ಇತಿಹಾಸ ದರ್ಶನ

ಸಂಪುಟ
೩೨

ಸಂಪಾದಕರು

ಡಾ. ದೇವರಕೊಂಡಾರೆಡ್ಡಿ
ಪ್ರೊ. ಜಿ.ಕೆ. ದೇವರಾಜಸ್ವಾಮಿ

KARNATAKA ITIHASA ACADEMY
कर्नाटक इतिहास अकादमि

೨೦೧೭



ಕರ್ನಾಟಕ ಇತಿಹಾಸ ಅಕಾದೆಮಿ (ರಿ.), ಬೆಂಗಳೂರು

ಇತಿಹಾಸ ದರ್ಶನ ಸಂಪುಟ ೩೧ ಬಿಡುಗಡೆ ಸಮಾರಂಭ



ಡಾ. ಎಸ್.ಕೆ. ಮೇಲಾಕಾರ, ಪ್ರೊ. ಜಿ.ಕೆ. ದೇವರಾಜಸ್ವಾಮಿ, ಶ್ರೀ ಆರ್. ಎಸ್. ಪಂಚಮುಖಿ, ಡಾ. ಶ್ರೀನಿವಾಸ ರಿತ್ತಿ,
ಪ್ರೊ. ಕೆ. ಪದ್ದಯ್ಯ, ಡಾ. ಆರ್. ಗೋಪಾಲ್, ಪ್ರೊ. ಪ್ರಮೋದ್. ಬಿ. ಗಾಯ್, ಡಾ. ಹಂಪಾ ನಾಗರಾಜಯ್ಯ, ಡಾ. ಎಸ್. ರಾಜಶೇಖರ್
ಡಾ. ಬಿ. ರಾಜಶೇಖರಪ್ಪ, ಶ್ರೀ ಎಂ.ಬಿ. ಪಾಟೀಲ್, ಡಾ. ಎಸ್.ವಿ. ಪಾಡಿಗಾರ್. ಡಾ. ದೇವರಕೊಂಡಾರೆಡ್ಡಿ

ಇತಿಹಾಸ ದರ್ಶನ

ITIHASA DARSANA - ***Volume 32 / 2017***

ಸಂಪುಟ ೩೨ / ೨೦೧೭

೨೦೧೬ರ ಅಕ್ಟೋಬರ್ ೨೨ರಿಂದ ೨೪ರವರೆಗೆ ಕರ್ನಾಟಕ ಇತಿಹಾಸ ಅಕಾದೆಮಿ ಹಾಗೂ ಕನ್ನಡ ಸಂಶೋಧನಾ ಸಂಸ್ಥೆ, ಅಮೃತ ಮಹೋತ್ಸವ ಸಮಿತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸೋಲ್ಲಾಸ ಸಭಾಂಗಣ, ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಸಮಾವೇಶಗೊಂಡಿದ್ದ ಕರ್ನಾಟಕ ಇತಿಹಾಸ ಅಕಾದೆಮಿಯ ೩೦ನೆಯ ವಾರ್ಷಿಕ ಸಮ್ಮೇಳನದಲ್ಲಿ ಅಕಾದೆಮಿಯ ಸದಸ್ಯರು ಮಂಡಿಸಿದ ವಿದ್ವತ್ ಪ್ರಬಂಧಗಳ ಸಂಪುಟ.

ಸಂಪಾದಕರು

ಡಾ|| ದೇವರಕೊಂಡಾರೆಡ್ಡಿ

ಪ್ರೊ. ಜಿ.ಕೆ. ದೇವರಾಜಸ್ವಾಮಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ITIHĀSA DARŚANA - ***Volume 32* / 2017**

The Volume of the Scholarly papers presented and the General body Proceedings of the 30th Annual Conference of

The Karnataka Ithihasa Academy (Regd.,)
held at Kannada Samshodana Samste, Karnataka University, Dharwad
on 22nd, 23rd & 24th October 2016

ಪುಟಗಳು : ೬೩೨ + xxxvi + Col. Photos XII

Pages : 632 + xxxvi + Co. Photos XII

Edited by : **Dr. Devarakondareddy**
Prof. G.K. Devarajaswamy

Published by : Secretary
Karnataka Itihasa Academy (Regd.)
43/13, Mathru Krupa, 2nd Floor, 2nd Main Road
5th Cross, Mount Joy Extension, Hanumanthanagar, Bangalore - 560 019.

e-mail : **karnatakaitihasaacademy25@gmail.com**
Web : **www.karnatakaitihasaacademy.org**

Price : ₹ **750**

ಬೆಲೆ : ₹ ೭೫೦

ಆರ್ಥಿಕ ನೆರವು : ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ.
ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಬಾಳೇಹೊನ್ನೂರು.

ISBN No. 978-81-921255-7-2

Printed at
ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA Bangalore
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨



॥ಶ್ರೀ ಜಗದ್ಗುರು ರೇಣುಕಾಚಾರ್ಯ: ಪ್ರಸೀದತು॥

ಮಾನವ ಧರ್ಮಕ್ಕೆ ಜಯವಾಗಲಿ।
ಧರ್ಮದಿಂದಲೇ ವಿಶ್ವಕ್ಕೆ ಶಾಂತಿ॥



ಸಾಹಿತ್ಯ–ಸಂಸ್ಕೃತಿ ಸಂವರ್ಧಿಸಲಿ।
ಶಾಂತಿ–ಸಮೃದ್ಧಿ ಸರ್ವರಿಗಾಗಲಿ॥

ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು
ಪ್ರಸನ್ನ ರೇಣುಕ ಡಾ॥ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು,

ಬಾಳೆಹೊನ್ನೂರು 577112 ಚಿಕ್ಕಮಗಳೂರು ಜಿಲ್ಲೆ ಕರ್ನಾಟಕ ರಾಜ್ಯ

ದಿನಾಂಕ : 20–09–2017 ವಾಸ್ತವ್ಯ : ಮಲಯಾಚಲ ತಪೋಭೂಮಿ

ಶುಭಾಶೀರ್ವಾದ ಸಂದೇಶ

ಜಾಗತೀಕರಣ ಉದಾರೀಕರಣ ಆಧುನೀಕರಣ ಖಾಸಗೀಕರಣದ ಭರಾಟೆಯಲ್ಲಿ ಸತ್ಯ ಸನಾತನ ಸಂಸ್ಕೃತಿ ಇತಿಹಾಸ ಮರೆಯಬಾರದು. ವ್ಯಕ್ತಿಯೇ ಆಗಲಿ ಜನಾಂಗವೇ ಆಗಲಿ ಶ್ರದ್ಧೆಯನ್ನು ಕಳೆದುಕೊಂಡರೆ ನಾಶ ಸಮೀಪಿಸಿದಂತೆಯೇ ಎಂಬುದನ್ನು ಮರೆಯುವಂತಿಲ್ಲ. ಬೆಳಕು, ನೀರು, ಗಾಳಿ, ಯೋಗ, ಆಹಾರ ಮತ್ತು ಭೂಮಿ ಇವು ಎಲ್ಲೆಡೆ ಲಭ್ಯವಿರುವ ಅಮೂಲ್ಯ ವಸ್ತುಗಳು. ಇವುಗಳನ್ನು ನಿರ್ಲಕ್ಷಿಸಿ ಬಾಳಲು ಹೇಗೆ ಸಾಧ್ಯವಾಗುವುದಿಲ್ಲವೋ ಹಾಗೆಯೇ ನಮ್ಮ ಇತಿಹಾಸ ಮತ್ತು ಪರಂಪರೆ ಆದರ್ಶಗಳನ್ನು ಮರೆತು ಬಾಳಲು ಅವಕಾಶಗಳಿಲ್ಲ.

ಕನ್ನಡಿ ಸ್ವಚ್ಛವಾಗಿದ್ದಲ್ಲಿ ಪ್ರತಿಬಿಂಬ ಸುಂದರವಾಗಿ ಕಾಣುವಂತೆ ಮನಸ್ಸು ಸ್ವಚ್ಛವಾಗಿದ್ದಲ್ಲಿ ಜಗತ್ತು ಸುಂದರವಾಗಿ ಕಾಣುತ್ತದೆ. ಸುಂದರವಾದ ಉಡುಗೆಯು ನಿಮ್ಮ ವ್ಯಕ್ತಿತ್ವವನ್ನು ಬದಲಿಸಬಹುದು. ಆದರೆ ಸುಂದರವಾದ ಗುಣವು ನಿಮ್ಮ ಬದುಕನ್ನೇ ಬದಲಿಸುತ್ತದೆ. ಸುಂದರವಾದ ಮನೆಯನ್ನು ಎಲ್ಲರೂ ಕಟ್ಟಬಲ್ಲರು. ಆದರೆ ಆ ಮನೆಯಲ್ಲಿ ಸುಂದರವಾಗಿ ಬದುಕುವುದನ್ನು ಕೆಲವರು ಮಾತ್ರ ಬಲ್ಲರು. ಏನೆಲ್ಲ ಇತಿಹಾಸ ಆದರ್ಶಗಳಿದ್ದರೂ ಅರಿಯಲಾರದವರು ಇದ್ದೇ ಇರುತ್ತಾರೆ. ಹಿಂದಿನ ಇತಿಹಾಸ ಭವಿಷ್ಯತ್ತಿನ ಬಾಳಿಗೆ ಅಡಿಪಾಯ ಎಂಬುದನ್ನು ಅರಿತು ಬಾಳಬೇಕಾಗುತ್ತದೆ.

ಕರ್ನಾಟಕ ಇತಿಹಾಸ ಅಕಾದೆಮಿ(ರಿ) ರಾಜ್ಯದಲ್ಲಿ ಅತ್ಯುತ್ತಮ ಸಾಧನೆ ಮಾಡುತ್ತಾ ಮುನ್ನಡೆದಿದೆ. ಪ್ರಾಚೀನ ಇತಿಹಾಸದ ಅರಿವು ಮೂಡಿಸುವ ಬಹು ದೊಡ್ಡ ಕಾರ್ಯ ಮಾಡುತ್ತಿರುವುದು ಸಂತೋಷದ ಸಂಗತಿ. ಕರ್ನಾಟಕ ಇತಿಹಾಸ ಅಕಾದೆಮಿಯ 31ನೇ ಸಮ್ಮೇಳನ ಕೊಪ್ಪಳ ಜಿಲ್ಲಾ ಕೇಂದ್ರದಲ್ಲಿ ಅಕ್ಟೋಬರ್ 28–29 ಮತ್ತು 30ರಂದು ಜರುಗಲಿರುವುದು ಹೆಮ್ಮೆಯ ಸಂಗತಿ. ಇತಿಹಾಸ ದರ್ಶನದ 32ನೇ ವಿದ್ವತ್ ಪ್ರಬಂಧಗಳ ಸಂಪುಟ ಬಿಡುಗಡೆಯಾಗಲಿರುವುದು ಈ ಸಂಸ್ಥೆಯ ಕ್ರಿಯಾಶೀಲತೆಗೆ ಸಾಕ್ಷಿಯಾಗಿದೆ. ಪ್ರತಿವರುಷದಂತೆ ಈ ವರ್ಷವು ಸಹ ಶ್ರೀಪೀಠದಿಂದ ಇಪ್ಪತ್ತೈದು ಸಾವಿರ (25000.00) ರೂಪಾಯಿಗಳನ್ನು ಆಶೀರ್ವಾದ ರೂಪದಲ್ಲಿ ದಯಪಾಲಿಸಲಾಗಿದೆ. ಈ ಮಹತ್ಕಾರ್ಯದಲ್ಲಿ ಡಾ॥ ದೇವರ ಕೊಂಡಾರೆಡ್ಡಿ, ಡಾ॥ ಎಂ.ಜಿ. ನಾಗರಾಜ ಮತ್ತು ಸಂಪಾದಕ ಮಂಡಳಿಯ ಶ್ರಮ ಸಾರ್ಥಕ. ಕರ್ನಾಟಕ ಇತಿಹಾಸ ಅಕಾದೆಮಿ (ರಿ) ಎಲ್ಲ ಸದಸ್ಯರಿಗೂ ಶುಭ ಹಾರೈಕೆಗಳು.

ಪರಮ ದಯಾಳು ಶ್ರೀ ಪಾರ್ವತಿ ಪರಮೇಶ್ವರರು, ಶ್ರೀ ಜಗದ್ಗುರು ರೇಣುಕಾಚಾರ್ಯರು ಹಾಗೂ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಸರ್ವರಿಗೂ ಮಂಗಲ ಪರಂಪರೆಯನ್ನು ಅನುಗ್ರಹಿಸಲಿ.

ಶುಭಾಶೀರ್ವಾದಗಳೊಂದಿಗೆ

ಶ್ರೀ ರಂಭಾಪುರಿ ಜಗದ್ಗುರುಗಳು
ಬಾಳೆಹೊನ್ನೂರು

ಪ್ರಾಚ್ಯಾಧ್ಯಯನವು ಬೆಣ್ಣೆ ಅಥವಾ ಬಂದೂಕುಗಳ ಉತ್ಪಾದನೆಯನ್ನು
ಹೆಚ್ಚಿಸಲು ನಮಗೆ ಸಹಾಯ ಮಾಡುವುದಿಲ್ಲ.
ಬದಲಿಗೆ ನಾವು ಇನ್ನಷ್ಟು ಸಹೃದಯವಾಗಿ ಯೋಚಿಸುವಂತೆಯೂ,
ನಡೆದುಕೊಳ್ಳುವಂತೆ ಮಾಡಬಲ್ಲದು.

ಪ್ರೊ॥ ಕೆ. ಪದ್ದಯ್ಯ



ಪ್ರೊ॥ ಕೆ. ಪದ್ದಯ್ಯ
ಕರ್ನಾಟಕ ಇತಿಹಾಸ ಅಕಾದೆಮಿಯ
ಮೂವತ್ತನೆಯ ವಾರ್ಷಿಕ ಸಮ್ಮೇಳದ ಸರ್ವಾಧ್ಯಕ್ಷರು



ಕರ್ನಾಟಕ ಇತಿಹಾಸ ಅಕಾದೆಮಿಯ 30ನೆಯ ವಾರ್ಷಿಕ ಸಮ್ಮೇಳನದ ಉದ್ಘಾಟನಾ ಸಮಾರಂಭ, ಕನ್ನಡ ಸಂಶೋಧನಾ ಸಂಸ್ಥೆ, ಕ.ವಿ.ವಿ. ಧಾರವಾಡ



ಪಾಟೀಲ ಬಸನಗೌಡ ಎಸ್. ಹುಣಸಗಿ ಅವರ 'ಗಿರಿನಾಡು' ಪುಸ್ತಕ ಗಣ್ಯರಿಂದ ಬಿಡುಗಡೆ



ಪ್ರೊ. ಎಸ್.ಸಿ. ಪಾಟೇಲ್ ಅವರ, ದೃಶ್ಯಕಲಾ ಸಂವೇದನೆ, ಚಿತ್ರಕಲಾಪಥ,
ಕರ್ನಾಟಕ ಭಿತ್ತಿ ಚಿತ್ರಕಲೆ ಹಲವು ಹೊಸ ಶೋಧ, ಪುಸ್ತಕಗಳ ಬಿಡುಗಡೆ



ಸಭೆಯಲ್ಲಿ ಗಣ್ಯರ ಉಪಸ್ಥಿತಿ



ಬೈಸಾನಿ ರುಕ್ಮಣಮ್ಮ ರತ್ನಂ ಶೆಟ್ಟಿ ಫ್ಯಾಮಿಲಿ ಚಾರಿಟಬಲ್ ಟ್ರಸ್ಟ್ ವತಿಯಿಂದ 'ಇತಿಹಾಸ ಸಂಸ್ಕೃತಿಶ್ರೀ' ಪ್ರಶಸ್ತಿ ಪುರಸ್ಕೃತರಾದ ಡಾ. ಎಸ್. ರಾಜಶೇಖರ್ ಅವರಿಗೆ ಶ್ರೀ ಅಶೋಕ್ ಕುಮಾರ್ ದಂಪತಿಗಳಿಂದ ನಗದು ಗೌರವಾರ್ಪಣೆ



ಶ್ರೀಮತಿ ಗೌರಮ್ಮ, ಗಂಗಾಧರಯ್ಯ ಇವರ ಹೆಸರಿನಲ್ಲಿ ಅವರ ಮಕ್ಕಳಾದ ಡಾ. ಎಂ.ಜಿ. ನಾಗರಾಜ್, ಶ್ರೀಮತಿ ಪದ್ಮಾ ವಿರೂಪಾಕ್ಷಯ್ಯ ಮತ್ತು ಡಾ. ಎಂ.ಜಿ. ಚಂದ್ರಕಾಂತ್ ಇವರು ಸ್ಥಾಪಿಸಿರುವ ದತ್ತಿಯಿಂದ"ಸಂಶೋಧನ ಶ್ರೀ" ಪ್ರಶಸ್ತಿ ಪುರಸ್ಕೃತರಾದ ಡಾ. ಬಿ. ರಾಜಶೇಖರಪ್ಪ ಅವರಿಗೆ ಸನ್ಮಾನ



'ಡಾ. ಬಾ.ರಾ.ಗೋಪಾಲ್ ಶಾಸನ ಪ್ರಶಸ್ತಿ' ಪುರಸ್ಕೃತರಾದ ಡಾ. ಎಸ್.ವಿ. ಪಾಡಿಗಾರ್ ಅವರಿಗೆ ಸನ್ಮಾನ



'ನೊಳಂಬಶ್ರೀ ಪ್ರಶಸ್ತಿ' ಪುರಸ್ಕೃತ ಡಾ. ಹೆಚ್. ಜಯಮ್ಮ ಕರಿಯಣ್ಣ ಅವರಿಗೆ ಸನ್ಮಾನ



ಕರ್ನಾಟಕ ಇತಿಹಾಸ ಅಕಾದೆಮಿಯ ಖಜಾಂಚಿಗಳಾದ ಶ್ರೀಯುತ ಎಂ.ಬಿ. ಪಾಟೀಲ್ ಅವರಿಗೆ ಗೌರವಾರ್ಪಣೆ



ಪ್ರೊ. ಕೆ. ಪದ್ದಯ್ಯ ಇವರಿಂದ 'ಎಂ.ಎಚ್. ಕೃಷ್ಣ ಮೆರಿಟ್ ಅವಾರ್ಡ'ಗೆ ದತ್ತಿನಿಧಿ ಕೊಡುಗೆ



ಡಾ. ಆರ್. ಗೋಪಾಲ್ ನಿರ್ದೇಶಕರು ವಸ್ತು ಸಂಗ್ರಹಾಲಯಗಳು, ಪ್ರೊ. ಪ್ರಮೋದ್ ಭೀ.ಗಾಯ್ ಕುಲಪತಿಗಳು ಕ.ವಿ.ವಿ, ಡಾ. ಹಂಪ ನಾಗರಾಜಯ್ಯ ಅವರಿಂದ ವಸ್ತು ಪ್ರದರ್ಶನ ಉದ್ಘಾಟನೆ



ಡಾ. ಆರ್. ಗೋಪಾಲ್, ನಿರ್ದೇಶಕರು ವಸ್ತುಸಂಗ್ರಹಾಲಯಗಳು, ಇವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿರುವುದು




ಪ್ರೊ. ಸಮ್ಮೇಳನಾಧ್ಯಕ್ಷರಾದ ಪ್ರೊ. ಕೆ. ಪದ್ದಯ್ಯ ಅವರಿಂದ ಅಧ್ಯಕ್ಷೀಯ ಭಾಷಣ



ಶ್ರೀ ಗವಿಸಿದ್ಧಯ್ಯ ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆ
ಇವರಿಂದ ಪರಂಪರೆ ಉಳಿಸಿ ಕಾರ್ಯಕ್ರಮ ಉದ್ಘಾಟಣೆ



ಹಾರನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ
ಶ್ರೀ ನಂದೀಶ್ ಎಸ್.ಎಸ್. ಅವರಿಂದ
ಭಿತ್ತಿ ಪತ್ರ ಬಿಡುಗಡೆ



ಪುರಾತತ್ವ ಸರ್ವೇಕ್ಷಣಾ ಇಲಾಖೆಯ
ನಿವೃತ್ತ ಅಧಿಕಾರಿಗಳಾದ
ಶ್ರೀ ಕೆ.ಎಸ್. ಸುಬ್ರಹ್ಮಣ್ಯ ಅವರಿಗೆ ಸನ್ಮಾನ



ಪರಂಪರೆ ಉಳಿಸಿ ಕಾರ್ಯಕ್ರಮ ಆಯೋಜಿಸಿದ್ದ
ಹೊಯ್ಸಳ ವೇದಿಕೆಯ ಹಾರನಹಳ್ಳಿ ನಾಗೇಂದ್ರ
ಇವರಿಂದ ಪ್ರಾಸ್ತಾವಿಕ ನುಡಿ



ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ
ವಿದ್ಯಾರ್ಥಿಗಳು ಹಾಗೂ ಗಣ್ಯರ ಉಪಸ್ಥಿತಿ



ಮೋಡಿಲಿಪಿ ಕಾರ್ಯಾಗಾರ ಉದ್ಘಾಟನೆ ಪತ್ರಾಗಾರ ಇಲಾಖೆಯ ಸಹಾಯಕ ನಿರ್ದೇಶಕರಾದ
ಶ್ರೀ. ಸದಾನಂದ ನೆಲ್ಕುದರಿ ಅವರಿಂದ



ಮೋಡಿಲಿಪಿ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಗಳಾದ
ಡಾ. ಪಿ.ವಿ.ನಾರಾಯಣ್ ಅವರು
ಮೋಡಿಲಿಪಿ ಬಗ್ಗೆ ಮಾತನಾಡುತ್ತಿರುವುದು



ಮೋಡಿಲಿಪಿ ಕಾರ್ಯಾಗಾರದಲ್ಲಿ
ಅಕಾದೆಮಿ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ
ಅವರು ಮಾತನಾಡುತ್ತಿರುವುದು



ಕಾರ್ಯಾಗಾರವನ್ನು ಉದ್ದೇಶಿಸಿ ಪತ್ರಾಗಾರ ಇಲಾಖೆಯ
ಸಹಾಯಕ ನಿರ್ದೇಶಕರಾದ ಶ್ರೀ ಸದಾನಂದ ನೆಲ್ಲುದರಿ
ಅವರಿಂದ ಭಾಷಣ




ಕಾರ್ಯಗಾರದಲ್ಲಿ ಡಾ. ಬಷೀರ್
ಬಿ.ಎಂ.ಶ್ರೀ ಪ್ರತಿಷ್ಠಾನ ಇವರಿಂದ ಭಾಷಣ



ಮೋಡಿಲಿಪಿ ಕಾರ್ಯಾಗಾರದಲ್ಲಿ
ಶಿಭಿರಾರ್ಥಿಗಳು ಹಾಗೂ ಗಣ್ಯರು



ಡಾ॥ ದೇವರಕೊಂಡರೆಡ್ಡಿಯವರು ದೇವಾಲಯಗಳ ಬಗ್ಗೆ ಮಾಹಿತಿ ನೀಡುತ್ತಿರುವುದು







ಅಧ್ಯಕ್ಷರ ನುಡಿ

ಕರ್ನಾಟಕ ಇತಿಹಾಸ ಅಕಾದೆಮಿಯು ೩೧ ವರ್ಷಗಳನ್ನು ಪೂರೈಸಿ ೩೨ನೇ ವರ್ಷಕ್ಕೆ ಕಾಲಿರಿಸಲು ಕಾರಣರಾದ ಎಲ್ಲಾ ಸದಸ್ಯ ಮಿತ್ರರಿಗೆ ಕಾರ್ಯಕಾರಿ ಸಮಿತಿಗೆ ಹಾಗೂ ನೆರವು ನೀಡಿದ ಮಹಾನುಭಾವರೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

೧೯೮೫ರಲ್ಲಿ ಆರಂಭವಾದ ಕರ್ನಾಟಕ ಇತಿಹಾಸ ಅಕಾದೆಮಿಯು ಅಂದು ಹಿರಿಯರ, ಅನುಭವಿಗಳ, ಧ್ಯೇಯೋದ್ದೇಶಗಳನ್ನು ಇರಿಸಿಕೊಂಡು ಪಾಲಿಸಿಕೊಂಡು ಬರುತ್ತಿದೆ. ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಹೆಚ್ಚು ಒತ್ತು ನೀಡುತ್ತಿದೆ. ರಾಷ್ಟ್ರೀಯ ಮಟ್ಟದಲ್ಲಿ ಇಂದಿಗೂ ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಗಮನಸೆಳೆಯುವಂತಹ ಅಧ್ಯಯನವನ್ನು ನಮ್ಮ ವಿದ್ವಾಂಸರು ನಡೆಸಿಲ್ಲ. ನರ್ಮದೆಯಿಂದ ಕಾವೇರಿವರೆಗೆ ೬೦೦ ವರ್ಷಗಳ ಕಾಲ ರಾಜ್ಯಭಾರ ಮಾಡಿ ತಮ್ಮ ಕುರುಹುಗಳನ್ನು ಕರ್ನಾಟಕ ರಾಜರು ಬಿಟ್ಟು ಹೋಗಿದ್ದರೂ ಆ ಬಗ್ಗೆ ಹೊರರಾಜ್ಯದ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನಸೆಳೆಯುವಂಥಹ ಕೃತಿಯಾಗಲಿ, ಪ್ರಭಾವಿ ಇತಿಹಾಸಕಾರರಾಗಲಿ ಇನ್ನೂ ಉದಿಸಿಲ್ಲ. ಯಾವುದೋ ರಾಜ್ಯದ ಚಿಕ್ಕ ರಾಜ ಮನೆತನಗಳು ಗಮನ ಸೆಳೆದಷ್ಟು ನಮ್ಮ ರಾಜ್ಯದ ಇತಿಹಾಸ ಗಮನ ಸೆಳೆದಿಲ್ಲ. ಈ ಕೊರತೆ ಕರ್ನಾಟಕದ ಸಂಸ್ಕೃತಿ–ಇತಿಹಾಸ ಅಭಿಮಾನಗಳನ್ನು ಕಾಡುತ್ತಲೇ ಇದೆ.

ಈ ವರ್ಷದ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಸಾಹಿತ್ಯ ಸಂಗಮ (ರಿ.) ಸಂಘದ ಆಶ್ರಯದಲ್ಲಿ ಹರಿಹರದಲ್ಲಿ ನಡೆಯಿತು. ಸುತ್ತಮುತ್ತಲ ಶಾಲಾ ಉಪಾಧ್ಯಾಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅದೇ ದಿನ ಸಂಜೆ ಹರಿಹರ ತಾಲ್ಲೂಕಿನ ಉಪಾಧ್ಯಾಯರಿಗೆ ಸಂಸ್ಕೃತಿ ಪರಂಪರೆ ಬಗ್ಗೆ ವಿಶೇಷ ಉಪನ್ಯಾಸವಿರಿಸಿದ್ದರು. ರಾಜ್ಯದ ಬೇರೆ ಸ್ಥಳಗಳಲ್ಲಿ ಪರಂಪರೆ ಉಳಿಸಿ ಕಾರ್ಯಕ್ರಮಗಳು ನಡೆದ ಬಗ್ಗೆ ವರದಿಗಳು ಬಂದಿವೆ. ಕಳೆದ ವರ್ಷ ದೇವಾಲಯಗಳ ಜೀರ್ಣೋದ್ಧಾರವನ್ನು ವೈಜ್ಞಾನಿಕವಾಗಿ ನಡೆಸಿದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಲ್ಲಿ ದೇವಾಲಯ ಸಂರಕ್ಷಣಾ ಅಧಿಕಾರಿಯಾಗಿದ್ದ ಶ್ರೀ ಕೆ. ಸುಬ್ರಹ್ಮಣ್ಯ ಅವರನ್ನು ಅವರ ಸಂರಕ್ಷಣಾ ಕಾರ್ಯದ ಶ್ರಮಕ್ಕಾಗಿ ಸನ್ಮಾನಿಸಲಾಗಿತ್ತು. ಈ ವರ್ಷ ಹಾಸನ ತಾಲ್ಲೂಕಿನ ಹೊನ್ನಾವರದ ಶ್ರೀ ಸ್ವಾಮಿಗೌಡ ಅವರನ್ನು ಸನ್ಮಾನಿಸಲಾಯಿತು. ಶ್ರೀ ಸ್ವಾಮಿಗೌಡ ಅವರು ತಮ್ಮ ಗ್ರಾಮದ ದೇವಾಲಯದ ಜೀರ್ಣೋದ್ಧಾರ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇಂಥಹ ಎಷ್ಟೋ ವ್ಯಕ್ತಿಗಳು ಕರ್ನಾಟಕದಲ್ಲಿ ಎಲೆಮರೆಯ ಕಾಯಿಯಂತೆ ದುಡಿಯುತ್ತಿದ್ದಾರೆ. ಅವರನ್ನು ಅಲ್ಲಿನ ಸ್ಥಳೀಯ ಸಂಸ್ಥೆಗಳು ಗೌರವಿಸುವುದು ಸೂಕ್ತ.

ಈ ವರ್ಷದ ೩೧ನೇ ಸಮ್ಮೇಳನವನ್ನು ಕೊಪ್ಪಳದಲ್ಲಿ ನಡೆಸಲು ಕೊಪ್ಪಳದ ಗವಿಮಠದ ಶ್ರೀಗಳು ಸಮ್ಮತಿಸಿದ್ದಾರೆ. ಇದರೊಂದಿಗೆ ಕೊಪ್ಪಳದ ಬಿ.ಸಿ. ಪಾಟೀಲ ಶತಮಾನೋತ್ಸವ ಸಮಿತಿಯವರು ನಮ್ಮೊಂದಿಗೆ ಕೈಜೋಡಿಸಿದ್ದಾರೆ. ಕೊಪ್ಪಳದಲ್ಲಿ ಈ ವರ್ಷದ ಸಮ್ಮೇಳನ ನಡೆಸಲು ಸಂಸ್ಥಾನದ ಗವಿಸಿದ್ಧೇಶ್ವರ ಆಶೀರ್ವಾದವು ಸೇರಿದ್ದು, ಕೊಪ್ಪಳದ ಗವಿಮಠ ಕಾಲೇಜಿನ ಪ್ರಾಂಶುಪಾಲರಾದ ಮನೋಹರ ದಾದ್ಮಿ, ಕೊಪ್ಪಳದ ಖ್ಯಾತ ವೈದ್ಯರಾದ ಡಾ. ಬಳ್ಳೊಳ್ಳಿ, ಶ್ರೀ ಸಿ.ಬಿ. ಪಾಟೀಲ್, ಎಸ್.ಜಿ.ವಿ.ವಿಯ ಆಡಳಿತಾಧಿಕಾರಿಗಳಾದ ಡಾ. ಮಲ್ಲಿಕಾರ್ಜುನ ಸೋಮಲಾಪುರ ಇವರೆಲ್ಲರಿಗೂ ಅಕಾದೆಮಿಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಅಕಾದೆಮಿ ಜಾಲತಾಣವೂ ಈಗ ಎಲ್ಲರಿಗೂ ಲಭ್ಯವಿದ್ದು ಅನೇಕ ಸೌಲಭ್ಯಗಳನ್ನು ಇದರಲ್ಲಿ ಒದಗಿಸಲಾಗಿದೆ. ಇದುವರೆಗಿನ ಇತಿಹಾಸ ದರ್ಶನದ ಲೇಖನಗಳನ್ನು ಜಿಲ್ಲಾವಾರು ಮೊದಲಾದ ವಿವರಗಳನ್ನು ಒದಗಿಸಲಾಗಿದೆ. ಈ ಕೆಲಸಗಳನ್ನು ಶ್ರೀಮತಿ ಸೀತಾಲಕ್ಷ್ಮೀ ಅವರು ನಿರ್ವಹಿಸುತ್ತಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಇದರ ವಾರ್ಷಿಕ ವೆಚ್ಚವನ್ನು ಡಾ. ದೇವರಕೊಂಡಾರೆಡ್ಡಿಯವರ ಅಭಿನಂದನಾ ಸಮಿತಿಯವರು ಇಟ್ಟಿರುವ ದತ್ತಿಯಿಂದ ನಿರ್ವಹಿಸಲಾಗುತ್ತಿದೆ.

ಅಕಾದೆಮಿಯು ಹೊರತರುತ್ತಿರುವ ಇತಿಹಾಸ ದರ್ಶನ ಸಂಪುಟದ ಪ್ರಕಟಣೆಗೆ ಬಾಳೆಹೊನ್ನೂರಿನ ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು, ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ರೂ. ೨೫,೦೦೦/– ಗಳನ್ನು ಸತತ ೧೩ ವರ್ಷಗಳಿಂದ ನೀಡುತ್ತಾ ಬಂದಿದ್ದಾರೆ. ಈ ವರ್ಷವೂ ರೂ. ೨೫,೦೦೦ಗಳನ್ನು ಆಶೀರ್ವಾದ ಪೂರ್ವಕವಾಗಿ ನೀಡಿ ಪ್ರೋತ್ಸಾಹಿಸಿದ್ದಾರೆ. ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಕಳೆದ ವರ್ಷ ರೂ. ೪,೦೦,೦೦೦/– ಗಳನ್ನು ನೀಡಿದೆ. ಅನೇಕರು ಅಕಾದೆಮಿಗೆ ತಮ್ಮ

ಅಲ್ಪ ಕಾಣಿಕೆಯನ್ನು ನೀಡಿದ್ದಾರೆ. ದೆಹಲಿಯ ಐ.ಸಿ.ಹೆಚ್.ಆರ್ ಸಂಸ್ಥೆಯು ಹಣ ನೀಡುವುದಾಗಿ ತಿಳಿಸಿದೆ. ಈ ಎಲ್ಲಾ ಸಂಸ್ಥೆಗಳಿಗೆ ನಮ್ಮ ಕೃತಜ್ಞತೆಗಳು.

ಸಾಮಾನ್ಯರಿಗೆ ಕರ್ನಾಟಕದ ಸಾಂಸ್ಕೃತಿಕ ಸ್ಥಾನಗಳ ಪರಿಚಯ ಮಾಡಿಸುವ ಉದ್ದೇಶದಿಂದ ಕರ್ನಾಟಕ ಇತಿಹಾಸ ಅಕಾದೆಮಿಯು ಬಾದಾಮಿ ಸುತ್ತಮುತ್ತಲ ಪ್ರದೇಶಗಳಿಗೆ ಪ್ರವಾಸವನ್ನು ಏರ್ಪಡಿಸಿತ್ತು. ಅನೇಕ ಸದಸ್ಯರು, ಸದಸ್ಯರಲ್ಲದ ಆಸಕ್ತರು ಇದರಲ್ಲಿ ಪಾಲ್ಗೊಂಡಿದ್ದರು.

ಈ ವರ್ಷ ಇನ್ನೆರಡು ಹೊಸ ದತ್ತಿಗಳು ನಮ್ಮ ಅಕಾದೆಮಿಗೆ ಬಂದಿವೆ. ಪ್ರೊ. ಲಕ್ಷ್ಮಣ್ ತೆಲಗಾವಿ "ನಾಯಕ ಶ್ರೀ" ಎಂಬ ಪ್ರಶಸ್ತಿಯನ್ನು ಇರಿಸಿ ಪ್ರತಿವರ್ಷ ಪಾಳೆಯಗಾರರ ಕುರಿತು ಸಂಶೋಧನೆ ಮಾಡಿದ ತಜ್ಞರಿಗೆ ರೂ. ೧೦,೦೦೦-/ ಗಳನ್ನು ಹಾಗೂ ಪ್ರಶಸ್ತಿ ಫಲಕ ನೀಡುವಂತೆ ತಿಳಿಸಿದ್ದಾರೆ. ಇನ್ನೊಂದು ಪ್ರಶಸ್ತಿ ಕಳೆದ ವರ್ಷದ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಪ್ರೊ. ಕೆ. ಪದ್ದಯ್ಯ ಅವರು ಡಾ. ಎಂ.ಹೆಚ್. ಕೃಷ್ಣ ಅವರ ಹೆಸರಿನಲ್ಲಿ ಪುದುವಟ್ಟು ಇರಿಸಿದ್ದು ಆ ವರ್ಷದ ಉತ್ತಮ ಪುರಾತತ್ತ್ವ ವಿಷಯದ ಲೇಖಕರಿಗೆ ಈ ಪ್ರಶಸ್ತಿಯನ್ನು ನೀಡಲು ಸೂಚಿಸಿದ್ದಾರೆ. ಇವರುಗಳಿಗೆ ಕೃತಜ್ಞತೆಗಳು.

ಅಕಾದೆಮಿಯ ಬೆಳವಣಿಗೆಯಲ್ಲಿ ಇದುವರೆವಿಗೆ ದುಡಿದವರನ್ನು ಸ್ಮರಿಸುತ್ತಾ ಹೊಸ ಆಶಯಗಳೊಂದಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಳೆಸೋಣವೆಂದು ಆಶಿಸುತ್ತಾ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

೧೮, ಅಕ್ಟೋಬರ್, ೨೦೧೭ **ಡಾ. ದೇವರಕೊಂಡಾರೆಡ್ಡಿ**

ಬೆಂಗಳೂರು.

ಇತಿಹಾಸ ದರ್ಶನದ ಸಂಪಾದಕ ಮಂಡಳಿ

ಸಂಪಾದಕೀಯ

ಕರ್ನಾಟಕ ಇತಿಹಾಸ ಅಕಾದೆಮಿಯು ೩೧ನೆಯ ವಾರ್ಷಿಕ ಸಮ್ಮೇಳನವನ್ನು ಆಚರಿಸಿಕೊಳುತ್ತಿದ್ದು, ಮೂವತ್ತೆರಡನೆಯ ವರ್ಷಕ್ಕೆ ಕಾಲಿಡುತ್ತಿದೆ. ಈ ದೀರ್ಘ ಬೆಳವಣಿಗೆಯಲ್ಲಿ ಅಕಾದೆಮಿಯ ಸದಸ್ಯರು ಮಠಮಾನ್ಯಗಳು, ಸಂಘಸಂಸ್ಥೆಗಳು ವ್ಯಕ್ತಿಗಳ, ಸರ್ಕಾರದ ಇಲಾಖೆಗಳ ಪಾತ್ರವನ್ನು ಮರೆಯುವಂತಿಲ್ಲ. ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ಸಮ್ಮೇಳನದಲ್ಲಿ ಮಂಡಿತವಾದ ವಿದ್ವತ್ ಪ್ರಬಂಧಗಳ ಸಂಕಲನವೇ 'ಇತಿಹಾಸದರ್ಶನ'. ಇದರ ಸಂಪಾದನೆ ಹಾಗೂ ಪ್ರಕಟಣೆ ಈ ಮೂವತ್ತೊಂದು ವರ್ಷಗಳಲ್ಲಿ ನಿರಂತರವಾಗಿ ಅಕಾದೆಮಿಯು ನಡೆಸಿಕೊಂಡು ಬಂದಿದೆ.

ಇತಿಹಾಸ ದರ್ಶನ ೩೨ ನೆಯ ಸಂಪುಟವು, ೨೦೧೬ ಅಕ್ಟೋಬರ್ ೨೨ರಿಂದ ೨೪ರವರೆಗೆ, ಕನ್ನಡ ಸಂಶೋಧನಾ ಸಂಸ್ಥೆ ಅಮೃತ ಮಹೋತ್ಸವ ಸಮಿತಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ನಡೆದ ೩೦ನೇ ವಾರ್ಷಿಕ ಸಮ್ಮೇಳನದಲ್ಲಿ ಮಂಡಿತ ಪ್ರಬಂಧಗಳ ಸಂಗ್ರಹವನ್ನು ಈ ಸಂಪುಟ ಒಳಗೊಂಡಿದೆ. ಈ ಸಮ್ಮೇಳನದಲ್ಲಿ ೨೧೦ ಪ್ರಬಂಧಗಳು ಮಂಡನೆಯಾಗಿದ್ದವು. ಮುದ್ರಣಕ್ಕೆ ೧೭೫ ಪ್ರಬಂಧಗಳು ಬಂದಿವೆ. ಇವುಗಳನ್ನು ಸಂಪಾದಕ ಮಂಡಳಿಯ ಮುಂದೆ ಇರಿಸಿ, ನಂತರದಲ್ಲಿ ಆಯ್ಕೆಯಾದ ೧೪೦ ಲೇಖನಗಳನ್ನು ಮಾತ್ರ ಪ್ರಕಟಿಸಿದೆ.

ಇತಿಹಾಸ ದರ್ಶನ ಮುದ್ರಣಕ್ಕೆ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಸಹಾಯ ನೀಡಿದೆ. ಶ್ರೀಮದ್‌ರಂಭಾಪುರಿ ವೀರ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ಡಾ॥ ವೀರ ಸೋಮೇಶ್ವರ ರಾಜ ದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು. ಪ್ರತಿ ವರ್ಷವೂ ರೂ.೨೫,೦೦೦ಗಳನ್ನು ಸಂಪುಟದ ಪ್ರಕಟಣೆಗೆ ಆಶೀರ್ವಾದ ಪೂರ್ವಕವಾಗಿ ನೀಡುತ್ತಾ ಬಂದಿದ್ದಾರೆ. ಕೇಂದ್ರ ಸರ್ಕಾರದ ಐ.ಸಿ.ಎಚ್.ಆರ್. ನವದೆಹಲಿ ಸಂಸ್ಥೆಗೂ ಧನಸಹಾಯಕ್ಕಾಗಿ ಪತ್ರವ್ಯವಹಾರ ನಡೆದಿದೆ. ಸಂಪುಟದ ಗಾತ್ರ, ಮುದ್ರಣದ ವೆಚ್ಚ ಮೊದಲಾದವು ಹೆಚ್ಚಾಗಿರುವುದರಿಂದ ಇದು ಅನಿವಾರ್ಯವಾಗಿದೆ. ಇವರೆಲ್ಲರೂ ಧನಸಹಾಯ ನೀಡಿ ಸಂಪುಟವು ಮೌಲಿಕವಾಗಿ ಸುಂದರವಾಗಿ ಬರಲು ಕಾರಣಕರ್ತರಾಗಿದ್ದಾರೆ.

ಇತಿಹಾಸ ದರ್ಶನದ ಈ ವರೆಗಿನ ಎಲ್ಲಾ ಸಂಶೋಧನಾ ಪ್ರಬಂಧಗಳು ಅಕಾದೆಮಿಯ WEBSITE ಮೂಲಕ ದೇಶ ವಿದೇಶಗಳ ಸಂಶೋಧಕರನ್ನು ಆಕರ್ಷಿಸಿದೆ. ಮಾಹಿತಿಗಳ ವಿನಿಮಯದ ಮೂಲಕ ಹೊರ ದೇಶೀಯರಿಂದ ಶ್ಲಾಘನೆಗಳೂ ಅಕಾದೆಮಿಗೆ ಸಂದಿದೆ. ಈ ಹಿನ್ನೆಲೆಯಲ್ಲಿ ನಮ್ಮ ಇತಿಹಾಸ ಸಂಸ್ಕೃತಿಯನ್ನು ಕಟ್ಟುವ ಹಿನ್ನೆಲೆಯಲ್ಲಿ ನಮ್ಮೆಲ್ಲರ ಪ್ರಾಮಾಣಿಕ ಸಂಶೋಧನೆಗಳ ಜವಾಬ್ದಾರಿ ಮುಖ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಯುವ ಸಂಶೋಧಕರು ಆಸಕ್ತಿಯಿಂದ ಪ್ರಬಂಧಗಳನ್ನು ಮಂಡಿಸುತ್ತಿರುವುದು ಇತಿಹಾಸ ಸಂಶೋಧನಾಕ್ಷೇತ್ರದಲ್ಲಿ ಆಶಾಭಾವನೆ ಮೂಡಿಸಿದೆ. ಹಾಗೆಯೇ ಹಿರಿಯ ವಿದ್ವಾಂಸರ ಮಾರ್ಗದರ್ಶನದ ಮೂಲಕ ಸಂಶೋಧನಾ ಪ್ರಬಂಧದ ಪ್ರಾಮಾಣಿಕತೆ, ಗುಣಮಟ್ಟ, ವಿಚಾರ ಮಂಡನೆ ಹಾಗೂ ಮೌಲ್ಯಗಳನ್ನು ಕಾಪಾಡಿಕೊಳ್ಳುವ ಅವಶ್ಯಕತೆ ಇದೆ. ಸಂಶೋಧನಾ ಪ್ರಬಂಧಗಳ ಗುಣಮಟ್ಟವನ್ನು ಕಾಪಾಡಿಕೊಳ್ಳವಲ್ಲಿ ಹಿರಿಯ ಮತ್ತು ಕಿರಿಯ ಸಂಶೋಧಕರ ಜವಾಬ್ದಾರಿ ಇನ್ನೂ ಹೆಚ್ಚಿದೆ.

ಇತಿಹಾಸ ದರ್ಶನ ಸಂಪುಟ ೩೨ ಹೊರಬರಲು ನೆರವಾದ ಕರ್ನಾಟಕ ಇತಿಹಾಸ ಅಕಾದೆಮಿಯ ಕಾರ್ಯಕಾರಿ ಸಮಿತಿ, ೩೦ನೆಯ ವಾರ್ಷಿಕ ಸಮ್ಮೇಳನದ ಸಹಯೋಗ ನೀಡಿದ್ದ ಕನ್ನಡ ಸಂಶೋಧನಾ ಸಂಸ್ಥೆ ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ; ಇ–ಮೇಲ್‌ನಲ್ಲಿ ಬಂದಿದ್ದ ಲೇಖನಗಳನ್ನು ಸಂಕಲಿಸಿದ ಶ್ರೀಮತಿ ನಿರ್ಮಲ ಗಣೇಶ್, ಕರಡಚ್ಚು ತಿದ್ದುವಲ್ಲಿ ಸಹಕರಿಸಿದ ಶ್ರೀ ಬಿ.ಎಸ್. ಗುರುಪ್ರಸಾದ್, ಶ್ರೀಮತಿ ಸಂಧ್ಯಾ ವಿ. ಶ್ರೀ ರೇಣುಕಾಸ್ವಾಮಿ ಒಡೆಯರ್, ಅಂದವಾಗಿ ಮುದ್ರಿಸಿದ ಲಕ್ಷ್ಮೀ ಮುದ್ರಣಾಲಯದ ಶ್ರೀ ಕೆ.ಎಸ್. ಮಂಜು ಅವರಿಗೂ ಡಿಟಿಪಿ ಮಾಡಿ ಚಿತ್ರಗಳನ್ನು ಸಂಯೋಜಿಸಿದ, ಶ್ರೀ ಪಿ.ಎಸ್. ಸುಬ್ರಮಣಿಬಾಬು ಮತ್ತು ಶ್ರೀಮತಿ ಮಾಲಾ ಎಂ. ಹಾಗೂ ಸಿಬ್ಬಂದಿ ವರ್ಗಕ್ಕೂ, ಇತಿಹಾಸ ದರ್ಶನದ ಸಂಪಾದಕ ಮಂಡಳಿಗೂ ನಮ್ಮ ಕೃತಜ್ಞತೆಗಳು.

ಡಾ. ದೇವರಕೊಂಡಾರೆಡ್ಡಿ
ಪ್ರೊ. ಜಿ.ಕೆ. ದೇವರಾಜ ಸ್ವಾಮಿ

೧೮ ಅಕ್ಟೋಬರ್ ೨೦೧೭
ಶಾಲಿವಾಹನ ಶಕ: ೧೯೩೯
ಹೇವಿಳಂಬಿನಾಮ ಸಂವತ್ಸರ
ಕಾರ್ತಿಕ ಮಾಸ, ನರಕ ಚತುರ್ದಶಿ
ಬುಧವಾರ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ಕಾರ್ಯಕಾರಿ ಸಮಿತಿ

(೨೩.೧೦.೨೦೧೬ರಲ್ಲಿ ಆಯ್ಕೆಯಾದವರು)

ಅ ಧ್ಯಕ್ಷರು

ಡಾ॥ ದೇವರಕೊಂಡಾರೆಡ್ಡಿ

ಉಪಾಧ್ಯಕ್ಷರು

ಡಾ॥ ಎಂ.ಜಿ. ನಾಗರಾಜ್

ಡಾ॥ ಎಚ್.ಎಸ್. ಗೋಪಾಲರಾವ್

ಪ್ರಧಾನ ಕಾರ್ಯದರ್ಶಿ

ಪ್ರೊ. ಜಿ.ಕೆ. ದೇವರಾಜಸ್ವಾಮಿ

ಕಾರ್ಯದರ್ಶಿಗಳು

ಶ್ರೀ ಕೆ.ಎಲ್. ರಾಜಶೇಖರ್

ಶ್ರೀಮತಿ ಸಂಧ್ಯಾ ವಿ.

ಕೋಶಾಧ್ಯಕ್ಷರು

ಶ್ರೀ ಎಂ.ಬಿ. ಪಾಟೀಲ್

ಸದಸ್ಯರು

ಡಾ॥ ಎ.ಕೆ. ಶಾಸ್ತ್ರಿ, ಶಿರಸಿ

ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಶ್ರೀ ಪ್ರಭಾಕರ್ ಎಂ.ಎನ್., ಮೈಸೂರು

ಡಾ॥ ಅಮರೇಶ್ ಯತಗಲ್, ಬಿಜಾಪುರ

ಪ್ರೊ. ಮುರುಗೇಶಿ ಟಿ., ಉಡುಪಿ

ಡಾ॥ ಹನುಮಾಕ್ಷಿ ಗೋಗಿ, ಧಾರವಾಡ

ಶ್ರೀ ಬಸವರಾಜ್ ಟಿ.ಎಚ್.ಎಂ. ಬಳ್ಳಾರಿ

ಶ್ರೀ ಕಲ್ಲಪ್ಪ ಮಹದೇವಪ್ಪ ಗರಗ, ಗದಗ

ಶ್ರೀ ಸಿ.ಬಿ. ಪಾಟೀಲ, ಕೊಪ್ಪಳ

ಶ್ರೀ ಸಿದ್ದಗಿರಿ ಓ.ಎಲ್. ಚಂದ್ರೇಗೌಡ, ಚಿಕ್ಕಮಗಳೂರು

ಪ್ರೊ. ಲಕ್ಷ್ಮಣ್ ತೆಲಗಾವಿ, ಧಾರವಾಡ

ಡಾ॥ ಎಫ್.ಟಿ. ಹಳ್ಳಿಕೇರಿ, ಯಾದಗಿರಿ

ಡಾ॥ ಲಿಂಗರಾಜು, ಮಂಡ್ಯ

ಡಾ॥ ಚಂದ್ರಶೇಖರ್ ಎಚ್. ಬೆಂಗಳೂರು

ಶ್ರೀ ಸುಮತೀಂದ್ರ ನಾಡಿಗ್, ದಾವಣಗೆರೆ

ಶ್ರೀ ಗುರುಪ್ರಸಾದ್ ಬಿ.ಎಸ್., ಬೆಂಗಳೂರು

ಶ್ರೀ ಗುರುಶಾಂತಪ್ಪ ವಿ.ಪಿ., ಬೆಂಗಳೂರು

ಡಾ. ಎಸ್.ಕೆ. ಮೇಲಾಕಾರ, ಧಾರವಾಡ

ಶ್ರೀ ಇಷ್ಟಲಿಂಗ ಶಿರಸಿ, ಬಾದಾಮಿ

ಪರಿವಿಡಿ

೧.	ಸಂಗೇನಹಳ್ಳಿಕೆರೆ ಪರಿಸರದಲ್ಲಿ ಹಳೆಯ ಶಿಲಾಯುಗದ ಕೈಕೊಡಲಿ ಪತ್ತೆ	ಡಾ. ಎಸ್.ವೈ. ಸೋಮಶೇಖರ್	೧
೨.	ಬಾಣಾವರದಲ್ಲಿ ಪತ್ತೆಯಾದ ನವಶಿಲಾಯುಗದ ಕೈಕೊಡಲಿಗಳು	ರೇಣುಕಸ್ವಾಮಿ ಒಡೆಯರ್ ಬಿ.ಈ.	೩
೩.	ತೀರ್ಥಹಳ್ಳಿ ತಾಲೂಕಿನ ಬೃಹತ್ ಶಿಲಾಯುಗ ನೆಲೆಗಳ ಹೊಸ ಶೋಧ	ಪ್ರೊ.ಜಿ.ಕೆ. ದೇವರಾಜಸ್ವಾಮಿ, ರಾಘವೇಂದ್ರ ಎಲ್.ಎಸ್.	೬
೪.	ಮಲ್ಲಿಗೇನಹಳ್ಳಿಯ ಬೃಹತ್ ಶಿಲಾಯುಗ ಸಂಸ್ಕೃತಿ	ಪ್ರವೀಣ್ ದೊಡ್ಡಗೌಡರ	೧೧
೫.	ಮಂಡ್ಯ ಜಿಲ್ಲೆಯ ಮಡಹಳ್ಳಿ ಪ್ರದೇಶದ ಶಿಲಾ ಗೋರಿಗಳು ಮತ್ತು ವಸತಿ ನೆಲೆಗಳ ಮೇಲೊಂದು ಹೊಸಬೆಳಕು	ಡಾ. ಲಿಂಗರಾಜು	೧೫
೬.	ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆ – ಸರೂರ	ಶಿವಪ್ಪ ನ. ನೀರಲಗಿ	೧೯
೭.	ಹಿರೇಗುಂಟನೂರು–ಬೃಹತ್ ಶಿಲಾಯುಗದ ನೆಲೆಗಳ ಶೋಧ	ಶರತ್‌ಬಾಬು ಕೆ.ಎಸ್.	೨೨
೮.	ಪರಂಪರೆಯ ಕಾವಿ, ಬಿತ್ತಿಚಿತ್ರ "ಗೀರುಶಿಲ್ಪ" ಶಾಸನ, ಬಂಡೆಯಾಸರೆ ಚಿತ್ತಾರ	ಎಸ್.ಎ. ಕೃಷ್ಣಯ್ಯ	೨೪
೯.	ತೀರ್ಥಹಳ್ಳಿ ತಾಲ್ಲೂಕಿನ ಬಂಡೆಗಲ್ಲು ಚಿತ್ರಗಳು	ಮೇಕನಗದ್ದೆ ಲಕ್ಷ್ಮಣಗೌಡ	೨೭
೧೦.	ಸವ್ವೆಗ್ರಾಮದಲ್ಲಿ ದೊರೆತ ಅಪ್ರಕಟಿತ ತಾಮ್ರ ಶಾಸನ	ಡಾ. ಜಿ. ಕರಿಯಪ್ಪ ನಿಂಗನಾಯ್ಕ ಸಿ.	೩೦
೧೧.	ಹಲಗೂರಿನ ಅಪ್ರಕಟಿತ ಶಾಸನಗಳು	ಡಾ. ಹನುಮಾಕ್ಷಿ ಗೋಗಿ	೩೪
೧೨.	ಹಾನುಗಲ್ಲು ಕದಂಬರ ಗೆಜ್ಜೆಹಳ್ಳಿಯ ಎರಡು ಅಪ್ರಕಟಿತ ಶಾಸನಗಳು	ಡಿ. ಸ್ಮಿತಾರೆಡ್ಡಿ	೪೯
೧೩.	ಗೆಜ್ಜೆಹಳ್ಳಿಯ ಕ್ರಿ.ಶ. ೧೧೭೮ರ ಶಾಸನ	ಡಾ. ನಳಿನಿ ವೆಂಕಟೇಶ್	೫೮
೧೪.	ಕಂಚಿಕೆರೆಯಲ್ಲಿ ದೊರೆತ ಉಚ್ಚಂಗಿ ಪಾಂಡ್ಯರ ಅಪ್ರಕಟಿತ ಶಾಸನ	ರಾಘವೇಂದ್ರಚಾರಿ ಕೆ.ಎಂ.	೬೧
೧೫.	ಅಣ್ಣಿಗೇರಿಯಲ್ಲಿ ದೊರೆತ ಹೊಯ್ಸಳರ ಇಮ್ಮಡಿ ವೀರಬಲ್ಲಾಳದೇವನ ಅಪ್ರಕಟಿತ ಶಾಸನಗಳು	ಸಂಜಯ ಎನ್. ಹಂಜೆ	೬೪
೧೬.	ತೀರ್ಥಹಳ್ಳಿಯ ಮಳಲಿಮಕ್ಕಿ ಹಾಗೂ ಶೃಂಗೇರಿ ಹಸೂರುಮಕ್ಕಿ ಅಪ್ರಕಟಿತ ಶಾಸನಗಳು	ಡಾ. ಎಂ.ಎ. ಪ್ರಭಾಕರ್	೭೫
೧೭.	ಇಮ್ಮಡಿ ದೇವರಾಯನ ಪಂಪಾ ಸರೋವರದ ಅಪ್ರಕಟಿತ ಶಾಸನ	ಡಾ. ಎಸ್. ನಾಗರಾಜಪ್ಪ	೭೮
೧೮.	ಸ್ವರ್ಣವಲ್ಲೀ ಮಠದ ಪತ್ರಾಗಾರದಲ್ಲಿ ವಿಜಯನಗರದ ಮೊದಲನೆಯ ಬುಕ್ಕರಾಯರ ಕಾಲದ ಧರ್ಮಶಾಸನದ ಪ್ರತಿ	ಡಾ. ಎ.ಕೆ.ಶಾಸ್ತ್ರಿ	೮೩
೧೯.	ಮೊಳಕಾಲ್ಮೂರು ತಾಲ್ಲೂಕು ಪದಿನಾನ ದೇವರಹಟ್ಟಿಯಲ್ಲಿ ದೊರೆತ ವಾಲ್ಮೀಕಿ ಮಠಕ್ಕೆ ಸಂಬಂಧಿಸಿದ ತಾಮ್ರಪತ್ರಗಳು	ಪ್ರೊ. ಲಕ್ಷ್ಮಣ್ ತೆಲಗಾವಿ	೮೬
೨೦.	ಕೊಳ್ಳೇಗಾಲ ಪಟ್ಟಣದಲ್ಲಿ ದೊರೆತ ಅಪ್ರಕಟಿತ ಶಾಸನ	ಕುಮಾರಸ್ವಾಮಿ ಎಸ್.ಡಿ.	೯೭
೨೧.	ಕಂಪಿಲದೇವರಾಯನ ಅವಧಿಯ ಶಾಸನ ಪತ್ತೆ	ಡಾ. ಗಿರಿಜಾ	೯೯
೨೨.	ಜೇಗರಕಲ್ ಪರಿಸರದ ಅಪ್ರಕಟಿತ ಶಾಸನಗಳು	ಡಾ. ಚನ್ನಬಸಪ್ಪ ಮಲ್ಕಂದಿನ್ನಿ	೧೦೦

೨೩.	ಕೆಳದಿ ನಾಯಕರ ಹಾಗೂ ಬಂಗರಸರ, ಅಪ್ರಕಟಿತ ಶಾಸನಗಳು	ಹೆಚ್.ಆರ್. ಪಾಂಡುರಂಗ	೧೦೯
೨೪.	ಚಿಕ್ಕನಹಳ್ಳಿ ಗ್ರಾಮದ ಅಪ್ರಕಟಿತ ವೀರಮಾಸ್ತಿ ಶಾಸನ	ಹೊನ್ನೂರುಸ್ವಾಮಿ ಹೆಚ್.	೧೧೩
೨೫.	ಯಾದವಾಡದ ಜೈನ ಶಿಲ್ಪಗಳು ಮತ್ತು ಶಾಸನಗಳು	ಡಾ. ಅಪ್ಪಣ್ಣ ಎನ್.ಹಂಜೆ	೧೧೫
೨೬.	"ಹರಿಹರದ" ಹೊಸ ಶಾಸನ ಮತ್ತು ಶೋಧಗಳು	ಡಾ. ಹರಿಹರ ಶ್ರೀನಿವಾಸರಾವ್	೧೨೩
೨೭.	ಹೊನ್ನೂರಿನ ಅಪ್ರಕಟಿತ ಶಾಸನ ಮತ್ತು ಮೂರ್ತಿ ಶಿಲ್ಪಗಳು	ಅನಿಲ್ ಎಲ್.	೧೨೬
೨೮.	ಸೀಬಿ ದೇವಾಲಯದ ದಾಖಲೆಗಳು	ಡಾ. ಬಿ. ನಂಜುಂಡಸ್ವಾಮಿ	೧೩೦
೨೯.	ಕೈಫಿಯತ್ತುಗಳಲ್ಲಿ ವಿವರಿಸಿರುವ ಕೆಲವು ಪ್ರಮುಖ ಅಮರ ನಾಯಕರು ಮತ್ತು ಅವರ ಕರ್ತವ್ಯಗಳು - ಪುನರ್ ಪರಿಶೀಲನೆ	ಡಾ. ಬಿ.ಎಸ್. ಪುಟ್ಟಸ್ವಾಮಿ	೧೩೭
೩೦.	ರಾಷ್ಟ್ರಕೂಟ ದೊರೆಗಳ ಶಾಸನಗಳಲ್ಲಿ ಕಣ್ವಶಾಖೆಯ ಬ್ರಾಹ್ಮಣರು	ಸುರೇಖಾ ಕುಲಕರ್ಣಿ	೧೪೬
೩೧.	ಹುನಗುಂದ ತಾಲೂಕಿನ ಶಾಸನೋಕ್ತ ಅಗ್ರಹಾರಗಳು ಮತ್ತು ಬ್ರಹ್ಮಪುರಿ	ಗೀತಾಬಾಯಿ ಬಡಿಗೇರ	೧೪೯
೩೨.	ಕಲ್ಯಾಣ ಚಾಲುಕ್ಯರ ಒಂದನೆಯ ಸೋಮೇಶ್ವರನ ಧಾರ್ಮಿಕ ಶಾಸನಗಳು	ಡಾ. ಡಿ.ಎಂ. ನಾಗರಾಜು	೧೫೧
೩೩.	ತಲಕಾಡಿನ ಗಂಗರ ಕಾಲದ ಸಾರಿಗೆ ಸಂಪರ್ಕಗಳು ಒಂದು ವಿಶ್ಲೇಷಣೆ	ಡಾ. ಹನುಮ ನಾಯಕ	೧೫೫
೩೪.	ಶಾಸನೋಕ್ತ ಕನ್ನಡ ಶಾಖೆಯ ಬ್ರಾಹ್ಮಣರು	ಡಾ. ಕೆ. ವಸಂತಲಕ್ಷ್ಮೀ	೧೫೯
೩೫.	ತುಳುನಾಡಿನಲ್ಲಿ ಹೊಯ್ಸಳರು-ಶಾಸನೋಕ್ತ ಆರ್ಥಿಕ ವಿಶ್ಲೇಷಣೆ	ಮಧುರಾಜ್	೧೬೪
೩೬.	ಇಮ್ಮಡಿ ವೀರಬಲ್ಲಾಳನ ಶಾಸನೋಕ್ತ ಬಿರುದುಗಳು	ಸತೀಶ್‌ಕುಮಾರ್ ಬಿ.ವಿ. ಮುನಿಕೆಂಪೇಗೌಡ	೧೬೮
೩೭.	ಹೊಯ್ಸಳರ ಕಾಲದ ಮಂಡ್ಯ ಪ್ರದೇಶದ ಜೈನಧರ್ಮ	ಡಾ. ಎಸ್. ಶಿವರಾಮು	೧೭೮
೩೮.	ಮಂಡ್ಯ ಜಿಲ್ಲೆಯಲ್ಲಿ ಹೊಯ್ಸಳರ ಕಾಲದ ಶಾಸನೋಕ್ತ ಆಡಳಿತ	ಡಾ. ಟಿ. ರಾಜು.	೧೮೩
೩೯.	ಹೊಯ್ಸಳರ ಕಾಲದ ತೆಲ್ಲಿಗರು ಒಂದು ಅವಲೋಕನ	ಡಾ. ಎಚ್. ಉಷಾರಾಣಿ	೧೮೬
೪೦.	ಶ್ರೀಮದಿಕ್ಕೇರಿ ಸಾಗರದಲ್ಲಿರುವ ಶ್ರೀಮದ್ರಾಮಾನುಜ ಲೋಕಾಚಾರ್ಯ ಮಠ-ಟಿಪ್ಪಣಿ	ಡಾ. ಕೆಳದಿ ವೆಂಕಟೇಶ್ ಜೋಯಿಸ್	೧೮೯
೪೧.	ಕೆಳದಿ ಅರಸರ ಕಾಲಾವಧಿಯಲ್ಲಿನ ಶೃಂಗೇರಿ ಮಠದ ಸಾಮಾಜಿಕ ವ್ಯವಸ್ಥೆ	ಹೆಚ್. ವಿರುಪಾಕ್ಷಪ್ಪ ಡಾ. ಹೆಚ್. ವಿಷ್ಣುವರ್ಧನ	೧೯೫
೪೨.	ವಿಜಯನಗರ ಪೂರ್ವ ಶಾಸನಗಳಲ್ಲಿ ವೀರಭದ್ರ ಆರಾಧನೆ	ಸರಸ್ವತಿ ಟಿ.	೨೦೨
೪೩.	ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಆಳ್ವಿಕೆಯ ಕೆಲವು ಮಹತ್ವದ ಅಂಶಗಳು: ಒಂದು ವಿವೇಚನೆ	ಬೋರಯ್ಯ ಆರ್.ಎನ್.	೨೦೪
೪೪.	ಮೈಸೂರು ಸೀಮೆಯ ಶಾಸನಗಳಲ್ಲಿ ಕಾವೇರಿ	ಡಾ. ಕೋ.ವೆಂ. ರಾಮಕೃಷ್ಣೇಗೌಡ	೨೦೭
೪೫.	"ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಂದಾಯ ವ್ಯವಸ್ಥೆ"	ನಾಗರಾಜ ಸಿ.ಎಸ್.	೨೧೧
೪೬.	ಹುಲಿಯ ಜಂಗುಳಿಯ ಮೊತ್ತ : ಒಂದು ಪರಿಚಯ	ಡಾ. ಎನ್.ಆರ್. ಲಲಿತಾಂಬ	೨೧೪

೪೭. ಕಾರಗಹಳ್ಳಿ ಕಾಳಗ ಹಲವು ಹೊಸ ವಿಚಾರಗಳು ಡಾ. ಟಿ.ಎಲ್. ಜಗದೀಶ ೨೨೦

೪೮. ಹೂವಿನಹಡಗಲಿ ತಾಲೂಕಿನ ಶಾಸನಗಳಲ್ಲಿ ಕಂಡುಬರುವ ತೋಟದ ಉಲ್ಲೇಖಗಳು ಡಾ. ಎ. ನಾಗವೇಣಿ ೨೨೪

೪೯. ಕುರುಬರಿಗೆ ಸಂಬಂಧಿಸಿದ ಶಾಸನೋಕ್ತ ಗ್ರಾಮನಾಮಗಳು ಡಾ. ಎಫ್. ಟಿ. ಹಳ್ಳಿಕೇರಿ ೨೨೯

೫೦. ಮಂಡ್ಯ ಜಿಲ್ಲೆಯ ಶಾಸನೋಕ್ತ ಜೈನಾಚಾರ್ಯರುಗಳು ರೂಪೇಶ್‌ಕುಮಾರ್ ಹೆಚ್.ಎಲ್. ೨೩೨

೫೧. ಹೂಲಿ ಶಾಸನಗಳಲ್ಲಿ ಸ್ಥಳೀಯ ಅಧಿಕಾರಿಗಳು ಡಾ. ಕೆ.ಎಸ್. ಪಾಟೀಲ ೨೩೯

೫೨. ಪ್ರಾಚೀನ ಕರ್ನಾಟಕದ ಕನ್ನಡ ಶಾಸನಗಳಲ್ಲಿ ಕೃಷಿ ತೆರಿಗೆ ರಂಜಿತಾ ಆರ್. ೨೪೪

೫೩. ಮುಳಗುಂದ ನಾಡಿನ ಶಾಸನಗಳಲ್ಲಿ ಲಿಪಿಕಾರರು ಡಾ. ಬಿ. ಸುರೇಶ ೨೪೯

೫೪. ನಾಗಮಂಗಲ ತಾಲೂಕಿನ ಶಾಸನೋಕ್ತ ಕೆರೆ-ಕಟ್ಟೆಗಳು ಡಾ. ಟಿ. ಉಮಾ, ಡಾ. ಜಿ. ಕರಿಯಪ್ಪ ೨೫೧

೫೫. ಮಧ್ಯ ಮಲೆನಾಡಿನ ಶಾಸನೋಕ್ತ ವೃತ್ತಿಗಳು ಮತ್ತು ಉದ್ದಿಮೆಗಳು (ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ) ಡಾ. ಕೆ.ಪಿ. ಪ್ರಕಾಶ ೨೫೫

೫೬. ದಾವಣಗೆರೆ ಜಿಲ್ಲೆಯ ಪ್ರಾಚೀನ ಅಗ್ರಹಾರಗಳಲ್ಲಿಯ ಶಿಕ್ಷಣ ಮತ್ತು ಶಿಕ್ಷಣೇತರ ಕಾರ್ಯಗಳು ವೈ. ಮದ್ದಾನಸ್ವಾಮಿ ೨೫೭

೫೭. ಕುಂದಗೋಳ ತಾಲೂಕಿನ ಶಾಸನೋಕ್ತ ಶೈವ ದೇವಾಲಯಗಳು ಮಂಗಲಾ ಎಂ. ಗೌಡ ೨೬೧

೫೮. ಗಜಮುಖಿ ಅರ್ಥಾಥ್ ಗಣೇಶಾಣಿ ಸಿದ್ಧರಗಿರಿ ಓ.ಎಲ್. ಚಂದ್ರೇಗೌಡ ೨೬೬

೫೯. ಮಹಿಳೆ ಆತ್ಮ ಬಲಿದಾನ : ಅಪರೂಪದ ಶಿಲ್ಪ ಡಾ. ಎಸ್.ಎಂ. ಧನರಾಜ್ ೨೭೧

೬೦. ಲಕ್ಷ್ಮೀಸಾಗರ ಗ್ರಾಮದ ರಾಷ್ಟ್ರಕೂಟರ ಕಾಲದ ಸಿಡಿತಲೆ ವೀರಗಲ್ಲು ಆರ್. ಶೇಜೇಶ್ವರ್ ೨೭೩

೬೧. ನರೇಗಲ್ಲಿನ 'ತುರುಗೋಳ್ ಶಿಲ್ಪ' ಡಾ. ಮಲ್ಲಿಕಾರ್ಜುನ ಕುಂಬಾರ ೨೭೫

೬೨. "ಚಿತ್ರದುರ್ಗ ಜಿಲ್ಲೆ ಹುಲಿಬೇಟೆ ವೀರಗಲ್ಲುಗಳು" ಕೆ.ಟಿ. ಮಹಹಂತೇಶ ೨೭೬

೬೩. ಪರಸನಹಳ್ಳಿಯಲ್ಲಿ ದೊರೆತ ಕ್ರಿ.ಶ. ೧೧ನೇ ಶತಮಾನದ ಗಣೇಶ ಹಾಗೂ ವಿಷ್ಣು ಶಿಲ್ಪಗಳು ನಿಂಗನಗೌಡ ಹ. ದೇಸಾಯಿ ೨೮೦

೬೪. ಬಾದಾಮಿ ತಾಲೂಕಿನ ಗುಳೇದಗುಡ್ಡ ಹತ್ತಿರದ ಪರ್ವತಿಯಲ್ಲಿ ದಶಾವತಾರಿ ವಿಷ್ಣು ಕಂಬಗಳ ಉಬ್ಬು ಶಿಲ್ಪಗಳು ಮಹಾದೇವ ಮಾ. ಜಗತಾಪ ೨೮೨

೬೫. "ಲಿಂಗಾಂಬುಧಿ ಕೆರೆಯಲ್ಲಿನ ವಿಷ್ಣುಶಿಲ್ಪ ಹಾಗೂ ಪರಂಪರೆ" ಡಾ. ಬಿ. ಬಸವರಾಜು ತಗರಪುರ ೨೮೬

೬೬. ಹಂಪಿಯಲ್ಲಿ ದೊರೆತ ಅಪರೂಪದ ಅಷ್ಟಭುಜ ವಿಷ್ಣು ಶಿಲ್ಪ ಡಾ. ಪದ್ಮಜಾ ದೇಸಾಯಿ ೨೮೮

೬೭. ಹಂಪಿ ಪರಿಸರದ ಕಂಕಾಳಮೂರ್ತಿ ಶಿಲ್ಪಗಳು ಡಾ. ಮೇಣಸಿಗಿ ಹೇಮಾವತಿ ಶಿವಾನಂದ ೨೯೨

೬೮. ಚಿತ್ರದುರ್ಗ ಜಿಲ್ಲೆಯಲ್ಲಿ ಜೈನ ನಿಷದಿ ಶಿಲ್ಪಗಳು ಡಾ. ಜಯಮ್ಮ ಬಿ. ೨೯೭

೬೯. ನಂದಿಗುಡಿ ಪರಿಸರದ ನಂದಿ (ವೃಷಭ) ಶಿಲ್ಪಗಳು ಡಾ. ಬಿ.ಸಿ. ರಾಕೇಶ್ ೩೦೦

೭೦. ಗದುಗಿನ ತ್ರಿಕೂಟೇಶ್ವರ ದೇವಾಲಯದ ಕಥಾ ನಿರೂಪಕ ಶಿಲ್ಪಗಳು ಪಾಟೀಲ ಡಿ.ಎಲ್. ೩೦೪

೭೧. ಸಿರದ ಗಾಳ-ಗಂಟಲು ಗಾಳ ಸಿಡಿದೆಲೆಯ ಒಂದು ಸಾಧನ ಡಾ. ಜಗದೀಶ್ ೩೧೦

೭೨.	ಕರ್ನಾಟಕದಲ್ಲಿ ದೇವಾಲಯ ಬೆಳವಣಿಗೆಯ ಮೊದಲ ಹೆಜ್ಜೆಗಳು ಔತ್ತರೇಯ ಸಂಪ್ರದಾಯ	ಎಂ.ಎನ್. ಪ್ರಭಾಕರ್	೩೧೨
೭೩.	ಶಾಸ್ತ್ರಗ್ರಂಥಗಳಲ್ಲಿರುವಂತೆ ಶಿಲ್ಪಿ–ಸ್ಥಪತಿಗಳ ಜ್ಞಾನ–ಕಾರ್ಯ–ಸ್ಥಾನ	ಡಾ. ಕೂ.ಸ. ಅಪರ್ಣ	೩೧೭
೭೪.	ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರ ದೇವಾಲಯ : ಕೆಲವು ಸಂಗತಿಗಳು	ಡಾ. ಬಿ. ರಾಜಶೇಖರಪ್ಪ	೩೨೩
೭೫.	ರಾಮನಗರ ಜಿಲ್ಲೆಯಲ್ಲಿ ಬೌದ್ಧ ನೆಲೆಗಳ ಕುರುಹುಗಳು	ಡಾ. ಕನ್ಯಾಕುಮಾರ್ ಪಿ.	೩೩೧
೭೬.	ಚನ್ನಪಟ್ಟಣ ತಾಲ್ಲೂಕಿನ ಪ್ರಾಚೀನ ಲಕುಲೀಶ ಪಂಥದ ಕೇಂದ್ರಗಳು	ಡಾ. ಎಂ.ಕೆ. ಮಂಜುನಾಥ ಕೆ.ವಿ. ಮುರುಳಿ	೩೩೪
೭೭.	ಬಾಸವೂರು ಕಂಪಣದಲ್ಲಿ ಶೈವಧರ್ಮ	ಶಿವಯೋಗಿ ಕೋರಿಶೆಟ್ಟರ	೩೩೮
೭೮.	ಪುಷ್ಪಗಿರಿ ಮಲ್ಲಿಕಾರ್ಜುನ ದೇವಾಲಯ ಒಂದು ಅವಲೋಕನ	ರೇಣುಕ ಸಿ.ಕೆ. ಡಾ. ಲೋಕೇಶ್ ಸಿ.ಈ.	೩೪೨
೭೯.	ಮರ್ಕುಲಿಯ ಪಂಚಕೂಟ ಜಿನಾಲಯ	ಡಾ. ಸನ್ಮತಿಕುಮಾರ್	೩೪೬
೮೦.	ಬೇವೂರಿನ ದೇವಾಲಯದ ವಿವೇಚನೆ	ಡಾ. ದತ್ತಾತ್ರೇಯ ಜಿ. ಕುಲಕರ್ಣಿ	೩೪೯
೮೧.	ಬಾದಾಮಿ ಪರಿಸರದಲ್ಲಿನ ತಾಂತ್ರಿಕ ಪ್ರಯೋಗದ ಕೊಳ್ಳಗಳು	ಡಾ. ಸಂಧ್ಯಾ ವಿ.	೩೫೧
೮೨.	ಸ್ವಯಂ ಅಭಿಷೇಕದ ಮಲಪನಗುಡಿಯ ಮಲ್ಲಿಕಾರ್ಜುನ ದೇವಾಲಯ	ಶ್ರೀಶೈಲ ಎಂ. ಮನಗುತ್ತಿ	೩೫೮
೮೩.	ಚಿತ್ರದುರ್ಗ ಜಿಲ್ಲೆಯ ವಿಜಯನಗರ ನಂತರ ಕಾಲದ ನರಸಿಂಹಸ್ವಾಮಿ ದೇವಾಲಯಗಳು	ಡಾ. ಶಕುಂತಲ ವೀರಭದ್ರಯ್ಯ ಎನ್.	೩೬೦
೮೪.	ವಿಜಯನಗರ ಕಾಲದ ಇಸ್ಲಾಂ ವಾಸ್ತುಶೈಲಿ: ಮರುನಿರೂಪಣೆ	ಅಕ್ತರ್ ಖಾನಂ ಹೆಚ್.ಎಸ್. ಮುನಿರಾಜ್ ಎಸ್.	೩೬೬
೮೫.	ಕೊಡಗಿನ ಕೆಲವು ಪ್ರಾಚೀನ, ಅರ್ವಾಚೀನ ಜನಾಂಗಗಳ ಚಾರಿತ್ರಿಕ–ಸಾಂಸ್ಕೃತಿ ವೈಶಿಷ್ಟ್ಯಗಳು	ಡಾ. ಎಂ.ಜಿ. ನಾಗರಾಜ್	೩೭೦
೮೬.	ರಾಮನಗರ ಜಿಲ್ಲೆಯಲ್ಲಿ ರಾಜಕೀಯ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತ್ಯಂತರಗಳು	ವಿ.ಪಿ. ಗುರುಶಾಂತ್	೩೮೦
೮೭.	ಗೋವೆ ಕದಂಬರ ಆಡಳಿತ ವಿಭಾಗಗಳು	ಸದಾಶಿವ ಎಸ್. ಮುಗಳಿ	೩೮೫
೮೮.	ದಾವಣಗೆರೆಯ ಜಿಲ್ಲೆಯಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಕೈಗಾರಿಕೋದ್ಯಮಗಳು	ಡಾ. ಎನ್.ಜಿ. ಸಂತೋಷ್	೩೯೦
೮೯.	ಚಿತ್ರದುರ್ಗ ಕೋಟೆಯೊಳಗೆ ೧೮ನೇ ಶತಮಾನದಲ್ಲಿ ಸಂಭವಿಸಿದ ಭೂನಡುಕ: ಒಂದು ಟಿಪ್ಪಣಿ	ಡಾ. ಹೆಚ್. ಚಂದ್ರಶೇಖರ	೩೯೪
೯೦.	ಎಂ.ಎಂ. ಕಲಬುರ್ಗಿ ಮತ್ತು ಚಾರಿತ್ರಿಕ ಕಾವ್ಯ ಸಂಪಾದನೆ	ಶ್ವೇತಾ ಎಚ್.ಬಿ.	೩೯೮
೯೧.	ರಾಣಿ ಚೆನ್ನಭೈರಾದೇವಿ ಮತ್ತು ಇಮ್ಮಡಿ ಅಂಕುಶ ರಾಯನ ನಾಣ್ಯಗಳು	ಮಂದರ್ಕೆ ನಿತ್ಯಾನಂದ ಪೈ	೪೦೨
೯೨.	ಅಂಕನಾಥಪುರ ಗ್ರಾಮದಲ್ಲಿ ದೊರೆತ ಈಸ್ಟ್ ಇಂಡಿಯ ಕಂಪೆನಿ ಮತ್ತು ಬ್ರಿಟೀಷ್ ನಾಣ್ಯಗಳು	ಕೆಂಡಮ್ಮ ಕೆ.	೪೦೪
೯೩.	ಸಾಕ್ಷರ ಲೋಕದ ದಾರಿದೀಪ "ಬೆಳಕು" ಪತ್ರಿಕೆ	ಮಂಜುಳ ಎ.ಸಿ.	೪೦೭
೯೪.	ಉತ್ತರಾದಿ ಸಂಗೀತಕ್ಕೆ ಧಾರವಾಡ ಪ್ರದೇಶದ ಕೊಡುಗೆ	ಡಾ. ಸುಷಮಾ ಆರೂರ್	೪೧೧


೯೫.	ಪೇಠಶಿರೂರ ಲಾಳಿಯವರ ಮನೆಯಲ್ಲಿನ ಭಿತ್ತಿ ಚಿತ್ರಗಳು	ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ	೪೧೬
೯೬.	ಹೈದರಾಲಿ ಪೂರ್ವಿಕರ ಸಮಾಧಿ ಭವನ–ಕೋಲಾರ	ಆದಪ್ಪ ಪಾಸೋಡಿ	೪೨೦
೯೭.	ಪಾರಂಪರಿಕ ನಗರಗಳು ಮತ್ತು ಪರಂಪರಾವಲಯ : ಅವಶ್ಯಕತೆ ಮತ್ತು ಸಾಧ್ಯತೆ (ಬೆಳಗಾವಿ ನಗರವನ್ನು ಅನುಲಕ್ಷಿಸಿ)	ಡಾ. ಸ್ಮಿತಾ ಸುರೇಬಾನಕರ	೪೨೮
೯೮.	ಬಿಜಾಪುರ ಆದಿಲ್‌ಶಾಹಿಗಳಿಗೆ ಸಂಬಂಧಿಸಿದ ಜನಪದ ಹಾಗೂ ಇತಿಹಾಸ	ಡಾ. ಅಮರೇಶ ಯತಗಲ್	೪೩೨
೯೯.	ದಾವಣಗೆರೆ ನಗರಕ್ಕೆ ರೈಲು ಸಂಪರ್ಕ–ಬ್ರಿಟಿಷರು ಮತ್ತು ಮೈಸೂರು ಒಡೆಯರ ಪ್ರಯತ್ನಗಳು	ಡಾ. ಬಿ.ಪಿ. ಕುಮಾರ್	೪೩೫
೧೦೦.	ಕರ್ನಾಟಕ ಏಕೀಕರಣ ಚಳುವಳಿ ಮತ್ತು ಚಿತ್ರದುರ್ಗ ಜಿಲ್ಲೆ	ಡಾ. ಎಚ್.ಈ. ಬಸವರಾಜಪ್ಪ	೪೩೮
೧೦೧.	ರಾಜ್ಯ ಪತ್ರಾಗಾರದ ಪರಿಚಯ ಮತ್ತು ಕಾರ್ಯಚಟುವಟಿಕೆಗಳು	ಮಂಜುಳಾ ಯಲಿಗಾರ	೪೪೨
೧೦೨.	ಸದಾಶಿವಮಠ, ಕಮಲಾಪುರ	ಡಾ. ಸಿ.ಎಸ್. ವಾಸುದೇವನ್	೪೪೬
೧೦೩.	ಪ್ರೊ. ಎಸ್.ಎಸ್. ಬಸವನಾಳ ಗ್ರಂಥಾಲಯ ಕನ್ನಡ ಸಂಶೋಧನ ಸಂಸ್ಥೆ	ಡಾ. ಸದಾನಂದ ಆರ್. ಶೆಟ್ಟಿ ರಮೇಶ್ ಮಾ. ಮೊರಬ	೪೫೨
೧೦೪.	ಸಾಹಿತ್ಯಕ್ಕೆ ಕನ್ನಡ ಸಂಶೋಧನ ಸಂಸ್ಥೆಯ ಕೊಡುಗೆ	ಡಾ. ಶಿವರಾಜ ಯತಗಲ್	೪೫೬
೧೦೫.	ಸ್ವದೇಶಿ ಚಳವಳಿಯಲ್ಲಿ ಪೈಸಾ ಫಂಡ್ ಪಾತ್ರ	ಡಾ. ಎ.ಬಿ. ವಗ್ಗರ	೪೫೯
೧೦೬.	ಕನ್ನಡ ಸಂಶೋಧನ ಸಂಸ್ಥೆಯ ಪ್ರಾಚ್ಯವಸ್ತು ಸಂಗ್ರಹಾಲಯದ ಮೂಲಾಕಾರಗಳು	ಡಾ. ಎಸ್.ಕೆ. ಮೇಲಕಾರ	೪೬೧
೧೦೭.	ಗ್ರಾಮೀಣ ಪರಿಸರದ ವಿದ್ಯಾರ್ಥಿ ನಿಲಯ : ವಿ.ಎಫ್. ಹಾಸ್ಟೆಲ್	ಡಾ. ಕೆ. ರವೀಂದ್ರನಾಥ	೪೬೫
೧೦೮.	ಕರ್ನಾಟಕದಲ್ಲಿ ಬಾಸೆಲ್ ಮಿಶನ್	ಡಾ. ಅಶೋಕ್ ರಾಕೇಶ್ ಡಿ'ಸೋಜ	೪೬೮
೧೦೯.	ಕುಕನೂರಿನ ವಿದ್ಯಾನಂದ ಗುರುಕುಲ	ಡಾ. ಫಕೀರಪ್ಪ ವಜ್ರಬಂಡಿ	೪೭೫
೧೧೦.	ಸ್ವಾತಂತ್ರ್ಯ ಚಳುವಳಿಗೆ ಹಗರಿಬೊಮ್ಮನಹಳ್ಳಿ ತಾಲೂಕಿನ ಹೋರಾಟಗಾರರ ಪಾತ್ರ	ಭೋಜ್ಯನಾಯ್ಕ ಎಲ್.ಎಚ್.	೪೭೯
೧೧೧.	ದಲಿತ ಸ್ವಾತಂತ್ರ್ಯ ಹೋರಾಟಗಾರ ದಾವಣಗೆರೆಯ ಬಿ. ಶಾಮಪ್ಪ	ಡಾ. ಎಚ್.ಎಸ್. ತಿಪ್ಪೇಸ್ವಾಮಿ	೪೮೨
೧೧೨.	ದಾಸ ಸಾಹಿತ್ಯಕ್ಕೆ ಹರಪನಹಳ್ಳಿ ಭೀಮವ್ವನವರ ಕೊಡುಗೆ ಹೊಸ ಶೋಧ	ಟಿ.ಹೆಚ್.ಎಂ. ಬಸವರಾಜ	೪೮೫
೧೧೩.	ಸ್ವಾತಂತ್ರ್ಯ ಹೋರಾಟದಲ್ಲಿ ಶಿವಪ್ಪ ಬಸಪ್ಪ ನೆಲ್ಲೂರರ ಪಾತ್ರ	ಶ್ರೀಮತಿ ಸರೋಜಿನಿ. ನೀ.ಹೊಸಕೇರಿ	೪೮೮
೧೧೪.	ಸ್ವಾತಂತ್ರ್ಯ ಹೋರಾಟಗಾರ ಅಥರಗಾ ಗ್ರಾಮದ ಶಿವಲಿಂಗಪ್ಪಾ ಗುಣಕಿ	ಎಂ.ಎಚ್. ಮೊಕಾಶಿ	೪೯೨
೧೧೫.	ಸಂಶೋಧನಾ ಕ್ಷೇತ್ರಕ್ಕೆ ಶ್ರೀ ಚನ್ನಮಲ್ಲಿಕಾರ್ಜುನರ ಕೊಡುಗೆ	ಜಯದೇವಪ್ಪ ಜೈನಕೇರಿ	೪೯೬
೧೧೬.	ಕುಣಿಗಲ್ ತಾಲ್ಲೂಕು ಹ(ಅ)ಂದಲಗೆರೆ ಗ್ರಾಮದ ನಾಮವಿವೇಚನೆ ಮತ್ತು ಪ್ರಾಚ್ಯವಶೇಷಗಳು	ಹಂ.ಗು. ರಾಜೇಶ್	೪೯೯
೧೧೭.	ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಪತ್ತಿನ ಕರ್ನಾಟಕವನ್ನು ಸುತ್ತೋಣ	ಡಾ. ಎಸ್.ಕೆ. ಜೋಶಿ	೫೦೩
೧೧೮.	ಹಾವೇರಿ ಜಿಲ್ಲೆಯಲ್ಲಿ ಆದಿಲ್‌ಶಾಹಿಗಳ ಕಾಲದ ಬಾವಿಗಳು	ಡಾ. ರಮಾ ಜಿ. ಗುಂಡುರಾವ್ ಡಾ. ಎಸ್.ಕೆ. ಮೇಲಕಾರ	೫೦೬
೧೧೯.	ಕೊಪ್ಪಳ ಜಿಲ್ಲೆಯ ಐತಿಹಾಸಿಕ ಬಾವಿಗಳು	ಶಿವಪ್ಪ	೫೦೯
೧೨೦.	ಯಾದಗಿರಿ ಜಿಲ್ಲೆಯ ಪುರಾತನ ಬಾವಿಗಳು	ರೇವ್ಯಾಗೋವಿಂದ ನಾಯಕ್	೫೧೨

೧೨೧. ಗಜೇಂದ್ರಗಡದ ಸ್ಮಾರಕಗಳು — ಪ್ರೊ. ಶಕುಂತಲಾ ಸಿಂಧೂರ — ೫೧೬
೧೨೨. "ಗಂಗಾವತಿ ಪರಿಸರದ ಸ್ಮಾರಕ ಮತ್ತು ಶಿಲ್ಪಗಳು" — ಗೀತಾ ಪೋಲಿಸ ಪಾಟೀಲ್ — ೫೨೦
೧೨೩. ಕಳಸ ಪಟ್ಟಣದ ಪ್ರಾಚ್ಯಾವಶೇಷಗಳು — ಸುಪ್ರೀತ ಕೆ.ಎನ್. — ೫೨೬
೧೨೪. ಕುಣಿಗಲ್ ಪಟ್ಟಣದ ಪ್ರಾಚೀನ ದೇವಾಲಯಗಳು — ರೇವಣಸಿದ್ದಯ್ಯ ಕೆ. — ೫೩೧
೧೨೫. ರಾವುಗೋಡ್ಲು ಪರಿಸರದ ಕೆಲವು ಪ್ರಾಚ್ಯಾವಶೇಷಗಳು — ಡಾ. ಮುತ್ತುರಾಜು — ೫೩೭
೧೨೬. ಹಿರಿಯೂರು ತಾಲ್ಲೂಕು ಬಿದರಕೆರೆಯ ಪ್ರಾಚ್ಯಾವಶೇಷಗಳು — ಕಾಂತರಾಜ್ ಎಚ್. ದೊಡ್ಮನೆ — ೫೪೧
೧೨೭. ಕ್ಯಾಸನೂರು ಮನೆತನ ಮತ್ತು ಪ್ರಾಚ್ಯಾವಶೇಷಗಳು — ಮಲ್ಲೇಶಪ್ಪ ಒ. ಗೊಲ್ಲರ್, ಪ್ರೊ. ಎಸ್.ಬಿ. ಹಿರೇಮಠ — ೫೪೪
೧೨೮. ಕಬ್ಬಳ್ಳಿ ಗ್ರಾಮದ ಪ್ರಾಚ್ಯಾವಶೇಷಗಳು — ಸಮೀವುಲ್ಲಾ — ೫೫೧
೧೨೯. ರಾಯಚೂರು ದೇವಾಲಯಗಳ ಪ್ರಾಚ್ಯಾವಶೇಷಗಳು — ರಡ್ಡೆಪ್ಪಹಳ್ಳಿ — ೫೫೩
೧೩೦. ಹಗರಿಬೊಮ್ಮನಹಳ್ಳಿ ತಾಲೂಕು ಅಲಬೂರು ಗ್ರಾಮದಲ್ಲಿರುವ ಪ್ರಾಚ್ಯಾವಶೇಷಗಳು — ಮಂಜುನಾಯ್ಕ ಆರ್. — ೫೫೮
೧೩೧. ಮಾಳಹಳ್ಳಿಯ ವೀರಗಲ್ಲು ಹಾಗೂ ಪರಿಸರ — ಬಿ.ಕೆ. ದೇವರಾಜ ಜೆ. ಬಾಗೇವಾಡಿ — ೫೬೩
೧೩೨. ನಲ್ಕುದುರೆಯ ಪ್ರಾಚ್ಯಾವಶೇಷಗಳು — ಸಂತೆಬೆನ್ನೂರು ಸುಮತೀಂದ್ರ ನಾಡಿಗ್ — ೫೬೫
೧೩೩. ದೊಡ್ಡೇರಿ ಗ್ರಾಮದ ವೀರಗಲ್ಲುಗಳು — ರವೀಂದ್ರ ಜೆ.ಸಿ. — ೫೬೭
೧೩೪. ಹರ್ತಿ ಕೋಟೆಯ ಪ್ರಾಚ್ಯಾವಶೇಷಗಳು — ಹೊನ್ನಮ್ಮ ಎಸ್. ಗುಡಿಯಾಳ್ — ೫೬೯
೧೩೫. ಕೃಷ್ಣರಾಜನಗರ ತಾಲ್ಲೂಕು ಪರಿಸರದ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳ ಪರಿಚಯ — ಡಾ. ಹೆಚ್.ಎನ್. ಕಾಳಸ್ವಾಮಿ — ೫೭೩
೧೩೬. ಇಟಕದಿಬ್ಬನ ಹಳ್ಳಿಯ ಸುತ್ತಮುತ್ತ ಸಿಕ್ಕಿರುವ ಪ್ರಾಚೀನ ಅವಶೇಷಗಳು — ಕೆ. ಪುಟ್ಟಕಾಮಯ್ಯ — ೫೭೭
೧೩೭. ಕೂಡ್ಲಿಗಿ ಪಟ್ಟಣದಲ್ಲಿರುವ ಬ್ರಿಟಿಷರ ಸ್ಮಾರಕಗಳು — ಸಣ್ಣಪಾಲಯ್ಯ ಬಿ.ಪಿ. — ೫೮೨
೧೩೮. ಕಲಾದಗಿ ಪರಿಸರದಲ್ಲಿ ವಸಾಹತು ಕಾಲದ ಸ್ಮಾರಕಗಳು — ಲೋಕಣ್ಣ ಭಜಂತ್ರಿ — ೫೮೬
೧೩೯. ಹಾಲಸಾಗರ ಗ್ರಾಮದ ಪ್ರಾಚ್ಯಾವಶೇಷಗಳು — ತಿಪ್ಪೇಶ ಹೆಚ್.ಎಂ. — ೫೯೧
೧೪೦. ಲಿಂಗಣ್ಣ ಕವಿಯ ಕೆಳದಿ ನೃಪವಿಜಯದಲ್ಲಿ ಅಕ್ಕಣ್ಣ–ಮಾದಣ್ಣ — ಡಾ. ಕೆಳದಿ ಗುಂಡಾಜೋಯಿಸ್ — ೫೯೬
* ವಾರ್ಷಿಕ ವರದಿ — ೬೦೫

ಕರ್ನಾಟಕ ಇತಿಹಾಸ ಅಕಾದೆಮಿಯ ವಾರ್ಷಿಕ ಅಧಿವೇಶನಗಳ ಸರ್ವಾಧ್ಯಕ್ಷರು

ಸಂಖ್ಯೆ	ಸರ್ವಾಧ್ಯಕ್ಷರು ದಿನಾಂಕ-ವರ್ಷ/ಸ್ಥಳ ಆಶ್ರಯ/ಸಹಯೋಗ

೧. **ಡಾ|| ಎಂ. ಚಿದಾನಂದಮೂರ್ತಿ**
೧೫-೧೭ ಮೇ ೧೯೮೭
ಕರ್ನಾಟಕ ಇತಿಹಾಸ ಅಕಾದೆಮಿ
ಬೆಂಗಳೂರು



೨. **ಡಾ|| ಜಿ. ಎಸ್. ಗಾಯಿ**
೨೩-೨೪ ಅಕ್ಟೋಬರ್ ೧೯೮೮
ಸಿದ್ಧಗಂಗಾಕ್ಷೇತ್ರ : ಡಾ। ಶಿವಕುಮಾರ
ಸ್ವಾಮಿಗಳು ಮತ್ತು ತುಮಕೂರು ಜಿಲ್ಲಾ
ಇತಿಹಾಸ ಪರಿಷತ್ತು, ತುಮಕೂರು




೩. **ಡಾ|| ಶ್ರೀನಿವಾಸ ರಿತ್ತಿ**
೧೦-೧೧ ಜೂನ್ ೧೯೮೯
ಶ್ರೀ ಮ. ನಿ. ಪ್ರ. ಜ|| ಡಾ|| ತೋಂಟದ
ಸಿದ್ಧಲಿಂಗ ಮಹಾಸ್ವಾಮಿಗಳು,
ಶ್ರೀ ತೋಂಟದಾರ್ಯ ಮಠದ
ವೀರಶೈವ ಅಧ್ಯಯನ ಸಂಸ್ಥೆ, ಗದಗ




೪. **ಡಾ|| ಎಸ್. ಆರ್. ರಾವ್**
೨೧-೨೨ ಜುಲೈ ೧೯೯೦
ಡಾ|| ಸದ್ಯೋಜಾತ ಶಿವಾಚಾರ್ಯ
ಸ್ವಾಮೀಜಿ, ಹಿರೇಮಠ, ದಾವಣಗೆರೆ




೫. **ಡಾ|| ಬಾ. ರಾ. ಗೋಪಾಲ್**
೧೨-೧೪ ಜುಲೈ ೧೯೯೧
ಚಿನ್ಮೂಲಾದ್ರಿ ಶ್ರೀ ಮುರುಘ
ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ



೬. **ಡಾ|| ಕೆ. ವಿ. ರಮೇಶ್**
೧೧-೧೩ ಜುಲೈ ೧೯೯೨
ಪಂಡಿತ್ ತಾರಾನಾಥ ಶಿಕ್ಷಣ ಸಂಸ್ಥೆ
ರಾಯಚೂರು




೭. **ಡಾ|| ಅ. ಸುಂದರ**
೨೩-೨೫ ಜುಲೈ ೧೯೯೩
ಸುತ್ತೂರು ಮಠದ ಶ್ರೀ ಶ್ರೀ ಶಿವರಾತ್ರಿ
ದೇಶಿಕೇಂದ್ರ ಮಹಾಸ್ವಾಮಿಗಳು
ಜೆ. ಎಸ್. ಎಸ್. ಸಂಸ್ಥೆ, ಮೈಸೂರು




ಸಂಖ್ಯೆ	ಸರ್ವಾಧ್ಯಕ್ಷರು ದಿನಾಂಕ-ವರ್ಷ/ಸ್ಥಳ ಆಶ್ರಯ/ಸಹಯೋಗ

೮. **ಡಾ|| ಎಂ. ಎಂ. ಕಲಬುರ್ಗಿ**
೯-೧೦ ಜುಲೈ ೧೯೯೪
ಶ್ರೀ ಎಂ. ವೈ. ಘೋರ್ಪಡೆ
ಕರ್ನಾಟಕ ಸೇವಾ ಸಂಘ
ಸೊಂಡೂರು




೯. **ಡಾ|| ಎ.ವಿ. ನರಸಿಂಹಮೂರ್ತಿ**
೯-೧೧ ಸೆಪ್ಟೆಂಬರ್ ೧೯೯೫
ಶ್ರೀ ಮ. ನಿ. ಪ್ರ. ಸಿದ್ಧರಾಮ
ಮಹಾಸ್ವಾಮಿಗಳು - ಶ್ರೀ ನಾಗನೂರು
ರುದ್ರಾಕ್ಷಿಮಠದ ವೀರಶೈವ ಅಧ್ಯಯನ ಅಕಾದೆಮಿ
ಬೆಳಗಾವಿ




೧೦. **ಡಾ|| ಜಿ. ಎಸ್. ದೀಕ್ಷಿತ್**
೭-೯ ಜೂನ್ ೧೯೯೬
ಕರ್ನಾಟಕ ವಿಶ್ವವಿದ್ಯಾಲಯ ಮತ್ತು
ಶ್ರೀ ಮ. ನಿ. ಪ್ರ. ಶಿವಯೋಗಿ
ಮಹಾಸ್ವಾಮಿಗಳು ಶ್ರೀ ಮುರುಘಾಮಠ
ಧಾರವಾಡ



೧೧. **ಪ್ರೊ|| ಕೆ. ಅಭಿಶಂಕರ್**
೨೫-೨೭ ಅಕ್ಟೋಬರ್ ೧೯೯೭
ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಮಠ
ಹಾಗೂ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ
ಶಿರಸಿ




೧೨. **ಡಾ|| ಎಸ್. ನಾಗರಾಜು**
೧೪-೧೬ ನವೆಂಬರ್ ೧೯೯೮
ಕರ್ನಾಟಕ ಇತಿಹಾಸ ಅಕಾದೆಮಿ
ದಿ ಮಿಥಿಕ್ ಸೊಸೈಟಿ, ಬೆಂಗಳೂರು



೧೩. **ಡಾ|| ಶ್ರೀನಿವಾಸ ಹಾವನೂರ**
೧೧-೧೩ ಜೂನ್ ೧೯೯೯
ಮಾನ್ಯ ಸಚಿವ ಶ್ರೀ ಡಿ. ನಾರಾಯಣದಾಸ್
ಮತ್ತು ಆಯೋಜಕರಾದ ಶ್ರೀ ಕುಂ.ಬಾ.ಸದಾಶಿವಪ್ಪ
ಸ್ವಾಗತ ಸಮಿತಿ, ಹರಪನಹಳ್ಳಿ



೧೪. **ಶ್ರೀ ಸಿ. ಟಿ. ಎಂ. ಕೊಟ್ರಯ್ಯ**
೮-೧೦ ಜುಲೈ ೨೦೦೦
ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ
ಹಂಪಿ



ಸಂಖ್ಯೆ	ಸರ್ವಾಧ್ಯಕ್ಷರು ದಿನಾಂಕ-ವರ್ಷ/ಸ್ಥಳ ಆಶ್ರಯ/ಸಹಯೋಗ	ಸಂಖ್ಯೆ	ಸರ್ವಾಧ್ಯಕ್ಷರು ದಿನಾಂಕ-ವರ್ಷ/ಸ್ಥಳ ಆಶ್ರಯ/ಸಹಯೋಗ

೧೫. **ಡಾ|| ಜ್ಯೋತ್ಸ್ನಾ ಕಾಮತ್**
೧೩-೧೫ ಅಕ್ಟೋಬರ್ ೨೦೦೧
ಪೂಜ್ಯ ಶ್ರೀ ವಿಶ್ವೇಶ್ವರ ತೀರ್ಥ ಪಾದಂಗಳು
ಪೇಜಾವರ ಮಠಾಧೀಶರು, ಉಡುಪಿ



೧೬. **ಡಾ. ಎ.ಕೆ. ಶಾಸ್ತ್ರಿ**
೨೨-೨೪ ಸೆಪ್ಟೆಂಬರ್ ೨೦೦೨
ಪೂಜ್ಯಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು
ಶ್ರೀ ರಾಮಚಂದ್ರಾಪುರ ಮಠ
ಹೊಸನಗರ



೧೭. **ಡಾ. ಎಸ್. ರಾಜಶೇಖರ್**
೧೩-೧೫ ಸೆಪ್ಟೆಂಬರ್ ೨೦೦೩
ವಿಶ್ವಚೇತನ ಸಂಸ್ಥೆ
ಬಾದಾಮಿ



೧೮. **ಶ್ರೀ ಕೆಳದಿ ಗುಂಡಾ ಜೋಯಿಸ್**
೨೪-೨೬ ಸೆಪ್ಟೆಂಬರ್ ೨೦೦೪
ಶ್ರೀ ಚನ್ನಪ್ಪಸ್ವಾಮಿ ವಿದ್ಯಾಪೀಠ
ಚನ್ನ-ಚೇತನ ಪ್ರಕಾಶನ ಮತ್ತು ಹಿರೇಕಲ್ಮಠ
ಹೊನ್ನಾಳಿ



೧೯. **ಡಾ. ಬಿ.ವ್ಹಿ. ಶಿರೂರ**
೧೧-೧೩ ಸೆಪ್ಟೆಂಬರ್ ೨೦೦೫
ಶ್ರೀ ಕೊತ್ತಲ ಬಸವೇಶ್ವರ
ಭಾರತೀಯ ಶಿಕ್ಷಣ ಸಂಸ್ಥೆ, ಸೇಡಂ



೨೦. **ಡಾ. ಸೂರ್ಯನಾಥ ಕಾಮತ್**
೯-೧೧ ಸೆಪ್ಟೆಂಬರ್ ೨೦೦೬
ಶ್ರೀ ರಾಘವೇಂದ್ರ ಸ್ವಾಮಿಗಳ ಮಠ
ನಂಜನಗೂಡು




೨೧. **ಪ್ರೊ. ಲಕ್ಷ್ಮಣ್ ತೆಲಗಾವಿ**
೮-೧೦ ಸೆಪ್ಟೆಂಬರ್ ೨೦೦೭
ಹಗರಿಬೊಮ್ಮನಹಳ್ಳಿಯ
ರಾಮನಗರ, ಹಗರಿಬೊಮ್ಮನಹಳ್ಳಿ
ಶ್ರೀರಾಮ ಯುವಕ ಸಂಘ



೨೨. **ಡಾ. ವಸುಂಧರಾ ಫಿಲಿಯೋಜಾ**
೧೮-೨೧ ಸೆಪ್ಟೆಂಬರ್ ೨೦೦೮
ಧರ್ಮಸ್ಥಳ ಮಂಜುನಾಥೇಶ್ವರ
ದೇವಾಲಯ ಸಂಸ್ಥೆ, ಧರ್ಮಸ್ಥಳ



೨೩. **ಡಾ. ಎಂ.ಜಿ. ನಾಗರಾಜ್**
೧೦-೧೨ ಅಕ್ಟೋಬರ್ ೨೦೦೯
ಶ್ರೀ ಜಗದ್ಗುರು ರಂಭಾಪುರಿ
ವೀರ ಸಿಂಹಾಸನ ಮಹಾಸಂಸ್ಥಾನ ಪೀಠ
ಬಾಳೆಹೊನ್ನೂರು



೨೪. **ಡಾ. ಎಂ.ಎಸ್. ಕೃಷ್ಣಮೂರ್ತಿ**
೧೩-೧೫ ನವೆಂಬರ್ ೨೦೧೦
ಶ್ರೀ ಆದಿಚುಂಚನಗಿರಿ
ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ




೨೫. **ಡಾ. ಎಚ್.ಎಸ್.ಗೋಪಾಲರಾವ್**
೯-೧೧ ಸೆಪ್ಟೆಂಬರ್ ೨೦೧೧
ದಿ ಮಿಥಿಕ್ ಸೊಸೈಟಿ
ಬೆಂಗಳೂರು




೨೬. **ಡಾ. ಎಸ್.ವಿ. ವೆಂಕಟೇಶಯ್ಯ**
೨೨-೨೪ ಸೆಪ್ಟೆಂಬರ್ ೨೦೧೨
ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಮ್
ಶೃಂಗೇರಿ



೨೭. **ಡಾ. ಎಸ್.ಕೆ. ಜೋಷಿ**
೨೧-೨೩ ಸೆಪ್ಟೆಂಬರ್ ೨೦೧೩
ದಿ ಮಿಥಿಕ್ ಸೊಸೈಟಿ
ಬೆಂಗಳೂರು




೨೮. **ಡಾ. ಕೆ.ಜಿ. ವಸಂತ ಮಾಧವ**
೨೬-೨೮ ಸೆಪ್ಟೆಂಬರ್ ೨೦೧೪
ಮೂಲ್ಕಿ ಸುಂದರರಾಮಶೆಟ್ಟಿ ಕಾಲೇಜು
ಶಿರ್ವ, ಉಡುಪಿ ಜಿಲ್ಲೆ
ಉಡುಪಿ



೨೯. **ನಾಡೋಜ ಪ್ರೊ. ಹಂಪ ನಾಗರಾಜಯ್ಯ**
೨೯-೩೧ ಅಕ್ಟೋಬರ್ ೨೦೧೫
ಕರ್ನಾಟಕ ಸಂಘ (ರಿ.) ಮಂಡ್ಯ
ಮಂಡ್ಯ ಜಿಲ್ಲೆ



೩೦. **ಪ್ರೊ. ಕೆ. ಪದ್ದಯ್ಯ**
೨೨-೨೪ ಅಕ್ಟೋಬರ್ ೨೦೧೬
ಕನ್ನಡ ಸಂಶೋಧನಾ ಸಂಸ್ಥೆ
ಕರ್ನಾಟಕ ವಿ.ವಿ. ಧಾರವಾಡ



ಸಂಖ್ಯೆ	ಸರ್ವಾಧ್ಯಕ್ಷರು ದಿನಾಂಕ-ವರ್ಷ/ಸ್ಥಳ ಆಶ್ರಯ/ಸಹಯೋಗ	ಸಂಖ್ಯೆ	ಸರ್ವಾಧ್ಯಕ್ಷರು ದಿನಾಂಕ-ವರ್ಷ/ಸ್ಥಳ ಆಶ್ರಯ/ಸಹಯೋಗ
೩೧.	***ಡಾ. ಪಿ.ಎಸ್. ನರಸಿಂಹಮೂರ್ತಿ*** ೨೮-೩೦ ಅಕ್ಟೋಬರ್ ೨೦೧೭ ಎಸ್.ಜಿ.ವಿ.ವಿ. ಟ್ರಸ್ಟ್‌ನ ಶ್ರೀ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯ ಮತ್ತು ಶ್ರೀ ಸಿ.ಎಸ್. ಪಾಟೀಲ್ ಟ್ರಸ್ಟ್ ಕೊಪ್ಪಳ 		

ಡಾ|| ಬಾ.ರಾ. ಗೋಪಾಲ್ ಶಾಸನ ದತ್ತಿ ಪ್ರಶಸ್ತಿ ಸನ್ಮಾನಿತರು

[ಪ್ರಾರಂಭ, ೨೦೦೧ ರಿಂದ ನಗದು ಹತ್ತು ಸಾವಿರ ರೂಪಾಯಿಗಳು]

---

೧ ***ಡಾ. ಕೆ.ವಿ. ರಮೇಶ***
ಹ೫ನೇ ವಾರ್ಷಿಕ ಸಮ್ಮೇಳನ
ಅಕ್ಟೋಬರ್ ೨೦೦೧
ಉಡುಪಿ



೨ ***ಡಾ. ಶ್ರೀನಿವಾಸ ರತ್ತಿ***
೧೬ನೇ ವಾರ್ಷಿಕ ಸಮ್ಮೇಳನ
ಸೆಪ್ಟಂಬರ್ ೨೦೦೨
ಹೊಸನಗರ



೩ ***ಡಾ. ದೇವರಕೊಂಡಾರೆಡ್ಡಿ***
೧೭ನೇ ವಾರ್ಷಿಕ ಸಮ್ಮೇಳನ
ಸೆಪ್ಟಂಬರ್ ೨೦೦೩
ಬಾದಾಮಿ



೪ ***ಡಾ. ಬಿ. ರಾಜಶೇಖರಪ್ಪ***
೧೮ನೇ ಸಮ್ಮೇಳನ
ಸೆಪ್ಟಂಬರ್ ೨೦೦೪
ಹೊನ್ನಾಳಿ




೫ ***ಡಾ. ಕೆ.ಆರ್. ಗಣೇಶ್***
೧೯ನೇ ಸಮ್ಮೇಳನ
ಸೆಪ್ಟಂಬರ್ ೨೦೦೫
ಸೇಡಂ




೬ ***ಡಾ. ಎಂ.ಜಿ. ನಾಗರಾಜ್***
೨೦ನೇ ಸಮ್ಮೇಳನ
ಸೆಪ್ಟೆಂಬರ್ ೨೦೦೬
ನಂಜನಗೂಡು



೭ ***ಡಾ. ಎಚ್.ಎಸ್. ಗೋಪಾಲರಾವ್***
೨೧ನೇ ಸಮ್ಮೇಳನ
ಸೆಪ್ಟೆಂಬರ್ ೨೦೦೭
ಹಗರಿಬೊಮ್ಮನಹಳ್ಳಿ



೮ ***ಡಾ. ಪಿ.ಎನ್. ನರಸಿಂಹಮೂರ್ತಿ***
೨೨ನೇ ಸಮ್ಮೇಳನ
ಸೆಪ್ಟೆಂಬರ್ ೨೦೦೮
ಧರ್ಮಸ್ಥಳ



೯ ***ಶ್ರೀಮತಿ ಹನುಮಾಕ್ಷಿ ಗೋಗಿ***
೨೩ನೇ ಸಮ್ಮೇಳನ
ಅಕ್ಟೋಬರ್ ೨೦೦೯
ಬಾಳೇಹೊನ್ನೂರು




೧೦ ***ಡಾ. ಪಿ.ವಿ. ಕೃಷ್ಣಮೂರ್ತಿ***
೨೪ನೇ ಸಮ್ಮೇಳನ
ನವೆಂಬರ್ ೨೦೧೦
ಆದಿಚುಂಚನಗಿರಿ



೧೧ ***ಶ್ರೀ ಕೆ. ಮೊಹಮ್ಮದ್ ಶರೀಫ್***
೨೫ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೧
ಬೆಂಗಳೂರು




೧೨ ***ಶ್ರೀ ಸೀತಾರಾಮ್ ಜಾಗೀರ್‌ದಾರ್***
೨೬ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೨
ಶೃಂಗೇರಿ




ಸಂಖ್ಯೆ ದಿನಾಂಕ–ವರ್ಷ/ಸ್ಥಳ ಸ್ಥಳ ಸನ್ಮಾನಿತರು

೧೩ ***ಡಾ|| ಆರ್. ಶೇಷಶಾಸ್ತ್ರಿ***
೨೭ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೩
ಬೆಂಗಳೂರು




೧೪ ***ಶ್ರೀ ಎಚ್.ಎಂ. ನಾಗರಾಜರಾವ್***
೨೮ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೪
ಶಿರ್ವ, ಉಡುಪಿ ಜಿಲ್ಲೆ.



೧೫ ***ಡಾ. ಡಿ.ವಿ. ಪರಮಶಿವಮೂರ್ತಿ***
೨೯ನೇ ಸಮ್ಮೇಳನ
ಅಕ್ಟೋಬರ್ ೨೦೧೫
ಮಂಡ್ಯ, ಮಂಡ್ಯ ಜಿಲ್ಲೆ.



೧೬ ***ಡಾ. ಎಸ್.ವಿ. ಪಾಡಿಗರ್***
೩೦ನೇ ಸಮ್ಮೇಳನ
ಅಕ್ಟೋಬರ್ ೨೦೧೬
ಕ.ವಿ.ವಿ., ಧಾರವಾಡ




೧೭ ***ಡಾ. ಎಂ.ಜಿ. ಮಂಜುನಾಥ್***
೩೧ನೇ ಸಮ್ಮೇಳನ
ಅಕ್ಟೋಬರ್ ೨೦೧೭
ಗವಿಮಠ, ಕೊಪ್ಪಳ



ಶ್ರೇಷ್ಠ ಇತಿಹಾಸ ತಜ್ಞರಿಗಾಗಿ ಬೈಸಾನಿ ರುಕ್ಮಣಮ್ಮ ರತ್ನಂ ಶೆಟ್ಟಿ ಕುಟುಂಬದ ಸೇವಾ ಟ್ರಸ್ಟ್‌ನ ಸನ್ಮಾನ್ಯ ಶ್ರೀ ಅಶೋಕ್‌ಕುಮಾರ್ ಅವರು ಸ್ಥಾಪಿಸಿರುವ

"ಇತಿಹಾಸ ಸಂಸ್ಕೃತಿಶ್ರೀ" ಪ್ರಶಸ್ತಿ

[ಪ್ರಾರಂಭ : ೨೦೧೨ ರಿಂದ ನಗದು ಒಂದು ಲಕ್ಷ ರೂಪಾಯಿಗಳು]

೧. ೨೬ನೆಯ ಸಮ್ಮೇಳನ ೨೨.೦೯.೨೦೧೨ ಶೃಂಗೇರಿ	ಶ್ರೀಮದ್ ಜಗದ್ಗುರು ಆದಿ ಶಂಕರಾಚಾರ್ಯ ಮಹಾಸಂಸ್ಥಾನಮ್, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಮ್, ಶೃಂಗೇರಿ	**ಪ್ರೊ. ಲಕ್ಷ್ಮಣ್ ತೆಲಗಾವಿ**	
೨. ೨೭ನೆಯ ಸಮ್ಮೇಳನ ೨೧.೦೯.೨೦೧೩ ಬೆಂಗಳೂರು	ದಿ ಮಿಥಿಕ್ ಸೊಸೈಟಿ, ಬೆಂಗಳೂರು	**ಡಾ. ಸೂರ್ಯನಾಥ ಕಾಮತ್**	
೩. ೨೮ನೆಯ ಸಮ್ಮೇಳನ ೨೬.೦೯.೨೦೧೪ ಶಿರ್ವ	ಮೂಲ್ಕಿ ಸುಂದರರಾಮ್‌ಶೆಟ್ಟಿ ಕಾಲೇಜು, ಉಡುಪಿ ಜಿಲ್ಲೆ	**ಡಾ. ಅ. ಸುಂದರ**	
೪. ೨೯ನೆಯ ಸಮ್ಮೇಳನ ೨೯.೧೦.೨೦೧೫ ಮಂಡ್ಯ	ಕರ್ನಾಟಕ ಸಂಘ (ರಿ). ಮಂಡ್ಯ ಜಿಲ್ಲೆ	**ಡಾ. ಎಂ.ಜಿ. ನಾಗರಾಜ್**	
೫. ೩೦ನೆಯ ಸಮ್ಮೇಳನ ೨೨.೧೦.೨೦೧೬ ಧಾರವಾಡ	ಕನ್ನಡ ಸಂಶೋಧನಾ ಸಂಸ್ಥೆ ಕರ್ನಾಟಕ ವಿ.ವಿ., ಧಾರವಾಡ	**ಡಾ. ಎಸ್. ರಾಜಶೇಖರ್**	
೬. ೩೧ನೆಯ ಸಮ್ಮೇಳನ ೨೮.೧೦.೨೦೧೭ ಕೊಪ್ಪಳ	ಗವಿಮಠ, ಕೊಪ್ಪಳ	**ಡಾ. ಶ್ರೀನಿವಾಸ ರಿತ್ತಿ**	

ಮೇಲಣ ಮಠದ ಲಿಂ. ಶ್ರೀ ವೇ.ಎಸ್. ಸಿದ್ದಣ್ಣಯ್ಯ ಮತ್ತು ಲಿಂ. ಶ್ರೀಮತಿ ಗಂಗಮ್ಮ ಸ್ಮಾರಕ ಟ್ರಸ್ಟ್ (ರಿ).
ಅರಸೀಕೆರೆ, ಇವರು ಸ್ಥಾಪಿಸಿರುವ

"ನೊಳಂಬಶ್ರೀ ಪ್ರಶಸ್ತಿ"


[ಪ್ರಾರಂಭ ೨೦೧೫ ರಿಂದ, ನಗದು ಹತ್ತು ಸಾವಿರ ರೂಪಾಯಿಗಳು]



೧. ೨೯ನೆಯ ಸಮ್ಮೇಳನ
ಮಂಡ್ಯ
೨೯.೧೦.೨೦೧೫
ಕರ್ನಾಟಕ ಸಂಘ (ರಿ).
ಮಂಡ್ಯ
ಮಂಡ್ಯ ಜಿಲ್ಲೆ.
ಡಾ. ಎಂ.ಎಸ್. ಕೃಷ್ಣಮೂರ್ತಿ



೨. ೩೦ನೆಯ ಸಮ್ಮೇಳನ
೨೨.೧೦.೨೦೧೬
ಧಾರವಾಡ
ಕನ್ನಡ ಸಂಶೋಧನಾ ಸಂಸ್ಥೆ
ಕರ್ನಾಟಕ ವಿ.ವಿ., ಧಾರವಾಡ
ಡಾ. ಎಚ್. ಜಯಮ್ಮ ಕರಿಯಣ್ಣ




೨. ೩೧ನೆಯ ಸಮ್ಮೇಳನ
೨೮.೧೦.೨೦೧೭
ಕೊಪ್ಪಳ
ಗವಿಮಠ, ಕೊಪ್ಪಳ
ಪ್ರೊ. ಕೆ.ಆರ್. ಬಸವರಾಜು


ಶ್ರೀಮತಿ ವಿ. ಗೌರಮ್ಮ, ಗಂಗಾಧರಯ್ಯ ಇವರ ಹೆಸರಿನಲ್ಲಿ ಅವರ ಮಕ್ಕಳಾದ
ಡಾ. ಎಂ.ಜಿ. ನಾಗರಾಜ್, ಶ್ರೀಮತಿ ಪದ್ಮ ವಿರೂಪಾಕ್ಷಯ್ಯ ಮತ್ತು ಡಾ. ಎಂ.ಜಿ. ಚಂದ್ರಕಾಂತ್ ಇವರುಗಳು
ಸ್ಥಾಪಿಸಿರುವ

"ಸಂಶೋಧನಶ್ರೀ ಪ್ರಶಸ್ತಿ"

[ಪ್ರಾರಂಭ ೨೦೧೬ ರಿಂದ, ನಗದು ಇಪ್ಪತ್ತೈದು ಸಾವಿರ ರೂಪಾಯಿಗಳು]



೧. ೩೦ನೆಯ ಸಮ್ಮೇಳನ
೨೨.೧೦.೨೦೧೬
ಧಾರವಾಡ
ಕನ್ನಡ ಸಂಶೋಧನಾ ಸಂಸ್ಥೆ
ಕರ್ನಾಟಕ ವಿ.ವಿ., ಧಾರವಾಡ
ಡಾ. ಬಿ. ರಾಜಶೇಖರಪ್ಪ




೨. ೩೧ನೆಯ ಸಮ್ಮೇಳನ
೨೮.೧೦.೨೦೧೭
ಕೊಪ್ಪಳ
ಗವಿಮಠ, ಕೊಪ್ಪಳ
ಡಾ. ಲಕ್ಷ್ಮಣ್ ತೆಲಗಾವಿ

ಪ್ರೊ. ಲಕ್ಷ್ಮಣ ತೆಲಗಾವಿ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ

"ನಾಯಕ ಶ್ರೀ ಪ್ರಶಸ್ತಿ"

[ಪ್ರಾರಂಭ ೨೦೧೭ ರಿಂದ, ನಗದು ಹತ್ತು ಸಾವಿರ ರೂಪಾಯಿಗಳು]



೧. ೩೧ನೆಯ ಸಮ್ಮೇಳನ ೨೮.೧೦.೨೦೧೭ ಗವಿಮಠ, ಕೊಪ್ಪಳ ಡಾ. ಸಿ.ಆರ್. ಶಾಮಲ, ಮುಂಬೈ

ಪ್ರೊ. ಕೆ. ಪದ್ದಯ್ಯ ಡೆಕ್ಕನ್ ಕಾಲೇಜು, ಪುಣೆ ಇವರು ಸ್ಥಾಪಿಸಿರುವ

"ಡಾ. ಎಂ.ಎಚ್. ಕೃಷ್ಣ ಮೆರಿಟ್ ಅವಾರ್ಡ್"

[ಪ್ರಾರಂಭ ೨೦೧೭ರಿಂದ, ನಗದು ಎರಡು ಸಾವಿರ ರೂಪಾಯಿಗಳು – ಪ್ರಾಗೈತಿಹಾಸಿಕ ಸಂಶೋಧನ ಲೇಖನಕ್ಕೆ]



೧. ೩೧ನೆಯ ಸಮ್ಮೇಳನ ೨೮.೧೦.೨೦೧೭ ಗವಿಮಠ, ಕೊಪ್ಪಳ ಡಾ. ಎಸ್.ವೈ. ಸೋಮಶೇಖರ್

ಡಾ. ದೇವರಕೊಂಡಾರೆಡ್ಡಿ ಅವರ ಅಭಿನಂದನಾ ಸಮಿತಿಯು ಸ್ಥಾಪಿಸಿರುವ ದತ್ತಿಯಿಂದ ಬರುವ ಬಡ್ಡಿಯಲ್ಲಿ
ಕರ್ನಾಟಕ ಇತಿಹಾಸ ಅಕಾದೆಮಿಯ

ಅಂತರ್ ಜಾಲ ನಿರ್ವಹಣೆ

[ಪ್ರಾರಂಭ ೨೦೧೬ರಿಂದ, ಒಂದು ಲಕ್ಷ ಹತ್ತು ಸಾವಿರ ರೂಪಾಯಿಗಳು]

ಕರ್ನಾಟಕ ಇತಿಹಾಸ ಅಕಾದೆಮಿ ೩೦ನೆಯ ವಾರ್ಷಿಕ ಸಮ್ಮೇಳನ

ಕನ್ನಡ ಸಂಶೋಧನಾ ಸಂಸ್ಥೆ, ಮನಸೋಲ್ಲಾಸ ಸಭಾಂಗಣ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ದಿನಾಂಕ ೨೨ ಅಕ್ಟೋಬರ್ ೨೦೧೬

ಸಮ್ಮೇಳನಾಧ್ಯಕ್ಷರು : **ಪ್ರೊ. ಕೆ. ಪದ್ದಯ್ಯ**

ಅಧ್ಯಕ್ಷೀಯ ಭಾಷಣ*

ಪ್ರಾಗೈತಿಹಾಸಿಕ ಅಥವಾ ಆಳ ಪ್ರಾಚ್ಯ ಮತ್ತು ಆಧುನಿಕ ಕಾಲದಲ್ಲಿ ಅದರ ಪ್ರಸ್ತುತತೆ

ಪೀಠಿಕೆ

ಉತ್ತರ ಕರ್ನಾಟಕದ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ರಾಜಧಾನಿಯೆನಿಸಿಕೊಂಡಿರುವ ಧಾರವಾಡದಲ್ಲಿ ನಡೆಯುತ್ತಿರುವ ಕರ್ನಾಟಕ ಇತಿಹಾಸ ಅಕಾಡೆಮಿಯ ೩೦ನೆಯ ವಾರ್ಷಿಕ ಸಮ್ಮೇಳನದ ಅಧ್ಯಕ್ಷನಾಗಿ ಆಹ್ವಾನಿತನಾಗಿರುವುದು ನನ್ನ ಗೌರವವೆಂದು ನಾನು ಭಾವಿಸುತ್ತೇನೆ. ಕಳೆದ ಮೂರು ದಶಕಗಳಿಂದಲೂ ಕರ್ನಾಟಕ ಇತಿಹಾಸ ಅಕಾಡೆಮಿಯು ವಾರ್ಷಿಕ ಸಮ್ಮೇಳನ ಹಾಗೂ ಮತ್ತಿತರ ಚಟುವಟಿಕೆಗಳನ್ನು ನಿರಂತರವಾಗಿ ನಡೆಸುವುದರ ಮೂಲಕ ಕರ್ನಾಟಕದ ಇತಿಹಾಸ ಮತ್ತು ಪುರಾತತ್ವ ಅಧ್ಯಯನಕ್ಕೆ ಅತ್ಯಮೂಲ್ಯ ಕೊಡುಗೆಗಳನ್ನು ಸಲ್ಲಿಸುತ್ತಾ ಬಂದಿದೆ. ಅಕಾಡೆಮಿಯ ವಾರ್ಷಿಕ ಸಮ್ಮೇಳನಗಳು ಹಿರಿಯ ಕಿರಿಯ ವಿದ್ವಾಂಸರು ಒಟ್ಟಾಗಿ ಸೇರಿ ಅಧ್ಯಾಪನ-ಸಂಶೋಧನ ಕ್ಷೇತ್ರಗಳಲ್ಲಿ ಅವರ ನೂತನ ಫಲಿತಗಳನ್ನು ಚರ್ಚಿಸುವುದಕ್ಕೂ ಭವಿಷ್ಯದ ಯೋಜನೆಗಳನ್ನು ರೂಪಿಸುವುದಕ್ಕೂ ಪ್ರಮುಖ ವೇದಿಕೆಯಾಗಿವೆ. ಹೆಸರಾಂತ ವಿದ್ವಾಂಸರಾದ ಎ.ವಿ. ನರಸಿಂಹಮೂರ್ತಿ, ಎಂ.ಎಸ್. ನಾಗರಾಜರಾವ್, ಕೆ.ವಿ. ರಮೇಶ್, ಎಂ.ಎಂ.ಕಲಬುರ್ಗಿ ಮತ್ತಿತ್ತರರು ಅಕಾಡೆಮಿಯ ಹಿಂದಿನ ಸಮ್ಮೇಳನಗಳ ಅಧ್ಯಕ್ಷತೆ ವಹಿಸಿ ಕರ್ನಾಟಕದ ಐತಿಹಾಸಿಕ ಮತ್ತು ಪುರಾತತ್ವೀಯ ಕ್ಷೇತ್ರಗಳಲ್ಲಿ ಹೊಸ ಸಂಶೋಧನಾ ಪರಿಕಲ್ಪನೆಗಳನ್ನೂ ಅದರ ಮಾರ್ಗ ಸೂಚಿಗಳನ್ನೂ ತಿಳಿಸಿಕೊಟ್ಟಿರುತ್ತಾರೆ. ಅವರಿಗೆ ನನ್ನ ಹೃತ್ಪೂರ್ವಕ ನಮನಗಳು.

ಬೆಂಗಳೂರಿನಲ್ಲಿರುವ ಭಾರತೀಯ ಸಂಸ್ಕೃತಿ ವಿದ್ಯಾಪೀಠದ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜಿನ ವತಿಯಿಂದ ೨೦೧೦ ರಲ್ಲಿ "ರೀಸೆಂಟ್ ಟ್ರೆಂಡ್ಸ್ ಇನ್ ದಿ ಸ್ಟಡಿ ಆಫ್ ಕರ್ನಾಟಕ ಹಿಸ್ಟರಿ" (ಕರ್ನಾಟಕದ ಚಾರಿತ್ರಿಕ ಅಧ್ಯಯನದಲ್ಲಿ ಇತ್ತೀಚಿನ ಬೆಳವಣಿಗೆಗಳು) ಎಂಬ ವಿಷಯವಾಗಿ ಸಮ್ಮೇಳನ ನಡೆಯಿತು. ಆ ಸಮ್ಮೇಳನದಲ್ಲಿ "ಆರ್ಕಿಯಾಲಜಿ ಇನ್ ಕರ್ನಾಟಕ: ಅಚೀವ್‌ಮೆಂಟ್ಸ್ ಅಂಡ್ ಇಶ್ಯೂಸ್ ಅಹೆಡ್" (ಕರ್ನಾಟಕದ ಪುರಾತತ್ವ: ಸಾಧನೆಗಳು ಮತ್ತು ಭವಿಷ್ಯದ ವಿಚಾರಗಳು) ಎಂಬ ವಿಷಯವನ್ನು ಕುರಿತು ನಾನು ಮಾಡಿದ ಪ್ರಾಸ್ತಾವಿಕ ಭಾಷಣ (ಕೀನೋಟ್ ಅಡ್ರೆಸ್) ಕರ್ನಾಟಕದ ಚರಿತ್ರೆ ಮತ್ತು ಪುರಾತತ್ವವನ್ನು ಕುರಿತಂತೆ ಇದುವರೆವಿಗೆ ನಡೆದಿರುವ ಸಂಶೋಧನೆಗಳ ಸಂಕ್ಷಿಪ್ತ ಐತಿಹಾಸಿಕ ಸಮೀಕ್ಷೆಯನ್ನು ಒಳಗೊಂಡಿತ್ತು. ಆ ಭಾಷಣದ ವಿಷಯವನ್ನೇ ಇಂದು ಇಲ್ಲಿ ಮತ್ತೆ ಪುನರಾವರ್ತಿಸುವುದು ಸಮಂಜಸವಲ್ಲ. ಅದರ ಬದಲಾಗಿ ಇಂದು ನಾನು ಸಮಕಾಲೀನ ಸಮಯದಲ್ಲಿ ಪ್ರಾಗೈತಿಹಾಸಿಕ ಅಥವಾ ಬರೆವಣಿಗೆ ಪೂರ್ವ ಕಾಲದ ಅಧ್ಯಯನದ ಪ್ರಾಮುಖ್ಯತೆ/ಪ್ರಸ್ತುತತೆಯನ್ನು ಕುರಿತು ಮಾತನಾಡಲು ಬಯಸುತ್ತೇನೆ.

ಈ ಶೀರ್ಷಿಕೆಯಡಿಯಲ್ಲಿ ನಾನು ಮೂರು ಮುಖ್ಯ ವಿಷಯಗಳನ್ನು ಕುರಿತಂತೆ ಚರ್ಚಿಸಬಯಸುತ್ತೇನೆ. ಮೊದಲಿಗೆ, ನನ್ನ ಚರ್ಚೆಗೆ ಹಿನ್ನೆಲೆಯಾಗಿ ಭಾರತದಲ್ಲಿ ಪ್ರಾಗೈತಿಹಾಸಿಕ ಅಧ್ಯಯನಗಳ ಬೆಳವಣಿಗೆಯ ಒಂದು ಕಿರುವರದಿಯನ್ನು ಪ್ರಸ್ತುತಪಡಿಸುತ್ತೇನೆ. ತದನಂತರದಲ್ಲಿ ಉತ್ತರ ಕರ್ನಾಟಕದಲ್ಲಿ ಈ ಕ್ಷೇತ್ರದಲ್ಲಿ ನಡೆದಿರುವ ಅಧ್ಯಯನಗಳನ್ನು ಶೋರಾಪುರ ದೋಆಬ್‌ನಲ್ಲಿ ನಾನು ನಡೆಸಿದ ಸಂಶೋಧನೆಗೆ ಸಂಬಂಧಿಸಿದಂತೆ ವಿವರಿಸುತ್ತೇನೆ. ಈ ಕ್ಷೇತ್ರದಲ್ಲಿರುವ ಅನೇಕಾನೇಕ ಅಧ್ಯಯನ ಸಾಧ್ಯತೆಗಳ ಬಗ್ಗೆ ತಿಳಿಸಿ ಅಂತಿಮವಾಗಿ, ತೀವ್ರ ಗತಿಯಲ್ಲಿ ಬದಲಾಗುತ್ತಿರುವ ಸಮಕಾಲೀನ ಸಮಾಜಗಳಿಗೆ ಪ್ರಾಗೈತಿಹಾಸಿಕ ಅಧ್ಯಯನದಿಂದ ದೊರೆಯುವ ಸಂದೇಶವು ಹೇಗೆ ದಾರಿದೀಪವಾಗಬಲ್ಲದು ಎಂಬುದರೊಂದಿಗೆ ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

---

* ಕನ್ನಡ ಅನುವಾದ: ಡಾ. ಶೋಭಾ, ನಿರ್ದೇಶಕರು, ಪ್ರಾಚೀನ ಇತಿಹಾಸ ಮತ್ತು ಪುರತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ ಮೈಸೂರು.ವಿ.ವಿ. – ೫೭೦೦೦೬

ಇತಿಹಾಸ ಮತ್ತು ಪುರಾತತ್ವ

ಈ ಕ್ಷೇತ್ರಗಳನ್ನು ಕುರಿತಂತೆ ಇರುವ ಕೆಲವು ಟೀಕೆಗಳು ಇಲ್ಲಿ ಪ್ರಸ್ತುತ. ಮೊದಲಿಗೆ, ಪುರಾತತ್ವ ಮತ್ತು ಇತಿಹಾಸ ಕ್ಷೇತ್ರಗಳ ನಡುವೆ ಇರುವ ಕಂದರ. ೧೯೭೪ರಲ್ಲಿ ಡಿ.ಪಿ. ಡೇಮಂಡ್ ಅವರು "ಆರ್ಕಿಯಾಲಜಿ ಅಂಡ್ ಹಿಸ್ಟರಿ: ಎ ಪ್ಲೀ ಫಾರ್ ರಿಕನ್ಸಿಲಿಯೇಷನ್" ಎಂಬ ಪ್ರಸಿದ್ಧ ಕೃತಿಯನ್ನು ಪ್ರಕಟಿಸಿದರು. ಈ ಕೃತಿಯಲ್ಲಿ ಡೇಮಂಡರು ಇಂಗ್ಲೆಂಡ್‌ನಲ್ಲಿ ಚರಿತ್ರೆ ಮತ್ತು ಪುರಾತತ್ವಗಳ ನಡುವಿರುವ ವೈಮನಸ್ಯದ ಬಗ್ಗೆ ಪ್ರಸ್ತಾಪಿಸಿ ಚರಿತ್ರಕಾರರು ಮತ್ತು ಪುರಾತತ್ವಜ್ಞರು ಬಹುಕಾಲದವರೆಗೆ ಮಾಡಿಕೊಂಡ ಪರಸ್ಪರ ದೋಷಾರೋಪಗಳನ್ನು ಕುರಿತು ವಿವರಿಸಿದ್ದಾರೆ. ಚರಿತ್ರೆಯ ಅಧ್ಯಯನದಲ್ಲಿ ಈ ಎರಡೂ ಕ್ಷೇತ್ರಗಳು ಪರಸ್ಪರ ಕೈಜೋಡಿಸಿ ಸಾಮರಸ್ಯದಿಂದ ನಡೆಯಬೇಕೆಂಬ ಕಳಕಳಿಯ ಮನವಿಯನ್ನು ಡೇಮಂಡರು ತಮ್ಮ ಕೃತಿಯಲ್ಲಿ ವ್ಯಕ್ತಪಡಿಸಿರುವರು.

ಇಂಗ್ಲೆಂಡ್‌ನಂತಹ ದೇಶಗಳಲ್ಲಿ ಒಂದು ಮಟ್ಟದ ಅನ್ಯೋನ್ಯತೆ ಈಗ ಕಂಡುಬರುವುದಾದರೂ ನಮ್ಮ ದೇಶದಲ್ಲಿ ಚರಿತ್ರೆ ಮತ್ತು ಪುರಾತತ್ವಗಳ ನಡುವಣ ವೈಮನಸ್ಯ ಇನ್ನೂ ಕರಗಿಲ್ಲ. ಯು.ಜಿ.ಸಿ ಯ ಅಧಿನಿಯಮದಂತೆ ವಿಶ್ವವಿದ್ಯಾನಿಲಯಗಳಲ್ಲಿ ಪುರಾತತ್ವವನ್ನು ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿಯ ವಿಭಾಗದೊಂದಿಗೆ ಸೇರಿಸಲಾಗಿದೆಯಾದರೂ, ಅನುದಾನ ಹಂಚಿಕೆಯ ವಿಷಯದಲ್ಲಿ ಅಥವಾ ತಮ್ಮ ತಮ್ಮ ಕ್ಷೇತ್ರಗಳ ಪ್ರಾಮುಖ್ಯತೆಯನ್ನು ಪ್ರಕಟಪಡಿಸುವಾಗ ಪುರಾತತ್ವಜ್ಞರು ಮತ್ತು ಇತಿಹಾಸಕಾರರು ಪ್ರತ್ಯಾರೋಪಗಳನ್ನು ಮಾಡುತ್ತ ಸ್ಪರ್ಧಿಗಳಂತೆ ವರ್ತಿಸುವರು. ಪುರಾತತ್ವ ಕ್ಷೇತ್ರವು ನ್ಯೂನತೆಗಳಿಂದ ತುಂಬಿದೆಯೆಂದು ಇತಿಹಾಸಕಾರರು ಟೀಕಿಸಿದರೆ, ಇತಿಹಾಸ ಲೇಖನ ಕೇವಲ ಕತೆಕಟ್ಟುವಿಕೆಯೆಂದು ಪುರಾತತ್ವಜ್ಞರು ಜರಿಯುತ್ತಾರೆ. ಆರ್.ಎಸ್.ಶರ್ಮ, ರೋಮಿಲ ಥಾಪರ್ ಮೊದಲಾದ ಇತಿಹಾಸಕಾರರು ಪ್ರಾಚೀನ ಭಾರತದ ಇತಿಹಾಸವನ್ನು ರಚಿಸುವಲ್ಲಿ ಪುರಾತತ್ವ ಆಕರಗಳನ್ನು ವ್ಯಾಪಕವಾಗಿ ಬಳಸಿಕೊಂಡಿರುವರಾದರೂ ಅಂತಹ ಚರಿತ್ರಕಾರರ ಸಂಖ್ಯೆ ಕಡಿಮೆ. ಅಂತೆಯೇ ಚಾರಿತ್ರಿಕ ವಿಧಾನದಲ್ಲಿ ಆಸಕ್ತಿಯುಳ್ಳ, 'ದಿ ಐಡಿಯಾ ಆಫ್ ಹಿಸ್ಟರಿ' ಎಂಬ ಜನಪ್ರಿಯ ಕೃತಿಯ ಲೇಖಕರಾದ ಆರ್.ಜಿ. ಕಾಲಿಂಗ್‌ವುಡ್‌ರಂತಹವರ ಬರೆವಣಿಗೆಯನ್ನು ಉಲ್ಲೇಖಿಸಬಲ್ಲ ಪುರಾತತ್ವಜ್ಞರೂ ಹೆಚ್ಚಿಲ್ಲ; ಇದರಿಂದಾಗಿ ಪುರಾತತ್ವ ಬರೆವಣಿಗೆಗಳು ಪ್ರೌಢರೂಪ ಪಡೆಯದೆ ಕೇವಲ ಅವಶೇಷಗಳ ವಿವರಣಾತ್ಮಕ ಪಟ್ಟಿಯಾಗಿ ಉಳಿದುಬಿಡುತ್ತವೆ.

ಪುರಾತತ್ವ ಕ್ಷೇತ್ರದಲ್ಲಿ ಹೆಚ್ಚು ಅವಜ್ಞೆಗೆ ಒಳಗಾಗಿರುವ ಆಗಾಗ್ಗೆ ಪರಿಹಾಸ್ಯಕ್ಕೆ ಈಡಾಗುವ ಶಾಖೆಯೆಂದರೆ ಪ್ರಾಗಿತಿಹಾಸ. ಪ್ರಾಗಿತಿಹಾಸವೆಂದರೆ "ಶಿಲಾಯಣ"ವೆಂದೂ ಪ್ರಾಗಿತಿಹಾಸಕಾರರು ಕೇವಲ ಶಿಲೋಪಕರಣ ಸಂಗ್ರಹಕಾರರೆಂದೂ ವ್ಯಂಗ್ಯವಾಡುವುದುಂಟು. ಈ ಟೀಕೆಗಳಲ್ಲಿ ಸತ್ಯಾಂಶವೂ ಕೆಲಮಟ್ಟಿಗಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಕೊನೆಯ ಬ್ರಿಟಿಷ್ ಮಹಾನಿರ್ದೇಶಕನಾಗಿದ್ದ ಮಾರ್ಟಿಮರ್ ವೀಲರನು ಪ್ರಾಗಿತಿಹಾಸಕಾರರಲ್ಲಿ ಸಾಂಸ್ಕೃತಿಕ ಪುನಾರಚನೆಯ ಮಹತ್ವದ ಬಗ್ಗೆ ಅರಿವಿಲ್ಲದಿರುವುದನ್ನು ಕಂಡು ಬೇಸರ ವ್ಯಕ್ತಪಡಿಸಿದ್ದನು. ಪ್ರಾಗಿತಿಹಾಸದ ಬಗ್ಗೆ ವೀಲರನ ಅಭಿಪ್ರಾಯ ಎಷ್ಟು ಕಟುವಾಗಿತ್ತೆಂದರೆ ಪ್ರಾಗಿತಿಹಾಸವನ್ನು ಅವನು "ಶಿಲಾಸ್ತೋಮ" ಎಂಬುದಾಗಿ ಹಳಿದನು. ಅವನ ಪ್ರಸಿದ್ಧ ಕೃತಿಯಾದ "ಅರ್ಲಿ ಇಂಡಿಯಾ ಅಂಡ್ ಪಾಕಿಸ್ತಾನ್" ನಲ್ಲಿ ಶಿಲಾಯುಗಕ್ಕೆ ಸಂಬಂಧಪಟ್ಟ ಮೊದಲೆರಡು ಅಧ್ಯಾಯಗಳಿಗೆ ಅವನು "ಕಲ್ಲುಗಳು" (ಸ್ಟೋನ್ಸ್) ಹಾಗೂ "ಮತ್ತಷ್ಟು ಕಲ್ಲುಗಳು" (ಮೋರ್ ಸ್ಟೋನ್ಸ್) ಎಂಬ ಶೀರ್ಷಿಕೆಯನ್ನಿಟ್ಟಿರುವನು.

ಪುರಾತತ್ವ–ಸಾಹಿತ್ಯಕ ಆಕರಗಳು ಮತ್ತು ಸಂಪ್ರದಾಯಗಳು ಪರಸ್ಪರ ಪೂರಕವಾಗಿರುವವೇ ಹೊರತು ಅವುಗಳ ನಡುವೆ ಸಂಘರ್ಷಕ್ಕೆ ಆಸ್ಪದವಿಲ್ಲ ಎಂಬ ಸತ್ಯಸಂಗತಿಯು ವಿದ್ವತ್ ವಲಯದಲ್ಲಿನ ಪರಸ್ಪರ ದೂಷಣೆ–ಆರೋಪದಿಂದಾಗಿ ತೆರೆಗೆ ಸರಿದಿರುವುದು ವಿಷಾದನೀಯ. ಭಾರತದಲ್ಲಿ ಕಳೆದ ನಾಲ್ಕು ದಶಕಗಳ ಅವಧಿಯಲ್ಲಿ ಶಿಲಾಯುಗ ಸಂಶೋಧನೆಯ ಗುರಿ–ವಿಧಾನಗಳಲ್ಲಿ ಕೆಲವು ಬದಲಾವಣೆಗಳಾಗಿರುವುದು ಸಂತಸಕರ. ಶಿಲೋಪಕರಣಗಳನ್ನು ತಯಾರಿಸಿದ ಮಾನವರು ಮತ್ತು ಅವರ ದೈನಂದಿನ ಬದುಕಿನ ಬಗ್ಗೆ ಅರಿಯುವುದು ಇದರಿಂದ ಕೆಲಮಟ್ಟಿಗೆ ಸಾಧ್ಯವಾಗಿದೆ. ಬರೆವಣಿಗೆ–ಪೂರ್ವ ಸಮಾಜವು ನಮ್ಮ ಸುದೀರ್ಘ ಪರಂಪರೆಯ ತಳಹದಿಯಾಗಿರುವದಷ್ಟೇ ಅಲ್ಲದೆ ಅದು ಕೆಲವು ಮಾರ್ಗೋಪಾಯಗಳನ್ನೂ ನಮಗೆ ತಿಳಿಸಿಕೊಡಬಲ್ಲದಾಗಿದೆ. ಈ ಕುರಿತು ನಾನು ಸುದೀರ್ಘವಾಗಿ ಮಾತನಾಡಬಯಸುತ್ತೇನೆ.

ಆಂಟಿಕ್ವೇರಿಯನ್ ಅಧ್ಯಯನಗಳು

ಭಾರತದಲ್ಲಿ ೨೦೦ ವರ್ಷಗಳಿಗೂ ಮೊದಲೇ ಆಂಟಿಕ್ವೇರಿಯನ್ ಸಂಶೋಧನೆ ಪ್ರಾರಂಭಗೊಂಡಿತು. ನಾವು ಇಂದು ನವಶಿಲಾಯುಗ ಮತ್ತು ಕಬ್ಬಿಣಯುಗದವು ಎಂದು ಗುರುತಿಸಿರುವ ಕೆಲವು ನೆಲೆಗಳು ೧೯ನೆಯ ಶತಮಾನದ ಮೊದಲಾರ್ಧದಲ್ಲಿಯೇ ಪರ್ಯಾಯ ಭಾರತದ ಎಲ್ಲೆಡೆಗಳಲ್ಲಿ ಹವ್ಯಾಸಿ ಸಂಶೋಧಕರಿಂದ ಬೆಳಕಿಗೆ ಬಂದವು. ೧೯ನೆಯ

ಶತಮಾನದ ಉತ್ತರಾರ್ಧದಲ್ಲಿ ಎರಡು ಪ್ರಮುಖ ಬೆಳೆವಣಿಗೆಗಳಾದವು. ಮೊದಲನೆಯದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಸ್ಥಾಪನೆ (೧೮೬೨). ಎರಡನೆಯದು ಪ್ರಾಗೈತಿಹಾಸಿಕ ಸಂಶೋಧನೆಯ ಆರಂಭ; ಇದಕ್ಕೆ ಕಾರಣ ಭೂಗೋಳ ವಿಜ್ಞಾನಿಯಾದ ಬ್ರೂಸ್‌ಫುಟ್‌ನು ೧೮೬೩-೧೯೦೭ರ ನಡುವೆ ದಕ್ಷಿಣ ಭಾರತದಾದ್ಯಂತ ಪ್ರಾಗೈತಿಹಾಸಿಕ ನೆಲೆಗಳನ್ನು ಶೋಧಿಸಿದುದು. ಇದರ ಬೆನ್ನಿಗೇ ಮೈಸೂರು ಮತ್ತಿತರ ಕೆಲವು ಸಂಸ್ಥಾನಗಳು ಪುರಾತತ್ವ ವಿಭಾಗಗಳನ್ನು ತೆರೆದುವು. ಅನಂತರ, ಕಳೆದ ಶತಮಾನದ ೨೦ ರ ದಶಕದಲ್ಲಿ ಸಿಂಧೂ ಸಂಸ್ಕೃತಿ ಬೆಳಕಿಗೆ ಬಂದಿತು.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಪ್ರಾರಂಭಗೊಂಡ ವಿಶ್ವವಿದ್ಯಾನಿಲಯಗಳ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗಗಳು ಹಾಗೂ ರಾಜ್ಯ ಪುರಾತತ್ವ ಇಲಾಖೆಗಳು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಜೊತೆಜೊತೆಗೆ ಕಾರ್ಯ ನಿರ್ವಹಿಸುತ್ತಿವೆ. ಕಳೆದ ಆರು ದಶಕಗಳಲ್ಲಿ ಹಳೆಶಿಲಾಯುಗ, ನವಶಿಲಾಯುಗ-ತಾಮ್ರಶಿಲಾಯುಗ ಮತ್ತು ಕಬ್ಬಿಣ ಯುಗಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಮುಖ ಶೋಧಗಳಾಗಿವೆ. ಇದರಿಂದಾಗಿ ಬರೆವಣಿಗೆ ಪೂರ್ವ ಕಾಲದ (ಅಂದರೆ ಕ್ರಿ.ಪೂ. ಮೊದಲನೆಯ ಸಹಸ್ರಮಾನದ ಮಧ್ಯಭಾಗದಲ್ಲಿ ಬರೆವಣಿಗೆ ಆರಂಭವಾಗುವವರೆಗೆ) ಇತಿಹಾಸದ ಬಗೆಗೆ ನಮಗೆ ಖಚಿತವಾದ ಚಿತ್ರಣ ದೊರಕಿದೆ. ತಮಿಳುನಾಡಿನ ಅತ್ತಿರಂಪಾಕ್ಕಂ ಮತ್ತು ಕರ್ನಾಟಕದ ಇಸಾಂಪುರದಲ್ಲಿ ಲಭಿಸಿರುವ ವೈಜ್ಞಾನಿಕ ಕಾಲಮಾನಗಳು ಮಾನವನ ಬರೆವಣಿಗೆ-ಪೂರ್ವದ ಇತಿಹಾಸ ಹತ್ತುಲಕ್ಷ ವರ್ಷಗಳಿಗೂ ಮುಂಚೆಯೇ ಆರಂಭಗೊಳ್ಳುವುದೆಂಬುದಾಗಿ ಸಾಬೀತುಪಡಿಸಿವೆ. ಈ ಕಾಲಾವಧಿಯಲ್ಲಿ ತಂತ್ರಜ್ಞಾನ, ಆಹಾರ ಗಳಿಕೆ ಹಾಗೂ ಇನ್ನಿತರ ಸಾಂಸ್ಕೃತಿಕ ವಲಯಗಳಲ್ಲಿ ಮುನ್ನಡೆಗಳಾದುವು. ಅತ್ಯಂತ ಸುದೀರ್ಘವಾಗಿರುವ ಬರೆವಣಿಗೆ ಪೂರ್ವ ಅವಧಿಯನ್ನು ಮೂರು ಸಾಂಸ್ಕೃತಿಕ ಹಂತಗಳಾಗಿ ವಿಂಗಡಿಸಲಾಗಿದೆ. ಇವು:

೧. ಹಳೆಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗ ಹಂತಗಳು ಅಥವಾ ಬೇಟೆ-ಆಹಾರ ಸಂಗ್ರಹಣೆಯನ್ನವಲಂಬಿಸಿದ್ದ ಸಂಸ್ಕೃತಿಗಳ ಕಾಲಾವಧಿ; ಈ ಕಾಲಾವಧಿಯಲ್ಲಿ ಆಂತರಿಕ ಪ್ರಗತಿಯನ್ನು ಕಾಣಬಹುದಾಗಿದೆ.

೨. ನವಶಿಲಾಯುಗ-ತಾಮ್ರಶಿಲಾಯುಗ ಹಂತ - ಈ ಸಂಸ್ಕೃತಿಗಳು ಸುಮಾರು ಹತ್ತುಸಾವಿರ ವರ್ಷಗಳ ಹಿಂದೆ ಪ್ರಾರಂಭಗೊಂಡ, ವ್ಯವಸಾಯ-ಪಶುಪಾಲನೆಯನ್ನು ಅವಲಂಬಿಸಿದ ಗ್ರಾಮಜೀವನದ ಹರಿಕಾರರೆನಿಸಿಕೊಂಡಿವೆ.

೩. ಕಬ್ಬಿಣಯುಗ - ಎರಡನೆಯ ಸಹಸ್ರಮಾನದ ಉತ್ತರಾರ್ಧದಲ್ಲಿ ಆರಂಭಗೊಂಡಿತು. ಕಬ್ಬಿಣ ತಂತ್ರಜ್ಞಾನ ಮತ್ತು ಬೃಹತ್‌ಶಿಲಾ ಸಮಾಧಿಗಳು ಈ ಯುಗದ ಪ್ರಾರಂಭಿಕ ಸೂಚನೆಗಳಾಗಿವೆ.

ಕರ್ನಾಟಕದಲ್ಲಿ ಆಂಟಿಕ್ವೇರಿಯನ್ ಅಧ್ಯಯನಗಳು

ಪ್ರಾಗೈತಿಹಾಸಿಕ ನೆಲೆಗಳು ಸಮೃದ್ಧವಾಗಿರುವ ಪ್ರದೇಶಗಳಲ್ಲಿ ಕರ್ನಾಟಕವೂ ಒಂದಾಗಿದೆ. ಮಾನವನ ಸಾಂಸ್ಕೃತಿಕ ಪ್ರಗತಿಯ ಎಲ್ಲ ಪ್ರಮುಖ ಹಂತಗಳನ್ನೂ ಪ್ರತಿನಿಧಿಸುವ ನೆಲೆಗಳು ಕರ್ನಾಟಕದಲ್ಲಿವೆ. ೧೯ನೆಯ ಶತಮಾನದ ಆದಿದಶಕಗಳಲ್ಲಿ ಕರ್ನಲ್ ಮೆಕೆಂಜಿಯು ಚಿತ್ರದುರ್ಗ ಮತ್ತು ಬಳ್ಳಾರಿ ಪ್ರದೇಶದಲ್ಲಿ ನವಶಿಲಾಯುಗದ ಬೂದಿದಿಬ್ಬಗಳನ್ನು ಶೋಧಿಸುವುದರೊಂದಿಗೆ ಇಡೀ ಭಾರತದಲ್ಲಿ ಪುರಾತತ್ವ ನೆಲೆಗಳ ವ್ಯವಸ್ಥಿತ ಶೋಧ ಆರಂಭಗೊಂಡಿತೆಂಬುದು ಸಂತೋಷದ ವಿಚಾರ. ಇದೇ ಶತಮಾನದ ಮಧ್ಯಭಾಗದಲ್ಲಿ ಶೋರಾಪುರ ದೋಆಬ್ ಪ್ರಾಂತದಲ್ಲಿ ಮೆಡೋಸ್ ಟೇಲರನು ಬೃಹತ್‌ಶಿಲಾಯುಗ ನೆಲೆಗಳನ್ನು ಶೋಧಿಸಿದುದೂ ಇಡೀ ವಿಶ್ವದಲ್ಲಿಯೇ ಪ್ರಪಥಮ ಭಾರಿಗೆ ಇವನು ಸ್ತರಕ್ರಮ ಆಧರಿತ ಉತ್ಖನನ ವಿಧಾನವನ್ನು ಸಮಾಧಿಯ ಉತ್ಖನನದಲ್ಲಿ ಅಳವಡಿಸಿಕೊಂಡುದುದೂ ಗಮನಾರ್ಹವಾಗಿದೆ. ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಉತ್ತರಕರ್ನಾಟಕದಲ್ಲಿ ಬ್ರೂಸ್‌ಫುಟ್‌ನು ಹಲವಾರು ಪ್ರಾಗೈತಿಹಾಸಿಕ ಮತ್ತು ನವಶಿಲಾಯುಗದ ನೆಲೆಗಳನ್ನು ಕಂಡುಹಿಡಿದುದು ಕರ್ನಾಟಕ ಪುರಾತತ್ವ ಕ್ಷೇತ್ರದ ಬೆಳೆವಣಿಗೆಯಲ್ಲಿ ಮತ್ತೊಂದು ಮೈಲಿಗಲ್ಲಾಗಿದೆ. ಕಳೆದ ಶತಮಾನದಲ್ಲಿ ಎಂ.ಎಚ್. ಕೃಷ್ಣ, ಎಂ. ಶೇಷಾದ್ರಿ, ಎಂ.ಎಸ್. ನಾಗರಾಜರಾವ್, ಎ. ಸುಂದರ, ಬಿ.ಕೆ. ಗುರುರಾಜರಾವ್ ಮತ್ತಿತರರು ಪ್ರಾಗೈತಿಹಾಸಿಕ ಮತ್ತು ಪೂರ್ವಭಾವಿ ಇತಿಹಾಸ ಅಧ್ಯಯನಗಳಿಗೆ ಪ್ರಮುಖ ಕೊಡುಗೆಗಳನ್ನು ನೀಡಿದ್ದಾರೆ.

ಸ್ವಾತಂತ್ರ್ಯೋತ್ತರ ದಶಕಗಳಲ್ಲಿ ಪುಣೆಯ ಡೆಕ್ಕನ್ ಕಾಲೇಜು ಕರ್ನಾಟಕದ ಪುರಾತತ್ವ ಸಂಶೋಧನ ರಂಗದಲ್ಲಿ ಪ್ರಧಾನ ಪಾತ್ರವಹಿಸಿದೆ. ಈ ಮಾತು ಉತ್ತರ ಕರ್ನಾಟಕದ ಪ್ರಾಗಿತಿಹಾಸ ಮತ್ತು ಪೂರ್ವಭಾವಿ ಇತಿಹಾಸ ನೆಲೆಗಳ ಸಂಶೋಧನೆಗೆ ವಿಶೇಷವಾಗಿ ಅನ್ವಯಿಸುತ್ತದೆ. ೧೯೪೦ರ ದಶಕದಲ್ಲಿ ಮಲಪ್ರಭಾ ಬಯಲಿನಲ್ಲಿ ಎಚ್.ಡಿ. ಸಾಂಕಲಿಯ ಅವರು ನಡೆಸಿದ ಶಿಲಾಯುಗ ಸಂಶೋಧನೆ ಹಾಗೂ ಬಳ್ಳಾರಿ ಪ್ರದೇಶದಲ್ಲಿ ಸುಬ್ಬರಾವ್ ಅವರು ಕೈಗೊಂಡ ಹಳೆಶಿಲಾಯುಗ

ಮತ್ತು ನವಶಿಲಾಯುಗದ ಅಧ್ಯಯನಗಳೊಂದಿಗೆ ಈ ಶೈಕ್ಷಣಿಕ ನಂಟು ಪ್ರಾರಂಭವಾಯಿತು. ಮುಂದೆ ಮಲಪ್ರಭಾ ಬಯಲಿನಲ್ಲಿ ಆರ್.ವಿ. ಜೋಶಿ ಅವರು ಚತುರ್ಥಯುಗಕ್ಕೆ (ಪ್ಲೀಸ್ಟೋಸೀನ್) ಸಂಬಂಧಿಸಿದಂತೆ ಅಧ್ಯಯನಗಳನ್ನು ನಡೆಸಿದರು. ೧೯೬೪-೬೫ ರಲ್ಲಿ ಎಚ್.ಡಿ. ಸಾಂಕಲಿಯ ಅವರು ತೆಕ್ಕಲಕೋಟೆಯಲ್ಲಿ, ಅದರ ಮರುವರ್ಷ ಸಂಗನಕಲ್ಲಿನಲ್ಲಿ ಉತ್ಖನನ ನಡೆಸಿ ಈ ನೆಲೆಗಳಲ್ಲಿ ನವಶಿಲಾಯುಗ ಮತ್ತು ನವಶಿಲಾಯುಗ ಪೂರ್ವದ ಹಂತಗಳನ್ನು ಬೆಳಕಿಗೆ ತಂದರು. ಅದೇ ವರ್ಷ ಮಜುಂದಾರ್ ಮತ್ತು ರಾಜಗುರು ಅವರು ಬಳ್ಳಾರಿಗೆ ಸಮೀಪದಲ್ಲಿರುವ ಕುಪ್ಪಗಲ್ಲಿನ ಬೂದಿದಿಬ್ಬದಲ್ಲಿ ಉತ್ಖನನ ನಡೆಸಿದರು. ಇದಾದ ಕೆಲಸಮಯದೊಳಗೆ ಎಂ.ಎಸ್. ನಾಗರಾಜರಾವ್ ಅವರು ನವಶಿಲಾಯುಗಕ್ಕೆ ಸಂಬಂಧಿಸಿದಂತೆಯೂ ಅ. ಸುಂದರ ಅವರು ಕಬ್ಬಿಣಯುಗ-ಬೃಹತ್ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದಂತೆಯೂ ಪಿಎಚ್.ಡಿ. ಸಂಶೋಧನೆಗಳನ್ನು ಪೂರ್ಣಗೊಳಿಸಿದರು. ಜೊತೆಗೆ ನಾಗರಾಜರಾವ್ ತುಂಗಭದ್ರಾ ಬಯಲಿನಲ್ಲಿರುವ ಹಳ್ಳೂರಿನಲ್ಲಿಯೂ ತೆಕ್ಕಲಕೋಟೆಯಲ್ಲಿಯೂ ಉತ್ಖನನ ಮಾಡಿದರು. ಇದೇ ಸಮಯದಲ್ಲಿ ಆರ್.ಎಸ್. ಪಪ್ಪು ಅವರು ಘಟಪ್ರಭಾ ಬಯಲಿನ ಶಿಲಾಯುಗ ಸಂಸ್ಕೃತಿಯನ್ನು ಕುರಿತಂತೆ ಅಧ್ಯಯನಗಳನ್ನು ನಡೆಸಿದರು. ಕೆ.ಕೆ. ಸುಬ್ಬಯ್ಯನವರು ಕೊಡಗಿನ ಪುರಾತತ್ವವನ್ನು ಕುರಿತು ಪಿಎಚ್.ಡಿ. ಸಂಶೋಧನೆ ಮಾಡಿದರು. ರವಿ ಕೋರಿಸೆಟ್ಟರ್ ಅವರು ೧೯೭೮ ರಲ್ಲಿ ರಾಯಚೂರು ದೋಆಬ್‌ನ ಭೂಸ್ವರೂಪ ಲಕ್ಷಣಗಳು ಮತ್ತು ಶಿಲಾಯುಗ ಸಂಸ್ಕೃತಿಯನ್ನು ಕುರಿತಂತೆ ಪಿಎಚ್.ಡಿ. ಸಂಶೋಧನೆಯನ್ನು ಪೂರ್ಣಗೊಳಿಸಿ ಮುಂದೆ ಅಮೆರಿಕ ಮತ್ತು ಬ್ರಿಟಿಷ್ ವಿದ್ವಾಂಸರ ಸಹಯೋಗದೊಂದಿಗೆ ಬಳ್ಳಾರಿ ಪ್ರದೇಶದಲ್ಲಿಯೂ ಮಲಪ್ರಭಾ ಬಯಲಿನಲ್ಲಿಯೂ ಹೆಚ್ಚಿನ ಅಧ್ಯಯನಗಳನ್ನು ನಡೆಸಿದರು. ಸುಷ್ಮಾದೇವ್ (೧೯೯೧) ಅವರು ಘಟಪ್ರಭಾ ಬಯಲಿನಲ್ಲಿರುವ ಶಿಲಾಯುಗ ನೆಲೆಗಳ ಭೂಸ್ವರೂಪ-ಭೌಗೋಳಿಕ ಲಕ್ಷಣಗಳನ್ನು ಕುರಿತಂತೆ ಸಂಶೋಧನೆ ನಡೆಸಿದರು. ಕೃಷ್ಣಾ ನದಿಯ ಮೇಲ್ಬಯಲಿನಲ್ಲಿ ನೆಲೆಸಿದ್ದ ಶಿಲಾಯುಗ ಮಾನವನಿಗೂ ಅವನ ಸುತ್ತಲಿನ ಭೂಪರಿಸರಕ್ಕೂ ಇದ್ದ ಸಂಬಂಧವನ್ನು ಕುರಿತು ಪಪ್ಪು ಮತ್ತು ದೇವ್ ಅವರು (೧೯೯೪) ವಿಶಿಷ್ಟವಾದ ಅಧ್ಯಯನವನ್ನು ನಡೆಸಿದರು. ೧೯೮೦ ಮತ್ತು ೯೦ರ ದಶಕದಲ್ಲಿ ಎಸ್.ಕೆ. ಅರುಣಿ, ರಿಚಾ ಜಲದಿಯಾಲ್, ಕ್ರಿಸ್ಟ್ ಬಿಲಾಲ್, ಸುಚಿ ದಯಾಳ್ ಮತ್ತು ವಿ. ಶೋಭಾ ಅವರು ಪ್ರಾಗಿತಿಹಾಸ, ನವಶಿಲಾಯುಗ, ಚಾರಿತ್ರಿಕ ಕಾಲ ಮತ್ತು ಮಧ್ಯಯುಗೀನ ಕಾಲಗಳನ್ನು ಕುರಿತಂತೆ ಪಿಎಚ್.ಡಿ. ಸಂಶೋಧನೆಗಳನ್ನು ಪೂರ್ಣಗೊಳಿಸಿರುತ್ತಾರೆ. ಇತ್ತೀಚಿಗೆ (೨೦೧೬) ಮೋಹನ ಅವರು ಮಲಪ್ರಭಾ ಬಯಲಿನಲ್ಲಿರುವ ಶಿಲಾಚಿತ್ರನೆಲೆಗಳನ್ನು ಕುರಿತು ಮಹಾಪ್ರಬಂಧವನ್ನು ಮಂಡಿಸಿರುತ್ತಾರೆ. ಕರ್ನಾಟಕದ ಪುರಾತತ್ವ ನೆಲೆಗಳೊಂದಿಗೆ ಡೆಕ್ಕನ್ ಕಾಲೇಜಿನ ಒಡನಾಟ ಇಂದಿಗೂ ಮುಂದುವರೆಯುತ್ತಿದೆ. ಸುಷ್ಮಾದೇವ್ ಅವರೂ ಹಲವಾರು ಪಿಎಚ್.ಡಿ. ಸಂಶೋಧಕರೂ ಉತ್ತರಕರ್ನಾಟಕದ ಶಿಲಾಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಗಳನ್ನು ಕುರಿತಂತೆ ಅಧ್ಯಯನಗಳನ್ನು ನಡೆಸುತ್ತಿದ್ದಾರೆ.

ಶೋರಾಪುರ (ಸುರಪುರ) ದೋಆಬ್‌ನಲ್ಲಿ ಕ್ಷೇತ್ರಕಾರ್ಯ-ಆಧರಿತ ಪುರಾತತ್ವ ಅಧ್ಯಯನ

ಅಧ್ಯಯನ ಕ್ಷೇತ್ರದ ಆಯ್ಕೆ ಮತ್ತು ಗುರಿಗಳು

೧೯೬೫-೨೦೦೧ ರ ವರೆಗಿನ ಅವಧಿಯಲ್ಲಿ ನಾನು ಸ್ವತಃ ಭೀಮಾ-ಕೃಷ್ಣಾ ನಡುವಿರುವ ಶೋರಾಪುರ ದೋಆಬ್ ಪ್ರದೇಶದಲ್ಲಿ ಅಧ್ಯಯನವನ್ನು ನಡೆಸಿರುತ್ತೇನೆ. ದೋಆಬ್ ಪ್ರದೇಶವು ಶೋರಾಪುರ ಮತ್ತು ಶಹಪುರ (ಯಾದಗಿರಿ ಜಿಲ್ಲೆ) ಹಾಗೂ ಜೇವರ್ಗಿ (ಗುಲ್ಬರ್ಗ ಜಿಲ್ಲೆ) ತಾಲ್ಲೂಕುಗಳನ್ನು ಒಳಗೊಳ್ಳುತ್ತದೆ. ಈ ಪ್ರದೇಶವು ಮಧ್ಯಯುಗೀನ ಕಾಲದಲ್ಲಿ ಸುರಪುರದ ಪ್ರಸಿದ್ಧ ಬೇಡರ ಸಂಸ್ಥಾನಕ್ಕೆ ಸೇರಿದುದಾಗಿತ್ತು. ಎಸ್.ಕೆ. ಅರುಣಿ ಅವರ ಮಹಾಪ್ರಬಂಧದಲ್ಲಿ ಸುರಪುರ ಸಂಸ್ಥಾನದ ಕೋಟೆಗಳು ಹಾಗೂ ಮತ್ತಿತರ ಪುರಾತತ್ವ ಅವಶೇಷಗಳನ್ನು ಕುರಿತಂತೆ ಸಮಗ್ರ ಮಾಹಿತಿ ಇದೆ. ದಖನ್ನಿನ ಅರೆ-ಒಣ ಹವೆಯ ವಲಯದಲ್ಲಿರುವ ಈ ಪ್ರದೇಶದಲ್ಲಿ ಹಿಂದೆ ಆಗಾಗ್ಗೆ ಬರದ ಸನ್ನಿವೇಶ ಏರ್ಪಡುತ್ತಿತ್ತು; ಆದರೆ ಈಗ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ನಾರಾಯಣಪುರದಲ್ಲಿ ಕೃಷ್ಣಾನದಿಗೆ ಅಣೆಕಟ್ಟು ನಿರ್ಮಿಸಿದ್ದು, ಇದರಿಂದಾಗಿ ಈ ಪ್ರದೇಶ ಇಂದು ನೀರಾವರಿಗೆ ಒಳಪಟ್ಟಿದೆ.

ಸರ್ವೇಕ್ಷಣೆ ಮತ್ತು ಉತ್ಖನನಗಳನ್ನೊಳಗೊಂಡ ನನ್ನ ೩೫ ವರ್ಷಗಳ ಸುದೀರ್ಘ ಅಧ್ಯಯನದಿಂದಾಗಿ ದೋಆಬ್ ಪ್ರದೇಶ ಭಾರತದ ಪುರಾತತ್ವ ಭೂಪಟದಲ್ಲಿ ಸ್ಥಾನಮಾನವನ್ನು ಪಡೆಯಿತೆಂಬುದನ್ನು ತಿಳಿಸಲು ನನಗೆ ಸಂತೋಷವೆನಿಸಿದೆ. ಈ ಪ್ರದೇಶದಲ್ಲಿರುವ ಹುಣಸಗಿ, ಇಸಾಂಪುರ ಮೊದಲಾದ ಕೆಲವು ನೆಲೆಗಳು ಇಂದು ವಿಶ್ವ ಪುರಾತತ್ವದಲ್ಲಿ ಮನ್ನಣೆ ಪಡೆದಿವೆ. ಈ ಪ್ರದೇಶವನ್ನು ನಾನು ಏತಕ್ಕಾಗಿ ಸಂಶೋಧನೆಗೆ ತೆಗೆದುಕೊಂಡೆ ಎಂದು ಇಲ್ಲಿ ಹೇಳಬಯಸುತ್ತೇನೆ. ನಾನು

ಡೆಕ್ಕನ್ ಕಾಲೇಜಿನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾಗ ಪ್ರೊ. ಎಚ್.ಡಿ. ಸಾಂಕಲಿಯ ಅವರು ೧೯೬೪ ರಲ್ಲಿ ತೆಕ್ಕಲಕೋಟೆಯಲ್ಲಿನ ನವಶಿಲಾಯುಗದ ನೆಲೆಯಲ್ಲಿ ನಡೆಸಿದ ಉತ್ಖನನದಲ್ಲಿ ಪಾಲ್ಗೊಂಡಿದ್ದೆ. ಈ ಅನುಭವ ಮತ್ತು ಆಂಧ್ರಪ್ರದೇಶದ ರೈತಾಪಿ ಕುಟುಂಬವೊಂದರಿಂದ ಬಂದ ನನ್ನ ಸ್ವಂತ ಹಿನ್ನೆಲೆ – ಇವೆರಡೂ ಅಂಶಗಳು ದಕ್ಷಿಣ ಭಾರತದ ಆರಂಭಿಕ ಕೃಷಿ–ಪಶುಪಾಲನೆಯನ್ನಾಧರಿಸಿದ ಸಮುದಾಯಗಳನ್ನು ಕುರಿತಂತೆ ನನ್ನಲ್ಲಿ ಆಸಕ್ತಿಯನ್ನು ಮೂಡಿಸಿದವು. ಈ ವಿಷಯಕ್ಕೆ ಸಂಬಂಧಿಸಿದ ಸಾಹಿತ್ಯಾವಲೋಕನದಿಂದ – ಮುಖ್ಯವಾಗಿ ಕೇಂಬ್ರಿಜ್‌ನ ಪ್ರಸಿದ್ಧ ಪುರಾತತ್ವಜ್ಞರಾಗಿದ್ದ ದಿವಂಗತ ಡಾ.ಎಫ್.ಆರ್. ಅಲ್ಚಿನ್ ಅವರ ಕೃತಿ 'ನಿಯಾಲಿತಿಕ್ ಕ್ಯಾಟಲ್ ಕೀಪರ್ಸ್ ಆಫ್ ಸೌತ್ ಇಂಡಿಯ: ಎ ಸ್ಟಡಿ ಆಫ್ ಡೆಕ್ಕನ್ ಆಶ್‌ಮೌಂಡ್ಸ್' ಮತ್ತು ರಾಯಚೂರು ದೋಆಬ್ ಪ್ರದೇಶವನ್ನು ಕುರಿತಂತಿರುವ ಅವರ ಇತರ ಬರೆವಣಿಗೆಗಳಿಂದ– ಶೋರಾಪುರ ದೋಆಬ್ ಪ್ರಾಂತವು ಅಧ್ಯಯನಕ್ಕೆ ಸೂಕ್ತವಾದ ಪ್ರದೇಶ ಎಂಬುದು ಮನದಟ್ಟಾಯಿತು. ಇದೇ ಪ್ರದೇಶದಲ್ಲಿ ಮೆಡೋಸ್ ಟೇಲರನು ೧೮೪೦ರ ದಶಕದಲ್ಲಿ ಜೇವರ್ಗಿ, ರಾಜನಕೋಳೂರು ಮುಂತಾದ ಬೃಹತ್‌ಶಿಲಾಯುಗ ನೆಲೆಗಳನ್ನು ಬೆಳಕಿಗೆ ತಂದು ಸ್ತರಕ್ರಮ ಆಧರಿತ ಉತ್ಖನನವನ್ನು ನಡೆಸಿದನು; ೧೮೭೦ರ ದಶಕದಲ್ಲಿ ರಾಬರ್ಟ್ ಬ್ರೂಸ್‌ಫುಟನು ಪ್ರಾಗೈತಿಹಾಸಕ ನೆಲೆಗಳನ್ನು ಈ ಪ್ರಾಂತದಲ್ಲಿ ಕಂಡುಹಿಡಿದನು. ೧೯೩೦ರ ದಶಕದಲ್ಲಿ ಹೈದರಾಬಾದಿನ ನಿಜಾಮ ಸರ್ಕಾರಕ್ಕೆ ಸೇರಿದ ಭೂಗೋಳವಿಜ್ಞಾನ ಇಲಾಖೆಯ ಸಿ. ಮಹದೇವನ್ ಮತ್ತು ಎಸ್.ಕೆ. ಮುಖರ್ಜಿ ಅವರು ದೋಆಬ್ ಪ್ರದೇಶದಲ್ಲಿ ನವಶಿಲಾಯುಗ ಮತ್ತು ಬೃಹತ್‌ಶಿಲಾಯುಗದ ನೆಲೆಗಳನ್ನು ಶೋಧಿಸಿರುವ ವಿಷಯವೂ ನನ್ನ ಗಮನಕ್ಕೆ ಬಂದಿತು. ಈ ಹಿನ್ನೆಲೆಯಲ್ಲಿ ನಾನು ಎಂ.ಎ. ಪದವಿಯನ್ನು ಪೂರ್ಣಗೊಳಿಸುವ ಮೊದಲೇ ಶೋರಾಪುರ ದೋಆಬ್ ಪ್ರದೇಶವನ್ನು ಪಿಎಚ್.ಡಿ. ಸಂಶೋಧನೆಗಾಗಿ ಆಯ್ದುಕೊಂಡಿದ್ದೆ.

ನವಶಿಲಾಯುಗದ ನೆಲೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು ನಾನು ದೋಆಬ್ ಪ್ರದೇಶದಲ್ಲಿ ಕ್ಷೇತ್ರಕಾರ್ಯವನ್ನು ಆರಂಭಿಸಿದೆನಾದರೂ, ೧೯೬೫ರಿಂದ ೬೮ ರವರೆಗೆ ನಾನು ನಡೆಸಿದ ಸರ್ವೇಕ್ಷಣೆಗಳಲ್ಲಿ ಮಧ್ಯಹಳೆಶಿಲಾಯುಗ ಮತ್ತು ಅಂತ್ಯಹಳೆಶಿಲಾಯುಗದ ಹಲವಾರು ನೆಲೆಗಳೂ ಸೂಕ್ಷ್ಮಶಿಲಾಯುಗದ ನೆಲೆಗಳೂ ಕಂಡುಬಂದಿದ್ದರಿಂದ ಇವುಗಳ ಬಗ್ಗೆಯೂ ನಾನು ನನ್ನ ಮಹಾಪ್ರಬಂಧದಲ್ಲಿ ವಿವರಗಳನ್ನು ನೀಡಿದ್ದೇನೆ (ಪದ್ದಯ್ಯ ೧೯೬೮, ೧೯೭೩). ೧೯೭೪ ರ ಅನಂತರ ಸುಮಾರು ೧೫ ವರ್ಷಗಳ ಕಾಲ ನಾನು ಕೃಷ್ಣಾ ನದಿಯಿಂದ ಸುಮಾರು ೩೫ ಕಿಮೀ ದೂರದಲ್ಲಿ, ಶೋರಾಪುರ ತಾಲ್ಲೂಕಿನ ನೈರುತ್ಯ ಭಾಗದಲ್ಲಿ ಇರುವ ಹುಣಸಗಿ–ಬೈಚಬಾಳು ಬಯಲುಗಳಲ್ಲಿನ ಒಂದು ಸಣ್ಣ ಪ್ರದೇಶದಲ್ಲಿ (ಸುಮಾರು ೫೦೦ ಚ.ಕಿಮೀ.) ಅಶ್ಯೂಲಿಯನ್ (ಆದಿ ಹಳೆಶಿಲಾಯುಗ) ನೆಲೆಗಳ ಬಗ್ಗೆ ಆಳವಾದ ಅಧ್ಯಯನವನ್ನು ನಡೆಸಿದೆ. ಈ ಸಂಶೋಧನೆಯ ಅಂಗವಾಗಿ ಹುಣಸಗಿ ಮತ್ತು ಯಡಿಯಾಪುರ ನೆಲೆಗಳಲ್ಲಿ ಉತ್ಖನನವನ್ನು ನಡೆಸಲಾಯಿತು. ೧೯೮೭ ರಿಂದ ೧೯೯೬ ರ ನಡುವೆ ನಾನು ನನ್ನ ಆಸಕ್ತಿಯನ್ನು ಮತ್ತೆ ನವಶಿಲಾಯುಗದೆಡೆಗೆ ಹೊರಳಿಸಿ, ಶೋರಾಪುರ ದೋಆಬ್ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿರುವ ಬೂದಿದಿಬ್ಬಗಳನ್ನು ಅವುಗಳ ಭೂಪರಿಸರದ ಹಿನ್ನೆಲೆಯಲ್ಲಿ (ಲ್ಯಾಂಡ್‌ಸ್ಕೇಪ್ ಆರ್ಕಿಯಾಲಜಿ) ಅರಿಯುವ ದೃಷ್ಟಿಯಿಂದ ಅಧ್ಯಯನವನ್ನು ನಡೆಸಿದೆ. ಬೂದಿಹಾಳ ನೆಲೆಯಲ್ಲಿ ೧೯೯೧–೯೬ ರವರೆಗೆ ವಿಸ್ತೃತ ಉತ್ಖನನ ನಡೆಸಿ ಕೃಷಿ–ಪಶುಪಾಲನೆಯನ್ನಾಧರಿಸಿದ್ದ ನವಶಿಲಾಯುಗದ ಗ್ರಾಮವೊಂದರ ಅವಶೇಷಗಳನ್ನು ಅನಾವರಣಗೊಳಿಸಿದೆ. ಮುಂದೆ ೧೯೯೭ ರಿಂದ ೨೦೦೧ ರ ನಡುವೆ ಹುಣಸಗಿ ಬಯಲಿನಲ್ಲಿರುವ ಪ್ರಮುಖ ಅಶೂಲಿಯನ್ ನೆಲೆಯಾದ ಇಸಾಂಪುರದಲ್ಲಿ ಉತ್ಖನನ ನಡೆಸಿದೆ. ಅಶೂಲಿಯನ್ ಸಂಸ್ಕೃತಿಯನ್ನು ಕುರಿತು ನಾನು ನಡೆಸಿದ ಸಂಶೋಧನೆಯ ಕೊನೆಯ ಹಂತದಲ್ಲಿ ಅಮೆರಿಕದ ಡಾ.ಎಂ.ಡಿ. ಪೆಟ್ರಾಗ್ಲಿಯ ಅವರು ನನ್ನ ಸಹವರ್ತಿಯಾಗಿ ಕಾರ್ಯನಿರ್ವಹಿಸಿದರು.

ಸಾಂಸ್ಕೃತಿಕ ಅನುಕ್ರಮಣಿಕೆ

ದೋಆಬ್ ಪ್ರದೇಶದಲ್ಲಿ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ ಮತ್ತು ನವಶಿಲಾಯುಗಕ್ಕೆ ಸೇರಿದ ಒಟ್ಟು ೪೦೦ ನೆಲೆಗಳಿವೆ. ಇವುಗಳಲ್ಲಿ ಸುಮಾರು ೨೦೦ ನೆಲೆಗಳು ಆದಿಹಳೆಶಿಲಾಯುಗದವು (ಇವನ್ನು ಫ್ರಾನ್ಸಿನ ನೆಲೆಯಾದ ಸೇಂಟ್ ಅಶೂಲ್‌ನ ಹೆಸರಿನಲ್ಲಿ ಅಶೂಲಿಯನ್ ಸಂಸ್ಕೃತಿಯ ನೆಲೆಗಳೆಂದು ಕರೆಯಲಾಗುತ್ತದೆ); ಈ ನೆಲೆಗಳು ಹುಣಸಗಿ–ಬೈಚಬಾಳು ಬಯಲುಗಳಲ್ಲಿ ಮಾತ್ರ ಕಂಡುಬರುತ್ತವೆ. ಮಧ್ಯಹಳೆಶಿಲಾಯುಗದಿಂದ ದೋಆಬ್ ಪ್ರದೇಶದಾದ್ಯಂತ ಪ್ರಾಗೈತಿಹಾಸಿಕ ಸಮುದಾಯಗಳು ನೆಲೆಸಿದ್ದುದಾಗಿ ತಿಳಿದುಬರುತ್ತದೆ. ನನ್ನ ಸಂಶೋಧನೆಯ ಜೊತೆಜೊತೆಗೆ ಡೆಕ್ಕನ್ ಕಾಲೇಜಿನ ನಾಲ್ವರು ವಿದ್ಯಾರ್ಥಿಗಳು ನನ್ನ ಮಾರ್ಗದರ್ಶನದಲ್ಲಿ ದೋಆಬ್ ಪುರಾತತ್ವದ ವಿವಿಧ ಆಯಾಮಗಳನ್ನು ಕುರಿತಂತೆ ಪಿಎಚ್.ಡಿ. ಸಂಶೋಧನೆಯನ್ನು ಪೂರ್ಣಗೊಳಿಸಿದರು. ಇಲ್ಲಿರುವ ಹಳೆಶಿಲಾಯುಗದ ನೆಲೆಗಳನ್ನು ರೂಪುಗೊಳಿಸಿದ ನೈಸರ್ಗಿಕ–

ಮಾನವಮೂಲದ ಪ್ರಕ್ರಿಯೆಗಳನ್ನು ಕುರಿತು (ಫಾರ್ಮೇಶನ್ ಪ್ರೊಸೆಸ್) ರಿಚ ಜಲದಿಯಾಲ್ ಅಧ್ಯಯನ ಮಾಡಿದರು. ಬೂದಿಹಾಳ ಮತ್ತು ಇತರ ಬೂದಿದಿಬ್ಬಗಳ ಭೂಪುರಾತತ್ವ ಅಧ್ಯಯನ ಬಿಲಾಲ್ ಕ್ರಿಸ್ತ್ ಅವರ ಸಂಶೋಧನಾ ವಿಷಯವಾಗಿತ್ತು. ಹಗರಟಗಿ, ಮುದನೂರು ಮತ್ತಿತರ ಕಡೆಗಳಲ್ಲಿರುವ ಚಾರಿತ್ರಿಕ ಕಾಲದ (ರಾಷ್ಟ್ರಕೂಟ-ಕಲ್ಯಾಣಿ ಚಾಳುಕ್ಯ) ದೇವಾಲಯ ಸಂಕೀರ್ಣಗಳನ್ನು ಕುರಿತು ಸುಚಿ ದಯಾಳ್ (೧೯೯೮) ಸಂಶೋಧನೆ ನಡೆಸಿದರೆ ಎಸ್.ಕೆ. ಅರುಣಿ ಅವರು ಸುರಪುರ ಸಂಸ್ಥಾನದ ಕೋಟೆ ಹಾಗೂ ಇತರ ಪುರಾತತ್ವ ಅವಶೇಷಗಳ ಬಗ್ಗೆ ಅಧ್ಯಯನ ನಡೆಸಿದರು.

ಈ ಎಲ್ಲ ಅಧ್ಯಯನಗಳಿಂದಾಗಿ ದೋಆಬ್ ಪ್ರಾಂತದಲ್ಲಿನ ಪ್ರಾಗಿತಿಹಾಸ ಸಂಸ್ಕೃತಿಗಳ ಅನುಕ್ರಮಣಿಕೆಯ ಪೂರ್ಣ ಚಿತ್ರಣವನ್ನು ಕಟ್ಟಿಕೊಡಲು ಸಾಧ್ಯವಾಗಿದೆ. ಪ್ರಾಗೈತಿಹಾಸಿಕ ಕಾಲದ ಮುಖ್ಯ ಸಾಂಸ್ಕೃತಿಕ ಹಂತಗಳು, ಸಾಂಸ್ಕೃತಿಕ ಅವಶೇಷಗಳು ಕಂಡುಬರುವ ಭೂಪದರಗಳ ಸ್ವರೂಪ ಮತ್ತು ಅಂದಾಜು ಕಾಲಮಾನವನ್ನು ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ (ಕೋಷ್ಟಕ ೧).

ಕೋಷ್ಟಕ ೧: ಶೋರಾಪುರ ದೋಆಬ್‌ನಲ್ಲಿ ಪ್ರಾಗೈತಿಹಾಸಿಕ ಕಾಲಾವಧಿಯಲ್ಲಿನ ಸಾಂಸ್ಕೃತಿಕ ಅನುಕ್ರಮಣಿಕೆ

ಸಂಸ್ಕೃತಿಭೂಪದರ/ಸ್ತರದ ಸ್ವರೂಪಕಾಲಮಾನ (ಅಂದಾಜು)*ಆದಿಚಾರಿತ್ರಿಕ ಕಾಲಕಣಗಾನಹಳ್ಳಿಯಲ್ಲಿರುವ ಅಶೋಕನ ಪ್ರಧಾನ ಶಿಲಾಶಾಸನ ಮತ್ತು ಬೌದ್ಧ ಸ್ತೂಪಗಳು ಹಾಗೂ ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ಭೀಮಾ ನದಿಯ ಎಡದಂಡೆಯ ಮೇಲಿರುವ ಸನ್ನತಿಯಲ್ಲಿರುವ ಸಾತವಾಹನ ಕಾಲದ ವಸತಿನೆಲೆಕ್ರಿ.ಪೂ. ೩ನೆಯ ಶತಮಾನದಿಂದಕಬ್ಬಿಣಯುಗ/ಬೃಹತ್ ಶಿಲಾಯುಗಕಪ್ಪುಮಣ್ಣಿನ ಸ್ತರರಚನೆಯ ಅನಂತರದಲ್ಲಿ (ಪೋಸ್ಟ್-ಬ್ಲಾಕ್ ಸಾಯಿಲ್)ಕ್ರಿ.ಪೂ. ಮೊದಲನೆಯ ಸಹಸ್ರಮಾನದ ಆದಿಭಾಗನವಶಿಲಾಯುಗಕಪ್ಪುಮಣ್ಣಿನ ಸ್ತರರಚನೆಯ ಅನಂತರದಲ್ಲಿ (ಪೋಸ್ಟ್-ಬ್ಲಾಕ್ ಸಾಯಿಲ್)ಕ್ರಿ.ಪೂ. ೨೫೦೦-೧೦೦೦ಸೂಕ್ಷ್ಮಶಿಲಾಯುಗನುಣುಪಾದ ಕಪ್ಪುಮಣ್ಣಿನ (ಬ್ಲಾಕ್ ಸಿಲ್ಟ್) ಸ್ತರದ ಮೇಲ್ಮೈ ಅಥವಾ ಕಪ್ಪುಮಣ್ಣಿನ ಸ್ತರದ ಮೇಲ್ಭಾಗದಲ್ಲಿಕ್ರಿ.ಪೂ. ೮೦೦೦-೨೫೦೦ಅಂತ್ಯಹಳೆಶಿಲಾಯುಗನುಣುಪಾದ ಕಪ್ಪುಮಣ್ಣು೩೦,೦೦೦-೧೦೦೦೦ ಬಿ.ಪಿ.ಮಧ್ಯಹಳೆಶಿಲಾಯುಗನುಣುಪಾದ ಕಂದುಮಣ್ಣು (ಮೇಲ್ಭಾಗ)೭೦,೦೦೦-೩೦,೦೦೦ ಬಿ.ಪಿ.ಆದಿಹಳೆಶಿಲಾಯುಗವಿಕಸಿತ ಅಶೂಲಿಯನ್ ಹಂತನುಣುಪಾದ ಕಂದುಮಣ್ಣು (ಕೆಳಭಾಗ)೨,೦೦,೦೦೦-೭೦,೦೦೦ ಬಿ.ಪಿ.ಆದಿ ಮತ್ತು ಮಧ್ಯ ಅಶೂಲಿಯನ್ ಹಂತಸಮೆದ ತಳಬಂಡೆಯ ಮೇಲೆ ಇಲ್ಲವೇ ಚಿಲುಮೆ ನೀರಿನಿಂದಾದ ಪದರದ ಮೇಲೆ, ಪ್ರತ್ಯೇಕ ಪದರದ ರೂಪದಲ್ಲಿ೧೨,೦೦,೦೦೦ - ೨,೦೦,೦೦೦ ಬಿ.ಪಿ.ವಿವಿಧ ಗಾತ್ರದ ಕಲ್ಲಿನುಂಡೆಗಳಿಂದಾದ ಸುಣ್ಣಮಿಶ್ರಿತ ಪದರ (ಕಂಕರ್ ಕಂಗ್ಲೊಮರೇಟ್)

* ಕ್ರಿ.ಪೂ. ಮತ್ತು ಬಿ.ಪಿ. (ಬಿಫೋರ್ ಪ್ರೆಸೆಂಟ್- ಇವತ್ತಿನಿಂದ ಹಿಂದೆ) ಯಲ್ಲಿ ಸೂಚಿಸಿರುವ ಕಾಲಮಾನಗಳು ಇಂಗಾಲ-೧೪, ಯುರೇನಿಯಮ್ ಸೀರೀಸ್, ಇ.ಎಸ್.ಆರ್ (ಎಲೆಕ್ಟ್ರಾನ್ ಸ್ಪಿನ್ ರೆಸೋನೆನ್ಸ್) ಮತ್ತಿತರ ವೈಜ್ಞಾನಿಕ ಕಾಲಮಾನ ವಿಧಾನಗಳಿಂದ ಪಡೆದಿರುವ ಪರಿಷ್ಕೃತ ಕಾಲಮಾನಗಳು.

ಈ ಮೇಲಿನ ತಾಂತ್ರಿಕ ಹಂತಗಳ ಸಾಂಸ್ಕೃತಿಕ-ಚಾರಿತ್ರಿಕ ವಿವರಗಳನ್ನು ಮುಂದೆ ಪರಿಶೀಲಿಸೋಣ. ಈ ಮೊದಲು ತಿಳಿಸಿದಂತೆ ಆದಿ ಹಳೆಶಿಲಾಯುಗ ಅಥವಾ ಅಶೂಲಿಯನ್ ಸಂಸ್ಕೃತಿಯು ಹುಣಸಗಿ ಮತ್ತು ಬೈಚಬಾಳು ಬಯಲಿನಲ್ಲಿ ಮಾತ್ರ ಕಂಡುಬರುತ್ತದೆ. ಮಧ್ಯಹಳೆಶಿಲಾಯುಗದ ಕಾಲದಿಂದ ಇಡಿಯ ದೋಆಬ್ ಪ್ರದೇಶದಲ್ಲಿ ಆದಿಮಾನವನ ವಾಸ್ತವ್ಯದ ನೆಲೆಗಳು ಕಾಣಸಿಗುತ್ತವೆ. ಈ ಪ್ರದೇಶದ ಅಶೂಲಿಯನ್ ಸಂಸ್ಕೃತಿಯ ವಿಶಿಷ್ಟ ಲಕ್ಷಣವೆಂದರೆ ಉಪಕರಣಗಳನ್ನು (ಕೈಗೊಡಲಿ, ಕೊಚ್ಚುಗತ್ತಿ ಇತ್ಯಾದಿ) ಮಾಡಲು ಸುಣ್ಣಕಲ್ಲನ್ನು ಬಳಸಿರುವುದು. ಸಾಂಸ್ಕೃತಿಕವಾಗಿ ನೋಡುವುದಾದರೆ, ಹತ್ತು ಲಕ್ಷವರ್ಷ ಕಾಲಾವಧಿಯಲ್ಲಿ ಹರಡಿದ್ದ ಈ ಹಂತವು ಬೇಟೆ-ಆಹಾರ ಸಂಗ್ರಹಣೆಯ ಆರಂಭಿಕ ಲಕ್ಷಣಗಳನ್ನು ಸೂಚಿಸುತ್ತದೆ. ಮಧ್ಯ ಮತ್ತು ಅಂತ್ಯಹಳೆಶಿಲಾಯುಗ ಕಾಲದಲ್ಲಿ (ಹೆರೆಚಕ್ಕೆ, ಮೊನೆ, ಚಾಕು ಮುಂತಾದ ಚಕ್ಕೆ-ಅಲಗುಗಳಿಂದ ತಯಾರಿಸಿದ ಉಪಕರಣಗಳು ಪ್ರಧಾನವಾಗಿರುವ ಕಾಲ) ಬೇಟೆ-ಆಹಾರ ಸಂಗ್ರಹಣೆಯ ವಿಧಾನಗಳಲ್ಲಿ ಅಭಿವೃದ್ಧಿಯಾದುದು ಕಂಡುಬರುತ್ತದೆ. ಜೊತೆಗೆ ಈ ಹಂತಗಳಲ್ಲಿ ಶಿಲೋಪಕರಣ ತಂತ್ರಜ್ಞಾನ ಪರಿಷ್ಕಾರಗೊಂಡಿತಲ್ಲದೆ ಉಪಕರಣಗಳ ತಯಾರಿಕೆಗೆ ಅರೆ-ಪ್ರಶಸ್ತ ಶಿಲೆಯಾದ ಚರ್ಟ್‌ಕಲ್ಲೂ ಸೇರಿದಂತೆ ವಿವಿಧ ಬಗೆಯ ಕಲ್ಲುಗಳ ಬಳಕೆಯನ್ನು ಮಾನವ ಮಾಡತೊಡಗಿದ; ಇದಲ್ಲದೆ ಹುಣಸಗಿ-ಬೈಚಬಾಳು ಬಯಲಿನಾಚೆಯೂ ಮಾನವ ವಾಸ್ತವ್ಯ ಹೂಡತೊಡಗಿದ. ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಹಂತದಲ್ಲಿ (ಬಾಣದ ಮೊನೆ, ಈಟಿಗಾಳ ಮುಂತಾದ ಸಂಯುಕ್ತ ಉಪಕರಣಗಳನ್ನು ಸೂಕ್ಷ್ಮಉಪಕರಣಗಳಿಂದ ತಯಾರಿಸುತ್ತಿದ್ದ ಹಂತ) ಬೇಟೆ-ಆಹಾರ ಸಂಗ್ರಹಣೆಯ ತಂತ್ರಗಳು ಮತ್ತಷ್ಟು ತೀವ್ರಗೊಂಡುದಾಗಿ ಕಂಡುಬರುತ್ತದೆ. ದೋಆಬ್ ಪ್ರದೇಶದ

ಎಲ್ಲ ಮೂಲೆಮೊಡಕುಗಳಲ್ಲಿ ಸೂಕ್ಷ್ಮಶಿಲಾಯುಗದ ಸಮುದಾಯಗಳು ನೆಲೆಸಿದ್ದುವು. ಎಲ್ಲ ಬಗೆಯ ವನ್ಯಾಹಾರಗಳನ್ನೂ (ಸಸ್ಯ ಮತ್ತು ಮಾಂಸ) ಈ ಸಮುದಾಯಗಳು ಉಪಯೋಗಿಸುತ್ತಿದ್ದುವು. ಇದರ ತರುವಾಯದಲ್ಲಿ ಬಂದ ನವಶಿಲಾಯುಗ ಸಂಸ್ಕೃತಿಯ ಕಾಲದಲ್ಲಿ ಮಾನವನ ಜೀವನಶೈಲಿಯಲ್ಲಿ ಒಂದು ಮೂಲಭೂತ ಬದಲಾವಣೆಯಾಯಿತು. ಅವನು ಅಲೆಮಾರಿ ಜೀವನಶೈಲಿಯನ್ನು ತೊರೆದು ಕೊಪ್ಪಲು-ಹಳ್ಳಿಗಳನ್ನು ಕಟ್ಟಿಕೊಂಡು ಒಂದೆಡೆ ಬೀಡುಬಿಟ್ಟು ಬದುಕಲಾರಂಭಿಸಿದನು. ಬೇಟೆ-ಆಹಾರ ಸಂಗ್ರಹಣೆ ಕೆಲಮಟ್ಟಿಗೆ ಮುಂದುವರೆಯಿತಾದರೂ ವ್ಯವಸಾಯ (ರಾಗಿ-ಜವೆ ಇತ್ಯಾದಿ) ಮತ್ತು ಪ್ರಾಣಿ ಸಾಕಣೆ (ಜಾನುವಾರು ಮತ್ತು ಕುರಿ-ಮೇಕೆ) ಆಹಾರ ಗಳಿಕೆಯ ಹೊಸ ಮಾರ್ಗಗಳಾಗಿ ರೂಪುಗೊಂಡವು. ಕುಂಬಾರಿಕೆ, ಬುಟ್ಟಿ ಹೆಣೆಯುವಿಕೆ, ಮಣಿ ಮೊದಲಾದ ಅಲಂಕಾರಿಕ ವಸ್ತುಗಳ ತಯಾರಿಕೆ (ಮೂಳೆ ಮತ್ತು ಅರೆ-ಪ್ರಶಸ್ತ ಶಿಲೆಗಳಿಂದ)- ಇವೇ ಮೊದಲಾದ ಕುಶಲ ಕಲೆಗಳು ಈ ಹಂತದಲ್ಲಿ ಬೆಳೆದುವು. ತಾವು ನೆಲೆಸಿದ ಪರಿಸರದಲ್ಲಿಯೇ, ಅದರಲ್ಲಿಯೂ ಗುಡಿಸಲುಗಳ ತಳಭಾಗದಲ್ಲಿ ಅಥವಾ ಆಸುಪಾಸಿನಲ್ಲಿ, ಕುಣಿತೋಡಿ ಮೃತರ ಸಮಾಧಿಗಳನ್ನು ಮಾಡತೊಡಗಿದುದು ಈ ಕಾಲದಲ್ಲಾದ ಮತ್ತೊಂದು ಗಮನಾರ್ಹ ಬದಲಾವಣೆ. ನವಶಿಲಾಯುಗದ ಕೃಷಿ-ಆಧರಿತ ಗ್ರಾಮ್ಯ ಬದುಕಿನ ಹಲವಾರು ಲಕ್ಷಣಗಳು ಇಂದಿಗೂ ಕರ್ನಾಟಕದ ಗ್ರಾಮೀಣ ಬದುಕಿನಲ್ಲಿ ಉಳಿದುಬಂದಿವೆ.

ಕಬ್ಬಿಣಯುಗದಲ್ಲಿ ಎರಡು ಪ್ರಧಾನ ಸೇರ್ಪಡೆಗಳಾದುವು. ಒಂದನೆಯದು ಕಬ್ಬಿಣ ತಂತ್ರಜ್ಞಾನದ ಆರಂಭ; ಇದರಿಂದಾಗಿ ಕೃಷಿ ಚಟುವಟಿಕೆಗಳು ಬಿರುಸಿನಿಂದ ನಡೆಯುವಂತಾಯಿತು; ಕೃಷಿಗಾಗಿ ಕೆರೆ ನೀರಾವರಿ ಆರಂಭವಾದುದೂ ಈ ಕಾಲಘಟ್ಟದಲ್ಲಿಯೇ. ಎರಡನೆಯದು ಮೃತರಿಗಾಗಿ ಬೃಹತ್ ಶಿಲಾಸಮಾಧಿಗಳ ನಿರ್ಮಾಣ; ಸಮಾಧಿಗಳು ಕಲ್ಲುವೃತ್ತ, ನಿಲಸುಗಲ್ಲು, ನೆಲಕೋಣೆ, ಡಾಲ್ಮೆನ್ ಮುಂತಾದ ಪ್ರಕಾರಗಳಲ್ಲಿ ಕಂಡುಬರುತ್ತವೆ. ಸಮಾಧಿಗಳಿಗೆ ಬೆಟ್ಟಗುಡ್ಡಗಳಲ್ಲಿ ಸಿಗುವ ಕಲ್ಲನ್ನು ಕಬ್ಬಿಣದ ಉಪಕರಣಗಳ ಸಹಾಯದಿಂದ ಒಡೆದು, ಕತ್ತರಿಸಿ ತರಲಾಗುತ್ತಿತ್ತು. ಆದಿಚಾರಿತ್ರಿಕ ಕಾಲದಲ್ಲಿ ಬರವಣಿಗೆ ಆರಂಭವಾದುದರ ಜೊತೆಗೆ ರಾಜ್ಯದ ಪರಿಕಲ್ಪನೆ ಮೂಡಿದುದು ಕಂಡುಬರುತ್ತದೆ. ಜೊತೆಗೆ ಕೆಲವು ಊರುಗಳು ಈ ಕಾಲದಲ್ಲಿ ನಗರಕೇಂದ್ರಗಳಾಗಿ ವಿಸ್ತರಿಸಿದುವು.

ದೋಆಬ್ ಪ್ರದೇಶದಲ್ಲಿ ಪುರಾತತ್ವ ನೆಲೆಗಳು ಸಮೃದ್ಧವಾಗಿದ್ದು ವೈವಿಧ್ಯಪೂರ್ಣವಾಗಿ ಇರುವುದರಿಂದಲೂ ನಾನು ಈ ಪ್ರದೇಶದಲ್ಲಿ ಕಾಲ್ನಡಿಗೆ ಸರ್ವೇಕ್ಷಣೆ ಮತ್ತು ಉತ್ಖನನಗಳನ್ನೊಳಗೊಂಡಂತೆ ಸುದೀರ್ಘ ಸಂಶೋಧನೆ ನಡೆಸಿದುದರಿಂದಲೂ ದೋಆಬ್ ಪ್ರದೇಶದ ಸಾಂಸ್ಕೃತಿಕ ಬೆಳವಣಿಗೆಯನ್ನು ಪುನಾರಚಿಸುವಲ್ಲಿ ಪ್ರಮುಖ ಸೈದ್ಧಾಂತಿಕ ಪರಿಕಲ್ಪನೆಗಳನ್ನೂ ಎಲ್ಲ ಬಗೆಯ ಕ್ಷೇತ್ರವಿಧಾನಗಳನ್ನೂ ಬಳಸಿಕೊಳ್ಳಲು ನನಗೆ ಅವಕಾಶ ದೊರೆಯಿತು. ನನ್ನ ಪಿಎಚ್.ಡಿ. ಮಹಾಪ್ರಬಂಧ ಸಾಂಸ್ಕೃತಿಕ ಇತಿಹಾಸವನ್ನು ಕುರಿತುದ್ದಾದ್ದರಿಂದ ಇದರಲ್ಲಿ ದೋಆಬ್‌ನ ಸಾಂಸ್ಕೃತಿಕ ಹಂತಗಳನ್ನು ಕಾಲಾನುಕ್ರಮಣಿಕೆಯಲ್ಲಿ ಜೋಡಿಸಿ ಪ್ರತಿ ಹಂತದ ವಿಶಿಷ್ಟ ಲಕ್ಷಣಗಳನ್ನು ಗುರುತಿಸಿ ವಿವರಿಸಲಾಗಿದೆ. ಪಿಎಚ್.ಡಿ. ಸಂಶೋಧನೆಯ ತರುವಾಯದಲ್ಲಿ ಹುಣಸಗಿ-ಬೈಚಬಾಳು ಬಯಲಿನಲ್ಲಿನ ಅಶೂಲಿಯನ್ ಸಂಸ್ಕೃತಿಯನ್ನು ಕುರಿತಂತೆ ನಾನು ನಡೆಸಿದ ಅಧ್ಯಯನವು ನವಪುರಾತತ್ವದ ಪರಿಕಲ್ಪನೆಗಳಿಂದ ಪ್ರೇರೇಪಣೆ ಪಡೆದಿದೆ. ಈ ಪರಿಕಲ್ಪನೆಗಳಲ್ಲಿ ಮುಖ್ಯವಾದುವು- (ಎ) ಸಂಸ್ಕೃತಿ ಎಂಬುದು ಆರ್ಥಿಕ, ಸಾಮಾಜಿಕ, ತಂತ್ರಜ್ಞಾನ ಮತ್ತಿತರ ಅಂಶಗಳಿಂದ ಕೂಡಿರುವ ಒಂದು ಸಮಗ್ರ ವ್ಯವಸ್ಥೆಯಾಗಿದ್ದು ಈ ಎಲ್ಲ ಅಂಶಗಳೂ ಪರಸ್ಪರ ಅವಿನಾಭಾವ ಸಂಬಂಧವನ್ನು ಹೊಂದಿರುತ್ತವೆ (ಬಿ) ಯಾವುದೇ ಸಂಸ್ಕೃತಿ ಅದರ ಸುತ್ತಮುತ್ತಲಿನ ಭೂಪರಿಸರದೊಂದಿಗಿನ ಹೊಂದಾಣಿಕೆಯಿಂದ ರೂಪುಗೊಂಡಿರುತ್ತದೆ. ನವಪುರಾತತ್ವದಿಂದಾಗಿ ಸಂಸ್ಕೃತಿ ಎಂಬ ಪದವು ಹೊಸ ಅರ್ಥವ್ಯಾಪ್ತಿಯನ್ನು ಪಡೆದುಕೊಂಡಿತು; ಅದುವರೆಗೆ ಸಂಸ್ಕೃತಿ ಎಂದರೆ ಅದರ ಕೆಲವು ಮುಖ್ಯಲಕ್ಷಣಗಳನ್ನು ಪಟ್ಟಿಮಾಡಿ ವಿವರಿಸುವುದಾಗಿತ್ತು. ಸಾಮಾಜಿಕ-ನೈಸರ್ಗಿಕ ಪರಿಸರದೊಂದಿಗಿನ ಒಡನಾಟದಿಂದ ಮಾನವನ ಬದುಕು ವಿಕಸನ ಹೊಂದುವ ಪ್ರಕ್ರಿಯೆಯೇ ಸಂಸ್ಕೃತಿ ಎಂಬ ಹೊಸ ಆಯಾಮವನ್ನು ನವಪುರಾತತ್ವ ಕಲ್ಪಿಸಿಕೊಟ್ಟಿತು. ಸಂಸ್ಕೃತಿಯ ಬಗೆಗಿನ ನವಪುರಾತತ್ವದ ಈ ನೂತನ ಪರಿಕಲ್ಪನೆ ನವಶಿಲಾಯುಗದ ಬೂದಿದಿಬ್ಬಗಳ ಅಧ್ಯಯನದಲ್ಲಿಯೂ ನನಗೆ ಸಹಕಾರಿಯಾಯಿತು. ಈ ಅಧ್ಯಯನದಲ್ಲಿ ನಾನು ನವಪುರಾತತ್ವದ ಅನಂತರದಲ್ಲಿ ಬಂದ ಪರಿಕಲ್ಪನೆಗಳನ್ನೂ (ಉದಾ. ಸಾಂಕೇತಿಕತೆ) ಬಳಸಿಕೊಂಡಿದ್ದೇನೆ.

ಶೋರಾಪುರ ದೋಆಬ್ ಅಧ್ಯಯನದ ಮಹತ್ವ

ಭಾರತೀಯ ಪ್ರಾಗಿತಿಹಾಸ ಕ್ಷೇತ್ರದಲ್ಲಿ ಶೋರಾಪುರ ದೋಆಬ್ ಸಂಶೋಧನೆಯ ಪ್ರಾಮುಖ್ಯತೆ ಏನೆಂಬುದರ ಬಗ್ಗೆ ಒಂದೆರಡು ಮಾತುಗಳನ್ನು ಇಲ್ಲಿ ಪ್ರಸ್ತಾಪಿಸಬಯಸುತ್ತೇನೆ. ನನ್ನ ಈ ಮಾತುಗಳು ವಿಶೇಷವಾಗಿ ಅಶೂಲಿಯನ್ ಸಂಸ್ಕೃತಿ

ಮತ್ತು ನವಶಿಲಾಯುಗದ ಬೂದಿದಿಬ್ಬಗಳಿಗೆ ಅನ್ವಯಿಸುತ್ತದೆ. ಅಶೂಲಿಯನ್ ಸಂಸ್ಕೃತಿಯನ್ನು ಕುರಿತು ಹೇಳುವುದಾದರೆ, ೧೯೭೦ರ ದಶಕದ ಮಧ್ಯಭಾಗದವರೆಗೆ ಭಾರತೀಯ ಪ್ರಾಗಿತಿಹಾಸ ಅಧ್ಯಯನವು ಪ್ರಮುಖ ನದಿಗಳ ದಂಡೆ–ಪಾತ್ರಗಳಲ್ಲಿರುವ ಪದರಗಳನ್ನು ಅನ್ವೇಷಿಸಿ, ಅವುಗಳಿಂದ ಕೆಲವೊಂದು ಶಿಲೋಪಕರಣಗಳನ್ನು ಆಯ್ದು ಸಂಗ್ರಹಿಸಿ ಇವುಗಳ ಆಧಾರದ ಮೇಲೆ ನದಿಯ ಸ್ತರಕ್ರಮ, ಪ್ರಾಗೈತಿಹಾಸಿಕ ಸಂಸ್ಕೃತಿಗಳ ಅನುಕ್ರಮಣಿಕೆ ಮತ್ತು ಪ್ರಾಗ್–ಹವಾಮಾನದಲ್ಲಾದ ಬದಲಾವಣೆಗಳನ್ನು ಕಟ್ಟಿಕೊಡುವುದಾಗಿದ್ದಿತು. ಸ್ಥಾನಪಲ್ಲಟಗೊಂಡ ಪ್ರಾಗೈತಿಹಾಸಿಕ ನೆಲೆಗಳಿಂದ ಸಂಗ್ರಹಿಸಿದ ಶಿಲೋಪಕರಣಗಳ ನಮೂನೆ–ತಂತ್ರಜ್ಞಾನಗಳನ್ನು ವಿಶ್ಲೇಷಿಸುವುದು ಸಾಂಸ್ಕೃತಿಕ ಅಧ್ಯಯನವೆನಿಸಿಕೊಂಡಿದ್ದಿತು. ಆದಿಮಾನವ ಮತ್ತು ಅವನ ದೈನಂದಿನ ಬದುಕು ಅಂದು ಅಧ್ಯಯನದ ಪರಿಧಿಯೊಳಗೆ ಸೇರಿರಲಿಲ್ಲ. ಆಗಿನ ದಿನಗಳಲ್ಲಿ ಪ್ರಾಗಿತಿಹಾಸ ಕೆಲವೊಮ್ಮೆ ಪರಿಹಾಸ್ಯಕ್ಕೆ ಗುರಿಯಾಗುತ್ತಿದ್ದುದು ಇದೇ ಕಾರಣದಿಂದಾಗಿಯೇ. ಹಿಂದೆ ತಿಳಿಸಿದಂತೆ ಸರ್ ಮಾರ್ಟಿಮರ್ ವೀಲರನು ಭಾರತೀಯ ಪ್ರಾಗಿತಿಹಾಸಕ್ಕೆ 'ಕಲ್ಲು' ಮತ್ತು 'ಇನ್ನಷ್ಟು ಕಲ್ಲು' ಎಂಬ ಅಡ್ಡಹೆಸರಿಟ್ಟಿದ್ದ. ಪ್ರಾಗಿತಿಹಾಸದ ಬಗೆಗಿದ್ದ ಇಂತಹ ಅಭಿಪ್ರಾಯಗಳನ್ನು ನಿವಾರಿಸುವ ಉದ್ದೇಶದಿಂದ ಕೈಗೊಂಡ ಕೆಲವೇ ಕೆಲವು ಯೋಜನೆಗಳಲ್ಲೊಂದು ಹುಣಸಗಿ–ಬೈಚಬಾಳು ಸಂಶೋಧನೆ; ಇದರ ಮತ್ತೊಂದು ಉದ್ದೇಶ ನವಪುರಾತತ್ವ ಪರಿಕಲ್ಪನೆಯ ಬೆಳಕಿನಲ್ಲಿ ಸಂಸ್ಕೃತಿಯನ್ನು ಅರ್ಥೈಸುವುದಾಗಿತ್ತು (ಪದ್ದಯ್ಯ ೧೯೭೮). ಈ ಜೋಡುಬಯಲುಗಳಲ್ಲಿರುವ ಸುಮಾರು ಇನ್ನೂರು ಅಶೂಲಿಯನ್ ನೆಲೆಗಳಲ್ಲಿ ಹೆಚ್ಚಿನವು ಮೂಲಸ್ಥಿತಿಯಲ್ಲಿರುವ ನೆಲೆಗಳಾಗಿದ್ದು ಇವುಗಳಲ್ಲಿ ಶಿಲೋಪಕರಣಗಳು ಯಥಾಸ್ಥಾನದಲ್ಲಿ ಉಳಿದಿವೆ. ಹುಣಸಗಿ, ಯಡಿಯಾಪುರ ಮತ್ತು ಇಸಾಂಪುರದ ಉತ್ಖನನಗಳಲ್ಲಿ ದೊರೆತ ಅವಶೇಷಗಳಿಂದ ಈ ನೆಲೆಗಳು ಆದಿಮಾನವನ ಶಿಬಿರ ತಾಣಗಳಾಗಿದ್ದು ಇಲ್ಲಿ ಶಿಲೋಪಕರಣ ತಯಾರಿಕೆಯೂ ಆಹಾರ ಸಂಸ್ಕರಣೆ–ಸೇವನೆಯೂ ಆಗುತ್ತಿತ್ತೆಂಬುದಾಗಿ ತಿಳಿದುಬಂದಿತು. ಆಹಾರದ ಕುರುಹಾಗಿ ಕಾಡುದನ, ಜಿಂಕೆ, ಕುದುರೆಗಳ ಮೂಳೆಗಳೂ ಆಮೆಯ ಚಿಪ್ಪುಗಳೂ ಇಲ್ಲಿ ಸಿಕ್ಕಿವೆ. ಈ ಬಯಲುಗಳಲ್ಲಿರುವ ಅಶೂಲಿಯನ್ ನೆಲೆಗಳನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು– ವಸತಿತಾಣಗಳು, ಕಾರ್ಯಾಗಾರಗಳು, ಆಹಾರ ಸಂಸ್ಕರಣಾ ನೆಲೆಗಳು ಮತ್ತು ಶಿಲೋಪಕರಣ ಸಂಗ್ರಹಣಾ ಸ್ಥಳಗಳು (ಕ್ಯಾಶೆ ಸೈಟ್).

ಹುಣಸಗಿ ಬಯಲಿನಲ್ಲಿರುವ ಇಸಾಂಪುರವು ಪ್ರಾಚ್ಯವಿಶ್ವದಲ್ಲಿಯೇ ಅತಿದೊಡ್ಡದಾದ ಮತ್ತು ಸುಸ್ಥಿತಿಯಲ್ಲಿರುವ ನೆಲೆಗಳಲ್ಲೊಂದು. ಇದರ ವಿಸ್ತೀರ್ಣ ಸುಮಾರು ಮುಕ್ಕಾಲು ಹೆಕ್ಟೇರ್. ವರ್ಷಪೂರ್ತಿ ಲಭ್ಯವಿದ್ದ ನೀರಿನ ಸೆಲೆಯ ಸಮೀಪದಲ್ಲಿ, ಸವೆದ ಸುಣ್ಣಕಲ್ಲಿನ ತಳಶಿಲೆಯ ಮೇಲೆ ಸ್ಥಿತವಾಗಿರುವ ಈ ನೆಲೆಯು ಬೇಟೆಗಾರರು–ಆಹಾರ ಸಂಗ್ರಹಕಾರರಿದ್ದ ಸಣ್ಣ ತಂಡವೊಂದಕ್ಕೆ ಮೂಲದಾಣವಾಗಿದ್ದಿತು (ಬೇಸ್). ಇಲ್ಲಿದ್ದ ಸುಣ್ಣಕಲ್ಲಿನ ಚಪ್ಪಡಿಗಳು ಉಪಕರಣಗಳಿಗೆ ಸೂಕ್ತವಾದ ಶಿಲೆಯ ಆಗರವಾಗಿದ್ದುವು. ತಯಾರಿಕೆಯ ವಿವಿಧ ಹಂತಗಳಲ್ಲಿದ್ದ ಸುಮಾರು ೧೫೦೦೦ ಉಪಕರಣಗಳು ಉತ್ಖನನದಲ್ಲಿ ದೊರೆತವು. ಇಲ್ಲಿ ಕಂಡುಬಂದ ಕಾಡುದನದ ಪಳೆಯುಳಿಕೆಗಳೂ ಆಮೆಯ ಚಿಪ್ಪಿನ ಚೂರುಗಳೂ ಈ ನೆಲೆಯು ಶಿಬಿರಸ್ಥಳವಾಗಿದ್ದು ಇಲ್ಲಿ ಆಹಾರ–ಸಂಬಂಧಿತ ಚಟುವಟಿಕೆಗಳೂ ನಡೆಯುತ್ತಿದ್ದವೆಂಬುದನ್ನು ಎತ್ತಿತೋರುತ್ತವೆ.

ಹುಣಸಗಿ–ಬೈಚಬಾಳು ಬಯಲುಗಳಲ್ಲಿ ಅಶೂಲಿಯನ್ ನೆಲೆಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಹರಡಿವೆ. ಈ ಎರಡೂ ಬಯಲುಗಳಲ್ಲಿ ಸುಮಾರು ೨೦ ನೆಲೆಗಳು ಒತ್ತೊತ್ತಾಗಿರುವ ಒಂದೊಂದು ಸಮೂಹವಿದೆ (ಕ್ಲಸ್ಟರ್). ಹುಣಸಗಿ ಹಳ್ಳ (ಹುಣಸಗಿ ಬಯಲು) ಮತ್ತು ಫತೇಪುರ ಹಳ್ಳಗಳ (ಬೈಚಬಾಳು ಬಯಲು) ಆಸುಪಾಸಿನಲ್ಲಿ ಇವೆರಡು ಸಮೂಹಗಳಿವೆ. ಇವುಗಳ ಸಮೀಪದಲ್ಲಿ ಸದಾಕಾಲ ನೀರು ಒಸರುವ ಒರತೆಗಳಿವೆ. ಈ ಒರತೆಗಳ ಸುತ್ತಲೂ ದಪ್ಪನಾದ, ಚಿಲುಮೆ ನೀರಿನಿಂದ ಉಂಟಾಗುವಂತಹ ಪದರಗಳು ಶೇಖರವಾಗಿದ್ದು, ಇದರಿಂದ ಅಶೂಲಿಯನ್ ಸಂಸ್ಕೃತಿಯ ಕಾಲದಲ್ಲಿಯೂ ಈ ಒರತೆಗಳು ಹರಿಯುತ್ತಿತ್ತೆಂಬುದನ್ನು ತಿಳಿಯಬಹುದಾಗಿದೆ. ಇನ್ನುಳಿದ ಅಶೂಲಿಯನ್ ನೆಲೆಗಳು ಬಯಲಿನ ಉದ್ದಗಲಕ್ಕೂ ಚದುರಿವೆ. ಸಂಶೋಧನೆಯ ಸಂದರ್ಭದಲ್ಲಿ ನಾನು ಜನಾಂಗೀಯ ಅಧ್ಯಯನದ ಮೂಲಕ ಈ ಪ್ರದೇಶದಲ್ಲಿರುವ ಬಡಸಮುದಾಯಗಳು ಸಂಗ್ರಹಿಸುವ ಕಾಡಿನ ಹಣ್ಣು–ಹಂಪಲುಗಳು ಮತ್ತು ಇವರ ಬೇಟೆಗೆ ಸಿಗುವ ಪ್ರಾಣಿ–ಪಕ್ಷಿಗಳ ಬಗೆಗೂ ಮಾಹಿತಿ ಸಂಗ್ರಹಿಸಿದೆ. ಸುಮಾರು ೫೦ ಬಗೆಯ ಸಸ್ಯಜನ್ಯ ಆಹಾರ ಪದಾರ್ಥಗಳು ದೋಆಬ್ ಪ್ರದೇಶದಲ್ಲಿ ಲಭ್ಯವಿರುವುದಾಗಿ ಈ ಸರ್ವೇಕ್ಷಣೆಯಿಂದ ತಿಳಿಯಿತು. ಇವುಗಳಲ್ಲಿ ಬಗೆಬಗೆಯ ಹಣ್ಣು–ಹಂಪಲುಗಳು, ಖಾದ್ಯ ಎಲೆ–ಚಿಗುರುಗಳು, ಮರಗಿಡಗಳ ಮೇಣ–ರಸ, ಗೆಡ್ಡೆ–ಗೆಣಸುಗಳು, ಹುಲ್ಲಿನ ಬೀಜಗಳು, ಜೇನು ಇತ್ಯಾದಿಗಳಿವೆ. ಬೇಟೆಯ ಪ್ರಾಣಿ–ಪಕ್ಷಿಗಳಲ್ಲಿ ಕಾಡುಹಂದಿ, ಮೊಲ, ಹುಳ–ಹುಪ್ಪಟೆಗಳು, ಮೀನು, ಹಕ್ಕಿಗಳು, ಉಡ ಮೊದಲಾದುವುಗಳಿವೆ. ನೆಲೆಗಳಲ್ಲಿ ದೊರೆತ ಕಾಡುದನ, ಕಾಡುಕುದುರೆ, ಜಿಂಕೆ, ಕಾಡಾನೆ ಮೊದಲಾದ ಪ್ರಾಣಿಗಳ ಪಳೆಯುಳಿಕೆಗಳಿಂದ ಈ ಬಯಲುಗಳಲ್ಲಿ ಅಶೂಲಿಯನ್ ಸಂಸ್ಕೃತಿಯ ಕಾಲದಲ್ಲಿ ಸವನ್ನಾ ಮಾದರಿಯ ಕುರುಚಲು ಕಾಡು ಹರಡಿದ್ದು ಶಾಶ್ವತ ಜಲಮೂಲಗಳು ಇದ್ದುವೆಂಬುದೂ, ಇಂತಹ ನೈಸರ್ಗಿಕ ಸೌಲಭ್ಯಗಳಿಂದಾಗಿ ಇಲ್ಲಿ ವೈವಿಧ್ಯಮಯವಾದ ಜೀವಜಾಲವಿದ್ದುದಾಗಿಯೂ

ತಿಳಿಯುತ್ತದೆ. ಇದಲ್ಲದೆ ಆ ಕಾಲಕ್ಕಾಗಲೇ ದಕ್ಷಿಣ ಏಷ್ಯದಲ್ಲಿ ಮಳೆಮಾರುತದಿಂದ ಪ್ರಭಾವಿತವಾದ ಹವಾಮಾನ – ಅಂದರೆ ವರ್ಷವನ್ನು ಸ್ಥೂಲವಾಗಿ ಬೇಸಗೆ ಮತ್ತು ಮಳೆಗಾಲವೆಂಬ ಎರಡು ಋತುಕಾಲಗಳಾಗಿ ವಿಭಜಿಸುವ ಹವಾಮಾನ – ಪಸರಿಸಿತ್ತೆಂಬುದನ್ನು ಗಮನದಲ್ಲಿಡಬೇಕು.

ಪುರಾತತ್ವ ಅವಶೇಷಗಳು, ಜನಾಂಗೀಯ ಅಧ್ಯಯನದಿಂದ ದೊರೆತ ಮಾಹಿತಿ ಮತ್ತು ಪ್ರಾಗ್–ಹವಾಮಾನದ ಲಕ್ಷಣಗಳು–ಇವೆಲ್ಲವನ್ನೂ ಒಗ್ಗೂಡಿಸಿ ದೋಆಬ್ ಪ್ರದೇಶದ ಅಶೂಲಿಯನ್ ಸಮುದಾಯಗಳು ಋತುಕಾಲಕ್ಕನುಗುಣವಾಗಿ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಯನ್ನು ಯಾವ ರೀತಿಯಲ್ಲಿ ಮಾಡುತ್ತಿದ್ದಿರಬಹುದೆಂಬುದನ್ನು ನಾನು ಅರ್ಥೈಸಿದೆ. ಈ ನಿಟ್ಟಿನಲ್ಲಿ ಎರಡು ಪ್ರಧಾನ ತಂತ್ರಗಳನ್ನು ಈ ಸಮುದಾಯಗಳು ಅನುಸರಿಸುತ್ತಿದ್ದುದಾಗಿ ತೋರುತ್ತದೆ– (ಅ) ಬೇಸಗೆಯ ಅವಧಿಯಲ್ಲಿ ಅಶೂಲಿಯನ್ ತಂಡಗಳು ಒರತೆಗಳಿಂದ ತುಂಬುತ್ತಿದ್ದ ನೀರಿನ ಹಳ್ಳಗಳ ಸುತ್ತ ಒಂದುಗೂಡಿ ನೆಲೆಸುತ್ತಿದ್ದವು ಮತ್ತು ದೊಡ್ಡಪ್ರಾಣಿಗಳನ್ನು ಬೇಟೆಯಾಡುತ್ತಿದ್ದವು; ಜೊತೆಗೆ ಇತರ ಪ್ರಾಣಿಗಳು ತಿಂದುಳಿದ ಮಾಂಸವನ್ನು ಸಂಗ್ರಹಿಸುತ್ತಿದ್ದವು. (ಆ) ಮಳೆಗಾಲದಲ್ಲಿ ಈ ತಂಡಗಳು ಬಯಲಿನಾದ್ಯಂತ ಚದುರಿ ಆ ಋತುವಿನಲ್ಲಿ ಸಮೃದ್ಧವಾಗಿ ಲಭ್ಯವಿರುತ್ತಿದ್ದ ವನ್ಯಸಸ್ಯಾಹಾರವನ್ನು ಸಂಗ್ರಹಿಸಿ, ಸಣ್ಣ ಪ್ರಾಣಿಗಳನ್ನು ಬೇಟೆಯಾಡಿ ಜೀವಿಸುತ್ತಿದ್ದವು (ಪದ್ದಯ್ಯ ೧೯೮೨). ಇತ್ತೀಚೆಗೆ ನಾನು ಚಿಂಪಾಂಜಿ, ಗೊರಿಲ್ಲ ಮುಂತಾದ ಮಾನವರಿಗೆ ಸಮೀಪ ಸಂಬಂಧಿಯಾಗಿರುವ ವಾನರ ಪ್ರಾಣಿಗಳು ತಮ್ಮ ಸುತ್ತಲಿನ ಪರಿಸರವನ್ನು ಹೇಗೆ ಬಳಸಿಕೊಳ್ಳುತ್ತವೆ ಎಂಬ ಮಾಹಿತಿಯ ಬೆಳಕಿನಲ್ಲಿ ಈ ಮೇಲಿನ ಅಶೂಲಿಯನ್ ಮಾದರಿಯನ್ನು ಮಾರ್ಪಡಿಸಿರುವೆನು (ಪದ್ದಯ್ಯ ೨೦೧೪). ಇದರಂತೆ, ೧೫ ರಿಂದ ೨೦ ಸದಸ್ಯರಿದ್ದ ಸುಮಾರು ೮–೯ ಅಶೂಲಿಯನ್ ತಂಡಗಳು ಹುಣಸಗಿ ಮತ್ತು ಬೈಚಬಾಳು ಬಯಲುಗಳಲ್ಲಿ ಪ್ರಾಯಶಃ ವಾಸಿಸುತ್ತಿದ್ದವು. ಪ್ರತಿ ತಂಡವೂ ಸುಮಾರು ೧೦–೧೫ ಕಿಮೀ ಪರಿಧಿಯ, ಅದರದ್ದೇ ಆದ ವಾಸಕ್ಷೇತ್ರವನ್ನು ಹೊಂದಿತ್ತು ಮತ್ತು ಪ್ರತಿ ತಂಡಕ್ಕೂ ಒಂದು ಮಾತೃತಾಣವಿದ್ದಿತು. ಈ ಮೂಲದಾಣದಿಂದ ಪ್ರತಿನಿತ್ಯ ಅಶೂಲಿಯನ್ ಮಾನವರು ಸಣ್ಣಸಣ್ಣ ಗುಂಪುಗಳಲ್ಲಿ ತಮ್ಮ ತಮ್ಮ ವಾಸಕ್ಷೇತ್ರಗಳಲ್ಲಿ ಆಹಾರಾನ್ವೇಷಣೆಗಾಗಿ ಸಂಚರಿಸುತ್ತಿದ್ದರು. ಹುಣಸಗಿ ಬಯಲಿನಲ್ಲಿ ಇಸಾಂಪುರ, ಹುಣಸಗಿ ಮತ್ತು ಗುಲ್‌ಬಾಳ ನೆಲೆಗಳೂ ಬೈಚಬಾಳು ಬಯಲಿನಲ್ಲಿ ಯಡಿಯಾಪುರ ಮತ್ತು ಮುದನೂರು ನೆಲೆಗಳೂ ಇಂತಹ ಮಾತೃತಾಣಗಳಾಗಿದ್ದುವು. ಈ ಮಾತೃತಾಣಗಳ ಸುತ್ತಮುತ್ತಲೂ ಅನೇಕ ಸಣ್ಣಸಣ್ಣ ನೆಲೆಗಳಿದ್ದು ಇವು ಆಹಾರ ಸಂಗ್ರಹಣೆ ಮತ್ತು ಮಾಂಸಾಹಾರ ಸಂಸ್ಕರಣೆಗೆ ಸಂಬಂಧಿಸಿದ ಚಟುವಟಿಕೆಗಳು ನಡೆಯುತ್ತಿದ್ದಂತಹ ತಾತ್ಕಾಲಿಕ/ಅಲ್ಪಾವಧಿಯ ತಾಣಗಳಾಗಿದ್ದುವು.

ಹುಣಸಗಿ–ಬೈಚಬಾಳು ಬಯಲುಗಳ ಅಶೂಲಿಯನ್ ಸಂಸ್ಕೃತಿಯ ಅಧ್ಯಯನ ಮೊದಲಬಾರಿಗೆ ಭಾರತದಲ್ಲಿನ ಶಿಲಾಯುಗ ಕಾಲದ ಜೀವನಕ್ರಮದ ಮೇಲೆ ಬೆಳಕು ಚೆಲ್ಲಿತು. ಈ ಅಧ್ಯಯನ ಮತ್ತೊಂದು ದೃಷ್ಟಿಯಿಂದಲೂ ಮಹತ್ವಪೂರ್ಣವಾಗಿದೆ. ಅಶೂಲಿಯನ್ ಸಾಂಸ್ಕೃತಿಕ ಹಂತವು ಹತ್ತುಲಕ್ಷ ವರ್ಷ ಅವಧಿಯಲ್ಲಿ ವಿಸ್ತರಿಸಿದ್ದರಿಂದ ಇಷ್ಟು ದೀರ್ಘ ಕಾಲಾವಧಿಯಲ್ಲಿ ಶಿಲೋಪಕರಣ ವಿಧಗಳು–ತಂತ್ರಜ್ಞಾನ, ಶಿಲಾಸಂಪನ್ಮೂಲಗಳ ಬಳಕೆ ಮತ್ತು ಜೀವನೋಪಾಯ ಕ್ರಮಗಳಲ್ಲಿ ವಿಕಾಸರೂಪದ ಬೆಳವಣಿಗೆಗಳಾಗಿರುವುದು ಸಹಜ. ಹುಣಸಗಿ–ಬೈಚಬಾಳು ಬಯಲುಗಳಲ್ಲಿನ ಅಶೂಲಿಯನ್ ಸಂಸ್ಕೃತಿಯಲ್ಲಿ ಇಂತಹ ಬೆಳವಣಿಗೆಯು ದಾಖಲಾಗಿರುವುದು ಗಮನಾರ್ಹ. ಸ್ತರಕ್ರಮ, ವೈಜ್ಞಾನಿಕ ಕಾಲಮಾನ ಮತ್ತು ಶಿಲೋಪಕರಣ–ಅವುಗಳ ತಂತ್ರಜ್ಞಾನದ ಲಕ್ಷಣಗಳನ್ನು ಆಧರಿಸಿ ಅಶೂಲಿಯನ್ ಸಂಸ್ಕೃತಿಯಲ್ಲಿ ಮೂರು ವಿಕಾಸ ಹಂತಗಳನ್ನು ಗುರುತಿಸಿ, ಈ ಹಂತಗಳನ್ನು ಆದಿ ಅಶೂಲಿಯನ್, ಮಧ್ಯ ಅಶೂಲಿಯನ್ ಮತ್ತು ವಿಕಸಿತ ಅಶೂಲಿಯನ್ ಎಂದು ಹೆಸರಿಸಲಾಗಿದೆ. ಭಾರತೀಯ ಪ್ರಾಗಿತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ಅಶೂಲಿಯನ್ ಸಂಸ್ಕೃತಿಯಲ್ಲಿ ಮೂರು ಹಂತಗಳನ್ನು ಗುರುತಿಸಲಾಗಿದ್ದು ಇಲ್ಲಿಯೇ.

ನವಶಿಲಾಯುಗದ ಬೂದಿದಿಬ್ಬಗಳ ಅಧ್ಯಯನದ ಮಹತ್ವವನ್ನು ಕುರಿತಂತೆ ಈಗ ತಿಳಿಯೋಣ. ಗುಲ್ಬರ್ಗ, ಯಾದಗಿರ್, ಬಿಜಾಪುರ, ರಾಯಚೂರು, ಬಳ್ಳಾರಿ, ಚಿತ್ರದುರ್ಗ, ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳನ್ನೊಳಗೊಂಡ ದಕ್ಷಿಣ ದಖನ್ನಿನ ವಲಯದಲ್ಲಿ ೧೫೦ಕ್ಕೂ ಹೆಚ್ಚು ಬೂದಿದಿಬ್ಬಗಳಿವೆ. ೧೯ನೆಯ ಶತಮಾನದ ಆದಿಭಾಗದಿಂದಲೇ ಬೂದಿದಿಬ್ಬಗಳ ಬಗ್ಗೆ ಸಾಮಾನ್ಯ ಅರಿವು ಇರುವ ವಿಚಾರವನ್ನೂ ಬೂದಿದಿಬ್ಬಗಳು ಭಾರತದಲ್ಲಿ ಶೋಧಕ್ಕೊಳಗಾದ ಪ್ರಪ್ರಥಮ ಪುರಾತತ್ವ ನೆಲೆಗಳಾಗಿರುವುವುವೆಂಬುದನ್ನೂ ಈಗಾಗಲೇ ಹೇಳಿದ್ದೇನೆ. ಬೂದಿದಿಬ್ಬಗಳು ಮೃದುವಾದ ಮತ್ತು ಗಟ್ಟಿಯಾಗಿ ಕಲ್ಲು–ಗಾಜಿನಂತಾದ ಬೂದಿಯ ಪದರಗಳಿಂದ ನಿರ್ಮಾಣವಾಗಿವೆ. ಇವು ಎತ್ತರದ ದಿಬ್ಬಗಳು. ಉದಾಹರಣೆಗೆ, ಕುಡತಿನಿಯಲ್ಲಿರುವ ಬೂದಿದಿಬ್ಬದಲ್ಲಿ ಸುಮಾರು ೩ ಲಕ್ಷ ಕ್ಯೂಬಿಕ್ ಅಡಿಯಷ್ಟು ಪ್ರಮಾಣದ ಬೂದಿಯಿದೆ. ಆರಂಭದಲ್ಲಿ ಇಂತಹ ದಿಬ್ಬಗಳು

ರಾಕ್ಷಸರನ್ನು ದಹಿಸಿದ ಸ್ಥಳಗಳೋ ಲೋಹ ಕೈಗಾರಿಕೆಯಿದ್ದ ಜಾಗವೋ ಇಲ್ಲವೇ ಅಗ್ನಿಪರ್ವತವಿದ್ದ ಸ್ಥಳವೋ ಎಂದು ತಿಳಿಯಲಾಗಿತ್ತು. ಬೂದಿದಿಬ್ಬಗಳು ನವಶಿಲಾಯುಗ ಕಾಲದಲ್ಲಿ ಒಣಗಿದ ಸಗಣಿಯನ್ನು ರಾಶಿ ಹಾಕಿ ಸುಡುತ್ತಿದ್ದ ಸ್ಥಳಗಳೆಂದು ಸಾಬೀತು ಮಾಡಿದವನು ರಾಬರ್ಟ್ ಬ್ರೂಸ್‌ಫುಟ್ (ಫುಟ್ ೧೯೧೬). ನವಶಿಲಾಯುಗದ ಜನರು ಜಾನುವಾರುಗಳ ದೊಡ್ಡದೊಡ್ಡ ಮಂದೆಗಳನ್ನು ಸಾಕುತ್ತಿದ್ದರೆಂದೂ ಜಾನುವಾರುಗಳ ಸಗಣಿಯನ್ನು ಒಂದೆಡೆ ತಿಪ್ಪೆಹಾಕಿ ಅದು ತ್ಯಾಜ್ಯವಾದ್ದರಿಂದ ಕಾಲದಿಂದ ಕಾಲಕ್ಕೆ ಅದನ್ನು ಸುಡುತ್ತಿದ್ದರು ಇಲ್ಲವೇ ಸಗಣಿಯ ಈ ಗುಡ್ಡೆಗಳಿಗೆ ಆಕಸ್ಮಿಕವಾಗಿ ಬೆಂಕಿಬಿದ್ದು ಅವು ಸುಟ್ಟುಬೂದಿಯಾಗುತ್ತಿದ್ದವೆಂದೂ ಬ್ರೂಸ್‌ಫುಟ್‌ನು ಅಭಿಪ್ರಾಯಪಟ್ಟನು. ರೇಮಂಡ್ ಅಲ್ಚಿನ್‌ರು ೧೯೫೦ರ ದಶಕದಲ್ಲಿ ಈ ಅಭಿಪ್ರಾಯವನ್ನು ಮತ್ತಷ್ಟು ಬಲಪಡಿಸಿದರು. ಅಲ್ಚಿನ್‌ರು ಈ ಪ್ರದೇಶದಲ್ಲಿರುವ ಬೂದಿದಿಬ್ಬಗಳ ಸರ್ವೇಕ್ಷಣೆಯನ್ನು ಮಾಡಿ, ತೆಲಂಗಾಣದ ಮೆಹಬೂಬನಗರ ಜಿಲ್ಲೆಯಲ್ಲಿರುವ ಉತ್ನೂರು ಬೂದಿದಿಬ್ಬದಲ್ಲಿ ಉತ್ಖನನ ನಡೆಸಿ, ಈ ಪ್ರದೇಶದಲ್ಲಿ ಇರುವ ಪಶುಪಾಲಕ ಸಂಸ್ಕೃತಿ–ಅದರ ಚಟುವಟಿಕೆಗಳು–ಜಾನುವಾರಗಳಿಗೆ ಸಂಬಂಧಿಸಿದ ಹಬ್ಬ–ಆಚರಣೆಗಳು ಮೊದಲಾದ ಜಾನಪದೀಯ ಮಾಹಿತಿಯನ್ನೂ ಸಂಗ್ರಹಿಸಿ, ಇವೆಲ್ಲದರ ಆಧಾರದ ಮೇಲೆ ಅವರ ಪ್ರಸಿದ್ಧ ಕೃತಿಯಾದ 'ದಿ ನಿಯಾಲಿತಿಕ್ ಕ್ಯಾಟಲ್ ಕೀಪರ್ಸ್ ಆಫ್ ಸೌತ್ ಇಂಡಿಯ'ವನ್ನು (೧೯೬೩) ಪ್ರಕಟಿಸಿದರು. ನವಶಿಲಾಯುಗ ಜನರು ತಮ್ಮ ಹಳ್ಳಿಗಳ ಸಮೀಪದಲ್ಲಿ ಕಟ್ಟಿಕೊಂಡಿದ್ದ ಜಾನುವಾರುಗಳ ದೊಡ್ಡಿಗಳೇ ಬೂದಿದಿಬ್ಬಗಳಾಗಿವೆ ಎಂಬುದು ಇವರ ಮತವಾಗಿದ್ದಿತು. ನವಶಿಲಾಯುಗದ ಪಶುಪಾಲಕರ ತಂಡಗಳು ಗುಳೆಹೋಗುವ ಸಂದರ್ಭದಲ್ಲಿ ಜಾನುವಾರುಗಳ ಫಲವತ್ತತೆ ಹೆಚ್ಚಲಿ ಎಂಬ ಆಶಯದಿಂದ ಒಣಸಗಣಿ ರಾಶಿಗೆ ಬೆಂಕಿಯಿಟ್ಟು ಸುಟ್ಟುಬಿಡುವ ಧಾರ್ಮಿಕ ಆಚರಣೆಯನ್ನು ಮೈಗೂಡಿಸಿಕೊಂಡಿದ್ದರು ಎಂಬುದಾಗಿ ಅಲ್ಚಿನ್‌ರು ತರ್ಕಿಸುತ್ತಾರೆ. ನಾನು ೧೯೮೭ರಿಂದ ೧೯೯೦ ರ ವರೆಗೆ ನಡೆಸಿದ ಪ್ರಾದೇಶಿಕ ಸರ್ವೇಕ್ಷಣೆಯಿಂದ ಎಲ್ಲ ಪ್ರಮುಖ ಬೂದಿದಿಬ್ಬಗಳಲ್ಲಿಯೂ ಮಾನವನ ವಸತಿಯ ಅವಶೇಷಗಳಿದ್ದುದನ್ನು ಕಂಡುಕೊಂಡೆ. ಈ ಬೆಳಕಿನಲ್ಲಿ ನವಶಿಲಾಯುಗದ ಜನರು ಅವರ ಹಳ್ಳಿಗಳನ್ನೂ ಜಾನುವಾರು ದೊಡ್ಡಿಗಳನ್ನೂ ಪ್ರತ್ಯೇಕ ಸ್ಥಳಗಳಲ್ಲಿ ಕಟ್ಟಿಕೊಳ್ಳುತ್ತಿದ್ದರೆಂಬ ಅಲ್ಚಿನ್‌ರ ಅಭಿಪ್ರಾಯವನ್ನು ನಾನು ಅಲ್ಲಗಳೆದೆ. ತದ್ವಿರುದ್ಧವಾಗಿ ಇಂದಿನ ಬೂದಿದಿಬ್ಬಗಳು ನವಶಿಲಾಯುಗದ ಪಶುಪಾಲಕರ ಹಳ್ಳಿಗಳಿದ್ದ ಸ್ಥಳಗಳೆಂಬುದಾಗಿಯೂ ಹಳ್ಳಿಗಳಲ್ಲಿ ಜಾನುವಾರು ಮತ್ತು ಕುರಿ–ಮೇಕೆಗಳ ಮಂದೆಗಳ ಜೊತೆಗೇ ಜನರು ವಾಸಿಸುತ್ತಿದ್ದರೆಂಬುದಾಗಿಯೂ ನಾನು ವ್ಯಾಖ್ಯಾನಿಸಿದೆ.

ನನ್ನ ಈ ಪ್ರಮೇಯವನ್ನು ಪರೀಕ್ಷಿಸುವ ಉದ್ದೇಶದಿಂದ ನಾನು ೧೯೯೧ ರಿಂದ ೧೯೯೬ ರ ನಡುವೆ ಶೋರಾಪುರ ತಾಲ್ಲೂಕಿನಲ್ಲಿ ಕೊಡೇಕಲ್ಲಿನ ಸಮೀಪವಿರುವ ಬೂದಿಹಾಳದಲ್ಲಿ ಉತ್ಖನನ ನಡೆಸಿದೆ. ನಾಲ್ಕು ಪ್ರತ್ಯೇಕ ಸ್ಥಳಗಳಲ್ಲಿ (ಲೊಕ್ಯಾಲಿಟಿ) ವಿಸ್ತರಿಸಿ ವಿಶಾಲವಾಗಿರುವ ಬೂದಿಹಾಳ ನೆಲೆಯು ಮರಳುಗಲ್ಲಿನ ಪ್ರಸ್ಥಭೂಮಿಯ ಮೇಲಿರುವಂತಹ ಒಂದು ಹಳ್ಳಿಯಾಗಿದ್ದಿತು. ಈ ನೆಲೆಯ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಆಳಕಮರಿಗಳಿದ್ದು ಅವುಗಳಲ್ಲಿ ಒರತೆಗಳಿಂದ ಜಿನುಗುವ ನೀರಿನಿಂದ ಸದಾಕಾಲ ತುಂಬಿರುವ ಹಳ್ಳಗಳಿವೆ. ಬೂದಿಹಾಳದ ಮುಖ್ಯ ವಸತಿಭಾಗವು (ಲೊಕ್ಯಾಲಿಟಿ –೧) ೧.೮೫ ಹೆಕ್ಟೇರ್ ಪ್ರದೇಶದಲ್ಲಿ ಹರಡಿದೆ. ಇದರಲ್ಲಿ ಸುಮಾರು ೨೦೦೦ ಚ.ಮೀ. ಭಾಗವನ್ನು, ೩ ಮೀ ಎತ್ತರವಿದ್ದು ೬೦ ಮೀ ವ್ಯಾಸವುಳ್ಳ ಬೂದಿದಿಬ್ಬವು ಆವರಿಸಿದೆ. ಬೂದಿದಿಬ್ಬಕ್ಕೆ ತಾಗಿ ಇರುವ ಸುಮಾರು ೩೦೦೦ ಚ.ಮೀ. ಜಾಗದಲ್ಲಿ ಜಾನುವಾರು ದೊಡ್ಡಿಯ ಅವಶೇಷವು ಉತ್ಖನನದಲ್ಲಿ ಕಂಡುಬಂದಿತು. ಇಂದಿಗೂ ಈ ಪ್ರದೇಶದಲ್ಲಿ ನಾವು ಕಾಣುವಂತೆ, ಇದೊಂದು ಗೋಡೆ–ಮಾಡು ಇಲ್ಲದ ಸಾಮೂಹಿಕ ದೊಡ್ಡಿಯಾಗಿದ್ದಿತು. ಕಲ್ಲುಹೆಂಟೆಗಳ ತಳಪಾಯದ ಮೇಲೆ ಕಟ್ಟಿನಿಲ್ಲಿಸಿದ್ದ ಮುಳ್ಳುಬೇಲಿಯಿಂದ ಇದು ಆವೃತವಾಗಿದ್ದಿತು. ದೊಡ್ಡಿ ಮತ್ತು ಸಗಣಿ ತಿಪ್ಪೆಯ (ಬೂದಿದಿಬ್ಬ) ಸುತ್ತಮುತ್ತಲ ಜಾಗದಲ್ಲಿ (೧.೩೫ ಹೆಕ್ಟೇರ್) ಸರಳ ಗುಡಿಸಲುಗಳ ಅವಶೇಷಗಳು, ಮಾನವರ ಸಮಾಧಿಗಳು, ವಿಶೇಷವಾಗಿ ಒಂದು ದೊಡ್ಡ ಕಸಾಯಿನೆಲದ (ಬುಚರಿಂಗ್ ಫ್ಲೋರ್) ಅವಶೇಷ ಇದ್ದುವು. ಜಾನುವಾರುಗಳ ತಲೆಬುರುಡೆ ಮತ್ತು ಮೂಳೆಗಳನ್ನು ಉದ್ದೇಶಪೂರ್ವಕವಾಗಿ ಹೂಳಿರುವಂತಹ ಕೆಲ ಉದಾಹರಣೆಗಳು ಇಲ್ಲಿ ಕಾಣದೊರೆತವು. ಇವು ಪ್ರಾಣಿಗಳು ಮಾನವನ ಬದುಕಿನಲ್ಲಿ ಗಳಿಸಿದ್ದ ಸ್ಥಾನಮಾನದ ಪ್ರತೀಕವಾಗಿವೆ. ಬೂದಿಹಾಳ ನೆಲೆಯಲ್ಲಿ ಚರ್ಟ್ ಅಲಗುಗಳನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸುತ್ತಿದ್ದ ಅತಿದೊಡ್ಡ ಕಾರ್ಯಾಗಾರವೊಂದಿದ್ದಿತು. ಇಲ್ಲಿಂದ ಅಲಗುಗಳನ್ನು ಸುತ್ತಮುತ್ತಲಿನ ನೆಲೆಗಳಿಗೆ ಸರಬರಾಜು ಮಾಡಲಾಗುತ್ತಿತ್ತು. ಬೂದಿಹಾಳವು ಆ ಪ್ರದೇಶಕ್ಕೆ ಒಂದು ಕೇಂದ್ರ ನೆಲೆಯಾಗಿದ್ದಂತೆ ತೋರುತ್ತದೆ. ಪ್ರಮುಖ ಹಬ್ಬ–ಆಚರಣೆಗಳ ದಿನಗಳಲ್ಲಿ ಸುತ್ತಮುತ್ತಲ ಪ್ರದೇಶದಲ್ಲಿನ ಜನರು ಬೂದಿಹಾಳದಲ್ಲಿ ನೆರೆಯುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ಸಾಮಾಜಿಕ–ಆರ್ಥಿಕ ವ್ಯಾಪಾರ ವಹಿವಾಟುಗಳು ಇಲ್ಲಿ ನಡೆಯುತ್ತಿದ್ದವು. ಒಣಸಗಣಿ ರಾಶಿಯ (ತಿಪ್ಪೆ) ಸುಡುವಿಕೆಯೂ ಇವರ ಪ್ರಮುಖ ಆಚರಣೆಗಳಲ್ಲೊಂದಾಗಿದ್ದು, ಅಲ್ಚಿನರು ತರ್ಕಿಸಿರುವಂತೆ ಇದು ಜಾನುವಾರುಗಳ ಫಲವತ್ತತೆಯೊಂದಿಗೆ ಸಂಬಂಧ ಹೊಂದಿತ್ತು. ತಿಪ್ಪೆಗೆ ಬೆಂಕಿ ಹಾಕಿದ ಅನಂತರ ಅದರ ಮೇಲೆ ಜಾನುವಾರುಗಳನ್ನು ಹಾಯಿಸುವುದೂ ಪ್ರಾಯಶಃ ಅಂದು ರೂಢಿಯಲ್ಲಿತ್ತು.

ಅಂತಹ ದಿನಗಳಂದು ಬೂದಿಹಾಳದಲ್ಲಿ ಬಂದು ಸೇರುತ್ತಿದ್ದ ಜನಸ್ತೋಮಕ್ಕೆ ಸಾಮೂಹಿಕ ಭೋಜನ ಏರ್ಪಡುತ್ತಿದ್ದುದರ ಕುರುಹಾಗಿ ಬೂದಿಹಾಳದ ಕಸಾಯಿನೆಲವನ್ನು ನಾವು ಅರ್ಥೈಸಬಹುದಾಗಿದೆ. ಸಗಣಿಬೂದಿಯಿಂದ ನಿರ್ಮಾಣವಾಗುತ್ತಿದ್ದ ದಿಬ್ಬಗಳು ಕ್ರಮೇಣ ಸ್ಮಾರಕಗಳ ಸ್ವರೂಪವನ್ನು ಪಡೆದುಕೊಂಡು, ಅದರ ನಿರ್ಮಾತೃಗಳಿಗೆ ಪ್ರಾದೇಶಿಕ-ಸಾಂಸ್ಕೃತಿಕ-ಸಾಮುದಾಯಿಕ ಅನನ್ಯತೆಯನ್ನು ನೀಡಿದ್ದಿರಬಹುದು. ಉತ್ತರಕರ್ನಾಟಕದಲ್ಲಿ ನಡೆಯುವ ಪ್ರಸ್ತುತ ದನದ ಜಾತ್ರೆಗಳ, ವಿಶೇಷವಾಗಿ ರಾಯಚೂರು ಜಿಲ್ಲೆಯ ಅಮರೇಶ್ವರ ಜಾತ್ರೆ ಮತ್ತು ಯಾದಗಿರಿ ಜಿಲ್ಲೆಯ ಕಕ್ಕೇರ ಜಾತ್ರೆ, ಮೂಲವನ್ನು ಹೀಗೆ ನಾವು ನವಶಿಲಾಯುಗ ಕಾಲಕ್ಕೆ ಕೊಂಡೊಯ್ಯಬಹುದಾಗಿದೆ.

ಮುಂದಿನ ಕಾರ್ಯಗಳು

ಕಲಿಕೆ ಮತ್ತು ಸಂಶೋಧನೆ ಎಲ್ಲ ಕ್ಷೇತ್ರಗಳಲ್ಲಿ ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದೆ. ಅದಕ್ಕೆ ಕೊನೆಯೆಂಬುದಿಲ್ಲ. ಏಕೆಂದರೆ ಪ್ರಕೃತಿ ಒಂದು ಅಕ್ಷಯ ಪಾತ್ರೆ ಇದ್ದಂತೆ; ಅದು ಮತ್ತೆ ಮತ್ತೆ ನಮ್ಮ ಮುಂದೆ ಹೊಸಹೊಸ ಸಂಗತಿಗಳನ್ನು ತೆರೆದಿಡುತ್ತದೆ. ಚಾರಿತ್ರಿಕ-ಪುರಾತತ್ವ ಆಕರಗಳನ್ನು ಬಳಸಿಕೊಳ್ಳುವ ಇತಿಹಾಸದ ಅಧ್ಯಯನವೂ ಇದಕ್ಕೆ ಹೊರತಾಗಿಲ್ಲ. ಹೊಸ ಅಧ್ಯಯನಗಳಿಗೆ ಇಲ್ಲಿ ಸದಾ ಅವಕಾಶಗಳಿರುತ್ತವೆ.

ಶೋರಾಪುರ ದೋಆಬ್‌ನಲ್ಲಿ ನಾನು ನಡೆಸಿದ ಅಧ್ಯಯನ ಸುದೀರ್ಘವೂ ವಿಸ್ತೃತವೂ ಆಗಿದ್ದರೂ ಈ ಪ್ರದೇಶದಲ್ಲಿ ಮುಂದೆ ಇನ್ನಷ್ಟು ಅಧ್ಯಯನಗಳನ್ನು ನಡೆಸಲು ಅವಕಾಶಗಳಿವೆ. ಮೊದಲನೆಯದಾಗಿ, ಹುಣಸಗಿ-ಬೈಚಬಾಳು ಬಯಲುಗಳ ಭೌಗೋಳಿಕ ಇತಿಹಾಸ – ಅಂದರೆ ಈ ಬಯಲುಗಳ ಭೌಗೋಳಿಕ ರಚನೆ ಯಾವಾಗ ಮತ್ತು ಹೇಗೆ ಆಯಿತೆಂಬುದು – ಇದನ್ನು ಕುರಿತಂತೆ ನಮಗಿರುವ ಜ್ಞಾನವನ್ನು ನಾವು ಮತ್ತಷ್ಟು ಬಲಪಡಿಸಿಕೊಳ್ಳಬೇಕಿದೆ. ಇದಕ್ಕಾಗಿ ಆ ಪ್ರದೇಶದಲ್ಲಿರುವ ಭೂಪದರಗಳ ವಿವರವಾದ ನಕಾಶೆಯನ್ನು ತಯಾರಿಸಿಕೊಂಡು ಪದರಗಳ ಸೂಕ್ಷ್ಮಪರಿಶೀಲನೆ ಮಾಡಬೇಕಿದೆ. ಇಲ್ಲಿರುವ ಕಂಕರ್ ಕಂಗ್ಲೊಮರೇಟ್ ಪದರ (ವಿವಿಧ ಗಾತ್ರದ ಕಲ್ಲಿನುಂಡೆಗಳಿಂದಾದ ಸುಣ್ಣಮಿಶ್ರಿತ ಪದರ), ಚಿಲುಮೆ ನೀರಿನಿಂದ ಶೇಖರಗೊಂಡ ಪದರ (ಟ್ರಾವರ್ಟೈನ್) ಮತ್ತು ಹೈ ಲೆವೆಲ್ ಗ್ರಾವೆಲ್‌ಗಳ (ಹಳ್ಳಗಳಿಂದ ದೂರದಲ್ಲಿ ಇರುವ ನೊರಜುಗಲ್ಲಿನ ಸ್ತರ) ನಿಖರ ಕಾಲಮಾನವನ್ನು ಪಡೆಯುವುದೂ ಬಹುಮುಖ್ಯವಾಗಿದೆ. ಶಿಲಾಯುಗ ಸಂಸ್ಕೃತಿಗಳ ಕಾಲದಲ್ಲಿನ ಹವಾಮಾನದ ಸ್ವರೂಪದ ಬಗೆಗೂ ನಾವು ಹೆಚ್ಚಿನ ಅಧ್ಯಯನ ನಡೆಸಬೇಕಿದೆ. ಹುಣಸಗಿ-ಬೈಚಬಾಳು ಬಯಲುಗಳಲ್ಲಿನ ನೈಸರ್ಗಿಕ ಜಲವ್ಯವಸ್ಥೆ (ಒರತೆ, ಚಿಲುಮೆಗಳನ್ನೊಳಗೊಂಡಂತೆ), ಬಯಲುಗಳ ಭೂಲಕ್ಷಣ-ಸ್ವರೂಪ, ಇಲ್ಲಿನ ಸಸ್ಯವರ್ಗಗಳ ಸ್ವರೂಪ, ಪ್ರಾಣಿ ಸಂಕುಲದ ಸಂಯೋಜನೆ ಮುಂತಾದ ವಿಷಯಗಳ ಮೂಲಕ ಪ್ರಾಗ್ ಹವಾಮಾನದ ಲಕ್ಷಣಗಳನ್ನು ನಾವು ಅರಿಯಬಹುದು. ಅಲ್ಲದೆ ಇನ್ನಷ್ಟು ತೀವ್ರವಾಗಿ ಈ ಪ್ರದೇಶದಲ್ಲಿ ಕಾಲ್ನಡಿಗೆ ಸರ್ವೇಕ್ಷಣೆಯನ್ನು ನಡೆಸುವ ಅಗತ್ಯವಿದೆ. ಜೊತೆಗೆ ಮಧ್ಯಹಳೆಶಿಲಾಯುಗ, ಅಂತ್ಯಹಳೆಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗ ಕಾಲದಲ್ಲಿ ವಸತಿವ್ಯವಸ್ಥೆ (ಸೆಟಲ್‌ಮೆಂಟ್ ಸಿಸ್ಟಮ್) ಯಾವ ರೀತಿಯಿತ್ತೆಂಬುದನ್ನು ತಿಳಿಯಲು ಆಯಾ ಕಾಲಗಳ ವಸತಿನೆಲೆಗಳಲ್ಲಿ ಉತ್ಖನನ ಮಾಡುವುದು ಅವಶ್ಯವಾಗಿದೆ. ಮತ್ತೊಂದು ಮುಖ್ಯವಾದ ಕೊರತೆಯೆಂದರೆ ಈ ಪ್ರದೇಶದಲ್ಲಿ ಆದಿಮಾನವನ ಪಳೆಯುಳಿಕೆಗಳು (ಮೂಳೆ) ಇದುವರೆವಿಗೆ ದೊರೆಯದಿರುವುದು. ಇದಕ್ಕಾಗಿ ಹಳೆಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗದ ನೆಲೆಗಳನ್ನು ಒಂದು ಅಂಗುಲವೂ ಬಿಡದಂತೆ ಮತ್ತೆ ಶೋಧಿಸುವುದು ಅತ್ಯಗತ್ಯವಾಗಿದೆ.

ಇದೇರೀತಿ ಬೂದಿದಿಬ್ಬಗಳ ಬಗೆಗೂ ಮತ್ತಷ್ಟು ಲಕ್ಷ್ಯ ಹರಿಸಬೇಕಿದೆ. ಬೂದಿದಿಬ್ಬಗಳ ಗಾತ್ರದಲ್ಲಿರುವ ಅಸಮಾನತೆ, ಬೂದಿದಿಬ್ಬಗಳಿಗಾಗಿ (ಸಗಣಿ ರಾಶಿಯೊಟ್ಟಲು) ಸ್ಥಳಗಳನ್ನು ಎಲ್ಲಿ ಮತ್ತು ಏಕೆ ಆಯ್ಕೆ ಮಾಡುತ್ತಿದ್ದರು- ಇಂತಹ ಆಯ್ಕೆಯ ಹಿಂದಿರುವ ಇತರ ಅಂಶಗಳು (ಲೊಕೇಶನಲ್ ಸೆಟ್ಟಿಂಗ್) – ಇವನ್ನು ಕುರಿತಂತೆ ಮತ್ತಷ್ಟು ಕ್ಷೇತ್ರಾಧ್ಯಯನ ಮತ್ತು ಪ್ರಯೋಗಾಲಯ ಸಂಶೋಧನೆಗಳನ್ನು ನಡೆಸಬೇಕು. ಬೂದಿ ಮತ್ತು ಮಣ್ಣಿನ ನಮೂನೆಗಳ ವೈಜ್ಞಾನಿಕ ಪರೀಕ್ಷೆಗಳಿಂದ ನವಶಿಲಾಯುಗ ವಾತಾವರಣದ ಪುನಾರಚನೆಯನ್ನು ಮಾಡುವುದರ ಜೊತೆಗೆ ನವಶಿಲಾಯುಗದ ಜನರ ಮತ್ತು ಪ್ರಾಣಿಗಳ ಆಹಾರಕ್ರಮದ ಬಗೆಗೆ ಮಾಹಿತಿಯನ್ನು ಪಡೆಯಬಹುದು. ದೋಆಬ್ ಪ್ರಾಂತದಲ್ಲಿ ಹಲವು ಬೃಹತ್ ಶಿಲಾಯುಗ ಸಮಾಧಿ ನೆಲೆಗಳನ್ನು ಬೆಳಕಿಗೆ ತರಲಾಗಿದೆ. ಆದರೆ ಆ ಕಾಲದ ವಸತಿನೆಲೆಗಳನ್ನು ಪತ್ತೆಮಾಡುವ ಪ್ರಯತ್ನ ಇದುವರೆಗೆ ನಡೆದಿಲ್ಲ. ಬೃಹತ್ ಶಿಲಾಯುಗ ಜೀವನಶೈಲಿಯನ್ನು ಅರಿಯಲು ಇದು ಅವಶ್ಯಕ.

ನನ್ನ ತಿಳಿವಳಿಕೆಯಲ್ಲಿ ಭಾರತದ ಒಟ್ಟು ಭೂಪ್ರದೇಶದಲ್ಲಿ ಕೇವಲ ಶೇಕಡ ೨೦ರಷ್ಟು ಪ್ರದೇಶದಲ್ಲಿ ಮಾತ್ರ ನಿರಂತರ ಪುರಾತತ್ವ ಅನ್ವೇಷಣೆ-ಸರ್ವೇಕ್ಷಣೆಗಳು ನಡೆಯುತ್ತಿವೆ. ಭಾರತದಲ್ಲಿ ಇದುವರೆವಿಗೆ ಅನ್ವೇಷಣೆಗೆ ಒಳಗಾಗದಿರುವ ಎಲ್ಲ

ಪ್ರದೇಶಗಳನ್ನು ಸಂಶೋಧನೆಯ ಕಕ್ಷೆಗೆ ತಂದು ಆಯಾ ಪ್ರದೇಶದ ಸಾಂಸ್ಕೃತಿಕ ಇತಿಹಾಸವನ್ನು ಸಂಪೂರ್ಣವಾಗಿ ಕಟ್ಟಿಕೊಡಬೇಕಾದುದು ಬಹುಮುಖ್ಯವಾದ ಕೆಲಸವಾಗಿದೆ. ಪ್ರಾದೇಶಿಕ/ಪ್ರಾಂತೀಯ ಮತ್ತು ಸ್ಥಳೀಯ ಮಟ್ಟದಲ್ಲಿ ಪುರಾತತ್ವೀಯ ಮತ್ತು ಚಾರಿತ್ರಿಕ ಅಧ್ಯಯನಗಳನ್ನು ಕೈಗೊಳ್ಳಲು ಅನೇಕ ಅವಕಾಶಗಳಿದ್ದು ಇದನ್ನು ಅತ್ಯಂತ ಜರೂರಾಗಿ ಮಾಡಬೇಕಾಗಿದೆ. ಏಕೆಂದರೆ ಇಂದಿನ ದಿನಗಳಲ್ಲಿ ಎಲ್ಲೆಡೆ ನೀರಾವರಿ ಯೋಜನೆ, ಕೃಷಿ ಭೂಮಿಯ ವಿಸ್ತರಣ, ಗಣಿಗಾರಿಕೆ, ಹೊಸ ರಸ್ತೆ ಮತ್ತು ರೈಲ್ವೆ ಮಾರ್ಗಗಳ ನಿರ್ಮಾಣ, ಊರುಗಳ ಬೆಳವಣಿಗೆ– ಇವೇ ಮೊದಲಾದ ಕಾರಣಗಳಿಂದ ಸಣ್ಣ ಮತ್ತು ಮಧ್ಯಮ ಗಾತ್ರದ ಪುರಾತತ್ವ ನೆಲೆಗಳು ಬಹುಬೇಗ ನಿರ್ನಾಮವಾಗುತ್ತಿವೆ.

ಕರ್ನಾಟಕದಲ್ಲಿಯೂ ಇದೇ ಪರಿಸ್ಥಿತಿಯನ್ನು ಇಂದು ನಾವು ಕಾಣುತ್ತೇವೆ. ಕರ್ನಾಟಕವು ಶ್ರೀಮಂತವಾದ ಚಾರಿತ್ರಿಕ ಮತ್ತು ಪುರಾತತ್ವೀಯ ಪರಂಪರೆಯುಳ್ಳ ನೆಲ. ಇಲ್ಲಿ ಪ್ರಾಗೈತಿಹಾಸಿಕ–ಪೂರ್ವಭಾವಿ ಇತಿಹಾಸ ಕಾಲದ ನೆಲೆಗಳು, ಚಾರಿತ್ರಿಕ ಕಾಲದ ದಿಬ್ಬಗಳು ಮತ್ತು ದೇವಾಲಯಗಳು, ಸೋಪಾನಸಹಿತವಾದ ಬಾವಿಗಳು, ಮೂರ್ತಿಶಿಲ್ಪಗಳು, ಮಧ್ಯಯುಗೀನ ಕಾಲದ ಕೋಟೆಕೊತ್ತಲಗಳು ಯಥೇಚ್ಛವಾಗಿವೆ. ಶೋರಾಪುರ ದೋಆಬ್‌ನಲ್ಲಿರುವ ಪ್ರತಿಹಳ್ಳಿಯಲ್ಲಿಯೂ ಯಾವುದಾದರೊಂದು ಪಾರಂಪರಿಕ ಅವಶೇಷವಿರುವುದನ್ನು ನಾನು ನನ್ನ ಕ್ಷೇತ್ರಾನುಭವದಿಂದ ಕಂಡಿದ್ದೇನೆ. ಇಂತಹ ಪಾರಂಪರಿಕ ಅವಶೇಷಗಳಲ್ಲಿ ಹಲವೊಂದು ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆಯಿಂದಾಗಿ ಅಧ್ಯಯನಕ್ಕೊಳಗಾಗುವ ಮೊದಲೇ ಸಂಪೂರ್ಣವಾಗಿ ನಾಶವಾಗಿರುವುದು ದುರದೃಷ್ಟಕರ. ಉದಾಹರಣೆಗೆ, ನೂರೈವತ್ತು ವರ್ಷಗಳಿಗೂ ಹಿಂದೆಯೇ ಜಗತ್ತಿನಲ್ಲಿಯೇ ಮೊದಲಬಾರಿಗೆ ಸ್ತರಕ್ರಮವನ್ನು ಅನುಸರಿಸಿ ಮೆಡೋಸ್ ಟೇಲರನು ಉತ್ಖನನ ನಡೆಸಿದ, ಕಬ್ಬಿಣಯುಗ–ಬೃಹತ್ ಶಿಲಾ ಕಲ್ಲುವೃತ್ತ ಸಮಾಧಿಗಳಿರುವ ಪ್ರಸಿದ್ಧ ನೆಲೆಯಾದ ಜೇವರ್ಗಿಯು (ಭೀಮಾ ನದಿಯ ದಂಡೆಯ ಮೇಲಿದೆ) ಕೃಷಿ ಹಾಗೂ ಊರಿನ ವಿಸ್ತರಣೆಯಿಂದಾಗಿ ಬಹುತೇಕ ನಿರ್ನಾಮವಾಗಿರುವುದನ್ನು ನಾನು ಬಲ್ಲೆ. ಬಳ್ಳಾರಿಯ ಬೆಟ್ಟಗಳಲ್ಲಿಯೂ ಕಬ್ಬಿಣದ ಗಣಿಗಾರಿಕೆಯಿಂದಾಗಿ ಇಂತಹುದೇ ಪರಿಸ್ಥಿತಿ ಉಂಟಾಗಿದ್ದಿರಬೇಕು.

ಕರ್ನಾಟಕದಾದ್ಯಂತ ಇಂತಹ ಬೆಳವಣಿಗೆಗಳಾಗುತ್ತಿವೆ. ಇಂತಹ ಸನ್ನಿವೇಶದಲ್ಲಿ ಪುರಾತತ್ವ ನೆಲೆಗಳ ದಾಖಲೀಕರಣದ ಕೆಲಸವನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆಗಳು ಮಾತ್ರ ನಿಭಾಯಿಸುವುದು ದುಸ್ಸಾಧ್ಯ. ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳು ಈ ಕೆಲಸದಲ್ಲಿ ಕೈಜೋಡಿಸಿ ಆಯ್ದ ಪ್ರದೇಶಗಳಲ್ಲಿ ಪುರಾತತ್ವ ಸರ್ವೇಕ್ಷಣೆಯ ಕಾರ್ಯವನ್ನು ಆರಂಭಿಸಬೇಕು ಎಂಬುದು ನನ್ನ ಕಳಕಳಿಯ ಮನವಿ. ಅಧ್ಯಾಪಕರುಗಳ ಸಂಶೋಧನಾ ಯೋಜನೆಗಳಲ್ಲದೆ ಪಿಎಚ್.ಡಿ., ಎಂ.ಫಿಲ್., ಎಂ.ಎ. ನಿಬಂಧಗಳ ಅಂಗವಾಗಿಯೂ ಇಂತಹ ದಾಖಲೀಕರಣ ಕಾರ್ಯವನ್ನು ಕೈಗೊಳ್ಳಬಹುದು. ಪ್ರಾಂತೀಯ ಮಟ್ಟದಲ್ಲಿ ಅಥವಾ ದೊಡ್ಡ ನೆಲೆಗಳಿಗೆ ಸೀಮಿತಗೊಂಡ ಕ್ಷೇತ್ರಾಧ್ಯಯನಕ್ಕಿಂತ ಸ್ಥಳೀಯ ಮಟ್ಟದಲ್ಲಿ, ಸಣ್ಣಪುಟ್ಟ ನೆಲೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಕ್ಷೇತ್ರಕಾರ್ಯ ನಡೆಸುವುದು, ಎಲ್ಲ ಹಂತಗಳ ಪ್ರಮುಖ ಲಕ್ಷಣಗಳನ್ನು ದಾಖಲೀಕರಿಸುವುದು ಇಂದು ಭಾರತೀಯ ಸಂದರ್ಭದಲ್ಲಿ ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಉತ್ತರ ಅಮೆರಿಕದ ಕೆಲವು ಯುವಸಂಶೋಧಕರು ಕರ್ನಾಟಕದಲ್ಲಿ ನವಶಿಲಾಯುಗದಿಂದ ಆದಿಚಾರಿತ್ರಿಕ ಕಾಲದವರೆಗಿನ ನೆಲೆಗಳಿಗೆ ಸಂಬಂಧಿಸಿದಂತೆ ಪ್ರಶಂಸಾರ್ಹವಾದ ರೀತಿಯಲ್ಲಿ ಕ್ಷೇತ್ರಕಾರ್ಯವನ್ನು ಈಗಾಗಲೇ ಪ್ರಾರಂಭಿಸಿರುವುದು ಸಂತಸದಾಯಕ. ಪೀಟರ್ ಜೊಹಾನ್‌ಸನ್ ರಾಯಚೂರಿನ ಮಸ್ಕಿ ಪ್ರದೇಶದಲ್ಲಿ, ಆಂಡ್ರ್ಯೂ ಬಾವರ್ ಮತ್ತು ಮುದಿತ್ ತ್ರಿವೇದಿ ಕೊಪ್ಪಳ ಜಿಲ್ಲೆಯ ಹಿರೇಬೆನಕಲ್ ಪ್ರದೇಶದಲ್ಲಿ, ನಮಿತ ಸುಗಂಧಿ ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆಯಲ್ಲಿ ಕ್ಷೇತ್ರಾಧ್ಯಯನ ನಡೆಸಿದ್ದಾರೆ. ದಕ್ಷಿಣ ಭಾರತದಲ್ಲಿರುವ ಕಬ್ಬಿಣಯುಗದ ಸಮಾಧಿಗಳ ಸಮಗ್ರ ಅಧ್ಯಯನ– ವಿಶೇಷವಾಗಿ ಸಮಾಧಿ ಪದ್ಧತಿಯಲ್ಲಿನ ವ್ಯತ್ಯಾಸಗಳನ್ನು ಕುರಿತಂತೆ – ಮಾಡಿರುವ ಆಂಡ್ರ್ಯೂ ಬೂಬೆಕರ್ ಅವರ ಕಾರ್ಯ ಗಮನಾರ್ಹವಾಗಿದೆ.

ದಾಖಲೀಕರಣದ ಕಾರ್ಯದ ಜೊತೆಗೆ ನಾವು ಗಮನಹರಿಸಬೇಕಾದ ಇನ್ನಿತರ ಸಂಶೋಧನಾ ವಿಷಯಗಳು ಹಲವಾರಿವೆ. ಅವುಗಳಲ್ಲಿ ಮುಖ್ಯವಾದುದು ನವಶಿಲಾಯುಗದಿಂದ ಕಬ್ಬಿಣಯುಗಕ್ಕೆ ಕಬ್ಬಿಣಯುಗದಿಂದ ಆದಿಚಾರಿತ್ರಿಕ ಕಾಲಕ್ಕೆ ಸಂಸ್ಕೃತಿ ಸ್ಥಿತ್ಯಂತರಗೊಂಡ ಪ್ರಕ್ರಿಯೆಯನ್ನು ಅರಿಯುವುದು. ನಮಗೆ ಸವಾಲಾಗಿರುವ ಮತ್ತೊಂದು ಚಾರಿತ್ರಿಕ ವಿಷಯವೆಂದರೆ ಗುಲ್ಬರ್ಗ, ರಾಯಚೂರು, ಬಳ್ಳಾರಿ, ಚಿತ್ರದುರ್ಗ ಮತ್ತು ಕರ್ನೂಲು ಜಿಲ್ಲೆಗಳಲ್ಲಿ ಅಶೋಕನ ಲಘು ಮತ್ತು ಪ್ರಧಾನ ಶಿಲಾಶಾಸನಗಳ ಒಂದು ದೊಡ್ಡಸಮೂಹವೇ ಇರುವುದು. ಈ ಪ್ರದೇಶದಲ್ಲಿ ಕಬ್ಬಿಣಯುಗ–ಬೃಹತ್ ಶಿಲಾಯುಗ ಸಮಾಧಿ ನೆಲೆಗಳು ನೂರಾರು ಸಂಖ್ಯೆಯಲ್ಲಿವೆ. ಅಶೋಕನ ಶಾಸನಗಳಿಗೂ ಬೃಹತ್ ಶಿಲಾಯುಗದ ನೆಲೆಗಳಿಗೂ ಯಾವ ರೀತಿಯ ಸಂಬಂಧ? ಅಶೋಕನು ನಿರ್ದೇಶನ ನೀಡಿದ್ದು ಯಾವ ಜನಾಂಗೀಯ ಅಥವಾ ಧಾರ್ಮಿಕ ಸಮುದಾಯಗಳಿಗೆ? ಇಂತಹ ಸಮಸ್ಯೆಗಳನ್ನು ಚರಿತ್ರಕಾರರು ಮತ್ತು ಪುರಾತತ್ವಜ್ಞರು ಒಟ್ಟಾಗಿ ಕೂಡಿ ಬಗೆಹರಿಸಬೇಕಿದೆ.

ಪ್ರಾಚ್ಯದ ಉಪಯುಕ್ತತೆ

ಪ್ರಾಚ್ಯಾಧ್ಯಯನದಿಂದ ನಮಗಾಗುವ ಪ್ರಯೋಜನಗಳೇನು ಎಂಬುದರೊಂದಿಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇಂದಿನ ಪ್ರಪಂಚದಲ್ಲಿ ಧರ್ಮ, ಸಂಸ್ಕೃತಿ, ಜನಾಂಗೀಯತೆ ಮುಂತಾದ ಕಾರಣಗಳಿಂದಾಗುತ್ತಿರುವ ಸಂಘರ್ಷಗಳ ಹಿನ್ನೆಲೆಯಲ್ಲಿ ಈ ವಿಷಯ ಅತಿಮಹತ್ವದ್ದಾಗಿ ತೋರುವುದು. ಭಾರತದಲ್ಲಿಯೂ ಇಂತಹ ಸನ್ನಿವೇಶ ರೂಪುಗೊಂಡಿರುವುದು ದುರದೃಷ್ಟಕರ. ರಾಜಕೀಯ ನೇತಾರರ ಮತ್ತು ಮಠಾಧಿಪತಿಗಳ ಕೆಲವು ಸಾರ್ವಜನಿಕ ಹೇಳಿಕೆಗಳು ಇದಕ್ಕೆ ಉದಾಹರಣೆಯಾಗಿವೆ. ಭಾರತೀಯ ಸಂಸ್ಕೃತಿಯು, ವಿವಿಧ ಕಾಲಘಟ್ಟದಲ್ಲಿ ಉದಯಿಸಿದ್ದರೂ ಸಮಾನ ಮಹತ್ವವುಳ್ಳ ಹಲವಾರು ಸಂಸ್ಕೃತಿ, ಭಾಷೆ, ಜನಾಂಗ, ಮತಧರ್ಮಗಳ ಸಮ್ಮಿಳನವೆಂಬುದನ್ನು ಮರೆತು ನಮ್ಮ ಪರಂಪರೆಯನ್ನು ಯಾವುದಾದರೊಂದು ಭಾಷೆ, ಮತ ಅಥವಾ ಸಂಸ್ಕೃತಿಯ ದೃಷ್ಟಿಕೋನದಿಂದ ನೋಡುವ ಸಂಕುಚಿತ ಮನೋಭಾವ ಇಂದು ಬೆಳೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಪ್ರಾಚ್ಯಾಧ್ಯಯನದಿಂದ ದೊರೆಯುವ ಸಂದೇಶದಿಂದ ಮಾತ್ರ ಜನರ ನಡುವಿನ ಮತೀಯ ವೈಷಮ್ಯವನ್ನು ತಗ್ಗಿಸಿ ಪ್ರಪಂಚದಲ್ಲಿ ಶಾಂತಿ, ಸಾಮರಸ್ಯ ನೆಲೆಸುವಂತೆ ಮಾಡುವುದು ಸಾಧ್ಯ. ಒಳಅರಿವನ್ನು ನಮ್ಮೊಳಗೆ ಬೆಳೆಸಿಕೊಂಡಾಗ ಹಿಂದಾದ ಕೆಲವು ಕೃತ್ಯಗಳನ್ನು–ಉದಾಹರಣೆಗೆ, ಅಯೋಧ್ಯೆಯ ದೇವಾಲಯ–ಮಸೀದಿ ವಿವಾದ, ಆಫ್ಘಾನಿಸ್ತಾನದ ಬಾಮಿಯಾನ್ ಬುದ್ಧಮೂರ್ತಿಗಳ ಧ್ವಂಸ, ಶ್ರೀಲಂಕದ ಕ್ಯಾಂಡಿಯಲ್ಲಿ ಹಲ್ಲಿನ ಅವಶೇಷವಿದ್ದ ದೇವಾಲಯದ ಮೇಲೆ ಬಾಂಬ್ ದಾಳಿ, ಸಿರಿಯದಲ್ಲಿ ಈಗ ಆಗುತ್ತಿರುವ ರೋಮನ್ ಸ್ಮಾರಕಗಳ ವಿನಾಶ – ಇಂತಹವುಗಳು ಮುಂದೆ ಪುನರಾವರ್ತನೆಯಾಗದಂತೆ ತಡೆಯಬಹುದು.

ಹಲವಾರು ಹೆಸರಾಂತ ಬರಹಗಾರರು ತಮ್ಮ ಕೃತಿಗಳಲ್ಲಿ ಪ್ರಾಚ್ಯಾಧ್ಯಯನದಿಂದ ನಮಗೆ ದೊರೆಯುವ ಸಾತ್ವಿಕ ಸಂದೇಶಗಳನ್ನು ಕುರಿತು ಬರೆದಿರುವರು. ಭಾರತಕ್ಕೆ ಬಂದು ೧೭೮೪ ರಲ್ಲಿ ಏಷಿಯಾಟಿಕ್ ಸೊಸೈಟಿಯನ್ನು ಸ್ಥಾಪಿಸುವುದಕ್ಕೆ ಬಹುಮುಂಚೆಯೇ ವಿಲಿಯಂ ಜೋನ್ಸ್‌ನು ಇತರ ಸಮುದಾಯ ಮತ್ತು ಸಂಸ್ಕೃತಿಗಳ ಬಗ್ಗೆ ಬ್ರಿಟಿಷರು ಹೊಂದಿದ್ದ ಉಪೇಕ್ಷೆಯ ಮನೋಭಾವವನ್ನು ಕಟುವಾಗಿ ಟೀಕಿಸಿದ್ದನು. ಅವನ ಮಾತಿನಲ್ಲೇ ಹೇಳುವುದಾದರೆ, "ಸೂರ್ಯನು ನಮಗಾಗಿ ಹುಟ್ಟಿ ಮುಳುಗುತ್ತಾನೆಂದು ನಂಬಿರುವ ಅನಾಗರಿಕರು ನಾವು. ನಮ್ಮ ದ್ವೀಪವನ್ನು ಸುತ್ತುವರೆದಿರುವ ಅಲೆಗಳು ಇನ್ನಾವುದೋ ಕಡಲತೀರದಲ್ಲಿ ಮುತ್ತು ಹವಳಗಳನ್ನು ಇಟ್ಟಿವೆಯೆಂಬುದನ್ನು ನಾವು ಅರಿಯೆವು". ಬ್ರಿಟಿಷ್ ಇತಿಹಾಸಕಾರ ಆರ್.ಜಿ. ಕಾಲಿಂಗ್‌ವುಡ್‌ರು ಇತಿಹಾಸ ನಮ್ಮಲ್ಲಿ ಸ್ವಜ್ಞಾನವನ್ನು ಮೂಡಿಸುತ್ತದೆ ಎಂಬ ಮಾತನ್ನು ಒತ್ತಿಹೇಳಿರುವರು. ಪರಂಪರೆಯ ಅಧ್ಯಯನಗಳು ಜಾಗತಿಕ ಮಟ್ಟದಲ್ಲಿ ಮೈತ್ರಿ, ಸಹಿಷ್ಣುತೆ ಮತ್ತು ಸದ್ಭಾವನೆಯ ಮನೋಭಾವವನ್ನು ಉತ್ತೇಜಿಸುತ್ತವೆ ಎಂಬುದು ಗ್ರಹಾಂ ಕ್ಲಾರ್ಕ್ ಮತ್ತು ಎಚ್.ಡಿ. ಸಾಂಕಲಿಯ ಅವರ ಅಭಿಪ್ರಾಯವೂ ಆಗಿದೆ.

ಪಂಡಿತ್ ನೆಹರು ಅವರು ತಮ್ಮ ಕೃತಿ "ದಿ ಡಿಸ್ಕವರಿ ಆಫ್ ಇಂಡಿಯ" ದಲ್ಲಿ ಪರಂಪರೆಯಲ್ಲಡಗಿರುವ ವಿಶ್ವವ್ಯಾಪಿ ಆಯಾಮವನ್ನು ಕುರಿತು ಸುಂದರವಾಗಿ ಬಣ್ಣಿಸಿರುವರು. 'ಪರಂಪರೆ' (ಇನ್‌ಹೆರಿಟೆನ್ಸ್) ಎಂದರೇನು ಎಂಬ ಪ್ರಶ್ನೆಗೆ ನೆಹರು ಸ್ಮರಣೀಯ ಮಾತುಗಳಲ್ಲಿ ಉತ್ತರಿಸಿರುವರು, "ನನ್ನ ಪರಂಪರೆ ಏನು? ನಾನು ಯಾವುದಕ್ಕೆ ವಾರಸುದಾರ? ಕಳೆದ ಸಾವಿರಾರು ವರ್ಷಗಳಲ್ಲಿ ಮನುಕುಲವು ಮಾಡಿರುವ ಸಾಧನೆಗಳಿಗೆ; ಮನುಕುಲದ ಚಿಂತನೆ, ಅನುಭವ, ನೋವು ನಲಿವುಗಳಿಗೆ; ಮನುಕುಲದ ಜಯಘೋಷಗಳಿಗೆ ಮತ್ತು ಸೋಲಿನ ಕಡುಸಂಕಟಗಳಿಗೆ; ಅನಾದಿಕಾಲದಿಂದ ಸಾಗಿಬಂದಿರುವ ಇಂದಿಗೂ ಮುಂದೆಯೂ ಸಾಗುವ, ವಿಸ್ಮಯ ಮೂಡಿಸುವ ಮಾನವನ ಸಾಹಸೀ ಪ್ರವೃತ್ತಿಗೆ. ಎಲ್ಲ ಮಾನವರಿಗೂ ಸಮಾನವಾಗಿ ಸಂಬಂಧಿಸಿರುವ ಇವೆಲ್ಲಕ್ಕೂ, ಇನ್ನೂ ಹೆಚ್ಚಿನದಕ್ಕೂ (ನಾನು ವಾರಸುದಾರ)".

ಪ್ರಾಗಿತಿಹಾಸ ಮತ್ತು ಪೂರ್ವಭಾವಿ ಇತಿಹಾಸ ನನ್ನ ಪರಿಣತಿಯ ಕ್ಷೇತ್ರವಾದುದರಿಂದ, ನನ್ನ ಪ್ರಾಸ್ತಾವಿಕ ನುಡಿಗಳನ್ನು ಈ ವಿಷಯಕ್ಕೆ ಸೀಮಿತಗೊಳಿಸಿದ್ದೇನೆ. ಪ್ರಾಗಿತಿಹಾಸ ಅಧ್ಯಯನದ ಸ್ಥಾನಮಾನ ಮತ್ತು ಮಹತ್ವದ ಬಗೆಗೆ ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಯುರೋಪಿನಲ್ಲಿ ಪ್ರಾಗಿತಿಹಾಸದ ಬಗ್ಗೆ ಬಹುಸಮಯದವರೆಗೆ ಋಣಾತ್ಮಕ ನಿಲುವು ಇದ್ದಿತ್ತು. "ಮೂಕ ಪ್ರಾಚ್ಯವನ್ನು ನಾವು ಸಂಪೂರ್ಣವಾಗಿ ಬಿಟ್ಟುಬಿಡಬೇಕು, ಅದು (ಪ್ರಾಚ್ಯಕ್ಕೆ ಸಂಬಂಧಿಸಿದ) ಸಂಗತಿಯಾಗಲೀ ಕಾಲಮಾನವಾಗಲೀ ಸಿದ್ಧಾಂತವಾಗಲೀ ಪುರಾಣವಾಗಲೀ...ಆದದ್ದು ಆಯಿತು; ಹೋದದ್ದು ಹೋಯಿತು" ಎಂಬ ಮಾತುಗಳು ಈ ನಿಲುವನ್ನು ಪ್ರತಿಪಾದಿಸುತ್ತವೆ. ಸುದೈವದಿಂದ ಈ ಜಾಯಮಾನ ಈಗ ಬದಲಾಗಿದೆ. ಪ್ರಾಗಿತಿಹಾಸದಲ್ಲಿನ 'ಪ್ರಾಗ್' ಎಂಬುದು 'ಇತಿಹಾಸ'ಕ್ಕೆ ಸೇರಿಸಿರುವ ಭಾಷೀಯ ಉಪಸರ್ಗ (ಪ್ರಿಫಿಕ್ಸ್) ಮಾತ್ರವಲ್ಲ; ಇತಿಹಾಸದ ಮೂಲ ಬುನಾದಿಯೇ ಪ್ರಾಗಿತಿಹಾಸ ಎಂಬ ಅಭಿಪ್ರಾಯ ಇಂದು ಕೇಳಿಬರುತ್ತಿದೆ. ಇತ್ತೀಚೆಗೆ ಇಂಗ್ಲೆಂಡಿನ ಪ್ರೊ. ಕ್ಲೈವ್ ಗ್ಯಾಂಬಲ್‌ರು ಪ್ರಾಗಿತಿಹಾಸಕ್ಕೆ (ಪ್ರಿಹಿಸ್ಟರಿ) ಪರ್ಯಾಯವಾಗಿ ಆಳ ಇತಿಹಾಸ (ಡೀಪ್ ಹಿಸ್ಟರಿ) ಎಂಬ ಪರಿಭಾಷೆ ಬಳಸುವುದು ಸಮಂಜಸವೆಂದು ವಾದಿಸಿರುವರು.

ಆಳ ಇತಿಹಾಸ ಎಂಬ ಪದವು ಭಾರತೀಯ ಸಂದರ್ಭಕ್ಕೆ ಪೂರ್ಣವಾಗಿ ಹೊಂದುತ್ತದೆ. ಭಾರತದಲ್ಲಿ ಪ್ರಾಗಿತಿಹಾಸ ಕಾಲದ ಸಾಂಸ್ಕೃತಿಕ ಪರಂಪರೆಗಳು ಅಳಿದುಹೋಗಿಲ್ಲ; ಇತಿಹಾಸದುದ್ದಕ್ಕೂ ಉಳಿದುಬಂದಿರುವ ಈ ಪರಂಪರೆಗಳು ನಮ್ಮ ಪ್ರಸ್ತುತ ಬದುಕಿನ ಅವಿಭಾಜ್ಯ ಅಂಗಗಳಾಗಿ ಸ್ಥಾನಪಡೆದಿವೆ. ನಾವು ಇಂದು ಭಾರತದಾದ್ಯಂತ ಕಾಣುವ ರೈತಾಪಿ ಸಮುದಾಯಗಳ ಬೇರಿರುವುದು ಸುಮಾರು ಆರುಸಾವಿರ ವರ್ಷಗಳ ಹಿಂದಿದ್ದ ಕೃಷಿಕ–ಪಶುಪಾಲಕ ಸಂಸ್ಕೃತಿಗಳಲ್ಲಿ. ಆ ಕಾಲದಲ್ಲಿ ಆರ್ಯ ಮತ್ತು ಹರಪ್ಪ ಸಂಸ್ಕೃತಿಗಳಾಗಲೀ ಸಂಸ್ಕೃತ ಭಾಷೆಯಾಗಲೀ ಇನ್ನೂ ಬೀಜವೊಡೆದಿರಲಿಲ್ಲ. ಅಂತೆಯೇ ಇಂದು ಭಾರತದ ಬೆಟ್ಟಕಾಡುಗಳಲ್ಲಿ ವಾಸವಾಗಿರುವ ಗಿರಿಜನ–ಆದಿವಾಸಿ ಸಮುದಾಯಗಳಲ್ಲಿ ಹಳೆಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗ ಕಾಲದ ಬೇಟೆ–ಆಹಾರ ಸಂಗ್ರಹಣೆಯ ಅಲೆಮಾರಿ ಬದುಕಿನ ಛಾಯೆ ಉಳಿದಿದೆ. ಆಳ ಇತಿಹಾಸದ ಅಧ್ಯಯನಕ್ಕೆ ಚಾರಿತ್ರಿಕ ಅಧ್ಯಯನದಂತೆ ಧಾರ್ಮಿಕ, ಜನಾಂಗೀಯ ಅಥವಾ ಭಾಷೀಯ ಆಯಾಮವಿಲ್ಲದಿರುವುದೇ ಅದರ ನಿಜವಾದ ಸತ್ವವಾಗಿದೆ. ಆಧುನಿಕ ಸಮಾಜಕ್ಕೆ ಪ್ರಾಗಿತಿಹಾಸದ ಅಧ್ಯಯನ ಪ್ರಸ್ತುತವಾಗುವುದು ಈ ಕಾರಣದಿಂದಲೇ.

ಶಿಕಾಗೊ ವಿಶ್ವವಿದ್ಯಾಲಯದಲ್ಲಿ ಮಾನವಶಾಸ್ತ್ರಜ್ಞರಾಗಿದ್ದ ದಿವಂಗತ ಪ್ರೊ. ರಾಬರ್ಟ್ ರೆಡ್‌ಫೀಲ್ಡ್ ವಿಶ್ವದಾದ್ಯಂತ ಇರುವ ಅತಿಸರಳ ಅಥವಾ ಸ್ವಾವಲಂಬಿ ಸಮಾಜಗಳ (ಮಾರುಕಟ್ಟೆ–ಆಧರಿತ ಸಮಾಜಗಳಿಗೆ ವಿರುದ್ಧವಾಗಿ) ಅನೇಕ ಸದ್ಗುಣಗಳನ್ನು (ಶ್ರೇಷ್ಠತೆ) ಈ ಕೆಳಗಿನಂತೆ ಪಟ್ಟಿ ಮಾಡಿರುವರು:

೧. ದೀರ್ಘವೇಳೆಯವರೆಗೆ ಶ್ರಮವಹಿಸಿ ದುಡಿಯುವ ಸಾಮರ್ಥ್ಯದ ಬಗೆಗಿರುವ ಅಭಿಮಾನ
೨. ಸಂಪತ್ತು ಮತ್ತು ಅಧಿಕಾರಗಳನ್ನು ಆಡಂಬರದಿಂದ ಪ್ರದರ್ಶನ ಮಾಡದಿರುವುದು
೩. ಪ್ರಕೃತಿಯ ಬಗೆಗಿನ ಪೂಜ್ಯಭಾವನೆ
೪. ನಿಕಟ ಕೌಟುಂಬಿಕ ಮತ್ತು ರಕ್ತಸಂಬಂಧಗಳು
೫. ಸಂಪನ್ಮೂಲಗಳ ಹಿತಮಿತ ಬಳಕೆ
೬. ಕಾಮವನ್ನು ಕ್ರೀಡೆ ಅಥವಾ ಶೌರ್ಯಾಟೋಪದಂತೆ ಕಾಣದೆ ಪ್ರಕೃತಿಯ ಸೃಷ್ಟಿಶಕ್ತಿಯಾಗಿ ಭಾವಿಸುವುದು.

ನಮ್ಮ ರಾಷ್ಟ್ರೀಯ ನಾಯಕರಾದ ಗಾಂಧಿ ಮತ್ತು ಟಾಗೋರರಂತಹವರು ಭಾರತೀಯ ಸಮಾಜದಲ್ಲಿ ಈ ಮೇಲಿನ ಎಲ್ಲ ಅಥವಾ ಕೆಲವೊಂದು ಲಕ್ಷಣಗಳಿರುವುದನ್ನು ಗುರುತಿಸಿದ್ದರು. ಜಾಗತೀಕರಣ ಮತ್ತು ಆಧುನಿಕ ಪರಿಕಲ್ಪನೆಗಳಿಂದಾಗಿ (ಮಾಡರ್ನೈಸೇಷನ್) ನಮ್ಮ ವಿಚಾರಧಾರೆಗಳೂ ಸ್ವಭಾವಗಳೂ ಬಹುಬೇಗ ಬದಲಾಗುತ್ತಿವೆ. ಇಂತಹ ಸಂಕ್ರಮಣ ಕಾಲದಲ್ಲಿ ಇಂದಿನ ಮತ್ತು ಹಿಂದಿನ ಸರಳ ಸಮಾಜಗಳ ಅಧ್ಯಯನವನ್ನು ನಾವು ನಮ್ಮ ಮನದಲ್ಲಿಟ್ಟುಕೊಳ್ಳುವುದು ಒಳಿತು. ಸುಪ್ರಸಿದ್ಧ ಪುರಾತತ್ವಜ್ಞರಾದ ಗೋರ್ಡನ್ ಚೈಲ್ಡ್‌ರು ನುಡಿದಿರುವಂತೆ, ಪ್ರಾಚ್ಯಾಧ್ಯಯನವು ಬೆಣ್ಣೆ ಅಥವಾ ಬಂದೂಕುಗಳ ಉತ್ಪಾದನೆಯನ್ನು ಹೆಚ್ಚಿಸಲು ನಮಗೆ ಸಹಾಯ ಮಾಡುವುದಿಲ್ಲ; ಬದಲಿಗೆ ನಾವು 'ಇನ್ನಷ್ಟು ಸಹೃದಯರಾಗಿ' ಯೋಚಿಸುವಂತೆಯೂ ನಡೆದುಕೊಳ್ಳುವಂತೆಯೂ ಅದು ಮಾಡಬಲ್ಲದು. ಇದು ಪ್ರಸ್ತುತ ಕಾಲಕ್ಕೆ ತಕ್ಕ ಮಾತು.

ಕೊನೆಯದಾಗಿ ನನ್ನ ಸಂಶೋಧನೆಯ ಫಲಿತಾಂಶಗಳನ್ನು ಇಂದು ನಿಮ್ಮೊಡನೆ ಹಂಚಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ಇತಿಹಾಸ ಅಕಾಡೆಮಿಗೆ ಮತ್ತೊಮ್ಮೆ ವಂದನೆಗಳು. ಶೋರಾಪುರ ದೋಆಬ್ ಪ್ರದೇಶವು ನನಗೆ ನನ್ನ ಸ್ವಂತ ಊರಿದ್ದಂತೆ. ಮೂವತ್ತೈದು ವರ್ಷಗಳ ನನ್ನ ಅಧ್ಯಯನದಲ್ಲಿ ನಾನು ಅಪಾರವಾದ ಪ್ರೀತಿ, ವಾತ್ಸಲ್ಯ ಮತ್ತು ಆತಿಥ್ಯವನ್ನು ದೋಆಬ್‌ನ ಎಲ್ಲ ವರ್ಗದ ಜನರಿಂದ ಪಡೆದಿದ್ದೇನೆ. ಇವರಲ್ಲಿ ಶಾಲಾ ಉಪಾಧ್ಯಾಯರಿದ್ದಾರೆ; ವಿವಿಧ ಹುದ್ದೆಯಲ್ಲಿದ್ದ ಸರ್ಕಾರಿ ಅಧಿಕಾರಿಗಳೂ ಉದ್ಯೋಗಿಗಳೂ ಮತ್ತು ಗ್ರಾಮಸ್ಥರೂ ಸೇರಿದ್ದಾರೆ. ಇವರೆಲ್ಲರಿಗೆ ನಾನು ಸದಾ ಋಣಿ. ನನ್ನ ಸುದೀರ್ಘ ಸಂಶೋಧನೆ ಸ್ಥಳೀಯರಲ್ಲಿ ಪ್ರಾಚ್ಯದ ಬಗೆಗೆ ಆಸಕ್ತಿಯನ್ನೂ ಅರಿವನ್ನೂ ಮೂಡಿಸುವಲ್ಲಿ ಯಶಸ್ವಿಯಾಯಿತು ಎಂದು ಹೇಳಲು ನನಗೆ ಸಂತೋಷವಾಗುತ್ತದೆ. ಹುಣಸಗಿಯ ಮಂಡಲ ಪಂಚಾಯತ್ ಸದಸ್ಯರು ಪಂಚಾಯತ್ ಕಚೇರಿಯ ಸಭಾಭವನದಲ್ಲಿ ವಿವಿಧ ಕಾಲಘಟ್ಟಗಳ ಅವಶೇಷಗಳ ಕಾಯಂ ಪ್ರದರ್ಶನವನ್ನು ಏರ್ಪಡಿಸಿದ್ದಾರೆ. ಪ್ರದರ್ಶನಕ್ಕಿಟ್ಟಿರುವ ಅವಶೇಷಗಳಲ್ಲಿ ಗ್ರಾಮಸ್ಥರೇ ಸ್ಥಳೀಯವಾಗಿ ಸಂಗ್ರಹಿಸಿರುವ ವೀರಗಲ್ಲುಗಳೂ ಬಿಡಿಶಿಲ್ಪಗಳೂ ಸೇರಿವೆ. ಗ್ರಾಮೀಣ ಜನರು ಅವರ ಪರಿಸರದಲ್ಲಿರುವ ನೈಸರ್ಗಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಧರ್ಮದರ್ಶಿಗಳಾಗಬಲ್ಲರು ಎಂಬ ಗಾಂಧೀಜಿಯವರ ಧ್ಯೇಯವನ್ನು ಇದು ನೆನಪಿಗೆ ತರುತ್ತದೆ.

* * *

BIO – DATA OF PROFESSOR K. PADDAYYA

Prof. K. Paddayya, D-14, Amrapalishree Cooperative Housing Society, Nagar Road, Pune 411006.
Tel 020-26681477, Mobile - 09823710542; E-mail : k.paddayya@gmail.com

---

Positions held

1. Professor of Geoarchacology (1995-2003)

2. Joint Director (1995-2003). Director, Deccan College post Graduate and Research Institute (Deemed University). Pune 411 006 (from 2003 to 2008).

3. Emeritus Professor of Archaeology. Department of Archaeology, Deccan College (Deemed University). Pune 411 006 Since October 2008.

Academic Qualifications: B.A. (Hons.) in History (1963), Andhra University.

M.A. in Archaeology (1965), University of Puna.

Ph.D. In Archaeology (1969) University of Pune.

Teaching Experience: Taught following papers for M.A. and M. Ph.D Courses in Ancient Indian History, Culture and Archaeology, Department of Archaeology, Deccan College, Pune, from 1972 to 2008.

Prehistory and Protohistory of India.
Principles of Archaeology.
Ancient History of India,
Field Methods in archaeology,
Historical Archaeology,
History of Archaeology in India,
Advanced Archacological Theory and Research Methodology.
Geoarchaeology and Ethnoarchaeology.

Research Supervision: Successfully Guided 15 Ph.D students covering various branches of Archaeology.

Research Experience:

i) Ph.D. thesis on the Neolithic Culture of Shorapur Doab, Karnataka (1968) completed under the supervision of H.D. Sankalia at the Deccan College, Pune

ii) Post-doetoral research (1969-70) on the Late Palacolithic of Northern Europe at the University of Groningen, the Netherlands.

iii) Post-doctoral research (1972 to 2003) involving intensive explorations and excavations of Palaeolithic and Neolithic sites in the Hunsgi and Baichbal Valleys of Shorpur Doab, North karnataka.

These Studies have led to the discovery of over 400 archacological sites ranging from the Lower Palacolithic to the Iron Age. The major Excavations conducted include the Acheulian sites at Hunsgi, yediyapur, Isampur and the Neolithic sites of Kodekal and Budihal. All these sites

have already been securely placed on the archaeological map of the country. They have given us a much better understanding of the Lower Palacolithic and Neolithic cultures of Peninsular India.

iv) Undertook research in theoretical archaeology and published one book on New archaeology; and many research papers in India and abroad.

Published / Edited the following books:

1) Investigations into the Neolithic culture of the Shorapur Doab, South India. Leiden: E.I. Bril. 1973.

2) The Acheulian culture of the Hunsgi Valley (Peninsular India): a Settlement System perspective. Pune: Deccan college. 1982.

3) (Edited with S.B. Deo) *Recent Advances in Indian Archaeoology*. Pune: Deccan College. 1985.

4) The New Archaeology and Aftermath: A View from outside the Anglo-American World. Pune: Ravish Publishers. 1990.

5) (Edited) *Recent Studies in Indian Archaeology.* New Delhi: Munshiram Manoharlal. 2002.

6) (Edited with others) *Formation Processes and Indian Archaeology.* Pune: Decean College. 2007.

7) (Edited with others) *Recent Research Trends in south Asian archaeology: Procedings of the H.D. sankalia Birth Centenary Seminar.* Pune: Deccan college. 2009.

ii) Published about 120 research papers on various aspects of Indian archaeology in reputed Indian and foreign periodicals such as *Man. Anthropos. Antiquity. Current Anthropology Man and Environment and Puratattva.*

Other Qualifications: Attended many national and international seminars and conferences; and visited the Netherlands, France, Germany, U.K. and the U.S.A. for carrying out research work.

Major Awards and Honours:Netherlands Government Reciprocal Research Fellowship (1969-1970)

Senior Fulbright Research Fellow in the U.S. (1986) University of California at Berkeley and University of new Mexico at Albuquerque.

Ancient India and Iran trust (Cambridge) research Fellowship (1989).

Ford Foundation Research Fellow in Sri Lanka (1994)

Fulbright Visiting Lecturer at the University of Michigan, an Arbor, U.S.A. (1999)

Rakhal Das Banerjee Medal and Citation for life-time achievementawarded by Bangiya Sahitya Parishad. Kolkata in November 2002.

U.G.C. Visiting Fellow and Delivered Lectures at Karnatak University, Dharwad, S.V. University, Tirupati and other places.

Delivered Father Heras Memorial Lectures at heras Institute of Indian History, Mumbai in 2006.

Served as a member of the Sethusamudram shipping canal Expert Committee (2007) and Committee on Culture Policy (2008), both appointed by the Government of India.

Delivered Presidential Address of the Indian Archacological Society (2003) and Ancient India and Archacology Section of Indian History Congress (2003).

Served as a member of the NAAC expert committee.

Currently a member of Indian Council of Historical Research, New Delhi.

೧

ಸಂಗೇನಹಳ್ಳಿಕೆರೆ ಪರಿಸರದಲ್ಲಿ ಹಳೆಯ ಶಿಲಾಯುಗದ ಕೈಕೊಡಲಿ ಪತ್ತೆ

ಡಾ. ಎಸ್.ವೈ. ಸೋಮಶೇಖರ್*

ಚಿತ್ರದುರ್ಗದಿಂದ ತಾಲೂಕಿನ ಉತ್ತರಕ್ಕೆ ಹಾಗೂ ಜಗಳೂರು ತಾಲೂಕಿನ ಗಡಿಭಾಗದಲ್ಲಿರುವ ಸಂಗೇನಹಳ್ಳಿ ಕೆರೆಯು ಪ್ರಾಗಿತಿಹಾಸ ಕಾಲದ ಪ್ರಸಿದ್ಧ ನೆಲೆಯೆಂಬುದು ನಮ್ಮ ಹಿಂದಿನ ಸಂಶೋಧನೆಗಳಿಂದ ಈಗಾಗಲೇ ಪ್ರಕಟಿತವಾಗಿತ್ತು. ೧೯೯೬ರ ಅವಧಿಯಲ್ಲಿ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಈ ನೆಲೆಯಲ್ಲಿ ಕಂಡುಬಂದ ಬೂದಿದಿಬ್ಬ, ಮಡಕೆ, ಕಲ್ಲಿನ ಕೊಡಲಿ ಮತ್ತಿತರ ಅವಶೇಷಗಳಿಂದ ಇದರ ಪ್ರಾಚೀನತೆಯನ್ನು ನವಶಿಲಾಯುಗದವರೆಗೆ ಗುರುತಿಸಲಾಗಿತ್ತು. ಆದರೆ ನವಶಿಲಾಯುಗಕ್ಕೂ ಪೂರ್ವದ ಯಾವುದೇ ಅವಶೇಷಗಳು ಅಂದು ಕಂಡುಬಂದಿರಲಿಲ್ಲ. ಆದರೆ ಇತ್ತೀಚೆಗೆ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ನವಶಿಲಾಯುಗಕ್ಕೂ ಪೂರ್ವದ ಅಂದರೆ ಮಧ್ಯ ಹಳೆಯ ಶಿಲಾಯುಗಕ್ಕೆ ಸೇರಿದ ಎರಡು ಕೈಕೊಡಲಿಗಳು ಪತ್ತೆಯಾಗಿವೆ. ಇದರಿಂದ ಸಂಗೇನಹಳ್ಳಿ ಕೆರೆಯ ನಡುಗಡ್ಡೆ ಹಾಗೂ ಸುತ್ತಮುತ್ತಲಿನ ಪರಿಸರವು ಹಳೆಯ ಶಿಲಾಯುಗದ ಮಾನವನ ವಾಸಕ್ಕೆ ಯೋಗ್ಯವಾದ ನೆಲೆಯಾಗಿತ್ತೆಂಬುದು ನಮ್ಮ ಈಗಿನ ಸಂಶೋಧನೆಯಿಂದ ದೃಢವಾದಂತಾಗಿದೆ. ಪ್ರಸ್ತುತ ಪ್ರಬಂಧವು ಎರಡು ಸಂಗತಿಗಳನ್ನು ಪ್ರಮುಖವಾಗಿಟ್ಟುಕೊಂಡಿದೆ.

೧. ನವಶಿಲಾಯುಗದವರೆಗೆ ಇದ್ದ ಸಂಗೇನಹಳ್ಳಿಕೆರೆ ನೆಲೆಯ ಕಾಲವನ್ನು ಮಧ್ಯ ಹಳೆಯ ಶಿಲಾಯುಗದವರೆಗೆ ಕೊಂಡೊಯ್ಯುವುದು.

೨. ಈಗಾಗಲೇ ಶೋಧಿಸಲಾದ ಬಂಡೆಗಲ್ಲುಗಳ ಮೇಲೆ ಕುಟ್ಟಿಮೂಡಿಸಿದ ಚಿತ್ರಗಳ ತಾಂತ್ರಿಕತೆ ಮತ್ತು ವರ್ಣಚಿತ್ರದ ಪ್ರಭಾವವನ್ನು ಗುರುತಿಸುವುದಾಗಿದೆ.


ಸಂಗೇನಹಳ್ಳಿ ಗ್ರಾಮದ ದಕ್ಷಿಣಕ್ಕಿರುವ ಆಯಕಟ್ಟು ಜಾಗವನ್ನು ಬಳಸಿಕೊಂಡು ೧೯೬೦ರ ವೇಳೆಗೆ ಜನಗಿಹಳ್ಳಕ್ಕೆ ಅಡ್ಡಲಾಗಿ ಕೆರೆಯೊಂದನ್ನು ಕಟ್ಟಲಾಗಿದೆ. ಇದು ಈ ಭಾಗದ ಪ್ರಮುಖ ಕೆರೆಯಾಗಿದೆ. ಈ ಕೆರೆಯನ್ನು ಕಟ್ಟುವ ಪೂರ್ವದಲ್ಲಿ ಕೆರೆಯ ಮಧ್ಯದ ನಡುಗಡ್ಡೆಯು ಪ್ರಾಚೀನ ಮಾನವನ ಕಾಲದಿಂದ ಇಂದಿನವರೆಗೆ ಜನವಸತಿ ಪ್ರದೇಶವಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಕಲ್ಲಿನ ಆಯುಧ, ಮಡಕೆ–ಕುಡಿಕೆ, ಬೂದಿದಿಬ್ಬ, ಕಟ್ಟಡದ ಅವಶೇಷಗಳು ಹಾಗೂ ವೀರಗಲ್ಲುಗಳನ್ನು ಇಂದಿಗೂ ಕಾಣಬಹುದು. ಈ ವಸತಿ ನೆಲೆಯನ್ನು ಹಿಂದೆ ಓಬಳಾಪುರವೆಂದೇ ಕರೆಯುತ್ತಿದ್ದರು. ಇಂದಿಗೂ ಅದೇ ಹೆಸರಿನಿಂದ ಹೆಸರಿಸಲಾಗುತ್ತದೆ.

ಈ ಓಬಳಾಪುರದ ನಡುಗಡ್ಡೆಯು ಇತ್ತೀಚಿನ ವಸತಿ ನೆಲೆ ಮಾತ್ರವಾಗಿರದೆ ಆದಿ ಕಾಲದಿಂದಲೂ ಮಾನವನ ಆವಾಸಸ್ಥಾನವಾಗಿತ್ತೆಂಬುದು ೧೯೯೬ ಹಾಗೂ ಇತ್ತೀಚೆಗೆ ಕೈಗೊಂಡ ಸಂಶೋಧನೆಗಳಿಂದ ದೃಢಪಟ್ಟಿದೆ. ೧೯೯೬ರಲ್ಲಿ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಎತ್ತು, ಮನುಷ್ಯ, ಹಾವು ಮೊದಲಾದ ಕುಟ್ಟಿಮೂಡಿಸಿದ ಚಿತ್ರಗಳು ಕಂಡುಬಂದವು. ನಂತರ ಪ್ರೊ. ಲಕ್ಷ್ಮಣ್ ತೆಲಗಾವಿಯವರೊಂದಿಗೆ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಕಲ್ಲಿನ ಕೊಡಲಿ, ಬೂದಿದಿಬ್ಬ, ಮಡಕೆ ಕುಡಿಕೆಗಳು ಬೆಳಕಿಗೆ ಬಂದವು ಈ ಎಲ್ಲ ಅವಶೇಷಗಳ ಹಿನ್ನೆಲೆಯಲ್ಲಿ ಈ ನೆಲೆಯ ಕಾಲವನ್ನು ಅಂದು ನವಶಿಲಾಯುಗದವರೆಗೆ ಕೊಂಡೊಯ್ಯಲಾಗಿತ್ತು. ಆದರೆ ಇತ್ತೀಚೆಗೆ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಮೇಲೆ ನಸುಗೆಂಪು ಬಣ್ಣದ ಡಾಲೊರೈಟ್ ಶಿಲೆಯಲ್ಲಿ ತಯಾರಿಸಲಾದ ಎರಡು ಕಲ್ಲಿನ ಕೊಡಲಿಗಳು ಕೆರೆಯ ಎಡದಂಡೆಯ ಮೇಲಿನ ಬಂಡೆಗಲ್ಲುಗಳ ಸಮೀಪ ದೊರೆತಿವೆ. ಅಲ್ಲದೆ ಈ ಬಂಡೆಗಲ್ಲು ಸಮೂಹದಲ್ಲೇ ನೂರಾರು ಕುಟ್ಟಿಮೂಡಿಸಿದ ಗೂಳಿ, ಹಾವು, ಮನುಷ್ಯ ಇನ್ನು ಮುಂತಾದ ಚಿತ್ರಗಳಿರುವುದು ಗಮನಾರ್ಹ.

---

* ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬.





ಡಾಲೊರೈಟ್ ಅಥವಾ ಉರುಟುಕಲ್ಲಿನ ನಸುಗೆಂಪು ಬಣ್ಣದ ಈ ಆಯುಧಗಳಲ್ಲಿ ಒಂದು ಆಯುಧವು ೯ ಸೆಂ.ಮೀ. ಅಗಲ, ೧೦.೫ ಸೆಂ.ಮೀ ಉದ್ದವಾಗಿದೆ, ಇನ್ನೊಂದು ಆಯುಧವು ೫ ಸೆಂ.ಮೀ. ಅಗಲ, ೧೧ ಸೆಂ.ಮೀ. ಉದ್ದವಿದೆ.

ಈ ಆಯುಧಗಳನ್ನು ತಯಾರಿಸಲು ಆದಿ ಹಳೆ ಶಿಲಾಯುಗದಲ್ಲಿ ಬಳಸುತ್ತಿದ್ದ ಕಲ್ಲಿನಿಂದ ಕಲ್ಲಿಗೆ ಹೊಡೆಯುವ ವಿಧಾನ, ಕಲ್ಲು ಸುತ್ತಿಗೆ ವಿಧಾನ ಮತ್ತು ಲಘು ಸುತ್ತಿಗೆ ವಿಧಾನಗಳ ಮೂಲಕ ಈ ಆಯುಧಗಳನ್ನು ತಯಾರಿಸಲಾಗಿದೆ. ಇವುಗಳನ್ನು ಪ್ರಾಣಿಗಳ ಬೇಟೆಗೆ, ನೆಲ ಅಗೆದು ಗೆಡ್ಡೆ-ಗೆಣಸುಗಳನ್ನು ತೆಗೆಯಲು ಹಾಗೂ ಮರದ ತೊಗಟೆಗಳನ್ನು ಬೇರ್ಪಡಿಸಲು ಹೆಚ್ಚಾಗಿ ಬಳಸಲಾಗುತ್ತಿತ್ತು.

ಕರ್ನಾಟಕದಲ್ಲಿ ಮಧ್ಯ ಹಳೆ ಶಿಲಾಯುಗದ ಕಾಲವನ್ನು ರೇಡಿಯೊ ಕಾರ್ಬನ್ ಕಾಲನಿರ್ಣಯ ವಿಧಾನದ ಮೂಲಕ ೪೦,೦೦೦ ವರ್ಷಗಳಷ್ಟು ಪೂರ್ವದಲ್ಲಿ ಇದ್ದಿರಬಹುದೆಂದು ವಿದ್ವಾಂಸರು ತರ್ಕಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಗೇನಹಳ್ಳಿ ಕೆರೆ ಪರಿಸರವು ೧೦೦೦೦ ವರ್ಷಗಳಷ್ಟು ಹಿಂದೆ ಬಾಳಿಬದುಕಿದ್ದ ಮಧ್ಯ ಹಳೆ ಶಿಲಾಯುಗ ಮಾನವನ ವಾಸದ ನೆಲೆಯಾಗಿತ್ತೆಂಬುದು ಕೈಕೊಡಲಿಗಳಿಂದ ದೃಢವಾದಂತಾಗಿದೆ.

ಈ ನೆಲೆಯ ಇನ್ನೊಂದು ವಿಶೇಷತೆಯೆಂದರೆ ಕೆರೆಯ ಎಡದಂಡೆಯ ಮೇಲೆ ನೂರಾರು ಕುಟ್ಟಿ ಮೂಡಿಸಿದ ಚಿತ್ರಗಳಿರುವುದು. ಇವು ಅಂದಿನ ಮಾನವನ ಜೀವನಕ್ರಮ ಮತ್ತು ಕಲೆಗಾರಿಕೆಯನ್ನು ಪ್ರತಿನಿಧಿಸುತ್ತವೆ. ಈ ಚಿತ್ರಗಳನ್ನು ಯಾವುದೇ ಕೊರೆಯುವ ಅಥವಾ ಗೀರುವ ಮೂಲಕ ರೇಖೆಗಳಿಂದ ರಚಿಸದೆ ಮೈತುಂಬಾ ಕುಟ್ಟಿದ ಚುಕ್ಕಿಗಳಿಂದ ಮೂಡಿಸಿರುವುದು. ಇದಕ್ಕೆ ಈ ಪೂರ್ವದಲ್ಲಿದ್ದ ಪ್ರಾಣಿ ಅಥವಾ ಮನುಷ್ಯ ದೇಹದ ತುಂಬಾ ಬಣ್ಣವನ್ನು ಹಚ್ಚುವ ಮೂಲಕ ಚಿತ್ರಗಳನ್ನು ರಚಿಸುತ್ತಿದ್ದುದರ ಪ್ರಭಾವ ಬಂಡೆಗಲ್ಲಿನ ಮೇಲೆ ಖಂಡರಿಸಲು ಆರಂಭಿಸಿದ ಚಿತ್ರಗಳ ಮೇಲೆ ಬೀರಿರುವುದನ್ನು ಗಮನಿಸಬಹುದು. ಇದರಿಂದ ಕುಟ್ಟಿಮೂಡಿಸಿದ ಚಿತ್ರಗಳು ಕೊರೆದ ಅಥವಾ ಗೀರಿನಿಂದ ಮಾಡಿದ ರೇಖಾಚಿತ್ರಗಳಿಗಿಂತ ಪ್ರಾಚೀನವೆಂಬುದನ್ನು ರೇಖಾ ಚಿತ್ರಗಳ ತಾಂತ್ರಿಕತೆ ಮತ್ತು ವರ್ಣಚಿತ್ರಗಳ ಸ್ವರೂಪಗಳಿಂದ ಸ್ಪಷ್ಟವಾಗುತ್ತದೆ. ಆದಿ ಮಾನವನಿಗೆ ರೇಖೆ, ಗೆರೆ, ಕುಟ್ಟಿ ಮೂಡಿಸಿದ ಚಿತ್ರಗಳಿಗೂ ಪೂರ್ವದಲ್ಲೇ ಬಣ್ಣದ ಬಳಕೆಯಾಗಿತ್ತು ಮತ್ತು ತನ್ನ ಅಭಿವ್ಯಕ್ತಿಗಳನ್ನು ಬಣ್ಣದ ಮೂಲಕ ತೋರ್ಪಡಿಸುತ್ತಿದ್ದನು. ಬಣ್ಣದ ಚಿತ್ರಗಳಲ್ಲಿ ತಾನು ರಚಿಸುವ ಚಿತ್ರದ ಮೈತುಂಬಾ ಬಣ್ಣ ತುಂಬುತ್ತಿದ್ದುದನ್ನು ಕಾಣುತ್ತೇವೆ. ಇದೇ ಬಗೆಯ ಚಿತ್ರಗಳನ್ನು ಬಂಡೆಗಲ್ಲಿನ ಮೇಲೆ ಮೂಡಿಸುವಾಗ ಪ್ರಾಣಿಯ ಮೈಯನ್ನು ರೇಖೆಗಳಲ್ಲಿ ಚಿತ್ರಿಸದೆ ಅದರ ಮೈತುಂಬಾ ಕುಟ್ಟಿ ಮೂಡಿಸುವ ಪರಿಪಾಠವನ್ನು ರೂಢಿಸಿಕೊಂಡಿದ್ದಾನೆ. ಇದಕ್ಕೆ ಬಣ್ಣದ ನಂತರದ ಬೆಳವಣಿಗೆ ಕಾರಣವೆಂಬುದು ಸ್ಪಷ್ಟವಾಗುತ್ತದೆ.

ಒಟ್ಟಿನಲ್ಲಿ ಪ್ರಸ್ತುತ ಸಂಗೇನಹಳ್ಳಿ ಕೆರೆಯ ಮಧ್ಯದ ನಡುಗಡ್ಡೆಯು ನವಶಿಲಾಯುಗವಲ್ಲದೆ ಹಳೆಯ ಶಿಲಾಯುಗದಲ್ಲೂ ಆದಿಮಾನವನ ಪ್ರಮುಖ ವಸತಿ ನೆಲೆಯಾಗಿದ್ದುದು ಸ್ಪಷ್ಟವಾಗುತ್ತದೆ. ಇಲ್ಲಿನ ಗುಹೇಶ್ವರ ಬೆಟ್ಟಗುಡ್ಡಗಳು, ವಿಶಾಲವಾದ ಹುಲ್ಲುಗಾವಲು ಬಯಲು ಹಾಗೂ ಸದಾ ನೀರಿನಿಂದ ತುಂಬಿ ಹರಿಯುತ್ತಿದ್ದ ಜನಗಿಹಳ್ಳ ಪರಿಸರವು ಪ್ರಾಚೀನ ಕಾಲದಿಂದಲೂ ಮಾನವನ ವಾಸಯೋಗ್ಯ ನೆಲೆಯಾಗುವಲ್ಲಿ ನೆರವಾಗಿದೆಯೆಂದರೆ ಅತಿಶಯೋಕ್ತಿಯಾಗಲಾರದು.

[ಕ್ಷೇತ್ರ ಕಾರ್ಯದಲ್ಲಿ ಪಾಲ್ಗೊಂಡು ಸಹಕರಿಸಿದ ನನ್ನ ವಿದ್ಯಾರ್ಥಿಮಿತ್ರ ಕೆ.ಎಸ್. ಶರತ್‌ಬಾಬು ಅವರಿಗೆ ಧನ್ಯವಾದಗಳು]

ಆಕರ ಗ್ರಂಥ

೧. ಸಂಗೇನಹಳ್ಳಿಯಲ್ಲಿ ಶಿಲಾಯುಧಗಳ ಪತ್ತೆ, ಕನ್ನಡ ಪ್ರಭ, ೦೬.೦೪.೧೯೯೬, ಸಂಯುಕ್ತ ಕರ್ನಾಟಕ, ೦೫.೦೪.೧೯೯೬.

೨

"ಅರಸೀಕೆರೆ ತಾಲ್ಲೂಕಿನ ಬಾಣಾವರದಲ್ಲಿ ಪತ್ತೆಯಾದ ನವಶಿಲಾಯುಗದ ಕೈಕೊಡಲಿಗಳು"

ರೇಣುಕಸ್ವಾಮಿ ಒಡೆಯರ್ ಬಿ.ಈ.*

ಬಾಣಾವರ ಗ್ರಾಮವು ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೪ ಕಿ.ಮೀ. ಅಂತರದಲ್ಲಿದೆ.[೧] ಕ್ರಿ.ಶ. ೧೮೮೨ರವರೆಗೂ ಈ ಗ್ರಾಮವು 'ಕಡೂರು' ಜಿಲ್ಲೆಗೆ ಸೇರಿದ ತಾಲ್ಲೂಕು ಕೇಂದ್ರವಾಗಿತ್ತು. ೧೮೮೬ರಲ್ಲಿ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕು ರಚನೆಯಾದ ನಂತರ ಬಾಣಾವರ ಹೋಬಳಿ ಕೇಂದ್ರವಾಗಿ ಅರಸೀಕೆರೆ ತಾಲ್ಲೂಕಿಗೆ ಸೇರ್ಪಡೆಯಾಯಿತು.[೨]

ಈ ಗ್ರಾಮದಲ್ಲಿ ಬಾಣೇಶ್ವರ ದೇವಾಲಯವಿರುವುದರಿಂದ ಈ ಊರಿಗೆ ಬಾಣಾವರ ಎಂಬ ಹೆಸರು ಬಂದಿರಬೇಕು. ಲಕ್ಷ್ಮಣ ಆಯಾಸದಿಂದ ಹೊರಲಾರದೆ ಕೆಳಗೆ ಹಾಕಿ ಹೋಗಿದ್ದ ಬಾಣಗಳನ್ನು ರಾಮ ಇಲ್ಲಿ ಎತ್ತಿಕೊಂಡ ಕಾರಣ ಈ ಸ್ಥಳಕ್ಕೆ ಬಾಣಹೊರು ಅಥವಾ ಬಾಣಾವರ ಎಂಬ ಹೆಸರು ಬಂದಿತೆಂಬ ಜನಪದವಿದೆ. ಬಾಣದೊರೆಗಳಿಗೂ ಈ ಊರಿಗೂ ಏನೋ ಸಂಬಂಧವಿರಬೇಕು ಎಂಬ ಅಭಿಪ್ರಾಯವೂ ಇದೆ.[೩] ಕ್ರಿ.ಶ. ೧೧೮೭ರ ಹೊಯ್ಸಳ ಎರಡನೇ ವೀರ ಬಲ್ಲಾಳನ ಶಾಸನದಲ್ಲಿ ಬಾಣಾವೂರ ಎಂದು ಉಲ್ಲೇಖಗೊಂಡಿದೆ.[೪] ಕ್ರಮೇಣ ಬಾಣಾವರ ಎಂದು ಕರೆಸಿಕೊಳ್ಳುತ್ತಿದೆ.

ಅರಸೀಕೆರೆ ತಾಲ್ಲೂಕು ಶಿಲಾಯುಗದ ನೆಲೆಯಾಗಿತ್ತು ಎಂಬುದಕ್ಕೆ ಚಿಟ್ಟನಹಳ್ಳಿ, ತಳಲೂರು, ಬೊಮ್ಮೇನಹಳ್ಳಿ ಮೊದಲಾದ ಸ್ಥಳಗಳಲ್ಲಿ ದೊರಕಿರುವ ಪ್ರಾಕ್ಚಾರಿತ್ರಿಕ ಆಧಾರಗಳೇ ಸಾಕ್ಷಿಯಂತಿವೆ.[೫] ಆರ್. ವೆಂಕಟೇಶಮೂರ್ತಿಯವರು ಅರಸೀಕೆರೆ ತಾಲ್ಲೂಕಿನ ಮಾಲೇಕಲ್ ತಿರುಪತಿ, ತಳಲೂರು, ಬೊಮ್ಮೇನಹಳ್ಳಿಯಲ್ಲಿ ಬೃಹತ್ ಶಿಲಾಯುಗದ ನೆಲೆಗಳನ್ನು ಪತ್ತೆಹಚ್ಚಿದ್ದಾರೆ.[೬]

ಪ್ರವೀಣ್ ಬೆಳ್ತಂಗಡಿ ಮತ್ತು ಡಾ॥ ಹನುಮನಾಯಕ್ ಅವರು ಬಾಣಾವರ ಹೋಬಳಿಯ ಅರೇಹಳ್ಳಿ, ಕರಡಿಹಳ್ಳಿ, ಕುರುಬರಹಳ್ಳಿ, ಕೊಮ್ಮರಗಟ್ಟಿ, ಕೋಡಿಹಳ್ಳಿ, ಪುರವೇಹಳ್ಳಿ, ಬಾಣಾವರ, ಬೆಂಡೆಕೆರೆ, ಬೈರಗೊಂಡನಹಳ್ಳಿ, ಮಲ್ಲಾಪುರ ಟಿ., ತೊಂಡಿಗಾನಹಳ್ಳಿ, ಶಾನೆಗೆರೆಯಲ್ಲಿ ಬೃಹತ್ ಶಿಲಾಯುಗದ ನೆಲೆಗಳನ್ನು ಶೋಧಿಸಿದ್ದಾರೆ.[೭]


ಡಾ॥ ಹನುಮನಾಯಕ ಅವರು ಬಾಣಾವರದಿಂದ ೩ ಕಿ.ಮೀ. ಅಂತರದಲ್ಲಿರುವ ಗವಿಮಠದಲ್ಲಿ ನವಶಿಲಾಯುಗದ ಕೆಂಪು, ಕಪ್ಪು ಬಣ್ಣದ ಮಡಕೆಯ ಚೂರುಗಳನ್ನು ಪತ್ತೆಹಚ್ಚಿದ್ದಾರೆ. ಹಾಗೂ ಇದೇ ಪರಿಸರದಲ್ಲಿ ವರ್ಣಚಿತ್ರಗಳನ್ನು ಶೋಧಿಸಿದ್ದಾರೆ.[೮] ಗವಿಮಠದಿಂದ ೧ ಕಿ.ಮೀ. ಅಂತರದಲ್ಲಿರುವ ಚಲುವನಹಳ್ಳಿಯಲ್ಲಿ ಬೃಹತ್ ಶಿಲಾಯುಗದ ನೆಲೆಗಳನ್ನು ಗುರ್ತಿಸಿದ್ದಾರೆ.[೯]

ಬಾಣಾವರ ಗ್ರಾಮದಲ್ಲಿ ಈಗಾಗಲೇ ಬೃಹತ್ ಶಿಲಾಯುಗದ ನಿಲುಸುಗಲ್ಲು ಕಂಡುಬಂದಿದೆ. ಪ್ರಸ್ತುತ ಬಾಣಾವರದ ಶಾಸನೋಕ್ತ ಮಾವಿನಕೆರೆಯಲ್ಲಿ ನಾಗೇಂದ್ರರವರಿಗೆ ಮಣ್ಣು ತೆಗೆಯುವ ಸಂದರ್ಭದಲ್ಲಿ ಎರಡು ಶಿಲಾ ಆಯುಧಗಳು ದೊರಕಿದ್ದವು. ಅವುಗಳು ಗೆಳೆಯನಾದ ಸಿರೀಷನ ಮೂಲಕ ನನ್ನ ಗಮನಕ್ಕೆ ಬಂದಿತು. ಈ ಆಯುಧಗಳು ನವಶಿಲಾಯುಗದ ಕೈಕೊಡಲಿಗಳಾಗಿವೆ.

ಶಿಲಾಯುಗವನ್ನು ಹಳೇ ಶಿಲಾಯುಗ (ಕ್ರಿ.ಪೂ. ೩೫,೦೦೦–೨೦,೦೦೦) ಸೂಕ್ಷ್ಮ ಶಿಲಾಯುಗ (ಕ್ರಿ.ಪೂ. ೨೦,೦೦೦–೧೦,೦೦೦), ನವಶಿಲಾಯುಗ (ಕ್ರಿ.ಪೂ. ೧೦,೦೦೦–೩೦೦೦) ಎಂದು ವಿಭಾಗಿಸಿ ಅವುಗಳ ಕಾಲವನ್ನು ವಿದ್ವಾಂಸರುಗಳು ಈಗಾಗಲೇ ಗುರ್ತಿಸಿದ್ದಾರೆ.[೧೦]

ನಮಗೆ ಈಗಾಗಲೇ ತಿಳಿದಿರುವಂತೆ ನವಶಿಲಾಯುಗದ ಆಯುಧಗಳು ಉಜ್ಜಿ ಉಜ್ಜಿ ನಯ ಮಾಡಿದ ಮೇಲ್ಮೈಗಳುಳ್ಳ ಕೊಡಲಿಗಳು, ಕೈಬಾಚಿಗಳು, ಉಳಿಗಳು ಮುಂತಾದವುಗಳನ್ನು ಮರದ ಹಿಡಿಕೆಗಳಿಂದ ಗಟ್ಟಿಯಾಗಿ ಮಾಡಿದ ಸಂಲಗ್ನ ಉಪಕರಣಗಳು. ಇವುಗಳನ್ನು ದಖ್ಖನಿನ ಕರಿಕಲ್ಲುಗಳಲ್ಲಿ ಅಥವಾ ವಜ್ರದುಂಡಿ (ಡೋಲರೈಟ್) ಕಲ್ಲಿನಲ್ಲಿ ತಯಾರಿಸುತ್ತಿದ್ದರು.[೧೧]

* ಹನುಮಂತನಗರ, ಬಾಣಾವರ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.



ನವ ಶಿಲಾಯುಗದ ಕೊಡಲಿಗಳು

ಆಯ್ದ ಕಲ್ಲಿನ ಮೇಲ್ಮೈಯಿಂದ ದಪ್ಪ ಚಕ್ಕೆಯನ್ನು ಎಬ್ಬಿಸಿ ನಿಶ್ಚಿತ ಆಕಾರಕ್ಕೆ ತರುತ್ತಿದ್ದರು. ತಗ್ಗುಗಳಲ್ಲಿ ಹಿತಮಿತವಾಗಿ ಸಣ್ಣ ಸಣ್ಣ ಚಕ್ಕೆಗಳನ್ನು ಎಬ್ಬಿಸಿ ಮೇಲ್ಮೈಯನ್ನು ಸಮತಲ ಮಾಡುತ್ತಿದ್ದರು. ನಂತರ ಉಜ್ಜಿ ನಯ ಮಾಡಿ ಹರಿತವಾದ ಬಾಯಿ ಭಾಗವನ್ನು ಅಥವಾ ಇಡೀ ಉಪಕರಣವನ್ನು ತಿಕ್ಕಿ ತಿಕ್ಕಿ ಹೊಳೆಯುವಷ್ಟು ನಯ ಮಾಡುತ್ತಿದ್ದರು. ಇವನ್ನು ಮರದ ಕಾವಿಗೆ ಸರಿಯಾಗಿ ಕಟ್ಟಿ ಕೊಡಲಿ ಬಾಚಿ ಮೊದಲಾದ ಸಲಕರಣೆಗಳನ್ನು ಪೂರ್ಣಗೊಳಿಸುತ್ತಿದ್ದರು. ಇಂತಹ ಶಿಲಾಯುಧಗಳು ಕೃಷ್ಣ ಮೇಲ್ದಂಡೆಯಲ್ಲಿ ಅಪರೂಪವಾಗಿಯೂ, ಭೀಮಾ, ತುಂಗಾಭದ್ರ ನದಿ ತೀರದಲ್ಲಿ ಹೆಚ್ಚಿನ ಬಳಕೆಯಲ್ಲಿದ್ದವು.[೧೨]

ಹೀಗೆ ತಯಾರಿಸಿದಂತಹ ಆಯುಧಗಳು ದೊರಕಿರುವ ಬಾಣಾವರದ ಮಾವಿನಕೆರೆಯು ಇಳಿಜಾರಿನ ಜೌಗು ಪ್ರದೇಶವಾಗಿದೆ. ಸಮೀಪದಲ್ಲಿಯೇ ಗುಡ್ಡ ಪ್ರದೇಶವಿದೆ. ಈ ಪ್ರದೇಶವನ್ನು ಸ್ಥಳೀಯರು "ಕರಿಮಟ್ಟಿ" ಎಂದು ಕರೆಯುತ್ತಾರೆ. ಈ ಗುಡ್ಡ ಪ್ರದೇಶವು ಕೆಂಪು ಮಣ್ಣಿನಿಂದ ಕೂಡಿದೆ. ಉಳುಮೆ ಮಾಡುವ ಸಂದರ್ಭದಲ್ಲಿ ನೇಗಿಲಿಗೆ ಸಿಕ್ಕಿರುವ ಚಿಕ್ಕ ಚಿಕ್ಕ ಕಲ್ಲುರಾಶಿಗಳನ್ನು ಇಲ್ಲಿ ಗಮನಿಸಬಹುದು.

ಕೆರೆಯಲ್ಲಿ ದೊರೆತ ಎರಡು ಆಯುಧಗಳ ಪೈಕಿ ಮೊದಲನೇ ಕೊಡಲಿಯು ಡೋಲರೈಟ್ ಶಿಲೆಯಿಂದ ಮಾಡಲಾಗಿದೆ. ಕೊಡಲಿಯ ಎರಡೂ ಕಡೆ ಚೆನ್ನಾಗಿ ಉಜ್ಜಿ ಸಂಪೂರ್ಣ ನಯಗೊಳಿಸಿದ್ದಾರೆ. ಹಾಗೂ ಬಾಯಿಯನ್ನು ಹರಿತಗೊಳಿಸಿದ್ದಾರೆ. ಇದು ೧೯ ಸೆ.ಮೀ. ಉದ್ದ, ೮ ಸೆ.ಮೀ. ಅಗಲ ಮತ್ತು ೩ ಸೆ.ಮೀ. ದಪ್ಪವಿದೆ.

ಎರಡನೇ ಕೊಡಲಿಯ ಬಾಯಿಯನ್ನು ಹರಿತಗೊಳಿಸಿದ್ದಾರೆ. ಆದರೆ ಎರಡೂ ಕಡೆ ಮೇಲ್ಮೈ ಒರಟಾಗಿರುವುದನ್ನು (ನಯಗೊಳಿಸಿಲ್ಲ) ಗಮನಿಸಬಹುದು. ಇದು ೨೦ ಸೆ.ಮೀ. ಉದ್ದ, ೭ ಸೆ.ಮೀ. ಅಗಲ ಮತ್ತು ೪ ಸೆ.ಮೀ. ದಪ್ಪವಿದೆ.

ಈ ಆಯುಧಗಳನ್ನು ಚಿಕ್ಕ ಗಿಡಗಳನ್ನು ಕತ್ತರಿಸಲು, ಬೇಟೆಯಾಡಲು, ಗೃಹಕೃತ್ಯಗಳಿಗೆ, ಕೃಷಿ ಕೆಲಸಗಳಿಗೆ ಉಪಯೋಗಿಸುತ್ತಿದ್ದರು ಎಂಬುದು ವಿದ್ವಾಂಸರ ಮತ.

ಈ ಕೊಡಲಿಗಳಿಗೂ ಮತ್ತು ತಿ. ನರಸೀಪುರದ ಉತ್ಖನನದಲ್ಲಿ ಪ್ರೊ. ಎಂ. ಶೇಷಾದ್ರಿಯವರಿಗೆ ದೊರೆತ ಕೊಡಲಿಗಳಿಗೆ[೧೪] ಹಾಗೂ "ಹೆಮ್ಮಿಗೆ" ಉತ್ಖನನದಲ್ಲಿ ಎಂ. ಹನುಮಂತರಾವ್ ಮತ್ತು ಎಸ್. ನಾಗರಾಜುರವರಿಗೆ ದೊರೆತ ಕೊಡಲಿಗಳಿಗೆ ಹೋಲಿಕೆಗಳಿವೆ.[೧೪]

[ಕ್ಷೇತ್ರ ಕಾರ್ಯದ ವೇಳೆ ಜೊತೆಗಿದ್ದ ಸಹೋದರ ಅಭಿಲಾಷ್ ಒಡೆಯರ್, ಮಾಹಿತಿ ನೀಡಿದ ಮಲ್ಲೇಶಪ್ಪ, ಯಲ್ಲಪ್ಪ ಹಾಗೂ ಬಿ.ಜೆ. ಭಾಸ್ಕರರವರನ್ನು ಸ್ಮರಿಸುತ್ತೇನೆ. ಈ ಆಯುಧಗಳನ್ನು ಸಂರಕ್ಷಿಸಿದಂತಹ ನಾಗೇಂದ್ರ ಮತ್ತು ಸಿರೀಷರವರಿಗೆ ಧನ್ಯವಾದಗಳು.]

ಆಧಾರ ಗ್ರಂಥಗಳು

೧. ಡಾ. ಹಾ.ಮಾ. ನಾಯಕ, ೧೯೭೯, ಕರ್ನಾಟಕ, ಕನ್ನಡ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪು. ಸಂ. ೯೯೪.

೨. Hayavadana Rai.c., 1930, Mysore Gazetteer, Vol. V, Part II, Govt. Press, Bengaluru, Page No. 946.

೩. ಡಾ. ಹಾ.ಮಾ ನಾಯಕ, ಅದೇ.

೪. ಎಪಿಗ್ರಾಫಿಯ ಕರ್ನಾಟಕ, (ಮೈಸೂರು ವಿವಿ) ಸಂಪುಟ ೧೦, ಅರಸೀಕೆರೆ ೫೫.

೫. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ಸಂ. ೬೫೮–೬೫೯.

೬. ಆರ್. ವೆಂಕಟೇಶಮೂರ್ತಿ, ೧೯೯೬, "ಅರಸೀಕೆರೆ ಪರಿಸರದ ಬೃಹತ್ ಶಿಲಾಯುಗದ ನೆಲೆಗಳು: ಒಂದು ಶೋಧ" ಇತಿಹಾಸ ದರ್ಶನ–೧೧, ಪು. ೩೭–೩೮.

೭. ಪ್ರವೀಣ ಬೆಳ್ತಂಗಡಿ, ಡಾ. ಹನುಮನಾಯಕ, ೨೦೧೪. "ಅರಸೀಕೆರೆ ತಾಲ್ಲೂಕಿನ ಬೃಹತ್ ಶಿಲಾಯುಗದ ನೆಲೆಗಳು" ಇತಿಹಾಸ ದರ್ಶನ, ೨೯, ಪು. ಸಂ. ೬.

೮. ಡಾ. ಹನುಮನಾಯಕ, ೨೦೧೦, "ಚಲುವನಹಳ್ಳಿ ಗವಿಮಠ: ಒಂದು ಪ್ರಾಗೈತಿಹಾಸಿಕ ನೆಲೆ" ಸಂ. ಡಾ. ಆರ್. ಗೋಪಾಲ್, "ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ" ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. ಸಂ. ೧೬–೧೭.

೯. ಡಾ. ಹನುಮನಾಯಕ, ೨೦೧೦, "ಅರಸೀಕೆರೆ ತಾಲ್ಲೂಕು ಚಲುವನಹಳ್ಳಿಯ ಬೃಹತ್ ಶಿಲಾಯುಗದ ನೆಲೆ", ಅದೇ. ಪು. ೧೮–೧೯.

೧೦. ಎಚ್. ತಿಪ್ಪೇಸ್ವಾಮಿ, ೨೦೦೦, "ನುಂಕೆಮಲೆ ಪರಿಸರದಲ್ಲಿ ಪ್ರಾಗೈತಿಹಾಸಿಕ ನೆಲೆಗಳ ಶೋಧನೆ", ಇತಿಹಾಸ ದರ್ಶನ–೧೫, ಪು. ೬–೭.

೧೧. ಪ್ರೊ. ಅ. ಸುಂದರ, ೧೯೯೭, "ಪೂರ್ವಭಾವಿ ಇತಿಹಾಸ ಹಂತದ ಸಂಸ್ಕೃತಿಗಳು", ಪ್ರ.ಸಂ. ಪ್ರೊ. ಬಿ. ಷೇಕ್ ಆಲಿ, ಸಂ. ಪ್ರೊ. ಅ. ಸುಂದರ "ಕರ್ನಾಟಕ ಚರಿತ್ರೆ", ಸಂ. ೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೫೦–೧೫೫.

೧೨. ಪ್ರೊ. ಅ. ಸುಂದರ, ೧೯೯೭, ಅದೇ, ಪುಟ ೧೫೫.

೧೩. Pro. M. Sheshadri, 1971, Report on the Excavation at T. Narasipur, Govt. of Mysore.

೧೪. M. Hanumantha Rao and S. Nagaraju, 1974. Excaution at Hemmige, Directorate of Archacology and Museum in Karanataka, Mysore.

೩

ತೀರ್ಥಹಳ್ಳಿ ತಾಲೂಕಿನ ಬೃಹತ್ ಶಿಲಾಯುಗ ನೆಲೆಗಳ ಹೊಸ ಶೋಧ

ಪ್ರೊ. ಜಿ.ಕೆ. ದೇವರಾಜಸ್ವಾಮಿ* ರಾಘವೇಂದ್ರ ಎಲ್.ಎಸ್.**

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಅರಳಸುರಳಿ ಸಮೀಪದ ತಟ್ಟೆ ಕೇವಿ ಗ್ರಾಮ ಮತ್ತು ಆರಗ ಸಮೀಪದ ಹಿರೇಗದ್ದೆಯಲ್ಲಿ ಮತ್ತು ನೊಣಬೂರು ಹಾಗೂ ಬೊಂಬಳಿಗೆಯಲ್ಲಿನಲ್ಲಿ ಬೃಹತ್ ಶಿಲಾಯುಗದ ನಿಲವುಗಲ್ಲುಗಳು ಹಾಗೂ ಶಿಲಾವೃತ್ತ ಗೋರಿಗಳು ಇತ್ತೀಚೆಗೆ ಪತ್ತೆಯಾಗಿವೆ.

ಕಬ್ಬಿಣದ ಉಪಯೋಗ ಬಂದಲ್ಲಿಂದ ಐತಿಹಾಸಿಕ ಯುಗದ ಪ್ರಾರಂಭದ ಕಾಲವನ್ನು 'ಕಬ್ಬಣದ ಯುಗ' ಎನ್ನುವುದು ರೂಢಿ. ಈ ಕಾಲಘಟ್ಟದಲ್ಲಿ ಬೃಹತ್ ಶಿಲಾ ಗೋರಿಗಳು ವಿಶೇಷವಾಗಿ ಕಂಡುಬರುತ್ತವೆ. ಆದ್ದರಿಂದ ಬೃಹತ್ ಶಿಲಾಯುಗ ಸಂಸ್ಕೃತಿ ಎಂದೇ ಕರೆಯಲ್ಪಟ್ಟಿದೆ. ಮೋರಿಯರ ಮನೆ, ಪಾಂಡವರ ತಳಿ. ಪಾಂಡವರ ಗುಹೆ, ಮುನಿಗುಹೆ. ಮುಂತಾದ ಹೆಸರಿನಿಂದ ಕರೆಯಲಾಗುತ್ತಿದೆ.

ಕರ್ನಾಟಕ್ಕೆ ಸಂಬಂಧಿಸಿ ಪ್ರಾಗೈತಿಹಾಸಿಕ ಕಾಲವನ್ನು ಈ ಕೆಳಕಂಡಂತೆ ವಿಂಗಡಿಸಿದೆ.

೧. ಹಳೆಯ ಶಿಲಾಯುಗ (ಪ್ರಶಕ್ತ ಶಕ ಪೂರ್ವ ೧೦,೦೦೦೦೦ದಿಂದ ಪೂರ್ವ ಶಿಲಾಯುಗ ೧೦,೦೦೦ ವರ್ಷಗಳವರೆಗೆ)

೨. ಸೂಕ್ಷ್ಮಶಿಲಾಯುಗ (ಪ್ರ.ಶ.ಪೂ. ಸುಮಾರು ೧೦,೦೦೦ ದಿಂದ ೩೦೦೦)

೩. ನವಶಿಲಾಯುಗ-ತಾಮ್ರಶಿಲಾಯುಗ (ಪ್ರ.ಶ.ಪೂ.ಸು ೩೦೦೦ ದಿಂದ ೮೦೦)

೪. ಕಬ್ಬಿಣದ ಯುಗ (ಪ್ರ.ಶ.ಪೂ. ೧೫೦೦ ರಿಂದ ೩೦೦) ಎಂದು ವಿದ್ವಾಂಸರುಗಳು ಅಂದಾಜಿಸಿವಿಂಗಡಿಸಿದ್ದಾರೆ.

ಬೃಹತ್ ಶಿಲಾಗೋರಿಗಳು ಕರ್ನಾಟಕದಾಂದ್ಯಂತ ಕಂಡುಬಂದಿವೆ. ಇವುಗಳಲ್ಲಿ ವೈವಿದ್ಯತೆಗಳೂ ಇವೆ. ಸಾಕಷ್ಟು ಉತ್ಖನನ ಹಾಗೂ ಅಧ್ಯಯನಗಳು ನಡೆದಿವೆ. ಪ್ರಮುಖವಾಗಿ ೧) ಹಾದಿಕೋಣೆ ಗೋರಿಗಳು, ೨) ಕೀಂಡಿಕೋಣೆ ಗೋರಿಗಳು, ೩) ಆಯುತಕೋಣೆ ಗೋರಿಗಳು, ೪) ನೆಲಮಾಳಿಗೆ, ೫) ತುಂಡುಕಲ್ಲು ದಿಣ್ಣೆಗಳು ೬) ಕಲ್ಲುವೃತ್ತಗಳು, ೭) ಅಸ್ಥಿಮೃತ್ ಪಾತ್ರೆ ಉಳ್ಳ ಕಲ್ಲುವೃತ್ತ ೮) ನಿಲಸು ಕಲ್ಲುಗಳು, ೯) ಗುಡಾಣ ಅಸ್ಥಿಮೃತ್ ಪಾತ್ರೆ ಕುಣಿಗಳು, ೧೦) ಶವಕುಣಿಗಳೆಂದು ವಿದ್ವಾಂಸರುಗಳು ಅಧ್ಯಯನದಿಂದ ವಿಂಗಡಿಸಲ್ಪಟ್ಟಿದೆ.

ಶಿವಮೊಗ್ಗ ಜಿಲ್ಲಾ ತೀರ್ಥಹಳ್ಳಿ ತಾಲೂಕಿನಲ್ಲಿ ಬೃಹತ್ ಶಿಲಾಯುಗ ಗೋರಿಗಳುನ್ನು ಡಾ. ಅ.ಸುಂದರ, ಪ್ರೊ.ಜಿ.ಕೆ. ದೇವರಾಜಸ್ವಾಮಿ ಅವರುಗಳು ಸಾಕಷ್ಟು ಅಧ್ಯಯನಗೊಂಡು ಪತ್ತೆ ಹಚ್ಚಿದ್ದಾರೆ. ಅರೆಹಳ್ಳಿ, ಬಂಡಿಗಾಣಿ, ಬುಕ್ಲಾಪುರ, ಸೀತೂರು, ಯಡಗುಡ್ಡೆ, ಕಲ್ಮನೆ, ಮುಂತಾದ ಕಡೆಗಳಲ್ಲಿ ಪತ್ತೆಯಾಗಿವೆ. ಸೂರನಕೊಡಿಗೆ, ಮಜ್ಜಿಗೇಸರ, ಬುಕ್ಲಾಪುರ, ಅರಳಸುರಳಿಗಳಲ್ಲಿ ನೂತನಶಿಲಾಯುಗದ ಆಯುಧಗಳು ಮತ್ತು ಮಡಕೆ ಚೂರುಗಳು ದೊರೆತಿವೆ. ಶಿಲಾಯುಗದ ರೇಖಾ ಚಿತ್ರವು ಮೃಗವಧೆ ಸಮೀಪದ ಮಲ್ಲಾಪುರದಲ್ಲಿ ಪತ್ತೆಹಚ್ಚಲಾಗಿದೆ.

ತಟ್ಟೇಕೇವಿ ಬೃಹತ್ ಶಿಲಾಯುಗದ ನೆಲೆ

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ. ದೂರದಲ್ಲಿರುವ ತಟ್ಟೇಕೇವಿಯು ಹೊಸನಗರ ತಾಲ್ಲೂಕಿನ ಗಡಿಭಾಗದಲ್ಲಿದೆ. ತಟ್ಟೇಕೇವಿ ಸರ್ಕಾರಿ ಪ್ರಾರ್ಥಮಿಕ ಶಾಲೆಗೆ ಹೊಂದಿಕೊಂಡಂತೆ ಸುಮಾರು ಎರಡು ಎಕರೆಯಷ್ಟು ಜಾಗ ವಿಸ್ತೀರ್ಣದಲ್ಲಿ ಇಪ್ಪತ್ತಕ್ಕೂ ಹೆಚ್ಚು ನಿಲವುಗಲ್ಲುಗಳಿವೆ. ನಿಲಸುಗಲ್ಲುಗಳು ಪ್ರಾಕ್ಚಾರಿತ್ರಿಕ ಸಮಾಧಿ ಎಡೆಗಳಲ್ಲಿ ಸ್ಥಾಪನೆಗೊಂಡ ನೆನಪಿನ ಶಿಲೆಗಳು ಎಂಬುದಾಗಿ ಡಾ. ಅ. ಸುಂದರ ಅವರು ತಿಳಿಸುತ್ತಾರೆ. ಬುಡದಲ್ಲಿ ೩.೫ ಅಡಿಗೂ ಹೆಚ್ಚು ಅಗಲವಾಗಿದೆ.

* ನಂ. ೫೬ 'ತ್ರಯೀ' ಮೈಸೂರು ಲ್ಯಾಂಪ್ಸ್ ಬಡಾವಣೆ, ಚೆನ್ನನಾಯಕನಪಾಳ್ಯ, ನಾಗಸಂದ್ರ ಅಂಚೆ, ಬೆಂಗಳೂರು-೫೬೦೦೭೩.
** ಶಿಕ್ಷಕರು, ೧೩ನೇ ಅಡ್ಡರಸ್ತೆ, ಸೊಪ್ಪುಗುಡ್ಡೆ, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ-೫೭೭೪೩೨.

ಮೇಲ್ಮುಖವಾಗಿ ಕಿರಿದಾಗುತ್ತಾ ೧೨ ಅಡಿಗೂ ಎತ್ತರವಾದ ನಿಲವುಗಲ್ಲುಗಳಿವೆ. ಏಳುಕಲ್ಲುಗಳು ಈಗಲೂ ನಿಂತಿವೆ. ಶರಾವತಿ ನದಿಗೆ ಹೊಂದಿಕೊಂಡಿರುವ ಎತ್ತರ ಪ್ರದೇಶವಾಗಿದ್ದು, ನೈಸರ್ಗಿಕ ಅರಣ್ಯ ಹಾಗೂ ನೆಡುತೋಪು ಪ್ರದೇಶವನ್ನು ಒಳಗೊಂಡಿದೆ. ಮಲೆನಾಡಿನ ಪ್ರದೇಶವಾದ್ದರಿಂದ ಮರದ ಬೇರು ದರಗೆಲೆಗಳಲ್ಲಿ ಮುಚ್ಚಿರುವುದೇ ಜಾಸ್ತಿ. ಶಿಲಾವೃತ್ತಗಳು ೨೦ಕ್ಕೂ ಹೆಚ್ಚು ಕಂಡುಬಂದಿದೆ. ಶಿಲಾ ವೃತ್ತಗಳು ದುಂಡುಕಲ್ಲಿಗಳಿಂದ ಹಾಗೂ ಕೆಲವು ಚಪ್ಪಡಿಗಳಿಂದ ಕೂಡಿದೆ. ಕಣಶಿಲೆಯನ್ನೇ ಹೆಚ್ಚಾಗಿ ಬಳಸಲಾಗಿದೆ.

ನಿಲುವುಗಳಲ್ಲುಗಳು ತಟ್ಟೇಕೇವಿ



೪' ಎತ್ತರ x ೨' ಅಗಲ



೫' ಎತ್ತರ x ೧.೫' ಅಗಲ



೧೦' ಉದ್ದ x ೩' ಅಗಲ



೯' ಉದ್ದ x ೧.೫' ಅಗಲ





ಹಿರೇಗದ್ದೆಯ ಬೃಹತ್ ಶಿಲಾಯುಗದ ನೆಲೆ

ತೀರ್ಥಹಳ್ಳಿ ತಾಲ್ಲೂಕಿನ ೧೦ ಕಿ.ಮೀ ದೂರದಲ್ಲಿ ಆರಗ ಸಮೀಪದ ಹಿರೇಗದ್ದೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎದುರಿನ ನೆಡುತೋಪಿನಲ್ಲಿ ದುಂಡಾದಕಲ್ಲು, ಮತ್ತು ಚಪ್ಪಡಿಗಳಿಂದ ರಚಿತವಾದ ವೃತ್ತಾಕಾರದ ಎಂಟು ಶಿಲಾವೃತ್ತಗಳು ಕಂಡುಬಂದಿವೆ. ಇವುಗಳು ಸುಮಾರು ೫೦ ಮೀ. ಅಂತರದಲ್ಲಿವೆ. ನೆಡು ತೋಪಿನಿಂದಾಗಿ ಸಾಕಷ್ಟು ಸಮಾಧಿಗಳು ಹಾಳಾಗಿವೆ. ಕಲ್ಲುಗಳು ಚಲ್ಲಾಪಿಲ್ಲಿಯಾಗಿವೆ. ಸಾಕಷ್ಟು ಸಮಾಧಿಗಳು ನಾಶವಾಗಿರುವುದು ಗೋಚರಿಸುತ್ತದೆ. ಈ ವೃತ್ತ ಸಮಾಧಿಗಳ ಸಮೀಪದಲ್ಲಿ ೭ ನಿಲುವುಗಲ್ಲುಗಳು ಕಂಡುಬಂದಿವೆ. ಅದರಲ್ಲೊಂದು ೬'೫ ಅಡಿಗಳಷ್ಟು ಎತ್ತರವಾಗಿದೆ. ಉಳಿದವು ಮೂರು ಅಡಿಗಳಷ್ಟಿವೆ.



೬.೫' ಎತ್ತರ x ೭' ಅಗಲ






೫' ಎತ್ತರ x ೩' ಅಗಲ

ನೊಣಬೂರಿನ ಬೃಹತ್ ಶಿಲಾಯುಗದ ನೆಲೆ

ತೀರ್ಥಹಳ್ಳಿ ತಾಲ್ಲೂಕಿನಿಂದ ೧೮ ಕಿ.ಮೀ. ದೂರದ ನೊಣಬೂರಿನ ಜಿಲ್ಲಾ ಮುಖ್ಯ ರಸ್ತೆಯ ಪಕ್ಕದಲ್ಲಿ ಭೂತರಾಯನ ಕಟ್ಟೆ ಕಟ್ಟಲಾಗಿದೆ. ಭೂತರಾಯನೆಂದು ಪೂಜಿಸುವ ಕಲ್ಲುಗಳು ಬೃಹತ್ ಶಿಲಾಯುಗಕಾಲದ ನಿಲವುಗಳಲ್ಲುಗಳಾಗಿವೆ. ಇದರಲೊಂದು ಕಲ್ಲು ಬುಡದಲ್ಲಿ ೭ ಅಡಿ ಅಗಲವಾಗಿದ್ದು ಮೇಲ್ಮುಖವಾಗಿ ಕಿರಿದಾಗುತ್ತಾ ಒಂದು ಅಡಿ ಹೊಂದಿದೆ. ಹಾಗೂ ೯ ಅಡಿಯಷ್ಟು ಎತ್ತರವಾಗಿದೆ. ಕೆಲವು ನಿಲವುಗಲ್ಲುಗಳು ಕಟ್ಟೆಯಿಂದ ಹೊರಭಾಗದಲ್ಲಿ ಬಿದ್ದಿವೆ. ಪಕ್ಕದಲ್ಲಿ ಬಿದ್ದಿರುವ ಕಲ್ಲು ಸುಮಾರು ೫.೫ ಅಡಿ ಉದ್ದ ಹಾಗೂ ೧.೨೫ ಅಡಿ ಅಗಲವಾಗಿದೆ, ಇದನ್ನೂ ಭೂತರಾಯನೆಂದೇ ಕರೆಯುತ್ತಾರೆ.

ಭೂತರಾಯನ ಕಟ್ಟೆಯಿಂದ ಸ್ವಲ್ಪ ದೂರದಲ್ಲಿ ಶಿರಿಗಾರು ಎಂಬ ಗ್ರಾಮದಲ್ಲಿ ಶಿರಿವಂತೇಶ್ವರ ದೇವಾಲಯವಿದೆ. ಇದಕ್ಕೆ ಹೊಂದಿಕೊಂಡಂತೆ '೭.೫ ಅಡಿ ಎತ್ತರ ಹಾಗೂ ೧.೫ ಅಡಿ ಅಗಲವಾದ ನಿಲವುಗಲ್ಲು ಇದೆ. ಸಮೀಪದಲ್ಲಿ ಶಿಲಾವೃತ್ತಗಳಾವುವು ಕಂಡುಬರುವುದಿಲ್ಲ.





೫.೫' ಉದ್ದ x ೨.೫' ಅಗಲ





೯' ಎತ್ತರ x ೭' ಅಗಲ

ಬೊಂಬಳಿಗೆ ಬೃಹತ್ ಶಿಲಾಯುಗದ ನೆಲೆ

ಬೊಂಬಳಿಗೆಯು ತೀರ್ಥಹಳ್ಳಿ ತಾಲ್ಲೂಕಿನಿಂದ ೨೪ ಕಿ.ಮೀ. ದೂರದ ಮಲ್ಲೇಸರಕ್ಕೆ ಹೋಗುವ ದಾರಿಯಿಂದ ಒಳಭಾಗಕ್ಕೆ ೨ ಕಿಮೀ. ದೂರದಲ್ಲಿದೆ. ಪ್ರಸ್ತುತ ಸ್ಥಳವು ಅಕೇಶಿಯಾ, ನೀಲಗಿರಿ ತೋಪಿನ ನಡುವೆ ಇದೆ. ಈ ಪ್ರದೇಶದಲ್ಲಿ ಸುಮಾರು ೧೦ ನಿಲುವುಗಲ್ಲುಗಳಿವೆ. ಒಂದು ೧೫ ಅಡಿ ಎತ್ತರವಾಗಿದೆ. ಉಳಿದವು ಸರಾಸರಿ ೮ ಅಡಿಗಳಷ್ಟಿವೆ.

ಅಗಲವು ಸಾಮಾನ್ಯ ೩ ಅಡಿ ಹಾಗೂ ೨ ಅಡಿದಪ್ಪ ಹೊಂದಿದೆ. ಇವುಗಳನ್ನು ಸ್ಥಳೀಯರು ಚೌಡಿದೇವರೆಂದು ಹಬ್ಬಗಳಲ್ಲಿ ಪೂಜಿಸುತ್ತಾರೆ. ಪೂಜೆಗೊಳ್ಳುವುದರಿಂದ ಇದರ ರಕ್ಷಣೆಯಾಗಿದೆ.



೧೫' ಎತ್ತರ x ೪' ಅಗಲ



೪' ಎತ್ತರ x ೨.೫' ಅಗಲ



೮' ಎತ್ತರ x ೪' ಅಗಲ

ಈ ಎಲ್ಲಾ ಪ್ರದೇಶಗಳು ಸುಮಾರು ೧೦.ಕಿಮೀ. ವ್ಯಾಪ್ತಿಗೆ ಒಳಪಟ್ಟಿದ್ದು, ಸಾಕಷ್ಟು ಶಿಲಾವೃತ್ತಗಳೂ ನಿಲವುಗಲ್ಲುಗಳೂ ಕಂಡು ಬಂದಿವೆ. ಹೆಚ್ಚು ಮಳೆ ಬೀಳುವ ಪ್ರದೇಶಗಳಾದ್ದರಿಂದ ಶಿಲಾಯುಗ ನೆಲೆಗಳು ಅಸ್ತವ್ಯಸ್ತಗೊಂಡಿದೆ. ಶಿಲಾ ವೃತ್ತಗಳಿಗೆ ಕಣಶಿಲೆಯ ದುಂಡು ಕಲ್ಲುಗಳನ್ನು ಹೆಚ್ಚಾಗಿ ಬಳಸಿದ್ದಾರೆ. ಚಪ್ಪಡಿಯಾಕಾರದ ಕಲ್ಲುಗಳೂ ಕಂಡುಬರುತ್ತವೆ. ಒಂದೆರಡು ಆಯುತಾಕಾರದ ಕೋಣೆ ಗೋರಿಗಳು ಇದೆ. ಬೊಂಬಳಿಗೆಯಲ್ಲಿ ನೆಡುತೋಪಿಗೋಸ್ಕರ ಶಿಲಾಗೋರಿಗಳನ್ನು ಕೀಳಲಾಗಿದೆ. ಶಿಲಾಗೋರಿಯ ಗುಂಡು ಕಲ್ಲುಗಳನ್ನು ರಾಶಿಯಾಗಿ ಅಲ್ಲಲ್ಲಿ ಹಾಕಲಾಗಿದೆ, ಸ್ಥಳೀಯರ ಮಾಹಿತಿ ಮೇರೆಗೆ ಸುತ್ತಮುತ್ತಲಿನಲ್ಲಿ ಇನ್ನು ಹೆಚ್ಚಿನ ಶಿಲಾಗೋರಿಗಳು ನಿಲವುಗಲ್ಲುಗಳಿವೆ. ಈ ಸ್ಥಳಗಳಲ್ಲಿ ಮಡಿಕೆ ಚೂರುಗಳು ನೂತನ ಶಿಲಾಯುಗದ ಆಯುಧಗಳಾಗಲೀ ಈ ವರೆಗೆ ಸಿಕ್ಕಿಲ್ಲ. ಪೂರ್ಣವಾಗಿರುವ ಶಿಲಾವೃತ್ತಗಳಿದ್ದರೂ, ಮಣ್ಣು ಮತ್ತು ದರೆಗೆಲೆಗಳಿಂದ ಮುಚ್ಚಿರುವ ಸಾಧ್ಯತೆಗಳೇ ಜಾಸ್ತಿ. ಕೆಲವನ್ನು ಮಾತ್ರ ದಾಖಲಿಸಿದ್ದು ಇನ್ನೂ ಹೆಚ್ಚಿನ ಅಧ್ಯಯನವು ಮುಂದುವರಿಯಲಿದೆ.

ಈ ಮೇಲ್ಕಂಡ ಪ್ರದೇಶಗಳು. ಆಕಾಲದ ಜನ ಜೀವನದ ಅಗತ್ಯತೆಗಳನ್ನು ನಿವಾರಿಸುವುದಕ್ಕೆ ಈ ಪ್ರದೇಶಗಳನ್ನು ಬಳಸಿಕೊಂಡಿರುವ ಸಾಧ್ಯತೆ ಇದೆ. ಈ ನೆಲೆಗಳ ಪರಿಸರವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ನೆಲವು ಫಲವತ್ತಾಗಿಯೂ ಹಾಗೂ ಬೆಟ್ಟ ಗುಡ್ಡಗಳಿಂದ ಸುತ್ತುವರಿದಿರುವುದರಿಂದ, ಕೃಷಿಗೆ ಮತ್ತು ಬೇಟೆಗೆ ಅನುಕೂಲವಾಗಿದ್ದಂತೆ ಕಾಣಬರುತ್ತದೆ. ಈ ಪ್ರದೇಶದಲ್ಲಿ ಪ್ರಸ್ತುತ ಶರಾವತಿನದಿ ಹಾಗೂ ಇತರೆ ಹಳ್ಳಗಳಿದ್ದು ಈಗಲೂ ಕೃಷಿ ಪ್ರಧಾನ ಕಸುಬಾಗಿದೆ. ಈ ಎಲ್ಲಾ ಅಂಶಗಳಿಂದ ಈ ಪ್ರದೇಶಗಳು ಪ್ರಾಗೈತಿಹಾಸಿಕ ಕಾಲದ ಜನ ವಾಸ್ತವ್ಯದ ನೆಲೆಗಳಾಗಿದ್ದವೆಂಬುದು ಸ್ಪಷ್ಟವಾಗುತ್ತದೆ.

[ಕ್ಷೇತ್ರ ಕಾರ್ಯದ ಸಮಯದಲ್ಲಿ ನಮ್ಮೊಂದಿಗಿದ್ದು ಸಹಕಾರ ನೀಡಿದ ತಟ್ಟೇಕೆವಿ ಶಾಲಾ ಶಿಕ್ಷಕರಾದ ಶ್ರೀಭಾಸ್ಕರ್ ಅವರಿಗೆ ಮತ್ತು ತೀರ್ಥಹಳ್ಳಿಯ ಪತ್ರಿಕಾಕರ್ತರಾದ ಶ್ರೀ ಸತ್ಯನಾರಾಯಣ ಗಣವಳ್ಳಿ ಅವರಿಗೆ ವಿಶೇಷ ಕೃತಜ್ಞತೆಗಳು]

೪

ಮಲ್ಲಿಗೇನಹಳ್ಳಿಯ ಬೃಹತ್ ಶಿಲಾಯುಗ ಸಂಸ್ಕೃತಿ

ಪ್ರವೀಣ್ ದೊಡ್ಡಗೌಡರ್*

ತರೀಕೆರೆ ತಾಲ್ಲೂಕು ಮಲ್ಲಿಗೇನಹಳ್ಳಿ ಪರಿಸರದಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡ ಸಂದರ್ಭದಲ್ಲಿ ಬೃಹತ್ ಶಿಲಾಯುಗ ಕಾಲಕ್ಕೆ ಸಂಬಂಧಿಸಿದ ಪ್ರಾಚ್ಯಾವಶೇಷಗಳು ಪತ್ತೆಯಾಗಿವೆ. ಈ ಪ್ರಾಚ್ಯಾವಶೇಷಗಳು ಸ್ಥಳೀಯ ಪ್ರಾಗೈತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ. ಮಲ್ಲಿಗೇನಹಳ್ಳಿ ಗ್ರಾಮದ ಇತಿಹಾಸವನ್ನು ಬೃಹತ್ ಶಿಲಾಯುಗ ಅವಶೇಷಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಭೌಗೋಳಿಕ ಪರಿಚಯ

ಚಿಕ್ಕಮಗಳೂರು ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ತರೀಕೆರೆ ತಾಲ್ಲೂಕು ಒಂದು. ತರೀಕೆರೆಯ ೧೩.೪೦° ಅಕ್ಷಾಂಶ ಮತ್ತು ೭೫.೪೦° ರೇಖಾಂಶಗಳ ನಡುವೆ ಚಿಕ್ಕಮಗಳೂರಿನ ಈಶಾನ್ಯ ದಿಕ್ಕಿನಲ್ಲಿ ಮಲ್ಲಿಗೇನಹಳ್ಳಿಯು ಕಂಡು ಬರುತ್ತದೆ.[೧] ತರೀಕೆರೆಯಿಂದ ಲಿಂಗದಳ್ಳಿಗೆ ಹೋಗುವ ಮಾರ್ಗದಲ್ಲಿ ಕೆಂಚಾಪುರ ಕ್ರಾಸ್‌ನಿಂದ ಬಲಭಾಗಕ್ಕೆ ಸುಮಾರು ೬ ಕಿ.ಮೀ. ದೂರದಲ್ಲಿ ಮಲ್ಲಿಗೇನಹಳ್ಳಿ ಗ್ರಾಮವು ಕಂಡು ಬರುತ್ತದೆ. ಗ್ರಾಮದ ಪರಿಸರಕ್ಕೆ ಐನಹಳ್ಳಿ, ತ್ಯಾಗದಭಾಗಿ ಗ್ರಾಮಗಳು ಹೊಂದಿಕೊಂಡಿವೆ. ಈ ಗ್ರಾಮದ ಬಹುಭಾಗ ಕೆಂಪು ಮರಳು ಮಣ್ಣಿನಿಂದ ಕೂಡಿದ್ದು, ಕೆಲಭಾಗ ಕಪ್ಪು ಮಣ್ಣು ಹೊಂದಿದೆ. ಇಲ್ಲಿಯ ಪರಿಸರವು ಬೆಟ್ಟ-ಗುಡ್ಡಗಳು, ಹಳ್ಳ-ಕೊಳ್ಳಗಳಿಂದ ಕೂಡಿದೆ. ಈ ಪ್ರದೇಶದಲ್ಲಿ ಪ್ರಾಗೈತಿಹಾಸ ಕಾಲದಿಂದ ಇತ್ತೀಚಿನವರೆಗೆ ಜನವಸತಿ ಪ್ರದೇಶವಾಗಿತ್ತು ಎಂಬುದಕ್ಕೆ ಪ್ರಾಕ್ತಾವಶೇಷಗಳಾದ ಶಾಸನಗಳು, ದೇವಾಲಯದ ಅವಶೇಷಗಳು ಆಧಾರವನ್ನು ನೀಡುತ್ತವೆ. ಮಲ್ಲಿಗೇನಹಳ್ಳಿ ಗ್ರಾಮದ ಚಾರಿತ್ರಿಕ ಇತಿಹಾಸವನ್ನು ಬೃಹತ್ ಶಿಲಾಸಂಸ್ಕೃತಿ ಯುಗದಿಂದ ಐತಿಹಾಸಿಕ ಕಾಲಘಟ್ಟದವರೆಗೆ ವಿಶ್ಲೇಷಿಸ ಬಹುದು. ಪ್ರಸ್ತುತದಲ್ಲಿ ಮಲ್ಲಿಗೇನಹಳ್ಳಿಯ ಬೃಹತ್ ಶಿಲಾ ಸಮಾಧಿಗಳ ಕುರಿತು ವಿವರಣೆಯನ್ನು ನೀಡಲಾಗಿದೆ.

ತರೀಕೆರೆ ತಾಲ್ಲೂಕಿನ ಮಲ್ಲಿಗೇನಹಳ್ಳಿ ಪರಿಸರದಲ್ಲಿ ಕಬ್ಬಿಣ ಯುಗಕ್ಕೆ ಸೇರಿದ ನಾಲ್ಕು ವಿವಿಧ ಮಾದರಿಯ ಬೃಹತ್ ಶಿಲಾ ಸಮಾಧಿಗಳು ಕಂಡುಬರುತ್ತದೆ. ಅವುಗಳಲ್ಲಿ ಪ್ರಮುಖವಾಗಿ ನಿಲುಸುಕಲ್ಲುಗಳು, ಕಲ್ಮನೆ ಸಮಾಧಿಗಳು, ನೆಲಕೋಣೆ ಸಮಾಧಿಗಳು ಮತ್ತು ಕಲ್ಲುವೃತ್ತ ಸಮಾಧಿಗಳು.

ನಿಲಸುಕಲ್ಲು ಸಮಾಧಿಗಳು

ಸ್ಥಳೀಯರು ಹೊನ್ನಮಟ್ಟದ ಹಟ್ಟಿ ಕಾವಲು ಎಂದು ಕರೆಯುವ ಮಲ್ಲಿಗೇನಹಳ್ಳಿ ಗ್ರಾಮದಿಂದ ಸುಮಾರು ಎರಡು ಕಿ.ಮೀ ದೂರದಲ್ಲಿ ಸರ್ವೆ ನಂಬರ್ ೫೯ರ ತುಂಬು ಹೊಳೆ ಪರಿಸರದಲ್ಲಿ ೯ ನಿಲಸುಕಲ್ಲುಗಳು ಕಂಡುಬಂದಿವೆ. ಅವುಗಳಲ್ಲಿ ೨ ನಿಲಸುಕಲ್ಲುಗಳು ನೇರವಾಗಿವೆ. ೩ ನಿಲಸುಕಲ್ಲುಗಳು ಬಾಗಿವೆ. ೪ ನಿಲಸುಕಲ್ಲುಗಳು ನೆಲಕ್ಕೆ ಉರುಳಿವೆ. ಈ ಎಲ್ಲಾ ನಿಲಸುಕಲ್ಲುಗಳನ್ನು ೨೫ ರಿಂದ ೫೦ ಸೆಂ.ಮೀ. ಕುಳಿ ತೋಡಿ ಕಲ್ಲಿನ ಚಿಕ್ಕ ಗುಂಡು ಕಲ್ಲು ಹಾಕಿ ನಿಲಸುಕಲ್ಲುಗಳು ಜರುಗದಂತೆ ಅಥವಾ ಕೆಳಗೆ ಬೀಳದಂತೆ ನಿಲ್ಲಿಸಲಾಗಿದೆ. ಈ ಪ್ರದೇಶವು ಆರ್ಥಿಕವಾಗಿ ಸಂಪದ್ಭರಿತವಾದ್ದರಿಂದ ಈ ಭಾಗದಲ್ಲಿ ಬೃಹತ್ ಶಿಲಾಯುಗ ಕಾಲದ ಮಾನವನು ನೆಲೆಸಿದ್ದಿರಬೇಕು. ಏಕೆಂದರೆ ಈ ನಿಲಸುಕಲ್ಲುಗಳು ದೊರೆತಿರುವ ಪರಿಸರದಲ್ಲಿ ತುಂಬು ಹೊಳೆ ಎಂಬ ಹೊಳೆ ಹರಿದು ಈಗ ಸಂಪೂರ್ಣವಾಗಿ ಬತ್ತಿಹೋಗಿದೆ. ಈ ಹೊಳೆಯಿಂದ ಸುಮಾರು ೧ ಕಿ.ಮೀ. ದೂರದಲ್ಲಿ ಈ ನಿಲಸುಕಲ್ಲುಗಳು ಪತ್ತೆಯಾಗಿವೆ. ಹಾಗಾಗಿ ಇದೊಂದು ವಸತಿ ನೆಲೆಯಾಗಿದ್ದಿರಬಹುದು ಎಂಬ ಅನುಮಾನವು ಮೂಡುತ್ತದೆ. ಏಕೆಂದರೆ ಈ ಪ್ರದೇಶಕ್ಕೆ ಸ್ಥಳೀಯ ಜನರು ಹೊನ್ನಮಟ್ಟದ ಹಟ್ಟಿಕಾವಲು ಎಂದು ಈಗಲೂ ಕರೆಯುತ್ತಾರೆ. ಇಲ್ಲಿ ಹಟ್ಟಿ ಎಂಬುದು ಮನೆ ಎಂಬುದನ್ನು ಸೂಚಿಸುತ್ತದೆ. ಹಾಗಾಗಿ ಪ್ರಾಗೈತಿಹಾಸ ಕಾಲದ

* ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಮತ್ತು ಪ್ರಾಕ್ತನ ಶಾಸ್ತ್ರ ವಿಭಾಗ, ಕುವೆಂಪು ವಿ.ವಿ. ಜ್ಞಾನ ಸಹ್ಯಾದ್ರಿ, ಶಂಕರಘಟ್ಟ.

ಮಾನವನು ಈ ಭಾಗದಲ್ಲಿ ನೆಲೆಸಿರಬೇಕು. ಅಲ್ಲದೆ ಹೊನ್ನು ಎಂಬುದನ್ನು ಆ ಪ್ರದೇಶವು ಆರ್ಥಿಕವಾಗಿ ಸಂಪತ್ತಿನಿಂದ ಕೂಡಿತ್ತು ಎಂಬುದನ್ನು ತಿಳಿಸುತ್ತದೆ.

ಅಧ್ಯಯನ ದೃಷ್ಟಿಯಿಂದ ಎಂ.೨ರಿಂದ ಎಂ.೧೦ ವರೆಗೆ ಸಂಕೇತಗಳನ್ನು ನೀಡಿ ಅವುಗಳ ವಿಶ್ಲೇಷಣೆಯನ್ನು ಮಾಡಲಾಗಿದೆ.

ಎಂ.೨ ನಿಲಿಸುಗಲ್ಲು

ಮಲ್ಲಿಗೇನಹಳ್ಳಿ ನೀಲಗಿರಿ ಪ್ರದೇಶದ ೨೫೫° ಪಶ್ಚಿಮದಲ್ಲಿ ಎಂ.೨ ನಿಲಿಸುಗಲ್ಲು ಕಂಡುಬರುತ್ತದೆ. ಈ ನಿಲಿಸುಗಲ್ಲು ನೆಲಮಟ್ಟದಿಂದ ಸ್ವಲ್ಪ ಓರೆಯಾಗಿದೆ. ಇದರ ಎತ್ತರ ೧೩.೫ ಅಡಿ ಹಾಗೂ ೨.೬ ಅಡಿ ಅಗಲವನ್ನು ಹೊಂದಿದೆ.

ಎಂ.೩ ನಿಲಿಸುಗಲ್ಲು

ಎಂ.೨ ನಿಲಿಸುಗಲ್ಲಿನಿಂದ ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿ ಈಶಾನ್ಯ ದಿಕ್ಕಿನಲ್ಲಿ ಈ ಎಂ.೩ ನಿಲಿಸುಗಲ್ಲು ಕಂಡುಬಂದಿದ್ದು, ಸಂಪೂರ್ಣವಾಗಿ ಉರುಳಿ ಬಿದ್ದಿದೆ. ಇದರ ಉದ್ದ ೧೭ ಅಡಿ– ಅಗಲ ೩.೮ ಅಡಿ.

ಎಂ.೪ ನಿಲಿಸುಗಲ್ಲು

ಎಂ.೩ ನಿಲಿಸುಗಲ್ಲಿನ ಪಕ್ಕದಲ್ಲಿ ಎಂ.೪ ನಿಲಿಸುಗಲ್ಲು ಕಂಡುಬಂದಿದ್ದು, ಸಂಪೂರ್ಣವಾಗಿ ಉರುಳಿ ಬಿದ್ದಿದು ಸ್ವಲ್ಪ ಭಾಗ ಭೂಮಿಯಲ್ಲಿ ಹೂತಿದೆ. ಇದರ ಉದ್ದ ೮.೭ ಅಡಿ– ಅಗಲ ೨ ಅಡಿ.

ಎಂ.೫ ನಿಲಿಸುಗಲ್ಲು

ಎಂ.೪ ನಿಲಿಸುಗಲ್ಲಿನಿಂದ ಉತ್ತರಕ್ಕೆ ಸ್ವಲ್ಪ ದೂರ ಚಲಿಸಿದರೆ ಎಂ.೫ ನಿಲಿಸುಗಲ್ಲು ಕಂಡುಬಂದಿದ್ದು, ಈ ನಿಲಿಸುಗಲ್ಲು ಭೂಮಿಯಿಂದ ೪೦° ಓರೆಯಾಗಿದೆ. ಇಲ್ಲಿ ದೊರೆತಿರುವ ನಿಲಿಸುಗಲ್ಲಿನಲ್ಲಿಯೇ ಎರಡನೇ ಎತ್ತರವಾದ ನಿಲಿಸುಗಲ್ಲು ಇದಾಗಿದೆ, ಇದರ ಎತ್ತರ ೧೯.೬ ಅಡಿ ಹಾಗೂ ೫.೪ ಅಡಿ ಅಗಲವನ್ನು ಹೊಂದಿದೆ.

ಎಂ.೬ ನಿಲಿಸುಗಲ್ಲು

ಎಂ.೫ ನಿಲಿಸುಗಲ್ಲಿನಿಂದ ಉತ್ತರಕ್ಕೆ ಸ್ವಲ್ಪ ದೂರ ಸಾಗಿದರೆ ಎಂ.೬ ನಿಲಿಸುಗಲ್ಲು ಕಂಡುಬಂದಿದೆ, ಇದು ಈ ಪರಿಸರದಲ್ಲೇ ದೊರೆತಿರುವ ಅತ್ಯಂತ ಎತ್ತರವಾದ ನಿಲಿಸುಗಲ್ಲು ಇದಾಗಿದೆ, ಇದರ ಎತ್ತರ ೨೦ ಅಡಿ ಹಾಗೂ ೨.೪ ಅಡಿ ಅಗಲವನ್ನು ಹೊಂದಿದೆ. ಸಂಪೂರ್ಣವಾಗಿ ನೆಲಕ್ಕೆ ಉರುಳಿ ಬಿದ್ದಿದೆ.

ಎಂ.೭ ನಿಲಿಸುಗಲ್ಲು

ಎಂ.೬ ನಿಲಿಸುಗಲ್ಲಿನಿಂದ ಉತ್ತರಕ್ಕೆ ಸಾಗಿ ಬಲಕ್ಕೆ ತಿರುಗಿದರೆ ಎಂ.೭ ನಿಲಿಸುಗಲ್ಲು ಕಂಡುಬಂದಿದೆ. ಇದು ನೇರವಾಗಿ ನಿಂತಿದ್ದು, ೧೬ ಅಡಿ ಎತ್ತರ ಮತ್ತು ೨.೮ ಅಡಿ ಅಗಲವಾಗಿದೆ.

ಎಂ.೮ ನಿಲಿಸುಗಲ್ಲು

ಎಂ.೭ ನಿಲಿಸುಗಲ್ಲಿನಿಂದ ಪೂರ್ವಕ್ಕೆ ಸಾಗಿದರೆ ಎಂ.೮ ನಿಲಿಸುಗಲ್ಲು ಕಂಡುಬಂದಿದೆ. ನಿಲಿಸುಗಲ್ಲು ನೆಲಕ್ಕೆ ಉರುಳಿದ್ದು ಇದರ ಉದ್ದ ೧೬.೨ ಅಡಿ ಮತ್ತು ೩ ಅಡಿ ಅಗಲವನ್ನು ಹೊಂದಿದೆ.

ಎಂ.೯ ನಿಲಿಸುಗಲ್ಲು

ಎಂ.೨ ನಿಲಿಸುಗಲ್ಲಿನಿಂದ ಪೂರ್ವಕ್ಕೆ ಸ್ವಲ್ಪ ದೂರ ಸಾಗಿ, ಉತ್ತರಕ್ಕೆ ತಿರುಗಿದರೆ ಅಲ್ಲಿ ಎಂ.೯ ನಿಲಿಸುಗಲ್ಲು ಕಂಡುಬರುತ್ತದೆ. ಇದು ೨೬° ಪೂರ್ವಕ್ಕೆ ಕಂಡಿದ್ದು ನೇರವಾಗಿ ನಿಂತಿದೆ. ಇದು ೪ ಅಡಿ ಎತ್ತರ ಮತ್ತು ೪.೯ ಅಡಿ ಅಗಲವನ್ನು ಹೊಂದಿದೆ.

ಎಂ.೧೦ ನಿಲಿಸುಗಲ್ಲು

ಮೇಲಿನ ನಿಲಿಸುಗಲ್ಲು ದೊರೆತ ಸ್ಥಳದಿಂದ ಪಶ್ಚಿಮಕ್ಕೆ ಎಂ.೧೦ ನಿಲಿಸುಗಲ್ಲು ಕಂಡುಬರುತ್ತದೆ. ಈ ನಿಲಿಸುಗಲ್ಲು ಭೂಮಿಯಿಂದ ೪೦° ಓರೆಯಾಗಿದ್ದು, ೧೩ ಅಡಿ ಎತ್ತರ ಮತ್ತು ೪.೮ ಅಡಿ ಅಗಲವಾಗಿದೆ.

ಕಲ್ಮನೆ ಸಮಾಧಿಗಳು

ಮಲ್ಲಿಗೇನಹಳ್ಳಿ ಪರಿಸರದಲ್ಲಿಯೇ ಮೂರು ಕಲ್ಮನೆ ಸಮಾಧಿಗಳು ಪತ್ತೆಯಾಗಿದ್ದು, ಅಧ್ಯಯನದ ದೃಷ್ಟಿಯಿಂದ ಅವುಗಳಿಗೆ ಎಂ.ಕೆ–೧, ಎಂ.ಕೆ–೨ ಮತ್ತು ಎಂ.ಕೆ–೩ ಎಂಬ ಸಂಖ್ಯೆಗಳನ್ನು ನೀಡಲಾಗಿದೆ. ಸ್ಥಳೀಯರು ಗಿರಿಯಜ್ಜಿ ಕಟ್ಟೆ ಎಂದು ಕರೆಯುವ ಮಲ್ಲಿಗೇನಹಳ್ಳಿ ಗ್ರಾಮದಿಂದ ಐನಹಳ್ಳಿಗೆ ಹೋಗುವ ಮಾರ್ಗದಲ್ಲಿ ಎಂ.ಕೆ–೧ ಮತ್ತು ಎಂ.ಕೆ–೨ ಕಲ್ಮನೆ ಸಮಾಧಿಗಳು ಪತ್ತೆಯಾಗಿದ್ದು, ಅದರಲ್ಲಿ ಎಂ.ಕೆ–೧ ಕಲ್ಮನೆ ಸಮಾಧಿಯು ಸಂಪೂರ್ಣವಾಗಿ ನಾಶವಾಗಿದೆ. ಎಂ.ಕೆ–೨ ಕಲ್ಮನೆ ಸಮಾಧಿಯು ಎಂ.ಕೆ–೧ ಕಲ್ಮನೆ ಸಮಾಧಿಯಿಂದ ೨೦೦ ಮೀ. ಅಂತರದಲ್ಲಿ ಕಂಡುಬರುತ್ತದೆ. ಇದು ನೆಲಮಟ್ಟದಿಂದ ೨ ಅಡಿ ಕಲ್ಲು ಚಪ್ಪಡಿಗಳನಿಟ್ಟು ಅದರ ಮೇಲೆ ಕಲ್ಲು ಚಪ್ಪಡಿಯ ಹಾಸನ್ನು ಹೊದಿಸಲಾಗಿದೆ. ನಿಧಿ ಶೋಧಕರು ಕುತೂಹಲದಿಂದ ನೆಲ ಅಗೆದಿರುವ ಪ್ರಯತ್ನದಿಂದಾಗಿ ಚಪ್ಪಡಿ ಕೆಳಗೆ ಉರುಳಿದೆ. ಕಲ್ಮನೆ ನೆಲಕ್ಕೆ ಕುಸಿಯದಂತೆ ನೆಲ ಮಟ್ಟದಲ್ಲಿ ಸುತ್ತಲು ಕಲ್ಲುಗಳನ್ನು ಜೋಡಿಸಲಾಗಿದ್ದು, ಚೌಕಾಕಾರವಾಗಿ ಕಂಡುಬರುತ್ತದೆ. ಕಲ್ಮನೆ ಪೂರ್ವ ಮತ್ತು ಪಶ್ಚಿಮದಲ್ಲಿ ೬ ಅಡಿ ಅಗಲವಾಗಿದ್ದು, ೪.೩ ಅಡಿ ವಿಸ್ತೀರ್ಣ ಹೊಂದಿದೆ. ಈ ಭಾಗದಲ್ಲಿ ಕಬ್ಬಿಣದ ಕಿಟ್ಟಗಳು ಕಂಡುಬರುತ್ತದೆ.

ಎಂ.ಕೆ–೩ ಕಲ್ಮನೆ ಸಮಾಧಿಯು ಮಲ್ಲಿಗೇನಹಳ್ಳಿಯಿಂದ ಬಸವನಹಳ್ಳಿ ಗಡಿಗೆ ಹೋಗುವ ಮಾರ್ಗದಲ್ಲಿ ಕಚ್ಚೇಗೊಲ್ಲರ ತಾಂಡದ ಹಿಂಭಾಗದ ನೀಲಗಿರಿ ಅರಣ್ಯದಲ್ಲಿ ಪತ್ತೆಯಾಗಿದೆ. ಇದು ಚೌಕಾಕಾರವಾಗಿದ್ದು ನೆಲದಿಂದ ೨.೫ ಅಡಿ ಎತ್ತರವಾಗಿದೆ. ಮೇಲ್ಭಾಗದಲ್ಲಿ ಚಪ್ಪಟೆಯಾಕಾರದ ಕಲ್ಲನ್ನು ಹೊದಿಸಲಾಗಿದ್ದು, ಇದು ೫ ಅಡಿ ಉದ್ದ ಮತ್ತು ೨.೫ ಅಡಿ ಅಗಲವನ್ನು ಹೊಂದಿದ್ದು, ಉಳಿದಂತೆ ಎರಡು ಚಪ್ಪಟೆ ಕಲ್ಲುಗಳು ಓರೆಯಾಗಿ ಬಿದ್ದಿವೆ.

ನೆಲಕೋಣೆ ಸಮಾಧಿ




ಮಲ್ಲಿಗೇನಹಳ್ಳಿಯ ನಿಲಿಸುಗಲ್ಲು ದೊರಕಿರುವ ಪ್ರದೇಶದಲ್ಲಿಯೇ ನೆಲಕೋಣೆ ಸಮಾಧಿಗಳು ಕಂಡುಬರುತ್ತದೆ. ಈ ಸಮಾಧಿಯು ಚೌಕಾಕಾರವಾಗಿದ್ದು, ಸಂಪೂರ್ಣವಾಗಿ ನೆಲದೊಳಗೆ ಹುದುಗಿದೆ. ಭೂ ಮೇಲ್ಮೈನಿಂದ ೧ ಅಡಿ ಪೂರ್ವ–ಪಶ್ಚಿಮ ಭಾಗದ ಚಪ್ಪಟೆ ಕಲ್ಲುಗಳು ಕಂಡುಬರುತ್ತದೆ.

ಕಲ್ಲುವೃತ್ತ ಸಮಾಧಿ

ಹೊನ್ನ ಮಟ್ಟದ ಹಟ್ಟಿ ಕಾವಲು ಪ್ರದೇಶದಲ್ಲಿಯೇ ನಾಲ್ಕು ಕಲ್ಲುವೃತ್ತ ಸಮಾಧಿಗಳು ಕಂಡುಬರುತ್ತವೆ. ಈ ಪ್ರದೇಶದಲ್ಲಿಯೇ ಹತ್ತಕ್ಕೂ ಹೆಚ್ಚು ಕಲ್ಲುಗುಪ್ಪೆ ಮಾದರಿಯ ಸಮಾಧಿಗಳು ಕಂಡುಬಂದಿದ್ದು, ಇವುಗಳ ಖಚಿತತೆಯ ಕುರಿತು ಇನ್ನು ಹೆಚ್ಚಿನ ಅಧ್ಯಯನ ಕೈಗೊಳ್ಳಬೇಕಾಗಿದೆ. ಮೇಲ್ನೋಟಕ್ಕೆ ಇವು ಕಲ್ಲುಗುಪ್ಪೆ ಮಾದರಿಯ ಸಮಾಧಿಗಳಂತೆಯೇ ಕಂಡುಬರುತ್ತದೆ.

ಒಟ್ಟಾರೆಯಾಗಿ ಈ ಪ್ರದೇಶದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಜನರಿಗೆ ಸೇರಿದ ಅವಶೇಷಗಳು ಲಭ್ಯವಾಗಿದ್ದು ಈ ಪ್ರದೇಶದಲ್ಲಿಯ ಜನವಸತಿ, ಪಶುಸಂಗೋಪನೆ, ಆರ್ಥಿಕ ಬೆಳವಣಿಗೆ ಮುಂತಾದವುಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ. ಈ ಸಮುದಾಯಕ್ಕೆ ಸೇರಿದ ಜನರು ಪಶುಸಂಗೋಪನೆ, ಬೇಟೆಯಾಡುವುದು ಮತ್ತು ಸುಧಾರಿತ ಬೇಸಾಯವನ್ನು ಅವಲಂಬಿಸಿದ್ದರು. ಈ ಸಂಸ್ಕೃತಿಗೆ ಸಂಬಂಧಿಸಿದಂತೆ ನೆಲೆಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ಕಂಡುಬಂದಿದ್ದು, ಆ ಪ್ರದೇಶಗಳಲ್ಲಿ ಆ ಕಾಲದ ಜನರು ತಯಾರಿಸಿದ ಆಯುಧಗಳಾದ ಈಟಿ, ಭರ್ಚಿ, ಬಾಣ, ಕತ್ತಿ, ಕಬ್ಬಿಣದ ಉಕ್ಕಿನ ನೇಗಿನಕುಳ, ಕುಡುಗೋಲು ಮುಂತಾದ ಅವಶೇಷಗಳು ದೊರಕಿದ್ದು, ಅವುಗಳ ಆಧಾರದ ಮೇಲೆ ಈ ಸಂಸ್ಕೃತಿಯ ಜನರು ಸುಧಾರಿತ ವ್ಯವಸಾಯ ಹೊಂದಿದ್ದರು. ಎಂಬುದು ತಿಳಿಯಬಹುದು. ಮಲ್ಲಿಗೇನಹಳ್ಳಿಯ ಬೃಹತ್ ಸಮಾಧಿ ಪತ್ತೆಯಾಗಿರುವುದರಿಂದ ಈ ಪ್ರದೇಶದಲ್ಲಿ ಕ್ರಿ.ಪೂ. ೧೨೦೦ ರಿಂದ ೧೦೦೦ ಕಾಲಾವಧಿಯಲ್ಲಿ ಕೃಷಿ ಚಟುವಟಿಕೆ ಪ್ರಾರಂಭವಾಗಿರುವುದು ಊಹಿಸಬಹುದು.







ಆಧಾರಸೂಚಿ

೧. ಸೂರ್ಯನಾಥ.ಯು.ಕಾಮತ್., ೧೯೮೯, ಕರ್ನಾಟಕ ಸ್ಟೇಟ್ ಗೆಝೆಟಿಯರ್ ಭಾಗ–೨, ಬೆಂಗಳೂರು: ಗೌವರ್ನಮೆಂಟ್ ಪ್ರೆಸ್, ಪು.ಸಂ–೨೩೨.

೨. ಶಿವತಾರಕ.ಕೆ.ಜಿ., ೨೦೦೧, ಕರ್ನಾಟಕ ಪುರಾತತ್ವ ನೆಲೆಗಳು, ಹಂಪಿ: ಪ್ರಸಾರಂಗ ಕನ್ನಡ ವಿಶ್ವವಿದ್ಯಾನಿಲಯ.

೩. ಅಂಬಳಿಕೆ ಹಿರಿಯಣ್ಣ, ೨೦೦೯, ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ, ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ಮೂರ್ತಿ.ಯು.ಎಸ್., ೧೯೯೪, ಮೆಗಲಿಥಿಕ್ ಕಲ್ಚರ್ ಆಫ್ ಸೌತ್ ಇಂಡಿಯಾ, ವಾರಣಾಸಿ: ಗಂಗಾ ಕಾವೇರಿ ಪಬ್ಲಿಕೇಷನ್ ಹೌಸ್.

೫

ಮಂಡ್ಯ ಜಿಲ್ಲೆಯ ಮಡಹಳ್ಳಿ ಪ್ರದೇಶದ ಶಿಲಾ ಗೋರಿಗಳು ಮತ್ತು ವಸತಿ ನೆಲೆಗಳ ಮೇಲೊಂದು ಹೊಸಬೆಳಕು

ಡಾ. ಲಿಂಗರಾಜು*

ಮಂಡ್ಯ ಜಿಲ್ಲೆಯು ಪ್ರಾಚೀನ ಕಾಲದಿಂದಲೂ ಮಾನವ ನಾಗರೀಕತೆಯ ವಿಕಾಸಕ್ಕೆ ಯೋಗ್ಯ ಸ್ಥಾನವೆಂದು ಪರಿಗಣಿಸಲ್ಪಟ್ಟಿದೆ. ಫಲವತ್ತಾದ ನದಿಕಣಿವೆಗಳು, ಬೆಟ್ಟಗುಡ್ಡಗಳ ಪ್ರದೇಶಗಳು, ಬಯಲು ಪ್ರದೇಶ, ದಟ್ಟವಾದ ಅರಣ್ಯ ಪ್ರದೇಶ, ಹರಿಯುವ ನದಿಗಳು, ಪ್ರಾಣಿ ಸಂಪತ್ತು, ವಾಸಿಸಲು ಯೋಗ್ಯವಾದ ನೈಸರ್ಗಿಕ ಗುಹೆಗಳು, ಶಿಲಾಯುಧಗಳನ್ನು ತಯಾರು ಮಾಡಲು ಅಗತ್ಯವಾದ ವಿವಿಧ ಜಾತಿಯ ಕಲ್ಲುಗಳು ಮೊದಲಾದವು ನೈಸರ್ಗಿಕ ಸಂಪತ್ತುಗಳಿಂದ ಕೂಡಿದ ಪ್ರದೇಶವಾಗಿ ಮಾನವ ವಿಕಾಸದ ಸರಣಿಯಲ್ಲಿ ಸಾಕಷ್ಟು ಪ್ರಭಾವವನ್ನು ಬೀರಿವೆ. ಈ ಜಿಲ್ಲೆಯಲ್ಲಿ ದೊರೆತಿರುವ ಪೂರ್ವೇತಿಹಾಸದ ನೆಲೆಗಳು ತೀರ ವಿರಳವಾದರೂ ಬೆಳಕಿಗೆ ಬಂದಿರುವ ಬೆರಣಿಕೆಯಷ್ಟು ನೆಲೆಗಳು ಹಳೆ ಶಿಲಾಯುಗದ, ನವ ಶಿಲಾಯುಗದ, ಕಬ್ಬಿಣ ಯುಗ ಮತ್ತು ಆದಿ ಇತಿಹಾಸ ಕಾಲ (ಕ್ರಿ.ಪೂ. ೫೦೦ರ ನಂತರ) ಕ್ಕೆ ಸಂಬಂಧಿಸಿದ ನೆಲೆಗಳು ಪತ್ತೆಯಾಗಿವೆ.

ಕರ್ನಾಟಕದ ಮೈಸೂರು ಪ್ರಾಂತ್ಯದಲ್ಲಿ ಪ್ರಾಚೀನ ಶಿಲಾಯುಗದ ಅವೇಶಷಗಳನ್ನು ಪತ್ತೆ ಹಚ್ಚುವ ಬಗ್ಗೆ ಪುರಾತತ್ವ ತಜ್ಞರಾದ ರಾಬರ್ಟ್ ಬ್ರೂಸ್ ಫೂಟ್ ಮತ್ತು ಡಾ. ಎಂ. ಶೇಷಾದ್ರಿಯವರು ವಿಶೇಷವಾಗಿ ಅಧ್ಯಯನ ನಡೆಸಿರುವರು. ವಿದ್ವಾಂಸರಾದ ಶ್ರೀಪಾದರಾವ್‌ರವರು ಮಂಡ್ಯ ಜಿಲ್ಲೆಯ ಕಾವೇರಿ ನದಿ ದಂಡೆಯ ಮೇಲಿನ ಹಂಗರಹಳ್ಳಿಯಲ್ಲಿ ದೊರೆತಿರುವುದರ ಬಗ್ಗೆ ವರದಿ ಮಾಡಿರುತ್ತಾರೆ. ಅಲ್ಲದೆ, ಕೆ.ಆರ್.ಪೇಟೆಯ ರಂಗನಾಥಪುರ, ಪಾಂಡವಪುರ ಬಳಿಯ ಕುಂತಿಬೆಟ್ಟ ಮೊದಲಾದ ಕಡೆಗಳಲ್ಲಿ ಹಳೆಯ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ದೊರೆತಿವೆ.

ಪಾಂಡವಪುರ ಬಳಿಯ ಕುಂತಿಬೆಟ್ಟ, ಮಳವಳ್ಳಿಯ ಶೆಟ್ಟಹಳ್ಳಿ ಮತ್ತು ಹುಲ್ಲಂಬಳ್ಳಿ ಮೊದಲಾದ ಕಡೆಗಳಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ದೊರೆತಿವೆ. ಪಾಂಡವಪುರ ಬಳಿಯ ಕೆರೆತೊಣ್ಣೂರು, ಮಳವಳ್ಳಿ ಬಳಿಯ ಬೆಳಕವಾಡಿ, ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ದೊರೆತಿವೆ.

ಭೌಗೋಳಿಕವಾಗಿ ವಿವಿಧ ಪರಿಸರದಲ್ಲಿ ನೆಲೆಸಿರುವ ಮಾನವರು ತಮ್ಮದೇ ಆದ ವೈಶಿಷ್ಟ್ಯತೆಯನ್ನು ಹೊಂದಿರುವುದು ಗೋಚರವಾಗುತ್ತದೆ. ನದಿಯ ತೀರಪ್ರದೇಶಗಳಲ್ಲಿ ಲಭ್ಯವಿರುವ ಮೃದುವಾದ ಕಲ್ಲುಗಳು ಆದಿ ಮಾನವರಿಗೆ ಅವಶ್ಯಕವಾದ ಉಪಕರಣ ಸಾಧನಗಳಾಗಿದ್ದವು. ಆದ್ದರಿಂದ ಮಳವಳ್ಳಿ ಬಳಿಯ ಕಾವೇರಿ ನದಿ ಪ್ರದೇಶದಲ್ಲಿ ಮಧ್ಯ ಮತ್ತು ನೂತನ ಶಿಲಾಯುಗದ ಅವಶೇಷಗಳು ಪತ್ತೆಯಾಗಿವೆ.

ಮಳವಳ್ಳಿ ತಾಲ್ಲೂಕಿನ ಪ್ರಾಗ್ ಇತಿಹಾಸ

ಶಿಲಾಯುಗ ಸಂಸ್ಕೃತಿಯ ಹಂತವನ್ನು ಅವಶೇಷ ಮತ್ತು ಅವುಗಳ ಬೆಳವಣಿಗೆ ಮತ್ತು ಕುಶಲತೆಯನ್ನು ಆಧರಿಸಿ ಹಳೆಯ ಶಿಲಾಯುಗ, ಸೂಕ್ಷ್ಮ ಶಿಲಾಯುಗ ಮತ್ತು ನೂತನ ಶಿಲಾಯುಗ ಸಂಸ್ಕೃತಿ ಎಂದು ವರ್ಗೀಕರಿಸಲಾಗಿದೆ.

ಲೋಹ ಯುಗ ಸಂಸ್ಕೃತಿಯ ಆರಂಭದಲ್ಲಿ ಶಿಲೆಯ ಬಳಕೆಯ ಜೊತೆಗೆ ತಾಮ್ರದ ಬಳಕೆಯಿದ್ದುದು ತಿಳಿಯುತ್ತದೆ. ಆದ್ದರಿಂದ ಮೊದಲ ಹಂತವನ್ನು ಶಿಲಾ–ತಾಮ್ರ ಯುಗವೆಂದು ನಂತರದ ಹಂತದಲ್ಲಿ ಕಬ್ಬಿಣವನ್ನು ಎಲ್ಲಾ ಕಾರ್ಯಗಳಿಗೂ ಬಳಸುವುದರ ಜೊತೆಗೆ ಬೃಹತ್ ಗಾತ್ರದ ಕಲ್ಲು ಚಪ್ಪಡಿಗಳನ್ನು ಬಳಸಿ ಸಮಾಧಿಗಳನ್ನು ನಿರ್ಮಿಸಿದ್ದರಿಂದ ಈ ಹಂತವನ್ನು ಕಬ್ಬಿಣ ಯುಗದ ಬೃಹತ್ ಶಿಲಾ ಗೋರಿ ಸಂಸ್ಕೃತಿ ಅಥವಾ ಬೃಹತ್ ಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗಿದೆ.

ಮಳವಳ್ಳಿ ತಾಲ್ಲೂಕಿನ ಹುಲ್ಲಂಬಳ್ಳಿಗೆ ಎರಡು ಕಿ.ಮೀ ದೂರದಲ್ಲಿರುವ ಮರಳಹಳ್ಳಿಯಲ್ಲಿ (ಬೇಚಿರಾಕ್) ಒಂದು ಪ್ರಾಚೀನ ನೆಲೆಯಿದೆ. ಅಲ್ಲದೆ ನೂತನ ಶಿಲಾಯುಗದ ನೆಲೆ (ಸು. ಕ್ರಿ.ಪೂ. ೧೮೦೦–೨೦೦), ಬೃಹತ್ ಶಿಲಾ ಸಂಸ್ಕೃತಿಯ

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಮಂಡ್ಯ.

(ಕ್ರಿ.ಪೂ. ೪೦೦-೧ನೇ ಶತಮಾನ) ಶಿಲಾಗೋರಿಗಳಿರುವುದನ್ನು (ಕಲ್ಗೋರಿ), **ಎಂ.ಎ.ಆರ್. ೧೯೪೭-೧೯೫೬ರಲ್ಲಿ** ಪ್ರಕಟಿಸಲಾಗಿದೆ. ಇದನ್ನು ಜಿಲ್ಲೆಯ ಮೊದಲನೇ ಜನವಸತಿ ನೆಲೆಯೆಂದು ಗುರುತಿಸಲಾಗಿದೆ. ಇಲ್ಲಿನ ಜನರು ಉಪಯೋಗಿಸುತ್ತಿದ್ದ ಮಣ್ಣಿನ ಪಾತ್ರೆಗಳ ಅವಶೇಷಗಳು ಹೇರಳವಾಗಿ ದೊರೆತಿವೆ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಹಲಗೂರಿನಲ್ಲಿ ಬೃಹತ್ ಶಿಲಾಯುಗದ ಎರಡು ಶಿಲಾಗೋರಿಗಳಿರುವ ಅಂಶ ಮತ್ತು ಕಲ್ಲು ವೃತ್ತಗಳಿರುವುದನ್ನು ಪುರಾತತ್ವಶಾಸ್ತ್ರಜ್ಞ ಕೆ.ಆರ್. ಶ್ರೀನಿವಾಸನ್‌ರವರು ದಕ್ಷಿಣ ಭಾರತದ ಬೃಹತ್ ಶಿಲಾಯುಗದ ಸರ್ವೇಕ್ಷಣೆ (ಪುಟ ೧೦೩-೧೧೫) ಎಂಬ ಗ್ರಂಥದಲ್ಲಿ ವರದಿ ಮಾಡಿರುತ್ತಾರೆ. ಆದರೆ ಇಂತಹ ಬೃಹತ್ ಶಿಲಾಯುಗ ಕಾಲಕ್ಕೆ ಸಂಬಂಧಿಸಿದಂತೆ ಮಳವಳ್ಳಿ ತಾಲ್ಲೂಕಿನ ಹಲಗೂರು ಬಳಿಯ ಮಡಹಳ್ಳಿ ಪ್ರದೇಶದಾದ್ಯಂತ ಇರುವ ಶಿಲಾ ಸಮಾಧಿಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಈ ಸಂಶೋಧನಾ ಲೇಖನದಿಂದ ಮಾಡಿರುತ್ತೇನೆ.

ಮಡಹಳ್ಳಿ ಗ್ರಾಮದ ಪಾಂಡವರ ಒಡ್ಡಿನಲ್ಲಿ ನಿಧಿಗಾಗಿ ಶೋಧ

ಮಳವಳ್ಳಿ ತಾಲ್ಲೂಕಿನ ಹಲಗೂರು ಬಳಿಯ ಬಸವನ ಬೆಟ್ಟ, ಕಾವೇರಿ ನದಿಯ ಆಜುಬಾಜಿನ ದೇವಸ್ಥಾನಗಳು ಮತ್ತು ಮಡಹಳ್ಳಿ ಗ್ರಾಮದ ಒಡ್ಡುಗಳಲ್ಲಿ ಹುಣ್ಣಿಮೆಯ ದಿನದಂದು ನೆಲ ಬಗೆದು ನಿಧಿಗಾಗಿ ಶೋಧ ನಡೆದಿರುವ ಮಾಹಿತಿ ಸ್ಥಳಿಯರ ದೂರಿನ ಹಿನ್ನಲೆಯಲ್ಲಿ ದಿನಪತ್ರಿಕೆ ಯೊಂದರಲ್ಲಿ ಪ್ರಕಟವಾದ ಹಿನ್ನಲೆಯಲ್ಲಿ ಸ್ಥಳೀಯರೊಡನೆ ನಾನು ಮತ್ತು ಪ್ರೊ. ಪಿ.ಎನ್. ನರಸಿಂಹಮೂರ್ತಿರವರು ಮಡಹಳ್ಳಿ ಬಳಿ ನಿಧಿಗಾಗಿ ನೆಲ ಬಗೆದಿರುವ ಸ್ಥಳಕ್ಕೆ ಬೇಟಿ ನೀಡಿದೆವು.

ಬಾಹ್ಯ ನೋಟಕ್ಕೆ ಈ ಪ್ರದೇಶ ಗೋಮಾಳವಾಗಿ ಕಂಡು ಬರುತ್ತದೆ. ಆದರೆ ಸರ್ಕಾರದ ಅಧೀನದಲ್ಲಿರುವ ಅರಣ್ಯ ಪ್ರದೇಶವಾಗಿದೆ. ಈ ವಿಶಾಲ ಪ್ರದೇಶದಲ್ಲಿ ಅರಣ್ಯ ಸಿಬ್ಬಂಧಿ ಸಸಿಗಳನ್ನು ನೆಡಲು ಜೆಸಿಬಿಯಿಂದ ಭೂಮಿಯನ್ನು ತೋಡುವ ಕಾರ್ಯದಲ್ಲಿ ತೊಡಗಿದ್ದಾಗ, ನಿಧಿಗಳ್ಳರು ಹುಣ್ಣಿಮೆಯ ದಿನದಂದು ವೃತ್ತಾಕಾರದ ಕಲ್ಲಿನಿಂದ ಸುತ್ತುವರಿದಿರುವ ಪ್ರದೇಶವನ್ನು ಅಗೆಯಲಾಗಿದ್ದು ಅಲ್ಲಿ ನೆಲ ಮಾಳಿಗೆಯೊಂದು ಕಾಣಿಸಿದೆ.

ಪ್ರಮುಖ ಶಿಲಾ ಗೋರಿಯ ಮುಂದಿನ ಭಾಗವನ್ನು ೩ ಅಡಿ ಉದ್ದ ಮತ್ತು ೩ ಅಡಿ ಅಗಲದಿಂದ ನಿರ್ಮಿಸಿ ಹತ್ತಿ ಇಳಿಯಲು ಅನುಕೂಲವಾಗುವ ರೀತಿಯಲ್ಲಿ ಕಟ್ಟಲಾಗಿದೆ.

ಇವರೆಡರ ನಡುವೆ ಚಪ್ಪಡಿ ಕಲ್ಲನ್ನು ಕೊರೆದು ಮಧ್ಯೆ ಶಿರ ಭಾಗ ತೂರಿಸುವಷ್ಟು ಕಲ್ಲನ್ನು ಕೊರೆದು ಕಿಂಡಿ ಮಾಡಲಾಗಿದೆ.

ಶಿಲಾ ಗೋರಿಯ ವಿಸ್ತೀರ್ಣ ಸುಮಾರು ೮ ಅಡಿ ಎತ್ತರ, ೮ ಅಡಿ ಉದ್ದ ಮತ್ತು ೩-೪ ಅಡಿ ಅಗಲದಿಂದ ಕೂಡಿದ್ದು ದೊಡ್ಡ ಚಪ್ಪಡಿ ಕಲ್ಲ ಬಳಸಿ ನಿರ್ಮಿಸಲಾಗಿದೆ.

ಶಿಲಾಗೋರಿಯ ಒಳಭಾಗದಲ್ಲಿರುವ ಮಣ್ಣು ತುಂಬಾ ಮೃದುವಾಗಿದ್ದು ತಂಪಾಗಿದೆ. ಶಿಲಾಗೋರಿಯ ತಳ ಭಾಗದಲ್ಲೂ ಕಲ್ಲು ಚಪ್ಪಡಿಯನ್ನು ಅಳವಡಿಸಿರುವುದು ಕಂಡು ಬರುತ್ತದೆ. ಮಳೆ ನೀರು ಒಳ ನುಗ್ಗದಂತೆ ನೆಲ ಮಟ್ಟದಿಂದ ಸ್ವಲ್ಪ ಎತ್ತರದಲ್ಲಿ ನಿರ್ಮಿಸಲಾಗಿದೆ. ನಂತರ ಚಪ್ಪಡಿ ಮೂಲಕ ಮುಚ್ಚಲಾಗಿದೆ.


ಶಿಲಾ ಗೋರಿಯ ಪ್ರಮುಖ ಮಾದರಿಗಳನ್ನು ೧) ಕೋಣೆ ಕಲ್ಗೋರಿ-ಹಾದಿ ಕೋಣೆ, ಕಂಡಿ ಕೋಣೆ, ಆಯಾತಾಕಾರದ ಅಂತರ್ಗತ ಶವಪೆಟ್ಟಿಗೆ ೨) ಕೋಣೆಯಾ ಕೃತಿಯಲ್ಲಿಲ್ಲದ ಕಲ್ಗೋರಿ-ಕಲ್ಲುಗ್ಗೆ, ಕುಣಿದ ಘನ, ಶಿಲಾವೃತ್ತ, ಶವಕುಳಿ, ದಫನ ದಿನ್ನೆ, ಅಸ್ತಿ ಪಾತ್ರೆ ದಫನ ೩) ಸಮಾಧಿ ಪ್ರಕ್ರಿಯೆಗೆ ಸಂಬಂಧ ಪಡದ ನಿಲಸುಗಲ್ಲು ಮೊದಲಾದ ಪ್ರಕಾರಗಳಿರುವುದನ್ನು ಕಾಣಬಹುದು.

ಈ ಸಂಸ್ಕೃತಿಯ ಜನರು ಜೀವಿಸುತ್ತಿದ್ದ ಪ್ರದೇಶಗಳನ್ನು ವಾಸ್ತವ್ಯದ ನೆಲೆಗಳೆಂದು ಗುರುತಿಸಲಾಗಿದೆ.

ಬೃಹತ್ ಗಾತ್ರದ ಒರಟಾದ, ಕಲ್ಲು ಚಪ್ಪಡಿ (Undressed) ಗಳನ್ನು ಉಪಯೋಗಿಸಿ ಸಮಾಧಿಗಳನ್ನು ನಿರ್ಮಿಸುವ (Dolmens) ನೂತನ ಪದ್ಧತಿಯನ್ನು ಆರಂಭಿಸಿದ 'ಬೃಹತ್ ಶಿಲಾಯುಗ ಸಂಸ್ಕೃತಿ'ಯ ಜನರು ವಿವಿಧ ರೀತಿಯ ಶವಸಂಸ್ಕಾರ ಪದ್ಧತಿಯನ್ನು ಅನುಸರಿಸುತ್ತಿದ್ದುದು ಮಂಡ್ಯ ಜಿಲ್ಲೆಯ ಮರಳಹಳ್ಳಿ, ಬೆಳಕವಾಡಿ, ಮುತ್ತತ್ತಿ, ಹಲಗೂರು, ಕುಂತಿಬೆಟ್ಟ, ಶೆಟ್ಟಹಳ್ಳಿ, ಸಣಬಕೊಪ್ಪಲು, ತೊಣ್ಣೂರು, ಮೇಲುಕೋಟೆ, ಹೊಸಕೋಟೆ ಮತ್ತು ಸಿರಗನಹಳ್ಳಿಗಳಲ್ಲಿ ಈ ಸಂಸ್ಕೃತಿಯ ಕುರುಹುಗಳನ್ನು ಸಂಶೋಧಕರು ಈಗಾಗಲೇ ಪತ್ತೆಹಚ್ಚಿರುವುದರಿಂದ ಮಡಹಳ್ಳಿ ಪ್ರದೇಶದ ಶಿಲಾ ಸಮಾಧಿಗಳ ಅಧ್ಯಯನ ಪ್ರಸ್ತುತ ಮತ್ತಷ್ಟು ವಸ್ತು ನಿಷ್ಠ ಅಧ್ಯಯನಕ್ಕೆ ಸಹಕಾರಿಯಾಗಿದೆ.



ಮಡಹಳ್ಳಿ ಪ್ರದೇಶದ ವೃತ್ತಾಕಾರದ ಶಿಲಾ ಸಮಾಧಿಗಳಿರುವ
ಬಾಹ್ಯ ನೋಟ







ಪ್ರೊ. ಪಿ.ಎನ್. ನರಸಿಂಹಮೂರ್ತಿರವರು ದೊರೆತಿರುವ
ಕುರುಹುನ್ನು ಪರಿಶೀಲಿಸುತ್ತಿರುವುದು.



ನಿಧಿಗಳ್ಳರ ಶೋಧನೆಗೆ ಒಳಪಟ್ಟ ಶಿಲಾ ಗೋರಿ ಮುಂಭಾಗದ ದೃಶ್ಯ



ಪ್ರೊ. ನರಸಿಂಹಮೂರ್ತಿರವರು ಶಿಲಾಗೋರಿಗಳ ಬಗ್ಗೆ
ಸ್ಥಳೀಯರಿಗೆ ವಿವರಿಸುತ್ತಿರುವುದು.



ಶಿಲಾಗೋರಿಗಳ ಬಳಿಯಲ್ಲೇ ಇರುವ ಕಲ್ಲಾಸರೆಯ ವಸತಿ ನೆಲೆಗಳು

ಮಂಡ್ಯ ಮತ್ತು ಸುತ್ತಮುತ್ತಲಿನ ಪರಿಸರದಲ್ಲಿ ಬೃಹತ್ ಶಿಲಾಯುಗದ ಶಿಲಾಗೋರಿಗಳು ಕಂಡು ಬರುತ್ತವೆ. ಆದರೆ ಇವುಗಳ ವ್ಯವಸ್ಥಿತ ಅಧ್ಯಯನ ಇನ್ನೂ ಆಗಬೇಕೆಂದು ಡಾ. ಬಿ.ಕೆ. ಗುರುರಾಜರಾವ್‌ರವರು ಅಭಿಪ್ರಾಯಪಡುತ್ತಾರೆ. ಆದ್ದರಿಂದ ಬೃಹತ್ ಗಾತ್ರದ ಒರಟಾದ ಕಲ್ಲು ಚಪ್ಪಡಿಗಳನ್ನು ಉಪಯೋಗಿಸಿ ಸಮಾಧಿಗಳನ್ನು ನಿರ್ಮಿಸುವ ನೂತನ ಪದ್ಧತಿಯನ್ನು ಆರಂಭಿಸಿದ ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ವಿವಿಧ ರೀತಿಯ ಶವಸಂಸ್ಕಾರ ಪದ್ಧತಿಯನ್ನು ಅನುಸರಿಸುತ್ತಿದ್ದುದು ಮಂಡ್ಯ ಜಿಲ್ಲೆಯ ಅನೇಕ ಕಡೆಗಳಲ್ಲಿ ದೊರೆತಿರುವ ಕುರುಹುಗಳಿಂದ ತಿಳಿದುಬರುತ್ತದೆ.

ಮಂಡ್ಯ ಜಿಲ್ಲೆಯಲ್ಲಿ ಇನ್ನಷ್ಟು ಪ್ರದೇಶಗಳಲ್ಲಿ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಪತ್ತೆಯಾಗುವ ಸಾಧ್ಯತೆಗಳಿವೆ. ಉದಾ: ಮಂಡ್ಯ ತಾಲ್ಲೂಕಿನ ತೂಬಿನಕೆರೆಯ ಗುಡ್ಡದಲ್ಲಿ ಚಕ್ರವ್ಯೂಹದಂತಹ ಬಯಲು ಬಂಡೆ ರೇಖಾ ಚಿತ್ರವನ್ನು ಇತ್ತೀಚೆಗೆ ಪತ್ತೆಹಚ್ಚಲಾಗಿದೆ. ಸಿಂಧಘಟ್ಟ ಬಳಿಯ ನಾರಾಯಣ ದುರ್ಗದ ಬೆಟ್ಟ ಶ್ರೇಣಿಯ ಮುದಿ ಬೆಟ್ಟದಲ್ಲಿರುವ ಹಲವಾರು ನೈಸರ್ಗಿಕ ಗವಿಗಳು ಶಿಲಾಯುಗ ಸಂಸ್ಕೃತಿಯ ಕುರುಹುಗಳನ್ನು ಹೊಂದಿರುವ ಸಾಧ್ಯತೆಗಳಿವೆ. ಮೇಲುಕೋಟೆಯ ಪಾಂಡವಪುರ ಗವಿ ಪರಿಸರ, ಮೈಲಾರಪಟ್ಟಣ, ಪಡವಲ ಪಟ್ಟಣ, ಕೋಟೆ ಬೆಟ್ಟಗಳನ್ನು ಈ ನಿಟ್ಟಿನಲ್ಲಿ ಪರಿಶೀಲಿಸುವ ಅಗತ್ಯವಿದೆ. ಹಲಸಹಳ್ಳಿ ಗವಿಮಠದಲ್ಲಿರುವ ನೂರಾರು ಕಿರುಶಿಲೆಗಳಲ್ಲಿ ಕೆಲವಾದರೂ ಶಿಲಾಯುಧಗಳಾಗಿರುವ ಸಾಧ್ಯತೆಗಳಿವೆ. ಹದ್ದಿನ ಕಲ್ಲು ಹನುಮಂತನಬೆಟ್ಟದಲ್ಲಿ ಪ್ರತೀ ಅಮಾವಾಸ್ಯೆಯಂದು ವಿಶೇಷವಾಗಿ ಜರುಗುವ ಕಲ್‌ಸೇವೆ (ದೆವ್ವ ಬಿಡಿಸುವ ತಂತ್ರ) ಶಿಲಾಯಗದಷ್ಟು ಪ್ರಾಚೀನ ಆಚರಣೆಯಂತೆ ತೋರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಮಂಡ್ಯ ಜಿಲ್ಲೆಯ ಅನೇಕ ಕಡೆಗಳಲ್ಲಿ ಹೆಚ್ಚಿನ ಸಂಶೋಧನೆಗಳು ತುರ್ತಾಗಿ ಜರುಗಬೇಕಾಗಿದೆ.

೬

ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆ – ಸರೂರ

ಶಿವಪ್ಪ ನ. ನೀರಲಗಿ*

ಪೀಠಿಕೆ

ಸರೂರು ಇದು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನಿಂದ ಆಗ್ನೇಯಕ್ಕೆ ಸುಮಾರು ೮ ಕಿ.ಮೀ. ಗಳ ಅಂತರದಲ್ಲಿದೆ. ಸರೂರು ಪ್ರಾಚೀನ, ಮಧ್ಯಕಾಲೀನ ಹಾಗೂ ಅರ್ವಾಚೀನ ಇತಿಹಾಸವನ್ನು ತನ್ನ ಗರ್ಭದಲ್ಲಿ ಇಟ್ಟುಕೊಂಡಿದೆ. ಈ ಊರಿನಲ್ಲಿ ೧೨ನೇ ಶತಮಾನದಲ್ಲಿ ಬಸವಣ್ಣನವರಿಗಿಂತ ಹಿರಿಯರು, ಸಮಕಾಲಿನರಾದ ಹಾಗೂ ೭೭೦ ಅಮರ ಗಣಂಗಳಲ್ಲಿ ಒಬ್ಬರಾದ ಶಾಂತಮುತ್ತಯ್ಯನೆಂಬ ಶರಣರು ಆಗಿಹೋಗಿದ್ದು, ಇವರ ಕಾಯಕ ಕುರಿ ಕಾಯುವದಾಗಿತ್ತು. ಇವರ ಹೆಸರಿನಿಂದಲೇ **'ತಗರ ಪವಾಡ'** ವೆಂಬ ಪುರಾಣವಿದೆಯಲ್ಲದೆ ಈ ಊರಿನಲ್ಲಿ ಶಾಂತೊಡೆಯರು ಹಾಗೂ ಮಂಕೊಡೆಯರೆಂಬ ಎರಡು ಪರಂಪರೆಗಳಿವೆ. ಈ ಎರಡು ಜನಾಂಗಗಳು ಕುರುಬಜನಾಂಗಕ್ಕೆ ಕುಲಗುರುಗಳಾಗಿದ್ದು; ಇವರನ್ನು ಒಡೆಯರೆಂದು ಕರೆಯುತ್ತಾರೆ. ಈ ಊರಿನಲ್ಲಿ ೧೯೨೯–೩೦ರಲ್ಲಿ ಎರಡು ಶಾಸನಗಳು ವರದಿಯಾಗಿದ್ದು, ಶ್ರೀ ರೇವಣಸಿದ್ದೇಶ್ವರ, ಶ್ರೀ ಮಲ್ಲಿಕಾರ್ಜುನ ಎಂಬ ದೇವಾಲಯಗಳಿವೆ. ಮಲ್ಲಿಕಾರ್ಜುನ ದೇವಾಲಯವು ವಿಜಯನಗರ ಕಾಲಕ್ಕೆ ಸೇರಿದ್ದಾಗಿದೆ. ಈ ನೆಲೆಯಲ್ಲಿರುವ ಹುಣಸೆಯ ಮರಗಳು ಸುಮಾರು ೮೦೦–೧೦೦೦ ವರ್ಷಗಳವರೆಗೆ ಸೇರಿದ್ದಾಗಿವೆಯಲ್ಲದೆ, ಈ ನೆಲೆಯು ಬಲವಾದ ನಾಗಾರಾಧನೆಯ ಕೇಂದ್ರವೂ ಆಗಿದೆ.


ಬೃಹತ್ ಶಿಲಾಯುಗಕ್ಕೆ ಸೇರಿದ ಅವಶೇಷಗಳು

ಈ ಊರಿನ ಉತ್ತರ ದಿಕ್ಕಿನಲ್ಲಿ ಹಾಳಾದ ಊರೊಂದು ಇದ್ದು, ಸ್ಥಳಿಯರು ಇದನ್ನು ಕಲ್ಕೆರೆ ಎಂದು ಕರೆಯುತ್ತಾರೆ. ಈ ಕಲ್ಕೆರೆಯು ಸುಮಾರು ೮–೧೦ ಎಕರೆ ಪ್ರದೇಶವನ್ನು ಹೊಂದಿದ್ದು, ಇದನ್ನು 'ಅಯ್ಯನ ಕೆರೆ' ಎಂದು ಸ್ಥಳಿಯರು ಕರೆಯುತ್ತಾರೆ. ಈ ಅಯ್ಯನ ಕೆರೆಯ ದಡದಲ್ಲಿಯೇ ಶಾಂತಮುತ್ತಯ್ಯನು ತನ್ನ ಕುರಿ ದೊಡ್ಡಿಯನ್ನು ಹಾಕಿಕೊಂಡಿದ್ದನೆಂದು ಇಲ್ಲಿಯ ಸ್ಥಳಿಯರ ಹೇಳಿಕೆಯಾಗಿದೆ. ಈ ಕಲ್ಕೆರೆಯ ಕಲ್ಲಿನ ಪೊಟರೆಯ ಮಧ್ಯೆ ನಿಲ್ಲುವ ನೀರೆ ಆದಿಮಾನವನಿಗೂ ಹಾಗೂ ಶಾಂತಮುತ್ತಯ್ಯನಿಗೂ ಆಸರೆಯಾಗಿತ್ತು. ಈ ಅಯ್ಯನ ಕೆರೆಯ ಪೂರ್ವಭಾಗ, ದಕ್ಷಿಣ ಭಾಗ ಹಾಗೂ ಪಶ್ಚಿಮ ಭಾಗದ ಪವಡೆಪ್ಪ ವಾಲಿಕಾರ, ಸಂಗಪ್ಪ ಎಸ್ ಬಿದರಕುಂದಿ ಹಾಗೂ ರೇವಣಸಿದ್ದಪ್ಪ ವಾಲಿಕಾರ ಊರಿನ ಪಶ್ಚಿಮ ಭಾಗದಲ್ಲಿರುವ ತಾತನಗೌಡ ಬಿರಾದಾರ ಇವರ ಹೊಲಗಳಲ್ಲಿ ಬೃಹತ್ ಶಿಲಾಯುಗದ ಅವಶೇಷಗಳು ಸಿಗುತ್ತವೆ. ಈ ಸ್ಥಳದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ದಪ್ಪ ಮತ್ತು ತೆಳು, ಕೆಂಪು ಮತ್ತು ಕಪ್ಪು ವರ್ಣದ ನಯಗೊಳಿಸಿದ ಮಡಿಕೆ ತುಣುಕುಗಳು, (Nicely polished black and brown coloured wares) ಮೃತ್‌ಪಾತ್ರೆಯ ತಳಭಾಗಗಳು, ಅರೆಯುವ ಕಲ್ಲುಗಳು, ಆದಿಮಾನವನ ಗೋರಿಗಳು ಹಾಗೂ ಕಬ್ಬಿಣ ಕಿಟ್ಟದ ಹುಂಡೆಗಳು ಸಾಕಷ್ಟು ಸಂಖ್ಯೆಯಲ್ಲಿ ಸಿಗುತ್ತವೆ.

ಚೌಡೇಶ್ವರಿ ವಿಗ್ರಹ

ವಿಜಯನಗರದ ಅರಸರು ರಣಾಂಗಣಕ್ಕೆ ಬರುವಾಗ ಎತ್ತಿನ ಬಂಡೆಯಲ್ಲಿ ಈ ಚೌಡೇಶ್ವರಿ ಮೂರ್ತಿಯನ್ನು ತರುತ್ತಿದ್ದರು. ೧೫೬೫ರ ತಾಳಿಕೋಟೆ ಯುದ್ಧದಲ್ಲಿ ರಾಮರಾಯನು ಈ ಮೂರ್ತಿಯನ್ನು ರಣಾಂಗಣಕ್ಕೆ ತಂದಿದ್ದು, ಯುದ್ಧದಲ್ಲಿ ಸೋತು ಸೆರೆಯಾಳಾಗಿ ಮರಣ ಹೊಂದಿದ್ದರಿಂದ ವಿಜಯನಗರದ ಸೈನಿಕರು ಅದನ್ನು ಅಲ್ಲಿಯೆ ಬಿಟ್ಟು ಪಲಾಯನ ಮಾಡಿದರು. ಈ ರಣಾಂಗಣವು ಸರೂರಿಗೆ ಸಮಿಪದಲ್ಲಿಯೇ ಇರುವುದರಿಂದ ಇಲ್ಲಿನ ಸ್ಥಳಿಯರು ಈ

* ಶಿವಗಂಗಾ ನಿಲಯ, ಖಾಸ್ಗತೇಶ್ವರ ನಗರ, ತಾಳಿಕೋಟೆ – ೫೮೬೨೧೪



ಕೆಂಪು ವರ್ಣದ ಮಡಿಕೆ ತುಣುಕುಗಳು



ಕಪ್ಪು ವರ್ಣದ ಮಡಿಕೆ ತುಣುಕುಗಳು




ಶ್ರೀ ಚೌಡೇಶ್ವರಿ ಶಿಲ್ಪ



ಭೈರವನ ಶಿಲ್ಪ



ಸಾವಿರಾರು ವರ್ಷದ ಹುಣಸೆ ಮರ



ನಾಗರ ಶಿಲ್ಪಗಳು

ಚೌಡೇಶ್ವರಿ ವಿಗ್ರಹವನ್ನು ರಣಾಂಗಣದಿಂದ ತಂದು ಈ ಸರೂರಿನಲ್ಲಿ ಪ್ರತಿಷ್ಠಾಪನೆಗೈದರೆಂದು ಇಲ್ಲಿನ ಸ್ಥಳಿಯರ ಹೇಳಿಕೆಯಾಗಿದೆ. ಇಂದಿನವರೆಗೂ ಈ ವಿಗ್ರಹವನ್ನು **ವಿಜಯನಗರದಮ್ಮ** ನೆಂದು ಕರೆಯುವದು ವಾಡಿಕೆಯಾಗಿದೆ.

ಅತ್ಯಂತ ಸುಂದರವಾದ ಈ ವಿಗ್ರಹವು ಲಲಿತಾಸನದಲ್ಲಿದ್ದು, ಊರಿನ ಮಧ್ಯಭಾಗದ ಚಿಕ್ಕ ಗುಡಿಯಲ್ಲಿದೆ. ಈ ವಿಗ್ರಹವು ಚತುರ್ಭುಜವನ್ನು ಹೊಂದಿದ್ದು, ಕೈಯಲ್ಲಿ ಖಡ್ಗ, ತ್ರಿಶೂಲ, ಢಮರು ಹಾಗೂ ಪಾನಬಟ್ಟಲುಗಳನ್ನು ಹೊಂದಿದೆ. ತಲೆಯಲ್ಲಿ ಕರಂಡ ಮುಕುಟವಿದ್ದು ಕೊರಳಲ್ಲಿ ಕಂಠಿಹಾರವಿದೆ. ಕಾಲಲ್ಲಿ ರುಳಿ, ಟೊಂಕದಲ್ಲಿ ವಡ್ಯಾಣವನ್ನು ಧರಿಸಿದ್ದಾಳೆ. ಮೂರ್ತಿಯ ಕಿವಿಯಲ್ಲಿ ದೊಡ್ಡವಾದ ಕರ್ಣಕುಂಡಲವನ್ನು ಧರಿಸಿದ್ದು ಘನಸ್ತನಗಳನ್ನು ಹೊಂದಿದ್ದಾಳೆ. ಸ್ತನಗಳಿಗೆ ಸ್ತನಬಂಧವಿದೆ.

ಬೈರವನ ವಿಗ್ರಹ

ಊರಿನ ಪಶ್ಚಿಮ ಭಾಗದಲ್ಲಿ **'ಬೈರಪ್ಪನಮಡ್ಡಿ'** ಎಂದು ಕರೆಯುವ ಸ್ಥಳವಿದ್ದು, ಹಾಳಾದ ಗುಡಿಯೊಂದು ಇದೆ. ಆ ಗುಡಿಯೊಳಗೆ ಕೆಂಪು ಮರಳುಗಲ್ಲಿನಲ್ಲಿ ಕೆತ್ತಿದ ಸುಂದರವಾದ ವಿಗ್ರಹವೊಂದು ಇದ್ದು, ಅದು ಸು. ೯–೧೦ನೇ ಶತಮಾನಕ್ಕೆ ಸೇರಿರಬಹುದಾಗಿದೆ ಹೆಚ್ಚಾಗಿ ಕೆಂಪು ಮರಳುಗಲ್ಲನ್ನು ಬದಾಮಿ ಚಾಲುಕ್ಯರು ಹಾಗೂ ರಾಷ್ಟ್ರಕೂಟರು ಬಳಸುತ್ತಿದ್ದರಿಂದ ಈ ಬೈರವನ ವಿಗ್ರಹವು ಅವರ ಕಾಲಕ್ಕೆ ಸೇರಿರ ಬಹುದಾಗಿದೆ. ಈ ವಿಗ್ರಹವು ಚತುರ್ಭುಜವನ್ನು ಹೊಂದಿದ್ದು ಬಲಗೈಯಲ್ಲಿ ಖಡ್ಗ, ಡಮರು, ತ್ರಿಶೂಲ ಹಾಗೂ ಪಾನಬಟ್ಟಲುಗಳನ್ನು ಹಿಡಿದಿದೆ. ಮೂರ್ತಿಯ ತಲೆಗೆ ಕರಂಡ ಮುಕುಟವಿದೆ. ಮೂರ್ತಿಯ ಕೊರಳಲ್ಲಿ ಕಂಠಿಹಾರವಿದ್ದು ರುಂಡಮಾಲೆಯನ್ನು ಧರಿಸಿದೆ. ಮೂರ್ತಿಯ ಎಡಭಾಗದಲ್ಲಿ ಉದ್ದನೆಯ ಜಡೆಬಿಟ್ಟ ಅಸ್ಥಿಪಂಜರವನ್ನು ಹೊಂದಿದ ಪ್ರೇತವಿದೆ. ಮೂರ್ತಿಯು ಉದ್ದನೆಯ ಎಳೆಎಳೆಯಾದ ಜಟೆಯನ್ನು ಹೊಂದಿದೆ. ಕೆಳಗೆ ಬಲಭಾಗದಲ್ಲಿ ದೊಡ್ಡದಾದ ಹುತ್ತ ಬೆಳೆದಿದ್ದರಿಂದ ಏನಿದೆಯಂದು ಗೊತ್ತಾಗುವದಿಲ್ಲ. ಬಹುಶಃ ಇದೊಂದು ಕಾಲಬೈರವನ ಮೂರ್ತಿಯಾಗಿರಬಹುದಾಗಿದೆ. ಸ್ಥಳಿಯರು ಈ ಸ್ಥಳವನ್ನು ಭೈರಪ್ಪನ ಮಡ್ಡಿಯೆಂದು ಕರೆದಿರುವದರಿಂದ ಇದೊಂದು ಹಿಂದೆ ಬೈರವನ ಬಲವಾದ ಆರಾಧನೆಯ ಕೇಂದ್ರವಾಗಿದೆ.

[ಸಲಹೆ ಸಹಕಾರವನ್ನು ನೀಡಿದ ಮುರುಗೆಶಿ ಶಿರ್ವಾ (ಉಡುಪಿ), ಕ್ಷೇತ್ರಕಾರ್ಯದಲ್ಲಿ ಸಹಾಯವನಿತ್ತ ವೇ. ಮೂ. ಶ್ರೀ ಸಿದ್ದಯ್ಯಗುರುವಿನ್, ರುದ್ರಯ್ಯ ಗುರುವಿನ್, ಸಿದ್ದಯ್ಯ ಸಣ್ಣಯ್ಯ ಗುರುವಿನ್, ಹಾಗೂ ಶಾಂತಯ್ಯ ಗುರುವಿನ್ ಇವರೆಲ್ಲರಿಗು ಲೇಖಕರ ಕೃತಜ್ಞತೆಗಳು]

ಆಧಾರ ಗ್ರಂಥಗಳು

೧. ಪ್ರಾಚ್ಯವಸ್ತು ಸಂಶೋಧನೆ, ಡಾ. ಅ. ಸುಂದರ.
೨. ಪುರಾತತ್ವ ಶೋಧನೆ, ಡಾ. ಎಸ್. ಶ್ರೀಕಂಠಶಾಸ್ತ್ರಿ.
೩. ಹಾಲುಮತ ಅಧ್ಯಯನದ ಆಕರಗಳು, ಡಾ. ಅನ್ನಪೂರ್ಣ ಗೊಸ್ಬಾಳ.

೭

ಹಿರೇಗುಂಟನೂರು-ಬೃಹತ್ ಶಿಲಾಯುಗದ ನೆಲೆಗಳ ಶೋಧ

ಶರತ್‌ಬಾಬು ಕೆ.ಎಸ್.*

ಚಿತ್ರದುರ್ಗ ತಾಲ್ಲೂಕಿನಲ್ಲಿರುವ ನಾಲ್ಕು ಹೋಬಳಿಗಳಲ್ಲಿ ಹಿರೇಗುಂಟನೂರು ಒಂದು ಹೋಬಳಿ ಕೇಂದ್ರ. ಭೀಮಸಮುದ್ರ ಮಾರ್ಗದಲ್ಲಿ ಕಂಡುಬರುವ ಹಿರೇಗುಂಟನೂರು ಐತಿಹಾಸಿಕವಾಗಿ ಮಹತ್ವ ಪಡೆದ ಪ್ರದೇಶ. ಹೋಬಳಿಯಲ್ಲಿ ಒಟ್ಟು ೬೭ ಗ್ರಾಮಗಳಿದ್ದು, ಅವುಗಳಲ್ಲಿ ೪೨ ಕಂದಾಯ ಗ್ರಾಮಗಳು, ೦೬ ಬೇಚಾರಕ್ ಗ್ರಾಮಗಳು, ೧೯ ಮಜುರೆ ಗ್ರಾಮಗಳು ಸೇರಿವೆ.

ಕಬ್ಬಿಣದ ಅದಿರಿರುವ ಬೆಟ್ಟ ಗುಡ್ಡಗಳು, ಗ್ರಾನೈಟ್ ಶಿಲೆಗಳು, ಕಲ್ಲು–ಗುಂಡುಗಳಿಂದ ಕೂಡಿರುವ ಗುಡ್ಡಗಳು, ಅಲ್ಲಲ್ಲಿ ಹರಿಯುವ ಹಳ್ಳಗಳು, ಅಗಾಧವಾದ ಸಸ್ಯಸಂಪತ್ತು ಹಾಗು ಫಲವತ್ತಾದ ಮಣ್ಣು ಪ್ರಸ್ತುತ ಹೋಬಳಿಯ ಪರಿಸರವಾಗಿದೆ.

ಇದೇ ಹೋಬಳಿಗೆ ಸೇರಿದ ಸಿರಿಗೆರೆ ಮಠದಿಂದ ೭–೮ ಕಿ.ಮೀ. ಅಂತರದಲ್ಲಿ ಬೃಹತ್ ಶಿಲಾಯುಗದ ೩ ಸಮಾಧಿ ನೆಲೆಗಳು ಶೋಧಗೊಂಡಿವೆ. ಈ ನೆಲೆಗಳು ಇರುವುದು ಮಿಂಚೇರಿ ಗುಡ್ಡ, ಕಡ್ಲೇಗುದ್ದು, ದೊಡ್ಡಾಲಘಟ್ಟ ಪ್ರದೇಶಗಳಲ್ಲಿ. ಇಂತಹ ಪ್ರಾಚೀನ ನೆಲೆಗಳನ್ನು ಲೇಖಕನಾದ ನಾನು ಮತ್ತು ಕಲ್ಕುಂಟೆ ಕರಿಬಸಪ್ಪ ಪತ್ತೆ ಮಾಡಿದ್ದೇವೆ. ಈ ಮೂರು ನೆಲೆಗಳು ಸೇರಿ ೬೦ಕ್ಕೂ ಹೆಚ್ಚು ಸಮಾಧಿಗಳನ್ನು ಗುರುತಿಸಲಾಗಿದೆ. ಅತಿ ಹೆಚ್ಚು ಸಮಾಧಿಗಳಿರುವುದು ಕಡ್ಲೇಗುದ್ದು ಪ್ರದೇಶದಲ್ಲಿ. ಪ್ರಸ್ತುತ ನೆಲೆಗಳಿಗೆ ಪಾಂಡವರ ಗುತ್ತಿ, ಪಾಂಡವರ ದಿಬ್ಬ, ಗಾದ್ರಿ ಪಾಲನಾಯಕನ ಸಮಾಧಿ, ಮನೆದೊಲಗಳೆಂದು ಕರೆಯುತ್ತಿದ್ದಾರೆ. ಈ ರೀತಿಯಾಗಿ ಬೃಹತ್ ಶಿಲಾಯುಗದ ನೆಲೆಗಳಿಗೆ ಕರೆಯುವ ಪ್ರತೀತಿ ಕರ್ನಾಟಕದಲ್ಲಿದೆ.

ಸಮಾಧಿ ನೆಲೆಗಳು ಮಿಂಚೇರಿಗುಡ್ಡ, ದೊಡ್ಡಾಲಘಟ್ಟದಲ್ಲಿ ಮಟ್ಟಿಯ ಮೇಲೆ ಕಾಣಬಹುದು. ಕಡ್ಲೇಗುದ್ದು ನೆಲೆಯಲ್ಲಿ ನೆಲಮಟ್ಟದಲ್ಲಿ ಸಮಾಧಿಗಳು ರಚನೆಯಾಗಿರುವುದು ವಿಶೇಷ. ಈ ಮೂರು ನೆಲೆಗಳು ಹಳ್ಳದ ದಂಡೆಯ ಮೇಲಿದ್ದು, ಕಲ್ಲುಗುಂಡುಗಳು ಇರುವ ಕಡೆ ಬೃಹತ್ ಶಿಲಾಯುಗ ಮಾನವನು ಸಮಾಧಿ ಮಾಡುವುದಕ್ಕೆ ಆಯ್ಕೆ ಮಾಡಿಕೊಂಡಿದ್ದಾನೆ. ಅಲ್ಲದೆ ಕಬ್ಬಿಣದ ಅದಿರು ಸಮೀಪದಲ್ಲಿರುವುದರಿಂದ ವಾಸಿಸಲು ಸಹಕಾರಿಯಾಗಿವೆ. ವಸತಿ ನೆಲೆಯು ಸಮಾಧಿಯ ಉತ್ತರಕ್ಕೆ ಇರುವುದು. ಈ ರೀತಿಯಾದ ನೆಲೆಯು ದೊಡ್ಡಾಲಘಟ್ಟದಲ್ಲಿ ಕಾಣಬಹುದು. ಚಿತ್ರದುರ್ಗ ಪರಿಸರದಲ್ಲಿ ಬೃಹತ್ ಶಿಲಾಯುಗದ ಸಮಾಧಿ ನೆಲೆಗಳು ಸಾಕಷ್ಟು ಪ್ರಮಾಣದಲ್ಲಿ ವಸತಿ ನೆಲೆಯ ದಕ್ಷಿಣಕ್ಕೆ ಇರುವುದು ನನ್ನ ಕ್ಷೇತ್ರಕಾರ್ಯದಲ್ಲಿ ಸಾಬೀತಾಗಿದೆ. ಮುಂದುವರಿದು ಸಮಾಧಿ ನೆಲೆಗಳು ವಸತಿ ನೆಲೆಗಳ ಉತ್ತರ, ಪೂರ್ವ, ಪಶ್ಚಿಮ, ದಕ್ಷಿಣ ದಿಕ್ಕಿಗೆ ಇರುವುದನ್ನು ಗಮನಿಸಿದಾಗ ಗೊಂದಲವೆನಿಸುವುದು. ಆದರೆ ಬೃಹತ್ ಶಿಲಾಯುಗದ ಮಾನವನು ವಸತಿ ನೆಲೆಯಿಂದ ೧ ಕಿ.ಮೀ. ಅಂತರದಲ್ಲಿ ಯಾವುದೇ ದಿಕ್ಕಿಗೆ ಆಗಿರಬಹುದು. ಶಿಲಾಸಮೂಹಗಳು ಸಿಗುವ ಕಡೆ ಸಮಾಧಿಗಳನ್ನು ನಿರ್ಮಿಸಿದ್ದಾರೆ ಎಂದು ನಿರ್ಧಾರಕ್ಕೆ ಬರಬಹುದು.

ಪ್ರಸ್ತುತ ಮಿಂಚೇರಿ ಗುಡ್ಡ ಮತ್ತು ಕಡ್ಲೇಗುದ್ದು ಸಮಾಧಿ ನೆಲೆಯಲ್ಲಿ ಸ್ಟೋನ್ ಸರ್ಕಲ್ ವಿತ್ ಡಾಲ್ಮೆನ್ ಶಿಸ್ಟ್ ಸಮಾಧಿಯನ್ನು ಕಾಣಬಹುದು. ಆದರೆ ದೊಡ್ಡಾಲಘಟ್ಟ ನೆಲೆಯಲ್ಲಿ ಸ್ಟೋನ್ ಸರ್ಕಲ್ ವಿತ್ ಫಿಟ್ ಸಮಾಧಿಗಳು ಮಾತ್ರ ಕಾಣಸಿಗುತ್ತವೆ. ರುಬ್ಬುವ ಕಲ್ಲು–ಗುಂಡಿನಷ್ಟು ಗಾತ್ರದ ಕಲ್ಲು–ಗುಂಡುಗಳನ್ನು ವೃತ್ತಾಕಾರವಾಗಿ ಜೋಡಿಸಿದ್ದಾರೆ. ಮಿಂಚೇರಿ ಗುಡ್ಡದಲ್ಲಿ ಕಂಡುಬಂದಿರುವ ಸಮಾಧಿ ರಚನೆಯಲ್ಲಿ ಕಲ್ಲು ಚಕ್ಕೆಗಳನ್ನು ಬಳಸಿರುವುದು ಗಮನಾರ್ಹ. ಇದೇ ರೀತಿಯಾಗಿ ಚಕ್ಕೆ–ಕಲ್ಲುಗಳನ್ನು ಬಳಸಿಕೊಂಡು ನಿರ್ಮಿಸಿದ ಸಮಾಧಿ ರಚನೆಗಳು ಚಿತ್ರದುರ್ಗ ತಾಲ್ಲೂಕಿನ ಬೆಳಗಟ್ಟದ ನೆಲೆಯಲ್ಲಿ ಇವೆ. ಬೆಳಗಟ್ಟ ಮತ್ತು ಮಿಂಚೇರಿ ಗುಡ್ಡ ಸಮಾಧಿಗಳ ರಚನೆಗೆ ಹೋಲಿಕೆಯಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ. ಡಾಲ್ಮೆನ್ ಶಿಸ್ಟ್ ಸಮಾಧಿ ರಚನೆಯು ಮಿಂಚೇರಿ ಗುಡ್ಡದಲ್ಲಿ ಕಂಡುಬಂದಿದ್ದು, ಒಟ್ಟು ೧೦ ಸಮಾಧಿಗಳಲ್ಲಿ ೨ ಮಾತ್ರ ಈ ರೀತಿಯವು. ೬೦ ಅಡಿ ವ್ಯಾಸದಲ್ಲಿ ವೃತ್ತಾಕಾರವಾಗಿ ಚಕ್ಕೆ–ಕಲ್ಲುಗಳಿಂದ ನಿರ್ಮಿತಗೊಂಡಿದ್ದು, ಮಧ್ಯಭಾಗದಲ್ಲಿ ೧೦ ಅಡಿ ಉದ್ದದ ೨

* ಕೂನಬೇವು, ಚಿತ್ರದುರ್ಗ ತಾಲ್ಲೂಕು.



ಕಡ್ಲೇಗುದ್ದು, ಹಿರೇಗುಂಟನೂರು ಹೋಬಳಿ



ಮಿಂಚೇರಿ ಗುಡ್ಡ, ಹಿರೇಗುಂಟನೂರು ಹೋಬಳಿ

ಅಡಿ ದಪ್ಪದ ಬೃಹತ್ ಕಲ್ಲುಬಂಡೆಯನ್ನು ದಕ್ಷಿಣೋತ್ತರವಾಗಿ ಹಾಸಿದ್ದಾರೆ. ಇಂತಹ ಬಂಡೆಗಳನ್ನು ಬಳಸಿರುವುದನ್ನು ಗಮನಿಸಿದರೆ ಆತನು ಎತ್ತು ಮತ್ತು ಬಂಡಿಗಳ ಸಹಾಯ ಪಡೆದು ಸಾಗಿಸಿರುವ ಸಾಧ್ಯತೆಗಳಿವೆ. ಇದಕ್ಕೆ ಪೂರಕವಾಗಿ ಮಿಂಚೇರಿ ಗುಡ್ಡದಲ್ಲಿ ಗ್ರಾನೈಟ್ ಬಂಡೆಗಳು ಸಿಗುವುದಿಲ್ಲ. ದೊಡ್ಡಾಲಘಟ್ಟದಿಂದ ಕಡ್ಲೇಗುದ್ದು ವರೆಗೆ ಉದ್ದವಾದ ಶಿಲಾ ಬೆಟ್ಟವಿದೆ. ಬಹುಶಃ ಬಂಡೆಗಳನ್ನು ಈ ಭಾಗದಿಂದಲೇ ಸಾಗಿಸಿರಬೇಕು. ೩ ಕಡೆಗಳಲ್ಲಿ ಕಂಡುಬಂದಿರುವ ಸಮಾಧಿಗಳು ೩೦ ರಿಂದ ೬೦ ಅಡಿ ವ್ಯಾಸದಲ್ಲಿ ರಚಿತಗೊಂಡಿದ್ದು ನಶಿಸಿಹೋಗುತ್ತವೆ. ಅತಿ ಹೆಚ್ಚು ಸಮಾಧಿಗಳು ದೊಡ್ಡಾಲಘಟ್ಟ ಮತ್ತು ಕಡ್ಲೇಗುದ್ದು ನೆಲೆಯಲ್ಲಿ ಇರುವುದನ್ನು ಗಮನಿಸಿದಾಗ ಜನಸಂಖ್ಯೆ ಪ್ರಮಾಣವನ್ನು ಗುರುತಿಸಬಹುದು. ಅದೇ ರೀತಿಯಾಗಿ ಸಮಾಧಿಗಳನ್ನು ಗಮನಸಿದಂತೆ ಮತ್ತಷ್ಟು ವಿಶ್ಲೇಷಣೆ ನೀಡಬಹುದು.

ದೊಡ್ಡಾಲಘಟ್ಟದಲ್ಲಿ ಶಿಕ್ಷಕರಾದ ಬಿ.ಟಿ. ನಾಗರಾಜ್‌ರವರನ್ನು ಕೇಳಿದಾಗ ಮನೆದೊಲ ಎಂದು ಕರೆಯುವ ವಸತಿ ನೆಲೆಯೊಂದು ದೊರಕಿದೆ. ಈ ವಸತಿ ನೆಲೆಯು ಬೃಹತ್ ಶಿಲಾಯುಗದ ಪ್ರಮುಖ ನೆಲೆಯಾಗಿದೆ ಎಂದು ನಿರ್ಧರಿತ ವಿಷಯ. ಈ ವಸತಿ ನೆಲೆಯು ಸಮಾಧಿನೆಲೆಯ ಉತ್ತರದಿಕ್ಕಿದ್ದು ಪ್ರಾಚ್ಯ ಅವಶೇಷಗಳಿಂದ ಕೂಡಿದೆ. ಈ ಹಿಂದೆ ಬಿ.ಟಿ. ನಾಗರಾಜ್‌ರವರಿಗೆ ಕೆಂಪು ಮತ್ತು ಕಪ್ಪು ಮಡಕೆಗಳು ದೊರಕಿದ್ದವು ಅಲ್ಲದೆ ಮೂಳೆಗಳ ಅವಶೇಷಗಳು ಕೂಡ ಕಾಣಬಹುದು ಎಂಬ ಮಾಹಿತಿಯನ್ನು ತಿಳಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ವಸತಿ ನೆಲೆಯು ನೀರಾವರಿಯಿಂದ ನಶಿಸಿಹೋಗುತ್ತಿರುವುದರಿಂದ ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಮಡಕೆ ಚೂರುಗಳನ್ನು ಕಾಣಬಹುದು. ಈ ಆಧಾರದ ಮೇಲೆ ಸಮಾಧಿ ನೆಲೆಯು ವಸತಿ ನೆಲೆಯ ದಕ್ಷಿಣ ದಿಕ್ಕಿಗಿರುತ್ತದೆ ಎಂಬುದು ಸತ್ಯ.

ಈ ಹಿಂದೆ ಭೀಮಸಮುದ್ರದ ಬೊಮ್ಮೇನಹಳ್ಳಿಯಲ್ಲಿ ನವ ಶಿಲಾಯುಗದ ಕಲ್ಲಿನ ಕೊಡಲಿಗಳನ್ನು ಪತ್ತೆ ಮಾಡಲಾಗಿರುತ್ತದೆ. ಇದರ ತರುವಾಯ ಈ ಪರಿಸರದಲ್ಲಿ ಬೃಹತ್ ಶಿಲಾಯುಗದ ನೆಲೆಗಳನ್ನು ಶೋಧಿಸಲಾಗಿದೆ. ಈ ಹಿನ್ನೆಲೆಯಲ್ಲಿ ನವಶಿಲಾಯುಗದಿಂದ (ಕ್ರಿ.ಪೂ. ೧೬೦೦ ರಿಂದ ೮೦೦) ಬೃಹತ್ ಶಿಲಾಯುಗದ (ಕ್ರಿ.ಪೂ. ೮೦೦ರಿಂದ ಕ್ರಿ.ಪೂ. ೨೦೦) ವರೆಗೆ ಹಿರೇಗುಂಟನೂರು ಪರಿಸರವು ಮಹತ್ತರವಾದ ಐತಿಹಾಸಿಕತೆಯನ್ನು ಹೊಂದಿದೆ. ಡಾ॥ ಎಸ್.ವೈ. ಸೋಮಶೇಖರ್‌ರವರು ಈ ಪರಿಸರವನ್ನು ಕ್ಷೇತ್ರಕಾರ್ಯದ ಮೂಲಕ ಗಮನಿಸಿ ಮತ್ತಷ್ಟು ನೆಲೆಗಳು ಸಿಗುವ ಸಾಧ್ಯತೆಗಳಿವೆ ಹಾಗೂ ಕೂನಬೇವು, ನರೇನಹಾಳ್ ಸಮಾಧಿ ನೆಲೆಗಳನ್ನು ಬಿಟ್ಟರೆ ಅತಿ ಹೆಚ್ಚು ಶಿಲಾ ಸಮಾಧಿಗಳು ಸಿಕ್ಕಿರುವುದು ಈ ಭಾಗಗಳಲ್ಲಿಯೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಆಧಾರ ಗ್ರಂಥಗಳು

೧. ಅ.ಸುಂದರ, ಬ್ರಹ್ಮಗಿರಿ ಮತ್ತು ಚಂದ್ರವಳಿ, ೧೯೭೩, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.

೨. ಚಿತ್ರದುರ್ಗ ಬಳಿ ಬೃಹತ್ ಶಿಲಾಗೋರಿಯ ನೆಲೆ ಪತ್ತೆ, ಸಂಯುಕ್ತ ಕರ್ನಾಟಕ ದಿನಪತ್ರಿಕೆ ದಿ: ೦೫.೦೧.೨೦೧೧.

೩. ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ, ೨೦೧೩-೧೪ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಚಿತ್ರದುರ್ಗ.

೪. ಮಂಜುನಾಥ್ ನಾಯಕ ಕೆ, ಚಿತ್ರದುರ್ಗ ಜಿಲ್ಲಾ ದರ್ಶನ, ೨೦೧೫, ಪಾರ್ವತಿ ಪ್ರಕಾಶನ, ಪಂಡ್ರಹಳ್ಳಿ.

೫. ತಹಶೀಲ್ದಾರ್‌ರವರ ಕಾರ್ಯಾಲಯ, ಚಿತ್ರದುರ್ಗ ತಾಲ್ಲೂಕು, ಗ್ರಾಮ ವಿವರಣಾ ಪಟ್ಟಿ, ೨೦೧೫, ಚಿತ್ರದುರ್ಗ.

೬ ಶಿವತಾರಕ್ ಕೆ.ಬಿ., ಕರ್ನಾಟಕ ಪುರಾತತ್ವ ನೆಲೆಗಳು, ೨೦೦೧, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.

೮

ಪರಂಪರೆಯ ಕಾವಿ (ಗೈರಿಕಾ), ಭಿತ್ತಿಚಿತ್ರ "ಗೀರುಶಿಲ್ಪ" ಶಾಸನ, ಬಂಡೆಯಾಸರೆ (ಮುರಕಲ್ಲು) ಚಿತ್ತಾರ

ಎಸ್.ಎ. ಕೃಷ್ಣಯ್ಯ*

ಜನಪದ ಚಿತ್ರಕಲೆಗಳು ಮನುಷ್ಯ ನಿರ್ಮಿತ. ಪ್ರಕೃತಿಯಲ್ಲಿ ಕಂಡಂತಹ ವಿನ್ಯಾಸಗಳು, ಪ್ರಾಣಿ, ಪಕ್ಷಿ, ಜಂತುಗಳ ಸಾಹಚರ್ಯವನ್ನು ಜನಸಮುದಾಯ ಭಾಷೆಯ ಧ್ವನಿಗಿಂತ ಚಿತ್ರ ಮಾಧ್ಯಮದಲ್ಲಿ ದಾಖಲಿಸಿದ ಅನೇಕ ಚಿತ್ರಗಳನ್ನು, ಗುಹಾಲಯಗಳಲ್ಲಿ ಸಂಶೋಧಕರು ಪತ್ತೆಹಚ್ಚಿದ್ದಾರೆ. ಹೀಗಾಗಿ ಚಿತ್ರಕಲೆಗಳ ಆರಂಭವನ್ನು ಪುರಾತನ ಬಂಡೆಯಾಸರೆಗಳಲ್ಲಿ ಕಂಡು ಹಿಡಿಯಲಾಗಿದೆ. ಬಹುತೇಕ ಈ ಪುರಾತನ ಬಂಡೆಯಾಸರೆಗಳ ಚಿತ್ರಗಳು Flat ಚಪ್ಪಟೆ ಮಾದರಿಯಲ್ಲಿದ್ದು, ಪುರಾತನ ಬಂಡೆಯಾಸರೆಗಳಲ್ಲಿ ವಾಸವಾಗಿದ್ದ ಜನಸಮುದಾಯದವರ ಮಾನಸಿಕ ಬಿಂಬಗಳೇನು ಎಂಬುದು ಈ ಚಿತ್ರಗಳಿಂದ ವ್ಯಕ್ತವಾಗುವುದು. ಮುಖ್ಯವಾಗಿ ನೈಸರ್ಗಿಕ ಬಣ್ಣಗಳಾದ ಕೆಂಪು, ಕಾವಿ, ಕಪ್ಪು, ಬಿಳಿ ಬಣ್ಣಗಳನ್ನು ಬಳಸುತ್ತಿದ್ದರು. ಬಂಡೆಯಾಸರೆ ಚಿತ್ರಗಳಲ್ಲಿ ಮ್ಯಾಂಗನೀಸ್, ಹೆಮೆಟಯಟ್, ಮೃದು ಕೆಂಪು ಶಿಲೆ ಮತ್ತು ಮರದ ಇದ್ದಿಲು, ಜೇಡಿಮಣ್ಣು ಈ ಬಣ್ಣಗಳನ್ನು ಉಪಯೋಗಿಸುತ್ತಿದ್ದರು.

ಭಾರತೀಯ ಚಿತ್ರಕಲಾ ಪ್ರಕಾರಗಳಲ್ಲಿ "ಗೈರಿಕಾ" ಕಾವಿ ಚಿತ್ತಾರ (ಗೀರುಚಿತ್ರ ರಚನೆ) ಪ್ರಕಾರ ಅತ್ಯಂತ ಪುರಾತನ ಪ್ರಕಾರವಾಗಿದೆ. ಡಾ. ಅ.ಲ. ನರಸಿಂಹನ್ ಗೈರಿಕಾ ಕಲೆಯ ಬಗ್ಗೆ ಮಾಹಿತಿಯನ್ನು ತಮ್ಮ ಪಿಎಚ್.ಡಿ. ಪ್ರಬಂಧದಲ್ಲಿ ನೀಡಿರುವವರು, 'ಗೈರ್' ಪದ ಕೆಂಪುವರ್ಣವನ್ನು ಸೂಚಿಸುವಂತದ್ದು, ದ್ರಾವಿಡ ಭಾಷಾ ನೆಲೆಯಲ್ಲಿ 'ಕುರ್ದಿ' (ಕೆಂಪು ಓಕಳಿ ನೀರು), 'ಗುರ್-ಗ(ಕ)ಂಜಿ" ಬೀಜ (ಕೆಂಪು ವರ್ಣದ ಚಿಕ್ಕಬೀಜ), ಈ ಎಲ್ಲ ಪದಗಳು ಕಡು ಕೆಂಪು ವರ್ಣವನ್ನು ತಿಳಿಸುತ್ತದೆ. ಪದ ನಿಷ್ಪತ್ತಿ ಪ್ರಕಾರ "ಗೈರು" ಕೆಂಪನ್ನು ಸೂಚಿಸುವುದು, ಇದರ ಮೂಲ ಬಾಂಗ್ಲ ಎಂದರೂ ದ್ರಾವಿಡ ಭಾಷೆಯ ಈ ಪದ 'ಗೈರಿಕಾಕಲೆ' ಬೆಂಗಾಲದತ್ತ ರವಾನೆಯಾಗಿರಬಹುದು, ನಾಲ್ಕನೆ ಶತಮಾನದಲ್ಲಿ ರಚಿತವಾದ ಹರ್ಷಚರಿತ್ರದಲ್ಲಿ 'ಗೈರಿಕ' ಕಲಾಗಾರಿಕೆ ಬಗ್ಗೆ ವರ್ಣನೆ ಇದೆ ಎಂಬುದು ಡಾ. ಅ.ಲ. ನರಸಿಂಹನ್ ಅಭಿಪ್ರಾಯ. ಕಡು ಕಾವಿ ಕೆಂಪು ಬಳಕೆಯನ್ನು ಸ್ಥಪತಿಗಳು, ಶಿಲ್ಪಿಗಳು, ಆಚಾರ್ಯರು, ದೇಸೀ ಚಿತ್ರಕಾರರು, ಬಿತ್ತಿಚಿತ್ರಕಾರರು ಇವರೆಲ್ಲ ಬಳಸುವ ಖನಿಜಯುಕ್ತವಾದ ಬಣ್ಣ, ಕೆಂಪು ಮಣ್ಣು. (ಕೆಂಪು ಮಣ್ಣು: Ochre natural earth pigment, ranges in color from yellow to deep orange or brown.)

ಮುಖ್ಯವಾಗಿ ಗೀರು/ರೇಖೆಗಳ ಚಿತ್ತಾರ ಎಲ್ಲಿಂದ ಆರಂಭವಾಯಿತು ಎಂದು ಹೇಳಬಯಸುವುದಾದರೆ ಬುಡಕಟ್ಟು ಜನ ಸಮುದಾಯದಿಂದ ಆರಂಭವಾಗಿರುವುದಕ್ಕೆ ಐತಿಹಾಸಿಕ ಸಾಕ್ಷಿಗಳಿವೆ, ಪುರಾವೆಗಳಿವೆ.

ಉಡುಪಿ ಜಿಲ್ಲೆಯ ಕೊಲ್ಲೂರು ಕಾನನದ ನಡುವೆ ಇರುವ ಐತಿಹಾಸಿಕ ನೆಲೆಯಾದ ಬುದ್ದನಜಡ್ಡು ಎಂಬಲ್ಲಿ ಮುರಕಲ್ಲಿನ/ಬಂಡೆಹಾಸಿನ (ಅಡಿಯಲ್ಲಿ ಗಟ್ಟಿ ಕಲ್ಲು ಇದೆ) ಬಣ್ಣವೇ ಕಾವಿಯಾಗಿ, ಅದರ ಮೇಲ್ ಪದರದಲ್ಲಿ ಗೀರುಚಿತ್ರಗಳು, ಕೆತ್ತನೆಗಳು ಇರುವುದು ಅಚ್ಚರಿ ಮೂಡಿಸುತ್ತವೆ. ಭಾರತದಲ್ಲಿ ಇಂತಹ ಚಿತ್ರಗಾರಿಕೆ (ಮುರಕಲ್ಲಿನ ಮೇಲಣ ಬಂಡೆಯಾಸರೆ ಚಿತ್ರ) ದೊರಕಿರುವುದು ಇದೇ ಮೊದಲು ಎಂಬುದು ಖ್ಯಾತ ಇತಿಹಾಸಗಾರರಾದ ಡಾ. ಅ. ಸುಂದರ, ಪ್ರೊ. ಮುರುಗೇಶಿ ಟಿ. ಇವರೆಲ್ಲರ ಅಭಿಪ್ರಾಯವೂ ಆಗಿದೆ. ಮುರಕಲ್ಲಿನ ಮೇಲೆ ಗೀರು ಚಿತ್ರ ಬಿಡಿಸಿರುವ ನಂದಿ, ಹರಿಣ, ಚಕ್ರ, ಮನುಷ್ಯ ಈ ಎಲ್ಲ ಆಶಯಗಳು ಯಾವುದೋ ವಿಧಿಯನ್ನು ತಿಳಿಸುತ್ತದೆ. ನಂದಿ ಆಶಯದ ಚಿತ್ತಾರದ ಆಚರಣೆಯ ವಿಧಿ ಇನ್ನೂ ಜೀವಂತವಾಗಿರುವುದಕ್ಕೆ ೧೯೩೪ರ ಸಂದರ್ಭದಲ್ಲಿ ಆರ್ನಾಲ್ಡ್ ಬಾಕೆ ದಾಖಲಿಸಿದ ಮೂಕಿ ಚಿತ್ರದ ತುಣುಕುಗಳು ರಾಷ್ಟ್ರೀಯ ಇತಿಹಾಸ ಕಟ್ಟಿಕೊಡುವಲ್ಲಿ ಮಹತ್ತರ ಪಾತ್ರವಹಿಸುತ್ತವೆ.

* ನಿರ್ದೇಶಕರು, ಪ್ರಾಚ್ಯಸಂಚಯ ಸಂಶೋಧನ ಕೇಂದ್ರ, ಉಡುಪಿ-೫೭೬೧೦೨.



ಧವಳಪ್ಪನಗುಡ್ಡದ ಪೂರ್ವಪಾರ್ಶ್ವದಲ್ಲಿ ಕಟ್ಟಿಗೆ ಸಂಗಪ್ಪ ವಿಗ್ರಹದ ಬಳಿ ಬೃಹತ್ ನೈಸರ್ಗಿಕ ಗುಳಿಯಲ್ಲಿ ಕೆಂಪು ಬಣ್ಣದಲ್ಲಿ ಬರೆದ ಶಾಸನ ಮತ್ತು ಲಿಂಗ


ಕಾವಿ ಬಣ್ಣ ಪ್ರಕೃತಿಜನ್ಯವಾದದ್ದು, ಅಂತೆಯೇ ಚಿತ್ರದುರ್ಗದ ಸಮೀಪವಿರುವ ಅನೇಕ ಗುಹೆ ಹಾಗೂ ಬಯಲುಗಳಲ್ಲಿ ಕಾವಿ ಬಣ್ಣದ ಚಿತ್ತಾರಗಳಿವೆ. ಸುಮಾರು ೪ ಅಥವಾ ೫ನೇ ಶತಮಾನದ ಸಂದರ್ಭದಲ್ಲಿ ಕಾವಿ ಬಣ್ಣದಲ್ಲಿ ಬರೆದಿರುವ ಶಾಸನ ಚಿತ್ರದುರ್ಗದ ದವಳಪ್ಪನ ಗುಡ್ಡದಲ್ಲಿ ಡಾ. ಬಿ. ರಾಜಶೇಖರಪ್ಪ ಇತಿಹಾಸ ತಜ್ಞರು ಪತ್ತೆಹಚ್ಚಿದ್ದಾರೆ.

ಕಾವಿ ಬಣ್ಣದಲ್ಲಿ ಶಾಸನ: ಶ್ರೀವಿನಯವರ್ಮ (?) (ಕ್ರಿ.ಶ. ೫ನೆಯ ಶತಮಾನ)

ಡಾ. ರಾಜಶೇಖರಪ್ಪ ಚಿತ್ರದುರ್ಗ ತಿಳಿಸುವಂತೆ ದವಳಪ್ಪನಗುಡ್ಡದ ಪೂರ್ವ ಪಾರ್ಶ್ವದಲ್ಲಿ ಬೃಹತ್ ಬಂಡೆಯಲ್ಲಿ ನೈಸರ್ಗಿಕವಾಗಿ ಆಗಿರುವ ಆಳೆತ್ತರದ ಅಂಡಾಕೃತಿಯ ಗುಳಿಯಲ್ಲಿ ಕೆಂಪು ಬಣ್ಣದಲ್ಲಿ ಬರೆದಿರುವ ಅರೆಬರೆಯಾಗಿ ಮಸಕಾಗಿರುವ ಒಂದು ಶಿವಲಿಂಗದ ಚಿತ್ರ ಮತ್ತು ಎರಡು ಪಂಕ್ತಿಗಳ ಕ್ರಿ.ಶ. ಸುಮಾರು ೪೦೦ರ ಕಾಲದ ಕನ್ನಡ ಲಿಪಿಯ ಸಂಸ್ಕೃತ ಭಾಷೆಯ ಒಂದು ಚಿಕ್ಕ ವರ್ಣಶಾಸನ ಇವೆ. ಈ ವರ್ಣಶಾಸನದ್ಲಿ "ತೆಜಸ್ವಾಮಿನ: ಶ್ರೀವನಯವರ್ಮ್ಮಣನಾಮ" ಎಂದಿರುವುದು ಗಮನಾರ್ಹವಾಗಿದೆ. ಇಂಥ ವಿಚಿತ್ರ ಜಾಗದಲ್ಲಿ ಈ ಚಿತ್ರ ಮತ್ತು ಶಾಸನಗಳನ್ನು ಏಕೆ ರಚಿಸಲಾಯಿತೋ ಸ್ಪಷ್ಟವಾಗುವುದಿಲ್ಲ. "ಶ್ರೀವಿನಯವರ್ಮ ಹೆಸರಿನ ತೇಜಸ್ವಾಮಿಗಳು" ಎಂಬ ಅದರ ಒಕ್ಕಣೆಯನ್ನು ನೋಡಿದರೆ ಈ ಶ್ರೀವಿನಯವರ್ಮ ಅಥವಾ ಬರಿ ವಿನಯವರ್ಮ ಒಬ್ಬ ಕದಂಬವಂಶಜನಿರಬಹುದೇ ಎಂದು ಸಂಶಯವಾಗುತ್ತದೆ.

ಕಾವಿ ಬಣ್ಣವನ್ನು ಮೂಲವಾಗಿರಿಸಿಕೊಂಡು ಬರೆದಿರುವ ಅಜಂತಾ–ಎಲ್ಲೋರಾ ಗುಹಾ ಚಿತ್ರಗಳು (ಫ್ರೆಸ್ಕೋ: ಕೈಮಣ್ಣು) ಹಾಗೂ ಕಲ್ಲುಬಂಡೆಗೆ ಕೈಮಣ್ಣು ಸೇರಿಸಿ ಚಿತ್ತಾರಗಳನ್ನು ಬರೆದಿರುವ ಗೈರಿಕಾ ಕಲೆ (ಮೂಲ ಕೆಂಪು ಬಣ್ಣ ಬಳಸಿದ ಗೀರುಶಿಲ್ಪ) ಆಂಧ್ರ ಪ್ರದೇಶದ ಲೇಪಾಕ್ಷಿಯಲ್ಲೂ ಕಾಣಬಹುದು (ಸು. ೧೬ನೇ ಶತಮಾನ).

ಕಾವಿಗಳಲ್ಲಿ ಎರಡು ವಿಧ: ಕೆಂಪು ಕಾವಿ ಮತ್ತು ಕಪ್ಪು ಕಾವಿ (ಕಪ್ಪು ಕಾವಿ ಎಂದರೆ ಪೂರ್ಣವಾಗಿ ಕಪ್ಪಲ್ಲ; ಕಡು ಕೆಂಪು), ಸಮುದ್ರದ ನಡುಗಡ್ಡೆಗಳಲ್ಲಿ ದೊರಕುತ್ತಿದ್ದ ಬಣ್ಣದ ಕಲ್ಲುಗಳನ್ನು ಜನರಿಗೆ ವಿತರಿಸುತ್ತಿದ್ದವರಲ್ಲಿ ಲಂಬಾಣಿ ಅಲೆಮಾರಿ



ಬುದ್ದನಜಡ್ಡು ಬಂಡೆಯಾಸರೆ ಬೇಸಿಗೆಕಾಲದ ಸಂದರ್ಭ: ಮುರಕಲ್ಲಿನ ಚಿತ್ರ

ಬುಡಕಟ್ಟು ಜನವರ್ಗದವರ ಪಾತ್ರ ಹಿರಿದಾದುದು. ಇವುಗಳನ್ನು ಮಂಜ/ಉರ್ಮಂಜ ಎಂದು ಕರೆಯುತ್ತಿದ್ದರು. ಸಂತೆಗಳಲ್ಲಿ ಮಾರಲ್ಪಡುತ್ತಿದ್ದವು. ಇವುಗಳು ಅನೇಕ ಚರ್ಮ ವ್ಯಾಧಿಗಳನ್ನು ಶಮನ ಮಾಡುತ್ತಿದ್ದವು ಎಂಬುದನ್ನು ಜನ ಬಲ್ಲವರಾಗಿದ್ದರು.

ಉತ್ತರ ಕರ್ನಾಟಕದಲ್ಲಿ ಜಿನಗಾರರು ಕಲಾವಂತಿಗೆ ಹೆಸರು ಪಡೆದಿರುವಂತೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ (ದ.ಕ. ಮತ್ತು ಉಡುಪಿ) ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಷ್ಠಶಿಲ್ಪ ಹಾಗೂ ಬಿತ್ತಿಚಿತ್ರದ ಕಲಾ ಕೌಶಲತೆಗೆ ಹೆಸರು ಪಡೆದ ಗುಡಿಗಾರರು, ಇವರ ಮನೆಮಾತು ಕೊಂಕಣಿ, ಕ್ರಿ.ಶ. ೧೫೨೮–೬೦ರ ಸಂದರ್ಭಗಳಲ್ಲಿ ಮತಾಂತರ ತಪ್ಪಿಸಿಕೊಳ್ಳಲು ವಲಸೆ ಬಂದವರು. ಮುಲ್ಕಿ ಸಾವಂತ ಅರಸು ಮನೆತನ, ಸೂರಾಲು ಅರಸ ಮನೆತನದವರು ಇವರಿಗೆ ಆಶ್ರಯ ನೀಡಿದವರೆಂಬುದು ಇತಿಹಾಸದ ಮಾತು. ಇದಲ್ಲದೆ ಸ್ಥಳೀಯ ಪಾಂಚಾಳ ಕುಲದ ವೃತ್ತಿಕಸುಬುದಾರರು ಗೀರುಚಿತ್ರ ಕಲೆಗೆ ಸಹಕರಿಸಿದ್ದಾರೆ. ಇನ್ನೂ ಅನೇಕ ಅಲೆಮಾರಿ ಜನವರ್ಗದವರುಗಳಲ್ಲಿ ಬಿತ್ತಿಚಿತ್ರಗಾರಿಕೆ ಕೌಶಲ ಕಂಡುಬಂದಿದೆ. ಮುಖ್ಯವಾಗಿ ಪಟಚಿತ್ರಕಾರರು, (ಪೋತಿಸೋಡ್ನ) ದಾಯತಿಕರ್ (ಚಿತ್ರಕರ್ಮಿಗಳು/ಚರ್ಮಪಟಕಾರರು) ಲೆಪ್ಪದಲ್ಲಿ ಮಾಡುವ ಚಿತ್ರಕರ್ಮಿಗಳಾದ ಚಿತ್ರಗಾರರು, ಪೈತಾನಿ ಪಟಚಿತ್ರಕಾರರು ಮುಂತಾದವರು ಈ ನಾಡಿನ ಅನೇಕ ದೇವಾಲಯಗಳಲ್ಲಿ ಮಸೀದಿಗಳಲ್ಲಿ, ಚರ್ಚುಗಳಲ್ಲಿ ಚಿತ್ರ ಆಶಯಗಳನ್ನು ಬಿಡಿಸಿ ಅನಾಮಿಕರಾಗಿಯೇ ಉಳಿದಿದ್ದಾರೆ. ಈಗಲಾದರೂ ಜನಸಮುದಾಯದಲ್ಲಿ ಈ ಕಲೆಯನ್ನು ಅಂತರ್ಗತ ಮಾಡಿಕೊಂಡ ಹಿರಿಯ ಕಲಾವಿದರು, ಮಣ್ಣಿನ ಮನೆ ನಿರ್ಮಾಣದ ಮೇಸ್ತ್ರಿಗಳು, (ಕನ್ನಡ, ಕೊಂಕಣಿ, ಮರಾಠಿ ಮಾತನಾಡುವ ಕುಲ ಬಾಂಧವರು) ಕರಕುಶಲಿಗರಾದ ಚಿತ್ರಕರ್ಮಿಗಳನ್ನು ಗುರುತಿಸುವ ಕೆಲಸವನ್ನು ಹಾಗೂ ಅನ್ವೇಷಣೆಯನ್ನು ಇಂದು ಅಗತ್ಯವಾಗಿ ಮಾಡಬೇಕಾಗಿದೆ.




೬

ತೀರ್ಥಹಳ್ಳಿ ತಾಲ್ಲೂಕಿನ ಬಂಡೆಗಲ್ಲು ಚಿತ್ರಗಳು

ಮೇಕನಗದ್ದೆ ಲಕ್ಷ್ಮಣಗೌಡ*

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಗುಡ್ಡೇಕೇರಿ ಹೊಸೂರು ಎಂಬ ಊರಿನಲ್ಲಿಕ್ರಿ.ಶ. ೬–೭ನೇ ಶತಮಾನದ ಕಾಲಕ್ಕೆ ಸೇರಿದ್ದೆಂದು ಹೇಳಲಾಗುವ ಬಂಡೆಗಲ್ಲು ಚಿತ್ರಗಳು ದೊರೆತಿವೆ. ಕುಂದಗ್ರಾಮದ ಗಣೇಶ್ ಇವರ ನೆರವಿನೊಂದಿಗೆ ಇವುಗಳನ್ನು ಸಂಶೋಧಿಸಿದ್ದು ಇದೊಂದು ಐತಿಹಾಸಿಕ ಸ್ಮಾರಕ ಎನ್ನಲಾಗಿದೆ.

ಊರಿನ ಪೂರ್ವದಿಕ್ಕಿನಲ್ಲಿ ನೆಡಬಾರು ಎಂಬ ಊರಿಗೆ ಹಾದುಹೋಗಿರುವ ಕಾಲುದಾರಿಯಲ್ಲಿ ಸಾಗಿದರೆ ಎದುರಾಗುವ ದಕ್ಷಿಣದಿಂದ ಉತ್ತರಕ್ಕೆ ಹರಿಯುತ್ತಿರುವ ಮಲಪಾವತಿ ನದಿಯ ದಂಡೆಯ ಮೇಲೆ ಇವು ಕಂಡುಬಂದಿವೆ. ಮಲಪಾವತಿ ನದಿಯು ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಹರಿಯುವ ತುಂಗಾನದಿಯ ಪ್ರಮುಖ ಉಪನದಿಯಾದ ಮಾಲತಿ ನದಿಯನ್ನು ಸೇರುತ್ತದೆ. ಇದು ಆಗುಂಬೆಯ ಜೋಗಿಗುಂಡಿ ಜಲಪಾತದಲ್ಲಿ ಹುಟ್ಟಿ ಉತ್ತರದ ಕುಂದಾದ್ರಿಯ ಕಡೆಗೆ ಹರಿದು ಬರುತ್ತದೆ. ನದಿಯ ಅಗಲ ಸುಮಾರು ನೂರು ಅಡಿಗೂ ಹೆಚ್ಚು ವಿಸ್ತಾರವಿದೆ. ನದಿಯ ಪಾತ್ರದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಭಾಗ ಮರಳಿನಿಂದಾವರಿಸಿದ್ದು ಕುರುಚಲು ಗಿಡಗಳು ಹುಟ್ಟಿ ಬೆಳೆದಿವೆ. ಮಳೆಗಾಲದಲ್ಲಿ, ಹಾಗೂ ಹೆಚ್ಚು ಮಳೆ ಬೀಳುತ್ತಿದ್ದಾಗ ಅಷ್ಟೂ ಜಾಗ ಜಲಾವೃತ್ತವಾಗಿರುತ್ತದೆ. ಬೇಸಿಗೆಯಲ್ಲಿ ನೀರಿನ ಹರಿವು ಕಡಿಮೆಯಿರುತ್ತದೆ.



೧. ಮಾಲಪಾವತಿ ನದಿ ಹರಿವು

೨. ನದಿ ಪಾತ್ರ

೩. ನೀರಿನ ಹೊಂಡ

೪. ಚಿತ್ರಗಳಿರುವ ಬಂಡೆ

೫. ಕೋಟೆಗುಡ್ಡಕ್ಕೆ ಸೇರಿದ ಪ್ರದೇಶ

ಹೊಳೆಯ ದಂಡೆಯು ಪೂರ್ವಕ್ಕೆ ಎತ್ತರವಾದ ಸಾಗು ಮಾಡದಿರುವ ಕಾಡಿನಿಂದ ಸುತ್ತುವರಿದಿದೆ. ಕಾಡಿನ ಇಳಿಜಾರಾದ ಅಂಚು ಮತ್ತು ಹೊಳೆಯ ದಂಡೆಯ ಕುರುಚಲು ಕಾಡಿನ ಅಂಚು ಸೇರುವಲ್ಲಿ ಸಣ್ಣ ನೀರಿನ ಹೊಂಡವಿದೆ. ಹಿಂಭಾಗದ ಕಾಡನ್ನು ಕೋಟೆಗುಡ್ಡೆ ಎನ್ನುತ್ತಾರೆ. ಹಿಂದೆ ಇದರ ನೆತ್ತಿಯಲ್ಲಿ ಕೋಟೆ ಇದ್ದ ಕುರಿತು ವಿವರಗಳು ದೊರೆಯುತ್ತವೆ. ಹೊಂಡದಲ್ಲಿ ಮುಳುಗಿರುವ ಕಲ್ಲು ಸೇರಿದಂತೆ ಇರುವ ಮೂರು ಕಲ್ಲುಗಳಲ್ಲಿ ಚಿತ್ರಗಳ ಕೆತ್ತನೆಯಿದೆ. ಇವುಗಳನ್ನು ಶಾಸನ ತಜ್ಞ ಬಿರೂರಿನ ಇಸ್ಮಾಯಿಲ್ ಇವರ ನೆರವಿನೊಂದಿಗೆ ಪರಿಶೀಲಿಸಿದಾಗ ಈ ಹಿಂದೆ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಹೊಳಲೂರು ಹಾಗೂ ಹೊಳೆಹನಸವಾಡಿಯಲ್ಲಿ ತುಂಗಭದ್ರನದಿಯ ಮಧ್ಯೆದಲ್ಲಿರುವ ಬಂಡೆಗಳ ಮೇಲೆ ದೊರೆತ ಚಿತ್ರಗಳೊಂದಿಗೆ ಹೋಲಿಸಿ ನೋಡಿದಾಗ ಅವು ಬರಿಯ (ಪ್ರಾಗೈತಿಹಾಸಿಕ ಕಾಲದವು) ರೇಖಾಚಿತ್ರಗಳಾಗಿದ್ದು ಇಲ್ಲಿದೊರೆತ ಚಿತ್ರಗಳಲ್ಲಿ ಆಳವಾಗಿ ಕೊರೆದ ಪ್ರಾಣಿ ಪಕ್ಷಿಗಳ ಚಿತ್ರಗಳು ಕಂಡುಬರುತ್ತವೆ.

ಇಲ್ಲಿ ಮೂರು ಬಂಡೆಗಳ ಮೇಲೆ ಚಿತ್ರಗಳನ್ನು ಅಚ್ಚುಕಟ್ಟಾಗಿ ಕೆತ್ತಲಾಗಿದೆ. ಅವೆಲ್ಲವೂ ಬಳಪದ ಕಲ್ಲುಗಳಾಗಿವೆ. ಈ ಕಲ್ಲುಗಳು ಎತ್ತರದಲ್ಲಿದ್ದು ಇತ್ತೀಚಿಗೆ ನೀರಿನಲ್ಲಿ ಮುಳುಗಿರುವುದಾಗಿ ಸ್ಥಳೀಯರಿಂದ ಮಾಹಿತಿ ದೊರೆಯುತ್ತದೆ. ಮೊದಲನೆಯ ದೊಡ್ಡಬಂಡೆ ನೀರಿನಿಂದ ಮೇಲ್ಭಾಗದಲ್ಲಿದ್ದು ಹೆಚ್ಚಿನ ಹಿಂಭಾಗ ಮಣ್ಣೊಳಗೆ ಸೇರಿಕೊಂಡಿದೆ. ಕೆಳಭಾಗ ನೀರಿನ ಹೊಂಡದೊಳಗೆ ಮುಳುಗಿದೆ. ನೀರಿನಿಂದ ಹೊರಗಿರುವ ಭಾಗದ ನೆತ್ತಿಯಲ್ಲಿ ಮೇಲೆ ಮಸುಕು ಮಸುಕಾದ ಹಾಗೂ ಪಾಚಿಕಟ್ಟಿದ ಚಿತ್ರಗಳಿವೆ. ಮಾನವಾಕೃತಿಯ ಸುತ್ತಲೂ ಪ್ರಾಣಿಯ ಚಿತ್ರಗಳೆಂದು ಅವುಗಳನ್ನು ಗುರುತಿಸಬಹುದಾಗಿದೆ. ಅದೇ ಬಂಡೆಯ ಕೆಳಭಾಗದಲ್ಲಿ ಕೊರೆದ ವಿವಿಧ ಪ್ರಾಣಿಗಳ ಚಿತ್ರಗಳನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಅವುಗಳಲ್ಲಿ ಕೆಳಭಾಗದ ಕೆಲವು

* ಹಸಿರು ಮನೆ ನಂದನ್, ಆಗುಂಬೆ ಗ್ರಾ.ಪಂ. ಅಧ್ಯಕ್ಷರು.



ಚಿತ್ರಗಳು ನೀರಿನಲ್ಲಿ ಮುಳುಗಿರುವ ಸ್ಥಿತಿಯಲ್ಲಿವೆ. ಆನೆ, ಕುದುರೆ, ಮನುಷ್ಯ, ಹೆಡೆಬಿಚ್ಚಿದ ನಾಗರಹಾವು, ನಂದಿ, ನವಿಲು, ಒಂಟೆ, ಕೋಣನತಲೆ, ತ್ರಿಶೂಲ ಈಶ್ವರಲಿಂಗ, ಸೂರ್ಯಚಂದ್ರರನ್ನು ಹೋಲುವ ಚಿತ್ರಗಳು ಹಾಗೂ ಇತರ ಪ್ರಾಣಿಗಳು ಇತ್ಯಾದಿ ಚಿತ್ರಗಳನ್ನು ಯಾವುದೇ ಕ್ರಮವಿಲ್ಲದೇ ಒಂದರ ಪಕ್ಕದಲ್ಲಿ ಒಂದರಂತೆ ಒತ್ತೊತ್ತಾಗಿ, ಜಾಗ ಇರುವಲ್ಲೆಲ್ಲ ನಡು ನಡುವೆ ಕೆತ್ತಲಾಗಿದೆ.

ಎರಡನೆಯದು ಇದರ ಪಕ್ಕದಲ್ಲಿರುವ ಬಂಡೆ. ಇದು ಮಳೆಗಾಲದಲ್ಲಿ ನೀರಿನಲ್ಲಿ ಸಂಪೂರ್ಣ ಮುಳುಗಿರುತ್ತದೆ. ಬೇಸಿಗೆಯಲ್ಲಿ ನೀರಿನಿಂದ ಮೇಲೆ ಸ್ಪಷ್ಟವಾಗಿ ಗೋಚರಿಸುತ್ತವೆ. ಇದರಲ್ಲಿ ಸಹ ಹೆಡೆಬಿಚ್ಚಿದ ಹಾವು, ಕೋಣನ ತಲೆ, ಸೂರ್ಯ, ಚಂದ್ರ, ಆನೆಯ ಚಿತ್ರಗಳಿವೆ. ಮೂರನೆಯದು ಇವೆರಡರ ನಡುವೆ ಇರುವ ಹಾಸುಬಂಡೆ. ಇದರಲ್ಲಿ ಸ್ಪಷ್ಟವಾಗಿ ಕೆತ್ತಿರುವ ಎರಡು ಪಾದಗಳಿವೆ. ಈ ಚಿತ್ರಗಳನ್ನು ಸುಮಾರು ಒಂದು ಇಂಚು ಆಳದ ಗೆರೆಗಳಿಂದ ಕೊರೆಯಲಾಗಿದೆ.

ಖ್ಯಾತ ಇತಿಹಾಸ ಸಂಶೋಧಕ ಡಾ. ಅ. ಸುಂದರ ಇವರ ಸಲಹೆಯ ಮೇರೆಗೆ ಈ ಕೆಳಗಿನ ಅಂಶಗಳನ್ನು ಗುರುತಿಸಲಾಗಿದೆ. ಈ ಮೂರು ಬಂಡೆಗಳಲ್ಲಿರುವ ಚಿತ್ರಗಳ ಶೈಲಿ ಹಾಗೂ ವಿಧಾನಗಳನ್ನು ಗಮನಿಸಿದಾಗ ಇವುಗಳನ್ನು ಅಲ್ಪಾವಧಿಯಲ್ಲಿ ಕೆತ್ತಲಾಗಿದೆ. ಇವು ಕಾಡಿನ ಮಧ್ಯೆ ಇರುವುದರಿಂದ ಅಲ್ಲಿನ ಪರಿಸರವನ್ನು ಚಿತ್ರಗಳಲ್ಲಿ ಕೆತ್ತಲಾಗಿದೆ. ಇಲ್ಲಿನ ಬಂಡೆಗಳ ಮೇಲೆ ಮನುಷ್ಯರಿಂದ ಸುತ್ತುವರಿಯಲ್ಪಟ್ಟ ನಂದಿ ಹಾಗೂ ಶಿವಲಿಂಗ ಇರುವುದರಿಂದ ಬಹುಮಟ್ಟಿಗೆ ಇದು ಶಿವನಿಗೆ ಸಂಬಂಧಿಸಿದ ಒಂದು ಜಾನಪದೀಯ ಕತೆಯ ದೃಶ್ಯಗಳನ್ನು ತೋರಿಸುವ ಪ್ರಯತ್ನವೇನೋ ಎಂಬಂತಿದೆ ಎನ್ನುತ್ತಾರೆ.

ಈ ಚಿತ್ರದ ಶೈಲಿಯ ದೃಷ್ಟಿಯಿಂದ ಇವು ೬–೭ನೇ ಶತಮಾನದ ಕಲಾಕೃತಿಗಳೆಂದು ಊಹಿಸಬಹುದು. ಏಕೆಂದರೆ ಇಲ್ಲಿನ ಚಿತ್ರಗಳಲ್ಲಿ ಕೋಣನ ತಲೆಯನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಮಹಿಷಮರ್ದಿನಿಯ ಸಂಕೇತವಾಗಿದೆ. ಮಹಿಷಾಸುರ ಮರ್ದನದ ಕತೆಯನ್ನು ತಿಳಿಸುವ ಇಂತಹ ಚಿತ್ರಗಳನ್ನು ದೇವಿಯ ಗುಡಿಯ ಮುಂದೆ ಇಡಲಾಗುತ್ತಿತ್ತು. ಚೋಳರ ಕಾಲದ ದೇವಾಲಯಗಳಲ್ಲಿ ಕೋಣನ ತಲೆಯ ಮೇಲೆ ದೇವಿಯು ನಿಂತಂತೆ ಇರುವ ಶಿಲ್ಪಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಹೆಚ್ಚಿನ ವಿವರಗಳಿಗೆ ಆ ಪ್ರದೇಶದ ಜನಪದ ಕತೆಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಬಹುದೆಂದು ಸಲಹೆ ನೀಡಿದ್ದಾರೆ.

ಅದರಂತೆ ಸುತ್ತಮುತ್ತಲ ಊರುಗಳಲ್ಲಿ ಶೋಧನೆ ನೆಡೆಸಿ, ಈ ಪ್ರದೇಶದ ಜಾನಪದೀಯ ಅಂಶಗಳನ್ನು ಸಂಗ್ರಹಿಸಿದಾಗ ಕೆಲವು ಅಂಶಗಳು ದೊರೆತವು. ಈ ಚಿತ್ರಗಳಿಗೆ ಹೊಂದಿಕೊಂಡಂತೆ ಇರುವ ಕೋಟೆಗುಡ್ಡದಲ್ಲಿ ಪುರಾತನವಾದ ಕೋಟೆ





ಇದ್ದ ಕುರುಹುಗಳಿದ್ದು ಅದರ ನೆತ್ತಿಯಲ್ಲಿ ಸಮತಟ್ಟಾದ ವಿಸ್ತಾರವಾದ ಜಾಗವಿದೆ. ಇಂದಿಗೂ ಅಲ್ಲಿ ಪ್ರತಿ ಸೋಮವಾರ ಹಾಗೂ ನವರಾತ್ರಿಯ ದಿನ ವನದುರ್ಗಿಯ ಪೂಜೆ ನಡೆಯುತ್ತದೆ. ಅಲ್ಲಿ ಹಿಂದೆ ಇದ್ದಿತೆನ್ನಲಾಗುವ ಚಾಮುಂಡೇಶ್ವರಿಯನ್ನು ಊರೊಳಗೆ ತಂದು ಪ್ರತಿಷ್ಠಾಪಿಸಲಾಗಿದೆ. ಅದರ ಸಮೀಪದಲ್ಲೇ ಈಶ್ವರ ದೇವಾಲಯವಿದೆ. ಅಲ್ಲಿ ೨ ವೀರಗಲ್ಲುಗಳಿವೆ. ಆ ದೇವಾಲಯದ ಅರ್ಚಕರಾಗಿರುವ ಗುರುಭಟ್ ಇವರ ಮಾಹಿತಿಯಂತೆ ಈ ಚಿತ್ರಗಳಿರುವ ಬಂಡೆಯ ಸಮೀಪದಲ್ಲಿರುವ ಹೊಳೆಯಲ್ಲಿರುವ ನೀರಿನ ಹೊಂಡಕ್ಕೆ ದಂಡು ಮುಳುಗಿದ ಹೊಂಡ ಎನ್ನಲಾಗುತ್ತಿದ್ದ ವಿವರಗಳನ್ನು ನೀಡುತ್ತಾರೆ. ಈ ಪರಿಸರದ ಊರುಗಳಾದ ದಂಡುಗ, ಹಲ್ಕೋಡು, ಮಾದಲಬೈಲು, ಹಂದಲಸ, ಗೋಡೇಕೊಪ್ಪ, ಕೌರಿಹಕ್ಲು, ತಲ್ಲೂರು, ತಲ್ಲೂರಂಗಡಿ ಮುಂತಾದ ಊರುಗಳನ್ನು ಪರಿಶೀಲಿಸಲಾಗಿ, ತಲ್ಲೂರು ಗ್ರಾಮದಲ್ಲಿ ಕೆಲವು ಶಿಲಾವಶೇಷಗಳಿದ್ದು ಧರ್ಮಸ್ಥಳ ವಸ್ತು ಸಂಗ್ರಾಹಾಲಯಕ್ಕೆ ಅವುಗಳನ್ನು ತೆಗೆದುಕೊಂಡು ಹೋಗಿರುವುದಾಗಿ ಗ್ರಾಮಸ್ಥರು ತಿಳಿಸುತ್ತಾರೆ. ತಲ್ಲೂರಂಗಡಿ ಗ್ರಾಮದಲ್ಲಿ ಪುರಾತನವಾದ ಗುತ್ಯಮ್ಮ ದೇವಾಲಯವಿದೆ, ಅಲ್ಲಲ್ಲಿ ಕೆಲವು ಲಿಪಿ ಇಲ್ಲದ ವೀರಗಲ್ಲುಗಳಿವೆ.

೧೦

ಸವ್ವೆಗ್ರಾಮದಲ್ಲಿ ದೊರೆತ ಅಪ್ರಕಟಿತ ತಾಮ್ರ ಶಾಸನ

ಡಾ. ಜಿ. ಕರಿಯಪ್ಪ* ನಿಂಗನಾಯ್ಕ.ಸಿ.**

ಸವ್ವೆಗ್ರಾಮವು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನ ಒಂದು ಗ್ರಾಮವಾಗಿದ್ದು, ಹೆಗ್ಗಡ ದೇವನಕೋಟೆಯ ಉತ್ತರಭಾಗಕ್ಕೆ ಸುಮಾರು ೫ ಕಿಲೋ ಮೀಟರ್ ದೂರದಲ್ಲಿ ಈ ಗ್ರಾಮವಿದೆ. ಈ ಗ್ರಾಮಕ್ಕೆ ಭೇಟಿ ನೀಡಿದಾಗ ಈ ಶಾಸನ ಲಭಿಸಿದೆ. ಈ ಶಾಸನವು ಹೆಚ್.ಡಿ. ಕೋಟೆ ತಾಲೂಕಿನ ಉತ್ತರಕ್ಕೆ ಸವ್ವೆ ಗ್ರಾಮದ ಒಂದು ಜಮೀನಿನಲ್ಲಿ ಪತ್ತೆಯಾಗಿದ್ದು ಪ್ರಸ್ತುತ ಇದನ್ನು ರಾಮ ಮಂದಿರದಲ್ಲಿ ಇಟ್ಟಿದ್ದಾರೆ. ಇದರ ವಿವರಣೆ ಈ ಕೆಳಕಂಡಂತಿದೆ.

ಶಾಸನ ಪಾಠ

೧. "ಸ್ವಸ್ತಿ[೧೧*]ಜಿತಭ್ಮ(ಮ್ಭ)ಗವತಾಗತಗನಗಘನನಾಭೇನ ಪಮ್ಮ (ದ್ಮ) ನಾಭೇನಶ್ರೀಮ ಜ್ಞಾಹ್ನವಿ(ವೇ)ಯ ಕುಲೋಮಲ

೨. ವಿಯೋಮವಭಾಸನ ಭಾಸ್ಕರ[ಃ*] ಸ್ವಳ್ಗುಕ ಪ್ರಹ(ಹಾ)ರ ಖಣ್ಡಿತ ಮಾಹಾಸಿಲಾಸ್ತಭ್ಮ(ಮ್ಭ) ಲದ್ದ(ಬ್ಧ)ಭಳ[ಪ*]ಹ್ರಾಕ್ರಮೆ

೩. ರುಣೆರಿಫಣ ವಿದಾರಿಣಿಪ್ರವೀಣ ವಿವಿಭೂಷಣವಿಭೂಷಿತ [ಃ*] ಕಾಣ್ಣ್ಗಯನ ಸೊಗೋತ್ರ ಶ್ರೀಮಗ್ಗೊ

೪. ಗ್ಗುಣಿವಮ್ಮ (ರ್ಮ್ಮ) ಮಾಹಧವಮಜಾಧಿರಾಜತ ಪ್ಪುತ್ರಃ ಪಿತುರನ್ನಾಗತ ಗುಣಯುಕ್ತೋ ವಿದ್ಯ ವಿನಯ ವಿಹಿತ ವಿ

೫. ತ್ತಿ[ಃ*] ಸಮ್ಯಕೂ ಪ(ಪ್ರ)ಜಪಾಲನ ಮಾತ್ತೇಧಿಗತ ರಾಜ್ಯಪ್ರಯೋಜನ ವಿದ್ದುಕ ವಿಕಾಣ್ಣ್ಜನ ನಿಕರಿಷೋಪಲಭು

೬. ತೋ ನಿತಿಸಾತಸ್ಯ ವಕ್ತ ಪ್ರಯುಕ್ತ ಕುಸಲೋದತ್ತಕಸೂತ್ರ ವ್ರಿತ್ತಿ ಪ್ರಣೀತಾ ಶ್ರೀ ಕೊ [೦*] ಗುಣಿವಮ್ಮ (ರ್ಮ್ಮ) ಧಮ (ಃ) ಮಹಾರಾಜ(ಜಾ)

೭. ಧಿರಾಜತ ಪುತ್ತ(ತ್ರ)ಃ ಪ್ರತುಪ್ಯೋತ ಮಾಗುಣಯುಕ್ತೋ ಅನೇಕಧಾತು ದನ್ತ ಚತುರುದತು ಸಲಿತ ಪಾಳಿತೇಷ ಶ್ರೀಮಜ್ಜರಿ

೮. ವರ್ಮ(ರ್ಮ್ಮ) ಮಹಾಧವ ಮಹಾರಾಜಾಧಿರಾಜತ ಪುತ್ತ್ರ ದಿಜಗುರು ದಿವತಾಪೂಜನಪರೋ ನಾರಾಯಣಚರಣ ಯ(ಯೋ)ದ್ಧಾತ ವಿಷ್ಣು

೯. ಗೋಪ ಮಹಾಧವ ಮಾ(ಮ)ಹ(ಹಾ)ರಾಜಾಧಿರಾಜ ತಳವನಪುರವತಿ ಸಕವರಿಷೇಷು ಗತೇಷು ಅಷ್ಟ(ಷ್ಟಾ)ಸಿತಿಸ

೧೦. ತೇವಿ(ವ್ಯ)ಯ ಸಂವಚ್ಚರೇ ಪಾಲ್ಗುಣ ಮಾಸೇ ಸುದ್ಧ ದಸಮಿ ಗುರುವಾರೇ ಪುನಭಾಷಣಕ್ಷತ್ರೇ ಅ

೧೧. ಮ್ರತಯೋಗೇ ಹರದರದಮ್ಮ ಗಾಮಣ್ಡನ ಮಗಹಳಿಯಮ್ಮ ಗಾಮಣ್ಡ ಚಲದಂಕರಾಮ ಸಿತಗರಗಣ್ಡ ಸೈ

೧೨. ನೋಲಪಾತ್ತ ಗಣ್ಡಭೇರುಣ್ಡ ಮರೆಹಕ್ಕರ ಕಾವನುಡಿದನ್ತೆಗಣ್ಡ ತಪ್ಪತಪ್ಪು ತನ್ನ ನಿಜಭುಜ ಕಗ್ಗದಿ

೧೩. ಅರೆನಾಡ ನೀಲಮೇಗ ಕಾಳಮೇಗ ಯೆಬ್ಮ(ಮ್ಬ)ಬೇಡರ ಕಾದಿ ಕೊನ್ದು ಅವರ ಹೆಣ್ಡಿ ಭಣ್ಡರವಹಿಡಿದು

೧೪. ಒಪ್ಪಿಸಿ ಗಂಗ ಚಕ್ರವಳ್ತಿ(ರ್ತಿ) ಮೆಚ್ಚಿ ನೆವಲೆನಾಡ ಸ್ಯೇವೆಯ ಕೊಡಂಗೆಯ ಕೊಟ್ಟು ತಸ್ಯ ಸಿಮಾತ್ರವಿ

೧೫. ಸಾನ್ಯ ಮೊಕನೋಡಿಯ ಸಾವೆಯ ಸಾವೆಗಾಲ ಕೊಡಸೆಗೆಯತ್ರಿ ಸನ್ದ(ಮ)ತ್ತಿಯ ಕೊಳನ ದೆಕ್ಷಣ ಮೆಕ

೧೬. ನೋಡಿ ಹೆರೊಳ್ಬೆ ವಿಡಿದು ನಡೆದು ವೇಣುವಿಕ್ಷವೆ ನೋಡಿ ಕೆರೆಯ ಮೂಡಣ ಕೋಡಿ ವಿಡಿದು ನಡೆದು

೧೭. ಮುಕುಳಿವ್ರಿಕ್ಷವೆಮಿಕ ಕೆರೆಯ ದಾಣ್ಡಿ ಆನ್ಗಿ ವೋಕನೋಡಿ ಸ್ಯೆದೆಯ ಕೊಡಸಿಗೆಯ ಮಲಿಯೆಡಿನ್ನ

೧೮. ತ್ತಿ ಸನ್ದಿ ಕಲ್ಪವ್ರಿಕ್ಷವೆ ಪಚ್ಚಿಮ ಮೊಕನೋಡಿ ಕಡಿವೆಕೊಳ ನೆರೊವೆ ಕುವ್ಮರಿಯ ಕೊಳನೆ ನರಿತ್ಯ ಮೊಕ

* ಸಹ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು.
** ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು.

೧೯. ನೋಡಿ ಸ್ಯವೆಯ ಮಲೆಯೇರಿನ. ಮನ್ದಿಲ್ಲೂರತ್ತಿ ಸನ್ತಿ ಜಮ್ಬುವ್ರಿಕ್ಷ ಮೊತ್ತರ ಮೊಕನೋಡಿಪ(ಳ್ಳಿ)ವಿಡಿ

೨೦. ದು ನಡೆದು ಬೋಧವ್ರಿಕ್ಷವೆ ವೇಣುವ್ರಿಕ್ಷವೆ ವಾಯಾಭ್ಯ ಮೊಕನೋಡಿ ಸ್ಯೇವೆಯ ಕಾರೆಲಿಯ ಸಾವೆಗಲ

೨೧. ತ್ತಿ ಸನ್ದಿ ಆಬ್ಮಲವ್ರಿಕ್ಷವೆ ಪುಭ್ಬಮೊಕನೋಡಿ ಬಾದಣ ಕಲ್ಲೆಹಿಣ್ಡಿಸದಕೊಳನ ಪುಟ್ಟರೆ ಪುಟ್ಟವದಾಣ್ಡಿ

೨೨. ಕಾಳಿಕೋಳ ಪುಣಿಸೆ ಕೊಳಕೂಡಿತು ಕುಡವಿನ್ತಪ್ಪುದಕ್ಕೆ ಸಾಕ್ಷಿ ಭಡಗನಾಡ ತಳವನಪುರದ ಹಣ್ಣು

೨೩. ವ ಸಾಸಲಿಯ ಮಾಗಮುಸುನಾಡ ಹಡದನದತಣ್ಡೆಯ ವಲೆಯೆರಿನ ವಿರಾಡಸಾವೆಗಾಲ

೨೪. ವಾಣಿಕ ಸ್ವದತ್ತ ಪರದತ್ತ[ವಾ*]ಯೋ ಹ ರ್ಯೆತ ವಸುನ್ದರ ಷಷ್ಟಿರ್ವ್ವರಿಷ ಸಹಸ್ರಾಣಿ ವ್ರಷ್ಟಾಯಾಜಾಯತೆ ಕ್ರಿಮಿ(ಃ ೧೧*)


ಶಾಸನದ ಬಾಹ್ಯ ವಿವರ

ಈ ತಾಮ್ರ ಪಟಶಾಸನವು ಒಟ್ಟು ಮೂರು ಫಲಕಗಳನ್ನು ಹೊಂದಿದ್ದು ಇದರ ತೂಕ ೭೭೫ ಗ್ರಾಂ ಇದ್ದು, ಪ್ರತಿಫಲಕದ ಉದ್ದ ಸುಮಾರು ೨.೯ ಅಂಗುಲ (ಅಥವಾ ೬.೬ ಸೆಂ.ಮೀ), ಅಗಲ ೮.೮ ಅಂಗುಲ (ಅಥವಾ ೨೧.೫ ಸೆಂ.ಮೀ) ದಪ್ಪ ೦.೪ (ಅಥವಾ ೦.೬ ಸೆಂ.ಮೀ) ಇದೆ. ಪ್ರತಿ ಫಲಕವನ್ನು ಒಳಗೊಂಡ ಒಂದು ಪಾರ್ಶ್ವದಲ್ಲಿ ರಂಧ್ರವಿದ್ದು, ಇದರ ವ್ಯಾಸ ೦.೭ ಅಂಗುಲ (೧ ಸೆಂಮೀ) ಇದರ ಫಲಕಗಳನ್ನು ಒಳಗೊಂಡಂತೆ ಒಂದು ಬಳೆ ಇದ್ದು ವೃತ್ತಾಕಾರವಾಗಿದೆ. ಸುಮಾರು ೨.೧೩ ಅಂಗುಲ (ಅಥವಾ ೭ ಸೆಂಮೀ) ಅಗಲದ ವೃತ್ತಾಕಾರದ ಬಳೆ ಇದೆ. ಈ ಬಳೆ ಕೂಡಿರುವ ಕೊಂಡಿಯಲ್ಲಿ ಗಂಗರ ಲಾಂಛನವಾದ ಆನೆಯ ಮುದ್ರೆ ಇದೆ. ಇದು ೧ ಅಂಗುಲ (೨.೫ ಸೆಂಮೀ) ಉದ್ದ ಅಗಲವಿದೆ. ಈ ಶಾಸನದ ಮೊದಲನೆಯ ಹಾಗೂ ಕಡೆಯ ಫಲಕಗಳ ಒಳ ಬದಿಯಲ್ಲಿ ಹಾಗೂ ನಡುವೆ ಇರುವ ಎರಡನೆಯ ಫಲಕದ ಎರಡು ಬದಿಯಲ್ಲಿ ಹೀಗೆ ಒಟ್ಟು ನಾಲ್ಕು ಬದಿಯಲ್ಲಿ ಒಟ್ಟು ೨೪ ಪಂಕ್ತಿಗಳಿವೆ. ಗಂಗರ ಕಾಲದ ಕನ್ನಡ ಲಿಪಿಯಿದೆ ಹಾಗೂ ಭಾಷೆ ಸಂಸ್ಕೃತ ಮತ್ತು ಕನ್ನಡದಲ್ಲಿದೆ. ಎಲ್ಲಾ ಫಲಕಗಳ ಮೇಲೆ ಮಧ್ಯದಲ್ಲಿರುವ ರಂಧ್ರದ ಆಚೆ ಈಚೆ (ಎಡ ಬಲಕ್ಕೆ) ಹಾಗೂ ಅದರ ಕೆಳಗೆ ಶಾಸನದ ಪಂಕ್ತಿಗಳನ್ನು ಕೊರೆಯುತ್ತ ಹೋಗಲಾಗಿದೆ. ಕಾಗುಣಿತದಲ್ಲಿ ಹೆಚ್ಚು ದೋಷವಿಲ್ಲದಿದ್ದರೂ ಕೆತ್ತನೆಯಲ್ಲಿ ಅಷ್ಟು ದೋಷಗಳಿಲ್ಲ ಬಹಳ ಚೆನ್ನಾಗಿ ಕೊರೆಯ ಲಾಗಿದೆ.

ಶಾಸನದ ಸಾರಾಂಶ

ಈ ಶಾಸನದ ವಿವರಗಳನ್ನು ಸಂಕ್ಷಿಪ್ತವಾಗಿ ಕೊಡ ಬಹುದು. ಶಾಸನವು ಸ್ವಸ್ತಿ 'ಒಳ್ಳೆಯದಾಗಲಿ' ಎಂದು ಪ್ರಾರಂಭವಾಗಿ ಜಿನನ ಶ್ಲೋಕದೊಂದಿಗೆ ಮುಂದುವರಿದು ಈ ಶಾಸನವು ಗಂಗರ ದೊರೆ ಕೊಂಗಣಿವರ್ಮನಂದ ಪ್ರಾರಂಭಿಸಿ ವಿಷ್ಣುಗೋಪನವರೆಗೆ ವಂಶಾಳಿಯನ್ನು ನೀಡುತ್ತದೆ. ಹೀಗೆ ಕೊಂಗಣಿವರ್ಮನ ಮಗನಾದ ಮಾಧವನ ಬಗ್ಗೆ ಹೇಳುವಾಗ ಈತನನ್ನು ಗುಣಮುಕ್ತ, ವಿದ್ಯವಿನಯ, ಸಮಯಕ ಪ್ರಜಪಾಲನ, ಕುಸಲೋದತ್ತಕಸೂತ್ರಮೃತಿ ಪರಿಣಿತ ಮಾತೇಧಿಗತ ರಾಜ್ಯಪ್ರಯೋಜನ, ಮಹಾರಾಧಿರಾಜ, ಚತುರದತ್ತು ಅನೇಕಧಾತು ದಂತ್ತ ಎಂದು ವರ್ಣನೆ ಮಾಡಲಾಗಿದೆ. ಮುಂದುವರಿದು ವಿಷ್ಣುಗೋಪನನ್ನು ವರ್ಣಿಸುತ್ತದೆ.

ದಿಜಗುರು, ವಿವತಾಪೂಜನಪರೋ (ಜನರ ಪರವಾಗಿರುವನು) ನಾರಾಯಣ ಚರಣಯಾದಾಂತ, ಮಹಾ ರಾಜಾಧಿರಾಜ, ತಳನಪುರರವತಿ ಹೀಗೆ ವರ್ಣನೆಮಾಡಿದೆ. ನಂತರ ಕಾಲದ ಉಲ್ಲೇಖ ಬರುತ್ತದೆ. ಶಾಸನ ಮುಂದುವರಿದು ವಿಷ್ಣುಗೋಪನ ಕಾಲದ ಗಾವುಂಡರ ಬಗ್ಗೆ ವಿವರಿಸುತ್ತದೆ. ಹರದಮ್ಮಗಾವುಂಡನ ಮಗನಾದ ಹಳಿಯಮ್ಮಗಾವುಂಡನು ಚಲದಂಕರಾಮ, ಸಿತರಗಂಡ, ಸ್ಯೆನ್ಯನೋಲಪಾತ, ಗಂಡಭೇರುಂಡ, ಮರತಿಹಕ್ಕರಕಾವನುಡಿದಗಂಡ, ನಿಜಭುಜಕಗ್ಗ ಎಂದು ವರ್ಣಿಸಲಾಗಿದೆ. ಈ ಹಳಿಯಮ್ಮಗಾವುಂಡನು ಅರತಿನಾಡ ಬೇಡರಾದ ನೀಲಮೇಗ ಮತ್ತು ಕಾಳಮೇಗ ಎಂಬುವರನ್ನು ಕೊಂದು ಹೆಣ್ಣೆಭಂಡರವ ತಂದು ಗಂಗ ಚಕ್ರವರ್ತಿಗೆ ಒಪ್ಪಿಸಿದ ಎಂದು ತಿಳಿಸುತ್ತದೆ. ಇದರ ಪ್ರತೀಕವಾಗಿ ಗಂಗಚಕ್ರವರ್ತಿಯು ನೆವಲೆನಾಡಿಗೆ ಸೇರಿದ ಸವ್ವೆ ಗ್ರಾಮವನ್ನು ದಾನ ನೀಡಿದರೆ ಚಕ್ಕಬಂದಿಯ ವಿವರ ಉಲ್ಲೇಖಿಸಿದೆ. ಶಾಸನದ ಕೊನೆಯಲ್ಲಿ ಶಾಪಶಾಯ ಎಂದು ಸಂಸ್ಕೃತದಲ್ಲಿ ಶ್ಲೋಕವಿದೆ. ಇದನ್ನು ಹಾಳು ಮಾಡಿದವರು ಸಾವಿರ ವರ್ಷ ಕ್ರೀಮಿ ಕೀಟಗಳಾಗಿ ಹುಟ್ಟುತ್ತಾರೆ ಎಂದು ಶಾಸನ ಮುಕ್ತಾಯವಾಗಿದೆ.



ಶಾಸನದ ಕಾಲ

ಈ ಶಾಸನವು ಕ್ರಿ.ಶ. ೮೮೦ರ ಫೆಬ್ರವರಿ ೨೪ರ ಗುರುವಾರದಂದು ಹೊರಡಿಸಲಾಗಿದೆ. ಇದು "ಗಂಗರ ಚಕ್ರವರ್ತಿ ವಿಷ್ಣುಗೋಪನ" ಕಾಲಕ್ಕೆ ಸೇರಿದ್ದಾಗಿದೆ.

ದಾನ ನೀಡಿದ ಭೂಮಿಯ ವಿವರ

ನವಿಲೆನಾಡಿಗೆ ಸೇರಿದ ಗ್ರಾಮವಾದ ಸವ್ವೆಗ್ರಾಮವನ್ನು ದಾನ ನೀಡಿದ ವಿವರ ಇಂತಿದೆ. ಸವ್ವೆಗ್ರಾಮದ ಈಶಾನ್ಯಕ್ಕೆ ಮುಖಮಾಡಿ ಸವ್ವೆ, ಸವೆಗಾಲ, ಕೊಡಸೀಗೆ ಸಂದಿ. ಮತಿಯ ಕೊಳ. ಅಲ್ಲಿಂದ ದಕ್ಷಿಣಕ್ಕೆ ಮುಖಮಾಡಿ, ವೇಣುವೃಕ್ಷ ನೋಡಿ, ಕೆರೆಯ ಮೂಡಣ ಕೋಡಿ ಹಿಡಿದು ಮುಕಳ್ಳಿ ವೃಕ್ಷ ಮಿಮಕ ಕೆರೆಯ ದಂಡೆ ಅಲ್ಲಿಂದ ಆಗ್ನೇಯಕ್ಕೆ ಮುಖಮಾಡಿ, ಸೇದೆಯ ಕೊಡೆಸೀಗೆಯ ಕಲ್ಪವೃಕ್ಷ, ಅಲ್ಲಿಂದ ಪಶ್ಚಿಮಕ್ಕೆ ಮುಖ ಮಾಡಿ ಕಡಿವೆಕೊಳ ನರೊವೆ ಕುಮ್ಮರಿಕೊಳ ಅಲ್ಲಿಂದ ನೈರುತ್ಯಕ್ಕೆ ಮುಖಮಾಡಿ, ಸವ್ವೆಯ ಮಲೆಯೇರಿಯ ಮಂದಿಲ್ಲರತಿ ಸಂದಿ ಜಂಬುವೃಕ್ಷ, ಅಲ್ಲಿಂದ ಉತ್ತರಕ್ಕೆ ಮುಖಮಾಡಿ ಪಳ್ಳಿವಿಡಿದು ನಡೆದು ನಡೆದು ಭೋದಿವೃಕ್ಷದ ಮತ್ತು ವೇಣುವೃಕ್ಷ ಅಲ್ಲಿಂದ ವಾಯುವ್ಯಕ್ಕೆ ಮುಖಮಾಡಿ ಸವ್ವೆಯ ಕಾರೆಲೀಯ ಸವ್ವೆಗಾಲಗತ್ತಿ ಸಂಧಿ, ಅಬ್ಮಲವೃಕ್ಷ, ಅಲ್ಲಿಂದ ಪುಬ್ಭಮೊಖ ಮಾಡಿ, ಬಾದಣ ಕಲ್ಲೇಹಿಂಡಿಸದನಕೊಳ ಪುಡ್ಡರೆ ಪಟ್ಟದ ದಂಡೆ ಕಾಳಿಕೊಳ ಪುಣಸೆಕೊಳಕೊಂಡಿತು. ಈ ರೀತಿಯಾಗಿ ದಾನಕೊಟ್ಟ ವಿವರವನ್ನು ಶಾಸನದಲ್ಲಿ ಉಲ್ಲೇಖಿಸಿದೆ. ಈ ದಾನಕ್ಕೆ ಸಾಕ್ಷಿಯಾಗಿ ಭಡಗನಾಡ, ತಡವನಪುರದ ಹಣ್ಣುವ ಶಾಸಲೀಯ ಮೊಗಮಸುನಾಡ ಹಡದನದತ್ತಂಡಿಯ ವಲೆಯನೆರೆನ ವಿರಡ ಸವ್ವೆಗಾಲ ವಾಣಿಕ ಎಂದು ನಮೂದಾಗಿದೆ.

[ಈ ಶಾಸನವನ್ನು ಓದಲು ನಮಗೆ ನೆರವಾದ ಕೇಂದ್ರಿಯ ಪುರಾತತ್ವ ಇಲಾಖೆಯ ಅಧೀಕ್ಷಕರಾದ ಡಾ. ಡಿ.ಎಂ. ನಾಗರಾಜು ಮತ್ತು ಸಹಾಯಕ ಶಾಸನ ತಜ್ಞರಾದ ನಾಗರಾಜಪ್ಪ ಹಾಗೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.]

೧೧

ಹಲಗೂರಿನ ಅಪ್ರಕಟಿತ ಶಾಸನಗಳು

ಡಾ. ಹನುಮಾಕ್ಷಿ ಗೋಗಿ*

ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಒಂದು ಪುಟ್ಟ ಹಳ್ಳಿ ಹುಲಗೂರು. ಈ ಊರು ನನ್ನ ಗಮನ ಸೆಳೆದಿದ್ದು ಶಿಶುನಾಳ ಶರೀಫರ ತತ್ವಪದದಲ್ಲಿ ಉಲ್ಲೇಖಗೊಂಡುದರಿಂದ. ಅವರ ಕಾಲಕ್ಕಾಗಲೇ ಹುಲಗೂರ ಸಂತಿ ಬಹಳ ಪ್ರಸಿದ್ಧವಾಗಿತ್ತು. ಈಗಲೂ ರವಿವಾರ ಸಂತೆ ನೆರೆಯುವುದರಿಂದ ಸುತ್ತಲ ಹತ್ತಾರು ಹಳ್ಳಿಗಳ ಜನ ವಸ್ತುಗಳನ್ನು ಮಾರಾಟ ಮಾಡಲು ಮತ್ತು ಖರೀದಿಸಲು ವಾರಕ್ಕೊಮ್ಮೆ ಇಲ್ಲಿ ಸೇರುತ್ತಾರೆ. ಇಲ್ಲಿಯ ಖಾದರಲಿಂಗನ ದರ್ಗಾ ತುಂಬ ಸುಪ್ರಸಿದ್ಧವಾದುದು. ಶಿಶುನಾಳ ಮತ್ತು ಹುಲಗೂರಿನ ನಡುವಿನ ಅಂತರ ೪ ಕಿ.ಮೀ.ಗಳು. ಅಂತೆಯೇ ಶರೀಫರ ಶಿಶುನಾಳ ಮತ್ತು ಗುರು ಗೋವಿಂದಭಟ್ಟರ ಕಳಸದ ನಡುವಿನ ಅಂತರ ೩ ಕಿ.ಮೀ.ಗಳು. ಶಿಶುನಾಳ ಮತ್ತು ದ್ಯಾಮವ್ವನ ಗುಡಿ ಇರುವ ಗುಡಗೇರಿಯ ನಡುವಿನ ಅಂತರವೂ ೪ ಕಿ.ಮೀ.ಗಳು. ಇಂತಹ ಪ್ರಸಿದ್ಧ ತತ್ವಪದಕಾರನು ಹೆಸರಿಸುವ ಊರು ಹುಲಗೂರಿನಲ್ಲಿ ಶಾಸನ ವರದಿಗಳಲ್ಲಿ ಇದುವರೆಗೆ ಗುರುತಿಸಿದ ಒಟ್ಟು ೧೮ ಶಾಸನಗಳಲ್ಲಿ ೧೩ ಅಪ್ರಕಟಿತ ಶಾಸನಗಳಿವೆ. ೫ ಪ್ರಕಟಿತ ಶಾಸನಗಳು EI XVI P.No. 329-332, EI XVI P 332-337, EI XXXIV P 59-62, K I VI P No. 54 ರಲ್ಲಿ ಪ್ರಕಟಿತಗೊಂಡಿವೆ. ಇನ್ನುಳಿದ ೧೩ ಶಾಸನಗಳ ಪಠ್ಯವು ಈ ಸಂಪ್ರಬಂಧದ ಮೂಲಕ ಮೊದಲ ಬಾರಿಗೆ ಬೆಳಕು ಕಾಣುತ್ತಲಿವೆ.

೧. ಹುಲಗೂರು

ಕಲ್ಮೇಶ್ವರ ದೇವಸ್ಥಾನದ ಹತ್ತಿರವಿರುವ ಶಾಸನ (ಕ್ರಿ.ಶ. ೧೦೧೮)

(ARSIE 1944-45 No. 23)

ಈ ತ್ರುಟಿತ ಶಾಸನವು ದಂಡನಾಯಕ ವಾವಣಾರ್ಯನು ಪುಲ್ಲುಂಗೂರ ಮೂಲಸ್ಥಾನ ರಾಮೇಶ್ವರದೇವರಿಗೆ, ಕಲ್ಲಿಕಯ್ಯಜೀಯರ ಕಾಲ್ತೊಳೆದು ನೀಡಿದ ಭೂಮಿದಾನವನ್ನು ವಿವರಿಸುತ್ತದೆ. ಇದು ಸಿಂಗಪಂಥಿಯ ಸ್ಥಾನವೆಂದು ದಾಖಲಿಸುವುದು ವಿಶೇಷವೆನಿಸುತ್ತದೆ.

೧ ರ್ಷ ೯೪೦ನೆಯ ಕಾಳಯುಕ್ತ ಸಂವತ್ಸರದ . . . .

೨ ರಮುಂ ಸಂಕ್ರಾನ್ತಿಯನ್ದು ಪುಲ್ಲುಂಗೂರ . . . .

೩ ಮೂಲಸ್ಥಾನದ ರಾಮೇಸ್ವರದೇವರ್ಗ್ಗೆ . . . .

೪ ಬಿಟ್ಟುಕೊಟ್ಟ ಭೂಮಿ ಯಾವುದೆಂದಡೆ ಲೆ . . . .

೫ ಇನ್ನೂಱಯ್ವತ್ತು ಅಬ್ಬಕನ ಪಳ್ಳದ . . . .

೬ ನೂಱು ಮತ್ತರ್ ಭೂಮಿಯೊಳಗೆ ವಿದ್ದ . . . .

೭ ದು ತೋಂಟ ೧ ಸ್ವಸ್ತಿ ಸಮಸ್ತ ಲೋಕಜನಸ್ತು . . . .

೮ ರ ಸಳ ಚಾಳುಕ್ಯ ವಂಶೋದ್ಭವಂ ಮು . . . .

೯ ತ್ಯ ಸಿಂಹಾಸನಂ ಅಭಿಮಾನನಪ್ಪ . . . .

೧೦ ನುಡಿದನ್ತೆ ಗಣ್ಡ ಧರ್ಮ್ಮಾರ್ತ್ಥ ಕಾಮಧೇನು . . . .

೧೧ [ಶ್ರೀ*]ಮತ್ ದೇವರಸಂ ಈ ಧರ್ಮ್ಮಮನನು . . . .

೧೨ ಕ್ರವರ್ತ್ತಿ ಪ್ರಸಾದಾಸಾದಿತ . . . .

* ಎಚ್.ಐ.ಜಿ., ೨೭, ನವನಗರ, ಹುಬ್ಬಳ್ಳಿ.

೧೩ ಸಾಮನ್ತ ಕಲಿಯುಗ ರೇವನ್ತ ಮರಿಗೆಱೆ . . . .
೧೪ ಣಲರ ಮಾರ್ತ್ತಣ್ಡ ಗುಣದ ಬೆಡೆಂಗ . . . .
೧೫ ಡಾಮಣಿ ಆರೂಢ ವಿದ್ಯಾಧರ ಶ್ರೀ . . . .
೧೬ ಗ ಮಾರಸಿಂಗ ಮರಿಗೆಱೆ ಮೂನೂ[ಱು*] . . . .
೧೭ ತೇಜ ಚಿತ್ತಮರಸಾಳ್ತನವಂ ನುಡಿದು ನೆಗರ್ತ್ತೆವ . . . .
೧೮ ರದೂಪೆವೇೞ್ದುಮಾನಳಿಸದ ವಿಕ್ರಮ ಕ್ರ . . . .
೧೯ ದೆದನಿಳೆಸನೊಳ್ಪಿರಿದೂ ಶೌರ್ಯ್ಯ ಗುಣೋಪೇತ . . . .
೨೦ ಸವರಾಜನ ತನಯಂ ವಿಬುಧ ಹೃತ್ಸರೋರುಹ ವಿಕಸದ್ದಿನಕರ . . . .
೨೧ ಹನಂ ವಾವಣಾರ್ಯ್ಯನನುಪಮ ಧೈರ್ಯ್ಯಂ ॥ ವೃ ॥ ಮನುವಿದಂ ಸುಚರಿತ್ರನ್ ಈ ಸುತ . .
೨೨ ಸತ್ಯಾನ್ವಿತ ಧರ್ಮ್ಮನನ್ದನನೀ ಧರ್ಮ್ಮಪರನಳಿತನಯನಂದಂ ಸೋವಿ ಜೀಮೂತವಾಹನ . .
೨೩ ನೀನಾದೆ ಪರೋಪಕಾರಿ ಬಲಿಯಿಂದನ್ದಾನಿ ದೇವೇಂದ್ರ ನನ್ದನನಿಂ ಸೌರ್ಯ್ಯ ಸಮೇತನದ್ರಿ ಪ
೨೪ ಯಿಂದತ್ಯುಂನ್ನತಂ ವಾವಣಂ ॥ ಶರಣೆಂದಂಘ್ರಿ ಯುಗಕ್ಕೆ ಬಾಗಿದವರಂ ಕಾವೊಳ್ಪಿನೊಳ್ಪು . .
೨೫ . ವಜ್ರಪಂಜರವೋರನ್ತೆ ಸಮಸ್ತ ಯಾಚಕಜನಕ್ಕಿವೊಳ್ಪಿನೊಳ್ಕಳ್ವನೂಱುರಬಾ . . .
೨೬ ಬಳದ್ವಿಪ ಪ್ರಚಯಮಮಂ ಸೋವೊಳ್ಪಿನೊಳ್ಬಾಳಕೇಸರಿ ದುದ್ವೃತ್ತ ವಿರೋಧಿ ವಾರಣ . .
೨೭ . . ಘಟ ವಿದ್ರಾವಣಂ ವಾವಣಂ ॥ ವಸುಧಾ ಚಕ್ರದೊಳೆ ನನಾವಿಗರವೋದಂ ತನ್ನಣ್ಮು ತ
೨೮ ನ್ನೊಳ್ಪು ತನ್ನೆಸಕಂ ತನ್ನ ನೆಗೞ್ತೆ ತನ್ನ ವಿಭವ ತನ್ನಾಜ್ಯ ತನ್ನಾಜ್ಞೆ ತನ್ನುಸಿರೆಂಬನ್ತಿರೆ ತನ್ನ ಸ . .
೨೯ ದ್ವಯಸದಿಂ ಭೂಲೋಕಮಂ ಕೂಡೆ ಮುದ್ರಿಸಿದಂ ಸರ್ಬ್ಬ ಗುಣೋದ್ದಾಮಂ ಸಮಸ್ತ ವಿಳಸನ್ಮುದ್ರಾವ
೩೦ ಣಂ ವಾವಣಂ । ಇವ ಪನ್ನರ್ಬ್ಬರ ಸಾಧಿಷ್ಟಾನದೊಳೆ ಬಿಟ್ಟುಕೊಟ್ಟರಿದ ಪ್ರತಿಪಾಳಿಸಿದಾ-
೩೧ ತ ವಾರಣಾಸಿಯೊಳೆ ಪ್ರಯಾಗೆಯೊಳೆ ಅರ್ಘ್ಯತೀರ್ತ್ಥದೊಳಂ ಸಾಸಿರ್ಬ್ಬರ್ ಪಾರ್ವ್ವ-
೩೨ ಗ್ರ್ಗೆ ಸಾಸಿರ ಕವಿಲೆಯ ಉಭಯಮುಖಿಗೊಟ್ಟ ಅಸ್ವಮೇಧಂಗೆಯ್ದ ಫಳವಕ್ಕು ಈ ಸ್ಥಿ-
೩೩ ತಿಯನಳಿದವನುಂ ಆಳಿವರೊಳೊಡಂಬಟ್ಟನು ವಾರಣಾಸಿಯುಮಂ ಪ್ರಯಾಗೆಯುಮಂ
೩೪ ಅರ್ಘ್ಯತೀರ್ತ್ಥಮುಮಂ ಶ್ರೀ ಪರ್ಬ್ಬತದೊಳೆ ಎೞ್ಕೋಟಿ ತಪೋಧನರುಮ ಸಾಸಿರ್ಬ್ಬರ ಪಾರ್ವ್ವರುಮಂ
೩೫ ಸಾಸಿರ ಕವಿಲೆಯುಮನಳಿದ ಪಾತಕನಕ್ಕುಂ @ ಶ್ಲೋಕಂ । ಮದ್ವಂಶಜಾಃಪ್ಪರ ಮಹೀಪ-
೩೬ ತಿ ವಂಶಜಾವಾಃ ಪಾಪಾದಪೇತ ಮನಸಾ ಭುವಿ ಭಾವಿ ಭೂಪಾಃ ಯೇ ಪಾಳಯಂತಿ
೩೭ ಮಮ ಧರ್ಮ್ಮಮಿದಂ ಸಮಸ್ತ ತೇಷಾಂ ಮ . . ವಳಭಿತೋಂಜಳಿರೇಷ ಮೂರ್ದ್ಧ್ನಿ । ಬಳ .
೩೮ ಪಾರ್ವ್ವಗುದಾಜ್ಜನಕಾ ರಾಜ್ಯಾಭಿಸ್ಸಗರಾದಿಭಿಃ ಯಸ್ಯ ಯಸ್ಯ ಯದಾ ಭೂಮಿ ತ-
೩೯ ಸ್ಯ ತಸ್ಯ ತದಾ ಫಲಂ ॥ ಸ್ವದತ್ತಂ ಪರದತ್ತಂ ವಾ ಯೋ ಹರೇತ ವಸುನ್ಧರಾಂ ಷಷ್ಟಿರ್ವ್ವರ್ಷ ಸಹ-
೪೦ ಶ್ರಾಣಿ ಮಿಷ್ಟಾಯಾಂ ಜಾಯತೇ ಕ್ರಿಮಿಂ । ಸ್ವಸ್ತಿ ಯಮನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೋನಾನು-
೪೧ ಷ್ಟಾಣ ಜಪ ಸಮಾಧಿ ಸಂಪನ್ನರಪ್ಪ ಶ್ರೀಮತ್ಕಲ್ಲಿಕಯ್ಯಜೀಯರ್ ಸರ್ವ್ವ ನಮಸ್ಯಮಾಗೆ
೪೨ ಪಡೆದರ್ [॥*] ಇದು ಸಿಂಗಪಂಥಿಯ ಸ್ಥಾನ [॥*] ಇಕೇರಿಯ ದೇಹುತ ಚಾಮುಣ್ಡಯ್ಯ
೪೩ ಬರೆದ । ಏರಿಯಮಯ್ಯ ಸೀನ ಪಾದಪಂಕಜ ಭ್ರಮರ ಸಮಯ ಪಡೆದವ . ತಿ
೪೪ ತೇಜನತಿವಂ ಕೇತಂ ಮಂಗಳ ಮಹಾ ಶ್ರೀ ಶ್ರೀ ಶ್ರೀ [॥*]

೨. ಹುಲಗೂರ

ಕಲ್ಮೇಶ್ವರ ಗುಡಿ ಹತ್ತಿರ (ಕ್ರಿ.ಶ. ೧೦೬೨)

(ARSIE 1944-45.NO.25)

ಕಲ್ಯಾಣ ಚಾಲುಕ್ಯ ಮೊದಲ ಸೋಮೇಶ್ವರನ ಆಡಳಿತಾವಧಿಯಲ್ಲಿ, ಮಹಾ ಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ದೇವಪಾಲ ಅರಸನು ಪುಲ್ಲುಂಗೂರು ಆಳುವಾಗ ಮೂರು ಕೆರೆಗಳ ನಿರ್ಮಾಣಕ್ಕಾಗಿ ೧೪ ಮತ್ತರು ಭೂಮಿಯನ್ನು ದಾನ ನೀಡಿದುದನ್ನು ದಾಖಲಿಸುತ್ತದೆ. ಇದಲ್ಲದೆ ಈ ದಾನವನ್ನು ಅರಸು ಮತ್ತು ಹನ್ನೆರಡು ಜನ ಗಾವುಂಡರು ಪ್ರತಿಪಾಲಿಸುತ್ತಾರೆಂದು ವಿವರಿಸುತ್ತದೆ ಮತ್ತು ಈ ಶಾಸನವು ತಿಕಣ್ಣಭಟ್ಟರ ಲಿಖಿತವೆಂದು ತಿಳಿಸುತ್ತದೆ. ಪುಲ್ಲುಂಗೂರು ಭತ್ತಗ್ರಾಮವಾಗಿತ್ತೆಂದು ಹೇಳುತ್ತದೆ.

೧ [ಸ್ವಸ್ತಿ ನಮ*]ಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲ
೨ [ಸ್ತಂಭಾಯ ಶಂಭವೇ ॥ ಸ್ವಸ್ತಿ*] ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿ-
೩ [ರಾಜ ಪರಮೇಶ್ವರಂ ಪ*]ರಮ ಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮ-
೪ [ತ್ರೈಳೋಕ್ಯ*]ಮಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾ-
೫ [ನಮಾಚಂದ್ರಾ*]ರ್ಕ್ಕತಾರಂಬರಂ ಸಲುತ್ತಮಿರೆ @ ತತ್ಪಾದ ಪದ್ಮೋಪಜೀವಿ @ ಸಮಧಿ[ಗತ*]
೬ [ಪಂಚ*]ಮಹಾಶಬ್ದ ಮಹಾಸಾಮನ್ತಾಧಿಪತಿ ಮಹಾಪ್ರಚಣ್ಡದಣ್ಡನಾಯ[ಕಂ*]
೭ . . [ವೈರಿ*]ಭಯದಾಯಕಂ ಬಿರುದ ಕೇದಾರಂ ಚವುಹತ್ಥಮಲ್ಲನಾಸ್ಥಾನ ಪದ್ಮಮು . .
೮ . . . . ಯಕಟಕ ಬಿರುದ ಜಳಧಿ ಬಡವಾನಳಂ ಶ್ರೀಮತ್ತ್ರೈಳೋಕ್ಯಮಲ್ಲದೇ-
೯ ವ ಪಾದಪಂಕಜಭ್ರಮರ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ
೧೦ . . . . [ಶ್ರೀ*]ಮದ್ದಣ್ಡನಾಯಕಂ ದೇವಪಾಳರಸರ್ಪ್ಪುರಿಗೆಱೆ ಮೂನೂಱಱ ಬಳಿಯ ಭತ್ತ
೧೧ ಗ್ರಾಮ ಪುಲ್ಲುಂಗೂರಂ ಸರ್ಬ್ಬಾಭ್ಯನ್ತರ ಸಿದ್ಧಿಯಿಂನಾಳ್ದರಸುಗೆಯ್ಯುತ್ತಮಿರ್ಬ್ದು ಸಕ
೧೨ [ನ್ರಿ*]ಪ ಕಾಳಾಕ್ರಾನ್ತ ಸಂವತ್ಸರ ಶತಂಗ ೯೮೪ನೆಯ ಶುಭಕೃತ್ಸಂವತ್ಸರ ಪ್ರವರ್ತ್ತಿ-
೧೩ ಸೆ ತದ್ವರ್ಷಾಭ್ಯನ್ತರದ ಪುಷ್ಯ ಬಹುಳ ಸಪ್ತಮೆ ಆದಿತ್ಯವಾರಮುಮುತ್ತ-
೧೪ ರಾಯಣ ಸಂಕ್ರಾನ್ತಿಯನ್ದು ಪುಲ್ಲುಂಗೂರ ಅರಕೆಱೆಗೆ ಮತ್ತರಾಱು ಕದಂಬ-
೧೫ ಗೆಱೆಗೆ ಮತ್ತರಾಱು ಮಾಣಿಚನ್ದನ ಕೊಳಕ್ಕೆ ಮತ್ತರೆರಡು ಅನ್ತು ಪದಿನಾಲ್ಕು ಮ-
೧೬ ತ್ತರ್ಕ್ಕೆಯ್ಯ ಫಲದಿಂ ಕೆಱೆಯಗಟ್ಟಿಯ ಕೆಲಸಮಾಚಂದ್ರಾರ್ಕ್ಕ ತಾರಂಬರಂ ಸಲೆ ನಡೆ-
೧೭ ವನ್ತಾಗೆ ಸರ್ಬ್ಬಬಾಧಾ ಪರಿಹಾರಂ ಸರ್ಬ್ಬನಮಶ್ಯಂ ಬಿಟ್ಟರ್ @ ಆ ಕೆಯ್ಯಂ ನಿಡುಗುಂದ-
೧೮ ರ ಮಾರಹುಲಿಗಾವುಣ್ಡನುಂ ಬಯ್ಸರ ನಾಗವರ್ಮ್ಮಗಾವುಣ್ಡನುಂ ಕೊಣ್ಡಲಸಿಂಗ
೧೯ ಗಾವುಣ್ಡನುಂ ತಮ್ಮ ಸಾಮ್ಯದ ಕೆಱೆಗಟ್ಗೆ ತನ್ತಮ್ಮ ಪೊಲದೊಳಗೆ ಕೆಯ್ಯಂ ಬಿಟ್ಟರ್ ।
೨೦ ಇನ್ತೀ ಕೆಯ್ಯನರಸುಂ ಪನ್ನಿರ್ಬ್ಬರ್ಗ್ಗಾವುಣ್ಡುಗಳುಂ ಕಾದು ನಡೆಯಿಸುವರ್ ।
೨೧ ಇನ್ತೀ ಧರ್ಮ್ಮಮಂ ಕಾದಾತಂಗೆ ಗಂಗೆ ಬಾಣರಾಸಿ ಪ್ರಯಾಗೆ ಅರ್ಗ್ಘ್ಯತೀರ್ತ್ಥ-
೨೨ ಮೆಂಬ ಪುಣ್ಯತೀರ್ತ್ಥಂಗಳೊಳ್ಸಾಸಿರ್ಬ್ಬ ಬ್ರಾಹ್ಮಣರ್ಗ್ಗೆ ಸಾಸಿರ ಕವಿಲೆಯನು-
೨೩ ಭಯಮುಖಿಗೊಟ್ಟ ಫಲಮಕ್ಕುಮಿದನಳಿದಾತನನಿತುಮನಳಿದ ಮಹಾ-
೨೪ ಪಾತಕನಕುಂ @ ಸ್ವದತ್ತಾಂ ಪರದತ್ತಾಂ ವಾಯೋ ಹರೇತ ವಸುಂಧರಾ ಷಷ್ಟಿರ್ವ್ವರ್ಷ ಸಹ-
೨೫ ಸ್ರಾಣಿ ವಿಷ್ಠಾಯಾಂ ಜಾಯತೇ ಕೃಮಿಃ ॥ ಸಾಮಾನ್ಯೋಯಂ ಧರ್ಮ್ಮಸೇತುನೃಪಾಣಾಂ ಕಾಲೇ

೨೬ ಕಾಲೇ ಪಾಳನೀಯೋ ಭವದ್ಭಿಃ ಸರ್ಬ್ಬಾನೇತಾನ್ಭಾಗಿನಃಪಾರ್ತ್ಥಿವೇಂದ್ರಾನ್ಭೂಯೋ
೨೭ ಭೂಯೋ ಯಾಚತೇ ರಾಮಭದ್ರಃ @ ತಿಕಣ್ಣಭಟ್ಟರ ಲಿಖಿತಂ @

೩. ಹುಲಗೂರ

ಅಳ್ಳಿಕಟ್ಟಿಯವರ ಹೊಲ (ಸು. ೧೨ ಶತಮಾನ)

(ARSIE 1944-45.NO.22)

ತುಣುಕು. ಕಲ್ಯಾಣ ಚಾಲುಕ್ಯ ೬ನೆಯ ವಿಕ್ರಮಾದಿತ್ಯನ ಆಡಳಿತಾವಧಿಯಲ್ಲಿಯ ಶಾಸನವಿದಾಗಿದೆ. ಶಾಸನದ ಕೆಳಭಾಗ ಒಡೆದಿದೆ.

೧ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಳೋಕ್ಯ ನಗ–
೨ ರಾರಂಭ ಮೂಳ ಸ್ತಂಭಾಯ ಶಂಭವೇ ॥
೩ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ
೪ ಪರಮೇಶ್ವರ ಪರಮ ಭಟ್ಟಾರಕ ಸತ್ಯಾಸ್ರಯ ಕುಳತಿಳಕಂ
೫ ಚಾಳುಕ್ಯಾಭರಣಂ ಶ್ರೀಮತ್ರಿಭುವನಮಲ್ಲದೇವರ ವಿಜಯರಾಜ್ಯ
೬ ಮುತ್ತರೋತ್ತರಾಭಿವ್ರಿದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂ
೭ ಬರಂ ಸಲುತ್ತಮಿರೆ [॥*] ಸ್ವಸ್ತಿ ಸಮಧಿಗತ ಪಂಚ ಮಹಾಶಬ್ದ*

* ಶಾಸನದ ಮುಂದಿನ ಭಾಗವಿರುವ ಶಾಸನದ ಕಲ್ಲು ಸ್ಥಳದಲ್ಲಿ ಲಭ್ಯವಿಲ್ಲ.

೪. ಹುಲಗೂರು

ಗರಡಿಮನೆಯಲ್ಲಿಯ ಶಾಸನ (ಕ್ರಿ.ಶ. ೧೧೪೦?)

(ARSIE 1944-45 No. 32)

ಶಾಸನ ವರದಿಗಳಲ್ಲಿ ಕೇವಲ ಜಗದೇಕಮಲ್ಲನ ಕಾಲದ್ದೆಂದು ಸಾರಾಂಶದಲ್ಲಿ ಗುರುತಿಸಲಾಗಿದೆ. ಪಠ್ಯ ಪ್ರಕಟಗೊಳ್ಳದೇ ಇರುವುದರಿಂದ, ಕ್ಷೇತ್ರಕಾರ್ಯ ಕೈಕೊಳ್ಳಲಾಯಿತು. ವರದಿಗಳಲ್ಲಿ ಸೂಚಿಸಿದ ಸ್ಥಳದಲ್ಲಿ ಶಾಸನವು ಲಭ್ಯವಿರಲಿಲ್ಲ. ಊರಿನವರನ್ನು ವಿಚಾರಿಸಿದಾಗ, ಗರಡಿ ಮನೆಯ ಗೋಡೆಯಲ್ಲಿ ಹಾಕಿ ಕಟ್ಟಲಾಗಿದೆಯೆಂದು ತಿಳಿಸಿದರು. ಗರಡಿಮನೆಯೊಳಗೆ ಹೋಗಲು ನನ್ನನ್ನು ಬಿಡಲಿಲ್ಲವಾದ್ದರಿಂದ ರವಿಕುಮಾರ ನವಲಗುಂದ ಅವರನ್ನು ಕರೆದುಕೊಂಡು ಹೋದಾಗ, ಅವರು ಶಾಸನವನ್ನು ಅರ್ಧದಿನ ಸ್ವಚ್ಛಗೊಳಿಸಿ ಪಡಿಯಚ್ಚನ್ನು ತೆಗೆದುಕೊಟ್ಟರು. ಆದರೆ ಶಾಸನದ ಎಡಭಾಗ ನೆಲದಲ್ಲಿ ಹೂಳಿದ್ದರಿಂದ ಮತ್ತು ಶಾಸನಕ್ಕೆ ಹಚ್ಚಿದ ಕೊಳೆಯನ್ನು ಪೂರ್ಣ ಸ್ವಚ್ಛಗೊಳಿಸಲು ಸಾಧ್ಯವಾಗದೇ ಹೋದುದರಿಂದ ಪಡಿಯಚ್ಚು ಸ್ಪಷ್ಟವಾಗಿ ಮೂಡಿರುವುದಿಲ್ಲ. ಲಭ್ಯವಿರುವ ಪಡಿಯಚ್ಚಿನ ಸಹಾಯದಿಂದ ಈ ಪಠ್ಯವನ್ನು ಸಿದ್ಧಗೊಳಿಸಲಾಗಿದೆ.

ಕಲ್ಯಾಣ ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲನ ಆಳ್ವಿಕೆಯಲ್ಲಿ, ಮಹಾಸನ್ಧಿವಿಗ್ರಹಾಧಿಕಾರಿಯೂ ಮಹಾಪ್ರಚಣ್ಡ ದಂಡನಾಯಕನೂ ಆಗಿದ್ದ ವಾವಣರಸರು ಪುರಿಗೆಱೆ ಮೂನೂಱು ಮತ್ತು ಬೆಳ್ವೊಲ ಮೂನೂಱು ಪ್ರಾಂತಗಳನ್ನು ಆಳುತ್ತಿದ್ದರು. ಮಣಲೇರ ವಂಶದ ಭೂತಪಾಂಡ್ಯನು ಈ ಭಾಗವನ್ನು ಆಳುತ್ತಿದ್ದನು. ಸಗರ ಕುಲದ ಇಂದ್ರಕೇಸಿ, ಪೊಲೆಕೇಸಿ, ಶಾಂತಿಗ, ಚಾವುಂಡರಾಯ, ಮಾರಸಿಂಗರ ನಂತರ ಜಯಕೇಸಿಯು ಆಳುತ್ತಿದ್ದನು. ಆ ಸಂದರ್ಭದಲ್ಲಿ ಇದ್ದ ಸೇನಾಮ್ನಾಯದ ಆಚಾರ್ಯರ ಪರಂಪರೆಯನ್ನು ತಿಳಿಸುತ್ತದೆ. ಬನ್ಧುಷೇಣ, ವೀರಷೇಣ, ನಾಗಸೇನ, ಶೌರ್ಯಸೇನ, ಅಭೆಯಸೇನ, ನಯಸೇನ ಮತ್ತು ನಾಗಶ್ರೀ ಕಂತಿಯರ ಹೆಸರುಗಳಿವೆ. ಶಾಸನದ ಕೆಳಭಾಗದ ಪಡಿಯಚ್ಚು ಲಭ್ಯವಿಲ್ಲದ್ದರಿಂದ ಪೂರ್ಣ ಪಾಠ ಕೊಡಲು ಸಾಧ್ಯವಾಗಿಲ್ಲ ಮತ್ತು ಬಳಸಿಕೊಂಡ ಈ ಪಡಿಯಚ್ಚು ಕೂಡ ಅಸ್ಪಷ್ಟವಾಗಿರುವುದರಿಂದ ಪಠ್ಯವು ದೋಷಪೂರಿತವಾಗಿದೆ.

೧ @ ಭದ್ರಮಸ್ತು । ಸುರಮಸ್ತಕಮೌಳಿವಿನ್ಯಸ್ತರತ್ನಕಿರಣೌಘಜೋದಿಬೋಧಿತಾಃ ಶ್ರೀಯೈಗಳೋರು ಜಿನಾನಾಂ
ಶಾಸನಾಯ ॥ ನರೆ

೨ ರಮಾಯ ನುತಾಯ ॥ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮ ಭಟ್ಟಾರಕಂ

೩ ಸತ್ಯಾಶ್ರಯಕುಳತಿಳಕಂ ಚಾಳುಕ್ಯಾಭರಣಂ ಶ್ರೀಮಜ್ಜಗದೇಕಮಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿಗೆ ಸಲುತ್ತುಮಿ–

೪ ರೆ ॥ ತತ್ಪಾದಪದ್ಮೋಪಜೀವಿ ॥ ಸಮಧಿಗತ ಪಞ್ಚಮಹಾಶಬ್ದ ಮಹಾಸನ್ಧಿವಿಗ್ರಹಾಧಿಕಾರಿ ಮಹಾ ಪ್ರಚಣ್ಡ ದಂಡನಾಯಕಂ ಶ್ರೀ ವಾವಣ–

೫ ರಸರ್ ಪುರಿಗೆಱೆ ಮೂನೂಱುಂ ಬೆಳ್ವೊಲ ಮೂನೂಱುಮನಾಳುತ್ತಿರೆ ॥ ಕಂ ॥ ಶ್ರೀಯುತ ಪುರಿಕರ ವಿಷಯೋಜೆಯಧಿಕಾರಿ ಪ್ರಕೂಟಕೋಚಿತ ಸಗರಾಮ್ನಾಯುದಿ–

೬ ತ ಮಣಲೇರಾಮ್ನಾಯದ ಪೂರ್ವ್ವಾವತಾರಮತಿ ವಿಸ್ತಾರ ॥ ಅದೆನ್ತೆನೆ ॥ ವೃ ॥ ಭುವನೈಕ ಪ್ರಭು ಭೂತಪಾಂಡ್ಯನಜೇಯಂ ತೇಜೋಧಿಕಂ ತದಸ್ಯಾಭವೇ ಬಾಯ್ಕೇಳಿಸಿ

೭ ತೀಬ್ರ ತೇಜದೆ ಕುಮಾರಿ ಭಾವದಿಂದಿತ್ತ ಸೇತುವರಂ ಸಂತತಮಾ ಘಟಾಂತಕಿ ನಿಜೋಗ್ರವಾ ಮಹಾದುಗ್ರ ಕಂಪನೋತ್ಸಾಹ ಹರಿನತೇಜವುಗ್ರಾನ್ಯು ಹಿಮ್ಯಾ–

೮ ದ್ರಿಯೊಳ್ ॥ ಅನ್ದನ್ದಂಗಭಿನವ ಜಿನಮನ್ದಿರಮಂ ಸಮೆದು ಮುದದಿನರ್ಚ್ಚಿಸಿ ಜಿನನಂ ಬನ್ದಿಸಿದೊನ್ದು ವ್ರತದಿನ್ದ ಸಲೆ ಸನ್ದರ್ ಧಾರಾದತ್ತಕಿರನ್ದುಂ ॥ ವಿಳಸತ್ಪುರಿ–

೯ ಕರ ವಿಷಯದೊಳಿಳಾಧಿಪನನನ್ದಕೇಸಿಯಂ ತತ್ಕ್ರಮದೊಳೆ ನಿಲವೇಟ್ಟು ಪೂರ್ವ್ವಪಶ್ಚಿಮಜಳಧಿವರಂ ಸಾಧಿಸಲ್ ಸಂದನ್ತಕಿನಳ್ಗಿದಳ್ ॥ ಶ್ರೀಕಾನ್ತಾಪ್ರಿ–

೧೦ ಯನಿನ್ದ್ರಕೇಸಿ ಸಗರಾಮ್ನಾಯೋದ್ಭವ ತತ್ಸುತಂ ಭೂಕಾನ್ತ ಪೊಲೆಕೇಸಿ ತತ್ತನಯನನ್ತಾ ಶಾನ್ತಿಗಂ ಗಂಗರೊಳ್ ಲೋಕಂ ಬಣ್ಣಿಸೆ ವುರ್ಬ್ಬರೆಯ ಮಣಲೇರಾಮ್ನಾ–

೧೧ ಯಮನ್ದಾಗೆ ತತ್ಲೋಕ ಪೆಂಪಿನ ಮಾರಸಿಂಗನಬಳಾನಂಗಂ ತದಗ್ರಾತ್ಮಜಂ ॥ ಪೊಲೆಕೇಸಿ ತನ್ನೃಪಾದ್ಯತ್ಕುಳೋದ್ಭವಂ ಜಿತ ವಿರೋಧಿ ಜಯಕೇಸಿಯೆಂಬಾ ತಳ–

೧೨ ಪತಿ ತತ್ತನೆಯಂ ಧರೆಯೊಳೆ ಧರಿತೋಪೇನ್ದ್ರನಿನ್ದ್ರಕೇಸಿ ನರೇನ್ದ್ರಂ ॥ ಎನಿಪೊಳ್ಪಿಂ ನೆಗಟ್ದಿನ್ದ್ರಕೇಸಿ ಜನನಾಥರ್ಸ್ಸುತಂ ಶಾನ್ತಿವರ್ಮ್ಮನರೇನ್ದ್ರಂ ಧೋರನಾ ಧೋ–

೧೩ ರನಾತನ ಸುತಂ ತತ್ಭೂಪನಿನ್ದಂ ಬಳಿಕ್ಕೆ ನ್ರಿಪಾಳರ್ಪ್ಪಲರಾಗೆ ಸನ್ದ ಬಳಿಕಂ ತದ್ವಂಶ ಜಾತಾವನೀಶನದೇಂ ನೋನ್ತನಾ ಪಾಳಿಗಂ ನಿಜಮೆನಿಪ್ಪ ಗಾದಿಗಂ ಕಾಟಿಗಂ

೧೪ ಕ ॥ ಆತನ ಸತಿ ಸಕಳ ಗುಣೋಪೇತೆ ತೇಜಗನ್ನುತೆ ಜಾತಿಯಬ್ಬರಸಿ ಮಹೀಜಾತೆಗೆ ಸೀತೆಗೆ ಚೇತಾಜಾತ ಪ್ರಿಯೆಗಧಿಕೆ ಸಿಕ್ಕ ಮೇಲೆನೆ ನೆಗಟ್ದಳ್ ॥

೧೫ ವೃ ॥ ಅವರ್ಗಗ್ರಭವ ಮನೋಭವನಭಂ ಚಾವುಣ್ಡರಾಯಂ ತನೂಭವನಾತಂಗೆನೆ ಮಾರಸಿಂಗನಭಯ ತತ್ಪುತ್ರಕಂ ವೀರನಾಹವಕಂಠೀರವನಿನ್ದರಂ ವೀರಜ–

೧೬ ಯಶ್ರೀ ಸುನ್ದರಂ ತಾನೆ ಮಾನವರೊಳ್ ಭೋಗಪುರನ್ಧರಂ ಕುಳಧರಂ ಸಮ್ಯಕ್ತ್ವ ಸನ್ಮನ್ದರಂ ॥ ಕ ॥ ಆ ನೆಗಟ್ದೆಟ್ದಿನ್ದರ ಧರಣೀನಾಥನ ವನಿತೆ ನಾಗಿಯಬ್ಬರಸಿ ಲ–

೧೭ ಸನ್ಮಾನಕಿಗಂ ಮಾನಿನಿ ತಜ್ಜಾನಕಿಗಂ ತಾನೆ ಪಾಟಿ ಪಾಸಟಿಯೆನಿಪೋಳ್ ॥ ವೃ ॥ ನುತ ಜನ ಕೋಟಿಕೋಟಿ ಜನಕಂ ಮಹಿಮಾಸ್ಪದೆ ರೇವಕಬ್ಬೆ ತಾಯ್ನುತ ರಿಪು ಮೌಳಿ ಲಾ–

೧೮ ಳಿತ ಪದಾಂಬುಜನಾರ್ಯ್ಯಗನಗ್ರಜಂ ಭುಜಾಶ್ರಿತ ಯಶನಿನ್ದರಂ ನಿಜ ಮನಜ್ಪ್ರಿಯನೊಳ್ಪಿನ ಮಾರಸಿಂಹ ಭೂಪತಿ ತನಗಗ್ರಪುತ್ರನುದಿತೋದಿತಮುನ್ನತಿ ನಾ–

೧೯ ಗಿಯಬ್ಬೆಯಂ ॥ ಜಿನ ಪೂಜೋತ್ಸವದಿಂ ಜಿನಾಭಿಷವಣೋತ್ಸಾಹಂಗಳಂ ಭಕ್ತಿಯಿಂ ಜಿನಚೈತ್ಯಂಗಳನುತ್ತಮಾಂಬರ ಮಣಿ ಸನ್ದೋಹ ಚಿತ್ರಂಗಳಂ ಜಿನಬಿಂಬಂಗಳನು–

೨೦ ಜ್ವಳೋಪಕರಣ ಬ್ರಾತಂಗಳಂ ರತ್ನಕಾಞ್ಚನನಿನಾ ಮಾಡಿಸಿ ನಾಗಿಯಬ್ಬರಸಿ ಕೀರ್ತ್ತಿಶ್ರೀಗಿದೆ ನೋನ್ತಳಾ ॥ ಎನಿಪವರ್ಗ್ಗಗ್ರಸೂನು ನವೀನ ವಿನಿರ್ಮ್ಮಳ ಕೀರ್ತ್ತಿ ತುಂಗನ ಜಿನಪದ ಪ–

೨೧ ದ್ಮಭೃಂಗನಶೇಷ ಜಿತಾಗ್ರಮ ಜಿನಾಸನಂ ನುತಿ ಬುಧಪ್ರಸಂಗನವನಂಗ ಲತಾಂಗ ವಿದಗ್ಧ ಮುಗ್ಧ ಸದ್ವನಿತೆ ಗನಂಗನಂ ಪೊಗಳದಿರ್ಪ್ಪವರನ್ದದ ಮಾರಸಿಂಗನಂ ॥ ಕ ॥ ಆ ಸ–

೨೨ ನ್ದ ಮಾರಸಿಂಗ ಶ್ರೀ ಸಗರಕುಳಾಂಬರನೆನ್ದು ತನ್ನನೃಪತಿಗೆ ಸಂತ್ರಾಸಿತರಿಪು ತನೆಯಂ ಗುಣಭಾಸಿ ಜಯಶ್ರೀನಿವಾಸಿ ಜಯಕೇಸಿ ನೃಪಂ ॥ ವೃ ॥ ಉದಿತ ಪಿತೃ ಮಾರ–

೨೩ ಸಿಂಗ ಮಹಿಪಂ ಸಂದಾರ್ಹತಂ ತನ್ನ ನಂಬಿದ ಧರ್ಮ್ಮಗುರುಗಳ್ ಸಮನ್ತಭಯಸೇನಾಚಾರ್ಯ್ಯರಾಶ್ಚರ್ಯ್ಯ ದೊಳ್ ಬಂಧುರಂ ಸ್ಥಾಪಿಸಿದಾಯ್ತವರ್ಮ್ಮಂ ॥ ಚಾಳುಕ್ಯಾನ್ವಯಂ ತನ್ನ .

೨೪ ದಲೆನ್ದನ್ದೆಯರಾತಿಕಂ ಸಗರಮಾರ್ತ್ತಣ್ಡಾವನಿಪಾಳಕಂ ॥ @ ಸ್ವಸ್ತ್ಯನೇಕ ರಿಪು ನೃಪತಿ ಶಿರಶ್ಶೇಖರ ಪ್ರಭಾವ ಕ್ರಮ ನಿಜ ವಿಜಯಶಾಸನ ಚಕ್ರವರ್ತ್ತಿ ಪ್ರಸಾದ ವರ–

೨೫ ಲಬ್ಧ ರಾಜ್ಯಚಿಹ್ನಸ್ತ ಪಂಥ ಪಞ್ಚಮಹಾಶಬ್ದ ಮಹಾಸಾಮನ್ತಂ ವೀರಲಕ್ಷ್ಮೀಕಾನ್ತ ಮಣಲೇರಾನ್ವಯ ಪ್ರಸೂತ ಸಿ . . . . . ದನ ಪ್ರಣೂತಂ ಪುರಿಗೆಱೆ ಪುರವರೇಶ್ವರಂ

೨೬ ವೀರ ಮಹೇಶ್ವರಂ ಪರಮ ಜಿನೇನ್ದ್ರ ಪಾದಾರವಿನ್ದ ಮಕರನ್ದ ಮತ್ತಮಧುಕರಂ ಸತ್ಯರತ್ನಾಕರಂ ಸಗರ ಚೂಡಾಮಣಿ ಭೃತ್ಯಚಿನ್ತಾಮಣಿ ಮತ್ತಗಜಮಲ್ಲನರ್ತ್ಥಿಗೆ ನಲ್ಲಂ ಹಯ–

೨೭ ವತ್ಸರಾಜಂ ಧರಣೀಸ್ವರ ಭೂಜಂ ರಿಪು . ಪಾರರ ವೈನತೇಯಂ ಸೌಚ ಗಾಂಗೇಯಂ ಸರಣಾಗತ ಜಳನಿಧಿ ಗುಣರತ್ನಂ ಪಯೋನಧಿ ಕಾಮಿನೀಕಾಮಂ ಮಣಲೇರ ಭೀಮಂ . . ಧಿ . ಮ–

೨೮ ನ್ನೆಯತಳಪ್ರಹಾರಿ ವೈರಿ ಮುರಾರಿ ಶ್ರೀಮಜ್ಜಯಕೇಸಿ ಪುರಿಗೆಱೆ ಮೂನೂಱಕ್ಕಂ ರಾಷ್ಟ್ರಕೂಟಕನಾಗಿ ಸುಖ ಸಂಕಥಾ ವಿನೋದದಿನರೆ @ ತದನು ರಾಜ್ಯಲಕ್ಷ್ಮೀರಿ–

೨೯ ಳಾಭವನ ಮೂಳಸ್ತಂಭಂ ಪರೋಪಕಾರ ಸೌರಂಭ ಸಮಸ್ತ ರಾಜ್ಯಭರ ಪುರನ್ಧರಂ ವಿಮಳಕುಳನ್ಧರಂ ಮಣಲೇರ ವಂಶ ಸಮುದ್ಧರಣ ಕಾರಣಂ . . ವೈರಿ ಸಂಹಾರಣಂ ಮನ್ನೆಯ

೩೦ ಮಂತ್ರಿ ಚತುರ್ಮ್ಮುಖಂ ಸಮರಮುಖ ಷಣ್ಮುಖಂ ಪತಿಹಿತಾಚಾರ್ಯ್ಯನಸಹಾಯಶೌರ್ಯ್ಯ ಸಮ್ಯಕ್ತ್ವ ಮನ್ದರಂ । ಮೂರ್ತ್ತಿ ಪುರನ್ದರಂ । ಸ್ವಾಮಿದ್ರೋಹ ಮುಖಮುದ್ರಂ ಸ್ಥಿತಿ ಸಾರಸ–

೩೧ ಮುದ್ರಂ ಬಾನ್ಧವಪ್ರಾಕಾರಂ ಶಿಷ್ಟಜನಾಧಾರಂ ಶ್ರೀಮತ್ಪೆರ್ಗ್ಗಡೆಯಾಯ್ತವರ್ಮ್ಮಯ್ಯಂ ॥ ವೃ ॥ ಮನುನಿಭನಜ್ಜನುಜ್ವಳ ಯಶಂ ತನಗೊಳ್ಪಿನ ದುದ್ಧಮಲ್ಲನಾತನ ತನೆಯಂ

೩೨ ಚಳುಕ್ಯತಿಳಕಂ ಜನಕಂ ವಿಭು ಬದ್ದೆಗಾಂಕನಾವನಗ್ರಹವಕ್ತ್ರಂ ಸನ್ದರಸಿಕಬ್ಬೆ ನಿಜಾಂಬಿಕೆಯೆನ್ದೊಡೇಂ ಜಗಜ್ಜನನುನ್ನತವಾಯ್ತೋ ಪೆಂಪಿನೆಸಕಂ . ದೊಳ್ನೆಗಟ್ದಾಯ್ತವರ್ಮ್ಮನಂ ॥ ಸ್ಮರನಿ–

೩೩ ನಮೂರ್ತ್ತಿ ವೀರ ಸಶೋವತ್ತಿ ವಿನಿರ್ಮ್ಮಳ ಕಿನ್ನಸನ ಮನ್ದರಗಿರಿ ಧೈರ್ಯ್ಯನಪ್ರತಿಮ ಶೌರ್ಯ್ಯನೋಪಾರ್ಜ್ಜಿತ ಧರ್ಮ್ಮಕಾರ್ಯ್ಯನುದ್ಧರ ರಿಪುಮಾರಿ ಶೌಚಗುಣಧಾರಿ ವಿನಿರ್ಜ್ಜಿತ ವೈರಿಯೆಂಬುದೀ ಸರಧಿಮ–

೩೪ ಲ್ಲನ ಜಸಕೆನಲ್ಲನನೀ ಧರೆ ದುದ್ಧಮಲ್ಲನಂ ॥ ರಾನುದ್ಧತಾರಿವಂ ತುರಂಗಬಳಕ್ಕೆ ಮಹಾಜಿರಂಗದೊಳ್ಪ ಕಂಜನಾಭನ ಪ್ರಯಿಮಂ ಮೃತ್ತಿಯೊಳಪ್ರಮಿತಾಗಮಂಗಳೊಳ್ ಪಂಕರುಹಾಸನಂ ತ್ರಿಪುರ । ಕ್ಷರಬು . . ವನೆಂಬುದು ವೋ

೩೫ ನಿಕ್ಕವನಾನನ್ವಯಾಂಬರ ಶಶಾಂಕನಾ ಸಂದ ಬದ್ದೆಗಾಂಕನಂ ॥ ಮೃಗರಿಪು ಸಾಮನ್ತರಿಪು ವಿಕ್ರಮಂ ತನಗೆ ಮಾವನೆನುದ್ಧತ ದುದ್ಧಮಲ್ಲನೀ ಜಗದೊಳುದಾರ ವೀರನಿಧಿ ತನ್ನ

೩೬ ಮನ ॥ ಜೀಯೆನುದ್ಧಕೀರ್ತ್ತಿ ಬದ್ದೆಗನೆಸೆವಾಯ್ತವರ್ಮ್ಮನವದಾತ ಯಶನ ನಿಜಸೂನುವೆನ್ದುದೀ ಪೊಗಳಲಳುಂಬ ಮಾಯ್ತರಸಿಕಾಂಬಿಕೆಯೊಳು ಮಹೋನ್ನತಿಕೆಯಂ ॥ ಸಮೆದರೋತಿ ಕುಳ

೩೭ . . . . . ವಧೂರಮಣಂ ಶ್ರೀ ಜಯಕೇಸಿ . . ತಿತದುರ್ವ್ವಿನಾಥ ಸನ್ಮಂತ್ರಿ ಶಾತ್ರ ಮದೇಭೇನ್ದ್ರದಳನ್ನೃತೇನ್ದ್ರನೆನೆ ಸನ್ದಾದಿ . . . .

೩೮ ಮಹಾಮಂತ್ರಿ ಚತುರ್ಮ್ಮುಖಂ ಬುಗಮುಖಾಳೋಕ ಕೃಯಾ ಸನ್ಮುಖಂ ॥ ಮಣಲೇರಾನ್ವಯಮಂ ಸಮುದ್ಧರಿಸಿದಂ ವಿಕ್ರಾನ್ತದೆ ದಾವನದಿನ್ತಣಿವನಂ ಪಿರಿದಿತ್ತನಾಶ್ರಿತ ಜನಕೂ–

೩೯ ರೂರೋದುತ್ತುಂಗ ತೋರಣ ಜೈನಾಳಯಮಂ ವಿನಿರ್ಮ್ಮಿಸಿದನತ್ಯಾಶ್ಚರ್ಯ್ಯಮಪ್ಪನ್ನೆಗಂ ಗುಣಮೇರು ಪ್ರಭುನಾಮಂ ಪತಿಹಿತಾಚಾರ್ಯ್ಯ ಮೆಯ್ವೆತ್ತುದೋ ॥ ಕ ॥ ಅಖಿಳ

೪೦ ವಚಶ್ರೀ ವಿಳಸನ್ಮುಖನಂ ಜಿನವನ . . . . ಪರಿಲುಳಿತ ಶಿಳೀಮುಖನಂ ಮಹೀಮಂತ್ರಿ ಚತುರ್ಮ್ಮುಖನಂ ಬಣ್ಣಿಪುದು ಸಮರಮುಖ ಷಣ್ಮುಖನಂ ॥ ಕನ್ಬೊದಿಗಳುಮೆನ

೪೧ ಳಿಸ ಗುಣಾನ್ವಿತನಾದಿತ್ಯವರ್ಮ್ಮ ನೆಗಟ್ದಿ ಪಂಚಲದೇವಾನ್ವಯ ಪವಿತ್ರನೆನೆ ಸಗರಾನ್ವಯ ನಿಸ್ತರಣನೆನೆ ಜನಂ ಬಣ್ಣಿಸದೆ ॥ ವೃ ॥ ಜಯವರ್ಮ್ಮಂಗೆ ಗುಣಾಸ್ಪದಂ ಬಲವರ್ಮ್ಮಂ

೪೨ ಗಗ್ರಜಂ ನಿಳಿಕಬ್ಬೆಯ ಕಾನ್ತಂ ಜನಂ ಕಲ್ಲಸುತೆ ಸರಿಯಲಾಂಬಾ ರೋಜಲಾಂಬಾಬ್ಬೆಗಂ ಪ್ರಿಯವಾಕ್ಯಂ ಕಲಿಗಂಗೆ ಮಣ್ಡಲಿಕ ವೀರಂ ಮೇರವರ್ಮ್ಮಂಗೆ ಕೂರ್ಮ್ಮೆಯ ಮಾವಂ ಕುಲದೊಳೆಂಬ

೪೩ ಚಳುಕ್ಯನಿದು ಪೆಂಪಾದಿತ್ಯವರ್ಮ್ಮಂ ॥ ಕುಳನಾಥ ಜಯಕೇಸಿಯಂ ಕಲಿಗ ಧಾತ್ರೀಪಾಳನಂ ಸನ್ದ ಮಣ್ಡಲಿಕಂ ವೀರ ಮಯೂರವರ್ಮ್ಮ ನೃಪನಂ ಕೈಕೊಣ್ಡು ಜೀಯಾ ಭುಜಬಳ–

೪೪ ದಿಂ ತತ್ಕ್ರಮು ರಾಜ್ಯದೊಳ್ನಿಲಿಸಿದೊಂದೌದಾರ್ಯ್ಯದಿಂ ಸೌರ್ಯ್ಯದ ಚಲವಾಳಂ ಪಲಗ್ಗಿತ್ತು ಮಾರ್ಪ್ಪಧಿಕರಾರಾದಿತ್ಯವರ್ಮ್ಮಂ ಜಗಂ ॥ ನರಿಯಳಿನಾಡ ಚಟ್ಟನನನಿನ್ದಿತನಂ ಮುಳುಗುನ್ದವನಾ . .

೪೫ ರತಿಯ ಸನ್ದ ದಾಯಿಗನನುದ್ಧರೆಯೊಳ್ಗಲಿ ಮಾರಸಿಂಗನ ನಿರುಪಮನಪ್ಪ ಜಿನ್ನವುರದಾ ಕೃತವರ್ಮ್ಮನನನ್ತೆ ಬೆಣ್ಣೆಯೂರರಿಬಳಮಲ್ಲನ ನಿಲಿಸಿದಂ ನೆರೆಯೊಳ್ ಗುಣಮೇರು

೪೬ ಸೌರ್ಯ್ಯದಿಂ ॥ ಎಲೆ ರತ್ನಾಕರ ಕಾಮಧೇನು ದಿವಿಜಾವದಾತ ವಜ್ರಕರಾವದಿ ಕೆಂದೂ ಕುಕಿಲಂಬ ವಿರಲನ್ತೊಪ್ಪಿನರ ಕಜುವಾರ ಕಾಯ್ವನೇಶ್ವರನಂ ಕಾಂಚಿಹತಂ ವೃಥಾಕುಳತೆಯಂ ಮಾರ್ಪ್ಪನ್ನ

೪೭ ರಿನ್ನಿಲ್ಲನಾಕುಳಮೆನ್ತೆನ್ತೆನೆ ಧಾತ್ರಿಯಂ ತಣಿಪಿದಂ ಶಿಷ್ಟೇಷ್ಟ ಕಳ್ಪದ್ರುಮಂ ॥ ಕ ॥ ದೂರದ ಬೆಟ್ಟದ ನುಣ್ಪುವೊಲಾರೊಳ್ಪುಂ ನೆಗಳ್ಗಮೆನ್ತುಮನ್ತಲ್ತನ್ತಸ್ಸಾರ ಶಿಷ್ಟೇಷ್ಟ ಜನಾಧಾರಂ ಸನೋ ಮೇರು ಬಾ–

೪೮ ನ್ಧವಪ್ರಾಕಾರಂ ॥ ವೃ ॥ ಕ್ರಮದಿಂದಾದಿ ನೃಪೇನ್ದ್ರರಿನ್ದೆ ಪಲಕಾಲಂ ಸನ್ದು ಪಾಪಾತ್ಮರಿನ್ದಮೆ ಮಾಣ್ದಿಟ್ದಿ ಮಹಾಧ್ವಜಂ ವಿವಿಧ ದೇವಚ್ಛನ್ದ ಸಾನನ್ದ ಪಞ್ಚಮಹಾಶಬ್ದ ಮಹೋತ್ಸವಾದಿ ಪ–

೪೯ ರಮಾರ್ಹತ್ಪೂಜಾ ಮಂತ್ರಗಳುತ್ತಮಮಾಯ್ತೆಂಬಿನೆಗಂ ಸಮುದ್ಧರಿಸಿದಂ ಶ್ರೀ ಮಂತ್ರಿ ನಾರಾಯಣಂ ॥ ಕಂ ॥ ಕುಳತಿಳಕನ ಗುಣಮೇರುವ ವಿಳಸದ್ಗುರುಕುಳಮತಿ । ಪ್ರಚಣ್ಡ ಮ–

೫೦ ಹಾಮಣ್ಡಳಿಕ ಮಹಾಸಾಮನ್ತ ಕಳನೆರಗಿ ಪಯೋದುನಿಯ ಸೇನಾಮ್ನಾಯಂ ॥ ವೃ ॥ ಎನೆ ಸನ್ದ ಬನ್ಧುಷೇಣವ್ರತಿಯ ಗಣಧರರ್ಬ್ಬನ್ಧುಷೇಣಾಖ್ಯಂ ಯೋಗಿ . ನಿನ್ನಂ ನನ್ದಿ ವೀರಷೇಣವ್ರ–

೫೧ ತಿಪತಿಯ್ಯೆಮ ನಿವೃತ್ತಿ ಜಯಾಗ್ರ ಶಿಷ್ಯ ಜಿನಕಳ್ಪನ್ನಾಗಸೇನವ್ರತಿಗಳವರಾ ಶಿಷ್ಯರ್ವ್ವಿನಯಾಬ್ಜ ಭಾಸ್ವದ್ದಾನಪಮ್ಮಿ ಕಾ(ಶೌ?)ರ್ಯ್ಯಸೇನವ್ರತಿಗಳಭೆಯಸೇನಾಖ್ಯ ಸಿದ್ಧಾನ್ತದೇವರ್ ॥

೫೨ ಕ ॥ ಆಗಮಿಕರಖಿಳ ವಸುಧಾ ಭಾಗದೊಳೆಸೆವ ನಯಸೇನಸಿದ್ಧಾನ್ತ ಮಹಾಯೋಗೀಶಾಭರಣಭಕ್ತರ್ ನಾಗಶ್ರೀ ಕನ್ತಿಯರ್ ವಿಸುದ್ಧ ಚರಿತ್ರರ್ ॥ ವೃ ॥ ಶಿಷ್ಯ ವಜ್ರಗುಣಮೇರು–

೫೩ ವಾತನ ಕುಳಸ್ತ್ರೀ ಜೈನ ಸನ್ಮಾನಾಖ್ಯ ಪವಿತ್ರೀಕೃತಗಾತ್ರೆ ಸುನ್ದರತರ ಶ್ರೀಮಜ್ಜಿನೇಂದ್ರ ಲಸಲ್ಲಪನಾಳೋಕನ ಲೋಲನೇತ್ರೆ ಜಿನವಾಣಿ ಪೂರಿತ ಶ್ರೋತ್ರೆಯೆನ್ದು ಪಲ ಕೀರ್ತ್ತಿಗೆ ನಿ–

೫೪ ಳಿಕಬ್ಬೆ ನೆಗಟ್ದಳ್ ವಿಶ್ವಂಭರಾ ಚಕ್ರದೊಳ್ ॥ ಕ ॥ ಪರಮತ ವಿರಕ್ತೆ ಧರ್ಮ್ಮಾನುರಕ್ತೆ ಪತಿಭಕ್ತೆ ಶೀಳಗುಣಯುಕ್ತೆ ಜಿನೇಶ್ವರ ಭಕ್ತೆ ಶಾಕ್ತೆಯೆನೆ ಬಿತ್ತರಿಸದರಾನ್ದಿಳಿಕಜೆಯಂ ವಸುಮ–

೫೫ ತಿಯೊಳ್ ॥ ವೃ ॥ ಜಿನನಂ ಪೂಜಿಸಿದಾಗಸ ವಜಿಕುಮಿನ್ತೀ ಸ್ತ್ರೀ ಜಿನೇನ್ದ್ರಾಭಿಷೇಚನದಿಂದಿನ್ನನೆ ಕೂಡುಗುಂ ಪುರುಶನಿನ್ತಿಂದ್ರಂಗೆನಲ್ಪಕ್ಕರಾರೆನಲಾ ಪೇಟ್ದಿಪನನ್ದು ಕೇಳ್ ಪುರುಶರತ್ನ ॥ ದರ್ಪ್ಪ *

(* ಶಾಸನದ ಮುಂದಿನ ಭಾಗದ ಪಡಿಯಚ್ಚು ಲಭ್ಯವಿಲ್ಲ.)

೫. ಹುಲಗೂರು

ಚಂದ್ರಶೇಖರ ಹಿರೇಮಠ ಅವರ ಮನೆ ಮುಂದಿನ ಶಾಸನ (ಕ್ರಿ.ಶ. ೧೧೪೪)

(ARSIE 1944-45 No. 35)

ಹಲಸಿಗೆ ಹಗರಿಟ್ಟಗೆ ಬೆಳ್ವಲ ೩೦೦ ಹುಲಿಗೆರೆ ೩೦೦ ಪ್ರಾಂತಗಳನ್ನು ಆಳುತ್ತಿದ್ದ ಮನ್ನೆಯ ಮಂತ್ರಿ ತಿಪ್ಪರಸರು ಮತ್ತು ಅಣ್ಣಿಗರಿದ್ದಾಗ, ಹಾನುಂಗಲ್ಲ ೫೦೦ರ ಹೆರ್ಜುಂಕ ವಡ್ಡರಾವುಳ ಬಿಲ್ಕೊಡೆ ಪನ್ನಾಯದಧಿಷ್ಠಾಯಕರೆನಿಸಿದ [ವಾವ]ಣರಸರು, ಹೆಗ್ಗಡೆ ಮಲ್ಲಿಯಣ್ಣ, ಹೆರ್ಗಡೆ ಕೇಸಿರಾಜಯ್ಯ, ಶ್ರೀಮನ್ಮಹಾಪ್ರಚಣ್ಡ ದಣ್ಡನಾಯಕಂ ತಿಪ್ಪರಸರು, ಹುಲುಂಗೂರ ಹನ್ನಿರ್ವರು ಗಾವುಂಡುಗಳು, ಸೆಟ್ಟಿಗುತ್ತರು, ಅಯ್ನೂರು, ಮುಮ್ಮುರಿದಂಡ, ನಖರರು, ಅಯ್ವತ್ತೊಕ್ಕಲು, ನಾಲ್ಕು ದೆಸೆಯ ವರ್ತಕರು ಮಹಾನಾಡಾಗಿ ನೆರೆದು, ಗವರೇಶ್ವರದೇವರಿಗೆ, ಶ್ರೀ ಬೊನ್ತೆಯದೇವರ ಶಿಷ್ಯರಾದ ಶ್ರೀ ಕೇದಾರಶಕ್ತಿಪಣ್ಡಿತರ ಕಾಲನ್ನು ತೊಳೆದುಬಿಟ್ಟ ಸುಂಕದಾನವನ್ನು ವಿವರಿಸುತ್ತದೆ.

೧ . . . . . . ಸುಖ ಸಂಕಥಾ . . . .

೨ . . . . . . ಮಪ್ರತಿಹತ . . ತಾ ಪ್ರಭವ ಮುಂನ . . . .

೩ . . . . . . ಹಲಸಿಗೆ ಹಗರಿಟ್ಟಗೆ ಬೆಳ್ವಲ ಮೂನೂಱು ಹುಲಿಗೆಱೆ ಮೂ–

೪ [ನೂ*]ಱುಮಂ ದುಷ್ಟ ನಿಗ್ರಹ ವಿಶಿಷ್ಟ ಪ್ರತಿಪಾಳನೆಯಿಂದಾಳ್ದರಸುಗೆ–

೫ . . . . . . ಶ್ರೀವರನಭಿನುತ ನರವಾಣಿವರನದಜ್ಞಯಾಂಗನಾ

೬ . . . . . . ಗೆ ಬಣ್ಣಿಸಲು . . . . . . ಮನ್ನೆಯಂ ಮಂತ್ರಿ ತಿಪ್ಪರಸರ್ ಬಿಟ್ಟ

೭ . . . . . . ಯೊಳು ಮಿರ್ದ್ದುವವೊಲು ಭದ್ರ . ಟ್ಠಂನ್ತೇಳು ಮಾಣಿಕ್ಯ

೮ . . . . . . ಷಹರಟ್ಟ ಭೂದೇವಕುಳದೊಳತಿ ಮುದದೆ ಅಣ್ಣಿಗ ನೆಗಳೆ ಶ್ರೀಮನ್ಮಹಾ ಪ್ರ–

೯ . . . . . . ಹಾನುಂಗಲ್ಲಯ್ನೂಱಱ ಹೆರ್ಜ್ಜುಂಕ ವಡ್ಡರಾವುಳ ಬಿಲ್ಕೊಡೆ ಪನ್ನಾಯದಧಿಷ್ಠಾಯ–

೧೦ . . ಣರಸರು ॥ ತತು ಹೃದಯಾನಂದಂಗೆ ಕರ ಜಳನಧಿಮಗುಣ್ಬು ವಸುಧೆಯ ತಳ

೧೧ . . ನಾಧಿನಾತನ ತೇಜಮಳಿಯ ಜಳಂ ತಯತ . ಗವದ ಸಲೆ ನೆರ್ದ್ದುನತ್ತೆಪೆನಾ

೧೨ . . ಮಲ್ಲ ॥ ಮಲ್ಲಂ ವಿನುತ ಗುಣಂ ಶ್ರೀವಲ್ಲಭ ಪದಕಮಳಭ್ರಿಂಗನಭಂಗೆ ಬೀರಂ . .

೧೩ . . ದುಮಧ ಜನವೊಲ ಸಲೆ ಬಣ್ಣಿಸಲ್ಕೆಪೆನಡೆ ದೇವರಿಗೆ ಅನ್ತೆನಿಸಿ ನೆಗಳ್ದ ಯಿ

೧೪ . . ರಳ ಹೆಗ್ಗಡೆ ಮಲ್ಲಿಯಣ್ಣನುಂ ಹೆರ್ಗ್ಗಡೆ ಕೇಸಿರಾಜಯ್ಯಂ ಶ್ರೀಮನ್ಮಹಾಪ್ರಚ–

೧೫ ಣ್ಡ ದಣ್ಡನಾಯಕಂ ತಿಪ್ಪರಸರು ಶ್ರೀಮಚ್ಚಾಳುಕ್ಯ ಪ್ರತಾಪ ಚಕ್ರವರ್ತ್ತಿ ಜಗದೇಕಮಲ್ಲ

೧೬ ವರ್ಷದ ೫ನೆಯ ದುನ್ದುಭಿ ಸಂವತ್ಸರದ ಪುಶ್ಯ ಸುದ್ಧ ೭ ಸೋಮವಾರದಲುತ್ತರಾಯಣ

೧೭ ಸಂಕ್ರಾನ್ತಿ ವ್ಯತಿಪಾತದಂದು ಹುಲುಂಗೂರ ಹನ್ನಿರ್ವರು ಗಾವುಂಡುಗಳುಂ ಸೆಟ್ಟಿಗುತ್ತರುಂ ಅಯ್ನೂ–

೧೮ ರುಂ ಮುಮ್ಮುರಿದಂಡಮುಂ ನಖರಮುಂ ಅಯ್ವತ್ತೊಕ್ಕಲುಂ ನಾಲ್ಕುಂ ದೆಸೆಯಾಸ್ರಯದ ಮಹಾ

೧೯ ನಾಡಾಗಿ ನೆರೆದಿರ್ದ್ದು ಬಿಟ್ಟ ಧರ್ಮ್ಮಮೆನ್ತೆಂದಡೆ ಶ್ರೀಮತ್ ಗವರೇಸ್ವರದೇವರ ತೋಂಟದಲು ಕೊ–

೨೦ ಯ್ದೆಲೆಯ ಹೇಱಿನ ಕುಳಿಯಂ ಬಿಲ್ಕೊಡೆಯ ಪನ್ನಾಯವಣ ದೇವರಂಗಭೋಗ–

೨೧ ಕ್ಕೆ ಸರ್ವ್ವಬಾಧಾ ಪರಿಹಾರ ಸರ್ವ್ವನಮಶ್ಯಂ.ಬಿಟ್ಟರು ಆ ದೇವರ ತೋಂಟದಡಕೆಯ ಹೆರ್ಜ್ಜುಂ–

೨೨ ಕ ವಡ್ಡರಾವುಳದ ಸುಂಕಮಂ ಸರ್ವ್ವಬಾಧಾ ಪರಿಹಾರಂ ಬಿಟ್ಟರ್ ॥ ಇನ್ತೀ ಧರ್ಮ್ಮಮಂ ಪ್ರತಿಪಾಳ್ಸಿದ–

೨೩ ರ್ ಗಂಗೆ ವಾರಣಾಸಿ ಕುರುಕ್ಷೇತ್ರ ಪ್ರಯಾಗೆ ಅರ್ಘ್ಯತೀರ್ತ್ಥದಲು ಸಾಸಿರ ಕವಿಲೆಯಂ ಕೋ–

೨೪ ಡುಮಂ ಕೊಳ್ಗುಂ ಪಂಚರತ್ನದಲು ಕಟ್ಟಿಸಿ ಚತುರ್ವ್ವೇದಪಾರಗರಪ್ಪ ಬ್ರಾಹ್ಮಣರ್ಗ್ಗುಭಯಮು–

೨೫ ಖಿಗೊಟ್ಟ ಫಲಮಕ್ಕುಂ ॥ ಇನ್ತೀ ಧರ್ಮ್ಮಮನಳಿದವಂ ಗಂಗೆ ವಾರಣಾಸಿ ಕುರುಕ್ಷೇತ್ರ ಪ್ರ–

೨೬ ಯಾಗೆ ಅರ್ಘ್ಯತೀರ್ತ್ಥದಲು ಸಾಸಿರ ಕವಿಲೆಯುಮಂ ಚತುರ್ವ್ವೇದಪಾರಗರಪ್ಪ ಬ್ರಾ-
೨೭ ಹಣರುಮ ಏಕ್ಕೋಟಿ ತಪೋಧನರುಮಂ ವಧಿಯ್ಸಿದ ಮಹಾಪಾತಕನಕ್ಕುಂ ॥
೨೮ ಸ್ವದತ್ತಾಂ ಪರದತ್ತಾಂ ವಾಯೋ ಹರೇತಿ ವಸುನ್ಧರಾಂ ಷಷ್ಟಿರ್ವ್ವರ್ಷ ಸಹಶ್ರಾಣಿ ವಿಷ್ಟಾಯಾಂ
೨೯ ಜಾಯತೇಃ ಕ್ರಿಮಿಃ ॥ ಸಾಮಾನ್ಯೋಯಂ ಧರ್ಮ್ಮಸೇತು ನ್ರಿಪಾಣಾಂ ಕಾಲೇ ಕಾಲೇ ಪಾಲ-
೩೦ ನಿಯೋ ಭವದ್ಭಿಃ ಸರ್ವ್ವಾನೇತಾನುಭಾವಿನಃ ಪಾರ್ತ್ಥಿವೇಂದ್ರಾನ್ಭೂಯೋ ಭೂಯೋ
೩೧ ಯಾಚತೇ ರಾಮಚಂದ್ರಃ ॥ . . ನದಂ ತ್ರೈಸೋಮ ಜನುಕ
೩೨ ದಳಿಸಿದ ॥ @ ಸ್ವಸ್ತಿ ಶ್ರೀಮತು ಗವಜೇಸ್ವರದೇವರಿಗೆ ಸ್ಥಳ ಸಮಸ್ತ ಮುಮ್ಮು-
೩೩ ರಿದಂಡ ನಖರ ಅಯ್ವತ್ತೊಕ್ಕಲು ನ . . . . . ದ ಮುಂಮುರಿದಂಡಂಗಳು
೩೪ ಚೈತ್ರಕ್ಕೆ ವೀಸ ೫ ಪವಿತ್ರಕ್ಕೆ ವೀಸ ೫ . . ಯವಿಂ . . ಯ ಮಾರುವ ಭಂಣ್ಡಕೆ
೩೫ ಹಸುಂಬೆಗೆ ವೀಸ ೧ ಎತ್ತು ಕತ್ತೆ ಕೋಣದೊಳಾ ದೇವರ್ಗ್ಗೆ ವೀಸ ೧ ಶ್ರೀ ಶ್ರೀ
೩೬ @ ಸ್ವಸ್ತಿ ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೋನಾನುಷ್ಠಾನ ಜಪ ಸಮಾಧಿ ಶೀಳ ಗುಣ
೩೭ ಸಂಪನ್ನರಪ್ಪ ಶ್ರೀ ಗವರೇಸ್ವರದೇವರ್ಗ್ಗೆ ಹೊನ್ನುವಿಲ್ಲಯ್ಯರಸ . . ದಿಸಾಳೆ . .
೩೮ ರದೇವ ಉತ್ತರಾಯಣ ಸಂಕ್ರಾನ್ತ ವ್ಯತಿಪಾತದಂದು ಶ್ರೀ ಬೊನ್ಥೆಯದೇವ-
೩೯ ರ ಶಿಸ್ಯರಪ್ಪ ಶ್ರೀ ಕೇದಾರಶಕ್ತಿಪಣ್ಡಿತರ ಕಾಲಂ ಕರ್ಚ್ಚಿ ಧಾರಾಪೂರ್ವ್ವಕಂ
೪೦ ಬಿಟ್ಟ ಧರ್ಮ್ಮಮೆನ್ತೆಂದಡೆ ಹೆರ್ಜ್ಜುಂಕ ವಡ್ಡರಾವುಳ ಬಿಲ್ಕೊ-
೪೧ ಡೆ ಬೀರವಣ ವೊಳಗಾಗಿ ಯಿರ್ಪ್ಪತ್ತು ಎತ್ತಿನಲು ಯಾವ ಭಣ್ಡಮಂ ಹೇ-
೪೨ ಜಿದಡೆ ಸರ್ವ್ವಬಾಧ ಪರಿಹಾರಂ ಸರ್ವ್ವನಮಸ್ಯಂ ಬಿಟ್ಟರ್ @@@@@

೬. ಹುಲಗೂರು

ಸಿದ್ಧಲಿಂಗೇಶ್ವರ ದೇವಾಲಯದ ಮುಂದಿನ ತ್ರುಟಿತ ಶಾಸನ

ಸು. ೧೨ನೆಯ ಶತಮಾನ (ಕ್ರಿ.ಶ. ೧೧೩೯-೧೧೫೦)

(ARSIE 1944-45 No. 33)

ಅಪೂರ್ಣ. ತ್ರುಟಿತ. ಕಲ್ಯಾಣ ಚಾಲುಕ್ಯ ಇಮ್ಮಡಿ ಜಗದೇಕಮಲ್ಲನ ಆಡಳಿತಾವಧಿಯಲ್ಲಿ, ಮಹಾಪ್ರಚಂಡ ದಂಡನಾಯಕ ವಾವಣರಸ ಪುರಿಗೆರೆ ೩೦೦, ಬೆಳ್ವೊಲ ೩೦೦ ಪ್ರಾಂತಗಳನ್ನು ಆಳುತ್ತಿರುವ ಉಲ್ಲೇಖ.

೧ [ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪೃ*]ಥ್ವೀವಲ್ಲಭಂ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾ-
೨ [ರಕಂ ಸತ್ಯಾಶ್ರಯಕುಳತಿಳಕಂ ಚಾಳುಕ್ಯಾಭರಣಂ*] ಶ್ರೀಮಜ್ಜಗದೇಕಮಲ್ಲದೇವರ ರಾಜ್ಯಮುತ್ತರೋ-
೩ [ತ್ತರಾಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕ್ಕತಾರಂಬರಂ*] ಸಲುತ್ತಿರೆ ತತ್ಪಾದಪದ್ಮೋಪಜೀವಿ ಸಮಧಿಗತ ಪಂಚ-
೪ [ಮಹಾಶಬ್ದ ಮಹಾಪ್ರ*]ಚಣ್ಡದಣ್ಡನಾಯಕಂ ಅಯ್ಯನಬಂಟ ಅರಿಘಟಾಮ
೫ . . . . ನ ಸತ್ಯಕಾನೀನ ಸಮರಧುರನ್ಧರಂ ಶ್ರೀಮದ್ದಣ್ಡನಾ-
೬ . . . . ಮೂನೂಱುಮಂ ಸುಖಸಂಕಥಾ ವಿನೋದದಿನಾಳುತ್ತಿರೆ
೭ . . . . ರಾಜ ವಿಜಯಶಾಸನ ಚಕ್ರವರ್ತ್ತಿ ಪ್ರಸಾದೋ ಫಲ
೮ . . . . ಲಕ್ಷ್ಮೀಕಾನ್ತ ಮಣಲೇರಾನ್ವಯ ಪ್ರಸೂತ
೯ . . . . ಶ್ವರಂ ನಗವದರ್ಹತ್ಪರಮೇಶ್ವರ ಪರಮ ಭಟ್ಟಾ-
೧೦ . . . . ಳಾಗ್ರಮಣ್ಡಿತ ದೋರ್ದ್ದಣ್ಡ ಸಗರಮಾರ್ತ್ತಣ್ಡ ಜೀ-

೧೧ . . . . ಮಣಿ ಮತ್ತಗಜಮಲ್ಲನರ್ತ್ಥಿಗೆ ನಲ್ಲ ಪಾಯ–
೧೨ . . . . ಯ ಶರಣಾಗತ ಜಳನಧಿಗುಣರತ್ನ ಪಯೋ–
೧೩ . . . . ಶ್ರೀ ಮಜ್ಜಯಕೇಸಿ ರಾಷ್ಟ್ರಕೂಟಕ ನಾ–
೧೪ . . . . ಕುನ್ದೂರಂ ಮಣಲೇರ ವಂಶ ಸವಟದ್ದರ
೧೫ . . . . ಸಮರಮುಖ ಷಣ್ಮುಖಂ ಪತಿಹಿತಾ–
೧೬ . . . . ಮುಖಮುದ್ರ ಸ್ಥಿತಿ ಶಾರಸ *

೭. ಹುಲಗೂರು

ಕಲ್ಮೇಶ್ವರ ದೇವಸ್ಥಾನದ ಹತ್ತಿರವಿರುವ ಶಾಸನ (ಕ್ರಿ.ಶ. ೧೧೫೪)

(ARSIE 1944-45 No. 26)

ಕಲ್ಯಾಣ ಚಾಲುಕ್ಯ ಮೂರನೆಯ ತೈಲನ ಆಳ್ವಿಕೆಯಲ್ಲಿ, ಮಹಾಪ್ರಧಾನ ಮಾಯಿಪಯ್ಯನಾಯಕನಿಂದ ಮಲ್ಲಿಕವ್ವೆ ಗಾವುಂಡಿಯ ಮಗ ಎರಕಗಾವುಂಡನ ತೋಟದ ಪನ್ನಾಯ ಸುಂಕ ದಾನದ ವಿವರಗಳಿವೆ. ಪುಲ್ಲುಂಗೂರಿನ ವರ್ಣನೆಯಿದೆ.

೧ ರಾಜ್ಯಮುತ್ತರೋತ್ತರಾಭಿವ್ರಿದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕ್ಕ ತಾರಂಬರಂ ಸಲುತ್ತಮಿರೆ ॥ ಶ್ರೀಕರಮೆನಿಪು–
೨ ದಖಿಳ ಕಳಾಕೋವಿದರಿರ್ಕ್ಕೆ ತಾಣಮೆನಿಸುವುದೆನ್ತುಂ ಲೋಕಕೆ ಚೆಲ್ವಿದೆನಿಸುವುದಾಕಾರಂ ನೋರ್ಪ್ಪ ಪು–
೩ ಲ್ಲುಂಗೂರು ॥ ಮತ್ತಂ ಅದಱ ಚೆಲ್ವದೆಂತೆನ್ದೊಡೆ ॥ ಬಳಸಿರ್ದ್ದಾರವೆ ಕೆಱೆ ಕಣ್ಗೊಳಿಸುವ ಪೂದೋಂಟಮೆಸೆವ
೪ ತಳರ್ತ್ತಳಿಪದೀ ವಿಜಾಲಯಂ ಸಂದಳಿಸಿರೆ ಪುರಲಕ್ಷ್ಮಿ ನಾಡೆಯುಂ ಸೊಗಯಿಸುಗು ॥ ರಸಮೊಸರ್ವ್ವಾಕದ . .
೫ ರಗೆಲ್ಲಸುನಂ ಮೆಳಸೆಲಯಲ್ಲ ಅರಿಸಿನಮಂ ಕಣ್ಗೆಸೆವ ಮುಳಸೊನ್ತೆ ಕೊಳ್ವವಸದಳಮೆನಸುವುದು ಪುರದ .
೬ ದೆಸೆಯೊಳ್ ॥ ಅನ್ತುಂನತಿವಡೆದ ಮಹಾನುಭಾವನನುಜನೆನ್ತೆನ್ದೊಡೆ ॥ ವ್ರಿತ್ತ ॥ ಪಿರಿದು ವಿಳಾಸದಿಂ ತಳೆದು ಸೊ . .
೭ ದಿರುಮೆ ಮಾಯಿದೇವನಿರ್ದ್ದರಮನೆ ಭಾನುವಿರ್ದ್ದ ಗಗನ ಸರಸಿರುಹಮಿರ್ದ್ದ ಪೂಗೊಳಂ ವರಭ್ರಿಂಗಮಿರ್ದ್ದ ನಂದನ
೮ ವನಪರಿರ್ದ್ದಮ್ರಿತಾಬ್ಧಿ ದೇವಸಿನ್ದುರಪತಿಯಿರ್ದ್ದ ಮನ್ದಿರನಿಳಾಧಿಪನಿರ್ದ್ದ ವಸುನ್ಧರಾತಳ ॥ ಚಿನ್ತಾಮಣಿ ಸುರ–
೯ ರುಂಗದೆ ಚಿನ್ತಿಸದೀಯಮ್ಮ ಜಗಕ್ಕೆ ಲೋಕದ ಮನುಜರ್ಚ್ಚಿನ್ತಿಸದೆ ಕುಕುತಂ ವನಭಿನವ ಚಿನ್ತಾಮಣಿ ಮಾಯಿದೇವ ದಣ್ಡೇ–
೧೦ ಶಂಗನ್ಯಯೆತ್ತನ್ದೊಪ್ಪಿದುದೆಂದು ಚಾರುಗಿರಿ ತಾನೆನ್ತನ್ತೆ ಧೈರ್ಯ್ಯ ದಿವಾಕರನಿನ್ನನ್ತನ್ತುಟು ತೇಜನಂಬುನಿಧಿ ತಾನೆನೆನ್ತೊಗ . . .
೧೧ ಮೆಂದಿರದಾರ್ವ್ವಣ್ಣಿಪರೆನೆ ಯೋಗನಿಪುಣನೆಸೆವ ಕಾಮಿನಿನಾಥನ ಸಿರನಂ ಮಾಯಿಪನಂ ಪ್ರವರ್ತ್ತಿಸಲೀ ಲೋಕ
೧೨ ವಿಖ್ಯಾತ ॥ ವಚನ ॥ ಅನ್ತು ಸಕಳ ವಿಖ್ಯಾತಿಯಂ ಪಡೆದ ಮಹಾಪ್ರಧಾನ ಪನ್ನಾಯದಧಿಷ್ಠಾಯಕನಂ ತನುಜನೀ . .
೧೩ ನ್ತರನ್ದೊಡೆ ॥ ಆತನ ತನಯಂ ಸುಜನ ವಿನೂತಂ ಶಿವಧರ್ಮ್ಮ ನಿರ್ಮ್ಮಳಂ ಸಕಳ ಗುಣೋಪೇತಂ ಸಮಸ್ತ ಭೂವಿಖ್ಯಾತ ಕೇವಳ ಮ . .
೧೪ ನಿರ್ದ್ದ ಗೊನಯರಾಮ ॥ ವಚನ ॥ ಅನ್ತೆನಿಸಿದ ಮಹಾಪ್ರಧಾನನಚ್ಚುಪನ್ನಾಯದಧಿಷ್ಠಾಯಕಂ ಮಾಯಿಪಯ್ಯ ನಾಯ[ಕ*]ರ್ ಸುಕ
೧೫ ಸಂಕಥಾ ವಿನೋದದಿಂನಾಳುತ್ತಮಿರ್ದ್ದು ॥ ಸ್ವಸ್ತ್ಯನವರತ ಶಾಸ್ತ್ರ ನಿರ್ಮ್ಮಳ ಪರಮ ಪವಿತ್ರೀಕ್ರಿತೋತ್ತ–
೧೬ ಮಾಂಗಿಯರಪ್ಪ ಶ್ರೀಮತ್ ಹುಲುಗೂರನಿದೆಂದು ಸರ ಮಲ್ಲಿಕವ್ವೆ ಗಾಮುಣ್ಡಿಯರ ಪುತ್ರನೆಟಿಕ ಗಾಮುಣ್ಡರ–

೩೦ ರಾಜಿತ ಚೂಡಾಮಣಿಯೆಂದು ವಿಷ್ಣುದೇವನ ನ . . . ಗಿಂ ಬಣ್ಣಿಪುದು ಸಕಳ ವಿಬುಧ ಕದಂಬ ॥ ಅನ್ತೆನಿಸಿ ನೆಗರ್ದ್ದ ಪನ್ನಾಯದ

೩೧ ರ್ವಾರಂ ವಿಷ್ಣುದೇವನುಂ ಜ್ಞಾದ್ರ್ಬ್ಬೆಮ ಸಾವನ್ತನುಂ ಹಡವಳ ಆಯ್ಚಣನುಂ ಕೈಚ ಮಾಳಿಯಣ್ಣನೂರನುಂ ಪ್ರಮುಖವಾಗಿ ಸಾಯಿರ ಪರಿಗ್ರಹ–

೩೨ ಮಂ ಶ್ರೀ ರಾಮೇಸ್ವರ ನಂದಾದೀವಿಗೆಗೆ ದೇವರ ತೋಂಟದ ತಮ್ಮ ಪಂನಾಯದ ಸುಂಕಮಂ ಸರ್ವ್ವನಮಶ್ಯ ಬಿಟ್ಟರ್ ॥ ಅನುಪಮ ಮಂತ್ರೀಶ

೩೩ ವ ಪಾದಪಯೋರುಹ ಯೋಪಯುಗ್ಮರುನ್ಮನ್ಮನಿಸುಚಿಂತಾಗ ಭುವಳಾತನಿನನ್ನ ತಪೋಜಶಕ್ತಿ ಸಜನಜನಾಮಷ್ವಿದಾ

೩೪ ಯಕವನುನೆಸೆವಹರ್ಣ್ನಿಶ ದಾನ . . . . ರಾದ

೩೫ ರ್ ॥ ಇನ್ತೆನಿಸಿದ ಧರ್ಮ್ಮವನಾ . . . . ಪ್ರತಿಪಾಳಿಸುವರ್ ॥

೩೬ ಸಿ ಪ್ರಯಾಗೆ ಕುರುಕ್ಷೇತ್ರ ಶ್ರೀಪರ್ವ್ವತಮೆಂಬ ಪುಣ್ಯತೀರ್ತ್ಥದಲಿ ಪಂನಿರ್ಛ್ಛಾಸಿರ ಕವಿಲೆಯಂ ಕೋಡುಂ ಕೊಳಗಂ ಪಂಚರತ್ನದಲು ಕಟ್ಟಿಸಿ ಚ–

೩೭ ತುರ್ವ್ವೇದ ಪಾರಗರಪ್ಪ ಪಂನಿರ್ಛ್ಛಾಸಿರ ಬ್ರಾಹ್ಮಣರಿರ್ಗ್ಗೆ . . . . ಫಳಮಕ್ಕುಂ ॥

೩೮ ಶ್ಲೋಕ ॥ ದಾನಂ ವಾ ಪಾಲನಂ ವೇತಿ ದಾನಾತ್ಚ್ಛ್ರೇಯೋನುಪಾಲನಂ ದಾನಾತ್ಸ್ವರ್ಗ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ ॥ ಸ್ವದತ್ತಂ ಪರದ–

೩೯ ತ್ತಂ ವಾಯೋ ಹರೇತಿ ವಸುನ್ಧರಾ ಷಷ್ಟಿರ್ವ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕೃಮಿ ॥ ಧರೆಯೊಳಗೆ ಸಿಳಾರ ಕುಲಾನ್ವಯರು ಕರ

೪೦ ವಿದ್ದಗೋಜರಾಗಿ . . . .

೪೧ . . . .

೪೨ . . . . ಮಂಗಳ ಮಹಾಶ್ರೀಶ್ರೀಶ್ರೀ [॥*]

೧೦. ಹುಲಗೂರು

ಕಲ್ಮೇಶ್ವರ ದೇವಸ್ಥಾನದ ಹತ್ತಿರವಿರುವ ಶಾಸನ (ಕ್ರಿ.ಶ. ೧೧೭೪)

(ARSIE 1944-45 No. 29)

ಕಲಚೂರ್ಯ ಅರಸ ರಾಯಮುರಾರಿ ಸೋವಿದೇವನ ಆಳ್ವಿಕೆಯಲ್ಲಿ, ದಂಡನಾಯಕ ಮಹೇಶ್ವರ ದೇವರಸರು ಹುಲುಗೂರ ಮೂಲಸ್ಥಾನದ ಶ್ರೀ ರಾಮನಾಥದೇವರಿಗೆ ನೀಡಿದ ಸುಂಕದಾನವನ್ನು ತಿಳಿಸುತ್ತದೆ.

ಈ ದಾನವನ್ನು ನಾಡನಾಳ್ವರಸುಗಳು ಹನ್ನಿರ್ವ್ವಗ್ಗಾಮುಂಡುಗಳ ಅರುವತ್ತೊಕ್ಕಲು ಪ್ರತಿಪಾಳಿಸುವರು ಎನ್ನುತ್ತದೆ. ವಾಸುದೇವ ದಂಡನಾಯಕ ಮತ್ತು ಕೇಸಿಮಯ್ಯರ ಉಲ್ಲೇಖವೂ ಇದೆ.

೧ @ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಖ್ಯ ನಗರಾರಂಭ ಮೂಳಸ್ತಂಭಾಯ ಶಂಭವೇ ॥ ಶ್ರೀ ರಾಮನಾಥ ॥

೨ ಸ್ವಸ್ತಿ ಶ್ರೀ ಕಳಚುರ್ಯ ಚಕ್ರಿ ತಿಳಕ ಶ್ರೀ ಬಿಜ್ಜಭೂಪ . . . . ಪಾಳಕ ಪ್ರಸ್ತುತ್ಯನತ ಮೌ–

೩ ಳಿ ರತ್ನವೆಡಂಗ ದಾನ . . ಕಾಂಚಾರುಹ ವಸ್ತು ಕ್ಷತ್ರ ಚಳುಕ್ಯರಾಯಮ . . . . ಶ್ರೀ ಮಹೀವಲ್ಲಭಂ ॥ ಗ ॥ ಅನ್ತು ನೆಗಳ್ದ ನಿಜ ಭುಜಬಳ ಪ್ರತಾ–

೪ ಪ ಚಕ್ರವರ್ತ್ತಿ ಬಿಜ್ಜಳಂ ವಿಳಸಿತ ಧವಳತರ ಕೀರ್ತ್ತಿ । ಶರಣಾಗತಾವನೀಪಾಳಕ ಸಂರಕ್ಷಣಂ ಪರಬಳ ಪ್ರಬಳ ಜಳನಿಧಿ ಬಡವಾನಳ ಪ್ರತಾಪ ಸಹಾಶ

೫ ಕಾರಣ ಪರನಾರೀದೂರ । ವೈರಿಭೂಭೃನ್ಮದಾನೆಗನ್ಧ ಸಿನ್ಧುರ ಕಂಠೀರವಂ ಶತ್ರು ಕ್ಷತ್ರಿಯ ಭಯಜ್ವರ ಭೂರಿಭೇರೀರವಂ । ಶ್ರೀಮತ್ಸಾರ್ವ್ವಭೌಮ ರಾ–

೬ ಯರಾ ಸೋವಿದೇವ ತಾರಕ ವಿಕ್ರಮ ಕ್ರಮ ರಾಜ್ಯಮುದಿತೋದಿತಮಾಚಂದ್ರಾರ್ಕ್ಕ ತಾರಂಬರಂ ಸಲೆ ತದವನೀಪಾಳ ಪ್ರಸಾದಿತಾದ್ವಿತೀಯಂ
೭ ರದ ವಿ . . ದನು ನಾಯಕಂ ಕೇಸಿಮಯ್ಯನ ಪ್ರಭುತ್ವಂ ಪ್ರಗಲ್ಭ್ಯಮೆಂತೆಂದೊಡೆ ॥ @ ಸುರುಚಿರ ಹರಿಪಾದ ದ್ವಂದ್ವ ನೀರೇಜ ಭೃಂಗ ಸುರ
೮ ಪಲಬರು ತ್ಯಂಗಿರಸಾಚಾರ ಮಂತ್ರಂ ವರ ಬುಧ ನುತ ಶೌರ್ಯ್ಯಮಂ ಧರಾದ್ರೀಂದ್ರಂ ಧೈರ್ಯ್ಯ ಪರಹಿತ ಚರಿತೋದಾ–
೯ . . ತಂ ಕೇಸಿ ಮತ್ತಂ . . ತತ್ತನುಜನಹಿತ ರಿಪುನೃಪಚಿತ್ತ ಗ್ರಾಹಕನಪಾರ ಹರುಷನೆನಂಪತ್ಯಂತಂ ಯಶ
೧೦ . . . . ಶಮದತಲೋಮಿ ವಾಸುದೇವ ದಂಡಾಧಿಪನಂ ಎನೆ ನೆಗಳ್ದ ಕೇಸಿಮಯ್ಯಗನುನಯದಿಂ ಚಕ್ರವರ್ತ್ತಿ ಕೊಟ್ಟ
೧೧ . . . . ಯೊಳಕ್ಕ ನವದಾತಾ . . . ರಕ್ಷಸಿರನ ಗತಿಯತ್ತ ಪಾನುಂಗಲ್ಲಂ @ ವ ॥ ಪಾನುಂಗಲ್ಲಯ್ನೂಱುಮಂ ದುಷ್ಟನಿಗ್ರಹ ಶಿಶಿ–
೧೨ ಷ್ಟ ಪ್ರತಿಪಾಳನದಿನಾಳ್ದು ಸುಖ ಸಂಕಥಾ ವಿನೋದದಿನಿರೆ [॥*] ತತ್ಪಾದಪದ್ಮೋಪಜೀವಿ ಮಹೇಶ್ವರ ದಂಡನಾಯಕನಾ ನಾಡ
೧೩ . . . . ಬಿಟ್ಟ ಸುಂಕ ವಡ್ಡರಾವುಳ ಕೊನ್ತಕುಳಿ ಮೂವತ್ತುಮನಾಳುತ್ತಿರ್ಪ್ಪನಾತನ ಪ್ರತಾಪಮೆಂತೆನೆ ॥ . ಷದಯದಿದೊ
೧೪ . . . . ಯಿದಾ . ತೆಂಕಲು ಮಹೋಜಯೊಳ್ಸುಖಾಸ್ಪದ ಮಧುರಾದಿನಾಯಕ ನೋಳ್ಪಿನತಿ ಮೇರುವಿನೊಳು ಭುಜ ಪ್ರತಾಪದ ಮದದಿಳೆವಮರಾತಿ
೧೫ . . . . ಯ ಕಾಳಿ ಕೀರ್ತ್ತಿಪುದು ವೀರ ಮಹೇಶ್ವರ ದಂಡನಾಥನ ಚಂಡ ಭುಜಾಸಿಯೊಳಂ ನೃಪಮೌಳಿ . .
೧೬ ಧರೆ ಮಹೇಶ್ವರ ದಂಡಾಧಿಪನಹಿತವನ ಕುಠಾರಂ ಬರಂ ॥ ಏನು ದೇವ ರೂಪಾತಿಶಯ
೧೭ . . . . ಮಾಹೇಶ್ವರಂಗೆ ಮನುಜದ್ರ್ಧೊರೆಯೇ ॥ ವ್ರಿ ॥ ವಿನಯಂ ಕೈಗನೊ . . .
೧೮ . . . . ಮುದದಿಂ ಶ್ರೀ ತ್ರಿಣ ಗ್ರಾಮದೊಳು ಭೂವಿನುತ . . . .
೧೯ . . . . ನೆಯ ಪ್ಲವ ಸಂವತ್ಸರದ ಜೇಷ್ಠದ ಅಮಾವಾಸ್ಯೆ ಆದಿತ್ಯವಾರ ಸೂರ್ಯ್ಯಗ್ರಹಣ
೨೦ . . . . ಮಹೇಶ್ವರ ದೇವರಸರು ಹುಲುಗೂರ ಮೂಲಸ್ಥಾನದ ಶ್ರೀ ರಾಮನಾಥದೇವರಾ
೨೧ . . . . ಧಾರಾಪೂರ್ಬ್ಬಕ ಮಾಡಿಕೊಟ್ಟ ವೃತ್ತಿಯಾಯವೆಂತೆಂದೊಡೆ [॥*] ಆ ದೇವರ ಯರಡು ತೋಂಟದ
೨೨ . . . . ಸರ್ಬ್ಬ ನಮಶ್ಯಮಾಗಿ ಬಿಟ್ಟರು ॥ ಮತ್ತವಾ ತಿಥಿಯಲು ಶ್ರೀಮದ್ದಂಡನಾಯ–
೨೩ . . . . ಮೂಲೆ ಸುಂಕಮಂ ಹತ್ತಿ ಹನ್ನಿಧಾನ್ಯ ಏನ ಹೇಜಿದಡೆ ಹಾಗ . . ಹೇಜಿಂಗೆ ಹಾಗ .
೨೪ . . . . ಇನ್ತೀ ಧರ್ಮ್ಮಮಂ ನಾಡನಾಳ್ವರಸುಗಳು ಹನ್ನರ್ವ್ವಗ್ಗಾಗಮುಂಡುಗಳ ಱುವತ್ತೊಕ್ಕಲು . .
೨೫ . . . . ರು ಪ್ರತಿಪಾಳಿಸುವರು ॥ ಸ್ವಸ್ತಿ ಶ್ರೀ ರಾಮನಾಥ ಪ್ರಸಂನಗಾ ಕೇಸಿ*

* ಶಾಸನದ ಮುಂದಿನ ಭಾಗ ನೆಲದಲ್ಲಿ ಹೂತಿದೆ.

೧೧. ಹುಲಗೂರು

ಕಲ್ಮಠದ ಹತ್ತಿರ ಬಾವಿಯ ಕಂಬದ ಮೇಲೆ (ಕ್ರಿ.ಶ. ೧೨೬೭)

(ARSIE 1944-45 No. 34)

ಯಾದವ ಚಕ್ರವರ್ತಿ ಮಹಾದೇವನ ಆಳ್ವಿಕೆಯ ಕಾಲದಲ್ಲಿ, ಸುಂಕವರ್ಗಡೆ ಸೀತಾಳ ಮಾಯದೇವನು ಸೀತಾಳ ಮಳಿಗೆ ಹುಲ್ಲುಂಗೂರ ಗವರೇಶ್ವರದೇವರ ಅಂಗಭೋಗ ಮತ್ತು ನಿವೇದ್ಯಗಳಿಗಾಗಿ ಸುಂಕದಾನ ಬಿಟ್ಟ ಉಲ್ಲೇಖವಿದೆ. ಈ ದಾನವನ್ನು ಹಂನಿರ್ಬ್ಬಗಾರ್ಮುಂಡುಗಳು (೧೨ ಜನ ಗಾವುಂಡರು) ಮತ್ತು ಮುಂಮುರಿದಂಡಂಗಳು (ವರ್ತಕ ಸಂಘದವರು) ಪಾಳಿಸುವರು ಎಂದು ತಿಳಿಸುತ್ತದೆ.

೧ ನಮಸ್ತುಂಗ । ಶಿರಸ್ಚುಂಬಿ । ಚಂದ್ರ ಚಾಮರ ಚಾರ–
೨ ವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ

೩ ಶಂಭವೇ ॥ ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪ್ರಿ-
೪ ಥ್ವೀವಲ್ಲಭಂ ಮಹಾರಾಜಾಧಿರಾಜಂ । ಪರಮೇಸ್ವರಂ ದ್ವಾ-
೫ ರಾವತೀ ಪುರವರಾಧೀಸ್ವರಂ । ವಿಷ್ಣು ವಂಶೋದ್ಭ-
೬ ವಂ । ಸುವರ್ಣ್ನಗರುಡಧ್ವಜಂ । ಯಾದವಕುಳ
೭ ಕಮಳ ಮಾರ್ತ್ತಂಡ । ಅರಿರಾಯ ಜಗಝುಂಪ । ಝುಂ-
೮ ಪಣಾಚಾರ್ಯ್ಯ ಮಾಳವೀರಾಯ ಮದನ ತ್ರಿಣೇತ್ರ ।
೯ ಗುರ್ಜ್ಜರರಾಯ ಭಯಜ್ವರ । ತುರ್ಕ್ಕರಾಯ ಉರ
೧೦ ಸೆಲ್ಲ । ತೆಲುಂಗರಾಯ ಸ್ತಾಪನಾಚಾರ್ಯ್ಯ ।
೧೧ ಯಿತ್ಯಖಿಳ ನಾಮಾವಳೀ ಸಮಾಳಂಕ್ರಿತಂ ।
೧೨ ಶ್ರೀಮತು ಪ್ರಉಢ ಪ್ರತಾಪ ಚಕ್ರವರ್ತ್ತಿ ಶ್ರೀ ವೀ-
೧೩ ರ ಮಹದೇವ ವಿಜಯರಾಜ್ಯೋದಯ ।
೧೪ ಮುತ್ತರೋತ್ತರಾಭಿವ್ರಿದ್ಧಿ ಪ್ರವತ್ತ (ರ್ಧ)ಮಾನಮಾ ಚಂದ್ರಾ-
೧೫ ರ್ಕ್ಕ ತಾರಂಬರಂ ಸಲುತ್ತಮಿರೆ । ಸಕ ವರುಶದ
೧೬ ೧೧೮೯ನೆಯ ಪ್ರಭವ ಸಂವತ್ಸರದ ಜೇಷ್ಟ
೧೭ ಬ[ಹುಳ*] ೩ರ ಬುಧವಾರ ಸೂರ್ಯ್ಯಗ್ರಹಣದಂ-
೧೮ ದು । ಶ್ರೀಮತು ಸುಂಕವೆರ್ಗಡೆ ಸೀತಾಳ
೧೯ ಮಾಯದೇವನು ಸೀತಾಳ ಮಳಿಗೆ ಹುಲ್ಲುಂ-
೨೦ ಗೂರ ಶ್ರೀ ಗವಜೇಸ್ವರದೇವರ ಯಂಗಭೋಗ
೨೧ ನಿವೇದ್ಯಕ್ಕೆ ೬೦ ಎತ್ತಿನ ಸುಂಕದ ವಹ-
೨೨ ಮಾನಮಂ ಧಾರಾಪೂರ್ವ್ವಕವಾಗಿ ಬಿ-
೨೩ ಟ್ಟನು ॥ ಯೀ ಧರ್ಮ್ಮಮನು ಹಂನಿರ್ಬ್ಬಗಾಮುಂ-
೨೪ ಡುಗಳು ಮುಂಮುರಿದಂಡಂಗಳು ಪಾ-
೨೫ ಳಿಸುವರು ॥ ಬೀರಣ ದೇಕೆಮ ತಂನ ಬೀರವಣ ಧಾ-
೨೬ ರೆಯನೆರೆದು ಬಿಟ್ಟ ॥ ಮಂಗಳ ಮಹಾ ಶ್ರೀ ಶ್ರೀ [॥*]

೧೨. ಹುಲಗೂರು

ಕಲ್ಮೇಶ್ವರ ದೇವಸ್ಥಾನದ ಹತ್ತಿರವಿರುವ ವೀರಗಲ್ಲು

(ಸು. ೧೩-೧೪ನೆಯ ಶತಮಾನ)

(ARSIE 1944-45 No. 30)

ಈ ತ್ರುಟಿತ ಶಾಸನವು, ಮಾಂಡಲಿಕನೊಬ್ಬನು ಯುದ್ಧಕ್ಕೆ ಬಂದಾಗ, ವೀರನೊಬ್ಬ ಯುದ್ಧದಲ್ಲಿ ಮಡಿದುದನ್ನು ದಾಖಲಿಸುತ್ತದೆ. ಆದರೆ ಮಾಂಡಲಿಕನ ಮತ್ತು ವೀರನ ಹೆಸರುಗಳು ಲಭ್ಯವಿಲ್ಲ.

೧ ಣ ಮಂಡಳಕನೆತಿ ಬಂದಲಿ ಸಮಸ್ತ ದಳತ್ಯೋಹರಕಿದಿರಾಗಿ ನಡೆದು
೨ ಕಾದಿ ತಳುತಿಜೆದು ಬಿದ (ಬಿರ್ದು) ಸುರಲೋಕಪ್ರಾಪ್ತನಾದನು [॥*] ಮಂಗಳ ಮಹಾಶ್ರೀ [॥*]

೧೩. ಹುಲಗೂರು

ಚಾವಡಿ ಸಮೀಪ ಮಸೀದೆಯ ಎದುರಿನ ವೀರಗಲ್ಲು (ಸು. ೧೩-೧೪ನೆಯ ಶತಮಾನ)

ARSIE 1944-45 No. 31

ಹಿರಿಯೂರಿನ ನಾಗೆಯನಾಯಕನ ಮಗ ಬದ್ದೆಯನಾಯಕನ ವೀರಮರಣದ ಸ್ಮರಣೆಗಾಗಿ ವೀರಗಲ್ಲನ್ನು ನಿಲ್ಲಿಸಿದುದನ್ನು ತಿಳಿಸುತ್ತದೆ.

೧ ಶ್ರೀಮದು ಹಿರಿಯೂರಿನ ನಾಗೆಯನಾಯಕನ ಮಗ ಬದ್ದೆಯನಾ-
೨ ಯಕನ ಬೀರಗಲ್ಲು ಶ್ರೀ ಮಂಗಳ ಮಹಾಶ್ರೀ ॥

೧೨

ಹಾನುಗಲ್ಲು ಕದಂಬರ ಗೆಜ್ಜೆಹಳ್ಳಿಯ ಎರಡು ಅಪ್ರಕಟಿತ ಶಾಸನಗಳು

ಡಿ. ಸ್ಮಿತಾರೆಡ್ಡಿ*

ಹಾವೇರಿ ಜಿಲ್ಲೆಯ ಹಾನಗಲ್ಲು ತಾಲೂಕಿನ ಗೆಜ್ಜೆಹಳ್ಳಿಯಲ್ಲಿ ದೊರೆತ ಹಾನಗಲ್ಲು ಕದಂಬರ ಎರಡು ಶಾಸನಗಳು ಹಾನಗಲ್ಲು ಪರಿಸರದ ಪ್ರಾದೇಶಿಕ ವಿವರಣೆ, ಆಳರಸರು ಮತ್ತು ಅಧಿಕಾರಿಗಳು, ಆಡಳಿತ, ಧರ್ಮ, ಸಂಸ್ಕೃತಿ, ಸಾಹಿತ್ಯ ಮುಂತಾದ ವಿಷಯಗಳ ಮೇಲೆ ಹೆಚ್ಚಿನ ಬೆಳಕು ಚೆಲುತ್ತವೆ.

ಗೆಜ್ಜೆಹಳ್ಳಿ ಹಾನಗಲ್–ಅಕ್ಕಿಆಲೂರಿನ ಮುಖ್ಯರಸ್ತೆಯಿಂದ ಪಶ್ಚಿಮಕ್ಕೆ ಒಂದು ಕಿ.ಮೀ. ದೂರದಲ್ಲಿದೆ. ಊರಿನ ಬಲಭಾಗದಲ್ಲಿರುವ ಗೆಜ್ಜೆಯ ಬಸವೇಶ್ವರ ದೇವಾಲಯ ಮೂಲತಃ ಕಲ್ಯಾಣ ಚಾಲುಕ್ಯರ ಕಾಲದ ರಚನೆಯಾಗಿದೆ. ದೇವಾಲಯದ ಗರ್ಭಗುಡಿಯಲ್ಲಿರುವ ಶಿವಲಿಂಗ ಮತ್ತು ಬಾಗಿಲವಾಡ ಮತ್ತು ಬಾಗಿಲವಾಡದ ಇಕ್ಕೆಲಗಳಲ್ಲಿರುವ ಶಂಕನಿಧಿ–ಪದ್ಮನಿಧಿ ಶಿಲ್ಪಗಳ ಹೊರತಾಗಿ ಈ ದೇವಾಲಯವನ್ನು ಜೀರ್ಣೋದ್ಧಾರದ ಹೆಸರಿನಲ್ಲಿ ಸಂಪೂರ್ಣವಾಗಿ ಆಧುನೀಕರಿಸಲಾಗಿದ್ದು, ಅದು ತನ್ನ ಮೂಲ ಸ್ವರೂಪ ಕಳೆದುಕೊಂಡಿದೆ. ದೇವಾಲಯದ ಹೊರಗೆ ಕೆಲವು ಅವಶೇಷಗಳು ಬಿದ್ದಿದ್ದು, ಅವುಗಳನ್ನು ಸ್ಥಳೀಯರು ರಕ್ಷಿಸಿಟ್ಟಿದ್ದಾರೆ. ದೇವಾಲಯದ ಹೊರಗೆ ಸುಂದರವಾದ ಮಹಿಷಮರ್ಧಿನಿ ಶಿಲ್ಪ ಹಾಗೂ ಸಪ್ತಮಾತೃಕೆಯರ ಫಲಕವಿದೆ. ದೇವಾಲಯದ ಗರ್ಭಗುಡಿಯ ಎಡಭಾಗದಲ್ಲಿ ಮೂರು ಶಾಸನಗಳನ್ನು ಅಕ್ಕಪಕ್ಕದಲ್ಲೇ ನಿಲ್ಲಿಸಲಾಗಿದೆ. ಮೂರೂ ಶಾಸನಗಳು ಅಪ್ರಕಟಿತವಾಗಿದ್ದು, ಅವುಗಳಲ್ಲಿ ಎರಡು ಶಾಸನಗಳನ್ನು ಇಲ್ಲಿ ನೀಡಲಾಗಿದೆ.

ಶಾಸನ ಶಿಲ್ಪ : ಎರಡು ಶಾಸನಗಳಲ್ಲಿ ಮೊದಲನೆಯ ಶಾಸನದಲ್ಲಿ ಸುಮಾರು ೬ ಅಡಿಗಳಷ್ಟು ಉದ್ದ, ೩ ಅಡಿಗಳಷ್ಟು ಅಗಲವಾಗಿದ್ದು, ಸುಂದರವಾದ ಹಾಗೂ ಸಾಂದ್ರವಾದ ಬರವಣಿಗೆಯನ್ನು ಒಳಗೊಂಡ ೬೫ ಸಾಲುಗಳಿವೆ. ಎರಡನೆಯ ಶಾಸನ ಸುಮಾರು ೪ ಅಡಿ ಉದ್ದ ೩ ಅಡಿ ಅಗಲವಾಗಿದ್ದು, ಇದೂ ಸಹ ಸುಂದರವಾದ ಬರವಣಿಗೆಯನ್ನೊಳಗೊಂಡಿದ್ದು, ಇದರಲ್ಲಿ ೩೧ ಸಾಲುಗಳಿವೆ.

ಮೊದಲನೆಯ ಶಾಸನದ ಮೇಲ್ಭಾಗದಲ್ಲಿ ಕಲ್ಯಾಣ ಚಾಲುಕ್ಯರ ಶಾಸನಗಳಲ್ಲಿ ಸಹಜವಾಗಿ ಕಂಡುಬರುವಂತೆ ಒಬ್ಬ ಕಾಳಾಮುಖ ಯತಿ ಲಿಂಗಪೂಜೆ ಮಾಡುತ್ತಿರುವ ಶಿಲ್ಪವಿದೆ. ಶಾಸನ ಶಿಲ್ಪದ ಬಲಭಾಗದಲ್ಲಿ ಲಿಂಗಕ್ಕಭಿಮುಖವಾಗಿ ಕುಳಿತಿರುವ ನಂದಿ ಮತ್ತು ಅದರ ಮೇಲ್ಭಾಗದಲ್ಲಿ ಚಂದ್ರ ಶಿಲ್ಪವಿದ್ದರೆ, ಶಾಸನದ ಎಡಭಾಗದಲ್ಲಿ ಕರುವಿಗೆ ಹಾಲುಣಿಸುತ್ತಿರುವ ಹಸುವಿನ ಶಿಲ್ಪವಿದೆ.

ಎರಡನೆಯ ಶಾಸನದಲ್ಲಿ ದೇವಾಲಯದ ರಚನೆಯನ್ನು ಹೋಲುವಂತಹ ಒಂದು ಸುಂದರವಾದ ಮಂಟಪವಿದ್ದು, ಅದರಲ್ಲಿ ಶಿವಲಿಂಗವನ್ನು ಅರ್ಚಿಸುತ್ತಿರುವ ಕಾಳಾಮುಖ ಯತಿಯ ಶಿಲ್ಪವಿದೆ. ಶಾಸನದ ಬಲಭಾಗದಲ್ಲಿ ಲಿಂಗಕ್ಕಭಿಮುಖವಾಗಿ ಕುಳಿತಂತಿರುವ ನಂದಿಯ ಶಿಲ್ಪವಿದ್ದು, ಎಡಭಾಗದಲ್ಲಿ ಕರುವಿಗೆ ಹಾಲುಣಿಸುತ್ತಿರುವ ಹಸುವಿನ ಶಿಲ್ಪವಿದೆ. ಇಕ್ಕೆಲಗಳಲ್ಲಿ ಸೂರ್ಯಚಂದ್ರರ ಕೆತ್ತನೆಗಳಿವೆ.

ಶಾಸನ ಕಾಲ: ಎರಡು ಶಾಸನಗಳನ್ನು ಶಕ ವರ್ಷ ೧೦೨೬ನೆಯ ಸುಭಾನು ಸಂವತ್ಸರದ ಕಾರ್ತಿಕ ಶುದ್ಧ ೧೩ ಬ್ರಿಹವಾರದಂದು ಹಾಕಿಸಲಾಗಿದೆ. ಇದು ಚಾಂದ್ರಮಾನ ಪಂಚಾಂಗದ ಪ್ರಕಾರ ಕ್ರಿ.ಶ. ೧೬ನೆಯ ಅಕ್ಟೋಬರ್, ೧೧೦೩ರ ಗುರುವಾರಕ್ಕೆ ಸರಿಹೊಂದುತ್ತದೆ.

ಶಾಸನದ ವಿಷಯ: ಎರಡು ಶಾಸನಗಳ ಒಂದೇ ವಿಷಯವನ್ನು ಒಳಗೊಂಡಿವೆ. ಕಲ್ಯಾಣ ಚಾಲುಕ್ಯ ತ್ರಿಭುವನಮಲ್ಲನ ಆಳ್ವಿಕೆಯಲ್ಲಿ ಹಾನುಗಲ್ಲು ಅಯ್ನೂರನ್ನು ಆಳುತ್ತಿದ್ದ ತೈಲಪನು ಎಡವೊಳಲ್ ಎಪ್ಪತ್ತರ ಬಳಿ ಗ್ರಾಮವನ್ನು ನಿರ್ಮಾಣ ಮಾಡಿ ಅದಕ್ಕೆ ಗೆಜ್ಜೆಯಹಳ್ಳಿಯೆಂದು ನಾಮಕರಣ ಮಾಡಿ ಗೆಜ್ಜೆಯ ಬೊಪ್ಪಣನಿಗೆ ದಾನ ನೀಡಿದ್ದನ್ನು ಹಾಗೂ ಗೆಜ್ಜೆಯ

* ಅಧೀನ ಕಾರ್ಯದರ್ಶಿ, ಭಾಷಾಂತರ ಶಾಖೆ, ಕರ್ನಾಟಕ ವಿಧಾನ ಪರಿಷತ್ತು, ವಿಧಾನಸೌಧ, ಬೆಂಗಳೂರು.

ಬೊಪ್ಪಣ ಅಲ್ಲಿನ ಮೂಲಸ್ಥಾನದ ದೇವಾಲಯಗಳಿಗೆ ದತ್ತಿ ನೀಡಿದ್ದನ್ನು ದಾಖಲಿಸುತ್ತವೆ. ಆದರೆ, ಒಂದನೆಯ ಶಾಸನದಲ್ಲಿ ತ್ರಿಭುವನಮಲ್ಲ ವಿಕ್ರಮಾದಿತ್ಯ, ತೈಲಪ, ಚಮಡ ದಂಡಾದೀಶ, ಗೆಜ್ಜೆಯ ಬೊಪ್ಪಣರ ವ್ಯಕ್ತಿತ್ವವನ್ನು ವಿಶೇಷವಾಗಿ ಹೊಗಳಲಾಗಿದೆಯಲ್ಲದೆ, ಕುಂತಳ ಪ್ರದೇಶವನ್ನು ಪ್ರಶಂಶಿಸಲಾಗಿರುವುದರಿಂದ ಶಾಸನ ಸುದೀರ್ಘವಾಗಿದೆ. ಎರಡನೆಯ ಶಾಸನದಲ್ಲಿ ನೇರವಾಗಿ ವಿಕ್ರಮಾದಿತ್ಯ ಹಾಗೂ ತೈಲಪನನ್ನು ಮಾತ್ರ ಪ್ರಶಂಶಿಸಿ, ಶಾಸನದ ಮುಖ್ಯ ಉದ್ದೇಶವನ್ನು ಸ್ಪಷ್ಟಪಡಿಸಿರುವುದರಿಂದ ಮೊದಲ ಶಾಸನದಷ್ಟು ಸುದೀರ್ಘವಾಗಿಲ್ಲ.

ಶಾಸನೋಕ್ತ ವ್ಯಕ್ತಿಗಳು

(೧) **ತ್ರಿಭುವನ ಮಲ್ಲ :** ಎರಡೂ ಶಾಸನಗಳಲ್ಲಿ ತ್ರಿಭುವನಮಲ್ಲನನ್ನು ಚಾಲುಕ್ಯರ ಪಾರಂಪರಿಕ ಬಿರುದುಗಳನ್ನು ಅನ್ವಯಿಸಿ ಸ್ತುತಿಸಲಾಗಿದೆ. ಇದರೊಂದಿಗೇ "ಬಳವದು ಭೂಪಾಳ ನಾರಾಯಣ, ಬಳವದು ಭೂಪಾಳ ತಾರಾಭ್ರಚಂದ್ರ, ಬಳವದು ಭೂಪಾಳ ಭಾಸ್ಕರ, ಬಳವದು ಭೂಪಾಳ ವಿದ್ಯಾಧರೇಂದ್ರ, ಬಳವದು ಭೂಪಾಳ ಚಾಲುಕ್ಯ ರುದ್ರ, ಬಳವದು ಚೂಡಾಮಣಿ ಪದಕಿರಣಂ ವಿಕ್ರಮಾದಿತ್ಯದೇವ" ಎಂದು ವಿಶೇಷವಾಗಿ ಹೊಗಳಲಾಗಿದೆ. ಎರಡನೆಯ ಶಾಸನದಲ್ಲಿ ಪಾರಂಪರಿಕ ಬಿರುದುಗಳನ್ನು ಮಾತ್ರ ಉಲ್ಲೇಖಿಸಲಾಗಿದೆ. ಈ ಎರಡೂ ಶಾಸನಗಳಲ್ಲಿ ಉಕ್ತನಾದ ಅಧಿರಾಜ ಕಲ್ಯಾಣ ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯ. ಆರನೆಯ ವಿಕ್ರಮಾದಿತ್ಯ ಕ್ರಿ.ಶ. ೧೦೭೬–೧೧೨೬ರವರೆಗೆ ಸುಮಾರು ೫೦ ವರ್ಷಗಳ ಕಾಲ ಸುದೀರ್ಘವಾಗಿ ಆಳ್ವಿಕೆ ನಡೆಸಿದ್ದಾನೆ. ಈತನ ಕೇಂದ್ರ ಕಾರ್ಯಸ್ಥಾನ ಕಲ್ಯಾಣವಾದರೂ, ತನ್ನ ಜೀವಿತಾವಧಿಯ ಬಹುಭಾಗವನ್ನು ಬನವಾಸಿಯ ನೆಲೆವೀಡಿನಿಂದ ಆಳ್ವಿಕೆ ನಡೆಸಿದ್ದಾನೆ. ಇವನ ಶಾಸನಗಳ ಅವಲೋಕನದಿಂದ ಈತ ಕ್ರಿ.ಶ. ೧೦೯೨, ೧೦೯೭, ೧೧೦೭, ೧೧೧೦–೧೨, ೧೧೧೫–೧೮, ೧೧೨೦–೨೬ರವರೆಗೆ ಬನವಾಸಿ ನೆಲೆವೀಡಿನಿಂದ ಆಳ್ವಿಕೆ ನಡೆಸಿದಂತೆ ಕಂಡುಬರುತ್ತದೆ. ಪ್ರಸಕ್ತ ಎರಡೂ ಶಾಸನಗಳು ಇವನ ನೆಲೆವೀಡಿನ ಬಗ್ಗೆ ಮೌನವಹಿಸಿವೆ. ಬಹುಶಃ ತೈಲನೇ ನೇರವಾಗಿ ದಾನ ನೀಡಿರುವುದರಿಂದ ಈ ಅವಧಿಯಲ್ಲಿ ತ್ರಿಭುವನಮಲ್ಲ ಬನವಾಸಿಯಲ್ಲಿ ಇರಲಿಲ್ಲವೆಂದು ತೋರುತ್ತದೆ.

(೨) **ಮಹಾಮಂಡಲೇಶ್ವರ ಇಮ್ಮಡಿ ತೈಲಪದೇವ:** ತೈಲನು ಹಾನುಗಲ್ಲು ಕದಂಬ ಶಾಖೆಯ ಬೇರುಗಳನ್ನು ಬನವಾಸಿ ಪ್ರಾಂತ್ಯದಲ್ಲಿ ಭದ್ರಪಡಿಸಿದ ಪ್ರಖ್ಯಾತ ಮಹಾಮಂಡಲೇಶ್ವರ. ಈ ಶಾಸನಗಳಲ್ಲಿ ಅವನನ್ನು ತೈಲ, ತೈಲಪ, ತೈಲಭೂಪ, ತೈಲಪದೇವ ಎಂಬ ಅಭಿದಾನಗಳಿಂದ ಸಂಬೋಧಿಸಲಾಗಿದೆ.

ಕರ್ನಾಟಕದಲ್ಲಿ ಬನವಾಸಿ ಕದಂಬ ಮಯೂರವರ್ಮನ ವಂಶಸ್ಥರೆಂದು ಹೇಳಿಕೊಂಡ ಸುಮಾರು ೧೩ಕ್ಕೂ ಅಧಿಕ ಕದಂಬ ಶಾಖೆಗಳು ಕಂಡುಬರುತ್ತವೆ. ಅಂಥ ಒಂದು ಶಾಖೆ ಹಾನಗಲ್ಲು ಐನೂರು ಪ್ರಾಂತ್ಯವನ್ನು ಕೇಂದ್ರವಾಗಿಟ್ಟುಕೊಂಡು ಆಡಳಿತ ನಡೆಸಿದ ಹಾನಗಲ್ಲು ಕದಂಬ ವಂಶ. ಇವರು ತಮ್ಮನ್ನು 'ಬನವಾಸಿ ಪುರವರೇಶ್ವರ' ಎಂಬ ಅಂಕಿತದಿಂದ ಗುರುತಿಸಿಕೊಳ್ಳುತ್ತಾರೆ. ಕಲ್ಯಾಣ ಚಾಲುಕ್ಯರ ಆಳ್ವಿಕೆಯಡಿ ಮೊದಲು ಕಾಣಿಸಿಕೊಳ್ಳುವ ಇವರು ಕ್ರಿ.ಶ. ೧೦ನೆಯ ಶತಮಾನದಿಂದ ೧೩ನೆಯ ಶತಮಾನದವರೆಗೆ ಕಲ್ಯಾಣ ಚಾಲುಕ್ಯ ವಂಶದ ವಿವಿಧ ರಾಜರ ಅಧೀನದಲ್ಲಿ ಮಹಾಮಂಡಲೇಶ್ವರರಾಗಿ ಆಳ್ವಿಕೆ ನಡೆಸಿದ್ದಾರೆ.

ಪ್ರಸಕ್ತ ಶಾಸನಗಳಲ್ಲಿ ಉಕ್ತನಾದ ಮಹಾಮಂಡಲೇಶ್ವರ ಇಮ್ಮಡಿ ತೈಲಪದೇವ ತನ್ನ ತಂದೆ ಶಾಂತಿವರ್ಮ ಬದುಕಿರುವಾಗಲೇ ಕ್ರಿ.ಶ. ೧೦೮೨ರ ವೇಳೆಗಾಗಲೇ ಬನವಾಸಿ ಹಾಗೂ ಹಾನುಗಲ್ಲುಗಳ ಮೇಲ್ವಿಚಾರಣೆ ವಹಿಸಿದ್ದಂತೆ ಕಂಡುಬರುತ್ತದೆ (ಎಆರ್‌ಐಇ– ೧೯೪೫–೪೬, ಸಂ. ೨೪೪ (ಕ್ರಿ.ಶ. ೧೦೮೩). ಆದರೆ, ಕ್ರಿ.ಶ. ೧೦೯೦ರ ವೇಳೆಗೆ ತ್ರಿಭುವನಮಲ್ಲನ ಅಧೀನದಲ್ಲಿ ಮಹಾಮಂಡಲೇಶ್ವರನೆಂದು ಗುರುತಿಸಿಕೊಂಡು ಹಾನಗಲ್ಲು ಅಯ್ಯೂರರ ಆಳ್ವಿಕೆ ನಡೆಸುತ್ತಿದ್ದ (ಎಆರ್‌ಐಇ– ೧೯೪೫–೪೬, ಸಂ. ೧೨, ಕ್ರಿ.ಶ. ೧೦೯೦) ಕ್ರಿ.ಶ. ೧೧೧೯ರ ಶಾಸನದಲ್ಲಿ ಆತ ಹಾನುಗಲ್ಲು ಅಯ್ಯೂರರ ಜೊತೆಗೆ ಸಾಂತಲಿಗೆ ಸಾಸಿರ ಮತ್ತು ಹೈವೆ ಐನೂರು ಪ್ರಾಂತ್ಯಗಳ ಆಡಳಿತವನ್ನು ಸಹ ನಿರ್ವಹಿಸುತ್ತಿದ್ದ. ಚಾಲುಕ್ಯ ಸಾಮ್ರಾಜ್ಯಕ್ಕೆ ಬನವಾಸಿ ಪ್ರಾಂತ್ಯದಲ್ಲಿ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟ.

ಗೆಜ್ಜೆಹಳ್ಳಿಯ ಎರಡನೆಯ ಶಾಸನದಲ್ಲಿ ತೈಲಪನನ್ನು ಅವನ ಪಾರಂಪರಿಕ ಕುಲವಿಶಿಷ್ಟ ಬಿರುದುಗಳಾದ 'ಬನವಾಸಿ ಪುರವರಾಧೀಶ್ವರ, ಜಯಂತಿ ಮಧುಕೇಶ್ವರದೇವ ಲಬ್ಧವರ ಪ್ರಸಾದ, ಮ್ರಿಗಮದಾಮೋದಂ . . . . ಕಾದಂಬ ಚಕ್ರಿ, ಮಯೂರವರ್ಮ ಮಹಾಮಹೀಪಾಳ ಕುಳಭೂಷಣಂ – – – ಕದಂಬರಾಭರಣಂ – – ಶ್ರೀಮತ್ರಿಭುವನಮಲ್ಲದೇವ ಪಾದಾಬ್ಜಬ್ರಿಂಗನಾಮಾವಳಿ ವಿರಾಜಿತನೆಂದು' ಸುದೀರ್ಘವಾಗಿ ಪ್ರಶಂಸಿಸಲಾಗಿದೆ. ಮೊದಲನೆಯ ಶಾಸನದಲ್ಲಿ ಅವನನ್ನು

ವೀರ ಮಾಹೇಶ್ವರ, ವೀರಾವತಾರ, ಬನವಾಸಿ ಪುರವರಾಧೀಶ್ವರನೆಂದು ಹೊಗಳುತ್ತ ಅವನ ಸಮರಸ್ಥೈರ್ಯವನ್ನು ವಿಶೇಷವಾಗಿ ಸ್ತುತಿಸಲಾಗಿದೆ. 'ತುರಕಮನೇರಿ ಕೂರಸಿಯನೆತ್ತಿದ ಮಾರಿಯ ಮೂರಿಯ್ಗೆಳೆಯನ್ತರೆ ರಣರಂಗ ಭೈರವನೊಳೆನ್ತು ನಿಲುವರು, ಎನ್ತು ಸಮಕಟ್ಟಿಪಾಯಿಸುವರು, ಎನ್ತು ತೈಲಪನೊಳಾನ್ತು ಬರ್ದುಂಕುವರು' ಎಂದು ಅವನ ವೀರ ಶೌರ್ಯಗುಣಗಳನ್ನು ಹೊಗಳಲಾಗಿದೆ. ಇವನು ಕ್ರಿ.ಶ. ೧೧೩೦ರಲ್ಲಿ ಹೊಯ್ಸಳ ವಿಷ್ಣುವರ್ಧನನೊಂದಿಗೆ ನಡೆದ ಹೋರಾಟದಲ್ಲಿ ಮೃತನಾಗುತ್ತಾನೆ. (ಎ.ಕ VII, ೪೭, ಬೆಳಗುತ್ತಿ, ಹೊನ್ನಾಳಿ ತಾಲೂಕು, ಕ್ರಿ.ಶ. ೧೧೩೦).

ತೈಲಪನ ಆಳ್ವಿಕೆಯಲ್ಲಿ ಸ್ವತಃ ತೈಲಪ ಮತ್ತು ಆತನ ಅಧೀನ ಅಧಿಕಾರಿ ವರ್ಗವು ಹಲವಾರು ದೇವಾಲಯಗಳನ್ನು ನಿರ್ಮಿಸಿರುವುದಲ್ಲದೆ, ಅಸಂಖ್ಯ ದೇವಾಲಯಗಳಿಗೆ ದತ್ತಿ ನೀಡಿದ್ದಾನೆ. ಸುರಳೇಶ್ವರದ ಚಿಕ್ಕೇಶ್ವರ (ಧಾರವಾಡ ಜಿಲ್ಲಾ ಶಾಸನ ಸೂಚಿ– ಹಾನಗಲ್ಲು, ೨೯೯), ಹಾನಗಲ್ಲಿನ ತೈಲೇಶ್ವರ (ಅದೇ, ಹಾನಗಲ್ಲು, ೨೯೮) ಈತನ ಕಾಲದ ನಿರ್ಮಿತಿಗಳೇ ಆಗಿವೆ. ಈತ ಗೆಜ್ಜೆಬೊಪ್ಪಗಾವುಂಡನಿಗೆ ಗೆಜ್ಜೆಹಳ್ಳಿ ಎಂಬ ಗ್ರಾಮವನ್ನು ನಿರ್ಮಾಣ ಮಾಡಿ ಅದಕ್ಕೆ ಗೆಜ್ಜೆಕುಲದ ಬೊಪ್ಪನ ಹೆಸರಿನಲ್ಲಿ 'ಗೆಜ್ಜೆಹಳ್ಳಿ' ಎಂದು ನಾಮಕರಣ ಮಾಡಿ ಅಲ್ಲಿಯ ಮೂಲಸ್ಥಾನದ ದೇವರಿಗೆ ದತ್ತಿ ನೀಡಿದ್ದನ್ನು ಗೆಜ್ಜೆಹಳ್ಳಿಯ ಈ ಶಾಸನಗಳು ತಿಳಿಸುತ್ತವೆ.

ತೈಲಪ ದಾನ ನೀಡಿದ ಹಾಗೂ ನಿರ್ಮಿಸಿದ ದೇವಾಲಯಗಳನ್ನು ಗಮನಿಸಿದಾಗ ಅವೆಲ್ಲವೂ ಕಾಳಾಮುಖ ಧರ್ಮ ಹಾಗೂ ಯತಿಗಳಿಗೆ ಸಂಬಂಧಿಸಿರುವ ಸಂಗತಿ ಗಮನಾರ್ಹ. ಕಾಳಾಮುಖ ಯತಿಗಳೂ ಸಹ ಈತನ ಮೇಲೆ ಹೆಚ್ಚು ಅಭಿಮಾನ ಹೊಂದಿದ್ದಂತೆ ತೋರುತ್ತದೆ. ಪುಲಿಗೆರೆಯ ಸೋಮನಾಥ ದೇವರ ಸ್ಥಾನಪತಿ ಮಹೇಂದ್ರ ಸೋಮಪಂಡಿತದೇವರು ಸೋಮನಾಥನ ಪ್ರಸಾದ–ಶೇಷಾಕ್ಷತೆಗಳನ್ನು ತೆಗೆದುಕೊಂಡು ಖುದ್ದಾಗಿ ಹಾನುಗಲ್ಲಿಗೆ ಹೋಗಿ ಮಹಾಮಂಡಲೇಶ್ವರ ತೈಲಪನನ್ನು ಆಶೀರ್ವಾದಿಸಿ ಬಂದನೆಂಬ ಸಂಗತಿ (ಐ.ಎ. XVI, ೨೪, ಲಕ್ಷ್ಮೇಶ್ವರ) ಈ ಅಂಶವನ್ನು ಪುಷ್ಟೀಕರಿಸುತ್ತದೆ.

(೩) **ಗೆಜ್ಜೆಯ ಬೊಪ್ಪ:** ಗೆಜ್ಜೆಹಳ್ಳಿಯ ಎರಡೂ ಶಾಸನಗಳಲ್ಲಿ ಉಳಿದೆಲ್ಲ ವ್ಯಕ್ತಿಗಳಿಗಿಂತ ಹೆಚ್ಚಾಗಿ ಗೆಜ್ಜೆಯ ಬೊಪ್ಪನ ಬಹುಮುಖ ವ್ಯಕ್ತಿತ್ವವನ್ನು ಪ್ರಶಂಸಿಸಲಾಗಿದೆ. ಶಾಸನದಲ್ಲಿ ಇವರ ಕುಲಾನ್ವಯವನ್ನು ವಿವರಿಸಲಾಗಿದೆ. ಗೆಜ್ಜೆಕುಲದಲ್ಲಿ ಅನುಪಮ ಬುಧನಿಧಿ ೧ಸೇಚಣ ಮತ್ತು ಚಾಕಣಬ್ಬೆಗೆ ಪುಣ್ಯವೇ ಜನಿಯಿಸುವಂತೆ ಚಮಡ ಹುಟ್ಟಿದ ಆ ಚಮಡ ವಿಭುವಿಗೆ ಮತ್ತು ಅಗಣಿತ ಗುಣಯುಕ್ತೆಯಾದ ಚಂಡಿಕಬ್ಬೆಯ ಮಗ ಬೊಪ್ಪಣ ಹುಟ್ಟಿದನೆಂದು ಹೇಳಲಾಗಿದೆ.

ಶಾಸನಗಳಲ್ಲಿ ಈತನನ್ನು ಬೊಪ್ಪಣಂ, ಬೊಪ್ಪಗಾವುಂಡ, ಗೆಜ್ಜೆಯಬೊಪ್ಪ ಮುಂತಾದ ಅಭಿದಾನಗಳಿಂದ ಹೆಸರಿಸಲಾಗಿದೆ. ಎರಡೂ ಶಾಸನಗಳಲ್ಲಿ ಈತನನ್ನು 'ಬಕುಲಕೆ ಲಲಾಮ, ಗೆಜ್ಜೆಕುಳಕಮಳ ಭಾಸ್ಕರ, ಗೆಜ್ಜೆಕುಲಾನ್ವಯದೊಳೆಸವ ದೀಪಕ, ಗೆಜ್ಜೆ ಕುಳಕಳಸ ಪಲ್ಲವ, ಗೆಜ್ಜೆ ಕುಳಾವಳಿಯ ಕೀರ್ತಿಗಾಪ್ಪಂ ಬೊಪ್ಪಂ' ಎಂದು ಸ್ತುತಿಸಲಾಗಿದೆ. ಅಷ್ಟೇ ಅಲ್ಲದೆ, ಆತ ತೈಲಪದೇವ ಪದಾರವಿಂದನಮನಸ್ಕನು, ಅಕಳಂಕ ಚರಿತನು, ಸಕಳಗುಣಗಣಾಧರನು, ಗೋತ್ರ ಪವಿತ್ರನು, ಪರನಾರಿಪುತ್ರನು, ವಿದ್ವಜ್ಜನಾನಂದನೂ, ಪವಿತ್ರ ಗೋತ್ರನು ಎಂದೆನಿಸಿಕೊಂಡಿದ್ದನೆಂದು ಶಾಸನ ತಿಳಿಸುತ್ತದೆ. ಈತ ಹಾನಗಲ್ಲ ಕದಂಬ ತೈಲಪನಿಗೆ ಹೆಚ್ಚು ನಿಕಟವರ್ತಿಯಾಗಿದ್ದ, ಈ ಕಾರಣದಿಂದ ಈತನ ಮೇಲಿನ ಕಾರುಣ್ಯದಿಂದ ಎಡವೊಳಲ್ ಎಪ್ಪತ್ತರ ಬಳಿಯಲ್ಲಿ ಒಂದು ಗ್ರಾಮವನ್ನು ನಿರ್ಮಾಣ ಮಾಡಿ ಆಚಂದ್ರಾರ್ಕಸ್ಥಾತಿಯಾಗಿ ಹಲವಾರು ವೃತ್ತಿದಾರರನ್ನು (ಎಂಟು ಹಿಟ್ಟುಗಳನ್ನು) ಅಲ್ಲಿ ನೆಲೆಗೊಳಿಸಿ, ಅದಕ್ಕೆ ಗೆಜ್ಜೆಯ ಬೊಪ್ಪಗಾವುಂಡನ ಹೆಸರಿನಲ್ಲಿ 'ಗೆಜ್ಜೆಹಳ್ಳಿ' ಯೆಂದು ನಾಮಕರಣ ಮಾಡಿ ಗೆಜ್ಜೆಯ ಬೊಪ್ಪನಿಗೆ ನೀಡುತ್ತಾನೆ. ಗೆಜ್ಜೆಯ ಬೊಪ್ಪಗಾಮುಂಡನು ಮೂಲಸ್ತಾನದ ಎರಡು ದೇವರಿಗೆ ನೈವೇದ್ಯಕ್ಕೆ, ಅಂಗರಂಗಭೋಗಕ್ಕೆ ಗೊರವಗೆಱೆಯ ಕೆಳಗೆ ಗದ್ದೆಯನ್ನು ದಾನ ನೀಡುತ್ತಾನೆ. ತಾನು ನೀಡುವ ದಾನವನ್ನು ದೇವರ ಅಂಗಭೋಗಕ್ಕೆ, ನೈವೇದ್ಯಕ್ಕೆ, ದೇವರ ಪರಿಯಳದ ತುಪ್ಪಕ್ಕೆ, ದೇವರ ನಂದಾದೀವಿಗೆಗೆ ನಿರ್ದಿಷ್ಟ ಪ್ರಮಾಣದಲ್ಲಿ ಹಂಚಿ ಮೀಸಲಿರಿಸುತ್ತಾನೆ.

ಹಾನಗಲ್ಲ ಕದಂಬರ ಇನ್ನಿತರ ಶಾಸನಗಳಲ್ಲಿ 'ಬೊಪ್ಪಗಾವುಂಡ, ಬೊಪ್ಪಣ' ಎಂಬ ಹೆಸರುಗಳೂ ಕಂಡುಬಂದರೂ, ಈತ ತನ್ನ ಕುಲಭಿದಾನವಾದ 'ಗೆಜ್ಜೆ' ಎಂಬ ಹೆಸರಿನಿಂದ ಪ್ರತ್ಯೇಕವಾಗಿ ನಿಲ್ಲುತ್ತಾನೆ. ಮೊಟ್ಟಮೊದಲ ಬಾರಿಗೆ ಗೆಜ್ಜೆಹಳ್ಳಿ ಶಾಸನದಲ್ಲಿ ಮಾತ್ರ ಉಕ್ತನಾಗಿದ್ದಾನೆ. ಗೆಜ್ಜೆಹಳ್ಳಿಯ ಮೊದಲ ಶಾಸನದ ಪ್ರಕಾರ ಗೆಜ್ಜೆಬೊಪ್ಪಣನ ವಂಶಾವಳಿ ಹೀಗಿದೆ:

ಏಚಣ — ಚಾಕಣಬ್ಬೆ(ಹೆಂ)
ಚಮಡ — ಚಂಡಿಕಬ್ಬೆ(ಹೆಂ)
ಬೊಪ್ಪಣ — ಬೋಗಿಕಬ್ಬೆ(ಹೆಂ)

ಐವರು ಮಕ್ಕಳು

(೪) **ಮಸಣ ದಂಡಾದೀಶ:** ಗೆಜ್ಜೆಹಳ್ಳಿಯ ಮೊದಲನೆಯ ಶಾಸನದಲ್ಲಿ ಉಲ್ಲೇಖಗೊಂಡ ಮತ್ತೊಬ್ಬ ಅಧಿಕಾರಿ ಮಸಣ ದಂಡನಾಯಕ. ಇವನನ್ನು ಶಾಸನ 'ಕೆವಣದ ನಡುವೆ ತಿವಿದ ನಾಯಕ ಮಣಿಯನ್ತೆ ತೈಲನ ಸಭೆಯಲ್ಲಿ ಶೋಭಿಸುತ್ತಿದ್ದನೆಂದು' ವರ್ಣಿಸುತ್ತದೆ. ಮುಂದುವರೆಸುತ್ತಾ, ಅವನನ್ನು ಮಲೆಯ ದಂಡನಾಯಕ, ಜಗದಳ ಅರಿದಂಡ ನಾಯಕ, ಗೋಧಮ ಘರಟ್ಟ, ಪರಚಕ್ರ ದಂಡನಾಯಕ ಎಂದು ವರ್ಣಿಸುತ್ತಾ ಆತನನ್ನು ತೈಲನ ಗರುಡ, ಮಹಾ ಪ್ರಚಂಡ ದಂಡನಾಯಕನಾಗಿದ್ದನೆಂದು ವರ್ಣಿಸುತ್ತದೆ. ಅಲ್ಲದೆ, ಸಮರ ರಂಗದಲ್ಲಿ ಮಸಣ ದಂಡಾಧಿಪತಿಯ ವಿರುದ್ಧ ಶತ್ರುರಾಜರಿಗೆ ಪರಚಕ್ರದಾವಾನಳನಾಗಿದ್ದನೆಂದು ಪ್ರಶಂಶಿಸುತ್ತದೆ.

ಈ ಮಸಣಯ್ಯ ದಂಡನಾಯಕನ ಬಗೆಗೆ ಹಾನುಗಲ್ಲು ಕದಂಬರ ಹಲವಾರು ಶಾಸನಗಳು ಉಲ್ಲೇಖಿಸುತ್ತವೆ. ಈತ ಮಹಾಮಂಡಲೇಶ್ವರ ತೈಲನು ಹಾನುಗಲ್ಲು ಐನೂರರ ಆಳ್ವಿಕೆ ನಡೆಸುವಾಗ ದಂಡಾಧಿಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಬಗ್ಗೆ ಗೆಜ್ಜೆಹಳ್ಳಿ ಪರಿಸರದಲ್ಲಿ ಹಲವಾರು ಶಾಸನೋಲ್ಲೇಖಗಳು ಲಭ್ಯವಾಗುತ್ತವೆ. ಈತ ಕ್ರಿ.ಶ. ೧೧೨೧ರಲ್ಲಿ ಹಾನಗಲ್ಲಿನಲ್ಲಿ ತೈಲಪನ ಹೆಸರಿನಲ್ಲಿ ತೈಲೇಶ್ವರ ದೇವಾಲಯವನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ (ಧಾರವಾಡ ಜಿಲ್ಲಾ ಶಾಸನ ಸೂಚಿ, ಹಾನಗಲ್ಲು ೨೯೮). ಕ್ರಿ.ಶ. ೧೨೨೮ರ ಒಂದು ವೀರಗಲ್ಲು ಶಾಸನವು ಹಾನಗಲ್ಲು ತೈಲಪನ ಮಹಾಪ್ರಧಾನಿ ಮನೆವೆರ್ಗಡೆ ದಂಡನಾಯಕ ಮಸಣಯ್ಯ ಚಾಲುಕ್ಯ ವಿಕ್ರಮ ವರ್ಷದ ೫೩ನೆಯ ಸಂವತ್ಸರದಲ್ಲಿ ಕಾಳಿಗನಾಯಕನ 'ಗಂಧವಾರಣ' ಬಂಮ್ಮುಸಾಂತರ ವೀರಮರಣ ಹೊಂದಿದ್ದನ್ನು ದಾಖಲಿಸುತ್ತದೆ (ಎಕ–VII, ಸೊರಬ, ೧೪೧, ಕ್ರಿ.ಶ. ೧೨೨೮).

ಕದಂಬ ತೈಲಪನು ಕಲ್ಯಾಣ ಚಾಲುಕ್ಯರ ಪರವಾಗಿ ಹೊಯ್ಸಳ ವಿಷ್ಣುವರ್ಧನನೊಡನೆ ನಡೆಸಿದ ಹಲವಾರು ಯುದ್ಧಗಳಲ್ಲಿ ಪ್ರಧಾನ ಪಾತ್ರವಹಿಸಿದ್ದಂತೆ ತೋರುತ್ತದೆ. ಹೊಯ್ಸಳ ವಿಷ್ಣುವರ್ಧನ ಕಲ್ಯಾಣ ಚಾಲುಕ್ಯರ ಬಲಾಢ್ಯ ಕೋಟೆಯಾಗಿದ್ದ ಹಾನುಗಲ್ಲು ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳಲು ಅವಿರತವಾಗಿ ಪ್ರಯತ್ನಿಸುತ್ತಲೇ ಇದ್ದ. ೧೧೨೫ರಲ್ಲಿಯೂ ಕದಂಬ ದಂಡನಾಯಕ ಮಸಣನು ಹೊಯ್ಸಳರೊಂದಿಗೆ ಯುದ್ಧ ಮಾಡಿದ್ದನ್ನು ಶಾಸನವೊಂದು ದಾಖಲಿಸುತ್ತದೆ (ಎಂಎಆರ್ ೧೯೩೨–೩೩, ಕೆಳಗೂರು, ಚಿಕ್ಕಮಗಳೂರು ತಾಲೂಕು). ಕ್ರಿ.ಶ. ೧೧೩೧ರ ಶಾಸನವು ಇವನು ತೈಲನ ಅಣತಿಯಂತೆ ಅವನ ಮಾಂಡಲಿಕ ಮಸಣಯ್ಯ ಬಲಿಪುರದ ಕಾಳಿಕಾ ದೇವಿಗೆ ದತ್ತಿ ನೀಡಿದ್ದನ್ನು ಉಲ್ಲೇಖಿಸುತ್ತದೆ. ಇವನು ತೈಲನ ನಂತರ ಅವನ ಮಗ ಎರಡನೆಯ ಮಯೂರವರ್ಮನ ಕಾಲದಲ್ಲೂ ದಂಡಾಧೀಶನಾಗಿ ಮುಂದುವರೆದಂತೆ ತೋರುತ್ತದೆ.

ಗೆಜ್ಜೆಹಳ್ಳಿ ಶಾಸನದ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಇವರೂ ಹೊಯ್ಸಳರಂತೆ 'ಗರುಡ' ಪದ್ಧತಿಯ ಅನುಯಾಯಿಗಳಾಗಿದ್ದರೇ? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಗೆಜ್ಜೆಹಳ್ಳಿಯ ಶಾಸನ ಮಸಣ ದಂಡಾಧೀಶನನ್ನು ಸ್ಪಷ್ಟವಾಗಿ 'ತೈಲನಗರುಡ'ನೆಂದು ಉಲ್ಲೇಖಿಸುತ್ತದೆ. ಮಸಣನ ಉಲ್ಲೇಖವಿರುವ ಕೆಲವು ಶಾಸನಗಳೂ ಇದಕ್ಕೆ ಪೂರಕ ಅಂಶಗಳನ್ನು ಒದಗಿಸುತ್ತವೆ. ಕ್ರಿ.ಶ. ೧೧೩೦ರ ಬೆಳಗುತ್ತಿಯ ಶಾಸನ (ಎಕ–VIII ೪೭, ಬೆಳಗುತ್ತಿ, ಹೊನ್ನಾಳಿ ತಾಲೂಕು) ಈ ಅಂಶವನ್ನು ಹೆಚ್ಚು ಸ್ಪಷ್ಟಪಡಿಸುತ್ತದೆ. ತೈಲಪದೇವರು ಸ್ವರ್ಗವೇರಲು ಶ್ರೀಮತ್ ಮನ್ನಿರ್ವರಗಂಡ ದಾಸರಸನ ತಂತ್ರಪಾಳ ಹಂನಿರ್ವ್ವರು ಮನ್ನೆಯರ ತಂತ್ರಪಾಳರ ಗಂಡ ಮಸಣಯ್ಯನ ಸಹೋದರ ಬೊಪ್ಪಣ ವೇಳೆವಾಳೆಯ ನಿಲಿಸಿ ತೈಲಪದೇವನ ಕೂಡೆ ಸ್ವರ್ಗಸ್ಥನಾಗುತ್ತಾನೆ. ವೇಳೆವಾಳಿಯಾದ ಬೊಪ್ಪಣನ ಮನೆತನಕ್ಕೆ ಶ್ರೀಮನ್ಮಾಹಾಮಂಡಳೇಶ್ವರ ಮಯೂರವರ್ಮ ಮತ್ತು ಮಾಂಡಲಿಕ ಮಸಣಯ್ಯ ಶ್ರೀಕರಣಸಹಿತವಾಗಿ ಬೊಪ್ಪಣ ಸಮಯಜೋಳಕೆ ನೂರು ಗದ್ಯಾಣಗಳನ್ನು ನೀಡಿದ್ದಲ್ಲದೆ, ಮಸಣಯ್ಯನ ಮಕ್ಕಳು, ಮಡಿದ ಬೊಪ್ಪಣನ ಮಕ್ಕಳನ್ನು ಸಲಹಬೇಕೆಂದು ತಿಳಿಸಿ ವೀರಗಲ್ಲನ್ನು ನಿಲ್ಲಿಸಲಾಯಿತೆಂದು ಹೇಳಲಾಗಿದೆ. ಈತನಿಗೆ ಸೋವಣನೆಂಬ ಮಗನಿದ್ದು, ಅವನೂ ಸಹ ಯುದ್ಧದಲ್ಲಿ ಮಡಿದಂತೆ ಕಾಣುತ್ತದೆ. (ಎಂಎಆರ್ ೧೯೨೬, ತಗರೆ)

ಹೀಗೆ ಚಮಡ ದಂಡಾಧೀಶನ ಇಡೀ ಕುಟುಂಬ ಯುದ್ಧದಲ್ಲಿ ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದ ಅಭ್ಯುದಯಕ್ಕಾಗಿ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಟ ನಡೆಸಿದರೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ.

(೫) **ಸೋಮೇಶ್ವರ ಪಂಡಿತ :** ಗೆಜ್ಜೆಹಳ್ಳಿಯ ಮೊದಲನೆಯ ಶಾಸನದಲ್ಲಿ ಗೆಜ್ಜೆಯ ಬೊಪ್ಪಗಾವುಂಡ ಸ್ಥಾನಪತಿ ಸೋಮೇಶ್ವರ ದೇವರಿಗೆ ಹಾಗೂ ಬೆಸಕಯ್ವ ಗೊರವಬ್ಬೆಗೆ, ಸುಂಖಭೋಗಕ್ಕೆ ಮತ್ತು ನಾಗದೇವಭಟ್ಟ ಜೋಯಿಸರಿಗೆ ಭೂದಾನ ನೀಡಿದ್ದನ್ನು ಶಾಸನ ದಾಖಲಿಸುತ್ತದೆ. ಇಲ್ಲಿ ಉದ್ಭವವಾಗುವ ಪ್ರಶ್ನೆ ಸ್ಥಾನಪತಿ ಸೋಮೇಶ್ವರ ಪಂಡಿತರಾರು? ಈ ಅವಧಿಯ ಆಸುಪಾಸಿನಲ್ಲಿ ಇದೇ ಹೆಸರಿನ ಕದಂಬೇಶ್ವರಾಚಾರ್ಯ ಸೋಮೇಶ್ವರ ಪಂಡಿತ (ಕೆಐ–೧, ೧೭, ಬಂಕಾಪುರ ಕ್ರಿ.ಶ. ೧೦೫೫), ಕುಮಾರ ಸೋಮರಾಕುಳ ಪಂಡಿತರ ಉಲ್ಲೇಖ ಬರುತ್ತದೆ (ಎಸ್‌ಐಐ–XVIII, ೨೯೧, ಬಂಕಾಪುರ). ಡಾ. ಚೆನ್ನಕ್ಕ ಪಾವಟೆಯವರು ಕ್ರಿ.ಶ. ೧೦೫೫–೧೦೭೯ರವರೆಗೆ ಹಾನುಗಲ್ಲಿನ ಶಾಸನಗಳನ್ನು ವಿವಕ್ಷಿಸಿ, "ಶೈವಧರ್ಮದ ಕಾಳಾಮುಖ ಯತಿಯಾದ ಕದಂಬೇಶ್ವರಾಚಾರ್ಯ ಸೋಮೇಶ್ವರ ಪಂಡಿತರು ಏಕಕಾಲದಲ್ಲಿ ಹಾನುಗಲ್ಲಿನ ಸುತ್ತಮುತ್ತಲಿನ ದೇವಸ್ಥಾನಗಳ ಜವಾಬ್ದಾರಿ ನೋಡುತ್ತಿದ್ದಂತೆ ತಿಳಿಯಬಹುದು" ಎಂದು ಅಭಿಪ್ರಾಯ ಪಟ್ಟಿದ್ದಾರೆ. (ಡಾ. ಚೆನ್ನಕ್ಕ ಪಾವಟೆ: ಹಾನಗಲ್ಲ ಕದಂಬರು, ಪು. ೧೫೬). ಆದರೆ ಕಾಲದ ದೃಷ್ಟಿಯಿಂದ ಈ ಸೋಮೇಶ್ವರ ಪಂಡಿತನಿಗೂ, ಶಾಸನ ಕಾಲಕ್ಕೂ ಹೊಂದಾಣಿಕೆಯಾಗುವುದಿಲ್ಲ. ಇಲ್ಲಿ ಉಕ್ತನಾದ 'ಸೋಮೇಶ್ವರ ಪಂಡಿತ' ಬಹುಶಃ ಪುಲಿಗೆರೆಯ ಸ್ಥಾನಪತಿ ಸೋಮೇಶ್ವರ ಪಂಡಿತನಾಗಿರುವ ಸಾಧ್ಯತೆ ಇದೆ. ಹಾನುಗಲ್ಲ ಕದಂಬರಿಗೂ, ಪುಲಿಗೆರೆಗೂ ಹೆಚ್ಚಿನ ಧಾರ್ಮಿಕ ಒಡನಾಟವಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಲಕ್ಷ್ಮೇಶ್ವರದ ಶಾಸನದ ಪ್ರಕಾರ (ಐಎ – XVI, ೨೪, ಲಕ್ಷ್ಮೇಶ್ವರ, ಕ್ರಿ.ಶ. ೧೧೦೭) ಸೋಮನಾಥದೇವರ ಸ್ಥಾನದಾಚಾರ್ಯ ಪ್ರಸಾದ ಶೇಷಾಕ್ಷತೆಗಳೊಂದಿಗೆ ಹಾನುಗಲ್ಲಿಗೆ ಬಂದು ತೈಲಪನನ್ನು ಆಶೀರ್ವದಿಸಿದ್ದು ಹಾಗೂ ಇದರಿಂದ ಸಂಪ್ರೀತನಾದ ತೈಲಪ ಕುನ್ದಾವರ ೩೦ರ ಬಾಡವಾದ ಕಲ್ಲವಣವೆಂಬ ಗ್ರಾಮವನ್ನು ದಾನಬಿಟ್ಟ ವಿಷಯ ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಈ ಅವಧಿಯ ಶಾಸನಗಳನ್ನು ಗಮನಿಸಿದಾಗ, ಕಾಳಾಮುಖ ಮಠ ಹಾಗೂ ದೇವಾಲಯಗಳಲ್ಲಿ ಮಹಿಳೆಯರೂ ಸಹ ಸ್ಥಾನಪತಿಗಳಾಗಿ ಅಥವಾ ದೇವಾಲಯಗಳ ಮುಖ್ಯಸ್ಥೆಯರಾಗಿ ಕಾರ್ಯನಿರ್ವಹಿಸುತ್ತಿದ್ದ ನಿದರ್ಶನಗಳು ನಮಗೆ ೧೦ ರಿಂದ ೧೩ನೆಯ ಶತಮಾನಗಳ ಶಾಸನಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹಾನಗಲ್ಲ ಕದಂಬರ ಕಾಲದ ಹೊಟ್ಟೂರಿನ ಕೇಶವೇಶ್ವರ ದೇವಸ್ಥಾನದ ಮಠದ ತಪಸಿ ಹಾಗೂ ಆಚಾರ್ಯಿಣಿಯಾಗಿದ್ದ ಗಂಗಿಕಬ್ಬೆ (ಐಎ–XVI, ೧೧ ಹೊಟ್ಟೂರು, ಹಾನಗಲ್ಲು ತಾಲೂಕು ಕ್ರಿ.ಶ. ೧೦೬೭), ರೇವಬ್ಬೆ ಗೊರವಿ (ಬಿಕೆಐ–1, ೫೦, ಕ್ರಿ.ಶ. ೧೦೦೫) ಅಂಥ ಕೆಲವು ನಿದರ್ಶನಗಳು. ಗೆಜ್ಜೆಹಳ್ಳಿ ಶಾಸನದಲ್ಲಿ 'ಬೆಸಕಯ್ವ ಗೊರವಬ್ಬೆಗೆ ದಾನ ನೀಡಿದ ಉಲ್ಲೇಖವಿದೆ. ದಾನ ನೀಡಿದ ಸ್ಥಳವೂ 'ಗೊರವಗೆಱೆ'ಯ ಕೆಳಗಿದೆ. ಗೊರವಬ್ಬೆ, ಗೊರವಗೆರೆ ಪರಸ್ಪರ ಸಾದೃಶ ಸಂಬಂಧ ಹೊಂದಿವೆಯೆನಿಸುತ್ತದೆ. ಇಲ್ಲಿ 'ಬೆಸಕಯ್ವ' ಎಂಬ ವಿಶೇಷಣ ಗೊರವಬ್ಬೆಗೆ ಬಂದಿದೆ. ಇದು ಅಂಕಿತವೋ ಅಥವಾ ಅನ್ವರ್ಥನಾಮವೋ ಗೊತ್ತಿಲ್ಲ. ಗೊರವಬ್ಬೆ ಗುರುವಿನ ಪತ್ನಿ ಆಗಿರುವ ಸಾಧ್ಯತೆಯಿದೆ. ಈ ಶಾಸನ ಕ್ರಿ.ಶ. ೧೧೦೪ಕ್ಕೆ ಸೇರಿದ್ದು ಬಸವಪೂರ್ವ ಯುಗದಲ್ಲಿ ದೇವಾಲಯದ ನಿರ್ವಹಣೆಯಲ್ಲಿ ಗೊರವಕಬ್ಬೆ ವಿಶಿಷ್ಟ ಸ್ಥಾನ ಪಡೆದಿರುವುದನ್ನು ಕಾಣಬಹುದು. ಸ್ಥಾನಪತಿ ಸೋಮದೇವ ಪಂಡಿತ, ಗೊರವಬ್ಬೆ ಮುಂತಾದ ಹೆಸರುಗಳು ಸ್ಪಷ್ಟವಾಗಿ ಶಾಸನದ ಕಾಳಾಮುಖ ಪರಂಪರೆಯ ಹಿನ್ನೆಲೆಯನ್ನು ಪ್ರತಿಪಾದಿಸುತ್ತವೆ. ಶಾಪಾಶಯಗಳನ್ನೂ ಸಹ ಕಾಳಾಮುಖ ಧರ್ಮಪರಂಪರೆಯ ಹಿನ್ನೆಲೆಯಲ್ಲಿಯೇ ನೀಡಲಾಗಿದೆ. ಎರಡು ಶಾಸನಗಳಲ್ಲೂ ಗಂಗೆ, ವಾರಣಾಸಿ, ಕುರುಕ್ಷೇತ್ರದೊಂದಿಗೆ ಶ್ರೀಪರ್ವತವನ್ನು ಸೇರಿಸಲಾಗಿದೆ. ಶ್ರೀಪರ್ವತ ಆಂಧ್ರಪ್ರದೇಶದ ಇಂದಿನ ಶ್ರೀಶೈಲವಾಗಿದ್ದು, ಇದು ಕಾಳಾಮುಖ ಪರಂಪರೆಯ ಪವಿತ್ರ ಸ್ಥಾನವಾಗಿತ್ತು.

ಶಾಸನದ ಸಾಹಿತ್ಯಕ ಮೌಲ್ಯ

ಗೆಜ್ಜೆಹಳ್ಳಿಯ ಎರಡು ಶಾಸನಗಳು ಒಂದೇ ವಿಷಯವನ್ನು ಪ್ರಸ್ತಾಪಿಸುತ್ತಿದ್ದರೂ, ಮೊದಲನೆಯ ಶಾಸನ ಬೃಹತ್ ಹಾಗೂ ಮಹತ್ತುಗಳೆರಡರಲ್ಲೂ ವಿಶಿಷ್ಟವಾಗಿದೆ. ಈ ಶಾಸನ ಚಂಪೂಶೈಲಿಯಲ್ಲಿ ರಚಿಸಲ್ಪಟ್ಟಿದ್ದು ೬೫ ಸಾಲುಗಳ ಕಾವ್ಯ. ಎರಡು ಕಂದ ಪದ್ಯಗಳು, ಒಂದು ವೃತ್ತ ಹಾಗೂ ವಚನಗಳ ಪ್ರಯೋಗವಾಗಿದೆ. ಆದರೆ ಅವು ಛಂದಸ್ಸಿಗೆ ಅನುಗುಣವಾಗಿಲ್ಲ.

ಶಾಸನದ ಆರಂಭವು 'ನಿನಗಾಯುಮಂ, ಶ್ರೀಯುಮಂ ಮಾಡುಗೆ ಮ್ರಿಗಧರ ಲಕ್ಷ್ಮೀ ಕಳಾಪೂರ್ಣ ಚೂಡಾಮಣಿ . . . . . ರತ್ನರಭಿಬ್ರಾತ ತ್ರಿಣೇತ್ರಂ' ಎಂದು ಶಿವನ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ.

ಎರಡನೆಯ ಶಾಸನವು 'ಗನ್ದರ್ವ ಕಿನ್ನರ ಸುರಾಸುರ ಪೂಜಿತಾಯ . . . . . ದೇವಾದಿದೇವ ವರದಾ ನಮಶ್ಶಿವಾಯ' ಎಂದು ಶಿವನ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ. ಆದರೆ, ಇಲ್ಲಿ ವಿಷಯವನ್ನು ನೇರವಾಗಿ ಹೇಳಿ ತೈಲಪ ಹಾಗೂ ಗೆಜ್ಜೆಯ ಬೊಪ್ಪಣನನ್ನು ವಿಶೇಷವಾಗಿ ಪ್ರಶಂಸಿಸಲಾಗಿದೆ.

ಇದನ್ನು ಬರೆದವರ ಬಗ್ಗೆ ಪ್ರಸ್ತಾಪಿಸುತ್ತಾ ಶ್ರೀಮತು ಸವಣೂರ ಕವುಡಯರ ಷಂಕಣಭಟ್ಟರ ಕಲುಪೆ ಎಂದು ಮೊದನೆಯ ಶಾಸನದಲ್ಲಿ ಹೇಳಲಾಗಿದೆ. ಎರಡನೆಯ ಶಾಸನದಲ್ಲಿ ಶ್ರೀಮದಾಲೂರ ಸೇವಬೋವ ರಾಜಣನ ಕಟ್ಟೆಯ ಬರಹ ಎಂದು ದಾಖಲಿಸಲಾಗಿದೆ. ಹಾಗೆಯೇ ಹರಪುತ್ರಕ ಗಣನಾಯಕ ಸರಸ್ವತಿಯ ತೊತ್ತು ಹಿಟ್ಟಿನ ಅಕ್ಕಸಾಲಿ ಹೊಲೊಜಯ ಕಲ್ಲಲ್ಲಿ ಅಕ್ಕರಂ ಪೊಯ್ದ ಎಂದು ಹೇಳುತ್ತದೆ.

ಕರ್ನಾಟಕದ ಪ್ರಾದೇಶಿಕ ಇತಿಹಾಸಕ್ಕೆ ಸಣ್ಣ ಸಣ್ಣ ಶಾಸನಗಳೂ ಸಹ ವಿಶಿಷ್ಟ ಕೊಡುಗೆ ನೀಡುತ್ತವೆ. ಗೆಜ್ಜೆಹಳ್ಳಿಯ ಈ ಶಾಸನಗಳು ಹಾನಗಲ್ಲು ಪರಿಸರದ ಪ್ರಾದೇಶಿಕ ಇತಿಹಾಸದ ಪುನಾರಚನೆಗೆ ಹೆಚ್ಚು ಪೂರಕವಾಗಿವೆ.

ಈ ಎರಡೂ ಶಾಸನಗಳ ಸುದೀರ್ಘ ಪಠ್ಯವನ್ನು ಕೆಳಗೆ ನೀಡಲಾಗಿದೆ:

ಒಂದನೆಯ ಶಾಸನ

೧) ನಿನಗಾಯುಂ ಶ್ರೀಯುಮಂ ಮಾಡುಗೆ ಮ್ರಿಗಧರ ಲಕ್ಷ್ಮಿಕಳಾಪೂರ್ಣ್ನ ಚೂಡಾಮಣಿ ಗೌರೀ ರ
೨) ಮ್ಯ ಗಾಡಸ್ತನ **ಮೂ** ಶ್ರೀಣರಜೋತ್ಸವ ರಾಗೋದಯ ರಾಮೋದ್ದಾಮ ವಕ್ಷಸ್ಥಳನಮರಧ್ಧಿ
೩) ಜೂಟಕೂಟ ವಿಟಂಕ ಪ್ರಮುದಾವಿಸ್ತಿರ್ನ್ನಾಪಾತ್ರಂ ಷ(ಧೋ)ಣರತ್ನರಭಿಭ್ರಾತ ಗಾತ್ರಂ ತ್ರೀಣೇತ್ರಂ
೪) ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪ್ರಿಥ್ವಿವಲ್ಲಭಂ ಮಹಾರಾಜಾಧಿರಾಜಂ ಪರಮೇಸ್ವರಂ ಪ
೫) ರಮಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ರಿಭುವನ
೬) ಮಲ್ಲದೇವರ ವಿಜಯ ರಾಜ್ಯಮುತ್ತರೋತ್ತರಾಭಿವ್ರಿದ್ಧಿ ಪ್ರವರ್ಧಮಾನಮಾ ಚಂದ್ರಾರ್ಕ ತಾರಂಬ
೭) ರಂ ಸಲುತ್ತಮಿರೆ ॥ ಬಳವದು ಭೂಪಾಳನಾರಾಯಣ ಬಳವದುಭೂಪಾಳ ತಾರಾಭ್ರಚಂ
೮) ದ್ರಂ ಬಳವದು ಭೂಪಾತಧಾಭಾಸ್ಕರ ಬಳವದು ಭೂಪಾಳ ವಿಧ್ಯಾಧರೇ[ಂ]ದ್ರಂ ಬಳವದು ಭೂ
೯) ಪಾಳಕಂ ಜಸನ ಬಳವದು ಭೂಪಾಳಾ ಚಾಳುಕ್ಯರುದ್ರಂ ಬಳವದು ಭೂಪಾಳ ಚೂಡಾಮ
೧೦) ಣಿ ಪದಕಿರಣಂ ವಿಕ್ರಮಾದಿತ್ಯದೇವ ॥ಕನ್ದ॥ ಕನಕಗಿರಿ ಪುಜ್ಪದನ್ತರ ವಿನದದ ಕಳ ತ್ರಿ
೧೧) ಪುರ ಹರನ ಪಿಡಿವ ಪಿನಾಕಂವನಗೆಸೆವ ರತ್ನಚೂಳಿಕೆ ವನಧಿಗಳಧಿಕಾರ ಮೇರು
೧೨) ಗಿರಿ ಸೊಗಯಿಸುಗು ॥ಕಂದ॥ ಮೇರಿಗಿರಿಯಿಂದೆ ತೆಂಕಣ ವಾರಿಧಿ ಪರೀವ್ರಿತವ
೧೩) ಸುನ್ದರಾ ವನಿತೆಯ ವಿಸ್ತಾರ ಮುಖ ಭರತವರ್ಷ ವಿರಾರಾಜಿಸುತಿರ್ಪ್ಪುದೆಸೆವ
೧೪) ಕುನ್ತಳ ವಿಷಯ ॥ವಚನ॥ ಆ ವಿಷಯ ವಿಳಾಸಿನಿಯ ವದನ ಕಮಳಕ್ಕೆ ತಿ
೧೫) ಳಕಮಿರ್ಪ್ಪುದದೆಂನ್ತೆಂದೊಡೆ ॥ವ್ರಿತ್ತ॥ ಬೇಱೊಂದುದುಭಾಸಿ ಬೇಱೊಂದಖಿಳ ಲಕ್ಷ್ಮಿ ಬೇಱೊಂದು
೧೬) ವಿಸ್ತಾರಪೂರಂ ಬೇಱೊಂದುತ್ಸಾಹ ಸಂಪತುಪಧದ ರಮಣ ಬೇಱೊಂದು ಲಾವಣ್ಯ
೧೭) ಪುಣ್ಯಂ ಬೇಱೊಂದ್ಯೈಶ್ವರ್ಯ್ಯ ರಾರಾಜಿತದತಿಶಯಮಿದು ಬೇಱೆಂಬಿನಂ ಪಾನುಗಲ್ಲ
೧೮) ಯ್ನೂಱೆಂಬೀ ಱಿತ್ತೋಚೆಲುವಂ ತನುಮಹಿಗೆ ಮಹಾಶೋಭೆಕಂಗೆಡ್ಡಮಾಗಲು॥
೧೯) ವಚನ ॥ ಅನ್ತಾ ದೇಶಾಧೀಶ್ವರನ ಸಕಳಗುಣಗಣಾಳಂಕ್ರಿತಮುಂ ವೀರ ಮಹೇಶ್ವರ
೨೦) ನ ವೀರಾವತಾರಮುಂ ಬನವಾಸಿ ಪುರವರಾಧೀಶ್ವರನ ವಿತರಣ ವಿನೋದಮುಂ ಮಂ
೨೧) ಮಾರ್ಕ್ಕೊಳುವರ ಗಂಡನಥಕ್ಯ ವಿಕ್ರಮೋಪಕ್ರಮಮುಂ ಮಂಡಳೀಕ ದೇವೇಂದ್ರನಭಿನು
೨೨) ತ ವಿಭವ ಪ್ರಭಾವಮುಂ ಕಾದಂಬಕಾಣ್ಠೀರವ ನಕ್ಷಾತ್ರವ್ರಿತ್ತಿಯುಮದೆನ್ತೆದೊಡೆ॥
೨೩) ತುರಕಮನೇಱಿ ಕೂರಸಿಯನೆತ್ತಿದ ಮಾರಿಯ ಮೂರಿಯೆ ಮೂರಿಯೆಳ್ಳೆಯನ್ತಿರೆ ರಣರಂಗ ಭೈರವ
೨೪) ನೊಳೆನ್ತು ಫಳಂಚುವರೆನ್ತು ನಿಲುಪರೆನ್ತಿರೆ ಸಮಕಟ್ಟಿಪಾಯಿಸುವರೆನ್ತು ತಱುಂಬುವರೆ
೨೫) ನ್ತು ನೂಂಕಿ ನಿತ್ತರಿಸುವರೆನ್ತೊ ತೈಲಪನೊಳಾನ್ತು ಬರ್ದುಂಕುವರುಗ್ರರಾತಿಗಳು॥


೨೬) ಕೆವಣದ ನಡುವೆ ತಿವಿದ ನಾಯಕಮಣಿಯನ್ತೆ ತೈಲಭೂಪನ ಸಭೆಯೊಳ್
೨೭) ನಾಯಕರತ್ನಂ ತೆಕ್ಕನೆತೀವಿರ್ದ್ದಂ ಮಸಣವ್ರೀಶಣದಂಧೀಷ ॥ವಚನ॥ ಅನ್ತು ಮಲೆ
೨೮) ಯ ದಂಡನಾಯಕ ಜಗದಳ ಅರಿದಂಡನಾಯಕ ಗೊಧೂಮ ಘರಟ್ಟ ಪರಚಕ್ರ
೨೯) ದಂಡನಾಯಕ ಮುಖಕಮಳಪ್ಪ ತೈಲನ ಗರುಡ ಮಹಾಪ್ರಚಂಡ ದಂಡನಾಯಕಂ
೩೦) ಮಸಣ ದಂಡಾಧಿಪತಿಯ ಪ್ರತಾಪಮೆಂತೆಂದೊಡೆ ॥ಕಂದ॥ ಕರವಾಳವಾಡುವಹಿತ
೩೧) ರ ಸಿರಮನುಕ(ರಂ) ಬೆರಸುಕೊಳುಮಸಣದಂಡಾಧಿಷಂಗರಿನ್ರಿಪರು ಸೆಣಸಲಾರ್ಪ
೩೨) ರೆ ಪರಚಕ್ರ ದವಾನಳಂಗೆ ಸಂಗರಧರೆಯೊಳು ॥ವಚನ॥ ಸ್ವಸ್ತಿ ಸಮಧಿಗತ ಪಂ
೩೩) ಚ ಮಹಾಸಬುದ ಮಹಾಮಂಡಳೇಸ್ವರಂ ಶ್ರೀ ಮತ್ತೈಲಪದೇವರು ಪಾನುಂಗಲ್ಲಯ್ಯೂ
೩೪) ಋಮನುಭಯ ಸಾಮ್ಯದಿಂ ಸುಖಸಂಕತಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ
೩೫) ಗೆಜ್ಜೆಯ ಬೊಪ್ಪಣಂಗೆ ಕಾರುಣ್ಯದಿ ನೆಡವೊಳಲೆರ್ಪ್ಪತ್ತಱ ಬಳಿಯ ಬಾಡಮಂ ಮಾ
೩೬) ಡಿ ಆಚಂದ್ರಾರ್ಕ್ಕಸ್ಥಾಯಾಗಿ ತಮಬಾಲ್ಯಮೆಂದಮ್ರಿತ ಹಸ್ತದಿಂದಾ ಗೆಜ್ಜೆಯ ಬೊಪ್ಪಣಂ
೩೭) ಗೆ ಹಿಟ್ಟಂಹೂಸಿ ಗೆಜ್ಜೆಯಹಳ್ಳಿಯೆಂದು ಪೆಸರಂ ಕುಡೆ ತಿರಮಾಗಿ ಸಂದುದದೆನ್ತೆ
೩೮) ದೊಡೆ ॥ಕಂದ॥ ಎಡವೊಳಲಿದಖಿಳ ಲಕ್ಷ್ಮಿಗೆ ತೊಡವಾದುದು ಬಳಿಯ ಬಾಡಮೆ
೩೯) ಪ್ಪತಕ್ಕಂ ನಡುನಾಡ ತೀರ್ತ್ಥಮೊಳು ದಂಗೆಡಿಗೊಂಡುದು ಗೆಜ್ಜೆವಳ್ಳಿ ದಿವಿಜನಪುರ
೪೦) ಮಂ ॥ವಚನ॥ ಆತನ ಕುಲಾನ್ವಯ ಮದೆನ್ತೊಂದೊಡೆ॥ ಅನುಪಮ ಬುಧನಿಧಿಯೇಚ
೪೧) ಣ ಜನಕಂಗಂ ಜನನೀ ಚಾಕಣಬ್ಬೆಗೆ ಪುಣ್ಯಂ ಜನಿಯಿಸುವನ್ತೆ ಸುಪುತ್ರಂ ಜನಿ
೪೨) ಯಿಸಿದಂ ದೀಪವರ್ತ್ತಿ ಚಮಡಂ ಧರೆಯೊಳು॥ ನೆಗದಿದ್ದಾ ಚಮಡ ವಿಭುವಿಂಗಗ(ಂ) ಣಿತ
೪೩) ಗುಣಯುಕ್ತೆ ಚಂಡಿಕಬ್ಬೆಗೆ ದೀಪಂ ದಿಗುನಾಗ ಕೀರ್ತಿ ವಿಳಸಿತ ಮಗನೊಗೆದಂ ಬೊಪ್ಪನೆಂ
೪೪) ಬಕುಲಕೆ ಲಲಾಮ॥ ಗೆಜ್ಜೆಕುಳ ಕಮಳಭಾಸ್ಕರ ಗೆಜ್ಜೆಕುಳಾನ್ವಯದೊಳೆಸೆವ ದೀಪಕ ಮತ್ತಂ
೪೫) ಗೆಜ್ಜೆಕುಳ ಕಳಸಪಲ್ಲವ ಗೆಜ್ಜೆಕುಳಾವಳೆಯ ಕೀರ್ತಿಗಾರ್ಪ್ಪಂ ಬೊಪ್ಪಂ॥ ಜಗವಿದಿತ ಪಾಂಡು
೪೬) ನಂದನ ವೊರ್ಗೆರ್ದ್ದಗ್ಗಡ ಬೊಪ್ಪವಿಭುಗೆ ಕಾರ್ಯ್ಯದುರಂಧರರಗಣಿತರಮಳ ಚರಿತ್ರರು ಮ್ರಿಗನೇತ್ರೆ
೪೭) ಗೆ ಚಾಗಿಕಬ್ಬೆಗಯ್ವರ್ತ್ತನೆಯರು ॥ ಅನಿಬರೊಳಗ್ರಜಬಲಕಂಗನಿಬರು ಬೆಸಕೆಯ್ದು ಮುದ್ದಕಗ್ಗ ಕಾಟಿ
೪೮) ಗ ತೈಲಂ ಮನುನೀತಿ ನಿಯತರದಿಕರುಮನಿವಾರಿತ ತೇಜರಲ್ತೆ ಕುಳತಿಳಕಂಗಳು॥ ಅನ್ತು ತೈಲಪದೇವ ಪಾದಾ
೪೯) ರವಿಂದವಂದನ ಮನಸ್ಕನುಂ ಅಕಳಂಕಚರಿತನುಂ ಸಕಳಗುಣ ಗಣಾಧಾರನು ಗೋತ್ರಪವಿತ್ರನು ಪರನಾರಿಪುತ್ರನುಂ
೫೦) ವಿಧ್ವಜ್ಜನಾನಂದ ಗುರು ದೇವ ದ್ವಿಜಾಸಿರ್ವಾದ ಪವಿತ್ರಗೋತ್ರನುಮೆನಿಸಿ ಗೆಜ್ಜೆಯ ಬೊಪ್ಪಗಾಮಂಡಂಮೂಲಸ್ತಾನದ ಎ
೫೧) ರಡುದೇವರ್ಗ್ಗೆ ನಿವೇದ್ಯಕ್ಕೆ ಬಳ್ಳವೆರುಡು॥ ದೇವರಂಗಭೋಗಕ್ಕೆ ಗೊರವಗೆಱೆಯ ಕೆಳಗೆ ಗದ್ದೆ ಮತ್ತ ೧ ಡ ಱೊಳಂಗಭೋಗ ವೆಂ
೫೨) ನ್ತೆದೊಡೆ ದೇವರ ನಿವೇದ್ಯಕ್ಕೆ ಗದ್ದೆ ಕಮ್ಮ ೬೨ ದೇವರ ಪರಿಯಳದ ತುಪ್ಪಕೆ ಗದ್ದೆ ಕಮ್ಮಂ ಮೂ ೩ ದೇವರ ನಂದಾದೀವಿಗೆ ಬೆ
೫೩) ಳಗುತ್ತಿಯ ಗದ್ದೆ ಕಮ್ಮ ೧೨ ಸ್ಥಾನಪತಿ ಸೋಮೇಸ್ವರ ಪಂಡಿತರ್ಗ್ಗೆ ಕಲಂಕಬಧಾರಾಪೂರ್ವಕ ಮಡಿಬಿಟ್ಟ ಅದದೇವರ್ಗ್ಗೆ
೫೪) ಬೆಸಕಯ್ವ ಗೊರವಬ್ಬೆಗೆ ಗದ್ದೆ ಕಮ್ಮ ೬ ನೈಷ್ಠಿಕ ತಪೋದನರಾಹಾರದಾನಕ್ಕೆ ಗದ್ದೆ ಕಮ್ಮ ೧ಅನ್ತು ಗದ್ದೆ ಮತ್ತ೧ಡಕಂಗಭೋ
೫೫) ಗಮನಿಸಿದುದು ಮತ್ತ ಗೊರವಗೆಱೆಯ ಕೆಳಗೆ ಸಂ ಕಿಮಿಯಂಗೆ ಸಂಖಭೋಗಕ್ಕೆ ಗದ್ದೆಕ ೬ ನಾಗದೇವಭಟ್ಟರ್ಗೆ
೫೬) ಜೋಯಿಸಗೆಯಿಗದ್ದೆ ಕಮ್ಮ ೧೦ ಸ್ಥಾನಪತಿ ಗೊರವಕಬ್ಬೆ ಸಂಖಭೋಗ ಜೋಯಿಸಗೆಯಿ ಇನ್ತಿ ನಾಲ್ಕುಂ ಗುಣಸಾಸನ ಬೊ

೫೭) ಪ್ಪಗಾಮುಂಡಂ ಮತ್ತ ಕೆರೆಗಳುಗೆ ಬಿಟ್ಟ ಗದ್ದೆ ಕ ೨೨ ಅನ್ತಾ ಗೊರವಗೆರೆಯ ಕೆಳಗೆ ಎಲ್ಲಾ ಧರ್ಮಂಗಳ್ಗೆ ಬಿಟ್ಟ ಗದ್ದೆ
೫೮) ಮತ್ತರು ೧ ಕ ಯಿದು ಚಂದ್ರಾರ್ಕ ತಾರಂಬರಂ ಸಲುತ್ತಮಿರೆ॥ ಸಕವರ್ಷ ೧೦೨೬ನೆಯ ಸುಭಾನು ಸವಂತ್ಸರದ
೫೯) ಕಾರ್ತಿಕ ಸುದ್ಧ ೧೩ ಬ್ರಿಹವಾರದುದು ಗೆಜ್ಜೆಯ ಬೊಪ್ಪ ಗಾಮುಂಡಂ ಧರ್ಮಸಾಸನಂ ನಿಲಿಸಲು ಶ್ರೀ ಮತ್ತೈಲಪದೇ
೬೦) ವರು ಪ್ರತಿಪಾಳಿಸುವರು ಇನ್ತಿಧರ್ಮಮಂ ಸ್ವಧರ್ಮದಿಂ ಪ್ರತಿಪಾಳಿಸಿದವರು ಗಂಗೆ ವಾರಣಾಸಿ ಕುರುಕ್ಷೇ
೬೧) ತ್ರ ಶ್ರೀಪರ್ವ್ವತ ಮೊದಲಾಗೆ ಪುಣ್ಯ ತೀರ್ತದೊಳು ಪನ್ನಿರ್ಚ್ಛಾಸಿರ ಬ್ರಾಹಣರ್ಗ್ಗಾಹಾರದಾನ ಕಪಿಲೆದಾನ
೬೨) ಮಿತ್ತ ಫಲಮಕ್ಕು ಇನ್ತಿ ಧರ್ಮಮನಳಿದನಾ ಪುಣ್ಯತ್ತೀರ್ತ್ತದೊಳು ಪನ್ನರ್ಚ್ಛಾಸಿರ ಬ್ರಾಹ್ಮಣರುಂ ಪನ್ನಿ
೬೩) ಚ್ಛಾಸಿರ ಕಪಿಲೆಗಳುಮಂ ಸ್ವಹಸ್ತದಿಂದ ಳಿತ ಪಾತಕನಕ್ಕು ॥ ಸ್ವದತ್ತಂ ಪರದತ್ತಂ ವಾಯೋಹರೇತಿ
೬೪) ವಸುಂನ್ಧರಾಂ ಷಷ್ಠಿ ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿ ॥ ಶ್ರೀ ಮತುಸ
ವಣೂರಕವುಡಯರ ಹಂಕಣ ಭಟ್ಟರ ಕಲುಪೆಯ ಬರೆಪ ಮಂಗಳ ಮಹಾ ಶ್ರೀ ಶ್ರೀ

ಎರಡನೆಯ ಶಾಸನ

೧. ಗನ್ದರ್ವ್ವ ಕಿನ್ನರ ಸುರಾಸುರ ಪೂಜಿತಾಯ ದೇವಪರಾ ಮಕುಟ ರಂಜಿತ ಶೋಭಿತ
೨. ಯ ಕರ್ಣ್ನಾವತಂಶನಹಿಕುಂಡಳ ಶೋಭಿತಾಯ ದೇವಾದಿದೇವ ವರದಾಯ ನಮಶ್ಶಿ
೩. ವಾಯ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪ್ರಿಥ್ವೀವಲ್ಲಭಂ ಮಹಾರಾಜಾಧಿರಾಜ ಶ್ರೀ
೪. ಪರಮೇಶ್ವರ ಪರಮಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀ
೫. ಮತ್ರಿಭುವನಮಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿಪ್ರದ್ಧಿ ಪ್ರವ
೬. ರ್ದ್ಧಮಾನ ಮಾಚಂದ್ರಾರ್ಕ ತಾರಂಬರಂ ಸಲುತ್ತಮಿರೆ ॥ ಸ್ವಸ್ತಿ ಸಮಧಿಗತ ಪಂಚಮ
೭. ಹಾಸಬ್ಧ ಮಹಾಮಂಡಳೇಶ್ವರಂ ಬನವಾಸಿ ಪುರವರಾಧೀಸ್ವರಂ ಜಯಂತಿ ಮಧುಕೇಶ್ವರ
೮. ದೇವಲಬ್ಧ ವರಪ್ರಸಾದ ಮ್ರಿಗಮದಾಮೋದಂ ತ್ರಯಕ್ಷ್ಮ ಸಂಭವಂ ಚತುರಾಸೀ
೯. ತಿ ನಗರಾಧಿಷ್ಟಿತ ಲಲಾಟಲೋಚನ ಚತುರ್ಭುಜಂ ಜಗದ್ವಿದಿತಾಷ್ಟಾದಶಾಶ್ವಮೇದ ದೀಕ್ಷ
೧೦. ದೀಕ್ಷಿತ ಹಿಮವದ್ಗಿರೀಂದ್ರರುಂದ್ರಶಿಖರ ಶಕ್ತಿಸಂಸ್ಥಾಪಿತ ಸ್ಪಟಿಕ ಶಿಳಾಸ್ತಂಭ ಬದ್ಧಮಧ
೧೧. ಗಜ ಮಹಾಮಹಿಮಾಭಿರಾಮ ಕಾದಂಬಚಿಕ್ರಿ ಮಯೂರವರ್ಮ ಮಹಾಮಹೀಪಾಳ
೧೨. ಕುಳಭೂಷಣಂ ಪೆರ್ಮಟ್ಟಿತೂರ್ಯ ನರ್ಘೋಷಣಂ ಶಾಖಾಚರೇಂದ್ರಧ್ವಜ ವಿರಾಜಮಾನಮಾ
೧೩. ನೋತ್ತುಂಗ ಸಿಂಹಲಾಂಚ್ಛನ ದತ್ತಾರ್ತ್ಥಿಕಾಂಚನಂ ಸಮರ ಜಯಕಾರಣ ಕದಂಬರಾಜರ
೧೪. ರ್ಣ ಮಾಕ್ಕೊಳ್ವರ ಗಂಡ ಪ್ರತಾಪಮಾರ್ತಾಂಡ ಸಾಹಸೋತ್ತುಂಗ ಶ್ರೀಮತಿಭುವನಮ
೧೫. ಲ್ಲದೇವಪಾದಾಬ್ಧ ಭ್ರಂಗನಾಮಾವಳಿ ವಿರಾಜಿತರಪ್ಪ ಶ್ರೀಮನ್ಮಹಾಮಂಡಳೀಶ್ವರಂತೈಲ
೧೬. ಪ ದೇವರು ಪಾನುಂಗಲ್ಲಯ್ನೂಱುಮನುಭಯ ಸಾಮ್ಯಾದಿ ರಾಜ್ಯಂಗೆಯ್ಯುತ್ತಮಿರೆ ॥
೧೭. ॥ ಗೆಜ್ಜೆಕುಳಕಮಳಭಾಸ್ಕರ ಗೆಜ್ಜೆಕುಳಾನ್ವಯದೊಳೆಸೆವದೀಪಕ ಮತ್ತಂ ಗೆಜ್ಜೆಕುಳ
೧೮. ಕಳಸಪಲ್ಲವ ಗೆಜ್ಜೆಕುಳಾವಳಯ ಕೀರ್ತಿಗೊಪ್ಪಂ ಬೊಪ್ಪಂ ॥ ಯಿತ್ತರ್ದೆರ್ಗೆದಡೆಯೆನ್ದಂ
೧೯. ಮತ್ತೆ ಕೆಯೋಮನಡದಸುಗೆಬೊಪ್ಪಣ ದಿಷ್ಟತ್ತಿಲ್ಲೆಂದೆಡೆಮೊಡನೆಯಿತ್ತಣನಾದಿ
೨೦. ತ್ಯದೇವನಿತ್ತಣ ದೆಸೆಯೊಳು ॥ ಸಕ ವರ್ಷ ೧೦೨೬ನೆಯ ಸುಭಾನುಸಂವತ್ಸರದ ಕಾರ್ತ್ತಿ
೨೧. ಕ ಸು ೧೩ ಬ್ರಿಹವಾರದಂದು ಗೆಜ್ಜೆಯ ಬೊಪ್ಪಗಾಮಂಡಂ ಮೂಲಸ್ಥಾನದೆರಡುದೇವ
೨೨. ರ್ಗ್ಗೆ ನಿವೇದ್ಯಕಂಗಭೋಗಕ್ಕಂ ಕೆರೆಗಳ್ಗೆಲ್ಲಾಧರ್ಮಕ್ಕಂ ಗೊರವಗೆಱೆಯ ಕೆಳಗೆ ಕೊಟ್ಟಗ
೨೩. ದ್ದೆ ಮ ೧ ಯಿಂತಿ ಧರ್ಮಂ ಪ್ರತಿಪಾಳಿಸಿದವರು ಗಂಗೆ ವಾರಣಾಸಿ ಕುರುಕ್ಷೇತ್ರ
೨೪. ಶ್ರೀಪರ್ವತಂ ಮೊದಲಾಗೆ ಪುಣ್ಯತೀರ್ಥದೊಳು ಪನ್ನಿರ್ಚ್ಛಾಸಿರ ಬ್ರಾಹ್ಮಣರ್ಗ್ಗಾಹಾರ ಕಪಿಳೆ
೨೫. ದಾನ ಮಿತ್ತ ಫಳಮಕ್ಕುಂ ಯಿಂತೀ ಧರ್ಮಮನಳಿದನಾಪುಣ್ಯ ತೀರ್ಥ್ಥದೊಳು ಪನ್ನ
೨೬. ರ್ಚ್ಛಾಸಿರ ಬ್ರಹ್ಮರು ಮನ್ನನಿತು ಕಪಿಳೆಗಳ ಸ್ವಹಸ್ತದಿಂದಳಿದ ಪಾತಕನಕ್ಕು
೨೭. ಶ್ಲೋಕ॥ ಸ್ವದತ್ತ ಪರದತ್ತಂ ವಾಯೋಹರೇತಿ ವಸುನ್ಧರಾ ಷಷ್ಟಿರ್ವ್ವರ್ಷಸಹಸ್ರಾ
೨೮. ಣಿ ವಿಷ್ಟಾಯಂ ಜಾಯತೀಕ್ರಿಮಿ ॥ ಸ್ವಸ್ತಿ ಸಮಸ್ತಗುಣ ಸಂಪನ್ನನಪ್ಪ
೨೯. ಶ್ರೀಮದಾಲೂರ ಸೇನಬೋವ ರಾಜಣನ ಕಲ್ವೆಯ ಬರಪ ಮಂಗಳ ಮಹಾ ಶ್ರೀ ಶ್ರೀ

೩೦. ಹರಪುತ್ರಕ ಗಣನಾಯಕಂ ಸರಸ್ವತಿದೇವಿಯ ತೊತ್ತು ಹಿಟ್ಟಿನ ಯಕ್ಕಸಾಲಿ ಹೊಲೋ ಜನಕಲ್ಲೈಯಕ್ಕರಮಂ ಪೊಯ್ದ
೩೧. ಮಂಗಳ ಮಹಾ ಸುಭಂ ಜಯತು.



ಶಾಸನ ೧



ಶಾಸನ ೨







೧೩

ಗೆಜ್ಜೆಹಳ್ಳಿಯ ಕ್ರಿ.ಶ. ೧೧೭೮ರ ಶಾಸನ

ಡಾ. ನಳಿನಿ ವೆಂಕಟೇಶ್*

ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಒಂದು ಕುಗ್ರಾಮ ಗೆಜ್ಜೆಹಳ್ಳಿ. ಇದು ಹಾನಗಲ್‌ನಿಂದ ಅಕ್ಕಿಆಲೂರಿಗೆ ಬರುವ ಮಾರ್ಗಮಧ್ಯೆ ಬಲಗಡೆಗೆ ರಸ್ತೆಯಿಂದ ಒಂದು ಕಿ.ಮೀ. ಒಳಗಿದೆ. ಊರಿನ ಉತ್ತರಕ್ಕೆ ಈಶ್ವರ ದೇವಾಲಯವಿದ್ದು, ಆ ದೇವಾಲಯದ ಗರ್ಭಗೃಹದ ಹೊರಭಾಗದ ಎಡಗೆಡಯಲ್ಲಿ ಈ ಶಾಸನವಿದೆ. ಈ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲದ ವಾಸ್ತುರಚನಾ ಶೈಲಿಯನ್ನು ಹೊಂದಿಬೆ. ಹಿಂದೆ ಶಿಥಿಲವಾಗಿ, ಈಗ ಜೀರ್ಣೋದ್ಧಾರಗೊಂಡಿದೆ.

ಪ್ರಸ್ತುತ ಶಾಸನವು ಈಶ್ವರ ದೇವಾಲಯದಲ್ಲಿರುವ ಮೂರು ಶಾಸನಗಳಲ್ಲಿ ಒಂದಾಗಿದೆ. ಯಾವುದೋ ಕಾಲದಲ್ಲಿ ಶಾಸನದ ಮೇಲೆ ಸುಣ್ಣ ಬಳಿದಿರುವುದರಿಂದ, ಅಲ್ಲಲ್ಲಿ ಅಕ್ಷರಗಳು ಸ್ಪಷ್ಟವಾಗಿ ಕಾಣಿಸುವುದಿಲ್ಲ. ಶಾಸನದ ಎಡಭಾಗ ಹಾಳಾಗಿದ್ದು ಪ್ರತಿ ಸಾಲಿನಲ್ಲೂ ಸುಮಾರು ೧೦–೧೨ ಅಕ್ಷರಗಳು ನಷ್ಟವಾಗಿದೆ. ಈ ಕಾರಣದಿಂದ ಶಾಸನದ ಸಂಪೂರ್ಣ ಪಾಠ ಲಭ್ಯವಿಲ್ಲ. ಶಾಸನವು ದೀರ್ಘವಾಗಿದ್ದು ೬೧ ಸಾಲುಗಳನ್ನು ಹೊಂದಿದೆ.

ಶಾಸನದಲ್ಲಿ ಅಕ್ಷರಗಳು ೧೨ನೇ ಶತಮಾನದ ಕನ್ನಡ ಅಕ್ಷರ ಸ್ವರೂಪವನ್ನು ಹೊಂದಿದೆ. ಬಹಳ ಆಳವಾಗಿ ಕೆತ್ತಿಲ್ಲ. ರಳದ ಪ್ರಯೋಗ ಆಗಿಲ್ಲ. ಶಕಟರೇಫದ ಬಳಕೆಯಾಗಿದೆ. ಅನೇಕ ಕಡೆಗಳಲ್ಲಿ ರೇಫಯುಕ್ತ ಸಜಾತೀಯದ್ವಿತ್ವವನ್ನು ಬಳಸಲಾಗಿದೆ. ಸಂಸ್ಕೃತ ಪದಗಳ ಬಳಕೆ ಕಡಿಮೆಯಿದೆ.

ಶಾಸನದ ಕಾಲ : ಶಾಸನದ ೫೮ನೆಯ ಸಾಲಿನಲ್ಲಿ ಸಕವರ್ಷದ ಉಲ್ಲೇಖ ಬಂದಿದೆ. ೧೧೦೦ನೆಯ ಹೇಮಳಂಬಿ ಸಂವತ್ಸರದ...ಸೋಮಗ್ರಹಣ ವ್ಯತೀಪಾತ ಸಂಕ್ರಮಣ ಎಂದಿದೆ. ಇಲ್ಲಿ ಮಾಸದ (ತಿಂಗಳ) ಉಲ್ಲೇಖ ಅಳಿಸಿಹೋಗಿದೆ. ಇದರ ಕಾಲವು ಕ್ರಿ.ಶ. ಮಾರ್ಚ್ ೫, ೧೧೭೮ರ ಭಾನುವಾರ ಸಮನಾಗುತ್ತದೆ. ಅಂದು ಚಂದ್ರಗ್ರಹಣವಿತ್ತು. ಆದರೆ ಸಂಕ್ರಮಣವಿರಲಿಲ್ಲ.

ಶಾಸನದ ಆರಂಭದಲ್ಲಿ ಯಾವುದೇ ಶ್ಲೋಕ ಅಥವಾ ಪ್ರಾರ್ಥನಾ ಪದ್ಯವಿಲ್ಲ. ಶಾಸನದ ಆರಂಭದಲ್ಲಿ ಸಂಕಮದೇವನ ಉಲ್ಲೇಖ ಬಂದಿದೆ. ಆತನ ಅನೇಕ ವಿಶೇಷಣಗಳನ್ನು ಬಳಸಲಾಗಿದೆ. ಸಂಕವರ್ಮನು ತನ್ನ ತಂದೆಯಾದ ಬಿಜ್ಜಳನನ್ನು ಮಾತ್ರ ನೆನೆದಿದ್ದಾನೆ. ಹಾನಗಲ್ಲಿನ ಕದಂಬರ ರಾಜನಾದ ಕೀರ್ತಿದೇವನು ಮಾಂಡಳಿಕನಾಗಿದ್ದನು.

ಪಾರಂಪರಿಕವಾಗಿ ಹಾನಗಲ್ ಕದಂಬರ ಬಿರುದುಗಳಾದ ಬನವಾಸಿ ಪುರವರೇಶ್ವರ, ಅಷ್ಟಾದಶಾಶ್ವಮೇಧ ದೀಕ್ಷಾದೀಕ್ಷಿತ, ಪೆರ್ಮ್ಮಟ್ಟಿ ತೂರ್ಯ್ಯ ನಿರ್ಘೋಷಣ ಮುಂತಾದುವನ್ನು ಬಳಸಲಾಗಿದೆ. ಶಾಂತಿವರ್ಮನನ್ನು ನೆನೆದಿದ್ದು, ತೈಲಪನ ನಂತರ ಅವನ ಮಗ ಕೀರ್ತಿದೇವ ಅಥವಾ ಕೀರ್ತಿಭೂಪಾಳ ಎಂಬುವನನ್ನು ಉಲ್ಲೇಖಿಸಿದೆ. ಇವನ ಕೈಕೆಳಗೆ ಸಂಣಯ ತಂತ್ರಪಾಳನ ಮಗ ಮಲ್ಲರಸ ತಂತ್ರಾಧೀಶ ಎಂಬುವವನಿದ್ದನು. ಇವರಲ್ಲಿ ಸಂಣಯ ತಂತ್ರಪಾಳನನ್ನು ಕೀರ್ತಿಗ ದೇವನ ರಾಜ್ಯವನ್ನು ವರಾಹಾವತಾರ ರೂಪಿನಿಂದ ರಕ್ಷಿಸಿದಂತೆ ಹೇಳಿದೆ.

ಮಲ್ಲರಸ ತಂತ್ರಪಾಳನ ಕಾಲದಲ್ಲಿ ವಾಮಕೀರ್ತಿ ಮುನಿ ಎಂಬ ಮುನಿಯಿದ್ದನು. ಇವನು ಲಾಕುಳ ಶೈವಪಂಥದ ಗುರುವಾಗಿದ್ದನು. ಈತನು ಅನೇಕರಿಗೆ ಕಾಳಾಮುಖ ದೀಕ್ಷೆಯನ್ನು ಕೊಟ್ಟಂತೆ ಉಲ್ಲೇಖವಿದೆ. ಈತನಿಗೆ ಶಿಷ್ಯನೊಬ್ಬನಿದ್ದಂತೆ ತಿಳಿಯುತ್ತದೆ. ಈ ಶಿಷ್ಯನ ವರ್ಣನೆ ಬಂದಿದ್ದು, ವಿವರಗಳು ಹಾಳಾಗಿವೆ.

ಮೇಲೆ ಉಲ್ಲೇಖಿಸಿರುವ ಮಲ್ಲರಸನು ತ್ರೈತೀಶ್ವರ ದೇವರ ಮಾಟಕೂಟ ಪ್ರಸಾದಕ್ಕೆ ಮತ್ತು ತಪೋಧನರ ಆಹಾರದಾನಕ್ಕೆ ದಾನ ನೀಡಿದಂತೆ ತಿಳಿಯುತ್ತದೆ. ಶಾಸನವು ಹಾಳಾಗಿರುವುದರಿಂದ ದಾನ ಕೊಟ್ಟ ವಿವರಗಳಾಗಲೀ, ದಾನ ಪಡೆದ ವ್ಯಕ್ತಿಯ ವಿವರಗಳಾಗಲೀ ತಿಳಿಯುವುದಿಲ್ಲ. ಶಾಸನದಲ್ಲಿ 'ಜಿನಧರ್ಮ್ಮಾದಿ ಸಂರಕ್ಷಕ'ನೆಂದು ಕರೆಯಲಾಗಿದೆ.

ತಂತ್ರಪಾಳ ಮಲ್ಲರಸನಿಗೆ ಜೈನಧರ್ಮದ ಬಗೆಗೆ (೫ನೇ ಸಾಲು) ಒಲವು ಇತ್ತೇ ಎಂಬ ಅನುಮಾನವಿದೆ.

* # ೧೫, ಮನಸ್ವಿನಿ, ಸ್ನೇಹ ಕಾಲೋನಿ, ಚಿಕ್ಕಲ್ಲಸಂದ್ರ, ಬೆಂಗಳೂರು–೫೬೦೦೬೧.

ತೈತೇಶ್ವರ ದೇವ ಮಾಟಕೂಟ ಪ್ರಸಾದಕ್ಕಾಗಿ ದಾನ ಕೊಟ್ಟ ಉಲ್ಲೇಖ.

ದಾನವನ್ನು ನಡೆಸುವ ಜವಾಬ್ದಾರಿಯನ್ನು ರಾಜ್ಯಾಧ್ಯಕ್ಷ ಹೆಗ್ಗಡೆ ಮಾಚಯ್ಯನಿಗೆ ವಹಿಸಿರುವ ಉಲ್ಲೇಖ.

ಈ ಶಾಸನದ ಪಕ್ಕದಲ್ಲಿಯೇ ಇನ್ನೂ ಎರಡು ಶಾಸನಗಳಿವೆ. ಈ ಎರಡೂ ಶಾಸನಗಳೂ ಶಕ ೧೦೨೬ಕ್ಕೆ ಅಂದರೆ ಕ್ರಿ.ಶ. ೧೧೦೪ಕ್ಕೆ ಸೇರಿವೆ. ಇದರಲ್ಲಿ ಹಾನಗಲ್ ಕದಂಬ ವಂಶಕ್ಕೆ ಸೇರಿದ ತೈಲಪದೇವನ ಉಲ್ಲೇಖ ಬಂದಿದೆ. ಗೆಜ್ಜೆಯ ಬೊಪ್ಪಣನೆಂಬುವನು ಈ ದೇವಾಲಯದ ಬಳಿ ಒಂದು ಊರನ್ನು ನಿರ್ಮಿಸಿ ಅದಕ್ಕೆ ಗೆಜ್ಜೆಹಳ್ಳಿ ಎಂಬ ಹೆಸರನ್ನು ಕೊಟ್ಟಂತೆ ತಿಳಿಯುತ್ತದೆ. ಹೀಗಾಗಿ ಮಲ್ಲರಸನಿಗಿಂತ ಮೊದಲೇ ಈ ದೇವಾಲಯವಿದ್ದಿತು. ಮಲ್ಲರಸ ತಂತ್ರಪಾಳನು ಅದಕ್ಕೆ ದಾನವನ್ನು ಕೊಟ್ಟಿದ್ದಾನೆ.

ಶಾಸನದ ಪಾಠ

೧. . . . . ನ . ತೈಲಶದೀಶಂ ಮನೋರಾಗ ಕಯಿ . ಮಿಗಲಿಕ ಮತ್ತ ವ ಮ .
೨. . . . . ಕಲೆಸದಿರ್ಪ್ಪ . . ಕುಂತಳದಿಶವಲಿಯಂ ಸಾಲತರಂ ವಿಶೇಶ . .
೩. . . ಶದಿಂನೆಗಿಹ ದೇವತಾಲೋಲದಿಂ ದಿವ್ಯ ನದೀ ಪ್ರಕರಗಳಿಂದ ವಿಧಾರಣಿಗೆ ಯ್ದೆತ . . . . .
೪. . . ಮಂಡಳಂ "ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪ್ರಿಥ್ವೀ ವಲ್ಲಭಂ ಮಹಾ
೫. . ರ ಪುರವರಾಧೀಶ್ವರಂ ಸುವರ್ನ ವ್ರಿಶಭಧ್ವಜಂ ಡಮರುಗ ತೂರ್ಯ್ಯ ನಿ .
೬. ಕ್ಷಣಂ ಕಮಳ ಮಾರ್ತಾಂಡ ಕದನ ಪ್ರಚಂಡ ಮಾನ ಕನಕಾಚಳ ಸುಭಟರಾದಿತ್ಯ
೭. ಸರಣಾಗತ ವಜ್ರಪಂಜರ, ಪ್ರತಾಪ ಲಂಕೇಸ್ವರಂ ಪರನಾರೀ ಸಹೋದರಂ ಸನಿವಾರ ಸಿದ್ಧಿ
೮. ವೈರೀಭ ಕಣ್ಠೀರ ವ ನಿಸ್ಸಂಕಮಲ್ಲ ನ ಸಾಹಸಾನ್ವಯ ಮೆಂಕೆಡೆ ॥ ಜೋ .
೯. . ಳ ಸೂನ್ ವಿದ್ಯಾಗಮ ಶಾಸ್ತ್ರ. ದೋರ್ವ್ವಳಯುತಂ ಕಲಿಬಿಜ್ಜಲದೇವ ಬಿಜ್ಜ . .
೧೦. ಮತ ಸಾನುರಾಗದಿಂ ನೆಯ್ದೆ ಬಣ್ಣಿಪುದು ಭೂಭುವನಂ ॥ ಕವೀಂದ್ರ .
೧೧. ಪಾಳನನಾಳ್ವೆಸಗೆಸಿದೊಂದು ನೇಪಾಳನ ಬೇರಂ ಕಿತ್ತು ನಭಕೆತ್ತಿ ಕಳಿಂಗನ ತೋ . . . .
೧೨. ಱಸಿ ಗೂರ್ಜ್ಜರನ ತಜಿದೊಡ್ಡಿ ಬೆಂಗಿ ಭೂಪಾಳನನಿಕ್ಕಿ ಮೆಟ್ಟಿದನು ಶಂಕ ಮಹಿ . . . .
೧೩. . . ವಿಗತ ಪಂಚ ಮಹಾ ಸಬ್ದ ಮಹಾ ಮಂಡಲೇಸ್ವರಂ ಬನವಾಸಿ ಪುರವರ . . . . . .
೧೪. ನಿ ಲಬ್ಧ ವರಪ್ರಸಾದಂ ಮೃಗಮದಾಮೋಹ ತ್ರೈಶ್ಷಷ್ಟ್ಯಸಂಭವಂ ಚತುರಾಸೀತಿ . . . .
೧೫. ಚತುರ್ಭುಜ ಜಗದ್ವಿತಾ ದ್ವಾದಶಾಸ್ವಮೇಧ ದೀಕ್ಷಾದೀಕ್ಷಿತ ಹಿಮವ
೧೬. ವಿದಿತಸ್ಪಟಿಕ ಶಿಲಾಸ್ತಂಭ ಬದ್ದ ಮದ ಗಜೇಂದ್ರ ಮಹಾಮಹಿಮಾಭಿರಾಮಂ . . . . .
೧೭. . ರವರ್ಮ್ಮ ಮಹಮಹಿಪಾಳ ಕುಳ ಭೂಷಣಂ ಪೆರ್ಮ್ಮಟ್ಟಿ ತೂರ್ಯ್ಯ ನಿರ್ಗ್ಘೋ . . .
೧೮. . . ಮಾ ನ ಮಾನೋತ್ತುಂಗ ಸಿಂಹಲಾಂಛನಂ ದತ್ತಾರ್ತಿ ಕಾಂಚನ ಸಮಂಜಯ . . . . .
೧೯. ಕ್ರ್ಕೊಳ್ವರಗಂಡ ಪ್ರತಾಪ ಮಾರ್ತ್ತಂಡ ಮಂಡಳಿಕ ಗಂಡ ಬಂಗಾಱಂ ನಿತ್ಯಾಬಿಳ ನಾಮಾವಳಿ . . . . .
೨೦. ಅನ್ವಯಮೆಂತೆನೆ ॥ ನಿಯತಂ ಪಾಂಡ್ಯಪಳತ್ತಂ ಸುಭಗಿ ಲಕ್ಷ್ಮಣ ಮಂಡಹ . . . .
೨೧. ವನತನೆಯ ಲವಂ ಹೊಯ್ಸಣಂ ಕುನ್ನಜ್ಜಯಕಾಂತಂ ಚೆನ್ನಬೊಪ್ಪ . . . . . .
೨೨. ಭಯದೂರಂ ಕಾಯ್ಪಿನಿಂದಂ ತಗ್ದನಿಬರಂ ಸಾಂತ ಭೂಮಂಡಳೇಶಂ ॥ . . . . . .
೨೩. ಭೂಭುಜ ತೈಲಹಂಗೆ ಮಿಕ್ಕುಂ ತನುರೂಪತಾನೆನಿಸಿದೊಪ್ಪುವ ಮಮ್ಮನೊಳ . . . . . .
೨೪. . . ಡ ಭಾನ್ವಯ ವೆಪ್ಪತ್ರೇಳುವಂ ಕುಂತಳದೇಶ ಬಾ ? ಸ್ವೆನಲು ತಾಳ್ದಿದ ಕೀರ್ತ್ತಿಗ ಭೂ . . . . . .
೨೫. . ದ್ವಿಶದ್ಭಳ ಪ್ರದ್ವಂಶ ನಿನೊಳು ಸಮಂತನಲಾನಾರ್ಪುವೇ ಕೀರ್ತ್ತಿ ದೇ . . . . .
೨೬. ವೆ ವಾರಿಧಿ ತೀರದಲೆಗು, ಪೊಗಳೊಳ್ ಕಾಂತರದೊಳು ನಿನ್ನ ಪಾವನ ಪಾ

೨೭. . . . ಪಾಳಕರು ॥ ಗಜಬಳ ಹಯಬಳ ಮೆಯ್ತರೆ ನಿಜ ಭುಜ ದಳದಿಂದ ಮದರಜಿ . . . . . .
೨೮. . ಷ್ಪದಿ ಜಯ ವಧೂರಮಣನೆಸೆವ ಕೀರ್ತಿ ನಿಪಾಳ ॥ ಜಗದೊಬ್ಬ ಗಂಡನೆಂದು ಜ. ಬಿ . . . . .
೨೯. ಬಗೆಯದರಿನ್ರಿ ಪರಗಂಡ ಮಿಗಿಲೆನಿಸುವ ಭೂಭುಜರ ಗಂಡ ಕೀರ್ತಿಗ ದೇವ . . . . . .
೩೦. ಧಾತ್ರಿಯನುಮಾದಿ ವರಾಹನ ರೂಪಿನಿಂದ ಮುನ್ನ ಸಜೆಯಾಗಿ ತ. ದೆ . . . .
೩೧. ರಾಜ್ಯವಂ ಹೆಸರಜೆಯಲ್ಕೆ ಬಾರದುದ ಮಾಡಿದ ಮತ್ತ ಪುನಃ . . . .
೩೨. . . ನ್ಮೀ ಸಂಣ್ಣೆಯ ತಂತ್ರಪಾಳಕ ॥ ರಾವಣ ಕೋಟಿಯಂ ತುಜಜಕಾವ್ಯ . . . .
೩೩. . . ದಹನಿಲು . ಮಾಳ್ಕೆಯೆ ಸಣ್ಣೆಯ ತಂತ್ರಹಾಳ ವಾಕ್ಕು ಕ್ರೀ ವಾರತ . . . .
೩೪. . . ಣ ಕರಂ ಭೂ . . . ರಾಮ ಲಕ್ಷ್ಮೀಧರರೆಂಬ ನ ವಾಂತವೋ . . . .
೩೫. . . ಳಂಬಮೆಂತೆಂದರೆ ಕಾದಂಬಾನ್ವಯ ರುದ್ರನ ಪಡೆ . .
೩೬. ಲಕ್ಷ್ಮಿಯೊಳು ನಿಲಿದೋರ್ದ್ದಂಡ ಚಂಡಾಸೆಯಿಂದಾದಂ . . ದ್ದೊಜಿ . . .
೩೭. . . . ಮಾಡಿನಿಂ ವೇದೋಕುತಾಯಂ ತಾಳ್ದು ಮಲ್ಲರಸ ತಂತ್ರಾಧೀಶ
೩೮. . . ತೀಬ್ರ ಚಂಡಾಸಿಯಿಂದ ಸ್ಥಿರರಾಜ್ಯಂ ಕೀರ್ತ್ತಿ ಭೂ ಬ್ರತಿ . .
೩೯. ರ್ಯ್ಯ ನೀತಿವರ್ಯ್ಯಾವೆಸೆವೀ ಧೈರ್ಯ್ಯ ನಾ ಚಾರ್ಯ . . ದನಿ . . ನ
೪೦. ಗುರು ಸೈದ್ಧಾಂತಿಕ ವಾಮಕೀರ್ತಿ ಮುನಿನಾಥ . ಲಾಕುಳಾಂಭೊ
೪೧. . . ಶ ಪಾದಾರ್ಚಿತಮವರ ಕಾಳಾಮುಖ ದೀಕ್ಷೆಯಂ ಪಲಗ್ಗೆ ಪತ್ಯಾಸದಿಂ . .
೪೨. . ಪ್ರೋದ್ಧಾರ . ವೆಯರ ॥ ಅಂತಾ ಮುನಿರಾಜ ವಲ್ಲಭರ ಶಿಷ್ಯ ರ . ತ . . .
೪೩. ಪ್ರತಿಮ ಶಿಷ್ಯ ತಾನೆ ತೇಜೋನಿಧಿಂ ಸು . . . ಮನೀರಾಜ ನಂದನ ಕರ
೪೪. ದಿವ್ಯ ಬ್ರಜಕ್ಕೆ ಪದ ಪಿಂಡಾತ್ತೀತ್ತ ಸತ್ಕೀರ್ತಿಯಂ ಕರೆ ನಿ ರಾ . [೦] ತಳದಿದ್ದವಾ . . .
೪೫. . . . ವಿಶೇಷ ಕವಿರಾಕ್ರಿತಿಯೊಳೆ ಸುಚರಿತ್ರ ವ್ರಿತ್ತಿಯೊ
೪೬. ಳ ಸಕಳಾರ್ತ್ಥ ಸಾಸ್ತ್ರದೊಳ್ ಸಾಗರದಿಂದವೆತ್ತಮಿಗಿಲೊಪ್ಪುವ ಕೀರ್ತ್ತಿಯಪೆ . . .
೪೭. . . ತಾನ . . ಸ್ವರಾರ್ಯ್ಯನ್ ॥ . ಮರ್ದ್ದನ್ತ ಸೊನೆಯಂ ಸುರೆಯ . . .
೪೮. . . ಪುವಂ ಕಜೆಯೆರಂಚ . . . ಕಯುರಂಭ ಸಂಭ್ರತ ಸಮನಿಸೆ
೪೯. . . . ವೆರಪುರಕ್ಕೆ ತಾನೆನಿಸಿ ಇಳಗೆ ನಾಡೆಯುಂ ಪಾಂಥಿನೀಪುರ ॥ ಒಳಜ ಬ್ರಾ
೫೦. . . ವಿದ್ಯಾವಿಳಯ ಲಕ್ಷ್ಮಿಶ . . ಧ್ಭವ ಭವ ಜಿನಧರ್ಮ್ಮಾದಿ ಸಂರಕ್ಷ .
೫೧. . . . ಕೇವಳ ಬೋವ . . ದೊಳ್ ಚೆಲ್ವನಾಳ್ದಿ ವಿಳಸ . . .
೫೨. . . . ಭವ್ಯರ ॥ ವಚನ ॥ ಯಿತಬಿಳ ನಾಮಾವಳಿ ವಿರಾಜಿ . .
೫೩. . . ತ್ರ ಕಾಳ ಮಲ್ಲರಸ . . . ಧರ್ಮ್ಮಾಧರ್ಮ್ಮ ಪ್ರವ್ರಿದ್ಧಿಯಂ ವಿಜಯ . .
೫೪. . . ಜೈನಧೀಶ್ವರನು ತೈತೀಶ್ವರ ದೇವರ ಮಾಟ ಕೂಟ ಪ್ರಾಸಾದಕ್ಕಂ ತಪೋಧನರ
೫೫. . . . . . ಸಂಕ್ರಮಣದ ಪೂಜೆ ಪುನಸ್ಕಾರ
೫೬. . . . . ದೀಪಕನು ಶ್ರೀಮತು ರಾಜ್ಯಾಧ್ಯಕ್ಷ ಹೆಗ್ಗಡೆ ಮಾಚಯ್ಯ
೫೭. . . . . . ಬಿನ್ನಪಂಗೆಯ್ದುಲಾ ಬಿಂನಪಮಂ ಸ್ವಾದಿತ್ತದೊಳ . . .
೫೮. ಬಾಡವತ್ತಿಂ ಬಾಳಂ ಸಕವರ್ಷ ೧೧೦೦ ನೆಯ ಹೇಮಳಂಬಿ ಸಂ
೫೯. . . . ವಾರ ಸೋಮಗ್ರಹಣ ವ್ಯತೀಪಾತ ಸಂಕ್ರಮಣದಲು ಶ್ರೀ ತೈತೀಸ್ವರ
೬೦. ಪಣ್ಡಿತದೇವರ ಕಾಲಂ ಕರ್ಚ್ಚಿ ಧಾರಾಪೂರ್ವಕವಾಗಿ

೧೪

ಕಂಚಿಕೆರೆಯಲ್ಲಿ ದೊರೆತ ಉಚ್ಚಂಗಿ ಪಾಂಡ್ಯರ ಅಪ್ರಕಟಿತ ಶಾಸನ

ರಾಘವೇಂದ್ರಚಾರಿ ಕೆ.ಎಂ.*

ಹರಪನಹಳ್ಳಿ ತಾಲೂಕು ಕಂಚಿಕೆರೆ ಗ್ರಾಮದ ಹೊರವಲಯದಲ್ಲಿರುವ ಸಿದ್ದೇಶ್ವರ ದೇವಾಲಯದ ಬಲಭಾಗದಲ್ಲಿ ಶಾಸನವೊಂದಿದ್ದು (ಇದರ ಅಳತೆ "೨೭X೪೦" ಎತ್ತರ) ಲಿಪಿಯು ಬಹಳ ಸುಂದರವಾಗಿದೆ. ಇದು ಉಚ್ಚಂಗಿ ಪಾಂಡ್ಯರ ಅವಧಿಯ ದಾನ ಶಾಸನವಾಗಿದೆ. ನೊಳಂಬರ ನಂತರ ಬಳ್ಳಾರಿ ಪ್ರದೇಶದಲ್ಲಿ ಪ್ರಬಲರಾಗಿ ಆಳ್ವಿಕೆ ನಡೆಸಿದ ಇವರು ಉಚ್ಚಂಗಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕಲ್ಯಾಣ ಚಾಳುಕ್ಯರೊಡನೆ ಮತ್ತು ಗುತ್ತರೊಡನೆ ಸಂಬಂಧ ಬೆಳೆಸಿಕೊಂಡು ತಮ್ಮ ರಾಜ್ಯದ ಎಲ್ಲೆಯನ್ನು ವಿಸ್ತರಿಸಿಕೊಂಡು ಆಳ್ವಿಕೆ ನಡೆಸಿದ ಅರಸರಾಗಿದ್ದಾರೆ. ಈ ಶಾಸನದ ಆರಂಭದ ಭಾಗ ಮುರಿದು ಹೋಗಿದ್ದು, ಶಾಸನದ ಅರ್ಧಭಾಗ ದೊರೆತಿದೆ. ಶಾಸನದಲ್ಲಿ ಉಲ್ಲೇಖಿಸಿದ ವರ್ಷ ವಿಕ್ರಮ ವರ್ಷದ ೫೦ನೆಯ ವಿಶ್ವಾಸವಸು ಸಂವತ್ಸರವೆಂದಿದ್ದು ಇದು ಕ್ರಿ.ಶ. ೧೧೨೫ಕ್ಕೆ ಸೇರಿದ ಶಾಸನವಾಗಿದೆ. ಈ ಶಾಸನವು ಒಂದು ಸುದೀರ್ಘ ಶಾಸನವಾಗಿದ್ದು ಅದರ ಉತ್ತರಾರ್ಧ ಮಾತ್ರ ದೊರೆತಿದೆ ಪೂರ್ವಾರ್ಧ ಲಭ್ಯವಾಗಿಲ್ಲ.

ಶಾಸನದಲ್ಲಿ ಉಲ್ಲೇಖಿತನಾದ ಮಂಗಳಾದಿನು ಕಂಚಿಕೆರೆ ಮಹಾದೇವರ್ಗೆ ಧೂಪ ನೈವೇದ್ಯಕ್ಕೆ ನಂದಾದೀವಿಗೆಗೆ ಮತ್ತು ಮಠದಲ್ಲಿ ಓದುವ ವಿದ್ಯಾರ್ಥಿಗಳಿಗೆ ಭೋಜನಕ್ಕೆ ಬ್ರಾಹ್ಮಣರ ಭೋಜನಕ್ಕೆ ದಾನ ನೀಡಿದ ವಿವರವಿದೆ. ಶಾಸನದಲ್ಲಿ ಬರುವ ಅಕ್ಕಸಾಲೆ ಗಟ್ಟಜಿಯನ ಕೆರೆ ಹದುಮಣ ಮಠ ಕಲ್ಲೋಜನ ಕೆರೆಯ ಹಲವು ಕಡೆ ದೇವಾಲಯಕ್ಕೆ ದಾನ ನೀಡಿದ್ದಾರೆ.

ಮಲ್ಲ ವಿಜಯ ಪಾಂಡ್ಯರ ಆಳ್ವಿಕೆಯಲ್ಲಿ ಅವನ ಮಹಾ ಪ್ರಧಾನ ಕುಮಾರ ವಿಜಯ ಹೆಂಮ್ಮಾಡಿ ದಂಡನಾಯಕರ ರಾಣಿಯು ಶ್ರೀ ಕೈಲಾಸ ದೇವರಿಗೆ ಮತ್ತು ಚಂದ್ರಶೇಖರ ದೇವಾಲಯಕ್ಕೆ ದಾನವನ್ನು ನೀಡಿದ ವಿಷಯವಿದೆ.

ಈ ಶಾಸನದಲ್ಲಿ ವಿಜಯ ಹೆಂಮ್ಮಾಡಿ ದಂಡನಾಯಕ ರಿಗೆ ಕುಮಾರ ಎಂದು ಕರೆದಿದ್ದು ವಿಜಯ ಹೆಂಮ್ಮಾಡಿಯು ತ್ರಿಭುವನಮಲ್ಲ ವಿಜಯ ಪಾಂಡ್ಯರಸನ ಮಗನಿರಬಹುದು. ಸ್ಥಳೀಯ ವೃತ್ತಿಕಾರ ಆಳು ಬೀರಭಟರು ಶ್ರೀ ಕೈಲಾಸ ದೇವರಂಗಭೋಗಕ್ಕೆ ಗದ್ದೆಯನ್ನು ದಾನ ಬಿಡುತ್ತಾನೆ, ಒಟ್ಟಾರೆ ಇದು ದೇವಾಲಯಗಳಿಗೆ ದಾನಕೊಟ್ಟ ವಿವರವನ್ನು ನೀಡುವ ಶಾಸನವಾಗಿದೆ.

೧. . . . .
೨. . . ತತ್ಪಾದೋಪ ಪದ್ಮಜೀವಿ
೩. . . . ನರೇಂದ್ರ ಚೂಡಾಮಣಿ ಮಂಗಳಾ . . .
೪. . . . . . ನಿಕ್ಷರ ಮಯನರ್ತಿ ಸಂನಿಹಿತನೆ ರಾಯ
೫. . ಕ . ರೊದಿ ಪತಾಕಂ . . . ಣ್ನಪಂ ಬಣ್ನಿಪಂ ॥ಕಂ॥ ಎನೆನೆಗಲ್ದ. ತಾ. ರೊಂದು
೬. ಯಾಂಬುದಿರಾಣಿ ವಿದ್ವಜನ, ಸಭೆಯೊಳು ವಿಭುವೆಸೆದಿರ್ಪ ಆನಂಬಯಾಳ್ವ ವಿಭು . .
೭. ಮೇಗವಾದಂ ದಾನ ನಿಧಿನಂದನೆ ಲಕ್ಷೀನಿಳಯಂ ಬುಧಜನ ಸುತ ಧರೆಯಾಳ್ದ . ಧರಿತ್ರಿಯೊಳು ಮೊಂಗಿನ.
೮. ಸಲು ವಂಧ್ಯೆದೊಳು ಮೆಚಿ . . . . ಕು.ದಲು ಸರ ಸತಿಗೆಧರೆಯೊಳ್‌ನತಿಯಿಂ ತಾಳ್ದಿ (ಳ್ದ) ದ ನರೇಂದ್ರ ಚೂ
೯. . . . ಮ ಯಿಂದ್ರ ಚೂಡಾಮಣಿ ಮಂಗರಾಧಿರಾಜ . . . ದ ಶ್ರೀ . . . . ವರ್ಗೆತಾ ದೇವಾಲಯವಂಮ . . . .
೧೦. ವಿಕ್ರಮ ವರ್ಷದ ಯ್ವತ್ತನೆಯ ವಿಶ್ವಾಸವನು ಸಂವತ್ಸರದಂದು ಬಹುಳ ತ್ರಯೋದಶಿ ಬೃಹಸ್ಪತಿವಾರ . . .
೧೧. ಸಂಕ್ರಾನ್ತಿಯಂದು . . . ದೂಪನೈವೇದ್ಯಕ್ಕುಂ ನಂದಾದೀವಿಗೆಗೆ ದೇ. . ಮಾಡಿಕೊಟ.
೧೨. ದ.ಕಂ. ಸ್ಪುಟಿಕ ಜೀರ್ಣೋದ್ದಾರಕ್ಕಂ ಶರಿಕ ಮಂಕಿಳಿ ಸು.ಬ್ರಾಹ್ಮಣಾ. ದ್ಯ.ರ ಜೀವಿ. . . . ಮದಾ ತ್ರಿಕಾಲ . . .

* ಟೈಲ್ಸ್ ಮೇಸ್ತ್ರಿ, ೩ನೇ ಕ್ರಾಸ್, ಭಾರತ್ ಕಾಲೋನಿ, ದಾವಣಗೆರೆ-೫೭೭೦೦೩.

೧೩. ಯ್ಯು ತಳ ವಿತ್ತಿಯಲ್ಲಿ ತಂಮ್ಮ ವೃತ್ತಿಯೊಳಗಾದ, ವೃತ್ತಿಯ್ದೆ ಮತ್ತಮಾ ದೇವಾಲಯದ ಮಠದಲುವೇದ ಶಾಸ್ತ್ರ
೧೪. ಕಳ ನಾನಾದೇಶಿ ಬ್ರಾಹ್ಮಣ ವಿದ್ಯಾಗಳ್ಗೆ ಬೋಜನಾರ್ತ ಮಾಗ್ರಾಮದ ಹಿರಿಯಕೆರೆಯೊಳ ಗಣಿಶಾನ್ಯದಾ ಆದ ಕೆರೆಯ
೧೫. ಯಲು ಗದ್ದೆ ಮತ್ತರು . . . . ಪಶ್ಚಿಮೋತ್ತರ. ಪೂರ್ವದಿಶಾಭಾಗಲು ಬೆದ್ದಲೆ ಮತ್ತರು ಹನ್ನೊಂದು.
೧೬. ಇನ್ತಿನಿತುವಂ ಸಲುವ ಮಾನ್ಯದಾ ...... ಲಿಯ ಮಹಾದೇವರ್ಕ್ಕೆ ನೂರು ಗದ್ಯಾಣ ಹೊನ್ನೊಂ ಕೊಟ್ಟು . . . ಕೊ
೧೭. ರಿ . . . ಯಾಕೆರೆಯಲು . . . ಯಲು ಪುಟ್ಟಿದ ಪಲಪರಿದಲ್ಲಿಗೆ. ಕ್ಕ ವಿದ್ಯಾರ್ಥಿ ಬ್ರಾಹ್ಮಣಾರಿಗೆ ಬೋಜನ . . .
೧೮. . . . . . . ವೃತ್ತಿಯ . . . . . . ಹಿರಿಯ ಕೆರೆಯ ಕೆಳಗೆ ಹಿರಿಯತೊಂಟ ಕಂಮವಿನೂರ (ವ) ವ್ವತ್ತು ಕಂಮ.
೧೯. . . . ಕೆತೋಟ ಕಂಮ ವಿನೂರೈತ್ತು ಅಲ್ಲಿ ಬಡಗಣ ಹದುಮಣ ಮತ್ತ ಕೊ (ಕೆ) ಳಗೆ ತೊಂಟ ಸ್ಥಳ ಕಂಮವೆಂನ್ನೂರು . . . ಬಡಗಣ.
೨೦. ದ ಕೊಡಿಯಲು ಗದ್ದೆ ಮತ್ತರು . . . ಕಂಮ ವಿನ್ನೂರು ಅಕ್ಕಸಾಲೆ ಗಟ್ಟದ (ಕೆ) ಳಗೆ ಕಂಮ್ಮವೆಂಬರ್ತು . . . . .
೨೧. ಬಯಲಲೂವಾರ ಕಂ ವಯ್ವತ್ತು ಹಿರಿಯ ಕೋಡಿ . . . . ಕಂಮ ನಾಲ್ವತು, ಜಿಯನ ಕೆರೆಯ ತೆಂಕಣ . . .
೨೨. ವೃತ್ತಿಯ . . ಗದ್ದೆಯ ಕಂಮ ನಾಲ್ಕು . . . . ಯೊಳಗೆ ಗದ್ದೆ ಕಂಮ್ಮ ವಿನ್ನೂಪತ್ತು . . . ದಿ.
೨೩. ನೂ . . . . . ತೋಟ, ಳ ಗದ್ದೆ ಮತ್ತರು ೧೪ ಕಂಮ ತೊಂಟಸ್ಥಳ . . . ರು . . . ತೋಟಕ್ಕಂ ದೇವಾಲಯದ . . ವರ್ಗ ಮನೆಯ . .
೨೪. ತೆ . . . . . . ವೆನೂರು (ಮಿ) . . . ದಂಡನಾಯಕರು ಗೌರಿ ದೇವಿಗೆ ಹಿರಿಯ ಬಯಲಲೂರ ದೆಗದ್ದೆಯಂ ತೆಂಕಲು ಗದ್ದೆ ಕಂಮ
೨೫. ನೂ . . . . . . ತೋಟ ಸ್ಥಳ ಗದ್ದೆ . . . . . ೧೨ ಕಂಮ ೪೨೬ ಬೆದ್ದಲೆ ಮತ್ತರು ೧೧ ಕಂ . . . ದೇವಾಲಯದ ಷರ ವರ್ಗ್ಗ ಮನೆಯ
೨೬. ಕ . . . . . . ಯೊಳಗೆ ನೂರು ಕಂಮ ತೊಂಟ ಸ್ಥಳ . . . ರು . . . ತೋಟಕ್ಕಂ ದೇವಾಲಯದ . . ವರ್ಗ .
೨೭. . . . .
೨೮. . . . . . ನಮಂದ್ರ ಚೂಡಾಮಣಿ . . . . . . ಶ್ರೀಮತುರಾಯ ಪಾಂಡ್ಯ ದೇವರ ರತಿಯೊ . . . .
೨೯. . . . . ರವಾಗಿ . . . . . ಪಡೆ . . . . ಗಳಾಗಿ . . . ರ . . ರು ಮಿಲ್ಲಿಯ ಮ
೩೦. ಹಾಜನರುಂ . ದಿ . . . . . ಣರು . . ಪರಿಪು . . . ಲಯ . . . . . ಮ
೩೧. ದವಳಚಕ್ರ . . . . ನೊಳಲು ನೆಗಳ್ದ ರಾಜ್ಯ ಶ್ರೀಗೆ ತಾನೆಕ್ಕು ದಾಣ ವಿಳಾ . . ಗಾತ್ರೆಯಂ ನಿಜ ಬಂಜದ ದಂಡಂ ಜಯಶ್ರೀಯ ನೊಂದುವ ಕೈಗೆ ನಳಿತೋಳು ಬೆರ್ಚ್ಚಿಸಿದ
೩೨. ನೆಗಳ್ದ ಕೀರ್ತಿ . . . . ಪಂಡಿತ ಪಾಂಡ್ಯ ಭೂಪನೆ ಸದಂ ಭೂಪಾಳ ವಿದ್ಯಾದರಂ ॥ಕ॥ ತದನುಜಾತಂಸಿರಿ ನೆಲೆಗೊಂಡ
೩೩. . . ಹರ ಕೀರ್ತಿವಲಲಿ ಕುಡಿಗೊಂಡ ನೆಗಳ್ತ ಲೋಕಮೆಲ್ಲಮಂ ಪರತೋಳಗೊಂಡ ಹರತಿಯ . . ಸಿಕೊಂಡ . . . ಳತ್ತವಿನ ವೀರ ಪಾಂಡ್ಯ ಮಹೀಪಂಗೆಯಾವನೊಬೂ
೩೪. ತಳದೊಳು . . . ದಿರೆ ಪಾಂಡ್ಯನ ನೂರ್ಜಿತ . . . . . ಸಿ.ಮ. . . . . ಯ.ದ.ವ. . . ನೆಗೆಯ್ದ ವಿಜಯನನೂರ್ಜಿತ
೩೫. ವಾರದಿ ಮಧ್ಯೆದೊಳು ಕ. ತೆಲಿಪ . . ಗಜ ಶೈಲೆಚ ಒರುತಿ . . ವರೆ . . . . . ಗೊಂಡಹರ . . . ಕು ವಿಜಯ ಪಾ
೩೬. ನರೇಂದ್ರನ . . . . . ತಾಪಾ. ಭೂ.ದ್ರದೊಳುದ . . . ನೆಲ್ಲ ನಿದ್ದಳಿದೆ ವಿಗೆಯೊ ॥ ಕ॥
೩೭. . . . . ರಾಯ ವಿಜಯ ಪಾಂಡ್ಯ ಭೂಪಾಳಕನ ॥ ಸ್ವಸ್ತಿ ಸಮದಿಗತ ಪಂಚ ಮಹಾ ಶಬ್ದ ಶ್ರೀ ಮನ್ಮಹ ಮಂಡಳೇಶ್ವರ.
೩೮. ಕಾಂಚಿಪುರವರೇಶ್ವರ ಯದು ವಂಶಾಂಬರ ದ್ವಿಮಣಿ ಸುಭಟ ಚೂಡಾಮಣಿ ಮಹೇಂದ್ರ ಮಣಿ ಮಕುಟ ಕೋಟಿವಿಷಟಿತ ತೇಜ ವಿಜಯ
೩೯. ಕಂಕಣ ಲೀಲಾಮಾತ್ರಾದಿ . . ಸಪ್ತಕೊಂಕಣ ಕನಕನಗರಿ ಶಿಲಾ ತಳ ಸ್ಥಾಪಿತ ಪಾಠಿನ ಲಾಂಛನ ಜಯಸ್ತಂಭಿದೂರಿ ಕೃತರಾತಿ ವೀರಾವಷ್ಠ
೪೦. .ಗಾರ ಪಣ್ಣಿನ ನಿನಕ್ತ ಮೌಕ್ತಿಕ ಯುಕ್ತಾಯುಕ್ತಾನಿ ರತ್ನಾಕರ ಮುದ್ರಾಮುದಿತ ಬಾಂಡಾಗಾರ ಮಳಯಗಿರಿ ಚಂದನ ಮಧ್ಯದೇಶ ನಿವೇಶಿತ . .

೪೧. ತೌರಾದಿ ವೀರ ಮಂಡಳಿಕ ಭೂತ ವೇತಾಳ ಮಂಡಳಂ ಸ್ವಿಕೃತಾನೇಕರಿ ಪುನೃಪತಿ ಮಂಡಳಂ ಹೇಳಾಗ್ರಹೀತಾ ಹಿತಾಸಿತ ಓಳಶೈಳ ದುರ್ಗವಂದಿಕೃತ . . . ಶಂಕರ ನಾರಾಯಣ ಪಾಂಡ್ಯಕುಳ ಕಮಳ..

೪೨. . ರ್ತಂಡ ಪರಿಭೇದಿಗಂಡ ರಾಜನ ಜೋಳ ಮನೋಭಂಗಂ ಸವಸ್ತ ನಾಮಾದಿ ಪ್ರಶಸ್ತಿ ಸಹಿತಂ ಶ್ರೀಮನ್ಮಹ ಮಾಂಡಳೇಶ್ವರ . . . ಮಲ್ಲವಿಜಯ.

೪೩. ಪಾಂಡ್ಯ ದೇವರು ನೊಳಂಬವಾಡಿ ಮುವತ್ತಾ ರಾಸಿರಮನುಚ್ಚಂಗಿಯ ನೆಲೆವೀಡಿನೊಳು ದುಷ್ಟನಿಗ್ರಹ ಶಿಷ್ಟ ಪ್ರತಿಪಾಳನದಿಂ ಸಾಖ ಸಂಕಥಾವಿನೊದಂ ರಾ.

೪೪. ಜ್ಯಂತೆಯುತ್ತಮಿರೆ ತತ್ಪಾದೋಪ ಪದ್ಮಜೀವಿ ಶ್ರೀಮನ್ಮಹ ಪ್ರಧಾನ ಕುಮಾರ ವಿಜಯ ಹೆಂಮಾಡಿ ದಂಡ ನಾಯಕರು (ಕು) ಲದಲೊ . . ಕವದ್ಯ ಚರಿತ

೪೫. . . . . . ದರಿತ್ರಿಯೊ ದಿಗ್ವಳ ಯಾಳ ಯಾರಮ (ವ) ಸ್ಮದಿರದರಿ ಪುದತಿಸ್ವಸಿ ಸತ್ಯಕ್ತಿಯ ನಿಶ್ಚಳರುದ್ಯತೇಜ . . . . . ಕು. . ವಿಳಯಾ.

೪೬. . . . ಳ ರೊತಿಯ ಕಣನೊಳರ್ದ್ದ . . ನೊಳ್ಪಡೆದದ . . . . ರಳವೆ ಹ.ರ. ಮಾದಂ ದಂಡಾದಿನಾಥಂ. . . .ರುವೆರವಿದುಂ. ಪತಿಭಕ . . . . ತೆಗ್ಗವಾ . . . .ರಾ

೪೭. ನಡಿಗೆರ ಗಿರ್ದ್ದರ ಕರುಣದಿಂದ ಮ ಯೋಗಾಚಾರ ದೊಳು ತೊಡರ್ದರ್ ಚಾರಮಂ ಕಳದು ರಕ್ಷಸಿ ಸಜನ ಪಥದರಿ ತ್ರಿಯೊಳ್ವಾ

೪೮. . . . . . . ಪತಿಕೀರ್ತ್ತಿಯಂ ಆ ವಿಜಯ ಹೆಂಮಾಡಿ ದಂಡನಾಯಕರ ಲಕ್ಷ್ಮೀ. ನಳ್ವ

೪೯. ಕೈಯಲು ಶ್ರೀ ಕೈಲಾಸದೇವರಂಗ ಬೋಗ ನೈವೇದ್ಯಕ್ಕಂ, ಕೊಟ್ಟರಿದಾಪರಿಯಾಯದಲು ಕೊಟ್ಟ ತೋಟ ಕಂಮನೂರಾ ಹನ್ನೆರಡು ೧೧೨ . . . . . .

೫೦. ಒಡಗಲು ಕಂಮ ೧೦ ಈ ದೇವದಾನಲುಳ್ಳ ತೋಟಗದ್ದೆ ಸುಂಕಮಂ ಸರ್ವ ಮಾನ್ಯವಾಗಿದೇವರ್ಗೆ ಕೊಟ್ಟರು . . . . . ಚಂದ್ರಶೇಖರ ದೇವರ್ಗೆಕೊಟ್ಟ ತೋ

೫೧. ಟಕಲಿದೇರ್ಗೆ ಮೂಡಲು ಕಂಮ್ಮ ನೂರು ೧೦೦. ಲ್ಲಿಯ ವೃತ್ತಿಕಾರ ಆಳು ಬೀರ ಭಟರು ಶ್ರೀ ಕೈಲಾಸ ದೇವರಂಗ ಬೋಗ ನೈವೇದ್ಯಕ್ಕಂ ಬಿಟ್ಟ ಗದ್ದೆಯ . . .

೫೨. ಗಳಾ . . . . . ಹಿರಿಕೆರೆಯ ಕೆಳಗೆ . . . . ಗದ್ದೆ ಕಂಮ್ಮ ನಾಲ್ಲೂನೊರೈವತ್ತು ೪೫೦.

೫೩. . . ಗದ್ದೆ ಕಂಮ ನಾಲ್ಕುನೂರು ೪೦೦ ತೋಟಸ್ಥಳ ನಡುವೆ ಕಂಮ್ಮ ನೊರ್ವ್ವತ್ತು ೧೫೦ . . ದ್ದೆ . ಹೊಸ ಗಟ್ಟದ ಕೆಳಗೆ.

೫೪. . . ನೂರಾವಿಪ್ಪತ್ತು ೧೨೦ . . . . ನೂರಾಹತ್ತು ೧೧೦ ಕಲ್ಲೋಜ ಕೆರೆಯ ಕೆಳಗೆ ಕಂವಿ ಪ್ಪತ್ತುಮೂರು ೨೩ (ಶ್ರೀ ಕೈಲಾಸ ದೇವರ ತೊ).

೫೫. . . . . ತೊಂಟ ಕಂಮ ನೂರಾಹದಿನೈದು ೧೧೫ . . ತೆಂಕಣ . . . . ಹ. . ಗಾಮೆಯಲುಗದ್ದೆ ಕಂಮ

೫೬. . . . . . . ಮಂಗಳಾದಿರಜ . . . . . . ದೇವರ ನೈವೇದಕ್ಕಂ ಕೊಟ್ಟಗಗದೆ . . . . . . ಗಾವೆಯಲು.

೫೭. ಕಂಮ . . ಯನೂರಾಯ್ವತ್ತು ೧೫೦ ದೇವರ . . . ವೆಲ ಕಂ ಸುಂಕಮಂ ಸರ್ವ ಮಾನ್ಯ ಮಾಡಿ. .

೫೮. . . . .

೫೯. . . . .

೬೦. ದಂಡನಾಯಕ

೬೧. . . ಯ ಕೊಟ್ಟ . . . . ಕೊಟ್ಟ ಗದ್ದೆ ಆಕೆರೆಯ ಕೆಳಗೆಕಂ . . . ಧರ್ಮ ಆ. . ಗ. ಮಹಾ. . . .

೬೨. . . . . ಕೊಟ್ಟ . . . . ಪರಿಹಾ . . . . . ಪ್ರತಿಪಾಳಿ ಸಿದರ್ಗೆ ಸಾಯಿರ ᳲವಿಲೆಯಕೊಂಡು . . .

೬೩. ..... ಬ್ರಾಹ್ಮಣ . . . . . ಏನಳಿದವನಿ ಬ್ರಾಹ್ಮಣರುಮಂ ಕವಿಲೆಯಂ ಕೊಂದ ಪಾತನಕ್ಕು ಸಾಮಾನ್ಯೊದಯಂ. ಧ

೬೪. ರ್ಮಸೇತುರ್ನೃ ಪಾಣಾಂ ಕಾಲೇಕಾಲೇ ಪಾಲನೀ ಯೋಭವದ್ಭೀ ಸರ್ವ್ವಾ ನೇತಾನ್ಬಾವಿನ (ವಿ). (ರ್ವ್ವಾ) ರ್ತ್ಥಿವೇಂದ್ರಾ ಸ್ಬೊಯೋ ಭೂಯೋಯಾಚತೆ ರಾಮಚಂದ್ರ.

[ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ ಚೆನ್ನೈ, ವಿಭಾಗ ಎಲ್ಲಾ ಅಧಿಕಾರಿ ವರ್ಗದವರಿಗೆ ನಾನು ಅಭಾರಿ ಯಾಗಿದ್ದೇನೆ ನಮ್ಮ ಜಿಲ್ಲೆಯಲ್ಲಿ ವಿನಂತಿಯ ಮೇರೆಗೆ ಬಂದು ಹಲವಾರು ಶಾಸನಗಳ ಪಡಿಯಚ್ಚು ತೆಗೆದು ಸಹಕರಿಸಿದ್ದಾರೆ ಮತ್ತು ಬುರುಡೆಕಟ್ಟೆ ಮಂಜಣ್ಣನವರಿಗೂ ಎ.ಆರ್.ಜಿ. ಕಾಲೇಜ್ ಡಾ. ಮಲ್ಲಿಕಾರ್ಜುನ ಜವಳಿಯವರಿಗೂ ಕಂಚಿಕೆರೆ ಗ್ರಾಮಸ್ಥರಿಗೂ ಅಭಾರಿಯಾಗಿದ್ದೇನೆ.]

ಅಣ್ಣಿಗೇರಿಯಲ್ಲಿ ದೊರೆತ ಹೊಯ್ಸಳರ ಇಮ್ಮಡಿ ವೀರಬಲ್ಲಾಳದೇವನ ಅಪ್ರಕಟಿತ ಶಾಸನಗಳು

ಸಂಜಯ ಎನ್. ಹಂಜೆ*

ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನಲ್ಲಿರುವ ಅಣ್ಣಿಗೇರಿ ಪಟ್ಟಣವು, ನವಲಗುಂದದಿಂದ ದಕ್ಷಿಣಕ್ಕೆ ಹತ್ತೊಂಭತ್ತು ಕಿ.ಮೀ., ಹುಬ್ಬಳ್ಳಿಯಿಂದ ಪೂರ್ವಕ್ಕೆ ಗದಗ ರಸ್ತೆಯಲ್ಲಿ ಮೂವತ್ತೈದು ಕಿ.ಮೀ. ಅಂತರದಲ್ಲಿದೆ. ಇದನ್ನು ಬೆಳ್ವಲ (ಬೆಳ್ವೊಲ) ಎಂಬ ಹೆಸರಿನಿಂದಲೇ ಒಂದು ಆಡಳಿತ ವಿಭಾಗವನ್ನಾಗಿ ರೂಪಿಸಿರುವುದು ಗಮನೀಯವಾಗಿದೆ.[೧] ಅಣ್ಣಿಗೇರಿ ಪಟ್ಟಣವು ಕ್ರಿ.ಶ. ಸುಮಾರು ೬ನೆಯ ಶತಮಾನದಿಂದ ೧೫ನೆಯ ಶತಮಾನದವರೆಗೂ ಬೆಳ್ವೊಲ-೩೦೦ ಆಡಳಿತ ವಿಭಾಗದ ರಾಜಧಾನಿಯಾಗಿ ಮೆರೆದಿದೆ. ಹಾಗೆಯೇ ಇದು ಕನ್ನಡದ ಆದಿಕವಿ ಪಂಪನ ಜನ್ಮಸ್ಥಳವೂ ಆಗಿದೆ. ಈ ಪಟ್ಟಣದ ಪ್ರಪ್ರಥಮ ಪ್ರಸ್ತಾಪವು ಬಾದಾಮಿ ಚಲುಕ್ಯರ ೧ನೆಯ ವಿಕ್ರಮಾದಿತ್ಯನ ಗದಗ ತಾಲ್ಲೂಕಿನ ಕುರ್ತಕೋಟಿಯ ಕ್ರಿ.ಶ. ೬೭೦-೭೧ರ ಶಾಸನದಲ್ಲಿ ಗೋಚರಿಸುತ್ತದೆ.[೨] ಅಣ್ಣಿಗೇರಿಯಲ್ಲಿ ಬಾದಾಮಿ ಚಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು ಕಲ್ಯಾಣದ ಕಲಚೂರಿಗಳು, ದೇವಗಿರಿಯ ಸೇವುಣರು, ದೋರಸಮುದ್ರದ ಹೊಯ್ಸಳರು, ತಲಕಾಡಿನ ಗಂಗರು, ವಿಜಯನಗರದ ಅರಸರು, ನವಲಗುಂದದ ಕತ್ತಲೆಕುಲ ಮೊದಲಾದ ಮನೆತನಗಳು ಹಾಗೂ ಸಮಕಾಲೀನ ಮಹಾಮಂಡಳೇಶ್ವರು, ಮಹಾಸಾಮಂತರು, ಪ್ರಭುಗಾವುಂಡರು, ದಂಡನಾಯಕರು, ಗಾವುಂಡರು, ಆಡಳಿತಾಧಿಕಾರಿಗಳು ಕೈಗೊಂಡ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅನೇಕ ಶಾಸನಗಳು ಬೆಳಕಿಗೆ ಬಂದಿವೆ. ಇವುಗಳಲ್ಲಿ ಹೊಯ್ಸಳರ ಇಮ್ಮಡಿ ವೀರಬಲ್ಲಾಳದೇವನ ಕಾಲಾವಧಿಯ (ಕ್ರಿ.ಶ. ೧೧೭೩-೧೨೨೦) ಹಲವು ಶಾಸನಗಳು ಗಮನೀಯವಾಗಿವೆ. ಅವುಗಳ ಸಾಂಸ್ಕೃತಿಕ ಹಿರಿಮೆಯನ್ನು ಈ ಸಂಶೋಧನ ಪ್ರಬಂಧದಲ್ಲಿ ಅವಲೋಕಿಸಲಾಗಿದೆ.

೨. ಅಣ್ಣಿಗೇರಿಯಲ್ಲಿ ಇದುವರೆಗಿನ ಪ್ರಕಟಿತ ಶಾಸನಗಳು

ಎನ್ಯುವಲ್ ರಿಪೋರ್ಟ್ಸ್ ಆನ್ ಸೌತ್ ಇಂಡಿಯನ್ ಎಪಿಗ್ರಫಿಯ ೧೯೨೮-೨೯, ೧೯೩೬-೩೭, ೧೯೪೬-೪೭ರ ವಾರ್ಷಿಕ ವರದಿಗಳಲ್ಲಿ ಒಟ್ಟು ಇಪ್ಪತ್ತೊಂಭತ್ತು ಶಾಸನಗಳು ವರದಿಯಾಗಿವೆ.[೩] ಎಂ.ಎಂ. ಕಲಬುರ್ಗಿ ಅವರು 'ಧಾರವಾಡ ಜಿಲ್ಲೆಯ ಶಾಸನಸೂಚಿ'ಯಲ್ಲಿ ಈ ಮೇಲಿನ ವರದಿಗಳಲ್ಲಿ ವರದಿಯಾಗಿರುವ ಇಪ್ಪತ್ತೊಂಭತ್ತು ಶಾಸನಗಳ ವಿವರಗಳನ್ನು ಸಂಗ್ರಹಿಸಿದ್ದಾರೆ.[೪] ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಶನ್ಸ್ ಸಂ. XI-i ರಲ್ಲಿ ಮೂರು (ಶಾ.ಸಂ. ೫, ೩೨, ೧೧೫), ಸಂ. XI-ii ದಲ್ಲಿ ಒಂದು (ಶಾ.ಸಂ. ೧೪೩), ಸಂ. XV ರಲ್ಲಿ ಇಪ್ಪತ್ತೆರಡು (ಶಾ.ಸಂ. ೨೦, ೫೯, ೭೨, ೯೬, ೧೦೦, ೧೦೨, ೧೧೦, ೧೨೨, ೧೩೦, ೧೪೯, ೧೯೪, ೨೧೩, ೨೧೬, ೨೧೭, ೨೨೪, ೨೫೪, ೨೬೮, ೬೧೧, ೨೧೩, ೬೩೪, ೬೫೬, ೬೭೮), ಸಂ. XX ರಲ್ಲಿ ಒಂದು (ಶಾ.ಸಂ. ೩೦೪), ಇ.ಆಯ್. ಸಂ. XXI ರಲ್ಲಿ ಒಂದು (ಶಾ.ಸಂ. ೨೩/ಬಿ) ಶಾಸನಗಳು ಪ್ರಕಟವಾಗಿವೆ. ಹನುಮಾಕ್ಷಿ ಗೋಗಿ ಅವರು ಆರು ಶಾಸನಗಳನ್ನು ಪ್ರಕಟಿಸಿದ್ದಾರೆ.[೫] ಅಪ್ಪಣ್ಣ ಎನ್. ಹಂಜೆ ಅವರು ಐದು ಶಾಸನಗಳನ್ನು ಪ್ರಕಟಿಸಿದ್ದಾರೆ.[೬] ರವಿಕುಮಾರ ನವಲಗುಂದ ಅವರು ಒಂದು ಶಾಸನವನ್ನು ಪ್ರಕಟಿಸಿದ್ದಾರೆ.[೭] ಹೀಗೆ ಇಲ್ಲಿಯವರೆಗೆ ಒಟ್ಟು ಮೂವತ್ತೆಂಟು ಶಾಸನಗಳು ಪ್ರಕಟವಾಗಿವೆ. ಇವುಗಳಲ್ಲಿ ನಾಲ್ಕು ಶಾಸನಗಳು ಹೊಯ್ಸಳರ ಇಮ್ಮಡಿ ವೀರಬಲ್ಲಾಳದೇವನ ಕುರಿತಾಗಿವೆ. ಇತ್ತೀಚೆಗೆ ಈ ಪಟ್ಟಣದಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡಿದ್ದ ಸಂದರ್ಭದಲ್ಲಿ ವೀರಬಲ್ಲಾಳದೇವನ ಕಾಲಾವಧಿಯ ಒಂಭತ್ತು ಶಾಸನಗಳು ಬೆಳಕಿಗೆ ಬಂದಿವೆ.[೮] ಈ ಶಾಸನಗಳು ದೊರೆತ ಸ್ಥಳಗಳು, ಕಾಲಮಾನ, ಪಾಠಗಳು ಮತ್ತು ಸಾರಾಂಶಗಳು ಈ ಕೆಳಗಿನಂತಿವೆ.

ಶಾಸನ ಸಂಖ್ಯೆ : ೧

ಅಮೃತೇಶ್ವರ ದೇವಾಲಯದ ಮೂಲ ನಂದಿಮಂಟಪದ ವಾಯವ್ಯಕ್ಕಿರುವ ಸ್ತಂಭದ ಪಶ್ಚಿಮ ಮುಖದಲ್ಲಿದೆ. ಕನ್ನಡ

* ಸಂಶೋಧನ ವಿದ್ಯಾರ್ಥಿ, ಪ್ರಾಚೀನ ಭಾರತದ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೦೩.

ಲಿಪಿ ಮತ್ತು ಭಾಷೆಯಲ್ಲಿರುವ ಈ ಶಾಸನದಲ್ಲಿ ಒಟ್ಟು ಹತ್ತೊಂಭತ್ತು ಸಾಲುಗಳಿವೆ. ಇದರಲ್ಲಿ "ಯಾದವ ನಾರಾಯಣ ಭುಜಬಳ ಪ್ರತಾಪ ಹೊಯ್ಸಣ ವೀರಬಲ್ಲಾಳದೇವ ವರ್ಷದ ೧೧ನೆಯ ರೌದ್ರಿ ಸಂವತ್ಸರದ ಚೈತ್ರದ ಪುಣ್ಣಮಿ ಸೋಮವಾರ" ಎಂದು ಕಾಲಮಾನದ ನಿರೂಪಣೆಯಿದೆ. ಇದು ಕ್ರಿ.ಶ. ೧೨೦೦ರ ಏಪ್ರಿಲ್ ೧ ಶನಿವಾರಕ್ಕೆ ಸಮನಾಗುತ್ತದೆ.

ಶಾಸನದ ಪಾಠ

೧. ⓢ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಳೋಕ್ಯ ನಗರಾರಂಭ ಮೂ

೨. ಲಸ್ತಂಭಾಯ ಶಂಭವೇ ॥ ಸ್ವಸ್ತಿ ಶ್ರೀಮತು ಯಾದವ ನಾರಾಯಣ ಭುಜ

೩. ಬಳ ಪ್ರತಾಪ ಹೊಯ್ಸಣ ವೀರಬಲ್ಲಾಳದೇವ ವರ್ಷದ ೧೧ನೆಯ ರೌದ್ರಿ

೪. ಸಂವತ್ಸರದ ಚೈತ್ರದ ಪುಣ್ಣಮಿ ಸೋಮವಾರದಂದು ಶ್ರೀಮದ್ರಾಜಧಾನಿ

೫. ಪಟ್ಟಣ ವಣ್ಣಿಗೆಱೆಯ ಸಕಳ ಕಳಾಸಾಂನಿಧ್ಯ ದಕ್ಷಿಣ ವಾರಣಾಸಿ ಶ್ರೀ ಸ್ವ ...

೬. .... ಶ್ರೀಮತವ್ರಿತೇಶ್ವರ ದೇವರ್ಗ್ಗೆ ಕಂಡಿಮಯ ನಾಯಕನ ಮಗ ಮೊಖ ...

೭. ಸಿಯಣ್ಣಂ ದೊಂಮ್ಮರ ವಿಕರಸನು ಮಂಡಳಿಕ ಬಾಚಯ್ಯಂಗೆ ದೇವರ ನಿವೇದ್ಯ

೮. ಕ್ಕೆ ಮಾಱರಾಱು ಮತ್ತಱುವಱುನೂಱು ಕಮ್ಮ ಕೆಯ್ಯ ಪಂಚೋತ್ತರದ ಸಾ

೯. ಯಿರ ಕಂಮ್ಮ ಕೆಯ್ಯ ಸಿಮಾಕ್ರಮ ವೆಂತೆಂದಡೆ ದೇವರ ನಿವೇದ್ಯದ ಕೆಯ್ಯಿಂ ಪಡ್ವ

೧೦. ವಲು ಪೆರ್ಬ್ಬಸೂಱ ಬಟ್ಟೆಯ್ಯಿಂದ ಬಡಗಲು ಪುರೋಹಿತ ಗೆಯ್ಯಿಂದಂ

೧೧. ಮೂಡಲು ಭಾಣಸಿಗನ ಪಂಚೋತ್ತರದ ಕೆಯ್ಯಿಂ ತೆಂಕಲಿಂತ್ತಿ ಚತುಸ್ಸೀಮೆ

೧೨. ಆ ಕೆಯ್ಯಿಂ ದ್ರಬ್ಯ ನಿವೇದನ ಪುರಸ್ಸರ ಧಾರಾಪೂರ್ವಕವಾಗಿ ಪುರಪಟ್ಟಣದ ಸಂ

೧೩. ನಿಧಾನದಲು ಮಾಱಕೊಂಡು ಬಿಟ್ಟ ಸಾಯ್ಯಿರ ಕಮ್ಮ ಕೆಯಿಂದಾದ ಗುತ್ತಗೆಯ ದಾ

೧೪. ನವಂ ತಂಮ್ಮ ನಿಯಾಮದಲು ನಡಯಿಸುವ ಸೋಮವಾರ ವ್ಯತೀಪಾತದ ನಿವೇದ್ಯ

೧೫. ವೆರಡಕಂ ಅಕ್ಕಿ ತುಪ್ಪ ಕಣಿಕ ತೋಗರಿ ಇಂತಿನಿತುವಂ ನಡವಂತಾಗಿ ಬಿಟ್ಟ ಆ ಉಪಹಾ

೧೬. ರದ ತದಂಗದ ಹಾಲು ಮೊಸರಿಂಗೆ ಕೊಟ್ಟ ಗದ್ಯಾಣ ವೊಂದು ಆ ಹೊಂನ್ನ ಬಡ್ಡಿಯಿಂ

೧೭. ನಡಸುವರು ॥ ಇ ಧರ್ಮ್ಮಮಂ ಹಿರಿಯರ್ಮ್ಮುಖ್ಯವಾಗಿ ಸಾಸಿರ್ವ್ವರುಂ ಪ್ರತಿಪಾ

೧೮. ಳಿಸುವರು ಸ್ವದತ್ತಂ ಪರದತ್ತಂ ವಾಯೋ ಹರೇತಿ ವಸುಂಧರಾ ಷಟ್ಟಿವರ್ಸ ಸಹ

೧೯. ಸ್ರಾಣಿ ವಿಷ್ಟಾಯ್ಯಾಂ ಜಾಯತೆ ಕ್ರಿಮಿ ॥

ಶಾಸನದ ಸಾರಾಂಶ

ಹೊಯ್ಸಳರ ಇಮ್ಮಡಿ ವೀರಬಲ್ಲಾಳದೇವನ ಬಿರುದುಗಳು ಮತ್ತು ಆಳ್ವಿಕೆಯ ಪರಿಚಯವಿದೆ. ಕಂಡಿಮಯ್ಯ ನಾಯಕನ ಮಗ ಮೊಖರಿ ಕೇಸಿಯಣ್ಣ(?) ಮತ್ತು ದೊಮ್ಮರ (ಡೊಂಬರ) ವಿಕರಸ ಕೂಡಿಕೊಂಡು ಮಾಂಡಳಿಕ ಬಾಚಯ್ಯನ (ಬಾಚಿದೇವರಸ) ನೇತೃತ್ವದಲ್ಲಿ ರಾಜಧಾನಿ ಪಟ್ಟಣ ಅಣ್ಣಿಗೇರಿಯ ಸಕಳಾಕಲಾ ಸಾನ್ನಿಧ್ಯ ಹಾಗೂ ದಕ್ಷಿಣ ವಾರಣಾಸಿ ಎಂದೆನಿಸಿದ ಸ್ವಯಂಭು ಅಮೃತೇಶ್ವರ ದೇವರ ನೈವೇದ್ಯಕ್ಕೆ ಆರುನೂರು ಮತ್ತರು ಕಮ್ಮ ಭೂಮಿಯನ್ನು ದಾನ ಮಾಡಿದರು. ಆ ಭೂಮಿಯು ಪಶ್ಚಿಮಕ್ಕೆ ಪೆರ್ಬ್ಬಸೂರದ (ಹೆಬಸೂರು) ದಾರಿಯಿಂದ ಉತ್ತರಕ್ಕೆ ಪುರೋಹಿತನ ಹೊಲ, ಪೂರ್ವಕ್ಕೆ ಭಾಣಸಿಗನ ಪಂಚೋತ್ತರದ ಹೊಲದಿಂದ ದಕ್ಷಿಣದವರೆಗಿನ ಸೀಮಾಚಕ್ಕಬಂದಿಯನ್ನು ಹೊಂದಿತ್ತು. ಆ ಹೊಲದಿಂದ ದ್ರಬ್ಯ, ನಿವೇದನ, ಪುರಸ್ಸರವನ್ನು ಧಾರಾಪೂರ್ವಕವಾಗಿ ಪುರಪಟ್ಟಣದ ಸನ್ನಿಧಾನದಲ್ಲಿ ಮಾರುಗೊಂಡು ಸಾವಿರ ಕಮ್ಮ ಭೂಮಿಯನ್ನು ದಾನ ಮಾಡಿದರು. ಆ ಭೂಮಿಯನ್ನು ಗುತ್ತಗೆಯ ರೂಪದಲ್ಲಿ ಪಡೆದು ಉಳುಮೆ ಮಾಡುವವರು ಸೋಮವಾರ ವ್ಯತೀಪಾತದಂದು ದೇವರಿಗೆ ನಡೆಯುವ ಎರಡು ಸಮಯದ ನೈವೇದ್ಯಕ್ಕೆ ಅಕ್ಕಿ, ತುಪ್ಪ, ಕಣಿಕ (ಗೋದಿ), ತೋಗರಿಯನ್ನು ದಾನ ಮಾಡಬೇಕು. ದೇವರಿಗೆ ನಡೆಯುವ ಉಪಹಾರಕ್ಕೆ (ನೈವೇದ್ಯ) ಬೇಕಾಗುವ ಹಾಲು, ಮೊಸರಿಗೆ

ಒಂದು ಗದ್ಯಾಣವನ್ನು ದಾನ ಮಾಡಿದರು. ಇದರ ಬಡ್ಡಿಯಿಂದ ಈ ಕಾರ್ಯವನ್ನು ನಡೆಸಬೇಕು. ಈ ಧರ್ಮವನ್ನು ಹಿರಿಯರು ಮುಖ್ಯವಾಗಿ ಸಾಸಿರ್ವ್ವರು ಪ್ರತಿಪಾಳಿಸುವರು. ಶಾಪಾಶಯದ ಪದ್ಯವಿದೆ.

ಶಾಸನ ಸಂಖ್ಯೆ : ೨

ಅಮೃತೇಶ್ವರ ನಗರದಲ್ಲಿರುವ ಹಳೆಯ ಅಮೃತೇಶ್ವರ ದೇವಾಲಯದ ಹತ್ತಿರವಿದೆ. ಈ ಶಾಸನ ಶಿಲೆಯನ್ನು ಈಗ ಶ್ರೀಮತಿ ನಿಂಗಮ್ಮ ಎನ್. ಹೂಗಾರ ಕಾಲೇಜಿನ ಆವರಣದಲ್ಲಿ ತಂದಿಡಲಾಗಿದೆ. ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಈ ಶಾಸನದಲ್ಲಿ ಒಟ್ಟು ಹನ್ನೊಂದು ಸಾಲುಗಳಿವೆ. ಇದರಲ್ಲಿ ಕಾಲಮಾನದ ಉಲ್ಲೇಖವಿಲ್ಲ.

ಶಾಸನದ ಪಾಠ

೧. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಳೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ ॥ ಸ್ವಸ್ತಿ ಸಮಸ್ತ

೨. ಭುವನಾಶ್ರಯಂ ಶ್ರೀ ಪೃಥ್ವೀವಲ್ಲಭಂ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕಂ

೩. ....

೪. .... ನ್ತಾಮಣಿ ಮಲೆರಾಜರಾಜ ಮಲೆಪರೊಳುಗಂಡನಸಹಾಯ ಸೂರನೇಕಾಂಗವೀರರಸಿನಾರ ಸಿಳಿದೀ....

೫. ಮಲ್ಲ ಚಲದಂಕರಾಮ ನಿಸ್ಸಂಕಭುಜಬಳ ಪ್ರತಾಪಚಕ್ರವರ್ತ್ತಿ ಶ್ರೀ ವೀರಬಲ್ಲಾಳದೇವರ ರಾಜ್ಯಮುತ್ತರೋ

೬ ತ್ತರಾಭಿವೃದ್ಧಿ ಪ್ರವರ್ಧಮಾನಮಾ ಚಂದ್ರಾರ್ಕ್ಕ ತಾರಂ ಸಲ್ಲುತ್ತಮಿರೆ ....

೭ ಹು ಕಂದನನಾ ....

೮. ವೆಡೆಯೊಳಗೆದಿಹ ....

೯. ಡವೋದ ....

೧೦. ವಿಳಾಮಾನಿಯ ....

೧೧. ತತ್ಪಾದಪದ್ಮೋಪಜೀವಿ ॥ ....

(ಮುಂದಿನ ಸಾಲುಗಳ ಅಕ್ಷರಗಳು ತ್ರುಟಿತವಾಗಿವೆ)

ಶಾಸನದ ಸಾರಾಂಶ

ಶಾಸನದ ಪ್ರಾರಂಭದಲ್ಲಿ "ಉತ್ತುಂಗವಾದ ಶಿರಸ್ಸನ್ನು ಚುಂಬಿಸತಕ್ಕಂತಹ ಚಂದ್ರನನ್ನು ಚಾಮರವನ್ನಾಗಿಸುವುದರ ಮೂಲಕ ಸುಂದರವಾಗಿರುವವನೂ, ಮೂರು ಲೋಕಗಳ ಉತ್ಪತ್ತಿಗೆ ಕಾರಣನೂ ಮತ್ತು ಆಧಾರಸ್ತಂಭನೂ ಆಗಿರುವಂತಹ ಶಂಭುವಿಗೆ ನಮಸ್ಕಾರಗಳು" ಎಂಬ ಪದ್ಯವಿದೆ. ತರುವಾಯ ಹೊಯ್ಸಳರ ಇಮ್ಮಡಿ ವೀರಬಲ್ಲಾಳದೇವನ ವಿವಿಧ ಬಿರುದುಗಳು ಮತ್ತು ಆಳ್ವಿಕೆಯ ಪರಿಚಯವಿದೆ. ಆತನ ಪಾದಪದ್ಮೋಪಜೀವಿಯ ಪ್ರಸ್ತಾಪವಿದೆ. ಆದರೆ ಶಾಸನದ ಮುಂದಿನ ಭಾಗದ ಅಕ್ಷರಗಳು ಸವೆದಿರುವುದರಿಂದ ವಿವರಗಳು ಅಸ್ಪಷ್ಟವಾಗಿವೆ.

ಶಾಸನ ಸಂಖ್ಯೆ : ೩

ಅಮೃತೇಶ್ವರ ದೇವಾಲಯದ ಆವರಣದಲ್ಲಿದೆ. ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಈ ಶಾಸನದಲ್ಲಿ ಒಟ್ಟು ಐವತ್ಮೂರು ಸಾಲುಗಳಿವೆ. ಇದರಲ್ಲಿ '...... ಬಲ್ಲಾಳದೇವ ವರ್ಷದ ೧೮ನೆಯ.......' ಎಂಬ ಕಾಲಮಾನದ ನಿರೂಪಣೆಯಿದೆ. ಇದು ಕ್ರಿ.ಶ. ಸುಮಾರು ೧೨ನೆಯ ಶತಮಾನಕ್ಕೆ ಸಮನಾಗುತ್ತದೆ.

ಶಾಸನದ ಪಾಠ

೧. ....ತ.................

೨. ....ಳಮಹಿಮ...............

೩. ....ರಸಂಗಳು ಬಜಿಚ...........

೪. ....[ಬ್ರಹ್ಮ]ಶೊಭೆಯಿಂ ರು ....

೫. ....[ವನಿ]ತೆವಾಸಂತಿಕಾದೇವಿ ಯಿರ್ಪ್ಪಳು...........
೬ ....ಮ ವಿದ್ಯಾದರಂ ನ್ತಾಂದೇವಿಯಂ ಕೂಳಾಚಳ..........
೭ ....ನರ್ತ್ಥಿ ಬಿಲ್ವಾಬಳ್ವಾಳಿಂ[ಗೆ] ಹರಿತನಯನಾ............
೮. ....ಶಾರ್ದ್ದೂಳ ಮಾತಂ ....[ತಱುಂ ಮಾ.........ಂತೋಸಂ]..............
೯. ....ಮು ಚಂದ್ರ[ಶ]ಯೆ ಸಳೆಯಿಂ ಸ್ವಯಂ ಭೂ...........
೧೦. ....ಪಾದೆ ಬಂಧು ವ್ವಾಯುಗಗಣ ಕ್ಕ[ದರ್ತ್ಥ]ತ್ಥಿಕ...........
೧೧. ....ದು ಪಜ್ಜಿ ಪಾಲ । ಶಾರ್ದ್ದೂಳಂ ॥ ಆ ....
೧೨. .... ಶ್ರೀ ಚಕ್ರ[ವರ್ತ್ತಿ] ಗಣಿತಯೆ ಪರೆಯ್ಯ ....
೧೩. ....ದ್ರದೊಳು ....ತ್ರಮಂ ವಿಜಯಾ ....
೧೪. .... ಆ ವಿನಯಾದಿತ್ಯಂಗೆ ಮಹಿವಂದಿತಪಾದ ....
೧೫. ....ರಣನಾಥ ॥ ಶೂಳಿಗೆ ನೇತ್ರತ್ರ ....
೧೬. ....ದೇವನೃಪ ಉದಯಾದಿತ್ಯಂ ॥ ....
೧೭. ....ಭವನದ ಸಿತ್ಪ ....
೧೮. .... ಆ ವಿಭೂ.............ರ್ತ್ಥ ....ತಾಶಾವಿಭ ....
೧೯. ....
೨೦. ....ದಾಯೆವೆರೆಸಿ ....ತ್ರೊತ್ರ ....
೨೧. ....ರ್ಪ್ಪ ಛಲವೀರ ನ್ರಿಪ................
೨೨. .... ಬಲ್ಲಾಳ ಭೂಪಾಳಕಂ ॥ ಅವ ....
೨೩. ....ವಾರ್ದ್ಧಿತೆನಲ್ತಪದಟರಾರ್ನ್ನಿಳಾಂ ....
೨೪. .... ತಿಥಿ ಹಸ್ತಾ ಪಲ್ಲವ ....
೨೫. .... ಸ್ವಸ್ತಿ ಸಮಸ್ತ ಭುವನಾಶ್ರಯಂ ....
೨೬. ....ನಿಶ್ವರ ಚಮೂಪಕುಳಾಂ ....ಬರ ....
೨೭. .... ಶನಿವಾರಸಿದ್ಧಿ ಗಿರಿದುರ್ಗ್ಗಮ ....
೨೮. ....ಬಲ್ಲಾಳದೇವರ ವಿಜಯರಾಜ್ಯ ಮುತ್ತರೋ ....
೨೯. ....ತತ್ಪಾದ ಪದ್ಮೋಪಜೀವಿ ॥ ಲಕ್ಕ[ಣ] ....
೩೦. ....ಕಱಿವ ಸನ್ಮಾ ....ವಾಲ್ಯದ ಮಚ್ಚದಿ............
೩೧. ....ಯ ಪೆಂಪುವೆತ್ತ ಕುವರಂ ಕಲಿಪ್ಯಂ
೩೨. ....ಶಸ್ಥಿ ಸಹಿತಂ ಶ್ರೀ ವೀರಬಲ್ಲಾಳ........
೩೩. ....ವಂಶಾವತಾರವೆಂತೆದೊಡೆ ಗಾ.............
೩೪. ....ಗಳಪ್ಪ ರಾಮಯ್ಯ ತೊಂ[ಡ]...................
೩೫. ....ತಿ ತೊಂಡಯ್ಯನ ಮಕ್ಕ..............
೩೬. ....ಡೆಗೆಕ್ಕವಳೆ ಭಳನಾಂನ್ತಿ ....
೩೭. ....ಚರಾಳಿಯ ಸೂಧ್ವಾಶಾಳ.............

೩೮. ....ನೇ ತೊಂಡ ಚಮುಪನ.................

೩೯. ....ಲಭದಶ್ವಭಂ ಶ್ರಿ ವಿ......................

೪೦. ....ಮದ್ರಾಜಧಾನಿ ಪಟ್ಟಣವಣ್ಣಿಗೆಜೆ..........

೪೧. .... [ಬ]ಲ್ಲಾಳದೇವ ವರ್ಷದ ೧೮ನೆಯ.............

೪೨. ....ನಾಳು ಶ್ರೀಮದ್ದ ದಕ್ಷಿಣವಾರಣಾಸಿ ....

೪೩. .... ಸಂನಿದಾನದಲು ಶ್ರೀ ಯ್ಯೆಕಾ................

೪೪. ....ರು ಸರ್ವ್ವಾತಿಥ್ಯದ [ಕೊ]ಲ್ಲರ ....

೪೫. ....ಶೋಭಾ ವಿಠಯ...................

೪೬. ....ರೇಧಸಸರಿಯ ಣ.................

೪೭. .... ಮತ್ತರು ಆಱುಳಿಯ ....

೪೮. ....ಯ ಕೆಯ್ಯಿಂದಂ ಭ....................

೪೯. ....ತ್ಥಂ ನಗರೇಶ್ವರ ದೇವ................

೫೦. ....ಅರವತ್ತೊಂದು ....

೫೧. ....ವಿಧ ....

೫೨. .... ಯಾಜಾ.................

೫೩. ....ಮಿ ಸ್ಥಸ್ಯ ....

ಶಾಸನದ ಸಾರಾಂಶ

ಈ ಶಾಸನದ ಅಕ್ಷರಗಳು ತುಂಬಾ ಸವೆದಿರುವುದರಿಂದ ಬಹುತೇಕ ವಿವರಗಳು ಅಸ್ಪಷ್ಟವಾಗಿವೆ. ಪ್ರಾರಂಭದಲ್ಲಿ ಹೊಯ್ಸಳರ ಉಗಮ ಮತ್ತು ಅರಸರ (ವಿನಯಾದಿತ್ಯ, ಬಿಟ್ಟಿದೇವ / ವಿಷ್ಣುವರ್ಧನ, ಉದಯಾದಿತ್ಯ ಇತ್ಯಾದಿ) ವಂಶಾವಳಿಯ ನಿರೂಪಣೆಯಿದೆ. ತರುವಾಯ ಇಮ್ಮಡಿ ವೀರಬಲ್ಲಾಳದೇವನ ವಿವಿಧ ಬಿರುದುಗಳು ಮತ್ತು ಆಳ್ವಿಕೆಯ ಪರಿಚಯವಿದೆ. ರಾಮಯ್ಯ ಮತ್ತು ತೊಂಡಯ್ಯ (ತೊಂಡ ಚಮೂಪ) ಎಂಬುವವರು ದಕ್ಷಿಣ ವಾರಣಾಸಿ ರಾಜಧಾನಿ ಪಟ್ಟಣ ಅಣ್ಣಿಗೇರಿಯ ನಗರೇಶ್ವರ ದೇವಾಲಯಕ್ಕೆ ಎಂಟು ಮತ್ತರು ಭೂಮಿಯನ್ನು ದಾನ ಮಾಡಿದರೆಂದು ಹೇಳಬಹುದಾಗಿದೆ.

ಶಾಸನ ಸಂಖ್ಯೆ : ೪

ಅಮೃತೇಶ್ವರ ದೇವಾಲಯದ ಮೂಲ ನಂದಿಮಂಟಪದ ವಾಯವ್ಯಕ್ಕಿರುವ ಸ್ತಂಭದ ಪೂರ್ವ ಮುಖದಲ್ಲಿದೆ. ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಈ ಶಾಸನದಲ್ಲಿ ಒಟ್ಟು ಹತ್ತು ಸಾಲುಗಳಿವೆ. ಇದರಲ್ಲಿ "ಹೊಯ್ಸಣ ವೀರಬಲ್ಲಾಳದೇವ ವರ್ಷದ ೧೩ನೆಯ ರುಧಿರೊದ್ಗಾರಿ ಸಂಮವತ್ಸರದ ವೈಶಾಖದ ಪೌರ್ಣ್ಣಮಾಸ್ಯೆ ಆದಿತ್ಯವಾರ ಸೋಮಗ್ರಹಣ ದಿವ್ಯ ತಿಥಿ" ಎಂಬ ಕಾಲಮಾನದ ನಿರೂಪಣೆಯಿದೆ. ಇದು ಕ್ರಿ.ಶ. ೧೨೦೩ರ ಏಪ್ರಿಲ್ ೨೭ ರವಿವಾರಕ್ಕೆ ಸಮನಾಗುತ್ತದೆ.

ಶಾಸನದ ಪಾಠ

೧. ⊚ ಸ್ವಸ್ತಿ ಶ್ರಿಮತು ಯಾದವ ನಾರಾಯಣಂ ಭುಜಬಳ ಪ್ರತಾಪಚಕ್ರ

೨. ವರ್ತ್ತಿ ಹೊಯ್ಸಣ ವೀರಬಲ್ಲಾಳದೇವ ವರ್ಷದ ೧೩ನೆಯ ರುಧಿರೊದ್ಗಾ

೩. ರಿ ಸಂಮವತ್ಸರದ ವೈಶಾಖದ ಪೌರ್ಣ್ಣಮಾಸ್ಯೆ ಆದಿತ್ಯವಾರ ಸೋಮ

೪. ಗ್ರಹಣ ದಿವ್ಯ ತಿಥಿಯಂದು ಶ್ರೀಮದ ಅಮ್ರಿತೇಶ್ವರ ದೇವರ್ಗ್ಗೆ

೫. ಬಲವಂಕ ಯಡವಂಕದ ಕೇಶವ ಠಕ್ಕುರನು ಕೊಟ್ಟ ಗದ್ಯಾಣ ಒಂದಕ್ಕಂ

೬. ನಿತ್ಯಸ್ಥಿತಿ ಅಯ್ವವತ್ತರಳು ಸೆವನ್ತಿಗೆಯುಮಂ ಬಡ್ಡಿಯಲು ನಡಸುವರು

೭. ಮತ್ತಂ ಆ ಕೇಶವ ಠಕ್ಕುರನು ಕೊಟ್ಟ ಗದ್ಯಾಣಂ ಮೂಱಱ ವ್ರಿಧ್ಧಿ ತಿಂಗಳಿಗೆ

೮. ಮೂರು ಹಾಗದಲಿ ಅಷ್ಟಮಿ ಚತುದರ್ಸಿಯ ನಿಯಿವೆದ್ಯ ಮಿಯಿಧ

೯. ರ್ಮ್ಮಮ್ ಹಿರಿಯ ಮುಖ್ಯವಾಗಿ ಸಾಸಿರ್ವ್ವರುಂ ಆ ಚಂದ್ರಾರ್ಕ್ಕ

೧೦. ತಾರಂ ಭರಂ ಪ್ರತಿಪಾಳಿಸುವರು ॥

ಶಾಸನದ ಸಾರಾಂಶ

ಹೊಯ್ಸಳರ ಇಮ್ಮಡಿ ವೀರಬಲ್ಲಾಳದೇವನ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. ೧೨೦೩ರ ಏಪ್ರಿಲ್ ೨೭ ರವಿವಾರದಂದು ಬಲವಂಕ ಯಡವಂಕದ ಕೇಶವ ಠಕ್ಕುರನು ಅಮೃತೇಶ್ವರ ದೇವರಿಗೆ ಪ್ರತಿನಿತ್ಯ ಅಯ್ವತ್ತರಳು ಸೇವಂತಿಗೆ ಹೂವುಗಳನ್ನು ಏರಿಸಲು ಒಂದು ಗದ್ಯಾಣವನ್ನು ದಾನ ಮಾಡಿದನು. ಈ ಗದ್ಯಾಣದ ಬಡ್ಡಿಯಲ್ಲಿ ಆ ಕಾರ್ಯವನ್ನು ನಡೆಸುವರು. ಆ ಕೇಶವ ಠಕ್ಕುರನು ಕೊಟ್ಟ ಮೂರು ಗದ್ಯಾಣದಿಂದ ತಿಂಗಳಿಗೆ ಬರುವ ಮೂರು ಹಾಗದಲ್ಲಿ ಅಷ್ಟಮಿ ಚತುದರ್ಶಿಯ ನೈವೇದ್ಯ ನಡೆಯುವುದು. ಈ ಧರ್ಮವನ್ನು ಹಿರಿಯರು ಮುಖ್ಯವಾಗಿ ಸಾಸಿರ್ವ್ವರು ಚಂದ್ರಸೂರ್ಯನಕ್ಷತ್ರ ಇರುವವರೆಗೂ ಪ್ರತಿಪಾಳಿಸುವರು.

ಶಾಸನ ಸಂಖ್ಯೆ : ೫

ಅಮೃತೇಶ್ವರ ದೇವಾಲಯದ ಮೂಲ ನಂದಿಮಂಟಪದ ವಾಯವ್ಯಕ್ಕಿರುವ ಸ್ತಂಭದ ಪಶ್ಚಿಮ ಮುಖದಲ್ಲಿದೆ. ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಈ ಶಾಸನದಲ್ಲಿ ಒಟ್ಟು ಏಳು ಸಾಲುಗಳಿವೆ. ಇದರಲ್ಲಿ "ಹೊಯ್ಸಣ ವೀರಬಲ್ಲಾಳದೇವ ವರ್ಷದ ೧೪ನೆ ರಕ್ತಾಕ್ಷ ಸಂವತ್ಸರದ ಶ್ರಾವಣ ಮಾಸದ ಕ್ರಿಷ್ಣಾಂಗಾರಕ ಚತುರ್ದಸಿ ಬ್ಯತೀಪಾತ ಸಂಕ್ರಮಣ" ಎಂಬ ಕಾಲಮಾನದ ನಿರೂಪಣೆಯಿದೆ. ಇದು ಕ್ರಿ.ಶ. ೧೨೦೪ರ ಜುಲೈ ೧೮ ರವಿವಾರಕ್ಕೆ ಸಮನಾಗುತ್ತದೆ.

ಶಾಸನದ ಪಾಠ

೧. ◈ ಸ್ವಸ್ತಿ ಶ್ರೀಮತು ಯಾದವ ನಾರಾಯಣಂ ಭುಜಬಳ ಪ್ರತಾಪ ಚಕ್ರವರ್ತ್ತಿ ಹೊಯ್ಸಣ ವೀ

೨. ರ ಬಲ್ಲಾಳದೇವ ವರ್ಷದ ೧೪ನೆ ರಕ್ತಾಕ್ಷ ಸಂವತ್ಸರದ ಶ್ರಾವಣ ಮಾಸದ ಕ್ರಿಷ್ಣಾಂಗಾರಕ ಚತು

೩. ರ್ದಸಿ ಬ್ಯತೀಪಾತ ಸಂಕ್ರಮಣದಂದು ಶ್ರೀ ಸ್ವಯಂಭೂ ಶ್ರೀಮದಮೃತೇಶ್ವರ ದೇವರ್ಗ್ಗೆ ವೀ

೪. ರ ಬಲ್ಲಾಳದೇವನ ಡಿಂಗರಿಗ ವಜ್ರಥಟ್ಟಿನ ಕಾಳೆಯ ಮಾಳೆಯ ರಾಹುತನು ದೇವರ ಶಿ

೫. ಖೆಗೆ ನಿತ್ಯಂ ಸ್ಥಿತಿ ಸಿವನ್ತಿಗೆಯ ಪೂಜ್ಪಿ ಮೂವತ್ತು ನಡೆವಂತಾಗಿ ಕೊಟ್ಟ ಗದ್ಯಾ

೬. ಣ ವೊಂದು ಈ ಹೊಂನ ಬಡ್ಡಿಯಲಾ ಚಂದ್ರಾರ್ಕ್ಕತಾರಂ ಭರಂ ದೇವ

೭. ಪುತ್ರಕ ಸಾಸಿರ್ಬ್ಬರು ಪ್ರತಿಪಾಳಿಸುವರು ॥

ಶಾಸನದ ಸಾರಾಂಶ

ಹೊಯ್ಸಳರ ಇಮ್ಮಡಿ ವೀರಬಲ್ಲಾಳದೇವನ ಆಳ್ವಿಕೆಯ ಕಾಲಾವಧಿಯ ಕ್ರಿ.ಶ. ೧೨೦೪ರ ಜುಲೈ ೧೮ ರವಿವಾರದಂದು ವೀರಬಲ್ಲಾಳದೇವನ ಡಿಂಗರಿಗ (ಸೇವಕ) ವಜ್ರಥಟ್ಟಿನ ಕಾಳೆಯ (ಕಾಳಯ್ಯ), ಮಾಳೆಯ (ಮಾಳಯ್ಯ) ಮತ್ತು ರಾಹುತ ಎಂಬುವವರು ಕೂಡಿಕೊಂಡು ಸ್ವಯಂಭು ಅಮೃತೇಶ್ವರ ದೇವರ ಶಿಖೆಗೆ (ಶಿರ/ಕಿರೀಟ) ಪ್ರತಿನಿತ್ಯ ಸೇವಂತಿಯ ಮೂವತ್ತು ಹೂವುಗಳನ್ನು ಏರಿಸಲು ಒಂದು ಗದ್ಯಾಣವನ್ನು ದಾನ ಮಾಡಿದರು. ಈ ಗದ್ಯಾಣದ ಬಡ್ಡಿಯಲ್ಲಿ ಆ ಕಾರ್ಯವನ್ನು ಸೂರ್ಯಚಂದ್ರನಕ್ಷತ್ರ ಇರುವವರೆಗೂ ದೇವಪುತ್ರಕರಾದ ಸಾಸಿರ್ವ್ವರು ಪ್ರತಿಪಾಳಿಸುವರು.

ಶಾಸನ ಸಂಖ್ಯೆ : ೬

ಅಮೃತೇಶ್ವರ ದೇವಾಲಯದ ಮಂಟಪದ ಭಿತ್ತಿಗೆ ಸೇರಿಸಿರುವ ಸ್ತಂಭದ ಪೂರ್ವ ಮುಖದಲ್ಲಿದೆ. ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಈ ಶಾಸನದಲ್ಲಿ ಒಟ್ಟು ಇಪ್ಪತ್ತೊಂಭತ್ತು ಸಾಲುಗಳಿವೆ. ಇದರಲ್ಲಿ "…. ಹೊಯಿಶಳ ಚಕ್ರವರ್ತ್ತಿ ವೀರಬಲ್ಲಾಳದೇವ ವರ್ಷದ ೧೬ನೆಯ……ಶಾಡ ಬಹುಳ ದಮಾವಾಸೆ ಸೋಮವಾರ ಸಂಕ್ರಮಣ……" ಎಂಬ ಕಾಲಮಾನದ ನಿರೂಪಣೆಯಿದೆ. ಇದು ಕ್ರಿ.ಶ. ೧೨೦೬–೦೭ಕ್ಕೆ ಸಮನಾಗುತ್ತದೆ.

ಶಾಸನದ ಪಾಠ

೧. [ನಮಸ್ತುಂಗ ಶಿರಶ್ಚುಂಬಿ ಚಂದ್ರಚಾ]ಮರ ಚಾರವೇ [।*] ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೆ ॥
೨. ....ರಿ ಕಾಶ್ಯಪನಂಗಿರಸಂ ಸಮಾನ ಹೊಯಿಕನೆ ತಾನ್ ಭಾರ್ಗ್ಗ
೩. ....ಶಿಷ್ಟ ಸನ್ಮ್ನಿಯಣೆ ಗೌತಮಂ ಪಡಿ ಪರಾಶರಣೆಯನುಸಾರಿ
೪. ....ತತಾಗುಣದಿಂ ಸಲೆ ರುದ್ರಶಕ್ತಿಯೊಳು ॥ ಆ ಮಹಾತ್ಮಾವೇತ್ತರು ॥
೫. ....ಪದ್ಮಾರಾದಕನಪ್ಪ ಪೂಜಾರಿ ಸೋಮಯ್ಯನ ಮಹತ್ವ ವೆಂತೆನೆ ॥
೬. ....[ನ]ದೊಳೆಸೆವಂ ಮಂತ್ರಿ ವಿದ್ಯಾಸಮುದ್ರಂ ಮುನಿನಾಥಂ ರುದ್ರ
೭ ....ಕಾರಂ ಮನುಮಾರ್ಗ್ಗಂ ಮೇರು ದ್ಯೆರ್ಯ್ಯಂ ಸೂಜನಜನ ಮನೊ
೮. ....ರ್ತ್ತಿ ಲಕ್ಷ್ಮೀಮನಿಮಯ ಮುಕುರಂ ವಿಪ್ರ ವಿದ್ಯಾಧರೇಂದ್ರಂ ॥
೯. .... ॥ ಪರಮ ಪರೋಪಕಾರ ನಿಧಿ ಸತುಕವಿ ಸಂತುಸ್ತ ನರ್ತ್ಥಿವ್ಯರ್ತ್ಥಂ
೧೦. ....ವ ನೆಗಳ್ತೆಯ ಭಾಗಿ ಲಕ್ಷ್ಮಣೇಶ್ವರ ಪದಪಂಕಜ ಭ್ರಮರ
೧೧. ....ನಂ ವರಗುನಿ ರುದ್ರಶಕ್ತಿಮುನಿನಾಥನ ಪೆರ್ಗ್ಗಡೆ ಮಲ್ಲಿದೇವನಂ ॥
೧೨. ....ಧಿಶಂಗೆ ಸದು ಭಕ್ತಿಯಿಂದೆ ನಸುಂ ಹೆರ್ಗ್ಗಡೆ ಮಲ್ಲಿದೇವನ ಸೇವಾ.....
೧೩. ....ಳಂ ಕರಣಸ್ರೂ ಪುಜ್ಜಚಯಕಂ ದಾನಂದಿಂದಿತ್ತ ಪಕನ
೧೪. ....ಶ ಶ್ರೀ ಕಾಂಚನಭ್ರಾತಮಂ ॥ ಸ್ವಸ್ತಿ ಶ್ರಿಮತು ಯಾದವನಾ
೧೫. .... ಹೊಯಿಶಳ ಚಕ್ರವರ್ತ್ತಿ ವೀರಬಲ್ಲಾಳದೇವ ವರ್ಷದ ೧೬ನೆಯ
೧೬. ....ಶಾಡ ಬಹುಳ ದಮಾವಾಸೆ ಸೋಮವಾರ ಸಂಕ್ರಮಣ
೧೭. .... ಶ್ರೀಮದ್ರಾಜಧಾನಿ ಪಟ್ಟಣವನ್ನಿಂಗೆಱೆಯ ಶ್ರೀಮದ್ ದಕ್ಷಿಣ
೧೮. ....ದೆಮ್ಮ ಶ್ರೀ ಸ್ವಯಂಭೂ ವಮೃತೇಶ್ವರ ದೇವರ್ಗ್ಗೆ ಸ್ವಸ್ತಿ ಯಮ
೧೯. ....ನ ಧಾರಣ ಮೊನಾನುಷ್ಟಾನ ಜಪ ಸಮಾಧಿ ಶೀಲ ಭೂ
೨೦. .... [ವಿ]ದ್ವಜ್ಜನ ಪ್ರಸನ್ನರುಂ । ಸ್ವಕೀಯಾನುಷ್ಟಾನ ನಿಷ್ಟಾಮಹಿಮೊ
೨೧. ....ತರಿ ಸ್ಥಾನಾಚಾರ್ಯ್ಯರಂ ॥ ಸುಜನ ಜನನಿವಹಣಮಸ್ಕಾರ್ಯ್ಯ
೨೨. ....ವ್ರ್ಣದೇವ ವೇದಾರ್ತ್ಥಾನೇಕ ಶಾಸ್ತ್ರಪ್ರವೀಣರುಂ । ಯತಿಚತುರ
೨೩. ....ಜನ ಸಮೆಯ ಸಮೂಹ ಸಾಧ್ಯರುಂ । ಚಕ್ರವರ್ತ್ತಿಯ ಪರ
೨೪. ....ಮದ್ರಾಜಧಾನಿ ಪಟ್ಟಣಂ ಹುಲಿಗೆಱೆಯ ಕ್ರಿತ ಯುಗಾದಿಮ
೨೫. ....[ಥ] ದೇವರ ದಿಭ್ಯ ಶ್ರೀಪಾದಪದ್ಮಾರಾದಕರೆನಿಸಿದ ಶ್ರೀಮದ್ಧರಾಜಗು
೨೬. .... ದೇವರು । ದೇವರ ಶಿಕೆಗೆ ನಿತ್ಯ ಸ್ಥಿತಿ ಸೆವಂತ್ತಿಗೆಯ ಪುಜ್ಪ [ಮತ್ತಂ]
೨೭. .... ನಡೆವಂತಾಗಿ ದೇವಪುತ್ರಕ ಸಾಸಿರ್ವ್ವರ ಕೈಯ್ಯಲು ಕೊಟ್ಟ......
೨೮. .... ಸೊಮಯ್ಯ ಕೊಟ್ಟ ಗದ್ಯಾಣಂ ಮೂಱು । ಹೆರ್ಗ್ಗಡೆ ಮ.....
೨೯. .... ಈಕ್ಕನ್ತಿ ಹೊನ್ನ ಬಡ್ಡಿಯಲು ಚಂದ್ರಾರ್ಕ್ಕ ತಾರಂಬರ ನಡೆ[ಸು]...

ಶಾಸನದ ಸಾರಾಂಶ

ಈ ಶಾಸನದ ಪ್ರತಿಯೊಂದು ಸಾಲಿನ ಪ್ರಾರಂಭದ ಅಕ್ಷರಗಳು ಸವೆದಿವೆ. ಹೀಗಾಗಿ ಹಲವು ವಿವರಗಳು ಅಸ್ಪಷ್ಟವಾಗಿವೆ. ಶಾಸನದ ಪ್ರಾರಂಭದಲ್ಲಿ ಶಿವಸ್ತುತಿ ಪದ್ಯವಿದೆ. ಪೂಜಾರಿ ಸೋಮಯ್ಯ, ರುದ್ರಶಕ್ತಿಮುನಿನಾಥನ ಪೆರ್ಗ್ಗಡೆ ಮಲ್ಲಿದೇವನ

ವರ್ಣನೆಗಳಿವೆ. ಪೆರ್ಗ್ಗಡೆ ಮಲ್ಲಿದೇವನು ಹೊಯ್ಸಳರ ಇಮ್ಮಡಿ ವೀರಬಲ್ಲಾಳದೇವನ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. ೧೨೦೬–೦೭ರಲ್ಲಿ ರಾಜಧಾನಿ ಪಟ್ಟಣ ಅಣ್ಣಿಗೇರಿಯ ದಕ್ಷಿಣ ವಾರಣಾಸಿ ಎಂದೆನಿಸಿದ ಸ್ವಯಂಭು ಅಮೃತೇಶ್ವರ ದೇವರಿಗೆ ಸ್ಥಾನಾಚಾರ್ಯರ (ಅಕ್ಷರಗಳು ಸವೆದಿರುವುದರಿಂದ ಹೆಸರು ಸ್ಪಷ್ಟವಿಲ್ಲ) ಸನ್ನಿಧಿಯಲ್ಲಿ ಭೂದಾನ ಮಾಡಿದನು. ಸೋಮಯ್ಯನು ಅಮೃತೇಶ್ವರ ದೇವರ ಶಿಖೆಗೆ ಪ್ರತಿನಿತ್ಯ ಸೇವಂತಿಗೆ ಹೂವುಗಳನ್ನು ಏರಿಸಲು ಮೂರು ಗದ್ಯಾಣಗಳನ್ನು ದೇವಪುತ್ರಕರಾದ ಸಾಸಿರ್ವರ ನೇತೃತ್ವದಲ್ಲಿ ದಾನ ಮಾಡಿದನು. ಈ ಗದ್ಯಾಣಗಳ ಬಡ್ಡಿಯಲ್ಲಿ ಆ ಕಾರ್ಯವು ಸೂರ್ಯಚಂದ್ರನಕ್ಷತ್ರ ಇರುವವರೆಗೂ ನಡೆಸುವರು.

ಶಾಸನ ಸಂಖ್ಯೆ : ೭

ಅಣ್ಣಿಗೇರಿ ಪಟ್ಟಣದ ಹೊರಭಾಗದಲ್ಲಿರುವ ತೋಂಟದಾರ್ಯ ಮಠದ ಆವರಣದಲ್ಲಿನ ಈಶ್ವರ ದೇವಾಲಯದ ನವರಂಗದ ದ್ವಾರಬಂಧದ ಬಲಬದಿಯ ಭಿತ್ತಿಗಂಬದ ಪೀಠದ ಮೇಲಿದೆ. ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಈ ಶಾಸನದಲ್ಲಿ ಒಟ್ಟು ಹದಿನೈದು ಸಾಲುಗಳಿವೆ. ಇದರಲ್ಲಿ "ಹೋಸಣ ಚಕ್ರವರ್ತ್ತಿ ವೀರಬಲ್ಲಾಳದೇವರ ವರ್ಷದ ೧೯ ಸುಕ್ಲ ಸಂವತ್ಸರದ ಜೇಷ್ಠ ಬಹುಳದಮಾವಾಸೆ ಸೋಮವಾರ" ಎಂಬ ಕಾಲಮಾನದ ನಿರೂಪಣೆಯಿದೆ. ಇದು ಕ್ರಿ.ಶ. ೧೨೧೯ರ ಜೂನ್ ೪, ಗುರುವಾರಕ್ಕೆ ಸಮನಾಗುತ್ತದೆ.

ಶಾಸನದ ಪಾಠ

೧. ನಮಸ್ತುಂಗ ಸಿರಶ್ಚುಂಬಿ ಚಂದ್ರಚಾಮರ ಚಾರವೆ ತ್ರೈಲೋಕ್ಯನಗರಾರಂಭ

೨. ಮೂಲಸ್ತಂಭಾಯ ಸಂಭವೆ ॥ ಸ್ವಸ್ತಿ ಶ್ರೀಮತು ಯಾದವನಾರಾ

೩. ಯಣಂ ಭುಜಬಳಪ್ರತಾಪ ಹೋಸಣ ಚಕ್ರವರ್ತ್ತಿ ವೀರಬಲ್ಲಾಳದೇವರ

೪. ವರ್ಷದ ೧೯ ಸುಕ್ಲ ಸಂವತ್ಸರದ ಜೇಷ್ಠ ಬಹುಳದಮಾವಾಸೆ ಸೋಮವಾರ

೫. ದಂದು ಶ್ರೀಮದ್ರಾಜಧಾನಿ ಪಟ್ಟಣವಣಿಂಗೆಜಿಯ ಶ್ರೀ ವೀರುಪಾಕ್ಷ(ದೇ)

೬. ವರಸ್ತಾನಾಚಾರ್ಯ್ಯ ಮಲ್ಲಿಕಾರ್ಜ್ಜುನದೇವರ ಮಗನು ಶ್ರೀಮತು ರಾಯ

೭ ಹಣಿಗಂಡ ಪೆಂಡಾರಜಂಗುಳಿ ಸೋ(ಸಾ)ಹಣಿ...ಯರಗಂಡ ಶ್ರೀ ಬಳ್ಳೇಶ್ವ

೮. ರದೇವರ ದಿಬ್ಯ ಶ್ರೀಪಾದಪದ್ಮಾರಾಧಕರಪ್ಪ ಗಂಡಪಿಂಡಾರ ಕಾಳೇಯ

೯. ಸೋ(ಸಾ)ಹಣಿಯ ಮಗ ಸೋವೆಯ.........ಹಣಿ ತಮ್ಮಾರಾದ

೧೦. ರಪ್ಪ ಮಲ್ಲಿಕಾರ್ಜ್ಜುನದೇವರ ಗುರು.....ಕ್ಕೆಂದು ಆಚಾರ್ಯ್ಯ...

೧೧. ಯಲು ಹೊಂಗೆ ತಿಂಗಳಿಂಗೆ ಹಾಗವೊಂದಱ ವ್ರಿಧಿಯಲು ಏಕಾ

೧೨. ದಶರುದ್ರರಾಗಿ ಸಂಕಲ್ಪಿಸಿ ಹಂನ್ನೊ(ಂ)ದು ..... ತಪೋಧನರಿಗೆ ಆಹಾ

೧೩. ರದಾನಕ್ಕೆಂದು ಕೊಟ್ಟ ಗದ್ಯಾಣವೆರಡು ಈ ಧರ್ಮ್ಮವನು ಆ ಸ್ಥಳದಾ

೧೪. ಚಾರ್ಯ್ಯರು ಚಂದ್ರಾರ್ಕ್ಕತಾರಂಬರಂ ನಡಸುವರು ॥ ಮಂ

೧೫. ಗಳ ಮಹಾಶ್ರೀ

ಶಾಸನದ ಪಾಠ

ಶಾಸನದ ಪ್ರಾರಂಭದಲ್ಲಿ ಶಿವಸ್ತುತಿ ಎಂಬ ಪದ್ಯವಿದೆ. ಹೊಯ್ಸಳರ ಇಮ್ಮಡಿ ವೀರಬಲ್ಲಾಳದೇವನ ಆಳ್ವಿಕೆಯ ಸಂದರ್ಭದಲ್ಲಿ, ರಾಜಧಾನಿ ಪಟ್ಟಣ ಅಣ್ಣಿಗೇರಿಯ ವೀರುಪಾಕ್ಷದೇವರ ಸ್ಥಾನಾಚಾರ್ಯನಾದ ಮಲ್ಲಿಕಾರ್ಜುನದೇವನ ಮಗನೂ (ಶಿಷ್ಯ), ರಾಯಹಣಿಗಂಡನೂ, ಪೆಂಡಾರಜಂಗಳಿ ಸೋಹಣಿಯರಗಂಡನೂ, ಬಳ್ಳೇಶ್ವರದೇವರ ಆರಾಧಕನೂ ಗಂಡಪಿಂಡಾರ ಕಾಳೇಯ ಸೋ(ಸಾ)ಹಣಿಯ ಮಗ ಸೋವೆಯಸಾಹಣಿ ತನ್ನ ಆರಾಧನೆಯ ಮಲ್ಲಿಕಾರ್ಜುನದೇವರ ಆಚಾರ್ಯರಿಗೆ ಪ್ರತಿ ತಿಂಗಳು ಒಂದು ಹಾಗದಂತೆ ಕೊಡಮಾಡಲು ಸಂಕಲ್ಪಿಸಿ ಹನ್ನೊಂದು ಹಾಗವನ್ನು ತಪೋಧನರ ಆಹಾರದಾನಕ್ಕೆ ಎರಡು ಗದ್ಯಾಣಗಳನ್ನು ಕೊಟ್ಟನು. ಈ ಧರ್ಮವನ್ನು ಆ ಸ್ಥಳದ ಆಚಾರ್ಯರು ಸೂರ್ಯಚಂದ್ರ ನಕ್ಷತ್ರಗಳು ಇರುವವರೆಗೂ ನಡೆಸುವರು. ಮಂಗಳವಾಗಲಿ.

ಶಾಸನ ಸಂಖ್ಯೆ : ೮

ಅಣ್ಣಿಗೇರಿ ಪಟ್ಟಣದ ಹೊರಭಾಗದಲ್ಲಿರುವ ತೋಂಟದಾರ್ಯ ಮಠದ ಆವರಣದಲ್ಲಿನ ಈಶ್ವರ ದೇವಾಲಯದ ನವರಂಗದ ದ್ವಾರಬಂಧದ ಎಡಬದಿಯ ಭಿತ್ತಿಗಂಬದ ಪೀಠದ ಮೇಲಿದೆ. ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಈ ಶಾಸನದಲ್ಲಿ ಒಟ್ಟು ಹದಿನೇಳು ಸಾಲುಗಳಿವೆ. ಇದರಲ್ಲಿ "ಹೋಯ್ಸಣ ಚಕ್ರವರ್ತಿ ವೀರಬಲ್ಲಾಳದೇವ ವರ್ಷದ ೧೭ನೆಯ ಪ್ರಭವ ಸಂವತ್ಸರದ ಮಾಘ ಬಹುಳದಮಾವಾಸೆ ಸೋಮವಾರದ ಬ್ಯತಿಪಾತ ಪುಂಣ್ಯತಿಥಿ" ಎಂಬ ಕಾಲಮಾನದ ನಿರೂಪಣೆಯಿದೆ. ಇದು ಕ್ರಿ.ಶ. ೧೨೦೮ರ ಫೆಬ್ರುವರಿ ೧೭ ರವಿವಾರಕ್ಕೆ ಸಮನಾಗುತ್ತದೆ.

ಶಾಸನದ ಪಾಠ

೧. ಸ್ವಸ್ತಿ ಶ್ರೀಮತು ಯಾದವನಾರಾಯಣಂ ಭುಜಬಳಪ್ರತಾಪ ಹೋ
೨. ಯ್ಸಣಚಕ್ರವರ್ತ್ತಿ ವೀರಬಲ್ಲಾಳದೇವ ವರ್ಷದ ೧೭ನೆಯ ಪ್ರಭವ ಸಂವ
೩. ತ್ಸರದ ಮಾಘ ಬಹುಳದಮಾವಾಸೆ ಸೋಮವಾರದ ಬ್ಯತಿ
೪. ಪಾತ ಪುಂಣ್ಯ ತಿಥಿಯಂದು ಶ್ರೀಮದ್ರಾಜಧಾನಿ ಪಟ್ಟಣವಣ್ಣಿ
೫. ಗೆಱೆಯ ಶ್ರೀ ವೀರುಪಾಕ್ಷದೇವರಾಚಾರ್ಯ್ಯ ಮಲ್ಲಿ
೬ ಕಾರ್ಜ್ಜುನದೇವರ ಮಗಳು ದೇವ್ವಯ ಸಾವಣಿಯ ಮದವಳಿಗೆ
೭ ವೋಜಂಮ್ಮವ್ವೆ ಗುಮಪರ್ವ್ವಕ್ಕೆಂದು ಆಚಾರ್ಯ್ಯಂ ಕೈಯಲು ಪೊಂಗೆ ಹಾ
೮. ವ್ರಿಥ್ಥಿಯಲು ಏಕಾದಶರುದ್ರರಾಗಿ ಸಂಕಲ್ಪಿಸಿ
೯. ದು ಮನುಷ್ಯ ತಪೋಧನರಿಗಾಹಾರ ದಾನಕ್ಕೆಂದು ಕೊಟ್ಟ ಗದ್ಯಾಣವೊಂದ
೧೦. ಂಲೆ ಧರ್ಮ್ಮಮನು ಆ ಸ್ಥಳದಾಚಾರ್ಯ್ಯರು ಚಂದ್ರಾರ್ಕ್ಕ
೧೧. ತಾರಂಬರಂ ನಡಸುವರು ಮಂಗಳ
೧೨. ಮಹಾಶ್ರೀ ೞ ಮತಂತೆ ಆ ದೇವೆಯ ಸಾಹಣಿಯ ಮದ
೧೩. ವಳಿಗೆ ವೋಂಮ್ಮವ್ವೆ ಹೊಂಗೆ ಹಾಗಂ ಬೆಳೆವ್ರಿಥಿಯ ಲೆಕ್ಕದಿಂ ಕೊ
೧೪. ಟ್ಟ ಗದ್ಯಾಣಂಬೊಂದು ಆ ವ್ರಿಥಿಯ ಧನದಲ್ಲಿ ತಿಂಗಳಿಂಗೆ ಹಾಗದ ಧೂಪ
೧೫. ತ್ರುಸ್ತಿಲೆ ದೇವರ ಸಿಖೆಗೆ ನಾಲ್ವತ್ತರಳ ನಡಸುವರು ಅಂತಾಧರ್ಮ್ಮನು ಆ ಸ್ತಾ
೧೬. ನದಾಚಾರ್ಯ್ಯರು ಆಚಂದ್ರಾರ್ಕ್ಕತಾರಂಬರಂ ಪ್ರತಿಪಾಳುಸವರು ॥ ಮಂ
೧೭. ಗಳ ಮಹಾಶ್ರೀ ॥ ೞ

ಶಾಸನದ ಪಾಠ

ಹೊಯ್ಸಳರ ಇಮ್ಮಡಿ ವೀರಬಲ್ಲಾಳದೇವನ ಆಳ್ವಿಕೆಯ ಸಂದರ್ಭದಲ್ಲಿ, ರಾಜಧಾನಿ ಪಟ್ಟಣ ಅಣ್ಣಿಗೇರಿಯ ವೀರುಪಾಕ್ಷದೇವರ ಸ್ಥಾನಾಚಾರ್ಯನಾದ ಮಲ್ಲಿಕಾರ್ಜುನದೇವನ ಮಗಳೂ (ಶಿಷ್ಯೆ), ದೇವಯ್ಯ ಸಾಹಣಿಯ ಮದವಳಿಗೆಯೂ ಆದ ವೋಜಮ್ಮವ್ವೆ ಗುಮಪರ್ವಕ್ಕೆಂದು (ಗುರುಪರ್ವ) ಆಚಾರ್ಯನಿಗೆ ಪೊಂಗ, ಹಾಗ ವ್ರಿತ್ತಿಯಾಗಿ ಕೊಡಲು ಸಂಕಲ್ಪಿಸಿ, ತಪೋಧನರ ಆಹಾರದಾನಕ್ಕಾಗಿ ಒಂದು ಗದ್ಯಾಣವನ್ನು ದಾನ ಮಾಡಿದಳು. ಈ ದಾನವನ್ನು ಆ ಸ್ಥಳದ ಆಚಾರ್ಯರು ಸೂರ್ಯಚಂದ್ರನಕ್ಷತ್ರಗಳು ಇರುವವರೆಗೂ ನಡೆಸುವರು. ಮಂಗಳವಾಗಲಿ. ಆ ದೇವಯ್ಯ ಸಾಹಣಿಯ ವೊಮ್ಮವ್ವೆ ಹೊಂಗೆ (ಪೊನ್ನು), ಹಾಗ, ಬೆಳೆ ವ್ರಿತ್ತಿಯಾಗಿ ಒಂದು ಗದ್ಯಾಣವನ್ನು ಕೊಟ್ಟಳು. ಆ ವ್ರಿತ್ತಿಯಲ್ಲಿ ಪ್ರತಿತಿಂಗಳು ದೇವರಿಗೆ ಧೂಪ ಇತ್ಯಾದಿಗಳನ್ನು ನಡೆಸಲಾಗುವುದು. ಈ ಧರ್ಮವನ್ನು ಆ ಸ್ಥಾನದ ಆಚಾರ್ಯರು ಸೂರ್ಯಚಂದ್ರನಕ್ಷತ್ರಗಳು ಇರುವವರೆಗೂ ನಡೆಸುವರು. ಮಂಗಳವಾಗಲಿ.

ಶಾಸನ ಸಂಖ್ಯೆ : ೯

ಅಮೃತೇಶ್ವರ ದೇವಾಲಯದ ದಕ್ಷಿಣ ಬದಿಯಲ್ಲಿರುವ ಸ್ತಂಭದ ಪೀಠದ ಮೇಲಿದೆ. ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಈ ಶಾಸನದಲ್ಲಿ ಒಟ್ಟು ಆರು ಸಾಲುಗಳಿವೆ. ಇದರಲ್ಲಿ "ಹೊಯಿಸಳ ಚಕ್ರವರ್ತಿ ವೀರಬಲ್ಲಾಳದೇವ ವರ್ಷದ ೧೭ನೆಯ

ಪ್ರಭವ ಸಂವತ್ಸರದ ಮಾಘ ಸುದ್ಧ ಪೌರ್ಣ್ನಮಿ ಸೋಮವಾರ ಸೋಮಗ್ರಹಣ ಪುಣ್ಯತಿಥಿ" ಎಂಬ ಕಾಲಮಾನದ ನಿರೂಪಣೆಯಿದೆ. ಇದು ಕ್ರಿ.ಶ. ೧೨೦೮ರ ಫೆಬ್ರುವರಿ ೩ ರವಿವಾರಕ್ಕೆ ಸಮನಾಗುತ್ತದೆ.

ಶಾಸನದ ಪಾಠ

೧. ಸ್ವಸ್ತಿ ಶ್ರೀಮತು ಯಾದವ ನಾರಾಯಣಂ ಭುಜಬಳ ಪ್ರತಾಪ ಹೊಯಿಸಳ ಚಕ್ರವರ್ತ್ತಿ ವೀರ

೨. ಬಲ್ಲಾಳದೇವ ವರ್ಷದ ೧೭ನೆಯ ಪ್ರಭವ ಸಂವತ್ಸರದ ಮಾಘ ಸುದ್ಧ ಪೌರ್ಣ್ನಮಿ ಸೋಮವಾರ

೩. ಸೋಮಗ್ರಹಣ ಪುಣ್ಯತಿಥಿಯಲು ॥ ಶ್ರೀಮದ್ರಾಜಧಾನಿ ಪಟ್ಟಣವಂಣ್ನಿಗೆಜಿಯ ಶ್ರೀ

೪. ಸ್ವಯಂಭು ದಕ್ಷಿಣ ವಾರಣಾಸಿ ಶ್ರೀಮದಮೃತೇಶ್ವರದೇವರ ಶಿಖೆಗೇಂ ನಿತ್ಯಸ್ಥಿತಿ

೫. ಅಯ್ವತ್ತು ಪುಷ್ಪ ನಡೆವಂತಾಗಿ ಪಿರಿಯರಸಿ ಪದ್ಮಲದೇವಿಯರ ಕೂಸ ಯೋಚಂಣ್ನ ಕೊಟ್ಟ

೬. ಗದ್ಯಾಣವೊಂದು ಯೀ ಹೊನ್ನ ಬಡ್ಡಿಯಲು ಚಂದ್ರಾರ್ಕ ತಾರಂಬರ ದೇವಪುತ್ರಕ ಸಾಸಿರ್ವ್ವರು ನಡಸುವರು ॥

ಶಾಸನದ ಸಾರಾಂಶ

ಹೊಯ್ಸಳರ ವೀರಬಲ್ಲಾಳದೇವನ ಆಳ್ವಿಕೆಯ ಸಂದರ್ಭದಲ್ಲಿ, ರಾಜಧಾನಿ ಪಟ್ಟಣ ಅಣ್ಣಿಗೇರಿಯ ಸ್ವಯಂಭು ದಕ್ಷಿಣ ವಾರಣಾಸಿ ಅಮೃತೇಶ್ವರದೇವರ ಶಿಖೆಗೆ ಪ್ರತಿನಿತ್ಯ ಐವತ್ತು ಪುಷ್ಪಗಳನ್ನು ಏರಿಸಲು ಬೇಕಾದ ಖರ್ಚನ್ನು ನಿಭಾಯಿಸಲು ಅನುವಾಗುವಂತೆ ವೀರಬಲ್ಲಾಳದೇವನ ಹಿರಿಯರಸಿ (ಪಟ್ಟದರಸಿ) ಪದ್ಮಲದೇವಿಯ ಕೂಸ (ಪ್ರೀತಿಯ ಮಗನಂತಿರುವ) ಏಚಣ್ಣನು ಒಂದು ಗದ್ಯಾಣವನ್ನು ದಾನ ಮಾಡಿದನು. ಈ ಹೊನ್ನವನ್ನು ಸಾಲವಾಗಿ ಕೊಟ್ಟು, ಅದರಿಂದ ಬರುವ ಬಡ್ಡಿಯ ಹಣದಿಂದ ನಿರಂತರವಾಗಿ ಪುಷ್ಪಗಳನ್ನು ತಂದು ದೇವರಿಗೆ ಏರಿಸುವ ಏರ್ಪಾಟು ಮಾಡುವ ಜವಾಬ್ದಾರಿಯನ್ನು ದೇವಪುತ್ರಕ ಸಾಸಿರ್ವರಿಗೆ ನೀಡಲಾಯಿತು.

೪. ಶಾಸನಗಳ ಸಾಂಸ್ಕೃತಿಕ ಮಹತ್ವ

ಹೊಯ್ಸಳರು ಕ್ರಿ.ಶ. ೧೦೦೬ ರಿಂದ ೧೯೮ರವರೆಗೆ ಚೋಳರ ಮತ್ತು ಕ್ರಿ.ಶ. ೧೯೮ ರಿಂದ ೧೨೦೦ರವರೆಗೆ ಕಲ್ಯಾಣದ ಚಾಳುಕ್ಯರ ಸಾಮಂತರಾಗಿ ಆಳ್ವಿಕೆ ಮಾಡಿದ್ದಾರೆ. ನಂತರದಲ್ಲಿ ಕ್ರಿ.ಶ. ೧೨೦೦ ರಿಂದ ೧೩೪೬ರವರೆಗೆ ಸ್ವಂತತ್ರರಾಗಿ ಆಳ್ವಿಕೆ ಮಾಡಿದ್ದಾರೆ. ಇಮ್ಮಡಿ ವೀರಬಲ್ಲಾಳದೇವನ ಆಳ್ವಿಕೆಯ ಕಾಲಾವಧಿಯಲ್ಲಿ ಅಣ್ಣಿಗೇರಿ ಪಟ್ಟಣದಲ್ಲಿ ಅನೇಕ ಸಾಂಸ್ಕೃತಿಕ ಚಟುವಟಿಕೆಗಳು ನಡೆದಿವೆ. ಈ ಪಟ್ಟಣದಲ್ಲಿ ಬೆಳಕಿಗೆ ಬಂದಿರುವ ಒಂಬತ್ತು ಶಾಸನಗಳು ಅಣ್ಣಿಗೇರಿ ಪಟ್ಟಣದ ಸಾಂಸ್ಕೃತಿಕ ಇತಿಹಾಸದ ವಿವಿಧ ಆಯಾಮಗಳ ಅಧ್ಯಯನಕ್ಕೆ ಅಪರೂಪದ ದಾಖಲೆಗಳಾಗಿವೆ.

೧. ಶಾಸನ ಸಂಖ್ಯೆ ೧, ೨, ೬, ೭ರಲ್ಲಿ "ಉತ್ತುಂಗವಾದ ಶಿರಸ್ಸನ್ನು ಚುಂಬಿಸತಕ್ಕಂತಹ ಚಂದ್ರನನ್ನು ಚಾಮರವನ್ನಾಗಿಸುವುದರ ಮೂಲಕ ಸುಂದರವಾಗಿರುವವನೂ, ಮೂರು ಲೋಕಗಳ ಉತ್ಪತ್ತಿಗೆ ಕಾರಣನೂ ಮತ್ತು ಆಧಾರಸ್ತಂಭನೂ ಆಗಿರುವಂತಹ ಶಂಭುವಿಗೆ (ಶಿವನಿಗೆ) ನಮಸ್ಕಾರಗಳು" ಎಂಬ ಪದ್ಯವಿದೆ.

೨. ಈ ಶಾಸನಗಳಲ್ಲಿ ಇಮ್ಮಡಿ ವೀರಬಲ್ಲಾಳದೇವನ ಬಿರುದುಗಳಾದ ಯಾದವನಾರಾಯಣ, ಭುಜಬಳಪ್ರತಾಪ, ಪ್ರಥ್ವೀವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟ್ಟಾರಕ, ಬಲ್ಲಾಳಭೂಪಾಳ, ಹೊಯ್ಸಳಚಕ್ರವರ್ತಿ ಎಂಬವುಗಳು ದಾಖಲಾಗಿವೆ.

೩. ಶಾಸನ ಸಂಖ್ಯೆ ೩ರಲ್ಲಿ ಹೊಯ್ಸಳರ ವಿನಯಾದಿತ್ಯನಿಂದ ಇಮ್ಮಡಿ ವೀರಬಲ್ಲಾಳದೇವನವರೆಗಿನ ವಂಶಾವಳಿಯ ಸವಿಸ್ತಾರವಾದ ಪರಿಚಯವಿದೆ.

೪. ಶಾಸನ ಸಂಖ್ಯೆ ೧, ೩, ೬, ೭, ೮, ೯ರಲ್ಲಿ ಅಣ್ಣಿಗೇರಿಯನ್ನು ದಕ್ಷಿಣದ ವಾರಣಾಸಿ, ರಾಜಧಾನಿ ಪಟ್ಟಣ ಅಣ್ಣಿಗೇರಿ ಎಂದೆಲ್ಲ ನಿರೂಪಿಸಲಾಗಿದೆ.

೫. ಶಾಸನ ಸಂಖ್ಯೆ ೧, ೨, ೫, ೭, ೮, ೯ರಲ್ಲಿ ಅಮೃತೇಶ್ವರ, ನಗರೇಶ್ವರ, ವಿರುಪಾಕ್ಷ ದೇವಾಲಯಗಳ ಪ್ರಸ್ತಾಪಗಳಿವೆ.

೬. ಶಾಸನ ಸಂಖ್ಯೆ ೧, ೩, ೪, ೬, ೯ರಲ್ಲಿ ದೇವರ ನೈವೇದ್ಯಕ್ಕೆ ಭೂಮಿ, ಹಣ ಮತ್ತು ಅವುಗಳ ಪ್ರಮಾಣ, ದಾನ ಮಾಡಿದ ವಸ್ತುಗಳು, ಭೂಮಿಯ ಚಕ್ಕಬಂಧಿಯ ನಿರೂಪಣೆಗಳಿವೆ.

೭ ಶಾಸನ ಸಂಖ್ಯೆ ೧ರಲ್ಲಿ ಸೋಮಯ್ಯ ಎಂಬ ಪೂಜಾರಿಯ ಉಲ್ಲೇಖವಿದೆ.

೮. ಶಾಸನ ಸಂಖ್ಯೆ ೭, ೮ರಲ್ಲಿ ಅಣ್ಣಿಗೇರಿಯ ವೀರುಪಾಕ್ಷ ದೇವಾಲಯದ ಸ್ಥಾನಾಚಾರ್ಯನಾದ ಮಲ್ಲಿಕಾರ್ಜುನದೇವನ ನಿರೂಪಣೆಗಳಿವೆ.

೯. ಶಾಸನ ಸಂಖ್ಯೆ ೧, ೬ರಲ್ಲಿ ಇಮ್ಮಡಿ ವೀರಬಲ್ಲಾಳದೇವನ ಮಾಂಡಳಿಕನಾದ ಬಾಚಯ್ಯನ (ಬಾಚಿದೇವರಸ) ಮತ್ತು ಪೆರ್ಗಡೆಯಾದ ಮಲ್ಲಿದೇವನ ಪ್ರಸ್ತಾಪಗಳಿವೆ.

೧೦. ಶಾಸನ ಸಂಖ್ಯೆ ೩, ೪, ೫, ೬, ೯ರಲ್ಲಿ ರಾಮಯ್ಯ, ತೊಂಡಯ್ಯ, ಕೇಶವಠಕ್ಕರ, ಡಿಂಗರಿಗ (ಸೇವಕ), ವಜಥಟ್ಟಿನ ಕಾಳೆಯ (ಕಾಳಯ್ಯ), ಮಾಳೆಯ (ಮಾಳಯ್ಯ), ರಾಹುತ, ಸೋಮಯ್ಯ, ಏಚಣ್ಣ, ಇಮ್ಮಡಿ ವೀರಬಲ್ಲಾಳದೇವನ ಪಟ್ಟದರಸಿ ಪದ್ಮಲದೇವಿಯ ಉಲ್ಲೇಖಗಳಿವೆ.

ಆಧಾರಸೂಚಿ

೧. ಹಂಜೆ ಅಪ್ಪಣ್ಣ ಎನ್., "ತಿರುಳ್ಗನ್ನಡನಾಡಿನ ಆಡಳಿತ ವಿಭಾಗಗಳು", ಶೋಧ ಸಂ. ೫/೧ (ಜುಲೈ-೨೦೧೫), ಪು. ೩೨-೬೧, ಡಾ. ಹಾಮಾನಾ ಸಂಶೋಧನ ಕೇಂದ್ರ, ಉಜಿರೆ.

೨. ಪಾಡಿಗಾರ ಶ್ರೀನಿವಾಸ ವಿ. (ಸಂ.), ಇನ್ಸಕ್ರಿಪ್ಶನ್ಸ್ ಆಫ್ ದಿ ಚಲುಕ್ಯಾಸ್ ಆಫ್ ಬಾದಾಮಿ (೨೦೧೦), ಶಾ.ಸಂ. ೧೩೯.

೩. ಎನ್ಯುವಲ್ ರಿಪೋರ್ಟ್ಸ್ ಆನ್ ಸೌತ್ ಇಂಡಿಯನ್ ಎಪಿಗ್ರಫಿಯ ೧೯೨೮-೨೯ : ಶಾ.ಸಂ. ೧೮೬, ೧೮೭, ೧೮೮, ೧೮೯, ೧೯೦, ೧೯೧, ೧೯೨, ೧೯೩, ೧೯೪, ೧೯೫, ೧೯೬, ೧೯೭, ೧೯೮, ೧೯೯, ೨೦೦, ೨೦೧, ೨೦೨, ೨೦೩, ೨೦೪, ೨೦೫, ೨೦೬, ೨೦೭, ೨೦೮, ೨೦೯, ೨೧೦, ೨೧೧. ೧೯೩೬-೩೭ : ಶಾ.ಸಂ. ೯೮. ೧೯೪೬-೪೭ : ಶಾ.ಸಂ. ೩.

೪. ಕಲಬುರ್ಗಿ ಎಂ.ಎಂ. (ಸಂ.), ಧಾರವಾಡ ಜಿಲ್ಲೆಯ ಶಾಸನ ಸೂಚಿ (೧೯೭೫), ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫. ಗೋಗಿ ಹನುಮಾಕ್ಷಿ, "ಅಣ್ಣಿಗೇರಿಯಲ್ಲಿ ದೊರೆತ ಹೊಸ ಶಾಸನಗಳು", ಅನುಶಾಸನ ಸಂಪುಟ-ಒಂದು (೨೦೦೨), ಪು. ೧೭೦-೧೮೦.

೬ ಹಂಜೆ ಅಪ್ಪಣ್ಣ ಎನ್., "ಅಣ್ಣಿಗೇರಿಯ ಸುಮತಿನಾಥ ತೀರ್ಥಂಕರನ ಶಿಲ್ಪ ಮತ್ತು ಪಾದಪೀಠ ಶಾಸನ", ಸ್ಟಡೀಜ್ ಇನ್ ಕರ್ನಾಟಕ ಹಿಸ್ಟ್ರಿ ಆಂಡ್ ಕಲ್ಚರ್ ಪ್ರೋಸಿಡಿಂಗ್ಸ್ ವಾಲ್ಯೂಮ್-ಗಿಖಖ (೨೦೦೮), ಪು. ೧೧೫. "ಅಣ್ಣಿಗೇರಿಯ ಎರಡು ಜೈನ ಶಿಲಾಫಲಕ ಶಾಸನಗಳು", ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ. ೮೨/೩ (ಜುಲೈ/ಸಪ್ಟೆಂಬರ-೨೦೦೮), ಪು. ೫೭-೬೦, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. "ನವಲಗುಂದ ತಾಲ್ಲೂಕಿನ ಜೈನಾವಶೇಷಗಳು", ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೦೮), ಪು. ೧೬-೧೮, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೭. ನವಲಗುಂದ ರವಿಕುಮಾರ, "ಕನ್ನಡ ತಾಮ್ರಶಾಸನ ಪತ್ತೆ", ಪ್ರಜಾವಾಣಿ ದಿನಪತ್ರಿಕೆ, ೨೦೧೩ರ ಡಿಸೆಂಬರ್ ೩, ಪು. ೫.

೮. ಈ ಎಲ್ಲ ಶಾಸನಗಳ ಪಾಠಗಳು ಮತ್ತು ಸಾರಾಂಶಗಳನ್ನು ಸಂಗ್ರಹಿಸಲು ಸಹಕರಿಸಿದ ಡಾ. ಶ್ರೀನಿವಾಸ ಪಾಡಿಗಾರ, ಶ್ರೀ ರವಿಕುಮಾರ ನವಲಗುಂದ, ಡಾ. ಅಪ್ಪಣ್ಣ ಎನ್. ಹಂಜೆ ಅವರಿಗೆ ಕೃತಜ್ಞನಾಗಿದ್ದೇನೆ.

ತೀರ್ಥಹಳ್ಳಿಯ ಮಳಲಿಮಕ್ಕಿ ಹಾಗೂ ಶೃಂಗೇರಿ ಹಸೂರುಮಕ್ಕಿ ಅಪ್ರಕಟಿತ ಶಾಸನಗಳು

ಡಾ. ಎಂ.ಎ. ಪ್ರಭಾಕರ್*

ಮಳಲಿಮಕ್ಕಿ ಶಾಸನ: ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕಿನ ದೇಮಲಾಪುರ ಗ್ರಾಮದ ಮಳಲಿಮಕ್ಕಿಯ ಬ್ರಹ್ಮಲಿಂಗ ದೇವಸ್ಥಾನದ ಸಮೀಪದ ಮಣ್ಣಿನಲ್ಲಿ ಹುದುಗಿ ಹೋಗಿದ್ದ ದಾನ ಶಾಸನವನ್ನು ಇತ್ತೀಚೆಗೆ ಪತ್ತೆಹಚ್ಚಲಾಯಿತು. ಮೊದಲ ಬಾರಿಗೆ ಈ ಶಾಸನದ ಪಾಠವನ್ನು ಇಲ್ಲಿ ನೀಡಲಾಗಿದೆ. ಪ್ರಸ್ತುತ ಶಾಸನವು ವಿಜಯನಗರ ಅರಸ ೧ನೇ ದೇವರಾಯನ ಅವಧಿಯದಾಗಿದ್ದು ಒಟ್ಟು ೨೫ ಸಾಲುಗಳನ್ನು ಒಳಗೊಂಡಿದೆ. ಶಾಸನದ ಕೆಲವು ಸಾಲುಗಳು ತೃಟಿತವಾಗಿದ್ದು, ಭಾಷೆ ಮತ್ತು ಲಿಪಿ ಸುಂದರವಾಗಿದೆ.

ಹರೂರು ಮಕ್ಕಿ ಶಾಸನ: ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲೂಕಿನ ನೆಮ್ಮಾರ್ ಗ್ರಾಮದ ಗದ್ದೆ ಬೈಲಿನಲ್ಲಿ ಲಭ್ಯವಾಗಿದೆ. ಈ ಶಾಸನವು ೨೯ ಸಾಲುಗಳನ್ನು ಒಳಗೊಂಡಿದೆ. ಇದು ವಿಜಯನಗರದ ಅರಸ ೧ನೇ ದೇವರಾಯನ ಅವಧಿಯದ್ದಾಗಿದೆ. ವಿಜಯನಗರದ ಅರಸರ ನಿರೂಪದಂತೆ ಅರಸು ಮನೆಯವರು ಅಥವಾ ಅವರ ಬಂಧುಗಳು ಆರಗದಲ್ಲಿ ಆಳ್ವಿಕೆ ನಡೆಸಿದರು. ವಿಜಯನಗರ ಅರಸರ ಕಾಲದಲ್ಲಿ ಆರಗವೇಂಟೆ ಆರಗ ರಾಜ್ಯದ ಮುಖ್ಯ ಸ್ಥಳವಾಗಿತ್ತು. ಈ ರಾಜ್ಯವು ಮೂರು ಪ್ರಮುಖ ಪಟ್ಟಣಗಳನ್ನು, ೧೮ ಕಂಪಣಗಳನ್ನು ಒಳಗೊಂಡಿತ್ತು. ವಿಜಯನಗರದ ಪತನಾನಂತರ ಆರಗ ರಾಜ್ಯವು ಕಣ್ಮರೆ ಆಯಿತು.

ಹರೂರುಮಕ್ಕಿ ಶಾಸನ
ಶೃಂಗೇರಿ ತಾಲ್ಲೂಕು ನೆಮ್ಮಾರ್ ಗ್ರಾಮದ
ಗದ್ದೆ ಬಯಲಿನಲ್ಲಿದ್ದ ಶಾಸನ
ಶಕವರ್ಷ ೧೩೩೦, (ಕ್ರಿ.ಶ. ೧೪೦೮)
ದೇವರಾಯ ಒಡೆಯ

೧) ಶ್ರೀಗಣಾಧಿಪತಯೇ ನಮಃ ನಮ ಸುಂಗ ಶಿರಶ್ಚುಂಬಿ ಚಂದ್ರ
೨) ಚಾಮರಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ
೩) ಸ್ವಸ್ತಿ ಶ್ರೀ ಶಕವರುಷ ೧೩೩೦ ನೆಯ. . . . . .
೪) . ಜ. . . . ಯ . ಪ್ರ. . ಬ . ಲು . ಶ್ರೀ ಮದ್ರಾರಾಜ
೫) ಧಿರಾಜರಾಜ ಪರಮೇಶ್ವರ ಶ್ರೀ ವೀರಪ್ರತಾಪ ಹರಿಹರ ಮಹಾ
೬) ರಾಯರಕುಮಾರದೇವರಾಯಒಡೆಯರು ಸುಕ ಸಂಕಥಾ ವಿನೋದ
೭) ದಿಂ ರಾಜ್ಯಂಗೆಯುತ್ತಲಿಹ ಪುಂಣ್ಯಕಾಲದಲುಆರಗದ ಹದಿ
೮) ನೆಂಟುಕಂಪಣದ ಒಳಗಣ ಕಿಕ್ಕುಂದನಾಡನುಲು ಬಾಗೆಯೊಳಗೆ
೯) ಮೆಣಸೆಯ ಬಕವೆಗ್ಗಡೆ ಭವಕಿ. . ಬೊಂಮಣ ವೆಗ್ಗಡೆಯ
೧೦) ಳ ಥ. . ಚತುಸೀಮೆಯ ಒಳಗಡೆಯ ಗಡಿಯ. . ಕಂ . ನಿ ಬೊಂಮಣ ಮಿ
೧೧) ನು ಕುಂಮರಿ ಕೋಹು . ಯಕಾ. ಗ ಅ . ಒಳಗಡೆ ಅ . . . ಯ

* ಇತಿಹಾಸ ಪ್ರಾಧ್ಯಾಪಕರು, ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ, ರಾಜೀವ್‌ಗಾಂಧಿ ಪರಿಸರ, ಶೃಂಗೇರಿ.

೧೨) ಕಾಲುಗದ್ದೆಯಲ್ಲಿ. . ಗದ್ದೆಬಯಲು. . . ಕ್ರಿ . . ಣ ಒಪ್ಪಗೊಡ ಬಡಗಣ

೧೩) ಯ. ಜಗಡಿಕೊ. . . . . ಬೆಂಕಿಕೂಡಿಗೆ. . ರಾಯ ಗಂ ಹ . ಡೆ.

೧೪) . ಯರ. . . ದೂಡ. . . ಯ್ಯ . . ಆರಾಯ. . ಡಕ ಬಲಗಡೆ ೦ಣ

೧೫) ಚಾಕದಂಬ ಗಣ. ತಂಗಿಯಬ್ಬೆ. ಗ್ವದ್ಯಾಣ ಕುಯಿ . . . . .

೧೬) ಬಲಗಡೆಯ ಬಂ . . ನೊಳಗಾದ .. ಡದ ನಾಡ. ಮ . . ಶ್ರೀ

೧೭) ಪಾದಂಗಳು ತುಂಗಾತೀರದ ಮಲ್ಲಿಕಾರ್ಜುನದೇವರ ಸಂನ್ನಿಧಿಯಲಿ . . . . . ಕ್ರಯದಾನ ಮೂಲವಾಗಿ ಆ ನಾಡವರು ಸುವರ್ಣೊದಕದಾನದಾರಾ ಪೂರ್ಬಕವಾ

೧೮) ಗಿ ದಾರ್ಯನ್ನೆರೆದುಕೊಟೆ ಉ ಆ ಭೂಮಿಗೆ ಸಲ್ಲುವ ನೀರವರಿಯೊಳ ಗುಳ್ಳ

೧೯) ಮನೆ ನಿದಿ ನಿಕ್ಷೇಪ ಜಲಪಾಷಣಅಕ್ಷೀಣಿ ಆಗಾಮಿಸಿದ್ಧ ಸಾಧ್ಯ

೨೦) ಅಷ್ಟ ಭೋಗತೇಜ ಸ್ವಾಮ್ಯ ಸಹಿತವಾಗಿ ಸರ್ವಮಾಂನ್ಯವಾಗಿ

೨೧) ಆಚಂದ್ರಾರ್ಕಸ್ಥಾಯಿಯಾಗಿ ಸಖದಿಂ ಭೋಗಿಸು ವಂತಾಗಿ ಆ ಬೊಂಮಣ್ಣ

೨೨) ಹೆಗಡೆಯರಕ್ರಯದಾನ ಪತ್ರ ಶಾಸನ ಯಿ ಧರ್ಮಕ್ಕೆ ಅಳುಪಿದವರಿಗೆ ವಾರಣಾಸಿ

೨೩) ಯಲೂ ಸಹಸ್ರ ಬ್ರಾಂಹ್ಮರನು ಕಪಿಲೆಯನು ವಧಿಸಿದ ದೋಶ ಯಿ ಧರ್ಮ

೨೪) ವನು ಪಾಲಿಸಿದವರಿಗೆ ವಾರಣಾಸಿಯಲೂ ಸಹಸ್ರ ಕವಿಲೆಯನು ಬಾಂಹ್ಮರಿಗೆ

೨೫) ದಾನವಕೊಟ್ಟ ಪಲ ಯಿಂತಪ್ಪುದಕ್ಕೆ ವೊಪ್ಪ ಆ ಮಲ್ಲಿದೇವರು, ಸ್ವದತ್ತಾಂ ಪರದತ್ತಾಂ

೨೬) ವಾಯೋ ಹರೇತಿ ವಸುಂಧರಾಂ ಸ್ರಷ್ಟಿರ್ವಷ ಸಹಸ್ರಾಣಿ ವಿಷ್ಠಾಯಾಂಜಾಯತೇ

೨೭) ಕ್ರಿಮಿಃದಾನಪಾಲನೊಯೋರ್ಮಧ್ಯೇದಾನಟ್ರೇಯೋನು ಪಾಲನಂ ದಾನಾ

೨೮) ತ್ಸರ್ಗ ಮವಾಪ್ನೋತಿ ಪಾಲನಾದಚ್ಚುತಂ ಪದಂ ॥ ಯಿಂತಮುದಕ್ಕೆ ಆ ನಾಡ

೨೯) ಸೇನಬೋವ ವಿಠಣನ ಬರಹ

ಶ್ರೀಶ್ರೀಶ್ರೀ

ಮಳಲಿಮಕ್ಕಿ ಶಾಸನ
ತೀರ್ಥಹಳ್ಳಿ ತಾಲ್ಲೂಕು
ಬ್ರಹ್ಮಲಿಂಗ ದೇವಸ್ಥಾನದ ಪಕ್ಕದಲ್ಲಿದ್ದ ಶಾಸನ
ಶಕವರ್ಷ ೧೩೪೧ (ಕ್ರಿ.ಶ. ೧೪೧೯) ಶ್ರೀ ದೇವರಾಯ

೧) ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇತ್ರೈ . ಕ್ಯ

೨) ನಗರಾರಂಭ ಮೂಲಸ್ತಂಬಾಯ ಶಂಭವೇ . . . .

೩) ಶ್ರೀ ದೇವರಾಯ ಮಹಾರಾಯ. . . .

೪) ಯ ಸ್ಥಾಪನಾಚಾರ್ಯ . . . . . ಪ್ರತಿಷ್ಠಾಚಾರ್ಯ .

೫) . . . . . ಮಸಕಾ . . . . . .

೬) ರಾಜ್ಯೋದಯ ಶಕವರುಷ ೧೩೪೧ ನೆಯರು ದಿರೋದ್ಧಾರಿ ಸಂವತ್ಸ .

೭) ರದ . . . ಜೇಷ್ಟಶುದ್ಧ ಬಿದಿಗೆ . . ವಾರದಂದುಗ . ಯ . . .

೮) . ಯ . . . ಳ ಮುಂದಿನ ತಂಮ ವೆಗ್ಗಡೆಯನು ಕಂನಂಗಿ ಆಂನ್ತು

೯) ಆದ್ಧಾನ . . . ತಂಗಿ ವೆಗ್ಗಡೆತಿಯು ಬೊಂಮವೆಗ್ಗಡೆ . . .

೧೦) ಯರು . ವ . . . . . . ಮುಂದಿನ ತಂಗಿದ ಬೊಂ
೧೧) ಮ ವೆಗ್ಗಡೆಯ ಬೊಂಮವೆಗ್ಗಡೆಯಆಕ್ಕ ಬೇಯಕ್ಕ ವೆಗ್ಗ
೧೨) ಡತಿಯರ . ಬೊಂವೆಗ್ಗಡೆಯರು ಮಾಡ್ಸಿದ ಲಿಂಗ ಪ್ರತಿ
೧೩) ಷ್ಟೆಯ ಮಾಡಿ ದೇವಾಲ್ಯವನುಕಟ್ಸಿ ಆ ಬ್ರಹ್ಮೇಶ್ವರ
೧೪) ದೇವರಿಗೆ ದೇವಾಸ ಮಣಲಿಯಲ್ಲಿ ನಾಕು . . . .
೧೫) . . . . ಬ್ಬಗಿಯಲಿ . . . . ಆಂನ್ತು
೧೬) ಆಯಿದುಹೊಂನ ಮಕ್ಕಿಯ ನುಣಿದು
೧೭) ಯಿ ಧರ್ಮವನೂ . . . ದೈವಕಾರ್ಯ್ಯ
೧೮) ವನೂ ಕಂನಂಗಿಯ ಬೊಂಮೆಯಜಯ್ಯಂ ಬೋ
೧೯) ಮ ಯರ ಹೆಗ್ಗಡೆಯರು ದಾರಾಪೂರ್ಬ
೨೦) ಕವಾಗಿ ಕೊಟ್ಟರು ಆ ಬ್ರಹ್ಮೇಶ್ವರ ಪುರ ಸರ್ವ
೨೧) ಮಾಂನ್ಯವಾಗಿ ಬ್ರಹ್ಮೇಶ್ವರದೇವರಿಗೆದಾರೆಯನ್ನರೆದು ಕೊಟ್ಟು
೨೨) ರ್ಮಕ್ಕೆ ಅಳುಪಿದವರಿಗೆ ವಾರಣಾಸಿಯಲಿ ಸಹಸ್ರ ಕಪಿಲೆಯ
೨೩) ನೂ ಬ್ರಾಹ್ಮರನೂಕೊಯಿದ ದೋಷಕ್ಕೆ ಹೋಹರು ಈಶಾಸ
೨೪) ನವ ಬರದ ನಾಡಸೇನಬೊವ ಸಿಂಗಣ್ಣನು . . .
೨೫) ಮಂಗಳ ಮಹಾ ಶ್ರೀಶ್ರೀಶ್ರೀ



ಹರೂರುಮಕ್ಕಿ ಶಾಸನ



ಮಳಲಿಮಕ್ಕಿ ಶಾಸನ

ಅಡಿಟಿಪ್ಪಣಿ

೧. ಎಪಿಗ್ರಾಫಿಯ ಕರ್ನಾಟಿಕಾ (ಪರಿಷ್ಕೃತ) ಸಂ. ೧೩.
೨. ಕಪ್ಪು ಶಾಯಿಯಿಂದ ತೆಗೆದ ಪಡಿ ಅಚ್ಚಿನಿಂದ ಓದಲಾಗಿದೆ.

೧೭

ಇಮ್ಮಡಿ ದೇವರಾಯನ ಪಂಪಾ ಸರೋವರದ ಅಪ್ರಕಟಿತ ಶಾಸನ

ಡಾ. ಎಸ್. ನಾಗರಾಜಪ್ಪ*

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ರಾಂಪುರ ಗ್ರಾಮದ ವ್ಯಾಪ್ತಿಯಲ್ಲಿರುವ ಪಂಪಾ ಸರೋವರದ ಬಳಿಯಲ್ಲಿ ವಿಜಯನಗರದ ಅರಸ ಇಮ್ಮಡಿ ದೇವರಾಯನ ಕಾಲದ ಶಾಸನ ಪತ್ತೆಯಾಗಿದೆ.[೧] ರಾಂಪುರ ಗ್ರಾಮದ ಸುತ್ತಮುತ್ತಲಿನ ಬೆಟ್ಟಗುಡ್ಡ ಮತ್ತು ಜಮೀನುಗಳಿಂದ ಬರುವ ನೀರಿನ ಹಳ್ಳವು ಪಂಪಾ ಸರೋವರದ ಮೂಲಕ ಹರಿದು, ಮುಂದೆ ತುಂಗಭದ್ರಾ ನದಿಯನ್ನು ಸೇರುವ ಬಳಿಯಲ್ಲಿನ ದೊಡ್ಡ ಬಂಡೆಯೊಂದರ ಮೇಲೆ ಈ ಶಾಸನವನ್ನು ಕೊರೆಯಲಾಗಿದೆ. ಈ ಶಾಸನ, ಇದರ ಬಳಿಯಲ್ಲಿ ಹಾಗೂ ಹಂಪಿ ಪರಿಸರದಲ್ಲಿ ಕಂಡುಬಂದಿರುವ ಪುರಾತತ್ವೀಯ ಕುರುಹುಗಳನ್ನು ಕೂಲಂಕಶವಾಗಿ ಪರಿಶೀಲಿಸುವ ಮತ್ತು ಅವುಗಳನ್ನು ಸಮೀಕರಿಸುವ ಪ್ರಯತ್ನ ಪ್ರಸ್ತುತ ಲೇಖನದ ಮುಖ್ಯ ಉದ್ದೇಶ.

ತುಂಗಭದ್ರಾ ನದಿಯ ಎಡದಂಡೆಯಲ್ಲಿನ ಬಂಡೆಯೊಂದರ ಮೇಲೆ ಕೊರೆಯಲ್ಪಟ್ಟಿರುವ ಈ ಶಾಸನವು ನಾಲ್ಕು ಸಾಲಿನದು. ಚಿಕ್ಕದಾದರೂ ಐತಿಹಾಸಿಕವಾಗಿ ಅತಿ ಹೆಚ್ಚು ಮಹತ್ವದ ಶಾಸನವೆಂಬುದು ಉಲ್ಲೇಖನೀಯ. ವಿಜಯನಗರ ಕಾಲದ ಇತರ ಶಾಸನಗಳಲ್ಲಿ ಕಂಡುಬರುವಂತೆ ಈ ಶಾಸನದ ಪ್ರತಿ ಸಾಲಿನ ಆರಂಭದಲ್ಲಿ ಸೊನ್ನೆಯನ್ನು ಕೊರೆಯಲಾಗಿದೆ. ಆರಂಭದ ಭಾಗ ಸ್ವಲ್ಪ ತ್ರುಟಿತವಾಗಿದ್ದರೂ ಇದರ ಮೂಲ ಆಶಯಕ್ಕೆ ಯಾವುದೇ ಧಕ್ಕೆಯಿಲ್ಲ. ಪ್ರಸ್ತುತ ಶಾಸನದ ಪಾಠ ಈ ಕೆಳಗಿನಂತಿದೆ.[೨]

ಶಾಸನದ ಪಾಠ

೧. ೦ ಶ್ರೀ[ಮತ್] ಪ್ರಉಡ ಗಜಬೇಟೆಕಾಱ ದೇವ

೨. ೦ ರಾಯರ ತ[೦*]ಮ ವ[ಕ್ಕ]ಳ ಚಂದಾ

೩. ೦ ಯದಪಣನಾಯಕರು ಬೇ

೪. ೦ ಸಗೆಯಲಿ ಉಂಬ ಕಲ್ಲ ತಳಿಗೆ [॥*]

ಪ್ರಸ್ತುತ ಶಾಸನದಲ್ಲಿ ಗಜಬೇಟೆಕಾರ ಪ್ರೌಢದೇವರಾಯರ ಉಲ್ಲೇಖವಿರುವುದರಿಂದ ಇದು ಕ್ರಿ.ಶ. ೧೪೨೪ ರಿಂದ ೧೪೪೬ರವರೆಗೆ ವಿಜಯನಗರವನ್ನಾಳಿದ ಸಂಗಮ ವಂಶದ ದೊರೆ ಇಮ್ಮಡಿ ದೇವರಾಯನ ಶಾಸನವೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಪ್ರೌಢದೇವರಾಯನ ತಮ್ಮ ಅಪಣನಾಯಕ(ಅಪ್ಪಣ್ಣನಾಯಕ)ನು ಬೇಸಿಗೆಯಲ್ಲಿ ಊಟ ಮಾಡುವ ಕಲ್ಲಿನ ತಳಿಗೆಯನ್ನು ಪ್ರಸ್ತುತ ಶಾಸನವು ಉಲ್ಲೇಖಿಸುತ್ತದೆ. ಈ ಶಾಸನದ ಬಳಿ ಕಲ್ಲಿನಲ್ಲಿ ಮೂಡಿಸಲಾದ ತಟ್ಟೆ ಅಥವಾ ತಳಿಗೆಯು ಪ್ರಮುಖನೊಬ್ಬನ ಊಟ ಮಾಡುವುದಕ್ಕಾಗಿ ರಚಿಸಲಾಗಿದೆಯೆಂಬುದನ್ನು ಶಾಸನವು ದೃಢಪಡಿಸುತ್ತದೆ.

ಅಪ್ಪಣ್ಣನಾಯಕನನ್ನು ಪ್ರೌಢದೇವರಾಯನ ತಮ್ಮ ಎಂದು ಉಲ್ಲೇಖಿಸಿರುವುದು ಈ ಶಾಸನದ ಪ್ರಮುಖ ಸಂಗತಿ. ಅಲ್ಲದೆ ಅವನನ್ನು 'ನಾಯಕರು' ಎಂಬ ವಿಶೇಷಣದಿಂದ ಗೌರವಯುತವಾಗಿ ಕರೆದಿರುವುದು ಗಮನಾರ್ಹ. ಇಮ್ಮಡಿ ದೇವರಾಯನಿಗೆ ಹರಿಮಾ ಎಂಬ ಹಿರಿಯ ಸಹೋದರಿ ಹಾಗೂ ಶ್ರೀಗಿರಿ ಎನ್ನುವ ಕಿರಿಯ ಸಹೋದರನಿದ್ದ ಎಂಬ ಸಂಗತಿಯು ಅವನ ಕಾಲದ ಶಾಸನಗಳಿಂದ ತಿಳಿದು ಬರುತ್ತದೆ.[೩] ಕ್ರಿ.ಶ. ೧೪೨೪ರ ಮದ್ರಾಸ್ ಮ್ಯೂಸಿಯಮ್‌ನ ತಾಮ್ರಶಾಸನವು ದೇವರಾಯನ ಕಿರಿಯ ಸಹೋದರ ಶ್ರೀಗಿರಿಯು ಮರಟಕನಗರ ಅಥವಾ ಮರಟಕಪುರಿಯಿಂದ ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ.[೪] ಇವನು ಶ್ರೀಗಿರಿ, ಶ್ರೀಗಿರಿನಾಥ ಉಡ್ಯೆಯರ್, ಶ್ರೀಗಿರಿನಾಥ ಒಡೆಯ, ಶ್ರೀಗಿರೀಂದ್ರ ಎಂಬ ಹಲವು ಅಭಿದಾನಗಳಿಂದ ಕರೆಯಲ್ಪಟ್ಟಿದ್ದಾನೆ.[೫] ಕ್ರಿ.ಶ. ೧೪೬೬ರಲ್ಲಿ ಹೊರಡಿಸಿರುವ ವಿರೂಪಾಕ್ಷನ ಶ್ರೀಶೈಲಂ ತಾಮ್ರಪಟವು[೬] ದೇವರಾಯನು ತನ್ನ ಹಿರಿಯ ಸಹೋದರನಿಂದ ಪೆನುಗೊಂಡೆ (ಘನಾದ್ರಿ) ರಾಜ್ಯವನ್ನು ಪಡೆದುಕೊಂಡ

* ಸಹಾಯಕ ಅಧೀಕ್ಷಕ, ಶಾಸನತಜ್ಞರು, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ, ಮೈಸೂರು.


ಸಂಗತಿಯನ್ನು ಅರಹುತ್ತದೆ. ಇದರಿಂದ ನಮಗೆ ದೇವರಾಯನಿಗೆ ಇನ್ನೊಬ್ಬ ಅಣ್ಣನದ್ದ ಎಂಬ ಸಂಗತಿ ಸ್ಪಷ್ಟವಾಗುತ್ತದೆ. ಆದರೆ ಈವರೆಗೆ ಆತನ ಹೆಸರು ಯಾವ ಶಾಸನಗಳಲ್ಲಿಯೂ ಪ್ರಸ್ತಾಪವಾಗಿಲ್ಲ. ಪ್ರಸ್ತುತ ಶಾಸನವು ಅಪ್ಪಣ್ಣನಾಯಕನನ್ನು ಇಮ್ಮಡಿ ದೇವರಾಯನ ತಮ್ಮನೆಂದು ತಿಳಿಸಿರುವುದರಿಂದ ದೇವರಾಯನಿಗೆ ಶ್ರೀಗಿರಿಯ ಜೊತೆ ಮತ್ತೊಬ್ಬ ತಮ್ಮನದ್ದ ಎನ್ನುವ ಸಂಗತಿ ಮೊಟ್ಟ ಮೊದಲಬಾರಿಗೆ ಬೆಳಕಿಗೆ ಬಂದಿದೆ. ಈತನ ಉಲ್ಲೇಖ ಈ ಶಾಸನವನ್ನು ಹೊರತುಪಡಿಸಿದರೆ ಬೇರೆ ಯಾವ ಶಾಸನಗಳಲಿಯ್ಲೂ ಈವರೆಗೆ ದೊರೆತಿಲ್ಲ.

ಅಪ್ಪಣ್ಣನಾಯಕನ ಹೆಸರಿನ ಮುಂಬದಿಯಲ್ಲಿ ವಕ್ಕಳ ಚಂದಾಯದ ಎಂಬ ಪೂರ್ವಪ್ರತ್ಯಯ ಇರುವುದು ಕುತೂಹಲಕರ. ಸಾಮಾನ್ಯವಾಗಿ ಶಾಸನಗಳಲ್ಲಿ ವಕ್ಕಳ, ಇಕ್ಕಳ, ಮುಕ್ಕಳ ಮತ್ತು ನಾಕಳ ಎಂಬ ಅಳತೆಯ ಮಾಪನಗಳ ಉಲ್ಲೇಖಗಳಿದ್ದು, ಇವು ಕ್ರಮವಾಗಿ ೧, ೨, ೩, ಮತ್ತು ೪ ಕೊಳಗಗಳನ್ನು ಸೂಚಿಸುತ್ತವೆ. ಪ್ರಸ್ತುತ ಶಾಸನದಲ್ಲಿ ಕಂಡುಬಂದಿರುವ ವಕ್ಕಳ ಅಥವಾ ವಕಳ ಎಂದರೆ ಒಂದು ಕೊಳಗ ಎಂದರ್ಥ. ಇದು ೨೦ ಸೇರುಗಳಿಗೆ ಸಮ. ಚಂದಾಯದ ಎಂದರೆ ಕಾಲಕಾಲಕ್ಕೆ ನೀಡುತ್ತಿದ್ದ ಕೊಡುಗೆಯನ್ನು ಸೂಚಿಸುತ್ತದೆ. ಹಾಗಾಗಿ ವಕ್ಕಳ ಚಂದಾಯವು ಬಹುಶಃ ಧವಸ ಧಾನ್ಯಗಳನ್ನು ಅಳೆಯುವಾಗ ಕಾಲಕಾಲಕ್ಕೆ ನೀಡುತ್ತಿದ್ದ ಸಣ್ಣ ಕೊಡುಗೆ ಎನ್ನಬಹುದು. ಅಪ್ಪಣ್ಣನಾಯಕನು ಬಹುಶಃ ಈ ರೀತಿ ಧವಸ ಧಾನ್ಯಗಳನ್ನು ಸಂಗ್ರಹಿಸುತ್ತಿದ್ದ ಆದಾಯ ವಿಭಾಗವೊಂದರ ಮುಖ್ಯಸ್ಥನಾಗಿದ್ದಿರಬಹುದು ಎಂದು ಊಹಿಸಬಹುದು.


ಅಪ್ಪಣ್ಣನಾಯಕ ಊಟಮಾಡಲು ಅಣಿಗೊಳಿಸಿದ ಕಲ್ಲಿನ ತಟ್ಟೆಯು ಸೊಗಸಾಗಿದೆ. ಈತ ಪೂರ್ವದಿಕ್ಕಿಗೆ ಮುಖಮಾಡಿ[೭] ಕುಳಿತುಕೊಳ್ಳಲು ಅನುಕೂಲವಾಗಲು ಅಲ್ಪ ಎತ್ತರವಾದ ವೇದಿಕೆಯನ್ನೂ, ಪ್ರಧಾನ ಭಕ್ಷ್ಯಕ್ಕೆ ವೃತ್ತಾಕಾರದ ತಟ್ಟೆ ಹಾಗೂ ವಿವಿಧ ಭಕ್ಷ್ಯಗಳನ್ನು ಇಟ್ಟುಕೊಳ್ಳಲು ಅನುಕೂಲವಾಗುವಂತೆ ಸುತ್ತಲೂ ಸಣ್ಣ ೮ ಬಟ್ಟಲುಗುಣಿಗಳನ್ನು ಕಡೆಯಲಾಗಿದೆ. ಇವುಗಳಲ್ಲಿ ಒಂದು ಬಟ್ಟಲುಗುಣಿಯು ದೊಡ್ಡದಾಗಿದೆ. ಅಪ್ಪಣ್ಣನಾಯಕ ದೇವರಾಯನ ತಮ್ಮ ಮತ್ತು ಆದಾಯ ಇಲಾಖೆಯೊಂದರ ಮುಖ್ಯಸ್ಥ ಸಹ ಆಗಿದ್ದರಿಂದ ಹಾಗೂ ಈತ ಬೇಸಿಗೆ ಕಾಲದ ಕಡು ಬಿಸಿಲಿನಲ್ಲಿ ಈ ಸ್ಥಳದಲ್ಲಿ ಊಟ ಮಾಡುತ್ತಿದ್ದುದರಿಂದ, ಇವನಿಗೆ ಇಲ್ಲಿ ನೆರಳಿನ ವ್ಯವಸ್ಥೆಯನ್ನು ಮಾಡಲಾಗಿದೆ. ತಟ್ಟೆಯ ನಾಲ್ಕು ದಿಕ್ಕುಗಳಲ್ಲಿ ಬಂಡೆಯ ಮೇಲೆ ಸುಮಾರು ೮ ಇಂಚು ಆಳ, ೧೨ ಇಂಚು ವ್ಯಾಸವುಳ್ಳ ನಾಲ್ಕು ಗುಳಿಗಳು ಕಂಡುಬಂದಿದ್ದು, ಈ ಮೇಲಿನ ಅಭಿಪ್ರಾಯವನ್ನು ಅಧಿಕೃತವಾಗಿ ಧೃಢಪಡಿಸುತ್ತವೆ. ಸುತ್ತಲೂ ಕಂಡುಬರುವ ಬೆಟ್ಟಗಳ ಸಾಲುಗಳ ವಿಹಂಗಮ ನೋಟ, ನದಿಯ ಕಡೆಯಿಂದ ಬೀಸುವ ತಂಪಾದ ಗಾಳಿ ಹಾಗೂ ಹರಿಯುವ ನೀರಿನ ಝುಳುಝುಳು ಶಬ್ದ ಹಿತವೆನಿಸುತ್ತವೆ. ಇದರ ಪಶ್ಚಿಮಕ್ಕೆ ಕಣಶಿಲೆಯಲ್ಲಿ ನಿರ್ಮಿಸಿದ ಅಲಂಕಾರ ರಹಿತವಾದ ಕಂಬಗಳುಳ್ಳ ಮಂಟಪ ಅಥವಾ ದೇವಾಲಯವನ್ನು (?) ಕಾಣಬಹುದು. ನದಿಯಲ್ಲಿ ಕಾಲಕಾಲಕ್ಕೆ ಉಲ್ಬಣಿಸುವ ಪ್ರವಾಹದಿಂದಾಗಿ ಇದರ ಬಹುಭಾಗವು ಮಣ್ಣಿನಿಂದ ಮುಚ್ಚಿರುವುದರಿಂದ ಈ ಕಟ್ಟಡದ ಬಗ್ಗೆ ಸ್ಪಷ್ಟವಾಗಿ ತಿಳಿಸುವುದು ಕಷ್ಟಸಾಧ್ಯ.

ಜಾತ್ರೆಗಳಿಗೆ ಆಗಮಿಸಿದವರು ನೀರು ದೊರೆಯುವ ಸ್ಥಳಗಳಲ್ಲಿ ಅಂದರೆ ಹಳ್ಳ ಅಥವಾ ನದಿಗಳ ಬಳಿ ಕೆಲವೊಮ್ಮೆ ಅಡುಗೆ ತಯಾರಿಸಿ, ಊಟ ಮಾಡುವ ಪದ್ದತಿ ಇಂದಿಗೂ ಪ್ರಚಲಿತದಲ್ಲಿರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ವಿವರಿಸುವುದಾದರೆ ಬಹುಶಃ ಹಂಪೆಯ ವಿರೂಪಾಕ್ಷ ದೇವರ ಜಾತ್ರೆಯ ಸಂದರ್ಭದಲ್ಲಿ ಅಥವಾ ಪಂಪಾ ಸರೋವರದ ದೇವಾಲಯಕ್ಕೆ ಭೇಟಿ ನೀಡಿದ ಸಮಯದಲ್ಲಿ ಈ ಪ್ರದೇಶಕ್ಕೆ ಬಂದು ಕಲ್ಲಿನ ತಟ್ಟೆಯಲ್ಲಿ ಅಪ್ಪಣ್ಣನಾಯಕ ಊಟ ಮಾಡಿದ್ದಿರಬಹುದು. ರಾಜಪ್ರಮುಖರು ಊಟವನ್ನು ಚಿನ್ನದ ತಳಿಗೆಗಳಲ್ಲಿ ಮಾಡುತ್ತಿದ್ದು, ೧೮೦೦೦ ಚಿನ್ನದ ತಳಿಗೆಗಳನ್ನು ಶ್ರೀಕೃಷ್ಣದೇವರಾಯ ದಿನಚರಿಯು ಉಲ್ಲೇಖಿಸುತ್ತದೆ.[೮] ಈತ ಕಲ್ಲಿನ ತಟ್ಟೆಯಲ್ಲಿ ಊಟ ಮಾಡಲು ನಿರ್ದಿಷ್ಟ ಕಾರಣವಿದ್ದಿರಬೇಕು. ಸಾಧಾರಣವಾಗಿ ಹರಕೆಗಳನ್ನು ಹೊತ್ತವರು ತಮ್ಮ ಹರಕೆಗಳು ತೀರಿದ ನಂತರ ಕಲ್ಲಿನ ಮೇಲೆ ಊಟ ಮಾಡುವ ಪದ್ಧತಿ ಕೆಲವೆಡೆ ಇಂದಿಗೂ ಪ್ರಚಲಿತದಲ್ಲಿದೆ. ಹಾಗಾಗಿ ಅಪ್ಪಣ್ಣನಾಯಕನು ಸಹ ಕಾರಣನಿಮಿತ್ತ ಮಾಡಿದ ಹರಕೆ ಈಡೇರಿದ ನಂತರ ಈ ಪರಿಸರದಲ್ಲಿ ಬಂದು, ದೇವರ ದರ್ಶನ ಮಾಡಿ, ವಾಡಿಕೆಯಂತೆ ಇಲ್ಲಿನ ಕಲ್ಲಿನ ತಟ್ಟೆಯಲ್ಲಿ ಊಟ ಮಾಡಿದ್ದಿರಬಹುದು.[೯]

ಕಲ್ಲಿನಲ್ಲಿ ತಯಾರಿಸಿದ ಇದೇ ಮಾದರಿಯ ಸರಿಸುಮಾರು ೩೦ಕ್ಕೂ ಹೆಚ್ಚಿನ ಕಲ್ಲಿನ ತಟ್ಟೆಗಳು ಹಂಪಿ ಪರಿಸರದಲ್ಲಿ ದೊರೆತಿವೆ. ರಾಜಪ್ರಾಂಗಣದ ದಕ್ಷಿಣಕ್ಕಿರುವ ಅಷ್ಟಕೋನ ವಿನ್ಯಾಸದ ಕಾರಂಜಿ ಕಟ್ಟಡದ ಬಳಿಯಲ್ಲಿ ಸುಮಾರು ೩೦ ಮೀಟರ್ ಉದ್ದವಿರುವ ಕಾಲುವೆಯ ಎರಡೂ ಬದಿಯಲ್ಲಿ ಒಂದರ ಪಕ್ಕ ಒಂದರಂತೆ ಉದ್ದಕ್ಕೂ ಕಲ್ಲಿನ ತಟ್ಟೆಗಳನ್ನು ಇರಿಸಲಾಗಿದೆ. ಸ್ಥಳಿಯವಾಗಿ ಇದನ್ನು 'ಭೋಜನಶಾಲೆ,' 'ಊಟದ ಕಾಲುವೆ,' 'ಊಟಿಯ ಕಾಲುವೆ' ಎಂದು ಕರೆಯಲಾಗುತ್ತದೆ.[೧೦] ಕರ್ನಲ್ ಮೆಕೆಂಜಿಯು ತನ್ನ ಭೂಪಟದಲ್ಲಿ ಈ ಕಾಲುವೆಯಲ್ಲಿ ಪೂರ್ಣಪ್ರಮಾಣದಲ್ಲಿ ತಟ್ಟೆಗಳಿದ್ದುದ್ದಾಗಿ ದಾಖಲಿಸಿದ್ದಾರೆ.[೧೧]




ರಾಂಪುರದ ಬಳಿಯಲ್ಲಿ ಪತ್ತೆಯಾದ ಇಮ್ಮಡಿ ದೇವರಾಯನ ಅಪ್ರಕಟಿತ ಶಾಸನ



ಶಾಸನದ ಬಳಿಯಲ್ಲು ಮೂಡಿಸಲಾದ ಕಲ್ಲಿನ ತಳಿಗೆ



ರಾಣಿಯರ ಸ್ನಾನಗೃಹದ ಬಳಿಯ ಊಟದ ಕಾಲುವೆ



ವಿಠಲ ದೇವಾಲಯದ ಉತ್ತರಕ್ಕೆ ನದಿ ದಂಡೆಯಲ್ಲಿರುವ ಕಲ್ಲಿನ ತಟ್ಟೆಗಳು



ಆಂಧ್ರ ಪ್ರದೇಶದಲ್ಲಿ ದೊರೆತ ಕಲ್ಲಿನ ಊಟದ ತಟ್ಟೆ



ಊಟದ ಕಾಲುವೆಯಲ್ಲಿನ ಕಲ್ಲಿನ ತಟ್ಟೆಗಳು

ಆದರೆ ಈಗ ಇದರ ಅರ್ಧಭಾಗಕ್ಕೆ ಮಾತ್ರ ತಟ್ಟೆಗಳಿವೆ. ಇದನ್ನು ಹೊರತುಪಡಿಸಿ ಹಂಪೆಯ ರಾಜ ಪ್ರಾಂಗಣದಲ್ಲಿರುವ ಮಹಾನವಮಿ ದಿಬ್ಬದ ದಕ್ಷಿಣ ಮತ್ತು ನೈರುತ್ಯ ದಿಕ್ಕಿಗೆ ಕೆಲವು ತಟ್ಟೆಗಳು, ವಿಠಲ ದೇವಾಲಯದ ಉತ್ತರದಿಕ್ಕಿಗೆ ನದಿಯ ದಂಡೆಯಲ್ಲಿ ಕೆಲವು ತಟ್ಟೆಗಳಿವೆ. ಇಲ್ಲಿಯೂ ಸಹ ಬಟ್ಟಲುಗುಣಿಗಳ ಸಹಿತ ತಟ್ಟೆಗಳಿದ್ದು, ಊಟ ಮಾಡಲು

ನೆರಳಿನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಕಮಲಾಪುರದಲ್ಲಿರುವ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿ ಒಂದು ತಟ್ಟೆಯನ್ನು ಪ್ರದರ್ಶನಕ್ಕೆ ಇಡಲಾಗಿದೆ. ಆಂಧ್ರಪ್ರದೇಶದ ದೇವಾಲಯವೊಂದರ ಪಕ್ಕದಲ್ಲಿ ಇದೇ ಮಾದರಿಯ ತಟ್ಟೆಯು ಕಂಡುಬಂದಿದೆ. ಇದರಲ್ಲಿಯೂ ವೃತ್ತಾಕಾರದ ತಟ್ಟೆಯ ಸುತ್ತ ಬಟ್ಟಲುಗುಣಿಗಳಿವೆ.

ಊಟದ ಕಾಲುವೆಯ ಒಳಬದಿಗೆ ಗ್ರಾನೈಟ್ ಕಲ್ಲಿನ ಹೊದಿಕೆಗಳಿರುವುದನ್ನು ಕಾಣಬಹುದು. ಇಲ್ಲಿರುವ ಕಲ್ಲಿನ ತಟ್ಟೆಗಳ ತಯಾರಿಕೆಗೆ ಕ್ಲೋರೈಟಿಕ್ ಶಿಸ್ಟ್ ಶಿಲೆಯನ್ನು ಬಳಸಲಾಗಿದೆ. ಇವುಗಳ ಗಾತ್ರ ಆಕಾರ ಮತ್ತು ಶೈಲಿಯಲ್ಲಿ ತುಸು ಭಿನ್ನತೆಯಿದೆ. ಈ ಕಲ್ಲಿನ ತಟ್ಟೆಗಳಲ್ಲಿ ಪ್ರಧಾನ ಭಕ್ಷ್ಯಕ್ಕೆ ಆದ್ಯತೆ ನೀಡಿ, ಹೆಚ್ಚಿನ ಜಾಗದ ವ್ಯವಸ್ಥೆಯನ್ನು ವೃತ್ತಾಕಾರ ಮತ್ತು ಬಾಳೆ ಎಲೆಯ ಆಕಾರದಲ್ಲಿ ಮಾಡಲಾಗಿದೆ. ಉಳಿದಂತೆ ಇದರ ಮುಂಬದಿ ಅಥವಾ ಇಕ್ಕೆಲಗಳಲ್ಲಿ ಚಿಕ್ಕ ಚಿಕ್ಕ ಬಟ್ಟಲುಗುಣಿಗಳನ್ನು ಪೂರಕ ಭಕ್ಷ್ಯಕ್ಕೆ ಮಾಡಲಾಗಿದೆ. ಕೆಲವು ತಟ್ಟೆಗಳಲ್ಲಿ ಒಂದು, ಎರಡು ಮತ್ತು ಇನ್ನೂ ಕೆಲವು ತಟ್ಟೆಗಳಲ್ಲಿ ಮೂರು ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಬಟ್ಟಲುಗುಣಿಗಳನ್ನು ರಚಿಸಿರುವುದನ್ನು ಕಾಣಬಹುದು. ಈ ಮಾದರಿಯ ತಟ್ಟೆಗಳು ಇಂದು ನಮಗೆ ಮುಂಬೈಲಿ ಅಥವಾ ಮದ್ರಾಸಿ ಊಟದ ತಟ್ಟೆಯನ್ನು ನೆನಪಿಸುತ್ತವೆ.[೧೩] ಅಚ್ಯುತರಾಯನ ಕಾಲದ ಕ್ರಿ.ಶ. ೧೫೪೧ರ ಶಾಸನವೊಂದು[೧೪] ಶ್ರೀರಘುನಾಥದೇವರ ಅಮೃತಪಡಿಗೆ ದಾನ ನೀಡಿದ ಸ್ಥಳಗಳನ್ನು ಉಲ್ಲೇಖೀಸುವ ಸಮಯದಲ್ಲಿ 'ಕಾಮಲಾಪುರದ ಕೆರೆಯ ಕೆಳಗೆ ಹೂವಿನ ಸಿದ್ದಯ್ಯನ ಸ್ಥಳದ ಗದ್ದೆ ಖ ೨ ಮಾದಲಾಪುರದ ಗ್ರಾಮದ ಕೆರೆವೊಳಗೆ ಊಟಕಾಲುವೆಯ ಸ್ಥಳದಲ್ಲೂ ಲಕುಮಯ್ಯ ಹೊಂನ್ನಯ್ಯ ಮಲ್ಲಯ್ಯಗಳ ಗದ್ದೆ' ಎಂದು ಉಲ್ಲೇಖಿಸುತ್ತದೆ. ಹಾಗಾಗಿ ಇದು ಊಟೆಯ ಕಾಲುವೆಯಾಗಿರದೆ ಊಟ ಮಾಡುವುದಕ್ಕಾಗಿ ನಿರ್ಮಿಸಿದ ಕಾಲುವೆ ಎಂಬುದು ಸ್ಪಷ್ಟ. ರಾಜಪ್ರಾಂಗಣದ ಅರಮನೆಗಳಿಗೆ ಸಂಬಂಧಿಸಿದ ಕೆಲಸಗಾರರು ಮತ್ತು ಸೈನಿಕರು ಅಥವಾ ಅಲ್ಲಿನ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಬ್ರಾಹ್ಮಣರು ಊಟಮಾಡಲು ಈ ಕಾಲುವೆಯನ್ನು ನಿರ್ಮಿಸಿದ್ದಿರಬಹುದು.

ಊಟದ ತಟ್ಟೆಗಳನ್ನು ತೊಳೆದ ನಂತರ ಕಲುಷಿತ ನೀರಿನ ನಿರ್ವಹಣೆಗೆ ಉತ್ತಮ ವ್ಯವಸ್ಥೆಯನ್ನು ಕಲ್ಪಿಸಿರುವುದು ಗಮನಾರ್ಹ. ಪ್ರಸ್ತುತ ಕಾಲುವೆಗೆ ನೀರಿನ ಸಂಪರ್ಕ ರಾಜಪ್ರಾಂಗಣ ಅಥವಾ ರಾಣಿಯರ ಸ್ನಾನಗೃಹದ ಬಳಿಯಿಂದ ಬಂದಿರುವ ಸಾಧ್ಯತೆಯಿದೆ. ಈ ಕಾಲುವೆಯ ಪಕ್ಕದಲ್ಲಿ ರಸ್ತೆ ಹಾದುಹೋಗಿರುವುದರಿಂದ ಊಟದ ಕಾಲುವೆಗೆ ಸಂಪರ್ಕ ಕಡಿತಗೊಂಡಿದೆ[೧೪] ಹಾಗೂ ಇದರ ಬದಿಯಲ್ಲಿ ಗಾರೆಗಚ್ಚಿನಿಂದ ತಯಾರಿಸಲ್ಪಟ್ಟ ಜಲವಾಹಕಗಳ ಅವಶೇಷಗಳು ಉಳಿದಿವೆ. ನೀರನ್ನು ಸಂಗ್ರಹಿಸಲು ಗಾರೆಗಚ್ಚಿನಂದ ರಚಿಸಿದ ಜಲಸಂಗ್ರಹಣ ತೊಟ್ಟಿಯಲ್ಲಿ ನಾಲ್ಕು ಕೊಳವೆಗಳಿದ್ದು, ಅದರಲ್ಲಿನ ಮೂರು ಕೊಳವೆಗಳ ಒಂದು ಭಾಗವು ಇಲ್ಲಿನ ಅಷ್ಟಕೋನ ವಿನ್ಯಾಸದ ಕಟ್ಟಡದಲ್ಲಿರುವ ನೀರಿನ ಕಾರಂಜಿಗೆ ಸಂಪರ್ಕ ಕಲ್ಪಿಸುತ್ತದೆ. ನಾಲ್ಕನೆಯ ಕೊಳವೆಯು ತೊಟ್ಟಿಯ ನೈರುತ್ಯ ದಿಕ್ಕಿಗೆ ಸಾಗಿದ್ದು ಊಟದ ಕಾಲುವೆಗೆ ಸಂಪರ್ಕ ಕಲ್ಪಿಸುತ್ತದೆ.[೧೫] ಇಲ್ಲಿನ ತ್ಯಾಜ್ಯಜಲವು ಕಾಲುವೆಯ ಮೂಲಕ ದಕ್ಷಿಣಕ್ಕಿರುವ ಕೋಟೆಗೋಡೆಯ ಕಡೆಗೆ ಹರಿಯುವ ವ್ಯವಸ್ಥೆ ಮಾಡಲಾಗಿದೆ.[೧೬] ಅಲ್ಲಿ ಭೂಮಿಯ ಏರಿಳಿತಗಳಿಗೆ ಅನುಗುಣವಾಗಿ ತ್ಯಾಜ್ಯಜಲ ಸರಾಗವಾಗಿ ಪ್ರವಹಿಸಲು ಮೇಲ್‌ಕಾಲುವೆಯನ್ನು (aqueduct) ನಿರ್ಮಿಸಲಾಗಿದೆ. ಈ ಮೇಲ್‌ಕಾಲುವೆಯನ್ನು ಕಾಲಕಾಲಕ್ಕೆ ಜೀರ್ಣೋದ್ಧಾರಗೊಳಿಸಿರುವುದನ್ನು ಕಾಣಬಹುದು. ಅದು ಮುಂದೆ ಸಾಗಿ ಕೋಟೆಗೋಡೆಯ ಇಳಿವೋರೆಯನ್ನು (Ramp) ಸೇರಿ ಪಶ್ಚಿಮಕ್ಕೆ ತಿರುವನ್ನು ಪಡೆಯುತ್ತದೆ. ಜಲವಾಹಕವು ಇಳಿವೋರೆಯ ಮೇಲೆ ಸುಮಾರು ೩೦ ಮೀಟರ್ ದೂರ ಸಾಗಿ ಕೋಟೆಗೋಡೆಯ ಪಕ್ಕದಲ್ಲಿರುವ ಇಂಗುಗುಂಡಿಯನ್ನು ಸೇರುತ್ತದೆ. ಹಾಗಾಗಿ ತ್ಯಾಜ್ಯಜಲದ ನಿರ್ವಹಣೆಯು ಅಂದಿನ ಜಲತಂತ್ರ ನಿಪುಣರ ಕೌಶಲಕ್ಕೆ ಸಾಕ್ಷಿಯಾಗಿದೆ.[೧೪] ಈ ಮೇಲೆ ಉಲ್ಲೇಖಿಸಲ್ಪಟ್ಟ ಊಟದ ಕಾಲುವೆಗೆ ನೀರಿನ ಸಂಪರ್ಕವನ್ನು ಜಲಸಂಗ್ರಹಣಾ ತೊಟ್ಟಿಯಿಂದ ಕಲ್ಪಿಸಿರುವುದರಿಂದ ಅದಕ್ಕೆ ಜಲ ನಿಯಂತ್ರಣ ಸಾಧನವನ್ನು (water control device) ಅಳವಡಿಕೆ ಮಾಡಿದ್ದಿರಬೇಕು. ಊಟದ ನಂತರ ಸ್ವಚ್ಛಗೊಳಿಸಲು ಇದರಲ್ಲಿ ನೀರನ್ನು ಒತ್ತಡದಲ್ಲಿ ಹರಿಸಿ, ಅದು ಸಂಪೂರ್ಣ ಸ್ವಚ್ಛಗೊಂಡ ನಂತರ ನೀರಿನ ಸಂಪರ್ಕವನ್ನು ಕಡಿತಗೊಳಿಸುತ್ತಿದ್ದರು ಎನ್ನಬಹುದು.

ಒಟ್ಟಾರೆಯಾಗಿ ದೇವರಾಯನಿಗೆ ಅಪ್ಪಣ್ಣನಾಯಕ ಎನ್ನುವ ತಮ್ಮನಿದ್ದ ಸಂಗತಿ ಈ ಮೇಲಿನ ಶಾಸನದಿಂದ ಪ್ರಥಮ ಬಾರಿಗೆ ಬೆಳಕಿಗೆ ಬಂದಿದೆ. ಶಾಸನದ ಬಳಿಯಲ್ಲಿ ಮೂಡಿಸಲಾದ ಕಲ್ಲಿನ ತಟ್ಟೆಯು ಈತ ಊಟ ಮಾಡುವುದಕ್ಕಾಗಿ ರಚಿಸಲ್ಪಟ್ಟಿದೆ ಎಂಬುದು ಸ್ಪಷ್ಟವಾಗಿದೆ. ಹಂಪಿ ಪರಿಸರದಲ್ಲಿ ಕಂಡುಬಂದಿರುವ ಊಟದ ಕಾಲುವೆ, ಅದಕ್ಕೆ ಒದಗಿಸಿರುವ ನೀರಿನ ಸಂಪರ್ಕ, ಅದರ ತ್ಯಾಜಜಲ ನಿರ್ವಹಣೆ ವಿಜಯನಗರ ಪಟ್ಟಣದ ನೀರು ಸರಬರಾಜು ವ್ಯವಸ್ಥೆ ಮತ್ತು ಜಲ ನಿರ್ವಹಣೆಗೆ ಸಾಕ್ಷಿಯಾಗಿದೆ.

ಅಡಿಟಿಪ್ಪಣಿ ಹಾಗೂ ಆಧಾರ ಗ್ರಂಥಗಳು

೧. Indian Archaeology -A Review 2011-12, pp.124 ಈ ಶಾಸನದ ಬಗ್ಗೆ ನನಗೆ ಮಾಹಿತಿ ನೀಡಿದ ಹಂಪಿ ವಿಶ್ವ ಪರಂಪರಾ ಪ್ರದೇಶ ನಿರ್ವಹಣಾ ಪ್ರಾಧಿಕಾರದಲ್ಲಿ ಸಹಾಯಕರಾಗಿದ್ದ ಹುಲಿಗೆಪ್ಪನವರಿಗೆ ಮತ್ತು ಪ್ರಸ್ತುತ ಶಾಸನವನ್ನು ಪ್ರಕಟಿಸಲು ಅನುಮತಿ ನೀಡಿದ ಮೈಸೂರಿನ ಭಾರತೀಯ ಪುರಾತತ್ವ ಸರ್ವೇಕ್ಷಣದ ನಿರ್ದೇಶಕರಿಗೆ (ಶಾಸನಶಾಸ್ತ್ರ) ಅನಂತ ಧನ್ಯವಾದಗಳು. ಇದನ್ನು ಶಾಸನಶಾಸ್ತ್ರ ವಿಭಾಗದ ೨೦೧೧–೧೨ನೆಯ ಸಾಲಿನ ವಾರ್ಷಿಕ ವರದಿಯಲ್ಲಿ ಪ್ರಕಟಿಸಲಾಗುವುದು.

೨. ಈ ಶಾಸನದ ಓದಿನಲ್ಲಿ ನನ್ನ ತಪ್ಪುಗಳನ್ನು ತಿದ್ದಿ, ಸರಿಯಾದ ಶಾಸನದ ಪಾಠವನ್ನು ಒದಗಿಸಿದ ಚಿತ್ರದುರ್ಗದ ಹಿರಿಯ ಸಂಶೋಧಕರಾದ ಡಾ. ಬಿ. ರಾಜಶೇಖರಪ್ಪನವರಿಗೆ ಧನ್ಯವಾದಗಳು.

೩. Nagaraju H.M., 1991, *Devaraya II and His Times,* Prasaranga, University of Mysore, Mysore, pp.14 ff.

೪. Hultzsch E., (ed.), *Epigraphia Indica*, vol. VIII, 1905-06, pp. 306 ff.

೫. Nagaraju H.M., *Op.cit.*, pp. 15

೬ Thomas F.W., (ed.), *Epigraphia Indica,* vol. XV, pp. 8 ff.

೭. ಶಾಸ್ತ್ರಗ್ರಂಥಗಳಲ್ಲಿ ಊಟದ ಕ್ರಮವನ್ನು ಮತ್ತು ನಂತರ ಮಾಡಬೇಕಾದ ಕರ್ತವ್ಯಗಳನ್ನು ತಿಳಿಸುತ್ತವೆ. ಅದರಂತೆ ಪೂರ್ವದಿಕ್ಕಿಗೆ ಮುಖ ಮಾಡಿ ಊಟ ಮಾಡುವವನ ಆಯಸ್ಸು ಹೆಚ್ಚುತ್ತದೆ. ದಕ್ಷಿಣಾಭಿಮುಖವಾಗಿ ಕುಳಿತು ಊಟ ಮಾಡುವವನು ಹೆಚ್ಚು ಕೀರ್ತಿಶಾಲಿಯಾಗುತ್ತಾನೆ. ಪಶ್ಚಿಮಾಭಿಮುಖವಾಗಿ ಕುಳಿತು ಊಟ ಮಾಡುವವನು ಅತಿಯಾದ ಸಂಪತ್ತನ್ನೂ, ಪುಷ್ಟಿಯನ್ನೂ ಪಡೆಯುತ್ತಾನೆ. ಉತ್ತರಾಭಿಮುಖವಾಗಿ ಕುಳಿತು ಊಟ ಮಾಡುವವನು ಸತ್ಯವಾಕ್ಯ ಪರಿಪಾಲನೆಯ ಫಲಗಳನ್ನು ಪಡೆಯುತ್ತಾನೆ. ಹೆಚ್ಚಿನ ಮಾಹಿತಿಗೆ ನೋಡಿ; ಮಲ್ಲೇಪುರಂ ಜಿ. ವೆಂಕಟೇಶ (ಸಂ.), ೧೯೯೯, *ಕೆಳದಿ ಬಸವರಾಜ ಸಂಕಲಿಸಿದ ಶಿವತತ್ವ ರತ್ನಾಕರ*, ಸಂ. ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೫೨೨–೩೦

೮. ಸೀತಾರಾಮಯ್ಯ ವಿ. (ಸಂ.), ೧೯೮೩, *ಶ್ರೀಕೃಷ್ಣದೇವರಾಯ ದಿನಚರಿ*, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ಪು. ೩೨ ಮತ್ತು ೩೮

೯. ಈ ಮಾಹಿತಿಯನ್ನು ನೀಡಿದ ಶ್ರೀಮತಿ ಯಶೋಧಾ ರಾಜಶೇಖರಪ್ಪನವರಿಗೆ ವಂದನೆಗಳು.

೧೦. ಊಟದ ಕಾಲುವೆಯಲ್ಲಿ ನೀರಿನ ಬುಗ್ಗೆಗಳು ಏಳುತ್ತಿದ್ದುದರಿಂದ ಸ್ಥಳಿಯರು ಇದಕ್ಕೆ 'ಊಟೆಯ ಕಾಲುವೆ' ಎಂದು ಕರೆಯುತ್ತಿದ್ದರು. ಈ ಮಾಹಿತಿಯನ್ನು ಒದಗಿಸಿದ ಡಾ. ದೇವರಕೊಂಡಾರೆಡ್ಡಿಯವರಿಗೆ ಅನಂತ ಧನ್ಯವಾದಗಳು.

೧೧. ಈ ಕಾಲುವೆಯು ಕಾಲಕಾಲಕ್ಕೆ ಜೀರ್ಣೋದ್ಧಾರಗೊಂಡಿದ್ದು ಇಲ್ಲಿನ ಕೆಲವು ತಟ್ಟೆಗಳನ್ನು ರಾಜಪ್ರಂಗಣದಲ್ಲಿ ಇಡಲಾಗಿದೆ ಎಂಬುದು ಡೊಮಿನಿಕ್ ಅವರ ಅಭಿಪ್ರಾಯ. ನೋಡಿ; Domenic Davison-Jenkins, 1997, *Irrigation and Water Supply Systems of Vijayanagara,* Manohar Publisher and distributors,New Delhi,pp. 43.

೧೨. ವಸುಂಧರಾ ಫಿಲಿಯೋಜಾ, ೨೦೧೧, ಅಳಿದುಳಿದ ಹಂಪೆ, ಮಾನಸೋಲ್ಲಾಸ ಪ್ರಕಾಶನ, ಬೆಂಗಳೂರು, ಪು. ೭೩–೭೪.

೧೩. *South Indian Inscriptions*, vol. IV, No 245 and Anila Verghese, 2001, *Archaeology Art Religion -New perspective on Vijayanagara*, Oxford University Press, New Delhi, pp. 264.

೧೪. ಕಾಲುವೆಯ ಪಕ್ಕದಲ್ಲಿ ೧೯೦೮–೦೯ಕ್ಕೆ ಮೊದಲು ಕಮಲಾಪುರ ಮತ್ತು ಹಂಪಿಯ ರಸ್ತೆ ಇರಲಿಲ್ಲ. ಭಾರತೀಯ ಪುರಾತತ್ವ ಇಲಾಖೆಯ ೧೯೦೮–೦೯ರ ವಾರ್ಷಿಕ ವರದಿಯಲ್ಲಿ ನೀಡಿರುವ ಅಷ್ಟಕೋನಾಕೃತಿಯ ಕಾರಂಜಿ ಕಟ್ಟಡದ ಛಾಯಾಚಿತ್ರದಲ್ಲಿ ರಸ್ತೆಯಿಲ್ಲ. ಹಾಗಾಗಿ ನಂತರದ ಕಾಲದಲ್ಲಿ ಇದನ್ನು ಮಾಡಿರುವುದು ಸ್ಪಷ್ಟವಾಗುತ್ತದೆ. ನೋಡಿ; *Annual Report of the Archaeological Survey of India, 1908-19*, pp. 23-24 and photo

೧೫. Domenic Davison-Jenkins ., *Op.cit.*, pp. 43

೧೬. ಊಟದ ಕಾಲುವೆಯ ಕಲುಷಿತ ನೀರಿನ ನಿರ್ವಹಣೆಯ ಬಗ್ಗೆ ಡೊಮಿನಿಕ್ ಯಾವ ವಿವರಣೆಯನ್ನೂ ನೀಡಿಲ್ಲ. ಈ ಕಾಲುವೆಯು ಕೊನೆಗೊಳ್ಳುವುದರ ಬಗ್ಗೆ ಈ ಕೆಳಗಿನಂತೆ ಉಲ್ಲೇಖಿಸಿದ್ದಾರೆ. 'The southwest end of the 'Bhojanaúâla' terminates abruptly, close to the northern boundary of a cane field. The final destination of the supply which flowed through the channel is unknown. However, the fragmentary remains of a large 'terraced' structure have been noted in the dense undergrowth to the southwest.' Domenic Davison-Jenkins ., *Op.cit.*, pp. 44.

೧೭. ವಿಜಯನಗರಪಟ್ಟನದಲ್ಲಿ ನೀರು ಸರಬರಾಜು ವ್ಯವಸ್ಥೆಯು ಅಂದಿನ ತಾಂತ್ರಿಕತೆಗೆ ಹಿಡಿದ ಕೈಗನ್ನಡಿಯಂತಿದೆ. ಕೊಳವೆಗಳ ಮತ್ತು ಕಿರುಗಾಲುವೆಗಳ ಮೂಲಕ ಸರಬರಾಜಾಗುವ ನೀರಿನ ವ್ಯವಸ್ಥೆ ಅಪೂರ್ವವಾಗಿದೆ. ಅಲ್ಲಲ್ಲಿ ಕಿರುಗಾಲುವೆಗಳಿಂದ ಸಂಗ್ರಹಿಸಿದ ತ್ಯಾಜ್ಯಜಲ ದೊಡ್ಡಕಾಲುವೆಗೆ ಸೇರಿ ದೊಡ್ಡ ಮೋರಿಯನ್ನು ಸೇರುತ್ತಿತ್ತು. ರಾಜಪ್ರಾಂಗಣದ ದಕ್ಷಿಣ ಪ್ರಾಕಾರ ಮತ್ತು ಉದ್ಯಾನವನವನ್ನು ಸುತ್ತುವರೆದಿರುವ ಗೋಡೆಯ ನಡುವೆ ಪೂರ್ವಪಶ್ಚಿಮವಾಗಿ ತ್ಯಾಜ್ಯಜಲ ಹರಿಯಲು ಮಾಡಿದ ಈ ಬಗೆಯ ಚರಂಡಿಯೊಂದನ್ನು ಭಾರತೀಯ ಪುರಾತತ್ವ ಇಲಾಖೆಯು ಉತ್ಖನನದಲ್ಲಿ ಗುರುತಿಸಲಾಗಿದೆ. ಕಾಲುವೆಗಳ ಮೂಲಕ ಉತ್ತರ ಭಾಗದ ಕೊಳಚೆ ನೀರು ರಾಜಾಂಗಣದಾಚೆಗೆ ಹೋಗುವಂತೆ ವ್ಯವಸ್ಥೆ ಕಲ್ಪಿಸಲಾಗಿದೆ. ಇದಕ್ಕೆ ಮಣ್ಣಿನ ಕೊಳವೆ, ಕಲ್ಲಿನ ಫಲಕಗಳು ಮತ್ತು ಸುಣ್ಣಕಲ್ಲಿನ ಜಲ್ಲಿಗಾರೆಯ ಕಾಲುವೆಗಳನ್ನು, ಇವುಗಳಿಗೆ ಅಲ್ಲಲ್ಲಿ ಪರೀಕ್ಷಾ ಗುಂಡಿಗಳನ್ನು ಒದಗಿಸಲಾಗಿದೆ. ನೋಡಿ; ಸುಂದರ ಅ. (ಸಂ.), ೨೦೦೯, ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು. ೯೭೧–೭೨.

೧೮

ಸ್ವರ್ಣವಲ್ಲೀ ಮಠದ ಪತ್ರಾಗಾರದಲ್ಲಿ ವಿಜಯನಗರದ ಮೊದಲನೆಯ ಬುಕ್ಕರಾಯರ ಕಾಲದ ಧರ್ಮಸಾಧನದ ಪ್ರತಿ

ಡಾ. ಎ.ಕೆ. ಶಾಸ್ತ್ರಿ*

ಸುಮಾರು ೧೨೦೦ ವರ್ಷಗಳ ಚರಿತ್ರೆಯಿರುವ, ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲೂಕಿನಲ್ಲಿರುವ ಸ್ವರ್ಣವಲ್ಲೀ ಮಠ ಒಂದು ಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿರುತ್ತದೆ. ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಚರಿತ್ರೆಯು ಉತ್ತರಕನ್ನಡ ಜಿಲ್ಲೆಯ ಐತಿಹಾಸಿಕ ಬೆಳವಣಿಗೆಯೊಂದಿಗೆ ಬೆಸೆದುಕೊಂಡು ಬಂದಿದೆ. ಪೂರ್ವದಲ್ಲಿ ಆದಿಶಂಕರರು ಭಾರತದ ನಾಲ್ಕು ದಿಕ್ಕುಗಳಲ್ಲಿ ಚತುರಾಮ್ನಾಯ ಮಠಗಳನ್ನು ಸ್ಥಾಪಿಸಿ, ತನ್ಮೂಲಕ ಅದ್ವೈತ ಸಿದ್ಧಾಂತವನ್ನು ಪ್ರಕಾಶಿಸಿ, ವೈದಿಕ ಧರ್ಮವನ್ನು ಪ್ರಚುರಪಡಿಸಿ, ದೇಶದ ಐಕ್ಯತೆ ಮತ್ತು ಜನರ ಹಿತಕ್ಕಾಗಿ, ಭಕ್ತಿ, ಕರ್ಮ ಮತ್ತು ಮುಖ್ಯವಾಗಿ ಜ್ಞಾನ ಮಾರ್ಗಗಳನ್ನು ಪ್ರತಿಪಾದಿಸಿದ ಸಂಗತಿ ಐತಿಹಾಸಿಕ ಸತ್ಯ. ಆದಿಶಂಕರರು ಪ್ರತ್ಯಕ್ಷವಾಗಿ ಮತ್ತು ತಮ್ಮ ಶಿಷ್ಯರ ಮೂಲಕ ಪರೋಕ್ಷವಾಗಿ, ದೇಶದ ವಿವಿದೆಡೆ ಮಠಗಳನ್ನು ಸ್ಥಾಪಿಸಲು ಕಾರಣರಾದರು. ಅಂಥ ಅದ್ವೈತ ಮಠಗಳ ಪರಂಪರೆ ಇಂದಿಗೂ ಸಾಗಿ ಬಂದಿದ್ದು, ಅವಿಚ್ಛಿನ್ನ ಗುರುಪರಂಪರೆಯುಳ್ಳ ಸ್ವರ್ಣವಲ್ಲೀ ಮಠ, ಅವುಗಳಲ್ಲಿ ಒಂದು ಆದಿಶಂಕರಾಚಾರ್ಯ ಮತ್ತು ಸುರೇಶ್ವರಾಚಾರ್ಯರ ಸಮ್ಮುಖದಲ್ಲಿ ಭಾಸ್ಕರೇಂದ್ರ ಸರಸ್ವತಿಗಳಿಂದ ಸನ್ಯಾಸದೀಕ್ಷೆ ಪಡೆದ ವಿಶ್ವವಂದ್ಯ ಸರಸ್ವತಿಗಳು ಕಾಶಿಯ ದಶಾಶ್ವಮೇಧ ಘಾಟಿನಲ್ಲಿ ನಿರ್ಮಾಣವಾದ ಶ್ರೀಮಠದ ಪ್ರಥಮ ಗುರುಗಳು, ನಂತರ ಕ್ರಮವಾಗಿ ಉಜ್ಜಯಿನಿ, ನಾಸಿಕ, ಗೋಕರ್ಣ, ಕಡತೋಕೆ, ಸಹಸ್ರಲಿಂಗ ಮತ್ತು ಕ್ರಿ.ಶ ೧೫೫೬ರಲ್ಲಿ ಇಂದಿನ ಸ್ವರ್ಣವಲ್ಲೀಗೆ ಸ್ಥಳಾಂತರಗೊಂಡ ಸಮಾಚಾರ ಶ್ರೀ ಮಠದಲ್ಲಿ ಲಭ್ಯವಿರುವ ಚಾರಿತ್ರಿಕ ದಾಖಲೆ, ಶಾಸನ ಮತ್ತು ಸಾಹಿತ್ಯಕ ಕೃತಿಗಳಿಂದ ತಿಳಿದುಬರುತ್ತದೆ.[೧]

ಪ್ರಸ್ತುತ ಲೇಖನವು ಮಲಪ ವಡೆಯರು ವೇದ ಸಾಂಗರ[೨] ಶ್ರೀಪಾದಂಗಳಿಗೆ ಕೊಟ್ಟ ಧರ್ಮಸಾಧನಕ್ಕೆ ಸೀಮಿತ ವಾಗಿದ್ದರಿಂದ, ಆ ಧರ್ಮಸಾಧನದ ಮುಖ್ಯಾಂಶಗಳನ್ನು ಮಾತ್ರ ಇಲ್ಲಿ ವಿವೇಚಿಸಲಾಗಿದೆ. ಕೈಯಿಂದ ತಯಾರಿಸಿದ ದಪ್ಪನೆಯ ಉರುಟು ಕಾಗದದಲ್ಲಿರುವ ಶಿಲಾಸಾಧನ [ಶಿಲಾಶಾಸನ]ದ ಈ ಪಟ್ಟಿಪ್ರತಿಯು[೩], ಸಾಮಾನ್ಯವಾಗಿ ಇನ್ನುಳಿದ ಶಾಸನಗಳಲ್ಲಿ ಕಂಡು ಬರುವಂತೆ, ಇಲ್ಲಿಯೂ "ಶ್ರೀಗಂಗಾಧಿಪತಯೆ ನಮಃ ನಮಸ್ತುಂಗ ಶಿರಸ್ತು[ಶ್ಚು]ಂಬಿ ಚಂದ್ರಚಾಮರ ಚಾರವೆ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೆ," ಎಂದು ಶ್ರೀಗಣಾಧಿಪತಿಯನ್ನು ಮತ್ತು ಶಂಭುವನ್ನು ಸ್ತುತಿಸುವ ಪ್ರಾರ್ಥನಾ ಶ್ಲೋಕದೊಂದಿಗೆ ಪ್ರಾರಂಭವಾಗುತ್ತದೆ. ನಂತರದಲ್ಲಿ, "ಸ್ವಸ್ತಿ ಶ್ರೀ ಮಹಾ ಮಂಡಲೇಶ್ವರ ತಿರಿರಾಯ ವಿಭಾಡ ಭಾಶೆಗೆ ತಪ್ಪುವರ ಗಂಡ ಶ್ರೀ ವೀರಬುಕ್ಕರಾಯ ಮಹಾರಾಯರ ವಿಜಯ ಸಾಂಬ್ರಾಜ್ಯ ಭೂದಯದ ಮಹಾಪ್ರಧಾನ ಬಸವೈಯ ನಾಯಕರು ಸಕಲ ರಾಜ್ಯವನ್ನು ಪ್ರತಿಪಾಲಿಸುತ್ತವಿದಂ ದಿನ ಶಕವರುಷ ೧೨೭೨ನೆಯ, ಸಉಮ್ಯ ಸಂವತ್ಸರದ ಪುಷ್ಯ ಬ. ೩೦ ಮು ಮಂಗಳವಾರದಲು ಆರ್ದ್ರಾ ನಕ್ಷತ್ರದಲು ಮಿಥುನ ಲಗ್ನದಲು ಸೂರ್ಯಗ್ರಹಣ ಕಾಲದಲು ಮಲಪ ವಡೆಯರು ತ್ತೆಂಗಿನ ಬಾಡದಲು ಆಘನಾಶಿನಿ ತ್ತಿರದಲು ಶ್ರೀಕಾಮೇಶ್ವರ ದೇವರ್ರಿಗೆ ಜಿರ್ಣೊಧಾರವ ಮಾಡ್ಡಿ ಶ್ರೀಮತ್ಪರಮಹಂಸ ಪರ್ರಿವ್ರಾಜಕಾಚಾರ್ಯವರ್ರಿಯರಾಜ ರಾಜನ ಪುರಿ । ಶ್ರೀ ಪಾದಂಗಳ ಶಿಷ್ಯ । ರಹವೆದಸಾಂಗರ ಶ್ರೀಪಾದಂಗಳಿಗೆ ಕೊಟ ಧರ್ಮಸಾಧನ ಶಿಲಾಸಾಧನದ ಪಟ್ಟೆಯ ಕ್ರಮವೆಂತ್ಯೆಂದರೆ...," ಎಂದು ಶಾಸನ ಮುಂದುವರೆಯುತ್ತದೆ.[೪]

ಶ್ರೀ ರಾಮೇಶ್ವರ ದೇವರಿಗೆ ಬಿಟ್ಟ ಭೂಮಿಯ ಗಡಿಗಳನ್ನು ಕಾಣಿಸಲಾಗಿದೆ. ಮೂಡಲು: ವೇದೇಶ್ವರ ದೇವರಿಗೆ ಶ್ರೀ ಬಸವೈಯ ನಾಯಕರು ಸರ್ವಮಾನ್ಯವಾಗಿ ಬಿಟ್ಟ ಭೂಮಿ, ತೆಂಕಲು: ರಾಜಮಾರ್ಗದ ಕಲ್ಲು, ಪಡುವಲು: ಮಹಾಬಲ ಭಂಡಾರಿಯ ಗದ್ದೆಕಂಠ, ಬಡಗಲು : ಹರಿವ ಹೊಲೆ. ಈ ರೀತಿಯಾಗಿ ಚತುಃಸೀಮೆಯೊಳಗಿನ ಭೂಮಿ ೮ ಮತ್ತು ಆ ಭಾಗದ ಭಾಗಿಗಳು ದೇವರಿಗೆ ಪ್ರತಿವರ್ಷ ಅಳೆಯುವ ಭತ್ತದ ಮುಡಿಗಳ ವಿವರವನ್ನು ನೀಡಲಾಗಿದೆ. ಒಟ್ಟೂ ೧೧೪

* 'ಭವಾನಿ', ಟಿ.ಎಸ್.ಎಸ್. ರೈಸ್ ಮಿಲ್ ಕೆಳಭಾಗ, ವಿದ್ಯಾಗಿರಿ, ಶಿರಸಿ, ಉತ್ತರ ಕನ್ನಡ–೫೮೧೪೦೨.

ಮುಡಿ ಭತ್ತ ದೇವರಿಗೆ ಸಂದಾಯವಾಗುತ್ತಿತ್ತೆಂದು ತಿಳಿದುಬರುತ್ತದೆ. ಹೀಗೆ ಸಂಗ್ರಹವಾದ ಭತ್ತವನ್ನು, ಮಾತಿಗಾರಗೆ ಮತ್ತು ದೇವರ ಅಮೃತಪಡಿಗೆ ಮುಡಿ ೩೦, ಹರಿಯವರಿಗೆ ಮುಡಿ ೪೫, ಶಾಂತಿ ಮಾಡುವ ಹೂಡಿ ಭಟ್ಟಕಳಿಗೆ ಮುಡಿ ೩೦, ಬಂದ ಸ್ವದೇಶಿ ಮತ್ತು ಪರದೇಶಿಗಳಿಗೆ, ಮಠದಲ್ಲಿ ಉಪ್ಪು ಪಾತ್ರವ ನಡಸುವ ಬಗ್ಗೆ ಭತ್ತ ಮುಡಿ ೯, ಅಂತೂ ಭತ್ತಮುಡಿ ೧೧೪, ದೇವರಿಗೆ ಬೇರೆ ಬೇರೆ ಸೇವೆ ಸಲ್ಲಿಸುತ್ತಿದ್ದವರಿಗೆ ನೀಡಲಾಗಿತ್ತು. ಬಾಡದ ನಾಡವರು ಅರಮನೆಗೆ ತೆರುವ ಹೊನ್ನಿನ ಒಳಗೆ, ೮ ಹೊನ್ನಿನ ಕುಳವ ಕಡಿದು, ಆ ೮ ಹೊನ್ನುಗಳನ್ನು ಮಲಪವಡೆಯರು ದೇವರಿಗೆ ಸಹಿರಣ್ಯೋದಕ ದಾನ ಧಾರಾಪೂರ್ವಕವಾಗಿ ಧರ್ಮಕ್ಕೆ ಧಾರೆಯನೆರೆದು ಕೊಟ್ಟರೆಂದು ಹೇಳಲಾಗಿದೆ. ದೇವಸ್ವದ ೮ ಭಾಗಗಳ ಮೇಲೆ ಬಾಡದ ನಾಡವರಿಗೆ ಆ ಭಾಗಿಗಳು ೮ ಹೊನ್ನುಗಳನ್ನು ತೆರುತ್ತಿದ್ದರೆಂದೂ, ಮಲಪವಡೆಯರು ಆ ನಾಡವರನ್ನು ವಡಂಬಡಿಶಿದ ಸಮಾಚಾರವೂ ಧರ್ಮಸಾಧನದಿಂದ ತಿಳಿದುಬರುತ್ತದೆ. ಆ ೮ ಹೊನ್ನುಗಳ ವೆಚ್ಚದ ವಿವರ ಇಂತಿದೆ. ಯತಿಗಳ ಭಿಕ್ಷಕ್ಕೆ ಗ ೩ ॥ ೦ (ಮೂವತ್ತೈದು ಹಣ), ಮಠದವರಿಗೆ ಗ ೨ ॥ (ಇಪ್ಪತ್ತೈದು ಹಣ), ದೇವರ ಗಂಧ, ಧೂಪ, ದೀಪ, ಆಭಿಗಾರ, ಎಣ್ಣೆ ಮತ್ತು ತುಪ್ಪಕ್ಕೆ ಗ ೧ '೨ (ಹನ್ನೆರಡು ಹಣ), ಸನ್ಯಾಸಿಗಳ ವಸ್ತ್ರ ಮತ್ತು ಕೌಪೀನಕ್ಕೆ ಗ ॥ ೦ (ಐದು ಹಣ), ಜೀರ್ಣೋದ್ಧಾರವಾಗಿ ವರುಷಂಪ್ರತಿ ಮಿಗಿಸುವ ಹಣ '೩ (ಮೂರು ಹಣ), ಅಂತೂ ಈ ಸ್ಥಳ, ದೇವಾಲಯ, ಮಠ, ಅ ದೇವಸ್ವ ಭೂಮಿ ಮಾಡುವ ಅನಾದ್ಯ ಪಾರುಪತ್ಯ, ಒಳಗಿನ ಜಲ, ಪಾಶಾಣ, ನಿಧಿ, ನಿಕ್ಷೇಪ ಸಹಿತ ಸರ್ವವನ್ನು, ಭೂರಿವಾಳ ಪರುಪಾಧಿಷ್ಠಿತರಾದಂಥ ವೇದಸಾಂಗರ ಶ್ರೀಪಾದಂಗಳಿಗೆ, ಶಿಲಾಶಾಸನದಲ್ಲಿದ್ದಂತೆ ಮಾರ್ಯದಿಯನ್ನು ಮತ್ತು ಧರ್ಮವೆಚ್ಚವನ್ನು ಆಚಂದ್ರಾರ್ಕ ಸ್ಥಾಯಿತರಾಗಿ, ತಮ್ಮ ಶಿಷ್ಯ ಪಾರಂಪರ್ಯವಾಗಿ ನಡಸುತ್ತ ಬರುವಂತೆ ಭೂದಾನ ಮಾಡಿದರು.

ಶಾಸನದ ಕೊನೆಯಲ್ಲಿ, ಈ ಧರ್ಮಕ್ಕೆ ತಪ್ಪಿದವರಿಗೆ ಯಾವ ಫಲ ಮತ್ತು ಈ ಧರ್ಮವ ಪಾಲನೆ ಮಾಡಿದವರಿಗೆ ಯಾವ ಫಲ ಎಂಬುದನ್ನು ನಮೂದಿಸಲಾಗಿದೆ. "ಸರ್ವಬಾಧಾ ಪರಿಹಾರವಾಗಿ, ಸರ್ವಮಾನ್ಯವೆಂದು ನೆಟ್ಟ ಶಿಲಾಶಾಸನ," ಎಂದು ಕಾಣಿಸುವುದರ ಜೊತೆಗೆ, "ಯಿ ಧರ್ಮಕೆ ತಪಿದವರ್ರಿಗೆ ವಾರಣಾಶಿಯಲ್ಲಿ ಸಹಸ್ರಗೋವುಗಳ ವಧಿಸಿದ ಫಲಾ । ಸಹಸ್ರ ಬ್ರಾಹ್ಮರ ವಧಿಸಿದ ಫಲಾ । ತಂಮ ಮಾತ್ತಾಪಿತ್ರುಗಳ ವಧಿಸಿದ ಫಲ । ಯಿ ಧರ್ಮವ ಪಾಲನೆಯ ಮಾಡಿದವರಿಗೆ ವಾರಣಾಶಿಯಲೂ ಸಹಸ್ರ ಅಲಂಕೃತ್ತವಾದ ಕಪಿಲೆಗಳು (ಕಂದು ಬಣ್ಣದ ಪವಿತ್ರ ಹಸುಗಳು) ವೇದೋಕ್ತಗಳಾದ ಸಹಸ್ರ ಬ್ರಾಹ್ಮರ್ರಿಗೆ ಕೊಟ್ಟ ಫಲಾ । ಯಿದಕ್ಕೆ ಲೋಕಸಾಕ್ಷಿಗಳ ನಿಕಿ ಬರಕೊಟ್ಟ ಶಿಲಾಶಾಸನ । ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ", ಎಂಬುದಾಗಿಯೂ ಅಂತ್ಯದಲ್ಲಿ ಬರೆಯಲಾಗಿದೆ.

ಒಟ್ಟಿನಲ್ಲಿ, ಈ ಶಾಸನದ ಬಗ್ಗೆ ಹೇಳಬೇಕಾದರೆ, ವಿಜಯನಗರ ಸಾಮ್ರಾಜ್ಯದ ಮೊದಲನೆಯ ಬುಕ್ಕರಾಯರು (ಕ್ರಿ.ಶ. ೧೩೫೬–೧೩೭೭) ಮಹಾಮಂಡಲೇಶ್ವರನಾಗಿ ಆಳುತ್ತಿದ್ದಾಗ, ಮಹಾಪ್ರಧಾನರಾಗಿ ಬಸವೈಯ ನಾಯಕರು ರಾಜ್ಯವನ್ನು ಪ್ರತಿಪಾಲಿಸುತ್ತಿದ್ದಾಗ, ಮಲಪವಡೆಯರು ಕ್ರಿ.ಶ. ೧೩೬೯ರ ಡಿಸೆಂಬರ್ ೨೯ ರಂದು, ಇಂದಿನ ಕುಮಟಾ ತಾಲೂಕಿನ ಅಘನಾಶಿನೀ ತೀರದಲ್ಲಿರುವ, ತೆಂಗಿನ ಬಾಡ [ಬಾಡ]ದಲ್ಲಿಯ ಶ್ರೀ ಕಾಮೇಶ್ವರದೇವರ ಜೀರ್ಣೋದ್ಧಾರ ಮಾಡಿ, ವೇದಸಾಂಗರ ಶ್ರೀಪಾದಂಗಳಿಗೆ ಭೂದಾನ ಮಾಡಿದಕ್ಕಾಗಿ ಶಿಲಾಶಾಸನ ನೆಟ್ಟ ಸಮಾಚಾರ. ದಾನ ಮಾಡಿದ ಭೂಮಿಯ ೮ ಭಾಗಗಳು, ಒಟ್ಟೂ ೧೧೪ ಮುಡಿ ಭತ್ತ, ದೇವರ ಸೇವೆಗೆ ಸಂಬಂಧಿಸಿದ ವೆಚ್ಚ, ನಾಡವರಿಂದ ಬಂದ ೮ ಹೊನ್ನುಗಳ ವೆಚ್ಚ, ಆ ಚಂದ್ರಾರ್ಕವಾಗಿ ಮತ್ತು ತಮ್ಮ ಶಿಷ್ಯ ಪಾರಂಪರ್ಯವಾಗಿ ಅನುಭವಿಸಲೆಂದು ನೀಡಿದ ಧರ್ಮ ಮತ್ತು ಕೊನೆಯಲ್ಲಿ, ಧರ್ಮಕ್ಕೆ ತಪ್ಪಿದವರಿಗೆ ಮತ್ತು ಧರ್ಮವ ಪಾಲನೆ ಮಾಡಿದವರಿಗೆ ಯಾವ ಯಾವ ಫಲ ಎಂಬುದನ್ನು ಉಲ್ಲೇಖಿಸಲಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಸ್ವರ್ಣವಲ್ಲೀ ಮಠದ ಚರಿತ್ರೆಗೆ ಸಂಬಂಧಿಸಿ, ಹೆಚ್ಚಿನ ಮಾಹಿತಿಗಾಗಿ ಲೇಖಕರ ಈ ಕೆಳಗಿನ ಗ್ರಂಥಗಳನ್ನು ಓದಿರಿ:

i. ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಐತಿಹಾಸಿಕ ದಾಖಲೆಗಳು, (ಸ್ವದಾ), ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.

ii. 'ಶ್ರೀ ಸ್ವರ್ಣವಲ್ಲಿ ಮಹಾಸಂಸ್ಥಾನ', ಶ್ರೀ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ, ೧೯೯೭.

iii. 'A History of the Swarnavalli Mahasamsthana, Sri Bhagavatpada Prakasana, Srarnavalli, 2004.

೨. ಶಾಸನದ ಕಾಗದ ಪ್ರತಿಯಲ್ಲಿ ಒಂದು ಕಡೆ 'ವೇದಸಾಂಗರ' ಎಂದು ಮತ್ತೆರಡು ಕಡೆ 'ವೇದಸಾಗರ' ಎಂದು ನಮೂದಿಸಲಾಗಿದ್ದು, ಪ್ರಸ್ತುತ ಲೇಖನದಲ್ಲಿ 'ವೇದಸಾಂಗರ' ಎಂಬುದನ್ನೇ ಬರೆಯಲಾಗಿದೆ.

೩. ಸ್ವದಾ. ೨.

೪. ಕಮಟಾ ತಾಲೂಕಿನ ತೆಂಗಿನ ಬಾಡದಲ್ಲಿದ್ದ ಶ್ರೀ ಕಾಮೇಶ್ವರ ದೇವಸ್ಥಾನ ಇಂದಿಗೂ ಅಸ್ತಿತ್ವದಲ್ಲಿದೆ. ಆದರೆ ಅಲ್ಲಿ ಈಗ ಯಾವ ಸ್ವಾಮಿಗಳೂ ಇಲ್ಲ. ಒಬ್ಬ ಭಟ್ಟರ ಕುಟುಂಬ ಮಾತ್ರ ವಾಸ್ತವ್ಯ ಮಾಡಿದೆ. ತೆಂಗಿನ ಮರಗಳಿಂದ ಸಮೃದ್ಧವಾದ ಬಾಡವನ್ನು ಪೂರ್ವದಲ್ಲಿ 'ತೆಂಗಿನ ಬಾಡ' ಎಂದು ಕರೆದಿದ್ದು ಅನ್ವರ್ಥಕವಾಗಿದೆ.

ಶಾಸನದಲ್ಲಿ ನಮೂದಿಸಲಾದ ರಾಜನಪುರಿ ಶ್ರೀಪಾದಂಗಳ ಬಗ್ಗೆಯಾಗಲಿ, ಅವರ ಶಿಷ್ಯರಾದ ವೇದಸಾಂಗರ ಬಗ್ಗೆಯಾಗಲಿ, ಇಲ್ಲವೆ, ಆ ಮಠದ ಪರಂಪರೆ ಬಗ್ಗೆಯಾಗಲಿ, ಯಾವ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ.

ಶ್ರೀ ಕಾಮೇಶ್ವರ ದೇವಸ್ಥಾನದ ಸುತ್ತಮುತ್ತ ಎಲ್ಲಿಯಾದರೂ ಇರಬಹುದಾದ ಮೂಲ ಶಿಲಾಶಾಸನದ ಶೋಧನ ಕಾರ್ಯ ಆಗಬೇಕಾಗಿದೆ. ಇನ್ನು, ಈ ಶಾಸನದ ಪ್ರತಿ ಸ್ವರ್ಣವಲ್ಲೀ ಮಠದ ಪತ್ರಾಗಾರದಲ್ಲಿ ದೊರಕಿದ್ದು ಸಹಜ. ಪ್ರಾರಂಭದಲ್ಲಿಯೇ ತಿಳಿಸಿದಂತೆ, ಇಂದಿನ ಸ್ವರ್ಣವಲ್ಲೀ ಮಠ, ಸ್ವರ್ಣವಲ್ಲಿಗೆ ಕ್ರಿ.ಶ. ೧೫೫೬ರಲ್ಲಿ ಸ್ಥಳಾಂತರಗೊಳ್ಳುವ ಪೂರ್ವದಲ್ಲಿ,೧೫–೧೬ ಶತಮಾನದವರೆಗೆ ಸಹಸ್ರಲಿಂಗದಲ್ಲಿದ್ದು, ಅದಕ್ಕಿಂತ ಹಿಂದೆ, ೧೪ನೇಯ ಶತಮಾನದಲ್ಲಿ, ಕಡತೋಕೆ (ಇಂದಿನ ಹೊನ್ನಾವರ ತಾಲೂಕಿನಲ್ಲಿ)ಯಲ್ಲಿ ಇತ್ತು. ಹೀಗಾಗಿ, ಪ್ರಸ್ತುತ ಶಾಸನ ಕ್ರಿ.ಶ. ೧೩೬೯ ರದ್ದಾಗಿರುವುದರಿಂದ, ಸ್ವರ್ಣವಲ್ಲಿಯ ಪೂರ್ಣಮಠ ಕಡತೋಕೆಯಲ್ಲಿದ್ದಾಗಿನ ಕಾಲಕ್ಕೆ ಸೇರಿರಬಹುದಾಗಿದೆ. ಶ್ರೀ ಕಾಮೇಶ್ವರ ದೇವಸ್ಥಾನ ಕಡತೋಕೆ ಮಠದ ತುಂಡು ಮಠ, ಇಲ್ಲವೆ, ಕಾಲು ಮಠವಾಗಿರಲು ಸಾಧ್ಯ, ಕ್ರಿ.ಶ. ೧೭೬೭ ರಲ್ಲಿ ಇಡಗುಂಜಿಯ ವಿಷ್ಣು ಸಭಾಯಿತರಿಗೆ ಸ್ವರ್ಣವಲ್ಲೀ ಮಠದ ಶ್ರೀ ಗಂಗಾಧರೇಂದ್ರ ಸರಸ್ವತಿಗಳು, ಮೂಲ ಗುತ್ತಿಗೆಯಾಗಿ ತಾವು ಅನುಭವಿಸಿ ಬರುತ್ತಿರುವ ಚಂದಾವರದ ಸೀಮೆ ಅಗಸೆ ಗ್ರಾಮದಲ್ಲಿ, ಅಘನಾಶಿನಿ ತೀರದಲ್ಲಿ ದೇವಸ್ಥಾನಕಟ್ಟಿಸಿ, ಶ್ರೀ ಸದಾಶಿವೇಶ್ವರ ದೇವರ ಪ್ರತಿಷ್ಠೆ ಮಾಡಿ, ಸಪರ್ಯಗಳಿಗೋಸುಗ ಭೂದಾನ ಮಾಡಿದರೆಂದು ತಿಳಿದುಬರುತ್ತದೆ. (ಡಾ॥ ಎ.ಕೆ. ಶಾಸ್ತ್ರಿ, 'ಇಡಗುಂಜಿಯ ಶ್ರೀ ಮಹಾಗಣಪತಿ ಮತ್ತು ಸಭಾಹಿತರು, ಲೀಲಾಗಣಪತಿ ಚಾರಿಟೆಬಲ್ ಟ್ರಸ್ಟ್, ಹಳದೀಪುರ, ೨೦೦೪, ಪು. ೧೫). ಹೀಗಾಗಿ ಈ ಅಘನಾಶಿನಿ ಪ್ರದೇಶದಲ್ಲಿಯ ದೇವಸ್ಥಾನಗಳು ಪೂರ್ವದಿಂದಲೂ ಸ್ವರ್ಣವಲ್ಲೀ ಮಠದ ನಿಯಂತ್ರಣಗಲ್ಲಿದ್ದವೆಂದು ಹೇಳಬಹುದು.

೧೯

ಮೊಳಕಾಲ್ಮೂರು ತಾಲ್ಲೂಕು ಪದಿನಾನ ದೇವರಹಟ್ಟಿಯಲ್ಲಿ ದೊರೆತ ವಾಲ್ಮೀಕಿ ಮತಕ್ಕೆ ಸಂಬಂಧಿಸಿದ ತಾಮ್ರಪತ್ರಗಳು

ಪ್ರೊ. ಲಕ್ಷ್ಮಣ್ ತೆಲಗಾವಿ*

ಪ್ರಸ್ತುತ ತಾಮ್ರಪತ್ರಗಳಿರುವುದು ಚಿತ್ರದುರ್ಗಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕು ಪದಿನಾನ ದೇವರಹಟ್ಟಿ (ರಾಯಾಪುರ ಅಂಚೆ)ಯಲ್ಲಿರುವ ಶ್ರೀಪದಿಪೂಜಾರಿ ಮುತ್ತಯ್ಯ ಅವರ ವಶದಲ್ಲಿ. ಈ ಮುತ್ತಯ್ಯನವರ ಪೀಳಿಗೆಯವರು ಪರಂಪರೆಯಿಂದ ಬಂದ ಪಶುಪಾಲಕ ಸಂಸ್ಕೃತಿಯ ಭಾಗವಾಗಿರುವವರು. ಇವರು ತಮ್ಮನ್ನು 'ಶ್ರೀಶೈಲ ಮಲ್ಲಿಕಾರ್ಜುನ ಶ್ರೀಪದಿಪೂಜಾರಿಗಳು', ಅಂದರೆ 'ಮುತ್ತಯ್ಯ'ಗಳೆಂದು ಕರೆದುಕೊಳ್ಳುತ್ತಾರೆ. ಅಲ್ಲದೆ, ತಾವು ಗೌತಮಋಷಿವಂಶದ ಮುತ್ತಯ್ಯಗಳೆಂಬ ನೆನಪು ಈ ಪೀಳಿಗೆಯವರಲ್ಲಿದೆ. ಬಹು ಹಿಂದಿನಿಂದಲೂ ಈ ಪೂಜಾರಿಗಳು ಈ ತಾಮ್ರಪತ್ರಗಳನ್ನು ತಮ್ಮಲ್ಲಿ ರಕ್ಷಿಸಿಟ್ಟುಕೊಂಡು ಬಂದಿರುತ್ತಾರೆ.

ತಾಮ್ರಪತ್ರಗಳ ತಾಂತ್ರಿಕ ವಿವರ

ಈ ತಾಮ್ರಪತ್ರಗಳನ್ನು 'ಗೌತಮಋಷಿಗಳಿಂದ ಉತ್ಪತ್ತಿಯಾದ ವಂಶದ, ಅಂದರೆ ವಾಲ್ಮೀಕಿಮತದ ತಾಮ್ರಪತ್ರ'ಗಳೆಂತಲೂ ಕರೆದಿದೆ. ಪೌರಾಣಿಕ ಹಿನ್ನೆಲೆಯಲ್ಲಿ ವ್ಯಕ್ತಪಟ್ಟಿರುವ ವಾಲ್ಮೀಕಿವಂಶದ ಕೆಲವಾರು ವಿವರಗಳು ಈ ಪಾಠಗಳಲ್ಲಿ ಪ್ರಸ್ತಾಪಗೊಂಡಿವೆ. ಈ ತಾಮ್ರಪತ್ರಗಳ ಒಟ್ಟುಸಂಖ್ಯೆ ೫ ; ಪುಟಗಳು ೧೦. ಪ್ರತಿಯೊಂದು ಪತ್ರದ ಎರಡೂ ಬದಿಯಲ್ಲಿ ಬರವಣಿಗೆ ಮಾಡಲಾಗಿದೆ. ಅಕ್ಷರಗಳನ್ನು ತಕ್ಕಮಟ್ಟಿಗೆ ಆಳವಾಗಿ ಕೊರೆಯಲಾಗಿದ್ದು, ಕನ್ನಡಭಾಷೆಯಲ್ಲಿದೆ. ಈ ಪತ್ರಗಳ ಕಾಲಮಾನವನ್ನು ೧೮ನೇ ಶತಮಾನವೆಂದು ತಿಳಿಯಲಾಗಿದ್ದು, ಇಲ್ಲಿಯ ಲಿಪಿಶೈಲಿ, ಭಾಷಾಶೈಲಿ ಮತ್ತು ಪ್ರಯೋಗಗಳನ್ನು ಆ ಕಾಲಮಾನಕ್ಕೆ ಹೊಂದಿಸಬಹುದು. ಈ ಪತ್ರಗಳು ೧x೧ ೧/೨ ಅಡಿ ಉದ್ದಗಲವಾಗಿದ್ದು, ಇವು ಹೊಂದಿರುವ ಸಾಲುಗಳ ಸರಾಸರಿ ಸಂಖ್ಯೆ ೨೯.

ಈ ತಾಮ್ರಪತ್ರಗಳಲ್ಲಿಯ ವೃತ್ತಾಂತವನ್ನು ಇತಿಹಾಸ-ಪುರಾಣ-ಐತಿಹ್ಯಗಳ ಸಮ್ಮಿಶ್ರಣವೆನ್ನುವುದೇ ಸರಿ. ಇವುಗಳಲ್ಲಿರುವ ಚಾರಿತ್ರಿಕಾಂಶಗಳನ್ನು ಆದ್ಯಂತವಾಗಿ ಪರಿಶೀಲಿಸಿ ಬಳಸಿಕೊಳ್ಳುವುದು ಸೂಕ್ತ. ಮುಖ್ಯವಾಗಿ, ವಾಲ್ಮೀಕಿ ಸಮುದಾಯದ ಸಂಸ್ಕೃತಿ ಅಧ್ಯಯನಕ್ಕೆ ಈ ಪತ್ರಗಳಲ್ಲಿಯ ವಿಷಯವು ಉಪಯುಕ್ತವಾದುದೆನಿಸಿದೆ.

ತಾಮ್ರಪತ್ರಗಳ ಪ್ರಮುಖಾಂಶಗಳು

ಈ ತಾಮ್ರಪತ್ರಗಳು ಪಾರಂಪರಿಕವಾಗಿ ಬಂದ ಪಶುಪಾಲಕ ಸಮುದಾಯದ ಕತೆಯನ್ನು ಬಿಚ್ಚಿಡುತ್ತವೆ. ಇವುಗಳ ಪ್ರಕಾರ, ವಾಲ್ಮೀಕಮತ ಉತ್ಪತ್ತಿಯಾದುದು ಗೌತಮಋಷಿಯಿಂದ. ಈ ಗೌತಮಋಷಿ ಜನಿಸಿದುದು ಪಂಚವರ್ಣದ ಗೋವಿನಗರ್ಭದಲ್ಲಿ. ಆದರೂ ಈ ಪಟಗಳಲ್ಲಿ ಬರುವ ಗೌತಮನು ಯಾರೆಂಬುದು ಸ್ಪಷ್ಟವಿಲ್ಲ. ಈ ಋಷಿಯು ಸಪ್ತರ್ಷಿಗಳಲ್ಲಿ ಒಬ್ಬನೆಂತಲೂ; ಪೌಲಸ್ತ್ಯ, ವಸಿಷ್ಠ, ವಾಲ್ಮೀಕಿ, ಭೃಗು, ಭರದ್ವಾಜ, ಕಶ್ಯಪ, ಅಂಗೀರಸ, ಕ್ರತು, ಜಮದಗ್ನಿ, ಕೌಶಿಕರ ಸಾಲಿಗೆ ಸೇರಿದ೧೨ ಜನ ಬ್ರಹ್ಮರ್ಷಿಗಳಲ್ಲೊಬ್ಬನೆಂತಲೂ ಪುರಾಣಗಳು ತಿಳಿಸುತ್ತವೆ. ಆದರೆ ವಾಲ್ಮೀಕರ ಏಳುಜನ ಬ್ರಹ್ಮರ್ಷಿಗಳ ವಂಶಾವಳಿಯಲ್ಲಿ ಈ ಗೌತಮಋಷಿಯ ಪ್ರಸ್ತಾಪವಿರುವುದಿಲ್ಲ. ಈ ಏಳುಜನ ವಾಲ್ಮೀಕರ ಬ್ರಹ್ಮರ್ಷಿಗಳೆಂದರೆ, ಅಶ್ವಮುನಿ (ಗುಜ್ಜರಗೋತ್ರ), ಋಷಿಮೃಗಮುನಿ (ಗುರ್ರಲಗೋತ್ರ), ಮೃಗಾಹಮುನಿ (ಭಾಲಮಂಡಲೀಕಗೋತ್ರ), ಹರಿಣಮುನಿ (ತೇರಸಾಮಂತಗೋತ್ರ), ಸಾರಂಗಮುನಿ (ಪಿಂಗಳರಂಗಗೋತ್ರ), ಮೃಗಶಿಂಗಮುನಿ (ಸಾಳ್ವಸಾರಂಗಗೋತ್ರ) ಹಾಗೂ ಉತ್ತುಂಗಮುನಿ ಅಥವಾ ಕೃತ್ತಿಕಾಮುನಿ (ಗಂಡಭೇರುಂಡಗೋತ್ರ) (ಪಂಡಿತ ರೇವಣ್ಣಶಾಸ್ತ್ರಿ: **ವಾಲ್ಮೀಕರ ಪುರಾಣವು** : ೧೯೫೫: ೧೬-೩೦).

* # ೧೫, ಸೋಮಶೇಖರ ನಿಲಯ, ಯಲ್ಲಮ್ಮದೇವಿ ಹೌಸಿಂಗ್ ಸೊಸೈಟಿ, ರಜತಗಿರಿ, ಧಾರವಾಡ-೫೮೦೦೦೮.

ಮುಖ್ಯವಾಗಿ, ಈ ತಾಮ್ರಪತ್ರಗಳು ದಾಖಲಿಸಿಕೊಂಡಿರುವ ಅಮೂಲ್ಯ ಹಾಗೂ ಅಧಿಕೃತ ಸಂಗತಿಗಳೆಂದರೆ, ಗೌತಮಋಷಿಯು ತನ್ನ ಕ್ರಿಯಾಮಂತ್ರದಿಂದ ಮುಕ್ತಾಚಾರ್ಯನೆಂಬ ಪುತ್ರನನ್ನು ಮಾಡಿಕೊಂಡದ್ದು; ಈತನೇ ಆ ನಂತರ ಮುತ್ತಯ್ಯನೆಂದು ಕರೆಸಿಕೊಂಡದ್ದು; ಗೌತಮಋಷಿಯ ತರುವಾಯ ಮುತ್ತಯ್ಯನೇ ಎಲ್ಲ ಗೋವುಗಳಿಗೆ ಒಡೆಯನಾದದ್ದು; ಇವೇ ಮುಂದೆ ಮುತ್ತಯ್ಯನ ಎತ್ತುಗಳೆಂದು ಪ್ರಸಿದ್ಧವಾದದ್ದು; ವಾಲ್ಮೀಕಿಋಷಿ ಸಲಹಿದ್ದ ಪಾರಮ್ಮಳೆಂಬ ಕನ್ಯೆಯೊಡನೆ ಮುತ್ತಯ್ಯನ ವಿವಾಹ ನಡೆದದ್ದು; ಈ ದಂಪತಿಗಳಿಗೆ ಬೋಡಿಪಾಲಯ್ಯನೆಂಬ ಮಗನಾದದ್ದು; ಬೋಡಿಪಾಲಯ್ಯನಿಗೆ ಬೋಸಮ್ಮ ಎಂಬವಳೊಡನೆ ಮದುವೆಯಾದದ್ದು; ಇವರಿಗೆ ಮಲ್ಲಯ್ಯನೆಂಬ ಮಗನಾದದ್ದು; ಮುಂದೆ ನಿಡುಗಲ್ಲಿನ ದೊರೆ ಭೂಮರಾಜನು ಈ ಮಲ್ಲಯ್ಯನಿಗೆ ತನ್ನ ಮಗಳನ್ನು ಕೊಟ್ಟು ಮದುವೆಮಾಡಿದ್ದು; ಈ ಮಲ್ಲಯ್ಯನಿಗೆ "ಯತ್ತುಗಳ ಕಿಲಾರಿ ಪೂಜಾಮುದ್ರಿಕೆ ಪದಿಪಾದಿಗೆ ಸಕಲಕ್ಕು ಕರ್ತು ನೀನೆ"ಯಂದು ಸರ್ವರೂ ೧೦೮ ಮಂದಿ ವಾಲ್ಮೀಕಮತದವರು ಒಪ್ಪಿದ್ದು; ತನ್ನ ೧೦೮ನೇ ವರ್ಷದಲ್ಲಿ ಬೋಡಿಪಾಲಯ್ಯನು ಮೃತನಾದದ್ದು- ಇತ್ಯಾದಿ.

ಕೃತ–ತ್ರೇತಾ–ದ್ವಾಪರ–ಕಲಿಯುಗಗಳ ಕಾಲಾನುಕ್ರಮದ ವಿವರಣೆ ದೊರೆಯುತ್ತದೆ ಈ ಪತ್ರಗಳಲ್ಲಿ. ರಾಮಾಯಣ–ಮಹಾಭಾರತಗಳಲ್ಲಿಯ ಕೆಲವು ಪಾತ್ರಗಳ ಪ್ರಸ್ತಾಪವಿದೆ. ಭಾರತದ ಪವಿತ್ರ ನದಿಗಳು ಹಾಗೂ ಪರ್ವತಗಳ ಪ್ರಸ್ತಾಪವಿದೆ. ಶ್ರೀಶೈಲಪರ್ವತ (ಪರ್ವತ ಮಲ್ಲಿಕಾರ್ಜುನಬೆಟ್ಟ), ಕೇದಾರಪರ್ವತ, ಕನಕಪರ್ವತ, ಕೀಲಪರ್ವತ, ಹರಿಶ್ಚಂದ್ರಬೆಟ್ಟ, ಕುಂದಿರ್ಪೆಬೆಟ್ಟ, ನಿಡುಗಲ್ಲುಬೆಟ್ಟ, ಶಿವರಾಯನಬೆಟ್ಟ, ಮೈಸೂರು–ಚಾಮುಂಡಿಬೆಟ್ಟ (ಮೈಸೂರುಧಾನಿ), ನೀಲಗಿರಿ, ಅಯೋಧ್ಯೆ, ಆನೆಗೊಂದಿ, ಸಂಡೂರು, ಗುಡೇಕೋಟೆ, ಮೊಳಕಾಲ್ಮೂರು, ರಾಯದುರ್ಗ, ಗುಡಿಬಂಡೆ, ಹೋತೂರು, ಜಾನಮದ್ದಿ, ಸುಲ್ತಾನಿಪುರ ಮೊದಲಾದ ಬೆಟ್ಟಪ್ರದೇಶಗಳು; ಕಪಿನಿ, ಕಾವೇರಿ, ಜಾಹ್ನವಿಹೊಳೆ ಮೊದಲಾದ ನದಿ–ಹೊಳೆಗಳು; ಆದಿಶಕ್ತಿ, ಬ್ರಹ್ಮ–ವಿಷ್ಣು–ರುದ್ರ, ಶ್ರೀಕೃಷ್ಣ, ಅಸುರರು, ಯಕ್ಷರು, ಭೈರವರು, ವಗ್ಗರು, ಜನಕಮುನಿ, ಕೌಂಡಿಲ್ಯಮಿಶ್ರ, ವಾಲ್ಮೀಕಿ, ವಿಶ್ವಾಮಿತ್ರ, ಗಾರ್ಗೇಯ, ದಧೀಚಿ, ವೀರವಸಂತರಾಯ, ಕಾಳವುಜ್ಜಯಿನಿಯ ಅಂಭೋಜರಾಜ, ಶಂತಾರ್ವಣ, ಅಲ್ಲಮಪ್ರಭು, ಬಸವೇಶ್ವರ, ಚನ್ನಬಸವಣ್ಣ, ಪರುಶ, ಕುಂದುರ್ಪೆಬೆಟ್ಟದ ಹೇಮರಾಜ, ಚಂದ್ರಗುತ್ತಿರಾಜ, ನಿಡುಗಲ್ಲಿನ ಭೂಮಿರಾಜ, ಪಡಿಪದೆರಾಜ, ಗಾದರಿ, ಪಾದಶಾಹದೊರೆ, ಮೈಸೂರು ರಾಜಾಸಾಬ್ (ಒಡೆಯರು), ನಂಜುಂಡಸ್ವಾಮಿ (ನಂಜುಂಡೇಶ್ವರ) ಮೊದಲಾದ ದೈವಾಂಶಸಂಭೂತರು, ಸಾಧಕರು, ಭೂಮಿಪಾಲರುಗಳು ಈ ತಾಮ್ರಪತ್ರಗಳಲ್ಲಿ ಕಂಡುಬರುವುದುಂಟು.

ಒಟ್ಟಿನಲ್ಲಿ, ಇದೊಂದು ಸಂಕೀರ್ಣ ಸ್ವರೂಪದ ಶಾಸನ. ಈ ತಾಮ್ರಪತ್ರಗಳಲ್ಲಿ ಮುತ್ತಯ್ಯನಿಂದ ಆರಂಭಗೊಳ್ಳುವ ವಾಲ್ಮೀಕಮತದ, ಮುಖ್ಯವಾಗಿ ಪರಂಪರೆಯಿಂದ ಬಂದ ಪಶುಪಾಲಕ ಸಂಸ್ಕೃತಿಗೆ ಸಂಬಂಧಿಸಿದ ವಿರಗಳಿವೆಯೆಂಬುದನ್ನು ಮೇಲೆಯೇ ಹೇಳಿದೆ. ಇಲ್ಲಿಯ ಸಂಗತಿಗಳು ಐತಿಹ್ಯೀಕೃತ ಇತಿಹಾಸದ ಹೊದಿಕೆಯೊಳಗೆ ಮರೆಯಾಗಿರುವುದು ವಿಶೇಷ. ಈ ತಾಮ್ರಪತ್ರಗಳಲ್ಲಿ ಕಾಣಬರುವ ಮುತ್ತಯ್ಯನ ಪೀಳಿಗೆಯ ಚಿತ್ರ ಈ ಕೆಳಗಿನಂತಿದೆ:

ಗೌತಮಋಷಿ
(ಮೂಲಪುರುಷ; ಪಂಚವರ್ಣದ ಗೋವಿನ ಗರ್ಭದಲ್ಲಿ ಜನಿಸಿದವನು)
|
ಮುಕ್ತಾಚಾರ್ಯ ಅಥವಾ ಮುತ್ತಯ್ಯ
(ಗೌತಮಋಷಿಯ ಕ್ರಿಯಾಮಂತ್ರದಿಂದ ಜನಿಸಿದ ಪುತ್ರ; ವಾಲ್ಮೀಕಿಋಷಿ ಸಲಹಿದ್ದ ಪಾರಮ್ಮಳೊಡನೆ ಈತನ ವಿವಾಹವಾಯಿತು)
|
ಬೋಡಿಪಾಲಯ್ಯ
(ಬೋಸಮ್ಮಳೆಂಬ ಕನ್ಯೆಯೊಡನೆ ಈತನ ವಿವಾಹವಾಯಿತು)
|
ಮಲ್ಲಯ್ಯ
(ನಿಡುಗಲ್ಲಿನ ದೊರೆ ಭೂಮಿರಾಜನ ಮಗಳೊಡನೆ ಈತನ ವಿವಾಹವಾಯಿತು)
|
x x x
|
ಮುತ್ತಯ್ಯ
(ಶ್ರೀಶೈಲ ಮಲ್ಲಿಕಾರ್ಜುನನ ಶ್ರೀಪದಿಪೂಜಾರಿ; ಹಾಲಿ ಜೀವಂತರಿರುತ್ತಾರೆ).

ಶಾಸನ ಪಾಠ

ತಾಮ್ರಪತ್ರ ೧ : ಪುಟ ೧–ಮುಂಬದಿ:

ಶ್ರೀ ಕಾ ೧ ಶ್ರೀಗುರುಬಸವಲಿಂಗಾಯನಮಃ

॥ ಪೂರ್ವಪರರುದ್ರಭಾರತಗಳ ನಿರ್ಮಿತವಾದ ಯೀ ಭೂಮಿಯಲ್ಲಿ ನಾನಾ ಮತ ಹುಟ್ಟಿದ್ದು ಅನೇಕಾವುಂಟು ಯೀಗ ವಾಲ್ಮೀಕಮಥ ॥

॥ ಕಟ್ಲೆ ಅಂದರೆ। ಗೌತುಮರುಷಿಗಳ ವುತ್ಪತ್ಯವಾದ ವಂಶದ ಶಾಸನದ ವಳಗಣ। ಬರದ ವೀವರಗಳು ಕ್ರಮ

॥ ಆದಿ ಆಧಾರವಿಲ್ಲ ಭೋಮಿ ಆಕಾಶವಿಲ್ಲ ಸಪ್ತಸಮುದ್ರವಿಲ್ಲ ಅಷ್ಟಕುಲಗಿರಿಗಳಿಲ್ಲ ಚಂದ್ರಸೂರ್‍ಯಾದಿಗಳು ಯಿಲ್ಲ॥

॥ ತ್ರೈಮೂರ್ತಿಗಳು ಯಿಲ್ಲ। ದೇವತೆಗಳು ಯಿಲ್ಲ। ಆಕಾಶದಲ್ಲಿ। ಬೈಗು ಬೆಳಗುಯಿಲ್ಲ ಅಂದಕಾರವಾದಿ ನಿಶಿಯೆ ವ್ಯ॥

॥ ಪಿಶಿತ್ತು। ಕಾಲದಲ್ಲಿ ನಿರ್ವಯಲ। ನಿರಾಕಾರಮೂರ್ತಿಯಾದ ಪ್ರಭುದೇವರು ವಾಯುವಿನಂತ್ತೆ। ಗುಪ್ತದಲ್ಲಿ ಯಿದ್ದರು॥

॥ ಕತ್ತಲು ಯಂಬ ಆದಿಶಕ್ತಿ ನಿಶಿಯಲ್ಲಿ ಸಂಚರಿಶಿಕೊಂಡು ಯಿದ್ದಳು । ವಂದಾನೂಂದು ದಿನದಲ್ಲಿ ಆದಿ॥

॥ ಶಕ್ತಿವೊರ್ವಳು ಬರುವ ವ್ಯಾಳ್ಯಾದಲ್ಲಿ । ಯೇಕೋದೇವನಾದ ಪ್ರಭುವಿನ ಸುಳುವು । ಕಾಣಿಸಲಾಗಿ । ಆದಿಶಕ್ತಿಯ ಕಂ॥

॥ ಣಿಗೆ ಮಿಂಚಿನಂತ್ತೆ ಕಂಡು ಬೆಸಗೊಂಡು । ನಿನು ದಾರು ಯಂದು ಕೇಳಲು। ಪ್ರಭುವು ನೀನು ದಾರು ಯಂದು ಕೇಳಲು ಹಿ ॥

॥ ೯ಗೆ ವಬ್ಬರಿಗೊಬ್ಬರಂತೆ ಕೇಳಲಾಗಿ। ದಾವದಾವ ಸಂಚಾರವಿಲ್ಲದೆ । ನಾನೂಬ್ಬಳೆ ಯಿದ್ದೇನೆಂದು। ನನಗೆ ತಿಳಿದು ಯಿರಲಾಗೀ॥

॥ ನೀನು ದಾವ ಮಹಿಮರೆಂದು ಕೇಳಲು । ಪ್ರಭುವು । ಮಾಯಿಗೆ ಶಿಲ್ಕಿದಾತನೆಂದು ಹೇಳಲಾಗಿ। ಆದಿಶಕ್ತಿ । ಅದುಷ್ಯಾಗೆ॥

॥ .. ರೋಷದಿಂದಾ। ಭೊಮಿ ಆಕಾಶ ರಕ್ತ ಹಸ್ತಿ ಪಿಂಡ ಮಾಮ್ಸ ಯಿದು ನಂನದು ಬಿಟ್ಟು ಕಡಿಗೆ ನಿಂತರೆ ನೀವೆ ದೊಡ್ಡಾತ॥

॥ ನೆಂದು ಯೇಳಲು ಅದೇ ಪ್ರಭುವು ।.. ಪನ್ತವನ್ನು ಬಿಟ್ಟು ಅಂತರಿಕ್ಷದಲ್ಲಿ ನಿಲ್ಲಲು ಆದಿಶಕ್ತಿ ಮಾಯದಿಂದ।

॥ ... ಯೀತನಂನ್ನು ಕೆಡವಬೇಕೆಂದು ಪಶ್ನಿಸಲು । ಆತನು ಪರಂಜ್ಯೋತಿಸ್ವರೂಪನು ಯಲುಬು ಆಗಿ ಅಂತ॥

॥ ರಿಕ್ಷದಲ್ಲಿ ನಿಂತು ಯಾವದಕ್ಕು ಹೆದರದೆ ಬೀಳದೇ ಯಿರಲು । ಯೀತ ನನಗೆ ದೊಡ್ಡಾತನೆಂದು ಆದಿಶಕ್ತಿ ಸಷ್ಟಾಂಗ ಪ್ರ॥

॥ ಣಾಮದಿಂದ ಬೇಡಿಕೊಳಲು ಆತನು ಮೆಚ್ಚಿ । ಬೆಡಿದ ಫಲಾ ಕೊಡುತ್ತಿನಿ ಯಂನಲಾಗಿ ಮುಂದೆ ಲೋಕಕ್ಕೆ ಕಾರಣಾ॥

॥ ದಕ್ಕೆ ವುತ್ಪತ್ಯ ಸ್ಥಿತಿ ಲಯಕ್ಕು। ಕಾರಣ ಮಾಡಬೇಕು ಆದ್ದರಿಂದ ಯಿದಕ್ಕೆ ಮಂತ್ರ ವುಪದೇಶ ಮಾಡಬೇಕೆಂದು ಬೆ॥

॥ ೯ಡಿಕೊಳ್ಳಲಾಗಿ । ಪ್ರಭುವು। ಹೊಂಕಾರ ಪ್ರಣಮ ಯಂಬ। ಮೂರು ಮಂತ್ರ ಕೂಡಲಾಗಿ। ಆದಿಶಕ್ತಿ ಯೀ ಮೂಲಮಂತ್ರ॥

॥ ದಿಂದ ಜಪವಂ ಮಾಡಲು । ಪ್ರಭುವು। ಅದ್ರುಶ್ಯವಾಗಿ । ಹೋದರು । ಯೀ ಮಂತ್ರಧ್ಯಾನದಿಂದ ಯೀ ಮಾಯಿ ಯಿರಲು..

॥ . ದಲ್ಲಿ । ಆದಿಶಕ್ತಿಮಂತ್ರದಿಂದ ಗೋವು ವುಟ್ಟಿತು । ಯೀ ಮೂರು ಮಂತ್ರದಿಂದ ಸ್ತುತಿಸಲಾಗಿ ಅಯಿದು ಕತ್ತಿ ಆದವು । ವಂ॥

॥ ದು ಕತ್ತಿಯಲ್ಲಿ ಪಂಚವರ್ನದ ಗೋವು ವುಟ್ಟಿತು । ಮೂರು ಕತ್ತಿಯಲ್ಲಿ ಮೂರು ಮೂರ್ತಿಗಳು ವುಟ್ಟಿದರು । ವಂದು ಕತ್ತಿ॥

॥ ಯಲ್ಲಿ ಅಖಿಳ ಝೂಂಡ ಬ್ರಾಂಹಂಡ ವುತ್ಪತ್ಯವಾದವು। ವಂದು ಕತ್ತಿಯಲ್ಲಿ ವುಟ್ಟಿದ ಪಂಚವರ್ನದ ಆಕಳದ ಗರ್ಭ॥

॥ ದಲ್ಲಿ ಪಂಚವರ್ನದ ಬಸವನು ವುಟ್ಟಿತು ಆ ಬಸವಂಣನು ಸಕಲ ಭೂಮಿಯಂನ್ನು ಅಪ್ಪು ಆಗಿ ನೀರಾಗಿ ಯಿರುವ ॥

॥ ದಂನ್ನ। ಯೆಪ್ಪು ಮಾಡಿದರು। ಭೋಮಿ ಘಟ್ಟಿಯಾಗಿ ನಿಂತದ್ದಾಯಿತು ಆ ಬಸವಂಣನ। ನಾಲ್ಕು ಪಾದದಿಂದ ನಾಲ್ಕ ಝೂಂಡ ಕು॥

॥ ಲಗಿರಿಗಳು ಸಪ್ತಸಮುದ್ರಗಳು । ನಿರ್ಮಿತವಾದವು ಆಕಾಶವಾಯಿತು । ಅಲ್ಲಿಂದ ಸದರಿ ಪಂಚವರ್ನದ ಗೋವಿನ ಗರ್ಭ॥

॥ ದಲ್ಲಿ ಗೌತುಮರುಷಿಗಳು ಹುಟ್ಟಿದರು । ಆ ರುಷಿಗಳು ಅನೇಕ ಕಾಲದಲ್ಲಿ । ತಪೋಧ್ಯಾನದಿಂದ ಯಿರಲು ಬ್ರಂಹ್ಮ ವಿಷ್ಣು॥

॥ ರುದ್ರರು ಮೂರು ಶಕ್ತಿಯಿಂದ ವುಟ್ಟಿದರು । ಅನಂತರ ಅದೇ ಗೋವುನ ಗರ್ಭದಿಂದ ಪುನಹ ಯೇಕಶ್ರುಂಗ ವುಟ್ಟಿ॥

॥ ಆಕಳವು ವುಟ್ಟಿತು । ವಂಟ್ಟಿಕೊಂಬಿನಬಲ್ಲಿ ಆವು ಆಯಿತು । ಪಂಚವರ್ನದ ಆಕಳದಿಂದ ಪಂಚಕಲ್ಯಾ॥
॥ ಣಿ ಬಸವಂಣನು ಗೌತಮರುಷಿ । ವಂದು ಕೋಡಿನ ಬಲ್ಲಿ ಆಕಳ ಮೂರು ವುಟ್ಟಿ ಯೀ ಲೋಕಾದಿ ಲೋಕತ್ರ ಕಾರ॥
॥ ಣರಾಗಿ ಮಹಿಮದಿಂದ ಯೀ ಭೊಮಿಗೆ ಯಪ್ಪು ಮಾಡಿಕೊಂಡು ಯಿರಲಾಗಿ ಯೀ ತ್ರೈಮೂರ್ತಿಗಳಿಂದ ಸಕಲ॥
॥ ಜಗತ್ತಿಗೆ ವುತ್ಪತ್ಯಕ್ಕೆ ಶ್ರುಷ್ಟಿಗೆ ಕರ್ತುಗಳಾಗಿ । ಯಿದ್ದರು ಆದಿಯಲ್ಲಿ ಯುಗದಲ್ಲಿ। ೨೪೮೮ ವರುಷದ ಪರಿಯಂತ್ರ॥

ತಾಮ್ರಪತ್ರ ೧: ಪುಟ ೨– ಹಿಂಬದಿ:

ಕಾ ೨

॥ ವರಿಗು । ಗೌತುಮರುಷಿಗಳು ಆಕಳವಂನ್ನು ಸಂಪಾದಿಸಿಕೊಂಡು ತಂನಾ ಬಲತೊಡೆಯಲ್ಲಿ ಅಡಗಿರ್ದ॥
॥ ಮಹಾಲಿಂಗವಂನ್ನು ತ್ಯಗದುಕೊಂಡು ತಮಾಕ್ರಿಯದಲ್ಲಿ ಯಿರಲಾಗಿ। ಅನಾದಿಯುಗ ಬರಲು ಆ ಯು॥
॥ ಗಾಂತರ। ೭೯೬೪೦ ವರುಷ ಹೀಗೆ ತಪಸ್ಸು ಮಾಡಿದರು ಅನಾದಿಯುಗದಲ್ಲಿ ಬ್ರಂಹ್ಮಗೆ ಪಟ್ಟವಾಯ್ತು ದೇವತರು॥
॥ ವುಟ್ಟಿದರು। ಅದ್ಭೂತಯುಗ। ೨೬೩೨ ಯುಗದಲ್ಲಿ। ಸೂರ್ಯಚಂದ್ರದಿಗಳು ಹುಟ್ಟಿದರು ಕ್ರುಷ್ಣಗೆ ವೈಕುಂಟ॥।
॥ ಸ್ತಿರಪಟ್ಟವಾಯ್ತು। ೨೫೪೧೦ ವರುಷ ಅಲಂಕ್ರುತಯುಗ ಅಷ್ಟಕುಲಗಿರಿಗಳು ಸಪ್ತಸಾಗರಗಳು ವುಟ್ಟಿ॥
॥ ದವು ಹಸುರರು ಯಕ್ಷರು ಪುಟ್ಟಿದರು। ೨೪೭೯ ವರುಷ ತಮಂದಯುಗ। ೧೯೮೧೦ ವರುಷದಲ್ಲಿ॥
॥ ಸಕಲ ಬೈರವರು ವಗ್ಗರು ಹುಟ್ಟಿದರು ತಾಂಜ। ೧೮೬೫ ವರುಷದಲ್ಲಿ। ಅನೇಕ ಜಾಂಡ ಪುಟ್ಟಿತು ಬಿಂನ್ನಜ ಯು॥
॥ ಗದಲ್ಲಿ । ೧೬೭೪ ವರುಷದಲ್ಲಿ ಆಕಾಶ ನಕ್ಷತ್ರಗಳು ಪುಟ್ಟಿದವು । ಮಣಿರಣಯುಗ। ೧೫೩೬ ವರುಷದಲ್ಲಿ ಗಾ॥
॥ ರ್ಗ್ಯ ದವೀಚಿರುಷಿಗಳು ಪುಟ್ಟಿದರು॥ ವಿಶ್ವಾಸುಯುಗ। ೨೬೪೪೦ ವರುಷ ಕೌಂಡಲ್ಯಮಿಶ್ರ ವಿಶ್ವಾಮಿತ್ರ ನಾದಪ॥
॥ ರು ಪುಟ್ಟಿದರು । ಮಣಿರಣ। ೧೨೬೩೦ ವರುಷದಲ್ಲಿ। ಅಷ್ಟದೇವತರು ಹುಟ್ಟಿದರು। ಮಾಂನ್ಯರಣ । ೨೩೪೮ ವರುಷ॥
॥ ದಲ್ಲಿ। ಚಡೇಶ್ವರರು ಹುಟ್ಟಿದರು ಅಲಂಕೃತಯುಗ। ೩೨೮೧೨ ವರುಷದಲ್ಲಿ । ಸಕಲ ಜಗತ್ತು। ಕಿಂನರ ಕಿಂಪುರಷ॥
॥ ಅಷ್ಟದೇವರು ಆಳಿಕೆಯಾಗಿಯಿತ್ತು। ಕ್ರುತಾಯುಗ। ೩೩೨೨೦ ವರುಷ ಅದರಲ್ಲಿ। ಸಕಲ ಶರಣರು ಪುರಾತ॥
॥ ನರು। ನಿರ್ಮಿತದವರು ಆ ಕಾಲದಲ್ಲಿ ಗೌತುಮರುಷಿಗಳು ತಪಸ್ಸುಕ್ರಿಯ್ಯಾನು ಫಲವಾಗಿ ಆ ಗೋವು ಪ॥
॥ ಂಚವರ್ನದ ಬಂಣ ವಂಟ್ಟಿಕೊಂಬಿನ ಗೊವು। ಸ್ಥಿರದಿಂದ ಯಿಷ್ಟು ಯಗೇಂತ್ರ ಗೌತುಮರುಷಿಗಳು ತ॥
॥ ಪಸ್ಸು ಫಲದಿಂದ ಯಿದ್ದು ಕೃತಾಯುಗ। ೩೩೮೨೫ ವರುಷದಲ್ಲಿ। ಪೊಂಪಾಖ್ಯಗಿರಿಗೆ ಗೌತುಮರುಷಿಗ॥
॥ ಳು ಹೋಗಿ। ಸರ್ವ ಆಕಳವಂನ್ನು। ಕಾಪಾಡಿಕೊಂಡು ಯಿರಲು। ವಂಟ್ಟಿಕೊಂಬಿನ ಆವಿನ ಗರ್ಭದಲ್ಲಿ ಪೊ॥
॥ ಂಪಾದ್ರಿ ಬಸವಂಣನೆಂದು ಕುರುಹುಳ್ಳ ಗೂಳಿ ಹುಟ್ಟಿತು। ಆತನು ಬಹಳ ಮಹಿಮೆ ನಡಶಿದರು। ಗೌತು॥
॥ ಮರುಷಿಗಳು ತಂನ್ನಾ ತೊಡೆಯಲ್ಲಿ ಯಿದ್ದ ಮಹಾಲಿಂಗವಂ ತೆಗೆದುಕೊಂಡು ಯೀ ಬಸವಗೆಗೂ(ಗೂ್ರ?)ಗಳಿಗೆ॥
॥ ಮುದ್ರೆಯಿಟ್ಟರು। ಕಾಮಾಷ್ಟಿಯಿಂದ ವಿನಾಯಾರ್ಥ ಮಾಡಿಸಿದರು। ಮುದ್ರಾಧರ್ಮದಿಂದ ಬಲಮುರಿ ಶಂಖು॥
॥ ನಾಗಬೆತ್ತ ಪಂಚಪ್ರಣಮದ ರುದ್ರಾಕ್ಷಿ। ಭಂಗಾರದ ಗಿಳಿಲು। ಕಮಂಡಲ। ಅಕ್ಷಯಪಾತ್ರಿ ಗಮನಪಾವುಗೇ॥
॥ ಯಿಷ್ಟುಂನ್ನು। ಪೂಜಿಸಿ ಮುದ್ರಸ್ಥಾಪನ ಮಾಡಿಸಿದರು। ಅಲ್ಲಿಗೆ ಆದಿಶಕ್ತಿ ಬಂದು। ಮಹಮಂತ್ರದಿಂದ॥
॥ ಸುಫಲವಂ। ಗೌತುಮರಿಗೆ ಕೊಟ್ಟು। ಶಿಯ್ತಿ ಚಾತ್ರಿಯಂ ಮಾಡಿಸಿದರು। ತಂಮ ತೆಲೆ ತೊಳದು। ಪಂಪಾದ್ರಿ ಬಸವ॥
॥ ಪಂಚವರ್ನದ ಬಸವ। ಬಲ್ಲಿ ಆವು ಯೇಕಶ್ರುಂಗದ ಅಸವು ಅಷ್ಟರ ಮೆಲೆ ಚಲ್ಲಿದರು। ಯಿಲ್ಲಿ । ಕೃತಯುಗ॥।
॥ ಅ. ಆಯ್ತು। ದಶರಥನು ಆತನ ಮಗ। ಲಕ್ಷ್ಮಣರು ಆಳಿದರು। ಭರತಶತ್ರುಘ್ನರು ಆಳಿದರು। ಯೀ ಭೂಮಿ॥
॥ ಗೇ ಧೊರೆಗಳು ಆಗಿಯಿದ್ದು। ರಾವಳ ವುಪಟಳದಿಂದ ಸಿತಾದೇವಿಗೋಸ್ಕರ ವನಸಂಚರಿಸಿ ಭುಜಾಂನಕಿಗೆ॥
॥ ಸಂಶಯವಿಟ್ಟು ರಾಮದೇವರು ಲಕ್ಷ್ಮಣರು ಆರಾನ್ಯಕ್ಕೆ ಶರೆಬಿಟ್ಟರು। ಅಲ್ಲಿ। ವಾಲ್ಮೀಕಿರುಷಿಗಳು ಕಂಡು ಆ ಸೀತಾ॥
॥ ದೇವಿಯಂನ್ನ ಪೊಷಿಸಲಾಗಿ। ಲವಕುಶಲರಂನ ಜನನವಾದಳು। ಆ ಶಿಶುಗಳು। ಲವರಿಗೆ ದನುರ್ವಾದ ವಿ॥

॥ ದ್ಯಬುದ್ಧಿಗಲಿತು ವಾಲ್ಮಿಕರಂ। ರುಷಿಗಳಿಂದ ನಂದಿಸಿಕೊಂಡು ಪುನಹಾ। ರಾಮದೇವರು ಕೂತುಕೊ॥
॥ ಂಡರು। ಅಲ್ಲಿ ತ್ರೈತಾಯುಗ ಮುಗಿಯಿತು॥ ದ್ವಾಪರಯುಗದಲ್ಲಿ॥ ೩೪೧೯೫೫ ವರುಷದಲ್ಲಿ। ಗೌತುಮಾ॥
॥ ರುಷಿಗಳು। ತಂನ ಬಸವಣಂ। ಗೋವುಗಳಂನಾ ಕರಕೊಂಡು ಬಂದು ಕೀಲಪರ್ವತದಲ್ಲಿ ಯಿಧರು॥

ತಾಮ್ರಪತ್ರ ೨: ಪುಟ ೩ – ಮುಂಬದಿ:

ಕಾ ೩

॥ ಯಿಲ್ಲಿಗೆ ಕೃಷ್ಣನು ಬಂದು। ಅಂಭೋಜರಾಜನನೆಂಬ ರಾಜನ। ರೋಷದಿಂದ ಪೂರ್ವದ್ವೇಷದಿಂದ ವ॥
॥ ದಗಲಾಗಿ ಅಂಭೋಜರಾಜನು ಬಂದು। ಕೀಲಪರ್ವತಕ್ಕೆ ಗೌತುಮರುಷಿಗಳ ಮೊರೆಹೋಗಲು। ಅವರು॥
॥ ತಂಮಲ್ಲಿ ಯಿಟ್ಟುಕೊಂಡು ಯೀ ಆಕಳಕ್ಕೆ ಕಾಯಲಿಕ್ಕೆ ಯಿಟ್ಟುಯಿದ್ದರು। ಸಮುದ್ರವಾದ ಹಾಲಸಮುದ್ರ॥
॥ ಕ್ಕೆ ಬಂದು ಗೌತುಮರುಷಿಗಳು ಆ ಯುಗ ಪ್ರಥಮದಲ್ಲಿ। ಹಾಲಸಮುದ್ರಗಡ್ಡೆಯಲ್ಲಿ ಯಿರಲು ಯೀ॥
॥ ಕ್ರುಷ್ಣದೇವರು ಅಂಬೋಜನದೇಶದಿಂದ ಬಂದು। ವಂಟಿಕೊಂಬಿನ ಆಕಳವಂನು ಹೊಡೆಯುತ್ತ॥
॥ ಯಿರಲು । ಅಂಬೋಜನು ಗೌತುಮರಿಗೆ ಹೇಳಲಾಗಿ। ಗೌತುಮರುಷಿಗಳು ಬಂದು ಕ್ರುಷ್ಣದೇವರಂನು।
॥ ಯಿದೇನು ಅಕ್ರಮವೆನಲು। ಅದೇ ಸಿಟ್ಟಿನಿಂದ। ಕ್ರುಷ್ಣನು ಗೌತುಮರುಷಿಗಳಂನ ಹೊಡೆಯಲಾಗಿ॥
॥ ಅನೇಕ ಅಲಕ್ಷ ಮಾಡಿ ಗೌತುಮರುಷಿಗಳಂನು ಕ್ರುಷ್ಣನು। ಹೊಡದಿರು। ನೋವು ಸುದರಿಸಿಕೊಂ॥
॥ ಡು। ತಪಸ್ಸು ಫಲದಿಂದ ಹಾಲಸಮುದ್ರದಲ್ಲಿ ಸ್ನಾನಾಮಾಡಿ ತೆಲೆ ತೊಳದು। ಕೂದಲು ಚಲ್ಲಲು ಬಂಣಕ್ಕೆ ಲಕ್ಷ ಗೋ॥
॥ ವುಗಳು। ಜನಿಸಿದವು। ಆಗ ತಂನ ತೆಲೆ ತೊಳದು। ಅಕಳಗಳ ಮೇಲೆ ಚಲ್ಲಿ। ತಂನ್ನ ಲಿಂಗದಿಂದ ಸಮು॥
॥ ದ್ರ ಸ್ತೇನ ಮಾಡಿಸಲಾಗಿ। ೧೨೦ ವರುಷ ಆಯಿತು। ಅಂಭೋಜರಾಜನು ಅಲ್ಲಿ ಮ್ರುತವಾದನು॥
॥ ಅಲ್ಲಿ ಪಂಚವರ್ನ ಗೋವು ಬಸವಂಣ ಅದ್ರುಶ್ಯವಾದವು। ವುಳಿಕೆ ಪಂಪಾದ್ರಿ ಬಸವಗೆ। ಝ಼ಲ್ಲ। ಭಂ॥
॥ ಗಾರದ ಗಗ್ಗರಿ। ವುರಿಗೆಜ್ಜೆ। ಮೊಖರಂಭ ಕೋಡಣಸು ಯಿಷ್ಟು ಸಾಮಾನು। ಅಂಭೋಜರಾಜನು॥
॥ ಮಾಡ್ಸಿಯಿಟ್ಟು। ೧೨೦ ವರುಷಕ್ಕೆ। ಆತನು ಕಾಲೀ ಕಳದನು। ಅಲ್ಲಿಂದ ದ್ವಾಪರದಲ್ಲಿ। ಪಾಂಡವರು। ಕೌವ॥
॥ ರವರು। ಭೋಮಿಗೆ ವಡೆಯರಾಗಿ। ಧರ್ಮದಿಂದ ರಾಜ್ಯ। ಆಳಿದರು। ದಿವಸ ಪಾಂಡುವರು॥
॥ ಧರ್ಮರಾಯರು। ಅರ್ಜುನ ಭೀಮ ನಕುಲ ಸಹದೇವರು। ಸಹಾ । ಕೌರುವರು। ಜೂಜನಾಡಿ ವನವಾಸವಂ ಚರಿಸಿ॥
॥ ಸತ್ಯದಿಂದ ಪುನಹಾ। ರಾಜ್ಯಪರಿಪಾಲನೆಯಂ ಮಾಡಿ। ಅಷ್ಟರೊಳಗೆ। ೧೨೮೩೦ ವರುಷ ಆಯ್ತು। ಆ॥
॥ ವ್ಯಾಳಕ್ಕೆ ಗೌತುಮರುಷಿಗಳು। ಪೊಂಪಾದ್ರಿ ಬಿರಿದುಳ್ಳ। ಬಸವಂಣ। ಬಲ್ಲಿಪಾವು...ಣಕ್ಕೆ ಲಕ್ಷ ಆ॥
॥ ವುಗಳಂನ ಸಹಾ। ಗೊವರಕ್ಷಣೆಯಂ ಮಾಡಿಕೊಂಡು। ಕೀಲಪರ್ವ್ವತದಲ್ಲಿ। ಕೆಲವು ದಿವಸ ಯಿದ್ದು। ಅಲ್ಲಿ॥
॥ ತಂಮ ತಪೋನ್ಯೆಷ್ಟೆಯಿಂದ ಯಿಂದ್ದು। ಕ್ರಿಯಮಂತ್ರದಿಂದ ವಬ್ಬ ಪುತ್ರನ ಮಾಡಿಕೊಂಡು ಆತನಿಗೇ॥
॥ ಮುಕ್ತಾಚಾರ್ಯನೆಂಬ। ಹೆಸರಿಟ್ಟು। ನಾಮಕರಣವಂ ಮಾಡಿ। ಸರ್ವ್ವ ರುಷಿಗಳಂ ಕರಸಿ ವಡೆಯರು ಯೆಂ॥
॥ ದು ಗೌತುಮರಿಗೆ। ಅನುಸರಿಸಿ। ಮುತ್ತೈಯಂಬ ಮಗನಿಗೆ। ದೀಕ್ಷಾ ಮೋಕ್ಷವಂ। ಕೊಟ್ಟು ಆಕಳ॥
॥ ಆ ಯೆತ್ತುಗಳಿಗೆ। ಯೀತನ್ನೆ ಕರ್ತನ ಮಾಡಿ ಗೌತುಮರುಷಿಗಳು। ಮಗ। ಮುತ್ತೈಯ್ಯನೆಂದು ಸ॥
॥ ರ್ವ್ವರು ವಪ್ಪಿಕೊಂಡು ಯಿರಲು। ಯಿವರು। ತುಂಗಭದ್ರಾ ಕೃಷ್ಣಾ ಗಂಗಾ ಗೋದಾವರಿ ಯಂಬ ನದಿ॥
॥ ಗಳಲ್ಲಿ। ಯೀ ಗೋವ್ವಗಳ ಸ್ನಾನ ಮಾಡಿಸಿ। ತಲಿಗೆ ಆಲು ತುಪ್ಪ ಅಚ್ಚಿ ತೊಳದು ಆ ಯೆತ್ತುಗಳ ಮೈಲೆ॥
॥ ಚಲ್ಲಿ। ಅಷ್ಟವಿಧದಿಂದ ಪೊಜಿಸಿ।ಕೊಂಡು ಅಲ್ಲಿಂದ। ಕ್ಷೀರಸಮುದ್ರಕ್ಕೆ ಗೌತುಮರುಷಿಗಳು॥
॥ ಮುತ್ತೈಯ್ಯನು ಪೊಂಪಾದ್ರಿ ಬಸವನು ಗೊವ್ವಗಳು। ಸಹಾ ಸಮುದ್ರಕ್ಕೆ ಬಂದು ಅಲ್ಲಿ ತಂಮ ಕ್ರಿಯ್ಯಗಳ॥
॥ ತಿರಿಸಿಕೊಳ್ಳುವದರಲ್ಲಿ। ಸಾಕ್ಷತ್ಕುಷ್ಣನು ಬಿಜಯಂಗೈದು ಅನೇಕ। ಅನುಸರಣೆಯಿಂದ ಗೌತುಮರಿಗೆ॥

ತಾಮ್ರಪತ್ರ ೨: ಪುಟ ೪-ಹಿಂಬದಿ:

ಕಾ ೪

॥ ಹೇಳಿ ಗೋವ್ಗಳಂನಾ। ತಂನ್ನ ವಶಮಾಡಿಕೊಳ್ಳಬೇಕೆಂದು। ಯೀ ಗೊವಳಂನ್ನ ಕೆಲವು ದಿವಸ ಕಾ॥
॥ ಯುದ್ದುಕೊಂಡು ಯಿದ್ದು। ಆ ಗೊವ್ಗಳ ಹೊಡಕೊಂಡು। ವಂದಾನೊಂದು ದಿವೆಸ। ಪರ್ವ್ವತ ಮಲ್ಲಿಕಾರ್ಜುನ॥
॥ ಗಿರಿಗೆ ಬರಲಾಗಿ। ಗೌತುಮರುಷಿಗಳು ಮುತ್ತೈಯ್ಯನು ಅನೇಕ ತರ ಹುಡಿಕಿಕೊಂಡು। ಆದಿಶಕ್ತಿ ಸ್ತವುತ್ಯೆ ಮಾ॥
॥ ಡಲಾಗಿ। ಮಹಾ ಆದಿಶಕ್ತಿ ಮೆಚ್ಚಿಬರಲು। ಆದಿಶಕ್ತಿಗೆ ಅನೇಕ ಶ್ರ. ಟ್ಟು। ಹೇಳಿಕೊಳ್ಳಲು। ಆ ಶಕ್ತಿಯು॥
॥ ಯೋಗದ್ರಿಷ್ಟಿಯಿಂದ ನೋಡಿ ಯಿವರಂನು ಕರದುಕೊಂಡು ಹೋಗಲು। ಆ ಪರ್ವ್ವತ ಅಲ್ಲಿ। ಆ ಗೋವು ಕ್ರು॥
॥ ಷ್ಣನ ವಶದಲ್ಲಿ ಯಿರಲು। ಕಂಡು ಆ ಕ್ರುಷ್ಣದೇವರಲ್ಲಿ ವಿಧವಿಧವಾಗಿ। ಶರ. ಮಾಡಿ ಶಾಸ್ತ್ರೇನುಸಾರ ವಪ್ಪಿ॥
॥ ಸಿ ಆ ಆದಿಶಕ್ತಿ ಯಿವಗೆ ಬಿಡಿಸಿಕೊಟ್ಟು ಆ ಕ್ರುಷ್ಣ ಆದಿಶಕ್ತಿ ಅದ್ರುಶ್ಯವಾಗಲು। ಅಲ್ಲಿಂದ ಗೌತುಮರುಷಿ॥
॥ ಮುತ್ತೈಯ್ಯನು ಕೀಲಪರ್ವ್ವತಕ್ಕೆ ಬಂದು। ಗಣಪರ್ವ್ವವಂ ಮಾಡಿಸಿ। ಅಲ್ಲಿ ಅನೇಕ ದಿನ ಯಿದ್ದು ತಂಮ ಶಿಷ್ಯರು ಸ॥
॥ ಹ ಕೂಡಿಕೊಂಡು ಯಿರಲಾಗಿ। ಅಷ್ಟರಲ್ಲಿ ಅನೇಕ ಮಹತ್ತು। ನಡದುಬರಲು। ೫೫೨೫ ವರುಷ ವೀರ॥
॥ ವಸವಂತ್ತ ದರ್ಮದಿಂದ ಆಳುವನು॥ ೬೧೦೩೨ ವರುಷ ಧರ್ಮರಾಯ ಆಳಿದನು॥ ೬೧೦೩೨॥
॥ ವರುಷ ಸೋಮಪ್ರಭು ಆಳುವನು॥ ೬೧೦೩೨ ವರುಷ ತುರದವನಾಳುವನು ॥೬೧೦೩೨ ವರುಷ॥
॥ ಶಂತಾರ್ವಣನಾಳುವನು॥ ೧೧೬೪೨೦ ವರುಷ ಕುಮುದು ಚಕ್ರವರ್ತಿ ಆಳುವನು॥ ೪೨೬೧೦೫॥
॥ ವರುಷ ವೀರವಸವಂತ್ತ ಆದಿಯಾಗಿ ಆಳುವನು॥ ಯಿಷ್ಟರಲ್ಲಿ ದ್ವಾಪರ ಮುಗಿಯಲು॥ ಮುತ್ತೆ
॥ ಯ್ಯಾನು ಗೌತುಮರು ಆ ಆಕಳವಂನು ಸಂಪಾದಿಸಿಕೊಂಡು ಬಂದು ಕಲಿಯುಗದಲ್ಲಿ ಗೋ॥
॥ ವರ್ಧನಗಿರಿಯ ಸಮೀಪಕ್ಕೆ ಬರಲು। ಕ್ರಿಷ್ಣನು ಬಂದು ಗೌತುಮರಿಗೆ ಹೇಳಿಕೊಂಡು ಮುತ್ತೆ॥
॥ ಯ್ಯಾ ಕಾಯತಕ್ಕ ಯೆತ್ತುಗಳಂನು ಸುರಭಿಗಳಂನು॥ ೫ ವರುಷ ಕಾಯ್ದು ಕ್ರುಷ್ಣನು ಬಿಟ್ಟುಹೊ॥
॥ ೀದನಂತ್ತರ ಗೌತುಮ ಮುತ್ತೈಯ್ಯ ಸಹ ಜಂಬುದ್ವೀಪಕ್ಕೆ ಬಂದಲ್ಲಿಗೆ ॥ ೧೨೫ ವರುಷ॥
॥ ಅಯಿತು ಜಂಬುದ್ವೀಪದಲ್ಲಿ ತಂಮ ಯತ್ತು ಗೋವುಗಳಂನು ಗೌತುಮರುಷಿಗಳು ಮು॥
॥ ತ್ತೈಯ್ಯಗೇ ವಪ್ಪಿಸಿ ಭಂಗಾರದ ಲಿಂಗಮುದ್ರೆ ಧರ್ಮ ಬಲಮುರಿ ಶಂಖು ನಾಗಬೆತ್ತ ರು॥
॥ ದ್ರಕ್ಷಿ ಕಂಠಮಾಲೆ ಅಕ್ಷಯಪಾತ್ರೆ ಕ್ರುಷ್ಣಾಂಜನ ಶಿವಪೂಜೆಪೆಟ್ಟಿಗೆ ಶಿವಕವುಚಲಿಂಗ ಪ॥
॥ ಂಚಮುಖದ ಬಸವಂಣ ಯೀ ಸಾಮಾನು ಗೌತುಮರುಷಿಗಳು ಮತ್ತೈಯ್ಯಗೆ ಕೊಟ್ಟು ಪದಿ॥
॥ ಪಾದಿಗೆ ಸಕಲಕ್ಕು ಬಾದ್ಯನ ಮಾಡಿ ರುಷಿಗಳು ಶಿವದ್ಯನದಲ್ಲಿ ಅದ್ರುಶ್ಯವಾದರು। ಯೀ ಕಲಿಯುಗ॥
॥ ೪೩೨೦೦ ವರುಷ ಪ್ರಮಾಣಕ್ಕೆ ನೂರ ಯಿಪ್ಪೈದು ವರುಷ ಅಲ್ಲಿಗೆ ಅಯಿತು॥ ಮುತ್ತೈಯ್ಯಾನು॥
॥ ಯತ್ತು ಗೋವುಗಳಿಗೆ ವಡೆಯನಾಗಿ ಪದ್ಧತಿ ಪ್ರಕಾರ ಪ್ರತಿವರುಷಕ್ಕೆ ವಂದು ವ್ಯಳ್ಯೆ ಆದಿಶಕ್ತಿ॥
॥ ಯಂಬ ದೇವತಿಯಂನು ಕಾರ್ತಿಕ ಶು ೫ಯಲ್ಲು। ಯತ್ತುಗಳಲ್ಲಿ ಪರುಷೆ ಮಾಡ್ಸಿ ದೇವ॥
॥ ತೆಯ ಪೂಜಿಸಿ ಯತ್ತುಗಳಿಗೆ ತಂನ್ನ ತಲೆ ತೊಳದು। ಹಾಲು ತುಪ್ಪದಿಂದ ಯತ್ತುಗಳಿಗೆ॥
॥ ಚಲ್ಲಿ ತೀರ್ಥ ತಳಿದು। ಹೀಗೆ ವರುಷಕ್ಕೆ ಮೂರುಬಾರಿ ಮಾಡಿಕೊಂಡು ಯೀ ಮುತ್ತೈ॥
॥ ಯ್ಯಾನು ವ್ರತದಿಂದ ಸೌರಕ್ಷಣೆಕರ್ತನಾಗಿ ಯಿರಲಾಗಿ ಪೊಂಪಾದ್ರಿ ಬಸವನು ಅದ್ರು॥
॥ ಶ್ಯವಾಗಿ ಹೊಯಿತು। ಮತ್ತು ಅದಕ್ಕೆ ಪ್ರತಿಯಾಗಿ ವಂದು ಹೋರಿ ನೇಮಕಮಾಡೀ॥

ತಾಮ್ರಪತ್ರ ೩: ಪುಟ ೫–ಮುಂಬದಿ:

೫

॥ ಝುಲ್ಲಿಭಂಗಾರದ ಗಗ್ಗರಿಪುರಿಗೆಜ್ಜೆ ಕಾಲುಪೆಂಡೆ ಮುಂತ್ತಾದ್ದು ಅಂಬೋಜರಾಜ ವಪ್ಪಿಸಿದ॥
॥ ಸಾಮಾನು ಶ್ರುಂಗರಿಸಿ ಆ ಬಸವಗೆ। ೧೪೨೮೦ ಗೋವುಗಳು ಯತ್ತುಗಳಿಗೆ ಬಾದ್ಯನಾಗಿ॥
॥ ಯಿರಲು ವಿಕ್ರಮಶಖದಲ್ಲಿ ಪರುಷನೆಂಬ ಧೊರಿಗಳು ಬಂದು ಯೀ ಮುತ್ತೈಯ್ಯಾಗಳ ಯ॥
॥ ತ್ತುಗಳ ಮಹಿಮೆಯಂ ಕಂಡು ತಂನ್ನಾ ಪಟ್ಟಣ ಕಾಳವುಜ್ಜುನಿಗೆ ಕರದೊಯ್ದು ಮೂರು ತಿಂಗ॥
॥ ಳು ಯೀ ಯತ್ತುಗಳಿಗೆ ಗಣಪರ್‍ವವಂ ಮಾಡಿಸಿ। ತುಂಬ ವುಡುಗರೆಯಂ ಮಾಡಿ ವಂದು ಪಾವು॥
॥ ಭಂಗಾರದ ಕಡೆಯ ಹಾಕಿಸಿ ವಂದು ಭೂಚಕ್ರದ ಗಡುಗು ಹಾಕಿಸಿ ಬೆಳ್ಳಿಚಾಮರ ಕೊಟ್ಟು ಅಯಿದು॥
॥ ಮಂಡಲ ಭೂಮಿ ಜಾಗಿರಿಯಂ ಕೊಟ್ಟು ಧಾನಪತ್ರ ಬರಕೊಟ್ಟರು ಅಲ್ಲಿಂದ ಕಪಿನಿ ಕಾವೇರಿ ಮ॥
॥ ದ್ಯೆದಿಂದ ಮುತ್ತೈನು ಯತ್ತುಗಳು ಆಳುಮಕ್ಕಳು ಸಹ ಬರಲು ಪರ್‍ವತದ ಸಮಿಪದಲ್ಲಿ ವಾಲ್ಮೀಕ॥
॥ ರುಷಿಗಳು ಸಂಪಾದಿಸಿದ ಪಾರಂಮ್ಮ ಯಂಬ ಸ್ತ್ರಿಯ್ಯಾಳಂನು ರುಷಿಜನರು ಯೀ ಮುತ್ತ್ಯೆಯಾ॥
॥ ಗೆ ಲಗ್ನವಂ ಮಾಡಿಸಿದರು ಅಲ್ಲಿಂದ ಮುತ್ತ್ಯೆಯ್ಯಾನು ತಂನ್ನ ಯಂಡತಿ ಪಾರಂಮ್ಮಂನ ಕರ॥
॥ ಕೊಂಡು ಬಂದು ಆನೆಗೊಂದಿಪ್ರಾಂತ್ಯದಲ್ಲಿ ಯೀ ಯತ್ತುಗಳ ಕಾಪಾಡಿಕೊಂಡು ಯಿರಲು ಐ॥
॥ ದು ವರುಷಕ್ಕೆ ಪಾರಂಮನು ಗರ್ಭವಾಗಿ ಜನನವಾದಳು ತುಂಗಭದ್ರೆನದಿಯಲ್ಲಿ॥
॥ ಸ್ನಾನ ಮಾಡಿಸಿಕೊಂಡು ರಾಮದೇವರಗುಡಿ ಮುಂದೆ ಅಯಿದು ದಿವ್ಸ ಯಿದ್ದು॥
॥ ಆ ಶಿಶುವಿಗೆ ಬೋಡಿಪಾಲನೆಂಬ ನಾಮಕರಣವಂ ಮಾಡಿ ಕೆಲವು ದಿವ್ಸದ ಮೇಲೆ ಆ॥
॥ ನೆಗೊಂದಿಯಲ್ಲಿ ನರಪತಿ ವುಡುಗರೆ ಮಾಡಿ ಮುತ್ತೈಯ್ಯಾಗೆ ಪಾರಂಮ ಶಿಶುವಾದ॥
॥ ಬೋಡಿಪಾಲಯ್ಯಾನೆಂಬವನಿಗೆ ವುಡುಗರೆ ಮಾಡಿ ಯತ್ತುಗಳಿಗೆ ಪರ್‍ವವಂ ಮಾಡಿಸಿ॥।
॥ ಯೇಳು ಮಂಡ[ಲ] ಭೊಮಿಯಂನ್ನು ಆಯೊದ್ಯವೆಂಬ ಗ್ರಮದಲ್ಲಿ ಜಾಗಿರಿಯಂ ಕೊಟ್ಟರು॥
॥ ಅಲ್ಲಿಗೆ ಬೋಡಿಪಾಲಯ್ಯಾಗೆ ಹಂನ್ನೆರಡು ವರುಷ ವಯಸ್ಸು ಆಯಿತು ಯತ್ತುಗಳು॥
॥ ವಡಕೊಂಡು ತಂನ್ನ ಸತಿ ಮಗನು ಸಹಾವಾಗಿ ಸೂಂಡೂರು ಗುಡೆಕೊಟೆ ಮೊಳಕಾಲ್ಮುರು॥
॥ ವು ರಾಯದುರ್ಗ ಯೀ ಪ್ರಾಂತ್ಯದಲ್ಲಿ ದಕ್ಷಣದಿಕ್ಕಿಗೆ ಬಂದು ಅಲ್ಲಿ ಆರಂಣ್ಯದಲ್ಲಿ ಯ॥।
॥ ತ್ತುಗಳ ಬೀಡು ಮಾಡ್ಸಿ ಹಳ್ಳದಲ್ಲಿ ವರ್ತೆ ಮಾಡಿಕೊಂಡು ತಂಮ್ಮ ಮಂದಿ ಸಹ ಅ॥
॥ ಲ್ಲಿ ಹದಿನಾರು ವರುಷ ಯಿರಲಾಗಿ ಬೋಡಿಪಾಲಯ್ಯಾಗೆ ಯಿಪ್ಪತ್ಯೆಂಟ್ಟು ವರುಷ॥
॥ ತುಂಬಲಾಗಿ ತಂನ್ನ ಮಗನಿಗೆ ಸಾಮಾನು ಮುದ್ರಧರ್ಮ ಪಂಚಗಿಳಿಲು ಯೀ [ಸಾ]ಮಾನುಗಳು॥
॥ ಕೊಟ್ಟು ಪಟ್ಟಕಟ್ಟಿಸಿ ಸರ್‍ವರ ಮುಖಾಂತ್ರ ಯೀ ಬೋಡಿಪಾಲಯ್ಯಾಗೆ ಪದಿಪದಿಗೆ ಸಕ॥
॥ ಲ ಕಾರ್ರ್ಯಕ್ಕು ಕರ್ತನಾಗಿ ನೇಮಿಸಿ ಯಿರಲಾಗಿ ಯೀ ಮುತ್ತೈಯ್ಯಾನು ಐಕ್ಯವಾಗಲು ಅಲ್ಲಿ॥
॥ ಮುತ್ತಿಗಾರುಹಟ್ಟಿ ಯಂಬ ಹೆಸರಾಯ್ತು ಹೀಗೆ ನೇಮಕಮಾಡಿ ಯಿರಲು ಅನೇಕ ಮೇಸ॥
॥ ಜನರು ಬಂದು ಕೂಡಿ ಹಟ್ಟಿ ಮಾಡಿಕೊಂಡು ಯಿರಲಾಗಿ ಪೂರ್‍ವದಂತ್ತೆ ಬೋಡಿಪಾಲಯ್ಯಾ॥
॥ ನು ತಂನ್ನ ತೊಳದು ಯೆತ್ತುಗಳಿಗೆ ಚಲ್ಲಿ। ಯೆತ್ತುಗಳಲ್ಲಿ ಪ್ರ ಸಂವತ್ಸರಕ್ಕು॥

ತಾಮ್ರಪತ್ರ ೩: ಪುಟ ೬-ಹಿಂಬದಿ:

೬

॥ ಆದಿಶಕ್ತಿ ಯಂಬ ಮಾರಂಮ್ಮ ಹೆಸರು ಯಿಟ್ಟುಕೊಂಡು ಶಾಂಶ್ತ್ರ ಮಾಡುತ್ತಾ ಹೀಗೆ ಯಿರ॥
॥ ಲಾಗಿ ತಂಮ್ಮ ತಾಯಿ ಮೃತಪಟ್ಟು। ಹೋಗಲಾಗಿ। ಯೀಚಿಗೆ ಪೂರ್ವಯಿರುವಷ್ಟಕ್ಕೆ ಯೆತ್ತುಗಳಂನು॥
॥ ಕಾಯುವದಕ್ಕೆ ಮಲ್ಲೆಯ್ಯಾ ಯಂಬುವಂನ ಗೊತ್ತುಮಾಡಿಕೊಂಡು ಯಿರಲು। ಅಲ್ಲಿಗೆ। ೪೦ ವರುಷ॥
॥ ಆಯ್ತು। ರಾಕ್ಷಸ ಸಂ।ರದ ಮಾಘಶುಧ ೧೦ ದಿವಸದಲ್ಲಿ ಗಾದ್ರೆ ಯೆಂಬುವನ ಮಗಳು। ಬೋಸಂ॥
॥ ಮ್ಮ ಯಂಬುವಳಂನ್ನ ಆ ಬೋಡಿಪಾಲಯ್ಯಾಗೆ ಲಗ್ನಮಾಡಿದರು। ಅಲ್ಲಿಂದ ಸತಿಪತಿಯುಕ್ತಾ॥
॥ ವಾಗಿ॥ ಮುತ್ತಿಗಳಅಟ್ಟಿ ವಳಗೆ। ಯೆತ್ತುಗಳು ಗೊವ್ಗಳು। ಮುಂತ್ತಾಗಿ। ಸವರಕ್ಷಣೆಯರಾಗಿರಲು। ಅಲ್ಲಿಗೆ ಸಂದ॥
॥ ಕಲಿಯುಗ। ೪೮೬೩ರಲ್ಲಿ ನಡವ ಪರಿಧಾವಿ ಸಂ॥ರದ ಪ್ರಥಮ ಚರಣದಲ್ಲಿ। ಯೆತ್ತುಗಳ ಬೀಡು ಬಿ॥
॥ ಟ್ಟುಕೊಂಡಿರುವ ಕಾಲದಲ್ಲಿ। ತುರಕರ ವಂಶದ ಪಾಶ್ಚವನೆಂಬ ಧೊರೆ ಬಂದು ಯೀ ಯೆತ್ತುಗಳು ವಡಿಸಿಕೊ॥
॥ ಂಡು ಹೋಗಲು। ಯೀ ಬೋಡಿಪಾಲ್ಯೆಯ್ಯಾನು ಮಲ್ಲೆಯ್ಯಾ ಯಿಂನ್ನು ಕೆಲವು ಜನರು ಕೂಡಿಕೊಂಡು ವುತ್ತ॥
॥ ರ ದಿಕ್ಕಿಗೆ। ಮಲ್ಲಯ್ಯಾನ।ಬೆಟ್ಟದ ಪ್ರಾಂತ್ಯದಲ್ಲಿ ಆ ಯೆತ್ತುಗಳು ಕಂಡು ಯೀ ಪಾಚ್ಚವನೆಂಬ ಧೊ॥
॥ ರಿಗೆ ಬಹು ಪ್ರಕಾರ ಹೇಳಿಕೊಂಡಾಗ್ಯು ಬಿಡದೆಯಿರಲು। ಆ ರಾತ್ರೆ ಆ ಧೊರೆ ಸಪ್ನವಳಿಯಲ್ಲಿ॥
॥ ಆದಿಶಕ್ತಿ। ಪ್ರತ್ಯಕ್ಷದಿಂದಾ ನಿನಗೆ ಯೀ ದುಷ್ಟತನದಿಂದ ಯೀ ಯೆತ್ತುಗಳು ಹೊಡದು ತಂದಿರುವೆ॥
॥ ಸಲ್ಲದು। ಯಿವು ಪೂರ್ವದಲ್ಲಿ ರುಷಿಗಳು... ಯಂದು ಹೇಳಿ ಯಿವು ಯಿಟ್ಟುಕೊಂಡರೆ ನಿಂನ ರಾಜ್ಯ॥
॥ ಭಾರ ಕೆಟ್ಟು ನಿಂನ ವಂಶ ನಾಶವಾಗುತ್ತದೆ ಅನಲು। ಅಷ್ಟರಲ್ಲಿ ಕಂಣ್ದೆರದು ನೋಡಲು... ಶಕ್ತಿಯಿಂದಾ॥
॥ ಅದ್ಭೂತ ತೋರಿ। ಆತನು। ಮೂರ್ಚೆಯಾಗಿ। ತಿಳಿದೆದ್ದು। ಯಿವರು। ಮಹಿಮರೆಂದು ದಂಡ॥
॥ ಸಲ್ಲಾಮು ಮಾಡಿ। ಯೀ ಬೋಡಿಪಾಲಯ್ಯಾಗೆ ವುಡುಗರೇ ಮಾಡಿ। ಯೆತ್ತುಗಳಲ್ಲಿ ಪರ್ರು ಮಾಡಿಸಿ। ೬॥
॥ ಮಂಡಲ ಬೊಮಿ ದಾನಪತ್ರ ಕೊಟ್ಟು ಯೀ ಮುತ್ತಿಗಳು ಯೆಂದು। ಅಲ್ಲಿ ಸುಲಿತ್ತಾನಿಪುರದ॥
॥ ಆಲದಮರದ। ಕಟ್ಟೆ ನೇಮಿಸಿ। ಕೊಂಡು ೩ ತಿಂಗಳುವರಿಗು ಯಿಟ್ಟುಕೊಂಡು ಯಿದ್ದು॥
॥ ಮುಂದಕ್ಕೆ ಕಳಿಸಲು। ಯೀ ಯತ್ತುಗ. ಳು ಮರಳಿಕೊಂಡು ಕನಕಪರ್ವತಕ್ಕೆ। ಹೋಗಿ॥
॥ ಅಲ್ಲಿ ದೇವತಾರ್ಚನೆ ಮಾಡಿಸಿ। ಅಲ್ಲಿಂದ। ಕೇತಾರಪರ್ವತಕ್ಕೆ ಬಂದು ಅಲ್ಲಿ ಜನಕಮುನೀ॥
॥ ತಪಸ್ಸು ಮಾಡುತ್ತಿರಲು ಆತನು ಯೀ ಯೆತ್ತುಗಳ ಕಂಡು। ವಿಚಾರ್ಸಲಾಗಿ। ಮುತ್ಯೆಗಳು॥
॥ ಯೆತ್ತುಗಳು ಗೌತುಮರು ಕೊಟ್ಟ ಪೊಂಪಾದ್ರಿ ಬಸವ ವಂಟಿಕೊಂಬಿನ ಬಲ್ಲಿಹಾವು ಯಂದು॥
॥ ಬೋಡಿಪಾಲಯ್ಯಾನು ಜನಕಮುನಿಗಳಿಗೆ ಹೇಳಲಾಗಿ। ಆ ಮುನಿ ನಂಮ ಗೌತುಮರು॥
॥ ಷಿಗಳು ಕೊಟ್ಟ ಯೆತ್ತುಗಳೆಂದು ತಿಳಿದು ಬಹಳ ಸಂತೋಷಮಾಡಿ ಅವರಿಗೆ... ॥
॥ ಲಾದಿಗಳ ಕೊಟ್ಟು। ಅನುಗಪ್ಸಿ ಯೆತ್ತುಗಳಿಗೆ ಸಮರಾಧನೆ।ಯಂ ಮಾಡ್ಸಿ ಮುಂದೆ ಸಮು॥
॥ ದ್ರದ ತೀರಕ್ಕೆ ಜನಕಮುನಿ। ಬೋಡಿಪಾಲಯ್ಯಾನು ತಂನ್ನ ಸತಿಸಹಿತ ಯೆತ್ತುಗಳ॥
॥ ವಡಕೊಂಡು ಹೋಗಿ। ಸಮುದ್ರದಲ್ಲಿ ಸ್ನನವಂ ಮಾಡ್ಸಿ ಜನಕಮುನಿ ವುದುಕ ಪ್ರ॥
॥ ಕ್ಷಣವಂ ಮಾಡಿಕೊಂಡು ಬೋಡಿಪಾಲಯ್ಯಾನು ತಂನ್ನ ತೆಲೆಯಂನು ಹಾಲು ತುಪ್ಪ॥
॥ ದಿಂದ ತೊಳೆದು ಯೆತ್ತುಗಳಿಗೆ ಚಲ್ಲಿ। ಅಲ್ಲಿ ಗೌತುಮರುಷಿಗಳು ಮುತ್ಯೆನು ಯಿಟ್ಟು॥
॥ ಹೊದ ಬೆಳ್ಳಿ ಚಪ್ಪೆಕೊಡಲಿ ಬೆಳ್ಳಿ ಜಮದಾಂಡು ಭಂಗಾರದ ಮುದ್ರೆಕೋಲು ಮುದ್ರೆವುಂಗರ॥
ವಂನು ಜನಕಮುನಿಗಳು ಬೋಡಿಪಾಲಯ್ಯಾಗೆ ಕೊಟ್ಟು ನೀನೆ ಯೀ ಗೌತುಮರು ಮುತ್ಯೆನಂತೆ॥

॥ ಪದಿಪಾದಿಗೆ ಗದ್ದಿಗೆ। ಕಿಲಾರಿ ನಾನ ಕಾರ್‍ಯ್ಕಕ್ಕೆ ನೀನೆ ಕರ್ತನೆಂದು ಅಲ್ಲಿಂದ ಪರ್ವತದ॥
॥ ಮಲ್ಲಿಕಾರ್ಜುನಬೆಟ್ಟಕ್ಕೆ ಬಂದರು ಅಲ್ಲಿ ಮಲ್ಲಿಕಾರ್ಜುನಸ್ವಾಮಿ ಪಂಚಅಭಿಷೇ[ಕ]ವಂ॥ ಮಾಡ್ಸಿ

ತಾಮ್ರಪತ್ರ ೪: ಪುಟ ೭– ಮುಂಬದಿ:

೭

॥ ಯೀ ಯೆತ್ತುಗಳಿಗೆ ತಿರ್ಥ ಚಲ್ಲಿ ಯೀ ಬೆಟ್ಟದ ಮೇಲೆ ಹತ್ತಿ ಪ್ರದಕ್ಷಣ ಮಾಡುವಾಗ್ಯೆ ಮಲ್ಲೇಶ್ವರನು॥
॥ ಪಂಚಕರ್ಮಾರ ಸಾಂಬ್ರಣಿಯಿಂದ ಬೆಳ್ಳಿಘಂಟೇ ಭಂಗಾರದ ಜಂಗು ಘಣರ ಘಣರೆಂದು ಗಿರಿಮೇಲೆ॥
॥ ಶಬ್ದ ಮಾಡಿ ಯೀ ಬೋಡಿಪಾಲಯ್ಯಾಗೆ ಆ ಘಂಟೆ ಜಂಘು ಕೊಟ್ಟರು ನೀನು ಗಿರಿಗಳ ಮೇಲೆ ಹತ್ತಿ ಯೀ॥
॥ ಗಂಟೇ ಬಾರಿಸಬೇಕೆಂದು ನೇಮ್ಸಿಕೊಟ್ಟರು ಅಲ್ಲಿ ಮಲ್ಲಿಕಾರ್ಜುನನ ವರವಂ ಪಡೆದು ಯಿರಲಾಗಿ ಯೀ॥
॥ ಬೋಡಿಪಾಲಯ್ಯಾನ ಹೆಂಡತಿ ಗರ್ಭಿಣಿಯಾಗಿ ಗಂಡುಮಗಂನ್ನ ಜನನವಾಯ್ತು ಜನಕಮುನಿ ಸರ್ವ॥
॥ ರು ಕೂಡಿ ಮಲ್ಯೆಯ [ಯ]ಂಬ ಹೆಸರಿಟ್ಟು ೯ ತಿಂಗಳು ಅಲ್ಲಿದ್ದು ಶಿವದ್ಯಾನದಿಂದ ೯ ತಿಂಗಳು ಮಗಂನ್ನ ಕ॥
॥ ರಕೊಂಡು ಜನಕಮುನಿ ಬೋಡಿಪಾಲಯ್ಯಾ ಸತಿ ಸುತ। ಯೆತ್ತುಗಳು ಕೂಡಿ ಪಾತಾಳಗಂಗೆಯ॥
॥ ಲ್ಲಿಗೆ ಬಂದರು ಅಲ್ಲಿ ಚಂದ್ರಗುತ್ತಿ ರಾಜನು ಪಾ[ತಾ]ಳಗಂಗೆಯಲ್ಲಿ ಸ್ನನ ಮಾಡುತ್ತಿರಲು ನೀನು ದಾ॥
॥ ವ ದೇಶವೆಂದು ಹೇಳಿ ಕೆಳಲು। ನಾವು ಜನಕಮುನಿ ಯಿವರು ನಂಮ ಗೌತುಮಮುತ್ಯೆನ ಯತ್ತು ಬಸ॥
॥ ವಂಣನೆಂದು ಹೇಳಲು ಆ ರಾಜನು ನೀವು ದೊಡ್ಡ ರುಷಿಗಳ ಕಡೆಯವರು ಯೀ ಭೂಮಿಗೆ ಮೊದ॥
॥ ಲು ಕತ್ತಲಲ್ಲಿ ವುಟ್ಟಿದ ಗೌತುಮರು ದೊಡ್ಡವರು ಅವರ ಕಡೆ ಬಸವೇಶ್ವರನೆಂದು ನಮಸ್ಕಾರವಂ ಮಾಡಿ॥
॥ ನಾನು ಚಂದ್ರಗುತ್ತಿ ಧೊರೆ ನನಗೆ ನಂನ್ನ ಮಗಳ ಮೇಲೆ ಮೋಹ್ಸಿದ ಕಾರಣ ಮಗಳು ಹೊಳೆಯಲ್ಲಿ ಬಿ॥
॥ ದ್ದು ನನಗೆ ಶಾಪ ಕೊಟ್ಟಳು ನಾನು ಯೀ ಪಾ[ತಾ]ಳಗಂಗೆಯಲ್ಲಿ ಕರ್ಮಕಳೆದುಕೊಳ್ಳುಬೇಕೆಂದು ಬಂದು॥
॥ ಯಿರುತ್ತಿನಿ ಯಂದು ಆ ರಾಜನು ಜನಕಮುನಿಗಳ ಮುಂದೆ ಹೇಳಲಾಗಿ ಆ ಮುನಿಗಳು ಯಿದು॥
॥ ಶಾಪ ಯಾರಿಂದಲು ಆಗದು ಮುಂದೆ ದೊಡ್ಡವರು। ಚಂನ್ನಬಸವ್ಯೆನವರಿಂದ ಕರ್ಮಪರಿಹಾರ॥
॥ ವಾದೀತು ಅದುವರಿಗೆ ನೀನು ಶಿಲೆಯಾಗಿ ಯಿರುತ್ತಿ ಯಂದು ಹೇಳಿ ಯೀ ಯೆತ್ತುಗಳಿಗೆ ಪಾ[ತಾ]ಳ॥
॥ ಗಂಗೆಯಲ್ಲಿ ಜಲವಂ ತಂದು ವುದುಕುವಂನ್ನು ಗಂಗಾಸ್ನಾ[ನ] ಮಾಡ್ಸಿಕೊಂಡು ಅಲ್ಲಿಂದ ಹರಿಚಂ॥
॥ ದ್ರಬೆಟ್ಟಕ್ಕೆ ಬಂದು ಆ ಬೆಟ್ಟವ ಹತ್ತಿ ಜನಕಮುನಿ ಬೋಡಿಪಾಲಯ್ಯನು ಸಹ ಯೆತ್ತುಗ।
॥ ಳ ಕೆಳಗೆ ನಿಲ್ಲಿ ಬೆಟ್ಟದ ಮೇಲೆ ಸಾಂಬ್ರಾಣಿ ಸುಟ್ಟು ಬೆಳ್ಳಿಗಂಟೇ ಬಾರಿಸಲು ಅಲ್ಲಿ ಯೇಳು॥
॥ ಮಂದಿ ರುಷಿಗಳು ಬಂದು ಯಿವರಿಗೆ ಫಲಾದಿಗಳು ಕೊಟ್ಟು ಕಳ್ಸಿಲಾಗಿ ಅಲ್ಲಿಂದ ಶಿವರಾಯನಬೆ॥
॥ ಟ್ಟಕ್ಕೆ ಬಂದರು ಅಲ್ಲಿಗೆ ಕಲಿಯುಗಸಂದ ಕಲಿ। ೪೮೮ ಆಯ್ತು ಅಲ್ಲಿ ಶಿವರಾಯನಬೆಟ್ಟದಲ್ಲಿ ಜ॥
॥ ನಕಮುನಿ ಬೋಡಿಪಾಲ್ಯೆ[ಯ್ಯಾನ] ಸತಿ ಮಗ ಮಲ್ಯೆಯ್ಯಾನು ಯಿರಲು ಅಲ್ಲಿಗೆ ಕ್ರಿಷ್ಣನು ಬಂದುನು ರಾಮನಾಗಿ॥
॥ ಬಂದು ನಾನು ಯೆತ್ತು ಕಾಯ್ತುವ್ತಿನಿ ಯಂದು ಕೇಳಲಾಗಿ ಆದಿಶಕ್ತಿ ಬಂದು ಕ್ರಿಷ್ಣನಿಗೆ ನೀನು ಕಾಯ್ಯು॥
॥ ದಕ್ಕೆ ಕಾರಣವಲ್ಲ ಬ್ಯಾಡವೆಂದು ಕ್ರಿಷ್ಣಂನ್ನ ವೈಕುಂಟಕ್ಕೆ ಕಳ್ಸಿಲಾಗಿ ಅಲ್ಲಿಂದ ೧೦ ತಿಂಗಳು ಅಲ್ಲಿದ್ದು॥
॥ ಕುಂದಿರ್ಪೆಬೆಟ್ಟಕ್ಕೆ ಬಂದರು। ಅಲ್ಲಿ ಹೇಮರಾಜ ಯಂಬವ ಧೊರೆ ನೋಡಿ ಯಿವರ ವಿಚಾರ್‍ಸಿ॥
॥ ಜನಕಮುನಿ। ಬೋಡಿಪಾಲಯ್ಯನ ಮಗ ಮಲ್ಲಯ್ಯನು ಸಹ ಯೀ ಯೆತ್ತುಗಳಿಗೆ ಧೊರೆಗಳು॥
॥ ಗಣಪರ್ವವಂ ಮಾಡಲಾಗಿ ಆ ಗಿರಿ ಮೇಲೆ ಬೆಳ್ಳಿಗಂಟೆ ಬಾರಿಸಿ ಸಾಂಬ್ರಾಣಿ ಅಕಲಾಗಿ॥
॥ ಅಲ್ಲಿಗೆ ಶ್ರೀಕ್ರಿಷ್ಣನು ಗೌತುಮರು ಸಂಗಡಯಿದ್ದು ಗಾರ್ಗ್ಯರಂನ್ನ ಬಾಣದಿಂದ ಹೊಡದು॥
॥ ಗಾರ್ಗೆರುಷಿಗಳು ಸಪ್ತಸಮುದ್ರ ತಿರಿಗಿ ತಪಸ್ಯ ಮಾಡುವದ ನೋಡಿ ಕ್ರಿಷ್ಣನು ಗಾರ್ಗೆ॥

॥ ರುಷಿಗಳಂನ್ನ ಹೆಗಲನೇರ್ಸಿಕೊಂಡು ಯೀ ಬೆಟ್ಟಕ್ಕೆ ಬಂದು ಜನಕಮುನಿಯ ಬೋಡಿಪಾ॥
॥ ಲಯ್ಯಾನ ಕಂಡು ಕ್ರಿಷ್ಣನು ಗಾರ್ಗೆರುಷಿಗಳಂನು ಯಿಳ್ಸಿಲಾಗಿ ಜನಕಮುನಿಗಳು ಕೆಳಲಾಗಿ॥
॥ ಕ್ರಿಷ್ಣನು ನಾನು ಗೌತುಮರ ಬಾಣದಿಂದ ವಡದ ಕಾರಣ ಯೀ ಗಾರ್ಗೆರುಷಿಗಳು ಹೋಗಿ ಸಪ್ತ॥
॥ ಸಮುದ್ರ ಸಂಚರ್ಸಿ ತಪಸನೇಷ್ಟೆದಲ್ಲಿ ಯಿದ್ದರು ಆದ್ದರಿಂದ ನನ್ನ ಶಾಪವಾಗುವದೆ॥
॥ ಂದು ಯಿವರಲ್ಲಿಗೇ॥

ತಾಮ್ರಪತ್ರ ೪: ಪುಟ ೮– ಹಿಂಬದಿ:

॥ ೮ ॥

॥ ಹೊತ್ತುಕೊಂಡು ಬಂದಾಯ್ತು ಯೆಂದು ಹೇಳಲಾಗಿ ಗಾರ್ಗ್ಯೆರುಷಿಗಳು ನೀ॥
॥ ನು ಮಾಡಿದ ಕರ್ಮಕ್ಕೆ ನಂಮ್ಮ ಬೋಡಿಪಾಲೈನ ಮುತ್ತೈಗಳ ಯೆತ್ತುಗಳಿಗೆ ವಂದು॥
॥ ಕಾರಣವಾಗಿ ಮಾಡ್ಸಿಬೇಕೆಂದು ಹೇಳಲಾಗಿ ಮುಂದೆ ನಂನ್ನ ವಂಶಕ್ಕೆ ನಾರಸಿಂಹ॥
॥ ಶರಸಿದ ಕಂಪಳನೆಂಬ ದೇವರಲ್ಲಿ ಯೀ ಯೆತ್ತುಗಳ ಬೋಡಿಪಾಲಯ್ಯ ವಂಶಕ್ಕೆ॥
॥ ಮರಿಯಾದಿ ಪದಿಪಾದಿಗೆ ಮಾಡ್ಸಿಕೊಡುವಂತ್ತೆ ಮಾಡ್ತುಸ್ತಿನಿ ಯಂದು ಕ್ರಿಷ್ಣನು॥
॥ ಹೇಳಿ ವೈಕುಂಟ್ಯೆಕ್ಕೆ ಹೋದನು ಅಲ್ಲಿಂದ ಕುಂದಿರ್ಪೆಬೆಟ್ಟದಲ್ಲಿ ಅನೇಕ ವಾಲ್ಮಿಕವಂ॥
॥ ಶಸ್ತರಾದ ಧೊರೆ ಪಾಲೈಯ್ಯಾ। ರಂಗೈಯ್ಯಾ ಮಾದೈಯ್ಯಾ ಯಿವರುಗಳು ಬೋಡಿಪಾಲೈ॥
॥ ಯ್ಯಾನು ಬೇಡಿಕೊಳ್ಳಲಾಗಿ ಅವರಿಗೆ ತಿರ್ಥ ಚಲ್ಲಿ ಅವರಂನ್ನ ಯೀ ಯೆತ್ತುಗಳಲ್ಲಿ ಯಿ॥
॥ ಟ್ಟುಕೊಂಡು ಕೆಲವು ದಿವಸ ಯಿರ್ದ್ದು ಅಲ್ಲಿಂದ ನಿಡುಗಲ್ಲುಬೆಟ್ಟಕ್ಕೆ ಯೀ ಜನಕ॥
॥ ಮುನಿ। ಬೋಡಿಪಾಲೈನ ಮಗ ಮಲೈಯ್ಯನು ಸಹ ವುಳಿಕೆ ಕಡಿಮೆ ಜನರು॥
॥ ಕೂಡಿ ಯತ್ತುಗಳು ಸಹ ಬಂದು ನಿಂತ್ತರು ಅಲ್ಲಿಗೆ ನಿಡುಗಲ್ಲು ವೀರೆಶ್ವರ।
॥ ನ ದರುಶನ ಮಾಡಿಕೊಳ್ಳುವ ಬಗ್ಯ ಯೀ ಮುನಿಗಳು ಆ.ಷೆ॥
॥ ಮಾಡಿದರು ಆ ದರಶನ ತ್ಯಗದುಕೊಂಡು ಅಲ್ಲಿಂದ ಚಾಮುಂಡಿ॥
॥ ಬೆಟ್ಟಕ್ಕೆ ಬಂದರು ಅಲ್ಲಿ ಬೆಟ್ಟದಲ್ಲಿ ನಂಜುಂಡಸ್ವೇಮಿ ಆಗಲೆ ಶಾಲಿ॥
॥ ವಾಹನ ಶಕ ವುದ್ದರಿಸುತ್ತ ಆ ರಾಜನು ಯೀ ಬಸವಗಳ ಗೋವ್ಲು॥
॥ ಳ ಕಂಡು ಯೀ ಮುನಿಗಳು ಕಂಡು ದರಿಶನ ಮಾಡಿಕೊಂಡ ಚಾಮುಂಡಿ॥
॥ ಬೆಟ್ಟದ ಮೇಲಕ್ಕೆ ಹತ್ತಿ ಜನಕ ಗಾರ್ಗ್ಗೆ ಬೋಡಿಪಾಲೈನು ಬೆಳ್ಳಿಗಂಟ್ಟೆ ಬಾರಿಸಿ॥
॥ ಸಾಂಬ್ರಾಣಿ ಸುಟ್ಟುಯಿರಲಾಗಿ ರಾಜಸಾಬಿ ಕಂಡು ಯಿವರು ರುಷಿವಂಶ॥
॥ ವೆಂದು ತಿಳಿದು ಯಿವರಂನ್ನು ವಿಚಾರ್ಸಿಲಾಗಿ ನಾವು ಗೌತುಮರುಷಿವಂಶ॥
॥ ಮುತ್ತೈಗಳ ಯೆತ್ತು ಯೆಂದು ಬೋಡಿಪಾಲೈನು ಹೇಳಲಾಗಿ ವಿಕ್ರಮ॥
॥ ಮುಸಲವನು ದೊರೆ ಕೊಟ್ಟ ಪತ್ರ ನೋಡಿಕೊಂಡು ಮೈಸೂರಧಾನಿ ವಳಗೆ ಯೀ॥
॥ ರುವ ೫ ಮಂಡಲ ಭೂಮಿಯಂನು ಜಾಗಿರಿಕೊಟ್ಟು ಕಳ್ಸಿಲಾಗಿ ಮತ್ತು ನಿಡುಗಲ್ಲಿ॥
॥ ಗೆ ಬಂದು ಯಿವರು ವೀರಭದ್ರದೇವರ ಪ್ರರ್ಥ್ನನೆಯಿಂದ ಯಿರಲು ನಿಡುಗಲ್ಲು॥
॥ ವಾಲ್ಮೀಕರಮತದ ಭೂಮಿರಾಜ ಯಂಬುವ ಧೊರೆ ಯಿವರಲ್ಲಿ ಬೇಡಿ॥
॥ ಕೊಂಡು ಗಾರ್ಗೆರುಷಿ ಜನಕಮುನಿಗೆ ಬೋಡಿಪಾಲೈಗೆ ಅನುಸರಿಸಿ ಯೀ ಯೆ॥
॥ ತ್ತುಗಳಲ್ಲಿ ತಿರ್ಥ ಮಾಡ್ಸಿಕೊಂಡು ಯಿವರ ಯಿಂದೆ ಸರ್ವರು ಬಂದರು ಅಲ್ಲಿಂದ॥

ತಾಮ್ರಪತ್ರ ೫: ಪುಟ ೯– ಮುಂಬದಿ:

೯

॥ ಜಾನಮದ್ದಿ ಅತ್ತಿರ ಭೂಮಿರಾಜ ಯಂಬುವನು ಯಿವರಂನ್ನ ಯೆತ್ತುಗಳಂ॥
॥ ನ್ನ ಬಿರಿದಿನಿಂದ ಜಾಂನ್ಹವಿಹೊಳೆ ದಾಂಟುವಾಗ್ಯೆ ೧೧ ಕಡಿಮೆ ೨ ಲಕ್ಷ ಗೋವ್ನು॥
॥ ಳು ಬಸವಂಣ ಲೆಖ್ಖ ಯಿದ್ದವು ಯಿಂದಕ್ಕೆ ಅರ್ಧ ಆದವು ಅಲ್ಲಿಗೆ ಆದಿಶಕ್ತಿ ಶ್ರಿಕ್ರಿಷ್ಣ॥
॥ ದೇವರು ಬಂದರು ಬಂದು ಕ್ರಿಷ್ಣನು ಯೀ ಗೊವ್ನುಳ ಕೆಲವು ತಿರಿಸಲಾಗಿ ಆದಿಶಕ್ತಿ ಸಿ॥
॥ ಟ್ಟುಮಾಡಿ ನಿನಗೆ ಯೆಷ್ಟು ಹೇಳಿದಾಗ್ಯೆ ತಿಳಿಯಲಿಲ್ಲಾ ನಿನಗೆ ದಕ್ಕುವದಿಲ್ಲಾ ಯಿದ॥
॥ ರ ಗೊಡೆವೆ ಬ್ಯಾಡವೆಂದು ಆದಿಶಕ್ತಿ ಹೆಳಲಾಗಿ ಕ್ರಿಷ್ಣನು ಸಂಮುತಪಟ್ಟು ಹೊಳೆ॥
॥ ದಾಂಟಿ ಅಲ್ಲಿ ಹೊಳೆಯಲ್ಲಿ ಕ್ರಿಷ್ಣದೇವರು ಆದಿಶಕ್ತಿ ಜನಕಮುನಿ ಗಾರ್ಗೆರು ಭೂ॥
॥ ಮಿರಾಜು ಯಿಂನ್ನು ಬೋಡಿಪಾಲ್ಯೆ ಮಗ ಮಲ್ಯೆನು ಸಹ ಆ ಜಾಗ ನಡುಹೊಳೆಯಲ್ಲಿ॥
॥ ಯತ್ತುಗಳ ದಾಂಟ್ಟಿ ಸೇಸೆಮಾಡ್ಸಿ ಗೋವ್ನುಳಿಗೆ ವಂದು ವಂದು ವಿಳಾಸ ಸೀಮಿಗೆ ಭೂ॥
॥ ಮಿ ಚಂದ್ರ ಯಿರು[ವ]ತನಕಾ ತಂಮ್ಮ ಹೆಸರು ಯಿರಬೇಕೆಂದು ಹೊಳೆಯಲ್ಲಿ ರಾಮಲಿ॥
॥ ಂಗಶ್ವೇರಲಿಂಗ ಬ್ರಂಹ್ಮಲಿಂಗ ರುದ್ರಲಿಂಗ ಯಿಂತ್ತಾ ನವಭಾಗ ಲಿಂಗಪ್ರತಿಷ್ಟೆ ಸ್ತಾಪನವ ಮಾಡ್ಸಿ॥
॥ ಅಷ್ಟಪೂಜೆಯಂ ಮಾಡಿ ಪೂರ್ವಮುದ್ರ ಬಲಮುರಿ ಶಂಖು ಭಂಗಾರದ ಪಂಚವರ್ನದ॥
॥ ಗಿಳಿಲು ಮುದ್ರೆಕೋಲು ಬೆಳ್ಳಿ ಅಗ್ಗ ಜಮದಾಂಟ್ಟು ರುದ್ರೇಕ್ಷಿಪೂಜೆ ಯಿಟ್ಟು ಬೋಡಿಪಾಲ್ಯೆ॥
॥ ನು ತೆಲೆ ತೊಳದು ಯತ್ತುಗಳಿಗೆ ಚಲ್ಲಿದರು ಅಲ್ಲಿ ರುಷಿಗಳು ಅದ್ರುಶ್ಯವಾದರು ಆದಿಶಕ್ತಿ॥
॥ ಹೋದಳು ಕ್ರಿಷ್ಣನು ವೈಕುಂಟ್ಟಕ್ಕೆ ಹೋದನು ಯಿಂನು ವುಳಿಕೆ ಹೊಳೆಯಲ್ಲಿ ಶಾಸನ ಗುರ್ತು॥
॥ ಮಾಡಿ ಭಂಗಾರದ ಚಾಮರ ಶಿಲೆ ಕೆಳಗೆ ಆಕಿದರು ಯಿಲ್ಲಿ ಸಕಲ ದೇವರು ವುಂಟ್ಟು॥
॥ ಯೆಂದು ಧರ್ಮದ ಜಾಗಮಾಡಿ ಭೂಮಿರಾಜ ಜನಕಮುನಿ ಬೋಡಿಪಾಲ ಮಗ ಪಾಲ್ಯೆನು॥
॥ ಯೀ ಯೆತ್ತುಗಳು ಸಹ ಗುಡುಬಂಡಿಗೆ ಬಂದರು ಅಲ್ಲಿ ಶಿವಾಚಾರದ ವಕ್ಕಲಗೌಡರು। ೧೦ ಬಸ॥
॥ ವಗಳ ಕೊಟ್ಟು ಪರ್ವಮಾಡ್ಸಿದರು ಅಲ್ಲಿ ಬೋಡಿಪಾಲ್ಯೆನ ಹೆಂಡುತಿ ಬ್ರುತವಾದಳು ೩ ತಿಂಗಳು॥
॥ ಕಳದು ಕರ್ಮ ತೀರ್ಸಿ ಹೋತೂರುಗ್ರಮಕ್ಕೆ ಬಂದು ಭೊಮಿರಾಜ ಜನಕಮುನಿ॥
॥ ಮುನಿ ಮುಂತ್ತಾದ ಅನೇಕ ವಾಲ್ಮೀಕರು ಕೂಡಿಕೊಂಡು ಬೋಡಿಬಂಡಿಗೇ॥
॥ ಬೋಡಿಪಾಲ್ಯೆನು ಯತ್ತುಗಳು ಸಾಗ್ಸಿಕೊಂಡು ಬಂದು ಅಲ್ಲಿ ಭೊಮಿರಾಜ॥
॥ ಪದಿಪದೆರಾಜ ಯಿಂನು ೧೦೮ ಮಂದಿ ವಾಲ್ಮೀಕಮತದವರು ಕೂಡಿ ಬೋಡಿಪಾ॥
॥ ಲ್ಯೆಯ್ಯಾನಿಗೆ ವಶವಂ ಮಾಡಿ ಭೂಮಿರಾಜನು ಕಂಚಿನಾಗರಿಯಂ ಕೊಟ್ಟು ತ॥
॥ ಂನ್ನ ಮಗಳ ಕೊಟ್ಟು ಲಗ್ನಮಾಡಿದರು ಯೀ ಮಲ್ಯೆಗೆ ೩೮ ವರುಷ ತುಂಬಿತು ಯೀ॥
॥ ಮಲ್ಯೆಗೆ ಯತ್ತುಗಳ ಕಿಲಾರಿ ಪೂಜಾಮುದ್ರಿಗೆ ಪದಿಪಾದಿಗೆ ಸಕಲಕ್ಕು ಕರ್ತು ನೀನೆ ಯಂದು॥

ತಾಮ್ರಪತ್ರ ೫: ಪುಟ ೧೦– ಹಿಂಬದಿ:

೧೦

॥ ವಪ್ಪಿದರು ಆ ಬೋಡಿಭಂಡಿಯಲ್ಲಿ ೫ ವರುಷ ಯಿರುವಲ್ಲಿ ಬೋಡಿಪಾಲ್ಯೆಯ್ಯಾನು॥
॥ ೧೦೮ ವರುಷ ತುಂಬಿ ಐಕ್ಯವಾದನು ಆತನು ಸಮಾದಿ ಮಾಡ್ಸಿ ಬೊಮಿರಾಜ ಜನಕ॥
॥ ಮುನಿ ಯೀ ಮಲ್ಯೆಗೆ ಸಕಲಕ್ಕೆ ಕರ್ತುವೆಂದು ನೇಮ್ಸಿ ಹೊದರು ಅಲ್ಲಿಂದ ಬೋಡಿಭಂಡೇ॥
॥ ಬಿಟ್ಟು ನೀಲಗಿರಿಗೆ ಮಲ್ಯೆನು ಪತಿ ಸತಿ ಸಹ ೧೦೧ ಮಂದಿ ವಾಲ್ಮೀಕ ಯಜಮಾಂನ್ಯರ್ರು॥

[ಈ ತಾಮ್ರಪತ್ರಗಳನ್ನು ದೊರಕಿಸಿಕೊಟ್ಟ ಶ್ರೀ ಡಿ. ಸೂರಯ್ಯ, ಮುಖ್ಯೋಪಧ್ಯಾಯರು (ನಿವೃತ್ತ), ಬಾಪೂಜಿ ಬಾಲಿಕಾ ಪ್ರೌಢಶಾಲೆ, ಚಿತ್ರದುರ್ಗ- ಅವರಿಗೆ ಆಭಾರಿಯಾಗಿದ್ದೇನೆ.]

ಕೊಳ್ಳೇಗಾಲ ಪಟ್ಟಣದಲ್ಲಿ ದೊರೆತ ಅಪ್ರಕಟಿತ ಶಾಸನ

ಕುಮಾರಸ್ವಾಮಿ.ಎಸ್.ಡಿ.*

ಕೊಳ್ಳೇಗಾಲವು ಚಾಮರಾಜನಗರ ಜಿಲ್ಲೆಗೆ ಸೇರಿದ ಒಂದು ತಾಲೂಕು ಕೇಂದ್ರವಾಗಿದ್ದು ಜಿಲ್ಲಾ ಕೇಂದ್ರದಿಂದ ಪೂರ್ವ ದಿಕ್ಕಿಗೆ ಸುಮಾರು ೪೦ ಕಿ.ಮೀ. ದೂರದಲ್ಲಿದೆ. ತಾಲೂಕು ಕೇಂದ್ರವಾದ ಕೊಳ್ಳೇಗಾಲ ಪಟ್ಟಣವು ಉತ್ತರ ಅಕ್ಷಾಂಶ ೧೨°-೧೦" ಮತ್ತು ಪೂರ್ವರೇಖಾಂಶ ೭೭°-೭" ದಲ್ಲಿ ಹಬ್ಬಿದೆ.

ಕೊಳ್ಳೇಗಾಲ ಪಟ್ಟಣದ ಮಧ್ಯಭಾಗದಲ್ಲಿರುವ ಚೌಡೇಶ್ವರಿ ಅಮ್ಮನವರ ದೇವಾಲಯದ ದಕ್ಷಿಣಾಮೂರ್ತಿಯ ದೇವ ಕೋಷ್ಠಕದ ಎಡಭಾಗದಲ್ಲಿ ಶಾಸನವಿದ್ದು, ಇದನ್ನು ದಕ್ಷಿಣಾಭಿಮುಖವಾಗಿ ನಿಲ್ಲಿಸಲಾಗಿದ್ದು, ಒಂದೂವರೆ ಅಡಿ ಅಗಲ ಮೂರು ಅಡಿ ಉದ್ದ ಹಾಗೂ ಅರ್ಧ ಅಡಿ ದಪ್ಪವಾಗಿದೆ. ಈ ಶಾಸನವನ್ನು ಗ್ರಾನೈಟ್ ಶಿಲೆಯಲ್ಲಿ ಕಂಡರಿಸಲಾಗಿದೆ. ಶಾಸನದ ಭಾಷೆ ಮತ್ತು ಲಿಪಿ ಕನ್ನಡದಲ್ಲಿದೆ. ಈ ಶಿಲೆ ಗ್ರಾನೈಟ್ ಶಿಲೆಯಾದ್ದರಿಂದ ಅಕ್ಷರಗಳನ್ನು ದಪ್ಪವಾಗಿ ಬರೆಯಲಾಗಿದ್ದು ಈ ಅಕ್ಷರಗಳು ಸ್ಪಷ್ಟವಾಗಿವೆ. ಶಾಸನದಲ್ಲಿ ಒಟ್ಟು ಒಂಭತ್ತು ಸಾಲುಗಳ ಪಾಠವಿದೆ. ಮೊದಲ ಸಾಲಿನ ಮೇಲ್ಭಾಗದಲ್ಲಿ ಲಿಂಗ ಪ್ರತಿಷ್ಠಾ ಎಂಬ ವಾಕ್ಯವಿದೆ.

ಶಾಸನ ಪಾಠದ ಸುಮಾರು ಒಂದು ಅಡಿ ಮೇಲ್ಭಾಗದಲ್ಲಿ ಉಬ್ಬುಶಿಲ್ಪಗಳಿವೆ. ಶಾಸನದ ಬಲ ಮತ್ತು ಎಡ ಭಾಗದಲ್ಲಿ ಸೂರ್ಯಮತ್ತು ಚಂದ್ರರ ಕೆತ್ತನೆ ಹಾಗೂ ಇದರ ತಳಭಾಗದಲ್ಲಿ ಶಾಸನದ ಬಲಭಾಗದಲ್ಲಿ ಏಳು ಸೆಂ.ಮೀ. ಅಗಲ ಐದು ಸೆಂ.ಮೀ. ಉದ್ದವಿರುವ ನಂದಿಯ ಉಬ್ಬು ಶಿಲ್ಪ ಹಾಗೂ ಎಡಭಾಗದಲ್ಲಿ ಎಂಟು ಸೆಂ.ಮೀ. ಉದ್ದ ಏಳು ಸೆಂ.ಮೀ. ಅಗಲವಿರುವ ಲಿಂಗವಿದೆ.

ಶಾಸನದ ಪಾಠ

ಲಿಂಗ ಪ್ರತಿಸ್ಠಾ

೧ ಶುಭಮಸ್ತು ಶಿವಾಯನಮಃ ಸ್ವಸ್ತಿ

೨ ಶ್ರೀ ವಿಜಯಭ್ಯುದಯ ಶಾಲಿವಾಹನ ಶ

೩ ಕಾಬ್ದಾಃ೧೭೬೫ ಕಲ್ಯಬ್ದಾಃ೪೯೪೪ ವರ್ತ

೪ ಮನ ಶೊಬಕೃ ಸಂವತ್ಸರ ಮಾಘ ಶುದ್ದ ೧೩

೫ ಗುರುವಾರಂ ಮಕರ ಮಾಸಂ ತೇದಿ ೨೦ ಲು

೬ ಶುಬದಿನ ಮ(ದ)ಂದು ಶ್ರೀ ವಿರಭದ್ರ ಸ್ವಾ

೭ ಮಿ ಪ್ರತಿಷ್ಠೆ ಶ್ರೀ ಮತ್ತು ದುಪ್ಪಟಿ

೮ ರುದ್ರಯ್ಯ ಕುಮಾರುಡಿ? ನಮ ಸಿವಾ

೯ ಯ ಸಿವಾಯ ಮಂಗಳ

ಶಾಸನವು ಶುಭಮಸ್ತು ಎಂದು ಹಾಗೂ ಶಿವಾಯನಮಃ ಎನ್ನುವ ಶಿವನನ್ನು ಸ್ತುತಿಸುವ ಮಂಗಲ ಪದದೊಂದಿಗೆ ಆರಂಭಗೊಂಡಿದೆ. ನಂತರ ಕಾಲದ ಉಲ್ಲೇಖವಿದೆ. ಶಾಸನದ ವಸ್ತು ವಿಷಯವು ವೀರಭದ್ರಸ್ವಾಮಿ ಮೂರ್ತಿಯನು ದುಪ್ಪಟಿಯ ರುದ್ರಯ್ಯನ ಮಗ ಪ್ರತಿಷ್ಠಾಪನೆ ಮಾಡಿರುವುದನ್ನು ತಿಳಿಸುತ್ತದೆ. ಆದರೆ ರುದ್ರಯ್ಯನ ಮಗ ಯಾರೆಂಬುದನ್ನು ತಿಳಿಸಿಲ್ಲ. ಶಾಸನದ ಕೊನೆಯಲ್ಲಿ ಮತ್ತೆ ಶಿವನನ್ನು ಸ್ತುತಿಸುವ ಮಂಗಲ ಪದದೊಂದಿಗೆ ಮುಕ್ತಾಯಗೊಂಡಿದೆ.

* ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.



ಶಾಸನದ ಪಡಿಯಚ್ಚುಗಳು

ಶಾಸನದಲ್ಲಿ ಕಾಲವನ್ನು ಶಾಲಿವಾಹನ ಶಕಾಬ್ದಾ ೧೭೬೫ ಕಲ್ಯಬ್ದಾ ೪೯೪೪ ವರ್ತಮಾನ ಶೋಭಕೃತು ಸಂವತ್ಸರ ಮಾಘ ಶುದ್ದ ೧೩ ಗುರುವಾರಂ ಮಕರ ಮಾಸಂ ತೇದಿ ೨೦ ಲು ಎಂದು ದಾಖಲಾಗಿದೆ. ಇದು ಕ್ರಿ.ಶ. ೧೮೪೩ ಫೆಬ್ರುವರಿ ೨ ಶುಕ್ರವಾರ ಕ್ಕೆ ಸರಿ ಹೊಂದುತ್ತದೆ. ಈ ಶಾಸನದ ಲಿಪಿಗೆ ಸಂಬಂಧಿಸಿದಂತೆ ಹೇಳುವುದಾರೆ ಮೈಸೂರು ಒಡೆಯರ ಕಾಲದ ಲಿಪಿಯನ್ನು ಲಿಪಿಕಾರನು ಗ್ರಾನೈಟ್ ಶಿಲೆಯಲ್ಲಿ ದಪ್ಪವಾಗಿ ಕೆತ್ತಿರುವುದು ವಿಶೇಷವಾಗಿದೆ. ಈ ಶಾಸನವು ತೀರ ಪ್ರಾಚೀನವಲ್ಲದ್ದಾದರು ಲಿಪಿಯನ್ನು ಕೆತ್ತುವುದರಲ್ಲಿ ಅಲ್ಪ ಸ್ವಲ್ಪ ಅಕ್ಷರಗಳು ತಪ್ಪಾಗಿ ನಮೂದಿತ ವಾಗಿರುವುದನ್ನು ಕಾಣುತ್ತೇವೆ. ಅವುಗಳು ಶೊಬಕೃ (ಶೋಭಕೃತು), (ಮಂದು) ದಂದು. ಹಾಗೂ ಅಲ್ಪಪ್ರಾಣ ಮಹಾಪ್ರಾಣ ಉಚ್ಚರಣೆಯ ಬಳಕೆಯಲ್ಲೂ ಸಹ ಕೆಲವೊಂದು ಪದಗಳು ತಪ್ಪಾಗಿ ನಮೂದಿಸಲ್ಪಟ್ಟಿವೆ. ಸಿವಾಯ (ಶಿವಾಯ), ವರ್ತಮನ (ವರ್ತಮಾನ) ಈ ರೀತಿಯಾಗಿ ಗುರುತಿಸಬಹುದು. ಈ ಶಾಸನವು ವೀರಭದ್ರಸ್ವಾಮಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿದುದನ್ನು ತಿಳಿಸುತ್ತದೆ. ಆದರೆ ದೇವಾಲಯವನ್ನು ಚೌಡೇಶ್ವರಿ ಅಮ್ಮನವರ ಹೆಸರಿನಲ್ಲಿ ಕರೆಯಲಾಗುತ್ತಿದೆ.

[ಈ ಶಾಸನವನ್ನು ಪಡಿಯಚ್ಚು ತೆಗೆಯಲು ಸಹಕಾರ ನೀಡಿದ ಅನಿಲ್.ಎಲ್. ಸಂಶೋಧಕರು, ಅವರಿಗೂ ಶಾಸನ ಓದಿ ತಿಳಿಸಿಕೊಟ್ಟ ನನ್ನ ಗುರುಗಳು ಪ್ರೊ. ಎಸ್.ವಿ. ಪಾಡಿಗಾರ, ನಿವೃತ್ತ ಪ್ರಾಧ್ಯಾಪಕರು, ಧಾರವಾಡ ಅವರಿಗೂ, ಎಸ್. ನಾಗರಾಜಪ್ಪ, ಸಹಾಯಕ ಶಾಸನ ಅಧೀಕ್ಷಕ ಮೈಸೂರು ಇವರಿಗೆ ನನ್ನ ಕೃತಜ್ಞತೆಗಳು]

ಆಧಾರಸೂಚಿ

೧. ನಾಯಕ. ಹಾ.ಮ., ಕನ್ನಡ ವಿಷಯ ವಿಶ್ವಕೋಶ, ಸಂಪುಟ ಸಂಖ್ಯೆ-೫, ಮೈಸೂರು ವಿಶ್ವವಿದ್ಯಾನಿಲಯ, ೧೯೭೯.

೨. ನಾಯಕ. ಹಾ.ಮ., ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ಸಂಖ್ಯೆ-೪, ಮೈಸೂರು ವಿಶ್ವವಿದ್ಯಾನಿಲಯ-೧೯೭೫.

೩. ನರಸಿಂಹಮೂರ್ತಿ. ಎ.ವಿ., ಕನ್ನಡ ಲಿಪಿಯ ಉಗಮ ಮತ್ತು ವಿಕಾಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು-೨೦೦೬.

೪. Dewan Bahadur L D Swamikannu Pillai, An Indian Ephemeris A. D s1800 to A.D.2000, Asian Educationl Services New Delhi-1987.

೨೧

ಕಂಪಿಲದೇವರಾಯನ ಅವಧಿಯ ಶಾಸನ ಪತ್ತೆ

ಡಾ. ಗಿರಿಜಾ*

ಬಳ್ಳಾರಿ ಜಿಲ್ಲೆ, ಸಂಡೂರು ತಾಲೂಕಿನ, ಸುಶೀಲಾ ನಗರದ ಪೂರ್ವಕ್ಕೆ ಈಶ್ವರಪ್ಪನವರ ಹೊಲದಲ್ಲಿ ಕ್ರಿ.ಶ. ೧೩೨೧ನೇ ವರ್ಷಕ್ಕೆ ಸಂಬಂಧಿಸಿದ ಕಂಪಿಲದೇವನ ಶಾಸನ ಪತ್ತೆಯಾಗಿದ್ದು, ಈ ಶಾಸನವು ೬ ಸಾಲುಗಳನ್ನು ಹೊಂದಿದೆ. ಇದು ಹೊಯ್ಸಳೋತ್ತರ ಲಿಪಿಯ ಬರವಣಿಗೆಯನ್ನು ಹೊಂದಿದೆ. ಈ ಶಾಸನವು ಸುಮಾರು ಎರಡೂವರೆ ಅಡಿ ಉದ್ದ ಹಾಗೂ ಒಂದೂವರೆ ಅಡಿ ಅಗಲ ಇರುವ ಈ ಶಿಲಾಶಾಸನದ ಮೇಲ್ಭಾಗದಲ್ಲಿ ಶಿವಲಿಂಗ, ನಂದಿ, ಸೂರ್ಯ, ಚಂದ್ರರ ರೇಖಾಚಿತ್ರ ಇದೆ. ಈ ಶಾಸನವು ವೀರ ಕಂಪಿಲರಾಯನು ದುರ್ಮತಿ ಸಂವತ್ಸರದಲ್ಲಿ, ಮಾಲ್ಯಸ್ವರ ದೇವರ ಸೇವೆಗಾಗಿ, ಗೊರವರಿಗೆ, ಲೆಂಕಣಿಯರಿಗೆ, ಪೂಜೆಯ ಪಡಿಗೆ, ಮಾಲಗಾರರ ಹೊಲವನ್ನು ಮತ್ತು ತೋಟವನ್ನು ದಾನವಾಗಿ ಕೊಟ್ಟ ವಿಷಯವನ್ನು ತಿಳಿಸುತ್ತದೆ.

ಒಟ್ಟಿನಲ್ಲಿ ಈ ಭಾಗದಲ್ಲಿ ಮುಖ್ಯವಾಗಿ ಗಮನಿಸುವು ದಾದರೆ, ಕಂಪಿಲರಾಯನಿಗೆ ಸಂಬಂಧಿಸಿದಂತೆ, ರಾಮಘಡ ಪ್ರದೇಶದಲ್ಲಿ ಶಾಸನಗಳು ಮತ್ತು ಹಲವು ಸ್ಮಾರಕಗಳು ದೊರೆತದ್ದನ್ನು ಬಿಟ್ಟರೆ, ಇದೇ ತಾಲೂಕಿನ ಮೆಟ್ರಿಕಿ ಎಂಬ ಗ್ರಾಮದಲ್ಲಿ ಕಾಣಸಿಗುವ ಕಂಪಿಲರಾಯ, ಹರಿಯಾಲದೇವಿ, ಕುಮಾರರಾಮನ ದೇವಾಲಯವನ್ನು ಕಾಣುತ್ತೇವೆ. ಅದನ್ನು ಹೊರತು ಪಡಿಸಿದರೆ, ಪ್ರಸ್ತುತವಾಗಿ ನಮಗೆ ದೊರೆತಿರುವ ಈ ಶಾಸನದಿಂದ ನಮಗೆ ತಿಳಿದು ಬರುವ ಸಂಗತಿ ಎಂದರೆ, ಕಂಪಿಲರಾಯನು ಈ ಭಾಗದ ದೇವಾಲಯಗಳಿಗೂ ದಾನಕೊಟ್ಟಂತಹ ವಿಷಯವನ್ನು ತಿಳಿಸುವಲ್ಲಿ ಮಹತ್ವದ ದಾಖಲೆಯಾಗಿ ಈ ಶಾಸನ ನಿಲ್ಲುತ್ತದೆ ಮತ್ತು ರಾಮಘಡ ಪ್ರದೇಶವು, ಕಂಪಿಲರಾಯ ಮತ್ತು ಕುಮಾರರಾಮನ ಆಳ್ವಿಕೆಯ ಪ್ರಮುಖವಾದ ಪ್ರದೇಶಗಳಲ್ಲಿ ಒಂದಾಗಿದ್ದರಿಂದ ಈ ಭಾಗದಲ್ಲಿ ಇನ್ನು ಹೆಚ್ಚಿನ ಸಂಶೋಧನೆ ಕೈಗೊಂಡರೆ ಹೆಚ್ಚಿನ ಶಾಸನಗಳು ಬೆಳಕಿಗೆ ಬರುವ ಸಾಧ್ಯತೆ ಇದೆ.



ಶಾಸನ ಪಠ್ಯ

೧. ಶ್ರೀಮತು ವೀರ ಕಂಪಿಲದೇವನ ರಾ

೨. ಜ್ಯದೊಳು ದುರ್ಮತಿ ಸಮತ್ಸರದಲಿ

೩. ಮಾಲಗಾರ ಹೊಲವು ತೋಟ ಕೊಟ್ಟೆ

೪. ಮಾಲ್ಯಸ್ವರ ದೇವರಿಗೆ ಗೊರವ ಲೆಂಕ

೫. ಣಿಯ ಸರ ಪೂಜೆಯ ಪಡಿ

೬. ಗೆ

[ಶಾಸನ ಪತ್ತೆಹಚ್ಚುವಲ್ಲಿ ಸಹಕರಿಸಿದ ಸುಶೀಲಾನಗರದ ಎರಿಸ್ವಾಮಿಯವರಿಗೆ ಮತ್ತು ಮಂಜುನಾಥ ಚಿಕ್ಕಬಿದರಿ ಅವರಿಗೆ, ಓದಲು ಸಹಕರಿಸಿದ ಪ್ರೊ. ಡಿ.ವಿ. ಪರಮಶಿವಮೂರ್ತಿ ಅವರಿಗೆ ಕೃತಜ್ಞತೆಗಳು.]

* ವೀರಭದ್ರೇಶ್ವರ ನಿಲಯ, ೨೬೭/ಎ, ಟೀಚರ್ಸ್ ಕಾಲೋನಿ, ೧ನೇ ಮುಖ್ಯರಸ್ತೆ, ಎಂ.ಪಿ. ಪ್ರಕಾಶ್‌ನಗರ, ಹೊಸಪೇಟೆ-೫೮೩೨೦೧.

೧೧

ಜೇಗರಕಲ್ ಪರಿಸರದ ಅಪ್ರಕಟಿತ ಶಾಸನಗಳು

ಡಾ. ಚನ್ನಬಸಪ್ಪ ಮಲ್ಕಂದಿನ್ನಿ*

ಜೇಗರಕಲ್ ಪರಿಸರವು ರಾಯಚೂರು ಜಿಲ್ಲೆ ಅದೇ ತಾಲೂಕು ವ್ಯಾಪ್ತಿಯಲ್ಲಿರುವ ಜೇಗರಕಲ್, ಮರ್ಚೆಡ, ಮನ್ಸಲಾಪುರ, ಮಮದಾಪುರ ಮತ್ತು ದೇವನಪಲ್ಲಿ ಗ್ರಾಮಗಳನ್ನೊಳಗೊಂಡ ಪ್ರದೇಶವಾಗಿದೆ. ಇಲ್ಲಿ ಒಟ್ಟು ಹತ್ತು ಅಪ್ರಕಟಿತ ಶಾಸನಗಳು ಬೆಳಕಿಗೆ ಬಂದಿರುತ್ತವೆ. ಈ ಶಾಸನಗಳು ಕ್ರಿ.ಶ. ೯ನೇ ಶತಮಾನದಿಂದ ಕ್ರಿ.ಶ. ೧೯ನೇ ಶತಮಾನದವುಗಳಾಗಿವೆ. ಇವುಗಳಲ್ಲಿ ಎರಡನೆಯ ಸಂಖ್ಯೆಯ ಶಾಸನವನ್ನು ಅರ್ಧಭಾಗ ಓದಲಾಗಿದೆ. ಹಾಗೆಯೇ ಐದನೇ ಸಂಖ್ಯೆಯ ಶಾಸನವು ಪೂರ್ಣ ಸವೆದು ಹೋಗಿದ್ದು, ಎಂಟನೆಯ ಸಂಖ್ಯೆಯ ಶಾಸನಕ್ಕೆ ವಾರ್ನಿಷ್ ಬಣ್ಣವನ್ನು ಹಲವಾರು ಸಲ ಹಚ್ಚಿದ ಕಾರಣ ಅದರ ಅಕ್ಷರಗಳು ಕಾಣದಾಗಿವೆ. ಆದುದರಿಂದ ಈ ಹಿಂದೆ ಹೈದ್ರಾಬಾದ್ ಪ್ರಾಚ್ಯವಸ್ತು ಇಲಾಖೆಯವರು ಸರ್ವೆ ಮಾಡಿದ ವರದಿಯ [ARIE.1987-88,B.NO.50 ಜೇಗರಕಲ್, B.NO. 58 ಮನ್ಸಲಾಪುರ, B.NO.55 ಮಮದಾಪುರ] ಸಾರಾಂಶವನ್ನು ಇಲ್ಲಿ ಯಥಾವತ್ತಾಗಿ ಸೇರಿಸಲಾಗಿದೆ. ಈ ಶಾಸನಗಳು ದತ್ತಿ ನೀಡಿದ ಶಾಸನಗಳಾಗಿವೆ. ಇಲ್ಲಿ ಒಟ್ಟು ಹತ್ತು ಶಾಸನಗಳಲ್ಲಿ ಒಂದು ಇಸ್ಲಾಂಧರ್ಮಕ್ಕೆ ಸಂಬಂಧಿಸಿದ್ದರೆ, ಉಳಿದವುಗಳು ಶೈವಧರ್ಮಕ್ಕೆ ಸೇರಿದವುಗಳಾಗಿವೆ. ಈ ಎಲ್ಲಾ ಶಾಸನಗಳು ಕನ್ನಡ ಭಾಷೆ, ಕನ್ನಡ ಲಿಪಿಯಲ್ಲಿರುವ ಶಾಸನಗಳಾಗಿವೆ.

ಜೇಗರಕಲ್

ಈ ಗ್ರಾಮವು ತಾಲೂಕು ಕೇಂದ್ರವಾದ ರಾಯಚೂರು ನಗರದಿಂದ ಉತ್ತರ ದಿಕ್ಕಿಗೆ ಹದಿನೆಂಟು ಕಿ.ಮೀ. ದೂರದಲ್ಲಿದೆ. ಈ ಊರಲ್ಲಿ ಹಲವು ವೀರಗಲ್ಲುಗಳು, ಈಶ್ವರ, ಹನುಮಾನ್, ಮಲ್ಲಿಕಾರ್ಜುನ [ಪ್ರಸ್ತುತ ಮಡಿದವರಗುಡಿ], ಈರಪ್ಪ ತಾತನ ಮಠ ಮೊದಲಾದ ದೇವಾಲಯಗಳಿವೆ. ಹಾಗೆಯೇ ಇಲ್ಲಿ ಎರಡು ಶಾಸನಗಳು ಪತ್ತೆಯಾಗಿವೆ.

೧. ಹನುಮಾನ್ ದೇವಾಲಯದ ಹೊರ ಆವರಣದಲ್ಲಿರುವ ಶಾಸನ

೧. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇತ್ರೈಲೋಕ್ಯನಗರಾ
೨. ರಂಭ ಮೂಲಸ್ತಂಭಾಯ ಶಂಭವೇ॥ ಸ್ವಸ್ತಿ ಶ್ರೀಮತ್ಕಳಚು
೩. ರಿಯ ಚಕ್ರವರ್ತಿ ರಾಯ ಮುರಾರಿ ಸೋವಿದೇವ ವರಿಷದ ೨ನೆಯ
೪. . . . ಸಂವತ್ಸರದ ಮಾಘ ಸುದ್ಧ ಸೋಮವಾರದಂ
೫. ದು ಸ್ವಸ್ತ್ಯಯನೇಕ ಭಂಗುರ ತರಂಗ ಸಂಘಾತ ವೀಚಿನೀಚಯಲ
೬. ವಣಾಬ್ಧಿವಳಯ ವಳಯಿತ ವೇಳಾವನ ಗಂಗಾಪಾರಿಯಾತ್ರ ತ
೭ ನ್ಮಧ್ಯದೇಶಾಧೀಶ್ವರಂ ಮಾಹಿಷ್ಮತೀಪುರವರಾದೀಶ್ವರಂ ಅ
೮. ರಸಂಕ ನರಶಿರದರ್ಪ್ಪಣ. ಪತಿ ಸಂ. ಪ್ಪ ಣ ಅ
೯. ಹಿಹಯ ವಂಶೋದ್ಭವಂ ವಿವೇಕಕಮಳೋದ್ಭವ ಧ್ವಜವಿರಾಜ
೧೦. ಮಾನ ದಾನ ಕಾನೀನ ಮಾಲ್ಪರೆ ಘೋಷಣಂ ನೃಪರತ್ನ ಭೂಷಣಂ
೧೧. ಮಂಡಳೀಕ ವೀರ ಬೂಪದೀಪ ನಳಂಕಕಾರ ನಾಮಾಧಿ ಸಮಸ್ತ

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ದೇವನಾಂಪ್ರಿಯ ಅಶೋಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ, ಮಸ್ಕಿ, ರಾಯಚೂರು ಜಿಲ್ಲೆ–೫೮೪೧೨೪.

೧೨. ಪ್ರಶಸ್ತಿ ಸಹಿತಂ ಶ್ರೀ ಮನ್ಮಹಾಮಂಡಳೇಶ್ವರ ವೀರ ಹೆರ್ಮ್ಮಾ
೧೩. ಡಿ ದೇವರಸರುವಂ . . . ಮುಂದಾಗಿ . . ಮಯ್ಯ . .
೧೪. . . ಡಂ ಶ್ರೀ ಪ್ರಭು . . . ರ ನಾಳುತ್ತಮಿರಲು.
೧೫. ಮಹಾಸ್ಥಾನ ಪತಿಯರುಮಪ್ಪ ಶ್ರೀ ಮತ್ವಗ . . . . ರ
೧೬. . ಟ್ಟ ಪ್ರಭು ನಾಗರಸರಾಧ್ಯದ ಶ್ರೀಯಭಿನವ ನಾಗೇ
೧೭. ಶ್ವರ ದೇವರಂಗಭೋಗ ರಂಗಭೋಗ ನಂದಾದೀವಿಗೆ ದೂಪದೀಪ
೧೮. ನೈವೇದ್ಯಕ್ಕೆ ಬಿಟ್ಟ . . . ಯಾ ದೇವರ ಸ್ಥಾನಪತಿ ಮಾಳ
೧೯. ಕಾಸಿ ಒಬಯಾಗಿ ಮೇಬೆಯ ದೇವ್ಹರ ಕಾಲಂ ಕರ್ಚಿ
೨೦. ಕಡಲೂರದಾರಿಯಿಂದ ದುತ್ತಾ ಮೂಲ ಸ್ತಾನ ದೇವರಿಗೆ . ಬಿ
೨೧. . . . ಲಿಂಕಲಾದರ ನೌದೆರೆನ ಕಾಲಲು ಬಿಟ್ಟ ಮ
೨೨. ತ್ತ ೨ ಅಪ್ಪಣಕಾ ದೇವಿ ಮಣ್ಣು ಬೀಡಲು ಬಿಟ್ಟ ಮತ್ತ ೧
೨೩. . . . ಲಿಂಗ ಬಾಳಲು ಬಿಟ್ಟ ಮತ್ತ ೧ ಕಾಡಲೂರಲು ಜಗನೆ
೨೪. . . . . ಕಮಲ್ಲ ಬೂಬೆಯ ನಾಯಕನುಂ ಹೆಗ್ಗಡೆ ಬಾಡಣ್ಣನು
೨೫. ಅಂಕ ನಾಗೆದಿಯಂ ಮೂಡಲು ಸರಿತೆ ಗಂಧವಾರಣ
೨೬. ದ ಕಾಲಲು ಬಿಟ್ಟ ಮತ್ತ ೧ ಒಂದು ಅರಸಂಕ ಬಿ ವ ಚಾಳುಕ್ಯ ಕಾಳಾದ .
೨೭. . . . ಶ್ರೀ ಮನ್ಮ ಮಹಾಮಂಡಳೇಶ್ವರಂ ಸೂಗೂರ (ಕಡಂಬ)
೨೮. ಅರಸು ಬಿಜ್ಜರಸರು ಕಾಡಲೂರ ಸೀಮೆಯದ ಮೂಡಲು ಆಸ್ತಿಯ
೨೯. ದ ಮಾದೇಶ್ವರ ದೇವರ ಕೆಯ್ಯಂ ತೆಂಕಲು ಅರಸಂಕ ಜಾರಿನಕಾಲ
೩೦. ಲು ಬಿಟ್ಟ ಮತ್ತ ೨ ಕಾಡಲೂರ ಸ್ಥಳ ದೂರ ನಡ ನಾಲ್ಯ ಯರಮ
೩೧. ಹಾನಾಡಾಗಿ ನೆಲ ಬಿಟ್ಟ ಮತ್ತ . ನಾಗೇಶ್ವರ ದೇವರಿಗೆ ಕೊಟ್ಟ ಆಯಣಂ
೩೨. ಲಾಯರಕ . ಳಿಗೆ . . ಲದಕೆ ಮೆಳಸು ಭತ್ತ ಹೂ ಗುಲಾಬಿ
೩೩. ಹೊರವಡುವ ಸ್ತಳ ದೇಸಿಯನ ದೇಲಳವ . ಣೆಸುವತೂ .
೩೪. . . ಡುವ ತೂಕದ ಸಮಸ್ತ ಭಂಣ್ಣದಲ್ಲಿ ಮಾ ಅರ್ದಗೆನ್ನಲುಕೊ
೩೫. ಣ್ಡಲ್ಲಿ ಕಾಣಿ ಕೊಟ್ಟಲ್ಲಿ ಕಾಣಿ ಅಂನು ಹೊಂಗೆಲವ ವೀಸವನು ಈಬಂಣ್ಣ
೩೬. ಕೆ ತಾರಂ ಬರಂ ಬಿಟ್ಟರುಯಿನ್ತ ಶಾಷನಮಗಯ್ಯಗ ದ್ಯೇಯಂ ತಪ್ಪ
೩೭. ದೆ ನಡೆಸಿದವರು ವಾರಾಣಾಸಿ ಕುರುಕ್ಷೇತ್ರ ಗಂಗೆಯ ತಡಿಯಲು ಸ
೩೮. ಹಸ್ರ ಕವಿಲೆಯ ಕೋಡುಮಂ ಕೊಳಗುಮಂದಂ ಬರತ್ನದಲು ಕಡ್ಡಿಸಿಸ
೩೯. ಹಸ್ರ ವೇದಪಾರಗರಪ್ಪ ಬ್ರಾಹ್ಮಣೋತ್ತಮ ದ್ವಿಜರ್ಗ್ಗೆಕೊಟ್ಟ ಫಲಮಕ್ಕುಯಿದನ್ನ
೪೦. ರಾಗಿವಸ್ಸಸ್ತನಾದ ಮಹಾಪಾತಕನು ಸಹಸ್ರ ಕವಿಲೆಯನು ಬ್ರಾಹ್ಮಣರು ಮ
೪೧. . . . ವಾರಣಾಸಿ ಕುರುಕ್ಷೇತ್ರ ಗಂಗೆಯ ತಡಿಯಲು ವದಯಿಸಿದಾದು ಸಾ
೪೨. ಸ ಆಘೋರಳಾಮವದಳಿಗಳ ನಿಳಿಗು

ಇದರಲ್ಲಿ ಮೂರು ಹಂತಗಳಲ್ಲಿ ಶಿಲ್ಪಗಳು ಮತ್ತು ಮೂರು ಸಾಲುಗಳಲ್ಲಿ ಅಕ್ಷರಗಳನ್ನು ಖಂಡರಿಸಲಾಗಿದ್ದು, ಅಕ್ಷರಗಳು ಸವೆದು ಹೋಗಿವೆ.

ಈ ಶಾಸನದ ಮೊದಲನೇ ಹಂತ(ಕೆಳ)ದಲ್ಲಿ ವೀರನು ಹೋರಾಟದ ಭಂಗಿಯ ಕುದುರೆಯ ಮೇಲೆ ಕುಳಿತು ಎಡಗೈಯ್ಯಿಂದ ಕುದುರೆಯ ಲಗಾಮು ಹಿಡಿದಿದ್ದು, ಬಲಗೈಯ್ಯಲ್ಲಿ ಖಡ್ಗ ಹಿಡಿದಿದ್ದಾನೆ. ವೀರನು ಕುಳಿತ ಕುದುರೆಯ ಮುಂಬದಿಯಲ್ಲಿ ಮೂವರು ಸೈನಿಕರು ನಿಂತಿದ್ದಾರೆ. ಹಾಗೆಯೇ ವೀರನ ಹಿಂಬದಿಯಲ್ಲಿ ನಾಲ್ಕು ಗೋವುಗಳು ಮುಮ್ಮುಖವಾಗಿದ್ದು, ಇವುಗಳ ಮೇಲೆ ಐದು ಜನ ಸ್ತ್ರೀಯರು ನಿಂತಿದ್ದಾರೆ. ಎರಡನೆಯ ಹಂತ (ಮಧ್ಯ)ದಲ್ಲಿ ವೀರ ಯುದ್ಧ ಮಾಡಿ ಗೆದ್ದು ಬಂದ ಮೇಲೆ ಸಾವನಪ್ಪಿದ್ದರಿಂದ ಆ ವೀರನನ್ನು ಇಬ್ಬರು ಅಪ್ಸರೆಯರು ಸ್ವರ್ಗ ಲೋಕಕ್ಕೆ ಎತ್ತಿಕೊಂಡು ಹೋಗುವ ಸನ್ನಿವೇಶದ ಶಿಲ್ಪವಿದೆ. ಮೂರನೆಯ ಹಂತ(ಕೊನೆಯ)ದಲ್ಲಿ ವೀರಸ್ವರ್ಗಲೋಕದ ಸಿಂಹಾಸನದಲ್ಲಿ ಕುಳಿತುಕೊಂಡಿದ್ದು, ವೀರನಿಗೆ ಚೌರದಾರಿಯರು ಚೌರಬೀಸುತ್ತಿದ್ದಾರೆ. ಇದರ ಮೇಲೆ ವೀರನ ಸವಿ ನೆನಪಿಗಾಗಿ ದೇವಾಲಯ ಕಟ್ಟಿಸಿ ಅದರೊಳಗೆ ವೀರನ ಲಿಂಗ ಪ್ರತಿಷ್ಠಾಪನೆ ಮಾಡಿದ ಶಿಲ್ಪವನ್ನು ಚಿತ್ರಿಸಲಾಗಿದೆ. ಈ ವೀರಗಲ್ಲು ಶಾಸನವು ಮೂರು ಸಾಲುಗಳಿಂದ ರಚಿತಗೊಂಡಿದ್ದು, ಇದರಲ್ಲಿ ಭತ್ತಪ್ಪಯ್ಯನೆಂಬ ವ್ಯಕ್ತಿಯ ಉಲ್ಲೇಖವಿದೆ. ಬಹುಶಃ ಅಂದಿನ ದಿನ ಮಾನಗಳಲ್ಲಿ ಭತ್ತಪ್ಪಯ್ಯನು ದಂಡನಾಯಕನೆಂಬ ಮಹತ್ವದ ಹುದ್ದೆಯ ಜವಾಬ್ದಾರಿ ವಹಿಸಿಕೊಂಡಿರಬೇಕು. ಇಂತಹ ಸಂದರ್ಭದಲ್ಲಿ ತನ್ನ ಸ್ವಗ್ರಾಮವಾದ ಮನ್ಸಲಾಪುರದ ಗೋವುಗಳು ಮತ್ತು ಹೆಂಗಳೆಯರ ಮಾನದ ರಕ್ಷಣೆಗಾಗಿ ಹೋರಾಟ ಮಾಡಿ ಗೆಲುವು ಸಾಧಿಸಿದ ಬಗ್ಗೆ ಶಿಲ್ಪದ ವಿವರದಿಂದ ತಿಳಿದುಬರುತ್ತದೆ. ತದನಂತರದಲ್ಲಿ ವೀರನು ಮರಣವನ್ನಪ್ಪಿದ ನಂತರ ಗ್ರಾಮಸ್ಥರು ಆ ವೀರನ ಸವಿನೆನಪಿಗಾಗಿ ದೇವಾಲಯ ಕಟ್ಟಿಸಿ ಲಿಂಗಪ್ರತಿಷ್ಠೆ ಮಾಡಿ ವೀರಗಲ್ಲನ್ನು ನೆಟ್ಟ ಸನ್ನಿವೇಶವು ಆ ಶಿಲ್ಪ ಶಾಸನದಲ್ಲಿದೆ. ಇದು ಬಹುಶಃ ವೀರನ ಸಮಾಧಿ (ದೇವಾಲಯ) ಹತ್ತಿರದಲ್ಲಿ ಬಹುಕಾಲ ಪೂಜೆಗೊಳಪಟ್ಟು ಗಾಳಿ, ಮಳೆ ಮಾನವರ ಕಡೆಗಣೆಯಿಂದ ನಿರ್ಲಕ್ಷಿಸಲ್ಪಟ್ಟು ನಾಮಾವಶೇಷವಾಗಿ ಹಲವಾರು ವರ್ಷಗಳು ಕಳೆದುಹೋಗಿರಬೇಕು. ಪ್ರಸ್ತುತ ಈ ವೀರಗಲ್ಲು ಶಾಸನವು ಗ್ರಾಮದ ಪೂರ್ವದಿಕ್ಕಿನ ಮೂಲೆಮನೆ ರೆಡ್ಡೆಪ್ಪಗೌಡರ ಹಾಳು ಹೊಲದ ಮಣ್ಣಿನಲ್ಲಿ ಹೂತು ಹೋಗಿತ್ತಂತೆ. ಈ ಹೊಲದ ಮಾಲೀಕರು ಬೇಸಾಯ ಮಾಡುವ ಸಂದರ್ಭದಲ್ಲಿ ಈ ವೀರಗಲ್ಲು ಶಾಸನವು ದೊರೆತ ಮೇಲೆ ಅದನ್ನು ಸ್ಥಳೀಯರು ಬಂಡಿಯಲ್ಲಿ (ಚಕ್ಕಡಿ) ಹಾಕಿಕೊಂಡು ಬಂದು ಗ್ರಾಮದ ಸಿದ್ದಲಿಂಗೇಶ್ವರ ದೇವಾಲಯದ ಹಿಂಬದಿಯ ತೇರಿನಮನೆಯ ಹತ್ತಿರ(ದಕ್ಷಿಣ)ದಲ್ಲಿ ನಿಲ್ಲಿಸಿ ಸಂರಕ್ಷಿಸಿದ್ದಾರೆ.

೬. ಸಿದ್ದಲಿಂಗೇಶ್ವರದೇವಾಲಯದ ಹಿಂದೆ ಕೆರೆಯ ಒಡ್ಡಿಗೆ ಜೋಡಿಸಿರುವ ಶಾಸನ

೧. ಹೇವಿಳಂಬಿ ಸಂವತ್ಸರದ

೨. ಮನಸಲಪುರದ ಗವುಡಕು

೩. ಲಕರಣಿ ಮುದಿಕಿರೆಡಿ ಗವುಡ

೪. ಕೇಸಿರೆಡಿ ಗವುಡ ಕುಲಕರಣಿರಾ

೫. ಮಣ ಮೇಚಗವುಡ ಯಲಿರೆಡಿ

೬. ವ. ಲ ರೆಡಿ ಮಟದ ಪ್ರಭುದೇವ

೭. ರುಗೆ ಬ . ೫೪೫ ಬಿಜವರಿನಾಗಳ

೮. ದಯ ಯೆನಿಸಿವ ನಾರದರ ಸಾಕ್ಷಅಗಿ

೯. ಕೊಟುಯಿದವು ತರುತ್ತರು ಸೂರ್ಯ

೧೦. ಚಂದ್ರವುಳ ಪರಿತ್ರ ನಮಸ್ಥಳ

೧೧. ವಪಯೆಂದು ಬರೆದು ಕೊಟ್ಟವನ

೧೨. ಪತ್ರವುವ . . ಂದಿರ ಕಲಿವ

೧೩. ಕೊಟ್ಟನಾದವನು . . . . ಕರಣ ರಮಣ

೧೪. ಮ . . .ಣ. .ಯಿ ಕೊಂದವ ಪಾಪ

ಸಾರಾಂಶ

ಈ ಶಾಸನವು ಕ್ರಿ.ಶ. ೧೬ನೇ ಶತಮಾನಕ್ಕೆ ಸೇರುತ್ತದೆ. ಮನಸಲಪುರದ ಗೌಡ ಕುಲಕರಣಿಗಳಾದ ಮುದಿಕಿರೆಡ್ಡಿಗವುಡ, ಕೇಸಿರೆಡ್ಡಿಗವುಡ, ಕುಲಕರಣಿ ರಾಮಣ್ಣ, ಮೇಚಗವುಡ ಯಲ್ಲಿರೆಡ್ಡಿ ಎಂಬುವವರು ಮಟದ ಪ್ರಭುದೇವರಿಗೆ ಭೂಮಿಯನ್ನು ದತ್ತಿನೀಡಿದ ಬಗ್ಗೆ ತಿಳಿಸುತ್ತದೆ.

೭. ಸಿದ್ದಲಿಂಗೇಶ್ವರ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಹಾಸು ಬಂಡೆಗಲ್ಲು ಶಾಸನ

೧. ಶ್ರೀ ಗಣೇಶಾಯ ನಮಃ

೨. ದಾತೃನಾಮ ಸಂವತ್ಸರದ

೩. ಮಾಘ ಬ. ೧೦ ಲು ಶ್ರೀಮತು

೪. ಕೊಂಡಿಕಲು ಸ್ಥಳದ ಮಾ . . . ದಾನಮಕ

೫. . ದ ನಾನು ಯಲು ಬರು . ಯಾಗ . . ನಾ . .

೬. ವೂರು ಯರದು ವಾಲಯದ . ಮಯಲನ ಮಕಳು ಮಲ

೭ ಯೆಂದು ಮಾದಾನ ಮಕಳು ದವಯಲ್ಲಿಯ ಬ್ರಯಿ . .

೮. ಬ . ಸೂರ್ಯ ಚಂದ್ರಪರಿಯಂತ್ರವು

೯. ಕೊಪ . .ತ್ರಯಕಳಧಾರಾ . . . . .

ಸಾರಾಂಶ

ಇದು ಬೆಟ್ಟದ ಬೃಹದಾಕಾರದ ಹಾಸು ಬಂಡೆಗಲ್ಲಿನ ಬಿಳಿಯ ಬಣ್ಣದ ಕಣಶಿಲೆಯಲ್ಲಿ ಬರೆಸಲ್ಪಟ್ಟ ಶಾಸನವಾಗಿದೆ. ಇದರಲ್ಲಿ ಶ್ರೀಗಣೇಶಾಯನಮಃ ದಾತೃನಾಮ ಸಂವತ್ಸರದ ಮಾಘ ಬ. ೧೧ ಲು ಎಂದಿದ್ದು ಕ್ರಿ.ಶ. ೧೭-೧೮ನೇ ಶತಮಾನಕ್ಕೆ ಸೇರುತ್ತದೆ. ಈ ಶಾಸನವು ಪ್ರಸ್ತುತ ಮನ್ಸಲಾಪುರ ಗ್ರಾಮವನ್ನು ಕೊಂಡಿಕಲ್ಲು ಎಂದು ತಿಳಿಸುವುದರೊಂದಿಗೆ ದತ್ತಿಕೊಟ್ಟ ಅಸ್ಪಷ್ಟ ಉಲ್ಲೇಖವಿದೆ.

ಮಮದಾಪುರ

ಈ ಗ್ರಾಮವು ತಾಲೂಕು ಕೇಂದ್ರವಾದ ರಾಯಚೂರು ನಗರದಿಂದ ದಕ್ಷಿಣ ದಿಕ್ಕಿಗೆ ಏಳು ಕಿ.ಮೀ. ದೂರದಲ್ಲಿದೆ. ಇಲ್ಲಿ ನಾಲ್ಕು ವೀರಗಲ್ಲುಗಳು, ಹನುಮಾನ್, ಈಶ್ವರ, ಸಾದರ ದೇವಾಲಯಗಳಿವೆ. ಹಾಗೆಯೇ ಎರಡು ಶಾಸನಗಳು ಪತ್ತೆಯಾಗಿವೆ.

೮. ಹನುಮಾನ್ ದೇವಾಲಯದ ಆವರಣದಲ್ಲಿರುವ ಶಾಸನ

ಇದು ವೀರಗಲ್ಲಿನ ಶಾಸನವಾಗಿದ್ದು, ಮೂರು ಹಂತಗಳಿಂದ ಕೂಡಿದೆ. ಶಾಸನದ ಮೊದಲಿನ ಹಂತ (ಕೆಳ)ದಲ್ಲಿ ಇಬ್ಬರು ವೀರರು ನಿಂತುಕೊಂಡಿದ್ದಾರೆ. ಎರಡನೆಯ ಹಂತ (ಮಧ್ಯದ) ದಲ್ಲಿ ಒಬ್ಬ ವೀರ ಕುಳಿತುಕೊಂಡಿದ್ದು ಬಲಗೈಯ್ಯಲ್ಲಿ ಕತ್ತಿ ಹಿಡಿದಿದ್ದು, ಎಡಗೈಯ್ಯಲ್ಲಿ ಭರ್ಚಿ ಹಿಡಿದಿದ್ದಾನೆ. ಇನ್ನೊಬ್ಬ ವೀರ ನಿಂತುಕೊಂಡು ಕೈಮುಗಿಯುತ್ತಿದ್ದಾನೆ. ಮೂರನೆಯ ಹಂತ (ಕೊನೆಯ) ದಲ್ಲಿ ವೀರ ಕುಳಿತಿದ್ದು, ಆತನ ಎಡಬಲಗಳಲ್ಲಿ ಅಪ್ಸರೆಯರು ಕುಳಿತಿದ್ದಾರೆ. ಈ ಮೂರು ಹಂತಗಳಲ್ಲಿ ಎರಡೆರಡು ಸಾಲುಗಳ ಒಟ್ಟು ಆರು ಸಾಲುಗಳ ಶಾಸನವಿದ್ದು, ಇದು ಕ್ರಿ.ಶ. ೯ನೆಯ ಶತಮಾನಕ್ಕೆ ಸೇರುತ್ತದೆ. ಈ ಶಾಸನವು ಕಣಶಿಲೆಯ ಚಪ್ಪಡಿ ಕಲ್ಲಿನಲ್ಲಿದೆ. ಸ್ಥಳೀಯರು ಇದಕ್ಕೆ ನೀಲಿ ವಾರ್ನಿಷ್ ಬಣ್ಣವನ್ನು ಹಲವಾರು ಸಲ ಹಚ್ಚಿದ ಕಾರಣ ಅಕ್ಷರಗಳು ಕಾಣದಾಗಿವೆ. ಇದು ಒಂದೂವರೆ ಅಡಿ ಅಗಲ, ನಾಲ್ಕು ಅಡಿ ಎತ್ತರ(ಉದ್ದ)ವಿದ್ದು, ಚಲ್ಲೇಶ್ವರನೆಂಬ ವ್ಯಕ್ತಿಯು ಗುಗ್ಗಳಪೊಟ್ಟಿಸಿರವು ಎಂಬ ಸ್ಥಳದಲ್ಲಿ ವೀರಮರಣವನ್ನಪ್ಪಿದ ಸ್ಮರಣಾರ್ಥವಾಗಿ ಮಮದಾಪುರ ಗ್ರಾಮದಲ್ಲಿ ಹಾಕಿಸಿದ ಶಾಸನವಾಗಿದೆ. ಬಹುಶಃ ಚಲ್ಲೇಶ್ವರ ಎಂಬ ವ್ಯಕ್ತಿಯು ಪ್ರಸ್ತುತ ಮಮದಾಪುರ ಗ್ರಾಮದವನಾಗಿರಬೇಕು. ಹಾಗೆಯೇ ಶಾಸನದಲ್ಲಿ ಗುಗ್ಗಳ ಪೊಟ್ಟಿಸಿರವು ಎಂಬ ಸ್ಥಳವು ಚಲ್ಲೇಶ್ವರನೆಂಬ ವೀರನ ಆಧೀನಕ್ಕೆ ಒಳಪಟ್ಟಿತ್ತೆಂದು ತೋರುತ್ತದೆ. ಈ ಗುಗ್ಗಳ ಪೊಟ್ಟಿಸಿರವು ಎಂಬ ಸ್ಥಳವು ಪ್ರಸ್ತುತ ಕರ್ನಾಟಕ ರಾಜ್ಯದ ಪ್ರದೇಶದಲ್ಲಿ ಕಾಣಬರುವುದಿಲ್ಲ. ಇದು ಬಹುಶಃ ರಾಯಚೂರು ಜಿಲ್ಲೆಯ ಗಡಿಗೆ ಹೊಂದಿಕೊಂಡಂತೆ ಈಗಿನ ತೆಲಂಗಾಣ ರಾಜ್ಯದಲ್ಲಿರಬೇಕು.

೯. ಸಾದರದೇವಾಲಯದ ಮುಖಮಂಟಪದ ಭಿತ್ತಿನಲ್ಲಿರುವ ಶಾಸನ

೧. . . . ಧ . . ಸ ಪ . .

೨. ಕರೆಪ್ಪ / ಅಯ್ಯಪ್ಪ

ಸಾರಾಂಶ

ಈ ಶಾಸನವು ಕ್ರಿ.ಶ. ೧೯–೨೦ನೇ ಶತಮಾನಕ್ಕೆ ಸೇರುತ್ತದೆ. ಇದರಲ್ಲಿ ಕರೆಪ್ಪ ಅಯ್ಯಪ್ಪ ಎಂಬ ಹೆಸರುಗಳು ಮಾತ್ರ ಕಾಣಬರುತ್ತವೆ.

ದೇವನಪಲ್ಲಿ

ಇದು ತಾಲ್ಲೂಕು ಕೇಂದ್ರವಾದ ರಾಯಚೂರು ನಗರದಿಂದ ಈಶಾನ್ಯದಿಕ್ಕಿಗೆ ಒಂಬತ್ತು ಕಿ.ಮೀ.ದೂರದಲ್ಲಿದೆ. ಈ ಊರಲ್ಲಿ ಏಳುವೀರಗಲ್ಲುಗಳು ಮತ್ತು ನಾಲ್ಕು ವೀರಗಾರರ ಗುಡಿಗಳಿದ್ದು, ಅವುಗಳ ಒಳಬದಿಯಲ್ಲಿ ವೀರರ ಶಿಲ್ಪಗಳಿವೆ. ಹಾಗೆಯೇ ಪಂಚಲಿಂಗೇಶ್ವರ, ತಿಮ್ಮಪ್ಪ, ಮಾರುತಿ ದೇವಾಲಯಗಳೊಂದಿಗೆ ಹಲವು ಶಕ್ತಿದೇವತೆಗಳ ಚಿಕ್ಕ ಚಿಕ್ಕ ದೇಗುಲಗಳಿವೆ. ಇವುಗಳೊಂದಿಗೆ ದೇವನಪಲ್ಲಿ ಗ್ರಾಮದಲ್ಲಿ ಒಂದು ಅಪ್ರಕಟಿತ ಶಾಸನವು ಪತ್ತೆಯಾಗಿದೆ.

೧೦. ಅಗಸಿಕಟ್ಟೆ ಹತ್ತಿರದಲ್ಲಿರುವ ಶಾಸನ

೧. @ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀಪೃಥ್ವೀವಲ್ಲಭಮಹಾರಾಜಾಧಿರಾಜಪರಮೇ

೨. ಶ್ವರ ಪರಮಭಟ್ಟಾರಕಂಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್

೩. ತ್ರಿಭುವನಮಲ್ಲದೇವರ ವಿಜಯರಾಜ್ಯ ಮುತ್ತರೋತ್ತರಾಭಿವೃದ್ದಿ ಪ್ರವರ್ದ್ಧಮಾನಚಂ

೪. ದ್ರಾರ್ಕ್ಕತಾರಬರಂ ಸಲ್ಲುತ್ತಮಿರೆ॥ @ಸ್ವಸ್ತಿ ಶಕವರ್ಷದ. . . . .

೫. . . . .

೬ . . . . ಮೇಶ್ವರಂ . ಲಿಕಲಿಯುಗಕುಳಮಹಾರಾಜಾ . . . .

೭ . . . ರಾಜ್ಯಂಗೆಯ್ಯುತ್ತಮಿರೆ ॥ ಸ್ವಸ್ತ ಯನೇಕ ಬಂಗುರ . . . .

೮ . .ಪಾರಿಯಾತ್ರ ತನ್ಮಧ್ಯ ದೇಶಾದೀಶ್ವರಂ ಮಾಹಿಶ್ಮತಿ ಪುರವರಾದೀಶ್ವರ ಸಹಸ್ರ

೯. ಬಾಹು ಅಹಿಹಯ ವಂಶೋದ್ಭವಂ ವೀರಕಮಳೋದ್ಭವಂ ಅತ್ಯುಗ್ರನರಶಿರೊದರ್ಪ್ಪಣ

೧೦. . . . . . . ಕಾನನ . .ಮಾ .ಸಮಸ್ತ . . . .

೧೧. . . .ಗೆಯ್ಯ . . ಮುದ್ಗನೂರ . . . .

೧೨. . . ಡದನಾಡೊ. . . ನಾಗೇ . . . .

೧೩. . . . . . ಹಯ . ರ . . ನದಿ . . . .

೧೪ . . . . ರನ . . . .

೧೫ . . . . ದೀರಮಾಳ . ಕಾ . ಸಿ . . .ವಾಗು . . . .

೧೬ ದ . . . ತನೆಯಜಯ ಸಂವತ್ಸರದ . . . . ಬಿಟ್ಟ . . . .

೧೭ ಮಲ್ಲಿಕಾರ್ಜುನ ದೇವರ್ಗ್ಗೆ ಪೂಜೆಪುನಃಸ್ಕಾರಕ್ಕೆ.. . . . .


೧೮ . . . . . . .ಮತ್ತರು . . ಮ . . . .

೧೯ . . . . ಹೊಲದೊಳಗೆ ಮಲ್ಲಿಸೆಟ್ಟಿ . . . .

೨೦ . . . . . . ರಪ್ಪ . . . ಲದೊಳಗಾಗಿ ಬಮ್ಮಗಾಮುಂಡ . . . .

೨೧ . . . .


೨೨ . . . . ದೊಳಗೆ . . . .
೨೩ . . . . ಯಮತ್ತರ . . . .
೨೪ . . . . ಮಲ್ಲಿಸೆಟ್ಟಿಯ . . . .
(೨೫, ೨೬, ೨೭ನೇ ಸಾಲುಗಳು ಸವೆದಿವೆ.)
೨೮ . . . . ಮತ್ತರು . . . .
೨೯ ನಿ. . . . .
೩೦ . ಬ. . . . . .ಕವಿಲೆಯ . . . .ನಳಿದವ. . . . .




ಜೇಗರಕಲ್ ಶಾಸನ–೧




ಮರ್ಚೆಡ ಶಾಸನ–೧



ಮರ್ಚೆಡ ಶಾಸನ–೨



ಮನ್ಸಲಾಪುರ ಶಾಸನ–೧



ಮಮದಾಪುರ ಶಾಸನ–೧



ಮನ್ಸಲಾಪುರ ಶಾಸನ–೨

ಸಾರಾಂಶ

ಈ ಶಾಸನದಲ್ಲಿ ವಿಕ್ರಮವರ್ಷ ೩೯ ಜಯವೈಶಾಕ ಸುದ್ಧ ೫ ವಡ್ಡವಾರ ಎಂದಿದ್ದು, ಇದು ಕ್ರಿ.ಶ. ೧೧-೦೪-೧೧೧೪ಕ್ಕೆ ಸರಿಹೊಂದುತ್ತದೆ.

ಕಲ್ಯಾಣಚಾಳುಕ್ಯ ಅರಸ ಆರನೇ ವಿಕ್ರಮಾದಿತ್ಯನು ರಾಜ್ಯಭಾರ ಮಾಡುತ್ತಿರುವಾಗ ಮಲ್ಲಿಸೆಟ್ಟಿ ಎಂಬುವವನು ಮಲ್ಲಿಕಾರ್ಜುನ ದೇವರಿಗೆ ಭೂಮಿ ಆಹಾರಧಾನ್ಯಗಳನ್ನು ದಾನ ನೀಡಿದನು. ಹಾಗೆಯೇ ಶಾಸನ ಮುಂದುವರೆದು ಬಮ್ಮಗಾವುಂಡ, ಮದಗಾವುಂಡ ಮತ್ತು ಬಿಲ್ಲಗಾವುಂಡರು ಕೂಡ ಮಲ್ಲಿಕಾರ್ಜುನ ದೇವರಿಗೆ ಭೂಮಿಯನ್ನು ದತ್ತಿಯಾಗಿ ನೀಡಿದರೆಂದು ಪ್ರಸ್ತಾಪಿಸುತ್ತದೆ. ಪ್ರಸ್ತುತ ದಿನಗಳಲ್ಲಿ ಈ ಶಾಸನವು ತಿಪ್ಪೆಯಲ್ಲಿ ಹೂತುಹೋಗಿದೆ. ಹಾಗೆಯೇ ಶಾಸನೋಕ್ತ ಮಲ್ಲಿಕಾರ್ಜುನ ದೇವಾಲಯವು ಇಂದು ಹನುಮಾನ್ ದೇವಾಲಯವಾಗಿ ಮಾರ್ಪಟ್ಟಿದೆ.

(ಶಾಸನಗಳ ಕ್ಷೇತ್ರ ಕಾರ್ಯದಲ್ಲಿ ಪರಪ್ಪ ಭಂಡಾರಿ ಹಂಚಿನಾಳ, ಆಂಜನೇಯ ತಂದೆ ಅಯ್ಯಾಳಪ್ಪ ರಾಯಚೂರು, ಗುರುಪ್ರಸಾದ್ ಮಮದಾಪುರ, ರಾಜೇಂದ್ರ, ಶಂಕ್ರಪ್ಪಗೌಡ, ಕೆ. ಶರಣಪ್ಪ, ಸಂತೋಷಕುಮಾರ, ಶರಣಪ್ಪ ಹಂಚಿನಾಳ, ಮಲ್ಲನಗೌಡ ಪಾಟೀಲ, ಡೊಣ್ಣಯ್ಯಸ್ವಾಮಿ, ಶರಣ ಬಸವಸ್ವಾಮಿ, ಮಂಜುನಾಥ ಕೋಟೆಹಾಳ್, ಮಲ್ಲಿಕಾರ್ಜುನಸ್ವಾಮಿ, ಹನುಮಂತಪ್ಪ, ಅಡಿವೆಪ್ಪ, ನಾಗಪ್ಪ, ಜುನೇದ, ಸಿದ್ದನಗೌಡ ಮಾಲಿ ಪಾಟೀಲ, ರಾಮನಗೌಡ ಪೊಲೀಸ್‌ಗೌಡ್ರು, ಈರನಗೌಡ, ನರಸಿಂಹಲು (ಗುಡದಯ್ಯ) ನಾಯಕ, ವೆಂಕಟಶನಾಯಕ ಮೊದಲಾದವರು ಕ್ಷೇತ್ರಕಾರ್ಯದಲ್ಲಿ ನೆರವಾಗಿದ್ದಾರೆ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ).

ಆಧಾರ ಗ್ರಂಥಗಳು

೧. ಡಾ. ಬಿ. ಚನ್ನಬಸಪ್ಪ, **ರಾಯಚೂರು ಜಿಲ್ಲೆಯ ಚರಿತ್ರೆ ಶಾಸನಗಳ ಹಿನ್ನೆಲೆಯಲ್ಲಿ**, ಅಕ್ಷರ ಮಂಟಪ ಪ್ರಕಾಶನ, ಹಂಪಿ ನಗರ, ಬೆಂಗಳೂರು, ೨೦೧೦.

೨. ಡಾ. ಚನ್ನಬಸಪ್ಪ ಮಲ್ಕಂದಿನ್ನಿ, ಕಳಚೂರಿ ಅರಸರ ಹೊಸ ಶಾಸನ ಶೋಧ, ಸಂಯುಕ್ತ ಕರ್ನಾಟಕ, ದಿನಾಂಕ: ೦೧.೧೦.೨೦೧೬, ಪು. ೦೨.

೩. ಡಾ. ಚನ್ನಬಸಪ್ಪ ಮಲ್ಕಂದಿನ್ನಿ, ಜೇಗರಕಲ್‌ನಲ್ಲಿ ಕಳಚೂರಿ ಅರಸರ ಶಾಸನ ಶೋಧ, ಬೆಂಕಿ ಬೆಳಕು, ದಿನಾಂಕ: ೦೧.೧೦.೨೦೧೬, ಪು. ೦೪.

೪. ಡಾ. ಚನ್ನಬಸಪ್ಪ ಮಲ್ಕಂದಿನ್ನಿ, ಜೇಗರಕಲ್: ಹೊಸ ಶಾಸನ ಪತ್ತೆ, ಸಂಜೆವಾಣಿ, ದಿನಾಂಕ: ೦೧.೧೦.೨೦೧೬, ಪು. ೦೪.

೫. ಡಾ. ಚನ್ನಬಸಪ್ಪ ಮಲ್ಕಂದಿನ್ನಿ, ಜೇಗರಕಲ್‌ನಲ್ಲಿ ಹೊಸ ಶಾಸನ ಶೋಧ, ರಾಯಚೂರು ವಾಹಿನಿ, ದಿನಾಂಕ: ೦೧.೧೦.೨೦೧೬, ಪು. ೦೧.

೬ ಡಾ. ಚನ್ನಬಸಪ್ಪ ಮಲ್ಕಂದಿನ್ನಿ, ಜೇಗರಕಲ್‌ನಲ್ಲಿ ಕಳಚೂರಿ ಅರಸರ ಹೊಸ ಶಾಸನ ಪತ್ತೆ, ಸುದ್ದಿಮೂಲ, ದಿನಾಂಕ: ೦೧.೧೦.೨೦೧೬, ಪು. ೦೩ ಮತ್ತು ೦೬.

೭. ಡಾ. ಚನ್ನಬಸಪ್ಪ ಮಲ್ಕಂದಿನ್ನಿ, ಕ್ರಿ.ಶ. ೧೧೬೮ರ ಕಳಚೂರಿ ಅರಸರ ಶಾಸನಪತ್ತೆ, ವಿಜಯವಾಣಿ, ದಿನಾಂಕ: ೦೨.೧೦.೨೦೧೬, ಪು. ೦೪.

೮. ಡಾ. ಚನ್ನಬಸಪ್ಪ ಮಲ್ಕಂದಿನ್ನಿ, ದೇವನಪಲ್ಲಿಯ ಪುರಾತನ ಅವಶೇಷಗಳ ಶೋಧ, ಹೊಸದಿಗಂತ, ದಿನಾಂಕ: ೧೮.೧೦.೨೦೧೬, ಪು. ೦೩.

೯. ಡಾ. ಚನ್ನಬಸಪ್ಪ ಮಲ್ಕಂದಿನ್ನಿ, ದೇವನಪಲ್ಲಿಯ ಪುರಾತನ ಅವಶೇಷಗಳ ಶೋಧ, ರಾಯಚೂರು ಸಂಜೆ, ದಿನಾಂಕ: ೧೮.೧೦.೨೦೧೬, ಪು. ೦೪.

೧೦. ಡಾ. ಚನ್ನಬಸಪ್ಪ ಮಲ್ಕಂದಿನ್ನಿ, ಮರ್ಚೆಡ ಗ್ರಾಮದಲ್ಲಿ ಅಪ್ರಕಟಿತ ಎರಡು ಶಾಸನಗಳ ಶೋಧ, ರಾಯಚೂರು ಸಂಜೆ, ದಿನಾಂಕ: ೧೦.೦೧.೨೦೧೭, ಪು. ೦೪.

೧೧. ಡಾ. ಚನ್ನಬಸಪ್ಪ ಮಲ್ಕಂದಿನ್ನಿ, ಶಾಸನಗಳು ಪತ್ತೆ, ವಿಜಯ ಕರ್ನಾಟಕ (ನಮ್ಮ ರಾಯಚೂರು), ದಿನಾಂಕ: ೧೦.೦೧.೨೦೧೭, ಪು. IV.

ಕಳಸದ – ಕೆಳದಿ ನಾಯಕರ ಹಾಗೂ ಬಂಗರಸರ, ಅಪ್ರಕಟಿತ ಶಾಸನಗಳು

ಹೆಚ್.ಆರ್. ಪಾಂಡುರಂಗ*

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕು ಕಳಸ ಪಟ್ಟಣ ಹೋಬಳಿ ಕೇಂದ್ರವಾಗಿದ್ದು, ಹೊಯ್ಸಳರು, ಜಯನಗರದ ಅರಸರು, ಕಾರ್ಕಳದ ಭೈರವರಸರು, ಕೆಳದಿ ನಾಯಕರು, ಮೈಸೂರು ಒಡೆಯರ ಆಳ್ವಿಕೆಗೆ ಒಳಪಟ್ಟಿದ್ದ ಈ ಸ ಪಟ್ಟಣವು ಭೈರವರಸರ ಆಳ್ವಿಕೆಯಲ್ಲಿ ಬೇಸಿಗೆ ರಾಜಧಾನಿಯಾಗಿದ್ದು, ಇಲ್ಲಿನ ಕ್ಷೇತ್ರದೇವತೆ ಶ್ರೀ ಕಳಸೇಶ್ವರ ದೇವಸ್ಥಾನ ಮು. ಕಳಸ ಪಟ್ಟಣದ ಪೂರ್ವ ಭಾಗದಲ್ಲಿ ಎತ್ತರವಾದ ಗುಡ್ಡದ ಮೇಲೆ ಹೊಯ್ಸಳ ದೊರೆಗಳಿಂದ ನಿರ್ಮಿತವಾಗಿದ್ದು, ಂತರ ವಿಜಯನಗರ ದೊರೆಗಳು, ಭೈರವರಸರು ಹಾಗೂ ಕೆಳದಿ ನಾಯಕರಿಂದ ವಿವಿಧ ಹಂತಗಳಲ್ಲಿ ವಿಸ್ತರಿಸಲ್ಪಟ್ಟಿದೆ. ಲ್ಲಿದೇವಾಲಯದ ಹೊರ ಪ್ರಾಕಾರದಲ್ಲಿ ಹೊಯ್ಸಳರು, ವಿಜಯನಗರ, ಕೆಳದಿ ಅರಸರುಗಳ, ಕಾಲದ ಹಲವಾರುತಾಮ್ರ ಸನ, ಶಿಲಾ ಶಾಸನಗಳು ಇವೆ. ಶ್ರೀ ಕಳಸೇಶ್ವರ ದೇವಸ್ಥಾನ, ಶ್ರೀ ಸರ್ವಾಂಗ ಸುಂದರಿ ಅಮ್ಮನವರ ದೇವಸ್ಥಾನ ಹಾಗೂ ೀಲಂಗಡಿ ಶ್ರೀ ಚನ್ನಕೇಶವ ದೇವಾಲಯಗಳ ಲೋಹ ಶಾಸನಗಳು ಮತ್ತು ಮೇಲಂಗಡಿ ಶ್ರೀವೆಂಕಟರಮಣದೇವಾಲಯದಲ್ಲಿ ಳದಿ ಅರಸರಕಾಲದ ಶಿಲಾ ಶಾಸನವೂ ಹಾಗೂ ಐತಿಹಾಸಿಕ ಕಳಸ ಸೀಮೆಯ ನಾಡ ಪ್ರಭುಅಡಕೋಡು ಹೆಗ್ಗಡೆಯವರ ನೆಯಲ್ಲಿ ಅಪರೂಪದ ಬಂಗರಸರ ಕಾಲದ ಕಾಷ್ಠ ಶಾಸನವು ದೊರೆತಿದ್ದು, ಕಳಸ ಸೀಮೆಯ ಇತಿಹಾಸದ ಮೇಲೆ ೊಸ ಬೆಳಕು ಚೆಲ್ಲಿವೆ.

ಅ] ಕಳಸದ ಶ್ರೀ ಕಳಸೇಶ್ವರ ದೇವಸ್ಥಾನದ ಹಿತ್ತಾಳೆ ಗಂಟೆ, ಶಾಸನ
"ಶ್ರೀ ಕಲಶೀಶ್ವರ ಸಾಮಿಯವರ ಸಂನಿಧಿಗೆ ಮೊಂಡಗದೆ
ಕೊಳುಂಡೆ ಮಂಜಿಗವುಡನ ಭಕ್ತಿ ॥"

ಈ ಗಂಟೆ ಶಾಸನ ೧೯ನೇ ಶತಮಾನದ ಆರಂಭ ಕಾಲದ ಕನ್ನಡ ಲಿಪಿ ಹೊಂದಿದ್ದು, ಮೈಸೂರು ಅರಸರ ಆಳ್ವಿಕೆ ಲದ ಶಾಸನವಾಗಿದ್ದು, ದೇವಸ್ಥಾನದ ನವರಂಗ ದಲ್ಲಿರುವ ಈ ಘಂಟೆಯನ್ನು ಕಳಸೇಶ್ವರ ಸ್ವಾಮಿ ಭಕ್ತನಾದ, ಮೊಂಡಗದೆಗ್ರಾಮದ ಳುಂಡೆ ಮನೆತನದ ಮಂಜಿಗವುಡನು ಭಕ್ತಿಯಿಂದ ಶ್ರೀ ಕಳಸೇಶ್ವರನಿಗೆ ಘಂಟೆಯ ಕಾಣಿಕೆ ಸಲ್ಲಿಸಿರುವ ವಿಚಾರ ತಿಳಿದು ರುತ್ತದೆ. ಇಂದಿನ ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆ–ಕುಳ್ಳುಂಡೆ ಗ್ರಾಮಗಳು ಅಂದಿನ ಮೊಂಡಗದೆ– ಕೊಳುಂಡೆ ಗಿದೆ.

ಆ] ಕಳಸದ ಶ್ರೀ ಸರ್ವಾಂಗ ಸುಂದರಿ ಅಮ್ಮನವರ ದೇವಸ್ಥಾನದಲ್ಲಿದೊರೆತಿರುವ ೩ ಘಂಟೆ ಶಾಸನಗಳು
೦೧] "ಕಳಸೆಶ್ವರ ದೆವರಿಗೆ । ಸಗ್ರದಕಂಚುಗರ ಮಲ್ಲಪನ। ಭಕ್ತಿ"

ಕಳಸೇಶ್ವರ ದೇವಾಲಯ ಸಂಕೀರ್ಣದಲ್ಲಿರುವ ಶ್ರೀ ಸರ್ವಾಂಗ ಸುಂದರಿ ಅಮ್ಮನವರ ದೇವಸ್ಥಾನದಲ್ಲಿ ದೊರೆತಿರುವ, ರ್ಭಗುಡಿಯ ಎದುರಿನ ಅಂಕಣದಲ್ಲಿರುವ ಹಾಗೂ ಇಂದಿಗೂ ಉಪಯೋಗದಲ್ಲಿರುವ ೧೯ನೇ ಶತಮಾನದ ಅಂತ್ಯಭಾಗದ, ೖಸೂರು ಅರಸರ ಆಳ್ವಿಕೆ ಕಾಲದ ಹಳೆಗನ್ನಡ ಲಿಪಿ ಹೊಂದಿದ ಹಿತ್ತಾಳೆ ಘಂಟೆಯ ಮೇಲಿರುವ ಈ ಶಾಸನದ ಪ್ರಕಾರ, ಳದಿ ನಾಯಕರ ಆಳ್ವಿಕೆಯ ಸಗ್ರ ಅಂದರೆ ಇಂದಿನ ಸಾಗರದ "ಕಂಚುಗರ ಮಲ್ಲಪನ" ಅಂದರೆ ಸಾಗರದ ಲೋಹದ ಸಗಾರರಾದ ಕಂಚುಗರ ಮಲ್ಲಪನೆಂಬವನು ಶ್ರೀ ಕಳಸೇಶ್ವರ ಸ್ವಾಮಿಗೆ ಭಕ್ತಿಕಾಣಿಕೆಯಾಗಿ ಹಿತ್ತಾಳೆ ಘಂಟೆಯನ್ನು ರ್ಪಿಸಿರುವ ವಿಷಯ ತಿಳಿದು ಬರುತ್ತದೆ.

೦೨] "॥ ಕಲಶದ ಶ್ರೀ ಆನೆ ವಿಘ್ನೆಶ್ವರ ಸ್ವಾಮಿಗೆ ।
ಪುನೆದ ಹರೀಯ ಸೇವೆ । ಗಂ ೦೧ಕೆ ಸೆ ೩"

---

* ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಕಳಸ–೫೭೭೧೨೪.

ಮೇಲೆ ಕಂಡ ಹಳೆಗನ್ನಡ ಶಾಸನ ಲಿಪಿ ಹೊಂದಿದ ಹಿತ್ತಾಳೆಯ ಇಂದಿಗೂ ಉಪಯೋಗದಲ್ಲಿರುವ ಎರಡು ಘಂಟೆಗಳು ಸರ್ವಾಂಗ ಸುಂದರಿ ಅಮ್ಮನವರ ಗರ್ಭಗುಡಿಯ ಎದುರಿನ ಅಂಕಣದಲ್ಲಿದ್ದು, ೧೯ನೇ ಶತಮಾನದ ಆದಿ ಭಾಗದ ಮೈಸೂರು ಅರಸರ ಆಳ್ವಿಕೆ ಸೇರುತ್ತದೆ. ಶಾಸನದ ಪ್ರಕಾರ ಕಳಸೇಶ್ವರ ದೇವಸ್ಥಾನದ ಪ್ರವೇಶದ್ವಾರದಲ್ಲಿರುವ ಆನೆ ವಿಘ್ನೇಶ್ವರ ಸ್ವಾಮಿಗಂಡು-ಹೆಣ್ಣು ಅವಳಿ ದೇವಾಲಯಗಳಿಗೆ ಪುಣೆಯ ಹರಿ ಎಂಬ ಭಕ್ತರೊಬ್ಬರು ಕಾಣಿಕೆಯಾಗಿ ಸಮರ್ಪಿಸಿದಂತೆ ತಿಳಿಯುತ್ತದೆ.

ಇ] ಮೇಲಂಗಡಿ ಶ್ರೀ ಚನ್ನಕೇಶವದೇವಸ್ಥಾನದ ದೀಪಸ್ತಂಭ ಶಾಸನ

"ತನೂಡಿದೊಡ್ಡೈಹೆಗ್ಗಡೆ ಸೇವೆ"

ಈ ಲೋಹ ಶಾಸನ ಕಳಸದ ಮೇಲಂಗಡಿ ಶ್ರೀ ಚನ್ನಕೇಶವದೇವಸ್ಥಾನದ ಹಿತ್ತಾಳೆ ದೀಪದಕಂಬದಲ್ಲಿದ್ದು ೧೯ನೇ ಶತಮಾನದ ಅಂತ್ಯಭಾಗದ ಕನ್ನಡ ಲಿಪಿ ಹೊಂದಿದ್ದು, ಮೈಸೂರು ಅರಸರ ಕಾಲದ್ದಾಗಿದೆ. ಈ ಮೂರು ಅಡಿ ಎತ್ತರದ ಹಿತ್ತಾಳೆ ದೀಪದ ಕಂಬವನ್ನು ಕಳಸ ಸಮೀಪದ ತನೂಡಿಯ ಪ್ರಸಿದ್ಧ ನಾಡ ಪ್ರಭು ಹೆಗ್ಗಡೆ ಮನೆತನದದೊಡ್ಡಯ್ಯ ಹೆಗ್ಗಡೆಯವರು ಶ್ರೀ ಚನ್ನಕೇಶವದೇವರಿಗೆ ಭಕ್ತಿ ಪೂರ್ವಕವಾಗಿ ಸಲ್ಲಿಸಿದ ವಿಷಯ ತಿಳಿದುಬರುತ್ತದೆ.

೨] ಕೆಳದಿ ನಾಯಕರಕಾಲದ ಶಿಲಾ ಶಾಸನ

"ಬಾ ಬಸ ನಾಯಕನ ಸುಬನ ಸೆವೆ"

ಕಳಸದ ಮೇಲಂಗಡಿ ಶ್ರೀ ವೆಂಕಟರಮಣ ದೇವಾಲಯದ ಪ್ರವೇಶದ್ವಾರದ ಕಲ್ಲಿನ ಮೆಟ್ಟಿಲು ಮೇಲಿರುವ ಏಕ ಸಾಲಿನ ಈ ಶಿಲಾ ಶಾಸನ ೧೮ನೇ ಶತಮಾನದ ಹಳೆಗನ್ನಡ ಲಿಪಿಯಲ್ಲಿದೆ. ಕೆಳದಿ ನಾಯಕರಾದ ಇಮ್ಮಡಿ ಸೋಮಶೇಖರ ನಾಯಕರ ಆಳ್ವಿಕೆಯಲ್ಲಿ [೧೭೧೪-೧೭೩೯] ಚಿತ್ರದುರ್ಗದ ನಾಯಕರ ಶತ್ರುಗಳು ಹಾಗೂ ಕೆಳದಿ ನಾಯಕರ ಮಿತ್ರರೂ ಆದ ಹರಪನಹಳ್ಳಿ ಪಾಳೇಗಾರ ಬಾಗಳಿ ಬಸಪ್ಪ ನಾಯಕರ ಅಧಿಕಾರಿ ಸುಬ್ಬನೆಂಬ ವ್ಯಕ್ತಿಯು ಬಾಗಳಿ ಬಸಪ್ಪ ನಾಯಕರ ಪರವಾಗಿ ಕಳಸದ ಶ್ರೀ ವೆಂಕಟರಮಣ ಸ್ವಾಮಿದೇವಸ್ಥಾನದ ಪ್ರವೇಶದ್ವಾರ ಕಟ್ಟಿಸಿ, ಬಾಗಳಿ ಬಸಪ್ಪ ನಾಯಕರಭಕ್ತಿ ಸೇವೆಯನ್ನು ಸಲ್ಲಿಸಿದ ವಿಷಯ ತಿಳಿದು ಬರುತ್ತದೆ. ಹಾಗೂ ಈ ಶಾಸನವು ಶ್ರೀ ವೆಂಕಟರಮಣ ಸ್ವಾಮಿದೇವಾಲಯದ ನಿರ್ಮಾಣದ ಕಾಲವನ್ನೂ ಸೂಚಿಸು ತ್ತದೆ.


೩] ಅಡಕೋಡು ಪದ್ಮರಾಜ ಹೆಗ್ಗಡೆಯವರ ಮನೆ ಚಾವಡಿಯ ಮರದತೊಲೆ ಮೇಲಿನ ಶಾಸನ


"ಶ್ರೀ ಮಧ್ವೀರ ನರಶಿಂಹ್ಮ ಕಾಮಪ್ಪರ್ಸರಾದ ಬಂಗರಾಜ
ವಥೆಯರುಗಳ ಸುಕುಮಾರಚಂದ್ರರಾಜ ಬಲ್ಲಾಳರು
ಕಟ್ಟಿಸಿದ ಯಿೂ ಗ್ರುಹಕ್ಕೆ ಶುಭವಾಗಲಿ ಸಿದ್ಧ"

ಕಳಸ ಸಮೀಪದ ಅಡಕೋಡು ಪದ್ಮರಾಜ ಹೆಗ್ಗಡೆಯವರ ದೊಡ್ಡ ಮನೆಯ ಚಾವಡಿಯ ಕಂಬದ ಮರದ ತೊಲೆಯ ಮೇಲೆ ಕೆತ್ತಲಾಗಿರುವ ೧೯ನೇ ಶತಮಾನದ ಅಂತ್ಯ ಭಾಗದ ಈ ಶಾಸನ ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಅಪರೂಪದ ಕಾಷ್ಠ ಶಾಸನವಾಗಿದ್ದು, ಚಿಕ್ಕಮಗಳೂರು ಜಿಲ್ಲೆಯಲ್ಲಿದೊರೆತಿರುವ ಪ್ರಥಮ ಕಾಷ್ಠ ಶಾಸನವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಶಾಸನ ದೊರೆಕಿದ ಅಡಕೋಡು ಮನೆ ಕಳಸ-ಕಾರ್ಕಳದ ಅರಸರಾದ ಭೈರವರಸರಕಾಲದ ಕಳಸ ಏಳು ಮಲೆನಾಡಿನ ಸಾವಿರಗ್ರಾಮದ ಮೂವರು ನಾಡ ಪ್ರಭುಗಳಲ್ಲಿ ಪ್ರಮುಖರಾದ"ಅಡಕೋಡು ಹೆಗ್ಗಡೆ" ಮನೆತನಕ್ಕೆ ಸೇರಿದೆ. ಹಾಗೂ ಈ ಮನೆತನಕ್ಕೆ ೬೦೦ ವರ್ಷಗಳ ಇತಿಹಾಸವಿದೆ. ೧೯ನೇ ಶತಮಾನದ ಅಂತ್ಯದಲ್ಲಿ ಕರಾವಳಿ ಕರ್ನಾಟಕದ ಪ್ರಸಿದ್ಧ ಬಂಗವಾಡಿ ಅರಸು ಮನೆತನದ ಬಂಗರಸರಾದ ನಂದಾವರದ ೫ನೇ ಕಾಮಪ್ಪ ಬಂಗರಸಒಡೆಯರ (೧೮೩೮-೧೮೮೯) ಮೂರನೇ ಪುತ್ರ ಹಾಗೂ ಬಂಗರಸರಕೊನೆಯಅರಸ, ೬ನೇ ಲಕ್ಷ್ಮಪ್ಪರಸ ಪದ್ಮರಾಜ ಬಂಗರಾಜಒಡೆಯರಕೊನೆಯ ಸೋದರ ಹಾಗೂ ಬಂಗಾಡಿರಾಜಕುಮಾರಚಂದ್ರರಾಜ ಬಲ್ಲಾಳರಿಗೆ ಕಳಸ ಸೀಮೆಯ ನಾಡಪ್ರಭು ಮನೆತನದ ಅಡಕೋಡು ದೇವಪ್ಪ ಹೆಗ್ಗಡೆಯವರ ಏಕ ಮಾತ್ರಜೇಷ್ಠ ಪುತ್ರಿಯನ್ನು ಕೊಟ್ಟು ವಿವಾಹ ಮಾಡಲಾಗಿತ್ತು. ಈ ವಿವಾಹ ನಡೆದ ಅಲ್ಪಕಾಲದಲ್ಲಿಯೇ ಬಂಗರಸರ ಬೀಗರಾದ ಅಡಕೋಡು ದೇವಪ್ಪ ಹೆಗ್ಗಡೆಯವರು ಮರಣ ಹೊಂದಿದರು. ಎರಡು ಪುಟ್ಟಗಂಡು ಮಕ್ಕಳ ತಾಯಿ, ಅಡಕೋಡುದೇವಪ್ಪ ಹೆಗ್ಗಡೆಯವರ ಹೆಂಡತಿ ಕುಸುಮಾಜಿ ಹೆಗ್ಗಡತಿಯವರಿಗೆ ಅಡಕೋಡು ಮನೆತನದ ವ್ಯವಹಾರ, ಕೃಷಿ ಮೇಲ್ವಿಚಾರಣೆ ನಡೆಸಲು ತೊಂದರೆಯಾದ ಕಾರಣ ತಮ್ಮ ಮಗಳ ಗಂಡ, ಅಳಿಯ ಚಂದ್ರರಾಜ ಬಲ್ಲಾಳರಿಗೆ ೦೪-೦೩-೧೮೯೨ರಲ್ಲಿ ಅಡಕೋಡು ಮನೆತನದ ಸಂಪೂರ್ಣ ಆಡಳಿತವನ್ನು ವಹಿಸಿಕೊಟ್ಟಿದ್ದರು. ತಮಗೆ ಕನ್ಯಾದಾನ ಮಾಡಿದ ಅಡಕೋಡು ಮನೆತನಕ್ಕೆ ಸುಭದ್ರವಾದ ವಾಸ ಗೃಹದ

೧. ಲೋಹ ಶಾಸನಗಳು












೨. ಶಿಲಾ ಶಾಸನಗಳು





ಅಗತ್ಯವನ್ನು ಮನಗಂಡು ೧೮೯೪–೧೮೯೫ರಲ್ಲಿ ಮೂವತ್ತು ಅಂಕಣದ ಭವ್ಯವಾದ ಮನೆ ನಿರ್ಮಿಸಿ ಚಾವಡಿ ಮುಂಭಾಗದ ಕಂಬದ ತೊಲೆಯ ಮೇಲೆ ಚಂದ್ರರಾಜ ಬಲ್ಲಾಳರು ತಮ್ಮ ತಂದೆ ಬಂಗಾಡಿ ಕಾಮಪ್ಪರಸರ ಪ್ರಸ್ತಾಪ ಮಾಡಿ ತಾನು ನಿರ್ಮಿಸಿದ ಭವ್ಯ ಗೃಹಕ್ಕೆ ಶುಭವಾಗಲಿ ಎಂದು ಹಾರೈಸಿ "ಸಿದ್ಧ" ಎಂಬ ಆಚಾರಿಯಿಂದ ಈ ಶಾಸನ ಕೆತ್ತಿಸಿದ್ದಾರೆ. ಈ ಶಾಸನದಿಂದ ಘಟ್ಟದ ಮೇಲಿನ ಕಳಸ ಸೀಮೆಯ ನಾಡಪ್ರಭು ಅಡಕೋಡು ಹೆಗ್ಗಡೆ ಮನೆತನಕ್ಕೂ, ಘಟ್ಟದ ಕೆಳಗಿನ ಬಂಗಾಡಿ ಬಂಗರಸರ ಮನೆತನಕ್ಕೂ ವೈವಾಹಿಕ ಸಂಬಂಧವಿದ್ದ ಚಾರಿತ್ರಿಕ ಮಹತ್ವದ ಸತ್ಯ ಬೆಳಕಿಗೆ ಬಂದಿದೆ.

[ಮಾರ್ಗದರ್ಶಕರಾದ ಡಾ. ಬಿ. ರಾಜಶೇಖರಪ್ಪ, ಸಂಶೋಧಕರು, ಚಿತ್ರದುರ್ಗ ಶ್ರೀ ಹೆಚ್.ಎಂ. ನಾಗರಾಜರಾವ್, ಶಾಸನ ತಜ್ಞರು, ಮೈಸೂರು ಇವರಿಗೆ ಹೃತ್ಪೂರ್ವಕ ಪ್ರಣಾಮಗಳು. ಕ್ಷೇತ್ರಕಾರ್ಯದಲ್ಲಿ ಸರ್ವ ಸಹಕಾರ ನೀಡಿದ ಕಳಸ ನಾಡಪ್ರಭು, ಅಡಕೋಡು ಮನೆತನದ ಶ್ರೀ ಪದ್ಮರಾಜ ಹೆಗ್ಗಡೆ ಹಾಗೂ ಅವರ ಪುತ್ರ ಶ್ರೀ ಎ. ವೀರೇಂದ್ರ ಹೆಗ್ಗಡೆ ಅವರಿಗೂ ಧನ್ಯವಾದಗಳು.]

ಆಧಾರ ಗ್ರಂಥಗಳು

೧. ಲಿಂಗಣ್ಣ ಕವಿಯ ಕೆಳದಿನೃಪ ವಿಜಯ.

೨. ಕೆ. ಅನಂತರಾಮ ಬಂಗಾಡಿ, ಬಂಗಾಡಿಯ ಇತಿಹಾಸ.

೧೪

ಚಿಕ್ಕನಹಳ್ಳಿ ಗ್ರಾಮದ ಅಪ್ರಕಟಿತ ವೀರಮಾಸ್ತಿ ಶಾಸನ

ಹೊನ್ನೂರುಸ್ವಾಮಿ.ಹೆಚ್.*

ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲೂಕಿಗೆ ಸೇರುವ ಸಣ್ಣ ಗ್ರಾಮ ಚಿಕ್ಕನಹಳ್ಳಿ. ಇದು ಹರಪನಹಳ್ಳಿಯಿಂದ ಯುವ್ಯ ದಿಕ್ಕಿಗೆ ಸು. ೬ ಕಿ.ಮೀ. ದೂರದಲ್ಲಿದೆ. ಕ್ರಿ.ಶ. ೧೦-೧೧ನೇ ಶತಮಾನದಲ್ಲಿ ಬಾಗಳಿ ಪರಿಸರವನ್ನು ಆಳ್ವಿಕೆ ಾಡಿದ ಕಲ್ಯಾಣ ಚಾಲುಕ್ಯರ ಪ್ರಭಾವ ಗ್ರಾಮದಲ್ಲಿದೆ. ಇದಕ್ಕೆ ಸಾಕ್ಷಿಯೆನ್ನುವಂತೆ ಇವರ ಅವಧಿಯಲ್ಲಿ ನಿರ್ಮಿಸಿದ ಕೆಲವು ್ಮರಕಗಳು ಗ್ರಾಮದಲ್ಲಿ ಕಂಡುಬರುತ್ತವೆ. ಗ್ರಾಮದ ಆಂಜನೇಯ ದೇವಸ್ಥಾನ ಸಮೀಪದ ಮನೆಯೊಂದರ ಬಳಿ ರಮಾಸ್ತಿಗಲ್ಲೊಂದಿದ್ದು, ಈ ವೀರಮಾಸ್ತಿಗಲ್ಲು ಶಾಸನದ ಪಾಠ ಮತ್ತು ಶಿಲ್ಪದ ವಿವರಗಳನ್ನು ಸ್ಥೂಲವಾಗಿ ಪರಿಚಯಿಸುವುದೇ ಸ್ತುತ ಲೇಖನದ ಉದ್ದೇಶ.

ಮೂರುವರೆ ಅಡಿ ಎತ್ತರ, ಒಂದುವರೆ ಅಡಿ ಅಗಲ, ಐದು ಇಂಚು ದಪ್ಪವಿರುವ ಸ್ಮಾರಕ ಶಿಲ್ಪವನ್ನು ಬಳಪದ ಲ್ಲಿನಿಂದ ನಿರ್ಮಿಸಲಾಗಿದೆ. ಸ್ಮಾರಕ ಒಂದು ಹಂತದಲ್ಲಿದ್ದು, ಶಿಲ್ಪದ ಕೆಳಭಾಗವನ್ನು ಹೂವಿನ ಅಲಂಕಾರದಿಂದ ಚಿತ್ರಿಸಲಾಗಿದೆ. ಲೀಢಭಂಗಿಯಲ್ಲಿರುವ ವೀರನು ಎಡಗೈಯಲ್ಲಿ ಆಳೆತ್ತರದ ಬಿಲ್ಲನ್ನು, ಬಲಗೈಯಲ್ಲಿ ಚೂರಿಯಂತಹ ಆಯುಧವನ್ನು ಡಿದಿದ್ದಾನೆ. ವೀರಗಚ್ಚೆಯನ್ನು ಕಟ್ಟಿದ್ದು, ಗಚ್ಚೆಯ ನೆರಿಗೆ ಕುಚ್ಚಿನಂತೆ ಸೊಂಟದಿಂದ ಪಾದಗಳವರೆಗೂ ಇಳಿಬಿದ್ದಿದೆ. ಕೈ- ಲುಗಳಲ್ಲಿ ಕಡಗ, ತೋಳಬಂಧಿ, ಕಿವಿಯಲ್ಲಿ ಆಭರಣಗಳಿದ್ದು, ಕೇಶವನ್ನು ತುರುಬಿನಂತೆ ಬಿಡಿಸಲಾಗಿದೆ. ವೀರನು ಯೋಗಿಸಿದ ಬಾಣದಿಂದ ಶತ್ರು ಮಡಿದಿದ್ದು, ವೀರನ ಕಾಲಕೆಳಗೆ ಅಂಗತವಾಗಿ ಬಿದ್ದಿರುವಂತೆ ಕಂಡರಿಸಲಾಗಿದೆ.

ಸ್ಮಾರಕದಲ್ಲಿ ಸತಿಯರಿಬ್ಬರಿದ್ದು, ಅವರನ್ನು ಪೀಠದ ಮೇಲೆ ನಂತಿರುವಂತೆ ಚಿತ್ರಿಸಲಾಗಿದೆ. ಬಹಳ ಸಣ್ಣದಾದ ಡುವನ್ನು ಹೊಂದಿರುವ ಇವರು, ಒಂದೇ ರೀತಿಯ ಉಡುಪನ್ನು ಧರಿಸಿದ್ದಾರೆ. ಇವರು ತೊಟ್ಟಿರುವ ಉಡುಪು ಂಗದಂತೆ ಕಾಣುತ್ತದೆ. ಅಲಂಕೃತ ಕೆತ್ತನೆಯಿರುವ ಲಂಗ, ಎಂಟು ಪಟ್ಟಿಯಲ್ಲಿ ತರೆ ತರೆಯಾಗಿ ಪಾದಗಳವರೆಗೂ ಳಿಬಿದಿದ್ದು, ಕೆಳಗೆ ಕಮಲದ ಹೂವಿನಂತೆ ಹರಡಿಕೊಂಡಿದೆ. ಕಲಾತ್ಮಕ ಕೆತ್ತನೆಯಲ್ಲಿರುವ ಉಡುಪು ಇಂದಿನ ಆಧುನಿಕಯುಗದ ್ರೀಯರ ಉಡುಪುಗಳಿಗೆ ಮಾದರಿಯಂತಿದೆ. ಕಿವಿಗಳಲ್ಲಿ ಆಭರಣ, ಕೇದಗೆಗರಿಯ ಹೂವನ್ನು ತಲೆಯಲ್ಲಿ ುಡಿಸಿಕೊಂಡಿರುವಂತೆ ಬಿಡಿಸಲಾಗಿದೆ. ಶಿಲ್ಪದಲ್ಲಿ ಸತಿಯರಿಬ್ಬರು ಕೈಗಳಿಂದ ಹರಿಸುತ್ತಿರುವಂತೆ ಬಿಡಿಸಿದ್ದು ಸ್ಮಾರಕದಲ್ಲಿ ಮತೋಲನವನ್ನು ತರಲು ಶಿಲ್ಪಿಯು ಒಬ್ಬಳ ಎಡಗೈಯನ್ನು, ಮತ್ತೊಬ್ಬಳ ಬಲಗೈಯನ್ನು ಎತ್ತಿಹಿಡಿದಂತೆ ಚಿತ್ರಿಸಿದ್ದಾನೆ. ೀರನ ಎಡಗಾಲಿನ ಮುಂದೆ ಚಿಕ್ಕದಾದ ಮತ್ತೊಂದು ಕೆತ್ತನೆಯಿದ್ದು, ಪೀಠದ ಮೇಲೆ ನಿಂತಿರುವಂತೆ ಚಿತ್ರಿಸಲಾಗಿದೆ. ಇದು ಯ ಶಿಲ್ಪದಂತೆ ಕಂಡುಬರುವುದು. ಪ್ರಾಯಶಃ ವೀರನಿಗೆ ಮೂವರು ಪತ್ನಿಯರಿದ್ದು, ಈಕೆ ಆತನ ಕಿರಿಯ ಪತ್ನಿಯಾಗಿರಬೇಕು. ತಿಯ ಮರಣದ ನಂತರ ಆಕೆಯು ಸತಿಹೋಗಿರುವ ಸಾಧ್ಯತೆಯಿದೆ. ಸ್ಥಳ ಅಭಾವದಿಂದ ಶಿಲ್ಪಿಯು ಈರೀತಿ ಸಣ್ಣದಾಗಿ ತ್ರಿಸಿರಬಹುದು. ಈ ಹೋರಾಟ ಹಂತದ ಮೇಲೆ ಆರು ಸಾಲಿನ ಶಾಸನವಿದೆ. ಶಾಸನದ ಮೇಲಿನ ಭಾಗ ಬಳ್ಳಿಯ ೂವಿನ ಅಲಂಕಾರದಿಂದ ಚಿತ್ರಿಸಿದ್ದು, ಮಧ್ಯದಲ್ಲಿ ಶಿವಲಿಂಗವನ್ನು ಕಂಡರಿಸಲಾಗಿದೆ. ಸ್ಮಾರಕದ ಒಟ್ಟಾರೆ ಕೆತ್ತನೆಯನ್ನು ಮನಿಸಿದರೆ ಶಿಲ್ಪಿಯ ಕಲಾನೈಪುಣ್ಯತೆ ಕಂಡುಬರುತ್ತದೆ.

ಸನ ಪಾಠ


ಸ್ವಸ್ತಿ ಶ್ರೀ ಜಯಾಭ್ಯುದಯಾ ಶಾಲಿ(ವಾಹ*)ನ ಸಕ(ವರ್ಷದ*) ೧೪..ನೆಯ


ಕ್ಷಯಸಂವತ್ಸರ ಆಶ್ವಯುಜಶು.. ....ಕಾ*ಚಾ

ಯ್ಯಖಾ...... .ಕರ*ದಂ...........ರ*ಕಾ ..ಕ

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.









೪ ಕ................ಗಸ*......ಯ ..ಸೆನಾ

೫ ಸಕ..ಬ*... ಕಾ.........ನ ....ವ*

೬ ಗಯವ*... ...ಕಾನ.. ಸುರಲೋ(ಕ*) (ಪ್ರಾಪ್ತ*)ನಾದ

ಈ ಮೇಲಿನ ಶಾಸನದ ಬಹುತೇಕ ಅಕ್ಷರಗಳು ಸವೆದು ಹೋಗಿದ್ದು. ಕೆಲವು ಅಕ್ಷರಗಳು ಮಾತ್ರ ಕಂಡುಬರುವುದರಿಂದ ಶಿಲ್ಪದ ಉದ್ದೇಶ ಸ್ಪಷ್ಟವಾಗುವುದಿಲ್ಲ. ಆದ್ದರಿಂದ ಹೋರಾಟದಲ್ಲಿ ಮಡಿದ ವೀರ ಯಾರು? ಯಾವ ಉದ್ದೇಶಕ್ಕಾಗಿ ಹೋರಾಡಿದ? ಸತಿ ಹೋದ ಆತನ ಪತ್ನಿಯರು ಯಾರು? ಎಂಬ ಇತ್ಯಾದಿ ಅಂಶಗಳು ತಿಳಿದುಬರುವುದಿಲ್ಲ. ಶಾಸನದಲ್ಲಿ ೧೪೦೦ರ ಮುಂದೆ ಎರಡು ಅಕ್ಷರ ಹೋಗಿದೆ. ಹಾಗಾಗಿ ಇದು ೧೫ನೇ ಶತಮಾನಕ್ಕೆ ಸಂಬಂಧಿಸಿದ ಶಾಸನವೆಂಬುದಕ್ಕೆ ಯಾವ ಲೋಪವಿಲ್ಲ.

[ಕೃತಜ್ಞತೆಗಳು: ಲೇಖನವನ್ನು ಸಿದ್ಧಪಡಿಸುವಲ್ಲಿ ಸಲಹೆಗಳನ್ನು ನೀಡಿದ ಗುರುಗಳಾದ ಡಾ. ರಮೇಶ ನಾಯಕ ಮತ್ತು ನಾಗರಾಜಪ್ಪ ಎಸ್. ಸಹಾಯಕ ಶಾಸನತಜ್ಞ, ನಿರ್ದೇಶಕರ ಕಛೇರಿ, ಭಾರತೀಯ ಪುರಾತತ್ವ ಸರ್ವೇಕ್ಷಣ, ಮೈಸೂರು.]

ಆಧಾರಸೂಚಿ

೧. ಶೇಷಶಾಸ್ತ್ರಿ ಆರ್., ೨೦೦೪, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨. ಪರಮಶಿವಮೂರ್ತಿ ಡಿ.ವಿ., ೧೯೯೯, ಕನ್ನಡ ಶಾಸನಶಿಲ್ಪ, ಪ್ರಸಾರಾಂಗ, ಕನ್ನಡ, ವಿಶ್ವವಿದ್ಯಾಲಯ, ಹಂಪಿ.

೩. ನರಸಿಂಹಮೂರ್ತಿ ಎ.ವಿ., ೨೦೧೧, ಕನ್ನಡ ಲಿಪಿಯ ಉಗಮ ಮತ್ತು ವಿಕಾಸ, ತಳುಕು, ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

೪. ಚನ್ನಬಸಪ್ಪ ಎಸ್. ಪಾಟೀಲ ಮತ್ತು ವಿನೋದಾ ಪಾಟೀಲ (ಸಂ)., ೧೯೯೭, ಬಳ್ಳಾರಿ ಜಿಲ್ಲೆಯ ಶಾಸನಗಳು (ಕರ್ನಾಟಕ ಶಾಸನಗಳು ಸಂ. ೨), ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೫. ದೇವರಕೊಂಡಾ ರೆಡ್ಡಿ (ಸಂ)., ೧೯೯೮, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ. ೧, ಬಳ್ಳಾರಿ ಜಿಲ್ಲೆ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೫

ಯಾದವಾಡದ ಜೈನ ಶಿಲ್ಪಗಳು ಮತ್ತು ಶಾಸನಗಳು

ಡಾ. ಅಪ್ಪಣ್ಣ ಎನ್. ಹಂಜೆ*

ಗೋಕಾಕ ತಾಲ್ಲೂಕಿನ ಯಾದವಾಡ ಗ್ರಾಮವು, ಗೋಕಾಕದಿಂದ ಪೂರ್ವಕ್ಕೆ ನಲವತ್ತೈದು ಕಿ.ಮೀ. ಮತ್ತು ಯರಗಟ್ಟಿಯಿಂದ ಉತ್ತರಕ್ಕೆ ಮೂವತ್ತೈದು ಕಿ.ಮೀ. ಅಂತರದಲ್ಲಿದೆ. ಈ ಗ್ರಾಮವು ಸವದತ್ತಿ ರಟ್ಟರ ಆಳ್ವಿಕೆಯ (ಕ್ರಿ.ಶ. ೯೩೦–೧೨೩೦) ಸಂದರ್ಭದಲ್ಲಿ ಸಾಂಸ್ಕೃತಿಕ ಕೇಂದ್ರವಾಗಿತ್ತು. ಅಂದು ಇಲ್ಲಿ ಎರಡು ಬಸದಿಗಳು ಮತ್ತು ರಾಮೇಶ್ವರ, ವೆಂಕಟೇಶ್ವರ ದೇವಾಲಯಗಳು ನಿರ್ಮಾಣವಾಗಿವೆ. ಈ ಎಲ್ಲ ಬಸದಿ ಮತ್ತು ದೇವಾಲಯಗಳು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಬಂದಿವೆ. ಆದರೂ ಇವುಗಳು ಸಮಕಾಲೀನ ವಾಸ್ತು ಕಲೆಯ ಅಧ್ಯಯನಕ್ಕೆ ಅಪರೂಪದ ಆಕರಗಳಾಗಿವೆ. ಪಿಂಜಾರ ಓಣಿಯಲ್ಲಿರುವ ಬಸದಿ ಯಾವುದೋ ಕಾಲಘಟ್ಟದಲ್ಲಿ ಶೈವ ಧರ್ಮದ ಕಾಶಿ ಈಶ್ವರಲಿಂಗ ದೇವಾಲಯವಾಗಿ ಪರಿವರ್ತಿತವಾಗಿದೆ. ಕೆಂಪು ಮರಳು ಶಿಲೆಗಳಲ್ಲಿ ಪೂರ್ವಾಭಿಮುಖವಾಗಿ ನಿರ್ಮಾಣವಾಗಿರುವ ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪಗಳಿವೆ. ಹೊರಭಾಗವು ಸಂಪೂರ್ಣ ಶಿಥಿಲವಾಗಿದ್ದು, ಹೀಗಾಗಿ ಹೊರಗಿನ ವಾಸ್ತು ಲಕ್ಷಣಗಳ ಸ್ವರೂಪವು ಸ್ಪಷ್ಟವಾಗುವುದಿಲ್ಲ. ಈ ದೇವಾಲಯದ ಗರ್ಭಗೃಹ ಮತ್ತು ಅಂತರಾಳದ ದ್ವಾರಬಂಧಗಳ ಲಲಾಟ ಪಟ್ಟಿಯಲ್ಲಿರುವ ತೀರ್ಥಂಕರರ ಉಬ್ಬುಶಿಲ್ಪಗಳು ಮತ್ತು ಅಂತರಾಳದ ದ್ವಾರಬಂಧದ ಉತ್ತರಾಂಗಣದ ಮೇಲ್ಭಾಗದಲ್ಲಿರುವ ಇಪ್ಪತ್ನಾಲ್ಕು ತೀರ್ಥಂಕರರ ಉಬ್ಬುಶಿಲ್ಪಗಳ ಸಾಲು ಈ ದೇವಾಲಯವು ಮೂಲತಃ ಬಸದಿ ಎಂಬುದನ್ನು ದೃಢಪಡಿಸುತ್ತವೆ.

ಸವದತ್ತಿ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಅಂದರೆ ಕ್ರಿ.ಶ. ಸುಮಾರು ೧೧–೧೨ನೆಯ ಶತಮಾನದಲ್ಲಿ ಯಾದವಾಡದಲ್ಲಿ ಪಾರ್ಶ್ವನಾಥ ಬಸದಿ ನಿರ್ಮಾಣವಾಗಿತ್ತು. ಇದು ಈಗಿರುವ ಬಸದಿಯಲ್ಲಿ ಪ್ರತಿಷ್ಠಾಪಿತವಾಗಿರುವ ಸಮಕಾಲೀನ ಚೌವ್ವೀಸ ತೀರ್ಥಂಕರರ ಪ್ರಭಾವಳಿಯುಳ್ಳ ಪಾರ್ಶ್ವನಾಥ ತೀರ್ಥಂಕರನ ಕಾಯೋತ್ಸರ್ಗ ಶಿಲ್ಪ ಮತ್ತು ಬಸದಿಯ ಆವರಣದಲ್ಲಿರುವ ಬಿಡಿ ವಾಸ್ತು ಅವಶೇಷಗಳಿಂದ ಖಚಿತವಾಗುತ್ತದೆ. ಆ ಬಸದಿ ಕಾಲಾಂತರದಲ್ಲಿ ನಡೆದ ಧಾರ್ಮಿಕ ಮತ್ತು ರಾಜಕೀಯ ಘರ್ಷಣೆಗಳಲ್ಲಿ ಜೀರ್ಣವಾಗಿದ್ದರಿಂದ ಅದನ್ನು ಕ್ರಿ.ಶ. ೧೯೫೨ರಲ್ಲಿ ಶಿಲೆ, ಗಚ್ಚು, ಕಟ್ಟಿಗೆ ಮತ್ತು ಮಣ್ಣಿನ ಇಟ್ಟಿಗೆಗಳಿಂದ ಪುನರ್ ನಿರ್ಮಿಸಲಾಗಿದೆ. ಉತ್ತರಾಭಿಮುಖವಾಗಿರುವ ಈ ಬಸದಿಯ ತಲವಿನ್ಯಾಸದಲ್ಲಿ ಗರ್ಭಗೃಹ ಮತ್ತು ಮುಖಮಂಟಪಗಳಿವೆ. ಗರ್ಭಗೃಹದ ನಾಲ್ಕೂ ಮೂಲೆಗಳಲ್ಲಿ ನಾಲ್ಕು ಭಿತ್ತಿಗಂಬಗಳಿವೆ. ವಿತಾನದಲ್ಲಿ ಪದ್ಮಮಂಡಲದ ಅಲಂಕಾರವಿದೆ. ಈ ಬಸದಿಯನ್ನು ಸ್ಥಳೀಯ ಸುರೇಂದ್ರ ಶೇಡಬಾಳೆ ಅವರು ಶ್ರಾವಕ ಸಮುದಾಯದ ತನುಮನಧನದ ಸಹಕಾರದಿಂದ ೨೦೦೦ರಲ್ಲಿ ಜೀರ್ಣೋದ್ಧಾರ ಮಾಡಿಸಿದ್ದಾರೆ. ಈ ಬಸದಿಯ ಪೂಜೆ–ಪುನಸ್ಕಾರಗಳು, ಮುನಿಗಳ ಆಹಾರದಾನ ಮತ್ತು ಪುರೋಹಿತರ ಉಪಜೀವನಕ್ಕಾಗಿ ಬ್ರಿಟಿಷ ಸಾಮ್ರಾಜ್ಞೆ ವಿಕ್ಟೋರಿಯಾ ಮಹಾರಾಣಿ ೧೯ನೆಯ ಶತಮಾನದಲ್ಲಿ ಬೆಳಗಾವಿ ಜಿಲ್ಲೆಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಬ್ರಿಟಿಷ ಅಧಿಕಾರಿಗಳಿಂದ ಭೂದಾನ ಮಾಡಿಸಿದಳೆಂದು ಸ್ಥಳೀಕರಿಂದ ತಿಳಿದುಬರುತ್ತದೆ. ಆ ಭೂದಾನದಲ್ಲಿ ಸುಮಾರು ಹದಿನೈದು ಎಕರೆಯಷ್ಟು ಭೂಮಿ ಇಂದಿಗೂ ಉಳಿದು ಬಂದಿದೆ. ಇದರ ಆದಾಯವನ್ನು ಬಸದಿಯ ಧಾರ್ಮಿಕ ಚಟುವಟಿಕೆಗಳಿಗೆ ಮತ್ತು ಪುರೋಹಿತರ ಉಪಜೀವನಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ.

ಶಿಲ್ಪಗಳು ಮತ್ತು ಪ್ರತಿಮೆಗಳು

ಪಾರ್ಶ್ವನಾಥ ಬಸದಿಯ ಗರ್ಭಗೃಹದಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಮತ್ತು ೧೬–೧೮ನೆಯ ಶತಮಾನದ ವಿವಿಧ ತೀರ್ಥಂಕರರು ಮತ್ತು ಯಕ್ಷಿಯರ ಶಿಲ್ಪಗಳು ಹಾಗೂ ಪ್ರತಿಮೆಗಳಿವೆ. ಇವುಗಳ ಪ್ರತಿಮಾ ಲಕ್ಷಣಗಳು ಈ ಕೆಳಗಿನಂತಿವೆ.

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಾಗಸಮುದ್ರ ರಸ್ತೆ, ಗದಗ–೫೮೨೧೦೨.

ಆದಿನಾಥನ ಪ್ರತಿಮೆ

ಕ್ರಿ.ಶ. ಸುಮಾರು ೧೬ನೆಯ ಶತಮಾನದ ಆದಿನಾಥನ ಪಂಚಲೋಹದ ಪ್ರತಿಮೆಯಿದೆ. ಪೀಠದ ಮೇಲೆ ಆದಿನಾಥನು ಪದ್ಮಾಸನದಲ್ಲಿ ಆಸೀನನಾಗಿದ್ದಾನೆ. ಪೀಠದ ಮುಮ್ಮುಖದಲ್ಲಿ ಈತನ ಲಾಂಛನವಾದ 'ಎತ್ತಿ'ನ (ಎತ್ತು) ಚಿತ್ರಣವಿದೆ.

ಸಂಭವನಾಥನ ಪ್ರತಿಮೆ

ಕ್ರಿ.ಶ. ಸುಮಾರು ೧೭ನೆಯ ಶತಮಾನದ ಸಂಭವನಾಥನ ಪಂಚಲೋಹದ ಪ್ರತಿಮೆಯಿದೆ. ಇದು ೧೯ ಸೆಂ.ಮೀ. ಎತ್ತರ ಮತ್ತು ೫ ಸೆಂ.ಮೀ. ಅಗಲವಾಗಿದೆ. ಸಂಭವನಾಥನು ಪೀಠದ ಮೇಲೆ ಪದ್ಮಾಸನದಲ್ಲಿ ಆಸೀನನಾಗಿದ್ದಾನೆ. ಈತನ ಎದೆಯ ಮೇಲೆ 'ಶ್ರೀವತ್ಸ' ಚಿಹ್ನೆಯಿದೆ. ಕಿವಿಗಳು ಭುಜಗಳವರೆಗೂ ಇಳಿಬಿದ್ದಿವೆ. ಪೀಠದ ಮುಂಬದಿಯಲ್ಲಿ ಈತನ ಲಾಂಛನ 'ಕುದುರೆ'ಯ ಚಿತ್ರಣವಿದೆ.

ಚಂದ್ರಪ್ರಭನಾಥನ ಪ್ರತಿಮೆಗಳು

ಕ್ರಿ.ಶ. ಸುಮಾರು ೧೭ನೆಯ ಶತಮಾನದ ಚಂದ್ರಪ್ರಭನಾಥ ತೀರ್ಥಂಕರನ ಕಂಚಿನ ಪ್ರತಿಮೆಯಿದೆ. ಇದು ೨೯ ಸೆಂ.ಮೀ. ಎತ್ತರ ಮತ್ತು ೮ ಸೆಂ.ಮೀ. ಅಗಲವಾಗಿದೆ. ಚಂದ್ರಪ್ರಭನಾಥನು ಪೀಠದ ಮೇಲೆ ಪರ್ಯಂಕಾಸನದಲ್ಲಿ ಆಸೀನನಾಗಿದ್ದಾನೆ. ಇದೇ ಬಸದಿಯಲ್ಲಿ ಕ್ರಿ.ಶ. ಸುಮಾರು ೧೭ನೆಯ ಶತಮಾನದ ಮತ್ತೊಂದು ಚಂದ್ರಪ್ರಭನಾಥನ ದುಂಡು ಪ್ರತಿಮೆಯಿದೆ. ಇದು ೮ ಸೆಂ.ಮೀ. ಎತ್ತರ ಮತ್ತು ೭ ಸೆಂ.ಮೀ. ಅಗಲವಾಗಿದೆ. ಚಂದ್ರಪ್ರಭನಾಥನು ಪೀಠದ ಮೇಲೆ ಪರ್ಯಂಕಾಸನದಲ್ಲಿ ಆಸೀನನಾಗಿದ್ದಾನೆ. ಪೀಠದ ಮುಂಬದಿಯಲ್ಲಿ ಈತನ ಲಾಂಛನ 'ಚಂದ್ರ'ನ ಚಿತ್ರಣವಿದೆ.

ಪಾರ್ಶ್ವನಾಥನ ಶಿಲ್ಪ ಮತ್ತು ಪ್ರತಿಮೆಗಳು

ಕ್ರಿ.ಶ. ಸುಮಾರು ೧೫ನೆಯ ಶತಮಾನದ ಶಿಲ್ಪವಿದೆ. ಇದು ಕಪ್ಪುಮಿಶ್ರಿತ ನೀಲಿಛಾಯೆಯ ಬಳಪದ ಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ೧೯ ಸೆಂ.ಮೀ. ಎತ್ತರ ಮತ್ತು ೧೫ ಸೆಂ.ಮೀ. ಅಗಲವಾಗಿದೆ. ಪದ್ಮಪೀಠದ ಮೇಲೆ ಕಾಯೋತ್ಸರ್ಗದಲ್ಲಿರುವ ಪಾರ್ಶ್ವನಾಥನ ಶಿರದ ಮೇಲೆ ಏಳು ಹೆಡೆಗಳ ಸರ್ಪವಿದೆ. ಸರ್ಪದ ಮೇಲೆ ಮುಕ್ಕೊಡೆಯಿದೆ. ಕಾಲುಗಳ ಪಾರ್ಶ್ವದಲ್ಲಿ ಈತನ ಯಕ್ಷ–ಯಕ್ಷಿಯರಾದ ಧರಣೇಂದ್ರ ಮತ್ತು ಪದ್ಮಾವತಿ ತಮ್ಮ ದ್ವಿಭುಜಗಳಲ್ಲಿ ವಿವಿಧ ಆಯುಧೋಪಕರಣಗಳನ್ನು ಹಿಡಿದುಕೊಂಡು ಸರ್ವಾಲಂಕೃತರಾಗಿ ನಿಂತಿದ್ದಾರೆ. ಶಿಲ್ಪದ ಮೇಲರ್ಧದ ಸುತ್ತಲೂ ಪ್ರಭಾವಳಿಯಿದ್ದು, ಮೇಲ್ತುದಿಯಲ್ಲಿ ಕೀರ್ತಿಮುಖದ ಅಲಂಕಾರವಿದೆ. ಇದೇ ಬಸದಿಯಲ್ಲಿ ಪಾರ್ಶ್ವನಾಥನ ಪಂಚಲೋಹದ ಪ್ರತಿಮೆಯಿದೆ. ಕ್ರಿ.ಶ. ಸುಮಾರು ೧೭ನೆಯ ಶತಮಾನದ ಈ ಪ್ರತಿಮೆ ೬ ಸೆಂ.ಮೀ. ಎತ್ತರ ಮತ್ತು ೩ ಸೆಂ.ಮೀ. ಅಗಲವಾಗಿದೆ. ಪೀಠದ ಮೇಲೆ ಪರ್ಯಂಕಾಸನದಲ್ಲಿ ಆಸೀನನಾಗಿರುವ ಪಾರ್ಶ್ವನಾಥನ ಶಿರದ ಮೇಲೆ ಏಳು ಹೆಡೆಗಳ ಸರ್ಪವಿದೆ. ಈತನ ಕಿವಿಗಳು ಭುಜಗಳವರೆಗೂ ಇಳಿಬಿದ್ದಿವೆ. ಇದೇ ಬಸದಿಯಲ್ಲಿ ಕ್ರಿ.ಶ. ಸುಮಾರು ೧೭ನೆಯ ಶತಮಾನದ ಇನ್ನೊಂದು ಪಾರ್ಶ್ವನಾಥನ ಪಂಚಲೋಹದ ಪ್ರತಿಮೆಯಿದೆ. ಪೀಠದ ಮೇಲೆ ಪರ್ಯಂಕಾಸನದಲ್ಲಿ ಆಸೀನನಾಗಿರುವ ಪಾರ್ಶ್ವನಾಥನ ಶಿರದ ಮೇಲೆ ಏಳು ಹೆಡೆಗಳ ಸರ್ಪವಿದೆ. ಪಾರ್ಶ್ವನಾಥನ ಪಾರ್ಶ್ವದಲ್ಲಿ ನಾಲ್ವರು ತೀರ್ಥಂಕರರು ಪರ್ಯಂಕಾಸನದಲ್ಲಿ ಆಸೀನರಾಗಿದ್ದಾರೆ. ಪ್ರತಿಮೆಯ ಮೇಲ್ತುದಿಯಲ್ಲಿ ಕೀರ್ತಿಮುಖದ ಅಲಂಕಾರವಿದೆ. ಇದೇ ಬಸದಿಯಲ್ಲಿ ಪಾರ್ಶ್ವನಾಥನ ಕ್ರಿ.ಶ. ಸುಮಾರು ೧೭ನೆಯ ಶತಮಾನದ ಪಂಚಲೋಹದ ಪ್ರತಿಮೆಯಿದೆ. ಇದು ೨೯ ಸೆಂ.ಮೀ. ಎತ್ತರ ಮತ್ತು ೮ ಸೆಂ.ಮೀ. ಅಗಲವಾಗಿದೆ. ಪಾರ್ಶ್ವನಾಥನು ಪೀಠದ ಮೇಲೆ ಪದ್ಮಾಸನದಲ್ಲಿ ಆಸೀನನಾಗಿದ್ದಾನೆ. ಶಿರದ ಹಿಂಬದಿಯಲ್ಲಿ ಪ್ರಭಾಮಂಡಲವಿದ್ದು, ಮೇಲ್ಭಾಗದಲ್ಲಿ ಐದು ಹೆಡೆಗಳ ಸರ್ಪವಿದೆ. ಪ್ರತಿಮೆಯ ಸುತ್ತಲೂ ಪ್ರಭಾವಳಿಯಿದ್ದು, ಮೇಲ್ಭಾಗದಲ್ಲಿ ಕೀರ್ತಿಮುಖದ ಅಲಂಕಾರವಿದೆ. ಇದೇ ಬಸದಿಯಲ್ಲಿ ಪಾರ್ಶ್ವನಾಥನ ಕ್ರಿ.ಶ. ಸುಮಾರು ೧೭ನೆಯ ಶತಮಾನದ ಪಂಚಲೋಹದ ಪ್ರತಿಮೆಯಿದೆ. ಇದು ೩೩ ಸೆಂ.ಮೀ. ಎತ್ತರ ಮತ್ತು ೨೧ ಸೆಂ.ಮೀ. ಅಗಲವಾಗಿದೆ. ಪದ್ಮಪೀಠದ ಮೇಲೆ ಕಾಯೋತ್ಸರ್ಗದಲ್ಲಿರುವ ಪಾರ್ಶ್ವನಾಥನ ಶಿರದ ಮೇಲೆ ಐದು ಹೆಡೆಗಳ ಸರ್ಪವಿದೆ. ಪಾರ್ಶ್ವದಲ್ಲಿ ಇಬ್ಬರು ಚಾಮರಧಾರಿಣಿಯರು ನಿಂತಿದ್ದಾರೆ. ಕಾಲುಗಳ ಪಾರ್ಶ್ವದಲ್ಲಿ ಪೀಠದ ಮೇಲೆ ಇಬ್ಬರು ತೀರ್ಥಂಕರರು ಕಾಯೋತ್ಸರ್ಗದಲ್ಲಿದ್ದಾರೆ. ಪ್ರತಿಮೆಯ ಮೇಲರ್ಧದ ಸುತ್ತಲೂ ಮಕರತೋರಣದ ಪ್ರಭಾವಳಿಯಿದ್ದು, ಮೇಲ್ತುದಿಯಲ್ಲಿ ಕೀರ್ತಿಮುಖದ ಅಲಂಕಾರವಿದೆ. ಪೀಠದ ಮುಂಬದಿಯಲ್ಲಿ ಒಂದು ಮತ್ತು ಪ್ರಭಾವಳಿಯ ಕೆಳಭಾಗದಲ್ಲಿ ಎರಡು ಸಿಂಹಗಳ ಚಿತ್ರಣಗಳಿವೆ. ಇದೇ ಬಸದಿಯ ಗರ್ಭಗೃಹದಲ್ಲಿ ಪಾರ್ಶ್ವನಾಥನ ಅಮೃತಶಿಲೆಯ ಶಿಲ್ಪವಿದೆ. ಕ್ರಿ.ಶ. ಸುಮಾರು ೧೬ನೆಯ ಶತಮಾನದ ಈ ಶಿಲ್ಪವು ೩೩ ಸೆಂ.ಮೀ. ಎತ್ತರ ಮತ್ತು ೨೧ ಸೆಂ.ಮೀ. ಅಗಲವಾಗಿದೆ. ಪದ್ಮಾಸನದಲ್ಲಿರುವ ಪಾರ್ಶ್ವನಾಥನ ಶಿರದ ಮೇಲೆ ಏಳು ಹೆಡೆಗಳ ಸರ್ಪವಿದೆ. ಈತನ ಕಿವಿಗಳು

ಭುಜಗಳವರೆಗೂ ಇಳಿಬಿದ್ದಿವೆ. ಇದೇ ಬಸದಿಯ ಗರ್ಭಗೃಹದಲ್ಲಿ ಪಾರ್ಶ್ವನಾಥನ ಕ್ರಿ.ಶ. ಸುಮಾರು ೧೬ನೆಯ ಶತಮಾನದ ಕಪ್ಪುಶಿಲೆಯ ಶಿಲ್ಪವಿದೆ. ಪೀಠದ ಮೇಲೆ ಪದ್ಮಾಸನದಲ್ಲಿರುವ ಪಾರ್ಶ್ವನಾಥನ ಶಿರದ ಮೇಲೆ ಏಳು ಹೆಡೆಗಳ ಸರ್ಪವಿದೆ. ಎದೆಯ ಮೇಲೆ ಶ್ರೀವತ್ಸ ಚಿಹ್ನೆಯಿದೆ. ಶಿಲ್ಪದ ಮೇಲರ್ಧದ ಸುತ್ತಲೂ ಬಳ್ಳಿಯ ಪ್ರಭಾವಳಿಯಿದ್ದು, ಮೇಲ್ತುದಿಯಲ್ಲಿ ಕೀರ್ತಿಮುಖದ ಅಲಂಕಾರವಿದೆ.

ಚೌವ್ವೀಸ ತೀರ್ಥಂಕರರ ಶಿಲ್ಪ ಮತ್ತು ಪ್ರತಿಮೆಗಳು

ಕ್ರಿ.ಶ. ಸುಮಾರು ೧೨ನೆಯ ಶತಮಾನದ ಚೌವ್ವೀಸ ತೀರ್ಥಂಕರರ ಪ್ರಭಾವಳಿಯುಳ್ಳ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವಿದೆ. ಇದು ೧೨೭ ಸೆಂ.ಮೀ. ಎತ್ತರ ಮತ್ತು ೫೩ ಸೆಂ.ಮೀ. ಅಗಲವಾಗಿದೆ. ಕಪ್ಪುಮಿಶ್ರಿತ ನೀಲಿಛಾಯೆಯ ಬಳಪದ ಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ಕಾಯೋತ್ಸರ್ಗದಲ್ಲಿರುವ ಪಾರ್ಶ್ವನಾಥನ ಶಿರದ ಮೇಲೆ ಏಳು ಹೆಡೆಗಳ ಸರ್ಪವಿದೆ. ಸರ್ಪದ ಮೇಲೆ ಮಣಿಖಚಿತ ಛತ್ರಿಯಿದೆ. ಶಿಲ್ಪದ ಇಕ್ಕೆಲಗಳಲ್ಲಿ ಬ್ರಹ್ಮಕಾಂತ ಪ್ರಕಾರದ ಸ್ತಂಭಗಳಿದ್ದು, ಇವುಗಳ ಮೇಲ್ಭಾಗದಿಂದ ಶಿಲ್ಪದ ಮೇಲರ್ಧದ ಸುತ್ತಲೂ ಮಕರತೋರಣದ ಪ್ರಭಾವಳಿಯಿದೆ. ಈ ಪ್ರಭಾವಳಿಯಲ್ಲಿ ಮತ್ತು ಸ್ತಂಭಗಳ ಮೇಲೆ ಇಪ್ಪತ್ಮೂರು ತೀರ್ಥಂಕರರು ಪರ್ಯಂಕಾಸನದಲ್ಲಿ ಆಸೀನರಾಗಿದ್ದಾರೆ. ಪಾರ್ಶ್ವನಾಥನ ಕಾಲುಗಳ ಬಲಬದಿಯಲ್ಲಿ ಧರಣೇಂದ್ರಯಕ್ಷ ಮತ್ತು ಎಡಬದಿಯಲ್ಲಿ ಪದ್ಮಾವತಿಯಕ್ಷಿ ತಮ್ಮ ಚತುರ್ಭುಜಗಳಲ್ಲಿ ವಿವಿಧ ಆಯುಧೋಪಕರಣಗಳನ್ನು ಹಿಡಿದುಕೊಂಡು ಸರ್ವಾಲಂಕೃತರಾಗಿ ಸುಖಾಸನದಲ್ಲಿ ಆಸೀನರಾಗಿದ್ದಾರೆ. ಈ ಶಿಲ್ಪದ ಸುತ್ತಲೂ ಕ್ರಿ.ಶ. ಸುಮಾರು ೧೮ನೆಯ ಶತಮಾನದ ಹಿತ್ತಾಳೆಯ ಮಕರತೋರಣದ ಪ್ರಭಾವಳಿಯನ್ನು ಅಳವಡಿಸಲಾಗಿದೆ.

ಕ್ರಿ.ಶ. ಸುಮಾರು ೧೭ನೆಯ ಶತಮಾನದ ಚೌವ್ವೀಸ ತೀರ್ಥಂಕರರ ಪ್ರಭಾವಳಿಯುಳ್ಳ ಮಹಾವೀರ ತೀರ್ಥಂಕರನ ಪಂಚಲೋಹದ ಪ್ರತಿಮೆಯಿದೆ. ಇದು ೧೭ ಸೆಂ.ಮೀ. ಎತ್ತರ ಮತ್ತು ೧೫ ಸೆಂ.ಮೀ. ಅಗಲವಾಗಿದೆ. ಪದ್ಮಪೀಠದ ಮೇಲೆ ಪದ್ಮಾಸನದಲ್ಲಿ ಆಸೀನನಾಗಿರುವ ಮಹಾವೀರನ ಶಿರದ ಹಿಂಬದಿಯಲ್ಲಿ ಪ್ರಭಾಮಂಡಲವಿದ್ದು. ಮೇಲ್ಭಾಗದಲ್ಲಿ ಮುಕ್ಕೊಡೆಯಿದೆ. ಸುತ್ತಲೂ ಇಪ್ಪತ್ಮೂರು ತೀರ್ಥಂಕರರು ಪದ್ಮಾಸನದಲ್ಲಿ ಆಸೀನರಾಗಿದ್ದಾರೆ. ಪೀಠದ ಪಾರ್ಶ್ವದಲ್ಲಿ ಮಹಾವೀರನ ಯಕ್ಷ–ಯಕ್ಷಿಯರಾದ ಮಾತಂಗ ಮತ್ತು ಸಿದ್ಧಾಯಿಕೆ ತಮ್ಮ ಚತುರ್ಭುಜಗಳಲ್ಲಿ ವಿವಿಧ ಆಯುಧೋಪಕರಣಗಳನ್ನು ಹಿಡಿದುಕೊಂಡು ಸರ್ವಾಲಂಕೃತರಾಗಿ ಸುಖಾಸನದಲ್ಲಿ ಆಸೀನರಾಗಿದ್ದಾರೆ. ಪೀಠದ ಮುಮ್ಮುಖದಲ್ಲಿ ಮಹಾವೀರನ ಲಾಂಛನವಾದ 'ಸಿಂಹ'ದ ಚಿತ್ರಣವಿದೆ. ಇದೇ ಬಸದಿಯಲ್ಲಿ ಚೌವ್ವೀಸ ತೀರ್ಥಂಕರರ ಪ್ರಭಾವಳಿಯುಳ್ಳ ಆದಿನಾಥ ತೀರ್ಥಂಕರನ ಪಂಚಲೋಹದ ಪ್ರತಿಮೆಯಿದೆ. ಕ್ರಿ.ಶ. ಸುಮಾರು ೧೭ನೆಯ ಶತಮಾನದ ಈ ಪ್ರತಿಮೆ ೯ ಸೆಂ.ಮೀ. ಎತ್ತರ ಮತ್ತು ೭ ಸೆಂ.ಮೀ. ಅಗಲವಾಗಿದೆ. ಪೀಠದ ಮೇಲೆ ಪದ್ಮಾಸನದಲ್ಲಿ ಆಸೀನನಾಗಿರುವ ಆದಿನಾಥನ ಶಿರದ ಮೇಲೆ ಮುಕ್ಕೊಡೆಯಿದೆ. ಸುತ್ತಲೂ ಇಪ್ಪತ್ತೆರಡು ತೀರ್ಥಂಕರರು ಪದ್ಮಾಸನದಲ್ಲಿ ಆಸೀನರಾಗಿದ್ದಾರೆ. ಕಾಲುಗಳ ಪಾರ್ಶ್ವದಲ್ಲಿ ಇಬ್ಬರು ತೀರ್ಥಂಕರರು ಕಾಯೋತ್ಸರ್ಗದಲ್ಲಿದ್ದಾರೆ. ಆದಿನಾಥನ ಶಿರದ ಪಾರ್ಶ್ವದಲ್ಲಿ ಇಬ್ಬರು ದೇವತೆಗಳು ಆನೆಯ ಮೇಲೆ ಕುಳಿತುಕೊಂಡು ಆದಿನಾಥನ ಕೇವಲಜ್ಞಾನ ಕಲ್ಯಾಣಕ್ಕೆ ಆಗಮಿಸುತ್ತಿರುವ ಚಿತ್ರಣವಿದೆ.

ತೀರ್ಥಂಕರರ ಶಿಲ್ಪ ಮತ್ತು ಪ್ರತಿಮೆಗಳು

ಕ್ರಿ.ಶ. ಸುಮಾರು ೧೭ನೆಯ ಶತಮಾನದ ತೀರ್ಥಂಕರನ ಪಂಚಲೋಹದ ಎರಡು ಪ್ರತಿಮೆಗಳಿವೆ. ಒಂದು ಪ್ರತಿಮೆಯಲ್ಲಿ ತೀರ್ಥಂಕರನು ಪದ್ಮಾಸನದಲ್ಲಿ ಆಸೀನನಾಗಿದ್ದಾನೆ. ಮತ್ತೊಂದು ಪ್ರತಿಮೆಯಲ್ಲಿ ಪದ್ಮಪೀಠದ ಮೇಲೆ ಕಾಯೋತ್ಸರ್ಗದಲ್ಲಿ ನಿಂತಿದ್ದಾನೆ. ಇದೇ ಬಸದಿಯಲ್ಲಿ ತೀರ್ಥಂಕರನ ಕ್ರಿ.ಶ. ಸುಮಾರು ೧೮ನೆಯ ಶತಮಾನದ ಬಿಳಿ ಅಮೃತಶಿಲೆಯ ಶಿಲ್ಪವಿದೆ. ಪದ್ಮಾಸನದಲ್ಲಿರುವ ತೀರ್ಥಂಕರನ ಶಿರದ ಮೇಲೆ ಉಷ್ಣೀಶವಿದೆ. ಕಿವಿಗಳು ಭುಜಗಳವರೆಗೂ ಇಳಿಬಿದ್ದಿವೆ.

ಪಂಚಪರಮೇಷ್ಠಿಗಳ ಪ್ರತಿಮೆಗಳು

ಕ್ರಿ.ಶ. ಸುಮಾರು ೧೭ನೆಯ ಶತಮಾನದ ಪಂಚಪರಮೇಷ್ಠಿಗಳ ಪಂಚಲೋಹದ ಪ್ರತಿಮೆಯಿದೆ. ಮಧ್ಯದಲ್ಲಿ ಸಿಂಹಪೀಠದ ಮೇಲೆ ಅರಿಹಂತ ಪರಮೇಷ್ಠಿ ಪದ್ಮಾಸನದಲ್ಲಿ ಆಸೀನನಾಗಿದ್ದಾನೆ. ಪ್ರತಿಮೆಯ ಮೇಲ್ಭಾಗದ ಪಾರ್ಶ್ವದಲ್ಲಿ ಸಿದ್ಧ ಮತ್ತು ಆಚಾರ್ಯ ಪರಮೇಷ್ಠಿಗಳು ಪದ್ಮಾಸನದಲ್ಲಿ ಆಸೀನರಾಗಿದ್ದಾರೆ. ಪ್ರತಿಮೆಯ ಕೆಳಭಾಗದ ಪಾರ್ಶ್ವದಲ್ಲಿ ಉಪಾಧ್ಯಾಯ ಮತ್ತು ಸಾಧು ಪರಮೇಷ್ಠಿಗಳು ಕಾಯೋತ್ಸರ್ಗದಲ್ಲಿದ್ದಾರೆ. ಪ್ರತಿಮೆಯ ಮೇಲ್ತುದಿಯಲ್ಲಿ ಕಲಶದ ಅಲಂಕಾರವಿದೆ. ಇದೇ ಬಸದಿಯಲ್ಲಿ ಪಂಚಪರಮೇಷ್ಠಿಗಳ ಕ್ರಿ.ಶ. ಸುಮಾರು ೧೭ನೆಯ ಶತಮಾನದ ಪಂಚಲೋಹದ ಪ್ರತಿಮೆಯಿದೆ. ಮಧ್ಯದಲ್ಲಿ ಪೀಠದ ಮೇಲೆ ಅರಿಹಂತ ಪರಮೇಷ್ಠಿ ಪದ್ಮಾಸನದಲ್ಲಿ ಆಸೀನನಾಗಿದ್ದಾನೆ. ಈತನ ಶಿರದ ಹಿಂಬದಿಯಲ್ಲಿ ಪ್ರಭಾಮಂಡಲವಿದ್ದು,

ಮೇಲ್ಭಾಗದಲ್ಲಿ ಮುಕ್ಕೊಡೆಯಿದೆ. ಪ್ರತಿಮೆಯ ಮೇಲ್ಭಾಗದ ಪಾರ್ಶ್ವದಲ್ಲಿ ಸಿದ್ಧ ಮತ್ತು ಆಚಾರ್ಯ ಪರಮೇಷ್ಠಿಗಳು ಪದ್ಮಾಸನದಲ್ಲಿ ಆಸೀನರಾಗಿದ್ದಾರೆ. ಪ್ರತಿಮೆಯ ಕೆಳಭಾಗದ ಪಾರ್ಶ್ವದಲ್ಲಿ ಉಪಾಧ್ಯಾಯ ಮತ್ತು ಸಾಧು ಪರಮೇಷ್ಠಿಗಳು ಕಾಯೋತ್ಸರ್ಗದಲ್ಲಿದ್ದಾರೆ. ಅರಿಹಂತ ಪರಮೇಷ್ಠಿಯ ಮುಕ್ಕೊಡೆಯ ಪಾರ್ಶ್ವದಲ್ಲಿ ಎರಡು ಆನೆಗಳು ಅಭಿಷೇಕ ಮಾಡುತ್ತಿರುವುದು ಗಮನೀಯವಾಗಿದೆ. ಪೀಠದ ಮುಂಬದಿಯಲ್ಲಿ ಮೂವರು ದ್ವಿಭುಜ ಚಾಮರಧಾರರು ಸುಖಾಸನದಲ್ಲಿ ಆಸೀನರಾಗಿದ್ದಾರೆ. ಪೀಠದ ಕೆಳಬದಿಯಲ್ಲಿ ಇಬ್ಬರು ವ್ಯಕ್ತಿಗಳು ಅಂಜಲಿಮುದ್ರೆಯಲ್ಲಿ ಆಸೀನರಾಗಿದ್ದಾರೆ.

ಪಂಚ ಬಾಲಯತಿ ತೀರ್ಥಂಕರರ ಶಿಲ್ಪ

ವರ್ತಮಾನ ಕಾಲದ ಇಪ್ಪತ್ನಾಲ್ಕು ತೀರ್ಥಂಕರರಲ್ಲಿ ವಾಸುಪೂಜ್ಯನಾಥ, ಮಲ್ಲಿನಾಥ, ನೇಮಿನಾಥ, ಪಾರ್ಶ್ವನಾಥ, ಮಹಾವೀರ ತೀರ್ಥಂಕರರು ಬಾಲಬ್ರಹ್ಮಚಾರಿಗಳಾಗಿದ್ದಾರೆ. ಈ ಐವರೂ ತೀರ್ಥಂಕರರನ್ನು ಒಂದೇ ಶಿಲ್ಪದಲ್ಲಿ ತೋರಿಸಲಾಗಿರುತ್ತದೆ. ಇಂತಹ ಶಿಲ್ಪಗಳನ್ನು 'ಪಂಚ ಬಾಲಯತಿ ತೀರ್ಥಂಕರರ ಶಿಲ್ಪಗಳು' ಎಂದು ಕರೆಯಲಾಗುತ್ತದೆ. ಇವುಗಳನ್ನು 'ಪಂಚತೀರ್ಥಿ' ಶಿಲ್ಪಗಳೆಂತಲೂ ಗುರುತಿಸಲಾಗುತ್ತದೆ. ಯಾದವಾಡದ ಪಾರ್ಶ್ವನಾಥ ಬಸದಿಯ ಮುಂಭಾಗದಲ್ಲಿ ಕ್ರಿ.ಶ. ಸುಮಾರು ೧೪ನೆಯ ಶತಮಾನದ ಪಂಚ ಬಾಲಯತಿ ತೀರ್ಥಂಕರರ ಶಿಲ್ಪವಿದೆ. ಇದು ಕಪ್ಪು ಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ಈ ಶಿಲ್ಪದ ಮಧ್ಯದಲ್ಲಿ ಪೀಠದ ಮೇಲೆ ಒಬ್ಬ ತೀರ್ಥಂಕರನು ಪರ್ಯಂಕಾಸನದಲ್ಲಿ ಆಸೀನನಾಗಿದ್ದಾನೆ. ಈತನ ಶಿರದ ಹಿಂಬದಿಯಲ್ಲಿ ಪ್ರಭಾಮಂಡಲವಿದ್ದು, ಮೇಲ್ಭಾಗದಲ್ಲಿ ಮುಕ್ಕೊಡೆಯಿದೆ. ಕಿವಿಗಳು ಭುಜಗಳವರೆಗೂ ಇಳಿಬಿದ್ದಿವೆ. ಪಾರ್ಶ್ವದಲ್ಲಿ ಇಬ್ಬರು ತೀರ್ಥಂಕರರು ಕಾಯೋತ್ಸರ್ಗದಲ್ಲಿದ್ದು, ಇವರ ಮೇಲ್ಭಾಗದಲ್ಲಿ ಇಬ್ಬರು ತೀರ್ಥಂಕರರು ಪರ್ಯಂಕಾಸನದಲ್ಲಿ ಆಸೀನರಾಗಿದ್ದಾರೆ.

ತ್ರಿ-ತೀರ್ಥಕ ಶಿಲ್ಪಪಟ್ಟಿಕೆ ಮತ್ತು ಪ್ರತಿಮೆ

ಪಾರ್ಶ್ವನಾಥ ಬಸದಿಯ ಮುಂಭಾಗದಲ್ಲಿ ಕ್ರಿ.ಶ. ಸುಮಾರು ೧೩ನೆಯ ಶತಮಾನದ ತ್ರಿ-ತೀರ್ಥಕ ಶಿಲ್ಪಪಟ್ಟಿಕೆಯಿದೆ. ಇದು ಕಪ್ಪು ಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ಈ ಶಿಲ್ಪಪಟ್ಟಿಕೆಯ ಮಧ್ಯದಲ್ಲಿ ಪಾರ್ಶ್ವನಾಥ ತೀರ್ಥಂಕರನು ಪರ್ಯಂಕಾಸನದಲ್ಲಿ ಆಸೀನನಾಗಿದ್ದಾನೆ. ಶಿರದ ಮೇಲೆ ಏಳು ಹೆಡೆಗಳ ಸರ್ಪವಿದೆ. ಈತನ ಎಡಬದಿಯಲ್ಲಿರುವ ತೀರ್ಥಂಕರನು ಪರ್ಯಂಕಾಸನದಲ್ಲಿ ಆಸೀನನಾಗಿದ್ದಾನೆ. ಶಿಲ್ಪಪಟ್ಟಿಕೆಯ ಬಲಬದಿಯ ಭಾಗವು ಒಡೆದಿದೆ. ಮೇಲ್ಭಾಗದಲ್ಲಿರುವ ಬಳ್ಳಿಯ ಅಲಂಕರಣದಲ್ಲಿ ತೀರ್ಥಂಕರನು ಪರ್ಯಂಕಾಸನದಲ್ಲಿ ಆಸೀನನಾಗಿದ್ದಾನೆ. ಇಂತಹ ಶಿಲ್ಪಗಳನ್ನು ಸಾಮಾನ್ಯವಾಗಿ ಬಸದಿಯ ಶಿಖರದ ಭಾಗದಲ್ಲಿ ಅಳವಡಿಸಲಾಗುತ್ತಿತ್ತು. ಶ್ರವಣಬೆಳಗೊಳದ ಅಕ್ಕನ ಬಸದಿಯ (ಪಾರ್ಶ್ವನಾಥ ಬಸದಿ) ಶಿಖರದ ಮುಂಭಾಗದಲ್ಲಿರುವ ಸುಖನಾಸದ ಲಲಾಟನಾಸಿಯಲ್ಲಿ ಅಷ್ಟವಿಧ ಮಹಾಪ್ರಾತಿಹಾರ್ಯಗಳಿಂದ ಶೋಭಿತವಾಗಿರುವ 'ತ್ರಿ-ತೀರ್ಥಕ' ತೀರ್ಥಂಕರರ ಶಿಲ್ಪಪಟ್ಟಿಕೆಯಿದೆ. ಇಂತಹ ತ್ರಿ-ತೀರ್ಥಕ ತೀರ್ಥಂಕರರ ಶಿಲ್ಪಪಟ್ಟಿಕೆಗಳು ಜಿನನಾಥಪುರದ ಅರೆಗಲ್ಲು ಬಸದಿ (ಪಾರ್ಶ್ವನಾಥ ಬಸದಿ), ಅಡಗೂರು, ಜಾವಗಲ್ಲು, ಕಡದರವಳ್ಳಿ ಬಸದಿಗಳ ವಾಸ್ತು ಸಂಕೀರ್ಣಗಳಲ್ಲಿಯೂ ಗೋಚರಿಸುತ್ತವೆ. ಪ್ರಸ್ತುತ ತ್ರಿ-ತ್ರೀರ್ಥಕ ಶಿಲ್ಪಪಟ್ಟಿಕೆಯನ್ನು ಯಾದವಾಡದಲ್ಲಿ ಕ್ರಿ.ಶ. ಸುಮಾರು ೧೨-೧೩ನೆಯ ಶತಮಾನದಲ್ಲಿ ನಿರ್ಮಾಣವಾಗಿದ್ದ ಪಾರ್ಶ್ವನಾಥ ಬಸದಿಯ ಶಿಖರದಲ್ಲಿ ಅಳವಡಿಸಲಾಗಿದ್ದಂತೆ ತೋರುತ್ತದೆ. ಇದೇ ಬಸದಿಯಲ್ಲಿ ಕ್ರಿ.ಶ. ಸುಮಾರು ೧೭ನೆಯ ಶತಮಾನದ ತ್ರಿ-ತೀರ್ಥಕ ತೀರ್ಥಂಕರರ ಪಂಚಲೋಹದ ಪ್ರತಿಮೆಯಿದೆ. ಮಧ್ಯದಲ್ಲಿ ಪೀಠದ ಮೇಲೆ ತೀರ್ಥಂಕರನು ಪದ್ಮಾಸನದಲ್ಲಿ ಆಸೀನನಾಗಿದ್ದಾನೆ. ಈತನ ಶಿರದ ಹಿಂಬದಿಯಲ್ಲಿ ಪ್ರಭಾಮಂಡಲವಿದ್ದು, ಮೇಲ್ಭಾಗದಲ್ಲಿ ಮುಕ್ಕೊಡೆಯಿದೆ. ಪಾರ್ಶ್ವದಲ್ಲಿ ಇಬ್ಬರು ತೀರ್ಥಂಕರರು ಕಾಯೋತ್ಸರ್ಗದಲ್ಲಿದ್ದಾರೆ. ಇವರ ಶಿರದ ಹಿಂಬದಿಯಲ್ಲಿ ಪ್ರಭಾಮಂಡಲವಿದ್ದು, ಮೇಲ್ಭಾಗದಲ್ಲಿ ಮುಕ್ಕೊಡೆಗಳಿವೆ. ಪೀಠದ ಬಲಬದಿಯಲ್ಲಿ ದ್ವಿಭುಜೆ ಅಂಬಿಕಾದೇವಿ (ಕೂಷ್ಮಾಂಡಿನಿ) ತೊಡೆಯ ಮೇಲೆ ತನ್ನ ಕಿರಿಯ ಮಗನಾದ ಶುಭಂಕರನನ್ನು ಎತ್ತಿಕೊಂಡು ಸುಖಾಸನದಲ್ಲಿ ಆಸೀನಳಾಗಿದ್ದಾಳೆ. ಪೀಠದ ಎಡಬದಿಯಲ್ಲಿ ದ್ವಿಭುಜ ಸರ್ವಾಹ್ನಯಕ್ಷನು ಸುಖಾಸನದಲ್ಲಿ ಆಸೀನನಾಗಿದ್ದಾನೆ. ಈ ಯಕ್ಷ-ಯಕ್ಷಿಯರ ಹಿನ್ನೆಲೆಯಲ್ಲಿ ಪ್ರಸ್ತುತ ತ್ರಿ-ತೀರ್ಥಕ ಪ್ರತಿಮೆಯ ಮಧ್ಯದಲ್ಲಿ ಆಸೀನನಾಗಿರುವ ತೀರ್ಥಂಕರನು ನೇಮಿನಾಥ ಎಂಬುದು ಮನದಟ್ಟಾಗುತ್ತದೆ.

ಪದ್ಮಾವತಿ ಪ್ರತಿಮೆಗಳು

ಕ್ರಿ.ಶ. ಸುಮಾರು ೧೭ನೆಯ ಶತಮಾನದ ಪದ್ಮಾವತಿಯ ಪಂಚಲೋಹದ ಪ್ರತಿಮೆಯಿದೆ. ಇದು ೧೭ ಸೆಂ.ಮೀ. ಎತ್ತರ ಮತ್ತು ೯ ಸೆಂ.ಮೀ. ಅಗಲವಾಗಿದೆ. ಪದ್ಮಾವತಿ ಪದ್ಮಪೀಠದ ಮೇಲೆ ಸವ್ಯಲಲಿತಾಸನದಲ್ಲಿ ಆಸೀನಳಾಗಿದ್ದಾಳೆ. ಚತುರ್ಭುಜಗಳಲ್ಲಿ ಬಲಬದಿಯ ಕೆಳಗಿನ ಕೈ ಅಭಯಮುದ್ರೆಯಲ್ಲಿದ್ದು, ಉಳಿದ ಕೈಗಳಲ್ಲಿ ಕ್ರಮವಾಗಿ ಅಂಕುಶ, ಪಾಶ,

ಫಲವನ್ನು ಹಿಡಿದುಕೊಂಡಿದ್ದಾಳೆ. ಕರಂಡಮಕುಟ, ಮಣಿಸರ, ಕೊರಳಹಾರ, ಕೇಯೂರ, ಕರ್ಣಕುಂಡಲ, ಕೈಬಳೆ, ಕಟಿವಸ್ತ್ರ, ಕಾಲ್ಗಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿದ್ದಾಳೆ. ಇವಳು ಧರಿಸಿರುವ ಕರಂಡಮಕುಟದಲ್ಲಿ ಪಾರ್ಶ್ವನಾಥ ತೀರ್ಥಂಕರನು ಪರ್ಯಂಕಾಸನದಲ್ಲಿ ಆಸೀನನಾಗಿದ್ದಾನೆ. ಈತನ ಶಿರದ ಮೇಲೆ ಏಳು ಹೆಡೆಗಳ ಸರ್ಪವಿದೆ. ಪದ್ಮಪೀಠದ ಮುಂಬದಿಯಲ್ಲಿ ಪದ್ಮಾವತಿಯ ವಾಹನ ಕುಕ್ಕುಟಸರ್ಪದ (ಹಾವಿನ ಹೆಡೆಯ ಹಾಗೆ ತಲೆಯೂ, ಕೋಳಿಯ ದೇಹವೂ ಇರುವ ವಿಶಿಷ್ಟ ಪ್ರಾಣಿ) ಚಿತ್ರಣವಿದೆ. ಪ್ರತಿಮೆಯ ಸುತ್ತಲೂ ಮಕರತೋರಣದ ಪ್ರಭಾವಳಿಯಿದ್ದು, ಮೇಲ್ತುದಿಯಲ್ಲಿ ಕೀರ್ತಿಮುಖದ ಅಲಂಕಾರವಿದೆ. ಇದೇ ಬಸದಿಯಲ್ಲಿ ಪದ್ಮಾವತಿಯ ಕ್ರಿ.ಶ. ಸುಮಾರು ೧೭ನೆಯ ಶತಮಾನದ ಪಂಚಲೋಹದ ಪ್ರತಿಮೆಯಿದೆ. ಪದ್ಮಾವತಿ ಪೀಠದ ಮೇಲೆ ಸುಖಾಸನದಲ್ಲಿ ಆಸೀನಳಾಗಿದ್ದಾಳೆ. ಇವಳ ಚತುರ್ಭುಜಗಳಲ್ಲಿ ಬಲಬದಿಯ ಕೆಳಗಿನ ಕೈ ಅಭಯಮುದ್ರೆಯಲ್ಲಿದ್ದು, ಉಳಿದ ಕೈಗಳಲ್ಲಿ ಕ್ರಮವಾಗಿ ಅಂಕುಶ, ಪಾಶ, ಫಲಗಳಿವೆ. ಕೀರಿಟಮಕುಟ, ಮಣಿಸರ, ಕೊರಳಹಾರ, ಕೇಯೂರ, ಕರ್ಣಕುಂಡಲ, ಕೈಬಳೆ, ಕಟಿವಸ್ತ್ರ, ಕಾಲ್ಗಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿದ್ದಾಳೆ. ಕೀರಿಟದ ಮೇಲೆ ಏಳು ಹೆಡೆಗಳ ಸರ್ಪವಿದೆ. ಸರ್ಪದ ಮೇಲೆ ಪಾರ್ಶ್ವನಾಥ ತೀರ್ಥಂಕರನು ಪದ್ಮಾಸನದಲ್ಲಿ ಆಸೀನನಾಗಿದ್ದಾನೆ. ಈತನ ಶಿರದ ಮೇಲೆ ಏಳು ಹೆಡೆಗಳ ಸರ್ಪವಿದೆ. ಪೀಠದ ಮೇಲೆ ಪದ್ಮಾವತಿಯ ವಾಹನ ಕುಕ್ಕುಟಸರ್ಪವು ಮುಮ್ಮುಖವಾಗಿ ನಿಂತಿದೆ. ಇದೇ ಬಸದಿಯಲ್ಲಿ ಪದ್ಮಾವತಿಯ ಕ್ರಿ.ಶ. ಸುಮಾರು ೧೭ನೆಯ ಶತಮಾನದ ಪಂಚಲೋಹದ ಪ್ರತಿಮೆಯಿದೆ. ಪದ್ಮಾವತಿ ಪೀಠದ ಮೇಲೆ ಸವ್ಯಲಲಿತಾಸನದಲ್ಲಿ ಆಸೀನಳಾಗಿದ್ದಾಳೆ. ಇವಳ ಚತುರ್ಭುಜಗಳಲ್ಲಿ ಬಲಬದಿಯ ಕೆಳಗಿನ ಕೈ ಅಭಯಮುದ್ರೆಯಲ್ಲಿದ್ದು, ಉಳಿದ ಕೈಗಳಲ್ಲಿ ಕ್ರಮವಾಗಿ ಅಂಕುಶ, ಪಾಶ, ಫಲಗಳಿವೆ. ಕೀರಿಟಮಕುಟ, ಮಣಿಸರ, ಕೊರಳಹಾರ, ಕೇಯೂರ, ಕರ್ಣಕುಂಡಲ, ಕೈಬಳೆ, ಕಟಿವಸ್ತ್ರ, ಕಾಲ್ಗಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿದ್ದಾಳೆ. ಕೀರಿಟದ ಮೇಲೆ ಏಳು ಹೆಡೆಗಳ ಸರ್ಪವಿದೆ. ಸರ್ಪದ ಮೇಲೆ ಪಾರ್ಶ್ವನಾಥ ತೀರ್ಥಂಕರನು ಪದ್ಮಾಸನದಲ್ಲಿ ಆಸೀನನಾಗಿದ್ದಾನೆ. ಈತನ ಶಿರದ ಮೇಲೆ ಏಳು ಹೆಡೆಗಳ ಸರ್ಪವಿದೆ. ಪೀಠದ ಮೇಲೆ ಪದ್ಮಾವತಿಯ ವಾಹನ ಕುಕ್ಕುಟಸರ್ಪದ ಚಿತ್ರಣವಿದೆ.

ಕೂಷ್ಮಾಂಡಿನಿ (ಅಂಬಿಕಾ) ಪ್ರತಿಮೆ

ಕ್ರಿ.ಶ. ಸುಮಾರು ೧೭ನೆಯ ಶತಮಾನದ ಕೂಷ್ಮಾಂಡಿನಿಯ ಪಂಚಲೋಹದ ಪ್ರತಿಮೆಯಿದೆ. ಇದು ೧೭ ಸೆಂ.ಮೀ. ಎತ್ತರ ಮತ್ತು ೯ ಸೆಂ.ಮೀ. ಅಗಲವಾಗಿದೆ. ಕೂಷ್ಮಾಂಡಿನಿ ಪದ್ಮಪೀಠದ ಮೇಲೆ ಸವ್ಯಲಲಿತಾಸನದಲ್ಲಿ ಆಸೀನಳಾಗಿದ್ದಾಳೆ. ಚತುರ್ಭುಜಗಳಲ್ಲಿ ಕ್ರಮವಾಗಿ ಮಾವಿನಗೊಂಚಲು, ಅಂಕುಶ, ಪಾಶವನ್ನು ಹಿಡಿದುಕೊಂಡಿದ್ದಾಳೆ. ಎಡಬದಿಯ ಕೆಳಗಿನ ಕೈಯಲ್ಲಿ ತನ್ನ ತೊಡೆಯ ಮೇಲೆ ಆಸೀನನಾಗಿರುವ ಚಿಕ್ಕ ಮಗನಾದ ಶುಭಂಕರನನ್ನು ಹಿಡಿದುಕೊಂಡಿದ್ದಾಳೆ. ಇವಳ ಬಲಬದಿಯ ಕಾಲಿನ ಹತ್ತಿರ ಹಿರಿಯ ಮಗನಾದ ಪ್ರಿಯಂಕರ ನಿಂತಿದ್ದಾನೆ. ಕಿರೀಟಮಕುಟ, ಮಣಿಸರ, ಕೊರಳಹಾರ, ಕೇಯೂರ, ಕರ್ಣಕುಂಡಲ, ಕೈಬಳೆ, ಕಟಿವಸ್ತ್ರ, ಕಾಲ್ಗಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿದ್ದಾಳೆ. ಇವಳು ಧರಿಸಿರುವ ಕಿರೀಟಮಕುಟದ ಮೇಲೆ ನೇಮಿನಾಥ ತೀರ್ಥಂಕರನು ಪರ್ಯಂಕಾಸನದಲ್ಲಿ ಆಸೀನನಾಗಿದ್ದಾನೆ. ಎಡಗಾಲಿನ ಕೆಳಬದಿಯಲ್ಲಿ ಇವಳ ವಾಹನ ಸಿಂಹವು ಮುಮ್ಮುಖವಾಗಿ ನಿಂತಿರುವ ಚಿತ್ರಣವಿದೆ. ಪ್ರತಿಮೆಯ ಸುತ್ತಲೂ ಪ್ರಭಾವಳಿಯಿದ್ದು, ಮೇಲ್ತುದಿಯಲ್ಲಿ ಕೀರ್ತಿಮುಖದ ಅಲಂಕಾರವಿದೆ.

ಶಾಸನಗಳು

ಈ ಮೇಲಿನ ಕೆಲವು ಶಿಲ್ಪಗಳು ಹಾಗೂ ಪ್ರತಿಮೆಗಳ ಪಾದಪೀಠಗಳ ಮೇಲೆ ಮತ್ತು ಕೆಲವು ಶಿಲ್ಪಗಳು ಹಾಗೂ ಪ್ರತಿಮೆಗಳ ಹಿಂಭಾಗದಲ್ಲಿ ಶಾಸನಗಳಿವೆ. ಅವುಗಳ ಪಾಠಗಳು ಮತ್ತು ಸಾರಾಂಶಗಳು ಈ ಕೆಳಗಿನಂತಿವೆ.

ಶಾಸನ ೧

ಕೂಷ್ಮಾಂಡಿನಿಯ ಪಂಚಲೋಹದ ಪ್ರತಿಮೆಯ ಹಿಂಬದಿಯಲ್ಲಿ ಸುತ್ತಲೂ ದೇವನಾಗರಿ ಲಿಪಿ ಮತ್ತು ಹಿಂದಿ(?) ಭಾಷೆಯ ಒಂದು ಸಾಲಿನ ಶಾಸನವಿದೆ. ಇದರಲ್ಲಿ "ಕ್ರಿ.ಶ. ೧೫೫೭ರಲ್ಲಿ ಉಸವಾಲ (ಓಸ್ವಾಲ) ಜ್ಞಾತಿಯ (ಜಾತಿ ಅಥವಾ ಪಂಥ) ಮಾಣಿಕ ಎಂಬುವವನು ಈ ಪ್ರತಿಮೆಯನ್ನು ಮಾಡಿದನು" ಎಂದು ನಿರೂಪಣೆಯಿದೆ.

ಶಾಸನದ ಪಾಠ

೧. ಸಂ. ೧೫೬೯ ವರ್ಷೇ ವೈಶಾಖ ವದಿ ೧೧ ಸುಕ್ರವಾರ ಉಸವಾಲ ಜ್ಞಾತಿ ಸಾ...ಸಾಂಮಾಕೆನಮಾ ...... ಸಾಂಡ ಸಿರಿಸು ಮಾಣಿಕಪಾ ಮಾಂಡಣ ಪಾವಾ ಕೀಕಾ

ಶಾಸನ ೨

ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾರ್ಶ್ವನಾಥ ತೀರ್ಥಂಕರನ ಸುತ್ತಲೂ ಇರುವ ಹಿತ್ತಾಳೆಯ ಪ್ರಭಾವಳಿಯ ಕೆಳಗಿನ ಪಟ್ಟಿಕೆಯ ಮೇಲೆ ಕನ್ನಡ ಲಿಪಿ ಮತ್ತು ಭಾಷೆಯ ಮೂರು ಸಾಲುಗಳ ಶಾಸನವಿದೆ. ಇದರಲ್ಲಿ "ನೃಪ ಶಾಲಿವಾಹನ ಶಕವರ್ಷ ೧೬೬೫ರ ಮಾರ್ಗಶಿರ ವಿಕಾರಿನಾಮ ಸಂವತ್ಸರದ ಭಾದ್ರಪದ ವದಿ ಕೃಷ್ಣಪಕ್ಷ ಚತುರ್ದಶಿ ಅಮವಾಸ್ಯೆಯಂದು (ಕ್ರಿ.ಶ. ೧೭೪೩) ಶ್ರೀ ಅನಂತಸೇನ ಸ್ವಾಮಿಗಳು ಯಾದವಾಡದ ಪಾರ್ಶ್ವನಾಥನಿಗೆ ಒಂದು ಮಾನ ತೂಕದ ಹಿತ್ತಾಳೆಯ ಪ್ರಭಾವಳಿಯನ್ನು ಮಾಡಿಸಿಕೊಟ್ಟರು" ಎಂದು ಪ್ರಸ್ತಾಪವಿದೆ.

ಶಾಸನದ ಪಾಠ

೧. ಸ್ವಸ್ತಿಶ್ರೀ ನ್ರಪ ಶಾಲಿವಾಹನ ಶಕೆ ೧೬೬೫ ವರ್ಷ ಮಾರ್ಗಶಿರ....ದ್ವಿಕಾರಿನಾಮ ಸಂವತ್ಸರ ಭಾ

೨. ದ್ರಪದ ವದಿ ಕೃಷ್ಣಪಕ್ಷ ಚತುರ್ದ್ದಸಿನಾಮವಾಸೆ ಯಾದವಾಡದ ಶುಭಸ್ಥಾನದಲ್ಲಿ ಮೂಲಸ್ವಾಮಿ ಶ್ರೀ

೩. ಪಾರ್ಶ್ವನಾಥಂಗೆ ಶ್ರೀ ಅನಂತಸೇನ ಸ್ವಾಮಿಗಳು ಇ ಪ್ರಭಾವನ(ಳಿ) ಮಾಡಿಸಿ ಕೊಟ್ಟರು ॥

ವಜನಿ ಮಾನ ೧

ಶಾಸನ ೩

ಕ್ರಿ.ಶ. ಸುಮಾರು ೧೭ನೆಯ ಶತಮಾನದ ತೀರ್ಥಂಕರನ ಪಂಚಲೋಹದ ಪ್ರತಿಮೆಯ ಪಾದಪೀಠದ ಮೇಲೆ ಕನ್ನಡ ಲಿಪಿ ಮತ್ತು ಭಾಷೆಯ ಒಂದು ಸಾಲಿನ ಶಾಸನವಿದೆ. ಇದರಲ್ಲಿ "ಚಂದಣ್ಣ ಎಂಬುವವನು ಸಿದ್ಧಚಕ್ರ ನೋಂಪಿಯನ್ನು ಉದ್ಯಾಪನೆಗೈದು ಈ ಪ್ರತಿಮೆಯನ್ನು ಮಾಡಿಸಿ ಕೊಟ್ಟನು" ಎಂಬ ವಿವರವಿದೆ.

ಶಾಸನದ ಪಾಠ

೧. ಚಂದಣ ಸಿದ್ದಚಂಕ್ರ ಉದ್ಯ

ಶಾಸನ ೪

ಕ್ರಿ.ಶ. ಸುಮಾರು ೧೭ನೆಯ ಶತಮಾನದ ಪಾರ್ಶ್ವನಾಥ ತೀರ್ಥಂಕರನ ಪಂಚಲೋಹದ ಪ್ರತಿಮೆಯ ಪೀಠದ ಮೇಲೆ ಎರಡು ಸಾಲುಗಳ ದೇವನಾಗರಿ ಲಿಪಿ ಮತ್ತು ಹಿಂದಿ ಭಾಷೆಯ ಶಾಸನವಿದೆ. ಅಕ್ಷರಗಳು ತುಂಬಾ ಸವೆದಿರುವುದರಿಂದ ಈ ಶಾಸನದ ಪಾಠ ಮತ್ತು ಸಾರಾಂಶವನ್ನು ಸಂಗ್ರಹಿಸಲು ಸಾಧ್ಯವಾಗಿಲ್ಲ.

ಶಾಸನ ೫

ಕ್ರಿ.ಶ. ಸುಮಾರು ೧೭ನೆಯ ಶತಮಾನದ ಚಂದ್ರಪ್ರಭನಾಥ ತೀರ್ಥಂಕರನ ಪಂಚಲೋಹದ ಪ್ರತಿಮೆಯ ಪೀಠದ ಮೇಲ್ತುದಿಯ ಸುತ್ತಲೂ ದೇವನಾಗರಿ ಲಿಪಿ ಮತ್ತು ಮಾರ್ವಾಡಿ(?) ಭಾಷೆಯ ಒಂದು ಸಾಲಿನ ಶಾಸನವಿದೆ. ಇದರಲ್ಲಿ ಕ್ರಿ.ಶ. ೧೬೬೭ರಲ್ಲಿ ಈ ಪ್ರತಿಮೆಯನ್ನು ದಾನ ಮಾಡಿದ ವಿವರವಿದೆ. ಅಕ್ಷರಗಳು ತ್ರುಟಿತವಾಗಿರುವುದರಿಂದ ಹೆಚ್ಚಿನ ವಿವರಗಳು ಅಸ್ಪಷ್ಟವಾಗಿವೆ.

ಶಾಸನದ ಪಾಠ

೧. ಸಕೆ ೧೫೪೯ ಕುರದಾನಾವಸವ.........ಸವ....ರ ಫಾರ ಶ್ರೀ ಪರ....೧೩...ಜನಾಥ

ಶಾಸನ ೬

ಕ್ರಿ.ಶ. ಸುಮಾರು ೧೬ನೆಯ ಶತಮಾನದ ಪಾರ್ಶ್ವನಾಥ ತೀರ್ಥಂಕರನ ಅಮೃತಶಿಲೆಯ ಶಿಲ್ಪದ ಪಾದಪೀಠದ ಮೇಲೆ ದೇವನಾಗರಿ ಲಿಪಿ ಮತ್ತು ಸಂಸ್ಕೃತ(?) ಭಾಷೆಯ ಎರಡು ಸಾಲುಗಳ ಶಾಸನವಿದೆ. ಇದರಲ್ಲಿ ಈ ಶಿಲ್ಪವನ್ನು ಕ್ರಿ.ಶ. ಸುಮಾರು ೧೬ನೆಯ ಶತಮಾನದಲ್ಲಿ ದಾನ ಮಾಡಿದ ವಿವರವಿದೆ. ಅಕ್ಷರಗಳು ತ್ರುಟಿತವಾಗಿರುವುದರಿಂದ ಹೆಚ್ಚಿನ ವಿವರಗಳು ಅಸ್ಪಷ್ಟವಾಗಿವೆ.

ಶಾಸನದ ಪಾಠ

೧. ಸಂವತ ೧೫.............ವರ .... ಕವ............

೨. ....ಪ........................

ಶಾಸನ ೭

ಪಾರ್ಶ್ವನಾಥ ತೀರ್ಥಂಕರನ ಕಪ್ಪುಶಿಲೆಯ ಶಿಲ್ಪದ ಹಿಂಬದಿಯಲ್ಲಿ ದೇವನಾಗರಿ ಲಿಪಿ ಮತ್ತು ಮರಾಠಿ ಭಾಷೆಯ ಮೂರು ಸಾಲುಗಳ ಶಾಸನವಿದೆ. ಇದರಲ್ಲಿ ಕ್ರಿ.ಶ. ೧೯೫೩ರಲ್ಲಿ ಪಾರ್ಶ್ವನಾಥ ಬಸದಿಗೆ ಈ ಶಿಲ್ಪವನ್ನು ದಾನ ಮಾಡಿದ ವಿವರವಿದೆ. ಅಕ್ಷರಗಳು ತ್ರುಟಿತವಾಗಿರುವುದರಿಂದ ಹೆಚ್ಚಿನ ವಿವರಗಳು ಅಸ್ಪಷ್ಟವಾಗಿವೆ.

ಶಾಸನದ ಪಾಠ

೧. ಸಂ. ೧೮೭೫ ಅಶ್ವಿನ ಸುಧ ಪ್ರತಿಪ.......

೨. ದ ಗುರುವಾರ ದಿನೇ ೧೦ ಪಾ......ನಾ

೩. ಗಫಣಿ ಪಾರ್ಶ್ವನಾಥ ಸಂಪ್ರ..........

ಶಾಸನ ೮

ಕ್ರಿ.ಶ. ಸುಮಾರು ೧೭ನೆಯ ಶತಮಾನದ ಚೌವ್ವೀಸ ತೀರ್ಥಂಕರರ ಪಂಚಲೋಹದ ಪ್ರತಿಮೆಯ ಹಿಂಬದಿಯಲ್ಲಿ ದೇವನಾಗರಿ ಲಿಪಿ ಮತ್ತು ಹಿಂದಿ ಭಾಷೆಯ ಎರಡು ಸಾಲುಗಳ ಶಾಸನವಿದೆ. ಇದರಲ್ಲಿ "ಭರಮಪ್ಪ ಎಂಬುವವನು ಈ ಪ್ರತಿಮೆಯನ್ನು ಮಾಡಿಸಿದನು" ಎಂಬ ವಿವರವಿದೆ.

ಶಾಸನದ ಪಾಠ

೧. ಭರಮಪಾ ... ಬ್ರು

೨. ಣಗೀ

ಶಾಸನ ೯

೨೦ನೆಯ ಶತವಾನದ ಹಿತ್ತಾಳೆಯ ಗಂಟೆಯ ಮೇಲೆ ದೇವನಾಗರಿ ಲಿಪಿ ಮತ್ತು ಮರಾಠಿ ಭಾಷೆಯ ಆರು ಸಾಲುಗಳ ಶಾಸನವಿದೆ. ಇದರಲ್ಲಿ "ಶ್ರೀ ಅಪ್ಪಾಸಾಹೇಬ ಭುಜಬಲಿ ಗರಗಟ್ಟಿ ಅವರ ಸ್ಮರಣಾರ್ಥವಾಗಿ ಬೆಳಗಾವಿ ಜಿಲ್ಲೆಯ ಶಿವಾಪುರದ (ಸವದತ್ತಿ ತಾಲ್ಲೂಕಿನ ಶಿವಾಪುರ) ಅವರ ಸಂಬಂಧಿಕರು (ಪ್ರಾಯಶಃ ಅಪ್ಪಾಸಾಹೇಬ ಅವರ ಮಗ) ಶ್ರೀ ಪಾರ್ಶ್ವನಾಥ ದಿಗಂಬರ ಜೈನ ಬಸದಿಗೆ ಈ ಹಿತ್ತಾಳೆಯ ಗಂಟೆಯನ್ನು ದಾನ ಮಾಡಿದರು" ಎಂದು ವಿವರಗಳಿವೆ.

ಶಾಸನದ ಪಾಠ

೧. ಶ್ರೀ

೨. ಸ್ವ. ಶ್ರೀ ಅಪ್ಪಾಸಾಹೇಬ ಭುಜಬಲಿ ಗರಗಟ್ಟಿ

೩. ಯಾಂಚೇ ಸ್ಮರಣಾರ್ಥ ಶ್ರೀ ಪಾರೀಶ್ವನಾಥ ದಿಗಂಬರ ......, ಮಂದಿರ

೪. .... ಗರಗಟ್ಟಿ .... ಅರ್ಪಣ

೫. .... ಅಂಡ್ ಸನ್ಸ್ ....

೬. ಶಿವಾಪುರ ಬೆಳಗಾಂವ

ಸಮಾರೋಪ

ಪಾರ್ಶ್ವನಾಥ ಬಸದಿಯ ಗರ್ಭಗೃಹದಲ್ಲಿ ಕ್ರಿ.ಶ. ಸುಮಾರು ೧೫-೧೬ನೆಯ ಶತಮಾನದ ಎಂಟು ಯಂತ್ರ-ಮಂತ್ರ ಪಟಗಳಿವೆ. ಇವೆಲ್ಲವೂ ವೃತ್ತಾಕಾರವಾಗಿವೆ. ಇವುಗಳ ಮಧ್ಯದಲ್ಲಿ ಯಂತ್ರಗಳನ್ನು ರಚಿಸಲಾಗಿದ್ದು, ಇವುಗಳಲ್ಲಿ ಮಂತ್ರಗಳಿವೆ. ಈ ಎಲ್ಲ ಮಂತ್ರಗಳು ಕನ್ನಡ ಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿವೆ. ೧ನೆಯ ಯಂತ್ರ ಪಟದ ಮಧ್ಯದಲ್ಲಿ ಸುತ್ತಲೂ ಹನ್ನೊಂದು ಸಾಲುಗಳ ಮಂತ್ರವಿದೆ. ೨ನೆಯ ಯಂತ್ರ ಪಟದ ಮಧ್ಯದಲ್ಲಿ ನಾಲ್ಕು ಸಾಲುಗಳ ಮಂತ್ರವಿದೆ. ೩ನೆಯ ಯಂತ್ರ ಪಟದ ಮಧ್ಯದಲ್ಲಿ ಸುತ್ತಲೂ ನಾಲ್ಕು ಸಾಲುಗಳ ಮಂತ್ರವಿದೆ. ೪ನೆಯ ಯಂತ್ರ ಪಟದ ಮಧ್ಯದ ವೃತ್ತಾಕಾರದಲ್ಲಿ ಐದು ಸಾಲುಗಳು ಮತ್ತು ಸುತ್ತಲಿನ ಎಲೆಯಾಕಾರದ ಹತ್ತು ಚೌಕುಗಳಲ್ಲಿ ತಲಾ ಐದು ಸಾಲುಗಳ ಮಂತ್ರಗಳಿವೆ. ೫ನೆಯ ಯಂತ್ರ ಪಟದ ಮಧ್ಯದಲ್ಲಿ ಸುತ್ತಲೂ ಏಳು ಸಾಲುಗಳ ಮಂತ್ರವಿದೆ. ೬ನೆಯ ಯಂತ್ರ ಪಟದ ಮಧ್ಯದ ವೃತ್ತಾಕಾರದಲ್ಲಿ ಆರು







ಸಾಲುಗಳು ಮತ್ತು ಸುತ್ತಲಿನ ಎಲೆಯಾಕಾರದ ಹತ್ತು ಚೌಕುಗಳಲ್ಲಿ ತಲಾ ಐದು ಸಾಲುಗಳ ಮಂತ್ರಗಳಿವೆ. ೭ನೆಯ ಯಂತ್ರ ಪಟವು ವೃತ್ತಾಕಾರವಾಗಿದೆ. ಇದರ ಒಂದು ಅಂಚಿನಲ್ಲಿ 'ಚಿಂತಾಮಣಿ' ಎಂದು ನಿರೂಪಣೆಯಿದೆ. ಮಧ್ಯದಲ್ಲಿ ಎಲೆಯಾಕಾರದ ಎಂಟು ಚೌ ಕಗಳಿದ್ದು, ಇವುಗಳಲ್ಲಿ ತಲಾ ಒಂದು ಸಾಲಿನ ಮಂತ್ರಗಳಿವೆ. ೮ನೆಯ ಯಂತ್ರ ಪಟವು ವೃತ್ತಾಕಾರವಾಗಿದೆ. ಇದರ ಒಂದು ಅಂಚಿನಲ್ಲಿ 'ಅನಂತನಪ್ಪರ ಸ್ಥಾಪನೆ ಯಂತ್ರಂ' ಎಂದು ನಿರೂಪಣೆಯಿದೆ. ಮಧ್ಯದಲ್ಲಿನ ಚೌಕಾಕಾರದ ಸುತ್ತಲೂ 'ಕ್ಷಿಲವಂ' ಎಂಬ ಒಂದು ಸಾಲಿನ ಮಂತ್ರವಿದೆ. ಕರ್ನಾಟಕದಾದ್ಯಂತದ ಬಸದಿಗಳಲ್ಲಿ ಇಂಥ ಸಾವಿರಾರು ಯಂತ್ರ ಪಟಗಳಿವೆ. ಇದುವರೆಗೂ ಇಂಥ ಪಟಗಳೆಡೆಗೆ ವಿದ್ವಾಂಸರು, ಸಂಶೋಧಕರು ಗಮನಹರಿಸಿಲ್ಲ. ಈ ಪಟಗಳು ಸಮಕಾಲೀನ ಧಾರ್ಮಿಕ, ಸಾಮಾಜಿಕ ವ್ಯವಸ್ಥೆಯ ಅಧ್ಯಯನಕ್ಕೆ ಅಪರೂಪದ ದಾಖಲೆಗಳಾಗಿವೆ. ಇವುಗಳ ಸಾಂಸ್ಕೃತಿಕ ಅಧ್ಯಯನದೆಡೆಗೆ ಸಂಶೋಧಕರು ಗಮನಹರಿಸುವುದು ಅವಶ್ಯವಿದೆ.

ಈ ಮೇಲಿನ ಕ್ರಿ.ಶ. ಸುಮಾರು ೧೬ನೆಯ ಶತಮಾನದಿಂದೀಚಿನ ತೀರ್ಥಂಕರರ ಶಿಲ್ಪಗಳು ಮತ್ತು ಪ್ರತಿಮೆಗಳಲ್ಲಿ ಶಿರದ ಮೇಲೆ ಉಷ್ಣೀಶ, ಎದೆಯ ಮೇಲೆ ಶ್ರೀವತ್ಸ, ಕಿವಿಗಳು ಭುಜಗಳವರೆಗೂ ಇಳಿಬಿದ್ದಿರುವುದು, ಕಟಿವಸ್ತ್ರ (ಸೊಂಟದ ಸುತ್ತಲೂ ಬಟ್ಟೆಯನ್ನು ತೊಡಿಸಿರುವುದು) ಮೊದಲಾದ ಲಕ್ಷಣಗಳು ಗೋಚರಿಸುತ್ತವೆ. ಈ ನಿಟ್ಟಿನಲ್ಲಿ ಗೋಕಾಕದ ಆಚಾರ್ಯಶ್ರೀ ಪಾಯಸಾಗರರ ತಪೋವನ ಮತ್ತು ಯಾದವಾಡದ ಪಾರ್ಶ್ವನಾಥ ಬಸದಿಯಲ್ಲಿರುವ ಶಿಲ್ಪಗಳು ಮತ್ತು ಪ್ರತಿಮೆಗಳು ಗಮನೀಯವಾಗಿವೆ. ಇವೆಲ್ಲವೂ ಉತ್ತರ ಭಾರತದ ಜೈನ ಶಿಲ್ಪಗಳ ಲಕ್ಷಣಗಳಾಗಿವೆ. ಗೋಕಾಕದ ಆಚಾರ್ಯಶ್ರೀ ಪಾಯಸಾಗರರ ತಪೋವನದಲ್ಲಿರುವ ಅಜಿತನಾಥ ಮತ್ತು ಪಾರ್ಶ್ವನಾಥ ತೀರ್ಥಂಕರರ ಶಿಲ್ಪಗಳಲ್ಲಿ ಸೊಂಟದಲ್ಲಿ ವಸ್ತ್ರವನ್ನು (ಕಟಿವಸ್ತ್ರ) ತೋರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಮೇಲಿನ ಲಕ್ಷಣಗಳಿರುವ ಶಿಲ್ಪಗಳು ಮತ್ತು ಪ್ರತಿಮೆಗಳನ್ನು ಉತ್ತರ ಭಾರತದ ರಾಜಸ್ಥಾನ, ಗುಜರಾತ ಮೊದಲಾದೆಡೆಯ ಶಿಲ್ಪಿಗಳು ಕಂಡರಿಸಿರುವುದು ಸ್ಪಷ್ಟವಾಗುತ್ತದೆ. ರಾಜಸ್ಥಾನದ ಶೇಠ (ಶಾಹ) ಜೀವರಾಜ ಪಾಪಡಿವಾಲೆ ಎಂಬುವವರು ಕ್ರಿ.ಶ. ಸುಮಾರು ೧೭ನೆಯ ಶತಮಾನದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ತೀರ್ಥಂಕರರ ಬಿಳಿ ಅಮೃತಶಿಲೆಯಲ್ಲಿ ಶಿಲ್ಪಗಳನ್ನು ಮಾಡಿಸಿ ದೇಶದಾದ್ಯಂತದ ಬಸದಿಗಳಲ್ಲಿ ಪ್ರತಿಷ್ಠಾಪಿಸಲು ದಾನ ಮಾಡಿದ್ದಾರೆ. ಆ ಶಿಲ್ಪಗಳಲ್ಲಿ ಕೆಲವು ಉತ್ತರ ಕರ್ನಾಟಕದ ಹಲವು ಬಸದಿಗಳಲ್ಲಿ ಪ್ರತಿಷ್ಠಾಪಿತವಾಗಿವೆ. ಗೋಕಾಕ ಪರಿಸರದಲ್ಲಿಯೂ ಅಂಥ ಕೆಲವು ಶಿಲ್ಪಗಳು ಗೋಚರಿಸುತ್ತವೆ.

೨೬

"ಹರಿಹರದ" ಹೊಸ ಶಾಸನ ಮತ್ತು ಶೋಧಗಳು

ಡಾ. ಹರಿಹರ ಶ್ರೀನಿವಾಸರಾವ್*

ಹರಿಹರವು ಕರ್ನಾಟಕ ರಾಜ್ಯದ ದಾವಣಗೆರೆ ಜಿಲ್ಲೆಯ ಹಲವಾರು ಶತಮಾನಗಳ ಇತಿಹಾಸ, ಸಾಂಸ್ಕೃತಿಕ, ಕೈಗಾರಿಕೆ, ಕಲೆ, ರಾಜಕೀಯ ಇತ್ಯಾದಿ ಅನೇಕ ಮಹತ್ವದ ಆಯಾಮ ಗಳನ್ನು ಒಳಗೊಂಡ ಒಂದು ಪುಣ್ಯಕ್ಷೇತ್ರ. ಅನೇಕ ವರ್ಷಗಳ ಒಡನಾಟ ಮತ್ತು ವಿಭಿನ್ನ ಅನುಭವಗಳ ಅರಿವಿನಿಂದ ದೊರೆತ ವಿಶೇಷಗಳನ್ನು ವಿಶ್ಲೇಷಿಸಿ ಸಂಪ್ರಬಂಧವನ್ನು ರಚಿಸಲಾಗಿದೆ.

ಎರಡು ಹೊಸ ಅಪ್ರಕಟಿತ ಶಾಸನಗಳು

ಅ) ಸಂಸ್ಕೃತ ಶಾಸನ: ಹರಿಹರ ನಗರದ ಮಧ್ಯೆ ಬಸ್ ನಿಲ್ದಾಣದಿಂದ ಹರಿಹರೇಶ್ವರ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿ ಪೇಟೆ ಆಂಜನೇಯ ದೇವಸ್ಥಾನವಿದೆ. ಆಳೆತ್ತರದ ಮಾರುತಿಯ ಮೂರ್ತಿಶಿಲ್ಪ ವಿಜಯನಗರ ಕಾಲಕ್ಕೆ ಸಂಬಂಧಿಸಿದ್ದುದೆಂದು ಊಹಿಸಬಹುದಾದರೂ, ಅದರ ಈಗಿನ ಗರ್ಭಗುಡಿಯ ಬಾಗಿಲುವಾಡವು ಮಾತ್ರ ಹೊಯ್ಸಳ ಶಿಲ್ಪದ ಮಾದರಿಯಲ್ಲೇ ಇದೆ. ಮೂರ್ತಿಯ ಮುಖಭಾಗ ಮೇಲಿರುವ ಜಾಗದಲ್ಲಿ ನಾಲ್ಕೂವರೆ ಸಾಲಿನ ಒಂದು ಸಂಸ್ಕೃತ ಭಾಷೆಯ ಶಾಸನವನ್ನು ಕಂಡರಿಸಲಾಗಿದ್ದು ಅದೂ ಕೂಡಾ ಪ್ರಾಯಶಃ ವಿಜಯನಗರಕಾಲದ್ದೆಂದು ತಿಳಿಯ ಬಹುದಾಗಿದೆ. ಶಾಸನದ ಕಾಲ ನಮೂದಿತವಾಗಿಲ್ಲ. ಅಕ್ಷರಗಳ ವಿನ್ಯಾಸ ಮತ್ತು ಅಲ್ಲಿರುವ ಪರಂಪರಾನುಗತ ನಂಬಿಕೆಯಂತೆ ಮೂರ್ತಿಯು ಕೃಷ್ಣದೇವರಾಯನ ಗುರುಗಳಾದ ವ್ಯಾಸರಾಜ ರಿಂದ ಸ್ಥಾಪಿತವಾಗಿದೆ ಎನ್ನಲು ಬಾಲದ ತುದಿಯಲ್ಲಿ ಢಾಳಾಗಿ ಕಟ್ಟಿರುವ ಗಂಟೆಯಿಂದ ಊಹಿಸಬಹುದಾಗಿದೆ. ವೀರ ಮಾರುತಿಯ ಭಂಗಿಯಲ್ಲಿ ಹಲ್ಲು ಕಿರಿದು, ಬಲಗೈ ಎತ್ತಿ ನಿಂತಿರುವುದನ್ನು ಸ್ಪಷ್ಟವಾಗಿ ಗಮನಿಸಬಹುದಾಗಿದೆ. ಹನುಮಂತನ ಸ್ತುತಿಯನ್ನು ಹೊಂದಿರುವ ಈ ಸಣ್ಣ ಶಾಸನದ ಸಾಲುಗಳು ಹೀಗಿವೆ.

೧. ನಮಸ್ತೆ ಹನು
೨. ಮತೇ ವೈನ್ಯತೇಯ ವೃ
೩. ಕೋದರಾ ಪ್ರ(ಸೇ) ಸ್ವೇ(?) ತಾಂ ದ್ವಿ
೪. ಜೇದ್ವಿಪ್ತೇ ತಥಾವೈನ್ಯ
೫. ತೇವೇದತೇ ॥

೨. ಪರ್ಷಿಯನ್ ಲಿಪಿಯ ಶಾಸನ : ಹರಿಹರೇಶ್ವರ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿ, ತೇರಿನ ಗಡ್ಡೆ (ತೇರಿನ ಚಕ್ರಗಳು ಮತ್ತು ಉತ್ಸವಮೂರ್ತಿಗಳನ್ನು ಇಡುವ ಭಾಗ) ಮತ್ತು ಅದರ ಎದುರಿಗೆ ಒಂದು ಮಸೀದಿ ಇದೆ. ಅದರ ಪಕ್ಕದಲ್ಲಿ ಚಿತ್ರದಲ್ಲಿ ತೋರಿಸಿರುವಂತೆ ಒಂದು ಸಣ್ಣ ಸೇದುವ ಬಾವಿ ಇದೆ. ಆ ಬಾವಿಯನ್ನು ಈಗ ಎರಡು ಮೂರು ಹಾಸು ಬಂಡೆಗಳಿಂದ ಮುಚ್ಚಲಾಗಿದೆ. ೨೦೧೨ನೆಯ ಇಸ್ವಿಯಲ್ಲಿ ದೇವಸ್ಥಾನಕ್ಕೆ ಹೋಗುವ ದಾರಿಯು ಹಿಂದೆ ಬಹಳ ಸಣ್ಣದಿದ್ದು ಅದರ ಅಗಲೀಕರಣ ಮತ್ತು ಸಿಮೇಂಟ್ ರೋಡ್‌ಗಳನ್ನು ಮಾಡುವಾಗ ಅಂಗಡಿ ಮುಂಗಟ್ಟುಗಳು ಹಾಗೂ ಮಸೀದಿಯನ್ನೂ ಕಿತ್ತೆಗೆದು ಹಾಕುವ ಸಂದರ್ಭ ಬಂದಿತ್ತು. ಬುಲ್‌ಡೋಜರ್‌ನಿಂದ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಮಸೀದಿಯನ್ನೂ ಮತ್ತು ಅದರ ಪಕ್ಕದಲ್ಲಿರುವ ಸಣ್ಣ ಬಾವಿಯನ್ನೂ ನೆಲಸಮ ಮಾಡುವ ಹೊತ್ತಿನಲ್ಲಿ ಬಾವಿಯ ಮೇಲಿನ ಹಾಸುಕಲ್ಲುಗಳನ್ನು ತೆಗೆಯುತ್ತಿದ್ದಾಗ ಬಾವಿಯ ಒಳಗೆ ಇರುವ ಸಣ್ಣದೊಂದು ಮೂರು ಸಾಲಿನ ಲಿಪಿ ಇರುವ ಶಾಸನ ಒಂದು ಕಂಡುಬಂದಿತು. ಆ ಶಾಸನದಲ್ಲಿ ಏನು ಬರೆದಿದ್ದಾರೆ ಎಂದು ಅಧಿಕಾರಿಗಳು ಮಾಡಿದ್ದರ ಫಲವಾಗಿ ಇಡೀ ಮಸೀದಿಯು ಒಂದು "ಐತಿಹಾಸಿಕ ಸ್ಮಾರಕ"ವೆಂದು ಪರಿಗಣಿತವಾಗಿ ಮಸೀದಿಯನ್ನು ಹಾಗೆಯೇ ಉಳಿಸಿ ಕೊಳ್ಳಬೇಕೆಂದು ನಿರ್ಣಯಿಸಲಾಯಿತು.

ವಿವರ: ಶಾಸನವು ಮೂರು ಸಾಲುಗಳನ್ನು ಒಳಗೊಂಡಿದ್ದು ಮೊದಲಲ್ಲಿಯೇ ಕನ್ನಡದ ಅಂಕೆಗಳಿಂದ ಇದು ಕ್ರಿ.ಶ.೧೬೪೯ನೇ ಇಸ್ವಿ ಅಂದರೆ ಕ್ರಿ.ಶ.೨೦೧೬ಕ್ಕೆ ೩೨೭ ವರ್ಷಗಳಷ್ಟು ಹಿಂದಿನದು ಎಂದು ಸ್ಪಷ್ಟವಾಗಿ ನಮೂದಿಸಲಾಗಿದೆ.

* # ೭೫/೧೫, ಸಮರ್ಥ, ವಿಕಾಸ್ ಹೈಸ್ಕೂಲ್ ಎದುರು, ೫ನೇ ಬ್ಲಾಕ್, ೩ನೇ ಫೇಸ್, ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦೦೮೫.

ಎರಡನೆ ಸಾಲು ಪರ್ಷಿಯನ್ ಲಿಪಿಯನ್ನು ಹೊಂದಿದೆ. ಇನ್ನು ಮೂರನೇ ಸಾಲು ಇತ್ತೀಚಿನ ಕನ್ನಡಲಿಪಿಯಲ್ಲೇ ಇರುವುದರಿಂದ ಬಾವಿಯನ್ನೊಮ್ಮೆ ಬಗ್ಗಿ ನೋಡಿದಾಗ ಅದರಲ್ಲಿ ಇನ್ನೂ ನೀರಿರುವುದು ಮತ್ತು ಆ ಬಾವಿಯ ಕಟ್ಟಡದ ರಚನೆ ಶಾಸನಕಾಲಕ್ಕೇ ಸೇರಿದ್ದೆಂದು ಅನ್ನಿಸುತ್ತದೆ. ಇನ್ನೊಂದು ಅಂಶವೆಂದರೆ ಹಿಂದೂ ದೇವಸ್ಥಾನಗಳ ಪಕ್ಕದಲ್ಲಿ ದೇವರ ಪೂಜೆ ಮತ್ತು ತೀರ್ಥಗಳಿಗೆ ಉಪಯೋಗಿಸಲು ಅನೇಕ ಶತಮಾನಗಳಿಂದಲೂ ಬಾವಿಗಳು ಇರುವಂತೆ ಇಲ್ಲಿಯೂ "ಅಲಾ(ಅಲ್ಲಾ)ವಿ ದೇವರ" ಹೆಸರಿದೆ.

೧. ३.೬.೧೬೪೯.



೨. [ಪರ್ಷಿಯನ್ ಲಿಪಿಯಲ್ಲಿದೆ]

೩. ಅಲಾವಿ ದೇವರ ಭಾವಿ.

೪. ಪ್ರಕಟಿತ ಕೆಲವು ಶಾಸನಗಳ ವಿಶ್ಲೇಷಣೆ: ನೈಸರ್ಗಿಕ ವಿಕೋಪ ಪರಿಸ್ಥಿತಿಗಳಲ್ಲಿ ಒಂದಾದ ನೆರೆ ಪರಿಹಾರವನ್ನು ಹೇಗೆ ಪರಿಹರಿಸಿಕೊಂಡು ಅದನ್ನು ಜಲ ನಿರ್ವಹಣೆಗೆಂದು ಬಳಸಿಕೊಂಡು, ಬರಡು ಭೂಮಿಯನ್ನು ಹಸಿರ ಹಸಿರಾಗು ವಂತೆ ಮಾಡಿ, ಭತ್ತ, ತೆಂಗು, ಅಡಿಕೆ ಬೆಳೆಯುವ ಪ್ರದೇಶವನ್ನಾಗಿ ಮಾರ್ಪಡಿಸಿದ್ದನ್ನು ೪೭೦ ವರ್ಷಗಳಷ್ಟು ಹಿಂದಿನ ಹರಿಹರದ ಶಾಸನಗಳು ಉಲ್ಲೇಖಿಸುತ್ತಿವೆ (ರೈಸ್. ಸಂ. ೧೧ ದಾ. ಶಾ. ಸಂ. ೨೯). ಈ ವಿಚಾರವನ್ನು ಬಿ.ಎಲ್. ರೈಸ್, ಶಂಕರ ನಾರಾಯಣರಾಯರು, ಜಿ.ಎಸ್. ದೀಕ್ಷಿತ್, ಸಿ.ಟಿ.ಎಂ. ಕೊಟ್ರಯ್ಯ ಇನ್ನೂ ಮುಂತಾದವರು ಈ ಮುಂಚೆ ಉಲ್ಲೇಖಿಸಿದ್ದಾರೆ. ಆದರೆ ಇಲ್ಲಿ ಶಾಸನೋಕ್ತ ಊರುಗಳ ಹೆಸರುಗಳನ್ನು ಇಂದಿನ ಕಾಂಟೂರು (ಭೂಮಿಯ ಇಳಿಜಾರು ಮತ್ತು ಏರು ತಗ್ಗು)ಗಳ ಮಾಹಿತಿಯನ್ನು ಆಧರಿಸಿ ನಕ್ಷೆ ತಯಾರಿಸುವು ದರ ಮೂಲಕ ಗುರುತಿಸಲಾಗಿದೆ. ***"ನೆರೆ ನೀರನ್ನು ಕಟ್ಟೆ ಕಟ್ಟಿ ಬಳಸಿಕೊಳ್ಳಲು ಕೊಳ್ಳುವ ವಿಧಾನಕ್ಕೆ ಹಿಂದೂ ದೇಶದಲ್ಲಿಯೇ ಈ ಶಾಸನವು ಒಂದು ಉತ್ತಮ ಉದಾಹರಣೆ ಎಂದು ಜಾಗತಿಕ ನೀರಾವರಿ ಬ್ಯಾಂಕ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಕೇಂದ್ರೀಯ ಜಲ ಆಯೋಗದ ಹಿಂದಿನ ಅಧ್ಯಕ್ಷರಾಗಿದ್ದ ಡಾ. ಚಿತ್ತಲೆಯವರು ಹೇಳಿದ್ದಾರೆ."*** ನದಿ ನೆರೆ ನೀರನ್ನು ಬಳಸಿಕೊಂಡಿರುವ ಭೂಭಾಗದ ವಿಸ್ತೀರ್ಣ ಶಾಸನೋಕ್ತ ಬನ್ನಿಕೋಡಿನಿಂದ ಗಂಗನರಸಿಯ ವರೆಗೆ ೪೦ ಚದರ ಕಿಲೋ ಮೀಟರ್‌ಗಳಷ್ಟು ವಿಸ್ತಾರವಾಗಿದೆ. ಒಟ್ಟು ಜಲಾನಯನ ಪ್ರದೇಶ ಸು.೪೦,೦೦೦ ಹೆಕ್ಟೇರುಗಳಾದರೆ, ಅಚ್ಚುಕಟ್ಟು ಪ್ರದೇಶ ೩೦ ಸಾವಿರ ಹೆಕ್ಟೇರುಗಳು. ಈಗ ಈ ಅಣೆಕಟ್ಟು ಪೂರ್ಣ ನಾಶ ಹೊಂದಿದ್ದರೂ ಶಾಸನೋಕ್ತವಾಗಿ ನೀರಾವರಿ ತಜ್ಞರಾಗಿದ್ದ, ಬುಳ್ಳಪ ಮತ್ತು ಚಾಮರಸರು ಇದ್ದಿದ್ದಕ್ಕೆ ಸಾಕ್ಷಿಯನ್ನು ಒದಗಿಸುತ್ತವೆ. ಇನ್ನೊಂದು ವಿಷಯವೆಂದರೆ ಭಾರತ ಜಲವಿಜ್ಞಾನ ತಂತ್ರಜ್ಞಾನವನ್ನು ವಿಶೇಷವಾಗಿ ವಿದೇಶಗಳಿಗೂ ಹಬ್ಬುವಂತೆ ಮಾಡಿದ್ದ ಕರ್ನಾಟಕದ ಹೆಸರಾಂತ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಹೆಸರಿನಿಂದ ಕೇವಲ ಬಡಾವಣೆಗಳ ಹೆಸರುಗಳು ಮಾತ್ರ ಇವೆ. ಆದರೆ ಮೇಲೆ ಹೇಳಿದ ಅಣೆಕಟ್ಟನ್ನು ನಿರ್ಮಿಸಿದ್ದಂತಹ ಬುಳ್ಳಪನ ಹೆಸರಿನಲ್ಲಿ ಹರಿಹರದಿಂದ ಸುಮಾರು ಏಳು ಕಿ.ಮೀ. ದೂರದಲ್ಲಿ ಗಂಗನರಸಿಯ ಇನ್ನೊಂದು ರಸ್ತೆಯ ಬದಿಯಲ್ಲಿ "ಬುಳ್ಳಾಪುರ"ವೆಂದು ಒಂದು ಹಳ್ಳಿ (ಹಿಂದೆ ಪುರ ಅಥವಾ ಪಟ್ಟಣದ)ಯ ಹೆಸರೇ ಇದೆ. ಇದು ಆ ಜಲತಂತ್ರಜ್ಞನಿಗೆ ಅಂದಿನ ಜನರು ತೋರಿಸಿದ್ದ ಗೌರವದ ದ್ಯೋತಕವಾಗಿದೆ.

ಚಿತ್ರದುರ್ಗ ಶಾಸನ ಸಂಪುಟ ೧೧ರಲ್ಲಿ ಪ್ರಕಟವಾಗಿರುವ ಶಾಸನ ಸಂಖ್ಯೆ ೬೬ ಮತ್ತು ೬೭ ಇವು, ತಾಮ್ರಪಟಗಳಾಗಿದ್ದು ಇವನ್ನು ರೈಸ್ ಅವರು ಹರಿಹರದಲ್ಲಿರುವ ಶ್ಯಾನುಭೋಗ ಶೀತಾರಾಮಯ್ಯ ಮತ್ತು ರಾಮಕೃಷ್ಣಯ್ಯ ಅವರುಗಳಿಂದ ಪಡೆದಿರುವುದಾಗಿ ಉಲ್ಲೇಖಿಸಿರುತ್ತಾರೆ. ಐತಿಹಾಸಿಕ ಮಹತ್ವವುಳ್ಳ ಈ ತಾಮ್ರಪಟಗಳಲ್ಲಿ ಉಲ್ಲೇಖಿಸಲಾಗಿರುವ ಶ್ರೀ ಶೀತಾರಾಮಯ್ಯನವರು ನನ್ನ ಅಂದರೆ ಡಾ. ಹರಿಹರ ಶ್ರೀನಿವಾಸರಾವ್ ಅವರ ಮುತ್ತಜ್ಜನವರು ಹಾಗೂ ಶ್ರೀ ರಾಮಕೃಷ್ಣಯ್ಯನವರು ಶ್ರೀ ಸೀತಾರಾಮಯ್ಯನವರ ತಮ್ಮಂದಿರಾಗಿದ್ದವರು. ಇವರು ಮನೆತನದಿಂದ ಅನೂಚಾನವಾಗಿ ಶ್ರೀಹರಿಹರೇಶ್ವರ ದೇವಸ್ಥಾನದ ಧರ್ಮದರ್ಶಿಗಳಾಗಿದ್ದಾರೆ. ಈಗಲೂ ದೇವತಾ ಕೈಂಕರ್ಯಗಳಾದ ಕಲ್ಯಾಣೋತ್ಸವ, ರಥೋತ್ಸವ, ನಾಲ್ಕು ವರ್ಷಗಳಿಗೊಮ್ಮೆ ಅತ್ಯಂತ ವಿಜೃಂಭಣೆಯಿಂದ ನಡೆಯುವ ಊರಮ್ಮನ ಹಬ್ಬ ಇತ್ಯಾದಿಗಳು ಈ ಮನೆತನದವರ ವತಿಯಿಂದಲೇ ನಡೆಯತ್ತವೆ. ೬೭ನೇ ಶಾಸನದಲ್ಲಿ ಉಲ್ಲೇಖಿತವಾಗಿರುವ ಹಿಂದೆ ಕೊಟ್ಟೂರುಚಾವಡಿಯಲ್ಲಿದ್ದ "ಮಿಟ್ಟಿಗನ ಕಟ್ಟೆ" ಈಗ ದಾವಣಗೆರೆ ಹೊರವಲಯದ ಒಂದು ಭಾಗವಾಗಿದೆ. ದಾನ ಕೊಟ್ಟಿದ್ದ ಮಿಟ್ಟಿಗನ ಕಟ್ಟೆಯ ಜಮೀನಿನ ಕೆಲವು ಭಾಗಗಳು ಈಗಿನ ನಮ್ಮ ದೇಶದ ಪ್ರಮುಖ ಹೆದ್ದಾರಿ ರಸ್ತೆ ಸಂಖ್ಯೆ.೪ (ಪೂನಾ-ಬೆಂಗಳೂರು ರೋಡ್)ರ ವ್ಯಾಪ್ತಿಯಲ್ಲಿ ಬಂದಾಗ ಕ್ರಿ.ಶ.೧೯೬೯ರಲ್ಲಿ ಸರ್ಕಾರದಿಂದ ಕೊಡ ಮಾಡಲ್ಪಟ್ಟ ಅನುದಾನದ ಮೊತ್ತ ಎರಡು ಸಾವಿರ ರೂಪಾಯಿಗಳನ್ನು ಈ ಲೇಖಕನು ಸ್ವೀಕರಿಸಿದ್ದು ನಮ್ಮ ಮನೆತನದ ಗೌರವ ಮತ್ತು ಅಂದಿನ ನಮ್ಮವರು ಮಾಡಿದ್ದ ಸಾಮಾಜಿಕ ಕಾರ್ಯಗಳಿಗಾಗಿ ಸುಮಾರು ೬ನೆಯ ಶತಮಾನದಿಂದ ಇಂದಿನವರೆಗೆ ರಾಜ ಮನೆತನದವರಾಗಲೀ,




ಸರ್ಕಾರಗಳಾಗಲೀ ತೋರಿಸಿರುವ ಪ್ರೀತಿ, ವಿಶ್ವಾಸಗಳಿಗೆ ಅತ್ಯುತ್ತಮ ಜೀವಂತ ಉದಾಹರಣೆಗಳಾಗಿವೆ ಎಂದರೆ ತಪ್ಪಾಗಲಾರದು.

ಎರಡನೆ ಮಹಾಯುದ್ಧದ ಪಳಿಯುಳಿಕೆ ಕಟ್ಟಡಗಳು: ಹರಿಹರದ ಶ್ರೀ ಸಮರ್ಥ ನಾರಾಯಣಾಶ್ರಮದಿಂದ ೩೦೦ ಮೀಟರ್‌ಗಳ ದೂರದಲ್ಲಿ ಈ ಕಟ್ಟಡಗಳ ಪಳಿಯುಳಿಕೆಗಳನ್ನು ಕಾಣಬಹುದಾಗಿದೆ. ೮ X ೧೦ ಅಡಿಗಳಷ್ಟಿರುವ ಈ ಇಟ್ಟಿಗೆ ಮತ್ತು ಸಿಮೆಂಟ್ ಉಪಯೋಗಿಸಿ ಕಟ್ಟಿರುವ ಈ ಕೋಣೆಗಳಲ್ಲಿ ೨ನೇ ಮಹಾಯುದ್ಧದಲ್ಲಿ ಬಂಧಿಸಲಾಗಿದ್ದ ಕೈದಿಗಳನ್ನು ಕೂಡಿಹಾಕಲಾಗುತ್ತಿತ್ತೆಂದು ತಿಳಿದು ಬರುತ್ತದೆ. ಯುದ್ಧದ ಅವಧಿಯಲ್ಲಿ ಕೇವಲ ಆರು ತಿಂಗಳ ಒಳಗೇ ತುಂಗಭದ್ರಾ ನದಿಯ ದಂಡೆಯಿಂದ ಗುತ್ತೂರು ಕಾಲೊನಿ (ಹರಿಹರ–ಹರಪನಹಳ್ಳಿ ರಸ್ತೆ)ವರೆಗೆ ಅಂದರೆ ಸುಮಾರು ಎರಡೂವರೆ ಕಿಲೋ ಮೀಟರ್‌ವರೆಗೆ ಒಂದು ದೊಡ್ಡ ನಗರವನ್ನೇ ನಿರ್ಮಿಸಲಾಗಿತ್ತು. ಇದರಂತೆಯೇ ಹರಿಹರ–ಶಿವಮೊಗ್ಗಾ ರಸ್ತೆಯಲ್ಲಿ ಬರುವ ತಿರುವಿನ ದಾರಿಯಲ್ಲೂ ಇನ್ನೊಂದು ಅಷ್ಟೇ ದೊಡ್ಡ ನಗರವು ನಿರ್ಮಾಣ ಮಾಡಿದ್ದರೆಂದು ತಿಳಿದು ಬರುತ್ತದೆಯಾದರೂ ಆ ಭಾಗದಲ್ಲಿ ಇಂತಹ ಪಟ್ಟಣ ನಿರ್ಮಾಣವಾಗಿದ್ದ ಯಾವ ಕಟ್ಟಡಗಳೂ ಈಗ ಕಂಡುಬರುವುದಿಲ್ಲ. ಬೆಟಾಲಿಯನ್ ೨೧ ಎಂದು ಹೆರಿಸಲಾಗಿದ್ದ ಮಿಲಿಟರಿ ಪಡೆಗೆ ಹರಿಹರದ ಬ್ರಾಹ್ಮರನ್ನೂ ಒಳಗೊಂಡಂತೆ ಎಲ್ಲ ಜನಾಂಗದ ಯುವಕರನ್ನೂ ಸೇರಿಸಿಕೊಳ್ಳಲಾಗಿದ್ದು ಮೈಸೂರು ಸಂಸ್ಥಾನದಲ್ಲಿ ಈ ಬಗೆಗೆ ವಿವರಗಳಿವೆ ಎನ್ನುವ ವಿಷಯ ತಿಳಿದು ಬಂದಿರುವುದರಿಂದ ಮುಂದಿನ ಸಂಶೋಧನೆಗೆ ಹೆಚ್ಚಿನ ಅವಕಾಶಗಳುಂಟು.

ಗರಡಿ ಮನೆಗಳು: ಹರಿಹರವು ಐತಿಹಾಸಿಕವಾಗಿ ರಕ್ಷಣೆಯ ಆಯಕಟ್ಟಿನ ಭಾಗವೂ ಆಗಿತ್ತೆನ್ನಲು ಇಲ್ಲಿರುವ ತುಂಗಭದ್ರಾ ನದಿಯಂತೆ ಕಟ್ಟಾಳುಗಳನ್ನು ತಯಾರಿಸುವ ಗರಡೀ ಮನೆಗಳೂ ಸುಮಾರಾಗಿ ಪ್ರತಿ ಬೀದಿಗೊಂದರಂತೆ ಕಂಡುಬರುವ ಹನುಮಂತನ ಗುಡಿಗಳೂ ಸಾಕ್ಷಿಯಾಗಿವೆ. ಹಿಂದೆ ಇದ್ದಂತಹ ಗರಡಿಮನೆಗಳ ವಿನ್ಯಾಸಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು ಈಗಲೂ ಇಲ್ಲಿ ಕುಸ್ತಿಪಟುಗಳಿಗೆ ಹಳೆಯ ಹಾಗು ಹೊಸ ಪಟ್ಟುಗಳ ಸಹಿತ ಉಚಿತವಾಗಿಯೇ ಹೇಳಿಕೊಡುವ ಅನೇಕ ಪೈಲ್ವಾನರುಗಳನ್ನು ಇಲ್ಲಿ ನೋಡಬಹುದಾಗಿದೆ. ಚಿತ್ರದಲ್ಲಿ ತೋರಿಸಿರುವ ದೊಡ್ಡಗರಡಿಯ ಸಾಧನಗಳನ್ನು ಇಂದಿಗೂ ಬಳಸಲಾಗುತ್ತಿರುವುದೂ ಒಂದು ವಿಶೇಷವೇ ಸರಿ. "ಊರಮ್ಮನ ಹಬ್ಬ – ಜಾತ್ರೆಗಳಲ್ಲಿ" ಅನೇಕ ಸಾವಿರ ಪ್ರೇಕ್ಷಕರೆದುರು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿ, ರಾಜ್ಯ ಮಟ್ಟದ ಕುಸ್ತಿ ಪಂದ್ಯಗಳನ್ನು ಸರ್ಕಾರದ ಸಹಾಯವಿಲ್ಲದೇ ಸಾವಿರಾರು ರೂಪಾಯಿಗಳ ಬಹುಮಾನ ಪಡೆಯುವುದು ಇಲ್ಲಿಯ ಯುವಕರ ಹಾಗೂ ಮಹಾಜನರ ಪ್ರಾಚೀನ ಕಲೆಯ ಪ್ರೀತಿಯ ದ್ಯೋತಕವಾಗಿದೆ.

[ಆಕರಗಳು ಮತ್ತು ಕೃತಜ್ಞತೆ : ಎಪಿಗ್ರಾಫಿಯಾ ಕರ್ನಾಟಿಕಾ ಸಂ. ೧೧, ವಿವಿಧ ಜನರ ಸಂದರ್ಶನಗಳ ಧ್ವನಿಮುದ್ರಣ. ಸಹಕಾರ: ಶ್ರೀಮತಿ ವಿನೋದ ಸುಬ್ರಮ್ಮಣ್ಯಂ, ಹರಿಹರ ಮತ್ತಿತರರು. ಚಿತ್ರಗಳು: ಶ್ರೀಮತಿ ಎಸ್. ಮಾಲತಿ ಮತ್ತು ನೀಲಾದ್ರಿ ಮಂಡಲ್, ಕೋಲ್ಕೊತ್ತಾ.]

೨೭

ಹೊನ್ನೂರಿನ ಅಪ್ರಕಟಿತ ಶಾಸನ ಮತ್ತು ಮೂರ್ತಿ ಶಿಲ್ಪಗಳು

ಅನಿಲ್.ಎಲ್.*

ಚಾಮರಾಜನಗರ ಜಿಲ್ಲೆಯ ತಾಲೂಕುಗಳಲ್ಲಿ ಒಂದಾದ ಯಳಂದೂರು ತಾಲೂಕು ಐತಿಹಾಸಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕವಾಗಿ ಪ್ರವಾಸಿ ಕೇಂದ್ರವಾಗಿ ಖ್ಯಾತಿಯನ್ನು ಪಡೆದುಕೊಂಡಿದೆ. ಇದು ಚಾಮರಾಜನಗರ ಜಿಲ್ಲೆಯ ಪೂರ್ವ ಭಾಗಕ್ಕಿದ್ದು, ಭೂಪಟದಲ್ಲಿ ಇದು ೧೨" ೧೩' ಉತ್ತರ ಅಕ್ಷಾಂಶದಿಂದ ೭೭" ೫' ಪೂರ್ವ ರೇಖಾಂಶದವರೆಗೆ ಹಬ್ಬಿದೆ. ಇಲ್ಲಿ ಸುವರ್ಣಾವತಿ ನದಿಯು ಹರಿಯುತ್ತಿದ್ದು ಫಲವತ್ತತೆಯಿಂದ ಕೂಡಿದೆ. ಹೀಗಿರುವಾಗ ಈ ತಾಲೂಕು ಕೇಂದ್ರದಿಂದ ಸುಮಾರು ೫ ಕಿ.ಮೀ ದೂರದಲ್ಲಿರುವ ಹೊನ್ನೂರು ಗ್ರಾಮವು ಪುರಾಣಪ್ರಸಿದ್ಧ ಸ್ಥಳವಾಗಿದೆ. ಕ್ಷೇತ್ರಕಾರ್ಯಕ್ಕೆ ಹೋದಂತಹ ಸಂದರ್ಭದಲ್ಲಿ ನನಗೆ ಒಂದು ತಮಿಳುಶಾಸನ ಹಾಗೂ ೫ ಮೂರ್ತಿ ಶಿಲ್ಪಗಳು ಗೋಚರಿಸಿದವು. ಈ ದೃಷ್ಟಿಯಿಂದ ನಾನು ಇವುಗಳ ಸಂಶೋಧನಾ ಅಧ್ಯಯನ ಸಲುವಾಗಿ ರಚಿತವಾದುದ್ದೆ ಈ ಕಿರುಲೇಖನ ಈ ಹೊನ್ನೂರು ಗ್ರಾಮವನ್ನು ಶಾಸನಗಳಲ್ಲಿ **"ತುಳುವಲದೇವಿ ಚತುರ್ವೇದಿ ಮಂಗಲಂ ಪೊನ್ನೂರು** ಎಂಬುದಾಗಿ ಉಲ್ಲೇಖವಾಗಿರುವುದು ಗಮನಾರ್ಹ.

ಈ ಶಾಸನವು ಹೊನ್ನೂರು ಗ್ರಾಮದಲ್ಲಿರುವ ರಾಕ್ಕಸಮ್ಮ ದೇವಾಲಯದ ಎಡಭಾಗದಲ್ಲಿದ್ದು ಇದು ಸುಮಾರು ೩ ಅಡಿ ಉದ್ದ, ೧.೫ ಅಡಿ ಅಗಲ, ೦.೫ ಅಡಿ ದಪ್ಪವಿರುವ ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿದ್ದು ಇದರ ಎಡಭಾಗದಲ್ಲಿ ವೀರನೊಬ್ಬನ ಉಬ್ಬುಶಿಲ್ಪವನ್ನು ಕೆತ್ತನೆ ಇದೆ. ಈ ಶಾಸನದ ಭಾಷೆ **ಸಂಸ್ಕೃತ** ಹಾಗೂ ಲಿಪಿ **ತಮಿಳು ಗ್ರಂಥ**. ಈ ಲಿಪಿಯು ಸುಮಾರು ೧೨ನೇ ಶತಮಾನದಾಗಿದೆ. ಗ್ರಾನೈಟ್ ಶಿಲೆಯಾಗಿದ್ದರೂ ಲಿಪಿಯನ್ನು ಆಳವಾಗಿ ಸುಂದರವಾಗಿ ಕೊರೆದಿರುವುದು ಈ ಶಾಸನದ ವಿಶೇಷವಾಗಿದೆ.

ವೀರನಶಿಲ್ಪ

ಇದು ಗ್ರಾನೈಟ್ ಶಿಲೆಯದಾಗಿದ್ದು ೩ ಅಡಿ ಉದ್ದ, ೧.೫ ಅಡಿ ಅಗಲ, ೦.೫ ಅಡಿ ದಪ್ಪವಿದ್ದು ಒಂದು ಪಟ್ಟಿಕೆಯಿಂದ ಕೂಡಿದೆ. ಇದರಲ್ಲಿ ವೀರನು ರಣರಂಗಕ್ಕೆ ಹೊರಡುವ ಸನ್ನಿವೇಶವಿದ್ದು ಎರಡು ಕೈಗಳಲ್ಲಿ ಬಿಲ್ಲು ಮತ್ತು ಬಾಣವನ್ನು ಹಿಡಿದಿದ್ದು ವೀರವೇಶದಿಂದ ಹೋರಾಟಕ್ಕೆ ಹೊರಡುತ್ತಿರುವ ದೃಶ್ಯ ವಿಶೇಷವಾಗಿ ಮೂಡಿಬಂದಿದೆ. ವೀರನ ಕರ್ಣಕುಂಡಲವು ಸುಂದರವಾಗಿದ್ದು ದುಂಡನೆಯ ಮಾದರಿಯ ಕೇಶಾಲಂಕಾರವನ್ನು ಹೊಂದಿದ್ದು ದಪ್ಪನಾದ ಮೀಸೆಯನ್ನು ಹೊಂದಿದ್ದಾನೆ. ವಿಶೇಷವಾಗಿ ಗಮನಿಸಿದರೆ ವೀರನು ಉತ್ತಮವಾದ ಶರೀರವನ್ನು ಹೊಂದಿದ್ದು ರಣರಂಗದಲ್ಲಿ ವೀರಾವೇಶದಿಂದ ಹೋರಾಡುವ ಮಾದರಿಯು ಶಿಲ್ಪದಲ್ಲಿ ಮೂಡಿಬಂದಿದೆ.


ಶಾಸನದ ಪಾಠ

ಶಕ ಶನಿವಾರ ಸಿದ್ದಿ ಗಿರಿದುರ್ಗಾ

ಶಾಸನದ ಸಾರಾಂಶ

ಈ ಶಾಸನದಲ್ಲಿ ಉಲ್ಲೇಖವಾದ ಕಾಲ ಸಕ (ಶಕ) ಎಂದು ನಮೂದಿಸಿದೆ. ಆದರೆ ಸ್ಪಷ್ಟವಾಗಿ ಕಾಲದ ಉಲ್ಲೇಖವಿಲ್ಲ. ಸಾಮಾನ್ಯವಾಗಿ ರಾಜನ ಬಿರುದಾವಳಿಗಳಾದ **"ಶನಿವಾರ ಸಿದ್ಧಿ, ಗಿರಿದುರ್ಗಾ"** ಎಂಬ ವಿಷಯಗಳನ್ನು ಇಲ್ಲಿ ಖಂಡರಿಸಿದೆ. ಹಾಗಾಗಿ ಈ ವೀರಗಲ್ಲಿಗೂ ಮತ್ತು ಇಲ್ಲಿರುವ ಶಾಸನದ ವಸ್ತು ವಿಷಯಕ್ಕೂ ಯಾವುದೇ ಸಂಬಂಧವಿಲ್ಲ. ಆದ್ದರಿಂದ ಈ ಶಾಸನವನ್ನು ಮೊದಲು ಬರೆಸಿ ನಂತರ ವೀರನ ಶಿಲ್ಪವನ್ನು ಕೆತ್ತಿರಬಹುದು ಈ ಶಿಲ್ಪವನ್ನು ವಿಜಯನಗರ ಕಾಲದಲ್ಲಿ ಕಂಡುಬರುವ ಶಿಲ್ಪದ ಮಾದರಿಯನ್ನು ಹೋಲುತ್ತದೆ. ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ.


* ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.



ಹೊನ್ನೂರಿನ ಅಪ್ರಕಟಿತ ತಮಿಳು ಶಾಸನ



ಹೊನ್ನೂರಿನ ಅಪ್ರಕಟಿತ ತಮಿಳು ಶಾಸನ ಮತ್ತು ವೀರಗಲ್ಲು



ಹೊನ್ನೂರಿನ ಅಪ್ರಕಟಿತ ತಮಿಳು ಶಾಸನ

ಈ ಶಿಲ್ಪವು ಗ್ರಾನೈಟ್ ಶಿಲೆಯಿಂದ ಕೂಡಿದ್ದು ೨ ಅಡಿ ಎತ್ತರ ಒಂದುವರೆ ಅಡಿ ಅಗಲವಾಗಿದ್ದು ಚತುರ್ಭುಜಾಕೃತಿಯಿಂದ ಕೂಡಿದ್ದು ೩ ತಲೆಯನ್ನು ಹೊಂದಿದೆ. ಬಲಭಾಗದ ೨ ಕೈಗಳಲ್ಲಿ ಡಮರುಗವನ್ನು ಹಿಡಿದಿದ್ದು ಎಡಭಾಗದಲ್ಲಿ ಒಂದು ಕೈಯಲ್ಲಿ ತ್ರಿಶೂಲ ಮತ್ತೊಂದು ಕೈಯನ್ನು ಕೆಳಕ್ಕೆ ಇಳಿಬಿಟ್ಟಿರುವುದನ್ನು ಕಾಣುತ್ತೇವೆ. ಜೊತೆಗೆ ಬಲಗಾಲನ್ನು ಇಳಿಬಿಟ್ಟಿರುವುದನ್ನು ಮತ್ತೊಂದು ಕಾಲನ್ನು ಮಡಚಿರುವಂತಿದೆ. ಇದರಿಂದ ಇದೊಂದು ದೇವತೆಯ ಶಿಲ್ಪ ಎಂದು ಹೇಳಬಹುದಾಗಿದೆ.

ಕುದುರೆಯ ಮೇಲೆ ಕುಳಿತ ರಾಜನು ೩ ಅಡಿ ಉದ್ದ ೨.೫ ಅಡಿ ಅಗಲ, ೦.೫ ಅಡಿ ದಪ್ಪನಾಗಿದ್ದು ಗ್ರಾನೈಟ್ ಶಿಲೆಯಿಂದ ಕೂಡಿದೆ. ಹೊನ್ನೂರಿನಲ್ಲಿರುವ ಈ ಶಿಲ್ಪವು ಸುಂದರವಾದ ಮತ್ತು ಕುದುರೆಯ ಮೇಲೆ ಕುಳಿತಿರುವ ದೃಶ್ಯ ದುಂಡು ಶಿಲ್ಪವು ಉಬ್ಬುಶಿಲ್ಪ ರಚನಾ ಶೈಲಿಯಲ್ಲಿದೆ. ಕುದುರೆಯ ಮೇಲೆ ಕುಳಿತಿದ್ದು ಎಡಗೈಯಲ್ಲಿ ಲಗಾಮು ಹಿಡಿದು ಬಲಗೈಯಲ್ಲಿ ಭರ್ಜಿ ಹಿಡಿದಿದ್ದು ವೀರಾವೇಶದಿಂದ ಹೋರಾಟಕ್ಕೆ ಹೊರಡುತ್ತಿರುವ ದೃಶ್ಯವು ವಿಶೇಷವಾಗಿ ಮೂಡಿಬಂದಿದೆ. ವೀರನ ಕರ್ಣಕುಂಡಲವು ಸುಂದರವಾಗಿದೆ. ಅಲ್ಲದೆ ದುಂಡನೆಯ ಮಾದರಿಯಲ್ಲಿ ಕೇಶಾಲಂಕಾರವನ್ನು ಹೊಂದಿದ್ದು ಮೀಸೆಯನ್ನು ಸಹ ಹೊಂದಿದ್ದಾನೆ. ಇದರಿಂದ ಇವನನ್ನು ಒಬ್ಬ ಸಾಮಾನ್ಯ ಮನುಷ್ಯನ ಬದಲಿಗೆ ಸೈನ್ಯಕ್ಕೆ ಸೇರಿದ ಒಬ್ಬ



ಕುದುರೆಯ ಮೇಲೆ ಕುಳಿತ ವೀರ



ಕುದುರೆಯ ಮೇಲೆ ಕುಳಿತ ವೀರ ಮಹಿಳೆ



ಹೊನ್ನೂರಿನ ರಾಕಸಮ್ಮ ದೇವಾಲಯದ ಮುಂಭಾಗದಲ್ಲಿರುವ ವೀರಗಲ್ಲುಗಳು

ಉತ್ತಮವಾದಂತಹ ಪದವಿಯನ್ನು ಹೊಂದಿದ ವ್ಯಕ್ತಿ ಎಂದು ಗುರುತಿಸಬೇಕು ಜೊತೆಗೆ ಈತನ ಹಿಂಬದಿಯಲ್ಲಿ ಇಬ್ಬರು ವ್ಯಕ್ತಿಗಳನ್ನು ಕಾಣಬಹುದು ಈ ಶಿಲ್ಪವನ್ನು ವಿಜಯನಗರ ಅರಸರ ಕಾಲಕ್ಕೆ ಹೋಲಿಕೆ ಮಾಡಲಾಗಿದೆ.

ಈ ಶಿಲ್ಪವು ಗ್ರಾನೈಟ್ ಕಲ್ಲಿನದಾಗಿದ್ದು ಇದನ್ನು ರಾವಳೇಶ್ವರ ಶಿಲ್ಪವೆಂದು ಗುರುತಿಸಲಾಗಿದೆ. ಈ ಶಿಲ್ಪವು ೨ ಅಡಿ ಎತ್ತರ, ೨ ಅಡಿ ಅಗಲವಾಗಿದ್ದು ಇವು ಚತುರ್ಭುಜಾಕೃತಿಯನ್ನು ಹೊಂದಿದೆ. ಕೆಳಗೆ ೨ ಕೈಗಳನ್ನು ಹೊಂದಿದ್ದು ಅವನು ಬಿಲ್ಲು ಮತ್ತು ಬಾಣವನ್ನು ಹಿಡಿದಿದ್ದು ಕತ್ತಿಯನ್ನು ಹಿಡಿದುಕೊಂಡಿದ್ದು ಇದರ ಇಕ್ಕೆಲಗಳಲ್ಲಿ ಒಬ್ಬ ಸ್ತ್ರೀ ಮತ್ತು ಒಬ್ಬ ಪುರುಷನ ಶಿಲ್ಪವಿರುವುದರಿಂದ ಇವರು ರಾಜಸೇವಕರಾಗಿರಬಹುದೆಂದು ಹೇಳಬಹುದಾಗಿದೆ. ಮೇಲಿನ ಒಂದು ಕೈಯಲ್ಲಿ ಬಿಲ್ಲು ಮತ್ತೊಂದು ಕೈಯಲ್ಲಿ ಬಾಣವನ್ನು ಹಿಂಬದಿಯಿಂದ ತೆಗೆಯುವಂತೆ ಕಾಣುತ್ತಿದ್ದು ಕೊರಳಲ್ಲಿ (ಕಂಠ) ರುದ್ರಮಾಲೆ (ರುದ್ರಾಕ್ಷಿಮಣಿ) ಹಾಕಿಕೊಂಡಿರುವುದು ಸ್ಪಷ್ಟವಾಗಿ ಕಾಣುತ್ತದೆ ಹಾಗೂ ಸೊಂಟದಲ್ಲಿ ವಸ್ತ್ರವನ್ನು ಧರಿಸಿದ್ದು ವಸ್ತ್ರವು ಸುಂದರವಾದ ನೆರಿಗೆಗಳಿಂದ ಕೂಡಿದ್ದು ೨ ಕಾಲುಗಳಲ್ಲಿ ಕಾಲುಕಡಗ (ಕಾಲಬಂದಿ) ಧರಿಸಿರುವುದು ಬಹಳ ಸುಂದರವಾಗಿ ಮೂಡಿಬಂದಿದೆ.

ರಾವಣಶಿಲ್ಪ

ಈ ಶಿಲ್ಪವು ಹೊನ್ನೂರು ಗ್ರಾಮದ ರಾಕ್ಕಸಮ್ಮ ದೇವಾಲಯದ ಹಿಂಭಾಗದಲ್ಲಿರುವ ಕೆಂಕಟ್ಟೆ ಕೆರೆಯ ದಡದ ಮೇಲಿದೆ. ಈ ಶಿಲ್ಪವು ಕಪ್ಪು ಗ್ರಾನೈಟ್ ಕಲ್ಲಿನಿಂದ ಕೂಡಿದ್ದು ೨ ಅಡಿ ಎತ್ತರ ೩ ಅಡಿ ಅಗಲ ಮತ್ತು ೨ ಇಂಚು ದಪ್ಪನಾಗಿದ್ದು

೧೦ ತಲೆಯನ್ನು ಹೊಂದಿದ್ದು ಚತುರ್ಭುಜಾಕೃತಿಯನ್ನು ಹೊಂದಿದೆ. ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದು ಅವುಗಳಲ್ಲಿ ತ್ರಿಶೂಲ, ಖಡ್ಗ, ಬಿಲ್ಲು ಮತ್ತು ಬಾಣಗಳನ್ನು ಹಿಡಿದಿರುವುದು ಮತ್ತೊಂದು ಕೈಯನ್ನು ಕೆಳಕ್ಕೆ ಇಳಿಬಿಟ್ಟಿರುವುದು ಕಂಡುಬರುತ್ತದೆ. ಕೊರಳಲ್ಲಿ (ಕಂಠ) ರುದ್ರಮಾಲೆ (ರುದ್ರಾಕ್ಷಿಮಣಿ) ಹಾಕಿಕೊಂಡಿರುವುದು ಸ್ಪಷ್ಟವಾಗಿ ಕಾಣುತ್ತಿದ್ದು ಸೊಂಟದ ಕೆಳಗೆ ವಸ್ತ್ರವನ್ನು ಧರಿಸಿದ್ದು ಸುಂದರವಾದ ನೆರಿಗೆಗಳಿಂದ ವಸ್ತ್ರವು ಕೂಡಿದ್ದು, ೨ ಕಾಲುಗಳಲ್ಲಿ ಕಾಲುಬಂಧಿಯನ್ನು ಧರಿಸಿದ್ದಾನೆ. ಒಟ್ಟಾರೆ ಈ ಮೇಲ್ಭಾಗದಲ್ಲಿ ಛತ್ರಿ ಛಾಮರವನ್ನು ಕಾಣಬಹುದು. ಈ ಎಲ್ಲಾ ಲಕ್ಷಣಗಳನ್ನು ಗಮನಿಸಿದಾಗ ಈ ಶಿಲ್ಪವು ರಾಜನ ಎಲ್ಲಾ ಲಕ್ಷಣಗಳನ್ನು ಹೊಂದಿರುವುದರಿಂದ ರಾವಳೇಶ್ವರ ಪ್ರತ್ಯೇಕ್ಷದೇವ (ರಾಜ) ಎಂದು ಈ ಭಾಗದಲ್ಲಿ ಕರೆಯುವ ಪ್ರತೀತಿಯಿದ್ದು ಇದನ್ನು ದೇವರೆಂದೂ ಇಂದಿಗೂ ಪೂಜಿಸುತ್ತಿದ್ದಾರೆ.

[ಶಾಸನವನ್ನು ಪಡಿಯಚ್ಚು ತೆಗೆಯಲು ಸಹಾಯ ಮಾಡಿದ ಸಂಶೋಧಕರಾದ ಎಸ್.ಡಿ. ಕುಮಾರಸ್ವಾಮಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮೈಸೂರು ಹಾಗೂ ಶಾಸನ ಪಾಠವನ್ನು ಓದಿಕೊಟ್ಟ ಭಾರತೀಯ ಸರ್ವೇಕ್ಷಣಾ ಇಲಾಖೆಯ ಶಾಸನ ತಜ್ಞರಾದ ಬಾಲಮುರುಗನ್ ಪಿ. ಹಾಗೂ ನಾಗರಾಜಪ್ಪರವರಿಗೂ ಮತ್ತು ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಮಾರ್ಗದರ್ಶಕರಾದ ಡಾ. ಕೆ. ಪ್ರಭುರವರಿಗೂ ಮತ್ತು ಗುರುಗಳಾದ ಡಾ. ಜಿ.ಕರಿಯಪ್ಪರವರಿಗೂ ಹಾಗೂ ಡಾ. ಹೆಚ್.ಎನ್. ಕಾಳಸ್ವಾಮಿಯವರಿಗೆ ಮತ್ತು ಹೊನ್ನೂರು ಗ್ರಾಮದ ಗ್ರಾಮಸ್ಥರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.]

ಆಧಾರಸೂಚಿ

೧. ಎಪಿಗ್ರಾಫಿಯಾ ಕರ್ನಾಟಿಕ ಸಂ. ೪, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೧೯೭೫.

೨. ಶೇಷಶಾಸ್ತ್ರಿ. ಆರ್., ಕರ್ನಾಟಕದ ವೀರಗಲ್ಲುಗಳು, ಬೆಂಗಳೂರು–೨೦೦೪.

೩. ಚಿದಾನಂದ ಮೂರ್ತಿ. ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು–೧೯೯೬.

೪. South Indian Inscriptions-24 (XXIV)- Archaeological Survey of India, New Delhi-1982.

೫. ಪರಮಶಿವಮೂರ್ತಿ. ಡಿ.ವಿ., ಕನ್ನಡ ಶಾಸನ ಶಿಲ್ಪ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ–೧೯೯೯.

೬. ಫೋಟೊದಲ್ಲಿನ ಚಿತ್ರವನ್ನು ಗಮನಿಸುವುದು.

೨೮

ಸೀಬಿ ದೇವಾಲಯದ ದಾಖಲೆಗಳು

ಡಾ. ಬಿ. ನಂಜುಂಡಸ್ವಾಮಿ*

ಸೀಬಿ ದೇವಾಲಯದ ದಾಖಲೆಗಳು ಇಪ್ಪತ್ತುನಾಲ್ಕು ಪುಟದ ಪುಸ್ತಕ ೧೯೧೯ರಲ್ಲಿ ತುಮಕೂರು ನಗರದ "General Agencies" ಪ್ರೆಸ್ಸಿನಲ್ಲಿ ಮುದ್ರಣವಾಗಿದೆ. ಈ ಪುಸ್ತಕವನ್ನು ಕರಣಿಕ ನಲ್ಲಪ್ಪ, ಧರ್ಮಕರ್ತ ಶ್ರೀ ಸೀಬಿ ನರಸಿಂಹಸ್ವಾಮಿ ದೇವಸ್ಥಾನ (PVT), Sri Sibi (Nelahal Post). ತುಮಕೂರು ತಾಲ್ಲೂಕ್ ಎಂದು ಇದೆ. ಅಂದಿನ ದಿನಮಾನದ ಸರ್ಕಾರ ಕೇಳಿದ ಹಲವಾರು ಪ್ರಶ್ನೆಗಳಿಗೆ ಉತ್ತರ ರೂಪವಾಗಿ ಈ ಪುಸ್ತಕ ಮುದ್ರಿಸಿರಬೇಕು. ಪುಸ್ತಕಕ್ಕೆ ಮುನ್ನುಡಿಯಾಗಲಿ ಬೆನ್ನುಡಿಯಾಗಲಿ ಇಲ್ಲ. ಈ ಪುಸ್ತಕದ ಒಂದೇ ಒಂದು ಪ್ರತಿ ಮಾತ್ರವಿದ್ದು, ಅದೂ ಕೋರ್ಟಿಗೆ ಸಲ್ಲಿಸಿರುವುದಾಗಿದೆ. ಆದ್ದರಿಂದ ಇದರ ದಾಖಲಾತಿ ಅವಶ್ಯಮತ್ತು ಅಪರೂಪವೆಂದೇ ಹೇಳಬೇಕು. ಪ್ರಕಟಿತ ಪುಸ್ತಕದಲ್ಲಿ

೧. ಈ ಹಿಂದೆ ಟಿಪ್ಪೂಸುಲ್ತಾನ್ (೧೭೭೫) ರಲ್ಲಿ ಕೊಟ್ಟ ಆದೇಶದ ಮಾಹಿತಿ ಮೊದಲ ಪತ್ರದಲ್ಲಿ ಇದೆ.
೨. ಎರಡನೇ ಪತ್ರ ಶಿದ್ಧಾಂತಶಾಸನ ಪತ್ರ ಈ ಪತ್ರದ ಕಾಲ ೧೭೭೯ ಅಥವಾ ೧೮೦೦ ರ ಕಾಲಮಾನದ ಪತ್ರ
೩. ಶ್ರೀ ಸೀಬಿ ನರಸಿಂಹಸ್ವಾಮಿ ದೇವಾಲಯದ ಇನಾಂ ಪತ್ರ ಕನ್ನಡ ಲಿಪಿ ಮರಾಠಿ ಭಾಷೆಯಲ್ಲಿ ಇದೆ.
೪. ದೇವಾಸ್ಥಾನದ ತಸ್ತೀಕ ವಿಚಾರವಾಗಿ ದೇವಸ್ಥಾನದ ಧರ್ಮಕರ್ತರಿಗೆ ಅರಮನೆಯ ಅಧಿಕಾರಿ ನರಸಿಂಗರಾಯ ಬರೆದ ಪತ್ರ.
೫. ತುಮ್ಕೂರು ಅಮಲ್ದಾರ್ ಕುಪ್ಪಯ್ಯಗೆ ಪೂರ್ಣಯ್ಯನವರು ಬರೆದ ಪತ್ರ
೬. ದೇವಸ್ಥಾನದ ಧರ್ಮಕರ್ತರಿಗೆ ದಿವಾನ್ ಪೂರ್ಣಯ್ಯನವರು ಬರೆದ ಪತ್ರ.
೭ ಶ್ರೀಮಾನ್‌ಮಹಾರಾಜ ಕೃಷ್ಣರಾಜ ಒಡೆಯರವರು ತುಮಕೂರು ದೇವರಾಯದುರ್ಗ ಅಮಲುದಾರ್ರ ತಿಪ್ಪೈಯ್ಯನಿಗೆ ಬರೆಸಿ ಕಳುಹಿಸಿದ ನಿರೂಪ
೮. ಕೃಷ್ಣರಾಜ ಒಡೆಯರವರು ಚನ್ನರಾಯದುರ್ಗದ ಅಮಲುದಾರ ಸಂಜೀವಗೌಡಗೆ ಬರೆಸಿ ಕಳುಹಿಸಿದ ನಿರೂಪ
೯. ಕೃಷ್ಣರಾಜ ಒಡೆಯರವರು ಸೀರ್‍ಯದ ಅಮಲುದಾರ ನರಸಿಂಹರಾಯಗೆ ಬರೆಸಿ ಕಳುಹಿಸ್ತ ನಿರೂಪ
೧೦. ಕೃಷ್ಣರಾಜ ಒಡೆಯರವರು ತುಮಕೂರು ದೇವರಾಯದುರ್ಗ, ಮದಗಿರಿ, ಚೆನ್ನರಾಯನದುರ್ಗ, ಕಡಬ, ಗುಬ್ಬಿ, ಹೆಬೂರು, ಮಿಡಿಗೇಶಿ, ಶೀರ್‍ಯ, ಹಾಗಲವಾಡಿ ವಗೈರೆ ಹಾಲ ಇಸ್ತಬಾಲ ಅಮುಲ್ಲದಾರ, ಕಿಲ್ಲೇದಾರ್ರಗೆ, ಸಹ ಬರೆಸಿ ಕಳುಹಿಸ್ತ ನಿರೂಪ
೧೧. ಕೃಷ್ಣರಾಜ ಒಡೆಯರವರು ತುಮಕೂರು ದೇವರಾಯದುರ್ಗದ ಅಮಲದಾರ್ ತಿಪ್ಪೈಯ್ಯಗೆ ಬರೆಸಿಕಳುಹಿಸ್ತ ನಿರೂಪ
೧೨. ಕೃಷ್ಣರಾಜ ಒಡೆಯರವರು ಲಕ್ಷ್ಮೀನರಸೈಯ್ಯ, ಪುಟ್ಟಂಣ್ಣೈಯ್ಯ, ನಲ್ಲಪ್ಪಗೆ ಸಹ ಬರೆಸಿ ಕಳುಹಿಸ್ತ ನಿರೂಪ.
೧೩. ಕೃಷ್ಣರಾಜ ಒಡೆಯರವರು ತುಮಕೂರು ದೇವರಾಯದುರ್ಗ ತಾಲ್ಲೂಕು ಅಮೀಲ ಕೃಷ್ಣಯ್ಯನಿಗೆ ಬರೆಸಿ ಕಳುಹಿಸಿದ ನಿರೂಪ ಲಿಪಿ ಕನ್ನಡ ಭಾಷೆ ಮರಾಠಿ.

ಹೀಗೆ ೨೪ ಪುಟದ ೧೩ ಪ್ರಮುಖ ಪತ್ರಗಳು ಶೀಬೀ ದೇವಾಲಯದ ಬಗ್ಗೆ ಅನೇಕ ಮಾಹಿತಿಯನ್ನು ನೀಡುತ್ತವೆ. ಮೊದಲ ಪತ್ರ ಎರಡು ಪುಟವಿದ್ದು ಶೀಬೀ ದೇವಾಲಯದ ಇತಿಹಾಸವನ್ನು ತಿಳಿಸುತ್ತದೆ. ಟಿಪ್ಪೂಸುಲ್ತಾನರಿಂದ ಈ ದೇವಾಲಯದ ಬಗ್ಗೆ ವಿಶೇಷವಾದ ಅಧಿಕಾರ ಪತ್ರವನ್ನು ಲಕ್ಷ್ಮೀನರಸೈಯ್ಯ ಸಹೋದರರು ಪಡೆದುಕೊಂಡಿದ್ದರು. ಮುಂದೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಆಳ್ವಿಕೆ ಬಂದ್ದದರಿಂದ. ಈ ಹಿಂದೆ ಪಡೆದುಕೊಂಡಿದ್ದ ಅಧಿಕಾರ ಪತ್ರದ ದಿನಾಂಕವನ್ನು ಉಲ್ಲೇಖಿಸಿದ್ದಾರೆ. ದೇವಾಲಯದ ಜೀರ್ಣೋದ್ಧಾರ ಕಾರ್ಯ ಮುಗಿದಿದ್ದು ೧೭೭೫ ರಲ್ಲಿ ಆಗ ಟಿಪ್ಪುಸುಲ್ತಾನ ಆಳ್ವಿಕೆ ಇತ್ತು.

ಶ್ರೀರಸ್ತು ॥ ॥ ಕುಂತಲ ನಗರ ಸಮೀಪ ಈ ದೇವರಿರುವ ದೇವಸ್ಥಾನದ ವನದಲ್ಲಿ ಕೌಂಡಿಣ್ಣ ಮುನಿವಂಶದ ಶೀಬೀ ಮುನಿತಪಸ್ಸಿಗೆ ಪ್ರಸನ್ನನಾಗಿ ದ್ವಾಪರದಲ್ಲಿ ಈ ನರಸಿಂಹದೇವರು ಲಿಂಗಾಕಾರದಿಂದ ಉದ್ಭವಿಸಿ ಚಂದ್ರಹಾಸಾದಿಗಳಿಂದ ಪೂಜೆಯಂ ಗೊಳ್ಳುತ್ತಿದ್ದು ಕಲಿಯುಗದಲ್ಲಿ

* ಪಂಡಿತ ತಾರಾನಾಥ್ ಆಯುರ್ವೇದ ಚಿಕಿತ್ಸಾಲಯ, ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್, ಬಿ.ಹೆಚ್. ರಸ್ತೆ, ತುಮಕೂರು-೫೭೨೧೦೨.

ಮಧ್ಯೆ ಕೆಲವುದಿನ ಆಲಯ ಶಿಥಿಲವಾಗಿ ಗಿಡ ಬೆಳೆದು ಇರುವಾಗ್ಲೆ ಅಮರೈಯ್ಯನೆಂಬ ಹೇರುಕಾರನು ಲಿಂಗದ ಜೊತೆಗೆ ಕಲ್ಲುಗಳು ಇಟ್ಟು ಅವನ ಎತ್ತುಗಳೆಲ್ಲಾ ಲಯವಾಗಿ ವೊಬ್ಬನಿಗೆ ಆವೇಶಾ ಬಂದು ಅವನ ಎತ್ತುಗಳೆಲ್ಲಾ ಬದುಕಿಕೊಂಡದ್ದರಿಂದ ಅವನು ವಂದು ಅಂಖಣ ಕಟ್ಟಿಶಿದ ಬಳಿಗ ಭಕ್ತಾದಿಗಳು ಸ್ವಲ್ಪ ಕಲ್ಲು ಅಂಖಣ ಮಣ್ಣುಗೋಡೆ ಗರ್ಭಗೃಹ ಪುರಾಣಸಿದ್ಧವಾದ ಗಜಸರೋವರವನ್ನು ಕಿರುದಾಗಿ ಕಾಡುಕಲ್ಲಿನಿಂದ ಕಟ್ಟಿಸಿ ಬಹುಕಾಲದಿಂದ ಪೂಜೆ ನಡೆಯುತ್ತಾ ಈಚೆಗೆ ಕಲ್ಯಾಣಿ, ಗುಡಿಸಹ ಜೀರ್ಣವಾಗಲಾಗಿ ಕೌಂಡಿಣ್ಣ ಗೋತ್ರ ವಂಗ ಪುರಗ್ರಾಮ ನಾಮಧೇಯ ಹರಯಪ್ಪ ಅಕ್ಕಾಜಮ್ಮನವರ ಪೌತ್ರ ತಮ್ಮಣ್ಣ, ಲಕ್ಷಮ್ಮನವರ ಪುತ್ರರಾದ ಕೃಷ್ಣಪ್ಪನವರು ಶ್ರೀರಂಗಪಟ್ಟಣ ಆರ್ಕಾಡು ರಾಮೇಶ್ವರದಿಂದ ಕೃಷ್ಣಾಪರ್ಯಂತ ಮೂರು ಕೋಟಿ ರಾಜ್ಯವಾಳಿದ ನವಾಬ ಹೈದರಲ್ಲೀಖಾ ಬಹದರ್ರರ ಬಳಿ ಮಹಲಾತ್ ಕಛೇರಿ ಕರಣೀಕತನ ಮಾಡುತ್ತಾ ಈ ನರಸಿಂಹನ ಸೇವೆ ಬಹಳವಾಗಿ ನಡದುಕೊಂಬುವಲ್ಲಿ ಈ ಕಛೇರಿ ಕೃಷ್ಣಪ್ಪನವರ ಧರ್ಮಪತ್ನಿ ಅಲಮೇಲಮ್ಮ ಗರ್ಭಸಂಜಾತರಾದ ಲಕ್ಷ್ಮೀನರಸೈಯ್ಯ, ಪುಟ್ಟಣ್ಣಯ್ಯ, ನಲ್ಲಪ್ಪ, ಸಹ ಧಾರವಾಡ ಕೃಷ್ಣಾ ತುಂಗಭದ್ರಾ ಮಧ್ಯೆ ಹದಿನೆಂಟುಲಕ್ಷ ಗುತ್ತಿ ಹನ್ನೆರಡುಲಕ್ಷ ಬೆಂಗಳೂರು ಕಛೇರಿ ಮುಂತಾದ ರಾಜ್ಯಾಧಿಕಾರಿಗಳ ಮಾಡುತ್ತಾ ಪ್ರಬಲಿಸಿ ಆಸಫ್ ಮಹಮ್ಮದಲ್ಲೀ ಮೆಹಕರಿ ಸಾಹೇಬರು ತಮ್ಮ ಮಕ್ಕಳೆಂದು ಪೋಷಿಸಿದ್ದರಿಂದಲೂ ಟಿಪ್ಪೂಸುಲ್ತಾನರ ಮೀರಾಸಫ್ ಮೀರ್ ಮಹಮ್ಮದ್ ಸಾದಕರೂ ಮೀರ್ ಮೀರಾ ಮಹಮ್ಮದ್ ರಜಾಬೆಂಕೀ ನವಾಬರು ಖಾನೇಜಹಾಖಾನರ ಕೃಪೆ ಇಂತಲೂ ಬಹುಶ್ಯಾ ಉತ್ತಮ ಖ್ಯಾತಿವಂತರೆನಿಸಿ ಸಲುಹಿದವರಿಗೆ ಪುಣ್ಯಕೀರ್ತಿಯು ಊಂಟಾಗುವ ಬಗ್ಯೂ ತಮ್ಮ ಪಿತೃವಂಶಕ್ಕೂ ಮಾತಾಮಹರಾದ ಭಾರದ್ವಾಜನ ಗೋತ್ರ ಕಡೆವೇಳ್ಳ ಮನೆವರೆಶೆಯವರಲ್ಲಿ ಇಕ್ಕೇರಿ. ಬಿದಲೂರು, ಕೂಡಿಯಾಲಬಂದರ್ ಹೈದರ್‌ನಗರ ಸುಸ್ಥಾನದ ಸರ್ವಾಧಿಕಾರಿ ಗುರಿಕಾರ್ ವೆಂಕಟಪತೈಯ್ಯನವರಿಗೂ ಮಾತಾಮಹಿ ರಮಣಮ್ಮನವರಿಗೂ ಮಾತುಳ ಗುರಿಕಾರ್ ರಮಣಪ್ಪ, ವೆಂಕಟಪ್ಪ ಸೋದರತ್ತೆ ಲಕ್ಷ್ಮೀದೇವಮ್ಮ ಲಕ್ಷ್ಮಮ್ಮ ಮೊದಲಾದ ತಮ್ಮ ಕುಲಮೇಕೋತ್ತರಶತಕ್ಕೂ ಸುಗತಿಯಾಗಿರತಕ್ಕ ಬಗ್ಯೂ ತಮಗೂ ತಮ್ಮ ಸಂತತಿ ಸ್ವಜನಕ್ಕೂ ಇಹಸುಖಾಭಿವೃದ್ಧಿ ಶಾಶ್ವತವೂ ನಂತರ ಕೈಲಾಸ ವೈಕುಂಟವಾಸವಾಗುವ ಬಗ್ಯೂ ಸಹ ಶಾಲೀವಾಹನ ಶಕಾಬ್ದಾಃ ೧೭೧೭ ನೇ ರಾಕ್ಷಸ ಸಂವತ್ಸರದ ಭಾದ್ರಪದ ಮಾಸದಾರಭ್ಯ ಈ ದೇವಸ್ಥಾನ ಸರೋವರ ನವೀನಪಾಣಿವಟ್ಟಪೀಠ ಅಷ್ಟಬಂಧನ ಲೋಕಾಂಬ ಅಂಬೆಗಾಲು ಕೃಷ್ಣ ರಾಮ ಗೋಪಾಲ ವರಾಹ ಕಾಳಿಂಗಭಂಜನ, ಲಕ್ಷ್ಮೀನರಸಿಂಹ ಭೂದೇವಿ ಶ್ರೀದೇವಿ ವಟಪತ್ರಶಾಯಿ ಶ್ರೀನಿವಾಸ ಯೋಗಾನಂದ ರಂಗೇಶ ಗಣಾಧಿಪ, ವಿಗ್ರಹ[ಗಳ] ನೂತನಪ್ರತಿಷ್ಠ ಮಂಟಪ ಆಭರಣ ವಸ್ತ್ರವಾಹನಾದಿ ಸಕಲ ಶೇವೆಯೂ ಮಾಡಿ ಬೆಳ್ಳಾವೆ ಸೋಮೇಶ್ವರ ನಿಲಯ ಜಗದಾಂಬಾದಿ ದೇವರು ಸರೋವರ ರಾಮ ಆಂಜನೇಯನಿಲಯ ಅಲ್ಲಿಂದಿಲ್ಲಿಗೆ ಸಾಲ್ತೋಪು ಮಾರ್ಗದಲ್ಲಿ ಕಟ್ಟೆಗಳು ತುಮಕೂರು ಬಳಿ ಛತ್ರ ನರಸಿಂಹನಿಲಯ ಭಾವಿ ಹೊಸಕೋಟೆ, ಹಲಸೂರು, ಮುದಿಗೆರೆ, ಕೊಟ್ಟಹಳ್ಳಿ ಸೋಮೇಶ್ವರ, ಆಂಜನೇಯ ನಿಲಯ ಸಹ ನಿರ್ಮಿಸಿ ಆಳಿದ ಮಹಾಸ್ವಾಮಿ ಕೃಷ್ಣರಾಜಒಡೆಯರವರ ಕರುಣದಿಂ ಸೋರೇಕುಂಟೆ ಹೊಸಹಳ್ಳಿ, ಚಿಕ್ಕಶೀಬಿ, ಪರಷೆ ಸುಂಕ ಜೋಡಿದೇವರಹಳ್ಳಿ ಮಾನ್ಯ ವರ್ತನೆ ಮುಂತಾದ್ದಕ್ಕೆಲ್ಲಾ ಸನ್ನದು ಮಾಡಿಸಿ ಕೆರೆಗಳು ಸಹ ಕಟ್ಟಿಸಿದರು. ಗುತ್ತಿಯಲ್ಲೂ ನರಸಿಂಹಸ್ವಾಮಿ ದೇವಸ್ಥಾನ ಕಟ್ಟಿಸಿದರು.

ಎರಡನೇ ಪತ್ರದಲ್ಲಿ ದೇವಸ್ಥಾನದ ತಸ್ದೀಕು ವ್ಯವಸ್ಥೆ ಬಗ್ಗೆ ಬೆಳಕು ಚೆಲ್ಲುತ್ತದೆ.

ಶ್ರೀ ನರಸಿಂಹ

" ಶ್ರೀ ಲೋಕಾಂಬಾ ಸಮೇತ ಶ್ರೀ ಶೀಬೀ ನರಸಿಂಹಸ್ವಾಮಿಯವರ ದೇವಸ್ಥಾನದ ತಸ್ದೀಕು ಶಾಲಿವಾಹನ ಶಕ ವರ್ಷಂಗಳು ೧೭೨೧ ನೇ ಪರವರ್ತಮಾನಕ್ಕೆ ಸಲ್ಲುವ ಶಿದ್ಧಾರ್ಥಿ ಸಂವತ್ಸರದ ಚೈತ್ರ ಬ ೭ ಗುರುವಾರದಲ್ಲೂ ತಚ್ಚರಣೆ ಕಟಾಕ್ಷ ವೀಕ್ಷಣಾಲಂಕಾರವರ ಲಬ್ಧಜನಿತ ಶ್ರೀಶೀಬಿನರಸಿಂಹ ಚರಣಸೇವಕ ಶ್ರೀರಾಮ ವಜ್ಜುಲ ಸುಧೀಮಣಿ ನಿರ್ಮಿತವಂಗಿ ಪುರಾಂಭೋಧಿಜನಿತ ಚಂದ್ರೋದಯರಾದ ಆಪಸ್ತಂಭಸೂತ್ರರಾದ ಯಜುಶಾಖಾಧ್ಯಾಯಿಗಳಾದ ಕೌಂಡಿಣ್ಯನ ಗೋತ್ರೋದ್ಭವ ಅಮರಾವಜ್ಜುಲ ಹರಿಯಪ್ಪನವರ ಪ್ರಪೌತ್ರರಾದ ತಮ್ಮಣ್ಣೈಯ್ಯನವರ ಪೌತ್ರರಾದ ಕೃಷ್ಣಪ್ಪೈಯ್ಯ ಅಲಮೇಲು ಮಂಗಾಬಿಕಾ ಗರ್ಭಜನಿತರಾದ ಶ್ರೀ ಶೀಬೀ ನರಸಿಂಹ ಲೋಕಾಂಬಿಕಾ ಚರಣ ಚತುಸ್ಸರೋಜ ಭೃಂಗಾಯಮಾನ ಭಕ್ತಿ ರಸಜ್ಞಾನ ಚಿತ್ತ ಸರೋಜ ಅತಿಚಲಭಕ್ತಿಯುಕ್ತ ಶ್ರೀ ಲಕ್ಷ್ಮೀನರಸಪ್ಪ, ಪುಟ್ಟಪ್ಪ, ನಲ್ಲಪ್ಪ ಸಹ ತಮ್ಮ ಕುಲಸ್ವಾಮಿಗೆ ಆಚಂದ್ರಾರ್ಕಸ್ಥಿತವಾಗಿ ಪ್ರತಿವರ್ಷದಲ್ಲೂ ನಡಿಯತಕ್ಕ ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವಾದಿ ಮಹಾ ಉತ್ಸವಗಳು ನಡದು ಬರುವಂತೆ ಮಾಡಿಶಿಕೊಟ್ಟ ಶಿದ್ಧಾಂತ ಶಾಸನ ಕ್ರಮವೆಂತೆದರೆ ಅದಾಗಿ...... ಅಂತೂ ವರ್ಷವಂದಕ್ಕೆ ತಸ್ದೀಕು ಕಂಠೀರಾಯಿ ಎಂಟುನೂರ ಎಪ್ಪತ್ತೊಂದು ವರಹಾನು ನಾಲ್ಕುಹಣ ಮುಪ್ಪಾಗೂ ವೀಸ.

ಮೂರನೇಯ ಪತ್ರ ಕನ್ನಡ ಲಿಪಿಯಲ್ಲಿ ಮುದ್ರಣವಾಗಿರುವ ಮರಾಠಿ ಭಾಷೆಯ ಪತ್ರ.

ನಾಲ್ಕನೇ ಪತ್ರ ಅರಮನೆ ಅಧಿಕಾರಿ ನರಸಿಂಗರಾಯರು ರಾಜಶ್ರೀ ಲಕ್ಷ್ಮೀನರಸೈಯ್ಯನವರು, ಪಟ್ಟಣ್ಣಿಯ್ಯ, ನಲ್ಲಪ್ಪನವರಿಗೆ ನಮಸ್ಕಾರ ಪೂರ್ವಕವಾಗಿ ಬರೆದ ಪತ್ರ.

ಶ್ರೀ

ಕರೇ ಅರಗಿನ

ಮೊಹರು

ರಾಜಶ್ರೀ ಲಕ್ಷ್ಮೀನರಸೈಯ್ಯನವರು, ಪುಟ್ಟಣ್ಣೈಯ್ಯನವರು, ನಲಪ್ಪನವರಿಗೆ ಸಹಾ ನರಸಿಂಗರಾಯರು ನಮಸ್ಕಾರ ಅದಾಗಿ:–

"ತುಮಕೂರು ತಾಲೂಕದಲ್ಲಿ ಶೀಬಿ ನರಷಿಂಹ್ಯಸ್ವಾಮಿಯವರ ದೇವಸ್ತಾನಕ್ಕೆ ಗ್ರಾಮದ ವಿದ್ಯಾಮಾನ ಮುಂತಾಗಿ ತಸ್ತೀಕ್‌ನ ವಿಚಾರವಾಗಿ ನೀಊ ಹೇಳಿದ ಮೇರೆಗೆ ಹಜೂರಿಗೆ ಅರ್ಜಿ ಬರೆದು ಇದದ್ದು ಸರಿಯಷ್ಟೆ ಈ ಬಗ್ಯೆ ನೀಊ ಇಲ್ಲಿ ಹೇಳಿಕೊಂಡು ಇದಮೇರೆಗೆ ಹಜೂರು ಅಪ್ಪಣಿ ಬಂದು ಇರುವ ವಿವರ: ಈ ದೇವಸ್ತಾನಕ್ಕೆ ಮೊದಲ್ಲು ನಡಿಯುತ್ತ ಇದ ಗ್ರಾಮ, ಭೂಮಿ, ಮುಂತಾಗಿ ಸರಕಾರಕ್ಕೆ ದಾಖಲು ಮಾಡಿಕೊಂಡು ಹಾಲಿ ಅಪ್ಪಣೆಯ್ಯಾಗಿ ಇರುವದು ದೇವರಾಯದುರ್ಗ ತಾಲೂಕ್ಕ ಪೈಯಿಕ್ಕೆ ಸೋರೆಕುಂಟೆ ಗ್ರಾಮ ೧ ಕ್ಕೆ ೧೦೫ ಶೀರ್ಯಾ ತಾಲೂಕದಿಂದ ದಾಖಲು ಮಾಡಿಕೊಟ ಚಿಕ್ಕಶೀಬಿಗ್ರಾಮ ೧ ಕ್ಕೆ ೨೫/ ಅಂತು ೧೫೫/೧ ವಂನ್ನ ಅಪ್ಪಣಿಕೂಡಿಶಿ ಈ ಗ್ರಾಮಗಳು ದೇವಸ್ಥಾನ ಸಹಾ ನಿಂಮ್ಮ ಹವಾಲಿಗೆ ಕೊಟ್ಟು ನಿಂಮ್ಮಮುಕಾಂತ್ರ ದೇವರ ಶೇವೆ ನಡಿಸುವಂತೆ ಹಜೂರು ಅಪ್ಪಣಿ ಬಂದು ಇರುವದರಿಂದಾ ಈ ಗ್ರಾಮಗಳು ಮುಂತಾಗಿ ನಿಮಗೆ ಶೇರಿಸಿಕೊಟ್ಟು ದೇವಸ್ತಾನ ಸಹಾ ನಿಮ್ಮ ಹವಾಲ್ಲು ಮಾಡತಕ್ಕ ಬಗ್ಯೆ ಸಹಾ ತುಮಕೂರು ಅಮಲುದಾರ್ರು ಕುಪಯ್ಯನವರ ಹೆಸರಿಗೆ ಹಜೂರಿಂದಾ ಬಂದ ಸನ್ನದು ಸಹಾ ಮಲಪೂಪುಮಾಡಿ ಕಳುಹಿಶಿ ಇದೆ. ಸನ್ನದು ಅವರಿಗೆ ಕೊಟ್ಟು ಗ್ರಾಮ, ಭೂಮಿ, ದೇವಸ್ತಾನ ಸಹಾ ನಿಮ್ಮ ಸ್ವಾಧೀನಮಾಡಿಕೊಂಡು ಗ್ರಾಮದ

ಕೆರೆಯೂ, ಕೆರೆಯೂ ನೀಊ ಹೇಳಿದ ಮೇರೆಗೆ ಕಟ್ಟಿಶಿ ಗ್ರಾಮಾ ಅಬಾದು ಮಾಡಿ ಗ್ರಾಮದಲಿ ಜಾಸ್ತಿಹುಟ್ಟವಳಿ ಮುಂತಾಗಿ ಆಗುವ ಮೇರೆಗೆ ಮಾಡಿ ನೀಊ ಹೇಳಿ ಇರುವ ಮೇರೆಗೆ ದೇವಸ್ಥಾನದ ಪಡಿತರ ದೀಪಾರಾಧನೆ ರಥೋತ್ಸವ ಮುಂತಾಗಿ ಸಾಂಗವಾಗಿ ನಡಿಶಿಕೊಂಡು ಬರುವದು. ಈ ಗ್ರಾಮಗಳು ನಿಂಮ್ಮ ಹವಾಲಿಗೆ ಕೊಟ್ಟರೆ ಸಾಬಕ್ಕ ಮೇರೆಗೆ ನೀಊ ನಡಿಸುವದಾಗಿ ಹೇಳಿದರಿಂದಾ ಈ ಮೇರೆಗ ಮೂಕರರು ಮಾಡಿಕೊಟ್ಟು ಇಥೆ. ಈ ವಿವರಾ ತಿಳಿದು ನೀಊ ಹೇಳಿ ಇರುವ ಮೇರೆಗೆ ಈ ದೇವಸ್ತಾನಕ್ಕೆ ಪಡಿತರ ದೀಪಾರಾಧನೆ. ರಥೋತ್ಸವ ಮುಂತಾಗಿ ನಡಶಿಕೊಂಡು ಬರುವದು. ಈ ದೇವಸ್ಥಾನಕ್ಕೆ ರುಧಿರೋದ್ಗಾರಿ ಸಂವತ್ಸರದಾರಭ್ಯವಾಗಿ ಈ ಗ್ರಾಮಗಳು ನಡಿಸುವ ಹಾಗೆ ಅಪ್ಪಣೆಯಾಗಿ ಇರುವದರಿಂದಾ ಈ ವರಿಗೆ ಈ ದೇವಸ್ತಾನಕ್ಕೆ ಮುಟ್ಟಿ ಇರುವ ಹಣ ನೀಊ ನಗದು ಕೊಟ್ಟುಬಿಡುವದೂ. ಈಗ ನಿಮ್ಮ ಹವಾಲಿಗೆ ಕೊಡುವ ಗ್ರಾಮಗಳಿಂದಾ ಈವರೆಗೆ ವಸೂಲ್ಲು ಆದ ಉತ್ತಾರ ಕೊಡುವ ಹಾಗೆ ತುಮಕೂರು ಅಮಲುದಾರ್‍ರಿಗೆ ಬರೆದು ಇದೆ. ಗ್ರಾಮದಲ್ಲಿ ವಸೂಲು ಆದ ಹಣ ಉತ್ತಾರ ತೆಗೆದುಕೊಂಡು ಈವರಿಗೆ ದೇವಸ್ಥಾನಕ್ಕೆ ಹೆಚು ಸಂದು ಇರುವ ಹಣವನ್ನು ಕೊಟ್ಟು ಬಿಡುವದು ರುಧಿರೋದ್ಗಾರಿ ಸಂವತ್ಸರ ಪುಷ್ಯ ಶು ೬ ಲ್ಲು ರೂಜೂಶ್ರೀ

ಐದನೇ ಪತ್ರ ದಿವಾನ್ ಪೂರ್ಣಯ್ಯನವರು ತುಮಕೂರು ಅಮಲ್ದಾರ್ ಕುಪ್ಪಯ್ಯಗೆ ಆಶೀರ್ವಾದ ಪೂರ್ವಕ ನೀಡಿದ ನಿರೂಪ.

ಶ್ರೀ

ಮೊಹರು

ಶೀಬಿ ನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ಪಡಿತರ ದೀಪಾರಾಧನೆ ರಥೋತ್ಸವ ಮುಂತಾದ ದೇವರ ಸೇವೆ ಬಗ್ಯೆ ನನ್ನ ತಾಲೂಕದಲ್ಲಿ ಮೊದಲು ನಡೆಯುತ್ತಾ ಇದ್ದ ಗ್ರಾಮಭಟಮಾನ್ಯದ ಭೂಮಿ, ವರ್ತನೆ ಮುಂತಾದ್ದನ್ನೂ ಸರಕಾರದಲ್ಲಿ ಜಪ್ತಿಮಾಡಿಸಿ ಹಾಲಿ ಅಪ್ಪಣೆ ಕೊಡಿಸಿ ಇರುವ ಗ್ರಾಮಗಳ ವಿವರ:– ದೇವರಾಯದುರ್ಗದ ತಾಲ್ಲೂಕು ಸೋರೆಕುಂಟೆ ಗ್ರಾಮ ವೊಂದಕ್ಕೆ ಬೇರೀಜು ಕಂಟಿರಾಯಿ ಗು ೧೦೫/೧ ವರಹವೂ ಒಂದು ಹಣ ಶೀರ್‍ಯದ ತಾಲೂಕದಿಂದ ನಿನ್ನ ತಾಲೂಕಿಗೆ ಸೇರಿಸಿಕೊಂಡು ದೇವಾಸ್ಥಾನಕ್ಕೆ ಕೊಡತಕ್ಕ ಚಿಕ್ಕಶೀಬೀ ಗ್ರಾಮ ೧ ಕ್ಕೆ ಬೇರೀಜು ಕಂಟಿರಾಯಿ ೨೫/೦ ವರಹ ಉಭಯಂ ಗ್ರಾಮ ೨ ಯರಡಕ್ಕೆ ಬೇರಿಜು ಕಂಟಿರಾಯಿ ಗು ೧೩೦/೧ ನೂರ ಮುವತ್ತು ವರಹವೂ ಒಂದು ಹಣ ದೇವಸ್ಥಾನದ ರಥೋತ್ಸವದ ಜಾತ್ರೆ ಸುಂಕದ ಬಗೆ ಬೇರೀಜು ಕಂಟಿಲಾಯಿ ೨೫/೦ ಇಪ್ಪತ್ತೈದು ವರಹಾವೂ ಉಭಂ। ಗು ೧೫೫/೦ ನೂರೈವತ್ತೈದು ವರಹಾವು ಒಂದು ಹಣವನ್ನು ಕೊಡುವಂತೆ ಅಪ್ಪಣೆ ಕೊಡಿಸಿ ಇಧೀತಾಗಿ ಈ ಬಗೆ ಗ್ರಾಮಗಳನ್ನು ತನ್ನ ಹವಾಲು ಮಾಡಿಸಿ ಕೊಟ್ಟು ದೇವಸ್ಥಾನವನ್ನು ತನ್ನ ಹವಾಲು ಮಾಡಿಸಿ ಕೊಟ್ಟರೆ ದೇವರ ಪಡಿತರ ದೀಪಾರಾಧನೆ ರಥೋತ್ಸವ ಮುಂತಾದ ದೇವತಾಸೇವೆಯನ್ನು ಸಾಂಗವಾಗಿ ತಾನು ಮಾಡಿಸುತ್ತೇನೆಂಬುದಾಗಿ ನಲ್ಲಪ್ಪನು ಹಜೂರನಲ್ಲಿ ಅರಿಕೆ ಮಾಡಿಕೊಂಡ ಕಾರಣ ಕಟ್ಲೆ ಮಾಡಿಸಿ ಇಧೀತಾಗಿ ಸದರಿ ಬರದ ಪ್ರಕಾರ ಯರಡು ಗ್ರಾಮ ಸುಂಕ ಸಹ ನಲ್ಲಪ್ಪನ ವಶಕ್ಕೆ ಕೊಟ್ಟು ದೇವಸ್ಥಾನವನ್ನು ನಲ್ಲಪ್ಪನ ಹವಾಲು ಮಾಡಿ ದೇವಸ್ಥಾನದ ಪೂಜಾರಿ ಮುಂತಾದವರನ್ನು ಅವರ ವಶಕ್ಕೆ ಕೊಟ್ಟು ಸದರಿ ಬರದಪ್ರಕಾರ ಎರಡು ಗ್ರಾಮ ಜಾತ್ರೆ ಸುಂಕವನ್ನೂ ಸಹ ರುಧಿರೋದ್ಗಾರಿ ಸಂವತ್ಸರದಾರಭ್ಯ ವರುಷಂ ಪ್ರತಿಯಲ್ಲೂ ಸರಾಗಗೂಡಿ ನಡೆಸಿಕೊಂಡು ಬರುವುದು. ಸದರಿ ಜಪ್ತಿಬಾಬತು ಗ್ರಾಮ ಭೂಮಿ ಹುಟ್ಟುವಳಿಯನ್ನು ನೋಡಿಕೊಂಡು ಅರಮನೆ ಲೆಖ್ಖಕ್ಕೆ ಸೇರಿಸಿ ಹಣವನ್ನು ನೀನು ವಸೂಲ್ಮಾಡಿಕೊಳ್ಳುವುದು. ರುಧಿರೋದ್ದಾರಿ ಸಂವತ್ಸರದ ಪುಶ್ಯ ಶುದ್ಧ ೩ಲ್ಲೂ ನೂರ ಐವತ್ತೈದು ವರಹಾವು ಒಂದು ಹಣವನ್ನು ನಡಿಸಿಕೊಂಡು ಬರೋದು ಶ್ರೀ : –

ದೈವಸಕ್ತಿ ರುಧೀರೋದ್ಗಾರಿ ಸಂವತ್ಸರದ ಪುಷ್ಯ ಶುದ್ಧ ೩ ಲ್ಲೂ

ಆರನೇ ಪತ್ರ ದಿವಾನ್ ಪೂರ್ಣಯ್ಯನವರು ಗೌರವಪೂರ್ವಕವಾಗಿ ಶೀಬಿ ನರಸಿಂಹಸ್ವಾಮಿ ದೇವಸ್ಥಾನದ ಧರ್ಮಕರ್ತರುಗಳಿಗೆ ಬರೆದ ಪತ್ರ.

ಶ್ರೀ

ಮೊಹರು

ರಾಜಶ್ರೀ ಲಕ್ಷ್ಮೀನರಸೈಯ್ಯನವರು, ಪುಟ್ಟಣ್ಣಯ್ಯನವರು, ನಲ್ಲಪ್ಪನರಿಗೆ ಸಹಾ ಪೂರ್ಣಯ್ಯನವರು ನಮಸ್ಕಾರ ಅದಾಗಿ : – ಶ್ರೀ ಶೀಬೀ ನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ದೇವರಾಯದುರ್ಗ ಸ್ಥಳದಲ್ಲೂ ಸೋರೇಕುಂಟೆ ಗ್ರಾಮ ಚಿಕ್ಕಶೀಬಿಗ್ರಾಮ ಸಹ ಯರಡು ಗ್ರಾಮವನ್ನೂ ದೇವಸ್ಥಾನದ ಜಾತ್ರೆ ಸುಂಕ ಸಹ ಸರಕಾರದಿಂದ ಕೊಡಿಸಿ ಇರ್‍ರುವುದು ಸರ್‍ರಿಯಷ್ಟೆ. ಯಿ ಗ್ರಾಮದ ಬಳಿಯಲ್ಲೂ ಶಿಥಿಲವಾಗಿ ಇರ್‍ರುವ ಕೆರೆಯನ್ನು ನಿಮ್ಮ ಕೈ ಇಂದ ಹಣಾ ಮುಟ್ಟಿಸಿ ಕಟ್ಟಿಸಿ ಅದರಿಂದಾ ಹೆಚ್ಚು ಹುಟ್ಟುವಳಿ ಆದ ಹಣವನ್ನು ದೇವರ ಸೇವೆಗೆ ಉಪಯುಕ್ತ ಆಗುವ ಹಾಗೆ ಮಾಡೇವು ಎಂಬುದಾಗಿ ನೀವು ಹಜೂರಿನಲ್ಲಿ ಅರಿಕೆ ಮಾಡಿಕೊಂಡ ಕಾರಣ ಅಪ್ಪಣೆಕೊಡಿಸಿ ಇಧೀತಾಗಿ ಶಿಥಿಲವಾಗಿ ಇರ್‍ರುವ ಕೆರೆಯನ್ನು ನಮ್ಮ ಕೈ ಇಂದ ಮುಟ್ಟುವಳೀ ಮುಟ್ಟಿಸಿ ಕಟ್ಟಿಸಿ ದುರಸ್ತು ಮಾಡಿಸಿ ಕೊಂಡು ಯಿ ಕೆರೆ ಹಿಂದೆ ಫಲಪೈರು ಮಾಡಿಸಿದಲ್ಲಿ ಆ ಪೈರಿನಿಂದ ಯಿಗ ಇರುವ ಗ್ರಾಮದ ಬೇರೀಜು ಹೊರತು ಯೇನುಹೆಚ್ಚು ಹುಟ್ಟುವಳಿ ಆಗುತ್ತೊ ಆ ಬಗ್ಗೆ ಹಣ ಸಹಾ ದೇವಸ್ಥಾನದ ಪಡಿತರ ದೀಪಾರಾಧನೆ ಮುಂತಾದ ದೇವರ ಸೇವೆಗೆ ಮುಟ್ಟುವಳಿ ಮಾಡಿಕೊಂಡು ಸಂಭ್ರಮದಿಂದ ದೇವರ ಸೇವೆಯನ್ನು ಸಾಲಾಬಾದು ಶಾಶ್ವತವಾಗಿ ನಡೆಸಿಕೊಂಡು ಬರುವ ಹಾಗೆ ಮಾಡಿಸುವದು. ಈ ಕೆರೆ ಹಿಂದೆ ಚವುಥಾಹಿಸ್ಸೆಭೂಮಿ ಕಟ್ಟು ಕೊಡಗಿ ಮಾಡಿಕೊಂಬುದು. ಪ್ರಭವ ಸಂವತ್ಸರದ ಕಾರ್ತೀಕ ಬಹುಳ ೮ ಯಲ್ಲು ರುಜು ಶ್ರೀ.

ಏಳನೇ ಪತ್ರ ಮುಮ್ಮಡಿ ಕೃಷ್ಣರಾಜ ಒಡೆಯರವರು ತುಮಕೂರು ದೇವರಾಯದುರ್ಗದ ಅಮಲುದಾರ್‍ರ ತಿಪ್ಪೆಯನಿಗೆ ಬರಸಿಕಳುಹಿಸ್ತ ನಿರೂಪ

ಶ್ರೀ

ಮೊಹರು

ಕೃಷ್ಣರಾಜವಡೆಯರವರು

ಪ್ರಜೋತ್ಪತ್ತಿ ಸಂವತ್ಸರದ ವೈಶಾಖ ಬ॥ ೭ ಲ್ಲು ಶ್ರೀಮತು ॥ ॥ ತುಮಕೂರು ದೇವರಾಯನದುರ್ಗದ ಅಮಲುದಾರ್‍ರ ತಿಪ್ಪೆಯನಗೆ ಬರಸಿಕಳುಹಿಸ್ತ ನಿರೂಪ ಅದಾಗಿ :– ಶ್ರೀ ॥ ॥ ಶೀಬೀನರಸಿಂಹಸ್ವಾಮಿಯವರ ದೇವಸ್ತಾನದ ಪಡಿತರ ದೀಪಾರಾಧನೆ ರಥೋತ್ಸವ ಮುಂತಾದ ಸೇವಾ

ಸತ್ಕಾರಗಳ ಬಗ್ಯೆ ಗ್ರಾಮ ಭೂಮಿ ಅಪ್ಪಣೆಕೊಡಿಸಿ ಇರುವ ವಿವರಾ । ದೇವರಾಯದುರ್ಗದ ತಾಲೂಕು ಪೈಕಿ ಕೋರದ ಹೋಬಳಿಗೆ ಸೇರಿದ ಸೋರೇಕುಂಟೆ ಅಸಲಿಗ್ರಾಮ ೧ ದಾಖಲಿ ೨ ಕೆರೆ ೧ಕಟ್ಟೆ ೧ ಸಹಾ ಐನು ಬೇರೀಜು ೧೦೫/೧ ಬಾಜೆಬಾಬು ಸುಂಕ ಪೊಮ್ಮು ವಗ್ಯೆರೆ ಗ ೧೦/೦ ಉಭಯಂ ಕಂಟಿರಾಯಿ ಗ ೧೦೫/೧/೦ ಸೀರ್‍ಯದಾ ತಾಲೂಕಿನಂದ ತುಮಕೂರ್‍ರಿಗೆ ಸೇರಿ ಬಂದ ಚಿಕ್ಕಶೀಬೀ ಗ್ರಾಂ ೧ ಕಟ್ಟೆ ೨ಕ್ಕೆ ಸಹಾ ಬಾಜೆಬಾಬು ಸುಂಕ ಪೊಂಮ್ಮು ವಗ್ಯೆರೆ ಬೇರೀಜು ಗ ೨೫/೦ ದೇವಸ್ಥಾನದ ಬಳೀಲಿ ರಥೋತ್ಸವದಲ್ಲೂ ಬರುವ ಪರಿಷೆ ಸುಂಕಗ ೨೫/೦ ಉಭಂ।ಗ ೧೬೫/೧/೦ ಕ್ಕೆ ವಿವರಾ ಪ್ರಾಕು ಕಚೇರಿ ಸನ್ನದಿನ ಪ್ರಕಾರ ೧೫೫/೧/೦ ಹಾಲಿ ಬಾಜೇಬಾಬು ಬಾಬತು ಅಪ್ಪಣಿಕೊಡಿಸಿ ಇರುವುದು. ೧೦/೦/೦ ಉಭಯಂ ಕಂಟೀರಾಯಿ ೧೬೫ /೧/೦ ನೂರು ಅರವತ್ತು ಐದು ವರಹಾವೂ ಒಂದು ಹಣ ಹಾಗಕ್ಕೆ ಸದರಿ ಗ್ರಾಮಗಳ ಸುಂಕ ವಗ್ಯೆರ್‍ರೆ ದೇವಸ್ಥಾನ ಸಹಾ ಲಕ್ಷ್ಮೀನರಸಯ್ಯ, ಪುಟ್ಟಣ್ಣಯ್ಯ, ನಲ್ಲಪ್ಪನ ಜಿಮ್ಮೆಮಾಡಿ ದೇವತಾಸೇವೆ ಸಂಭ್ರಮದಲ್ಲಿ ನಡೆಯುವಂತೆ ಅಪ್ಪಣೆ ಕೊಡಿಸಿ ಇರುವವರ್‍ರಿಂದಾ ಸದರ್‍ರಿಪ್ರಕಾರ ಗ್ರಾಮಗಳೂ ಪರ್‍ರಿಷೆ ಸುಂಕ ದೇವಸ್ತಾನ ಸಹಾ ಇವರ ವಶಾಕೊಡಿಸಿ ಕೊಟ್ಟು ಯಿ ಸನ್ನದಿನ ನಕಲನ್ನು ನನ್ನ ತಾಲೂಕಿನ ಅಟವಣಿ ಶಿರಸ್ತೆದಾರರ ದಪ್ತರಕ್ಕೆ ಬರಸಿಕೊಂಡು ಅಸಲು ಸನ್ನದು ಇವರ ವಶಕ್ಕೆ ವಾಪಸು ಕೊಡುವದು ವರ್‍ರುಷಂ ಪ್ರತಿವರ್‍ರುಷದಲ್ಲೂ ಪುನಹಾತಾಜಾ ಸನ್ನದಿನ ಉಜೂರು ಇಡದೆ ಸದ್ದರಿ ಪ್ರಕಾರ ಗ್ರಾಮಗಳು ವಗ್ಯೆರೆಯನ್ನು ಶಾಶ್ವತವಾಗಿ ದೇವರ ಸೇವೆ ಬಗ್ಯೆ ಇವರ ಹವಾಲು ಮಾಡಿಕೊಡುವುದು ಶ್ರೀ ॥ ॥ ಯವರ ರಥೋತ್ಸವದಲ್ಲಿ ತುಮಕೂರು ದೇವರಾಯದುರ್ಗದ ಸೀಮೆಯಿಂದ ಸುದಾಮದ ಪ್ರಕಾರ್‍ರ ಹಣ ಮುಟ್ಟದ ಸೋಬಸ್ಕರ ಬಿಟ್ಟಿಬೇಗಾರ್‍ರಿ ಮುಂತಾದ್ದನ್ನು ಮುಂದೂ ವರುಷಂಪ್ರತಿ ವರುಷವೂ ಲೇಶ ಆಟಕಾವು ಇಲ್ಲದಂತೆ ಶಾಶ್ವತವಾಗಿ ನಡಿಸಿಕೊಂಡು ಬರುವದು. ತಾರೀಕು ೧೫ನೆ ಮೆ ಸನ್ ೧೮೧೧ ನೆ ಯಿಸವಿಲ್ಲೂ **ಶ್ರೀಕೃಷ್ಣ**

ಎಂಟನೇ ಪತ್ರ ಮುಮ್ಮಡಿ ಕೃಷ್ಣರಾಜ ಒಡೆಯರವರು ಕೊರಟಗೆರೆ ಹತ್ತಿರದ ಚನ್ನರಾಯನದುರ್ಗದ ಅಮಲುದಾರ ಸಂಜೀವಗೌಡಗೆ ಬರಶಿ ಕುಳುಹಿಸಿದ ನಿರೂಪ

ಶ್ರೀ

ಮೊಹರು

ಕೃಷ್ಣರಾಜವಡೆಯರವರು

ಪ್ರಜೋತ್ಪತ್ತಿ ಸಂವತ್ಸರದ ವೈಶಾಖ ಬ॥ ೭ ಲ್ಲು ಶ್ರೀಮತು ॥ ॥ ಚನ್ನರಾಯದುರ್ಗದ ಅಮಲುದಾರ ಸಂಜೀವಗೌಡಗೆ ಬರಶಿ ಕಳುಹಿಸ್ತ ನಿರೂಪ ಅದಾಗಿ :- ಚನ್ನರಾಯದುರ್ಗ ತಾಲೂಕು ಪೈಕಿ ದೇವರಹಳ್ಳಿಯೆಂಬ ಗ್ರಾಮವೂ ಬಹುಕಾಲದಿಂದಾ ಶ್ರೀ ॥ ॥ ಶೀಬಿನರಸಿಂಹಸ್ವಾಮಿಯವರ ದೇವಸ್ತಾನದ ಪಡಿತರ ದೀಪಾರಾಧನೆ ಬಗ್ಗೆ ವರುಷ ೧ಕ್ಕೆ ಕಂಟೀರಾಯಿ ೩/೦ ಮೂರು ವರಹಾದ ಪ್ರಕಾರ ಸರಕಾರಕ್ಕೆ ಜೋಡಿ ತೆಗೆದುಕೊಂಡು ದೇವಸ್ಥಾನಕ್ಕೆ ಗ್ರಾಮ ನಡಸುತ್ತಾ ಇದ್ದದ್ದನ್ನು ಈಚೆಗೆ ವರುಷ ೧ ಕ್ಕೆ ಕಂಟಿರಾಯಿ ೧೦/೦ ಹತ್ತು ವರಹಾದ ಪ್ರಕಾರ ಜೋಡಿ ತೆಗೆದುಕೊಳ್ಳುತ್ತಾ ಇಥೆಯಂತೆ ಆದ್ದರಿಂದ ಈಗಲೂ ವರುಷಂಪ್ರತಿ ವರುಷದಲ್ಲೂ ಸದರಿ ಪ್ರಕಾರ ಕಂಟೀರಾಯಿ ೧೦/೦ ಹತ್ತು ವರಹಾದ ಮ್ಯಾರೆಗೆ ಸರಕಾರಕ್ಕೆ ಜೋಡಿ ತೆಗೆದುಕೊಳ್ಳುತ್ತಾ ಗ್ರಾಮವನ್ನು ದೇವರ ಸೇವೆಗೆ ನಡಿಸುವಂತೆ ಅಪ್ಪಣೆ ಕೊಡಿಸಿ ಇಧೀತಾಗಿ ಸದರಿ ಬರದು ಇರುವಮ್ಯಾರೆಗೆ ಹತ್ತು ವರಹಾದ ಪ್ರಕಾರ ಜೋಡಿಯನ್ನು ಸರಕಾರಕ್ಕೆ ತೆಗೆದುಕೊಳ್ಳುತ್ತಾ ಗ್ರಾಮವನ್ನು ದೇವಸ್ಥಾನದವರ ಜಿಮ್ಮೆಮಾಡಿ ದೇವರಸೇವೆ ನಡಿಯುವಂತೆ ಸರಾಗಮಾಡಿ ನಡಿಸಿಕೊಂಡು ಬರುವುದು. ವರುಷಂಪ್ರತಿ ವರುಷದಲ್ಲೂ ತಾಜಾ ಸನ್ನದಿನ ಉಜೂರು ಇದಕೆಲಸವಿಲ್ಲ । ಸದರಿ ಅಪ್ಪಣೆ ಕೊಟ್ಟು ಇರುವ ಮ್ಯಾರೆಗೆ ಗ್ರಾಮವನ್ನು ದೇವಸ್ತಾನದವರ ಜಿಮ್ಮೆಮಾಡಿ ನಡಸುವದು. ಈ ಸನ್ನದಿನ ನಕಲನ್ನು ನನ್ನ ತಾಲೂಕಿನ ಅಟ್ಟವಣಿ ಶಿರಸ್ತೆದಾರರ ದಸ್ತರಕ್ಕೆ ಬರಶಿಕೊಂಡು ಅಸಲು ಸನ್ನದನ್ನೂ ದೇವಸ್ತಾನದವರ ವಶಕ್ಕೆ ವಾಪಸು ಕೊಡುವದು. ಈ ದೇವಸ್ತಾನ ಗ್ರಾಮ ಸಹ ಲಕ್ಷ್ಮೀನರಸೈಯ್ಯ, ಪುಟ್ಟಣ್ಣಯ್ಯ, ನಲ್ಲಪ್ಪನ ಜಿಮ್ಮೆಮಾಡಿಸಿ ಇರುವದರಿಂದ. ಸದರಿ ಗ್ರಾಮವು ಇವರ ಹವಾಲಿಗೆ ಕೊಡುವದು. ಈ ದೇವರ ರಥೋತ್ಸವದಲ್ಲು ಸುದಾಮದು ಪ್ರಕಾರ ನಿನ್ನ ತಾಲ್ಲೂಕಿನಲ್ಲಿ ಬರುವ ಪರಿಷೆ ಜನಕ್ಕೆ ಸುಂಕಸೋದಿಗೆ ತಕರಾರು ಮಾಡದೆ ಹಣಮುಟ್ಟದ ಸೋಬಸ್ಕರ ಬಿಟ್ಟಿಬೇಗಾರಿ ವಗ್ಯೆರೆ ಸುದಾಮದು ಪ್ರಕಾರ ಸರಾಗವಾಗಿ ನಡಿಸಿಕೊಂಡು ಬರುವದು. ತಾರೀಕು ೧೫ ನೆ ಮೆ ಸನ್ ೧೮೧೧ ಯಿಸವಿಯಲ್ಲು **ಶ್ರೀಕೃಷ್ಣ**

ಒಂಭತ್ತನೇ ಪತ್ರ ಕೃಷ್ಣರಾಜವಡೆಯರವರು ಸೀರ್‍ಯದ ಅಮಲುದಾರ ನರಸಿಂಗರಾಯಗೆ ಬರಸಿ ಕಳುಹಿಸಿದ ನಿರೂಪ.

ಶ್ರೀ

ಮೊಹರು

ಕೃಷ್ಣರಾಜ ವಡೆಯರವರು

ಪ್ರಜೋತ್ಪತ್ತಿ ಸಂವತ್ಸರದ ವೈಶಾಖ ಬ ॥ ೭ ಲ್ಲು ಶ್ರೀಮತು ॥ ॥ ಸೀರ್‍ಯದ ಅಮಲುದಾರ ನರಸಿಂಗರಾಯಗೆ ಬರಸಿ ಕಳುಹಿಸ್ತ ನಿರೂಪ ಅದಾಗಿ:- ಸೀರ್‍ಯದ ತಾಲ್ಲೂಕು ಪೈಕಿ ಶ್ರೀ ॥ ॥ ಶೀಬೀನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ಸುದಾಮದು ಪ್ರಕಾರಾ ನಡೆದುಬರುವ ಹೊಲ ಉತ್ತಾರ । ದೊಡ್ಡ ಶೀಬೀಗ್ರಾಮದಲ್ಲು ಹೊಲದ ಕಂದಾಯ ಗ ೧ ॥ ೨ ಹುಂಜನಾಳು ಗ್ರಾಮದಲ್ಲು ಶಂಖ ಚಕ್ರ ಮುದ್ರೆಯಿರುವ ಬಂಡೆ ಬಗೆ ಹೊಲ ೨/೦ ಉಭಯಂ ಕಂಟಿರಾಯಿ ಗ ೪॥೨ ನಾಲ್ಕು ವರಹಾವು ಏಳು ಹಣದ ಹೊಲವನ್ನು ವರುಷಂಪ್ರತಿಯಲ್ಲೂ ದೇವಸ್ತಾನಕ್ಕೆ ನಡಿಸಿಕೊಂಡು ಬರುವದು. ಇದಲ್ಲದೆ ಅಗ್ರಹಾರ, ಹುಂಜನಾಳೂ, ಹೋಬಳಿ ಪೈಕಿ ರೈತಾಪಿ ವಗ್ಯೆರೆ ಜನರು ತಮ್ಮ ಕೈ ಇಂದಾ ರಥೋತ್ಸವದ ವರ್ತನೆ ಬಗ್ಗೆ ಸುದಾಮದು ಕೊಡುತ್ತಾ ಇದ್ದ ಮ್ಯಾರೆಗೆ ಮುಂದು ಅಟಕಾವು ಇಲ್ಲದೆ ನಡಿಸಿಕೊಂಡು ಬರುವುದು. ರಥೋತ್ಸವದಲ್ಲಿ ಶೀರ್‍ಯದ ಪ್ಯಾಟೆ ಸೀಮೆ ವಗ್ಯೆರೆ ಪರಿಷೆಗೆ ಹೋಗುವ ಅಂಗಡಿಕಾರ್‍ರು ವಗ್ಯೆರೆ ಜನರಿಗೆಲ್ಲಾ ಸುದಾಮದು ಕೊಡುತ್ತಾ ಇದ್ದ ಮ್ಯಾರೆಗೆ ಮುಂದು ಅಟಕಾವು ಇಲ್ಲದೆ ನಡಿಸಿಕೊಂಡು ಬರುವುದು. ಇದಲ್ಲದೆ ಅಗ್ರಹಾರ ಹುಂಜನಾಳು, ಹೋಬಳಿ ಪೈಕಿ ರೈತಾಪಿ ವಗ್ಯೆರೆ ಜನರು ತಮ್ಮ ಕೈ ಇಂದಾ ಹಣ್ಣಮುಟ್ಟದ ಸೋಬಸ್ಕರ ಬಿಟ್ಟಿಬೇಗಾರಿ ಮುಂತಾದ್ದು ಸದರಿ ರಥೋತ್ಸವದಲ್ಲಿ ಪೂರ್ವದಾರಭ್ಯಾ ನಡದು ಬಂದ ಮ್ಯಾರೆಗೆ ಮುಂದುಸಾಲಾಬಾದು ಹರಕತ್ತು ಇಲ್ಲದಂತೆ ನಡಿಸಿಕೊಂಡು ಬರವದು. ಸದರಹೂ ದೇವಸ್ತಾನದ ಭೂಮಿ, ಕಾಣಿ, ಮುಂತಾಗಿ ಲಕ್ಷ್ಮೀನರಸಯ್ಯ, ಪುಟ್ಟಣ್ಣಯ್ಯ, ನಲಪ್ಪನ ಜಿಮ್ಮೆ ಮಾಡಿಸಿ ಇರುವುದರಿಂದ ಯಿ ನಿರೂಪದ ನಕಲನ್ನು ನಿನ್ನ

ತಾಲೂಕಿನ ಅಟವಣಿ ಶಿರಸ್ತೆದಾರರ ದಪ್ತರಕ್ಕೆ ಬರಶಿಕೊಂಡು ಅಸಲು ಸನ್ನದನ್ನು ಅವರ ಜಿಮ್ಮೆಗೆ ವಾಪಸ್ ಕೊಡುವದು ತಾರೀಕು ೧೫ನೆ ಮೇ ಸನ್ ೧೮೧೧ ನೇ ಇಸವಿಲ್ಲೂ ಶ್ರೀಕೃಷ್ಣ

ಹತ್ತನೆಯ ಪತ್ರ ಮುಮ್ಮಡಿ ಕೃಷ್ಣರಾಜ ಒಡೆಯರವರು ತುಮಕೂರು ಜಿಲ್ಲೆಯ ತಾಲ್ಲೂಕಿನ ಇಸ್ತಪಾಲ, ಅಮಲದಾರ್ರು, ಕಿಲ್ಲೇದಾರ್ರಗೆ ಬರಸಿ ಕಳುಹಿಸಿದ ನಿರೂಪ.

ಶ್ರೀ

ಮೊಹರು

ಕೃಷ್ಣರಾಜ ವಡೆಯರವರು

ಪ್ರಜೋತ್ಪತ್ಯ ಸಂವತ್ಸರದ ವೈಶಾಖ ಬ ॥ ೭ ಲೂ ಶ್ರೀಮತು ॥ ॥ ತುಮಕೂರು ದೇವರಾಯದುರ್ಗ ಮದಗಿರಿ ಚನ್ನರಾಯನದುರ್ಗ ಕಡಬ ಗುಬಿ ಹೆಬೂರು ಮಿಡಿಗೇಶಿ ಶೀರ್ಯ ಹಾಗಲ್ಲವಾಡಿ ವಗ್ಯೆರೆ ಹಾಲ್ಲ ಇಸ್ತಪಾಲ ಅಮಲ್ಲುದಾರ್ರ । ಕಿಲ್ಲೇದಾರ್ರಗೆ ಸಹ ಬರಶೀ ಕಳುಹಿಸ್ತ ನಿರ್ರುಪ ಅದಾಗಿ ಶ್ರೀಶೀಬಿನರಸಿಂಹಸ್ವಾಮಿಯವರ ರತ್ತೋತ್ಸವ ಆಗುವಲ್ಲಿ ನಿಮ್ಮ ತ್ತಾಲೂಕ್ಕುಗಳ ಶೆಟ್ಟಿ ವರ್ತಕ ವಗ್ಯೆರೆ ಜನರು ನಿಮ್ಮ ತ್ತಾಲೂಕುಗಳ ಮಾರ್ಗವಾಗಿ ಪರ್ರಿಷೆಗೆ ಬರುವ ಜನ ಸಹ ಹೇರು ವಸರ ಮುಂತಾದ ಜನಕ್ಕೇಲ್ಲಾ ಸುದಾಮದು ಪ್ರಕಾರ ನಡದು ಬಂದ ಮೇರೆಗೆ ಸರರ್ರಾಸು ಮುಂದೂ ವರ್ಷಂಪ್ರತಿವರ್ಷವೂ ನಡಸುತ್ತಾ ಬರ್ರುವದೆ ವಿನಹ ನ್ನುತನ ಪದ್ಧತೀಮಾಡಿ ಸುಂಕವಸೂಲಿಗೆ ಹೆಚ್ಚು ತರ್ರಿಗಳ ಬರಬೇಕೆಂದು ಅಟಕಾವುಮಾಡಿ ಪರ್ರಿಷೇ ಖಲಲ್ಲು ಮಾಡದೆ ಪೂರ್ವದಿಂದ್ದಾ ನಡದ್ದು ಬಂದ ಮೇರೆಗೆ ಮುಂದೂ ಸಾಲಾಬಾದು ನಡಸಿಕೊಂಡು ಬರುವದ್ದು ರತ್ತೋತ್ಸವಕ್ಕೆ ಕುಂಬಾರ ಸ್ವರ್ರುಪ ಹುಲ್ಲು ಮುಂತಾದ ಹಣ ಮುಟದ ಸೋಪಸ್ಕರ ಬಿಟಿ ಬೇಗಾರ್ರಿ ಮುಂತಾದ್ದು ರತ್ತೋತ್ಸವದಲ್ಲಿ ಪೂರ್ವಾರಭ್ಯಾ ಯಾವ ಯಾವ ತಾಲೂಕ್ಕಿನಂದಾ ಯಾವ ಮೇರೆಗೆ ಮರ್ಯಾದೆ ನಡದ್ದು ಬರ್ರುತ್ತಾ ಇತ್ತೋ ಆ ಪ್ರಕಾರಾ ಸಾಲಾಬಾದು ನಡಸಿಕೊಂಡು ಬರ್ರುವದ್ದು ರತ್ತೋತ್ಸವದಲ್ಲಿ ದೇವಸ್ತಾನದಯ ಹತ್ತಿಯಾಜಿಬಗ್ಯೆ ಮದಗಿರ್ರಿ ಮ್ಮಿಡಿಗೇಶಿ ಚನ್ನರಾಯನದುರ್ಗ ತುಮಕೂರ್ರು ದೇವರಾಯದುರ್ಗ ಶೀರ್ರ್ಯದಿಂದ ಸಹ ಹತ್ತು ಹತ್ತು ಜನ ವಾಲ್ಲೇಕಾರ್ರನ್ನು ಬಾರ್ರಿನವರು ಸಹ ರತ್ತೋತ್ಸವ ಆಗುವವರ್ರೆಗೂ ದೇವಸ್ಥಾನದ ಬಳಿಯಲ್ಲಿ ತೈನಾತ್ತೀಬಗೆ ಇಟು ಸದರಹು ದೇವಸ್ಥಾನವಂನ್ನು ಲಕ್ಷ್ಮೀನರಸೈಯ್ಯ, ಪುಟ್ಟಣ್ಣಿಯ್ಯ, ನಲ್ಲಪ್ಪನ ಸ್ವಾದೀನಕೆ ಅಪ್ಪಣೆ ಕೊಡಿಸಿ ಇರ್ರುವದರ್ರಿಂದಾ ಅವರ್ರು ಬರಶಿ ಕಳುಹಿಸ್ತ ಮೇರ್ರೆಗೆ ಪೂರ್ವಾರಭ್ಯಾ ನಡದು ಬರ್ರುವ ಹಣಮುಟದ ಸೋಪಸ್ಕರ ಮುಂತ್ತಾದ ಮರ್ಯಾದೆ ಸುದಾಮದುಮೇರ್ರೆಗೆ ಮುಂದು ಸಾರಾಬಾದ್ದು ನಡಸಿಕೊಂಡು ಬರ್ರುವದ್ದು. ಮಾರ್ಗದಲ್ಲಿ ಕಳ್ಳಕಾಕರ ಉಪದ್ರವಬಗ್ಯು ದೇವಸ್ಥಾನದಯ ಹತ್ತೀಯಾಜೀ ಬಗ್ಯೆ ಸಹ ದೇವಸ್ಥಾನದ ಸಮೀಪದಲ್ಲಿ ಮೊದಲ್ಲಿಂದಾ ಇಟು ಇರ್ರುವ ಉಕ್ಕಡ ಪಹರ್ರೆ ದೇವರಾಯದುರ್ಗದ ತ್ತಾಲೂಕ್ಕೂ ವಾಲ್ಯೆಕಾರರಜನ ೯ ದಫೇದಾರನ ಜನ ಸಹ ಹತ್ತು ಜನವನ್ನೂ ಮುಂದೂ ಮೊದಲ್ಲಿನಂತೆ ಉಕಡ ಪಹರೆ ಕಾಯಮು ಇಟು ಇರ್ರುವದ್ದು ಖಿತ್ತಾರೀಕ್ಕು ೧೫ನೇ ಮಾಹೆ ಮೇ ಸನ್ ೧೮೧೧ ನೇ ಇಸವಿಯಲ್ಲೂ ಶ್ರೀಕೃಷ್ಣ

ಹನ್ನೊಂದನೇ ಪತ್ರ ಮುಮ್ಮಡಿ ಕೃಷ್ಣರಾಜ ಒಡೆಯರವರು ತುಮಕೂರು ದೇವರಾಯದುರ್ಗ ಅಮಲದಾರ ತಿಪ್ಪೈಯ್ಯಗೆ ಬರಶೀಕಳುಹಿಸ್ತ ನಿರೂಪ

ಶ್ರೀ

ಮೊಹರು

ಕೃಷ್ಣರಾಜ ವಡೆಯರವರು

ಪ್ರಜೋತ್ಪತ್ಯ ಸಂವತ್ಸರದ ವೈಶಾಖ ಬ ॥ ೭ ಯಲ್ಲೂ ಶ್ರೀಮತು ॥ ॥ ತುಮಕೂರು ದೇವರಾಯದುರ್ಗದ ಅಮಲದಾರ ತಿಪ್ಪೈಯ್ಯಗೆ ಬರಶಿಕಳುಹಿಸ್ತ ನಿರೂಪ ಅದಾಗಿ ತುಮಕೂರು ತಾಲೂಕು ಪೈಕಿ ಹಾಲಿ ದೇವಸ್ಥಾನಗಳಿಗೆ ಪಡಿತರ ದೀಪಾರಾಧನೆ ಬಗ್ಯೆ ತಸದೀಕು ಅಪ್ಪಣೆ ಕೊಡಿಸಿ ಇರುವ ವಿವರಾ ತುಮಕೂರು ಅರೆಬಾಗಲ ಬಳಿಯಣ ಸತ್ರದ ಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ತಿಂಗಳು ವಂದಕ್ಕೆ ದರ ೨॥೦ ಯರಡೂವರೆ ವರಹಾದಲ್ಲೂ ವರ್ಷವಂದಕ್ಕೆ ಕಂಠೀರಾಯಿ ೩೦/೦ ಮುವ್ವತ್ತು ವರಾಹ ಮುದಿಗೆರೆ ಪ್ರಸನ್ನ ಸೋಮೇಶ್ವರಸ್ವಾಮಿಯವರ ದೇವಸ್ಥಾನಕ್ಕೆ ತಿಂಗಳು ವಂದಕ್ಕೆ ಗು ೨/೦ ಯರಡುವರಹಾದಲ್ಲೂ ವರುಷ ವಂದಕ್ಕೆ ಕಂಗು ೨೪/೦ ಇಪ್ಪತ್ತನಾಲ್ಕೂ ವರಹ ಕೂಟ್ಲಹಳ್ಳಿ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ವರ್ಷವಂದಕ್ಕೆ ಕಂಠೀರಾಯಿ ೬/೦ ಆರು ವರಹ ಬೆಳ್ಳಾವೆ ಸೋಮೇಶ್ವರಸ್ವಾಮಿಯವರ ದೇವಸ್ಥಾನಕ್ಕೆ ಪ್ರಾಕು ಸಲ್ಲುತ್ತಾ ಇರುವದು ೬/೦ ಆರು ವರಹ ಹಾಲಿ ಜಾಸ್ತಿ ಕಂಗು ೨೪/೦ ಇಪ್ಪತ್ತನಾಲ್ಕು ವರಹ ಉಭಯಂ ಕಂಗು ೩೦/೦ ಮುವತ್ತುವರಹ ಬೆಳ್ಳಾವೆ ಸತ್ರದ ಬಳಿಯಣ ಆಂಜನೇಯಸ್ವಾಮಿಯವರ ದೇವಸ್ಥಾನಕ್ಕೆ ವರ್ಷವಂದಕ್ಕೆ ಕಂಠೀರಾಯಿ ೨೪/೦ ಇಪ್ಪತ್ತುನಾಲ್ಕು ವರಹ ಅಂತು ದೇವಸ್ಥಾನ ಐದಕ್ಕೆ ವರ್ಷ ವಂದಕ್ಕೆ ಕಂಠಿರಾಯ ೧೧೪/೦ ನೂರಹದಿನಾಲ್ಕು ವರಹಾಕ್ಕೆ ಭೂಮಿ ಕೊಡತಕ್ಕ ಬಗ್ಯೆ ಕಟ್ಟೆಮಾಡಿಸಿ ಇರುವದ್ದರಿಂದ ಈ ಬಗ್ಯೆ ಭೂಮಿ ಕೊಡತಕ್ಕ ವಿವರಾ ದೇವರಾಯದುರ್ಗದ ತಾಲ್ಲೂಕುಪೈಕಿ ಬೀರನಕಲ್ಲು ಹೋಬಳಿ ಹೊಸಹಳ್ಳಿ ಗ್ರಾಮ ಅಸುಲಿವಂದು ದಾಖಲಿವಂದು ಕಟ್ಟೆಯರಡು ನಾಲಿವಂದು ಸಹ ಬೆರೀಜು ಐಮ ೬೭॥೩ ಅರವತ್ತೇಳು ವರಹಾವು ಯಂಟು ಹಣ ಬಾಜೇಬಾಬು ಸುಂಕ ಪೊಮ್ಮು ಸಹ ಕಂಗು ೩೩/೩ ಮುವತ್ತುಮೂರು ವರಹಾ ಹಣ ಉಭಂ ಕಂಗು ೭೧/೦ ಕ್ಕೆ ಜಾರೀ ಇನಾಂತಿ ವಜಾ ಕಂಗು ೧/೦ ಜಾತಾ ಶುದ್ದನಂತ ಬೆರೀಜು ೭೦/೧ ಯಪ್ಪತ್ತು ವರಹಾವು ವಂದುಹಣ ಕೋರಾದ ಹೋಬಳಿ ಪೈಕಿ ಲಿಂಗನಹಳ್ಳಿ ಅಸಲಿವಂದು ಕಟ್ಟೆವಂದಕ್ಕೆ ಸಹ ಬೇರೀಜು ಐದು ಕಂಗು ೨೩/೪ ಬಾಜೇಬಾಬು ಸುಂಕ ಪೊಮ್ಮು ಸಹ ಕಂಗು ॥ ೦ ॥। ಹ ಉಭಂ ೨೪/೦ ಇಪ್ಪತ್ತನಾಲ್ಕು ವರಹ ತುಮಕೂರು ಪೈಕಿ ಕಸಬೆ ತುಮಕೂರಲ್ಲೂ ಮಂಟಪದಡಕು ಕಟ್ಟೆಹೊಲ ಕರಿಯನಬಗೇದು ೬/೦ ಆರುವರಹ ತೋಪಿನ ಹೊಲ ೪೧೧೦ ನಲ್ವತ್ತೈದು ಹಣ ಕಸಬಾ ಕಂದಕದ ಬಾಳೆ ಕೆಸವಿನ ಭೂಮಿ ಕಂದಾಯ ಕಂಗು ೪ ಜೋಳದ ಕೊಳೆಹೊಲ ಚೋಳನಕಟ್ಟೆ ಹಿಂದಣದು ಕಂಗು ೨/೦ ಅಂತು ಹನ್ನೆರಡು ವರಹಾವು ವಂಭತ್ತುಹಣ ಅಮಾನೀಕೆರೆ ಹಿಂದಣ ಸತ್ರದ ಬಳಿ ತೋಟದ ಕಂದಾಯ ೧/೦ ಊರುಕೆರೆ ಬಳಿ ಹೊಸ್ತಾಗಿ ಪಾಳುಭೂಮಿ ಕ್ರಯ ಪಟ್ಟೆ ಆಗಿರುವ ಭೂಮಿ ಪಾಳ್ಯಾ ಕಟ್ಟತಕ್ಕ ಬಗ್ಯೆ ಮುಂದೆ ಕ್ರಯದ ಮೇಲೆ ರುಜುವಾಗತಕ್ಕದ್ದು ಪ್ರಮೋದೂತಕ್ಕ ಕಂಗು ೧/೦ ಮುಂದೆ ವರ್ರುಷ ೫ ಐದಕ್ಕೆ ಜಾಸ್ತಿ ಆಗತಕ್ಕದ್ದು ಕಂಗು ೫/೦ ಐದು ವರಹ ಉಭಂ ಇವ ಸಂವತ್ಸರಕ್ಕೆ ನಿಂತ ಜಿರೀಜು ಬಾಜೇಬಾಬು ಸುಂಕ ಪೊಮ್ಮು ಸಹ ೬/೦ ಆರು ವರಹ ಅಂತು ಗ್ರಾಮ ಯರಡು ಪಾಳ್ಯ ಆಗತಕ್ಕದ್ದು ವಂದುಹೊಲ

ಮೂರು ಕಂದಕದ ಬಾಳೆ ಕೆಸವಿಭೂಮಿ ತೋಟ ಕಂದಾಯ ಸಹ ಕಂಠೀರಾಯಿಗು ೧೧೪/೦ ನೂರಹದಿನಾಲ್ಕು ವರಹಾಕ್ಕೆ ಸದರಿ ಗ್ರಾಮ ಭೂಮಿಯನ್ನು ಅಪ್ಪಣೆ ಕೊಡಿಸಿ ಇರ್ರುವದರಿಂದ್ದಾ ಈ ಪ್ರಕಾರಕ್ಕೆ ಈ ಬಗೆ ಗ್ರಾಮ ಭೂಮಿ ದೇವಸ್ಥಾನಗಳು ಲಕ್ಷ್ಮೀನರಸೈಯ್ಯ, ಪುಟ್ಟಣ್ಣಯ್ಯ, ನಲ್ಲಪ್ಪನ ಜಿಮ್ಮೆ ಮಾಡಿಕೊಟ್ಟು ವರ್ಷಂಪ್ರತಿಯಲ್ಲೂ ತಾಜಾ ಸನ್ನದಿನ ಉಜೂರು ಇಡದೆ ಶಾಶ್ವತವಾಗಿ ದೇವತಾಪೂಜೆ ನಡೆಸುವಂತೆ ಅಪ್ಪಣೆ ಕೊಡಿಸಿ ಇಧೆ. ಮೊದಲು ಸೋಮೇಶ್ವರಸ್ವಾಮಿಯವರಿಗೆ ನಗದು ಕೊಡುತ್ತಾ ಇದ್ದ ಆರುವರಹಾವನ್ನು ನಗದುಕೊಡಕೆಲಸವಿಲ್ಲ. ಈ ಸನದು ಶಿರೇಸ್ತಾದಾರರ ಲೆಕ್ಕಕ್ಕೆ ಬರಶಿ ಅಸಲ್ ಸನದನ್ನು ಲಕ್ಷ್ಮೀನರಸೈಯ್ಯನ ವಶಕ್ಕೆ ಕೊಡಿಸಿಕೊಡುವದು. ತಾರೀಖು ೧೫ನೇ ಮಾಹೆ ಮೆ ಸನ್ ೧೮೧೧ ಸೇ ಇಸವಿಯಲ್ಲೂ ಶ್ರೀಕೃಷ್ಣ

ಹನ್ನೆರಡನೇ ಪತ್ರ ಕೃಷ್ಣರಾಜವಡಯರವರ್ರು ಲಕ್ಷ್ಮೀನರಸೈಯ್ಯ, ಪುಟ್ಟಂಣೈಯ್ಯ, ನಲ್ಲಪ್ಪ ಇವರಿಗೆ ಬರಶಿ ಕಳುಹಿಸಿದ ನಿರೂಪ

ಶ್ರೀ

ಮೊಹರು

ಕೃಷ್ಣರಾಜವಡೆಯರವರ್ರು

ಪ್ರಜೊತ್ಪತ್ಯ ಸಂವತ್ಸರದ ವೈಶಾಖ ಬ॥ ೮ ಲ್ಲೂ ಶ್ರೀಮತ್ತು ॥ ॥ ಲಕ್ಷ್ಮೀನರಸೈಯ್ಯ, ಪುಟ್ಟಂಣೈಯ್ಯ, ನಲ್ಲಪ್ಪಗೆ ಸಹ ಬರಶಿ ಕಳುಹಿಸ್ತ ನಿರೂಪ ಅದಾಗಿ:– ದೇವತಾಸೇವೆ ಸಂಭ್ರಮದಿಂದ್ದಾ ನಡಸತಕ್ಕ ಬಗ್ಯೆ ನಿಂಮ್ಮ ತಾಲೂಕಿಗೆ ಅಪ್ಪಣೆಕೊಡ್ಸಿ ಇರ್ರುವದು ಶ್ರೀ ಶೀಬಿ ನರಸಿಂಹಮ್ಮಸ್ವಾಮಿಯವರ ದೇವಸ್ಥಾನ ವಂದು ಬೆಳ್ಳಾವೆ ಸೋಮೇಶ್ವರ ಸ್ವಾಮಿಯವರ ದೇವಸ್ಥಾನ ವಂದು ಬೆಳ್ಳಾವೆ ಛತ್ರದ ಆಂಜನೇಯಸ್ವಾಮಿಯವರ ದೇವಸ್ಥಾನ ವಂದು ಮುದಿಗೆರೆ ಪ್ರಸಂನ್ನ ಸೋಮೇಶ್ವರಸ್ವಾಮಿಯವರ ದೇವಸ್ಥಾನ ವಂದು ತುಮಕೂರ್ರು ಛತ್ರದ ಲಕ್ಷ್ಮೀನೃಸಿಂಹ್ಮಸ್ವಾಮಿಯವರ ದೇವಸ್ಥಾನ ವಂದು ಕೊಟ್ಟಹಳ್ಳಿ ಆಂಜನೇಯಸ್ವಾಮಿಯವರ ದೇವಸ್ಥಾನ ವಂದು ಅಂತ್ತು ಆರು ದೇವಸ್ಥಾನವನ್ನು ನಿಂಮ್ಮ ಜಿಂಮ್ಮೆಮಾಡಿ ಯಿ ದೇವರುಗಳಿಗೆ ಪಡಿತರ ದೀಪಾರಾಧನೆ ಮುಂತ್ತಾದ ಸೇವಾ ಸತ್ಕಾರಗಳ ಬಗ್ಯೆ ಅಪ್ಪಣೆ ಕೊಡ್ಸಿ ಇರ್ರುವದು ದೇವರಾಯದುರ್ಗದ ತಾಲೂಕು ಸೋರೇಕುಂಟೆ ಗ್ರಾಮ ಮೆ ಬಾಜೆಬಾಬುಸುಂಕ ವಗ್ಯೆರ್ರೆ ಕಂಗು ೧೧೫/=೧೦ ತುಮಕ್ರೂರು ಸ್ಥಳದ ಚಿಕ್ಕಶೀಬೀ ಗ್ರಾಮ ಮೈ ಬಾಜೇಬಾಬು ಸುಂಕ ಸಹ ೨೫/೦ ಶೀಬೀ ದೇವಸ್ಥಾನದ ರಥೋತ್ಸವದ ಜತ್ರೆ ಸುಂಕ ಕಂಗು ೨೫/೦ ಶೀರ್‍ಯದ ತಾಲೂಕು ದೊಡ್ಡಶೀಬೀ ಹುಂಜನಾಳು ಹೊಲಗಳ ಕಂದಾಯ ಕಂಗು ೪ ॥ ೨ ದೇವರಾಯದುರ್ಗದ ತಾಲೂಕು ಬೀರನಕಲ್ಲು ಹೋಬಳಿ ಪೈಕಿ ಹೊಸಹಳ್ಳಿ ಗ್ರಾಮ ಮೈಬಾಜೆ ಬಾಬು ಸುಂಕ ವಗ್ಯೆರ್ರೆ ಜಾರ್ರಿಯಿನಾಮತಿ ಕಂಗು ೧/೦ W ನಿಂತ ಬೆರ್ರಿಜು ಕಂಗು ೭೦/೦ ಯಪ್ಪತ್ತು ವರಹವು ವಂದು ಹಣ ದೇವರಾಯದುರ್ಗ ಸ್ಥಳದ ಕೋರದ ಹೋಬಳಿ ಪೈಕೀ ಲಿಂಗನಹಳ್ಳಿ ಗ್ರಾಮ ಬಾಜೆ ಬಾಬು ಸುಂಕ ವಗ್ಯೆರ್ರೆ ಕಂಗು ೨೪/೦ ತುಮಕೂರು ಕಸಬಾ ಮಜಕೂರ ಪೈಕೀ ಮಂಟಪದ ವಡಕುಕಟ್ಟೆ ಹೂಲಕರ್ರಿಯನ ಬಗೆದು ಕಂಗು ೬/೦ ತೋಪಿನ ಹೊಲ ಗು ೪॥೦ ಜೋಳದ ಕೂಳೆಹೊಲ ಗು ೨ ಕಸಬಾಕಂದಕದ ಬಾಳೆಕೆಸವಿನಭೂಮಿ ಬಗೇದು ಕಂಗು / ೪ ಅಮಾನಿಕೆರೆ ಹಿಂದಣಛತ್ರದ ತೋಟದ ಕಂದಾಯ ಕಂಗು ೧ / ೦ ಯೇಕೂನ ೧೩ ॥ ೪ ತುಮಕ್ರೂರು ಸ್ಥಳ ಊರುಕೆರೆ ಗ್ರಾಮದ ಯಲ್ಲೆಯಲ್ಲಿ ಹೊಸ್ತಾಗಿ ಪಾಳುಭೂಮಿ ಕ್ರಯಪಟ್ಟೆ ಆಗಿಯಿರುವ ಬಗೆ ಇವ ಸಂವತ್ಸರಕ್ಕೆ ಬಾಜೆ ಬಾಬು ಸುಂಕ ವಗ್ಯೆರ್ರೆ ಕಂಗು ೬ / ೦ ಅಂತ್ತು ಕಂಗು ೨೮೩ ॥ ૩ । ೦ ಯಿನ್ನೂರ ಯಂಭತ್ತಮೂರ್ರು ವರಹವು ಯಂಟುಹಣ ಹಾಗದ ಗ್ರಾಮ ಭೂಮಿ ಸದರ್ರಿ ದೇವಸ್ಥಾನಗಳು ಸಹಾ ನಂಮ್ಮ ಸ್ವಾಧೀನಾ ಮಾಡಿಯಿರುವದರ್ರಿಂದ್ದಾ ಯಿ ಬಗೆ ಗ್ರಾಮ ಭೂಮಿಗಳ ಬಳಿಯಣ ಕೆರೆಕುಂಟೆಗಳನ್ನು ನಿಂಮ್ಮ ಕೈಯಿಂದ್ದಾ ಹಣ ಮುಟ್ಟಿಶಿ ಕಟ್ಟಿಶಿದಲ್ಲಿ ಆ ಬಗೆ ಕೆರೆಕುಂಟೆಗಳ ಹಿಂದಣ ಭೂಮಿಯಲ್ಲಿ ಚವುಥಾಯಿ ನಾಲ್ಕು ಹಿಸ್ಸೆಯಲ್ಲಿ ವಂದುಪಾಳು ಭೂಮಿನಮಗೆ ಕಟ್ಟು ಕೊಡಗೀ ಅಪ್ಪಣೆಕೊಡ್ಸಿ ಯಿಧೀತಾಗಿ ಸೋರೆಕುಂಟೆ ಚಿಕ್ಕ ಶೀಬೀ ಬಳಿಯಲ್ಲಿ ಯಿವರ್ರಿಗೆ ನೀವು ಕಟ್ಟಿಶಿಯಿರುವ ಕೆರೆ ವಂದು ಕುಂಟೆ ವಂದು ಮುಂದೆ ಕಟ್ಟಿಸುವ ಕೆರೆಕುಂಟೆಗಳ ಕೆಳಗಣ ಭೂಮಿಯಲ್ಲಿ ಸಹ ಚವುಥಾಯಿ ಹಿಸ್ಸೆ ಗದ್ದೆ ಭೂಮಿಯನ್ನು ನಿಂಮ ಕಟ್ಟು ಕೊಡಿಗಿ ಶಿಲಾಪ್ರತಿಷ್ಠಿ ಮಾಡಿಕೊಂಡು ನಿಂತಭೂಮಿಯಲ್ಲೂ ಯಿದಲ್ಲದೆ ಯಿಗ್ರಾಮಗಳ ಅಬಾದು ಮಾಡಿಕೊಂಡು ಗ್ರಾಮದ ಭೂಮಿಯಲ್ಲಿ ಪಾಳ್ಯವಗೈರೆ ಕಟ್ಟಿ ಪೈರುವಳೀ ಮುಂತಾದ್ದರಲ್ಲಿ ಚಂನರಾಯ ದುರ್ಗದ ತಾಲೂಕಾ ಪೈಕೀ ದೇವರಹಳ್ಳಿ ಜೋಡಿಗ್ರಾಮದಲ್ಲಿ ಸಹಯೇನು ಹೆಚ್ಚು ಹುಟ್ಟುವಳಿ ಆದಾಗ್ಯೂ ಜಾತ್ರೆ ಸುಂಕದಲ್ಲಿ ಯೇನು ಜಾಸ್ತಿ ಹುಟ್ಟಿದಾಗ್ಯು ಭಕ್ತಾದಿಗಳು ಯೇನುದೇವರ ಸೇವೆ ಬಗ್ಯೆ ತಂದು ವಪ್ಪಿಶಿದಾಗ್ಯು ಅದೆಲ್ಲಾ ದೇವತಾ ಸೇವೆ ಬಗ್ಯೆ ಮುಟ್ಟುವಳಿ ಮಾಡ್ಸುತ್ತಾ ಸಂಭ್ರಮದಿಂದ್ದಾ ದೇವತಾಸೇವಾ ಸತ್ಕಾರ ಶ್ರೀ ಶೀಬೀ ನರಸಿಂಹಮ್ಮಸ್ವಾಮಿಯವರ ರಥೋತ್ಸವ ಮುಂತ್ತಾಗಿ ಮಾಡ್ಸುತ್ತಾ ಶಾಶ್ವತವಾಗಿ ಅಪ್ಪಣೆ ಕೊಡ್ಸಿ ಯಿರ್ರುವ ಧರ್ಮವನ್ನು ನ್ಯೂನತೆಯಿಲ್ಲದೆ ನಡಶಿಕೊಂಡು ಬರ್ರುವದು. ರಥೋತ್ಸವದ ಬಗ್ಯೆ ಯಾರ್ರೇನು ವರ್ತನೆ ಸರ್ತನೆ ಮುಂದೆ ಮತ್ಯಾರಾದರ್ರೂ ಧರ್ಮಕ್ಕೆ ತಂಮ್ಮ ಭೂಮಿಕಾಣಿ ಮುಂತಾಗಿ ದೇವರ್ರಿಗೆ ವಪ್ಪಿಶಿದಾಗ್ಯು ಅದೆಲ್ಲಾ ದೇವರ ಸೇವೆಗೆ ಸಾರ್ಥಕಮಾಡ್ಸಿವದು. ನೀವು ಯಿ ದೇವಸ್ಥಾನಗಳ ಕಟ್ಟಿಶಿ ನಿಂಮ ಕೈಯಿಂದ್ದಾ ಮುಟ್ಟುವಳಿಮಾಡಿ ಯಿ ದೇವರ್ರುಗಳಲ್ಲಿ ಭಕ್ತಿ ತತ್ಪರರಾಗಿ ಯಿರ್ರುವದರಿಂದ್ದಾ ಯಿ ದೇವಸ್ಥಾನಗಳು ಗ್ರಾಮಭೂಮಿ ವಗ್ಯೆರೆ ಸರ್ವವು ಶಾಶ್ವತವಾಗಿ ನಿಮ್ಮ ಪುತ್ರ ಪೌತ್ರ ಪಾರಂಪರ್ಯವಾಗಿ ನಿಂಮ್ಮ ಜಿಂಮ್ಮೆಯಲ್ಲೇ ಯಿರುತ್ತಾ ನೀವೆ ದೇವತಾಸೇವೆ ಮಾಡತಕ್ಕದು ಯಂದು ಅಪ್ಪಣೆ ಕೊಡ್ಸಿ ಯಿಧೀತಾಗಿ ಸದರ್ರಿ ಬರದ ಪ್ರಕಾರ್ರಾ ನಡದು ಕೊಳ್ಳುವದು. ಶೀರ್‍ಯ ತುಮಕೂರ್ರು ದೇವರಾಯನದುರ್ಗ, ಚಂನರಾಯದುರ್ಗ ಮದ್ದಗಿರಿ ಮುಂತ್ತಾದ ಸುತ್ತ ಮುತ್ತಣ ತಾಲ್ಲೂಕುಗಳಿಂದ್ದಾ ರಥೊತ್ಸವಕ್ಕೆ ಅಡಿಗಬ್ಬು, ಹುಲ್ಲು, ಕುಂಬಾರಸ್ವರೂಪ ಮುಂತ್ತಾದ ಹಣ ಮುಟ್ಟದ ಸೋಪಸ್ಕರ ಬಿಟ್ಟಿಚಿಗಾರ್ರಿ ಮುಂತ್ತಾದ್ದು ಸುದಾಮದ ಪ್ರಕಾರ್ರಾ ಮುಂದೂಸಾಲಾಬಾದು ನಡದು ಬರುವಂತ್ತೆ ಅಪ್ಪಣೆ ಕೊಡ್ಸಿಯಿಧೀತಾಗಿ ತ್ತಿಳಿದು ಯಿರುವದು. ತಾರೀಖು ೧೬ನೆ ಮಾಹೆ ಮೆ ಸನ್ ೧೮೧೧ ನೆ ಯಿಸವಿಯಲ್ಲೂ ಶ್ರೀಕೃಷ್ಣ

ಶ್ರೀ ಸೀಬಿ ನರಸಿಂಹಸ್ವಾಮಿ ದೇವಾಲಯದ ದಾಖಲೆಗಳು (೧೭೮೦–೧೮೨೦) ದಾಖಲೆಗಳಿಂದ ಬಹಳಷ್ಟು ಐತಿಹಾಸಿಕ ಮಾಹಿತಿಗಳೂ ಲಭ್ಯವಾಗುತ್ತದೆ. ಯುವ ವಿದ್ವಾಂಸರು ಇಂತಹ ದಾಖಲೆಗಳನ್ನು ಅಧ್ಯಯನ ಮಾಡಬೇಕು. ಮೊದಲ ಪತ್ರದಲ್ಲಿ ಶೀಬಿ ದೇವಾಲಯದ ಇತಿಹಾಸವನ್ನು ತಿಳಿಸುತ್ತದೆ. ಕರಣೀಕ ಕೃಷ್ಣಪ್ಪನವರ ತಾತ ಹರಿಯಪ್ಪ ಅಜ್ಜಿ ಅಕ್ಕಾಜಮ್ಮ ತಂದೆ ತಮ್ಮಣ್ಣ, ತಾಯಿ ಲಕ್ಷ್ಮಮ್ಮ ಎಂದು, ಕರಣೀಕ ಕೃಷ್ಣಪ್ಪ ಹೈದರ್‌ಆಲಿ ಹತ್ತಿರ ಕರಣೀಕತನ ಮಾಡುತ್ತಿದ್ದು ಸಹ ಸ್ಪಷ್ಟವಾಗಿ ತಿಳಿದುಬರುತ್ತದೆ.

ಈ ಪತ್ರದಲ್ಲಿ ಕರಣೀಕ ಕೃಷ್ಣಪ್ಪ ಅಥವಾ ಕಛೇರಿ ಕೃಷ್ಣಪ್ಪ ಅಲಮೇಲಮ್ಮ ಇವರ ಧರ್ಮಪತ್ನಿ ಇವರಿಗೆ ಮೂವರು ಮಕ್ಕಳು ಲಕ್ಷ್ಮೀನರಸೈಯ್ಯ, ಪುಟ್ಟಣ್ಣೆಯ್ಯ, ನಲ್ಲಪ್ಪ. ಇದೇ ಪತ್ರದಲ್ಲಿ ಹೈದರಾಲಿ ಕಾಲದಲ್ಲಿ ಆಸಫ್ ಮಹಮ್ಮದಲ್ಲೀ ಮೆಹಕರಿ ಸಾಹೇಬ ಧಾರವಾಡ ಕೃಷ್ಣಾ, ತುಂಗಭದ್ರಾ ಮಧ್ಯೆ

ಸವಣೂರು ಹದಿನೆಂಟು ಲಕ್ಷ ಗುತ್ತಿ ಹನ್ನೆರಡು ಲಕ್ಷ ಬೆಂಗಳೂರು ಕಛೇರಿ ಮುಂತಾದ ರಾಜ್ಯಾಧಿಕಾರಗಳ ಮಾಡುತ್ತಾ ಪ್ರಕಟಿಸಿದ್ದು ಈ ದಾಖಲೆ ಹೇಳಿತ್ತದೆ. ಇದೇ ಪತ್ರದಲ್ಲಿ ಟಿಪ್ಪುಸುಲ್ತಾನರ ಮೀರ್ ಆಸಫ್, ಮೀರಾ ಮಹಮ್ಮದ್ ಸಾದಕರೂ ಮೀರ್ ಮೀರಾ ಮಹಮ್ಮದ್ ರಜಾವೆಂಕೀ ನವಾಬರ ಉಲ್ಲೇಖವಿದೆ.

ಇದೇ ಪತ್ರದಲ್ಲಿ ಇಕ್ಕೇರಿ – ಬಿದಲೂರು – ಕೊಡಿಯಾಲ್ ಬಂದರ್ – ಹೈದರ್‌ನಗರ ಸರ್ವಾಧಿಕಾರಿ ಗುರಿಕಾರ್ ವೆಂಕಟಪತೈಯ್ಯನವರು – ಅವರ ಪತ್ನಿ ರಮಣಮ್ಮ ಅವರ ಮಗ ಗುರಿಕಾರ್ ವೆಂಕಟಪತೈಯ್ಯ ಅವರ ಪತ್ನಿ ಲಕ್ಷ್ಮೀದೇವಮ್ಮ ಇನ್ನೊಬ್ಬ ಮಗ ವೆಂಕಟಪ್ಪ ಅವರ ಪತ್ನಿ ಲಕ್ಷುಮ್ಮ ಈ ಪತ್ರದ ಕಾಲ ಶಾಲೀವಾಹನ ಶಕಾಬ್ದಃ ೧೭೧೭ ನೇ ರಾಕ್ಷಸ ಸಂವತ್ಸರ ಈ ಪತ್ರದ ಕಾಲ ಕ್ರಿ.ಶ. ೧೭೯೫ ಈ ಪತ್ರ ಆ ಕಾಲದಲ್ಲಿ ಟಿಪ್ಪುಸುಲ್ತಾನ್ ರಾಜ್ಯಭಾರ ಮಾಡುತ್ತಾ ಇದ್ದಿದು ಎರಡನೇ ಪತ್ರದ ಕಾಲ ಶಾಲೀವಾಹನ ಶಕ ೧೭೨೧ ನೇ ಪರಿವರ್ತಮಾನಕ್ಕೆ ಸಲ್ಲುವ ಶಿದ್ಧಾರ್ಥಿ ಸಂವತ್ಸರದ ಚೈತ್ರ ಬ ೭ ಗುರುವಾರ ಈ ಪತ್ರದ ಕಾಲ ಕ್ರಿ.ಶ. ೧೭೯೯ ಈ ಪತ್ರದ ಕಾಲದಲ್ಲಿ ರಾಜ್ಯವಾಳುತ್ತಾ ಇದ್ದವರು ಟಿಪ್ಪುಸುಲ್ತಾನ್. ಕಛೇರಿ ಕೃಷ್ಣಪ್ಪನವರ ಪತ್ನಿಯು ಪೂರ್ತಿ ಹೆಸರು 'ಅಲಮೇಲು ಮಂಗಾಂಬಿಕಾ" ಎಂದು ತಿಳಿದು ಬರುತ್ತದೆ. ನಾಲ್ಕನೇ ಪತ್ರದಿಂದ ರುಧಿರೋದ್ಗಾರಿ ಸಂವತ್ಸರ ಕಾಲದಲ್ಲಿ ತುಮಕೂರು ಅಮಲುದಾರ್ರು ಕುಪ್ಪಯ್ಯನವರು. ನನ್ನ ಮಾಹಿತಿ ಪ್ರಕಾರ ತುಮಕೂರು ತಾಲ್ಲೂಕ್ ಮೊದಲ ಅಮಲುದಾರ್ರು ಕುಪ್ಪಯ್ಯನವರೆ ಇರಬೇಕು. ಐದನೇ ಪತ್ರದಲ್ಲಿ ದಿವಾಣ್ ಪೂರ್ಣಯ್ಯನವರು ತುಮ್ಕೂರು ಅಮಲ್ದಾರ್ ಕುಪ್ಪಯ್ಯನವರಿಗೆ ಆದೇಶ ನೀಡಿದ್ದಾರೆ. ಎಳನೇ ಪತ್ರ ಮುಮ್ಮಡಿ ಕೃಷ್ಣರಾಜ ಒಡೆಯರವರು ಪ್ರಜೋತ್ಪತ್ತಿ ಸಂವತ್ಸರದ ವೈಶಾಖ ಬ ॥ ೭ ಲ್ಲು ಬರೆದ ಪತ್ರದಲ್ಲಿ ತುಮಕೂರು ದೇವರಾಯದುರ್ಗದ ಅಮಲದಾರ್ರ ತಿಪ್ಪೈಯ್ಯನವರ ಉಲ್ಲೇಖವಿದೆ. ಮುಮ್ಮಡಿಯವರ ಕಾಲದಲ್ಲಿ ದೇವರಾಯನದುರ್ಗ ತಾಲ್ಲೂಕ್ ಸ್ಥಳವಾಗಿತ್ತು. ಅದರ ಮೊದಲ ಅಮಲುದಾರ್ರು ತಿಪ್ಪೈಯ್ಯ.

ಎಂಟನೇ ಪತ್ರದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರವರು ಬರೆದ ಪತ್ರದ ಕಾಲ ಪ್ರಜೋತ್ಪತ್ತಿ ಸಂವತ್ಸರದ ವೈಶಾಖ ಬ॥ ೭ಲ್ಲು ಚನ್ನರಾಯದುರ್ಗದ ಅಮಲುದಾರ ಸಂಜೀವಗೌಡ. ಈ ಹಿಂದೆ ಚನ್ನರಾಯದುರ್ಗ ಮದಗಿರಿ ಮಹಾಪ್ರಭುಗಳ ಕಾಲದಲ್ಲಿ ಆಡಳಿತ ಕೇಂದ್ರವಾಗಿತ್ತು. ಕೊರಟಗೆರೆ ಪಕ್ಕ ಇರುವ ಗಿರಿಯ ಮೇಲೆ ದೇವಾಲಯ ಎಲ್ಲಾ ಇದೆ ಮುಮ್ಮಡಿಯವರ ಕಾಲದಲ್ಲಿ ಚನ್ನರಾಯನದುರ್ಗ ತಾಲ್ಲೂಕ್ ಕೇಂದ್ರವಾಗಿತ್ತು. ಈ ತಾಲ್ಲೂಕ್ ಕೇಂದ್ರದ ಮೊದಲ ಅಮಲುದಾರ ಸಂಜೀವಗೌಡ. ಒಂಭತ್ತನೇಪತ್ರದಲ್ಲಿ ಮುಮ್ಮಡಿಯವರು ಪ್ರಜೋತ್ಪತ್ತಿ ಸಂವತ್ಸರದ ವೈಶಾಖಲ ಬ॥ ೭ ಲ್ಲು ಸೀರ್ಯದ ಅಮಲುದಾರ ನರಸಿಂಗರಾಯನಿಗೆ ಕೊಟ್ಟ ಆದೇಶದಿಂದ ಸೀರ್ಯ = ಶಿರಾ ತಾಲ್ಲೂಕ್ ಕೇಂದ್ರವಾಗಿದ್ದು ಅದರ ಮೊದಲ ಅಮಲುದಾರ ನರಸಿಂಗರಾಯ ಇದೇ ಪತ್ರದಲ್ಲಿ ಹುಂಜನಾಳು ಗ್ರಾಮದಲ್ಲು "ಶಂಖ ಚಕ್ರ ಮುದ್ರೆ ಇರುವ ಬಂಡೆ" ಎಂದು ಉಲ್ಲೇಖವಾಗಿದೆ. ಅದು ವಾಮನ ಮುದ್ರೆ ಕಲ್ಲು ಇದ್ದು ಯಾವುದೋ ವಿಷ್ಣು ದೇವಸ್ಥಾನದ ಇನಾಂ ಹೊಲ ಎಂದು ತಿಳಿದು ಬರುತ್ತದೆ.

ಹತ್ತನೇ ಪತ್ರ ಮುಮ್ಮಡಿ ಕೃಷ್ಣರಾಜ ಒಡೆಯರವರು ಪ್ರಜೋತ್ಪತ್ತಿ ಸಂವತ್ಸರದ ವೈಶಾಖ ಬ॥ ೭ ಲೂ ಬರೆದ ಪತ್ರದಲ್ಲಿ ತುಮಕೂರು ಜಿಲ್ಲೆಯಲ್ಲಿ ಇದ್ದ ಪ್ರಮುಖ ಕೇಂದ್ರಗಳ ಉಲ್ಲೇಖ ಇದೆ. ಅವು ಯಾವುದು ಎಂದರೆ ತುಮಕೂರು, ದೇವರಾಯದುರ್ಗ, ಮದಗಿರಿ, ಚನ್ನರಾಯನದುರ್ಗ, ಕಡಬ, ಗುಬಿ, ಹೆಬೂರು, ಮಿಡಿಗೇಶಿ, ಶೀರ್ಯ, ಹಾಗಲ್ಲವಾಡಿ ವಗೈರೆ ಹಾಲ್ಲ ಇಸ್ತಬಾಲ, ಅಮಲ್ಲುದಾರ್ರ ಕಿಲ್ಲೇದಾರ್ರಗೆ ಎಂದಿರುವುದರಿಂದ ಮೇಲೆ ಉಲ್ಲೇಖಿಸಿದ ಕೆಲವು ಸ್ಥಳಗಳಲ್ಲಿ ಕಿಲ್ಲೇದಾರ್ರ ಇದ್ದರು ಅನ್ಯ ದಾಖಲೆಗಳಿಂದ ಯಾವ ಯಾವದು ಕಿಲ್ಲೆಗಳು ಆಗಿದ್ದವು ಎಂಬುದನ್ನು ಸಂಶೋಧನೆ ಮಾಡಬೇಕು.

ಹನ್ನೊಂದನೇ ಪತ್ರದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಪ್ರಜೋತ್ಪತ್ತಿ ಸಂವತ್ಸರದ ವೈಶಾಖ ಬ॥ ೭ ಲ್ಲೂ ಬರೆದ ಪತ್ರದಲ್ಲಿ ತುಮಕೂರು ದೇವರಾಯದುರ್ಗದ ಅಮಲದಾರ ತಿಪ್ಪೈಯ್ಯನ ಉಲ್ಲೇಖವಿದೆ.

ಹನ್ನೆರಡನೇ ಪತ್ರ ಮುಮ್ಮಡಿ ಕೃಷ್ಣರಾಜ ಒಡೆಯರವರ ಪ್ರಜೋತ್ಪತ್ಯ ಸಂವತ್ಸರದ ವೈಶಾಖ ಬ॥ ೮ಲ್ಲೂ ಬರೆದ ಪತ್ರದಲ್ಲಿ ದೇವರಾಯದುರ್ಗದ ಸ್ಥಳ ಕೋರದ ಹೋಬಳಿ ಪೈಕೀ ಲಿಂಗನಹಳ್ಳಿ ಗ್ರಾಮ ಎಂದಿರುವುದರಿಂದ ಅಂದಿನ ದಿನಮಾನದಲ್ಲಿ ಕೋರ ಹೋಬಳಿಯಾಗಿತ್ತು. ಅದು ಇಂದಿಗೂ ಮುಂದುವರೆದಿದೆ. ಈ ಹಿಂದೆ ಕೋರಾದಲ್ಲಿ ಏಳುನಾಡು ಪ್ರಭುಗಳು ವಂಶಸ್ಥರು ನೆಲೆಸಿದ್ದು ರಾಜ್ಯಬಾರ ಮಾಡುತ್ತಾ ಇದ್ದರು ಅವರನ್ನು ಕೋರಾ ಪಾಳೆಯಗಾರರು ಎಂದು ಕರೆಯಲಾಗುತ್ತಿತ್ತು.

ಹದಿಮೂರನೇ ಪತ್ರದಲ್ಲಿ ಕೃಷ್ಣರಾಜ ಒಡೆಯರ್‌ರವರು ವಿಕ್ರಮ ಸಂವತ್ಸರ ಆಶ್ವೀಜ ಶು॥ ೧೦ ಮಂಗಳವಾರ ಬರೆದ ಮರಾಠಿ ಭಾಷೆಯ ಈ ಪತ್ರದಲ್ಲಿ ತುಮಕೂರ ದೇವರಾಯದುರ್ಗ ತಾಲೂಕ ಆಮೋಲ ಕೃಷ್ಣಯ್ಯನ ಉಲ್ಲೇಖವಿದೆ. ಈ ಪತ್ರದ ಕಾಲ ೧೭ ಮಾಹೇ ಅಗಟಂಬರ ಸನ್ ೧೮೨೦ ನೇ ಇಸವಿ. ಈ ಹಿಂದೆ ಇತಿಹಾಸ ದರ್ಶನ ಸಂಪುಟ ೧೪ ೧೯೯೯ರಲ್ಲಿ ಪ್ರಕಟವಾದ ನನ್ನ ಲೇಖನ "ಹೈದರ್‌ನಾಮಾ" ಕೃತಿ ಕರ್ತೃ ಯಾರು? ಸೀಬಿ ನರಸಿಂಹಸ್ವಾಮಿ ದೇವಸ್ಥಾನದ ಮಹಾದ್ವಾರದ ದಕ್ಷಿಣದ ಮಾಳಿಗೆಯಲ್ಲಿ ಕಪ್ಪುಶಾಯಿಯಿಂದ ಬರೆದಿರುವ ಶಾಸನದ ಪೂರ್ಣ ಪಾಠದ ಲೇಖನದಲ್ಲಿ "ಹೈದರ್ ನಾಮಾ" ಕರ್ತೃ "ಕಛೇರಿಕೃಷ್ಣಪ್ಪ" ನವರು ಎಂದು ಸಿದ್ಧ ಮಾಡಿದ್ದೇನೆ. ಆಸಕ್ತರು ದಯಮಾಡಿ ಆ ಲೇಖನವನ್ನು ಪರಾಂಬರಿಸ ಬೇಕಾಗಿ ವಿನಂತಿ.

ಮೈಸೂರು ನಗರ ನವಾಸಿ ಶ್ರೀ ಜಿ.ಎ. ಶಿವಲಿಂಗಯ್ಯನವರು ಸಂಪಾದಿಸಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯಿಂದ ೨೦೧೧ ರಲ್ಲಿ ಮುದ್ರಣವಾದ ಗ್ರಂಥ "ಯಾದಾಸ್ತು ಹೈದರ ನಾಮಾ" ಮತ್ತೊಂದು ಹೊಸ ಹಸ್ತಪ್ರತಿಯಿಂದ ಸಂಪಾದಿಸಿ ಪ್ರಕಟಿಸಿದ್ದಾರೆ. ಅದೇ ಮಸ್ತಕದ ಅನುಬಂಧವಾಗಿ "ಹೈದರ್‌ನಾಮ" ಹೆಚ್. ಅಪ್ಪಣ್ಣಶೆಟ್ಟಿಯಿಂದ ರಚನೆಗೊಂಡು ೧೮೯೭ ರಲ್ಲಿ ಮುದ್ರಣವಾದ ಮಸ್ತಕವನ್ನು ಅನುಬಂಧವಾಗಿ ಕೊಡಲಾಗಿದೆ. ಒಂದೇ ಹೆಸರಿನ ಎರಡು ಮಸ್ತಕಗಳು. ಕಛೇರಿ ಕೃಷ್ಣಪ್ಪ "ಹೈದರ್‌ನಾಮಾ" ಕೃತಿಯನ್ನು ಮುಗಿಸಿದ್ದು ಕ್ರೋಧಿ ಸಂವತ್ಸರದ ಆಷಾಢ ಶುದ್ಧ ೧೧ ಮಂಗಳವಾರ ಈ ಕಾಲಮಾನ ಕ್ರಿ.ಶ. ೧೭೮೪ ಜೂನ್ ೨೪ ಮಂಗಳವಾರಕ್ಕೆ ಹೊಂದುತ್ತದೆ. ಮೈಸೂರಿನ ಅಪ್ಪಣ್ಣಶೆಟ್ಟಿ ರಚಿಸಿದ "ಹೈದರ್‌ನಾಮಾ" ಪ್ರಕಟವಾದದ್ದು ೧೮೯೭. ಶೀಬಿ ನರಸಿಂಹಸ್ವಾಮಿ ದೇವಾಲಯದ ಆಡಳಿತ ಮಾಡುತ್ತಾ ಬಂದಿರುವ ವಂಶಸ್ಥರ ಬಳಿ ಅಪಾರ ಕಾಗದ ಪತ್ರಗಳ ಸಂಗ್ರಹವಿದೆ. ಆ ಬೃಹತ್ ಪತ್ರ ಸಂಗ್ರಹ ಪ್ರಕಟವಾದರೆ ಇನ್ನಷ್ಟು ಸೂಕ್ಷ್ಮವಾದ ಐತಿಹಾಸಿಕ ಅಂಶಗಳು ತಿಳಿದು ಬರುತ್ತದೆ. ನನ್ನ ಇತಿಹಾಸ ಸಂಶೋಧನೆ ಬಗ್ಗೆ ಇದ್ದ ಆಸಕ್ತಿಯನ್ನು ಗಮನಿಸಿ ಲಿಂ॥ ಪ್ರೊ॥ ಎಚ್. ರೇವಣಸಿದ್ದಪ್ಪನವರು ಈ ದಾಖಲೆಗಳನ್ನು ನನ್ನ ಅಧ್ಯಯನಕ್ಕೆ ನೀಡಿದರು ಆ ಹಿರಿಯ ಚೇತನಕ್ಕೆ ನನ್ನ ಭಕ್ತಿಪೂರ್ವಕ ವಂದನೆಗಳು.

೧೮

ಕೈಫಿಯತ್ತುಗಳಲ್ಲಿ ವಿವರಿಸಿರುವ ಕೆಲವು ಪ್ರಮುಖ ಅಮರ ನಾಯಕರು ಮತ್ತು ಅವರ ಕರ್ತವ್ಯಗಳು-ಪುನರ್ ಪರಿಶೀಲನೆ

ಡಾ. ಬಿ.ಎಸ್. ಪುಟ್ಟಸ್ವಾಮಿ*

ವಿಜಯನಗರ ಸಾಮ್ರಾಜ್ಯದ ಕಾಲದ ರಾಜಕೀಯ ಇತಿಹಾಸದಲ್ಲಿ ಕಂಡುಬರುವ ಸ್ಥಳೀಯ ಪ್ರಭುಗಳೇ ಅಮರನಾಯಕರೆಂದು ಕಂಡುಬರುತ್ತಾರೆ. ವಿಜಯನಗರೋತ್ತರ ಕಾಲದಲ್ಲಿ ಪಾಳೇಗಾರರೆಂದು ಕರೆಯಲ್ಪಟ್ಟ ಅಮರನಾಯಕರು ವಿಜಯನಗರ ಸಾಮ್ರಾಜ್ಯದ ಭದ್ರಬುನಾದಿಯಾಗಿದ್ದರು. ಚಿತ್ರದುರ್ಗ, ಕೆಳದಿ. ಆಗಲವಾಡಿ, ಉಮ್ಮತ್ತೂರು, ತರೀಕೆರೆ, ಯಲಹಂಕ, ಹರಿಕುತಾರ, ಬೆಳಗುತ್ತಿ, ಮೈಸೂರು, ಹರಪನಹಳ್ಳಿ, ಚನ್ನಪಟ್ಟಣ, ನಾಗಮಂಗಲ, ಹೊಳೇನರಸಿಪುರ ಮೊದಲಾದ ಅನೇಕ ಪ್ರಸಿದ್ಧ ಪಾಳೇಪಟ್ಟಿನ ನಾಯಕರು ಆರಂಭದಲ್ಲಿ ವಿಜಯನಗರ ಸಾಮ್ರಾಜ್ಯದ ಅಮರನಾಯಕರಾಗಿದ್ದರು. ಅಮರನಾಯಕರ ವ್ಯವಸ್ಥೆ ವಿಜಯನಗರ ಸಾಮ್ರಾಜ್ಯದ ಅಡಿಪಾಯವಾಗಿದ್ದು ಅಂತಹ ಕೆಲವು **ಅಮರನಾಯಕರ ಬಗೆಗೆ ಕೈಫಿಯತ್ತುಗಳು ನೀಡುವ ಮಾಹಿತಿ ಉಪಯುಕ್ತ, ಕುತೂಹಲಕಾರಿ** ಮತ್ತು ಅನೇಕ ಸಂದರ್ಭಗಳಲ್ಲಿ ಗೊಂದಲಮಯವಾಗಿರುವ ಅಪರೂಪದ ವಿಷಯಗಳನ್ನು ಪ್ರಸ್ತಾಪಿಸುತ್ತವೆ.

ದಕ್ಷಿಣ ಭಾರತವನ್ನಾಳಿದ ಅನೇಕ ರಾಜಮನೆತನಗಳು ಅನುಕೂಲದ ದೃಷ್ಟಿಯಿಂದ ತಮ್ಮ ವಿಸ್ತಾರವಾದ ಭೂಪ್ರದೇಶಗಳನ್ನು ವಿವಿಧ ಸ್ವರೂಪದ ಆಡಳಿತ ಘಟಕಗಳನ್ನಾಗಿ ವಿಭಾಗಿಸಿದುದು ಇತಿಹಾಸದುದ್ದಕ್ಕೂ ಕಂಡುಬರುತ್ತದೆ. ಪ್ರತಿಯೊಂದು ಆಡಳಿತ ಘಟಕವೂ ರಾಜನಿಂದ ನೇಮಿಸಲ್ಪಟ್ಟ ಒಬ್ಬೊಬ್ಬ ರಾಜಪ್ರತಿನಿಧಿಯ ಅಧೀನದಲ್ಲಿರುತ್ತಿತ್ತು. ಕೇಂದ್ರಸರ್ಕಾರವೇ ಸಾಮ್ರಾಜ್ಯದ ದೂರದ ಪ್ರದೇಶಗಳನ್ನು ನಿಯಂತ್ರಿಸುವುದು ಕಷ್ಟಸಾಧ್ಯವಾದ್ದರಿಂದ ಈ ಅಮರನಾಯಕರ ವ್ಯವಸ್ಥೆ ಜಾರಿಗೆ ಬಂದಿತು. ಮೌರ್ಯರಾಧಿಯಾಗಿ ಆಧುನಿಕ ಕಾಲದ ವಸಾಹತುಶಾಹಿಯವರೆಗಿನ ವಿವಿಧ ಕಾಲ ಘಟ್ಟಗಳಲ್ಲಿ ಅಮರನಾಯಕತನದ ಸ್ವರೂಪವು ವಿಕಾಸವಾದ ಬಗೆ, ವಿಸ್ತಾರವಾದ ವ್ಯಾಪ್ತಿ, ಸಾಮರ್ಥ್ಯದ ನೆಲೆಯಲ್ಲಿ ಹೇಗೆ ಪ್ರಭಾವಗೊಂಡಿದೆ ಎಂಬುದು ಇಲ್ಲಿಯ ಪ್ರಮುಖ ಅಂಶ. ದಕ್ಷಿಣ ಭಾರತದ ಮಟ್ಟಿಗೆ ಕಾಕತೀಯರ ಆಡಳಿತಾವಧಿಯ ಸಾಮಂತರ ವ್ಯವಸ್ಥೆ ಹುಟ್ಟಿತಾದರೂ ಮುಂದೆ ವಿಜಯನಗರ ಅವಧಿಯಲ್ಲಿ ತೀವ್ರಸ್ವರೂಪ ಪಡೆಯಿತು. ಅದರಲ್ಲೂ ಕೃಷ್ಣದೇವರಾಯನ ಆಡಳಿತಾವಧಿಯ ಅಮರನಾಯಕರನ್ನೇ ಸಂಪೂರ್ಣವಾಗಿ ಅವಲಂಬಿಸಿದ್ದುದು ಸ್ಪಷ್ಟ. ಇವರು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದ್ದರೂ ತಮ್ಮ ತಮ್ಮ ಪ್ರಾಂತಗಳಲ್ಲಿ ಸ್ವತಂತ್ರರಂತೆ ವರ್ತಿಸಿರುವುದುಂಟು. ಮುಂದೆ ಇದಕ್ಕೆ ಜನ ಬೆಂಬಲದ ಕಾರಣವಾಗಿ ಪಾಳೆಯಗಾರಶಾಹಿಯೂ ಬಲಗೊಂಡಿತು. ಕೃಷ್ಣದೇವರಾಯನು ತನ್ನ ಬೃಹತ್ ಸಾಮ್ರಾಜ್ಯವನ್ನು ನಿಯಂತ್ರಿಸುವಲ್ಲಿ ಈ ಅಮರನಾಯಕರ ಪಾತ್ರ ಬಹುಮುಖ್ಯವಾಗಿದೆ. ಅಂತೆಯೇ ಈತನ ಅವಧಿಯಲ್ಲಿ ಭಾರೀ ಸಂಖ್ಯೆಯಲ್ಲಿ ಅಮರನಾಯಕರು ನೇಮಕಗೊಂಡಿರುವುದು ಗಮನಾರ್ಹವಾಗಿದೆ. ಚಕ್ರವರ್ತಿ ಹಾಗೂ ಜನಸಾಮಾನ್ಯರ ನಡುವೆ ಸಂಪರ್ಕ ಸೇತುವಾಗಿ ಕಾರ್ಯನಿರ್ವಹಿಸಿದ ಈ ಅಮರ ನಾಯಕರು ಜನಾನುರಾಗಿಯಾಗಿದ್ದಾರೆ; ಕೆಲವರು ಜನ ವಿರೋಧಿ ನೀತಿಯನ್ನು ಅನುಸರಿಸಿದ್ದಾರೆ. ಸಾಮಾಜಿಕ-ಆರ್ಥಿಕ-ರಾಜಕೀಯ ಸ್ಥಿತಿ-ಗತಿಗಳ ಹಿನ್ನೆಲೆಯಲ್ಲಿ ಪ್ರಮುಖ ಪಾತ್ರವಹಿಸಿರುವ ಇವರು ಸ್ಥಳೀಯ ಚರಿತ್ರೆ ದೃಷ್ಟಿಯಿಂದ ಗಮನಾರ್ಹ ಸಾಧನೆ ಮಾಡಿದ್ದಾರೆ ಎಂದು ಪ್ರೊ|| ಲಕ್ಷ್ಮಣ್ ತೆಲಗಾವಿ ವ್ಯಾಖ್ಯಾನಿಸುತ್ತಾರೆ.

ಈ ಪದ್ಧತಿಯನ್ನು ನಾಯಕರ ಪದ್ಧತಿ ಅಮರನಾಯಕರ ಪದ್ಧತಿ, ಅಮರಮಾಗಣಿ, ಅಮರಂ ಎಂದು ಗುರುತಿಸಲಾಯಿತು. ಇವರಿಗೆ ಸಾಮಂತ ನಾಯಕ, ದಂಡನಾಯಕ, ಮಂಡಲೇಶ್ವರ, ರಾಜ ಮಹಾರಾಜ ಒಡೆಯರ್ ಮುಂತಾದ ವಿವಿಧ ಹೆಸರುಗಳಿದ್ದು ಸಮ ದರ್ಜೆಯ ಅಧಿಕಾರವಿದ್ದಿತು ಎಂದು ಎ.ವಿ. ವೆಂಕಟರತ್ನಂ ತಿಳಿಸಿದ್ದಾರೆ.

ಮಹಾಲಿಂಗಂರವರ ಪ್ರಕಾರ ಅಮರನಾಯಕರು ಎಂದರೆ ಸಾಮ್ರಾಟನು ಭೂಮಿಯನ್ನು ತನ್ನ ಒಡೆತನದಲ್ಲಿ ಇಟ್ಟುಕೊಂಡಿದ್ದು ಅದನ್ನು ತನ್ನ ಆಶ್ರಿತರಿಗೆ ಹಂಚುತ್ತಿದ್ದನು. ಹೀಗೆ ರಾಜನಿಂದ ಭೂಮಿಯನ್ನು ಪಡೆದವರನ್ನು ನಾಯಕರೆನ್ನಲಾಗುತ್ತಿದ್ದು

* ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ವಿ.ವಿ. ಪುರಂ ಕಲೆ ಮತ್ತು ವಾಣಿಜ್ಯ ಕಾಲೇಜು, ಕೆ.ಆರ್. ರಸ್ತೆ, ಬೆಂಗಳೂರು-೫೬೦೦೦೪.

ಅವರ ಮೂಲಕ ಸಾಮ್ರಾಜ್ಯದಲ್ಲಿ ಏರ್ಪಟ್ಟ ಆಡಳಿತ ಪದ್ಧತಿಯನ್ನು ನಾಯಕರ ಪದ್ಧತಿ ಎಂದು ಕರೆಯುತ್ತಿದ್ದರು. ಎನ್. ವೆಂಕಟರಮಣಯ್ಯನವರ ಪ್ರಕಾರ ಒಂದು ನಿಗಧಿಯಾದ ಆದಾಯವನ್ನು ತರುತ್ತಿದ್ದ ಪ್ರದೇಶವನ್ನು ಒಬ್ಬ ಸೈನಿಕ ನಾಯಕನಿಗೆ ಒಂದು ನಿಗದಿಯಾದ ವಾರ್ಷಿಕ ಹಣವನ್ನು ಸಂದಾಯ ಮಾಡುವುದರ ಜೊತೆಗೆ ಗೊತ್ತಾದ ಸಂಖ್ಯೆಯಲ್ಲಿ ಸೈನಿಕರು ಅಶ್ವಗಳು ಮತ್ತು ಆನೆಗಳನ್ನು ಒದಗಿಸುವ ಷರತ್ತಿನ ಮೇಲೆ ವಿಜಯನಗರದ ರಾಜರು ಕೊಡುತ್ತಿದ್ದುದು ಅವರ ಸಾಮಂತರ ಪದ್ದತಿ.

ಅಮರ ನಾಯಕ ಪದ ಅರ್ಥವನ್ನು ಪರಿಶೀಲಿಸಿದಾಗ ಇದು ಅಮರ+ನಾಯಕ+ತನ ಎಂಬ ಪದಗಳ ಮಿಶ್ರಣವಾಗಿದೆ. ಎಚ್.ಎನ್. ವಿಲ್ಸನ್ ಅವರು ಅಮರ ಎಂಬ ಪದಕ್ಕೆ Literally a command of thousand foot ಎಂಬ ಅರ್ಥವನ್ನು ನೀಡಿದ್ದಾರೆ. ನಾಯಕ ಎಂಬ ಪದಕ್ಕೆ ಶಬ್ದಕೋಶಗಳಲ್ಲಿ ಮುಂದಾಳು ಮುಖಂಡ ದಳಪತಿ ಎಂಬ ಅರ್ಥವಿದೆ. ತನ ಎಂಬುದಕ್ಕೆ ನಿರ್ದಿಷ್ಟ ಅರ್ಥ ಕೊಡುವುದು ಸಾಧ್ಯವಿಲ್ಲ. ಇದಕ್ಕೆ ಕಛೇರಿ ಇದ್ದಿರಬಹುದು ಎಂದು ವೆಂಕಟರಮಣಯ್ಯನವರು ಊಹಿಸಿದ್ದಾರೆ. ಒಟ್ಟಾರೆ ಅಮರ ನಾಯಕತನ ಎಂದರೆ ಚಕ್ರವರ್ತಿ ಕೆಲವು ಷರತ್ತುಗಳ ಮೇಲೆ ಒಬ್ಬ ನಂಬಿಕಸ್ತ ವ್ಯಕ್ತಿಗೆ ದತ್ತಿಯಾಗಿ ನೀಡಿದ ಭೂಪ್ರದೇಶ ಎನ್ನಬಹುದು.

ಕೈಫಿಯತ್ತುಗಳು ವಿವರಿಸಿರುವ ಕೆಲವು ಪ್ರಮುಖ ಅಮರನಾಯಕರು

'ಅಮರನಾಯಕರು' ಎಂಬ ಸ್ಥಳೀಯ ಪ್ರಭುಗಳು ವಿಜಯನಗರದ ರಾಜಕೀಯ ಇತಿಹಾಸದಲ್ಲಿ ಕಂಡುಬರುತ್ತಾರೆ. ಅಮರ ನಾಯಕರೇ ವಿಜಯನಗರೋತ್ತರ ಕಾಲದಲ್ಲಿ 'ಪಾಳೇಗಾರ'ರೆಂದು ಕರೆಯಲ್ಪಟ್ಟರು. ಅಮರನಾಯಕರು ವಿಜಯನಗರ ಸಾಮ್ರಾಜ್ಯದ ಬುನಾದಿಯಾಗಿದ್ದರು. ಅಮರ ಎಂದರೆ ಸೈನ್ಯ – ಸೈನ್ಯದ ಠಾಣ್ಯ ಎಂಬುದಾಗಿ ಹೆಚ್. ಹೆಚ್. ವಿಲ್ಸನ್ ಅಭಿಪ್ರಾಯ ಪಡುತ್ತಾರೆ. ವಿಜಯನಗರದ ಅರಸರು ಅಮರನಾಯಕರನ್ನು ನೇಮಕ ಮಾಡುತ್ತಿದ್ದರು. ಕೆಲವು ಹಳ್ಳಿಗಳಿಂದ ಆರಂಭವಾಗಿ ದೊಡ್ಡ ದೊಡ್ಡ ಪ್ರದೇಶಗಳಲ್ಲಿ ಅನೇಕ ಹಂತಗಳ ಅಮರನಾಯಕರು ಇದ್ದರು. ವಿದೇಶಿ ಪ್ರವಾಸಿಗ ನ್ಯೂನಿಜ್ ಇಂತಹ ಅಮರನಾಯಕರನ್ನು ಗುರುತಿಸಿದ್ದಾನೆ. **ಚಿತ್ರದುರ್ಗ, ಕೆಳದಿ, ಆಗಲವಾಡಿ, ಉಮ್ಮತ್ತೂರು, ತರೀಕೆರೆ, ಯಲಹಂಕ, ಅರಿಕುಟಾರ, ಬೆಳಗುತ್ತಿ, ಮೈಸೂರು, ಹರಪನಳ್ಳಿ, ಚನ್ನಪಟ್ಟಣ ಹೊಳೆನರಸೀಪುರ** ಮೊದಲಾದ ಅನೇಕ ಪ್ರಸಿದ್ಧ ಪಾಳೇಪಟ್ಟಿನ ನಾಯಕರು ಆರಂಭದಲ್ಲಿ ವಿಜಯನಗರ ಸಾಮ್ರಾಜ್ಯದ ಅಮರನಾಯಕರಾಗಿದ್ದರು. ಈ ವ್ಯವಸ್ಥೆಯನ್ನು ಊಳಿಗಮಾನ್ಯ ವ್ಯವಸ್ಥೆಗೆ ಹೋಲಿಸಲಾಗಿದೆ. ರಾಜನ ಅನುಗ್ರಹ ಇರುವವರೆಗೆ ಅಮರನಾಯಕರು ತಮಗೆ ಕೊಡಲ್ಪಟ್ಟ ಅಮರ ಮಾಗಣಿಯ ಅಥವಾ ಸ್ಥಳದ ಪ್ರಭುಗಳಾಗಿ ಇರುತ್ತಿದ್ದರು.

ಅಮರನಾಯಕ ಪದವಿ ವಂಶಪಾರಂಪರ್ಯವಾಗಿತ್ತು. ಅಮರನಾಯಕರು ಪ್ರಮುಖವಾಗಿ ಎರಡು ಕರ್ತವ್ಯಗಳನ್ನು ನಿರ್ವಹಿಸಬೇಕಾಗಿತ್ತು. ತಮಗೆ ಕೊಡಲ್ಪಟ್ಟ ಅಮರ ನಾಯಕತನದ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುವುದು, ತೆರಿಗೆಗಳನ್ನು ಸಂಗ್ರಹಿಸಿ ಅದರಲ್ಲಿ ಒಂದು ಪಾಲನ್ನು ವಿಜಯನಗರದ ಚಕ್ರವರ್ತಿಗಳಿಗೆ ಸೈನ್ಯದ ತುಕಡಿಯೊಂದನ್ನು ಇಟ್ಟುಕೊಂಡು (ಅಶ್ವಪಡೆ), ವಿಜಯನಗರ ಚಕ್ರವರ್ತಿಗಳಿಗೆ ಅಗತ್ಯ ಬಿದ್ದಾಗ ಸಹಾಯಕ್ಕಾಗಿ ತನ್ನಲ್ಲಿದ್ದ ಸೈನ್ಯವನ್ನು ನೀಡಬೇಕಾಗಿತ್ತು. ಇದಲ್ಲದೆ ನವರಾತ್ರಿ, ಚಕ್ರವರ್ತಿಗಳ ಪುತ್ರೋತ್ಸವ, ಮುಂತಾದ ವಿಶೇಷ ಸಮಾರಂಭದ ಕಾಲದಲ್ಲಿ ಚಕ್ರವರ್ತಿಯ ಆಸ್ಥಾನದಲ್ಲಿ ಹಾಜರಿರಬೇಕಾಗಿತ್ತು. ಒಟ್ಟಿನಲ್ಲಿ ಅಮರನಾಯಕ ವ್ಯವಸ್ಥೆ ವಿಜಯನಗರ ಸಾಮ್ರಾಜ್ಯದ ಅಡಿಪಾಯವಾಗಿತ್ತು ಎಂದರೆ ಉತ್ಪ್ರೇಕ್ಷೆಯಾಗಲಾರದು. ಇಂತಹ ಕೆಲವು ಅಮರನಾಯಕರ ಬಗೆಗೆ ಕೈಫಿಯತ್ತುಗಳು ಪ್ರಸ್ತಾಪಿಸುತ್ತವೆ.

ತಿರುಮಲನಾಯಕ (ಹತ್ತಿ ಬೆಳಗಲ್ಲು ಕೈಫಿಯತ್ತು)

"ಬೆಳಕಲ್ಲು ಗುಡ್ಡದ ಮ್ಯಾಲೆ ನಾ[>ಸಾ]ರಮ್ಮ ನಾಯಕಸಾನಿ ಗಂಡ ಬ್ಯಾಡನು ಜೇನುಬ್ಯಾಡರು ಶೇರಿಕೊಂಡು, ಪಾಳೆಗಾರನು ಅನಿಸಿಕೊಂಡು ಯಿದ್ದನು. ಆತನ ಹೆಸರು ತಿಳಿಯಲಿಲ್ಲಾ. ಆತನ ಹೆಂಡತಿ ಸಾರಮ್ಮ ನಾಯಕಸಾನಿ ಯಂಬವಳು ಕೆಲವು ದಿನ ಆಳಿದಳು.

ಯೀ ಬ್ಯಾಡರು ಯೀ ಸ್ಥಳಕ್ಕೆ ಪ್ರಾಬಲ್ಯೆ ಆಗಲಿಕ್ಕೆ ಕಾರಣ, ವಿಜಯನಗರ ಶೀಮೆ ತುರುಕರು ಕಟ್ಟಿದ ಸಮಯದಲ್ಲು ದೇಶ ಅನಾಯಕದ ಆದ್ದರಿಂದ ಯೀ ಬ್ಯಾಡರು ಕಟ್ಟಿಕೊಂಡರು. ಯೀ ನಾ[>ಸಾ]ರಮ್ಮನ ಮಗ ತಿರುಮಲನಾಯಕ ಯಂಬವನು ಬ್ಯಾಡರನು ಶೇರಿಸಿಕೊಂಡು ಬೆಟ್ಟದಲ್ಲು ಸದರಿ ಬರದ ಅಗ್ರಹಾರ ಖಿಲವಾಗಿ ಬ್ಯಾಡರು ಶೇರಿದರು. ಸದರಿ ಬರದ ನಾಯಕನ ಕೆಳಗೆ ಯಿದ್ದ ಗ್ರಾಮಗಳು:

ಹತ್ತಿ ಬೆಳಗಲ್ಲು, ಹರ [+ದ]ಗೆರೆ, ಕಾಮಿನಹಾಳ, ತಿಂಮಾಪುರಾ, ಕುಕ್ಕಿರಬೇಡು, ಮಾಕನೂರು, ರಾಮದುರ್ಗ, ಮೇದಿಹಾಳು, ಬೊಮ್ಮಿನಹಾಳು, ಶಿಂಗರಾಪುರಾ [>ಶಿರಗಾಪುರ], ಶಿದ್ದರಹಾಳು, ನಗರಹೊ [ಡೊ]ಣೆ, ಬೆಳ್ಳಡೊಣೆ, ಹಲಹರವಿ, ಜಚಾರಹಳ್ಳಿ ಎಂಬ ೧೫ ಗ್ರಾಮಕ್ಕೆ ಕಾವಲಿ ತಳವಾರಿಕೆ ಮಾಡಿಕೊಂಡು ಅಧಿಕಾರ ಯಿವರೆ ಮಾಡಿಕೊಂಡು, ದಿವಾಣಕ್ಕೆ ಹಣ ಕೊಡುತ್ತಾ ಯಿದ್ದರು. ಯೀತನೆ ಪ್ರಾಬಲ್ಯನಾಗಿ ಯಿದ್ದನು. ಯೀ ತಿರುಮಲನಾಯಕಗೆ ಯಿಬ್ಬರು ತಮ್ಮಂದರು, ವೊಬ್ಬ ಸೋಮಶೇಖರನಾಯಕ, ಯರಣ್ಣೆ ಅವ ಸೋಮಪ್ಪನಾಯಕ. ಯೀ ಮೂರು ಮಂದಿ ಅಣ್ಣ ತಮ್ಮಂದಿರು ಹಂಚಿಕೊಂಡದ್ದು ಪತಶೀಲು:

ರಾಮದೇವರಾಯ (ತಾಲುಕು ಕಂಪಿಲಿ ಕೈಫಿಯತ್ತು)

"ಪಶ್ಚಿಮ ತುಂಗಭದ್ರ ಆಚೆ ದಡದಲ್ಲಿ ದೇವಹಿತ ಸಮೀಪ ದೇವಗಿರಿಯಲ್ಲಿಗೆ ಯಂಡು ಹರದಾರಿ ಯಿರಲಾಗಿ, ಆ ಸ್ಥಳದಲ್ಲಿ ದೇವಗಿರಿಯಂಚೋ ಗ್ರಾಮದಲ್ಲಿ ರಾಮದೇರಾಯ ಅರಸು ರಾಜ್ಯಭಾರ ಮಾಡಿಕೊಂಡು ಯಿರಲಾಗಿ.

ಬ್ಯಾಡರ ಮುಖ್ಯಸ್ತ ಸಿಂಗನಾಯಕ – ರಾಮದೇವರಾಯರ ಹತ್ರ ಸಂಬಳ ನಿಗದಿಮಾಡಿಕೊಂಡು ಚಾಕರಿ ನಿಂತರು.

ರಾಮದೇವರಾಯರು ಬ್ಯಾಟಿ – ಸಿಂಗನಾಯಕನ ಸಮೂಹ ಜತೆಯಲ್ಲಿ ಒಂದು ವುಡವು ಕಂಡು ಬೆನ್ನು ಹತ್ತಿ ಓಡಿ ಹುತ್ತಕ್ಕೆ ಹೊಕ್ಕಿತು. ಶೋದಿಸಿದಾಗ ಒಂದು ಕೊಪ್ಪರಿಗಿ ದ್ರವ್ಯಯಿತ್ತು. – ಗ್ರಾಮ ಕಟ್ಟಲಿಕ್ಕೆ ಅಪ್ಪಣೆ ಪಡೆದರು – ಖಾಸಾ ಅರಮನೆ ಕಟ್ಟಿಕೊಂಡು ಸಿಂಗನಾಯಕಯೆಂದು ಕಿತಾಬು ಕೊಟ್ಟು ಬುಮಾನ ಮಾಡಿದರು" ಎಂಬುದಾಗಿ ತಾಲೂಕ ಕಂಪಲಿ ಕೈಫಿಯತ್ತಿನಲ್ಲಿ ವಿವರಣೆ ಇದೆ.

ಸಿಂಗನಾಯಕ (ತಾಲುಕು ಕಂಪಿಲಿ ಕೈಫಿಯತ್ತು)

"ರಾಯದುರ್ಗಕ್ಕೆ ಉತ್ತರ ನಾಲ್ಕು ಹರದಾರಿಯಿರುವ ಮಲ್ಲಪಂಥೀದೇಶ ಅರಣ್ಯಪಂಥಿ ಗ್ರಾಮಗಳಲ್ಲಿ ಬ್ಯಾಡರ ಮುಖ್ಯಸ್ಥ ಸಿಂಗಾನಾಯಕ: ರಾಮದೇವರಾಯರ ಚಾಕರಿಗೆ ನಿಂತು. ದ್ರವ್ಯ ಸಿಕ್ಕಿದ ಮೇಲೆ ಗ್ರಾಮ ಕಟ್ಟಲು ಅತ್ತಗೆ ಪಡೆದರು. ಮುಂದುಡಿ ಸಿಂಗನಾಯಕ ರಾಯದುರ್ಗದೇಶಕ್ಕೆ ಹೋಗಿ ಮಲ್ಲದೇವರಾಯ ಪ್ರಭತ್ವ ಮಾಡುತ್ತಾ ಯಿರಲಾಗಿ, ಅಲ್ಲಿ ಭೇಟಿ ತಕೊಂಡನು. ಸಂತೋಷ ಪಟ್ಟ ಕಾಯ ೨೦ ಗ್ರಾಮಗಳು ಮಾಡಿಕೊಟ್ಟರು.

ವೆಂಕಟಾದ್ರಿಯ ನಾಯಕ (ಚಿಕ್ಕಮಗಳೂರು ಕೈಫಿಯತ್ತು)

ಕ್ರಿಷ್ಣರಾಯರ ಸಮೀಪದಲಿ ಯಿದ್ದ ಬಾಯಿಣನ ಮಗಾ ಯರಿ ಕ್ರಿಷ್ಣಪ್ಪನಾಯಕನು ರಾಯರಿಗೆ ಅನೇಕ ದಿಗ್ವಿಜಯ ಮಾಡಿಕೊಂಡು. ಕ್ರಿಷ್ಣರಾಯರು ಬೇಲೂರನ್ನು ಜಹಾಗೀರು ಹಾಕಿಕೊಟ್ಟರು. ಕ್ರಿಷ್ಣಪ್ಪನಾಯಕನ ಮಗಾ ವೆಂಕಟಾದ್ರಿನಾಯಕನು ರಾಜ್ಯ ಪ್ರರಿಪಾಲನೆ ಮಡೊವ್ಯಾಗೆ ಕ್ರಿಷ್ಣರಾಯರ ಸಮೀಪದಲಿ ಯಿರುವ ಪಣಿಕೊನಯ್ಯನವರಿಗೆ ಸಣ್ಣತಿ, ಬಾಗೂರು ಮೊದಲು ಮಾಡಿಕೊಂಡು [ತರಿ +] ಕೆರಿ ಪರಿಯಂತ್ರಕು ಜಹಾಗೀರು ಅನುಭವಿಸಿಕೊಂಡು. ತರಿಕೆರೆಯಲ್ಲಿ ಮೃತವಾದನು. ಅವರಿಗೆ ಪುತ್ರಸಂತಾನಯಿಲ್ಲದೆಯಿದ್ದದರಿಂದಾ ಆತನ ಮಗಳು ವೆಂಕಟಾದ್ರಿನಾಯಕರಿಗೆ ಕ್ರಯಕೆ ಕೊಟ್ಟದರಿಂದಾ ತನ ಶೀಮೆ ವಿಚಾರಣೆ ಮಾಡುವ ಬಗ್ಗೆ ಯೀ ಸ್ಥಳಕೆ ಸ್ವಾರಿ ಮುಖಾಂತರ ಬಂದು ನೋಡಿದಲಿ, ಯಿಲ್ಲಿ ಮೊದಲು ಬಸ್ತಿಹಾಳಿ ಯೆಂಬದಾಗಿ ವಂದು ಗ್ರಾಮ ಯಿದ್ದದರಿಂದಾ ಯೀ ೧೨ ಸಾವಿರ ಸೀಮೆ ವುತ್ತರ ಮಾಡಿ ಕೊಟ್ಟು. ಕಿಲ್ಲೆ ಆಯಕಟ್ಟು ಮುಂದೆ ಜಮೋಕರು ಮಾಡಿಕೊಟ್ಟು, ಯೀ ಶೀಮೆ ವಿಚಾರಣೆ ಬಾಕಳೆಟ್ಟಕೆ ನಾಯಿಕಾಕೆ ಹಚ್ಚಿ ವಸಾಯಿತಾ ಯಿರಶಿ. ಚಿಕ್ಕನಹಳ್ಳಿಯಂಬಾ ಹೆಸರು ತೆಗೆದು ಚಿಕ್ಕಮಗಳೂರು ಯಂಬದಾಗಿ ಹೆಸರು ಯಿಟ್ಟು, ಯವತು ಮೊಕರರು ಮಾಡಿದರು."

ವೆಂಕಟಪತಿರಾಯ (ತಾಲುಕು ಕಂಪಲಿ ಕೈಫಿಯತ್ತು)

"ಶ್ರೀರಂಗರಾಯರ ಮಗ ವೆಂಕಟಪತಿರಾಯರ ಆಳಿಕೆ ಶಖ ೧೫೫೪–೧೬೧೪ವರಿಗೆ ಮಟ್ಟಂತರಕ್ಕೆ ನಡದ್ದು ಯಿದೆ. ಪುರದ ಕಡೆಯಿಂದಲು: ಶಾಮಜಾಬಾನಮ ಅದಬಾನಿಲಿ ನಿಂತು ಅಲ್ಲಿಂದ ಬಂದು ಕೊಂಡು ಯಿರೋದರ ವಳಗೆ, ಮಸೂರಬಾನನು ದೇಶಾಯಿಕೆ, ದೇಶಕುಲಕರ್ಣಿಕೆ, ಗೌಡಕಿ ಸ್ವಾಸ್ತಿಗಳು ಮಾಡಿಕೊಟ್ಟನು. ಯೀಪ್ರಕಾರಕ್ಕೆ ಅವರು ರಾಜ್ಯ ಆಳಿ ಆಮೇಲೆ ಅರ್ಸುಗಳಿಗೆ ಠಾಣ್ಯ ಬಿಟ್ಟು ವರುಷ ಖಂಡಣಿ ತಕ್ಕೊಂಡು ಇದ್ದರು"

ತಿಮ್ಮಪ್ಪನಾಯಕ (ಹಾರನಹಳ್ಳಿ ಕೈಫಿಯತ್ತು)

ತರಿಕೆರೆ ಅರಸು ತಿಮ್ಮಪ್ಪನಾಯಕನೆಂಬೀ ಪಾಳೆಗಾರನು ಬಲವಂತವಾಗಿ ಯೀ ಶೀಮೆ ಯಾವತನ್ನು ಕಟ್ಟಿಕೊಂಡು ಅಮರಗಿ ಜನಾರ್ಧನಸ್ವಾಮಿಯವರು ತಿಮ್ಮಪ್ಪನಾಯಕರಿಗೆ ಪ್ರತ್ಯಕ್ಷವಾಗಿ 'ದೇವಸ್ಥಾನವನ್ನು ಕಟ್ಟಿಸಿ, ಗಿರಿಗೆ ಪಶ್ಚಿಮ ದಿಕ್ಕಿನಲ್ಲಿ 'ತಿಮ್ಮಪ್ಪನಾಯಕನ ಕೆರೆ' ಯೆಂದು ದೊಡ್ಡಕೆರೆಯನ್ನು ಕಟ್ಟಿಸಿದನು. ದೇವಸ್ಥಾನದ ಸೇವೆಯನ್ನು ಮಾಡಿಕೊಂಡು, ದೇವತಾ ಸೇವೆಯನ್ನು ಮಾಡಿಕೊಂಡು ಯಿವರ ವಂಶಸ್ಥರು ಹನುಮಪ್ಪನಾಯಕ. ಸರ್ಜಾ ಹಜಮಪ್ಪನಾಯಕ ನೇತಾರಾಮಪ್ಪನಾಯಕ ಮುಂತಾದವರು ಆಳಿದರು.

ದಳವಾಯಿ ವೀರರಾಜು. ಕೈಫಿಯತ್ತು ತಾಲೂಕೆ ಯಗಟಿ

ನಾಡಿಗರ ಖಂಡರಾಯರು ಬರಶಿಕೊಟ್ಟ ಪ್ರಕಾರ ಕ್ರೋಧನ ಸಂವತ್ಸರ, ಅಶ್ವಿಜ ಬ ೭ಲ್ಲು, ಆಜಂಪುರಾ.

ಪೂರ್ವದಲ್ಲಿ ಶಾಲಿವಾಹನ ಶಕ ವರುಷ ೧೪೭೨ನೆ ಸಂದ ವರ್ತಮಾನಕೆ ಸಲ್ಲುವ ಸಾಧಾರಣ ಸಂವತ್ಸರದಲ್ಲಿ ಘನಗಿರಿರಾಜ್ಯಕ್ಕೆ ಸಲ್ಲುವ ಹೊಸಪಟ್ಟಣದ ವೇಂಟೆಕೆ ವಳಗಣ ಯೆಗಟಿ ಸ್ತಳ ಹುಟ್ಟಿದ ವಿವರ. ಪ್ರಾಕು ನೀಲಾವತಿ ಪಟ್ಟಣವನ್ನು ಆಳಿಕೊಂಡು ಯಿದ್ದಾ ನರಪತಿರಾಯ ಸಂವಸ್ತಾನದ ಬಾಗಿಲ ದಳವಾಯಿ ವೀರರಾಜು ಮಹಾಅರಸುಗಳು ನೀಲಗುಂದದ ಪಟ್ಟಣದಿಂದ ಈ ಮಾರ್ಗವಾಗಿ ಸ್ವಾರಿ ಬಂದು, ಪೂರ್ವದಲ್ಲಿ ಕಿರಾತರು ಕಟ್ಟಿದ ಕೊಕ್ಕಸಮುದ್ರಯಂಬೋ ಕೆರೆಯು ಯಿರುವ ವೃತ್ತಾಂತವನ್ನು ಕೇಳಿ, ಯೀ ಕೆರಿ ಸ್ವಲ್ಪವಾಗಿ ಯಿದ್ದುದರಿಂದಾ ದೊಡ್ಡದಾಗಿ ಕಟ್ಟಶಿ. ಆ ಕೆರಿಯ ಯೇರಿಯ ಮೇಲೆ ಶಿಲ್ಲಾಪ್ರಥಮೆಗಳನ್ನು ಮಾಡಿಸಿ, ಸ್ತಾಪನೆ ಮಾಡ್ಸಿ ಯಿರುವ ವಿವರ: ಕಿರಾತಕರ ಪ್ರತಿಮೆ, ನಾಯಿಪ್ರತಿಮೆ, ಸೆಟ್ಟಿಪ್ರತಿಮೆ, ಯಿತನ ಹೆಂಡತಿ ಪ್ರತಿಮೆ,ಯೀ ಮೇರಿಗೆ ನಾಲ್ಕು ಪ್ರತಿಮೆಯನ್ನು ಯಿರಿಸಿ ನಿಲಿಸಿ, ಯಿ ಕುಕ್ಕುಗೆ ಆ ಕೆರಿ ಕೆಳಗೆ ಮಾನ್ಯವಾಗಿ, ... ಯನ್ನು ಬಿಟ್ಟು ಯಿರ್ರುವದರಿಂದ ಯಿದಕ್ಕೆ ಕುಕ್ಕನಗದ್ದೆ ಯಂಬದಾಗಿ ಹೇಳುತ್ತಾರೆ.

ತಿಮ್ಮೆಗವುಡ – ನರಸೇಗವುಡ (ಬಾಗಡೆ ಕೈಫಿಯತ್ತು)

"ಹ[>ಹೊ] ಳೆ ನರಶೀಪುರದಿಂದ ತಿಮ್ಮೆಗವುಡ ಯಂಬವನು ಬಂದು, ಯೀ ಸ್ಥಳವನ್ನು ನೋಡಿ, ಯಾರ್‍ರೂ ಯಿಲ್ಲದೇ ಮೈದಾನವಾಗಿ ಯಿದ್ಧಕಾರಣ, ಯೀ ಸ್ಥಳದಲ್ಲಿ ವಂದು ಗ್ರಾಮವನ್ನು ಕಟ್ಟಿ, ತನ್ನ ಹೆಸರನಿರಿಸಬೇಕೆಂದು ಚಿಕ್ಕದಾಗಿ ಬಂದು ಊರು ಕಟ್ಟಿ, ಬಾಗಡೆಯಂಬ ಹೆಸರು ಯಿಟ್ಟು, ಊರಿಗೆ ಪಶ್ಚಿಮದಿಕ್ಕಿನಲ್ಲಿ ತೆಂಗಟಿಯಂಬ ವಂದು ಸಣ್ಣ ಕೆರೆಯನ್ನು ಕಟ್ಟಿಸಿ ಯಿರುತ್ತಾ ಯಿದ್ದನು. "ಯೀ ಗಉಡ ವಂಶಸ್ತನಾದ ನರಸೇಗವುಡ ಯಂಬವನು ಯಿದ್ದಾನೆ" ಯಂಬುದಾಗಿ ಹೇಳಿದ್ದರಿಂದ "ಯೀ ಕೋಟೆಯನ್ನು ದುರಸ್ತಾಗಿ ಕಟ್ಟಿಸಿದರೆ ನಮ್ಮ ಸಂಸ್ತಾನಕ್ಕೆ ಹೆಸರಾಯಿತು" ಯಂಬುದಾಗಿ ಆಲೋಚಿಸಿ. ಉಪಾಯವನ್ನು ತೆಗೆದು, ಕಂದಕ ಮುಂತಾಗಿ ಹೇರಳವಾಗಿ ತೋಡಿಶಿ, ಅದರಲ್ಲಿ ಮೀನು ಮೊಸಳೆ ಮುಂತಾಗಿ ನಿಲ್ಲುವಂತೆ ನೀರ್‍ರು ಬಂದ ಕಾರಣ, ಯೀ ಕೋಟೆ ಕಟ್ಟಿ ಊರ್‍ರು ಮುಂದಿನ ಕೆರ್‍ರೆಯನ್ನು ಕಟ್ಟಿಸಿದರು."

ಉಮ್ಮತೂರ ಸಂಸ್ಥಾನದ ಭುಜಂಗರಾಯ (ತಲಕಾಡು ಕೈಫಿಯತ್ತು)

"ಯಿವನ ಕಾಲದಲ್ಲಿ ಉಮ್ಮತ್ತೂರಿರ ಸಂಸ್ಥಾನದ ಭುಜ[+ಂ]ಗರಾಯರಯ ಪ್ರಬಲವಾಗಿ ಆಲೋಚನೆ ಮಾಡಿದರಿಂದ ತನ್ನಯ ಸಂಸ್ಥಾನಕ್ಕೆ ಯೀ ನಗರಪುರಿಪಟ್ಟಣ ಸಮೀಪವಾಗಿಯಿದೆಯಂಬುದಾಗಿ ಯೋಚಿಸಿಕೊಂಡು, ತನ್ನ ಫಉಜುಗಳನ್ನೆಲ್ಲ ತಯ್ಯಾರು ಮಾಡಿಕೊಂಡು, ಯೀ ಪಟ್ಟಣದ ಮೇಲೆ ಜಗಳಕ್ಕೆ ಬಂದು ಯುದ್ಧವನ್ನು ಮಾಡಿದನು. ಯೀ ಯುದ್ಧದಲ್ಲಿ ಸಕಳೆದಣ್ಣಾಯಕನು ಮೃತವಾದನು. ಯೀ ಮೇಲೆ ಭುಜಂಗರಾಯರು ಪಟ್ಟಣವನ್ನು ಕೈವಶ ಮಾಡಿಕೊಂಡು, ಬಂದೋಸ್ತು ಮಾಡಿಕೊಂಡು ರಾಜ್ಯ ವರುಷ ೪೫"

ದೇವರಾಯ ಆನೆಗೊಂದಿ ಸಂಸ್ಥಾನ – ಸೋಮರಾಜ ವಡೆಯ

(ತಾಲುಕು ಕಂಪಲಿ ಕೈಫಿಯತ್ತು)

"ಕಲಿಯುಗದಲ್ಲಿ ಶಾಲಿವಾಹನ ಶಕ ವರುಷ ೭೮೪ ... ಸು ತ್ತಳಕಾಡು ಸಣ್ಣಗ್ರಾಮಯನಿಸಿಕೊಂಡು ಯಿರಲಾಗಿ. ಆನೆಗೊಂದಿ ಸಮಸ್ತಾನದ ದೇವರಾಯರ ಯಂಬ ರಾಯರ ಕಡೆಯಿಂದಾ ಸೋಮರಾಜವಡೆಯರೆಂಬ ವಡೆರಿಗೆ ಹನ್ನೆರಡು ಸಾವಿರ ಶೀಮೆ ಉಂಬಳಿಗೆ ಅಪ್ಪಣೆ ಆದ್ದರಿಂದ ಯೀ ...ದಕ್ಷಿಣ [ದೇ+] ಶಕೆ ಸ್ಥಳಾ ನಿರೀಕ್ಷಿಸುತ್ತ ಬಂದಲ್ಲಿ ... ಯಿಗಳು ... ಕಾವೇರಿ ಚತುರವಾಹಿನಿತೀರ ಕ್ಷೇತ್ರಮಹಾತ್ಮೆಯನ್ನು ಕೇಳಿದಂತಾವರಾಗಿ ಯೀ ಸ್ತಳ ಬಹಳ ಪ್ರಶಸ್ತವಾದುದ

ಕಂಡು. ತಮ್ಮ ಧಣಿಯಾದ ... ವಂಥಾವರಿಗೆ ಬರದು ಕೊಟ್ಟದಕೆ ಅವರ ಕಡೆಯಿಂದಾ ತಳಕಾಡು ಸಾವಿರ ಸೀಮೆಯನ್ನು ಸೇರಿಸಿಕೊಳ್ಳುವಂಥಾದು ... ಪನೆಯನ್ನು ತರಿಸಿಕೊಂಡು, ಯೀ ಸ್ಥಳವನ್ನು ಕಟ್ಟಿ...ನ್ನು ಮಾಡಿಕೊಂಡು, ಕೋಟೆಯನ್ನು ಕಟ್ಟಿಶಿ. ದೇವಸ್ಥಾನ ಜೀರ್ನೋದ್ಧಾರ ಮಾಡಿದಂಥಾದು ಶಾಲಿವಾಹನ ಶಕವರುಷ...೭೮೫.

ತಿಮ್ಮಣ್ಣ ಢಣಾಯಕ (ನಾಗಮಂಗಲ ಕೈಫಿಯತ್ತು)

ತರುವಾಯ ಯೀ ಲಕ್ಷ್ಮಮ್ಮನು ಯೀ ರಸಾ ತುಂಬಿದ ತೆಂಬಗೆಯನ್ನು ಅಡಿಗೆಮನೆ ವಳಿಗೆ ವಲೆಯ ಮೇಲುಕಡೆಯಲ್ಲಿ ಶಿಕ್ಕದ ಮೇಲಿರಿಸಿ, ತಾನು ತನ್ನ ಮಕ್ಕಳಿಗೆ ಉಣುವ ಬಗ್ಗೆ ರೊಟ್ಟಿ ಮಾಡುವುದಕ್ಕೆ ಕಬ್ಬಿಣದ ಕಾವಲ್ಲಿಯನ್ನು ವಲೆ ಮೇಲೆ ಮಡಗಿ, ರೊಟ್ಟಿ, ಮಾಡುವುದಕ್ಕೆ ಆರಂಭಿಸಲಾಗಿ, ಯೀ ಬೆಂಕಿ ತಾಪದಿಂದಾ ಆ ರಸದ ಚಟಗೆಯಿಂದಾ ವಂದು ಬಿಂದು ದ್ರವಿಶಿ ಯೀ ಕಬ್ಬಿಣ ಹಂಚಿನ ಮೇಲೆ ಬೀಳಲಾಗಿ, ಯೀ ರೊಟ್ಟಿ ಕಾವಲಿಯ ಸುವರ್ಣವಾಯಿತು. ಯೀ ಆಶ್ಚರ್ಯ ನೋಡಿ ತನ್ನ ಮಗ ತಿಮ್ಮಣ್ಣ ಕಡೆ ಹೇಳಿದಲ್ಲಿ ಯಿದನ್ನು ನೋಡಿ ಯೀತನು ಆಶ್ಚರ್ಯಂಬಟ್ಟು "ಯಿದಕ್ಕೆ ಯೇನು ಕಾರಣ?" ಯಂದು ಆಲೋಚಿಸಿ "ಯೀ ರಸವನ್ನು ನಮ್ಮಲ್ಲೆ ಯಿರಿಸಿಕೊಳ್ಳಬಾರದು" ಯಂದು. ಅಂಗೈ ರಾಜ್ಯಕ್ಕೆ ಪ್ರಭುಗಳಾಗಿರುವ ನರಪತಿ ಸಂಸ್ಥಾನ ವಿಜಯನಗರದ ಅರಸ್ಸುಗಳು ಸಾಳುವ ಕ್ರಿಷ್ಣರಾಯರ ಬಳಿಗೆ ವೈದು ಕೊಡಬೇಕೆಂದು ನಿಶ್ಚೈಸಿ, ಆ ರಸದ ಚರಿಗೆಯನ್ನು ತೆಗೆದುಕೊಂಡು ವಿಜಯನಗರಿಗೆ ಅರಸಾದ ಸಾಳ್ವ ಕೃಷ್ಣರಾಯರ ಬಳಿಗೆ ವೈದು ಕೊಡಲಾಗಿ, ಆ ರಾಯರುರ್ರು ಯಿದರ ಪರೀಕ್ಷೆ ಮಾಡಿಶಿ, ಯೀತನು ಪ್ರಾಮಾಣಿಕನೆಂದು ಯೀತಗೆ.... ಉಡುಗೋರೆ ಉಚಿತವನ್ನು ಕೊಟ್ಟು, ಢಣಾಯಕನೆಂಬ ಹೆಸರು ಕೊಟ್ಟು "ಯೀ ದಕ್ಷಿಣದೇಶದಲ್ಲಿ ನೀನು ಪ್ರಭುನಾಗಿ ಫೌಜು ಬಂದಿಯನ್ನು ಮಾಡಿಕೊಂಡು ಅಲ್ಲಿ ಕೋಟೆ ಕೊತ್ತಳೆ ಮಾಡಿಕೊಂಡು ಯಿರುವದೆಂ"ದು "ಕಿಕ್ಕೇರಿ ಉಭಯ ... ಅಷ್ಟಗ್ರಾಮಕ್ಕೆಲ್ಲಾ ಲಾವಣೀ ನಿರ್ಣಯ ಮಾಡಿಕೊ" ಯಂದು ಹೇಳಿ, ಆ ಸಿದ್ಧರಸವನ್ನು ತಿರುಗಿ ಕೊಟ್ಟು, ಕುದುರೆ ಕುರಲೆ ಅಪ್ತಾಗಿರಿ ಮೊದಲಾದ ಬಹುಮಾನವನ್ನು ಕೊಟ್ಟು ಕಳುಹಿಸಲಾಗಿ, ಆ ಮಹಾರಾಯರ ಅಪ್ಪಣೆ ತೆಗೆದುಕೊಂಡು ಬಂದರು.

ದಣಾಯಕರು (ನಗರಸೀಮೆ ಕೈಫಿಯತ್ತು)

ಮಂಚೆ ದಣಾಯಕ, ಭೀಮ ದಣಾಯಕ, ಪೆರಮಾಳ ದಣಾಯಕ

ಪೆರಮಾಳಡಣಾಯಕರು ಯಂಬವನು ಆಳಿದ ವರುಷ ೩೫. ಯೀ ಪ್ರಕಾರ ಆಳಿಕೊಂಡು ಯಿದ್ದರು. ಆ ತರುವಾಯ ತಮ್ಮ ಫವುಜಿಗೆ ರಾಜ್ಯ ಸಾಲದು ಯಂದು ತಮ್ಮ ತಮ್ಮ ವಳಗೆ ಆಲೋಚನೆ ಮಾಡಿಕೊಂಡುಮ ಬೆಟ್ಟದಕೋಟೆಗೆ ಲಡಾಯ ಹೋದ ವಿಮಾ.... ೪೦೦ ನೂರು ಕುದುರೆ ೩೦೦ ವಂಟೆ ನಾಲ್ವತ್ತು ಸಾವಿರ ಯತ್ತು ಮುಂತಾದ ಪಾಯದಳಾ ತೆಗೆದುಕೊಂಡು, ಬೆಟ್ಟದಕೋಟೆ ಮೇಲೆ ದಳವಾಯಿ ಲಗ್ಗೆ ಹೋಗಿ, ಆ ದುರ್ಗವನ್ನು ಮುತ್ಗೆ ಹಾಕಿ, ಮೂರು ವರುಷ ಪರಿಯಂತ್ರ ಈ ಲಡಾಯ ಮಾಡಿದರು. ಕಡೆಗೆ ಯಿವರಿಗೆ ನಿವಾ [+೯] ಹವಿಲ್ಲದೆ ಯೀ ಫೌಜು ಸಾಲದೆ ಯಿದ್ದದ್ದರಿಂದಾ, ಯಿವರು ವಂದು ದಿವಸ ರಾತ್ರಿ ತಮ್ಮ ಯೇಳು ಸಾವಿರ ಯತ್ತುಗಳ ಕ[>ತ]ರಸಿ ಅದರ ಕೊಂಬಿಗೆ ಪ[>ಕ] ಡೆಯಲಿ ದೀವಟಿಗೆ ಕಟ್ಟಿಶಿ, ಯೀ ಯೆತ್ತುಗಳನೆಲ್ಲ ಆ ಗಾ[>ಗ]ಡಿವಳಗೆ ಯೀ ಯತ್ತುಗಳ ಹಿಂದುಗಡೆ ತಮ್ಮ ದಂಡುಗಳೆಲ್ಲ ತಮ್ಮವರು ಮಡಿಶಿ. ಯೇಕಾಯೇಕ ದುರ್ಗದ ಮೇಲೆ ಹಲ್ಲೆ ಮಾಡಿದರು. ಆವಾಗೆ ದುರ್ಗದ ಮೇಲೆ ಯಿದ್ದಾಮಂಚೆದಣ್ಣಾಯಕ ಯೀ ದಂಡನು ನೋಡಿ ಬಹಳ ದಿಗಲು ಪಟ್ಟು, "ಯಿದೆ ಯಿಷ್ಟು ಯಿದೆಯಲ್ಲಾ, ಯಿನ್ನು ಎಷ್ಟು ದಂಡು ಬರುತ್ತ ಯಿದೆಯೋ ಹ್ಯಾಗೆ ಯೀ ದುರ್ಗ ತೆಗೆದುಲೊಳ್ಳತ್ತಯಿದ್ದರೆ ಯಿವರ ಕೈಶೆರೆ ಸಿಗಬಾರದು" ಯಂದು ತನ್ನ ಕುದುರೆ ಮೇಲೆ ಕುಳಿತುಕೊಂಡು ಕಮರಿ ವಳಿಗೆ ಬೀಳಬೇಕು ಯಂಬುದಾಗಿ ಕುದುರೆಯನ್ನು ಹೊಡದಲ್ಲಿ, ಆ ಕುದುರೆ ಕಮರಿಗೆ ಬೀಳದೇ ಹಿಂದಕ್ಕೆ ಹೋಯಿತು. ಆದ್ದರಿಂದ ತಮ್ಮ ವ್ರಾಸವನ್ನು ಕಮರಿಗೆ ಹಾಕಿದ, ಆ ಮೇಲೆ ಕುದುರ್ರೆ ತಾನ್ನು ಸಹಾ ಕಮರಿಗೆ ಬಿತ್ತು. ಯೀ ಕುದುರೆ ಹೆಜ್ಜೆ. ಟಗರಿನ ಹೆಜ್ಜೆ, ನಾಯಿಯ ಹೆಜ್ಜೆ ಈಗಲೂ ಸಹ ಕಮರೀ ಕಲ್ಲಿನ ಮೇಲೆ ಯಿದೆ. ಯೀ ಸಮಾಚಾರ ಅವನ ಹೆಂಡತಿಯಾದಂತಹ ಸುಗ್ಗಲೆಯಂಬವಳು. ಕೇಳಿ "ತಾನು ಹೆಂಗಸು, ತಾನ್ನು ಕೈಸೆರೆ ಸಿಕ್ಕಬಾರದು. ಸಿಕ್ಕಿದರೆ ಅಭಿಮಾನ ಹೋಗಬಾರದುಯಂದು ಅಗ್ನಿಪ್ರವೇಶವಾದಳು.

ಆ ತರುವಾಯ ಯೀ ನಾಲ್ಕು ಡಣಾಯಕರು ದುರ್ಗದ ಖಿಲ್ಲಾ ಬಂದೋಬಸ್ತು ಮಾಡಿಕೊಂಡು, ದುರ್ಗದ ಮೇಲೆ ಠಾಣ್ಯ ಹಾಕಿಕೊಂಡು. ದುರ್ಗದ ಗು[>ಗ]ಡಿಯನ್ನೇ ಗೊತ್ತು ಮಾಡಿ, ಹಿರಿಯನಾದ ಭೀಮಡಣಾಯಕನು ರಾಜಾ [>ಜ್ಯಾ] ಬಂದೋಬಸ್ತು ಮಾಡಿಕೊಂಡು, ನಗರಾಪುರಿಪಟ್ಟಣವನ್ನು ಬೆಟ್ಟದಕೋಟೆ ಸೇರಿದ ಗಡಿ ಹಾಗೆ ಮಾಡಿಸಿ ತನ್ನ ಪುತ್ರನಾದ

ಅಜ್ಜಡಣಾಯಕಗೆ ಈ ಗಡಿ ಆಳುವ ಹಾಗೆ ನೇಮಕಮಾಡಿ, ತಾಯಿಂದರೂ ಸಹ ಯಿಲ್ಲರು ಹಾಗೆ ಮಾಡಿ ಢಣಾಯಕರು ತಮ್ಮ ತಮ್ಮ ವಳಗೆ "ತಮ್ಮ ಪಉಜಿಗೆ ರಾಜ್ಯ ಸಾಲದು" ಯಂದು ಆಲೋಚನೆ ಮಾಡಿ ತಮ್ಮ ಫವುಜು ತಯ್ಯಾರಿ ಮಾಡಿಕೊಂಡು ಪರರಾಷ್ಟ್ರಕ್ಕೆ ಹೋಗಿ ಯುದ್ಧಾಮಾಡಿ, ರಾಜ್ಯಾ ಸಾಧ್ಯಮಾಡಿ ಕಟ್ಟಿಕೊಂಡ ವಿವರಾ:

ಬೆಳಗುತ್ತಿ ಅರಸುಗಳ ವಂಶಾವಳಿ (ಬೆಳಗುತ್ತಿ ಅರಸುಗಳ ವಂಶಾವಳಿ ಕೈಫಿಯತ್ತು)

ಬೆಳಗುತ್ತಿ ಚಲುವರಂಗಪ್ಪ, ನಾಯಕ, ಮಾರಭೂಪರಾಯ, ಶೂರಭೂಪ ರಾಯ, ದೇವರಾಯ, ಅರಿಮಾಧವ ರಾಯ, ವೆಂಕಟಾದ್ರಿರಾಯ, ರೋಮಕೋಟಿರಾಯ, ಯಲ್ಲಣ್ಣನಾಯ್ಕ, ದಾಸಪ್ಪ, ನಾಯಕ, ತಿಮ್ಮಪ್ಪನಾಯಕ, ದೊಡ್ಡಪ್ಪನಾಯಕ, ಸೋಮಪ್ಪ ನಾಯಕ, ನರಸಪ್ಪ ನಾಯ್ಕ, ವೆಂಕಟಪ್ಪ ನಾಯ್ಕ, ತರಿಕೆರೆ ಹನುಮಪ್ಪ ನಾಯಕ ಬಂಕಾಪುರದ ರಂಗಪ್ಪರಾಜ. ಚಲುವಪ್ಪ ರಂಗಪ್ಪನಾಯಕ. "ಶಾಲಿವಾಹನ ಶಕ ವರುಷ ೧೨೫೮, ಧಾತು ಸಂವತ್ಸರದಾ ವೈಶಾಖ ಶು ೭ ಆದಿತ್ಯವಾರ ವಿಜಯನಗರದಲ್ಲು ರಾಯಸಿಂಹಾಸನಕ್ಕೆ ಹರಿಹರ ಮಹಾರಾಯರವರಿಗೆ ಪಟ್ಟವಾಯಿತು. ಯಿವರ ಮಗ ದೇವರಾಯರಯ.

ಯೀ ದೇವರಾಯ ಮಗಳ ಮಗ ಚಲುವರಂಗಪನಾಯ್ಕರು. ಯಿವರು ಆನೆಗೊಂದಿಯಿಂದ ಅಮರಮಾಗಣಿಯಾಗಿ ಅಪ್ಪಣೆ ತೆಗೆದುಕೊಂಡು ಫವುಜು ಮಂದಿ ಮುಂತಾಗಿ ಸಹ ಸಿರಿಗೆರೆ ಬಿಳಿನಾಡ [ಬೆಳೆನಾಡು] ವಳಗಣ ತುಂಗಭದ್ರಾತೀರ ದಿಡುಗೂರು ಕಿಲ್ಲೆದಲ್ಲು ಶಕ ಶಾಲಿವಾಹನ ೧೨೮೦ ವಿಳಂಬ ಸಂವತ್ಸರದಲ್ಲು ಬಂದು ಠಾಣ್ಯ ಹಾಕಿದರ್ರು.

ದೇವಪ್ಪದಣ್ಣಾಯಕ (ಆನೆಕನ್ನಂಬಾಡಿ ಕೈಫಿಯತ್ತು)

"ಪೂರ್ವದಲ್ಲಿ ಮಲಪತ್ತುಯಾಗಿ ಯಿದ್ದಲ್ಲಿ, ದೇವಪ್ಪದಣ್ಣಾಯಕರು ಯೀ ಊರಿಂದಾ ಬಾಲ್ಯದಲ್ಲಿ ವಿಜಯನಗರಕ್ಕೆ ಹೋಗಿ, ಅಲ್ಲಿ ಕರಣಿಕರಾ ಮನೆಯಲ್ಲಿ ಶೇರಿದರು. ಅವರ ಮನೆಯಲ್ಲಿ ಕೆಲವು ಕಾಲವು ಯಿದ್ದರು. ವಿಜಯನಗರದ ದೊರೆ ರಾಯರ್ರು ಅರಮನೆಯಲ್ಲಿ ಅರ್ಧರಾತ್ರಿಯಲ್ಲಿ ಬೊಕ್ಕಸದ ಗೊಲ್ಲರು ಕೆಲವು ಜನರು ಬೊಕ್ಕಸದ ಹಣವನ್ನು ಕದ್ದು ತೆಗೆದುಕೊಂಡು ಹೋಗುತ್ತಾಯಿದ್ದರು. ಅರಮನೆ ಬಾಗಿಲಲ್ಲಿ ಯೀ ದೇವಪ್ಪದಣ್ಣಾಯಕರು ಅಲ್ಲಿ ಕರಣಿಕರ ಸಂಗಡ ಅರಮನೆಗೆ ಹೋಗಿ ಹೊರಬಾಗಲಲ್ಲಿ ಯಿದ್ದರು. ಯೀ ಕರಣಿಕರು ಮನೆಗೆ ಬರುವಾಗ, ನಿದ್ರೆಗೈಯುತ್ತಾ ಯಿವರ ಸಂಗಡ ಬರಲಿಲ್ಲ. ಆ ವೇಳೆಯಲ್ಲಿ ಯೀ ಹಣ ತೆಗೆದುಕೊಂಡು ಹೋದ ಕಳ್ಳರು ಮನಗಿದ್ದ ದಣ್ಣಾಯಕರ ಕಂಡು ಭಯದಿಂದಾ ಯೀ ಹಣವನ್ನು ಅರಮನೆಯ ಭೂಮಿ [ಭಾವಿ] ಯ ವೊಳಕ್ಕೆ ದಡಮ್ಮನೆ ಯೆತ್ತಿ ಹಾಕಿ ವೋಡಿಹೋದ ಶಬ್ದವನ್ನು ಕೇಳಿ ದಣ್ಣಾಯಕರು ಆ ತಿಥಿ, ವಾರ ಹೊತ್ತಗೆ ಬರದು ಯಿಟ್ಟುಕೊಂಡು ಯಿದ್ದರು. ಕೆಲವು ದಿವಸದ ಮೇಲೆ ರಾಯರ್ರು ಬೊಕ್ಕಸದ ಆದಾಯ ವೆಚ್ಚ ವಿಚಾರಿಸುವಾಗ್ಯೆ. ಬಹಳ ಹಣಾ ಕಡಮೆ ಆಗಿದ್ದರಿಂದ ಆ ಕರಣಿಕರ ಮೇಲೆ ಕೋಪಾಮಾಡಿ[>ಡೆ]. ಅವರ್ರು ಮನಿಗೆ ಬಂದು ವೆಸ [+ನ] ಪಟ್ಟುಕೊಂಡು ಯಿದ್ದ ಸಮುದಾಯದಲ್ಲಿ. ಅವರ ಸೇವಕ ದೇವಪ್ಪದಣ್ಣಾಯಕರು. ಸ್ನಾನಾದಿಗಳಿಗೂ ಯೇಳದೇ ಯಿದ್ದಲ್ಲಿ ಅವರಿಗೆ ಮನಸ್ಸು ಸಮಾಧಾನವಾಗುವ ರೀತಿ ಕೇಳಿದಲ್ಲಿ. ಆ ಕರಣಿಕರು "ಈ ದ್ರವ್ಯ ಹೋದ ಪೂರ್ವೋತ್ತರಕ್ಕೆ ರಾಯರು ಬಹಳಾ ಸಿಟ್ಟು, ಅಗಿಯಿದ್ದಾರೆ ಯೆಂಬುದನ್ನು ದಣ್ಣಯಕರು ಕೇಳಿ. "ಯೆನ ಮಾತು, ಯೇನು ಇದ್ದಾಗ್ಯೂ ವಿಚಾರಿಸಿ ಗೊತ್ತು ಮಡುತ್ತೇನೆ" ಯೆಂಬುದಾಗಿ ಬರವಸೆ ಕೊಟ್ಟು. ಯೆಬ್ಬಿಸಿಕೊಂಡು ಭೋಜನಾನಂತರ ಕರಣೀಕರೂ ದಣ್ಣಾಯಕರೂ ಸಹ ಅರಮನೆಗೆ ಹೋಗಿ. ಆ ದಿವಸ ಬರದುಯಿದ್ದ ತಿಥಿ ವಾರದಲ್ಲೂ ದೃಡವಾಗಿಸಿ ಭಾವಿಯಲ್ಲಿ ಆಗಿಯಿದೆ ಯೆಂಬಾ ಗುರುತಂ ಬರದುದನ್ನು ಶೃತ ಮಾಡಲಾಗಿ, ಆ ಭಾವಿಯನ್ನು ಶೋಧಿಸಲಾಗಿ ಆ ದ್ರವ್ಯ ಶಿಕ್ಕಿ ಪೂರ್ವ ವ್ಯತ್ಯಾಸವಾಗಿಯಿದ್ದ ಹಣದ ಲೆಕ್ಕಕ್ಕೆ ಯಿಲ್ಲಿ ತಗದ ಹಣದ ಲೆಕ್ಕಕ್ಕೆ ಸರಿಯಾಗಿದ್ದದರಿಂದ ಆ ದೊರ್ರೆಗಳಿಗೆ ದಯೆ ಬಂದು, ಡಣಾಯಕರನ್ನು "ಯೇನು ಬೇಕು?" ಯಂದು ಕೇಳಿದಲ್ಲಿ. ಯಿವರು ರಾಯರನ್ನು ಕೇಳಿಕೊಂಡದ್ದು "ಹೇಮಾವತಿಗೆ ಕಟ್ಟೆ ಕಟ್ಟಿಶಿ. ಆ ಕಾಲುವೆ ಕೆಳಗೆ ಅನೇಕ ಪೈರುಮಾಡಿಶಿ,, ಅಲ್ಲಿ ವಂದು ಪ್ರತಿಮೆ ಕಟ್ಟಿಸು ಹಾಗೆ ಅಪ್ಪಣೆ ಕೊಡಬೇಕು" ಯೆಂಬುದಾಗಿ ಅರಿಕೆ ಮಾಡಿದ್ದರಿಂದ. ರಾಯರು ಅದಕ್ಕೆ ತಕ್ಕ ದ್ರವ್ಯ ಬಹುಮಾನ ಸಹಾ ಕೊಟ್ಟು ಯೀ ದೇಶಕ್ಕೆ ಕಳುಹಿಸಿ ಕೊಟ್ಟಲ್ಲಿ ಯಿ ದಣ್ಣಾಯಕರು ಅಲ್ಲಿಂದಾ ಯೀ ದೇಶಕ್ಕೆ ಬಂದು, ಬೀಳುಗುಳಿಗ್ರಾಮ ಸಮೀಪದಲ್ಲಿ ಹೇಮಾವತಿಗೆ ಕಟ್ಟೆ ಕಟ್ಟಿಸಿ ಯೀ ನದಿ ದಕ್ಷಿಣ ತೀರದಲ್ಲಿ ಕಾಲುವೆ ತೆಗೆದುಕೊಂಡು ಬಂದು, ಯಿಲ್ಲಿ ಪೂರ್ವಯಿದ್ದ ಕೆರಿಗೆ ನೀರು ತಂದು. ಪಟ್ಟಣದ ಹೊಸ ಸ್ತಳದಲ್ಲಿ ಕಟ್ಟಬೇಕುಯಂಬುದಾಗಿ ಯೋಚಿಸಿ, "ರಾಯರು ಕೊಟ್ಟುಯಿದ್ದಾ ಆನೆಗೆ ಶೃಂಗರಿಸಿಕೊರಳು ಮಾಲಿಕೆ ಹಾಕಿ. ಮಾವಟಿಗೆ ವಿನಾ ಸಭೆಯಲ್ಲಿ ಬಿಟ್ಟರೆ ಯಾವ ಬಳಿಯಲ್ಲಿ ಮೂರು ಮುಕ್ಕಾಲು ಗಳಿಗೆ ನಿಲ್ಲುತ್ತೊ ಯಾವ ದಿಕ್ಕಿಗೆ ಅಭಿಮುಖವಾಗಿ ನಿಲ್ಲತ್ತೊ. ಆ ಮುಖದ ಭಾಗವು ಅದು ನಿಂತ ಬಿಳಿಯ ಅರಮನೆ ಪಟ್ಟಣ ಸಹಾ ಕಟ್ಟಸಬೇಕು" ಯಂಬುದಾಗಿ ನಿಶ್ಚಯ ಮಾಡಿ, ದೇವತಾಪ್ರರ್ಥನಾ ಪುರಾಃಸರವಾಗಿ ಆನೆಯನ್ನು ಶೃಂಗರಿಸಿ, ಶುಭಮುಹೂರ್ತದಲ್ಲಿ

ಅಂಕಾ [>ಕು]ಶ ವಿನಃ ಬಿಟ್ಟಲ್ಲಿ ಆ ಅನೆ ಯೀ ಸ್ಥಳದಲ್ಲಿ ಬಂದು ನಿಂತು ಪೂರ್ವಾಭಿಮುಖವಾಗಿ ಆರ [>ಆ]ರ್ದ ಯಾಮ ತನಕು ಸ್ಥಿರವಾಗಿ ಯಿದ್ದುದರಿಂದ ದೇವಪ್ಪದಣ್ಣಾಯಕರು ಸಂತೋಷಪಟ್ಟು ಇಲ್ಲಿ ಪಟ್ಟಣ ಕಟ್ಟಿಸಿ, ಆನೆಕನ್ನಂಬಾಡಿಯೆಂಬ ನಾಮಧೇಯವಿಟ್ಟು, ಮೂಡುಬಾಗಲು ಮಾಡಿ ಅರಮನೆ ಮುಂತಾದ್ದು ಕಟ್ಟಿಶಿ. ಶಾಲಿವಾಹನ ಶಕ ೧೨೨೮ನೆ ನಳಸಂವತ್ಸರದಲ್ಲಿ ಸಂನ್ಮಮುಹೂರ್ತದಲ್ಲಿ ಯೀ ಗ್ರಾಮ ಗೃಹಾಪ್ರವೇಶ ಮಾಡಿ. ಬಹು ದಿವಸ ಸುಕಸಂತೋಷದಲ್ಲಿ ಇರುವಾಗ್ಯೆ ಈ ಪಟ್ಟಣದಲ್ಲಿ ಅನೆಕನ್ನಂಬಾಡಿಯಲ್ಲಿ ಜಕ್ಕಣಾಚಾರಿಯನ್ನು ಕರೆ ಕಳುಹಿಸಿಕೊಂಡು ಯೀ. ನರಸಿಂಹದೇವಸ್ಥಾನ ಕಟ್ಟಿಸಿದರು.

ಯೀ ಕನ್ನಂಬಾಡಿ ಕ[> ಕೆ]ರೆ ಕೆಳಗೆ ಖ॥೦ ಕೊಳಗ ಹೊಲಾ, ಕರಿ ಗ೬ ವರಹಾ ಸಹಾ ಪೂರ್ವದಲ್ಲಿ ಬಿಟ್ಟುಕೊಟ್ಟು ಯಿತ್ತು ಸೇವಾರ್ತಗಳು ಬಹುಕಾಯಾದ ಮೇರ್‍ಗೆ ನಡದು ಬರುತ್ತ ಯಿತ್ತು. ಕೆಲವು ಕಾಲದ ಮೇಲೆ ನರಸಿಂಹಪುರದ ನಾಯಕರ ಹವಾಲಗೆ ಯೀ ಆನೆಕನ್ನಂಬಾಡಿ ಸೇರಲಾಗಿ ಅವರು ಯೀ ಪೂರ್ವ ಪ್ರಕಾರವೆ ನಡಿಯುವ ರೀರಿಯು ಆಲಿ [> ಅಲ್ಲಿ] ಭಕ್ತಿಯಿಂದ ವಿಚಾರಿಶಿ ನಡಸುತ್ತಲೆ ಯಿದ್ದರು. ಹೋದ ಶೋಭಕೃತ ಸಂವತ್ಸರದಲ್ಲಿ ಯೀ ಗ್ರಾಮ ಭೂಮಿಗಳು ಜಪ್ತಿಯಾಗಿ ಯಿದ್ದು, ರವೂದ್ರಿ ಸಂಚತ್ಸರದಲ್ಲು ಮಹಾರಾಜಶ್ರಿಯವರ ಅಪ್ಪಣೆಯಿಂದಾ ಕರೀ ಗ ೫೯೨॥ ಭೂಮಿ ಪಡಿತರ ಬಗ್ಯೆ ನಡದು ಬರುತ್ತಯಿದೆ. ಯೀ ದೇವರ ಆಳಿಕೆ ವೈಖಾನಸ ತಿಮ್ಮಪ್ಪಯ್ಯ.

ಚನ್ನಪಟ್ಣದ ಜಗದೇವರಾಯ (ಕೈಫಿಯತ್ತು ತಾಲುಕು ಅಜಂಪುರ)

ರಾಮರಾಯರ ಕಾಲದಲ್ಲಿ ಶಕವರುಷ ೧೪೮೦ ರಕ್ತಾಕ್ಷಿ ಸಂ॥ಲ್ಲು ರಾಣಾ [ಜ+] ಗದೇವಯಿರಗೆ ದಯಪಾಲಿಸಿದ್ದರಿಂದ ಯಿವರು ಮೊದಲು ಚೆನ್ನಪಟ್ಣದಲ್ಲಿದ್ದುಕೊಂಡು ಗಡಿ ೪೬ ಗಡಿ ಶೀಮೆಯನ್ನು ಆಳಿದು. ಶಕವರುಷ ಸಿದ್ಧಾರ್ಥಿ ಸಂ। ಆರಭ್ಯಾ ಶಕವರುಷ ೧೫೩೧ ।ನೇ ಸವುಮ್ಯ ಸಂ। ವರಿಗೆ ಆಳಿದ ವರುಷಾ ೫೧.

ಜಗದೇವರಾಯ (ನಾಗಮಂಗಲ ಕೈಫಿಯತ್ತು)

"ಯಿದರ ಶಿವಾಯ ಅಗ್ರಹಾರ ಉತ್ತರಗಳ ಬಿಟ್ಟಿರುವುದಕ್ಕೆ ಸಹಾ ಹಾಜರಿರುವ ಸನ್ನದಿ ನಕಲು ಅಗ್ರಹಾರಗಳು ಉತ್ತಿ ವಿವರಾ. ಗ್ರಾಮಗಳ ವಿವರಾ ಸಹಾ ... ದ ಪಟ್ಟಿ ಬರಶಿಯಿದೆ. ಯೀ ಪ್ರಕಾರ :

ಯೀ ಜಗದೇವರಾಯನ ಸಂತತಿಯವರು ಆಳಿದ್ದು ರಾಣಾ ದೊಡ್ಡ ಜಗದೇವರಾಯ, ಆತನ ಮಗ ಅಂಕುಶದೇವರಾಯ ... ಜಗದೇವರಾಯ, ಯೀತನ ಮಗ ಅಂಕುಶದೇವರಾಯ ಯೀತನ ಮಗ ಜಗದೇವರಾಯ, ಶಾಲಿವಾಹನ ಶಕ ೧೫೪೭ನೆ ವರ್ಷವಾಂತು ಪರಿಯಂತ್ರ ಅಂತು ಜನ ೫ ರಾಜ್ಯಭಾರ ಮಾಡುತ್ತ ಯಿದ್ದರು. ಆ ತರುವಾಯ ಯೀ ಐದು ಮಂದಿ ಅರಸುತನದ ಆದ ತರುವಾಯ ಯಿವರ ತಾಲೂಕ್ಕಲ್ಲಿ ಯಿದ್ದ ಶೀಮೆಗಳು ಹಟಗೋಟವಾದರಿಂದಾ ಆಗ್ಯೆ ಶ್ರೀರಂಗಪಟ್ನ ಆಳುತ್ತ ಯಿರ್‍ರುವ ಶೀಮೆಗಳನ್ನೆಲ್ಲ ಮೈಸೂರವರ ತಾಬೆಗೆ ಕೊಟ್ಟ ಮೇಲೆ, ಅವರು ಮೈಸೂರು ಶ್ರೀರಂಗಪಟ್ಟಣ, ಯೀ ನಗಮಂಗಲ ಮುಂತಾದ ಶೀಮೆಗಳ ಆಳಿಕೊಂಡು ಯಿರುವಾಗ್ಯೆ"

ಜಗದೇವರಾಯ (ಹಾರನಹಳ್ಳಿ ಕೈಫೀಯತ್ತು)

೧ ತದನಂತರ ದಕ್ಷಿಣದೇಶದಲ್ಲು ಪಾಳ್ಯಾ ಪಟ್ಟಣ .... ಶಿಬಿ ದೇಶದ ಜನರಿಗೆ ಬಹಳ ನಿರ್ಬಂಧವಾದ ಕಾರಣ ಶ್ರೀಕೃಷ್ಣರಾಯರು ತಮ್ಮ ವಂಶಸ್ಥರಾದ ಜಗದೇವರಾಯರನ್ನು ಕರದು, "ದಕ್ಷಿಣ ರಾಜ್ಯವನ್ನು ನಿಮಗೆ ಜಹಗೀರು ಸದನದ ಬರಶಿಕೊಡುತ್ತ ಯಿದ್ದೇವೆ. ಪಾಳೆ ಪಟ್ಟಗಿನವರನೆಲ್ಲ ಶಿಕ್ಷಿಸಿ ಯಾವತ್ತೂ ರಾಜ್ಯವನ್ನು ನಿಮಗೆ ಜಹಗೀರು ಸನದ ಬರಶಿಕೊಡುತ್ತ ಯಿದ್ದೇವೆ. ಪಾಳೆ ಪಟ್ಟಗಿನವರನೆಲ್ಲ ಶಿಕ್ಷಿಸಿ ಯಾವತ್ತೂ ರಾಜ್ಯವನ್ನು ಸ್ವಾಧೀನ ಮಾಡಿಕೊಂಡು ರಾಜ್ಯವನ್ನು ಪರಿಪಾಲನೆ ಮಾಡುತ್ತ ಬರುವುದು" ಯಂಬುದಾಗಿ ರಣ ಜಗದೇವರಾಯರಿಗೆ ದಕ್ಷಿಣರಾಜ್ಯವನ್ನು ಜಹಗೀರು ಸನ್ನದ್ದು ಬರಶಿಕೊಟ್ಟ ಯೀ ರಣ ಜಗದೇವರಾಯರನ್ನು ಕಳುಹಿಸಿಕೊಟ್ಟಲ್ಲಿ. ಅವರು ಬಂದು ದುಷ್ಟ ಪಾಳೆ ಪಟ್ಟದವರನೆಲ್ಲ ಶಿಕ್ಷಿಸಿ. ರಾಜ್ಯವನ್ನು ತಮ್ಮ ಸ್ವಾಧೀನ ಮಾಡಿಸಿಕೊಂಡು, ಯಿವರ ವಂಶಸ್ತರು ರಾಜ್ಯಪರಿಪಾಲನೆ ಮಾಡಿದು.

ಯಿಮ್ಮಡಿ ಜಗದೇವರಾಯ. ಯೀತನ ಮಗ ಜಗದೇರಾಯ, ಯೀತನ ಮಗ ಅಂಕುಶ ರಾಯ ಸಹ ಆಳಿದರು.

ಜಗದೇವರಾಯ, ಕುಮಾರ ಜಗದೇವರಾಯ (ಬೆಟ್ಟದ ಕೋಟೆ ಕೈಫೀಯತ್ತು)

"ಯೀ ಶಖೆ ೧೦೮೧ರಿಂದ ಮುಂದೆ ವಿಷ್ಣುವರ್ಧನರಾಯರ ಆಳಿಕೆಯಲ್ಲಿ ಪಂಚನಾರಾಯಣ ಪ್ರತಿಷ್ಟೆಗೆ ವಳಿತವಾದ ವಿಜಯಾಪುರದ ವಿಜೆನಾರಾಯಣಸ್ವಾಮಿ ಪ್ರತಿಷ್ಠೆ. ಯೀ ಆಳಿಕೆ ಶಖೆ ೧೧೧೦ ವರ್‍ರಿಗೂ ಆಳಿದರು. ಯಿಲ್ಲಿಂದ ಮುಂದೆ

ಶಖೆ ೧೨೮೦ ವರ್ರಿಗು ರಾಜ್ಯ ಅತಂತ್ರವಾಗಿ ಹಟ ಕೊಟ್ಟವಾಗಿ, ಚಂದಪ್ಪಬೇಡನು ಕಟಿಕೊಂಡು ತನ್ನ ಸ್ವಾಧೀನವಾದ ಶೀಮೆ ಅಗ್ರಹಾರ ದೆವಸ್ತಾನವನ್ನು ಕಟ್ಟಿಕೊಂಡನು. ಯಿಲ್ಲಿಂದ ಮುಂದೆ ಉಂಮ್ಮತ್ತೂರರಾಯರ ವಂಶಸ್ತನಾದ ದೇವರಾಯನು ರಾಜ್ಯವಂನ್ನು ಹೊಡದು ಕಟಿಕೊಂಡು ಶಖೆ ೧೩೪೦ ವರ್ರಿಗು ಆಳಿದರು. ತೆರಕಣಾಂಬಿ ಮೂಲಸ್ಥಾನದ ದೇವಸ್ಥಾನವನ್ನು ಜೀರ್ನೋದ್ಧಾರವಂ ಯಿಲ್ಲಿಂದ ಮುಂದೆ ಯೀ ವಂಶಸ್ತರಾದ ನಂಜರಾಜರಾಯರು ಶಖೆ ೧೩೮೪ ರ ವರ್ರಿಗು ಆಳಿದರು ಯಲ್ಲಿಂದ ಮುಂದೆ ಯಿವರ ವಂಶಸ್ತ ಗೋವರ್ಧನರಾಯರ ಆಳಿಕೆ ಶಖೆ ೧೪೮೯ರ ವರ್ರಿಗೂ ಆಳಿದರು. ಮುಂದೆ ಆನಂದ ಸಂವತ್ಸರದ ಫಾಲ್ಗುಣ ಶು ೫ ಶುಕ್ರವಾರ ಕೃಷ್ಣರಾಯರು ರಾಜ್ಯವನ್ನು ಕಟ್ಟಿಕೊಂಡು ಯಿವರ ಅಳಿಯ ಜಗದೇವರಾಯರಿಗೆ ಮುಖಾಶಿಯಾಗಿ ಕೊಟ್ಟದ್ದರಿಂದ, ಯೀ ಆರಭ್ಯ ಶಖೆ ೧೪೯೨ರ ವರ್ರಿಗು ರಾಜ್ಯವನಾಳಿ ಯೀ ಮಧ್ಯದಲ್ಲಿ ೧೪೩೨ ವರುಷದಲ್ಲಿ ತ್ರಿಯಂಬಕಪುರದ ತ್ರಿಯಂಬಕೇಶ್ವರ ದೇವರಿಗೆ ಪಡಿತರ ದೀಪಾರಾಧನೆ ಬಗ್ಯೆ ಗ್ರಾಮ ಭೂಮಿಗಳ ಸಹಾ ಬಿಟ್ಟು, ಧರ್ಮದಿಂದ ೧೪೯೨ ವರ್ರಿಗೆ ಆಳಿದನು. ಯಿಲ್ಲಿಂದ ಮುಂದೆ ಪ್ರಮೋದೂತ ಸಂವತ್ಸರದ ಆರಭ್ಯ ಶಖೆ ೧೫೧೫ರ ಸಉಮ್ಯ ಸಂವತ್ಸರದ ವರ್ರಿಗೆ ಶ್ರೀರಂಗರಾಯರು ಆಳಿದರು. ಯಲ್ಲಿಂದ ಮುಂದೆ ಅವರ ವಂಶಕ್ಕೆ ಮಕ್ಕಳು ಯಿಲ್ಲದೆ ಯಿದ್ದು, ಯಿವರ್ರಿಗು ಬೆಂನ್ನು ಫಣಿಯಾಗಿ ವೇದನೆಯನನು ಸಹಿಸಲಾರದೆ ಬದುಕೂದು ಯಿಲ್ಲವೆಂದು ತಿಳಿದು ತಾನು ಗಜಾರಂಣ್ಯಕ್ಷೇತ್ರಕೆ ಹೋಗಬೇಕೆಂದು ಯೋಚಿಸಿ, ಉಭಯ ಕಾವೇರಿ ಮಧ್ಯದ ಶ್ರೀರಂಗಪಟ್ಟಣದ ಸಂಸ್ಥಾನದ ಬೀಗಮುದ್ರೆ ಬೊಕ್ಕಸ ಮುಂತಾದ್ದನ್ನು ಮೈಹಿಶೂರ ಸಂಸ್ಥಾನದ ದೊರೆತನ ಮಾಡುವ ರಾಜವಡೆರೈಯನವರ್ರಿಗೆ ಯೀ ಸಉಮ್ಯ ಸಂವತ್ಸರದ ಕಾರ್ತಿಕ ಬಹುಳ ೧೦ ಮಂಗಳವಾರ ದಿವಸ ಕೊಟ್ಟು ಬಿಟ್ಟು ಹೊರಟುಹೋದರು. ಯೀ ಆರಭ್ಯ ವರುಷ ೯ ಧೊರಿತನಾ ಮಾಡಿದರು.

ಯಿಲ್ಲಿಂದಾ ಮುಂದೆ ಯಿವರ ಮಗ ಯಿಮ್ಮಡಿ ರಾಜವಡೆಯರ ಆಳಿಕೆ ಶಖೆ ೧೫೭೫ ಯೀ ವರ್ರಿಗ್ಯೆ ಯಿವರ ಧೊರೆತನ ೨೩ ವರುಷ ಆಳಿದರು. ಯಿವರ ಕೊಮಾರ್ರು ಯಿಮ್ಮಡಿ ರಾಜವಡ್ರೇರು ೨ ವರುಷಕ್ಕೆ ಶಖೆ ವರುಷ ೧೫೨೨ರ ವರೆಗೆ ಆಳಿದರ್ರು. ಯಿಲ್ಲಿಂದಾ ಮುಂದೆ ನಳೂರಲ್ಲಿ ಯಿದ್ದ ಕಂಠೀರವ ನರಸರಾಜ ವಡೆಯರವರ್ರು ಯಿಪ್ಪತ್ತು ಮೂರ್ರು ವರುಷಕ್ಕೆ ಶುದ್ಧ ಶೆಖೆ ೧೬೦೦ ಆಳಿದ್ದರ್ರು. ಯಲ್ಲಿಂದ ಮುಂದೆ ದೊಡ್ಡ ದೇವರಾಜ ವಡೆರ್ರ ಆಳಿಕೆ ೧೪ ವರುಷ. ತದನಂತರದಲ್ಲಿ ಯಿವರ ಕೊಮ್ಮಾರು ಚಿಕ್ಕದೇವರರಾಯರ ಆಳಿಕೆ ವರುಷ ೩೩ರಲ್ಲಿ ಯೀತೆರಕಣಾಂಬಿ ಶೀಮೆಯಲ್ಲಿ ಮಾಡಿದ ಅಗ್ರಹಾರ ದೇವಸ್ಥಾನಗಳು ಅಪ್ರತಿಪರವಾಲು ದೆವರ ಪ್ರತಿಷ್ಠೆ ಪರಾಭವ ಸಂವತ್ಸರದಲ್ಲು ಮಾಡಿ. ಯೀ ದೇವಸ್ಥಾನಕ್ಕೆ ಬಿಟ್ಟ ಗ್ರಾಮ ೨೪ಕ್ಕೆ ಹೆಚ್ಚು ಗ್ರಾಮ ೨ ಮೂರಕ್ಕೆ [> ಎರಡು] ಗ್ರಾಮ ೩೬ಕ್ಕೆ ರೇಖೆ ಲಾಗ ೪೨೧೩ ॥೨।೦ಕ್ಕೆ, ಹುಟ್ಟುವಳಿ ಲಾಗ ಅಗ್ರಹಾರ ಪರಿಧಾವಿ ಸಂವತ್ಸರದಲ್ಲು ಯಾವತ್ತು ದೇವನಗರದ ಅಗ್ರಹಾರ ಯಿದಕ್ಕೆ ಬಿಟ್ಟ ಗ್ರಾಮ ೩೩, ಯಂನ್ನು ಬ್ರಾಹ್ಮಣರಿಗೆ ದೇವರಿಗೆ ಸಹಾ ಗ್ರಾಮ ಭೂಮಿ ಮುಂತಾದ್ದು ಬಿಟ್ಟು ಯೀ ದೇವಸ್ಥಾನ ಅಗ್ರಹಾರ ಮುಂತಾದ ಸಂರಕ್ಷಣಾರ್ಥವಾಗಿ ವಿಜಯಾಪುರದ ಕೋಟೆಯನ್ನು ಹಾರಿಸಿ, ದೇವಬ್ರಾಹ್ಮಣ ಪರಿಪಾಲನವನ್ನು ಮಾಡಿಕ್ಕೊಂಡು ರಾಜ್ಯವನಾಳಿದ ವರುಷ ೩೩. ಯಿಲ್ಲಿಂದಾ ಮುಂದೆ ಯಿವರ ಕೊಮಾರ್ರು ಕಂಠೀರವ ನರಸರಾಜವಡೆರವರು ಆಳಿದ ವರುಷ ೪. ಇವರ ಕೊಮಾರ್ರು ಕೃಷ್ಣರಾಜವಡೇರವರು ಆಳಿದ ವರುಷ ೩೦. ಯೀ ತರುವಾಯ ಚಾಮರಾಜವಡೇರವರು ಆಳಿದ ವರುಷ ೨.

ಯೀ ತರುವಾಯ ಕೃಷ್ಣರಾಜವಡೆರು ಆಳಿದ ವರುಷ ೩೦ ಸಂ।ದ ಶಾಲಿವಾಹನ ಶಕ ವರುಷ ೧೬೮೦ ಸರ್ವಬಹುದಾನ್ಯ ಸಂವತರದಲ್ಲಿ ಯೀ ಕೃಷ್ಣರಾಜವಡೇರ್ರ ಆಳಿಕೆಯಲ್ಲು ಹೈದರು ನಾಯಕರ್ರು ದಳವಾಯಿ ಕರ್ರುಚೂರಿ ನಂಜರಾಜ್ಯೆಯ್ಯನವರ ಹವಾಲಿನಲ್ಲಿ ಶೀಮೆ ಯಾವತ್ತನ್ನು ಕಟ್ಟಿಕೊಂಡು, ನಂಜರಾಜ್ಯೆಯ್ಯನವರಿಂದ ಹೈದರಲಿಖಾನಯಂಬ ಹೆಸರ್ರು ಮಾಡಿಕೊಂಡು, ಶ್ರೀರಂಗಪಟ್ಟಣಕ್ಕೆ ಠಾಣ್ಯ ಹಾಕಿಕೊಂಡು, ಸಕಲ ವಿಚಾರಣೆಯನ್ನು ತಾನೆ ಮಾಡುತ್ತ ಯಿರ್ರುವ ಕಾಲದಲ್ಲಿ ಯೀ ದೊರೆತನಾ ಮಾಡುತ್ತ ಯಿದ್ದ ಕೃಷ್ಣರಾಜವಡೆರೈಯ್ಯನವರು ಸರ್ಗಸ್ಥರಾಗಲಾಗಿ, ಯೀ ತದನಂತರದ ಯಿವರ ಮಗ ನಂಜರಾಜ ವಡೆಯರ್ರಿಗೆ ಪಟ್ಟವಂ ಕಟ್ಟಿ, ರಾಜ್ಯದ ಮೇಲು ವಿಚಾರವನ್ನು ಮಾಡುತ್ತಾ ಯಿರಲಾಗು.

ಅರಸರು ಮತ್ತು ಅವರ ಅಧಿಕಾರವರ್ಗದವರು ಹಾಗೂ ಅಮರನಾಯಕರು ಅಂದಿನ ರಾಜಕೀಯ ವ್ಯವಸ್ಥೆಯಲ್ಲಿ ಸರ್ವಾಧಿಕಾರಿಗಳಾಗಿರಲಿಲ್ಲ ಹಾಗೂ ಪ್ರಜಾಪೀಡಕರಾಗಿ ರಲಿಲ್ಲ ಎಂಬುದನ್ನು ದಾಖಲಿಸಿವೆ. ಪ್ರಜಾಕ್ಷೇಮ ವಿಜಯನಗರ ಕಾಲದ ರಾಜಕೀಯ ವ್ಯವಸ್ಥೆಯ ಗುರಿಯಾಗಿತ್ತು. ಉದಾಹರಣೆಗೆ ಕೈಫಿಯತ್ತುಗಳು ಪದೇ ಪದೇ ಆಳರಸರು, ಅಧಿಕಾರವರ್ಗ ಮತ್ತು ಅಮರ ನಾಯಕರು. ಕಟ್ಟಿಸಿದ ಕೆರೆ, ಕಟ್ಟೆ, ಕಾಲುವೆಗಳ ಬಗೆಗೆ ಪ್ರಸ್ತಾಪಿಸಿತ್ತವೆ. ಅಂತಹ ಕೆರೆಗಳು ಇಂದಿಗೂ ಮೈಸೂರು ಪ್ರದೇಶದಲ್ಲಿದೆ. ವಿಜಯನಗರ ಕಾಲದ ರಾಜಕೀಯ ಚರಿತ್ರೆಯ ಮೇಲೆ ಮೈಸೂರು ಪ್ರದೇಶದ ಕೈಫಿಯತ್ತುಗಳು

ನೀಡುವ ಮಾಹಿತಿ ಉಪಯುಕ್ತ, ಕುತೂಹಲಕಾರಿ ಮತ್ತು ಅನೇಕ ಸಂದರ್ಭಗಳಲ್ಲಿ ಗೊಂದಲಮಯವಾಗಿರುವುದು ಸ್ಪಷ್ಟವಾಗಿವೆ.

ಆಧಾರ ಗ್ರಂಥಗಳು

೧. ಅಜ್ಜೀಬಳ ರಾ.ಗ., ಕರ್ನಲ್ ಮೆಕೆಂಝಿ, ಐಬಿಹೆಚ್ ಪ್ರಕಾಶನ, ಬೆಂಗಳೂರು. ೧೯೮೪.

೨. ಕಲಬುರ್ಗಿ ಎಂ.ಎಂ. (ಸಂ.), ಕರ್ನಾಟಕದ ಕೈಫಿಯತ್ತುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪.

೩. ಕುಲಕರ್ಣಿ ಬಿ.ಎಸ್. (ಸಂ.), ಕೈಫಿಯತ್ತು ಮತ್ತು ಮೈಸೂರು ರಾಜರ ಚರಿತ್ರೆ ವಚನ ಕಾವ್ಯವು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೮೪.

೪. ಕುಶಾಲಪ್ಪಗೌಡ ಕೆ. ಮತ್ತು ಚಿನ್ನಪ್ಪಗೌಡ ಕೆ., ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು.

೫. ಕರ್ನಲ್ ಕಾಲಿನ್ ಮೆಕೆಂಝಿಯ ಸಂಗ್ರಹಗಳು, ಮದ್ರಾಸ್ ಆರ್ಕೈವ್ಸ್, ಮದ್ರಾಸ್.

೬ ಮದ್ರಾಸ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್, ಲೈಬ್ರರಿಯಲ್ಲಿರುವ ಕೈಫಿಯತ್ತುಗಳು.

೭. ಪುಟ್ಟಣ್ಣ ಎಂ.ಎಸ್., ಇಕ್ಕೇರಿ ಸಂಸ್ಥಾನದ ಚರಿತ್ರೆ, ಪಾಳೆಗಾರರ ಲೇಖನ ಮಾಲೆ, ಬೆಂಗಳೂರು. ೧೯೭೭.

೮. ಪುಟ್ಟಸ್ವಾಮಿ ಬಿ.ಎಸ್., ಕೈಫಿಯತ್ತು ಕಂಡ ಮೈಸೂರು ರಾಜಕೀಯ ಚರಿತ್ರೆ. ಮುದ್ದುಶ್ರೀ ಗ್ರಂಥಮಾಲೆ, ಬೆಂಗಳೂರು. ೨೦೦೭.

೯. ಪುಟ್ಟಸ್ವಾಮಿ.ಬಿ.ಎಸ್., ಕರ್ನಲ್ ಮೆಕೆಂಝಿ ಮತ್ತು ಕೈಫಿಯತ್ತುಗಳು, ಮನೋಜ್ ಪಬ್ಲಿಕೇಷನ್, ಬೆಂಗಳೂರು, ೨೦೧೨.

೧೦. ಇತಿಹಾಸ ಅಕಾದೆಮಿ, ಎ) ಪಾಂಡುಕುಮಾರ್ ಬಿ. –ಮಧುಗಿರಿ ಪಾಳೇಗಾರರ ಕೈಫಿಯತ್ತು –ಒಂದು ಚಾರಿತ್ರಿಕ ಪರಿಶೀಲನೆ.
ಬಿ) ದೇವರಕೊಂಡಾರೆಡ್ಡಿ –ಆನೇಕಲ್ ಪಾಳೇಗಾರರ ಕೈಫಿಯತ್ತು.

೧೧. ಎಂ.ವಿ. ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ, ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ೧೯೭೪, ಚಿತ್ರದುರ್ಗ.

೩೦

ರಾಷ್ಟ್ರಕೂಟ ದೊರೆಗಳ ಶಾಸನಗಳಲ್ಲಿ ಕಣ್ವಶಾಖೆಯ ಬ್ರಾಹ್ಮಣರು

ಸುರೇಖಾ ಕುಲಕರ್ಣಿ*

ಭಾರತವು ತನ್ನದೇಯಾದ ವಿಶಿಷ್ಟ, ಭವ್ಯ ಇತಿಹಾಸವನ್ನು ಹೊಂದಿದೆ. ಇಲ್ಲಿ ಅನೇಕ ರಾಜ ಮಹಾರಾಜರು ಆಳ್ವಿಕೆ ಮಾಡಿ ತಮ್ಮ ಹಿರಿಮೆ ಗರಿಮೆಗಳನ್ನು ಎತ್ತಿ ತೋರಿಸುತ್ತ ಒಟ್ಟಾರೆ ಭಾರತದ ಕೀರ್ತಿ ಪತಾಕೆಯನ್ನು ಹಾರಿಸಿದ್ದಾರೆ. ಅವರಲ್ಲಿ ಭಾರತದ ದಖ್ಖನ್ ಪ್ರದೇಶಗಳಾದ ಮಹಾರಾಷ್ಟ್ರ, ಆಂಧ್ರ ಪ್ರದೇಶ, ಉತ್ತರ ಕರ್ನಾಟಕ, ಮಧ್ಯ ಪ್ರದೇಶ, ಗುಜರಾತ್ ಭಾಗಗಳಲ್ಲಿ ಆಳ್ವಿಕೆ ಮಾಡಿದ ರಾಷ್ಟ್ರಕೂಟ ಅರಸರು ಪ್ರಮುಖರು. ಇವರು ೮ನೇಯ ಶತಮಾನದಿಂದ ೧೦ನೇಯ ಶತಮಾನದವರೆಗೆ ಕಾಲಘಟ್ಟದಲ್ಲಿ ಸುಮಾರು ೩೦೦ ವರ್ಷಗಳ ಕಾಲ ರಾಜ್ಯಭಾರ ಮಾಡಿದವರು. ಇವರ ಕಾಲದ ಅನೇಕ ತಾಮ್ರ, ಶಿಲಾ ಶಾಸನಗಳು, ನಾಣ್ಯಗಳು, ಸ್ಮಾರಕಗಳು, ತಾಳೆಗರಿಯಲ್ಲಿಯ ಸಾಹಿತ್ಯ ಕೃತಿಗಳು ಲಭ್ಯವಾಗಿವೆ. ಈ ದೊರೆಗಳು ಹಾಕಿಸಿದ ದಾನ ಶಾಸನಗಳನ್ನು ಅಭ್ಯಸಿಸಿದರೆ ಆ ಕಾಲದ ಅನೇಕ ವಿಷಯಗಳು ಅನಾವರಣಗೊಳ್ಳುತ್ತವೆ. ಅವುಗಳಲ್ಲಿ ಕಣ್ವಶಾಖೆಯ ಮತ್ತು ಮಾಧ್ಯಾಂದಿನ ಶಾಖೆಯ ಬ್ರಾಹ್ಮಣರಿಗೆ ಇದ್ದ ಅಪಾರ ಗೌರ, ಸ್ಥಾನ, ಮಾನಗಳ ಪರಿಚಯವನ್ನು ಶಾಸನಗಳು ಮಾಡಿಕೊಡುತ್ತವೆ. ಈ ಶಾಸನಗಳು ಕಣ್ವಶಾಖೆಯ ಬ್ರಾಹ್ಮಣರನ್ನು 'ಚತುರ್ವಿದ್ಯಾ ಪ್ರವೀಣರು' ಎಂದು ವರ್ಣಿಸಿರುವುದು ಗಮನಾರ್ಹ ಸಂಗತಿ. ಚತುರ್ವಿದ್ಯೆಗಳೆಂದರೆ ಅಧ್ಯಾತ್ಮವಿದ್ಯೆ, ವೈದಿಕವಿದ್ಯೆ, ರಾಜಪತ್ರ ವಿದ್ಯೆ, ಧನುರ್ವಿದ್ಯೆ.

ರಾಷ್ಟ್ರಕೂಟ ಅರಸರಲ್ಲಿ ಬರುವ ಖ್ಯಾತ ಅರಸರಾದ ಕರ್ಕ I, ಕೃಷ್ಣ I, ದ್ರುವ, ಗೋವಿಂದ III, ಕೃಷ್ಣ II, ಇಂದ್ರ III, ಗೋವಿಂದ IV, ಕೃಷ್ಣ III ಅರಸರು ಹಲವಾರು ಸಂದರ್ಭಗಳಲ್ಲಿ ಬ್ರಾಹ್ಮಣರಿಗೆ ದಾನಗಳನ್ನು ಕೊಟ್ಟು ದಾನ ಶಾಸನಗಳನ್ನು ಹೊರಡಿಸಿದ್ದಾರೆ. ದ್ರುವ ಮತ್ತು ಮೂರನೇ ಗೋವಿಂದ ಅರಸರು ತಮ್ಮ ಪಟ್ಟಬಂಧೋತ್ಸವ ಸಂದರ್ಭದಲ್ಲಿ ಅನೇಕ ಹಳ್ಳಿಗಳನ್ನು ದಾನವಾಗಿ ಬಿಟ್ಟಿದ್ದಾರೆ. ಹೀಗೆ ಕೊಟ್ಟ ದಾನಗಳಲ್ಲಿ ಪ್ರತಿಶತ ಎಂಬತ್ತರಷ್ಟು ದಾನಗಳು ಕಣ್ವ ಮತ್ತು ಮಾಧ್ಯಾಂದಿನ ಶಾಖೆಯ ಬ್ರಾಹ್ಮಣರಿಗೆ ಕೊಡಮಾಡಿವೆ ಎಂಬುದು ವಿಶೇಷ ಸಂಗತಿ. ರಾಷ್ಟ್ರಕೂಟರ ಆಳ್ವಿಕೆಗೆ ಸೇರಿದ ನೂರಾರು ಶಾಸನಗಳಲ್ಲಿ ಕೆಲವು ದಾನಶಾಸನಗಳನ್ನು ಇಲ್ಲಿ ಉದಾಹರಿಸುತ್ತೇನೆ.

ನಾಲ್ಕು ವೇದಗಳಲ್ಲಿ ಒಂದಾದ ಶುಕ್ಲ ಯಜುರ್ವೇದವನ್ನು (ಯಜುರ್ವೇದದಲ್ಲಿ ಎಂಟು ಭಾಗ ಕೃಷ್ಣ ಮತ್ತು ಶುಕ್ಲ) ಶ್ರೀ ಸೂರ್ಯನಾರಾಯಣನಿಂದ ನಡೆದುಕೊಂಡು ಬಂದ ಅದ್ವಿತೀಯ ಗುರುವರೇಣ್ಯನೆಂದರೆ ಯೋಗೀಶ್ವರ ಯಾಜ್ಞವಲ್ಕ್ಯರು ಇವರು ತತ್ವಜ್ಞಾನವನ್ನು ಹದಿನೈದು ಶಿಷ್ಯರಿಗೆ ದಯಪಾಲಿಸಿ ಶಾಖಾ ಪ್ರವರ್ತಕರೆನಿಸಿಕೊಂಡರು. ಅವು ಯಾವುವೆಂದರೆ ಕಣ್ವ, ಮಾಧ್ಯಾಂದಿನ, ಜಾಬಾಲ, ಸ್ತಾಪಾಯನೀಯ, ವಲ್ಸೆ, ಪೌಂಡ್ರವಲ್ಸೆ, ಆವಟಿಕಾ, ಪರಮಾವಟಿಕೆ, ಪರಾಶರ್ಯಾ, ವೈಧೇಯ, ವೈದೇಯ, ಜಾಧೇಯ, ಗಾಲವ, ವೈಜವ, ಕಾತ್ಯಾಯನ, ಶಾಖೆಗಳು, ಪ್ರಥಮ ಶಾಖೆಯವರೆನಿಸಿಕೊಂಡ ಕಣ್ವಶಾಖೆ ಮತ್ತು ಮಾಧ್ಯಾಂದಿನ ಶಾಖೆಯ ಬ್ರಾಹ್ಮಣರು ಸ್ವೀಕರಿಸಿದ ದಾನಗಳು ಮತ್ತು ಅವರ ಮಹತ್ವವನ್ನು ಹೇಳುವ ಕೆಲವು ಶಾಸನಗಳನ್ನು ಇಲ್ಲಿ ಉದಾಹರಿಸುತ್ತೇನೆ.

೧. ಶಾಸನ ಕಾಲ : ಕ್ರಿ.ಶ. ೭ನೇ ಶತಮಾನ ತಾಮ್ರಪಟ ದೊರೆ : ರಾಷ್ಟ್ರಕೂಟ ಒಂದನೆ ಕರ್ಕ ಭಾಷೆ/ಲಿಪಿ : ಸಂಸ್ಕೃತ/ ಸಿದ್ಧಮಾತೃಕಾ ವಿಷಯ : ಬಿಂಬಪಲ್ಲಿ ಎಂಬ ಗ್ರಾಮವನ್ನು ಕಣ್ವಶಾಖೆಯ ಶ್ರೀವತ್ಸಗೋತ್ರದ ಕೋಶಶರ್ಮನ ಮಗ ಭಾನುಭಟ್ಟನಿಗೆ ನೀಡಲಾಗಿದೆ. ಶಾಸನ ಪಾಠ : ಶ್ರೀ ಸ್ವಾಮಿರಾಜೇನ ವತ್ಸಂ ನಗೋತ್ರಾನ್ವಯಸ್ಯ ಕಾಣ್ವಸ್ಯ ಕೋಶಾಶರ್ಮ ಬ್ರಾಹ್ಮರಾನ್ಯ ಸುಲಾಯ ಭಾನುಭಟ್ಟಾಯಾತ್ಮನಃ ಪುಣ್ಯಾಭಿವೃದ್ಧಯೆ ಬಿಂಬಪಲ್ಲಿ ನಾಮಧೇಯೊ ಗ್ರಾಮೋದರಪೂರ್ವಂ ಕ್ಷಿಪ್ತಾ, ಶಾಸನ ದೊರೆ ಸ್ಥಳ : ಭಂಧೋನ್, ಔರಂಗಾಬಾದ್ ತಾಲೂಕು ತ್ರಯೆಂಬ ವಾದಾ ಪಾಟೀಲ ಅವರ ಜಮೀನಿನಲ್ಲಿ ಸಿಕ್ಕ ತಾಮ್ರಪಟಗಳು. JESI Vol. X, P. 30-35.

* ನಿರ್ಮಲಗಂಗಾ, ವಿದ್ಯಾಗಿರಿ ರಸ್ತೆ, ಸಂಖ್ಯೆ ೨೨, ಬಾಗಲಕೋಟೆ-೩೦.

೨. ಶಾಸನ ಕಾಲ : ಕ್ರಿ.ಶ. ಸು. ೮ನೇ ಶತಮಾನ ತಾಮ್ರಪಟಗಳು ದೊರೆ : ಒಂದನೆ ಕೃಷ್ಣ ಭಾಷೆ/ಲಿಪಿ : ಸಂಸ್ಕೃತ/ನಾಗರಿ ವಿಷಯ : ಒಂದು ಪಿಟಿಕೆ ಭತ್ತ ಬೆಳೆಯುವಷ್ಟು ಭೂಮಿಯನ್ನು ಶ್ರೀ ಪರ್ಣಿಕಾ ಗ್ರಾಮದಲ್ಲಿ ನೀಡಲಾಗಿದೆ. ಶಾಸನಪಾಠ : ....ಯಥಾ ಪಾಷಾಣಿ ವಾಸ್ತವ್ಯ ಕೌತನ ಗೋತ್ರ ವಾಜಪನೆಂದು ನಬ್ರಹ್ಮಚಾರಿಗೇ ಭಟ್ಟರ ಅನಂತಸ್ವಾಮಿನೆ. ಪಂಚಮಹಾಯಜ್ಞಧರ್ಮ ಕ್ರಿಯೋತ್ಸರ್ಪಣಾಯ ಪರಮ ಭಟ್ಟಾರಕಪಾದಾನಾಂ. ಶಾಸನ ದೊರೆತ ಸ್ಥಳ : ಸಂಕೇದ ಗ್ರಾಮ ಬರೋಡ ಜಿಲ್ಲೆ, ಗುಜರಾತ್ EI Vol. 11, P. 21-24.

೩. ಶಾಸನ ಕಾಲ : ಕ್ರಿ.ಶ. ೭೭೫ ತಾಮ್ರಪಟಗಳುದೊರೆ : ದ್ರವ ಭಾಷೆ/ಲಿಪಿ : ಸಂಸ್ಕೃತ/ನಾಗರ ವಿಷಯ : ಜಂಪೂ ಮಠದಲ್ಲಿ ನೆಲೆಸಿದ್ದ ಚತುರ್ವಿದ್ಯೆಗಳನ್ನು ಬಲ್ಲ ಅನಾಮಾತ್ಯ ಭ್ರಷ್ಟಾಚಾರ ಭಾರದ್ವಾಜ ಗೋತ್ರದ ಕಾಣ್ವಿಶಾಖೆಯ ದೀಕ್ಷಿತನ ಮಗ ಭಟ್ಟನೊಡನೆ ಪಟನಗರದ ಲೀಲಾಗ್ರಾಮವನ್ನು ನೀಡಿರುವರು.

ಶಾಸನ ಪಾಠ : ....ಮಯಾ ಮಾತಾ ಸಿಟ್ರೊವಾತ್ಮದಶ್ಚತಿ ಕಾಮುಷ್ಮಿಕ ಪುಣ್ಯ ಯಶೋಭಿವೃಧಯೆ ಚಂಪೂಮಠಃ ಸ್ಥಾನನಿತಸಿತ ಚತುರ್ವಿದ್ಯಾ ಅಸಾಮಾನ್ಯ ಭರದ್ವಾಜನ ಗೋತ್ರ ಕಾಣ್ತ ನ ಬ್ರಹ್ಮಚಾರಿ ಭಟ್ಟಾಪುರ ದೀಕ್ಷಿತ ಸುತಭಟ್ಟದೇವಾಯ...

ಶಾಸನ ದೊರೆತ ಸ್ಥಳ : ಪಿಂಪರಿ ಗ್ರಾಮ, ನಾಸಿಕ್ ಜಿಲ್ಲೆ, ಮಹಾರಾಷ್ಟ್ರ. EI Vol. X 19, P. 81-89.

೪. ಶಾಸನ ಕಾಲ : ಕ್ರಿ.ಶ. ೭೮೬ ತಾಮ್ರಪಟ ದೊರೆ : ಧ್ರುವ ಭಾಷೆ/ಲಿಪಿ : ಸಂಸ್ಕೃತ/ನಾಗರಿ ವಿಷಯ : ಕೋಲವರ ಗ್ರಾಮವನ್ನು ಶಾಲಂಕಾಯನ ಗೋತ್ರದ ಶಾಣ್ತಶಾಖೆಯ ಮಾರಚ್ಚನಿಗೆ ಮತ್ತು ದುರ್ಗಾದಿತ್ಯನಿಗೆ ನೀಡಲಾಗಿದೆ.

ಶಾಸನಪಾಠ : ....ಶಾಲಂಪಾಯನನ ಗೋತ್ರ ಅಧ್ವಯು ಕಾಣ್ವನ ಬ್ರಹ್ಮಚಾರಿ ಬ್ರಾಹ್ಮಣ ಮಾರಣಸೋಮಮ್ಮಾರಟ್ಟ: ಶ್ರೀ ನಾನ್ದಿ ಪುರದ್ವಾರೀ ವಾಸ್ತವ್ಯ ತಟ್ಟಾಯದ್ತಿಶ್ಯ ನ(ಸಾ)ಮಾನ್ಯ ಚಾತುರಣ್ಯನ ಗೋತ್ರ ಅಧ್ವಯು ಮಾಧ್ಯನ್ದಿನನ ಬ್ರಹ್ಮಚಾರಿ.

ಶಾಸನ ದೊರೆತ ಸ್ಥಳ : ಬೇಡ್ವಾಯ್ ಗ್ರಾಮ, ಸೀಮರ್ ತಾಲೂಕು, ಮಧ್ಯಪ್ರದೇಶ, ಈ ಗ್ರಾಮದ ಸಮೀಪ ಬೆಟ್ಟದ ಮೇಲಿರುವ ಕೋಟೆಯಲ್ಲಿ EI Vol. XXI, 17, P. 98

೫. ಶಾಸನ ಕಾಲ : ಕ್ರಿ.ಶ. ೭೯೪ ತಾಮ್ರಪಟ ದೊರೆ : ಮೂರನೆ ಗೋವಿಂದ ಭಾಷೆ/ಲಿಪಿ : ಸಂಸ್ಕೃತ/ನಾಗರಿ

ವಿಷಯ : ಲಿಂಬಕಾಮಿಕಾ ಗ್ರಾಮವನ್ನು ಕಾಣ್ವಶಾಖೆಯ ನಾನಾ ಗೋತ್ರದ ಬ್ರಾಹ್ಮಗಿರಿಗೆ ವೈಶ್ವದೇವ, ಅಗ್ನಿಹೋತ್ರ, ಪಂಚ ಮಹಾಯಜ್ಞಗಳನ್ನು ನಡೆಸಿಕೊಂಡು ಹೋಗಲೆಂದು ನೀಡಲಾಗಿದೆ.

ಶಾಸನ ದೊರೆತ ಸ್ಥಳ : ಪೈಠಣ್, ಔರಂಗಾಬಾದ್ ಜಿಲ್ಲೆ, ಮಹಾರಾಷ್ಟ್ರ, ತಿರ್ಕಮ್‌ರಾಯ್ ತಾತ್ಯಾ ಕಾಸರ ಶೇಟ ಇವರಿಗೆ ಸೇರಿದ ಪಟಗಳು. EI Vol. III, 17, P. 103

೬ ಶಾಸನ ಕಾಲ : ಕ್ರಿ.ಶ. ೮೧೨ ತಾಮ್ರಪಟ ದೊರೆ : ಮೂರನೆ ಗೋವಿಂದ ಭಾಷೆ/ಲಿಪಿ : ಸಂಸ್ಕೃತ/ನಾಗರಿ

ವಿಷಯ : ಗೋಪಟ್ಟಣ ಗ್ರಾಮವನ್ನು ವಾಜನನೇಯ ಕಣ್ವಶಾಖೆಯ ವಿವಿಧ ಗೋತ್ರದ ಬ್ರಾಹ್ಮಣರಿಗೆ ನೀಡಲಾಗಿದೆ.

ಶಾಸನ ಪಾಠ : ...ಮಯಾ ಮಾತಾತಿತ್ರೋರಾಧ್ಮನಶ್ಚ ಪುಣ್ಯಯಶೋಭಿವೃದ್ಧಯೆ

ಐತಿಕಾಮುಷ್ಟಿಕ ಫಲಾನಾಪ್ತ್ಯತ್ಥರಂ ಬಲಿ ಚರು ವೈಶ್ವದೇವಾಗ್ನಿ ಮೊಟ್ಟ

ಕ್ರತುಕ್ರಿಯಾದ್ಯಚ್ಛ(ತ್ಸ)ಪೂರ್ಣಾರ್ಥಂ ಬದರಸಿದ್ಧಿ ಚಾತುವೀದ್ಯನಾ

ಮಾನ್ಯ ವಾಜನನೇಯ ಮಾಧ್ಯನ್ದಿನ ಬ್ರಹ್ಮಚಾರಿ ತ್ರಿಪವರ

ಲಾವಾಯನ ಸಗೋತ್ರ ಬ್ರಾಹ್ಮಣ...

ಶಾಸನ ದೊರೆತ ಸ್ಥಳ : ಧುಲಿಯಾ ಗ್ರಾಮ, ಶಹಾರ ತಾಲೂಕ, ಮಹಾರಾಷ್ಟ್ರ ದೇವರಾವ ಬಲವಂತರಾವ ಎಂಬುವವರ ವಶದಲ್ಲಿರುವ ತಾಮ್ರಪಟಗಳು. EI Vol III No. 9, F-53.

೭ ಶಾಸನ ಕಾಲ : ಕ್ರಿ.ಶ. ೮೧೨ ತಾಮ್ರಪಟ ದೊರೆ : ಮೂರನೆ ಗೋವಿಂದ ಭಾಷೆ/ಲಿಪಿ : ಸಂಸ್ಕೃತ/ನಾಗರಿ

ವಿಷಯ : ವಡಪದ್ರಕ ಗ್ರಾಮವನ್ನು ಚಾತುರ್ವಿದ್ಯಾ ಪ್ರವೀಣನಾದ ವಾತ್ಸಾಯನ ಗೋತ್ರದ ವಾಜಸನೇಯ ಮಾಧ್ಯಾಂನ್ದಿನ ಬ್ರಹ್ಮಚಾರಿ ಭಾನವೇ ಭಟ್ಟನಿಗೆ ನೀಡಲಾಗಿದೆ.

ಶಾಸನ ಪಾಠ : ... ಶ್ರೀವಲಭೀವಿನಿರ್ಗ್ಗತ ತಚ್ಚಾತುರ್ವಿದ್ಯಸಾಮಾನ್ಯ ವಾತ್ಸಾಯನ ಸಗೋತ್ರ ಮಾಧ್ಯಂದನಬ್ರಹ್ಮಚಾರಿ ಬ್ರಾಹ್ಮಣ ಭಾನವೇ ಭಟ್ಟ ಸೋಮಾದಿತ್ಯ ಪುತ್ರಾಯ....

ಶಾಸನ ದೊರೆತ ಸ್ಥಳ : ಬಾನುಮ್ರಾ ಗ್ರಾಮ, ಬರೋಡಾ ತಾಲೂಕು, ಗುಜರಾತ್

ಸ್ಥಳ : ಬ್ರಿಟಿಷ್ ಮ್ಯೂಸಿಯಂನಲ್ಲಿರುವ ತಾಮ್ರಪಟಗಳು. JBBRAS Vo. VIII, P-292.

೮. ಶಾಸನ ಕಾಲ : ಕ್ರಿ.ಶ. ೯೩೦ ತಾಮ್ರಪಟ ದೊರೆ : ನಾಲ್ಕನೆಯ ಗೋವಿಂದ ಭಾಷೆ/ಲಿಪಿ : ಸಂಸ್ಕೃತ/ನಾಗರಿ

ವಿಷಯ : ನಾಲ್ಕನೆ ಗೋವಿಂದನು ತನ್ನ ಪಟ್ಟಬಂಧ ಉತ್ಸವದ ಸಂದರ್ಭದಲ್ಲಿ ಮಾನ್ಯಖೇಟ ವಾಸಿಯಾದ ಶ್ರೀಮದ ವಲ್ಲಭನರೇಂದ್ರ ದೇವರ ಪಾದ ಪದ್ಮೋಪಜೀವಿಯಾದ ಮಾಠರ ಗೋತ್ರದ ವಾಜಸನೇಯ ಕಾಣ್ವಶಾಖೆಯ ಮಹಾದೇವಯ್ಯನ ಮಗ ನಾಗಮಾರ್ಯನಿಗೆ ಬಾಬ ದೇಸದ ಕೇವಂಜ ಗ್ರಾಮವನ್ನು ನೀಡಿರುವನು.

ಶಾಸನ ಪಾಠ : ... ಮಾನ್ಯಖೇಟೇ ವಾಸ್ತವ್ಯಾಯ ಶ್ರೀಮದ್ವಲ್ಲಭನರೇನ್ದ್ರ ದೇವಪಾದ ಪದ್ಮೋಪಜೀವನೇ ಮಾಠರಸಗೋತ್ರವಾಜಿ ಕಾಣ್ವದ ಬ್ರಹ್ಮಚಾರಿಗೆ ಮಹಾದೇವಯ್ಯನುತಾಯ ನಾಗಮಾರ್ಯಾಯ....

ಶಾಸನ ದೊರೆತ ಸ್ಥಳ : ಕ್ಯಾಂಬೆ, ಗುಜರಾತ್, ನೆಲ ಉಳುಮೆ ಮಾಡುತ್ತಿರುವಾಗ ಮರದ ಪೆಟ್ಟಿಗೆಯಲ್ಲಿ ಸಿಕ್ಕ ತಾಮ್ರಶಾಸನಗಳು. IA Vol. XII, No. 133, P. 247-255.

೯. ಶಾಸನ ಕಾಲ : ಕ್ರಿ.ಶ. ೯೩೩ ತಾಮ್ರಪಟ ದೊರೆ : ನಾಲ್ಕನೆಯ ಗೋವಿಂದ ಭಾಷೆ/ಲಿಪಿ : ಸಂಸ್ಕೃತಿ/ನಾಗರಿ

ವಿಷಯ : ಲೋಹ ಗ್ರಾಮವನ್ನು ಕೌಶಿಕ ಗೋತ್ರದ ವಾಜನನೇಯ ಕಣ್ವಶಾಖೆಯ ದಾಮೋದರ ಭಟ್ಟನ ಮಗನಾದ ಕೇಶವ ದೀಕ್ಷಿತನಿಗೆ ಕೊಡಲಾಗಿದೆ.

ಶಾಸನ ಪಾಠ : ...ಛಂದ್ರವರ್ಧನಗರ ವಿನಿರ್ಗತ ಕೌಶಿಕ ಸಗೋತ್ರ ವಾಜಿ ಕಾಣ್ವನ ಬ್ರಹ್ಮಚಾರಿ ದಾಮೋದರ ಭಟ್ಟ ಸುತಾಯ ಕೇಶವ ದೀಕ್ಷಿತಾಯ ರಾಮಪುರಿ ಸಪ್ತಶತಾಂತರ್ಗ್ಗತ ಲೋಹ ಗ್ರಾಮ.... IA Vol. V.P. 113-114.

೧೦. ಶಾಸನ ಕಾಲ : ಕ್ರಿ.ಶ. ೯೪ ಸ್ತಂಭ ಶಾಸನ ದೊರೆ : ಮೂರನೇ ಕೃಷ್ಣ ಭಾಷೆ/ಲಿಪಿ : ಸಂಸ್ಕೃತ/ನಾಗರಿ

ವಿಷಯ : ಮುದುವೊಳಲಿನಲ್ಲಿ (ಮುಧೋಳ) ವಾಸವಾಗಿದ್ದ ಕೌಡಿಣ್ಯ ಗೋತ್ರದ ವಾಜನನೇಯ ಕಣ್ವಶಾಖೆಯ ಗಜಾಂಕುಶ ನಾರಾಯಣ ಕವಿಯು, ನಂಧಿವಿಗ್ರಹಿಯು ಪಾವಿಟ್ಟಗೆಯಲ್ಲಿ (ನಾಲೋಟಗಿ) ವಾಜನನೇಯ ಕಣ್ವಶಾಖೆಯ ಗೋವಿಂದಭಟ್ಟನ ಮಗನಾದ ಬುದಶ್ಚತ್ರಾಯಧನಗೆ ಅವನು ಕಟ್ಟಿಸಿದ ತ್ರೈಪುರುಷ ಶಾಲೆಗೆ ಜಿಲ್ಲೆಯ ವಿದ್ಯಾರ್ಥಿಗಳಿಗೆ ಭೂಮಿದಾನವನ್ನು ಕೊಟ್ಟಿರುವನು.

ಶಾಸನ ಪಾಠ : ....ಮಾಹಿಷ ವಿಷಯೇ ಕುಚವಮುದುವೋಲಿತಿ ಪ್ರಸಿದ್ಧೇ

ಗ್ರಾಮ ವಾಸ್ತವ್ಯ ಕೌಂಡಿನ್ಯೋ ವಾಜನನೇಯಸ್ತು

ಕಾಣ್ವಶಾಖಾಧ್ಯಯನಃ ದಾಮಪಾರ್ಯ್ಯಸುತಃ....ಪ್ರಧಾನಃ

ಕೃಷ್ಣರಾಜನ್ಯ ಮಂತ್ರಿಂ ನನ್‌ನನ್ಧಿವಿಗ್ರಹಿಂ...

ಶಾಸನ ಇರುವ ಸ್ಥಳ : ನಾಲೋಟಗಿ, ಇಂಡಿ ತಾಲೂಕು, ಕರ್ನಾಟಕ ಪ್ರಸ್ತುತ ಗ್ರಾಮದ ಚಾವಡಿಯಲ್ಲಿರುವ ಸ್ತಂಭದ ಮೇಲಿದೆ. EI Vol. IV. No. 6A, P. 57.

ಇದೇ ರೀತಿಯಲ್ಲಿ ಇನ್ನೂ ಹಲವಾರು ಶಾಸನಗಳನ್ನು ಉದಹರಿಸಬಹುದು. ಕೇವಲ ರಾಷ್ಟ್ರಕೂಟ ಅರಸರ ಕಾಲದಲ್ಲಿ ಮಾತ್ರವಲ್ಲ ಮುಂದೆ ಬಂದ ಕಲ್ಯಾಣ ಚಾಲುಕ್ಯರ ಕಾಲದಲ್ಲಿಯೂ ಕಾಣ್ವಶಾಖೆಯ ಬ್ರಾಹ್ಮಣರಿಗೆ ದಾನಗಳು ಸಂದಾಯವಾಗಿದೆ. ಇಂತಹ ಶಾಸನಗಳು ದಾನದ ಉದ್ದೇಶವನ್ನೂ ಸ್ಪಷ್ಟವಾಗಿ ಹೇಳಿವೆ. ಅದೇನೆಂದರೆ '...ಯಮ ನಿಯಮ ಸ್ವಾಧ್ಯಾಯಾಧ್ಯಯನ ಉಪಾಸದ ದಾನ ದಕ್ಷಿಣಾರ್ಥಂ ರಾಜಸೂಯ ವಾಜಪೇಯಾಗ್ನಿಷ್ಟೋಮಾದಿ ಸಪ್ತರೋಮಸಂಸ್ಥಾತ್ರಮಾಪಕರಣಾರ್ಥ...' ಎಂದು ಹೇಳಿವೆ. ಇದರ ಮೇಲಿಂದ ಕಾಣ್ವಾಶಾಖೆ ಬ್ರಾಹ್ಮಣರ ಶ್ರೇಷ್ಠತೆ ಅವರ ಜವಾಬ್ದಾರಿಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಮೇಲೆ ಹೇಳಿದ ಸಾಲೋಟಗಿ ಶಾಸನದಿಂದ ಇವರು ಪಾಠಶಾಲೆ ಶಿಕ್ಷಣದ ಜವಾಬ್ದಾರಿಯನ್ನು ಹೊತ್ತಿದ್ದರು ಎಂದು ತಿಳಿದುಬರುತ್ತದೆ.

ಈ ರೀತಿ ಕಾಣ್ವಶಾಖೆಯ ಬ್ರಾಹ್ಮಣರನ್ನು ಉಲ್ಲೇಖಿಸುವ ಶಾಸನಗಳ ಕ್ರಮಬದ್ಧ ಅಧ್ಯಯನ ತುರ್ತಾಗಿ ಆಗಬೇಕಿದೆ.

೩೧

ಹುನಗುಂದ ತಾಲೂಕಿನ ಶಾಸನೋಕ್ತ ಅಗ್ರಹಾರಗಳು ಮತ್ತು ಬ್ರಹ್ಮಪುರಿ

ಗೀತಾಬಾಯಿ ಬಡಿಗೇರ*

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಶಾಸನೋಕ್ತ ಅಗ್ರಹಾರಗಳು ಮತ್ತು ಬ್ರಹ್ಮಪುರಿಗಳ ಬಗ್ಗೆ ಕುರಿತಾದ ಈ ಪ್ರಬಂಧವು ಪ್ರಸಕ್ತ ಪ್ರದೇಶದ ಪ್ರಾಚೀನ ಅಗ್ರಹಾರಗಳು ಹಾಗೂ ಬ್ರಹ್ಮಪುರಿಗಳ ವಿವರಣೆಯಾಗಿದೆ. ಮಹಾಜನಗಳು ಅಂದಿನ ಕಾಲದಲ್ಲಿ ಅಗ್ರಸ್ಥಾನದಲ್ಲಿದ್ದ ವರ್ಗ ಯಜನ-ಯಾಜನ ಅಧ್ಯಯನ-ಅಧ್ಯಾಪನ ದಾನ-ಪ್ರತಿಗ್ರಹಣ ಇವು ಅವರ ಮುಖ್ಯ ಕರ್ತವ್ಯಗಳಾಗಿದ್ದವು. ಯಾಗವನ್ನು ಮಾಡುವುದು, ಮಾಡಿಸುವುದು, ಓದುವುದು, ಓದಿಸುವುದು, ದಾನ ಮಾಡುವುದು ಮತ್ತು ಸ್ವೀಕರಿಸುವುದು ಅವುಗಳನ್ನು ಷಟ್ಕರ್ಮಗಳೆಂದು ಕರೆಯಲಾಗಿದೆ. ಬ್ರಾಹ್ಮಣರಿಗೆ, ಊರುಗಳನ್ನು ಅಗ್ರಹಾರಗಳನ್ನಾಗಿ ಮಾಡಿ ದಾನ ಕೊಡಲಾಗುತ್ತಿತ್ತು. ಇಲ್ಲಿನ ಐಹೊಳೆ, ಹುನಗುಂದ, ಕೂಡಲಸಂಗಮ, ಸೂಳಿಬಾವಿ ಹಾಗೂ ನಂದವಾಡಗಿ ಗ್ರಾಮಗಳು ಅಗ್ರಹಾರಗಳಾಗಿದ್ದವು. ಇವುಗಳಲ್ಲದೆ ಇತರ ಪಟ್ಟಣಗಳಲ್ಲಿ ಬ್ರಹ್ಮಪುರಿಗಳು ಇದ್ದವು. ಈ ಪ್ರದೇಶದಲ್ಲಿ ಅರಸೀಬೀದಿ, ಮುಖ್ಯವಾದ ಬ್ರಹ್ಮಪುರಿಯಾಗಿತ್ತು. ಇಲ್ಲಿ ವೇದಾಧ್ಯಯನಗಳಲ್ಲಿ ನಿರತರಾದ ಬ್ರಾಹ್ಮಣರು ವಾಸವಾಗಿದ್ದರು. ಹುನಗುಂದ ತಾಲೂಕಿನ ಪ್ರಾಚೀನ ಅಗ್ರಹಾರಗಳು ಹಾಗೂ ಬ್ರಹ್ಮಪುರಿಗಳನ್ನು ಕುರಿತು ಈ ಕೆಳಗಿನಂತೆ ನೋಡಬಹುದು.

ಐಹೊಳೆ: ಪ್ರಾಚೀನ ಕರ್ನಾಟಕದ ಐತಿಹಾಸಿಕ ಮಹತ್ವ ಹೊಂದಿದಂತಹ ತವರುಗ್ರಾಮವಾಗಿದೆ. ಕ್ರಿ.ಶ. ೧೦೬೭ರ ಶಾಸನ 'ಕಲ್ಯಾಣ ಚಾಲುಕ್ಯರ ತ್ರೈಲೋಕ್ಯಮಲ್ಲದೇವರ ಆಶ್ರಿತ ಕುಠೆಯಚಾರದ ಬಚ್ಚ ವೈಷ್ಣವ ಸೊದ್ದಪ್ಪನು ಅಗ್ರಹಾರ ಐಹೊಳೆಯಲ್ಲಿ ಸತ್ರ ತೆರೆದು ಬ್ರಾಹ್ಮಣ ಮಹಾಜನರಿಗೆ ದತ್ತಿ ನೀಡಿದ' ವಿವರವಿದೆ.

ಶ್ರೀಮದ್‌ಗ್ರಹಾರ ಅಯ್ಯಾವೊಳೆಯಲ್ ಸತ್ರದ ಬ್ರಾಹ್ಮಣ ಮಾಜನಕ್ಕೆ ಪೊಂಗೆ ವರ್ಷಕ್ಕೆರಡು ಪಣ ವೃದ್ಧಿಯಲಿ... ಸಮಸ್ತ ಖಯವಕೊಂಡು ಚಟ್ಟಿವಾನಿಯರಿರ್ವರು ಮೊದಲಾಗಿ ಕೇರಿಯ ನೂರ್ವರು ಸರ್ಮಚ್ಚ ನಡೆಯಿಸುವರಾ ಬಡ್ಡಿಯಲು' ಎಂದು ಉಲ್ಲೇಖವಿದೆ. ಇದು ಅಗ್ರಹಾರವಾಗಿಷ್ಟೆ ಇರದೆ ಸತ್ರವೂ ಕೂಡ ಆಗಿತ್ತು. ಕ್ರಿ.ಶ.೮ನೇ ಶತಮಾನದ ಐಹೊಳೆಯ ಲಾಡಖಾನ್ ಗುಡಿಯ ಹೊರಗೋಡೆಯ ಶಾಸನವು[೧] ಆರ್ಯಪುರದ ಜನರಿಂದ ಯೋಗ್ಯರೆಂದು ಆರಿಸಿದ ೫೦೦ ಮಹಾಜನಗಳಿಗೆ ಎಂದು ಉಲ್ಲೇಖಿಸಿದೆ. ಇನ್ನೊಂದು ಶಾಸನದಲ್ಲಿ[೨] ಇದೇ ಆರ್ಯಪುರದ ಮಹಾಜನರನ್ನು ಚತುರ್ವೇದಿಗಳೆಂದು ತಿಳಿಸಿದೆ. ಮತ್ತೊಂದು ಶಾಸನದಲ್ಲಿ[೩] ವಿಕ್ರಮಾದಿತ್ಯ ಸತ್ಯಾಶ್ರಯ ಮಹಾರಾಜನು ಆಳುತ್ತಿರುವಾಗ ಪೆಸದೊರನ ಮಗನಾದ ರೇವಡಿ, ಭಟ್ಟ ಕೊಮಲಸಿಂಗನ ದೇವಾಲಯದ ಆದಿತ್ಯಭಟರಿಗೆ ಕೆಲವು ಸುಂಕದಾನ ಮಾಡಿದ್ದನು. ಅದನ್ನು ರಾಜರ ಅಧಿಕಾರಿಗಳು ಮಹಾಜನರು ಮತ್ತು ನಗರದವರು ನಡೆಸಬೇಕೆಂದು ಹೇಳಿದೆ.

ಕ್ರಿ.ಶ. ೧೦೭೫ರ ಶಾಸನವು[೪] ಭುವನೈಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಕಲಿಕೆಯರಸನ ಮಗ ಮತ್ತು ಕಂಚಿಕವ್ವೆಯ ಪುತ್ರನಾದ ಮನೆಯ ಅಯ್ಯಾವೊಳೆಯ ನೂರು ಮಹಾಜನರಿಗೆ ದಾನ ನೀಡಿದ ಉಲ್ಲೇಖವಿದೆ. ಈ ಮಹಾಜನರು ದುರ್ಗಾಭಗವತಿ ದೇವಿಗೆ ಭೂದಾನ ಮಾಡಿದ್ದನ್ನು ಶಾಸನ ತಿಳಿಸುತ್ತದೆ. ಈ ತರಹದ ದಾನ ನೀಡುವುದಲ್ಲದೆ ಮಹಾಜನರು ಭೂಮಿಯನ್ನು ದಾನವಾಗಿ ಕೂಡ ಪಡೆಯುತ್ತಿದ್ದರು. ತಾವು ಪಡೆದ ಭೂಮಿಯನ್ನು ಸಾಗುವಳಿಗೆ ನೀಡುವಾಗ ಕೆಲವು ನಿಬಂಧನೆಗಳನ್ನು ಹಾಕಿ ಸಾಗುವಳಿಗೆ ನೀಡಿದ ಶಾಸನ[೫] ಉಲ್ಲೇಖಗಳು ಇವೆ.

ಹುನಗುಂದ : ಕ್ರಿ.ಶ. ೧೦೭೪ರ ಶಾಸನವು[೬] ೧೨೦ ಜನ ಮಹಾಜನ ಸಮ್ಮುಖದಲ್ಲಿ ಅರವತ್ತು ಮತ್ತರು ಭೂಮಿಯನ್ನು ಚಾಲುಕ್ಯ ಭುವನೈಕಮಲ್ಲದೇವನ ಮಹಾಮಂಡಳೇಶ್ವರನಾದ ಲಕ್ಷ್ಮರಸನು ಬೆಳ್ವೊಲ-೩೦೦, ಪುಲಿಗೆರೆ-೩೦೦ನ್ನು ಆಳುತ್ತಿರುವಾಗ ಶ್ರೀಕರಣದ ದೇವಾಣಯ್ಯನಾಯಕ, ಹೆಗ್ಗರೆನಾರೆಮಯ್ಯ, ರೇವಣಯ್ಯ, ವಸಾಯಿತ ಕಾಚಿಮಯ್ಯ ಇವರ ಅಪೇಕ್ಷೆಯಂತೆ ಪೊನ್ನಗುಂದದ ಅರಸರ ಬಸದಿಗೆ ದಾನ ನೀಡಿದ ಉಲ್ಲೇಖವಿದೆ.

*

ಕೂಡಲಸಂಗಮ : ಕ್ರಿ.ಶ. ೧೧೬೦ರ ಶಾಸನವು[೮] ಸರ್ವನಮಸ್ಯದ ಅಗ್ರಹಾರ ಕೂಡಲ ಕಪ್ಪಡಿ ಸಂಗಮದ ಮಹಾಜನರ ಕಾರುಣ್ಯದಿಂದ ಚುಂಚಿನಾದಿಶೆಟ್ಟಿ ಹಾಗೂ ಅರುವತ್ತೊಕ್ಕಲುಗಳು ಕಾಳೇಶ್ವರ ಮತ್ತು ಅಚೇಶ್ವರ ದೇವರಿಗೆ ತಲಾ ೧೨ ಮತ್ತರು ಮತ್ತು ಸಮಸ್ತ ತಲ್ಲಿಗರು ಸೇರಿ ಗಾಣ, ಹೂವಿನತೋಟ, ಅಂಗಡಿ ಬಿಟ್ಟು ಅದನ್ನು ವಿದ್ವಜ್ಯನರಾದ ಮಹಾಜನರು ರಕ್ಷಿಸಬೇಕೆಂದು ಹೇಳಲಾಗಿದೆ. ಕ್ರಿ.ಶ. ೧೨೧೩ರ ಶಾಸನದಲ್ಲಿ[೯] ಆಚೇಶ್ವರ ದೇವರಿಗಾಗಿ ಹೂದೋಟ, ಧೂಪಕ್ಕೆಂದು ದೇವರಾಸಿಜೀಯನಿಗೆ ಚುಂಚನಾದಿಶೆಟ್ಟಿ ಎಂಬುವವನು ದಾನ ನೀಡಿದ್ದಾನೆ. ದೇವರಿಗೆ ಸಾವಿರ ಮಹಾಜನರು ಎಲೆಯನ್ನು ಧರ್ಮವಾಗಿ ಬಿಟ್ಟಿದ್ದಾರೆ. ಹಾಗೆಯೇ ಇಲ್ಲಿನ ಮಹಾಜನರನ್ನು ಸಂಗಮೇಶ್ವರ ದೇವರ ವರಪ್ರಸಾದವೆಂದು ಕರೆಯಲಾಗಿದೆ.

ಸೂಳಿಬಾವಿ : ಕ್ರಿ.ಶ. ೧೧೮೭ರ ಶಾಸನವು[೧೦] ಶ್ರೀಮತು ವಿಕ್ರಮಾದಿತ್ಯ ದೇವರಸನು ಈ ಕೇಶವದೇವರು ಅಗ್ರಾಸನದ ಬ್ರಾಹ್ಮಣರ ಭೋಜನಕ್ಕೆ ಕೊಟ್ಟ ಧರ್ಮವನ್ನು ದಾಖಲಿಸಲಾಗಿದೆ. ಈ ಧರ್ಮದ ನಿರ್ವಹಣೆಗಾಗಿ ಭೂಮಿ ಮತ್ತು ಸುಂಕದಲ್ಲಿ ಪಂನಾಯ ಹೆಜ್ಜುಂಕ, ಬೀರವಣ ಇತ್ಯಾದಿಯನ್ನು ಬಿಟ್ಟುಕೊಟ್ಟಂತಿದೆ. ಸೂಳಿಬಾವಿ ಕ್ರಿ.ಶ. ೧೨ನೇ ಶತಮಾನಕ್ಕೂ ಪೂರ್ವದಲ್ಲಿ ಅಗ್ರಹಾರವಾಗಿತ್ತೆಂದು ತಿಳಿಯುತ್ತದೆ.

ನಂದವಾಡಗಿ: ಕ್ರಿ.ಶ. ೯೦೩ರ ರಾಷ್ಟ್ರಕೂಟರ ಶಾಸನವು[೧೧] ಅಕಾಳವರ್ಷನ ಕಾಲದಲ್ಲಿ ದೇವರ ಪ್ರತಿಷ್ಠೆ ಮಾಡಿ ಕಪಿಲರಿಷಿಗೆ ಸಮಾನರಾದ ಮೂವರನ್ನೊಳಗೊಂಡ ಮಹಾಜನರಿಗೆ ಅಬಾಲ ವೃದ್ಧರ ಸಾಕ್ಷಿಯಲ್ಲಿ ದಾನ ನೀಡಿದ ಉಲ್ಲೇಖವಿದೆ.

ಇದುವರೆಗೂ ಅಗ್ರಹಾರಗಳ ಬಗ್ಗೆ ಮಾಹಿತಿ ನೀಡುವ ಶಾಸನಾಧಾರಗಳ ಹಿನ್ನೆಲೆಯಲ್ಲಿ ಹುನಗುಂದ ತಾಲೂಕಿನ ಗ್ರಾಮಗಳನ್ನು ನೋಡಿದೆವು. ಈಗ ಬ್ರಹ್ಮಪುರಿಯ ಉಲ್ಲೇಖವಿರುವ ಅರಸೀಬೀದಿಯ ಶಾಸನಗಳನ್ನು ಗಮನಿಸೋಣ.

ಅರಿಸೀಬೀದಿ : ಕ್ರಿ.ಶ. ೧೦೫೩ರ ಶಾಸನವು[೧೨] ಚಾಲುಕ್ಯದೊರೆ ತ್ರೈಲೋಕ್ಯಮಲ್ಲ ಮೊದಲನೆಯ ಸೋಮೇಶ್ವರರು ರಾಜ್ಯಭಾರ ಮಾಡುತ್ತಿದ್ದಾಗ ಅರಿರಾಯರಿಂದ ವಂದಿಸಿಕೊಳ್ಳುವ ಗಂಗಾನದಿಯಲ್ಲಿ ಸ್ನಾನಮಾಡಿ ಪವಿತ್ರಳಾದ ದೀನರಿಗೆ ಚಿಂತಾಮಣಿ, ವಿವೇಕಚೂಡಾಮಣಿ, ಗುಣದ ಬೆಡಂಗಿ ಎಂದು ಮುಂತಾಗಿ ಹೊಗಳಿಸಿಕೊಂಡಿರುವ ಅಕ್ಕಾದೇವಿಯು ಕಿಸುಕಾಡು ೭೦ನ್ನು ಆಳುತ್ತಿದ್ದಳು. ಈ ರಾಜಧಾನಿ ವಿಕ್ರಮಪುರಿಯ ನಂದಿಯರನ್ನು ಷಡಂಗಿ ಭಟ್ಟೋಪಾಧ್ಯಾಯ ಹಾಗೂ ೪೨ ಜನ ಬ್ರಾಹ್ಮಣರಿಗೆ ಊರ ದಕ್ಷಿಣ ದಿಕ್ಕಿನಲ್ಲಿರುವ ತೋಟದ ಕೆಲವು ಭಾಗ ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ. ಈ ವಿಕ್ರಮಪುರವು ಬ್ರಹ್ಮಪುರಿಯಾಗಿತ್ತು ಎಂದು ಕ್ರಿ.ಶ. ೧೦೬೧ರ ಶಾಸನವು[೧೩] ತಿಳಿಸುತ್ತದೆ. ಬ್ರಹ್ಮಪುರಿಯ ವಿಷ್ಣುದೇವಾಲಯದ ಸತ್ರದ ೧೨ ಜನ ಬ್ರಾಹ್ಮಣರ ಭೋಜನದ ವೆಚ್ಚಕ್ಕಾಗಿ ಅಚ್ಚುಪನ್ನಾಯದ ಆದಾಯವನ್ನು ದಾನವಾಗಿ ಕೊಟ್ಟಿದ್ದಾನೆ. ಹಾಗೆಯೇ ಕ್ರಿ.ಶ.೧೦೮೭ರ ಶಾಸನದಲ್ಲಿ[೧೪] ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ತ್ರಿಭುವನಮಲ್ಲದೇವನ ಪಾದಾರಾಧಕ ಕಾರ್ಯಸಾಧಕ ಮುಂತಾದ ಬಿರುದುಗಳನ್ನು ಹೊಂದಿದ್ದ ಆವರಸನು ಕಿಸುಕಾಡು ೭೦ ಕರಿವಿಡಿ ೩೦ನ್ನು ಆಳುತ್ತಿದ್ದ ಇವನ ರಾಜಧಾನಿ ವಿಕ್ರಮಪುರದ ಬ್ರಹ್ಮಪುರಿಗೇರಿಯ ೪೨ ಜನ ಬ್ರಾಹ್ಮಣರಿಗೆ ಮನೆಯನ್ನು ಹಾಗೂ ಭೂಮಿಯನ್ನು ನೀಡಿದ ಉಲ್ಲೇಖವಿದೆ.

ಅರಸೀಬೀದಿಯ ಪ್ರಾಚೀನ ಹೆಸರು ವಿಕ್ರಮಪುರ. ಇಲ್ಲಿ ವಿಕ್ರಮಪುರ ಷಡಂಗಗಳಾದ ಕಲ್ಪ, ಶಿಕ್ಷೆ, ಛಂದಸ್ಸು, ನಿರುಕ್ತ, ವ್ಯಾಕರಣ, ಜ್ಯೋತಿಷ್ಯ ಕಲಿಸುವ ವಿದ್ಯಾಕೇಂದ್ರ ಹಾಗೂ ಕಾವ್ಯ ಶಾಸ್ತ್ರಗಳು ವೇದಾಧ್ಯಯನಕ್ಕೆ ಪೂರಕವಾದ ಕೌಶಲ್ಯವನ್ನು ಕಲಿಸುತ್ತಿದ್ದರೆಂದು ತಿಳಿಯುತ್ತದೆ.

ಒಟ್ಟಾರೆಯಾಗಿ ಅಗ್ರಹಾರಗಳ ಹಾಗೂ ಬ್ರಹ್ಮಪುರಿಗಳ ರಚನೆಯ ಉದ್ದೇಶಗಳು ಶಿಕ್ಷಣವನ್ನು ಪ್ರಸಾರ ಮಾಡುವುದಕ್ಕಿಂತ ಇತರ ಲೌಕಿಕ ಸಾಧನೆಗಳಿಗೆ ಹಾಗೂ ಪುಣ್ಯ ಸಂಪಾದನೆಗಾಗಿ ನೀಡಿದ ದಾನಗಳಾಗಿವೆ. ಈ ದಾನಗಳ ಹಿಂದೆ ಪುಣ್ಯ ಪ್ರಾಪ್ತಿ, ಅಥವಾ ತನ್ನ ಕರ್ಮವನ್ನು ಕಳೆದುಕೊಳ್ಳುವ ಹಪಾಹಪಿತನ ದಾನಿಯಲ್ಲಿರುತ್ತದೆ. ಶಿಕ್ಷಣದ ಪ್ರಸಾರದ ಪ್ರಕ್ರಿಯೆ ಕರ್ತವ್ಯಕ್ಕೆ ಬದಲಾಗಿ ದಾನ ಪಡೆದ ಬ್ರಾಹ್ಮಣನ ವಿವೇಚನೆಗೆ ಬಿಟ್ಟಿದಾಗಿದ್ದುದು ಸಾರ್ವತ್ರಿಕವಾಗಿ ಕಂಡುಬರುತ್ತದೆ. ಅಲ್ಲದೆ ಉನ್ನತ ಸ್ಥಾನಗಳನ್ನು ಕಾಪಾಡಿಕೊಳ್ಳುವಲ್ಲಿ ಬ್ರಾಹ್ಮಣರು ನಿರತರಾಗಿದ್ದಾರೆಂದು ಹೇಳಬಹುದು.

ಅಡಿ ಟಿಪ್ಪಣಿಗಳು

೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೯, ಬಾಗಲಕೋಟೆ ಜಿಲ್ಲೆ, ಹುನಗುಂದ.
೨. ಅದೇ, ಹುನಗುಂದ, ೧. ೩. ಅದೇ, ಹುನಗುಂದ, ೨. ೪. ಅದೇ, ಹುನಗುಂದ, ೧೧. ೫. ಅದೇ, ಹುನಗುಂದ, ೧೨.
೬ ಅದೇ, ಹುನಗುಂದ, ೩೪: ೭. ಅದೇ, ಹುನಗುಂದ, ೯೪. ೮. ಅದೇ, ಹುನಗುಂದ, ೯೭. ೯. ಅದೇ, ಹುನಗುಂದ, ೧೯೬.
೧೦. ಅದೇ, ಹುನಗುಂದ, ೧೦೦. ೧೧.ಅದೇ, ಹುನಗುಂದ, ೧೨೩. ೧೨. ಅದೇ, ಹುನಗುಂದ, ೧೦೩.
೧೩. ಅದೇ, ಹುನಗುಂದ, ೧೦೪. ೧೪.ಅದೇ, ಹುನಗುಂದ, ೧೦೮.

೩೨

ಕಲ್ಯಾಣ ಚಾಲುಕ್ಯರ ಒಂದನೆಯ ಸೋಮೇಶ್ವರನ ಧಾರ್ಮಿಕ ಶಾಸನಗಳು (ಕ್ರಿ.ಶ. ೧೦೪೩–೧೦೬೮)

ಡಾ. ಡಿ.ಎಂ. ನಾಗರಾಜು*

ಇಮ್ಮಡಿ ಜಯಸಿಂಹನ ಮಗನೂ, ಉತ್ತರಾಧಿಕಾರಿಯೂ ಸಹ ಒಂದನೆಯ ಸೋಮೇಶ್ವರನಿಗೆ 'ವೀರಮಾರ್ತಾಂಡ' ಎಂಬ ನಾಮಾಂಕಿತವಿದ್ದಿತು. ಅವನು 'ಆಹವಮಲ್ಲ', 'ತ್ರೈಲೋಕ್ಯಮಲ್ಲ' ಮತ್ತು 'ರಾಜನಾರಾಯಣ' ಎಂಬ ಬಿರುದುಗಳನ್ನು ಧರಿಸಿದನು.

ಕಲ್ಯಾಣವನ್ನಾಳಿದ ಚಾಲುಕ್ಯ ಅರಸರನೇಕರು ಮತ್ತು ಅವರ ಮಾಂಡಲೀಕರು ಶೈವಧರ್ಮವನ್ನು ಅವಲಂಬಿಸಿದ್ದರೂ ಜೈನಧರ್ಮದ ಪೋಷಕರಾಗಿದ್ದರು. ಚಾಲುಕ್ಯರ ಕಾಲದ ಅರಸರು ಶ್ರೀಮಂತರೂ ಆಗಿದ್ದು ದೇವಾಲಯಗಳಿಗೆ ದಾನ–ದತ್ತಿಗಳನ್ನು ನೀಡುವುದು ಪುಣ್ಯಕಾರ್ಯವೆಂದು ಭಾವಿಸಿದ್ದರು.

ಒಂದನೇ ಸೋಮೇಶ್ವರನಿಗೆ ನಾಲ್ವರು ಪುತ್ರರಿದ್ದರು. ಅವರೆಂದರೆ ಇಮ್ಮಡಿ ಸೋಮೇಶ್ವರ, ಆರನೆಯ ವಿಕ್ರಮಾದಿತ್ಯ–ವಿಷ್ಣುವರ್ಧನ, ವಿನಯಾದಿತ್ಯ ಹಾಗೂ ಜಯಸಿಂಹ. ಇವರೆಲ್ಲರೂ ತಮ್ಮ ತಂದೆಯ ಜೀವಿತ ಕಾಲದಲ್ಲಿ ಮಂಡಲಾಧಿಪತಿಗಳಾಗಿದ್ದರು. ಈತನಿಗೆ ಐವರು ರಾಣಿಯರಿದ್ದರು. ಚಂದ್ರಿಕಾದೇವಿ, ಪಿರಿಯರಸಿ ಮೈಳಲದೇವಿ, ಬಾಚಲದೇವಿ, ಕೇತಲದೇವಿ, ಲೀಳಾದೇವಿ ಎಂದು. ಆಹವಮಲ್ಲ ಒಂದನೇ ಸೋಮೇಶ್ವರನಿಗೆ ಸುಗ್ಗಲದೇವಿ ಎಂಬ ಮಗಳಿದ್ದಳೆಂದೂ, ಅವಳನ್ನೂ ಮಹಾಮಂಡಲೇಶ್ವರ ಸಿಂಗಣದೇವನಿಗೆ ಕೊಟ್ಟು ವಿವಾಹ ಮಾಡಲಾಯಿತೆಂದೂ ಅಕೆಯು ಕಿಸುಕಾಡು–೭೦ರಲ್ಲಿದ್ದ ನಿಡಗುಂದಿ ಅಗ್ರಹಾರದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಳೆಂದು ನಿಡಗುಂದಿ ಶಾಸನ ತಿಳಿಸುತ್ತದೆ.

ಕ್ರಿ.ಶ. ೧೦೪೪ರ ಸಿರಿವಾರ ಶಾಸನದಲ್ಲಿ ಪೊಟ್ಟಳಕೆಱೆಯ ಬೀಡಿನಲ್ಲಿ ರಾಜ್ಯವಾಳುತ್ತಿರುವಾಗ ಒಡೆಯಾದಿತ್ಯದೇವನು ಕಪ್ಪೆಕಲ್ಲ ಗ್ರಾಮವನ್ನೂ, ಜೇಷ್ಟರಾಶಿಭಳಾರರ್ಗ್ಗೆ ೮ ಮತ್ತರು ಭೂಮಿ ಮತ್ತು ಒಂದು ಗ್ರಾಮವನ್ನೂ, ಮಹದೇವದೇವರ ಸೇವೆಗೆ ಮತ್ತು ಮಠಕ್ಕೆ ೮ ಮತ್ತರು ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಸುತ್ತೂರು (ಹರಪ್ಪನಹಳ್ಳಿ ತಾಲ್ಲೂಕು) ಸತ್ತಿಯಾರ ಮತ್ತು ಕುಪ್ಪರಸ ಮುಖಂಡ ಸೋವಿಮಯ್ಯ ಮಾಸವಾಡಿ–೧೪೦ ಮಹದೇವರಿಗೋಸ್ಕರ ಕೆಲವು ಭೂಮಿಯನ್ನು ದಾನ ನೀಡಿದ ವಿವರವಿದೆ. ಏಳಮೇಲದ ಮಹಾಸಾಮಂತ (ಹೆಸರಿಲ್ಲ) ಪ್ರಭು ತಗರನಗರ ಆಳುತ್ತಿರುವಾಗ ಉತ್ತರೇಶ್ವರ ದೇವಾಲಯಕ್ಕೆ ಭೂಮಿ ದಾನಮಾಡಿದ ವಿವರವಿದೆ.

ಕ್ರಿ.ಶ. ೧೦೪೪–೪೫ರ ಆಡೂರು ಶಾಸನದಲ್ಲಿ ಕದಂಬವಂಶದ ಮಯೂರವರ್ಮ ಪಾನುಂಗಲ್–೫೦೦ ಭಾಗ ಆಳುತ್ತಿರುವಾಗ ಬರ್ಮಗಾವುಂಡ ಎಂಬುವವನು ಕಾಳೇಶ್ವರದೇವರಿಗೆ ಭೂಮಿ ದಾನ ನೀಡಿದ ವಿವರವಿದೆ.

ಕ್ರಿ.ಶ. ೧೦೪೫ರ ಮಾರಿಗೇರಿ ಶಾಸನದಲ್ಲಿ ಉದಯಾದಿತ್ಯದೇವ ಲೆಂಕ–೧೦೦೦ ಛತ್ರ ೨೪ ವ್ಯಕ್ತಿಗಳ ಉದ್ಧಾರಕ್ಕೋಸ್ಕರ ನೊಳಂಬೇಶ್ವರ ಮತ್ತು ಲೆಂಕೇಶ್ವರ ವಿಗ್ರಹಗಳನ್ನು ಸ್ಥಾಪಿಸಲು ಮತ್ತು ಪೂಜೆ ಮತ್ತು ವಿದ್ಯಾಭ್ಯಾಸಗೋಸ್ಕರ ದಾನ ನೀಡಿದೆ. ಇದೇ ಕಾಲದ ಕುಯಿಬಾಲ್ ಶಾಸನದಲ್ಲಿ ನಿಗದಿಪಡಿಸಿದ ಗಾವುಂಡರುಗಳ ಕಯ್ಯಬಾಳ ಬಸದಿಗೆ ದಾನ ನೀಡಿದ ದಾಖಲೆಯಿದೆ. ತಿಳಿಸಾವೆದಿ ಗುಣಭದ್ರ, ಸಿದ್ಧಾಂತದೇವ ಮತ್ತು ಈತನ ಶಿಷ್ಯೆ ಮಾನಿಮತಿಕಂತಿಯನ್ನು ಹೆಸರಿಸುತ್ತದೆ. ಮುಗಡ ಶಾಸನದಲ್ಲಿ ದೇವಸ್ಥಾನಕ್ಕೆ ಹೊಂದಿಕೊಂಡಿರುವ ಸಂಯುಕ್ತರತ್ನಾಕರ ಚೈತ್ಯಾಲಯ, ನಾಟಕಶಾಲೆ ಕಟ್ಟಲು, ಯಾತ್ರಿಕರ ಆಹಾರದಾನ ಮತ್ತು ಪುನರ್‌ಉದ್ಧಾರಗೋಸ್ಕರ ನಾರಗಾವುಂಡ, ಚಾವುಂಡ–ಗಾವುಂಡನು ಕೆಲವು ಭೂಮಿದಾನ ನೀಡಿದ ವಿವರವಿದೆ.

ಕ್ರಿ.ಶ. ೧೦೪೬ರ ಮೈಲಾರ ಶಾಸನದಲ್ಲಿ ಮಹಾಮಂಡಲೇಶ್ವರ ಗಂಡರಾದಿತ್ಯರಸ ಸಿಂದವಾಡಿ–೧೦೦೦ ಆಳುತ್ತಿರುವಾಗ ಅಗ್ರಹಾರ ನರಗುಂದ ಮತ್ತು ಬೆಣ್ಣಿಯಾರು, ಪೆರ್ಗ್ಗಡೆ ಕಾಳಿಮಯ್ಯನು ಚಿಲ್ಲುಕಾಚಾರ್ಯ್ಯರ ಶಿಷ್ಯ ಮಲ್ಲಿಮೂಡು ತೇಜೂರಾರಸಿಪಂಡಿತ ಕೆಲವು ಭೂಮಿ, ಎರಡುಮನೆಗಳನ್ನು ಸ್ವಯಂಭುದೇವರಸೇವೆಗೆ ಮತ್ತು ಮೂಲಸ್ಥಾನದ ಸೇವೆಗೋಸ್ಕರ

* ಮೈಸೂರು.

ದಾನ ನೀಡಿದ ದಾಖಲೆಯಿದೆ. ಮೊರಿಗೇರಿ ಶಾಸನದಲ್ಲಿ ದಂಡನಾಯಕ ತಿಕಣ್ಣ ಎಂಬುವವನು ರಾಜನಿಂದ ಅಪ್ಪಣೆ ಪಡೆದು ೧೦೦೦ ಮತ್ತರು ಭೂಮಿಯನ್ನು ಮಾಳಂಬೇಶ್ವರ ದೇವರಿಗೋಸ್ಕರ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೦೪೭ರ ಕಂಚಗಾರಬೆಳಗಲ್ಲು ಶಾಸನದಿಂದ ಗಂಡರಾದಿತ್ಯ ಸಿಂದವಾಡಿ–೧೦೦೦, ಬೆಣ್ಣೆವೂರು–೧೨ ಮತ್ತು ನರಗುಂದ ಆಳುತ್ತಿರುವಾಗ ೬ ಮತ್ತರು ಭೂಮಿಯನ್ನು ಕಂಚಗಾರಬೆಳಗಲಿ ವಿಷ್ಣುದೇವರಿಗೋಸ್ಕರ ದಾನ ನೀಡಿದ ವಿವರವಿದೆ. ಅರಸಿಬೀದಿ ಶಾಸನದಲ್ಲಿ ಅಕ್ಕಾದೇವಿ ಗೋಕಾಗೆಯಲ್ಲಿ ಬೀಡುಬಿಟ್ಟಿರುವಾಗ ವಿಕ್ರಪುರದ ಗೊಣಡಬೆಡಂಗಿ ಜಿನಾಲಯಕ್ಕೆ ಭೂಮಿದಾನ ಮಾಡಿದ ವಿವರವಿದೆ.

ಕ್ರಿ.ಶ. ೧೦೪೮ರ ಹೊಳಿನವೇರಿ ಶಾಸನದಲ್ಲಿ ದೇವಾಲಯದಲ್ಲಿ ಕೆಲವು ಹೆಂಗಸರ, ಸಂಗೀತಗಾರರ, ನೃತ್ಯ ಮಾಡುವ ಹುಡುಗಿಯರ ವಿದ್ಯಾಛತ್ರ ದೇವರ ಸೇವೆಗೋಸ್ಕರ ಉಚಿತ ವಿದ್ಯಾರ್ಥಿಗಳ ನಿಲಯದಲ್ಲಿ ಬ್ರಹ್ಮಪುರಿಮಾಚಯ್ಯ ದೇವಸ್ಥಾನದ ಪೂಜೆ, ನೈವೇದ್ಯಗೋಸ್ಕರ ದಾನನೀಡಿದ ದಾಖಲೆಯಿದೆ.

ಕ್ರಿ.ಶ. ೧೦೪೯ರ ಶಿರೂರು ಶಾಸನದಲ್ಲಿ ಪೊಂಗು–೩೦ರ ಪ್ರಾಂತ್ಯದ ಶ್ರೀಪುರದಲ್ಲಿ ಗೌರಬ್ಬೆಮಗ ಮಾರಸಿಂಘಪ್ರಭು ಸಿದ್ಧೇಶ್ವರ, ಹಾಟಕೇಶ್ವರ, ವಿಷ್ಣುದೇವ, ಚಂಡಿಕ ಹನುಮಾನ್, ಭೈರವ ಇತರ ದೇವರ ಸೇವೆಗೋಸ್ಕರ, ಆಹಾರದಾನಕ್ಕೆ ಜೀರ್ಣೋದ್ಧಾರಕ್ಕೆ ಮಠದಲ್ಲಿರುವ ವಿದ್ಯಾರ್ಥಿಗಳ ಸಂನ್ಯಾಸಿಗಳಿಗೆ ಭೂಮಿ ದಾನ ನೀಡಿದೆ. ಹೊಂಬಲ ಶಾಸನದಲ್ಲಿ ವಿಷ್ಣು ದೇವಾಲಯಕ್ಕೆ ಹೊಂದಿಕೊಂಡಿರುವ ಸತ್ರಶಾಲ, ಅತಿಥಿಗಳ ಆಹಾರದಾನಕ್ಕೆ ಬ್ರಹನ್‌ಜಕ್ಕಿಮಯ್ಯನು ಭೂಮಿ ದಾನ ನೀಡಿದ್ದಾನೆ. ಇದೇ ಕಾಲದ ಬಾಗೇವಾಡಿ ಶಾಸನದಲ್ಲಿ ರಾಜನ ಹಿರಿಯರಾಣಿ ಮೈಳಲದೇವಿ ಮತ್ತು ಬಲ್ಲವರಸ ಬೇರೆಯವರ ಮುಂದೆ ಸೋಮೇಶ್ವರ ದೇವಾಲಯದ ಜೀರ್ಣೋದ್ಧಾರಕ್ಕೋಸ್ಕರ ತರ್ದವಾಡಿ–೧೦೦೦ ಹೊನ್ನವಾಡಿ ಗ್ರಾಮದಲ್ಲಿ ಭೂಮಿ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೦೫೦ರ ಕೂರಲಹಳ್ಳಿ ಶಾಸನದಲ್ಲಿ ಅಕ್ಕಾದೇವಿ ಪನ್ನಾವಾಟಿಯ ಕೋಟೆಯಲ್ಲಿ ಕಿಸುಕಾಡು–ಎಪ್ಪತ್ತು, ತೊಜಿಗಲೆ. . . . ಮಾಸಿಯವಾಡಿ–೧೪೦ ಬೇರೆ ಜಿಲ್ಲೆಗಳಿಂದ ದೇವರ ಹೆಸರಿಲ್ಲ. ಈ ದಾನವನ್ನು ಮಹಾಸಾಮಂತ ಅಜ್ಜಾರಸನಿಂದ ದಾನನೀಡಿದ ವಿವರವಿದೆ. ಇದೇ ಕಾಲದ ಸಂನ್ಧಿಹಳ್ಳಿ ಶಾಸನದಲ್ಲಿ ಭೂತಬ್ಬರಸಿಯರ ಕೂಕರಸರ ಮತ್ತು ಗ್ರಾಮದ ಮಹಾಜನರು ಜೊತೆಗೆ ಅಡಿಕೆಮರಗಳು, ತುಂಡು ನೆಲಗಳು, ಹೂವಿನತೋಟ, ಎಣ್ಣೆಗಾಣವನ್ನು ತೇಜೋನಿಧಿಪಂಡಿತರ ಶಿಷ್ಯ ವಿದ್ಯಾನಿಧಿಪಂಡಿತರ ಪಾದ ತೊಳೆದು ಸಂಕರದೇವರ ಮೂಲಸ್ಥಾನ ಸೇವೆಗೋಸ್ಕರ ದಾನ ನೀಡಿದ ದಾಖಲೆಯಿದೆ. ಪುನಬಗಟ್ಟ ಶಾಸನದಲ್ಲಿ ನರಸಿಂಘದೇವನ ರಾಣಿ ನೊಳಂಬಮಹಾದೇವಿ ಹೊಸಗೆಜೆ ಮಹಾದೇವರ ಸೇವೆಗೋಸ್ಕರ ಭೂಮಿ ದಾನ ನೀಡಿದ ವಿವರವಿದೆ.

ಕ್ರಿ.ಶ. ೧೦೫೩ರ ಅಸುಂದಿ ಶಾಸನದಲ್ಲಿ ಸೋಮೇಶ್ವರ ದೇವರಿಗೋಸ್ಕರ ದೇವಸಿಂಗಿ ಪಂಡಿತನಿಗೆ ಮತ್ತು ಶಿಷ್ಯರಿಗೆ ಭೂಮಿ ದಾನ ನೀಡಿದೆ. ಹಾವನೂರು ಶಾಸನದಲ್ಲಿ ತ್ರೈಲೋಕ್ಯಮಲ್ಲದೇವನ ಹಿರಿಯರಾಣಿ ಮೈಳಲದೇವ ಬನವಾಸಿ–೧೨೦೦೦ ಆಳುತ್ತಿರುವಾಗ ಕೆಲವು ನಿಗದಿಪಡಿಸಿದ ತೆರಿಗೆಗಳ ಆದಾಯದಿಂದ ಮೂಲಸ್ಥಾನ ಕಲಿದೇವಸ್ವಾಮಿ ದೇವಾಲಯಕ್ಕೆ ದಾನ ನೀಡಿದ್ದನ್ನು ತಿಳಿಸುತ್ತದೆ. ಪುನಗಟ್ಟ ಶಾಸನದಲ್ಲಿ ನಾಗರಸಯ್ಯ ಜೊತೆಗೆ ಪೆರ್ಗ್ಗಡೆ ಮಾಕಿಮಯ್ಯ ಮತ್ತು ಈ ಸ್ಥಳದ ಬೇರೆಯವರು ಹುಳಿಬೆಯಘಟದ ಕದಂಬೇಶ್ವರ ದೇವರಸೇವೆಗೋಸ್ಕರ ಕೆಲವು ಭೂಮಿ ದಾನ ನೀಡಿದೆ. ಕಲಕೇರಿ ಶಾಸನದಲ್ಲಿ ಕುಪ್ಪಟೂರಟ್ಠಾಣೆಯ ಅನೇಕ ಅಧಿಕಾರಿಗಳು ಕಲಕೆರೆ ಸೋಮೇಶ್ವರ ಪೂಜೆ, ನೈವೇದ್ಯ ಮತ್ತು ದೀಪಾರಾಧನೆಗೋಸ್ಕರ ಸುಂಕದ ಆದಾಯದಿಂದ ದಾನ ನೀಡಿದೆ.

ಕ್ರಿ.ಶ. ೧೦೫೪ರ ಹೀರೆಮ್ಯಾಗಲಗೇರಿ ಶಾಸನದಲ್ಲಿ ಜಗದೇಕಮಲ್ಲ–ನೊಳಂಬ ಬ್ರಹ್ಮಾದಿರಾಜನು ಕಂಚಿಒಡೆಯ ಎಂಬ ಬಿರುದು ಪಡೆದವನು ಸ್ವಯಂಭುದೇವರ ಸೇವೆಗೋಸ್ಕರ ಚಂದ್ರಭೂಷಣಪಂಡಿತರ ಪಾದತೊಳೆದು ಭೂಮಿದಾನ ನೀಡಿದ್ದನ್ನು ತಿಳಿಸುತ್ತದೆ.

ಕ್ರಿ.ಶ. ೧೦೫೫ರ ಕಲಕೇರಿ ಶಾಸನದಲ್ಲಿ ಬಮ್ಮಗಾವುಂಡನು ಸೋಮೇಶ್ವರದೇವರ ಪೂಜೆ, ನೈವೇದ್ಯ ದೀಪದಕಂಭ ಇತರ ಭೂಮಿ ದಾನ ನೀಡಿ ಈ ದಾನವನ್ನು ಪಶುಪತಿದೇವನಿಗೆ ಒಪ್ಪಿಸಿದ್ದನ್ನು ತಿಳಿಸುತ್ತದೆ. ಕಮ್ಮರಚೇಡು ಶಾಸನದಲ್ಲಿ ರಾಜನು ಸಿಂದವಾಡಿ–೧೦೦೦ ಆಳುತ್ತಿರುವಾಗ ಗಾವುಂಡರುಗಳು, ನೊಳಂಬ ರಾಜನು ಭೋಗೇಶ್ವರ ಮತ್ತು ಮೂಲಸ್ಥಾನ ದೇವರ ಸೇವೆಗೋಸ್ಕರ ಕೆಲವು ಭೂಮಿ ದಾನ ನೀಡಿದೆ. ನೊಳಂಬ ಮುಖ್ಯಸ್ಥ ಕಂಪಲಿಯಲ್ಲಿ ತಂಗಿದ್ದ ವಿಷಯವಿದೆ. ನಂದಿಬೇವೂರು ಶಾಸನದಲ್ಲಿ ಜಗದೇಕ ನೊಳಂಬ ಬ್ರಹ್ಮಾದಿರಾಜಘಟ್ಟಿಯರಸ, ಊರೊಡೆಯ ಶಿವಮಯ್ಯ, ೧೨೦ ಮಹಾಜನರು ಒಟ್ಟಿಗೆ ಸೇರಿ ೫ ಜನ ಮಂತ್ರಿಗಳ ಒಪ್ಪಿಗೆ ಪಡೆದು ನರಸಿಂಗದೇವನು ಜೈನ ಉಪಹಾರರು ಅಷ್ಟೋಪ್ರವಾಸಿಭಳಾರ ಜೈನಬಸದಿ ಕಟ್ಟಿಸಲು ಭೂಮಿದಾನ ನೀಡಿದ್ದನ್ನು ತಿಳಿಸುತ್ತದೆ. ಬಳಗಾನೂರು ಶಾಸನದಲ್ಲಿ ಸ್ವಯಂಭುಶ್ರೀಕಾಂತೇಶ್ವರ ದೇವರಿಗೆ ತ್ರಿಭುವನಶಕ್ತಿ–ಜೀಯ, ಕೇತಿಮಯ್ಯ ರುದ್ರಶಕ್ತಿಜೀಯ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಸೂಡಿ ಶಾಸನದಲ್ಲಿ

ಅಕ್ಕದೇವಿ, ಕಿಸುಕಾಡ-೭೦, ತೊಜಿಗೇರಿ-೬೦ ಮತ್ತು ಮಾಸಿಯವಾಡಿ-೧೪೦ ಆಳುತ್ತಿರುವಾಗ ಅಕ್ಕೇಶ್ವರ ದೇವರಿಗೆ ಪೆರ್ಗ್ಗಡೆ ನಾಗದೇವಯ್ಯ ಮತ್ತು ಬೇರೆಯ ಅಧಿಕಾರಿಗಳು ವಿಕ್ರಮಪುರ ನೆಲೆವೀಡಿನಲ್ಲಿ ಸೇರಿ ಭೂಮಿ ದಾನ ನೀಡಿದ್ದಾನೆ. ಹಾಗೂ ತನ್ನ ಹೆಸರಿನ ಅರ್ಕೇಶ್ವರ ದೇವರನ್ನು ಕಟ್ಟಿಸಿದ ವಿವರವಿದೆ. ತಾಂಬರಗುಂಡಿಪೇಟ ದಾಸಿಮಯ್ಯ ಅಗ್ರಹಾರ ಕಿಸುಗುಂಡಿ ಆಳುತ್ತಿರುವಾಗ ಕಲಿದೇವಸ್ವಾಮಿ ಮತ್ತು ವಿಷ್ಣುದೇವ ದೀಪಾರಾಧನೆಗೆ ನೈವೇದ್ಯಗೋಸ್ಕರ ಇತರರು ಚಿನ್ನ ದಾನ ನೀಡಿ ಈ ದಾನವನ್ನು ಮಹಾಅಗ್ರಹಾರದ ಜನರಿಗೆ ಒಪ್ಪಿಸಿದ ವಿವರವಿದೆ.

ಕ್ರಿ.ಶ. ೧೦೫೭ ಹಡಗಳ್ಳಿ ಶಾಸನದಲ್ಲಿ ದೇಮರಸ ವಿಟಚಕ್ರವರ್ತಿನ್ ಮಹಾಮಾತ್ಯ ದೇವಸ್ಥಾನ ಕಟ್ಟಿಸಿ ದೇಮೇಶ್ವರನು ಭೂಮಿ ದಾನ ಮಾಡಿ ದೇವರಸೇವೆಗೋಸ್ಕರ ಪೊಸವಡನೆಗಿಲೆ ಮಹಾಜನರಿಗೆ ೫೦೦ ಬಳಂಜರು, ೧೨೦ ಮಹಾಜನರು ಒಂದು ಎಣ್ಣೆಗಾಣ, ಕೆಲವು ಆದಾಯಗಳು ದೇವರ ಸೇವೆಗೋಸ್ಕರ ದಾನ ನೀಡಿದ ದಾಖಲೆಯಿದೆ. ಕೋಟಿಪಲ್ಲೆ ಶಾಸನದಿಂದ ಮೈಳಲದೇವಿ ಮತ್ತು ಶ್ರೀಶೈಲಗೆ ಬಂದು ಮಲ್ಲಿಕಾರ್ಜುನದೇವರ ಮುಂದೆ ಸೂರೇಶ್ವರಪಂಡಿತರ ಪಾದತೊಳೆದು ಕನ್ನೆ-೩೦೦ರಲ್ಲಿ ದುದಿಯಾ ಗ್ರಾಮವನ್ನು ದಾನ ನೀಡಿ ಸ್ವಯಂಭು ಭೈರವದೇವರ ಸೇವೆಗೋಸ್ಕರ ದಾನ ನೀಡಿ ಪೂರ್ವಬಾಗಿಲ ಶ್ರೀಶೈಲ ಸೇವೆಗೋಸ್ಕರ ಅನ್ನದಾನ ಮಾಡಿ ಕೊಳ್ಳಾದಶ್ರೀಗ್ರಾಮದಲ್ಲಿ ಸಾರಂಗೇಶ್ವರ ದೇವರ ಸೇವೆ ಅನ್ನದಾನಕ್ಕೆ ಮತ್ತು ಕುರುಕುಂದೇಗ್ರಾಮದ ಇಂದೇಶ್ವರ ದೇವರ ಸೇವೆಗೋಸ್ಕರ ಅನ್ನದಾನ ನೀಡಿದ ವಿವರವಿದೆ. ಶಿವಪುರ ಗ್ರಾಮದ ಮಲ್ಲಿಕಾರ್ಜುನದೇವರ ಸ್ಥಾನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮೈಳಲದೇವಿ ಮತ್ತು ಬಲ್ಲವರಸ ರಾಜನ ಹೇಳಿಕೆ ಮೇರೆಗೆ ಶಿವಪುರ ಮತ್ತು ಬೇರೆ ಗ್ರಾಮದ ಭೈರವದೇವರ ನಿರ್ವಹಣೆಗೆ, ಸೇವೆಗೋಸ್ಕರ ದಾನ ನೀಡಿದ ದಾಖಲೆಯಿದೆ. ಚಡಚಣಗ್ರಾಮದ ಶಾಸನದಲ್ಲಿ ಮಹಾಮಂಡಳೇಶ್ವರ ಬಿಜ್ಜರಸ ಕಾಲಂಜರಪುರದ ಯಜಮಾನ ದೇವಾಲಯಕ್ಕೆ ಭೂಮಿ ನೀಡಿದ ವಿವರ ಹಾಗೂ ಧರ್ಮಶಿವಭಟಾರ ದೇವರಿಗೆ ಭೂಮಿ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೦೫೮ರ ರಂಗಾಪುರಂ ಶಾಸನದಲ್ಲಿ ಮಾಗೊಳ ಮಹಾಜನರು ನರಸಿಂಹದೇವರ ಸೇವೆಗೋಸ್ಕರ ೨೩ ಮತ್ತರು ಭೂಮಿ ದಾನ ನೀಡಿ ಮತ್ತು ಗಣಪತಿದೇವರ ಸೇವೆಗೋಸ್ಕರ ಭೂಮಿ ದಾನ ನೀಡಿದ ದಾಖಲೆಯಿದೆ. ಕುಯಿಬಾಳ ಶಾಸನದಲ್ಲಿ ಮಹಾಸಾಮಂತ ಇಂದ್ರಕೇಶಿಯರಸ ಪುಲಿಗೆಱೆ-೩೦೦ ಭಾಗ ಆಳುತ್ತಿರುವಾಗ ಜೋಗೇಶ್ವರ ದೇವರಿಗೆ ಭೂಮಿದಾನ ಈ ದಾನವನ್ನು ಲೋಕಾಭರಣ ಪಂಡಿತನಿಗೆ ವಹಿಸಿದ ವಿವರ. ಎರಡನೇ ಭಾಗ ಇದೇ ದೇವರಿಗೆ ಕುಯಿಲ್ಲಬಾಳದ ಕೆಲವು ಗಾವುಂಡರುಗಳ ಹೆಸರಿಲ್ಲ, ದಾನ ನೀಡಿ ಲೋಕಾಭರಣ ಪಂಡಿತನು ಸ್ವೀಕರಿಸಿದ್ದನ್ನು ತಿಳಿಸುತ್ತದೆ.

ಕ್ರಿ.ಶ. ೧೦೫೯ರ ಹೀರೆಮಗಲಗೇರಿ ಶಾಸನದಲ್ಲಿ ಮೇಗಣಗೇಱೆಯ ಸ್ವಯಂಭು ಕಲಿದೇವದೇವರ ಸೇವೆಗೋಸ್ಕರ ಮಹಾಮಂಡಳೇಶ್ವರ ಸಿಂಗಣದೇವ ಉಚ್ಚಂಗಿ-೩೦ರಲ್ಲಿ ಆಳುತ್ತಿರುವಾಗ ಸ್ವಯಂಭು ತ್ರಿಕೂಟೇಶ್ವರ ದೇವಾಲಯದ ಆಚಾರ್ಯ ಆರ್ಯದೇವನ ಶಿಷ್ಯನಾದ ಮುರುಜಾವಿಪಂಡಿತನ ಪಾದತೊಳೆದು ಕೆಲವು ಭೂಮಿದಾನ ನೀಡಿದ ದಾಖಲೆಯಿದೆ. ಡಂಬಳ ಶಾಸನದಲ್ಲಿ ಬಾಚಯ್ಯಸೆಟ್ಟಿಯ ಅಳಿಯ ಬೀರಯ್ಯಸೆಟ್ಟಿ ಮಹಾನಗರದ ೧೬ ಸೆಟ್ಟಿಯರು ಧರ್ಮವೂಟಿಲ್ ನಗರ ಜಿನಾಲಯಕ್ಕೆ ಚಿನ್ನ ದಾನ ಮಾಡಿದ್ದನ್ನು ತಿಳಿಸುತ್ತದೆ. ಕರಮಡಿ ಶಾಸನದಲ್ಲಿ ಗಂಗಜೀಯ ಬಬ್ಬಲೇಶ್ವರ ಮನೆಯ ದೇವರ ದೇವಾಲಯದ ನಿರ್ವಹಣೆ, ಅನ್ನದಾನ, ಪೂಜೆ, ನೈವೇದ್ಯ ಹಣವನ್ನು ೨೦೦ ಮಹಾಜನಗಳ ಕೈಯಲ್ಲಿ ಕೊಟ್ಟ ದಾಖಲೆಯಿದೆ.

ಕ್ರಿ.ಶ. ೧೦೬೦ ಹೀರೆಮಗಲಗೇರಿ ಶಾಸನದಲ್ಲಿ ದಂಡನಾಯಕ ಕೇಸಿಮಯ್ಯ ಕದಂಬಳಿಕೆ-೧೦೦೦ ಮೇಗಣಗೇಱೆ ರಾಜ್ಯವಾಳುತ್ತಿರುವಾಗ ಸ್ವಯಂಭು ಕಲಿದೇವದೇವರ ಸೇವೆಗೋಸ್ಕರ ಭೂಮಿ ದಾನ ನೀಡಿದ ವಿವರವಿದೆ.

ಕ್ರಿ.ಶ. ೧೦೬೨ರ ಮುಳಗುಂದ ಶಾಸನದಲ್ಲಿ ಗಂಗರಾಸಿಪಂಡಿತರ ಶಿಷ್ಯ ದ್ರುವರಾಸಿ ಪಂಡಿತರಿಗೆ ನಾಗೇಶ್ವರ ದೇವಾಲಯಕ್ಕೆ ಹೊಂದಿಕೊಂಡಿರುವ ಮಠದ ಸಂನ್ಯಾಸಿಗಳಿಗೆ, ಶಿಷ್ಯರಿಗೆ, ಸೆಟ್ಟಿಗಳು, ಗಾಮುಂಡರುಗಳು, ೧೨೦ ಮಹಾಜನಗಳು, ಬೇರೆ ಸಾರ್ವಜನಿಕರು ಮಹಾಸಾಮಂತ ಸಿಂದರ-ಭೀಮರಸನ ಮುಂದೆ ದಾನ ನೀಡಿದ ದಾಖಲೆಯಿದೆ. ಬ್ಯಾಕೂಡ್ ಶಾಸನದಲ್ಲಿ ತ್ರೈಲೋಕ್ಯಮಲ್ಲನ ಉಪಸಭಾಪತಿ ಲೋಪದೇವರಸ ಆಳುತ್ತಿರುವಾಗ ಮೂಲಸ್ಥಾನ ಮತ್ತು ಸೋಮೇಶ್ವರ ದೇವರುಗಳಿಗೆ ಭೂಮಿ ದಾನ ನೀಡಿದ ವಿವರವಿದೆ. ಹಾಗೂ ಕೆರೆ ಅಭಿವೃದ್ಧಿಗೋಸ್ಕರ ಸಾವಳವಾಡಿಗೆ ಮತ್ತು ಪಿಪ್ಪರನ ವಲಯಗಳ ಭೂಮಿ ದಾನ ಮಾಡಿದ ವಲಯಗಳು, ಬಂಕಪುರ ಶಾಸನದಲ್ಲಿ ಇಂದ್ರೇಶ್ವರ ದೇವಾಲಯದ ಪಾದಮೂಲ ಪರಿವಾರದವರಿಗೆ ಪಡೆವಳ ಬೀರಯ್ಯ, ಪೆರ್ಗ್ಗಡೆ ಆಲಿಮಯ್ಯ, ಪೆರ್ಗ್ಗಡೆ ಶ್ರೀಧರಯ್ಯ ಮತ್ತು ಬೇರೆಯವರು ಕದಂಬ ಕುಟುಂಬದ ತೊಯಿಲದೇವನಿಂದ ಅಪ್ಪಣೆ ಪಡೆದು ದಾನ ನೀಡಿದ್ದಾನೆ. ಹೊನ್ನವಾಡ ಶಾಸನದಿಂದ ಸಿದ್ದೇಶ್ವರದೇವರ ಪೂಜೆ ಮತ್ತು ನೈವೇದ್ಯಗೋಸ್ಕರ ಒಂದು ಭೂಮಿ, ಒಂದು ಎಣ್ಣೆಗಾಣ, ಒಂದು ತೋಟವನ್ನು ರಾಜನ ರಾಣಿ ಕೇತಲದೇವಿ ಕಲ್ಯಾಣದಲ್ಲಿರುವಾಗ ದಾನ ನೀಡಿದ್ದಾಳೆ. ಕ್ರಿ.ಶ. ೧೦೬೨-೬೩ರ ಶಿರೂರು ಶಾಸನ ಸವೆದಿದೆ. ಸಿದ್ದೇಶ್ವರದೇವರ ಖಣ್ಡಸ್ಪುಟಿತ ಜೀರ್ಣೋದ್ಧಾರಗೋಸ್ಕರ ವಡಕಮಹಾಗ್ರಾಮದ ಮಹಾಜನರ ಕೈಯಲ್ಲಿ ೨೩೦೦ ಗದ್ಯಾಣಗಳನ್ನು ಕೊಟ್ಟ ವಿವರವಿದೆ. ಕ್ರಿ.ಶ. ೧೦೬೩ ನಂದವಾಡಿಗೆ ಶಾಸನದಲ್ಲಿ ರಾಣಿಮೈಳಲದೇವಿ ಹೆಸರಿಸಿದೆ. ಮಹಾಮಂಡಳೇಶ್ವರ (ಹೆಸರು ಇಲ್ಲ) ಮುಖ್ಯಸ್ಥ ಬಾವನಗಂಧವಾರಣ

ಅನೇಕ ದೇವಸ್ಥಾನಗಳು, ಮಠಗಳು, ಕೆರೆಗಳನ್ನು ಇತರ, ರಾಜಧಾನಿ ಕಲ್ಯಾಣದಲ್ಲಿ ಚಾಳುಕ್ಯ ಚಕ್ರವರ್ತಿ ರಾಜಧಾನಿ ಅಣ್ಣಿಗೆಱೆ, ಮುಳಗುಂದ [ಕೊಳವು]ಗೆ, ನಂದಪುರ ಕೋಹಳ್ಳಿ, ಮಂಡಲಗೆಱೆ, ಬೆಳಗಲಿ, ರಾಜಧಾನಿ ಬನವಾಸಿಪುರ, ಕರಿವಿಡಿ, ನವಿಲೆ, ನಂದವಾಡಿಗೆ ಮತ್ತು ಪೆರೂರ ತ್ರಿಭುವನತಿಲಕ ಜಿನಾಲಯ ಮಹಾಶ್ರೀಮಂತಬಸದಿ ಇತರೆ ಪೊನ್ನುಗುಂಡ, ವೀರಜಿನಾಲಯ ಪುಱುಗೂರು ಮತ್ತು ಜಿನಾಲಯ ಕುಂದರಗೆ, ಸಂಗೀತಗಾರರಿಗೆ ಇತರರಿಗೆ ಪ್ರದಾನ ಭೂಮಿ ದಾನ ಮಾಡಿದ ದಾಖಲೆಯಿದೆ.

ಕ್ರಿ.ಶ. ೧೦೬೫ರಲ್ಲಿ ಮಂತ್ರಿಯಾಗಿದ್ದ ದಂಡನಾಯಕ ರೂಪಭಟ್ಟಯ್ಯನು ಬಳ್ಳಿಗಾವೆಯಲ್ಲಿ ಜಯಂತಿ ಬೌದ್ಧವಿಹಾರವನ್ನೂ ಸ್ಥಾಪಿಸಿ, ಅದರ ಪೋಷಣೆಗೂ ತಾರಾಭಗವತಿಯ ಆರಾಧನೆಗೂ ಯೋಗಿನಿಗಳು, ಕುಶಲಿಗಳು ಮತ್ತು ಸಂನ್ಯಾಸಿಗಳಿಗೆ ಆಹಾರ ವಿತರಣೆಗೂ ಉಂಬಳಿಗಳನ್ನು ಕೊಟ್ಟನೆಂದು ಶಿಕಾರಿಪುರ ಶಾಸನದಲ್ಲಿ ತಿಳಿಸಲಾಗಿದೆ. ಇದರಿಂದ ಬೌದ್ಧಮತವು ಇನ್ನು ಉಳಿದಿತ್ತೆಂದು ಹೇಳಬಹುದು.

ಕ್ರಿ.ಶ. ೧೦೬೪ರ ಉಚ್ಚಂಗಿದುರ್ಗಿ ಶಾಸನದಲ್ಲಿ ದಂಡನಾಯಕರಮುಕರಾಜ ಬಿಜ್ಜಳದೇವಗಳಗೇಶ್ವರ ದೇವರ ಸೇವೆಗೋಸ್ಕರ ಕಳೇಶ್ವರಪಂಡಿತನ ಪಾದ ತೊಳೆದು ದಾನ ನೀಡಿದ್ದಾನೆ. ಮತ್ತೊಂದು ದಾಖಲೆ ದಂಡನಾಯಕ ನಾಗದೇವಯ್ಯ ಇಱಿಕಪಯ್ಯ, ಮಾರಮಯ್ಯ ಸಂದಿವಿಗ್ರಹಿ ಕಾಳಿದಾಸ–ಭಟ್ಟನು ರಾಜನನ್ನು ಕೇಳಿ ಕಳಿದೇವರ ಸೇವೆಗೋಸ್ಕರ ರಾವಿಭಟ್ಟ ದಾನ ನೀಡಿದ್ದಾನೆ. ಅಸುಂಡಿ ಶಾಸನದಲ್ಲಿ ರಾಜನ ಸಾಮಂತ (ಹೆಸರು ಇಲ್ಲ) ದೇವಸ್ಥಾನದ ಪೂಜೆ, ದೀಪಾಲಂಕಾರಗೋಸ್ಕರ ಶಾಂತರಾಸಿಪಂಡಿತನಿಗೆ ದಾನ ನೀಡಿದೆ. ವಿವರ ಈ ಶಾಸನದ ಕೊನೆಯಲ್ಲಿ ಉದ್ದದ ಪ್ರಶಸ್ತಿಯಿದೆ ಕೆಲವು. ತ್ರಿಕುಟೇಶ್ವರ ದೇವರ ಭಕ್ತನಾಕರಸ ಎಂಬುದು ಇದೆ. ಗದಗ ಶಾಸನದಲ್ಲಿ ಲೊಕ್ಕಿಗುಂಡಿಯ ಸೋಮೇಶ್ವರ ದೇವರಿಗೆ ಮಹಾಮಂಡಳೇಶ್ವರ ಮಾರರಸನು ಭೂಮಿದಾನ ಮಾಡಿ ತತ್‌ಪುರುಷಜೀಯ ದೇವಸ್ಥಾನದ ಆಚಾರ್ಯ್ಯನಗೆ ವಹಿಸಿದ ದಾಖಲೆಯಿದೆ. ದೇವೂರಶಾಸನದಲ್ಲಿ ಮಹಾಸಾಮಂತ [ವಾ]ರರಸ ಮಹಾಮಂಡಳೇಶ್ವರ ತ್ರೈಲೋಕ್ಯಮಲ್ಲ–ನೊಳಂಬ ಮಲ್ಲವಪೆರ್ಮಾನಡಿ–ಜಯಸಿಂಹ ದೇವನಿಂದ ಭೂಮಿ ದಾನಹೊಂದಿ ದೇವಪುರದ ಮಾರಸಿಂಗದೇವರಿಗೆ, ಪೂಜೆ ಮತ್ತು ಸನ್ಯಾಸಿಗಳ, ವಿದ್ಯಾರ್ಥಿಗಳಿಗೋಸ್ಕರ ೬೦ ಮತ್ತರು ಭೂಮಿ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೦೬೫ರ ಗುಡಿಹಳ್ಳಿ ಶಾಸನದಲ್ಲಿ ನೊಳಂಬೇಶ್ವರ ದೇವರ ಸೇವೆಗೋಸ್ಕರ ಕೂಗಳಿ–೫೦೦ ಉಪವಿಭಾಗದಲ್ಲಿ ಮುತ್ತಗಿ–೩೦ರಲ್ಲಿರುವ ಕಡಕೊಳಗ್ರಾಮವನ್ನು ದಾನವಾಗಿ ನೀಡಿದ ವಿವರವಿದೆ. ಹಾಗೂ ವಿದ್ಯಾಭ್ಯಾಸ, ಭಕ್ತಿಯುಳ್ಳ ಒಂದು ಭಾಗ ಅನ್ನದಾನ. ಈ ದಾನವನ್ನು (ಶೈವ ಗುಂಪು) ಲಾಕುಳ ದಿವ್ಯಶಕ್ತಿಪಂಡಿತದೇವನ ಪಾದ ತೊಳೆದು ದಾನ ನೀಡಿದ ವಿವರವಿದೆ.

ಕ್ರಿ.ಶ. ೧೦೬೬ರ ಹರಕನಲ್ ಶಾಸನದಲ್ಲಿ ಅರಹಟಟ ಸ್ವಯಂಭು ಕಲಿದೇವಸ್ವಾಮಿಯ ದೇವಗ್ರ್ಗೆ ಖಣ್ಡಸ್ಪುಟಿತ, ಜೀರ್ಣೋದ್ಧಾರಕ್ಕೆ, ನೈವೇದ್ಯಕ್ಕೆ ಕೂಗಳಿ–೫೦೦ ಉಪವಿಭಾಗ, ಮುಳತಗೆ–೩೦ರಲ್ಲಿ ನಿಲ್ಲಜಿಗೆ ಗ್ರಾಮವನ್ನು ಪೆರ್ಗ್ಗಡೆ ದೇವಪಯ್ಯ ಮತ್ತು ಬೇರೆ ಕರಣದವರು ದಾನ ನೀಡಿದ ವಿವರವಿದೆ. ಮಾಟಬೆನ್ನೂರು ಶಾಸನದಲ್ಲಿ ಮಹಾಮಂಡಳೇಶ್ವರ ಲಕ್ಷ್ಮರಸ ಬನವಾಸೆ–೧೨೦೦೦ ಬೆಣವೂರ ಪಾಳೆಯಗೇರಿ ಆಳುತ್ತಿರುವಾಗ ಇವನ ಉಪಸಭಾಪತಿ ಆಮಚನ ಜೈನವಿಗ್ರಹ ಶಾಂತಿನಾಥಜಿನ ಸ್ಥಾಪಿಸಿ, ಈ ದಾನವನ್ನು ಚಂದ್ರಕಾವಾಟವಂಸ ಶಾಂತಿನಂದಿ ಭಟ್ಟಾರಕನಿಗೆ ಒಪ್ಪಿಸಿದ ದಾಖಲೆಯಿದೆ. ಮಾರಸನಹಳ್ಳಿ ಶಾಸನದಲ್ಲಿ ತ್ರೈಲೋಕ್ಯಮಲ್ಲ–ನೊಳಂಬ–ಪಲ್ಲವ–ಪೆರ್ಮಾಡಿ ಜಯಸಿಂಹದೇವ ತರ್ದವಾಡಿ–೧೦೦೦ ಆಳುತ್ತಿರುವಾಗ ಎಳಮೇಲದ ಉತ್ತರೇಶ್ವರದೇವಾಲಯಕ್ಕೆ ಹೊಂದಿಕೊಂಡಿರುವ ಮಠದ ವಿದ್ಯಾರ್ಥಿಗಳಿಗೆ ಮತ್ತು ಸಂನ್ಯಾಸಿಗಳ ಆಹಾರ ದಾನಗೋಸ್ಕರ ಮಾರಸಿಂಘನಪಳ್ಳಿ ಗ್ರಾಮವನ್ನು ದಾನವಾಗಿ ಕೊಟ್ಟು, ಈ ದಾನವನ್ನು ಪಾಶುಪತ ಶಾಲೆಯ ಸೋಮೇಶ್ವರ ಪಂಡಿತನಿಗೆ ವಹಿಸಿದೆ.

ಒಂದನೇ ಸೋಮೇಶ್ವರನ ಕಾಲದಲ್ಲಿ ಬೌದ್ಧ, ಶೈವ, ಜೈನ, ವೈಷ್ಣವ ಧರ್ಮಗಳ ಶಾಸನಗಳನ್ನೊಳಗೊಂಡ ದಾಖಲೆಯಿದೆ.

ಕೊನೆಯದಾಗಿ ಚಾಲುಕ್ಯರ ಕಾಲದ ಧಾರ್ಮಿಕ ವೈಶಿಷ್ಟ್ಯ ವೆಂದರೆ ಅನ್ಯಧರ್ಮ ಸಹಿಷ್ಣುತೆ ಹಾಗೂ ಒಬ್ಬನೇ ವ್ಯಕ್ತಿಯಲ್ಲಿ ವಿವಿಧ ಧರ್ಮಗಳ ಬಗ್ಗೆ ಶ್ರದ್ಧಾಭಕ್ತಿಯುಳ್ಳವರಾಗಿದ್ದರು. ಕಲ್ಯಾಣ ಚಾಲುಕ್ಯ ಕಾಲದಲ್ಲಿ ಕಾಳಾಮುಖ ಪಾಶುಪಥ ಪಂಥವೂ ಶೈವಧರ್ಮವೂ ಬೆಳೆಯಿತು.

ಗ್ರಂಥಋಣ

೧. ಎಸ್.ಎಸ್.ಐ. ಸಂ. ೯, ಭಾಗ ೧ ಮತ್ತು ೧೧, ೧೫, ೧೮, ೨೦.

೨. ಎ.ಕ. ಸಂ. VII.

೩೩

ತಲಕಾಡಿನ ಗಂಗರ ಕಾಲದ ಸಾರಿಗೆ ಸಂಪರ್ಕಗಳು ಒಂದು ವಿಶ್ಲೇಷಣೆ

ಡಾ. ಹನುಮ ನಾಯಕ*

ತಲಕಾಡಿನ ಗಂಗರು ಕ್ರಿ.ಶ. ೩೨೫ರಿಂದ ೧೦೦೪ ರವರೆಗೆ ಕರ್ನಾಟಕದ ದಕ್ಷಿಣ ಭಾಗವನ್ನು ಯಶಸ್ವಿಯಾಗಿ ಆಳಿ ಕರ್ನಾಟಕದ ಸಂಸ್ಕೃತಿಗೆ ಅಪಾರ ಕಾಣಿಕೆ ನೀಡಿದ್ದಾರೆ. ಕರ್ನಾಟಕದಲ್ಲಿ ಇವರಷ್ಟು ದೀರ್ಘ ಕಾಲ ಆಳ್ವಿಕೆ ನಡೆಸಿದ ಮತ್ತೊಂದು ರಾಜವಂಶವಿಲ್ಲ. ಬಹಳ ಬಲಿಷ್ಟವಾದ ರಾಜವಂಶಗಳು ಕೇವಲ ೨೦೦-೨೫೦ ವರ್ಷಗಳಲ್ಲಿಯೇ ಕಣ್ಮರೆಯಾದವು. ಆದರೆ ಗಂಗರು ಮಾತ್ರ ತಮ್ಮ ಚಾಣಾಕ್ಷ ರಾಜಕೀಯ ಗುಣಗಳಿಂದ ಅತಿ ಹೆಚ್ಚು ಕಾಲ ಆಳ್ವಿಕೆ ನಡೆಸಿದರು. ಇದಕ್ಕೆ ಕಾರಣಗಳನ್ನು ಸಹ ಗುರುತಿಸಬಹುದು. ಅವುಗಳೆಂದರೆ; ೧) ಅವರು ಕೃಷಿಗೆ ಕೊಟ್ಟ ಪ್ರಾಧಾನ್ಯತೆ, ೨) ಆಡಳಿತದ ದಕ್ಷತೆ, ೩) ವ್ಯಾಪಾರ ಮತ್ತು ವಾಣಿಜ್ಯಕ್ಕೆ ಹಾಗೂ ಸಾರಿಗೆ ಸಂಪರ್ಕ ವ್ಯವಸ್ಥೆಗೆ ಒತ್ತು ನೀಡಿದ್ದು ಮುಂತಾದವು.

ಸಾರಿಗೆ ಸಂಪರ್ಕಗಳು ಹಿಂದಿನ ಕಾಲದಿಂದ ಇಂದಿನವರೆಗೂ ಒಂದು ಪ್ರದೇಶದ ಸರ್ವತೋಮುಖ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದನ್ನು ಗಮನಸಬಹುದು. ಇವು ನಮ್ಮ ದೇಹದ ನರನಾಡಿಗಳಿದ್ದಂತೆ. ಒಬ್ಬ ವ್ಯಕ್ತಿಯ ಆರೋಗ್ಯಪೂರ್ಣ ಬೆಳವಣಿಗೆಯಲ್ಲಿ ರಕ್ತನಾಳಗಳು ಹೇಗೆ ಕಾರ್ಯ ನಿರ್ವಹಿಸುತ್ತವೆಯೋ ಅದೇ ರೀತಿ ಒಂದು ನಾಡಿನ ಬೆಳವಣಿಗೆಯಲ್ಲಿ ಸಾರಿಗೆ ಸಂಪರ್ಕ ಸೌಲಭ್ಯಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಈ ಸೌಲಭ್ಯಗಳು ಕೇವಲ ಸರಕು ಸಾಮಾಗ್ರಿಗಳನ್ನು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಾಗಿಸಲು ಸಹಾಯಕವಾಗಿದ್ದಲ್ಲದೇ, ಸಮಾಚಾರಗಳನ್ನು ಒಯ್ಯಲು ಹಾಗೂ ಸೈನ್ಯವನ್ನು ತನ್ನ ಗಡಿಗಳನ್ನು ಕಾಯುವುದಕ್ಕೂ ಹಾಗೂ ಸೈನಿಕ ಕಾರ್ಯಾಚರಣೆಯನ್ನು ನಡೆಸಲು ಬಳಸಲಾಗುತಿತ್ತು. ಸಾರಿಗೆ ವ್ಯವಸ್ಥೆಯು ಪ್ರಾಚೀನ ಕಾಲದಿಂದ ಇದ್ದುದನ್ನು ಗಮನಸಬಹುದು. ಮನುಷ್ಯ ಅಲೆಮಾರಿ ಜೀವನವನ್ನು ಬಿಟ್ಟು ಒಂದೆಡೆ ನೆಲೆ ನಂತಾಗಿನಂದ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಒಂದೆಡೆಯಿಂದ ಇನ್ನೊಂದೆಡೆಗೆ ಚಲಿಸಿ ಕೆಲವು ಸಂಪರ್ಕ ಕೇಂದ್ರಗಳನ್ನು ಕಂಡುಕೊಂಡಿದ್ದನ್ನು ಬೃಹತ್ ಶಿಲಾಯುಗದಿಂದಲೂ ಗಮನಸಬಹುದು. ಇದಕ್ಕೆ ಸಾಕ್ಷಿಯಾಗಿ ಇಂದಿನ ಕೆಲವು ಹೆದ್ದಾರಿಗಳು ಬೃಹತ್ ಶಿಲಾಯುಗದ ನೆಲೆಗಳ ಮುಖಾಂತರ ಹಾದುಹೋಗಿರುವುದನ್ನು ಕಾಣಬಹುದು. ವ್ಯಾಪಾರವು ಪ್ರಮುಖವಾಗಿ ಭೂಮಾರ್ಗ ಮತ್ತು ಜಲಮಾರ್ಗಗಳಲ್ಲಿ ನಡೆದಿದ್ದನ್ನು ಅತೀ ಪ್ರಾಚೀನ ಕಾಲದಿಂದಲೂ ಕಾಣಬಹುದು. ಆದರೆ ಈ ಮಾರ್ಗಗಳನ್ನು ಅಂದಿನ ಆಡಳಿತಗಳು ನಿರ್ಮಾಣ ಮಾಡಿದ್ದನ್ನು ಮತ್ತು ನಿರ್ವಹಿಸುತಿದ್ದುದನ್ನು ಅಂದಿನ ದಾಖಲೆಗಳು ಅದರಲ್ಲೂ ಪ್ರಮುಖವಾಗಿ ಶಾಸನಗಳು ನೇರವಾಗಿ ಉಲ್ಲೇಖಿಸದೇ ಪರೋಕ್ಷವಾಗಿ ಬೆಳಕು ಚೆಲ್ಲುತ್ತವೆ. ಈ ಲೇಖನವನ್ನು ಹೆಚ್ಚಾಗಿ ಗಂಗರ ಕಾಲದ ಶಾಸನಗಳನ್ನು ಆಧರಿಸಿ ರಚಿಸಲಾಗಿದೆ.

ಬರವಣಿಗೆಗಳ ಸಮೀಕ್ಷೆ: ಸಾರಿಗೆ ಸಂಪರ್ಕಗಳ ಕುರಿತು ಸ್ಥಳೀಯ ಆಕರಗಳ ಜೊತೆಗೆ ವಿದೇಶಿ ಯಾತ್ರಿಕರು ಮತ್ತು ವ್ಯಾಪಾರಿಗಳ ಬರಹಗಳು ಸಹ ಮಾಹಿತಿ ನೀಡುತ್ತವೆ. ಉದಾ: ಚೀನಾದ ಯಾತ್ರಿಕ ಫಾಹಿಯನ ಪ್ರಕಾರ ದಕ್ಷಿಣ ಭಾರತದ ವ್ಯಾಪಾರ ಮಾರ್ಗವು ಬಹಳ ಕಷ್ಟದಾಯಕವಾಗಿತ್ತು. ಕ್ರಿ.ಶ. ೭ನೆಯ ಶತಮಾನದಲ್ಲಿ ಭಾರತಕ್ಕೆ ಭೇಟಿಕೊಟ್ಟ ಮತ್ತೋರ್ವ ಚೀನಾ ಯಾತ್ರಿಕ ಹೂಯೆನ್‌ತ್ಸಾಂಗ್ ಪ್ರಕಾರ ದಾರಿಕಳ್ಳರು ಮತ್ತು ದಟ್ಟ ಅರಣ್ಯಗಳು ಯಾತ್ರಾರ್ಥಿಗಳ ಚಲನವಲನಗಳಿಗೆ ಮತ್ತು ವ್ಯಾಪಾರ ಬೆಳವಣಿಗೆಗೆ ಅಡ್ಡಿಯುಂಟು ಮಾಡುತಿದ್ದವು.[೧] ಬಿ.ಎಲ್. ರೈಸ್‌ರವರು ಮೌರ್ಯ ವಂಶದ ಸ್ಥಾಪಕ ಚಂದ್ರಗುಪ್ತ ಮೌರ್ಯ ಮತ್ತು ಆತನ ಗುರು ಭದ್ರಬಾಹು ಶ್ರವಣಬೆಳಗೊಳಕ್ಕೆ ಕ್ರಿ.ಪೂ. ೪ನೆಯ ಶತಮಾನದಲ್ಲಿ ಭೇಟಿ ನೀಡಿದಾಗ ಬಹುಶಃ ಚೆನ್ನಾಗಿ ನಿರ್ಮಿತವಾದ ವ್ಯಾಪಾರ ಮಾರ್ಗದಲ್ಲಿ ಬಂದಿರಬಹುದು ಎಂದು ಊಹಿಸಿದ್ದಾರೆ.[೨] ಅಲ್ಟೇಕರ್ ಮತ್ತು ದಿವಾಕರ್‌ರವರು ಸಾರಿಗೆ ಸಂಪರ್ಕ ವ್ಯವಸ್ಥೆಯು ಎತ್ತಿನ ಗಾಡಿ, ಪ್ರಾಣಿಗಳು ಮತ್ತು ಕೋಣಗಳಿಂದ ಕೂಡಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ.[೩] ಮುಖ್ಯ ರಸ್ತೆಗಳನ್ನು ಹೆದ್ದಾರಿ (ಹೆಬ್ಬಟ್ಟೆ), ಬಂಡಿದಾರಿ, ಓಣಿಗಳೆಂದು ಕರೆಯಲಾಗಿದ್ದು,

* ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಯಲ, ಮಂಗಳಗಂಗೋತ್ರಿ, ದಕ್ಷಿಣ ಕನ್ನಡ-೫೭೪೧೯೯.

ಅವುಗಳನ್ನು ಸ್ಥಳೀಯ ಆಡಳಿತವು ನೋಡಿಕೊಳ್ಳುತಿತ್ತು.[೪] ಓಂಪ್ರಕಾಶ್ ಪ್ರಸಾದ್ ಪ್ರಕಾರ ಆರಂಭಿಕ ಮಧ್ಯಕಾಲೀನ ಯುಗದಲ್ಲಿ ಸಾರಿಗೆ ಸಂಪರ್ಕಗಳ ಅಭಿವೃದ್ಧಿಗೆ ಧಾರ್ಮಿಕ ಮತ್ತು ಆಡಳಿತದ ಅಗತ್ಯತೆಯು ಪ್ರೇರೇಪಣೆಯ ಅಂಶಗಳಾಗಿವೆ. ಆದರೆ ೧೦ ಮತ್ತು ೧೨ನೆಯ ಶತಮಾನಗಳ ನಡುವೆ ಸಾರಿಗೆ ಮತ್ತು ಸಂಪರ್ಕದ ಬೆಳವಣಿಗೆಯಲ್ಲಿ ವ್ಯಾಪಾರದ ಅವಶ್ಯಕತೆಗಳು ಅತ್ಯಂತ ಶಕ್ತಿದಾಯಕವಾದ ಪ್ರೇರೇಪಣೆಯ ಅಂಶಗಳಾಗಿ ಕಂಡುಬಂದಿವೆ. ಬಂದರು ಪಟ್ಟಣಗಳ ಸಮೃದ್ಧಿಯು ತನ್ನ ಆಂತರಿಕ ಹಾಗೂ ಬಾಹ್ಯ ವ್ಯಾಪಾರದ ಮೇಲೆ ಅವಲಂಬಿತವಾಗಿದ್ದು, ಮುಂದುವರಿದಂತೆ ಇದು ಒಳನಾಡಿನ ಸಂಪರ್ಕ ಜಾಲಗಳ ಬೆಳವಣಿಗೆಯ ಮೇಲೆ ಪ್ರಭಾವ ಬೀರಿದೆ. ಪ್ರಾರಂಭಿಕ ಮಧ್ಯಕಾಲೀನ ಕಾಲದ ಯುದ್ಧಗಳು ಹಳೆಯ ರಸ್ತೆಗಳ ಕಾಪಾಡುವಿಕೆ ಹಾಗೂ ಹೊಸ ರಸ್ತೆಗಳ ರಚನೆಗೆ ಆಳುವ ವರ್ಗದವರಿಂದ ಪ್ರೋತ್ಸಾಹ ನೀಡುವಂತೆ ಮಾಡುತ್ತಿದ್ದವು.[೫] ಸಾಲೆತ್ತೂರು ಪ್ರಕಾರ ತುಳುನಾಡಿನ (ದ.ಕ) ರಸ್ತೆಗಳು ವಿಶ್ರಾಂತಿ ಗೃಹಗಳಿಂದ ಕೂಡಿದ್ದು, ಅವುಗಳ ನಿರ್ವಹಣೆಗಾಗಿ ದಯಾವಂತರನ್ನು ನೇಮಿಸಲಾಗಿತ್ತು. ಈ ಬಗೆಯ ವಿಶ್ರಾಂತಿ ಗೃಹಗಳನ್ನು ಕಟ್ಟೆಗಳೆಂದು ಕರೆಯಲಾಗುತ್ತಿತ್ತು. ಅಲ್ಲಿ ಎರಡು ಪ್ರಕಾರದ ಕಟ್ಟೆ ಅಥವಾ ವಿಶ್ರಾಂತಿ ಗೃಹಗಳಿದ್ದವು. ಅವುಗಳೆಂದರೆ, ಸಾಮಾನ್ಯ ಕಟ್ಟೆಗಳು ಮತ್ತು ಧರ್ಮಕಟ್ಟೆಗಳು. ಧರ್ಮಕಟ್ಟೆಗಳಲ್ಲಿ ಮೂರು ಪ್ರಕಾರದ ಕುಡಿಯುವ ನೀರಿನ ಲೋಟಗಳಿದ್ದವು. ಒಂದನ್ನು ಪ್ರಭುವರ್ಗದವರು ಮತ್ತು ರಾಜಕುಮಾರರಿಗೆ ಕುಡಿಯುವ ನೀರಿಗಾಗಿ ಬಳಸುತ್ತಿದ್ದರೆ, ಇನ್ನೊಂದು ಸಣ್ಣ ಲೋಟವನ್ನು ಬ್ರಾಹ್ಮಣರಿಗೆ ಮತ್ತು ಮೂರನೆಯ ಲೋಹದ ಲೋಟವನ್ನು ಎಲ್ಲಾ ಬಗೆಯ ಜಾತಿಯವರಿಗೆ ಕುಡಿಯುವ ನೀರಿಗಾಗಿ ಬಳಸಲಾಗುತ್ತಿತ್ತು.[೬] ಮೋತಿಚಂದ್ರರವರು ಕ್ರಿ.ಶ. ೧೧ನೆಯ ಶತಮಾನದಲ್ಲಿ ಉತ್ತರ ಭಾರತದಲ್ಲಿದ್ದ ವಿಶ್ರಾಂತಿಗೃಹಗಳನ್ನು ಜಾಜಮ, ಅಮಪುರಿ, ಕಡ ಮತ್ತು ಬ್ರಹ್ಮಶಿಲೆಗಳೆಂಬುದಾಗಿ ಕರೆಯಲಾಗುತಿತ್ತೆಂದು ತಿಳಿಸಿದ್ದಾರೆ.[೭] ಅವರ ಪ್ರಕಾರ ಭಾರತದಲ್ಲಿ ಐದು ಪ್ರಮುಖ ಮಾರ್ಗಗಳಿದ್ದು ಅವು ಉತ್ತರವನ್ನು ದಕ್ಷಿಣದೊಂದಿಗೆ ಹಾಗೂ ಪೂರ್ವದೊಂದಿಗೆ ಪಶ್ಚಿಮವನ್ನು ಕೂಡಿಸುತಿದ್ದವು. ಆ ಐದು ಮಾರ್ಗಗಳಲ್ಲಿ ಮೂರನೇ ಮಾರ್ಗವು ಮಹಾರಾಷ್ಟ್ರ/ಗೋವಾದ ದಕ್ಷಿಣ ಭಾಗದಿಂದ ಪ್ರಾರಂಭವಾಗಿ, ಕೃಷ್ಣಾ–ತುಂಗಾಭದ್ರಾ ದೋಅಬ್ ನದಿ ಮೂಲಕ, ಹಂಪಿ ಅಥವಾ ಹರಿಹರದಲ್ಲಿ ತುಂಗಭದ್ರಾ ನದಿಯನ್ನು ಹಾದು ಹೋಗಿ ಮೈಸೂರನ್ನು ಕಾವೇರಿ ನದಿ ಮೂಲಕ ಪ್ರವೇಶಿಸಿ ಮುಂದಕ್ಕೆ ಸಾಗುತ್ತದೆ. ಈ ಮಾರ್ಗಗಳನ್ನು ಯುದ್ಧ, ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಪರ್ಕಗಳಿಗಾಗಿ ಬಳಸಲಾಗುತ್ತಿತ್ತು.[೮] ಅಪ್ಪಾದೊರೈಯವರು ದಕ್ಷಿಣ ಭಾರತದಲ್ಲಿ, ಕರ್ನಾಟಕ ಸೇರಿದಂತೆ ರಸ್ತೆ ಸಂಪರ್ಕಗಳಿದ್ದು, ಅವುಗಳನ್ನು ಅಂದಿನ ರಾಜರು ನಿರ್ಮಿಸುತಿದ್ದರು. ರಾಜಪಥಗಳು ಅಸ್ತಿತ್ವದಲ್ಲಿದ್ದುದನ್ನು ಹಾಗೂ ಅವುಗಳ ಉದ್ದ ಹಾಗೂ ಅಗಲ ಇತ್ಯಾದಿ ವಿವರಗಳನ್ನು ನೀಡಿರುವುದಲ್ಲದೇ ರಸ್ತೆಗಳಲ್ಲಿ ವಿಶ್ರಾಂತಿ ಗೃಹಗಳಿದ್ದುದನ್ನು ತಿಳಿಸಿದ್ದಾರೆ. ಅವರ ಪ್ರಕಾರ ದೂರದ ವ್ಯಾಪಾರಕ್ಕಾಗಿ ಸಾಕು ಪ್ರಾಣಿಗಳನ್ನು ಹಾಗೂ ಎತ್ತಿನ ಗಾಡಿಗಳನ್ನು ಹೆಚ್ಚಾಗಿ ಬಳಸಲಾಗುತಿತ್ತು.[೯] ಎಸ್. ಗುರುರಾಜಾಚಾರ್ ತಮ್ಮ ಕೃತಿಯಲ್ಲಿ ಕರ್ನಾಟಕದ ವರ್ತಕರು ಸಮುದ್ರಮಾರ್ಗದ ಮುಖಾಂತರ ಬೆಲೆ ಬಾಳುವ ವಸ್ತುಗಳನ್ನು ವ್ಯಾಪಾರ ಮಾಡುತಿದ್ದುದನ್ನು ಹಾಗೂ ವಿವಿಧ ಭಾಗಗಳಲ್ಲಿ ವಿವಿಧ ರೀತಿಯ ರಸ್ತೆಗಳಿದ್ದುದನ್ನು ಅದರಲ್ಲೂ ಪ್ರಮುಖವಾಗಿ ಬಂಡಿದಾರಿ ಮತ್ತು ಹೆದ್ದಾರಿಗಳಿದ್ದು ಅವು ಅಂದಿನ ರಾಜಧಾನಿಗಳೊಡನೆ ಸಂಪರ್ಕ ಹೊಂದಿದ್ದನ್ನು ತಿಳಿಸಿದ್ದಾರೆ. ಇದಲ್ಲದೇ ಸಮುದ್ರದ ಮುಖಾಂತರ ವ್ಯಾಪಾರ ವ್ಯವಹಾರಗಳಿದ್ದುದನ್ನು ಸಹ ಚರ್ಚಿಸಿದ್ದಾರೆ.[೧೦] ಜಿ.ಆರ್. ಕುಪ್ಪುಸ್ವಾಮಿಯವರು ಸ್ಥಳೀಯ ಮಟ್ಟದಲ್ಲಿ ಸರಕನ್ನು ಸಾಗಿಸಲು ವಿವಿಧ ರೀತಿಯ ಪ್ರಾಣಿಗಳನ್ನು ಹಾಗೂ ಬಂಡಿಗಳನ್ನು ಬಳಸಲಾಗುತ್ತಿತ್ತು ಹಾಗೂ ಕರ್ನಾಟಕದ ಪಶ್ಚಿಮ ತೀರದ ಕೆಲವು ಪ್ರಮುಖ ಬಂದರುಗಳ ಮುಖಾಂತರ ಬೆಲೆಬಾಳುವ ವಸ್ತುಗಳನ್ನು ರಫ್ತು ಮಾಡಲಾಗುತಿತ್ತು ಎಂದು ತಿಳಿಸಿದ್ದಾರೆ.[೧೧] ಕಾಮೇಶ್ವರ ಪ್ರಸಾದರವರು ಪ್ರಾಚೀನ ಭಾರತದಲ್ಲಿ ಪ್ರಮುಖವಾಗಿ ಎರಡು ವ್ಯಾಪಾರ ಮಾರ್ಗಗಳು, ಉತ್ತರಾಪಥ ಮತ್ತು ದಕ್ಷಿಣಾಪಥ ಅಸ್ತಿತ್ವದಲ್ಲಿದ್ದು ಅವು ಭಾರತದ ಎಲ್ಲಾ ಭಾಗಗಳೊಂದಿಗೆ ಹಾಗೂ ತೀರಪ್ರದೇಶದೊಂದಿಗೆ ಸಂಪರ್ಕ ಹೊಂದಿದ್ದವೆಂದು ಅಭಿಪ್ರಾಯಪಟ್ಟಿದ್ದಾರೆ.[೧೨]

ಈ ಮೇಲಿನ ಬರವಣಿಗೆಗಳು ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ ಸಾರಿಗೆ ಸಂಪರ್ಕಗಳನ್ನು ಕುರಿತು ಸ್ಪಷ್ಟವಾದ ಚಿತ್ರಣ ನೀಡುವುದಿಲ್ಲ. ಆದುದರಿಂದ ಈ ಲೇಖನದಲ್ಲಿ ದಕ್ಷಿಣ ಕರ್ನಾಟಕವನ್ನು ಹೆಚ್ಚು ಕಾಲ ಆಳಿದ ಗಂಗರ ಶಾಸನಗಳನ್ನು ಆಧರಿಸಿ ಅಂದಿನ ಸಾರಿಗೆ–ಸಂಪರ್ಕದ ಬಗ್ಗೆ ಹೆಚ್ಚು ಬೆಳಕು ನೀಡಲು ಪ್ರಯತ್ನಿಸಲಾಗುವುದು. ಸಾರಿಗೆ ಸಂಪರ್ಕಗಳ ಬಗ್ಗೆ ಶಾಸನಗಳು ಪರೋಕ್ಷವಾಗಿ ಮಾಹಿತಿ ನೀಡುತ್ತವೆ. ಅವುಗಳೆಂದರೆ ಕ್ರಿ.ಶ. ೫ನೆಯ ಶತಮಾನದ ತುಮಕೂರು ಜಿಲ್ಲೆ ಮತ್ತು ಅದೇ ತಾಲ್ಲೂಕಿನ ಮೇಳೆಕೋಟೆ ಶಾಸನವು ಅಂದಿನ ಪ್ರಮುಖ ಹೆದ್ದಾರಿಯನ್ನು ಹೆಬ್ಬಟ್ಟೆ ಎಂದು ಉಲ್ಲೇಖಿಸಿದೆ.[೧೩] ಮಂಡ್ಯ ಜಿಲ್ಲೆಯ ಕ್ರಿ.ಶ. ೮ನೆಯ ಶತಮಾನದ ಹಲ್ಲೆಗೆರೆಯ ಶಿವಮಾರನ ತಾಮ್ರಪಟಗಳು ಕೃಷ್ಣಾನದಿಯ ದಡದಲ್ಲಿ ಹೆದ್ದಾರಿಯು ಹಾದು ಹೋಗಿದ್ದನ್ನು ತಿಳಿಸುತ್ತದೆ.[೧೪] ಗಂಗ ದೊರೆ ನೀತಿಮಾರ್ಗನ ಕಾಲದ ಶಾಸನವು ಸಾರ್ವಜನಿಕ ರಸ್ತೆಗಳನ್ನು

ಉಲ್ಲೇಖಿಸುತ್ತವೆ. ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೋಕಿನ ಕ್ರಿ.ಶ.೭೨೭–೨೮ರ ನಂದಿ ಗ್ರಾಮದ ತಾಮ್ರಪಟಗಳು ದೊಡ್ಡ ಪ್ರಮಾಣದ ಬಂಡಿದಾರಿಯನ್ನು ಉಲ್ಲೇಖಿಸುತ್ತವೆ.[೧೫] ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಕೆರೆಗೋಡಿ ರಂಗಾಪುರದ ಕ್ರಿ.ಶ. ೯ನೆಯ ಶತಮಾನದ ತಾಮ್ರಪಟಗಳು ಪ್ರಮುಖ ಹೆದ್ದಾರಿಯನ್ನು ರಾಜಪಥವೆಂದು ಉಲ್ಲೇಖಿಸಿದೆ.[೧೬] ಕ್ರಿ.ಶ. ೯೬೨ರ ಕೂಡಲೂರು ಶಾಸನವು ಮೈಸೂರಿಗೆ ಹೋಗುವ ದಾರಿಯನ್ನು ಉಲ್ಲೇಖಿಸಿದೆ.[೧೭] ಈ ಎಲ್ಲಾ ರಸ್ತೆಗಳು ಪ್ರಮುಖ ಪ್ರಾಂತ್ಯಗಳು ಮತ್ತು ವ್ಯಾಪಾರ ಕೇಂದ್ರಗಳನ್ನು ಸಂಪರ್ಕಿಸುತ್ತಿದ್ದವು. ಕೆಲವು ಪ್ರಮುಖ ರಸ್ತೆಗಳು ಪಶ್ಚಿಮಘಟ್ಟದ ಮುಖಾಂತರ ಹಾದು ತೀರಪ್ರದೇಶಗಳೊಂದಿಗೆ ಸಂಪರ್ಕವನ್ನು ಏರ್ಪಡಿಸಿದ್ದವು.

ಈ ಮೇಲೆ ಉಲ್ಲೇಖಿಸಿದ ಶಾಸನಗಳು ಭೂಮಿಯನ್ನು ದಾನ ಮಾಡಿದ ಸಂದರ್ಭದಲ್ಲಿ ಅದರ ಎಲ್ಲೆಗಳನ್ನು ತಿಳಿಸುವಾಗ ಪರೋಕ್ಷವಾಗಿ ರಸ್ತೆಗಳನ್ನು ಉಲ್ಲೇಖಿಸಿವೆ. ಇಂತಹ ಪರೋಕ್ಷ ಉಲ್ಲೇಖಗಳನ್ನು ಬಿಟ್ಟರೆ ದಾಖಲೆಗಳು ಎಲ್ಲಿಯೂ ನೇರವಾಗಿ ಸಾರಿಗೆ–ಸಂಪರ್ಕಗಳ ಬಗ್ಗೆ ಮಾಹಿತಿ ನೀಡುವುದಿಲ್ಲ. ಮೇಲಿನ ಶಾಸನಗಳು ಹೆಬ್ಬಟ್ಟೆ, ಹೆದ್ದಾರಿ, ಬಂಡಿದಾರಿ, ರಾಜಪಥ ಎಂಬ ಮಾರ್ಗಗಳನ್ನು ಉಲ್ಲೇಖಿಸಿವೆ. ಇವುಗಳಿಂದ ತಿಳಿದುಬರುವುದೇನೆಂದರೆ, ಈ ಅವಧಿಯಲ್ಲಿ ಕೆಲವೇ ಕೆಲವು ಸಾರಿಗೆ ಮಾರ್ಗಗಳಿದ್ದು ಅವುಗಳಲ್ಲಿ ಹೆಚ್ಚಿನ ದಟ್ಟಣೆ ಇದ್ದಂತೆ ಕಂಡುಬರುವುದಿಲ್ಲ. ಬಂಡಿದಾರಿಯಲ್ಲಿ ಎತ್ತಿನ ಗಾಡಿಗಳನ್ನು ಹೆಚ್ಚಾಗಿ ಬಳಸಿದಂತೆ ಕಂಡುಬಂದಿದ್ದು, ಬಮ್ಡಿಯು ಅಂದಿನ ಸಾರಿಗೆಯ ಪ್ರಮುಖ ಸಾಧನವಾಗಿತ್ತು. ಇಂತಹ ಸ್ಥಿತಿಯನ್ನು ಅಧ್ಯಯನ ಮಾಡಿದ ಎಡ ಪಂಥೀಯ ಚರಿತ್ರೆಕಾರರಾದ ಡಿ.ಡಿ. ಕೊಸಾಂಬಿ, ಆರ್.ಎಸ್. ಶರ್ಮ ಮತ್ತಿತರು ಈ ಕಾಲವನ್ನು ಊಳಿಗಮಾನ್ಯ ವ್ಯವಸ್ಥೆಯ ಅವಧಿ ಎಂದು ಪರಿಗಣಿಸಿದ್ದಾರೆ.[೧೮] ಈ ವ್ಯವಸ್ಥೆಯ ಪ್ರಮುಖ ಲಕ್ಷಣಗಳೆಂದರೆ; ೧) ಭೂಮಿಯ ಮೇಲೆ ಹೆಚ್ಚು ಅವಲಂಬಿತವಾಗಿದ್ದು, ಸೇವೆಗಳಿಗೆ ಹಣದ ಬದಲು ಭೂಮಿಯನ್ನು ಹೆಚ್ಚು ಪ್ರಮಾಣದಲ್ಲಿ ದಾನ ಮಾಡಿರುವುದು. ೨) ನಗರ–ಪಟ್ಟಣಗಳ ಕೊರತೆ ೩) ನಾಣ್ಯಗಳ ಚಲಾವಣೆ ಹೆಚ್ಚು ಪ್ರಮಾಣದಲ್ಲಿ ಇಲ್ಲದೆ ವಸ್ತು ವಿನಿಮಯದ (ಸಾಟಿ) ವ್ಯವ್ಸ್ಥೆ ಅಸ್ತಿತ್ವದಲ್ಲಿದ್ದುದು, ೪) ಕಡಿಮೆ ಉತ್ಪಾದನೆಯಿದ್ದು, ಸ್ಥಳೀಯ ಅವಶ್ಯಕತೆಗಳನ್ನು ಮಾತ್ರ ಪೂರೈಸಲಾಗುತಿತ್ತು. ಹಾಗೂ ೫) ಆಯಗಾರ ಪದ್ದತಿಯನ್ನು ಅನುಸರಿಸುತಿದ್ದುದು.

ಈ ಮೇಲೆ ತಿಳಿಸಿದ ಅಂಶಗಳಲ್ಲಿ ಗಂಗರ ಕಾಲದಲ್ಲಿ ಕೆಲವು ಸ್ಪಷ್ಟವಾಗಿ ಕಂಡುಬರುತ್ತವೆ. ಅವುಗಳೆಂದರೆ; ೧) ಇವರ ಕಾಲದಲ್ಲಿ ಕ್ರಿ.ಶ. ೪ನೆಯ ಶತಮಾನದ ಆರಂಭದಿಂದ ಕ್ರಿ.ಶ.೭–೮ನೆಯ ಶತಮಾನದವರೆಗೆ ಆಳುವ ವರ್ಗ ಪುರೋಹಿತಶಾಹಿ ವರ್ಗ ಮತ್ತು ಅವರ ಸಂಘ ಸಂಸ್ಥೆಗಳಿಗೆ ಗ್ರಾಮ, ಮನೆ, ಮನೆ ನಿವೇಶನ, ವಿವಿಧ ರೀತಿಯ ಭೂಮಿ (ಹೊಲ, ಗದ್ದೆ, ತೋಟ, ಪಾಳು, ಮತ್ತು ಕಾಡು ಭೂಮಿ) ಹಾಗೂ ಕೆರೆಗಳನ್ನು ಹೆಚ್ಚಾಗಿ ದಾನ ಮಾಡಿರುವುದು ಕಂಡುಬರುತ್ತದೆ. ಕ್ರಿ.ಶ.೮ ರಿಂದ ೧೧ನೆಯ ಶತಮಾನದವರೆಗೆ ದಾನವನ್ನು ಆಳುವ ವರ್ಗದವರಲ್ಲದೇ ವ್ಯಾಪಾರಿ ವರ್ಗದವರು ಹಾಗೂ ಶ್ರೀಮಂತ ಭೂಮಾಲೀಕರು ಸಹ ವಿವಿಧ ಉದ್ದೇಶಗಳಿಗಾಗಿ ಭೂಮಿಯನ್ನು ದಾನ ಮಾಡಿರುವುದನ್ನು ಕಾಣಬಹುದು. ಇಂತಹ ಸ್ಥಿತಿಯನ್ನು ಕೊಸಾಂಬಿಯವರು ಮೇಲ್‌ಸ್ತರದ ಮತ್ತು ಕೆಳಸ್ತರದ ಊಳಿಗಮಾನ್ಯ ವ್ಯವಸ್ಥೆಯೆಂದು ಕರೆದಿದ್ದಾರೆ.[೧೯] ೨) ಗಂಗರು ಸುಮಾರು ೬೫೦ ವರ್ಷಗಳ ಕಾಲ ಆಳ್ವಿಕೆ ಮಾಡಿದ್ದರೂ, ಈ ಅವಧಿಯಲ್ಲಿ ನಗರಗಳು ಹೆಚ್ಚು ಸಂಖ್ಯೆಯಲ್ಲಿ ಕಂಡುಬರುವುದಿಲ್ಲ ಇದ್ದರೂ ಅವು ಹೆಚ್ಚಾಗಿ ಆಡಳಿತ ಮತ್ತು ಧಾರ್ಮಿಕ ಕೇಂದ್ರಗಳಾಗಿದ್ದವೇ ಹೊರತು ವ್ಯಾಪಾರ ಕೇಂದ್ರಗಳಾಗಿರಲಿಲ್ಲ. ಆಡಳಿತ ಕೇಂದ್ರಗಳಲ್ಲಿ ವ್ಯಾಪಾರ ವ್ಯವಹಾರಗಳು ನಡೆದಿದ್ದರೂ ಅವು ರಾಜ್ಯಗಳ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಸೀಮಿತವಾಗಿತ್ತು. ೩) ನಾಣ್ಯಗಳ ಉಲ್ಲೇಖ ಶಾಸನಗಳಲ್ಲಿ ಕಂಡುಬಂದರೂ, ದಿನನಿತ್ಯದ ಜೀವನದಲ್ಲಿ ಸಣ್ಣ ಪ್ರಮಾಣದ ನಾಣ್ಯಗಳನ್ನು ಜನಸಾಮಾನ್ಯರು ಬಳಸಿದಂತೆ ಕಂಡುಬರುವುದಿಲ್ಲ. ಏಕೆಂದರೆ ಇದುವರೆಗೂ ಸಿಕ್ಕಿರುವ ಗಂಗರ ನಾಣ್ಯಗಳೆಲ್ಲವು ಹೆಚ್ಚು ಕಡಿಮೆ ಚಿನ್ನದ ನಾಣ್ಯಗಳಾಗಿದ್ದು, ಇತರೆ ಲೋಹದ ನಾಣ್ಯಗಳು ಹೆಚ್ಚಾಗಿ ಕಂಡುಬಂದಿಲ್ಲ. ಹಾಗಾಗಿ ಹೆಚ್ಚಾಗಿ ಸಾಟಿ ಪದ್ದತಿಯೇ ಪ್ರಮುಖವಾಗಿತ್ತೆಂದು ಊಹಿಸಬಹುದು.

ಈ ಮೇಲಿನ ಎಲ್ಲಾ ಅಂಶಗಳು ಗಂಗರ ಕಾಲದಲ್ಲಿ ಸಾರಿಗೆ ಸಂಪರ್ಕಗಳು ಹೆಚ್ಚು ಪ್ರಮಾಣದಲ್ಲಿ ಇರಲಿಲ್ಲವೆಂದೂ, ಹಾಗು ಇವುಗಳ ಕೊರತೆಯಿಂದಾಗಿ ವ್ಯಾಪಾರ, ವಾಣಿಜ್ಯ, ನಗರ ಕೇಂದ್ರಗಳು, ವ್ಯಾಪಾರ ಕೇಂದ್ರಗಳು ಮತ್ತು ವ್ಯಾಪಾರ ಸಂಘಗಳು ಬೆಳೆಯುವುದಕ್ಕೆ ಸಾಧ್ಯವಾಗಿಲ್ಲ ಎಂಬುದಕ್ಕೆ ಪುಷ್ಟಿ ನೀಡುವುದಲ್ಲದೆ ಅಂದಿನ ಸಮಾಜ ಮತ್ತು ಆರ್ಥಿಕತೆ ಊಳಿಗಮಾನ್ಯ ವ್ಯವಸ್ಥೆಯ ಲಕ್ಷಣಗಳನ್ನು ಹೊಂದಿತ್ತೆಂದು ಹೇಳಬಹುದು.

ಅಡಿಟಿಪ್ಪಣಿಗಳು

೧. ದೀಪಕ್ ರಂಜನ್ ದಾಸ್, ಎಕನಾಮಿಕ್ ಹಿಸ್ಟರಿ ಆಫ್ ದಿ ಡೆಕ್ಕನ್, (ದೆಹಲಿ, ೧೯೬೮), ಪು. ೨೨೪.

೨. ಬಿ.ಎಲ್. ರೈಸ್, ಮೈಸೂರ್ ಅಂಡ್ ಕೂರ್ಗ್ ಫ್ರಮ್ ದಿ ಇನ್ಸ್ಕ್ರಿಪ್ಷನ್ಸ್, (ನವದೆಹಲಿ, ೧೯೮೬), ಪು. ೩–೪.

೩. ಅಲ್ಟೇಕರ್, ಎ.ಎಸ್, ರಾಷ್ಟ್ರಕೂಟಾಸ್ ಅಂಡ್ ದೇರ್ ಟೈಮ್ಸ್, (ಪೂನಾ, ೧೯೯೩೪), ಪುಟಗಳು ೩೫೯–೬೦, ಮತ್ತು ದಿವಾಕರ್, ಆರ್.ಆರ್, (ಸಂ.) ಕರ್ನಾಟಕ ಥ್ರೂ ದಿ ಏಜಸ್, (ಬೆಂಗಳೂರು, ೧೯೬೮), ಪುಟ ೧೭೯.

೪. ಎಂ.ವಿ. ಕೃಷ್ಣರಾವ್, ದಿ ಗಂಗಾಸ್ ಆಫ್ ತಲಕಾಡ್, (ಮದ್ರಾಸ್, ೧೯೩೬), ಪು. ೨೮೪.

೫. ಪ್ರಸಾದ್ ಓಂ ಪ್ರಕಾಶ್, ಡೀಕೆ ಅಂಡ್ ರಿವೈವಲ್ ಆಫ್ ಅರ್ಬನ್ ಸೆಂಟ್ರ್ಸ್ ಇನ್ ಮೆಡಿವಲ್ ಸೌಥ್ ಇಂಡಿಯಾ, ಕ್ರಿ.ಶ. ೬೦೦–೧೨೦೦, (ದೆಹಲಿ, ೧೯೮೯), ಪುಟಗಳು ೧೨೦–೧೨೧.

೬ ಸಾಲೆತ್ತೂರು, ಬಿ.ಎ. ಏನ್ಸಿಯೆಂಟ್ ಕರ್ನಾಟಕ, ಸಂಪುಟ ೧, ಹಿಸ್ಟರಿ ಆಫ್ ತುಳುವ, (ಪೂನಾ, ೧೯೩೬), ಪು. ೫೨೧.

೭. ಮೋತಿಚಂದ್ರ, ಸಾರ್ಥವಾಹ, ಅನುವಾದ ಹೆಚ್.ಎಸ್. ಪಾಟೀಲ, (ನವದೆಹಲಿ, ೧೯೭೭) ಪುಟಗಳು ೨೯–೩೦.

೮. ಮೋತಿಚಂದ್ರ., ಪೂರ್ವೋಕ್ತಿ, ಪುಟಗಳು ೩೬–೩೬.

೯. ಅಪ್ಪಾದೊರೈ, ಎ. ಎಕನಾಮಿಕ್ ಕಂಡೀಶನ್ಸ್ ಇನ್ ಸದರನ್ ಇಂಡಿಯಾ, (೧೦೦೦–೧೫೦೦ ಎಡಿ), ಸಂಪುಟ ೧, ಮರುಮುದ್ರಣ, (ಮದ್ರಾಸ್, ೧೯೯೦), ಪುಟಗಳು ೪೨೪–೨೬.

೧೦. ಗುರುರಾಜಚಾರ್ ಎಸ್, ಸಮ್ ಆಸ್ಪೆಕ್ಟ್ಸ್ ಆಫ್ ಎಕನಾಮಿಕ್ ಅಂಡ್ ಸೋಷಿಯಲ್ ಲೈಫ್ ಇನ್ ಕರ್ನಾಟಕ, (೧೦೦೦–೧೩೦೦ ಎಡಿ), (ಮೈಸೂರು, ೧೯೪), ಪುಟಗಳು ೧೨೬–೨೮.

೧೧. ಕುಪ್ಪುಸ್ವಾಮಿ, ಜಿ.ಆರ್., ಎಕನಾಮಿಕ್ ಕಂಡೀಷನ್ಸ್ ಇನ್ ಕರ್ನಾಟಕ (೯೭೩–೧೩೩೬ ಎಡಿ), (ಧಾರವಾಡ, ೧೯೭೫), ಪುಟಗಳು ೧೧೪–೧೬.

೧೨. ಕಾಮೇಶ್ವರ ಪ್ರಸಾದ್, ಸಿಟೀಸ್, ಕ್ರಾಫ್ಟ್ಸ್, ಅಂಡ್ ಕಾಮರ್ಸ್ ಅಂಡರ್ ದಿ ಕುಶಾನಸ್, (ದೆಹಲಿ, ೧೯೮೪), ಪುಟಗಳು ೧೪೯–೫೧.

೧೩. ಮೈಸೂರ್ ಆರ್ಕಿಯಾಲಜಿ ರಿಪೋರ್ಟ್, ೧೯೧೦, ಪುಟ ೧೭.

೧೪. ಎಪಿಗ್ರಾಫಿಯಾ ಕರ್ನಾಟಿಕ, ಸಂ. ೩, ಮಂಡ್ಯ, ಸಂಖ್ಯೆ ೧೧೩ ಹೊಸ ಆವೃತ್ತಿ.

೧೫. ಮೈಸೂರ್ ಆರ್ಕಿಯಾಲಜಿ ರಿಪೋರ್ಟ್, ೧೯೧೪, ಪುಟಗಳು ೨೭–೨೮.

೧೬. ಅದೇ., ೧೯೧೯, ಪುಟಗಳು ೨೧–೨೪.

೧೭. ಎಪಿಗ್ರಾಫಿಯಾ ಇಂಡಿಕಾ, ಸಂಖ್ಯೆ ೩೭, ಪುಟಗಳು ೯೭–೧೧೦.

೧೮. ಕೊಸಾಂಬಿ, ಡಿ.ಡಿ., ಅನ್ ಇನ್ಟ್ರೊಡಕ್ಷನ್ ಟು ದಿ ಸ್ಟಡಿ ಆಫ್ ಇಂಡಿಯನ್ ಹಿಸ್ಟರಿ, ಮರುಮುದ್ರಣ, ಬಾಂಬೆ, ೧೯೯೮ ಮತ್ತು ಆರ್.ಎಸ್. ಶರ್ಮ, ಇಂಡಿಯನ್ ಫ್ಯೂಡಲಿಸಂ, ಮರುಮುದ್ರಣ, ಮದ್ರಾಸ್, ೧೯೮೦.

೧೯. ಕೊಸಾಂಬಿ, ಡಿ.ಡಿ., ಪೂರ್ವೋಕ್ತಿ., ೨೯೬–೪೮೧.

೩೪

ಶಾಸನೋಕ್ತ ಕನ್ನಡ ಶಾಖೆಯ ಬ್ರಾಹ್ಮಣರು

ಡಾ. ಕೆ. ವಸಂತಲಕ್ಷ್ಮಿ*

ಶಿವಮೊಗ್ಗ ಜಿಲ್ಲೆಯು ಕರ್ನಾಟಕದಲ್ಲಿ ಅತೀ ಹೆಚ್ಚು ಸಂಖ್ಯೆಯ ಶಾಸನ ಭಂಡಾರವನ್ನು ಹೊಂದಿದೆ ಎಂಬುದು ಸರ್ವವಿದಿತ. ಶಾಸನ ಶಾಸ್ತ್ರ ಪಿತಾಮಹ ಎನಿಸಿದ ಬಿ.ಎಲ್. ರೈಸರ ಕಾಲದಲ್ಲೇ ಈ ಜಿಲ್ಲೆಯ ಶಾಸನಗಳ ಎರಡು ಸಂಪುಟಗಳಲ್ಲಿ ಎಪಿಗ್ರಾಫಿಯಾ ಕರ್ನಾಟಿಕ ಸಂ.೭ ಮತ್ತು ಸಂ. ೮ರಲ್ಲಿ ಸಂಗ್ರಹಿಸಿ ಪ್ರಕಟಿಸಲಾಗಿತ್ತು. ಈ ಸಂಪುಟಗಳ ಮುನ್ನುಡಿಯಲ್ಲಿ ರೈಸ್ ಸಾಹೇಬರು ತಾವು ಪ್ರಕಟಿಸಿರುವ ಶಾಸನಗಳಲ್ಲಿ ಅತೀ ಪ್ರಾಚೀನ ಶಾಸನಗಳೆಂದರೆ ಪ್ರಾಕೃತ ಭಾಷೆಯ ಶಾತವಾಹನರ ಕಾಲದ್ದು ಮತ್ತು ಕದಂಬರ ದೊರೆಯ ಮಳವಳ್ಳಿ ಶಾಸನವಾಗಿದೆ ಎಂದಿದ್ದಾರೆ. ಆದರೆ ಇದಕ್ಕೆ ಮೊದಲೇ– ಈ ಸಂಪುಟದಲ್ಲಿ ಪೌರಾಣಿಕ ವ್ಯಕ್ತಿಯಾದ, ಸೋಮವಂಶದವನಾದ ಜನಮೇಜಯನು ಸರ್ಪಯಾಗವನ್ನು ಮಾಡಿ ದತ್ತಿಬಿಟ್ಟ ಅಗ್ರಹಾರದ ಶಾಸನಗಳು ಈ ಪ್ರದೇಶದ ಮೂಲದ ಬಗೆಗೆ ಸೂಚಿಸುವಂತಿವೆ. ಈ ಶಾಸನಗಳು ನಾಗರೀ ಲಿಪಿಯ ಶಾಸನಗಳಾಗಿದ್ದು, ಇವು ಕೂಟ ಶಾಸನಗಳೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಆದರೆ ಇಲ್ಲಿ, ಈ ಶಾಸನಗಳ ವಿಷಯದ ಸತ್ಯಾಸತ್ಯತೆಗಿಂತ, ಅಲ್ಲಿ ದಾಖಲಾಗಿರುವ ಸಾಂಸ್ಕೃತಿಕ ವಿವರವನ್ನು ಆಧರಿಸಿ, ಆ ಪರಿಸರದಲ್ಲಿದ್ದ 'ಕನ್ನಡ ಶಾಖೆಯ ಬ್ರಾಹ್ಮಣರ' ಬಗೆಗೆ ಗಮನ ಸೆಳೆಯಲು ಯತ್ನಿಸಲಾಗಿದೆ.

ಪ್ರಾಚೀನ ಕರ್ನಾಟಕದಲ್ಲಿ ಅಗ್ರಹಾರಗಳನ್ನು ನಿರ್ಮಿಸುವಲ್ಲಿ ಆ ಪ್ರದೇಶದ ಮಹತ್ವವನ್ನು ಪ್ರಾಚೀನತೆಯನ್ನು ಸೂಚಿಸುವಂತೆ, 'ಪೌರಾಣಿಕ ಅರಸನಾದ ಜನಮೇಜಯನು ದಾನವಾಗಿ ಕೊಟ್ಟದ್ದು' ಎಂದೂ, ಜನಮೇಜಯ ಮಹಾರಾಜನು ಸರ್ಪಯಾಗ ಮಾಡುವಾಗ ಋತ್ವಿಜರಿಗೆ ಆ ಅಗ್ರಹಾರವನ್ನು ದಾನವಾಗಿತ್ತನೆಂಬ ಐತಿಹ್ಯವೂ ಶಾಸನಗಳಲ್ಲಿ ಉಕ್ತವಾಗಿದೆ (SII.XV.159, 1213). ಶಿವಮೊಗ್ಗ ಜಿಲ್ಲೆಯ ಅನೇಕ ಶಾಸನಗಳಲ್ಲಿ ಇಂಥ ಹಲವು ಪೌರಾಣಿಕ ಸಂದರ್ಭಗಳನ್ನಳವಡಿಸಿಕೊಂಡು ಪ್ರಸ್ತುತ ಶಾಸನಗಳನ್ನು ನಿರೂಪಿಸಲಾಗಿದೆ. ಕೂಡಲಿಯ ಶಾಸನವು–(ಶಿವ.೪೮) ರುಕ್ಮಾಂಗದನ ಮಗ ಧರ್ಮಾಂಗದನು ನೀಡಿದ ಭೂದಾನದ ಬಗೆಗೆ ತಿಳಿಸಿದೆ; ದಾನಿ ಧರ್ಮಾಂಗದನನ್ನು ಅಯೋಧ್ಯೆಪುರವರಾಧೀಶ್ವರ, ವೈಷ್ಣವ ಚಕ್ರವರ್ತಿ, ಏಕಾದಶೀ ಧುರಧವಳ ಎಂದಿದೆ. ಈ ಶಾಸನವು ಸಂಸ್ಕೃತ, ಮರಾಠಿ ಭಾಷೆಗಳ ಮಿಶ್ರ ಪಾಠವಾಗಿದ್ದು, ಕೂಟಶಾಸನವಾಗಿದೆ. ಇದರಿಂದ ಈ ಪ್ರದೇಶದಲ್ಲಿ ಮರಾಠರು ಪ್ರಬಲರಾದುದ್ದನ್ನು (ಸು. ೧೮ನೇ ಶ.) ತಿಳಿಯುತ್ತದೆ. ಹೀಗೆ ಕಾಲದ ದೃಷ್ಟಿಯಿಂದ ಇದು ಕೂಟವಾದರೂ ಇಲ್ಲಿನ ಉಕ್ತ ಸಂಗತಿಗಳು ಆ ಪ್ರದೇಶದಲ್ಲಿದ್ದ ವಾಸ್ತವಿಕತೆಯನ್ನು ಸೂಚಿಸುತ್ತದೆ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಮತ್ತು ಸೊರಬ ತಾಲೂಕಿನ ಶಾಸನಗಳಲ್ಲಿ, ಸೋಮವಂಶದಲ್ಲಿ ಜನಿಸಿದ ಪರೀಕ್ಷಿತ ಮಹಾರಾಜ; ಅವನ ಮಗ ಜನಮೇಜಯನು ಹಸ್ತಿನಾಪುರದಲ್ಲಿ ಆಳುತ್ತಿದ್ದನು. ಜನಮೇಜಯ ಮಹಾರಾಜನ ಆಳ್ವಿಕೆಯ ಭಾಗವಾದ ಬನವಸೆ ಪನ್ನಿಚ್ಛಾಸಿರವು ಮಧ್ಯದಲ್ಲಿ ತುಂಗಭದ್ರೆಯ ಸಂಗಮವಾದ ಶ್ರೀ ಹರಿಹರದೇವನ ಸನ್ನಿಧಿಯನ್ನು ಹೊಂದಿತ್ತು. ಇಲ್ಲಿ ಅವನು ಸರ್ಪಯಾಗವನ್ನು ಮಾಡಿ ಋತ್ವಿಜರಿಗೆ ನೀಡಿದ ಅಗ್ರಹಾರದಾನವನ್ನು ದಾಖಲಿಸಿರುವಂತೆ, ನಾಲ್ಕು ಶಾಸನಗಳು ನಿರ್ಮಾಣವಾಗಿವೆ. ಈ ಎಲ್ಲಾ ಶಾಸನಗಳು ನಾಗರೀ ಲಿಪಿಯ ಶಾಸನಗಳಾಗಿದ್ದು ನಿರ್ದಿಷ್ಟವಾದ ಕಾಲಸೂಚನೆ ಇಲ್ಲ. ಆದರೆ ಇಲ್ಲಿರುವ ವಿವರಗಳು ಅದೇ ಊರಿನ ಇತರ ಕಾಲೋಕ್ತವಾಗಿರುವ ಶಾಸನಗಳಲ್ಲೂ ದಾಖಲಾಗಿರುವುದು ಗಮನಾರ್ಹವಾಗಿದೆ. ಮತ್ತು ಈ ಎಲ್ಲಾ ಶಾಸನಗಳಲ್ಲೂ ದಾನಗಳನ್ನು ಸ್ವೀಕರಿಸಿದವರು 'ಕನ್ನಡಶಾಖೆಯ ಬ್ರಾಹ್ಮಣ'ರಾಗಿರುವುದು ಗಮನಾರ್ಹವಾಗಿದೆ.

ಸೊರಬ ತಾಲೂಕಿನ ಕುಪ್ಪಗದ್ದೆ ಅಗ್ರಹಾರದ ತಾಮ್ರಶಾಸನವು (ಎಕ.೮. ಸೊರಬ–೧೮೩)– ಸೋಮವಂಶದಲ್ಲಿ ಜನಿಸಿದ ಪರೀಕ್ಷಿತ; ಅವನ ಮಗ ಜನಮೇಜಯ ಮಹಾರಾಜನು ಹಸ್ತಿನಾಪುರದಲ್ಲಿ ಆಳುತ್ತಿದ್ದನು. ಇವನು ತುಂಗಭದ್ರೆಯ ಸಂಗಮವಾದ ಶ್ರೀಹರಿಹರದೇವರ ಸನ್ನಿಧಿಯಲ್ಲಿ ದಾನಬಿಟ್ಟದ್ದನ್ನು ತಿಳಿಸಿದೆ. ಚೈತ್ರಮಾಸ ಕೃಷ್ಣಪಕ್ಷ ಸೋಮವಾರದಂದು ಭರಣಿ ಮಹಾನಕ್ಷತ್ರವಿದ್ದಾಗ, ಸಂಕ್ರಾಂತಿ ವ್ಯತೀಪಾತ ನಿಮಿತ್ತವಾಗಿ 'ಸರ್ಪಯಾಗ'ವನ್ನು ಮಾಡಿದನು. ಸರ್ಪಯಾಗದ

* # ೧೬೪೮, ೧೭ನೇ ಮುಖ್ಯರಸ್ತೆ, ಬನಶಂಕರಿ ೧ನೇ ಹಂತ, ೨ನೇ ಬ್ಲಾಕ್, ಬೆಂಗಳೂರು–೫೬೦೦೫೦.

ಪೂರ್ಣಾಹುತಿಯ ಸಮಯದಲ್ಲಿ ಚಕ್ರವರ್ತಿರ್ಯಾಯು, ಬನವಸೆ ಪನ್ನಿಚ್ಛಾಸಿರದ ಮಧ್ಯದ ಕಂಪಣ ಎಡನಾಡ ಮಧ್ಯಭಾಗದಲ್ಲಿರುವ ಪುಸ್ಪಗಡ್ಡೆ ಗ್ರಾಮದಲ್ಲಿ ನೆಲೆಸಿದ್ದ

೧. ಬ್ರಾಹ್ಮಣ ಕನ್ನಡ ಶಾಖೆಯ ಆತ್ರೇಯ ಗೋತ್ರದ ಮಾಧವ ಪಟ್ಟವರ್ಧನರು,

೨) ಬ್ರಾಹ್ಮಣ ಕನ್ನಡ ಶಾಖೆಯ ವಸಿಷ್ಠ ಗೋತ್ರದ ಶಂಕರ ಫಳೀಸರು,

೩) ಬ್ರಾಹ್ಮಣ ಕನ್ನಡ ಶಾಖೆಯ ಶ್ರೀವತ್ಸಗೋತ್ರದ ಯೋಗೀಶ್ವರಪಟ್ಟವರ್ಧನರು,

೪) ಬ್ರಾಹ್ಮಣ ಕನ್ನಡ ಶಾಖೆಯ ವಿಶ್ವಾಮಿತ್ರಗೋತ್ರದ ವಿಷ್ಣುಕ್ರಮಿತರು ಮತ್ತು

೫) ಚವುಘಮ್ರುಕ್ಷಜ ನಾನಾಗೋತ್ರದ ಸಹಸ್ರದ್ವಯ ಬ್ರಾಹ್ಮಣರಿಗೆ, ಪಂಚಾಂಗ ಪಸಾಯಛತ್ರ ಸುಖಾಸನ ಬಲದಗದಿಗೆ ಅಂಕದಂಡ ಖಂಡಣ ಅಷ್ಟಭೋಗತೇಜಸಾಮ್ಯ ಸರ್ವನಮಸ್ಯವಾಗಿ ಈ ಪುಸ್ಪಗಡ್ಡೆಯ ಗ್ರಾಮವನ್ನು ಅದರ ಮಧ್ಯದಲ್ಲಿರುವ ಬೊಂಮನಹಳ್ಳೀ, ನಿಟ್ಟಕ್ಕೀ, ನಭೆ ಕೊರಕೋಡಿ, ಅಂನಗಡೆ, ಕೊಡರ್ಲಿ, ಕೆರೆಊರು, ಗೆಂಡಣ, ಕುಳವಳೀಕ ಕೊಂಡೆಯಾಹಳ್ಳಿ– ಎಂಬ ದಶಗ್ರಾಮಗಳನ್ನು ಸರ್ವನಮಸ್ಯವಾಗಿ ಧಾರಾಪೂರ್ವಕವಾಗಿ ಬಿಟ್ಟರು ಎಂದು ತಿಳಿಸಿದೆ. ಈ ಭೂಭಾಗದ ಅಷ್ಟದಿಕ್ಕುಗಳಲ್ಲಿನ ಸೀಮಾ ವಿವರವನ್ನು ತಿಳಿಸಿದೆ. ೩ ಶ್ಲೋಕ ಶಾಪಾಶಯವಿದೆ.

ಕೊನೆಯಲ್ಲಿ ಮತ್ತೆ, ರಾಮನಾಥದೇವಭೂಮಿ ಮತ್ತರು ೪.... ಭೂಮಿ ಮತ್ತರು ೪; ಅನ್ನಿರಿಗೆಗೆ ಭೂಮಿ ಮತ್ತರು ೨, ಛತ್ರಕ್ಕೆ ಭೂಮಿ ಮತ್ತರು ೮ ಎಂದಿದೆ. ಶಾಸನಾಂತ್ಯದಲ್ಲಿ– ಅರಿರಾಯಮಸ್ತಕ ತಳಪ್ರಹಾರಿ ಎಂಬ ಒಪ್ಪದೊಂದಿಗೆ ಮುಕ್ತಾಯವಾಗಿದೆ.

ಶಿಕಾರಿಪುರ ತಾಲೂಕಿನ, ಶಿಕಾರಿಪುರ ಹೋಬಳಿ ಬೇಗೂರು ಅಗ್ರಹಾರದ ತಾಮ್ರಶಾಸನವು (ಶಿ.ಪುರ.೧೨–ಎಕ.೭) (ಶಾಸನ ಪಾಠವನ್ನು ಸ್ಥಳದವರು ಕೊಟ್ಟ ಪ್ರತಿಯಿಂದ ಅಚ್ಚು ಹಾಕಿದ್ದು– ಎಂದು ರೈಸ್ ಸಾಹೇಬರು ಸೂಚಿಸಿದ್ದಾರೆ), ಮೂರು ಹಲಗೆಗಳ ವರಾಹಮುದ್ರೆಯುಳ್ಳ ತಾಮ್ರಶಾಸನವಾಗಿದೆ.

ಆರಂಭದಲ್ಲಿ ಶ್ರೀಗಣೇಶಾಯ ನಮಃ, ವರಾಹನ ಸ್ತುತಿ ಇದೆ. ಈ ಶಾಸನವು ಸೋಮವಂಶೋದ್ಭವ ಜನಮೇಜಯ ಮಹಾರಾಜನು ಆಳುತ್ತಿದ್ದಾಗ ಎಂದೇ ದಾಖಲಿಸಿದೆ. ದಾನವನ್ನು 'ಚೈತ್ರಮಾಸ ಕೃಷ್ಣಪಕ್ಷೆ ಸೋಮದಿನೇ ತ್ರಿತೆಯಾಂ ವಿಶಾಖನಕ್ಷತ್ರೇ, ಸಂಕ್ರಾಂತೀ, ವ್ಯತೀಪಾತ ನಿಮಿತ್ತೇ' ಸರ್ಪಯಾಗವನ್ನು ಮಾಡಿದನು. ಬನವಸೆ ಪಂನ್ನಿಚ್ಛಾಸಿರ ಸಹಸ್ರದ ಮಧ್ಯೆ ಉತ್ತರದ ಯಡನಾಡೆಲ್ಪತ್ತರ ಮಧ್ಯದಲ್ಲಿನ ಶ್ರೀಮತ್ ಅನಾದಿ ಅಗ್ರಹಾರವಾದ ಬೇಗೂರು ಗ್ರಾಮದಲ್ಲಿನ ಈ ಕೆಳಕಂಡಬ್ರಾಹ್ಮಣರಿಗೆ ದಾನ ನೀಡಿದನು;

೧) ಕನ್ನಡ ಶಾಖೆಯ ಶ್ರೀವತ್ಸಗೋತ್ರದ ಸೋಮೇಶ್ವರ ಪಟ್ಟವರ್ಧನರು,

೨) ಕನ್ನಡ ಶಾಖೆಯ ವಸಿಷ್ಟಗೋತ್ರದ ಮಾಧವ ಪಟ್ಟವರ್ಧನರು,

೩) ಕನ್ನಡ ಶಾಖೆಯ ಗೌತಮಗೋತ್ರದ ನಾರಾಯಣ ಪಟ್ಟವರ್ಧನರು,

೪) ಕನ್ನಡ ಶಾಖೆಯ ವಿಶ್ವಾಮಿತ್ರಗೋತ್ರದ ವಿಷ್ಣುದೀಕ್ಷಿತರು.

ಚೌಘಮುಖ್ಯ ನಾನಾಗೋತ್ರದ ಸಹಸ್ರದ ಮುಂನೂರವರು ಬ್ರಾಹ್ಮಣರಿಗೆ ಸರ್ಪಯಾಗದ ಆರಂಭದ ಸಮಯದಲ್ಲಿ ಆಶೀರ್ವಾದ ಮಾಡಿದ್ದನ್ನು ಮೆಚ್ಚಿ ರಾಜನು ಅಷ್ಟಭೋಗ ತೇಜಸಾಮ್ಯಸಹಿತ ಸರ್ವನಮಸ್ಕೃತವಾಗಿ ಕುಮುದ್ವತಿ ನದೀತೀರದ ಪೂರ್ವ ದಿಕ್ಕಿನಲ್ಲಿರುವ ಬೇಗೂರು ಗ್ರಾಮವನ್ನು ಅದರ ಮಧ್ಯದಲ್ಲಿರುವ ಗೋಕರ್ಣಹಳ್ಳಿಯ ಬಸವಾಪುರ, ಐಶ್ವರ್ಯಪುರ, ಮುಗುಳಿಕೆರೆ, ಕೇತತ್ತಿ, ಕೊಪ್ಪ, ಚಂಪಕತೀರ್ಥ, ಕೆಂಚಾಪುರ, ಧೂಪಾಪುರ– ಎಂಬ ದಶಗ್ರಾಮಗಳನ್ನು ಬಿಟ್ಟನು. ಸೀಮಾ ವಿವರವನ್ನು ಶಾಪಾಶಯದ ಭಾಗದ ನಂತರ ಶಾಸನಾಂತ್ಯದಲ್ಲಿ 'ಅರಿರಾಯತಳಪ್ರಹಾರಿ' ಎಂಬ ವೊಪ್ಪವಿದೆ.

ಬೇಗೂರು ಗ್ರಾಮದ ಮಲ್ಲಿಕಾರ್ಜುನ ದೇವಾಲಯದ ಶಿಲಾ ಶಾಸನವು(ಶಿ.ಪುರ.೧೩)–ಚಾಳುಕ್ಯವಿಕ್ರಮ ಶಕೆ ವರ್ಷದ ೨೨(ಇಪ್ಪತ್ತೆರಡನೆಯ) ಈಶ್ವರ ಸಂವತ್ಸರದ ಪೌಶ್ಯ ಶುದ್ಧ ದಶಮೀ ಆದಿತ್ಯವಾರದಂದು ಉತ್ತರಾಯಣ ಸಂಕ್ರಮಣ ನಿಮಿತ್ತವಾಗಿ ಶ್ರೀಮದಗ್ರಹಾರವಾದ ಮಾರಸಿಂಗನ ಬೇಗೂರು ವಿಷ್ಣು ದೇವರಿಗೆ ಸುಂಕದ ಆದಾಯವನ್ನು ದಾನ ಬಿಟ್ಟಿದ್ದನ್ನು ದಾಖಲಿಸಿದೆ. ಅದೇ ದೇವಾಲಯದ ಮತ್ತೊಂದು ಶಿಲಾ ಶಾಸನವು ಬೇಗೂರು ಅಗ್ರಹಾರದ ಮಹಾಬ್ರಾಹ್ಮಣರ ಬಗೆಗೆ – "ಯಮನಿಯಮಸ್ವಾಧ್ಯಾಯ ಧ್ಯಾನಧಾರಣ ಮೋನಾನುಷ್ಠಾನ ಸಮಾಧಿ ಸಂಪನ್ನರು, ಮೀಮಾಂಸಕ ಲೋಕಾಯತ ಬೌದ್ಧ ಸಾಂಖ್ಯ ವೈಶೇಷಿಕಾದಿ ಶಾಸ್ತ್ರಾಗಮ ಕುಶಲರು, ಅಗ್ನಿಷ್ಠೋಮಾದಿ ವಿಶಿಷ್ಟೇಷ್ಟ ವಿದ್ವಜ್ಜನ ಪೂಜಿತರು–ದ್ವಾತ್ರಿಂಶತ್ಸಹಸ್ರ ಸಮಯಾಗ್ರಗಣ್ಯರನೇಕ ಸ್ಮೃತಿ ಶ್ರುತಾರ್ಥ್ಯ ಕೀರ್ತಿತ್ರಯ ಸಂಪನ್ನರಪ್ಪ ಶ್ರೀ ಶ್ರೀ ಮದಗ್ರಹಾರ ಬೇಗೂರ ಮಹಾಜನಂ ಸಾಸಿರದ ಮುನ್ನೂರ್ವ್ವರಂ ಸಮಸ್ತ ಗುಣಸಂಪನ್ನರಪ್ಪ ಇವರಿಗೆ ಶ್ರೀಮದಂಬದ ಕಾಳಗಾವುಂಡನ ಮಗ ಚಟ್ಟಗೋಸಿ

ಪಾದಪೂಜೆ ಮಾಡಿ ದಾನಬಿಟ್ಟಿದ್ದನ್ನು ದಾಖಲಿಸಿದೆ. ಈ ದಾನವನ್ನು ಚಾಳುಕ್ಯವಿಕ್ರಮ ಕಾಲದ ೧೪ನೇ ಶುಕ್ಲ ಸಂವತ್ಸರದ ಜ್ಯೇಷ್ಠ ಮಾಸ ಅಮಾವಾಸ್ಯೆಯಂದು ದಾನಬಿಟ್ಟರೆಂದಿದೆ (ಕ್ರಿ.ಶ.೧೦೮೦ರ ಶಾಸನ). ಇಲ್ಲಿಯ ಮತ್ತೊಂದು ಶಾಸನದಲ್ಲೂ (ಶಿ.ಪುರ.೧೫)– ಸಾವಿರದ ಮುನ್ನೂರು ಜನ ಬ್ರಾಹ್ಮಣರ ಗುಣಾವಳಿ ಇದೆ. ಈ ಊರಿನ ಮಲ್ಲಿಕಾರ್ಜುನ ದೇವಾಲಯದಲ್ಲಿ ಕಾಶ್ಮೀರೀದೇವರ ಶಿಷ್ಯರಾದ ಷಡಂಗಿಗಳಾದ ತ್ರಿಲೋಚನ ಪಂಡಿತರು ನೆಲೆಸಿದ್ದನ್ನು ಇಲ್ಲಿಯ ಶಾಸನವೊಂದು ತಿಳಿಸಿದೆ.

ಶಿಕಾರಿಪುರ ತಾಲೂಕಿನ ಗೌಜ ಅಗ್ರಹಾರದ ತಾಮ್ರಶಾಸನವು(ಶಿ.ಪುರ.೪೫–ಬೆಳ್ಳಂದೂರು ಹೋಬಳಿ, ಗೌಜ ಗ್ರಾಮ), ಜನಮೇಜಯ ಮಹಾರಾಜನು ಆಳುತ್ತಿದ್ದಾಗ, ದಿಗ್ವಿಜಯವನ್ನು ಮಾಡಿ ವಿಜಯ ಗಳಿಸಿದ ಸಂದರ್ಭದಲ್ಲಿ ಚೈತ್ರಮಾಸ ಕೃಷ್ಣಪಕ್ಷ..... ಉತ್ತರಾಯಣ ಸಂಕ್ರಾಂತಿ ವ್ಯತೀಪಾತ ನಿಮಿತ್ತವಾಗಿ ಸರ್ಪಯಾಗವನ್ನು ಮಾಡಿದ್ದನ್ನು ತಿಳಿಸಿದೆ. ಆಗ ರಾಜನು ಬನವಾಸಿಪನ್ನಿಚ್ಛಾಸಿರದ ಮಧ್ಯದ ಕಂಪಣ ಸಾಂತಲಿಗೆ ಸಾವಿರದ ಮಧ್ಯದಲ್ಲಿನ ಗೌತಮಗ್ರಾಮವನ್ನು ಈ ಕೆಳಗೆ ಹೇಳಿರುವ ಬ್ರಾಹ್ಮಣರಿಗೆ ದಾನ ನೀಡಿದನು:

೧) ಬ್ರಾಹ್ಮಣ ಕಂನಡ ಶಾಖೆಯ ಗೌತಮಗೋತ್ರದ ಗೋವಿಂದ ಪಟ್ಟವರ್ಧನ,

೨) ಬ್ರಾಹ್ಮಣ ಕಂನಡ ಶಾಖೆಯ ವಸಿಷ್ಟಗೋತ್ರದ ವಾಮನಪಟ್ಟವರ್ಧನರು,

೩) ಬ್ರಾಹ್ಮಣ ಕನ್ನಡ ಶಾಖೆಯ–ಭಾರಧ್ವಾಜಗೋತ್ರದ ಕೇಶವ ಯಜ್ವದೀಕ್ಷಿತರು,

೪) ಬ್ರಾಹ್ಮಣ ಕನ್ನಡ ಶಾಖೆಯ ಶ್ರೀವತ್ಸಗೋತ್ರದ ನಾರಣದೀಕ್ಷಿತರು ಮತ್ತು

ಚತುರ್ಮುಖ ನಾನಾ ಗೋತ್ರಗಳಿಗೆ ಸೇರಿದ ದ್ವಾತ್ರಿಂಸತು ಸಹಸ್ರ ಬ್ರಾಹ್ಮಣರಿಗೆ, ಸರ್ಪಯಾಗದ ಪೂರ್ಣಾಹುತಿಯ ಸಮಯದಲ್ಲಿ ಮಂತ್ರಾಂಗ ಪ್ರಣವವನ್ನು ಮಾಡಿದ್ದನ್ನು ಕಂಡು ಮೆಚ್ಚಿ ರಾಜನು, ಅಷ್ಟಭೋಗತೇಜ ಸ್ವಾಮ್ಯವಾಗಿ ಗೌತಮ ಗ್ರಾಮವನ್ನೂ, ಅದರ ಮಧ್ಯದಲ್ಲಿನ ನಾಡವಲ್ಲಿ, ಬಾಡವಲ್ಲಿ, ಚಿಕ್ಕಹಾರಿ, ಕೊಡೊಣಂಡುರು, ತಲಂಗೆರೆ, ಸುಲ್ಲಿಗೋಡು, ತೊಗರು, ಗೌಜ, ಆಲುರು, ಬಾಚೆಯನಹಳ್ಳಿ, ಚಂಪಗೋಡು, ಕಿರುಸಂಪಗೋಡು ಎಂಬ– ೧೨ ಗ್ರಾಮಗಳನ್ನು ಸರ್ವನಮಸ್ಯವಾಗಿ ಬಿಟ್ಟರೆಂದು ತಿಳಿಸಿದೆ. ಅಂತ್ಯದಲ್ಲಿ ಸೀಮಾ ವಿವರವಿದ್ದು, ಶಾಪಾಶಯವಿದೆ.

ಗೌಜದ ಗೌತಮೇಶ್ವರ ದೇವಾಲಯದ ಶಾಸನವು (ಶಿ.ಪುರ.೪೭), ಯಮನಿಯಮ ಸ್ವಾಧ್ಯಾಯನಿರತ, ಸಕಲ ಗುಣಸಂಪನ್ನರಾದ ಶ್ರೀಮದನಾದಿ ಅಗ್ರಹಾರ ಗೌಜದ ಮೂವತ್ತಿರ್ಚ್ಛಾಸಿದ ಅಶೇಷ ಮಹಾಜನಗಳಿಗೆ ಬಿಟ್ಟ ದಾನವನ್ನು ತಿಳಿಸಿದೆ. ಈ ಊರಿನಲ್ಲಿ ಪನ್ನಿಚ್ಛಾಸಿರ ಅಗ್ನಿಹೋತ್ರ ಮನುಮಾರ್ಗದ ಮೂವತ್ತಿಚ್ಛಾಸ್ಸಿರಾಭರಣರ ಅಗ್ರಹಾರದ ಗೌಜ........ಎಂದಿದೆ.

ಗೌಜ ಗ್ರಾಮದ ಮತ್ತೊಂದು ಶಿಲಾ ಶಾಸನವು–ಶಕ ವರ್ಷ ೧೦೮೧ರಲ್ಲಿ ಕುಮಾರ ಬೀರರಸರನ್ನು ಹೆಸರಿಸಿದೆ. ಯಮನಿಯಮ ಸ್ವಾಧ್ಯಾಯ, ಸೀಲಗುಣಸಂಪನ್ನರಾದ, ಏಕಾಗ್ರಸಮಾಧಿ ಶಾಸ್ತ್ರ ಸ್ಮೃತಿಮಾರ್ಗನಿರತರೂ, ಪದವ್ಯಾಕರಣ ನಿರ್ಣಯಾನೀಕರೂ, ಚತುರ್ವೇದ ಮುಖೋದ್ಗತರೂ, ಶಬ್ದಶಾಸ್ತ್ರ ಅಲಂಕರಣಭರಣರೂ, ಶಿವಪಾದಾರ್ಚಿತರೂ, ಬ್ರಹ್ಮವಂಶೋದ್ಭವರೂ ಆದ ೩೨೦೦೦ ಬ್ರಾಹ್ಮಣರಿಗೆ ಕುಮಾರ ಬೀರರಸರು ದಾನ ಬಿಟ್ಟಿದ್ದನ್ನು ತಿಳಿಸಿದೆ. ಇದರಿಂದ ಗೌಜ ಅಗ್ರಹಾರದಲ್ಲಿನ ಬ್ರಾಹ್ಮಣರು ಸು. ಕ್ರಿ.ಶ. ೧೧೫೯ರಲ್ಲಿ ಈ ಭಾಗದಲ್ಲಿ ನೆಲೆಸಿದ್ದರೆನ್ನಬಹುದು(ಶಿ.ಪುರ.೪೯) ಇದರಂತೆ– ಗೌಜದ ಮತ್ತೊಂದು ಶಾಸನವು (ಕ್ರಿ.ಶ. ೧೦೭೫ರಲ್ಲಿ), 'ಶಕ ವರ್ಷ ೯೭೭ರ ರಾಕ್ಷಸ ಸಂವತ್ಸರ ಮಾಘದಂದು......ಗೌಜದ ಮೂವತ್ತಿಚ್ಛಾಸಿರ ಮಹಾಜನರು ಶತ್ರುವಿನೊಡೆ ಹೋರಾಡಿ ಸತ್ತಾಗ' ಬಿಟ್ಟ ಭೂದಾನ ದಾಖಲಿಸಿದೆ; ಇದರಿಂದ ಗೌಜದಲ್ಲಿ ೧೧–೧೨ನೇ ಶತಮಾನದಲ್ಲಿ ಕನ್ನಡ ಶಾಖೆ ಬ್ರಾಹ್ಮಣರಿದ್ದರೆಂದು ಹೇಳಬಹುದು.

ಶಿರಾಳಕೊಪ್ಪದಲ್ಲಿ ಜೋಯಿಸ ಶೇಷಪ್ಪನವರ ವಶದಲ್ಲಿದ್ದ ೨ ಹಲಗೆ ನಾಗರಾಕ್ಷರದ ತಾಮ್ರ ಶಾಸನವು (ಶಿ.ಪುರ.೮೬) ಆರಂಭದಲ್ಲಿ ಶ್ರೀ ಶಂಕರನೇ ಗತಿ/ಶುಭಮಸ್ತು ಎಂದಿದ್ದು, ಮುಂದೆ ವರಾಹನಸ್ತುತಿ ಇದೆ. ಆರಂಭದ ಭಾಗ ಹಿಂದೆ ಹೇಳಿದ ತಾಮ್ರ ಶಾಸನದಂತಿದ್ದು, ಚೈತ್ರಮಾಸ ಕೃಷ್ಣಪಕ್ಷ ಸೋಮದಿನ, ಭರಣೀ ಮಹಾನಕ್ಷತ್ರ, ಸಂಕ್ರಾಂತಿವ್ಯತೀಪಾತ ನಿಮಿತ್ತ ಸರ್ಪಯಾಗವನ್ನು ಮಾಡಿದಾಗ, ಬ್ರಾಹ್ಮಣರು ಆಶೀರ್ವಾದ ಮಾಡಿದ್ದನ್ನು ಮೆಚ್ಚಿ ಚಕ್ರವರ್ತಿಯು ಸರ್ವನಮಸ್ಯವಾಗಿ ಬಿಟ್ಟ ದಾನವನ್ನು ಉಲ್ಲೇಖಿಸಿದೆ. ಹಿರೇಜಂಬೂರು, ಸೂತ್ರಗೊಟೆ ವರಹ, ಬಲ್ಲೂರು ಗ್ರಾಮಗಳು ಕನ್ನಡ ಶಾಖೆಯ ವಸಿಷ್ಠ ಗೋತ್ರ ಅಶ್ವಲಾಯನ ಸೂತ್ರದ ಋಖ್ ಶಾಖೆಯ ಛಾಯಾಭಟ್ಟರ ಪುತ್ರ ಚಿಕ್ಕಛಾತ್ರೇಭರು, ತತ್ಪುತ್ರ ಶಂಕರ, ಲಿಂಗಣ ಜೋಯಿಸರಿಗೆ ಐಕ್ಯಮತ್ಯವಾಗಿ ಬಿಟ್ಟರು; ಸೀಮೆಕಲ್ಲನ್ನು ನೆಡಿಸಿ ದಾನ ಬಿಟ್ಟಿದ್ದನ್ನು ತಿಳಿಸಿದೆ. ಈ ಶಾಸನಾಂತ್ಯದಲ್ಲೂ– ಅರಿರಾಯ ಕುಲವಿಲಯ ಕಾಲಾನಲ ಎಂಬ ಒಪ್ಪವಿದೆ.

ಹೀಗೆ ಈ ೪ ಶಾಸನಗಳಿಂದ, ಒಟ್ಟು ೧೬ ಜನ ಕನ್ನಡ ಶಾಖೆಯ ಬ್ರಾಹ್ಮಣರ ಉಲ್ಲೇಖಗಳು ದೊರೆತಿದ್ದು, ಕುಪ್ಪಗಡ್ಡೆ, ಶಿಕಾರಿಪುರ, ಬೇಗೂರು ಮತ್ತು ಗೌಜ (ಗೌತಮ) ಗ್ರಾಮಗಳು ಜನಮೇಜಯ ಚಕ್ರವರ್ತಿ ನೀಡಿದ ಅಗ್ರಹಾರಗಳಾಗಿತ್ತೆಂದು ತಿಳಿಯುತ್ತದೆ.

ಈ ಪರಿಸರದಲ್ಲಿ ಕ್ರಿ.ಶ. ೧೧-೧೨ನೇ ಶ.ದಲ್ಲಿ ಸಹಸ್ರ ಸಂಖ್ಯೆಯಲ್ಲಿ ನೆಲೆಸಿದ್ದ ಕನ್ನಡ ಶಾಖೆಯ ಬ್ರಾಹ್ಮಣರ ಸಂತತಿಯವರು ನಂತರದ ಕಾಲದಲ್ಲಿ ಹೀಗೆ ಖಚಿತವಾಗಿ ನೆಲೆಸಿದ್ದಂತೆ ಶಾಸನಗಳಲ್ಲಿ ಕಾಣಬರುತ್ತಿಲ್ಲ. ಈ ಬ್ರಾಹ್ಮಣರ ಹೆಸರಿನೊಂದಿಗೆ ಸೇರಿರುವ ಉಪಪದಗಳಾದ-ಷಣಂಗಿ, ಪಟ್ಟವರ್ಧನ, ಕ್ರಮಿತ, ದೀಕ್ಷಿತ, ಘಳಿಸರು ಮುಂತಾದವು ಅವರ ವಂಶನಾಮಗಳಂತೆ, ಅವರ ವಿದ್ವತ್ಸೂಚಕ ಪದಗಳಾಗಿವೆ. ಬೇಗೂರು ಅಗ್ರಹಾರ ಸಹಸ್ರದ ಮೂನ್ನೂರ್ವರು ಬ್ರಾಹ್ಮಣರಿಗೆ ಜನಮೇಜಯನು ದಾನ ನೀಡಿದ್ದಾನೆಂದಿದೆ. ಗೌಜದಲ್ಲಿದ್ದ ಈ ಬ್ರಾಹ್ಮಣರ ಘನತೆಯನ್ನು ಯಮನಿಯಮ ಸ್ವಾಧ್ಯಾಯಧ್ಯಾನಧಾರಣ ಮೋನಾನುಷ್ಠಾನರು, ಜಪಶೀಲ ಸಮಾಧಿ ಸಂಪನ್ನರಾದ ಚತುರ್ವೇದ ಮುಖೋದ್ಗತರೂ, ಸ್ಮೃತಿಶಾಸ್ತ್ರ ಕುಶಲರು-ಎಂದಿದೆ. ಇಂಥ ಬ್ರಾಹ್ಮಣವರ್ಗದವರು ಇಲ್ಲಿ ನೆಲೆಸಿದ್ದರು.

ಸುಮಾರು ಕ್ರಿ.ಶ.೯ನೇ ಶತಮಾನದ ನಂತರದಲ್ಲಿ ಕಾಶ್ಮೀರದಿಂದ ವಲಸೆ ಬಂದಿದ್ದ ಬ್ರಾಹ್ಮಣರು ಕರ್ನಾಟಕದಲ್ಲಿ ನೆಲೆಸಿದ್ದನ್ನು ಶಾಸನಗಳು ದಾಖಲಿಸಿವೆ. ಕಾಶ್ಮೀರ ಸಂತತಿಯ ಒಂದು ಪಂಗಡದ ಕಾಳಾಮುಖ ಮುನಿಗಳು ಬಳ್ಳಾರಿ, ಬಿಜಾಪುರ, ಶಿವಮೊಗ್ಗ ಜಿಲ್ಲೆಗಳಲ್ಲಿ ನೆಲೆಸಿದ್ದರೆಂದು ಶಾಸನಗಳಿಂದ ತಿಳಿಯುತ್ತದೆ. ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯ ಕೋಡಿಮಠದಲ್ಲಿ ಕಾಶ್ಮೀರಿದೇವನ ಸಂತತಿಯ ಕಾಳಾಮುಖ ಮುನಿಗಳು ನೆಲೆಸಿದ್ದರೆಂಬುದು ಖಚಿತವಾಗಿದೆ. ಕಲ್ಯಾಣ ಚಾಲುಕ್ಯರ ದೊರೆ ವಿಕ್ರಮಾದಿತ್ಯನ ಕಾಲದಲ್ಲಿ-ಆಸ್ಥಾನಕವಿ ಬಿಲ್ಹಣನು ಕಾಶ್ಮೀರದಿಂದ ಬಂದವನು. ಹೀಗೆ ಕ್ರಿ.ಶ. ೧೦-೧೨ನೇ ಶ.ದಲ್ಲಿ ದಕ್ಷಿಣ ಭಾರತದ ಹಲವೆಡೆಗಳಲ್ಲಿ ಕಾಶ್ಮೀರಿ ಬ್ರಾಹ್ಮಣರು ನೆಲೆಸಿದ್ದು, ಮೇಲೆ ತಿಳಿಸಿರುವ ಕನ್ನಡ ಶಾಖೆಯ ಬ್ರಾಹ್ಮಣರೂ ಕಾಶ್ಮೀರದಿಂದ ಬಂದು ನೆಲೆಸಿದ್ದ ಕನ್ನಡ ಶಾಖೆಯ ಬ್ರಾಹ್ಮಣರೆಂದು ತಿಳಿಯುತ್ತದೆ. ಇದನ್ನು ಕೆಳಗಿನ ಶಾಸನಗಳಿಂದ ದೃಢಪಡಿಸಬಹುದು.

ಶಿಕಾರಿಪುರ ತಾಲೂಕಿನ ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯದ ಶಾಸನವು (ಶಿ.ಪುರ.೧೦೪), ಬಿಜ್ಜಣದೇವನು ಸಕಳ ದೇಶವನ್ನು ಆಳುತ್ತಿದ್ದಾಗ ಬನವಸೆ ಪನ್ನಿಚ್ಛಾಸಿರವನ್ನು ಪೋತರಸ, ಚಟ್ಟಮರಸ, ಪದ್ಮರಸ ಮತ್ತು ಸೋವರಸರೆಂಬ ನಾಲ್ಕು ಕರಣಗಳು ಆಳುತ್ತಿದ್ದರೆಂದು ತಿಳಿಸಿದೆ. ಇವರ ಮಹಾಪ್ರಧಾನನಾದ ಹರಸರಸಿರುಹ ಷಟ್ಚರಣಂ, ಬುಧಜನೈಕಶರಣಂ ಆದ ಶ್ರೀಮದ್ರಾಯ ನಾರಾಯಣಪುರದವನಾದ ತತ್ರಮಾನ್ಯ ಸಹವಾಸ್ಯಾನಂದ ಭಟ್ಟೋಪಧ್ಯಾಯ ಪ್ರಿಯತನೂಜನೂ, ಸಂತರ್ಪಿತ ಬುಧ ಸಮಾಜನೂ ವೃಷಣಗೋತ್ರ ಪವಿತ್ರನಾದ ಗೌರಲಾದೇವಿಯ ಪ್ರಿಯಪುತ್ರ ಇತ್ಯಾದಿ ನಾಮಾವಳೀ ವಿರಾಜಮಾನನಾದ, ಮಾಯಿದೇವರಸನೆಸೆದನು, ಎಂದಿದೆ. ಅಂದರೆ, ಮಾಯಿದೇವರಸನು ಶ್ರೀಮದ್ರಾಯ ನಾರಾಯಣಪುರದಲ್ಲಿ ಮಾನ್ಯರಾಗಿದ್ದ ಸಹವಾಸ್ಯಾನಂದ ಭಟ್ಟೋಪದ್ಯಾಯನ ಪ್ರಿಯತನೂಜ. ಈ ಮಾಯಿದೇವರಸನು ಬನವಸೆ ಪನ್ನಿಚ್ಛಾಸಿರದ ವಡ್ಡರಾವುಳ, ಹೆಜ್ಜುಂಕದ ಹೆಗ್ಗಡೆಯೂ ಆಗಿದ್ದು-ಚಾಳುಕ್ಯ ತ್ರೈಲೋಕ್ಯಮಲ್ಲ ವರ್ಷ ೬ನೇ ಯುವ ಪಾರ್ಥಿವ ಸಂವತ್ಸರದಲ್ಲಿ ಕೇದಾರೇಶ್ವರದ ವಾಮಶಕ್ತಿ ದೇವರಿಗೆ ದಾನ ನೀಡಿದ್ದನ್ನು ತಿಳಿಸಿದೆ.

ಇದೇ ದೇವಾಲಯದ ಮತ್ತೊಂದು ಶಾಸನವು (ಶಿ.ಪುರ.೧೯೯), ಕಲ್ಯಾಣ ಚಾಲುಕ್ಯ ದೊರೆ ತ್ರಿಭುವನಮಲ್ಲನು ಆಳುತ್ತಿದ್ದಾಗ, ಮಹಾಪ್ರಧಾನಿ, ಅಂತಃಪುರದ ಅಧ್ಯಕ್ಷನಾದ ಸಹವಾಸಿಗಳ ಅಧಿಷ್ಠಾಯಕ ಹೆರಿಲಾಳ ಕಂನಡ ಸರಧಿವಿಗ್ರಹಿ ಮನೆವೆರ್ಗ್ಗಡೆ ಭೀವಣಯ್ಯಗಳನ್ನು ಹೆಸರಿಸಿದೆ. ಭೀವಣಯ್ಯನು ಕನ್ನಡವಂಶದ ಸಂಧಿವಿಗ್ರಹಿಯಾಗಿದ್ದು, ಸಹವಾಸಿಗಳ ಅಧಿಷ್ಠಾಯಕನೂ ಆಗಿದ್ದದ್ದನ್ನು ಏಕತ್ರ ಸೂಚಿಸಿರುವುದನ್ನು ಕಂಡಾಗ, ಕನ್ನಡ ಶಾಖೆಯ ಬ್ರಾಹ್ಮಣರು ಕಾಶ್ಮೀರದ ಬ್ರಾಹ್ಮಣರೆನ್ನಿಸಿದ್ದ ಸಹವಾಸಿ ಬ್ರಾಹ್ಮಣರೆಂದು ಸ್ಪಷ್ಟವಾಗಿದೆ.

ಶಿಕಾರಿಪುರ ತಾಲೂಕಿನ ಮತ್ತೊಂದು ಶಾಸನವು (ಶಿ.ಪುರ.೧೬೬)-ತ್ರಿಭುವನಮಲ್ಲದೇವರ ವರ್ಷದ ೩ನೇ ಅಂಗೀರಸ ಸಂವತ್ಸರ ವೈಶಾಖಶುದ್ಧ ಏಕಾದಶಿಯಂದು, ಮಹಾಪ್ರಧಾನ ಭೀಮಣ್ಣದಂಡನಾಯಕನ ಮೊಮ್ಮಗ ಸಾವಾಸಿಗಳ ಅಧಿಷ್ಠಾಯಕ ಹೆಗ್ಗಡೆ ಮಲ್ಲದೇವರಸರ ಮಾವನಾದ ಮಧ್ಯದೇಶೀ ಮಹಾಪ್ರಧಾನ ಸಂಧಿವಿಗ್ರಹಿ.....ಚವುಂಡಹಳ್ಳಿಯ ದೇವಪ್ಪನಾಯಕರ ಮೊಮ್ಮಗ ಕಿರುಗೇರಿಯ ಮಹಾಪ್ರಭು ಚೌಂಡರಸರು ಬ್ರಾಹ್ಮಣರ ಅಗ್ರಾಸನಕ್ಕೆ ಬಿಟ್ಟ ದಾನವನ್ನು ತಿಳಿಸಿದೆ. ಈ ಶಾಸನದಲ್ಲಿ ಮೈಳುಗಿ ದೇವನನ್ನು ಉಲ್ಲೇಖಿಸಿದೆ.

ಶಿಕಾರಿಪುರ ತಾಲೂಕಿನ ಬಂದಳಿಕೆ ಗ್ರಾಮದ ಶಾಸನದಂತೆ (ಶಿ.ಪುರ.೨೩೫), ವೀರಬಲ್ಲಾಳದೇವನು ಆಳುತ್ತಿದ್ದಾಗ, ಅವನ ಅಧಿಕಾರಿ ಮಲ್ಲಿದೇವನು ಅಗ್ರಹಾರ ನಿರ್ಮಿಸಿದನು. ಆಗ ರಾಣಿ ಕೇತಲಾದೇವಿಯು ರಾಜನಲ್ಲಿ ಬಿನ್ನಪಮಾಡಿ ಆ ಅಗ್ರಹಾರವನ್ನು ೩೩ ಕಂಬ ಮತ್ತರ್ ಭೂಮಿ ದಾನ ಬಿಡಿಸಿದ್ದನ್ನು ತಿಳಿಸಿದೆ. ಈ ವೃತ್ತಿಗಳ ಹಂಚಿಕೆಯಲ್ಲಿರುವ ಬ್ರಾಹ್ಮಣರಲ್ಲಿ-ನಂದಿಪೆದ್ದಿಗಳು, ನಾಚಣಪಟ್ಟವರ್ಧನ, ಸರ್ವಜ್ಞ ಸೋಯಿದೇವ, ವೈಯಾಕರಣ ಸೋವಿದೇವಭಟ್ಟರು, ನಾಗದೇವ ಪಟ್ಟವರ್ಧನ, ಹರಿಹರ ಪಟ್ಟವರ್ಧನ, ಚೌಂಡರಾಯಭಟ್ಟ, ಸುಸ್ವರಿತ ವಿಕ್ರಮಪಟ್ಟವರ್ಧನ, ವಿಷ್ಣು ಘಳಿಸಾಸರಿಗೆ ವೃತ್ತಿಗಳನ್ನು ಹಂಚಲಾಗಿದೆ.

ಇಲ್ಲಿ ಚಿಕ್ಕ ವಾಗೀಶ್ವರಭಟ್ಟರಿಗೆ ಕಲಿಘಳಿಸಾಸರ ವೃತ್ತಿ ಮೂರನ್ನು ನೀಡಿರುವುದು ಗಮನಾರ್ಹ. ಪ್ರಭಾಕರದ ಅಪ್ಪಣ್ಣಗಳು, ವೇದಾರ್ಥದ ಯೋಗೀಸ್ವರಭಟ್ಟ, ಸಾಮವೇದಿ ಪದ್ಮನಾಭ ಭಟ್ಟೋಪಧ್ಯಾಯ, ಘಟಿಕಾನರಿ ವಿಷ್ಣುದೇವರಿಗೆ ಎರಡೆರಡು ವೃತ್ತಿ ನೀಡಿದ್ದಾರೆ. ಇಲ್ಲಿರುವ ಅನೇಕ ಹೆಸರು ಕಾಶ್ಮೀರಿ ಬ್ರಾಹ್ಮಣರ ಉಪಾಂತಗಳಾಗಿರುವುದನ್ನು ಗಮನಿಸಬಹುದು.

ಶಿಕಾರಿಪುರ ತಾಲೂಕಿನ ಮಳವಳ್ಳಿಯ ರಾಮಾಂತದೇವರ ದೇವಸ್ಥಾನದ ಶಾಸನ (ಶಿ.ಪುರ.೨೬೭)–ಕಲ್ಯಾಣ ಚಾಲುಕ್ಯ ದೊರೆ ಜಗದೇಕಮಲ್ಲನು ಆಳುತ್ತಿದ್ದಾಗ, ಅವನ ಅಧಿಕಾರಿ ಮಹಾಪ್ರಧಾನ ಅನ್ತಃಪುರಾಧ್ಯಕ್ಷನಾದ ಶ್ರೀಕರಣದ ಹಿರಿಕಂನಡಸಂಧಿವಿಗ್ರಹಿ ಬಮ್ಮದೇವರಸನು ಬನವಸೆಯನ್ನು ಆಳುತ್ತಿದ್ದನೆಂದಿದೆ. ಸೊರಬ ತಾಲೂಕಿನ ತವನಂದಿ ಹೋಬಳಿ ಮೂಡಿ ಗ್ರಾಮದ ಶಾಸನವು (ಸೊರಬ.೧೭೦) ತ್ರಿಭುವನಮಲ್ಲಿದೇವನು ಆಳುತ್ತಿದ್ದಾಗ ಮಹಾಪ್ರಧಾನಿ ಸಹವಾಸಿಗಳ ಅಧಿಷ್ಠಾಯಕ ಸಂಧಿವಿಗ್ರಹಿ ಭೋಗಯ್ಯಗಳನ್ನು ದಾಖಲಿಸಿದೆ. ಇದೇ ಶಾಸನದಲ್ಲಿ–ವಡ್ಡರಾವುಳ ದಂಡನಾಯಕ ಮೆದಿಮಯ್ಯ, ಪೆಗ್ಗಡೆ ಚಾಮುಂಡಯ್ಯ, ಸೋಯಿಮಯ್ಯ, ಲಕ್ಕಿನಾಯಕ, ಮಾಕಿಮಯ್ಯರ ಉಲ್ಲೇಖಗಳಿವೆ.

ಸೊರಬ ೨೯೫ರ ಶಾಸನವು–ಸಿಂಧು ಗೋವಿಂದ, ಸಿತಗರಗಂಡ, ಪಾತಾಳ ಚಕ್ರವರ್ತಿ, ಭುಜಗೇಂದ್ರ ವಂಶೋದ್ಭವ, ರಾಯಪದ ಪಾಳ, ಸಾವಾಸಿಗರಗಂಡ ಶ್ರೀಮಂನಾಳ್ಪ್ರಭು, ಘಟಸರ್ಪಹಡವಳ ಕಾಮಯ್ಯನನ್ನು ಉಲ್ಲೇಖಿಸಿದೆ.

ಸೊರಬ ೫೧೫ರ ಕ್ಯಾಪನೂರ ಹೋಬಳಿ ಚಿಟ್ಟೂರು ಗ್ರಾಮದ ಶಾಸನವು ಕ್ರಿ.ಶ. ೧೧೮೨ರಲ್ಲಿ, ಹೆಜ್ಜುಂಕದ ಹೆಗ್ಗಡೆ ಸವಾಸಿ ಸಿಂಗಯ್ಯ, ಬಸವಯ್ಯನು ಚಿಟ್ಟೂರ ರಾಮನಾಥ ದೇವರಿಗೆ ದಾನ ಬಿಟ್ಟಿದ್ದನ್ನು ತಿಳಿಸಿದೆ. ಈ ಶಾಸನಗಳನ್ನು ಗಮನಿಸಿದರೆ, ಕನ್ನಡ ವಂಶದ ಬ್ರಾಹ್ಮಣರ ಕುಲವು, ಕಾಶ್ಮೀರಿ ಬ್ರಾಹ್ಮಣರಾದ ಸಾವಾಸಿಕುಲದ ಒಂದು ಪಂಗಡವೆಂದು ತಿಳಿಯುತ್ತದೆ. ತವನಂದಿ ಶಾಸನವು ಸ್ಪಷ್ಟವಾಗಿ–ಸಹವಾಸಿಗಳ ಅಧಿಷ್ಠಾಯಕ ಕಂನಡ ಸಂಧಿವಿಗ್ರಹಿ ಭೋಜಯ್ಯನ ಬಗೆಗೆ ತಿಳಿಸುತ್ತಾ, ನಮ್ಮ ಅಭಿಪ್ರಾಯವನ್ನು ಖಚಿತಪಡಿಸಿದೆ. ಸಹವಾಸಿ ವಂಶದ ಬಗೆಗೆ ಮೊದಲು ಗಮನಸೆಳೆದ ಕಪಟರಾಳ ಕೃಷ್ಣರಾಯರು– ಸಹವಾಸಿ ವಂಶದ ಮೂಲಪುರುಷನು ರುದ್ರಭಟ್ಟ ಕವೀಂದ್ರನು. ತನ್ನ ಕವಿತೆಯಿಂದ ಕನ್ನರದೇವನನ್ನು ಮೆಚ್ಚಿಸಿ ೧೮ ಗ್ರಾಮಗಳನ್ನು ಕೊಡುಗೆ ಪಡೆದಿದ್ದನು' ಎಂದು ಶಾಸನ ತಿಳಿಸಿದೆ. ಇದರಿಂದ ಕನ್ನರ ದೇವನ ಕಾಲದಿಂದಲೂ (ಕ್ರಿ.ಶ. ೯೪೫–೯೫೬) ಕನ್ನಡ ನಾಡಿನಲ್ಲಿ ಇವರು ನೆಲೆಸಿದ್ದರೆಂದು ತಿಳಿಸಿದ್ದಾರೆ.

ಮಲೆನಾಡಿನ ಭಾಗಗಳಾದ ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳು ಪ್ರಕೃತಿ ಸಹಜವಾಗಿ ಅರಣ್ಯಾವೃತವಾದ ಭಾಗಗಳಾಗಿದ್ದು ಈ ಪರಿಸರದಲ್ಲಿ ವಿವಿಧ ಜಾತಿಯ ಸರ್ಪಗಳು ಸಹಜವಾಗಿ ಕಾಣಬರುತ್ತವೆ. ಚಿಕ್ಕಮಗಳೂರಿನ ಸಮೀಪದ ಹಿರೇಮಗಳೂರು ಕ್ಷೇತ್ರವು 'ಭಾರ್ಗವಪುರಿ' ಎಂದೂ ಜನಮೇಜಯನು ಸರ್ಪಯಾಗ ಮಾಡಿದ ಪವಿತ್ರ ಕ್ಷೇತ್ರವೆಂದೂ ಐತಿಹ್ಯವನ್ನು ಹೊಂದಿದೆ. ಈ ದಿಸೆಯಲ್ಲಿ ಗಮನಿಸಿದಾಗ, ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ, ಸೊರಬ, ಶಿರಾಳಕೊಪ್ಪ ತಾಲೂಕಿನ ಪರಿಸರದಲ್ಲೂ ಸರ್ಪಗಳು ಹೆಚ್ಚಾಗಿ ನೆಲೆಸಿರುವುದು ಸರ್ವವಿದಿತ. ಇದರಿಂದಾಗಿ ಈ ಪರಿಸರದಲ್ಲಿ ಸು. ೧೦–೧೧ನೇ ಶತಮಾನದಲ್ಲಿ ನೆಲೆಸಿದ್ದ ಬ್ರಾಹ್ಮಣರು 'ಸರ್ಪಯಾಗ'ವನ್ನು ಮಾಡಿದ್ದು, ಅದರ ಮಹತ್ವವನ್ನು ಸಾರಲೆಂಬಂತೆ ಪೌರಾಣಿಕ ಹಿನ್ನೆಲೆಯನ್ನಾಧರಿಸಿ ಜನಮೇಜಯನು ಸರ್ಪಯಾಗ ಮಾಡಿದ ಪ್ರಸಂಗವೆಂದು ಉಲ್ಲೇಖಿಸಿರುವಂತಿದೆ. ತಾಮ್ರ ಶಾಸನಗಳು ಕೂಟ ಶಾಸನಗಳೆನ್ನಿಸಿದ್ದರೂ, ಅದರಲ್ಲಿನ ಸಾಂಸ್ಕೃತಿಕ ಅಂಶವು ಸಹಜವಾಗಿರುತ್ತದೆ ಎಂಬುದು ತಿಳಿದ ವಿಷಯವೇ ಆಗಿದೆ. ಇದರಂತೆ ಶಿವಮೊಗ್ಗ ಜಿಲ್ಲೆಯಲ್ಲಿ ಸಹವಾಸಿ ಕುಲಕ್ಕೆ ಸೇರಿದ ಒಂದು ಪಂಗಡದವರಾದ ಕನ್ನಡ ಶಾಖೆಯ ಬ್ರಾಹ್ಮಣರು ನೆಲೆಸಿದ್ದು, ಆ ಪರಿಸರದ ಧಾರ್ಮಿಕ ಕಾರ್ಯಗಳಲ್ಲಿ ಸಾಮಾಜಿಕ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಈ ಜಿಲ್ಲೆಯ ಸಮಾಜೋಧಾರ್ಮಿಕ ಇತಿಹಾಸವನ್ನು ಅಭ್ಯಸಿಸುವಲ್ಲಿ ಕನ್ನಡ ಶಾಖೆಯ ಬ್ರಾಹ್ಮಣರ ಕೊಡುಗೆಯು ಒಂದು ಮೈಲಿಗಲ್ಲಿನಂತಿದೆ; ಹೀಗೆ ಪ್ರಾಚೀನ ಕರ್ನಾಟಕದಲ್ಲಿ ಕಾಶ್ಮೀರದ ಕಡೆಯಿಂದ ಬಂದು ನೆಲೆಸಿದ್ದ ವಿವಿಧ ಗುಂಪಿನ ಬ್ರಾಹ್ಮಣರ ಬಗೆಗೆ ಹೆಚ್ಚಿನ ಅಧ್ಯಯನವಿನ್ನೂ ಆಗಬೇಕಾಗಿದೆ.

ಗ್ರಂಥಋಣ

೧. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ ೭, ೮ (ರೈಸ್ ಸಂಪುಟಗಳು).

೨. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ ೧೩ (ಮೈ.ವಿ.ವಿ.).

೩. ಕಪಟರಾಳ ಕೃಷ್ಣರಾಯರು, (ಲೇಖನ)–ಕೃತಿ–ಕರ್ನಾಟಕ ಸಂಸ್ಕೃತಿ ಸಂಶೋಧನೆ, ಮೈಸೂರು–೧೯೭೦.

೪. ವಸಂತಲಕ್ಷ್ಮಿ.ಕೆ., ಹಾಸನ ಜಿಲ್ಲೆಯ ಕಾಶ್ಮೀರಿ ಬ್ರಾಹ್ಮಣರು, ಇತಿಹಾಸ ದರ್ಶನ, ಸಂ. ೧೫, ಪು. ೧೯೭.

೫. ಸವ್ಯಸಾಚಿ, ಕಣ್ಣನ್, ಶ್ರೀನಿವಾಸ ದೇಶಿಕಾಚಾರ್, ಭಾರ್ಗವಪುರಿ–ಹಿರೇಮಗಳೂರು, ಚಿಕ್ಕಮಗಳೂರು.

೩೫

ತುಳುನಾಡಿನಲ್ಲಿ ಹೊಯ್ಸಳರು–ಶಾಸನೋಕ್ತ ಆರ್ಥಿಕ ವಿಶ್ಲೇಷಣೆ

ಮಧುರಾಜ್*

ಆರಂಭಿಕ ಮಧ್ಯಯುಗೀನ ಕಾಲದಿಂದ ಮೊದಲು ಗೊಂಡ ಹೊಯ್ಸಳ ವಂಶದ ಆಡಳಿತವು ಅನೇಕ ರಾಜಕೀಯ ಸ್ಥಿತ್ಯಂತರಗಳಿಗೆ ಒಳಗಾಗಿದ್ದು, ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಅನೇಕ ಕಾರ್ಯತಂತ್ರಗಳನ್ನು ರೂಪಿಸಿಕೊಂಡಿತ್ತು. ರಾಜಕೀಯ ಅಸ್ತಿತ್ವವನ್ನು ಪೋಷಿಸಲು ಆರ್ಥಿಕ ಸದೃಢತೆ ಅನಿವಾರ್ಯವಾಗಿದ್ದು, ಈ ನಿಟ್ಟಿನಲ್ಲಿ ಭೌಗೋಳಿಕವಾಗಿ ವಾಣಿಜ್ಯ ವ್ಯವಹಾರಗಳಿಗೆ ಅತ್ಯವಶ್ಯವೆನಿಸಿದ ಸಂಪದ್ಭರಿತ ತುಳುನಾಡನ್ನು ತಮ್ಮ ರಾಜ್ಯದ ಅವಿಭಾಜ್ಯ ಅಂಗವನ್ನಾಗಿ ಪರಿವರ್ತಿಸುವ ಪ್ರಯತ್ನಗಳು ಮತ್ತು ಸಾಂಪ್ರದಾಯಿಕ ರಾಜಕಾರಣದಿಂದ ಅಸಾಧ್ಯವೆನಿಸಿದಾಗ ಪರಿಸ್ಥಿತಿಗನುಗುಣವಾಗಿ ಸಾಂಪ್ರದಾಯಿಕ ನಿಯಮಗಳಿಗಿಂತ ವ್ಯತಿರಿಕ್ತವಾದ ರಾಜಕೀಯ ಹಾಗೂ ಆರ್ಥಿಕ ಅಭಿಲಾಷೆಯನ್ನು ತುಳುನಾಡಿನಲ್ಲಿ ಹೊಯ್ಸಳರು ವ್ಯಕ್ತಪಡಿಸಿದ್ದರು.

ಆರ್ಥಿಕ ಸಮೃದ್ಧತೆಯ ಆಧಾರದಲ್ಲಿ ರಾಜ್ಯದ ರಾಜಕೀಯ ಸ್ಥಿರತೆಯನ್ನು ಅಳೆಯಬಹುದಾಗಿದ್ದು, ಹೊಯ್ಸಳರ ರಾಜ್ಯ ಮೂರು ನದಿ ಬಯಲುಗಳನ್ನು ಒಳಗೊಂಡಿದ್ದು, ಉತ್ತರದಲ್ಲಿ ಕೃಷ್ಣಾ, ಮಧ್ಯಭಾಗದಲ್ಲಿ ತುಂಗಭದ್ರಾ ಹಾಗೂ ದಕ್ಷಿಣದಲ್ಲಿ ಕಾವೇರಿ ನದಿ ಮತ್ತು ಉಪನದಿಗಳು ಕೃಷಿ ಚಟುವಟಿಕೆಗಳಿಗೆ ಇಂಬು ನೀಡುತ್ತಿತ್ತು. ಶಿಕಾರಿಪುರ ತಾಲೂಕಿನ ಬಳ್ಳಿಗಾವೆ ದಾನಶಾಸನವು *"Kunthala which is an ornament of Bharata is filled with prosperous people abundance of flowers agreeable occupation splendid streams and tanks"*[1]. ಎಂದು ತಿಳಿಸುವ ಮೂಲಕ ಹೊಯ್ಸಳ ನಾಡು ಕೃಷಿ ಚಟುವಟಿಕೆಯ ಸಮೃದ್ಧಿಯು ಖಚಿತವಾಗಿದೆ. ಇದರ ಪರಿಣಾಮ ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರಗಳ ಬೆಳವಣಿಗೆ ಸಾಧ್ಯವಾಗಿದ್ದು, ಆಂತರಿಕ ಶಾಂತಿ ಮತ್ತು ಭದ್ರತೆಗೆ ಸರಿಯಾದ ಸಾರಿಗೆ ಸಂಪರ್ಕ, ವಾಣಿಜ್ಯ ವಸ್ತುಗಳ ಲಭ್ಯತೆ, ಸಂಘಟಿತ ವ್ಯಾಪಾರೀ ಸಮುದಾಯ, ಸುಲಭ ಹಾಗೂ ಸುಲಲಿತ ವಿನಿಮಯ ಮತ್ತು ರಾಜಾಶ್ರಯ ಪೂರಕವಾಗಿದೆ. ವ್ಯಾಪಾರೀ ಸಮುದಾಯಗಳು ಹೊಯ್ಸಳ ರಾಜ್ಯದ ವ್ಯಾಪಾರೀ ಹೆದ್ದಾರಿಗಳಲ್ಲಿ ಲಭಿಸುವ ಸೌಕರ್ಯಗಳನ್ನು ತಿಳಿಸುತ್ತಾ ಬಳಸಿಕೊಂಡು ವಾಣಿಜ್ಯೋದ್ಯಮಕ್ಕೆ ಮತ್ತು ಹೂಡಿಕೆಗೆ ಹೊಯ್ಸಳರ ನಾಡು ಅತ್ಯುತ್ತಮವಾಗಿತ್ತು ಎಂದು ಸ್ವತಃ ವ್ಯಾಪಾರಿಗಳೇ ಒಪ್ಪಿಕೊಂಡಿರುವುದು ಗಮನಾರ್ಹ.

ತುಳುನಾಡಿನ ಅವಶ್ಯಕತೆಯನ್ನು ವಾಣಿಜ್ಯ ಹಾಗೂ ವ್ಯಾಪಾರೀ ಚಟುವಟಿಕೆಗಳಲ್ಲಿ ಹೊಯ್ಸಳರು ಕಂಡುಕೊಂಡಿರುವುದನ್ನು ಮನಗಾಣಬೇಕಾದರೆ ಹನ್ನೊಂದು ಮತ್ತು ಹನ್ನೆರಡನೆಯ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಪುನರುಜ್ಜೀವನಗೊಂಡ ಅರ್ಥವ್ಯವಸ್ಥೆಗೆ ಹೊಯ್ಸಳರನಾಡು ಹೇಗೆ ಸ್ಪಂದಿಸಿತ್ತು ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಸಾಕಷ್ಟು ವ್ಯಾಪಾರೀ ಸಮುದಾಯದಿಂದ ಪ್ರಶಂಸೆಗೊಳಗಾದ ಹೊಯ್ಸಳನಾಡು, ವ್ಯಾಪಾರೀ ಸಂಪರ್ಕಕ್ಕೆ ಹೆಚ್ಚಾಗಿ ದಕ್ಷಿಣದ ಹೆದ್ದಾರಿಯನ್ನು ಅವಲಂಬಿಸಿಕೊಂಡಿತ್ತು. ಮಂಗಳೂರಿನಿಂದ ಪ್ರಾರಂಭಗೊಂಡ ವ್ಯಾಪಾರೀ ಮಾರ್ಗ ಮೂಡಿಗೆರೆ ಮತ್ತು ಅಂಗಡಿಯ ಮೂಲಕ ಬೇಲೂರು ಮತ್ತು ದ್ವಾರಸಮುದ್ರ ಪ್ರವೇಶಿಸಿ ಅಲ್ಲಿಂದ ಪೂರ್ವಕ್ಕೆ ಹಾರನಹಳ್ಳಿ, ಅರಸೀಕೆರೆ, ಚಿಕ್ಕನಾಯಕನ ಹಳ್ಳಿ ಮತ್ತು ಕೋಲಾರ ತಲುಪುತ್ತಿದ್ದು, ಹೆದ್ದಾರಿಯು ಮುಂದುವರೆದು ದಕ್ಷಿಣದ ತೊಂಡನೂರು, ಸೋಮನಾಥಪುರ ಮತ್ತು ತಲಕಾಡುಗಳನ್ನು ಸಂಪರ್ಕಿಸುತ್ತಿತ್ತು.[2] ಇನ್ನೂ ವಿಶೇಷವಾಗಿ ಗಮನಿಸಬೇಕಾದ ಅಂಶವೆಂದರೆ, ಹೊಯ್ಸಳನಾಡಿನ ಪ್ರಮುಖ ವ್ಯಾಪಾರಿ ಕೇಂದ್ರಗಳಲ್ಲೊಂದಾದ ಅರಸೀಕೆರೆ, ಆಲೂರು ಮತ್ತು ಬಾಣವೂರು ನಡುವಿನ ಪ್ರಮುಖ ವ್ಯಾಪಾರಿ ಹೆದ್ದಾರಿಯ ಮಧ್ಯಭಾಗದಲ್ಲಿದ್ದು, ಬಾಣಾವೂರಿನಿಂದ ಪಶ್ಚಿಮದ ಕಡೆಗೆ ತಿರುಗಿ, ಮಂಗಳೂರನ್ನು ಪ್ರವೇಶಿಸಬಹುದಾಗಿದೆ. ಇದಲ್ಲದೇ ಈ ಮಾರ್ಗವು ಪಶ್ಚಿಮ ಘಟ್ಟಗಳ ಮೇಲಿರುವ ಬೇಲೂರು ಮತ್ತು ದ್ವಾರಸಮುದ್ರವನ್ನು ಬಳಸಿಕೊಂಡು ಬಂದಿದ್ದು, ಎಲ್ಲ ಹೊಯ್ಸಳ ನಾಡಿನ ವ್ಯಾಪಾರ ಕೇಂದ್ರಗಳನ್ನು ಸಂಪರ್ಕ ಸಾಧಿಸುವುದರಿಂದ ಆಂತರಿಕ ವ್ಯಾಪಾರ, ಪಟ್ಟಣ ಪಟ್ಟಣಗಳ ನಡುವಿರುವ ಸಂಬಂಧ ಹಾಗೂ ನಗರ ಮತ್ತು ದೇಶಗಳ ನಡುವಿನ ವ್ಯಾಪಾರಿ ಸಂಪರ್ಕಕ್ಕೆ ಕಾರಣವಾಗಿದೆ.

---

* ಇತಿಹಾಸ ಉಪನಸ್ಯಾಕರು, ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜು, ಅದಮಾರು, ಉಡುಪಿ ಜಿಲ್ಲೆ–೫೭೪೧೧೬.

ಹೊಯ್ಸಳರು ತಮ್ಮ ಆಳ್ವಿಕೆಯ ಉದ್ದಕ್ಕೂ ಬಾರಕೂರು, ಘಟ್ಟದ ಹೆದ್ದಾರಿಯನ್ನು ತಮ್ಮ ಪಶ್ಚಿಮದ ಪರಿಧಿಯೆಂದು ನಿರಂತರವಾಗಿ ಶಾಸನಗಳಲ್ಲಿ ಉಲ್ಲೇಖಿಸಿದ್ದು, ಹೊಯ್ಸಳ ವಿಷ್ಣುವರ್ಧನನ ಸಾಮ್ರಾಜ್ಯ ಸಾ. ಶ. ೧೧೩೬ರಲ್ಲಿ ತನ್ನ ಪರಿಧಿಯ ವಿಸ್ತರಣೆ ಮಾಡಿದ್ದರೂ ಆತ ತುಳುನಾಡಿನ ಮೇಲೆ ಅತಿಕ್ರಮಣ ಮಾಡಿದನೇ ಹೊರತಾಗಿ, ರಾಜ್ಯದ ಭಾಗವನ್ನಾಗಿ ಮಾಡಿಕೊಂಡಿಲ್ಲ. ಕ್ರಿ.ಶ. ೧೨ನೇ ಶತಮಾನದ ನಂತರವಷ್ಟೇ ಸಾಮ್ರಾಜ್ಯದ ಭಾಗವಾಗಿ ಘೋಷಿಸಿಕೊಂಡಿದ್ದರು. ಆದರೆ ಮೂರನೇ ಬಲ್ಲಾಳನ ಕ್ರಿ.ಶ. ೧೩೧೮–೧೯ರ ಶಾಸನವು ಚಂದಾವರದ ಬಸವದೇವನನ್ನು ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಸೋಲಿಸಿ, ತುಳುವ ಪ್ರದೇಶದಲ್ಲಿ ತನ್ನ ಇರುವಿಕೆಯನ್ನು ಗೊತ್ತುಪಡಿಸಿದ್ದ.[೩] ಇದರ ಹೊರತಾಗಿ ಬೇರಾವ ಅರಸರುಗಳು ತಮ್ಮ ರಾಜಕೀಯ ಅಸ್ತಿತ್ವವನ್ನು ಕಂಡುಕೊಂಡಂತಹ ಖಚಿತ ಉದಾಹರಣೆಗಳು ಕಾಣಸಿಗುವುದಿಲ್ಲ. ಕ್ರಿ.ಶ. ೧೩೦೦ರ ನಂತರದ ಹೊಯ್ಸಳರ ರಾಜಕೀಯ ಪರಿಸ್ಥಿತಿಯನ್ನು ಅವಲೋಕಿಸಿದಾಗ ಚಿಂತಾಜನಕವಾದ ರಾಜಕೀಯ ಸನ್ನಿವೇಶಗಳು ಎದುರಾಗಿದ್ದು, ದೆಹಲಿಯ ಸುಲ್ತಾನರು ನಿರಂತರ ದಾಳಿಯಿಂದ ತತ್ತರಿಸಿದ್ದು, ಫೆರಿಸ್ತಾ, ಬರಾನಿಯ ಬರಹಗಳು ಮಹಮ್ಮದ್ ಬಿನ್ ತುಘಲಕ್, ದೇವಗಿರಿ, ತೆಲಂಗಾಣ, ಕಂಪಿಲ, ದ್ವಾರಸಮುದ್ರ ಮತ್ತು ಮಲಬಾರ್‌ಗಳಿಂದ ಬೃಹತ್ ಪ್ರಮಾಣದ ಸಂಪತ್ತನ್ನು ಪಡೆಯುತ್ತಿದ್ದರು.[೪] ಇಂತಹ ಸನ್ನಿವೇಶದಲ್ಲಿ ಹೆಚ್ಚುತ್ತಿರುವ ಆರ್ಥಿಕ ಅಗತ್ಯತೆಗಳನ್ನು ಪೂರೈಸಲು ಅನಿವಾರ್ಯ ಎಂಬಂತೆ ಮೂರನೇ ಬಲ್ಲಾಳನು ಪಶ್ಚಿಮ ಕರಾವಳಿಯ ಕಡೆಗೆ ತನ್ನ ಗಮನವನ್ನು ಹರಿಸಿದ್ದು, ಆರ್ಥಿಕ ಅವಶ್ಯಕತೆಗಳನ್ನು ಕರಾವಳಿ ಪ್ರದೇಶದ ವಾಣಿಜ್ಯ ವ್ಯವಹಾರಗಳಿಂದ ಸರಿದೂಗಿಸುವುದು ಇದರ ಉದ್ದೇಶವಾಗಿದೆ. ಹೆಚ್ಚುತ್ತಿರುವ ಆರ್ಥಿಕ ಬೇಡಿಕೆಯನ್ನು ಪೂರೈಸಿ, ರಾಜಕೀಯ ಸ್ಥಿರತೆಯನ್ನು ಕಂಡುಕೊಳ್ಳುವ ಪ್ರಯತ್ನ ನಡೆಸಿದಂತೆ ಭಾಸವಾಗುತ್ತದೆ. ಈ ವಿಚಾರವನ್ನು ಇನ್ನಷ್ಟು ಸ್ಪಷ್ಟವಾಗಿ ಪ್ರಚುರಪಡಿಸಲು ತುಳುನಾಡಿನಲ್ಲಿ ಹೊಯ್ಸಳರ ಸಮಕಾಲೀನ ಆರ್ಥಿಕ ವಿಚಾರಗಳನ್ನೊಳಗೊಂಡಂತಹ ಶಾಸನಗಳನ್ನು ಅಧ್ಯಯನ ಮಾಡುವುದರಿಂದ ಅರ್ಥೈಸಿಕೊಳ್ಳಬಹುದಾಗಿದೆ. ಈ ಕಾಲಾವಧಿಯಲ್ಲಿ ಒಟ್ಟು ಇಂತಹ ಎಂಟು ಶಾಸನಗಳನ್ನು ಗುರುತಿಸಬಹುದಾಗಿದೆ. ಕ್ರಿ.ಶ. ೧೨೧೫ರ ಮೂಡಬಿದ್ರೆ ಶಾಸನ[೫], ಕ್ರಿ.ಶ. ೧೨೫೪ರ ಕೋಟೇಶ್ವರ ಶಾಸನ[೬], ಕ್ರಿ.ಶ. ೧೨೬೨ರ ಕುಂದಾಪುರ ಶಾಸನ[೭], ೧೨೮೭ರ ಕೊಡವೂರು ಶಾಸನ[೮], ಕ್ರಿ.ಶ. ೧೨೯೨ರ ಪಡುಅಲೆವೂರು ಶಾಸನ[೯], ಕ್ರಿ.ಶ. ೧೨೯೨ರ ನೀಲಾವರ ಶಾಸನ[೧೦], ಕ್ರಿ.ಶ. ೧೩೦೨ರ ಮಂಗಳೂರು ಶಾಸನ[೧೧] ಮತ್ತು ಕ್ರಿ.ಶ. ೧೩೩೪ರ ಹಿರಿಯಂಗಡಿ ಶಾಸನ[೧೨]. ಈ ಎಲ್ಲಾ ಶಾಸನಗಳು ಹನ್ನೆರಡನೇ ಶತಮಾನದ ನಂತರದ ಶಾಸನಗಳಾಗಿದ್ದು, ಆರ್ಥಿಕ ವಿಚಾರಗಳ ಬಗ್ಗೆ ಹೆಚ್ಚು ಬೆಳಕು ಚೆಲ್ಲುತ್ತದೆ. ಹನ್ನೆರಡನೇ ಶತಮಾನದ ನಂತರ ದಕ್ಷಿಣ ಭಾರತದಲ್ಲಾದ ಆರ್ಥಿಕ ಪುನರುಜ್ಜೀವನದ ಬಗ್ಗೆ ಹೆಚ್ಚಿನ ದಾಖಲೆಗಳು ಕಂಡು ಬಂದಿದ್ದು, ಅದರಲ್ಲೂ ವಿಶೇಷವಾಗಿ ಹೊಯ್ಸಳರ ಸುದೀರ್ಘ ಆಳ್ವಿಕೆ ನಡೆಸಿದ ಮೂರನೇ ಬಲ್ಲಾಳ ಕ್ರಿ.ಶ. ೧೩೩೩–೩೬ರಲ್ಲಿ ತುಳುನಾಡಿನಲ್ಲಿ ಬಂದು ನೆಲೆಸಿದ್ದು, ತನ್ನ ಆರ್ಥಿಕ ಸಂಪನ್ಮೂಲದ ಕ್ರೋಢೀಕರಣಕ್ಕಾಗಿ ಹೊರತು, ಸಾಮ್ರಾಜ್ಯ ವಿಸ್ತರಣೆಗೆಂದಲ್ಲ. ಈತನ ಕ್ರಿ.ಶ. ೧೩೩೪ರ ಶಾಸನವು ತುಳುನಾಡಿನ ಆಳ್ವಿಕೆಯ ಸಮಕಾಲೀನ ಶಾಸನವಾಗಿದ್ದು, ಸೆಲೆಯ ಮಾಳವೆ, ಉಪ್ಪಿನ ಹೇರು, ಮೆಣಸಿನ ಭಾರ, ಶುಂಠಿಯ ಭಾರ, ಭತ್ತದ ಹೇರು, ಅಕ್ಕಿಯ ಹೇರು, ಎಳ್ಳು ಹೇರು, ಮುಂತಾದವುಗಳ ಮೇಲೆ ವಿಧಿಸುತ್ತಿದ್ದ ಸುಂಕವನ್ನು ತಿಳಿಸಿದ್ದು, ತುಳುನಾಡನ್ನು ಆರ್ಥಿಕತೆಯ ದೃಷ್ಟಿಯಿಂದ ಬಳಸಿಕೊಂಡಿರುವುದಕ್ಕೆ ಅತ್ಯಂತ ಸಮರ್ಪಕ ಉದಾಹರಣೆಯಾಗಿದೆ.

ಹೊಯ್ಸಳರು ಒಂದು ಏಕೀಕೃತ ರಾಜ್ಯವನ್ನು ಸ್ಥಾಪಿಸಲು ಸಾಧ್ಯವಾಗಿಲ್ಲ. ನಿಯಂತ್ರಣವನ್ನು ರಾಜ್ಯದ ಕೇಂದ್ರದಿಂದ ಪ್ರಾರಂಭಿಸಿ, ಪ್ರಭಾವಲಯಕ್ಕೆ ವ್ಯಾಪಿಸುವುದು ತ್ರಾಸದಾಯಕ. ಸೈನಿಕ ಶಕ್ತಿಯನ್ನು ಅವಲಂಬಿಸಿ ಗೆದ್ದ ಸಂಸ್ಥಾನಗಳನ್ನು ಅದೇ ಸಾಮಂತರಿಗೆ ವಹಿಸಿಕೊಡುವ ಕ್ರಮ ಏಕೀಕೃತ ರಾಜ್ಯ ವ್ಯವಸ್ಥೆಗೆ ಹೊಂದಿಕೊಳ್ಳಲಾಗದು. ಅದಕ್ಕಾಗಿ ಅಧೀನ ಒಕ್ಕೂಟ ಮತ್ತು ಸಾಮಂತ ವ್ಯವಸ್ಥೆಯ ಲಕ್ಷಣಗಳನ್ನು ಅದು ಹೊಂದಿತ್ತು. ಅಧೀನ ರಾಜನಿಷ್ಠೆ ಹಲವು ಬಾರಿ ಸ್ವಯಂಪ್ರೇರಿತವಾಗಿದ್ದು, ಇನ್ನು ಕೆಲವು ಬಾರಿ ಬಲಾತ್ಕಾರದ ನಿಷ್ಠೆಯಾಗಿತ್ತು. ಇದಕ್ಕೆ ಸರಿಯಾಗಿ ಹೊಯ್ಸಳರ ರಾಜ್ಯ ಕೇಂದ್ರೀಕೃತ ಮತ್ತು ಊಳಿಗಮಾನ್ಯದ ಅಂಶಗಳೆರಡರ ಸಮ್ಮಿಶ್ರಣವಾಗಿದ್ದು, ವಿದೇಶೀ ವ್ಯಾಪಾರದಂತಹ ಕೆಲವು ಅಂಶಗಳು ಹೊರಗಿನ ಸನ್ನಿವೇಶಗಳನ್ನು ಅವಲಂಬಿಸಿದ್ದವು. ಭೌಗೋಳಿಕ ಅಡ್ಡಿಗಳಿಂದ ಕೃಷಿ ಉತ್ಪಾದನೆಯಲ್ಲಾಗುತ್ತಿದ್ದ ತೊಡಕುಗಳನ್ನು ನಿವಾರಿಸಲು ನಿರಂತರವಾಗಿ ಸಂಪನ್ಮೂಲಗಳನ್ನು ರೂಢಿಸಿಕೊಂಡು ತಮ್ಮ ಅಧಿಕಾರಿ ವರ್ಗದ ಸಹಾಯದಿಂದ ಸಾಂಪ್ರದಾಯಿಕ ರೂಪಕ್ಕಿಂತ ಮಿಗಿಲಾದ ಅಧಿಕಾರ ಚಲಾಯಿಸುತ್ತಿದ್ದರು. ಆರ್ಥಿಕ ಸಂಪನ್ಮೂಲ ಕ್ರೋಢೀಕರಣದ ದೃಷ್ಟಿಯಿಂದ ಸದಾಕಾಲ ಜಾಗರೂಕತೆ ಮತ್ತು ಬೌದ್ಧಿಕ ಚಾಕಚಕ್ಯತೆಯನ್ನು ಮೆರೆಯುವ ಅಗತ್ಯತೆಯನ್ನು ಮನಗಂಡಿದ್ದರು.[೧೩]

ತುಳುನಾಡಿನ ಅರ್ಥವ್ಯವಸ್ಥೆ ಹೊಯ್ಸಳರಿಗೆ ಅತ್ಯಂತ ಅವಶ್ಯ ಎಂಬುದನ್ನು ಈ ಕೆಳಗಿನ ಕೆಲವೊಂದು ಅಂಶಗಳಿಂದ ಮನಗಾಣಬಹುದಾಗಿದೆ.

೧) ೧೨ನೇ ಶತಮಾನದಲ್ಲಿ ಮಾರುಕಟ್ಟೆ ಅರ್ಥವ್ಯವಸ್ಥೆ ಬೆಳವಣಿಗೆ ಹೊಸ ವಿಚಾರಗಳನ್ನು ತಂದೊಡ್ಡಿದ್ದು, ಅತೀ ಮುಖ್ಯವಾಗಿ ನಿರಂತರವಾಗಿ ಹೊಂದಾಣಿಕೆಯೊಂದಿಗೆ ಆರ್ಥಿಕ ಜೀವನದಲ್ಲಿ ನಾಣ್ಯಗಳ ಉಪಯೋಗದ ಪ್ರಮಾಣದಲ್ಲಿ ಗಣನೀಯ ಏರಿಕೆ, ನಾಣ್ಯಗಳ ಮೂಲಕ ತೆರಿಗೆಯನ್ನು ನಗದು ರೂಪದಲ್ಲಿ ಪಾವತಿ, ನಿರ್ಮಾಣಕಾರರಿಗೆ ನೀಡುವ ವೇತನ ಮತ್ತು ಯಥೇಚ್ಛವಾಗಿ ಬೆಳೆದ ಮುಂಗಡ ಪಾವತಿಗಳು ನಾಣ್ಯ ಪದ್ಧತಿಯ ಪ್ರಾಮುಖ್ಯತೆಯನ್ನು ತಿಳಿಯಪಡಿಸುತ್ತದೆ. ಕೆಲವು ವಿದ್ವಾಂಸರ ಅಭಿಪ್ರಾಯದಂತೆ ವ್ಯಾಪಾರಿ ಚಟುವಟಿಕೆಗಳಲ್ಲಾದ ಕುಂಠಿತದಿಂದಾಗಿ ಲೋಹದ ನಾಣ್ಯಗಳ ಬಳಕೆ ವಿರಳವಾಯಿತು ಎಂಬುದು ಸತ್ಯಕ್ಕೆ ದೂರವಾಗಿದ್ದು, ನಿರಂತರವಾಗಿ ಬೆಳೆಯುತ್ತಿರುವ ಮಾರುಕಟ್ಟೆಯ ಒತ್ತಡ ಮತ್ತು ಹೆಚ್ಚಿನ ಗಳಿಕೆಯ ಪರಿಣಾಮವಾಗಿ ಹೆಚ್ಚು ಕೃಷಿ ಉತ್ಪಾದನೆಯ ಅಗತ್ಯವಿದ್ದು, ಹೆಚ್ಚು ಭೂಮಿಯನ್ನು ಕೃಷಿ ಭೂಮಿಯನ್ನಾಗಿ ಪರಿವರ್ತಿಸಲು ಭೂಮಿಯನ್ನು ಕೊಂಡುಕೊಳ್ಳುವುದಕ್ಕೋಸ್ಕರ ನಾಣ್ಯಗಳ ಅವಶ್ಯಕತೆ ಇದ್ದು, ಇದರಿಂದಾಗಿ ನಾಣ್ಯಗಳ ಚಲಾವಣೆಯಲ್ಲಿ ಕೊರತೆಯೇ ಹೊರತಾಗಿ ಅರ್ಥವ್ಯವಸ್ಥೆಯ ಅವಸಾನದಿಂದಲ್ಲ.[೧೪] ಈ ಕಾಲದ ಶಾಸನಗಳು ಉಲ್ಲೇಖಿಸುವ ಹಲವಾರು ವ್ಯಾಪಾರೀ ಸಂಘಟನೆಗಳಲ್ಲಿ ಪ್ರಮುಖವಾಗಿ ಐಹೊಳೆಯ ಐನೂರು ಸ್ವಾಮಿಗಳು, ನಾನಾ ದೇಸಿಗಳು, ಸೆಟ್ಟಿಗಳು, ಗಾತ್ರಿಗ, ಗವರೆ, ಮುಮ್ಮರಿದಂಡ[೧೫] ಇತ್ಯಾದಿ ವ್ಯಾಪಾರೀ ವರ್ಗಗಳ ಇರುವಿಕೆ ಮಾರುಕಟ್ಟೆ ವ್ಯವಸ್ಥೆಗೆ ಅತ್ಯಂತ ಬಲಿಷ್ಠವಾಗಿ ಬೆಳೆದಿತ್ತು ಎಂಬುದಕ್ಕೆ ಪೂರಕವಾಗಿದೆ. ಸಮಕಾಲೀನ ದಾಖಲೆಗಳು ತಿಳಿಸುವಂತೆ ಹೊಯ್ಸಳನಾಡು ಸಮೃದ್ಧವಾಗಿದ್ದು, ಮಿಗತೆ ಉತ್ಪಾದನೆಯ ಕೇಂದ್ರ ಹಾಗೂ ವ್ಯಾಪಾರೀ ಸಮುದಾಯಗಳು ತಮ್ಮ ವ್ಯಾಪಾರೀ ಮಾರ್ಗದಲ್ಲಿ ದೊರಕುವ ಸೌಲಭ್ಯಗಳ ಬಗ್ಗೆ ಸಂತೃಪ್ತಿಯನ್ನು ವ್ಯಕ್ತಪಡಿಸಿದ್ದನ್ನು ಈಗಾಗಲೇ ಚರ್ಚಿಸಿದ್ದು, ಮಿಗತೆ ಉತ್ಪಾದನೆ ಹೊಯ್ಸಳ ಅರ್ಥವ್ಯವಸ್ಥೆಯಲ್ಲಿತ್ತು ಎನ್ನುವುದು ಸ್ಪಷ್ಟವಾಗುತ್ತದೆ.

೨)ಹೊಯ್ಸಳರು ವ್ಯಾಪಾರೀ ಚಟುವಟಿಕೆಗಳನ್ನು ಯಥೇಚ್ಛವಾಗಿ ಪ್ರೋತ್ಸಾಹಿಸುತ್ತಿದ್ದು, ರಸ್ತೆ ಸಾರಿಗೆ ವ್ಯವಸ್ಥೆಯ ಮಾರ್ಗಗಳನ್ನು ವೃದ್ಧಿಸಿದ್ದು, ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು ಪ್ರಭಾವ ಬೀರಿದ್ದ ಹೊಯ್ಸಳರು ಮಂಗಳೂರಿಗೆ ರಾಜ್ಯದ ಎಲ್ಲಾ ಭಾಗಗಳನ್ನು ಸಂಪರ್ಕಿಸುವ ಹೆದ್ದಾರಿಗಳ ಅಭಿವೃದ್ಧಿಪಡಿಸಿದ್ದಲ್ಲದೇ ಅದರಲ್ಲೂ ವಿಶೇಷವಾಗಿ ಅರಸೀಕೆರೆ, ಬೇಲೂರು ಹಾಗೂ ದ್ವಾರಸಮುದ್ರದಂತಹ ನಗರಗಳ ಜೋಡಣೆ ವ್ಯಾಪಾರೀ ಜಾಲಗಳ ಬೆಳವಣಿಗೆಗೆ ಆಂತರಿಕ ಮತ್ತು ವಿದೇಶೀ ವ್ಯಾಪಾರಕ್ಕೆ ನೀಡಿದ ಆದ್ಯತೆಯನ್ನು ತೋರ್ಪಡಿಸಿದ್ದು, ಕರಾವಳಿ ಪ್ರದೇಶದ ವ್ಯಾಪಾರೀ ಪ್ರಾಮುಖ್ಯತೆಯನ್ನು ಮನಗಾಣಬಹುದಾಗಿದೆ. ಈ ನಟ್ಟಿನಲ್ಲಿ ಬೇಲೂರಿನಲ್ಲಿ ಕಂಡುಬಂದಿರುವ ಶಾಸನವು ತುಳುನಾಡಿನ ನಾನಾದೇಶಿಗಳು ಮತ್ತು ನಖರಗಳನ್ನು ಉಲ್ಲೇಖಿಸಿರುವುದು ಗಮನಾರ್ಹ[೧೬].

೩) ಹೊಯ್ಸಳರು ಬದಲಾಗುತ್ತಿರುವ ತಮ್ಮ ಆರ್ಥಿಕ ಅವಶ್ಯಕತೆಗಳಿಗನುಗುಣವಾಗಿ ತಮ್ಮ ರಾಜಕೀಯ ನೀತಿಯನ್ನು ರೂಪಿಸುತ್ತಿದ್ದು, ಏಕೀಕೃತ ಆಡಳಿತ ವ್ಯವಸ್ಥೆ ರಾಜ್ಯದಾದ್ಯಂತ ಸ್ಥಾಪಿಸಲು ಸಾಧ್ಯವಿಲ್ಲ ಎಂದು ಭಾವಿಸಿ, ಮಿಲಿಟರಿ ವ್ಯವಸ್ಥೆಯನ್ನು ಉಳಿಸಿ, ಅದೀನ ಒಕ್ಕೂಟ ಹಾಗೂ ಸಾಮಂತ ವ್ಯವಸ್ಥೆಯ ಮೂಲಕ ಒಡಂಬಡಿಕೆಯ ರಾಜಕಾರಣವನ್ನು ತುಳುನಾಡಿನ ವಿಚಾರದಲ್ಲಿ ಪ್ರದರ್ಶಿಸಿದ್ದು, ಅರ್ಥವ್ಯವಸ್ಥೆಗೆ ಬೇಕಾದ ಹೊಂದಾಣಿಕೆಯನ್ನು ಮೂರನೆಯ ಬಲ್ಲಾಳನು ತನ್ನ ಸಾಮಾಜಿಕ ಸಂಪ್ರದಾಯವನ್ನು ವಿರೋಧಿಸಿ, ಸೌಹಾರ್ದಯುತವಾದ ವೈವಾಹಿಕ ಸಂಬಂಧಕ್ಕೆ ಮುಂದಾಗಿ, ತನ್ನ ರಾಜ್ಯದ ವಾಣಿಜ್ಯ ವ್ಯವಹಾರಗಳಿಗೆ ತುಳುನಾಡಿನಲ್ಲಿ ಆಶ್ರಯ ನೀಡಿದ್ದನು.

ಹೊಯ್ಸಳರು ಆರ್ಥಿಕ ಹಿತಚಿಂತನೆಯ ಕಾರಣದಿಂದ ತುಳುನಾಡಿನ ಸಾಮಾಜಿಕ ಕಟ್ಟುಕಟ್ಟಳೆಗಳನ್ನು ಮೀರಿ, ಸ್ಥಳೀಯರೊಂದಿಗೆ ಸಂಘರ್ಷಕ್ಕೆ ಕಾರಣವಾಗಿಲ್ಲ. ಮೂಲತಃ ಪುರುಷಪ್ರಧಾನ ವ್ಯವಸ್ಥೆಗೆ ಒಗ್ಗಿಕೊಂಡ ಮೂರನೇ ಹೊಯ್ಸಳ ಬಲ್ಲಾಳ ತುಳುನಾಡನ್ನು ವಶಪಡಿಸಿಕೊಂಡು ತುಳುನಾಡಿನ ಚಿಕ್ಕಾಯಿ ತಾಯಿಯೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದನಾದರೂ ಸ್ಥಳೀಯ ಮಾತೃಪ್ರಧಾನ ವ್ಯವಸ್ಥೆಗೆ ಪೂರಕವಾಗಿ ನಡೆದುಕೊಂಡಿದ್ದು, ಆಕೆಯನ್ನೇ ತನ್ನ ತುಳುನಾಡಿನ ರಾಜ್ಯದ ಉತ್ತರಾಧಿಕಾರಿಯನ್ನಾಗಿ ಮಾಡುವ ಮೂಲಕ ರಾಜ್ಯದ ಆರ್ಥಿಕ ಹಿತಚಿಂತನೆಯನ್ನು ಪೋಷಿಸಿದನೇ ಹೊರತಾಗಿ, ತುಳುನಾಡಿನ ಸಾಮಾಜಿಕ ನಿಯಮಗಳನ್ನು ಉಲ್ಲಂಘಿಸಿ, ಸಂಘರ್ಷಕ್ಕೆ ನಾಂದಿ ಹಾಡಿಲ್ಲ.

೪) ಅತ್ಯಂತ ಮುಖ್ಯವಾಗಿ ತುಳುನಾಡಿನಲ್ಲಿ ದೊರೆತ ಮೂರನೇ ಬಲ್ಲಾಳನ ಅವಧಿಯ ತುಳುನಾಡಿನ ಹಿರಿಯಂಗಡಿಯ ಶಾಸನ ಹೊಯ್ಸಳರು ತಮ್ಮ ರಾಜಕೀಯ ಅಸ್ತಿತ್ವವನ್ನು ತುಳುನಾಡಿನಲ್ಲಿ ಕಂಡುಕೊಂಡಂತಹ ಸಂದರ್ಭದಲ್ಲಿ (ಕ್ರಿ.ಶ. ೧೩೩೩-೩೬) ಹೊರಡಿಸಿದ್ದು, ಕ್ರಿ.ಶ. ೧೩೩೪ರ ಈ ಶಾಸನ ವಿಶೇಷವಾಗಿ ಕೇವಲ ವಸ್ತುಗಳ ಮೇಲೆ ವಿಧಿಸಿದ ಸುಂಕವನ್ನು ಪ್ರಸ್ತಾಪಿಸುವ ಮೂಲಕ ಹೊಯ್ಸಳರು ಆರ್ಥಿಕ ದೃಷ್ಟಿಯಿಂದಲೇ ತಮ್ಮ ಅಗತ್ಯತೆಗನುಗುಣವಾಗಿ ತಮ್ಮ ರಾಜ್ಯದ ಪರಿಧಿಯಲ್ಲಿರುವ ತುಳುನಾಡಿನಲ್ಲಿ ರಾಜಕೀಯವಾಗಿ ಪ್ರವೇಶಿಸಿದ್ದರು ಎಂಬುದು ಸಾಬೀತಾಗುತ್ತದೆ.

ಅಡಿಟಿಪ್ಪಣಿಗಳು

೧. E.C., VII, S K. 197.

೨. Ibid., P_p- 84-85

೩. Prof. B. Gururaja Bhat, *'Studies in Tuluva History and Culture Udupi- 1975'* P-12

೪. J.D.M. Derret, '*The Hoysalas a Medieval Indian Royal Family*' 1957, Madras, P-166.

೫. SII, VII No. 222

೬ A.R. No. 486 from 1928-29.

೭. SII, IX Part-1, No. 396

೮. A.R. No. 577 for 1929-30

೯. A.R. No. 587 for 1929-30

೧೦. A.R. No. 491 for 1928-29

೧೧. ಡಾ. ಕೆ.ವಿ.ರಮೇಶ್, 'ತುಳುನಾಡಿನ ಶಾಸನಗಳು' ಸಂಪುಟ–೧ ಶಾ.ಸಂ.–೪೫, ಉಡುಪಿ– ೧೯೭೮–, ಪು–೯೧.

೧೨. ಅದೇ, ಶಾಸನ ಸಂಖ್ಯೆ–೪೭, ಪು. ೯೪–೯೮.

೧೩. ಪ್ರ.ಸಂ. ಪ್ರೊ. ಬಿ. ಶೇಕ್ ಆಲಿ., ಸಂ.ಸಂ. ಪ್ರೊ. ಬಿ. ಸುರೇಂದ್ರ ರಾವ್., ಲೇಖನ: ಡಾ. ಕೆ. ಶಿವಣ್ಣ, 'ಹೊಯ್ಸಳರ ರಾಜ್ಯಾಡಳಿತ ಮತ್ತು ಆರ್ಥಿಕತೆ' ಹಂಪಿ., ೧೯೯೭, ಪು. ೧೭೭

೧೪. R.N.Nandi, *'State Formation Agrarian Growth And Social Change In Feudal South India (A.D. 600-1200)* Delhi-2000, P- 111.

೧೫. *C VII, S.K. 118.*

೧೬. *EC IX,. Bl 373.*

೨೬

ಇಮ್ಮಡಿ ವೀರಬಲ್ಲಾಳನ ಶಾಸನೋಕ್ತ ಬಿರುದುಗಳು

ಸತೀಶ್‌ಕುಮಾರ್.ಬಿ.ವಿ.* ಮುನಿಕೆಂಪೇಗೌಡ**

ಬಿರುದುಗಳು ಗೌರವ ಸೂಚಕ ಪದಗಳಾಗಿದ್ದು, ಆ ವ್ಯಕ್ತಿಯ ವಿಶೇಷ ಗುಣ, ಶೌರ್ಯ, ಪರಾಕ್ರಮಗಳು ಇತ್ಯಾದಿಗಳ ಹಿನ್ನೆಲೆಯಲ್ಲಿ ಬಿರುದುಗಳು ಹುಟ್ಟಿಕೊಂಡಿದೆ. ರಾಜರ ಆಸ್ಥಾನದಲ್ಲಿ ಈ ಬಿರುದುಗಳನ್ನು ಕೂಗಿ ಬಹುಪರಾಕ್ ಹೇಳಲು ಹೊಗಳುಭಟ್ಟರು ಇರುತ್ತಿದ್ದರು. ಇವರನ್ನು ಭಟ್ಟಂಗಿಗಳು, ಹೊಗಳುಭಟ್ಟರು, ಸ್ತುತಿಪಾಠಕರು, ವಂದಿಮಾಗದರು ಎಂಬ ವಿವಿಧ ಹೆಸರುಗಳಿಂದ ಕರೆಯುತ್ತಿದ್ದರು. ರಾಜನ ಆಸ್ಥಾನದಲ್ಲಿ ಇವರು ಉದ್ಯೋಗವನ್ನು ಪಡೆದಿದ್ದರು. ಹೊಯ್ಸಳರ ಕಾಲದಲ್ಲಿ ರಾಜಧಾನಿಯಾದ ದ್ವಾರಸಮುದ್ರದಲ್ಲಿ ಹೊಗಳುಭಟ್ಟರಿಗಾಗಿಯೇ ಒಂದು ದೊಡ್ಡಕೇರಿಯೊಂದು ಇದ್ದುದನ್ನು ಕನ್ನಡ ನಿಘಂಟು(ಕನ್ನಡ ಸಾಹಿತ್ಯ ಪರಿಷತ್ತು)ವಿನಲ್ಲಿ ಉಲ್ಲೇಖಿಸಿದೆ. ಅಲ್ಲದೆ ತಿ.ನರಸೀಪುರದ ಒಂದು ಶಾಸನದಲ್ಲಿ ಹೊಗಳು ಭಟ್ಟರಿಗೆ ಭಟ್ಟಗುತ್ತರು ನೀಡಿದ ಉಲ್ಲೇಖ ದೊರೆಯುವುದು. ಹೀಗೆ ಬಿರುದುಗಳನ್ನು ಹೇಳುತ್ತಿದ್ದ ಭಟ್ಟಂಗಿಗಳು ರಾಜನ ಆಸ್ಥಾನದಲ್ಲಿ ತಮ್ಮದೇ ಆದ ವಿಶೇಷ ಸ್ಥಾನವನ್ನು ಪಡೆದಿರುವುದು ಕಂಡುಬರುವುದು.

ಹೊಯ್ಸಳರ ಪ್ರಖ್ಯಾತ ದೊರೆಗಳಲ್ಲಿ ಇಮ್ಮಡಿ ವೀರಬಲ್ಲಾಳನು ಒಬ್ಬ. ಈ ವಂಶದ ಬಲಿಷ್ಠ ರಾಜನಾಗಿದ್ದು ಹೊಯ್ಸಳ ವಂಶದ ಕೀರ್ತಿಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದನು. ಹಲವಾರು ಯುದ್ಧಗಳಲ್ಲಿ ವಿಜಯಗಳನ್ನು ಸಾಧಿಸಿ ಹೊಯ್ಸಳ ರಾಜ್ಯವನ್ನು ಉತ್ತರದಲ್ಲಿ ತುಂಗಭದ್ರ, ಕೃಷ್ಣಾನದಿಯವರೆಗೆ, ದಕ್ಷಿಣದಲ್ಲಿ ತಮಿಳುನಾಡಿನವರೆಗೆ ರಾಜ್ಯವನ್ನು ವಿಸ್ತರಿಸಿದನು. ಶಾಸನಗಳಲ್ಲಿ ಈತನ ಶೌರ್ಯ, ಪರಾಕ್ರಮ, ದಿಗ್ವಿಜಯ, ಉತ್ತಮ ಗುಣಗಳ ಬಗ್ಗೆ ತಿಳಿಸುವ ಹಲವಾರು ಬಿರುದುಗಳು, ದೊರೆಯುವುದು. ಈ ಬಿರುದುಗಳನ್ನು ಒಂದೆಡೆ ಸಂಗ್ರಹ ಮಾಡಿದಾಗ ೨೭೦ಕ್ಕೂ ಅಧಿಕ ಬಿರುದುಗಳು ಇರುವುದು ಕಂಡುಬರುವುದು. ಬಿರುದುಗಳ ಹಿನ್ನೆಲೆಯಲ್ಲಿ ವೀರಬಲ್ಲಾಳನ ರಾಜಕೀಯ, ಆಡಳಿತ, ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳ ಮೇಲೆ ಹೊಸ ಬೆಳಕು ಚೆಲ್ಲುವ ಪ್ರಯತ್ನ ಈ ಲೇಖನದ ಉದ್ದೇಶವಾಗಿದೆ.

ವೀರಬಲ್ಲಾಳನ ಮೂಲವನ್ನು ತಿಳಿಸುವ ಬಿರುದುಗಳು

ಹೊಯ್ಸಳರು ಯಾದವರೆಂದು ಸೋಮವಂಶದವರೆಂದು ಹಲವು ಶಾಸನಗಳಲ್ಲಿ ಉಲ್ಲೇಖಿಸಿವೆ. ಅದರಂತೆ **ಯಾದವಕುಳಾಂಬರದ್ವಿಮಣಿ, ಯಾದವಕುಲೋದ್ಭವಂ, ಯದುಕುಲತಿಲಕ, ಯಾದವನಾರಾಯಣ, ಯಾದವಚಕ್ರವರ್ತಿ** ಮುಂತಾದ ಬಿರುದುಗಳು ಕಂಡುಬರುವುದು. **ಶಶಕಪುರಕೃತನವಾಸ** ಇವರು ಆರಂಭಿಕದಲ್ಲಿ ಸೊಸೆಯೂರಿನಿಂದ ರಾಜ್ಯಭಾರ ಪ್ರಾರಂಭಿಸಿದರು ಎಂಬುದನ್ನು ತಿಳಿಸುವುದು. ಹಾಗೆಯೇ ಇವರ ಕುಲದೇವತೆ ವಾಸಂತಿಕಾದೇವಿ ಎಂಬುದು **ವಾಸಂತಿಕಾದೇವಿಲಬ್ಧವರಪ್ರಸಾದ** ಎಂಬ ಬಿರುದಿನಿಂದ ತಿಳಿದು ಬರುವುದು. ಆದರೆ ಇವರ **ಮಲೆಪರೊಳ್ಗಂಡ, ಮಲೆರಾಜರಾಜ** ಎಂಬ ಬಿರುದುಗಳಿಂದ ಇವರು ಸ್ಥಳೀಯ ಕನ್ನಡ ರಾಜಮನೆತನದವರು ಎಂದು ತಿಳಿದುಬರುವುದು. ನಂತರದಲ್ಲಿ ಇವರು ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದರು ಎಂಬುದು ಇವರ **ದ್ವಾರವತೀಪುರಾವರಾಧೀಶ್ವರ** ಎಂಬ ಬಿರುದಿನಿಂದ ತಿಳಿಯುವುದು.

ವೀರಬಲ್ಲಾಳನು ತನ್ನ ವಂಶಜರಿಂದ ಪಡೆದ ಬಿರುದುಗಳು

ಹೊಯ್ಸಳ ವಂಶದಲ್ಲಿ ಪ್ರಖ್ಯಾತ ದೊರೆ ವಿಷ್ಣುವರ್ಧನ ವೀರಬಲ್ಲಾಳನ ತಾತನಾಗಿದ್ದನು. ಈತನು ಹಲವಾರು ರಾಜರನ್ನು ಸೋಲಿಸಿ ಹೊಯ್ಸಳ ರಾಜ್ಯವನ್ನು ವಿಸ್ತರಿಸಿದನು. ಕಲ್ಯಾಣ ಚಾಲುಕ್ಯರ ವಿರುದ್ಧ ಬಂಡೆದ್ದು ಸ್ವತಂತ್ರನಾಗಲು ಪ್ರಯತ್ನಿಸಿದನು. ಹಾಗೆಯೇ ವೀರಬಲ್ಲಾಳನ ತಂದೆ ಮೊದಲನೆ ನರಸಿಂಹನ ಹಲವಾರು ಬಿರುದುಗಳು ಇವನಿಗೆ ಸೇರಿಕೊಂಡಿವೆ. **ಭುಜಬಲ ವೀರಗಂಗ, ವಿಷ್ಣುವರ್ಧನ ಹೊಯ್ಸಳ, ಸಪ್ತಮಾಳವ ವಿಷ್ಣುವರ್ಧನ, ಕಲಿವಿಷ್ಣುವರ್ಧನ, ತಳಕಾಡುಗೊಂಡ,**

* ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೬.

ವೀರನಾರಾಯಣ, ತೆಂಕಣಚಕ್ರವರ್ತಿ, ತೆಂಕಣಾದಿತ್ಯ, ಏಕಾಂಗವೀರ ನಿಸ್ಸಂಕ ಪ್ರತಾಪ ಚಲದಂಕರಾಮ, ಅಸಾಯಶೂರ ಮುಂತಾದ ಬಿರುದುಗಳು ಸೇರಿಕೊಂಡಿವೆ.

ಅನ್ಯ ರಾಜಮನೆತನದ ಬಿರುದುಗಳು

ಹೊಯ್ಸಳರು ಆರಂಭದಲ್ಲಿ ಕಲ್ಯಾಣ ಚಾಲುಕ್ಯರ ಮಾಂಡಳಿಕರಾಗಿದ್ದರು. ಹಾಗಾಗಿ ಅವರ ಬಿರುದುಗಳಾದ **ತ್ರಿಭುವನಮಲ್ಲ, ಚಾಲುಕ್ಯಮಣಿ, ತ್ರೈಲೋಕ್ಯಮಲ್ಲ** ಮುಂತಾದ ಬಿರುದುಗಳನ್ನು ವೀರಬಲ್ಲಾಳನು ಆರಂಭದಲ್ಲಿ ಧರಿಸಿರುವುದು ಕಂಡುಬರುವುದು. ನಂತರ ಈತ ಚಾಲುಕ್ಯರ ಅದೀನತೆಯನ್ನು ತೊರೆದು ಸ್ವತಂತ್ರನಾದನು.

ವೀರಬಲ್ಲಾಳನು ಸೋಲಿಸಿದ ರಾಜರನ್ನು ತಿಳಿಸುವ ಬಿರುದುಗಳು

ವೀರಬಲ್ಲಾಳನು ಯುದ್ಧವೀರನಾಗಿ ಯಶಸ್ವಿ ರಾಜನಾಗಿದ್ದನು. ರಾಜಕೀಯಕ್ಕೆ ಪ್ರವೇಶಿಸಿ ಹಲವು ದಿಗ್ವಿಜಯಗಳನ್ನು ಕೈಗೊಂಡು ಜಯವನ್ನು ಸಾಧಿಸಿದನು. ಗೆದ್ದರಾಜರು ಆತನಿಗೆ ಶರಣಾದಾಗ ಮನ್ನಿಸಿ ಅವರಿಗೆ ಮತ್ತೆ ಅವರ ರಾಜ್ಯವನ್ನು ಮರಳಿಸಿ ತಮ್ಮ ಮಾಂಡಳಿಕರನ್ನಾಗಿ ಮಾಡಿಕೊಳ್ಳುತ್ತಿದ್ದನು. ಈ ರೀತಿಯಾಗಿ ಯುದ್ಧದಲ್ಲಿ ಗೆದ್ದ ರಾಜರ ಹಿನ್ನೆಲೆಯಲ್ಲಿ ಹಲವು ಬಿರುದುಗಳು ಸೇರಿಕೊಂಡಿವೆ. ಅವುಗಳೆಂದರೆ ಉಚ್ಚಂಗಿ ಪಾಂಡ್ಯರ ಮೇಲೆ ವಿಜಯ ಸಾಧಿಸಿದ ಕುರುಹಾಗಿ **ಗಿರಿದುರ್ಗಮಲ್ಲ, ಶನಿವಾರಸಿದ್ಧಿ, ಪಾಂಡ್ಯಕುಳ ಕಮಳವನವೇದಂಡ, ಪಾಂಡ್ಯರಾಜ್ಯಸಮುದ್ಧರಣ, ಉಚ್ಚಂಗಿಕೊಂಡಗಂಡ, ಪಾಂಡ್ಯರಾಯಗಜಕೇಸರಿ, ಪಾಂಡ್ಯ ವೇದಂಡಸಿಂಹಂ** ಮುಂತಾದ ಬಿರುದುಗಳು ಕಂಡುಬರುವುದು.

ವೀರಬಲ್ಲಾಳನು ಕರ್ನಾಟಕ ಮಾತ್ರವಲ್ಲದೆ ತಮಿಳುನಾಡಿನ ರಾಜಕೀಯಕ್ಕು ಪ್ರವೇಶಿಸಿ ಪಾಂಡ್ಯರಿಂದ ಚೋಳರನ್ನು ರಕ್ಷಿಸಿ ಅವರನ್ನು ಸಿಂಹಾಸನದ ಮೇಲೆ ಕೂರಿಸಿ ವೈವಾಹಿಕ ಸಂಬಂಧವನ್ನು ಬೆಳೆಸಿ ತಮ್ಮ ಮಾಂಡಳಿಕರನ್ನಾಗಿ ಮಾಡಿಕೊಂಡನು ಅದರ ಹಿನ್ನೆಲೆಯಲ್ಲಿ **ಚೋಳಕಟಕಸೂಱೆಕಾರ, ಚೋಳರಾಯ ಸ್ಥಾಪನಾಚಾರ್ಯ, ಚೋಳಮಾಳವ ಗೂರ್ಜರ ಭಯಜ್ವರ** ಮುಂತಾದ ಬಿರುದುಗಳು ಬಂದಿವೆ. ಹಾಗೆಯೆ ಉತ್ತರದ ದಿಗ್ವಿಜಯದಲ್ಲಿ ಸೇವುಣರೊಂದಿಗೆ ಲೊಕ್ಕಿಗುಂಡಿಯಲ್ಲಿ ವಿಜಯ ಸಾಧಿಸಿ **ಬಿಲ್ಲಮದಳತಳಪ್ರಹಾರಿ, ಸೇವುಣಕುಳೋನ್ಮೂಳ(ಸಂ), ಬಿಲ್ಲಮಜಳಜಳಧಿಬಡವಾನಳಂ** ಬಿರುದುಗಳು ಸೇರಿಕೊಂಡಿವೆ. **ಲಲನಾಕದಂಬ ಕಾಮಂ, ಕಾಳೋಜನಪುರವರಾಧೀಶ್ವರಂ, ಕಾಡವಬಳಜಳಧಿಬಡವಾನಳಂ, ಅದಿಯಮಕಾಡವರಾಯಪ್ರಬಳ, ಮಗರರಾಜ್ಯನಿರ್ಮೂಳನ, ತುಳುವಬಳಜಳಧಿಬಡವಾನಳಂ** ಮುಂತಾದ ಬಿರುದುಗಳು ಇವನು ಸೋಲಿಸಿದ ರಾಜಮನೆತನ, ಇತರ ಅಧೀನ ರಾಜರುಗಳ ವಿವರ ತಿಳಿಯುವುದು. ವೀರಬಲ್ಲಾಳನು ಚೆಂಗಾಳ್ವ, ಕೊಂಗಾಳ್ವ, ಬೆಳಗುತ್ತಿ ಸಿಂದರು, ಎರಂಬರೆಗೆ ಸಿಂದರು, ನೊಳಂಬರು, ಹಾನುಗಲ್ಲಿನ ಕದಂಬರು, ರಟ್ಟರು ಮುಂತಾದವರನ್ನು ಸೋಲಿಸಿ ತನ್ನ ಮಂಡಳಿಕರನ್ನಾಗಿ ಮಾಡಿಕೊಂಡ ಹಿನ್ನೆಲೆಯಲ್ಲಿ **ಮಂಡಲಿಕ ಮಕುಟಚೂಡಾಮಣಿ, ಮಂಡಳಿಕ ಗಿರಿವಜ್ರದಂಡ, ಮಂಡಳಿಕಬೇಂಟೆಕಾರ, ಪರಮಂಡಲಸೂಱೆಕಾರ, ಮಂಡಳಿಕರಹುಲಿ, ಮಂಡಳಿಕರಗಂಡರಾಯ** ಮುಂತಾದ ಬಿರುದುಗಳು ಸೇರಿಕೊಂಡಿವೆ.

ಚಕ್ರವರ್ತಿಯಾಗಿ ವೀರಬಲ್ಲಾಳ

ವೀರಬಲ್ಲಾಳನು ಯುದ್ಧೋತ್ಸಾಹಿಯಾಗಿದ್ದು ಹಲವು ಯುದ್ಧವನ್ನು ಜಯಗಳಿಸಿ ಚಕ್ರವರ್ತಿಯಾಗಿ ಮೆರೆದ ರಾಜ. ಈ ಹಿನ್ನೆಲೆಯಲಿ **ದಕ್ಷಿಣಚಕ್ರವರ್ತಿ, ದಕ್ಷಿಣಚಕ್ರಿ, ನಿಶ್ಶಂಕಪ್ರತಾಪಚಕ್ರವರ್ತಿ, ರಾಯಚಕ್ರವರ್ತಿ, ವಿಕ್ರಮಚಕ್ರವರ್ತಿತಿಳಕಂ, ರಾಯಬೇರುಂಡ, ರಾಜಾಧಿರಾಜ, ಪೃಥ್ವೀವಲ್ಲಭ, ರಾಜಕಂಠೀರವ, ರಕ್ಷಣದಕ್ಷದಕ್ಷಿಣ ಭುಜಂ** ಮುಂತಾದ ಚಕ್ರವರ್ತಿ ಬಿರುದುಗಳನ್ನು ಧರಿಸಿಕೊಂಡಿದ್ದನು. ಹೊಳಲಕೆರೆಯ ಶಾಸನದಲ್ಲಿನ **ಗಜವೇಂಟೆಕಾಱ** ಎಂಬ ಬಿರುದು ವೀರಬಲ್ಲಾಳನಿಗೆ ಇದೆ. ಈ ಬಿರುದು ವಿಜಯನಗರದ ದೊರೆ ಪ್ರೌಢದೇವರಾಯನಿಗಿಂತ ಮೊದಲು ವೀರಬಲ್ಲಾಳನಿಗೆ ಇದ್ದದ್ದು ವಿಶೇಷವೆನಿಸುವುದು. ಈ ಬಿರುದುಗಳಿಂದ ವೀರಬಲ್ಲಾಳನು ರಾಜಕೀಯದ ಸಾಧನೆಗಳು ತಿಳಿದುಬರುವುದು. ಈ ರೀತಿಯ ವಿಶೇಷ ಬಿರುದುಗಳು ಆತನ ಶಾಸನಗಳಲ್ಲಿ ಕಂಡುಬರುವುದು. ಈ ಬಿರುದುಗಳ ಪಟ್ಟಿಯನ್ನು ಅಕಾರಾದಿಯಾಗಿ ಕೊಟ್ಟಿದೆ.

ಇಮ್ಮಡಿ ವೀರಬಲ್ಲಾಳನ ಬಿರುದುಗಳು(ಅಕಾರಾದಿಯಾಗಿ)

ಕ್ರಮ ಸಂಖ್ಯೆ	ಕಾಲ	ಶಾಸನ ಸಂಖ್ಯೆ	ಬಿರುದುಗಳು
೧	೧೨-೧೩ ಶತ	ಕಡೂರು-೧೬	ಅಕ್ಷುಣ್ಣಲಕ್ಷ್ಮೀವಕ್ಷಪ್ರದೇಶನಂ
೨	೧೧೯೮	ತರೀಕೆರೆ-೧೨	ಅತಿಳತರತೇಜಂ
೩	೧೨೧೬	ಕಡೂರು-೨೮	ಅದಿಯಮಕಾಡವರಾಯಪ್ರಬಳ

೪	೧೧೭೮	ಚಿಕ್ಕಮಗಳೂರು–೮೮	ಅಪ್ರತಿಹತಪ್ರತಾಪವಿದಿತ ವಿಜಯಾರಂಭನುಂ
೫	೧೨೦೮	ಅರಸೀಕೆರೆ–೭೨	ಅಪೂರ್ವ್ವರೂಪಕಂದರ್ಪ್ಪ
೬	೧೧೮೪	ತರೀಕೆರೆ–೧೮	ಅಭ್ರಂಕಶೋತ್ತುಂಗ
೭	೧೧೭೮	ಹಾಸನ–೧೪೦	ಅರ್ತ್ಥಿಜನಚಿಂತಾಮಣಿ
೮	೧೨೧೬	ಕಡೂರು–೨೮	ಅರಿನ್ರಿಪಕಪಾಳವಜ್ರದಂಡಂ
೯	೧೨೧೬	ಕಡೂರು–೨೮	ಅರಿನ್ರಿಪತಿಮದನಿವಾರಣಂ
೧೦	೧೧೬೯	ತಿಪಟೂರು–೯೧	ಅರಿಮಂಡಳಿಕಹ್ರಿದಯಸಲ್ಲ
೧೧	೧೧೮೪	ಅರಸೀಕೆರೆ–೩೩	ಅರಿಸರಧಿಬಡವಾನಳಂ
೧೨	೧೧೯೬	ಅರಸೀಕೆರೆ–೧೨೮	ಅವಿಶ್ರಾಂತವಿದ್ಯಾವಿನೋದಂ
೧೩	೧೨–೧೩ ಶತ	ಚಿಕ್ಕಮಗಳೂರು–೧೩೨	ಅಸಹಾಯಸೌರ್ಯ್ಯ
೧೪	೧೧೬೫	ನಾಗಮಂಗಲ–೬೩	ಅಸಾಯಶೂರ
೧೫	೧೧೯೬	ನೆಲಮಂಗಲ–೮೨	ಅಹುದೆಂಬರಾಯಭರಣ
೧೬	೧೧೭೩	ಅರಸೀಕೆರೆ–೨೩	ಇಂದುಮಂದಾಕಿನೀ ಗುಣಯೂಥಂ
೧೭	೧೨೦೨	ಅಣ್ಣಿಗೇರಿ, ನಂ–೨೧೬	ಉಚ್ಚಂಗಿ ಬನವಸೆ ಪಾನುಂಗಲ್ಗೊಂಡ ಗಂಡಂ
೧೮	೧೧೭೯	ತಿ. ನರಸೀಪುರ–೧೩೬	ಉಚ್ಚಂಗಿಕೊಂಡಗಂಡಂ
೧೯	೧೧೮೧	ಚನ್ನರಾಯಪಟ್ಟಣ–೯	ಉದ್ದಂಡಪ್ರಚಂಡ
೨೦	೧೨೧೬	ಕಡೂರು–೨೮	ಉದ್ದಂಡಪಾಂಡ್ಯಗರ್ಬ್ಬಪರ್ಬ್ಬತಪಾಕಸಾಸನಂ
೨೧	೧೧೬೮	ಚನ್ನರಾಯಪಟ್ಟಣ–೫೫	ಏಕಾಂಗವೀರ
೨೨	ತೇದಿರಹಿತ	ಭದ್ರಾವತಿ–೧೯	ಕ್ಷತ್ರಧರ್ಮ್ಮನಿರ್ಮ್ಮಳ
೨೩	೧೧೮೪	ತರೀಕೆರೆ–೫೧	ಕ್ಷತ್ರಿಯಶಿಖಾಮಣಿ
೨೪	೧೧೮೬	ಅರಸೀಕೆರೆ–೫೯	ಕದನದೊಳದಿರದದಿರ್ಚ್ಚಿದದಟರನದಟಲವ ಪುರಂದರನಂದನಂ
೨೫	೧೧೭೧	ನಾಗಮಂಗಲ–೧	ಕದನಪ್ರಚಂಡ
೨೬	ತೇದಿರಹಿತ	ಭದ್ರಾವತಿ–೧೯	ಕದನೈಕಭೈರವ
೨೭	೧೨–೧೩ ಶತ	ಚನ್ನರಾಯಪಟ್ಟಣ–೧೨೪	ಕಲಿವಿಷ್ಣುವರ್ದ್ಧನ
೨೮	೧೧೬೫	ನಾಗಮಂಗಲ–೬೩	ಕಲಿಕಾಲಕಾಮ
೨೯	೧೧೮೧	ಚನ್ನರಾಯಪಟ್ಟಣ–೯	ಕಳಪಾಳಕಪಾಳಶೋಳ ವಜ್ರದಂಡಂ
೩೦	೧೧೭೯	ಅರಸೀಕೆರೆ–೮೮	ಕಾಡವಬಳಜಳಧಿಬಡವಾನಳಂ
೩೧	೧೨೦೫	ಚಿಕ್ಕಮಗಳೂರು–೩೬	ಕಾಳೋಜನಪುರವರಾಧೀಶ್ವರಂ
೩೨	೧೧೮೪	ತರೀಕರೆ–೧೮	ಕುರಂಗಚತುರವಿದ್ವಜ್ಜನಪ್ರಸಂಗ
೩೩	೧೧೭೩	ಹಾಸನ–೧೨೮	ಕುಳಾಚಳಧೀರಂ
೩೪	೧೨–೧೩ ಶತ	ಅರಸೀಕೆರೆ–೪೭	ಕೊಂಕಣಭಯಂಕರ
೩೫	೧೧೭೩	ಅರಸೀಕೆರೆ–೨೩	ಗಂಡಗಿರಿನಾಥಂ
೩೬	೧೧೬೫	ನಾಗಮಂಗಲ–೬೩	ಗಂಡಭೇರುಂಡ
೩೭	೧೨–೧೩ ಶತ	ಕಡೂರು–೧೬	ಗಜರಾಜಗಂಡವಿಜಯಡಿಂಡಿಮಾನೋಡ್ಡಮರ ಮಧುಕರಪಿಂಚ್ಛಾತಪತ್ರನುಂ

೩೮	೧೨೧೪	ಹೊಳಲಕೆರೆ-೨	ಗಜವೇಂಟೆಕಾರ
೩೯	೧೧೬೯	ತಿಪಟೂರು-೯೧	ಗಿರಿದುರ್ಗ್ಗಮಲ್ಲ
೪೦	೧೨೦೮	ಅರಸೀಕೆರೆ-೭೨	ಗುಣನಿಳಯ
೪೧	೧೧೮೧	ಚನ್ನರಾಯಪಟ್ಟಣ-೯	ಚಕ್ರಕೂಟಕೋಟಾವೀದವಾನಳಂ
೪೨	೧೧೮೪	ಅರಸೀಕೆರೆ-೩೩	ಚತುಸ್ಸಮಯಸಮುದ್ಧರಣಂ
೪೩	೧೧೭೧	ನಾಗಮಂಗಲ-೧	ಚಲದಂಕರಾಮ
೪೪	೧೧೮೫	ಸಂಶೋಧನಾ ಲೇಖನ	ಚಲಿಕ್ಯಮಣಿ
೪೫	೧೨೧೧	ಕಡೂರು-೧೩೩	ಚೈತರಾಹುತ ದಿಶಾಪಟ್ಟ
೪೬	೧೨೦೨	ಅಣ್ಣೀಗೇರಿ, ನಂ-೨೧೬	ಚೋಳ ಮಾಳವ ಗೂರ್ಜ್ಜರ ಭಯಜ್ವರ
೪೭	೧೧೭೩	ಶ್ರವಣಬೆಳಗೊಳ-೫೬೫	ಚೋಳಕಟಕಸೂಱೆಕಾರ
೪೮	೧೨೦೮	ತುಮಕೂರು-೮೭	ಚೋಳರಾಯಸ್ಥಾಪನಾಚಾರ್ಯ
೪೯	೧೨೧೯	ಅರಸೀಕೆರೆ-೩೧	ಜಗತೀರಕ್ಷಣದಕ್ಷ ದಕ್ಷಿಣಭುಜಂ
೫೦	೧೧೬೮-೬೯	ಅರಸೀಕೆರೆ-೨೬೮	ಜಗದೇಕವೀರ
೫೧	೧೧೮೧	ಶ್ರವಣಬೆಳಗೊಳ-೪೪೪	ಜಯಭುಜಂ
೫೨	೧೨ನೇ ಶತ	ಚಿಕ್ಕಮಗಳೂರು-೧೭೧	ಆಳದರಮ
೫೩	೧೧೭೩	ಮೈಸೂರು-೨೨೪	ತ್ರಿಭುವನಮಲ್ಲ
೫೪	೧೧೯೮	ಇ.ದರ್ಶನ-೧೯, ದಾವಣಗೆರೆ	ತ್ರೈಲೋಕ್ಯಮಲ್ಲ
೫೫	೧೧೬೫	ನಾಗಮಂಗಲ-೬೩	ತುಳುವಬಳಜಳದಿಬಡವಾನಳಂ
೫೬	೧೧೭೪	ಪಿರಿಯಾಪಟ್ಟಣ-೧೧೮	ತೆಂಕಣಚಕ್ರವರ್ತಿ
೫೭	೧೧೭೪	ಪಿರಿಯಾಪಟ್ಟಣ-೧೧೮	ತೆಂಕಣಾದಿತ್ಯ
೫೮	೧೧೬೫	ನಾಗಮಂಗಲ-೬೩	ದ್ವಾರಾವತೀಪುರವರಾಧೀಶ್ವರಂ
೫೯	೧೨೧೫	ಹಡಗಲಿ-೬೫	ದಕ್ಷಿಣ ಚಕ್ರವರ್ತಿ
೬೦	೧೧೯೮	ಸೊರಬ-೧೪೦	ದಕ್ಷಿಣ ಚಕ್ರಿ
೬೧	೧೧೮೪	ಅರಸೀಕೆರೆ-೩೩	ದರ್ಪಿಷ್ಟವನದವಾನಳಂ
೬೨	೧೨೦೮	ಸೊರಬ-೨೮	ದಾನಭರಣಂ
೬೩	೧೧೮೩	ಚನ್ನರಾಯಪಟ್ಣ-೧೩೩	ದಾಯದ್ಯದುರ್ಗದಾವಳಂ
೬೪	೧೧೭೯	ನಾಗಮಂಗಲ-೧೩೨	ದಾಯದದಾವಾನಳಂ
೬೫	೧೧೮೪	ತರೀಕೆರೆ-೧೮	ದುಷ್ಟವಿದ್ವಿಷ್ಟಮರಾಳಮೇಘನಾದ
೬೬	೧೧೮೪	ತರೀಕೆರೆ-೫೧	ಧರ್ಮ್ಮನಿರ್ಮ್ಮಾಣ ನವೀನಧರ್ಮ್ಮಪುತ್ರ
೬೭	೧೧೯೪	ಅರಸೀಕೆರೆ-೨೯	ಧರಾತಳತಿಳಕಂ
೬೮	೧೨-೧೩ ಶತ	ಅರಸೀಕೆರೆ-೪೭	ಧರಾಧರಧೈರ್ಯಂ
೬೯	೧೧೮೪	ತರೀಕೆರೆ-೫೧	ಧೈರ್ಯ್ಯಗುಣಮಂದರಂ
೭೦	೧೧೭೪	ಬೇಲೂರು-೧೦೮	ಧೈರ್ಯಧರಾಧರ
೭೧	೧೧೯೬	ಅರಸೀಕೆರೆ-೧೨೮	ನ್ರಿಪರೂಪಕಂದರ್ಪ
೭೨	೧೧೮೯	ಅರಸೀಕೆರೆ-೮೮	ನರರೂಪಂ ಹೊಯ್ಸಳೇಸಂ
೭೩	೧೧೮೪	ತರೀಕೆರೆ-೫೧	ನಿಖಿಳಜನಾನಂದಚಂದ್ರಂ

೭೪	೧೨-೧೩ ಶತ	ಚಿಕ್ಕಮಗಳೂರು-೧೩೨	ನಿಜಬಾಹುವೀರ್ಯ್ಯ
೭೫	೧೧೯೩	ಶಿಕಾರಿಪುರ-೧೦೫	ನಿಜಭಜಬಳ ಭೀಮಃ
೭೬	೧೧೮೪	ತರೀಕೆರೆ-೧೮	ನಿಜವಿಜಯಶಾರ್ದೂಲಧ್ವಜ
೭೭	೧೧೯೪	ಅರಸೀಕೆರೆ-೧೩೯	ನಿರುಪಮಪ್ರಾಜ್ಞಂ
೭೮	೧೧೬೫	ನಾಗಮಂಗಲ-೬೩	ನಿಸ್ಸಂಕಪ್ರತಾಪ
೭೯	೧೧೭೪	ಪಿರಿಯಾಪಟ್ಟಣ-೧೧೮	ನಿಶ್ಶಂಕಪ್ರತಾಪಚಕ್ರವರ್ತಿ
೮೦	೧೧೭೩	ಮೈಸೂರು-೨೨೪	ನಿಸ್ಸಂಕಮಲ್ಲ
೮೧	೧೨೧೬	ಕಡೂರು-೨೮	ನೀತಿವಿಚಾರಂ
೮೨	೧೧೮೧	ಶ್ರವಣಬೆಳಗೊಳ-೫೭೧	ನೃಪಗುಣಾಧಾರಂ
೮೩	೧೧೭೪	ಬೇಲೂರು-೧೦೮	ನೃಪಾಳಸಂಹಾರ
೮೪	೧೨೧೬	ಕಡೂರು-೨೮	ಪಂನೆಗವ್ವೆತನತೇಯಂ
೮೫	೧೧೭೪	ಬೇಲೂರು-೧೦೮	ಪ್ರಚಂಡಕೋದಂಡವಿದ್ಯಾಧರ
೮೬	೧೧೬೮-೬೯	ಅರಸೀಕೆರೆ-೨೬೮	ಪ್ರಚಂಡಮದ ವೇದಂಡ
೮೭	೧೧೯೩	ಚಿಕ್ಕಮಗಳೂರು-೪೧	ಪ್ರಜೆಮೆಚ್ಚೆಗಂಡ
೮೮	೧೧೮೪	ತರೀಕೆರೆ-೫೧	ಪ್ರಣೂತಚಾತುರ್ಯ್ಯಪರಿಪಾಳಿತ ತ್ರಿವರ್ಗ
೮೯	೧೧೬೯	ಗುಬ್ಬಿ-೮೩	ಪ್ರತಾಪ ಚಕ್ರವರ್ತಿ
೯೦	೧೧೯೧	ಅರಸೀಕೆರೆ-೧೬೧	ಪ್ರತಾಪತ್ರಿಣೇತ್ರಂ
೯೧	೧೨೦೦	ಶಿಕಾರಿಪುರ-೧೮೬	ಪ್ರತಾಪನಿಧಿಬಲ್ಲಾಳಂ
೯೨	೧೨೦೨	ಅಣ್ಣೀಗೇರಿ, ನಂ-೨೧೬	ಪ್ರತಾಪಸಿದ್ಧಿ
೯೩	೧೧೭೩	ಶ್ರವಣಬೆಳಗೊಳ-೫೬೫	ಪ್ರಣವತರವಿತರಣವಿನೋದಂ
೯೪	೧೧೮೪	ತರೀಕೆರೆ-೧೮	ಪ್ರಸಿದ್ಧಶುದ್ಧೋಭಯಪಕ್ಷ
೯೫	೧೨೦೫	ತಿಪಟೂರು-೪೩	ಪರಬಳಸಾಧಕನ್
೯೬	೧೧೬೫	ನಾಗಮಂಗಲ-೬೩	ಪರಮಂಡಲಸೂಱೆಕಾರ
೯೭	೧೧೭೧	ನಾಗಮಂಗಲ-೧	ಪರಮಭಟ್ಟಾರಕ
೯೮	೧೧೭೧	ನಾಗಮಂಗಲ-೧	ಪರಮೇಶ್ವರ
೯೯	೧೨-೧೩ ಶತ	ಕಡೂರು-೧೬	ಪರವಧೂಪುತ್ರನಂ
೧೦೦	೧೧೮೪	ತರೀಕೆರೆ-೫೧	ಪರಾಕ್ರಮಗುಣಪ್ರಕಟಿತಪಾರ್ತ್ಥಪ್ರಭಾವಂ
೧೦೧	೧೧೭೭-೭೮	ಬೇಲೂರು-೨೨೫	ಪರಾಕ್ರಮ ಪ್ರಥಮಸಮಯ ನಿರ್ಬ್ಭಿದ್ಯಮಾನವೀರಾರಿಗಿರುದುರ್ಗ್ಗಂ
೧೦೨	೧೧೮೪	ತರೀಕೆರೆ-೫೧	ಪರಿಪಾಳಿತಭೂಲೋಕಂ
೧೦೩	ತೇದಿರಹಿತ	ಭದ್ರಾವತಿ-೧೯	ಪರಿಪೂರ್ಣ್ಣಾರ್ಣವಂ
೧೦೪	೧೧೬೫	ನಾಗಮಂಗಲ-೬೩	ಪಾಂಡ್ಯಕುಳಕಮಳವನವೇದಂಡ
೧೦೫	೧೧೮೩	ಚನ್ನರಾಯಪಟ್ಟಣ-೧೩೩	ಪಾಂಡ್ಯಕುಳಕುಧರಬಳಿಶದಂಡಂ
೧೦೬	೧೧೮೧	ಶ್ರವಣಬೆಳಗೊಳ-೫೭೧	ಪಾಂಡ್ಯಕುದಾವಾನಳಂ
೧೦೭	೧೧೮೧	ಚನ್ನರಾಯಪಟ್ಟಣ-೯	ಪಾಂಡ್ಯಗಂಡಗರ್ವ್ವವಿದಂಡನಂ
೧೦೮	೧೧೭೪	ಪಿರಿಯಾಪಟ್ಟಣ-೧೧೮	ಪಾಂಡ್ಯರಾಜ್ಯಸಮುದ್ಧರಣ

೧೦೯	೧೧೯೬	ನೆಲಮಂಗಲ–೮೨	ಪಾಂಡ್ಯರಾಜಗಜಕೇಸರಿ
೧೧೦	೧೨೦೮	ತುಮಕೂರು–೮೭	ಪಾಂಡ್ಯರಾಯಪ್ರತಿಷ್ಠಾಚಾರ್ಯ
೧೧೧	೧೧೮೯	ಅರಸೀಕೆರೆ–೮೮	ಪಾಂಡ್ಯವೇದಂಡಸಿಂಹಂ
೧೧೨	೧೧೮೪	ತರೀಕೆರೆ–೫೧	ಪುಂಡರೀಕಪತಾಕಂ
೧೧೩	೧೨೦೨	ಅಣ್ಣಿಗೇರಿ, ನಂ–೨೧೬	ಪೂರ್ವ ಕಂದರ್ಪ
೧೧೪	೧೧೮೧	ಶ್ರವಣಬೆಳಗೊಳ–೪೪೪	ಬಲವದ್ವೈರಿಕುಳಾಂತಕಂ
೧೧೫	ತೇದಿರಹಿತ	ಭದ್ರಾವತಿ–೧೯	ಬಳೆಕ . . . ರೆಕಾಜಿ
೧೧೬	೧೨ನೇ ಶತ	ಚನ್ನರಾಯಪಟ್ಟಣ–೧೮	ಬಿರುದಂಕ ಭೈರವಂ
೧೧೭	೧೨೦೫	ತರೀಕೆರೆ–೯	ಬಿರುದಂಕಭೀಮ
೧೧೮	೧೨೦೮	ಕಡೂರು–೧೩೨	ಬಿಲ್ಲಮದಳತಳಪ್ರಹಾರಿ
೧೧೯	೧೧೭೭	ಅರಸೀಕೆರೆ–೯೬	ಭಾನುಸುತಪ್ರತಿಮನತಿಬಳಂ
೧೨೦	೧೨೦೨	ಅಣ್ಣಿಗೇರಿ, ನಂ–೨೧೬	ಭಿಲ್ಲಮಜಳಜಳಧಿಬಡವಾನಳಂ
೧೨೧	೧೧೭೭–೭೮	ಬೇಲೂರು–೨೨೫	ಭೀಮಬಾಹುಬಲ್ಲಾಳನೃಪಂ
೧೨೨	೧೧೭೩	ನಾಗಮಂಗಲ–೧೮೪	ಭೀಮಭುಜಂ
೧೨೩	೧೧೯೮	ತರೀಕೆರೆ–೧೨	ಭುಜಗರಾಜದ್ರಾಘಿಮಂ
೧೨೪	೧೨೧೬	ಕಡೂರು–೨೮	ಭುಜಬಲರೌಹಿಣೇಯಂ
೧೨೫	ತೇದಿ ರಹಿತ	ಕಡೂರು–೧೩೧	ಭಜಬಳ
೧೨೬	೧೧೬೫	ನಾಗಮಂಗಲ–೬೩	ಭಜಬಲ ವೀರಗಂಗ
೧೨೭	೧೧೮೪	ತರೀಕೆರೆ–೫೧	ಭುವನಸಮ್ಮತ ನಿಜಸ್ವಭಾವಂ
೧೨೮	೧೧೭೭	ಅರಸೀಕೆರೆ–೯೬	ಭೂನುತವಿಕ್ರಮನಿಧಿ
೧೨೯	೧೨೦೨	ಅಣ್ಣಿಗೇರಿ, ನಂ–೨೧೬	ಮ[ಹೇ]ಶ್ವರ ದೇವಪಾದಾರಾಧಕಂ
೧೩೦	೧೨೧೬	ಕಡೂರು–೨೮	ಮಂಗಳಮಳಮಣಿತೋರಣಂ
೧೩೧	೧೧೭೯	ನಾಗಮಂಗಲ–೧೩೨	ಮಂಡಲಿಕಮಕುಟ ಚೂಡಾಮಣಿ
೧೩೨	೧೧೬೮–೬೯	ಅರಸೀಕೆರೆ–೨೬೮	ಮಂಡಳಿಕಗಿರಿ ವಜ್ರದಂಡ
೧೩೩	೧೧೯೬	ನೆಲಮಂಗಲ–೮೨	ಮಂಡಳಿಕತಲೆಚವರ
೧೩೪	೧೧೬೫	ನಾಗಮಂಗಲ–೬೩	ಮಂಡಳಿಕಬೇಂಟೆಕಾರ
೧೩೫	೧೧೯೬	ನೆಲಮಂಗಲ–೮೨	ಮಂಡಳಿಕರಗಂಡರಾಯ
೧೩೬	೧೧೯೬	ನೆಲಮಂಗಲ–೮೨	ಮಂಡಳಿಕರಣಹುಲಿ
೧೩೭	೧೧೯೬	ನೆಲಮಂಗಲ–೮೨	ಮಂಡಳಿಕಲವುಡಿ ನಾರಾಯಣ
೧೩೮	೧೧೬೫	ನಾಗಮಂಗಲ–೬೩	ಮೃಗಮದಾಮೋದ
೧೩೯	೧೨೧೬	ಕಡೂರು–೨೮	ಮಗರಮಂಡಳಿಕಭೂರಿಭೂರುಹಕಠೋರಕುಠಾರಂ
೧೪೦	೧೧೭೩	ಕಡೂರು–೧೩೧	ಮಗರರಾಜ್ಯನಿರ್ಮೂಲನ
೧೪೧	೧೧೭೪	ಹಾಸನ–೧೭೪	ಮಥನಜಯಭುಜಂ
೧೪೨	೧೧೬೮–೬೯	ಅರಸೀಕೆರೆ–೨೬೮	ಮಲಪರೊಳ್ಗಂಡ
೧೪೩	೧೧೭೧	ನಾಗಮಂಗಲ–೧	ಮಲೆರಾಜರಾಜ
೧೪೪	೧೧೬೫	ನಾಗಮಂಗಲ–೬೩	ಮಹಾಮಂಡಲೇಶ್ವರ

೧೪೫	೧೧೭೧	ನಾಗಮಂಗಲ–೧	ಮಹಾರಾಜಾಧಿರಾಜ
೧೪೬	೧೧೭೪	ಮದ್ದೂರು–೧೧೨	ಮಹಾವೀರಗಂಗ
೧೪೭	೧೨೦೨	ಶಿವಮೊಗ್ಗ–೯೮	ಮಳಯಜ ಲಸನ್ಮಲ್ಲಿಕಾಮೋದ . .ಜರಾ . ಮನುಜಮನೋಜ
೧೪೮	೧೨–೧೩ ಶತ	ಅರಸೀಕೆರೆ–೪೭	ಮಾನಧನಂ
೧೪೯	೧೧೮೧	ಚನ್ನರಾಯಪಟ್ಟಣ–೯	ಯದುಕುಳ(ಕುಳ)ವಿಳಸಿದ ಸುಧಾಕರಂ
೧೫೦	೧೧೮೫	ಸಂಶೋಧನ ಲೇಖನ, ತುರುವೇಕೆರೆ	ಯದುಕುಳಂ
೧೫೧	೧೧೮೧	ಬೇಲೂರು–೧೩೨	ಯದುಕುಳಕಳಶನ್ರಿಪಾಳ
೧೫೨	೧೧೯೪	ಅರಸೀಕೆರೆ–೧೩೯	ಯದುಕುಳತಿಳಕ
೧೫೩	೧೨ನೇ ಶತ	ಚನ್ನರಾಯಪಟ್ಟಣ–೧೮	ಯದುಕುಳಪ್ರಭವಂ
೧೫೪	೧೧೯೦	ಇ.ದರ್ಶನ–೨೩, ಹಸ್ತಪ್ರತಿ	ಯಾಚಕ ಜನಕಲ್ಪವೃಕ್ಷ
೧೫೫	೧೧೭೮	ಪರಿಗಿ–೨೬	ಯಾದವಕುಲೋದ್ಭವಂ
೧೫೬	೧೧೭೪	ಬೇಲೂರು–೧೦೮	ಯಾದವಕುಳಕಮಳಮಾರ್ತ್ತಂಡ
೧೫೭	೧೧೭೫	ಪಾಂಡವಪುರ–೨೦	ಯಾದವಕುಳವಾದಿವರ್ಧನ ಸುಧಾಕರ
೧೫೮	೧೧೭೧	ನಾಗಮಂಗಲ–೧	ಯಾದವಕುಳಾಂಬರದ್ಯುಮಣಿ
೧೫೯	೧೧೭೯–೮೦	ಕೊಪ್ಪಳ–೩	ಯಾದವನಾರಾಯಣ
೧೬೦	೧೧೮೪	ತರೀಕೆರೆ–೧೮	ಯಾದವಾಂನ್ವಯಯೋದನ್ವತ್ಸಂಗತ ವಿನೂತಪಾರಿಜಾತ
೧೬೧	೧೧೬೮–೬೯	ಅರಸೀಕೆರೆ–೨೬೮	ಯಾದವಾನ್ವಯಸುಧಾವಾರ್ಧಿ ವರ್ದ್ಧನಮಾಕರ ಸಾಂದ್ರಚಂದ್ರ
೧೬೨	೧೨೦೨	ಅಣ್ಣೀಗೇರಿ, ನಂ–೨೧೬	ಯಾದವಾಭರಣಂ
೧೬೩	೧೧೯೮	ತರೀಕೆರೆ–೧೨	ರಕ್ಷಣದಕ್ಷದಕ್ಷಿಣಭುಜಂ
೧೬೪	೧೧೭೭–೭೮	ಬೇಲೂರು–೨೨೫	ರಣಪ್ರಣಯಿ
೧೬೫	೧೧೬೮–೬೯	ಅರಸೀಕೆರೆ–೨೬೮	ರಣರಂಗಧೀರ
೧೬೬	೧೧೮೧	ಶ್ರವಣಬೆಳಗೊಳ–೫೭೧	ರಣರಂಗಭೀಮ
೧೬೭	೧೨೦೨	ಅಣ್ಣೀಗೇರಿ, ನಂ–೨೧೬	ರಣರಂಗವೀರಂ
೧೬೮	೧೧೭೩	ಅರಸೀಕೆರೆ–೨೩	ರಾಜ್ಯವಿದ್ಯಾವಿಳಾಸಿನೀಸಖಂ
೧೬೯	೧೨೨೯	ತಿಪಟೂರು–೪೨	ರಾಜಕಣ್ಠೀರವ
೧೭೦	೧೧೭೭–೭೮	ಬೇಲೂರು–೨೨೫	ರಾಜನೀತಿಪರಿಪಾಳಿತತ್ರೈವರ್ಗ್ಗಂ
೧೭೧	೧೧೯೦	ಇ.ದರ್ಶನ, ೨೩, ಹಸ್ತಪ್ರತಿ	ರಾಜಪರಮೇಶ್ವರಂ
೧೭೨	೧೨೦೮	ತುಮಕೂರು–೮೭	ರಾಜಮಾರ್ತ್ತಂಡ
೧೭೩	೧೧೭೪	ಚನ್ನರಾಯಪಟ್ಟಣ–೨೩	ರಾಜಮಾರ್ತ್ತಂಡದೇವ
೧೭೪	೧೨೦೮	ಅರಸೀಕೆರೆ–೭೨	ರಾಜಸರ್ವ್ವಜ್ಞಂ
೧೭೫	೧೧೭೪	ಅರಸೀಕೆರೆ–೯೬	ರಾಜಹಂಸಂ
೧೭೬	೧೧೭೪	ಬೇಲೂರು–೧೦೮	ರಾಜಾಧಿರಾಜ
೧೭೭	೧೧೯೮	ತರೀಕೆರೆ–೧೨	ರಾಯಕೋಳಾಹಳನಂ

೧೭೮	೧೨೦೨	ಅಣ್ಣೀಗೇರಿ, ನಂ-೨೧೬	ರಾಯಗಂಡಭೇರುಂಡಂ
೧೭೯	೧೧೯೪	ಅರಸೀಕೆರೆ-೧೩೯	ರಾಯಘಟಸರ್ಪ್ಪಂ
೧೮೦	೧೧೯೮	ತರೀಕೆರೆ-೧೨	ರಾಯಚಕ್ರವರ್ತಿ
೧೮೧	೧೨೧೨-೧೩	ಅರಸೀಕೆರೆ-೮೬	ರಾಯಚೂಡಾಮಣಿ
೧೮೨	೧೧೯೪	ಅರಸೀಕೆರೆ-೧೩೯	ರಾಯಪುರಂದರಂ
೧೮೩	೧೨೦೨	ಅಣ್ಣೀಗೇರಿ, ನಂ-೨೧೬	ರಾಯಬಂಗಾಳಿ
೧೮೪	೧೧೯೮	ತರೀಕೆರೆ-೧೨	ರಾಯಭೇರುಂಡ
೧೮೫	೧೨೦೫	ತರೀಕೆರೆ-೯	ರಾಯಮನ್ಮಥಂ
೧೮೬	೧೨೦೫	ತರೀಕೆರೆ-೯	ರಾಯಶಿರಸೆಲ್ಲಂ
೧೮೭	೧೨೦೨	ಅಣ್ಣೀಗೇರಿ, ನಂ-೧೨೦೬	ರಾಯಹಾಳಾಹಳಂ
೧೮೮	೧೧೮೧	ಶ್ರವಣಬೆಳಗೊಳ-೪೪೪	ರಿಪುದಾತ್ರೀಶಾದ್ರಿವಜ್ರಂ
೧೮೯	೧೧೮೧	ಶ್ರವಣಬೆಳಗೊಳ-೪೪೪	ರಿಪುನೃಪನಳಿನಾನೀಕರಾಶಶಾಂಕಂ
೧೯೦	೧೧೮೧	ಚನ್ನರಾಯಪಟ್ಟಣ-೯	ರಿಪುಬಳಜಳಧಿಬಡವಾನಳಂ
೧೯೧	೧೧೮೧	ಶ್ರವಣಬೆಳಗೊಳ-೪೪೪	ರಿಪುಭೂಪಾಳೇಭಸಿಂಹಂ
೧೯೨	೧೧೮೫	ಚಿಕ್ಕಮಗಳೂರು-೧೮೨	ರಿಪುರಾಜ
೧೯೩	೧೧೬೮-೬೯	ಅರಸೀಕೆರೆ-೨೬೮	ರಿಪುರಾಜಕದಳೀಷಂಡಖಂಡನ
೧೯೪	೧೧೮೪	ತರೀಕೆರೆ-೫೧	ರಿಪುರಾಜಗಂಡಭೇರುಂಡಂ
೧೯೫	೧೧೮೧	ಶ್ರವಣಬೆಳಗೊಳ-೫೭೧	ರಿಪುಹೃದಯಸೆಲ್ಲ
೧೯೬	೧೧೭೪	ಬೇಲೂರು-೧೦೮	ರೂಪಕಂದರ್ಪ
೧೯೭	೧೨೧೬	ಕಡೂರು-೨೮	ರೂಪಮನೋಜಂ
೧೯೮	೧೧೯೩	ಶಿಕಾರಿಪುರ-೧೦೫	ರೂಪಸಂಪತ್ತಿಕಾಮಃ
೧೯೯	೧೨೦೯	ಹಡಗಲಿ-೬೭	ಲಲನಾಕದಂಬಕಾಮಂ
೨೦೦	೧೧೭೧	ನಾಗಮಂಗಲ-೧	ವೈರೀಭಕಂಠೀರವ
೨೦೧	೧೨೧೧	ಕಡೂರು-೧೩೩	ವರವೀರಶ್ರೀಸಖಂ
೨೦೨	೧೧೬೫	ನಾಗಮಂಗಲ-೬೩	ವಾಸಂತಿಕಾದೇವಿಲಬ್ಧವರ ಪ್ರಸಾದ
೨೦೩	೧೨೦೨	ಅಣ್ಣೀಗೇರಿ, ನಂ-೨೧೬	ವಿಕ್ರಮಚಕ್ರವರ್ತಿ ತಿಳಕಂ
೨೦೪	೧೨೧೧	ಕಡೂರು-೧೩೩	ವಿಕ್ರಮಗುಣನಿಳಯಂ
೨೦೫	೧೧೯೪	ಅರಸೀಕೆರೆ-೧೯೩	ವಿಕ್ರಾಂತಕಾಂತಂ
೨೦೬	೧೨೧೬	ಕಡೂರು-೨೮	ವಿಜಯಲಕ್ಷ್ಮೀಭವನಂ
೨೦೭	೧೧೮೪	ತರೀಕೆರೆ-೫೧	ವಿಜಯಲಕ್ಷ್ಮೀವಿನೋದಂ
೨೦೮	೧೨-೧೩ ಶತ	ಚನ್ನರಾಯಪಟ್ಟಣ-೧೨೪	ವಿಜಯವರ್ಧನ
೨೦೯	೧೧೭೭-೭೮	ಬೇಲೂರು-೨೨೫	ವಿಜಯಶಾರ್ದೂಲಧ್ವಜಂ
೨೧೦	೧೧೮೪	ತರೀಕೆರೆ-೫೧	ವಿತರಣವಿಭವೋಪಹಸಿತದಿವಿಜೇಂದ್ರಂ
೨೧೧	೧೧೮೪	ತರೀಕೆರೆ-೫೧	ವಿದಳಿತವಿಜಯಪಾಂಡ್ಯ ವಿಕ್ರಮಧಾರ ಗಿರಿದುರ್ಗ್ಗಂ
೨೧೨	೧೧೮೪	ಅರಸೀಕೆರೆ-೩೩	ವಿನಮದಹಿತಮಹಿಪಚೂಡಾಲೀಢನೂತ್ನ ರತ್ನಜಾಳಜಟಿಳಿತನಖಕಿರಣಂ

೨೧೩	೧೧೮೪	ತರೀಕೆರೆ-೫೧	ವಿನುತವಿಭವೋಪಹಸಿತದಿವಿಜೇಂದ್ರಂ
೨೧೪	೧೧೬೮-೬೯	ಅರಸೀಕೆರೆ-೨೬೮	ವಿಭವಾಧರೀಕೃತಾಮರೇಂದ್ರ
೨೧೫	೧೧೮೯	ಅರಸೀಕೆರೆ-೮೮	ವಿಮಳಯಸಂ
೨೧೬	೧೧೬೮-೬೯	ಅರಸೀಕೆರೆ-೨೬೮	ವಿರಚಿತ ವೀರವಿತರಣವಿನೋದಂ
೨೧೭	ತೇದಿ ರಹಿತ	ಭದ್ರಾವತಿ-೧೯	ವಿರೋಧಿಮಂಡಳಿಕ ಕುರುಂಗ ಕಂಠೀರವ
೨೧೮	೧೧೮೧	ಚನ್ನರಾಯಪಟ್ಟಣ-೯	ವಿವಿಧಯಾಚಕಜನ್ಯೆಕ ಚಿಂತಾಮಣಿ
೨೧೯	೧೧೮೧	ಚನ್ನರಾಯಪಟ್ಟಣ-೯	ವಿವೇಕಕಮಳಾಸನ
೨೨೦	೧೧೮೪	ತರೀಕೆರೆ-೫೧	ವಿಶಿಷ್ಟವಿದ್ವಜ್ಜನಪ್ರೀತಿಪಾತ್ರಂ
೨೨೧	೧೧೭೧	ನಾಗಮಂಗಲ-೧	ವಿಷ್ಣುವರ್ದ್ಧನ ಹೊಯಿಸಳ
೨೨೨	೧೧೮೪	ತರೀಕೆರೆ-೫೧	ವಿಳಾಸಪುರಂದರಂ
೨೨೩	೧೧೮೯	ಅರಸೀಕೆರೆ-೮೮	ವೀರ ಸಂಗ್ರಾಮರಾಮಂ
೨೨೪	೧೧೭೯	ತಿ. ನರಸೀಪುರ-೧೩೬	ವೀರಗಂಗ
೨೨೫	೧೨೦೨	ಅಣ್ಣೀಗೇರಿ, ನಂ-೨೧೬	ವೀರಗಂಗ ಬಲ್ಲಾಳದೇವ
೨೨೬	೧೧೯೪	ತರೀಕೆರೆ-೧೭	ವೀರಗಂಗ ವಿಷ್ಣುವರ್ಧನ ದೇವರು ಬಲ್ಲಾಳರಾಯರು
೨೨೭	೧೧೯೬	ನೆಲಮಂಗಲ-೮೨	ವೀರನಾರಾಯಣ
೨೨೮	೧೧೮೪	ಅರಸೀಕೆರೆ-೩೯	ವೀರವಿಕ್ರಮ
೨೨೯	೧೨೦೮	ಅರಸೀಕೆರೆ-೭೨	ವೀರವಿಕ್ರಮ ತೇಜಂ
೨೩೦	೧೨೧೧	ಕಡೂರು-೧೩೩	ವೀರಸಂಗ್ರಾಮರಾಮಂ
೨೩೧	೧೧೭೭-೭೮	ಬೇಲೂರು-೨೨೫	ವೀರಾಗ್ರೇಸರ
೨೩೨	೧೧೭೩	ಹಾಸನ-೧೨೮	ವೈರಿಬ(ಬ)ಳಗಹನದಾವಾನಳ[ಂ]
೨೩೩	೧೧೮೬	ಗುಬ್ಬಿ-೪೯	ವೈರಿಭಕಂಠೀರವ
೨೩೪	ತೇದಿ ರಹಿತ	ಭದ್ರಾವತಿ-೧೯	ವೈರಿಮಂಡಳಿಕ
೨೩೫	೧೨೧೬	ಕಡೂರು-೨೮	ವೈರಿಹ್ರಿಭೆಲ್ಲಂ
೨೩೬	೧೧೭೧	ನಾಗಮಂಗಲ-೧	ಶ್ರೀಪೃಥ್ವೀವಲ್ಲಭ
೨೩೭	ತೇದಿರಹಿತ	ಭದ್ರಾವತಿ-೧೯	ಶ್ರೀಪುರುಷೋತ್ತಮದೇವರ ಪಾದಬ್ಜಬ್ರಿಂಗ
೨೩೮	೧೧೭೧	ನಾಗಮಂಗಲ-೧	ಶ್ರೀಮತು ಪ್ರತಾಪಚಕ್ರವರ್ತ್ತಿ
೨೩೯	೧೧೬೮	ಚನ್ನರಾಯಪಟ್ಟಣ-೫೫	ಶ್ರೀಮನ್ಮಹಾಮಂಡಲೇಶ್ವರ
೨೪೦	೧೧೭೪	ಬೇಲೂರು-೧೦೮	ಶ್ರೀಮನ್ಮುಕುಂದಪಾದಾರವಿಂದ
೨೪೧	೧೧೯೫-೯೬	ಚಿಕ್ಕಮಗಳೂರು-೧೫೬	ಶ್ರೀಮಹಾರಾಜಾಧಿರಾಜ
೨೪೨	೧೧೯೪	ತರೀಕೆರೆ-೧೭	ಶ್ರೀಲೋಕ ತ್ರಿಭುವನಮಲ್ಲ
೨೪೩	೧೨-೧೩ ಶತ	ಕಡೂರು-೧೬	ಶ್ವೇತಾತಪ್ರತಶೀತಳೀಕ್ರಿತಭೂತನಳನುಂ
೨೪೪	೧೧೭೧	ನಾಗಮಂಗಲ-೧	ಶನಿವಾರಸಿದ್ಧಿ
೨೪೫	೧೧೯೮	ತರೀಕೆರೆ-೧೨	ಶರಣಾಗತವಾರ್ದ್ಧಿ
೨೪೬	೧೧೭೮	ನಾಗಮಂಗಲ-೧೧೮	ಶಶಕಪುರಕೃತನಿವಾಸ
೨೪೭	೧೧೮೧	ಚನ್ನರಾಯಪಟ್ಟಣ-೯	ಶೌರ್ಯಮೃಗರಾಜಂ
೨೪೮	೧೧೮೪	ತರೀಕೆರೆ-೧೮	ಷಕಿತಚಳಚಂದ್ರಬಿಂಬಾಂತರ್ಗ್ಗತ

೨೪೯	೧೧೬೫	ನಾಗಮಂಗಲ-೬೩	ಸಂಗ್ರಾಮಭೀಮ
೨೫೦	೧೨-೧೩ ಶತ	ಕಡೂರು-೧೬	ಸಂಗೀತಪ್ರಸಂಗಭಂಗಿಸಂಗತ ಚತುರಭರತನುಂ
೨೫೧	೧೧೮೯	ಅರಸೀಕೆರೆ-೮೮	ಸ್ಥಿರಸತ್ವಂಕ್ಷತ್ರಪುತ್ರಾಗ್ರಣಿ
೨೫೨	೧೨೧೧	ಕಡೂರು-೧೩೩	ಸ್ಮರರೂಪಂ ಹೊಯ್ಸಣೇಶಂ
೨೫೩	೧೧೮೬	ಅರಸೀಕೆರೆ-೫೯	ಸಕಲಜನಮನೋನಂದನಂ
೨೫೪	೧೧೭೩	ಶ್ರವಣಬೆಳಗೊಳ-೫೬೫	ಸಕಲವಂದಿಜನಮನಸ್ಸಂತರ್ಪ್ಪಣ
೨೫೫	೧೧೬೫	ನಾಗಮಂಗಲ-೬೩	ಸಕಲವಂದಿಬ್ರಿಂದಸಂತರ್ಪ್ಪಣ ಸಮರ್ತ್ಥ
೨೫೬	೧೧೮೪	ತರೀಕೆರೆ-೧೮	ಸಕಲಕಳಾಕಮಳಜಾತ
೨೫೭	೧೧೭೩	ಕಡೂರು-೪೮	ಸಕಳಕಳಾಪರಿಪೂರ್ಣ್ಣಂ
೨೫೮	೧೧೭೩	ಚಿಕ್ಕಮಗಳೂರು-೨೩೪	ಸಕಳಕಳಾಸಂಪೂರ್ಣ್ಣಂ
೨೫೯	೧೧೭೭	ಅರಸೀಕೆರೆ-೯೬	ಸಕಳಗುಣಗಣಾಂಭೋಜಿನೀ
೨೬೦	೧೨-೧೩ ಶತ	ಅರಸೀಕೆರೆ-೧೨	ಸಕಳದಂಡಾಧೀಶ
೨೬೧	೧೧೮೪	ತರೀಕೆರೆ-೫೧	ಸಕಳವಿಬುಧಜನಾನಂದನಂ
೨೬೨	೧೨೦೨	ಅಣ್ಣೀಗೇರಿ, ನಂ-೨೧೬	ಸಕಳಶಾಸ್ತ್ರಪಾರಾಯಣಂ
೨೬೩	೧೧೭೫	ಪಾಂಡವಪುರ-೨೦	ಸತ್ಯರತ್ನಾಕರ
೨೬೪	ತೇದಿರಹಿತ	ಭದ್ರಾವತಿ-೧೯	ಸತ್ಯರಾಧೇಯ
೨೬೫	೧೧೯೩	ಶಿಕಾರಿಪುರ-೧೦೫	ಸಮರವಿಜಯರಾಮಃ
೨೬೬	೧೨-೧೩ ಶತ	ಅರಸೀಕೆರೆ-೪೭	ಸೇವುಣಕುಳೋನ್ಮೂಳ
೨೬೭	ತೇದಿರಹಿತ	ಭದ್ರಾವತಿ-೧೯	ಸೌಚಗಾಂಗೇಯ
೨೬೮	೧೧೭೮	ಚಿಕ್ಕಮಗಳೂರು-೮೮	ಹರ್ಮ್ಯಮೂಳಸ್ತಂಭನುಂ
೨೬೯	೧೧೯೯	ತಿಪಟೂರು-೯೨	ಹುಲಿರಾಯ
೨೭೦	೧೧೭೭-೭೮	ಬೇಲೂರು-೨೨೫	ಹೃದಯಾರವಿಂದಮಂದಿರಾನೀತ ಗರುಡಧ್ವಜ
೨೭೧	೧೧೯೩	ಶಿಕಾರಿಪುರ-೧೦೫	ಹೊಯ್ಸಳಾಭರಣಂ
೨೭೨	೧೨೧೯	ಮಾಗಡಿ-೭೯	ಹೊಯಿಸಳೇಶ್ವರ
೨೭೩	೧೧೭೪	ಪಿರಿಯಾಪಟ್ಟಣ-೧೧೮	ಹೊಯಿಸಳಭುಜಬಲ

ಗ್ರಂಥಋಣ

೧. ಎಪಿಗ್ರಾಫಿಯಾ ಕರ್ನಾಟಿಕಾ, ಬಿ.ಎಲ್. ರೈಸ್ ಸಂಪುಟಗಳು.

೨. ಎಪಿಗ್ರಾಫಿಯಾ ಕರ್ನಾಟಿಕಾ (ಪರಿಷ್ಕೃತ) ಸಂಪುಟಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩೭

ಹೊಯ್ಸಳರ ಕಾಲದ ಮಂಡ್ಯ ಪ್ರದೇಶದ ಜೈನಧರ್ಮ

ಡಾ. ಎಸ್. ಶಿವರಾಮು*

ಪ್ರಾಚೀನ ಕಾಲದಿಂದಲೂ ಕರ್ನಾಟಕವು ಜೈನಧರ್ಮದ ನೆಲೆಯಾಗಿತ್ತು. ಕರ್ನಾಟಕದಲ್ಲಿ ಹಲವು ರಾಜಮನೆತನಗಳ ರಾಜಾಶ್ರಯದಿಂದ ಈ ಧರ್ಮವು ಅತ್ಯಲ್ಪ ಕಾಲದಲ್ಲೇ ತನ್ನ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಂಡಿತು. ಅದರ ಉಚ್ಛ್ರಾಯ ಸ್ಥಿತಿಯ ದಿನಗಳಲ್ಲೂ ಹಾಗೂ ಬೆಳವಣಿಗೆಯ ದಿನಗಳಲ್ಲೂ ಜನರ ಆದರ ಮತ್ತು ಪ್ರಾಮಾಣಿಕ ಅನುರಾಗ ಪಡೆಯಿತು. ದಕ್ಷಿಣಭಾರತದಲ್ಲಿ ಜೈನಧರ್ಮದ ಇತಿಹಾಸವೆಂದರೆ ಮುಖ್ಯವಾಗಿ ಅದು ಕರ್ನಾಟಕದಲ್ಲಿ ಈ ಧರ್ಮದ ಇತಿಹಾಸವೇ ಆಗಿದೆ.

ಹೊಯ್ಸಳರ ಕಾಲದಲ್ಲಿ ಜೈನಧರ್ಮವು ಉಚ್ಛ್ರಾಯಸ್ಥಿತಿಯಲ್ಲಿತ್ತೆಂದು ಹೇಳಬಹುದು. ಹೊಯ್ಸಳ ರಾಜ್ಯದ ಸ್ಥಾಪನೆ ಕೂಡ ಜೈನ ಮುನಿಯ ಪ್ರಭಾವದಿಂದಲೇ ಸಳನೆಂಬುವನು ಮಾಡಿದನೆಂದು ಅನೇಕ ಶಾಸನಗಳು ಖಚಿತಪಡಿಸುತ್ತವೆ[೧]. ಹೊಯ್ಸಳ ವಂಶದ ಪ್ರಭಾವೀ ದೊರೆಯಾದ ವಿಷ್ಣುವರ್ಧನನು ವೈಷ್ಣವನಾಗಿ ಮತಾಂತರ ಹೊಂದಿದರೂ ಜೈನಧರ್ಮಕ್ಕೆ ಪ್ರೋತ್ಸಾಹವನ್ನೇನೂ ಕಡಿಮೆ ಮಾಡಲಿಲ್ಲ, ಅವನ ರಾಣಿ ಶಾಂತಲೆಯು ಜೈನ ಬಸದಿಗಳನ್ನೂ ಕಟ್ಟಿಸಿ ಅದಕ್ಕೆ ದತ್ತಿ ಬಿಟ್ಟಿರುವುದನ್ನು ಮಂಡ್ಯ ಪ್ರದೇಶದ ಶಾಸನಗಳು ತಿಳಿಸುತ್ತವೆ. ಹೊಯ್ಸಳವಂಶದ ದೊರೆಗಳಲ್ಲಿ ಬಹುತೇಕ ಎಲ್ಲ ರಾಜರೂ ಜೈನಧರ್ಮವನ್ನು ಪಾಲಿಸಿಕೊಂಡು ಬಂದಿದ್ದಾರೆ. ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಮಂಡ್ಯ ಪ್ರದೇಶವು ಅವರ ಸಾಮ್ರಾಜ್ಯಕ್ಕೊಳಪಟ್ಟಿದ್ದುದರಿಂದ ಇಲ್ಲಿನ ಜೈನಧರ್ಮದ ಮಾಹಿತಿಯು ಅವರ ಕಾಲದ ಜೈನಶಾಸನಗಳು, ಬಸದಿಗಳಲ್ಲಿ ಸಾಕಷ್ಟು ಕಂಡುಬಂದಿವೆ. ಮಂಡ್ಯ ಪ್ರದೇಶದಲ್ಲಿ ಹೊಯ್ಸಳರ ಕಾಲದಲ್ಲಿ ಈ ಧರ್ಮ ಹೇಗೆ ಬೆಳವಣಿಗೆ ಕಂಡುಬಂತು ಎಂಬ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಮಂಡ್ಯ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ಜೈನಧರ್ಮ ಹರಡಿಕೊಂಡಿತ್ತು ಎಂಬುದಕ್ಕೆ ಶಾಸನಗಳು ಮತ್ತು ಉಳಿದಿರುವ ಹಾಗೂ ಜೀರ್ಣವಾಗಿರುವ ಬಸದಿಗಳು ಸಾಕ್ಷಿಯಾಗಿವೆ. ಶ್ರೀರಂಗಪಟ್ಟಣ ತಾಲ್ಲೂಕಿನ ಕಳಸ್ತವಾಡಿಯಲ್ಲಿ ಜೈನ ಬಸದಿಗಳಿಗೆ ಸೇರಿರುವ ಅನೇಕ ಲೋಹದ ಮೂರ್ತಿಗಳು ಮತ್ತು ಪಾತ್ರೆಗಳು ವಿನಯಾದಿತ್ಯನಕಾಲದಲ್ಲಿ ಈ ಸ್ಥಳವು ಬಹುಮುಖ್ಯ ಜೈನ ಕೇಂದ್ರವಾಗಿತ್ತೆಂದು ತಿಳಿದು ಬರುತ್ತದೆ[೨]. ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿ ಬಿಂಡಿಗನವಿಲೆಗೆ ಒಂದು ಮೈಲಿದೂರದಲ್ಲಿದ್ದರೂ ಹಿಂದೆ ಅದು ಬಿಂಡಿಗನವಿಲೆಯ ಒಂದು ಭಾಗವೇ ಆಗಿತ್ತು. ಇಲ್ಲಿರುವ ಪಂಚಕೂಟ ಬಸದಿಯ ಮುಂದಿನ ಮಾನಸ್ತಂಭದಿಂದಾಗಿ ಈ ಪ್ರದೇಶಕ್ಕೆ ಕಂಬದಹಳ್ಳಿ ಎಂಬ ಹೆಸರು ಬಂದಿದೆ. ಕಂಬದಹಳ್ಳಿಯ ಬಸದಿಗಳಲ್ಲಿ ಆದಿನಾಥ ಬಸದಿಯು ಪ್ರಾಚೀನವಾದುದು ಇದಕ್ಕೆ ತ್ರಿಕೂಟಚಲ ಆದಿನಾಥ ಬಸದಿ ಎಂದೂ ಹೆಸರಿದೆ ಈ ಬಸದಿಯ ಮೇಲೆ ಮೂರು ಶಿಖರಗಳಿವೆ. ಮೂರು ಶಿಖರಗಳು ಮೂರು ವಿಧವಾಗಿವೆ. ವಾಸ್ತುಶಿಲ್ಪದ ದೃಷ್ಟಿಯಿಂದ ಇವು ಮಹತ್ವದಾಗಿವೆ[೩]. ಕಂಬದಹಳ್ಳಿಯ ಕಂಬದರಾಯನ (ಬ್ರಹ್ಮಯಕ್ಷ) ಕಂಬದ ಬುಡದಲ್ಲಿರುವ ಶಾಸನವು ಕ್ರಿ.ಶ. ೧೧೧೮ಲಕ್ಕೆ ಸೇರುತ್ತದೆ. ಹೊಯ್ಸಳ ವಿಷ್ಣುವರ್ಧನನ ನೆಚ್ಚಿನ ದಂಡನಾಯಕ ಗಂಗರಾಜನಿಗೆ ತಲಕಾಡನ್ನು ಗೆದ್ದಾಗ ಮೆಚ್ಚಿದನ್ನು ಕೇಳಿಕೋ ಎಂದಾಗ "ಬಿಂಡಿಗನವಿಲೆಯ ತೀರ್ಥಕ್ಕರರ ವೃತ್ತಿಯಂ" ಬೇಡಿಕೊಳ್ಳುತ್ತಾನೆ. ಹೀಗೆ ಪಡೆದ ಬಿಂಡಿಗನವಿಲೆಯ ವೃತ್ತಿಯನ್ನು ಗಂಗರಾಜನು ಶ್ರೀ ಮೂಲಸಂಘದ ದೇಶಿಗಣದ ಪುಸ್ತಕಗಚ್ಚದ ಕುಂದಕುಂದಾನ್ವಯದ ಶುಭಚಂದ್ರ ಸಿದ್ಧಾಂತ ದೇವರಿಗೆ ಧಾರಾಪೂರ್ವಕವಾಗಿ ಕಾಲುತೊಳೆದು ದತ್ತಿಬಿಟ್ಟ ವಿಚಾರವನ್ನು ಈ ಶಾಸನ ತಿಳಿಸಿಕೊಡುತ್ತದೆ[೪]. ನಾಗಮಂಗಲ ತಾಲ್ಲೂಕಿನ ವಿಷ್ಣುವರ್ಧನನ ಕಾಲದ ದಡಗ ಶಾಸನದಲ್ಲಿ ತೇದಿಯಿಲ್ಲದ ಸವೆದುಹೋದ ಕಲ್ಲುದಡಿಗ ಕೆರೆಯ ಪಂಚಬಸದಿಗೆ ಬಾಹುಬಲಿಕೂಟಕ್ಕೆ ಎಲ್ಲಾ ಆದಾಯಗಳಿಂದಲೂ ಕೆಲವು ಭೂಮಿಯನ್ನು ದೇವರಿಗೋಸ್ಕರ ಇಬ್ಬರು ಮಂತ್ರಿಗಳಾದ ಮಹಾಪ್ರಧಾನ ದಂಡನಾಯಕ ಮರಿಯಾನೆ ಮತ್ತು ಭರತಿಮಯ್ಯನು ದಾನ ನೀಡಿದ್ದಾನೆ. ತಿಂತ್ರಿಣೀ ಗಚ್ಛದ ಮತ್ತು ಕಾಣೂರ್ಗ್ಗಣ ಕುಂದಕುಂದಾನ್ವಯ ಮೂಲಸಂಘದ ಮುನಭದ್ರ ಸಿದ್ಧಾನ್ತದೇವರ ಶಿಷ್ಯ ಮೇಘಚಂದ್ರ ಸಿದ್ಧಾನ್ತದೇವರು ದಾನ ಪಡೆದಿದ್ದಾರೆ.

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು–೫೭೧೩೦೧. ಮೈಸೂರು ಜಿಲ್ಲೆ.

ಈ ಒಂದು ದಾನವನ್ನು ನಾಲ್ಕು ಬಸದಿಗಳಿಗೆ ಸಮವಾಗಿ ಹಂಚಿದ ದಾಖಲೆಯಿದೆ. ಈ ಶಾಸನದಿಂದ ಆರ್ಥಿಕ ಮತ್ತು ಧಾರ್ಮಿಕ ವಿಶೇಷತೆಯನ್ನು ಕಾಣಬಹುದು[೫].

ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲು ಗ್ರಾಮದ ಪಾರ್ಶ್ವನಾಥ ಬಸದಿಯಲ್ಲಿ ಕ್ರಿ.ಶ. ೧೧೨೫ಕ್ಕೆ ಸೇರುವ ಶಾಸನವೊಂದಿದೆ. ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ (ಕ್ರಿ.ಶ. ೧೧೧೮) ದೋರಸಮುದ್ರದ ಪಟ್ಟಣ ಸ್ವಾಮಿಯಾಗಿದ್ದ ದೀನಾನಾಥ ಬುಧಜನ ಕಲ್ಪವೃಕ್ಷ, ದ್ವಿತೀಯ ಚವುಂಡಾಡಿ ಎಂಬ ಹೆಸರನ್ನು ಪಡೆದಿದ್ದ ಹೊಯ್ಸಳಸೆಟ್ಟಿಯು ಶ್ರೀ ಶುಭಚಂದ್ರಸಿದ್ದಾಂತ ದೇವರ ಜಿನಗಂಧೋದಕ ಪವಿತ್ರೀಕೃತೋತ್ತಮಾಂಗ ಆಹಾರಾಭಯ ಭೇಷಜಶಾಸ್ತ್ರ ಶಾಸ್ತ್ರದಾನವಿನೋದೆಯಾದ ದೇಮಿಕಬ್ಬೆಯು ನೊಳಬಿಸೆಟ್ಟಿಯ ಹೆಂಡತಿ ಇವರು ತ್ರಿಕೂಟ ಜಿನಾಲಯವನ್ನು ಮಾಡಿಸಿ ತಮ್ಮ ಗುರುಗಳಾದ ಶುಭಚಂದ್ರ ಸಿದ್ಧಾಂತ ದೇವರಿಗೆ ಕೊಟ್ಟಿದ್ದರು. ಆ ಬಸದಿಗಾಗಿ ಅರ್ಹನಹಳ್ಳಿ ಬಸದಿಯ ಬಡಗಲು ತೆಂಕಲುಗಳ ಭೂಮಿ, ದಾನಶಾಲೆ, ಎರಡುಗಾಣ, ಎರಡು ತೋಟಗಳು, ಗಂಡ ನಾರಾಯಣಶೆಟ್ಟಿಯು ಕೊಟ್ಟ ಭೂಮಿ ಇವಿಷ್ಟನ್ನೂ ನೊಳಬಿಸೆಟ್ಟಿಯು ಶ್ರೀ ಶುಭಚಂದ್ರಸಿದ್ಧಾಂತ ದೇವರಿಗೆ ದತ್ತಿಯಾಗಿ ಬಿಟ್ಟುಕೊಟ್ಟನೆಂದು ಈ ಶಾಸನದಿಂದ ತಿಳಿದುಬರುತ್ತದೆ[೬].

ನಾಗಮಂಗಲದ ವಿಷ್ಣುವರ್ಧನನ ಆಳ್ವಿಕೆಯ ಶಿಲಾಶಾಸನವೊಂದು ಸತ್ಯದೇವನು ಚಂದ್ರಗ್ರಹಣದ ಸಮಯದಲ್ಲಿ ಕುರುಲಿ ತೀರ್ಥದಲ್ಲಿ ಗಂಗಜಿನಾಲಯವನ್ನು ಕಟ್ಟಿಸಿ ಗುರುವಾರ ಮಾಧವಚಂದ್ರದೇವನ ಪಾದಗಳನ್ನು ತೊಳೆದುದಾಗಿ ತಿಳಿಸುತ್ತದೆ[೭]. ಇದೇ ಸ್ಥಳದ ವಿಷ್ಣುವರ್ಧನನ ಕಾಲದ ಶಾಸನವು ಕಾನೂರ್ಗಣ ಮತ್ತು ತಿಂತ್ರಿಣಿಗಚ್ಚದ ಮುನಿಚಂದ್ರಸಿದ್ಧಾಂತ ದೇವರ ಆರಾಧಕರಾದ ಮೇಘಚಂದ್ರನು ಬಸದಿ ಮತ್ತು ಭೂಮಿಯನ್ನು ಕಾಣಿಕೆಯಾಗಿ ಸ್ವೀಕರಿಸಿದ್ದನ್ನು ತಿಳಿಸುತ್ತದೆ[೮]. ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿಯ ಕೋದಂಡರಾಮ ದೇವಸ್ಥಾನದ ಬಳಿದೊರಕಿರುವ ಕ್ರಿ.ಶ. ೧೧೭೫ಕ್ಕೆ ಸೇರಿದ ಶಾಸನವು ಎರೆಯಣ್ಣ ಎಂಬುವವನು ಸ್ವಲ್ಪ ಭೂಮಿಯನ್ನು ಕ್ರಯಕ್ಕೆ ತೆಗೆದುಕೊಂಡು ಕೊಡೆಹಾಳ ಬಸದಿಗೆ ದತ್ತಿಬಿಟ್ಟಿರುವುದನ್ನು ತಿಳಿಸುತ್ತದೆ[೯].

ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿ ಅಬಲವಾಡಿ ಗ್ರಾಮದ ವಿಷ್ಣುವರ್ಧನನ ಕಾಲದ ಶಾಸನವು ಹೆಗ್ಗಡೆ ಮಲ್ಲಿನಾಥನು ನಯಕೀರ್ತಿ ಮತ್ತು ಭಾನುಕೀರ್ತಿಗಳ ಶಿಷ್ಯನಾಗಿದ್ದು, ಜೈನ ಬಸದಿಯನ್ನು ಕಟ್ಟಿಸಿ ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತದೆ[೧೦]. ನಾಗಮಂಗಲ ತಾಲ್ಲೂಕಿನ ಸುಕದರೆ ಗ್ರಾಮದ ವಿಷ್ಣುವರ್ಧನನ ಶಾಸನದಲ್ಲಿ ಒಂದು ಬಸದಿಯನ್ನು ಕಟ್ಟಿಸಿ ಗ್ರಾಮದಲ್ಲಿ ದಕ್ಷಿಣ ಮತ್ತು ಪಶ್ಚಿಮಭಾಗದಲ್ಲಿ ಒಂದು ಕೆರೆಯನ್ನು ಉತ್ಖನನ ಮಾಡಿಸಿ, ಸನ್ಯಾಸಿಗಳ ಆಹಾರದಾನಕ್ಕೆ ಜಕ್ಕಸೆಟ್ಟಿಯ ನಿಗದಿಪಡಿಸಿದ ಭೂಮಿಗಳನ್ನು ದ್ರವಿಳ ಸಂಘದ ದಯಾಪಾಲದೇವನಿಗೆ ದಾನ ನೀಡಿದ ದಾಖಲೆಯಿದೆ[೧೧]. ದ್ರಾವಿಡಾನ್ವಯದ ಅಜಿತಮುನಪನು ಧಾರ್ಮಿಕ ಗುರುವಾಗಿದ್ದು, ಸೈನ್ಯಾಧಿಕಾರಿ ಮರಿಯಾನೆ ಮತ್ತು ಅವನ ಸಹೋದರನಾದ ಭರತನು ರಾಜ ವಿಷ್ಣುವರ್ಧನನ ಕೈಕೆಳಗೆ ವಿಶಿಷ್ಟ ದಳಪತಿಗಳಾಗಿದ್ದರು ಮತ್ತು ಅವರು ಗಂಗರಾಜನ ಮಗನಾದ ಸೇನಾಧಿಪತಿ ಬೊಪ್ಪನ ಭಾವಮೈದುನರಾಗಿದ್ದರು. ಭರತನು ಮೊದಲನೇ ತೀರ್ಥಂಕರನಾದ ವೃಷಭನಾಥನ ಮಕ್ಕಳಾದ ಭರತ ಮತ್ತು ಬಾಹುಬಲಿಯ ಮೂರ್ತಿಗಳನ್ನು ಕೆತ್ತಿಸಿದನು. ಅವನು ೮೦ ಹೊಸ ಬಸದಿಗಳನ್ನು ಕಟ್ಟಿಸಿ ಗಂಗವಾಡಿಯಲ್ಲಿ ೨೦೦ ಹಳೆಯವುಗಳನ್ನು ನವೀಕರಣಗೊಳಿಸಿದನು[೧೨]. ಅವನು ಜಿನಮಂದಿರಗಳಿಗಾಗಿ ತನ್ನೆಲ್ಲಾ ಸಂಪತ್ತನ್ನೂ ಸಮರ್ಪಿಸಿದನು. ಕೆ.ಆರ್.ಪೇಟೆ ತಾಲ್ಲೂಕಿನ ಅಕ್ಕಿಹೆಬ್ಬಾಳು ಹೋಬಳಿ ಶ್ರವಣಹಳ್ಳಿಯ ಶಾಸನವೊಂದು ರಾಣಿ ಚಂದಲದೇವಿಯರ ಕಿರಿಯ ಸಹೋದರನಾದ ದುದ್ದ ಮಲ್ಲದೇವನು ಮಂದಗೆರೆ ಬಳಿಯ ಕಾವನಹಳ್ಳಿಯನ್ನು ಮೂಲಸಂಘ ದೇಶಿಗಣ ಪುಸ್ತಕಗಚ್ಚ ಮತ್ತು ಕುಂದಕುಂದಾನ್ವಯ ಮೇಘಚಂದ್ರರ ಶಿಷ್ಯರಾದ ಜೈನಗುರು ಪ್ರಭಾಚಂದ್ರರಿಗೆ ವೀರಕೊಂಗಾಳ್ವ ಜಿನಾಲಯ ಜೈನ ಮಂದಿರದಲ್ಲಿ ದೇವರಪೂಜೆಯ ಖರ್ಚುಗಳನ್ನು ಪೂರೈಸಲು ಕಾಣಿಕೆಯಾಗಿ ಕೊಟ್ಟನೆಂದು ತಿಳಿಸುತ್ತದೆ[೧೩].

ಬೋಗಾದಿಗ್ರಾಮದ ಪಾಳು ಬಸದಿಯಲ್ಲಿ ಎರಡು ಶಾಸನಗಳು ಕಂಡುಬರುತ್ತದೆ. ಹೆಗ್ಗಡೆ ಮಾದಿರಾಜನು ಮಾಡಿಸಿದ ಶ್ರೀಕರಣ ಜಿನಾಲಯಕ್ಕೆ ಶ್ರೀಮನ್ ಹೊಯ್ಸಳ ದೇವರು ಕ್ರಿ.ಶ. ೧೧೪೫ರಲ್ಲಿ ಭೋಗವತಿಯನ್ನು (ಬೋಗಾದಿ) ದಾನ ಮಾಡಿದುದನ್ನು ತಿಳಿಸುತ್ತದೆ[೧೪]. ಬಸದಿಯ ಪಶ್ಚಿಮ ದಿಕ್ಕಿನ ತಳಪಾದಿ ಕಲ್ಲಿನಲ್ಲಿರುವ ಶಾಸನವು ಕ್ರಿ.ಶ. ೧೧೭೩ಕ್ಕೆ ಸೇರಿದುದು ಹೊಯ್ಸಳ ಎರಡನೇ ಬಲ್ಲಾಳನ ಕಾಲದಲ್ಲಿ ಮಹಾಪ್ರಧಾನ ಸರ್ವಾಧಿಕಾರಿ ಹೆಗ್ಗಡೆ ಬಲ್ಲಯ್ಯನು ಭೋಗವತಿಯ ಶ್ರೀಕರಣಜಿನಾಲಯದ ಶ್ರೀ ಪಾರ್ಶ್ವದೇವರ ಅಷ್ಟವಿದಾರ್ಚನೆಗೆಂದು ಪದ್ಮಪ್ರಭಸ್ವಾಮಿಗಳಿಗೆ ದತ್ತಿಬಿಟ್ಟ ವಿಚಾರವು ಇದರಲ್ಲಿದೆ[೧೫]. ಕ್ರಿ.ಶ. ೧೧೩೧ರಲ್ಲಿ ನಾಗಮಂಗಲದ ಶಾಸನದ ಪ್ರಕಾರ ವಿಷ್ಣುವರ್ಧನನ ದಂಡನಾಯಕನಾದ ಗಂಗರಾಜನ ಪುತ್ರ ಬೊಪ್ಪನು ತನ್ನ ತಂದೆಯ ವಿಶಿಷ್ಟ ಬಿರುದುಗಳಾದ ದ್ರೋಹಘರಟ್ಟ ಎಂಬ ಹೆಸರಿನಲ್ಲಿ **"ದ್ರೋಹಘರಟ್ಟ ಬಸದಿ"**ಯನ್ನು ನಿರ್ಮಿಸಿ ಅದರಲ್ಲಿ ಶಾಂತಿನಾಥನನ್ನು ಪ್ರತಿಷ್ಠಾಪಿಸಿದನೆಂದು ತಿಳಿದು ಬರುತ್ತದೆ[೧೬]. ಈ ಬಸದಿಯು ನಾಗಮಂಗಲದಿಂದ

ಪಶ್ಚಿಮಕ್ಕೆ ಶ್ರವಣಬೆಳಗೊಳ ಮಾರ್ಗದಲ್ಲಿ ೧೬ ಕಿ.ಮೀ. ದೂರದ ಕಂಬದಹಳ್ಳಿಯಲ್ಲಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ಸುಕನಾಸಿಗಳಿಂದ ಕೂಡಿದ ಒಂಬತ್ತು ಅಂಕಣಗಳನ್ನುಳ್ಳ ನವರಂಗವಿದೆ. ಗರ್ಭಗೃಹದಲ್ಲಿ ಅಷ್ಟದಿಕ್ಪಾಲಕರನ್ನು ಹೊಂದಿರುವ ಕಮಲಪೀಠದ ಮೇಲೆ ನಿಂತಿರುವ ಶಾಂತಿನಾಥನ ಮೂರ್ತಿಇದೆ. ಚಾಮರಧಾರಿಗಳು, ಯಕ್ಷಯಕ್ಷಿಣಿಯರು ಹಾಗೂ ಇತರೆ ದೇವತೆಗಳ ಶಿಲ್ಪಗಳಿವೆ. ಒಟ್ಟಾರೆ ಹೊಯ್ಸಳ ಶಿಲ್ಪದ ಸೂಕ್ಷ್ಮತೆ ನವಿರತೆ ಇಲ್ಲಿ ಪ್ರಧಾನವಾಗಿ ತೋರುತ್ತದೆ[೧೭]. ಇದೇ ಬಸದಿಯ ಶಾಂತೀಶ್ವರ ವಿಗ್ರಹದ ಮುಂದಿನ ತೊಲೆಯ ಮೇಲಿರುವ ಶಾಸನವು ಕಂಬದಹಳ್ಳಿಯ ದೇವತಾ ಪೂಜೆಗೂ ಆಹಾರದಾನಕ್ಕೂ ತನ್ನ ಹಿರಿಯರು ಹಿಂದೆ ಬಿಟ್ಟದ್ದು ಸಾಲದೆಂದು ಕ್ರಿ.ಶ. ೧೧೪೫ರಲ್ಲಿ ನರಸಿಂಹ ಬಲ್ಲಾಳ ದೇವನು ಮೊದಲಿಯಹಳ್ಳಿಯನ್ನು ದತ್ತಿಬಿಟ್ಟನೆಂದು ತಿಳಿಸುತ್ತದೆ[೧೮]. ಈ ದತ್ತಿಯನ್ನು ಗಂಡವಿಮುಕ್ತಸಿದ್ಧಾಂತ ದೇವರ ಶಿಷ್ಯರುಗಳಾದ ಮರಿಯಾನೆ ದಂಡನಾಯಕ ಮತ್ತು ಭರತಿಮಯ್ಯ ದಂಡನಾಯಕರುಗಳಿಗೆ ಧಾರಾಪೂರ್ವಕವಾಗಿ ಬಿಟ್ಟಿದ್ದಾನೆ. ಇದೇ ಬಸದಿಯ ಗರ್ಭಗೃಹದ ಮುಂದಿನ ತೊಲೆಯ ಮೇಲೆ ಇರುವ ಕ್ರಿ.ಶ. ೧೧೭೪ರ ಶಾಸನದಿಂದ ಸಾಮಂತ ಭರತೆಯನಾಯಕನು ಶ್ರೀ ಶಾಂತಿದೇವರ ಪೂಜೆಗಾಗಿ ಹರಿಯ ಕೆರೆಯ ತೆಂಕಣ ತುಂಬಿನ ಮೊದಲೇರಿಯಲ್ಲಿ... ಖಂಡುಗಗದ್ದೆಯನ್ನು ದತ್ತಿಬಿಟ್ಟ ವಿಚಾರ ತಿಳಿದು ಬರುತ್ತದೆ[೧೯].

ಕಸಲಗೆರೆಯ ಕಲ್ಲೇಶ್ವರ ದೇವಸ್ಥಾನದ ಮುಂದೆ ಬಲಗಡೆ ಕಲ್ಲಿನಲ್ಲಿರುವ ಕ್ರಿ.ಶ. ೧೧೪೨ರ ಶಾಸನವೊಂದು ಕಲ್ಕುಣಿನಾಡಿನ ಸಾಮಂತ ಸೋವೆಯ ನಾಯಕನು ಹೆಬ್ಬಿದಿರೂರ್ವಾಡಿಯಲ್ಲಿ ಉತ್ತುಂಗ ಚೈತ್ಯಾಲಯವನ್ನು ಕಟ್ಟಿಸಿ ಪಾರ್ಶ್ವನಾಥ ತೀರ್ಥಂಕರರನ್ನು ಸ್ಥಾಪಿಸಿ ಅರುಹನಹಳ್ಳಿಯನ್ನು ಬ್ರಹ್ಮದೇವ ಮುನಿಗಳಿಗೆ ದತ್ತಿಯಾಗಿ ಬಿಟ್ಟನೆಂದು ತಿಳಿಸುತ್ತದೆ[೨೦]. ಇನ್ನೊಂದು ಶಾಸನವು ಜಿನಾಲಯವನ್ನು ಕಲ್ಕುಣಿನಾಡ ಎಕ್ಕೋಟಿಜಿನಾಲಯವೆಂದು ಹೆಸರಿಸಿರುವುದನ್ನು ತಿಳಿಸುತ್ತದೆ, ಯಲ್ಲಾದಹಳ್ಳಿಯ ಪಾಳುಬಸದಿಯ ಬಳಿಯ ಶಾಸನವು ದೇವರಾಜನೆಂಬುವನು ದತ್ತಿನೀಡಿದ ಶಾಸನವಾಗಿದೆ. ದೇವರಾಜನ ಧರ್ಮಬುದ್ಧಿಗೆ ಮತ್ತು ಸ್ವಾಮಿಭಕ್ತಿಗೆ ಮೆಚ್ಚಿ ಹೊಯ್ಸಳ ದೊರೆಯು ಸೂರನಹಳ್ಳಿಯನ್ನು ಕೊಟ್ಟನು. ದೇವರಾಜನು ರಾಜರಾಷ್ಟ್ರ ಯಶೋಧನ ವೃದ್ಧಿಯನ್ನು ಬಯಸಿ ಅಮರೇಂದ್ರ ಭವನವೆನಸುವ ಉತ್ತುಂಗ ತ್ರಿಕೂಟ ಪಾರ್ಶ್ವಜಿನಾಲಯವನ್ನು ಮಾಡಿಸಿದನು. ದೊರೆಯು ಶ್ರೀ ಪಾರ್ಶ್ವದೇವನ ಅಷ್ಟ ವಿದಾರ್ಚನೆಗೆ ಆಹಾರದಾನಕ್ಕೆ ಆ ಇಷ್ಟದೇವತಾ ಸನ್ನಿಧಿಯಲ್ಲಿ ಪಾರ್ಶ್ವಪುರವನ್ನು ಮಾಡಿ ಆ ಸೂರನ ಹಳ್ಳಿಯ ಮೊದಲ ೪೦ ಹೊನ್ನೊಳಗೆ ಮೊದಲ ೧೦ ಹೊನ್ನನ್ನು ದೇವರಾಜನಿಗೆ ಕೊಟ್ಟ ಭವ್ಯ ಚಿಂತಾಮಣಿಯಾದ ಆ ದೇವರಾಜನು ಶ್ರೀಮುನಿಚಂದ್ರ ದೇವರಿಗೆ ಅದನ್ನು ದತ್ತಿಯಾಗಿ ಬಿಟ್ಟನು[೨೧].

ಕೃಷ್ಣರಾಜ ಪೇಟೆಯ ಬಸ್ತಿಯ ಒಂದು ಜೈನ ಶಾಸನವು ಮಹಾಮಂತ್ರಿಯೂ ಮತ್ತು ಸೇನಾಧಿಪತಿಯೂ ಆದ ಪುಣಿಸಮಯ್ಯನು ಮೂಲಸ್ಥಾನ ಬಸದಿಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಅಲ್ಲದೆ ಅವನ ಪ್ರೀತಿಪಾತ್ರ ದೈವವೂ ಜಿನನೆಂದೂ ಮತ್ತು ಅವನ ಗುರು ಅಜಿತನೆಂದೂ ಹೇಳಿದೆ ಅಲ್ಲದೇ ಮಾಣಿಕದೊಡಲೂರು ಮತ್ತು ಮಾವಿನಕೆರೆಯನ್ನೂ ದತ್ತಿವಿಟ್ಟನೆಂದು ಹೇಳುತ್ತದೆ[೨೨]. ಇದೇ ತಾಲ್ಲೂಕಿನ ಬಸ್ತಿಹೊಸಕೋಟೆಯ ಬಳಿಯಲ್ಲಿ ಗೊಮ್ಮಟೇಶ್ವರ ಬಸದಿಯ ಮುಂದೆ ಮಾನಸ್ತಂಭದಲ್ಲಿರುವ ಬರವಣಿಗೆಯು ಕ್ರಿ.ಶ. ೧೧೪೭ಕ್ಕೆ ಸೇರುತ್ತದೆ. ಹೊಯ್ಸಳ ಮಹಾಪ್ರಧಾನ ಹೆಗ್ಗಡೆ ಶಿವರಾಜ ಸೋಮಯ್ಯನು ಮಾಣಿಕ್ಯದೊಳಲ ಜಿನಾಲಯಕ್ಕೆ ದತ್ತಿ ಬಿಟ್ಟಿದ್ದನ್ನು ಈ ಶಾಸನ ತಿಳಿಸುತ್ತದೆ[೨೩]. ಕ್ರಿ.ಶ. ೧೦೬೮ಕ್ಕೆ ಸೇರಿದ ಶಾಸನವೊಂದು ಕೊಪ್ಪ ಗ್ರಾಮದಲ್ಲಿ ಉತ್ತರಕ್ಕೆ ಮಾಸ್ತಮ್ಮನ ಗುಡಿಯ ಬಾಗಿಲ ಚೌಕಟ್ಟಿನ ಕಲ್ಲಿನಲ್ಲಿದೆ. ಹೊಯ್ಸಳದೇವನು ಬಸದಿಗಾಗಿ ಮಣಿಯರಸನ ಕೆರೆಯನ್ನು ದತ್ತಿಬಿಟ್ಟುದಾಗಿ ಈ ಶಾಸನ ಹೇಳುತ್ತದೆ. ಇದೇ ಕೊಪ್ಪಗ್ರಾಮದ ಬಂಡೆಯ ಮೇಲೆ ಶ್ರೀಮದ್ ಏಲಾಚಾರ್ಯರ ಶಿಷ್ಯ ಬಂಡಯ್ಯನು ಗುಹೆಯ ಭಟ್ಟಾರಕರ ನಿಶ್ಚಲ ತಪಸ್ಸಿನ ಸುಂದರ ವರ್ಣನೆಯನ್ನು ಮಾಡಿದ್ದಾನೆ[೨೪].

ನಾಗಮಂಗಲ ತಾಲ್ಲೂಕಿನ ಅಳೀಸಂದ್ರದಲ್ಲಿರುವ ಎರಡನೇ ಬಲ್ಲಾಳನಕಾಲದ ಕ್ರಿ.ಶ. ೧೧೮೪ರ ಒಂದು ಜೈನದತ್ತಿ ಶಾಸನವು ಸುದೀರ್ಘ ಶಾಸನಗಳಲ್ಲೊಂದಾಗಿದ್ದು ಅತ್ಯಂತ ಅಮೂಲ್ಯ ವಿಚಾರಗಳನ್ನು ತಿಳಿಸಿ ಕೊಡುತ್ತದೆ. ಭರತಿಮಯ್ಯ ದಂಡನಾಯಕ ಮತ್ತು ಬಾಹುಬಲಿ ದಂಡ ನಾಯಕರು ಸರ್ವಾಧಿಕಾರಿಗಳಾಗಿ, ಮಾಣಿಕ ಭಂಡಾರಿಗಳಾಗಿದ್ದರು. ಕ್ರಿ.ಶ. ೧೧೮೫ರಲ್ಲಿ ನಡೆದ ಕುಮಾರ ನಾರಸಿಂಹ ದೇವನ ಜನ್ಮೋತ್ಸವದ ಸಂದರ್ಭದಲ್ಲಿ ತಮ್ಮ ವಂಶಕ್ಕೆ ಸೇರಿದ ಸಿಂದಗೆರೆಯ ಬಗ್ಗವಳ್ಳಿಯ ಕಲ್ಕುಣಿನಾಡಿನ ದಡಿಗನಕೆರೆಯ ಅಣುವ ಸಮುದ್ರದಲ್ಲಿ ಕಂನೆವಸದಿಗಾಗಿ ಮಾಡಿಸಿ ಆ ಬಸದಿಗೆ ಮತ್ತು ಚಾಕೆಯನಹಳ್ಳಿಯ ಬಸದಿಗೆ ದೇವಪೂಜೆ ಮತ್ತು ಆಹಾರದಾನಕ್ಕೆ ಅಣುವ ಸಮುದ್ರದ ಪ್ರಭುತ್ವವನ್ನು ಶ್ರೀ ಮನ್ಮಹಾಪ್ರಧಾನ ಭರತಿಮಯ್ಯ ನಾಯಕರು ಮತ್ತು ಶ್ರೀ ಮನ್ಮಹಾಪ್ರಧಾನ ಬಾಹುಬಲಿನಾಯಕರು ಬಲ್ಲಾಳದೇವನ ಶ್ರೀ ಹಸ್ತದಿಂದ ಧಾರಪೂರ್ವಕವಾಗಿ ಪಡೆದರು. ಈ ಮಹಾದಾನವನ್ನು ಕ್ರಿ.ಶ. ೧೧೮೪ರಲ್ಲಿ ಶ್ರೀ ದೇವಚಂದ್ರ ಪಂಡಿತದೇವರಿಗೆ ಆ ನಾಯಕರಿಬ್ಬರೂ ದತ್ತಿಯಾಗಿ ಕೊಟ್ಟರು ಎಂದು ಈ ಶಾಸನವು ತಿಳಿಸುತ್ತದೆ. ಒಂದು ದತ್ತಿ ಬಿಟ್ಟ ವಿಚಾರವನ್ನು ಹೇಳುವ ಈ

ಶಾಸನವು ಹೊಯ್ಸಳ ವಂಶದ ಅನೇಕ ಐತಿಹಾಸಿಕ ಸಂಗತಿಗಳನ್ನು ತಿಳಿಸುವ ಅಮೂಲ್ಯ ದಾಖಲೆಯಾಗಿದೆ[೨೫]. ಕ್ರಿ.ಶ. ೧೨೦೦ರ ಶಾಸನವೊಂದು ಮತೀಯ ಸೌಹಾರ್ದವನ್ನು ತೋರಿಸುವ ಅಮೂಲ್ಯದಾಖಲೆಯಾಗಿದೆ. 'ಏಳುಕೋಟಿ ಶ್ರೀರುದ್ರರಿರ್ಪ ಶ್ರೀ ಮೂಲಸಂಘ ದೇಶಿಗಣದ ಪುಸ್ತಕಗಚ್ಚದ ಕಂಬದಹಳ್ಳಿ ತೀರ್ಥವ ಎಕ್ಕೋಟಿ ಜಿನಾಲಯವೆಂದು ಹೆಸರುಂಭೇರೀ ಪಂಚಮಹಾಶಬ್ದವಂ ಎಕ್ಕೋಟಿ ಮಹಾರುದ್ರರಿಳ್ದು ಕೊಟ್ಟರ್ 'ಅದನಾಗದೆಂದವಂ ಶಿವದ್ರೋಹಿ" ಎಂದು ಸಾರುವ ಈ ಶಾಸನ ಜೈನಶೈವರ ನಡುವೆ ಇದ್ದ ಪರಸ್ಪರ ಸಾಮರಸ್ಯ ಗೌರವವನ್ನು ತಿಳಿಸುವ ಮಹತ್ವದ ಶಾಸನವಾಗಿದೆ[೨೬].

ನಾಗಮಂಗಲ ತಾಲ್ಲೂಕಿನ ಹಟ್ಟಣ ಶಾಸನವು ಹೊಯ್ಸಳ ದೇವರಾಜ್ಯಾಭ್ಯುಯಾರ್ಥವಾಗಿ ಪಟ್ಟಣಸ್ವಾಮಿ ಸೋಮಿಶೆಟ್ಟಿಯು ದತ್ತಿಕೊಟ್ಟ ವಿಚಾರವನ್ನು ತಿಳಿಸುತ್ತದೆ. ಅವನು ತನ್ನ ಹೆಸರಿನ ಪಟ್ಟಣದಲ್ಲಿ ತಟಾಕತ್ರಯಗಳನ್ನೂ ಅಮರಗಿರಿ ತುಂಗಪಾರ್ಶ್ವ ಜಿನಗೃಹವನ್ನೂ ಮಾಡಿಸಿ ಕೃತಾರ್ಥನಾಗಿದ್ದ, ಶ್ರೀ ಪಾರ್ಶ್ವದೇವರ ಅಷ್ಟವಿದಾರ್ಚನೆಗೆ ಜೀರ್ಣೋದ್ಧಾರಕ್ಕೆ ಜಿನಮುನಿಗಳ ಆಹಾರದಾನಕ್ಕೆಂದು ಚಾವುಗಾವೆಯ ಪ್ರಭುಗಾವುಂಡಗಳ ಮತ್ತು ಸಾಮಂತ ನರಸಿಂಗನಾಯಕನ ಸಮ್ಮತಿಯಿಂದ ಕ್ರಿ.ಶ. ೧೧೭೮ರಲ್ಲಿ ತನ್ನ ಗುರುಗಳಾದ ಆಧ್ಯಾತ್ಮಿಕ ಬಾಲಚಂದ್ರ ದೇವರಿಗೆ ದತ್ತಿ ಬಿಟ್ಟನು. ಮಹಾಪ್ರಧಾನ ಮಾಧವ ದಂಡನಾಯಕರ ಬೆಸದಿಂದ ಬಹಿತ್ರದ ನಾರಣವೆರ್ಗಡೆಯು ನಂದಾ ದೀವಿಗೆಗಾಗಿ ಅಷ್ಟವಿದಾರ್ಚನೆಗಾಗಿ ಒಂದು ಗಾಣ ಮತ್ತು ಹೇರಿನ ಸುಂಕದ ಹತ್ತನೇ ಒಂದು ಭಾಗವನ್ನು ಬಿಟ್ಟು ಕೊಟ್ಟನೆಂದು ಇದೇ ಶಾಸನದಲ್ಲಿ ಉಲ್ಲೇಖವಾಗಿದೆ[೨೭]. ಇದೇ ತಾಲ್ಲೂಕಿನ ಕೆಳಗೆರೆ ಗ್ರಾಮದ ಕೆರೆಯ ಬಳಿಯ ಬಂದು ಶಾಸನದಲ್ಲಿ ಹೊಯ್ಸಳ ದೊರೆಗಳ ಪಟ್ಟಿಯೇ ಅಲ್ಲದೆ ಜೈನಮುನಿ ಪರಂಪರೆಯ ಪಟ್ಟಿಯೂ ಇದೆ. ದೋರಸಮುದ್ರದ ತ್ರಿಕೂಟ ರತ್ನತ್ರಯದ ಶ್ರೀಶಾಂತಿನಾಥದೇವರ ಪೂಜೆಗೆ ಆಹಾರದಾನಕ್ಕೆ ಮತ್ತು ಸಮಸ್ತ ಧರ್ಮಕಾರ್ಯಕ್ಕಾಗಿ ಹೊಯ್ಸಳ ದೊರೆ ವೀರ ನಾರಸಿಂಹ ದೇವನು ಚಿಕ್ಕಕನ್ನೆಯನಹಳ್ಳಿಯನ್ನು ಮಾಘನಂದಿ ಸಿದ್ಧಾಂತ ಚಕ್ರವರ್ತಿಗಳಿಗೆ ದತ್ತಿಕೊಟ್ಟ ವಿಚಾರ ಈ ಶಾಸನದಲ್ಲಿದೆ[೨೮].

ಮಳವಳ್ಳಿ ತಾಲ್ಲೂಕಿನ ಹುಸ್ಕೂರು ಗ್ರಾಮದ ಊರ ಬಾಗಿಲ ಶಾಲೆಯ ಬಳಿ ಇರುವ ಗಾಣದ ಮೇಲೆ ಕೊರೆದಿರುವ ಶಾಸನದಲ್ಲಿ 'ಬನ್ನಿಗದರೆ' ಎಂಬ ಆದಾಯವನ್ನು ಹೊಯ್ಸಳ ದೊರೆ ವೀರನರಸಿಂಹನ ಪರವಾಗಿ ಚಟ್ಟೊಡಯ ಎಂಬಾತ ತಲಕಾಡಿನ ಆನೆ ಬಸದಿಗೆ ನೀಡಿದ ಉಲ್ಲೇಖ ಶಾಸನದಲ್ಲಿದೆ. ಶಾಸನದಕಾಲ ಕ್ರಿ.ಶ. ೧೦೭೮–೭೯ರಲ್ಲಿ ನಿರ್ಮಾಣವಾಗಿರುವ ಉಲ್ಲೇಖವಿದೆ[೨೯]. ಇದೇ ಊರಿನ ಪಾಳುಮನೆಯೊಂದರಲ್ಲಿ ಬಿದ್ದಿರುವ ತುಂಡುಕಲ್ಲುಗಳು ಕ್ರಿ.ಶ. ೧೩೧೩ಕ್ಕೆ ಸೇರಿದ ಶಾಸನಗಳಾಗಿದ್ದು ಹೊಯ್ಸಳ ದೊರೆ ವೀರಬಲ್ಲಾಳನ ಆಳ್ವಿಕೆಯ ಕಾಲವನ್ನು ಸೂಚಿಸುತ್ತದೆ. ತಲಕಾಡಿನ ಆನೆ ಬಸದಿಗೆ ಜಮೀನನ್ನು ದತ್ತಿ ನೀಡಿದ ವಿವರವನ್ನು ಈ ಶಾಸನ ನೀಡುತ್ತದೆ. ಇದರಲ್ಲಿರುವ ಕುತೂಹಲದ ಸಂಗತಿ ಎಂದರೆ ತಲಕಾಡನ್ನು ಈ ಶಾಸನದಲ್ಲಿ 'ರಾಜರಾಜಪುರ' ಎಂದು ಉಲ್ಲೇಖಿಸಲಾಗಿದೆ[೩೦]. ಶ್ರೀರಂಗಪಟ್ಟಣ ತಾಲ್ಲೂಕು ಬೆಳಗೊಳ ಹೋಬಳಿ ಬಸ್ತೀಪುರವೆಂಬ ಗ್ರಾಮದ ಸರಹದ್ದಿನ ಬಂಡೆಯ ಮೇಲೆ ಶ್ರೀ ಸಕಲ ಚಂದ್ರದೇವರ ತಪಸ್ಸಿನ ಪ್ರಭಾವವನ್ನು ವರ್ಣಿಸುವ ಶಾಸನವಿದೆ. ಕೂರಗಹಳ್ಳಿಯ ಪ್ರಭುಗಳು ಗೌಡರುಗಳಾದ ಕೇತಗೌಡ, ರಾಮಗೌಡ, ಸಂಬುಗೌಡ, ಮಾದಿಗೌಡ ಮೊದಲಾದ ಸಮಸ್ತಗೌಡುಗಳು ಕ್ರಿ.ಶ. ೧೩೮೩ರಲ್ಲಿ ಪಾರ್ಶ್ವದೇವರ ಪ್ರತಿಷ್ಠೆಯನ್ನು ಮಾಡಿಸಿ ದತ್ತಿಬಿಟ್ಟಿರುವುದನ್ನು ಇದೇ ಶಾಸನವು ತಿಳಿಸುತ್ತದೆ[೩೧]. ಮಳವಳ್ಳಿ ತಾಲ್ಲೂಕಿನ ತಿಪ್ಪೂರಿನ ಶಾಸನವೊಂದು ಗಮನಾರ್ಹವಾದುದು. ಜೈನಗುರುವೊಬ್ಬನಿಗೆ ನೀಡಲಾದ ದಾನ ಶಾಸನವಿದು. ಶಾಸನದ 'ಅಣ್ಣನ ಒಡವೆ ತಮ್ಮಂಗೆ ತಂಮನ ಒಡವೆ ಅಣ್ಣಂಗೆ ಮಾವನ ಒಡವೆ ಅಳಿಯಂಗೆ ಅಳಿಯನ ಒಡವೆ ಮಾವಂಗೆ ಸೇರ್ದುಕೊಂಡು ಪ್ರತಿಬದ್ದದೆ ಗಂಡನುಳ್ಳಡೆ ವಡವೆಯ ಹಳಿಗೆ ಸುಡುವುದು ತೊತ್ತೊಪ್ಪಡೆ ಎಳೆದು ಬಿಸಿಡುವುದು ಹಗಲು ಸೂಳೆ ಯಿರಳು ಸಜ್ಜನೆ ವೊಡಲಲಿ ವೊಕ್ಕಲ ರಣಕ್ಕೆ ದಂಡವಿಲ್ಲ ಮತ್ತು ಹಣ ತುಂಬಿದುದು ಕಿಳಗು ಬಿಸಾಡಿಕೊಂಡುವುದು ಹಾದರಕೆ ದಂಡವಿಲ್ಲ" ಎಂಬ ಭಾಗದ ಸರಿಯಾದ ಸ್ಪಷ್ಟವಾದ ಅರ್ಥವೇನೆಂದು ತಿಳಿಯುವುದಿಲ್ಲ. ಇದು ಆಗಿನ ಕಾಲದ ಸಾಮಾಜಿಕ ದುವರ್ತನೆಯನ್ನು ಸೂಚಿಸುತ್ತದೆ[೩೨].

ಮಂಡ್ಯ ಪ್ರದೇಶದಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದಂತೆ ನಡೆದಿರುವ ದಾನ, ಧರ್ಮ, ದತ್ತಿ ಬಸದಿಗಳ ನಿರ್ಮಾಣ ಇವುಗಳಲ್ಲಿ ಹೊಯ್ಸಳರ ಕಾಲದ ಕೊಡುಗೆ ಅಪಾರವಾಗಿದೆ. ಗಂಗರ ಕಾಲಕ್ಕಿಂತಲೂ ಹೊಯ್ಸಳರ ಕಾಲದಲ್ಲಿ ಈ ಪ್ರದೇಶದಲ್ಲಿ ನಡೆದ ಜೈನ ಧಾರ್ಮಿಕ ಚಟುವಟಿಕೆಗಳ ದಾಖಲೆಗಳು ಅಪಾರವಾಗಿ ಲಭ್ಯವಿವೆ. ಇದಕ್ಕೆ ಸ್ಪಷ್ಟ ಕಾರಣವೆಂದರೆ ಹೊಯ್ಸಳರಿಗಿಂತಲೂ ಮೊದಲು ರಾಜ್ಯವಾಳಿದ ಗಂಗರ ಕಾಲದಲ್ಲಿ ಈ ಪ್ರದೇಶದಲ್ಲಿ ಜೈನಧರ್ಮಕ್ಕೆ ಸಿಕ್ಕಿದ ಪ್ರೋತ್ಸಾಹ ಬಹಳ ಮುಖ್ಯವಾದದ್ದು. ಮಂಡ್ಯ ಪ್ರದೇಶದಲ್ಲಿ ಈ ಅಧ್ಯಯನದಿಂದ ದಾಖಲಾದ ಜೈನಶಾಸನಗಳು, ಬಸದಿಗಳು ಕರ್ನಾಟಕದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತವೆ, ಪ್ರಾಚೀನ ಭಾರತೀಯ ಧರ್ಮವಾದ ಜೈನಧರ್ಮಕ್ಕೆ ಮಂಡ್ಯ ನೆಲವು ತನ್ನ ಕೊಡುಗೆಗಳ ಮೂಲಕ ಶ್ರೀಮಂತಗೊಳಿಸಿದೆ.

ಅಡಿಟಿಪ್ಪಣಿಗಳು

೧. ಡಾ. ಎಸ್. ಶಿವರಾಮು, ಹೊಯ್ಸಳ ವಿಷ್ಣುವರ್ಧನನ ಕಾಲದ ಜೈನಧರ್ಮ, ಮಾನವಿಕ ಕರ್ನಾಟಕ, ಸಂಪುಟ ೩೯, ಸಂಚಿಕೆ ೨, ೨೦೧೧ ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು, ಪು. ೫೯.

೨. MAR. 1913, PP. 34-35.

೩. ಶ್ರೀಕಂಠಶಾಸ್ತ್ರಿ.ಎಸ್., ಹೊಯ್ಸಳ ವಾಸ್ತುಶಿಲ್ಪ, ಪು. ೯೮ .

೪. E.C. VII. Ng, 33, p. 19-20.

೫. E.C. VII. Ng. 68, p. 51-52.

೬. E.C.VI. Kr.3 p. 4.

೭. E.C. VII. Ng. 64, p. 45-46.

೮. 'Gopal.R. (2000) Cultural Study of Hoysala inscriptions, mysore - p. 40.

೯. E.C.VI. PP. 15, p. 113.

೧೦. E.C.VII. Md. 29, p. 269-270.

೧೧. E.C.VI. Ng. 14, p. 11-12.

೧೨. E.C. II, Sr. 265.

೧೩. E.C. VI. Kr. 21, p. 15.

೧೪. E.C. VII. Ng. 183, p. 177.

೧೫. MAR. 1940 p. 28.

೧೬. E.C. VII. Ng. 29.30, p. 18.

೧೭. ಡಾ. ಎಸ್. ಶಿವರಾಮು, ಹೊಯ್ಸಳ ವಿಷ್ಣುವರ್ಧನನ ಕಾಲದ ಜೈನ ವಾಸ್ತುಶಿಲ್ಪ, ಅಭಿವ್ಯಕ್ತಿ (ಸಾಹಿತ್ಯ ಮಾಸಿಕ) ಸಂ. ೨, ಸಂಚಿಕೆ ೭, ಜುಲೈ ೨೦೦೯, ಮಂಡ್ಯ ಪು. ೫೦.

೧೮. E.C. XIV. 130.

೧೯. E.C.XIV. 129.

೨೦. E.C. VI. Ng. 169, p. 167.

೨೧. E.C. VII. Ng. 64, p. 45.46.

೨೨. E.C.VI. Kr. 107, p. 96.

೨೩. E.C.VI. Kr. 106, P. 95.

೨೪. ದೇಜಗೌ, ಸಿರಿಯೊಡಲು, ಮಂಡ್ಯ, ೧೯೯೪, ಪು. ೨೯೬.

೨೫. E.C. VII. Ng. 72, p. 59.

೨೬ E.C.XIV. 130.

೨೭. E.C. VII. Ng. 118, P. 117-121.

೨೮. E.C.VII. Ng. 60, p. 32.

೨೯. E.C. VII. Ml. 30, p. 364.

೩೦. ಮುಹಮ್ಮದ್ ಕಲೀಂ ಉಲ್ಲ, ಶಾಸನ ಪರಿಚಯ ಮಳವಳ್ಳಿ ತಾಲ್ಲೂಕು, ನಾಗಮಂಗಲ, ೨೦೦೮, ಪುಟ ೨೦–೨೧.

೩೧. E.C. VI. Sr. 74, p. 404-405.

೩೨. MAR. 1947, 56-20.

ಮಂಡ್ಯ ಜಿಲ್ಲೆಯಲ್ಲಿ ಹೊಯ್ಸಳರ ಕಾಲದ ಶಾಸನೋಕ್ತ ಆಡಳಿತ

ಡಾ. ಟಿ. ರಾಜು*

ಮಲೆನಾಡಿನ ಅಧಿಪರರಾಗಿ ಆಳ್ವಿಕೆ ನಡೆಸಿದ ಹೊಯ್ಸಳರು ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ತಮ್ಮ ರಾಜಕೀಯ ಪ್ರಗತಿಯನ್ನು ರೂಪಿಸಿಕೊಂಡವರು-ಗಂಗವಾಡಿ ಪ್ರದೇಶವನ್ನು ಚೋಳರಿಂದ ವಶಪಡಿಸಿಕೊಂಡು ಚಾಳುಕ್ಯರ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುತ್ತಲೇ ಕ್ರಮೇಣ ಸ್ವತಂತ್ರರಾಗಲು ಹವಣಿಸಿ ಸಫಲರಾದರು. ಹೊಯ್ಸಳ ಆಡಳಿತಕ್ಕೆ ಮಂಡ್ಯ ಜಿಲ್ಲೆಯ ಪ್ರದೇಶವೆಲ್ಲವೂ ಸೇರಿದ್ದಿತು. ಹೊಯ್ಸಳ ಕಾಲದ ಪ್ರದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ತಿಳಿಯಲು ಶಾಸನಗಳೇ ಪ್ರಮುಖ ಆಧಾರಗಳು. ಇವರಿಗೆ ಸಂಬಂಧಿಸಿದಂತೆ ಸುಮಾರು ೩೦೦ಕ್ಕೂ ಹೆಚ್ಚಿನ ಶಾಸನಗಳು ಮಂಡ್ಯ ಜಿಲ್ಲೆಯಲ್ಲಿ ದೊರೆತಿವೆ. ಈ ಶಾಸನಗಳು ಕ್ರಿ.ಶ. ೧೧ನೇ ಶತಮಾನದಿಂದ ಕ್ರಿ.ಶ. ೧೪ನೇ ಶತಮಾನದವರೆಗಿನ ಕಾಲಮಾನಕ್ಕೆ ಸೇರುವ ಶಾಸನಗಳಾಗಿದೆ.

ಕೆ.ಆರ್.ಪೇಟೆ ತಾಲ್ಲೂಕಿನ ಮಾರುಗೋನಹಳ್ಳಿಯ ಶಾಸನವು ಕ್ರಿ.ಶ. ೧೧೦೩ರಲ್ಲಿ ಹೊಯ್ಸಳ ರಾಜ ೧ನೇ ಬಲ್ಲಾಳನು ಗಂಗವಾಡಿ ೯೬೦೦೦ ಆಡಳಿತ ವಿಭಾಗದ ಮೇಲೆ ತನ್ನ ಹತೋಟಿಯನ್ನು ಸ್ಥಾಪಿಸಿಕೊಂಡ ಬಗ್ಗೆ ವಿವರವಿದೆ. ಮದ್ದೂರು ತಾಲ್ಲೂಕಿನ ಅರೆತಿಪ್ಪಂದು ಶಾಸನದಲ್ಲಿ ವಿಷ್ಣುವರ್ಧನ ದಂಡನಾಯಕ ಗಂಗರಾಜನು ಚೋಳರ ಪ್ರತಿನಿಧಿಗಳಾದ ಆಧಿಯಮ ನರಸಿಂಹವರ್ಮರನ್ನು ಕಂಚಿಯವರೆಗೆ ಹಿಮ್ಮೆಟ್ಟಿಸಿಕೊಂಡು ಹೋಗುವ ಮೂಲಕ ಚೋಳರ ಸೊಕ್ಕನ್ನು ಮುರಿದ ಸಂಗತಿಯನ್ನು ತಿಳಿಸುತ್ತದೆ.

ಹಾಗೂ ಅರೆತಿಪ್ಪೂರು ಗ್ರಾಮ ಗಂಗರಾಜನಿಗೆ ಬಳುವಳಿಯಾಗಿ ನೀಡಲ್ಪಟ್ಟಿತೆಂದು ಅಲ್ಲಿ ಜೈನ ಧರ್ಮದ ಪ್ರಭಾವ ಮತ್ತು ತೀರ್ಥಂಕರ ಪ್ರತಿಮೆಗಳು ಸ್ಥಾಪನೆಗೊಂಡು ಜೈನ ಕೇಂದ್ರವಾಗಿತ್ತೆಂದು ಶಾಸನದಿಂದ ತಿಳಿದು ಬರುತ್ತದೆ. ಮಂಡ್ಯ ತಾಲ್ಲೂಕಿನ ರಾಯಶೆಟ್ಟಿಪುರದ ಶಾಸನದಲ್ಲಿ ಕೆರೆಗೋಡು ನಾಡು ಬಿದರಕೋಟೆ ಗ್ರಾಮಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಕಾಲದಲ್ಲಿ ನೀಡಲಾದ ದಾನಗಳನ್ನು ಕುರಿತಾಗಿದೆ. ಈ ಶಾಸನ ಒಂದನೆಯ ಬಲ್ಲಾಳನ ಕಾಲದಲ್ಲಿ ಮಲ್ಲಯ್ಯನಾಯಕ ಮತ್ತು ಸೋಮಯ್ಯನಾಯಕ ಎಂಬುವರು ವೀರಶೈವರಿಗೆ ಬಿದರಕೋಟೆ ಗ್ರಾಮವನ್ನು ಶಿವಪುರವಾಗಿ ಮಾಡಿ ದತ್ತಿ ಬಿಟ್ಟರು. ಕೆ.ಆರ್.ಪೇಟೆ ತಾಲ್ಲೂಕಿನ ಮಾಳಗೂರು ಕೆರೆಯ ಹಿಂದಿನ ಈಶ್ವರ ದೇವಸ್ಥಾನದಲ್ಲಿರುವ ಶಾಸನದಲ್ಲಿ ಕಬ್ಬಾವು ೧೦೦೦ದ ವ್ಯಾಪಿಯಲ್ಲಿದ್ದ ಮಾಳಿಗೆ ಎಂಬ ಆಡಳಿತ ವಿಭಾಗವನ್ನು ಪಟ್ಟ ಮಹಾದೇವಿ ಶಾಂತಲೆಯ ಮೈದುನ 'ಬಲ್ಲಯ್ಯ ನಾಯಕನ ಅಧೀನದಲ್ಲಿ ಆಳ್ವಿಕೆ ಮಾಡುತ್ತಿದ್ದುದ್ದು ಉಲ್ಲೇಖವಾಗಿದೆ ಹಾಗೂ ಬಲ್ಲಯ್ಯ ನಾಯಕ ಮತ್ತು ಈ ಸ್ಥಳದ ಗಾವುಂಡರುಗಳು ಊರಿನ ೫೦ ಒಕ್ಕಲುಗಳ ಸಮ್ಮುಖದಲ್ಲಿ ಮಾಳಿಗೆ ಗ್ರಾಮದ ಕಮ್ಮಟೇಶ್ವರ ದೇವಾಲಕ್ಕೆ ಭೂ ದಾನ ನೀಡುವ ಬಗ್ಗೆ ದಾಖಲಿಸಿದೆ. ಪಾರ್ಶ್ವನಾಥ ದೇವಾಲಯದ ಗೋಡೆ ಶಾಸನವು ಕ್ರಿ.ಶ. ೧೧೧೮ರಲ್ಲಿ ಗಂಗವಾಡಿ ೯೬೦೦೦-ದ ಆಡಳಿತ ವಿಭಾಗದ ಮೇಲೆ ಹೊಯ್ಸಳ ಆಳ್ವಿಕೆಯನ್ನು ದಾಖಲಿಸಿದೆ. ಮತ್ತು ಕತ್ತರೆಘಟ್ಟ ಎಂಬ ಗ್ರಾಮದಲ್ಲಿ ನೊಳಂಬಶೆಟ್ಟಿ ಮತ್ತು ಆತನ ಪತ್ನಿ ದೇನಿಕಬ್ಬೆ ಎಂಬುವವರು ತ್ರಿಕೂಟ ಜಿನಾಲಯವನ್ನು ನಿರ್ಮಿಸಿದ್ದರ ಬಗ್ಗೆ ಉಲ್ಲೇಖವಿರುತ್ತದೆ. ಅಗ್ರಹಾರ ಬಾಚಹಳ್ಳಿ ಶಾಸನವು ಹೊಯ್ಸಳರ ಅರಸರೊಡನೆ ಗರುಡರಾದವರ ವಂಶಾವಳಿಯನ್ನು ತಿಳಿಸುತ್ತದೆ. ಎರೆಯಂಗನಿಗೆ ಗರುಡರಾದವರು ಗಂಡರಾಯಶೆಟ್ಟಿ ಮತ್ತು ಆತನ ಹೆಂಡತಿ ಮಾರವ್ವನಾಯಕಿತಿ. ವಿಷ್ಣುವರ್ಧನನ ಹೊಯ್ಸಳ ಶೆಟ್ಟಿ ಆತನ ಪತ್ನಿ ಮಾಚವ್ವೆನಾಯಕಿತಿ. ಒಂದನೇ ನರಸಿಂಹನಿಗೆ ಲಕ್ಕಯ ನಾಯಕ-ಗಂಗದೇವಿ ಮೂವರು ಲೆಂಕರು ಅಂದಿನ ಜೀವನದಲ್ಲಿ ಗರುಡರಾಗಿ ಮೃತರಾದರ ವೀರಸ್ವರ್ಗಕ್ಕೆ ಪ್ರಾಪ್ತರಾಗುತ್ತಾರೆ ಎಂಬ ನಂಬಿಕೆ ಅಚಲವಾದಿತು. ಹೀಗೆ ಗರುಡ ಸಂಪ್ರದಾಯ ಮಹತ್ವ, ನಿಷ್ಠೆ ಬಗ್ಗೆ ಮೇಲಿನ ಶಾಸನದಿಂದ ತಿಳಿದುಬರುತ್ತದೆ. ಮಂಡ್ಯ ತಾಲ್ಲೂಕಿನ ಹೊಸಬೂದನೂರು ಸೋಮೇಶ್ವರ ದೇವಾಲಯದ ಬಳಿಯಿರುವ ವಿರಗಲ್ಲು ಶಾಸನವು ಕ್ರಿ.ಶ. ೧೦೫೭ರಲ್ಲಿ ಹೊಯ್ಸಳ ಮಂಡಳೇಶ್ವರ ಎರೆಯಂಗನು ಆಳ್ವಿಕೆ ಮಾಡುತ್ತಿದ್ದಾಗ ವೀರನೊಬ್ಬನ ಮರಣದ ಬಗ್ಗೆ ತಿಳಿಸುತ್ತದೆ. ನಾಗಮಂಗಲ ತಾಲ್ಲೂಕಿನ ಬಿಂಡಿಗನವಿಲೆ ಶಾಸನವು

* ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಇತಿಹಾಸ ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಮಂಡ್ಯ.

ಕ್ರಿ.ಶ. ೧೧೮೪ರಲ್ಲಿ ಹೊಯ್ಸಳ ರಾಜ್ಯದಲ್ಲಿ ಹಸುಗಳನ್ನು ಅಪಹರಿಸಿದ ಘಟನೆಯನ್ನು ಹಾಗೂ "ಹರಮ" ಎಂಬ ವೀರನ ಹೆಸರನ್ನು ತಿಳಿಸುತ್ತದೆ. ಮದ್ದೂರು ತಾಲ್ಲೂಕಿನ ವೈದ್ಯನಾಥಪುರ ಶಾಸನದಲ್ಲಿ ಕ್ರಿ.ಶ. ೧೧೩೨ರಲ್ಲಿ ಹೊಯ್ಸಳ ವಿಷ್ಣುವರ್ಧನನು ಗಂಗವಾಡಿ–೯೬೦೦೦, ನೊಳಂಬವಾಡಿ –೩೨೦೦೦, ಬನವಾಸಿ–೧೨೦೦೦ ಮತ್ತು ಹಾನಗಲ್–೫೦೦ ಮೊದಲಾದ ಆಡಳಿತ ವಿಭಾಗಗಳನ್ನು ತನ್ನ ರಾಜಧಾನಿಯಾದ ದ್ವಾರಸಮುದ್ರದಿಂದ ಆಳ್ವಿಕೆ ಮಾಡುತ್ತಿದ್ದನೆಂದು ತಿಳಿಸುತ್ತದೆ. ಹಾಗೂ ಮದ್ದೂರು ಅಥವಾ ನರಸಿ ಮಹಾ ಚತುರ್ವೇದಿ ಮಂಗಲದ ಸ್ವಂಯಂ ಭೂ ವೈದ್ಯನಾಥ ದೇವಾಲಯಕ್ಕೆ ಕೊಟ್ಟಿದ್ದ ದಾನಗಳನ್ನು ನವೀಕರಿಸುವ ಅಂಶಗಳು ವ್ಯಕ್ತವಾಗುತ್ತದೆ. ಮಂಡ್ಯ ಜಿಲ್ಲೆಯ ಶಾಸನಗಳು ಹೊಯ್ಸಳರ ಕಾಲದ ಆಡಳಿತ ವಿಭಾಗಳನ್ನು ತಿಳಿಸುತ್ತದೆ. ಕಬ್ಬಾವು ೧೦೦೦ ನಾಡಿಗೆ ಕೆ.ಆರ್. ಪೇಟೆಯ ಮಾಳಿಗೆ ಕೇಂದ್ರವಾಗಿತ್ತು. ಎಡತೊರೆ ಸಾವಿರ ನಾಡಿಗೆ ಕಳಲೆ ಕೇಂದ್ರಸ್ಥಳವಾಗಿತ್ತು. ಕಲ್ಕೂಣೆ ನಾಡು ೨೦, ಬಡಗೆರೆ ನಾಡು, ಎಡತೊರೆ ನಾಡು ಶ್ರೀರಂಗಪಟ್ಟಣ ಸೀಮೆ, ಸಿಂದಘಟ್ಟ ಸೀಮೆ, ಕೆರಗೋಡು ನಾಡು, ಕುಂದುನಾಡು, ಬಡಗುಂದನಾಡು, ಚಿಕ್ಕಗಂಗವಾಡಿ, ಹೆಬ್ಬೆಟ್ಟನಾಡು, ಕುವಂತನಾಡು, ಮೋದುರೂನಾಡು, ಕಿಕ್ಕೇರಿ ೧೨ ಮುಂತಾದ ಆಡಳಿತ ಕೇಂದ್ರಗಳು, ಶಾಸನಗಳಲ್ಲಿ ವ್ಯಕ್ತವಾಗಿವೆ.

ಕೆ.ಆರ್.ಪೇಟೆ ತಾಲ್ಲೂಕಿನ ಹಿರೀಕಳಲೆಯ ಬಸವ ದೇವಸ್ಥಾನದ ಬಳಿ ಇರುವ ಶಾಸನದಲ್ಲಿ ಕಿಕ್ಕೇರಿಯಲ್ಲಿ ಚಿನ್ನಮ್ಮ ಎಂಬ ಅಧಿಕಾರಿಯು ವಿಷ್ಣುವರ್ಧನ ಕಾಲದಲ್ಲಿ ಅಧಿಕಾರ ನಡೆಸುತ್ತಿದ್ದುದ್ದರ ಬಗ್ಗೆ ಉಲೇಖವಿದೆ. ಮತ್ತು ಬಸ್ತಿ ಎಂಬ ಮಾಣಿಕ್ಯದೊಡಲೂರು ಮತ್ತು ಮಾವಿನಕೆರೆ ಎಂಬ ಗ್ರಾಮಗಳನ್ನು ಬಸದಿಯ ಪೂಜೆ ಪುನಸ್ಕಾರಗಳಿಗಾಗಿ ದತ್ತಿ ಬಿಟ್ಟಿದ್ದ ವಿಚಾರವು ತಿಳಿದುಬರುತ್ತದೆ. ಪಾಂಡವಪುರ ತಾಲ್ಲೂಕಿನ ಶಂಭುಹಳ್ಳಿ ಎಂಬಲ್ಲಿ ಸಿಕ್ಕಿರುವ ಶಾಸನದಲ್ಲಿ (ಸ್ತಂಭಶಾಸನ) ವಿಷ್ಣುವರ್ಧನನು ತನ್ನ ತಾಯಿ ಮೊದಲ ಮಹಾದೇವಿಯು ನಿರ್ಮಿಸಿದ ತುವ್ವಲೇಶ್ವರ ದೇವರಿಗೆ ಯಾದವಪುರವನ್ನು ದಾನವಾಗಿ ನೀಡಿ ಅದರ ಹೆಸರನ್ನು ಶಂಕರಹಳ್ಳಿ ಎಂದು ಬದಲಾಯಿದ ವಿವರವು ತಿಳಿದು ಬರುತ್ತದೆ. ಕ್ರಿ.ಶ ೧೧೪೦ರ ತೊಣ್ಣುರಿನ ಕೃಷ್ಣದೇವಾಲಯದಲ್ಲಿರುವ ಶಾಸನದಲ್ಲಿ ಹೊಯ್ಸಳ ನರಸಿಂಹನು ತೊಣ್ಣೂರನ್ನು ಯಾದವನಾರಾಯಣ ಚತುರ್ವೇದಿ ಮಂಗಲವನ್ನಾಗಿ ಪರಿವರ್ತಿಸಿ ಅಲ್ಲಿ ನಾರಾಯಣ ದೇವಾಲಯವನ್ನು ನಿರ್ಮಿಸಿದ ಬಗ್ಗೆ ದಾಖಲೆಯಿದೆ. ಹಾಗೂ ತೊಣ್ಣೂರಿನಲ್ಲಿ ವಿತ್ತಿರುಂದ ಪೆರಿಮಾಳ್ ಹಾಗೂ ಲಕ್ಷ್ಮೀದೇವರುಗಳನ್ನು ಪ್ರತಿಷ್ಠಾಪಿಸಿ ದಾನ ನೀಡುದುದರ ಬಗ್ಗೆ ತಿಲಿಸುತ್ತದೆ. ಕಿಕ್ಕೇರಿ ಶಾಸನವು ಕ್ರಿ.ಶ. ೧೧೭೧ ರಲ್ಲಿ ಬರ್ಮಯ್ಯ ಸಾಮಂತನ ಪತ್ನಿ ಬಮ್ಮವ್ವ ನಾಯಕಿತಿಯು ಬ್ರಹ್ಮೇಶ್ವರ ದೇವಾಲಯಕ್ಕೆ ದಾನ ನೀಡುದುದರ ಬಗ್ಗೆ ತಿಳಿಸುತ್ತದೆ.

ಇಮ್ಮಡಿ ಬಲ್ಲಾಳನ ಕಾಲದಲ್ಲಿ ಮಂಡ್ಯ ಜಿಲ್ಲೆಯ ಹಲವು ಪ್ರದೇಶಗಳಲ್ಲಿ ಹೊಯ್ಸಳರ ಆಡಳಿತದ ಬಗ್ಗೆ ವಿವರಗಳು ಶಾಸನಗಳಿಂದ ತಿಳಿದು ಬರುತ್ತದೆ. ಕೆರೆ ತೊಣ್ಣೂರಿನ ಶಾಸನವೊಂದು ೨ನೇ ಬಲ್ಲಾಳನ ಅಧಿಕಾರಿಗಳಾದ ಹಿರಿಯ ಹೆಗ್ಗಡೆ ಕೇಳಿಯಣ್ಣ ಮತ್ತು ಹೆಗ್ಗಡೆ ಕೋಮಣ್ಣ ಎಂಬುವರು ಎಣ್ಣೆ ಗಾಣವನ್ನು ದಾನ ನೀಡಿದ ಬಗ್ಗೆ ವಿಚಾರ ತಿಳಿದು ಬರುತ್ತದೆ. ಹಾಗೂ ಪಾಂಡವಪುರ ತಾಲ್ಲೂಕಿನ ಕ್ಯಾತನ ಹಳ್ಳಿ ದೊರಕಿರುವ ಶಾಸನವೊಂದರಲ್ಲಿ ೨ನೇ ಬಲ್ಲಾಳನ ಮಹಪ್ರಧಾನ ಸರ್ವಾಧಿಕಾರಿ ಎರೆಯಣ್ಣ ಎಂಬುವರು ಶ್ರೀಕರಣದ ಕಲಿಯಣ್ಣನಿಂದ ಭೂಮಿಯನ್ನು ಯಾದವನಾರಾಯಣ ಚತುರ್ವೇದಿ ಮಂಗಲದ ಕೊಡೆಯಾಳ ಜೈನ ಬಸದಿಗೆ ದಾನ ನೀಡಿದ ವಿಚಾರವು ತಿಳಿದು ಬರುತ್ತದೆ. ಶ್ರೀರಂಗಪಟ್ಟಣ ಶ್ರೀರಂಗನಾಥಸ್ವಾಮಿ ದೇವಾಲಯದ ಗರ್ಭಗೃಹದ ತಳಪಾದಿಯ ಮೇಲಿರುವ ಶಾಸನವು ಕ್ರಿ.ಶ. ೧೨೧೦ರಲ್ಲಿ ವೀರ ಬಲ್ಲಾಳನು ಬ್ರಹ್ಮಪುರಂ ಚತುರ್ವೇದಿ ಮಂಗಲಕ್ಕೆ ಗ್ರಾಮವೊಂದನ್ನು ದಾನವನ್ನಾಗಿಸಿದೆ. ಆ ಗ್ರಾಮದಿಂದ ಬರುವ ಉತ್ಪತಿ ಮತ್ತು ಆದಾಯವನ್ನು ದೇವಾಲಯಕ್ಕೆ ಒಪ್ಪಿಸಿದುದ್ದರ ಬಗ್ಗೆ ವಿಚಾರವಿದೆ.

ಹೊಯ್ಸಳರ ಅರಸು ಸೋಮೇಶ್ವರನ ಕಾಲದ ಕೆ.ಆರ್.ಪೇಟೆ ತಾಲ್ಲೂಕಿನ ಗೋವಿಂದನ ಹಳ್ಳಿ ಪಂಚಲಿಂಗೇಶ್ವರ ದೇವಾಲಯದಲ್ಲಿರುವ ನಾಗರಿ ಶಾಸನವು ಕ್ರಿ.ಶ. ೧೨೩೬ ಹೊಯ್ಸಳ ವಂಶವೃಕ್ಷವನ್ನು ತಿಳಿಸುತ್ತದೆ. ಅಲ್ಲದೆ ರಾಜ ಮಂತ್ರಿಗಳು ಹಾಗೂ ಅಧಿಕಾರಿಗಳಾದ ಕೇತಯ್ಯನ ಮಕ್ಕಳಾದ ಬೋಗಯ್ಯ ಮತ್ತು ಮುರಾರಿ ಮಲ್ಲಯ್ಯ ಇವರುಗಳಿಗೆ ಸೋಮೇಶ್ವರನು ಕಬ್ಬಾವು ನಾಡಿನ ವ್ಯಾಪ್ತಿಯಲ್ಲಿದ್ದ ತಂಗಿನ ಘಟ್ಟ ಗ್ರಾಮ ಹಾಗೂ ಸುತ್ತಮುತ್ತಲಿನ ೧೧ ಹಳ್ಳಿಗಳನ್ನು ದಾನವನ್ನಗಿ ಕೊಟ್ಟ ವಿವರಗಳು ತಿಳಿದು ಬರುತ್ತದೆ. ಹಾಗೂ ಸೋಮನಾಥಪುರ ಎಂಬ ಅಗ್ರಹಾರವನ್ನಾಗಿ ನಿರ್ಮಿಸಿ ಶಿಕ್ಷಣಕ್ಕೆ ಪ್ರೊತ್ಸಾಹ ನೀಡಿದ್ದ ಬಗ್ಗೆ ದಾಖಲೆಯಿದೆ. ೩ನೇ ವೀರ ಬಲ್ಲಾಳನ ಕಾಲದಲ್ಲಿ ಪ್ರಮುಖ ಶಾಸನಾಗಳಾದ ಹರಿಹರ ಪುರದ ಶ್ರೀಚನ್ನಕೇಶವದೇವಾಲಯದಲ್ಲಿರುವ ಶಾಸನವು ನೀರಾವರಿ ಅಣೆಕಟ್ಟು ಮತ್ತು ಕೃಷಿನಾಲೆಯನ್ನು ತಪಾಶಣೆ ಕೈಗೋಳ್ಳುವ ಸಲುವಾಗಿ ಬೇಟಿ ನೀಡುದ್ದರ ಬಗ್ಗೆ ವಿಚಾರವಿದೆ. ಅದೇ ಶಾಸನದಲ್ಲಿ ರಾಜನು ಜಾರಿಗೆ ತಂದಿದ್ದ ತೆರಿಗೆ ವಿದಗಳನ್ನು ದಾಖಲಿಸಲಾಗಿದೆ. ಹೆಜ್ಜುಂಕ ಮತ್ತು ನಾಟ್ಯ ಸುಂಕದ ಬಗ್ಗೆ ವಿವರವಿದೆ. ಹೊಯ್ಸಳರ ಅರಸ ೩ನೇ ವೀರ

ಬಲ್ಲಾಳ ಹರಿಹರಪುರದ ಕಟ್ಟೆಗೆ ಬಿಜಯಂಗೈದ ಆರೋಗಣೆ ಮಾಡಿ ಕಟ್ಟೆ ಕಾಲುವೆಗೆ ಚಿತ್ತೈಸಿ, ಅದರ ನಿರ್ವಹಣೆಗಾಗಿ ರಾಜಗುರು ಹರಿಹರ ಬಟ್ಟೋಪದ್ಯಾಯ ಮತ್ತು ಇತರೆ ೧೨೬ ಮಹಾಜನರಿಗೆ ಹೆಜ್ಜುಂಕ ಮತ್ತು ನಾಡ ಸುಂಕಗಳ ಆದಾಯವನ್ನು ನೀಡಿದನೆಂದು ತಿಳಿದು ಬರುತ್ತದೆ. ಹಾಗೂ ೯೨೮ ಮಾವಿನ ಮರಗಳಿಂದ ಕೂಡಿದ ಬನವೊಂದನ್ನು ನಿರ್ಮಿಸಿ ನಿಸರ್ಗ ಸಂಪತ್ತನ್ನು ಹೆಚ್ಚಿಸಿದ್ದುದ್ದರ ಬಗ್ಗೆ ದಾಖಲೆಯು ಇದೆ.

ಮಳವಳ್ಳಿ ತಾಲ್ಲೂಕಿನ ಅಂತರವಳ್ಳಿ ಗ್ರಾಮದ ಸೋಮೇಶ್ವರದೇವಾಲಯದ ತಳಪಾಯದ ಕಲ್ಲಿನ ಶಾಸನದಲ್ಲಿ ೩ನೆಯ ವೀರ ಬಲ್ಲಾಳನ ಆಳ್ವಿಕೆಯ ಅವಧಿಯಲ್ಲಿ ಆಡಳಿತ ನಿರ್ವಹಿಸುತ್ತಿದ್ದ, ಮಹಾಪ್ರಧಾನಿ ಚಂದ್ರಮೌಳಿಯಣ್ಣನು ಕಳಲೆನಾಡಿನ ತೇನಾ ಪಾಗೈ ಅನಾದಾನಪಳ್ಳಿಯ ಕೈಲಾಸ ಸ್ಥಾನ ದೇವಾಲಯದ ಆವರಣದಲ್ಲಿ ಚಂದ್ರಮೌಳೇಶ್ವರ ದೇವಾಲಯವನ್ನು ಕಟ್ಟಿಸಿದ ಬಗ್ಗೆ ವಿವರ ಕಂಡು ಬರುತ್ತದೆ.

ಮಂಡ್ಯ ಜಿಲ್ಲೆಯಲ್ಲಿ ಹೊಯ್ಸಳರ ಆಡಳಿತದ ಅವಧಿಯಲ್ಲಿ ಜಾರಿಯಲ್ಲಿದ್ದ ತೆರಿಗೆಗಳ ಬಗ್ಗೆ ಶಾಸನಗಳಿಂದ ವಿವರಗಳು ಕಂಡು ಬರುತ್ತದೆ. ಮಾರಹಳ್ಳಿಯ ಶಾಸನವು ಸಾಮಾಜಿಕ, ಆರ್ಥಿಕ, ಆಡಳಿತ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯ ಪ್ರಮಾಣದಲ್ಲಿ ಮಂಡ್ಯ ಜಿಲ್ಲೆ ಅಭಿವೃದ್ಧಿಗೊಂಡಿತ್ತು ಎಂಬ ವಿಷಯವನ್ನು ತಿಳಿಸುತ್ತದೆ. ಅಲ್ಲದೆ ತೆರಿಗೆ ವಿಧಗಳಾದ ತರನಾವು ಆನೆಸೇಸೆ, ಕಟಕಸೇಸೆ, ಕುದುರೆಸೇಸೆ ಮುಂತಾದ ವಿಶೇಷ ತೆರಿಗೆಗಳ ಬಗ್ಗೆ ವಿಷಯವನ್ನು ತಿಳಿಸುತ್ತದೆ. ಹಾಗೂ ಬೌದ್ಧ, ಜೈನ, ಶೈವ, ವೈಷ್ಣವ ಧರ್ಮಗಳು ರಾಜಾಶ್ರಯ ಪಡೆದಿದ್ದವು. ಉದಾಹರಣೆಗೆ: ಕಂಬದಹಳ್ಳಿ, ಬೋಗಾದಿ, ತಿಪ್ಪೂರು, ಬಸ್ತಿಪುರ, ಬಸರಾಳು, ಬೂದನೂರು, ಕಿಕ್ಕೇರಿ, ತಂಗಿನಗಟ್ಟ, ಗೋವಿಂದನ ಹಳ್ಳಿ, ಹೊಸಹೊಳಲು, ತೊಣ್ಣೂರು, ಬೆಳಗೊಳ, ಶ್ರೀರಂಗಪಟ್ಟಣ, ಮೇಲುಕೋಟೆ ಮುಂತಾದ ಸ್ಥಳಗಳಲ್ಲಿರುವ ಶಾಸನಗಳಲ್ಲಿ ಹೊಯ್ಸಳರ ಕಾಲದ ಆಡಳಿತ ತೆರಿಗೆ ಪದ್ಧತಿ, ಸಾಂಸ್ಕೃತಿಕ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆಗಳ ಬಗ್ಗೆ ವಿವರಗಳನ್ನು ತಿಳಿಸುತ್ತದೆ.

ಹೊಯ್ಸಳರ ಕಾಲದ ತೆರಿಗೆಗಳು ಶಾಸನಗಳಲ್ಲಿ ದಾಖಲಾಗಿವೆ. ಸಿದ್ದಾಯ, ಅಳಿಲು, ಅಂಗಡಿಕರ, ಹೊಳೆಯಸುಂಕ, ಅಡುದೊರೆ, ಆಲೆದೆರೆ, ಕಪ್ಪಿಲದೆರೆ, ಮನೆಸುಂಕ, ಮಗ್ಗದೆರೆ, ಪಟ್ಟಬಂಧ, ಬಾಸಿಗದೆರೆ, ಇತ್ಯಾದಿ ತೆರಿಗೆಗಳ ಬಗ್ಗೆ ದಾಖಲೆಗಳಿವೆ. ಮತ್ತು ಕೆರೆಗಳ ನಿರ್ಮಾಣದ ಬಗ್ಗೆ ಶಾಸನಗಳಲ್ಲಿ ವಿವರಗಳನ್ನು ಕಾಣಬಹುದು. ಉದಾ: ನಗರಸಮುದ್ರ ಹೊಯ್ಸಳಸಮುದ್ರ, ದುಮ್ಮನಸಮುದ್ರ, ಮಣಿಯಮ್ಮನಕೆರೆ, ಹಳ್ಳಗಟ್ಟಕೆರೆ, ಮಸಣಸಮುದ್ರ, ಮಾಚಸಮುದ್ರ ಇತ್ಯಾದಿ ದೊಡ್ಡ ದೊಡ್ಡ ಕೆರೆಗಳ ಉಲ್ಲೇಖವಿದೆ.

ಆಧಾರ ಗ್ರಂಥಗಳು

೧. ಮಂಡ್ಯ ಜಿಲ್ಲೆಯ ೭ ತಾಲ್ಲೂಕುಗಳು ಪರಿಷ್ಕೃತ ಎಫಿಗ್ರಾಫಿಯ ಸಂಪುಟಗಳು.

೨. ಡಾ. ಎಸ್. ಶ್ರೀಕಂಠಶಾಸ್ತ್ರಿ, ಭಾರತೀಯ ಸಂಸ್ಕೃತಿ ೧೯೫೪.

೩. ಭಾರತದ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ, ಮಂಡ್ಯ ಜಿಲ್ಲೆ ಪರಿಷ್ಕೃತ ಆವೃತ್ತಿ, ಟಿ.ಎ. ಪಾರ್ಥಸಾರತಿ, ಸಂಪಾದಕರು.

೪. ಸಿಂಗಾರ ಹ.ಕ: ರಾಜೇಗೌಡ ೧೯೯೮.

೫. ಎ.ಕ. ಸಂಪುಟ ೬, ೧೯೭೭ ಕೆ.ಆರ್. ಪೇಟೆ.

೬ IBRD vil-7 madduru, 116.

೭. IBRD vil-7 mandya.

೮. ಸಕ್ಕರೆ ಸೀಮೆ ಕೆ. ಚಿನಂತರಾಮು.

೯. ಕರ್ನಾಟಕ ಪರಂಪರೆ ಸಂಪುಟ ೨.

೧೦. ಮೈಸೂರು, ಆರ್ಕಿಯಲಾಜಿಕಲ್ ರಿಪೋರ್ಟ್, ೧೯೧೨ (MAR).

೩೮

ಹೊಯ್ಸಳರ ಕಾಲದ ತೆಲ್ಲಿಗರು ಒಂದು ಅವಲೋಕನ

ಡಾ. ಎಚ್. ಉಷಾರಾಣಿ*

ದಿನನಿತ್ಯ ಜ್ಯೋತಿ ಬೆಳಗಲು, ಖಾದ್ಯ ತಯಾರಿಸಲು ತೈಲದ ಬಳಕೆ ತಿಳಿದಿರುವ ಸಂಗತಿ. ತೈಲ ಉತ್ಪಾದನೆ, ಮಾರಾಟ, ಸಂಘಟನೆ ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ತೆಲ್ಲಿಗರು ಹೊಯ್ಸಳರ ಆರ್ಥಿಕ ಕ್ಷೇತ್ರದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಪ್ರತಿ ಗ್ರಾಮ ಸ್ವಾವಲಂಬಿಯಾಗಿದ್ದು ವಿವಿಧ ವೃತ್ತಿಯವರ ನಡುವೆ ಸಹಕಾರವಿತ್ತು. ತೆಲ್ಲಿಗರಿಗೆ ಸಂಬಂಧಿಸಿದಂತೆ ಹೊಯ್ಸಳರ ಶಾಸನಗಳಲ್ಲಿ ಗಾಣ, ಗಾಣದೆರೆ, ಗಾಣದ ಒಕ್ಕಲು, ಕಲ್ಲುಗಾಣ, ಕೈಗಾಣ, ಮೆಟ್ಟುಗಾಣ ಎತ್ತುಗಾಣ, ತೆಲ್ಲಿಗಗೇರಿ, ತೆಲ್ಲಿಗೇಶ್ವರ ಗುಡಿ ಇತ್ಯಾದಿ ಪದಗಳ ಉಲ್ಲೇಖವಿದೆ. ಈಗಾಗಲೇ ವಿದ್ವಾಂಸರು ತೆಲ್ಲಿಗರ ಬಗ್ಗೆ ಬೆಳಕು ಚೆಲ್ಲಲು ಯತ್ನಿಸಿದ್ದಾರೆ.[೧] ವಿದ್ವಾಂಸರು ಗಮನಸದಿರುವ ಕೆಲವು ಅಂಶಗಳನ್ನು ಗುರುತಿಸಿ ವಿಶ್ಲೇಷಿಸುವುದೇ ಪ್ರಸ್ತುತ ಪ್ರಬಂಧದ ಉದ್ದೇಶ.

ಹೊಯ್ಸಳರು ಏಳಿಗೆಗೆ ಬರುತ್ತಿದ್ದ ಕಾಲದಲ್ಲಿ ತಮಿಳುನಾಡಿನ ತೆಲ್ಲರ ಕುಲತಿಲಕನೆನಿಸಿದ್ದ ಅಪ್ರಮೇಯ ಹಳೆ ಮೈಸೂರಿನ ಗಡಿಗ್ರಾಮ ಕಲಿಯೂರಿಗೆ ಧಾಳಿಯಿಟ್ಟು ಪೊಯ್ಸಳ, ಭೂತುಗ, ಚೊತ್ತರಳಿ, ಸೇನವಾರ, ಜೋರೆಗ, ಸಂಚಿಗ, ಕಕ್ಕಗ, ಸಿನ್ನಿವರ, ಎರೆಗಂಗ, ಮರ್ದಸ, ಬರಮಣ್ಣ ಮೊದಲಾದವರನ್ನು ಸೋಲಿಸಿ, ಕೆಲವರನ್ನು ಕೊಂದು ಜಯಸ್ಥಂಭ ನೆಟ್ಟ ಬಗ್ಗೆ ಕ್ರಿ.ಶ. ೧೦೦೬ರ ಕಲಿಯೂರು ಶಾಸನ[೨] ತಿಳಿಸುತ್ತದೆ. ರಾಜರಾಜ ಚೋಳನ ಮಹಾಮಾತ್ಯ ಹಾಗೂ ಕೊತ್ತಮಂಡಲನಾಥನು ಆಗಿದ್ದ ಅಪ್ರಮೇಯನು ಆಡಳಿತ ಘಟಕದಲ್ಲಿ ಉನ್ನತ ಪದವಿ ಗಳಿಸಿದ್ದ. ಈತನ ವಿಜಯದಿಂದಾಗಿ ಕುಲಬಾಂಧವರು ಈ ಪ್ರದೇಶದಲ್ಲಿ ವಾಸ್ತವ್ಯ ಹೂಡಿದ್ದರೆಂದರೆ ತಪ್ಪಾಗಲಾರದು. ಮತ್ತೊಂದೆಡೆ ೆಲ್ಲ ಕುಲದವರು ಕಲಿಗಳಾಗಿ, ಅಮಾತ್ಯರಾಗಿ ಸೇವೆ ಸಲ್ಲಿಸುತ್ತಿದ್ದುದು ಗಮನಾರ್ಹ.

ಕ್ರಿ.ಶ. ೧೧೩೩ರ ಬಸ್ತಿಹಳ್ಳಿ ಶಾಸನ,[೩] ಭೂದಾನದ ಗಡಿ ಸೀಮೆ ಗುರುತಿಸುವಲ್ಲಿ ಕೇರಿಯ ತೆಲ್ಲಿಗರಿಪ್ಪತ್ತೊಕ್ಲು ಎಂದು ಹೇಳಿದೆ. ಪ್ರತಿಗ್ರಾಮ ಹಾಗೂ ದೇವಾಲಯಗಳ ಕೈಂಕರ್ಯಗಳಿಗೆ ಎಣ್ಣೆ ಪೂರೈಸಲು ತೆಲ್ಲಿಗರೊಕ್ಕಲುಗಳು ಇರುತ್ತಿದ್ದವು. ರಾಜಧಾನಿ ಸಮೀಪದ ಗ್ರಾಮದಲ್ಲಿ ಒಕ್ಕಲುಗಳ ಸಂಖ್ಯೆ ಅಗತ್ಯಕ್ಕನುಗುಣವಾಗಿ ಹೆಚ್ಚಾಗಿದ್ದುದನ್ನು ಉಲ್ಲೇಖಿತ ಶಾಸನ ದಾಖಲಿಸಿದೆ.

ವಿಷ್ಣುವರ್ಧನನ ಕ್ರಿ.ಶ. ೧೧೪೨ರ ಕೆಲ್ಲಂಗೆರೆ ಶಾಸನ[೪] ಎರಡು ಅಂಶಗಳ ಮೇಲೆ ಮಾಹಿತಿ ಒದಗಿಸುತ್ತದೆ. ಅದರಂತೆ ಮೊದಲನೆಯದಾಗಿ ಕೆಲ್ಲಂಗೆರೆ ಅಗ್ರಹಾರ, ತೆಂಕಣ ಅಯ್ಯಾವಳೆ ಎಂದು ಹೆಸರುವಾಸಿಯಾಗಿತ್ತು. ಇಲ್ಲಿದ್ದ ಅಗ್ರಹಾರದಲ್ಲಿ ಬ್ರಾಹ್ಮಣೇತರರು ಅಧಿಕ ಸಂಖ್ಯೆಯಲ್ಲಿ ವಾಸಿಸುತ್ತಿದ್ದರು. ಎರಡನೆಯದಾಗಿ ಈ ಅಗ್ರಹಾರದಲ್ಲಿದ್ದ ತೆಲ್ಲಿಗ ಜಕ್ಕವ್ವೆ ತನ್ನ ಸಹೋದರ ಅಜ್ಜಮ್ಮನ ಸ್ಮರಣಾರ್ಥ ಗ್ರಾಮೇಶ್ವರ ಎಂಬ ಶಿವದೇವಾಲಯ ಕಟ್ಟಿಸಿದ್ದಳು. ಶಾಸನದಲ್ಲಿ ಅಜ್ಜಮ್ಮನನ್ನು ತೆಲ್ಲಿಗ ಮುಖಕೆ ಕನ್ನಡಿ, ತೆಲ್ಲಿಗ ಕುಲಕ್ಕೆ ಕಳಶ ಎಂದು ವರ್ಣಿಸಲಾಗಿದೆ. ಹೀಗೆ ಅಜ್ಜಮ್ಮ ಅಲಂಕರಿಸಿದ್ದ ಸಾಮಾಜಿಕ ಸ್ಥಾನಮಾನದ ಬಗ್ಗೆ ಶಾಸನ ದಾಖಲಿಸುತ್ತದೆಯಷ್ಟೆ. ಆದರೆ ಆತನ ಸೇವಾಕಾರ್ಯಗಳ ಬಗ್ಗೆ ಶಾಸನ ಮೌನವಾಗಿದೆ. ಇಷ್ಟಾದರೂ ತೆಲ್ಲಿಗ ಸ್ತ್ರೀಯ ಕಾರ್ಯವನ್ನು ದಾಖಲಿಸಿರುವುದು ಶ್ಲಾಘನೀಯ.

ವೀರಬಲ್ಲಾಳನ ಕ್ರಿ.ಶ. ೧೧೯೦ರ ಬೈರೇದೇವನಗುಡ್ಡ ಶಾಸನ[೫] ಹಿರಿಯ ತೆಲ್ಲಿಗಕೇರಿ ಮತ್ತು ಕಿರಿಯ ತೆಲ್ಲಿಗಕೇರಿಯನ್ನು ಉಲ್ಲೇಖಿಸುತ್ತದೆ. ರಾಜಧಾನಿ ಹಳೆಬೀಡಿನ ಸಮೀಪ ವಾಸಿಸುತ್ತಿದ್ದ ಈ ತೆಲ್ಲಿಗರನ್ನು ಈ ರೀತಿ ಅರ್ಥೈಸಬಹುದು. ಮೊದಲಿಗೆ ಹಿರಿಯ ತೆಲ್ಲಿಗಕೇರಿಯವರು ಕಿರಿಯರಿಗೆ ತರಬೇತಿ ಹಾಗೂ ಮಾರ್ಗದರ್ಶನ ಮಾಡುವ ಪ್ರವೃತ್ತಿಯವರು. ಎರಡನೆಯದಾಗಿ ಹಿರಿಯ ತೆಲ್ಲಿಗಕೇರಿಯವರು ದೊಡ್ಡಪ್ರಮಾಣದ ಎಣ್ಣೆ ಉತ್ಪಾದಕರಾಗಿದ್ದು, ಕಿರಿಯ ತೆಲ್ಲಿಗರು ಸಣ್ಣಪ್ರಮಾಣದಲ್ಲಿ ಎಣ್ಣೆ ತಯಾರು ಮಾಡುತ್ತಿದ್ದರು. ಕೊನೆಯದಾಗಿ ಹಿರಿಯ ತೆಲ್ಲಿಗಕೇರಿಯವರು ನುರಿತ ವ್ಯಾಪಾರಿಗಳು, ಕಿರಿಯ ತೆಲ್ಲಿಗರು ಚಿಲ್ಲರೆ ವ್ಯಾಪಾರಿಗಳಾಗಿದ್ದರೆಂದು ಅಂದಾಜು ಮಾಡಬಹುದು.

* # ೨೭೪, ೮ನೇ ಮುಖ್ಯರಸ್ತೆ, ಬ್ಯಾಂಕ್ ಕಾಲೋನಿ, ಬೋಗಾದಿ, ಮೈಸೂರು–೫೭೦೦೨೬.

ಮೂರನೆ ನರಸಿಂಹನ ಕ್ರಿ.ಶ. ೧೨೭೬ರ ತಿ. ನರಸೀಪುರದ ೨ ಶಾಸನಗಳು,[೬] ಸೋಮನಾಥಪುರದ ಕೇಶವ ದೇವಾಲಯ ಮತ್ತು ಪಂಚಲಿಂಗೇಶ್ವರ ದೇವಾಲಯಗಳ ಎಣ್ಣೆ ಅಗತ್ಯಗಳನ್ನು ದಾಖಲಿಸಿವೆ. ಅದು ಹೀಗಿದೆ; ವರ್ಷ ಒಂದಕ್ಕೆ ಎಲ್ಲಾ ಹಬ್ಬಗಳ ಕೈದೀವಿಗೆಗೆ, ಚೈತ್ರ ಪವಿತ್ರ ದವನಕ್ಕೆ, ಶನಿವಾರ ಬುಧವಾರದ ಮಜ್ಜನಕ್ಕೆ ದೀಪಾವಳಿಯ ದೀಪಮಾಲೆ, ಕೇಶವ ದೇವಾಲಯಕ್ಕೆ ಸಲಗೆ ೯೪, ಕೊಳಗ ೧೮, ಬಳ್ಳ ೨ ಮತ್ತು ಪಂಚಲಿಂಗದೇವಾಲಯಕ್ಕೆ ಸಲಗೆ ೪೪, ಕೊಳಗ ೨, ಮಾನ ೬ ಎಂದು ಸ್ಪಷ್ಟವಾಗಿ ನಮೂದಿಸಲಾಗಿದೆ. ಉಲ್ಲೇಖಿತ ದೇವಾಲಯಗಳಿಗೆ ೭೨ ಅಥವಾ ಬಾಹತ್ತರ ನಿಯೋಗಿಗಳು ಇದ್ದಾಗ್ಯೂ ತೆಲ್ಲಿಗರ ಪ್ರಸ್ತಾಪವಿಲ್ಲ. ಆದರೆ ದೇವಾಲಯದ ಆವರಣದಲ್ಲಿ ಗಾಣ ಹಾಕಿಸುವುದು ಪುಣ್ಯಕಾರ್ಯವೆಂದು ಭಾವಿಸಲಾಗಿತ್ತು. ಉದಾಹರಣೆಗೆ ಇದೇ ತಾಲ್ಲೂಕಿನ ವೀರ ಬಲ್ಲಾಳನ ಕ್ರಿ.ಶ. ೧೧೭೯ರ ಕಾರಗಹಳ್ಳಿ ಶಾಸನ[೭] ಸ್ಥಳೀಯ ಸೋಮೇಶ್ವರ ದೇವರ ಮುಂದೆ ಶ.ಕ. ೧೧೦೦ನೇ ವಿಕಾರಿ ಸಂವತ್ಸರದ ಜೇಷ್ಠ ಸುದ್ದ ೧೪ ಸೋಮವಾರದಂದು ಕೊಳಲ್ಲೂರ ಬಾಣಿಗರ ಬೆಳ್ಳಿಗೌಡನ ಮಗ ಬಿಟ್ಟೆಗೌಡ ದೇವರ ಮುಂದೆ ಕಲ್ಲಗಾಣ ಹಾಕಿಸಿದ್ದನ್ನು ತಿಳಿಸುತ್ತದೆ ಅಷ್ಟೇ ಏಕೆ? ಮೂರನೇ ನರಸಿಂಹನ ಕ್ರಿ.ಶ. ೧೨೭೭ರ ಹಳೇ ಆಲೂರು ಶಾಸನ[೮] ತೆಂಕಣ ಐಯ್ಯಾವಳೆ ಎನಿಸಿದ್ದ ಆಲೂರು ತೆಲ್ಲರನ್ನು ಪ್ರಸ್ತಾಪಿಸುತ್ತದೆ. ಇದರಿಂದ ವಣಿಕ ವರ್ಗದ ತೆಳ್ಳರು ಈ ಪ್ರದೇಶದಲ್ಲಿ ನೆಲಸಿದ್ದು, ಕಾರ್ಯ ಪ್ರವೃತ್ತರಾಗಿದ್ದುದಂತು ದಿಟ.

ತೆಲ್ಲಿಗರ ಸಂಘಟನೆಗಳು ವಿಸ್ತರಿಸಿತ್ತೇ ಎಂಬ ಪ್ರಶ್ನೆ ಸಂಶೋಧಕನನ್ನು ಕಾಡುತ್ತದೆ. ಏಕೆಂದರೆ ತೆಲ್ಲಿಗರೈವತ್ತೊಕ್ಕಲು[೯] ಸಾಮಾನ್ಯವಾಗಿ ಶಾಸನಗಳಲ್ಲಿ ಉಕ್ತವಾಗಿದೆ. ಹೊಯ್ಸಳರ ಕಾಲದ ವೇಳೆಗೆ ತೆಲ್ಲಿಗರ ಚಟುವಟಿಕೆ ಸಾಕಷ್ಟು ವಿಸ್ತಾರಗೊಂಡು ರಾಜಧಾನಿಯಾದ ಹಳೇಬೀಡಿನಲ್ಲಿ ಇವರು ಅಧಿಕ ಸಂಖ್ಯೆಯಲ್ಲಿದ್ದರು. ಪ್ರಾಯಶಃ ಜನಸಂಖ್ಯೆ ಹೆಚ್ಚಳ ಸಹಜವಾಗಿ ತೈಲ ಬೇಡಿಕೆಯನ್ನು ಹೆಚ್ಚಿಸಿತ್ತು. ಇದಕ್ಕೆ ಸಂಬಂಧಿಸಿದಂತೆ ಹಳೇಬೀಡಿನ ಶಾಸನ[೧೦] ಬಹಳ ಸ್ವಾರಸ್ಯಕರ ಮಾಹಿತಿಯನ್ನು ಒದಗಿಸುತ್ತದೆ. ಉಲ್ಲೇಖಿತ ಶಾಸನ ಪ್ರಕಾರ ತೆಲ್ಲಿಗ ಗಾವುಂಡುಗಳಾದ ದೇವಗೌಂಡ, ಮಂಟಬಮ್ಮಗೌಡ, ಚಟ್ಟಗೌಡ, ಬಸದಿಯ ಕಿರುವೊಕ್ಕಲು, ಸಾವಂತನ ಮಗ ಬಮ್ಮಗೌಡನೊಳಗಾದ "ಸಾಯಿರೊಕ್ಕಲು" ಎಂದು ಗೊತ್ತಾಗುತ್ತದೆ. ಅಲ್ಲದೇ "ಮೆಟ್ಟುಗಾಣದೈವತ್ತೊಕ್ಕಲು" ಸೇರಿದಂತೆ ಸಾಯಿರದೈವತೊಕ್ಕಲು ಎಂದು ಸ್ಪಷ್ಟವಾಗಿದೆ. ಇದರಿಂದ ತೆಲ್ಲಿಗರಲ್ಲಿ ಮೆಟ್ಟುಗಾಣ, ಎತ್ತುಗಾಣ, ಕೈಗಾಣ, ಿರಿಯ ಒಕ್ಕಲು, ವ್ಯಾಪಾರಿ ಇತ್ಯಾದಿ ಹಲವು ಶಾಖೆಗಳಿದ್ದವೆಂದು ಅಂದಾಜು ಮಾಡಬಹುದು. ಇವರೆಲ್ಲರೂ ಸಂಘಟಿತರಾಗಿ ಸ್ಥಳೀಯ ಗಳಗೇಶ್ವರ ದೇವರಿಗೆ ಗಾಣಕ್ಕೆ ಒಂದು ಸೊಲ್ಲಿಗೆ ಎಣ್ಣೆ ಬಿಟ್ಟರೆಂದು ಹೇಳಲಾಗಿದೆ. ಮತ್ತೊಂದು ತೆಲ್ಲಿಗರ ಶ್ರೇಣಿ ಅರವತ್ತೊಕ್ಕಲು, ಐವತ್ತೊಕ್ಕಲು, ನೂರು ಒಕ್ಕಲು ಸೇರಿದಂತೆ ತರಕಾರಿ ಬೆಳೆಯುವ ಹಾಗೂ ಮಾರುವ ಅರವತ್ತೊಕ್ಕಲು ಶ್ರೇಣಿಯನ್ನು ಡಾ. ಗುರುವ ಅವರು ಗುರುತಿಸಿದ್ದಾರೆ. ವೀರ ಬಲ್ಲಾಳನ ಕ್ರಿ.ಶ. ೧೨೧೯ರ ಬಳ್ಳಾರಿ ಶಾಸನ[೧೧] "ಗಾಣದ ಅರವತೊಕ್ಕಲು" ಸೇರಿ ಶ್ರೀ ತೆಲ್ಲಿಗೇಶ್ವರ ದೇವರನ್ನು ಪ್ರತಿಷ್ಠಾಪಿಸಿ ದೇವರ ನಂದಾದೀವಿಗೆಗೆ ಬರುವ ಆದಾಯದಲ್ಲಿ ಒಂದು ಭಾಗ ಎಣ್ಣೆಗೆ ಬಿಟ್ಟರೆಂದು ತಿಳಿಸುತ್ತದೆ.

ಕೊನೆಯದಾಗಿ, ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದ ಈ ತೆಲ್ಲಿಗ ವರ್ಗ ಸಾಮಾಜಿಕ ಸ್ಥಾನಮಾನ ಗಳಿಸಿದ್ದುದಂತು ಹೌದು, ಸನ್ನಿವೇಶಕ್ಕೆ ಅನುಗುಣವಾಗಿ ಜೀವದ ಹಂಗುತೊರೆದು ಹೋರಾಡುವ ಪ್ರವೃತ್ತಿಯವರೂ ಆಗಿದ್ದರು ಎಂಬುದನ್ನು ಅರಸೀಕೆರೆಯ ಎಳವಾರೆ ಶಾಸನ[೧೨] ಗುರುತಿಸುತ್ತದೆ. ಈ ಶಾಸನ ಎಳವರೆಯ ತೆಲ್ಲಿಗ ಮಲ್ಲೇನಾಯಕನ ಮಗ, ಸಿಂಗನ ಧಾಳಿಯ ವಿರುದ್ಧ ಹೋರಾಡಿ ಶ.ಕ. ೧೦೨೫ ಪ್ರಜಾಪತಿ ಸಂವತ್ಸರದ ಚೈತ್ರ ಶುದ್ಧ ೧೩ ಸೋಮವಾರದಂದು ವೀರಸ್ವರ್ಗ ಸಂದ ಎನ್ನುತ್ತದೆ. ಉಲ್ಲೇಖಿತ ಸಿಂಗ, ಸೇವುಣರ ಸಿಂಗಣ ದೇವನಾಗಿರಬೇಕು. ಮಗ ವೀರಮರಣವನ್ನಪ್ಪಿದ ಸ್ಮರಣಾರ್ಥ ಮಲ್ಲೆನಾಯಕ ವೀರಗಲ್ಲು ನಿಲ್ಲಿಸಿದನೆಂದು ಹೇಳಲಾಗಿದೆ.

ಹೊಯ್ಸಳರ ಕಾಲದ ಶಾಸನಗಳ ಸಮೀಕ್ಷೆಯಿಂದ ತೆಲ್ಲಿಗರ ಕುರಿತು ಈ ಕೆಳಗಿನ ತೀರ್ಮಾನಕ್ಕೆ ಬರಲಾಗಿದೆ.

೧. ಹೊಯ್ಸಳರ ಕಾಲದಲ್ಲಿ ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ ಹಲವು ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ತೆಲ್ಲಿಗ ಸಮುದಾಯದ ಮಹಿಳೆಯರಲ್ಲಿ ಅರಸೀಕೆರೆಯ ಜಕ್ಕವ್ವೆ ಏಕೈಕ ಮಹಿಳೆಯಾಗಿ ಗುರುತಿಸಲ್ಪಟ್ಟಿರುವುದು ಆಶಾದಾಯಕ ಬೆಳವಣಿಗೆ ಎಂದಷ್ಟೇ ಭಾವಿಸಬಹುದು.

೨. ತಮಿಳುನಾಡಿನ ತೆಲ್ಲರು ಅಪ್ರಮೇಯನ ನೇತೃತ್ವದಲ್ಲಿ ಕಲಿಯೂರಿನ ಮೇಲೆ ದಾಳಿಯಿಟ್ಟು ಹೊಯ್ಸಳರ ನಾಡಿನಲ್ಲಿ ವಾಸ್ತವ್ಯ ಹೂಡಿದ್ದರೆಂಬುದಕ್ಕೆ, ತೆಂಕಣ ಅಯ್ಯಾವಳೆ ಎನಿಸಿದ್ದ ಹಳೆ ಆಲೂರಿನ ಶಾಸನದಲ್ಲಿ ಉಕ್ತವಾದ ತೆಳ್ಳರು ಎಂಬ ವಣಿಕ ವರ್ಗವೂ ಇದ್ದುದಕ್ಕೆ ಮಾಹಿತಿ ಇದೆ. ಇದರಿಂದ ದಕ್ಷಿಣ ಕರ್ನಾಟಕದಲ್ಲಿ ತಮಿಳರ ಪ್ರಭಾವ ಇತ್ತೆಂಬುದು ವೇದ್ಯವಾಗುತ್ತದೆ.

೩. ತೆಲ್ಲಿಗರ ಕೊತ್ತಳಿ, ತೆಲ್ಲಿಗರ ಶ್ರೇಣಿ ಅಥವಾ ಸಂಘಟನೆಯಲ್ಲಿ "ಐವತ್ತೊಕ್ಕಲು"ಗಳಿಂದ "ಸಾಯಿರ ದೈವತ್ತೊಕ್ಕಲುಗಳ ಉಲ್ಲೇಖ ನಿಜಕ್ಕೂ ಹೊಯ್ಸಳರ ಆರ್ಥಿಕ ಕ್ಷೇತ್ರದಲ್ಲಿ ತೆಲ್ಲಿಗರ ಗಣನೀಯ ಪಾತ್ರವನ್ನು ಬಿಂಬಿಸುತ್ತದೆ.

೪. ತೆಲ್ಲಿಗರು ಕೇವಲ ವ್ಯಾಪಾರಿ ಮನೋಭಾವಕ್ಕೆ ತಮ್ಮನ್ನು ಸೀಮಿತವಾಗಿರಿಸದೆ ನಾಡಿಗಾಗಿ ಪ್ರಾಣ ತೆರುವ ಪ್ರವೃತ್ತಿಯವರು ಆಗಿದ್ದರೆಂಬುದಕ್ಕೆ ತೆಲ್ಲಿಗ ಮಲ್ಲೆನಾಯಕ ತನ್ನ ಮಗನ ಹೆಸರಲ್ಲಿ ನಿಲ್ಲಿಸಿದ ವೀರಗಲ್ಲು ಸಾಕ್ಷಿಯಾಗಿದೆ.

ಆಧಾರಸೂಚಿ

೧. ಸಿದ್ದಲಿಂಗಮ್ಮ, ಮಧ್ಯಕಾಲೀನ ಕರ್ನಾಟಕದಲ್ಲಿ ತೆಲ್ಲಿಗರು, ಇತಿಹಾಸ ದರ್ಶನ ೨೧, ಪುಟ ೨೧೭.

೨. ಎ.ಕ.ಸಂ. ೫, ತೀ.ನ. ೨೨೦.

೩. ಎ.ಕ.ಸಂ. ೯, ಬೇಲೂರು ೩೪೯.

೪. ಎ.ಕ.ಸಂ. ೧೦, ಅರಸೀಕೆರೆ, ೧೪೯.

೫. ಎ.ಕ.ಸಂ. ೯, ಬೇಲೂರು, ೫೫೪.

೬ ಎ.ಕ.ಸಂ. ೫, ತೀ.ನ. ೮೮, ೯೬.

೭. ಎ.ಕ.ಸಂ. ೫, ತೀ.ನ. ೩೨೨.

೮. ಎ.ಕ.ಸಂ. ೪, ಚಾಮರಾಜನಗರ, ೧೮೮.

೯. ಡಾ. ಹನುಮಾಕ್ಷಿ ಗೋಗಿ (ಸಂ), ಅಸಿಸ್ಟಂಟ್ ಕಲೆಕ್ಟರ್, ಆರ್.ಎಸ್. ಗುರವ ಶಾಸನ ಪ್ರಬಂಧಗಳು.

೧೦. ಎ.ಕ.ಸಂ. ೯. ಬೇಲೂರು, ೩೧೭, ಕ್ರಿ.ಶ. ೧೧೭೩.

೧೧. ಬಳ್ಳಾರಿ ಜಿಲ್ಲೆ, ಕನ್ನಡ ವಿಶ್ವವಿದ್ಯಾನಿಲಯ, ಶಾಸನ ಸಂಪುಟ ಹರಪನಹಳ್ಳಿ, ೮೮.

೧೨. ಎ.ಕ.ಸಂ. ೧೦, ಅರಸೀಕೆರೆ, ೨೩೦, ಕ್ರಿ.ಶ. ೧೨೧೧.

ಶ್ರೀಮದಿಕ್ಕೇರಿ ಸಾಗರದಲ್ಲಿರುವ ಶ್ರೀಮದ್ರಾಮಾನುಜ ಲೋಕಾಚಾರ್ಯ ಮಠ–ಟಿಪ್ಪಣಿ

ಡಾ. ಕೆಳದಿ ವೆಂಕಟೇಶ್ ಜೋಯಿಸ್*

ಕೆಳದಿ ಅರಸರ ಎರಡನೇ ರಾಜಧಾನಿ ಇಕ್ಕೇರಿ ಮತ್ತು ಕೆಳದಿಯ ಮಧ್ಯದಲ್ಲಿರುವ ನಗರ ಸಾಗರ. ಕೆಳದಿಯ ಹಿರಿಯ ವೆಂಕಟಪ್ಪನಾಯಕನು ತನ್ನಜ್ಜ ಸದಾಶಿವನಾಯಕನ ಹೆಸರಲ್ಲಿ ಈ ಸದಾಶಿವಸಾಗರ ಎಂಬ ನಗರವನ್ನು ನಿರ್ಮಾಣ ಮಾಡಿದುದನ್ನು ದಾಖಲೆಗಳು ತಿಳಿಸುತ್ತವೆ. ಸಾಗರ ತಾಲ್ಲೂಕಿನಾದ್ಯಂತ ಎಲ್ಲಾ ಧರ್ಮದ ಕುರುಹುಗಳು ಕಂಡುಬಂದಿವೆ. ಇವುಗಳಲ್ಲಿ ಬೇರೆ ಬೇರೆ ಮಠಮಾನ್ಯಗಳು ಅಸ್ತಿತ್ವದಲ್ಲಿದ್ದ ಕುರುಹುಗಳೂ ಇಲ್ಲಿವೆ. ಹೊಯ್ಸಳರ ಪ್ರೋತ್ಸಾಹದಿಂದ ಪ್ರಬಲವಾಗಿ ಬೆಳೆದು, ವಿಜಯನಗರ, ಕೆಳದಿ ಅರಸುಮನೆತನಗಳ ಕಾಲದಲ್ಲಿ ಆಶ್ರಯ ಪಡೆದಿದ್ದ ಶ್ರೀವೈಷ್ಣವಧರ್ಮದ ಅವಶೇಷಗಳೂ ಇಲ್ಲಿ ಸಿಕ್ಕಿವೆ. ಈ ಧರ್ಮದ ಸಂಪ್ರದಾಯದ ಭಾಗವಾಗಿ ರಾಮಾನುಜ ಕೂಟಗಳು ಅಂದು ಕಾರ್ಯ ನಿರ್ವಹಿಸುತ್ತಿದ್ದುದು ಕಂಡುಬರುತ್ತದೆ. ಕೆಳದಿ ಅರಸರ ಶಾಸನಗಳಲ್ಲಿ ಈ ಧರ್ಮಕ್ಕೆ ಆಶ್ರಯ ನೀಡಿದ ಉಲ್ಲೇಖವಿದೆ. ಅಲ್ಲದೆ ಇತ್ತೀಚೆಗೆ ದೊರೆತ ನಿರೂಪವೊಂದು ಈ ಧರ್ಮದ ಮಠದ ಮೇಲೆ ಹೊಸ ಬೆಳಕು ಚೆಲ್ಲಲು ಸಹಕಾರಿಯಾಗಿದೆ.

ಶ್ರೀ ರಾಮಾನುಜಾಚಾರ್ಯರು (೧೦೧೭–೧೧೩೭)

೧೧–೧೨ನೇ ಶತಮಾನದ ಪ್ರಮುಖ ದಾರ್ಶನಿಕರೂ, ತತ್ವಜ್ಞಾನಿಯೂ, ಯಾಮುನಾಚಾರ್ಯರ ಶಿಷ್ಯರೂ, ಆಚಾರ್ಯತ್ರಯರಲ್ಲಿ ಎರಡನೆಯವರೂ ಆದ ಶ್ರೀ ರಾಮಾನುಜಾಚಾರ್ಯರು ವಿಶಿಷ್ಟಾದ್ವೈತ ಸಿದ್ಧಾಂತದ ಪ್ರತಿಪಾದಕರು[೧]. ಆಧ್ಯಾತ್ಮದ ಮೂಲಕ ಸಮಾಜದಲ್ಲಿದ್ದ ಜಾತಿ, ವರ್ಣ ಪದ್ಧತಿಯನ್ನು ಹೋಗಲಾಡಿಸಿ ಅನ್ಯೋನತೆ ಮೂಡಿಸುವತ್ತ ಇವರು ಗಮನ ಹರಿಸಿದ್ದರು. ಮೊದಲಬಾರಿಗೆ ಭಕ್ತಿ ಮತ್ತು ಶರಣಾಗತಿಯಿಂದ ಬರುವ ಕೆಳಸ್ತರದವರನ್ನು ದೇವಾಲಯದೊಳಗೆ ಬಿಟ್ಟುಕೊಳ್ಳುವ, ಅವರಿಗೆ ಶಾಸ್ತ್ರ ವಿರೋಧವಿಲ್ಲದೆ ಪೂಜೆ ಸಲ್ಲಿಸಲು ಅವಕಾಶವನ್ನು ತಮ್ಮ ಕಾರ್ಯಕ್ಷೇತ್ರವಾದ ಮೇಲುಕೋಟೆಯಲ್ಲಿ ಕಲ್ಪಿಸಿದ್ದಲ್ಲದೆ ಮಂತ್ರೋಪದೇಶವನ್ನೂ ನೀಡಿದ್ದರು. ಪಾಂಚರಾತ್ರ ಆಗಮರೀತ್ಯ ಪೂಜಾದಿಗಳು ನಡೆಯುವಂತೆ ಹಲವು ವಿಷ್ಣು ದೇವಾಲಯಗಳಲ್ಲಿ ಇವರು ಕ್ರಮ ಕೈಗೊಂಡಿದ್ದರು. ಇವರ ಕಾಲದಿಂದ ಎಲ್ಲಾ ಕಡೆಯಲ್ಲಿ ಶ್ರೀವೈಷ್ಣವ ಮತ ಬೆಳೆಯಿತು. ಶ್ರೀಕಲಮದಾನಿ ಗುರುರಾಯರು ತಮ್ಮ ಕೃತಿಯಲ್ಲಿ ಕುರುಬರೆಂದು ಕರೆಯಿಸಿಕೊಳ್ಳುವ ಜನಾಂಗವೂ ಶ್ರೀವೈಷ್ಣವರಾದರೆಂದು ದಾಖಲಿಸುತ್ತಾರೆ[೨]. ಜಾತಿ, ಭೇದ ಇಲ್ಲದೆ ಆಳ್ವಾರರು, ಮತ್ತು ಸ್ತ್ರೀ ಪ್ರತೀಕವಾದ ಆಂಡಾಳ್ ಸಂತಳ ವಿಗ್ರಹವನ್ನು ಶ್ರೀವೈಷ್ಣವ ದೇವಾಲಯಗಳಲ್ಲಿ ಪ್ರತಿಷ್ಠಾಪಿಸಿದರು[೩]. ಇವರಿಗೆ ಉಭಯ ವೇದಾಂತ ಪ್ರವರ್ತಕ, ಉಡೈಯವರ್, ಯತಿರಾಜ, ಶ್ರೀ ವೈಷ್ಣವ ಸಿದ್ಧಾಂತದ ತತ್ವಾಚಾರ್ಯ ಈ ಮೊದಲಾದ ಬಿರುದುಗಳಿದ್ದವು. ರಾಮಾನುಜರು ಕ್ರಿ.ಶ. ೧೧೩೭ರಲ್ಲಿ ತಮಿಳುನಾಡಿನ ಶ್ರೀರಂಗಂನಲ್ಲಿ ದೇಹತ್ಯಾಗ ಮಾಡಿದರು. ಅವರ ನಂತರ ೧೩ನೆಯ ಶತಮಾನದಲ್ಲಿ ಜೀವಿಸಿದ್ದ ಪಿಳ್ಳೈ ಲೋಕಾಚಾರ್ಯರೇ ಮೊದಲಾಗಿ ಹಲವು ಶಿಷ್ಯರು ಈ ಧರ್ಮವನ್ನು ಮುಂದುವರೆಸಿಕೊಂಡು ಬಂದಿರುವುದು ಕಂಡುಬರುತ್ತದೆ.

ಶ್ರೀ ರಾಮಾನುಜ ಕೂಟ

ಶ್ರೀ ರಾಮಾನುಜಾಚಾರ್ಯರು ಬ್ರಾಹ್ಮಣೇತರರೂ ಉಪಾಸನೆ ಆರಾಧನೆ ಮೂಲಕ ಮೋಕ್ಷ ಹೊಂದಲಿ ಎಂಬುದ್ದೇಶದಿಂದ ಶ್ರೀವೈಷ್ಣವಧರ್ಮದ ಪಂಚ ಸಂಸ್ಕಾರ ದೀಕ್ಷೆಗಳಾದ ನಾಮ, ಶಂಖ ಚಕ್ರಗಳನ್ನು ಹಾಕುವುದರ ಜೊತೆಗೆ ಮಂತ್ರೋಪದೇಶವನ್ನು ಸರ್ವರಿಗೂ ಮಾಡುವುದರ ಮೂಲಕ ದೇವರ ಮುಂದೆ ಎಲ್ಲರೂ ಸಮಾನರು ಎಂಬ ಅಂಶಗಳನ್ನು ಪ್ರತಿಪಾದಿಸಿದರು. ಪ್ರಪಂಚದಾದ್ಯಂತ ಇಂದು ಶ್ರೀವೈಷ್ಣವ ಸಂಪ್ರದಾಯದವರಿದ್ದಾರೆ. ಕರ್ನಾಟಕದಲ್ಲಿ ದೊರೆತಿರುವ ಶಾಸನಗಳನ್ನು ಗಮನಿಸಿದರೆ ಅಂದು ೫೮ ವಿವಿಧ ಜಾತಿಯ ಜನರಿಗೆ ದೀಕ್ಷೆಯನ್ನು ನೀಡಿರುವುದು ಕಂಡುಬರುತ್ತದೆ. ರಾಮಾನುಜ ಧರ್ಮದ ದೀಕ್ಷೆಯನ್ನು

* ಕ್ಯುರೇಟರ್, ಕೆಳದಿ ವಸ್ತುಸಂಗ್ರಹಾಲಯ, ಕೆಳದಿ.

ಪಡೆದವರಿಗೆ ಭಾಗವತರು, ದಾಸಯ್ಯ ಎಂಬುದಾಗಿಯೂ ಕರೆಯುವುದು ರೂಢಿಯಲ್ಲಿತ್ತು. ಹಾಡು, ನರ್ತನ ಮೂಲಕ ಧರ್ಮ ಪ್ರಚಾರ ಮಾಡುವ ಗುಂಪುಗಳು ಭಾಗವತ ಗೋಷ್ಠಿ ಎಂದು ಕರೆಯಲ್ಪಡುತ್ತಿದ್ದವು. ಇಂತಹ ಭಾಗವತ ಗೋಷ್ಠಿಗಳು ಚರ್ಚಿಸಲು ಮತ್ತು ರಾತ್ರಿ ಉಳಿಯುವುದಕ್ಕಾಗಿ ಮಾಡಿಕೊಂಡ ವ್ಯವಸ್ಥೆಗೆ ರಾಮಾನುಜ ಕೂಟ ಎಂದು ಕರೆಯಲಾಗುತ್ತಿತ್ತು. ರಾಮಾನುಜ ಮತದಲ್ಲಿ ಅಧ್ಯಯನ, ಅಧ್ಯಾಪನ, ಆರಾಧನೆ ಇತ್ಯಾದಿಗಳಿಗೆ ಪ್ರಾಮುಖ್ಯತೆ ದೊರೆಯುತ್ತಿತ್ತು. ರಾಮಾನುಜ ಕೂಟಗಳಲ್ಲಿ ಜಾತಿ ಭೇದವಿಲ್ಲದೆ ಸರ್ವರೂ ದೇವರ ಹೆಸರಿನ ನರ್ತನೆ, ಕೀರ್ತನೆ, ಅರ್ಚನೆಗೆ ಪ್ರಾಮುಖ್ಯತೆ ಇತ್ತು. ಸಾಮಾನ್ಯವಾಗಿ ದೇವಾಲಯದ ಪಕ್ಕದಲ್ಲಿ ಈ ರೀತಿಯ ರಾಮಾನುಜ ಕೂಟಗಳಿರುವುದು ಕಂಡುಬರುತ್ತದೆ. ಕೆಳದಿ ಶಾಸನಗಳಲ್ಲಿಯೂ ಇಂತಹ ರಾಮಾನುಜ ಕೂಟಗಳ ಉಲ್ಲೇಖ ಕಂಡುಬಂದಿದೆ.

ಕೆಳದಿ ಅರಸರ ಶಾಸನಗಳಲ್ಲಿ ರಾಮಾನುಜ ಕೂಟದ ಉಲ್ಲೇಖ

ಕೆಳದಿ ಅರಸರ ಕಾಲದ, ಹೊಸನಗರ ಮತ್ತು ಸಾಗರ ತಾಲ್ಲೂಕಿನಲ್ಲಿ ದೊರೆತಿರುವ ಎರಡು ಶಾಸನದಲ್ಲಿ ರಾಮಾನುಜ ಕೂಟದ ಉಲ್ಲೇಖ ಕಂಡುಬರುತ್ತದೆ. ಅದರಲ್ಲಿ ಮೊದಲನೆಯದು ನಗರದ ಚಾತಾಳಿ ರಾಮಾನುಜಯ್ಯನಲ್ಲಿದ್ದ ತಾಮ್ರ ಶಾಸನ[೪]. ಇದು ಕೆಳದಿ ಹಿರಿಯ ವೆಂಕಟಪ್ಪನಾಯಕನ ಕಾಲದ್ದಾಗಿದೆ. ಇದು ಶಾ.ಶ. ೧೫೩೮ನೇ ನಳ ಸಂವತ್ಸರದ ಶ್ರಾವಣ ಶುಕ್ಲ ದಶಮಿ ಅಂದರೆ ಕ್ರಿ.ಶ. ೧೬೧೬ ಜುಲೈ ೧೪ ಭಾನುವಾರಕ್ಕೆ ಸರಿಹೊಂದುತ್ತದೆ. ಕೆಳದಿ ವೆಂಕಟಪ್ಪ ನಾಯಕನು ಇಕ್ಕೇರಿಯ ರಾಮಾನುಜ ಧರ್ಮ ಕೂಟದ ಮಠಕ್ಕೆ ಮತ್ತು ವೆಂಕಟೇಶ ದೇವಾಲಯಕ್ಕೆ ಹರತಾಳು ಸೀಮೆಯ ತಿಪ್ಪಳ್ಳಿಯನ್ನು ದಾನ ನೀಡಿರುವುದನ್ನು ಶಾಸನ ತಿಳಿಸುತ್ತದೆ. ಇಲ್ಲಿ ಬಳಸಿರುವ ಚಾತಾಳಿ ಪದವು ಶಾತ್ತಾದ ಎಂಬ ಪದದ ಅಪಭ್ರಂಶ ರೂಪವೆಂಬ ಅಭಿಪ್ರಾಯವಿದೆ. ಶಾತ್ತಾದ ಎಂದರೆ ಧರಿಸದವನು ಅಂದರೆ ಜನಿವಾರವನ್ನು ಧರಿಸದವನು ಎಂಬ ಅರ್ಥ ಇರುವುದಾಗಿ ತಿಳಿದುಬರುತ್ತದೆ. ಅಂದರೆ ಬ್ರಾಹ್ಮಣೇತರರು ಎಂಬುದನ್ನು ಇದು ತಿಳಿಸುತ್ತದೆ. ಇದು ಕೆಳದಿ ಕಾಲದಲ್ಲಿ ಶ್ರೀರಾಮಾನುಜ ಧರ್ಮದ ಜನಪ್ರಿಯತೆಯನ್ನು ತಿಳಿಸುತ್ತದೆ. ಇದಕ್ಕೆ ಪೂರಕವೆಂಬಂತೆ ಇತ್ತೀಚೆಗೆ ದೊರೆತಿರುವ ನಿರೂಪವೊಂದು ಗಮನ ಸೆಳೆಯುತ್ತದೆ.

ದೊರೆತಿರುವ ದಾಖಲೆ ೧.

ಗೆ ನಂಬರು ೭೧೬

ಶ್ರೀಮತೇ ರಾಮಾನುಜಾಯ ನಮಃ

ಶ್ರೀ ಲಕ್ಷ್ಮಿ ವೆಂಕಟೇಶ ಪ್ರಸನ್ನಃ॥

ಶ್ರೀ ಮದ್ವೇದಮಾರ್ಗ ಪ್ರತಿಷ್ಠಾಪನಾಚಾರ್ಯ ಉಭಯವೇದಾಂತ ಪ್ರವರ್ತಕ ಶ್ರೀವೈಷ್ಣವ ಕುಲಾದ್ಯಕ್ಷ ಶ್ರೀ ಭಗವದ್ರಾಮಾನುಜ

ಮತ ಸಿದ್ಧಾಂತ ನಿರ್ಧಾರಣ ಸಾರ್ವಭೌಮ । ಶ್ರೀಮತ್ಪರಮಹಂಸ । ಪರಿವ್ರಾಜಕಾಚಾರ್ಯರಾದ ಶ್ರೀಮದ್
ತಿರುಕ್ಕೋವಲೂರು ತಿರುಮಲ ಎದುಗಿರಿ ಲಕ್ಷ್ಮೀನಾರಾಯಣ ಅಯ್ಯಂಗಾರ್ ಸ್ವಾಮೀನಾಂ ।

ಪೂರ್ಣಭಿಮಾನ ಕೃಪಯಾ ಕರಕಮಲ ಸಂಜಾತ ಪಟ್ಟಾಭಿಷಿಕ್ತಾಧ್ಯಕ್ಷ ಶ್ರೀ

ಮತ್ಸೌಂದರ್ಯ ವೆಂಕಟಾಚಾರ್ಯ ಸ್ವಾಮಿವಂಶೋದ್ಭವಸ್ಯ

ಶ್ರೀಮದಿಕ್ಕೇರಿ ಸಾಗರ ಪುರನಲಯಶ್ರೀಮದ್ರಾಮಾನುಜ ಲೋಕಾಚಾರ್ಯ ಸ್ವಾಮಿಭಿಃ ॥

ಶ್ರೀಮಠಕ್ಕೆ। ------ ಅತ್ಯಂತ ಪ್ರಿಯ ಶಿಷ್ಯ ರಾದ ಕಾರ್ಕಳ

ತಾಲೂಕು ಸಾಣೂರದಲ್ಲು ಯಿರ್ರುವ ಸಮಾಗಾರ ಜಾತಿ ೧ನೇ ಗೌಡ

ಬೊಂಮ ೨ನೇ ಬುದ್ಧಿವಂತ ಬೊಂಮ ೩ನೇ ಮೊರ್ಚ್ಯ (ಮೋಚಿ)

ದಾಮರ್ಸ್ಯ ಕೂಡಾ ೩ ಜನರಿಗೆ ಆಶೀರ್ವಾದ ಪೂರ್ವಕ ನೀಉಗಳು ಯಿ ಮಟ

ಕ್ಕೆ ಬಂದು ನಿಮ್ಮ ಪೈಕಿ ದೇವರ ಕಾಣಿಕೆಯನ್ನು ಮಾಡಿಸಿ ತಿರ್ಥ ಪ್ರಸಾ

ದ ಆಶಿರ್ವಾದಗಳನ್ನು ಪಡಕೊಂಡ ವಿಶಯದಲ್ಲು ತುಂಬಾ ಸ

ಂತೊಶವೈತ್ತು. ಯಿನ್ನು ಮುಂದೆ ನಉಗಳು ವರುಶದಿಂದ ವಂದರ

ಕಾಣಿಕೆ ೮-೦ ಅಕ್ಕಿ ಸೆರು ೧ ವಂದು ತ್ತೆಂಗಿನಕಾಯಿ ಕೂಡಾ ವರುಷಕ್ಕೆ
ಮಟಕ್ಕೆ ಸಮರ್ಪಿಸಿ ಗುರು ಕಟಾಕ್ಷಕ್ಕು ದೇವರ ಕಟಾಕ್ಷಕ್ಕೂ ಪಾತ್ರರಾ
ಗುವತಕ್ಕದ್ದು. ನಿಮ್ಮಲ್ಲಿ ನಡೆಯತಕ್ಕ ಲಗ್ನ ಕಾಲಗಳಲ್ಲಿ ನೀ
ವುಗಳು ಹೆಂಣಿನ ಕಡೆಯಿಂದ ಆಣೆ ೦-೪-೦ ನಾಲ್ಕು ಗಂಡಿನ
ಕಡೆಯಿಂದ ಆಣೆ ೦-೪-೦ ವಸ್ಲು ಮಾಡಿ ಅಂತ್ತವರಿಗೆ ರಸೀದಿಕೋ
ಟ್ಟು ಅದನ್ನು ಸವಾರಿ ಬರುವರೇ ಸಮರ್ಪಿಸಬೇಕು
ಯಿಂತ್ತಿ ಆಶೀರ್ವಾದಗಳು
೩೦.೫.೨೬ ಅ.ವೆ.ಶ್ರೀನಿವಾಸಾಚಾರ್ಯ
ಕಾಬೆಟ್ಟು
ವಿಳಾಸ: ಅ.ವಿ.ಶ್ರೀನವಾಸ ಅಚಾರ್ಯ್ಯ, ಲೋಕಾಚಾರ್ಯ
ಸಾಗರ ಮಠ.

ಈ ದಾಖಲೆಯಲ್ಲಿ ಸಮಗಾರ, ಗೌಡ, ಮೋರ್ಚಿ ಈ ಮೊದಲಾದ ಜಾತಿಯ ಮುಖಂಡರಿಗೆ ಅವರವರ ಜಾತಿಯಲ್ಲಿ ನಡೆಯುವ ವಿವಾಹ ಸಂದರ್ಭದಲ್ಲಿ ಗಂಡಿನ ಮತ್ತು ಹೆಣ್ಣಿನ ಕಡೆಯವರಿಂದ ಕಾಣಿಕೆ ಪಡೆದು ಅವರಿಗೆ ರಸೀತಿ ಕೊಟ್ಟು ಶ್ರೀ ಮಠದ ಸವಾರಿ ಬಂದ ಸಂದರ್ಭದಲ್ಲಿ ಅದನ್ನು ಸಮರ್ಪಣೆ ಮಾಡುವಂತೆ ತಿಳಿಸಿರುವುದು ಕಂಡುಬರುತ್ತದೆ.

ದೊರೆತಿರುವ ದಾಖಲೆ ೨

ಸಾಗರದ ಲೋಕಾಚಾರ್ಯ ಮಠದ ಗಡಿ ದಾಖಲಿಸುವ ದಾಖಲೆಯೊಂದಿದ್ದು ಇದು ಕೆಳದಿ ಜೋಯಿಸರ ಮನೆತನಕ್ಕೆ ಸಂಬಂಧಿಸಿದ ಪತ್ರವಾಗಿದೆ. ಅದರ ಪಾಠ ಇಂತಿದೆ.

ಸನ್ ೧೮೯೪ನೆಯ್ಸಿ ಸಪಟಂಬ್ರು ತಾರ್‍ರಿಖು ೧೯ನೆ ಜಯ ಸಂವತ್ಸರದ ಭಾ
ದ್ರಪದ ಬಹುಳ್ಳ ಚವತಿಯಲ್ಲು ಶ್ರಿಮತು ಮೈಸೂರ್‍ರು ಯಿಲಾಖಾ ಶಿವಮೊಗ್ಗ
ಡಿಸ್ಟ್ರೀಕಟ್ಟು ಸಾಗರ ತ್ತಾಲ್ಕು ಕೆಳದಿ ಮಾಗಣಿ ಕೆಳದಿಯಲ್ಲಿರ್‍ರುವ ದೇವಪ್ಪ ಜೊ
ಯ್ಸರ್‍ರ ಮಗ ಮರ್‍ರಿಜೊಯ್ಸರ್‍ರು ವಂದು ಸಾಗರ ಕಸಬೆಯಲ್ಲಿರ್‍ರುವ ನಂಜುಂಡ
ಜೊಯ್ಸರ್‍ರ ಮಗ ಸುಬ್ಬಾಜೊಯ್ಸರ್‍ರು ವಂದು ಯಿ ಯರಡು ಜನರ್‍ರಿಗೆ ಉತ್ರಕನ್ನಡ
ಜಿಲ್ಲಾ ಶಿದ್ದಾಪುರ ತ್ತಾಲ್ಕು ಶಿದ್ದಾಪುರ ಕಸಬೆಯಲ್ಲಿರ್‍ರುವ ಚಂದ್ರಗಟ್ಟಿ ಮಂಜೈಯ
ನವರ ಮಗ ಪುಟ್ಟಪ್ಪನು ಬರಶಿಕೊಟ್ಟ ಮನದಣಸ್ತಳದ ಕ್ರಯದಸ್ತೈವಜುಯೆ
ನಂದ್ರೆ ನಾವುಆಗ್ಯೆ ನಂಮ್ಮ ತರ್ಫಿನಿಂದ ಯಿದ್ದ ಬಿಳಗಿ ದಾಮೊದರ್‍ರ ಶ್ರೀನಿ
ವಾಸಪ್ಪನವರ ಹೆಸ್ಸಯಲ್ಲಿ ಹರಾಜಿಗೆ ಪಡದ ಸಾಗರಸ್ದ ಕ್ಸಬಾ ಬ್ರಾಹ್ಮಣರ್‍ರ ಶ್ರೇಣಿಯ
ಲ್ಲಿರ್‍ರುವ ಹಂಚಿನ ಭಾವಣಿ ತಕ್ತಪೋಶು ಕಟ್ಟಡದ ಪೈಕಿ ಮೇಲು
ಭಾವಣಿ ಕಟ್ಟಡವು ನಾವು ತ್ತೆಗದುಕೊಂಡುವುಪಯೋಗಿಶಿಕೊಂಡದ್ರ
ಶಿವ್ವಾ ಬಾಕಿ ವುಳಿದ ಸ್ಥಳವನ್ನು ನಿವು ಕ್ರಯಕ್ಕೆ ಕೊಡುಬೇಕಾಗಿಹೇಳಿದ್ದ
ಕ್ಕೆ ನಾನು ಕೋಡುವರೇ ವಪ್ಪಿ ಸದ್ರಿ ಸ್ಥಳಕ್ಕೆ ರೂಪೈ. ಯಂಟುನೂರ್‍ರು ೮೦೦ ೯ ಕ್ರಯ
ನಿಶ್ಚೈಶಿ ನಿಮಗೆ ಕ್ರಯಕ್ಕೆ ಕೊಟ್ಟುವೈಶಿಕೊಟ್ಟಿದ್ದೆನೆ. ಯಿ ಸ್ಥಳದ ಪೈಕಿ ಪೂರ್ವ
ತರ್ಫಿನ ಅರವಾಸಿ ಸ್ಸ್ಥಳ ನಿಂಮ್ಮ ಪೈಕಿ ನಾಗಾಜೋಯ್ಸರ್‍ರಿಗೆ ಪಶ್ಚಿಮ ದಿಕ್ಕಿನ
ನಿಂಮ್ಮ ತಾಬೇ ವಹಿಶಿಕೊಟ್ಟಿದ್ದೇನೆ. ಯಿ ಪೂರಾ ಸ್ಥಳದಲ್ಲಿ ಮೆಲೆವಿವರ್‍ರಿಶಿದ ತ

ರ್ಫಗಳ ಪ್ರಕಾರ್‍ರ ನಿವು ವುಭಯಿತರ್‍ರು ಸಮಾ ಅರವಾಶಿ ಪ್ರಕಾರ
ದಕ್ಷಿಣ ರಾಜಮಾರ್ಗದ ಕಾಲವೇಯಿಂದ ಪ್ರಾಕು ಕೆಳಗೆ ನಮೂದಿಶಿದ ಗಡೀ
ವರ್‍ರಿಗೆ ಹಿತ್ಲು ಸಮೇತ ಸಮಭಾಗವಾಗಿ ನಿಂವು ನಿಂಮ್ಮ ಯಿಷ್ಟಾನುಸಾರ ಅನು
ಭವಿಶಿಬರ್‍ರುವದು ಯಿದ್ರಲ್ಲಿ ಯಿರ್‍ರುವ ಬಾವಿ ಯಿ ಮರ್‍ರಿಜೊಯ್ಸರ್‍ರ ಸರ್ಹಿಗೆ
ಶೇರಿರ್‍ರುವದರಿಂದ ದದ್ರಿ ಬಾವಿ ನೀರು ನಾಗಾಜೊಯ್ಸರ್‍ರು ತರ್‍ರುವಲ್ಲಿ ಮರ್‍ರಿ
ಜೊಯ್ಸರ್‍ರ ಅಡ್ಡಿ ಮಾಡಬಾರದು ಬಾವಿ ನಿರ್‍ರು ತರ್‍ರುವ ಹಕ್ಕು ಉಭಯೆತರ್‍ರಿ
ಗಿರುತ್ತದೆ ಹೊರ್ತು ಸದ್ರಿ ಬಾವಿ ಸ್ಥಲದ ಹಕ್ಕು ನಾಗಾಜೊಯ್ಸರ್‍ರಿಗೆ ವುಂಟೆಂ
ತ ಹೇಳ ಕಾರಣವಿಲ್ಲ ನಾಗಾಜೊಯ್ಸರ್‍ರಮನೆಯಲ್ಲಿದ್ದವರ್‍ರು ನಿರ್‍ರುತರಲ್ಲಿಕ್ಕೆ
ಹೊಗುವದಕ್ಕೆ ಮರ್‍ರಿಜೊಯ್ಸರ್‍ರ ಹಕ್ಕಿನ ಸ್ಥಳದಲ್ಲಿ ಬಾವಿ ಸಮೀಪದಾರ್‍ರಿ ಬಿಟ್ಟು
ಕೊಡಬೇಕು ಯಿ ಶರ್ತದ ಮೆಲೆ ವುಭಯತರ್‍ರು ನಿಂಮ್ಮ ನಿಂಮ್ಮ ಯಿಛಾ
ನುಸಾರ್‍ರ ಸಂತಾನ ಪಾರಂಪರ್ಯ ಅನುಭವಿಶಿ ಬರ್‍ರುವದು ನಿಶ್ಚೈಶಿದ ಕ್ರ
ಯ್ ರೂಪ್ಯೆ ಯಂಟನೂರ್‍ರು ರುಪ್ಯೆ ಪೈಕಿ ಮರ್‍ರಿಜೊಯ್ಸರ ಬಗ್ಗೆ ರೂಪಾಯಿ
ನೂರಯಪ್ಪತ್ತೈದರ್‍ರ ನೋಟವನಗದಿ ಸಹ ಅಳಿಯ ಕಾಳಿಂಗ ಜೋಯ್ಸರ್‍ರು
ರುಪ್ಯೆಯಿಪ್ಪತ್ತೈದು ನಾಗಾಜೊಯ್ಸರ್‍ರು ಸಹಾ ಕೊಟ್ಟಿದ್ರಿಂದ ರೂಪ್ಯೆಯಿಂನ್ನು
ರ್‍ರು ಸಂತ್ತು ಬಾಕಿ ರೂಪ್ಯೆ ಯಿಂನ್ನುರ್‍ರು ಯಿಪ್ಪತ್ತೈದು ಮರ್‍ರಿಜೊಯ್ಸರ್‍ರು
ರುಪ್ಯೆ ಮುಂನ್ನುರ್‍ರು ಯಿಪ್ಪತ್ತದು ನಾಗಾಜೊಯ್ಸರ್‍ರು ಯಿ ಮೆರ್‍ರಿಗೆ ರಾಜೆಶ್ರೀ
ಸಾಗರದ ಯಾಗ್ಯೆನವರ ರಂಗಪ್ಪನವರ ಸ್ವಾಧಿನ ಕೊಟ್ಟು ರಿಜಸ್ಟಿ ಬಗ್ಗೆ ನಾ
ನು ಯಿದಿವ್ಸ ಸದ್ರಿ ರಂಗಪ್ಪನವರ ಹೆಸರಲ್ಲಿ ಬರಕೊಟ್ಟ ಮೊಕ್ತ್ಯಾರ್‍ರಿ ಪ್ರಕಾರ
ಸದ್ರಿ ರುಪ್ಯೆಆರನೂರ್‍ರು ಸದ್ರಿಯವರ ಸ್ವಾಧೀನ ಕೊಟ್ಟು ಅವರ್‍ರಿಂದ

ಹಿಂಭಾಗ

ರಿಜಸ್ಟ್ರಿ ಮಾಡಿಶಿಕೊಳ್ಳತಕ್ಕದ್ದು ಯಿಮೆರ್‍ರಿಗೆ ಸದ್ರಿ ಕ್ರಯದ ಆೈವಜು
ರ್‍ರುಪ್ಯೆಯಂಟುನೂರ್‍ರು ನನಗೆ ಸಂದಿದ್ರಿಂದ ಯಿಂನ್ನು ಸದ್ರಿ ಸ್ಥಳದ ಆೈವಜು
ಬರಬೇಕೆಂತಾಗ್ಲಿ ಸದ್ರಿ ಸ್ಥಳದ ಮೆಲೆ ನಂಮ್ಮ ಹಕ್ಕು ವುಂಟೆಂತಾಗ್ಲಿ ನಾವು ನಂಮ್ಮ
ಸಂತಾನದವರ್‍ರು ಹೇಳಲಿಕ್ಕೆ ಕಾರ್ಣವಿಲ್ಲ ಸದ್ರಿ ಸ್ಥಳದ ಚತುರ್ಗಡಿ ಶಿವಮೊಗ್ಗಾ ಡಿ
ಸ್ಟ್ರಿಕಟ್ಟು ಸಾಗರ ಸಬರಿಜಸ್ಟ್ರರ ತುಕಡಿಗೆ ಶೇರಿದ ಸಾಗರ ತಾಲ್ಕು ಸಾಗರ ಕ್ಸಬಾ ಬ್ರಾಂ
ಹ್ಮಣ ಶ್ರೀಣಿಯಲ್ಲಿರ್‍ರುವ ಖಾನೇಷುಮಾರ್‍ರಿ ಬಂಜ್ರ ನಂಬ್ರು ಯಿಂನ್ನೂರ್‍ರ ಹನ್ನೊಂದು ಯಿ
ಸ್ಥಳಕ್ಕೆ ಗಡಿ ಪೂರ್ವಕ್ಕೆ ಬೇಗೂರ್‍ರು ಶೇಷಗಿರ್‍ರಿಯಪ್ಪನವರ್‍ರ ವಂಭತ್ತು ಗಜದ ಸ್ಥಳದ
ಪೈಕಿ ಮೂರ್‍ರು ಅಡಿ ಸ್ಥಳ ನಮಗೆ ಕೊಟ್ಟಿದ್ದು ಹೊಗಲಾಗಿ ಬಾಕಿ ಸದ್ರಿ ಶೆಷಗಿರಿಯಪ್ಪೆ
ನವರ ಬಂಜ್ರ ಸ್ಥಲದ ಸರ್ವೆ ಬಂದ ಹಾಂಗೆ **ಪಶ್ಚಿಮಕ್ಕೆ ಲೋಕಾಚಾರ್ಯಶ್ರೀನಿವಾಸಾಚಾರ್ಯ**
ಗೆ ಆದದಸ್ತೈವಜು ಪ್ರಕಾರ ಅವರಿಗೆ ಬಿಟ್ಟುಕೊಟ್ಟ ಸ್ಥಳದ ಸರ್ವೆ ಬಂದ ಹಾ
ಗೆವುತ್ರ ಬೇಲಿಸಾಲು ದಕ್ಷಿಣ ರಾಜಬಿದಿ ಕಾಲವೇ ಯಿ ಚತುರ್ಗಡಿ ವಳಗು
ಳ ಮನದಣದ ಅಡಿಸ್ಥಳನಿಂಮ್ಮಗೆ ಕ್ರಯಕ್ಕೆ ಕೊಟ್ಟದ್ದಾಗಿರುತ್ತದೆ.
ಯಿಸ್ಥಳದ ಬಗ್ಗೆ ಸಂನ್ ಸಾವಿರದ ಯಂಟುನೂರ ಯಂಭತ್ತ ಮೂರನೆ ಯ್ಸಿ

೨ ಸಪ್ಟಂಬರ್‍ರು ಮೂವಸ್ತ್ತನೆ ತಾರ್ರಿಖಿನ ಸರ್ಟಿಫಿಕೇಟು ಮತ್ತು ಬೇಗೂರು
ಶೇಷಗಿರಿಯಪ್ಪನವರ್‍ರು ನಂಮ ಕಡೆ ಬಿಳಗಿ ದಾಮೋಧರ ಶಿನಪ್ಪನವರ್‍ರ ಹೆಶ್ರಿ
ಗೆ ಸಂನ್ ೧೮೮೬ನೆಯ್ಸಿ೨ ಮೇ ತಾರ್ರಿಖು ೨೭ರಲ್ಲು ಮೂರ್‍ರು ಅಡಿ ಜಾಗಾದ ಬಗ್ಗೆ
ಬರಕೊಟ್ಟ ದಸ್ತೈವಜು ಸಹಾ ನಂನ್ನಕ್ಷರಾನಿಶಿ ನಿಂಮ ಪೈಕಿ ನಾಗಾಜೊ
ಯ್ಸಿರ್‍ರ ವಶ್ ಯಕೆ ಕೊಟ್ಟಿದ್ದೆನೆ. ಯಿಕ್ರಯದಸ್ತೈವಜು ಮರ್‍ರಿಜೊಯ್ಸರ್‍ರ ತಾ
ಬೇ ಯಿರತಕ್ಕದ್ದು ಯಂತಾ ಸಹಾ ಬರಶಿಕೊಟ್ಟ ಕ್ರಯದಸ್ತೈವಜು
ಚಂದ್ರಗಟ್ಕಿಪುಟ್ಟೈ ಯಂತಾ ರ್‍ರುಜು ಯಿರುತ್ತೆ
ಯಿದಕ್ಕೆ ಸಾಕ್ಷಿಗಳು
ಸಾಕ್ಷಿಕ್ರಿಷ್ಣಯ್ಯ ಸುಬ್ಬೈಯ ಬೇಡ್ಕಣಿ ಯಂತಾ ಯಿದೆ
ದೇವಪ್ಪನಗಣಪೈಯ – ಹಿತ್ಲಕ್ಕೈ ಯಂತಾ ಯಿದೆ.
ಕಾಳಿಂಗ ಜೊಯ್ಸನ ಸಾಕ್ಷಿ ಯಂತ ಯಿದೆ
ಬಾಳೂರ್‍ರು ಮಂಜಪ್ಪೈಯ ಯಂತ ಸಾಕ್ಷಿ ಯಿದೆ
--- ಶೆಷಗಿರಿ ದಾಮೊದರ ಶಿದ್ಧಾಪುರ್‍ರ ಯಂತ ಯಿದೆ.

ಇದರಲ್ಲಿ ಲೋಕಾಚಾರ್ಯಮಠ ಸಾಗರದ ಎಸ್.ಪಿ.ಎಂ. ರಸ್ತೆಯ ಈಗಿನ ನಗರೇಶ್ವರ ದೇವಸ್ಥಾನದ ಎದುರು ಇದ್ದಿರಬೇಕೆನಿಸುತ್ತದೆ. ಅಂದು ಕೆಳದಿ ಜೋಯಿಸರ ಮನೆತನದವರು ಖರೀದಿ ಮಾಡಿದ ದಸ್ತಾವೈಜು ಪತ್ರದಲ್ಲಿ ಗಡಿಯನ್ನು ತಿಳಿಸುವ ಸಂದರ್ಭದಲ್ಲಿ ಸಾಗರದ ಲೋಕಾಚಾರ್ಯ ಶ್ರೀನಿವಾಸ ಆಚಾರ್ಯರಿಗೆ ಸೇರಿದ ದಸ್ತಾವೈಜು ಎಂದು ಬರೆದಿರುವುದನ್ನು ಗಮನಿಸಬಹುದು. ಅಂದರೆ ಈ ರಾಮಾನುಜ ಕೂಟದ ಮಠವೊಂದು ಇಲ್ಲಿದ್ದುದು ಈ ದಾಖಲೆಯಿಂದ ಸ್ಪಷ್ಟವಾಗುತ್ತದೆ.

ಎರಡನೆಯ ಶಾಸನ ಸಾಗರ ಗರುಡಾಚಾರ್ಯರ ವಶದಲ್ಲಿರುವ ಲೋಕಾಚಾರ್ಯ ಮಠದ ತಾಮ್ರಶಾಸನ[೫]. ಇದು ಕೆಳದಿ ರಾಣಿ ಚೆನ್ನಮ್ಮಾಜಿಯ ಕಾಲಕ್ಕೆ ಸೇರಿದ್ದಾಗಿದೆ. ಶಾಸನದ ಕಾಲ ಶಕ ವರುಷ ೧೫೯೬ನೆಯ ಪ್ರಮಾದಿ ಸಂವತ್ಸರ ನಿಜ ಭಾದ್ರಪದ ಶುಕ್ಲ ೧೫ ರಂದು ಅಂದರೆ ಕ್ರಿ.ಶ. ೧೬೭೭ ಸೆಪ್ಟೆಂಬರ್ ೧೬ ರಂದು ಹೊರಡಿಸಲಾಗಿದೆ. ಅವರು ಅಮಟೆಕೊಪ್ಪದ ಸೀಮೆಗೆ ಸೇರಿದ ಕೋಟಿಪುರ ಗ್ರಾಮದ ರಾಮಾನುಜ ಕೂಟದ ಮಠಕ್ಕೆ ದಾನವನ್ನು ಕೊಟ್ಟಿದ್ದಾರೆ. ಈ ಶಾಸನವು ಯಲ್ಲಪ್ಪಸೆಟ್ಟಿ ಎಂಬುವನು ರಾಮಾನುಜ ಕೂಟದ ಮಠವನ್ನು ಕಟ್ಟಿಸಿ ಧರ್ಮ ನಡೆಸಬೇಕೆಂದು ಕೇಳಿಕೊಂಡ ಸಂಬಂಧ ಅವನ ಕೋರಿಕೆಯ ಮೇರೆಗೆ ಚೆನ್ನಮ್ಮಾಜಿಯು ಅಮಟೆಕೊಪ್ಪ ಸೀಮೆ ಕೋಟಿಪುರ ಗ್ರಾಮವನ್ನು ದಾನ ನೀಡಿರುವುದನ್ನು ತಿಳಿಸುತ್ತದೆ.

ಇದರಲ್ಲಿ ಉಲ್ಲೇಖಗೊಂಡಿರುವ ಲೋಕಾಚಾರ್ಯರು ರಾಮಾನುಜಾಚಾರ್ಯರ ನಂತರ ೧೩ನೇ ಶತಮಾನದ ಕೊನೆಯಲ್ಲಿ ಬಂದ ಆಚಾರ್ಯರಲ್ಲಿ ಶ್ರೀರಂಗಂನಲ್ಲಿ ಶ್ರೀರಾಮಾನುಜಾಚಾರ್ಯ ಪರಂಪರೆಯ ಗುರುಗಳಾಗಿದ್ದ ಶ್ರೀವಚನ ಭೂಷಣ, ಮುಮುಕ್ಷುಪಡಿ ಮೊದಲಾದ ಕೃತಿಗಳನ್ನು ರಚಿಸಿರುವ ಪಿಳ್ಳೈ ಲೋಕಾಚಾರ್ಯರು ಮತ್ತು ವೇದಾಂತ ದೇಶಿಕರು ಪ್ರಮುಖರಾಗುತ್ತಾರೆ. ಈ ಪಿಳ್ಳೈ ಲೋಕಾಚಾರ್ಯರ ಪರಂಪರೆಯವರಿಂದ ವರವರಮುನಿ ಸಂಪ್ರದಾಯ ಪ್ರಾರಂಭವಾಯಿತು. ಮುಸಲ್ಮಾನರ ದಾಳಿ ಅಲ್ಲಿ ಪ್ರಭಲವಾಗಿದ್ದರಿಂದ ಅವರು ರಂಗನಾಥನ ದೇವಾಲಯ ಮತ್ತು ವಿಗ್ರಹವನ್ನು ರಕ್ಷಿಸಲು ತಮ್ಮ ಜೀವಿತವನ್ನೇ ಅರ್ಪಿಸಿದ್ದರು. ಈ ಶ್ರೀ ಪಿಳ್ಳೈ ಲೋಕಾಚಾರ್ಯರ ಮಠವೊಂದು ಅವರ ಹೆಸರಿನಲ್ಲಿ ಸಾಗರದಲ್ಲಿದ್ದುದು ಕಂಡುಬರುತ್ತದೆ. ಸಾಮಾನ್ಯವಾಗಿ ರಾಮಾನುಜ ಮಠ, ವಾನಮಾಮಲೈ ಮಠ, ಪರಕಾಲ ಮಠ, ಯದುಗಿರಿ ಯತಿರಾಜ ಮಠ ಮೊದಲಾದ ಮಠಗಳು ಕಂಡುಬರುತ್ತವೆ. ಆದರೆ ಲೋಕಾಚಾರ್ಯರ ಮಠ ಕರ್ನಾಟಕದಲ್ಲಿ ಕಂಡುಬಂದಿರುವ ಉಲ್ಲೇಖ ಎಲ್ಲಿಯೂ ಇಲ್ಲ. ಇಲ್ಲಿ ಲೋಕಾಚಾರ್ಯರ ಮಠದ ಉಲ್ಲೇಖವಾಗಿರುವುದು ವಿಶೇಷ ಸಂಗತಿಯಾಗಿದೆ.

ಐತಿಹ್ಯ ಮತ್ತು ವಾಸ್ತವ

ಸಾಗರ, ಸೊರಬ, ಹೊಸನಗರ ಮೊದಲಾದ ಪ್ರದೇಶದಲ್ಲಿ ಈ ಲೋಕಾಚಾರ್ಯ ಮಠದ ಗುರುಗಳಾಗಿದ್ದ ತಾತಾಚಾರ್ಯ ಎಂಬುವವರು ಪ್ರತಿವರ್ಷ ಎತ್ತಿನ ಗಾಡಿಯಲ್ಲಿ ಬಂದು ದೀವರು, ಒಕ್ಕಲಿಗರೇ ಮೊದಲಾಗಿ ಕೆಳಸ್ತರದ

ಶಿಷ್ಯವರ್ಗದವರಿಂದ ಧಾನ್ಯ ಮತ್ತು ಕಾಣಿಕೆಯನ್ನು ಸಂಗ್ರಹಿಸುತ್ತಿದ್ದುದೂ ಕಂಡುಬರುತ್ತದೆ. ಈ ಹಿಂದೆ ಅಂದರೆ ಕ್ರಿ.ಶ. ೧೫೯೦ರಲ್ಲಿ ಕೆಳದಿ ಜೋಯಿಸ್ ಮನೆತನಕ್ಕೆ ಸದಾಶಿವಾರಾಯನಾಯ್ಕರು ದಾನವಾಗಿ ನೀಡಿದ್ದ ಸೀಮೆಗಳಲ್ಲಿ ಕೆಲವನ್ನು ಈ ಮಠಕ್ಕೂ ಬಿಟ್ಟುಕೊಟ್ಟಿರುವುದು ಕಂಡುಬರುತ್ತದೆ. ಶ್ರೀ ಮಠವು ಇಲ್ಲಿ ಕಾಣಿಕೆ ಪಡೆಯುತ್ತಿದ್ದಿರಬೇಕೆನಿಸುತ್ತದೆ.

ಕೆಳದಿಯಲ್ಲಿರುವ ಕವಿ ಮನೆತನದವರ ಮನೆಯ ಪಕ್ಕದಲ್ಲಿಯೂ ಈ ಲೋಕಾಚಾರ್ಯ ಮಠದವರು ಹಿಂದೆ ವಾಸ ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಶಿಕಾರಿಪುರ ತಾಲ್ಲೂಕು ಸುಣ್ಣದಹಳ್ಳಿ ಎಂಬಲ್ಲಿಯೂ ಈ ಮಠದ ಅವಶೇಷ ಕಂಡುಬಂದಿದೆ. ಅಲ್ಲಿ ವಿಷ್ಣು ದೇವಾಲಯ ಎಂದು ಕರೆಯುತ್ತಾರೆ.

[ಶ್ರೀ ರಾಮಾನುಜ ಮಠದ ಕುರಿತು ಮಾಹಿತಿ ಒದಗಿಸಿದ ಡಾ. ಚಲ್ವಪಿಳ್ಳೈರಿಗೆ. ಸಲಹೆ ಸೂಚನೆಗಳನ್ನಿತ್ತ ಡಾ. ನಂಜುಂಡಸ್ವಾಮಿ, ತುಮಕೂರು, ಇವರಿಗೆ ನಾನು ಅಭಾರಿಯಾಗಿದ್ದೇನೆ.]

ಆಧಾರಸೂಚಿ

೧. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪು. ಸಂ. ೮೭೪.

೨. ಕನಕದಾಸರ ಜೀವನ ಚರಿತ್ರೆ, ಶ್ರೀ ಕಲಮದಾನಿ ಗುರುರಾಯರು, ಪು. ಸಂ. ೩.

೩. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪು. ಸಂ. ೮೭೪.

೪. ಎ.ಕ. ಸಂಪುಟ ೧೫, ಹೊಸನಗರ ಶಾಸನ ಸಂಖ್ಯೆ, ೨೪.

೫. ಎ.ಕ. ಸಂಪುಟ ೧೫, ಸಾಗರ, ಶಾಸನ ಸಂಖ್ಯೆ, ೧೯೭.

ಪರಾಮರ್ಶನ ಗ್ರಂಥಗಳು

೧. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೮, ಹಳೆಯದು ಮತ್ತು ಹೊಸದು ೧೫, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೯. ಮತ್ತು ಕೆಳದಿ ಅರಸರ ಶಾಸನ ಸಂಪುಟ ಗದಗ ತೋಂಟದಾರ್ಯಮಠ.

೨. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಲಯ, ಮೈಸೂರು, ೨೦೦೯.

೩. ಶ್ರೀ ಕನಕದಾಸರ ಕೀರ್ತನೆಗಳು, ಸಂಪಾದಕರು–ಡಾ. ಟಿ.ಎನ್. ನಾಗರತ್ನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೪. ಮತ್ತು ಕನಕದಾಸರ ಜೀವನ ಚರಿತ್ರೆ, ಶ್ರೀ ಕಲಮದಾನಿ ಗುರುರಾಯರು, ೧೯೬೫.

೪. ಕರ್ನಾಟಕದಲ್ಲಿ ರಾಮಾನುಜಾಚಾರ್ಯರು, ಬಾ.ರಾ. ಗೋಪಾಲ, ದೆಹಲಿ.

೫. ವಿ.ವಿ. ರಾಮಾನುಜಾಚಾರ್ಯರು ಕರ್ನಾಟಕಕ್ಕೆ ಪ್ರವೇಶ ಮಾಡಿದಾಗ ಕೆಳವರ್ಗದವರಿಗೆ ವೈಷ್ಣವ ದೀಕ್ಷೆ ಕೊಡುವುದರ ಜೊತೆಗೆ ಶ್ರೀವೈಷ್ಣವ ಸಿದ್ಧಾಂತವನ್ನು ಅನುಸರಿಸಿ ಪ್ರಚಾರ ಮಾಡಿದರು. ಗ್ರಾಮಾಂತರ ಪ್ರದೇಶದಲ್ಲಿ ಆಂಜನೇಯ ಮತ್ತು ವಿಷ್ಣು ದೇವಸ್ಥಾನದ ಪೂಜೆ ಮಾಡುವ 'ಶಾತ್ತಾದ್' ಶ್ರೀ ವೈಷ್ಣವರು ಅವರನ್ನು ಜನ 'ಶಾತ್ತಾತ್' ಎಂದು ಕರೆಯುವುದು ಬರುಬರುತ್ತಾ 'ಸಾತಾಂ' ಎಂದಾಯಿತು. ಶಾಸನದಲ್ಲಿ ಬಳಸಿರುವ 'ಚಾತಾಳಿ' ಪದವು 'ಶಾತ್ತಾದ' ಪದದ ಅಪಭ್ರಂಶ ರೂಪವೆಂಬ ಅಭಿಪ್ರಾಯವಿದೆ. 'ಶಾತ್ತಾದ' ಎಂದರೆ ಧರಿಸದವನು ಅಂದರೆ ಜನಿವಾರವನ್ನು ಧರಿಸದವನು ಎಂಬ ಅರ್ಥ ಇರುವುದಾಗಿ ತಿಳಿದುಬರುತ್ತದೆ. ಕೆಳವರ್ಗದವರ ಮನೆಯಲ್ಲಿ ಪೂಜೆಗಳನ್ನು ಮಾಡುವುದು, ಅವರು ಕೊಡುವ ತಳಿಗೆಯನ್ನು ಅರ್ಥಾತ್ ತಳಿಗೆ ಸೇವೆ ಸಲ್ಲಿಸುವುದು ಸಾಮಾನ್ಯವಾಗಿತ್ತು. ರಾಮಾನುಚಾರ್ಯ ಪಂತದಲ್ಲಿ ಕೆಲವರು ಮಠವನ್ನು ಒಪ್ಪಿಕೊಳ್ಳುತ್ತಾರೆ. ಇನ್ನು ಕೆಲವರು ಸ್ವಯಂ ಆಚಾರ್ಯರು. ತಂದು ಅವರಿಗೆ ಉಪದೇಶ ಮಾಡುವಂತಹದು, ರಾಮಾನುಜಾಚಾರ್ಯ ಪರಂಪರೆಯವರು ಸನ್ಯಾಸಾಶ್ರಮದಲ್ಲು ಜನಿವಾರ ಧರಿಸುತ್ತಾರೆ. ರಾಮಾನುಜಕೂಟ ಈ ಹಿಂದೆ ಭಕ್ತಾದಿಗಳು ಸೇರಿ ಪಲೂಜೆ ಮುನಸ್ಕಾರ ತದನಂತರ ಪ್ರಸಾದ ವಿನಿಯೋಗ ಮಾಡುವಂತಹದು ಅರ್ಥಾತ್ ದಾಸೋಹ. ಈ ಹಿಂದೆ ಕನ್ನಡನಾಡಿನಲ್ಲಿ ಇದ್ದ ವಿಷ್ಣುಭಕ್ತರಲ್ಲಿ ತಾವು ಶಾತ್ತಾತ್ ಶ್ರೀ ವೈಷ್ಣವರನ್ನು ನೋಡಬಹುದು. ಇವರಿಗೆ ತಮಿಳು ಬರುವುದಿಲ್ಲ. ಇವರೆಲ್ಲಾ ಅಚ್ಚ ಕನ್ನಡಿಗರು.

೪೧

ಕೆಳದಿ ಅರಸರ ಕಾಲಾವಧಿಯಲ್ಲಿನ ಶೃಂಗೇರಿ ಮಠದ ಸಾಮಾಜಿಕ ವ್ಯವಸ್ಥೆ

ಹೆಚ್. ವಿರುಪಾಕ್ಷಪ್ಪ* ಡಾ. ಹೆಚ್. ವಿಷ್ಣುವರ್ಧನ**

ಕೆಳದಿ ಅರಸರ ಕಾಲದಲ್ಲಿ ಅದರಲ್ಲೂ ಮುಖ್ಯವಾಗಿ ಕ್ರಿ.ಶ. ೧೬–೧೭ನೇ ಶತಮಾನದಿಂದ ೧೯ನೇ ಶತಮಾನದವರೆಗಿನ ಶೃಂಗೇರಿ ಧರ್ಮ ಸಂಸ್ಥಾನದ ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ. ಕೆಳದಿ ನಾಯಕರ ಕಾಲಕ್ಕೆ ಸಂಬಂಧಿಸಿದ ಹಾಗೆ ಶೃಂಗೇರಿ ಮಠದ ವ್ಯಾಪ್ತಿಯ ಸಾಮಾಜಿಕ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುವ ಅನೇಕ ದಾಖಲೆಗಳು ನಮಗೆ ಹೆಚ್ಚು ದೊರೆಯದೇ ಇದ್ದರೂ, ಕಡತಗಳೇ ನಮಗೆ ಪ್ರಮುಖ ಆಧಾರ. ಶೃಂಗೇರಿ ಸಂಸ್ಥಾನದಲ್ಲಿ ಬ್ರಾಹ್ಮಣರ ಪ್ರಾಬಲ್ಯವಿತ್ತಾದರೂ, ಜಗದ್ಗುರುಗಳು ತಮ್ಮ ಸಂಸ್ಥಾನದಲ್ಲಿ ಸರ್ವ ಧರ್ಮದವರಿಗೂ ಆಶ್ರಯ ನೀಡಿದ್ದರು.

ಜಾತಿ ಪದ್ಧತಿ

ಭಾರತದಲ್ಲಿ ವೈದಿಕ ಕಾಲದಿಂದಲೂ ಜಾತಿ ವ್ಯವಸ್ಥೆ ನಮ್ಮ ಸಮಾಜದಲ್ಲಿ ನಡೆದುಕೊಂಡು ಬಂದಿದೆ. ಹಾಗೆಯೇ ಶೃಂಗೇರಿ ಧರ್ಮ ಸಂಸ್ಥಾನದಲ್ಲಿಯೂ ಜಾತಿ ಪದ್ಧತಿಯೂ ನಡೆದುಬಂದಿತು. ಆದರೆ ಕಾಲಕ್ಕನುಗುಣವಾಗಿ ಜಾತಿಪದ್ಧತಿಯಲ್ಲಿ ಬದಲಾವಣೆಗಳುಂಟಾಗಿದ್ದವು. ದಾಖಲೆಗಳ ಅಲಭ್ಯತೆಯಿಂದಾಗಿ ಶ್ರೀ ಮಠದ ವ್ಯಾಪ್ತಿಯಲ್ಲಿ ಬೇರೆ ಬೇರೆ ಕಾಲದಲ್ಲಿ ಯಾವ ಯಾವ ಜಾತಿಯವರು ಇದ್ದರು ಎಂಬುದರ ಬಗ್ಗೆ ಪರಿಪೂರ್ಣವಾಗಿ ತಿಳಿಯಲು ಸಾಧ್ಯವಾಗಿಲ್ಲ. ಆದರೂ ಸಮಾಜದಲ್ಲಿ ಜಾತಿ ವ್ಯವಸ್ಥೆ ಪ್ರಬಲವಾಗಿತ್ತು. ಬ್ರಾಹ್ಮಣರು ಅಧಿಕ ಸಂಖ್ಯೆಯಲ್ಲಿಲ್ಲದಿದ್ದರೂ ಸಮಾಜದಲ್ಲಿ ಅವರಿಗೆ ಹೆಚ್ಚಿನ ಸ್ಥಾನಮಾನಗಳಿದ್ದವೆಂಬುದು ಕಡತಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಶೃಂಗೇರಿ ಕೇವಲ ಧಾರ್ಮಿಕ ಕೇಂದ್ರವಾಗಿರದೆ, ವಿದ್ಯಾರ್ಜನೆಯ ಕೇಂದ್ರವಾಗಿತ್ತು ಮತ್ತು ಅಗ್ರಹಾರಗಳ ಸ್ಥಾಪನೆಯಿಂದಾಗಿ ಬ್ರಾಹ್ಮಣರೆಲ್ಲಾ ಸಾಂಪ್ರದಾಯಿಕವಾಗಿ ಬಂದ ಧಾರ್ಮಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗುತ್ತಿದ್ದರು. ಉಳಿದ ಎಲ್ಲಾ ಜಾತಿಯವರಿಂದಲೂ ಈ ವರ್ಗದವರಿಗೆ ಮರ್ಯಾದೆ ಸಲ್ಲುತ್ತಿತ್ತು. ಅದ್ವೈತ ಸಿದ್ಧಾಂತದಲ್ಲಿ ಶ್ರದ್ಧೆಯಿದ್ದವರೆಲ್ಲಾ ಸಹಜವಾಗಿಯೇ ಶೃಂಗೇರಿಯತ್ತ ಧಾವಿಸಿದರು. ಮಠದಲ್ಲಿಯ ಮಹತ್ವದ ಸ್ಥಾನಗಳೆಲ್ಲವೂ ಬ್ರಾಹ್ಮಣರಿಗೆ ಮೀಸಲಾಗಿದ್ದವು, ಅವರು ಮಠದ ಪಾರುಪತ್ಯಗಾರರಾಗಿ, ಅರ್ಚಕರಾಗಿ ಮತ್ತು ಬೊಕ್ಕಸ್ತರಾಗಿ ಸೇವೆ ಸಲ್ಲಿಸಿದರು. ಅವರಲ್ಲಿ ಕೆಳದಿ ಮುಮ್ಮಡಿ ಸೋಮಶೇಖರ ನಾಯಕನ ಕಾಲದಲ್ಲಿ ಶೃಂಗೇರಿ ಶ್ರೀ ಮಠದ ಅಧಿಕಾರಿ **ಶೃಂಗಶಾಸ್ತ್ರಿ** ಎಂಬ ಹೆಸರು[೧] ಪ್ರಸ್ತಾಪವಾಗಿದೆ.

ಹಾಗೆಯೇ ವೆಂಕಭಟ್ಟ[೨] ಅಹೋಬಲರಾಯ[೩] ನರಸಿಂಹಭಟ್ಟ (ಪಾರುಪತ್ಯೇತರ) ರಾಮಚಂದ್ರಯ್ಯ, ವಿಶ್ವೇಶ್ವಯ್ಯ, ಶೇಷಪ್ಪಯ್ಯ, ಬುಚಂಭಟ್ಟ, ಅವಧಾನದ ವೆಂಕಟಾಚಲಯ್ಯ, ತಿರುಮಲಭಟ್ಟ,[೪] ಸುಬ್ಬಾಶಾಸ್ತ್ರೀ,[೫] ಇತ್ಯಾದಿ ಮಠದಲ್ಲಿ ಸೇವೆ ಸಲ್ಲಿಸಿದ ಅಧಿಕಾರಿಗಳ ಹೆಸರು ಕಡತಗಳ ದಾಖಲೆಗಳಲ್ಲಿ ಕಂಡುಬರುತ್ತವೆ.

ಜನಿವಾರ ತೊಡಲು ಕ್ಷತ್ರಿಯ ವರ್ಗದ ಸೇರೆಗಾರರೂ ಅರ್ಹರೋ, ಅನರ್ಹರೋ ಎಂಬ ವಿವಾದ ಕೊಂಕಣಿಗರಿಗೆ ಮತ್ತು ಸೇರೆಗಾರರಿಗೆ ಬಂದದ್ದಕ್ಕಾಗಿ ಕ್ರಿ.ಶ. ೧೬೩೩ ರಲ್ಲಿ ಬಾರಕೂರು, ಮಂಗಳೂರು, ಬನವಾಸಿ, ಗೇರುಸೊಪ್ಪ, ಚಂದಾವರ, ಬಿಳಗಿ, ಮಿಡ್ಜೆ, ಸ್ವಾದಿ ಮತ್ತು ಕೆಳದಿಯ ಕ್ಷತ್ರಿಯ ವರ್ಗದವರು ಶೃಂಗೇರಿಯ ಶ್ರೀ ನರಸಿಂಹ ಭಾರತೀ ಸ್ವಾಮಿಗಳ ಶಿಷ್ಯರಾದ ಶ್ರೀ ಶಂಕರಭಾರತೀ ಸ್ವಾಮಿಗಳಿಗೆ ತಮ್ಮ ಬಿನ್ನವತ್ತಳೆಯನ್ನು ಸಮರ್ಪಿಸಿದರು.[೬]

ಈ ಎಲ್ಲಾ ಪ್ರಜೆಗಳಿಗೆ ಕೆಳದಿಯ ಭದ್ರಪ್ಪನಾಯಕರು ಅರಸರಾಗಿದ್ದರಿಂದ ಈ ಸಂಗತಿಯನ್ನು ಅವರ ಗಮನಕ್ಕೆ ತರಲಾಯಿತು. ಈ ವಿಷಯವು ಸಾಮಾಜಿಕ ಮತ್ತು ಧಾರ್ಮಿಕ ಸಮಸ್ಯೆಯಾಗಿದ್ದರಿಂದ ಇದನ್ನು ಬಗೆಹರಿಸಲು ಶೃಂಗೇರಿ ಗುರುಗಳನ್ನು ಕಾಣುವಂತೆ ಭದ್ರಪ್ಪನಾಯಕನು ಸೇರೆಗಾರರಿಗೆ ತಿಳಿಸಿದರು. ನಾಯಕರ ಇಚ್ಛೆಯಂತೆ ಸೇರೆಗಾರರು ಶೃಂಗೇರಿ

---

* ಸಹಾಯಕ ಪ್ರಾಧ್ಯಾಪಕರು, ಸ.ಪ್ರ.ದ. ಕಾಲೇಜು, ಹರಿಹರ.

** ಪ್ರಾಂಶುಪಾಲರು, ಎಂ.ಇ.ಎಸ್. ಮಹಿಳಾ ಕಾಲೇಜು, ಚಿಕ್ಕಮಗಳೂರು.

ಗುರುಗಳನ್ನು ಕಂಡು ತಮಗೆ ಜನಿವಾರ ತೊಡಲು ಅಪ್ಪಣೆಕೊಡಬೇಕೆಂದು ಪ್ರಾರ್ಥಿಸಿಕೊಂಡರು. ಆನಂತರ ಶೃಂಗೇರಿಯ ದೇವತಾದಿಗಳಿಗೆ ಪೂಜೆ ಸಲ್ಲಿಸಿ, ಮಠಕ್ಕೆ ಕಾಣಿಕೆ ಸಮರ್ಪಿಸಿ ಜನಿವಾರ ತೊಡಲು ಬಹುಶಃ ಅಪ್ಪಣೆ ಪಡೆದರೆಂದು ತೋರುತ್ತದೆ. ಶೃಂಗೇರಿಯ ಗುರು ಪರಂಪರೆಯಲ್ಲಿ ಶಾ.ಶ. ೧೫೫೫ (ಕ್ರಿ.ಶ. ೧೬೩೩) ರಲ್ಲಿ ಪ್ರಥಮ ಶ್ರೀ ಅಭಿನವ ಸಚ್ಚಿದಾನಂದ ಭಾರತೀಗಳ ಶಿಷ್ಯ ಪ್ರಥಮ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳು ಶೃಂಗೇರಿಯ ಮಠಾಧೀಶರಾಗಿದ್ದರು. ಆದ್ದರಿಂದ ಕ್ರಿ.ಶ. ೧೬೩೩ರಲ್ಲಿ ಶ್ರೀ ನರಸಿಂಹ ಭಾರತೀ ಸ್ವಾಮಿಗಳಾಗಲಿ ಇಲ್ಲವೆ ಶ್ರೀ ಶಂಕರಭಾರತೀ ಸ್ವಾಮಿಗಳಾಗಲಿ ಶೃಂಗೇರಿಯ ಮಠಾಧೀಶರಾಗಿರಲಿಲ್ಲ ಮೇಲಾಗಿ ಭದ್ರಪ್ಪನಾಯಕರ ಕಾಲವು ಕ್ರಿ.ಶ. ೧೬೬೧-೧೬೬೩. ಕ್ರಿ.ಶ. ೧೬೩೩ರಲ್ಲಿ ವೀರಭದ್ರನಾಯಕರು (ಕ್ರಿ.ಶ. ೧೬೨೯-೧೬೪೫) ಕೆಳದಿಯ ಅರಸರುಗಳಾಗಿದ್ದರು. ಆದ್ದರಿಂದ ಈ ಬಿನ್ನವತ್ತಳೆಯು ಶೃಂಗೇರಿಯ ಪರಂಪರೆಯಿಂದಾಗಲಿ ಅಥವಾ ಕೆಳದಿಯ ಪರಂಪರೆಯಿಂದಾಗಲಿ ಸರಿಹೊಂದುವುದಿಲ್ಲವಾದರೂ ಬಿನ್ನವತ್ತಳೆಯ ಎಲ್ಲಾ ಅಂಶಗಳನ್ನು ತಳ್ಳಿ ಹಾಕುವಂತಿಲ್ಲ. ಸಾಮಾಜಿಕ ಮತ್ತು ಧಾರ್ಮಿಕ ಪರಿಸ್ಥಿತಿಗಳನ್ನರಿಯಲು ಇದೊಂದು ಮಹತ್ವದ ಬಿನ್ನವತ್ತಳೆಯಾಗಿರುತ್ತದೆ.[೭]

ಇನ್ನುಳಿದಂತೆ ಕಡತಗಳಲ್ಲಿ ವೈಶ್ಯವರ್ಗದ ಶೆಟ್ಟಿಗಳ ಉಲ್ಲೇಖವಿರುತ್ತದೆ. ಕ್ರಿ.ಶ. ೧೬೦೦ ಕೆಳದಿ ವೆಂಕಟಪ್ಪನಾಯಕರ ಕಾಲಕ್ಕೆ ಸೇರಿದ ಕೊಂಕಣಿಗರಿಗೆ ಬರೆದ ಭಾಷಾ ಪತ್ರಿಕೆಯಲ್ಲಿ ಗೋವಾ ಸೀಮೆಯಿಂದ ಬಂದ ಕೊಂಕಣಿಗರ ಪರವಾಗಿ ರಾಮಕೃಷ್ಣ ಶ್ರೇಣಿ ಎಂಬುವವನು ಶೃಂಗೇರಿ ಜಗದ್ಗುರುಗಳಿಗೆ ಬರೆದ ಪತ್ರದಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ಬಣಜಿಗರು, ಕೊಮಟಿಗರು, ಮಹಾದೈಯಿವ, ಬಣಜಿಗರಿಗೆ ಸರಿಸಮಾನವಾಗಿ ಕೊಂಕಣಿ ವರ್ಗದ ವೈಶ್ಯರಿಗೆ ಕುಲವೈಶ್ಯಾಚಾರ ಪುರಾಣೋಕ್ತ ಕರ್ಮಕ್ರಿಯೆ, ಕೇಶವಾದಿ ನಾಮಸ್ಮರಣೆ, ಹರಿಕಥಾ, ಪ್ರಸಂಗ, ಮಯಶ್ವ ಮಾನ ಗ್ರಹಣ, ವೈಶ್ಯೋಪನಯನ, ವಿವಾಹ, ದೇವತಾ ಸೇವೆ, ಆಶ್ರಮವ್ಯವಸ್ಥೆ, ಆಚಾರಪಟ್ಟೆ ಪುರೋಹಿತಿಕೆ, ವೇದಾಧ್ಯಯನ, ಮಠ, ದೇವಸ್ಥಾನದ ಪೂಜೆ, ಮತ್ತು ವ್ಯಾಪಾರ ಮಾಡಲು ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿಕೊಂಡಿರುವುದನ್ನು ನಾವು ಕಾಣಬಹುದು.[೮]

ಕ್ರಿ.ಶ. ೧೬೨೯ರಲ್ಲಿ ಕೆಳದಿ ವೆಂಕಟಪ್ಪನಾಯಕರ ಕಾಲಕ್ಕೆ ಸೇರಿದ ಬಿನ್ನವತ್ತಳೆಯ ಪ್ರತಿಯನ್ನು ಶೃಂಗೇರಿ ಜಗದ್ಗುರುಗಳಾದ ಶ್ರೀ ಶಂಕರಾನಂದ ಭಾರತೀಯವರಿಗೆ ಶ್ರೀ ರಾಮಚಂದ್ರ ಸರಸ್ವತಿ ಸ್ವರ್ಣವಲ್ಲಿ ಮಠ, ಸೊಂದಾಪುರ, ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಘುನಾಥ ಶ್ರೀ ಪಾದಂಗಳು ಗೋಕರ್ಣ ಮಠದ ರಾಘವೇಶ್ವರ ಭಾರತೀ ಶ್ರೀ ಪಾದಂಗಳು, ಸೋದೆ ಹಯಗ್ರೀವ ಮಠ, ವಿಶ್ವವಂದ್ಯ ತೀರ್ಥ ಶ್ರೀಪಾದಂಗಳು, ಸೋದೆ, ಪಲಮಾರು, ಅದಮಾರು, ನೆರಂಬಳ್ಳಿ, ಪೇಜಾವರ, ತೀರ್ಥಹಳ್ಳಿ ಮುಳಬಾಗಿಲು ಸತ್ಯ ಪೂರ್ಣ, ಸುಮತೀಂದ್ರ ಕಂಡಲಾಚಾರ್ಯ, ಸಾಲಾಚಾರ್ಯ, ಭಟ್ಟಾಚಾರ್ಯ, ತಿರುಮಲಾಚಾರ್ಯ ಅವಧೂತ, ಶ್ರೀ ಯೋಗೀಂದ್ರ ಮಹತ್ತಿನ ಮಠ (ವಿರಕ್ತ), ಶ್ರೀ ಯೋಗೀಶ್ವರ ವೀರಮಹೇಶ್ವರ ಇತ್ಯಾದಿ ಮಠಗಳವರು ತಿಳಿಸಿದ್ದಾಗಿದ್ದು, ಸುಮತೀಂದ್ರ ಶ್ರೀ ಪಾದಂಗಳು ಕೃಷ್ಣಶ್ರೇಣಿಗೆ ಸಂನ್ಯಾಸ ನೀಡಿದ ವಿಚಾರವಾಗಿ ನಾಲ್ಕು ಸಂಸ್ಥಾನಗಳಾದ ಸೋದೆ, ಬಿಳಗಿ, ಇಕ್ಕೇರಿ ಮತ್ತು ಗೇರುಸೊಪ್ಪೆ, ಕೊಂಕಣ ರಾಜ್ಯದೊಳಗಣ ಪಂಚದ್ರಾವಿಡ, ಪಂಚಗೌಡ, ಬ್ರಾಹ್ಮಣ ಮಹಾನಾಡು, ದೈವ ಕ್ಷತ್ರಿಯ, ಕೊಮಟಿಗ, ಬಣಜಿಗರು, ಭಾಗವಹಿಸಿದ್ದ ಸಭೆಯಲ್ಲಿ ಸೋದೆ ಅರಸರು, ಬಿಳಗಿ ವಿರುಪ ಒಡೆಯರು, ಕೆಳದಿ ವೀರಭದ್ರನಾಯಕರು ಮತ್ತು ಗೇರು ಸೊಪ್ಪೆ ಕೃಷ್ಣರಾಜ ಒಡೆಯರುರವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಇತ್ಯರ್ಥವಾಗಿದೆ, ಈ ನಾಲ್ಕು ಸಂಸ್ಥಾನದ ಅರಸರಿಗೆ ಕೊಟ್ಟ ದೂರಿನ ಪ್ರಕಾರ ವೈಶ್ಯಕೊಂಕಣಿಗರಿಗೆ ಆಶ್ರಮ ವ್ಯವಸ್ಥೆ ಅನುಸರಿಸಲು ಅವಕಾಶವಿದೆಯೇ, ಇಲ್ಲವೆ ಎಂಬ ವಿಷಯವಾಗಿ ಪರಸ್ಪರ ಚರ್ಚಿಸಿ, ಈ ಗೊಂದಲವನ್ನು ನಿವಾರಿಸಲು ಶೃಂಗೇರಿ ಜಗದ್ಗುರುಗಳಿಗೆ ವಿಚಾರಣೆ ನಡೆಸಿ, ನಿರ್ಣಯ ಕೈಗೊಳ್ಳುವ ಅಧಿಕಾರ ನೀಡಿದರು. ಈ ಸಮಸ್ಯೆ ಬಹಳ ಸೂಕ್ಷ್ಮವಾಗಿದ್ದರಿಂದ ಗುರುಗಳು ಮೈಯೂಹ, ಹೇಮಾದ್ರಿ, ಪರಾಶರ ಸ್ಮೃತಿ, ವಿಜ್ಞಾನೇಶ್ವರ, ನಿರ್ಣಯ ಸಿಂಧು, ಭೈರವ, ಇತ್ಯಾದಿ ಗ್ರಂಥಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ಪಂಚ ತ್ರಿವಿಧ, ಪಂಚಗೌಡ ಮತ್ತು ಬ್ರಾಹ್ಮಣ ಸಮುದಾಯದೊಂದಗೆ ಚರ್ಚಿಸಿ ವೈಶ್ಯ ಕೊಂಕಣಿಗರಿಗೆ ಆಶ್ರಮ ವ್ಯವಸ್ಥೆ ಪಾಲಿಸಲು ಅವಕಾಶವಿಲ್ಲವೆಂದು ತೀರ್ಪು ಹೇಳಿದರು. ಈ ಮಧ್ಯೆ ರಾಮಕೃಷ್ಣ ಶ್ರೇಣಿ ಬೇರೆ ರಾಜ್ಯಕ್ಕೆ ಓಡಿಹೋದ. ಈ ರಾಮಕೃಷ್ಣ ಶ್ರೇಣಿಯನ್ನು ಪುನಃ ಹುಡುಕಿ ಕರೆತರಲು ಸಾಧ್ಯವಾಗದೇ ಇದ್ದುದರಿಂದ ಕೊಂಕಣಿಗ ವೈಶ್ಯರು ಈ ನಾಲ್ಕು ಸಂಸ್ಥಾನಗಳಿಗೆ ೨,೪೦,೦೦೦ ಗದ್ಯಾಣ ಹಣವನ್ನು ದಂಡವಾಗಿ ನೀಡಿದರೆಂದು ತಿಳಿಸಲಾಗಿವೆ. ೨,೪೦,೦೦೦ ಗದ್ಯಾಣದ ಉಲ್ಲೇಖ-ತೆರಬೇಕೆಂಬುದು ಅನುಮಾನಾಸ್ಪದವಾಗಿದೆ. ಈ ದಾಖಲೆಯ ಕಾಲ ಕ್ರಿ.ಶ ೧೬೨೯ರಲ್ಲಿ ಉಲ್ಲೇಖಿಸಲಾಗಿರುವ ಶ್ರೀ ಶೃಂಗೇರಿ ಶಂಕರಾನಂದ ಭಾರತೀಗಳು (ಕ್ರಿ.ಶ. ೧೪೪೮-೧೪೫೪) ೧೬ನೇ ಜಗದ್ಗುರುಗಳು ಇವರು ಪ್ರಥಮ ಪುರುಷೋತ್ತಮ ಭಾರತೀಗಳ ಶಿಷ್ಯರೇ ವಿನಃ ನರಸಿಂಹ ಭಾರತೀಗಳ ಶಿಷ್ಯರಲ್ಲ ಆದರೆ ವೆಂಕಟಪ್ಪನಾಯಕರು ಶ್ರೀ ಶಂಕರಾನಂದ ಭಾರತೀಯವರ

ಹೆಸರನ್ನು ಉಲ್ಲೇಖಿಸಿರುವ ಕಾಲವು ಸರಿಹೊಂದುವುದಿಲ್ಲ. ಇದರ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ಅಗತ್ಯವಿದೆ.[೯] ಕೆಳದಿ ಅರಸರ ಕಾಲಕ್ಕೆ ಸೇರಿದ ಎಷ್ಟೋ ಕಡತಗಳಲ್ಲಿ. ಬಣಜಿಗರು, ಕೊಮಟಿಗರು, ಹರಿಕಂತರು, ಮೊಗೆರು, ಅಂಬಿಗರು,[೧೦] ಇತ್ಯಾದಿ ಉಳಿದ ಕೋಮಿನವರ ಬಗ್ಗೆಯೂ ಉಲ್ಲೇಖವಿದೆ. ಕ್ರಿ.ಶ. ೧೭೨೭-೨೮ರ ಕಾಲಕ್ಕೆ ಸೇರಿದ ಶೃಂಗೇರಿ ಮಠದ ಅಪ್ರಕಟಿತ ಶಾಸನದಲ್ಲಿ-ಕೆಳದಿಯ ಎರಡನೇ ಸೋಮಶೇಖರ ನಾಯಕರಿಂದ ಶೃಂಗೇರಿ ಮಲ್ಲಣ್ಣನಿಗೆ ಬರೆದ ದಾಖಲೆಯಲ್ಲಿ -ಮಲ್ಲಿಕಾರ್ಜುನ ದೇವಾಲಯದ ಕೆಲಸಕ್ಕೆ ದುರ್ಗ ಮುಂತಾದ ಸ್ಥಳಗಳಿಂದ ಕಲ್ಲುಕುಟಿಗರನ್ನು ಕರೆಸಿಕೊಂಡು ಕೆಲಸ ಮಾಡಿಸಿರುವುದು ಕಲ್ಲುಕುಟಿಗರು ಸಹಾ ಇದ್ದರೆಂದು ಸ್ಪಷ್ಟವಾಗುತ್ತದೆ.[೧೧]

ಮತ್ತೊಂದು ದಾಖಲೆಯಲ್ಲಿ ಶೂದ್ರಜಾತಿಯ ಬೋಯಿಜನರ (ಪಲ್ಲಕ್ಕಿ ಹೊರುವವರು) ಉಲ್ಲೇಖವಿದೆ. ಸಂಸ್ಥಾನದಲ್ಲಿ ದಾಸ್ಯ ವೃತ್ತಿಯ ಕೆಲಸಕ್ಕೆಂದು ಕೆಲವು ಕೆಳವರ್ಗದವರನ್ನು ಸಂಬಳಕೊಟ್ಟು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಉದಾ: ಚನ್ನಬಸವನ ಮಗ ನಂಜ ಮತ್ತು ರುದ್ರನ ಮಗ ವೀರ ಇವರಿಗೆ ಮಠದಲ್ಲಿ ದಾಸ್ಯವೃತ್ತಿಯ ಸೇವೆ ಸಲ್ಲಿಸುತ್ತಿದ್ದಕ್ಕಾಗಿ ಸಂಬಳ ಕೊಟ್ಟ ವಿಷಯವು ಕಡತದ ದಾಖಲೆಯೊಂದರಲ್ಲಿ ಉಲ್ಲೇಖಿಸಲಾಗಿದೆ.[೧೨]

ಮಠದಲ್ಲಿ ಸ್ವಚ್ಛತೆ ಕಾಪಾಡಲೆಂದು ಪರಿಚಾರಕರನ್ನು ನೇಮಕ ಮಾಡಲಾಗುತ್ತಿತ್ತು. ಉತ್ಸವದ ದಿನಗಳಲ್ಲಿ ಸ್ವಯಂ ಪಾಕಕ್ಕೆಂದು ಅವರಿಗೆ ಅಕ್ಕಿ, ಹೆಸರು, ಬೆಲ್ಲ ಮುಂತಾದವುಗಳನ್ನು ಪೂರೈಸಲಾಗುತ್ತಿತ್ತು.[೧೩]

ಸಂಸ್ಥಾನದಲ್ಲಿ ಅಕ್ಕಸಾಲಿಗರು ಮತ್ತು ಗಾಣಿಗರಿದ್ದರು. ಉದಾಹರಣೆಗಾಗಿ ಅಕ್ಕಸಾಲೆ ಯಲ್ಲಪ್ಪನ ಮಗ ತಿಮ್ಮಪ್ಪನು ಗಾಣಿಗರ ಕೆಂಚಯ್ಯನಿಂದ ಮನೆಯನ್ನು ಬಾಡಿಗೆಗೆ ಪಡೆದುಕೊಂಡ ಸಂಗತಿಯು ಕಡತದಲ್ಲಿಯ ಬಿನ್ನವತ್ತಳೆಯಿಂದ ತಿಳಿದು ಬರುತ್ತದೆ.[೧೪] ಹಾಗೆಯೇ ಕ್ಷೌರಿಕರು, ಅಗಸರು, ಕುರುಬರು, ವಾಲೆಕಾರರು, ಚಾಂಡಾಲರು ಮುಂತಾದ ಕೋಮಿನವರ ಉಲ್ಲೇಖವಿದ್ದರೂ ಇವರ ಬಗ್ಗೆ ಹೆಚ್ಚಿನ ಮಾಹಿತಿಯೇನು ದೊರೆಯುವುದಿಲ್ಲ.[೧೫]

ಪರಧರ್ಮ ಸಹಿಷ್ಣುತೆ

ಶೃಂಗೇರಿ ಮಠದ ಪರಂಪರೆಯು ಅವಿಚ್ಛಿನ್ನವಾಗಿ ಮುಂದುವರೆದುಕೊಂಡು ಬರಲು ಮುಖ್ಯ ಕಾರಣ ಅದ್ವೈತ ಮತದ ಪ್ರಮುಖ ಕೇಂದ್ರವಾಗಿದ್ದರೂ ಬೇರೆ ಬೇರೆ ಜಾತಿ, ಮತ ಮತ್ತು ಪಂಗಡದವರನ್ನು, ಜಗದ್ಗುರುಗಳು ಸಮಾನವಾಗಿ ಕಾಣುತ್ತಲೇ ಬಂದಿದ್ದಾರೆ. ಬಹುಶಃ ಈ ಕಾರಣದಿಂದಲೇ ಸಮಾಜದಲ್ಲಿನ ಎಲ್ಲಾ ಜಾತಿ ವರ್ಗದವರು ಶೃಂಗೇರಿ ಗುರುಗಳನ್ನು ಗೌರವಿಸುತ್ತಾ ಬಂದಿದ್ದಾರೆ. ಕೆಳದಿ ನಾಯಕರು ವೀರಶೈವರಾಗಿದ್ದರೂ ಸ್ಮಾರ್ತ ಸಂಪ್ರದಾಯದ ಶೃಂಗೇರಿ ಮಠದೊಂದಿಗೆ ಉತ್ತಮ ಬಾಂಧವ್ಯಗಳನ್ನು ಹೊಂದಿರಲು ಈ ಮಠದ ಪರಧರ್ಮ, ಪರಮತ ಸಹಿಷ್ಣುತೆಯೇ ಕಾರಣ.

ಶೃಂಗೇರಿ ಗುರುಗಳು ತಮ್ಮ ಮಠದ ವ್ಯಾಪ್ತಿಯ ಇನ್ನುಳಿದ ಕೋಮಿನವರಿಗೂ ಭೂದಾನ ನೀಡಿರುವುದರ ಬಗ್ಗೆ ಚರ್ಚಿಸಲಾಗಿದೆ. ಉದಾ : ಕೆಳದಿ ಇಮ್ಮಡಿ ಸೋಮಶೇಖರನಾಯಕರು, ಮಂಗಳೂರು ಸೀಮೆಯ ವಾಮಂಜೂರು ಮಾಗಣೆಯ ವಾಮಂಜೂರು ಗ್ರಾಮದ ತಿಮ್ಮನಿಗೆ ಭೂಮಿಯನ್ನು ದಾನಮಾಡಿರುವುದು.[೧೬]

ಶೃಂಗೇರಿ ಮಠದಲ್ಲಿರುವ ಕ್ರಿ.ಶ. ೧೬೪೦ ಕಾಲಕ್ಕೆ ಸೇರಿದ ಕಾಗದದ ಸನ್ನದ್ದಿನಲ್ಲಿ ಬಿಜಾಪುರದ ಅಧಿಕಾರಿ ರಣದುಲ್ಲಾಖಾನನು ಶೃಂಗೇರಿ ಮಠವು ಯಲ್ಲಪ್ಪನ ಸಂಗಡ ಆಶೀರ್ವಾದ ಪತ್ರಿಕೆಯನ್ನು ಕಳುಹಿಸಿದಕ್ಕೆ ಉತ್ತರವಾಗಿ ಬರೆದ ಪತ್ರದಲ್ಲಿ - ಶೃಂಗೇರಿ ಮಠದ ವ್ಯಾಪ್ತಿಗೆ ಬರುವ ಶಿವಮೊಗ್ಗ ಜಿಲ್ಲೆಯ ಮಣಿಯ ಗ್ರಾಮಗಳಿಂದ ಅಧಿಕಾರಿಗಳು ಬಲವಂತವಾಗಿ ತೆರಿಗೆಗಳೂ ವಸೂಲಿ ಮಾಡದೆ ಶೃಂಗೇರಿ ಮಠಕ್ಕೆ ವಿಧೇಯರಾಗಿರಬೇಕೆಂದು[೧೭] ತಿಳಿಸಿರುವುದು ಮತ್ತು ಆನಂದಪುರ ಸೀಮೆಯ ಮಳಲಗೋಡಿನ ತಾವರೆಗರೆಯಲ್ಲಿಯ ಮಸೀದಿಗೆ ಕೆಳದಿಯ ವೀರಭದ್ರನಾಯಕರು ಭೂಮಿಯನ್ನು ಉಂಬಳಿಯಾಗಿ ಬಿಟ್ಟಿರುವುದನ್ನು ಕಾಣಬಹುದು.[೧೮]

ಕ್ರಿ.ಶ. ೧೬೫೩-೫೪ರ ಬಿನ್ನವತ್ತಳೆಯ ಕಡತದಲ್ಲಿ ಮಠದ ಉತ್ಪನ್ನದ ಲಾಭವು ಸಂಸ್ಥಾನದ ಸರ್ವ ಧರ್ಮದವರಿಗೂ ಉಪಯೋಗವಾಗುವಂತೆ ವ್ಯವಸ್ಥೆ ಮಾಡಬೇಕೆಂದು ಪ್ರಥಮ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳು ಕೆಳದಿ ಶಿವಪ್ಪನಾಯಕನನ್ನು ಕೇಳಿಕೊಂಡಾಗ ನಾಯಕನು ಅದೇ ರೀತಿ ವ್ಯವಸ್ಥೆ ಮಾಡಿದನು.[೧೯]

ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ

ಶೃಂಗೇರಿ ಸಂಸ್ಥಾನದಲ್ಲಿ ಮಹಿಳೆಯರ ಸ್ಥಾನಮಾನಗಳು ಹೇಗಿದ್ದವೆಂದು ಹೇಳಲು ಕಡತಗಳಲ್ಲಿ ಸಾಕಷ್ಟು ಆಧಾರಗಳಿಲ್ಲ. ಮೇಲ್ವರ್ಗದ ಮಹಿಳೆಯರ ಬಗ್ಗೆ ಹೆಚ್ಚೇನು ಕಡತಗಳಲ್ಲಿ ಹೇಳುವುದಿಲ್ಲ. ಅಂದರೆ ಸಾಮಾಜಿಕ ಮತ್ತು ಸಾಂಸ್ಕೃತಿಕ

ಚಟುವಟಿಕೆಗಳಲ್ಲಿ ಮಹಿಳೆಯರು ಈಗಿನಂತೆ ವಿಶೇಷ ಪಾತ್ರ ವಹಿಸುತ್ತಿದ್ದಂತೆ ತೋರುವುದಿಲ್ಲ. ಬಹುಶಃ ಅವರು ತಮ್ಮ ಗೃಹ ಕೆಲಸಗಳಿಗೇ ಸೀಮಿತವಾಗಿರುತ್ತಿದ್ದರು. ಆದರೂ ಕೆಲವು ಮೇಲ್ವರ್ಗದ ಮಹಿಳೆಯ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿದೆ.

ಶೃಂಗೇರಿ ಹರಿಹರೇಶ್ವರ ದೇವಾಲಯದ ಬಲ ಭಾಗದಲ್ಲಿರುವ ಶಾಸನವು ಕ್ರಿ.ಶ. ೧೬೦೮ ರ ಕಾಲಕ್ಕೆ ಸೇರಿದ್ದಾಗಿದ್ದು ಈ ದಾಖಲೆಯಲ್ಲಿ ಆತ್ರೇಯ ಗೋತ್ರದ ಯಜುಶ್ಯಾಖೆಯ ವಿಷ್ಣುಭಟ್ಟರ ಪುತ್ರಿ ನರಸಮ್ಮಳು ಶೃಂಗೇರಿ ಗುರುಗಳಾದ ಶ್ರೀ ನರಸಿಂಹ ಭಾರತೀ ಸ್ವಾಮಿಗಳ ಆಜ್ಞೆಯಂತೆ ಸ್ವಲ್ಪ ಭೂಮಿಯನ್ನು ದಾನ ಕೊಟ್ಟಿರುವುದು. ಮೇಲ್ವರ್ಗದ ಮಹಿಳೆಯರು ಕೂಡ ಭೂದಾನ ನೀಡಿರುವುದು ವಿಶೇಷವಾದ ಸಂಗತಿಯಾಗಿದೆ.[೨೦]

ಮತ್ತೊಂದು ದಾಖಲೆಯಲ್ಲಿ ಶೃಂಗೇರಿ ಜಗದ್ಗುರುಗಳಾದ ಶ್ರೀ ಸಚ್ಚಿದಾನಂದ ಭಾರತೀಗಳು ವಿದ್ಯಾರಣ್ಯಪುರದ ಅಗ್ರಹಾರದಲ್ಲಿನ ಭೂಮಿಯನ್ನು ಕಪನೀಪತಿ ಭಟ್ಟನ ಹೆಂಡತಿ ತಿಮ್ಮವ್ವಳ ವಂಶದವರಿಗೆ ದಾನವಾಗಿ ನೀಡಿದ್ದು ಅವಳ ಗಂಡ, ಪುತ್ರ ಸಂತಾನವಿಲ್ಲದೆ ಮರಣ ಹೊಂದಿದ ಮೇಲೆ ತನ್ನ ಜೀವನ ನಿರ್ವಹಣೆಗೆ ಮತ್ತು ತನ್ನ ಗಂಡ ಮಾಡಿದ ಸಾಲವನ್ನು ತೀರಿಸಲು ಗಂಡ ಮತ್ತು ಪಿತೃಗಳಿಗೆ ಪುಣ್ಯ ಪ್ರಾಪ್ತಿಯಾಗಲೆಂದು ತಿಮ್ಮವ್ವಳ ೧೨ ವರಹ ಉತ್ಪತ್ತಿಯುಳ್ಳ ಭೂಮಿಯನ್ನು ವಾಲೆ ಸಿಂಗಣ್ಣನು ಕ್ರಯಕ್ಕೆ ತೆಗೆದುಕೊಂಡು, ಕೇಂದ್ರ ಖಜಾನೆಗೆ ೨೪ ವರಹಗಳ ಕಾಣಿಕೆ ನೀಡಿ, ಆ ವಿಧವೆ ತಿಮ್ಮಕ್ಕಳ ಅಂತ್ಯಕಾಲದವರೆಗೆ ಅವಳಿಗೆ ಅನ್ನ ವಸ್ತ್ರ ಕೊಟ್ಟು ಎಲ್ಲಾ ವ್ಯವಸ್ಥೆ ಮಾಡಬೇಕೆಂದು ಕೆಳದಿ ದೊರೆ ಇಮ್ಮಡಿ ಸೋಮಶೇಖರ ನಾಯಕರು ಆಜ್ಞೆ ಹೊರಡಿಸಿದ ಸಂಗತಿಯು ಈ ಕಡತದ ದಾಖಲೆಯಿಂದ ತಿಳಿದು ಬರುತ್ತದೆ.[೨೧] ವಿಧವೆಯರಿಗೆ ಸಾಮಾಜಿಕ, ಆರ್ಥಿಕ ಭದ್ರತೆಯನ್ನು ಕೆಳದಿ ಅರಸರು ಒದಗಿಸಿಕೊಟ್ಟು, ಅವರ ಜೀವನ ಸಾಗಲು ಅವಕಾಶ ಮಾಡಿಕೊಟ್ಟಿರುವುದನ್ನು ಕಾಣಬಹುದು.

ಆದರೆ ಬಹು ಪಾಲು ಕಡತಗಳಲ್ಲಿ ಕೆಳವರ್ಗದ ಮಹಿಳೆಯರ ಬಗ್ಗೆ ಸ್ವಲ್ಪ ಹೆಚ್ಚಿನ ಮಾಹಿತಿ ದೊರೆಯುತ್ತದೆ. ಇಂಥ ಮಹಿಳೆಯರು ಮಠದಲ್ಲಿ ದಾಸ್ಯ ವೃತ್ತಿಯಲ್ಲಿ ಕೆಲಸ ಮಾಡುತ್ತಿದ್ದರು. ಶೂದ್ರ ಕಂದಾಚಾರಿಕೆ ಎಂಬ ಶೀರ್ಷಿಕೆಯ ಕೆಳಗೆ ವಾಲಗದವರಿಗೆ, ತಾಳದ ಚಾಕರಗೆ, ಚಾಮರದ ಜನಕೆ, ವಿನಿಯೋಗದವರಿಗೆ ಮತ್ತು ದೇವರ ಬಳಿ ಬಾಗಿಲ ಚಾಕರಿ ಮಾಡುವವರಿಗೆ ಮಠದಲ್ಲಿ ಚಾಕರಿ ಮಾಡುವ ಹೆಣ್ಣುಮಕ್ಕಳಿಗೂ ಸಂಬಳ ಸಂದಾಯವಾಗುತ್ತಿತ್ತು.[೨೨]

ಎಲ್ಲಾ ಜಾತಿ ವರ್ಗಗಳಲ್ಲಿಯ ನಿರ್ಗತಿಕ ಬಡ ಹೆಂಗಸರು ಶ್ರೀಮಠದ ಚಾವಡಿಗೆ ಬಂದು ತಮಗೆ ಬಂದ ಆಪತ್ತನ್ನು ಹೇಳಿಕೊಂಡಾಗ ಅಂಥ ಹೆಣ್ಣುಗಳ ವಿಚಾರಣೆ ಚಾವಡಿಯಲ್ಲಾಗುತ್ತಿತ್ತು. ಅನಾಥ ಮತ್ತು ಹೆಣ್ಣುಗಳನ್ನು ಮಠದಲ್ಲಿ ದಾಸ್ಯ ವೃತ್ತಿಯ ಕೆಲಸಕ್ಕೆಂದು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಸಮಾಜದಿಂದ ತಿರಸ್ಕರಿಸಲ್ಪಟ್ಟ ಹೆಣ್ಣುಗಳನ್ನು ಭೂಮಿಯ ಮಾಲಿಕರು ಮಠದ ಚಾವಡಿಯಿಂದ ಖರೀದಿಸಿ ತಮ್ಮ ಮನೆಯ ಹೊರ ಕೆಲಸಕ್ಕಾಗಿ ಇಟ್ಟುಕೊಳ್ಳುತ್ತಿದ್ದರು.[೨೩]

ಕಡತಗಳಲ್ಲಿ ಬರುವ ಹೆಣ್ಣಿನ ಕ್ರಯ ಚೀಟಿನ ಕೆಲವು ದಾಖಲೆಗಳಲ್ಲಿ ಶೃಂಗೇರಿ ಮಠದ ಪಾರುಪತ್ಯಗಾರ ನರಸೀಭಟ್ಟರಿಗೆ ಗೋಧಿ ಎಂಬ ವಿಧವೆಯನ್ನು ಅವಳ ಸಹೋದರನೇ ಆದ ಚಿಂತಾಮಣಿ ಭಟ್ಟಗೆ ಹನ್ನೆರಡು ವರಹಗಳಿಗೆ ಮಾರಾಟ ಮಾಡಿದರೆಂದು ಇದೆ. ಬಹುಶಃ ಈ ಚಿಂತಾಮಣಿ ಭಟ್ಟನು ತನ್ನ ಸಹೋದರಿ ಅನಾಥೆಯಾಗಿ ಮನೆಯಿಂದ ಮನೆಗೆ ತಿರುಗದೆ ತನ್ನ ಮನೆಯಲ್ಲಿಯೇ ಮರ್ಯಾದೆಯಿಂದಿರಲೆಂದು ಚಾವಡಿಯಿಂದ ತಾನೇ ಖರೀದಿಸಿದನೆಂದು ತೋರುತ್ತದೆ.[೨೪]

ಶ್ರೀ ಮಠದ ಚಾವಡಿಯಲ್ಲಿ ತಪ್ಪಿತಸ್ಥ ಸ್ತ್ರೀಯರ ವಿಚಾರಣೆಯಾಗಿ ಅಂಥ ಹೆಣ್ಣುಗಳ ಹೇಳಿಕೆಗಳು ಸಿದ್ಧವಾದಲ್ಲಿ ಆ ಹೆಣ್ಣುಗಳಿಗೆ ತಪ್ಪಿದವರನ್ನು ಶಿಕ್ಷಿಸಲಾಗುತ್ತಿತ್ತು ಎಂಬುದಕ್ಕೆ ಕಡತಗಳಲ್ಲಿ ಕೆಲ ದಾಖಲೆಗಳಿವೆ. ಸಕ್ಕರೆ ಪಟ್ಟಣದ ಚನ್ನಿ ಎಂಬುವವಳಿಗೆ ಹಿರೇಮಗಳೂರಿನ ಹೊನ್ನನು ಆರು ವರ್ಷಗಳಿಂದ ತಪ್ಪಿ ನಡೆಯುತ್ತಿದ್ದು, ಇಬ್ಬರು ತಾವು ಮಾಡಿದ ತಪ್ಪನ್ನು ಚಾವಡಿಯಲ್ಲಿ ಒಪ್ಪಿಕೊಂಡರು. ಚಾವಡಿಯ ತೀರ್ಪಿನಂತೆ ತಾನು ನಡೆದುಕೊಳ್ಳುವುದಾಗಿ ಹೇಳಿ ಎರಡು ಗದ್ಯಾಣ ಮತ್ತು ನಾಲ್ಕು ಹಣಗಳನ್ನು ತಪ್ಪಿನ ದಂಡವೆಂದು ಸಲ್ಲಿಸಿದನು. ಹೀಗೆ ಚಾವಡಿಯಲ್ಲಿ ತಪ್ಪಿತಸ್ಥರಿಂದ ದೊರೆಯುತ್ತಿದ್ದ ದಂಡವು ಮಠಕ್ಕೆ ಒಂದು ಅಲ್ಪ ಆದಾಯವಾಗಿತ್ತೆಂದು ಹೇಳಬಹುದು.[೨೫]

ಮಠ ಮತ್ತು ಶಿಷ್ಯರ ನಡುವಿನ ಸಾಮಾಜಿಕ ಸಂಬಂಧಗಳು

ಶ್ರೀ ಶೃಂಗೇರಿ ಮಠದಲ್ಲಿ ಪ್ರಾರಂಭದಿಂದಲೂ ಮಠ ಮತ್ತು ಶಿಷ್ಯರ ನಡುವೆ ಸೌಹಾರ್ದಯುತ ಸಂಬಂಧವಿತ್ತೆಂಬುದು ಕಡತಗಳ ಆಧಾರದಿಂದ ಹೇಳಬಹುದು. ಚಕ್ರವರ್ತಿಗಳು, ಅರಸರುಗಳು, ಸಂಸ್ಥಾನಿಕರು, ಬೇರೆ ಬೇರೆ ಜಾತಿ ಪಂಗಡಗಳ ಸಿರಿವಂತರು ಮತ್ತು ಬಡವರು ಶೃಂಗೇರಿ ಮಠದ ಶಿಷ್ಯರಾಗಿದ್ದರು.

ಅದರಲ್ಲಿಯೂ ಕೆಳದಿ ಅರಸರು ವೀರಶೈವರಾಗಿದ್ದರೂ ತಮ್ಮ ಆಳ್ವಿಕೆಯ ಕಾಲದಲ್ಲಿ ಶೃಂಗೇರಿ ಶ್ರೀ ಮಠದ ಭಕ್ತರಾಗಿದ್ದರು. ಶೃಂಗೇರಿ ಜಗದ್ಗುರುಗಳ ಹಾಗೂ ಕೆಳದಿ ಅರಸರ ನಡುವಿನ ಸಂಬಂಧ ಗುರು ಶಿಷ್ಯರ ಸಂಬಂಧದಂತಿತ್ತು ಎಂಬುದಕ್ಕೆ ಅನೇಕ ದಾಖಲೆಗಳಿವೆ.

ಕ್ರಿ.ಶ. ೧೭೪೧ರ ಬಿನ್ನವತ್ತಳೆಯ ಪ್ರತಿಯಲ್ಲಿ-ಕೆಳದಿ ಬಸವಪ್ಪ ನಾಯಕರು. ಶೃಂಗೇರಿ ಜಗದ್ಗುರುಗಳಾದ ಶ್ರೀ ಎರಡನೇ ಸಚ್ಚಿದಾನಂದ ಭಾರತಿ ಸ್ವಾಮಿಗಳಿಗೆ ಬರೆದ ಪತ್ರದ ಪ್ರತಿಯಲ್ಲಿ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳಿಗೆ ಆರೋಗ್ಯ ಸರಿಯಿಲ್ಲವೆಂದು ತಿಳಿದಾಗ ನಾಯಕರು ಅವರಿಗೆ ಕಲ್ಲು ಸಕ್ಕರೆ, ದ್ರಾಕ್ಷಿ, ಸಕ್ಕರೆ ಮುಂತಾದವುಗಳನ್ನು ಕಳುಹಿಸಿ ಗುರುಗಳ ಆರೋಗ್ಯದ ಸಮಾಚಾರವನ್ನು ತಿಳಿಯಲು ಎಷ್ಟೊಂದು ಕುತೂಹಲ ಉಳ್ಳವನಾಗಿದ್ದನೆಂದು ತಿಳಿದುಬರುತ್ತವೆ.[೨೬]

ಕ್ರಿ.ಶ. ೧೭೫೬ರ ಬಿನ್ನವತ್ತಳೆಯಲ್ಲಿ ಕೆಳದಿ ಚೆನ್ನ ಬಸವಪ್ಪ ನಾಯಕರ ಪಟ್ಟಾಭಿಷೇಕ ಸಂದರ್ಭದಲ್ಲಿ ಶೃಂಗೇರಿ ಜಗದ್ಗುರುಗಳು ಕಾಣಿಕೆಗಳನ್ನು ಕಳುಹಿಸಿರುವುದು[೨೭] ಮತ್ತು ಮುಮ್ಮಡಿ ಸೋಮಶೇಖರ ನಾಯಕರಿಗೆ ಶ್ರೀ ನಾರಾಯಣ ಸ್ಮರಣೆ ಪೂರ್ವಕವಾಗಿ ಆಶೀರ್ವಾದ ಮಾಡಿ ನಂಜನಗೂಡಿನ ನಂಜುಂಡೇಶ್ವರನ ಸನ್ನಿಧಿಯಲ್ಲಿ ಚಾತುರ್ಮಾಸ್ಯ ಸಂದರ್ಭದಲ್ಲಿ ಶೃಂಗೇರಿ ಜಗದ್ಗುರುಗಳಾದ ಶ್ರೀ ಅಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳು ಕೆಳದಿ ಅರಸರ ಮೇಲಿನ ಅಭಿಮಾನದಿಂದ ಜಪತಪ ದೇವ ಪೂಜಾ ಸಮಯದಲ್ಲೂ ಅವರ ಅಭ್ಯುದಯವನ್ನು ಬಯಸಿ ವ್ಯಾಸ ಪೂಜೆ ಮಾಡಿ ವ್ಯಾಸಾಕ್ಷತೆ ಗಂಧ ಪ್ರಸಾದ, ಮಂತ್ರಾಕ್ಷತೆಯನ್ನು ಕಳುಹಿಸಿರುವುದು[೨೮] ಶೃಂಗೇರಿ ಜಗದ್ಗುರುಗಳಿಗೆ ಕೆಳದಿ ಅರಸರ ಮೇಲೆ ಎಷ್ಟರ ಮಟ್ಟಿಗೆ ಅಭಿಮಾನವಿತ್ತೆಂಬುದನ್ನು ತಿಳಿಸುತ್ತವೆ.

ಆಚಾರ ವಿಚಾರ

ಶೃಂಗೇರಿ ಮಠದ ವ್ಯಾಪ್ತಿಯ ಮತ್ತು ಹೊರಗಿನ ತನ್ನ ಶಿಷ್ಯರ ಬಗ್ಗೆ ಮಠವೂ ಸದಾ ಕಾಳಜಿ ವಹಿಸುತ್ತಿತ್ತು. ಶಿಷ್ಯರು ಅಧರ್ಮ ಮತ್ತು ಸಮಾಜಘಾತುಕ ಕಾರ್ಯಗಳಲ್ಲಿ ತೊಡಗದಂತೆ ಮಾಡಲು ಮಠದಿಂದ ಧರ್ಮಾಧಿಕಾರಿಗಳು ಮತ್ತು ಧರ್ಮ ಪ್ರಚಾರಕರ ನೇಮಕವಾಗುತ್ತಿತ್ತು. ಮಠದ ಈ ಪ್ರತಿನಿಧಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲೆಲ್ಲಾ ಸಂಚರಿಸಿ ಶಿಷ್ಯರ ಆಚಾರ ವಿಚಾರಗಳನ್ನು ಪರಿಶೀಲಿಸಿ, ಜನರಲ್ಲಿ ಧರ್ಮ ಜಾಗೃತಿಯನ್ನುಂಟು ಮಾಡಿ, ಅಧರ್ಮ ಕಾರ್ಯಗಳಲ್ಲಿ ತೊಡಗಿದ ತಪ್ಪಿತಸ್ಥ ಶಿಷ್ಯರಿಗೆ ತಕ್ಕ ಪ್ರಾಯಶ್ಚಿತ್ತ ಮಾಡುತ್ತಿದ್ದರು. ಹಿಂದೂಗಳಲ್ಲಿಯೂ ಭಿನ್ನ ಭಿನ್ನ ಕೋಮುಗಳ ಮಠದ ಶಿಷ್ಯರಿಗೆ ಸರಿಯಾದ ಬೋಧನೆ ಮಾಡಿ, ಆಳುವ ರಾಜಮನೆತನಗಳ ಸಹಾಯದಿಂದ ನಿಯಂತ್ರಿಸುತ್ತಿದ್ದರು. ಕೆಳದಿ ಅರಸರು ಕೂಡ ಶೃಂಗೇರಿ ಮಠದ ವ್ಯಾಪ್ತಿಯೊಳಗೆ ಮತ್ತು ಹೊರಗೆ ತನ್ನ ಶಿಷ್ಯರನ್ನು ಹತೋಟಿಯಲ್ಲಿಡಲು ಸಹಕರಿಸುತ್ತಿದ್ದರು ಎಂಬುದಕ್ಕೆ ಅನೇಕ ಕಡತಗಳ ದಾಖಲೆಗಳು ದೊರೆಯುತ್ತವೆ.

ಕ್ರಿ.ಶ. ೧೬೪೯ರ ಕಡತದ ದಾಖಲೆಯಲ್ಲಿ ಶಿವಪ್ಪನಾಯಕರು ಕಾವಡಿಯ ಚನ್ನಯ್ಯನಿಗೆ ಆಜ್ಞಾಪಿಸಿದ ವಿಚಾರವಾಗಿ ಉಳವೆಬೈಲಿನ ಶಂಕರ ನಾರಾಯಣನಿಗೆ ತೊಂದರೆ ಮಾಡಿ ಅವನಿಂದ ಬಲವಂತವಾಗಿ ೧೦ ವರಹವನ್ನು ಕಸಿದುಕೊಂಡಿದ್ದು ಅದನ್ನು ಹಿಂತಿರುಗಿಸಬೇಕೆಂದು ತಿಳಿಸಲಾಗಿದೆ.[೨೯] ಕ್ರಿ.ಶ. ೧೬೯೮ರ ಕಡತದ ದಾಖಲೆಯಲ್ಲಿ ಕೆಳದಿಯ ಹಿರಿಯ ಬಸವಪ್ಪನಾಯಕರು ಕವಿ ನರಸಿಂಹಗೆ ಕುಂಬಳ ಸೀಮೆಯ ಜನರ ಆಚಾರ ವಿಚಾರಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಶೃಂಗೇರಿ ಸ್ವಾಮಿಗಳಿಗೆ ಸಹಾಯ ಮಾಡಬೇಕೆಂದು ಮತ್ತು ನಿಯಮದ ಪ್ರಕಾರ ಮರ್ಯಾದೆಯಿಂದ ನಡೆದುಕೊಳ್ಳಬೇಕೆಂದು, ಈ ರೀತಿ ನಡೆದುಕೊಳ್ಳದೆ ಸ್ವೇಚ್ಛೆಯಿಂದ ವರ್ತಿಸಿದವರನ್ನು ಕರೆಸಿ ವಿಚಾರಣೆ ನಡೆಸಬೇಕೆಂದು ತಾಕೀತು ಮಾಡಿರುವುದನ್ನು ಕಾಣಬಹುದು.[೩೦]

ಕ್ರಿ.ಶ. ೧೬೯೮ರ ಕಡತದಲ್ಲಿನ ಪತ್ರದಲ್ಲಿ ಕೆಳದಿಯ ಹಿರಿಯ ಬಸವಪ್ಪ ನಾಯಕರು ಕೃಷ್ಣಪ್ಪನಿಗೆ ನಿರ್ದೇಶಿಸಿದ್ದು, ಭಟ್ಕಳ ಸೀಮೆಯ ಬಗ್ಗವಾಡಿ ಹೋಬಳಿಯ ಗೇರು ಸೊಪ್ಪೆ, ಶಿರಾಳಿ ಮತ್ತು ಚಂದಾವರ ಕಾರ್ಕಳ ಹೋಬಳಿಯ ಬಸರೂರು, ಶಂಕರನಾರಾಯಣ, ಬೆಳ್ತಂಗಡಿ, ಮೊಗೆರ ನಾಡು ಮತ್ತು ಗಾಜನೂರು. ಕೆಳದಿ ಹೋಬಳಿಯ ದಾನಿವಾಸ, ಖಾಂಡ್ಯ, ಗರ್ಜೆ, ಗೋಣಿಬೀಡು, ಜಾವಣಿಗೆ ಮುಂತಾದ ಹೋಬಳಿ ಸೀಮೆ ದೇವಸ್ಥಾನಗಳಲ್ಲಿ ಶೃಂಗೇರಿ ಸ್ವಾಮಿಗಳವರ ಆಚಾರ ವಿಚಾರಕ್ಕೆ ಸಂಬಂಧಿಸಿದಂತೆ ಮಠಕ್ಕೆ ನಿಯಮದ ಪ್ರಕಾರ ನಡೆದುಕೊಳ್ಳಬೇಕು. ಈ ರೀತಿ ನಡೆದುಕೊಳ್ಳದೆ ಸ್ವೇಚ್ಛೆಯಿಂದ ವರ್ತಿಸುವವರನ್ನು ಕರೆಸಿ ವಿಚಾರಣೆ ನಡೆಸಬೇಕೆಂದು ತಾಕೀತು ಮಾಡಿರುವ ಸಂಗತಿಯನ್ನು ಕಾಣಬಹುದು.[೩೧]

ಇದೇ ಕಾಲಕ್ಕೆ ಸೇರಿದ ಮತ್ತೊಂದು ದಾಖಲೆಯಲ್ಲಿ ಕೆಳದಿಯ ಹಿರಿಯ ಬಸವಪ್ಪನಾಯಕರು. ಆವಿನಹಳ್ಳಿ ಚಿಕ್ಕನರಸಣ್ಣಗೆ ಬರೆದ ನಿರೂಪ ಪತ್ರದಲ್ಲಿ ಆದೇಶಿಸಿರುವಂತೆ ಬಾರ್ಕೂರು ಹೋಬಳಿ ಸೀಮೆಗಳಲ್ಲಿ ಶೃಂಗೇರಿ ಮಠದ ಭಕ್ತರ ಆಚಾರ

ವಿಚಾರಕ್ಕೆ ಸಂಬಂಧಿಸಿದ ಹಾಗೆ ಮರ್ಯಾದೆಯಿಂದ ನಡೆದುಕೊಳ್ಳಬೇಕು, ಆ ರೀತಿ ನಡೆದುಕೊಳ್ಳದೆ ಸ್ವೇಚ್ಛೆ ಮಾಡುವಂಥವರನ್ನು ಕರೆಸಿ ಅವರನ್ನು ವಿಚಾರಣೆ ನಡೆಸಿ ಕಟ್ಟು ಮಾಡಿಸಬೇಕೆಂದು ತಿಳಿಸಿರುವುದು ಕಂಡುಬರುತ್ತದೆ.[೩೨]

ಕ್ರಿ.ಶ. ೧೭೨೦ರ ಕಾಲಕ್ಕೆ ಸೇರಿದ ಕಡತದ ದಾಖಲೆಯಲ್ಲಿ ಕೆಳದಿಯ ಇಮ್ಮಡಿ ಸೋಮಶೇಖರ ನಾಯಕರು ಶೃಂಗೇರಿ ಜಗದ್ಗುರು ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳು ಬರೆದ ಬಿನ್ನವತ್ತಳೆಯಲ್ಲಿ ಈ ಹಿಂದೆ ನೀವು ಮಲ್ಲಿನ ವಿರುಪಾಕ್ಷನ ವಿಶೇಷ ಪಾರುಪತ್ಯದ ವಿಚಾರವಾಗಿ ಆಚಾರ ವಿಚಾರಕ್ಕೆ ಸಂಬಂಧಿಸಿದಂತೆ ಶ್ರೀ ಮಠದ ವಿಚಾರವೇನಿದ್ದರೂ ನಾವೇ ವಿಚಾರ ಮಾಡುತ್ತೇವೆಂದು ತಿಳಿಸಿದ್ದಿರಲ್ಲ, ಹಾಗೆಯೇ ತಪ್ಪು ಮಾಡಿದವರಿಗೆ ಕರೆಸಿ ಬುದ್ಧಿ ಹೇಳಿಸಿ ಧರ್ಮವು ಸಾಂಗವಾಗಿ ನಡೆಸುವುದಾಗಿ ಕಟ್ಟಲೆ ಮಾಡಿಸಿರುವುದನ್ನು ಕಾಣಬಹುದು.[೩೩]

ಕ್ರಿ.ಶ. ೧೭೪೪ರ ಕಾಲಕ್ಕೆ ಸೇರಿದ ಕಡತದ ದಾಖಲೆ ಕೆಳದಿ ಯಜ್ಞನಾರಾಯಣ ದೀಕ್ಷಿತರ ಮಗ ಗಂಗಾಧರ ಶಾಸ್ತ್ರೀ (ಶ್ರೌತ್ರಿ) ಯು ಶೃಂಗೇರಿ ಮಠದ ಭಂಡಾರಕ್ಕೆ ಸಲ್ಲಿಸಿದ ಬಿನ್ನವತ್ತಳೆಯಲ್ಲಿ ಈ ಕೆಳಗೆ ಕಂಡು ಬರುವ ಕೆಳದಿ, ಕೆಸರೂರು, ಯಿಂದುವಣಿ, ತಾಳಗುಪ್ಪೆ, ಇಕ್ಕೇರಿ, ಸಾಗರ, ಅವಿನಹಳ್ಳಿ, ಶಿರವಂತೆ, ಕಲ್ಲು ಸಮಂತಸಾಲಿ, ಯಲಗಳಲೆ, ಪಾಕವಾಡಿ, ಮಳಲಿ, ಮರಬುದಿಕರೂರು, ಸಾತ್ತಳಲು, ಸವುಳು ನಾಡು, ಸೊರಬ, ಅಂಡಿಗೆ, ಉಧರೆ, ಗುತ್ತಿ, ತವನಿಧಿ, ಜಡೆಯ್ಯ ಕಪಟ್ಟೂರು, ಆನಂದಪುರ, ಉಡಗಣಿ, ಮಹದೇವಪುರ, ಗವುಜ ಕಣೂರು, ತ್ಯಾಗರ್ತಿ, ಬೇಗೂರು, ಹಾರೋ ಮುಚಡಿ, ಯಲಸೆ, ಕುಪ್ಪಗದ್ದೆ, ಬಾರಂಗಿಹದೆ, ಅಬಸೆ, ಕಾತ್ತಗೂಳಿ ಮೂಗೂರು, ಹೊಸೂರು, ಜಿಂಣಗೆರೆ, ವೃತ್ತಿಕೊಪ್ಪ, ಯಲೆಹಳೆ ಮತ್ತು ಬನವಾಸಿ ಮುಂತಾದ ಸ್ಥಳಗಳ ಆಚಾರ ವಿಚಾರವನ್ನು ತಾನು ಪಾಲಿಸಬೇಕೆಂದು ಹೇಳಿರುವ ಮತ್ತು ಅಲ್ಲಿನ ಚರಣ ಕಾಣಿಕೆ, ಅಗ್ರ ತಾಂಬೂಲ ಇತ್ಯಾದಿಗಳನ್ನು ತಪ್ಪದೇ ಮಠಕ್ಕೆ ಸಲ್ಲಿಸುವುದಾಗಿ ಒಪ್ಪಿ ಬರೆದ ಪತ್ರವಾಗಿದೆ.[೩೪]

ಪೂರ್ಣಯ್ಯನವರಿಗಿಂತ ಮೊದಲೇ ಹೈದರಾಲಿಯು ಶೃಂಗೇರಿ ಮಠಕ್ಕೆ ನಡೆದು ಬರುವ ಚರಣ ಕಾಣಿಕೆ, ಅಗ್ರತಾಂಬೂಲ, ಆಚಾರ ವ್ಯವಹಾರ, ಮುಂತಾದವುಗಳು ಪೂರ್ವಾರಬ್ಯ ನಡೆದು ಬಂದ ಮೇರೆಗೆ ಮುಂದೆಯೂ ಸಾಗಲೆಂದು ಅರಮನೆ ಸೀಮೆ ಗಡಿಗಳ ಕಿಲ್ಲೆದಾರ ಮತ್ತು ಪಾರು ಪತ್ಯಗಾರರಿಗೆ ಕ್ರಿ.ಶ. ೧೭೭೯-೮೦ರಲ್ಲಿ ನಿರೂಪ ಹೊರಡಿಸಿದ್ದನು.[೩೫] ದುರ್ವರ್ತನೆ ನಡೆಸಿದ ಶಿಷ್ಯರನ್ನು ಅವರು ಗಂಡಾಗಿರಲಿ ಅಥವಾ ಹೆಣ್ಣಾಗಿರಲಿ ಶಿಕ್ಷಿಸುವ ಅಧಿಕಾರ ಮಠಕ್ಕಿತ್ತು. ಉದಾಹರಣೆಗೆ ಶಿಷ್ಯರಲ್ಲಿ ತಪ್ಪಿತಸ್ಥ ಗಂಡು ಹೆಣ್ಣುಗಳನ್ನು ಮಠದವರು ಶಿಕ್ಷಿಸುವಲ್ಲಿ ಸರ್ಕಾರದವರು ತಡೆಯಬಾರದೆಂದು ಟಿಪ್ಪುಸುಲ್ತಾನ ಕಾಲದಲ್ಲಿ ಆದ ಹುಕುಮ್ಮಿನ ಪ್ರತಿಯಲ್ಲಿದೆ.[೩೬]

ಮಾರಕ ವರ್ಗದವರು (ಹಳೆ ಕರ್ನಾಟಿಗರು) ತಮ್ಮ ಜಾತಿ ಧರ್ಮಕ್ಕೆ ವಿರೋಧವಾಗಿ ಬ್ರಾಹ್ಮಣರ ನಡತೆಯನ್ನು ಅನುಸರಿಸಿದರೆ ಅಂಥವರನ್ನು ಹಿಡಿದು ಪಹರೆಯಲ್ಲಿ ಹಾಕಬೇಕೆಂದು ದಿವಾನ್ ಪೂರ್ಣಯ್ಯನವರು ಮೈಸೂರು, ತಾಯೂರು, ಹಾದನಹಳ್ಳಿ, ಬೆಳಂದೂರು ಮುಂತಾದ ಸ್ಥಳಗಳ ಕಿಲ್ಲೆದಾರ ಮತ್ತು ಅಮಲ್‌ದಾರರಿಗೆ ಕ್ರಿ.ಶ. ೧೮೦೬ರಲ್ಲಿ ನಿರೂಪ ಹೊರಡಿಸಿದ್ದರೆಂದು ಸನ್ನದ್ದಿನಿಂದ ತಿಳಿದುಬರುತ್ತದೆ.[೩೭]

ಮೈಸೂರಿನ ಬ್ರಿಟಿಷ್ ಕಮಿಷನರೂ ಕೂಡ ೧೮೩೨ ನೇ ಇಸವಿ ಸೆಪ್ಟಂಬರ್ ೫ ರಂದು ಶಿಷ್ಯರ ಆಚಾರ ವಿಚಾರಕ್ಕೆ ಸಂಬಂಧಿಸಿದ ನಿರೂಪವನ್ನು ಹೊರಡಿಸಿದರು.[೩೮] ಈ ದಾಖಲೆಗಳು ಶೃಂಗೇರಿ ಸೀಮೆಯ ಆಚಾರ ವಿಚಾರಕ್ಕೆ ಸಂಬಂಧಿಸಿದ ಹಾಗೆ ಕೆಳದಿ ಅರಸರು ಮಾತ್ರವಲ್ಲ, ಅವರ ನಂತರ ಹೈದರಾಲಿ ಟಿಪ್ಪು ಸುಲ್ತಾನ್, ಮೈಸೂರು ಒಡೆಯರ್ ಮತ್ತು ಬ್ರಿಟಿಷ್ ಕಮೀಷನರುಗಳು ಕೂಡ ಶೃಂಗೇರಿ ಮಠದ ಶಿಷ್ಯರ ಆಚಾರ ವಿಚಾರ ನೋಡಿಕೊಳ್ಳುವಲ್ಲಿ ಎಷ್ಟು ಸಹಕಾರ ನೀಡುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ.

ಮಠವು ರಾಜರ ಸಹಾಯದಿಂದ ಸಮಾಜದಲ್ಲಿ ರೀತಿ ಸಂಪ್ರದಾಯಗಳನ್ನು ಪಾಲಿಸಲು ಕಟ್ಟುಪಾಡುಗಳನ್ನು ಮಾಡಿರುವುದು ಮಠದ ಶಿಷ್ಯರು ಎಲ್ಲೇ ಇರಲಿ ಅವರ ಧಾರ್ಮಿಕ ಮತ್ತು ಸಾಮಾಜಿಕ ಜೀವನದ ಮೇಲೆ ಮಠಕ್ಕೆ ಪೂರ್ಣ ಹಿಡಿತವಿತ್ತೆಂಬುದು ಮೇಲ್ಕಾಣಿಸಿದ ಉದಾಹರಣೆಗಳಿಂದ ಖಚಿತವಾಗುತ್ತದೆ. ಅದಕ್ಕೆ ವಿರೋಧವಾಗಿ ವರ್ತಿಸುವವರ ಸಂಖ್ಯೆ ತೀರ ಕಡಿಮೆಯಿತ್ತೆಂದು ತೋರುತ್ತದೆ. ಸಾಮಾನ್ಯವಾಗಿ ಜನರ ಜೀವನವನ್ನು ರೂಪಿಸುವ ಎಷ್ಟೋ ಧಾರ್ಮಿಕ ಮತ್ತು ಸಾಮಾಜಿಕ ಅಂಶಗಳು ಶೃಂಗೇರಿ ಸಂಸ್ಥಾನದಲ್ಲಿ ಸಾಮಾಜಿಕ ಸಾಮರಸ್ಯವನ್ನುಂಟು ಮಾಡಲು ಬಹಳಷ್ಟು ಸಹಕಾರಿಯಾಗಿದ್ದವು. ಈ ವ್ಯವಸ್ಥೆಗೆ ಕೆಳದಿ ಮೊದಲಾದ ಆಳ್ವಿಕೆಗಳ ಸಂಪೂರ್ಣ ಬೆಂಬಲವಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಆಧಾರಸೂಚಿ

೧. ಮೈಸೂರು ಪುರಾತತ್ವ ವರದಿ, ಮೈಸೂರು ವಿಶ್ವವಿದ್ಯಾನಿಲಯ, ೧೯೨೨. ಪುಟ ೬೮, ೬೯.
೨. ಶಾಸ್ತ್ರೀ.ಎ.ಕೆ., ಸಿ.ಕೆ.ಆರ್.ಎ.ಎಸ್.ಎಮ್. ೧೧. ಕ.೪., ದಿ ರೆಕಾರ್ಡ್ ಆಫ್ ಶೃಂಗೇರಿ ಮಠ ರಿಲೇಟೆಡ್ ಕೆಳದಿ, ಮ.ರಿ.ಕೆ.ಕೆ., ಮ್ಯೂ, ಅ, ರಿ,ಬ್ಯೂ., ಕೆಳದಿ, ೨೦೦೧, ಪುಟ ೨೪.
೩. ಶಾಸ್ತ್ರೀ.ಎ.ಕೆ., ೨೦೦೧.
೪. ಶಾಸ್ತ್ರೀ .ಎ.ಕೆ., ಕ. ೨೦, ದಾ. ೩೧, ಶೃಂಗೇರಿ ಮಠದ ಆಯ್ದ ಚಾರಿತ್ರಿಕ ದಾಖಲೆಗಳು, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಬೆಂಗಳೂರು, ೨೦೦೩, ಪುಟ–೧೯೪, ೧೯೬.
೫. ಶಾಸ್ತ್ರೀ.ಎ.ಕೆ., ೨೦೦೧.
ಶಾಸ್ತ್ರೀ. ಎ.ಕೆ., ೨೦೦೩.
೬ ಶಾಸ್ತ್ರೀ.ಎ.ಕೆ., ಶೃಂಗೇರಿ ಧರ್ಮ ಸಂಸ್ಥಾನ ಶ್ರೀಮಠ., ಶೃಂಗೇರಿ, ೧೯೮೩, ಪುಟ–೧೭೮.
೭. ಅದೇ.,
೮. ಶಾಸ್ತ್ರೀ.ಎ.ಕೆ., ೨೦೦೧.
೯. ಶಾಸ್ತ್ರೀ.ಎ.ಕೆ., ೨೦೦೧.
೧೦. ಅದೇ., ಪುಟ ೨–೩.
೧೧. ವೆಂಕಟೇಶ್ ಜೋಯಿಸ್. ಕೆ., ಸಿ.ಕೆ.ಆರ್.ಎ.ಎಸ್.ಎಮ್.ಕ. ೫, ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯ, ಕ.ಸಾ.ಪ., ಬೆಂಗಳೂರು, ೧೯೯೬, ಮೈಸೂರು.
೧೨. ಶಾಸ್ತ್ರೀ. ಎ.ಕೆ., ಪುಟ ೧೮೦.
೧೩. ಅದೇ., ಪುಟ ೧೮೦.
೧೪. ಶಾಸ್ತ್ರೀ. ಎ.ಕೆ., ೧೯೮೩, ಪುಟ ೧೮೦.
೧೫. ಶಾಸ್ತ್ರೀ. ಎ.ಕೆ., ಪುಟ ೧೮೦.
೧೬. ಶಾಸ್ತ್ರೀ. ಎ.ಕೆ., ೨೦೦೧, ಪುಟ ೪೨.
ಶಾಸ್ತ್ರೀ. ಎ.ಕೆ., ಪುಟ ೧೭೨, ೭೪.
೧೭. ಮೈ.ಪು.ವ., ೧೯೩೪ ನಂ. ೩, ಪುಟ ೧೩೧, ೧೩೩.
೧೮. ಶಾಸ್ತ್ರೀ. ಎ.ಕೆ., ಶೃ.ಧ.ಸಂ. ಶ್ರೀಮಠ., ಶೃಂಗೇರಿ, ೧೯೮೩, ಪುಟ ೪೦.
ಶಾಸ್ತ್ರೀ. ಎ.ಕೆ., ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್ ಪ್ರೊಸಿಡಿಂಗ್ ವಾಲ್ಯೂಮ್, ಕರ್ನಾಟಕ ಹಿಸ್ಟರಿ ಕಾಂಗ್ರೆಸ್, ಕೆಳದಿ ವೀರಭದ್ರನಾಯಕ ಮತ್ತು ಶೃಂ.ಮಠ., ೧೯೯೦, ಪುಟ ೧೦.
೧೯. ಶಾಸ್ತ್ರೀ. ಎ.ಕೆ., ೧೯೮೩, ಪುಟ ೧೮೧.
೨೦. ಎ.ಕೆ. ವಾಲ್ಯೂಮ್, (ಪರಿಷ್ಕೃತ) XII, ಶೃಂ. ೮, ಪುಟ ೨೫೦, ೨೫೧.
೨೧. ಶಾಸ್ತ್ರೀ. ಎ.ಕೆ., ಪುಟ ೧೭೬, ೧೭೭.
೨೨. ಶಾಸ್ತ್ರೀ. ಎ.ಕೆ., ೧೯೮೩, ಪುಟ ೧೮೨.
೨೩. ಶಾಸ್ತ್ರೀ. ಎ.ಕೆ., ೧೯೮೩, ಪುಟ ೧೮೨.
೨೪. ಅದೇ ೧೯, ಪುಟ ೧೮೩.
೨೫. ಅದೇ., ಪುಟ ೧೮೪.
೨೬. ಶಾಸ್ತ್ರೀ. ಎ.ಕೆ., ೨೦೦೧, ಪುಟ ೫೪.
ಶಾಸ್ತ್ರೀ. ಎ.ಕೆ., ಪುಟ ೧೯೦, ೧೯೧.
೨೭. ಶಾಸ್ತ್ರೀ. ಎ.ಕೆ., ೨೦೦೧, ಪುಟ ೭೫.
ಶಾಸ್ತ್ರೀ. ಎ.ಕೆ., ಪುಟ ೨೦೭.
೨೮. ಶಾಸ್ತ್ರೀ. ಎ.ಕೆ., ಪುಟ ೮೯, ೯೦.
ಶಾಸ್ತ್ರೀ. ಎ.ಕೆ., ೨೦೦೩, ಪು. ೨೧೯, ೨೨೦.
೨೯. ಶಾಸ್ತ್ರೀ. ಎ.ಕೆ., ೨೦೦೧, ಪುಟ ೨೨.
೩೦. ಶಾಸ್ತ್ರೀ.ಎ.ಕೆ., ಪುಟ ೩೯.
ಸುಬ್ರಹಣ್ಯಂ ಅಯ್ಯರ್ ವಿ., ಶೃಂಗೇರಿ ಮಠದ ಪ್ರಕ್ತನಶಾಸ್ತ್ರ ಲೇಖನ ಮೂಲ ಸಂಪುಟ ೧, ಗೌರ್ನಮೆಂಟ್ ಪ್ರೆಸ್, ಮೈಸೂರು, ೧೯೨೭, ಪುಟ ೩೯.
೩೧. ಶಾಸ್ತ್ರೀ.ಎ.ಕೆ., ೨೦೦೧, ಪುಟ ೩೯.
ಸುಬ್ರಹಣ್ಯಂ ಅಯ್ಯರ್ ವಿ., ೧೯೨೭, ಪುಟ–೩೯.
೩೨. ಶಾಸ್ತ್ರೀ.ಎ.ಕೆ., ೨೦೦೧, ಪುಟ ೪೧.
ಸುಬ್ರಹಣ್ಯಂ ಅಯ್ಯರ್ ವಿ., ೧೯೨೭, ಪುಟ ೩೭, ೩೮.
೩೩. ಶಾಸ್ತ್ರೀ.ಎ.ಕೆ., ಪುಟ ೧೭೪, ೭೫.
೩೪. ಶಾಸ್ತ್ರೀ.ಎ.ಕೆ., ೨೦೦೧, ಪುಟ ೬೪, ೬೫.
೩೫. ಶಾಸ್ತ್ರೀ.ಎ.ಕೆ., ೧೯೮೩, ಪುಟ ೧೯೨.
೩೬ ಅದೇ., ಪುಟ ೧೯೧, ೧೯೮೩.
೩೭. ಅದೇ., ಪುಟ ೧೯೨.
೩೮. ಅದೇ., ಪುಟ ೧೯೩.

೪೨

ವಿಜಯನಗರ ಪೂರ್ವ ಶಾಸನಗಳಲ್ಲಿ (ಕರ್ನಾಟಕದಲ್ಲಿ) ವೀರಭದ್ರ ಆರಾಧನೆ

ಸರಸ್ವತಿ ಟಿ.*

ಶಿವನ ಪರಿವಾರ ವರ್ಗದಲ್ಲಿ ಒಬ್ಬನಾದ ವೀರಭದ್ರರ ದೇವತೆಯ ರೂಪುಗೊಂಡ ಕಥೆ ಪ್ರಥಮವಾಗಿ, ಮಹಾಭಾರತದ ಶಾಂತಿಪರ್ವದಲ್ಲಿ ಉಕ್ತವಾಗಿರುತ್ತದೆ. ನಂತರ ರಾಮಯಣ, ಕೆಲವು ಪುರಾಣಗಳಲ್ಲಿ ಅಲ್ಪ ಸಲ್ಪ ವ್ಯತ್ಯಾಸಗಳೊಂದಿಗೆ ನಿರೂಪಿತವಾಗಿರುತ್ತದೆ.

ಮೂಲಕಥೆಯಲ್ಲಿ, ದಕ್ಷನು ಶಿವನೊಂದಿಗಿದ್ದ ದ್ವೇಷದ ಹಿನ್ನೆಲೆಯಲ್ಲಿ ಶಿವರಹಿತ ಯಾಗ ಮಾಡಲು ನಿಶ್ಚಯಿಸಿ ಇಂದ್ರನ ನೇತೃತ್ವದ ದೇವಾನುದೇವತೆಗಳಾದ ರುದ್ರರು, ಬ್ರಹ್ಮ, ಸೂರ್ಯ, ವಸು, ಅಶ್ವಿನಿ ಇತ್ಯಾದಿ ಆಹ್ವಾನಿಸಿ ಯಜ್ಞ ಮಾಡುತ್ತಿರುತ್ತಾನೆ. ಇದನ್ನು ಅರಿತ ಶಿವನ ಪತ್ನಿ ಉಮಾ ಯಾಗದ ಪಾಲು ತಮಗೂ ದಕ್ಕಬೇಕು ಎಂದು ಒತ್ತಾಯಿಸಿದ ಪರಿಣಾಮ ಶಿವ ಪ್ರಾಣವಾಯುವಿನಿಂದ ವೀರಭದ್ರನನ್ನು ಸೃಷ್ಟಿಸುತ್ತಾನೆ. ಶಿವನ ಅಣತಿಯಂತೆ ವೀರಭದ್ರನು ಯಾಗ ಧ್ವಂಸ ಮಾಡಿ ದಕ್ಷನ ಶಿರವನ್ನು ಕತ್ತರಿಸಿ, ದೇವಾನುದೇವತೆಗಳನ್ನು ಬಂಧಿಸುತ್ತಾನೆ. ಬ್ರಹ್ಮನ ಪ್ರಾರ್ಥನೆ ಮೇರೆಗೆ ಶಿವನು ದಕ್ಷನಿಗೆ ಮರುಜೀವವನ್ನಿಟ್ಟು ಯಾಗ ಪೂರ್ಣ ಮಾಡಲು ಅನುವು ಮಾಡಿಕೊಡುವುದು ಕಂಡುಬರುತ್ತದೆ.[೧]

ವಿಜಯನಗರಪೂರ್ವ ಕಾಲದಲ್ಲಿ, ಶಾಸನದ ಆಧಾರದ ಮೇಲೆ, ವೀರಭದ್ರ ಉಪಾಸನೆ ಬಗ್ಗೆ ಪರಿಶೀಲಿಸಿದಾಗ ಸುಮಾರು ೨೪ ವೀರಭದ್ರ ಉಲ್ಲೇಖಿತ ಶಾಸನಗಳು ದೊರೆತಿದ್ದು, ಇವುಗಳಲ್ಲಿ ಸು. ೬ ಶಾಸನಗಳು ಖಚಿತವಾಗಿ ವೀರಭದ್ರ ಉಪಾಸನೆ ಇರುವಿಕೆಯ ಬಗ್ಗೆ ಆಧಾರ ನೀಡ ಬಲ್ಲವಾಗಿವೆ. ಇವುಗಳಲ್ಲಿ ಒಂದು ಶಾಸನ ಚೋಳರ ಕಾಲಕ್ಕೆ ಸೇರಿದರೆ, ೩ ಶಾಸನಗಳು ಹೊಯ್ಸಳರ ಕಾಲಕ್ಕೆ ಸೇರಿರುತ್ತವೆ ಮತ್ತು ಉಳಿದ ೨ ಶಾಸನಗಳು ಅರಸು ಮನೆತನಗಳ ಬಗ್ಗೆ ಉಲ್ಲೇಖಿಸಿರುವುದಿಲ್ಲ. ಈ ಶಾಸನಗಳಲ್ಲಿ ವೀರಭದ್ರದೇವರಿಗೆ ಪೂಜಾ ಸೌಕರ್ಯಕ್ಕಾಗಿ ದತ್ತಿ ಬಿಟ್ಟ ವಿಷಯ ಪ್ರತಿಷ್ಠಾಪನೆ ವಿಷಯ ಮತ್ತು ದೇಗುಲ ಕಟ್ಟಿಸುವುದರ ವಿಚಾರಗಳ ಬಗ್ಗೆ ಬೆಳಕು ಚಲ್ಲುತ್ತವೆ.

ಕೋಲಾರ ಶಾಸನ (ಕ್ರಿ.ಶ ೧೦೭೧)–ಚೋಳರ ಆಳ್ವಿಕೆಗೆ ಒಳಪಟ್ಟ ಕರ್ನಾಟಕದ ಭಾಗವಾದ ಗಂಗವಾಡಿ/ಕೊಡಗು ಪ್ರದೇಶದ ಕೋಲಾರದಲ್ಲಿ ವೀರಭದ್ರ, ಸಪ್ತಮಾತೃಕೆಯರು, ಗಣೇಶ, ಇತ್ಯಾದಿ ಪ್ರತಿ ದೇವತೆಗಳಿಗೂ ದೇವದಾನ ಗ್ರಾಮಗಳಿಂದ ಪೂಜಾಸೌಕರ್ಯಕ್ಕಾಗಿ ಉತ್ಪತ್ತಿ (ಆದಾಯ) ಬಿಟ್ಟ ವಿಷಯ ದಾಖಲಾಗಿರುತ್ತದೆ.[೨]

ಚಿಕ್ಕಮಗಳೂರು ಶಾಸನ (ಕ್ರಿ.ಶ. ೧೨೫೭)–ಹೊಯ್ಸಳರ ಆಳ್ವಿಕೆಗೆ ಒಳಪಟ್ಟ ಚಿಕ್ಕಮಗಳೂರಿನಲ್ಲಿ ಸೋಮನಾಥ ಮತ್ತು ವೀರಭದ್ರ ದೇವರನ್ನು ಪ್ರತಿಷ್ಠಾಪಿಸಿ, ದತ್ತಿಬಿಟ್ಟ ವಿಷಯ ತಿಳಿಸುತ್ತದೆ.[೩]

ಕುಂಕೋವಾ ಶಾಸನ (ಕ್ರಿ.ಶ. ೧೨೬೨)–ಕುಂಕೋವ ಗ್ರಾಮದಲ್ಲಿ ವೀರಭದ್ರದೇಗುಲ ಕಟ್ಟಿಸುವಾಗ ರಾಮುಗ ಎಂಬುವನು ಕಲ್ಲುಬಿದ್ದು ಶಿವೈಕ್ಯನಾದ, ಶಿವಾರ್ಪಿತವಾಗಿ ಶಿಲಾನೆಟ್ಟು ಭೂದಾನ ನೀಡಿದರ ಬಗ್ಗೆ ತಿಳಿಸುತ್ತದೆ.[೪]

ಸಿದ್ಧಾಪುರ ಶಾಸನ (ಕ್ರಿ.ಶ. ೧೨೮೫)–ವೀರಭದ್ರ ಮತ್ತು ಮಹಾಲಿಂಗದೇವರಿಗೆ ಪೂಜಾಸೌಕರ್ಯಕ್ಕಾಗಿ ವಿವಿಧ ದಾನಗಳನ್ನು ನೀಡಿದ ವಿಚಾರ ತಿಳಿಸುತದೆ.[೫]

ಕುಂಕೋವಾ ಶಾಸನ (ಕ್ರಿ.ಶ. ೧೩೨೦)–ಕುಂಕೋವದ ವೀರೇಶ್ವರ ದೇವರಿಗೆ ನೈವೇದ್ಯಕ್ಕಾಗಿ ಭೂದಾನ ಬಿಟ್ಟ ವಿಚಾರವಿದೆ.[೬]

ಹೊಸಾಳ ಶಾಸನ (ಕ್ರಿ.ಶ. ೧೩೩೪)–ಉಡುಪಿ (ತಾ) ವೀರೇಶ್ವರದೇವರಿಗೆ ಭೂದಾನ ಮತ್ತು ಹಣ ನೀಡಿದರ ಬಗ್ಗೆ ತಿಳಿಯಪಡಿಸುತ್ತದೆ.[೭]

* ಜಿನ್ನನಹಳ್ಳಿ, ಹಿರಿಸಾವೆ ಹೋಬಳಿ, ಚನ್ನರಾಯಪಟ್ಟಣ ತಾ॥ ಹಾಸನ – ೫೭೩೧೨೪

ಹಾಗೂ ಪರೋಕ್ಷ ಆಧಾರಗಳಿಂದ ಗಂಗವಾಡಿ/ಕೊಡಗು ಪ್ರದೇಶಗಳಲ್ಲಿ ಅಂದರೆ ಕೊಡಗಿನ ಕಾವೇರಿ ನದಿ ತೀರದಲ್ಲಿ ಮತ್ತು ಚಾಮರಾಜನಗರ ಜಿಲ್ಲೆಯ ಬಂಡಳ್ಳಿಯಲ್ಲಿ ಚೋಳ ಪ್ರತಿಷ್ಠಾ ವೀರಭದ್ರ ದೇಗುಲಗಳು (ಕ್ರಿ.ಶ. ೧೦೦೪–೧೧೧೬) ಇದ್ದವೆಂದು ತಿಳಿದುಬರುತ್ತದೆ.[೮]

ಒಟ್ಟಿನಲ್ಲಿ ಮೇಲಿನ ಶಾಸನಗಳ ಸಾಹಿತ್ಯ ಅಧ್ಯಯನದಿಂದ ನಾವು ಈ ಕೆಳಕಂಡ ಅಭಿಪ್ರಾಯಗಳನ್ನು ಹೊಂದಬಹುದಾಗಿದೆ.

*ವಿಜಯನಗರ ಪೂರ್ವದಲ್ಲಿ ಕರ್ನಾಟಕವನ್ನಾಳಿದ ಅರಸು ಮನೆತನಗಳಲ್ಲಿ ಚೋಳರ ಮತ್ತು ಹೊಯ್ಸಳರ ರಾಜ ಮನೆತನದ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳಲ್ಲಿ ವೀರಭದ್ರನ ಉಪಾಸನೆ ಕಂಡುಬರುತ್ತದೆ.

* ಚೋಳರ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳಲ್ಲಿ (ಗಂಗವಾಡಿ) ವೀರಭದ್ರನ ಉಪಾಸನೆ ಆರಂಭಗೊಂಡು,ಹೊಯ್ಸಳರ ನಾಡಿಗೆ ಪಸರಿಸಿ, ವಿಜಯನಗರ ಕಾಲದಲ್ಲಿ (ಹಂಪೆ) ವ್ಯಾಪಕವಾದಂತೆ ಕಂಡುಬರುತ್ತದೆ.

* ಕೋಲಾರ ಶಾಸನ (ಕ್ರಿ.ಶ. ೧೦೭೧) ಪ್ರಥಮವಾಗಿ ವೀರಭದ್ರನ ಆರಾಧನೆ ಬಗ್ಗೆ, ಚಿಕ್ಕಮಗಳೂರು ಶಾಸನ (ಕ್ರಿ.ಶ. ೧೨೫೭) ಪ್ರಥಮವಾಗಿ ವೀರಭದ್ರ ದೇವರ ಪ್ರತಿಷ್ಠಾಪಿಸುವ ಬಗ್ಗೆ ಮತ್ತು ಕುಂಕೋವಾ ಶಾಸನ (ಕ್ರಿ.ಶ. ೧೨೬೨) ಪ್ರಥಮವಾಗಿ ವೀರಭದ್ರ ದೇಗುಲ ಕಟ್ಟಿಸುವುದರ ಬಗ್ಗೆ ತಿಳಿಸುತ್ತದೆ.

ಒಟ್ಟಾರೆ ಕ್ರಿ.ಶ. ೧೧ನೇ ಶತಮಾನದ ಆದಿಯಿಂದಲೇ ಅಂದರೆ ೧೨ನೇ ಶತಮಾನದ ಬಸವ ವೀರಶೈವಧರ್ಮ ಉದಯವಾಗುವುದಕ್ಕೂ ಮುನ್ನವೆ ದೂರದ ದಕ್ಷಿಣದ ಕರ್ನಾಟಕದಲ್ಲಿ ವೀರಭದ್ರ ಆರಾಧನೆ ಕಾಣಬರುತ್ತದೆ. ಕ್ರಮೇಣ ಹಂತಹಂತವಾಗಿ ಉತ್ತರದ ಕಡೆಗೆ ಪಸರಿಸಿದಂತೆ ಕಂಡುಬರುತ್ತದೆ.

ಅಡಿಟಿಪ್ಪಣಿ

೧. Jeyapriya rarajan Terrific manifestations of siva, Virabhadra sharada publishing house, delhi-2009, p. 23.

೨. **ಎ.ಕ. ೧೦, (ರೈಸ್)** ಕೋಲಾರ (ಜಿ), **ಸಂಚಿಕೆ–೨,** ನಂ. ೧೦೮, ೧೯೦೫, ಪುಟ ೨೬.

೩. ಎ.ಕ. ೧೧, (ಹೊಸತು), ಚಿಕ್ಕಮಗಳೂರು (ಜಿ), ನಂ. ೧, ೧೯೯೮, ಪುಟ ೩.

೪. **ಎ.ಕ. ೭ (ರೈಸ್),** ಕುಂಕೋವಾ ಹೊನ್ನಾಳಿ (ತಾ), ಶಿವಮಾಗ್ಗ (ಜಿ), ನಂ. ೭೭, ಸಂಚಿಕೆ–೧, ೧೯೦೨, ಪುಟ ೪೦೭.

೫. **ಎ.ಕ. ೯ (ಹೊಸತು),** ಹಾಸನ (ಜಿ), ಬೇಲೂರು (ತಾ). ಸಿದ್ಧಾಪುರ ಶಾಸನ, ನಂ. ೪೫೯, ೧೯೯೦, ಪುಟ ೪೧೨.

೬. **ಎ.ಕ. ೭ (ರೈಸ್),** ಕುಂಕೋವಾ ಹೊನ್ನಾಳಿ (ತಾ), ಶಿವಮಾಗ್ಗ (ಜಿ), ನಂ. ೭೮, ಸಂಚಿಕೆ–೧, ೧೯೦೨, ಪುಟ ೪೦೭.

೭. **ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್**–೨೭, ಹೊಸಾಳ, ಉಡುಪಿ (ತಾ) ದ.ಕ. (ಜಿ), ನಂ. ೩೭, ೨೦೦೧, ಪುಟ ೪೬.

೮. **ಎ.ಕ ೪ (ಹೊಸತು),** ಬಂಡಳ್ಳಿ, ಕೊಳ್ಳೇಗಾಲ (ತಾ), ಚಾಮರಾಜನಗರ (ಜಿ), ನಂ. ೬೭, ೧೯೭೫ ಪುಟ ೪೪೭ ಮತ್ತು **ಗೆಜೇಟಿಯರ್ ಆಫ್ ಇಂಡಿಯ,** ಮೈಸೂರು ಸ್ಟೇಟ್, ಕೂರ್ಗ (ಜಿ), ೧೯೬೫, ಪುಟ ೪೫.

೪೩

ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಆಳ್ವಿಕೆಯ ಕೆಲವು ಮಹತ್ವದ ಅಂಶಗಳು: ಒಂದು ವಿವೇಚನೆ

ಬೋರಯ್ಯ ಆರ್.ಎನ್.*

ಮದ್ಯಕಾಲೀನ ಭಾರತದ ಇತಿಹಾಸದಲ್ಲಿ ಹೊಯ್ಸಳರ ನಂತರ ಅಧಿಕಾರಕ್ಕೆ ಬಂದ ವಿಜಯನಗರ ಸಾಮ್ರಾಜ್ಯ ಕ್ರಿ.ಶ. ೧೩೩೬ರಿಂದ ೧೫೬೫ರವರೆಗೆ ಹಂಪೆಯಲ್ಲಿ ಸುಮಾರು ೨೨೯ ವರ್ಷಗಳ ಕಾಲ ಆಳ್ವಿಕೆ ನಡೆಸಿತು. ವಿಜಯನಗರದ ಸ್ಥಾಪನೆ ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯವಾದುದು. ಮುಸ್ಲಿಮರ ದಾಳಿಗಳಿಂದ ಜರ್ಝರಿತವಾಗಿದ್ದ ಹಿಂದು ಧರ್ಮದ ಶ್ರೀರಕ್ಷೆಯಾಗಿ ಉದಯವಾದ ಕಟ್ಟಕಡೆಯ ಹಿಂದೂ ಸಾಮ್ರಾಜ್ಯವಾಗಿದೆ.

ವಿಜಯನಗರದ ಅರಸರು ಚಿತ್ರದುರ್ಗ ಪ್ರದೇಶವನ್ನು ತಮ್ಮ ರಾಜ್ಯದ ಒಂದು ಭಾಗವನ್ನಾಗಿಸಿಕೊಂಡು ಆಡಳಿತ ನಡೆಸಿದರು. ಈ ಭಾಗವು ವಿಜಯನಗರದ ಆಸೆ, ಆಕಾಂಕ್ಷೆ ಹಾಗೂ ಧ್ಯೇಯೋದ್ದೇಶಗಳನ್ನು ಪೂರೈಸುವ ಬಹುಮುಖ್ಯವಾದ ಘಟಕವಾಗಿತ್ತು. ಏಕೆಂದರೆ ವಿಜಯನಗರದ ಅರಸರು ತಮ್ಮ ಸಾಮ್ರಾಜ್ಯವನ್ನು ಹೆಚ್ಚಾಗಿ ದಕ್ಷಿಣ ಭಾರತದಲ್ಲಿ ವಿಸ್ತರಿಸಿದರು. ಹಂಪಿ ಮತ್ತು ಕರ್ನಾಟಕದ ದಕ್ಷಿಣ ಭಾಗದ ಮಧ್ಯ ಇರುವ ವಿಸ್ತಾರವಾದ ಭೂಪ್ರದೇಶವನ್ನು ಸಹಜವಾಗಿ ಅವರು ರಾಜಕೀಯ ಹಾಗೂ ಸೈನಿಕ ನೆಲೆಯನ್ನಾಗಿ ಬಳಸಿಕೊಂಡರು.


ಚಿತ್ರದುರ್ಗ ಪ್ರದೇಶವು ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶವಾಗಿತ್ತು. ಹಾಗಾಗಿ ಸಹಜವಾಗಿಯೇ ಕೋಟೆ–ಕೊತ್ತಲಗಳನ್ನು ಕಟ್ಟಿಸಿಕೊಳ್ಳಲು ಇದು ವಿಜಯನಗರದ ಅರಸರಿಗೆ ಸಹಕಾರಿಯಾಗಿತ್ತು. ಅಲ್ಲದೆ ಉತ್ತಮ ಸಂಪನ್ಮೂಲಗಳು ದೊರಕುತ್ತಿದ್ದರಿಂದಲೂ ಮಿಲಿಟರಿ ದೃಷ್ಠಿಯಿಂದ ಬಹುಮುಖ್ಯ ಪ್ರದೇಶವಾಗಿತ್ತು. ಜೊತೆಗೆ ಭಾರತದ ಉತ್ತರ ಹಾಗೂ ನೈರುತ್ಯ ಭಾಗಗಳ ನಡುವೆ ಹೋಗುವ ಹೆದ್ದಾರಿಯಲ್ಲಿ ಇದ್ದುದರಿಂದ ಸಹಜವಾಗಿಯೇ ವಿಜಯನಗರದ ರಾಜರು ತಮ್ಮ ನೇರ ಆಳ್ವಿಕೆಗೆ ಒಳಪಡಿಸಿಕೊಂಡು ಸಾಮ್ರಾಜ್ಯಗಳನ್ನು ಸೀಮೆ, ಚಾವಡಿ, ಮಾಗಣಿ, ಸಂಮತ್ತ, ಹೋಬಳಿ, ಕಸುಬೆ, ವೆಂಟೆ, ರಾಜ್ಯ, ವಳಿತ, ನಾಡು ಮುಂತಾದ ಪ್ರಾದೇಶಿಕ ವಿಭಾಗಗಳನ್ನು ಸ್ಥಾಪಿಸಿಕೊಂಡು ಆಳ್ವಿಕೆ ನಡೆಸಿದ್ದರೆಂಬುದನ್ನು ಚಿತ್ರದುರ್ಗ ಪ್ರದೇಶದಲ್ಲಿ ಅವರ ಕಾಲದಲ್ಲಿ ದೊರೆತ ಶಾಸನಗಳಿಂದ ತಿಳಿದುಬರುತ್ತದೆ.


ವಿಜಯನಗರ ಆಡಳಿತಾವಧಿಯಲ್ಲಿ ಚಿತ್ರದುರ್ಗ ಪ್ರದೇಶದಲ್ಲಿ ೧೨ ಸೀಮೆಗಳು, ೧೯ ಸ್ಥಳಗಳು ಹಾಗೂ ೬ ನಾಡುಗಳು ಅಸ್ತಿತ್ವದಲ್ಲಿದ್ದವು. ಸೀಮೆಗಳಲ್ಲಿ ಪ್ರಮುಖವಾಗಿ ರಾಮಗಿರಿ, ಜಾಜೂರು, ಚಿತ್ರಹಳ್ಳಿ, ದುಮ್ಮಿ, ಬಾಗೂರು, ಬೂದಿಹಾಳು, ಮತ್ತೋಡು, ಹಿರಿಯೂರು, ಗುಂಟನೂರು, ದೊಡ್ಡೇರಿ, ನವಬಾಕುವಾಡ ಮತ್ತು ಹೊಳಲ್ಕೆರೆ ಸೀಮೆಗಳು ಸ್ಥಳಗಳಲ್ಲಿ ಅರಳಿಹಾಳ, ಕುರುಬರಹಳ್ಳಿ, ಗೌಡನಹಳ್ಳಿ, ತವನಿಧಿ, ನಂದನಸೋಮ, ನುಲಿಯನೂರು, ಬಗ್ಗನಡು, ಮಧ್ವಸಮುದ್ರ, ಮಲೆಯನೂರು, ಇಕ್ಕನೂರು, ಲಕ್ಕಿಹಳ್ಳಿ, ಹರತಿ ಮತ್ತು ಹೊಸೂರು ಮುಖ್ಯವಾಗಿವೆ.

ಅಂಕಸಮುದ್ರ, ವೇಣುಕಲ್ಲುಗುಡ್ಡ, ಗೋಸಿಕೆರೆ, ಚಿಂಮತ್ತನಕಲ್ಲು, ಚಿತ್ರಹಳ್ಳಿ, ನಾಡುಗಳಲ್ಲಿ ಮುಖ್ಯವಾದವುಗಳೆಂದು ಹೇಳಲಾಗಿದೆ.

ಈ ಮೇಲ್ಕಂಡ ವಿಭಾಗಗಳಲ್ಲದೆ ಬಾಗೂರುವಳಿತ, ಕೋಟೆಕೆರೆಯವೆಂಟೇ, ಬಯಕಾರ ರಾಮಪ್ಪನ ಮಾಗಣಿ, ಧರ್ಮಪುರ ಸಮ್ಮತ್ತು, ಚಿಮ್ಮತ್ತನೂರುವಿತ್ತಿ, ಇನ್ನು ಮುಂತಾದ ಆಡಳಿತ ವಿಭಾಗಗಳು ಜಿಲ್ಲೆಯಾದ್ಯಂತ ಕಂಡುಬರುತ್ತವೆ. ಇವುಗಳಿಂದ ವಿಜಯನಗರ ಅರಸರು ಇಡೀ ಚಿತ್ರದುರ್ಗ ಜಿಲ್ಲೆಯನ್ನು ತಮ್ಮ ಆಡಳಿತದ ಭಾಗಗಳನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ. ವಿಜಯನಗರದ ಅರಸರು ಚಿತ್ರದುರ್ಗ ಪ್ರದೇಶದಲ್ಲಿ ಆಳ್ವಿಕೆ ಮಾಡಿರುವುದಕ್ಕೆ ಹಲವಾರು ರೀತಿಯ ಕೆಲವು ಮಹತ್ವ ಅಂಶಗಳನ್ನು ನಾವು ಕಾಣುತ್ತೇವೆ. ಅಂತಹ ಮಹತ್ವದ ಸಂಗತಿಗಳೆಂದರೆ:

* ಪಿಹೆಚ್.ಡಿ ಸಂಶೋಧನಾರ್ಥಿ, ಭಾರತೀಯಾರ್ ವಿಶ್ವವಿದ್ಯಾನಿಲಯ, ಕೊಯಿಮತ್ತೂರು.





ಚಿತ್ರದುರ್ಗದ ಬೆಟ್ಟದ ಮೇಲಿರುವ ಸಂಪಿಗೆ ಸಿದ್ದೇಶ್ವರ ದೇವಾಲಯದ ೧ನೆಯ ಬುಕ್ಕರಾಯನ ಶಾಸನದಲ್ಲಿ ಚಿಮ್ಮತ್ತನಕಲ್ಲು ನಾಡನ್ನು ಮಲ್ಲಿನಾಥ ಒಡೆಯನು ಆಳುತ್ತಿದ್ದಾಗ ಈತನು ಸಂಪಿಗೆ ಸಿದ್ದೇಶ್ವರದೇವರಿಗೆ ಕಲ್ಲಿನ ಉಪ್ಪರಿಗೆ ಮತ್ತು ಉಯ್ಯಾಲೆಯನ್ನು ಮಾಡಿಸಿ ಶಿಖರ ಪ್ರತಿಷ್ಠಾಪನೆ ಮಾಡಿಸಿ ಎರಡು ಗ್ರಾಮಗಳನ್ನು ದತ್ತಿ ಬಿಟ್ಟಿದಾಗಿ ಹೇಳುತ್ತದೆ. ಈ ಮಲ್ಲಿನಾಥ ಒಡೆಯನಿಗೆ ನಡೆಗೊಂಟೆಮಲ್ಲ ಎಂಬ ಬಿರುದಿತ್ತು. ನಡೆಗೋಂಟೆ ಎಂದರೆ ವೀರರು ಕೋಟೆಯಂತೆಯೇ ನೀಡುತ್ತಿದ್ದ ರಕ್ಷಣೆಯನ್ನು ಕವಿಗಳು ಗಮನಿಸಿ ಅವರನ್ನು ನಡೆಗೋಂಡೆ ಎಂಬುದಾಗಿ ಕರೆದಿದ್ದಾರೆ. ಇದೇ ರೀತಿಯಾಗಿ ಮತ್ತು ಶಾಸನವು ದೇವಾಲಯ ದತ್ತಿಗಳ ರಕ್ಷಣೆಯನ್ನು ಪೌರಾಣಿಕವಾಗಿ ಕಾವ್ಯಮಯ ಶೈಲಿಯಲ್ಲಿ ಹೇಳುತ್ತದೆ.

ಹಿಡಿಂಬೇಶ್ವರ ದೇವಾಲಯದಲ್ಲಿನ ಶಾಸನವು ವಿಜಯನಗರ ವೀರ ಪ್ರತಾಪದೇವರಾಯನ ಮಗ ವೀರಮಲ್ಲಣ ಒಡೆಯನು ಮಹಾಮಂಡಲೇಶ್ವರನಾಗಿ ಚಿಮ್ಮತ್ತನಕಲ್ಲು ಪಟ್ಟಣದಲ್ಲಿ ಆಳುತ್ತಿದ್ದಾಗ ಇದೇ ದೇವಾಲಯದ ದಕ್ಷಿಣ ದ್ವಾರಕ್ಕೆ ಕಲ್ಲುಗೋಪುರ ಕಟ್ಟಿಸಿದನೆಂದು ತಿಳಿಸುತ್ತದೆ. ಈಗಲೂ ಈ ಗಾಳಿಗೋಪುರಗಳು ಆ ಕಾಲದ ಜೀವಂತ ಸಾಕ್ಷಿಗಳಾಗಿವೆ.

ವಿಜಯನಗರದ ಅರಸರು ಈ ಜಿಲ್ಲೆಯಲ್ಲಿ ಸುವ್ಯವಸ್ಥಿತವಾದ ಹಾಗೂ ಕ್ರಮಬದ್ಧವಾದ ಆಡಳಿತವನ್ನು ಏರ್ಪಡಿಸುವುದರ ಜೊತೆಗೆ ಕೃಷಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದರು. ಕೃಷ್ಣದೇವರಾಯನ ಕಾಲದಲ್ಲಿ ಈ ಜಿಲ್ಲೆಯ ಒಂದು ಭಾಗದ ಜನರು ತೆರಿಗೆಯ ಭಾರದಿಂದ ಬಳಲುತ್ತಿದ್ದಾಗ ಅವನ ಕೈಕೆಳಗಿನ ಅಧಿಕಾರಿ ಕಾಣಿಕೆ, ಮೇಲುಪಣ ಮತ್ತು ಕಬ್ಬಿನ ಮೇಲಿನ ಸುಂಕವನ್ನು ರದ್ದುಪಡಿಸಿದ. ಅದೇ ರೀತಿ ಅಚ್ಯುತರಾಯನ ಆಜ್ಞೆಯ ಮೇರೆಗೆ ಬಾಗೂರು ಸೀಮೆಯಲ್ಲಿ ಮದುವೆಯ ಸುಂಕವನ್ನು ರದ್ದುಪಡಿಸಲಾಯಿತು. ಹಾಗೆಯೇ ಜಿಲ್ಲೆಯ ಅನೇಕ ಕಡೆ ಅಗ್ರಹಾರಗಳನ್ನು ಸ್ಥಾಪಿಸುವುದರ ಮೂಲಕ ವಿದ್ಯಾರ್ಜನೆಗೆ ಪ್ರೋತ್ಸಾಹ ಕೊಟ್ಟಿದ್ದರು ಎಂಬುದಕ್ಕೆ ವಿಜಯನಗರ ಅರಸರ ಕಾಲಾವಧಿಯ ಶಾಸನಗಳಿಂದ ದೃಢಪಟ್ಟಿದೆ. ಹೊಳಲ್ಕೆರೆಯ ಗಣಪತಿ ದೇವಾಲಯದ ಎಡಭಾಗದಲ್ಲಿರುವ ಶಾಸನದಿಂದ ವಿಜಯನಗರದ ಅರಸರು ಸೇವಕರಿಗೆ ಭೂಮಿ ನೀಡಿದ ಬಗ್ಗೆ ಬಲಭಾಗದ ಶಾಸನದಿಂದ ರಾಮರಾಜ ಮಹಾರಾಯರು ಕ್ಷೌರಿಕರಿಗೆ ಭೂಮಿ ಕೊಟ್ಟ ಬಗ್ಗೆ ಉಲ್ಲೇಖವಿದೆ.

ಕ್ರಿ.ಶ. ೧೫೧೫ರಲ್ಲಿ ಕೃಷ್ಣದೇವರಾಯನು ಆಳುವಾಗ ಮಲೆಯಬೆನ್ನೂರು ಸೀಮೆಯನ್ನು ಆಳುತ್ತಿದ್ದ ಗಜಪತಿ ಪ್ರತಾಪರುದ್ರನ ಮಗನಾದ ಶ್ರೀ ವೀರಭದ್ರ ಮಹಾರಾಯನಿಗೆ ತಂದೆಗೆ ಮತ್ತು ತನಗೆ ಪುಣ್ಯವಾಗಲೆಂದು ಮಲೆಯಬೆನ್ನೂರು ಸೀಮೆ ಮತ್ತು ಲಿಂಗವಳ್ಳಿ ಒಳಗಿನ ಮದುವೆಯ ಸುಂಕವನ್ನು ದಾನವಾಗಿ ಬಿಟ್ಟ ವಿಚಾರ ಶಾಸನದಿಂದ ತಿಳಿಯುತ್ತದೆ.

ಅಚ್ಯುತರಾಯನ ಕಾಲದಲ್ಲಿ ಶ್ರೀ ವೀರಭದ್ರದೇವರ ಅಮೃತಪಡಿಗೆ ಈ ಕಡಲೂರು ಗ್ರಾಮವನ್ನು ದತ್ತಿ ಬಿಟ್ಟ ಮತ್ತು ವಾಮರಸಯ್ಯನು ಕಡಲೂರು ಕೆರೆ ಕಟ್ಟಿಸಿ ಜೀರ್ಣೋದ್ಧಾರ ಮಾಡಿದ ಬಗ್ಗೆ ಅಲ್ಲಿನ ಶಾಸನದಿಂದ ತಿಳಿದುಬರುತ್ತದೆ. ವಿಜಯನಗರದ ಅರಸರು ಆಡಳಿತದ ದೃಷ್ಟಿಯಿಂದ ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯ ಹಾಗೂ ರಾಜ್ಯಗಳನ್ನಾಗಿ ವಿಭಾಗ ಮಾಡಿಕೊಂಡು ಆಡಳಿತದಲ್ಲಿ ರೂಢಿಸಿಕೊಂಡು ಬಂದ ವಿಶಿಷ್ಟ ವ್ಯವಸ್ಥೆಯೇ 'ಅಮರನಾಯಕ' ಅಥವಾ 'ನಾಯಂಕರ ಪದ್ಧತಿ' ಅಮರನಾಯಕ ಅರಸನು ನಿರ್ದಿಷ್ಟಪಡಿಸಿದ ಸೈನಿಕ ಸೇವೆಯನ್ನು ಸಲ್ಲಿಸಬೇಕಾದ ಸಾಮಂತ ಅಧಿಕಾರಿಗಳಾಗಿದ್ದರು ಇವರು ದ್ರವ್ಯ ಮತ್ತು ಸೈನಿಕ ಸೇವೆಯನ್ನು ಸಲ್ಲಿಸಲು ಇಂತಿಷ್ಟು ಭೂಮಿಯನ್ನು ಉಂಬಳಿಯಾಗಿ ಪಡೆಯುತ್ತಿದ್ದರು. ಭೂಮಿಯ ಉತ್ಪತ್ತಿಗೆ ಅನುಗುಣವಾಗಿ ಸೈನ್ಯವನ್ನು ಸಲಹಬೇಕಾಗಿದ್ದಿತು. ಈ ಅಮರನಾಯಕ ವ್ಯವಸ್ಥೆಯು ಅವರ

ಭೌಗೋಳಿಕ ಸ್ಥಾನ, ಗಾತ್ರ ಮತ್ತು ಸಂಪನ್ಮೂಲಗಳ ಮೇಲೆ ನಿರ್ಧರಿತವಾಗುತ್ತಿತ್ತು. ಅಮರನಾಯಕರು ತಮ್ಮ ಪ್ರದೇಶದಲ್ಲಿ ಕೋಟೆಗಳನ್ನು ಕಟ್ಟಲು ಹಾಗೂ ಸೇನೆಯನ್ನು ಇಟ್ಟುಕೊಳ್ಳಲು ಅವರಿಗೆ ಅವಕಾಶವಿತ್ತು. ಈ ಪದ್ಧತಿಯ ಆಧಾರದ ಮೇಲೆ ಈ ಜಿಲ್ಲೆಯಲ್ಲಿ ಅನೇಕ ಪ್ರದೇಶಗಳನ್ನು ಅಮರನಾಯಕರಿಗೆ ಕೊಡಲಾಗಿತ್ತು.

ಅಚ್ಯುತರಾಯನ ಕಾಲದಲ್ಲಿ ಹೊಳಲ್ಕೆರೆ ಪ್ರದೇಶದಲ್ಲಿ ಹಡಪ ಬೈಯಪೇಂದ್ರನಾಯಕ ಒಬ್ಬ ಅಮರನಾಯಕನಾಗಿದ್ದನು. ಅವನು ವಿದ್ವಾಂಸರಾಗಿದ್ದ ಬ್ರಾಹ್ಮಣರಿಗೆ ಸ್ವಲ್ಪ ಭೂಮಿಯನ್ನು ದಾನವಾಗಿ ಕೊಡಬೇಕೆಂದು ಚಕ್ರವರ್ತಿ ಅಚ್ಯುತರಾಯನ ಅನುಮತಿಯನ್ನು ಕೋರಿ ಪಡೆದನು.

ಚಿತ್ರದುರ್ಗದ ಪ್ರಥಮ ದೊರೆ ಮತ್ತಿ ತಿಮ್ಮಣ್ಣನಾಯಕನು ಒಬ್ಬ ಸಾಧಾರಣ ಅಮರನಾಯಕನಾಗಿದ್ದನು. ಈತನ ಪರಿಶ್ರಮ ಮತ್ತು ಪರಾಕ್ರಮಗಳನ್ನು ಗುರುತಿಸಿ ವಿಜಯನಗರದ ಅರಸರು ಕ್ರಿ.ಶ. ೧೪೩೫ರಲ್ಲಿ ಅವನಿಗೆ ಹೊಳಲ್ಕೆರೆಯ ಅಮರನಾಯಕನಾಗಿ ಬಡ್ತಿ ನೀಡಿ ಪುರಸ್ಕರಿಸಿದರು. ಹೀಗೆ ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರದ ಅರಸರು ತಮ್ಮದೇ ರೀತಿಯ ವೈಶಿಷ್ಟವಾದ ಆಡಳಿತದ ವಿವಿಧ ಘಟಕಗಳ ಮುಖಾಂತರವಾಗಿ ಆಳ್ವಿಕೆ ನಡೆಸಿರುವುದು ಅತ್ಯಂತ ಸಮರ್ಥವಾದಂತಹ ಸಂಗತಿಯಾಗಿದೆ.

ಆಧಾರ ಗ್ರಂಥಗಳು

೧. ಗಿರಿಜಾ, ಟಿ. ೨೦೦೧, ಚಿತ್ರದುರ್ಗ ಜಿಲ್ಲಾದರ್ಶಿನಿ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

೨. ಗೋಪಾಲ, ಆರ್. ೨೦೦೫–ಚಿತ್ರದುರ್ಗ ಜಿಲ್ಲಾ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೩. ಚಿದಾನಂದಮೂರ್ತಿ, ಎಂ. ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಂಗ, ಮೈಸೂರು ವಿಶ್ವವಿದ್ಯಾಲಯ.

೪. ಬಿ.ಎಲ್. ರೈಸ್, ಎಫಿಗ್ರಾಫಿಯ ಆಫ್ ಕರ್ನಾಟಕ, ಸಂಪುಟ ೧೧.

೫. ಕೃಷ್ಣಮೂರ್ತಿ ಡಿ.ವಿ., ೧೯೯೯ ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಕಾಲದ ಆಡಳಿತ ವಿಭಾಗಗಳು, ಪ್ರಾಚೀನ ಕರ್ನಾಟಕದ ಆಡಳಿತದ ವಿಭಾಗಗಳು, ಕಲಬುರ್ಗಿ, ಎಂ.ಎಂ. (ಸಂ), ಪು.೨೧೩.

೬ ಡಾ. ಎಸ್. ತಿಪ್ಪೇಸ್ವಾಮಿ, ೨೦೦೫, 'ರಕ್ಷಣಾ ವಾಸ್ತುಶಿಲ್ಪ' ಚಿತ್ರದುರ್ಗ ಜಿಲ್ಲೆ (ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ) ಕನ್ನಡ ವಿ.ವಿ. ಹಂಪಿ.

೭. ಪ್ರಾಚೀನ ಚಿತ್ರದುರ್ಗ–೨೦೧೬, ಡಾ. ಬಿ. ರಾಜಶೇಖರಪ್ಪ.

೮. ಸೋಮಶೇಖರ ಎಸ್.ವೈ. ೨೦೦೯, ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ, ಸಂಚಿಕೆ ಪ್ರಕಾಶನ, ಚಿತ್ರದುರ್ಗ.

ಮೈಸೂರು ಸೀಮೆಯ ಶಾಸನಗಳಲ್ಲಿ ಕಾವೇರಿ

ಡಾ. ಕೋ.ವೆಂ. ರಾಮಕೃಷ್ಣೇಗೌಡ*

ಜಗತ್ತಿನ ಪ್ರಾಚೀನ ನದಿಗಳಲ್ಲಿ ಒಂದಾಗಿರುವ ಕಾವೇರಿಯು ಪುರಾಣ ಕಾಲದಿಂದಲೂ ಮಹತ್ವವನ್ನು ಪಡೆದುಕೊಂಡಿರುವ ಜೀವಂತ ನದಿಯಾಗಿದೆ. ನದಿಯ ಜೀವಂತಿಕೆಯೊಡನೆ ಸಂಸ್ಕೃತಿಯೂ ಜೀವಂತವಾಗಿರುವುದಕ್ಕೆ ಕಾವೇರಿ ನದಿಯೊಡನೆ ಬೆಸೆದುಕೊಂಡಿರುವ ಧಾರ್ಮಿಕ ಹಾಗೂ ಭಾವನಾತ್ಮಕ ಅಂಶಗಳು ಗಮನ ಸೆಳೆಯುತ್ತವೆ. ನಾಗರಿಕತೆ ಅರಳಲು ಕಾರಣವಾಗಿರುವ ಕಾವೇರಿ ನದಿಯು ಕೊಡವ, ಕನ್ನಡ ಮತ್ತು ತಮಿಳು ಭಾಷಿಕ ಕುಲಗಳ ಭಾಷಿಕ, ಸಾಂಸ್ಕೃತಿಕ ಅನನ್ಯತೆಯ ಸಂಕೇತವಾಗಿಯೂ ಮುಖ್ಯವಾಗುತ್ತದೆ. ನದಿಯ ಹರಿಯುವಿಕೆಯಂತೆಯೇ ಭಿನ್ನ ಆಚರಣೆಗಳು; ವಿಭಿನ್ನ ನೆಲೆಗಳಲ್ಲಿ ತೆರೆದುಕೊಂಡಿರುವುದಲ್ಲದೆ ಶ್ರೇಷ್ಠತೆಯ ಹೆಗ್ಗುರುತಾಗಿಯೂ ಮಹತ್ವ ಪಡೆದುಕೊಂಡಿರುವುದನ್ನು ಗುರುತಿಸಬಹುದು. ಆರ್ಥಿಕ ಬೆಳವಣಿಗೆಯಲ್ಲಿ ಕಾವೇರಿ ನದಿಯ ಪಾತ್ರ ದೊಡ್ಡದು. ಪ್ರಭುತ್ವಗಳ ಅಸ್ತಿತ್ವ, ಪ್ರಾಬಲ್ಯಕ್ಕಾಗಿ ಪೈಪೋಟಿ, ಸೋಲು-ಗೆಲುವುಗಳ ಕಹಿ-ಸಿಹಿ ಅನುಭವದ ಹೆದ್ದಾರಿಯಾಗಿ, ರಾಜಕೀಯ ಏಳುಬೀಳುಗಳ ಸಾಕ್ಷಿಪ್ರಜ್ಞೆಯಾಗಿ ಪರಿಣಮಿಸಿರುವ ಕಾವೇರಿ ನದಿಯು ಶತಮಾನಗಳುದ್ದಕ್ಕೂ ಕನ್ನಡ ಮತ್ತು ತಮಿಳು ಭಾಷಿಕ ಕುಲಗಳ ಸಂಘರ್ಷದ ಕೇಂದ್ರಬಿಂದುವಾಗಿದೆ. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ, ಚಾರಿತ್ರಿಕ, ಸಾಹಿತ್ಯಕ, ಭೌಗೋಳಿಕ ವಿಕಸನಕ್ಕೆ ಮೂಲ ಕಾರಣವಾಗಿರುವ ಕಾವೇರಿ ನದಿಯು ತನ್ನ ಪಾತ್ರವನ್ನು ಸಮೃದ್ಧ, ಶ್ರೀಮಂತವಾಗಿ ಮಾಡಿದೆ. ಕೊಡಗು ಜಿಲ್ಲೆ ತಲಕಾವೇರಿಯಲ್ಲಿ ಹುಟ್ಟಿ ಸಮುದ್ರವನ್ನು ಸೇರುವ ವರೆಗೆ ೮೦೨ ಕಿಲೋಮೀಟರು ಹರಿಯುತ್ತದೆ. ಜೀವಂತ ದಾಖಲೆಗಳಾಗಿರುವ ಶಾಸನಗಳು ಕಾವೇರಿ ನದಿಯ ಉದ್ದಕ್ಕೂ ಎರಡೂ ಬದಿಯಲ್ಲಿ ಹೇರಳವಾಗಿ ದೊರೆಯುತಿವೆ.

ಕರ್ನಾಟಕದ ಮೈಸೂರು ಸೀಮೆಯಲ್ಲಿ ಸಾವಿರಾರು ಶಾಸನಗಳು ದೊರೆತಿವೆಯಾದರೂ, ಕಾವೇರಿ ನದಿಯ ಉಲ್ಲೇಖವಿರುವ ೧೦೭ ಶಾಸನಗಳು ನಮ್ಮ ಗಮನ ಸೆಳೆಯುತ್ತವೆ. ಮೈಸೂರು ಜಿಲ್ಲೆಯ ೪೭ ಶಾಸನಗಳಲ್ಲಿ ಕಾವೇರಿಯ ಉಲ್ಲೇಖವಿದೆ. ಕೃಷ್ಣರಾಜನಗರ ತಾಲ್ಲೂಕಿನ ಹನಸೋಗೆ ಮತ್ತು ಕೃಷ್ಣರಾಜನಗರದಲ್ಲಿ ತಲಾ ಎರಡು, ಮಿರ್ಲೆ, ಭೇರ್ಯ, ಮುಂಡೂರು, ಮಾಚನಹಳ್ಳಿ, ಹನಸೋಗೆ ಸ್ಥಳಗಳಲ್ಲಿ ತಲಾ ಒಂದು ಶಾಸನ ದೊರೆತಿದೆ. ತಿರುಮಕೂಡಲು ನರಸೀಪುರದಲ್ಲಿ ಅತಿ ಹೆಚ್ಚು ಅಂದರೆ ೧೮ ಶಾಸನಗಳು ಲಭ್ಯವಾಗಿವೆ. ತಿರುಮಕೂಡಲಿನ ೮ ಶಾಸನಗಳಲ್ಲಿ ಕಾವೇರಿಯ ಉಲ್ಲೇಖವಿದೆ. ತಾಲ್ಲೂಕಿನ ಬನ್ನೂರು, ಸೋಮನಾಥಪುರ, ತಡಿಮಾಲಂಗಿಯಲ್ಲಿ ತಲಾ ಎರಡು ಶಾಸನಗಳು, ಹೆಮ್ಮಿಗೆ, ಹೊಸಪುರ, ಸೋಸಲೆ, ಕಿರಗಸೂರುಗಳಲ್ಲಿ ದೊರೆತಿರುವ ತಲಾ ಒಂದು ಶಾಸನದಲ್ಲಿ ಕಾವೇರಿಯನ್ನು ಉಲ್ಲೇಖಿಸಲಾಗಿದೆ. ಪಿರಿಯಾಪಟ್ಟನ ತಾಲ್ಲೂಕಿನ ಮಲ್ಲಿನಾಥಪುರ, ಮೈಸೂರು ಜಿಲ್ಲೆಯ ಮೈಸೂರಿನಲ್ಲಿ ೮, ಹಂಚೆ, ಕುರುಬರಹಳ್ಳಿ, ನಂಜನಗೂಡು ತಾಲ್ಲೂಕಿನ ನಂಜನಗೂಡಿನಲ್ಲಿ ಮೂರು, ಅಂಕುಸಯ್ಯನಪುರ ಮತ್ತು ಗಜ್ಜಿಗದಹಳ್ಳಿಯಲ್ಲಿ ತಲಾ ಒಂದು ಶಾಸನ ಲಭ್ಯವಾಗಿವೆ. ಹುಣಸೂರು ತಾಲ್ಲೂಕಿನ ತರೀಕಲ್ಲು, ಹೆಗ್ಗಡದೇವನಕೋಟೆ ತಾಲ್ಲೂಕಿನ ಹೊರಮರಳಿಯಲ್ಲೂ ಕಾವೇರಿಯ ಉಲ್ಲೇಖವಿರುವ ಶಾಸನಗಳಿವೆ. ಮಂಡ್ಯ ಜಿಲ್ಲೆಯ ಒಟ್ಟು ೨೬ ಶಾಸನಗಳಲ್ಲಿ ಕಾವೇರಿ ನದಿಯ ಉಲ್ಲೇಖವಿದ್ದು ಶ್ರೀರಂಗಪಟ್ಟಣ ತಾಲ್ಲೂಕಿನ ಶ್ರೀರಂಗಪಟ್ಟಣದಲ್ಲಿ ಐದು, ಗಂಜಾಂ, ನೆಲಮನೆ, ಆನಂದೂರು, ನಗುವನಹಳ್ಳಿಗಳಲ್ಲಿ ತಲಾ ಒಂದು ಶಾಸನ ದೊರೆತಿದೆ. ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯಲ್ಲಿ ಮೂರು, ಕನ್ನಂಬಾಡಿ, ಸೀತಾಪುರ, ತೊಣ್ಣೂರುಗಳ ತಲಾ ಒಂದು ಶಾಸನದಲ್ಲಿ ಕಾವೇರಿಯ ಉಲ್ಲೇಖ ಬಂದಿದೆ. ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ, ಕರಗಸೂರು, ಸುಜ್ಜಲೂರು, ಮಳವಳ್ಳಿ, ನಾಗಮಂಗಲ ತಾಲ್ಲೂಕಿನ ದೊಡ್ಡಜಟಕ, ಹೊನ್ನೇನಹಳ್ಳಿ, ಮಂಡ್ಯ ತಾಲ್ಲೂಕಿನ ಮಂಡ್ಯ, ಕೃಷ್ಣರಾಜಪೇಟೆ ತಾಲ್ಲೂಕಿನ ಬ್ಯಾಲದಕೆರೆ, ಮಾಳಗೂರು; ಮದ್ದೂರು ತಾಲ್ಲೂಕಿನ ಹುರಗಲವಾಡಿ, ಕೌಡ್ಲೆ ಸ್ಥಳಗಳಲ್ಲಿ ದೊರೆತಿರುವ ಶಾಸನಗಳಲ್ಲೂ ಕಾವೇರಿ ನದಿಯ ಪ್ರಸ್ತಾಪವಿದೆ.

* ಕನ್ನಡ ಪ್ರಾಧ್ಯಾಪಕರು, # ೨, ೨ನೇ ಮಹಡಿ, ೧ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ, ಶ್ರೀನಿಧಿ ಬಡಾವಣೆ, ಕೋಣನಕುಂಟೆ, ಬೆಂಗಳೂರು-೬೨.

ಹಾಸನ ಜಿಲ್ಲೆಯ ಹತ್ತೊಂಬತ್ತು ಶಾಸನಗಳಲ್ಲಿ ಕಾವೇರಿಯ ಉಲ್ಲೇಖವಿದೆ. ಬೇಲೂರು ತಾಲ್ಲೂಕಿನ ಬೇಲೂರಿನ ಐದು ಶಾಸನಗಳು ಕಾವೇರಿ ನದಿಯನ್ನು ದಾಖಲಿಸಿವೆ. ಅದೇ ತಾಲ್ಲೂಕಿನ ಘಟ್ಟದಹಳ್ಳಿ, ಸಿಂಗಾಪುರ; ಹಾಸನ ತಾಲ್ಲೂಕಿನ ಕಬ್ಬಿನಹಳ್ಳಿ, ಯೆಲೆಗುಂದ, ಜಕ್ಕೇನಹಳ್ಳಿ, ಕುದುರೆಗುಂಡಿಯ ತಲಾ ಒಂದು ಹಾಗೂ ಹಾಸನದ ಎರಡು ಶಾಸನಗಳಲ್ಲಿ ಕಾವೇರಿ ನದಿಯ ಉಲ್ಲೇಖವನ್ನು ನೋಡಬಹುದಾಗಿದೆ. ಅರಸೀಕೆರೆ ತಾಲ್ಲೂಕಿನ ಅರಕೆರೆ, ಹಾರನಹಳ್ಳಿ; ಹೊಳೆನರಸೀಪುರ ತಾಲ್ಲೂಕಿನ ಆನೆಕನ್ನಂಬಾಡಿ; ಅರಕಲಗೂಡು ತಾಲ್ಲೂಕಿನ ರಾಮನಾಥಪುರ, ಕೊಣನೂರು; ಚನ್ನರಾಯಪಟ್ಟಣ ತಾಲ್ಲೂಕು ಕೇಂದ್ರದಲ್ಲಿ ದೊರೆತಿರುವ ಶಾಸನಗಳಲ್ಲೂ ಕಾವೇರಿ ನದಿಯ ಹೆಸರು ಪ್ರಸ್ತಾಪವಾಗಿದೆ. ಚಾಮರಾಜನಗರ ಜಿಲ್ಲೆಯ ಹನ್ನೆರಡು ಶಾಸನಗಳಲ್ಲಿ ಕಾವೇರಿಯ ಉಲ್ಲೇಖವಿದ್ದು ಚಾಮರಾಜನಗರ ತಾಲ್ಲೂಕಿನ ಹರದನಹಳ್ಳಿಯ ಎರಡು ಶಾಸನ, ಮೂಡಲಗ್ರಹಾರ; ಯಳಂದೂರು ತಾಲ್ಲೂಕಿನ ಮಾಂಬಳ್ಳಿ, ಯಳಂದೂರು; ಕೊಳ್ಳೇಗಾಲ ತಾಲ್ಲೂಕಿನ ಕಾಮಗೆರೆ, ಹನೂರು, ಶಿವನಸಮುದ್ರ; ಗುಂಡ್ಲುಪೇಟೆ ತಾಲ್ಲೂಕಿನ ಕರಕಲಮಾದಹಳ್ಳಿ, ಹೊಣಕನಹಳ್ಳಿ, ಗುಂಡ್ಲುಪೇಟೆ, ತ್ರಿಯಂಬಕಪುರದ ತಲಾ ಒಂದು ಶಾಸನದಲ್ಲಿ ಕಾವೇರಿಯ ಉಲ್ಲೇಖ ಬಂದಿದೆ. ಕಾವೇರಿಯ ಉಗಮ ಸ್ಥಾನವಿರುವ ಕೊಡಗು ಜಿಲ್ಲೆ ಮಡಿಕೇರಿಯಲ್ಲಿ ಒಂದು, ಕಾವೇರಿ ಪ್ರದೇಶವಲ್ಲದ ಚಿಕ್ಕಮಗಳೂರು ಜಿಲ್ಲೆ ಶೃಂಗೇರಿಯ ಎರಡು ಶಾಸನಗಳಲ್ಲೂ ಕಾವೇರಿ ನದಿಯ ಪ್ರಸ್ತಾಪ ಬಂದಿದೆ.

ಈ ಶಾಸನಗಳ ವಸ್ತು, ವಿಷಯ, ಅವು ಪ್ರತಿಪಾದಿಸಿರುವ ಜಲಸಂಬಂಧಿ ಸಂಗತಿಗಳು, ಕಾವೇರಿ ನದಿಯೊಡನೆ ಪ್ರಭುತ್ವ ಹಾಗೂ ಶ್ರೀಸಾಮಾನ್ಯರು ಹೊಂದಿದ್ದ ಧಾರ್ಮಿಕ ಹಾಗೂ ಭಾವನಾತ್ಮಕ ಸಂಬಂಧ, ಸಾಮಾಜಿಕ, ಸಾಹಿತ್ಯಕ, ಸಾಂಸ್ಕೃತಿಕ, ಆರ್ಥಿಕ ಮಹತ್ವಗಳನ್ನು ಗುರುತಿಸಬಹುದು. ಕಾವೇರಿ ನದಿಯ ಉಲ್ಲೇಖವಿರುವ ಒಟ್ಟು ೧೦೭ ಶಾಸನಗಳಲ್ಲಿ ೫೪ ತಾಮ್ರ ಶಾಸನಗಳಾದರೆ, ೫೩ ಶಿಲಾಶಾಸನಗಳಾಗಿವೆ. ಇವುಗಳಲ್ಲಿ ೫೩ ಕನ್ನಡ ಶಾಸನಗಳು. ಸಂಸ್ಕೃತ ಕನ್ನಡ ಭಾಷೆಯನ್ನೊಳಗೊಂಡ ನಲವತ್ತೊಂದು, ಎರಡು ತಮಿಳು ಹಾಗೂ ಒಂದು ಪರ್ಷಿಯನ್ ಶಾಸನದಲ್ಲಿ ಕಾವೇರಿಯ ಉಲ್ಲೇಖವಿದೆ. ಚಾರಿತ್ರಿಕ ಹಿನ್ನೆಲೆಯಲ್ಲಿ ನೋಡಿದರೆ ಪುನ್ನಾಟರ ಒಂದು, ಗಂಗರ ಎರಡು, ಹೊಯ್ಸಳರ ಹನ್ನೊಂದು, ವಿಜಯನಗರ ಅರಸರ ಕಾಲದ ಐವತ್ತೆರಡು ಶಾಸನಗಳಲ್ಲಿ ಕಾವೇರಿ ನದಿಯ ಪ್ರಸ್ತಾಪವಿದೆ. ಮೈಸೂರು ಅರಸರ ಆಳ್ವಿಕೆಯ ಕಾಲದ ಇಪ್ಪತ್ತು ಶಾಸನಗಳಲ್ಲಿ ಕಾವೇರಿ ನದಿಯ ಉಲ್ಲೇಖ ದೊರೆಯುತ್ತದೆ. ಹೊಯ್ಸಳ ವಿಷ್ಣುವರ್ಧನನ ಆರು ಶಾಸನಗಳಲ್ಲಿ ಕಾವೇರಿಯ ಉಲ್ಲೇಖ ಬರುತ್ತದೆ. ವಿಜಯನಗರ ಅರಸರಲ್ಲಿ ಕೃಷ್ಣದೇವರಾಯನ ಕಾಲದ ಹದಿನಾರು, ದೇವರಾಜ ಭೂಪಾಲನ ಆಳ್ವಿಕೆಯ ಒಂಬತ್ತು ಮತ್ತು ಅಚ್ಚುತರಾಯನ ಕಾಲದ ಏಳು ಶಾಸನಗಳಲ್ಲಿ ಕಾವೇರಿ ನದಿಯನ್ನು ಹೆಸರಿಸಲಾಗಿದೆ. ಭೌಗೋಳಿಕ ಅಂಶಗಳು ಹಾಗೂ ಮೇರೆಗಳನ್ನು ಇಪ್ಪತ್ತಾರು ಶಾಸನಗಳಲ್ಲಿ ನಿರ್ದೇಶಿಸಲಾಗಿದೆ. ಕಾವೇರಿ ನದಿಯ ಉಲ್ಲೇಖವಿರುವ ಇಪ್ಪತ್ತು ಶಾಸನಗಳಲ್ಲಿ ದೇವಾಲಯದ ಪ್ರಸ್ತಾಪವಿದ್ದು, ಅವುಗಳಲ್ಲಿ ಹತ್ತು ಅಗಸ್ತ್ಯೇಶ್ವರ ದೇವಾಲಯಕ್ಕೆ ಸಂಬಂಧಿಸಿವೆ. ರಂಗನಾಥದೇವರ ನಾಲ್ಕು, ಲಕ್ಷ್ಮೀನರಸಿಂಹದೇವರ ಎರಡು, ವೈದ್ಯನಾಥೇಶ್ವರ ಮತ್ತು ಕನ್ನಗೊಂಡೇಶ್ವರ ದೇವರ ತಲಾ ಒಂದು ಶಾಸನದಲ್ಲಿ ಕಾವೇರಿಯ ಪ್ರಸ್ತಾಪವಿದೆ. ರಾಜರ ಹೆಸರಿನೊಡನೆ ಬೆಸೆದುಕೊಂಡ ಆರು, ಶಾಪಾಶಯಗಳ ಮೂರು, ಸದಾಶಯ ಸೂಚಿಸುವ ಒಂದು ಶಾಸನದಲ್ಲಿ ಕಾವೇರಿಯನ್ನು ನೆನೆಯಲಾಗಿದೆ. ಕಾವೇರಿ ನದಿಯ ತೀರ, ತಡಿಯ ಪ್ರಸ್ತಾಪ ಏಳು ಶಾಸನಗಳಲ್ಲಿ ಬಂದಿದೆ. ಕಾವೇರಿ ನದಿಗೆ ಕಟ್ಟೆ ಕಾಲುವೆ ನಿರ್ಮಾಣ ಮಾಡಿರುವ ವಿವರ ೯ ಶಾಸನಗಳಲ್ಲಿ ಬಂದಿದೆ. ಪ್ರವಾಹದಿಂದಾಗಿ ವೈರಿಗಳು ಕಾವೇರಿ ನದಿಯನ್ನು ದಾಟಲು ಅಸಾಧ್ಯವಾದ ಅಂಶವನ್ನು ತಿಳಿಸುವ ಹನ್ನೆರಡು ತಾಮ್ರಶಾಸನಗಳಲ್ಲಿ ನದಿಯ ವರ್ಣನೆ ಏಕಪ್ರಕಾರವಾಗಿ ದಾಖಲಾಗಿದೆ. ದೇಶವಾಚಕವಾಗಿ ಒಂದು ಹಾಗೂ ಕಾವೇರಿ ಶುಭದಾಯಿನಿ, ಪಾವನೆ ಎಂದು ಐದು ಶಾಸನಗಳಲ್ಲಿ ವರ್ಣಿಸಲಾಗಿದೆ. ಶಾಪಾಶಯ ಸೂಚಕ ಅಂಶವೂ ಕಾವೇರಿಯ ಉಲ್ಲೇಖಿತ ಶಾಸನಗಳಲ್ಲಿ ಬಂದಿರುವುದನ್ನು ಕಾಣಬಹುದು.

ಕಾವೇರಿ ನದಿಯ ಪ್ರಸ್ತಾಪವಿರುವ ಪ್ರಾಚೀನ ಶಾಸನವೆಂದರೆ, ಕ್ರಿ.ಶ. ಸುಮಾರು ೫೫೦ರ ಯಳಂದೂರು ತಾಲ್ಲೂಕಿನ ಮಾಂಬಳ್ಳಿಯ ಶಾಸನ.[೧] ಇದು ಪುನ್ನಾಟ ಅರಸರಿಗೆ ಸೇರಿದ ತಾಮ್ರಶಾಸನವಾಗಿದ್ದು ನಾಲ್ಕು ಹಲಗೆಗಳಲ್ಲಿ ಬರೆಯಲಾಗಿದೆ. ಈ ಶಾಸನದ ದಾನಿಯಾಗಲಿ, ದಾನದ ವಿವರವಾಗಲಿ ತಿಳಿದುಬರುವುದಿಲ್ಲ. ರಾಷ್ಟ್ರವರ್ಮ ಹಾಗೂ ಅವನ ಪತ್ನಿ ಪ್ರಭಾವತಿಯರ ಮೂವರು ಮಕ್ಕಳಲ್ಲಿ ಹಿರಿಯನಾದ ಪೃಥ್ವೀಪತಿಯ ಪ್ರಶಸ್ತಿಯೊಡನೆ ಶಾಸನವು ಅನಿರೀಕ್ಷಿತವಾಗಿ ಮುಕ್ತಾಯಗೊಳ್ಳುತ್ತದೆ. **"ಗಹನ ಘನಚಾಯಾ ಪರೀತೋಭಯತಟರೇಖಾಭಿಃ ಕಾಬೇರೀ ಕಪಿನೀ ಶ್ರೀನದೀಭಿರಲಂಕೃತಸ್ಯ ವಿದೇಹ ಇವ ಬಭ್ರಾಜ್ಯಮಾನಸ್ಯ ಅಧಿಪತಿಃ"** ಎಂದು ಪುನ್ನಾಟ ರಾಜ್ಯವು ಕಾವೇರಿ, ಕಬಿನಿ ನದಿಗಳಿಂದ ಅಲಂಕೃತವಾಗಿದ್ದ ಸಂಗತಿಯನ್ನು ತಿಳಿಸುತ್ತದೆ. ಪುನ್ನಾಟ ಅರಸರು ಹೆಗ್ಗಡದೇವನಕೋಟೆಯ ಬಳಿಯ ಕೀರ್ತಿಪುರ(ಈಗಿನ ಕಿತ್ತೂರು)ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು

ಕಾವೇರಿ ಕಬಿನಿ ನದಿಗಳ ಮಧ್ಯದಲ್ಲಿ ಗಂಗರ ಸಮಕಾಲೀನರಾಗಿ ಕ್ರಿ.ಶ. ೪ರಿಂದ ೬ನೇ ಶತಮಾನದವರೆಗೆ ಆಳುತ್ತಿದ್ದರು. ನಂತರ ಅದು ಗಂಗರ ರಾಜ್ಯದಲ್ಲಿ ವಿಲೀನವಾಯಿತು. ೨ ಗ್ರೀಕ್ ಭೂಗೋಳ ವಿಜ್ಞಾನಿ ಟಾಲೆಮಿ (ಕ್ರಿ.ಶ. ೧೩೦) ಪುನ್ನಾಟವನ್ನು ಪ್ರಸ್ತಾಪಿಸಿರುವುದಲ್ಲದೆ ಅಲ್ಲಿಂದ ಅಮೂಲ್ಯವಾದ ಹರಳುಗಳು ಗ್ರೀಸ್ ಮತ್ತು ರೋಮ್‌ಗಳಿಗೆ ಸರಬರಾಜಾಗುತ್ತಿದ್ದವೆಂದು ಬರೆದಿದ್ದಾನೆ. ಕ್ರಿ.ಶ. ೬೭೪ರಲ್ಲಿ ಬಾದಾಮಿ ಚಾಲುಕ್ಯರ ಮೊದಲನೆಯ ವಿಕ್ರಮಾದಿತ್ಯನು ಕೆತ್ತಿಸಿರುವ ಸವಣೂರು ತಾಮ್ರಶಾಸನದಲ್ಲಿ ಕಾವೇರಿಯ ಉಲ್ಲೇಖ ಬಂದಿದೆ.೩ ಗಂಗದೊರೆ ರಣವಿಕ್ರಮಯ್ಯ ಎರೆಯಂಗನು ಕ್ರಿ.ಶ. ೮೯೦ರಲ್ಲಿ ಕೊಳೆನೆಲ್ಲೂರು ಗ್ರಾಮವನ್ನು ಬ್ರಹ್ಮದೇಯವಾಗಿ ಪರಪಡಿಭಟನಗೆ ದಾನ ಮಾಡಿದನು. ಆ ಗ್ರಾಮದ ಮೇರೆಗಳನ್ನು ಗುರುರಿಸುವಾಗ **'ಮೊದಳುಳ್ ಬಡಗಾಯ್ಪೆರ್ಗ್ಗೊಳ್ಳಿಯೆ ಸನ್ದು ಕಾವೇರಿಯುಳ್ ಕೂಡಿತ್ತು ಸೀಮೆ'** ಎಂಬ ಉಲ್ಲೇಖವಿದೆ.[೪] ಗಂಗವಂಶದ ದೊರೆಯಾದ ಮಾರಸಿಂಗ ಎರೆಯಪ್ಪನ ಆಳ್ವಿಕೆಯ ಗಂಜಾಂ ಶಿಲಾಶಾಸನವೊಂದರಲ್ಲಿ **'ಸೀಮಾನ್ತರಂ ಪಡುವಾಯ್ಕಾವೇರಿಯೆ'** ಎಂಬ ಪ್ರಸ್ತಾಪವಿದೆ.[೫]

ಕ್ರಿ.ಶ. ೧೦೦೧ರಲ್ಲಿ ಕೊಡಗಿನ ಸ್ಥಳೀಯ ಪ್ರಭುವಾಗಿದ್ದ ಗಣಗೂರಿನ ಬಿಹಗಾಮುಣ್ಡನ ಮಗ ಹಂಚಮಸೆಟ್ಟಿಯು ತನ್ನ ಭುಜಬಲದಿಂದ ಮುಳ್ಳೂರುನಾಡಿನ ಬೋಕನಹಳ್ಳಿ, ಗೊರಹಳ್ಳಿ, ಕಡಲೂರುಗಳನ್ನು ಗೆದ್ದು **'ಮೊದಲ್ಕಾವೇರಿ'**ಯಲ್ಲಿ ಮಿಂದು ರಾಮೇಶ್ವರ ದೇವರಿಗೆ ಪೂಜೆ ಸಲ್ಲಿಸಿದನು.[೬] ಶಾಸನದಲ್ಲಿ ಬರುವ ಮೊದಲ್ಕಾವೇರಿಯು ತಲಕಾವೇರಿಗೆ ಇದ್ದ ಹೆಸರಾಗಿದೆ. ಚೋಳರನ್ನು ಸಂಪೂರ್ಣವಾಗಿ ಸೋಲಿಸಿ 'ತಲಕಾಡುಗೊಂಡ' ಎಂಬ ಬಿರುದನ್ನು ಪಡೆದ ಹೊಯ್ಸಳ ವಿಷ್ಣುವರ್ಧನನ ಕ್ರಿ.ಶ ೧೧೧೭ರ ಶಾಸನದಲ್ಲಿ ಕಾವೇರಿಯ ಪ್ರಸ್ತಾಪವಿದೆ.[೭] ವಿಷ್ಣುವರ್ಧನನು **"ಕಾವೇರಿ ತೀರ ವನವಿಹಾರಿ"** ಆಗಿದ್ದನೆಂದು ಶಾಸನ ಬಣ್ಣಿಸಿದೆ. ಹೊಯ್ಸಳರ ಹಲವು ಶಾಸನಗಳಲ್ಲಿ ಈ ಬಗೆಯ ಉಲ್ಲೇಖಗಳು ಮತ್ತೆಮತ್ತೆ ಬರುತ್ತವೆ.[೮] ಹೊಯ್ಸಳ ವಿಷ್ಣುವರ್ಧನನು ಕಾವೇರಿ ತಡಿಯ ತಳಕಾಡಿನಲ್ಲಿ ಇದ್ದಾಗ ಕನ್ನಂಬಾಡಿಯ ಕನ್ನಗೊಂಡೇಶ್ವರ ದೇವರಿಗೆ ದಂಡನಾಯಕ ಲಿಂಗಪಯ್ಯ ಕ್ರಿ.ಶ. ೧೧೧೮ರಲ್ಲಿ ದಾನಕೊಟ್ಟ ವಿವರ ಪಾಂಡುಪುರ ತಾಲ್ಲೂಕಿನ ಶಾಸನವೊಂದರಲ್ಲಿದೆ.[೯]

ಹೊಯ್ಸಳ ಒಂದನೇ ನರಸಿಂಹನ ಕ್ರಿ.ಶ. ೧೧೬೪ರ ಶಾಸನದಲ್ಲಿ ಕಾವೇರಿ ಪರಿಸರವನ್ನು ಕುರಿತ ಉಲ್ಲೇಖ ಹೀಗೆ ಬಂದಿದೆ.೧೦ **"ಧನದಂ ದಕ್ಷಿನ ವಾಯುವೇಕೆ ತಡೆದತ್ತೋ ತೀಡಿತಿಲ್ಲಿಂನುವೆಂಬಿನೆಗಂ ವೈರಿಕರೋಟಿಕೋಟಿಮುಖನಾ ಸಾರಂಧ್ರದೊಳ್ಮಂದ್ರ ನಿಸ್ವನಮುಣ್ಮಲ್ ಮಳಯಾನಿಳಂ ಸುಳಿದು ಕಾಲಕ್ಷೇಪಮಂ ವಿಷ್ಣುಭೂಪನ ಜೈತ್ರೋರ್ವ್ವರೆಯಲ್ಲಿ ಮಾಡುವುದು ಕಾವೇರಿ ನದಿ ತೀರದೊಳ್'** (ಮತ್ತೇಭವಿಕ್ರೀಡಿತ ವೃತ್ತ) ಹೊಯ್ಸಳ ವೀರಬಲ್ಲಾಳನ ಶಾಸನದಲ್ಲಲೂ ಈ ಪದ್ಯ ಬಂದಿದೆ.[೧೧] ಹೊಯ್ಸಳ ಸೋಮೇಶ್ವರನು ರಾಜಧಾನ ಕ್ಷೀರಸಮುದ್ರ ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದಾಗ ಬೊಪ್ಪದೇವರಸನು ರಾಮನಾಥಪುರದ ಕಾವೇರಿಯ ತಡಿಯಲ್ಲಿ ಶ್ರೀ ರಾಮೇಶ್ವರ ದೇವಾಲಯದ ಕ್ರಿ.ಶ. ೧೨೪೫ರ ಶಾಸನದಲ್ಲಿ ದೇವರನ್ನು ಪ್ರತಿಷ್ಠೆ ಮಾಡಿಸಿ ಮಾವನೂರು ಗ್ರಾಮವನ್ನು ದತ್ತಿ ಬಿಟ್ಟ ವಿವರ ಬಂದಿದೆ.[೧೨] ವಿಜಯನಗರ ಅರಸರು ಪ್ರಬಲರಾಗುವುದಕ್ಕೂ ಮೊದಲು ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಪ್ರಚಾರದಲ್ಲಿದ್ದ ಪ್ರಾದೇಶಿಕ ವಿಭಾಗಗಳ ಹೆಸರುಗಳನ್ನೇ ಮುಂದುವರಿಸಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಮೈಸೂರು ಜಿಲ್ಲೆ ತಿರುಮಕೂಡಲು ನರಸೀಪುರ ತಾಲ್ಲೂಕು ಸೋಮನಾಥಪುರದ ಕ್ರಿ.ಶ. ೧೩೭೭ರ ಇಮ್ಮಡಿ ಹರಿಹರನ ಶಾಸನದಲ್ಲಿ 'ಹೊಯಿಸಣದೇಶೇ ಕಾವೇರ್ಯಾ ಉತ್ತರ ತೀರೇ' ಎಂಬ ಉಲ್ಲೇಖವಿದೆ.[೧೩]

ವಿಜಯನಗರ ಅರಸರ ಕಾಲದ ಶಾಸನಗಳಲ್ಲಿ ಕಾವೇರಿಯ ಉಲ್ಲೇಖ ಅಧಿಕವಾಗಿ ಬಂದಿದೆ. ಎರಡನೇ ಹರಿಹರನ ತಿರುಮಕೂಡಲು ನರಸೀಪುರದ ಕ್ರಿ.ಶ. ೧೩೯೭ರ ತಾಮ್ರಶಾಸನದಲ್ಲಿ **'ಮರುದ್ವೃಧಾ ಕಪಿಲಯೋಃ ಸಮಾಗಮಾಮಥಾಗಮತ್'**[೧೪] ಎಂಬ ದಾಖಲೆಯಿದ್ದು, ಕಾವೇರಿಯನ್ನು **'ಮರುದ್ವೃಧೆ'** ಎಂದು ಕರೆದಿರುವ ಏಕೈಕ ಶಾಸನ ಇದಾಗಿದೆ. ವೇದಗಳಲ್ಲಿ ಕಾವೇರಿಯನ್ನು **"ಮರುದ್ವೃಧೇ"** ಎಂದು ಕರೆಯಲಾಗಿದ್ದು ಋಗ್ವೇದದಲ್ಲಿನ ಈ ಶ್ಲೋಕ ನಿದರ್ಶನವಾಗಿದೆ.

ಎಮಂ ಮೇ ಗಂಗೇ ಯಮುನೇ ಸರಸ್ವತಿ
ಶುತದ್ರಿ ಸ್ತೋಮಂ ಸಚ್‌ತಾಪರುಷ್ಣ್ಯಾ
ಆಸಿಕ್ನ್ಯಾ ಮರುದ್ವೃಧೇ ವಿತಸ್ತಯಾ
ಆರ್ಜೀಕಿಯೆ ಶೃಣುಹ್ಯ ಸುಷೋಮಯಾ[೧೫]

"ಎಲೈ ಗಂಗೇ, ಹೇ ಯಮುನೇ, ಹೇ ಸರಸ್ವತಿ, ಹೇ ಶುತದ್ರೀ, ಹೇ ಪರುಷ್ಣೀ, ಹೇ ಅಸಿಕ್ನೆಯಿಂದ ಒಡಗೂಡಿದ ಮರುದ್ವೃಧೇ, ವಿತಸ್ತಾ ಮತ್ತು ಸುಷೋಮಗಳಿಂದ ಕೂಡಿದ ಆರ್ಜಿಕೆಯೇ ನೀವು ನಿಮ್ಮ ಸ್ತೋತ್ರವನ್ನು ರಮಿಸಿ ಸಾವಧಾನದಿಂದ ಆಲಿಸಿ."

ಸಾಮಾನ್ಯವಾಗಿ ಶಾಸನಗಳಲ್ಲಿ ಬರುವ ಶಾಪಾಶಯಗಳಲ್ಲಿ 'ಗಂಗೆಯ ತಡಿಯಲಿ ಬ್ರಾಹ್ಮಣರ ಕೊಂದ ಪಾಪ, ಕವಿಲೆಯ ಕೊಂದ ಪಾಪಕ್ಕೆ ಹೋಹರೆಂದು' ಹೇಳಲಾಗುತ್ತದೆ. **'ಕಾವೇರಿಯ ತೀರದಲು ಕವಿಲೆಯನ್ನು ಕೊಂದ ಪಾಪದಲಿ ಹೋಹರು'**. ಎಂಬ ಶಾಪಾಶಯ ವಿಜಯನಗರ ಅರಸ ಒಂದನೆಯ ದೇವರಾಜನ ಬಳಕವಾಡಿಯ ಕ್ರಿ.ಶ. ೧೪೨೦ರ ಶಾಸನದಲ್ಲಿ ಬಂದಿದೆ.[೧೬] ಇದೇ ಬಗೆಯ ಶಾಪಾಶಯ ಕಿರುಗಸೂರು ಶಾಸನದಲ್ಲಿದೆ.[೧೭] "ಈ ಧರ್ಮವನು ಆರೊಬ್ಬರು ಅಳಿದರೆ ಕಾವೇರಿಯ ತಡಿಯಲು ಕವಿಲೆಯ ಕೊಂದ ಪಾಪದಲಿ ಹೋಹನು.' ಈ ಬಗೆಯ ಶಾಪಾಶಯಗಳು ನದಿಯ ಬಗೆಗೆ ಜನರಿಗಿದ್ದ ಭಕ್ತಿಯ ದ್ಯೋತಕವಾಗಿವೆ. ವಿಜಯನಗರದ ದೊರೆ ಹರಿಹರನ ಕ್ರಿ.ಶ. ೧೩೯೧ರ ಶಾಸನದಲ್ಲಿ "ದಾನವನ್ನು ಕಾಪಾಡುವವರಿಗೆ ಕಾವೇರಿಯ ತೀರದಲ್ಲಿ ಸಹಸ್ರ ಕಪಿಲೆಯನ್ನು ದಾನಕೊಟ್ಟ ಪುಣ್ಯ ಲಭಿಸುವುದೆಂದು ಹೇಳಿದೆ.[೧೮] ಇಂಥ ಸದಾಶಯ ಹುಟ್ಟಲು ನದಿಯೊಡನೆ ಜನರಲ್ಲಿದ್ದ ಭಾವನಾತ್ಮಕ ಸಂಬಂಧ ಕಾರಣವೆನ್ನಬಹುದು.

ಕಾವೇರಿ ನದಿಯು ಕನ್ನಡ ಸಂಸ್ಕೃತಿಯ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವಲ್ಲಿ ಶತಮಾನಗಳಿಂದಲೂ ಕಾರಣವಾಗಿರುವುದರಿಂದಲೇ ರಾಜ, ಮಹಾರಾಜರು ನದಿಗೆ ತಮ್ಮ ಭಕ್ತಿ ಗೌರವಗಳನ್ನು ಸಲ್ಲಿಸಿದ್ದಾರೆ. ಹಾಗೂ ನದಿಯು ಹರಿಯುವ ಪ್ರದೇಶಗಳ ಮೇಲೆ ವಿಶೇಷ ಮಮಕಾರವನ್ನು ವ್ಯಕ್ತಮಾಡಿದ್ದಾರೆ. ಧಾರ್ಮಿಕ ಭಾವನೆಯನ್ನು ಪ್ರಜೆಗಳಲ್ಲಿ ಉತ್ತೇಜಿಸಲು ದೇವಾಲಯಗಳ ನಿರ್ಮಾಣ ಮಾಡಿರುವುದಲ್ಲದೆ ಅವುಗಳ ನಿರ್ವಹಣೆಗೂ ದತ್ತಿಗಳನ್ನು ಬಿಟ್ಟಿರುವರು. ನದಿ ನೀರನ್ನು ಕೃಷಿ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಹೊಸದಾಗಿ ಕಟ್ಟೆ, ಕಾಲುವೆಗಳನ್ನು ನಿರ್ಮಿಸಿದ್ದಾರೆ.[೧೯] ಕಾವೇರಿ ತೀರದಲ್ಲಿ ರಾಜಧಾನಿಯನ್ನು ನಿರ್ಮಿಸಿಕೊಂಡು ಆಳ್ವಿಕೆಯನ್ನು ನಡೆಸಿದ್ದಾರೆ.೨೦ ಕನ್ನಡ ಭಾಷಿಕ ಕುಲದ ಹಿರಿಮೆಯನ್ನು ಅಧಿಕಗೊಳಿಸುವ ಮೂಲಕ ನಾಡ ಸೇವೆಗೈದಿದ್ದಾರೆ. ಕನ್ನಡ ನಾಡಿಗೆ ಕಾವೇರಿ ನದಿಯ ಕೊಡುಗೆ ಅನನ್ಯ, ಅಸಾಧಾರಣ ಎಂಬ ಅಂಶವನ್ನು ಕಾವೇರಿ ನದಿಯನ್ನು ಉಲ್ಲೇಖಿಸಿರುವ ಶಾಸನಗಳಿಂದ ವೇದ್ಯವಾಗುತ್ತದೆ.

ಅಡಿಟಿಪ್ಪಣಿ

೧. ಎ.ಕ. ೪, ಯಳಂ ೧೬೭.
೨. ಮೈಸೂರು ಜಿಲ್ಲಾ ಗೆಜೆಟಿಯರ್, ೧೯೮೮, ಪು. ೪೪೭.
೩. ಯದುರ್ಕುಳ ಶಂಕರನಾರಾಯಣ ಭಟ್ಟ, ಶ್ರೀ ಕಾವೇರಿ ವೈಭವ, ಪು. ೪೪೭.
೪. ಎಕ ೫, ಕೃನ ೧೦೫.
೫. ಎಕ ೬ ಶ್ರೀಪ ೬೬.
೬ ಎಕ ೧ ಮಡಿ ೩.
೭. ಎಕ ೯, ಬೇ ೧೬.
೮. ಎಕ ೯ ಬೇ ೯೬, ಬೇ ೧೩೬, ಬೇ ೨೬೧.
೯. ಎಕ ೬ ಪಾಮು ೪೧
೧೦. ಎಕ ೯ ಬೇ ೧೩೬.
೧೧. ಎಕ ೯ ಬೇ ೧೦೮.
೧೨. ಎಕ ೮ ಅಗೂ ೪೪.
೧೩. ಎಕ ೫ ಕೃನ ೭೭.
೧೪. ಎಕ ೪, ತಿನ ೧೭.
೧೫. ಋಗ್ವೇದ ೧೦-೭೪-೫.
೧೬. ಎಕ ೭ ಮವ ೯೬.
೧೭. ಎಕ ೫, ತಿನ ೪೩.
೧೮. ಎಕ ೫ ಕೃನ ೧.
೧೯. ಎಕ ೬ ಪಾಂಮು ೧೯, ಎಕ ೫ ಮೈ ೩೭.
೨೦. ಎಕ ೧೧ ಶೃಂ ೩೯.

೩೫

"ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಂದಾಯ ವ್ಯವಸ್ಥೆ"

ನಾಗರಾಜ ಸಿ.ಎಸ್.*

ಪ್ರಸ್ತುತ ಲೇಖನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆ ಕಾಲದಲ್ಲಿನ (೧೭೯೯–೧೮೩೧) ಕಂದಾಯ ವ್ಯವಸ್ಥೆ ಮತ್ತು ಅದರ ಪರಿಣಾಮಗಳನ್ನು ಚಿಕ್ಕಮಗಳೂರು (ನಗರ ಅಥವಾ ಬಿದನೂರು ವಿಭಾಗ) ಭಾಗಗಳನ್ನು ಕೇಂದ್ರೀಕರಿಸಿ ವಿಶ್ಲೇಷಿಸಲಾಗಿದೆ. ೪ನೇ ಆಂಗ್ಲ–ಮೈಸೂರು ಯುದ್ಧದಲ್ಲಿ ಟಿಪ್ಪು ಮರಣ ಹೊಂದಿದ ನಂತರ ಬ್ರಿಟಿಷರು ಮೈಸೂರು ಸಂಸ್ಥಾನವನ್ನು ಒಡೆಯರಿಗೆ ಹಿಂತಿರುಗಿಸಿದಾಗ ಈಗಿನ ಚಿಕ್ಕಮಗಳೂರು ಭಾಗಗಳು ಒಡೆಯರ ನೇರ ಆಡಳಿತಕ್ಕೆ ಒಳಗಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರು ಅಪ್ರಾಪ್ತ ವಯಸ್ಕರಾಗಿದ್ದರಿಂದ ದಿವಾನರಾಗಿ ಮುಂದುವರೆದ ಪೂರ್ಣಯ್ಯನವರು ರಾಜ್ಯದ ಆದಾಯದ ಮೂಲವಾಗಿದ್ದ ಕೃಷಿ ಕ್ಷೇತ್ರದ ಸುಧಾರಣೆಗೆ ಅನೇಕ ಕ್ರಮಗಳನ್ನು ಕೈಗೊಂಡರು. ಆನಂತರ ಆಳ್ವಿಕೆಗೆ ಬಂದ ಒಡೆಯರು ಮತ್ತು ಬ್ರಿಟಿಷ್ ಕಮಿಷನ್ನರು ಕೃಷಿ ಸುಧಾರಣೆಗೆ ಮತ್ತಷ್ಟು ಪ್ರಯತ್ನಿಸಿದರು.

ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಗಿಂತ ಪೂರ್ವದ ಅಂದರೆ ಹೈದರಾಲಿ ಆಳ್ವಿಕೆಯ ಅವಧಿಯಲ್ಲಿ, ಕಂದಾಯ ಪದ್ಧತಿಯಲ್ಲಿ ಹೆಚ್ಚಿನ ಬದಲಾವಣೆಗಳನ್ನು ಮಾಡದೆ ಚಿಕ್ಕದೇವರಾಜ ಒಡೆಯರ ಕಾಲದ ಕಂದಾಯ ಪದ್ಧತಿಯನ್ನೆ ಮುಂದುವರಿಸಿಕೊಂಡು ಬಂದನು. ಆದರೆ ಕಂದಾಯ ವಸೂಲಿಯಲ್ಲಿನ ಹಣ ದುರುಪಯೋಗ ತಡೆಗಟ್ಟಲು ಹೊಸದಾಗಿ ಪ್ರತಿ ತಾಲ್ಲೂಕಿಗೆ 'ಹರಿಕಾರಸ್' ರನ್ನು ನೇಮಕ ಮಾಡಿದನು. ಇವರ ಮುಖ್ಯ ಕಾರ್ಯ ಕಂದಾಯಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ದೂರುಗಳನ್ನು ಸ್ವೀಕರಿಸುವುದು, ಸರ್ಕಾರಕ್ಕೆ ವರದಿ ಮಾಡುವುದು ಮತ್ತು ಇತರೆ ಕಾರ್ಯಗಳನ್ನು ನಿರ್ವಹಿಸಬೇಕಿತ್ತು.

ಹೈದರಾಲಿ ಮರಣದ ನಂತರ ಟಿಪ್ಪು ಸುಲ್ತಾನನ ಆಳ್ವಿಕೆ ಕಾಲದಲ್ಲಿ ಕಂದಾಯ ಪದ್ದತಿಯಲ್ಲಿ ಹೊಸ ಸುಧಾರಣೆಗಳನ್ನು ಜಾರಿಗೆ ತಂದನು. ತನ್ನ ರಾಜ್ಯವನ್ನು ತುಕಡಿಗಳಾಗಿ ೫,೦೦೦ ಪಗೋಡಗಳಾಗಿ ವಿಂಗಡಿಸಿ ಪ್ರತಿ ತುಕಡಿಗೆ ಅಧಿಕಾರಿಗಳನ್ನು ನೇಮಿಸಿದನು. ಇವರ ಕಾರ್ಯ ಕಂದಾಯ ವಸೂಲಿ ಹಾಗೂ ನಿರ್ವಹಣೆ ಮಾಡುವುದಾಗಿತ್ತು. ೨೦ ರಿಂದ ೩೦ ತುಕುಡಿಗಳನ್ನು 'ಆಸಫ್'ರ ಅಧೀನಕ್ಕೆ ಒಳಪಡಿಸಲಾಯಿತು. ಅವರಿಗೆ ಒಬ್ಬ ಮೇಲಾಧಿಕಾರಿಯನ್ನು ನೇಮಿಸಿದನು. ಅಸಫ್ ಕಛೇರಿಗಳಲ್ಲಿ ಒಬ್ಬ ಅಧ್ಯಕ್ಷನನ್ನು ನೇಮಿಸಿದನು. ಹೈದರಾಲಿ ನೇಮಕಮಾಡಿದ್ದ ಹರಿಕಾರಸ್ ಹುದ್ದೆಯನ್ನು ರದ್ದುಮಾಡಿದನು. ಚಿಕ್ಕದೇವರಾಜ ಒಡೆಯರ್ ಮತ್ತು ಹೈದರಾಲಿ ರದ್ದು ಮಾಡಿದ ಹೆಚ್ಚಿನ ತೆರಿಗೆ ಹೊರೆಯನ್ನು ಟಿಪ್ಪು ಒಂದು ಆದೇಶ ಹೊರಡಿಸುವುದರ ಮೂಲಕ ಅವುಗಳನ್ನು ಪುನಃ ಜಾರಿಗೆ ತಂದನು.

೪ನೇ ಆಂಗ್ಲ–ಮೈಸೂರು ಯದ್ಧದಲ್ಲಿ ಗೆದ್ದ ಬ್ರಿಟಿಷರು, ಮೈಸೂರು ಸಂಸ್ಥಾನವನ್ನು ವಾರ್ಷಿಕ ೨೪ ೧/೨ ಲಕ್ಷ ರೂಪಾಯಿ ಪೊಗದಿಯನ್ನು ಬ್ರಿಟಿಷರಿಗೆ ಕೊಡುವ ನಿಬಂಧನೆಯೊಂದಿಗೆ ಒಡೆಯರಿಗೆ ಹಿಂತಿರುಗಿಸಿ, ಅಪ್ರಾಪ್ತ ಬಾಲಕನಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರನ್ನು ರಾಜನನ್ನಾಗಿ ನೇಮಿಸಿದರು. ಅವರ ಪರವಾಗಿ ಬ್ರಿಟಿಷ್ ಸರ್ಕಾರ ಪೂರ್ಣಯ್ಯನವರನ್ನು ದಿವಾನರಾಗಿ ನೇಮಕ ಮಾಡಿ, ಅವರಿಗೆ ಸಂಪೂರ್ಣ ಆಡಳಿತದ ಜವಾಬ್ದಾರಿಯನ್ನು ನೀಡಿತು. ಮೈಸೂರು ಸಂಸ್ಥಾನದಲ್ಲಿ ಒಬ್ಬ ಬ್ರಿಟಿಷ್ ರೆಸಿಡೆಂಟನ್ನು ನೇಮಕ ಮಾಡಿದರು. ಪೂರ್ಣಯ್ಯನವರು ದಿವಾನರಾಗಿ ರಾಜ್ಯದ ಆಡಳಿತವನ್ನು ವಹಿಸಿಕೊಂಡ ನಂತರ ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದನು. ಮುಖ್ಯವಾಗಿ ಬ್ರಿಟಿಷರೊಂದಿಗೆ ಮಾಡಿಕೊಂಡ ಒಪ್ಪಂದದಂತೆ ವಾರ್ಷಿಕ ಪೊಗದಿಯನ್ನು ನಿಗದಿತವಾಗಿ ಸಲ್ಲಿಸುವ ಆಸಕ್ತಿ ವಹಿಸಿದನು.[೧] ಸಂಸ್ಥಾನದ ಆಡಳಿತ ನಿರ್ವಹಿಸಲು ಮತ್ತು ಬ್ರಿಟಿಷರಿಗೆ ಪೊಗದಿ ಸಲ್ಲಿಸಲು ಬೇಕಾದ ಹಣವನ್ನು ಸಂಗ್ರಹಿಸುವ ಸಲುವಾಗಿ, ರಾಜ್ಯದ ಆದಾಯದ ಮುಖ್ಯಮೂಲವಾದ ಕಂದಾಯ ಆಡಳಿತವನ್ನು ತರ್ಕಬದ್ಧವಾಗಿ ಮತ್ತು ಸ್ಥಿರೀಕರಣಕ್ಕೆ ಪ್ರಯತ್ನಿಸಿದನು. ಭೂಮಿಯನ್ನು ಅಳತೆ ಮಾಡಿ ಕಂದಾಯ ನಿಗದಿಪಡಿಸಲಾಯಿತು. ಭೂ ಆಸ್ತಿಯ ದಾಖಲೆ ಇಡಲಾಯಿತು. ಆಸ್ತಿಯ ಹಕ್ಕನ್ನು ಕೊಡಲಾಯಿತು. ತೆರಿಗೆ ವಸೂಲಿ

* ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಕೊಣಾಜೆ–೫೭೪೧೯೯

ಮಾಡುವಾಗ ರೈತರೊಡನೆ ಸೌಮ್ಯತೆಯಿಂದ ನಡೆದುಕೊಳ್ಳಲು ಆಜ್ಞೆ ಮಾಡಿದನು. ನಿಗದಿಪಡಿಸಿದ ಕಂದಾಯವನ್ನು ಧಾನ್ಯ ರೂಪ ಅಥವಾ ಹಣದ ರೂಪದಲ್ಲಿ ಸಂಗ್ರಹಿಸಲಾಯಿತು.

ಭೂಮಿಯ ಮಾಪನಕ್ಕೆ ಆಜ್ಞೆ ಹೊರಡಿಸಿ. ಭೂಮಿಯನ್ನು ಒಣ ಭೂಮಿ ಮತ್ತು ನೀರಾವರಿ ಭೂಮಿಗಳೆಂದು ವಿಂಗಡಿಸಿ, ಒಣಭೂಮಿಯ ಕಂದಾಯವನ್ನು ಶೇಕಡ ೧/೩ ಭಾಗ ನಿಗದಿಮಾಡಿ, ನೀರಾವರಿ ಭೂಮಿಯ ಕಂದಾಯವನ್ನು ಒಟ್ಟು ಬೆಳೆಯ ಶೇಕಡ ೧/೨ ಭಾಗ ನಿಗದಿಪಡಿಸಿದರು. ಈ ಹಿಂದೆ ಇದ್ದ ಹರಾಜು ಪದ್ಧತಿ ರದ್ದುಮಾಡಿ ಕಂದಾಯ ವಸೂಲಿಯನ್ನು ಸರ್ಕಾರದ ನೇರ ಅಧೀನಕ್ಕೆ ತಂದರು. ಪ್ರತಿ ಜಿಲ್ಲೆಯಲ್ಲೂ ಒಂದೇ ರೀತಿಯ ಸರಾಸರಿ ಕಂದಾಯ ನಿಗದಿ ಮಾಡಲಾಯಿತು. ಹೀಗಾಗಿ ಕಂದಾಯದ ಪ್ರಮಾಣ ಹಿಂದಿಗಿಂತಲೂ ಹೆಚ್ಚಾಯಿತು. ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗಗಳಲ್ಲಿ ಕೆಳದಿ ಶಿವಪ್ಪನಾಯಕನು ಜಾರಿಗೆ ತಂದಿದ್ದ 'ಶಿಸ್ತ್' (sist) ಪದ್ಧತಿಯನ್ನು ಮುಂದುವರಿಸಿಕೊಂಡು ಬರಲಾಯಿತು[೨]. ಕಂದಾಯವನ್ನು 'ಅಮಿನ್' ನ ನಿರ್ವಹಣೆಗೆ ಒಳಪಡಿಸಿದರು. ಒಟ್ಟಾರೆ ಪೂರ್ಣಯ್ಯನವರು ಕೃಷಿ ಕ್ಷೇತ್ರ ಸುಧಾರಣೆ ಮತ್ತು ನೀರಾವರಿ ಸೌಲಭ್ಯಗಳ ಪರಿಣಾಮವಾಗಿ ರೈತರು ಉತ್ತಮ ಜೀವನ ನಿರ್ವಹಣೆ ಮಾಡಲು ಸಾಧ್ಯವಾಯಿತು. ಕಂದಾಯ ಸುಧಾರಣೆಗಳಿಂದ ವಾರ್ಷಿಕ ಕಂದಾಯ ಸಂಗ್ರಹ ಪ್ರಮಾಣ ಹೆಚ್ಚಾಯಿತು. ಕೊಲೊನಲ್ ವಿಲ್ಕ್ಸ್‌ರ ಪ್ರಕಾರ ಪೂರ್ಣಯ್ಯನವರ ಆಳ್ವಿಕೆ ಅವಧಿಯಲ್ಲಿ ಕಂದಾಯ ಪ್ರಮಾಣ ಒಟ್ಟು ಉತ್ಪಾದನೆಯಲ್ಲಿ ಶೇ. ೪೦% ರಿಂದ ಶೇ. ೬೦% ಹೆಚ್ಚಾಯಿತು.[೩] ಇವರ ಆಳ್ವಿಕೆಯ ಪ್ರಾರಂಭದಲ್ಲಿ ರಾಜ್ಯದ ಆದಾಯ ೬೦ ಲಕ್ಷ ಇದ್ದದು ೧೮೦೯ರ ವೇಳಗೆ ೭೧ಲಕ್ಷ ರೂಪಾಯಿಗಳಿಗೆ ಹೆಚ್ಚಾಯಿತು. ಇದು ಅವರು ಅನುಸರಿಸಿದ ಕಂದಾಯ ನೀತಿಯ ಉತ್ತಮ ಪ್ರತಿಫಲವಾಗಿದೆ. ರಾಜ್ಯದ ಆದಾಯದ ಹಿತದೃಷ್ಟಿಯಿಂದ ನೋಡಿದಾಗ ಇದು ಉತ್ತಮ ಕಂದಾಯ ನೀತಿ ಎನಿಸಿದರು, ರೈತರ ಹಿತದೃಷ್ಟಿಯಿಂದ ಪೂರ್ಣಯ್ಯನವರ ಕಂದಾಯ ಪದ್ಧತಿ ಮಾರಕವಾಗಿ ಪರಿಣಮಿಸಿತು. ಮಿತಿಮೀರಿದ ಕಂದಾಯ ವಸೂಲಿಯಿಂದಾಗಿ ರೈತಾಪಿವರ್ಗ ಹಲವಾರು ರೀತಿಯಲ್ಲಿ ಶೋಷಣೆ ಅನುಭವಿಸುವಂತಾಯಿತು. ರೈತರಲ್ಲಿ ಕಂದಾಯ ಪದ್ದತಿಯ ಮತ್ತು ವಸೂಲಿ ವಿಧಾನದ ವಿರುದ್ಧ ಅಸಮಾಧಾನ ಹೆಚ್ಚಾಗುತ್ತಾ ಹೋಯಿತು. ಮುಂದೆ ಕೃಷ್ಣರಾಜ ಒಡೆಯರ ಕಾಲದಲ್ಲಿ ರಾಜ್ಯದಾದ್ಯಂತ ರೈತ ದಂಗೆಗಳ ರೂಪದಲ್ಲಿ ಅದು ಪ್ರತಿಫಲಗೊಂಡಿತು.

ಕ್ರಿ.ಶ. ೮೦೧೦ರಲ್ಲಿ ದಿವಾನ್ ಪೂರ್ಣಯ್ಯ ರಿಂದ ಆಳ್ವಿಕೆಯನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ವಹಿಸಿಕೊಂಡ ಪ್ರಾರಂಭದಲ್ಲಿ ಪೂರ್ಣಯ್ಯನವರು ಜಾರಿಗೆ ತಂದ ಕಂದಾಯ ಪದ್ಧತಿಯನ್ನೇ ಮುಂದುವರೆಸಿದರು. ೧೮೧೬-೧೮೧೯ ಮತ್ತು ೧೮೨೭-೨೮ ರಲ್ಲಿ ಚಿಕ್ಕಮಗಳೂರು ಜಿಲ್ಲೆ ಒಳಗೊಂಡಂತೆ ಸಂಸ್ಥಾನದ ಬಹು ಭಾಗ ಭೀಕರ ಬರಗಾಲಕ್ಕೆ ತುತ್ತಾದುದರಿಂದ ಆಹಾರ ಧಾನ್ಯಗಳ ಉತ್ಪಾದನೆ ಕಡಿಮೆಯಾಗಿ ರಾಜ್ಯದ ಆದಾಯ ಪ್ರಮಾಣ ಇಳಿಮುಖವಾಯಿತ್ತಲ್ಲದೆ ಅದರ ಜೊತೆಗೆ ದಿವಾನ್ ರಾಮರಾವ್ ಕಾಲದಲ್ಲಿ ಆಡಳಿತದ ಎಲ್ಲಾ ಹಂತಗಳಲ್ಲಿ ತಮ್ಮ ಬಂಧುಗಳನ್ನು ಮತ್ತು ಸ್ನೇಹಿತರನ್ನು ನೇಮಕ ಮಾಡಿದ್ದರಿಂದ ಆಡಳಿತದಲ್ಲಿ ಭ್ರಷ್ಟಾಚಾರ, ಅನೀತಿ, ರೈತರ ನಿರಂತರ ಶೋಷಣೆಗಳಿಂದ ರೈತರು ಕಡು ಬಡತನಕ್ಕೆ ಒಳಗಾದರು. ರಾಜ್ಯದ ಆರ್ಥಿಕ ಸ್ಥಿತಿ ಕೂಡ ಹದಗೆಟ್ಟಿತು. ಆಡಳಿತ ವ್ಯವಸ್ಥೆ ಕುಸಿಯುತ್ತಾ ಬಂದಿತು.

ರಾಜ್ಯದ ಆರ್ಥಿಕ ಸ್ಥಿತಿ ಸುಧಾರಿಸುವ ಸಲುವಾಗಿ, ಯಾರು ಅತೀ ಹೆಚ್ಚಿನ ಮೊತ್ತಕ್ಕೆ ಹರಾಜು ಕೂಗುತ್ತಾರೊ ಅವರಿಗೆ ಗ್ರಾಮಗಳ ಕಂದಾಯ ವಸೂಲಿಯ ಅಧಿಕಾರವನ್ನು ನೀಡಲಾಯಿತು.[೪] ಈ ಪದ್ಧತಿಯನ್ನು 'ಶರತ್ ಪದ್ದತಿ' ಎಂದು ಕರೆಯಲಾಯಿತು. ಇವರನ್ನು ಅಮಲ್ದಾರರು ಎಂದು ಕರೆಯಲಾಯಿತು. ಈ ಪದ್ಧತಿಯಂತೆ ನಿಗದಿಪಡಿಸಿದ ವಾರ್ಷಿಕ ಕಂದಾಯವನ್ನು ರಾಜ್ಯಕ್ಕೆ ಸಲ್ಲಿಸುವ ಜವಾಬ್ದಾರಿ ಅವರಿಗೆ ನೀಡಿ ಕಂದಾಯ ಕಟ್ಟದಿದ್ದರೆ ಅವರನ್ನೇ ಹೊಣೆಗಾರರನ್ನಾಗಿ ಮಾಡಲಾಯಿತು. ಆದರೆ ರೈತರಿಗೆ ಯಾವುದೇ ರೀತಿಯ ಕಿರುಕುಳ ವಸೂಲಿ ಸಂದರ್ಭದಲ್ಲಿ ನೀಡಬಾರದು ಎಂಬ ಮುಚ್ಚಳಿಕೆಯನ್ನು ಅಮಲ್ದಾರರೊಡನೆ ಮಾಡಿಕೊಳ್ಳಲಾಯಿತು. ರೈತರಿಂದ ಈ ವಿಷಯದ ಕುರಿತು ಯಾವುದೇ ದೂರುಗಳು ಬಂದರೆ ವಿಚಾರಣಾ ಸಮಿತಿ ನೇಮಕ ಮಾಡಿ ಶಿಕ್ಷೆ ಮತ್ತು ಹೆಚ್ಚಿನ ವಸೂಲಿಯನ್ನು ಹಿಂದಕ್ಕೆ ಪಡೆಯುವ ಎಚ್ಚರಿಕೆ ಕೊಡಲಾಯಿತು. ಜೊತೆಗೆ ಕೃಷಿ ಭೂಮಿ ವಿಸ್ತರಣೆಗೆ ಆದ್ಯತೆ ನೀಡಲು ಸೂಚಿಸಲಾಯಿತು. ಆದರೆ ಕಾಲ ಕಳೆದಂತೆ ಕೆಲವು ಅಮಿಲ್ದಾರರು ನಿಗದಿಗಿಂತ ಹೆಚ್ಚಿನ ಕಂದಾಯವನ್ನು ರೈತರಿಂದ ಬಲವಂತವಾಗಿ ವಸೂಲಿ ಮಾಡುತ್ತಾ, ಸುಳ್ಳು ಲೆಕ್ಕ ತೋರಿಸಿ ರಾಜ್ಯದ ಆರ್ಥಿಕ ದುಸ್ತಿತಿಗೆ ಕಾರಣರಾದರು. ಮಿತಿಮೀರಿದ ಕಿರುಕುಳಕ್ಕೆ ರೈತರು ಒಳಗಾದರು. ಕಂದಾಯ ಕಟ್ಟಲು ಸಾಧ್ಯವಾಗದ ರೈತರಿಂದ ಅವರ ಭೂಮಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಭೂಮಿ ಕಳೆದುಕೊಂಡ ರೈತರು ಭೂ ರಹಿತ ಕೃಷಿ ಕಾರ್ಮಿಕರಾಗಿ ಮಾರ್ಪಾಡು ಹೊಂದಿದರು.[೫] ಕೂಲಿ ಕೆಲಸದ ಆಳುಗಳು(ಜೀತ) ಜೀವನ ಮಟ್ಟ ಶೋಚನೀಯವಾಗಿತ್ತು. ಮತ್ತು ತೀರ ಬಡತನದ ಜೀವನಕ್ಕೆ ತುತ್ತಾದರು. ಈ ಎಲ್ಲಾ ಅಂಶಗಳು ರಾಜ್ಯದಲ್ಲಿ ರೈತ

ದಂಗೆಗಳು ಉದ್ಭವಿಸಲು ಕಾರಣವಾಯಿತು. ಮುಖ್ಯವಾಗಿ ನಗರ ವಿಭಾಗದಲ್ಲಿ ಮೊದಲು ಕಾಣಿಸಿಕೊಂಡಿತು. ಅದು ಮುಂದೆ ಇತರೆ ಪ್ರದೇಶಗಳಿಗೂ ಹರಡಿತು. ಚಿಕ್ಕಮಗಳೂರು ಭಾಗದ ತರೀಕೆರೆಯ ಲಕ್ಕವಳ್ಳಿ, ವಸ್ತಾರೆ ಮುಂತಾದ ಭಾಗಗಳಲ್ಲಿ ರೈತರ ದಂಗೆಗಳು ಸಂಭವಿಸಿದವು. ತರೀಕೆರೆ ಪಾಳೇಗಾರನ ವಂಶಕ್ಕೆ ಸೇರಿದ ರಂಗಪ್ಪನಾಯಕ ಈ ಭಾಗಗಳಲ್ಲಿ ರೈತದಂಗೆಯ ಮುಂದಾಳತ್ವ ವಹಿಸಿದ್ದನು. ಮತ್ತು ಸಾಕಷ್ಟು ಸಮಸ್ಯೆಗಳನ್ನು ಸೃಷ್ಟಿಸಿದನು.

ಒಟ್ಟಾರೆ ಮುಮ್ಮಡಿ ಕೃಷ್ಣರಾಜ ಒಡೆಯರು ಜಾರಿಗೆ ತಂದ 'ಶರತ್ ಕಂದಾಯ ಪದ್ಧತಿ' ಯು ಉತ್ತಮ ದೂರ ದೃಷ್ಟಿ ಹೊಂದಿದ್ದರೂ, ಅದರ ಅನುಷ್ಠಾನದಲ್ಲಿ ಲೋಪವೆಸಗಿದ ಅಮೀಲ್ದಾರರು, ರೈತರ ಶೋಷಣೆ ಜೊತೆ ಜೊತೆಗೆ ರಾಜ್ಯದ ಆಡಳಿತ ವ್ಯವಸ್ಥೆ ಕುಸಿಯಲು ಮತ್ತು ರಾಜ್ಯದಲ್ಲಿ ಆರ್ಥಿಕ ಸಂಕಷ್ಟ ನಿರ್ಮಾಣವಾಗಲು ಕಾರಣಕರ್ತರಾದರು. ರಾಜ್ಯದಲ್ಲಿನ ರೈತದಂಗೆಗಳು ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರ ಆಡಳಿತದಲ್ಲಿನ ಅಸಾಮರ್ಥ್ಯತೆಯ ನೆಪವೊಡ್ಡಿ ಬ್ರಿಟಿಷರು ಮೈಸೂರು ಆಡಳಿತವನ್ನು ಅಕ್ಟೋಬರ್ ೧೮೩೧ರಲ್ಲಿ ನೇರವಾಗಿ ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡರು. ಹೀಗೆ ದೋಷಪೂರಿತ ಕಂದಾಯ ಪದ್ಧತಿ, ಅನುಷ್ಠಾನದಲ್ಲಿನ ದೋಷಗಳು, ರೈತರ ಶೋಷಣೆ ಮುಂತಾದ ಅಂಶಗಳು ಒಡೆಯರು ಅಧಿಕಾರ ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣ ಮಾಡಿತು.

ಆಧಾರ ಗ್ರಂಥಗಳು

೧. ಡಾ. ತಿಮ್ಮನಹಳ್ಳಿ ವೇಣುಗೋಪಾಲ್, ರೈತರು, ಮೈಸೂರು ಅಧಿಕಾರಶಾಹಿ ಮತ್ತು ರಾಷ್ಟ್ರೀಯ ಚಳುವಳಿ ೧೮೮೧–೧೯೪೭ ಪು. ಸಂ. ೮, ಧಾತ್ರಿ ಪ್ರಕಾಶನ, (ಬೆಂಗಳೂರು, ೨೦೧೦).

೨. ಸೂರ್ಯನಾಥ್ ಕಾಮತ್, ಕರ್ನಾಟಕ ಗೆಜೆಟಿಯರ್, ಸಂಪುಟ ೨, ಪುಟ ಸಂಖ್ಯೆ ೨೯೬.

೩. ವಿಲ್ಕ್ಸ್, ಎಮ್. ರಿಪೋರ್ಟ್ ಆಫ್ ದಿ ಇಂಟೀರಿಯರ್ ಅಡ್ಮಿನಿಸ್ಟ್ರೇಷನ್, ಪುಟ ಸಂಖ್ಯೆ ೧೨೦.

೪. ಸೂರ್ಯನಾಥ್ ಕಾಮತ್, ಕರ್ನಾಟಕ ಗಜೆಟಿಯರ್ ಸಂಪುಟ ೨, ಪುಟ ಸಂಖ್ಯೆ ೨೯೫.

೫. ರಾಜಾರಾಮ್ ಹೆಗಡೆ, ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಪು. ಸಂ. ೯೧, ಪ್ರಸರಾಂಗ ಕನ್ನಡ ವಿಶ್ವವಿದ್ಯಾಲಯ, (ಹಂಪಿ ೨೦೦೨).

ಆಧಾರಸೂಚಿ

೧. ಚಿಕ್ಕಮಗಳೂರು ಜಿಲ್ಲಾ ಗೆಜೆಟಿಯರ್, ಬೆಂಗಳೂರು ೧೯೮೧

೨. ಸೂರ್ಯನಾಥ ಕಾಮತ್, ಕರ್ನಾಟಕ ಗೆಜೆಟಿಯರ್, ಸಂಪುಟ ೨.

೩. ಸಿ. ಹಯವದನರಾವ್, ಮೈಸೂರು ಗೆಜೆಟಿಯರ್, ಸಂಪುಟ ೪.

೪. ಧರ್ಮಕುಮಾರ್, ದಿ ಕೇಂಬ್ರಿಡ್ಜ್ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ, (೧೭೫೭ ೧೯೭೦), ಸುಂಪುಟ ೨, ಒರಿಯಂಟ್ ಲಾಂಗ್ಮನ್ (ದೆಹಲಿ ೧೯೮೪).

೫. ಶಾಮರಾವ್ ಎಮ್. ಮಾರ್ಡನ್ ಮೈಸೂರು ಸಂಪುಟ ೧, ಹಿಗ್ಗಿನ್ ಬಾಥಮ್, ಬೆಂಗಳೂರು.

೬ ಪುಟ್ಟಸ್ವಾಮಯ್ಯ, ಡೆವೆಲೆಪ್ ಮೆಂಟ್ ಆಫ್ ಕರ್ನಾಟಕ, ಸಂಪುಟ ೨. ಬೆಂಗಳೂರು.

೭. ಡಾ. ತಿಮ್ಮನಹಳ್ಳಿ ವೇಣುಗೋಪಾಲ್, ರೈತರು, ಮೈಸೂರು ಅಧಿಕಾರಶಾಹಿ ಮತ್ತು ರಾಷ್ಟ್ರೀಯ ಚಳುವಳಿ ೧೮೮೧–೧೯೪೭ ಪು. ಸಂ.೮, ಧಾತ್ರಿ ಪ್ರಕಾಶನ, (ಬೆಂಗಳೂರು, ೨೦೧೦).

೮. ರಾಜಾರಾಮ್ ಹೆಗಡೆ, ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಪುಟ ಸಂಖ್ಯೆ. ೯೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, (ಹಂಪಿ ೨೦೦೨).

೪೬

ಹುಲಿಯ ಜಂಗುಳಿಯ ಮೊತ್ತ : ಒಂದು ಪರಿಚಯ

ಡಾ. ಎನ್.ಆರ್. ಲಲಿತಾಂಬ*

ಮಧ್ಯಕಾಲೀನ ಕರ್ನಾಟಕದಲ್ಲಿ ಕಂಡು ಬಂದಿರುವ 'ಹುಲಿಯ ಜಂಗುಳಿಯ ಮೊತ್ತ' ಎಂಬ ಸಮೂಹವನ್ನು ಪರಿಚಯಿಸುವುದು ಈ ಲೇಖನದ ಉದ್ದೇಶವಾಗಿದೆ. ಕರ್ನಾಟಕದ ಶಾಸನಗಳಲ್ಲಿ ಹಾಗೂ ಸಾಹಿತ್ಯದಲ್ಲಿ ಹಲವು ಉಲ್ಲೇಖಗಳು ಕಂಡುಬಂದಿವೆ. ಈ ಸಮೂಹದ ವಿಶೇಷತೆ, ಇವರು ಅರಸು ಮನೆತನಗಳೊಂದಿಗೆ ಹೊಂದಿದ್ದ ನಿಷ್ಠೆ ಮತ್ತು ಅವರ ಕಾಲ, ಪ್ರಾದೇಶಿಕ ವಿಸ್ತಾರ ಇವುಗಳನ್ನು ಹಾಗೂ ಅವರು ನಂಬಿ ನಡೆದ ಮೌಲ್ಯಗಳನ್ನು ಶಾಸನ ಮತ್ತು ಸಾಹಿತ್ಯಕ ಉಲ್ಲೇಖಗಳ ಸಹಾಯದಿಂದ ಈ ಪ್ರಬಂಧದಲ್ಲಿ ಚರ್ಚಿಸಲಾಗುವುದು.

ಇಲ್ಲಿಯವರೆಗೆ ದೊರಕಿರುವ ಉಲ್ಲೇಖಗಳು ಕ್ರಿ.ಶ. ೧೧೭೧ರ ಹುಲಿಯ ಜಂಗುಳಿ ಪ್ರಮುಖ ಮುಖ್ಯವಾದ 'ಸಾಮನ್ತ ಬರ್ಮಯ್ಯ', ಕ್ರಿ.ಶ. ೧೧೯೪ರ 'ಹುಲಿಯ ಚಟ್ಟ ಗಾವುಂಡ', ಕ್ರಿ.ಶ. ೧೨೦೦ರ ಬಿಕ್ಕಯ್ಯನಾಯಕ, ಕ್ರಿ.ಶ. ೧೨೨೪ರ 'ಹುಲಿಯ ಜಂಗುಳಿಯ ಕೇತ', ೧೩ನೇ ಶತಮಾನದ ವಾಸಿಯಣ್ಣನೊಳಗಾದ ಅನೇಕ ನಾಯಕರು, ಕ್ರಿ.ಶ. ೧೨೯೨ರ 'ಯಿಂದಾವುರದ ಹುಲಿಯಜಂಗುಳಿಯ ಮಸಣಿತಂಮ' ಮತ್ತು ಅವನ ಮಗ ಬಿಕ್ಕಯ್ಯನಾಯಕ, ಹಾಗೂ, ಕ್ರಿ.ಶ. ೧೩೦೫ರ ಶಾಸನದ 'ಹುಲಿಯಜ್ಯಂಗುಡಿಮೊತ್ತದ ಸೇನಾನಾಯಕ ನಾಗಯ್ಯ' ಇವರ ಶಾಸನಗಳಲ್ಲದೆ ಹುಲಿಯಮಾನಿಯ ತೋಟ, ಗದ್ದೆ, ಭೂಮಿಗಳ, ಹುಲಿಗಾಹಿನ ವ್ರಿತ್ತಿಗಳ ಉಲ್ಲೇಖ ಕಂಡುಬಂದಿವೆ. ಈ ಉಲ್ಲೇಖಗಳೊಂದಿಗೆ ಕನ್ನಡ ಸಾಹಿತ್ಯ ಕೃತಿಗಳಲ್ಲಿನ ಉಲ್ಲೇಖಗಳನ್ನೂ ಪೂರಕವಾಗಿ ಗಮನಿಸಬಹುದು.

ಈ ಪದ ಸಮುಚ್ಚಯದ ಅರ್ಥವನ್ನು ತಿಳಿಯಲು ಪ್ರಯತ್ನಿಸೋಣ. 'ಹುಲಿ', 'ಜಂಗುಳಿ', 'ಮೊತ್ತ' ಎಂಬ ಮೂರೂ ನಾಮಪದಗಳಾಗಿದ್ದು, ಷಷ್ಠಿವಿಭಕಿಪ್ರತ್ಯಯವನ್ನು ಹತ್ತಿಸಲಾಗಿದೆ. ಇದು ಯಾವುದೋ ತಂಡದ ಹೆಸರಾಗಿದೆ. ಹುಲಿಯ ಎಂದರೆ 'ಹುಲಿಯಂತಹಪರಾಕ್ರಮಿಗಳ' ಎಂದು ಅರ್ಥೈಸಬಹುದು. 'ಹುಲಿಗಾಹು' ಎಂಬುದಕ್ಕೆ ಬಹಳ 'ಎಚ್ಚರವಾಗಿ ಮಾಡುವ ಪಹರೆ' ಎಂಬ ಅರ್ಥವಿದೆ. 'ನೀಲಯ್ಯಗಳು ಚಾಮಯ್ಯಗಳು ಕೋಟೆಯ ಹುಲಿಗಾಹು ಆ ವ್ರಿತ್ತಿಯನುಮಾಳ್ದು' ಎಂಬ ಉಲ್ಲೇಖವಿದೆ.[೧] ಹೊಯ್ಸಳ ಬಲ್ಲಾಳನ ಮಹಾಪ್ರಧಾನ ಸರ್ವಾಧಿಕಾರಿ ಸೇನಾಪತಿ ಮಹಾಪಸಾಯ್ತ ದಂಡನಾಯಕ ಜ್ಯೋತಿಮಯ್ಯನು ದಂಡನಾಯಕ ಬಲ್ಲಯ್ಯನೂ ಯಾದವಗಿರಿಯ ಕೋಟೆಯ ರಕ್ಷಾಪಾಳಕರಾಗಿದ್ದರು. ಅವರಮಕ್ಕಳಾದ ನೀಲಯ್ಯ ಚಾಮಯ್ಯರಿಗೆ **ಕೋಟೆಯ ಹುಲಿಗಾಹಿನ ಕೆಲಸಕ್ಕಾಗಿ** ವ್ರಿತ್ತಿಯನ್ನು ನೀಡಿದ್ದು ಅದನ್ನು ಅವರು ಆಳುತ್ತಿದ್ದರೆಂಬುದು ತಿಳಿದುಬರುತ್ತದೆ.

'ಜಂಗುಳಿ' ಎಂದರೆ ಸಮೂಹ, ಎಂಬ ಅರ್ಥವಿದೆ.[೨] 'ಮೊತ್ತ' ಎಂಬುದಕ್ಕೂ ಒಟ್ಟಾದ, ಗುಂಪು, ಸಮೂಹ ಅಥವಾ ತಂಡ ಎಂಬ ಅದೇ ಅರ್ಥವಿರುವುದರಿಂದ ಈ ಸಂದರ್ಭದಲ್ಲಿ 'ಜಂಗುಳಿ' ಎಂಬುದಕ್ಕೆ ಬೇರೆ ಅರ್ಥವಿರಬಹುದೆ ಎಂದು ಪರಿಶೀಲಿಸಬೇಕಾಗುತ್ತದೆ. ಜಂಗು ಎಂದರೆ ಯುದ್ಧ, ಕಾಳಗ, ಸೈನ್ಯ ಎಂಬ ಅರ್ಥವಿದೆ. "ಶ್ರೀಮತು ರಾಚಮಲ್ಲದೇವರ ಜಂಗಿನ ಸೇನಬೋವ ಸುಭಕರಯ್ಯ"[೩] "ಜಂಗುಳಿಮನ್ನೆಯ ಬೇಂಟೆಕಾಱ" ಎಂಬ ಬಿರುದು "ಆಳಿಂ ಮುನ್ನಿರಿವಂ ಶೌರ್ಯಮಂ ಮೆಱೆವಂ ಜಂಗುಳಿ ಮಂನೆಯ ಬೇಂಟೆಕಾಱಂ ಮಾರ್ತಾಂಡದೇವನಂಕಕಾಱಂ"[೪]. **"ಸಿಂಗದ ಜಂಗುಳಿ**ಯಂತಿರಸುಂಗೊಳೆ ಪೊಱಮಟ್ಟು ಕಾದೆ ವರುಣಕುಮಾರರ್" ಎಂದು ನಾಗಚಂದ್ರ ಬಳಸಿದ್ದಾನೆ.[೫] "ಇತ್ತಲಿದು ಕಲ್ಪಾಂತರುದ್ರನ ಮೊತ್ತ **ಕಾಳೋರಗನ ಜಂಗುಳಿ** ಮತ್ಯುವಿನ ಮೋಹರ ಕೃತಾಂತನ ಥಟ್ಟು" ಎಂಬುದಾಗಿ ಕುಮಾರವ್ಯಾಸ ಬಳಸಿದ್ದಾನೆ.[೬] ಮೇಲಿನ ಉಲ್ಲೇಖಗಳ ಸಹಾಯದಿಂದ 'ಜಂಗುಳಿ' ಎಂಬುದಕ್ಕೆ 'ಸೈನ್ಯ'ಎಂಬ ಅರ್ಥವನ್ನು ಮಾತ್ರ ಇಟ್ಟುಕೊಂಡರೆ 'ಹುಲಿಯ ಸೈನ್ಯದ ಮೊತ್ತ' ಅಥವಾ ಹುಲಿಯಂತಹ ವೀರರ ಸೈನ್ಯದ ತಂಡ ಎಂಬ ಅರ್ಥ ನೀಡಬಹುದು. ಹಾಗಾಗಿ ಹುಲಿಯ ಜಂಗುಳಿ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ವಿಶೇಷ ವೀರರಪಡೆಯನ್ನು ಈ ಪದಸಮೂಹ ಸೂಚಿಸುತ್ತಿದೆ

* ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನೆಯ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿಜಯನಗರ, ಬೆಂಗಳೂರು–೫೬೦೧೦೪.

ಎನಿಸುತ್ತದೆ. ಈ ಊಹೆಗೆ ಸಾಕ್ಷಿಯಾಗಿ ಈ ಹೆಸರಿನ ಸಮೂಹದ ಅನೇಕ ವೀರರನ್ನು, ವೀರಪಡೆಯನ್ನೂ ಅವರ ಕಾರ್ಯ ವೈಖರಿಯನ್ನು ಕರ್ನಾಟಕದ ಅನೇಕ ಶಾಸನಗಳು ಉಲ್ಲೇಖಿಸಿವೆ. ಅವುಗಳನ್ನು ಒಂದೊಂದಾಗಿ ಪರಿಶೀಲಿಸಬಹುದು.

ಹೊಯ್ಸಳ ವೀರ ನರಸಿಂಹನ ಪಾದಪದ್ಮೋಪಜೀವಿಯಾದ "ಸಮಸ್ತ ಪ್ರಶಸ್ತಿ ಸಹಿತಂ ಸಮಸ್ತ ನಾಮಾವಳೀ ಸಮಲಂಕೃತರೂ ವೈರಿಸಾಮನ್ತದಿಶಾಪಟ್ಟನೂಂ ಅರಿಬಿರುದಸಾಮನ್ತ ಗಣ್ಡಭೇರುಂಡ ಗುಣಸಂಪನ್ನರಪ್ಪ ಶ್ರೀ ಮನ್ಮಹಾಸಾಮನ್ತ ಹುಲಿಯಜಂಗುಳಿ ಪ್ರಮುಖ ಮುಖ್ಯವಾದ ಸಾಮನ್ತ ಬರ್ಮಯ್ಯನು ಇಕ್ಕೇರಿಸ್ಥಳವನ್ನು ಆಳುತ್ತಿದ್ದು, ಅವನ ಮಡದಿ ಶಿವಭಕ್ತಳಾದ ಬಮ್ಮವ್ವೆನಾಯಕಿತಿಯು ಬ್ರಹ್ಮೇಶ್ವರದೇವಾಲಯವನ್ನು ಕಟ್ಟಿಸಿ ದೇವರ ಪ್ರತಿಷ್ಠೆಯನ್ನು ಮಾಡಿಸುತ್ತಾಳೆ. ಆ ದೇವಾಲಯಕ್ಕೆ ಚಕ್ರವರ್ತಿ ನರಸಿಂಹನು ಜೀರ್ಣೋದ್ಧಾರಕ್ಕೆ ನಿತ್ಯಪೂಜೆಗೆ ಗ್ರಾಮದಾನ ನೀಡಿದ ವಿವರವಿದೆ. ಇಲ್ಲಿ ಬರ್ಮಯ್ಯನು ಹುಲಿಯಜಂಗುಳಿಯ ಪ್ರಮುಖನಾಗಿದ್ದನು. ಮತ್ತು ಪ್ರಶಸ್ತಿ ಸಹಿತ ಪ್ರಸಿದ್ಧನಾಗಿದ್ದ ಸಾಮಂತನಾಗಿದ್ದನು ಎಂಬುದು ತಿಳಿದುಬರುತ್ತದೆ.[೭] ಕೃಷ್ಣರಾಜ ಪೇಟೆ ತಾಲ್ಲೂಕು ಅಗ್ರಹಾರ ಬಾಚಹಳ್ಳಿಯ ಹುಣಸೇಶ್ವರ ದೇವಾಲಯದ ನೈಋತ್ಯ ಮಂಟಪದಲ್ಲಿರುವ ತುರುಗೊಳ್ ಪೆಣ್ಬುಯ್ಯಲ್ ವೀರಗಲ್ಲು ಹುಲಿಯ ಜಂಗುಳಿಯ ಮೊತ್ತದ ವೀರನಾದ ಕೇತಣ್ಣನ ಸ್ಮಾರಕವಾಗಿದೆ. ಈ ಕೇತಣ್ಣನು ಬೋಕ ಬಿಲ್ಲಗಾಟಿಯ ಬಲ್ಲಗೌಡನ ಮಗ. ಮಹಾಸಾಮಂತ ಬಿರುದರಗೋವನೆಂದು ಪ್ರಸಿದ್ಧರಾದ ಕಬ್ಬಹುನಾಡಾಳುವ ಕನ್ನಡಿಗ ಮೊನೆಯಾಳ್ತನವನ್ನು ಮಾಡುವವರ ಸೇನಾನಾಯಕನಾದ ಕೂರೆಯನಾಯಕನ ಮಗನಾದ ಬಲ್ಲೆಯನಾಯಕನ ಜೊತೆಯಲ್ಲಿ ಹಯ್ಸೆಯ್ಯ ನಾಯಕನೆಂಬುವವನ ದಾಳಿಗೆ ಎದುರಾಗಿ ಹೋರಾಡಿ ಹೆಣ್ಣುಸೆರೆ, ಗೋಮಹಿಷಿಗಳನ್ನು ಮರಳಿಸಿ ಶತ್ರುಸೈನ್ಯದ ಕುದುರೆಗಳನ್ನಿರಿದು ಸುಭಟರನ್ನು ಕೊಂದು ವೀರ ಮರಣಹೊಂದಿದ್ದಾನೆ. ಇವನನ್ನು ಶಾಸನ 'ಬಿರುದರಗೋವ', 'ಬಲ್ಲೆಯನಾಯಕನ ಕಟ್ಟಿದಲಗೂ', 'ಹುಲಿಯಜಂಗುಳಿಯ ಕೇತ'ನೆಂದು ಕರೆದಿದೆ. ಕಬ್ಬಹುನಾಡ ಸಾಮಂತರ ಸೈನ್ಯದ ಸೇನಾಪತಿ ಕೂರಯ್ಯನಾಯಕನ ಮಗ ಬಲ್ಲಯ್ಯನ ನಾಯಕತ್ವದಲ್ಲಿ ಈ ವೀರರ ಹುಲಿಯ ಜಂಗುಳಿಯ ಪಡೆ ಇದ್ದು, ಆ ಪಡೆಯಲ್ಲಿ ಈ ಕೇತನು ಒಬ್ಬನೆಂಬುದು ನಿಸ್ಸಂಶಯ.

ಕನ್ನಡಿಗಮೊನೆಯರ ಆಳುತನಗೆಯ್ಯುವ ಈ ಕಬ್ಬಹು ನಾಡಾಳುವ ಮಹಾಸಾಮಂತ ಸೇನಾನಾಯಕ ಹೊಯಿಸಳಲೆಂಕ ನಿಸ್ಸಂಕನೆಂದು ಪ್ರಸಿದ್ಧನಾದ ಕೂರಯ್ಯನು ಅಗ್ರಹಾರಬಾಚಳ್ಳಿಯನ್ನು ಆಳುತ್ತಿದ್ದನು.[೮] ಈತ ಅಗ್ರಹಾರ ಬಾಚಹಳ್ಳಿಯ ಮುಗಿಲ ಕುಲದವರು. ಹೊಯ್ಸಳ ಅರಸರ ಅನ್ವಯಾನುಗತ ಗರುಡರಾಗಿ ಬಾಳಿದ ವಂಶದವನಾಗಿದ್ದು, ಗಂಡನಾರಾಯಣಸೆಟ್ಟಿ ಮಾರವ್ವೆಯರ ಮೊಮ್ಮಗ ಹೊಯ್ಸಳ ಸೆಟ್ಟಿಯ ಮಗ[೯] ಇವನು ತನ್ನ ಇಬ್ಬರು ಮಡದಿಯರು ಏಳು ಪ್ರಜೆಲೆಂಕರೊಂದಿಗೆ ಹೊಯ್ಸಳ ನರಸಿಂಹನೊಂದಿಗೆ ಗರುಡರಾಗಿ ಭಾಷೆನಡೆಸಿಕೊಟ್ಟಿದ್ದಾನೆ.[೧೦] ಈತನ ಇಬ್ಬರು ಮಕ್ಕಳಲ್ಲಿ ಸಿವನೆಯನಾಯಕ ಇಮ್ಮಡಿ ವೀರಬಲ್ಲಾಳನಿಗೆ ಭಾಷೆಕೊಟ್ಟು ಗರುಡನಾಗಿದ್ದರೆ, ಮತ್ತೊಬ್ಬ ಮಗ ಬಲ್ಲಯ್ಯ 'ಹುಲಿಯ ಜಂಗುಳಿಯ ಮೊತ್ತದ ವೀರಪಡೆ'ಯ ನಾಯಕನಾಗಿದ್ದನು.

ವೀರಗರುಡ ಕೂರಯ್ಯನಾಯಕನಿಗೆ ಇದ್ದ ಬಿಕ್ಕೆಯನಾಯಕನೆಂಬ ಮತ್ತೊಬ್ಬ ಮಗನ ವೀರಮರಣವನ್ನು ಕ್ರಿ.ಶ. ೧೨೦೦ರ ಮಡುವಿನಕೋಡಿಯ ವೀರಸ್ಮಾರಕ ಶಾಸನ[೧೧] ಹೇಳಿದೆ. ಈ ವೀರಗಲ್ಲಿನಲ್ಲಿ ಕೂರಯ್ಯನಾಯಕನನ್ನು ಅವನ ವಂಶವನ್ನು ಹೊಗಳಲಾಗಿದೆ. "ಬರಸಿಡಿಲು ಸಾಮಂತ ಗಂಡರಗಂಡ ಜಂಗುಳಿ ಸಾಮಂತರ ಹಿಂಡಕಾವ ಗೋವ ತಂದೆಯ ಗಂಧವಾರಣ" ಎಂಬ ಬಿರುದನ್ನು ಬಿಕ್ಕಯ್ಯನಾಯಕ ಹೊಂದಿದ್ದನು. ಈ ಬಿಕ್ಕಯ್ಯನಾಯಕನು ಮೊಡವನಕೋಡಿಗೆ ದಾಳಿಬಂದಾಗ ಅರಸರ ಬೆಸದಿಂದ ಯುದ್ಧದಲ್ಲಿ ಪಾಲ್ಗೊಂಡು ಪ್ರಾಣ ನೀಗಿದ್ದಾನೆ. ಇವನ ಬಿರುದಿನಲ್ಲಿರುವ "ಜಂಗುಳಿಸಾಮಂತರಹಿಂಡು" ಎಂಬುದು ಹುಲಿಯ ಜಂಗುಳಿಯ ಮೊತ್ತವನ್ನೇ ಹೇಳುತ್ತಿರಬಹುದು. ಈ ವೀರನ ತಾಯಿ ಕೂರಯ್ಯನಾಯಕನ ಅರ್ಧಾಂಗಲಕ್ಷ್ಮಿ ಧರ್ಮದಮೇರು ಪಾರ್ವತಿಗೌರಿ, ಅಭಿನವ ಸುಗ್ಗಲದೇವಿ, ಗೋತ್ರ ಚಿಂತಾಮಣಿ ರಾಣಿಮೊಖಜ್ಯೋತಿ ಎಂದು ಪ್ರಸಿದ್ಧಳಾದ ಮಾಚವ್ವೆ. ಮಾಚವ್ವೆಯ ಈ ಬಿರುದುಗಳನ್ನು ನೋಡಿದರೆ ಆಕೆ ವೀರಗರುಡನ ಮಡದಿಯಾಗಿ ಲೆಂಕಿತಿಯಾಗಿ ತಾನೂ ಹೊಯ್ಸಳ ಅರಸಿಗೆ ಭಾಷೆಕೊಟ್ಟು ವೀರಜೀವನ ನಡೆಸಿರುವುದು ಸ್ಪಷ್ಟವಾಗುತ್ತದೆ.

'ಗರುಡ ಪಡೆ', 'ಹುಲಿಯ ಜಂಗುಳಿಯ ಮೊತ್ತ' ಹಾಗೂ 'ಭೇರುಂಡನ ಕೂಸರ ಮೊತ್ತ'ಗಳು ಇವೆಲ್ಲಾ ಏಕಕಾಲದಲ್ಲೇ ಚಾಲ್ತಿಯಲ್ಲಿದ್ದುವೆಂದು ಅವು ಹೊಯ್ಸಳರ ಸೈನ್ಯದ ವಿವಿಧ ಸೈನ್ಯ ತಂಡಗಳಾಗಿದ್ದವೆಂದು ಹೇಳಬಹುದು. ಮುಗಿಲಕುಲದ ಗರುಡರ ಮಕ್ಕಳಲ್ಲಿ ಒಬ್ಬನು ಗರುಡನಾಗಿ ಅನ್ವಯಾನುಗತವಾಗಿ ಭಾಷೆಯನ್ನು ನಡೆಸಿಕೊಂಡು ಬಂದರೆ ಉಳಿದವರು ಈ ರೀತಿ ವೀರಪಡೆಗಳ ನಾಯಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದರೆನ್ನಬಹುದು.

ಕ್ರಿ.ಶ. ೧೨೯೨ರ ಶಾಸನ 'ಯಿಂದಾವುರದ ಹುಲಿಯಜಂಗುಳಿಯ ಮಸಣಿತಂಮ'ನನ್ನು ಉಲ್ಲೇಖಿಸಿದೆ. ಈ ಶಾಸನ ವಿಶೇಷ ಘಟನೆಯೊಂದನ್ನು ಹೇಳುತ್ತದೆ. ವೀರ ಬಲ್ಲಾಳದೇವರು ಆಳುತ್ತಿರುವಾಗ ಸಮುದ್ರ ಪಾಂಡ್ಯನ ಮನೆಯ ಮರಕಾಲನೆಂಬುವವನು ಅಗ್ರಹಾರವನ್ನು ಬೇಡಿ ತನ್ನೆಲ್ಲಾ ವಸ್ತುವಾಹನಾದಿಗಳೊಡನೆ ಬಂದಾಗ ಕಾಳಲದೇವಿಯ ಕುಮಾರ ಪಾಂಡ್ಯದೇವ ಮಹಾದೇವನು ಆತನನ್ನು ಕೊಂದು ಅವನ ವಸ್ತು ವಾಹನಾದಿಗಳನ್ನು ವಶಪಡಿಸಿಕೊಳ್ಳುತ್ತಾನೆ. ಈ ಉದ್ಧಟತನವನ್ನು ವಿರೋಧಿಸಿ ತಳಿಗೆನಾಡೂ ದೇವಳಿಗೆನಾಡವರು ಪಾಂಡ್ಯದೇವ ಮಹಾದೇವನಮೇಲೆ ಏರಿಹೋದಾಗ ಹೊಳೆಹೊನ್ನೂರಿನಲ್ಲಿ ಕಾಳಗ ನಡೆಯುತ್ತದೆ. ಆ ಕುದುರೆಕಾಳಗದಲ್ಲಿ "ವೀರ ಮಸಣನು ಹೊಯಿದು ಹೊಯಿಕುಟ್ಟಾಡಿ ಉಭಯ ಬಲ್ಲಣಿ ಬಹರಿಯ ಯಜೆದು ಕುದುರೆನುಮಿಜೆದು ಕಾಲಾಳನು ನಾಯಕರನ್ನು ತಿವಿದು ಸುರಲೋಕಪ್ರಾಪ್ತನಾದನು. ಅವನ ವೀರಗಲ್ಲನ್ನು ಚಿಕೋಜನು ಕಡೆದಿದ್ದು ಅದನ್ನು ಪೂಜಿಸುವವರಿಗೆ ಎರಡುಕೊಳಗ ಮಸಣಿತಂಮನ ಬೆದ್ದಲೆಯನ್ನು ಬಿಟ್ಟಿದ್ದಾರೆ.[೧೨] ಬಿಕ್ಕಯ್ಯನಾಯಕ ಎಂಬ ವೀರನೂ ಸಹ ಈ ಕಾಳಗದಲ್ಲಿ ಮರಣವನ್ನಪ್ಪಿದ್ದಾನೆ. ಈ ವೀರರು ದೇವಳಿಗೆ ನಾಡಿನ ಒಡೆಯರ ಪರವಾಗಿ ಹೋರಾಡಿ ಪ್ರಾಣತ್ಯಾಗ ಮಾಡಿದ್ದಾರೆ. 'ಯಿಂದಾವುರದ ಹುಲಿಯಜಂಗುಳಿಯ ಮಸಣಿತಂಮ' ಎಂಬ ಮಾತಿನಿಂದ ಇಂದಾವರದಲ್ಲಿ ಒಂದು ಹುಲಿಯ ಜಂಗುಳಿಯ ವೀರರ ಪಡೆಯಿದ್ದು, ಅದರಲ್ಲಿ ಮಸಣಿತಮ್ಮ ಹಾಗೂ ಅವನ ಮಗ ವೀರ ಮಸಣರು ಸೇರಿದ್ದರು. ಮಸಣನು ಶತ್ರುಗಳ ಬಲ್ಲಣಿಬಹರಿಗಳನ್ನು (ದೊಡ್ಡಸೈನ್ಯದ ಕುದುರೆಯಾಳುಗಳು) ಕುದುರೆಗಳನ್ನು ಇರಿದು ಅನೇಕ ಕಾಲಾಳುಗಳನ್ನು ಕೊಂದು ಪ್ರಾಣನೀಗಿದ್ದಾನೆ. ಸಾವನ್ನಪ್ಪಿದ ಬಿಕ್ಕಯ್ಯ ನಾಯಕನೂ ಸಹ ಇದೇ ಹುಲಿಯ ಜಂಗಳಿಯ ಮೊತ್ತದ ವೀರನಾಗಿರುವ ಸಾಧ್ಯತೆಯಿದೆ.

ಕ್ರಿ.ಶ. ೧೪೮೯ ಹಾಗೂ ೧೬೩೨ರ ಶಾಸನಗಳಲ್ಲಿ ಹುಲಿಯ ಮಾನಿಯ ಭೂಮಿಗಳ ಉಲ್ಲೇಖವಿದೆ.[೧೩] ಬೊಬ್ಬಿನಾಡವಳಗಣ ಹುಲಿಮಾನಿಯ ತೋಟದಕೋಹಿನ ಉಲ್ಲೇಖವಿದೆ. ಆ ತೋಟದೊಳಗಿನ ಮರಗಳ ಲೆಕ್ಕವಿದೆ. ಚತುಸ್ಸೀಮೆಯ ಉಲ್ಲೇಖವಿದೆ. 'ಹುಲಿಗಾಹಿ'ಗಾಗಿ ಉಂಬಳಿಗಳನ್ನು ನೀಡಿರುವುದು ತಿಳಿದುಬಂದಿದೆ.[೧೪] ಬಹುಶಃ ಇವು ಹುಲಿಯ ಜಂಗುಳಿಯ ವೀರರಿಗೆ ನೀಡಿರಬಹುದಾದ ಮಾನ್ಯದ ಭೂಮಿ, ತೋಟ, ಗ್ರಾಮಗಳಾಗಿರಬಹುದು.

ಕ್ರಿ.ಶ. ೧೨೯೪ರ ಹೊಯ್ಸಳ ಇಮ್ಮಡಿ ವೀರ ಬಲ್ಲಾಳನ ಕಾಲದಲ್ಲಿ ಆಸಂದಿ ನಾಡೊಳಗಣ 'ಹುಲಿಯ ಚಟ್ಟ ಗಾವುಂಡ' ತನ್ನ ಹೆಸರಿನಲ್ಲಿ ಚಟ್ಟನ ಹಳ್ಳಿ ಎಂಬ ಊರನ್ನು ಮಾಡಿ ಮಲ್ಲಿಕಾರ್ಜುನ ದೇವರ ಪ್ರತಿಷ್ಠೆಯನ್ನು ಮಾಡಿದ್ದಾನೆ. ಅಂಗಭೋಗಕ್ಕೆ ಬೆದ್ದಲೆಯನ್ನು ದಾನಬಿಟ್ಟಿದ್ದಾನೆ. ಮಡದಿ ಏಚಗಾವುಂಡಿ ಮಕ್ಕಳು ಹಿರಿಯ ಬಂಮಗೌಡ ಮತ್ತು ಚಿಕ್ಕಬಂಮಗೌಡರು ಆ ದಾನವನ್ನು ನಿಡುಗಟ್ಟದ ಕಲ್ಯಾಣಶಕ್ತಿ ದೇವರಿಗೆ ಧಾರಾಪೂರ್ವಕ ಮಾಡಿಕೊಟ್ಟಿದ್ದಾರೆ.[೧೫]

ಕಲ್ಕೇರಿಯ ೧೩ನೇ ಶತಮಾನದ ಶಾಸನವೊಂದು[೧೬] ಮಹಾಪಸಾಯ್ತ ಪರಮವಿಶ್ವಾಸಿ ವಾಸಿಯಣ್ಣನೊಳಗಾದ ಹುಲಿಯ ಜಂಗುಳಿಯ ಮೊತ್ತದ ಕಳ್ಪಮುದ್ರೆಯ ಸಮಸ್ತ ನಾಯಕರು ಕಲ್ಕೆರೆಯ ಸ್ವಯಂಭುದೇವರಿಗೆ ಹಾಗೂ ಮೂರುಜಾವಿದೇವರಿಗೆ ಶಿವರಾತ್ರಿಯಂದು ಭೂಮಿದಾನಮಾಡಿರುವ ವಿಚಾರವನ್ನು ದಾಖಲಿಸಿದೆ.

ಕ್ರಿ.ಶ. ೧೩೦೫ರ ಮರಡಿಪುರದ ಶಾಸನವೊಂದರಲ್ಲಿ ಹೊಯ್ಸಳ ವೀರ ಬಲ್ಲಾಳದೇವನ ಪಾದಪದ್ಮೋಪಜೀವಿ "ಶ್ರೀ ಮನುಮಹಾಸಾಮಂನ್ತ ಭಾಷೆಗೆ ತಪ್ಪುವಲೆಂಕರಗಂಡ **ಹುಲಿಯ ಜ್ಯಂಗುಡಿಮೊತ್ತದ** ಸೇನಾನಾಯಕಂ ಶ್ರೀ ಕಲಿದೇವರ ದಿವ್ಯ ಶ್ರೀಪಾದಪದ್ಮಂಗಳಂ ಕಮಳ ನಾಳ ಸೂತ್ರದಂತೆ ಎಡೆವರಿಯದೆ ಅನುದಿನಂ ಬೆಸಕೆಯ್ಯುತಿದ್ದ ನಾಗಯ್ಯ, ವೀರಬಮ್ಮಯ್ಯನ ಮಗ, ಭಕ್ತರ ಕಾರುಣ್ಯದ ಮಗ, ಶರಣರದಾಸ, ಸೋವನ ಸಿಂಗನ ಮಾರೆಯನಾಯಕ ಮುಂತಾದ ಅನೇಕ ಗಾವುಂಡುಗಳು ಸೇರಿ 'ಯೆಮ್ಮೆಯ ಕೇತನಹಟ್ಟಿ'ಯನ್ನು ಶ್ರೀ ಕಲಿದೇವರಿಗೆ ಶಿವಪುರವಾಗಿ ಭಕ್ತರಿಗೆ ಕೊಟ್ಟಿದ್ದನ್ನು ಹೇಳಿದೆ.[೧೭]ಗುಮ್ಮಳಾಪುರದ ದಾನಶಾಸನವೊಂದರಲ್ಲಿ[೧೮] ಜಂಗುಳಿದೇವನೆಂಬ ಶರಣನನ್ನು ವೀರಮಾಹೇಶ್ವರನೆಂದು ಕರೆದಿದೆ. ಈತನನ್ನು ಚನ್ನಬಸವಪುರಾಣದಲ್ಲಿ[೧೯] ಏಳುನೂರೊಂದು ವಿರಕ್ತರ ತರುವಾಯದ ಶರಣರಲ್ಲಿ ಗುರುತಿಸಿದೆ. ಇವನನ್ನು ಗುಮ್ಮಳಾಪುರದ ಶಾಸನ 'ಜಂಗುಳಿವೀರಪ್ಪ'ನೆಂದು ಕರೆದು, ಈತನು ಸುಪ್ರಸಾದಿದೇವ ಮುಖ್ಯರಾದ ಚಾರುಚರಮೂರ್ತಿಗಳು ಸೇರಿ ಬಂದ ಜಂಗಮರಿಗೆ ದಾಸೋಹವನ್ನು ಮಾಡುತ್ತಿದ್ದರೆಂದು ಹೇಳುತ್ತದೆ.

ಈ ಮೇಲಿನ ಮೂರು ಶಾಸನಗಳಲ್ಲಿ ಯಾವುದೇ ಕಾಳಗದ ವಿವರಗಳಿಲ್ಲ, ಬದಲಿಗೆ ಶಿವ ದೇವಾಲಯಗಳಿಗೆ ದಾನದ, ದಾಸೋಹದ ವಿವರಗಳಿವೆ. ಎರಡೂ ಶಾಸನಗಳಲ್ಲಿ ಹುಲಿಯ ಜಂಗುಳಿಯ ಮೊತ್ತದ ವೀರನಾಯಕರ ಉಲ್ಲೇಖವಾಗಿದೆ. ಇಲ್ಲಿನ ಹುಲಿಯಜಂಗುಳಿ/ಜ್ಯಂಗುಡಿಯ ಸೇನಾನಾಯಕ ನಾಗಯ್ಯ,[೨೦] ಪಸಾಯತ ವಾಸಿಯಣ್ಣ, ಹಾಗೂ ವೀರಬೊಮ್ಮಯ್ಯನ ಮಗ ಮಾರೆಯನಾಯಕರು ಶಿವ ಭಕ್ತರಾಗಿ ಶರಣರ ದಾಸರಾಗಿ ಗುರುತಿಸಲ್ಪಟ್ಟಿದ್ದಾರೆ. ಈ ಶಾಸನವನ್ನು ಬರೆದವನು

ಜಡೆಯಶಂಕರದೇವರ ಭಕ್ತ ಮಲ್ಲಯ್ಯ. ಇಡೀ ಶಾಸನದಲ್ಲಿ ವೀರಶೈವ ವಾತಾವರಣವಿದೆ. ಅನೇಕ ವೀರಶೈವ ಭಕ್ತರ ಉಲ್ಲೇಖಗಳಿವೆ. ಅದರಲ್ಲಿ, ಸಂಗನಬಸವಯ್ಯ, ಜಗದೇವದಂಣ್ಣಾಯಕ ಏಕಾಂತದರಾಮಯ್ಯರ ಹೆಸರಿರುವುದನ್ನು ಗಮನಿಸಬಹುದು. ಅಲ್ಲದೆ ಈ ಗ್ರಾಮವನ್ನು ಶಿವಪುರವಾಗಿ ಪಡೆದ ಅಲ್ಲಿನ ದೇವಾಲಯಗಳ ಭಕ್ತರನ್ನು **ದೇವರುಗಳ ತೊತ್ತು**ಗಳೆಂದು, **ಲೆಂಕ**ರೆಂದು ಕರೆದಿರುವುದನ್ನು ಗಮನಿಸಿದರೆ, ವೀರಬೊಮ್ಮಯ್ಯ, ಅಂಕಯ್ಯ, ಜಕ್ಕಯ್ಯ, ಕೇತಯ್ಯ, ಅಪ್ಪಯ್ಯ, ಯೇಚಯ್ಯ ಹೊಯ್ಸಣದಾಸಿ ಚೂಡಮದೇವರ ಮಾಚಯ್ಯ, ಹೊನ್ನಯ್ಯ, ಚೂಡಮದೇವರ ಲೆಂಕಬೂವಣ್ಣರು ಎಲ್ಲರೂ ಅನುಕ್ರಮವಾಗಿ ಆಯಾಯ ದೇವಾಲಯಗಳ ರಕ್ಷಣೆಗೆ ಮೀಸಲಾದ ವೀರಮಾಹೇಶ್ವರರೆಂದು ಭಾವಿಸಲು ಅವಕಾಶವಿದೆ. ಇನ್ನು ಗುಮ್ಮಳಾಪುರದ ಜಂಗುಳಿವೀರಪ್ಪದೇವನನ್ನು ಶ್ರೇಷ್ಠವಾದ ಚಾರುಚರಮೂರ್ತಿ, ವೀರಮಾಹೇಶ್ವರನೆಂದು ಸ್ಪಷ್ಟವಾಗಿ ಕರೆಯಲಾಗಿದೆ.

ಕರ್ನಾಟಕದ ಚರಿತ್ರೆಯಲ್ಲಿ ಒಂದು ಕಡೆ ವೀರರ ಸಮೂಹಗಳು ವೈಷ್ಣವಧರ್ಮದ ಒಕ್ಕಲಾಗುವುದು ಕಂಡುಬರುವಂತೆಯೇ ಮತ್ತೊಂದೆಡೆ ವೀರಸಮೂಹಗಳು ಶಿವ/ವೀರಭದ್ರನ ಒಕ್ಕಲಾಗುತ್ತಿದ್ದುದನ್ನು ೧೨-೧೩ನೇಶತಮಾನದಲ್ಲಿ ವಿಶೇಷವಾಗಿ ಗಮನಿಸಬಹುದು. ೧೩ನೇ ಶತಮಾನದ ಹೊತ್ತಿಗಾಗಲೇ ವೀರಶೈವರಲ್ಲಿ ವೀರ ಮಾಹೇಶ್ವರರು ತಮ್ಮ ಧರ್ಮ-ದೈವಗಳ ಸಂರಕ್ಷಣೆಗಾಗಿ ಕಂಕಣಬದ್ಧರಾಗಿದ್ದುದು ನಮಗೆ ತಿಳಿದಿದೆ.

'ಮಾಹೇಶ್ವರನು' ಷಟ್ಸ್ಥಲಗಳಲ್ಲಿ ಎರಡನೆಯ ಹಂತವಾದ ಮಾಹೇಶ್ವರಸ್ಥಲದಲ್ಲಿರುವವನು. ಈ ಸ್ಥಲ ಲಿಂಗ ನಿಷ್ಠೆ ವೃದ್ಧಿಸುವ ಸ್ಥಲ. ಅವನು ಪರಸ್ತ್ರೀ ಪರಧನ ವ್ಯಾಮೋಹವನ್ನು ಬಿಡಬೇಕಾದವನು, ವಿರಾಗಿಯೂ, ಲಿಂಗನಿಷ್ಠಾಪರನೂ ಆಗಿರುವ ಭಕ್ತ. ಇಂಥ ವೀರಮಾಹೇಶ್ವರರಲ್ಲಿ ಇಹಲೋಕ ವೀರ, ಪರಲೋಕವೀರ ಮತ್ತು ಲಿಂಗವೀರ ಎಂಬ ಮೂರು ಬಗೆಯನ್ನು ಗುರುತಿಸಲಾಗಿದೆ. ಅದನ್ನು **'ಮಾಹೇಶ್ವರ ತ್ರಿವಿಧ'**ವೆಂದು ಕರೆಯಲಾಗುತ್ತದೆ. ತಾನು ಕೈಕೊಂಡ ಕಾರ್ಯವನ್ನು ಸಾಧಿಸುವುದರ ಜೊತೆಗೆ ತನ್ನ ಕಾರ್ಯಕ್ಕೆ ಅಡ್ಡಿ ಬರುವವರನ್ನು ನಿಗ್ರಹಿಸುವವನು ಇಹಲೋಕವೀರ, ಚತುರ್ವಿಧ ಪುರುಷಾರ್ಥಗಳನ್ನು ಲಕ್ಷಿಸದೆ ನಿಷ್ಕಾಮದಿಂದಿರುವವನು ಪರಲೋಕವೀರ ಮತ್ತು ಲಿಂಗಾಂಗಸಂಗಿಯಾಗಿ ತನ್ನ ಕರಣಗಳೆಲ್ಲವನ್ನೂ ಅಂಕೆಯಲ್ಲಿಟ್ಟುಕೊಳ್ಳುವ ಲಿಂಗವೀರ ಎಂಬ ಮೂರು ಪ್ರಕಾರದ ಮಾಹೇಶ್ವರರ ಲಕ್ಷಣಗಳನ್ನು ವಿವರಿಸಲಾಗಿದೆ.[೨೧] "ಮರ್ತ್ಯಲೋಕದ ಮಹಾಗಣಂಗಳು ಮೆಚ್ಚುವಂತೆ ಷಡ್ದರ್ಶನಂಗಳ ನಿರಸನವ ಮಾಡಿ ತನ್ನ ಸಮಯಕ್ಕೆ ಪ್ರಾಣವ ವೆಚ್ಚಿಸುವನಾಗಿ ಇಹಲೋಕವೀರ"[೨೨] ಎಂದು ಚೆನ್ನಬಸವಣ್ಣ ಹೇಳಿದ್ದಾನೆ. ಇಂತಹ ಸಮಯ ನಿಷ್ಠೆಯನ್ನು ತೋರಿಸಿರುವ ಒಬ್ಬವೀರನ ಉದಾಹರಣೆ ಶಾಸನವೊಂದರಲ್ಲಿದೆ. ಶಿವಪುರವಾಗಿ ಪರಿವರ್ತಿಸಿ ನೀಡಲಾಗಿದ್ದ ಬಿದಿರಕೋಟೆ ಗ್ರಾಮವನ್ನು ಭಕ್ತರಿಗೆ ಬಿಡದೆ ಮಾದೆಯ್ಯನಾಯಕನೆಂಬುವವನು ದಾಷ್ಟ್ಯವನ್ನು ತೋರಿದಾಗ ಆ ಗ್ರಾಮದ ವೀರಮಲ್ಲಯ್ಯನೆಂಬ ಶಿವಭಕ್ತನು ತನ್ನನ್ನು ತಾನೇ ಕುತ್ತಿಕೊಂಡು ಆ ಗ್ರಾಮದ ನಾಲ್ಕುದಿಕ್ಕಿನ ಸೀಮೆಕಲ್ಲುಗಳ ಮೇಲೆ ತನ್ನ ರಕ್ತಸುರಿಸಿ ಗುರುತುಮಾಡುವ ವಿಭಿನ್ನ 'ಸಮಯನಿಷ್ಠೆ'ಯನ್ನು ತೋರಿಸಿ ಅಧಿಕಾರಿಯನ್ನು ಮಣಿಸಿ ತಮ್ಮ ಗ್ರಾಮವನ್ನು ಶಿವಪುರವಾಗಿ ಮತ್ತೆ ಪಡೆದು ವೀರಮಾಹೇಶ್ವರತನವನ್ನು ಪ್ರದರ್ಶಿಸಿದ್ದಾನೆ.[೨೩] ಶೈವ ಶಾಸನಗಳು ಹಾಗೂ ವಚನಗಳಲ್ಲಿ ಕಂಡುಬಂದಿರುವ ಜಂಗುಳಿವೀರರಿಗೆ ಈ 'ಲೌಕಿಕ ಮಹೇಶ್ವರರ' ಅಥವಾ 'ಇಹಲೋಕವೀರಮಾಹೇಶ್ವರ'ನ ಲಕ್ಷಣಗಳು ಚೆನ್ನಾಗಿ ಹೊಂದಿಕೊಳ್ಳುತ್ತದೆ. ಶರಣರ ಹಿಂದೆ ಇಂಥ ಜಂಗುಳಿಯ ವೀರರಿರುತ್ತಿದ್ದುದನ್ನು ವಚನಗಳ ಉಲ್ಲೇಖಗಳಿಂದ ತಿಳಿಯಬಹುದು. "ಜಾನುಜಂಗೆ (ಮೊಳಕಾಲಿನ ಗೆಜ್ಜೆ) ಯಲಿ ಹುಟ್ಟಿ ಜಂಗಮವೆನಿಸಿಕೊಳಬುದೆ" [೨೪], "ಜಂಗಮದ ಸರ್ವಸಂಗವ ಮಾಡುವ ಜಂಗು ಜಂಘೇಯ ಮುಱಿದು"[೨೫] ಎಂಬ ವಚನಕಾರ ದಾಸೋಹದ ಸಂಗಣ್ಣನ ಮಾತು, "ಪರವಿತ್ತ ಪರಸತಿಗೆಳಸನ್ ಅರಸೇವೆ ಹಂಗುಹಱಿಯಳಿದ ನಿರ್ವಂಚಕನೆ ಮಾಹೇಶ್ವರ[೨೬] ಎಂಬ ಮಾತುಗಳು, 'ಜಂಗು (ಗೆಜ್ಜೆ) ಕಟ್ಟಿದ ಜಂಘೆಯನ್ನು ಮುರಿದು' ಜಂಗಮ ಸಂಗವನ್ನು ಮಾಡುವವನು ಹಾಗೂ ಸಂಪತ್ತು, ವೀರಸ್ವರ್ಗದ ರಮಣಿಯರ ಹಂಬಲ, ಅರವೆಸನದ (ಜೋಳವಾಳಿತನ)ದ ಹಂಗನ್ನು ಹರಿದುಕೊಂಡವನು ಮಾತ್ರ ಮಾಹೇಶ್ವರನಾಗಬಹುದು ಎಂಬುದನ್ನು ಹೇಳುತ್ತಿವೆ. ಅಲ್ಲದೆ ಇಂತಹ ವೀರರ 'ರಾಜನಿಷ್ಠೆ'ಯು 'ಲಿಂಗನಿಷ್ಠೆ'ಯಾಗಿ ಪರಿವರ್ತನೆಗೊಳ್ಳಬೇಕಾದುದನ್ನೇ ಒತ್ತಿಹೇಳುತ್ತಿರುವಂತಿದೆ. ಅರಸನಿಂದ ವೀಳೆಯವನ್ನು ಪಡೆದು ಭಾಷೆಸಲಿಸಿ ವೇಳೆಗೊಂಡು ಮೆಚ್ಚುಕೊಡುಗೆಗಳನ್ನು ಪಡೆಯುತ್ತಿದ್ದ ವೀರರು ಇಲ್ಲಿ 'ಸಮಯ' ನಿಷ್ಠರಾಗಿ ಮರ್ತ್ಯ ಲೋಕದ ಮಹಾಗಣಂಗಳು ಮೆಚ್ಚುವಂತೆ ನಡೆದುಕೊಳ್ಳಬೇಕಾಗುತ್ತದೆ. ಹಾಗೆ ಪರಿವರ್ತನೆಗೊಳ್ಳದ ಅರೆಬರೆ ಬದಲಾವಣೆಗೊಂಡವರು "ಜಂಗಮ ಜಂಗುಕಟ್ಟಿ ಹಿಂಗಡೆ ತಿರುಗಲು ಸಂಗನ ಶರಣರಿಗೇನುಫಲ"[೨೭] ಎಂದು ವಿಡಂಬನೆಗೆ ಒಳಗಾಗಿರುವುದೂ ಉಂಟು.

ವೀರರು ಘಂಟೆಯನ್ನು ಧರಿಸಿ ಮುಖ್ಯವ್ಯಕ್ತಿ ಅಥವಾ ಅರಸರ ಹಿಂದೆ ತಿರುಗುವ ಕರ್ತವ್ಯವನ್ನು ನೆರವೇರಿಸುತ್ತಿದ್ದು, ಶರಣರಾದಮೇಲೂ ಅದನ್ನು ಬಿಡದೆ ಶ್ರೇಷ್ಠ ವ್ಯಕ್ತಿಗಳ, ಶಿವಭಕ್ತರ ಹಿಂದೆ ಅವರ ಕಾಪಿನವರಾಗಿ ಸುಳಿದಾಡುತ್ತಿದ್ದಿರೆಂಬುದನ್ನು

ಇಂತಹ ಸಾಹಿತ್ಯಿಕ ಉಲ್ಲೇಖಗಳು ತಿಳಿಸುತ್ತವೆ. ಅಂಥವರನ್ನು ಈ ಮಾತು ವಿಡಂಬಿಸುತ್ತಿದೆ. ಎಲ್ಲಿ ಶರಣತ್ವವಿದೆಯೋ ಅಲ್ಲಿ ರಾಗದ್ವೇಶಗಳಿಗೆ, ಆಕ್ರಮಣಶೀಲತೆಗೆ ಅವಕಾಶವಿಲ್ಲ ಎಲ್ಲಿ ಆಕ್ರಮಣದ ಭಯವಿಲ್ಲವೋ ಅಲ್ಲಿ ರಕ್ಷಣೆಯ ಅವಶ್ಯಕತೆಯೂ ಬರುವುದಿಲ್ಲ. ಹಾಗಾಗಿ ಈ ಜಂಗುಳಿ ವೀರರ ಅವಶ್ಯಕತೆ ಶರಣರಿಗೆ ಅನವಶ್ಯಕ, ಸಂಗನ ಶರಣರಿಗೆ ಇದು ಬೇಡವಾದದ್ದು ಮತ್ತು ವ್ಯರ್ಥವೆಂಬ ಭಾವ ಈ ಮಾತಿನಲ್ಲಿರುವುದನ್ನು ಗಮನಿಸಬಹುದು. ಶರಣರಾದಮೇಲೂ ವೀರರು, ವೀರವೃತ್ತಿಯವರು ಆಕ್ರಮಣಶೀಲತೆಯನ್ನು ಬಿಟ್ಟಿಲ್ಲವೆಂದು ವಚನಗಳು ವಿಡಂಬಿಸಿರುವುದಕ್ಕೆ ಅನೇಕ ಉದಾಹರಣೆಗಳಿವೆ.[೨೮] ಈ ಮೇಲಿನ ಎಲ್ಲಾ ಉಲ್ಲೇಖಗಳನ್ನು ಗಮನಿಸಿದರೆ ಈ ವೀರತಂಡವೂ ಅರಸರ ನೆಚ್ಚಿನ ವೀರರಾಗಿ ಎರವೆಸನದ ವೀರಮೌಲ್ಯವನ್ನು ಎತ್ತಿಹಿಡಿದವರಂತೆ ತೋರುತ್ತದೆ. ಭೇರುಂಡದ ಮೊತ್ತದಂತೆ[೨೯] ಪ್ರಸ್ತುತ 'ಹುಲಿಯ ಜಂಗುಳಿಯ ಮೊತ್ತ' ಎಂಬುದೂ ಕೂಡ ಹೊಯ್ಸಳರ ಕಾಲದಲ್ಲಿದ್ದ ವಿಶಿಷ್ಟ ವೀರಪಡೆಗೆ ಇದ್ದ ಹೆಸರಾಗಿದೆ. ಆ ವೀರಪಡೆಯನ್ನು 'ಹುಲಿಗಳ ಸಮೂಹ'ವೆಂದು ಕರೆದಿರುವುದು ಅವರ ಶೌರ್ಯ, ಸಾಹಸಗಳನ್ನು ಎತ್ತಿತೋರುತ್ತದೆ. ಇಲ್ಲಿ ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಅವರಿಗೆ ಗುರುತಾಗಿ 'ಕಳ್ಪಮುದ್ರೆ'ಯಿತ್ತು ಎಂಬುದು. ಕಲ್ಕೇರಿಯ ಶಾಸನವು[೩೦] ವಾಸಿಯಣ್ಣನೊಳಗಾದ ಸಮಸ್ತನಾಯಕರನ್ನು "ಹುಲಿಯ ಜಂಗುಳಿಯ ಮೊತ್ತದ ಕಳ್ಪಮುದ್ರೆಯನ್ನು ಹೊಂದಿದ್ದರೆಂದು ಕರೆದಿದೆ. ಕಳ್ಪಮುದ್ರೆ ಎಂದರೇನೆಂಬುದು ತಿಳಿದುಬಂದಿಲ್ಲ. ಅನೇಕ ವೀರನಾಯಕರಿಗೆ 'ಕಳುವ' ಎಂಬುದು ಉಪನಾಮದಂತೆ ಬಳಕೆಯಾಗಿದ್ದಕ್ಕೆ ಶಾಸನಗಳಲ್ಲಿ ಉದಾಹರಣೆಗಳಿವೆ.[೩೧] ಆದರೆ 'ಕಳುವ'ಎಂಬುದರ ಅರ್ಥವೇನೆಂಬುದು ಸ್ಪಷ್ಟವಾಗುವುದಿಲ್ಲ. ಪ್ರಸ್ತುತ ಶಾಸನದಲ್ಲಿ 'ಕಳ್ಪುಮುದ್ರೆ ಎಂಬುದು 'ಕಳ್ಪಮುದ್ರೆ' ಎಂದು ಲಿಪಿಕಾರನ ತಪ್ಪಿನಿಂದಾಗಿದೆ ಎಂದು ಭಾವಿಸುವುದಾದರೆ ಕಳ್ಪು>ಕರ್ಪ್ಪು>ಕಪ್ಪು ಎಂಬ ಪದ ಸ್ವರೂಪದ ಹಿನ್ನೆಲೆಯಲ್ಲಿ ಹುಲಿಯ ಜಂಗುಳಿಯ ಮೊತ್ತದ ವೀರರು ಕಪ್ಪು ಬಣ್ಣದ ಗುರುತಿನ ಯಾವುದೋ ಮುದ್ರೆಯನ್ನು ಧರಿಸುತ್ತಿದ್ದಿರಬಹುದೆಂದು ಊಹಿಸಬಹುದು. ಇತರ ವೀರ ಗುಂಪುಗಳಿಂದ ಇವರನ್ನು ಬೇರೆಯಾಗಿ ಗುರುತಿಸಲು ಇದ್ದ ಮುದ್ರೆಯಿದಾಗಿದ್ದು, ಮುದ್ರೆ ಎದ್ದು ಕಾಣುವಂತಿರಲೇಬೇಕು ಹಾಗಾಗಿ ಕಪ್ಪು ಬಣ್ಣದ ಹುಲಿ ಪಟ್ಟೆಯಂತಹ ಒಂದು ಗುರುತನ್ನು ಇವರು ಮುಖದ ಮೇಲೆ ಬರೆದುಕೊಳ್ಳುತ್ತಿದ್ದಿರಬಹುದೇ? ಅಥವಾ ಕಪ್ಪು ವಸ್ತ್ರವನ್ನಾಗಲೀ, ಹುಲಿ ಗುರಿತಿನ ಕಪ್ಪುವರ್ಣದ ಶಿರಸ್ತ್ರಾಣವನ್ನಾಗಲೀ ಧರಿಸುತ್ತಿದ್ದಿರಬಹುದೇ ಎಂಬ ಅನುಮಾನಗಳು ಬರುತ್ತದೆ. ಶಾಸನ ಶಿಲ್ಪಗಳಲ್ಲಿ ಈ ರೀತಿಯ ಕುರುಹುಗಳು ನನಗೆ ಕಂಡುಬಂದಿಲ್ಲ. ಒಟ್ಟಿನಲ್ಲಿ ಕಾಲಿಗೆ ಕಟ್ಟಿದ ಗಂಟೆಯೊಂದಿಗೆ, ಹುಲಿಯ ಗುರುತಿನ ವಿಶೇಷ ಮುದ್ರೆ, ಲಾಂಚನ ಅಥವಾ ಉಡುಗೆಯನ್ನು ಧರಿಸುತ್ತಿದ್ದಿರಬಹುದಾದ ಹೊಯ್ಸಳರ ಕಾಲದಲ್ಲಿ ಪ್ರಮುಖವಾಗಿದ್ದ ಒಂದು ವಿಶೇಷ ಸೈನ್ಯ ತುಕಡಿ ಇವರನ್ನು ಗುರುತಿಸಬಹುದು. ಅವರಲ್ಲಿ ಕೆಲವರು ವೀರಶೈವ ಧರ್ಮದ ಪ್ರಭಾವದಿಂದ ವೀರಮಾಹೇಶ್ವರರಾಗಿ ಪರಿವರ್ತನೆಗೊಂಡರೆಂದು ಉಲ್ಲೇಖಗಳ ಆಧಾರದಿಂದ ತೀರ್ಮಾನಿಸಬಹುದು.

ಟಿಪ್ಪಣಿಗಳು

೧. ಎ.ಕ. ಸಂ. ೧೪ (ಸಪ್ಲಿಮೆಂಟರಿ) ಶಾ.ಸಂ. ೧೫೨, ಶ್ರೀರಂಗಪಟ್ಟಣ, ಕ್ರಿ.ಶ. ೧೧೮೯.
೨. ಕ.ಸಾ.ಪ.ನಿ. ೨೯೩೭.
೩. ಎ.ಕ. ೨, ೧೯೦ ಶ್ರವಣಬೆಳಗುಳ. ಕ್ರಿ.ಶ. ೧೦೦೦.
೪. ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ ೧೧-೨, ಶಾ. ಸಂ ೧೬೫೧೧, ೧೧೧೨.
೫. ಪಂಪರಾಮಾಯಣ ೧೦-೨೦೭.
೬ ಕು.ವ್ಯಾ. ಭಾ. ಭೀಷ್ಮಪರ್ವ ೨-೧೬.
೭. ಎ.ಕ. ೬ (ಪರಿ) ಶಾ.ಸಂ. ೨೭, ಕಿಕ್ಕೇರಿ ಕೃಷ್ಣರಾಜಪೇಟೆ, ಕ್ರಿ.ಶ. ೧೧೭೧.
೮. ಎ.ಕ. ೯ (ಪರಿ) ಶಾ.ಸಂ. ೭೯, ಕ್ರಿ.ಶ. ೧೨೪೨.
೯. ಅದೇ ಶಾ.ಸಂ. ೮೨, ೧೨೫೬.
೧೦. ಅದೇ. ಶಾ.ಸಂ. ೮೪, ಕ್ರಿ.ಶ. ೧೨೯೧.
೧೧. ಎ.ಕ. ೬. ಕೃಷ್ಣರಾಜಪೇಟೆ, ಶಾ. ಸಂಖ್ಯೆ ೧೧೨, ಕ್ರಿ.ಶ. ೧೨೦೦.

೧೨. ಎ.ಕ. ೧೧ (ಪರಿ) ಶಾ.ಸಂ. ೨೫, ಇಂದಾವರ ಸಂಗಮೇಶ್ವರ ದೇವಸ್ಥಾನಕ್ಕೆ ಪೂರ್ವ ಕಡೆ ಇರುವ ವೀರಗಲ್ಲು, ಕ್ರಿ.ಶ. ೧೨೯೨.

೧೩. ಎ.ಕ. ೧೧ (ಪರಿ) ಶಾ.ಸಂ. ೭೪, ಹುಲಿಮನೆ ಹಾಗೂ ಶಾ.ಸಂ. ೪೨, ಶೃಂಗೇರಿ.

೧೪. ಎ.ಕ. ಸಂ. ೧೪ ಶ್ರೀರಂಗ ೧೫೨-೧೫ ಕ್ರಿ.ಶ. ೧೧೮೯.

೧೫. ಎ.ಕ. ೧೨. ಶಾ.ಸಂ. ೯೧ ಚಟ್ಟನಹಳ್ಳಿ. ಕ್ರಿ.ಶ. ೧೧೯೪ ಕಡೂರು.

೧೬. ಎಸ್.ಐ.ಐ. ಸಂ. ೨೦-೧೯೮೮ ಶಾಸನ ಸಂಖ್ಯೆ, ೩೩೨ ಹಾನಗಲ್ ತಾಲ್ಲೂಕು, ಧಾರವಾಡ ಜಿಲ್ಲೆ.

೧೭. ಎ.ಕ. (ಪರಿ) ೭ ಶಾ. ಸಂ. ೧೩ ಮರಡಿಪುರ ಮಂಡ್ಯ, ಕ್ರಿ.ಶ. ೧೩೦೫.

೧೮. ಶರಣ ಸಾಹಿತ್ಯ, ೨೧-೨ ಮತ್ತು ೩ ಕ್ರಿ.ಶ. ೧೪೭೪.

೧೯. ಚನ್ನಬಸವಪುರಾಣ, ೬೩-೫೪೦.

೨೦. ರೈಸ್‌ರವರು ಛೀಫ್ ಆಫ್ ದಿ ಕಲೆಕ್ಷನ್ ಆಫ್ ಆರ್ಮಿ ಆಫ್ ಹುಲಿಯಜ್ಯಂಗುಡಿ ಎಂದು ಅನುವಾದಿಸಿ ಹುಲಿಯಜಂಗುಡಿಯ ಮುಂದೆ ಪ್ರಶ್ನಾರ್ಥಕ ಚಿಹ್ನೆಯನ್ನು ಇಟ್ಟಿದ್ದಾರೆ.

೨೧. ವೀರಶೈವ ಪಾರಿಭಾಷಿಕ ಪದಕೋಶ (ಸಂ) ಎಸ್. ವಿದ್ಯಾಶಂಕರ್, ಬಸವ ಸಮಿತಿ-೨೦೦೦.

೨೨. ಚೆನ್ನಬ. ಸಮವ. ೩-೩೨೨-೯೮೭.

೨೩. ಎ.ಕ.೭. (ಪರಿ) ಶಾ.ಸಂ. ೩೪, ರಾಯಸೆಟ್ಟಿಪುರ, ಕ್ರಿ.ಶ. ೧೨೫೧ ಮಂಡ್ಯ.

೨೪. ಅಲ್ಲಮನ ವಚನ ಚಂದ್ರಿಕೆ, ೧೦೪-೪೭೦ ಎಂಬ ಅಲ್ಲಮನ ಮಾತು.

೨೫. ದಾ.ಸೋ. ಸಂಪುಟ ೩೬.

೨೬ ವೀರಶೈವ ಪುರಾಣ, ೮-೧೨೮-೧೩.

೨೭. ಶರೀಫ-೭೦, ಕವಿ ಕಾವ್ಯ ಪರಿಚಯ.

೨೮. ಶಾಸನ ಮತ್ತು ಸಾಹಿತ್ಯದ ಬೆಳಕಿನಲ್ಲಿ ಎಕ್ಕಟಿಗರ ಉಲ್ಲೇಖ.

೨೯. ಭೇರುಂಡದ ಮೊತ್ತದ ಕೂಸರು.ಎನ್.ಆರ್. ಲಲಿತಾಂಬ, ಇತಿಹಾಸ ದರ್ಶನ, ಸಂ. ೨೨-೨೦೦೬.

೩೦. ಎಸ್.ಐ.ಐ. ಸಂ. ೨೦-೧೯೮೮ ಶಾಸನ ಸಂಖ್ಯೆ ೩೩೨, ಹಾನಗಲ್ ತಾಲ್ಲೂಕು, ಧಾರವಾಡ ಜಿಲ್ಲೆ.

೩೧. ಕ (ಪರಿಷ್ಕೃತ) ಅರಸೀಕೆರೆ ಶಾ.ಸಂ. ೫೯, ಎ.ಕ. (ಪರಿಷ್ಕೃತ) ೯, ಬೇಲೂರು, ಶಾ.ಸಂ. ೩೩೨, ಕ್ರಿ.ಶ. ೧೨೨೦.

೩೭

ಕಾರಗಹಳ್ಳಿ ಕಾಳಗ ಹಲವು ಹೊಸ ವಿಚಾರಗಳು

ಡಾ. ಟಿ.ಎಲ್. ಜಗದೀಶ*

ಮೈಸೂರು ಸಂಸ್ಥಾನದ ಸ್ಥಾಪನೆಯಲ್ಲಿ ಕಾರಗಹಳ್ಳಿಯ ಕಾಳಗ ಮಹತ್ವದ್ದಾಗಿದೆ. ಇದರ ಬಗೆಗೆ ಹಲವು ಇತಿಹಾಸಕಾರರು ಹಾಗೂ ವಿದ್ವಾಂಸರು ಉಲ್ಲೇಖಿಸಿದ್ದಾರೆ. ಈ ಸ್ಥಳವು ನಂಜನಗೂಡಿನ ಸಮೀಪವಿರುವ ಕಾರಗಹಳ್ಳಿಯೆಂದು ಬಹುತೇಕ ವಿದ್ವಾಂಸರು ಹಾಗೂ ಇತಿಹಾಸಕಾರರು ಗುರುತಿಸಿದ್ದಾರೆ. ಆದರೆ ಇತ್ತೀಚೆಗೆ ದೊರೆತ ಕೆಲವು ಆಧಾರಗಳಿಂದ ಈ ಕಾರಗಹಳ್ಳಿಯು ಅದಾಗಿರದೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿದೆ. ಮಾತ್ರವಲ್ಲ ಅಂದಿನ ಕಾರಗಹಳ್ಳಿಯು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ 'ಹಡಜನ' ಗ್ರಾಮದ ಸಮೀಪದಲ್ಲಿದ್ದು ಇಂದು ಆ ಸ್ಥಳದ ಅವಶೇಷಗಳು ಮಾತ್ರ ಉಳಿದಿರುವುದನ್ನು ಕಾಣಬಹುದು.

ಮೈಸೂರು ಪ್ರಾಚೀನ ಪರಂಪರೆಯನ್ನು ಹೊಂದಿರುವ ಪ್ರದೇಶ. ಈ ಸ್ಥಳದ ಪ್ರಾಚೀನತೆ ಕ್ರಿ.ಪೂ. ೪೦೦ರ ಕಾಲಘಟ್ಟವೆಂದು ಬಿ.ಎಲ್. ರೈಸ್ ಅವರು ಗುರುತಿಸಿದ್ದಾರೆ. 'ಮಾಹಿಷ್ಮತಿ' ಎಂದೇ ಕರೆಯಲಾಗುತ್ತಿದ್ದ ಈ ಊರಿನ ಹೆಸರು ಮಹಾಭಾರತದ ಕಥಾಭಾಗದಲ್ಲಿ ಉಲ್ಲೇಖವಿದೆ. ಮೈಸುನಾಡು, ಮೈಸೆನಾಡು, ಮಹಿಸೂರಪುರ, ಮಯಿಸೂರು, ಮೈಸೂರು ಎಂದಿದೆ. ಮೈಸೂರು ಅರಸರ ವಂಶದ ಮೂಲಪುರುಷರು ಯದುರಾಯ ಮತ್ತು ಕೃಷ್ಣರಾಯರು ಈ ಪ್ರಾಂತ್ಯಕ್ಕೆ ವಿಜಯ ಮಾಡಿಸಿದರು. ಮಾತ್ರವಲ್ಲ ನಂಜನಗೂಡು ಸಮೀಪದಲ್ಲಿರುವ ಕಾರಗಹಳ್ಳಿ ಎಂಬ ಸ್ಥಳದಲ್ಲಿ ಬಂದಿಳಿದರು ಎಂದು ವಿದ್ವಾಂಸರಾದ ಬಿ.ಎಲ್. ರೈಸ್ ಅಭಿಪ್ರಾಯಪಟ್ಟಿದ್ದಾರೆ.

ಕ್ರಿ.ಶ. ೧೭೬೦–೧೮೩೧ರ ಅವಧಿಯಲ್ಲಿ ರಚಿಸಲಾದ 'ಮೈಸೂರು ದೇಶದ ಚರಿತ್ರೆ' ಎಂಬ ಕೃತಿಯ ಲೇಖಕರಾದ ಕರ್ನಲ್ ಮಾರ್ಕ್‌ವಿಲ್ಕ್ಸ್ ಅವರು ಇಂಗ್ಲೀಷ್ ಭಾಷೆಯಲ್ಲಿ ಬರೆಯುವ ಸಂದರ್ಭದಲ್ಲಿ 'ಹಡಜನ' ಎಂಬ ಊರಿನ ಸಮೀಪದಲ್ಲಿರುವ ಕಾರಗಹಳ್ಳಿ ಎಂಬುದಾಗಿದೆ. ಆದರೆ ದಾಖಲಿಸುವ ಸಂದರ್ಭದಲ್ಲಿ 'ಡಿ' ಎಂಬ ಅಕ್ಷರವು ಸಂದರ್ಭಾನುಸಾರವಾಗಿ ಬಳಕೆಯಾಗಿದೆ. 'ಹಡಜನ' ಎಂಬ ಸ್ಥಳವನ್ನು ಹೆಸರಿಸುವಾಗ 'ಡ'ಕಾರ ಲೋಪವಾಗಿ 'ಹದನ' ಅಥವಾ 'ಹದಣ' ಎಂಬುದಾಗಿ ಕರ್ನಲ್ ಮಾರ್ಕ್‌ವಿಲ್ಕ್ಸ್ ಅವರು ದಾಖಲಿಸಿದ್ದಾರೆ.

ಕ್ರಮೇಣ ಕ್ರಿ.ಶ. ೧೮೩೭ರ ವೇಳೆಗೆ ಈ ಪ್ರದೇಶಕ್ಕೆ ಬಂದಂತಹ ಬಿ.ಎಲ್. ರೈಸ್ ಅವರು ಮೈಸೂರು ಸಂಸ್ಥಾನದ ಸ್ಥಾಪನೆಗೆ ಕಾರಣವಾದ ಅಂಶಗಳನ್ನು ಹೇಳುವ ಸಂದರ್ಭದಲ್ಲಿ ಈ ಕೃತಿಯನ್ನು ಅವಲೋಕಿಸಿದ್ದಾರೆ. ಮಾತ್ರವಲ್ಲ ಕರ್ನಲ್ ವಿಲ್ಕ್ಸ್‌ರ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಂಡಿರುತ್ತಾರೆ. ರೈಸ್ ಅವರು ಭಾವಿಸಿರುವಂತೆ ಯದುರಾಯ ಮತ್ತು ಕೃಷ್ಣರಾಯರು ಹಾಗೂ ಕಾರಗಹಳ್ಳಿಯ ಮಾರನಾಯಕನ ನಡುವೆ ನಡೆದ ಯುದ್ಧವು 'ಕಾರಗಹಳ್ಳಿ ಕಾಳಗ'ವೆಂದೇ ಇತಿಹಾಸದಲ್ಲಿ ಜನಜನಿತವಾಗಿದೆ. ಆದರೆ ಈ ಕಾರಗಹಳ್ಳಿಯು ಎಲ್ಲಿದೆ? ಎನ್ನುವ ಶೋಧದಲ್ಲಿ ತೊಡಗಿದ ಬಿ.ಎಲ್. ರೈಸ್ ಅವರು ವಿಲ್ಕ್ಸ್ ಅವರು ಹೇಳಿರುವ 'ಹದನ' ಅಥವಾ 'ಹದಣ' ಎಂಬ ಸ್ಥಳವನ್ನು ಹುಡುಕಲು ಯತ್ನಿಸಿದ್ದಾರೆ. ಆದರೆ ಮೈಸೂರಿನ ಸುತ್ತಮುತ್ತ ಈ ಊರಿನ ಸುಳಿವು ಕಾಣದೆ ನಂಜನಗೂಡಿಗೆ ಸುಮಾರು ಆರು ಮೈಲಿ ಪಶ್ಚಿಮಕ್ಕೆ ಹಾಗೂ ಮೈಸೂರಿಗೆ ಸುಮಾರು ಒಂಬತ್ತು ಮೈಲಿ ಆಗ್ನೇಯ ದಿಕ್ಕಿನಲ್ಲಿರುವ 'ಹದಿನಾರು' ಎಂಬ ಗ್ರಾಮವೇ ವಿಲ್ಕ್ಸ್ ಹೇಳಿರುವ 'ಹದನ' ಗ್ರಾಮವಿರಬಹುದೆಂದು ಭಾವಿಸಿ, ಕಾರಗಹಳ್ಳಿ ಎಂಬುದು 'ಹದಿನಾರು' ಎಂಬ ಸ್ಥಳದ ಪಕ್ಕದಲ್ಲಿದೆ ಎನ್ನುವ ಅಭಿಪ್ರಾಯವನ್ನು ಮೈಸೂರು ಗ್ಯಾಸೆಟಿಯರ್‌ನಲ್ಲಿ ದಾಖಲಿಸಲಾಗಿದೆ.

ಕ್ರಿ.ಶ. ೧೯೯೭ರಲ್ಲಿ 'ಕರ್ನಾಟಕ ಚರಿತ್ರೆ' ಎಂಬ ಕೃತಿ ರಚಿಸಿದ ಪ್ರೊ. ಬಿ. ಷೇಕ್ ಅಲಿ ಮತ್ತು ಮಿತ್ರರು ಮೈಸೂರು ಅರಸರ ಮೂಲವನ್ನು ಕುರಿತು, ಯದುರಾಯ ಮತ್ತು ಕೃಷ್ಣರಾಯರು ಉತ್ತರ ದೇಶದಿಂದ ಬಂದರು, ಇವರು ಸೋದರರಾಗಿದ್ದು, ಹದಿನಾಡು ಪ್ರದೇಶದಲ್ಲಿ ನಿಂತರು. ಆ ಸಂದರ್ಭದಲ್ಲಿ ಹದಿನಾಡಿನ ರಾಜನಿಗೆ ಬುದ್ಧಿವೈಕಲ್ಯ ಉಂಟಾಗಿತ್ತು. ಈ ಪರಿಸ್ಥಿತಿಯನ್ನು

* ಸಹಾಯಕ ಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.

ಅರಿತ ಕಾರಗಹಳ್ಳಿ ಮಾರನಾಯಕನು ರಾಜನಿಲ್ಲದ ಹದಿನಾಡಿನ ರಾಜಕುಮಾರಿಯನ್ನು ಮದುವೆಯಾಗಬೇಕೆಂಬುದಾಗಿ ಹವಣಿಸಿದನು. ಈ ಸನ್ನಿವೇಶವನ್ನರಿತ ಮಹಾರಾಣಿ ದೇವಾಜಮ್ಮರವರು ಲಿಂಗವಂತ ಒಡೆಯರ್ ಅವರ ಸಲಹೆಯ ಮೇರೆಗೆ ಮಾರನಾಯಕನನ್ನು ಕೊಲ್ಲುವಂತೆ ಸೋದರರಿಬ್ಬರನ್ನು ಪ್ರೇರೇಪಿಸಿದರು. ಈ ಪರಿಸ್ಥಿತಿಯ ಲಾಭವನ್ನರಿತ ಯದುರಾಯ ಮತ್ತು ಕೃಷ್ಣರಾಯರು ಮಾರನಾಯಕನನ್ನು ಕೊಂದರು. ಇದರ ಪರಿಣಾಮವಾಗಿ ಯದುರಾಯರು ರಾಜಕುಮಾರಿಯನ್ನು ಮದುವೆಯಾಗಿ ಮೈಸೂರು ಪ್ರಾಂತ್ಯವನ್ನು ಆಳತೊಡಗಿದನು ಎಂದು ಹೇಳಿದ್ದಾರೆ.

ಇದೇ ಅಭಿಪ್ರಾಯವನ್ನು ದೇವಚಂದ್ರನ ತನ್ನ 'ರಾಜಾವಳಿಕಥಾಸಾರ'ದ ಪೀಠಿಕಾ ಭಾಗದಲ್ಲಿ ವಿಶಿಷ್ಟವಾಗಿ ಉಲ್ಲೇಖಿಸಲಾಗಿದೆ. ಬಲ್ಲಾಳನ ಸಂತತಿಯವರು ವಿಜಯನಗರಕ್ಕೆ ಹೊರಡುವರು. ಕೆಲವರು ಕಾರುಗಹಳ್ಳಿ, ಅರಿಕುಠಾರ, ತಲಕಾಡು, ಮೂಗೂರು ಮೊದಲಾದ ಗ್ರಾಮದಲ್ಲುಳಿದರು. ಕಾರುಗಹಳ್ಳಿಯ ವೀರಸೂರನೆಂಬುವನು ಕೆಲವು ರಾಜ್ಯವನ್ನು ಸಾಧಿಸಿ ವಾಸಂತಿಕಾದೇವಿಗೆ ಚಾಮುಂಡಿಯೆಂಬ ಹೆಸರಿಟ್ಟು ಪರ್ವತದ ಮೇಲೆ ಸ್ಥಾಪಿಸಿ ದೇವಿಯ ವರದಿಂದ ಮಹಿಷಾಸುರನೆಂದಿರ್ದ ವನಮಹಿಷನನ್ನು ಕೊಂದು ಮಹಿಷಾಪುರ ಎಂಬ ಪೊಳಲನ್ನು ಮಾಡಿದನು. ಕೊನೆಗೆ ತನಗೆ ಮಕ್ಕಳಿಲ್ಲದ್ದುದರಿಂದ ತನ್ನಳಿಯನಿಗೆ ಪ್ರಭುತ್ವವನ್ನು ಕೊಟ್ಟನೆಂಬುದಾಗಿ ತಿಳಿದುಬರುತ್ತದೆ. ಮುಂದುವರೆದು ಮೈಸೂರಿಗೆ ಸೇರಿದ ಕಾರುಗಹಳ್ಳಿಯಲ್ಲಿ ಅರಸುಗಳು ಆಳುತ್ತಿರಲು ಉಮ್ಮತ್ತೂರಿನ ದೇವಣ್ಣರಾಯ, ತಗಡೂರ ಪ್ರಭುರಾಯ, ಸೋಮಸಮುದ್ರದ ಸೋಮಶೇಖರರಾಯ, ಬೆಟ್ಟದಪುರದ ಪಟ್ಟರಾಯ ಮೊದಲಾದವರು ಆ ಸಂದರ್ಭದಲ್ಲಿ ಸಮಕಾಲೀನ ಅರಸರೆನಿಸಿದ್ದರು. ಈ ಸಂದರ್ಭದಲ್ಲಿ ಅರಸುಗಳಿಗೆ ಹೆಣ್ಣು ಹುಟ್ಟಿ ಬೆಳೆಯಲು ತೊರೆಯ ನಾಯಕರು ಅತ್ಯಂತ ಪ್ರಭಾವಶಾಲಿಗಳಾಗಿದ್ದರು. ಮಾತ್ರವಲ್ಲ ಆ ಹೆಣ್ಣನ್ನು ತಮಗೆ ಕೊಡಬೇಕೆಂಬುದಾಗಿ ಬೇಡಿದರು. ಇದರಿಂದ ಹೆದರಿದ ಅರಸುಗಳು ಮದುವೆಯ ಸನ್ನಾಹದಲ್ಲಿದ್ದರು. ಈ ವೇಳೆಗೆ ವಿಜಯನಗರದಿಂದ ಯಾದವ ವಂಶದ ಬಲ್ಲಾಳ ಸಂತತಿಯ ಈರ್ವರರಸು ಮಕ್ಕಳು ಉಪಾಯದಿಂದ ನಾಯಕರನ್ನು ಸಮಾಪ್ತಿ ಮಾಡಲು ಕುಮಾರಿಯು ರಾಜಒಡೆಯರನ್ನು ಪತಿಯನ್ನಾಗಿ ಪಡೆದಳೆಂಬುದಾಗಿ ದಾಖಲಿಸಲಾಗಿದೆ.

ಡಾ. ಬಿ.ಎಸ್. ಕುಲಕರ್ಣಿ ಅವರು 'ಮೈಸೂರು ರಾಜರ ಚರಿತ್ರೆ ವಚನ ಕಾವ್ಯವು' ಎಂಬ ಕೈಪಿಯತ್ತಿನಲ್ಲಿ ದೇವಚಂದ್ರನ ಹೇಳಿಕೆಗಿಂತಲೂ ಭಿನ್ನವಾದ ರೀತಿಯಲ್ಲಿ ಮೈಸೂರು ಅರಸರ ಮೂಲವನ್ನು ಹೇಳಿದ್ದಾರೆ. ಉತ್ತರಪ್ರದೇಶದ ದ್ವಾರಕೆಯ ಕಡೆಯಿಂದ ಭುಜಂಗರಾಯನು ಪರರ ಆಕ್ರಮಣಕ್ಕೆ ನಲುಗಿ, ಪ್ರಧಾನಿ ಸಹಿತ ೩೨ ಜನರು ಸಿಂಧುವಳ್ಳಿಗೆ ವಲಸೆ ಬಂದರು. ಆ ರಾತ್ರಿ ಅಲ್ಲಿಯೇ ಇದ್ದು ಮಾರನೆಯ ದಿನ ಉಪ್ಪನಹಳ್ಳಿ ಹಾದು ಚಾಮುಂಡೇಶ್ವರಿ ಬೆಟ್ಟದ ಬಳಿಗೆ ಬರುತ್ತಾರೆ. ಇಲ್ಲಿರುವ ಹಾಲುಕೊಳದ ದಂಡೆಯ ವೃಕ್ಷದ ಕೆಳಗೆ ದಣಿವಾರಿಸಿಕೊಳ್ಳುತ್ತ ಮಲಗಿದರೆಂಬುದಾಗಿ ದಾಖಲಿಸಲಾಗಿದೆ. ಆ ಸಂದರ್ಭದಲ್ಲಿ ೩೩ ಹಳ್ಳಿಗಳ ಗಡಿಯನ್ನು ಲಿಂಗವಂತ ಒಡೆಯರು ಆಳ್ವಿಕೆ ಮಾಡುತ್ತಿದ್ದರು. ಅವರ ಹೆಣ್ಣು ಮಕ್ಕಳು ನೀರಿಗೆಂದು ಕೊಳದ ಬಳಿ ಬರುತ್ತಿದ್ದರು. ಆ ಸಂದರ್ಭದಲ್ಲಿ ವೀರನಗೆರೆ ನಾಯಕನು ಈ ಹೆಣ್ಣುಮಕ್ಕಳ ಸೌಂದರ್ಯಕ್ಕೆ ಮನಸೋತು ಇವರನ್ನು ಅಪಹರಿಸಲು ಆಲೋಚಿಸಿದನು. ಈ ಸಂಗತಿಯು ಬೆಟ್ಟದ ಬಳಿ ತಂಗಿದ್ದ ರಾಚೇಅರಸನಿಗೆ ತಿಳಿಯಲು ಆ ಗಂಡಾಂತರವನ್ನು ನಿವಾರಿಸುತ್ತೇನೆಂದು ಧೈರ್ಯ ತುಂಬಿದನು. ಮಾತ್ರವಲ್ಲ ವೀರನಗೆರೆ ನಾಯಕನಿಗೆ ಹೆಣ್ಣು ಕೊಡುತ್ತೇವೆಂದು ಕರೆತಂದು ಅವನ ರುಂಡಛೇದನ ಮಾಡಿ ಉಳಿದ ಜನರನ್ನು ಅರಮನೆಯ ಹಿಂದಿನ ಕಂದಕದಲ್ಲಿ ಹಾಕಿದರೆಂಬುದಾಗಿ ತಿಳಿದು ಬರುತ್ತದೆ.


ವೀರನಗೆರೆ ನಾಯಕನ ಉಪಟಳ ಕೊನೆ ಮಾಡಿದ ರಾಚೇಅರಸನಿಗೆ ಹೆಣ್ಣು ಕೊಟ್ಟು ಲಗ್ನ ಮಾಡಿದರು. ಅಲ್ಲದೆ ಮುಂದೆ ಗಂಡು ಮಕ್ಕಳಾದರೆ 'ಒಡೆಯರು' ಎಂಬ ಹೆಸರನ್ನಟ್ಟು ನಡೆಸಿಕೊಡುವಂತೆ ಲಿಂಗವಂತ ಒಡೆಯರು ಕೇಳಿಕೊಂಡರೆಂದು ಉಲ್ಲೇಖಿಸಲಾಗಿದೆ. ಈ ಮೇಲಿನ ವಿವರಗಳನ್ನು ಅವಲೋಕಿಸಿದಾಗ ಸಹಜವಾಗಿ ಗೊಂದಲಗಳು ಏರ್ಪಡುತ್ತವೆ. ಈ ಗೊಂದಲಗಳ ನಿವಾರಣೆಗೆ ಪ್ರಾಕ್ತನ ವಿಮರ್ಶ ವಿಚಕ್ಷಣರೆನಿಸಿರುವ ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ ಅವರು ೧೯೧೮ರಲ್ಲಿ ತಮ್ಮ ರಿಪೋರ್ಟ್‌ನಲ್ಲಿ ನಂಜನಗೂಡು ತಾಲೂಕಿನಲ್ಲಿರುವ 'ಹದಿನಾರು' ಎಂಬ ಗ್ರಾಮ ಪುರಾತನವಾದುದು. ನಂಜನಗೂಡಿನ ಕೆಲವು ಶಾಸನಗಳಿಂದ ಈ ಗ್ರಾಮದ ಹೆಸರು 'ಅದಿರಾರು ' ಎಂಬುದಾಗಿದೆ.. ಇದು ೧೨ ಗ್ರಾಮಗಳ ಗುಂಪಿಗೆ ಮುಖ್ಯ ಸ್ಥಳವಾಗಿತ್ತು. 'ಅದಿರಾರು' ಎನ್ನುವ ಹೆಸರು ವಿಕಲ್ಪದಿಂದ 'ಹದಿನಾರು' ಎನಿಸಿಕೊಂಡಿರುವುದು. ಇದನ್ನು 'ಹದಿನಾಡು' ಎನಲು ಯಾವ ಆಧಾರವೂ ಇರುವುದಿಲ್ಲವೆಂದು ಬರೆದಿದ್ದಾರೆ.

ಆರ್. ನರಸಿಂಹಾಚಾರ್ ಅವರ ಹೇಳಿಕೆಗೆ ಪೂರಕವೆಂಬಂತೆ ಮೈಸೂರು ರಾಜಧಾನಿಯಲ್ಲಿ ಹಳೆಯ ದಾಖಲೆಯು ಲಭ್ಯವಾಗಿರುವುದು. ಇದು ಕ್ರಿ.ಶ. ಶಾಲಿವಾಹನ ಶಕ ೧೭೦೭ ಅಂದರೆ ಕ್ರಿ.ಶ. ೧೭೮೫ನೆಯ ಕ್ರೋಧಿ ಸಂವತ್ಸರದಲ್ಲಿ

ನಾಶವಾಗಿರುವ ಕಾರಗಹಳ್ಳಿ ಪ್ರದೇಶದಲ್ಲಿರುವ ದೇವಾಲಯಗಳ ಮತ್ತು ಕೋಟೆಯ ಅವಶೇಷಗಳು ಹಾಗೂ ಆ ಕಾಲದಲ್ಲಿ ನಿರ್ಮಿಸಲಾದ ಬಾವಿ



ಬರೆದುದು. ಈ ಉಪಲಬ್ದ ದಾಖಲೆಯಲ್ಲಿ 'ಈ ಮಹಿಶೂರ ನಗರದ ದೊರೆತನದ ಪೂರ್ವತ್ರದ ಸಂಗತಿ ಶ್ರೀಮಲೆಖ್ಖ ಮುಂತಾದುದನ್ನು ಪೂರ್ವದ ಕಡತ ನೋಡಿ ನಕಲು ಬರೆವುದಕ್ಕೆ ನಿರ್ವಿಘ್ನ ಮಸ್ತು' ಎಂದೂ ಮತ್ತು ವಿಜಯರಾಯರೆಂಬ ಪ್ರತಿನಾಮವನ್ನು ಪಡೆದ ಯದುರಾಯರು ಅವರ ತಮ್ಮಂದಿರು ಕೃಷ್ಣರಾಯರೊಂದಿಗೆ "ಶ್ರೀರಂಗಪಟ್ಟಣಕ್ಕೆ ಬಂದು ಶ್ರೀರಂಗನ ದರ್ಶನ ಮಾಡಿಕೊಂಡು ಕಾವೇರಿಯ ದಕ್ಷಿಣ ದಿಕ್ಕಿನಲ್ಲಿರುವ ಚಾಮುಂಡೇಶ್ವರಿ ಅಮ್ಮನವರ ಬೆಟ್ಟದ ವತ್ತಿನ ದಕ್ಷಿಣ ಪಾರ್ಶ್ವದಲ್ಲಿ 'ಹಡದಣ' ಎಂಬ ಕೋಟೆಗೆ ಬಂದು ಚಾಮುಂಡೇಶ್ವರಿ ಅಮ್ಮನವರ ಸೇವೆಯನ್ನು ಮಾಡಿಕೊಂಡು ಈ ಪ್ರಕಾರಕ್ಕೆಯಿರುತ್ತಾಯಿದ್ದಲ್ಲಿ" ಎಂದೂ ಬರೆದಿರುತ್ತದೆ. ಅಲ್ಲದೆ ಅದೇ ಮಸ್ತಕದಲ್ಲಿ ಕಾರುಗಹಳ್ಳಿಯ ಉಪಗ್ರಾಮಗಳನ್ನು



ವಿವರಿಸುವಾಗ ಸಕಳ್ಳಿ ಗ್ರಾಮವಾಗುತ್ತಲೇ ಅದರ ಬಳಿ 'ಹಡದಣ' ಗ್ರಾಮವನ್ನು ಕಾಣಿಸಿದೆ. ಈ ಗ್ರಾಮ ಪ್ರಸ್ತುತದಲ್ಲಿಯೂ ಇದೇ ಸ್ಥಳದಲ್ಲಿದೆ. ಈ ಗ್ರಾಮವನ್ನು 'ಹಡದನ' ಎನ್ನುತ್ತಾರೆ. ಇದು ಹಡದಣ ಶಬ್ದದ ಗ್ರಾಮೋಚ್ಚಾರಣೆ ಎನ್ನಬಹುದಾಗಿದೆ. ಇದು ವಿಶೇಷವಾದ ನಾಮವಿಕಲ್ಪವಲ್ಲ. ಈ ಗ್ರಾಮವು ಚಾಮುಂಡಿ ಬೆಟ್ಟದ ದಕ್ಷಿಣ ಬುಡದಲ್ಲಿಯೇ ಇರುತ್ತೆ. ಇತ್ಯಾದಿ ಕಾರಣ ಬಲದಿಂದ ಶ್ರೀಚಾಮುಂಡೇಶ್ವರಿ ಭಕ್ತಿ ಪರಾಯಣರಾಗಿದ್ದ ಆ ರಾಜಪುತ್ರರಿಗೂ ಈ ಪ್ರಾಂತ್ಯಕ್ಕೆ ಬಂದಾಗ ಆದಿಯಲ್ಲಿ ಅವರು ನೆಲೆಸಿದ್ದುದು ಇದೇ ಸ್ಥಳವಾಗಿರುತ್ತದೆ. ಅದಲ್ಲದೆ ಇನ್ನು ದೂರದಲ್ಲಿರುವ ನಂಜನಗೂಡು ತಾಲೂಕಿಗೆ ಸೇರಿರುವ ಹದಿನಾರು ಎಂಬ ಗ್ರಾಮ ಅಲ್ಲವೆಂದು ತಿಳಿದು ಬರುತ್ತದೆ.

ಈ ಮೇಲೆ ಹೆಸರಿಸಲಾದ ಆರ್. ನರಸಿಂಹಾಚಾರ್ ಅವರ ಹೇಳಿಕೆ ಹಾಗೂ ಇತ್ತೀಚೆಗೆ ಮೈಸೂರಿನಲ್ಲಿ ದೊರೆಕಿರವ ದಾಖಲೆಯನ್ನು ಆಧರಿಸಿ ಕ್ಷೇತ್ರಕಾರ್ಯ ಮಾಡಲಾಗಿದ್ದು, 'ಕಾರಗಹಳ್ಳಿ' ಎಂಬ ಗ್ರಾಮವು ಚಾಮುಂಡಿ ಬೆಟ್ಟಕ್ಕೆ ಸುಮಾರು ಮೂರು ಕಿ.ಮೀ. ದೂರದಲ್ಲಿರುವ 'ಹಡದನ' ಎಂಬ ಗ್ರಾಮದ ಸನಿಹದಲ್ಲಿದೆ. ಈ ಪ್ರದೇಶದಲ್ಲಿ ಪ್ರಾಚೀನ ನೆಲೆಯ ಅವಶೇಷಗಳು ಅಲ್ಲಿ ಕಾಣಸಿಗುತ್ತವೆ. 'ಕಾರಗಹಳ್ಳಿ' ಎಂಬ ಹಳ್ಳಿಯು ಹಿಂದೆ ಇಲ್ಲಿಯೇ ಇದ್ದಿತೆನ್ನುವುದಕ್ಕೆ ಸಾಕಷ್ಟು ಆಧಾರಗಳಿವೆ. ಆ ಕಾಲಘಟ್ಟದಲ್ಲಿ ಜನರು ವಾಸಿಸುತ್ತಿದ್ದರು ಎನ್ನುವುದಕ್ಕೆ ಅಲ್ಲಿ ಸಿಕ್ಕಿರುವ ದೇವಾಲಯದ ಅವಶೇಷಗಳು ಹಾಗೂ ಲಕ್ಷ್ಮಿ ಮತ್ತು ವಿಷ್ಣುವಿನ ಶಿಲ್ಪಗಳು ಕಾಣಸಿಗುತ್ತವೆ. ಆ ಪ್ರದೇಶದಲ್ಲಿ ಜನರು ವಾಸಿಸುತ್ತಿದ್ದುದರ ಕುರುಹಾಗಿ ನೀರಿನ ನೆಲಬಾವಿಯು ಸುಮಾರು ಮೂವತ್ತು ಅಡಿಗಳಷ್ಟು ಆಳವಿದೆ. ಮಾತ್ರವಲ್ಲ ಹಡದನದ ಪ್ರಾಚೀನ ಕೋಟೆಯ ಅವಶೇಷವೂ ಅಲ್ಲಲ್ಲಿ ಕಾಣಸಿಗುತ್ತದೆ. 'ಕಾರಗಹಳ್ಳಿ'ಯ ಬಸಪ್ಪ ಎನ್ನುವ ದೇವಾಲಯವೂ ಇದೆ. ಅದರ ಸಮೀಪದಲ್ಲಿಯೇ ಕಾರಗಹಳ್ಳಿ 'ಮಾರನಾಯಕನ ತೋಪು' ಎಂದು ಕರೆಯುತ್ತಿರುವ ಪ್ರದೇಶವಿದೆ. ಅಲ್ಲಿ ಮಳೆಗಾಲದಲ್ಲಿ ಬೆಣಚುಕಲ್ಲಿನ ಅರಳುಗಳು ಹಾಗೂ ನಾಣ್ಯಗಳು ಹಲವು ಜನರಿಗೆ ಸಿಕ್ಕಿವೆ, ಎಂದು ಸಕಳ್ಳಿ ಗ್ರಾಮದ ೮೦ನೇ ವಯಸ್ಸಿನ ಶಿವಬಸಪ್ಪ ಅವರ ಅಭಿಪ್ರಾಯವಾಗಿದೆ.

ಅಲ್ಲದೆ ಕಾರಗಹಳ್ಳಿ ಗ್ರಾಮ ಹಾಗೂ ಹಡಜನ ಗ್ರಾಮ ಅಕ್ಕಪಕ್ಕದಲ್ಲಿದ್ದು, ಇಂದು ಹಡಜನ ಗ್ರಾಮ ಉಳಿದು ಕಾರಗಹಳ್ಳಿ ಗ್ರಾಮ ಸಂಪೂರ್ಣ ನಾಶವಾಗಿದೆ. ಅದು ಯದುರಾಯ ಮತ್ತು ಕೃಷ್ಣರಾಯರು ಹಾಗೂ ಮಾರನಾಯಕನ ನಡುವೆ ಕಾಳಗದೊಂದಿಗೆ ನಾಶವಾಗಿರುವ ಸಾಧ್ಯತೆಯಿದೆ. ವಿಶೇಷವೆಂದರೆ ಹಡಜನ ಗ್ರಾಮದ ಸಮೀಪವಿರುವ ಉತ್ತನಹಳ್ಳಿ ಗ್ರಾಮದಲ್ಲಿ ಕಾರಗಳ್ಳಿ ಮಾರನಾಯಯಕನ ವೀರಗಲ್ಲು ಎನ್ನಲಾದ ಶಿಲ್ಪವೊಂದನ್ನು ಪೂಜಿಸುತ್ತಿದ್ದಾರೆ. ಅದರಲ್ಲಿ ಯುದ್ಧಕ್ಕೆ ಹೊರಟು ನಿಂತ ವೀರನನ್ನು ಕಡೆಯಲಾಗಿದ್ದು, ಎರಡೂ ಕೈಗಳಲ್ಲಿ ಆಯುಧಗಳಿದ್ದು ಶ್ವೇತಛತ್ರಿಯಿರುವುದನ್ನು ಕಾಣಬಹುದು.

ಹಾಗಾಗಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ದೊರೆಕಿರುವ ಆಧಾರಗಳು ಹಾಗೂ ಆರ್. ನರಸಿಂಹಾಚಾರ್ ಮತ್ತು ಕರ್ನಲ್ ಮಾರ್ಕ್ಸ್‌ವಿಲ್ಕ್ಸ್‌ರ ಅಭಿಪ್ರಾಯದ ಹಿನ್ನೆಲೆಯಲ್ಲಿ 'ಕಾರಗಹಳ್ಳಿ' ಎನ್ನುವ ಪ್ರದೇಶ ನಂಜನಗೂಡಿಗೆ ಸಮೀಪದಲ್ಲಿಲ್ಲದೆ, ಅದು ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಹತಿರ್ತದಲ್ಲಿರುವ 'ಹಡಜನ' ಗ್ರಾಮದ ಸನಿಹದಲ್ಲಿದೆ ಎಂದು ಸ್ಪಷ್ಟವಾಗಿ ಹೇಳಲು ಆಧಾರಗಳು ದೊರಕುತ್ತವೆ. ಮಾತ್ರವಲ್ಲ ವೀರಗಲ್ಲಿನಲ್ಲಿರುವ ಶ್ವೇತಛತ್ರಿಯನ್ನು ಅವಲೋಕಿಸಿದರೆ ಕಾರಗಹಳ್ಳಿ ಮಾರನಾಯಕನು ಈ ಪ್ರದೇಶದ ಪಾಳೇಗಾರನಾಗಿರದೆ ರಾಜನಾಗಿರಬಹುದು. ಅವನು ಈ ಊರಿನ ಸನಿಹದಲ್ಲಿರುವ 'ಹಡದನ'ದ ಚಾಮರಾಜನ ಮಗಳು ಚಿಕ್ಕದೇವರಸಿಯನ್ನು ನೋಡಲು ಬರುತ್ತಿದ್ದನು ಎಂದು ಹೇಳಲು ಅವಕಾಶವಿದೆ. ಅದಲ್ಲದೆ ಈ ಕಾರಗಹಳ್ಳಿ ಪ್ರದೇಶವು ನಂಜನಗೂಡಿನ ಹತ್ತಿರದಲ್ಲಿದೆ ಎನ್ನುವುದು ಸತ್ಯಕ್ಕೆ ದೂರವಾದುದಾಗಿದೆ.

ಆಕರ ಗ್ರಂಥಗಳು

೧. ಕರ್ನಲ್ ಮಾರ್ಕ್‌ವಿಲ್ಕ್ಸ್‌ರ **ಮೈಸೂರು ದೇಶದ ಚರಿತ್ರೆ.**

೨. ಬಿ. ರಾಮಕೃಷ್ಣರಾವ್ **ಶ್ರೀಮನ್ಮಹಾರಾಜರವರ ವಂಶಾವಳಿ, ಭಾಗ–೨.**

೩. ದೇವಚಂದ್ರನ **ರಾಜಾವಳಿ ಕಥಾಸಾರ.**

೪. ಪ್ರೊ. ಷೇಕ್ ಅಲಿ ಮತ್ತು ಪ್ರೊ. ಕೆ.ಎಸ್. ಶಿವಣ್ಣ, **ಕರ್ನಾಟಕ ಚರಿತ್ರೆ.**

೫. ಡಾ. ಬಿ.ಎಸ್. ಕುಲಕರ್ಣಿ, **ಕೈಫಿಯತ್ತು ಮತ್ತು ಮೈಸೂರು ರಾಜರ ಚರಿತ್ರೆ ವಚನ ಕಾವ್ಯವು.**

೬೮

ಹೂವಿನಹಡಗಲಿ ತಾಲೂಕಿನ ಶಾಸನಗಳಲ್ಲಿ ಕಂಡುಬರುವ ತೋಟದ ಉಲ್ಲೇಖಗಳು

ಡಾ. ಎ. ನಾಗವೇಣಿ*

ಬಳ್ಳಾರಿ ಜಿಲ್ಲೆಯಲ್ಲಿರುವ ಏಳು ತಾಲೂಕುಗಳಲ್ಲಿ ಹೂವಿನಹಡಗಲಿ ತಾಲೂಕು ಒಂದು. ಇದು ಜಿಲ್ಲಾ ಕೇಂದ್ರದಿಂದ ನೈರುತ್ಯಕ್ಕೆ ೧೫೦ ಕಿ.ಮೀ. ದೂರದಲ್ಲಿ ಹಾಗೂ ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರಿನಿಂದ ೩೪೧ ಕಿ.ಮೀ. ದೂರದಲ್ಲಿದೆ. ತಾಲೂಕಿನ ದಕ್ಷಿಣ ಮತ್ತು ಪಶ್ಚಿಮದ ಅಂಚಿನಲ್ಲಿ ಗಡಿಯಾಗಿ ತುಂಗಭದ್ರಾ ನದಿ ತಾಲೂಕು ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿ ಹರಿಯುತ್ತದೆ.

ತಾಲೂಕಿನ ಭೌಗೋಳಿಕ ಪರಿಸರ ಉತ್ತಮವಾಗಿದ್ದು ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವನ ವಾಸಕ್ಕೆ ಯೋಗ್ಯವಾಗಿತ್ತು. ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಈ ಪ್ರದೇಶ ತನ್ನದೇ ಆದ ಪಾತ್ರ ನಿರ್ವಹಿಸಿದೆ. ಈ ತಾಲೂಕಿನಲ್ಲಿ ತೋಟಗಾರಿಕೆ ಬೆಳೆಗಳು ಹಿಂದಿನಿಂದೂ ಪ್ರಮುಖ ಸ್ಥಾನವನ್ನು ಹೊಂದಿವೆ. ತಾಲೂಕಿನ ವಿವಿಧೆಡೆ ದೊರೆಯುವ ಕೆಲ ಶಾಸನಗಳು ಬೇರೆ ಬೇರೆ ವಿಷಯಗಳನ್ನು ತಿಳಿಸುವಂತೆ ಅಂದಿನ ವಿಭಿನ್ನ ಪ್ರಕಾರದ ಪ್ರಮುಖ ಕೃಷಿ ಮತ್ತು ತೋಟಗಳನ್ನು ದಾಖಲಿಸಿವೆ.

ಹಡಗಲಿ ತಾಲೂಕಿನ ಶಾಸನಗಳಲ್ಲಿ ತೋಟಗಳ ಉಲ್ಲೇಖಗಳಿದ್ದು, ತೋಂಟ>ತೋಟ, ಪೂದೋಟ> ಹೂದೋಟ ಎಂಬುದಾಗಿ ಸಂಕ್ಷಿಪ್ತವಾಗಿ ಪದನಿಷ್ಪತ್ತಿಯನ್ನು ಹೊಂದಿದೆ ಎಂದು ಹೇಳಬಹುದು.

ತಾಲೂಕಿನ ಮೊಟ್ಟಮೊದಲ ತೋಟದ ಉಲ್ಲೇಖ ವಿರುವ ಕ್ರಿ.ಶ. ಮೂರನೇ ಶತಮಾನದ ತಾಮ್ರಶಾಸನವು ಹಿರೇಹಡಗಲಿಯಲ್ಲಿ ದೊರೆತಿದೆ. ಈ ಶಾಸನದಲ್ಲಿ ಪಲ್ಲವರ ದೊರೆ ಶಿವಸ್ಕಂದವರ್ಮನು ಚಿಲ್ಲರೇಕಕೋಡುಂಕ ಗ್ರಾಮದಲ್ಲಿನ ತೋಟವನ್ನು ದಾನ ಮಾಡಿದ ಉಲ್ಲೇಖವಿದೆ. (ಹಡಗ-೫೭, ಕ್ರಿ.ಶ. ೩ನೇ ಶತಮಾನ)

ಹೂವಿನಹಡಗಲಿ ತಾಲೂಕಿನ ಕುರುವತ್ತಿ ಗ್ರಾಮದಲ್ಲಿ ಚಾಲುಕ್ಯ, ಹೊಯ್ಸಳ, ಯಾದವ ಮತ್ತು ಗುತ್ತರ ಕಾಲದ ೨೨ ಶಾಸನಗಳಿದ್ದು, ಅತ್ಯಂತ ಹೆಚ್ಚು ಜನರು ದಾನ ಮಾಡಿರುವುದು ಕಂಡುಬರುತ್ತದೆ. ೬೪ ಜನ ದಾನಿಗಳು ೨೭೪ ಮತ್ತರು ಜಮೀನನ್ನು, ೧೭ ಭತ್ತದ ಗದ್ದೆಗಳನ್ನು, ೨೭ ತೋಟಗಳನ್ನು ದಾನ ಮಾಡಿರುವರು. ತೋಟಗಳಲ್ಲಿ ಹೆಚ್ಚಾಗಿ ಅಡಕೆ ತೋಟಗಳು, ದೇವರಿಗೆಂದು ಮೀಸಲಾದ ೨ ಹೂದೋಟಗಳು ಮತ್ತು ೧ ಎಲೆಬಳ್ಳಿಯ ತೋಟದ ಉಲ್ಲೇಖಗಳು ಕಂಡುಬರುತ್ತದೆ.

ಹಿರೇಹಡಗಲಿಯಲ್ಲಿ ೨೩ ಜನ ದಾನಿಗಳು ಚಾಲುಕ್ಯ-ಹೊಯ್ಸಳ ಅರಸರ ಆಳ್ವಿಕೆಯ ಕಾಲದಲ್ಲಿ ೯ ತೋಟಗಳನ್ನು ದಾನ ಬಿಟ್ಟಿರುವುದು ಕಂಡುಬರುತ್ತದೆ.

ಚಾಲುಕ್ಯ-ಹೊಯ್ಸಳ ಅರಸರ ಆಳ್ವಿಕೆಯ ಕಾಲದಲ್ಲಿ ಹೊಳಲು ಗ್ರಾಮದಲ್ಲಿ ೩೦ ಜನ ದಾನಿಗಳು ೨ ತೋಟಗಳನ್ನು ದಾನ ಬಿಟ್ಟಿರುವುದನ್ನು ಶಾಸನಗಳು ಉಲ್ಲೇಖಿಸಿವೆ.

ಮೈಲಾರ ಗ್ರಾಮದಲ್ಲಿ ಇಬ್ಬರು ದಾನಿಗಳು ಚಾಲುಕ್ಯ-ಹೊಯ್ಸಳ-ಯಾದವ-ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ೧ ತೋಟವನ್ನು ದಾನ ಬಿಟ್ಟಿರುವುದು ಕಂಡುಬರುತ್ತದೆ. ಕೊಟ್ಟಿನಕಲ್ ಗ್ರಾಮದಲ್ಲಿ ೬ ಜನ ದಾನಿಗಳು ಚಾಲುಕ್ಯ ಅರಸರ ಆಳ್ವಿಕೆಯ ಕಾಲದಲ್ಲಿ ೧ ತೋಟವನ್ನು ದಾನ ಬಿಟ್ಟಿರುವುದು ಕಂಡುಬರುತ್ತದೆ. ಹೂವಿನ ಹಡಗಲಿಯಲ್ಲಿ ೯ ಜನ ದಾನಿಗಳು ಚಾಲುಕ್ಯ-ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ೧ ತೋಟವನ್ನು ದಾನ ಬಿಟ್ಟಿರುವುದು ಕಂಡುಬರುತ್ತದೆ.

* ೧೮ನೇ ವಾರ್ಡ್, ಮನ್ಮಥಕೇರಿ, ಕಮಲಾಪುರ-೫೮೩೨೨೧.

ಕತ್ತೆಬೆನ್ನೂರಿನಲ್ಲಿ ಭೋಗೇಶ್ವರಿ ದೇವರ ನಂದಾದೀವಿಗೆಗೆ ಸೆಟ್ಟಿಗಳು ತೋಟವನ್ನು ದಾನವಾಗಿ ಬಿಟ್ಟಿರುವ ಉಲ್ಲೇಖವಿದೆ. ಒಟ್ಟಾರೆಯಾಗಿ ೪೨ ತೋಟಗಳನ್ನು ದಾನ ಬಿಟ್ಟಿರುವುದು ಕಂಡುಬರುತ್ತದೆ.

ಕುರುವತ್ತಿಯ ಕಲ್ಲೇಶ್ವರ ದೇವಾಲಯದ ಬಳಿಯಿರುವ ಕ್ರಿ.ಶ. ೧೧೯೯ರ ಶಾಸನವು ಚಾಲುಕ್ಯ ಅರಸ ತ್ರಿಭುವನ ಮಲ್ಲದೇವರ ಆಳ್ವಿಕೆಯ ಕಾಲದ್ದಾಗಿದೆ. ಈ ಶಾಸನದಲ್ಲಿ ಕುರುವತ್ತಿಯ ಊರೊಡೆಯ ಕಾಳಿಯಣ್ಣನ ತೋಟ ಗಿಡಮರಗಳು ಅಭಿನವ ಸೋಮೇಶ್ವರ ದೇವರ ಅಂಗಭೋಗಕ್ಕೆ ತಪೋಧನರ ಆಹಾರದಾನಕ್ಕೆ ದಾನ ಬಿಟ್ಟಿರುವ ಉಲ್ಲೇಖ ಕಂಡುಬರುತ್ತದೆ. ಅಲ್ಲದೆ ಬಿಡಿವಾಳಯ್ಯನ ಚಾವಣ್ಣನು ದೇವರ ಹೂದೋಟಕ್ಕೆ ಬಾದುಂಬೆಯ ಹಳ್ಳದಿಂದ ಪೂರ್ವಕ್ಕಿರುವ ಮಾಳವದ ಮಕ್ಕಿ ಗುಣಿಗಾನ ೧ ಮತ್ತರು ಭೂಮಿಯನ್ನು ಬಿಟ್ಟುಕೊಟ್ಟನು. ಸ್ವಸ್ತಿಶ್ರೀ ಮಾರಸಿಂಗಯ್ಯ ನಾಯಕರ ಮಗ ನಾಗದೇವನು ತನ್ನ ಭಾಗದ ೨ ಹತ್ತಿಯರೆಯ ಬಳಿಯಿರುವ ತೋಟವನ್ನು ಧಾರಾಪೂರ್ವಕವಾಗಿ ದೇವರ ನೈವೇದ್ಯಕ್ಕೆ ದಾನವಾಗಿ ಬಿಟ್ಟುಕೊಟ್ಟನು. ಕುರುವತ್ತಿಯ ಈ ಶಾಸನದಲ್ಲಿ ಒಟ್ಟು ೬೨೦೫ ಕಮ್ಮದ ತೋಟ ಮತ್ತು ದೇವರ ಹೂದೋಟಕ್ಕೆ ೧ ಮತ್ತರು ಭೂಮಿಯನ್ನು ದಾನ ನೀಡಿರುವ ಉಲ್ಲೇಖವಿದೆ.

ಪ್ರತಿಯೊಬ್ಬನಿಗೂ ದಾನ ನೀಡಿದ ವಿವರ ಹಾಗೂ ಹೆಸರನ್ನು ಶಾಸನವು ಉಲ್ಲೇಖಿಸಿದೆ. ಒಟ್ಟು ೬೨೦೫ ಕಮ್ಮದ ತೋಟವನ್ನು ದಾನ ಬಿಟ್ಟಿರುವ ಉಲ್ಲೇಖಗಳಿವೆ. (ಕ.ವಿ.ಹಂ.ಶಾ.ಸಂ. ೧ ಹಡಗ-೧, ಕ್ರಿ.ಶ. ೧೧೯೯)

ಕುರುವತ್ತಿಯ ಮಲ್ಲಿಕಾರ್ಜುನ ದೇವರ ದಕ್ಷಿಣ ದ್ವಾರದ ಬಲಗಡೆಯ ಗೋಡೆಯ ಮೇಲಿನ ಕ್ರಿ.ಶ. ೧೦೮೭ರ ಶಾಸನದಲ್ಲಿ ಚಾಲುಕ್ಯ ಮಲ್ಲೇಶ್ವರ ದೇವರಿಗೆ ಬ್ರಹ್ಮಪುರಿ ಕುರುವತ್ತಿಯ ೧೨೦ ಮಹಾಜನಗಳು ತಮ್ಮ ಪುತ್ರ ಪೌತ್ರರಿಗೆ ಪುಣ್ಯವಾಗಲೆಂದು ಅಭಿನವವಾದಿ ದೇವರ ಕಾಲು ತೊಳೆದು ೭೦೦ ಕಮ್ಮದ ಭೂಮಿಯನ್ನು ಹೂದೋಟಕ್ಕೆಂದು ಬಿಟ್ಟುಕೊಟ್ಟರು. (ಕ.ವಿ.ಹಂ.ಶಾ.ಸಂ. ಹಡಗ-೭, ಕ್ರಿ.ಶ. ೧೦೮೭)

ಹೊಳಲಿನ ಗೌರೀಶ್ವರ ದೇವಾಲಯದ ಕ್ರಿ.ಶ. ೧೧೭೮ರ ವಿಜಯ ಪಾಂಡ್ಯದೇವನ ಆಳ್ವಿಕೆಯ ಶಾಸನದಲ್ಲಿ ವಿಜಯಪಾಂಡ್ಯರಸರಿಗೆ ಮಹಾಪ್ರಧಾನ ದಂಡನಾಯಕ ಅರಸರ ಮಗ ಮಹಾಪ್ರಧಾನ ಸರ್ವಾಧಿಕಾರಿ ಮಹಾಪಸಾಯಿತ ಶಂಕರ ದಂಡನಾಯಕ ಬಿನ್ನವಿಸಿಕೊಳ್ಳಲು ಗಂಡರಾದಿತ್ಯನ ಹೊಳಲ ಗವರೇಶ್ವರ ದೇವರಂಗಭೋಗಕ್ಕೆ ಮತ್ತು ರಂಗಭೋಗಕ್ಕೆ ವಾದ್ಯಕ್ಕೆ ಬಿಟ್ಟ ತೋಟ ೧೫೦ ಕಂಬ ಎಂಬ ಉಲ್ಲೇಖವಿದೆ. ಇದರಲ್ಲಿ ಗಂಡರಾದಿತ್ಯ ಹೊಳಲಿನ ವರ್ಣನೆ ಬರುತ್ತದೆ. ಹೊಳಲನ್ನು ಮಾಮರಗಳ ತೋಪು, ಭತ್ತದ ಗದ್ದೆಗಳು ಬಳಸಿ ನಳನಳಿಸುತ್ತಿದ್ದವು ಎಂಬ ವರ್ಣನೆ ಬರುತ್ತದೆ. (ಕ.ವಿ.ಹಂ.ಶಾ.ಸಂ. ೧ ಹಡಗ-೩೯, ಕ್ರಿ.ಶ. ೧೧೭೮)

ಹೊಳಲಿನ ಅನಂತಶಯನ ಗುಡಿ ಬಳಿಯ ಪಾಂಡ್ಯದೇವನ ಆಳ್ವಿಕೆಯ ಕಾಲದ ಶಾಸನದಲ್ಲಿ ಶಂಕರಭಟ್ಟರು ಅವರ ಮಗನೂ ಶ್ರೀರಂಗದೇವರ ತಾಂಬೂಲಕ್ಕೆಂದು ೫೦ ಕಂಬದ ತೋಟವನ್ನು ದಾನವಾಗಿ ಬಿಟ್ಟಿರುವ ಉಲ್ಲೇಖವಿದೆ. (ಕ.ವಿ.ಹಂ.ಶಾ.ಸಂ. ೧ ಹಡಗ-೪೦)

ಹಿರೇಹಡಗಲಿಯ ಭೀಮೇಶ್ವರ-ದೇಮೇಶ್ವರ ದೇವಾಲಯದ ಮುಂದಿನ ಶಾಸನ ಕ್ರಿ.ಶ. ೧೦೫೭ರ ಶಾಸನವು ಮಹಾಅಗ್ರಹಾರ ಹೊಸಹಡಗಲಿಯ ೧೨೦ ಜನ ಪ್ರಮುಖ ಮಹಾಜನಗಳ ಕೈಯಿಂದ ಸರ್ವಮಾನ್ಯವಾಗಿ ದೇಮರಸರು ಊರಿನ ಕೆರೆಯ ಕೆಳಗಿನ ಮತ್ತರು ವಸುಗೆಯ ಸ್ಥಳದಲ್ಲಿದ್ದ ಮಾಳವೇಶ್ವರದ ಅಡಿಕೆ ತೋಟವನ್ನು ದಾನ ನೀಡಿದ ಉಲ್ಲೇಖವಿದೆ. ನಂತರ ಚಟ್ಟಾಂಬಿಕೆಯ ಮಗ ಶಂಕರಮಯ್ಯನು ದೊಡ್ಡ ಕೆರೆಯ ಕೆಳಗಿನ ಹಳುಗಿನ ತಮ್ಮ ಮಾನ್ಯದಲ್ಲಿ ಬಿಟ್ಟ ಅಡಕೆಯ ತೋಟ ಮೂಷಿ, ತೆ೨೩೧, ಪೆ೩೩೧, ಕಮ್ಮ ೩೪೪, ಶಾಂತಿವರ್ಮಯ್ಯ ನಾಯಕರ ಶತದಲ್ಲಿ ಬಿಟ್ಟ ಅಡಕೆಯ ತೋಟ ಮುಷಿ, ತೆ೯, ಪಷಿ, ಬ೨, ಕಾ೧, ಕಮ್ಮ ೧೧೪ ದಾನವಾಗಿ ಬಿಟ್ಟರು. ಶಾಂತಿವರ್ಮ ನಾಯಕರು, ವಾಲಿಮಯ್ಯ ನಾಯಕರು ಮತ್ತು ಮಹಾದೇವ ನಾಯಕರು ದೇಮೇಶ್ವರ ದೇವರ ಅಂಗಭೋಗಕ್ಕೆ ಹಿರಿಯ ಕೆರೆಯ ಕೆಳಗಣ ಹಳುಗಿನ ತಮ್ಮ ಶತದಲು ಬಿಟ್ಟ ಅಡಕೆಯ ತೋಟ ಮೂ೮, ವಿ೧, ತೆ೧೭, ಪ೯, ವಿ೨, ಬ೧೭, ಕಮ್ಮ ೬೧೨, ಕಿರಿಯಶೆಟ್ಟಿ ಬಿಟ್ಟ ಅಡಕೆಯ ತೋಟ ಕಮ್ಮ ದಾನವಾಗಿ ಬಿಟ್ಟರು.

ದೇಮೇಶ್ವರ ದೇವರಿಗೆ ಬಿಟ್ಟ ತೋಟದ ಉಲ್ಲೇಖ:

ಮಹಾ ಅಮಾತ್ಯ ದೇಮರಸರು – ೧ ಅಡಕೆ ತೋಟ

ಶಂಕರಮಯ್ಯನು – ೧ ಅಡಕೆ ತೋಟ

ಮಹದೇವ ನಾಯಕರು – ೧ ಅಡಕೆ ತೋಟ, ಮೂಲ, ವ೧, ತೆ೧೭, ಪ೯, ಬ೧೭, ಕಮ್ಮ ೬೧೨

ಕಿರಿಯಶೆಟ್ಟಿ – ೧ ಅಡಕೆ ತೋಟ ಕಮ್ಮ ೧೧೫

ಒಟ್ಟು ೫ ಅಡಕೆ ತೋಟಗಳನ್ನು ದೇವರ ಅಂಗಭೋಗಕ್ಕೆ ಹಾಗೂ ರಂಗಭೋಗಕ್ಕೆ ಮತ್ತು ಜೀರ್ಣೋದ್ಧಾರಕ್ಕೆ ಬಿಟ್ಟುಕೊಟ್ಟಿದ್ದಾರೆ.

ಈ ಶಾಸನದಲ್ಲಿ ಹೊಸಹಡಗಲಿಯು ಸುವಾಸನೆಯನ್ನು ಬೀರುವ ಸಂಪಿಗೆ, ಕೇದಗೆ, ಪಾದರಿ, ಮಲ್ಲಿಗೆ, ನಾಗಸಂಪಿಗೆ ಮೊದಲಾದ ಪುಷ್ಪಗಳಿಂದ, ತೆಂಗು, ಬಾಳೆ, ಹಲಸು, ನಿಂಬೆ, ಪೇರಲ, ಮಾವು ಮೊದಲಾದ ಫಲಭರಿತ ಮರಗಳಿಂದಲೂ ಆಕರ್ಷಣೀಯವಾಗಿತ್ತು ಎನ್ನುವ ಉಲ್ಲೇಖವಿದೆ. (ಕ.ವಿ.ಹಂ.ಶಾ.ಸಂ. ೧ ಹಡಗ–೫೨, ಕ್ರಿ.ಶ. ೧೦೫೭)

ಅದೇ ದೇವಾಲಯದ ಮುಂದಿರುವ ಇನ್ನೊಂದು ಶಾಸನ ಕ್ರಿ.ಶ. ೧೨೧೨ರ ಹೊಯ್ಸಳ ದೊರೆ ವಿಷ್ಣುವರ್ಧನ ಇಮ್ಮಡಿ ವೀರಬಲ್ಲಾಳ ಹಳ್ಳವುರ (ವಿಜಯಸಮುದ್ರ) ನೆಲೆವೀಡಿನಿಂದ ಆಳ್ವಿಕೆ ಮಾಡುತ್ತಿದ್ದ ಕಾಲದಲ್ಲಿ ಆತನ ಹಿರಿಯ ರಾಣಿ ಪದುಮಲದೇವಿ ಹೊಸ ಹಡಗಲಿಯನ್ನು ಆಳುತ್ತಿದ್ದಳು ಎಂಬುದನ್ನು ತಿಳಿಸುತ್ತದೆ. ತೋಟಗಟ್ಟೆ ೨ ಮತ್ತರು ಪಶ್ಚಿಮಕ್ಕೆ ಈ ಚಮೆ ತೋಟದ ಓಣಿ ಮುಂತಾಗಿ ಉಲ್ಲೇಖವಿದೆ. ಹೊಯ್ಸಳ ವಿಷ್ಣುವರ್ಧನ ವೀರಬಲ್ಲಾಳದೇವನು ದಾವಣ್ಣನ ಆದೇಶದಂತೆ ಊರಿನ ಮಹಾಜನಗಳ ಸಮ್ಮುಖದಲ್ಲಿ ಮತ್ತೊಂದು ತೋಟವನ್ನು ಬಿಟ್ಟುಕೊಟ್ಟ ಉಲ್ಲೇಖವಿದೆ. ವೀರಪಾಂಡ್ಯದೇವರ ಮಾವನವರಾದ ವಿಕ್ರಮಾದಿತ್ಯನ ಸಮ್ಮುಖದಲ್ಲಿ ೨೦೦ ಕಂಬದ ತೋಟವನ್ನು ಸರ್ವಬಾಧ ಪರಿಹಾರವಾಗಿ ಧಾರೆಯೆರೆದು ಕೊಟ್ಟರು. ಎರಡೂ ಕಡೆಯ ತೋಟಗಳನ್ನು ದತ್ತಿಯಾಗಿ ಬಿಟ್ಟುಕೊಟ್ಟರು. (ಕ.ವಿ.ಹಂ.ಶಾ.ಸಂ. ೧ ಹಡಗ–೫೩, ಕ್ರಿ.ಶ. ೧೨೧೨)

ಇಲ್ಲಿನ ವೀರಭದ್ರ ದೇವರ ಗುಡಿಯ ಬಳಿಯ ಶಾಸನ ಉಲ್ಲೇಖಿಸಿದಂತೆ ಕ್ರಿ.ಶ. ೮೫೦ರ ಚಾಲುಕ್ಯ ತ್ರಿಭುವನ ಮಲ್ಲದೇವರ ಆಳ್ವಿಕೆಯಲ್ಲಿ ಸಾಮಂತ ಮಹೇಂದ್ರನೆಂಬ ಮಂಡಳೇಶ್ವರ ಕೋಗಳಿಯಲ್ಲಿ ರಾಜ್ಯವನ್ನಾಳುತ್ತಿದ್ದನು. ಆ ಊರಿನ ನಾಯಕರಾದ ಮಾದಿಮಯ್ಯ ನಾಯಕ, ಅವರ ಮಗ ಬಾಚಿಮಯ್ಯ ನಾಯಕ ಹಾಗೂ ಮಲ್ಲಿಯಣ್ಣ ಪರಸ್ಪರ ಹೊಂದಾಣಿಕೆಯಿಂದ ಊರಿನ ಮೂಲದೇವರಾದ ಮಲ್ಲಿಕಾರ್ಜುನ ದೇವರಿಗೆ ೪೦೦ ಕಮ್ಮದ ತೋಟವನ್ನು ದಾನ ನೀಡುತ್ತಾರೆ. (ಕ.ವಿ.ಹಂ.ಶಾ.ಸಂ. ೧ ಹಡಗ–೫೬, ಕ್ರಿ.ಶ. ೮೫೦)

ಇದೇ ಊರಿನ ಚನ್ನಪ್ಪ ಎಂಬ ವ್ಯಾಪಾರಿಯ ವಶದಲ್ಲಿದ್ದ ತಾಮ್ರಶಾಸನವು ಕ್ರಿ.ಶ. ಮೂರನೇ ಶತಮಾನಕ್ಕೆ ಸೇರಿದ್ದು, ಅದು ಪಲ್ಲವರ ದೊರೆ ಶಿವಸ್ಕಂದವರ್ಮನು ಚಿಲ್ಲರೇಕಕೋಡುಂಕ ಗ್ರಾಮದಲ್ಲಿನ ತೋಟವನ್ನು ದಾನ ಮಾಡಿದ ಉಲ್ಲೇಖವಿದೆ. (ಹಡಗ–೫೭, ಕ್ರಿ.ಶ. ೩ನೇ ಶತಮಾನ)

ಮಾಗಳದ ವೇಣುಗೋಪಾಲಸ್ವಾಮಿ ದೇವಾಲಯದಲ್ಲಿರುವ ಕ್ರಿ.ಶ. ೧೨೧೫ರ ಶಾಸನವು ಹೊಯ್ಸಳ ದೊರೆ ವಿಷ್ಣುವರ್ಧನ ವೀರಬಲ್ಲಾಳನ ಆಳ್ವಿಕೆಯಲ್ಲಿ ಊರಡೆಯ ಸಂತಾನ ಹರಿಯಣ್ಣ ಗೋವಿಂದದೇವನವರ ಭಾವವಿರುಪಯ್ಯ ಮೊದಲಾದವರೆಲ್ಲ ದೇವರ ರಂಗಭೋಗ, ನೈವೇದ್ಯ, ನಂದಾದೀವಿಗೆ, ಚೈತ್ರ ಸ್ಫುಟಿತ ಖಣ್ಡಿತ ಜೀರ್ಣೋದ್ಧಾರಕ್ಕೆ ಸರ್ವಬಾಧ ಪರಿಹಾರವಾಗಿ ಹಿರಿಯೂರಡೆಯರ ತೋಟಗಟ್ಟೆಯಲ್ಲಿ ೨ ಮತ್ತರು ಭೂಮಿಯನ್ನು ದಾನ ಬಿಟ್ಟಿರುವ ವಿಷಯ ತಿಳಿದುಬರುತ್ತದೆ. (ಕ.ವಿ.ಹಂ.ಶಾ.ಸಂ. ೧ ಹಡಗ–೬೫, ಕ್ರಿ.ಶ. ೧೨೧೫)

ಇದರ ಮುಂದುವರಿದ ಇನ್ನೊಂದು ಶಾಸನದ ಕಾಲ ಕ್ರಿ.ಶ. ೧೨೧೫. ಇದರಲ್ಲಿ ಅನಾದಿ ಅಗ್ರಹಾರ ಮಾಗೋಳದ ೨೦೦ರ ಸಮ್ಮುಖದಲ್ಲಿ ಶ್ರೀಮಾನ್ ವಡ್ಡವ್ಯವಹಾರಿ ವಾಸುದೇವ ನಾಯ್ಕರು ಶ್ರೀ ಗೋಪಾಲಸ್ವಾಮಿ ದೇವರ ಹೂದೋಟಕ್ಕೆ ೨ ಗದ್ಯಾಣ ಹಣವನ್ನು ಬೂತರಕಲ್ಲಯ್ಯನ ಮೇಲೆ ವೊಕಲುಗಡನಾಗಿ ಕೊಟ್ಟರು. (ಕ.ವಿ.ಹಂ.ಶಾ.ಸಂ. ೧ ಹಡಗ–೬೬, ಕ್ರಿ.ಶ. ೧೨೧೫)

ಮಾಗಳದ ಸೂರ್ಯನಾರಾಯಣಸ್ವಾಮಿ ದೇವಾಲಯದ ಶಾಸನ ಕ್ರಿ.ಶ. ೧೨೮೯ರ ಹೊಯ್ಸಳ ದೊರೆ ವಿಷ್ಣುವರ್ಧನ ವೀರಬಲ್ಲಾಳನ ಕಾಲದ್ದಾಗಿದೆ. ಮಾಗಳದ ಹಿರಿಯ ಮಾಣಿಕ್ಯ ಭಂಡಾರಿ ಸಿಂಗಯ್ಯನು ಸೋಮನಾಥ ದೇವರಿಗೆ, ಪ್ರಸನ್ನ ಕೇಶವ ದೇವರಿಗೆ ಹಾಗೂ ಸೂರ್ಯ ದೇವರಿಗೆ ಅಂಗಭೋಗ, ರಂಗಭೋಗ, ನೈವೇದ್ಯಕ್ಕೆ, ಶ್ರೀಕಾರ್ಯಕ್ಕೆ ಸರ್ವಬಾಧ ಪರಿಹಾರವಾಗಿ ರಾಮೇಶ್ವರ ದೇವರ ಹೂದೋಟದಿಂ ಮೂಡಹಾದರಿ ಮಣಲು ಮತ್ತರು ೨ ಮನ್ನೆಯಗೆರೆಯ ಕೋಡಿಯಿಂ ತೆಂಕ ತೋಟಗಟ್ಟು ಮತ್ತರು ೧, ಆ ಕೆರೆಯ ಕೆಳಗೆ ೧ ಮತ್ತರು ತೋಟವನ್ನು ದಾನ ಬಿಟ್ಟಿರುವ ಉಲ್ಲೇಖವಿದೆ. (ಕ.ವಿ.ಹಂ.ಶಾ.ಸಂ. ೧ ಹಡಗ–೬೭, ಕ್ರಿ.ಶ. ೧೨೮೯)

ರಂಗಾಪುರ ಗ್ರಾಮದ ನರಸಿಂಹ ದೇವಾಲಯದ ಕೈಸಾಲೆಯಲ್ಲಿರುವ ಕಂಬದಲ್ಲಿ ಉತ್ತರ ಮುಖದಲ್ಲಿನ ಶಾಸನದ ಕೆಳಗೆ ಇರುವ ಕ್ರಿ.ಶ. ೧೨೮೮ರ ಯಾದವ ರಾಮಚಂದ್ರದೇವನ ಆಳ್ವಿಕೆಯ ಕಾಲದ ಶಾಸನದಲ್ಲಿ ಮಾಗಳದ ಶ್ರೀ ನರಸಿಂಹದೇವರ ಹೂದೋಟ ಮಾಡುವ ಮಾಲೆಗಾರ ಜಕ್ಕಯ್ಯನಿಗೆ ಬೊಮ್ಮಣ್ಣ, ಗೋವಿಂದದೇವ, ಮದ್ದಯ್ಯ ಮತ್ತು ಮಹಾದೇವನು ಕೆಲವು ದಾನಗಳನ್ನು ನೀಡುತ್ತಾರೆ. (ಕ.ವಿ.ಹಂ.ಶಾ.ಸಂ. ೧ ಹಡಗ-೭೬, ಕ್ರಿ.ಶ. ೧೨೮೮)

ಕೊಟ್ನಕಲ್ಲು ಕೋಟೇಶ್ವರ ದೇವಾಲಯದ ಗೋಡೆಗೆ ಸೇರಿಸಿರುವ ಕಲ್ಲಿನಲ್ಲಿ ವಿಜಯಪಾಂಡ್ಯದೇವನು ಕ್ರಿ.ಶ. ೧೧೭೮ರ ಗುರುವಾರ ಕೋಟಿಶಂಕರದೇವರ ರಂಗಭೋಗಕ್ಕೆ ಹೂವಿನಹಡಗಲಿಯಲ್ಲಿರುವ ಊರಕೇರಿಯ ಕೆಳಗಿನ ೩೮೦ ಕಂಬವುಳ್ಳ ತೋಟವನ್ನು ಆಚಂದ್ರಾರ್ಕವಾಗಿ ಸ್ಥಿರವಾಗಿ ನಿಲ್ಲಲೆಂದು ಧಾರಾಪೂರ್ವಕ ಎರೆದುಕೊಟ್ಟ ವಿಷಯವಿದೆ. ಮುಂದುವರೆದು ಕೊಟ್ಟಿಗನೂರಿನ ನಾಲ್ಕು ಕಡೆಯ ಸೀಮೆಯನ್ನು ಪರಿಚಯಿಸುವಾಗ ಪೂರ್ವಕ್ಕೆ ಬಸುರಿಯ ಆಲದ ಮರಗಳು, ಉತ್ತರಕ್ಕೆ ಹುಣಸೆಮರಗಳ ತೋಪು ಮುಂತಾದ ವಿವರವಿದೆ. (ಕ.ವಿ.ಹಂ.ಶಾ.ಸಂ. ೧ ಹಡಗ-೮೧, ಕ್ರಿ.ಶ. ೧೧೭೮)

ಹೂವಿನಹಡಗಲಿಯ ಕೇಶವಸ್ವಾಮಿ ದೇವಾಲಯದ ಪಶ್ಚಿಮ ದಿಕ್ಕಿನ ಪ್ರವೇಶ ದ್ವಾರದ ಬಳಿಯಿರುವ ಕ್ರಿ.ಶ. ೧೦೯೦ರ ಶಾಸನದಲ್ಲಿ ಚಾಲುಕ್ಯ ದೊರೆ ತ್ರಿಭುವನಮಲ್ಲ ಪಾಂಡ್ಯದೇವನು ನೊಳಂಬವಾಡಿ-೩೨೦೦೦ವನ್ನು ಆಳುತ್ತಿದ್ದಾಗ ಶೂರ ಬ್ರಾಹ್ಮಣ ಸೇನಾಪತಿ ರವಿಗ ಅಥವಾ ರವಿದೇವನ ಪತ್ನಿಯಾದ ರೆಬ್ಬಲದೇವಿಯು ತನ್ನ ಹುಟ್ಟೂರಾದ ಪೂವಿನ ಪೊಸವಡಂಗಿಲೆಯಲ್ಲಿ ಕೇಶವ ದೇವಾಲಯವನ್ನು ಕಟ್ಟಿಸಿ, ಮೂರ್ತಿ ಸ್ಥಾಪಿಸಿ, ಮಹಾಜನಗಳ ಸಮ್ಮುಖದಲ್ಲಿ ಅಡಕೆಯ ತೋಟವನ್ನು ಕೇಶವ ದೇವರಿಗೆ ಬಿಟ್ಟುಕೊಟ್ಟ ಉಲ್ಲೇಖವಿದೆ. ದಕ್ಷಿಣದ ತೋಟದ ಕಮ್ಮ ೬೩೦, ಪಶ್ಚಿಮದ ತೋಟ ಗಡಿಭಾಗದ ೨೦ ಮತ್ತರು ಭೂಮಿಯನ್ನು, ಅಡಕೆಯ ತೋಟದ ಹಾಗೂ ಗದ್ದೆಯ ನಡುವಿರುವ ೧ ಮತ್ತರು ಹೂವಿನ ತೋಟವನ್ನು ನಾನಾ ಜಾತಿಯ ಪುಷ್ಪಗಳನ್ನು ಬೆಳೆಸಲು ದಾನ ಕೊಡಲಾಯಿತು. (ಕ.ವಿ.ಹಂ.ಶಾ.ಸಂ. ೧ ಹಡಗ-೮೩, ಕ್ರಿ.ಶ. ೧೦೯೦)

ಹೊಳಗುಂದಿ ಗ್ರಾಮದ ಬಲ್ಲೇಶ್ವರ ದೇವಾಲಯದ ಶಾಸನ ಕ್ರಿ.ಶ. ೧೦೯೭ರ ಕಾಲದ್ದಾಗಿದೆ. ಚಾಲುಕ್ಯ ದೊರೆ ತ್ರಿಭುವನಮಲ್ಲದೇವನ ಆಳ್ವಿಕೆಯಲ್ಲಿ ಚಾವುಂಡರಸನ ಮಗ ಮಹಾಮಂಡಳೇಶ್ವರ ಗಂಗರಸನು ಅವನ ತಂದೆ ತನ್ನದೆಂದು ಕಟ್ಟಿಸಿದ ಬಾಳೇಶ್ವರ ದೇವರ ಸೇವಾಕಾರ್ಯಗಳಿಗೆ ಭೂದಾನ ಮಾಡಿಸಿದನು. ಈ ಶಾಸನದ ೪ನೇ ಸಾಲಿನಲ್ಲಿ ಕೋಗಳಿನಾಡು ಕೆರೆ, ಬಾವಿ, ಛತ್ರ, ಹೂಕೊಳ, ತೋಟಗಳಿಂದ, ಪ್ರಸಿದ್ಧ ದೇವಾಲಯಗಳಿಂದ ಯಾವಾಗಲೂ ರಮ್ಯವಾಗಿತ್ತು ಎನ್ನುವ ಉಲ್ಲೇಖ ಬನರುತ್ತದೆ. (ಕ.ವಿ.ಹಂ.ಶಾ.ಸಂ. ೧ ಹಡಗ-೯೩, ಕ್ರಿ.ಶ. ೧೦೯೭)

ಸೋಗಿ ಗ್ರಾಮದಲ್ಲಿ ಕಲ್ಲೇಶ್ವರ ದೇವಾಲಯದ ಹೊರಗಡೆ ಇರುವ ಕ್ರಿ.ಶ. ೧೦೩೮ರ ಶಾಸನದಲ್ಲಿ ಚಾಲುಕ್ಯ ದೊರೆ ಜಗದೇಕಮಲ್ಲದೇವನ ಆಳ್ವಿಕೆಯಲ್ಲಿ ಉದಯಾದಿತ್ಯನು ಕೆಲವು ನಾಡುಗಳನ್ನು ಆಳುತ್ತಿದ್ದನು. ಆಗ ಜಗದೇಕಮಲ್ಲನಿರ್ಮಡಿ ನೊಳಂಬರು ಮಾಸೆಯವಾಡಿ-೧೪೦ನ್ನು ಆಳುತ್ತಿರುವಾಗ ಸೋಗೆಯೂರ ಮಹಾಜನಗಳ ಸಮ್ಮುಖದಲ್ಲಿ ಬಳ್ಳಿಯ ತೋಟ ೨ ಖಂಡುಗ ದಾನ ಮಾಡಿದ ಉಲ್ಲೇಖವಿದೆ. (ಕ.ವಿ.ಹಂ.ಶಾ.ಸಂ. ೧ ಹಡಗ-೯೬, ಕ್ರಿ.ಶ. ೧೦೩೮)

ಇದೇ ದೇವಸ್ಥಾನದ ಹತ್ತಿರದಲ್ಲಿರುವ ವೀರಪ್ಪನ ಮನೆಯ ಮುಂದೆ ಬಿದ್ದಿರುವ ತುಂಡು ಶಾಸನವು ಹೊಯ್ಸಳ ರಾಜ ವಿಷ್ಣುವರ್ಧನ ವೀರಬಲ್ಲಾಳನ ಕಾಲಕ್ಕೆ ಸೇರಿದೆ. ನಾಗವರ್ಮನ ವಂಶಕ್ಕೆ ಸೇರಿದ ಕಾಳಿಮಯ್ಯನ ಮಗ ತಿಳಕಯ್ಯನು ಕೋಗಳಿಯ ಉಭಯಚಾರ್ಯನೆಂಬ ಜೈನ ಗುರುಗಳಿಗೆ ಸರ್ವಬಾಧ ಪರಿಹಾರವಾಗಿ ಕಲಿದೇವರ ಹೂದೋಟದಿಂ ತೆಂಕ ಹೂದೋ.... ದಾನವಾಗಿ ಬಿಟ್ಟುಕೊಟ್ಟಿರುವ ಉಲ್ಲೇಖವಿದೆ. (ಕ.ವಿ.ಹಂ.ಶಾ. ಸಂ. ೧ ಹಡಗ-೧೦೦)

ಉತ್ತಂಗಿ ಗ್ರಾಮದಲ್ಲಿನ ಶಂಕರಲಿಂಗೇಶ್ವರ ದೇವಾಲಯದ ಗೋಡೆಗೆ ಸೇರಿಸಿರುವ ಕ್ರಿ.ಶ. ೧೧೫೦ರ ಶಾಸನದಲ್ಲಿ ಜಗದೇಕಮಲ್ಲ ವೀರಪಾಂಡ್ಯದೇವನು ನೊಳಂಬವಾಡಿ-೩೨೦೦೦ವನ್ನಾಳುತ್ತಿದ್ದ ವಿವರವಿದೆ. ಆಗ ಕೋಗಳಿ ನಾಡಿನ ಕುತ್ತಂಗಿಯಲ್ಲಿ ಸೌದರ ಬಸವಯ್ಯನು ಕಟ್ಟಿಸಿದ ಬಸವೇಶ್ವರ ದೇವಾಲಯದ ಸೇವಾಕಾರ್ಯಗಳಿಗೆ ಊರೊಳಗೆ ಮಾರಿದ ಬಂಡೆ ಹೊಲವನ್ನು ಕಾಣಿಕೆಯಾಗಿ ಪೂವಗೆಯನಂ ಕಮ್ಮ ತೋಟ ಮಣ್ಣಕೆರೆಯಲ್ಲಿ ಬಿಟ್ಟನು ಎಂಬ ಉಲ್ಲೇಖವಿದೆ. (ಕ.ವಿ.ಹಂ.ಶಾ.ಸಂ. ೧ ಹಡಗ-೧೦೭, ಕ್ರಿ.ಶ. ೧೧೫೦)

ಕತ್ತೆಬೆನ್ನೂರಿನ ಅಪ್ರಕಟಿತ ಶಾಸನದಲ್ಲಿ ಭೋಗೇಶ್ವರ ದೇವರ ನಂದಾದೀವಿಗೆ ಐವತ್ತೊಕ್ಕಲು ಮುಖ್ಯವಾಗಿ ಬಹು ಭುಗುಡಿಸೆಟಿ ಶಿವಗಿಸೆಟಿ ಭ ನಂದಸೆಟ್ಟಿಗಳು ತೋಟವನ್ನು ದಾನವಾಗಿ ಬಿಟ್ಟಿರುವ ಉಲ್ಲೇಖ ಕಂಡುಬರುತ್ತದೆ.

ಹಡಗಲಿಯ ಪರಿಸರದ ಶಾಸನಗಳಲ್ಲಿ ಅಡಕೆ, ಹೂದೋಟ, ಎಲೆಬಳ್ಳಿಗಳ ತೋಟಗಳ ಜೊತೆಗೆ ಮಾವಿನ ತೋಪು, ತೆಂಗು, ಹಲಸು, ನಿಂಬೆ, ಬಾಳೆ, ಪೇರಲ, ಹುಣಿಸೆ ಮರಗಳ ತೋಪು, ಆಲದ ಮರಗಳು ಮೊದಲಾದ ಫಲಭರಿತ

ಮರಗಳ ಉಲ್ಲೇಖಗಳು ಕಂಡುಬರುತ್ತವೆ. ದೇವಸ್ಥಾನದ ಪಕ್ಕದಲ್ಲಿ ಅವುಗಳಿಗೆ ಮೀಸಲಾದ ಹೂದೋಟಗಳಿದ್ದವೆಂದು ಮತ್ತು ಈ ಹೂದೋಟದಿಂದ ಇಂತಿಷ್ಟು ಹೂ ಕೊಡುವ ನಿಯಮವಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಒಟ್ಟಾರೆಯಾಗಿ ತಾಲೂಕಿನ ಉಲ್ಲೇಖಿತ ೧೯ ಶಾಸನಗಳಲ್ಲಿ ೪೨ ತೋಟಗಳನ್ನು ದಾನ ಬಿಟ್ಟಿರುವುದು ಕಂಡಬರುತ್ತದೆ.

ಮೇಲಿನ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ತೋಟಗಳ ಬಗೆಗಿನ ವಿವರಗಳನ್ನು ಅವಲೋಕಿಸಿದಾಗ ಹೂವಿನಹಡಗಲಿಯು ಪ್ರಾಚೀನ ಕಾಲದಿಂದಲೂ ಸಂಪದ್ಭರಿತ ಕೃಷಿಕ್ಷೇತ್ರವಾಗಿತ್ತು ಎಂಬುದನ್ನು ತಿಳಿಯಬಹುದು. ಸುಭಿಕ್ಷ ನಾಡು-ಸಂಪದ್ಭರಿತ ನಾಡು ಎಂಬುದಕ್ಕೆ ಶಾಸನಗಳಲ್ಲಿನ ಉಲ್ಲೇಖಗಳೇ ಸಾಕ್ಷಿಗಳಾಗಿವೆ. ಐತಿಹಾಸಿಕವಾಗಿ ಹೆಸರು ಪಡೆದಿರುವ ಹೂವಿನಹಡಗಲಿ ತಾಲೂಕು ಕೃಷಿಪ್ರಧಾನವಾದ ತಾಲೂಕಾಗಿತ್ತು. ಹಾಗೆಯೇ ದಾನ-ಧರ್ಮಗಳಿಗೆ ಹೆಸರಾದ ಭಾರತದ ಸಂಸ್ಕೃತಿಯು ಇಲ್ಲಿ ಅನಾವರಣಗೊಂಡಿದೆ. ದೇವರ ಹೆಸರಲ್ಲಿ, ಮಹಾಪುರುಷರ ಹೆಸರಲ್ಲಿ ದಾನ ಮಾಡಿದ ಉಲ್ಲೇಖಗಳನ್ನು ಶಾಸನಗಳಲ್ಲಿ ಗಮನಿಸಬಹುದು. ಒಟ್ಟಾರೆಯಾಗಿ ಹೂವಿನಹಡಗಲಿಯನ್ನು ಆಳಿದ ರಾಜಮನೆತನಗಳು, ಸಾಮಂತರು, ಜನಸಾಮಾನ್ಯರು ಕೃಷಿ-ತೋಟಗಾರಿಕೆಗೆ ಹೆಚ್ಚಿನ ಮಹತ್ವ ನೀಡಿರುವುದು ಕಂಡುಬರುತ್ತದೆ.

೪೯

ಕುರುಬರಿಗೆ ಸಂಬಂಧಿಸಿದ ಶಾಸನೋಕ್ತ ಗ್ರಾಮನಾಮಗಳು

ಡಾ. ಎಫ್.ಟಿ. ಹಳ್ಳಕೇರಿ*

ಆದಿಕಾಲದಿಂದಲೂ ಕುರಿಸಾಕಣೆ, ಕಂಬಳಿ ನೇಕಾರಿಕೆ, ಹೈನುಗಾರಿಕೆಗಳಂಥ ಉದ್ಯೋಗಗಳನ್ನು ಮಾಡಿಕೊಂಡು ಬರುತ್ತಿರುವ ಸಮುದಾಯಗಳಲ್ಲಿ ಕುರುಬ ಜನಾಂಗವೂ ಒಂದು. ಕರ್ನಾಟಕದ ಗ್ರಾಮನಾಮಗಳನ್ನು ಅವಲೋಕಿಸಿದಾಗ ಕುರಿಗದ್ದೆ, ಕುರಿಹಾಳ, ಕುರುಬರಹಳ್ಳಿ, ಕುರುಬಗೆರೆ, ಕುರಿಹಟ್ಟಿ, ಕುರುಬರಹಟ್ಟಿ, ಕುರುಬರಪಾಳ್ಯ, ಕುರುಬೂರು, ಕುರುಬರಮಲ್ಲೂರು, ಕುರುಬದೊಡ್ಡಿ, ಕುರಿಕಾವಲು ಇತ್ಯಾದಿ ಗ್ರಾಮಗಳ ಹೆಸರುಗಳು ಕುರುಬ ಜನಾಂಗವನ್ನು ನೆನಪಿಗೆ ತರುತ್ತವೆ. ಅಷ್ಟೇ ಏಕೆ, ಕುರುಬರಹಳ್ಳಿ ಎಂಬ ಹೆಸರಿನ ಗ್ರಾಮಗಳು ಐವತ್ತಕ್ಕೂ ಹೆಚ್ಚು ಕಂಡುಬರುತ್ತವೆ. ಈಗ ಆ ಗ್ರಾಮಗಳಲ್ಲಿ ಕುರುಬರ ಸಂಖ್ಯೆ ಕಡಿಮೆಯಿರಬಹುದು. ಅದರೆ ಆ ಕಾಲಕ್ಕೆ ಅಲ್ಲಿ ಕುರುಬರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಿರಬಹುದು. ಆ ಕಾರಣಕ್ಕಾಗಿ ಆ ಗ್ರಾಮಕ್ಕೆ ಆ ಹೆಸರುಗಳು ಬಂದಿರಲೂಬಹುದು. ಈಗ ಕೆಲವು ಶಾಸನೋಕ್ತ ಗ್ರಾಮಗಳ ಕುರಿತು ಅವಲೋಕಿಸಬಹುದು.

೧. ಕುರುಬರಹಟ್ಟಿ

ಕಡೂರ ತಾಲೂಕಿನ ಸಿಂಗಟಗೆರೆಯ ಕಲ್ಲೇಶ್ವರ ದೇವಾಲಯದಲ್ಲಿರುವ ವೀರಗಲ್ಲೊಂದರಲ್ಲಿ ಹೊಯ್ಸಳ ಎರಡನೆಯ ಬಲ್ಲಾಳನ ಕಾಲ(ಶಕೆ ೧೧೩೨)ದಲ್ಲಿ ಮಾಳಗೌಡ ಬೋವಗೌಡ ರಾಮಗೌಡನು ತಮ್ಮ ತಂದೆಯ ವೀರಗಲ್ಲಿನ ಪೂಜಾಪುನಸ್ಕಾರ ನೈವೇದ್ಯಕ್ಕಾಗಿ ದಾನವನ್ನು ನೀಡಿದುದನ್ನು ತಿಳಿಸುತ್ತ "ಕುರುಬರಹಟ್ಟಿಯ ......ಗೆಯ್ಯಿಂ ತೆಂಕಲ ಕಂಬ......" ಎಂದು ಉಲ್ಲೇಖವಿದೆ.

–ಎಪಿಗ್ರಾಫಿಯ ಕರ್ನಾಟಿಕ ಸಂ. ೧೨, ಪುಟ ೨೪೭, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಮೈಸೂರು, ೨೦೦೩

೨. ಕುರುಬರಹಳ್ಳಿ

ಶೃಂಗೇರಿ ಮಠದಲ್ಲಿರುವ ಒಂದನೆಯ ತಾಮ್ರಶಾಸನದ ಎರಡನೆಯ ಹಲಗೆಯ ಹಿಂಭಾಗದಲ್ಲಿ

"ಮೈಸೂರು ನಗರದ ಹೋಬಳಿ ವಿಚಾರ ಚಾವಡಿವಳಿತವಾದ ಬೇಲೂರುಸ್ಥಳದ ಬೆಳವಾಡಿ ಗ್ರಾಮದ ಉಪಗ್ರಾಮ ಶಂಕರನಹಳ್ಳಿಗ್ರಾಮ..........ಕುರುಬರಹಳ್ಳಿ..." ಮೊದಲಾದ ಗ್ರಾಮಗಳ ಕುರಿತೆರಿಗೆ ಬಾಲತೆರಿಗೆ ಮೊದಲಾದ ತೆರಿಗೆಯಿಂದ ಬಂದ ಆದಾಯವನ್ನು ಬೆಳವಾಡಿ ಗ್ರಾಮದ ದೇವಸ್ಥಾನ ಕೆರೆಕಟ್ಟೆ ನಿರ್ಮಾಣಕ್ಕೆ ಬಿಟ್ಟುಕೊಟ್ಟದ್ದನ್ನು ತಿಳಿಸುತ್ತದೆ.

–ಎಪಿಗ್ರಾಫಿಯ ಕರ್ನಾಟಿಕ ಸಂ. ೧೧, ಪುಟ ೨೬೦, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಮೈಸೂರು, ೧೯೭೮

೩. ಕುರುಬರ ಬೂದಿಹಾಳು

ಶೃಂಗೇರಿ ಮಠದಲ್ಲಿರುವ ಒಂದನೆಯ ತಾಮ್ರಶಾಸನದ ಮೂರನೆಯ ಹಲಗೆಯ ಹಿಂಭಾಗದಲ್ಲಿ

........ಯೀ ಗ್ರಾಮಕ್ಕೆ ಯೀ ಶಿಲೆಗೆ ಪಶ್ಚಿಮ ಬಿದಿರುಮೆಳೆಕಟ್ಟೆಗೆ ಉತ್ತರ ನರಸೀಪುರ ಕೊಟ್ಟಿಗೇನಹಳ್ಳಿ ಕುರುಬರ ಬೂದಿಹಾಳು ....

–ಎಪಿಗ್ರಾಫಿಯ ಕರ್ನಾಟಿಕ ಸಂ. ೧೧, ಪುಟ ೨೬೦, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಮೈಸೂರು, ೧೯೭೮

೪. ಕುರುಬಗೇರಿ

ಚಾಮರಾಜನಗರ ತಾಲೂಕಿನ ಹಂಡ್ರಕನಹಳ್ಳಿ ಗ್ರಾಮದ ಕುರುಬಗೇರಿ ಹೊಲದಲ್ಲಿರುವ ಶಿಲಾಶಾಸನ

––––ಹಂಡ್ರಕನಹಳ್ಳಿಯ ಊರಿಂದ ಬಡಗಣ ಮಧ್ಯಕದ ಕೆಬ್ಬೆ ೧೦೦ ಕುರುಬಗೆರೆಯಲಿ....೧೦೦ ನಿರುಂಬಕೆರೆಯ ಕೆಳೆಗೆ ಗದ್ದೆ ಮಧ್ಯಕ ೧೦೦ ನೂ ಆ ಮಾಕೋಜನವರು ವಂಶಪಾರಂಪರೆ ಆಗಿ ಚಂದ್ರಸೂರ್ಯರು ಉಳ್ಳಂ ಪರಿಯಂತೆರ ಸಲುವುದೆಂದು ಕೊಟ್ಟ ಶಿಲಾಶಾಸನ...

–ಎಪಿಗ್ರಾಫಿಯ ಕರ್ನಾಟಿಕ ಸಂ. ೪, ಪುಟ ೧೯, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಮೈಸೂರು, ೧೯೭೮

---

* ಪ್ರಾಧ್ಯಾಪಕ, ಹಸ್ತಪ್ರತಿ ಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬.

೫. ಕುರುಬೂರು

ಟಿ. ನರಸೀಪುರ ತಾಲೂಕಿನ ಕುರುಬೂರು ಕೆರೆಯ ಮೇಲಿರುವ ಶಿಲಾಶಾಸನ

----....ಹಿರಿಯದಂಡನಾಯಕ ಲಕುಮಯ್ಯಂಗಳ ಬೆಸದಿ ಹೆಗ್ಗಡೆ ತಿಕಯ್ಯಂಗಳು ಶುಭಕ್ರಿತು ಸಂವತ್ಸರದ ಫಾಲ್ಗುಣ ಸು ೧೪ ಆದಿವಾರದಂದು ಕುರುಬೂರ ಹೆಗ್ಗಡೇಶ್ವರದೇವರ ನಂದದೀವಿಗೆ ಆಚಂದ್ರಾರ್ಕತಾರಾಂಬರ ನಡವಂತಾಗಿ ಆ ಗಾಣದ ಸುಂಕಮಂ ಧಾರಾಪೂರ್ವಕಂ ಮಾಡಿ ಕೊಟ್ಟ ಧರ್ಮ್ಮ.....

–ಎಪಿಗ್ರಾಫಿಯ ಕರ್ನಾಟಿಕ ಸಂ. ೫, ಪುಟ ೬೫೬, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಮೈಸೂರು, ೧೯೭೬

೬. ಕುರುಬೂರು

ಟಿ.ನರಸೀಪುರದ ಗ್ರಾಮಸ್ಥರಲ್ಲಿದ್ದ ತಾಮ್ರಶಾಸನ

..... ಮಡುವಮುಖವಾಗಿ ನೆ.ಕ. ೧ ಇದಕ್ಕೆ ತೆಂಕ ನಡದು ಕುರುಬೂರು ಯಲ್ಲೆಗೆ ಪ । .....

–ಎಪಿಗ್ರಾಫಿಯ ಕರ್ನಾಟಿಕ ಸಂ. ೫, ಪುಟ ೩೬೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಮೈಸೂರು, ೧೯೭೬

೭. ಕುರುಬರ ಬೇಗೂರನಹಟ್ಟಿ

ಟಿ.ನರಸೀಪುರದ ಗ್ರಾಮಸ್ಥರಲ್ಲಿದ್ದ ತಾಮ್ರಶಾಸನ

........ಕುರುಬರ ಬೇಗೂರನಹಟ್ಟಿಗೆ ಬ । ಊರಮುಂದೆ ಮೂಡಮುಖವಾಗಿ ನೆಟ್ಟ ವಾಮಮುದ್ರೆ ಕಲ್ಲು ೧ ....

–ಎಪಿಗ್ರಾಫಿಯ ಕರ್ನಾಟಿಕ ಸಂ. ೫, ಪುಟ ೩೭೮, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಮೈಸೂರು, ೧೯೭೬

೮. ಕುರುಬನಕಟ್ಟೆ

ತೊಣ್ಣೂರು ಕೃಷ್ಣದೇವಾಲಯದಲ್ಲಿರುವ ಹದಿಮೂರನೆಯ ಹಲಗೆಯ ಮುಂಭಾಗದ ತಾಮ್ರಶಾಸನ

.......ಇದಕ್ಕೆ ಪಡುವಲಾಗಿ ಕುರುಬರಕಟ್ಟೆಗೆ ಮೂಡಾಚಾರು...............

–ಎಪಿಗ್ರಾಫಿಯ ಕರ್ನಾಟಿಕ ಸಂ. ೬, ಪುಟ ೧೮೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಮೈಸೂರು, ೧೯೭೭

೯. ಕುರುಬರಹಳ್ಳಿ

ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲೂಕಿನ ನೇರಳಕೆರೆ ಗ್ರಾಮದ ನರಸಮ್ಮನ ಬಳಿಯಿರುವ ತಾಮ್ರಶಾಸನದ ೪ನೆಯ ಪತ್ರದ ಮುಂಭಾಗ

.......ಬಡಗ ಕುರುಬರಹಳ್ಳಿ ಗಾಣದಹುಣಸೆಗೆ ಮೂಡಲು ದಾರಿ...............

–ಕೃಷ್ಣದೇವರಾಯನ ಶಾಸನಗಳು, ಪುಟ ೩೫, ಕನ್ನಡ ವಿ.ವಿ. ಹಂಪಿ, ೨೦೧೦

೧೦. ಕುರುಬಗೇರಿ

ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ದೇವಣಗಾಂವ್ ಗ್ರಾಮದ ಕಲ್ಲಪ್ಪ ದೇವಾಲಯದಲ್ಲಿ ನೆಟ್ಟ ಒಂದು ಶಿಲಾಶಾಸನ

.......ಕುರುಬಗೇರಿಯಿಂ ಮೂಡಲು ನಿವೇಶನ ಚೌರಸ ೩೦ ॥ ....

–ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧೦ (ಬಿಜಾಪುರ ಜಿಲ್ಲೆ), ಪುಟ ೨೭೩, ಕನ್ನಡ ವಿ.ವಿ. ಹಂಪಿ, ೨೦೧೧

೧೧. ಹಿರಿಯಕುರಿಹಟ್ಟಿ

ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಆರೇಕುರಹಟ್ಟಿಯ ಹನುಮಂತದೇವರ ದೇವಾಲಯದ ಮುಂಭಾಗದಲ್ಲಿರುವ ಶಿಲಾಶಾಸನ ಮೂರನೆಯ ತ್ರೈಲೋಕ್ಯಮಲ್ಲ(೧೧೫೪)ನ ಕಾಲದ

....................ಶ್ರೀ ತ್ರಿಭುವನಮಲ್ಲದೇವರ ನಿತ್ಯದಾನದ ಬ್ರಹ್ಮಪುರಿ ಸರ್ವನಮಸ್ಯದಗ್ರಹಾರ ಹಿರಿಯ ಕುರಿಹಟ್ಟಿಯ ಶ್ರೀಮದಶೇಷ ಮಹಾ ....ಸನ್ನಿಧಾನದಲು ಶ್ರೀಮತ್ರೈಲೋಕ್ಯಮಲ್ಲದೇವವರ್ಷದ........

ಈಗ ಈ ಗ್ರಾಮ ಆರೆಕರಹಟ್ಟಿ ಎಂದು ಮಾರ್ಪಾಡುಗೊಂಡಿದೆ. ಶಾಸನ ಪಾಠವನ್ನು ಗಮನಿಸಿದರೆ ಕುರುಬರು ಕುರಿಗಳನ್ನು ನಿಲ್ಲಿಸುತ್ತಿದ್ದರಿಂದ ಇದಕ್ಕೆ ಕುರಿಹಟ್ಟಿ ಎಂಬ ಹೆಸರು ಬಂದಿರಬಹುದು. ಈ ಪ್ರದೇಶದಲ್ಲಿ ಕುರ[ರಿ]ಹಟ್ಟಿ ಎಂಬ ಹೆಸರಿನ ಗ್ರಾಮಗಳು ಮೂರ್‍ನಾಲ್ಕು ಇವೆ. ತುಪ್ಪದಕುರಹಟ್ಟಿ, ಕೊಂಕಣಕುರಹಟ್ಟಿ ಇತ್ಯಾದಿ. ಇವುಗಳನ್ನು ಗುರುತಿಸುವುದಕ್ಕಾಗಿ ಈ ರೀತಿಯ ಹೆಸರುಗಳಿಂದ ಕರೆದಿರಬಹುದು.

–ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಸನ್ಸ್–೧೫, ಪುಟ: ೬೫, ಆರ್ಕಾಲಾಜಿಕಲ್ ಸರ್ವೇ ಆಫ್ ಇಂಡಿಯಾ, ೧೯೮೬

೧೨. ಕುರುಬರಹಳ್ಳಿ (ನರಸಿಂಹಪುರ)

ಈ ಗ್ರಾಮದ ಶಿಲಾಶಾಸನದಲ್ಲಿ "......ಬಂಕಾಪುರದ ಸೀಮೆಯೊಳಗಣ ಗುತ್ತಳ ವೇಂಠೇಯಕೆ ಸಲುವ ಕುರುಬನಹಳ್ಳಿಗೆ ಪ್ರತಿನಾಮವಾದ ನರಸಿಂಹಪುರ ಗ್ರಾಮವನು ನಾವು, ನಿಮಗೆ ಧಾರಾಪೂರ್ವಕವಾಗಿ ಕೊಟ್ಟೆವು". ಕುರುಬನಹಳ್ಳಿಯು ನರಸಿಂಹಪುರವಾಗಿ ಮರುನಾಮಕರಣ ಗೊಂಡಿದ್ದನ್ನು ಈ ಶಾಸನವು ಹೇಳುತ್ತದೆ. ಗ್ರಾಮಗಳ ಹೆಸರನ್ನು ಬದಲಾಯಿಸಿ ಮರುನಾಮಕರಣ ಮಾಡುವ ಪ್ರಕ್ರಿಯೆ ಬಹು ಹಿಂದಿನಿಂದಲೂ ನಡೆಯುತ್ತ ಬಂದಿದೆಯೆಂಬುದಕ್ಕೆ ಅನೇಕ ಶಾಸನಗಳಲ್ಲಿ ಉಲ್ಲೇಖಗಳಿವೆ.

–ಸೌತ್ ಇಂಡಿಯನ್ ಇನಸ್ಕ್ರಿಪ್ಸನ್ಸ್–೧೪, ಆರ್ಕಾಲಾಜಿಕಲ್ ಸರ್ವೇ ಆಫ್ ಇಂಡಿಯಾ

ಈವರೆಗಿನ ಅವಲೋಕನದಿಂದ ನನ್ನ ಗಮನಕ್ಕೆ ಬಂದ ಕುರುಬರಿಗೆ ಸಂಬಂಧಿಸಿದ ಶಾಸನೋಕ್ತ ಗ್ರಾಮಗಳ ಮಾಹಿತಿಯುದು. ಇನ್ನೂ ಶಾಸನಸಂಪುಟಗಳನ್ನು ಸಮಗ್ರವಾಗಿ ಪರಾಮರ್ಶಿಸಿದರೆ ಕುರುಬರಿಗೆ ಸಂಬಂಧಪಟ್ಟ ಗ್ರಾಮನಾಮಗಳು ಸಿಗಬಹುದು.

ಇನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಕಟಿಸಿದ ಕರ್ನಾಟಕದ ಗ್ರಾಮ ಸೂಚಿ (ಸಂ: ಶ್ರೀನಿವಾಸ ರಿತ್ತಿ, ೧೯೮೫)ಯಲ್ಲಿ ಕುರುಬ ಎಂಬ ಪದದಿಂದ ಆರಂಭವಾಗುವ ಅಥವಾ ಮುಕ್ತಾಯವಾಗುವ ಗ್ರಾಮನಾಮಗಳ ವಿವರಗಳನ್ನು ಕಾಣಬಹುದು.

ಹೀಗೆ ಉಕ್ತವಾದ ಗ್ರಾಮಗಳು ಕುರುಬರಹಳ್ಳಿ, ಕುರುಬಗಟ್ಟಿ, ಕುರಿಹಟ್ಟಿ, ಕುರುಬದೊಡ್ಡಿ ಹೀಗೆ ನಾನಾ ಹೆಸರುಗಳಿಂದ ಈಗಲೂ ಅಸ್ತಿತ್ವದಲ್ಲಿರುವ ಗ್ರಾಮಗಳಾಗಿವೆ. ವಿಶೇಷವಾಗಿ ಕುರುಬರಹಳ್ಳಿ ಎಂಬ ಹೆಸರಿನ ಗ್ರಾಮಗಳು ಅಧಿಕ ಸಂಖ್ಯೆಯಲ್ಲಿರುವುದನ್ನು ನೋಡಿದರೆ, ಒಂದು ಕಾಲಕ್ಕೆ ಇಲ್ಲಿ ಕುರುಬರೇ ವಾಸವಿದ್ದಿರಬಹುದು. ಕೋಲಾರ ಜಿಲ್ಲೆಯೊಂದರಲ್ಲಿ ಕುರುಬರಹಳ್ಳಿ ಹೆಸರಿನಿಂದ ೨೬ ಗ್ರಾಮಗಳು ಈಗಲೂ ಅಸ್ತಿತ್ವದಲ್ಲಿವೆ. ಇಂಥ ಗ್ರಾಮಗಳಲ್ಲಿ ಸರ್ವೇಕ್ಷಣೆ ಕೈಕೊಂಡರೆ ಆಯಾ ಗ್ರಾಮನಾಮಗಳ ಹಿಂದಿರುವ ಸಾಂಸ್ಕೃತಿಕ ವಿಶಿಷ್ಟತೆಯನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಆ ಸಾಧ್ಯತೆಯ ಸಂದರ್ಭದಲ್ಲಿ ಈ ಸಂಪ್ರಬಂಧ ಸಹಾಯಕ್ಕೆ ಬರುವುದೆಂಬ ನಂಬಿಕೆ ನನ್ನದಾಗಿದೆ.

ಆಕರ ಗ್ರಂಥಗಳು

೧. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨. ಸೌಥ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ಸಂಪುಟಗಳು, ಆರ್ಕ್ಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ, ನವದೆಹಲಿ.

೩. ಎಂ.ಎಂ. ಕಲಬುರ್ಗಿ, ಕನ್ನಡ ನಾಮವಿಜ್ಞಾನ, ಸಪ್ನ ಬುಕ್ ಹೌಸ್, ಬೆಂಗಳೂರು.

೪. ಶ್ರೀನಿವಾಸ ರಿತ್ತಿ (ಸಂ), ಕನ್ನಡ ಗ್ರಾಮಸೂಚಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೫. ಡಿ.ವಿ. ಪರಮಶಿವಮೂರ್ತಿ(ಸಂ), ಕೃಷ್ಣದೇವರಾಯನ ಶಾಸನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೫೦

ಮಂಡ್ಯ ಜಿಲ್ಲೆಯ ಶಾಸನೋಕ್ತ ಜೈನಾಚಾರ್ಯರುಗಳು

ರೂಪೇಶ್‌ಕುಮಾರ್ ಹೆಚ್.ಎಲ್.*

ಮಂಡ್ಯ ಜಿಲ್ಲೆಯ ಜೈನ ಶಾಸನಗಳನ್ನು ಅವಲೋಕಿಸಿದಾಗ ಮೂಲಸಂಘ, ದ್ರವಿಳಸಂಘ, ಮಣಲೂರು ಹಾಗೂ ನಂದಿಸಂಘದ ಆಚಾರ್ಯರುಗಳು ಇಲ್ಲಿ ಧರ್ಮಪ್ರಚಾರ ಮತ್ತು ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿದ್ದನ್ನು ಖಚಿತಪಡಿಸಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ಶಾಸನಗಳು ಉಲ್ಲೇಖಿಸುವ ಆಚಾರ್ಯರುಗಳ ಸಾಧನೆಯ ವಿವರಗಳನ್ನು ಸಂಕಲಿಸಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದಲೂ ಜೈನಧರ್ಮ ಹರಡಿಕೊಂಡಿತ್ತು ಎಂಬುದಕ್ಕೆ ಶಾಸನಗಳು ಮತ್ತು ಉಳಿದಿರುವ ಹಾಗೂ ಜೀರ್ಣವಾಗಿರುವ ಬಸದಿಗಳು ಸಾಕ್ಷಿಯಾಗಿವೆ. ಮಂಡ್ಯ ಜಿಲ್ಲೆಯಲ್ಲಿ ಇಲ್ಲಿಯವರೆಗೆ ದೊರೆತಿರುವ ಸುಮಾರು ೧೦೬೪ ಶಾಸನಗಳಲ್ಲಿ ೫೭ ಶಾಸನಗಳು ಜೈನಶಾಸಗಳಾಗಿವೆ. ಈ ಶಾಸನಗಳ ತಾಲ್ಲೂಕು ವಾರು ವಿವರ ಹೇಗಿದೆ. ನಾಗಮಂಗಲ ೨೮, ಕೃಷ್ಣರಾಜಪೇಟೆ ೧೦, ಪಾಂಡವಪುರ ೦೫, ಮದ್ದೂರು ೧೦, ಶ್ರೀರಂಗಪಟ್ಟಣ ೦೪, ಈ ಶಾಸನಗಳಲ್ಲಿ ವಿವಿಧ ಸಂಘ, ಗಣ, ಗಚ್ಛ ಮತ್ತು ಅನ್ವಯಕ್ಕೆ ಸೇರಿದ ಸುಮಾರು ೨೫ ಜೈನ ಆಚಾರ್ಯರುಗಳು ಉಲ್ಲೇಖಿತರಾಗಿದ್ದಾರೆ. ಈ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಅತಿ ಹೆಚ್ಚು ಜೈನ ಆಚಾರ್ಯರುಗಳು ಉಲ್ಲೇಖಿತಗೊಂಡಿದ್ದಾರೆ. ಉತ್ತರ ಕರ್ನಾಟಕದಲ್ಲಿ ಯಾಪನೀಯ ಸಂಘದವರು ಪ್ರಚಲಿತದಲ್ಲಿದ್ದರೆ ದಕ್ಷಿಣ ಕರ್ನಾಟಕದಲ್ಲಿ ಮೂಲಸಂಘವು ಹೆಚ್ಚು ಪ್ರಭಾವಿತವಾಗಿದ್ದು, ಇಂದಿನ ಶ್ರವಣಬೆಳಗೊಳ, ಕಂಬದಹಳ್ಳಿ, ಮಲೆಯೂರು (ಕನಕಗಿರಿ) ನರಸಿಂಹರಾಜಪುರ, ಹುಂಚದ ಭಟ್ಟಾರಾಕ ಪರಂಪರೆಯು ಮೂಲಸಂಘ ದೇಶೀಯಗಣ ಪುಸ್ತಕಗಚ್ಛ ಮತ್ತು ಕುಂದದಾನ್ವಯಕ್ಕೆ ಸೇರಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಈ ಜಿಲ್ಲೆಯಲ್ಲಿ ದೊರಕುವ ಅತ್ಯಂತ ಪ್ರಾಚೀನ ಜೈನ ಶಾಸನವೆಂದರೆ ನಾಗಮಂಗಲ ತಾಲ್ಲೂಕು, ದೇವರಹಳ್ಳಿಯಲ್ಲಿ ದೊರೆತ ಗಂಗ ಶ್ರೀಪುರುಷನ ಕ್ರಿ.ಶ. ೭೭೬ರ ತಾಮ್ರಶಾಸನ.[೧] ಈ ಶಾಸನದಲ್ಲಿ ನಂದಿ ಸಂಘ ಎರೆಗಿತ್ತೂರು ಗಣ ಪುಲಿಕಲ್‌ಗಚ್ಛಕ್ಕೆ ಸೇರಿದ ವಿಮಲಚಂದ್ರ ಆಚಾರ್ಯರ ಉಲ್ಲೇಖವಿದೆ. ವಿಮಲಚಂದ್ರ ಆಚಾರ್ಯರ ಗುರುಪರಂಪರೆಯನ್ನು ಈ ಶಾಸನದಲ್ಲಿ ತಿಳಿಸಲಾಗಿದೆ. ಈ ಶಾಸನದಿಂದ ವಿಮಲಚಂದ್ರ ಆಚಾರ್ಯರು ಕೀರ್ತಿ ನಂದಿದೇವರ ಶಿಷ್ಯರಾಗಿದ್ದು, ಚಂದ್ರನಂದಿದೇವರ ಗುರುಪರಂಪರೆಯವರು ಎನ್ನುವ ವಿಚಾರ ತಿಳಿದು ಬರುತ್ತದೆ.

ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿಯ ಕ್ರಿ.ಶ. ೯೦೦ಕ್ಕೆ ಸೇರಿದ ಶಾಸನದಲ್ಲಿ ಕುಮಾರಸೇನ ಭಟ್ಟಾರಕರು ಸತ್ಯವಾಕ್ಯ ಕೊಂಗುಣಿವರ್ಮನ ಕಾಲದಲ್ಲಿ ತ್ಯಾಗಿಪೆರ್ಮಾಡಿಯು ಕಟ್ಟಿಸಿದ ಕಲ್ಲು ಬಸದಿಯೊಂದಕ್ಕೆ ದತ್ತಿ ಪಡೆದ ವಿಚಾರ ದಾಖಲಾಗಿದೆ.[೨] ಈ ಶಾಸನವು ಸತ್ಯವಾಕ್ಯ ಕೊಂಗುಣಿವರ್ಮನನ್ನು ಬೆಳಗೊಳದ ಶ್ರವಣ ಸಂಘದ ಮತ್ತು ಸ್ಯಾದ್ವಾದದ ಆಧಾರಭೂತ ಎಂದು ಕರೆದಿದೆ. ಕ್ರಿ.ಶ. ೯೦೪ರ ಶ್ರೀರಂಗಪಟ್ಟಣ ತಾಲ್ಲೂಕು, ರಾಂಪುರ ಗ್ರಾಮದಿಂದ ವರದಿಯಾಗಿರುವ ಶಾಸನದಲ್ಲಿ ವರಮತಿಸಾಗರಪಂಡಿತಾಚಾರ್ಯರ ಉಲ್ಲೇಖವಿದೆ.[೩] ಇವರು ಒಬ್ಬ ಘನ ವಿದ್ವಾಂಸರಾಗಿದ್ದು, ಇವರ ಅಪ್ಪಣೆಯ ಮೇರೆಗೆ ಅಣ್ಣಯ್ಯ, ದೇವಕುಮಾರ ಮತ್ತು ದೊರೆ ಎಂಬುವರು ನದಿಗೆ ಅಡ್ಡಲಾಗಿ ಕಟ್ಟೆಯನ್ನು ಕಟ್ಟಿಸಿದರು ಎಂಬ ವಿವರ ಲಭ್ಯವಾಗಿರುತ್ತದೆ.

ಮದ್ದೂರು ತಾಲ್ಲೂಕು, ಕೂಲಿಗೆರೆ ಗ್ರಾಮದ ಕೆರೆ ಏರಿಯ ಮೇಲಿರುವ ಕ್ರಿ.ಶ. ೯೮೯ರ ಶಾಸನವು ಕನಕಸೇನ ಭಟ್ಟಾರಕರನ್ನು ಉಲ್ಲೇಖಿಸುತ್ತದೆ.[೪] ಮಣಲೆಯರನು ಕನಕಗಿರಿ ತೀರ್ಥದ ಮೇಲಿನ ಬಸದಿಯನ್ನು ಇಮ್ಮಡಿನ ಅರಸರ ಅಧ್ಯಕ್ಷದಲ್ಲಿ ಕನಕಸೇನ ಭಟಾರರಿಗೆ ತಿಪ್ಪೂರಿನ ಕೆಲವು ತೆರಿಗೆಗಳನ್ನು ಬಿಟ್ಟುಕೊಟ್ಟಿರುವುದನ್ನು ಈ ಶಾಸನವು ತಿಳಿಸುತ್ತದೆ. ಕನಕಸೇನಭಟ್ಟಾರರು ತಿಪ್ಪೂರಿನಲ್ಲಿಯೇ ಇದ್ದುದರಿಂದ ಅದಕ್ಕೆ ಕನಕಗಿರಿ ಎಂಬ ಹೆಸರು ಬಂದಿರಬಹುದು.

---

* 'ತ್ರಯಲೋಕ್ಯನಿಲಯ' ಕೆ.ಆರ್.ಎಸ್. ರಸ್ತೆ, ವಿ.ಸಿ. ಕಾಲೋನಿ, ಪಾಂಡವಪುರ, ಮಂಡ್ಯ ಜಿಲ್ಲೆ.

ಚಿಕ್ಕರಸಿನಕೆರೆ ಹೋಬಳಿ, ತಿಪ್ಪೂರಿನಲ್ಲಿ ಮೇಲೆ ಹೇಳಿರುವ ಕನಕಗಿರಿ ಕ್ಷೇತ್ರದಲ್ಲಿ ವಿಷ್ಣುವರ್ಧನನ ಕಾಲದ ಒಂದು ಶಾಸನವಿದೆ. ಕ್ರಿ.ಶ. ೧೧೧೭ರಲ್ಲಿ ಸೇನಾನಿ ಗಂಗರಾಜನಿಗೆ ತಲಕಾಡಿನಲ್ಲಿ ಚೋಳರ ಮೇಲೆ ಸಾಧಿಸಿದ ಗೆಲುವಿನಿಂದ ಸಂಪ್ರೀತನಾದ ಅರಸ ವಿಷ್ಣುವರ್ಧನನು ಬೇಕಾದುದ್ದನ್ನು ಕೇಳು ಎಂದು ಹೇಳಿದಾಗ ಆತ ಏನನ್ನು ಬೇಡದೆ ಭೂ ಮಂಡಲವೇ ಹೊಗಳುತ್ತಿದ್ದ ತಿಪ್ಪೂರು ವೃತ್ತಿಯನ್ನು ಕೇಳುತ್ತಾನೆ. ದೊರೆ ಅದನ್ನು ಕೊಟ್ಟಾಗ ಸಂತೋಷಪಟ್ಟ ಗಂಗರಾಜನು ಇದನ್ನು ತನ್ನ ಗುರುವಾದ ಮೇಘಚಂದ್ರ ಸಿದ್ದಾಂತ ದೇವನಿಗೆ ಧಾರೆ ಎರೆದುಕೊಡುತ್ತಾನೆ ಎಂಬ ಅಂಶ ಈ ಮೇಲಿನ ಶಾಸನದಿಂದ ಗೊತ್ತಾಗುತ್ತದೆ.[೫] ಇದೇ ಗಂಗರಾಜನು ತಿಪ್ಪೂರಿನ ಬಳಿ ಇರುವ ಒಂದು ಸಣ್ಣಗುಡ್ಡದ ಮೇಲೆ ಕಟ್ಟಿಸಿದ ಬಸದಿಯಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ಕವಿಯಾಗಿದ್ದ ಬಾಲಚಂದ್ರದೇವನು ತನ್ನ ಗುರುವಿನ ನೆನಪಿಗೆ ಜನಬಿಂಬವನ್ನು ಪ್ರತಿಷ್ಟೆ ಮಾಡಿಸಿರುವುದಾಗಿ ತಿಳಿದು ಬರುತ್ತದೆ.[೬] ಬಾಲಚಂದ್ರದೇವನನ್ನು ಉಭಯ ಭಾಷಾ ಕವಿಚಕ್ರವರ್ತಿಯೆಂದು ಕಾಣೂರು ಗಣತಿಲಕನೆಂದು ಇದೇ ತಿಪ್ಪೂರಿನ ದೊಣೆಯ ಬಳಿ ಬಿದ್ದಿದ್ದ ಜಿನ ಬಿಂಬದ ಮೇಲಿನ ಶಾಸನವು ತಿಳಿಸುತ್ತದೆ. ಇವನ ತಂದೆ ಮತ್ತು ಗುರು ಕವಿಕಂದರ್ಪ, ತಾಯಿ ಸೊಂನ್ನಾದೇವಿ. ಬಾಲ್ಯದಲ್ಲಿ ವಿದ್ಯಾಭ್ಯಾಸವನ್ನು ಬಾಲಚಂದ್ರ ತನ್ನ ತಂದೆಯಿಂದಲೇ ಕಲಿತಿತದ್ದನು. ನಂತರ ನಯಕೀರ್ತಿ ಈತನ ಗುರುವಾಗಿದ್ದನು. ಕನ್ನಡ ಮತ್ತು ಸಂಸ್ಕೃತಗಳಲ್ಲಿ ಕವಿಯಾಗಿದ್ದ ಬಾಲಚಂದ್ರದೇವನ ಯಾವ ಕೃತಿಯೂ ಈವರೆಗೆ ಉಪಲಬ್ದವಾಗಿಲ್ಲ. ಇವನಂದಲೇ ರಚಿತವಾಗಿರುವ ಎರಡು ಶಾಸನಗಳಲ್ಲಿ ಇವನು ತನ್ನನ್ನು ಚತುರ್ಭಾಷಾ ಕವಿಚಕ್ರವರ್ತಿಯೆಂದು ಹೇಳಿಕೊಂಡಿದ್ದಾನೆ. ಈತನು ರಚಿಸಿರುವ ಎರಡು ಶಾಸನಗಳು ಬೆಳಗಾವಿಯ ಕೋಟೆಯಲ್ಲಿವೆ. ಜಿನಬಿಂಬದ ಪೀಠದಲ್ಲಿರುವ ಶಾಸನದಲ್ಲಿ ಅವನ ಗುರು ಯಾರೆಂದು ಹೆಸರಿಸಿಲ್ಲ. ಆದರೆ ಅವನ ಗುರು ಸಕಲಚಂದ್ರನ ಮಗ ಮಾಧವಚಂದ್ರ ಎಂಬುದಾಗಿ ಬೇರೆ ಮೂಲಗಳಿಂದ ತಿಳಿದು ಬರುತ್ತದೆ. 'ಯಶೋಧರ ಚರಿತೆ' ಯ ಜನ್ನನ ಪತ್ನಿ ಲಕುಮಾದೇವಿಗೆ ಬಾಲಚಂದ್ರನು ಗುರುವಾಗಿದ್ದಾನೆಂದು ಜನ್ನನ ಅನಂತನಾಥ ಪುರಾಣದಿಂದ ತಿಳಿದು ಬರುತ್ತದೆ.

ನಾಗಮಂಗಲ ತಾಲ್ಲೂಕಿನ ಎಲೆಕೊಪ್ಪ ಗ್ರಾಮದ ಕ್ರಿ.ಶ. ೧೦೬೮ರ ಶಾಸನದಲ್ಲಿ ಭಟ್ಟಾರಕ ಏಲಾಚಾರ್ಯ ಕಠಿಣವಾದ ಉಪಸರ್ಗಗಳನ್ನು ಅನುಭವಿಸುತ್ತಾ ನಿಶ್ಕಳಂಕ ಚರಿತನಾಗಿ ವಾಸ ಮಾಡುತಾತ್ತಿದ್ದುದರಿಂದ ನೊಳಂಬವಾಡಿಯು ಮತ್ತು ದಡಿಗವಾಡಿಯು ಪ್ರಸಿದ್ದವಾದವು ಎಂಬ ವಿಚಾರವನ್ನು ಈ ಶಾಸನದ ಕವಿ ಏಲಾಚಾರ್ಯರ ಶಿಷ್ಯನು ಆದ ಬಿಂಡಯ್ಯನು ತಿಳಿಸುತ್ತಾನೆ.[೭]

ಕ್ರಿ.ಶ. ೯೭೫ರ ಬಿಂಡಗನವಿಲೆಯ ನಿಷಿಧಿ ಶಾಸನವು ಕಂತಿ ಅಮೃತಬ್ಬೆ ಎಂಬ ಜೈನ ಸನ್ಯಾಸಿನಿ ಇಹಲೋಕ ತ್ಯಜಿಸಿದಾಗ ಆಕೆಯ ಮಗನಾದ ಪದ್ಮನಂದಿ ಭಟ್ಟಾರರು ತಮ್ಮ ತಾಯಿಯ ಹೆಸರಿನಲ್ಲಿ ನಿಶಿದಿ ಶಾಸನ ನಿಲ್ಲಿಸಿದರು.[೮] ಕಂಬದ ಹಳ್ಳಿಯ ಬ್ರಹ್ಮಯಕ್ಷ ಕಂಬದ ಬುಡದಲ್ಲಿರುವ ಕ್ರಿ.ಶ. ೧೧೧೮ರ ಶಾಸನದ ಪ್ರಕಾರ ಹೊಯ್ಸಳದೇವ ವಿಷ್ಣುವರ್ಧನನು ತನ್ನ ಹಿರಿಯ ದಂಡನಾಯಕ ಗಂಗರಾಜನಿಗೆ ತಲಕಾಡನ್ನು ಗೆಲ್ಲುವುದಕ್ಕೆ ಮುಂಚಿತವಾಗಿಯೇ ವಾಗ್ದಾನ ಮಾಡಿ ಮೆಚ್ಚಿದ್ದನ್ನು 'ಬೇಡಿಕೊಳ್' ಎಂದಾಗ ಆತ ಶ್ರೀ ಬಿಂಡಗನವಿಲೆಯ ತೀರ್ಥಕ್ಕರಳ ವೃತ್ತಿಯನ್ನು ಬೇಡಿಕೊಳ್ಳುತ್ತಾನೆ. ಹೀಗೆ ಪಡೆದ ಬಿಂಡಿಗನವಿಲೆ ವೃತ್ತಿಯನ್ನು ಗಂಗರಾಜನು ಶ್ರೀ ಮೂಲ ಸಂಘದ ದೇಶಿಗಣದ ಪುಸ್ತಕ ಗಚ್ಛದ ಕೊಂಡಕುಂದಾನ್ವಯದ ಶುಭಚಂದ್ರ ಸಿದ್ದಾಂತದೇವರಿಗೆ ಧಾರಾಪೂರ್ವಕವಾಗಿ ಕಾಲುತೊಳೆದು ದತ್ತಿ ಬಿಟ್ಟ ವಿಚಾರ ತಿಳಿದುಬರುತ್ತದೆ.[೯]

ಈ ಶುಭಚಂದ್ರ ಸಿದ್ದಾಂತ ದೇವರ ಉಲ್ಲೇಖ ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲು ಗ್ರಾಮದಲ್ಲಿ ದೊರೆತಿರುವ ಕ್ರಿ.ಶ. ೧೧೧೮ರ ಶಾಸನದಲ್ಲೂ ಕಂಡುಬರುತ್ತದೆ.[೧೦] ದ್ವಾರಸಮುದ್ರದ ಪಟ್ಟಣ ಸ್ವಾಮಿಯಾದ ನೊಳಂಬಿ ಶೆಟ್ಟಿಯ ಮನೋವಲ್ಲಭೆ ದೇಮಿಕಬ್ಬೆ ಸೆಟ್ಟಿತಿಯು ಅರುಹನಹಳ್ಳಿ ಮತ್ತು ಬಸದಿಯ ಬಡಗಲು ತೆಂಕಲಗಳ ಭೂಮಿ, ದಾನಶಾಲೆ, ಎರಡು ಗಾಣ, ಎರೆಡು ತೋಟಗಳು, ಗಂಡ ನಾರಾಯಣಶೆಟ್ಟಿಯು ಕೊಟ್ಟ ಭೂಮಿ: ಇವಿಷ್ಟನ್ನು ಶ್ರೀ ಶುಭಚಂದ್ರ ಸಿದ್ದಾಂತದೇವರಿಗೆ ದತ್ತಿಯಾಗಿ ಬಿಟ್ಟುಕೊಟ್ಟರೆಂದು ತಿಳಿದುಬರುತ್ತದೆ. ಈ ಶಾಸನದಲ್ಲಿ ಶ್ರೀ ಶುಭಚಂದ್ರ ಸಿದ್ದಾಂತದೇವರ ಗುರುಪರಂಪರೆಯೂ ಉಕ್ತವಾಗಿದೆ. ಶ್ರೀ ಶುಭಚಂದ್ರ ಸಿದ್ದಾಂತ ಗುರುಗಳು ಕುಕ್ಕಟಾಸನ ಮಾಲಾದಾರಿ ದೇವರು ಹಾಗೂ ಅವರ ಗುರುಗಳು ದಿವಾಕರ ನಂದಿಮುನಿಗಳು ಎಂಬ ಅಂಶ ತಿಳಿದು ಬರುತ್ತದೆ. ಮೂಲ ಸಂಘದ ಕೊಂಡಕುಂದಾ ಮಾರ್ಗವು ಜಿನಧರ್ಮದಲ್ಲಿ ಅತ್ಯಂತ ಪ್ರಾಚೀನವಾದುದು ಮತ್ತು ದೇಶಿಗಣದ ಪುಸ್ತಕ ಗಚ್ಛದ ವಿದ್ವಾಂಸರಾದ ಕುಕ್ಕಟಾಸನ ಮಾಲಧಾರಿದೇವನ ಪ್ರಸಿದ್ದ ಶಿಷ್ಯನಾದ ಶುಭಚಂದ್ರಸಿದ್ದಾಂತ ದೇವನ ಶಿಷ್ಯನೆನಿಸಿರುವ ಸೇನಾನಿ ಗಂಗನು ನಿಸ್ಸಂದೇಹವಾಗಿಯೂ ಆ ಮಾರ್ಗದ ಪ್ರವರ್ತಕ.

ಕೃಷ್ಣರಾಜಪೇಟೆ ತಾಲ್ಲೂಕು, ಅಕ್ಕಿಹೆಬ್ಬಾಳು ಹೋಬಳಿಗೆ ಸೇರಿದ ಶ್ರವಣಹಳ್ಳಿಯಲ್ಲಿ ದೊರಕಿರುವ ೧೦-೧೧ ನೇ ಶತಮಾನದ ಶಾಸನವು ಶಾಂತಲಾದೇವಿ ಮತ್ತು ಅವಳ ತಮ್ಮ ದುದ್ದ ಮಲ್ಲನು ತಮಗೆ ತಮ್ಮ ತಂದೆ ಬಳುವಳಿಯಾಗಿ ಕೊಟ್ಟಿದ್ದ ಕಾವನಹಳ್ಳಿಯನ್ನು ವೀರಕೊಂಗಾಳ್ವ ಜನಾಲಯಕ್ಕೆ ದತ್ತಿಯಾಗಿ ತಮ್ಮ ಗುರುಗಳಾದ ಪ್ರಭಾಚಂದ್ರ ಸಿದ್ಧಾಂತ ದೇವರ ಕಾಲನ್ನು ತೊಳೆದು ಸರ್ವಬಾಧಾ ಪರಿಹಾರವಾಗಿ ಕೊಡುತ್ತಾರೆ ಎಂದಿದೆ.[೧೧]

ನಾಗಮಂಗಲ ತಾಲ್ಲೂಕು, ಸುಖದೆರೆ ಎಂಬ ಗ್ರಾಮದಿಂದ ವರದಿಯಾಗಿರುವ ವಿಷ್ಣುವರ್ಧನನ ಕಾಲಕ್ಕೆ ಸೇರಿದ ಶಾಸನದಲ್ಲಿ ಸುಖದೆರೆಯ ಜಕ್ಕಿಸೆಟ್ಟಿಯು ಗ್ರಾಮದಲ್ಲಿ ಒಂದು ಬಸದಿಯನ್ನು ಕಟ್ಟಿಸಿ ಅದಕ್ಕೆ ದತ್ತಿಗಳನ್ನು ಮತ್ತು ದಾನಗಳನ್ನು ದಯಪಾಲದೇವ ಎಂಬ ಆಚಾರ್ಯರಿಗೆ ಧಾರೆ ಎರೆದುಕೊಟ್ಟಿದ್ದನ್ನು ದಾಖಲಿಸಲಾಗಿದೆ.[೧೨] ದಯಾಪಾಲದೇವ ಆಚಾರ್ಯರು ದ್ರಮಿಳ ಸಂಘಕ್ಕೆ ಸೇರಿದ್ದು, ಅವರ ಪರಂಪರೆಯ ಸಮಂತಭದ್ರರು, ಹೇಮಸೇನಾ ಹಾಗೂ ವಾದಿರಾಜರ ಆರ್ಚಾಯರರ ಹೆಸರುಗಳು ಈ ಶಾಸನದಲ್ಲಿ ಉಲ್ಲೇಖವಾಗಿವೆ.

ಕಂಬದಹಳ್ಳಿಯಿಂದ ವರದಿಯಾಗಿರುವ ಕ್ರಿ.ಶ. ೧೧೬೮ರ ಶಾಸನವೊಂದರಲ್ಲಿ ನೇಮ ದಂಡೇಶನ ಮುದ್ದರಸಿಯರ ಮಗನು, ಕಲಿಯುಗಭೀಮ, ಜನದೇವಾಲಯಗಳ ಜೀರ್ಣೋದ್ಧಾರಕನು ಆದ ಗಂಗ ಕುಲದ ಪಾರ್ಶ್ವ ದೇವನ ದೇವಕ್ಷೇತ್ರನಿಸಿದ ಬಿಂಡಗನವಿಲೆಯನ್ನು ಪಾರ್ಶ್ವದಾನ ಸ್ಥಳವೆಂದು ಪರಿಗಣಿಸಿ ಮೂಲ ಸಂಘದ, ದೇಸಿ ಗಣದ, ಪುಸ್ತಕ ಗಚ್ಛದ, ಭೂಸ್ಥಿತಿರಾದ ಹನಸೋಗೆಯ ಮುನಿಗಳ ಪಾದಾರ್ಚನೆಗೂ, ಶ್ರಾವಕರಿಗೂ ಹಾಗೂ ತನ್ನ ವಂಶದವರಿಗೂ ಇದು ಸೇರುತ್ತದೆ ಎಂದು ಹೇಳುತ್ತಾ, ಬಿಂಡಗನವಿಲೆಯ ಪಾರ್ಶ್ವಜಿನಾಲಯಕ್ಕೆ ಸುಣ್ಣ ಬಳಸಿ ಅದರ ಕೈಂಕರ್ಯಕ್ಕಾಗಿ ೨೦ ಖಂಡುಗ ನೀರ್ನೆಲವನ್ನು ೫೦ ಖಂಡುಗ ಬಿದ್ದಲೆಯನ್ನು ಋಷಿಗಳಿಗೆ, ವಿದ್ಯಾರ್ಥಿಗಳಿಗೆ ಅತ್ಯಂತ ಉತ್ಸಾಹದಿಂದ ದಾನ ಮಾಡಿದನು ಎನ್ನುವ ಅಂಶ ತಿಳಿದುಬರುತ್ತದೆ.[೧೩]

ಕ್ರಿ.ಶ. ೧೧೦೦ರ ನಾಗಮಂಗಲ ತಾಲ್ಲೂಕಿನ ಹಟ್ನ ಗ್ರಾಮದ ಶಾಸನವು ಬಾಳಚಂದ್ರ ದೇವನ ಗುರುಪರಂಪರೆಯನ್ನು ತಿಳಿಸುತ್ತದೆ.[೧೪] ಹೊಯ್ಸಳ ವೀರಬಲ್ಲಾಳನು ಆಳುತ್ತಿದ್ದಾಗ ಕ್ರಿ.ಶ. ೧೧೦೦ರಲ್ಲಿ ಹೊಯ್ಸಳ ಪಟ್ಟಣ ಸ್ವಾಮಿಯಾದ ಸೋಮಿಶೆಟ್ಟಿಯು ತಾನು ಕಟ್ಟಿಸಿದ ಶ್ರೀ ಪಾರ್ಶ್ವನಾಥ ದೇವರ ಬಸದಿಗಾಗಿ, ಮುನಿಗಳ ಆಹಾರಕ್ಕಾಗಿ ಕೆಲವು ಭೂಮಿಗಳನ್ನು ಆಗ ತನ್ನ ಅಧಿಕಾರಿಯಾಗಿದ್ದ ಸಾಮಂತ ನರಸಿಂಹನಾಯಕನ ಅನುಮತಿಯಿಂದ ತನ್ನ ಗುರುಗಳಾದ ಬಾಳಚಂದ್ರ ದೇವರಿಗೆ ದಾರಾ ಪೂರ್ವಕವಾಗಿ ಕೊಟ್ಟನು. ವೀರ ಬಲ್ಲಾಳ ಕಾಲದ ಇನ್ನೊಂದು ಶಾಸನವು ನಾಗಮಂಗಲ ತಾಲ್ಲೂಕಿನ ಅಳೀಸಂದ್ರದಿಂದ ವರಿದಿಯಾಗಿದ್ದು, ಇದರಲ್ಲಿ ಮೂಲ ಸಂಘ, ದೇಸೀಯ ಗಣ, ಪುಸ್ತಕ ಗಚ್ಚ, ಕುಂದಾಕಂದಾನ್ವಯದ ಶ್ರೀ ಮಾಘನಂದಿ ಸಿದ್ಧಾಂತದೇವರ ಶಿಷ್ಯರು ಶ್ರೀಗಂಧ ವಿಮುಕ್ತ ಸಿದ್ಧಾಂತ ದೇವರು ಅವರ ಶಿಷ್ಯ ಶ್ರೀ ದೇವಕೀರ್ತಿ ಪಂಡಿತ ದೇವರ ಶಿಷ್ಯ ಶ್ರೀ ದೇವಚಂದ್ರ ಪಂಡಿತ ದೇವರಿಗೆ ಶಕವರ್ಷ ೧೧೦೬ರಲ್ಲಿ ಆಹಾರ ಭೂಮಿಯನ್ನು ದಾನವಾಗಿ ನೀಡಿದ್ದನ್ನು ದಾಖಲಿಸಿದೆ.[೧೫]

ಕ್ರಿ.ಶ. ೧೧೪೫ಕ್ಕೆ ಸೇರಿದ ಕಂಬದ ಹಳ್ಳಿಯ ಇನ್ನೊಂದು ಶಾಸನವು ಹೊಯ್ಸಳ ಒಂದನೇ ನರಸಿಂಹದೇವನು ತನ್ನ ಹಿರಿಯರು ಕಂಬದಹಳ್ಳಿ ದೇವತಾಪೂಜೆಗೂ, ಆಹಾರದಾನಕ್ಕೂ ಮೊದಲಿಹಳ್ಳಿಯ ಶಾಂತಿನಾಥ ದೇವರ ಪೂಜೆಗಾಗಿ ಬಿಟ್ಟಿದ್ದ ದತ್ತಿಯನ್ನು ದಂಡ ವಿಮುಕ್ತ ಸಿದ್ಧಾಂತದೇವರ ಶಿಷ್ಯರಾದ ಮರಿಯಾನೆ ದಂಡನಾಯಕನಿಗೂ ಮತ್ತು ಭರತಮಯ್ಯ ದಂಡನಾಯಕನಗೂ ಧಾರಾಪೂರ್ವಕವಾಗಿ ಕೊಟ್ಟರು.[೧೬] ನಂತರ ಈ ದಂಡನಾಯಕರು ಮೇಲೆ ತಿಳಿಸಿದ ದತ್ತಿಯನ್ನು ತಮ್ಮ ಗುರುಗಳಾದ ದಂಡ ಶಮಿಮುಕ್ತ ಸಿದ್ಧಾದಂತದೇವರಿಗೆ ಭಕ್ತಿಪೂರ್ವಕವಾಗಿ ಅರ್ಪಿಸಿದರು ಎನ್ನುವ ವಿಚಾರ ತಿಳಿದುಬರುತ್ತದೆ.

ಕಂಬದಹಳ್ಳಿಯಿಂದ ವರದಿಯಾಗಿರುವ ಇನ್ನೊಂದು ಶಾಸನವು ಸೂರಸ್ತ ಗಣಕ್ಕೆ ಸೇರಿದ ಪಲ್ಲವಪಂಡಿತ ಎಂಬ ಆಚಾರ್ಯನ ಅನ್ವಯವನ್ನು ಕೊಡುತ್ತದೆ.[೧೭] ಈತನ ಪೂರ್ವಜರನ್ನು ಅನಂತವೀರ್ಯಾಚಾರ್ಯ ಪ್ರಾರಂಭಿಸಿ, ನಂತರ ಬಾಳಚಂದ್ರ ದೇವ, ಪ್ರಭಾಚಂದ್ರಮುನಿ, ಕಣ್ಣೆಲದೇವ, ಅಷ್ಟೋಪವಾಸಿ, ಹೇಮನಂದಿಮುನಿ ಎಂದು ಹೇಳಿ ನಂತರ ಈ ಸೂರಸ್ತ ಗಣಕ್ಕೆ ಭಾಸ್ಕರನೆನಿಸಿದ ವಿನಯಕೀರ್ತಿ ಮುನಿಯ ಹೆಸರನ್ನು ಹೇಳಿ, ಅದರ ನಂತರ ಆತನು ಸೋನು ಏಕವೀರ ಎಂದು ಆ ಮುನಗಳ ಅನುಜರೇ ಪಲ್ಲಪಂಡಿತ ಅಥವಾ ಪಲ್ಲ ಕೀರ್ತಿ ಎಂದು ಹೇಳುತ್ತದೆ. ಈ ಪಲ್ಲಕೀರ್ತಿ ಪಂಡಿತನ ಗುಣಗಳನ್ನು ಸುಮಾರು ೫೦ ಪಂಕ್ತಿಗಳಲ್ಲಿ ಹೇಳುತ್ತಾ ಈತ **“ಬೇಡಿದರ್ಥಿ ಜನಕ್ಕೆ ಇಚ್ಚನೀವ ದೇವತರು”** ಎಂದು ಹೇಳಲಾಗಿದೆ. ಈ ಶಾಸನದಲ್ಲಿ ಸೂರಸ್ತ ಗಣದ ಅನೇಕ ಆಚಾರ್ಯರು ಮತ್ತು ಮುಖ್ಯವಾಗಿ ಪಲ್ಲಕೀರ್ತಿ ದೇವನು ಒಬ್ಬ ಅತ್ಯಂತ ಫ್ರಭಾವಶಾಲಿಯು ಪ್ರಖ್ಯಾತನು ಆದ ವ್ಯಕ್ತಿ ಇರಬೇಕು ಈ ಶಾಸನ ದೊರೆತಿರುವ ಕಂಬದಳ್ಳಿ ತೀರ್ಥದ ಆಚಾರ್ಯನು ಇವನೇ ಆಗಿರಬಹುದೆಂಬ ವಿಚಾರ ಮನದಟ್ಟದಾಗುತ್ತದೆ. ಆದರೆ ಈ ಶಾಸನವು ಬಿಂಡಿಗನವಿಲೆಯ ಸ್ಥಳ ವೃತ್ತಿಯನ್ನು ಸ್ವೀಕರಿಸಿದ ದೇಸಿಗಣದ ಶುಭಚಂದ್ರ ಸಿದ್ದಾಂತದೇವರಿಗೂ, ಕಂಬದಹಳ್ಳಿಯ ಸೂರಸ್ತಗಣದ ಪಲ್ಲಕೀರ್ತಿದೇವನಿಗೂ ಸಂಬಂಧವೇನು ಎಂದು ಹೇಳುವುದಿಲ್ಲ.

ಒಂದನೇ ನರಸಿಂಹನ ಕಾಲಕ್ಕೆ ಸೇರಿದ ನಾಗಮಂಗಲ ತಾಲ್ಲೂಕಿನ ಯಾಲದಹಳ್ಳಿಯಲ್ಲಿ ದೊರಕಿರುವ ಶಾಸನವು ಮೂಲ ಸಂಘಕ್ಕೆ ಸೇರಿದ ಮುನಿಚಂದ್ರ ದೇವರಿಗೆ ಸಂಬಂಧಿಸಿದ್ದು, ಈ ಶಾಸನದ ಪ್ರಕಾರ ಹೊಯ್ಸಳ ಒಂದನೇ ನರಸಿಂಹನು ತನ್ನ ಮಹಾಪ್ರಧಾನನಾದ ದೇವರಾಜನಿಗೆ ಬಳುವಳಿಯಾಗಿ ಕೊಟ್ಟ ಸೂರನಹಳ್ಳಿಯಲ್ಲಿ ತ್ರಿಕೂಟಜಿನಾಲಯವನ್ನು ಕಟ್ಟಿಸಿ ಶ್ರೀ ಪಾರ್ಶ್ವನಾಥ ತೀರ್ಥಂಕರರ ವಿಗ್ರಹವನ್ನು ಪ್ರತಿಷ್ಠಾಪಿಸಿ ಪಾರ್ಶ್ವಪುರ ಎಂಬ ನಾಮಕರಣ ಮಾಡಿರುತ್ತಾನೆ. ಈ ಜಿನಾಲಯವನ್ನು ಅದರ ದತ್ತಿ ಭೂಮಿಗಳನ್ನು ದೇವರಾಜನು ತನ್ನ ಗುರುಗಳಾದ ಮುನಿಚಂದ್ರದೇವರಿಗೆ ಧಾರೆಎರೆದುಕೊಟ್ಟ ವಿಚಾರ ತಿಳಿದುಬರುತ್ತದೆ.[೧೮] ಈ ಶಾಸನದಲ್ಲಿ ಮೂಲ ಸಂಘ ದೇಶೀಯಗಣ ಪುಸ್ತಕಗಚ್ಚ ಕುಂದಾಕುಂದಾನ್ವಯದ ಸಮಂತಭದ್ರಾಚಾರ್ಯ, ಅಕಳಂಕ ದೇವರು, ಗುಧ್ರಪಿಂಚಾಚಾರ್ಯರು, ಸಾಗರನಂದಿ, ಸಿದ್ಧಾಂತದೇವ, ಅರ್ಹನಂದಿಮುನಿ, ನರೇಂದ್ರಕೀರ್ತಿ ತ್ರೈವಿದ್ಯದೇವ ಹಾಗೂ ಮುನಿಚಂದ್ರ ಭಟ್ಟಾರಕರ ಉಲ್ಲೇಖವಿದೆ. ಈ ಶಾಸನ ಕೌಶಿಕಗೋತ್ರದ ಮಹಾಪ್ರಧಾನ ತಂತ್ರವೆಗ್ಗಡ ದೇವರಾಜನನ್ನು ಪರಿಚಯಿಸುತ್ತದೆ. ದೇವರಾಜನ ಗುರುಪರಂಪರೆಯನ್ನು ಅನೇಕ ತಲೆಮಾರುಗಳ ತನಕ ಹೇಳುತ್ತಾ ಇದು ಶ್ರೀ ವರ್ಧಮಾನ ಸ್ವಾಮೀಗಳ ದಿವ್ಯ ತೀರ್ಥ ಎನ್ನುತ್ತದೆ. ಈ ವರ್ದಮಾನ ಸ್ವಾಮೀಯೇ ಈ ಗುರುಪರಂಪರೆಯ ಮೂಲಿಗಳು, ಅವರು ಈ ಸ್ಥಳದಲ್ಲಿ ಇದ್ದುದರಿಂದರಿಂದಲೇ ಈ ಕ್ಷೇತ್ರಕ್ಕೆ ವರ್ದಮಾನ ಸ್ವಾಮೀಗಳ ದಿವ್ಯತೀರ್ಥ ಎಂದು ಕರೆಯಲಾಗಿದೆ ಹಾಗೂ ಈ ಕ್ಷೇತ್ರದಲ್ಲಿ ಕೇವಲಿಗಳು, ಶೃತ ಕೇವಲಿಗಳು, ಆಗಿಹೋದರು ಎಂದು ತಿಳಿಯಲಾಗಿದೆ. ಈ ಪೈಕಿ ಆಚಾರ್ಯ ಸಂಮಂತ ಭದ್ರರು ಆಚಾರ್ಯ ಅಕಳಂಕ ದೇವರ ಹಾಗೂ ಆಚಾರ್ಯ ಗುದ್ರ ಪಿಂಚರು ಜೈನ ಧರ್ಮದ ಮಹಾಘನತೆವೆತ್ತ ಆಚಾರ್ಯರು. ಒಂದನೇ ನರಸಿಂಹನ ಕಾಲದ ಕ್ರಿ.ಶ. ೧೧೪೪ರ ನಾಗಮಂಗಲ ತಾಲ್ಲೂಕಿನ ಬೋಗಾದಿ ಗ್ರಾಮದಲ್ಲಿ ದೊರೆತಿರುವ ಶಾಸನವು ಶ್ರೀಕರಣದ ಹೆಗ್ಗಡೆ ಮಾದಿರಾಜನಿಗೆ ಆಳರಸ ಜಿನಾಲಯ ಕಟ್ಟಲು ಅವಕಾಶಕೊಟ್ಟಾಗ ಈ ಮಾದಿರಾಜ ಇಲ್ಲಿ ಒಂದು ಶ್ರೀಕರಣದ ಜಿನಾಲಯವನ್ನು ಕಟ್ಟಿಸಿ ಅದರ ಕೈಂಕರ್ಯಕ್ಕಾಗಿ ಜಮೀನನ್ನು ತನ್ನ ಗುರುಗಳಾದ ಅಜಿತಸೇನಾ ಭಟ್ಟಾರಕರಿಗೆ ದಾರೆ ಎರೆದುಕೊಟ್ಟ ವಿಚಾರವನ್ನು ಒಳಗೊಂಡಿದೆ.[೧೯] ಅದೇ ಗ್ರಾಮದ ಕ್ರಿ.ಶ. ೧೧೭೩ರ ಹೊಯ್ಸಳ ಅರಸ ವೀರಬಲ್ಲಾಳನ ಮಂತ್ರಿಯಾಗಿದ್ದ ಮಾಚಿರಾಜನ ಮಾವ ಸರ್ವಾಧಿಕಾರಿ ಹೆಗ್ಗಡೆ ಬಿಲ್ಲಯನು ಬೋಗವತಿಯ ಶ್ರೀಕರಣದ ಜಿನಾಲಯದ ಸೇವಾಕಾರ್ಯಗಳಿಗಾಗಿ ಬೋಗವತಿ ಮತ್ತು ಕಾಳಬೋವನಹಳ್ಳಿಯ ಸಮಸ್ತ ಸುಂಕಗಳನ್ನು ತನ್ನ ಗುರುವಾದ ಅಕಳಂಕ ಸ್ವಾಮೀಗಳ ಶಿಷ್ಯರಾದ ಪದ್ಮಪ್ರಭ ಸ್ವಾಮಿಗಳಿಗೆ ದಾನ ಕೊಟ್ಟುದ್ದನ್ನು ತಿಳಿಸುತ್ತದೆ.[೨೦]

ಹೊಯ್ಸಳ ದೊರೆ ಮೂರನೇ ನರಸಿಂಹನ ಕಾಲದ ಶಾಸನವು ಕಳೆಗೆರೆ ಗ್ರಾಮದಿಂದ ವರದಿಯಾಗಿದ್ದು, ಜೈನ ಆಚಾರ್ಯ ಮಾಘನಂದಿಸಿದ್ಧಾಂತರ ಗುರುಪರಂಪರೆಯನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಸುಮಾರು ೧೮ ಜನ ಗುರುಗಳ ಹೆಸರು ಉಲ್ಲೇಖವಾಗಿದೆ.[೨೧] ಇವರೆಲ್ಲರೂ ಮೂಲ ಸಂಘದ ಬಲತ್ಕಾರ ಗಣಕ್ಕೆ ಸೇರಿದರು. ಇಲ್ಲಿ ಉಕ್ತವಾಗಿರುವ ಆಚಾರ್ಯರೆಂದರೆ ವರ್ಧಮಾನಭಟ್ಟಾರರು, ಶ್ರೀಧರಾಚಾರ್ಯರು, ದೇವನಂದಿತ್ರೈವಿದ್ಯರು, ವಾಸೂಪೂಜ್ಯ ಸಿದ್ಧಾಂತದೇವರು, ಶುಭಚಂದ್ರ ಸಿದ್ಧಾಂತದೇವರು, ಅಷ್ಟೋಪವಾಸಿ ಕನಕಚಂದ್ರದೇವರು, ನಯಕೀರ್ತಿ ಸಿದ್ಧಾಂತಿಗಳು, ಮಾಸೋಪವಾಸಿ ರವಿಚಂದ್ರ ಕೀರ್ತಿಗಳು, ಹರಿಯನಂದಿ ಸಿದ್ಧಾಂತಿಗಳು, ಶೃತಕೀರ್ತಿತ್ರೈವಿಧ್ಯಾದರರು, ವೀರನಂದಿ ಸಿದ್ಧಾಂತಿಗಳು ಹಾಗೂ ಗಂಡವಿಮುಕ್ತ ನೇಮಿಚಂದ್ರ ಭಟ್ಟಾರಕರು.

ಕಸಲಗೆರೆಯ ಕ್ರಿ.ಶ. ೧೧೪೨ರ ಶಾಸನವು ಕುಲ್ಕಣಿನಾಡಿನ ಒಡೆಯನಾಗಿದ್ದ ಸಾಮಂತ ಸೋವೆಯ ನಾಯಕನು ಹೆಬ್ಬದಿರುವಾಡಿಯಲ್ಲಿ ಉತ್ತುಂಗ ಚೈತಾಲಯ ಕಟ್ಟಿಸಿ, ಶ್ರೀ ಪಾಶ್ವದೇವರ ಪ್ರತಿಷ್ಠೆಯನ್ನು ಮಾಡಿ ದೇವರ ಸೇವೆಗಾಗಿ, ಮುನಿಗಳ ಆಹಾರಕ್ಕಾಗಿ, ಬಸದಿಯ ಜೀರ್ಣೋದ್ದಾರಕ್ಕಾಗಿ ತನ್ನ ಗುರುಗಳಾದ ಸೂರಸ್ತಗಣದ ಬ್ರಹ್ಮದೇವರ ಕಾಲನ್ನು ಮುಟ್ಟಿ ಧಾರಾಪೂರ್ವಕವಾಗಿ ದತ್ತಿ ಕೊಟ್ಟ ವಿವರ ಹಾಗೂ ಅದರ ಸೀಮಾ ಉಲ್ಲೇಖವನ್ನು ಹೊಂದಿದೆ.[೨೨]

ಪಾಂಡವಪುರ ತಾಲ್ಲೂಕು, ಬಳೆಅತ್ತಿಗುಪ್ಪೆ ಗ್ರಾಮದ ೧೨ನೇ ಶತಮಾನದ ಶಾಸನದಲ್ಲಿ ಕುಂದಕುಂದಾನ್ವಯಒ ಸಿದ್ಧಾಂತ ಚಕ್ರವರ್ತಿಗಳೆಸಿದ ಶ್ರೀ ಮನ್ಮಯ ಕೀರ್ತಿದೇವರಿಗೆ ಒಬ್ಬ ಮಹಾದಾನಿ ಶ್ರಾವಕನು ಪೂಜಿಸಿ ದತ್ತಿಕೊಟ್ಟ ವಿಚಾರ ತಿಳಿದುಬರುತ್ತದೆ. ಇದೇ ತಾಲ್ಲೂಕಿನ ಹಿರೇಮರಳಿಯಲ್ಲಿ ಬುದ್ದಸೇನ ಕಂತಿ ಎಂಬ ಜೈನ ಸನ್ಯಾಸಿಯು ತಪಸ್ಸು ಮಾಡಿ ಸ್ವರ್ಗಸ್ಥಳಾದಳು ಎಂದು ತಿಳಿದುಬರುತ್ತದೆ.[೨೩] ಕುಂತಿಬೆಟ್ಟ ಹಾಗೂ ಹಿರೋಡೆಬೆಟ್ಟ ಪರಿಸರದಲ್ಲಿ ಮಣಲೂರು ಸಂಘದ ಒಬ್ಬ ಜೈನ ಆಚಾರ್ಯರು ಇದ್ದು, ಧರ್ಮಪ್ರಸಾರ ಮಾಡುತ್ತಿದ್ದರು ಎನ್ನುವ ಉಲ್ಲೇಖವಿದೆ.

ಶ್ರೀರಂಗಪಟ್ಟಣ ತಾಲ್ಲೂಕು, ಬಸ್ತಿಪುರ ಗ್ರಾಮದ ಕ್ರಿ.ಶ.೧೪೨೨ರ ಶಾಸನದಲ್ಲಿ ಮೂಲಸಂಘದ ವಾಸುಪೂಜ್ಯ ದೇವರ ಶಿಷ್ಯರಾದ ಸಕಲಚಂದ್ರದೇವರ ಫ್ರಭಾವದಿಂದ ಕೂರಗಹಳ್ಳಿಯ ಗೌಡ ಕುಲದ ಕೇತುಗೌಡ, ರಾಮಗೌಡ ಮುಂತಾದವರು ಬಸ್ತಿಯನ್ನು ಕಟ್ಟಿಸಿ ಪಾರ್ಶ್ವದೇವರ ಸೇವೆಗಾಗಿ ಗದ್ದೆಯನ್ನು ದತ್ತಿಯಾಗಿ ಬಿಟ್ಟಿದ್ದಾರೆ ಎಂದಿದೆ.[೨೪] ಬಸ್ತಿಪುರದ ಬೆಳಗೊಳ

ಗ್ರಾಮದಲ್ಲಿ ದೊರೆತಿರುವ ೧೨-೧೩ನೇ ಶತಮಾನಕ್ಕೆ ಸೇರಿದ ಶಾಸನದಲ್ಲಿ ಅರುಂಗಳಾನ್ವಯದ ದ್ರಮೀಳ ಸಂಘದ ನಂದೀಸಂಘದ ಉಲ್ಲೇಖವಿದೆ.[೨೫]

ಬೆಳ್ಳೂರಿನ ಶಾಸನವೊಂದರಲ್ಲಿ ಸಮಂತಭದ್ರರ ಶಿಷ್ಯರಾದ ವಾದೀಬ ವಾಗ್ಮೀ ಕವಿಯಾದ ಲಕ್ಷ್ಮೀಸೇನ ಭಟ್ಟಾರಕರ ಶಿಷ್ಯನಾದ ಹುಲಿಕಲ್ಲು ನಿವಾಸಿ ಪದ್ಮಕುಲ ವಣಿಕ ಶ್ರೇಷ್ಟ ಸರ್ಕರಶೆಟ್ಟಿ, ಎಂಬಾತನು ವಿಭಲನಾಥ ಬಸದಿಯನ್ನು ಕಟ್ಟಿಸಿದನು ಎಂದು ಉಲ್ಲೇಖಿತವಾಗಿದೆ.[೨೬] ಇದೇ ಬೆಳ್ಳೂರಿನ ಕ್ರಿ.ಶ. ೧೬೦೨ರ ಶಾಸನವು ಚಿತ್ರದುರ್ಗ ಜಿಲ್ಲೆಯ ಹರತಿಯ ಪಾಳೇಗಾರರು ತಮ್ಮ ಸೀಮೆಗೆ ಸೇರಿದ್ದ ರತ್ನಗಿರಿ ಬಸದಿಯ ಜೀರ್ಣೋದ್ದಾರ ಮತ್ತು ಪೂಜಾ ಕೈಕಂರ್ಯಗಳನ್ನು ತಮ್ಮ ಗುರುಗಳಾದ ಲಕ್ಷೀಸೇನ ಭಟ್ಟಾರಕರ ಇಷ್ಟಾನುಸಾರ ಕೈಗೊಂಡಿರುವ ವಿಚಾರವನ್ನು ದಾಖಲಿಸಿದೆ.[೨೭] ಬೆಳ್ಳೂರಿನಿಂದ ವರದಿಯಾಗಿರುವ ಎಲ್ಲಾ ಶಾಸನಗಳು ಲಕ್ಷ್ಮೀಸೇನಾಭಟ್ಟಾರಕರಿಗೆ ಸಂಬಂಧಿಸಿದ್ದು, ಇವೆಲ್ಲವೂ ವಿಮಲನಾಥ ತೀರ್ಥಂಕರರ ಬಸದಿಯಲ್ಲಿ ದೊರಕಿವೆ. ಇದರಿಂದ ಶ್ರೀ ಲಕ್ಷ್ಮೀಸೇನಾ ಭಟ್ಟಾರಕರು ದಕ್ಷಿಣ ಭಾರತದಲ್ಲಿ ದಿಗಂಬರ ಪಂಥದ ಪ್ರಮುಖ ಆಚಾರ್ಯರಾಗಿದ್ದು, ಅವರ ಕೇಂದ್ರ ಸ್ಥಳವು ಬೆಳ್ಳೂರಿನ ವಿಮಲನಾಥ ತೀರ್ಥಂಕರರ ಬಸದಿಯೇ ಇರಬೇಕು ಎನ್ನುವ ಅಂಶ ಗಮನಕ್ಕೆ ಬರುತ್ತದೆ.

ಬೆಳ್ಳೂರು ಬಳಿಯ ದಡಗ ಗ್ರಾಮದ ಶಾಸನವೊಂದರಲ್ಲಿ ಮೂಲಸಂಘದ ಕಾನೂರು ಗಣದ ತಿಂತ್ರಿಂಣಿಗಚ್ಛಕ್ಕೆ ಸೇರಿದ ಕೊಂಡಕುಂದಾನ್ವಯದ ಜವಳಿಗೆ ಮುನಿ ಭದ್ರಸಿದ್ದಾಂತ ದೇವರ ಹಾಗೂ ಮೇಘಚಂದ್ರ ಸಿದ್ದಾಂತ ದೇವರ ಉಲ್ಲೇಖವಿದೆ.

ಮಂಡ್ಯ ಜಿಲ್ಲೆಯ ಶಾಸನಗಳನ್ನು ಅವಲೋಕಿಸಿದಾಗ ಕ್ರಿ.ಶ. ೮ನೆಯ ಶತಮಾನದಿಂದ ೧೨ನೆಯ ಶತಮಾನದ ವರೆಗೆ ಜೈನ ಪರಂಪರೆಯು ಅತೀ ಉಚ್ಛ್ರಾಯದಲ್ಲಿದ್ದುದನ್ನು ಕಂಡುಕೊಳ್ಳಬಹುದಾಗಿದೆ. ಇದನ್ನು ಬೇರೆ ರೀತಿ ಭಾವಿಸುವುದಾದರೆ ಗಂಗರು ಮತ್ತು ಹೊಯ್ಸಳರ ಕಾಲಘಟ್ಟದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಜೈನ ಮತವು ಅಪಾರ ರಾಜ ಮನ್ನಣೆಯನ್ನು ಹೊಂದಿದ್ದಿತ್ತಲ್ಲದೆ ಕ್ರಮೇಣ ವಿಜಯನಗರ ಕಾಲದಲ್ಲಿ ಹಾಗೂ ವಿಜಯನಗರೋತ್ತರ ಕಾಲದಲ್ಲಿ ತನ್ನ ಪ್ರಖರತೆಯನ್ನು ಮಸುಕಾಗಿಸಿಕೊಂಡಿತೆಂದೆ ಹೇಳಬೇಕು. ಆದರೂ ಜೈನ ಧರ್ಮ ಜಿಲ್ಲೆಯಲ್ಲಿ ಉಳಿದುಕೊಂಡು ಬಂದಿರುವುದಕ್ಕೆ ಜಿಲ್ಲೆಯಲ್ಲಿರುವ ಅನೇಕ ಶಾಸನಗಳು ಜಿನಾಲಯಗಳು ಹಾಗೂ ಸ್ಮಾರಕಗಳು ಸಾಕ್ಷಿಯಾಗಿವೆ. ಅಲ್ಲದೆ ನೂರಾರು ಕುಟುಂಬಗಳು ಇಲ್ಲಿ ಇಂದಿಗೂ ಉಳಿದುಕೊಂಡು ಬಂದಿದ್ದು ಈ ಪರಂಪರೆಯ ಸಂರಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಉಕ್ತರಾಗಿರುವ ಆಚಾರ್ಯರು ಮತ್ತು ಅವರ ಗುರುಪರಂಪರೆ

ಕ್ರ.ಸಂ	ಆಚಾರ್ಯರು	ಸಂಘ	ಗಣ	ಗಚ್ಛ	ಅನ್ವಯ	ಗುರುಪರಂಪರೆ
೧	ದೇವರಹಳ್ಳಿ ಶಾಸನ ವಿಮಲಚಂದ್ರ	ನಂದಿ ಸಂಘ	ಎರೆಗಿತ್ತೂರುಗಣ	ಪುಲಿಕಲ್ ಗಚ್ಛ	–	ಚಂದ್ರ ನಂದಿ ದೇವರು, ಕುಮಾರ ನಂದಿ ದೇವರು, ಕೀರ್ತಿನಂದಿ ದೇವರು, ವಿಮಲಚಂದ್ರ,
೨	ಸುಕ್ಕುದರೆ ಶಾಸನ ಮಲ್ಲಿಷೇಣ ಮಲದಾರಿ ದೇವರು	ದ್ರವಿಳ ಸಂಘ	–	–	–	ಸಮಂತ ಭದ್ರರು, ಭಟ್ಟಾ ಕಳಂಕರು, ಹೇಮಸೇನರು, ವಾದಿರಾಜರು, ಅಜಿತಸೇನರು, ಮಲ್ಲಿಷೇಣಾ ಮಾಲಾದಾರಿ ದೇವರು
೩	ಕಂಬದಹಳ್ಳಿ ಶಾಸನ ಪ್ರಭಾಚಂದ್ರ ಸಿದ್ದಾಂತ ದೇವರು	ಮೂಲಸಂಘ	ದೇಶೀಯಗಣ	ಪುಸ್ತಕಗಚ್ಛ	ಕುಂದಕುಂದಾನ್ವಯ	ಮೇಘಚಂದ್ರ ತ್ರೈವಿದ್ಯಾ ದೇವರು, ಪ್ರಭಾಚಂದ್ರ ಸಿದ್ದಾಂತ ದೇವರು
೪	ಪಲ್ಲಕೀರ್ತಿ ಪಂಡಿತ	–	ಸೂರಸ್ತಗಣ	–	–	ಅನಂತ ವೀರ್ಯ, ಬಾಳಚಂದ್ರ ಪಂಡಿತ, ಪ್ರಭಾ ಚಂದ್ರ ಪಂಡಿತ, ಕಣ್ಣೆಲದೇವ, ಅಷ್ಟೋಪವಾಸಿ ಮುನಿ, ವಿನಯನಂದಿ ದೇವ, ಪಲ್ಲಕೀರ್ತಿ ದೇವ

೫	ಕಳಗೆರೆ ಶಾಸನ ಮಾಘನಂದಿ ಸಿದ್ಧಾಂತ ಚಕ್ರವರ್ತಿ	ಮೂಲಸಂಘ	ಬಲತ್ಕಾರಗಣ	–	–	ವರ್ದಮಾನ ಭಟಾರರು, ಶ್ರೀಧರಾ ಚಾರ್ಯರು, ದೇವನಂದಿ ತ್ರೈವಿದ್ಯರು, ವಾಸುಪೂಜ್ಯ ಸಿದ್ಧಾಂತ ದೇವರು, ಶುಭಚಂದ್ರ ಸಿದ್ಧಾಂತ ದೇವರು, ಅಭಯನಂದಿ ಭಟ್ಟಾರರು, ಅರ್ಹನಂದಿಭಟ್ಟಾರರು, ದೇವಚಂದ್ರ ಸಿದ್ಧಾಂತಿಗಳು, ಅಷ್ಟೋಪವಾಸಿ ಕನಕಚಂದ್ರ ದೇವರು, ನಯಕೀರ್ತಿ ಚಂದ್ರಾರ್ಯರು, ಮಾಸೋಪ ವಾಸಿ ರವಿಚಂದ್ರ ಕೀರ್ತಿಗಳು, ಹರಿಯನಂದಿ ಸಿದ್ಧಾಂತಿಗಳು, ಗಂಡ ವಿಮುಕ್ತ ನೇಮಿಚಂದ್ರ ಭಟಾರರು, ವರ್ಧಮಾನ ಮುನೀಂದ್ರರು, ಶ್ರೀಧರಾ ಚಾರ್ಯರರು, ಸುಪೂಜ್ಯ ತ್ರೈವಿದ್ಯರು, ಉದಯಚಂದ್ರ ಸಿದ್ಧಾಂತಿಗಳು, ಕುಮುದಚಂದ್ರ ಭಟಾರರು, ಮಾಘನಂದಿ ಸಿದ್ಧಾಂತ ಚಕ್ರವರ್ತಿ
೬	ಯಾಲದಹಳ್ಳಿ ಶಾಸನ ದೇವರಾಜ ಪಂಡಿತ	ಮೂಲಸಂಘ	ದೇಶೀಯಗಣ	ಪುಸ್ತಕಗಚ್ಛ	ಕುಂದಕುಂದಾ ನ್ವಯ	ಸಮಂತ ಭದ್ರಾಚಾರ್ಯ, ಅಕಳಂಕ ದೇವರು, ಗೃಧ್ರ ಪಿಂಚಾಚಾರ್ಯರು, ಸಾಗರನಂದಿ ಸಿದ್ಧಾಂತ ದೇವರು, ಅರ್ಹನಂದಿ ಮುನಿ, ನರೇಂದ್ರ ಕೀರ್ತಿ ತೈವಿದ್ಯಾದೇವರು, ಮುನಿಚಂದ್ರ ಭಟ್ಟಾರಕರು, ದೇವರಾಜ ಪಂಡಿತ
೭	ಅಳೀ ಸಂದ್ರ ಶಾಸನ ದೇವ ಚಂದ್ರ ಪಂಡಿತ	ಮೂಲಸಂಘ	ದೇಶೀಯಗಣ	ಪುಸ್ತಕಗಚ್ಛ	ಕುಂದಕುಂದಾ ನ್ವಯ	ಮಾಘನಂದಿ ಸಿದ್ಧಾಂತ ದೇವರು, ಗಂಧವಿಮುಕ್ತ ಸಿದ್ಧಾಂತ ದೇವ, ದೇವಕೀರ್ತಿ ಪಂಡಿತ ದೇವ, ದೇವರಾಜ ಪಂಡಿತ ದೇವ
೮	ಹಟ್ಟಣ ಶಾಸನ ಬಾಲಚಂದ್ರ ದೇವರು	ಮೂಲಸಂಘ	ದೇಶೀಯಗಣ	ಪುಸ್ತಕಗಚ್ಛ	ಕುಂದಕುಂದಾ ನ್ವಯ	ಗುಣಚಂದ್ರ ಸಿದ್ಧಾಂತ ದೇವ, ನಯಕೀರ್ತಿ ಸಿದ್ಧಾಂತ ದೇವ, ರಾಮನಂದಿ ತ್ರೈವಿದ್ಯಾ ದೇವ, ಬಾಲಚಂದ್ರ ದೇವರು
೯	ಎಲೆಕೊಪ್ಪ ಶಾಸನ ಏಲಾಚಾರ್ಯ	–	–	–	–	–
೧೦	ದಡಗ ಶಾಸನ ಮೇಘ ಚಂದ್ರ ಸಿದ್ಧಾಂತ ದೇವರು	ಮೂಲಸಂಘ	ಕಾನೂರುಗಣ	ತಿಂತ್ರಿಣಗಚ್ಛ	ಕುಂದಕುಂದಾ ನ್ವಯ	ಜವಳಿಗೆಮುನಿ ಭದ್ರಸಿದ್ಧಾಂತ ದೇವರು, ಮೇಘ ಚಂದ್ರ ಸಿದ್ಧಾಂತ ದೇವರು
೧೧	ಬೆಳ್ಳೂರು ಶಾಸನ ಲಕ್ಷ್ಮೀಸೇನ ಭಟ್ಟಾರ ಕರು	ಮೂಲಸಂಘ	ದೇಶೀಯಗಣ	ಪುಸ್ತಕಗಚ್ಛ	ಕುಂದಕುಂದಾ ನ್ವಯ	ಡಿಳ್ಳಿ, ಕೊಲ್ಲಾಪುರ, ಜಿನಕಂಚಿ, ಪೆನಗೊಂಡೆ, ನರಸಿಂಹರಾಜಪುರ ಸಿಂಹಾಸನಸ್ತರಾದ ಸಮಂತಭದ್ರ ಸ್ವಾಮಿ, ವೀರಸೇನಭಟ್ಟಾರಕ, ಲಕ್ಷ್ಮೀಸೇನಭಟ್ಟಾರಕರು

೧೨	ಕಸಲಗೆರೆ ಶಾಸನ ಬಾನುಕೀರ್ತಿಸಿದ್ಧಾಂತ ದೇವ	ಮೂಲಸಂಘ	ಸೂರಸ್ತಗಣ	–	–	–
೧೩	ಬೋಗಾದಿ ಶಾಸನ	ದ್ರವೀಳಸಂಘ	–	–	–	ಸಮಂತಭದ್ರ ಆಚರ್ಯ, ಅಕಳಂಕದೇವ, ವಕ್ರಗ್ರೀವಾ ಚಾರ್ಯ, ಕನಕಸೇನಾಚಾರ್ಯ, ವಾದಿರಾಜ, ವಿಜಯನಂದಿ ಆಚಾರ್ಯ, ಅಜಿತಪಾಲನಾಥ ದೇವ, ಅಜಿತಸೇನಾ ಆಚಾರ್ಯ, ದಿತೀಯ ಅಕಳಂದೇವ, ಕುಮಾರ ಸ್ವಾಮಿ, ಮಲ್ಲಿಸೇನಾ ಮಲಧಾರಿದೇವ
೧೪	ಅಬಲವಾಡಿ ಶಾಸನ ನಯಕೀರ್ತಿ, ಭಾನುಕೀರ್ತಿ ಮುನೀಂದ್ರರರು	ಮೂಲಸಂಘ	ದೇಶೀಯಗಣ	ಪುಸ್ತಕಗಚ್ಚ	ಕುಂದಕುಂದಾ ನ್ವಯ	ಸಿದ್ಧಾಂತದೇವ ಚಕ್ರವರ್ತಿ, ಗುಣಭದ್ರ ಸಿದ್ಧಾಂತ ದೇವರು, ನಯಕೀರ್ತಿ, ಭಾನುಕೀರ್ತಿ ಪಂಡಿತರು,
೧೫	ಹೊಸಹೊಳಲು ಶುಭಚಂದ್ರ ಸಿದ್ಧಾಂತ ದೇವ	ಮೂಲಸಂಘ	ದೇಶೀಯಗಣ	ಪುಸ್ತಕಗಚ್ಚ	ಕುಂದಕುಂದಾ ನ್ವಯ	ದಿವಾಕರ ನಂದಿ ಮುನಿ, ಕುಕ್ಕಟಾಸನ ಮಲದಾರಿ ದೇವ, ಶುಭಚಂದ್ರ ಸಿದ್ಧಾಂತ ದೇವ
೧೬	ಶ್ರವಣನ ಹಳ್ಳಿ ಶಾಸನ	ಮೂಲಸಂಘ	ದೇಶೀಯಗಣ	ಪುಸ್ತಕಗಚ್ಚ	ಕುಂದಕುಂದಾ ನ್ವಯ	ಮೇಘಚಂದ್ರ ತ್ರೈವಿದ್ಯಾದೇವ, ಪ್ರಭಾಚಂದ್ರ ಸಿದ್ಧಾಂತ ದೇವ
೧೭	ಬಸ್ತಿಪುರ ಶಾಸನ ಸಕಲ ಚಂದ್ರ ದೇವ	ಮೂಲಸಂಘ	ಕಾನೂರುಗಣ	ತಿಂತ್ರಿಣಿಗಚ್ಚ	ಕುಂದಕುಂದಾ ನ್ವಯ	ವಾಸುಪೂಜ್ಯದೇವರು, ಸಕಲ ಚಂದ್ರ ದೇವರು

ಆಧಾರಸೂಚಿ

೧. Epigraphia Carnatica., Vol, ನಾಮಂ. ೮೫.
೨. ಇ.ಅ., Vol. III, (೦) ಶ್ರೀಪ. ೧೪೭.
೩. ಇ.ಅ., Vol. III, (೦) ಶ್ರೀಪ. ೧೪೮.
೪. ಇ.ಅ., Vol. III, (೦) ಮವ. ೩೦.
೫. ಇ.ಅ., Vol. III, (೦) ಮವ. ೩೧.
೬ M.A.R., ೧೯೪೭–೫೬, (೦) Md. 21.
೭. ಇ.ಅ., Vol. IV, (೦) ನಾಮಂ. ೬೭.
೮. M.A.R., ೧೯೪೦, ನಾಮಂ ೩೫.
೯. ಇ.ಅ., Vol. IV , (೦) ನಾಮಂ. ೧೯.
೧೦. ಇ.ಅ., Vol. IV, (೦) ಕೃಪೆ. ೩.
೧೧. ೧೧. M.A.R., ೧೯೨೭, ಕೃಪೆ. ೧೧೫.
೧೨. ಇ.ಅ., Vol. IV, (೦) ನಾಮಂ. ೧೦೩.
೧೩. ಇ.ಅ., Vol. IV , (೦) ನಾಮಂ. ೨೦.
೧೪. ಇ.ಅ., Vol. IV , (೦) ನಾಮಂ. ೭೦.
೧೫. ಇ.ಅ .., Vol. IV , (೦) ನಾಮಂ. ೧೫೩೨.
೧೬. ಇ.ಅ., Vol. XIV, (೦) ೧೩೦.
೧೭. ಇ.ಅ., Vol. IV , (೦) ನಾಮಂ. ೧೯.
೧೮. ಇ.ಅ., Vol. IV , (೦) ನಾಮಂ. ೭೬.
೧೯. ಇ.ಅ., Vol. IV , (೦) ನಾಮಂ. ೧೦೦.
೨೦. M.A.R., ೧೯೪೦, (೦) ೨೯.
೨೧. M.A.R., ೧೯೪೦, (೦) ೩೭.
೨೨. ಇ.ಅ., Vol. IV, (೦) ನಾಮಂ. ೯೪.
೨೩. ಇ.ಅ., Vol. III, (೦) ಶ್ರೀಪ. ೩೬.
೨೪. ಇ.ಅ., (೦) ಶ್ರೀಪ. ೧೪೪.
೨೫. M.A.R., ೧೯೪೪, (೦) ೧೨.
೨೬. ಇ.ಅ., Vol. IV, (೦) ನಾಮಂ. ೪೩.
೨೭. ಇ.ಅ., Vol. XIV, (೦) ನಾಮಂ. ೧೪೨.

ಗ್ರಂಥ ಋಣ

೧. ಶುಭಚಂದ್ರ : ಜೈನ ಸಾಹಿತ್ಯ ಮತ್ತು ಸಂಸ್ಕೃತಿ–ಕೆಲವು ಅಧ್ಯಯನಗಳು, ಮೈಸೂರು, ೧೯೭೬.
೨. ಡಾ. ಆರ್. ರಂಗಸ್ವಾಮಿ : ಕೃಷ್ಣರಾಜಪೇಟೆ ತಾಲ್ಲೂಕಿನ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ, ಮೈಸೂರು, ೨೦೧೧.
೩. ಡಾ. ಎನ್. ಸರಸ್ವತಿ ಮತ್ತು ಡಾ. ಸಿ.ಎನ್. ಶಿಲ್ಪಶ್ರೀ : ಹೊಯ್ಸಳರ ಕಾಲದಲ್ಲಿ ದಾನಿಗಳ ಪಾತ್ರ ಮೈಸೂರು, ೨೦೧೧.

೫೧

ಹೂಲಿ ಶಾಸನಗಳಲ್ಲಿ ಸ್ಥಳೀಯ ಅಧಿಕಾರಿಗಳು

ಡಾ. ಕೆ.ಎಸ್. ಪಾಟೀಲ*

ಹೂಲಿ ಗ್ರಾಮವು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನಲ್ಲಿದ್ದು ಸವದತ್ತಿಯಿಂದ ೫ ಕಿ.ಮೀ. ಅಂತರದಲ್ಲಿದೆ. ಇದು ಪುರಾತನ ಐತಿಹಾಸಿಕ ಸ್ಥಳವಾಗಿದ್ದು, ಸ್ಥಳೀಯ ಶಿಲಾಶಾಸನಗಳಲ್ಲಿ ಇದನ್ನು 'ಪೂಲಿ', 'ಪೂವಲ್ಲಿ', 'ಪುಲಿಗ್ರಾಮ', 'ಪುಲಿಪುರ', ಹೂಲಿ ಎಂಬ ಹೆಸರುಗಳಿಂದ ಕರೆಯಲಾಗಿದೆ. ಅಲ್ಲದೆ ಬೆಳ್ವೊಲ ಪ್ರದೇಶದ ಸಾವಿರ ಮಹಾಜನರುಗಳಿಂದ ನಿರ್ವಹಿಸಲ್ಪಡುತ್ತಿದ್ದ ಹದಿನೆಂಟು ಅಗ್ರಹಾರಗಳ ಮುಕುಟದಂತಿದ್ದ ಇದನ್ನು ಶಾಸನಗಳಲ್ಲಿ "ಚಾಳುಕ್ಯ ಚಕ್ರವರ್ತಿ ಮಹಾಅಗ್ರಹಾರ" ಎಂದು ವರ್ಣಿತವಾಗಿದೆ.[೧] ಇದು ನೇರವಾಗಿ ರಾಜನ ಪ್ರೋತ್ಸಾಹದಲ್ಲಿತ್ತು. ಹೂಲಿಯ ಸ್ಥಳೀಯ ಮಹಾಜನರೇ ಊರೊಡೆಯರಾಗಿರುವುದರಿಂದ, ಸ್ಥಳೀಯ ಧಾರ್ಮಿಕ ಚಟುವಟಿಕೆಗಳಿಗೆ ಅವರ ಮನ್ನಣೆ ಮತ್ತು ಪರವಾನಿಗೆ ಅಗತ್ಯವಾಗಿತ್ತು. ಈ ಪರಿಸರದಲ್ಲಿ ಬಾದಾಮಿ ಚಲುಕ್ಯರು, ಸೇಂದ್ರಕರು, ರಾಷ್ಟ್ರಕೂಟರು, ಕಲ್ಯಾಣದಚಾಳುಕ್ಯರು, ಕಳಚೂರಿಗಳು, ವಿಜಯನಗರದ ಅರಸರು ಮತ್ತು ಶಿರಸಂಗಿ ದೇಸಾಯಿ ಮನೆತನಗಳು ಆಳ್ವಿಕೆ ಮಾಡಿದ ಬಗ್ಗೆ ಸ್ಥಳಿಯ ಶಾಸನಗಳಲ್ಲಿ ಪ್ರಸ್ತಾಪವಿದೆ. ಪರ್ಸಿಬ್ರೌನ್, ಹೆನ್ರಿಕಸಿನ್ಸ್, ಎಂ.ಎ. ಢಾಕಿ, ಆ್ಯಡಮ್ ಹಾರ್ಡಿ, ಗೆರಾರ್ಢ ಫೊಕೆಮಾ ಮುಂತಾದ ಇತಿಹಾಸ ವಿದ್ವಾಂಸರು ಹೂಲಿ ದೇವಾಲಯಗಳ ವಿವರ ಪೂರ್ಣ ಅಧ್ಯಯನ ನಡೆಸಿ ಅವುಗಳ ವಿಶಿಷ್ಟತೆಯನ್ನು ತೋರಿಸಲು ಶ್ರಮಿಸಿದ್ದಾರೆ. ಒಟ್ಟಾರೆಯಾಗಿ ಹೂಲಿಯು ಕಾಳಾಮುಖ ಶೈವಪಂಥದ ಆರಾಧನಾ ಚಟುವಟಿಕೆಯ ಕೇಂದ್ರವೂ ಮತ್ತು ಜೈನ ಕೇಂದ್ರವೂ ಆಗಿತ್ತೆಂಬುದು ಶಾಸನಗಳು ಪರಿಚಯಿಸುತ್ತವೆ.[೨]

ಹೂಲಿ ಗ್ರಾಮದಲ್ಲಿ ದೊರೆತ ಶಾಸನಗಳನ್ನು ಅಭ್ಯಸಿಸಿದಾಗ ರಾಜರುಗಳ ಅಧೀನದಲ್ಲಿ ದಂಡನಾಯಕರು, ಪೆರ್ಗ್ಗಡೆಗಳು, ಸಾಮಂತರು, ತಳಾರರು, ನಾಯಕರು, ಸೇನಬೋವರು, ಕುಳಕರಣಿಗಳು, ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಅಂತಹ ಸ್ಥಳೀಯ ಅಧಿಕಾರಿ ವರ್ಗದವರನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ದಂಡನಾಯಕರು

ದಂಡನಾಯಕರುಗಳು ಚಕ್ರವರ್ತಿ ಇಲ್ಲವೆ ಮಹಾ ಮಂಡಳೇಶ್ವರರಿಂದ ನೇಮಿಸಲ್ಪಟ್ಟಿದ್ದರು. "ಮಹಾ ಸಾಮಂತಾಧಿಪತಿ", ಮಹಾಪ್ರಚಂಡ ದಂಡನಾಯಕ, "ದಂಡನಾಯಕ" ಎಂಬುದು ಹುದ್ದೆಯ ಹೆಸರಾಗಿದೆ. ಇವರಲ್ಲಿ ಕೆಲವರು ಸುಂಕ, ಕೆಲವರು ಸೈನ್ಯ, ಕೆಲವರು ವಿದೇಶಾಂಗ ಇಲಾಖೆಗಳಿಗೆ ಸಂಬಂಧ ಪಟ್ಟವರಾಗಿದ್ದಾರೆ. ಈ ಶ್ರೇಣಿಯ ಅಧಿಕಾರಿಗಳಲ್ಲಿ ಪ್ರಾಂತೀಯ ದಂಡನಾಯಕರು ಪ್ರಭುಗಳಾದ ಮಹಾಮಂಡಳೇಶ್ವರರ ಕೆಳಗೆ ಅಧಿಕಾರಿಗಳಾಗಿದ್ದರೆ ಕೇಂದ್ರೀಯ ದಂಡನಾಯಕರು ಮಹಾಸಾಮಂತಾಧಿಪತಿ ಮಹಾಪ್ರಚಂಡನಾಯಕರ ಕೆಳಗೆ ಅಧಿಕಾರಿಗಳಾಗಿರುತ್ತಾರೆ.[೩] ಹೂಲಿ ಶಾಸನಗಳಲ್ಲಿ ದಂಡನಾಯಕರುಗಳ ಪ್ರಸ್ತಾಪವಿದೆ.

ದಂಡನಾಯಕ ಲಕ್ಕರಸ

ಹೂಲಿಯ ಕ್ರಿ.ಶ. ೧೧೧೦ರ ಶಾಸನದ ಉಲ್ಲಿಖಿತದಂತೆ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಮಹಾಪ್ರಧಾನ ಭಾಣಸುಪೆರ್ಗ್ಗಡೆ ಅನಂತಪಾಳನ ಅಳಿಯ ದಂಡನಾಯಕ ಲಕ್ಕರಸನು ಬೆಳ್ವೊಲ ಮೂನ್ನೂರನ್ನು ಆಳುತ್ತಿದ್ದನು.[೪] ಈತನು ಧರ್ಮಕಾರ್ಯದ ಉದ್ದೇಶದಿಂದ ತನ್ನ 'ಪಳಿಹಿತ' (ಪೆರ್ಗ್ಗಡೆ) ಸಿಂಗರಸನನ್ನು ಕರೆದು ಅಗ್ರಹಾರ ಪೂಲಿಯ ಶ್ರೀ ಶ್ರೀಮದ್ ಅಂಧಾಸುರ ದೇವರಿಗೆ ಭೂದಾನ ಮಾಡಿದ ಬಗ್ಗೆ ತಿಳಿಯುತ್ತದೆ.

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಂದಗೋಳ, ಧಾರವಾಡ ಜಿಲ್ಲೆ.

ಪೆರ್ಗ್ಗಡೆಗಳು

"ಪೆರ್ಗ್ಗಡೆ ಎಂಬುದು ಸಂಸ್ಕೃತದ "ಮಹತ್ತರ" ಎಂಬುದರ ಸಮಾನ ಪದ ಎಂದು ಚಿದಾನಂದ ಮೂರ್ತಿಯವರ ಅಭಿಪ್ರಾಯವಾಗಿದೆ.[೫] ಪೆರ್ಗ್ಗಡೆಗಳು ಒಂದಕ್ಕಿಂತ ಹೆಚ್ಚಿನ ಗ್ರಾಮಗಳ ಮೇಲೆ ಅಧಿಕಾರವನ್ನು ಹೊಂದಿದ್ದರು. ಅಂದರೆ ಗಾವುಂಡರಗಿಂತ ಮೇಲಿನ ಪದವಿ ಇವರದಾಗಿತ್ತು. ಪಿರಿಯ ಗಾವುಂಡ ಎಂಬ ಪದದಿಂದಲೇ ಹೆಗ್ಗಡೆ ಅಥವಾ ಪೆರ್ಗ್ಗಡೆ ನಿಷ್ಪತ್ತಿಯಾಗಿದೆ ಎಂದು ಜೆ.ಎಂ. ನಾಗಯ್ಯ ಅವರು ಅಭಿಪ್ರಾಯಪಟ್ಟಿದ್ದಾರೆ.[೬]

ದದ್ದಪ್ಪಯ್ಯ

ಅಂಧಕೇಶ್ವರ ಅಥವಾ ಭೀಮೇಶ್ವರ ದೇವಾಲಯದ ಉತ್ತರ ದಿಕ್ಕಿಗೆ ಇರುವ ಅಕ್ಕ ತಂಗೇರ ಭಾವಿಯ ಹತ್ತಿರ ದೊರೆತ ಕ್ರಿ.ಶ. ೯೮೫ರ ವೀರಗಲ್ಲು ಶಾಸನದ ಪ್ರಕಾರ ಕಲ್ಯಾಣದ ಚಾಳುಕ್ಯ ಅರಸನಾದ ಇಮ್ಮಡಿ ತೈಲಪನು ರಾಜ್ಯವಾಳುತ್ತಿರುವಾಗ ಸೋಬನಯ್ಯನ ಮಗ ಪೆರ್ಗ್ಗಡೆ ದದ್ದಪ್ಪಯ್ಯನು ಹೂಲಿ ಗ್ರಾಮಾಧಿಕಾರಿಯಾಗಿದ್ದನು.[೭]

ಸಾಮನ್ತ/ಪೆರ್ಗ್ಗಡೆ "ಕಾಲಡಿಯಬೋಳಗಡಿ"

ವೀರಭದ್ರ ದೇವಾಲಯದಲ್ಲಿರುವ ಕ್ರಿ.ಶ. ೧೦೪೪ರ ಶಾಸನದ ಪ್ರಕಾರ ಕಲ್ಯಾಣದ ಚಾಳುಕ್ಯ ಅರಸನಾದ ಮೊದಲನೆಯ ಸೋಮೇಶ್ವರನು ರಾಜ್ಯವಾಳುತ್ತಿರುವಾಗ, ಕಾಲಡಿಯ ಬೋಳಗಡಿಯು ತೊಂಭತ್ತಾರು ಹಳ್ಳಿಗಳನ್ನೊಳಗೊಂಡ ಪ್ರದೇಶವನ್ನು ಆಳುತ್ತಿದ್ದನು. ಹಾಗೂ ಈತನು ಹೂಲಿ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಸಾಮಾನ್ತ/ಪೆರ್ಗ್ಗಡೆಯಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಈತನ ಮಗ ಪಾಯಿಮ.[೮]

ಸಿಂಗರಸ

ಕ್ರಿ.ಶ. ೧೧೦೪ರ ಅಂಧಕಾಸುರ ದೇವಾಲಯದಲ್ಲಿರುವ ಶಾಸನದ ಉಲ್ಲಿಖಿತದಂತೆ ದಂಡನಾಯಕ ಲಕ್ಕರಸನ ಅಧೀನದಲ್ಲಿ ಸಿಂಗರಸನು ಪೆರ್ಗ್ಗಡೆಯಾಗಿ ಹೂಲಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದನು. ಈತನು ಅಂಧಕಾಸುರ ದೇವರ ಅಂಗಭೋಗಕ್ಕೆ ಮತ್ತು ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಅಲ್ಲಿಯ ಸ್ಥಾನಾಚಾರ್ಯರಾದ ತತ್ಪುರುಷ ಪಂಡಿತರ ಸಮಕ್ಷಮದೊಳಗೆ ಮತ್ತು ಊರೊಡೆಯ ಪ್ರಮುಖ ಸಾಸಿರ್ವ್ವ ಮಹಾಜನಂಗಳ ಸನ್ನಧಾನದಲ್ಲಿ ಭೂದಾನ ಮಾಡಿದನು.[೯]

ನೇಮಣ್ಣ

ವೀರಭದ್ರ ದೇವಾಲಯದಲ್ಲಿರುವ ಕ್ರಿ.ಶ. ೧೧೪೫ರ ಶಾಸನದ ಪ್ರಕಾರ ಕಲ್ಯಾಣದ ಚಾಳುಕ್ಯ ಅರಸನಾದ ಎರಡನೆಯ ಜಗದೇಕಮಲ್ಲನು ರಾಜ್ಯವಾಳುತ್ತಿರುವಾಗ ನೇಮಣ್ಣನು ಹೂಲಿಯ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಪೆರ್ಗ್ಗಡೆಯಾಗಿ ಕಾರ್ಯನಿರ್ವಹಿಸುತ್ತಿದ್ದನು. ಈತನು ಲಚ್ಚಿಯಬ್ಬರಸಿಯ ಮೊಮ್ಮಗನಾಗಿದ್ದು, ಲಚ್ಚಿಯಬ್ಬರಸಿಯು ಮಾಡಿಸಿದ ಬಸದಿಗೆ ಮತ್ತು ಬಸದಿಯಲ್ಲಿರುವ ಋಷಿಯರ ಆಹಾರ ದಾನಕ್ಕೆ ಅಲ್ಲಿಯ ಆಚಾರ್ಯರಾದ ರಾಮಚಂದ್ರದೇವರ ಪಾದವನ್ನು ತೊಳೆದು ಶಿವಯಗೇರಿಯಲ್ಲಿ ಆರು ಮತ್ತರು ಭೂಮಿ, ಕಳಶವಳ್ಳಿಗೇರಿಯಲ್ಲಿ ಆರು ಮತ್ತರು ಕೇಯ್ಯ, ಚಿನ್ನ ಮತ್ತು ಮೂರು ಪಣವನ್ನು ದಾನ ಮಾಡಿದನು.[೧೦] ಅಲ್ಲದೇ ಶಾಸನದಲ್ಲಿ ಈತನ ವಂಶಾವಳಿಯನ್ನು ಹೇಳಲಾಗಿದ್ದು, ಅದು ಈ ಕೆಳಗಿನಂತಿದೆ.

ಲಚ್ಚಿಯಬ್ಬೆ

ದೇಮಣ+ಭಾಗಿಯಬ್ಬೆ   ಪಾಯಿಮ

ಕಲಿದೇವ   ನೇಮಣ್ಣ

ದಾಸಿರಾಜ

ಕ್ರಿ.ಶ. ೧೧೬೨ರ ಪಂಚಲಿಂಗೇಶ್ವರ ದೇವಾಲಯದ ಅಗ್ರಮಂಟಪದಲ್ಲಿರುವ ಶಾಸನವೊಂದರ ಉಲ್ಲಿಖಿತದಂತೆ ಕಳಚೂರ್ಯ ಬಿಜ್ಜಳನು ರಾಜ್ಯವಾಳುತ್ತಿರುವಾಗ ದಾಸಿರಾಜನು ಹೂಲಿಯ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಪೆರ್ಗ್ಗಡೆಯಾಗಿ ಕಾರ್ಯ ನಿರ್ವಹಿಸುತ್ತಿದ್ದನು. ನಾಗರಖಂಡಿಯ ಕೇಶವ ದೇವಾಲಯದ ಖಂಡಸ್ಫುಟಿತ ಜೀರ್ಣೋದ್ಧಾರ, ನಿತ್ಯ ನೈವೇದ್ಯ,

ಚೈತ್ರ, ಪವಿತ್ರ, ನಂದಾದೀವಿಗೆಗೆ ಮತ್ತು ಪೂಜಾರಿಯ ಜೀವಿತಕ್ಕೆ ಕೊಕ್ಕುಳಗೇರಿಯ ಮತ್ತು ಕತ್ತಿಯಗೇರಿಯಲ್ಲಿ ೬ ಮತ್ತರು ಭೂಮಿ ದಾನ ಮಾಡಿದನು.[೧೧] ಅಲ್ಲದೆ ಶಾಸನವು ಪೆರ್ಗ್ಗಡೆ ದಾಸಿರಾಜನ ವಂಶಾವಳಿಯನ್ನು ಹೇಳುತ್ತದೆ.

ಮಾಳಪಯ್ಯ (ಭಾರದ್ವಾಜ ಗೋತ್ರ)
|
ಕಾಳಿಮಯ್ಯ + ರೇವಿಯಕ್ಕ
|
ದಾಸಿರಾಜ + ಓಳಜಲೆ ಮತ್ತು ಭಾಗಲೆ
|
ಮಹಾದೇವ — ಮಾಳಯ್ಯ

ಶಂಕರಯ್ಯ ನಾಯಕ

ಅಗಸ್ತೇಶ್ವರ ದೇವಾಲಯದಲ್ಲಿರುವ ಕ್ರಿ.ಶ. ೧೧೬೨ರ ಶಾಸನದ ಪ್ರಕಾರ ಕಳಚೂರಿ ಬಿಜ್ಜಳನು ರಾಜ್ಯವಾಳುತ್ತಿರುವಾಗ, ಪೆರ್ಗ್ಗಡೆ ಶಂಕರಯ್ಯ ನಾಯಕನು ಹೂಲಿಯ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಪೆರ್ಗ್ಗಡೆಯಾಗಿ ಕಾರ್ಯ ನಿರ್ವಹಿಸುತ್ತಿದ್ದನು.[೧೨] ಅಲ್ಲದೇ ಇದೇ ಶಾಸನದಲ್ಲಿ ಪ್ರಸ್ತಾಪವಾಗಿರುವ ಒಂದೇ ಮನೆತನಕ್ಕೆ ಮತ್ತು ಭಾರದ್ವಾಜ ಗೋತ್ರಕ್ಕೆ ಸಂಬಂಧಿಸಿದ ಶಿವಯಗೇರಿಯ ಅಧಿಕಾರಿಗಳ ವಂಶಾವಳಿಯು ಈ ಕೆಳಗಿನಂತಿದೆ.

ಆದಿತ್ಯ
|
ದೇವಪಯ್ಯ
|
ಪೆರ್ಗ್ಗಡೆ ಸೋಮ
|
ಮೈಳಪಯ್ಯ
|
ಕಾಳಿದಾಸ–I — (ಕಾಳಿಮಯ್ಯ) + ರೇವಿಯಕ್ಕ
|
ದಾಸಿರಾಜ
|
ಮಹಾದೇವ — ಮಾಳಪಯ್ಯ (ಮಾಳಯ್ಯ) — ಕಾಳಿದಾಸ–II

ಇವರೆಲ್ಲರೂ ಸಹ ಹೂಲಿ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಭಾಗಿಯಾಗಿದ್ದರೆಂದು ಈ ಮೇಲಿನ ಶಾಸನದಿಂದ ತಿಳಿಯುತ್ತದೆ.

ಪ್ರಭು ಮಾಳಪಯ್ಯ

ಪಂಚಲಿಂಗೇಶ್ವರ ದೇವಾಲಯದ ಅಗ್ರಮಂಟಪದಲ್ಲಿರುವ ಕ್ರಿ.ಶ. ೧೧೬೨ರ ಶಾಸನದಲ್ಲಿ ಉಲ್ಲಿಖಿತವಾಗಿರುವ ಪ್ರಭು ಮಾಳಪಯ್ಯನು ಕಳಚೂರಿ ಬಿಜ್ಜಳನು ರಾಜ್ಯವಾಳುತ್ತಿರುವಾಗ ಹೂಲಿ ಆಡಳಿತ ವ್ಯವಸ್ಥೆಯಲ್ಲಿ ಸ್ಥಳೀಯ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದನು.[೧೩] ಈತನ ಮಗ ಕಾಳಿಮಯ್ಯ.

ತಳಾರನಾಯಕ ಗಂಗರ ಬೋಸಿ

"ತಳಾರರು' ಎಂಬ ಚಿಕ್ಕ ಹುದ್ದೆಯ ಅಧಿಕಾರಿಗಳು ಪ್ರಾಚೀನ ಕರ್ನಾಟಕದ ಇತಿಹಾಸದಲ್ಲಿ ಮಹತ್ವದ ಪಾತ್ರ ವಹಿಸಿದುದು ಶಾಸನಗಳಿಂದ ತಿಳಿಯುತ್ತದೆ. ಇವರು ಗ್ರಾಮಗಳಲ್ಲಿ ಇಂದಿನ 'ತಳವಾರ'ರಾಗಿದ್ದಾರೆ. ಈ ಶಬ್ದ 'ಸ್ಥಳ' ಇಲ್ಲವೆ 'ತಲ್ವಾರ್' (ಖಡ್ಗ) ಮೂಲದಿಂದ ಬಂದಿರಬಹುದು ಎಂದು ಜೆ.ಎಂ. ನಾಗಯ್ಯ ಅವರು ಅಭಿಪ್ರಾಯಪಡುತ್ತಾರೆ.[೧೪]

ಪ್ರಮುಖವಾಗಿ ಈತನ ಕೆಲಸ ಗ್ರಾಮದ ರಕ್ಷಣೆ. ಅಂದರೆ ಕಳ್ಳರಿಂದ ಸಮಾಜ ದ್ರೋಹಿಗಳಿಂದ ಗ್ರಾಮವನ್ನು ರಕ್ಷಣೆ ಮಾಡುವುದು. ತಳಾರರು ಕೇವಲ ತನ್ನ ಗ್ರಾಮ ರಕ್ಷಣೆಗೆ ಮಾತ್ರ ಮೀಸಲಾಗಿದ್ದಿಲ್ಲ. ಕೆಲವೊಮ್ಮೆ ಬೇರೆ ಬೇರೆ ಸ್ಥಳಗಳ ರಕ್ಷಣಾ ಕಾರ್ಯವನ್ನು ಮಾಡುತ್ತಿದ್ದರು. ವೀರರಾದ ಇವರು ಗ್ರಾಮದ ರಕ್ಷಣೆಗಾಗಿ, ತನ್ನ ಒಡೆಯನಿಗಾಗಿ, ಮಿತ್ರನಿಗಾಗಿ ತನ್ನ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿ ಮಡಿದ ಉಲ್ಲೇಖವಿದೆ.

ಭೀಮೇಶ್ವರ ದೇವಾಲಯದ ಉತ್ತರ ದಿಕ್ಕಿಗೆ ಇರುವ ಕ್ರಿ.ಶ. ೧೧೦೭ರ ವೀರಗಲ್ಲು ಶಾಸನದಲ್ಲಿ ತೊರಪರ ಬೂತಯ್ಯನೆಂಬುವನು ಹೂಲಿಯ ತುರು (ಆಕಳು)ಗಳನ್ನು ಕದ್ದುಕೊಂಡು ಹೋಗುವಾಗ ಪೆರುವ ಮಲ್ಲಿಯು ತುರುಗಳಿಗೆ ಅಡ್ಡ ಬಂದು ಮೇಲಾಳನ್ನು, ಕುದುರೆಯನ್ನು ಇರಿದು ಮಡಿಯುತ್ತಾನೆ. ತನ್ನ ಜೊತೆಗೆ ಉಂಡಗಳೆಯ ಮಲ್ಲಿಯು ಸತ್ತುದನ್ನು ಕೇಳಿ ತಳಾರನಾಯಕ ಗಂಗರಬೋಸಿ ಶತ್ರುಗಳನ್ನು ಎದುರಿಸಿ ತಾನೂ ಸಾವನ್ನಪ್ಪುತ್ತಾನೆ.[೧೫]

ಕಿಸುವಾರ್ಯರವಿಕಿಮಯ್ಯ ನಾಯಕ

ವೀರಭದ್ರ ದೇವಾಲಯದಲ್ಲಿರುವ ಕ್ರಿ.ಶ. ೧೦೮೨ರ ಶಾಸನದ ಉಲ್ಲಿಖಿತದಂತೆ ಆರನೆಯ ವಿಕ್ರಮಾದಿತ್ಯನು ರಾಜ್ಯವಾಳುತ್ತಿರುವಾಗ ಕಿಸುವಾರ್ಯರವಿಕಿಮಯ್ಯನಾಯಕನು ಹೂಲಿ ರವಿಯಣಗೇರಿಯ ಆಡಳಿತ ವ್ಯವಸ್ಥೆಯಲ್ಲಿ ಭಾಗಿಯಾಗಿದ್ದನು. ಈತನು ರವಿಯಣಗೇರಿಯ ಒಂದು ನೂರು ಬ್ರಾಹ್ಮಣರಲ್ಲಿ ಪ್ರಮುಖ ಅಧಿಕಾರಿಯಾಗಿದ್ದು, ನಾರಾಯಣದೇವರ ಖಂಡಸ್ಫುಟಿತ ಜೀರ್ಣೋದ್ಧಾರ, ಸ್ನಾನ, ಗಂಧ, ಧೂಪ, ನೈವೇದ್ಯ ಮತ್ತು ಅಂಗಭೋಗಕ್ಕೆ ಭಟ್ಟರಕೊಳದಲ್ಲಿ ಆರುಮತ್ತರು ಭೂಮಿ ಮತ್ತು ಕಲ್ಕುಟಿಗರ ಓಣಿಯಲ್ಲಿ ಒಂದು ಮತ್ತರು ಭೂಮಿದಾನ ಮಾಡಿದನು.[೧೬] ಈತನ ವಂಶಾವಳಿ ಈ ಕೆಳಗಿನಂತಿದೆ.

ದೇಮಯ (ಶಾಂಡಿಲ್ಯ ಗೋತ್ರ)

ಗೊಮ್ಮಿಮಯ್ಯ

ರವಿಕಮಯ್ಯ   ಟಿಕಣಾರ್ಯ   ಕೇಶವ

ನಾಕಿಮಯ್ಯ ನಾಯಕ (ನಾಕರಸ)

ವೀರಭದ್ರ ದೇವಾಲಯದಲ್ಲಿರುವ ಕ್ರಿ.ಶ. ೧೯೭ರ ಶಾಸನದ ಪ್ರಕಾರ ಆರನೆಯ ವಿಕ್ರಮಾದಿತ್ಯನು ರಾಜ್ಯವಾಳುತ್ತಿರುವಾಗ ನಾಕಿಮಯ್ಯನು ಹೂಲಿ ಕಳಶವಳ್ಳಿಗೇರಿಯ ಆಡಳಿತ ವ್ಯವಸ್ಥೆಯಲ್ಲಿ ಸ್ಥಳೀಯ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದನು. ಈತನು ಶ್ರೀಮನ್ಮಹಾಗ್ರಹಾರ ಪೂಲಿಯೂರೊಡೆಯ ಪ್ರಮುಖ ಸಾಸಿರ್ವ್ವ ಮಹಾಜನಗಳ ಸನ್ನಿಧಿಯಲ್ಲಿ ತಾನು ಮಾಡಿಸಿದ ಹರಿಹರ ದೇವರ ನೈವೇದ್ಯ, ಚೈತ್ರ ಪವಿತ್ರ, ಖಂಡಸ್ಫುಟಿತ ಜೀರ್ಣೋದ್ಧಾರ ಮತ್ತು ಪೂಜಾರಿಯ ಜೀವಿತಕ್ಕೆ ಭೂದಾನ ಮಾಡಿದನು.[೧೭] ಈತನ ವಂಶಾವಳಿ ಈ ಕೆಳಗಿನಂತಿದೆ.

ಪ್ರಭುಶೋಭನ ನಾಯಕ (ಆತ್ರೆಯ ಗೋತ್ರ) + ಮುದ್ದಿಕಟ್ಟೆ

ನಾಕಿಮಯ್ಯ (ನಾಕರಸ) + ನಾಗಿಕವ್ವೆ

ನಾಣಿಮಯ್ಯ   ರಾಮದೇವ   ಮಹಾದೇವ

ಹೀಗೆ ಹೂಲಿ ಆಡಳಿತ ವ್ಯವಸ್ಥೆಯಲ್ಲಿ ಈ ಮೇಲಿನ ಎಲ್ಲ ಸ್ಥಳೀಯ ಅಧಿಕಾರಿಗಳು ಆಡಳಿತ ವ್ಯವಸ್ಥೆಯಲ್ಲಿ ಭಾಗಿಯಾಗಿದ್ದರೆಂಬುದು ಅಲ್ಲಿನ ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಅಡಿ ಟಿಪ್ಪಣಿಗಳು

೧. ರಿತ್ತಿ ಶ್ರೀನಿವಾಸ "ಬೆಳ್ವೊಲ ಮುನ್ನೂರು" (೧೯೬೯) **ಕರ್ನಾಟಕ ಭಾರತಿ,** ಸಂಪುಟ ೬, ಸಂಚಿಕೆ ೧, ಪು. ೮೦.

೨. ಪಾಡಿಗಾರ ಶ್ರೀನವಾಸ, ವಿ., "ಬೆಳಗಾವಿ ಜಿಲ್ಲಾ ಪ್ರದೇಶದ ದೇವಾಲಯ ವಾಸ್ತು", **ಬೆಳಗಾವಿ ಜಿಲ್ಲಾ ಭವ್ಯ ಪರಂಪರೆ,** ಪು. ೧೧೧-೧೧೨.

೩. ನಾಗಯ್ಯ, ಜೆ.ಎಂ. ೬ನೇ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ಪು. ೩೨೦.

೪. E.I. ಸಂ XVIII, ಶಾ.ಸಂ. ೨೨/ E, ಪು. ೧೯೦-೧೯೩.

೫. ಚಿದಾನಂದಮೂರ್ತಿ, ಎಂ. "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ", ಪು. ೩೩೦-೩೩೧.

೬. ಪೂರ್ವೋಕ್ತ, ಪು. ೩೫೦.

೭. E.I. ಸಂ XVIII, ಶಾ.ಸಂ. ೨೨/ A, ಪು. ೧೭೧-೧೭೨.

೮. ಅದೇ, ಶಾ.ಸಂ. ೨೨/ B, ಪು. ೧೭೨-೧೭೮.

೯. ಅದೇ, ಶಾ.ಸಂ. ೨೨/ E, ಪು. ೧೯೦-೧೯೩.

೧೦. ಅದೇ, ಶಾ.ಸಂ. ೨೨/ B, ಪು. ೧೭೨-೧೭೮.

೧೧. ಅದೇ, ಶಾ.ಸಂ. ೨೨/ L, ಪು. ೨೧೨ ಮತ್ತು S.I.I. V ಶಾ.ಸಂ. ೮೫೧, ಪು. ೩೪೭-೩೪೯.

೧೨. ಅದೇ, ಶಾ.ಸಂ. ೨೨/ M, ಪು. ೨೧೩-೨೧೬ ಮತ್ತು S.I.I. V, ಶಾ.ಸಂ. ೨೭, ಪು. ೫೩-೫೭.

೧೩. ಅದೇ, ಶಾ.ಸಂ.-೨೨/ L, ಪು. ೩೦೮-೩೧೩.

೧೪. ಪೂರ್ವೋಕ್ತ, ಪು. ೩೬೧.

೧೫. ಅದೇ, ಶಾ.ಸಂ. ೨೨/ G ಪು. ೩೦೦.

೧೬. ಅದೇ, ಶಾ.ಸಂ. ೨೨/ C, ಪು. ೧೭೮-೧೮೨.

೧೭. ಅದೇ, ಶಾ.ಸಂ. ೨೨/ D ಪು. ೧೮೩-೧೮೬.

೩೭

ಪ್ರಾಚೀನ ಕರ್ನಾಟಕದ ಕನ್ನಡ ಶಾಸನಗಳಲ್ಲಿ ಕೃಷಿ ತೆರಿಗೆ

ರಂಜಿತಾ ಆರ್.*

ಮಾನವರ ಜೀವನ ನಿರ್ವಹಣೆಯಲ್ಲಿ ಕೃಷಿಯು ಒಂದು ಮುಖ್ಯ ಭಾಗವಾಗಿದೆ. ಇದು ಬೇಟೆ ಸಂಸ್ಕೃತಿ, ಪಶುಪಾಲನೆಯ ನಂತರ ಅಥವಾ ಅದರೊಂದಿಗೆ ಕಂಡುಕೊಂಡು ರೂಢಿಸಿಕೊಂಡ ಪ್ರಮುಖ ಚಟುವಟಿಕೆಗಳಲ್ಲೊಂದಾಗಿದೆ. ಕೃಷಿಯು ಸು. ೧೦೦೦೦ ವರ್ಷಗಳಿಗೂ ಹೆಚ್ಚು ಹಿಂದಿನ ಚರಿತ್ರೆಯನ್ನೊಳಗೊಂಡಿದೆ. ಇದಕ್ಕೆ ಸಂಬಂಧಿಸಿದಂತೆ ಪ್ರಾಚೀನ ಕಾಲದಿಂದಲೇ ಇದೊಂದು ಪ್ರಾಥಮಿಕ ಚಟುವಟಿಕೆಯಾಗಿತ್ತೆಂದು ವೇದಗಳಲ್ಲಿ ಉಲ್ಲೇಖಿತವಾಗಿದೆ. ಜೊತೆಗೆ ಜಾನುವಾರು ಶಕ್ತಿ ಬಳಸಿ ನೇಗಿಲಿನಿಂದ ಉಳುಮೆ ಮಾಡಲಾಗುತ್ತಿತ್ತೆಂದು ಮಹಾಭಾರತವು ತಿಳಿಸುತ್ತದೆ[೧]. ಕೃಷಿಯು ಒಂದು ಸಂಕೀರ್ಣ ಕ್ರಿಯೆಯಾಗಿದ್ದು, ಕಮ್ಮಾರಿಕೆ, ಬಡಗಿ, ಮೊದಲಾದ ವೃತ್ತಿಗಳನ್ನು ಆಧರಿಸಿ ಬೆಳೆದು ಬಂದಿದೆ. ಕೃಷಿ ವ್ಯವಸ್ಥೆಯಲ್ಲಿ ಕೃಷಿಕರು ಹಾಗೂ ಅವರ ಪಾತ್ರ ನಿರ್ವಹಣೆ, ಸಮಾಜದಲ್ಲಿ ಅವರು ಹೊಂದಿದ್ದ ಸ್ಥಾನಮಾನಗಳು, ಚರಿತ್ರೆಯಲ್ಲಿ ಬಿಂಬಿತವಾದ ಬಗೆ, ಶ್ರಮದ ನಿರ್ಲಕ್ಷ್ಯ, ಜೀವನಕ್ರಮ, ಅಂದಿನ ಅವರ ಸ್ಥಿತಿಗತಿಗಳು, ಸಮಸ್ಯೆ, ಸವಾಲುಗಳು ಹಾಗೂ ಮತ್ತಿತರ ಅಂಶಗಳನ್ನು ಕುರಿತು ಶಾಸನಗಳ ಹಿನ್ನೆಲೆಯಲ್ಲಿ ಅಧ್ಯಯನಕ್ಕೊಳಪಡಿಸುವುದು ಪ್ರಸ್ತುತ ಲೇಖನದ ಉದ್ದೇಶವಾಗಿದೆ.

ಮುಖ್ಯವಾಗಿ ಭೂಮಿಯನ್ನು ಹಸನುಗೊಳಿಸಿ ಉತ್ತಿ–ಬಿತ್ತಿ ಬೆಳೆ ತೆಗೆಯುವ ಕಾರ್ಯ ನಿರ್ವಾಹಕ ಸಮೂಹವನ್ನು ಕೃಷಿಕರೆನ್ನಲಾಗುತ್ತದೆ. ಕ್ರಿ.ಶ. ೧೧೫೩ರ ಶಾಸನವು ಬೆಳೆ ಬೆಳೆಯುವ ರೈತನನ್ನು 'ಭೂದೇವಿಯ ಮಕ್ಕಳೆಂದು' ಕರೆದಿದೆ. ಅಲ್ಲದೆ ಅನ್ನದಾನ ಸಂಪೂರ್ಣರುಂ ಭೂಮಿ ಪುತ್ರಕರುಮಪ್ಪ ಚಂದಗೌಡ ಎಂದಿದೆ.[೨] ಕ್ರಿ.ಶ. ೧೦೯೩ ಮತ್ತು ಕ್ರಿ.ಶ. ೧೧೦೫ರ ಶಾಸನಗಳು ರೈತರನ್ನು 'ಒಕ್ಕಲು ಮಕ್ಕಳೆಂದು ಕರೆದಿವೆ'[೩] ಹಾಗೆಯೇ ಕ್ರಿ.ಶ. ೧೨೮೫ರ ಜಮಖಂಡಿ ತಾಲೂಕು ಆಲ್ಗೂರು ಶಾಸನವು 'ವಕಲು' ಪದವನ್ನು ಉಲ್ಲೇಖಿಸುತ್ತದೆ.[೪] ಕ್ರಿ.ಶ. ೭–೮ನೆಯ ಶತಮಾನದ ಶಾಸನಗಳು ಒಕ್ಕಲುತನ ಮಾಡುವ ಒಕ್ಕಲಿಗರನ್ನು ಶಾಪಾಶಯಗಳಲ್ಲಿ ಉಲ್ಲೇಖಿಸುತ್ತವೆ. ಕ್ರಿ.ಶ. ೮ನೆಯ ಶತಮಾನದ ಶಾಸನಗಳಲ್ಲಿ ಒಕ್ಕಲುಳ್ಪೊತ್ತಿ ಮಕ್ಕಳ್ಪುಟ್ಟದೆ ಕೆಡುಗೆ, ಇದಾನಟಿತ್ತು ಕೆಡಪಿದೊನೊಕ್ಕಲ್ಕೆಡುಗ, ಒಕ್ಕಲುಳ್ಪೊತ್ತಿನ್ಮಕಳ್ಪುಟ್ಟಲ್ಕ ಪುಟ್ಟಿದೊಂದು, ಕೆಡಿಸುವೊನು ಕೊಳ್ವೊನು ಪಂಚ ಮಹಾಪಾತಕನಕ್ಕೆ ಒಕ್ಕ...ಲುಳಿದುಣ್ಬು ಕಾದುವೊಂಗಿದು ಕಣ್ಗೆಟ್ಟು ತೊಟ್ಟಿಕುತ್ತುವ,[೫] ವಿತ್ತಿಯಲ್ಲಿ ವೆಳೆಯಾಗದೆ ಕೆರ್ಡುರ್[೬] ಎಂದೆಲ್ಲ ಉಲ್ಲೇಖಿಸುತ್ತವೆ. ಜೊತೆಗೆ ಅಂದಿನ ಸಮಾಜದಲ್ಲಿ ಒಕ್ಕಲಿಗರ ಜೀವನ ನಿರ್ವಹಣೆಯ ಜೊತೆಗೆ ಅವರು ನೇಗಿಲು ಹಿಡಿದು ದುಡಿಯಲು ಅವರಿಗೆ ದೈಹಿಕ ಅಂಗಾಂಗಗಳ ಬಲವೇ ಮುಖ್ಯವಾಗಿರುತ್ತಿತ್ತು. ಅವರ ಮಾನಸಿಕ ನೆಮ್ಮದಿ, ಬಲ ಎಲ್ಲವೂ ಅವರ ಪೀಳಿಗೆಯ ಜೀವನಾಡಿಗಳಾದ ಮಕ್ಕಳೇ ಆಗಿರುತ್ತಿದ್ದರು. ಹಾಗೆಯೇ ಭೂಮಿ ಮತ್ತು ಅದರಿಂದ ಬೆಳೆಯುವ ಬೆಳೆಯು ಅವರ ಜೀವನದ ಉಸಿರಾಗಿರುತ್ತಿತ್ತು. ಇದು ಹಾಳಾದರೆ ಅವರು ಅನುಭವಿಸುವ ನಷ್ಟದ ಪರಿಣಾಮ ಭೀಕರವಾಗಿರುತ್ತಿತ್ತು. ಇದರಿಂದಾಗಿ ಭೂಮಿ ಮತ್ತು ಕೃಷಿಕರ ನಡುವಿನ ಸಂಬಂಧದ ಸೂಕ್ಷ್ಮತೆಗಳನ್ನು ಅಧ್ಯಯನಕ್ಕೊಳಪಡಿಸುವ ಅಗತ್ಯ ಇಂದಿನ ದಿನಗಳಿಗಿದೆ. 'ಕೃಷಿ ತೋ ನಾಸ್ತಿ ದುರ್ಭಿಕ್ಷಂ' ಎಂಬ ಮಾತು ಒಕ್ಕಲಿಗ ನಿರ್ವಹಿಸುವ ಕೃಷಿಯ ಪ್ರಾಮುಖ್ಯತೆಯನ್ನು ತಿಳಿಸುತ್ತದೆ.

ಶಾಸನಗಳು ಭೂಮಾಲೀಕರಾದ ಅರಸರು, ಸಾಮಂತರು, ಮಾಂಡಳಿಕರು, ಸಾಮಾನ್ಯ ವರ್ಗದವರು ನೀಡಿದ ದೇವಸ್ವ, ಬ್ರಹ್ಮಸ್ವ ಹಾಗೂ ಸಾಮಾಜಿಕ ಕಾರ್ಯಗಳಿಗೆ ನೀಡಿದ ಭೂದಾನದ ಬಗೆಗೆ ಹೇಳುತ್ತವೆ. ಇದರೊಂದಿಗೆ ಕೃಷಿಗೆ ಸಂಬಂಧಿಸಿದ ಭೂಮಿ, ಭೂಮಿಯ ವಿಧಗಳು, ಬೆಳೆಗಳು, ನೀರಾವರಿಯ ಆಕರಗಳು ಹಾಗೂ ತೆರಿಗೆ ಮೊದಲಾದವುಗಳನ್ನು ಕುರಿತು ಉಲ್ಲೇಖಿಸಿವೆ. ಹಾಗೆಯೇ ಇವುಗಳೊಂದಿಗೆ ಕೃಷಿ ಚಟುವಟಿಕೆಗಳು ಜರುಗಲು ಕೃಷಿಕನ ಪಾತ್ರವೂ ಸಹ ಅಷ್ಟೇ ಪ್ರಮುಖವಾಗಿರುತ್ತದೆ. ಇವರನ್ನು ಕುರಿತ ಉಲ್ಲೇಖಗಳು ಶಾಸನಗಳಲ್ಲಿ ಬಿಡಿಯಾಗಿ, ವಿರಳವಾಗಿ ಕಂಡುಬರುತ್ತವೆ. ಈ

* ಪಿಎಚ್‌ಡಿ ಸಂಶೋಧನಾ ವಿದ್ಯಾರ್ಥಿ, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರೀತಿಯಾದ ಉಲ್ಲೇಖಗಳ ವಿರಳತೆಗೆ ಕಾರಣಗಳೇನು ಎಂಬುದರ ಹಿಂದಿರುವ ಅಂತಃಸತ್ವದ ಎಳೆಗಳನ್ನು ಅಧ್ಯಯನಕ್ಕೊಳಪಡಿಸಿದರೆ ಅದರ ಆಯಾಮಗಳು ತೆರೆದುಕೊಳ್ಳುತ್ತವೆ. ಹಾಗೆಯೇ ರಾಜಪ್ರಭುತ್ವದ ಅಧಿಕಾರ ಕೇಂದ್ರವ್ಯವಸ್ಥೆಯು ನಿರ್ವಹಿಸಿದ ಕಾರ್ಯನಿರ್ವಹಣೆಯಲ್ಲಿ ಕೃಷಿಕ ಸಮುದಾಯದ ಗೌಣ ಪಾತ್ರ ಅಭಿವ್ಯಕ್ತವಾಗುತ್ತದೆ. ಕೃಷಿಕರನ್ನು ಭೂರಹಿತ ಕೃಷಿಕರು ಮತ್ತು ಭೂಮಾಲೀಕ ಕೃಷಿಕರು ಎಂದು ವಿಂಗಡಿಸಬಹುದು.

ಭೂರಹಿತ ಕೃಷಿಕರು: ಇವರು ಅರಸರು, ಸಾಮಂತರು, ಮಾಂಡಲಿಕರು, ಸಾಮಾನ್ಯವರ್ಗದ ಭೂಮಾಲೀಕರ ಭೂಮಿಯಲ್ಲಿ ದುಡಿಯುವ ವರ್ಗದವರಾಗಿರುತ್ತಿದ್ದರು. ಹಾಗೆಯೇ ಭೂಮಾಲೀಕರು ಗೇಣಿ ರೂಪದಲ್ಲಿ ನೀಡುವ ಭೂಮಿಯಲ್ಲಿ ದುಡಿಯುವ ಕೆಲಸದವರಾಗಿರುತ್ತಿದ್ದರು. ಕ್ರಿ.ಶ. ೧೧ನೆಯ ಶತಮಾನದ ಮಧ್ಯಭಾಗಕ್ಕೆ ಸೇರಿದ ತಿರುಕ್ಕಲವರ[೭] ಶಾಸನವು ರೈತನಿಗೆ ಎರಡು ಪಾಲು, ಭೂಮಾಲೀಕನಿಗೆ ಒಂದು ಪಾಲು ಕೊಡುವ ಮೂಲಕ ಭೂಮಿಯನ್ನು ಉಳುವವನ ವಶಕ್ಕೆ ಕೊಡಲಾಗುತ್ತಿತ್ತು. ಭೂಮಿಯ ವರ್ಗಾವಣೆಗೆ ಗ್ರಾಮದ ಮಹಾಜನರ ಒಪ್ಪಿಗೆಯ ಅಗತ್ಯವಿರುತ್ತಿತ್ತು. ಕ್ರಿ.ಶ. ೧೦೦೭ರ ಶಾಸನವು[೮] ಬಸದಿಗೆ ಬಿಟ್ಟುಕೊಟ್ಟ ತೋಟವನ್ನು ಮಾಡುವವರು 'ಬಸದಿಗೆ ಸಮಭಾಗವಿಕ್ಕಿ ಭೋಗಿಸಬೇಕು' ಎಂದು ಹೇಳುತ್ತದೆ. ಇಂದಿಗೂ ಶ್ರೀಮಂತ ಭೂಮಾಲೀಕರ ಜಮೀನಿನಲ್ಲಿ ಕೋರು ಮಿಟ್ಟಗಳ ರೂಪದಲ್ಲಿ ಭೂರಹಿತ ಕೃಷಿಕರು ದುಡಿಯುತ್ತಿರುವುದನ್ನು ಕಾಣಬಹುದು. ವರ್ಷವಿಡೀ ದುಡಿದು ಭೂಮಾಲೀಕರಿಗೆ ನೀಡಿ ಅಳಿದುಳಿದ ಭಾಗದಲ್ಲಿ ಇವರು ಜೀವನ ಸಾಗಿಸುವ ಪದ್ಧತಿ ಬೆಳೆದು ಬಂದಿದೆ. ಸಮಾಜದಲ್ಲಿ ಇಂದಿಗೂ ಇದರ ಬೇರುಗಳು ಬಲಿಷ್ಠವಾಗಿವೆ. ಇದರ ಹಿಂದೆ ರೂಪಿತವಾಗಿರುವ ಚರಿತ್ರೆಯ ರಚನೆಯು ಅರಸಕೇಂದ್ರಿತ ಅಧ್ಯಯನ ನೆಲೆಯಲ್ಲೇ ಸಾಗಿಬಂದಿದೆ. ಇತಿಹಾಸದುದ್ದಕ್ಕೂ ಕೃಷಿಕರ ಶ್ರಮ ಮತ್ತು ಅವರ ಜೀವನ ನಿರ್ವಹಣೆಯ ಅಂಶಗಳು ಮರೆಮಾಚಿ ಹೋಗಿವೆ. ಸಮಾಜದಲ್ಲಿ ಬಹುದೊಡ್ಡ ಆರ್ಥಿಕ ಶಕ್ತಿಯಾಗಿದ್ದವರು ಶ್ರೀಮಂತ ಮಧ್ಯವರ್ತಿ ಭೂಮಾಲೀಕರು ಇವರು ಅರಸರು ಮತ್ತು ರೈತರ ಮಧ್ಯೆ ಕೊಂಡಿಯಾಗಿ ವ್ಯವಹರಿಸುತ್ತಿದ್ದರು. ಈ ರೀತಿ ಮಧ್ಯ ವ್ಯವಹರಿಸುತ್ತಿದ್ದ ಭೂಮಾಲೀಕರ್[೯] ರೈತರನ್ನು ಶೋಷಣೆಗೊಳಪಡಿಸುತ್ತಿದ್ದರು. ಜೊತೆಗೆ ಭೂಮಾಲೀಕರ ಅಧಿಕಾರ ಮತ್ತು ತೀರ್ಮಾನಗಳನ್ನು ಪ್ರಶ್ನಿಸುವ ಅಧಿಕಾರವನ್ನು ರೈತರು ಹೊಂದಿದ್ದು ಅತ್ಯಂತ ವಿರಳ. ಹಾಗೆಯೇ ಕೃಷಿಕ್ಷೇತ್ರದಲ್ಲಿ ಭೂಮಿ ಮತ್ತು ತೆರಿಗೆಗೆ ದೊರೆತಷ್ಟು ಪ್ರಾಮುಖ್ಯತೆ ಕೃಷಿಕರಿಗೆ ದೊರೆತ ದಾಖಲೆಗಳ ಸಂಖ್ಯೆಯೂ ಸಹ ವಿರಳವೇ ಆಗಿದೆ. ಇಂತಹ ಕೃಷಿಕರನ್ನು ಭೂಮಿಕಾರ, ಒಕ್ಕಲು, ಬೆಸವೊಕ್ಕಲು[೧೦] ಎಂದು ಕರೆಯಲಾಗುತ್ತಿತ್ತು. ಅಲ್ಲದೆ ಹೊಲಯ ಮತ್ತು ತೊಟ್ಟು ಎಂಬ ಜೀತದಾಳುಗಳು ಇದ್ದರೆಂದು ಶಾಸನಗಳು ತಿಳಿಸುತ್ತವೆ.[೧೧] ಇವರು ಭೂಮಾಲೀಕರ ಅನುಮತಿಯಂತೆ ಕಾರ್ಯ ನಿರ್ವಹಿಸುತ್ತಿದ್ದರು. ಕೃಷಿಯಲ್ಲಿ ಭೂಮಿಯ ಪಾತ್ರದಷ್ಟೇ ಕೃಷಿಕನ ಶ್ರಮವೂ ಮುಖ್ಯವಾಗಿರುತ್ತದೆ. ಆದರೆ ಕೃಷಿಕರಾದ ಶ್ರಮಿಕರು ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದರು. ಇವರು ಉತ್ಪಾದಿಸಿದ ಉತ್ಪನ್ನಕ್ಕೆ ದೊರೆಯುವ ಮಾನ್ಯತೆ ಶ್ರಮಕ್ಕಿರಲಿಲ್ಲ. ಇಂದಿಗೂ ಈ ರೀತಿಯಾಗಿ ಪರಿಭಾವಿಸುವ ಬಗೆ ಕಂಡುಬರುತ್ತದೆ. ಅಗ್ರಹಾರವನ್ನು ನಿರ್ಮಿಸುವ ಸಂದರ್ಭದಲ್ಲಿ ಒಕ್ಕಲುಗಳನ್ನು ಒಕ್ಕಲೆಬ್ಬಿಸುತ್ತಿದ್ದರು ಎಂದು ಚನ್ನರಾಯಪಟ್ಟಣದ ಶಾಸನವು ತಿಳಿಸುತ್ತದೆ.[೧೨] ಅಗ್ರಹಾರದ ಭೂಮಿಯ ಮೇಲೆ ಬ್ರಾಹ್ಮಣರು ಸಂಪೂರ್ಣ ಹಿಡಿತವನ್ನು ಹೊಂದಿದ್ದರು. ಹಾಗಾಗಿ ಅವರು ತಮ್ಮ ಸ್ವಯಿಚ್ಛೆಯಂತೆ ಬೇಕೆಂದಾಗ ಭೂಮಿಯನ್ನು ಹಿಂಪಡೆಯುವ ಅಧಿಕಾರ ಹೊಂದಿದ್ದರು. ಹುನಗುಂದದ ಕ್ರಿ.ಶ. ೯ನೆಯ ಶತಮಾನದ ಶಾಸನವು[೧೩] ಭೂಮಿಯ ಹಂಚಿಕೆ ಹಾಗೂ ಗೇಣಿ ನೀಡುವ ಬಗೆಗೆ ತಿಳಿಸುತ್ತದೆ. ಕಿಸುಕಾಡಿನ ಕೆಲವು ಭಾಗಗಳನ್ನು ಗಾವುಣ್ಡುಗಳಿಗೆ ವ್ಯವಸಾಯಕ್ಕೆ ನೀಡಿದಾಗ ಮೊದಲ ವರ್ಷ ಒಂದು ಭಾಗದಂತೆ ೭ನೆಯ ವರ್ಷದವರೆಗೂ ಮುಂದುವರಿದು ಆ ವರ್ಷ ಸಮಭಾಗಕ್ಕೆ ಬರುತ್ತಿತ್ತು. ಕ್ರಿ.ಶ. ೮ನೆಯ ಶತಮಾನದ ಹುನಗುಂದದ ಶಾಸನವು 'ಪಾರ್ವನಿಗೆ ಕೇಣಿ ಇಲ್ಲ'[೧೪] ಎಂದು ಹೇಳುತ್ತದೆ. ದುಡಿಯುವ ಭೂರಹಿತ ಕೃಷಿ ಸಮುದಾಯವೊಂದು ಪ್ರತ್ಯೇಕವಾಗಿತ್ತೆಂದು ಇದರಿಂದ ತಿಳಿಯುತ್ತದೆ. ಕ್ರಿ.ಶ. ೧೧೧೪-೧೫ರ ಹುನಗುಂದ ತಾಲ್ಲೂಕು ಕಂದಗಲ್ಲು ಶಾಸನವು "ಕರಿಯ [ಹಾಳ] ಮುಕ್ಕಪ್ಪೆಯ ಭಾಗಂ ಪೊಸದಟ್ಟಿಪ[ಂ]ನ್ನೆರಡಱ ಭಾಗಂ ವರ್ಷ ಪ್ರತಿಒನ್ದು ಭಾಗಂ ಇಳಿಯುತುಂ"[೧೫] ಅಂದರೆ ಹೊಸದಾಗಿ ಮಾಡುವವರು ಹನ್ನೆರಡರ ಭಾಗದಲ್ಲಿ ವರ್ಷಕ್ಕೆ ಒಂದು ಭಾಗ ಇಳಿಸಿಕೊಳ್ಳುವಂತೆ ಕರಾರುಗಳಿದ್ದವೆಂದು ತಿಳಿಸುತ್ತದೆ. ಕ್ರಿ.ಶ. ೧೦೬೮ರ ಶಿರೂರು ಶಾಸನವು "ಕಿರುವಿಟ್ಟೆಗಳ್ಗಮೀವ"[೧೬] ಅಥವಾ ತೆರಿಗೆರಹಿತ ಭೂಮಿಯ ದಾನದ ಬಗೆಗೆ ಹೇಳುತ್ತದೆ. ಅಂದರೆ ಇದು ಕಲ್ಕಾಡ ಭೂಮಿಯಾಗಿರುತ್ತಿತ್ತು. ಈ ಭೂಮಿಯಲ್ಲಿ ಬೆಳೆಯುವ ಆರಂಭದ ಬೆಳೆಗೆ ತೆರಿಗೆ ಇರುವುದಿಲ್ಲ. ಕೃಷಿಕರು ಶ್ರಮ ವಹಿಸಿ ಭೂಮಿಯನ್ನು ಹಸನು ಮಾಡಿ ಸಮೃದ್ಧಿಯಾಗಿ ಫಲ ಬರುವಾಗ ಇಂತಿಷ್ಟು ವರ್ಷಗಳ ನಂತರ ಅದು ತೆರಿಗೆಗೆ ಒಳಪಡುತ್ತಿತ್ತು. ಕ್ರಿ.ಶ. ೧೧೩೪ರ ಸಿಂಧನೂರು ತಾಲ್ಲೂಕು ಮುಕ್ಕುಂದಿಯ ಶಾಸನವು[೧೭] ಪೂಜಾರಿಯ ಜೀವಿತಕ್ಕೆ ಭೂಮಿ ನೀಡಿದುದನ್ನು ಹೇಳುತ್ತದೆ. ಸಮಾಜದ ಎಲ್ಲ ವರ್ಗದವರು ಗೇಣಿ ನೀಡಿದ ಭೂಮಿಯಲ್ಲಿ ಈ ಭೂರಹಿತ

ಕೃಷಿಕರು ದುಡಿಯುತ್ತಿದ್ದರು. ಕ್ರಿ.ಶ. ೯ನೆಯ ಶತಮಾನದ ಶಾಸನವು[೧೮] ಭೂಮಿಯ ಗುಣಮಟ್ಟಕ್ಕೆ ಅನುಗುಣವಾಗಿ ಕೃಷಿಕರು ಭೂಮಾಲೀಕರಿಗೆ ಕೊಡುವ ಭಾಗದ ಒಪ್ಪಂದವನ್ನು ಕುರಿತು ಹೇಳುತ್ತದೆ. ಹಾಗೆಯೇ ಕರಿಯ ಕೆಯಿಯಲ್ಲಿ ಉತ್ತಿದ ವರ್ಷ ಪರಿಹಾರವಾಗಿ ಅರ್ಧ ಭಾಗ ನೀಡಬೇಕೆಂದು ತಿಳಿಸಿದೆ. ಜೊತೆಗೆ ಮೀರಿದರೆ 'ದೋಷ ಮಾಡುವವಗೆ ದಂಡ' ಎಂದು ಬಾದಾಮಿಯ ಶಾಸನವು ಸ್ಪಷ್ಟಪಡಿಸುತ್ತದೆ.[೧೯] ದೇವಾಲಯಗಳಿಗೆ ನೀಡಿದ ದಾನದ ಜವಾಬ್ದಾರಿಯನ್ನು ಮಹಾಜನರು ಹೊಂದಿರುತ್ತಿದ್ದರು. ಕೆಲವೊಮ್ಮೆ ಇವರನ್ನು ಕೃಷಿಕರು ವಿರೋಧಿಸಿರುವುದನ್ನು ಶಾಸನವೊಂದು ಹೇಳುತ್ತದೆ. ಕ್ರಿ.ಶ. ೧೨೫೧ರ ಶಾಸನದಲ್ಲಿ[೨೦] ಹಳ್ಳಿಯೊಂದರ ಜನರು ತಮ್ಮ ಹಳ್ಳಿಯನ್ನು ಬ್ರಾಹ್ಮಣರಿಗೆ ನೀಡುವುದನ್ನು ವಿರೋಧಿಸಿರುವುದು ಕಂಡುಬರುತ್ತದೆ. ಕ್ರಿ.ಶ. ೧೧೦೦ರ ಶಿರೂರು ಶಾಸನವು[೨೧] ಆಚಾರ್ಯರಾಶಿ ಪಂಡಿತದೇವನು ದೇವರ ಹೊಲದಲ್ಲಿ ಬಾಚಿಸೆಟ್ಟಿ ಕೆರೆಗೆ ಭೂದಾನ ನೀಡಿದನು ಎಂದು ತಿಳಿಸುತ್ತದೆ. ಬ್ರಾಹ್ಮಣರು ದೇವಸ್ವದಾನದ ಸಂಪೂರ್ಣ ಹಕ್ಕು ಮತ್ತು ಹೊಣೆಗಾರಿಕೆಯನ್ನು ಹೊಂದಿದ್ದರು. ಜೊತೆಗೆ ಹೆಚ್ಚು ಪ್ರಭಾವಶಾಲಿಗಳೂ ಆಗಿದ್ದರು. ಕೆಲವೊಮ್ಮೆ ರಾಜನಿಂದ ತೆರಿಗೆ ವಿನಾಯಿತಿಯನ್ನು ಪಡೆಯುತ್ತಿದ್ದರು. ಕೃಷಿ ಭೂಮಿಯಲ್ಲಿ ಬೆಳೆಯ ಇಳಿಮುಖತೆ ಇದ್ದಾಗ ಭೂಮಾಲೀಕರು ಯಾವ ನಿರ್ಧಾರ ತೆಗೆದುಕೊಳ್ಳುತ್ತಿದ್ದರೋ ತಿಳಿಯದು. ಭೂಮಾಲೀಕರು ತಮಗೆ ಬರಬೇಕಾದ ಭಾಗವನ್ನು ಪಡೆದಿರಬಹುದು ಅಥವಾ ಬಿಟ್ಟಿರಬಹುದು. ಆದರೆ ತೆರಿಗೆ ವಿನಾಯಿತಿ ನೀಡಿರುವ ವಿವರಗಳು ವಿರಳ. ಇಂತಹ ಸನ್ನಿವೇಶಗಳೇ ಕೃಷಿ ಬದುಕಿನಲ್ಲಿ ಅತಿವೃಷ್ಟಿ ಅನಾವೃಷ್ಟಿಗಳಿಂದಾಗಿ ಘಟಿಸುತ್ತಿದ್ದವು. ಇದರಿಂದಾಗಿ ಶ್ರಮಿಕವರ್ಗ ಕೆಳಸ್ತರದಲ್ಲೇ ಉಳಿಯಿತು. ಶ್ರೀಮಂತ ಭೂಮಾಲೀಕವರ್ಗ ಮೇಲುಗೈ ಸಾಧಿಸಿತು. ಇದರಿಂದಾಗಿ ಸಮಾಜದ ಸ್ಥಿರತೆಯಲ್ಲಿ ಅಂತರಗಳು ಉಂಟಾಗಿರುವುದು ಕಂಡುಬರುತ್ತದೆ. ಕೆಳಸ್ತರದ ಮೂಲಕ ಅಧ್ಯಯನ ಮಾಡಿದಾಗ ಮಾತ್ರ ಇಂತಹ ಸೂಕ್ಷ್ಮತೆಗಳು ಅಧ್ಯಯನಕ್ಕೆ ತೆರೆದುಕೊಳ್ಳುತ್ತವೆ.

ಕೃಷಿಕ ಭೂಮಾಲೀಕರು: ಭೂಮಿಯನ್ನು ಹೊಂದಿದ ಕೃಷಿಕ ಸಮುದಾಯದವರು ಇವರಾಗಿರುತ್ತಾರೆ. ಇವರು ಸಾಮಾನ್ಯ ವರ್ಗಕ್ಕೆ ಸೇರಿದವರಾಗಿದ್ದು, ಸಣ್ಣ ಭೂಹಿಡುವಳಿದಾರರಾಗಿರುತ್ತಿದ್ದರು. ಇವರು ಪ್ರಭುತ್ವ, ಬ್ರಾಹ್ಮಣ ಹಾಗೂ ಅಧಿಕಾರಿ ವರ್ಗದ ಭೂಮಾಲೀಕರು ಹೊಂದಿದಷ್ಟು ಪ್ರಮಾಣದ ಭೂಮಿಯನ್ನು ಹೊಂದಿರುವುದಿಲ್ಲ. ಜೊತೆಗೆ ಇವರ ಭೂಮಿಯಲ್ಲಿ ಉಳುವವರಾಗಿರದೆ ತಮ್ಮ ಸ್ವಂತ ಭೂಮಿಯಲ್ಲಿ ಉಳುವವರಾಗಿರುವ ಸಾಧ್ಯತೆಗಳಿವೆ. ಇವರು ಕೆರೆ ನಿರ್ಮಿಸಿದ, ಭೂದಾನ ಮಾಡಿದ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ. ಕ್ರಿ.ಶ. ೧೨೪೨ರ ಧಾರವಾಡ ಜಿಲ್ಲೆಯ ಶಾಸನವು[೨೨] ಯಾದವಸಿಂಘಣನು ಕಟ್ಟಿದ ಕೆರೆಯ ಬಗೆಗೆ ಹೇಳುತ್ತದೆ. ಕ್ರಿ.ಶ. ೧೨೧೩ರ ಹರಪನಹಳ್ಳಿ ತಾಲ್ಲೂಕು ಮುತ್ತಗಿಯ ಶಾಸನವು[೨೩] ಬೊಪ್ಪಯ್ಯ ಎಂಬುವವನು ಬಮ್ಮಯ್ಯನಿಂದ ಭೂದಾನ ಪಡೆದು ಅರವಂಟಿಗೆ ಕಟ್ಟಿದನೆಂದು ಹೇಳುತ್ತದೆ. ಕ್ರಿ.ಶ. ೧೧೨೬ರ ಬಾಗಳಿ ಶಾಸನವು[೨೪] ಚಿಕ್ಕ ದೇವಿಮಯ್ಯನು ಎಡೆವ ಬರಯಣ್ಣನಗೆ ಭೂದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೦೬೮ರ ಶಿರೂರು ಶಾಸನವು[೨೫] ಗೌರಬ್ಬೆಯ ಗಂಡ ನಿಂಬಕುಳದ ದೇವರಾಯ ತೆರಿಗೆರಹಿತ ಭೂಮಿ ದಾನ ಬಿಟ್ಟನೆಂದು ಹೇಳುತ್ತದೆ. ಕ್ರಿ.ಶ. ೧೧೨೮ರ ಮಂಕಣಿ ಶಾಸನವು[೨೬] ಸಾದೇವನು ಮಂಕಣಿಯಲ್ಲಿ ೫೦೦ ಜನರಿಗೆ ಭೂದಾನ ನೀಡಿದ್ದನ್ನು ಹೇಳುತ್ತದೆ. ('ಪಿರಿದಾಗಿ ನೆರಪಿದೈ ನೂರ್ವರಿಗಿತ್ತಂ ಭೂಮಿದಾನಮಂ') ಕ್ರಿ.ಶ. ೧೧೯೯ರ ಹೂವಿನಹಡಗಲಿ ತಾಲ್ಲೂಕಿನ ಕುರುವತ್ತಿಯ ಶಾಸನವು[೨೭] ೪೦ ಜನರು ದಾನ ನೀಡಿದ ಬಗೆಗೆ ಹೇಳುತ್ತದೆ. ಇದರಿಂದ ಸಾಮಾನ್ಯ ಜನತೆಯು ಭೂಮಿಯನ್ನು ಹೊಂದಿ ಭೂಮಾಲೀಕರಾಗಿದ್ದರೆಂದು ತಿಳಿದು ಬರುತ್ತದೆ. ಭೂಮಿ ಹೊಂದಿದ ರೈತರೂ ಸಹ ಕಷ್ಟಪಟ್ಟು ಶ್ರಮ ವಹಿಸಿ ದುಡಿಯಬೇಕಿತ್ತು. ಕ್ರಿ.ಶ. ೧೧೧೫ರ ಬಿಜಾಪುರ ಜಿಲ್ಲೆಯ ನಿಡೋಣಿ ಶಾಸನವು[೨೮] ಕೃಷಿಕರ ಬದುಕಿನ ಕಷ್ಟ–ನಿಷ್ಟುರ, ಸಮಸ್ಯೆ–ಸವಾಲುಗಳು ಹಾಗೂ ಜಿಪುಣತನವನ್ನು ಕುರಿತು ವಿವರಿಸುತ್ತದೆ. ಈ ಶಾಸನವು ಮೇಣ್ಪೆಯ ಬಿರ್ಮಣನೆಂಬ ಒಕ್ಕಲಿಗನನ್ನು 'ಕುಡಿ ಒಕ್ಕಲಿಗ' ಎಂದು ಕರೆದಿದೆ.

> **"ಪಡೆದಪೆವೆಂದು ನೆತ್ತಿಯ ಬೆಮರು ಮಿಡಿಯಿಂದಿಳಿವನ್ನು**
> **ದುಕ್ಕದಲು ದುಡಿಯುತಮಿರ್ಪ್ಪರ....**
> **ಗಿಡಗಡಿದುರ್ತ್ತು ಬಿತ್ತಿ ಫಲಮಂ ಪಡೆದುಣ್ಣದೆ ಲಾಬಲೋಬ**
> **ದಿಂದ ಮಡಗಿ ಬಳ್ಳಿಕೆ ಗಾವಣೆಗೆ ಗಂಲಿಗೆ ಟೊಪ್ಪರವಿಟ್ಟು**
> **ಕೊಳ್ವನಿಗ್ಗಡಿ ನ್ರಿಪಜ್ಜತ್ತತೆತ್ತು ಬಜೆದಾಗಿ ಬೆಳ್ಮೊಗ**
> **ದಿಂದವಿರ್ಪ್ಪ ಬೆಳ್ಗುಡಿಯರ...."**

ಕೃಷಿಕರು ಪಡುವ ಕಷ್ಟ, ಅವರ ನೋವು, ಬೆವರಿನ ದುಡಿಮೆ ಭೂಮಿಯನ್ನು ಶ್ರಮ ವಹಿಸಿ ಸಾಗುವಳಿ ಮಾಡಿ ಬಂದ ಫಸಲಿಗೆ ನಿರೀಕ್ಷಿತ ಫಲ ಪಡೆಯದೆ ಹೋಗುವ ಸ್ಥಿತಿಯನ್ನಲ್ಲಿ ಗಮನಿಸಬಹುದು. ಇಂದಿಗೂ ಕೃಷಿಕರ ಸ್ಥಿತಿ ಇದರಿಂದ

ಹೊರತಾಗಿಲ್ಲ. ಫಲಕ್ಕೆ ಸರಿಯಾದ ಬೆಲೆ ದೊರೆಯದೆ ರೈತರು ಕಂಗಾಲಾಗುತ್ತಿರುವುದು ಇಂದು ಕಂಡುಬರುತ್ತಿದೆ. ಕೃಷಿಕರು ನಿರಾಸೆ, ಸಂಕಟಗಳಿಗೆ ಬಲಿಯಾಗುತ್ತಲೇ ಸಾಗಿ ಬಂದಿರುವುದು ಇಲ್ಲಿ ಗಮನಾರ್ಹ.

ಪ್ರಾಚೀನ ಕಾಲದ ಕೃಷಿಕರು ಭೂಮಿಯಲ್ಲಿ ದೈಹಿಕ ಶ್ರಮ ವಹಿಸಿಯೇ ದುಡಿಯಬೇಕಿತ್ತು. ಇಂದಿನಂತೆ ಯಾವ ವೈಜ್ಞಾನಿಕ ಉಪಕರಣಗಳ ಸೌಲಭ್ಯಗಳಿರಲಿಲ್ಲ. ಇವರು ಶ್ರಮ ವಹಿಸಿ ಉತ್ಪಾದಿಸಿದ ಉತ್ಪನ್ನವನ್ನು ಸಮಾಜದ ಎಲ್ಲ ವರ್ಗವು ಉಪಭೋಗಿಸುತ್ತಿತ್ತು. ಜೊತೆಗೆ ಕೃಷಿಕರ ಶ್ರಮದ ದುಡಿಮೆಯ ತೆರಿಗೆಯು ರಾಜ್ಯದ ಆದಾಯದ ಒಂದು ಭಾಗವಾಗಿರುತ್ತಿತ್ತು. ಆದರೂ ಸಹ ಈ ಸಮುದಾಯವನ್ನು ಕೆಳಸ್ತರಕ್ಕೆ ಸರಿಸಿ ನಿರ್ಲಕ್ಷಿಸಿರುವುದು ಅಧ್ಯಯನಗಳಿಂದ ತಿಳಿದುಬರುತ್ತದೆ. ಕೃಷಿಕರು 'ಒಕ್ಕಲದೆರೆ'[೨೯] ಎಂಬ ತೆರಿಗೆಯನ್ನು ತೆರಬೇಕಾಗಿತ್ತು. ಹಾಗೆಯೇ ಭೂ ಉತ್ಪತ್ತಿಯ ೧/೬ ಭಾಗ ತೆರಿಗೆಯನ್ನು ರಾಷ್ಟ್ರಕೂಟರ ಕಾಲದಲ್ಲಿ ವಿಧಿಸಿದುದು ಕಂಡುಬರುತ್ತದೆ.[೩೦] ಇದನ್ನು 'ನಿಬಂಧ'[೩೧] ಎಂದು ಕರೆಯಲಾಗುತ್ತಿತ್ತು. ಒಮ್ಮೊಮ್ಮೆ ಬೆಳೆ ನಷ್ಟವಾದಾಗ ರಾಜರಿಂದ ತೆರಿಗೆ ವಿನಾಯಿತಿ ದೊರೆಯುತ್ತಿತ್ತು. ಆದರೆ ಕೃಷಿಕರಿಗೆ ತೆರಿಗೆಗಳು ಹೊರೆಯಾಗಿದ್ದವೆ ಎಂಬುದನ್ನು ತಿಳಿಯುವುದು ಕಷ್ಟಕರ ಸಂಗತಿಯಾಗಿದೆ. ಸಮಾಜದಲ್ಲಿ ವರ್ಗ ಭೇದವಿಲ್ಲದಂತೆ ಎಲ್ಲ ವರ್ಗದವರು ಕೃಷಿಕರಾಗಿದ್ದರೆಂದು ಹೇಳಲಾಗಿದೆ. ಕ್ರಿ.ಶ. ೧೧೦೩ರ ದೇವದುರ್ಗ ತಾಲ್ಲೂಕು ಗಬ್ಬೂರ ಶಾಸನವು[೩೨] ಗೊಬ್ಬೂರ ಚತುಸ್ಸೀಮೆಯಿಂದೊಳಗೆ ಜಾತಿ ವಿಜಾತಿಯೆ... ನೊಗನಿಕ್ಕಿ ಉತ್ತುಹರಗಿ ಬಿತ್ತಿ ಬೆಳೆದು ಆ ಹಿರಿಯ ಮಹಾಜನಂಗಳಿಗೆ ಸೂಡು ಜೋಳಮಂ ತೆತ್ತುಗೆಯ್ದಂ ಎಂದು ಸಹ ಉಲ್ಲೇಖಿಸುತ್ತದೆ. ಪ್ರತಿವರ್ಷ ಪ್ರತಿ ಕುಂಟೆಗೆ ಮೇಳಿಯಲೊಂದು ಹಣ ನೀಡಬೇಕಿತ್ತು ಎಂದು ತಿಳಿಸುತ್ತದೆ.

ಸಮಾಜದಲ್ಲಿ ತೆರಿಗೆಗೆ ನೀಡಿದ ಪ್ರಾಮುಖ್ಯತೆ ಕೃಷಿಕ ಸಮುದಾಯಕ್ಕೆ ಇದ್ದುದು ಕಂಡುಬರುವುದಿಲ್ಲ. ಆದರೆ ಕೃಷಿಕರಿಗೆ ಇದು ಹೊರೆಯಾಗಿತ್ತೆ ಅಥವಾ ಇಲ್ಲವೇ ಎಂಬ ನಿರ್ಧಾರಕ್ಕೆ ಬರುವುದು ಕ್ಲಿಷ್ಟಕರ ಸಂಗತಿ. ಮಹಾಭಾರತದಲ್ಲಿ 'ಋಷಿಗಳು ಯುಧಿಷ್ಠಿರನನ್ನು ಹೀಗೆ ಪ್ರಶ್ನೆಸುತ್ತಾರೆ. ನೀನು ವಿಧಿಸಿರುವ ತೆರಿಗೆಗಳಿಂದ ರೈತರು ತಮ್ಮ ಉದ್ಯೋಗ ತ್ಯಜಿಸಿ ಗ್ರಾಮಗಳನ್ನು ಬಿಡುತ್ತಿಲ್ಲ ತಾನೆ'?[೩೩] ಎಂದು ಕೇಳುತ್ತಾರೆ. ಇದನ್ನು ಗಮನಿಸಿದರೆ ತೆರಿಗೆಯ ಭಾರ ಹೆಚ್ಚಿದಾಗ ಕೃಷಿಕರು ಫಲಾಯನ ಮಾಡಿದ ಸಂದರ್ಭಗಳು ಇರುತ್ತಿದ್ದವೆಂದು ತಿಳಿದುಬರುತ್ತದೆ. ಇವರು ನೀಡುವ ತೆರಿಗೆಯು ರಾಜ್ಯದ ಆದಾಯಕ್ಕೆ ಒಂದು ಭಾಗವಾಗಿ ಪ್ರಭುತ್ವದ ಏಳಿಗೆಗೆ ಕಾರಣವಾಗುತ್ತಿತ್ತು. ಆದರೆ ಕೃಷಿಕರ ಸಮಸ್ಯೆ ಸಂಕಟಗಳು ಚರಿತ್ರೆಯ ಗರ್ಭದಲ್ಲಿ ಹುದುಗಿ ಹೋಗಿವೆ. ಇತಿಹಾಸದ ತುಂಬೆಲ್ಲ ರಾಜರ ಆಳ್ವಿಕೆಯೇ ತುಂಬಿ ಹೋಗಿರುತ್ತದೆ. ಅಲ್ಲಿ ಕೃಷಿಕರ ಚರಿತ್ರೆಗೆ ಅವಕಾಶವಿರುವುದು ವಿರಳ. ಈ ಸಮುದಾಯವು ಪ್ರಾಚೀನ ಕಾಲದಿಂದ ಇಂದಿನವರೆಗೂ ನಿರ್ಲಕ್ಷ್ಯಕ್ಕೆ ಒಳಗಾದುದಾಗಿದೆ. ಇಂದಿನ ದಿನಮಾನಗಳಲ್ಲಿ ಚರಿತ್ರೆಯನ್ನು ಅರ್ಥೈಸುವ, ಅಭ್ಯಸಿಸುವ ಕ್ರಮ ಬದಲಾಗುತ್ತಿದೆ. ಜನತೆಯ ಇತಿಹಾಸವನ್ನು ಗುರುತಿಸುವ ಅಧ್ಯಯನಗಳು ಪ್ರಾರಂಭವಾಗುತ್ತಿವೆ. ಕೆಳಸ್ತರದ ಮೂಲಕ ಅಧ್ಯಯನ ನಡೆಸಿದಾಗ ಶೋಷಿತವರ್ಗದ ಸಮಸ್ಯೆ-ಸವಾಲುಗಳು ಬೆಳಕಿಗೆ ಬರುತ್ತವೆ. ಇದರಿಂದ ಸಮಾಜದಲ್ಲಿ ಉಂಟಾಗಿರುವ ಸಾಮಾಜಿಕ ಅಂತರದ ಪರಿಧಿಗಳಿಗೆ ಕಾರಣವನ್ನು ಗುರುತಿಸಬಹುದು. ಹಾಗೆಯೇ ಜನತೆಯ ಇತಿಹಾಸ ಇನ್ನಷ್ಟು ಸ್ಪಷ್ಟೀಕರಣಗೊಳ್ಳುತ್ತದೆ.

ಅಡಿ ಟಿಪ್ಪಣಿಗಳು

೧. ಡಾ. ಶ್ರೀಪತಿ ಕಲ್ಲೂರಾಯ, ಕೃಷಿರಂಗ: ಒಂದು ಅವಲೋಕನ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ೧೯೯೮, ಪು. ೧.

೨. ಡಾ. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು ೨೦೧೧, ಪು. ೪೦೪.

೩. ಅದೇ, ಪು. ೪೦೪.

೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ. ೯, ಶಾಸನ ಸಂಖ್ಯೆ ೨೧ (ಬಾಗಲಕೋಟೆ ಜಿಲ್ಲೆ).

೫. ಡಾ. ದೇವರಕೊಂಡಾರೆಡ್ಡಿ, ಕರ್ನಾಟಕದ ಶಾಸನಗಳಲ್ಲಿ ಶಾಪಾಶಯ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ, ಧಾರವಾಡ ೨೦೦೮, ಪು. ೨೦.

೬ ಡಾ. ಎಂ. ಚಿದಾನಂದಮೂರ್ತಿ, ಕ.ಶಾ.ಸಾಂ.ಅ ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೧, ಪು. ೪೦೪.

೭. ಕರ್ನಾಟಕ ಪರಂಪರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂಪುಟ ೧, ಪು. ೪೦೨.

೮. ಡಾ. ಎಂ. ಚಿದಾನಂದಮೂರ್ತಿ, ಕ.ಶಾ.ಸಾಂ.ಅ., ಪು. ೪೧೧.

೯. ಡಾ. ಕೆ. ಮೋಹನ್‌ಕೃಷ್ಣರೈ, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೪, ಪು. ೩೦.
೧೦. ಅದೇ, ಪು. ೩೧.
೧೧. ಅದೇ, ಪು. ೩೧.
೧೨. ಅದೇ, ಪು. ೩೨.
೧೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೯, ಹುನಗುಂದ, ಶಾ.ಸಂ. ೯೪, (ಬಾಗಲಕೋಟೆ ಜಿಲ್ಲೆ).
೧೪. ಅದೇ ಶಾ.ಸಂ. ೩೪, (ಹುನಗುಂದ).
೧೫. ಅದೇ, ಶಾ.ಸಂ. ೧೨೯, (ಹುನಗುಂದ).
೧೬. ಅದೇ, ಶಾ.ಸಂ. ೩೮, (ಶಿರೂರು).
೧೭. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭ (ರಾಯಚೂರು ಜಿಲ್ಲೆ), ಶಾ.ಸಂ. ೬ (ಸಿಂಧನೂರು).
೧೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೯, ಶಾ.ಸಂ. ೧೨ (ಬದಾಮಿ)
೧೯. ಅದೇ ಶಾ.ಸಂ. ೨೭೧ (ಬದಾಮಿ).
೨೦. ಡಾ. ಕೆ. ಮೋಹನ್‌ಕೃಷ್ಣರೈ, ಪ್ರಭುತ್ವ ಜನತೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೪, ಪು. ೩೨.
೨೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೯, ಶಾ.ಸಂಖ್ಯೆ ೪೦ (ಬಾಗಲಕೋಟೆ ಜಿಲ್ಲೆ).
೨೨. ಜಿ.ಎಸ್. ದೀಕ್ಷಿತ್, ಜೆ.ಆರ್. ಕುಪ್ಪುಸ್ವಾಮಿ (ಮೂಲ), ಎಸ್.ಕೆ. ಮೋಹನ್, ನೀಲತ್ತ ಹಳ್ಳಿ ಕಸ್ತೂರಿ (ಅನು), ಕರ್ನಾಟಕದಲ್ಲಿ ಕೆರೆ ನೀರಾವರಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦ ಪುಟ ೪೫.
೨೩ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧, ಶಾ.ಸಂ ೧೮೭ (ಹರಪನಹಳ್ಳಿ).
೨೪. ಅದೇ, ಶಾ.ಸಂ. ೧೩೭ (ಹರಪನಹಳ್ಳಿ),
೨೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೯, ಶಾ.ಸಂ. ೩೮ (ಶಿರೂರು).
೨೬ ಅದೇ ಶಾ.ಸಂ. ೨೯, (ಬಾಗಲಕೋಟೆ ಜಿಲ್ಲೆ).
೨೭. ಬಿ.ಜಿ. ಚಂದ್ರಶೇಖರಪ್ಪ, ಸಮಗ್ರಭಾರತದ ಇತಿಹಾಸ ಪೂರ್ಣಪ್ರಕಾಶನ, ಶಿವಮೊಗ್ಗ, ೨೦೦೨, ಪು ೯೯.
೨೮. ಅದೇ, ಪು ೯೯.
೨೯. ಡಾ. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ೨೦೧೧, ಪು ೪೧೧.
೩೦. ಡಾ. ಎಂ. ಜಿ. ಚಂದ್ರಕಾಂತ, ಡಾ. ಎಂ. ಮಹದೇವಪ್ಪ (ಸಂ) ಭಾರತೀಯ ಸಂಸ್ಕೃತಿ ಮತ್ತು ಕೃಷಿ, ದಿ ಮಿಥಿಕ್ ಸೊಸೈಟಿ, ಬೆಂಗಳೂರು, ೨೦೦೯. ಪು. ೧.
೩೧. ಡಾ. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ೨೦೧೧, ಪು. ೪೧೧.
೩೨. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, (ರಾಯಚೂರು ಜಿಲ್ಲೆ), ದೇವದುರ್ಗ ಶಾಸನ ಸಂ.೩.
೩೩. ಡಾ. ಎಂ.ಜಿ. ಚಂದ್ರಕಾಂತ, ಡಾ. ಎಂ. ಮಹದೇವಪ್ಪ (ಸಂ) ಭಾರತೀಯ ಸಂಸ್ಕೃತಿ ಮತ್ತು ಕೃಷಿ, ದಿ ಮಿಥಿಕ್ ಸೊಸೈಟಿ, ಬೆಂಗಳೂರು, ೨೦೦೯. ಪು. ೨.

೫೩

ಮುಳಗುಂದ ನಾಡಿನ ಶಾಸನಗಳಲ್ಲಿ ಲಿಪಿಕಾರರು

ಡಾ. ಬಿ. ಸುರೇಶ*

ಪ್ರಾಚೀನ ಆಡಳಿತದ ವಿಭಾಗಗಳಲ್ಲಿ ಮುಳಗುಂದ ನಾಡು ಒಂದು. ಬೆಳ್ವೊಲ ಮುನ್ನೂರು ಮತ್ತು ಪುಲಿಗೆರೆ ಅಂಚಿನಲ್ಲಿದ್ದ ಈ ಪ್ರದೇಶವು ಪ್ರಸ್ತುತ ಗದಗ ಜಿಲ್ಲೆಯ ವ್ಯಾಪ್ತಿಯಲ್ಲಿದೆ. ಮುಳುಗಂದ ನಾಡು ಪ್ರದೇಶವು ಐತಿಹಾಸಿಕವಾಗಿ ತುಂಬಾ ಮಹತ್ವವನ್ನು ಪಡೆದಿದ್ದು, ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ಇದೊಂದು ಆಡಳಿತದ ಪ್ರಮುಖ ವಿಭಾಗವಾಗಿತ್ತು. ಈ ಆಡಳಿತ ವಿಭಾಗವು ಮುಳಗುಂದವನ್ನು ಒಳಗೊಂಡಂತೆ ಹೊಸೂರು, ಎಲೆ ಹೊಸೂರು, ಕಣವಿ, ವೆಂಕಟಾಪುರ, ಹರ್ತಿ, ಕುರ್ತಕೋಟಿ, ಕಲ್ಲೂರು, ಎಳವತ್ತಿ, ಎಲಿಶಿರೂರು, ಶಿರೂರು ಹಾಗೂ ನೀಲಗುಂದ ಗ್ರಾಮಗಳನ್ನು ಒಳಗೊಂಡಿತ್ತು. ಇಲ್ಲಿರುವ ಅನೇಕ ದೇವಾಲಯಗಳು, ಶಿಲ್ಪಗಳು, ಶಾಸನಗಳು ಹಾಗೂ ಇನ್ನಿತರ ಐತಿಹಾಸಿಕ ಕುರುಹುಗಳು ಇಲ್ಲಿನ ಐತಿಹಾಸಿಕ ಮಹತ್ವವನ್ನು ಸಾರುತ್ತವೆ.

ಮುಳಗುಂದ ನಾಡಿನ ವ್ಯಾಪ್ತಿಯಲ್ಲಿ ಸುಮಾರು ನೂರಕ್ಕೂ ಅಧಿಕ ಸಂಖ್ಯೆಯ ಶಾಸನಗಳು ದೊರಕಿದ್ದು ಅವುಗಳು ಈ ಪ್ರದೇಶದ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಮೇಲೆ ಬೆಳಕನ್ನು ಚಲ್ಲುತ್ತವೆ. ಆದಾಗ್ಯೂ ಕೆಲವು ಶಾಸನಗಳಲ್ಲಿ ಇಲ್ಲಿನ ಲಿಪಿಕಾರರ ಉಲ್ಲೇಖವಿದ್ದು, ಅವರುಗಳ ವಿವರಗಳನ್ನು ನೋಡಬಹುದು.

ಕ್ರಿ.ಶ. ೯೬೯ರಲ್ಲಿ ರಚನೆಗೊಂಡಿರುವ ಮುಳುಗುಂದ ಶಾಸನ (ಸಂಖ್ಯೆ ೫೧೭) ವು ಸಾಮಿಯಣ್ಣನನ್ನು ನೇರವಾಗಿ ಉಲ್ಲೇಖಿಸದೇಯಿದ್ದರೂ ಶಾಸನದ ಕೊನೆಯಲ್ಲಿ "ಬರೆದಪ ಬಲ್ಮಗ" ಎಂದಿದೆ. ಸರಿ ಸುಮಾರು ಇದೇ ಕಾಲಮಾನದಲ್ಲಿ ರಚನೆಗೊಂಡಿರುವ ನಾಗಾವಿ ಶಾಸನದಲ್ಲಿ " ಬಲ್ಮಗ ಸಾಮಿಯಣ್ಣಂ ಬರೆದೊಂ" ಎಂದು ಸ್ಪಷ್ಟವಾಗಿ ಉಲ್ಲೇಖಗೊಂಡಿರುವ ಸಾಮಿಯಣ್ಣನೇ ಬಹುಶಃ ಮುಳುಗುಂದ ಶಾಸನದಲ್ಲಿ ಉಲ್ಲೇಖಗೊಂಡಿರುವ ಸಾಮಿಯಣ್ಣನಿರಬೇಕೆನಿಸುತ್ತದೆ. ಕ್ರಿ.ಶ. ೧೦೪೨ ರಲ್ಲಿ ರಚನೆಗೊಂಡಿರುವ ಮುಳುಗುಂದ ಶಾಸನ (ಸಂಖ್ಯೆ ೯೭) ವು ಬಮ್ಮನನ್ನು ಉಲ್ಲೇಖಿಸುತ್ತದೆ. ಈತನು ಲಕ್ಷ್ಮೇಶ್ವರ (ಪುರಿಕರನಗರ) ದವನೆಂದೂ, ಸರಸ್ವತಿ ಗಣಕ್ಕೆ ಸೇರಿದವನೆಂದೂ, ಈತನನ್ನು ಬರ್ಮ್ಮಯ್ಯ, ಕುಳಕರಣಿ ಬರ್ಮ್ಮಯ್ಯ, ಬಮ್ಮ ಎಂದೂ ಶಾಸನಗಳಲ್ಲಿ (ಶಿರೂರು) ಉಲ್ಲೇಖಿಸಲಾಗಿದೆ. ಕ್ರಿ.ಶ. ೧೦೮೭ರ ಕುರ್ತಕೋಟಿಯ ಶಾಸನ (ಸಂಖ್ಯೆ ೧೨೭) ವು ಈತನು ಮತ್ತು ಈತನ ಮಗನಾದ ಅಣ್ಣಯ್ಯನನ್ನು ಉಲ್ಲೇಖಿಸುತ್ತದೆ. ಆದ್ದರಿಂದ ಈತನ ಮನೆತನವು "ಲಿಪಿಕಾರ" ಮನೆತನವಿದ್ದಿರಬಹುದೆಂದು ಹೇಳಬಹುದು.

ಕ್ರಿ.ಶ. ೧೦೮೭ ರ ಕುರ್ತಕೋಟಿಯ ಶಾಸನ (ಸಂಖ್ಯೆ ೧೨೭) ವು ಕುಳಕರಣಿ ಮಾಬಳಾರ್ಯನನ್ನು ಹೆಸರಿಸುತ್ತದೆ.

ಪರಹಿತನ್ನೂರ್ವರ ಪದ
ಸರಸೀರುಹಾಮೋದ ಮಧುಕರಂ ಶಿವಭಕ್ತಂ
ಕರವತಿಶಯಮಾಗಿರೆ ವಿ
ಸ್ತರದಿಂ ಕುಳಕರಣಿ ಮಾಬಳಾರ್ಯಂ ಬರೆದ

ಎಂದಿರುವುದನ್ನು ಗಮನಸಿದರೆ ಈತನು ಶಿವಭಕ್ತನಾಗಿದ್ದು ಬೇರೆಯವರ ಹಿತವನ್ನು ಬಯಸುತ್ತಿದ್ದನು ಎಂದು ಹೇಳಬಹುದು.

ಕ್ರಿ.ಶ. ೧೧೩೮ ರ ಎಲಿಶಿರೂರ ಶಾಸನ (ಸಂಖ್ಯೆ ೫೦) ವು ಗಣಪೋಜನನ್ನು ಉಲ್ಲೇಖಿಸುತ್ತಗದೆ. "ಹೊಸವೂರ ಮೊರಕೇಶ್ವರ ದೇವರ ಓಜನ ಮಗ ಸಿಂಗೋಜನಪುತ್ರ ಗಣಪೋಜನ ಬರೆದಪಂ" ಎಂದಿರುವುದನ್ನು ಗಮನಿಸಿದರೆ ಈತನೂ ಸಹ 'ಲಿಪಿಕಾರ' ವಂಶದವನರಬೇಕು ಎನಿಸುತ್ತದೆ. ಶಾಸನದಲ್ಲಿ ಈತನ ತಂದೆ ಸಿಂಗೋಜನನ್ನು ಮತ್ತು ಆತನ ತಂದೆ ಓಜನನ್ನು ಉಲ್ಲೇಖಿಸಲಾಗಿದೆ. ಕ್ರಿ.ಶ. ೧೧೪೭ರ ಹೊಸೂರಿನ ಶಾಸನ (ಸಂಖ್ಯೆ ೩೬) ವು ಬಮ್ಮೋಜನನ್ನು

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಳುಗುಂದ, ಗದಗ.

ಹೆಸರಿಸಿದೆ. ಈ ಶಾಸನದಲ್ಲಿ "ಕಲ್ಲುಕೆರೆಯ ಬಮ್ಮೋಜನು ಕಣ್ಡರಿಸಿದಂ" ಎಂದಿರುವುದನ್ನು ಗಮನಿಸಿದರೆ ಈತನೇ ಈ ಶಾಸನದ ಲಿಪಿಕಾರನೆಂದು ಸ್ಪಷ್ಟವಾಗಿ ಹೇಳಬಹುದು.

ಕ್ರಿ.ಶ. ೧೧೬೭ರ ಎಲಿಶಿರೂರಿನ ಶಾಸನದಲ್ಲಿ 'ಬೊಪ್ಪ' ನೆಂಬ ಲಿಪಿಕಾರರನ್ನು ಉಲ್ಲೇಖಿಸಿದೆ. ೧೭ ಸಾಲುಗಳಲ್ಲಿರುವ ಈ ಶಾಸನವು ಇಲ್ಲಿನ ಪ್ರಸಿದ್ದ ಬೋಗೇಶ್ವರ ದೇವರಿಗೆ ಮಹಾಪ್ರಭು ದಾಸಿರಾಜಯ್ಯನು ಒಂದು ತೋಟವನ್ನು ದಾನ ನೀಡಿದ ವಿವರವನ್ನು ನೀಡುತ್ತದೆ. ಕುರ್ತಕೋಟಿಯ ಮತ್ತೊಂದು ಶಾಸನದಲ್ಲಿ 'ಮಂಟುರಾಯೋಜ' ನನ್ನು, ನೀಲಗುಂದ ಶಾಸನದಲ್ಲಿ 'ಕನ್ನೋಜ' ನನ್ನು ಉಲ್ಲೇಖಿಸಲಾಗಿದೆ.

ಕ್ರಿ.ಶ. ೧೦೨೮ರ ಹೊಸೂರಿನ ಶಾಸನ (ಸಂಖ್ಯೆ ೬೫) ವು "ಮಹೀಮಂಡಳದೊಳ್ ಸ್ಥಿರಮಾಗಿರೆ ಪೊಲಗ ಸಾಸನಮಂ ಬರೆಸಿದಂ" ಎಂದಿರುವುದನ್ನು ಗಮನಿಸಿದರೆ ಪೊಲಗನು ಇಲ್ಲಿನ ಶಾಸನಗಳನ್ನು ಬರೆಸುತ್ತಿದ್ದನೆಂದು ಸ್ಪಷ್ಟವಾಗುತ್ತದೆ. ಒಂದನೇ ಜಗದೇಕಮಲ್ಲನ ಕಾಲದ ಈ ಶಾಸನವನ್ನು ಪೊಲೆಗನು ಬರೆಸಿದುದಾಗಿ, ಅದನ್ನು ನೆಲನು ಮತ್ತು ಅರ್ಕನು ನಿಲ್ಲಿಸಿದುದಾಗಿ ಈ ಶಾಸನದಲ್ಲಿ ಹೇಳಲಾಗಿದೆ. ಅಂದರೆ ಒಂದು ಶಾಸನ ರಚನಾ ಮತ್ತು ಸ್ಥಾಪನಾ ಪ್ರಕ್ರಿಯೆಯಲ್ಲಿ ಯಾರೆಲ್ಲಾ ಕೆಲಸ ಮಾಡುತ್ತಿದ್ದರು ಎನ್ನುವ ಸೂಕ್ಷ್ಮ ಸಂಗತಿಗಳನ್ನು ಈ ಶಾಸನದಿಂದ ತಿಳಿಯಬಹುದು.

ಪ್ರಾಚೀನ ಮುಳಗುಂದ ನಾಡು ಆಡಳಿತಾತ್ಮಕವಾಗಿ ಒಂದು ಚಿಕ್ಕ ಉಪ ವಿಭಾಗವಾಗಿದ್ದರೂ ಇಲ್ಲಿನ ಶಾಸನಗಳಲ್ಲಿ ಹತ್ತಕ್ಕೂ ಅಧಿಕ ಲಿಪಿಕಾರರನ್ನು, ಅವರಲ್ಲಿ ಕೆಲವರ ವಂಶಾವಳಿಯನ್ನು ಮತ್ತು ಇನ್ನೂ ಕೆಲವರ ಗುಣಗಾನಗಳನ್ನು ತಿಳಿಯಬಹುದಾಗಿದೆ.

ಆಕರ ಗ್ರಂಥಗಳು

೧. ಕನ್ನಡ ವಿಷಯ ವಿಶ್ವಕೋಶ.

೨. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂ. ೧೧, ೧೫ ಮತ್ತು ೧೮.

೩. ಎಪಿಗ್ರಾಫಿಯಾ ಇಂಡಿಕಾ, ಸಂ. ೧೩.

೪. ಡಾ. ಧನವಂತ ಹಾಜವಗೋಳ, ಮುಳಗುಂದ ನಾಡು: ಒಂದು ಅಧ್ಯಯನ, ಮಹಾದೇವಿ ಪ್ರಕಾಶನ, ಧಾರವಾಡ–೨೦೦೪.

೫೪

ನಾಗಮಂಗಲ ತಾಲೂಕಿನ ಶಾಸನೋಕ್ತ ಕೆರೆ-ಕಟ್ಟೆಗಳು

ಡಾ. ಟಿ. ಉಮಾ* ಡಾ. ಜಿ. ಕರಿಯಪ್ಪ**

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ೩೦ ಜಿಲ್ಲೆಗಳಲ್ಲಿ ಮಂಡ್ಯ ಜಿಲ್ಲೆಯು ಒಂದಾಗಿದ್ದು. ಈ ಜಿಲ್ಲೆಯಲ್ಲಿರುವ ಏಳು ತಾಲೂಕುಗಳಲ್ಲಿ ಒಂದಾದ ನಾಗಮಂಗಲ ತಾಲೂಕಿನ ಇತಿಹಾಸವು ತನ್ನದೇ ಆದಂತಹ ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿದೆ. ಏಕೆಂದರೆ ಕರ್ನಾಟಕದ ಪ್ರಸಿದ್ಧ ರಾಜಮನೆತನಗಳಾದ ಗಂಗ, ಹೊಯ್ಸಳ, ವಿಜಯನಗರ ಸಾಮ್ರಾಜ್ಯ, ಮೈಸೂರು ಒಡೆಯರು ಹಾಗೂ ನಾಗಮಂಗಲದ ಪ್ರಭುಗಳು ಈ ಪ್ರದೇಶದಲ್ಲಿ ರಾಜ್ಯಭಾರ ಮಾಡಿದ್ದಾರೆ.[೧]

ನಾಗಮಂಗಲ ತಾಲೂಕಿನ ದಕ್ಷಿಣ ಭಾಗಕ್ಕೆ ಹೇಮಾವತಿ ಎಡದಂಡೆ ನಾಲೆ ಹರಿದು ಬಂದು ಸಾವಿರಾರು ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸುತ್ತಿದೆ. ಇಲ್ಲಿ ಕಂಡುಬರುವ ಪ್ರಮುಖ ಕೆರೆಗಳೆಂದರೆ ಹಿರಿಕೆರೆ, ಸೂಳೆಕೆರೆ, ಸಿಂಗರಸಿನಕೆರೆ, ಮತ್ತು ಅಮ್ಮನಕೆರೆ ಇವುಗಳಲ್ಲದೆ ಈ ತಾಲೂಕಿನಲ್ಲಿ ಎರಡು ಚಿಕ್ಕ ನದಿಗಳು ಹರಿಯುತ್ತವೆ. "ಲೋಕಪಾವನಿ" ನದಿಯು ಬೋಗಾದಿ ಸಮೀಪದ ಕಳ್ಳಿಗುಂದಿ ಎಂಬ ಪ್ರದೇಶದಲ್ಲಿ ಹುಟ್ಟಿ ದಕ್ಷಿಣಾಭಿಮುಖವಾಗಿ ಹರಿದು, ಪಾಂಡವಪುರ ತಾಲೂಕಿನಲ್ಲಿ ಸಂಪರ್ಕಿಸಿ ಶ್ರೀರಂಗಪಟ್ಟಣದ ಬಾಬುರಾಯನ ಕೊಪ್ಪಲಿನ ಹತ್ತಿರ ಹರಿದು ಕಾವೇರಿ ನದಿಯನ್ನು ಸೇರುತ್ತದೆ. ಈ ನದಿಗೆ ನಾಗಮಂಗಲ ತಾಲೂಕಿನ ಕರಿಕ್ಯಾತನಹಳ್ಳಿ ಬಳಿ ಅಣೆಕಟ್ಟೆಯನ್ನು ನಿರ್ಮಿಸಿದ್ದಾರೆ.

ಇದನ್ನು 'ಉಯ್ಯನಹಳ್ಳಿ ಅಣೆ' ಎಂತಲೂ ಕರೆಯುತ್ತಾರೆ. ಅಲ್ಲದೆ ವೀರವೈಷ್ಣವಿ ನದಿಯು ಶಿಂಷಾ ನದಿಯ ಉಪನದಿಯಾಗಿದ್ದು, ಇದೂ ಸಹ ಬೆಳ್ಳೂರು ಹೋಬಳಿಯ ನಲ್ಲಿಗೆರೆ ಸಮೀಪದಲ್ಲಿ ಈ ತಾಲೂಕನ್ನು ಪ್ರವೇಶಿಸಿ ಆಗ್ನೇಯ ಭಾಗಕ್ಕೆ ಹರಿದು ಮಂಡ್ಯದ ಹತ್ತಿರ ಶಿಂಷಾ ನದಿಯನ್ನು ಸೇರುತ್ತದೆ. ಈ ನದಿಗೆ ದುಮ್ಮಸಂದ್ರ ಗ್ರಾಮದ ಬಳಿ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಈ ಎರಡು ಚಿಕ್ಕ ನದಿ ಪಾತ್ರಗಳ ಪ್ರದೇಶಗಳು ಸಹ ಸಾವಿರಾರು ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸುತ್ತವೆ.

ಶಾಸನೋಕ್ತ ಕೆರೆ-ಕಟ್ಟೆಗಳು

ನಾಗಮಂಗಲ ತಾಲೂಕಿನ ಕೆರೆ-ಕಟ್ಟೆಗಳು ಕೆಲವೊಂದು ಶಾಸನದಲ್ಲಿ ಉಲ್ಲೇಖಿತವಾದ ಕೆರೆ-ಕಟ್ಟೆಗಳು ಹಾಗೂ ಇನ್ನೂ ಕೆಲವು ಐತಿಹಾಸಿಕವಾಗಿ ಪ್ರಸಿದ್ಧಿ ಪಡೆದಿರುವ ಕೆರೆ-ಕಟ್ಟೆಗಳಾಗಿ ಕಂಡುಬಂದಿವೆ. ಹಾಗಾಗಿ ನಾನು ಈ ಪ್ರಸ್ತುತ ಲೇಖನದಲ್ಲಿ ಈ ಎರಡು ರೀತಿಯ ಕೆರೆ-ಕಟ್ಟೆಗಳ ಬಗ್ಗೆಯೂ ಕೂಲಂಕುಷವಾಗಿ ಪರಿಶೀಲಿಸಿ, ಕ್ಷೇತ್ರಕಾರ್ಯ ಮಾಡಿ, ಕೆಲವೊಂದು ಗ್ರಂಥಗಳನ್ನು ಪರಾಮರ್ಶಿಸಿ ಮತ್ತು ಶಾಸನಗಳಲ್ಲಿ ಉಲ್ಲೇಖ ಗೊಂಡಿರುವ ಮಾಹಿತಿಗಳನ್ನಾಧರಿಸಿ ಕೆರೆ-ಕಟ್ಟೆಗಳು, ತೂಬುಗಳು, ಕಾಲುವಳಿಗಳು ಇತ್ಯಾದಿ ಪ್ರಮುಖ ನೀರಾವರಿ ವ್ಯವಸ್ಥೆಗಳ ಪ್ರಾಮುಖ್ಯತೆಯನ್ನು ಕುರಿತಂತೆ ಈ ನನ್ನ ಲೇಖನದಲ್ಲಿ ವಿವರಿಸಲು ಪ್ರಯತ್ನಿಸಿದ್ದೇನೆ.

ನಾಗಮಂಗಲ ತಾಲೂಕಿನಲ್ಲಿ ಮೊದಲಿಗೆ ಶಾಸನೋಕ್ತವಾಗಿ ಉಲ್ಲೇಖಿತವಾಗಿರುವ ಪ್ರಮುಖ ಕೆರೆಯೆಂದರೆ "ಸುಖದೆರೆ" ಎಂಬ ಗ್ರಾಮದಲ್ಲಿ ನಿರ್ಮಿಸಲಾಗಿರುವ ಕೆರೆಯ ಬಗ್ಗೆ ಮಾಹಿತಿಯನ್ನು ಸುಮಾರು ಕ್ರಿ.ಶ. ೧೧೨೦ರ ಶಾಸನದಲ್ಲಿ ಕಂಡುಬಂದಿದೆ. ಪ್ರಸ್ತುತ ಈ ಶಾಸನವು ಸುಖದೆರೆ ಊರಿನ ಲಕ್ಕಮ್ಮನ ದೇವಾಲಯದ ಮುಂದೆಯೇ ಬಿದ್ದಿರುವ ಕಲ್ಲಿನ ಮೇಲೆ ಬರೆಯಲ್ಪಟ್ಟಿದೆ. ಈ ಶಾಸನದಲ್ಲಿ ಉಲ್ಲೇಖವಾಗಿರುವ ವಿಷಯವೆಂದರೆ ವಿಷ್ಣುವರ್ಧನನ ಆಳ್ವಿಕೆಯ ಕಾಲದಲ್ಲಿ "ಜಕಶೆಟ್ಟಿ" ಎಂಬುವವನು ಸುಖದೆರೆಯಲ್ಲಿ ಬಸದಿಯನ್ನು ಮತ್ತು ಕೆರೆಯೊಂದನ್ನು ಕಟ್ಟಿಸಿ ಭೂದಾನಗಳನ್ನು ನೀಡಿದ್ದಲ್ಲದೇ, "ತೆಪ್ಪಸುಂಕ"ದೊಂದಿಗೆ ಸಣ್ಣಕೆರೆಯನ್ನು ದಾನವಾಗಿ ನೀಡಿದ್ದನೆಂದು ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ.[೨] ಸುಖದೆರೆ ಗ್ರಾಮದ ಪೂರ್ವದಲ್ಲಿ "ಮತ್ತಿಕೆರೆ" ಎಂಬ ಕೆರೆಯಿದೆ. ಈಗ ಈ ಕೆರೆ ಸಂಪೂರ್ಣವಾಗಿ ಮುಚ್ಚಿಹೋಗಿದ್ದು, ಈ ಕೆರೆಯ ಅಂಗಳದಲ್ಲಿ

* ಸಂಶೋಧನಾ ವಿದ್ಯಾರ್ಥಿನಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು-೫೭೦೦೦೬.
** ಸಹ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು-೫೭೦೦೦೬.

ತೆಂಗಿನ ತೋಟಗಳು ಆವರಿಸಿವೆ. ಕೆರೆ ಇದ್ದ ಗುರುತಿಗೆ ಕೆರೆಯ ಏರಿ ಮಾತ್ರ ಉಳಿದಿದೆ. ಈ ಗ್ರಾಮದ ಮತ್ತೊಂದು ಬದಿಯಲ್ಲಿ ಒಂನು ಕೆರೆ ಇದ್ದು ಅದನ್ನೇ "ಸುಖದೆರೆ ಕೆರೆ" ಎನ್ನುತ್ತಾರೆ. ಇದು ಮಳೆಯಾಶ್ರಿತ ಕೆರೆಯಾಗಿದೆ. ಇಂದು ಈ ಕೆರೆಯ ಸುತ್ತಮುತ್ತಲಿನ ಪ್ರದೇಶವು ಗ್ರಾಮದವರಿಂದ ಒತ್ತುವರಿಯಾಗಿದ್ದು, ಪ್ರಸ್ತುತ ಕೆರೆಯ ಮೂಲ ಕಾಣದಂತೆ ಸಂಪೂರ್ಣವಾಗಿ ಕಣ್ಮರೆಯಾಗಿದೆ.

ನಾಗಮಂಗಲ ತಾಲೂಕಿನ ಪುರದ ಕಟ್ಟೆಯ ತೆಂಗಿನ ತೋಟವೊಂದರಲ್ಲಿ ದೊರೆತ ಕ್ರಿ.ಶ. ೧೧೩೯ರ ಶಾಸನದಲ್ಲಿ ಕಶ್ಯಪಗೋತ್ರಕ್ಕೆ ಸೇರಿದ "ಮಾಗಿಸೊಡ" ಮತ್ತು "ಮಾಕಬ್ಬೆ" ಎಂಬ ಇಬ್ಬರು ಕೆರೆಗಳನ್ನು ನಿರ್ಮಿಸಿ ಅವರ ಹೆಸರುಗಳನ್ನು ಮಂಚನ ಸಮುದ್ರ, ಮಾಚಸಮುದ್ರ ಎಂಬುದಾಗಿ ಕರೆಸಿಕೊಂಡಿರುವುದು ಶಾಸನದಲ್ಲಿ ಉಲ್ಲೇಖಿತವಾಗಿದೆ.[೩] ಈ ಶಾಸನದ ಕಲ್ಲು ಈ ತಾಲೂಕಿನ ಬೇಚಿರಾಕ್ ಗ್ರಾಮದ ಬೊಮ್ಮನಾಯಕನಹಳ್ಳಿಯ ಸಮೀಪದ ಶ್ರೀಕಂಠೇಗೌಡ ಮತ್ತು ಹನುಮಂತೇಗೌಡ ಎಂಬ ಸಹೋದರರಿಗೆ ಸೇರಿದ ಹೊಲದ ನೆಲದಲ್ಲಿ ಬಿದ್ದಿತ್ತು, ನಾನು ಕ್ಷೇತ್ರಕಾರ್ಯ ಮಾಡಿದ ಸಂದರ್ಭದಲ್ಲಿ ಅಲ್ಲಿನ ಗ್ರಾಮಸ್ಥರ ಸಹಾಯದಿಂದ ಶಾಸನವನ್ನು ನಿಲ್ಲಿಸಲಾಯಿತು. ಇದರ ಪ್ರಕಾರ ಇಬ್ಬರು ಸಹೋದರರು ತಮ್ಮ ತಂದೆಯಾದ "ಮಾಚೋಡ" ಮತ್ತು ತಾಯಿಯಾದ "ಮಾಕಬ್ಬೆಯ" ಹೆಸರಿನಲ್ಲಿ ಈ ಎರಡು ಕೆರೆಗಳನ್ನು ನಿರ್ಮಿಸಿದ್ದಾರೆ ಮತ್ತು ಅವುಗಳಿಗೆ ಮಾಚಸಮುದ್ರ ಮತ್ತು ಮಾಕಸಮುದ್ರ ಎಂದು ಹೆಸರಿಸುತ್ತಾರೆ. ನಾಗಮಂಗಲ ಪಟ್ಟಣದ ವೀರಭದ್ರ ದೇವಾಲಯದ ಬಳಿ ನಿಲ್ಲಿಸಿರುವ ಕ್ರಿ.ಶ. ೧೧೭೮ರ ಶಾಸನದಲ್ಲಿ ಮಾರಸಿಂಗ ನಾಯಕನ ಸಾಮಾಂತಾಧಿಕಾರಿ ಪಟ್ಟಣಸ್ವಾಮಿ ಸೋವಿಶೆಟ್ಟಿ ಮೂರು ಕೆರೆಗಳನ್ನು ತೋಡಿಸಿ, ಪಾರ್ಶ್ವನಾಥ ಜಿನಾಲಯವನ್ನು ನಿರ್ಮಿಸಿದ ಬಗ್ಗೆ ಶಾಸನದಲ್ಲಿ ಉಲ್ಲೇಖಿತಗೊಂಡಿದೆ.[೪]

ನಾಗಮಂಗಲ ತಾಲೂಕಿನ ಬೆಳ್ಳೂರು ಗ್ರಾಮದ ಮೂಲೆ ಸಿಂಗೇಶ್ವರ ದೇವಾಲಯದ ಬಾಗಿಲಿನ ಬಲಭಾಗದಲ್ಲಿ ನಲ್ಲಿಸಿರುವ ಕ್ರಿ.ಶ. ೧೨೬೯ರ ಶಾಸನದಲ್ಲಿ ಬೆಳ್ಳೂರು ಮಹಾಜನರು ಅಗ್ರಹಾರವನ್ನು, ಮಹಾಪ್ರಧಾನ ಪೆರುಮಾಳದೇವ ದಣ್ಣಾಯಕ ಮತ್ತು ಶ್ರೀರಂಗಪುರದ ಮಾಹಾಜನರ ನಡುವೆ ಬಳಗು, ದಡಿಗ, ಅರಶಿ ಮತ್ತು ಚಾಕಿಯ ನಾಗಹಳ್ಳಿಯ ಗ್ರಾಮಸ್ಥರ ಸಮ್ಮುಖದಲ್ಲಿ ಕೆರೆಯನ್ನು ಪುನಃ ನಿರ್ಮಾಣ ಮಾಡಿದ್ದಕ್ಕಾಗಿ ಶ್ರೀರಂಗಪುರದ ಗ್ರಾಮಸ್ಥರು ಆ ಕೆರೆಯ ಕೆಳಗಿನ ತರಿಭೂಮಿಯ ಬದಲಾಗಿ ಸ್ವಲ್ಪ ಖುಷ್ಕಿ ಭೂಮಿಯನ್ನು ವಿನಮಯ ಮಾಡಿಕೊಳ್ಳಬೇಕೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೫] ಈಗ ಈ ಕೆರೆಯನ್ನು ಅಲ್ಲಿನ ಜನರು 'ದಾಸನಕೆರೆಯೆಂದು' ಕರೆಯುವರು .

ಇದೇ ತಾಲೂಕಿನ ಕ್ರಿ.ಶ. ೧೨೬೯ರ ಮೂಲೆಸಿಂಗೇಶ್ವರ ದೇವಾಲಯದ ಬಲಭಾಗದಲ್ಲೇ ನಿಲ್ಲಿಸಿರುವ ಈ ಶಾಸನದ ಮತ್ತೊಂದು ಭಾಗದಲ್ಲಿ ಮಹಾಪ್ರಧಾನ ಪೆರುಮಾಲೆದೇವ ದಣ್ಣಾಯಕ 'ಅಳ್ಳಾಳ ಸಮುದ್ರ' ಮತ್ತು "ಅಂವ್ವರೆಯದೆ" ಕೆರೆಗಳನ್ನು ಪುನರ್ ನಿರ್ಮಾಣಗೊಳಿಸಿದ್ದಕ್ಕಾಗಿ ಆ ಕೆರೆಗಳ ಅಚ್ಚುಕಟ್ಟಿನ ಭೂಮಿಗಳನ್ನು ಪಡೆದು ಇಬ್ಬರು ನಂಬಿಯಾರರು ತಮ್ಮ ಜಮೀನುಗಳನ್ನು ತರಿ ಭೂಮಿಗಳಿಗೆ ವಿನಿಮಯ ಮಾಡಿಕೊಂಡು ಅದಕ್ಕೆ ಪ್ರತಿಯಾಗಿ ಪ್ರತಿ ಖಂಡುಗಕ್ಕೆ ೪ ಹಣ, ಬಿತ್ತುವಟ್ಟ ನೀಡಲು ಸಮ್ಮತಿಸುತ್ತಾರೆ. ಹಾಗೂ ಅಲ್ಲಿನ ಅಧಿಕಾರಿಗಳಿಗೆ ಮತ್ತು ಗೌಡರಿಗೆ ಪಾಲು ನೀಡಲು ಒಪ್ಪಿಗೆ ನೀಡಿರುವುದನ್ನು ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೬]

ನಾಗಮಂಗಲ ತಾಲೂಕಿನ ದೊಂದೆಮಾದಿಹಳ್ಳಿಯ ಕ್ರಿ.ಶ. ೧೫೨೧ರ ಶಾಸನದಲ್ಲಿ[೭] ವಿಠಣ್ಣ ಎಂಬುವವನು "ಮಾಯಿದೇವಿಕೆರೆ" ನಿರ್ಮಿಸಿದುದಕ್ಕಾಗಿ, ಆ ಕೆರೆಯ ಅಚ್ಚುಕಟ್ಟಿನ ಭಾಗದಲ್ಲಿ ೪ ಭಾಗದ ಭೂಮಿಯನ್ನು ದಾನವಾಗಿ ನೀಡಿರುವ ಬಗ್ಗೆ ಈ ಶಾಸನದಲ್ಲಿ ಉಲ್ಲೇಖವಾಗಿದೆ.

ನಾಗಮಂಗಲ ತಾಲೂಕಿನ ಕೆಲಗೆರೆ ಗ್ರಾಮದ ಕ್ರಿ.ಶ. ೧೫ನೇ ಶತಮಾನದ ಶಾಸನವು ವಿಜಯನಗರದ ಪ್ರೌಢದೇವರಾಯನು ಆಳ್ವಿಕೆ ಮಾಡುತ್ತಿದ್ದಾಗ ಹೊನ್ನೆ ನಾಯಕನ ಮಗನಾದ 'ವರದೆಯ ನಾಯಕನು' ಕೆಲ್ಲಂಗೆರೆ ಗ್ರಾಮದಲ್ಲಿ ಕೆರೆಯನ್ನು ಜೀರ್ಣೋದ್ಧಾರ ಮಾಡಿಸಿದನಲ್ಲದೇ, ಅಲ್ಲಿಯೇ ಹೊಸದಾಗಿ ಮತ್ತೊಂದು ಕೆರೆಯನ್ನು ಕಟ್ಟಿಸಿ, ಅ ಕೆರೆಗೆ 'ವರದರಾಜ ಸಮುದ್ರ'ವೆಂದು ಹೆಸರಿಟ್ಟನೆಂಬ ವಿಷಯವು ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ.[೮]

ನಾಗಮಂಗಲದ ಅತ್ಯಂತ ಪ್ರಸಿದ್ಧ ಮತ್ತು ದೊಡ್ಡ ವಿಶಾಲವಾದ ಭೂ ಪ್ರದೇಶವನ್ನು ಆವರಿಸಿಕೊಂಡಿರುವ "ಸೂಳೆಕೆರೆ"ಯ ಬಗ್ಗೆ 'ನಾಗಮಂಗಲದ ಕೈಫಿಯತ್ತಿನಲ್ಲಿ' ಪ್ರಮುಖವಾಗಿ ಉಲ್ಲೇಖವಾಗಿದೆ.[೯] ತಿಮ್ಮಣ್ಣದಣ್ಣಾಯಕ ಎಂಬುವವನು ಈ ಕೆರೆಯನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಕೈಫಿಯತ್ತಿನ ಪ್ರಕಾರ ತಿಮ್ಮಣ್ಣದಣ್ಣಾಯಕನು ಕೆರೆಯ ಒಡ್ಡನ್ನು ನಿರ್ಮಿಸುತ್ತಿರುವಾಗ ಒಡ್ಡು ನಿಲ್ಲದೆ ಇದ್ದುದ್ದರಿಂದ ಆ ಕೆಲಸವು ಪೂರ್ಣವಾಗಲಿಲ್ಲ. ಆಗ ದಣ್ಣಾಯಕನ ಕನಸಿನಲ್ಲಿ ಗಂಗಾದೇವಿಯು ಮುತ್ತೈದೆ ರೂಪದಲ್ಲಿ ಬಂದು "ನಿನ್ನ ಆತ್ಮ ಸಖಿಯಾದ ಗಾಂಧರ್ವ ಪತ್ನಿಯನ್ನು ಬಲಿಕೊಟ್ಟರೆ ಕೆರೆಯ ಒಡ್ಡು ಕುಸಿಯದೆ



ಸುಖಧರೆ ಕೆರೆ



ಪುರದ ಕಟ್ಟೆಯ ಕೆರೆ



ಮೂಲೆ ಸಿಂಗೇಶ್ವರ ದೇವಸ್ಥಾನ, ಬೆಳ್ಳೂರು



ಮೂಲೆ ಸಿಂಗೇಶ್ವರ ದೇವಾಲಯದಲ್ಲಿರುವ ಶಾಸನ



ಕೆರೆಯ ಪಕ್ಕದಲ್ಲಿರುವ ಕಲ್ಲಿನ ಮಂಟಪ



ದಾಸನ ಕೆರೆ, ಬೆಳ್ಳೂರು

ನಿಲ್ಲುತ್ತದೆಂದು" ತಿಳಿಸುತ್ತಾಳೆ. ನಂತರ ತಿಮ್ಮಣ್ಣದಣ್ಣಾಯಕನು ತನ್ನ ಕನಸಿನಲ್ಲಿ ನಡೆದ ವಿಷಯವನ್ನು ಆತನ ಪ್ರಿಯಸಖಿಯಲ್ಲಿ ಪ್ರಸ್ತಾಪಿಸುತ್ತಾನೆ. ಇದನ್ನು ಕೇಳಿದ ಆಕೆ ಆದರ್ಶವಾಕ್ಯವಾಗಿ ಪಾಲಿಸಿ ಸರ್ವಾಲಂಕಾರವಾಗಿ ಶುಭಮೂಹೂರ್ತದಲ್ಲಿ ಕೆರೆಯ ಏರಿಗೆ ಬಂದು ತನ್ನೆಲ್ಲಾ ಆಭರಣಗಳನ್ನು ಬ್ರಾಹ್ಮಣರಿಗೆ ದಾನ ಮಾಡಿ ತನ್ನ ಮಾಂಗಲ್ಯವನ್ನು ಕುಸಿಯುತ್ತಿದ್ದ ಏರಿಯ ಕಟ್ಟೆಯ ಪ್ರದೇಶದಲ್ಲಿ ಹಾಕಿ ಶುಭವನ್ನು ಹಾರೈಸಿ ಕೆರೆಗೆ ಹಾರವಾಗುತ್ತಾಳೆ. ಈ ನಂತರವೇ ಕೆರೆಯ ಕಟ್ಟೆ ನಿಂತು ಅಪಾರವಾದ ಜಲದಾರೆ ಕೆರೆಯಲ್ಲಿ ಶೇಖರವಾಯಿತೆಂದು ಈ ಕೈಫಿಯತ್ತಿನಲ್ಲಿ ಪ್ರಸ್ತಾಪಿಸಲಾಗಿದೆ.

ನಾಗಮಂಗಲ ತಾಲೂಕಿನಲ್ಲಿರುವ ಈ ಸೂಳೆಕೆರೆಯ ಕೆಳಗೆ ಪೂರ್ವ ದಿಕ್ಕಿನಲ್ಲಿ ಅಮ್ಮನಕೆರೆಯೆಂದು ಹೆಸರು ಪಡೆದಿರುವ ಅಮ್ಮನಕಟ್ಟೆಯಿದೆ. ಇದನ್ನು ಸಹಾ ತಿಮ್ಮಣ್ಣದಣ್ಣಾಯಕನು ಕಟ್ಟಿಸಿದನೆಂದು ಕೈಫಿಯತ್ತಿನಲ್ಲಿ ತಿಳಿಸಲಾಗಿದೆ.[೧೦] ಈತನು ತನ್ನ ತಾಯಿಯ ನೆನಪಿಗಾಗಿ ಈ ಕೆರೆಯನ್ನು ನಿರ್ಮಿಸಿ "ಅಮ್ಮನಕೆರೆ" ಎಂದು ಕರೆದನು. ಆದರೆ ಇಂದು ಇದನ್ನು 'ಅಮ್ಮನ ಕಟ್ಟೆ' ಎಂದು ಇಲ್ಲಿನ ಜನತೆ ಕರೆಯುತ್ತಾರೆ. ಸೂಳೆಕೆರೆಯಿಂದ ಬರುವ ನೀರು ಈ ಕೆರೆಗೆ ಕೋಡಿಯೊಂದರ ಮೂಲಕ ಬಂದು ತಲುಪುತ್ತದೆ. ಆದರೆ ಇಂದು ಸೂಳೆಕೆರೆಯಿಂದ ಬರುತ್ತಿದ್ದ ನೀರಿನ ಕಾಲುವೆಯು ದುಸ್ಥಿತಿಯಿಂದ ಕೂಡಿದೆ.

ಚಕ್ರತೀರ್ಥ ಕೊಳ: ನಾಗಮಂಗಲದ ಪೂರ್ವಕ್ಕೆ ಒಂದು ಕಿ.ಮೀ. ದೂರದಲ್ಲಿ ಒಂದು ಕಲ್ಲಿನ ವೃತ್ತಾಕಾರವಾಗಿರುವ ಕೊಳವಿದೆ. ಇದನ್ನು ಚಕ್ರತೀರ್ಥ ಕೊಳವೆಂದು ಕರೆಯುವರು. ಈ ಕೊಳವು ೬೦ ಅಡಿ ವ್ಯಾಸವನ್ನು ಹೊಂದಿದ್ದು, ೩ ರಿಂದ ೪ ಅಡಿಗಳಷ್ಟು ಆಳವಾಗಿರುವುದು ಕಂಡುಬರುತ್ತದೆ.[೧೧] ಇಂದಿಗೂ ಕುಡಿಯಲು ಯೋಗ್ಯವಾದ ನೀರು ಈ ಕೊಳದಲ್ಲಿ ಸಂಗ್ರಹವಾಗಿದೆ. ಇದರಲ್ಲಿ ನೀರು ಯಾವಾಗಲೂ ಒಂದೇ ಮಟ್ಟದಲ್ಲಿರುವುದು ಕಂಡುಬರುತ್ತದೆ. ಈ ಕೊಳವು ಕೂಡ ವಿಜಯನಗರ ಸಂಸ್ಥಾನದ ಅವಧಿಯಲ್ಲಿ ಕಟ್ಟಲ್ಪಟ್ಟಿತು ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಇದು ಕೂಡ ಒಂದು ಪುರಾಣ ಪ್ರಸಿದ್ಧ, ಐತಿಹಾಸಿಕ ಮತ್ತು ಹೆಚ್ಚು ಪ್ರಾಶಸ್ತ್ಯ ಹೊಂದಿರುವ ಕೊಳವಾಗಿದೆ ಎಂದು ಹೇಳಬಹುದು.

ಹೀಗೆ ನಾಗಮಂಗಲ ತಾಲೂಕಿನಲ್ಲಿ ಆಳ್ವಿಕೆ ಮಾಡಿದಂತಹ ಎಲ್ಲಾ ರಾಜಮನೆತನಗಳು, ಪಾಳೇಗಾರರು, ಸಾಮಂತ ಅರಸರು, ನಾಯಕರುಗಳು ತಮ್ಮ ಆಡಳಿತಾವಧಿಯಲ್ಲಿ ಕೆರೆ-ಕಟ್ಟೆಗಳನ್ನು ಕಟ್ಟಿಸಿ, ಬಾವಿಗಳನ್ನು ತೋಡಿಸಿ, ತೂಬುಗಳ ನಿರ್ಮಾಣ ಮಾಡಿ ಇನ್ನೂ ಅನೇಕ ರೀತಿಯಲ್ಲಿ ನೀರಾವರಿ ವ್ಯವಸ್ಥೆಗೆ ಪ್ರೋತ್ಸಾಹ ನೀಡಿ ಅವರ ನೆನಪುಗಳನ್ನು ಅಮರವಾಗಿಸಿಕೊಂಡಿದ್ದಾರೆಂಬುದನ್ನು ಗಮನಿಸಬಹುದಾಗಿದೆ. ಈ ಅಂಶಗಳನ್ನು ಗಮನಿಸಿದಾಗ ನೀರಿನ ಅವಶ್ಯಕತೆ ಪ್ರತಿಯೊಬ್ಬರಿಗೂ, ಪ್ರತಿಯೊಂದು ಜೀವಿಗೂ ಅವಶ್ಯಕ ಎಂಬುದು ಗಮನಾರ್ಹವಾದದ್ದು. ಹಾಗಾಗಿ ನೀರಾವರಿ ವ್ಯವಸ್ಥೆ ಪ್ರಾಚೀನ ಕಾಲದಿಂದಲೂ ಇಂದಿನ ದಿನಗಳವರೆವಿಗೂ ಬಹಳ ಪ್ರಾಮುಖ್ಯತೆ ಪಡೆದುಕೊಂಡು ಬಂದಿದೆ ಎಂಬುದು ಸುಸ್ಥಿತವಾಗಿದೆ.

[ನನ್ನ ಈ ಲೇಖನವನ್ನು ಸಿದ್ಧಪಡಿಸಲು ಸಹಕರಿಸಿದ ಡಾ. ಹೆಚ್.ಎನ್. ಕಾಳಸ್ವಾಮಿ ಅವರಿಗೂ ಹಾಗೂ ಶ್ರೀ ಮುಹಮ್ಮದ್ ಕಲೀಂ ಉಲ್ಲಾ ಅವರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.]

ಪರಾಮರ್ಶನ ಗ್ರಂಥಗಳು

೧. ಪಾರ್ಥಸಾರಥಿ, ಟಿ.ವಿ., ಮಂಡ್ಯ ಜಿಲ್ಲಾ ಗೆಜೆಟಿಯರ್ (ಪರಿಷ್ಕೃತ ಅವೃತ್ತಿ), ೨೦೦೩.

೨. ಎಪಿಗ್ರಾಫಿಯಾ ಕರ್ನಾಟಕ, ಸಂಪುಟ ೭, ಶಾಸನ ಸಂಖ್ಯೆ ೧೪, ನಾಗಮಂಗಲ, ಪುಟ ಸಂಖ್ಯೆ ೧೧, ೧೨.

೩. ಎ.ಕ.ಸಂ. ೭, ಶಾ. ಸಂ. ೧೭, ನಾಗಮಂಗಲ, ಪುಟ ಸಂಖ್ಯೆ ೧೩, ೧೪.

೪. ಎ.ಕ.ಸಂ. ೭, ಶಾ. ಸಂ. ೧೧೮, ನಾಗಮಂಗಲ, ಪುಟ ಸಂಖ್ಯೆ ೧೧೭.

೫. ಎ.ಕ.ಸಂ. ೭, ಶಾ. ಸಂ. ೮೨, ನಾಗಮಂಗಲ, ಪುಟ ಸಂಖ್ಯೆ ೮೪.

೬ ಎ.ಕ.ಸಂ. ೭, ಶಾ. ಸಂ. ೮೩, ನಾಗಮಂಗಲ, ಪುಟ ಸಂಖ್ಯೆ ೮೬.

೭. ಎ.ಕ.ಸಂ. ೭, ಶಾ. ಸಂ. ೧೫೧, ನಾಗಮಂಗಲ, ಪುಟ ಸಂಖ್ಯೆ ೧೫೬.

೮. ಎ.ಕ.ಸಂ. ೭, ಶಾ. ಸಂ. ೫೮, ನಾಗಮಂಗಲ, ಪುಟ ಸಂಖ್ಯೆ ೬೫.

೯. ಕಲುಬುರ್ಗಿ ಎಂ.ಎಂ., ೧೯೯೪, ಕರ್ನಾಟಕ ಕೈಫಿಯತ್ತುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ಸಂಖ್ಯೆ ೮೨-೮೬.

೧೦. ಕಲುಬುರ್ಗಿ ಎಂ.ಎಂ., ೧೯೯೪, ಕರ್ನಾಟಕ ಕೈಫಿಯತ್ತುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ಸಂಖ್ಯೆ ೮೨-೮೬.

೧೧. ಅನಂತರಾಯ, ಸಕ್ಕರೆಯ ಸೀಮೆ, ಅನಂತ ಪ್ರಕಾಶನ, ಮೈಸೂರು, ಪುಟ ಸಂಖ್ಯೆ ೩೦೦-೩೧೦.

೧೨. ಮುಹಮ್ಮದ್ ಕಲೀಂಉಲ್ಲ, ನಾಗಮಂಗಲ ತಾಲೂಕು ದರ್ಶನ.

೫೫

ಮಧ್ಯ ಮಲೆನಾಡಿನ ಶಾಸನೋಕ್ತ ವೃತ್ತಿಗಳು ಮತ್ತು ಉದ್ದಿಮೆಗಳು (ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ)

ಡಾ. ಕೆ.ಪಿ. ಪ್ರಕಾಶ*

ಸುಮಾರು ಸಾವಿರಾರು ವರ್ಷಗಳ ಭವ್ಯ ಇತಿಹಾಸ ಹೊಂದಿರುವ ಮಧ್ಯಮಲೆನಾಡು ಸಹ್ಯಾದ್ರಿ ಪರ್ವತ ಶ್ರೇಣಿಯ ತಪ್ಪಲಿನಲ್ಲಿಯ ರಮಣೀಯ ಪ್ರದೇಶಗಳಿಂದ ಆವೃತವಾಗಿದ್ದು, ತಪೋಭೂಮಿ, ಕರ್ಮಭೂಮಿ ಮತ್ತು ಜ್ಞಾನಭೂಮಿಯಾಗಿದ್ದು ಸಾಕಷ್ಟು ವೈವಿಧ್ಯತೆಯನ್ನು ಹೊಂದಿದೆ. ಶ್ರೀಮಂತವಾದ ಸಂಸ್ಕೃತಿಯ ಪರಂಪರೆ ಹೊಂದಿದ್ದು ಪ್ರಾಗ್ಯೈತಿಹಾಸಿಕ ನೆಲೆವೀಡಾಗಿಯೂ ಬೆಟ್ಟ, ಗುಡ್ಡ, ಹಳ್ಳ, ನದಿ, ತೊರೆ, ಜಲಪಾತಗಳಿಂದ ಕೂಡಿದ ದಟ್ಟ ಮಲೆನಾಡು ಭಾಗವಾಗಿದೆ.

ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ ತಾಲ್ಲೂಕುಗಳು ಸಾಂಸ್ಕೃತಿಕವಾಗಿ, ಸಾಂಪ್ರದಾಯಿಕವಾಗಿ ಹಾಗೂ ರೂಢಿಗತವಾಗಿ ಮಧ್ಯಮಲೆನಾಡು ಭಾಗವೆಂದು ಚಿರಪರಿಚಿತವಾಗಿವೆ. ಈ ಪ್ರದೇಶಗಳು ತಮ್ಮೊಳಗೆ ಭೌಗೋಳಿಕವಾಗಿ ಸಾಮ್ಯತೆಯನ್ನು ಹೊಂದಿದ್ದು ಬೇರೆ ಪ್ರದೇಶಗಳೊಂದಿಗೆ ತುಲನೆ ಮಾಡಿದಾಗ ಭಿನ್ನತೆಯ ವ್ಯಕ್ತವಾಗಿರುವುದಕ್ಕೆ ಕಾರಣ ಇಲ್ಲಿನ ದಟ್ಟವಾದ ಅರಣ್ಯ ಪ್ರದೇಶ. ಈ ಮೂರು ತಾಲ್ಲೂಕುಗಳು ಪ್ರಸ್ತುತ ಎರಡು ಜಿಲ್ಲೆಯ ಭೌಗೋಳಿಕ ಪ್ರದೇಶದಲ್ಲಿ ಹಂಚಿಹೋಗಿದ್ದರೂ ಒಂದೇ ಭೌಗೋಳಿಕ ಪ್ರದೇಶದ ವ್ಯಾಪ್ತಿಯಲ್ಲಿ ಕೇಂದ್ರೀಕರಣಗೊಂಡಿರುವುದನ್ನು ಕಾಣಬಹುದು. ತೀರ್ಥಹಳ್ಳಿಯು ಉಡುಪಿ, ಕೊಪ್ಪ, ಶೃಂಗೇರಿ, ನರಸಿಂಹರಾಜಪುರ ಹಾಗೂ ಹೊಸನಗರ ತಾಲ್ಲೂಕುಗಳಿಂದ ಸುತ್ತುವರಿಯಲ್ಪಟ್ಟಿದ್ದು ಮಲೆನಾಡಿನ ಕೇಂದ್ರಭಾಗವಾಗಿರುವುದನ್ನು ಗಮನಿಸಬಹುದು.

ಈ ಹಿನ್ನೆಲೆಯ ಭೌಗೋಳಿಕ ದೃಷ್ಟಿಕೋನದಲ್ಲಿ ಅಧ್ಯಯನದ ಕಮ್ರಗಳನ್ನು ನಿರೂಪಿಸುವ ಸಂದರ್ಭದಲ್ಲಿ ಮಧ್ಯಮಲೆನಾಡು ಎನ್ನುವ ಮೇಲಿನ ಮೂರು ತಾಲ್ಲೂಕು ಪ್ರದೇಶಗಳು ಭೌಗೋಳಿಕವಾಗಿ ಸಾಮ್ಯತೆಯನ್ನು ಹೊಂದಿದ್ದು ಇನ್ನಿತರ ಪ್ರದೇಶಗಳಿಂದ ಭಿನ್ನವಾಗಿವೆ. ಈ ಮೂರು ತಾಲ್ಲೂಕುಗಳು ತಾಲ್ಲೂಕು ಕೇಂದ್ರಗಳಿಂದ ಸುಮಾರು ೬೦ ಕಿ.ಮೀ. ದೂರದವರೆಗೂ ದಟ್ಟ ಮಲೆನಾಡಿನ ಭಾಗದಿಂದ ಅವೃತವಾಗಿ ಮಲೆನಾಡಿನ ಮಧ್ಯಭಾಗದಲ್ಲಿ ಸ್ಥಿತವಾಗಿದ್ದು ಪಶ್ಚಿಮ ಭಾಗದಲ್ಲಿ ಕರಾವಳಿಯ ಘಟ್ಟ ಪ್ರದೇಶಗಳು ಪೂರ್ವದಲ್ಲಿ ದೂರದ ಅರೆಮಲೆನಾಡಿನ ಪ್ರದೇಶಗಳು ಆವರಿಸಿಕೊಂಡಿರುವುದಿರಂದ ಮಧ್ಯಮಲೆ ನಾಡಿನ ಕೇಂದ್ರಭಾಗವೆಂದು ಕರೆಯಲಾಗುವುದು. ಮಧ್ಯಮಲೆನಾಡು ಎಂಬ ಪದಕ್ಕೆ ನಿಖರವಾದ ಅರ್ಥವನ್ನು ಅಥವಾ ವ್ಯಾಪ್ತಿಯನ್ನು ನಿಗದಿಪಡಿಸುವ ಕೆಲಸ ಕೈಗೊಂಡಾಗ ಕರ್ನಾಟಕದ ಭೌಗೋಳಿಕ ನಕ್ಷೆಯಲ್ಲಿ ಮೂರು ತಾಲ್ಲೂಕುಗಳು ಮಲೆನಾಡಿನ ಕೇಂದ್ರ ಸ್ಥಾನವೆಂದು ಸಾದರಪಡಿಸಬಹುದಾಗಿದೆ.

ಈ ಮೇಲಿನ ಅಂಶಗಳನ್ನು ಮುಂದಿಟ್ಟುಕೊಂಡು, ಮಧ್ಯಮಲೆನಾಡು ಸಾಂಸ್ಕೃತಿಕ ಮೌಲ್ಯಗಳನ್ನು ಹೊಂದಿದ್ದು ಭಿನ್ನಪರಿಸರದಿಂದ ವಿಭಜಿಸಲ್ಪಟ್ಟು ತನ್ನದೇ ಆದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು, ಸ್ಥಿತ್ಯಂತರಗಳನ್ನು, ಬದಲಾವಣೆಗಳನ್ನು ಹೊಂದುತ್ತಾ ತನ್ನದೇ ಆದಂತಹ ಜೀವನ ಮೌಲ್ಯಗಳನ್ನು ರಕ್ಷಿಸಿ ಬೆಳೆಸಿಕೊಂಡು ಬಂದಿರುವುದನ್ನು ವಿವೇಚಿಸಬಹುದು. ಮಧ್ಯಮಲೆನಾಡು ಜನರು ಆಚರಿಸುವ ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳು, ಹಬ್ಬ-ಹರಿದಿನಗಳು, ರೂಢಿ-ಸಂಪ್ರದಾಯಗಳು ಏಕತಾನತೆಯನ್ನು ಪ್ರದರ್ಶಿಸುವಂತಹವುಗಳಾಗಿದ್ದು ಬೇರೆ ಪರಿಸರದ ಜೊತೆಗಿನ ಹೊಂದಿಕೊಳ್ಳಲಾರದಂತಹ ಭಿನ್ನತೆಯನ್ನು ಪರಿವೀಕ್ಷಿಸುವಂತಿವೆ. ಇಲ್ಲಿನ ಧಾರ್ಮಿಕ ಕಟ್ಟುಪಾಡುಗಳು, ಜನರ ಅಭಿರುಚಿ ಬಹುಶಃ ಒಂದೇ ರೀತಿಯಾಗಿರುವುದಕ್ಕೆ ಉದಾಹರಣೆಯಾಗಿ ಯಕ್ಷಗಾನ-ಬಯಲಾಟ, ಜಾನಪದ ನೃತ್ಯಗಳು, ಅಂಟಿಕೆ-ಪಿಂಟಿಕೆ ಮುಂತಾದವುಗಳು ಕಂಡುಬರುತ್ತವೆ. ಇಲ್ಲಿನ ಬಹುಸಂಖ್ಯಾತರು ಒಕ್ಕಲಿಗರಾಗಿದ್ದು ಮೂರು ತಾಲ್ಲೂಕುಗಳ ನಡುವೆಯೇ ಭಾಗಶಃ ವೈವಾಹಿಕ ಸಂಬಂಧಗಳು ನಡೆಯುವುದರಿಂದ ಮಧ್ಯಮಲೆನಾಡಿನ ಜನರ ಆಚಾರ-ವಿಚಾರ, ಜನಜೀವನ, ಉಡುಗೆ-ತೊಡುಗೆ, ಆಹಾರ ವಸತಿಯಲ್ಲಿನ ಸಾಮ್ಯತೆಯನ್ನು ಪರಿಗಣಿಸಬಹುದಾಗಿದೆ.

---

* ಸಹಾಯಕ ಪ್ರಾಧ್ಯಾಪಕರು, ಶ್ರೀ ಜಿ.ಸಿ.ಬಿ.ಎಂ. ಕಾಲೇಜು, ಶೃಂಗೇರಿ.

ಮಧ್ಯಮಲೆನಾಡು ಅಂದಿನ ಕಾಲದಲ್ಲಿ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಪ್ರಧಾನ ಕೇಂದ್ರವಾಗಿತ್ತು ಎಂಬುದಕ್ಕೆ ಶಾಸನಗಳು ವಿಪುಲವಾದ ಮಾಹಿತಿಯನ್ನು ನೀಡುವುದರ ಮೂಲಕ ಇಲ್ಲಿನ ಭವ್ಯ ಇತಿಹಾಸಕ್ಕೆ ಮೆರಗನ್ನು ನೀಡುತ್ತವೆ. ಪ್ರಮುಖವಾಗಿ ಆಳ್ವಾರರು, ಸಾಂತರರು, ಹೊಯ್ಸಳರು, ಆರಗ ಮಾಂಡಳಿಕರು, ಕಳಸ–ಕಾರ್ಕಳ ಪ್ರಭುಗಳು, ದಾನಿವಾಸ ಒಡೆಯರು, ಕೆಳದಿ ನಾಯಕರು, ಮೈಸೂರು ಒಡೆಯರು ನೇರವಾಗಿ ಆಡಳಿತ ನಡೆಸಿದ್ದು ಇಲ್ಲಿನ ಇತಿಹಾಸಕ್ಕೆ ಎಲ್ಲಾ ಕಾಲಘಟ್ಟದಲ್ಲಿ ಶ್ರೀಮಂತ ಕೊಡುಗೆ ನೀಡಿದ್ದಾರೆ.

ವೃತ್ತಿಗಳು ಮತ್ತು ಉದ್ದಿಮೆಗಳು

ಕೃಷಿ ಮತ್ತು ತೋಟಗಾರಿಕೆಯು ಅಂದಿನ ಕಾಲದ ಪ್ರಧಾನ ವೃತ್ತಿಗಳಾಗಿದ್ದರೂ, ಇನ್ನಿತರ ವೃತ್ತಿಗಳು ಆಚರಣೆಯಲ್ಲಿದ್ದವು ಮತ್ತು ಅವುಗಳು ಅಗತ್ಯವಾಗಿದ್ದವು ಎನ್ನುವ ಅಂಶವನ್ನು ಶಾಸನಗಳು ತಿಳಿಸುತ್ತವೆ. ಆದರೆ ಬೇರೆ ಬೇರೆ ವೃತ್ತಿಗಳು ಮತ್ತು ಉದ್ದಿಮೆಗಳ ಹೆಸರುಗಳನ್ನು ಹೇಳುತ್ತಿದ್ದರೂ ಸವಿಸ್ತಾರವಾದ ವಿವರಗಳನ್ನು ನೀಡುತ್ತಿಲ್ಲ, ನೇಯ್ಗೆಯ ಪ್ರಧಾನವಾದ ಉದ್ದಿಮೆಯಾಗಿದ್ದಿತು. ಒಂದು ಶಾಸನದಲ್ಲಿ ಮಗ್ಗದ ಉಲ್ಲೇಖವಿದೆ. ಬಟ್ಟೆಯನ್ನು ನೇಯಲು ಮಗ್ಗಗಳನ್ನು ಬಳಸುತ್ತಿದ್ದರು. ಇದರಲ್ಲಿ ಜೇಡರ ಮಗ್ಗ ಎಂಬುದರ ಮಾಹಿತಿ ಇದೆ. ಕೆಲವು ಶಾಸನಗಳಲ್ಲಿ ಪಟ್ಟೆ, ಪಠವಳಿ, ಝುಲ್ಲಿ ಪಟ್ಟೆ ಎಂಬ ಉಲ್ಲೇಖಗಳಿದ್ದು, ಅವುಗಳು ಬೆಲೆಬಾಳುವ ರೇಷ್ಮೆ ವಸ್ತುಗಳಾಗಿದ್ದು ಶ್ರೀಮಂತರಿಗೆ ಮತ್ತು ದೇವರಿಗೆ ನೀಡುವ ವಸ್ತುಗಳಾಗಿವೆ. ರೇಷ್ಮೆ ಬಟ್ಟೆಗಳನ್ನು ನೇಯುವವರಿಗೆ ಪಟ್ಟೆಗಾರರೆಂದು ಕರೆಯುತ್ತಿದ್ದರು. ನೇಯ್ಗೆ ವೃತ್ತಿಯವರನ್ನು ಜೇಡ ಅಥವಾ ಜಾಡ ಎಂದು ಗುರುತಿಸಲಾಗಿದೆ.

ಎಣ್ಣೆ ತೆಗೆಯುವುದು ಒಂದು ಪ್ರಮುಖ ಉದ್ದಿಮೆಯಾಗಿರಬಹುದು. ತೈಲಿಗರು ಎಣ್ಣೆಯ ಬೀಜಗಳನ್ನು ಗಾಣಕ್ಕೆ ಹಾಕಿ ಎಣ್ಣೆಯನ್ನು ತೆಗೆಯುತ್ತಿದ್ದರು. ಎಣ್ಣೆ ಅಂದಿನ ವ್ಯಾಪಾರದ ಸರಕಾಗಿದ್ದು ಬಹಳಷ್ಟು ಶಾಸನಗಳಲ್ಲಿ ಎಣ್ಣೆಯ ಉಲ್ಲೇಖವಿದೆ.

ಬೆಲ್ಲ ಮತ್ತು ಸಕ್ಕರೆಗಳನ್ನು ಮಾರಾಟ ಮಾಡುತ್ತಿದ್ದ ವಿಷಯ ಶಾಸನಗಳಲ್ಲಿ ವ್ಯಕ್ತವಾಗಿದೆ. ಇವುಗಳು ಮಾರಾಟದ ಪ್ರಧಾನ ವಸ್ತುಗಳಾಗಿದ್ದವು. ಗಾಣಗಳ ಮೇಲೆ ಸುಂಕ ಹಾಕುತ್ತಿದ್ದರು ಎಂಬುದಕ್ಕೆ ಶಾಸನವೊಂದರಲ್ಲಿ 'ಅಲೆಸುಂಕ' ಎಂದು ಉಲ್ಲೇಖವಿದೆ.

ಶಾಸನಗಳಲ್ಲಿ 'ಕಂಚಗಾರವೊಣಿ' ಎಂಬ ಉಲ್ಲೇಖವಿದ್ದು ಕಂಚಗಾರರು ಕಂಚಿನ ಪಾತ್ರೆಗಳ ತಯಾರಿಯಲ್ಲಿ ನಿಷ್ಣಾತರಾಗಿದ್ದರು. ಒಂದು ಶಾಸನದಲ್ಲಿ ಮುಕ್ತಿ ಹರಿಹರಪುರ ಅಗ್ರಹಾರಕ್ಕೆ ಶೈವ ಅಕ್ಕಸಾಲಿ, ಬಡಗಿ, ಕಮ್ಮಾರ ಈ ಮೂರು ಒಕ್ಕಲುಗಳು ಮಹಾಜನಗಳ ಸೇವೆ ಮಾಡಿಕೊಂಡು ಸುಖದಲ್ಲಿ ಇರುವುದು ಎಂದಿದೆ. ಇನ್ನಿತರ ವೃತ್ತಿಕಾರರೆಂದರೆ 'ಕಂದಾಚಾರ' ತಳವಾರ, ದೀವರ ಮಾಲೆಗಾರ ಪ್ರಸ್ತಾಪ ಕಂಡುಬರುತ್ತದೆ.

ಕ್ರಿ.ಶ. ಹನ್ನೊಂದನೇ ಶತಮಾನದ ನಂತರ ಕರ್ನಾಟಕದ ಶಾಸನಗಳಲ್ಲಿ ತಳಸಮುದಾಯದ (ಅಯಗಾರ) ಬಗ್ಗೆ ಕೆಲವು ಪ್ರಸ್ತಾಪಗಳು ಸಿಗುತ್ತವೆ. ಈ ತಳಸಮುದಾಯವನ್ನು ಕುರಿತು ಹಿಂದಿನ ಕೆಲವು ಶಾಸನಗಳು ಬಿಡಿಬಿಡಿಯಾಗಿ ಪ್ರಸ್ತಾಪಿಸುತ್ತವೆ. ಆದರೆ ನಂತರದ ಶಾಸನಗಳಲ್ಲಿ ಕೆಳ ಸಮುದಾಯಗಳ ಉಲ್ಲೇಖ ಗುಂಪುಗುಂಪಾಗಿ ಬಂದಿರುವುದು ವಿಶೇಷ. ತೀರ್ಥಹಳ್ಳಿ ಶಾಸನವೊಂದರಲ್ಲಿ ಪಂಚಕಾರಕ ಎಂಬ ಪದದ ಉಲ್ಲೇಖವಿದ್ದು ಕಮ್ಮಾರ, ಅಕ್ಕಸಾಲಿಗ, ಬಡಗಿ, ಕಂಚುಗಾರ ಹಾಗೂ ಶಿಲ್ಪಿಗಳಲ್ಲಿ ಈ ಕುಲಕ್ಕೆ ಸೇರಿದವರು. ಇವರ ಜೊತೆಗೆ ಅಸ್ಪೃಶ್ಯರೆಂದು ಗುರುತಿಸುವ ಸಮಗಾರ ಹೊಲೆಯರಂತ ಕೆಳಸಮುದಾಯಗಳು ಸಮಾನ ಮಾನ್ಯತೆ ಪಡೆಯುವುದು ವಿಶೇಷ. ತಳಸಮುದಾಯದವರನ್ನು ಶಾಸನಗಳಲ್ಲಿ ಸಮಸ್ತ ನಾಡವರು ಎಂದು ಗುರುತಿಸಲಾಗಿದೆ. ಇಂತಹ ಸಂಗತಿಗಳನ್ನು ಬರಿಶುಷ್ಕ ಜಾತಿನಿಷ್ಠ ಸ್ಥರಗಳಲ್ಲಿಟ್ಟು ನೋಡುವುದಕ್ಕಿಂತ ಕುಲಕಸುಬುಗಳ ವೃತ್ತಿ ಸಮುದಾಯಗಳ ಸಹಜ ಸ್ಥಿತಿಯಲ್ಲಿಟ್ಟು ನೋಡಬೇಕು. ಪಂಚಕಾರುಕವೃತ್ತಿ ಕೇವಲ ಉತ್ಪಾದನೆ ಮತ್ತು ಸೇವೆಯಾಗಿರದೆ ಅದೊಂದು ಜೀವನವಿಧಾನವಾಗಿತ್ತು.

ಶಾಸನಗಳಲ್ಲಿ ಮೇಲಿನ ಹೆಚ್ಚಿನ ಅಧ್ಯಯನದಿಂದ ನಮಗೆ ಗೋಚರಿಸುವ ಪ್ರಮುಖ ವಿಶೇಷತೆಗಳೆಂದರೆ ರಾಜನ ಯುದ್ಧ, ದೇವಾಲಯಗಳ ನಿರ್ಮಾಣ ಹಾಗೂ ದಾನಕಾರ್ಯಗಳ ಶ್ರೇಷ್ಠತೆಯನ್ನು ಹೇಳುತ್ತದೆಯೇ ಹೊರತು ಒಂದು ಸಂಪೂರ್ಣ ಸಮಾಜ, ಸಂಸ್ಕೃತಿಗಳ ಅಧ್ಯಯನ ಗೌಣವಾಗಿ ಕಾಣುತ್ತದೆ. ತಳಸಮುದಾಯಗಳು ಸಮಾಜದಲ್ಲಿ ಬಹು ಸಂಖ್ಯಾತರಾಗಿದ್ದರೂ ಅಲ್ಪಸಂಖ್ಯಾತರ ನಿಯಂತ್ರಣದಲ್ಲಿದ್ದರು. ಕಸುಬುದಾರ ವರ್ಗಗಳ ಚರ್ಚೆ ಶಾಸನಗಳಲ್ಲಿ ಗೌಣವಾಗಿದೆ.

ಆಕರಗ್ರಂಥ

೧. EC XI (R) & EC XII (R) ಸಂಪುಟಗಳು.

೫೬

ದಾವಣಗೆರೆ ಜಿಲ್ಲೆಯ ಪ್ರಾಚೀನ ಅಗ್ರಹಾರಗಳಲ್ಲಿಯ ಶಿಕ್ಷಣ ಮತ್ತು ಶಿಕ್ಷಣೇತರ ಕಾರ್ಯಗಳು

ವೈ. ಮದ್ದಾನಸ್ವಾಮಿ*

ಪ್ರಾಚೀನ ಮತ್ತು ಮಧ್ಯಕಾಲೀನ ಶಿಕ್ಷಣವು ಪ್ರಮುಖವಾಗಿ ದೇವಾಲಯಗಳು, ಮಠಗಳು ಘಟಿಕಸ್ಥಾನಗಳು, ಬ್ರಹ್ಮಪುರಿಗಳು ಮತ್ತು ಅಗ್ರಹಾರಗಳಲ್ಲಿ ನಡೆಯುತಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಪ್ರಾಚೀನ ಕಾಲದ ಶಿಕ್ಷಣ ಕೇಂದ್ರಗಳಾದ ಇವುಗಳು ಕೇವಲ ಶಿಕ್ಷಣ ಪ್ರಸಾರಕ್ಕೆ ಮಾತ್ರ ಮೀಸಲಾಗಿರದೆ, ಇವುಗಳಲ್ಲಿ ಶಿಕ್ಷಣವನ್ನು ಹೊರತುಪಡಿಸಿ ಮಾನವ ಸಂಸ್ಕೃತಿಗೆ ಸಂಬಂಧಿಸಿದ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಕಾರ್ಯಚಟುವಟಿಕೆಗಳು ಜರುಗುತ್ತಿದ್ದವು. ೧೫ ಆಗಸ್ಟ್, ೧೯೯೭ರಲ್ಲಿ ರಚಿತವಾದ ದಾವಣಗೆರೆ ಜಿಲ್ಲೆ ಹರಿಹರ, ಜಗಳೂರು, ಚನ್ನಗಿರಿ, ಹೊನ್ನಾಳಿ, ಹರಪನಹಳ್ಳಿ ಮತ್ತು ದಾವಣಗೆರೆ ಎಂಬ ಆರು ತಾಲ್ಲೂಕುಗಳನ್ನು ಒಳಗೊಂಡಿದೆ. ಇಲ್ಲಿ ೫ನೇ ಶತಮಾನದಿಂದ ಹದಿನೇಳನೇ ಶತಮಾನದವರೆಗಿನ ಸಾವಿರಾರು ಶಾಸಗಳು ದೊರಕಿದ್ದು ಅವುಗಳಲ್ಲಿ ಕೆಲವು ಮೇಲಿನ ಶಿಕ್ಷಣ ಕೇಂದ್ರಗಳನ್ನು ಉಲ್ಲೇಖಿಸುತ್ತವೆ.

ದಾವಣಗೆರೆ ಜಿಲ್ಲೆಯ ಪ್ರಾಚೀನ ಅಗ್ರಹಾರಗಳ ಬಗ್ಗೆ ಲೇಖನ ಮಂಡಿಸುವ ಈ ಸಂದರ್ಭದಲ್ಲಿ ಅಲ್ಲಿಯ ಪ್ರಾಚೀನ ಶಿಕ್ಷಣ ಕೇಂದ್ರಗಳಾದ ಮಠಗಳು, ಘಟಿಕಸ್ಥಾನಗಳು, ಬ್ರಹ್ಮಪುರಿಗಳ ಬಗ್ಗೆ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ.

ಕ್ರಿ.ಶ. ೧೦೬೩ರ ಮೆದಿಕೆರೆ ಶಾಸನವು ಅಲ್ಲಿಯ ಮಠಕ್ಕೆ ಮತ್ತು ಸಕಳೇಶ್ವರ ಪಂಡಿತರ ಆಹಾರ ಧಾನ್ಯಕ್ಕೆ ಮಾಚಗಾವುಂಡನು ಭೂದತ್ತಿ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ. ಸಿರಿನಾಯಕ ಎಂಬುವನು ಲಿಂಗದೇವರ ಮಠಕ್ಕೆ & ಅಲ್ಲಿಯ ಜಂಗಮರಿಗೆ ಭೂದತ್ತಿ ನೀಡಿದನ್ನು ತಿಳಿಸುತ್ತದೆ. ಅಲ್ಲದೇ ದಾವಣಗೆರೆ ಜಿಲ್ಲೆಯ ಕ್ರಿ.ಶ. ೧೫೭೧ರ ಸಾಳಂಗ ಶಾಸನ, ಕ್ರಿ.ಶ. ೧೫೭೬ರ ರೆಡ್ಡಿಹಳ್ಳಿ ಶಾಸನ, ಭರಮಸಮುದ್ರ ಶಾಸನ & ಗೋಣಿಗೆರೆ ಶಾಸನಗಳು ಅಲ್ಲಿಯ ಮಠಗಳನ್ನು ಉಲ್ಲೇಖಿಸುವುದನ್ನು ಗಮನಿಸಿದರೆ ಮಠಗಳು ಉನ್ನತ ಶಿಕ್ಷಣ ಕೇಂದ್ರಗಳಲ್ಲಿ ಪ್ರಮುಖವಾಗಿದ್ದವು ಎಂದೆನಿಸುತ್ತದೆ. ಘಟಿಕವು ಬ್ರಾಹ್ಮಣ ಸಮೂಹ ವಾಸಿಸತಕ್ಕಂತ ಸ್ಥಳ ಇದೊಂದು ಧಾರ್ಮಿಕ ಕೇಂದ್ರ ಹಾಗೂ ಇದೊಂದು ಉಚ್ಚ ಅಥವಾ ಉನ್ನತ ಶಿಕ್ಷಣ ಕೇಂದ್ರ. ವಿದ್ಯಾವಂತರು, ಧನವಂತರು ಒಂದುಕಡೆ ಕುಳಿತು ಚರ್ಚಿಸುವ ಸ್ಥಳ ಎಂದು ಎಸ್.ಎಲ್. ಶಾಂತಕುಮಾರಿ ಅಭಿಪ್ರಾಯ ಪಟ್ಟಿದ್ದಾರೆ. ಕರ್ನಾಟಕದ ಅನೇಕ ಕಡೆ ಘಟಿಕಸ್ಥಾನಗಳು ಕಂಡುಬಂದರೂ ದಾವಣಗೆರೆ ಜಿಲ್ಲೆಯ ಶಾಸನಗಳಲ್ಲಿ ಯಾವುದೇ ಘಟಿಕಸ್ಥಾನದ ಬಗ್ಗೆ ಉಲ್ಲೇಖಗಳು ಕಂಡುಬಂದಿರುವುದಿಲ್ಲ.

ಬ್ರಹ್ಮಪುರಿ ಎಂದರೆ ಪಟ್ಟಣ ಅಥವಾ ನಗರದ ಒಂದು ಭಾಗದಲ್ಲಿ ಸುಶಿಕ್ಷಿತ ಬ್ರಾಹ್ಮಣರು ವಾಸಿಸುವ ಸ್ಥಳ. ಬ್ರಹ್ಮಪುರಿಗಳನ್ನು ಬ್ರಹ್ಮಪುರಿಗೇರಿ ಎಂತಲೂ ಕರೆದಿದ್ದಾರೆ. ಒಂದೇ ಪಟ್ಟಣದಲ್ಲಿ ಹಲವಾರು ಬ್ರಹ್ಮಪುರಿಗಳಿದ್ದ ಬಗ್ಗೆ ಉಲ್ಲೇಖಗಳು ದೊರಕುತ್ತವೆ. ಬಳ್ಳಿಗಾವಿಯಲ್ಲಿ ಏಳು ಬ್ರಹ್ಮಪುರಿಗಳಿದ್ದವೆಂದು ತಿಳಿದುಬರುತ್ತದೆ. ದಾವಣಗೆರೆ ಜಿಲ್ಲೆಯ ಕ್ರಿ.ಶ. ೧೧೭೫ರ ಬೆಳಗುತ್ತಿ ಶಾಸನವು ನಲ್ಲಮರಸ ಎಂಬುವನು ಬ್ರಹ್ಮಪುರಿಗೆ ದಾನ ನೀಡಿದ ಉಲ್ಲೇಖವಿದೆ. ಆದರೆ ಈ ಬ್ರಹ್ಮಪುರಿ ಎಲ್ಲಿತ್ತು ಎಂಬ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಇದನ್ನು ಹೊರತುಪಡಿಸಿದರೆ ಹನಗವಾಡಿ ತೃಟಿತ ಶಾಸನದಲ್ಲಿ ಬ್ರಹ್ಮಪುರಿ ಬಗ್ಗೆ ಉಲ್ಲೇಖ ಕಂಡು ಬಂದಿದ್ದು, ಈ ಭಾಗದಲ್ಲಿ ಬ್ರಹ್ಮಪುರಿಗಳ ಅಸ್ತಿತ್ವವನ್ನು ಪುಷ್ಟೀಕರಿಸುತ್ತದೆ.

ಬ್ರಾಹ್ಮಣರಿಗೆ ದಾನವಾಗಿತ್ತ ಊರುಗಳಿಗೆ 'ಅಗ್ರಹಾರ'ವೆಂದು ರೂಢಿಯಲ್ಲಿ ಬಂದಿತು. ಒಂದು ಊರನ್ನು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ದಾನ ಮಾಡುವಲ್ಲಿ ಪುಣ್ಯ ಲಭಿಸುತ್ತದೆ. ವಿದ್ವಾಂಸ ಬ್ರಾಹ್ಮಣರನ್ನು ಒಂದೆಡೆ ನೆಲೆಗೊಳಿಸುವುದರಿಂದ ವಿದ್ಯಾರ್ಜನೆಗೆ ವ್ಯವಸ್ಥೆ ಮಾಡಿದಂತಾಗುತ್ತದೆ ಎಂಬ ಉದ್ದೇಶಗಳಿಂದ ಈ ಅಗ್ರಹಾರಗಳನ್ನು ನಿರ್ಮಿಸಿದಂತೆ ತೋರುತ್ತದೆ.

ಅಗ್ರಹಾರದಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣ ವಿದ್ವಾಂಸರು ಅಲ್ಲಿಯ 'ಮಹಾಜನರು' ಎಂದೆನಿಸುತ್ತಿದ್ದರು. ಅಗ್ರಹಾರಗಳು ವಿದ್ವಾಂಸರ ನೆಲೆಗಳಾಗಿದ್ದರೆ, ಮಹಾಜನರು ಆ ಕಾಲದಲ್ಲಿ ಪ್ರಚಲಿತವಿದ್ದ ನಾನಾ ವಿದ್ಯೆಗಳಲ್ಲಿ ಪಾಂಡಿತ್ಯ ಗಳಿಸುತ್ತಿದ್ದರು.

* ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ.

ಇವರು ತಪೋನಿಷ್ಠರು, ಷಟ್ಕರ್ಮನಿರತರೂ ಆಗಿರುತ್ತಿದ್ದಂತೆ ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿಯೂ ಪಾಲ್ಗೊಳ್ಳುತ್ತಿದ್ದರು. ಅಗ್ರಹಾರಗಳಿಗೆ ಮಹಾಜನರೇ ಒಡೆಯರು. ಆ ಗ್ರಾಮದ ಆದಾಯವೆಲ್ಲವೂ ಅವರಿಗೆ ಸೇರುತ್ತಿತ್ತು. ಅದರೊಂದಿಗೆ ಗ್ರಾಮದ ಆಡಳಿತ ಹೊಣೆಯೂ ಅವರದೇ. ಅಗ್ರಹಾರದಲ್ಲಿ ಬ್ರಾಹ್ಮಣರಂತೆ ಇತರೆ ಜಾತಿ-ಮತಗಳಿಗೆ ಸೇರಿದವರು ವಾಸವಾಗಿರುತ್ತಿದ್ದರು. ಈ ವಿಭಜಿತ ದಾವಣಗೆರೆ ಪ್ರದೇಶದಲ್ಲಿ ಹಲವಾರು ಅಗ್ರಹಾರಗಳಿದ್ದು, ಅವು ಪ್ರಮುಖವಾಗಿ ಅಗ್ರಹಾರ ನೀಲಗುಂದ, ನ್ಯಾಮತಿ, ಕೋಳಿಗನಘಟ್ಟ, ಈಸೂರು, ಹರಿಹರ, ಭಾನುವಳ್ಳಿ ಮೊದಲಾದವುಗಳು ಪ್ರಮುಖವಾಗಿವೆ.

ಅಗ್ರಹಾರ ನೀಲಗುಂದ

ದಾವಣಗೆರೆ ಪ್ರದೇಶದ ಅಗ್ರಹಾರಗಳಲ್ಲಿ ನೀಲಗುಂದ ಅಗ್ರಹಾರವು ಪ್ರಮುಖವಾದುದು. ಕ್ರಿ.ಶ. ೧೦೨೯ರ ಶಾಸನವೊಂದರಲ್ಲಿ ನೀಲಗುಂದವನ್ನು 'ಅಗ್ರಹಾರ'ವೆಂದು ಕರೆಯಲಾಗಿರುವುದರಿಂದ ಇದು ಈ ಕಾಲಕ್ಕಿಂತಲೂ ಪ್ರಾಚೀನವಾದುದೆಂದು ಹೇಳಬಹುದು, ಅಲ್ಲದೆ ಇದು ಶಾಸನಗಳಲ್ಲಿ ಅಗ್ರಹಾರ, ಅನಾದಿ ಅಗ್ರಹಾರ, ಮಹಾ ಅಗ್ರಹಾರ & ಮಹಾಗ್ರಾಮ ಎಂದು ಕರೆಯಲ್ಪಟ್ಟಿದೆ. ಈ ಅಗ್ರಹಾರವನ್ನು ಕೋಗಳಿ-೫೦೦ರ, ಬೆಕ್ಕಿಗ-೭೦ ರ ಉಪ ವಿಭಾಗದಲ್ಲಿ ಶ್ರೇಷ್ಠ ಅಗ್ರಹಾರ ಎಂದು ಉಲ್ಲೇಖಿಸಲಾಗಿದೆ. ಇದರ ಆಡಳಿತ ನೋಡಿಕೊಳ್ಳಲು ೩೦೦ ಮಹಾಜನರಿದ್ದು ಕಂಡುಬರುತ್ತದೆ. ಈ ಸಂಖ್ಯೆಯಿಂದ ಇದೊಂದು ದೊಡ್ಡ ಅಗ್ರಹಾರವಾಗಿತ್ತೆಂದು ತಿಳಿದುಬರುತ್ತದೆ.

ಈ ನೀಲಗುಂದ ಅಗ್ರಹಾರದ ಮಹಾಜನರು ಶಾಸ್ತ್ರ, ಪುರಾಣ, ಪಂಚಯಜ್ಞ, ಷಟ್ಕರ್ಮ, ದಾನ-ಧರ್ಮ, ವಿಧಿ-ನಿಯಮಗಳಲ್ಲಿ ಪ್ರಸಿದ್ಧರಾಗಿದ್ದುದನ್ನು ಶಾಸನಗಳು ತಿಳಿಸುತ್ತವೆ. ಕ್ರಿ.ಶ. ೧೦೭೮ರ ಶಾಸನದಲ್ಲಿ ನೀಲಗುಂದದ ೩೦೦ ಮಹಾಜನರು ರಾಮೇಶ್ವರದೇವರಿಗೆ ಭೂಮಿಯನ್ನು ದಾನವಾಗಿತ್ತ ವಿಷಯವನ್ನು ತಿಳಿಸುತ್ತದೆ. ಅಲ್ಲದೆ ೫೦೦ ಬಣಜಿಗರು, ನಾನಾ ದೇಶಿಗಳು ಕೂಡದತ್ತಿ ಬಿಟ್ಟ ಉಲ್ಲೇಖವಿದೆ.

ಅಗ್ರಹಾರ ನ್ಯಾಮತಿ

ಈ ನಾಡಿನ ಇನ್ನೊಂದು ಪ್ರಮುಖ ಅಗ್ರಹಾರವೆಂದರೆ ನ್ಯಾಮತಿಯ ಅಗ್ರಹಾರ. ಇದನ್ನು ಶಾಸನಗಳಲ್ಲಿ 'ಭತ್ತಗ್ರಾಮೆಯಗ್ರಹಾರ', ಶ್ರೀಮದ್ ಅಗ್ರಹಾರ ನೆಲ್ಲವತ್ತಿ, (ನ್ಯಾಮತಿ) ಶ್ರೀ ಮದನಾದಿ ಅಗ್ರಹಾರ ನ್ಯಾಮತಿ ಎಂದು ಕರೆಯಲಾಗಿದೆ. ಈ ಅಗ್ರಹಾರದಲ್ಲಿ ಸಾವಿರ (೧೦೦೦) ಮಹಾಜನರು ವಾಸವಾಗಿದ್ದರು. ಅವರ ಸಂಖ್ಯೆಯಿಂದ ಇದೊಂದು ದೊಡ್ಡ ಅಗ್ರಹಾರವಾಗಿತ್ತೆಂದು ತಿಳಿದು ಬರುತ್ತದೆ. ಜೊತೆಗೆ ಇದೇ ಶಾಸನದಲ್ಲಿ ಜಪ-ತಪ-ಸಮಾಧಿ ಸಂಪನ್ನರು, ತರ್ಕಶಾಸ್ತ್ರ, ವ್ಯಾಕರಣ, ಛಂಧಸ್ಸು, ಅಲಂಕಾರ, ಕಾವ್ಯ ಮುಂತಾದವುಗಳಲ್ಲಿ ಪ್ರವೀಣರು, ಋಗ್ವೇದ ಚೂಡಾಮಣಿಗಳಾಗಿದ್ದರೆಂದು ವರ್ಣಿಸಿದೆ. ಇದನ್ನು ನೋಡಲಾಗಿ ಇವರು ಮಹಾನ್ ವಿದ್ವತ್ತನ್ನು ಪಡೆದವರಾಗಿ ಅನೇಕ ವಿಷಯಗಳಲ್ಲಿ ಪಾಂಡಿತ್ಯ ಪಡೆದಿದ್ದರೆಂದು ತಿಳಿಯುವುದಲ್ಲದೆ, ಈ ಎಲ್ಲಾ ವಿಷಯಗಳನ್ನು ಬೋಧಿಸಲಾಗುತ್ತಿತ್ತೆಂದು ಹೇಳಬಹುದು. ಇದು ಪ್ರಮುಖ ವಿದ್ಯಾಕೇಂದ್ರವಾಗಿದ್ದು, ಮಹಾಜನಗಳು ದಾನ ನೀಡಿದ್ದು ಕಂಡುಬರುತ್ತದೆ. ಶ್ರೀಮದ್‌ಅನಾದಿಅಗ್ರಹಾರ ನೆಲ್ಲವತ್ತಿಯ ಮಹಾಜನಗಳು ಕುಂಕುಮದ ಕುರುವದ ರಾಮೇಶ್ವರದೇವರ ನೈವೇದ್ಯಕ್ಕೆ ಗಂಗಾಸಾಗರ ಬಯಲಿನಗದ್ದೆ ದಾನಮಾಡಿದ ಬಗ್ಗೆ ತಿಳಿದು ಬರುತ್ತದೆ. ನ್ಯಾಮತಿಯ ಕ್ರಿ.ಶ. ೧೧೨೫ರ ಶಾಸನದಲ್ಲಿ ಶ್ರೀಮದ್‌ಅನಾದಿಅಗ್ರಹಾರ ನೆಲ್ಲವತ್ತಿ (ನ್ಯಾಮತಿ) ಯ ಅಗ್ರಹಾರದ ತುರುಗಳನ್ನು ಬೆಳವತ್ತಿಗೆ ಅಪಹರಿಸಿಕೊಂಡು ಹೋಗಲಾಗಿ ಚಿಕ್ಕನೆಂಬುವನು ತುರುಗಳನ್ನು ಬಿಡಿಸಿ ಸಾವನ್ನಪ್ಪಿದನು. ಇದನ್ನು ಮೆಚ್ಚಿದ ಶೇಷ ಮಹಾಜನಗಳು ನೆತ್ತರು ಬೋದುಗೆಯಾಗಿ ದತ್ತಿ ಬಿಟ್ಟಿ ಉಲ್ಲೇಖವಿದೆ.

ಅಗ್ರಹಾರಕೋಳಿಗನಘಟ್ಟ (ಕುಣೆಗಲುಘಟ್ಟ)

ದಾವಣಗೆರೆ ಪ್ರದೇಶದ ಅಗ್ರಹಾರಗಳಲ್ಲಿ ಈ ಕೋಳಿಗನಘಟ್ಟ ಅಗ್ರಹಾರವು ಒಂದು. ಈ ಅಗ್ರಹಾರವು ಹೊಯ್ಸಳ ಅರಸ ವಿಷ್ಣುವರ್ಧನನ ಕ್ರಿ.ಶ. ೧೧೬೩ರ ಶಾಸನದಲ್ಲಿ ಮೊದಲು ಕಾಣಿಸಿಕೊಂಡಿದ್ದು, ನಂತರ ಅದೇ ಹೊಯ್ಸಳ ಅರಸರಾದ ಎರಡನೇ ಬಲ್ಲಾಳ ಮತ್ತು ೩ನೇ ನರಸಿಂಹ ಇವರಿಗೆ ಸಂಬಂಧಿಸಿದ ಶಾಸನಗಳಲ್ಲಿ ಉಲ್ಲೇಖಗೊಂಡಿದೆ.

ಕೋಳಿಗನಘಟ್ಟ ಅಗ್ರಹಾರವು ಒಂದು ಪ್ರಮುಖ ವಿದ್ಯಾಕೇಂದ್ರವಾಗಿತ್ತು. ಈ ಅಗ್ರಹಾರದ ಶೇಷಮಹಾಜನಗಳು ಜಪ-ತಪ ಸಮಾಧಿಯಿಂದ ಗುಣಶೀಲರಾಗಿ, ಅಶೇಷಶಾಸ್ತ್ರಗಳಿಂದ ಪ್ರವೀಣರಾಗಿ ತರ್ಕದಲ್ಲಿ ಸರ್ವಜ್ಞನಂತೆ ವಿದ್ಯಾಸಂಪನ್ನರಾಗಿದ್ದರು. ಈ ಅಗ್ರಹಾರವು ಅಯ್ಯವೊಳೆ (ಹೊಳೆ) ಎನ್ನುವ ನಾಲ್ಕು ದಿಕ್ಕಿನಲ್ಲಿ ಪ್ರಸಿದ್ಧವಾದ ನಾನಾದೇಶಿಗಳಿಗೆ

ಆಶ್ರಯತಾಣವಾಗಿತ್ತೆಂದು ಶಾಸನದಿಂದ ತಿಳಿದುಬರುತ್ತದೆ. ಈ ಕೋಳಿಗನಘಟ್ಟ ಎಂಬ ಅಗ್ರಹಾರದ ವಿತ್ತಿಯಲ್ಲಿ (ಅದರ ಅಧೀನ) ಚೋಳಮಹಾದೇವಿಪುರ ಎಂಬ ಅಗ್ರಹಾರವು ಇದ್ದು, ಅಲ್ಲಿ ಮಹಾಜನಗಳು ವಾಸವಾಗಿದ್ದರು ಎಂಬುದನ್ನು ಶಾಸನ ತಿಳಿಸುತ್ತದೆ. ಮಾವನಕೋಟೆ ಶಾಸನದಲ್ಲಿ "ಶ್ರೀಮದ್ ಅನಾದಿ ಅಗ್ರಹಾರ ಕೋಳಿಗನಘಟ್ಟದ ಶೇಷಮಹಾಜನಂಗಳ್ ಸಹಾನುಮತದಿಂದ ಲಕ್ಷ್ಮೀನರಸಿಂಹದೇವರ ಪ್ರತಿಷ್ಠೆ ಮಾಡಿದ" ವಿಷಯ ತಿಳಿದು ಬರುತ್ತದೆ.

ಅಗ್ರಹಾರಈಸೂರ:

ದಾವಣಗೆರೆ ಪ್ರದೇಶದಲ್ಲಿ ಈಸೂರು ಪ್ರಸಿದ್ಧಿ ಪಡೆದ ಅಗ್ರಹಾರವಾಗಿತ್ತು. ಇದು ಕ್ರಿ.ಶ. ೧೦೭೧ ರ ಶಾಸನವೊಂದರಲ್ಲಿ ಅಗ್ರಹಾರವೆಂದು ಕರೆಯಲ್ಪಟ್ಟಿರುವುದರಿಂದ ಇದು ಈ ಕಾಲಕ್ಕಿಂತಲೂ ಪ್ರಾಚೀನವಾದುದೆಂದು ಹೇಳಬಹುದು ಇದನ್ನು ಶಾಸನಗಳಲ್ಲಿ "ಶ್ರೀಮದಗ್ರಹಾರ ಈಸವುರು" ಎಂದು ಕರೆಯಲಾಗಿದೆ. ಇದರಲ್ಲಿ ಒಂದು ಸಾವಿರ ಮಹಜನರಿದ್ದರು. ಇವರ ಸಂಖ್ಯೆಯಿಂದ ಇದೊಂದು ದೊಡ್ಡ ಅಗ್ರಹಾರವಾಗಿತ್ತೆಂದು ತಿಳಿದುಬರುತ್ತದೆ.

ಅಗ್ರಹಾರ ಹರಿಹರ

ಈ ಪ್ರದೇಶದಲ್ಲಿ ಪ್ರಸಿದ್ಧಿ ಪಡೆದ ಅಗ್ರಹಾರವು ಇದಾಗಿದ್ದು, ಇದನ್ನು ಶಾಸನಗಳಲ್ಲಿ 'ಕೂಡಲೂರು ಅಗ್ರಹಾರ' ಎಂದು ಕರೆಯಲಾಗಿದೆ. ಈ ಕ್ಷೇತ್ರಕ್ಕೆ ಹರೀಶಪುರ, ಕೂಡಲೂರು, ಗುಹಾರಣ್ಯಕ್ಷೇತ್ರ, ಹರಿಹರ ಎಂಬ ಬೇರೆ ಬೇರೆ ಹೆಸರುಗಳು ಶಾಸನಗಳಲ್ಲಿ ದೊರೆಯುತ್ತವೆ, ಹಾಗೆಯೇ ಈ ಶಾಸನದಲ್ಲಿ ಹರಿಹರವನ್ನು 'ಕೂಡಲೂ' ಎಂದು ಕರೆದಿದೆ. ಈ ಅಗ್ರಹಾರವು ಬನವಾಸಿ-೧೨,೦೦೦ ಆಡಳಿತಾಧಿಕಾರಿಯಾಗಿದ್ದ ದುಗ್ಗರಸ ದಂಡನಾಯಕನ ಆಳ್ವಿಕೆಯ ಕಾಲದಲ್ಲಿ ಬಹಳ ಪ್ರಾಚೀನ ಅಗ್ರಹಾರವಾಗಿತ್ತೆಂದು ತಿಳಿದುಬರುತ್ತದೆ. ಈ ದುಗ್ಗರಸ ದಂಡನಾಯಕನು ಕೂಡಲೂರು ಅಗ್ರಹಾರದ ಮಹಾಜನರಾದ ನೂರನಾಲ್ವರಿಗೆ (ಬ್ರಾಹ್ಮಣ) ಹತ್ತು ಗದ್ಯಾಣವನ್ನು ನೀಡಿದನು. ಇಲ್ಲಿ ನೂರನಾಲ್ವರು ಬ್ರಾಹ್ಮಣರಿದ್ದು, ಅವರು ವೇದವೇದಾಂಗಪಾರಂಗತರು, ಸದಾಶೀಲಸಂಪನ್ನರು, ಸಮಸ್ತಶಾಸ್ತ್ರಗಳನ್ನು ಬಲ್ಲವರಾಗಿದ್ದರು ಎಂಬುದನ್ನು ನೋಡಿದರೆ ಕೂಡಲೂರು ಒಂದು ಪ್ರಮುಖ ವಿದ್ಯಾಕೇಂದ್ರವಾಗಿತೆಂದರೆ ತಪ್ಪಾಗಲಾರದು. ಈ ಸಂಖ್ಯೆಯಿಂದ ಇದೊಂದು ದೊಡ್ಡ ಅಗ್ರಹಾರವಾಗಿತ್ತೆಂದು ತಿಳಿದುಬರುತ್ತದೆ. ಅಗ್ರಹಾರದಲ್ಲಿ ಬ್ರಾಹ್ಮಣರ ಭೋಜನಕ್ಕೆ, ಅಕ್ಷರ ಶಿಕ್ಷಣಕ್ಕೆ, ವಾಸ, ಅಧ್ಯಾಪನಕ್ಕಾಗಿ ೩೦೦ ನಿಷ್ಕಗಳ ಕಂದಾಯವನ್ನು & ಕೂಡಲೂರು ಗ್ರಾಮವನ್ನು ಮಹಾಮಂಡಳೇಶ್ವರನಾದ ವಿಜಯಪಾಂಡ್ಯನು ಗುತ್ತಿಗೆ ಆಧಾರದ ಮೇಲೆ ಬ್ರಾಹ್ಮಣರಿಗೆ ದತ್ತಿಕೊಟ್ಟನು. ಈ ಶಾಸನವು ಉಲ್ಲೇಖಿಸುವ 'ಅಕ್ಷರ ಶಿಕ್ಷಣ' ಎಂಬ ಸ್ಪಷ್ಟ ಉಲ್ಲೇಖವನ್ನು ಹಾಗೂ ದಾನದ ಮೊತ್ತವನ್ನು ನೋಡಿದರೆ ಇಲ್ಲಿ ಪ್ರತಿದಿನ ವಿದ್ಯಾದಾನ ನಡೆಯುತ್ತಿದ್ದು, ಇದೊಂದು ಪ್ರಮುಖ ವಿದ್ಯಾಕೇಂದ್ರವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಕ್ರಿ.ಶ. ೧೧೭೧ರ ಶಾಸನೋಕ್ತ ಕೂಡಲೂರನ್ನು ಅನಾದಿ ಅಗ್ರಹಾರವೆಂದು ಕರೆದಿರುವುದು ಸ್ಥಳದ ಪ್ರಾಚೀನತೆಗೆ ಸಾಕ್ಷಿಯಾಗಿ ನಿಲ್ಲುತ್ತದೆ.

ಅಗ್ರಹಾರ ಭಾನುವಳ್ಳಿ

ಈ ಪ್ರದೇಶದ ಮತ್ತೊಂದು ಅಗ್ರಹಾರವೆಂದರೆ ಭಾನುವಳ್ಳಿ ಅಗ್ರಹಾರ, ಕ್ರಿ.ಶ. ೧೨೨೪ರ ಶಾಸನವೊಂದರಲ್ಲಿ 'ಅನಾದಿ ಅಗ್ರಹಾರ'ವೆಂದು ಕರೆಯಲ್ಪಟ್ಟಿದ್ದರಿಂದ ಇದು ಪ್ರಾಚೀನವಾದುದೆಂದು ಹೇಳಬಹುದು. ಮುಂದೆ ಭಾನುವಳ್ಳಿಯನ್ನು ಲಕ್ಷ್ಮೀನಾರಾಯಣಪುರವೆಂದು ನಾಮಕರಣ ಮಾಡಲಾಯಿತು. ಶಾಸನದ ಪ್ರಕಾರ ಬಾನುವಳ್ಳಿ ಅನಾದಿ ಅಗ್ರಹಾರವಾಗಿದ್ದು, ಅಲ್ಲಿ ನೂರನಾಲ್ವರು ಬ್ರಾಹ್ಮಣರಿದ್ದರೆಂದು ತಿಳಿದು ಬರುತ್ತದೆ. ಬಾನುವಳ್ಳಿ ಅನಾದಿ ಅಗ್ರಹಾರವಾಗಿದ್ದರೂ ಇದರ ಹೆಸರು ಶಾಸನದಲ್ಲಿ ಕೇಳಿಬರುತ್ತಿರುವುದು ಕ್ರಿ.ಶ. ೧೨೨೪ರ ಶಾಸನದಲ್ಲಿ. ಈ ಊರಗೆ ಲಕ್ಷ್ಮೀ ನಾರಾಯಣಪುರವೆಂಬ ಹೆಸರಿದ್ದುದನ್ನು ನೋಡಿದರೆ ಇದರ ಪ್ರಾಚೀನತೆ ಬಗ್ಗೆ ಸಂದೇಹವುಂಟಾಗುತ್ತದೆ. ಈಗ ಆ ಹೆಸರು ಕಳಚಿಹೋಗಿ ಬಾನ(ನು)ವಳ್ಳಿ ಎಂಬ ಹೆಸರು ಉಳಿದಿದೆ. ಇಲ್ಲಿದ್ದ ಬ್ರಾಹ್ಮಣರನ್ನು 'ನಿರುತರ್ ಷಟ್ಕರ್ಮಂಗಳೊಳ್ ಅರಿವಿಜಯಾಷ್ಟಾಂಗ ಯೋಗಸಿದ್ದರ್ ಧರೆಯೊಳಗೆ ನೂರನಾಲ್ವರ್ ಸುರತರುಗಳ್' ಎಂದು ಹೊಗಳಿರುವುದನ್ನು ನೋಡಿದರೆ ಅಲ್ಲಿಯ ಶಿಕ್ಷಣ ಔನ್ನತ್ಯದ ಬಗ್ಗೆ ತಿಳಿಯುತ್ತದೆ. ಈ ಅಗ್ರಹಾರದ ಬ್ರಾಹ್ಮಣರಿಗೆ ರಾಮಚಂದ್ರದೇವನ (ಯಾದವ) ಮಹಾಪ್ರಧಾನ ತಿಪ್ಪರಸನು ಅಪುತ್ರಾರ್ಕಧನವನ್ನು (ಮಕ್ಕಳಿಲ್ಲದೆ ಸತ್ತವರ ಹಣ) ದತ್ತಿಯಾಗಿ ಬಿಟ್ಟನೆಂದು ತಿಳಿದುಬರುತ್ತದೆ. ಇಲ್ಲಿದ್ದ ನೂರಾನಾಲ್ಕು ಜನ ಬ್ರಾಹ್ಮಣರು ಷಟ್ಕರ್ಮಗಳಲ್ಲಿ ಪ್ರಾವೀಣ್ಯರಾಗಿದ್ದರೆಂಬುದು ವಿಶೇಷ.

ಈ ಮೇಲಿನ ಎಲ್ಲಾ ಅಂಶಗಳನ್ನು ಅವಲೋಕಿಸಲಾಗಿ ಈ ಪ್ರದೇಶದಲ್ಲಿ ಅಗ್ರಹಾರಗಳು ಬಹಳಷ್ಟಿದ್ದು, ಅಲ್ಲಿ ಬ್ರಾಹ್ಮಣರೇ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾಸಂಪನ್ನರಾಗಿದ್ದದ್ದು ಸ್ಪಷ್ಟವಾಗುತ್ತದೆ. ಈ ಅಗ್ರಹಾರಗಳು ಕೇವಲ ಶಿಕ್ಷಣಕ್ಕೆ ಮಾತ್ರ ಸೀಮಿತವಾಗಿರದೆ, ಅಲ್ಲಿ ಅನೇಕ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳು ಶಿಕ್ಷಣದ ಜೊತೆಜೊತೆಯಲ್ಲಿ ನಡೆಯುತ್ತಿದ್ದವೆಂದು ಹೇಳಬಹುದಾಗಿದೆ.

ಆಧಾರ ಗ್ರಂಥಗಳು

೧. ತಿಪ್ಪೇರುದ್ರಸ್ವಾಮಿ ಎಚ್. 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ', ೧೯೬೮.
೨. ಶಾಂತಕುಮಾರಿ ಎಸ್.ಎಲ್., 'ಹಿಸ್ಟರಿ ಆಫ್ ದಿ ಅಗ್ರಹಾರಾಸ್ ಇನ್ ಕರ್ನಾಟಕ', ೧೯೮೬.
೩. ರಾಜಶೇಖರ ಎಸ್., 'ಅಗ್ರಹಾರ ನೀಲಗುಂದ', ಕರ್ನಾಟಕ ಭಾರತ, ಸಂಪುಟ ೧೧-೧೯೭೦.
೪. ಶಂಕರನಾರಾಯಣರಾವ್ ಹೆಚ್.ಎಮ್., 'ಶ್ರೀ ಹರಿಹರ ದೇವಾಲಯ', ೧೯೮೨.
೫. ಚಿದಾನಂದಮೂರ್ತಿ ಎಮ್., 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ', ೧೯೭೯.
೬ ಶಾಂತಕುಮಾರಿ ಎಸ್.ಎಲ್., 'ಕರ್ನಾಟಕದ ಅಗ್ರಹಾರಗಳು', ೧೯೭೨.
೭. ನಾಯಕ ಬಿ.ಜೆ., 'ಚನ್ನಗಿರಿ ತಾಲೂಕು ದರ್ಶನ', ೧೯೮೬.
೮. ವೇಣುಗೋಪಾಲರಾವ್ ಎ.ಎಸ್., 'ಹೊನ್ನಾಳಿ ತಾಲೂಕು ದರ್ಶನ', ೧೯೮೬.
೯. ಸದಾಶಿವಪ್ಪ ಕುಂ.ಬಾ., 'ಹರಪನಹಳ್ಳಿ ಪಾಳೇಗಾರರು', ೧೯೯೬.
೧೦. ಗಿರಿಜಾ ಟಿ., 'ದಾವಣಗೆರೆ ಇದು ನಮ್ಮ ಜಿಲ್ಲೆ', ೨೦೦೧.
೧೧. ಬಿದರಿ ಆಯ್.ಎಸ್., 'ಪ್ರಾಚೀನ ಭಾರತೀಯ ಶಿಕ್ಷಣ', ೧೯೭೮.
೧೨. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೭.
೧೩. ಕನ್ನಡ ವಿಶ್ವವಿದ್ಯಾಲಯ ಶಾಸನ, ಸಂಪುಟ ೧, ಬಳ್ಳಾರಿ ಜಿಲ್ಲೆ.

೫೭

ಕುಂದಗೋಳ ತಾಲೂಕಿನ ಶಾಸನೋಕ್ತ ಶೈವ ದೇವಾಲಯಗಳು

ಮಂಗಲಾ ಎಂ. ಗೌಡ*

ಕುಂದಗೋಳವು ಧಾರವಾಡ ಜಿಲ್ಲೆಗೆ ಸೇರಿದ ತಾಲೂಕಾಗಿದ್ದು ಜಿಲ್ಲೆಯ ನೈರುತ್ಯಕ್ಕೆ ಇದೆ. ಪ್ರಾಚೀನ ಶಾಸನಗಳಲ್ಲಿ ಕುಂದಗೋಳ 'ಕುಂದಾಗಲ್ಲ' ಎಂದೇ ಉಲ್ಲೇಖಿತಗೊಂಡಿರುವ ಇದು ಬೆಳ್ವೊಲ-೩೦೦ ಆಡಳಿತ ವಿಭಾಗಕ್ಕೆ ಸೇರಿದ ಪ್ರದೇಶವಾಗಿದೆ[೧]. ಇಲ್ಲಿ ಆಳ್ವಿಕೆ ನಡೆಸಿದ ರಾಜರಿಗೆ ಅಧಿನರಾಗಿ ಮಹಾಮಂಡಳೇಶ್ವರು, ಮಾಂಡಳಿಕರು, ಮಹಾ ಸಾಮಂತರು, ಸಾಮಂತರು ಅಧಿಕಾರಿಗಳು, ಪ್ರಭುಗಾವುಂಡರು, ಗಾವುಂಡರು ಮತ್ತು ಸ್ತ್ರೀಯರು ಪ್ರಾಂತಗಳನ್ನು ಆಳ್ವಿಕೆ ಮಾಡುವದರ ಜೊತೆಗೆ ದೇವಾಲಯಗಳ ನಿರ್ಮಾಣ, ಖಂಡಸ್ಫುಟಿತ ಜೀರ್ಣೋದ್ಧಾರ ಕಾರ್ಯಗಳಿಗಾಗಿ ಮೂರ್ತಿಶಿಲ್ಪ ಪ್ರತಿಷ್ಠಾಪಿಸಿ, ಉದಾರ ದಾನ-ದತ್ತಿಗಳನ್ನು ನೀಡಿ ಶೈವಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವುದು ಶಾಸನಗಳಿಂದ ತಿಳಿದು ಬರುತ್ತವೆ.

ಶೈವ ಗುರು ಪರಂಪರೆ

ಕುಂದಗೋಳ ತಾಲೂಕಿನಲ್ಲಿ ಕಂಡುಬರುವ ಶೈವಯತಿಗಳು ಗುರು ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡಿರುವದು ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೦೫೮ರ ಶಾಸನದಲ್ಲಿ ಶೈವ ಸ್ಥಾನಾಚಾರ್ಯ ಲೋಕಾಭರಣ ಪಂಡಿತನ ಉಲ್ಲೇಖ ಬರುತ್ತವೆ[೨] ಕ್ರಿ.ಶ. ೧೧೪೯ರ ಗುಡಗೇರಿ ಶಾಸನದಲ್ಲಿ ಶೈವ ಸ್ಥಾನಾಚಾರ್ಯ ಸೋಮೇಶ್ವರ ಪಂಡಿತನು ನಾಗೇಶ್ವರ ದೇವಾಲಯದಲ್ಲಿ ಸ್ಥಾನಾಚಾರ್ಯನಾಗಿದ್ದದ್ದನ್ನು ಕುರಿತು ತಿಳಿಸುತ್ತವೆ[೩]. ಕ್ರಿ.ಶ. ೧೧೪೯ರ ಗುಡಗೇರಿ ಶಾಸನದಲ್ಲಿ ನಿರ್ವಾಣಶಕ್ತಿ ಪಂಡಿತನು ಶ್ರೀ ಕುಳೇಶ್ವರ ದೇವಾಲಯದ ಸ್ಥಾನಾಚಾರ್ಯರಾಗಿದ್ದದ್ದನ್ನು ಕುರಿತು ತಿಳಿಸುತ್ತವೆ[೪] ಕ್ರಿ.ಶ. ೧೨೧೭ರ ಶಾಸನದಲ್ಲಿಯೂ ಕಾಳೇಶ್ವರ ಸ್ಥಾನಾಚಾರ್ಯರ ಕುರಿತು ತಿಳಿಸುತ್ತವೆ[೫]. ಈ ರೀತಿಯಾಗಿ ಪ್ರಸಿದ್ಧ ದೇಗುಲಗಳನ್ನು ನಿರ್ಮಿಸಿ ಸುಪ್ರಸಿದ್ಧ ಗುರುಪರಂಪರೆಯನ್ನು ಬೆಳೆಸಿದೆ. ಅವರ ಗುರುಪರಂಪರೆ ಈ ರೀತಿಯಾಗಿದೆ.

ಲೋಕಾಭರಣ ಪಂಡಿತ
|
ಈಶಾನಶಕ್ತಿ ಪಂಡಿತ
|
ನಿರ್ವಾಣಶಕ್ತಿ ಪಂಡಿತ
|
ತೇಜೋನಿಧಿ ಪಂಡಿತ
|
ಸೋಮೇಶ್ವರ ಪಂಡಿತ

ಕ್ರಿ.ಶ. ೧೦೪೪ರ ಕಲ್ಯಾಣಚಾಲುಕ್ಯರ ದೊರೆ ಒಂದನೆಯ ಸೋಮೇಶ್ವರ ಕುಂದಗೋಳ ಶಾಸನದಲ್ಲಿ ಉಲ್ಲೇಖಿತವಾಗಿರುವ 'ಬಾಳಚನ್ದ್ರೇಶ್ವರ' ಉಲ್ಲೇಖ ಬರುವದರಿಂದ[೬] ಇಲ್ಲಿಯ ಅತಿ ಪ್ರಾಚೀನ ಶೈವ ದೇವಾಲಯ ಕುಂದಗೋಳದ ಬಾಲಚಂದ್ರೇಶ್ವರ ದೇವಾಲಯ ಎಂದು ಊಹಿಸಬಹುದಾಗಿದೆ. ಕ್ರಿ.ಶ.. ೧೧೪೪ರ ಸಂಶಿ ಶಾಸನದಲ್ಲಿ ಕಾಳಾಮುಖ ಆಚಾರ್ಯ ಈಶಾನಶಕ್ತಿ ಪಂಡಿತ ಕುರಿತ ತಿಳಿಸುವ ಶಾಸನಗಳಾಗಿವೆ[೭].

* ಸಂಶೋಧನಾ ವಿದ್ಯಾರ್ಥಿನಿ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩. ಕುಂದಗೋಳ ತಾಲೂಕಿನ ಶೈವ ದೇವಾಲಯಗಳು

ಕುಂದಗೋಳ ತಾಲೂಕಿನ ಶಾಸನೋಕ್ತ ಪ್ರಾಚೀನ ಶೈವ ದೇವಾಲಯ ಕುಂದಗೋಳದ ಬಾಳಚನ್ದ್ರೇಶ್ವರ ಮತ್ತು ಸ್ವಯಂಭೂದೇವ ಕುಯಿಬಾಳದ ಜೋಗೇಶ್ವರ, ಯಿನ್ದ್ರೇಶ್ವರ ಮತ್ತು ಸ್ಥಾನಾಚಾರ್ಯ ಲೋಕಾಭರಣ ಪಂಡಿತರ ಉಲ್ಲೇಖ ಹಾಗೆಯೇ ಸಂಶಿಯ ಸಿದ್ದೇಶ್ವರ ಮತ್ತು ಕಾಳಾಮುಖ ಸ್ಥಾನಾಚಾರ್ಯ ಈಶಾನಶಕ್ತಿಯ ಉಲ್ಲೇಖ ಎಲಿವಾಳದ ಸ್ವಯಂಭೂ ನಖರೇಶ್ವರ, ಬೆಟದೂರಿನ ಮೂಲಸ್ಥಾನ ದೇವರು ಪ್ರತಿಷ್ಠೆ, ಗುಡಗೇರಿಯ ನಾಗೇಶ್ವರ ದೇವಾಲಯ ಮತ್ತು ಅಲ್ಲಿಯ ಸ್ಥಾನಾಚಾರ್ಯ ಸೋಮೇಶ್ವರ ಪಂಡಿತರ ಉಲ್ಲೇಖ ಮತ್ತು ಶ್ರೀ ಕಾಳೇಶ್ವರ ಹಾಗೂ ನಿರ್ವಾಣಶಕ್ತಿ ಪಂಡಿತರು ಹಾಗೆಯೇ ಕಲಿದೇವಸ್ವಾಮಿಯ ಕುರಿತು ಶಾಸನಗಳು ತಿಳಿಸುತ್ತವೆ.

ಬಾಳಚನ್ದ್ರೇಶ್ವರ ದೇವಾಲಯವನ್ನು ಉಲ್ಲೇಖಿಸುವ ಕ್ರಿ.ಶ. ೧೦೪೪ ರ ಶಾಸನ ಪ್ರಸ್ತುತ ಕುಂದಗೋಳದ ದೊರೆ ೧ನೆಯ ಸೋಮೇಶ್ವರನ ಕಾಲದ ಶಾಸನವಾಗಿವೆ ಪ್ರಮುಖ ಊರೊಡೆಯ ಬಾಲಚನ್ದ್ರೇಶ್ವರನಿಗೆ ನೀಡಿದ ದಾನ ದತ್ತಿಯನ್ನು ತಿಳಿಸುತ್ತವೆ[೮] ಕಲ್ಯಾಣಚಾಲುಕ್ಯ ೧ನೆಯ ಸೋಮೇಶ್ವರ ಕ್ರಿ.ಶ. ೧೦೫೮ರ ಕುಯಿಬಾಳ ಶಾಸನವು ಜೋಗೇಶ್ವರ ಮತ್ತು ಯಿನ್ದ್ರೇಶ್ವರ ದೇವರು ಮತ್ತು ಸ್ಥಾನಾಚಾರ್ಯ ಲೋಕಾಭರಣ ಪಂಡಿತರ ಪಾದ ತೊಳೆದು ಮಹಾಸಾಮಂತ ಇಂದ್ರಕೇಶ ಮತ್ತು ಗಾವುಂಡ ವರ್ಗಗಳು ದಾನ ನೀಡಿದ ವಿವರಗಳಿವೆ[೯] ಕ್ರಿ.ಶ. ೧೧೦೮ರ ಎಲಿವಾಳ ಕಲ್ಮೇಶ್ವರ ದೇವಾಲಯದ ಗೋಡೆಯ ಮೇಲಿನ ಶಾಸನವು ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಶಾಸನದಲ್ಲಿ ಎಲಿವಾಳದ ಶ್ರೀ ಸ್ವಯಂಭೂ ನಖರೇಶ್ವರ ದೇವರಿಗೆ ದುಗುಳ ದೊರೊಡೆಯರು ಸೇರಿ ದೇವರಿಗೆ ದಾನ ನೀಡಿದ ಕುರಿತು ಉಲ್ಲೇಖಿಸುತ್ತವೆ. ಕುಂದಗೋಳದ ಶಂಭುಲಿಂಗ ಗುಡಿಯ ರಂಗಮಂಟಪದಲ್ಲಿದ್ದ ಕಲ್ಯಾಣ ಚಾಲುಕ್ಯ ಸೋವಿದೇವನ ಕಾಲದ ಶಾಸನದಲ್ಲಿ ಸ್ವಯಂಭೂ ದೇವಾಲಯಕ್ಕೆ ಅರಸ ದಂಡನಾಯಕ ಪ್ರಮುಖ ಮಂತ್ರಿವರ್ಗಗಳು ನೀಡಿದ ದಾನವನ್ನು ತಿಳಿಸುತ್ತವೆ ಸ್ವಯಂಭೂ ದೇವರ ಕುರಿತಾಗಿ ತಿಳಿಸುವ ಇನ್ನೊಂದು ಶಾಸನ ಕುಂದಗೋಳದ ಗಂಗಾಧರೇಶ್ವರ ಗುಡಿಗೋಡೆಯ ಮೇಲಿದ್ದ ಕಲ್ಯಾಣ ಚಾಲುಕ್ಯ ತ್ರಿಭುವನ ಮಲ್ಲ ಎಂದು ಹೆಸರಾಗಿದ್ದ ೬ನೆಯ ವಿಕ್ರಮಾದಿತ್ಯ ಕಾಲದ ಶಾಸನದಲ್ಲಿ ಸ್ವಯಂಭೂ ದೇವರ ಕುರಿತು ತಿಳಿಸುತ್ತವೆ. ಈತನ ಕಾಲಕ್ಕೆ ಸೇರಿದ ಕ್ರಿ.ಶ. ೧೧೨೨ ಬೆಟದೂರಿನ ಶಾಸನದಲ್ಲಿ ಮೂಲಸ್ಥಾನ ದೇವರ ಪ್ರತಿಷ್ಠೆ ಮಾಡಿದ್ದರ ಕುರಿತು ತಿಳಿಸುತ್ತದೆ[೧೦] ಕಲ್ಯಾಣ ಚಾಲುಕ್ಯ ೨ನೆಯ ಜಗದೇಕಮಲ್ಲ ಕಾಲದ ಕ್ರಿ.ಶ. ೧೧೪೪ರ ಸಂಶಿ ಶಾಸನವು ಕಲ್ಮೇಶ್ವರ ದೇವಾಲಯದ ಹತ್ತಿರ ಇವೆ ಈ ಶಾಸನದಲ್ಲಿ ಲಕುಲೀಶ ಮತ್ತು ಕಾಳಾಮುಖ ಆಚಾರ್ಯ ಈಶಾನಶಕ್ತಿ ಪಂಡಿತರು ಮತ್ತು ಸಿದ್ದೇಶ್ವರ ಹಾಗೂ ಗವರೇಶ್ವರ ದೇವಾಲಯಕ್ಕೆ, ಬೆಳ್ವಲ ಆಳುತ್ತಿದ್ದ ಬಮಣ್ಣ ದಂಡನಾಯಕರು ಅಗ್ರಹಾರದ ನಾಲ್ಕೂರು ಮಹಾಜನರು ಮತ್ತು ಇತರ ವರ್ಗದವರು ದಾನ ನೀಡಿದ ಕುರಿತು ತಿಳಿಸುತ್ತವೆ[೧೧]. ದೇವಗಿರಿಯ ಯಾದವ ಸಿಂಘಣನ ಕಾಲದ ಕ್ರಿ.ಶ ೧೨ನೇ ಶತಮಾನ ಮತ್ತು ಗುಡಗೇರಿಯ ಕಲ್ಮಠದ ಕಂಬದಲ್ಲಿದ್ದ ಶಾಸನದಲ್ಲಿ ಶ್ರೀ ಕಾಳೇಶ್ವರ ಮತ್ತು ದೇವಾಲಯದ ಸ್ಥಾನಾಚಾರ್ಯ ನಿರ್ವಾಣಶಕ್ತಿ ಪಂಡಿತರಿಗೆ ಅಲ್ಲಿಯ ೧೨ ಗಾವುಂಡರು ದಾನ ನೀಡಿದ ಕುರಿತು ತಿಳಿಸುತ್ತವೆ ಈ ಊರಿನ ಕ್ರಿ.ಶ. ೧೨೧೭ರ ಇನ್ನೊಂದು ಶಾಸನದಲ್ಲಿ ಕಾಳೇಶ್ವರ, ಸ್ಥಾನಾಚಾರ್ಯ, ತೇಜೋನಿಧಿ ಪಂಡಿತರನ್ನು ಉಲ್ಲೇಖಿತ ೧೨ ಮಹಾಜನರು ಎಣ್ಣೆ ದಾನ ನೀಡಿದನ್ನು ತಿಳಿಸುತ್ತವೆ[೧೨].

೪. ಶೈವ ದೇವಾಲಯಗಳ ಪೋಷಣೆ

ಶೈವ ದೇವಾಲಯಕ್ಕೆ ರಾಜರು ಮಹಾಮಂಡಳೇಶ್ವರರು ಸಾಮಂತರು, ಗಾವುಂಡರು, ಊರೊಡೆಯರು ದಾನದತ್ತಿಗಳನ್ನು ನೀಡಿ ಅದಕ್ಕೆ ಪೋಷಣೆಯನ್ನು ನೀಡಿದ್ದಾರೆ. ಸಂಶಿ ಇದು ಕಾಳಾಮುಖ ಆಶ್ರಯ ತಾಣವಾಗಿತ್ತು ಕಲ್ಯಾಣ ಚಾಲುಕ್ಯ ಎರಡನೆಯ ಜಗದೇಕಮಲ್ಲನ ಕಾಲದಲ್ಲಿ ಬೆಳ್ವಲವನ್ನು ಆಳುತ್ತಿದ್ದ ಬಮ್ಮಣ್ಣ ದಂಡನಾಯಕ ಅಗ್ರಹಾರದ ನಾಲ್ಕೂರು ಮಹಾಜನರು ಐನೂರ್ವರು. ಗಾತ್ರಿಕರು, ಬೀರರು, ಬೀರುದರು, ಸೆಟ್ಟಿಯರು, ಸೆಟ್ಟಿಗುತ್ತರೂ ಗೌಡರು–ಗಾವುಂಡರು, ಐಯಾವೊಳೆ ಐನೂರ್ವರು, ತಂಬುಲಿಗ ಸಾಸಿವಳರೆಲ್ಲ ಸೇರಿ ಶ್ರೀ ಮಚ್ಚಾಳುಕ್ಯ ಪ್ರತಾಪ ಜಗದೇಕಮಲ್ಲ ಚಕ್ರವರ್ತಿ ಪೌಷ್ಯದಮಾವಾಸ್ಯೆ ಸೋಮವಾರ ವ್ಯತಿಪಾತ ಉತ್ತರಾಯಣ ಸಂಕ್ರಮಣ ಸೂರ್ಯಗ್ರಹಣದಂದು ಭೂಮಿ ಮನೆ, ಜಾಗ, ಅಂಗಡಿ, ವೀಸ ಪಾಗ ಸೇರಿ ಶ್ರೀ ಗವರೇಶ್ವರ ಸ್ಥಾನದ ಕಾಳಾಮುಖ ಆಚಾರ್ಯ ಲಕುಲೀಶ ಪಂಕಜರಾವ, ನೀಶಾನಶಕ್ತಿ ಪಂಡಿತರಿಗೆ, ಸಿದ್ದೇಶ್ವರ ದೇವರ ನೈವೇದ್ಯ, ಲಿಂಗಭೋಗಕ್ಕೆ, ಖಂಡಸ್ಪುಟಿತ ಜೀರ್ಣೋದ್ಧಾರಕ್ಕೆ ತಪೋದರ ಆಹಾರದಾನಕ್ಕೆ ಈಶಾನಶಕ್ತಿ ಪಂಡಿತದೇವರ ಕಾಲುಕರ್ಚ್ಚಿ ಧಾರಾಪೂರ್ವಕವಾಗಿ ದಾನ ನೀಡಿದ ವಿವರಣೆ ಇದೆ. ಇಲ್ಲಿ ಶೈವ ದೇವಾಲಯವನ್ನು ಪೋಷಿಸಿ ಮತ್ತು ಸ್ಥಾನಾಚಾರ್ಯರಿಗೆ ಆಶ್ರಯ ನೀಡಿರುವದು ಈ ಶಾಸನದಿಂದ ತಿಳಿದು ಬರುತ್ತವೆ.

ಗುಡಗೇರಿಯ ಕಲ್ಮಠದ ಕಂಬದಲ್ಲಿನ ಶಾಸನದಲ್ಲಿ ಶ್ರೀ ಕಾಳೇಶ್ವರ ದೇವರ ದಕ್ಷಿಣದ ದಿಶಾಬಾಗದಲಿಂತನ ಕಂಡೆಯರ ಕಲ್ಲಿಮಯ್ಯ ಹೆಸರಿನಲ್ಲಿ ಲಿಂಗ ಪ್ರತಿಷ್ಠೆ ಮಾಡಿ ಶ್ರೀ ಕಲಿದೇವರ ಪೂಜೆ ಪುರಸ್ಕಾರಕ್ಕೆ ನಿಮಿತ್ತವಾಗಿ ಗುಡಗೇರಿಯ ೧೨ ಗಾವುಂಡರು ಅರುವತ್ಮೂರು ಗದ್ಯಾಣ, ಹೊನ್ನು, ೫ ಮತ್ತರು ಭೂಮಿ ಸೀಮೆ ೩೨ ಗೇಣು ಬಾಚಿವಿಡಿಯ ಕೋಲು ೩ ಮತ್ತರು ಕಮ್ಮವನ್ನು ಶ್ರೀ ಕಾಳೇಶ್ವರ ದೇವರ ಸ್ಥಾನಾಚಾರ್ಯ ನಿರ್ವಾಣಶಕ್ತಿ ಪಂಡಿತರ ದೇವರ ಶಿಷ್ಯಳಾದ ಶಂಕಕಬ್ಬೆ, ನಿರ್ವಾಣಶಕ್ತಿ ದೇವರ ಶಿಷ್ಯ ಚಂದ್ರಭೂಷಣ ದೇವರ ಶಿಷ್ಯ, ತಲಯಣವೂಚಣ ಮತ್ತು ಕಾಳೇಶ್ವರ ದೇವರಿಗೆ ೧೨ ಮತ್ತರು ತಪೋವನದ ಭಿಕ್ಷೆ, ಮತ್ತರು ಎರಡನ್ನು ಸರ್ವಬಾದ ಪರಿಹಾರವಾಗಿ ಅಕ್ಷೋಹಿಣಿಯಂ ಕೊಟ್ಟು ಬಿಟ್ಟರು ಕಾಳೇಶ್ವರ ಸ್ಥಾನಾಚಾರ್ಯನನ್ನು ಉಲ್ಲೇಖಿಸುವ ಗುಡಗೇರಿಯ ದೇವಗಿರಿಯ ಯಾದವರ ಅರಸ ಸಿಂಘಣನ ಕಾಲದಲ್ಲಿ ೧೨ ಮಹಾಜನರು ಮತ್ತು ತೆಲ್ಲಿಗರ ವೀರಸಿಂಘಣ ದೇವವರ್ಷದ ೭ನೆಯ ಈಶ್ವರ ಸಂವತ್ಸರದ ಶ್ರಾವಣ ಮಾಸದ ಅಮವಾಸ್ಯೆ ಬ್ರಹಸ್ಪತಿವಾರ (ಗುರುವಾರ) ಸೂರ್ಯಗ್ರಹಣ ಬ್ಯಲೆಪಾತದಂದು ಶ್ರೀ ಕಾಳೇಶ್ವರ ದೇವರ ನಂದಾದೀವಿಗೆಗೆ ಅಲ್ಲಿಯ ಸ್ಥಾನಾಚಾರ್ಯ ತೇಜೋನಿಧಿ ಪಂಡಿತರ ಪಾದ ತೊಳೆದು (ಕಾಲಂಕರ್ಚಿ) ದಾರಾಪೂರ್ವಕವಾಗಿ ಸೊಲ್ಲಗೆ ಸೂಟಿಗೆ ಎಣ್ಣೆಯನ್ನು ಅರ್ಪಣೆ ಮಾಡಿದನು[೧೩]. ಕಲ್ಯಾಣ ಚಾಲುಕ್ಯ ೨ನೆಯ ಜಗದೇಕಮಲ್ಲನ ಕಾಲದ ಗುಡಗೇರಿಯ ತಾಲೂಕ ಕಛೇರಿ ಹತ್ತಿರ ಇದ್ದ ಇನ್ನೊಂದು ಶಾಸನದಲ್ಲಿ ಜೈನ ಮತದವರು ಶೈವಯತಿ ಮತ್ತು ನಾಗೇಶ್ವರ ದೇವರಿಗೆ ದಾನ ನೀಡಿರುವದು ಕಂಡು ಬರುತ್ತದೆ. ಜೈನ ಮತದವರಾದ ಕೇತೋಜ ಮತ್ತು ಮಂಡಳಾಚಾರ್ಯರಾದ ನಾಗೋಜರು ನಂದೀಬ್ರತಿಸನೆ ಮತ್ತು ತೇಜೋನಿಧಿ ಪಂಡಿತರ ಪಾದ ತೊಳೆದು ದಾನ ನೀಡಿದ ವಿವರವಿದೆ ಗುಡಗೇರಿಯ ನಾಗೇಶ್ವರ ದೇವರಿಗೆ ಬಸದಿಯ ಮಂಡಳಾಚಾರ್ಯರಪ್ಪರಾವ ನಾಗಗಾವುಂಡ ಪ್ರಮುಖವಾಗಿ ಗುಡಗೇರಿಯ ಗಾವುಂಡಗಳು ಸೇರಿ ಸ್ವಸ್ತಿ ಶ್ರಿಮತು ಪ್ರತಾಪ ಚಕ್ರವರ್ತಿ ಜಗದೇಕಮಲ್ಲ ಸಿದ್ಧಾರ್ಥಿ ಸಂವತ್ಸರ ಪುಷ್ಯಶುದ್ಧ ಪಂಚಮಿಯಂದು ಪಡುವಲು ಹುಲುಗೊರು ದಾರಿ ಮೂವತ್ತೆರಡು ಗೇಣನ್ನು ನಾಗೋಜಮ ಉತ್ತರಾಯಣ ಸಂಕ್ರಾಂತಿಯಂದು ಅಲ್ಲಿಯ ದೇವಾಲಯದ ಸ್ಥಾನಾಚಾರ್ಯ ಸೋಮೇಶ್ವರ ಪಂಡಿತರ ಪಾದ ತೊಳೆದು ಧಾರಾಪೂರ್ವಕವಾಗಿ ಕೊಟ್ಟರು[೧೪]. ಕುಯಿಬಾಳದ ಮಸಿದಿಯ ಹತ್ತಿರ ಇರುವ ಕಲ್ಯಾಣ ಚಾಲುಕ್ಯ ೧ನೆಯ ಸೋಮೇಶ್ವರನ ಶಾಸನದಲ್ಲಿ ಶೈವ ಧರ್ಮವನ್ನು ಪೋಷಣೆ ನೀಡಿದ್ದು ಕಂಡುಬರುತ್ತದೆ ಈತನ ಕಾಲದಲ್ಲಿ ಮಹಾಸಾಮಂತನಾದ ಇಂದ್ರಕೇಶಿಯು ಪುಲಿಗೆರೆ ೩೦೦ರ ರಾಜ್ಯಪಾಲನಾಗಿದ್ದ ಕಾಲದಲ್ಲಿ ಪುಲಿಗೆರೆ ೩೦೦ ರಾಷ್ಟ್ರಕೂಟರು ಮತ್ತು ಇವನ ಆಡಳಿತ ವಿಭಾಗವಾಗಿತ್ತು. ಆ ಸಂದರ್ಭದಲ್ಲಿ ತಂತ್ರಪಾಲ ಚಾವುಂಡಮಯ್ಯ ಚಾವಗಾವುಂಡ, ಸೋಭನಗಾವುಂಡರು ಸೇರಿ ಶಕವರ್ಷ ೯೮೦ನೆಯ ವಿಳಂಬಿ ಸಂವತ್ಸರದ ಪುಷ್ಯ ಶುದ್ಧ ಆದಿತ್ಯವಾರ ಉತ್ತರಾಯಣ ಸಂಕ್ರಾಂತಿಯಂದು ಜೋಗೇಶ್ವ ದೇವರಿಗೆ ಪಾದ ತೊಳೆದು ಶಕ್ತಿಪರ್ಸೆಯ ಲೋಕಾಭರಣ ಪಂಡಿತರ ಭೂಮಿ, ಸೀಮೆಯಿಂದ ಬಡಗಣ, ಗೇಣಗಳೆಯೊಳ ಬಿಟ್ಟಕೆಯ್ಯ ಮತ್ತರು ಹನ್ನೆರಡು ಎಂದು ಉಲ್ಲೇಖಿಸುತ್ತವೆ[೧೫] ಇದೆ ಶಾಸನದ ಇನ್ನೊಂದು ಸಾಲಿನಲ್ಲಿ ಬಮ್ಮಗಾವುಂಡ ಮತ್ತು ರಾಜಗಾವುಂಡರು, ಗಾವುಂಡರು ಸೇರಿ ಶ್ರಾವಣ ೧ನೆಯ ಸೋಮವಾರ ದಕ್ಷಿಣಾಯಣ ಸಂಕ್ರಮಣದಂದು ಕುಯಿಬಾಳ ಶ್ರೀ ಜೋಗೇಶ್ವರ ದೇವರಿಗೆ ಲೋಕಾಭರಣ ಪಂಡಿತರ ಪಾದತೊಳೆದು ಪಂಚಮಠ ಕುರುವಗೇರಿ ಪಡುವಲು ೫೫೦ ಕಮ್ಮ, ಬಮ್ಮಗಾವುಂಡನು ೪೪೦ ಕಮ್ಮ ಮತ್ತು ರಾಜಗಾವುಂಡರು ೨೦೦ ಕಮ್ಮ ಮತ್ತರನ್ನು ವಗಾವುಂಡ ೪೦೦ ಕಮ್ಮವನ್ನು ದಾನ ನೀಡಿ ಶೈವ ಪರಂಪರೆಗೆ ಪ್ರೋತ್ಸಾಹ ನೀಡಿದ್ದು ಕಂಡು ಬರುತ್ತದೆ. ಕುಂದಗೋಳದ ಬ್ರಹ್ಮದೇವರ ಹೊಲದಲ್ಲಿದ್ದ ಕಲ್ಯಾಣ ಚಾಲುಕ್ಯರ (ಅಹವಯಲ್ಲಿ) ೧ನೆಯ ಸೋಮೇಶ್ವರನ ಶಾಸನದಲ್ಲಿ ಶ್ರೀಮದೊರೊಡೆಯ ಪ್ರಮುಖ ಮಹಾಜನಗಳು ಶಕವರ್ಷ ೯೬೮ನೇ ತಾರಣ ಸಂವತ್ಸರ ಚೈತ್ರ ಶುದ್ಧ ಪಂಚಮಿಯಂದು ಬಾಳಚನ್ದ್ರೇಶ್ವರ ದೇವರಿಗೆ ಸ್ಥಾನಾಚಾರ್ಯರಿಗೆ ಭೂಮಿ ಮತ್ತು ಮನೆಯನ್ನು ದಾನ ನೀಡಿದ ಕುರಿತು ತಿಳಿಸುತ್ತವೆ.[೧೬] ಕುಂದಗೋಳದ ಇನ್ನೊಂದು ಕಲಚೂರಿ ಸೋವಿದೇವನ ಕಾಲದ ಶಾಸನದಲ್ಲಿ ರಾಯಮುರಾರಿ ಸೋವಿದೇವ ಮತ್ತು ಮಹಾಪ್ರಧಾನ ಲಕ್ಷ್ಮೀಧರ ದಂಡನಾಯಕ ಪ್ರಮುಖ ಶ್ರೀಕರಣಂಗಳು ಶುಕ್ರವಾರ ಸೋಮಗ್ರಹಣವಿನಿತು ಕೂಡಿದಂತಿದ್ದ ಪು(೦)ಣ್ಯತಿಥಿಯೊಳು ಪಾದ ತೊಳೆದು ಶ್ರೀ ಸ್ವಯಂಭೂ ದೇವರಿಗೆ ರಂಗಭೋಗ, ಅಂಗಭೋಗ ನಿತ್ಯ ನೈವೇದ್ಯಕ್ಕೆ ದೇವರ ಪೂಜೆಗೆ ಭೂದಾನ ಮಾಡಿದ ಕುರಿತು ತಿಳಿಸುತ್ತವೆ[೧೭]. ಕುಂದಗೋಳದ ಗಂಗಾಧರೇಶ್ವರ ಗುಡಿಯ ಗೋಡೆಗೆ ಇದ್ದ ಶಾಸನವು ಕಲ್ಯಾಣಚಾಲುಕ್ಯ ತ್ರಿಭುವನ ಮಲ್ಲನ ಕಾಲದ್ದಾಗಿದ್ದು ಚಾಲುಕ್ಯ ಅರಸ ತ್ರಿಭುವನ ಮಲ್ಲದೇವನ ವರ್ಷದಲ್ಲಿ ಸ್ವಯಂಭೂ ದೇವರ ಸೂತ್ರದಾರಿ ಬಮ್ಮೋಜನ ಪುತ್ರ ಕಾಳೋಜನಿಗೆ ದಾನ ನೀಡಿದ ಉಲ್ಲೇಖವಿದೆ[೧೮]. ಎಲಿವಾಳದ ಕಲ್ಮೇಶ್ವರ ದೇವಾಲಯದ ಗೋಡೆ ಮೇಲಿದ್ದ ಕಲ್ಯಾಣ ಚಾಲುಕ್ಯ ೬ನೆಯ ವಿಕ್ರಮಾದಿತ್ಯನ ಕಾಲದ ಶಾಸನದಲ್ಲಿ ಪ್ರಮುಖ ಊರೊಡೆಯರು ಕುಂದಗೋಳ ಮಹಾಜನರಲ್ಲೊಬ್ಬನಾದ ಕೇಶವರಾಜ ಲಚಿಕಬ್ಬೆ ಸೇರಿ ಸ್ವಸ್ತಿ ಶ್ರೀ ಮಚ್ಚಾಳುಕ್ಯ ವಿಕ್ರಮ

ಕಾಲದ ೩೩ನೆಯ ಸರ್ವದಾರಿ ಸಂವತ್ಸರದಂದು ಶ್ರೀ ಸ್ವಯಂಭೂ ದೇವರಿಗೆ ನಂದಾದೀವಿಗೆಗೆ, ನೈವೇದ್ಯಕ್ಕೆ ಮೂರು ಅಂಗಡಿಯ ತೆಂಕಣ, ಬಡಗಣ ದಾನ ನೀಡಿದ್ದನ್ನು ಉಲ್ಲೇಖಿಸುತ್ತವೆ[೧೯]. ಬೆಟದೂರಿನ ಕಲ್ಲೇಶ್ವರ ದೇವಾಲಯದ ಎದುರಿಗಿದ್ದ ಶಾಸನದಲ್ಲಿ ಕಲ್ಯಾಣ ಚಾಲುಕ್ಯ ೬ನೆಯ ವಿಕ್ರಮಾದಿತ್ಯನ ಶಾಸನದಲ್ಲಿ ಮಹಾಮಂಡಳೇಶ್ವರನು ಅಗಸ್ತ್ಯಗೋತ್ರ ನಾರಾಯಣಭಟ್ಟ ಮತ್ತು ವಿನಾಯಕ ದ್ಯೇವಿಯರು ಕಂಚಿಕಬ್ಬೆಯ ತಮ್ಮ ಕಲ್ಲಿಸೆಟ್ಟಿ ಸೇನುಬೋವರು ಸೇರಿ ಮೂಲಸ್ಥಾನ ದೇವರ ಪ್ರತಿಷ್ಠೆ ಮಾಡಿ ವೃತ್ತಿಯ ಮತ್ತರು ಕೆಯ್ಯಬಳೇಯ ಕೇರಿ ಕೆಳಗಣ ಒಂದೊಂದು ಹೂವಿನ ತೋಟಮುಮಂ ಪ(ಡೆದು) ಅಂಗಡಿಯನ್ನು ಮಹಾಜನಗಳ ಕೈಯಲ್ಲಿ ಮಾನ್ಯವಾಗಿ ಬಿಟ್ಟರು. ಶಕವರ್ಷ ೧೦೪೮ನೆಯ ಶುಭಕೃತ ಸಂವತ್ಸರ ಬಹುಳಾಮವಾಸ್ಯೆ ಶುಕ್ರವಾರ ಪುಣ್ಯೋದಯ ದಿನದೊಳು ಸೂರ್ಯಗ್ರಹಣ ತತ್ಕಾಲದೊಳ್ ಈಶ್ವರಭಟ್ಟ ಗೋವಿಂದ ಭಟ್ಟನು ದೇವರಿಗೆ ದಾನ ಬಿಟ್ಟ ವಿವರಣೆ ಇದೆ.[೨೦] ಕಲ್ಯಾಣ ಚಾಲುಕ್ಯ ೬ನೆಯ ವಿಕ್ರಮಾದಿತ್ಯನ ಕಳಸದ ಶಾಸನದಲ್ಲಿ ಗಡಹವ ಯೋಗೀಶ್ವರ ದೇವಾಲಯಕ್ಕೆ ಭೂದಾನವನ್ನು ಇನ್ನೊರ್ವರು ನೀಡಿದ ವಿವರವಿದೆ.[೨೧]

ಕುಂದಗೋಳ ತಾಲೂಕಿನ ಅನ್ವಯ ಶೈವಧರ್ಮಕ್ಕೆ ಪ್ರೋತ್ಸಾಹ ನೀಡಿದ ಅರಸರು

ಅ.ನಂ.	ಗ್ರಾಮ	ರಾಜಮನೆತನಗಳು	ರಾಜರು	ಕ್ರಿ.ಶ. ಕಾಲ	ದೇವಾಲಯ	ಸ್ಥಾನಾಚಾರ್ಯ	ಪ್ರಕಟಣೆ
೧.	ಕುಂದಗೋಳ	ಕಲ್ಯಾಣ ಚಾಲುಕ್ಯ	೧ನೆಯ ಸೋಮೇಶ್ವರ	೧೦೪೪	ಬಾಲಚಂದ್ರೇಶ್ವರ		S.I.I. Vol. XI No. 45
೨.	ಕುಯಿಬಾಳ	ಕಲ್ಯಾಣ ಚಾಲುಕ್ಯ	೧ನೆಯ ಸೋಮೇಶ್ವರ	೧೦೫೮	ಜೋಗೇಶ್ವರ ಯಿನ್ದ್ರೇಶ್ವರ	ಸ್ಥಾನಾಚಾರ್ಯ ಲೊಕಾಭರಣ ಪಂಡಿತ	S.I.I. XX No. 29
೩.	ಎಲಿವಾಳ	ಕಲ್ಯಾಣ ಚಾಲುಕ್ಯ	೬ನೆಯ ವಿಕ್ರಮಾದಿತ್ಯ	೧೧೦೮	ಶ್ರೀ ಸ್ವಯಂಭೂ ನಖರೇಶ್ವರ		
೪.	ಕುಂದಗೋಳ	ಕಲ್ಯಾಣ ಚಾಲುಕ್ಯ	೬ನೆಯ ವಿಕ್ರಮಾದಿತ್ಯ	–	ಸ್ವಯಂಭೂದೇವ		S.I.I. XX 96-122
೫.	ಬೆಟದೂರ	ಕಲ್ಯಾಣ ಚಾಲುಕ್ಯ	೬ನೆಯ ವಿಕ್ರಮಾದಿತ್ಯ	೧೧೨೨	ಮೂಲಸ್ಥಾನ ದೇವರ ಪ್ರತಿಷ್ಠೆ		S.I.I. XX No. 82
೬.	ಸಂಶಿ	ಕಲ್ಯಾಣ ಚಾಲುಕ್ಯ	೨ನೆಯ ಜಗದೇಕಮಲ್ಲ	೧೧೪೪	ಗವರೇಶ್ವರ ಸಿದ್ದೇಶ್ವರ	ಕಾಳಾಮುಖ ಸ್ಥಾನಾಚಾರ್ಯ ಈಶಾನಶಕ್ತಿ	S.I.I. Vol. XX No. 112
೭.	ಕಳಸ	ಕಲ್ಯಾಣ ಚಾಲುಕ್ಯ	೬ನೆಯ ವಿಕ್ರಮಾದಿತ್ಯ	೧೧–೧೨ ನೆಯ ಶತಮಾನ	ಯೋಗಿಶ್ವರ		
೮.	ಗುಡಗೇರಿ	ಕಲ್ಯಾಣ ಚಾಲುಕ್ಯ	೨ನೆಯ ಜಗದೇಕಮಲ್ಲ	೧೨ನೆಯ ಶತಮಾನ	ಶ್ರೀ ಕಾಳೇಶ್ವರ	ನಿರ್ವಾಣ ಶಕ್ತಿ ಪಂಡಿತರು	S.I.I. Vol. XX No. 314
೯.	ಕುಂದಗೋಳ	ಕಲಚೂರಿಗಳು	ಸೋವಿದೇವ	ಕ್ರಿ.ಶಕ ೧೨ನೆಯ ಶತಮಾನ	ಸ್ವಯಂಭೂ ದೇವಾಲಯ		S.I.I. Vol. XX No. 163
೧೦.	ಗುಡಗೇರಿ			ಕ್ರಿ.ಶಕ ೧೨ನೆಯ ಶತಮಾನ	ಕಲಿದೇವ ಸ್ವಾಮಿ		
೧೧.	ಗುಡಗೇರಿ	ದೇವಗಿರಿ ಯಾದವರು	ಸಿಂಘಣ	ಕ್ರಿ.ಶ.೧೨೧೭	ಕಾಳೇಶ್ವರ	ತೇಜೋನಿಧಿ ಪಂಡಿತರು	S.I.I. Vol. XX No. 193
೧೨.	ಗುಡಗೇರಿ	ಕಲ್ಯಾಣ ಚಾಲುಕ್ಯರು	೨ನೆಯ ಜಗದೇಕಮಲ್ಲ	ಕ್ರಿ.ಶ.೧೧೩೯	ನಾಗೇಶ್ವರ	ತೋಜೋನಿಧಿ ಪಂಡಿತ ಸೋಮೇಶ್ವರ ಪಂಡಿತ	S.I.I. XX No. 110

ಕುಂದಗೋಳ ತಾಲೂಕಿನ ಶೈವ ಶಾಸನಗಳನ್ನು ಅಧ್ಯಯನಕ್ಕೊಳಪಡಿಸಿದ್ದಾಗ ಒಟ್ಟು ೧೨ ಶೈವ ಶಾಸನಗಳು ಕಂಡುಬರುತ್ತವೆ ಅವುಗಳಲ್ಲಿ ೯ ಕಲ್ಯಾಣ ಚಾಲುಕ್ಯರಿಗೆ ಸಂಬಂಧಪಟ್ಟಿವೆ ಅದರಲ್ಲಿ ಒಂದನೆಯ ಸೋಮೇಶ್ವರನ ೨ ಶಾಸನಗಳ ಆರನೆಯ ವಿಕ್ರಮಾದಿತ್ಯನ ೪ ಶಾಸನಗಳು, ಜಗದೇಕಮಲ್ಲನ ೩ ಶಾಸನಗಳು ಕಂಡುಬಂದಿವೆ. ಇವರ ಕಾಲದಲ್ಲಿ ಬಾಲಚಂದ್ರೇಶ್ವರ, ಜೋಗೇಶ್ವರ ಇಂದ್ರೇಶ್ವರ ದೇವರ ಸ್ಥಾನಾಚಾರ್ಯ ಲೋಕಾಭರಣ ಪಂಡಿತರು ಸ್ವಯಂಭೂ, ನಖರೇಶ್ವರ, ಸ್ವಯಂಭೂದೇವ, ಗವರೇಶ್ವರ, ಸಿದ್ದೇಶ್ವರ ದೇವಾಲಯದ ಕಾಳಾಮುಖ ಸ್ಥಾನಾಚಾರ್ಯ, ಈಶಾನಶಕ್ತಿ ಪಂಡಿತರು ಶ್ರೀ ಕಾಳೇಶ್ವರ ದೇವಾಲಯದ ಸ್ಥಾನಾಚಾರ್ಯ ನಿರ್ವಾಣಶಕ್ತಿ ಪಂಡಿತರು–ನಾಗೇಶ್ವರ ದೇವಾಲಯದ ಸ್ಥಾನಾಚಾರ್ಯ ತೋಜೋನಿಧಿ ಪಂಡಿತರ ಕಾಲದಲ್ಲಿ ಶೈವ ಪರಂಪರೆಗೆ ರಾಜರು ಆಶ್ರಯ ನೀಡಿರುವುದು ತಿಳಿದುಬಂದಿದೆ. ಹಾಗೆಯೇ ಕಲಚೂರಿಗಳ ೧ ಶಾಸನವು ಸೋವಿದೇವನ ಕಾಲದ್ದಾಗಿದ್ದು ಸ್ವಯಂಭೂದೇವನನ್ನು ಉಲ್ಲೇಖಿಸುತ್ತದೆ ದೇವಗಿರಿಯ ಯಾದವ ಸಿಂಘಣನ ಕಾಲದ ಶಾಸನ ಕಾಳೇಶ್ವರ ದೇವಾಲಯದ ಸ್ಥಾನಾಚಾರ್ಯ ತೇಜೋನಿಧಿ ಪಂಡಿತನನ್ನು ಉಲ್ಲೇಖಿಸುತ್ತದೆ. ಕುಂದಗೋಳ ತಾಲೂಕು ಧಾರ್ಮಿಕವಾಗಿ ಪ್ರಮುಖ ಶೈವ ಕೇಂದ್ರವಾಗಿತ್ತೆಂಬುದಕ್ಕೆ ಶೈವ ದೇವಾಲಯವನ್ನು ಕಟ್ಟಿಸಿ ಶೈವ ಸ್ಥಾನಾಚಾರ್ಯರಿಗೆ ನೀಡಿದ ಭೂಧಾನ ಮತ್ತು ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ನೀಡಿರುವ ಗ್ರಾಮ, ಗ್ರಾಮದಾನ, ಸುಂಕದಾನ ನಂದಾದೀವಿಗೆ ಎಣ್ಣೆ ದಾನಗಳನ್ನು ಉಲ್ಲೇಖಿಸುತ್ತವೆ. ವಿಳಂಬಿಸಂವತ್ಸರ ಶುಭಕೃತ ಸಂವತ್ಸರ ಈಶ್ವರ ಸಂವತ್ಸರ ದಿನದಂದು ದಾನ ನೀಡಿದಂತೆ ಇನ್ನೂ ಮಹಾಸಾಮಂತ ಇಂದ್ರಕೇಶ, ತಂತ್ರಪಾಲ, ಚಾವುಂಡಮಯ್ಯ, ಮಂಡಲಾಚಾರ್ಯರು ಶೈವಧರ್ಮಕ್ಕೆ ಪೋಷಣೆ ನೀಡಿರುವುದು ತಿಳಿದು ಬರುತ್ತದೆ. ಪ್ರಮುಖ ಗಾವುಂಡರುಗಳಾದ ರಾಜಗಾವುಂಡ, ಬಮ್ಮಗಾವುಂಡ, ಚಾವುಂಡಮಯ್ಯ, ಸೋಭನ ಗಾವುಂಡ, ಚಾವಗಾವುಂಡ ಕೂಡಾ ದೇವಾಲಯಗಳಿಗೆ ತಮ್ಮದೆ ಆದ ಕೊಡುಗೆ ನೀಡಿದ್ದಾರೆ. ಪ್ರಮುಖ ದಂಡನಾಯಕರು ಬಮ್ಮಣ್ಣ ದಂಡನಾಯಕ, ಲಕ್ಷ್ಮೀದರ ದಂಡನಾಯಕ ಪ್ರಮುಖರು ಊರೊಡೆಯ ಸಮಸ್ತ ಜನರು ಕುಂದಗೋಳ ತಾಲೂಕಿನ ಶೈವಧರ್ಮವನ್ನು ಪೋಷಿಸುವುದರ ಜೊತೆಗೆ ಶೈವ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವದು ಶಾಸನಗಳಿಂದ ತಿಳಿದು ಬರುತ್ತದೆ.

ಅಡಿಟಿಪ್ಪಣಿಗಳು

೧. ಸೂರ್ಯನಾಥ ಕಾಮತ್, (ಸಂ) ೧೯೯೭, ಧಾರವಾಡ ಜಿಲ್ಲೆ, ಗ್ಯಾಸೆಟಿಯರ್, ಪು. ೮.
೨. S.I.I. Vo. XX No. 38, ಕುಯಿಬಾಳ, ಕ್ರಿ.ಶ. ೧೦೫೮.
೩. S.I.I.Vol. XX No. 110, ಗುಡಗೇರಿ, ಕ್ರಿ.ಶ. ೧೧೩೯.
೪. S.I.I.Vol. XV, ಗುಡಗೇರಿ ಕ್ರಿ.ಶ. ೧೨ನೆಯ ಶತಮಾನ.
೫. S.I.I.Vol. XX No. 193, ಗುಡಗೇರಿ, ಕ್ರಿ.ಶ. ೧೨೧೭.
೬ S.I.I. Vol. XX No. 29, ಕುಂದಗೋಳ, ಕ್ರಿ.ಶ. ೧೦೪೪.
೭. S.I.I. Vol. XX No. 112, ಸಂಶಿ, ಕ್ರಿ.ಶ. ೧೧೪೪.
೮. S.I.I. Vol. XX No. 29, ಕುಂದಗೋಳ, ಕ್ರಿ.ಶ. ೧೦೪೪.
೯. S.I.I. Vol. XX 38, ಕುಯಿಬಾಳ, ಕ್ರಿ.ಶ. ೧೦೫೮.
೧೦. S.I.I. Vol. XX No. 82, ಎಲಿವಾಳ, ಕ್ರಿ.ಶ. ೧೧೦೮.
೧೧. S.I.I. Vol. XX No.112, ಸಂಶಿ, ಕ್ರಿ.ಶ. ೧೧೪೪.
೧೨. S.I.I. Vol. XX No. 193, ಗುಡಗೇರಿ, ಕ್ರಿ.ಶ. ೧೨೧೭.
೧೩. ಅದೇ.,
೧೪. S.I.I.Vol. XX No. 110, ಗುಡಗೇರಿ, ಕ್ರಿ.ಶ. ೧೧೩೯.
೧೫. S.I.I. Vol. XX 38, ಕುಯಿಬಾಳ, ಕ್ರಿ.ಶ. ೧೦೫೮.
೧೬. S.I.I.Vol. XX No. 29, ಕುಂದಗೋಳ ಕ್ರಿ.ಶ. ೧೦೪೪.
೧೭. S.I.I. Vol. XX No. 163, ಕುಂದಗೋಳ.
೧೮. S.I.I. Vol. XX No. 96, ಕುಂದಗೋಳ.
೧೯. S.I.I. Vol. XX No. 82, ಎಲಿವಾಳ, ಕ್ರಿ.ಶ. ೧೧೦೮.
೨೦. S.I.I. Vol. XX No. 82, ಬೆಟದೂರು, ಕ್ರಿ.ಶ. ೧೧೨೨.
೨೧. S.I.I. XX No. 314, ಕಳಸ ಕ್ರಿ.ಶ. ೧೧–೧೨ನೆಯ ಶತಮಾನ.

೫೮

ಗಜಮುಖಿ ಅರ್ಥಾತ್ ಗಣೇಶಾಣಿ

ಸಿದ್ಧರಗಿರಿ ಓ.ಎಲ್. ಚಂದ್ರೇಗೌಡ*

ಈ ದಿಗಂಬರಿಯಾಕಾರದ ಗಜಮುಖಿ ಗಣೇಶಾನಿಯ ವಿಗ್ರಹರೂಪವು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಚಂದ್ರಗುತ್ತಿ, ಚಿತ್ರದುರ್ಗ ಜಿಲ್ಲೆಯ ಲುಂಕಿಮಲೆಯಲ್ಲಿನ ಕಲ್ಯಾಣಿಯ ಸಮೀಪದ ಬಂಡೆಯಲ್ಲಿ, ಅಸ್ಸಾಂ ರಾಜ್ಯದಲ್ಲಿರುವ ಪ್ರಖ್ಯಾತ ಶಕ್ತಿಪೀಠಗಳಲ್ಲೊಂದಾದ ಕಾಮಾಖ್ಯ ಮಂದಿರದ ಒಳಪ್ರಾಂಗಣದಲ್ಲಿ ಸದ್ಯಕ್ಕೆ ನನಗೆ ಗೋಚರಿಸಿವೆ.

ನಾವು ಸಂಶೋಧನಾ ಕ್ಷೇತ್ರ ಕಾರ್ಯನಿಮಿತ್ತವಾಗಿ ಚಂದ್ರಗುತ್ತಿ ಬೆಟ್ಟವನ್ನು ಅಭಿಮುಖ ಮಾಡಿಕೊಂಡು ಏರತೊಡಗಿದರೆ ಸುಮಾರು ೭೦ ಮೆಟ್ಟಲುಗಳನ್ನು ಏರಿದೊಡನೆಯೇ, ತಮಗೆ ಎಡಬದಿಯಲ್ಲಿನ ಸ್ವಲ್ಪ ಎತ್ತರವಾದ ಸ್ಥಳದಲ್ಲಿ ಚಂದ್ರನಾಥ ಎಂಬ ನಾಥಸಿದ್ಧರ ಜೀವಂತ ಸಮಾಧಿ ಎಂಬ ನಾಮಫಲಕ ಇರುವಂತಹ ಒಂದು ಸಮಾಧಿ ಕಾಣಲು ಸಿಕ್ಕುತ್ತದೆ. ಈ ಸಮಾಧಿಯು ನಾಥಸಂಪ್ರದಾಯದ ಕೌಲಸಿದ್ಧಾಂತಿ ಯೋಗಿಸಿದ್ದರ ಸಮಾಧಿ.

ಈ ಸಮಾಧಿಯಿಂದ ಸುಮಾರು ೨೦೦ ಅಡಿಗಳಷ್ಟು ಅಂತರದಲ್ಲಿ ನಾಥಸಿದ್ದರು ವಾಸವಾಗಿರುವ ಕುಟೀರದ ಮುಂಭಾಗದ ಅಂಗಳದಲ್ಲಿ ಪೀಠದ ಮೇಲೆ, ಪುರಾತನ ಕಾಲದ ಚತುರ್ಭುಜಾಕಾರದ ಗಣೇಶಾನಿಯ ವಿಗ್ರಹವಿದೆ.

ಸಾಮಾನ್ಯವಾಗಿ ಗಣೇಶನ ಪ್ರತಿಮೆಗಳಲ್ಲಿ ಎದ್ದು ಕಾಣುವ ಏಕದಂತವಾಗಲೀ, ಯಜ್ಞೋಪವೀತವನ್ನಾಗಲೀ ಹಾಗೂ ಯಾವುದೇ ಆಭರಣದ ಅಲಂಕಾರವನ್ನಾಗಲೀ ಈ ಗಜಮುಖಿಯ ವಿಗ್ರಹದ ಮೇಲೆ ಚಿತ್ರಿಸಿಲ್ಲ. ಸಹಜ ದಿಗಂಬರಿಯಾಕಾರದಲ್ಲಿದೆ. ಬಲಮುಂಗೈಯಲ್ಲಿ ಪಾನಬಟ್ಟಲನ್ನು ಹಾಗೆಯೇ ಬಲ ಹಿಂಗೈಯಲ್ಲಿ ಪರಶು (ಕೊಡಲಿ) ಆಯುಧವನ್ನು ಎಡ ಮುಂಗೈ ಹಸ್ತದ ಮೇಲೆ ಸೊಂಡಿಲನ್ನು ಇರಿಸಿಕೊಂಡಿದೆ. ಹಾಗೆಯೇ ಎಡ ಹಿಂಗೈಯಲ್ಲಿ ತ್ರಿಶೂಲವನ್ನು ಧಾರಣೆ ಮಾಡಿಕೊಂಡಿದೆ. ಈ ಗಣೇನಿಯ ಪಕ್ಕದಲ್ಲಿ ಮೂಷಕನ ಚಿಹ್ನೆ ಇಲ್ಲದೇ ಇರುವುದು ಗಮನಿಸಬೇಕಾಗಿರುವ ವಿಷಯ.

ತೊಡೆಗಳನ್ನು ಎಡ–ಬಲದಿಕ್ಕಿಗೆ ಅಗಲಿಸಿಕೊಂಡು ಯೋನಿದ್ವಾರ, ಮಲದ್ವಾರಗಳು ಗೋಚರಿಸುವಂತೆ ಮೊಣಕಾಲುಗಳನ್ನು ಹಾಗೂ ಪಾದಗಳನ್ನು ಸಹ ಎಡಬಲ ದಿಕ್ಕಿನೆಡೆಗೆ ಅಗಲಿಸಿಕೊಂಡು ಕುಳಿತಂತಿದೆ.

ಗುಢಾಣಾಕಾರದಂತಹ ಹೊಟ್ಟೆ ಇದ್ದರೂ ಸಹ ಯೋನಿದ್ವಾರ, ಮಲದ್ವಾರಗಳು ಸ್ಪಷ್ಟವಾಗಿ ಗೋಚರಿಸುವಂತಿದೆ.

ಈ ಕ್ಷೇತ್ರದರ್ಶನದಲ್ಲಿ ಕಂಡ ಮಾಹಿತಿಯ ಬಗ್ಗೆ ಯೋಚಿಸಲು ನಾವುಗಳು ನಾಥ ಸಂಪ್ರದಾಯದ ತಾಂತ್ರಿಕ ಎಳೆಗಳಲ್ಲೊಂದಾದ ಕೌಲ ಸಿದ್ಧಾಂತದ ಹಾದಿಯನ್ನು ಸವೆಸಲೆಬೇಕು. ಇದರ ಬಗ್ಗೆ.

E.I. VVI ತೇದಿ ೩೮೦ ಎಂದು ಗುರುತಿಸಿರುವ ೨ನೇ ಚಂದ್ರಗುಪ್ತರ ಕಾಲದ ಸ್ಥಂಭಶಾಸನ ಹಾಗೂ With ehead catalogue of coins in the panjab musem ಪುಟ ೧೮೩–೧೮೪ರಲ್ಲಿನ ಮುದ್ರಾಂಕಿತ ಪಟ್ಟಿಯಲ್ಲಿ ದಾಖಲಾಗಿ ಸುರಕ್ಷಿತವಾಗಿರುವ ಕ್ರಿ.ಶ. ಮೊದಲನೇ ಶತಮಾನದ ಕುಷಾನರ ವಂಶಸ್ತನಾದ ಪ್ರಖ್ಯಾತ ಚಕ್ರವರ್ತಿ ಕಾನಿಷ್ಕನ ಆಳ್ವಿಕೆ ಕಾಲದ ನಾಣ್ಯದ ಮೇಲಿರುವ ಗೋರಖನಾಥನ ಪ್ರತಿಮಾ ಚಿಹ್ನೆಯ ಆಧಾರ (ಸಂಶೋಧಕ ಆರ್.ಸಿ. ಮುಂಜುಂದಾರ್)

ಬಂಗಾಳದ ಪ್ರಖ್ಯಾತ ಇತಿಹಾಸ ಸಂಶೋಧಕ ಪಿ.ಸಿ. ಬಾಗ್‌ಚಿರವರ ಬಂಗಾಳ ಚರಿತಾ ಗ್ರಂಥದ ಪ್ರಥಮ ಸಂಪುಟದ ೪೦೬ರಿಂದ ೪೦೭ರವರೆಗಿನ ಪುಟಗಳಲ್ಲಿ ಉಲ್ಲೇಖಿಸಿರುವ ಇಂಡೊನೇಶಿಯಾ ಮತ್ತು ಜಾವಾ ದ್ವೀಪದ ೨ ಶಾಸನಗಳ ಆಧಾರ ರೀತ್ಯಾ.

Archaeological Survery of India Annual Report page No. 179 ರಲ್ಲಿ ಉಲ್ಲೇಖದ ಆಧಾರ.

Journal of The Bombay Branch of The Royal Asiatic Society-page No. 151 ರಲ್ಲಿನ ಉಲ್ಲೇಖದ ಆಧಾರ.

ಚೀನಾ ಯಾತ್ರಿಕ ಪಾಹಿಯಾನ್ (ಕ್ರಿ.ಶ. ೩೯೪–೪೧೪) KRCM Hindoe Jayaneshl gerschie dins-page no. 88 (ಸಂಶೋಧಕ ಡೇವಿಡ್ ಲಾರೆಂಜನ್‌ರ ಆಕಾರ). ವಿವರ ನೀಡುತ್ತವೆ.

---

* ಸಿದ್ದರಗಿರಿ ಕಾಫಿ ಎಸ್ಟೇಟ್, ಜಾಗರ ಅಂಚೆ, ಚಿಕ್ಕಮಗಳೂರು ತಾ, ಜಿಲ್ಲೆ.

ಮೇಲ್ಕಂಡ ಎಲ್ಲಾ ಚಾರಿತ್ರಿಕ ಆಧಾರಗಳ ಕಚಿತತೆಯ ನಿರ್ಣಯದಂತೆ ನಾಥ ಸಂಪ್ರದಾಯದ ಆದ್ಯಪ್ರವರ್ತಕರುಗಳಲ್ಲೊಬ್ಬರಾದ ಮತ್ಸೇಂದ್ರ ಘೋರಕರ ಜೀವಂತ ಕಾಲಮಾನವು ಕುಶಾನರ ವಂಶಸ್ಥರ ಆಳ್ವಿಕೆಯ ಕಾಲದಲ್ಲಿ ಅಂದರೆ ಸುಮಾರು ಕ್ರಿಸ್ತ ಶಕೆಯ ಪೂರ್ವದಾರಂಭದಲ್ಲಿಯೇ ಜೀವಿಸಿದ್ದರು ಎಂಬುದನ್ನು ಆಧಾರಸಹಿತ ನಿರ್ಣಯಿಸಲಾಗಿದೆ.

ಇವರುಗಳ ಕಾಲನಿರ್ಣಯವನ್ನು ಪಂಡಿತರುಗಳು ಸಹ ಒಂಬತ್ತರಿಂದ ೧೨ನೇ ಶತಮಾನವೆಂದು ಬಹಳಷ್ಟು ಗ್ರಂಥ ಕಟ್ಟಣಗಳಲ್ಲಿ ನಮೂದಿಸಿದ್ದಾರೆ. ಆದರೆ ನಾನು ೨೦೧೦ನೇ ಇಸವಿ ನವೆಂಬರ್‌ನಲ್ಲಿ ನಡೆದ ಆದಿಚುಂಚನಗಿರಿಯಲ್ಲಿ ನಡೆದ ಇತಿಹಾಸ ಅಕಾಡೆಮಿಯ ಸಮ್ಮೇಳನದಲ್ಲಿ ಮತ್ಸೇಂದ್ರ ಗೋರಖನಾಥರ ಕಾಲಮಾನ ಎಂಬ ಪ್ರಬಂಧವನ್ನು ಮೇಲ್ಕಂಡ ಚಾರಿತ್ರಿಕ ಸಾಕ್ಷಾಧಾರವನ್ನು ಮುಂದಿಟ್ಟುಕೊಂಡು ಕೌಲ ಸಿದ್ಧಾಂತಾಚಾರ್ಯ ಮತ್ಸೇಂದ್ರನಾಥ ಇವನ ಶಿಷ್ಯ ಪಾಶುಪಥ ಸಿದ್ಧಾಂತಾಚಾರ್ಯ ಲಕುಳಧಾರಿ ಪ್ರಥಿಮಾಲಕ್ಷಣದಲ್ಲಿ ದೇಶಾದ್ಯಂತ ಗೋಚರಿಸುವ ಗೋರಖನಾಥ ಯತಿಗಳ ಜೀವಿತ ಕಾಲಮಾನವು ಕ್ರಿಸ್ತ ಶಕಾರಂಭ ಎಂಬುದನ್ನು ಇತಿಹಾಸ ದರ್ಶನ ಸಂಪುಟ ೨೬/೨೦೧೧ರಲ್ಲಿ ನಮೂದಿಸಲಾಗಿದೆ.

ನಾಥಸಂಪ್ರದಾಯದ ಎಳೆಗಳಲ್ಲೊಂದಾದ ಕೌಲಸಿದ್ಧಾಂತದ ಪ್ರತಿಪಾದಕ ಮತ್ಸೇಂದ್ರನಾಥ ಇವರ ಪ್ರಮುಖ ಶಿಷ್ಯರಲ್ಲೊಬ್ಬನಾದ ಪಾಶುಪಥ ಸಿದ್ಧಾಂತಚಾರ್ಯನಾದ ಗೋರಖನಾಥ, ಇವರುಗಳ ಸಮಕಾಲೀನರಾದ ಚಾರ್ವಕ ಸಿದ್ಧಾಂತಾಚಾರ್ಯ ಚೋರಂಗಿನಾಥ, ಕಾಪಾಲಿಕ ಸಿದ್ಧಾಂತಾಚಾರ್ಯ ಜ್ವಾಲಾಂದರನಾಥ ಹಾಗೂ ಇವನ ಪ್ರಮುಖ ಶಿಷ್ಯ ಕಾನೀಪನಾಥ ಇವರುಗಳೇ ನಾಥಸಂಪ್ರದಾಯದ ಆಗ್ರಪೂಜೆಗೆ ಅರ್ಹರಾದ ಪಂಚಸಿದ್ದರುಗಳು. (ಇವರುಗಳ ಪ್ರತೀಕವೇ ದೇಶಾದ್ಯಂತ ಇರುವ ಪಂಚಲಿಂಗ ಕ್ಷೇತ್ರಗಳು).

ಈ ಪಂಚಸಿದ್ದರುಗಳಿಂದ ಸೂಚಿಸಲ್ಪಟ್ಟು ಇವರ ಶಿಷ್ಯಬಳಗವಾದ ಚೌರಾಸೆ (೮೪) ಸಿದ್ದರುಗಳಿಂದ ದೇಶಾದ್ಯಂತ ಪ್ರವರ್ದಮಾನಕ್ಕೆ ಬಂದಂತಹ ಕೌಲ, ಕಾಪಾಲಿಕ, ಶಾಕ್ತ ಹಾಗೂ ಪಾಶುಪಥ ಇದರ ಉಪಶಾಖೆಗಳಾದ ಶಕ್ತಿಪರಿಶಿ, ಸಿಂಹ ಪರಿಶಿ ಹಾಗೂ ಪರ್ವತಾಳಿಗಳೆಂಬ ಕಾಳಮುಖ ಪರಂಪರೆ ಮತ್ತು ಗಾಣಪಥವೆಂಬ ಶೈವ ಎಳೆಗಳಿಂದಲೂ, ಹಾಗೆಯೇ ಚಾರ್ವಾಕ, ಸೌರ ಹಾಗೂ ವೈಷ್ಣವ ಎಂಬ ವಿಭಿನ್ನ ಎಳೆಗಳಿಂದಲೂ ಸಹ ಸಂಕೀರ್ಣಗೊಂಡಿರುವುದು ಕಂಡುಬರುತ್ತದೆ. ಹೀಗೆ ಹಲವಾರು ವಿಭಿನ್ನ ತತ್ವಮುಖದಿಂದ ಒಡಗೂಡಿರುವುದರಿಂದ ಈ ಹಿಂದಿನ ಸಂಶೋಧಕರು ಹಾಗೂ ಹಲವು ಬರಹಗಾರರು ತಮ್ಮ ತಮ್ಮ ಗ್ರಂಥ ಕಟ್ಟಣಗಳಲ್ಲಿ ನಮೂದಿಸಿರುವಂತೆ ಇದು ಒಂದು ಪಂಥವಲ್ಲ. ಇದು ಒಂದು ಸಂಪ್ರದಾಯ, ಆದುದರಿಂದ ನಾಥಸಂಪ್ರದಾಯವೆಂದು ಸಂಬೋಧಿಸುವುದೇ ಶ್ರೇಷ್ಠ.

ಕ್ರಿಸ್ತ ಶಖಾರಂಭಗೊಂಡು ಸುಮಾರು ೧ ಸಾವಿರ ವರ್ಷಗಳು ದೇಶದ ಉದ್ದಗಲಗಳಲ್ಲೆಲ್ಲಾ ನಾಥಸಂಪ್ರದಾಯದ ಬಿಳಲುಗಳಾದ ಕೌಲ, ಚಾರ್ವಾಕ, ಕಾಪಾಲಿಕ, ಪಾಶುಪಥ, ಶಾಕ್ತ, ಗಾಣಪಥ, ವೈಷ್ಣವ ಪಂಥಗಳ ತತ್ವಸಾರವು ರಾಜಮನ್ನಣೆ ಪಡೆದು ಉಚ್ಛಾಶ್ರಯದಲ್ಲಿ ಇದ್ದ ಕಾವಲದು. ಅದರಲ್ಲೂ ಗುಪ್ತರ ಕಾಲವಂತೂ ನಾಥಸಂಪ್ರದಾಯದ ಸುವರ್ಣಯುಗವೆಂದೇ ಕರೆಯಬಹುದು. ಈ ಒಂದು ಸಾವಿರ ವರ್ಷ ಪರ್ಯಂತವೂ ಭಾರತ ದೇಶದಲ್ಲಿನ ತತ್ವೋದ್ಭವ ಕಾಲವೆಂದರೆ ಅತಿಶಯೋಕ್ತಿಯಾಗಲಾರದು.

ಇಲ್ಲಿ ಮೇಲಿನ ಸಾಲುಗಳಲ್ಲಿ ವೈಷ್ಣವ ಎಂದು ಉಲ್ಲೇಖಿಸಿರುವುದು ಹಲವರಿಗೆ ಆಶ್ಚರ್ಯವಾಗದೇ ಇರದು. ಏಕೆಂದರೆ ನಾಥಸಂಪ್ರದಾಯವನ್ನು ಇಲ್ಲಿಯವರೆಗೆ ಹಲವಾರು ಬರಹಗಾರರು ಇತಿಹಾಸ ಸಂಶೋಧಕರೂ ಕೂಡ ತಳಸ್ಪರ್ಶೀಯ ಶೋಧನೆಯನ್ನು ನಡೆಸದೆ ನಿರೂಪಿಸಿರುವ ರೀತ್ಯ ಕೇವಲ ಶೈವ ಎಳೆಗಳಿಂದ ಆವೃತವಾಗಿದೆ ಎಂದು ನಿರೂಪಿಸಿರುವುದು ಸಹಜವಾಗಿದೆ. ನಾಥ ಸಂಪ್ರದಾಯದ ಪಂಚಸಿದ್ದರಲ್ಲೊಬ್ಬರಾದ ಚೋರಂಗಿನಾಥ್ ಪರಂಪರೆಯ ಚಾರ್ವಾಕರು ಎಂಬ ಸಹಜವಾದಿ ತತ್ವಸಿದ್ಧಾಂತಗಳಿಂದ ಹಿಡಿದು ಶಾಕ್ತ, ಶೌರ ಹಾಗೂ ವೈಷ್ಣವ ತತ್ವ ಸಿದ್ಧಾಂತದ ಎಳೆಗಳಿಂದಲೂ ಸಹ ನಾಥ ಸಂಪ್ರದಾಯವು ಸಂಕೀರ್ಣಗೊಂಡಿರುವುದರಿಂದಲೇ ರಂಗನಾಥ್, ವಿಠಲ. ಪಾಂಡುರಂಗ, ತಿಮ್ಮಪ್ಪ, ವಿಠೋಭ ವೆಂಕಟೇಶ್ ಮುಂತಾದ ಜನಪ್ರಿಯ ವೈಷ್ಣವ ನಾಮಗಳು ಅವೈದಿಕ ಪರಂಪರೆಗೆ ಸೇರಿದವುಗಳಾದ್ದರಿಂದ ವೈದಿಕ ಪರಂಪರೆಯ ವಿಷ್ಣು ಸಹಸ್ರ ನಾಮಾವಳಿಗಳ ಪಟ್ಟಿಯಲ್ಲಿ ಸೇರದೆ ಇರಲು ಕಾರಣವಾಗಿದೆ.

ರಂಗನಾಥ, ವಿಠಲ, ಪಾಂಡುರಂಗ, ತಿಮ್ಮಪ್ಪ, ವಿಟ್ಠೋಭ, ವೆಂಕಟೇಶ ಎಂಬ ನಾಮಸಂಕೇತದ ದೇವಸಾನಿಧ್ಯಗಳು ನಾಥಸಂಪ್ರದಾಯದ ಘೋರಖನಾಥ ಸಿದ್ದರುಗಳಿಂದ ಪ್ರತಿಷ್ಠಾಪಿಸಲ್ಪಟ್ಟಂತ ವಿಗ್ರಹಗಳು.

ಈ ನಾಥ ಸಂಪ್ರದಾಯದ ಯತಿಗಳನ್ನು ಸಿದ್ಧರುಗಳು, ಅವದೂತರುಗಳು, ನಾಥರುಗಳು, ಯೋಗಿಗಳು ಹಾಗೂ ಒಟ್ಟಿನಲ್ಲಿ ಇವರೆಲ್ಲರೂ ಭೈರವೇಶ್ವರ ಸಂಭೂತವಾದ ಅಷ್ಟ ಮತ್ತು ಅಷ್ಟಾಷ್ಟ ಬೈರವರನ್ನು ತಮ್ಮ ಮೇಲೆಯೇ ಆವಾಹಯಾಮಿಸಿ

ಕೊಂಡಂತಹ ಶೈವಾಂಶ ಸಂಭೂತರಾದ ಯೋಗಿಗಳಾಗಿರುವುದರಿಂದ ಇವರನ್ನು ಮಹೇಶ್ವರರು ಎಂದು ನಾಥ ಸಂಪ್ರದಾಯದ ಚಾರಿತ್ರಿಕ ಗ್ರಂಥದಲ್ಲಿ ಗುರುತಿಸಲಾಗಿದ್ದಾರೆ.

ಈ ಮಹೇಶ್ವರರು, ಸಾಮಾನ್ಯವಾಗಿ ಸ್ಮಶಾನ, ನದಿ ತೀರ, ಪರ್ವತದ ಗುಹೆಗಳಲ್ಲಿ ಕಾಣಿಸಿಕೊಳ್ಳುವ ಇವರು ಆರು ಮುದ್ರೆಗಳನ್ನು ಧಾರಣೆ ಮಾಡಿಕೊಂಡಿರುತ್ತಾರೆ. ೧) ರಕ್ತ ವರ್ಣದ ವಸ್ತ್ರ, ೨) ಕರ್ಣಕುಂಡಲ, ೩) ಭಸ್ಮ, ೪) ಕಪ್ಪು ಕುರಿಯ ಉಣ್ಣೆಯ ಎಳೆಗಳಿಂದ ತಯಾರಿಸಿದ ಯಜ್ಞೋಪವೀತ, ೫) ಕಟ್ವಾಂಗ, ೬) ಕಾಪಾಲಧಾರಣೆ ಮಾಡಿಕೊಂಡಿರುತ್ತಾರೆ. ಇವರುಗಳಲ್ಲಿ ವಿಶೇಷವಾಗಿ ಕಾಪಾಲಿಕರುಗಳು ಕಾಪಾಲವನ್ನು, ಹಾಗೆಯೇ ಕೌಲಯತಿಗಳು ಖಟ್ವಾಂಗವನ್ನು, ಪಾಶುಪತರು (ಲಕುಳ) ದಂಡವನ್ನು ಒಟ್ಟನಲ್ಲಿ ಈ ಆಕಾರದಲ್ಲಿರುವಂತಹ ಯೋಗಿಗಳನ್ನು ಮಾತ್ರ ನಾಥಸಂಪ್ರದಾಯಗಳಲ್ಲಿ ಸುಮಾರು ೨೦೦೦ ವರ್ಷಗಳಿಂದಲೂ ಮಹೇಶ್ವರರು ಎಂದು ಸಂಬೋಧಿಸುತ್ತಾರೆ.


ಅಂಡಾಂಡ (ಬ್ರಹ್ಮಾಂಡ)ದಲ್ಲಿರುವುದೆಲ್ಲವೂ ಪಿಂಡಾಂಡದ ಕಣಕಣದಲ್ಲೂ ಹುದುಗಿದೆ ಎಂಬ ನಾಥಯತಿಗಳ ಯೋಗಾನುಭವದಂತೆ ಅವರವರ ಶರೀರದಲ್ಲಿನ ಗುದದ್ವಾರ ಮಲದ್ವಾರದ ಮಧ್ಯದಲ್ಲಿನ ಮೂಲಾಧಾರದ ಆದಿಷ್ಠಾನ ಚಕ್ರದ ಮೇಲೆ ಕೆಂಪು ಬಣ್ಣದ ಚತುರ್ದಳ ಪದ್ಮಾಕಾರವಿದೆ. ವಂ.ಶಂ.ಷಂ.ಸಂ ಎಂಬ ಮಂತ್ರ ಬೀಜಾಕ್ಷರ ಸ್ಥಿತಿಯು ಈ ಚತುರ್ದಳ ಪದ್ಮದಳಕ್ಕಿದೆ. ಈ ಚತುರ್ದಳದ ಪದ್ಮಾಕಾರದ ಮೇಲೆ ತ್ರಿಕೋನಾಕಾರದ ಯೋನಿ ಪೀಠಾಸನದ ಮೇಲೆ ಮಹಾಶಕ್ತಿ ಕುಂಡಲಿನಿ ದೇವಿಯು ಸರ್ಪಾಕಾರದಲ್ಲಿ ಮೂರುವರೆ ಸುತ್ತು ಸುತ್ತಿಕೊಂಡು ತನ್ನ ಬಾಲವನ್ನು ಮುಖದೊಳಗೆ ಹುದುಗಿಸಿಕೊಂಡು ಸುಪ್ತಾವಸ್ತೆಯಲ್ಲಿ ವಿರಮಿಸುತ್ತಾ ಇರುತ್ತದೆ ಎಂದು ಆ ಮಹಾ ಸಾಧಕರು ಕಂಡಿದ್ದಾರೆ.

ಈ ಸಿದ್ದಿಸಾಧನಾ ಮಹಾಯಾತ್ರೆ ಆರಂಭಿಸುವ ಮೊದಲ ಸ್ಥಾನವಾದ ಮೂಲಾಧಾರ ಆದಿಷ್ಠಾನ ಚಕ್ರದಲ್ಲಿನ ಚತುರ್ದಲ ಪದ್ಮಾಕಾರದ ಕೇಂದ್ರಬಿಂದುವಿನ ಯೋನಿಪೀಠದಲ್ಲಿ ಅಂದರೆ ಸ್ತ್ರೀಲಿಂಗಸೂಚಿಯಲ್ಲಿ ಮೂರುವರೆ ಸುತ್ತು ಸುತ್ತಿಕೊಂಡು ಪವಡಿಸಿರುವ ನಾಗಿಣಿ (ಸ್ತ್ರೀಲಿಂಗ) ಯಾಕಾರದ ಕುಂಡಲಿನಿ ಎಂಬ ಶಬ್ದೋಚ್ಚಾರವೂ ಸಹ ಸ್ತ್ರೀಲಿಂಗ ಸೂಚಕವಾದುದ್ದರಿಂದ ಮೂಲಾಧಾರದ ಆದಿಷ್ಠಾನ ಚಕ್ರದ ಪೃತ್ವಿ ಎಂಬ ಸ್ತ್ರೀಲಿಂಗ ಸೂಚಕದಲ್ಲಿ ಪವಡಿಸಿರುವವಳು ಗಜಮುಖಿ ಅರ್ಥಾತ್ ಗಣೇಶಾನಿಯೇ ಹೌದು.

ಗಣೇಶಾನಿಯನ್ನು ದೇವಪುರಾಣದಲ್ಲಿನ ನವಮಾತ್ರಿಕೆಯರ ಪಟ್ಟಿಯಲ್ಲಿ ಗಜಮುಖಿ, ವಿಘ್ನವಿನಾಶಿನಿ ಎಂಬ ಸ್ತ್ರೀಲಿಂಗಸೂಚಿಯಿಂದ ವಿವರಿಸಿರುವುದು ಹಾಗು ನಾಥಸಂಪ್ರದಾಯದ ಕೌಲ ಸಿದ್ಧಾಂತದಿಂದ ತಾಂತ್ರಿಕ ಸಾಧನೆಗಳನ್ನು ಪಡೆದುಕೊಂಡಂತಹ ಬೌದ್ಧ ಯಾನಗಳಲ್ಲೊಂದಾದ ವಜ್ರಾಯಾನದ ಮಂಜುಶ್ರೀ ಕಲ್ಪದಲ್ಲಿ ಹಾಗೂ ಕಾಪಾಲಿಕ ಸಿದ್ಧಾತಂದಿಂದ ತಾಂತ್ರಿಕ ಸಾಧನೆಗಳನ್ನು ಪಡೆದುಕೊಂಡಂತಹ ಸಹಜಯಾನದ ಸಿದ್ಧಿಸಾಧಕರೂ ಸಹ ಮೂಲಾಧಾರದಲ್ಲಿನ ಕುಂಡಲಿನಿಯನ್ನು ಗಜಮುಖಿ ಎಂದು ಪೂಜಿಸುತ್ತಿದ್ದಾರೆ.

ಕುಂಡಲಿನೀ ಶಕ್ತಿಯನ್ನು ಆದಿಶಂಕರಾಚಾರ್ಯ ಭಗವತ್ಪಾದರು ಸಹ ಗೌರಿ ದಶಕಸೂಕ್ತದಲ್ಲಿ ವರ್ಣಿಸಿರುವುದನ್ನು ಈ ಪ್ರಬಂಧಕ್ಕೆ ಹೆಚ್ಚಿನ ಅಕಾರವೆಂದು ಪರಿಗಣಿಸಿದ್ದೇನೆ. ಮೇಲ್ಕಂಡಂತಹ ಆಧಾರಗಳೆಲ್ಲದರ ರೀತ್ಯಾ ಮೂಲಾಧಾರದಲ್ಲಿನ ನಾಗಿಣೀಯಾಕಾರದ ಕುಂಡಲಿನಿಯೇ ಗಜಮುಖಿ ಗಣೇಶಾನಿ ಎಂಬುದು ನಿರ್ವಿವಾದ. ಈ ಗಜಮುಖಿ ಅರ್ಥಾತ್ ಗಣೇಶಾನಿಯ ಸಹ ಈಗ ದೃಷ್ಯ ದುರ್ಲಭರಾದ ಕಾಪಾಲಿಕ ಚಾರ್ವಾಕ, ಕೌಲ ಯತಿಗಳ ಕುಂಡಲಿನೀ ಸಿದ್ದಿಸಾಧನ ಸೃಷ್ಟಿ ರೂಪಕವೆಂದು ದೃಢಪಡುತ್ತದೆ.

ಆದರೆ ಹಿಂದೂ ಸಂಪ್ರದಾಯದಲ್ಲಿ ಮೈನೆರೆದ ಹೆಣ್ಣು ಮಿಂದು ಮಡಿಯಾಗಿ ಬರುವುದನ್ನು ಚತುರ್ಥಿ ಎಂದು ಸಂಬೋಧಕಿಸುತ್ತಾರೆ. ಹೀಗೆಯೇ ಈ ಸಂಪ್ರದಾಯದ ಹೆಣ್ಣುಮಕ್ಕಳಿಗೆ ವಿವಾಹ ಸಂಬಂಧಿ ವಿಘ್ನ ಪರಂಪರೆಗಳು ತಲೆದೋರಿದಲ್ಲಿ ವಿನಾಯಕ ಶಾಂತಿ ಹವನವನ್ನು ಮಾಡಲಾಗುತ್ತದೆ. ಅಂದರೆ ಚತುರ್ಥಿ ಹವನವೆಂದು ಕರೆಸಿಕೊಳ್ಳುವುದು ಋತುಶಾಂತಿ ಹವನವನ್ನು ಎಂದಂತಾಯಿತು. ಹೀಗಿರುವಾಗ ಹಿಂದೂ ಪಂಚಾಂಗದಲ್ಲಿ ಗಣೇಶ ಚತುರ್ಥಿ ಎಂಬ ವಿಶೇಷ ಆಚರಣಾ ದಿನವನ್ನು ಕಂಡಾಗ ಒಂದು ಮೂಲಭೂತ ಪ್ರಶ್ನೆ ಉದ್ಭವವಾಗುತ್ತದೆ. ಗಣೇಶ ಗಂಡೋ? ಹೆಣ್ಣೋ?. ಆದರೆ ಸೃಷ್ಠಿ ತತ್ವಾಧಾರಿತವಾಗಿ ಗಣೇಶ ಪುಲ್ಲಿಂಗ (ಗಂಡು). ಮೇಲ್ಕಂಡಂತೆ ಹಿಂದೂ ಸಂಪ್ರದಾಯದಲ್ಲಿ ಚತುರ್ಥಿ ಹವನವೆಂದು ಕರೆಸಿಕೊಳ್ಳುವುದು ಋತುಶಾಂತಿ ಹವನವನ್ನು. ಹಾಗಾದರೆ ಪ್ರತಿ ಸಂವತ್ಸರದಲ್ಲಿನ ಪಂಚಾಂಗಗಲ್ಲಿಯೂ ಭಾದ್ರಪದ ಮಾಸದ ಶುಕ್ಲಪಕ್ಷ ಚೌತಿಯಂದು ಗಣಪನಿಗೆ ಚತುರ್ಥಿ ಆಗಲು ಹೇಗೆ ಸಾಧ್ಯ.



ಸೃಷ್ಟಿತತ್ವದಲ್ಲಿನ ಅಂಡಾಂಸ ಶುಕ್ರದ (ಬೀಜದ) ಮೂಲಧಾರ ಚಕ್ರದಲ್ಲಿನ ಕುಂಡಲಿನಿ ಯಾನೆ ಗಣೇಶಾನಿ ಅರ್ಥಾಥ್ ಗಜಮುಖಿ ಗೌರಿಶಿವಾನಿಯ ಚತುರ್ಥಿಯೇ ಸರಿ. ಅಂದರೆ ಗಣೇಶಾನಿಯ ಚತುರ್ಥಿ ಎಂದಂತಾಯಿತು. ಆದರೆ ಗಣೇಶಾತರ್ವವೇದ ಸೂಚಿಯಲ್ಲಿ "ತುಂ ಮೂಲಾಧಾರೋ ಸ್ಥಿತೋಸಿನಿತ್ಯಂ" ಎಂದು ಗಣೇಶನನ್ನು ಸ್ತುತೀಕರಿಸಿರುವುದು ಹಾಗೂ ಮತ್ಸ್ಯಪುರಾಣ, ವರಹಾ ಪುರಾಣ ಹಾಗೂ ವಾಂಯುಪುರಾಣಗಳಲ್ಲಿ ಗಣಪನನ್ನು ಮೂಲಾಧಾರವಾಸಿ ಎಂದು ವರ್ಣಿಸಿರುವುದು ವಿಪರ್ಯಾಸವೇ ಸರಿ.

ವಿಶ್ವಸೃಷ್ಟಿ ಕಾರಕವಾದ ಮೂಲ ಪ್ರಾಕೃತಿಕ ವಿರಾಟ್ ಸ್ವರೂಪದ ಅಂಡಾಂಡ ಶುಕ್ರ (ಬೀಜ) ದಲ್ಲಿನ ಮೂಲಾಧಾರದಲ್ಲಿ ಪವಡಿಸಿರುವ ಕುಂಡಲಿನಿ ಯಾನೆ ಗಜಮುಖಿ ಅರ್ಥಾತ್ ಗಜಗೌರಿ ಸ್ವರೂಪವು ಮೂಲಾಧಾರದಿಂದ ಹೊರಟು ವಿರಾಟ್ ಸ್ವರೂಪಿಯ ಶುಶುಮ್ನಾನಾಡಿಯ ಮೂಲಕ ಷಡ್ಚಕ್ರಗಳನ್ನು ಹಾಗೂ ಪರಾತ್ಪರ ಸಿದ್ಧಿ ಪ್ರತೀಕವಾದ ಸಹಸ್ರಾದಲ್ಲಿನ ಪರಶಿವನೆಂಬ ಪ್ರಕೃತಿ ಸ್ವರೂಪದೊಂದಿಗೆ ಒಂದಾದ ಸಂಗಮಾನಂದದಲ್ಲಿ ಉದ್ಭವಿಸಿದ ಪರಮೋದ್ಭವ ಗೌರೀಶಂಕರರ ಜೇಷ್ಠ ಸೃಷ್ಟಿಯೇ ಪರಾತ್ಪರ, ಪೆರಜ್ಞಾನ ಸಿದ್ಧಿಯ ಪ್ರತೀಕವೇ ಗಜಮುಖ ಗಣೇಶ. ಈ ಗಣೇಶನು ಹಿಂದೂ ಸಂಪ್ರದಾಯದ ಎಲ್ಲಾ ಜಾತಿ–ಪಂಗಡಗಳ ಪಾಲಿಗೆ ಪ್ರಿಯನಾದ ಗಣಪ. ಮುಗ್ಧಾತಿಮುಗ್ಧ. ಇವನು ಭಾವುಕರಿಗೂ ಬೇಕು, ಲಲಿತ ಕೋವಿದರಿಗೂ ಬೇಕು, ಅಧ್ಯಾತ್ಮ ಜಿಜ್ಞಾಸಿಗಳಿಗೂ ಬೇಕು, ಸೃಷ್ಟಿಕರ್ತನ ಕುಂಡಲಿನಿ ಅರ್ಥಾತ್ ಗಜಮುಖಿಯ ಸಹಸ್ರಾದಲ್ಲಿನ ಶಂಕರನಲ್ಲಿ ಸಂಘಮಿಸಿದಾಗಿನ ಪರಮಾನಂದೋದ್ಭವ ಪ್ರತೀಕನೇ ಗೌರಿ ಪುತ್ರ ಗಣೇಶ. ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗಗಳ ಪ್ರೇರಕ. ಇವನ ಮಂತ್ರಬೀಜಾಕ್ಷರ ಗಂ. ಇವನ ವಾಹನ ಸ್ವರೂಪ ಮೂಶಿಕ.

ಪ್ರಥಮದಲ್ಲಿ ಮತ್ಸೇಂದ್ರ ಗೋರಖಾದಿ ಚೌರಾಸೆ (೮೪) ತಾಂತ್ರಿಕ ಸಿದ್ಧರುಗಳು ಗೌರಿ (ಕುಂಡಲಿನಿ) ಪುತ್ರ ಗಣೇಶನನ್ನು ತಂತ್ರ ಶಾಸ್ತ್ರದಾಧಾರರೀತ್ಯದಲ್ಲಿ ದೇಶಾದ್ಯಂತ ಉಪಾಸಿಸುತ್ತಿದ್ದರು, ಜನಪದರು ಸಾರ್ವತ್ರಿಕವಾಗಿ ಗೋವಿನ ಸಗಣಿಯಲ್ಲಿ ಹಾಗೂ ಹುತ್ತದ ಮಣ್ಣಿನ ಉಂಡೆಯಲ್ಲಿ ಬೆನಕನನ್ನು ಕಂಡರು. ಇದು ಈಗಲೂ ಆಚರಣೆಯಲ್ಲಿದೆ. ೯ನೇ ಶತಮಾನದ ನಂತರ ವೈದಿಕರು ಮಂತ್ರಗಳಲ್ಲಿ ಆವಾಹಿಸಿ ಮಂತ್ರಶರೀರನೆಂದು ಆರಾಧಿಸಲು ಪ್ರಾರಂಭಿಸಿದರು.

ಆದರೆ ವೇದಗಳಲ್ಲಿ ಗಜಮುಖಾಕಾರದ ಗಣಪತಿಯ ವರ್ಣನೆಯಾಗಲೀ, ಸ್ಥುತಿಯಾಗಲೀ ಕಾಣುವುದಿಲ್ಲ ಎಂಬುದು ಪಂಡಿತರ ಅಭಿಮತ. ಇದು ಸರ್ವವೇದ್ಯ. ಗಣೇಶನನ್ನು ಮೊಟ್ಟಮೊದಲು ಬಹಿರಂಗವಾಗಿ ಕಾಣಿಸಿಕೊಂಡಿದ್ದು ಮಹಾಭಾರತ ಪುರಾಣದಲ್ಲಿ ವ್ಯಾಸಮಹರ್ಷಿಗಳ ಸಮ್ಮುಖದಲ್ಲಿ ನಂತರ ಗಣಪನ ಸ್ತುತಿಗಳು ಗೋಚರಿಸಿದಂತೆ ತೋರುತ್ತದೆ.

ಕ್ರಿಸ್ತಶಕ ಎರಡನೇ ಶತಮಾನದ ಹೊತ್ತಿಗೆ ಗಾಣಪಥವು ಸ್ವತಂತ್ರ ಪಂಥವಾಗಿ ಪ್ರವರ್ಧಮಾನಕ್ಕೆ ಬಂದಂತೆ ಗೋಚರಿಸುತ್ತದೆ. ತಂತ್ರಶಾಸ್ತ್ರದ ಆಧಾರ ರೀತ್ಯಾ ಗಣೇಶನು "ಅಷ್ಟಭಾಹುಂ ತ್ರಿನಯನಂ, ಚತುರ್ಭಾಹುಂ, ದ್ವಿಭಾಹುಕಂ ದಂಷ್ಟಕರಾಲವದನಂ" ಹೀಗೆ ಇವನ ಆಕಾರವನ್ನು ವರ್ಣಿಸುತ್ತಾ "ಕ್ರೂರಕಾರ್ಯೇಶು ತಾಮಸಂ ಶೃತು", ವಶ್ಯೇ ವಿದ್ವೇಶಿಣಿ ಸ್ಥಂಭೇ ಸರ್ವ ವಿಘ್ನ ನಿವಾರಾರ್ಥ ರಾಜಸಂ ಶೃತು, "ಶುಭಕಾರ್ಯೇಶು ಸಾತ್ವಿಕಂ ಶೃತು" ಎಂಬ ಗುಣಧರ್ಮ ಆಕಾರಗಳನ್ನು ವರ್ಣಿಸಲಾಗಿದೆ.

ಮೇರುತಂತ್ರದ ಉಲ್ಲೇಖದಂತೆ ಗಣೇಶನು ಅಷ್ಟಬಾಹುಗಳುಳ್ಳವನು, ರುಂಡಮಾಲಧಾರನಾಗಿರುವನು. ಇವನು ತಾಮಸ ಗುಣಸಂಪನ್ನ ಇವನಿಗೆ ಪ್ರಾಣಿಬಲಿ ಹಾಗೂ ಮಾಂಸಮಧ್ಯಾದಿ ಪಂಚಮಾರಾಧನೆ ಅತ್ಯಾವಶ್ಯವೆಂದು ತಂತ್ರಶಾಸ್ತ್ರದಲ್ಲಿ ವಿವರಿಸಿದೆ. ಆದರೆ ಈ ತಾಮಸ ಗುಣಸಂಪನ್ನನಾದ ಅಷ್ಟಬಾಹು ಆಕಾರದ ಪುರಾತನ ಗಣೇಶನ ವಿಗ್ರಹವು ಭಾರತದಲ್ಲಿ ದೃಷ್ಯ ದುರ್ಲಭವಾಗಲು ಕಾರಣವಿದೆ. (ಆ ಮಾತು ಇಲ್ಲಿ ಅನಾವಶ್ಯಕ) ಭಾರತದಿಂದ ಹಿಂದೂ ಮತ್ತು ಬೌದ್ಧ ಧರ್ಮವನ್ನು ಸ್ವೀಕರಿಸಿದ ಮಲೆಯ, ಬೋರ್ನಿಯಾ, ಇಂಡೋನೇಷ್ಯಾ ದ್ವೀಪ ಸಮೂಹದಲ್ಲಿ ಈಗಲೂ ಕಾಣಸಿಗುವುದು ವಿಶೇಷವೇ ಸರಿ.

ತಂತ್ರಶಾಸ್ತ್ರದ ಆಧಾರರೀತ್ಯಾ ರುದ್ರಾಕ್ಷಿ ಮಹಾಮಂತ್ರದ ಆಧಾರರೀತ್ಯಾ ಅಷ್ಟಮುಖದ ರುದ್ರಾಕ್ಷಿಯು ಗಣೇಶ ರುದ್ರಾಕ್ಷಿ ಎಂದು ಪ್ರಚಲಿತವಾಗಿರುವುದೂ ಸಹ ಅಷ್ಟಬಾಹು ಗಣಪನಹ ಪ್ರಬಂಧಕ್ಕೆ ಒಂದು ಆಕಾರವೇ ಸರಿ. ಹಾಗೆಯೇ ಶಾರದಾ

ತಿಲಕತಂತ್ರದ ನಂಬುಗೆಯಂತೆ ಗಣೇಶನು ಕೈಯಲ್ಲಿ ಪರಶು, ಪಾಷ, ಅಂಕುಶ ಮತ್ತು ಮದ್ಯತುಂಬಿದ ಕಪಾಲವನ್ನು ಹಿಡಿದಿರುತ್ತಾನೆ ಎಂದು ತಿಳಿಸಿರುವುದೂ ಸಹ ತಾಂತ್ರಿಕ ಆಚರಣೆಯ ಕುರುಹುಗಳೇ ಸರಿ.

ತಾಂತ್ರಿಕ ಆಚಾರಗಳನ್ನು ಅನೈತಿಕವೆಂದು ಸಾರಿದ ಆದಿ ಶಂಕರಾಚಾರ್ಯರು, ಷಣ್ಮತ ಸಿದ್ಧಾಂತವನ್ನು ಪ್ರತಿಪಾದಿಸಿ ಗಣಪತಿಯನ್ನು ಸಾತ್ವಿಕ (ದ್ವಿಬಾಹು) ಮತ್ತು ರಾಜಸ (ಚತುಬಾಹು) ರೂಪಾಕಾರದ ಪೂಜಾ ಉಪಾಸನಾವಿಧಿಗಳನ್ನು ಮಾತ್ರ ಪ್ರಚಾರ ಪಡಿಸಿದರು. ಶಂಕರಾಚಾರ್ಯರ ದರ್ಶನ ಗ್ರಂಥಗಳಲ್ಲಿ ಈ ಬಗ್ಗೆ ವಿವರಗಳಿಲ್ಲದಿದ್ದರೂ ಸಹ ಆನಂದಗಿರಿಯವರ ಶಂಕರದಿಗ್ವಿಜಯ ಗ್ರಂಥಗಳಲ್ಲಿ ಇದರ ಉಲ್ಲೇಖವಿದೆ. (ಸಂಶೋಧಕ ಡೇವಿಡ್ ಲಾರೆಂಜನ್).

ಸುಮಾರು ೯-೧೦ನೇ ಶತಮಾನಗಳಿಂದೀಚೆಗೆ ಗಾಣಪಥ ತಂತ್ರವು ಮುಂಚಿನ ತಾಂತ್ರಿಕ ತಿರುವನ್ನು ಕಳೆದುಕೊಂಡು ಸಾತ್ವಿಕ ಅಂದರೆ ದ್ವಿಬಾಹು ರೂಪದ ರಾಜಸ ಎಂದರೆ ಚತುರ್ಬಾಹು ರೂಪಾಕಾರದ ಹಿಂದೂ ಪರಂಪರೆಯ ಉಪಾಸನಾ ವಿಧಿ ವಿಧಾನಗಳಲ್ಲಿ ಈಗ ಆರಾಧಿಸಲ್ಪಡುತ್ತಿವೆ. ಆದರೆ ಅಷ್ಟಬಾಹುಗಳಾಕಾರದ (ತಾಂತ್ರಿಕ ಉಪಾಸನಾ ಗಣಪನು ಕ್ರಿ.ಶ. ೭-೮ನೇ ಶತಮಾನದವರೆವಿಗೂ ಉಚ್ಚಸ್ಥಿತಿಯಲ್ಲಿದ್ದುದಾಗಿ ತೋರುತ್ತದೆ. ಆದರೆ ಸುಮಾರು ಕ್ರಿಸ್ತಶಕ ೯-೧೦ನೇ ಶತಮಾನದಿಂದೀಚೆಗೆ ರೂಪಗೊಂಡಂತಹ ದೊಡ್ಡ ದೊಡ್ಡ ಗಣೇಶ ದೇವಾಲಯುಗಳಲ್ಲಿ ಹಾಗೂ ಪುನರ್ಜೀರ್ಣೋದ್ಧಾರಗೊಂಡಂತಹ ಶೈವ ಶಾಕ್ತ ದೇವಾಲಯಗಳೆಲ್ಲೆಲ್ಲಾ ದ್ವಿಬಾಹು ಹಾಗೂ ಚತುರ್ಬಾಹು ರೂಪದಲ್ಲಿ ಪ್ರತಿಷ್ಠಾಪಿಸಲ್ಪಟ್ಟು ಪೂಜಿಸಲ್ಪಡುತ್ತಿವೆ.

ಗಣೇಶನ ಉಪಾಸನೆಯನ್ನು ಕ್ರಿ.ಶ. ೧೬೦೦ರ ಮಧ್ಯಭಾಗದಲ್ಲಿ ಬಹಳಷ್ಟು ಜನಪ್ರಿಯಗೊಳಿಸಿದವರು ಮಹಾರಾಷ್ಟ್ರದ ಗಣಪತಿ ಮೋರ್ಯ ಗೋಸಾಯಿಯವರು. ಈ ಸಾಧಕನಿಗೆ ಗಣೇಶನ ಪ್ರತ್ಯಕ್ಷ ದರ್ಶನ ಭಾಗ್ಯ ಲಭಿಸಿದ್ದರಿಂದ ಅದೇ ಆಕಾರದ ವಿಗ್ರಹ ರೂಪಿಸಿ ತನ್ನ ಜನ್ಮಸ್ಥಳವಾದ ಮಹಾರಾಷ್ಟ್ರದ ಚುಂಚವಾಡ ಎಂಬಲ್ಲಿ ದೇವಾಲಯವನ್ನು ನಿರ್ಮಿಸಿ ಈ ವಿಗ್ರಹವನ್ನು ಅಲ್ಲಿ ಪ್ರತಿಷ್ಠಾಪಿಸಿ ಕ್ರಿಸ್ತಶಕ ೧೬೫೧ರಲ್ಲಿ ಇದೇ ಸ್ಥಳದಲ್ಲಿ ಸಜೀವ ಸಮಾಧಿಯಾದರೆಂದು ಇತಿಹಾಸವಿದೆ.

ಗತ ಇತಿಹಾಸದ ಮೆಟ್ಟಲೇರಿಯೇ ತತ್ವಜ್ಞಾನವು ಬೆಳೆದು ಬಂದಿರುವುದರಿಂದ ಈ ತತ್ವಜ್ಞಾನದ ಎಳೆಗಳಲ್ಲೊಂದಾದ ಗಣೇಶ ಮರ್ಸಿನೀ ತಂತ್ರದ ಪ್ರತಿಪಾದಕರುಗಳಾದ ನಾಥ ಸಂಪ್ರದಾಯದ ಎಳೆಗಳಾದ ಕೌಲ, ಚಾರ್ವಕ ಕಾಪಾಲಿಕ ಸಿದ್ಧಾಂತ ಸಾಧನಾ ಯತಿಗಳು ಈಗ ದೃಷ್ಯ ದುರ್ಲಭರಾಗಿರುವುದರಿಂದ ಈ ಗಣೇಶಾನಿಯನ್ನು ಮುಂದಿಟ್ಟುಕೊಂಡು ಇವರ ಸಾಧನಾ ಸ್ಥಾವರಗಳ ಸಂಶೋಧನಾ ಹುಡುಕಾಟದ ಹಾದಿಯಲ್ಲಿ ನಾನು ಕಂಡ ನಾಥ ಸಂಪ್ರದಾಯದ ಸಾಧನಾ ಎಳೆಗಳನ್ನು ಪ್ರತಿಪಾದಿಸಿದ್ದೇನೆ.

ಭಾರತೀಯ ತತ್ವಸಿದ್ಧಾಂತದ ಪ್ರಮುಖ ಮಗ್ಗಲುಗಳಲ್ಲೊಂದಾದ ಕೌಲ, ಕಾಪಾಲಿಕ ಸಿದ್ಧಾಂತದ ಪ್ರತೀಕವಾಗಿ ಕೌಲ ಕಾಪಾಲಿಕ ಸಿದ್ಧಿಸಾಧನಾ ಮೂಲ ಸ್ಥಳಗಳಲ್ಲಿ ಮಾತ್ರ ಕ್ಷೀಣ ರೂಪದಲ್ಲಾದರೂ ಸಹ ಶಾಶ್ವತವಾಗಿ ಈಗಲೂ ಗೋಚರಿಸುವ ಗಣೇಶಾನಿಯ ರಹಸ್ಯವನ್ನು ಅರಿಯುವ ನನ್ನದೊಂದು ಜಿಜ್ಞಾಸಾ ಪ್ರಯತ್ನವೇ ಆಗಿದೆ.

ಘನ ವಿದ್ವಾಂಸರು ಈ ಪ್ರಬಂಧವನ್ನು ಅಸಂಪ್ರದಾಯವೆಂಬ ಭಾವನೆಗೆ ಪಕ್ಕಾಗದೆ ಸಂಶೋಧನಾ ಸತ್ಯದರ್ಶನ ದೃಷ್ಟಿಯಿಂದ ಈ ಪ್ರಬಂಧವು ಹೊರಡಿಸುವ ಸಾಧನಾ ಸ್ಥರಗಳ ಚಿಂತನೆಯನ್ನು ಗಮನದಲ್ಲಿರಿಸಿಕೊಂಡು ಈ ಪ್ರಬಂಧದ ಸಾರವನ್ನು ಸೂಕ್ಷ್ಮವಾಗಿ ಸ್ವಪ್ರಜ್ಞಾಶೀಲರಾಗಿ ಮುಕ್ತ ಮನಸ್ಸಿನಿಂದ ವಿವೇಚಿಸಿದರೆ ದೃಶ್ಯ ದುರ್ಲಭವಾಗಿರುವ ಆದಿಕಾಲೀನ ಸಂಸ್ಕೃತಿಯ ವೈಶಿಷ್ಟ್ಯದಲ್ಲಿನ ಆದ್ಯವೊಂದನ್ನು ಅನಾವರಣಗೊಳಿಸಿದಂತಹ ಈ ಪ್ರಬಂಧವು ಮುಂದಿನ ಪೀಳಿಗೆಯ ಇತಿಹಾಸ ಸಂಶೋಧಕರಿಗೆ ಪ್ರೇರಣೆ ಒದಗಿಸಬಹುದೆಂಬ ನಂಬಿಕೆಯೂ ಸಹ ನನಗಿದೆ.

೫೮

ಮಹಿಳೆ ಆತ್ಮ ಬಲಿದಾನ : ಅಪರೂಪದ ಶಿಲ್ಪ

ಡಾ. ಎಸ್.ಎಂ. ಧನರಾಜ್*

ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕಿನ 'ಶಿವಪುರ' ಬೇಚರಾಕ್ ಗ್ರಾಮವಾಗಿದೆ. ಈ ಸ್ಥಳದಲ್ಲಿ ಪ್ರಾಚೀನವಾದ ಬಸವೇಶ್ವರ ದೇವಾಲಯವಿದ್ದು, ಅದನ್ನು ಜೀರ್ಣೋದ್ಧಾರ ಮಾಡುವ ಸಂದರ್ಭದಲ್ಲಿ 'ಮಹಿಳೆ ಆತ್ಮಬಲಿದಾನ' ಮಾಡಿಕೊಳ್ಳುತ್ತಿರುವ ಅಪರೂಪದ ಶಿಲ್ಪ ಬೆಳಕಿಗೆ ಬಂದಿದೆ.

ದೇವಾಲಯದ ನೈರುತ್ಯ ಭಾಗದಲ್ಲಿ ಪೂರ್ವಾಭಿಮುಖವಾಗಿ ನಿಲ್ಲಿಸಿರುವ ಈ ಶಿಲ್ಪದ ಎತ್ತರ ಸುಮಾರು ೧೩೩ ಸೆಂ.ಮೀ, ಅಗಲ ಸುಮಾರು ೫೧ ಸೆಂ.ಮೀ. ಆಗಿದೆ. ಶಾಸನವಿಲ್ಲ. ಶಿಲ್ಪವನ್ನು ಆಧಾರವಾಗಿಟ್ಟುಕೊಂಡು ಈ ಲೇಖನವನ್ನು ರಚಿಸಲಾಗಿದೆ.

ಈ ಶಿಲ್ಪವು ಉಬ್ಬುಶಿಲ್ಪವಾಗಿದ್ದು ಮಹಿಳೆಯೊಬ್ಬಳು ಶೂಲವನ್ನು ತನ್ನ ತೊಡೆಗಳ ಮಧ್ಯಭಾಗದಲ್ಲಿ ಜನನಾಂಗದ ನೇರಕ್ಕೆ ಚುಚ್ಚಿಕೊಂಡು ಬಲಿಯಾಗುತ್ತಿರುವ ಅಪರೂಪದ ಬಲಿಯ ಸನ್ನಿವೇಶವನ್ನು ದಾಖಲಿಸಿದೆ. ಇದು ಧಾರ್ಮಿಕ ಬಲಿದಾನ ಶಿಲ್ಪವಾಗಿದೆ. ವ್ಯಕ್ತಿಯು ತನ್ನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು, ಕೋರಿಕೆಗಳನ್ನು ದೇವರ ಮುಂದಿಟ್ಟು ಹರಕೆಗಳನ್ನು ಹೊತ್ತು ಹರಕೆಯನ್ನು ಒಪ್ಪಿಸುವ ಪದ್ಧತಿ ಈಗಲೂ ರೂಢಿಯಲ್ಲಿದೆ. ಹರಕೆ, ಹಣ, ಪ್ರಾಣ, ದೇಹದಂಡನೆ, ಉಪವಾಸ ಮೊದಲಾದ ರೂಪಗಳಲ್ಲಿದೆ. ಪ್ರಾಚೀನ ಕರ್ನಾಟಕದಲ್ಲಿ ಇವುಗಳ ಜೊತೆಗೆ ಕೆಲವರು ಪ್ರಾಣಾರ್ಪಣೆಯನ್ನೂ ಮಾಡುತ್ತಿದ್ದರು. ಈ ರೀತಿ ಪ್ರಾಣವನ್ನು ಧಾರ್ಮಿಕವಾಗಿ ಹರಕೆ ಕೊಡುವ ವಿಧಾನಗಳಲ್ಲಿ ಉರಿಯ ಉಯ್ಯಾಲೆ, ಸಿಡಿದಲೆಬಲಿ, ಶೂಲಬಲಿ ಮೊದಲಾದವು ಹರಕೆಯ ರೂಪದ ಬಲಿಗಳಾಗಿರುವುದನ್ನು ಡಾ.ಡಿ.ವಿ.ಪರಮಶಿವಮೂರ್ತಿ ಅವರು ಕನ್ನಡ ಶಾಸನ ಶಿಲ್ಪ ಕೃತಿಯಲ್ಲಿ ಗುರುತಿಸಿದ್ದಾರೆ.

೧.ಉರಿಯ ಉಯ್ಯಾಲೆ: ಬೆಂಕಿಯ ಜ್ವಾಲೆಗಳ ಮೇಲೆ ಉಯ್ಯಾಲೆ ಆಡುತ್ತ ಉರಿಗೆ ದುಮ್ಮಿಕ್ಕುತ್ತಿರುವುದನ್ನು ಕೌಜಗೇರಿಯ ಶಾಸನ ದಾಖಲಿಸಿದೆ.

೨.ಶೂಲಬಲಿ : ಹಾವೇರಿ ಜಿಲ್ಲೆ, ಹಿರೇಕೆರೂರು ತಾಲ್ಲೂಕು, ಆಲದಗೇರಿಯ ಶಾಸನ ಶಿಲ್ಪವು ಶೂಲದ ಮೇಲೆ ಬಿದ್ದು ಬಲಿಯಾಗುವ ಅಪರೂಪದ ಸನ್ನಿವೇಶವನ್ನು ದಾಖಲಿಸಿದೆ.

೩.ಸಿಡಿದಲೆ: ಎಂಬುದು ರುಂಡ ಹಾರಿಸಿಕೊಳ್ಳುವ ವಿಧಾನವಾಗಿದೆ. ಬಗ್ಗಿಸಿದ ಗಿಡದ ಟೊಂಗೆಗೆ ಅಥವಾ ಬಗ್ಗಿಸಿದ ಬಿದುರು ಬೊಂಬಿನ ತುದಿಗೆ ಹರಕೆ ಹೊತ್ತವರ ಕೂದಲನ್ನು ಕಟ್ಟಿ, ಒಬ್ಬನು ಖಡ್ಗದಿಂದ ಅವರ ರುಂಡವನ್ನು ಕತ್ತರಿಸಿದರೆ ರುಂಡ ಚಂಗನೆ ಮೇಲಕ್ಕೆ ಚಿಮ್ಮುತ್ತದೆ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬಸರಾಳು ಗ್ರಾಮ ಶಿಲ್ಪ, ಕನ್ನಡ ವಿ.ವಿ. ಯಲ್ಲಿರುವ ಶಿರಚ್ಛೇದನ ಮಾಡಿಕೊಂಡ ಸ್ತ್ರೀಶಿಲ್ಪ, ಕುಟುಂಬ ಸಮೇತ ಸಿಡಿದಲೆಯಾದ ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ, ಅಬ್ಬಲೂರಿನ ಶಿಲ್ಪ ಮೊದಲಾದವುಗಳು ಧಾರ್ಮಿಕ ಆತ್ಮಬಲಿದಾನದ ಶಿಲ್ಪಗಳೆಂದು ಗುರ್ತಿಸಲಾಗಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಶಿವಪುರದ ಶಿಲ್ಪವೂ ಕೂಡ ಧಾರ್ಮಿಕ ಬಲಿದಾನದ ಶಿಲ್ಪವೆಂದು ಅರ್ಥೈಸಲಾಗಿದೆ.

ಶಿವಪುರದ ಶಿಲ್ಪ : ಮೊದಲ ಹಂತದಲ್ಲಿ ಶಿಲ್ಪದ ಎಡಭಾಗದಲ್ಲಿ ಆತ್ಮಬಲಿಯಾಗಲಿರುವ ಮಹಿಳೆ ಕೈಮುಗಿದು ನಂತಿರುವುದಾಗಿದೆ. ಬಲ ಭಾಗದಲ್ಲಿ ಗಂಡಸು ಢೋಲು ವಾದ್ಯವನ್ನು ಬಾರಿಸುತ್ತಿರುವುದನ್ನು ಬಿಡಿಸಲಾಗಿದೆ. ವಾದ್ಯ ಬಾರಿಸುತ್ತಿರುವುದು ಅಭಿನಯಾತ್ಮಕವಾಗಿ ಸಹಜವಾಗಿ ಮೂಡಿಬಂದಿರುವುದು ಶಿಲ್ಪಿಯ ಕೈನೈಪುಣ್ಯವಾಗಿದೆ. ಇವರಿಬ್ಬರ ಮಧ್ಯದಲ್ಲಿ ಶಿಲ್ಪ ಮಧ್ಯಭಾಗದಲ್ಲಿ ಶೂಲದ ಕಂಬವನ್ನು ನೆಲದಲ್ಲಿ ನೆಟ್ಟು ಮೇಲಕ್ಕೆ ನಲ್ಲಿಸಲಾಗಿದ್ದು, ಎರಡನೇ ಹಂತದವರೆಗೂ ಎತ್ತರವಿರುವುದನ್ನು ಚಿತ್ರಿಸಲಾಗಿದೆ.

* ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಭಾರತೀ ಕಾಲೇಜು, ಭಾರತೀನಗರ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.



ಎರಡನೆಯ ಹಂತದಲ್ಲಿ ಶೂಲಕಂಬದ ಮೇಲೆ ಶೂಲಬಲಿದಾನ ಮಾಡಿಕೊಳ್ಳುತ್ತಿರುವ ಮಹಿಳೆಯನ್ನು ಸ್ಪಷ್ಟವಾಗಿ ಬಿಡಿಸಲಾಗಿದೆ. ವಸ್ತ್ರವನ್ನು ಧರಿಸಿರುವುದು, ಕೈಕಾಲುಗಳಿಗೆ ಆಭರಣ ಹಾಕಿರುವುದು, ತುರುಬನ್ನು ಕಟ್ಟಿ ಬಲಭಾಗಕ್ಕೆ ತಿರುಗಿಸಿರುವುದು ಸ್ಪಷ್ಟವಾಗಿ ಚಿತ್ರಿಸಲಾಗಿದೆ. ಶೂಲ ಕಂಬದಲ್ಲಿ ನಿಲ್ಲಲು ಅನುಕೂಲವಾಗುವ ಹಾಗೆ ಅಡ್ಡಕ್ಕೆ ಒಂದು ಕಂಬ ಕಟ್ಟಿರುವುದಾಗಿದೆ. ಈ ಕಂಬದ ಮೇಲೆ ಮಹಿಳೆ ಎಡದ ಕಾಲನ್ನು ಊರಿ ನಿಂತು ಎಡದ ಕೈಯನ್ನು ಮೇಲೆ ಎತ್ತಿ ಹರಸುತ್ತಿರುವುದಾಗಿದೆ. ಬಲದ ಕಾಲನ್ನು ಎತ್ತಿ ಶೂಲ ಕಂಬದ ಮೇಲೆ ಶೂಲ ತೊಡೆಯ ಮಧ್ಯಕ್ಕೆ ಬರುವ ಹಾಗೆ ಇಡಲಾಗಿದೆ. ಬಲದ ಕೈಯಲ್ಲಿ ಚಿಕ್ಕದೊಂದು ಕಠಾರಿ ರೂಪದ ಆಯುಧವಿದ್ದು, ಅದನ್ನು ಎರಡು ತೊಡೆಯ ಮಧ್ಯಭಾಗದ ನೇರಕ್ಕೆ ಹಿಡಿದಿರುವುದಾಗಿದೆ. ಇದರಿಂದ ತೊಡೆಯ ಮಧ್ಯಭಾಗಕ್ಕೆ ಶೂಲವನ್ನು ಚುಚ್ಚುಕೊಂಡು ಬಲಿದಾನವಾಗಿರುವುದು ಎಂಬುದು ಸ್ಪಷ್ಟವಾಗುತ್ತದೆ.

ಆತ್ಮಬಲಿದಾನದ ಮಹಿಳೆಯ ಎಡಭಾಗದಲ್ಲಿ ಆಯುಧ ಹಿಡಿದಿರುವ ಪುರುಷನು ನಿಂತಿದ್ದಾನೆ. ಬಲಭಾಗದಲ್ಲಿ ಮಹಿಳೆ ನಿಂತಿರುವುದಾಗಿದೆ.

ಮೂರನೇ ಹಂತದಲ್ಲಿ ಶೂಲವೇರಿದ ಮಹಿಳೆ ಪದ್ಮಾಸನದಲ್ಲಿ ಕೈಮುಗಿದು ಕುಳಿತಿದ್ದಾಳೆ. ಅವಳ ತಲೆಯ ಮೇಲೆ ತ್ರಿಶೂಲವಿದೆ. ಎಡಪಕ್ಕದಲ್ಲಿ ಶಿವಲಿಂಗ ನಂದಿಯಚಿತ್ರಣವಿದೆ. ಅವುಗಳನ್ನು ಪೂಜಿಸುತ್ತಿರುವ ವ್ಯಕ್ತಿಯ ಎಡಗೈಯಲ್ಲಿ ಗಂಟೆ ಆಡಿಸುತ್ತಿರುವ ಚಿತ್ರಣವಿದೆ.

ಧಾರ್ಮಿಕ ಹಿನ್ನೆಲೆಯ ಬಲಿದಾನದ ಶಿಲ್ಪವಾಗಿರುವ ಇದರ ಉಬ್ಬುಶಿಲ್ಪದ ಶೈಲಿಯನ್ನು ನೋಡಿದರೆ ೧೦ನೇ ಶತಮಾನದ ಗಂಗರ ಕಾಲದ ಶಿಲ್ಪವಿರಬೇಕೆಂದು ಊಹಿಸಬಹುದಾಗಿದೆ.

ಶಿಲ್ಪದಲ್ಲಿ ಶಾಸನಪಾಠವಿದ್ದಿದ್ದರೆ ಶಿಲ್ಪ ಸ್ಪಷ್ಟತೆಗೆ ನೆರವಾಗುತ್ತಿತ್ತು. ಶಿಲ್ಪಿಯು ಈ ಮಹಿಳೆ ಆತ್ಮಬಲಿದಾನ ಶಿಲ್ಪವನ್ನು ಅತ್ಯಂತ ಕಲಾತ್ಮಕವಾಗಿ ಕೆತ್ತಿರುವುದರಿಂದ ಆ ಶಾಸನ ಶಿಲ್ಪವು ತಿಳಿಸಬೇಕೆಂದಿರುವ ವಿಷಯವು ಸಮರ್ಥವಾಗಿ ಅರಿವಿಗೆ ಬರುತ್ತದೆ.

[ಕ್ಷೇತ್ರಕಾರ್ಯದಲ್ಲಿ ಮಾಹಿತಿ ನೀಡಿದ ಶ್ರೀ ಸೋಮಾರಾಧ್ಯ, ಕಗ್ಗಳ, ಮಳವಳ್ಳಿ, ಎನ್.ಜಿ. ಮಹೇಶ, ಮಳವಳ್ಳಿ, ಮಂಡ್ಯ ಜಿಲ್ಲೆ ಇವರಿಗೆ ಕೃತಜ್ಞತೆಗಳು.]

ಆಧಾರ ಗ್ರಂಥಗಳು

೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಎಂ. ಚಿದಾನಂದಮೂರ್ತಿ, ಪ್ರಸಾರಂಗ, ಮೈಸೂರು ವಿ.ವಿ., ೧೯೬೬.

೨. ಕನ್ನಡ ಶಾಸನ ಶಿಲ್ಪ, ಡಾ. ಡಿ.ವಿ. ಪರಮಶಿವಮೂರ್ತಿ, ಪ್ರಸಾರಂಗ ಕನ್ನಡ ವಿ.ವಿ., ೧೯೯೯.

೩. ಕರ್ನಾಟಕದ ವೀರಗಲ್ಲುಗಳು, ಡಾ. ಆರ್. ಶೇಷಶಾಸ್ತ್ರಿ.

೪. ಕನ್ನಡ ಸಾಹಿತ್ಯ ಪರಿಷತ್ತು, ೨೦೦೪.

೬೦

ಲಕ್ಷ್ಮೀಸಾಗರ ಗ್ರಾಮದ ರಾಷ್ಟ್ರಕೂಟರ ಕಾಲದ ಸಿಡಿತಲೆ ವೀರಗಲ್ಲು

ಆರ್. ಶೇಜೇಶ್ವರ*

ಲಕ್ಷ್ಮೀಸಾಗರ ಗ್ರಾಮವು ಚಿತ್ರದುರ್ಗ ಜಿಲ್ಲೆ ಹಾಗೂ ಚಿತ್ರದುರ್ಗ ತಾಲೂಕಿಗೆ ಸೇರಿದ ಗ್ರಾಮವಾಗಿದ್ದು, ರಾಷ್ಟ್ರೀಯ ಹೆದ್ದಾರಿ–೪ರಲ್ಲಿ ಚಿತ್ರದುರ್ಗದಿಂದ ಭರಮಸಾಗರಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿಯಿಂದ ಎಡಗಡೆಗೆ– ಒಂದು ಕಿ.ಮೀ. ಒಳಗಡೆ ಹೋದರೆ ಈ ಗ್ರಾಮವು ಕಂಡುಬರುತ್ತದೆ, ಈ ಗ್ರಾಮದ ಊರ ಮುಂದೆ ಮಹೇಶ್ವರ ದೇವಸ್ಥಾನವಿದ್ದು, ಈ ದೇವಾಸ್ಥಾನದ ಮುಂಭಾಗದಲ್ಲಿ ರಾಷ್ಟ್ರಕೂಟರ ಮೂರನೇ ಕೃಷ್ಣನಿಗೆ ಸಂಬಂಧಿಸಿದ ಶಿಲಾಶಾಸನವಿದೆ. ಇದು ರಾಷ್ಟ್ರಕೂಟರ ಸಾಮಂತನಾಗಿ ಕದಂಬಳಿಗೆ ಸಾಸಿರ–೧೦೦೦ ಆಳುತಿದ್ದ ಕನ್ನಯ್ಯನ ಕ್ರಿ.ಶ. ೯೪೬ರ ಶಾಸನವಾಗಿದೆ[೧]. ರಾಷ್ಟ್ರಕೂಟರ ಕಾಲದಲ್ಲಿ ಕಳ್ಳಹುಣಸೆಯೆಂದು ಈ ಗ್ರಾಮವನ್ನು ಕರೆಯುತ್ತಿದ್ದರು.

ಸಿಡಿತಲೆ ವೀರಗಲ್ಲು ಕುರಿತು

ಪ್ರಾಚೀನ ಕರ್ನಾಟಕದಲ್ಲಿ ವ್ಯಕ್ತಿಗಳು ತಮ್ಮ ಪ್ರಾಣವನ್ನು ತಾವೇ ತಗೆದುಕೊಳ್ಳುವ ಕೆಲವು ಪದ್ಧತಿಗಳಿದ್ದವು, ಇವುಗಳನ್ನು ಆತ್ಮಬಲಿ ಅಥವಾ ದೇಹತ್ಯಾಗ ಎಂಬ ಪದಗಳಿಂದ ಕರೆಯಲಾಗಿದೆ, ಈ ವಿಧಾನದಲ್ಲಿ ಮೋಕ್ಷಾಪೇಕ್ಷೆಯನ್ನು ಅಸೀಮವಾದ ಧೈರ್ಯ, ನಿಷ್ಠೆ, ಸ್ವಾಮಿಭಕ್ತಿಗಳನ್ನು ಕಾಣಬಹುದು, ಈ ಆತ್ಮಬಲಿಗಳಲ್ಲಿ ಕೆಲವು ಪೂರ್ಣವಾಗಿ ಧಾರ್ಮಿಕವಾದವು, ಇನ್ನು ಕೆಲವು ಇನ್ನೂ ಉದತ್ತವಾದ ಪ್ರತಿ ಪ್ರೇಮವನ್ನು ಸ್ವಾಮಿಭಕ್ತಿಯನ್ನೂ ಎತ್ತಿ ತೋರಿಸತಕ್ಕವು[೨]. ದೇವರಿಗಾಗಿ ಪ್ರಾಣಾರ್ಪಣೆ ಮಾಡಿಕೊಳ್ಳುವ ಧಾರ್ಮಿಕ ಬಲಿದಾನಕ್ಕೆ ಸಮಾಂತರವಾಗಿ ತಲೆಯೆತ್ತಿದ ವ್ಯಕ್ತಿಗಾಗಿ ಪ್ರಾಣಾರ್ಪಣೆ ಮಾಡಿಕೊಳ್ಳುವ ಲೌಕಿಕ ಬಲಿದಾನವು ಪತಿಗಾಗಿ ಪ್ರಿಯ ಸತಿಯ ಸಹಗಮನ ಮತ್ತು ವ್ಯಕ್ತಿಗಾಗಿ ಪ್ರಿಯ ವ್ಯಕ್ತಿಯ ವೇಳವಾಳಿ ಎಂದು ಎರಡು ಕವಲುಗಳಲ್ಲಿ ಬೆಳೆದು ಬಂದಿತು[೩], ಇಂತಹ ಆತ್ಮಬಲಿದಾನಗಳಲ್ಲಿ ಅಗ್ನಿ ಪ್ರವೇಶಗೆಯುವುದು, ಕಂಬಗಳ ಮೇಲಿಂದ ಜಿಗಿಯುವುದು ಮುಂತಾದ ವಿಧಾನಗಳು ಕಂಡುಬರುತ್ತವೆ, ಅವುಗಳಲ್ಲಿ ಸಿಡಿತಲೆಗೊಡುವುದು ಸಹಾ ಒಂದಾಗಿದೆ.

ಸಿಡಿತಲೆ ಕೊಡುವ ವಿಧಾನ : ಸಿಡಿತಲೆಯನ್ನು ಕೊಡಬೇಕಾದ ವ್ಯಕ್ತಿಯು ಧ್ಯಾನಭಂಗಿಯಲ್ಲಿ ಕುಳಿತುಕೊಳ್ಳುತ್ತಾನೆ, ಅವನ ಜುಟ್ಟಿಗೆ ನೆಲದಲ್ಲಿ ಹೂಳಿದ ಗಳುವೊಂದನ್ನು ಬಾಗಿಸಿ ಕಟ್ಟುತ್ತಾರೆ, ಅವನ ತಲೆಯನ್ನು ಇನ್ನೊಬ್ಬನು ಕತ್ತಿಯಿಂದ ಹಾರಿಸಿದಾಗ ತಲೆಯು ಮೇಲಕ್ಕೆ ಚಂಗನೆ ಸಿಡಿಯುತ್ತದೆ ಇದು ಸಿಡಿತಲೆ ಕೊಡುವ ವಿಧಾನವಾಗಿದೆ[೪].

ಕರ್ನಾಟಕದಲ್ಲಿ ವಿವಿಧ ಕಾರಣಗಳಿಗಾಗಿ ಸಿಡಿತಲೆಕೊಟ್ಟ ಶಾಸನಾಧಾರಿತ ವೀರಗಲ್ಲುಗಳು ಕಂಡುಬರುತ್ತವೆ. ಅವುಗಳಲ್ಲಿ ಪ್ರಮುಖವಾಗಿ ಒಡಯನಗೆ ಶುಭ ಕೋರಿ ಪ್ರಾಣಾರ್ಪಣೆ ಮಾಡಿದ ಸಿಡಿತಲೆ ವೀರಗಲ್ಲು ನಮ್ಮ ಶಾಸನ ಸಹಿತ ಹಾಗೂ ಶಾಸನ ರಹಿತವಾಗಿ ಕಂಡುಬಂದಿವೆ.

ಈ ಮೇಲಿನ ಸಿಡಿತಲೆ ವೀರಗಲ್ಲುಗಳ ರೀತಿಯಲ್ಲಿಯೇ ಲಕ್ಷ್ಮೀಸಾಗರ ಗ್ರಾಮದ ಮಹೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಬಿದ್ದಿರುವ ಶಾಸನರಹಿತವಾದ ರಾಷ್ಟ್ರಕೂಟರ ಕಾಲದ ಸೀಡಿತಲೆ ವೀರಗಲ್ಲನ್ನು ನೋಡಬಹುದಾಗಿದೆ. ಈ ಸಿಡಿತಲೆ ವೀರಗಲ್ಲು ಗ್ರಾನೈಟ್ ಕಲ್ಲಿನಂದ ಕೂಡಿದ್ದು, ಈ ಶಿಲ್ಪದ ಕೆತ್ತನೆ ಹಾಗೂ ಉಪಯೋಗಿಸಿರುವ ಶಿಲೆಯ ಆಧಾರದ ಮೇಲೆ ರಾಷ್ಟ್ರಕೂಟರ ಕಾಲದ್ದು ಎಂದು ಅಂದಾಜಿಸಲಾಗಿದೆ. ಇವರ ಕಾಲದಲ್ಲಿ ಆಡಂಬರವಿಲ್ಲದ ಶಿಲ್ಪದ ಕೆತ್ತನೆ ಮಹತ್ವದ್ದು ಎಂದು ತಿಳಿಯಬಹುದಾಗಿದೆ, ಇವರ ಕಾಲದಲ್ಲಿ ಮೂರನೇ ಹಂತದಲ್ಲಿ ಅಂದರೇ ಪೀಠದಲ್ಲಿ ದೇವರುಗಳನ್ನು ತೋರಿಸುವ ಪರಿಹಾಠವಿಲ್ಲದೇ ವೀರನನ್ನು ಪೀಠದ ಮೇಲೆ ತೋರಿಸಿ ಚಾಮಧಾರಿಯರು ಚಾಮರ ಬೀಸುವಂತೆ ಚಿತ್ರಿಸಿರುತ್ತಾರೆ ಇದು ಇವರ ಕಾಲದ ವೈಶಿಷ್ಟ್ಯ.

* ಸಹಾಯಕ ನಿರ್ದೇಶಕರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಶಿವಪ್ಪ ನಾಯಕ ಅರಮನೆ, ಶಿವಮೊಗ್ಗ.



ಈ ಸಿಡಿತಲೆ ವೀರಗಲ್ಲು ಗ್ರಾನೈಟ್ ಕಲ್ಲಿನಿಂದ ಕೂಡಿದ್ದು, ೧೨೫ ಸೆಂ.ಮೀ, ಉದ್ದ, ೮೦ ಸೆಂ.ಮೀ, ಅಗಲ ಹಾಗೂ ೧೩ ಸೆಂ.ಮೀ, ದಪ್ಪದಿಂದ ಕೂಡಿದೆ, ಕೆಳಗಡೆ ಸ್ವಲ್ಪ ಭಾಗ ಒಡೆದು ಹೋಗಿದ್ದು, ಶಿಲ್ಪಕ್ಕೆ ಯಾವುದೇ ದಕ್ಕೆಯಾಗಿರುವುದಿಲ್ಲ.

ಮೊದಲನೇ ಪಟ್ಟಿಕೆ : ರಾಜ ಅಥವಾ ಆಳುವಂತಹ ಪ್ರಭು ಅಥವಾ ಸಿಡಿತಲೆಯನ್ನು ಒಪ್ಪಿಸುತ್ತಿರುವವನ ಪೋಷಕನಿರಬಹುದು ಇವನು ಆಲಂಕಾರಿಸಿದ ಆನೆಯ ಮೇಲೆ ಕುಳಿತಿರುವನು, ಇಲ್ಲಿ ನೆಲಕ್ಕೆ ಒಂದು ಗಳುವೊಂದನ್ನು ಇಟ್ಟು ಅದನ್ನು ಬಾಗಿಸಿ ವೇಳೆವಾಳಿಯ ಜುಟ್ಟಿಗೆ ಸಿಗಿಸಲಾಗಿದೆ, ವೇಳೆವಾಳಿಯು ಧ್ಯಾನಸಕ್ತನಾಗಿ ಕುಳಿತಿರುವಂತೆ ಇದ್ದು ಇವನ ತಲೆಯನ್ನು ಕತ್ತರಿಸಲಾಗಿ ರುಂಡ ಹಾಗೂ ಮುಂಡ ಬೇರೆ ಬೇರೆಯಾಗಿರುವುದನ್ನು ಕಾಣಬಹುದು, ಒಬ್ಬ ವ್ಯಕ್ತಿಯು ಕತ್ತಿಯನ್ನು ಹಿಡಿದು ಸಿಡಿತಲೆ ವೀರನ ಕಡೆ ಮುಖಮಾಡಿ ನಿಂತಿರುವಂತೆ ಚಿತ್ರಿಸಲಾಗಿದೆ.

ಎರಡನೇ ಪಟ್ಟಿಕೆ : ಎರಡು ಜನ ಅಪ್ಸರೆಯರು ವೀರನನ್ನು ಭುಜಗಳ ಮೇಲೆ ಹಾಕಿಕೊಂಡು ಸ್ವರ್ಗಕ್ಕೆ ಹೋಗುವಂತೆ ತೋರಿಸಲಾಗಿದೆ.

ಮೂರನೇ ಪಟ್ಟಿಕೆ : ವೀರನು ಸ್ವರ್ಗಸ್ತನಾಗಿ ಕುಳಿತಿರುವನು ಇಬ್ಬರು ಚಾಮರಧಾರಣಿಯರು ಚಾಮರ ಬೀಸುವಂತೆ ಕಂಡುಬರುತ್ತದೆ.

ಈ ಎಲ್ಲಾ ಲಕ್ಷಣಗಳ ಆಧಾರದ ಮೇಲೆ ಇದು ರಾಷ್ಟ್ರಕೂಟರ ಕಾಲದ ಸಿಡಿತಲೆ ವೀರಗಲ್ಲು ಎನ್ನಬಹುದು.

(**ಕೃತಜ್ಞತೆ:** ಈ ಪ್ರಬಂಧವನ್ನು ರಚನೆ ಮಾಡುವಲ್ಲಿ ಸಹಕರಿಸಿದ ನನ್ನ ಗುರುಗಳು ಹಾಗೂ ಮಾರ್ಗದರ್ಶಕರಾದ ಡಾ. ಹನುಮನಾಯಕರವರಿಗೆ ಹಾಗೂ ಡಾ. ಜಗದೀಶ ಇವರುಗಳಿಗೆ ನಾನು ಅಭಾರಿಯಾಗಿರುತ್ತೇನೆ).

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಗಂಗಾನಾಯಕ್ (ಸಂ). ರಾಷ್ಟ್ರಕೂಟರ ಶಾಸನ ಸಂಪುಟ ೨, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು-೦೬. ೨೦೧೧. ಪುಟ ೫೩೧.

೨. ಡಾ. ಎಂ. ಚಿದಾನಂದಮೂರ್ತಿ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸವ, ಬೆಂಗಳೂರು, ೨೦೧೧, ಪುಟ ೩೩೦.

೩. ಡಾ. ಎಂ.ಎಂ. ಕಲಬುರ್ಗಿ ಸಮಾಧಿ-ಬಲಿದಾನ ವೀರ ಮರಣ ಸ್ಮಾರಕಗಳು, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು-೦೯. ೧೯೮೦. ಪುಟ ೫೧.


೪. ಡಾ. ಎಂ. ಚಿದಾನಂದಮೂರ್ತಿ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೧. ಪುಟ ೩೩೩.

೩೧


ನರೇಗಲ್ಲಿನ 'ತುರುಗೋಳ್ ಶಿಲ್ಪ'

ಡಾ. ಮಲ್ಲಿಕಾರ್ಜುನ ಕುಂಬಾರ*

ಗದಗ ಜಿಲ್ಲೆಯ ರೋಣ ತಾಲೂಕಿನ ನರೇಗಲ್ಲಿನಲ್ಲಿರುವ ತುರುಗೋಳ್ ಶಿಲ್ಪವು ಬಹು ಅಪರೂಪ ಹಾಗೂ ವಿಶಿಷ್ಟವಾಗಿದೆ. ಇದು ದರಗದರವರ ಓಣಿಯಲ್ಲಿರುವ ತ್ರಿಪುರಾಂತಕೇಶ್ವರ ದೇವಾಲಯದ ಎಡಬದಿಯಲ್ಲಿದೆ. ಇದು ಐದು ಹಂತದ ಬಹು ಅಪೂರ್ವವಾದ ಶಾಸನವುಳ್ಳ ಉಬ್ಬುಶಿಲ್ಪವಾಗಿದೆ. ಇದರಲ್ಲಿ ನಾಲ್ಕು ಮತ್ತು ಐದನೆಯ ಹಂತದ ನಡುವೆ ಆರು ಸಾಲಿನ ಬಹಳಷ್ಟು ತೃಟಿತವಾದ ಶಾಸನವಿದೆ. ಅದು ಈ ರೀತಿ ಇದೆ. "ಗವುಡ.... ಭುಜಬಳ .... ಧಿಪರ್ಸ್ವತ್ಯಾನ್ವತ.....ತತ್ವಾ....ಗಾಯಕರುಂ ತಾನೆನಲು....ದೊರೆವೆತ್ತ ಕಲಿ ಬೊಮ್ಮಯ್ಯ ಶುಭಟಚೂಡಾರತ್ನಂ"[೧] ಇದು ಹೊಯ್ಸಳ ವೀರಬಲ್ಲಾಳನ ಕಾಲಕ್ಕೆ ಸೇರಿದೆ. ಇದರ ಕಾಲ ಕ್ರಿ.ಶ. ೧೧೯೭. ಇದರಲ್ಲಿ ಕಲಿ ಬೊಮ್ಮಯ್ಯನ ವೀರಮರಣವನ್ನು ಉಲ್ಲೇಖಿಸಲಾಗಿದೆ. ಮೊದಲ ಹಂತದಲ್ಲಿ ವೀರನು ಶತ್ರುಗಳ ಜೊತೆಗೆ ದನಗಳನ್ನು ಕದ್ದೊಯ್ಯುತ್ತಿರುವ ಕುದುರೆಗಳ ಮೇಲೆ ಕುಳಿತವರೊಂದಿಗೆ ಹೋರಾಡುತ್ತಿದ್ದಾರೆ. ಇವನೊಂದಿಗೆ ಈತನ ನಾಲ್ವರು ಸಹಾಯಕರು ಬಿಲ್ಲು ಬಾಣಗಳನ್ನು ಹಿಡಿದಿದ್ದಾರೆ. ಅವರ ಹಿಂದೆ ಬೆನ್ನು ಹತ್ತಿದ ನರೇಗಲ್ಲಿನ ವೀರರು ಅವರ ಒಂದು ಕುದುರೆಯನ್ನು ಸಾಯಿಸಿದ್ದಾರೆ. ಈ ವೀರರು ಕೈಯಲ್ಲಿ ಈಟಿಗಳನ್ನು ಹಿಡಿದುಕೊಂಡಿದ್ದಾರೆ. ಎರಡನೆಯ ಹಂತದಲ್ಲಿ ಆರು ಜನರಿದ್ದು, ಇವರು ಎಂಟು ದನಗಳನ್ನು ಓಡಿಸಿಕೊಂಡು ಹೋಗುತ್ತಿದ್ದಾರೆ. ಇವುಗಳನ್ನು ಶಿಲ್ಪದಲ್ಲಿ ದೊಡ್ಡದಾಗಿ ಚಿತ್ರಿಸಲಾಗಿದೆ. ಅದರಲ್ಲಿ ಒಂದು ಕರುವನ್ನು ಒಂದು ದೊಡ್ಡದಾದ ದನವು ಪ್ರೀತಿಯಿಂದ ನೆಕ್ಕುತ್ತಿದೆ. ಬಹುಶಃ ಇದು ಈ ಕರುವಿನ ತಾಯಿ ಇರಬಹುದು. ಇದನ್ನು ಚಿತ್ರಿಸಿದ ಶಿಲ್ಪಿಯ ಕಲಾನೈಪುಣ್ಯತೆ ಅದ್ಭುತವಾಗಿದೆ. ಮೂರನೆಯ ಹಂತದಲ್ಲಿ ಅನೇಕ ವಾದ್ಯಗಾರರೊಂದಿಗೆ ಹಲವು ಅಪ್ಸರೆಯರು, ವೀರರನ್ನು ಸ್ವರ್ಗಕ್ಕೆ ಕರೆದುಕೊಂಡು ಹೊರಟಿದ್ದಾರೆ. ನಾಲ್ಕನೆಯ ಹಂತದಲ್ಲಿ ಸ್ವರ್ಗಕ್ಕೆ ಹೊರಟ ವೀರನಿಗೆ ಈರ್ವರು ಚಾಮರವನ್ನು ಬೀಸುತ್ತಾ, ಕೈಲಾಸಕ್ಕೆ ಕರೆದೊಯ್ಯುತ್ತಿದ್ದಾರೆ. ಐದನೆಯ ಹಂತದಲ್ಲಿ ಒಂದೆಡೆ ವೀರನು ಕೈಲಾಸದಲ್ಲಿ ಕುಳಿತಿದ್ದರೆ, ಆತನ ಬದಿಯಲ್ಲಿ ಲಿಂಗ, ಮತ್ತೊಂದೆಡೆಯಲ್ಲಿ ನಂದಿಯ ವಿಗ್ರಹವಿದೆ. ಅದರ ಮೇಲು ಭಾಗದಲ್ಲಿ ಗೋಪುರದಾಕಾರವನ್ನು ಕೆತ್ತಲಾಗಿದೆ. ಐದು ಹಂತದಲ್ಲಿರುವ ಈ ಅಪೂರ್ವ ತುರುಗೋಳ್ ಶಿಲ್ಪವು ಈ ಭಾಗದಲ್ಲಿ ಗಮನ ಸೆಳೆದಿದೆ.



ನರೇಗಲ್ಲದ ತ್ರಿಪುರಾಂತಕೇಶ್ವರ ದೇವಾಲಯದ ಬಳಿಯ ತುರುಗೋಳ್ ಶಿಲ್ಪ.



ಈ ಶಿಲ್ಪದಲ್ಲಿರುವ ತಾಯಿ ಆಕಳು ತನ್ನ ಕರುವನ್ನು ನೆಕ್ಕುತ್ತಿರುವ ದೃಶ್ಯ

ಆಧಾರಸೂಚಿ

೧. SII X V - 212, ನರೇಗಲ್ಲಿನ ಶಾಸನ.

* "ವಚನ" ರೋಣ ತಾಲ್ಲೂಕು, ಗದಗ ಜಿಲ್ಲೆ, ರಾಜೂರ-೫೮೨೨೩೦.

೩೨

"ಚಿತ್ರದುರ್ಗ ಜಿಲ್ಲೆ ಹುಲಿಬೇಟೆ ವೀರಗಲ್ಲುಗಳು"

ಕೆ.ಟಿ. ಮಹಂತೇಶ*

ಹುಲಿಯನ್ನು ಬೇಟೆಯಾಡುವವನು ನಿಜವಾಗಿಯೂ ಧೈರ್ಯಶಾಲಿಯಾಗಿರಬೇಕು ಹಂದಿಯನ್ನು ಕೊಲ್ಲುವಷ್ಟು ಸುಲಭವಾಗಿ ಹುಲಿಯನ್ನು ಕೊಲ್ಲಲು ಸಾಧ್ಯವಿಲ್ಲ. ಕಾರಣ ಮನುಷ್ಯನಿಗಿಂತಲೂ ಬಲಿಷ್ಠವಾದ ಪ್ರಾಣಿ ಹುಲಿ. ಇಂತಹ ಬಲಿಷ್ಠವಾದ ಪ್ರಾಣಿಯೊಂದಿಗೆ ಹೋರಾಡಿದ ವಿಷಯವನ್ನು ತಿಳಿಸುವ ಅನೇಕ ವೀರಗಲ್ಲುಗಳು ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆಯುತ್ತವೆ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಹುಲಿಯ ಭೇಟೆ ಪ್ರಚಲಿತದಲ್ಲಿತ್ತು. ಹೊಯ್ಸಳ ಸಾಮ್ರಾಜ್ಯ ಸ್ಥಾಪಕನಾದ ಸಳನು ಹುಲಿಯೊಡನೆ ಹೋರಾಡುತ್ತಿರುವ ದೃಶ್ಯ ಅನೇಕ ಶಿಲ್ಪಗಳಲ್ಲಿ ಕಾಣಬಹುದು. ಹಾಗೆಯೆ ಭಾರತಕ್ಕೆ ಬಂದ ವಿದೇಶಿ ಪ್ರವಾಸಿಗನಾದ 'ಪ್ರಾನ್ಸುವಾಪಿರಾರ್ಡ್‌ದೆಲವಲ್' ಎಂಬುವನು "ದಕ್ಷಿಣ ಭಾರತದ ಕೇರಳದಲ್ಲಿ ಹುಲಿಗಳು ಹೆಚ್ಚು ಇವನ್ನು ನಾಯರ್‌ಗಳು ಭೇಟೆಯಾಡುತ್ತಾರೆ ಯಾವ ಆಯುಧಗಳು ಇಲ್ಲದೆ ನಾಯರ್‌ಗಳು ಹುಲಿಯ ಮೇಲೆ ಬಿದ್ದು ಅವನ್ನು ಕೊಂದಿದ್ದನ್ನು ನಾನು ನೋಡಿದ್ದೇನೆ. ಕೆಲವರು ತಮ್ಮ ಮೈಪರಚಿಕೊಂಡು ರಕ್ತ ಸುರಿಸುತ್ತಾ ಕೊಂದ ಹುಲಿಯನ್ನು ರಾಜನ ಮುಂದೆ ಎಳೆದುಕೊಂಡು ಬಂದದ್ದನ್ನು ನೋಡಿದ್ದೇನೆ" ಎಂಬುದಾಗಿ ಹೇಳಿದ್ದಾನೆ.[೧] ಚಿತ್ರದುರ್ಗ ತಾಲ್ಲೂಕು ಗೊಡಬನಾಳ್ ಗ್ರಾಮದಲ್ಲಿ ಮೊಟ್ಟಮೊದಲ ಬಾರಿಗೆ ಹುಲಿಭೇಟೆ ವೀರಗಲ್ಲು ಪತ್ತೆಯಾಗಿದ್ದು ವೀರ ಹುಲಿಯೊಡನೆ ಹೋರಾಡಿ ಮರಣ ಹೊಂದಿದ ಬಗ್ಗೆ ತಿಳಿಯುತ್ತದೆ. ಇದನ್ನು ಬಿಟ್ಟರೆ ಅಪರೂಪವೆನಿಸುವ ವೀರಗಲ್ಲು ಹಿರಿಯೂರು ತಾಲ್ಲೂಕಿನ ಐಮಂಗಲ ವೀರಭದ್ರ ದೇವಾಲಯದ ಪಕ್ಕದಲ್ಲಿ ಶಾಸನ ರಹಿತವಾದ 'ಹುಲಿಬೇಟೆ' ವೀರಗಲ್ಲಿದೆ. ಶಿಲ್ಪದಲ್ಲಿ ವೀರ ಎಡಗೈಯಲ್ಲಿ ಭರ್ಜಿ ಹಿಡಿದು ಹುಲಿಗೆ ಇರಿದಿದ್ದಾನೆ. ಹುಲಿ ಹಿಂಗಾಲಿನ ಬಲಗಾಲ ಮೇಲೆ ನಿಂತು ಎಡ ಕಾಲನ್ನು ಮೇಲಕ್ಕೆತ್ತಿದೆ. ಮುಂಗಾಲುಗಳನ್ನು ಎತ್ತಿ ಪರಚುವಂತೆ ಇದ್ದು ಬಾಯಿ ತೆಗೆದಿದೆ. ವೀರ ಬಲಗೈಯಲ್ಲಿ ಕೊಡಲಿಯನ್ನು ಮೇಲಕ್ಕೆತ್ತಿದ್ದಾನೆ. ವೀರನು ಕೈಕಡಗ, ತೋಳ್ಬಂದಿ, ಕಂಠಾಭರಣಗಳು ಅಲಂಕಾರಿಕ ಓಲೆಗಳು ತುರುಬು ಸೊಂಟಕ್ಕೆ ಪಟ್ಟಿ, ಪಟ್ಟಿಯಲ್ಲಿ ಬಾಕು ಸಿಕ್ಕಿಸಿಕೊಂಡಿದ್ದಾನೆ. ಶಿಲ್ಪದ ಬಲಭಾಗದಲ್ಲಿ ಮದಿಸಿದ ಒಂದು ಹೋರಿ ಬಾಲವನ್ನು ಎತ್ತಿ ಗಾಬರಿಯಿಂದ ನೋಡುತ್ತಾ ನಿಂತಿದೆ. ವೀರನ ಹಿಂಭಾಗ ಅಂದರೆ ಎಡಭಾಗದಲ್ಲಿ ಎರಡು ಹೋರಿಗಳು ಉದ್ದನೆಯ ಕೊಂಬುಗಳಿಂದ ದಷ್ಟಪುಷ್ಟವಾದ ದೇಹದಿಂದ ಕೂಡಿದ್ದು ಭಯಬೀತಗೊಂಡು ನೋಡುತ್ತಾ ನಿಂತಿವೆ. ಮೇಲಿನ ಭಾಗದಲ್ಲಿ ಸೂರ್ಯಚಂದ್ರರನ್ನು ಕೆತ್ತಲಾಗಿದೆ. ಹುಲಿ ದನಗಳನ್ನು ಹಿಡಿಯಲು ಬಂದಾಗ ವೀರ ಹುಲಿಯೊಡನೆ ಹೋರಾಡಿ ಮರಣ ಹೊಂದಿರಬಹುದು. ಶಿಲ್ಪ ಶೈಲಿಯ ಆಧಾರದ ಮೇಲೆ ಕ್ರಿ.ಶ. ೧೫-೧೬ನೆಯ ಶತಮಾನದ್ದಾಗಿರಬಹುದು. (ಈ ರೀತಿಯ ವೀರಗಲ್ಲೊಂದು ಬೆಂ.ವಿ.ವಿ. ಕನ್ನಡ ಅಧ್ಯಯನ ಸಂಸ್ಥೆ ಮುಂಭಾಗದಲ್ಲಿದೆ.)

ಚಳ್ಳಕೆರೆ ತಾಲ್ಲೂಕು ಸಾಣಿಕೆರೆ ಕೆರೆಯ ಏರಿಯ ಮೇಲೆ ಪಾಳು ಬಿದ್ದಿರುವ ದೇವಾಲಯದ ಹತ್ತಿರ ಶಿಲ್ಪ ಪಟ್ಟಿಕೆಯಲ್ಲಿ ಹುಲಿ ಬೇಟೆಯ ವೀರಗಲ್ಲೊಂದಿದೆ ಇದರ ಶಿಲ್ಪ ವಿಶೇಷವಾಗಿದೆ. ವೀರ ಉದ್ದನೆಯ ಭರ್ಚಿಯನ್ನು ಹಿಡಿದಿದ್ದು, ತಲೆಗೆ ತುರುಬು ಕಟ್ಟಿಕೊಂಡಿದ್ದಾನೆ. ಸೊಂಟಕ್ಕೆ ಪಟ್ಟಿ ಕಂಠಾಭರಣ, ಓಲೆಗಳು, ಕಾಲ್ಗಡಗ, ತೋಳ್ಬಂದಿ, ಕೈಕಡಗ ಧರಿಸಿದ್ದಾನೆ. ಬಲಗೈಯಲ್ಲಿ ಈಟಿ ಹಿಡಿದು ತಲೆಯ ಮೇಲಿಂದ ದಷ್ಟಪುಷ್ಟವಾದ ಹುಲಿಗೆ ಭರ್ಚಿಯಿಂದ ತಿವಿದಿದ್ದಾನೆ. ಹುಲಿ ಈಟಿಯನ್ನು ಬಿಡಿಸಿಕೊಳ್ಳುಲು ಬಾಯಿ ತೆರೆದು ಮುಂಗಾಲಿನ ಬಲಗಾಲನ್ನು ಎತ್ತಿ ಬಿಡಿಸಿಕೊಳ್ಳಲು ಪ್ರಯತ್ನಸುತ್ತಿದೆ. ಹುಲಿಯು ಈಟಿಯ ರಭಸಕ್ಕೆ ಹಿಂದಿನ ಎರಡು ಕಾಲುಗಳ ಸಮೇತ ದೇಹ ಭಾಗಿದಂತೆ ಕಂಡು ಬರುತ್ತದೆ. ಹಿಂದಿನ ಕಾಲಿನ ಬೆರಳುಗಳನ್ನು ಸ್ಪುಟವಾಗಿ ಖಂಡಿಸಲಾಗಿದೆ. ವೀರ ಮತ್ತು ದೊಡ್ಡ ಹುಲಿಯ ಮಧ್ಯೆ ಇನ್ನೊಂದು ಹುಲಿ ವೀರನ ಮೇಲೆ ಎರಗಿದೆ. ವೀರ ಎಡಕೈಯಿಂದ ಭರ್ಚಿಯನ್ನು ಬಾಯಿ/ತಲೆಗೆ ತಿವಿದಿದ್ದಾನೆ. ಭರ್ಚಿ ಕುತ್ತಿಗೆಯ ಹಿಂಭಾಗದಲ್ಲಿ ಹೊರ ಬಂದಿದೆ. ಹುಲಿ ಮುಂಗಾಲುಗಳನ್ನು ಮೇಲಕ್ಕೆತ್ತಿ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಬಾಲವನ್ನು ಹಿಂದಕ್ಕೆ ಮಡಿಚಿಕೊಂಡಿದೆ. ವೀರನ ಹಿಂದೆ ಬೇಟೆ ನಾಯಿ ಜಿಂಕೆಯನ್ನು ಮೇಲಕ್ಕೆತ್ತಿ ಹಿಡಿಯಲು ಪ್ರಯತ್ನಿಸುತ್ತಿದೆ. ಜಿಂಕೆ ಮುಂದಿನ ಒಂದು ಕಾಲನ್ನು ಮೇಲಕ್ಕೆತ್ತಿ

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ.

ಹಿಂದಕ್ಕೆ ತಿರುಗಿ ನೋಡುತ್ತಿದೆ. ಈ ಅಂಶಗಳನ್ನು ಗಮನಿಸಿದಾಗ ಈ ಭೂಭಾಗ ಅರಣ್ಯ ಪ್ರದೇಶವಾಗಿದ್ದು ಕಾಡು ಪ್ರಾಣಿಗಳು ಮತ್ತು ಕ್ರೂರ ಮೃಗಗಳಿಂದ ತುಂಬಿದ ಪ್ರದೇಶವಾಗಿತ್ತೆಂದು, ಭೇಟೆಗಾಗಿ ನಾಯಿಗಳನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆಂದು ಹೇಳಬಹುದು.

ಮೊಳಕಾಲ್ಮೂರು ತಾಲ್ಲೂಕು ನಾಗಸಮುದ್ರ ಹಳೆಯ ನೀರಿನ ಟ್ಯಾಂಕ್ ಬಳಿ ಇರುವ ಸುಮಾರು ಆರು ಅಡಿ ಎತ್ತರದ ಬಿಳಿ ಕಣಶಿಲೆಯ ಮೂರು ಹಂತಗಳ ವೀರಗಲ್ಲಿದೆ. ಕೆಳಗಿನ ಹಂತದಲ್ಲಿ ಕುದುರೆಯ ಮೇಲೆ ಕುಳಿತಿರುವ ವೀರನು ಹುಲಿಯೊಂದಿಗೆ ಹೋರಾಡುತ್ತಿದ್ದ ಅವನ ಹಿಂದೆ ಪರಿವಾರದವರು ತಮ್ಮ ಕೈಗಳಲ್ಲಿ ವಿಧವಿಧವಾದ ಆಯುಧಗಳನ್ನು ಹಿಡಿದುಕೊಂಡು ಒಡೆಯನಿಗೆ ಸಹಾಯ ಮಾಡುತ್ತಿದ್ದಾರೆ. ಎರಡನೆಯ ಹಂತದಲ್ಲಿ ಮೂರುಜನ ಸ್ತ್ರೀಯರು ಓರ್ವ ಪುರುಷನನ್ನು ಬಿಡಿಸಲಾಗಿದೆ. ಸ್ತ್ರೀಯರ ಗುಂಪಿನಲ್ಲಿ ಒಬ್ಬಳು ಕೈಯಲ್ಲಿನ ಕನ್ನಡಿಯಿಂದ ಮುಖವನ್ನು ನೋಡಿಕೊಳ್ಳುತ್ತಿದ್ದಾಳೆ. ಮೂರನೆಯ ಹಂತದಲ್ಲಿ ಶಿವಲಿಂಗವನ್ನು ನಂದಿಯನ್ನು ಇದರ ಮೇಲ್ಭಾಗದಲ್ಲಿ ಸೂರ್ಯಚಂದ್ರರ ಕೆತ್ತನೆ ಮಾಡಲಾಗಿದೆ. ಸ್ವರ್ಗಸ್ಥನಾದ ವೀರನು ಶಿವ ಸಾನಿಧ್ಯವನ್ನು ಹೊಂದಿರುವುದನ್ನು ಮೇಲಿನ ಹಂತದಲ್ಲಿ ಕಾಣಬಹುದು. ಈ ಶಿಲ್ಪ ರಚನೆಯನ್ನು ನೋಡಿದರೆ ಹೊಯ್ಸಳರ ಕಾಲದಲ್ಲಿ ಅಥವಾ ಅವರ ನಂತರದ ಕಾಲದಲ್ಲಿ ಈ ಸ್ಮಾರಕವನ್ನು ಹುಲಿ ಕಾಳಗದಲ್ಲಿ ಮೃತನಾದ ವೀರನ ನೆನಪಿನಲ್ಲಿ ಹಾಕಿಸಲಾಗಿದೆ.

ಇದೇ ತಾಲ್ಲೂಕಿನ ಕೋನಸಾಗರ ಕೆರೆಯ ಅಂಗಳದಲ್ಲಿ, ನೇರ್ಲಹಳ್ಳಿ ಗ್ರಾಮಕ್ಕೆ ಸೇರಿದ ಕಪಡಬಂಡೆಹಟ್ಟಿ ಎಂಬಲ್ಲಿ ಅವುಲಯ್ಯ ಎಂಬುವರ ಜಮೀನಿನಲ್ಲಿ ಪೂರ್ವಾಭಿಮುಖವಾಗಿ ವೀರಗಲ್ಲು ಗುಡಿ ಇದ್ದು ಸ್ಥಳೀಯರು ಇದನ್ನು 'ಪೆದ್ದಯ್ಯನಗುಡಿ' ಎಂದು ಹೇಳುತ್ತಾರೆ. ಈ ಶಿಲೆಯ ಶಿಲ್ಪ ಪಾಠ ಸಾಧಾರಣದ್ದೇ ಆದರೂ ಭೇಟೆಯ ಪ್ರಸಂಗವನ್ನು ಇಲ್ಲಿ ಶಿಲ್ಪಿ ಸಹಜವಾಗಿಯೇ ಮೂಡಿಸಿದ್ದಾನೆ. ವೀರನ ಮೇಲೆರೆಗಿದ ಚಿರತೆಯನ್ನು ಕೇಶಧಾರಿಯಾಗಿರುವ ವೀರ ಧೈರ್ಯದಿಂದಲೇ ನಿರಾಯುಧವಾಗಿಯೇ ಎದುರಿಸುತ್ತಿರುವ ಪರಿ ಒಡೆಯನಿಗೆ ಸಹಾಯ ಮಾಡಲೆಂದೆ ಚಿರತೆಯ ಮೇಲೆ ಆಕ್ರಮಣ ಮಾಡುತ್ತಿರುವಂತೆ ನೆಗೆಯುತ್ತಿರುವ ನಾಯಿಗಳ ಚಿತ್ರಗಳು ಪರಿಣಾಮಕಾರಿಯಾಗಿ ಮೂಡಿ ಬಂದಿವೆ. ಯಾರು ಈ ವೀರ? ಮ್ಯಾಸನಾಯಕ ಬುಡಕಟ್ಟು ಸಂಸ್ಕೃತಿಗೆ ಸೇರಿದ ಯರಮಂಚ ನಾಯಕನಾದ ಪೆದ್ದಯ್ಯ ಮ್ಯಾಸ ಬೇಡರ ಒಬ್ಬ ವೀರ ಪುರುಷ ನೇತ್ರನಹಳ್ಳಿ ಪರಿಸರದಲ್ಲಿ ದನಗಳ ಹಿಂಡನ್ನು ಕಟ್ಟಿಕೊಂಡು ಜೀವನ ನಡೆಸುತ್ತಿದ್ದ ಒಬ್ಬ ದನಗಾಹಿ. ಪೂರ್ವಕ್ಕೆ ಕೋನಸಾಗರದ ತಿಮ್ಮಪ್ಪನ ಗುಡ್ಡದ ಸಾಲು ಇದ್ದು ಸುತ್ತ ಹಲವು ದನ–ಕುರಿಗಳ ಹಟ್ಟಿ ಇದ್ದವು. ಇಂತಹ ಹಟ್ಟಿಗಳ ಮೇಲೆ ಜಾನುವಾರುಗಳಿಗಾಗಿ ಚಿರತೆಗಳು ಹಾಗೂ ಇತರೆ ದುಷ್ಟ ಮೃಗಗಳು ಆಗಾಗ್ಗೆ ದಾಳಿ ನಡೆಸುತ್ತಿದ್ದದ್ದು ಸಾಮಾನ್ಯವಾಗಿತ್ತು ಒಂದು ಸಾರಿ ಕುರಿ ಮಂದೆಯ ಮೇಲೆರೆಗಿದ ಚಿರತೆಯನ್ನು ತನ್ನ ಸಾಕು ನಾಯಿಗಳ ಸಹಾಯದೊಂದಿಗೆ ನಿರಾಯುಧನಾಗಿಯೇ ಸಾಯಿಸಿ, ಕಾದಾಟದಲ್ಲಿ ಆದ ಗಾಯಗಳಿಂದ ಪೆದ್ದಯ್ಯ ಮರಣ ಹೊಂದಿದ. ಈ ವೀರನ ನೆನಪಿಗಾಗಿ ಕೋನಸಾಗರದವರಿಗೆ ಒಂದು ಹಸುವನ್ನು ನೀಡಿ ಈ ವೀರಗಲ್ಲನ್ನು ಕಡೆಸಿ ನೆಟ್ಟು ಹಬ್ಬ ಹರಿದಿನಗಳಲ್ಲಿ ವಿಶೇಷ ಪೂಜೆ ನಡೆಸಿಕೊಂಡು ಹೋಗುವುದನ್ನು ರೂಢಿಯಲ್ಲಿ ಬೆಳೆಸಿಕೊಂಡು ಬರುತ್ತಿದ್ದಾರೆ.

ಹಿರಿಯೂರು ತಾಲ್ಲೂಕಿನ ಹರಳೀಕೆರೆ ಗ್ರಾಮದಲ್ಲಿ ಕಪ್ಪುಗ್ರಾನೈಟ್ ಕಲ್ಲಿನಿಂದ ರಚಿಸಲಾಗಿರುವ ವೀರಗಲ್ಲು ಮೂರು ಹಂತಗಳನ್ನು ಹೊಂದಿದ್ದು. ಮೊದಲನೆ ಹಂತದಲ್ಲಿ ವೀರನು ಹುಲಿಯನ್ನು ಕೊಲ್ಲುತ್ತಿರುವ ಚಿತ್ರ ಕಾಣಬಹುದು. ವೀರನು ಅಭರಣಭರಿತನಾಗಿರುವುದು ಸತ್ತ ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುವ ಹಾಗೆ ವೀರನು ಶಿವಲಿಂಗದ ಪಕ್ಕದಲ್ಲಿ ಕೈಜೋಡಿಸಿ ಧ್ಯಾನ ಮಾಡುತ್ತಿರುವ ದೃಶ್ಯ ಖಂಡರಿಸಲಾಗಿದೆ.

ಹೊಸದುರ್ಗ ತಾಲ್ಲೂಕು ಅನಿವಾಳ ಗ್ರಾಮದ ಶ್ರೀ ಕಲ್ಲೇಶ್ವರ ದೇವಾಲಯದ ಬಲ ಭಾಗದಲ್ಲಿರುವ ವೀರಗಲ್ಲು ಗ್ರಾಮ ರಕ್ಷಣೆಯಲ್ಲಿ ಹೋರಾಡಿ ಮಡಿದ ವೀರನ ನೆನಪಿಗಾಗಿ ಸ್ಮಾರಕವನ್ನು ಹಾಕಿಸಿರುವುದು ಕಂಡುಬರುತ್ತದೆ. ವೀರಗಲ್ಲು ಮೂರು ಹಂತಗಳನ್ನು ಹೊಂದಿದ್ದು ಗ್ರಾಮದೊಳಗೆ ಹುಲಿಯು ನುಗ್ಗಿ ಜನರಿಗೆ ತೊಂದರೆ ಕೊಟ್ಟಾಗ, ಆ ಗ್ರಾಮದ ವೀರನು ದುಷ್ಟ ಪ್ರಾಣಿಯನ್ನು ಸಂಹರಿಸಲು ಹುಲಿ ಮತ್ತು ವೀರನ ಹೋರಾಟ ದೃಶ್ಯ ಖಂಡಿಸಲಾಗಿದೆ. ವೀರನು ಕೈಯಲ್ಲಿ ಖಡ್ಗವನ್ನು ಹಿಡಿದು ಹುಲಿಯ ಬಾಯಿಗೆ ಖಡ್ಗದಿಂದ ತಿವಿಯುತ್ತಿದ್ದು, ಈ ಹೋರಾಟದಲ್ಲಿ ಆ ವೀರನನ್ನು ಪ್ರಾಣಿಯು ಕೊಂದಿರುವ ಚಿತ್ರಣವಿದೆ. ಎರಡನೇ ಹಂತದಲ್ಲಿ ವೀರನನ್ನು ಪುಷ್ಪಕ ವಿಮಾನದಲ್ಲಿ ಕುಳ್ಳರಿಸಿಕೊಂಡು ಸುರಾಂಗನೆಯರು ನೃತ್ಯ ಭಂಗಿಯಲ್ಲಿ ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ದೃಶ್ಯವಿದೆ. ಮೂರನೇ ಹಂತದಲ್ಲಿ ವೀರನು ಪುನರ್ ಜನ್ಮ ಪಡೆದು ಶಿವಲಿಂಗದ ಪಕ್ಕದಲ್ಲಿ ಧ್ಯಾನ ಮಾಡುತ್ತಿರುವಂತಿದ್ದು, ಶಿವಲಿಂಗದ ಎಡಭಾಗದಲ್ಲಿ ನಂದಿಯ ಚಿತ್ರಣ ಮೇಲ್ಭಾಗದಲ್ಲಿ

ಸೂರ್ಯಚಂದ್ರರ ಚಿತ್ರ ಕೆತ್ತಲಾಗಿದೆ. ಹೀಗಾಗಿ ಗ್ರಾಮದ ರಕ್ಷಣೆಗಾಗಿ ಹುಲಿಯೊಡನೆ ಹೋರಾಟ ಮಾಡಿ ಹತನಾಗಿದ್ದಕ್ಕೆ ಅವನ ಹೆಸರಿನಲ್ಲಿ ವೀರಗಲ್ಲನ್ನು ಹಾಕಿಸಲಾಗಿದೆ.

ಹೊಳಲ್ಕೆರೆ ತಾಲ್ಲೂಕು ಕೋಟೆಹಾಳ್ ಗ್ರಾಮಕ್ಕೆ ಹೋಗುವ ರಸ್ತೆ ಬದಿಯಲ್ಲಿದ್ದ ಹುಲಿ ಬೇಟೆ ವೀರಗಲ್ಲು ಈಗ ಎಸ್.ಜೆ.ಎಂ. ಮಹಾವಿದ್ಯಾಲಯ ಚಿತ್ರದುರ್ಗದಲ್ಲಿ ಸಂರಕ್ಷಿಸಲಾಗಿರುವ ವೀರಗಲ್ಲು ಮೂರು ಹಂತಗಳಿಂದ ಕೂಡಿದ, ಕಪ್ಪು ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿರುವ ಶಾಸನೋಕ್ತ ವೀರಗಲ್ಲಾಗಿದೆ. ಶಾಸನವನ್ನು ವೀರಗಲ್ಲಿನ ಮೇಲ್ಭಾಗ ಮತ್ತು ಮಧ್ಯದ ಪಟ್ಟಿಕೆಯ ಮೇಲೆ ಕೆತ್ತಲಾಗಿದೆ. ಶಾಸನ ಅಲ್ಲಲ್ಲಿ ತ್ರುಟಿತಗೊಂಡಿದೆ. ಮೊದಲನೇ ಹಂತದಲ್ಲಿ ವೀರನು ಕೈಯಲ್ಲಿ ಉದ್ದವಾದ ಭರ್ಚಿಯನ್ನು ಎರಡು ಕೈಯಲ್ಲಿ ಹಿಡಿದು ಹುಲಿಯ ಬಾಯಿಗೆ ತಿವಿಯ್ಯುತ್ತಿರುವ ದೃಶ್ಯ ಕಾಣಬಹುದು. ವೀರನು ದಷ್ಟಪುಷ್ಟವಾಗಿದ್ದು ವೀರಗಚ್ಚೆ ಧರಿಸಿದ್ದಾನೆ. ತೋಳಲ್ಲಿ ಕಡಗ ಕಿವಿಯಲ್ಲಿ ಕುಂಡಲ ಧರಿಸಿದ್ದು ತಲೆಗೂದಲಿಗೆ ಸುತ್ತಲೂ ಹಣೆಗೆ ಹೊಂದಿಕೊಂಡಂತೆ ಪಟ್ಟಿಯನ್ನು ಧರಿಸಿದ್ದಾನೆ. ವೀರನ ಕಾಲ ಕೆಳಗೆ ಒಬ್ಬ ಮನುಷ್ಯ ಬಿದ್ದಿರುವ ಹಾಗೂ ಆ ವ್ಯಕ್ತಿಯ ಮೇಲೆ ಎಡಗಾಲಿನಿಂದ ತುಳಿದು ಹುಲಿಯೊಡನೆ ಹೋರಾಡುತ್ತಿರುವ ಹಾಗೆ ಹುಲಿಯು ಎರಡು ಹಿಂಗಾಲುಗಳ ಮೇಲೆ ನಿಂತು ಮುಂದಿನ ಎರಡು ಕಾಲುಗಳನ್ನು ಹಾಗೆ ಬಾಲವನ್ನು ಮೇಲೆಕ್ಕೆತ್ತಿ ವೀರನ ಮೇಲೆ ಆಕ್ರಮಣ ಮಾಡುತ್ತಿರುವಂತೆ ಚಿತ್ರಿಸಲಾಗಿದೆ.

ಎರಡನೇ ಹಂತದಲ್ಲಿ ಮಡಿದ ವೀರನನ್ನು ಮಂಟಪದಲ್ಲಿ ಕೂರಿಸಿ ಸ್ವರ್ಗಕ್ಕೆ ಸುರ ಕನ್ಯೆಯರು ಹೊತ್ತೊಯ್ಯುತ್ತಿರುವ ಹಾಗೆ ಮಂಟಪದ ಮೇಲ್ಭಾಗದಲ್ಲಿ ಎರಡು ಕೈಗಳಲ್ಲಿ ಹೂವಿನ ದಂಡೆಯನ್ನಿಡಿದಿರುವ ದೇವ ಕನ್ಯೆಯರು ಹಾರುತ್ತಿರುವಂತೆ ಚಿತ್ರಿಸಲಾಗಿದೆ. ಶಿಲ್ಪ ಬಹಳ ಮನಮೋಹಕವಾಗಿದ್ದು ಮಂಟಪದ ಕೆಳ ಭಾಗದಲ್ಲಿ ಎರಡು ದೊಡ್ಡ ಹೂವುಗಳು ಬಿದ್ದಿರುವಂತೆ ಕೆತ್ತನೆ ಮಾಡಲಾಗಿದೆ. ಮೂರನೇ ಹಂತದಲ್ಲಿ ಶಿವಲಿಂಗವನ್ನು ಯತಿಯು ಪೂಜಿಸುತ್ತಿರುವ ದೃಷ್ಯ, ಯತಿಯ ಹಿಂಭಾಗದಲ್ಲಿ ವೀರನು ಧ್ಯಾನಾಸಕ್ತನಾಗಿ ಕುಳಿತಿದ್ದು ಇವರ ಎದುರಿಗೆ ಮತ್ತೊಬ್ಬನ ಚಿತ್ರವನ್ನು ಚಿತ್ರಿಸಲಾಗಿದ್ದು ವೀರಗಲ್ಲು ಒಡೆದು ಹೋಗಿರುವುದರಿಂದ ಆ ಚಿತ್ರವನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗಿತ್ತಿಲ್ಲ. ಕಾಲಮಾನ ದೃಷ್ಟಿಯಿಂದ ಈ ವೀರಗಲ್ಲು ಕಿ.ಶ. ೧೩-೧೪ನೇ ಶತಮಾನಕ್ಕೆ ಸೇರಿದ್ದಾಗಿದೆ.

ಚಿತ್ರದುರ್ಗ ತಾಲ್ಲೂಕು ಸಿರಿಗೆರೆ ಗ್ರಾಮದಲ್ಲಿ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳಿವೆ. ಜನರು ಇವುಗಳಿಗೆ ಗುಡಿಯನ್ನು ನಿರ್ಮಿಸಿ ಇಂದಿಗೂ ಪೂಜಿಸುತ್ತಾರೆ. ಇಲ್ಲಿ ಒಂದು ಕಥೆ ಪ್ರಸ್ತಾಪದಲ್ಲಿದೆ. ಗಾದರಿ ಪಾಲನಾಯಕ ಎಂಬುವನು ಚಳ್ಳಕೆರೆ ತಾಲ್ಲೂಕು ನನ್ನಿವಾಳ ಗ್ರಾಮದಿಂದ ಗೋವುಗಳ ಮೇವಿಗಾಗಿ ಮಿಂಚೇರಿ ದಟ್ಟ ಅರಣ್ಯ ಪ್ರದೇಶಕ್ಕೆ ಬರುತ್ತಾನೆ. ಇಲ್ಲಿ ಹುಲಿಗಳು ಸಹಾ ವಾಸವಾಗಿರುತ್ತವೆ. ಹೀಗಾಗಿ ಹುಲಿಗಳಿಗೂ ಗಾದರಿ ಪಾಲನಾಯಕನಗೂ ಪರಸ್ಪರರು ಸ್ನೇಹದಿಂದಿರುವಂತೆ ಒಪ್ಪಂದವಾಗುತ್ತದೆ. ಹೀಗಾಗಿ ದನಗಳು, ಹುಲಿಗಳು ಅನ್ಯೋನ್ಯವಾಗಿ ಜೀವಿಸುತ್ತಿರುತ್ತವೆ. ಒಂದು ದಿನ ಗಾದರಿ ಪಾಲನಾಯಕನ ಬಾವಮೈದುನರು ಈ ಹಟ್ಟಿಗೆ ಬರಲಾಗಿ ಹುಲಿ ಮತ್ತು ಕರುಗಳು ಆಟವಾಡುತ್ತಿರುವುದನ್ನು ನೋಡಿ ಒಪ್ಪಂದದ ಅರಿವಿಲ್ಲದೆ ತಪ್ಪು ಗ್ರಹಿಕೆಯಿಂದ ಹುಲಿ ಮರಿಗಳನ್ನು ಕೊಂದು ಹಾಕುತ್ತಾರೆ. ಸಂಜೆ ಗಾದರಿ ಪಾಲನಾಯಕನು ಹಟ್ಟಿಗೆ ಹಿಂತಿರುಗಿ ಬಂದು ನೋಡಿದಾಗ ಹುಲಿ ಮರಿಗಳು ಸತ್ತು ಬಿದ್ದಿರುವುದನ್ನು ಕಂಡು ವ್ಯಥೆ ಪಟ್ಟು ಬಾವಮೈದುನರಿಂದ ನಡೆದ ವಿಷಯ ತಿಳಿದು ಬರುತ್ತದೆ. ಇತ್ತಾ ಹುಲಿಗಳು ಸಹಾ ಬರಲಾಗಿ ತನ್ನ ಮರಿಗಳು ಸತ್ತು ಬಿದ್ದಿರುವುದನ್ನು ನೋಡಿ ಮನುಷ್ಯರ ಕ್ರೂರತನದಿಂದ ಸಿಟ್ಟಾಗಿ ಗಾದರಿಪಾಲನಾಯಕನೊಡನೆ ಹೋರಾಟ ಮಾಡುತ್ತವೆ. ಇದರಲ್ಲಿ ಗಾದರಿಪಾಲನಾಯಕನು ಮತ್ತು ಹುಲಿಗಳು ಮರಣ ಹೊಂದುತ್ತವೆಂಬುದು ಕಥೆಯಲ್ಲಿದೆ. ಹೀಗೆ ಮರಣ ಹೊಂದಿದ ಗಾದರಿಪಾಲನಾಯಕ ಹೆಂಡತಿಯರು ಸಹ ಸಹಗಮನ ಆಚರಿಸುತ್ತಾರೆ ಹೀಗಾಗಿ ಇಲ್ಲಿ ವೀರಗಲ್ಲು ಮಾಸ್ತಿಗಲ್ಲುಗಳನ್ನು. ಈ ವಂಶದವರು ಇಂದಿಗೂ ಸಹ ವೀರ ಮತ್ತು ಸತಿಯರನ್ನು ದೈವತ್ವಕ್ಕೆ ಹೋಲಿಸಿ ಪೂಜಿಸುತ್ತಾರೆ.

ಹೀಗೆ ಹುಲಿಯ ಜೊತೆ ಹೋರಾಡುವ ಶಿಲ್ಪಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ವೀರಗಲ್ಲುಗಳಲ್ಲಿ ದೊರಕಿವೆ. ಇವುಗಳಲ್ಲಿ ಬಹಳಷ್ಟು ವೀರಗಲ್ಲುಗಳು ಏಕತಾನತೆಯಿಂದ ಕೂಡಿದ್ದು ವೀರನ ಭಂಗಿ ಹುಲಿಯ ಗಾತ್ರ ಶಿಲ್ಪ ಸೂಕ್ಷ್ಮತೆಯಲ್ಲಿ ವ್ಯತ್ಯಾಸವಿದೆ. ಹುಲಿ ಹೋರಾಟದ ಸಂದರ್ಭವನ್ನು ಸಮರ್ಥವಾಗಿಯೇ ಆ ಶಿಲ್ಪಗಳು ಧ್ವನಿಸುತ್ತವೆ.

ಒಂದು ಜಾನಪದ ಗೀತೆಯಲ್ಲಿ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಯರ್ರಪ್ಪ ಎಂಬುವವನು ಹುಲಿಯೊಡನೆ ಹೋರಾಟ ಮಾಡಿದ ಬಗ್ಗೆ ತಿಳಿದು ಬರುತ್ತದೆ. ಯರ್ರಪ್ಪ ಈ ಭಾಗದ ಗೊಲ್ಲರ ಆರಾಧ್ಯ ದೈವ, ಈತನ ವೃತ್ತಿ ಪಶುಪಾಲನೆ. ಬಗ್ಗಲಡು ಎಂಬ ಕಡೆ ಹುಲ್ಲು ನೀರಿರುವ ಜಾಗದಲ್ಲಿ ಗೂಡು ತಿರುವಿ ದನಕಾಯುತ್ತಿದ್ದ ಈತನ ಪರಾಕ್ರಮಕ್ಕೆ ಶರಣಾಗಿ ಚುಕ್ಕೆ ಬಣ್ಣದ ಹುಲಿಗಳೇ ಬಂದು ಶರಣು ಮಾಡುತ್ತಿದ್ದವು ಎಂಬುದು ವೀರಗೀತೆಯಿಂದ ತಿಳಿದು ಬರುತ್ತದೆ. ಈ ವೀರಗೀತೆಯ ವೀರನ ಹೋರಾಟದ ಕೆಲವು ಸಾಲುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.



ಹೊಳಲ್ಕೆರೆ ತಾ. ಕೋಟೆಹಾಳ್ ಹುಲಿ ಬೇಟೆ ವೀರಗಲ್ಲು



ಚಳ್ಳಕೆರೆ ತಾ. ಸಾಣಿಕೆರೆ ಕೆರೆ ಏರಿ ಮೇಲಿರುವ ಹುಲಿ ಬೇಟೆ ಶಿಲ್ಪ

'ಬಿದ್ದನಲ್ಲಿ ಈರ ಬಿಳಿಯಂಗಿ ಮೇಲಾಗಿ
ವಜ್ಜುರದ ಬಾಕು ಅಡಿಯಾಗಿ- ಮಡಿದ
ಉರುವ ಸೂರಿದನ ಇದಿರಾಗಿ
ಮಡುದನಲ್ಲ ಈರ ಇಡಿದಂಬು ಮೇಲಾಗಿ
ಇಡಿದಿರುವ ಬಾಕು ಅಡಿಯಾಗಿ- ಮಡಿದ
ಸೂರಿದಗೆ ಇದಿರಾಗಿ
ಬಿದ್ದನಲ್ಲ ಈರ ಬಿದ್ದನಲ್ಲ ಸೂರ
ಬಿದ್ದ ಸಂದ ಮಗನೀರ–ವೀರಣ್ಣ
ಬಿದ್ದು ಕೀರುತಿಯ ಪಡೆದಾನೆ'[೭]

ಆಕಾರ ಗ್ರಂಥಗಳು

೧. Altekar.A.S ; The Coinage of Gupta Empire plate no. 12.
೨. ನಾಗೇಗೌಡ ಹೆಚ್.ಎಲ್., ಪ್ರವಾಸಿ ಕಂಡ ಇಂಡಿಯಾ ಭಾಗ–೩, ಪುಟ ೪೦೪.
೩. ರಾಮದಾಸರೆಡ್ಡಿ.ಎಸ್.ಜಿ., ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿಕ.
೪. ಪುನರೋಕ್ತಿ.
೫. ಮರಿಕುಂಟೆ ತಿಪ್ಪೇಸ್ವಾಮಿ., ಮೊಳಕಾಲ್ಮುರು ದರ್ಶನ.
೬. ಡಾ. ವಿರುಪಾಕ್ಷಿ ಪೂಜಾರಹಳ್ಳಿ, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು.
೭. ಕೃಷ್ಣಮೂರ್ತಿ ಹನೂರು, ಜನಪದ ವೀರಗೀತೆಗಳು, ಪು. ೧೬೩ ಮತ್ತು ೧೭೦.

೬೩

ಪರಸನಹಳ್ಳಿಯಲ್ಲಿ ದೊರೆತ ಕ್ರಿ.ಶ. ೧೧ನೇ ಶತಮಾನದ ಗಣೇಶ ಹಾಗೂ ವಿಷ್ಣು ಶಿಲ್ಪಗಳು

ನಿಂಗನಗೌಡ ಹ. ದೇಸಾಯಿ (ಹನಿ) ಪರಸನಹಳ್ಳಿ*

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಬಹುತೇಕ ಹಳ್ಳಿಗಳಲ್ಲಿ ಶಾಸನಗಳು, ಶಿಲ್ಪಗಳು, ದೇವಾಲಯಗಳು ಅಥವಾ ದೇವಾಲಯಕ್ಕೆ ಸಂಬಂಧಿಸಿದ ಐತಿಹಾಸಿಕ ಅವಶೇಷಗಳು ಹೇರಳವಾಗಿ ನೋಡಸಿಗುತ್ತವೆ. ಹೀಗೆ ಐತಿಹಾಸಿಕ ವಿಗ್ರಹಗಳು ದೊರೆತ ಗ್ರಾಮಗಳಲ್ಲಿ ಪ್ರಾಚೀನ ದೇವಾಲಯಗಳು ಹಾಗೂ ಶಾಸನಗಳು ಲಭ್ಯವಾಗದಿದ್ದರೆ, ದೊರೆತ ವಿಗ್ರಹಗಳ ಇತಿಹಾಸದ ಬಗ್ಗೆ ಖಚಿತಪಡಿಸಿಕೊಳ್ಳುವದು ತುಂಬಾ ಕಷ್ಟಕರ. ಇದಕ್ಕೆ ಉತ್ತಮ ಉದಾಹರಣೆ ಎಂದರೆ, ಸುರಪುರ ತಾಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೫ ಕಿ.ಮೀ. ದೂರದಲ್ಲಿ, ಕೆಂಭಾವಿಯಿಂದ ಪೂರ್ವಕ್ಕೆ ೫ ಕಿ.ಮೀ. ಸಮೀಪವಿರುವ ಪರಸನಹಳ್ಳಿ ಗ್ರಾಮದಲ್ಲಿ ದೊರೆತಿರುವ ಗಣೇಶ ಹಾಗೂ ವಿಷ್ಣು ಶಿಲ್ಪಗಳು.

ಪರಸನಹಳ್ಳಿ ಗ್ರಾಮದ ಕುರಿತು ಈಗಾಗಲೇ ಪ್ರಕಟವಾಗಿರುವ ಈ ಭಾಗದ ಯಾವುದೇ ಶಾಸನಗಳಲ್ಲಿ ಉಲ್ಲೇಖಗಳು ಕಂಡುಬರುವದಿಲ್ಲ. ಅಲ್ಲದೇ ಸಧ್ಯ ಈ ಗ್ರಾಮದಲ್ಲಿ ಯಾವುದೇ ಹಳೆಯ (ಐತಿಹಾಸಿಕ) ದೇವಾಲಯ ಅಥವಾ ದೇವಾಲಯಕ್ಕೆ ಸಂಬಂಧಿಸಿದ ಅಧಿಷ್ಠಾನ ಭಾಗ, ಬೋದುಗೆ, ಬಾಗಿಲುವಾಡ, ಕಂಬಗಳು, ಹಾಗೂ ಭುವನೇಶ್ವರಿ ಭಾಗಗಳು ಯಾವುದೂ ಕಾಣುವುದಿಲ್ಲ. ಕುತೂಹಲಕಾರಿ ಸಂಗತಿ ಎಂದರೆ, ಕ್ರಿ.ಶ. ೧೧ನೇ ಶತಮಾನಕ್ಕೆ ಸೇರಿದ ವಿಷ್ಣು, ಗಣೇಶ ಎರಡು ಶಿಲ್ಪಗಳು ಗ್ರಾಮದ ಆರಾದ್ಯ ದೇವರಾದ ಶ್ರೀ ವರಹಳ್ಳೇರಾಯ (ಹನುಮಂತ ದೇವರ) ದೇವಸ್ಥಾನದ ಪರಿಸರದಲ್ಲಿ ಕಂಡುಬರುತ್ತವೆ. ಐತಿಹಾಸಿಕ ದೇವಾಲಯಗಳಿಲ್ಲದ ಊರಲ್ಲಿ ಈ ಶಿಲ್ಪಗಳು ಎಲ್ಲಿಂದ ಬಂದವು, ತಂದಿರಬಹುದು ಎಂಬ ಪ್ರಶ್ನೆ ನಮ್ಮನ್ನು ಬಹುದಿನಗಳಿಂದಲೂ ಕಾಡಿದ್ದು, ಈ ಪ್ರಶ್ನೆಗಳ ಜಾಡಿನಲ್ಲಿ ಹುಡುಕಿಕೊಂಡು ಹೋದಾಗ, ಈ ಕೆಳಗಿನ ಮಹತ್ವದ ಅಂಶಗಳು ಬೆಳಕಿಗೆ ಬಂದವು.

ವಿಷ್ಣು ವಿಗ್ರಹ : ಕಪ್ಪು ಕಲ್ಲಿನಲ್ಲಿ ಕೆತ್ತಿರುವ ಈ ವಿಗ್ರಹ ಸ್ಥಾನಿಕ ಸಮ ಭಂಗಿಯಲ್ಲಿದೆ. ಸುಮಾರು ಎರಡು ಅಡಿ ಎತ್ತರ, ಒಂದೂವರೆ ಅಡಿ ಅಗಲವಿರುವ ಈ ವಿಗ್ರಹದ ಮುಖ ಶಾಂತ ರೂಪದಲ್ಲಿದ್ದು, ಕೊರಳಲ್ಲಿ ಕಂಠೀಹಾರ, ಆಕರ್ಷಕ ಕಿವಿಯೊಲೆ, ಉದರ ಬಂಧ, ಕಾಲ್ಗಡಗ ಮುಂತಾದ ಆಭರಣಗಳಿಂದ ಸರ್ವಾಲಂಕೃತವಾಗಿದ್ದು ಮೇಲೆ ಕಿರೀಟಮುಕುಟ ಹೊಂದಿರುವ ವಿಗ್ರಹದ ಬಲಭಾಗದ ಕೆಳಗೆ ವಾಹನವಾದ ಗರುಡ ಅಂಜಲಿ ಮುದ್ರೆಯಲ್ಲಿ ಕುಳಿತ ಶಿಲ್ಪವಿದೆ. ವಿಗ್ರಹಕ್ಕೆ ನಾಲ್ಕು ಕೈಗಳಿದ್ದು, ಮುಂದಿನ ಬಲಕೈಗಳಲ್ಲಿ ಚಕ್ರ, ಅಭಯ ಹಸ್ತ, ಹಿಂದಿನ ಕೈಗಳಲ್ಲಿ ಶಂಖ ಇದ್ದು ಇನ್ನೊಂದು ಕೈ ಭಗ್ನಗೊಂಡಿದೆ, ವಿಗ್ರಹದ ಮೈತುಂಬ ಎಣ್ಣೆ ಹಾಕಿದ್ದರಿಂದ ವಿಗ್ರಹದ ಲಕ್ಷಣ ಸ್ಪಷ್ಟವಾಗಿ ಕಾಣುವದಿಲ್ಲ. ವಿಗ್ರಹದ ಎಡಗಡೆ ಕೆಳಗೆ ಚಾಮರ ಧಾರಿ ಶಿಲ್ಪ ಕೂಡ ಇದೆ.

ಗಣೇಶ ವಿಗ್ರಹ: ಈ ವಿಗ್ರಹ ಕಪ್ಪು ಕಲ್ಲಿನಲ್ಲಿ ಕೆತ್ತಿದ್ದು ಆಸೀನ ಭಂಗಿಯಲ್ಲಿದೆ. ವಿಗ್ರಹ ಸಂಪೂರ್ಣ ಭಗ್ನಗೊಂಡಿದ್ದು ಹೊಟ್ಟೆ ಮತ್ತು ಕಾಲುಗಳು ಅಷ್ಟೇ ಇವೆ. ರುಂಡ ಹಾಗೂ ಕೈಗಳು ಭಗ್ನಗೊಂಡಿವೆ. ಕೆಳಗಡೆ ಗಣೇಶನ ವಾಹನವಾಗಿರುವ ಇಲಿಯ ಚಿಕ್ಕ ಅಸ್ಪಷ್ಟವಾಗಿ ಕೆತ್ತಿದ ಶಿಲ್ಪವಿದೆ.

ಹೋಲಿಕೆ: ಮೇಲೆ ಹೇಳಿದ ವಿಷ್ಣು, ಗಣೇಶ ವಿಗ್ರಹಗಳಿಗೂ ಪರಸನಹಳ್ಳಿ ಗ್ರಾಮದಿಂದ ಸುಮಾರು ಮೂರು ಕಿ.ಮೀ.ದೂರದಲಿರುವ ನಡಕೂರ ಗ್ರಾಮದಲ್ಲಿ ಪತ್ತೆಯಾಗಿರುವ ಕ್ರಿ.ಶ. ೧೧ನೇ ಶತಮಾನದ ದೇವಾಲಯದ ಅದಿಷ್ಠಾನ ಭಾಗ ಹಾಗೂ ಅಲ್ಲಿರುವ ಇತರ ಶಿಲ್ಪಗಳಿಗೂ ಸಾಮ್ಯತೆ ಇದೆ. ನಡಕೂರ ಗ್ರಾಮದ ಬಗ್ಗೆ ಕ್ರಿ.ಶ. ೧೦೫೪ ಕೆಂಭಾವಿ ಶಾಸನದಲ್ಲಿ (ರೇವಣಸಿದ್ದೇಶ್ವರ ಆವರಣದಲ್ಲಿರುವ) ನಡಕೂರ ಎಂಬ ಉಲ್ಲೇಖ ದೊರೆಯುತ್ತವೆ. (ಹನುಮಾಕ್ಷಿ ಗೋಗಿಯವರ ಸುರಪುರ ತಾಲೂಕಿನ ಶಾಸನಗಳು ಕೃತಿಯಲ್ಲಿ) ಇದರಿಂದ ಆ ಗ್ರಾಮ ಪ್ರಾಚಿನ ಕಾಲದ್ದೆಂಬ ಐತಿಹಾಸಿಕ ಗ್ರಾಮವೆಂದು

* ಸಹ ಶಿಕ್ಷಕರು, ಸರಕಾರಿ ಬಾಲಕಿಯರ ಪ್ರೌಢಶಾಲೆ, ಕೆಂಭಾವಿ.



ಪರಸನಹಳ್ಳಿಯ ಶ್ರೀ ವರಹಳ್ಳೇರಾಯ ದೇವಾಲಯದಲ್ಲಿ ದೊರೆತಿರುವ ಕ್ರಿ.ಶ 11 ನೇ ಶತಮಾನದ ಗಣೇಶ ಹಾಗೂ ವಿಷ್ಣು, ಶಿಲ್ಪಗಳು.

ಸ್ಪಷ್ಟವಾಗುತ್ತದೆ. ಅಂದರೆ ಮೇಲಿನ ಎಲ್ಲ ವಿವರಗಳನ್ನು ನೋಡಿದಾಗ ಐತಿಹಾಸಿಕ ನಡಕೂರ ರಾಮಲಿಂಗೇಶ್ವರ ದೇವಾಲಯದ ಅದಿಷ್ಠಾನ ಭಾಗ ಹಾಗೂ ಗಣೇಶ, ನಂದಿ, ಶಿವಲಿಂಗ ವಿಗ್ರಹಗಳು ನಡಕೂರ ಗ್ರಾಮದಲ್ಲಿ ಇರುವುದಕ್ಕೂ ಪರಸನಹಳ್ಳಿ ಗ್ರಾಮದಲ್ಲಿ ಯಾವುದೇ ಐತಿಹಾಸಿಕ ದೇವಾಲಯ ಅಥವಾ ಅದಕ್ಕೆ ಸಂಬಂಧಿಸಿದ ಭಾಗಗಳು ಇಲ್ಲದ್ದನ್ನು ಗಮನಿಸಿದಾಗ, ನಡಕೂರದಲ್ಲಿರುವ ಶಿಲ್ಪಗಳಿಗೂ ಪರಸನಹಳ್ಳಿ ಗ್ರಾಮದಲ್ಲಿರುವ ಶಿಲ್ಪಗಳಿಗೂ ಕೆತ್ತನೆಯ ಶೈಲಿಯ ದೃಷ್ಟಿಯಿಂದ ತುಂಬಾ ಸಾಮ್ಯತೆ ಕಂಡು ಬರುತ್ತದೆ. ಅಲ್ಲದೆ ಪರಸನಹಳ್ಳಿ ಗ್ರಾಮದ ಬೆಕ್ಕಲ ಗುಡ್ಡದಲ್ಲಿರುವ ಗುರುಲಿಂಗಪ್ಪ ಎಂದು ಸ್ಥಳೀಯರು ಕರೆಯುವ ಶಿವನ ರುಂಡ ಮಾತ್ರ ಇರುವ ವಿಗ್ರಹ ಕೂಡ ನಡಕೂರ ಗ್ರಾಮದ ವಿಗ್ರಹಗಳಿಗೆ ಹೋಲಿಕೆಯಾಗುತ್ತದೆ. ಆದರೂ ಇನ್ನೂ ಹೆಚ್ಚಿನ ಸಂಶೋಧನೆ ಆಗಬೇಕಾಗಿದೆ. ಶ್ರೀ ವರಹಳ್ಳೇರಾಯ ದೇವಸ್ಥಾನದಲ್ಲಿ ಇತ್ತಿಚಿನ ನಾಗಶಿಲ್ಪಗಳೂ ಕೂಡಾ ಇವೆ.

ಈ ಐತಿಹಾಸಿಕ ನಡಕೂರ ಗ್ರಾಮದ ಶ್ರೀ ರಾಮಲಿಂಗೇಶ್ವರ ದೇವಾಲಯ ಕಾಲಾಂತರದಲ್ಲಿ ಹಾಳಾಗಿ ಅಥವಾ ದಾಳಿಗೆ ತುತ್ತಾಗಿ ನಶಿಸಿರಬಹುದು. ಅಲ್ಲಿಯ ವಿಗ್ರಹಗಳು ಅಕ್ಕಪಕ್ಕದ ಗ್ರಾಮಗಳಿಗೆ ತಂದು ಪೂಜೆಗೆ ಅವಕಾಶ ಕಲ್ಪಿಸಿರಬಹುದೆಂದು ಊರ ಹಿರಿಯರು ಹೇಳುತ್ತಾರೆ. ನಡಕೂರ ಗ್ರಾಮದ ದೇವಾಲಯ ಸಂಪೂರ್ಣ ಹಾಳಾದರೂ, ಅಲ್ಲಿಯ ವಿಗ್ರಹಗಳು ಇಂದು ಪೂಜೆಗೆ ಅರ್ಹವಾಗಿವೆ. ಎರಡೂ ಗ್ರಾಮಕ್ಕೆ ಸಂತೋಷ ತರುವಂಥದ್ದೇನೆಂದರೆ, ಸಾಮಾನ್ಯವಾಗಿ ದೇವಾಲಯ ಹಾಳಾದಾಗ ವಿಗ್ರಹಗಳನ್ನು ಸಾರ್ವಜನಿಕ ಕಟ್ಟೆಗೊ ಅಥವಾ ತಿಪ್ಪೆ ಗುಂಡಿಗೊ ಆಸರೆಯಾಗಿಟ್ಟಿರುವುದನ್ನು ನೋಡಿದ್ದೇವೆ. ಇವೆಲ್ಲವುಗಳನ್ನು ನೋಡಿದರೆ ಮೇಲಿನ ವಿಗ್ರಹಗಳು ಭಾಗ್ಯಶಾಲಿಯಲ್ಲವೆ ? ಆದರೂ ನಡಕೂರದಲ್ಲಿ ರಾಮಲಿಂಗೇಶ್ವರ ದೇವಾಲಯ ಸಂಪೂರ್ಣ ಹಾಳಾಗಲು ಏನು ಕಾರಣ ಎನ್ನಲು ಮುಖ್ಯ ಆಧಾರಗಳು ದೊರೆತಿಲ್ಲ. ಈ ಬಗ್ಗೆ ಹೆಚ್ಚಿನ ಸಂಶೋಧನೆ ಅಗತ್ಯವಾಗಿದೆ.

೬೪

ಬಾದಾಮಿ ತಾಲೂಕಿನ ಗುಳೇದಗುಡ್ಡ ಹತ್ತಿರದ ಪರ್ವತಿಯಲ್ಲಿ ದಶಾವತಾರಿ ವಿಷ್ಣು, ಕಂಬಗಳ ಉಬ್ಬು ಶಿಲ್ಪಗಳು

ಮಹಾದೇವ ಮಾ. ಜಗತಾಪ*

ಬಾದಾಮಿಯ ಪೂರ್ವ ದಿಕ್ಕಿನಲ್ಲಿರುವ ಗುಳೇದಗುಡ್ಡದ ದಕ್ಷಿಣ ಭಾಗದಲ್ಲಿ ಪರ್ವತದ ಮೇಲೆ ಪರ್ವತಿ ಎಂಬ ಚಿಕ್ಕ ಹಳ್ಳಿ. ಆ ಹಳ್ಳಿಯಲ್ಲಿ ಪ್ರಾಯಶಃ ಹದಿನೆಂಟನೆಯ ಶತಮಾನದಲ್ಲಿ ನಿರ್ಮಾಣಗೊಂಡ ಸರ್ವೋತ್ಕೃಷ್ಟವಾದ ವಿಷ್ಣುವಿನ ಮೂರಡಿ ಎತ್ತರದ ವಿಷ್ಣುಶಿಲ್ಪ ಇದೆ. ಇದು ಭಗ್ನಕೊಂಡಿರುವುದಕ್ಕೆ ಪೂಜೆಗೆ ಅರ್ಹವಾದದ್ದಲ್ಲವೆಂದು ಊರಿನ ಅಶ್ವತ್ಥವೃಕ್ಷದ ಕೆಳಗೆ ಪ್ರತಿಷ್ಠಾಪಿಸಲಾಗಿದೆ. ಅದರ ಹತ್ತಿರವೆ ಸ್ತಂಭ ಭಿತ್ತಿ ಚಿತ್ರಗಳ ಉಬ್ಬು ಶಿಲ್ಪಗಳುಳ್ಳ ಚೌಕಾಕಾರದ ಸ್ತಂಭವೂ ಇದೆ. ವಿಷ್ಣುವಿನ ಮೂರ್ತಿಯ ಪ್ರಭಾವಳಿಯಲ್ಲಿರುವ ದಶಾವತಾರದ ಸುಂದರ ಉಬ್ಬು ಶಿಲ್ಪಗಳ ಹಾಗೂ ಸ್ತಂಭದಲ್ಲಿರುವ ಜಾನಪದ ವಾದ್ಯ ಸಂಯೋಜನೆಗಳನ್ನು ಅರಿಯುವುದೆ ಪ್ರಸ್ತುತ ಸಂಶೋಧನೆಯ ಉದ್ದೇಶವಾಗಿದೆ. ವಿಷ್ಣುಶಿಲ್ಪ ಸಮೀಪದ ಶೆಲ್ಲಿಕೇರಿ ಕಪ್ಪು ಮೃದುಶಿಲ್ಪದಲ್ಲಿ ನಿರ್ಮಿಸಲಾಗಿದೆ. ಆದರೆ ಚೌಕಾಕಾರದ ಸ್ತಂಭವು ಗಟ್ಟಿ ಶಿಲೆ ಕಂದುಬಣ್ಣವಾಗಿದೆ.

ವಿಷ್ಣುವಿನ ಮೂರ್ತಿಯ ಕ್ರಿ.ಶ. ೧೫ ಅಥವಾ ೧೬ನೇ ಶತಮಾನದಲ್ಲಿ ನಿರ್ಮಾಣವಾದದ್ದಾಗಿರಬಹುದು. ಬೇಲೂರಿನ ಶಿಲಾ ಬಾಲಿಕೆಯರ ನಯ ನಾಜೂಕು, ಕಪ್ಪುಶಿಲೆ ಎಲ್ಲವನ್ನು ಹೋಲುತ್ತದೆ. ಕರ್ನಾಟಕ ಲಲಿತಕಾಲಾ ಅಕಾಡೆಮಿಯು ಹೊರತಂದಿರುವ ಶಿಲ್ಪಕಲಾ ಪ್ರಪಂಚದಲ್ಲಿ ಶ್ರೀ ಬಿ. ವೆಂಕೋಬರಾವ್ ಅವರು ಉಲ್ಲೇಖಿಸಿದಂತೆ ಜಗತ್ತಿನಲ್ಲಿ ಸೃಷ್ಠಿ ಸ್ಥಿತಿ ಲಯಗಳಿಗೆ ಕಾರಣವಾದ ಪರಮಾತ್ಮನೊಬ್ಬನಿರುವನೆಂದು ಅವನನ್ನು ಪ್ರತಿಯೊಬ್ಬ ಮನುಷ್ಯನು ಪೂಜಿಸಬೇಕೆಂದು ಶಾಸ್ತಗಳು ಸಾರಿದವು. ನಿರಾಕಾರನೂ, ಇಂದ್ರಿಯಾತೀತನೂ ಆದ ಭಗವಂತನನ್ನು ಆರಾಧಿಸುವುದು ಜನಸಾಮಾನ್ಯರಿಗೆ ಸಾಧ್ಯವಿಲ್ಲವೆಂದು ತಿಳಿದು ಭಗವಂತನ ಅನಂತ ಗುಣಗಳು ಅವರವರ ಭಾವನೆಗಳಿಗೆ ತಕ್ಕಂತೆ ಜನರ ಮನಸ್ಸಿಗೆ ಹಿಡಿಯುವಂತೆ ಆಕಾರವನ್ನು ಕಲ್ಪಿಸಿ ಧ್ಯಾನಶ್ಲೋಕಗಳನ್ನು ರಚಿಸಿ, ಈ ಧ್ಯಾನ ಶ್ಲೋಕಗಳಿಗೆ ಅನುಸಾರವಾಗಿ ವಿಗ್ರಹಗಳನ್ನು ಮಾಡಿಕೊಂಡು ಜನಗಳೆ ಪೂಜಿಸಬೇಕೆಂದು; ಪೂಜಿಸಹುದೆಂದು ಜ್ಞಾನಿಗಳು ಉಪದೇಶ ಮಾಡಿದರು. ಅದರಂತೆಯೇ "ಅಜ್ಞಾನಾಂ ಭಾವನಾರ್ಥಾಯ ಪ್ರತಿಮಾಃ ಪರಿಕಲ್ಪಿತಾ" ಎಂದು ಉಪನಿಷತ್ತಿನಲ್ಲಿ ಹೇಳಿದೆ.

ಕಲ್ಲಿನಲ್ಲಿ ಸೃಷ್ಟಿಸಿದ ಅಚಲ ವಿಗ್ರಹ ಇದಾಗಿದೆ. ಯೋಗ ಮುದ್ರೆಗಳನ್ನು ಹೊಂದಿದ ತಾತ್ವಿಕ ಮೂರ್ತಿಯ ಇದಾಗಿದೆ. ಚಿತ್ರಶಿಲ್ಪ ಥ್ರೀಡೈಮೆನ್-ಶೆನ್ (ತ್ರಿವಳಿ) ದ್ದಾಗಿದೆ. ಈ ಸರಳ ಸುಂದರ ಅಲಂಕಾರಿಕ ಶೈಲಿಯ ಸುಂದರ ಮೂರ್ತಿಯ ಜನರ ಮನಸ್ಸನ್ನು ಆಕರ್ಷಿಸುತ್ತದೆ.

ವಿಷ್ಣುವಿನ ಕೈಯಲ್ಲಿ ಶಂಖ ಚಕ್ರ, ಆಯುಧಗಳಿವೆ. ತಲೆಯಲ್ಲಿ ಕಿರೀಟ, ಕೇಶ ಬಂಧ, ಕಿವಿಯಲ್ಲಿ ಕುಂಡಲ ಕತ್ತಿನಲ್ಲಿ ಹಾರ ತೋಳಿನಲ್ಲಿ ಕೈಯಲ್ಲಿ ಕಂಕಣ ಹೊಟ್ಟೆಯ ಸುತ್ತ ಉದರ-ಬಂಧ ಸೊಂಟದಲ್ಲಿ ಕಟಿ ಬಂಧ, ಯಜ್ಞೋಪವಿತ, ಕಾಲಿನಲ್ಲಿ ನೂಪುರ ಸಮಪಾದದಲ್ಲಿ ನಿಂತಿರುವ ವಿಷ್ಣುವಿನ ವಿಗ್ರಹ ಇದಾಗಿದೆ.

ಈ ವಿಷ್ಣುವಿನ ಹಿಂಬದಿಗೆ ಅಲಂಕಾರಿಕ ಪವಳಿಯ ಬಳ್ಳಿಯ ಅಲಂಕಾರದೊಂದಿಗೆ ಪ್ರಾರಂಭವಾಗಿ ದುಂಡಾದ ಆಕಾರದಲ್ಲಿ ಮತ್ಸ್ಯ, ಕೂರ್ಮ ವರಹಾ ನರಸಿಂಹ, ವಾಮನ, ರಾಮ, ಕೃಷ್ಣ, ಪರಶುರಾಮ, ಬುದ್ಧ, ಕಲ್ಕಿ ತದನಂತರ ಅಲಂಕಾರಿಕ ಮಕರ ತೋರಣದಿಂದ ಕೂಡಿದೆ.

ಮತ್ಸ್ಯಾವತಾರದಲ್ಲಿ ಮೀನಿನ ಕಣ್ಣು ಬಾಯಿ ಹಾಗೂ ಅಕ್ಕ-ಪಕ್ಕಕ್ಕೆ ನೀರಿನಲ್ಲಿ ಈಜಲು ಸಹಾಯವಾಗುವ ರೆಕ್ಕೆಗಳನ್ನು ಮತ್ತು ಹಿಂಬದಿಗೆ ಇರುವ ರೆಕ್ಕೆ ನೈಜವಾಗಿ ಚಿತ್ರಿಸಿದ್ದಾಗಿದೆ. ಮೀನಿನ ಮೈಮೇಲಿನ ಸೌಂದರ್ಯವನ್ನು ಸಹಿತ ಶಿಲ್ಪದಲ್ಲಿ ತೋರಿಸುವಲ್ಲಿ ಕಲಾವಿದ ಸಫಲನಾಗಿದ್ದಾನೆ.

* ಚಿತ್ರಕಲಾ ಶಿಕ್ಷಕ, ವೃತ್ತಿ ಶಿಕ್ಷಕ, ವೆಂಕಟೇಶ ಕನ್ನಡ ಮಾಧ್ಯಮ ಪ್ರೌಢಶಾಲೆ, ಗುಳೇದಗುಡ್ಡ-೫೮೭೨೦೩.



ಕೂರ್ಮಕ್ಕೆ ಬಳಸಿಕೊಂಡಂತೆ ದುಂಡಾದ ಭಾಗವನ್ನು ಮಾಡದೆ ಸ್ವಲ್ಪ ದೀರ್ಘವೃತ್ತಾಕಾರದ ಸ್ಥಳವನ್ನು ಬಳಸಿಕೊಂಡಿದ್ದು ಕಲಾವಿದನ ಜಾಣ್ಮೆ ಹಾಗೂ ಸೌಂದರ್ಯಪ್ರಜ್ಞೆಯನ್ನು ಎತ್ತಿ ತೋರುತ್ತದೆ.

ಕೂರ್ಮಾವತಾರದ ಶಿಲ್ಪ ನೈಜವಾಗಿದ್ದು ವಾಸ್ತವದ ಆದಿಯ ಹಾಗೆ ಭಾಸವಾಗುವಷ್ಟು ಸುಂದರವಾಗಿ ಶಿಲ್ಪ ರಚಿಸಲಾಗಿದೆ. ಅಲಂಕಾರ ಪಟ್ಟಿಯನ್ನು ಸ್ವಲ್ಪ ಒಳಗಡೆಗೆ ಬಾಗಿಸಿ ವರಹ ಅವತಾರದ ಶಿಲ್ಪವನ್ನು ಕೆತ್ತಿದ್ದಾರೆ. ನಾಲ್ಕು ಕಾಲು, ಎರಡು ಕಿವಿ, ಬಾಲ, ಕೋರೆ ಹಲ್ಲು ಎಲ್ಲವೂ ಸೂಕ್ಷ್ಮ ಕೆಲಸವಾಗಿದೆ. ವರಹದ ಹಿಂದುಗಡಗೆ ಹೂವಿನ ಅಲಂಕಾರಿಕ ರೂಪವೂ ವಿಷ್ಣು ಚಿತ್ರಶಿಲ್ಪಕ್ಕೆ ಸೌಂದರ್ಯದ ಗುರಿಯಾಗಿದೆ.

ನರಸಿಂಹಾವತಾರ ಶಿಲ್ಪ ಚತುರ್ಭುಜವಾಗಿದ್ದು ಶಂಖ, ಚಕ್ರ, ಉಗ್ರ ನರಸಿಂಹ ಮುಖ ಅರ್ಧ ಪದ್ಮಾಸನದಲ್ಲಿ ಪವಡಿಸಿದ್ದು ಕಂಡುಬರುತ್ತದೆ. ಯಜ್ಞೋಪವಿತವು ಸ್ಪಷ್ಟವಾಗಿ ಕಾಣುತ್ತದೆ.

ವಾಮನಾವತಾರದಲ್ಲಿ ಮುಟ್ಟಗಾತ್ರದ ವಾಮನನ ಕೈಯಲ್ಲಿ ಛತ್ರ ಚಾಮರ ತಲೆಗೂದಲು ಮುಡಿಕಟ್ಟಿರುವುದು ಅರ್ಧಪದ್ಮಾಸನದಲ್ಲಿ ಕುಳಿತಿದ್ದು ಯಜ್ಞೋಪವಿತ ಧರಿಸಿದ್ದು ಚೆನ್ನಾಗಿ ಗೋಚರಿಸುತ್ತದೆ.

ರಾಮಕೃಷ್ಣ, ಪರಶುರಾಮರ ಚಿತ್ರ ಶಿಲ್ಪಗಳಲ್ಲಿ ಯಜ್ಞೋಪವಿತ ಹಾಗೂ ಅರ್ಧಪದ್ಮಾಸನದಲ್ಲಿ ಪವಡಿಸಿದ್ದು ಸ್ಪಷ್ಟ ಕೃಷ್ಣಾವತಾರದಲ್ಲಿ ತಲೆಗೆ ಸುಂದರ ಪೇಟಾ ಪರಶುರಾಮವತಾರದಲ್ಲಿ ಜಟೆ ಕಟ್ಟಿದ್ದು ಬಲಗೈಯಲ್ಲಿ ಪರಶುವನ್ನು ಹಿಡಿದಿದ್ದು ಕಂಡುಬರುತ್ತದೆ.

ಬುದ್ಧನ ಅವತಾರ ಶಾಂತ ಚಿತ್ತದಿಂದ ಪದ್ಮಾಸನದಲ್ಲಿ ಕುಳಿತಿದ್ದಾನೆ ಅಲಂಕಾರಿಕ ಕಿವಿ ಹಾಗೂ ತಲೆಗೂದಲು ಹರದಾದ ಎದೆ, ಧ್ಯಾನ ಮುದ್ರೆ, ಅಧ್ಯಾತ್ಮದ ದರ್ಶನ ಮೂಡಿಸುತ್ತವೆ. ಕಲ್ಕಿಯು ಅವತಾರದಲ್ಲಿ ಹಸನ್ಮುಖಿಯಾಗಿಯು ರೌದ್ರಮಯವೂ ಆಗಿ ಕೈಯಲ್ಲಿ ದಂಡ ಹಿಡಿದು ಯಜ್ಞೋಪವಿತ ಧರಿಸಿದ್ದಾನೆ. ಕೆಳಗಡೆ ಚಿಕ್ಕ ಚಿಕ್ಕ ಗರುಡ, ಭಕ್ತಿಣಿ ಮೂರ್ತಿಯನ್ನು ನೋಡುತ್ತೇವೆ.



ಸ್ತಂಭ ಭಿತ್ತಿ ಚಿತ್ರದ ಉಬ್ಬು ಶಿಲ್ಪಗಳು

ಸ್ತಂಭ ಭಿತ್ತಿಚಿತ್ರದ ಚಿತ್ರಸಂಖ್ಯೆ ಒಂದರಲ್ಲಿ ಚಾಲುಕ್ಯರ ಉಬ್ಬು ಶಿಲ್ಪಗಳಲ್ಲಿರುವಂತೆ ಕಲಾವಿದ ತಾಂತ್ರಿಕತೆ ಮೆರೆದಿದ್ದಾನೆ. ಕ್ರಿ.ಶ. ಆರನೆಯ ಶತಮಾನದಲ್ಲಿ ಬಾದಾಮಿಯ ಒಂದನೇ ಗುಹೆಯಲ್ಲಿ ಎದುರುಗಡೆಗೆ ಒಂದೇ ಪ್ರಾಣಿ ಎರಡು ಮುಖ ಪ್ರಾಣಿಗಳು ಕಾಣುವಂತೆ ತಾಂತ್ರಿಕತೆ ಬಳಸಿದ್ದುನ್ನು ನಂದಿ ಹಾಗೂ ಆನೆಯ ಶಿಲ್ಪದಲ್ಲಿ; ಹಾಗೂ ಮಗುವಿನ ಎರಡು ಮುಖಗಳು ನಾಲ್ಕು ಮಕ್ಕಳು ಬೇರೆ ಬೇರೆ ಅವಸ್ತೆಗಳನ್ನು ಕಂಡರಿಸಿದ್ದಾನೆ. ಅದೇ ತರನಾಗಿ ನಾಲ್ಕು ಕಾಲುಗಳು ಆದರೆ ಆರು ಕಾಲುಗಳಂತೆ ಕಾಣುವ ತಾಂತ್ರಿಕತೆ ವಿಶೇಷವಾಗಿ ಮುಂದುವರೆದ ಕಲಾ ಶೈಲಿ ಎನ್ನುಬಹುದು.

ಮೊದಲನೆಯ ಮನುಷ್ಯನು ವಾದ್ಯ ಬಾಯಿಯಿಂದ ಊದುತ್ತಿರುವಂತೆ ಎರಡನೆಯ ಮಾನವನು ಕೈಯಲ್ಲಿ ತಾಳ ಹಿಡಿದು ಬಾರಿಸುತ್ತಿರುವುದು, ಚಡ್ಡಿ ಧರಿಸಿದ ಜಟ್ಟಿಯಂತೆ ಮಧ್ಯದಲ್ಲಿ ಅಲಂಕಾರಿಕ ವಸ್ತ್ರ ಸುಂದರ ಶೈಲಿಯ ತಲೆ ಗೂದಲು; ಮೂರನೆಯ ವ್ಯಕ್ತಿಯು ಬಗ್ಗಿನಿಂತು ಹಲಗೆ ಬಾರಿಸುವಂತೆ ಗೋಚರಿಸುತ್ತಿದೆ.

ಶಿಲಾಸ್ತಂಭವು ನಾಲ್ಕು ಅಡಿ ಎತ್ತರವಾಗಿದ್ದು ಒಂದುವರೆ ಅಡಿಗಳಷ್ಟು ಅಗಲವಾಗಿದೆ. ಕೆಳಭಾಗದಲ್ಲಿ ಚೌಕಾಕಾರ ಮಧ್ಯದಲ್ಲಿ ದುಂಡಾದ ಭಾಗಗಳು ಮತ್ತು ಮೇಲ್ಗಡೆಗೆ ಚೌಕಾಕಾರದ ಪಟ್ಟಕ ಮತ್ತು ದುಂಡಾದ ಭಾಗ ನೋಡಲು ಸಿಗುತ್ತವೆ. ಇವು ಹದಿನೆಂಟನೆಯ ಶತಮಾನದಲ್ಲಿ ಈ ಭಾಗದಲ್ಲಿರುವ ವಿಷ್ಣುವಿನ ಮಂದಿರದ ದ್ವಾರ ಮಂಟಪದ ಎಡಬಲಕ್ಕೆ ಅಲಂಕಾರ ಸ್ತಂಭಗಳಾಗಿ ನಿಂತಿರಲೂಬಹುದು. ಏಕೆಂದರೆ ಕೇವಲ ಮೂರು ಭಾಗಕ್ಕೆ ಚಿತ್ತಾರ ಶಿಲ್ಪಗಳಿವೆ.

ಅಕ್ಕಪಕ್ಕದ ಎರಡೂ ಮಾನವಾಕೃತಿಗಳು ಬಗ್ಗಿ ನಿಲ್ಲುವ ಉದ್ದೇಶ ಮಧ್ಯದ ಮಾನವಾಕೃತಿಯ ಕಾಲುಗಳೇ ಅವುಗಳಿಗೂ ಇದ್ದಂತೆ ಕಾಣಲಿ ಹಾಗೂ ನರ್ತನ ನಿರತರಾಗಿದ್ದಾರೆಂಬ ಕಲ್ಪನೆ.

ಜನಪದ ವಾದ್ಯಮೇಳ

ಮಾನವಾಕೃತಿಯ ಸಾಂಪ್ರದಾಯಿಕ ಉಡಿಗೆಯಾದ ಧೋತ್ರ (ಪಂಚೆ) ಚಿಕ್ಕದಾದ ಅಂಗಿ, ನಡ ಕಟ್ಟುಗಳನ್ನು ಉಪಯೋಗಿಸಿದ್ದು ಕಂಡುಬರುತ್ತದೆ ತಲೆಗೆ ಪೇಟಾಸುತ್ತುತಿದ್ದುದು ಗೋಚರಿಸುತ್ತದೆ.

ಶಹನಾಹಿ ವಾದನ ಮಾಡುವವನ ರಾಗಕ್ಕೆ ತಕ್ಕಂತೆ ನರ್ತನ ಮಾಡುತ್ತ ಕರಡಿ ಹಾಗೂ ಹಲಗೆ ಬಡಿಯುತ್ತಿರುವುದು ಕಂಡುಬಂದಿದೆ. ಜನಪದ ವೇಷಭೂಷಣಕಾರ ಇವರು ರಾಗ, ಲಯಗಳಿಂದ ಹಾಯಾಗಿ ಕುಣಿಯುತ್ತಿರುವುದು ಗೋಚರಿಸುತ್ತದೆ. ಇಂದಿನ ಕಣಿ ಮಜಲು, ಕರಡಿ ಮಜಲುಗಳು ಜೀವಂತವಾಗಿ ಉಳಿಯಲ್ಲಿಕ್ಕೆ ಇಂತಹ ಭಿತ್ತಿ ಕಂಭ ಶಿಲ್ಪಗಳೇ ಕಾರಣ ಎನ್ನಬೇಕಾಗುತ್ತದೆ.

ಪ್ರಮಾಣ ಬದ್ಧ ಮಾನವಾಕೃತಿಗಳಿಂದ ನಿರ್ಮಾಣಗೊಂಡ ಜನಪದ ನೃತ್ಯ ಉಬ್ಬುಶಿಲ್ಪವೂ ಜನರಿಂದ ನೋಡಿಸಿ ಕೊಳ್ಳುತ್ತದೆ.

ಪಾದಗಳು ಹಾಗೂ ಕೈಯ ಅಂಗೈ ಭಾಗಗಳು ನರ್ತನ ನಿರತವಾಗಿರುವುದು ನಮಗೆ ತಿಳಿಯುತ್ತದೆ. ಜಟಾ ಪೇಟಾ ತಲೆಗೆ ಭೂಷಣವಾಗಿವೆ.

ತಂತಿವಾದ್ಯ ನುಡಿಸುವವರು ಅಥವಾ ಹೆಜ್ಜೆ ಮೇಳದ ನೃತ್ಯ

ಬಿಡಿ ಬಿಡಿಯಾಗಿ ಧೋತ್ರ ನಡಕ್ಕೆ ನಡಕಟ್ಟು ಕಟ್ಟಿಕೊಂಡು ಹಾಡುತ್ತಾ ತಂತಿವಾದ್ಯ ನುಡಿಸುತ್ತಿರುವುದು ಸುಂದರವಾದ ಸಂಯೋಜನೆಯಾಗಿದೆ. ತಂತಿವಾದ್ಯಕ್ಕೆ ವಸ್ತ್ರಕಟ್ಟಿ ಅಲಂಕಾರ ಹೆಚ್ಚಿಸುವ ಹಾಗೆ ಮಾಡಿದ್ದಾರೆ.

ಕರ್ಣಕುಂಡಲ, ಕೇಶಲಂಕಾರ, ವಸ್ತ್ರಲಂಕಾರಗಳು ಚನ್ನಾಗಿ ರಚನೆಗೊಂಡಿದೆ. ವಿಷ್ಣುವಿನ ಮುಖಕ್ಕೆ ಅಲಂಕಾರವಾಗಿ ಪವಳಿ ಅದಕ್ಕೆ ಅಲಂಕಾರವಾಗಿ ಜನಪದ ನೃತ್ಯದ ಕಂಬಗಳು ಕಲಾತ್ಮಕತೆ ಇಂದೊಡಗೂಡಿವೆ ಸಂಶೋಧಕರಿಗೆ ಇದೊಂದು ಉತ್ತಮ ಸ್ಥಳವಾಗಿದೆ.

ಆಧಾರಸೂಚಿ

೧. ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ಹೊರತಂದಿರುವ "ಶಿಲ್ಪಕಲಾ ಪ್ರಪಂಚ"

೨. ಶ್ರೀ ಸರಗಣಾಚಾರಿಮಠ, ಶ್ರೀ ಸುಂಕದ, ಶ್ರೀ ಬಾಬಣ್ಣ ಪರ್ವತಿಕರ ಹಾಗೂ ಪರ್ವತಿಯ ಹಿರಿಯರು.

೩. ಶ್ರೀ ನಾಗಪ್ಪ ಗಾಜಿ

೪. ಉತ್ತರ ಭಾರತದ ದಿವಂಗತ ಬಾಬಾಜಿಯವರ ಹೇಳಿಕೆಯ ಪ್ರಕಾರ, ಶ್ರೀಮತಿ ಶಾಂತವ್ವ ಸಂಗಯ್ಯ ಸರಗಣಾಚಾರಿ ಹೇಳಿಕೆ

೬೫

“ಲಿಂಗಾಂಬುಧಿ ಕೆರೆಯಲ್ಲಿನ ಅವಶೇಷ–ವಿಷ್ಣುಶಿಲ್ಪ ಹಾಗೂ ಪರಂಪರೆ”

ಡಾ. ಬಿ. ಬಸವರಾಜು ತಗರಪುರ*

ಮೈಸೂರು ನಗರವು ಸಹ ತನ್ನದೇ ಆದ ಇತಿಹಾಸವನ್ನು ನಿರ್ಮಿಸಿದೆ ಎಂದು ಹೇಳಬಹುದಾಗಿದೆ. ಮೈಸೂರಿಗೆ ಪುರಾತನ ಕಾಲದ ಹಾಗೂ ಇತಿಹಾಸ ಕಾಲಕ್ಕೂ ನಿರಂತರ ಹಿನ್ನೆಲೆ ಇದೆ.

ಮೈಸೂರು ಇತಿಹಾಸವನ್ನು ತೆರೆದು ನೋಡಿದರೆ, ನಾನಾ ವಂಶದವರು ಆಳ್ವಿಕೆ ನಡೆಸಿರುವುದು ತಿಳಿದುಬರುತ್ತದೆ. ಮೈಸೂರು ಒಡೆಯರ್ ಕೂಡ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಅದರಲ್ಲಿ ಕೆರೆಗಳ ನಿರ್ಮಾಣ ಕಾರ್ಯವು ಸಹ ಒಂದಾಗಿದೆ. ಮೈಸೂರು ಒಡೆಯರ ಕಾಲಕ್ಕೆ ಮೈಸೂರು ನಗರ ಹಾಗೂ ಮೈಸೂರು ನಗರ ಹೊರವಲಯದಲ್ಲಿಯೂ ಅನೇಕ ಕೆರೆಗಳನ್ನು ನಿರ್ಮಿಸಿದ್ದಾರೆ. ಮೈಸೂರು ಒಡೆಯರ ಕಾಲದ ಕುಕ್ಕರಹಳ್ಳಿ ಕೆರೆ, ಸುಬ್ಬರಾಯನ ಕೆರೆ, ಜೀವನರಾಯನ ಕಟ್ಟೆ ಕೆರೆ, ದೇವನೂರು ಕೆರೆ ಹಾಗೂ ಲಿಂಗಾಂಬುಧಿ ಕೆರೆಗಳು ಪ್ರಮುಖ ಕೆರೆಗಳಾಗಿವೆ.

ಲಿಂಗಾಂಬುಧಿ ಕೆರೆ

ಮೈಸೂರು ನಗರದ ಕೇಂದ್ರದಿಂದ ಸುಮಾರು ೫ ಕಿಲೋಮೀಟರ್ ಅಂತರದಲ್ಲಿ ದಕ್ಷಿಣ ಹಾಗೂ ಈಶಾನ್ಯ ದಿಕ್ಕಿಗೆ ಸೇರಿದಂತೆ ಲಿಂಗಾಂಬುಧಿ ಕೆರೆ ಇದೆ. ಈ ಕೆರೆಯ ಸಮೀಪದಲ್ಲಿ ಸುಮಾರು ಒಂದು ಕಿಲೋಮೀಟರ್ ದೂರದಲ್ಲಿ ಲಿಂಗಾಂಬುಧಿ ಪಾಳ್ಯ ಎಂಬ ಊರು ಇದೆ. ಲಿಂಗಾಂಬುಧಿ ಕೆರೆಯು ಸುಮಾರು ೬೦೦ ರಿಂದ ೬೫೦ ಎಕರೆ ಪ್ರದೇಶದ ವ್ಯಾಪ್ತಿಯನ್ನು ಪಸರಿಸಿದೆ. ಈ ಕೆರೆಗೆ ಪೂರಕವಾಗಿ ಮೈಸೂರು ಒಡೆಯರ್, ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಧರ್ಮಪತ್ನಿಯಾದ ಕೃಷ್ಣವಿಲಾಸದ ಲಿಂಗಾಜಮ್ಮಣ್ಣಿಯವರು ಲಿಂಗಾಂಬುಧಿ ಕೆರೆಯ ದಂಡೆಯಲ್ಲಿ ಮಹಾಲಿಂಗೇಶ್ವರ ದೇವಾಲಯವನ್ನು ಕಟ್ಟಿಸಿ, ಅದಕ್ಕೆ ಹೊಂದಿಕೊಂಡಂತೆ ದಕ್ಷಿಣ ಹಾಗೂ ಪಶ್ಚಿಮ ಭಾಗಕ್ಕೆ ವಿಸ್ತಾರವಾದ ಸುಮಾರು ೬೫೦ ಎಕರೆ ಕೆರೆಯನ್ನು ೧೮೨೮ ರಲ್ಲಿ ಕಟ್ಟಿಸಿದ್ದಾಳೆಂದು ಶಾಸನದಿಂದ ತಿಳಿದುಬರುತ್ತದೆ. ಅಂದಿನ ಕಾಲಕ್ಕೆ ಹಾಗೂ ಪ್ರಸ್ತುತ ಇಂದಿನ ಕಾಲಕ್ಕೆ ಪ್ರಮುಖ ವ್ಯಕ್ತಿಗಳ ಹೆಸರು ಇಡುತ್ತಿದ್ದುದು ಇದೆ. ಈ ಹಿನ್ನೆಲೆಯಲ್ಲಿ ಲಿಂಗಾಂಬುಧಿ ಕೆರೆ ನಾಮಕರಣವನ್ನು ಮೈಸೂರಿನ ರಾಣಿ ಲಿಂಗಾಜಮ್ಮಣ್ಣಿಯವರು ಕಟ್ಟಿಸಿರುವುದರಿಂದ ಈ ಕೆರೆಗೆ ಲಿಂಗಾಂಬುಧಿಕೆರೆ ಎಂಬ ಹೆಸರು ಬಂದಿದೆ.

ಮೈಸೂರು ನಗರದ ದಕ್ಷಿಣ ದಿಕ್ಕಿಗೆ ಇರುವ ಶ್ರೀರಾಮಪುರದಿಂದ ಲಿಂಗಾಂಬುಧಿ ಪಾಳ್ಯಕ್ಕೆ ಒಂದು ಏರಿ ರಸ್ತೆ ಇದೆ. ಈ ರಸ್ತೆಯು ಸುಮಾರು ೧.೧೦ ಕಿಲೋಮೀಟರ್ ಅಂತರವಿದೆ. ಕೆರೆಯ ಏರಿಯ ಭಾಗವನ್ನು ದಪ್ಪ ದಪ್ಪನಾದ ಕಪ್ಪು ಗ್ರಾನೈಟ್ ಕಲ್ಲುಗಳಿಂದ ಕಟ್ಟಲಾಗಿದೆ. ಏರಿಯ ಎತ್ತರ ಹೆಚ್ಚು ಕಡಿಮೆ ೨೦ ರಿಂದ ೨೫ ಅಡಿಗಳಷ್ಟು ಎತ್ತರವನ್ನು ಹೊಂದಿದೆ. ಈ ಕೆರೆಯ ಆಗ್ನೇಯ ದಿಕ್ಕಿಗೆ ಏರಿಗೆ ಸೇರಿದಂತೆ ಮೈಸೂರು ಒಡೆಯರ್ ಕಾಲಕ್ಕೆ ಸೇರಿದ ಒಂದು ಕಲ್ಲಿನ ಮಂಟಪವನ್ನು ನಿರ್ಮಿಸಲಾಗಿದೆ.

ಲಿಂಗಾಂಬುಧಿ ಕೆರೆಯ ದಂಡೆಯಲ್ಲಿರುವ ಮಹಾಲಿಂಗೇಶ್ವರ ದೇವಾಲಯದ ಮುಖಮಂಟಪದ ಹೊರಭಾಗದಲ್ಲಿ ಒಂದು ಶಿಲಾಶಾಸನ ಇದೆ. ಈ ಶಾಸನವು ಮಹಾಲಿಂಗೇಶ್ವರ ದೇವಾಲಯವನ್ನು ಹಾಗೂ ಮಹಾರಾಣಿ ಲಿಂಗಾಜಮ್ಮಣ್ಣಿಯವರನ್ನು ಕುರಿತು ತಿಳಿಸುವ ಶಾಸನವಾಗಿದೆ.

ಈಗ ನೋಡಿದರೆ ಕೆರೆ ಪಕ್ಕದಲ್ಲಿ ನಗರ ಬೆಳವಣಿಗೆಯಾಗಿದೆ. ಸುಮಾರು ೧೬೮ ವರ್ಷಗಳ ಇತಿಹಾಸ ಇರುವ ಈ ಲಿಂಗಾಂಬುಧಿ ಕೆರೆ ನಗರದ ಒಳಗೆ ಸೇರಿದೆ. ೧೬೮ ವರ್ಷಗಳ ಹಿಂದೆ ಮೈಸೂರಿನ ಮಹಾರಾಣಿಯ ಹೆಸರಿನಲ್ಲಿ ಲಿಂಗಾಂಬುಧಿ ಕೆರೆಯನ್ನು ನಿರ್ಮಿಸಿ ಲಿಂಗಾಂಬುಧಿ ಪಾಳ್ಯವೆಂದೇ ಹೆಸರಿಸಿರುವುದು ಇತಿಹಾಸ ಪುಟಗಳಿಂದ ತಿಳಿದುಬರುತ್ತದೆ.

* ಲೇಟ್ ಬಸವಯ್ಯ, ತಗರಪುರ, ಚಿಲಕವಾಡಿ ಅಂಚೆ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ–೫೭೧೪೪೦.



ಲಿಂಗಾಬುದಿ ಕೆರೆಯಲ್ಲಿನ ಅವಶೇಷ–ವಿಷ್ಣುಶಿಲ್ಪ

ಇವೆಲ್ಲವೂ ಕೂಡ ಮೈಸೂರು ಒಡೆಯರ್ ಕೊಡುಗೆ. ರಾಜರ ಉದ್ದೇಶ ವ್ಯವಸಾಯ ಹಾಗೂ ವ್ಯವಸಾಯಕ್ಕೆ ಜಾನುವಾರುಗಳಿಗೆ, ಪ್ರಾಣಿ ಪಕ್ಷಿಗಳಿಗೆ ಜನಸಾಮಾನ್ಯರಿಗೆ ಕುಡಿಯಲು, ನೀರುಣಿಸಲು ಕೆರೆಗಳನ್ನು ನಿರ್ಮಿಸುತ್ತಿದ್ದರೆಂಬುದು ಶಾಸನಗಳ ಹಿನ್ನೆಲೆಯಿಂದ ವ್ಯಕ್ತವಾಗುತ್ತದೆ. ಅಲ್ಲದೆ ವಿವಿಧ ಧರ್ಮಗಳಿಗೂ ಪ್ರೋತ್ಸಾಹವನ್ನು ನೀಡಿರುವುದು ತಿಳಿದುಬರುತ್ತದೆ. ಆದಕಾರಣವೇ ಮಹಾರಾಣಿ ಲಿಂಗರಾಜಮ್ಮಣ್ಣಿಯವರು ತಮ್ಮ ಹೆಸರಿನ ಕೆರೆಯನ್ನು ಮೈಸೂರು ನಗರದಲ್ಲಿ ೧೮೨೮ ರಲ್ಲಿಯೇ ನಿರ್ಮಿಸಿರುವುದು ತಿಳಿದುಬರುತ್ತದೆ. ಲಿಂಗಾಂಬುಧಿ ಕೆರೆಯ ರಾಮಕೃಷ್ಣನಗರದ ಕಡೆಗೆ ಇರುವ ಪ್ರಧಾನ ದ್ವಾರ ಪಕ್ಕದಲ್ಲಿ ಒಂದು ವಿಷ್ಣುಶಿಲ್ಪ ಸಹ ಪತ್ತೆಯಾಗಿದೆ. ವೈಷ್ಣವ ಧರ್ಮಕ್ಕೆ ಪೂರಕವಾಗಿ ಇಲ್ಲಿ ಯಾವುದೇ ರೀತಿಯ ಶಾಸನವಾಗಲಿ ಇಲ್ಲ. ಆದರೆ ಇತ್ತೀಚೆಗೆ ವಿಷ್ಣು ಶಿಲ್ಪವನ್ನು ಲಿಂಗಾಂಬುಧಿಕೆರೆಯಲ್ಲಿ ಪತ್ತೆಯಾಗಿರುವುದನ್ನು ದಿನಾಂಕ: ೨೯.೧೨.೨೦೧೫ರ ಪ್ರಜಾವಾಣಿ, ಆಂದೋಲನ ದಿನಪತ್ರಿಕೆಗಳಲ್ಲಿ ಹಾಗೂ ೩೦.೧೨.೨೦೧೫ರ ಸ್ಟಾರ್ ಆಫ್ ಮೈಸೂರು ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ಈ ಶಿಲ್ಪವನ್ನು ಗಮನಿಸಿದರೆ ಮೈಸೂರು ಒಡೆಯರ್ ಕಾಲಕ್ಕೆ ಸೇರಿದ ವಿಷ್ಣುಶಿಲ್ಪವೆನ್ನಬಹುದಾಗಿದೆ. ಈ ಭಾಗದಲ್ಲಿ ವಿಷ್ಣು (ವೈಷ್ಣವ) ದೇವಾಲಯವನ್ನು ಕುರಿತು ಯಾವುದೇ ತರಹದ ಮಾಹಿತಿಗಳಿಲ್ಲ. ಆದಕಾರಣ ಈ ವಿಷ್ಣುಶಿಲ್ಪ ಲಿಂಗಾಂಬುಧಿಕೆರೆಯಲ್ಲಿ ಪತ್ತೆಯಾಗಿರುವುದು ಇತಿಹಾಸಕ್ಕೆ ಇನ್ನೊಂದು ಕೈಗನ್ನಡಿ ಎನ್ನಬಹುದು. ಮೈಸೂರು ಒಡೆಯರ್ ರಾಜಕೀಯದ ಮರುವಿನ್ಯಾಸವು ಅವರ ದೈವಭಕ್ತಿ ಕ್ರಿಯೆಗಳಲ್ಲಿಯೂ ಪ್ರತಿಬಿಂಬಿತವಾಗಿತ್ತೆಂದೂ ತಿಳಿದುಬರುತ್ತದೆ. ಉನ್ನತವಾದ ಸ್ಥಾನಮಾನಗಳಿಗೆ, ಪರಮೇಶ್ವರ ಪದವಿಗೇರಲು ಹವಣಿಸಿದ ರಾಜ ಒಡೆಯರ್ ಬೋಳ ಚಾಮರಾಜನು ದೇವಿಯ ಪ್ರತಿ ತೋರಿದ ಭಕ್ತಿಗೆ ಬದಲು ಸೂಕ್ತವಾದ ವೈಷ್ಣವ ಧರ್ಮದ ಸಾಮ್ರಾಜ್ಯದ ದಾರಿಯನ್ನು ಹಿಡಿದನು. ರಾಜ ಒಡೆಯನು ೧೬೧೦ರಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ಮೇಲೆ ವೈಷ್ಣವ ಧರ್ಮ ಸ್ವೀಕರಿಸಿದ ಮೊದಲ ಮೈಸೂರು ರಾಜನಾದ ಎಂದು ತಿಳಿದುಬರುತ್ತದೆ. ಇದಕ್ಕೆ ಮೊದಲೇ ೧೫೯೮ರ ಶಾಸನವೊಂದರಲ್ಲಿ ರಾಜ ಒಡೆಯನು ಆಗಲೇ ತನ್ನ ವಂಶಕ್ಕೆಂದು ವೈಷ್ಣವ ಧರ್ಮವನ್ನು ಒಪ್ಪಿಕೊಂಡಿದ್ದಾನೆಂದು ತಿಳಿದುಬರುತ್ತದೆ. ಶಾಸನ ಹಾಗೂ ಸಾಹಿತ್ಯದ ಹಿನ್ನೆಲೆಯಿಂದ ರಾಜ ಒಡೆಯನು ತನ್ನ ಆಳ್ವಿಕೆಯಲ್ಲಿ ರಾಜ್ಯಾದ್ಯಂತ ವೈಷ್ಣವ ದೇವಾಲಯಗಳಿಗೆ ಪ್ರೋತ್ಸಾಹ ನೀಡಿದ್ದಾನೆಂದು ತಿಳಿದುಬರುತ್ತದೆ.

ಚಿಕ್ಕದೇವರಾಯ ವಂಶವಳಿಯಲ್ಲಿ ಕಾಲ (ಕ್ರಿ.ಶ. ೧೭೦೦) ರಲ್ಲಿ ರಾಜ ಒಡೆಯನು ಮೇಲುಕೋಟೆಯ ಲಕ್ಷ್ಮೀಕಾಂತ (ಲಕ್ಷ್ಮೀನಾರಾಯಣ) ನನ್ನು ತನ್ನ ಕುಲದೇವತೆಯಾಗಿ ಸ್ವೀಕರಿಸಿದನೆಂದು ತಿಳಿದುಬರುತ್ತದೆ. ಮೈಸೂರು ನಗರದಲ್ಲಿ ದೇವರಾಜ ಮೊಹಲ್ಲಾ, ಕೃಷ್ಣರಾಜ ಮೊಹಲ್ಲಾಗಳಲ್ಲಿ ವೈಷ್ಣವ ದೇವಾಲಯಗಳಿವೆ. ಅಲ್ಲಿರುವ ವಿಷ್ಣು ಶಿಲ್ಪಗಳು ಲಿಂಗಾಂಬುಧಿ ಕೆರೆಯಲ್ಲಿ ಪತ್ತೆಯಾಗಿರುವ ಶಿಲ್ಪವನ್ನು ಸೂಕ್ಷ್ಮವಾಗಿ ಗಮನಿಸಿದರೆ ಒಂದೇ ರೀತಿಯ ಶೈಲಿಯನ್ನು ಹೊಂದಿದೆ. ಆದಕಾರಣ ಲಿಂಗಾಂಬುಧಿ ಕೆರೆಯಲ್ಲಿ ದೊರೆತಿರುವ ವಿಷ್ಣುಶಿಲ್ಪವೂ ಮೈಸೂರು ಒಡೆಯರ್ ಕಾಲಕ್ಕೆ ಸೇರಿಸಬಹುದಾಗಿದೆ ಈ ಶಿಲ್ಪವು ಭೂಮಿಯಲ್ಲಿ ಅರ್ಧಭಾಗ ಮುಚ್ಚಿದೆ. ಆದರೂ ಕೂಡ ಇನ್ನರ್ಧ ಭಾಗದ ಲಕ್ಷಣದಿಂದ ಇದು ಮೈಸೂರು ಒಡೆಯರ ಕಾಲಕ್ಕೆ ಸೇರಿದೆ ಎನ್ನಬಹುದು. ವಿಷ್ಣುವಿನ ಮೇಲ್ಭಾಗವನ್ನು ಗಮನಿಸಿದರೆ, ನಾಲ್ಕು ಕೈಗಳನ್ನು ಹೊಂದಿದ್ದು, ಎರಡು ಕೈಗಳು ಮಣ್ಣಿನಲ್ಲಿ ಮುಚ್ಚಿವೆ. ಉಳಿದೆರಡು ಕೈಗಳಲ್ಲಿ ಶಂಖ ಮತ್ತು ಚಕ್ರವನ್ನು ಗುರುತಿಸಬಹುದಾಗಿದೆ. ವಿಷ್ಣುವಿನ ಕೊರಳಿನಲ್ಲಿ ಮಣಿಸರಗಳ ಮಾಲೆಯನ್ನು ಕಡೆಯಲಾಗಿದೆ. ಕೈಗಳಲ್ಲಿ ಬಂಧಿಗಳನ್ನು ಇರಿಸಲಾಗಿದೆ. ಕಿವಿಗಳಲ್ಲಿ ಕರ್ಣಕುಂಡಲವನ್ನು ಕಡೆಯಲಾಗಿದೆ. ತಲೆಯ ಮೇಲ್ಭಾಗದಲ್ಲಿ ನಾಗರಶೈಲಿಯ ಕೆತ್ತನೆಯ ಕಿರೀಟವನ್ನು ಕಡೆಯಲಾಗಿದೆ. ಈ ಎಲ್ಲಾ ಹಿನ್ನೆಲೆಯಿಂದ ಇದೊಂದು ಮೈಸೂರು ಒಡೆಯರ್ ಕಾಲಕ್ಕೆ ಸೇರಿದ ವಿಷ್ಣುಶಿಲ್ಪವೆಂದೂ ಹೇಳುವುದಲ್ಲದೆ, ಈ ಕೆರೆಯ ದಡದಲ್ಲಿರುವ ಮಹಾಲಿಂಗೇಶ್ವರ ದೇವಾಲಯದ ಕಾಲಕ್ಕೂ ಈ ಶಿಲ್ಪ ನಿರ್ಮಿತವಾಗಿರಬಹುದು. ಆದರೆ ಇಲ್ಲಿ ಇದ್ದಿರಬಹುದಾದ ವೈಷ್ಣವ ದೇವಾಲಯವನ್ನು ಕುರಿತು ಯಾವುದೇ ಶಾಸನ ದೊರೆತಿಲ್ಲ.

೬೬

ಹಂಪಿಯಲ್ಲಿ ದೊರೆತ ಅಪರೂಪದ ಅಷ್ಟಭುಜ ವಿಷ್ಣು ಶಿಲ್ಪ

ಡಾ. ಪದ್ಮಜಾ ದೇಸಾಯಿ*

ಅಷ್ಟಭುಜ ವಿಷ್ಣು ಶಿಲ್ಪ

ಕರ್ನಾಟಕದಲ್ಲಿ ಅಷ್ಟಭುಜಗಳನ್ನು ಹೊಂದಿರುವ ವಿಷ್ಣು ಶಿಲ್ಪಗಳು ದೊರೆಯುವುದು ವಿರಳ. ಕ್ರಿ.ಶ. ೬ನೆಯ ಶತಮಾನದಲ್ಲಿ ರಚಿತವಾದ ಆಳ್ವಾರರ ನಲಾಯಿಯರ್ ದಿವ್ಯಪ್ರಬಂಧಗಳಲ್ಲಿ ಅಷ್ಟಭುಜ ವಿಷ್ಣುವಿನ ವರ್ಣನೆ ಇದೆ. ಅದೇ ರೀತಿಯಾಗಿ ಕರ್ನಾಟಕದಲ್ಲಿ ಎರಡು ವಿಶೇಷ ಶಿಲ್ಪಗಳೆಂದರೆ ಒಂದು ಬಾದಾಮಿಯಲ್ಲಿ ಚಾಲುಕ್ಯ ಅರಸು ಮಂಗಳೇಶನು ಕ್ರಿ.ಶ. ೫೭೮ರಲ್ಲಿ ನಿರ್ಮಿಸಿದ ೩ನೆಯ ವೈಷ್ಣವ ಗುಹೆಯಲ್ಲಿ ಅಷ್ಟಭುಜ ವಿಷ್ಣು ಶಿಲ್ಪವು ಖಡ್ಗ, ಬಾಣ, ಗದಾ, ಚಕ್ರ (ಬಲಭಾಗದ ಕೈಯಲ್ಲಿ), ಶಂಖ, ಖೇಟಕ, ಧನಸ್ಸು ಮತ್ತು ಕಟ್ಯಾವಲಂಬಿತ ಹಸ್ತ (ಎಡಭಾಗದ ಕೈಯಲ್ಲಿದೆ). ಮತ್ತೊಂದು ಶಿಲ್ಪ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದಲ್ಲಿದೆ. ಈ ದೇವಾಲಯವನ್ನು ಚಾಲುಕ್ಯ ಅರಸು ಇಮ್ಮಡಿ ವಿಕ್ರಮಾದಿತ್ಯನ ಹೆಂಡತಿ ಲೋಕಮಹಾದೇವಿ ಕ್ರಿ.ಶ. ೭೪೦ರಲ್ಲಿ ವಿರೂಪಾಕ್ಷ ದೇವಾಲಯವನ್ನು ನಿರ್ಮಿಸಿದಳು. ಈ ದೇವಾಲಯದ ಉತ್ತರ ಭಾಗದ ಗೋಡೆಯಲ್ಲಿ ದೇವಕೋಷ್ಠಕದಲ್ಲಿ ಈ ಶಿಲ್ಪವಿದೆ.

ಕದಂಬಪೂರ್ವ ಕಾಲದಲ್ಲಿದ್ದ ಅರಸು ವಿಷ್ಣುರುದ್ರಶಿವಾಲನಂದ ಸಾತಕರ್ಣಿ ಎಂಬ ಅರಸು ತನ್ನ ಆಡಳಿತಾವಧಿಯಲ್ಲಿ ಹಲವಾರು ವಿಷ್ಣುದೇವಾಲಯಗಳನ್ನು ನಿರ್ಮಿಸುವುದರ ಜೊತೆಗೆ ಈ ಅಷ್ಟಭುಜವಿಷ್ಣುವಿನ ದೇವಾಲಯವನ್ನು ನಿರ್ಮಿಸಿದನು. ನಂತರದ ಕಾಲದಲ್ಲಿ ಬನವಾಸಿಯಲ್ಲಿ ದೊರೆತ ನಾಣ್ಯಗಳ ಮೇಲೆ ಶಿವಾಲನಂದ ಎಂಬ ರಾಜನ ಹೆಸರಿದೆ. ಅಷ್ಟಭುಜ ವಿಷ್ಣುವಿನ ಪರಿಕಲ್ಪನೆ ಮುಂದೆ ಹರಿಹರ ಶಿಲ್ಪದ ರಚನೆಗೆ ಕಾರಣವಾಯಿತು. ಹರಿಹರ ಶಿಲ್ಪದಲ್ಲಿ ವಿಷ್ಣು ಮತ್ತು ಶಿವನ ಆಯುಧಗಳು ಇರುತ್ತವೆ. ಅರ್ಧ ಹರಿಯ ಭಾಗ, ಅರ್ಧ ಹರನ ಭಾಗವನ್ನು ಶಿಲ್ಪದಲ್ಲಿ ತೋರಿಸಲಾಗುತ್ತದೆ[೧].

ಕ್ರಿ.ಶ. ೩ನೆಯ ಶತಮಾನದಲ್ಲಿ ನಾಗಾರ್ಜುನಕೊಂಡ (ಆಂಧ್ರಪ್ರದೇಶದಲ್ಲಿ) ದೊರೆತ ಶಂಖದ ಮೇಲೆ ಬರೆದ ಶಾಸನವು ಅಷ್ಟಭುಜ ಸ್ವಾಮಿಯ ದೇವಾಲಯ ಎಂದು ಹೆಸರಿಸಿದೆ. ನಾಗಾರ್ಜುನಕೊಂಡದಲ್ಲಿ ಔದುಂಬರ ಮರದಿಂದ ಮಾಡಿದ ಅಷ್ಟಭುಜಸ್ವಾಮಿ ಶಿಲ್ಪವು ದೊರೆತಿದೆ[೨].

ಅಷ್ಟಭುಜ ವಿಷ್ಣು ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ವಿವರಿಸುವ ಶಿಲ್ಪಶಾಸ್ತ್ರ ಗ್ರಂಥಗಳಾದ, ಬೃಹತ್‌ಸಂಹಿತೆ, ಮತ್ಸ್ಯಪುರಾಣ, ದೇವತಾಮೂರ್ತಿಪ್ರಕರಣ ಮತ್ತು ಸಾತತ್ವಸಂಹಿತೆ, ಈ ಗ್ರಂಥಗಳು ಅಷ್ಟಭುಜ ವಿಷ್ಣುವಿನ ಪ್ರತಿಮಾಲಕ್ಷಣಗಳ ವಿವರಣೆಯನ್ನು ನೀಡಿವೆ. (ಅಧೋಪ್ರದಕ್ಷಣ ಪಥ)

ಬೃಹತ್‌ಸಂಹಿತೆಯ ಪ್ರಕಾರ:– **ಬಲಗೈಗಳಲ್ಲಿ** : ಅಭಯ ಹಸ್ತ, ಕಠಾರಿ, ಗದೆ, ಬಾಣ,

ಎಡಗೈಗಳಲ್ಲಿ : ಬಿಲ್ಲು, ಚಕ್ರ, ಖಡ್ಗ, ಶಂಖ[೩].

ಮತ್ಸ್ಯಪುರಾಣದ ಪ್ರಕಾರ:– **ಬಲಗೈಗಳಲ್ಲಿ** : ಕಠಾರಿ, ಗದೆ, ಬಾಣ, ಕಮಲ,

ಎಡಗೈಗಳಲ್ಲಿ : ಬಿಲ್ಲು, ಖೇಟಕ, ಶಂಖ, ಚಕ್ರ[೪].

ದೇವತಾಮೂರ್ತಿಪ್ರಕರಣದ ಪ್ರಕಾರ:– **ಬಲಗೈಗಳಲ್ಲಿ** : ಕಠಾರಿ, ಗದೆ, ಬಾಣ, ಕಮಲ,

ಎಡಗೈಗಳಲ್ಲಿ : ಶಂಖ, ಬಿಲ್ಲು, ಚಕ್ರ, ಖೇಟಕ[೫].

ಸಾತತ್ವಸಂಹಿತೆ ಪ್ರಕಾರ:– **ಬಲಗೈಗಳಲ್ಲಿ** : ಗದೆ, ಒನಕೆ, ಚಕ್ರ, ಖಡ್ಗ,

ಎಡಗೈಗಳಲ್ಲಿ : ತ್ರಿಶೂಲ, ಪಾಶ, ಬಿಲ್ಲು ಮತ್ತು ಬಾಣ[೬].

* **W/O** ಅಶ್ವಿನ್‌ಕುಮಾರ್, ಗುಮಗೇರಾ ಅಂಚೆ, ಕುಷ್ಟಗಿ ತಾ., ಕೊಪ್ಪಳ ಜಿಲ್ಲೆ–೫೮೪೧೨೧.

ಅಷ್ಟಭುಜ ವಿಷ್ಣುವಿನ ಕೈಗಳಲ್ಲಿ ಈ ಆಯುಧಗಳು ಇರಬೇಕೆಂದು ಒಂದೊಂದು ಶಿಲ್ಪಶಾಸ್ತ್ರಗ್ರಂಥವೂ ಬೇರೆ ಬೇರೆ ವಿಧದ ಆಯುಧಗಳನ್ನು ಹೆಸರಿಸಿದೆ. ಆದರೆ ಕೆಲವು ಸಲ ಈ ನಿಯಮವನ್ನು ಹೊರತುಪಡಿಸಿ ಶಿಲ್ಪಗಳು ರಚನೆಗೊಂಡಿದೆ ಎಂಬುದು ಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ಅಧ್ಯಯನ ಮಾಡಿದಾಗ ತಿಳಿದುಬರುವ ಸಂಗತಿ.

ಹಂಪೆಯ ವಿರೂಪಾಕ್ಷ ದೇವಾಲಯದ ಹಿಂಭಾಗದಲ್ಲಿರುವ ಲೋಕಪಾವನಿ ಪುಷ್ಕರಣಿಯ ಹತ್ತಿರವಿರುವ ಚಿಕ್ಕ ಗುಹಾಲಯದಲ್ಲಿ ಅಷ್ಟಭುಜ ವಿಷ್ಣುವಿನ ಶಿಲ್ಪವಿದೆ. ಇಲ್ಲಿ ಒಟ್ಟು ಮೂರು ಶಿಲ್ಪಗಳನ್ನು ಇರಿಸಲಾಗಿದೆ. ಅಷ್ಟಭುಜ ವಿಷ್ಣು, ಸೂರ್ಯ ಮತ್ತು ಗಣೇಶ ಶಿಲ್ಪಗಳಿವೆ ಅಷ್ಟಭುಜ ವಿಷ್ಣು ಮತ್ತು ಸೂರ್ಯಶಿಲ್ಪಗಳು ವಿಜಯನಗರಪೂರ್ವ ಕಾಲಕ್ಕೆ ಸೇರುತ್ತವೆ. ಗಣೇಶ ಶಿಲ್ಪ ವಿಜಯನಗರ ಕಾಲದ್ದಾಗಿದೆ. ಈ ಶಿಲ್ಪಗಳಿಗೆ ಪ್ರತಿನಿತ್ಯ ಪೂಜೆ ನಡೆಯುತ್ತದೆ. ಇಲ್ಲಿನ ಅರ್ಚಕರು ಈ ಅಷ್ಟಭುಜ ವಿಷ್ಣು ಶಿಲ್ಪವನ್ನು ಮಲಯಬ್ರಹ್ಮನೆಂದು ಕರೆಯುತ್ತಾರೆ. ಈ ಶಿಲ್ಪವು ವಿಶೇಷವಾದ ಪ್ರತಿಮಾಲಕ್ಷಣಗಳನ್ನು ಹೊಂದಿದೆ[೭]. ಶಿಲ್ಪಲಕ್ಷಣ ದೃಷ್ಟಿಯಿಂದ ಈ ಶಿಲ್ಪವು ಕ್ರಿ.ಶ.ಸು. ೧೦–೧೧ನೆಯ ಶತಮಾನಕ್ಕೆ ಸೇರುವಂತಹದಾಗಿದೆ.

ಸಾಮಾನ್ಯವಾಗಿ ವಿಷ್ಣು ಶಿಲ್ಪಗಳನ್ನು ದ್ವಿಭುಜ ಚತುರ್ಭುಜ ಮತ್ತು ಬಹುಭುಜ ಎಂದು ವಿಂಗಡಿಸಲಾಗುತ್ತದೆ ಪ್ರಾಚೀನ ಶಿಲ್ಪಗಳು ದ್ವಿಭುಜಗಳನ್ನು ಹೊಂದಿರುತ್ತವೆ. ಆದರೆ ನಂತರದ ಕಾಲದಲ್ಲಿ ಚತುರ್ಭುಜ ಮತ್ತು ಬಹುಭುಜ ಶಿಲ್ಪಗಳು ಕಾಣಸಿಗುತ್ತವೆ. ಪ್ರಸ್ತುತ ಶಿಲ್ಪವು ಅಷ್ಟಭುಜಗಳನ್ನು ಹೊಂದಿ ಸಮಪಾದಭಂಗಿಯಲ್ಲಿ ಸಾದಾ ಪೀಠದ ಮೇಲೆ ಇದೆ. ಪೀಠದ ಅಂಚಿನಲ್ಲಿ ಗರುಡನ ಚಿಕ್ಕ ಶಿಲ್ಪವಿದೆ. ಅಷ್ಟಭುಜಗಳನ್ನು ಹೊಂದಿರುವ ಈ ಶಿಲ್ಪದ ಮುಂದಿನ ಎರಡು ಕೈಗಳು ಭಗ್ನವಾಗಿವೆ.

ವಿಷ್ಣುವಿನ ಎಂಟು ಕೈಗಳಲ್ಲಿರುವ ಆಯುಧಗಳ ವಿನ್ಯಾಸವು ಅಧೋಪ್ರದಕ್ಷಣಾ ಪಥದಲ್ಲಿ ವಿವರಿಸಲಾಗಿದೆ.

ಬಲಭಾಗದ ಕೈಯಲ್ಲಿರುವ ಆಯುಧಗಳು	**ಎಡಭಾಗದ ಕೈಯಲ್ಲಿರುವ ಆಯುಧಗಳು**
(ಕೆಳಗಿನಿಂದ–ಮೇಲಕ್ಕೆ)	(ಮೇಲಿನಿಂದ–ಕೆಳಕ್ಕೆ)
* **ಮೊದಲನೆಯ ಕೈ** – ಅಭಯ ಹಸ್ತ(ಭಗ್ನವಾಗಿದೆ)	**ಐದನೆಯ ಕೈ** – ಶಂಖ
* **ಎರಡನೆಯ ಕೈ** – ಖಡ್ಗ	**ಆರನೆಯ ಕೈ** – ಬಿಲ್ಲು
* **ಮೂರನೆಯ ಕೈ** – ಬಾಣ	**ಏಳನೆಯ ಕೈ** – ಖೇಟಕ
* **ನಾಲ್ಕನೆಯ ಕೈ** – ಚಕ್ರ	**ಎಂಟನೆಯ ಕೈ** – ವರದಹಸ್ತ (ಭಗ್ನವಾಗಿದೆ)

ಸಮಪಾದ ಭಂಗಿಯಲ್ಲಿರುವ ಈ ಶಿಲ್ಪವು ಕೀರ್ತಿಮುಖದ ರಚನೆಯ ಪ್ರಭಾವಳಿಯಲ್ಲಿ ಕೆತ್ತಲಾಗಿದೆ. ಬಲಭಾಗದಲ್ಲಿ ಶ್ರೀದೇವಿಯ ಶಿಲ್ಪವು ತ್ರಿಭಂಗಿಯಲ್ಲಿದೆ. ಈ ಶಿಲ್ಪವು ವಿಷ್ಣುವಿನ ಉತ್ತಮ ಭೋಗ ಸ್ಥಾನಕ ಶಿಲ್ಪದ ವರ್ಗಕ್ಕೆ ಸೇರುತ್ತದೆ. ಉತ್ತಮ ದಶತಾಲಮಾನ ಪದ್ದತಿಯಲ್ಲಿ ಈ ಶಿಲ್ಪವನ್ನು ಕೆತ್ತಲಾಗಿದೆ.[೮]

ಅಷ್ಟಭುಜ ವಿಷ್ಣು ಶಿಲ್ಪವು ಸಮಪಾದಭಂಗಿಯಲ್ಲಿದ್ದು ಉದ್ದವಾದ ಕಿರೀಟಮಕುಟವನ್ನು ಧರಿಸಿದೆ. ವಿಷ್ಣುವಿನ ತಲೆಯ ಭಾಗದಿಂದ ಎಡ ಮತ್ತು ಬಲಭುಜಗಳ ಮೇಲೆ ಜಟೆಗಳು ಇಳಿಬಿದ್ದಿವೆ. ಇವುಗಳು ಶಿವನ ಉಗ್ರರೂಪವನ್ನು ತೋರಿಸುವಾಗ ಇರುವ ಜಟೆಗಳಂತಿವೆ. ವಿಷ್ಣುವಿನ ಮುಖದಲ್ಲಿ ಕಾಂತಿಯುಕ್ತವಾದ ಕಣ್ಣುಗಳು ವೀರತ್ವವನ್ನು ಪ್ರತಿಬಿಂಬಿಸುತ್ತದೆ. ಭುಜಬಂಧ, ಕೇಯೂರ, ಬಾಹುವಲಯ, ಕೈಗಡಗಗಳು, ಕಾಲುಗಡಗಗಳು ಇವೆ. ಕೊರಳಲ್ಲಿ ಕಂಠಹಾರ, ಕೊರಳಹಾರ, ಮುತ್ತಿನಹಾರಗಳು ಎದೆಯಲ್ಲಿ ಶ್ರೀವತ್ಸ ಚಿಹ್ನೆ, ಯಜ್ಞೋಪವೀತ, ಉದ್ದವಾದ ವನಮಾಲ ಮಂಡಿಯ ಕೆಳಗೆ ಇದೆ. ಕಟಿಭಾಗದ ಅಲಂಕರಣೆಯು ಎದ್ದು ಕಾಣುವಂತಿದೆ. ಉರುದಾಮ, ಧೋತಿಯ ನೆರಿಗೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಕಟಿಭಾಗದಿಂದ ಅಕ್ಕ–ಪಕ್ಕದಲ್ಲಿ ಉತ್ತರೀಯವು ಇಳಿಬಿದ್ದಿದೆ.

ಈ ಶಿಲ್ಪದ ವಿಶೇಷವೆಂದರೆ ವಿಷ್ಣುವಿನ ಬಲಭಾಗದಲ್ಲಿ ಶ್ರೀದೇವಿಯ ಶಿಲ್ಪವಿದೆ. ಈ ಶಿಲ್ಪವು ಕರಂಡಮಕುಟ, ಕೊರಳಲ್ಲಿ ಸರಗಳು, ವನಮಾಲಾ ಇದೆ. ತ್ರಿಭಂಗಿಯಲ್ಲಿದ್ದು, ಬಲಗೈ ಡೋಲಹಸ್ತವಾಗಿದೆ, ಎಡಗೈಯಲ್ಲಿ ಪದ್ಮವನ್ನು ಹಿಡಿದಿದೆ, ಸೀರೆಯನ್ನು ಧರಿಸಿದ್ದಾಳೆ, ಕೈಗಡಗ, ಕಾಲುಗಡಗ, ಭುಜಬಂಧ, ಬಾಹುವಲಯ, ಕುಚಬಂಧವನ್ನು ಧರಿಸಿದ್ದಾಳೆ. ಈ ಶಿಲ್ಪ ಮಧ್ಯಮ ದಶತಾಲಮಾನದಲ್ಲಿದೆ.

ಅಷ್ಟಭುಜ ವಿಷ್ಣು ಶಿಲ್ಪದ ಪ್ರತಿಮಾಲಕ್ಷಣಗಳನ್ನು ವಿವರಿಸುವ ನಾಲ್ಕು ಗ್ರಂಥಗಳಲ್ಲಿ ಪ್ರಸ್ತುತ ಹಂಪಿಯಲ್ಲಿ ದೊರೆತ ಶಿಲ್ಪವು ಹೊಂದಿರುವ ಪ್ರತಿಮಾಲಕ್ಷಣಗಳು ಸರಿಯಾಗಿ ಹೊಂದಿಕೆಯಾಗಿಲ್ಲ. ಆದರೆ ಈ ಶಿಲ್ಪವು ಯಾವುದೋ ದೇವಾಲಯದ ಗರ್ಭಗೃಹದಲ್ಲಿದ್ದು ಈ ಶಿಲ್ಪ ಸ್ಥಳಾಂತರವಾದ ಬಗ್ಗೆ ಮಾಹಿತಿ ದೊರೆತಿಲ್ಲ ಆದರೆ ಪ್ರತಿ ನಿತ್ಯ ಪೂಜೆ ನಡೆಯುತ್ತದೆ.



ಅಷ್ಟಭುಜ ವಿಷ್ಣು ಶಿಲ್ಪ



ವಿರೂಪಾಕ್ಷ ದೇವಾಲಯ ಹಿಂಭಾಗದಲ್ಲಿರುವ ಲೋಕಪಾವನಿ ಹತ್ತಿರ ಚಿಕ್ಕ ಗುಹಾಲಯದಲ್ಲಿರುವ ಶಿಲ್ಪಗಳು

ಹಂಪಿ ಶಿಲ್ಪಗಳ ಬಗ್ಗೆ ಹಲವಾರು ವಿದ್ವಾಂಸರು ಅಧ್ಯಯನವನ್ನು ಕೈಗೊಂಡಿದ್ದಾರೆ. ಆದರೆ ಅವರು ನೀಡಿದ ವಿವರಣೆ ಸಾಲದು ಅನ್ನಾಡೆಲ್ಲಾ ಪಿಕ್ಕೊಲ್ಲಾ ಮತ್ತು ಅನಿಲಾ ವರ್ಗೀಸ್‌ರವರು "ಸ್ಕಲ್ಪಚರಲ್ ಆರ್ಟ ವಿಜಯನಗರ", "ಐಕೋನೋಗ್ರಫಿ ಆ್ಯಂಡ್ ಸ್ಟೈಲ್", ಎಂಬ ಗ್ರಂಥದಲ್ಲಿ 'ವೈಷ್ಣವ ಶಿಲ್ಪಗಳು' ಎಂಬ ೬ನೇ ಅಧ್ಯಾಯದಲ್ಲಿ ಈ ಶಿಲ್ಪದ ಬಗ್ಗೆ ವಿವರಣೆ ನೀಡಿದ್ದಾರೆ ಆದರೆ ಅವರು ಆಗಮಗಳ ಹಿನ್ನೆಲೆಯಲ್ಲಿ ವಿವರಿಸಿಲ್ಲ[೯].

ಕೆ.ಎಂ. ಸುರೇಶರವರು "ಸ್ಕಲ್ಪಚರಲ್ ಆರ್ಟ ಆಫ್ ಹಂಪಿ", ಎಂಬ ಗ್ರಂಥದಲ್ಲಿ ವೈಷ್ಣವ ಶಿಲ್ಪಗಳು ಎಂಬ ೬ನೇ ಅಧ್ಯಾಯನದಲ್ಲಿ ವೈಷ್ಣವ ಶಿಲ್ಪಗಳ ಕುರಿತು ವಿವರಣೆ ನೀಡಿದ್ದಾರೆ. ಆದರೆ ಈ ಶಿಲ್ಪದ ಬಗ್ಗೆ ಗಮನಹರಿಸಿಲ್ಲ[೧೦].

ಟಿ.ಎ. ಗೋಪಿನಾಥರಾವ್ ರವರು "ಎಲಿಮೆಂಟ್ಸ ಆಪ್ ಹಿಂದೂ ಐಕೋನೋಗ್ರಫಿ", ಎಂಬ ಗ್ರಂಥದಲ್ಲಿ ಕರ್ನಾಟಕದಲ್ಲಿರುವ ಬಾದಾಮಿ ಚಾಲುಕ್ಯ ಮತ್ತು ಹೊಯ್ಸಳ ಕಾಲದ ಶಿಲ್ಪದ ವಿವರಣೆ ನೀಡಿದ್ದಾರೆ. ಹಂಪಿ ಶಿಲ್ಪಗಳ ವಿವರಣೆ ಇಲ್ಲ[೧೧].

ಶ್ರೀನಿವಾಸ ಪಾಡಿಗಾರರವರು "ವಿಷ್ಣು ಕಲ್ಟ್ ಇನ್ ಕರ್ನಾಟಕ" ಎಂಬ ಗ್ರಂಥದಲ್ಲಿ ವೈಷ್ಣವ ಧರ್ಮದ ಬಗ್ಗೆ ತಿಳಿಸುತ್ತಾ ಶಿಲ್ಪಗಳ ವಿವರಣೆ ನೀಡಿದ್ದಾರೆ. ೯ನೆಯ ಅಧ್ಯಯನದ ಪ್ರತಿಮಾಲಕ್ಷಣ ಎಂಬುದರಲ್ಲಿ ವಿಷ್ಣು ಶಿಲ್ಪಗಳ ಬಗ್ಗೆ ವಿವರಿಸಿದ್ದಾರೆ. ಆದರೆ ಇವರು ೧೦-೧೪ನೇ ಶತಮಾನದ ವ್ಯಾಪ್ತಿಗೆ ಈ ಕೃತಿಯನ್ನು ಸೀಮಿತಗೊಳಿಸಿದ್ದಾರೆ[೧೨].

ದೇವದತ್ತ ಪಟ್ನಾಯಕ್‌ರವರು "ವಿಷ್ಣುವಿನ ಏಳು ರಹಸ್ಯಗಳು", ಎಂಬ ಗ್ರಂಥದಲ್ಲಿ ನಾಲ್ಕನೇ ಅಧ್ಯಾಯದಲ್ಲಿ ವಿಷ್ಣುವಿನ ತ್ರಿವಿಕ್ರಮನ ಶಿಲ್ಪದ ವಿವರಣೆ ನೀಡಿದ್ದಾರೆ[೧೩].

ಎಸ್.ಕೆ. ರಾಮಚಂದ್ರರಾವ್ ರವರು ಮೂರ್ತಿಶಿಲ್ಪದ ನೆಲೆ-ಹಿನ್ನೆಲೆ ಎಂಬ ಗ್ರಂಥದಲ್ಲಿ ೬ನೇ ಅಧ್ಯಾಯದಲ್ಲಿ ವಿಷ್ಣುವಿನ ವೈಶಿಷ್ಟ್ಯ ಎಂಬುದರಲ್ಲಿ ವಿಷ್ಣು ಶಿಲ್ಪದ ಬಗ್ಗೆ ವಿವರಣೆ ನೀಡಿದ್ದಾರೆ. ಆದರೆ ಅಷ್ಟಭುಜ ವಿಷ್ಣು ಶಿಲ್ಪಗಳ ವಿವರಣೆ ನೀಡಿಲ್ಲ[೧೪].

ಒಟ್ಟಾರೆಯಾಗಿ ಹಂಪಿಯಲ್ಲಿ ದೊರೆತ ಈ ಅಷ್ಟಭುಜವಿಷ್ಣು ಶಿಲ್ಪವು ವಿಶೇಷವಾದ ಪ್ರತಿಮಾಲಕ್ಷಣಗಳನ್ನು ಹೊಂದಿದೆ. ಶಿಲ್ಪಗಳಲ್ಲಿ ಉಗ್ರರೂಪವನ್ನು ತೋರಿಸಬೇಕಾದರೆ ಹಲವು ಭುಜಗಳು, ವಿವಿಧ ಆಯುಧಗಳು, ಉಗ್ರಮುಖಭಾವ ಇರುವಂತೆ ಶಿಲ್ಪಿಯು ನಿರೂಪಿಸಿರುತ್ತಾನೆ. ಆದರೆ ವಿಷ್ಣುವಿನ ಉಗ್ರರೂಪಗಳಾದ ಸ್ಥಾಣನರಸಿಂಹ, ತ್ರಿವಿಕ್ರಮ, ವಿಶ್ವರೂಪ, ವೈಕುಂಠನಾಥ ಈ ಕೆಲವು ಶಿಲ್ಪಗಳಲ್ಲಿ ವಿವಿಧ ಆಯುಧಗಳನ್ನು ಬಾಹುಭುಜಗಳಲ್ಲಿರುವಂತೆ ರಚಿಸಲಾಗಿರುತ್ತದೆ. ವಿಷ್ಣುವಿನ ಪತ್ನಿಯರಲ್ಲಿ ಶ್ರೀದೇವಿಯನ್ನು ಮಾತ್ರ ಬಲಭಾಗದಲ್ಲಿ ತೋರಿಸಲಾಗಿದೆ.

ಅಡಿಟಿಪ್ಪಣಿಗಳು

೧. ಅದೇ, ಪು. ೨೦೨, ಜಸ್ವಾಲ್.ಎಸ್.

೨. ಶ್ರೀನಿವಾಸ್ ಪಾಡಿಗಾರ, 'ವಿಷ್ಣು ಕಲ್ಟ್ ಇನ್ ಕರ್ನಾಟಕ', ಪು. ೩೦–೩೧.

೩. ಕಲ್ಪನಾ ದೇಸಾಯಿ, "ಐಕೋನೋಗ್ರಫಿ ಆಫ್ ವಿಷ್ಣು", ಪು. ೧೫–೧೬.

೪. ಮತ್ಸ್ಯಪುರಾಣ, CCLVIII, 7.

೫. ಕಲ್ಪನಾ ದೇಸಾಯಿ ಪೂರ್ವೋಕ್ತ, ಪು. ೧೭. ಸೋಮೇಶ್ವರನ ಮಾನಸೋಲ್ಲಾಸದ ಅಧ್ಯಾಯ III, ಪು. ೩೩೩ರಲ್ಲಿ ಅಷ್ಟಭುಜ ವಿಷ್ಣುವಿನ ಪ್ರತಿಮಾಲಕ್ಷಣದ ವಿವರಣೆಯಲ್ಲಿ ಈ ಆಯುಧಗಳ ವಿವರಣೆ ಇದೆ.

೬ ಕಲ್ಪನಾ ದೇಸಾಯಿ ಪೂರ್ವೋಕ್ತ, ಪು. ೧೮.

೭. ಅನ್ನಾಡೆಲ್ಲಾ ಪಿಕ್ಕೊಲ್ಲಾ ಮತ್ತು ಅಟುಲಾ ವರ್ಗೀಸ್, "ಸ್ಕಲ್ಪಚರ್ ಆ್ಯಟ್ ವಿಜಯನಗರ ಐಕೋನೋಗ್ರಫಿ ಆ್ಯಂಡ್ ಸ್ಟೈಲ್" ಪು. ೪೩.

೮. ಟಿ.ಎ. ಗೋಪಿನಾಥರಾವ್, "ಎಲಿಮೆಂಟ್ಸ ಆಫ್ ಹಿಂದೂ ಐಕೋನೋಗ್ರಫಿ", ಸಂ. ೧. ಭಾಗ ೧, ಪು. ೧೬೧–೧೬೨.

೯. ಅನ್ನಾಡೆಲ್ಲಾ ಪಿಕ್ಕೊಲ್ಲಾ ಮತ್ತು ಅಟುಲಾವರ್ಗೀಸ್ ಪೂರ್ವೋಕ್ತ, ಪು. ೪೩–೪೪.

೧೦. ಕೆ.ಎಂ. ಸುರೇಶ, "ಸ್ಕಲ್ಪಚರಲ್ ಆರ್ಟ ಆಫ್ ಹಂಪಿ", ಪು. ೭೯–೮೦.

೧೧. ಟಿ.ಎ. ಗೋಪಿನಾಥರಾವ್ ಪೂರ್ವೋಕ್ತ, ಪು. ೨೨೫–೨೨೬.

೧೨. ಶ್ರೀನಿವಾಸ ಪಾಡಿಗಾರ್ ಪೂರ್ವೋಕ್ತ, ಪು. ೧೪೮–೧೪೯.

೧೩. ದೇವದತ್ತ ಪಟ್ನಾಯಕ್ ಕನ್ನಡಕ್ಕೆ ಅನುವಾದ ಜಿ.ಬಿ.ಹರೀಶ, 'ವಿಷ್ಣುವಿನ ಏಳು ರಹಸ್ಯಗಳು', ಪು. ೯೧–೯೨.

೬೭

ಹಂಪಿ ಪರಿಸರದ ಕಂಕಾಳಮೂರ್ತಿ ಶಿಲ್ಪಗಳು

ಡಾ. ಮೆಣಸಿಗಿ ಹೇಮಾವತಿ ಶಿವಾನಂದ*

ವಿಜಯನಗರದ ರಾಜಧಾನಿಯಾದ ಹಂಪಿಯು ಒಂದು ಪ್ರಸಿದ್ಧ ಶೈವಕ್ಷೇತ್ರ. ಇಲ್ಲಿರುವ ಕೆಲವು ದೇವಾಲಯಗಳ ಭಿತ್ತಿ, ಕಂಬ, ಶಿಖರ ಮುಂತಾದ ಭಾಗಗಳಲ್ಲಿ ಶಿವನ ಲೀಲಾಮೂರ್ತಿಗಳನ್ನು ಹಾಗೂ ಇನ್ನೂ ಹಲವು ರೂಪಗಳನ್ನು ಉಬ್ಬು ಶಿಲ್ಪಗಳಾಗಿ ಕೆತ್ತಿರುವರು. ಇಂತಹ ಶಿವನ ಮುಖ್ಯ ಮೂರ್ತಿಶಿಲ್ಪಗಳಲ್ಲಿ ಒಂದಾದ ಕಂಕಾಳಮೂರ್ತಿ ಶಿಲ್ಪವು ಆಗಮ, ಪುರಾಣಗಳಲ್ಲಿ ಮತ್ತು ಇತರೆ ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ಉಲ್ಲೇಖವಿರುವ ಪ್ರತಿಮಾ ಲಕ್ಷಣಗಳ ಅನುಸಾರವಾಗಿ ಕೆತ್ತಲಾಗಿದೆಯೇ ಇಲ್ಲವೇ ಎಂಬ ವಿಷಯದ ಮೇಲೆ ಹೆಚ್ಚು ಗಮನವಿರಿಸಿ ಲೇಖನವನ್ನು ಬರೆಯಲಾಗಿದೆ.

ಶಿವನ ಕಂಕಾಳಮೂರ್ತಿ ಶಿಲ್ಪಗಳು ಹಾಗೂ ಭಿಕ್ಷಾಟನಾ ಮೂರ್ತಿ ಶಿಲ್ಪಗಳು ಒಂದೇ ಆಗಿ ಕಂಡುಬಂದರೂ ಆಗಮಗಳಲ್ಲಿ ಅವುಗಳನ್ನು ಪ್ರತ್ಯೇಕ ಪ್ರತಿಮಾ ಲಕ್ಷಣಗಳಿಂದ ವಿವರಿಸಲಾಗದೆ.

ಶಿವನಿಗೆ ಬ್ರಹ್ಮಹತ್ಯಾ ದೋಷ ತಗುಲಿ ಭಿಕ್ಷುಕನಾಗಿ ಸಂಚರಿಸಿದಾಗಿನ ರೂಪವೇ ಕಂಕಾಳ ಮತ್ತು ಭಿಕ್ಷಾಟನಾಮೂರ್ತಿಎಂದು ಹೇಳಲಾಗಿದೆ. ಕಂಕಾಳಮೂರ್ತಿಯ ಬಗೆಗೆ ಕುರಿತು ಹಲವು ಪಠ್ಯಗಳು ವಿಭಿನ್ನ ರೀತಿಯಲ್ಲಿ ವಿವರಿಸುತ್ತದೆ. ಆದರೆ ಸಾಮಾನ್ಯವಾಗಿ ಕಂಡುಬರುವ ವಿವರಣೆಯೆಂದರೆ, ಹಿಂದೆ ಒಮ್ಮೆ ಋಷಿಗಳೆಲ್ಲರೂ ಸೇರಿ ಈ ವಿಶ್ವದ ಸೃಷ್ಟಿಕರ್ತನು ಯಾರು? ಎಂಬುದನ್ನು ತಿಳಿಯಲು ಮೇರುಪರ್ವತಕ್ಕೆ ಹೋಗಿ ಬ್ರಹ್ಮನನ್ನು ಕೇಳಿದರು. ಅಹಂಕಾರದಿಂದ ಬ್ರಹ್ಮನು ತಾನೇ ಎಂದು ಹೇಳಿಕೊಂಡಾಗ ಶಿವನು ಅವನ ಅಹಂಕಾರವನ್ನು ಮುರಿಯಲು ಬೆಳಕಿನ ದೊಡ್ಡ ಸ್ತಂಭರೂಪದಲ್ಲಿ ಅವತರಿಸಿದನು. ಆಗ ಅದರ ಆದಿ ಅಂತ್ಯಗಳನ್ನು ತಿಳಿಯಲು ಯಾರಿಂದಲೂ ಸಾಧ್ಯವಾಗಲಿಲ್ಲ. ಆದರೂ ಬ್ರಹ್ಮನು ಅದರ ಕೊನೆಯನ್ನು ತಾನು ನೋಡಿದ್ದೇನೆಂದು ಸುಳ್ಳು ಹೇಳಿದನು. ಇದರಿಂದ ಕೋಪಗೊಂಡ ಶಿವ ಭೈರವನರೂಪದಲ್ಲಿ ಬ್ರಹ್ಮನ ಐದು ತಲೆಗಳಲ್ಲಿ ಒಂದು ತಲೆಯನ್ನು ಕತ್ತರಿಸಿದನು. ಆಗ ಶಿವನಿಗೆ ಬ್ರಹ್ಮಹತ್ಯಾ ಪಾತಕವು ಅಂಟಿಕೊಂಡಿತು. ಈ ದೋಷದ ಪರಿಹಾರಕ್ಕಾಗಿ ಕತ್ತರಿಸಿದ ತಲೆಯ ಬುರುಡೆಯನ್ನು ಕೈಯಲ್ಲಿ ಹಿಡಿದು ವಿಷ್ಣುವನ್ನು ಕಾಣುವ ತನಕ ಭಿಕ್ಷೆ ಬೇಡಬೇಕೆಂದು ಬ್ರಹ್ಮನೇ ಸೂಚಿಸಿದ. ಅದುವರೆವಿಗೂ ಬ್ರಹ್ಮಹತ್ಯೆಯೂ ಸ್ತ್ರೀ ರೂಪದಲ್ಲಿ ಹಿಂದೆಯೇ ಇರುತ್ತದೆಂದು ಹೇಳಿದ. ಭೈರವನು ಭೂತಗಣಗಳೊಂದಿಗೆ ಭಿಕ್ಷೆ ನಡೆಸುತ್ತಾ ಹೋದ ಮನೆಗಳಲ್ಲಿ ಹೆಂಗಸರೆಲ್ಲಾ ಇವನನ್ನು ಕಂಡು ಮೋಹಿತರಾಗಿ ಹಾಡುತ್ತಾ ಕುಣಿಯುತ್ತಾ ಅವನ ಗುಂಪಿನಲ್ಲಿ ಸೇರಿಕೊಂಡರು. ಕೊನೆಗೆ ವೈಕುಂಠವನ್ನು ತಲುಪಿದರು. ಆದರೆ ಅಲ್ಲಿ ಬಾಗಿಲಲ್ಲಿದ್ದ ವಿಷ್ವಕ್ಸೇನನು ಭೈರವನನ್ನು ಒಳಕ್ಕೆ ಬಿಡಲಿಲ್ಲ. ಆಗ ಭೈರವನು ಅವನನ್ನು ಕೊಂದದ್ದರಿಂದ ಬ್ರಹ್ಮಹತ್ಯಾ ಪಾತಕ ದ್ವಿಗುಣಗೊಂಡಿತು. ವಿಷ್ವಕ್ಸೇನನ ಶಿರವನ್ನು ತನ್ನ ಶೂಲಕ್ಕೆ ತೂಗು ಹಾಕಿಕೊಂಡು ವಿಷ್ಣುವಿನ ಮುಂದೆ ನಿಂತು ಪರಿಹಾರ ಕೇಳಿದನು. ವಿಷ್ಣುವು ವಾರಣಾಸಿಗೆ ಹೋದರೆ ಪಾಪವು ಪರಿಹಾರವಾಗುತ್ತದೆಂದು ಹೇಳಿದನು. ಹೀಗೆ ಭೈರವನು ಕಾಶಿಯನ್ನು ತಲುಪಿದಾಗ ಅಲ್ಲಿ ಕಂಕಾಳ–ಕಪಾಲಗಳೆರಡೂ ವಿಮೋಚನೆ ಪಡೆದವು. ಭೈರವನು ಕೈಲಾಸಕ್ಕೆ ಹಿಂತಿರುಗಿದ. ವಿಷ್ವಕ್ಸೇನನು ವಿಷ್ಣುವನ್ನು ಸೇರಿದನು.

ಕಂಕಾಳಮೂರ್ತಿಯ ಕುರಿತಂತೆ ಶ್ರೀ ಕಾಶ್ಯಪಶಿಲ್ಪ ಶಾಸ್ತ್ರ[೧] ಕಾಮಿಕಾಗಮ,[೨] ರೌರವಾಗಮ,[೩] ಕಾರಣಾಗಮ,[೪] ಶಿಲ್ಪರತ್ನ[೫] ಹಾಗೂ ಶ್ರೀ ತತ್ವನಿಧಿಗಳಲ್ಲಿ[೬] ಪ್ರತಿಮಾಲಕ್ಷಣಗಳನ್ನು ನೀಡಲಾಗಿದೆ. ಅವುಗಳ ಒಟ್ಟಾರೆ ವಿವರಣೆ ಜ್ಞಾನಾನಂದ ಜಿ. ಅವರ ಕಾಶ್ಯಪಶಿಲ್ಪ ಶಾಸ್ತ್ರ ಮತ್ತು ಗೋಪಿನಾಥರಾವ್ ಟಿ.ಎ. ಅವರ Elements of Hindu Iconography.[೭] ಗ್ರಂಥದಲ್ಲಿ ನೀಡಲಾಗಿದೆ.

ಕಂಕಾಳಮೂರ್ತಿಯು ಸ್ಥಾನಿಕ ಭಂಗಿಯಲ್ಲಿದ್ದು, ಎಡಪಾದವು ಸುಸ್ಥಿತದಲ್ಲಿ, ಬಲಪಾದವು ಕುಂಚಿತವಾಗಿಯೂ ಇರಿಸಿ, ಮುನ್ನಡೆಯುತ್ತಿರುವಂತೆ ಭಾಸವಾಗುವಂತಿರಬೇಕು. ಶ್ವೇತವರ್ಣಿತನಾಗಿ ಮೇಲುಡೆಗೆಯನ್ನಾಗಿ ಕೆಂಪು ವಸ್ತ್ರವನ್ನು ಧರಿಸಿದ್ದು, ಹುಲಿಚರ್ಮದುಡುಗೆಯನ್ನು ಕೆಳವಸ್ತ್ರವನ್ನಾಗಿ ಧರಿಸಿರಬೇಕು. ಶಿರವು ಜಟಾಮುಕುಟದಿಂದ ಹಾಗೂ ಅದರ ಎಡಭಾಗದಲ್ಲಿ ಧಾತುರ ಪುಷ್ಪ, ನಾಗ ಮತ್ತು ಬಲಭಾಗದಲ್ಲಿ ಚಂದ್ರನಿಂದ ಅಲಂಕೃತನಾಗಿರಬೇಕು. ಶಿವನು ಸುಂದರ

* ಅತಿಥಿ ಉಪನ್ಯಾಸಕರು, ಸ್ನಾತಕೋತ್ತರ ಕೇಂದ್ರ, ಕೊಪ್ಪಳ.

ನಗುಮೊಗವನ್ನು ಹೊಂದಿರಬೇಕು. ಕರ್ಣಗಳಲ್ಲಿ ಸಾಮಾನ್ಯ ಕುಂಡಲಗಳನ್ನು ಅಥವಾ ಬಲಕಿವಿಯಲ್ಲಿ ಮಕರಕುಂಡಲ, ಎಡಕಿವಿಯಲ್ಲಿ ಶಂಖಪತ್ರವನ್ನು ಧರಿಸಿರಬೇಕು. ಎದೆಯ ಭಾಗದಲ್ಲಿಯ ಜ್ಞೋಪವೀತ ಇರಬೇಕು. ಚತುರ್ಭುಜನಾಗಿದ್ದು, ಮುಂದಿನ ಬಲಗೈಯಲ್ಲಿ ಬಾಣ (ಬಾಣವೆಂದರೆ ಢಕ್ಕೆಯನ್ನು ಬಾರಿಸಲು ಒಂದು ಚಿಕ್ಕ ಕೋಲು, ಆಗಮಗಳಲ್ಲಿ ಪ್ರಹಾರ ಎಂದು ಬಳಸಲಾಗಿದೆ) ಮುಂದಿನ ಎಡಕೈಯಲ್ಲಿ ಢಕ್ಕೆಯನ್ನು ಹಿಡಿದಿರಬೇಕು .ಹಿಂದಿನ ಬಲಗೈ ಹಸ್ತವು ಕಟಕ ಮುದ್ರೆಯಲ್ಲಿ ಶಿವನ ನೆಚ್ಚಿನ ಪ್ರಾಣಿಯಾದ ಜಿಂಕೆಯ ಬಾಯಿಯ ಬಳಿ ಇರಬೇಕು. ಹಿಂದಿನ ಎಡಹಸ್ತದಲ್ಲಿ ಕಂಕಾಳ ದಂಡವನ್ನು ಹಿಡಿದಿರಬೇಕು. ಇದಕ್ಕೆ ಹತನಾದವನ ಕೈ-ಕಾಲು ದೇಹವನ್ನು ದಂಡಕ್ಕೆ ಕಟ್ಟಿರುವಂತಿರಬೇಕು ಹಾಗೂ ಇದರೊಂದಿಗೆ ನವಿಲುಗರಿಗಳನ್ನು ಹಿಡಿದಿರಬೇಕು. ಕಂಕಾಳವು ಒಣಗಿ ಕಪ್ಪಾಗಿರಬೇಕು. ಆದರೆ ಅವುಗಳ ಮೇಲೆ ಮತ್ತು ದಂಡಕ್ಕೆ ಕಟ್ಟಿರುವ ಗೆಜ್ಜೆಗಳ ಮೇಲೆ ರಕ್ತದ ಕಲೆಗಳು ಇರಬೇಕು. ಈ ಕಂಕಾಳ ದಂಡವನ್ನು ಭುಜದ ಮೇಲೆ ಅಡ್ಡಲಾಗಿ ಇರಿಸಿಕೊಂಡಿರಬೇಕು. ಅದರ ಒಂದು ಕೊನೆಯನ್ನು ಹಿಂದಿನ ಎಡಹಸ್ತ ಹಿಡಿದಿರಬೇಕು. ಸೊಂಟದಲ್ಲಿ ಬೆಳ್ಳಿಯ ಹಿಡಿ ಇರುವ ಚಿನ್ನದ ಕಠಾರಿ ಸಿಲುಕಿಸಿಕೊಂಡಿರಬೇಕು. ಮರದ ಪಾದುಕೆಗಳನ್ನು ಧರಿಸಿರಬೇಕು.

ಶಿವನು ನಾಗಾಭರಣಗಳನ್ನು ಧರಿಸಿರಬೇಕು. ಕಂಕಾಳಮೂರ್ತಿಯು ಹೆಂಗಸರಿಂದ ಭೂತಗಣಗಳಿಂದ ಸುತ್ತುವರೆದಿರಬೇಕು. ಅವರು ನೃತ್ಯ ಮಾಡುತ್ತಾ ಹಾಡುತ್ತಾ ಇರುವಂತೆ ಚಿತ್ರಿಸಲ್ಪಟ್ಟಿರಬೇಕು. ಶಿವನ ಎಡಗಡೆಗೆ ಒಂದು ಭೂತವು ತಲೆಯ ಮೇಲೆ ಒಂದು ಪಾತ್ರೆಯನ್ನು ಹೊತ್ತು ನಿಂತಿರಬೇಕು. ಶಿವನಿಗೆ ದೊರೆತ ಭಿಕ್ಷೆಯನ್ನು ಇದರಲ್ಲಿ ಇರಿಸಿಕೊಳ್ಳುತ್ತಿರಬೇಕು. ಸುತ್ತುವರೆದಿರುವ ಹೆಂಗಸರು ಶಿವನ ಬಗ್ಗೆ ಬಹುವಾಗಿ ಆಕರ್ಷಿತರಾಗಿ ಅವನನ್ನು ಅಲಂಗಿಸುವಂತೆ ಸೌಟುಗಳಿಂದ ಆಹಾರವನ್ನು ತೆಗೆದುಕೊಡುತ್ತಿರುವಂತೆ ರೂಪಿಸಬೇಕು. ಶಿವನ ಬಗ್ಗೆ ಅವರಿಗಿರುವ ಅತೀವ ಕಾಮದ ಫಲವಾಗಿ ಅವರ ವಸ್ತ್ರಗಳು ಸೊಂಟದಿಂದ ಜಾರುತ್ತಿರುವಂತೆ ತೋರಬೇಕು. ಶಿವನ ಸುತ್ತಲೂ ಋಷಿಗಳು, ದೇವತೆಗಳು, ಗಂಧರ್ವರು, ಸಿದ್ಧರು, ವಿದ್ಯಾಧರರು ಅಂಜಲಿ ಬದ್ಧರಾಗಿರಬೇಕು. ವಾಯುದೇವರು ಶಿವನು ಹೋಗಲಿರುವ ಬೀದಿಯನ್ನೆಲ್ಲಾ ಗುಡಿಸಬೇಕು. ವರುಣದೇವನು ಅಲ್ಲಿ ನೀರು ಚಿಮುಕಿಸಬೇಕು. ಇತರ ದೇವತೆಗಳು ಶಿವನು ನಡೆವ ಹಾದಿಯಲ್ಲಿ ಹೂಗಳನ್ನು ಚೆಲ್ಲಬೇಕು. ಋಷಿಗಳು ವೇದಘೋಷವನ್ನು ಮಾಡುತ್ತಾ ಮುಂದೆ ಇರಬೇಕು. ಸೂರ್ಯ, ಚಂದ್ರರು, ಶಿವನಿಗೆ ಛತ್ರ-ಚಾಮರಗಳನ್ನು ಹಿಡಿದಿರಬೇಕು. ನಾರದತಂಬುರರು ಸಂಗೀತವನ್ನು ಹಾಡುತ್ತಾ ಇರಬೇಕು. ಶಿವನೊಂದಿಗೆ ಇರುವ ಹೆಂಗಸಿನ ಎತ್ತರವು ಶಿವನ ಗದ್ದ ಅಥವಾ ಸ್ತನಸೂತ್ರ ಅಥವಾ ನಾಭಿಸೂತ್ರದ ಎತ್ತರಕ್ಕೆ ಇರಬಹುದು. ಭೂತಗಳ ಎತ್ತರವು ಶಿವನ ಮುಖದ ಮೂರರಷ್ಟು ಅಥವಾ ಮೂರುವರೆಯಷ್ಟು ಎತ್ತರ ಇರಬೇಕು. ಭೂತಗಳನ್ನು ಪಂಚತಾಲಮಾನ ಕ್ರಮದಲ್ಲಿ ರೂಪಿಸಬೇಕು. ಇದು ಇವನ ರೂಪದ ಬಗ್ಗೆ ಇವರುವ ಕಲ್ಪನೆ.

ಹಂಪಿ ಪರಿಸರದಲ್ಲಿ ಒಟ್ಟು ೫ ಕಂಕಾಳ ಮೂರ್ತಿಶಿಲ್ಪಗಳು ದೊರೆತಿದ್ದು, ಅವುಗಳು ಹಂಪಿಯ ವಿರೂಪಾಕ್ಷ ದೇವಾಲಯ, ಹರಿಹರದೇವಾಲಯ, ಕಡಲೆಕಾಳು ಗಣೇಶದೇವಾಲಯ, ವಿಠಲ ದೇವಾಲಯ ಹಾಗೂ ತಿಮ್ಮಲಾಪುರದ ತ್ರಿಕೂಟ ದೇವಾಲಯಗಳಲ್ಲಿ ಕಂಡುಬರುತ್ತವೆ.

ಹಂಪಿಯ ವಿರೂಪಾಕ್ಷ ದೇವಾಲಯದ ಮಹಾರಂಗ ಮಂಟಪದ ೩ನೇ ಕಂಬದಲ್ಲಿ ಕಂಕಾಳ ಮೂರ್ತಿಯ ಶಿಲ್ಪವಿದೆ. ಈ ಶಿಲ್ಪದಲ್ಲಿ ಪಾದುಕೆಗಳನ್ನು ಧರಿಸಿದ ಶಿವನ ಎಡಪಾದ ಸುಸ್ಥಿತದಲ್ಲಿ ಹಾಗೂ ಬಲಪಾದವು ಕುಂಚಿತದಲ್ಲಿದೆ. ಜಟಾಮುಕುಟ, ಕರ್ಣಕುಂಡಲಗಳು, ಕೊರಳ ಹಾರಗಳು, ಕೆಯೂರ, ಕಂಕಣಗಳ ಕಾಲ್ಕಡಗಗಳನ್ನು ಹಾಗೂ ತೊಡೆಯ ಭಾಗದವರೆಗಿನ ವಸ್ತ್ರವನ್ನು ಧರಿಸಿರುವನು. ಜಟಾಮುಕುಟವನ್ನು ಕಿರೀಟ ಮುಕುಟದಂತೆ ಅಲಂಕರಣೆ ಮಾಡಿರುವರು. ಮುಕುಟದ ಬಲಭಾಗಕ್ಕೆ ಪುಷ್ಪವೂ ಕೆತ್ತಲ್ಪಟ್ಟಿದೆ. ತೆರೆದ ಕಣ್ಣುಗಳು, ಮುಖದಲ್ಲಿ ಸೌಮ್ಯಭಾವ ಕಾಣುತ್ತದೆ. ಚತುರ್ಭುಜಗಳನ್ನು ಹೊಂದಿದ್ದು, ಬಲಭಾಗದ ಮುಂದಿನ ಹಸ್ತವು ಎಡಭಾಗದ ಮುಂದಿನ ಹಸ್ತದಲ್ಲಿ ಢಕ್ಕೆಯನ್ನು ಬಾರಿಸುವಂತೆ ಕಂಡರಿಸಲಾಗಿದೆ. ಢಕ್ಕೆಯನ್ನು ಹಿಡಿದಿರುವ ಹಸ್ತವನ್ನು ಎದೆಯ ಭಾಗದವರೆಗೆ ಚಾಚಿ ಹಿಡಿದಿರುವನು. ಬಲಮುಂದಿನ ಹಸ್ತವು ಕಟಕ ಮುದ್ರೆಯಲ್ಲಿದ್ದು, ಬಲಪಾದದ ಪಕ್ಕದಲ್ಲಿರುವ ಜಿಂಕೆಯ ಬಾಯಿವರೆಗೂ ಚಾಚಿರುವನು. ಎಡಭಾಗದ ಹಿಂದಿನ ಹಸ್ತವು ಕಂಕಾಳ ದಂಡವನ್ನು ಅಥವಾ ಕಂಕಾಳವನ್ನು ಸಿಕ್ಕಿಸಿರುವ ತ್ರಿಶೂಲವನ್ನು ಎರಡೂ ಭುಜಗಳ ಮೇಲೆ ಅಡ್ಡಲಾಗಿ ಹಿಡಿದುಕೊಂಡಿರುವನು. ಶಿವನ ಎಡಕ್ಕೆತಲೆಯ ಮೇಲೆ ಪಾತ್ರೆಯನ್ನು ಹೊತ್ತಿರುವ ಕುಬ್ಜ ಗಣನನ್ನು ತೋರಿಸಲಾಗಿದೆ.

ಇನ್ನೊಂದು ಶಿಲ್ಪವು ಕಡಲೆಕಾಳು ಗಣೇಶದೇವಾಲಯದ ಹಿಂಭಾಗದಲ್ಲಿರುವ ಹರಿಹರ ದೇವಾಲಯದ ಒಂದನೇ ಕಂಬದಲ್ಲಿದೆ. ಇಲ್ಲಿ ಶಿವನು ತ್ರಿಭಂಗಿಯಲ್ಲಿ ಸ್ಥಾನಿಕನಾಗಿರುವನು. ಜಟಾಮುಕುಟ, ಕಂಕಣ, ಕೆಯೂರಗಳನ್ನು ಧರಿಸಿರುವನು. ಚತುರ್ಭುಜಗಳನ್ನು ಹೊಂದಿದ್ದು, ಮುಂದಿನ ಬಲಹಸ್ತವು ಎಡಮುಂದಿನ ಹಸ್ತದಲ್ಲಿರುವ ಢಕ್ಕೆಯ ಹತ್ತಿರ ಚಾಚಿರುವುದು.

ಹಿಂದಿನ ಎರಡೂ ಹಸ್ತಗಳಿಂದ ಭುಜಕ್ಕೆ ಅಡ್ಡಲಾಗಿ ಕಂಕಾಳ ದಂಡವನ್ನು ಹಿಡಿದಿರುವನು ಹಾಗೂ ಉದ್ದನೆಯ ವನಮಾಲೆಯನ್ನು ಧರಿಸಿರುವನು.

ಹಾಗೆಯೇ ಕಡಲೆಕಾಳು ಗಣೇಶ ದೇವಾಲಯದ ೨೪ನೇ ಕಂಬದಲ್ಲಿ ಕಂಕಾಳಮೂರ್ತಿ ಶಿಲ್ಪವು ಕಂಡುಬರುತ್ತದೆ. ಇದೊಂದು ನಿರೂಪಣಾತ್ಮಕ ಶಿಲ್ಪವಾಗಿದೆ. ಶಿಲ್ಪಶಾಸ್ತ್ರಗಳು ಹಾಗೂ ಆಗಮಗಳು ತಿಳಿಸುವಂತೆ ಶಿವನ ಶಿಲ್ಪದ ಪಕ್ಕದಲ್ಲಿ ಅವನ ಮೋಹಕ್ಕೆ ಒಳಗಾದ ಸ್ತ್ರೀಯ ಶಿಲ್ಪವನ್ನು ಕಂಡರಿಸಲಾಗಿದೆ. ಅಂದರೆ ಒಂದೇ ಕಂಬದ ಎರಡು ಪಾರ್ಶ್ವಗಳನ್ನು ಬಳಸಿ ಒಂದೇ ಮೂರ್ತಿ ಶಿಲ್ಪಕ್ಕೆ ಸಂಬಂಧಿಸಿದ ಎರಡು ಶಿಲ್ಪಗಳನ್ನು ಕೆತ್ತಲಾಗಿದೆ. ಆದ್ದರಿಂದ ಇದನ್ನು ನಿರೂಪಣಾತ್ಮಕ ಶಿಲ್ಪ ಎನ್ನಬಹುದು. ಶಿವನ ಶಿಲ್ಪವನ್ನು ಕಂಬದ ಪಶ್ಚಿಮ ದಿಕ್ಕಿನ ಪಾರ್ಶ್ವದ ಕೆಳಭಾಗದಲ್ಲಿ ಕಂಡರಿಸಲಾಗಿದೆ. ಇಲ್ಲಿ ಶಿವನ ಎಡ ಪಾದವು ಸ್ಥಿರವಾಗಿದ್ದು, ಬಲಪಾದವು ಕುಂಚಿತವಾಗಿದೆ. ಚತುರ್ಬಾಹುಗಳನ್ನು ಹೊಂದಿದ್ದು, ಮುಂದಿನ ಎಡ ಹಸ್ತದಲ್ಲಿ ಢಕ್ಕೆಯನ್ನು ಹಿಡಿದು ಮುಂದಿನ ಬಲ ಹಸ್ತದಿಂದ ಅದನ್ನು ಬಾರಿಸುತ್ತಿರುವಂತೆ ಕೆತ್ತಲಾಗಿದೆ ಹಾಗೂ ಹಿಂದಿನ ಎರಡು ಹಸ್ತಗಳಲ್ಲಿ ಭುಜಗಳಿಗೆ ಅಡ್ಡಲಾಗಿ ತ್ರಿಶೂಲವನ್ನು ಹಿಡಿದಿರುವನು. ಕಿರೀಟ ಮುಕುಟ, ಎಡಕರ್ಣದಲ್ಲಿ ವೃತ್ತಕುಂಡಲ, ಬಲಕರ್ಣದಲ್ಲಿ ಮಕರಕುಂಡಲ, ಕೊರಳಹಾರಗಳು, ಬಾಹುವಳಯ, ಕಂಕಣಗಳು ಹಾಗೂ ಉದ್ದನೆಯ ವನಮಾಲೆಯನ್ನು ಧರಿಸುವನು. ಹಾಗೆಯೇ ಶಿಲ್ಪದ ಪಕ್ಕದಲ್ಲಿಯೇ ಬರುವಂತೆ ಅಂದರೆ ಕಂಬದ ಉತ್ತರ ದಿಕ್ಕಿನ ಪಾರ್ಶ್ವದ ಕೆಳಭಾಗದಲ್ಲಿ ಒಬ್ಬ ಸ್ತ್ರೀಯ ಶಿಲ್ಪವನ್ನು ಕಂಡರಿಸಲಾಗಿದೆ. ಇಲ್ಲಿ ಸ್ತ್ರೀಯು ತ್ರಿಭಂಗದಲ್ಲಿ ಸ್ಥಾನಿಕಗಳಾಗಿದ್ದು, ಅವಳು ಧರಿಸಿದ ವಸ್ತ್ರವು ಮೇಲಿನಿಂದ ಜಾರುತ್ತಿರುವಂತೆ ತೋರಿಸಲಾಗಿದೆ. ಒಟ್ಟಾರೆ ಇದೊಂದು ವಿಶಿಷ್ಟ ಶಿಲ್ಪವೆಂದೇ ಹೇಳಬಹುದು. ಏಕೆಂದರೆ ಶಿವನಿಗೆ ಚತುರ್ಬಾಹುಗಳನ್ನು ತೋರಿಸಿದ್ದರೂ ಅವುಗಳಲ್ಲಿ ತ್ರಿಶೂಲ ಮತ್ತು ಢಕ್ಕೆಯನ್ನು ಮಾತ್ರ ಹಿಡಿದಿರುವನು.

ಇನ್ನೊಂದು ಕಂಕಾಳ ಮೂರ್ತಿ ಶಿಲ್ಪವು ವಿಠಲ ದೇವಾಲಯದ ನೂರು ಕಂಬಗಳ ಮಂಟಪದಲ್ಲಿ ೧೩ನೆಯ ಕಂಬದಲ್ಲಿದೆ. ಈ ಶಿಲ್ಪವನ್ನು ಕಂಬದ ಎರಡು ಪಾರ್ಶ್ವಗಳಲ್ಲಿ ಅಂದರೆ ಕಂಬದ ಪಶ್ಚಿಮ ಹಾಗೂ ದಕ್ಷಿಣ ಪಾರ್ಶ್ವದಲ್ಲಿ ಕಂಡರಿಸಲಾಗಿದೆ. ಆದ್ದರಿಂದ ಮೇಲಿನ ಶಿಲ್ಪದಂತೆಯೇ ಇದೂ ಸಹ ಒಂದು. ಹಾಗೆಯೇ ಮೇಲಿನ ಶಿಲ್ಪಕ್ಕಿಂತಲೂ ಬಹು ಸುಂದರ ಕೆತ್ತನೆಯಿಂದ ಕೂಡಿದೆ. ಕಂಬದ ಪಶ್ಚಿಮ ಪಾರ್ಶ್ವದಲ್ಲಿರುವ ಶಿವನ ಕಂಕಾಳಮೂರ್ತಿ ಶಿಲ್ಪವು ಜಟಾಮುಕುಟ, ತ್ರಿನೇತ್ರ, ಯಜ್ಞೋಪವೀತ ಹಾಗೂ ಮೊಣಕಾಲ ಮೇಲಿನ ಅಲಂಕೃತ ವಸ್ತ್ರ ಧರಿಸಿದವನಾಗಿದ್ದು, ಸರ್ವಾಭರಣ ಭೂಷಿತನಾಗಿರುವನು. ಮುಖದಲ್ಲಿ ಪ್ರಸನ್ನ ಭಾವವಿದೆ. ಶಿವನ ಎಡಪಾದವು ಸ್ಥಿರವಾಗಿದ್ದು, ಬಲಗಾಲು ಮುನ್ನಡೆಯುತ್ತಿರುವ ಭಂಗಿಯಲ್ಲಿದೆ. ಚತುರ್ಭುಜಗಳನ್ನು ಹೊಂದಿದ್ದು, ಬಲಗೈಗಳಲ್ಲಿ ಮುಂದಿನದು ಸಣ್ಣಗಾತ್ರದ ದಂಡವನ್ನು ಹಿಡಿದಿದೆ. ಹಿಂದಿನ ಹಸ್ತವು ಕಟಕ ಮುದ್ರೆಯಲ್ಲಿದ್ದು, ಕೆಳಗಿರುವ ಜಿಂಕೆಯ ಬಾಯಿಯವರೆಗೂ ಚಾಚಿಕೊಂಡಿದೆ. ಎಡಗೈಗಳಲ್ಲಿ ಮುಂದಿನದು ಢಕ್ಕೆಯನ್ನು ಹಿಡಿದಿದೆ. ಮುಂದಿನ ಬಲಗೈಯಲ್ಲಿ ಹಿಡಿದಿರುವ ದಂಡದಿಂದ ಇದನ್ನು ಬಾರಿಸುತ್ತಿರುವಂತೆ ರಚಿಸಲಾಗಿದೆ. ಹಿಂದಿನ ಕೈಯಲ್ಲಿ ತ್ರಿಶೂಲವನ್ನು ಎರಡೂ ಭುಜಗಳಿಗೆ ಅಡ್ಡಲಾಗಿ ಹಿಡಿದಿರುವನು. ಈ ತ್ರಿಶೂಲಕ್ಕೆ ಚೀಲವೊಂದನ್ನು ಸಿಕ್ಕಿಸಿರುವಂತೆ ಕೆತ್ತಲಾಗಿದೆ. ಇದೇ ಕಂಕಾಳವೆಂದು ಹೇಳಬಹುದು. ಈ ಶಿಲ್ಪದ ಇನ್ನೊಂದು ಭಾಗವನ್ನು ಇದೇ ಕಂಬದ ದಕ್ಷಿಣ ಪಾರ್ಶ್ವದ ಕೆಳಭಾಗದಲ್ಲಿ ಅಂದರೆ ಇದೇ ಶಿಲ್ಪದ ಪಕ್ಕದಲ್ಲಿಯೇ ಕೆತ್ತಲ್ಪಟ್ಟಿದೆ. ಒಬ್ಬ ಕುಬ್ಜನು ಅಥವಾ ಭೂತವೂ ಪಾತ್ರೆಯೊಂದನ್ನು ತಲೆಯ ಮೇಲೆ ಹೊತ್ತು ನಿಂತಿದ್ದು, ಆ ಪಾತ್ರೆಯಲ್ಲಿ ಮಹಿಳೆಯೊಬ್ಬಳು ಆಹಾರವನ್ನು ನೀಡುತ್ತಿರುವಂತೆ ಕೆತ್ತಲಾಗಿದೆ ಹಾಗೂ ಇಲ್ಲಿ ಮಹಿಳೆಯು ಸಕಲ ವಸ್ತ್ರಾಭಾರಣ ಧರಿಸಿದವಳಾಗಿದ್ದು, ಶಿವನ ರೂಪಕ್ಕೆ ಮೋಹಿತಳಾಗಿ ಆಕೆಯ ವಸ್ತ್ರವು ಕೆಳಕ್ಕೆ ಜಾರುತ್ತಿರುವಂತೆ ಕೆತ್ತಲಾಗಿದೆ.

ಮತ್ತೊಂದು ಶಿಲ್ಪವು ತಿಮ್ಮಲಾಪುರದ ತ್ರಿಕೂಟ ದೇವಾಲಯದ ನವರಂಗದ ೫ನೇ ಕಂಬದಲ್ಲಿದೆ. ಇಲ್ಲಿಯೂ ಶಿವನ ಪಾದವು ಸ್ಥಿರವಾಗಿದ್ದು, ಬಲಪಾದವು ಕುಂಚಿತದಲ್ಲಿಯೇ ಇದೆ. ಕಿರೀಟ ಮುಕುಟ, ಚನ್ನವೀರ, ಯಜ್ಞೋಪವೀತ, ಕೆಯೂರ ಕಂಕಣಗಳನ್ನು ಧರಿಸಿರುವನು. ಉದ್ದನೆಯ ವಸ್ತ್ರವನ್ನು ಧರಿಸಿದ್ದು, ಅದು ಅಕ್ಕಪಕ್ಕದಲ್ಲಿ ಹರಡಿರುವಂತೆ ಕೆತ್ತಲಾಗಿದೆ. ಚತುರ್ಭುಜಗಳನ್ನು ಹೊಂದಿರುವ ಶಿವನ ಎಡ ಮುಂದಿನ ಹಸ್ತದಲ್ಲಿ ಢಕ್ಕೆಯನ್ನು ಹಿಡಿದಿದ್ದು, ಬಲ ಮುಂದಿನ ಹಸ್ತದಲ್ಲಿಯು ಡಕ್ಕೆಯನ್ನು ಹಿಡಿದಿದ್ದು, ಢಕ್ಕೆಯನ್ನು ಬಾರಿಸುತ್ತಿರುವಂತೆ ಕೆತ್ತಲಾಗಿದೆ. ಬಲಹಿಂದಿನ ಹಸ್ತದಲ್ಲಿ ತ್ರಿಶೂಲವನ್ನು ಎರಡೂ ಭುಜಗಳಿಗೆ ಅಡ್ಡಲಾಗಿ ಹಿಡಿದಿದ್ದು ಎಡ ಹಿಂದಿನ ಹಸ್ತದಲ್ಲಿ ಡಮರುವನ್ನು ಹಿಡಿದಿರುವನು.

ಈ ಮೇಲಿನ ನಾಲ್ಕು ಶಿಲ್ಪಗಳಲ್ಲಿ ವಿರೂಪಾಕ್ಷ ದೇವಾಲಯ ಮತ್ತು ವಿಠಲ ದೇವಾಲಯದಲ್ಲಿ ದೊರೆತಿರುವ ಶಿಲ್ಪಗಳು ಮೇಲೆ ತಿಳಿಸಿದ ಆಗಮಗಳು ಮತ್ತು ಶಿಲ್ಪಶಾಸ್ತ್ರ ಗ್ರಂಥಗಳಲ್ಲಿರುವ ಕಂಕಾಳಮೂರ್ತಿಯ ಪ್ರತಿಮಾಲಕ್ಷಣಾ ವಿವರಗಳನ್ನು ಹೊಂದಿರುವುದರಿಂದ ಇವುಗಳು ಆಗಮ ಮತ್ತು ಶಿಲ್ಪ ಶಾಸ್ತ್ರ ಗ್ರಂಥಗಳ ಅನ್ವಯ ರಚಿತಗೊಂಡ ಶಿಲ್ಪಗಳಾಗಿವೆ ಎಂದು



ಕಂಕಾಳಮೂರ್ತಿ, ವಿರೂಪಾಕ್ಷ ದೇವಾಲಯ, ಹಂಪಿ



ಕಂಕಾಳಮೂರ್ತಿ, ಹರಿಹರ ದೇವಾಲಯ, ಹಂಪಿ





ಕಂಕಾಳಮೂರ್ತಿ, ಕಡಲೆಕಾಳು ಗಣೇಶ ದೇವಾಲಯ, ಹಂಪಿ





ಕಂಕಾಳಮೂರ್ತಿ, ವಿಠಲ ದೇವಾಲಯ, ಹಂಪಿ



ಕಂಕಾಳಮೂರ್ತಿ, ತ್ರಿಕೂಟ ದೇವಾಲಯ ತಿಮ್ಮಲಾಪುರ

ಹೇಳಬಹುದು. ವಿರೂಪಾಕ್ಷ ದೇವಾಲಾಯದಲ್ಲಿ ದೊರೆತ ಶಿಲ್ಪವು ಆಗಮಗಳು ಮತ್ತು ಶಿಲ್ಪ ಶಾಸ್ತ್ರ ಗ್ರಂಥಗಳು ಹೇಳುವ ಸಂಪೂರ್ಣ ಲಕ್ಷಣಗಳನ್ನು ಹೊಂದಿರದಿದ್ದರೂ, ಅವುಗಳಲ್ಲಿ ವಿವರಿಸಿದ ಕೇವಲ ಶಿವನ ಸಂಪೂರ್ಣ ಲಕ್ಷಣಗಳನ್ನು ಒಳಗೊಂಡಿದೆ. ಆದರೆ ವಿಠಲ ದೇವಾಲಯದಲ್ಲಿ ದೊರೆತಿರುವ ಶಿಲ್ಪವು ಸಂಪೂರ್ಣ ಲಕ್ಷಣಾ ವಿವರಗಳನ್ನು ಹೊಂದಿರುವುದು. ಮೇಲೆ ವಿವರಿಸಿರುವ ಹರಿಹರ ದೇವಾಲಯ, ಕಡಲೆಕಾಳು ಗಣೇಶ ದೇವಾಲಯ ಹಾಗೂ ತಿಮ್ಮಲಾಪುರದಲ್ಲಿರುವ ಶಿಲ್ಪಗಳು ಆಗಮ ಮತ್ತು ಶಿಲ್ಪಶಾಸ್ತ್ರ ಗ್ರಂಥಗಳ ಅನ್ವಯ ರಚಿತವಾಗಿರದೆ ಶಿಲ್ಪಿಯ ಅಭಿರುಚಿಯ ಪ್ರಭಾವದಿಂದ ಕೆತ್ತಲ್ಪಟ್ಟಿದೆ ಎಂದು ಹೇಳಬಹುದು.

ಈ ಮೇಲಿನ ೫ ಶಿಲ್ಪಗಳಲ್ಲಿ ವಿರೂಪಾಕ್ಷ ಮತ್ತು ವಿಠಲ ದೇವಾಲಯಗಳಲ್ಲಿ ದೊರೆತಿರುವ ಶಿಲ್ಪಗಳು ಆಗಮ ಮತ್ತು ಶಿಲ್ಪಶಾಸ್ತ್ರ ಗ್ರಂಥಗಳ ಉಲ್ಲೇಖಿಸಿರುವ ಪ್ರತಿಮಾ ಲಕ್ಷಣಗಳ ಅನುಸಾರವಾಗಿ ಕೆತ್ತಲಾಗಿದೆ. ಆದರೆ ಉಳಿದ ೩ ಶಿಲ್ಪಗಳು ಅಂದರೆ ಹರಿಹರ ದೇವಾಲಯ, ಕಡಲೆಕಾಳು ಗಣೇಶ ದೇವಾಲಯ ಮತ್ತು ತಿಮ್ಮಲಾಪುರದ ತ್ರಿಕೂಟ ದೇವಾಲಯಗಳಲ್ಲಿ ದೊರೆತ ಶಿಲ್ಪಗಳ ಪ್ರತಿಮಾ ಲಕ್ಷಣಗಳು ಆಗಮಗಳು ತಿಳಿಸುವ ಪ್ರತಿಮಾ ಲಕ್ಷಣಗಳಿಗಿಂತ ಅಲ್ಪ ಭಿನ್ನತೆಯನ್ನು ಹೊಂದಿದ್ದು, ಶಿಲ್ಪ ಕೆತ್ತನೆಯ ಸ್ವತಂತ್ರಕ್ಕೆ ಸಾಕ್ಷಿಯಾಗಿದೆ. ಒಟ್ಟಾರೆ ಹಂಪಿ ಪರಿಸರದಲ್ಲಿ ಕಂಡುಬರುವ ಶಿವನ ರೂಪಗಳಲ್ಲಿ ಕಂಕಾಳಮೂರ್ತಿ ಶಿಲ್ಪಗಳ ವಿರಳವಾಗಿದ್ದರೂ ಮುಖ್ಯವಾಗಿವೆ ಎನ್ನಬಹುದು.

ಅಡಿಟಿಪ್ಪಣಿಗಳು

೧. ಜ್ಞಾನಾನಂದ ಜಿ. (ಸಂ.), *ಶ್ರೀ ಕಾಶ್ಯಪ ಶಿಲ್ಪ ಶಾಸ್ತ್ರಂ (ಉತ್ತರಾರ್ಧ)*, ಪು. ೫೨೮–೫೩೫.

೨. Swaminath C. (Ed.), *Kamikagama, Chapter 52th*, pp.862-864.

೩. Bhatt N.R.(Ed.), *Rauravagama* Vol II, *chapter 35th*, pp.116-119.

೪. MayilaiMadaliar (Ed.), *Karanagama, Chapter 78th*, p. 321.

೫. SambasivaSastri K. (Ed.), *Silparatna of Sri Kumara Part II, Chapter 22*, pp.112-113.

೬ ರಮೇಶ ಕೆ.ವಿ. (ಸಂ.), *ಶ್ರೀತತ್ವನಿಧಿ ಸಂ. ೩*, ಶಿವನಿಧಿ, ಪು. ೧೩೫–೧೩೬.

೭. GopinathRao T.A., *Elements of Hindu Iconography*, Vol.2, pp.303-305 ಮತ್ತು ಜ್ಞಾನಾನಂದಜಿ. (ಸಂ.), *ಶ್ರೀ ಕಾಶ್ಯಪ ಶಿಲ್ಪ ಶಾಸ್ತ್ರಂ (ಉತ್ತರಾರ್ಧ)*, ಪು. 543–544.

೩೮

ಚಿತ್ರದುರ್ಗ ಜಿಲ್ಲೆಯಲ್ಲಿ ಜೈನ ನಿಷದಿ ಶಿಲ್ಪಗಳು

ಡಾ. ಜಯಮ್ಮ.ಬಿ.*

ಚಿತ್ರದುರ್ಗ ಜಿಲ್ಲೆಯಲ್ಲಿ ಕ್ರಿ.ಶ. ೧೨ನೇ ಶತಮಾನದಿಂದ ಕ್ರಿ.ಶ. ೧೬ನೇ ಶತಮಾನದವರೆಗೂ ಜೈನಧರ್ಮ ಇಲ್ಲಿ ಅಸ್ತಿತ್ವದಲ್ಲಿದ್ದ ಬಗ್ಗೆ ಶಾಸನಗಳು ದೃಢೀಕರಿಸುತ್ತವೆ ಈ ಜಿಲ್ಲೆಯಲ್ಲಿ ಸುಮಾರು ೧೮ ನಿಷದಿ ಸ್ಮಾರಕಗಳು ಈವರೆಗೆ ಲಭ್ಯವಾಗಿವೆ ಅವು ಚಿತ್ರದುರ್ಗ, ಚಂದ್ರವಳ್ಳಿ, ಹೆಗ್ಗೆರೆ ಸಿದ್ದಾಪುರಗಳಲ್ಲಿವೆ. ಇವುಗಳಲ್ಲಿ ಕೆಲವುಗಳು ಶಾಸನೋಕ್ತವಾಗಿವೆ. ಚಿತ್ರದುರ್ಗದ ಒಂದು ನಿಷದಿ ಶಾಸನದಲ್ಲಿ ಜಯಕೀರ್ತಿದೇವನ ಗುಡ್ಡ ಕೇತಯನನ್ನು ಉಲ್ಲೇಖಿಸುತ್ತದೆ. ಪ್ರಾಯಶಃ ಈತ ಖ್ಯಾತ ಛಂದಃಶಾಸ್ತ್ರಕಾರನಾದ ಜೈನಮುನಿ ಜಯಕೀರ್ತಿದೇವ ಆಗಿರಬಹುದು. ಆತನ ಶಿಷ್ಯ ಕೇತಯನ ನಿಷದಿ ಇದಾಗಿದೆ.

ಚಂದ್ರವಳ್ಳಿಯ ಆಂಜನೇಯ ದೇವಾಲಯದ ಪಶ್ಚಿಮದ ಕಡೆ ಒಂದು ಗೂಡಿನ ಮೇಲೆ ನಿಷದಿ ಶಾಸನವಿದೆ. ಇದನ್ನು ಬಿ.ಎಲ್. ರೈಸ್ ಅವರು ಸೆಟಿಕವೆ ಮನೆತನ ಅಥವಾ ಸ್ಥಳದ ಬಾಗವ್ವೆ ಎಂದು ಅರ್ಥೈಸಿದ್ದರು. ಆದರೆ ಡಾ. ರಾಜಶೇಖರಪ್ಪ ಅವರು ಅದನ್ನು ಪುನರ್ ಪರಿಶೀಲಿಸಿ ಸೆಟಕವೆ, ಬಾಗವ್ವೆ ಎಂಬ ಇಬ್ಬರು ಸ್ತ್ರೀಯರ ಹೆಸರನ್ನು ಪತ್ತೆ ಹಚ್ಚಿರುವರು. ಇಲ್ಲಿಯ ಶಿಲ್ಪದಲ್ಲಿ ಜಿನ ಸ್ಥಾನಿಕವಾಗಿ ನಿಂತಿರುವನು ಬದಿಗಳಲ್ಲಿ ಚಾಮರಗಳಿವೆ. ತಲೆ ಮೇಲೆ ಮುಕ್ಕೊಡೆ ಇದೆ. ಈತನ ಪಾರ್ಶ್ವಗಳಲ್ಲಿ ಇಬ್ಬರು ಕುಳಿತ ಸ್ತ್ರೀಯರಿರುವರು. ಈ ದೃಶ್ಯದಿಂದ ಈ ಇಬ್ಬರು ಸ್ತ್ರೀಯರು ನಿಷದಿಯಾಗಿರುವರೆಂದು ಸ್ಪಷ್ಟವಾಗಿ ಹೇಳಬಹುದು.

ಸಿದ್ದಾಪುರ, ಮೊಳಕಾಲ್ಮೂರು ತಾಲ್ಲೂಕು ಇಲ್ಲಿಯ ಬಸದಿಯ ಬಳಿ (ಈಗ ಬಸದಿ ಹಾಳಾಗಿದೆ) ಸುಮಾರು ೧೪ ನಿಷದಿ ಶಿಲ್ಪಗಳು ಕಂಡುಬಂದಿದೆ. ಇವುಗಳ ಕಾಲಮಾನ ಸುಮಾರು ಕ್ರಿ.ಶ. ೧೨ನೇ ಶತಮಾನದಿಂದ ಕ್ರಿ.ಶ. ೧೫ನೇ ಶತಮಾನ. ಸಾಮಾನ್ಯವಾಗಿ ಈ ಎಲ್ಲಾ ಶಿಲ್ಪಗಳು ಎರಡು ಹಂತಗಳಲ್ಲಿವೆ. ಮೇಲಿನ ಭಾಗದಲ್ಲಿ ಜಿನನನ್ನು ತೋರಿಸಿದರೆ ಕೆಳಗಿನ ಚಿತ್ರದಲ್ಲಿ ನಿಷದಿಯಾದವರ ಚಿತ್ರಗಳಿವೆ. ಇಲ್ಲಿಯ ಒಂದು ಶಿಲ್ಪ ಎರಡು ಹಂತಗಳನ್ನು ಹೊಂದಿದೆ. ಕೆಳಗೆ ಕೈ ಮುಗಿದ ಕುಳಿತ ದಂಪತಿಗಳಿರಬೇಕು, ಮೇಲಿನ ದೃಶ್ಯದಲ್ಲಿ ಸ್ಥಾನಿಕ ಜಿನ ಇರುವನು. ಆತನ ತಲೆಯ ಮೇಲೆ ಮುಕ್ಕೊಡೆ ಇದೆ. ಬಲಬದಿಯಲ್ಲಿ ದಂಪತಿಗಳು ಕೈ ಮುಗಿದು ಕುಳಿತಿರುವರು. ಪ್ರಾಯಶಃ ನಿಷದಿಯಾದ ದಂಪತಿಯರೀರ್ವರು ಜಿನರ ಬಳಿ ಸೇರಿರುವ ಅರ್ಥವಿರಬಹುದು. ಕೆಲವೊಮ್ಮೆ ಸತಿ–ಪತಿಯರಿಬ್ಬರೂ ಒಟ್ಟಿಗೆ ನಿಷದಿಯಾಗುತ್ತಿದ್ದರೆಂಬುದನ್ನು ಇದರಿಂದ ತಿಳಿಯಬಹುದು. ಕಾಲಮಾನ ಸುಮಾರು ಕ್ರಿ.ಶ. ೧೨ನೇ ಶತಮಾನ.

ಇದರ ಬಳಿ ಮತ್ತೊಂದು ನಿಷದಿ ಶಿಲ್ಪವಿದೆ. ಅದರಲ್ಲಿಯೂ ಕೂಡಾ ಇದೇ ರೀತಿಯ ದೃಶ್ಯವಿದೆ. ಆದರೆ ಶಿಲ್ಪದ ರಚನೆ, ಬಳಸಿದ ಮಾಧ್ಯಮ ಮಾತ್ರ ಭಿನ್ನವಾಗಿದೆ. ಮೊದಲನೇ ಶಿಲ್ಪ ಕ್ರಿ.ಶ. ೧೨ನೇ ಶತಮಾನದ್ದಾಗಿದ್ದು, ಪ್ರಾಯಶಃ ಈ ಶಿಲ್ಪ ನಂತರ ಕಾಲದ್ದಾಗಿದೆ. ಇದರಲ್ಲಿಯ ದೃಶ್ಯಗಳು ಸುಂದರವಾಗಿಲ್ಲ. ಬಳಸಿದ ಮಾಧ್ಯಮವೂ ಅದಕ್ಕೆ ಕಾರಣ ಇರಬಹುದು. ಆದರೂ ಎರಡೂ ಶಿಲ್ಪಗಳ ದೃಶ್ಯ ನಿರೂಪಣೆ ಮಾತ್ರ ಒಂದೇ ರೀತಿಯದ್ದಾಗಿದೆ.

ಈ ಸ್ಥಳದಲ್ಲಿಯ ಮತ್ತೆ ೩ ಶಿಲ್ಪಗಳು ಒಂದೇ ರೀತಿಯಲ್ಲಿವೆ, ಈ ಶಿಲಾ ಫಲಕಗಳು ಎರಡು ಹಂತಗಳಲ್ಲಿವೆ. ಕೆಳಗಿನ ಹಂತಗಳಲ್ಲಿ ವ್ಯಕ್ತಿಯೋರ್ವರು ಕೈಮುಗಿದು ಕುಳಿತವರು. ಮೇಲಿನ ಹಂತದಲ್ಲಿ ಜಿನನ ಚಿತ್ರಗಳಿವೆ. ಕೆಳಗಿನ ವ್ಯಕ್ತಿ ನಿಷದಿಯಾಗಿರುವ ವ್ಯಕ್ತಿಗಳಾಗಿರುವರು. ಇಲ್ಲಿನ ಮತ್ತೊಂದು ಶಿಲಾಫಲಕ ಗಮನ ಸೆಳೆಯುತ್ತದೆ. ಇಲ್ಲಿಯವರೆಗೆ ಒಬ್ಬ ವ್ಯಕ್ತಿ, ಇಬ್ಬರು ವ್ಯಕ್ತಿಗಳು ನಿಷದಿಯಾದ ಬಗ್ಗೆ ಗಮನಿಸಿದೆವು. ಆದರೆ ಈ ಶಿಲಾಫಲಕದಲ್ಲಿ ೩ ಜನ ವ್ಯಕ್ತಿಗಳು ನಿಷದಿಯಾದ ಬಗ್ಗೆ ಮಾಹಿತಿಯಿದೆ. ಈ ಫಲಕ ಎರಡು ಹಂತಗಳಲ್ಲಿವೆ. ಕೆಳಗಿನ ದೃಶ್ಯದಲ್ಲಿ ಮೂರು ಜನ ವ್ಯಕ್ತಿಗಳು ಕೈ ಮುಗಿದು ಕುಳಿತಿರುವರು. ಮೇಲಿನ ದೃಶ್ಯದಲ್ಲಿ ಜಿನ ಚಿತ್ರವಿದೆ. ಮೂರು ಜನ ನಿಷದಿಯಾದ ಬಗ್ಗೆ ಇದು ಮಾಹಿತಿ ನೀಡಿದೆ. ಬದಿಗಳ ವ್ಯಕ್ತಿಗಳು ಯತಿಗಳೇನಾದರೂ ಆಗಿರಬಹುದು ಎಂದುಕೊಳ್ಳಬಹುದಾದರೆ, ಇಲ್ಲಿಯ ಯಾವುದೇ ಶಿಲ್ಪದಲ್ಲೂ ಯತಿಯನ್ನೂ ತೋರಿಸಿಲ್ಲ. ಹಾಗಾಗಿ ಇಲ್ಲಿ ಮೂರು ಜನ ವ್ಯಕ್ತಿಗಳು ನಿಷದಿಯಾಗಿರಬಹುದೆಂದು ತಿಳಿಯುತ್ತದೆ. ಇಲ್ಲಿನ ಮತ್ತೊಂದು ಶಿಲ್ಪದಲ್ಲಿ ಸ್ಥಾನಿಕ ಜಿನ ಚಿತ್ರವಿದೆ.

* ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ.

ಚಿತ್ರದುರ್ಗ ಜಿಲ್ಲೆಯಲ್ಲಿ ಜೈನ ನಿಷದಿ ಶಿಲ್ಪಗಳು









ತಲೆಗೆ ಸಮಾನಾಂತರವಾಗಿ ಬದಿಗಳಲ್ಲಿ ಚಾಮರಗಳಿವೆ. ತಲೆಯ ಮೇಲೆ ಮುಕ್ಕೊಡೆ ಇದೆ. ಈತನ ಪಾರ್ಶ್ವಗಳಲ್ಲಿ ಕುಳಿತ ಇಬ್ಬರು ವ್ಯಕ್ತಿಗಳ ಚಿತ್ರಗಳಿವೆ. ಹಾಗಾಗಿ ಕುಳಿತ ಇಬ್ಬರು ವ್ಯಕ್ತಿಗಳು ಸಮಾಧಿಯಾದ ಮಾಹಿತಿ ಇದಾಗಿದೆ. ಇಲ್ಲಿಯ ಮತ್ತೆ ಮೂರು ಕಲ್ಲುಗಳ ಮೇಲೆ ಅರ್ಧ ಪದ್ಮಾಸನದಲ್ಲಿ ಕುಳಿತ ಜಿನನನ್ನು ಮಾತ್ರ ತೋರಿಸಲಾಗಿದೆ. ಮೇಲೆ ಮುಕ್ಕೊಡೆ ಇದೆ. ಒಂದರಲ್ಲಿ ರೇಖಾ ಚಿತ್ರದಂತೆ ತೋರಿಸಿದ್ದರೆ, ಮತ್ತೆ ಎರಡರಲ್ಲಿ ಕಲ್ಲನ್ನು ಕೊರೆದು ಉಬ್ಬು ಚಿತ್ರದಂತೆ ತೋರಿಸಿರುವರು.

ಇವು ಕೂಡ ನಿಷದಿಗಳೇ ಆಗಿದ್ದು, ನಿಷದಿಯಾದವರ ಚಿತ್ರಗಳನ್ನು ಇಲ್ಲಿ ತೋರಿಸದೇ ಜಿನನನ್ನು ಮಾತ್ರ ತೋರಿಸಲಾಗಿದೆ. ಇಲ್ಲಿಯ ಮತ್ತೆ ಮೂರು ಶಿಲಾಫಲಕದಲ್ಲಿ ಸ್ಥಾನಿಕ ಜಿನನನ್ನು ಮಾತ್ರ ತೋರಿಸಿರುವರು. ಒಂದು ಫಲಕದಲ್ಲಿ ಸ್ಥಾನಿಕ ಜಿನನನ್ನು ರೇಖಾಚಿತ್ರದಂತೆ ತೋರಿಸಿದ್ದರೆ, ಮತ್ತೆ ಎರಡು ಶಿಲ್ಪಗಳು ಕೊರೆದ ದುಂಡು ಶಿಲ್ಪಗಳಾಗಿವೆ. ಈ ರೀತಿಯಾಗಿ ಒಂದೇ ಸ್ಥಳದಲ್ಲಿ ಸುಮಾರು ಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದ್ದರೆ, ಉಳಿದೆಲ್ಲವುಗಳು ನಂತರದ ರಚನೆಗಳಾಗಿವೆ. ಬಹುಷಃ ಇವೆಲ್ಲಾ ಒಂದೇ ಕಾಲಕ್ಕೆ ಸೇರಿದವುಗಳಾಗಿವೆ. ಒಂದೇ ಸ್ಥಳದಲ್ಲಿ ಸುಮಾರು ೧೪ ಜೈನ ನಿಷದಿ ಶಿಲ್ಪಗಳು ಕಾಣುತ್ತವೆ. ಇಲ್ಲಿಯ ಒಂದೆರಡು ಶಿಲ್ಪಗಳು ಮಾತ್ರ ಸುಮಾರು ಕ್ರಿ.ಶ. ೧೨ನೆಯ ಶತಮಾನಕ್ಕೆ ಸೇರಿದ್ದರೆ, ಉಳಿದೆಲ್ಲವುಗಳು ನಂತರದ ರಚನೆಗಳಾಗಿವೆ. ಬಹುಷಃ ಇವೆಲ್ಲಾ ಒಂದೇ ಕಾಲಕ್ಕೆ ಸೇರಿದವುಗಳಾಗಿವೆ. ಒಂದೇ ಸ್ಥಳದಲ್ಲಿ ಇಷ್ಟೊಂದು ದೊರೆತಿರುವುದು ಮಹತ್ವದ್ದೇ ಆಗಿದೆ. ಇಷ್ಟೊಂದು ಜನ ನಿಷದಿಯಾಗಿರುವುದನ್ನು ಗಮನಿಸಿದರೆ ಈ ಕಾಲಮಾನದಲ್ಲಿ ಇಲ್ಲಿ ಜೈನಧರ್ಮೀಯರ ಸಂಖ್ಯೆ ಅಧಿಕವಾಗಿತ್ತೆಂದೇ ಹೇಳಬಹುದು. ಇಲ್ಲಿಯ ಕ್ರಿ.ಶ. ೧೨೭೮ರ ಶಾಸನ ಜೈನ ಬಸದಿ ಇದ್ದ ಬಗ್ಗೆ ಉಲ್ಲೇಖಿಸಿದೆ. ಕ್ರಿ.ಶ. ೧೩೩೬ರ ೩ನೇ ಬಲ್ಲಾಳನ ಪ್ರಾಂತ್ಯಾಧಿಕಾರಿ ಬಲ್ಲಪ್ಪ ದಂಡನಾಯಕನ ನಿಷದಿಶಾಸನವೂ ಕೂಡಾ ದೊರೆತಿದೆ.

ಚಿತ್ರದುರ್ಗದ ಮೆಣಸಿಕನಾಯಿ ತಿಮ್ಮಜ್ಜನ ತೋಟದಲ್ಲಿ ಕ್ರಿ.ಶ. ೧೪೨೩ರ ಕಾಲದ ನಿಷದಿ ದೊರೆತಿದೆ. ಅದು ಮಂಗೀಸೆಟ್ಟಿಯ ಮಗ ಗುಮ್ಮಿಸೆಟ್ಟಿ ನಿಷದಿಯಾದ ಬಗ್ಗೆ ತಿಳಿಸಿದೆ. ಇಲ್ಲಿಯ ಚಿತ್ರಗಳು ಕೂಡಾ ಅಷ್ಟೇನು ನೈಜವಾಗಿಲ್ಲ. ಇಲ್ಲಿ ಮೂವರು ವ್ಯಕ್ತಿಗಳು ಧ್ಯಾನದಲ್ಲಿ ಕುಳಿತಿರುವರು. ಇವರ ಬಲಬದಿಗೆ ಪೀಠವಿದೆ. ಮಧ್ಯದಲ್ಲಿ ಕುಳಿತ ವ್ಯಕ್ತಿಯ ತಲೆಯ ಮೇಲ್ಭಾಗದಲ್ಲಿ ಮುಕ್ಕೊಡೆ ಇರುವುದು, ಬದಿಗಳಲ್ಲಿ ಸೂರ್ಯ–ಚಂದ್ರ ಚಿತ್ರಗಳಿವೆ. ಇದೇ ರೀತಿ ಮೂರು ಜನ ಕುಳಿತಿರುವ ಶಿಲಾಫಲಕವೊಂದು ಸಿದ್ದಾಪುರದಲ್ಲಿ ದೊರೆತಿರುವುದನ್ನು ಸ್ಮರಿಸಿಕೊಳ್ಳಬಹುದಾಗಿದೆ. ಅಲ್ಲಿ ಮೂರು ಜನ ವ್ಯಕ್ತಿಗಳ ಮೇಲೆ ಜಿನ ಬಿಂಬವನ್ನು ತೋರಿಸಲಾಗಿದೆ. ಇಲ್ಲಿ ಜಿನನ ಪ್ರತೀಕವಾಗಿ ಮುಕ್ಕೊಡೆಯನ್ನು ಮಾತ್ರ ತೋರಿಸಿರುವರು.

ಹೆಗ್ಗೆರೆಯ ಜೈನಬಸದಿಯ ಮುಂಭಾಗದಲ್ಲಿ ಎರಡು ನಿಷದಿ ಶಿಲ್ಪಗಳು ಕಂಡುಬಂದಿವೆ. ಕ್ರಿ.ಶ. ೧೧೬೩ ನಿಷದಿ ಶಾಸನ ಮಾಣಿಕ್ಯಾನಂದ ಸಿದ್ಧಾಂತದೇವರ ಶಿಷ್ಯ ಮೇಘಚಂದ್ರ ಭಟ್ಟದೇವ ನಿಷದಿಯಾದ ಬಗ್ಗೆ ತಿಳಿಸಿದೆ. ಕ್ರಿ.ಶ. ೧೯೨ರ ನಿಷದಿ ತ್ರಿಭುವನಕೀರ್ತಿಯ ಮಗನಾದ ಚಂದ್ರಕೀರ್ತಿ ದೇಹ ತ್ಯಜಿಸಿದ ಬಗ್ಗೆ ಉಲ್ಲೇಖಿಸಿದೆ.

ಈ ರೀತಿಯಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು ಕ್ರಿ.ಶ. ೧೨ ರಿಂದ ೧೬ನೇ ಶತಮಾನದವರೆಗಿನ ಸುಮಾರು ೧೮ ನಿಷದಿ ಶಿಲ್ಪಗಳು ಕಂಡುಬಂದಿವೆ. ಇದರಿಂದ ಆ ಕಾಲದಲ್ಲಿ ಜೈನಧರ್ಮ ಇಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಬಗ್ಗೆ ತಿಳಿಯಬಹುದು.

ಆಕರ ಗ್ರಂಥಗಳು

೧. EC : Vol No. XI.

೨. ಡಾ. ಬಿ. ರಾಜಶೇಖರಪ್ಪ, 'ಪ್ರಾಚೀನ ಚಿತ್ರದುರ್ಗ' ಮತ್ತು 'ದುರ್ಗದ ಶೋಧ'.

೪೯

ನಂದಿಗುಡಿ ಪರಿಸರದ ನಂದಿ (ವೃಷಭ) ಶಿಲ್ಪಗಳು

ಡಾ. ಬಿ.ಸಿ. ರಾಕೇಶ್*

ನಂದಿಗುಡಿ ಪರಿಸರದಲ್ಲಿ ಬರುವ ನಂದಿಯ ಮೂರ್ತಿ ಅಥವಾ ವೃಷಭ ಶಿಲ್ಪಗಳ ಗುಣಲಕ್ಷಣಗಳನ್ನು ವಿವರಿಸುವುದಾಗಿದೆ. ನಂದಿಗುಡಿ ಪರಿಸರದಲ್ಲಿ ಅಂದರೆ ನಂದಿಗುಡಿಯ ಬಸವೇಶ್ವರ ಅಥವಾ ನಂದೀಶ್ವರ ದೇವಾಲಯ, ನಂದಿತಾವರೆಯ ಮಲ್ಲಿಕಾರ್ಜುನ ಅಥವಾ ಬಸವೇಶ್ವರ ದೇವಾಲಯ ಹಾಗೂ ಪುರದಕೇರಿಯ ಬಸವೇಶ್ವರ ದೇವಾಲಯಗಳಲ್ಲಿ ಕಾಣಬರುವ ಬೃಹತ್ ವೃಷಭ ಅಥವಾ ನಂದಿಯ ಶಿಲ್ಪಗಳ ವಿಶೇಷತೆ ಹಾಗೂ ಆಚರಣೆಗಳನ್ನು ಕುರಿತು ವಿಶ್ಲೇಷಿಸುವುದಾಗಿದೆ. ನಂದಿಗುಡಿ ಮತ್ತು ನಂದಿತಾವರೆ ಹರಿಹರ ತಾಲ್ಲೂಕು ದಾವಣಗೆರೆ ಜಿಲ್ಲೆಯಲ್ಲಿ ಬರುತ್ತವೆ. ಪುರದಕೇರಿ ಹಿರೇಕರೂರು ತಾಲ್ಲೂಕು ಹಾವೇರಿ ಜಿಲ್ಲೆಯಲ್ಲಿ ಬರುತ್ತದೆ. ಪುರದಕೇರಿ ಮತ್ತು ನಂದಿಗುಡಿ ತುಂಗಭದ್ರೆಯ ಎಡ ಮತ್ತು ಬಲ ದಂಡೆಯಲ್ಲಿವೆ. ತುಂಗಭದ್ರ ನದಿಯ ಪಾತ್ರದಲ್ಲಿ ವಾಸಿಸುವ ಜನರ ನೀರಿನ ಅಗತ್ಯವನ್ನು ಪೂರೈಸುತ್ತಾ ಬಂದಿದೆ. ಹಾಗೂ ನಂದಿತಾವರೆ ನಂದಿಗುಡಿಯಿಂದ ೨೦ ಕಿ.ಮೀ. ಅಂತರದ ಹರಿಹರ-ಹೊನ್ನಾಳಿ ರಸ್ತೆಯಲ್ಲಿ ಬರುವ ಗ್ರಾಮವಾಗಿದೆ. ನಂದಿಗುಡಿ ಮಠದ ಪೀಠಾಧ್ಯಕ್ಷರಾದ ವೃಷಭಪುರಿ ಸೂರ್ಯ ಸಿಂಹಾಸನಾಧೀಶ್ವರ ೧೧೦೮ ಜಗದ್ಗುರು ಶ್ರೀ ಶ್ರೀ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಬೃಹನ್ಮಠ, ವೃಷಭಪುರಿ ಸಂಸ್ಥಾನ, ನಂದಿಗುಡಿ. ಇವರುಗಳು ದೇವಾಲಯಗಳ ಆಚರಣೆಗಳಲ್ಲಿ ಪ್ರಮುಖ ಪಾತ್ರ ಹಾಗೂ ಮಾರ್ಗದರ್ಶನವನ್ನು ನೀಡುತ್ತಾ ಬಂದಿದ್ದಾರೆ. ನಂದಿಗುಡಿಯ ಜಾತ್ರೆಯನ್ನು ನೊಳಂಬ ಸಮುದಾಯದ ಕುಲದೇವರ ರೀತಿಯಲ್ಲಿ ಎಲ್ಲರೂ ಸೇರಿಕೊಂಡು ಆಚರಣೆ ಮಾಡುತ್ತಾ ಬಂದಿದ್ದಾರೆ. ಹಾಗಾಗಿ ಮಠ ಮತ್ತು ನಂದೀಶ್ವರ ದೇವಾಲಯ ಸಮಾಜದ ಎಲ್ಲರಿಗೂ ಪವಿತ್ರ ಮತ್ತು ಪೂಜ್ಯನೀಯವಾದ ಪುಣ್ಯಸ್ಥಳವಾಗಿದೆ.

ನಂದಿಗುಡಿಯ ಪಕ್ಕದಲ್ಲಿ ಐತಿಹಾಸಿಕ ಹಿನ್ನೆಲೆ ಪಡೆದ ಕಡರನಾಯಕನಹಳ್ಳಿ, ವಾಸನ, ಪಾಳ್ಯ ಹಾಗೂ ನದಿಯ ಎಡದಂಡೆಯಲ್ಲಿ ಮಾಳನಾಯಕನಹಳ್ಳಿ, ಉಕ್ಕಡಗಾತ್ರಿ, ತುಮ್ಮಿನಕಟ್ಟೆ ಊರುಗಳ ಹೆಸರುಗಳು ಐತಿಹಾಸಿಕ ಮಹತ್ವ ಪಡೆದ ನಾಯಕರ ಹೆಸರಿನಿಂದ ಕರೆಯಲಾಗುತ್ತದೆ. ಊರುಗಳಲ್ಲಿ ನೊಳಂಬ ಸಮುದಾಯಕ್ಕೆ ಸೇರಿದ ಲಿಂಗಾಯ್ತ ಜನಾಂಗ ವಾಸವಾಗಿದ್ದು ನಂದಿಗುಡಿಯ ನಂದೀಶ್ವರ ದೇವಾಲಯದ ಭಕ್ತರಾಗಿದ್ದಾರೆ. ಮೂರು ದೇವಾಲಯಗಳಲ್ಲಿ ನಂದಿಗೆ ವಿಶೇಷ ಪೂಜೆಯನ್ನು ಸಲ್ಲಿಸುತ್ತಿದ್ದಾರೆ. ರಥೋತ್ಸವದ ಸಂದರ್ಭದಲ್ಲಿ ನಂದಿಗೆ ಕಿರೀಟಧಾರಣೆ ಅಂದರೆ ಬಾಸಿಂಗವನ್ನು ಧಾರಣೆ ಮಾಡುತ್ತಾರೆ. ನಂದಿಗುಡಿಯ ನಂದಿಗೆ ಗೋವಿನಹಾಳ್ ದಡ್ಡಿ ನಿಂಗನಗೌಡರ ಮನೆಯಿಂದ ಬಾಸಿಂಗ ಧಾರಣೆ ನಡೆಯುತ್ತದೆ. ನಂದಿತಾವರೆಯ ನಂದಿಗೆ ಜಿಗಳಿಯ ಮಲ್ಲನಗೌಡ ವಂಶಸ್ಥರಾದ ಮಲ್ಲಪ್ಪಗೌಡ ಮನೆತನದವರು ಬಾಸಿಂಗವನ್ನು ರಥೋತ್ಸವದ ಸಂದರ್ಭದಲ್ಲಿ ನೀಡುತ್ತಾರೆ. ಮತ್ತು ಪುರದಕೇರಿಯ ನಂದಿಗೆ ಊರಿನ ಸಮಸ್ತ ಗ್ರಾಮಸ್ಥರಿಂದ ಬಾಸಿಂಗಧಾರಣೆ ಕಾರ್ಯಕ್ರಮ ನಡೆಯುತ್ತದೆ. ನಂದಿತಾವರೆಯ ಬಸವೇಶ್ವರ ದೇವರ ರಥೋತ್ಸವದಲ್ಲಿ ಆನೆ ಉತ್ಸವ, ಕುದುರೆ ಉತ್ಸವ, ನಂದಿಧ್ವಜ ರಾಜಬೀದಿ, ನಂದಿಕೋಲು, ನಂದಿ ಧ್ವಜಾರೋಹಣ, ಕಂಕಣಧಾರಣೆ, ಉತ್ಸವಮೂರ್ತಿಯ ಮೆರವಣಿಗೆ ಮುಂತಾದ ಆಚರಣೆಗಳು ರಾಜರ ಆಚರಣೆಗಳನ್ನು ನೆನಪಿಸುತ್ತದೆ. ೯ ದಿನಗಳ ಕಾಲ ಆಚರಣೆಗಳು ನಡೆಯುತ್ತವೆ. ನಂದಿಗುಡಿ ಮತ್ತು ಪುರದಕೇರಿಯಲ್ಲಿ ನೊಳಂಬ ಲಿಂಗಾಯ್ತರೆ ಈ ಆಚರಣೆಗಳನ್ನು ಮಾಡುತ್ತಾ ಬಂದಿದ್ದಾರೆ.

ಭಾರತೀಯ ಸಂಸ್ಕೃತಿಯಲ್ಲಿ ವೃಷಭ ಸಂಸ್ಕೃತಿ ಪ್ರಮುಖ ಮತ್ತು ಪ್ರಾಚೀನ ಸಂಸ್ಕೃತಿ ಅನಾದಿ ಶ್ರೀ ರುದ್ರ ದೇವನಿಂದಲೇ ಪ್ರಾರಂಭವಾದುದು. ವೃಷಭೋರುದ್ರಃ ರುದ್ರನಿಗೆ ಅನ್ವರ್ಥಕ ಹೆಸರು ರುದ್ರದೇವನು ಧರ್ಮ ಪರಾಕ್ರಮಿಯಾಗಿದ್ದರಿಂದ ಆತನನ್ನು ವೃಷಭನೆಂದು ಸಂಬೋಧಿಸಿದರು. ವೃಷಭ ಪದದರ್ಥ ಧರ್ಮ ಪರಾಕ್ರಮ ಎನ್ನುವುದು. ಧರ್ಮ ಮತ್ತು ಪರಾಕ್ರಮ ಇವೆರಡೂ ರುದ್ರದೇವನ ಸ್ವಾಭಾವಿಕ ಗುಣಧರ್ಮಗಳಾಗಿದ್ದವು. ಶಿವನ ಅವತಾರವಾದ ರುದ್ರನು ಪರಾಕ್ರಮಿಯೆಂಬುದು ಪ್ರಸಿದ್ಧ, ಅಂತೆಯೇ ರುದ್ರನು ವಿಶ್ವರೂಪ ಎಂದು ವಿಖ್ಯಾತನಾಗಿದ್ದಾನೆ. ನಂದಿಯ ರೂಪದಲ್ಲಿರುವ ವೃಷಭದೇವನು ಜನರ ದುಃಖಗಳನ್ನು ದೂರಮಾಡಿ ಜನರಿಗೆ ನೆಮ್ಮದಿಯನ್ನು ಕರುಣಿಸುತ್ತಾನೆ ಎಂಬ ನಂಬಿಕೆ ಇದೆ. ಹಾಗಾಗಿ ನಂದಿಯ

* ಸಹಾಯಕ ಪ್ರಾಧ್ಯಾಪಕರು, ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು, ದಾಣಗೆರೆ-೫೭೭೦೦೪.

ರೂಪದಲ್ಲಿ ಶಿವನನ್ನು ಕಾಣುವ ಒಂದು ಸಂಪ್ರದಾಯ ನೊಳಂಬ ಅರಸರ ಕಾಲದಲ್ಲಿ ಬೆಳವಣಿಗೆಯಾಯಿತು. ಅಂತೆಯೇ ನಂದಿಯನ್ನು ಅವರ ಲಾಂಛನವಾಗಿ ಸ್ವೀಕರಿಸಿರಬಹುದು.

ವೃಷಭೋ ವಿಶ್ವರೂಪಃ। ನಂದಿಯ ಪೂಜೆಯ ಸಿಂಧೂ ನಾಗರೀಕತೆಯ ಕಾಲದಲ್ಲಿ ನಮಗೆ ಸಿಗುತ್ತದೆ. ಅಂತೆಯೇ ಬೃಹತ್ ನಂದಿಯ ಮೂರ್ತಿಗಳು ಜಗತ್ತಿನ ಬೇರೆ ಬೇರೆ ಕಡೆ ಕಂಡುಬರುತ್ತವೆ. ಕಾಂಬೋಡಿಯ ದೇವಾಲಯದ ಸಂಕೀರ್ಣಗಳಲ್ಲಿ, ನೇಪಾಳದ ಪಶುಪತಿ ದೇಗುಲ, ಆಸ್ಟ್ರೇಲಿಯ. ಜರ್ಮನಿ, ಈಜಿಪ್ಟ್ ದೇಶಗಳಲ್ಲಿ ನಂದಿಯ ಮೂರ್ತಿಗಳು ಸಿಗುತ್ತವೆ. ನಂದಿಯು ಆಹಾರ ಮತ್ತು ಶಕ್ತಿಯ ಸಂಕೇತ, ಚೈತನ್ಯ, ಸಾಕ್ಷಾತ್ಕಾರ, ಭೂಮಿಯ ಮೇಲಿರುವ ಕಲ್ಪತರು ವಿಶ್ವದ ರಕ್ಷಕ ಮುಂತಾದ ಹೆಸರುಗಳಿಂದ ನಂದಿಯನ್ನು ಹೊಗಳಲಾಗಿದೆ. ಸೂರ್ಯನು ಸೃಷ್ಟಿಯ ಕರ್ತೃ ಅದರಂತೆ ನಂದಿಯು ರಕ್ಷಕನಾಗಿ ಕಾರ್ಯವನ್ನು ನಿರ್ವಹಿಸುತ್ತಾನೆ. ಅನೇಕ ದೇವಾಲಯಗಳಲ್ಲಿ ಮಕರ ಸಂಕ್ರಮಣದ ದಿನದಂದು ಸೂರ್ಯ ಕಿರಣಗಳು ನಂದಿಯ ಕೊಂಬಿನ ಮಧ್ಯದಿಂದ ಹಾದು ಲಿಂಗದ ಮೇಲೆ ಬೀಳುತ್ತದೆ.

ನಂದಿಗುಡಿಯ ಬಸವೇಶ್ವರ ದೇವಾಲಯದಲ್ಲಿರುವ ನಂದಿಯ ಶಿಲ್ಪವನ್ನು ನಾವು ನೋಡುವುದಾದರೆ ಬೃಹತ್ ನಂದಿಯನ್ನು ಪ್ರತಿಷ್ಠಾಪನೆಯ ನಂತರದಲ್ಲಿ ದೇವಾಲಯವನ್ನು ಕಟ್ಟಿದ್ದರಿಂದ ನಂದಿಗುಡಿ ಎಂದು ನಾಮಕರಣ ಮಾಡಿ ವೃಷಭಪುರಿ ಸಂಸ್ಥಾನ ಮಠವನ್ನು ನಿರ್ಮಾಣ ಮಾಡಿರಬಹುದು. ನಂದಿಯ ಶಿಲ್ಪವನ್ನು ಶಿವಲಿಂಗಕ್ಕೆ ಅಭಿಮುಖವಾಗಿ ನಿರ್ಮಾಣ ಮಾಡಲಾಗಿದೆ. ಶಿವಲಿಂಗವು ಪೂರ್ವಕ್ಕೆ ಮುಖ ಮಾಡಿದೆ, ನಂದಿಯನ್ನು ದಕ್ಷಿಣಾಭಿಮುಖವಾಗಿ ಕೆತ್ತಲಾಗಿದೆ. ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗಗಳನ್ನು ಒಳಗೊಂಡಿದೆ. ನಂದಿ ಹಿಂದೆ ಕಿರಿದಾದ ಚಿಕ್ಕ ಗರ್ಭಗೃಹದಲ್ಲಿ ಸೂರ್ಯನ ವಿಗ್ರಹವಿದೆ. ಸುತ್ತಲು ಶಿವನ ಪರಿವಾರ ದೇವತೆಗಳು ಗೋಡೆಗೆ ಹೊಂದಿಕೊಂಡಂತೆ ಕೆತ್ತಲಾಗಿದೆ. ನಂದಿಯ ವಿಗ್ರಹವನ್ನು ಅರ್ಧ ಅಡಿ ಎತ್ತರದ ಪೀಠದ ಮೇಲೆ ಎಡಕ್ಕೆ ಮಲಗಿರುವ ಹಾಗೆ ಪ್ರತಿಷ್ಠಾಪಿಸಲಾಗಿದೆ. ನಂದಿಯ ವಿಗ್ರಹವು ಮುಖದ ಭಾಗದಲ್ಲಿ ೬೧/೨ ಅಡಿ ಎತ್ತರವಿದ್ದು ೮ ಅಡಿ ಉದ್ದ ಹಾಗೂ ೪ ಅಡಿ ಅಗಲವಾಗಿದೆ. ಆಕರ್ಷಕ ಏರು ಮುಖವನ್ನು ಹೊಂದಿದೆ. ಕೊರಳು ಹಾಗೂ ಭುಜ (ಡುಬ್ಬ)ವನ್ನು ಸುಂದರವಾಗಿ ಬಲಿಷ್ಠ ರೀತಿಯಲ್ಲಿ ಕೆತ್ತಲಾಗಿದೆ. ಸಣ್ಣದಾದ ದಪ್ಪ ಹಾಗೂ ಬಲಿಷ್ಠ ಕೊಂಬುಗಳು, ಕೊಂಬುಗಳಿಗೆ ಹೊಂದಿಕೊಂಡಂತೆ ಕಿವಿಗಳು, ಕಿವಿಯಲ್ಲಿ ನೆರಿಗೆಗಳು, ಕಿವಿ ಮತ್ತು ಕೊಂಬುಗಳ ಮಧ್ಯ ಸೇರಿಸಿ ದುಂಡಾದ ಕೀರ್ತಿಮುಖವನ್ನು ಕೆತ್ತಲಾಗಿದೆ. ಕೊಂಬಿಗೆ ಸುತ್ತುವರಿದು ಹಣೆಪಟ್ಟಿಯನ್ನು ವಿವಿಧ ಅಲಂಕಾರಗಳಿಂದ ಕೆತ್ತಲಾಗಿದೆ. ವಿಶಾಲವಾದ ಹಣೆ, ಸುಂದರವಾದ ಮೂಗಿನ ಹೊರಳೆಗಳು, ಬಾಯಿ, ಬಾಯಿಯ ಕೆಳ ಭಾಗವನ್ನು ಸುಂದರವಾಗಿ ಹಾಗೂ ಕೊಂಬಿನ ಪಟ್ಟಿಕೆ, ಭುಜ (ಡುಬ್ಬ) ಮತ್ತು ಕೊಂಬಿನ ಮಧ್ಯದಲ್ಲಿ ಹಾರಗಳನ್ನು ವಿವಿಧ ರೀತಿಯಲ್ಲಿ ಚಿತ್ರಿಸಲಾಗಿದೆ. ಇದರಲ್ಲಿ ಗಂಟೆಯ ಹಾರವು ಒಂದು ನಂದಿಯ ಬೆನ್ನನ್ನು ಸುತ್ತಿಕೊಂಡು ಬಂದಿರುವ ಇನ್ನೊಂದು ಹಾರ ಮುಂದೆ ಒಂದುಗೂಡಿಕೊಂಡು ಗಂಟೆಯನ್ನು ಸೇರಿಕೊಳ್ಳುತ್ತದೆ. ಬಲಗಾಲು ಮಡಚಿಕೊಂಡು ಎಡಗಾಲು ಮುಂದೆ ಚಾಚಿ ಅರ್ಧ ಮಡಚಿದ ರೀತಿಯಲ್ಲಿ ಕೆತ್ತಲಾಗಿದೆ. ಪೂರ್ಣ ದೇಹದ ಭಾಗವು ನೆಲದ ಮೇಲೆ ಎಡಕ್ಕೆ ಮಲಗಿದಂತೆ ಕೆತ್ತಲಾಗಿದೆ. ಪೃಷ್ಠದ ಭಾಗ ಸಪುರವಾಗಿ ಹಾಗೂ ಬಲಿಷ್ಠವಾಗಿ ಕೆತ್ತಲಾಗಿದೆ. ಕಾಲುಗಳು ಮಡಚಿದಂತೆ ಬಲಗಾಲು ಹೊರಗಡೆ ಕಾಣುವಂತೆ, ಎಡಗಾಲು ಅದರ ಪಕ್ಕದಲ್ಲಿ ಪುಷ್ಠ ಭಾಗಕ್ಕೆ ಹೊಂದಿಕೊಂಡಂತೆ ಬಾಲವನ್ನು ಚಿತ್ರಿಸಲಾಗಿದೆ. ಹಿಂಬದಿಯ ತೊಡೆಯ ಮಧ್ಯದಲ್ಲಿ ಹಿಂದೆ ಕಾಣುವಂತೆ ವೃಷಣಗಳನ್ನು ಸುಂದರವಾಗಿ ಕೆತ್ತಲಾಗಿದೆ. ಸುಂದರವಾದ ನಂದಿಯು ಮಲಗಿದ ರೀತಿಯಲ್ಲಿ ಕೆತ್ತಲಾಗಿದೆ, ರಥೋತ್ಸವದ ಸಂದರ್ಭದಲ್ಲಿ ನಂದಿಗೆ ವಿಶೇಷ ಪೂಜೆ ಮಾಡಿ ನಂದಿಯ ಉತ್ಸವಮೂರ್ತಿ ಮತ್ತು ಸ್ವಾಮಿಗಳನ್ನು ರಥದಲ್ಲಿ ಕೂರಿಸಿ ರಥೋತ್ಸವ ನಡೆಸುತ್ತಾರೆ. ನಂದಿಧ್ವಜ, ಕಂಕಣಧಾರಣೆ, ವೀರಭದ್ರದೇವರ ಗುಗ್ಗಳ, ಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವ ಇನ್ನೂ ಮುಂತಾದ ಕಾರ್ಯಕ್ರಮಗಳು ಜರಗುತ್ತವೆ.

ನಂದಿತಾವರೆಯಲ್ಲಿರುವ ಬಸವೇಶ್ವರ ಅಥವಾ ಮಾಣಿಕ್ಯೇಶ್ವರ ದೇವಾಲಯದ ನವರಂಗದಲ್ಲಿರುವ ನಂದಿಯ ಶಿಲ್ಪವನ್ನು ನಾವು ಗಮನಿಸಬಹುದು. ಈ ದೇವಾಲಯವನ್ನು ೧೨ನೇ ಶತಮಾನದಲ್ಲಿ ಮಾಣಿಕ್ಯಣ್ಣ ಎಂಬುವವನು ಸ್ಥಳೀಯ ನೊಳಂಬ ಅರಸನು ನಿರ್ಮಾಣ ಮಾಡಿದ ಶಾಸನ ಉಲ್ಲೇಖ ನಮಗೆ ದೊರೆಯುತ್ತದೆ. ನಂದಿಯ ಬೃಹತ್ ವಿಗ್ರಹವನ್ನು ಕೆತ್ತಲಾಗಿದೆ. ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದನ್ನು ಮಾಣಿಕ್ಯೇಶ್ವರನೆಂದು ಕರೆಯುತ್ತಾರೆ. ಅಂತರಾಳ ಭಾಗದಲ್ಲಿ ಸಣ್ಣ ನಂದಿಯ ಶಿಲ್ಪವಿದೆ. ನವರಂಗವು ನಾಲ್ಕು ಕಂಬಗಳನ್ನು ಒಳಗೊಂಡಿದೆ. ಸುಂದರ ಕೆತ್ತನೆ ಮತ್ತು ಪರಿವಾರ ದೇವತೆಗಳು, ಭುವನೇಶ್ವರಿಯು ತುಂಬ ಸುಂದರವಾಗಿದೆ. ಅಂತರಾಳದ ಬಾಗಿಲು ತುಂಬ ಸುಂದರವಾದ ಪಟ್ಟಿಕೆಗಳಿಂದ ಕೂಡಿದೆ. ಮುಖಮಂಟಪವು ದೇವಾಲಯಕ್ಕೆ ಹೊಂದಿಕೊಂಡಂತೆ ಇದೆ. ಮುಖ ಮಂಟಪದ ಮುಂದೆ ನಂದಿಗಾಗಿ ನಂದಿಮಂಟಪವನ್ನು ನಿರ್ಮಾಣ ಮಾಡಲಾಗಿದೆ. ನಂದಿಮಂಟಪ ಮತ್ತು ಮುಖಮಂಟಪದ ಮಧ್ಯ ದೇವಾಲಯಕ್ಕೆ ಬರಲು ದಾರಿಯನ್ನು

ಮಾಡಲಾಗಿದೆ. ನಂದಿಯ ಮಂಟಪವು ಜೀರ್ಣೋದ್ಧಾರಗೊಂಡಿದೆ. ನಂದಿಯ ವಿಗ್ರಹವು ೬ ಅಡಿ ಎತ್ತರ, ೬ ಅಡಿ ಉದ್ದ ಮತ್ತು ೪ ಅಡಿ ಅಗಲವಾಗಿದೆ. ನೋಡಲು ದುಂಡು ದುಂಡಾಗಿದೆ. ಏರುಮುಖ ಹಾಗೂ ಬಲಿಷ್ಠವಾಗಿದೆ. ಮುಖದ ಲಕ್ಷಣವನ್ನು ನಾವು ಗಮನಿಸಿದಾಗ ಅಗಲವಾದ ಹಣೆ, ಗಿಡ್ಡ ಮತ್ತು ದಪ್ಪನೆಯ ಕೊಂಬುಗಳು, ಕೊಂಬುಗಳಿಗೆ ಸುತ್ತಿಕೊಂಡಂತೆ ಹಣೆಪಟ್ಟಿ ಸುಂದರವಾದ ಕಿವಿಗಳು ಮತ್ತು ಕವಿಯಲ್ಲಿನ ಗೆರೆಗಳು, ಮೂಗಿನ ಹೊರಳೆ, ಬಾಯಿ, ಬಾಯಿಯ ಕೆಳಭಾಗ, ಕುತ್ತಿಗೆ ಭಾಗ, ಚರ್ಮದ ಮಡಿಕೆ, ಕೆಳಭಾಗದಲ್ಲಿ ಸುಂದರ ಕೆತ್ತನೆ, ಕೊರಳಹಾರ, ಬೆನ್ನಿನ ಮೇಲಿಂದ ಕುತ್ತಿಗೆ ಭಾಗಕ್ಕೆ ಸುತ್ತಿಕೊಂಡಂತೆ ಹಾರ ಹಾರವನ್ನು ಬೆನ್ನಿನ ಮೇಲೆ ಅಂದವಾಗಿ ಕಟ್ಟಿದ ಗುಚ್ಚವನ್ನು ತುಂಬ ಸುಂದರವಾಗಿ ಕೆತ್ತಿದ್ದಾರೆ. ಎಡಗಾಲು ಮಡಚಿ, ಮುಂದೆ ಪಾದದ ಮೇಲೆ ಕಾಲೂರಿದೆ, ಬಲಗಾಲು ಮಡಚಿ ಹಿಂದಕ್ಕೆ ಬಾಗಿ ದೇಹದ ಕೆಳಗಡೆ ಇದೆ. ಹಿಂದಿನ ಬಲಗಾಲು ದೇಹಕ್ಕೆ ಹೊಂದಿಕೊಂಡಂತೆ ಮತ್ತು ಎಡಗಾಲಿನ ಕೊಳಗ ಕಾಣುವಂತೆ ಕೆತ್ತಲಾಗಿದೆ. ಬಾಲವನ್ನು ಚಪ್ಪೆಯ ಮೇಲೆ ಬಂದಂತೆ ಕೆತ್ತಲಾಗಿದೆ. ಹಿಂದೆ ತೊಡೆಯ ಮಧ್ಯದಲ್ಲಿ ವೃಷಣಗಳು ಹೊರ ಬಂದಂತೆ ಕೆತ್ತಲಾಗಿದೆ. ಸಂಪೂರ್ಣ ದೇಹವು ಎಡಕ್ಕೆ ಮಲಗಿದಂತೆ ಕೆತ್ತಲಾಗಿದೆ.

ನಂದಿಯನ್ನು ವಿಶೇಷವಾಗಿ ಜಾತ್ರೆಯ ಸಮಯದಲ್ಲಿ ಬಾಸಿಂಗ, ಬೆಳ್ಳಿಯ ಆಭರಣಗಳಿಂದ ಅಲಂಕರಿಸುತ್ತಾರೆ. ಬಾಸಿಂಗವನ್ನು ಜಿಗಳಿಯ ಗೌಡ್ರ ಮನೆತನದವರು ಅಂದರೆ ಮಲ್ಲನಗೌಡ್ರ ವಂಶದವರು ಬಾಸಿಂಗವನ್ನು ಪ್ರತಿವರ್ಷ ಮಾಡಿಸುತ್ತಾರೆ. ೯ ದಿನಗಳ ಕಾಲ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯುತ್ತವೆ. ರೇವತಿ ನಕ್ಷತ್ರದಂದು ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವ ಜರುಗುತ್ತದೆ.

ಪುರದಕೇರಿ ಗ್ರಾಮವು ಹಿರೇಕರೂರು ತಾಲ್ಲೂಕು ಹಾವೇರಿ ಜಿಲ್ಲೆಯಲ್ಲಿ ಕಾಣಬರುತ್ತದೆ. ಗ್ರಾಮದಲ್ಲಿ ಪ್ರಸಿದ್ಧ ಬಸವೇಶ್ವರ ದೇವಾಲಯವು ಸಾವಿರಾರು ವರ್ಷಗಳಿಂದ ಉಳಿದುಕೊಂಡು ಬಂದಿರುವುದೇ ಸಾಕ್ಷಿ. ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗ ಭಾಗಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ನೋಡಲು ಸುಂದರವಾಗಿದೆ. ಅಂತರಾಳದಲ್ಲಿ ಯಾವುದೇ ಶಿಲ್ಪಗಳಿಲ್ಲ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು ನೋಡಲು ಸುಂದರವಾಗಿದೆ, ನಾಲ್ಕು ಕಂಬಗಳ ಮುಂದೆ ನಂದಿಯ ಶಿಲ್ಪವನ್ನು ಕೆತ್ತಲಾಗಿದೆ. ನಂದಿಯು ಏರುಮುಖವನ್ನು ಹೊಂದಿದ್ದು ಶಿವಲಿಂಗಕ್ಕೆ ನೇರವಾಗಿದೆ. ನಂದಿಯ ಮುಖ, ಬಾಯಿ, ಮೂಗಿನ ಹೊರಳೆಗಳು ಕ್ರಮಬದ್ಧವಾಗಿವೆ. ಕಣ್ಣುಗಳು, ಗಿಡ್ಡ ಮತ್ತು ದಪ್ಪನೆಯ ಕೊಂಬುಗಳು, ಸುಂದರವಾದ ಕಿವಿಗಳು, ಕೊಂಬಿಗೆ ಸುತ್ತಿಕೊಂಡಂತೆ ಹಣೆಪಟ್ಟಿಯನ್ನು ಶೃಂಗರಿಸಲಾಗಿದೆ. ಹಣೆಯ ಮಧ್ಯದಲ್ಲಿ ಕೆತ್ತಲಾಗಿದೆ. ಜಾತ್ರೆಯ ಸಮಯದಲ್ಲಿ ಕೊಂಬು, ಕಿವಿ ಹಾಗೂ ಕಣ್ಣುಗಳಿಗೆ ಬೆಳ್ಳಿಯ ಆಭರಣಗಳನ್ನು ತೊಡಿಸುತ್ತಾರೆ. ಕೊರಳಲ್ಲಿ ಅಲಂಕಾರಿಕ ಹಾರಗಳು ಹಾಗೂ ಗಂಟೆಯ ಹಾರವನ್ನು ಕೆತ್ತಲಾಗಿದೆ. ಜೂಲಹಾರವು ಅಲಂಕಾರದಿಂದ ಕೂಡಿದ್ದು ಮುಂದಿನಿಂದ ಬೆನ್ನಿನವರಗೆ ಸುತ್ತಿಕೊಂಡಿದ್ದು ಬೆನ್ನಿನ ಮೇಲೆ ಗಂಟನ್ನು ಅಲಂಕಾರಯುತವಾಗಿ ಕೆತ್ತಲಾಗಿದೆ. ಡುಬ್ಬವನ್ನು ಸುತ್ತುವರಿದು ಚರ್ಮದ ನರಿಗೆಗಳು ಕಂಡು ಬರುತ್ತವೆ. ಎಡ ಪಾರ್ಶ್ವಕ್ಕೆ ಮಲಗಿದ್ದು ಎಡಗಾಲು ಮುಂದೆ ಚಾಚಿ ಮಡಚಿಕೊಂಡು ಕೊಳಗ ಅಥವಾ ಪಾದದ ಮೇಲೆ ಕಾಲೂರಿದೆ, ಬಲಗಾಲನ್ನು ಹಿಂದಕ್ಕೆ ಮಡಚಿಕೊಂಡಿದೆ. ಹಿಂದಿನ ಬಲಗಾಲು ಮುಂದೆ ಚಾಚಿದಂತೆ ಕೆತ್ತಲಾಗಿದೆ. ಎಡಗಾಲಿನ ಕೊಳಗ ಮಾತ್ರ ಕಾಣುತ್ತದೆ. ಪೃಷ್ಠ ಭಾಗವು ನೋಡಲು ದಷ್ಟಪುಷ್ಟವಾಗಿದ್ದು ಬಾಲವನ್ನು ಹಿಂದಿನಿಂದ ಚಪ್ಪೆಯ ಮೇಲೆ ಇರುವ ರೀತಿಯಲ್ಲಿ ಕೆತ್ತಲಾಗಿದೆ. ವೃಷಣಗಳನ್ನು ಹಿಂದೆ ಕಾಣುವಂತೆ ದೇಹದ ಆಕಾರಕ್ಕೆ ಸರಿ ಹೋಗುವಂತೆ ಕೆತ್ತಲಾಗಿದೆ. ಎಲ್ಲಾ ಅಂಗಗಳು ಅದರ ದೇಹದ ಅಳತೆಗೆ ಸರಿ ಹೊಂದುವಂತೆ ಕೆತ್ತಲಾಗಿದೆ.

ಮುರದಕೇರಿ ಪರಿಸರದಲ್ಲಿ ಚಿತ್ರಶೇಖರ ಮತ್ತು ಸೋಮಶೇಖರ ಎಂಬ ಅರಸರು ಆಳುತ್ತಿದ್ದರು. ಸೋಮಶೇಖರನ ಕಾಲದಲ್ಲಿ ಸೋಮೇಶ್ವರ ದೇವಾಲಯವನ್ನು ಕಟ್ಟಲಾಯಿತು ಎಂಬುದಾಗಿ ಹೇಳುತ್ತಾರೆ. ಆದರೆ ಒಂದು ಶಾಸನದಲ್ಲಿ ಸೋಮೇಶ್ವರ ದೇವಾಲಯ ಎಂಬುದಾಗಿ ಮಾತ್ರ ಕಂಡುಬರುತ್ತದೆ. ಶಿವರಾತ್ರಿಯ ದಿನದಂದು ಸೂರ್ಯೋದಯದ ನಂತರ ಸೂರ್ಯನ ಕಿರಣಗಳು ನಂದಿಯನ್ನು ಬಳಸಿಕೊಂಡು ಶಿವಲಿಂಗದ ಮೇಲೆ ಬೀಳುತ್ತದೆ. ದೇವಾಲಯದ ಆಚರಣೆಗಳು ಹಾಗೂ ದೇವಾಲಯ ಉಸ್ತುವಾರಿಯನ್ನು ನೊಳಂಬ ಲಿಂಗಾಯ್ತ ಸದಸ್ಯರು ನೋಡಿಕೊಂಡು ಬರುತ್ತಿದ್ದಾರೆ. ಇತ್ತೀಚೆಗೆ ದೇವಾಲಯದ ಜೀರ್ಣೋದ್ಧಾರ ಕಾರ್ಯ ಹಾಗೂ ದೇವಾಲಯದ ವತಿಯಿಂದ ಕಲ್ಯಾಣ ಮಂಟಪವನ್ನು ಕಟ್ಟಿಸಲಾಗಿದೆ.

ದೇವಾಲಯಗಳು ಮತ್ತು ನಂದಿ ಶಿಲ್ಪಿಗಳು ನೊಳಂಬ ಅರಸರ ಕಾಲದಲ್ಲಿ ನಿರ್ಮಾಣ ಆಗಿರುವ ಸಾಧ್ಯತೆ ಇದೆ. ಇದಕ್ಕೆ ಪೂರಕವಾಗಿ ಹಲವು ವಿದ್ವಾಂಸರ ಅಭಿಪ್ರಾಯಗಳನ್ನು ನಾವು ಗಮನಿಸಿದಾಗ ಡಾ. ಎಂ.ಎಸ್. ಕೃಷ್ಣಮೂರ್ತಿಯವರು ನೊಳಂಬ ದೇವಾಲಯಗಳ ಒಳ ರಚನೆಗಳನ್ನು ಕುರಿತು ವಿವರಿಸಿದ್ದಾರೆ. ಅದರಲ್ಲಿ ಗರ್ಭಗೃಹ, ಅರ್ಧ ಮಂಟಪ, ಅರ್ಧ ಮಂಟಪದಲ್ಲಿ ಎರಡು ಅಥವಾ ನಾಲ್ಕು ಕಂಬಗಳನ್ನು ಹೊಂದಿರುತ್ತದೆ. ಕೆಲವೊಮ್ಮೆ ಕಂಬಗಳಿರುವುದಿಲ್ಲ. ಅರ್ಧ ಮಂಟಪದ ಮುಂದಿನ ನವರಂಗ ಮಂಟಪವು ಸಾಮಾನ್ಯವಾಗಿ ನಾಲ್ಕು ಕಂಬಗಳನ್ನು ಹೊಂದಿರುತ್ತದೆ. ಮುಖಮಂಟಪವು ನಾಲ್ಕು ಕಂಬಗಳನ್ನು ಒಳಗೊಂಡಿರುತ್ತದೆ. ದೇವಾಲಯದ ಮುಂದೆ ನಂದಿಗಾಗಿ ಪ್ರತ್ಯೇಕ ಮಂಟಪವಿರುತ್ತದೆ. ಇದಕ್ಕೆ ಪೂರಕವಾಗಿ ಡಾ. ಶ್ರೀಮತಿ ಹೆಚ್. ಜಯಮ್ಮ ಕರಿಯಣ್ಣನವರು ಕೆಲವು ಸೇರ್ಪಡೆಗಳನ್ನು ಮಾಡಿ ಅವರು ಕೂಡ ಈ ಲಕ್ಷಣಗಳನ್ನು ಒಪ್ಪಿಕೊಂಡಿದ್ದಾರೆ. ಜೊತೆಗೆ ಡಾ. ಎಮ್.ಜಿ. ನಾಗರಾಜರವರು ಸಹ ನಂದಿಯ ಲಕ್ಷಣಗಳು ಎಡಗಾಲು ಮೇಲೆ ಮಡಚಿದ ಹಾಗೂ ನಂದಿಯು ದುಂಡು ದುಂಡಾಗಿ ಬಲಿಷ್ಠವಾಗಿರುತ್ತದೆ ಎಂಬುದಾಗಿ ತಿಳಿಸಿರುತ್ತಾರೆ ಮತ್ತು ಹೆಂಜೇರುವಿನಲ್ಲಿರುವ ನೊಳಂಬರ ಲಾಂಛನದಲ್ಲಿರುವ ನಂದಿಯ ಶಿಲ್ಪಕ್ಕೆ ಇವುಗಳು ಸಾಮೀಪ್ಯವನ್ನು ಹೊಂದಿವೆ. ಈ ದೇವಾಲಯಗಳ ಪರಿಸರದಲ್ಲಿ ಸಿಕ್ಕಿರುವ ಶಾಸನಗಳು ಮತ್ತು ವೀರಗಲ್ಲುಗಳು ೧೦ನೇ ಶತಮಾನದ ಸುಮಾರಿಗೆ ಸೇರುತ್ತವೆ. ಹಲವು ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ದೇವಾಲಯಗಳಲ್ಲಿ ಇರುವ ಕೆಲವೊಂದು ಆಚರಣೆಗಳು, ಶಬ್ಧಗಳು ರಾಜರ ರೀತಿಯಲ್ಲಿ ಆಚರಣೆ ಹಾಗೂ ಉಲ್ಲೇಖಿಸಲ್ಪಡುತ್ತವೆ. ದೇವಾಲಯದ ಲಕ್ಷಣಗಳು ವಿದ್ವಾಂಸರ ಅಭಿಪ್ರಾಯಗಳು, ನೊಳಂಬ ಲಿಂಗಾಯ್ತರ ಆಚರಣೆಗಳು, ನೊಳಂಬ ಲಿಂಗಾಯ್ತರ ಮನೆ ದೇವರು ನೊಳಂಬರ ವಾಸ್ತುಶಿಲ್ಪ ಕಲೆಗೆ ಸಾಮ್ಯತೆ ಇದ್ದು ನೊಳಂಬವಾಡಿ ೩೨೦೦೦ ದ ಭಾಗವಾಗಿದ್ದುದು. ನದಿ ದಾಟಲಿಕ್ಕೆ ದಾರಿಗಳು, ಪರಿಸರದಲ್ಲಿರುವ ಊರಿನ ಹೆಸರುಗಳು ಜೊತೆಗೆ ಹೊಯ್ಸಳರ ಕಾಲದ ನಂತರ ತಮ್ಮ ಅಸ್ಥಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಹೋರಾಟ ಮಾಡಿರಬಹುದು ಎನ್ನುವಂತಹ ವಿಷಯಗಳು ಗೋಚರಿಸುತ್ತವೆ. ನೊಳಂಬ ಲಿಂಗಾಯ್ತರಲ್ಲಿ ಮುಖ್ಯವಾಗಿ ಯಾವುದೇ ಮನೆ ದೇವರು ಇದ್ದರು ಕೂಡ ನಂದಿಗುಡಿಯ ಬಸವೇಶ್ವರ ದೇವಾಲಯದ ಕಾರ್ಯಕ್ರಮಗಳಲ್ಲಿ ಎಲ್ಲರು ಭಾಗಿಯಾಗುತ್ತಾರೆ. ಇಲ್ಲಿನ ಗುರುಗಳ ಅಭಿಪ್ರಾಯದಂತೆ ವೃಷಭಪುರಿ ಸಂಸ್ಥಾನದ ಗುರುಗಳು ನೊಳಂಬರ ಕುಲಗುರುಗಳಾಗಿದ್ದರು ಎನ್ನುವಂತಹ ವಿಚಾರಗಳು ಗೊತ್ತಾಗುತ್ತದೆ.

ಆಕರ ಗ್ರಂಥಗಳು

೧. ಶ್ರೀ ಜ.ಚ.ನಿ. ಸನ್ನಿಧಿಯು, **ವೃಷಭ ಸಂಸ್ಕೃತಿ,** ಶ್ರೀ ಜ.ಚ.ನಿ. ಅಧ್ಯಯನ ಪೀಠ ಮತ್ತು ಸ್ನಾತಕೋತ್ತರ ಸಂಸ್ಥೆ, ಬೆಂಗಳೂರು–೧೯೮೯.

೨. ಹೆಚ್. ಜಯಮ್ಮ ಕರಿಯಣ್ಣ, **ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ, ಧಾರವಾಡ–೨೦೦೭–೦೮.

೩. Krishnmurthy. **M.S. The Nolambs,** Mysore-1980.

೪. ವೆಂಕಣ್ಣಗುಡ್ಡ ಟಿ. **ಕರ್ನಾಟಕದ ಕನ್ನಡ ವಿಷಯ ವಿಶ್ವಕೋಶ,** ಮೈಸೂರು–೧೯೭೦.

೫. ವೈ. ಆರ್. ಚನ್ನಬಸವಯ್ಯ, **'ನೊಳಂಬವಾಣಿ',** ಸಂಪುಟ ೧ ರಿಂದ ೧೨ ನೊಳಂಬ ವೀರಶೈವ ಸಂಘ, ಬೆಂಗಳೂರು–೨೦೧೨–೧೪.

೬. ಜಗದೀಶ್. ಎಂ. ಹೆಚ್. **'ಶಿವಗಣ ಸೂಚಕ ಶಿಲ್ಪಗಳು',** ನೊಳಂಬವಾಣಿ, ಸಂ–೨, ಸಂಚಿಕೆ–೮, ಬೆಂಗಳೂರು–೨೦೧೩, ಪು.ಸಂ. ೧೦.

೭. ಚಂದ್ರಶೇಖರ್ ಎಸ್.ಟಿ., **'ನಂದಿ – ಬಸವ' ಒಂದು ಜಿಜ್ಞಾಸೆ,** ನೊಳಂಬವಾಣಿ, ಸಂ–೪, ಸಂಚಿಕೆ–೪, ಬೆಂಗಳೂರು–೨೦೧೪, ಪು. ೨–೫.

೨೦

ಗದುಗಿನ ತ್ರಿಕೂಟೇಶ್ವರ ದೇವಾಲಯದ ಕಥಾ ನಿರೂಪಕ ಶಿಲ್ಪಗಳು

ಪಾಟೀಲ ಡಿ.ಎಲ್.*

ಗದಗ ಜಿಲ್ಲೆಯು ಪ್ರಾಚೀನ ಕಾಲದಿಂದಲೂ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಹೆಸರಾಗಿದ್ದು, ಈ ಭಾಗದಲ್ಲಿ ನೂರಾರು ದೇವಾಲಯಗಳು ನಿರ್ಮಾಣಗೊಂಡಿವೆ. ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ವಿಜಯನಗರಪೂರ್ವ, ವಿಜಯನಗರ ಮುಂತಾದ ಕಾಲಘಟ್ಟಗಳಲ್ಲಿ ಈ ಭಾಗದ ದೇವಾಲಯಗಳಲ್ಲಿ ಪ್ರವಾಸೋದ್ಯಮಕ್ಕೆ ಪೂರಕವಾದ ಕಥಾ ನಿರೂಪಕ ಶಿಲ್ಪಗಳು ಕಂಡುಬರುತ್ತವೆ.

ತ್ರಿಕೂಟೇಶ್ವರ ದೇವಸ್ಥಾನ

ಗದಗ ಜಿಲ್ಲೆಯ ಕೇಂದ್ರ ಸ್ಥಾನವಾದ ಗದಗ, ಪ್ರಾಚೀನ ಕಾಲದಿಂದಲೂ ಪುರಾಣ ಪ್ರಸಿದ್ಧ ಸ್ಥಳ. ವಿವಿಧ ಅರಸು ಮನೆತನಗಳ ಆಳ್ವಿಕೆಗೊಳಪಟ್ಟಿದ್ದ ಈ ಸ್ಥಳವು ಬೆಳವಲ-೩೦೦ ಆಡಳಿತ ವಿಭಾಗಕ್ಕೆ ಸೇರಿತ್ತು. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಆಳರಸರ ನೇರ ಪ್ರೋತ್ಸಾಹದಿಂದಾಗಿ ಇಲ್ಲಿ ಅನೇಕ ದೇವಾಲಯಗಳು ನಿರ್ಮಾಣಗೊಂಡವು. ಇದರಿಂದಾಗಿ ಇಲ್ಲಿ ಕಲೆ ಮತ್ತು ವಾಸ್ತುಶಿಲ್ಪ ಪರಾಕಾಷ್ಠತೆಯನ್ನು ತಲುಪಿತು. ತ್ರಿಕೂಟೇಶ್ವರ ದೇವಾಲಯವು ಈ ದೃಷ್ಟಿಯಿಂದ ಮಹತ್ವದ ರಚನೆಯಾಗಿದೆ.

ತ್ರಿಕೂಟೇಶ್ವರ ದೇವಾಲಯ ಒಂದೇ ದೇವಾಲಯವಾಗಿರದೆ ದೇವಾಲಯಗಳ ಸಂಕೀರ್ಣದಲ್ಲಿರುವ ಪ್ರಮುಖ ದೇವಾಲಯವಾಗಿದೆ. ತ್ರಿಕೂಟೇಶ್ವರ ದೇವಾಲಯ ಶಾಸನಗಳಲ್ಲಿ "ತ್ರೈಪುರುಷ" "ಸ್ವಯಂ ಭೂ ಈಶ್ವರ" "ಸ್ವಯಂ ಭೂ ತ್ರಿಕೂಟೇಶ್ವರ" ಎಂದು ಉಲ್ಲೇಖಿತಗೊಂಡಿದೆ. ಚಾಲುಕ್ಯ, ಹೊಯ್ಸಳ, ವಿಜಯನಗರ ಅರಸರು ಈ ದೇವಾಲಯಕ್ಕೆ ದಾನದತ್ತಿಗಳನ್ನು ನೀಡಿದ್ದಾರೆ. "ಮೂಲತಃ ರಾಷ್ಟ್ರಕೂಟರ ಶೈಲಿಯ ಗರ್ಭಗೃಹ ಹಾಗೂ ಅಂತರಾಳವನ್ನು ಹೊಂದಿದ್ದು ಅನಂತರ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನವರಂಗ ಹಾಗೂ ಸಭಾ ಮಂಟಪಗಳನ್ನು ಸೇರಿಸಲಾಗಿದೆ. ನಂತರದ ಅರಸ ಮನೆತನದವರ ಕಾಲದಲ್ಲಿ ವಿಸ್ತರಿಸಲಾಗಿದೆ"[೧] ಗರ್ಭಗೃಹವು ಚೌಕಾಕಾರದ ತಲವಿನ್ಯಾಸವನ್ನು ಹೊಂದಿದ್ದು ಒಂದೇ ಪಾಣಿ ಪೀಠದ ಮೇಲೆ ಮೂರು ಲಿಂಗಗಳು ಕಂಡು ಬರುತ್ತವೆ. ಇವು "ಸ್ವಯಂ ಭೂ ಬ್ರಹ್ಮ, ವಿಷ್ಣು, ಮಹೇಶ್ವರ ಪ್ರತಿರೂಪವೆಂದು ಗದುಗಿನ ಸ್ಥಳ ಪುರಾಣ "ಕೃತಪುರ ಮಹಾತ್ಮೆ" ಯಲ್ಲಿ ವರ್ಣಿಸಲಾಗಿದೆ.

ಕಲಾತ್ಮಕ ಕುಸುರಿ ಕೆತ್ತನೆಯಿಂದ ಕೂಡಿದ ೪೨ ಕಂಬಗಳುಳ್ಳ ವಿಶಾಲವಾದ ಸಭಾಮಂಟಪವಿದೆ. ಇದರಲ್ಲಿ ಬೃಹತ್ ಗಾತ್ರದ ಸುಂದರವಾದ ನಂದಿ ಶಿಲ್ಪವಿದೆ. ಸಭಾ ಮಂಟಪದ ಸುತ್ತಲೂ ಕಕ್ಷಾಸನಗಳಿವೆ. ಉತ್ತರ-ದಕ್ಷಿಣ ಬದಿಗಳ ಮಧ್ಯದಲ್ಲಿ ಪ್ರವೇಶ ದ್ವಾರಗಳಿವೆ. ದೇವಾಲಯದ ನವರಂಗದ ಈಶಾನ್ಯ ಮೂಲೆಯಲ್ಲಿ ಸುಂದರವಾದ ಚಿಕ್ಕ ನಟರಾಜನ ಮೂರ್ತಿಯಿದೆ. "ದೇವಾಲಯವು ಅಧಿಷ್ಠಾನ ಉಪಾನ, ಪದ್ಮ, ಕಪೋತ, ಕುಮುದಗಳ ಅಲಂಕಾರದಿಂದ ಕೂಡಿದೆ. ಭಿತ್ತಿಯಲ್ಲಿ ಅರೆಗಂಬಗಳು, ಪೂರ್ಣಗಂಬಗಳು, ಶಾಲಾ-ಕೂಟ ಪಂಜರಗಳ ಮತ್ತು ಶಿಖರದ ಮಾದರಿಗಳನ್ನು ಕೆತ್ತಲಾಗಿದೆ. ದೇವಾಲಯದ ಮೇಲಿದ್ದ ಮೂಲ ಶಿಖರ ನಶಿಸಿದ್ದು, ನಂತರದಲ್ಲಿ ಕದಂಬನಾಗರ ಶಿಖರವನ್ನು ನಿರ್ಮಿಸಲಾಗಿದೆ"[೨]. ಸಭಾ ಮಂಟಪ (ನಂದಿ ನವರಂಗ) ದ ಮುಂಭಾಗಕ್ಕೆ (ಪೂರ್ವಭಾಗದಲ್ಲಿ) ಸೂರ್ಯನಾರಾಯಣ ದೇವಾಲಯದ ಗರ್ಭಗೃಹವೆಂದು ಹೇಳಲಾಗುವ ಕಟ್ಟಡವಿದ್ದು, ಈಗ ಬಳಕೆಯಲ್ಲಿಲ್ಲದಾಗಿದೆ.

ಕಥಾ ನಿರೂಪಕ ಶಿಲ್ಪಗಳು

ಈ ದೇವಾಲಯದಲ್ಲಿ ಕಂಡು ಬರುವ ಕಥಾ ನಿರೂಪಕದ ಶಿಲ್ಪಗಳನ್ನು ಗ್ರಂಥಗಳಿಗನುಗುಣವಾಗಿ ಈ ರೀತಿಯಾಗಿ ವಿಂಗಡಿಸಬಹುದಾಗಿದೆ.

* ಉಪನ್ಯಾಸಕರು, ವಿ.ದಾ.ಸ. ಬಾಲಕಿಯರ ಪ.ಪೂ. ಕಾಲೇಜು, ಗದಗ.

ರಾಮಾಯಣದ ದೃಶ್ಯಗಳು

ಕಲ್ಯಾಣ ಚಾಲುಕ್ಯರ ಕಾಲದ ಬಹುತೇಕ ದೇವಾಲಯಗಳ ಹೊರಭಿತ್ತಿಯಲ್ಲಿ ರಾಮಾಯಣದ ದೃಶ್ಯಗಳು ಕಂಡು ಬರುತ್ತವೆ. ತ್ರಿಕೂಟೇಶ್ವರ ದೇವಾಲಯದ ಸಭಾ ಮಂಟಪದ ಪಶ್ಚಿಮ ಭಿತ್ತಿಯಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಕಥಾನಕ ಶಿಲ್ಪಗಳು ಕಂಡು ಬರುತ್ತವೆ.

ಬಂಗಾರದ ಜಿಂಕೆ ಬೆನ್ನಟ್ಟಿರುವ ರಾಮ

ಬಂಗಾರದ ಜಿಂಕೆಯ ಪ್ರಸಂಗವು ತ್ರಿಕೂಟೇಶ್ವರ ದೇವಾಲಯದ **ಸಭಾ ಮಂಟಪದ ಪಶ್ಚಿಮದ ಭಿತ್ತಿಯಲ್ಲಿ ಕಂಡು ಬರುತ್ತದೆ.** ಈ ಪ್ರಸಂಗವು **ಶ್ರೀಮದ್ ವಾಲ್ಮೀಕಿರಾಮಾಯಣದ ಅರಣ್ಯಕಾಂಡದ ೪೪ನೇ ಸ್ವರ್ಗದಲ್ಲಿದೆ.**[೩]

ಆ ಕಥೆಯನ್ನು ನಿರೂಪಸುವ ಶಿಲ್ಪವು ಏಕದೃಶ್ಯ ನಿರೂಪಣಾ ಕಥಾನಕ ಶಿಲ್ಪವಾಗಿದ್ದು, ಈ ಶಿಲ್ಪದಲ್ಲಿ ಬಂಗಾರದ ಜಿಂಕೆಯನ್ನು ಬೆನ್ನು ಹತ್ತಿರುವ ರಾಮನ ಶಿಲ್ಪವನ್ನು ಕಂಡರಿಸಲಾಗಿದೆ. ರಾಮನು ಎಡಗೈಯಲ್ಲಿ ಬಿಲ್ಲನ್ನು ಹಿಡಿದು, ಬಲಗೈಯಿಂದ ಬಿಲ್ಲಿನ ಶಿಂಜನಿಯನ್ನು ಎಳೆಯುತ್ತಿದ್ದಾನೆ. ಆತನ ಮುಂದೆ ಜಿಂಕೆಯು ಓಡುತ್ತಿರುವಂತೆಯೂ, ಎರಡೂ ಕಾಲುಗಳನ್ನು ಮೇಲಕ್ಕೆತ್ತಿ ಕತ್ತು ತಿರುಗಿಸಿ ಶ್ರೀರಾಮನತ್ತ ನೋಡುತ್ತಿದೆ. ಕೆಳಭಾಗದಲ್ಲಿ ಶ್ರೀರಾಮನ ಪಾದತಲದಲ್ಲಿ ಮಾರೀಚನು ಜಿಂಕೆಯ ರೂಪವನ್ನು ತೊರೆದು ಮಾನವ ರೂಪ ಹೊಂದಿ ಸತ್ತು ಬಿದ್ದದ್ದನ್ನು ತೋರಿಸಲಾಗಿದೆ.

ಕುಕನೂರಿನ ಬ್ರಹ್ಮಲಿಂಗೇಶ್ವರ ದೇವಾಲಯದಲ್ಲಿಯೂ ಮಾಯಾ ಜಿಂಕೆಯ ಪ್ರಸಂಗ ಏಕದೃಶ್ಯ ನಿರೂಪಣೆಯಾಗಿ ಮೂಡಿ ಬಂದಿದ್ದು, ತ್ರಿಕೂಟೇಶ್ವರ ದೇವಾಲಯದ ಶಿಲ್ಪದ ರೀತಿಯಲ್ಲಿಯೇ ಮೂಡಿ ಬಂದಿದೆ. ಹಾನಗಲ್ಲಿನ ತಾರಕೇಶ್ವರ ದೇವಾಲಯದಲ್ಲಿ ಕಕ್ಷಾಸನದಲ್ಲಿ ಈ ಪ್ರಸಂಗ ಬಹುದೃಶ್ಯ ನಿರೂಪಣೆಯಲ್ಲಿ ಮೂಡಿ ಬಂದಿದ್ದು, ಮಾರೀಚ ಹತನಾಗುವ ಸಂದರ್ಭದಲ್ಲಿ ಅವನನ್ನು ಕೊಂಬುಳ್ಳ ವ್ಯಕ್ತಿಯಾಗಿ ಶ್ರೀರಾಮನ ಖಡ್ಗದಿಂದ ಹತನಾಗುವ ಹಾಗೆ ಸುಂದರವಾಗಿ ಕಂಡರಿಸಲಾಗಿದೆ.

ರಾಮನು ಹನುಮಂತನಿಗೆ ಬಂಗಾರದ ಮುದ್ರೆಯ ಉಂಗುರವನ್ನು ನೀಡುತ್ತಿರುವುದು. (ಅಂಗುಲೀಯಕ)

ದೇವಾಲಯದ ಸಭಾಮಂಟಪ ಪಶ್ಚಿಮದ ಕಕ್ಷಾಸನದ ಹೊರಮೈ ಮೇಲೆ ರಾಮನು ತನ್ನ ಅಂಗುಲೀಯಕವನ್ನು ಹನುಮಂತನಿಗೆ ನೀಡುವ ಕಥಾನಿರೂಪಕ ಶಿಲ್ಪವಿದೆ. **ಈ ಕಥೆ ಕಿಷ್ಕಿಂದಾಕಾಂಡದ ೪೪ನೇ ಸರ್ಗದಲ್ಲಿ ಬರುತ್ತದೆ.**[೪]

ರಾಮಾಯಣದ ಕಥೆಯಾದ **"ಅಂಗುಲೀಕ"** ವನ್ನು ನಿರೂಪಿಸುವ ಕಥಾ ನಿರೂಪಕ ಶಿಲ್ಪವು ಏಕದೃಶ್ಯ ನಿರೂಪಣೆಯಾಗಿದೆ. ದೃಶ್ಯದಲ್ಲಿ ಒಂದು ಸುಂದರವಾದ ವೃಕ್ಷವನ್ನು ಕಂಡರಿಸಿದ್ದು, ಅದರ ಎಡ ಹಾಗೂ ಬಲ ಬದಿಗಳಲ್ಲಿ ಶ್ರೀರಾಮ ಮತ್ತು ಹನುಮಂತರು ನಿಂತಿದ್ದಾರೆ. ರಾಮನು ಕಿರೀಟಧಾರಿಯಾಗಿದ್ದು, ಅವನು ಉಂಗುರವನ್ನು ನೀಡಲು ಕೈಚಾಚಿದಂದಿತಿದೆ, ಹನುಮಂತ ತನ್ನ ಒಂದು ಕೈಯಿಂದ ಅಂಗಲಿಕ ಪಡೆಯುವಂತಿದೆ.

ಅಶೋಕವನದಲ್ಲಿ ಸೀತೆ

ಈ ಕಥಾನಕ ಶಿಲ್ಪವು ತ್ರಿಕುಟೇಶ್ವರ ದೇವಾಲಯ ಸಭಾ ಮಂಟಪದ ಪೂರ್ವಬದಿಯ ಕಕ್ಷಾಸನದ ಹೊರಮೈಯಲ್ಲಿ ಕಂಡು ಬರುತ್ತದೆ. ಈ ಘಟನೆಗೆ ಸಂಬಂಧಿಸಿದಂತೆ ರಾಮಾಯಣದ ಸುಂದರಕಾಂಡದ ೧೫ನೇ ಸರ್ಗದಲ್ಲಿ ಬರುವ ಕಥೆಯ ನಿರೂಪಣೆಯಾಗಿದೆ.[೫]

ಈ ಕಥೆಯನ್ನು ನಿರೂಪಿಸುವ ಶಿಲ್ಪವು ಅಂಗುಲೀಕ ಶಿಲ್ಪದ ಪಕ್ಕದಲ್ಲಿಯೇ ಕಂಡು ಬಂದಿದೆ. ಇಲ್ಲಿ ಶಿಲ್ಪ ಹನುಮಂತನು ರಾಮನಿಂದ ಪಡೆದ ಶಿಲ್ಪದ ನಂತರ ಅವನು ಅಶೋಕವನದಲ್ಲಿ ಕುಳಿತ ಸೀತೆಗೆ ಉಂಗುರವನ್ನು ನೀಡುವ ಶಿಲ್ಪವನ್ನು ಕಂಡರಿಸಿದ್ದಾರೆ. ಈ ಶಿಲ್ಪದಲ್ಲಿ ಸುಂದರವಾದ ಪುಷ್ಪ, ಮೊಗ್ಗುಗಳಿಂದ ಕೂಡಿದ ವಿಶಾಲವಾದ ವೃಕ್ಷವನ್ನು ಕಂಡರಿಸಿದ್ದು, ವೃತ್ತಾಕಾರದ ಕಟ್ಟೆಯ ಮೇಲೆ ಸೀತೆ ಕುಳಿತಿದ್ದಾಳೆ. ಇಬ್ಬರು ರಾಕ್ಷಸಿಯರನ್ನು ಅವಳ ಅಕ್ಕಪಕ್ಕದಲ್ಲಿ ತೋರಿಸಲಾಗಿದೆ. ಅವಳ ಪಕ್ಕದಲ್ಲಿ ಹನುಮಂತನ ಶಿಲ್ಪ ಹಾಗೂ ಸೀತೆಯ ಎರಡೂ ಕೈ ಒಡೆದುಹೋಗಿದೆ. ಇಂಥದೇ ಕಥಾನಕ ಪಟ್ಟಿಕೆ ಲಕ್ಕುಂಡಿಯ "ಕಾಶಿವಿಶ್ವೇಶ್ವರ ದೇವಾಲಯದ ಕಕ್ಷಾಸನದ ಪಶ್ಚಿಮ ಮುಖದ ಆರನೆಯ ಪಟ್ಟಿಕೆಯಲ್ಲಿ ಕಂಡು ಬಂದಿದ್ದು, ತ್ರಿಕೂಟೇಶ್ವರ ದೇವಾಲಯದಲ್ಲಿರುವ ಪಟ್ಟಿಕೆಗಿಂತಾ ಉತ್ತಮವಾಗಿ, ವಿವರವಾಗಿ ನಿರೂಪಿಸಲ್ಪಟ್ಟಿವೆ. ಇಲ್ಲಿಯೂ ಹನುಮಂತನ ಅಶೋಕವನದಲ್ಲಿ ವೃತ್ತಾಕಾರದ ಕಟ್ಟೆಯ ಮೇಲೆ ಕುಳಿತಿರುವ ಸೀತೆಯೊಂದಿಗೆ ಸಮಾಲೋಚಿಸುತ್ತಿದ್ದಾನೆ. ಸೀತೆ ಚಿಂತಾಕ್ರಾಂತಳಾಗಿ ಕುಳಿತಿದ್ದಾಳೆ[೬]."

ಭಾಗವತ ಮತ್ತು ಪುರಾಣದ ದೃಶ್ಯಗಳು

ಭಾಗವತ ಮತ್ತು ಪುರಾಣದ ದೃಶ್ಯಗಳು ಹೆಚ್ಚಾಗಿ ತ್ರಿಕೂಟೇಶ್ವರ ದೇವಾಲಯದ ಎದುರಿಗಿನ ಭಾಗವಾಗಿರುವ ಸೂರ್ಯದೇವಾಲಯದ ದಕ್ಷಿಣಭಾಗದ ಕಕ್ಷಾಸನದ ಹೊರಮೈ ಮೇಲೆ ಕಂಡು ಬರುತ್ತವೆ.

ಗಜಾಸುರ ಸಂಹಾರಮೂರ್ತಿ

ಈ ಕಥಾನಕ ಶಿಲ್ಪವು **ತ್ರಿಕೂಟೇಶ್ವರ ದೇವಾಲಯದ ಭಾಗವಾಗಿರುವ ಸೂರ್ಯ ದೇವಾಲಯದ ದಕ್ಷಿಣ ಭಾಗದ ಕಕ್ಷಾಸನದ ಹೊರಮೈ ಮೇಲೆ ಕಂಡು ಬರುತ್ತದೆ. ಗಜಾಸುರ ಸಂಹಾರಮೂರ್ತಿ ಕುರಿತು ವರಾಹಪುರಾಣ, ಶಿವಪುರಾಣ ಮೊದಲಾದವುಗಳಲ್ಲಿ ಉಲ್ಲೇಖಗಳು ಬಂದಿವೆ.**

"ಅಂಧಕನೆಂಬ ಮಹಾದೈತ್ಯನು ಬ್ರಹ್ಮನು ಕೊಟ್ಟ ವರದಿಂದ ದೇವತೆಗಳನ್ನು ಅಧೀರರನ್ನಾಗಿ ಮಾಡಿಕೊಂಡು ಮೇರುಪರ್ವತದಿಂದ ಓಡಿಸಿ ಬಿಟ್ಟನು. ಆಗ ಬ್ರಹ್ಮನು ಸಮಸ್ತ ದೇವತೆಗಳೊಂದಿಗೆ ಶಿವನನ್ನು ಮೊರೆಹೋದನು, ನಂತರ ಶಿವನಿಗೂ ಅಂಧಕನಿಗೂ ನಡೆದ ಯುದ್ಧದಲ್ಲಿ ನೀಲನೆಂಬ ಹೆಸರಿನ ಅಂಧಕನ ಸೇನಾಪತಿಯ ಆನೆಯ ರೂಪತಾಳಿ ಅದ್ಭುತಾಕಾರದಿಂದ ಶಿವನ ಹತ್ತಿರಕ್ಕೆ ಬಂದನು ಇದನ್ನು ತಿಳಿದ ವೀರಭದ್ರನು ಸಿಂಹರೂಪದಿಂದ ಬೇಗನೆ ಅವನ ಮೇಲೆ ಬಿದ್ದುಕೊಂಡು ಆನೆಯ ರೂಪದಲ್ಲಿದ್ದ ಅವನ ಚರ್ಮವನ್ನು ಶಿವನಿಗೆ ಒಪ್ಪಿಸಿದನು ಶಿವನು ಅದನ್ನೇ ವಸ್ತ್ರದಂತೆ ಹೊದೆದುಕೊಂಡನು"[೬]. *ಮತ್ಸ್ಯಪುರಾಣದಲ್ಲಿ ಸ್ವಲ್ಪ ಭಿನ್ನವಾಗಿ ಬಂದಿದೆ.*

"ದೈತ್ಯರಿಗೂ ಹಾಗೂ ದೇವತೆಗಳಿಗೂ ನಡೆದ ಯುದ್ಧದಲ್ಲಿ ದೈತ್ಯ ಶಿರೋಮಣಿಯಾದ ಗಜಾಸುರನು ಮದ್ದಾನೆಯ ರೂಪ ತಳೆದು ಸುರ ಸೈನ್ಯರ ಮೇಲೆ ಎರಗಿ ದೇವತೆಗಳನ್ನು ಕೊಲ್ಲುತ್ತಿದ್ದನು. ಆಗ ಶಿವನು ಆನೆ ರೂಪ ತಾಳಿ ಆ ಗಜಾಸುರನ ಕುಂಭಸ್ಥಳಕ್ಕೆ ಜೋರಾಗಿ ಹೊಡೆದನು. ಆಗ ಗಜಾಸುರನು ಹನ್ನೊಂದು ಗಣರುದ್ರದಲ್ಲಿ ಒಂಭತ್ತು ಗಣರುದ್ರರನ್ನು ತನ್ನ ಕಾಲಿನಿಂದ ತುಳಿದನು. ಅದನ್ನು ನೋಡಿ ಶಿವನು ಓಡಿ ಬಂದು ಗಜಾಸುರನ ಸೊಂಡಿಲನ್ನು ಹಿಡಿದು ಗರಗರನೆ ತಿರುಗಿಸಿ ನೆಲದ ಮೇಲೆ ಅಪ್ಪಳಿಸಿದನು. ಅದು ಇನ್ನೂ ಜೀವಂತವಿರುವಾಗಲೇ ಗಜಾಸುರನ ಮೈಮೇಲಿನ ಚರ್ಮವನ್ನೆಲ್ಲಾ ಸುಲಿದು ಉತ್ತರೀಯದಂತೆ ತನ್ನ ಮೈಮೇಲೆ ಹೊದೆದುಕೊಂಡನು"[೭].

ತ್ರಿಕೂಟೇಶ್ವರ ದೇವಾಲಯದಲ್ಲಿ ಗಜಾಸುರಸಂಹಾರ ಮೂರ್ತಿಯನ್ನು ಅತ್ಯಂತ ಸರಳವಾಗಿ ಸುಂದರವಾಗಿ ಕಂಡರಿಸಲಾಗಿದೆ. ಇದೂ ಸಹ ದೇವಾಲಯದ ಇತರೆ ಕಥಾ ನಿರೂಪಕ ಶಿಲ್ಪಗಳಂತೆ ಏಕದೃಶ್ಯ ನಿರೂಪಣೆಯಾಗಿದೆ. ನಾಟ್ಯಭಂಗಿಯಲ್ಲಿರುವ ಶಿವನು ಅಸುರನ ಮೇಲೆ ನಿಂತಿದ್ದಾನೆ. ಅಸುರನ ಶಿಲ್ಪ ತೃಟಿತಗೊಂಡಿದೆ. ಶಿವನಿಗೆ ಹತ್ತು ಕೈಗಳಿದ್ದು, ಎಲ್ಲವೂ ಒಡೆದು ಹೋಗಿವೆ. ಗಜಮೂರ್ತಿಯನ್ನು ಅತ್ಯಂತ ತೆಳುವಾಗಿ ಶಿವನ ಪ್ರಭಾವಳಿಯಂತೆ ತೋರಿಸಲಾಗಿದೆ. ಆನೆಯ ಶಿರೋಭಾಗ ಕಲಾತ್ಮಕವಾಗಿ ಮೂಡಿಬಂದಿದೆ.

ಗಜಾಸುರ ಸಂಹಾರಮೂರ್ತಿಯು ಲಕ್ಕುಂಡಿಯ ಕಾಶಿವಿಶ್ವೇಶ್ವರ ದೇವಾಲಯದಲ್ಲಿಯೂ ಕಂಡು ಬರುತ್ತದೆ. ತ್ರಿಕೂಟೇಶ್ವರ ದೇವಾಲಯದ ಶಿಲ್ಪಕ್ಕಿಂತಲೂ ಸುಂದರವಾಗಿ ವಿವರಣಾತ್ಮಕವಾಗಿ ಕಂಡರಿಸಲ್ಪಟ್ಟಿದೆ. ತ್ರಿಕೂಟೇಶ್ವರ ದೇವಾಲಯದಲ್ಲಿ ಕಂಡು ಬರದ ಗಣೇಶ, ದೇವಿ, ಗಣಗಳ ಶಿಲ್ಪಗಳು ಇಲ್ಲಿ ಕಂಡರಿಸಲ್ಪಟ್ಟಿವೆ.

ರಾವಣನು ಕೈಲಾಸ ಪರ್ವತವನ್ನು ಎತ್ತುತ್ತಿರುವುದು

ಈ ಕಥಾನಕ ಪಟ್ಟಿಕೆಯು ತ್ರಿಕುಟೇಶ್ವರ ದೇವಾಲಯದ ಸೂರ್ಯ ದೇವಾಲಯ ಭಾಗದ ದಕ್ಷಿಣ ಬದಿಯ ಕಕ್ಷಾಸನದ ಹೊರಮೈಯಲ್ಲಿ ಕಂಡು ಬರುತ್ತದೆ. ರಾವಣನ ಅಪರಿಮಿತವಾದ ಶಕ್ತಿಯನ್ನು ತೋರಿಸಲಿಕ್ಕೆಂದು ಸೃಜಿತವಾದ ಕಥೆಗಳಲ್ಲಿ ರಾವಣನು ಕೈಲಾಸ ಪರ್ವತವನ್ನೆತ್ತುತ್ತಿರುವ ದೃಶ್ಯವೂ ಒಂದು. **ರಾಮಾಯಣದ ಉತ್ತರ ಕಾಂಡದ ೧೬ನೇ ಸರ್ಗದಲ್ಲಿ ಇದಕ್ಕೆ ಸಂಬಂಧಿಸಿದ ಕಥೆಯಿದೆ. ಬ್ರಹ್ಮಪುರಾಣಗಳಲ್ಲಿಯೂ ಇದರ ಉಲ್ಲೇಖವಿದೆ.**[೮]

ರಾವಣನು ಕೈಲಾಸ ಪರ್ವತವನ್ನೆತ್ತುತ್ತಿರುವ ಶಿಲ್ಪವು ಏಕದೃಶ್ಯ ಶಿಲ್ಪವಾಗಿದ್ದು, ಇದರಲ್ಲಿ ಮೂರು ಹಂತಗಳಿವೆ. ಮೊದಲ ಹಂತ ಕೆಳಗಿನ ಭಾಗದಲ್ಲಿ ರಾವಣನ ಹತ್ತು ತಲೆಗಳಲ್ಲಿ ಶಿಲ್ಪಿಯು ನಾಲ್ಕು ತಲೆಗಳನ್ನು ಮಾತ್ರ ತೋರಿಸಿದ್ದಾನೆ. ರಾವಣನು ತನ್ನ ಕೈಗಳಿಂದ ಕೈಲಾಸ ಪರ್ವತವನ್ನೆತ್ತುತ್ತಿದ್ದಾನೆ. ಆದರೆ ಅವನ ಹಸ್ತಗಳು ತೃಟಿತಗೊಂಡಿವೆ. ಅದರ ಮೇಲಿನ ಹಂತದಲ್ಲಿ ವಿವಿಧ ಪ್ರಾಣಿಗಳನ್ನು ತೋರಿಸಲಾಗಿದ್ದು ಅವು ಅಸ್ಪಷ್ಟವಾಗಿವೆ. ನಾಲ್ಕನೆಯ ಹಂತದಲ್ಲಿ ಐದು ಚಿಕ್ಕ ಮಂಟಪಗಳನ್ನು ಕೆತ್ತಲಾಗಿದ್ದು ಮಧ್ಯದ ಮಂಟಪದಲ್ಲಿ ಶಿವಪಾರ್ವತಿಯರು ಕುಳಿತಿದ್ದಾರೆ. ಹಾಗೂ ಪಕ್ಕದಲ್ಲಿ ಗಣಗಳು ನಿಂತಿರುವ ಶಿಲ್ಪವಿದೆ.

ರಾವಣನು ಕೈಲಾಸ ಪರ್ವತವನ್ನೆತ್ತುತ್ತಿರುವ ಶಿಲ್ಪವು ಕಥಾ ನಿರೂಪಕ ಶಿಲ್ಪಗಳಲ್ಲಿ ಜನಪ್ರಿಯ ಶಿಲ್ಪವಾಗಿದ್ದು, ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಮಂಟಪದ ಅರ್ಧಗಂಭದಲ್ಲಿದೆ. ಅದರಂತೆ ಲಕ್ಕುಂಡಿ ಕಾಶಿವಿಶ್ವೇಶ್ವರ ದೇವಾಲಯದ ಗರ್ಭಗೃಹದ ಹಿಂಭಾಗದ ಭಿತ್ತಿಯಲ್ಲಿ ಕಂಡು ಬರುತ್ತಿದ್ದು, ತ್ರಿಕೂಟೇಶ್ವರ ದೇವಾಲಯದ ಶಿಲ್ಪಕ್ಕಿಂತಲೂ ಹೆಚ್ಚು ವಿವರಣಾತ್ಮಕವಾಗಿ ಆಕರ್ಷಕವಾಗಿದೆ. ಪ್ರಸ್ತುತ ಶಿಲ್ಪವು ಗಾಳಿಮಳೆಯಿಂದಾಗಿ ತನ್ನ ಮೂಲ ಆಕರ್ಷಣೆಯನ್ನು ಕಳೆದುಕೊಂಡಿದೆ.

ವಾಮನಾವತಾರದ ದೃಶ್ಯಗಳು

ಬಲಿ ಪ್ರಸಂಗದ ಕಥಾ ನಿರೂಪಕ ಪಟ್ಟಿಕೆಗಳು **ತ್ರಿಕೂಟೇಶ್ವರ ದೇವಾಲಯದ ದಕ್ಷಿಣ ಭಾಗದ ಕಕ್ಷಾಸನದ ಹೊರಮೈ ಮೂರು ಪಟ್ಟಿಕೆಗಳಲ್ಲಿ ಕಂಡು ಬರುತ್ತವೆ. ಭಾಗವತದ ಅಷ್ಟಮ ಸ್ಕಂದದಲ್ಲಿ ಬಲಿ ಪ್ರಸಂಗದ ಉಲ್ಲೇಖವಿದೆ.**[೧೦]

ಕಥೆಯನ್ನು ನಿರೂಪಿಸುವ ಕಥಾ ನಿರೂಪಕ ಶಿಲ್ಪವು ಬಹುದೃಶ್ಯ ನಿರೂಪಣೆಯಾಗಿದೆ. ಆದರೆ ಈ ದೃಶ್ಯಗಳಲ್ಲಿ ಏಕಸೂತ್ರತೆ ಇಲ್ಲ. (ದೇವಾಲಯದ ಜೀರ್ಣೋದ್ಧಾರದ ಸಮಯದಲ್ಲಿ ಹೀಗಾಗಿರುವ ಸಾಧ್ಯತೆ ಇದೆ). ಬಲಿ ಪ್ರಸಂಗವನ್ನು ಮೂರು ಪಟ್ಟಿಕೆಗಳಲ್ಲಿ ಕಂಡರಿಸಲಾಗಿದೆ. ಈ ಪಟ್ಟಿಕೆಗಳು ಏಕಪ್ರಕಾರದ ಸಾಲುಗಳಲ್ಲಿವೆ. ಇದೊಂದು ಬಹು ದೃಶ್ಯ ನಿರೂಪಣೆಯಾಗಿದೆ. ಬಲಿಪ್ರಸಂಗವನ್ನು ಇಲ್ಲಿ ಸಾಂಕೇತಿಕವಾಗಿ ಕೆಲವೇ ದೃಶ್ಯಗಳ ಮೂಲಕ ನಿರೂಪಿಸಲಾಗಿದೆ. ಪ್ರಥಮ ಪಟ್ಟಿಕೆಯಲ್ಲಿ ಬಲಿಯು ಇಂದ್ರನ ಪತ್ನಿ ಶಚಿಯೊಂದಿಗೆ ಕುಳಿತಿದ್ದಾನೆ. ಅವನ ಹಿಂದೆ ಸೇವಕಿ ನಿಂತಿರುವುದನ್ನು ಕಂಡರಿಸಲಾಗಿದೆ. ವಾಮನನು ಅವನ ಎದುರಿಗೆ ನಿಂತು ದಾನಕೇಳುತ್ತಿದ್ದ ಶಿಲ್ಪ ತೃಟಿತಗೊಂಡಿದೆ. ದ್ವಿತೀಯ ಪಟ್ಟಿಕೆಯಲ್ಲಿ ವಾಮನ ಮತ್ತು ಬಲಿಯು ಸಂವಾದ ಮಾಡುತ್ತಿರುವ ದೃಶ್ಯವನ್ನು ಕಂಡರಿಸಲಾಗಿದೆ. ಇಲ್ಲಿ ವಾಮನನು ತನಗೆ ದಾನವಾಗಿ ಮೂರು ಹಜ್ಜೆಗಳಷ್ಟು ಭೂಮಿ ಬೇಕು ಎಂದು ಕೇಳುತ್ತಿದ್ದಾನೆ. ತೃತೀಯ ಪಟ್ಟಿಕೆಯಲ್ಲಿ ವಾಮನನ ಕಾಲನ್ನು ಅರ್ಘ್ಯ ಬಿಡುವ ಮೊದಲು ಬಲಿ ತೊಳೆದು ದಾನವನ್ನು ನೀಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾನೆ. ಈ ದೃಶ್ಯದಲ್ಲಿ ವಾಮನನನ್ನು ಪ್ರಮುಖವಾಗಿ ತೋರಿಸಲಾಗಿದೆ. ಬಲಿ ಅವನ ಪಾದವನ್ನು ತೊಳೆಯುತ್ತಿದ್ದಾನೆ. ಅವರ ಹಿಂದೆ ವ್ಯಕ್ತಿಯೊಬ್ಬ ನಿಂತಿರುವಂತೆ ತೋರಿಸಲಾಗಿದ್ದು, ಅದು ಅಸ್ಪಷ್ಟವಾಗಿದೆ. ಬಲಿಯ ಬಲಗಾಲು ಹಾಗೂ ಎಡಗೈ ತೃಟಿತಗೊಂಡಿದೆ.

ಬಲಿ ಪ್ರಸಂಗದ ಕಥಾನಕ ಪಟ್ಟಿಕೆಗಳು ಲಕ್ಕುಂಡಿಯ ಕಾಶಿವಿಶ್ವೇಶ್ವರ ದೇವಾಲಯದ ಅಂತರಾಳದ ವಾಜನಭಾಗದಲ್ಲಿ ಕಂಡು ಬಂದಿದ್ದು ಮೇಲಿನ ಶಿಲ್ಪಗಳಿಗಿಂತ ವಿವರಣಾತ್ಮಕವಾಗಿದ್ದು ಆಕರ್ಷಕವಾಗಿ ಕಂಡರಿಸಲ್ಪಟ್ಟಿವೆ.

ಮಹಾಭಾರತದ ದೃಶ್ಯಗಳು

ಪಾಂಡವರು ಅರಗಿನ ಮನೆಯಿಂದ ಪಾರಾದ ಪ್ರಸಂಗ

ಈ ಕಥಾನಕ ಶಿಲ್ಪವು ತ್ರಿಕೂಟೇಶ್ವರ ದೇವಾಲಯದ ಭಾಗವಾಗಿರುವ ಸೂರ್ಯದೇವಾಲಯದ ದಕ್ಷಿಣ ಭಾಗದ ಕಕ್ಷಾಸನದ ಹೊರಮೈಯಲ್ಲಿ ಕಂಡು ಬರುತ್ತದೆ. ಪಾಂಡವರು ಅರಗಿನ ಮನೆಯಿಂದ ಪಾರಾಗಿ ಬಂದ ಪ್ರಸಂಗವು ಮಹಾಭಾರತದ ಆದಿ ಪರ್ವದಲ್ಲಿ ಬರುತ್ತದೆ.[೧೧]

ಈ ಕಥಾನಕ ಶಿಲ್ಪವು ಏಕದೃಶ್ಯ ನಿರೂಪಣೆಯಾಗಿದ್ದು ಇದರಲ್ಲಿ ಪಾಂಡವರನ್ನು ಭೀಮಸೇನನು ಅರಗಿನ ಮನೆಯಿಂದ ಕೊಂಡ್ಯೊಯ್ಯುತ್ತಿರುವ ಪ್ರಸಂಗವನ್ನು ಕಂಡರಿಸಲಾಗಿದೆ. ಭೀಮಸೇನನು ನಕುಲ ಸಹದೇವರನ್ನು ಸೊಂಟದ ಮೇಲೆ ಕೂರಿಸಿಕೊಂಡಿದ್ದಾನೆ. ಕೈಗಳಲ್ಲಿ ಯುಧಿಷ್ಠಿರ ಅರ್ಜುನನನ್ನು ಹಿಡಿದುಕೊಂಡು ಹೊರಟಿದ್ದಾನೆ. ತಾಯಿಯಾದ ಕುಂತಿಯನ್ನು ಹೆಗಲಮೇಲೆ ಹತ್ತಿಸಿಕೊಂಡು ಹೊರಟಿದ್ದಾನೆ. ಆದರೆ ಶಿಲ್ಪದ ಆ ಭಾಗವು ತೃಟಿತಗೊಂಡಿವೆ. ಹಿಂಬದಿಯಲ್ಲಿ ನಕುಲನು ದಂಡವನ್ನು ಹಿಡಿದುಕೊಂಡ ಹಾಗೆ ಚಿತ್ರಿಸಲಾಗಿದೆ.

ಪಾಂಡವರು ಅರಗಿನ ಮನೆಯಿಂದ ಹೊರಬಂದು ಭೀಮಸೇನನು ಅವರನ್ನು ಹೊತ್ತುಕೊಂಡು ಹೋಗುವ ದೃಶ್ಯವು ಅಪರೂಪವಾಗಿದ್ದು, ಉತ್ತರ ಕರ್ನಾಟಕದ ಬೇರಾವ ದೇವಾಲಯಗಳಲ್ಲಿ ಕಂಡು ಬರುವುದಿಲ್ಲ.

ತ್ರಿಪುರಾಂತಕ ದಹನ

ತ್ರಿಪುರಾಂತಕ ಸಂಹಾರಮೂರ್ತಿಯು ತ್ರಿಕೂಟೇಶ್ವರ ದೇವಾಲಯದ ಭಾಗವಾದ ಸೂರ್ಯದೇವಾಲಯದ ದಕ್ಷಿಣ ಭಾಗದ ಕಕ್ಷಾಸನದ ಹೊರಮೈಯಲ್ಲಿ ಕಂಡು ಬರುತ್ತದೆ. ತ್ರಿಪುರಾಂತಕ ಸಂಹಾರ ಕುರಿತು ಮಹಾಭಾರತದ ಕರ್ಣಪರ್ವದ ೩೪ನೇ ಹಾಗೂ ಶಿವಪುರಾಣಗಳಲ್ಲಿ ಕಂಡುಬರುತ್ತದೆ.[೧೨]

ಪ್ರಸ್ತುತ ತ್ರಿಪುರಾಂತಕ ದಹನದ ಶಿಲ್ಪವು ಸಹ ಒಂದೇ ಪಟ್ಟಿಕೆಯಲ್ಲಿ ಮೂಡಿಬಂದಿದ್ದು, ಅತ್ಯಂತ ಸಾಂಕೇತಿಕವಾಗಿ ಸುಂದರವಾಗಿ ನಿರೂಪಿಸಲಾಗಿದ್ದು, ಶಿಲ್ಪವು ಮೂರು ಹಂತಗಳಲ್ಲಿ ಕಂಡರಿಸಲಾಗಿದೆ.

ಮೇಲ್ಭಾಗದಲ್ಲಿ ತಾರಕಾಸುರನ ಮೂವರು ಮಕ್ಕಳಾದ ತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿ ಮೂರು ಲೋಕಗಳನ್ನು ಹೊತ್ತು ನಿಂತಂತೆ ತೋರಿಸಲಾಗಿದೆ. ಎರಡನೆ ಹಂತ ಮಧ್ಯಭಾಗದಲ್ಲಿ ಶಿವನ ಶಿಲ್ಪವನ್ನು ಶಿಲ್ಪಿಯು ಜಾಣ್ಮೆಯಿಂದ ಹಿಂಬದಿಯಿಂದ ತೋರಿಸಿದ್ದು ಶಿವನ ಶಿರೋಭಾಗ ಹಾಗೂ ಬಾಣ ಬಿಡುತ್ತಿರುವದು ತ್ರುಟಿತಗೊಂಡಿದೆ. ಅರ್ಧ ಹಿಂಭಾಗ ಮಾತ್ರ ಕಂಡು ಬರುತ್ತದೆ. ಶಿಲ್ಪದ ಕೆಳಗಿನ ಹಂತದಲ್ಲಿ ಗಣಪತಿ ಹಾಗೂ ಷಣ್ಮುಖರ ಚಿಕ್ಕ ಶಿಲ್ಪಗಳಿವೆ.

ಇಂಥದೇ ರೀತಿಯ ತ್ರಿಪುರಾಂತಕ ಶಿಲ್ಪವು ಕುಕನೂರಿನ ಬ್ರಹ್ಮಲಿಂಗೇಶ್ವರ ದೇವಾಲಯದ ಕಂಬಗಳ ಮೇಲೆ ಕಂಡು ಬರುತ್ತವೆ. ಇದು ತ್ರಿಕೂಟೇಶ್ವರ ದೇವಾಲಯ ಶಿಲ್ಪಕ್ಕಿಂತಾ ವಿಭಿನ್ನವಾಗಿದ್ದು ವಿವರಣಾತ್ಮಕ ಹಾಗೂ ದ್ವಿಪಟ್ಟಿಕೆಗಳಲ್ಲಿ ಶಿವನು ಭೂಮಿಯನ್ನು ರಥವನ್ನಾಗಿಸಿಕೊಂಡು ಸೂರ್ಯ ಚಂದ್ರರನ್ನು ಗಾಲಿಗಳನ್ನಾಗಿಸಿಕೊಂಡಿದ್ದನ್ನು ತೋರಿಸಲಾಗಿದೆ. ನಾಲ್ಕು ಕುದುರೆಗಳಲ್ಲಿ ಒಂದು ಕುದುರೆಯನ್ನು ಮಾತ್ರ ಸಾಂಕೇತಿಕವಾಗಿ ತೋರಿಸಲಾಗಿದೆ. ಸಾರಥಿಯಾದ ಬ್ರಹ್ಮನನ್ನು ಚಿಕ್ಕ ಶಿಲ್ಪದಲ್ಲಿ, ಬಿಲ್ಲಾದ ಮೇರು ಪರ್ವತ ಮತ್ತು ಬಾಣವಾದ ವಿಷ್ಣುವನ್ನು ತೋರಿಸಲಾಗಿದೆ. ಈ ಶಿಲ್ಪದ ಇನ್ನೊಂದು ಪಾರ್ಶ್ವದಲ್ಲಿ ಶಿವನು ಬಿಲ್ಲನ್ನು ಹೂಡಿ ಬಾಣವನ್ನು ಪ್ರಯೋಗಿಸುತ್ತಿದ್ದಾನೆ. ಆತನ ಮುಂದೆ ತ್ರಿಪುರಗಳನ್ನು ಚೌಕಾಕಾರದಲ್ಲಿ ಆರು ಭಾಗಗಳಲ್ಲಿ ಹಾರಾಡುತ್ತಿರುವ ಹಾಗೆ ತೋರಿಸಲಾಗಿದೆ.

ತಂತ್ರ ಮತ್ತು ಶೈಲಿ

ತ್ರಿಕೂಟೇಶ್ವರ ದೇವಾಲಯದ ಕಥಾ ನಿರೂಪಕ ಶಿಲ್ಪಗಳು ಕಲಾದೃಷ್ಟಿಯಿಂದ ಗಮನೀಯವಾಗಿವೆ. ಶಿಲ್ಪಿಗೆ ರಾಮಾಯಣ, ಮಹಾಭಾರತ ಮತ್ತು ಪುರಾಣ ಕಥೆಗಳ ಪರಿಚಯ ಚೆನ್ನಾಗಿತ್ತೆಂದು ತೋರುತ್ತದೆ. ಕಕ್ಷಾಸನದ ಕೆಲವು ಶಿಲ್ಪಗಳನ್ನು ಪರಿಶೀಲಿಸಿದಾಗ (ಉದಾ: ಬಲಿ ಪ್ರಸಂಗ) ಶಿಲ್ಪಿಯು ಲಭ್ಯ ಸೀಮಿತ ಸ್ಥಳಾವಕಾಶದಲ್ಲಿ ಕಥೆಯ ಘಟನಾವಳಿಗಳನ್ನು ಪರಿಣಾಮಕಾರಿಯಾಗಿ ತೋರಿಸಿದ್ದಾನೆ.

ಇಲ್ಲಿನ ಬಹುತೇಕ ದೃಶ್ಯಗಳನ್ನು ಗಮನಿಸಿದಾಗ ಶಿಲ್ಪಿಯು ಏಕದೃಶ್ಯನಿರೂಪಣಾತಂತ್ರವನ್ನು (moniscinc mode) ಅನುಸರಿಸಿದ್ದು ಕಂಡು ಬರುತ್ತದೆ. ರಾಷ್ಟ್ರಕೂಟರ ಕಾಲದ ನಿರಂತರ ಬಹುದೃಶ್ಯ ನಿರೂಪಣಾ ಶೈಲಿಗಿಂತ ಕಲ್ಯಾಣ ಚಾಲುಕ್ಯರ ಕಾಲದ ತ್ರಿಕೂಟೇಶ್ವರ ದೇವಾಲಯದಲ್ಲಿ ಕಂಡರಿಸಲ್ಪಟ್ಟ ಕಥಾ ನಿರೂಪಕ ಶಿಲ್ಪಗಳಲ್ಲಿ ಶಿಲ್ಪಿಯು ಕಥೆಯ ಬಹಳಷ್ಟು ವಿಷಯಗಳನ್ನು ಒಂದೇ ದೃಶ್ಯ ಅಥವಾ ಪಟ್ಟಿಕೆಯಲ್ಲಿ ನಿರೂಪಿಸಲು ಪ್ರಯತ್ನಿಸಿದ್ದಾರೆ. (ಉದಾ: ತ್ರಿಪುರ ಸಂಹಾರಮೂರ್ತಿ) ಈ ಕಾಲದಲ್ಲಿಯ ನಿರ್ಮಾಣಗೊಂಡಿರಬಹುದಾದ ಸಮೀಪದ ಲಕ್ಕುಂಡಿಯ ಕಾಶಿವಿಶ್ವೇಶ್ವರ ದೇವಾಲಯದ ಕಥಾ ನಿರೂಪಕ ಶಿಲ್ಪಗಳು ತ್ರಿಕೂಟೇಶ್ವರ ದೇವಾಲಯದ ಕಥಾ ನಿರೂಪಕ ಶಿಲ್ಪಗಳಿಗಿಂತ ತಂತ್ರ, ಶೈಲಿ, ಗಾತ್ರ ಮತ್ತು ನಿರೂಪಣೆಯಲ್ಲಿ ಉತ್ತಮವಾಗಿ ಮೂಡಿಬಂದಿವೆ. ಆದರೆ ತ್ರಿಕೂಟೇಶ್ವರ ದೇವಾಲಯದ ಕಥಾ ನಿರೂಪಕ ಶಿಲ್ಪಗಳು ವಿಷಯ ಪ್ರತಿಪಾದನೆಯಲ್ಲಿ ಶ್ರೀಮಂತವಾಗಿದ್ದರೂ ಗಾತ್ರ ಮತ್ತು ಘಟನೆಗಳನ್ನು ನಿರೂಪಿಸುವಲ್ಲಿ ಸೊರಗಿವೆ.

ಧಾರ್ಮಿಕ ದೃಷ್ಟಿಯಿಂದ ಇಲ್ಲಿನ ಶಿಲ್ಪಗಳ ಕುರಿತು ಕೆಲವು ಅವಲೋಕನಗಳನ್ನು ಮಾಡಬಹುದಾಗಿದೆ. ಶಾಸನದಲ್ಲಿ ಈ ದೇವಾಲಯವನ್ನು ತ್ರೈಪುರುಷ ದೇವಾಲಯ ಎಂದು ಕರೆಯಲಾಗಿದ್ದು, ಇಲ್ಲಿ ಪಾಶುಪತ, ಕಾಳಾಮುಖರ ಪ್ರಭಾವ ಕಂಡು

ಬರುತ್ತದೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಡಾ. ಅ ಸುಂದರ ಅವರ ಪ್ರಕಾರ "ಈ ಭಾಗದಲ್ಲಿ ಕಾಳಾಮುಖ ಪ್ರಭಾವದ ಪುರಾಣೋಕ್ತ ಹಾಗೂ ರಾಮಾಯಣದ ಕಥಾ ನಿರೂಪಕ ಶಿಲ್ಪಗಳು ಹೆಚ್ಚಾಗಿ ಕಂಡು ಬರುತ್ತವೆ"[೧೩].

ಶೈಲಿಯ ದೃಷ್ಟಿಯಿಂದ ಗಮನಸಿದರೆ ಪ್ರಸ್ತುತ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ್ದು, ಬಾದಾಮಿ ಚಲುಕ್ಯರು ಹಾಗೂ ನಂತರದ ಹೊಯ್ಸಳರ ಕಾಲದ ಕಥಾನಿರೂಪಕ ಶಿಲ್ಪಗಳಿಗೆ ಹೋಲಿಸಿದರೆ ತ್ರಿಕೂಟೇಶ್ವರ ದೇವಾಲಯದ ಶಿಲ್ಪಗಳಲ್ಲಿ ಜೀವಕಳೆ ಕಡಿಮೆಯಾಗಿದೆ. ಒಂದು ರೀತಿಯ ಏಕತಾನತೆ ಈ ಶಿಲ್ಪಗಳ ಮಿತಿಯಾಗಿದೆ. ಆದರೆ ಪ್ರತಿಯೊಂದು ಶಿಲ್ಪದಲ್ಲಿಯೂ ಶಿಲ್ಪಿಯು ವಿವಿಧ ಪ್ರಕಾರದ ವೃಕ್ಷಗಳನ್ನು ಬಿಡಿಸುವಲ್ಲಿ ಜಾಣ್ಮೆಯನ್ನು ತೋರಿದ್ದು, ಶಿಲ್ಪದಷ್ಟೇ ಪ್ರಾಮುಖ್ಯತೆಯನ್ನು ಶಿಲ್ಪದ ಹಿಂದಿರುವ ವಾತಾವರಣ ನಿರ್ಮಾಣ ಪ್ರಭಾವಕ್ಕೆ ನೀಡಿದ್ದು ಕಂಡು ಬರುತ್ತದೆ. ಇದು ಶಿಲ್ಪಿಯ ಕೌಶಲ್ಯ ಮತ್ತು ಪರಿಕಲ್ಪನೆ ಹಾಗೂ ಪರಿಸರ ಪ್ರೀತಿಯ ಪ್ರತೀಕವಾಗಿದೆ. ಒಟ್ಟಾರೆಯಾಗಿ ತ್ರಿಕೂಟೇಶ್ವರ ದೇವಾಲಯದ ಕಥಾ ನಿರೂಪಕ ಶಿಲ್ಪಗಳು ತಮ್ಮ ವಿಷಯ ವೈವಿಧ್ಯತೆ ಮತ್ತು ಪರಿಸರ ಹಿನ್ನೆಲೆಯಿಂದಾಗಿ ವೀಕ್ಷಕರ ಮೇಲೆ ಪ್ರಭಾವ ಬೀರುವಂತೆ ಮಾಡುವಲ್ಲಿ ಶಿಲ್ಪಿಯು ಸಫಲನಾಗಿದ್ದಾನೆ.

[ಈ ಸಂಪ್ರಬಂಧವನ್ನು ಸಿದ್ಧಪಡಿಸುವಲ್ಲಿ ಕ್ಷೇತ್ರಕಾರ್ಯದಲ್ಲಿ ಸಹಾಯ ಸಲ್ಲಿಸಿದ ಶ್ರೀ ಅ.ದ. ಕಟ್ಟಿಮನಿ, ಸಲಹೆಯನ್ನು ನೀಡಿದ ಸ್ನೇಹಿತರಾದ ಡಾ. ಸಿ.ಬಿ. ತಾಬೋಜಿ ಹಾಗೂ ಮಾರ್ಗದರ್ಶನ ನೀಡಿದ ಮಾರ್ಗದರ್ಶಕರಾದ ಡಾ. ಸಿ.ಎಸ್. ವಾಸುದೇವನ್‌ರವರಿಗೆ ವಿಶೇಷ ಕೃತಜ್ಞತೆಗಳು].

ಅಡಿಟಿಪ್ಪಣಿ

೧. ವಸಂತ ಲಕ್ಷ್ಮೀ ಕೆ., "ಗದಗ ಜಿಲ್ಲೆಯ ಕಲ್ಯಾಣ ಚಾಲುಕ್ಯರ ಕಲೆ ಮತ್ತು ವಾಸ್ತುಶಿಲ್ಪ", ಪು-೨೧೨, ಆರ್. ಗೋಪಾಲ್, ಗದಗ ಜಿಲ್ಲೆ ಇತಿಹಾಸ ಮತ್ತು ಪುರಾತತ್ವ, ೨೦೦೬, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೨. ಬಾಲಸುಬ್ರಹ್ಮಣ್ಯ, ವಾಸುದೇವನ್ ಸಿ.ಎಸ್., ರಮೇಶ ನಾಯಕ, ೨೦೦೭, "ಕರ್ನಾಟಕ ದೇವಾಲಯ ಕೋಶ-ಗದಗ ಜಿಲ್ಲೆ", ಪು. ೫೧, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಶ್ರೀಹರಿ ಮತ್ತು ಶ್ರೀನಿವಾಸರಾಯರು ನ.ವೆಂ., ೧೯೮೭, 'ಶ್ರೀಮದ್ವಾಲ್ಮೀಕಿರಾಮಾಯಣ' ಸಂ. ೪, ಪು. ೧೪೭೪-೧೪೭೮, ಭಾರತ ದರ್ಶನ ಪ್ರಕಾಶನ ಸಮಿತಿ, ಬೆಂಗಳೂರು.

೪. ಶ್ರೀಹರಿ ಮತ್ತು ಶ್ರೀನಿವಾಸರಾಯರು ನ.ವೆಂ., ೧೯೮೮, 'ಶ್ರೀಮದ್ವಾಲ್ಮೀಕಿರಾಮಾಯಣ' ಸಂ. ೬, ಪು. ೧೯೪೪-೧೯೪೮ ಭಾರತ ದರ್ಶನ ಪ್ರಕಾಶನ ಸಮಿತಿ, ಬೆಂಗಳೂರು.

೫. ರಂಗನಾಥ ಶರ್ಮ ಎನ್., (ಅನು), ೧೯೭೨, ಶ್ರೀಮದ್ವಾಲ್ಮೀಕಿರಾಮಾಯಣಮ್, ಸುಂದರಕಾಂಡ, ಪು. ೧೩೩-೧೪೧, ರಾಮಾಯಣ ಪ್ರಕಾಶನ ಸಮಿತಿ, ಬೆಂಗಳೂರು.

೬ ತಾಬೋಜಿ. ಸಿ.ಬಿ., ೨೦೦೬, "ಲಕ್ಕುಂಡಿಯ ಕಾಶಿ ವಿಶ್ವೇಶ್ವರ ದೇವಾಲಯದ ಕಥಾ ನಿರೂಪಕ ಶಿಲ್ಪಗಳು", ಪು. ೩೧೭, ಆರ್. ಗೋಪಾಲ್, ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೭. ವರದಾಚಾರ್ಯ ಮ.ರ., (ಅನು), ೧೯೪೬, 'ಶ್ರೀವರಾಹ ಮಹಾಪುರಾಣ', ಭಾಗ ೧, ಪು. ೩೦೬-೩೦೯, ಶ್ರೀ ಹನುಮಾನ್ ಪ್ರೆಸ್, ಮೈಸೂರು.

೮. ಫಂಡರಿನಾಥಾಚಾರ್ಯ ಗಲಗಲಿ., (ಅನು), ೧೯೭೩, 'ಶ್ರೀಮತ್ಸ್ಯ ಮಹಾಪುರಾಣ' ಭಾಗ ೨, ಪು. ೫೯೦-೬೧೭, ವೇದಪುರಾಣ ಸಾಹಿತ್ಯಮಾಲಾ ಹುಬ್ಬಳ್ಳಿ.

೯. ಆಳಸಿಂಗಾಚಾರ್ಯ., ೧೯೩೩, (ಅನು), ಶ್ರೀಮದ್ ರಾಮಾಯಣವು, ಉತ್ತರಕಾಂಡ, ಪು. ೭೧-೭೬ ಕರ್ನಾಟಕ ಡಿಪೋ, ಮದರಾಸ.

೧೦. ವಿಶ್ವಾಮಿತ್ರ ಮತ್ತು ಇತರರು, ೧೯೯೪, 'ಶ್ರೀಮದ್ಭಾಗವತ', ಸಂಪುಟ-೫, ಪು. ೧೭೫೨-೧೭೯೩, ಭಾರತ ದರ್ಶನ ಪ್ರಕಾಶನ ಸಮಿತಿ, ಬೆಂಗಳೂರು.

೧೧. ಕೃಷ್ಣಶಾಸ್ತ್ರಿ ಎ.ಆರ್, ೧೯೫೦, ವಚನಭಾರತ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು. ೨೮-೩೪.

೧೨. ರಂಗಸ್ವಾಮಿ ಎಚ್.ಎನ್., ಮತ್ತು ಇತರರು (ಅನು), ೧೯೭೯, 'ಶ್ರೀಮನ್ಮಹಾಭಾರತ', ಸಂಪುಟ ೧೮, ಪು. ೩೯೩೩-೩೯೪೭, ಭಾರತ ದರ್ಶನ ಪ್ರಕಾಶನ ಸಮಿತಿ, ಬೆಂಗಳೂರು.

೧೩. ಸುಂದರ ಅ., ೧೯೭೫, "ಗದಗ ಬೆಟಗೇರಿಯ ಪ್ರಾಚೀನ ದೇವಾಲಯಗಳು", ಪು. ೪೭೧, ಕಿದಿಯೂರು ಹ.ರಾ., ಗದಗ ಬೆಟಗೇರಿ ಡೈರೆಕ್ಟರಿ, ಡೈರಕ್ಟರಿ ಪಬ್ಲಿಕೇಶನ್, ಗದಗ.

ಸಿರದ ಗಾಳ-ಗಂಟಲು ಗಾಳ ಸಿಡಿದೆಲೆಯ ಒಂದು ಸಾಧನ

ಡಾ. ಜಗದೀಶ್*

ಡಾ. ಎಂ.ಎಂ. ಕಲಬುರ್ಗಿ ಅವರ ಮಾರ್ಗ ಸಂಪುಟ ೧೯೮೮ರಲ್ಲಿ ಪ್ರಕಟವಾಯಿತು. ಇದರಲ್ಲಿನ ಕೆಲವು ಲೇಖನಗಳ ಸಂಗ್ರಹವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ 'ಐತಿಹಾಸಿಕ' ಎಂಬ ಕೃತಿಯನ್ನು ೧೯೯೧ರಲ್ಲಿ ಪ್ರಕಟಿಸಿದೆ. ಈ ಕೃತಿಯಲ್ಲಿರುವ ಒಂದು ಲೇಖನ ಸಿರದ ಗಾಳ-ಉರಿಯ ಉಯ್ಯಾಲೆ-ಮೂದಲೆಯ ಉಲಿ (ಡಾ. ಎಂ.ಎಂ. ಕಲಬುರ್ಗಿ, ೧೯೯೧, ಐತಿಹಾಸಿಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪುಟ ೧೯೬-೨೦೦). ಜನ್ನನ ಯಶೋಧರ ಚರಿತೆಯ ಪದ್ಯಗಳಲ್ಲಿ ವಸಂತಮಾಸದಲ್ಲಿ ಚಂಡ ಮಾರಿ ದೇವತೆಗೆ ಪಶು ಬಲಿ ಅರ್ಪಿಸುವ ಸಂದರ್ಭ ನಿಮಿತ್ತ ದೇವಿಯ ಆವರಣದಲ್ಲಿ ಜರುಗುತ್ತಲಿದ್ದ ಆಚರಣೆಗಳನ್ನು ಮತ್ತು ತೂಗಾಡುವ ವೀರರ ಚಿತ್ರವನ್ನು ಕವಿ ವರ್ಣಿಸಿದ್ದಾನೆ.

ಆ ದೇವಿಯ ಜಾತ್ರೆಗೆ ಮೊಳೆ
ವೋದಳೆವಱೆ ಸಿರದ ಗಾಳಮುರಿಯುಯ್ಯಲೆ ಕೈ ।
ವೋದಸುಕೆ ಕೋಕಿಲಧ್ವನಿ
ಮೂದಲೆಯುಲಿಯಾಗೆ ಬಂದನಂದು ವಸಂತಂ । (೧-೩೬)
ತಾಳುಗೆಯನುರ್ಚಿ ನೆತ್ತಿಯ
ಗಾಳು ಗಗನದೊಳೆಟಲ್ವ ಪಾರಿಯ ಬೀರರ್ ।
ಪಾಳಿಯೊಳೆಸೆದರ್ ಪಾಪದ
ಜೋಳದ ಬೆಳಸಿಂಗೆ ಬೆರ್ಚುಗಟ್ಟಿದ ತೆಱದಿಂ । (೧-೫೫)

ವಸಂತ ಮಾಸದ ಬಾಲಚಂದ್ರನು ಸಿರದ ಗಾಳ, ಅಶೋಕ ವೃಕ್ಷವು ಉರಿಯ ಉಯ್ಯಲೆ, ಕೋಕಿಲೆಯ ಧ್ವನಿಯು ಮೂದಲೆಯ ಉಲಿಯಂತೆ ಅಲ್ಲಿ ಕಾಣುತ್ತಿದ್ದವು : ಕೇಳಿಸುತ್ತಿದ್ದವು. ಕಲಬುರ್ಗಿಯವರು ತಮ್ಮ ಲೇಖನದಲ್ಲಿ ಸಿರದ ಗಾಳ ಎಂಬುದು ನೆತ್ತಿಯ ಗಾಳ ಅಥವಾ ಬೆನ್ನಗಾಳಗಳನ್ನಲ್ಲ ಗಂಟಲ ಗಾಳವನ್ನು ಸೂಚಿಸುತ್ತದೆ ಎಂಬ ಸಂದೇಹ ಹುಟ್ಟುತ್ತದೆ ಎಂದು ಹೇಳುತ್ತಾರೆ. ಮುಂದುವರಿದು ಸಿರದ ಗಾಳ ಕುತ್ತಿಗೆಯ ಹಿಂಭಾಗಕ್ಕೆ ಚುಚ್ಚುವ ಸಿಡಿಯನ್ನು ಸೂಚಿಸುವ ಸಾಧ್ಯತೆಯಿದೆ ಎಂಬ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

ಹೊಯ್ಸಳ ಕಾಲದ ಶಿಲ್ಪಿಗಳ ಬಿರುದುಗಳಲ್ಲಿ ಮಸ್ತಕ ಶೂಲ, ಗಂಟಲ ಗಾಳ ಬಳಕೆಯಾಗಿದೆ. ಬೇಲೂರಿನ ಶಿಲಾಬಾಲಿಕೆಯ ಕೆಳಗಿನ ಶಾಸವೊಂದರಲ್ಲಿ ಬಿರುದಿನ ರೂವಾರಿಗಳಿಗೆ ತಾನು ಗಣ್ಡ ಗತ್ತರಿ ಎಂದು ಹೇಳಿಕೊಂಡಿದ್ದಾನೆ [ಬಿರುದು ರೂವಾರಿಗಳ ಗಣ್ಡಗತ್ತರಿ ಪದರಿ ಮಲ್ಲೋಜ ಗೆಯ್ದ ಪುತ್ತಳಿ (ಇಸಿ ನಂ. ೫, ಬೇಲೂರು ನಂ. ೪೩)] ನುಗ್ಗೇಹಳ್ಳಿಯ ಶಾಸನವೊಂದರಲ್ಲಿ ಶಿಲ್ಪಿ ನಂದಿಯ ಬೈಚೋಜನು ತಾನು ಪ್ರಾಸಾದಿಗಳ ಮಸ್ತಕ ಶೂಲ ಎಂದು ಹೇಳಿದ್ದಾನೆ (ಹಿರಿ ಬಿರಿದ ರೂವಾರಿ ಗಿರಿವಜ್ರದಂಡವಿರಿದ ಪ್ರಾಸಾದಿ ಮಸ್ತಕ ಸೂಲ ರೂವರಿ ನಂದಿಯ ಬೈಚೋಜ ಮಾಡಿದ ರೂವಾರ ಶ್ರೀ ಶ್ರೀ ಶ್ರೀ, ನುಗ್ಗೇಹಳ್ಳಿ ಲಕ್ಷ್ಮೀನರಸಿಂಹ ದೇವಾಲಯ)

ಸಿಡಿದಲೆಗಳು ಅನೇಕ ಬಗೆಯಾಗಿ ಚಿತ್ರಿತವಾಗಿದೆ. ಭೈರವ ಪಾದದ ಸುತ್ತಲೂ ಇರುವ ಶಿಲ್ಪಗಳಲ್ಲಿ ವ್ಯಕ್ತಿ ಮತ್ತು ಕೋಣನ ಬಲಿಯ ಚಿತ್ರಣಗಳು ನಮಗೆ ದೊರಕುತ್ತವೆ. ಭೈರವನಿಗೆ ತಮ್ಮ ತಲೆಗಳನ್ನು ಅರ್ಪಿಸುವ ವ್ಯಕ್ತಿಗಳು. ಇಲ್ಲಿ ವೀರರು ತಮ್ಮ ತಲೆಯನ್ನು ತಾವೇ ಅರ್ಪಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ತಲೆಯನ್ನು ಕತ್ತರಿಸಲು ಉಪಯೋಗಿಸಿರುವ ಆಯುಧ ಕತ್ತಿ ಆಗಿದೆ.

ಸಿಡಿ ಹೋಗುವ ವ್ಯಕ್ತಿಯ ತಲೆಯನ್ನು ಬಾಗಿದ ಬಿದಿರು ಕೋಲಿಗೆ ಬಿಗಿದಿರುತ್ತಾರೆ. ಹಳೇಬಿಡಿನ ಹೊಯ್ಸಳೇಶ್ವರ ಶಾಂತಲೇಶ್ವರ ದೇವಾಲಯದ ಆವರಣದಲ್ಲಿನ ಕಂಬವೊಂದರಲ್ಲಿ ಇಂತಹ ಸಿಡಿದಲೆಯ ಶಿಲ್ಪವಿದೆ. ಇನ್ನು ಕೆಲವು ಸಾರಿ


* # ೬೬, ಹೊಸಮನೆ, ಬಡಾವಣೆ, ಶಿವಮೊಗ್ಗ-೫೭೭೨೦೧.














ಸಿಡಿದಲೆ ಹೋಗುವ ವ್ಯಕ್ತಿಯ ತಲೆಯನ್ನು ಮತ್ತೊಬ್ಬರು ಕತ್ತರಿಸುತ್ತಾರೆ. ಮತ್ತೊಬ್ಬ ವ್ಯಕ್ತಿಯು ರುಂಡವನ್ನು ಕತ್ತರಿಸುತ್ತಾನೆ. ಹೀಗೆ ಕತ್ತರಿಸುವಾಗ ವ್ಯಕ್ತಿ ಅಲುಗಾಡದೆ ಇರಲು ಆತನ ಪಾದವನ್ನು ಮೆಟ್ಟಿ ಹಿಡಿಯಲಾಗಿರುತ್ತದೆ. (ಶಿವಮೊಗ್ಗ ಸರ್ಕಾರಿ ವಸ್ತು ಸಂಗ್ರಹಾಲಯ, ಭದ್ರಾವತಿ ಸಂಗ್ರಹ) ರುಂಡ ಹಾರಿಸುವವನು ವ್ಯಕ್ತಿಗೆ ಕಾಣದಂತೆ ಹಿಂದಿನಿಂದ ಕಾರ್ಯವನ್ನು ಎಸಗುತ್ತಿರುವಂತೆ ಚಿತ್ರಿಸಲಾಗಿದೆ.

ಅಬಲೂರಿನ ಸಿಡಿದಲೆ ವೀರಗಲ್ಲಿನಲ್ಲಿ ಮೂರು ಹಂತಗಳನ್ನು ಚಿತ್ರಿಸಲಾಗಿದೆ. ಈ ಕಾರ್ಯಕ್ಕೆ ಒಪ್ಪುವ ವ್ಯಕ್ತಿಗಳ ತಲೆಗೆ ಬಿದಿರಿನ ಕೋಲನ್ನು ಬಾಗಿಸಿ ಕಟ್ಟಲಾಗಿದೆ. ತಲೆ ಕಟ್ಟಿದ ಕೋಲಿನ ಭಾಗಕ್ಕೆ ಹೂವಿನ ಗೊಂಡೆಗಳ ಅಲಂಕಾರವಿದೆ. ಎರಡನೆಯ ಹಂತದಲ್ಲಿ ಮೂವರು ಸಿಡಿದಲೆ ಹೋಗಿರುವುದನ್ನು ಚಿತ್ರಿಸಲಾಗಿದೆ. ಇವರ ಎಡಗಡೆ ಒಂದು ವೃತ್ತಾಕಾರದ ವಸ್ತುವನ್ನು ತೋರಿಸಲಾಗಿದೆ. ಈ ವೃತ್ತದ ಮೇಲೆ ಹಿಡಿಯಿದೆ, ಇನ್ನೊಂದೆಡೆ ಚೂಪಾದ ಮೊನೆಯಿದೆ. ಈ ವಸ್ತುವಿಗೂ ಹೂವಿನ ಗೊಂಡೆಗಳಿಂದ ಅಲಂಕರಿಸಲಾಗಿದೆ. ಇದು ಸಿಡಿದಲೆಗೆ ಬಳಸಿರುವ ಸಾಧನ ಎಂದು ತೋರುತ್ತದೆ. ಪ್ರಾಯಶಃ ತಲೆಯನ್ನು ದೇಹದಿಂದ ಬೇರ್ಪಡಿಸಲು ಈ ವಸ್ತುವನ್ನು ಬಳಸಲಾಗಿತ್ತೆಂದು ತೋರುತ್ತದೆ. ಈ ಚಿತ್ರದಿಂದ ಊಹಿಸಬಹುದಾದುದೇನೆಂದರೆ ವೃತ್ತಾಕಾರದ ಎರಡು ಬಳೆಗಳನ್ನು ಕುತ್ತಿಗೆಯ ಸುತ್ತಲೂ ಅಳವಡಿಸಲಾಗುತ್ತಿತ್ತು. ಈ ಎರಡು ಬಳೆಗಳ ಮಧ್ಯೆ ಚೂಪಾದ ಮೊನೆಯಯಿರುವ ಹಿಡಿಯನ್ನು ಬೆನ್ನ ಹಿಂದಿನಿಂದ ತಳ್ಳಲಾಗುತ್ತಿತ್ತು. ಇದರಿಂದ ರುಂಡವು ದೇಹದಿಂದ ಸುಲಭವಾಗಿ ಬೇರ್ಪಡುತ್ತಿತ್ತು. ಪ್ರಾಯಶಃ ಇದೇ ಸಿರದ ಗಾಳ ಅಥವಾ ಗಂಟಲ ಗಾಳ ಆಗಿರಬೇಕೆಂದು ತೋರುತ್ತದೆ. ಸಿಡಿದಲೆಯ ಸಾಧನವಾದ ಸಿರದ ಗಾಳವನ್ನು ಬಿಂಬಿಸುವ ಅಬಲೂರಿನ ಸಿಡಿದಲೆ ಕಲ್ಲು ಅಪರೂಪದ ನಿರೂಪಣೆ ಎಂದು ತೋರುತ್ತದೆ.

೭೨

ಕರ್ನಾಟಕದಲ್ಲಿ ದೇವಾಲಯ ಬೆಳವಣಿಗೆಯ ಮೊದಲ ಹೆಜ್ಜೆಗಳು ಔತ್ತರೇಯ ಸಂಪ್ರದಾಯ

ಎಂ.ಎನ್. ಪ್ರಭಾಕರ್*

ಔತ್ತರೇಯ ಸಂಪ್ರದಾಯದ ದೇವಾಲಯಗಳ ಮೂಲವನ್ನು ಗುರುತಿಸುವಾಗ, ಭುವನೇಶ್ವರದ ಪರಶುರಾಮೇಶ್ವರ ದೇವಾಲಯವನ್ನು ಹೆಸರಿಸುವುದು, ಇಂದಿನವರೆಗೂ ವಿದ್ವಾಂಸರಲ್ಲಿ ಚಾಲ್ತಿಯಲ್ಲಿದೆ. ಒಡಿಸ್ಸಾದ ಈ ದೇವಾಲಯದ ಶಿಖರ, ಮುಂಭಾಗದ ಜಗಮೋಹನ ಮೊದಲಾದ ಭಾಗಗಳನ್ನು ಹೆಸರಿಸಿ ಹಾಗೂ ಈ ದೇವಾಲಯದಲ್ಲಿರುವ ಕಿರುಶಾಸನಗಳ ಲಿಪಿಯ ಆಧಾರದ ಮೇಲೆ ಕಾಲವನ್ನು ನಿರ್ಧರಿಸಿ ಪ್ರಾಚೀನವೆಂದಿದ್ದಾರೆ.

ಕರ್ನಾಟಕದ ಐಹೊಳೆಯ ದೇವಾಲಯಗಳ ಅಧ್ಯಯನ ಭುವನೇಶ್ವರದ ದೇವಾಲಯಗಳೊಂದಿಗೆ ತುಲನಾತ್ಮಕವಾಗಿ ನಡೆದಿಲ್ಲ ಎನ್ನುವುದು ನಿಜ. ಐಹೊಳೆಯ ದೇವಾಲಯಗಳನ್ನು ಕೊಂಚ ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ಇವುಗಳ ಕಾಲಮಾನವನ್ನು ಖಂಡಿತಾ ಹಿಂದಕ್ಕೆ ಕೊಂಡೊಯ್ಯಬಹುದು. ಇಲ್ಲಿನ ಆರಂಭಿಕ ದೇವಾಲಯಗಳು ಔತ್ತರೇಯ ಸಂಪ್ರದಾಯವನ್ನು ಬೆಳೆಸಿದ್ದು ಭಾರತದ ಪಶ್ಚಿಮ ಮತ್ತು ಉತ್ತರಕ್ಕೆ ಪಸರಿಸಿದ್ದನ್ನು ಗುರುತಿಸಬಹುದು. ಅಂತಹ ಪ್ರಯತ್ನವನ್ನು ಈ ಪ್ರಬಂಧದದಡಿಯಲ್ಲಿ ಮಾಡಲಾಗಿದೆ.

ಐಹೊಳೆಯ ಲಾಡ್‌ಖಾನ್ ದೇವಾಲಯ ಕರ್ನಾಟಕದ ದೇವಾಲಯಗಳ ಅಧ್ಯಯನದಲ್ಲಿ ಒಂದು ಮೈಲಿಗಲ್ಲು. ಈ ರಚನೆ ಮೂಲರೂಪದಲ್ಲಿ ಉಳಿದಿರುವುದು ಒಂದು ಅದೃಷ್ಟ. ಇದನ್ನು ತಳಹದಿಯಾಗಿ ಇಟ್ಟುಕೊಂಡು, ಇದರ ಸುತ್ತ ಮುತ್ತ ರಚನೆಗೊಂಡ ಆಯಾಮಗಳನ್ನು ಬೆಳವಣಿಗೆಯನ್ನು ಪರೀಕ್ಷಿಸಬಹುದು. ಅದಕ್ಕೆ ಶಾಸ್ತ್ರದ ಬೆಂಬಲವಿದೆಯೇ ಎಂದು ವಿಶ್ಲೇಷಿಸಬಹುದು.

ಮೊದಲಿಗೆ ಲಾಡ್‌ಖಾನ್ ದೇವಾಲಯವನ್ನು ಗಮನಿಸೋಣ. ಲಾಡ್‌ಖಾನ್ ಕಟ್ಟಡದ ಹೆಸರು ಅಲ್ಲಿ ಮೊದಲಿಗೆ ಬಿಡಾರ ಹೂಡಿದ್ದ ನಿವಾಸಿಯೊಬ್ಬನ ಹೆಸರು. ಪ್ರಾಕ್ತನ ಇಲಾಖೆಯವರು ತಮ್ಮ ಸುಪರ್ದಿಗೆ ತೆಗೆದುಕೊಂಡ ನಂತರವೂ, ಅವನ ಹೆಸರಿನಲ್ಲೇ ಗುರುತಿಸುವುದು ಮುಂದುವರೆಯಿತು. ಔತ್ತರೇಯ ವಾಸ್ತು ಗ್ರಂಥಗಳ ಪ್ರಕಾರ, ಲಾಡ್‌ಖಾನ್ ದೇವಾಲಯ ಸಾರ್ವಜನಿಕ ವಸ್ತು ಗೃಹ–ಸಭೆ. ಸಭೆಯು ಅಗ್ರಹಾರದ ಮಹಾಜನರು, ಊರೊಡೆಯರು ಒಂದೆಡೆ ಸೇರಿ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳುತ್ತಿದ್ದ ವೇದಿಕೆ. ಮಹಾಜನರ ಸಮೂಹಕ್ಕೆ ಅನ್ವಯಿಸಿದ ಪದವು, ತದನಂತರ ಕಾಲದಲ್ಲಿ, ಅವರು ಸೇರುವ ಎಡೆಗೆ, ಸ್ಥಳಕ್ಕೆ ಅನ್ವಯಿಸಲಾಯಿತು.

ಛನ್ನಂ ಭವೇತ್ ಮಹಾಜನಸ್ಯ ಸ್ಥಾನಂ ಸಭೆಯ ಕಥಿತಾ ಶಾಲಾ – ಇದು ಸಮರಾಂಗನಾ ಸೂತ್ರಧಾರ ಗ್ರಂಥದ ಉಲ್ಲೇಖ. 'ಸಭಾ' ಎಂಬ ಪದ 'ಭ' ಧಾತು ಮೂಲದ್ದು ದಿ ಸಮ್ಯಕ್ ಬಾತೀತಿ ಸಭಾ – ಸಭಾ ಎಂದಲ್ಲಿ ಹೊಳೆಯುವಂಥದ್ದು– Shaining Body "ನಾಸಾ ಸಭೆ ಯಪ್ರ ನಸಂತಿ ವೃದ್ಧಾ : ವೃತ್ರನತೇ ಯೇ ನದ್ಧಾವದಂತಿ ಧರ್ಮಂ"– ಇದು ಸಭೆಯಾಲಕ್ಷಣ. ಸಭೆಯಲ್ಲಿ ಜ್ಞಾನವೃದ್ಧರಿರಬೇಕು; ಅವರು ಧರ್ಮವನ್ನು ಪಾಲಿಸುತ್ತಿರಬೇಕು.

ಸಮರಾಂಗಣ ಸೂತ್ರಧಾರ ಹಾಗೂ ಅಪರಾಜಿತ ಪೃಜಾ ಗ್ರಂಥಗಳು ಸಭಾ ರಚನೆಯ ವಿವರಗಳನ್ನು ಒದಗಿಸಿವೆ.

ಲಾಡ್‌ಖಾನ್ ದೇವಾಲಯ ೬X೬ ಕಂಬಗಳ ಚತುರಶ್ರ ರಚನೆ. ಮಧ್ಯದಲ್ಲಿ ಎತ್ತರದ ತುಸುಭಾರವೆನಿಸುವ ನಾಲ್ಕು ಕಂಬಗಳು; ಇದಕ್ಕೆ ಚತುಷ್ಕ ಎಂದು ಹೆಸರು. ಇದು ಪ್ರಧಾನಭಾಗ. ಈ ಚತುಷ್ಕದ ಸುತ್ತ ಅಲಿಂದವಿದೆ. ಅಲಿಂದ ಎಂದರೆ ಸುತ್ತಲೂ ಓಣಿ; ಇಂಗ್ಲೀಷಿನ passage ಇದಕ್ಕೆ ಸಮಾನಪದ. ಇದನ್ನು ಸುತ್ತುವರೆದಂತೆ ೧೨ ಕಂಬಗಳಿವೆ. ಪುನಃ ಓಣಿ ಹಾಗೂ ೨೦ ಕಂಭಗಳ ರಚನೆ. ಕಂಬದೊಡನೆ ಇರುವ ಓಣಿಗೆ ಶಾಲಾ ಎಂದು ಹೆಸರು. ಹೊರಭಾಗದ ಕಂಭಗಳ ಮಧ್ಯೆ

* ಪದ್ಮಪ್ರಭಾ, # ೪೨, ಬ್ಲಾಕ್ ೧೭, ಬ್ಯಾಂಕ್ ಕಾಲೋನಿ, ಶ್ರೀರಾಂಪುರ ೨ನೇ ಹಂತ, ಮೈಸೂರು–೫೭೦೦೨೩.

ಭಿತ್ತಿ, ಜಾಲಂದ್ರಗಳಿವೆ. ಇಲ್ಲಿಂದ ಗಾಳಿ, ಬೆಳಕಿಗೆ ಅವಕಾಶ. ಹೊರ ಮೂಲೆಯ ಕಂಭಗಳು ಭಿತ್ತಿಯೊಡನೆ ಸೇರಿವೆ; ಅಣುಕು ಕಂಭಗಳಂತಿವೆ. ಮೇಲ್ಛಾವಣಿಯ ಭಾರವನ್ನು ತಡೆಯುವ ಸಲುವಾಗಿ ಮೂಲೆಯಿಂದ ಎರಡೂ ದಿಕ್ಕಿನಲ್ಲಿ ಭಿತ್ತಿ ಕೊಂಚ ಮುಂದುವರಿಕೆ.

ನಾಲ್ಕು ಕಂಭಗಳ ಚತುಷ್ಕ, ನಂತರ ಅಲಿಂದ, ಶಾಲಾ, ಅಲಿಂದ ಶಾಲಾ ಹೀಗೆ ರಚನೆಗಳು ವಿಸ್ತಾರಗೊಳ್ಳುತ್ತವೆ. ಅಥವಾ ಇದನ್ನು ಚತುಷ್ಕ, ಒಂದನೇ ಅಲಿಂದ, ಎರಡನೇ ಅಲಿಂದ, ಮೂರನೆ ಅಲಿಂದ ಇತ್ಯಾದಿ., ಹೀಗೂ ವಿವರಿಸಬಹುದು. ಈ ಚತುರಶ್ರ ರಚನೆಯ ಮುಂಭಾಗದಲ್ಲಿ ೪X೩ ಕಂಭಗಳ ಮಂಟಪವಿದೆ. ಪ್ರವೇಶಕ್ಕಾಗಿ ಮಂಟಪದ ಮುಂಭಾಗದಲ್ಲಿ ಸೋಪಾನಗಳಿವೆ. ಸೋಪಾನಗಳ ಇಬ್ಬದಿಯಲ್ಲಿ ಒರಟಾದ ಹಸ್ತಿ ಹಸ್ತ ರಚನೆ ಇದೆ. ಈ ಮುಖ ಮಂಟಪದ ಸುತ್ತ ಕಕ್ಷಾಸನವಿದೆ. ಕಕ್ಷಾಸನದ ಹೊರಭಾಗದಲ್ಲಿ ಪೂರ್ಣಕುಂಭಗಳ ಅಲಂಕರಣ. ಮುಖ ಮಂಟಪದ ಸುತ್ತ ಕಂಭಗಳಲ್ಲಿ ದಂಪತೀಶಿಲ್ಪಗಳ, ಸಾಲ ಭಂಜಿಕೆಯರ ಅನಾವರಣ. ಒಳಗೆ ನೆಲಮಧ್ಯದಲ್ಲಿ ಕಂಭಗಳು ಸುತ್ತುವರೆದ ತೆಳು ಪಟ್ಟಿಕೆಯ ಮೇಲೆ ನಿಂತಿವೆ. ಮಧ್ಯದ ಚತುಷ್ಕದ ಎತ್ತರ ಹೆಚ್ಚು; ಇದರ ಮೇಲ್ಭಾಗದಲ್ಲಿ ಕಿರು ಗೃಹವಿದೆ. ಇದಕ್ಕೆ ಗೃಹಾಣಕ ಎಂದು ಹೆಸರು. ನಾಲ್ಕು ದಿಕ್ಕುಗಳಲ್ಲಿಯೂ ಭಿತ್ತಿ ಇದೆ.

ಭಿತ್ತಿಯಲ್ಲಿ ದೇವತೆಗಳ ಉಬ್ಬು ಶಿಲ್ಪಗಳಿವೆ. ಗೃಹಾಣಕದ ಮೇಲ್ಛಾವಣಿ ಸಮತಟ್ಟಾದುದು. ಇದಕ್ಕೆ ದಂಡ ಛಾದ್ಯವೆಂದು ಹೆಸರು. ಛಾದ್ಯದ ಹಾಸುಗಲ್ಲುಗಳು ಕೂಡುವೆಡೆಯಲ್ಲಿ ದುಂಡಾದ ದಿಂಡು ಕಲ್ಲುಗಳನ್ನು ನೀರು ಒಳಗೆ ಇಳಿಯದಂತೆ ಜೋಡಿಸಿದ್ದಾರೆ. ಅಲ್ಲಿಂದ ಶಾಲಾ ಭಾಗದಲ್ಲಿ ಎರಡು ಹಂತದಲ್ಲಿ ಇಳಿಜಾರಾದ ಛಾವಣಿ ಇದೆ. ಇದಕ್ಕೆ ಮಲ್ಲಛಾದ್ಯವೆಂದು ಹೆಸರು. ಇಲ್ಲಿಯೂ ಕಲ್ಲುಗಳು ಕೂಡುವಡೆಯಲ್ಲಿ ದುಂಡನೆಯ ದಿಂಡುಗಳನ್ನು ಜೋಡಿಸಿದ್ದಾರೆ. ಈ ರೀತಿಯ ಜೋಡಣೆಯನ್ನು ಐಹೊಳೆಯ ಹಲವಾರು ದೇವಾಲಯಗಳಲ್ಲಿ ಕಾಣಬಹುದು. ಮುಖಮಂಟಪದ ಛಾವಣಿಯೂ ಇದೇ ರೀತಿಯದು. ಮುಖಮಂಟಪದಲ್ಲಿ ಮೇಲೆ ಏರಲು ಒಂದು ಒರಟಾದ ಏಣಿಯನ್ನು ಇರಿಸಿದ್ದಾರೆ. ಇದು ಈ ಕಟ್ಟಡದ ಸ್ಥೂಲ ರೂಪ. ಈ ಸಭಾ ರಚನೆಯನ್ನು ತದನಂತರ ಕಾಲದಲ್ಲಿ ದೇವಾಲಯವಾಗಿ ಮಾರ್ಪಡಿಸಿದರು. ಮಧ್ಯದ ಚತುಷ್ಕದಲ್ಲಿ ನಂದಿಯನ್ನು ಇರಿಸಿದರು. ಹಿಂಭಾಗದ ಪಶ್ಚಿಮದ ಅಲಿಂದದ ಮಧ್ಯಭಾಗದಲ್ಲಿ ಗರ್ಭಗೃಹವನ್ನು ನಿರ್ಮಿಸಿದರು. ಹಿಂಭಾಗದ ಗರ್ಭಗೃಹ ತದನಂತರದ ಕಾಲದ್ದು ಎಂದು ಸ್ಪಷ್ಟವಾಗಿ ಗುರುತಿಸಬಹುದು. ದೇವಾಲಯವಾಗಿ ಪರಿವರ್ತಿಸುವಾಗ ಮಧ್ಯದ ಪ್ರಧಾನ ಚತುಷ್ಕವನ್ನೇ ಗರ್ಭಗೃಹವಾಗಿ ನಿರ್ಮಿಸಬಹುದಾಗಿತ್ತು. ಮೇಲ್ಗಡೆಯ ಗೃಹಾಣಕವೂ ನಂತರದ ಕಾಲದ್ದು ಎಂದು ವಿದ್ವಾಂಸರ ಅಭಿಪ್ರಾಯವಿದೆ. ದೇವಾಲಯವಾಗಿ ಪರಿವರ್ತಿಸಿದ್ದು ಬಹುಶಃ ಎಂಟನೆಯ ಶತಮಾನದ ನಂತರ ಎಂದು ಊಹಿಸಲು ಸಾಧ್ಯವಿದೆ. ಲಾಡ್‌ಖಾನ್ ಆಲಯದ ಭಿತ್ತಿಯಲ್ಲಿ ಮಹಾಜನರನ್ನು ಹೆಸರಿಸುವ ಎಂಟನೆ ಶತಮಾನದ ಎರಡು ಶಾಸನಗಳಿವೆ. ಸಭಾ ರಚನೆಯನ್ನು ಕುರಿತ ವಸ್ತುವಿವರಗಳು ಇಂತಿವೆ:

ಷಡ್ಭಾಗ ಭಾಜಿತೇ ಕ್ಷೇತ್ರೇಕರ್ಣಭಿತ್ತಿಂ ನಿವೇಶಯೇತ್
ಸಭಾಸ್ಸಾದ್ ಭಾವಿತ್‌ನಾಮ ಸಪ್ರಾಗ್ರೀವಾತ್ರ ಪಂಚಮೀ
ಸ್ತಂಭಾನ್ ಷಟ್‌ತ್ರಿಂಶಾದೇತಾಸು ಪಂಚಸ್ವಮಪಿ ನಿವೇಶಯೇತ್
ಸ್ತಂಭಾನ್ ಪ್ರಾಗ್ರೀವ ಸಂಬದ್ಧಾನ್ ಪೃಥಗೇಭ್ಯೋ ವಿನಿರ್ದಿಶೇತ್.

ಇದು ಸಮರಾಂಗಣ ಸೂತ್ರಧಾರ ಗ್ರಂಥದ ವಿವರ. ಸಭಾರಚನೆಯ ಎಂಟು ಪ್ರಬೇಧಗಳಲ್ಲಿ ಭಾವಿತ್ ಎಂಬ ಪ್ರಬೇಧದ ವಿವರಣೆಯನ್ನು ನೀಡಲಾಗಿದೆ. ಇದು ೬X೬=೩೬ ಸ್ತಂಭಗಳ ರಚನೆ ಮುಂಭಾಗದಲ್ಲಿ ಪ್ರಾಗ್ರೀವೆ. ಪ್ರಾಗ್ರೀವೆ ಎಂಬ ಮಂಟಪ ರಚನೆ ಎರಡು ಕಂಭಗಳಿಂದ ಆರಂಭಗೊಳ್ಳುತ್ತದೆ. ಆದರೆ ಇಲ್ಲಿ ೧೨ ಕಂಭಗಳ ಮಂಟಪ ರಚನೆ ಇದೆ. ಸಂಬದ್ಧ ಎನ್ನುವುದು ಶಾಲಾ ರಚನೆಯ ಪ್ರಬೇಧ. ಸಂಭದ್ಧವು ಚತುಷ್ಕ, ಅಲಿಂದ, ಶಾಲಾಗಳ ವ್ಯವಸ್ಥಿತ ಜೋಡಣೆಯನ್ನು ಗುರುತಿಸುತ್ತದೆ.

ಕ್ರಿ.ಶ. ೧೯೬೮ರಲ್ಲಿ ಎಸ್.ಆರ್.ರಾವ್ ಅವರು ಲಾಡ್‌ಖಾನ್ ಗುಡಿ, ಗೌಡರಗುಡಿ ಮೊದಲಾದ ದೇವಾಲಯಗಳ ಕಾಲಮಾನ ನಿಷ್ಕರ್ಶಿಸುವ ಸಲುವಾಗಿ, ದೇವಾಲಯಗಳ ಸುತ್ತ ಆವರಿಸಿದ್ದ ಮಣ್ಣಿನ ಸ್ತರಗಳನ್ನು ಹಂತಹಂತವಾಗಿ ಪರೀಕ್ಷಿಸಿದರು. ಅವರ ಶೋಧದ ಪ್ರಕಾರ ಗೌಡರಗುಡಿಯನ್ನು ಎರಡನೆಯ ಶತಮಾನದ ಆರಂಭ, ಕ್ರಿ.ಶ. ೪೦೦-೪೨೫ರ ಕಾಲದ್ದು ಎಂದು ನಿರ್ಧರಿಸಿದರು. ಲಾಡ್‌ಖಾನ್ ಆಲಯವನ್ನು ಕ್ರಿ.ಶ. ೪೨೫ ಮತ್ತು ೪೫೦ರ ಕಾಲದ್ದು ಎಂದು ತರ್ಕಿಸಿದರು. ಇವೆರಡು ಕಲ್ಲಿನ ರಚನೆಗಳು.

ಈ ಶತಮಾನದ ಆರಂಭದಲ್ಲಿ ತಲಕಾಡಿನಲ್ಲಿ ರಾಜ್ಯ ಪುರಾತತ್ತ್ವ ಇಲಾಖೆಯವರು ಮೈಸೂರು ವಿಶ್ವವಿದ್ಯಾನಿಲಯದ ವಿದ್ವಾಂಸರೊಡನೆ ಕೂಡಿ ಉತ್ಖನನ ಕೈಗೊಂಡಿದ್ದು, ಐಹೊಳೆಯ ದೇವಾಲಯಗಳಿಗಿಂತ ಪ್ರಾಚೀನವೆನ್ನುವ ದೇವಾಲಯ ಸ್ವರೂಪವನ್ನು ಗುರುತಿಸಿದ್ದಾರೆ. ಈ ಉತ್ಖನನದ ವರದಿ ಪ್ರಕಟವಾಗಬೇಕಾಗಿದೆ. ಈ ಮಹತ್ವದ ಶೋಧವನ್ನು ಡಾ. ಎಂ.ಎಸ್. ಕೃಷ್ಣಮೂರ್ತಿಯವರು ಛಾಯಾ ಚಿತ್ರಗಳೊಂದಿಗೆ ಹಲವು ವೇದಿಕೆಗಳಲ್ಲಿ ವಿವರಿಸಿದ್ದಾರೆ. ಈ ಉತ್ಖನನದಲ್ಲಿ ದೊರೆತದ್ದು ಇಟ್ಟಿಗೆಯ ರಚನೆ. ದೇವಾಲಯದ ಅಧಿಷ್ಠಾನದ ಒಂದು ಭಾಗ ಮಾತ್ರ. ಆದರೆ ದೇವಾಲಯದ ಸ್ಥೂಲ ರೂಪವನ್ನು ತಿಳಿಯಲು ಸಾಧ್ಯವಾಗಿದೆ. ಈ ರಚನೆ ಐಹೊಳೆಯ ರಚನೆಗಳಿಗಿಂತ ಪ್ರಾಚೀನ ಎಂದು ಗುರುತಿಸಿರುವುದರಿಂದ ಮಹತ್ವದ ಶೋಧನೆಯಾಗಿದೆ.

ಈ ದೇವಾಲಯದ ಮಧ್ಯಾಂಕಣದಲ್ಲಿ ಕಲ್ಲು ಚಪ್ಪಡಿಗಳನ್ನು ಹಾಸಿದ್ದು ಕೆಳಗೆ ನೆಲಮಟ್ಟದಲ್ಲಿ ಇಟ್ಟಿಗೆಯಿಂದ ಕೂಡಿದ ವಾಸ್ತು ಚಕ್ರವನ್ನು ರಚಿಸಲಾಗಿದೆ. ಮಧ್ಯಂಕಣದಲ್ಲಿ ಕಲ್ಲು ಚಪ್ಪಡಿಗಳಿಗೂ ವಾಸ್ತು ಚಕ್ರಕ್ಕು ಮಧ್ಯೆ ಮಣ್ಣಿನಿಂದ ಭರ್ತಿಮಾಡಿದ್ದು ಈ ಹಂತದಲ್ಲಿ ಆದಿಚಾರಿತ್ರಿಕ ಯುಗದ ಮೃತ್‌ಪಾತ್ರೆಗಳು ದೊರೆತವು. ಇದನ್ನು ಧಾರ್ಮಿಕ ವಿಧಿಯ ಅಂಗವಾಗಿ ಇಲ್ಲಿ ಇರಿಸಲಾಗಿತ್ತು ಎಂದು ಅಭಿಪ್ರಾಯ ಪಡಲಾಗಿದೆ. ಈ ಮೃತ್ ಪಾತ್ರೆಗಳು ಕಪ್ಪು ಮತ್ತು ಕೆಂಪು ಮಣ್ಣಿನ ಜಾಡಿಗಳಾಗಿದ್ದು ಮೇಲ್ಭಾಗದಲ್ಲಿ ಸುದ್ದೆಮಣ್ಣಿನಲ್ಲಿ ಚಿತ್ರಿಸಿದ ಅಲಂಕಾರವನ್ನು ಹೊಂದಿದ್ದವು. ವಿದ್ವಾಂಸರು ಈ ಜಾಡಿಗಳನ್ನು "ರಸೆಟ್‌ಕೋಟೆಡ್ ಕೇವಲಿನ್ ಪೈಂಟೆಡ್ ಬ್ಲಾಕ್ ಅಂಡ್ ರೆಡ್ವೇರ್" ಎಂದು ಗುರುತಿಸಿದ್ದಾರೆ. ಈ ರೀತಿಯ ಮೃತ್‌ಪಾತ್ರಗಳು ಕರ್ನಾಟಕದಲ್ಲಿ ಕ್ರಿಸ್ತಶಕದ ಮೊದಲ ಮೂರು ಶತಮಾನಗಳಲ್ಲಿ ಬಳಕೆಯಲ್ಲಿತ್ತು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಆದ್ದರಿಂದ ಈ ದೇವಾಲಯ ರಚನೆ ಕ್ರಿ.ಶ. ನಾಲ್ಕನೆ ಶತಮಾನದ ಮುಂಚಿನದು ಹಾಗೂ ಐಹೊಳೆಯ ದೇವಾಲಯಗಳಿಗಿಂತ ಪ್ರಾಚೀನ ಎಂದಿದ್ದಾರೆ. ದೇವಾಲಯದ ಮಧ್ಯಂಕಣದಲ್ಲಿ ಲಭ್ಯವಿರುವ ಕಲ್ಲು ಚಪ್ಪಡಿಗಳಲ್ಲಿ ಕುಳಿಗಳಿದ್ದು ಇಲ್ಲಿ ಮರದ ಮಂಟಪವನ್ನು ಜೋಡಿಸಿದ್ದರು ಎನ್ನಲಾಗಿದೆ. ಮರದ ಮಂಟಪದಲ್ಲಿ ಲೋಹದ ಅಥವಾ ಮರದ ವಿಗ್ರಹವಿರಲು ಸಾಧ್ಯ. ಆಲಯದ ಛಾವಣಿಗೆ ಮರದ ಕಟ್ಟನ್ನು ಬಳಸಲಾಗಿದ್ದು ಹೆಂಚನ್ನು ಹೊದೆಸಲಾಗಿತ್ತು ಎಂದು ದೊರೆತಿರುವ ಪಳೆಯುಳಿಕೆಗಳನ್ನು ಆಧರಿಸಿ ನಿರ್ಧರಿಸಲಾಗಿದೆ. ಆದರೆ ಛಾವಣಿಯ ಆಕಾರವನ್ನು ನಿರ್ಧರಿಸಲಾಗದು.

ಔತ್ತರೇಯ ಮತ್ತು ದಾಕ್ಷಿಣಾತ್ಯ ಸಂಪ್ರದಾಯದ ದೇವಾಲಯಗಳನ್ನು ಬೇರ್ಪಡಿಸುವಾಗ ಛಾವಣಿಯ ರಚನೆಯನ್ನು ಗಮನಿಸಬೇಕಾದ ಅವಶ್ಯಕತೆ ಇದೆ. ದಾಕ್ಷಿಣಾತ್ಯ ರಚನೆಗಳಲ್ಲಿ ಸಮತಲ ಛಾವಣಿಯನ್ನು ಐಹೊಳೆ, ಬಾದಾಮಿ, ಪಟ್ಟದಕಲ್ಲು ಪರಿಸರದಲ್ಲಿ ಕಾಣಬಹುದು. ಕರಾವಳಿ ಪ್ರದೇಶದಲ್ಲಿ ಇಳಿಜಾರಿನ ಮಾಡನ್ನು ಹೊಂದಿದ ಉಪಾ ಪಟ್ಟಿಕೆಗಳನ್ನು ಆಧರಿಸಿದ ರಚನೆಗಳಿವೆ. ಉಪಾ ಪಟ್ಟಿಕೆಗಳು ಮೇಲೆ ತುದಿಯಲ್ಲಿ ಜುಟ್ಟು ಹಿಡಿದಂತೆ ಒಂದುಗೂಡಿ ಸ್ತೂಪಿಯ ಕೆಳಗಿನ ಕೂಟಭಾಗದಲ್ಲಿ ಬಂಧಿಸಲ್ಪಡುತ್ತವೆ. ಉಪಾ ಪಟ್ಟಿಕೆಗಳ ಮೇಲೆ ತೆಳುವಾದ ಕಲ್ಲಿನ ಹಾಸುಗಳು ಅಥವಾ ಮರದ ಹಲಗೆಗಳನ್ನು ಹೊದಿಸಲಾಗುತ್ತದೆ. ಹೆಂಚುಗಳನ್ನು ಮರದಜಂತಿ(ಜಯಂತಿ?)ಗಳ ಮೇಲೆ ಜೋಡಿಸುವುದುಂಟು. ಕೆಲವೆಡೆ ಲೋಹದ ಹಾಳೆಗಳನ್ನು ಹೊದೆಸಿದ್ದಾರೆ.

ಔತ್ತರೇಯ ಸಂಪ್ರದಾಯದಲ್ಲಿ ಛಾವಣಿಯು ಎರಡು ಹಂತದ್ದು. ಮಧ್ಯದ ಚತುಷ್ಕವನ್ನು ಆವರಿಸಿದ್ದು ಸಮತಲಛಾದ್ಯ ಅಥವಾ ದಂಡಛಾದ್ಯ. ಅಲಿಂದ ಮತ್ತು ಶಾಲಾಭಾಗವನ್ನು ಆಧರಿಸಿದ್ದು ಇಳಿಜಾರು ಛಾದ್ಯ ಅಥವಾ ಮಲ್ಲಛಾದ್ಯ. ಮಧ್ಯದ ದಂಡಛಾದ್ಯ ತುಸು ಎತ್ತರದಲ್ಲಿರುತ್ತದೆ. ಮಧ್ಯದ ಚತುಷ್ಕ ದಂಡಛಾದ್ಯ ಮತ್ತು ಮಲ್ಲ ಚಾದ್ಯ ಎರಡನ್ನೂ ಧರಿಸುತ್ತದೆ. ಅದರಿಂದ ಬೃಹತ್ ಸ್ತಂಭಗಳು ಇವೆರಡೂ ಛಾದ್ಯಗಳ ನಡುವೆ ಶೀರ್ಷಕಸ್ತಂಭ ಹಾಗೂ ಕುಡ್ಯಾರಚನೆ ಸಾಧ್ಯ.

ಔತ್ತರೇಯ ಸಂಪ್ರದಾಯದಲ್ಲಿ ತೊಲೆ(ತುಲಾ)ಗಳ ಮೇಲೆ ನೇರವಾಗಿ ಹಲಗೆಗಳಿವೆ; ದಾಕ್ಷಿಣಾತ್ಯ ಸಂಪ್ರದಾಯದಲ್ಲಿ ಉಪಾಪಟ್ಟಿಕೆಗಳಿದ್ದು ಅವನ್ನು ಆಧರಿಸಿ ಹಲಗೆಗಳು ಅಥವಾ ಹೆಂಚು ಹೊದೆಸಲ್ಪಟ್ಟಿವೆ. ಈ ವ್ಯತ್ಯಾಸವನ್ನು ಪ್ರಮುಖವಾಗಿ ಗಮನಿಸಬೇಕು. ಲಾಡ್‌ಖಾನ್ ದೇವಾಲಯದ ಛಾವಣಿಯಲ್ಲಿರುವ ದಂಡಛಾದ್ಯ ಹಾಗೂ ಮಲ್ಲಛಾದ್ಯಗಳನ್ನು ವಿವರಿಸಲಾಗಿದೆ. ಈಗ ಮುಂದಿನ ರಚನೆಗಳನ್ನು ಗಮನಿಸಬೇಕು.

ಡಾ.ಎಸ್.ಆರ್. ರಾವ್ ಅವರ ಪ್ರಕಾರ ಗೌಡರಗುಡಿ ಪ್ರಾಚೀನ ಆಲಯ. ಇದಕ್ಕಿಂತ ಪ್ರಾಚೀನವೆಂದು ಗುರುತಿಸಿದ್ದು ತಲಕಾಡು ಉತ್ಖನನದಲ್ಲಿ ದೊರೆತ ರಚನೆ ಎನಿಸಿದೆ. ಇವೆರಡರಲ್ಲಿಯೂ ಗರ್ಭಗೃಹ ಮಧ್ಯದಲ್ಲಿದೆ ಎಂದು ಗಮನಿಸಬೇಕು. ಲಾಡ್‌ಖಾನ್ ಗುಡಿಯು ಸಾರ್ವಜನಿಕ ವಸ್ತುವಾಗಿದ್ದು ದೇವಾಲಯವಾಗಿ ಮಾರ್ಪಡಿಸುವಾಗ ಗರ್ಭಗೃಹವನ್ನು ಮಧ್ಯದಲ್ಲಿರಿಸಬಹುದಿತ್ತು. ಈ ಮೂಲದಿಂದ ಲಡ್‌ಖಾನ್ ಗುಡಿಯನ್ನು ಮೊದಲ ಹಂತ ಎನ್ನಲು ಸಾಧ್ಯ. ಗೌಡರ ಗುಡಿಯನ್ನು ಈಗ ವಿವರಿಸಬಹುದು. ಗೌಡರ ಗುಡಿಯಲ್ಲಿ ೪X೬ ಕಂಭಗಳಿವೆ. ಲಾಡ್‌ಖಾನ್ ದೇವಾಲಯವನ್ನು

ಇದರೊಂದಿಗೆ ಹೋಲಿಸಿದರೆ ಎರಡು ಪಾರ್ಶ್ವಗಳಲ್ಲಿ ಅಲಿಂದ ರಚನೆಯನ್ನು ಕಡಿಮೆಗೊಳಿಸಿರುವುದು ಕಂಡುಬರುತ್ತದೆ. ಸಮರಾಂಗನಾ ಸೂತ್ರಧಾರ ಗ್ರಂಥದ ಕೆಳಗಿನ ಶ್ಲೋಕವನ್ನು ಗಮನಿಸಬೇಕು.

ಪುರತಃ ಪೃಷ್ಟತಃ ಪಾರ್ಶ್ವೇ ಯದಿವಾಲಿಂದ ವರ್ಜಿತಾ
ಗೃಹೇನ ಶಸ್ಯತೇ ದೇವಾಗಾರೇತು ಶಸ್ಯತೇ

ಅಲಿಂದವನ್ನು ಮುಂದೆ, ಹಿಂದೆ ಅಥವಾ ಪಾರ್ಶ್ವಗಳಲ್ಲಿ ಕಡಿಮೆಗೊಳಿಸಬಹುದು. ಇದು ದೇವಾಲಯ ರಚನೆಯಲ್ಲಿ ಮಾತ್ರ ಸಾಧ್ಯ. ಗೃಹರಚನೆಯಲ್ಲಿ ನಿಶಿದ್ಧ. ಶಾಸ್ತ್ರಗ್ರಂಥಗಳ ಪ್ರಕಾರ ಗೃಹ, ರಾಜಗೃಹಗಳು ಚತುರಶ್ರ ರಚನೆಗಳೇ ಆಗಬೇಕು. ದೇವಾಲಯ ರಚನೆಯಲ್ಲಿ ಚತುರಶ್ರ ರಚನೆಗಳನ್ನು ಆಯತಾಕಾರವಾಗಿ ಪರಿವರ್ತಿಸಬಹುದು. ಸಾಮಾನ್ಯವಾಗಿ ದೇವಾಲಯಗಳು ಉದ್ದ ಹೆಚ್ಚು; ಅಗಲ ಕಡಿಮೆ.

ಗೌಡರಗುಡಿಯಲ್ಲಿ ೬X೬ ಕಂಭದ ರಚನೆಯಲ್ಲಿ ಎರಡು ಪಾರ್ಶ್ವಗಳನ್ನು ಕಡಿಮೆಗೊಳಿಸಿ ೬X೪ ಕಂಭಗಳ ಆಕಾರವನ್ನು ಪಡೆಯಲಾಗಿದೆ. ಮಧ್ಯದಲ್ಲಿರಬಹುದಾಗಿದ್ದ ಪ್ರಧಾನ ಗೃಹ ಅಥವಾ ಗರ್ಭಗೃಹ ಒಂದು ಹೆಜ್ಜೆಹಿಂಸರಿದಿದೆ. ಗರ್ಭಗೃಹಕ್ಕೆ ಭಿತ್ತಿ ಇದೆ. ಸುತ್ತಲು ತೆರೆದ ಭಾಗ. ಸುತ್ತಲೂ ಕಂಭಗಳನ್ನು ಸುತ್ತುವರೆದಂತೆ ಕಕ್ಷಾಸನವಿದೆ. ಮುಂಭಾಗದಲ್ಲಿ ಪ್ರಾಗ್ರೀವಾದಿ ಮಂಟಪವಿಲ್ಲ. ಪ್ರವೇಶಕ್ಕೆ ನೇರವಾಗಿ ಹಸ್ತಿಹಸ್ತವುಳ್ಳ ಸೋಪಾನಗಳಿವೆ. ಮಧ್ಯದಲ್ಲಿ ದಂಢಛಾದ್ಯ, ಸುತ್ತ ಅಲಿಂದದ ಮೇಲೆ ಮಲ್ಲಿಛಾದ್ಯ, ಗರ್ಭಗೃಹದ ಮುಂಭಾಗದಲ್ಲಿ ನಾಲ್ಕು ಕಂಭಗಳ ಚತುಷ್ಕವಿದೆ. ಇದು ವಿಕಾಸಗೊಂಡು ಮುಂದಿನ ಹಂತಗಳಲ್ಲಿ ನವರಂಗದ ಸ್ವರೂಪ ಪಡೆಯಲು ಸಾಧ್ಯ. ಗೌಡರಗುಡಿಯ ನಂತರ ಗಮನಿಸಬೇಕಾದದ್ದು ಚಿಕ್ಕಗುಡಿ.

ಗೌಡರ ಗುಡಿಗೂ, ಚಿಕ್ಕ ಗುಡಿಗೂ ಹೆಚ್ಚಿನ ವ್ಯತ್ಯಾಸವಿಲ್ಲ. ಚಿಕ್ಕಗುಡಿಯಲ್ಲಿ ಅಲಿಂದ ರಚನೆಯ ಸುತ್ತ ಕಂಭಗಳೊಂದಿಗೆ ಭಿತ್ತಿ ಹಾಗೂ ಜಾಲಂದ್ರ ಜೋಡಣೆ ಇದೆ. ಗರ್ಭಗೃಹವಿರುವೆಡೆಯಲ್ಲಿ ಗಾಳಿ ಬೆಳಕಿಗಾಗಿ ಹೊರಭಿತ್ತಿಯಲ್ಲಿ ಜಾಲಂದ್ರಗಳು. ಮುಂಭಾಗದಲ್ಲಿ ತೆರೆದ ಮಂಟಪ ಹಾಗೂ ಪ್ರವೇಶಕ್ಕಾಗಿ ಸೋಪಾನಗಳು ಮಧ್ಯದ ಛಾವಣಿಯು ದಂಡಛಾದ್ಯ: ಪಾರ್ಶ್ವಗಳಲ್ಲಿ ಮಲ್ಲಛಾದ್ಯ, ಗರ್ಭಗೃಹ ಹಾಗೂ ಮುಂದಿನ ಚತುಷ್ಕ ಸೃಷ್ಟವಿದೆ. ದೇವಾಲಯದ ಸ್ವರೂಪ ಖಚಿತಗೊಂಡಿದೆ; ಆದರೆ ಶಿಖರವಿಲ್ಲ. ಮುಂದಿನ ಮಂಟಪದಲ್ಲಿ ಕಕ್ಷಾ ಸವಂ ಅಪೇಕ್ಷಣೀಯ ವೆನಿಸಿತ್ತು. ವಿಕಾಸದ ದೃಷ್ಟಿಯಿಂದ ಲಾಡ್‌ಖಾನ್ ದೇವಾಲಯ ಮೊದಲ ಹಂತವಾದರೆ, ಗೌಡರಗುಡಿ ಹಾಗೂ ಚಿಕ್ಕಗುಡಿ ಎರಡನೆ ಹಂತದ್ದು. ಒಂದರಲ್ಲಿ ಭಿತ್ತಿರಚನೆ ಇಲ್ಲ. ಮತ್ತೊಂದರಲ್ಲಿ ಕಕ್ಷಾಸನವಿಲ್ಲ. ಮುಂದಿನ ಹಂತದಲ್ಲಿ ಶಿಖರವನ್ನು ಕಾಣಬಹುದು.

ಹುಚ್ಚುಮಲ್ಲಿ ಗುಡಿಯ ಮೇಲೆ ಕಳಿಂಗ ಶಿಖರವಿದೆ. ಇದನ್ನು ರೇಖಾಮಾದರಿ ಅಥವಾ ಬಾಗಿದ ಶಿಖರವೆಂದು ಗುರುತಿಸಲಾಗುತ್ತಿದೆ. ಶಿಖರ ರಚನೆಯೊಂದಿಗೆ ಸುತ್ತ ಭಿತ್ತಿ ರಚನೆಯನ್ನು ಹೊರಭಾಗದಲ್ಲಿ ಕಾಣುತ್ತೇವೆ. ಗರ್ಭಗೃಹವಿರುವೆಡೆಯಲ್ಲಿ ಪಾರ್ಶ್ವಗಳಲ್ಲಿ ಹಾಗೂ ಹಿಂಭಾಗದಲ್ಲಿ ಕಿರಿದಾದ ಜಾಲಕಗಳಿವೆ. ದೇವಾಲಯವು ಆಯತಾಕಾರವುಳ್ಳದ್ದು. ಪರಿಪೂರ್ಣ ದೇವಾಲಯವೆನ್ನಲು ಸಾಧ್ಯ. ತಳವಿನ್ಯಾಸದಲ್ಲಿ ೬X೪ ಕಂಭಗಳ ಮುಂದುವರಿಕೆ ಎಂಬಂತಿದೆ. ಕಂಬಗಳನ್ನು ಗುರುತಿಸಲಾಗದು. ಛಾವಣಿಯ ರಚನೆಯಲ್ಲಿ ಮಧ್ಯೆ ದಂಡಛಾದ್ಯ ಮತ್ತು ಪಾರ್ಶ್ವಗಳಲ್ಲಿ ಮಲ್ಲ ಛಾದ್ಯವನ್ನು ಗುರುತಿಸಬಹುದು. ಮುಂಭಾಗದಲ್ಲಿ ನಾಲ್ಕು ಕಂಬಗಳ ಮುಖಮಂಟಪವಿದೆ. ಪಾರ್ಶ್ವಗಳಲ್ಲಿ ಕಕ್ಷಾಸನ ರಚನೆ ಇದೆ. ಸೋಪಾನಗಳಿಂದ ಪ್ರವೇಶ. ದೇವಾಲಯವು ಸರಳವಾದ ಪೀಠರಚನೆಯನ್ನು ಹೊಂದಿದೆ. ಗರ್ಭಗೃಹವು ಭಿತ್ತಿಯಿಂದ ಆವರಿಸಿದ್ದು ಮುಂಭಾಗದಲ್ಲಿ ನಾಲ್ಕು ಕಂಬಗಳಿವೆ. ಔತ್ತರೇಯ ದೇವಾಲಯ ಖಚಿತರೂಪ ಪಡೆದಿದ್ದು ಇದನ್ನು ಮೂರನೆಯ ಹಂತ ಎಂದು ಗುರುತಿಸಬಹುದು.

ನಾಲ್ಕನೆಯ ಹಂತ ಬಹು ಮುಖ್ಯವಾದುದು. ಅಲಿಂಧದಿಂದ ಸುತ್ತುವರೆದಿದ್ದ ಗರ್ಭಗೃಹ ಪೂರ್ಣವಾಗಿ ಹಿಂಸರಿದು ಪ್ರತ್ಯೇಕಗೊಳಿಸಲ್ಪಟ್ಟಿದೆ. ಬಾಗಿದ ಶಿಖರದ ಭಾರವನ್ನು ಗರ್ಭಗೃಹ ಸಂಪೂರ್ಣವಾಗಿ ಹೊರುತ್ತದೆ: ಗರ್ಭಗೃಹವನ್ನು ಪ್ರತ್ಯೇಕಿಸಲು ಇದೂ ಕಾರಣವಿರಬಹುದೇ? ಗರ್ಭಗೃಹದ ಮುಂಭಾಗದಲ್ಲಿ ನವರಂಗವು ರೂಪುಗೊಂಡಿದೆ. ಛಾದ್ಯ ರಚನೆಯಲ್ಲಿ ಮಲ್ಲಛಾದ್ಯ ಹಾಗೂ ದಂಡಛಾದ್ಯ ರಚನೆಯನ್ನು ಕಾಣಬಹುದು. ಈ ಹಂತವನ್ನು ಹುಚ್ಚಪ್ಪಯ್ಯನ ಗುಡಿಯಲ್ಲಿ ಕಾಣಬಹುದು. ನವರಂಗ ರಚನೆ ಸಂಪ್ರದಾಯ ಬೇಧವನ್ನುಣಿಸದೆ ದಾಕ್ಷಿಣಾತ್ಯ ದೇವಾಲಯಗಳಿಗೂ ಕರ್ನಾಟಕದಲ್ಲಿ ವಿಸ್ತರಿಸಿತು. ಆದರೆ ಬಾಗಿದ ಶಿಖರ ರಚಿಸಿ ಹಾಗೂ ಮಲ್ಲಛಾದ್ಯ ಮತ್ತು ದಂಡಛಾದ್ಯ ರಚನೆ ಔತ್ತರೇಯ ಸಂಪ್ರದಾಯದ ಲಕ್ಷಣವಾಗಿ ಮುಂದುವರೆಯಿತು. ಈ ಹಂತದಲ್ಲಿ ಭುವನೇಶ್ವರದ ಪರಶುರಾಮೇಶ್ವರ ದೇವಾಲಯವನ್ನು ಗಮನಿಸಬೇಕು. ಇಲ್ಲಿಂದ ಮುಂದುವರೆದ ಹಂತಗಳನ್ನು ಭುವನೇಶ್ವರ ಹಾಗೂ ಉತ್ತರ ಭಾರತದಲ್ಲಿ ಕಾಣಲು ಸಾಧ್ಯವೇ ಹೊರತು, ಹಿಂದಿನ ಬೆಳವಣಿಗೆಗಳಿಲ್ಲ. ಅಲಂಪುರದ ಬಾದಾಮಿ ಚಾಲುಕ್ಯರ ಕಾಲದ ನವಬ್ರಹ್ಮ ದೇವಾಲಯಗಳಲ್ಲಿ ಬಹುಪಾಲು

ರಚನೆಗಳು ಈ ಮೂಲದ್ದು. ಐಹೊಳೆಯ ತಾರಬಸಪ್ಪನ ಗುಡಿ, ಮಲ್ಲಿಕಾರ್ಜುನ ದೇವಾಲಯಗಳನ್ನೂ ಹೆಸರಿಸಬಹುದು. ಮಲ್ಲಿಕಾರ್ಜುನ ದೇವಾಲಯದಲ್ಲಿ ಫಾಂಸನಾಕಾರ ಶಿಖರವಿದೆ.

ಕರ್ನಾಟಕದಲ್ಲಿರುವ ಕಳಿಂಗ ಶೈಲಿಯ ಶಿಖರಗಳಿಗೂ, ಭುವನೇಶ್ವರದಲ್ಲಿರುವ ಕಳಿಂಗ ಶೈಲಿಯ ಶಿಖರಗಳಿಗೂ ಸಾಮ್ಯತೆ ಇದೆ. ಇವು ಪ್ರಾದೇಶಿಕ ಲಕ್ಷಣಗಳನ್ನು ಮೈಗೂಡಿಸಿಕೊಂಡಿವೆ. ಕರ್ನಾಟಕದಲ್ಲಿ ದಾಕ್ಷಿಣಾತ್ಯ ಶೈಲಿಗಳಾದ ನಾಗರ, ದ್ರಾವಿಡ, ವೇಸರ ಶೈಲಿಗಳೊಡನೆ ಕಳಿಂಗ ಶೈಲಿಯ ಬಾದಾಮಿ ಚಾಲುಕ್ಯರ ಕಾಲದಲ್ಲಿ ರೂಪುಗೊಂಡಿತ್ತು. ಈ ಶೈಲಿಗಳನ್ನು ಬಳ್ಳಾರಿ ಜಿಲ್ಲೆಯ (ಈಗ ದಾವಣಗೆರೆ ಜಿಲ್ಲೆ) ಹೊಳಲು ಶಾಸನ ಹೆಸರಿಸಿದೆ. ಫಾಂಸನಾಕಾರ ಸ್ವತಂತ್ರ ಶೈಲಿ ಎನ್ನುವಷ್ಟು ಆ ಕಾಲದಲ್ಲಿ ರೂಪುಗೊಂಡಿರಲಿಲ್ಲವೆನ್ನಬಹುದು; ಆದರೆ ಪ್ರಯೋಗ ಹಂತದಲ್ಲಿತ್ತು. ಮೊದಲಿಗೆ ಫಂಸನಾಕಾರ ಶಿಖರದ ಮೇಲೆ ಆಮಲಕವಿದ್ದು (ಮಲ್ಲಿಕಾರ್ಜುನ ದೇವಾಲಯ) ತದನಂತರದಲ್ಲಿ ಘಂಟಾ ರಚನೆಯನ್ನು ಅಳವಡಿಸಿಕೊಂಡಿತು ಎನ್ನಬಹುದು. ಕರ್ನಾಟಕದ ಕಳಿಂಗ ಶೈಲಿಯೂ ರೇಖಾಮಾದರಿಯ ಬಾಗಿದ ಶಿಖರವೇ. ಈ ಶಿಖರದಲ್ಲಿ ಕಂಠ, ಕಪೋತಗಳ ಪುನರಾವರ್ತನೆ ಇದೆ. ಬನವಾಸಿಯ ಮಧುಕೇಶ್ವರ ದೇವಾಲಯದ ಶಿಖರವನ್ನು ಗಮನಿಸಬಹುದು. ಕಳಿಂಗ ಶೈಲಿಯಲ್ಲಿ ಕಪೋತ ಅಥವಾ ಪಟ್ಟಿಕೆಯಲ್ಲಿ ಅಲಂಕರಣವಿದೆ. ಶಿಖರದ ನಂತರ ಮೇಲ್ಭಾಗದಲ್ಲಿ ವೇದಿ ಇದೆ. ವೇದಿಯ ನಂತರ ಕಂಠ ಅಥವಾ ಗಲ; ನಂತರ ಆಮಲಕ ಮತ್ತು ಕಳಶ. ಕಳಶವು ನೀಳವಾದದ್ದು. ಅಮಲಿಕ ಗುಂಡಗಿದ್ದು ನೆಲ್ಲಿಕಾಯಿಯನ್ನು ಹೋಲುತ್ತದೆ. ಕರ್ನಾಟಕ ಹಾಗೂ ಅಲಂಪುರದಲ್ಲಿರುವ ರೇಖಾಶಿಖರದ ರಚನೆ ಈ ರೀತಿಯದು ಭುವನೇಶ್ವರ ಮೊದಲೆಡೆಯಲ್ಲಿ ಬಾಗಿದ ಕಳಿಂಗ ಶೈಲಿಯ ಶಿಖರದ ತುದಿಯನ್ನು ಬೇಕಿ ಎಂದು ಗುರುತಿಸುತ್ತಾರೆ. ಶಿಖರದ ನಂತರ ಗಲ ಹಾಗೂ ಚಪ್ಪಟೆಯಾದ ಅಮಲಸಾರ. ಕರ್ನಾಟಕದ ಅಮಲಕಕ್ಕೆ ಹೋಲಿಸಿದರೆ ಇದು ಮುಂದುವರೆದ ಹಂತವೇ. ತುದಿಯಲ್ಲಿ ಕುಂಭಕಳಶ ವೇದೀ ಭಾಗವಿಲ್ಲ ಎನ್ನುವುದನ್ನು ಗಮನಿಸಬೇಕು.

ಬಾದಾಮಿ ಚಾಲುಕ್ಯರ ಕಾಲದ ರಚನೆಗಳಲ್ಲಿ ದಂಡಭಾದ್ಯ ಮತ್ತು ಮಲ್ಲಭಾದ್ಯದ ಮೇಲೆ ಹಾಸುಗಲ್ಲುಗಳು ಕೂಡುವೆಡೆಯಲ್ಲಿ ದುಂಡಾದ ದಿಂಡುಗಳನ್ನು ಇರಿಸಿದ್ದಾರೆ. ಈ ರೀತಿಯ ರಚನೆಯನ್ನು ಪುನಃ ಶೃಂಗೇರಿಯ ವಿದ್ಯಾಶಂಕರ (ಫಂಸನಾ ಶಿಖರ) ದೇವಾಲಯ ಹಾಗೂ ಕೆಳದಿ ಅರಸರ ಕಾಲದ ರಚನೆಗಳಲ್ಲಿಯೂ ಕಾಣುತ್ತೇವೆ.

ಭುವನೇಶ್ವರದ ಪರಶುರಾಮೇಶ್ವರ ದೇವಾಲಯವನ್ನು ಕಿರುಶಾಸನಗಳ ಲಿಪಿಯ ಆಧಾರದ ಮೇಲೆ ಕ್ರಿ.ಶ. ೬೫೦ಕ್ಕೆ ಸೇರಿದ್ದು ಎಂದು ವಿದ್ವಾಂಸರು ವಿವರಿಸುತ್ತಾರೆ. ಇದನ್ನು ಒಪ್ಪಿಕೊಂಡಲ್ಲಿ ಕರ್ನಾಟಕದ ಕಳಿಂಗ ಶೈಲಿಯನ್ನು ಇನ್ನೂ ಹಿಂದಕ್ಕೆ ಕೊಂಡೊಯ್ಯಲು ಅವಕಾಶವಿದೆ. ದಾಕ್ಷಿಣಾತ್ಯ ಮತ್ತು ಔತ್ತರೇಯ ಸಂಪ್ರದಾಯ ಶೈಲಿಗಳನ್ನು ಗುರುತಿಸುವಲ್ಲಿ ಪ್ರಧಾನವಾಗಿ ಶಿಖರದ ಆಕಾರವನ್ನು ಈವರೆಗೆ ಅವಲಂಬಿಸಲಾಗುತ್ತಿತ್ತು. ಆದರೆ ಈಗ ತಲಚ್ಛಂದ, ಛಾವಣಿ ರಚನೆಯನ್ನು ಗಮನಿಸಬೇಕು ಎಂಬ ಅರಿವು ಮೂಡಿದೆ. ಇದರಿಂದ ಔತ್ತರೇಯ ದಾಕ್ಷಿಣಾತ್ಯಗಳ ಬಗ್ಗೆ ಸ್ಪಷ್ಟತೆ ಪ್ರಾಪ್ತವಾಗಿದೆ. ಸಮಾನ್ಯವಾಗಿ ದಾಕ್ಷಿಣಾತ್ಯ ವಿಮಾನ ಮಾದರಿ ಶಿಖರಗಳು (ಪುಸ್ತಕ ಅಥವಾ ಸಮತಲ ಛಾದ್ಯದ ಮೇಲೆ ನಿಂತಿವೆ. ಔತ್ತರೇಯ ರೇಖಾಮಾದರಿ ಶಿಖರಗಳು ದಂಡಛಾದ್ಯ ಮತ್ತು ಮಲ್ಲಛಾದ್ಯವನ್ನು ಪಡೆದಿವೆ. ಇಲ್ಲಿ ಬಳಸಿದ ಕಲ್ಲು, ಅದರ ಗಟ್ಟಿತನ ಮುಖ್ಯ. ಬಾದಾಮಿ ಚಾಲುಕ್ಯರ ಕಾಲದಲ್ಲಿ ಈ ಸಂಪ್ರದಾಯಗಳು ಕವಲೊಡೆಯುವ ಹಂತದಲ್ಲಿ ದಂಡಛಾದ್ಯ, ಮಲ್ಲಛಾದ್ಯವನ್ನು ದಾಕ್ಷಿಣಾತ್ಯ ಶಿಖರಗಳಿಗೆ ಬಳಸಿದ್ದು ಉಂಟು? ಬಾದಾಮಿಯ ಮೇಲಿನ ಶಿವಾಲಯ ಮತ್ತು ಕೆಳಗಿನ ಶಿವಾಲಯಗಳಲ್ಲಿ ಶಿಖರವು ದಾಕ್ಷಿಣಾತ್ಯ ಆದರೆ ಛಾವಣಿ ಮತ್ತು ತಳಚ್ಛಂದ ಔತ್ತರೇಯ! ಅದೇ ರೀತಿ ನಾಗನಾಥ ದೇವಾಲಯದಲ್ಲಿಯೂ ಕಾಣಬಹುದು. ಐಹೊಳೆಯ ಕುಂತಿ ಗುಡಿಗಳ ಸಮೂಹದಲ್ಲಿ ಒಂದನೇ ದೇವಾಲಯದಲ್ಲಿ ದಾಕ್ಷಿಣಾತ್ಯ ಶಿಖರವಿತ್ತು ಎಂದು ಊಹಿಸಬಹುದು. ಈ ಪ್ರಯೋಗಗಳು ಕ್ರಿ.ಶ. ೬೦೦–೬೫೦ರ ಸುಮಾರಿನಲ್ಲಿ ನಡೆದಿರಬಹುದು.

ಪಟ್ಟದಕಲ್ಲಿನ ಪಾಪನಾಥ ದೇವಾಲಯದ ತಲಚ್ಛಂದ ಬಹುಪಾಲು ದಾಕ್ಷಿಣಾತ್ಯ ಎನ್ನಿಸುತ್ತದೆ. ಮುಂಭಾಗದ ಪಾರ್ಶ್ವಗಳಲ್ಲಿ ಕೈಪಿಡಿಯ ಗೋಡೆಯಲ್ಲಿ ದಾಕ್ಷಿಣಾತ್ಯ ಶಾಲಾ ರಚನೆಗಳಿವೆ. ದಾಕ್ಷಿಣಾತ್ಯ ಮತ್ತು ಔತ್ತರೇಯ ಸಂಪ್ರದಾಯಗಳು ಕವಲೊಡೆಯುವ ಮುನ್ನ ಹಲವು ರೀತಿಯ ಪ್ರಯೋಗಗಳನ್ನು ಕಾಣಬಹುದು. ಈ ಪ್ರಯೋಗಗಳು ವಿಪುಲ ಅವಕಾಶಗಳೇ ಈ ಪರಿಸರವನ್ನು ದೇವಾಲಯ ವಾಸ್ತುರಚನೆಯ ತೊಟ್ಟಿಲು ಎಂದು ಗುರುತಿಸಲು ಕಾರಣವೆನಿಸಿತು. ಇಲ್ಲಿ ಹೆಚ್ಚಿನ ಅಧ್ಯಯನಕ್ಕೆ ಹೆಚ್ಚಿನ ಅವಕಾಶಗಳಿವೆ.

೭೩

ಶಾಸ್ತ್ರಗ್ರಂಥಗಳಲ್ಲಿರುವಂತೆ ಶಿಲ್ಪಿ-ಸ್ಥಪತಿಗಳ ಜ್ಞಾನ-ಕಾರ್ಯ-ಸ್ಥಾನ

ಡಾ. ಕೂ.ಸ. ಅಪರ್ಣ*

ಮಯಮತದ ಅಧ್ಯಾಯ ೧೫ ಮತ್ತು ಮಾನಸಾರದ ಅ.೨ರಲ್ಲಿ (ಶ್ಲೋಕ. ೧-೧೯) 'ಶಿಲ್ಪಿಲಕ್ಷಣ' ಎಂಬ ಉಪವಿಭಾಗಗಳಿವೆ. ಇದಲ್ಲದೆ, ಕಟ್ಟಡದ ನಿರ್ಮಾಣದ ಬಗ್ಗೆ ಹೇಳುವಾಗ ಅಲ್ಲಲ್ಲಿ ಸ್ಥಪತಿಯ ಕಾರ್ಯದ ಬಗ್ಗೆ ವಿವರಗಳು ದೊರೆಯುತ್ತವೆ ಹಾಗೂ ಪೂರ್ಣ ನಿರ್ಮಾಣದ ನಂತರ ಅವರಿಗೆ ನೀಡುವ ದಾನ-ಸನ್ಮಾನದ ಬಗ್ಗೆಯೂ ಹೇಳಿವೆ; ಅದನ್ನಿಲ್ಲಿ ವಿಶ್ಲೇಷಿಸಲಾಗಿದೆ.

ಯಾವುದೇ ಕಟ್ಟಡ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುವವರು – ಶಿಲ್ಪಿಗಳು. ಸ್ಥಪತಿ, ಸೂತ್ರಗ್ರಾಹಿ, ವರ್ಧಕಿ, ತಕ್ಷಕ ಎಂದು ೪ ವರ್ಗದ ಶಿಲ್ಪಿಗಳಿದ್ದು, ಅವರವರ ಕರ್ಮಾನುಸಾರ ಅವರು ಬೇರೆ ಬೇರೆ ಹೆಸರುಗಳನ್ನು ಪಡೆಯುತ್ತಾರೆ. ಇವರ ಬಗ್ಗೆ ಕೆ.ಎಸ್. ಕುಮಾರಸ್ವಾಮಿಯವರು, 'ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು' ಎಂಬ ನಿಬಂಧವನ್ನು ಪ್ರಕಟಿಸಿದ್ದಾರೆ. ಇದಕ್ಕೆ ಆಧಾರವಾಗಿ ಬಹುಪಾಲು ಶಾಸನಗಳನ್ನು ಬಳಸಿದ್ದಾರೆ. ಈ ಲೇಖನದಲ್ಲಿ, ಶಾಸ್ತ್ರ ಗ್ರಂಥಗಳನ್ನಾಧರಿಸಿ, ಶಿಲ್ಪಿಗಳ ಜ್ಞಾನ, ಕಾರ್ಯ ಮತ್ತು ದಾನದ ಬಗ್ಗೆ ದೊರೆವ ವಿವರಗಳನ್ನು ಮಾತ್ರ ನೀಡಿದ್ದೇನೆ.

ನಾಲ್ಕು ಪ್ರಕಾರದ ಶಿಲ್ಪಿಗಳ ಉದಯದ ಬಗ್ಗೆ ಒಂದು ಕಥೆ ಇದೆ. ಬ್ರಹ್ಮನಿಂದ ಜನಿಸಿದವನು – ವಿಶ್ವಕರ್ಮ. ಇವನಿಗೂ ಬ್ರಹ್ಮನಂತೆ ೪ ಮುಖಗಳಿವೆ. ಅದರಲ್ಲಿ, ಪೂರ್ವದ್ದನ್ನು 'ವಿಶ್ವಭೂ' ಎಂದೂ, ದಕ್ಷಿಣದ್ದನ್ನು ವಿಶ್ವವಿತ್ ಎಂದೂ, ಉತ್ತರ ಮತ್ತು ಪಶ್ಚಿಮದ್ದನ್ನು ಕ್ರಮವಾಗಿ ವಿಶ್ವಸ್ಥ ಮತ್ತು ವಿಶ್ವಸ್ರಷ್ಟ ಎಂದೂ ಹೆಸರಿಸಲಾಗಿದೆ. ಈ ೪ ಮುಖದಿಂದ ೪ ವಂಶಗಳು ಮೊದಲಿಗೆ ಹುಟ್ಟಿದವು: ಪೂರ್ವದ ಮುಖದಿಂದ ವಿಶ್ವಕರ್ಮನೂ, ದಕ್ಷಿಣ ಮುಖದಿಂದ ಮಯನೂ, ಉತ್ತರ ಮುಖದಿಂದ ತ್ವಷ್ಟರ್ ಮತ್ತು ಪಶ್ಚಿಮ ಮುಖದಿಂದ ಮನು ಜನಿಸಿದರು (ಮಾನ.* II-1-6). ಇವರು ನಾಲ್ವರೂ ಕ್ರಮವಾಗಿ ಇಂದ್ರ, ಸುರೇಂದ್ರ, ವೈಶ್ರವಣ ಹಾಗೂ ನಲನ ಹೆಣ್ಣು ಮಕ್ಕಳನ್ನು ಮದುವೆಯಾದರು (ಅದೇ. ೭-೮). ನಂತರ ಇವರಲ್ಲಿ, ವಿಶ್ವಕರ್ಮನ ಮಗನನ್ನು 'ಸ್ಥಪತಿ' ಎಂದೂ, ಮಯನ ಮಗನನ್ನು 'ಸೂತ್ರಧಾರಿ' ಎಂದೂ, ತ್ವಷ್ಟರ್‌ನ ಮಗನನ್ನು 'ವರ್ಧಕಿ' ಎಂದೂ, ಮನುವಿನ ಮಗನನ್ನು 'ತಕ್ಷಕ' ಎಂದೂ ಕರೆಯಲಾಯಿತು (ಅದೇ. ೯-೧೦). (=Master builder, draftsman, designer and carpenter resp.). 'ಸ್ಥಪತ್ಯಾದಿ ಚತುರ್ವರ್ಣಃ ಶಿಲ್ಪಿಭಿ ಪ್ರಕೀರ್ತಿತಃ' (ಅದೇ. ೧೫) ಎಂದು ಹೇಳಿ, ಇವರೆಲ್ಲರನ್ನೂ 'ಶಿಲ್ಪಿ' ಎಂದು ಗುರುತಿಸಲಾಗಿದೆ. ಶಿಲ್ಪಿಗಳ ಕಾರ್ಯ, ಗೌರವದ ಅನುಕ್ರಮಣಿಕೆಯಲ್ಲಿ ಸ್ಥಪತಿಯದೇ ಮೊದಲ ಸ್ಥಾನ. ಅವನು, ವಾಸ್ತುಶಾಸ್ತ್ರದ ನಿಯಮಗಳನ್ನು ತಿಳಿದಿದ್ದು, ನಿರ್ಮಾಣದ ಎಲ್ಲ ಕಾರ್ಯಗಳ ನಿರ್ದೇಶಕನಾಗಿರುತ್ತಾನೆ. ಹಾಗೂ ಉಳಿದೆಲ್ಲ ಶಿಲ್ಪಿಗಳಿಗೂ 'ಗುರು' ಸ್ಥಾನದಲ್ಲಿರುತ್ತಾನೆ (ಮಾನ. II-11).

ಸ್ಥಪತಿ Literally means, 'Chief of fixed abode,' 'Chief architect', 'Master builder' ಎಂದು ಹೇಳಲಾಗಿದೆ (PKA-p.578); ಅಲ್ಲದೆ, ಅವನು 'Director General and consulting architect' ಎಂಬ ಅರ್ಥದಲ್ಲೂ ಹೇಳಿದೆ (ಮಾನ. II.11). ಸ್ಥಪತಿಯು, ಹೆಸರೇ ಸೂಚಿಸುವಂತೆ ಸ್ಥಾಪನಾರ್ಹನಾಗಿರಬೇಕೆಂದೂ, ವಾಸ್ತುವಿದ್ಯಾಸಾಗರದಲ್ಲಿ ಮುಳುಗೆದ್ದವನಾಗಿರಬೇಕೆಂದೂ ಸರ್ವಶಾಸ್ತ್ರ ವಿಶಾರದನಾಗಿರಬೇಕೆಂದೂ ವಾಸ್ತುವಿದ್ಯಾ ಗ್ರಂಥವು ಹೇಳಿದೆ (I, 12-15). ಅವನು ಸರ್ವಶಾಸ್ತ್ರಜ್ಞನೆಂದು ಮಾನಸಾರವೂ ಗುರುತಿಸಿದೆ (ಮಾನ. II.12). ಸ್ಥಪತಿಯು ಗಣಿತ, ಪುರಾಣ ತಿಳಿದಿರಬೇಕಲ್ಲದೆ, ಎಲ್ಲ ಶಾಸ್ತ್ರಗಳ ಜ್ಞಾನವಿದ್ದು, ವಾಸ್ತು ವಿದ್ಯೆಯಲ್ಲಿ ಪರಿಣತನಾಗಿರಬೇಕು (ಮಯ-5.14-18) ವೇದವಿದನೂ ಆಗಿರಬೇಕು ಎಂದು ಎಲ್ಲ ಗ್ರಂಥಗಳೂ ಹೇಳಿವೆ. ಆಚಾರ್ಯನಂತಹ ಅರ್ಹತೆಯುಳ್ಳವನಾಗಿದ್ದು, ಇತರರಿಗೆ ನಿರ್ದೇಶಿಸುವವನಾಗಿರಬೇಕು (ಮಾನ-II.26-27, 31); ಚರಿತ್ರೆ ಬಲ್ಲವನೂ ಆಗಿದ್ದು, ಸಂಗೀತ, ವರ್ಣಕಲೆಯನ್ನು ತಿಳಿದವನಾಗಿರಬೇಕು. ಹಾಗೂ ಎಲ್ಲ

* # ೧೬೮೮, ೧೭ನೇ ಮುಖ್ಯರಸ್ತೆ, ಬನಶಂಕರಿ ಮೊದಲನೇ ಹಂತ, ೨ನೇ ಬ್ಲಾಕ್, ಬೆಂಗಳೂರು-೫೬೦೦೫೦.

ದೇಶಗಳನ್ನೂ ತಿಳಿದಿರಬೇಕು (Geographist) ಎಂದೂ ಗ್ರಂಥಗಳು ಹೇಳಿವೆ. ಮತ್ಸ್ಯಪುರಾಣವೂ ಕೂಡಾ ವಾಸ್ತುವಿಧಾನಜ್ಞನೂ, ಕರಕುಶಲನೂ, ಶ್ರಮಜಿತನೂ, ದೂರದರ್ಶಿಯೂ, (ವಾಸ್ತು ವಿಷಯದಲ್ಲಿ) ಶೂರನೂ ಆದವನು 'ಸ್ಥಪತಿ' ಎಂದು ಗುರುತಿಸಿದೆ. (ಉದ್ಧೃತ–PKA.580). ಅವನು ಪ್ರಾಜ್ಞ, ಮೇಧಾವಿ, ಬಹುಶೃತನಾಗಿರಬೇಕೆಂದು ಮಹಾಭಾರತವೂ ಹೇಳಿದೆ (ಅದೇ.).

ಸ್ಥಪತಿಗಳ ಜ್ಞಾನ, ವಿದ್ಯೆಯ ಬಗ್ಗೆ ಮಾತ್ರವಲ್ಲದೆ, ಅವರ ಆರೋಗ್ಯಯುತ ಶರೀರ ಹಾಗೂ ಉತ್ತಮ ವ್ಯಕ್ತಿತ್ವದ ಬಗ್ಗೆಯೂ ಗ್ರಂಥಗಳು ಹೇಳಿವೆ. ಅವನು ಉತ್ತಮ ವಂಶಜನಾಗಿರಬೇಕು, ಶಾರೀರಿಕವಾಗಿ ಸಶಕ್ತನಾಗಿರಬೇಕು, ಹೀನಾಂಗನಾಗಿರಬಾರದು, ಖಾಯಿಲೆ ಇರಬಾರದು; ಸಪ್ತವ್ಯಸನಗಳಿಂದ ದೂರನಾಗಿದ್ದು, ಜಿತೇಂದ್ರಿಯನಾಗಿರಬೇಕು. ಅವನ ವ್ಯಕ್ತಿತ್ವ ವಿಶೇಷವೆಂದರೆ, ಅವನು ದುರಾಸೆ ಇಲ್ಲದವನೂ, ಯಾವುದೇ ತಪ್ಪು ಮಾಡುವುದಕ್ಕಿಂತ ಮೇಲಿರುವವನೂ ಅಗಿದ್ದು, ಸಂಯಮಿಯಾಗಿರಬೇಕು; ಸತ್ಯವಂತನಾಗಿದ್ದು, ಮನದಲ್ಲಿ ಆನಂದವನ್ನು ಹೊಂದಿರಬೇಕು; ಮಾತ್ರವಲ್ಲದೆ, ಸಮಾಜದಲ್ಲಿ ಒಳ್ಳೆಯ ಹೆಸರಿದ್ದು, ಸ್ನೇಹಿತರೊಂದಿಗೆ ವಿಶ್ವಾಸದಿಂದಿರಬೇಕು ಎಂದೂ 'ವಾಸ್ತುವಿದ್ಯಾ' ಗ್ರಂಥವು ಹೇಳಿದೆ (I. 12-15, ಉದ್ಧೃತ).

ಶಿಲ್ಪಿಗಳಲ್ಲಿ ಮುಂದಿನ ಶ್ರೇಣಿಯವನು –'ಸೂತ್ರಗ್ರಾಹಿನ್', 'ಸೂತ್ರಧಾರ'. ಇವನು ದೇವಾಲಯದ ರಚನೆಗೆ ತಕ್ಕಂತೆ ಅಳತೆಯ ಸೂತ್ರವನ್ನು ಹಿಡಿಯುವವನೂ, ಎಲ್ಲ ಅಳತೆಯನ್ನು ಮಾಡುವವನೂ ಆಗಿರುತ್ತಾನೆ. ಆದ್ದರಿಂದ ಇವನು ರೇಖಾಜ್ಞಾನದಲ್ಲಿ (drawing) ಪರಿಣತನಿರಬೇಕು. ಸೂತ್ರ, ದಂಡ, ಅಳತೆ, ಪ್ರಮಾಣಗಳನ್ನರಿತವನಾಗಿರಬೇಕು (ಮಾನ. II.16, 12, ಮಯ–5.18-19) ಹಾಗೂ ಶಿಲ್ಪಶಾಸ್ತ್ರ ಗೊತ್ತಿರಬೇಕು (SKR). ವಾಸ್ತುವಿದ್ಯಾ ಗ್ರಂಥವು ಸೂತ್ರಗ್ರಾಹಿಯ ಬಗ್ಗೆ,

'ಸ್ಥಾಪತ್ಯ ಜ್ಞಾನಾನುಸಾರೀಚ ಸರ್ವಕರ್ಮವಿಶಾರದಃ ।
ಸೂತ್ರದಂಡ ಪ್ರಮಾಣಜ್ಞೋ ಮಾನೋನ್ಮಾನಾ ಪ್ರಮಾಣವಿತ್' ॥

(I.16-17) ಎಂದು ಹೇಳಿದೆ. ಇವನು ಸ್ಥಪತಿಯ ನಿರ್ದೇಶನದಂತೆ ನಡೆದುಕೊಳ್ಳುವವನಾಗಿದ್ದು, ವರ್ಧಕಿ ಮತ್ತು ತಕ್ಷಕನಿಗೆ ಗುರುಸ್ಥಾನದಲ್ಲಿರುತ್ತಾನೆ. ಸ್ಥಪತಿಯಂತೆ ಇವನೂ ಕೂಡಾ ವೇದಬಲ್ಲವನೂ, ಎಲ್ಲ ಶಾಸ್ತ್ರಗಳನ್ನು ಬಲ್ಲವನೂ ಆಗಿರಬೇಕೆಂದು ಗ್ರಂಥಗಳು ಹೇಳಿವೆ. ಅವನು ವಾಸ್ತು ಚರಿತ್ರೆಯನ್ನೂ ಅರಿತಿರಬೇಕೆಂದು ಒಂದೆಡೆ ಹೇಳಲಾಗಿದೆ (SKR). 'ಶಿಲ್ಪದೀಪಿಕಾ' ಕೂಡಾ ಸೂತ್ರಧಾರನ ಬಗ್ಗೆ ಹೇಳಿರುವುದಾಗಿ ತಿಳಿದುಬರುತ್ತದೆ. ಸುಶೀಲನೂ, ಅಲೋಭಿಯೂ, ಚತುರನೂ, ದಕ್ಷನೂ, ಶಾಸ್ತ್ರಜ್ಞನೂ, ಕ್ಷಮಾವಾನನೂ, ಬ್ರಾಹ್ಮಣನೂ ಆಗಿರುವವನು 'ಸೂತ್ರಧಾರ' ಎಂದು ಈ ಗ್ರಂಥವು ಹೇಳಿದೆ (ಉದ್ಧೃತ–PKA-p.580). ಹೀಗೆ, ಇವನಿಗೂ ಕೂಡಾ ಒಂದು ವ್ಯಕ್ತಿತ್ವವನ್ನು ಶಾಸ್ತ್ರಬದ್ಧಗೊಳಿಸಲಾಗಿದೆ.

ಗ್ರಂಥಗಳಲ್ಲಿ ಇನ್ನೊಂದು ವಿಷಯವೂ ಇದೆ. ಸೂತ್ರಗ್ರಾಹಿಯು ಸ್ಥಪತಿಯ ಶಿಷ್ಯ ಅಥವಾ ಮಗನಾಗಿರಬೇಕು ಎಂದು ಮಾನಸಾರವೂ (II-11-12), ವಾಸ್ತುವಿದ್ಯಾ ಗ್ರಂಥವೂ (I.16, ಉದ್ಧೃತ) ಹೇಳಿದೆ. ಆಕಸ್ಮಾತ್ತಾಗಿ ಸ್ಥಪತಿಯು ತೀರಿಕೊಂಡರೆ, ಆ ಕೆಲಸವನ್ನು ಅವನ ಮಗ ಅಥವಾ ಶಿಷ್ಯನೇ ಮುಂದುವರಿಸಬೇಕು ಎಂದೂ ಶಾಸ್ತ್ರದಲ್ಲಿದೆ (ಮಯ–18.159-60).

ಶಿಲ್ಪಿಗಳಲ್ಲಿ ಮೂರನೇ ಶ್ರೇಣಿಯವನು–'ವರ್ಧಕಿ'. 'ವೃದ್ಧಿಸುವವನೇ ವರ್ಧಕ' ಎಂದೂ ವಾಸ್ತುವಿದ್ಯಾ ಗ್ರಂಥದಲ್ಲಿದೆ (ಉದ್ಧೃತ). ತಕ್ಷಕನು ಚೂರುಗಳಾಗಿ ಒಡೆದವುಗಳನ್ನು ಸೂಕ್ತವಾಗಿ ಜೋಡಿಸುವುದು–ಇವನ ಕಾರ್ಯ. ಕಾರ್ಯದೃಷ್ಟಿಯಿಂದ ಇವನದೇ ಕೊನೆಯ ಕಾರ್ಯವಾದರೂ, ಶ್ರೇಣಿಯಲ್ಲಿ ಇವನೇ ಹಿರಿಯನು. ಇವನು ಸೂತ್ರಗ್ರಾಹಿಯ ಆದೇಶದಂತೆ ಕಾರ್ಯ ನಿರ್ವಹಿಸುತ್ತಾನೆ (ವಾವಿ–I.18, 5.21-22). ನಿಖರ ಅಳತೆಯ ಬಗ್ಗೆ ಹಾಗೂ ವಾಸ್ತು ಸಾಮಗ್ರಿಗಳ ಶಕ್ತಿಯ ಬಗ್ಗೆ ತಿಳಿದವನಾಗಿರಬೇಕು. ಇವನನ್ನು ಮಾನಕರ್ಮಜ್ಞ, ಶ್ರುತಜ್ಞ ಹಾಗೂ ಚಿತ್ರಕರ್ಮಜ್ಞ, ವಿಚಾರಜ್ಞ, ವೇದಜ್ಞನೆಂದೂ ಗುರುತಿಸಲಾಗಿದೆ. ಅಳತೆಯ ಬಗ್ಗೆ ಪ್ರಾಯೋಗಿಕ ಜ್ಞಾನವಿರಬೇಕು; ಪರಂಪರೆಯಿಂದ ಬಂದ ಜ್ಞಾನಭಂಡಾರವಿರಬೇಕು; ವಿಶೇಷವಾಗಿ ಚಿತ್ರಕಲೆಯೂ (designing and painting) ಗೊತ್ತಿರಬೇಕು; ವೇದವನ್ನೂ ತಿಳಿದಿರಬೇಕು; ವಾಸ್ತು ಮತ್ತು ಶಿಲ್ಪದ ಕೃತಿಗಳನ್ನು ತನ್ನ ಸ್ವಂತ ಚಿಂತನೆಗಳಿಂದ ಚಿತ್ರಿಸಬಲ್ಲವನಾಗಿರಬೇಕು ಹಾಗೂ ವಾಸ್ತು ವಿಷಯದಲ್ಲಿ ಸರಿಯಾಗಿ ತೀರ್ಮಾನಿಸಬಲ್ಲವನಾಗಿರಬೇಕು ಎಂದು ಗ್ರಂಥಗಳಲ್ಲಿವೆ (ಮಾನ. II.13, 17).

ಒಂದು ಅಧಿಷ್ಠಾನದ ಭಾಗಗಳ ಬಗ್ಗೆ ಹೇಳುವಾಗ, ಮಯಮತದಲ್ಲಿ, ಚೆನ್ನಾಗಿ ತಿಳಿದಿರುವ ವರ್ಧಕಿಯು ಇದನ್ನು ಮಾಡಬೇಕೆಂದು ಹೇಳಿರುವುದು (೧೪.೩೦), ವರ್ಧಕಿಯ ಕಾರ್ಯ ವಿಶೇಷತೆಯ ಮೇಲೆ ಬೆಳಕು ಚೆಲ್ಲಿದೆ. ಅಧಿಷ್ಠಾನದಲ್ಲಿ ಹೊರ–ಒಳ ಚಾಚಿದಂತೆ ಪಟ್ಟಿಕೆಗಳನ್ನು ಸೂಕ್ತವಾಗಿ ಜೋಡಿಸುವುದೇ ಮುಖ್ಯವಾದ್ದರಿಂದ ಈ ಮಾತು ಸೂಕ್ತವೆನಿಸುತ್ತದೆ.

'ತಕ್ಷಕನು' ಶಿಲ್ಪಿಶ್ರೇಣಿಯಲ್ಲಿ ನಾಲ್ಕನೆಯವನು. ತಕ್ಷಕನು, ಕಲ್ಲು, ಮರ, ಇಟ್ಟಿಗೆಗಳನ್ನು ಚೂರುಗಳಾಗಿ ಒಡೆಯುವವನು (ಮಯ-೫.೨೦).

'ತಕ್ಷಣಾತ್ ಸ್ಥೂಲಸೂಕ್ಷ್ಮಾಣಾಂ ತಕ್ಷಕಃ ಸ ತು ಕೀರ್ತಿತಃ ।
ಮೃತ್ ಕರ್ಮಜ್ಞೋ ಗುಣೀ ಶಕ್ತಃ ಸರ್ವಕರ್ಮ ಸ್ವತಂತ್ರಕಃ' ॥
ಗುರುಭಕ್ತಃ ಸದಾ ಹೃಷ್ಟಃ ಸ್ಥಪತ್ಯಾದ್ಯನುಗ್ರಹಃಸದಾ ॥

(ಮಾನ. II.12, ವಾವಿ. I.17-19). ಅಂದರೆ, ಸರ್ವಕರ್ಮಸ್ವತಂತ್ರಕ(?)ನಾದ ತಕ್ಷಕನಿಗೆ ಆ ವಸ್ತುಗಳನ್ನು ಸ್ಥೂಲಸೂಕ್ಷ್ಮಗಳಾಗಿ ಒಡೆಯುವುದರಿಂದಲೇ ಆ ಹೆಸರು ಬಂದಿದೆ. ಅವುಗಳನ್ನು ಜೋಡಿಸುವುದೂ ಇವನ ಕಾರ್ಯವೆಂದೇ ಒಂದೆಡೆ ಹೇಳಿದೆ (PKA. P.590). ಇವನು ಗುರು ಭಕ್ತಿಯುಳ್ಳವನಾಗಿದ್ದು, ಸ್ಥಪತಿಯ ಅನುಗ್ರಹದಲ್ಲಿರುತ್ತಾನೆ.

ಇವನ ಬಗ್ಗೆ, **'ತಕ್ಷಕಃ'** ಕರ್ಮ ವಿದ್ಯುಶ್ಚ ಬಲಬಂಧೂದಯಃ ಪರಃ'

(ಮಾನ-II.17-18) ಎಂದು ಹೇಳಲಾಗಿದೆ. ಅವನು ತನ್ನ ಕಾಯಕದ (corpentery) ಬಗ್ಗೆ ಚೆನ್ನಾಗಿ ತಿಳಿದವನಾಗಿರಬೇಕು; ಮಾತ್ರವಲ್ಲದೆ, ತನ್ನ ಸಹಪಾಠಿಗಳಿಗೆ ಸಹಾಯ ಮಾಡುವವನೂ, ಸ್ನೇಹಿತರೊಂದಿಗೆ ವಿಶ್ವಾಸದಿಂದಿರುವವನೂ, ಸಾಮಾಜಿಕ ಪ್ರವೃತ್ತಿಯವನೂ, ಮೃದುಸ್ವಭಾವ ಉಳ್ಳವನೂ ಆಗಿರಬೇಕೆಂದು ಇಲ್ಲಿ ಹೇಳಲಾಗಿದೆ. ಇದರೊಂದಿಗೆ ಮಾನಸಾರವು, ಇವನಿಗೂ ವೇದವಿದ್ಯೆಯನ್ನು ಹೇಳಿರುವುದು ವಿಶೇಷವಾಗಿದೆ.

ಹೀಗೆ, ವಿವಿಧ ವರ್ಗಗಳವರಿಂದ ಅವರ ಜ್ಞಾನದಿಂದ ವಾಸ್ತು ನಿರ್ಮಾಣವು ಸುಲಭವಾಗಿ ಸಾಗುವುದು. ಪಿ.ಕೆ. ಆಚಾರ್ಯ ಅವರು, 'This wise division of labour is necessary, for successfully carrying out a big design in architecture and sculpture' ಎಂದಿರುವುದು ಸೂಕ್ತವಾಗಿದೆ (p.590).

ಇಲ್ಲಿ ಕೆಲವು ಅಂಶಗಳು ಗಮನಾರ್ಹವಾಗಿವೆ:

೧. ಒಂದು ವರ್ಗದ ಶಿಲ್ಪಿಯನ್ನು ಮತ್ತೊಂದು ವರ್ಗದ ಶಿಲ್ಪಿಯ ಹೆಸರಲ್ಲೂ ಕರೆಯಲಾಗಿದೆ. ಸ್ಥಪತಿ-ಸೂತ್ರಧಾರ, ಸೂತ್ರಧಾರಿ-ವರ್ಧಕಿ, ಸ್ಥಪತಿ-ತಕ್ಷಕ ಇತ್ಯಾದಿಯಾಗಿ ಬದಲೀ ಕಾರ್ಯನಾಮವಿರುವುದನ್ನು ಸಂಪಾದಕರುಗಳು ಗುರುತಿಸಿದ್ದಾರೆ. ಹೀಗೆ ಕರೆದಿರುವುದು ಕೆಲವೆಡೆ ಆಕಸ್ಮಿಕವಿರಬಹುದು. ಆದರೆ ಮೇಲಿನ ವಿವರಗಳನ್ನು ಗಮನಿಸಿದರೆ, ಒಂದು ಅಂಶ ಸ್ಪಷ್ಟವಾಗುತ್ತದೆ. ಸ್ಥಪತಿ/ತಕ್ಷಕನನ್ನು ಬಿಟ್ಟರೆ(?), ಸೂತ್ರಗ್ರಾಹಿ, ವರ್ಧಕಿ-ಇವರುಗಳ ಕಾರ್ಯವಿಸ್ತಾರವು, ಎಲ್ಲ ಕಾಲ/ಸಂದರ್ಭಗಳಲ್ಲೂ ನಿಖರವಾಗಿರಲಿಲ್ಲ ಎನಿಸುತ್ತದೆ. ಸಂದರ್ಭಕ್ಕೆ ತಕ್ಕಂತೆ ಕಾರ್ಯವನ್ನು ಹಂಚಿಕೊಳ್ಳುವ ಸಾಧ್ಯತೆ ಇದ್ದಿರಬೇಕು. ಆಕಸ್ಮಾತ್ ಸ್ಥಪತಿಯು ತೀರಿಕೊಂಡರೆ, ಸೂತ್ರಗ್ರಾಹಿಯು ಆ ಕೆಲಸವನ್ನು ಮುಂದುವರಿಸಬೇಕು ಎಂದೇ ಹೇಳಿದೆ. ಸಂದರ್ಭ ಬಂದಾಗ ವರ್ಧಕಿಯು ತಕ್ಷಕನಿಗೆ ಸಹಾಯ ಮಾಡಿರಲೂಬಹುದು. ಒಂದು ವರ್ಗದವರ ಜ್ಞಾನಾರ್ಹತೆಯನ್ನು ಹೇಳುವಾಗಲೂ ಆಯಾ ವರ್ಗ-ಕಾರ್ಯದ ವಿಶೇಷ ಜ್ಞಾನ, ಎಲ್ಲ ವರ್ಗದ ಸಾಮಾನ್ಯ ಜ್ಞಾನ ಮಾತ್ರವಲ್ಲದೆ ಇನ್ನೊಂದು ವರ್ಗದ ಶಿಲ್ಪಿಯ ಜ್ಞಾನವನ್ನೂ ಅವನಿಗೆ ಹೇಳಿರುವುದೂ ಈ ಕಾರಣಕ್ಕೇ ಎನಿಸುತ್ತದೆ. ಹೀಗಾಗಿ ಇವು, ಕಾರ್ಯನಿಮಿತ್ತ ಬಂದ ಹೆಸರುಗಳೇ ಹೊರತು ನಿಖರವಲ್ಲ. ಅವರವರಿಗೆ ಒಪ್ಪಿಸಿರುವ ಕೆಲಸದ ಆಧಾರದ ಮೇಲೆ ಅವರಿಗೆ ಆಯಾ ವರ್ಗದ ಹೆಸರುಗಳು ಬಂದಿದ್ದರೂ, ಅವರು ಬೇರೆಯವರ ಕೆಲಸವನ್ನೂ ಮಾಡುತ್ತಿದ್ದರು. ಅಲ್ಲದೆ, ಇದು ಒಂದು ವ್ಯಕ್ತಿಗೇ ಅಂಟಿಕೊಂಡ ವರ್ಗದ ಹೆಸರೂ (Designation) ಅಲ್ಲ. ಒಬ್ಬನೇ ವ್ಯಕ್ತಿ ಬೇರೆ ಬೇರೆ ಎಡೆಗಳಲ್ಲಿ ಬೇರೆ ಬೇರೆ ವರ್ಗದ ಕೆಲಸವನ್ನು ಮಾಡಿ ಅದಕ್ಕೆ ತಕ್ಕ ವರ್ಗದ ಹೆಸರನ್ನು ಪಡೆದಿರುವ ಸಾಧ್ಯತೆಯೂ ಇರುವಂತಿದೆ; ಒಟ್ಟಾರೆ, ಇಲ್ಲಿ ವ್ಯಕ್ತಿಗಿಂತ ಕಾರ್ಯ ಗೌರವ ಮುಖ್ಯ ಹಾಗೂ ಕಾರ್ಯ ಸಂಪನ್ನವಾಗುವುದು ಮುಖ್ಯ.

೨. ಶಿಲ್ಪಿಗಳ ಜ್ಞಾನಭಂಡಾರದಲ್ಲಿ ಸರ್ವಶಾಸ್ತ್ರಜ್ಞಾನವನ್ನು ಸ್ಥಪತಿ ಮತ್ತು ಸೂತ್ರಗ್ರಾಹಿಗೆ ನಿಗದಿಪಡಿಸಿದೆ. ವರ್ಧಕಿಗೆ ಪರಂಪರೆಯಿಂದ ಬಂದ ಜ್ಞಾನ ಇರಬೇಕೆಂದೂ ಹೇಳಿದೆ. ಅಂತೇ, ಎಲ್ಲರಿಗೂ ವೇದಜ್ಞಾನವೂ ಇರಬೇಕೆಂದು ಹೇಳಿದೆ. ಹೀಗೆ ಹೇಳುವುದು ಅಸಹಜ, ಮಾಡುವುದು ಅಸಾಧ್ಯ ಎನ್ನಿಸಿದರೂ, ಅದರಲ್ಲಿಯೂ ಒಂದು ಅರ್ಥವಿದೆ. ದೇವಾಲಯ (ಅಥವಾ ಇತರ ಕಟ್ಟಡ) ನಿರ್ಮಾಣದ ಸಂದರ್ಭದಲ್ಲಿ ಸ್ಥಪತಿಯಾದವನು ಬೇರೆ ಬೇರೆ ಜ್ಞಾನಶಾಖೆಗಳನ್ನು ಅವಲಂಬಿಸಬೇಕಾಗುತ್ತದೆ. ಅವೆಲ್ಲವನ್ನೂ ಚಿಂತನ-ಮಥನ ಮಾಡಿ ತನ್ನ ದೂರದೃಷ್ಟಿಯಿಂದ ಎಲ್ಲವನ್ನೂ ಕೂಡಲೇ ವಿವೇಚಿಸಿ ತನ್ನ ಶಿಷ್ಯರಿಗೆ ಮಾರ್ಗದರ್ಶನ ಮಾಡಬೇಕಾಗುತ್ತದೆ. ಆದ್ದರಿಂದ, ಅದರ ಪದಶಃ ಅರ್ಥದಂತೆ ಗ್ರಹಿಸದಿದ್ದರೂ,

ತನ್ನ ಕಾರ್ಯಸಾಧನೆಗೆ ಬೇಕಾದಷ್ಟು ಶಾಸ್ತ್ರಗಳ ಜ್ಞಾನ ಸ್ಥಪತಿಗಿರಲೇಬೇಕಾಗುತ್ತದೆ. ಪಿ.ಕೆ. ಆಚಾರ್ಯ ಅವರು ಹೇಳಿದಂತೆ, ವಾಸ್ತುಶಾಸ್ತ್ರ ಗ್ರಂಥಗಳ ವಿವಿಧ ಅಧ್ಯಾಯಗಳ ಹೆಸರುಗಳು ಹಾಗೂ ವಿವರಗಳೇ ಅವನಿಗಿರಬೇಕಾದ ಜ್ಞಾನವನ್ನು ಪರೋಕ್ಷವಾಗಿ ಸೂಚಿಸುತ್ತವೆ (ಪು. ೫೮೯–೯೦). ಆದ್ದರಿಂದ ಸ್ಥಪತಿಯು ಅಗಾಧ ಜ್ಞಾನವನ್ನು ಹೊಂದಿರಬೇಕು. ಖಏಖ ಅವರು ಹೇಳುವಂತೆ, ಅಪೇಕ್ಷೆ ಪಟ್ಟರೆ ಸ್ಥಪತಿ ಮಾತ್ರವೇ ಇಷ್ಟು ಓದಲು ಸಾಧ್ಯ (ಪು. ೫); ಹಾಗೂ ಗ್ರಂಥಗಳೂ ಸ್ಥಪತಿಗೆ ಮಾತ್ರವೇ ಅಷ್ಟನ್ನು ಹೇಳಿವೆ; ಆದರೆ, ಸ್ಥಪತಿಯ ನಂತರ ಕಾರ್ಯವನ್ನು ಮುಂದುವರಿಸಬೇಕಾದವನು ಸೂತ್ರಗ್ರಾಹಿಯಾದ್ದರಿಂದ, ಅವನಗೂ ಸಕಲಶಾಸ್ತ್ರಜ್ಞಾನವನ್ನು ನಿಯಮಿಸಿವೆ. ಬುದ್ಧಿ ಹೃದಯಗಳ ಸಂಗಮವೇ ಪ್ರತಿಭೆ ಎನ್ನುವಂತೆ, ಸ್ಥಪತಿಯ ಅಪಾರ ಬುದ್ಧಿ, ಉತ್ತಮ ಹೃದಯದಿಂದ ಮೈದಳೆದ ಅವನ ಪ್ರತಿಭಾ ಸ್ಮಾರಕವೇ ದೇವಾಲಯ. ಹಾಗಿರಬೇಕೆಂದೇ ಶಾಸ್ತ್ರವು ಈ ಎಲ್ಲ ಜ್ಞಾನ (ಮತ್ತು ಔನ್ನತ್ಯ ಗುಣ)ವನ್ನು ಸ್ಥಪತಿಗಳಿಂದ ನಿರೀಕ್ಷಿಸುತ್ತದೆ.

ಸ್ಥಪತಿ ಮತ್ತು ಸೂತ್ರಗ್ರಾಹಿ ಇವರಿಬ್ಬರಿಗೂ ವಾಸ್ತುಶಿಲ್ಪಶಾಸ್ತ್ರ ಜ್ಞಾನವಿರಬೇಕಾದುದೂ ಅನಿವಾರ್ಯವೇ. ಶಿಲ್ಪಶಾಸ್ತ್ರವನ್ನು ಓದದೆ ಶಿಲ್ಪಕರ್ಮದಲ್ಲಿ ತೊಡಗಬಾರದೆಂಬ ಸೂಚನೆಯನ್ನು 'ಸಮರಾಂಗಣ ಸೂತ್ರಧಾರ' ಗ್ರಂಥವು ನೀಡಿದೆ; ಶಿಲ್ಪಶಾಸ್ತ್ರಗಳನ್ನು ಓದಿದ್ದನ್ನೂ, ಭರತಾಗಮ ಶಾಸ್ತ್ರ ಹಾಗೂ ವರ್ಣಕವಿತೆಯಲ್ಲಿ ಇವರು ಪರಿಣತರಾಗಿದ್ದುದನ್ನೂ ಶಾಸನಗಳು ದೃಢಪಡಿಸಿವೆ (ಕುಮಾರಸ್ವಾಮಿ, ಪು. ೧೧೬–೧೭). ಇದರೊಂದಿಗೆ, ಗ್ರಂಥಗಳು ಎಲ್ಲರಿಗೂ ವೇದಜ್ಞಾನವನ್ನು ನಿಯಮಿಸಿರುವುದರ ಹಿನ್ನೆಲೆ ಎಂದರೆ, ಬಹುಶಃ, ನಮ್ಮ ಭಾರತೀಯ ತತ್ವ ಸಿದ್ಧಾಂತಗಳ ಬೆನ್ನೆಲುಬು ಹಾಗೂ ಪರಂಪರಾಗತವಾಗಿ ಬಂದು ಮೊದಲಿಗೆ ಗ್ರಂಥಸ್ಥವಾಗಿದ್ದು ವೇದ. ಅನೇಕ ಜ್ಞಾನಶಾಖೆಗಳ ಮೂಲವೂ ಹೌದು. ಹೀಗಾಗಿ, ವೇದಜ್ಞಾನವನ್ನು ಎಲ್ಲ ವರ್ಗದವರಿಗೂ ಅವಶ್ಯಕವಾಗಿ ಹೇಳಿರಬಹುದು. ಅವರು ಈ ಜ್ಞಾನವನ್ನು ಕೋಶ ಓದುವುದರಿಂದ ಮಾತ್ರವಲ್ಲದೆ (ದೇಶ ಸುತ್ತುವುದರಿಂದ(?)), ಸಮರಾಂಗಣ ಸೂತ್ರಧಾರದಲ್ಲಿ ಹೇಳಿರುವಂತೆ, ಪರಂಪರಾಗತ ಜ್ಞಾನದಿಂದ, ಸ್ವ–ಕುಶಲತೆಯಿಂದ, ಅಭ್ಯಾಸ–ಅನುಭವಗಳಿಂದ, ಇತರರ ಸೂಚನೆಗಳಿಂದ ಸಂಪಾದಿಸಬಹುದಾಗಿದೆ (ಉದ್ಧೃತ SKR, p.4). ಒಟ್ಟಾರೆ, ಆ ಜ್ಞಾನ ಅವಶ್ಯಕ ಅಷ್ಟೆ. ಏಕೆಂದರೆ, ಕುಮಾರಸ್ವಾಮಿಯವರು ಹೇಳಿರುವಂತೆ, 'ದೇವಾಲಯಗಳು ಅವರಿಂದ ದೈಹಿಕ ಪರಿಶ್ರಮವನ್ನಷ್ಟೇ ಅಲ್ಲದೆ ಬೌದ್ಧಿಕ ಪರಿಶ್ರಮವನ್ನೂ ನಿರೀಕ್ಷಿಸುವಂಥವುಗಳಾಗಿದ್ದವು (ಪು. ೧೧೬).

೩. ಶಿಲ್ಪಿಗಳಿಗೆ ಜ್ಞಾನ ಮಾತ್ರವಲ್ಲದೆ, ಶಾರೀರಕ ಕ್ಷಮತೆ ಮತ್ತು ಉತ್ತಮ ವ್ಯಕ್ತಿತ್ವವನ್ನೂ, ಸಹಕಾರ, ಸಹಜ್ಞಾನ, ಉನ್ನತ ಗುಣಗಳನ್ನೂ ಹೇಳಿರುವುದು ಇಲ್ಲಿ ಮುಖ್ಯವಾಗುತ್ತದೆ. 'ಆರೋಗ್ಯವೇ ಭಾಗ್ಯ' ಎಂಬುದರ ಮಹತ್ವವು ಒಬ್ಬ ಸಾಧಕನಿಗೆ ಚೆನ್ನಾಗಿ ತಿಳಿದಿರುತ್ತದೆ; ಅದು ಅವನಿಗೆ ಅವಶ್ಯವಾಗಿರುತ್ತದೆ. ಅಲ್ಲದೆ, ಒಬ್ಬರ ಜ್ಞಾನವನ್ನು ಮತ್ತೊಬ್ಬರೂ ತಿಳಿದಿರುವುದರಿಂದ, ಯಾವುದೇ ತೊಂದರೆಯಾದಲ್ಲಿ ಮತ್ತೊಬ್ಬರ ಸಹಕಾರದಿಂದ ಕೆಲಸವನ್ನು ಮುಗಿಸಬಹುದು; ಒಬ್ಬರು ಹೇಳಿದ್ದನ್ನು ಮತ್ತೊಬ್ಬರು ಸುಲಭವಾಗಿ ಗ್ರಹಿಸಬಹುದು. ಸಹ ಉದ್ಯೋಗಿಗಳೊಂದಿಗೆ ಸ್ನೇಹ–ವಿಶ್ವಾಸಗಳನ್ನೂ ಹೇಳಿರುವುದರಿಂದ ಅಂತಹವರ ನಡುವೆ ಹೊಂದಾಣಿಕೆ ಸುಲಭವಾಗುತ್ತದೆ. ಹಾಗೇ ಉತ್ತಮ ಗುಣ–ಆಲೋಚನೆ ಉಳ್ಳವರು ಯಾವುದೇ ತಕರಾರಿಲ್ಲದೆ ಕಾರ್ಯವನ್ನು ಸಂಪೂರ್ಣಗೊಳಿಸುತ್ತಾರೆ. ಅಂತಹವರು ಕಾರ್ಯನಿಷ್ಠುರರಾಗಿ ಬದ್ಧತೆಯಿಂದ ಕೆಲಸ ಮಾಡುತ್ತಾರೆ; ತಮ್ಮ ತನು–ಮನಗಳನ್ನು ಪೂರ್ಣವಾಗಿ ಅರ್ಪಿಸಿ ಕಾರ್ಯವು ಫಲಪ್ರದವಾಗುವಂತೆ ಮಾಡುತ್ತಾರೆ. ಒಟ್ಟಾರೆ, ದೇವಾಲಯ ನಿರ್ಮಾಣದಂತಹ ಮಹತ್ವದ ಪವಿತ್ರ ಕಾರ್ಯವು, ಶುದ್ಧ–ಸುಂದರ–ಪವಿತ್ರ ವಾತಾವರಣದಲ್ಲಿ ಒಮ್ಮನಸ್ಸಿನಿಂದ ನಿರ್ವಿಘ್ನವಾಗಿ ಪೂರ್ಣಗೊಳ್ಳುವಂತೆ ಮಾಡುವ ವ್ಯವಸ್ಥೆ ಇದಾಗಿದೆ.

೪. ಇತರ ಶಿಲ್ಪಿಗಳೆಲ್ಲರೂ ಸ್ಥಪತಿಯೊಂದಿಗೆ ಗೌರವದಿಂದ ನಡೆದುಕೊಂಡು ಅವನ ನಿರ್ದೇಶನಗಳನ್ನು ಪಾಲಿಸಬೇಕೆಂದಿರುವುದು ಹಾಗೂ ಇತರರೂ ಹಾಗೇ ಒಬ್ಬರಿನೊಬ್ಬರಿಗೆ ಶಿಷ್ಯರಂತಿರುವುದನ್ನಿಲ್ಲಿ ಗಮನಿಸಬಹುದು. ಇತರ ಶಿಲ್ಪಿಗಳಿಗೆ ಸ್ಥಪತಿಯು ವಿಶ್ವಕರ್ಮನಿದ್ದಂತೆ, ಸ್ಥಪತಿಯೂ ಕೂಡಾ ಇವರಿಲ್ಲದೆ ಏನನ್ನೂ ಮಾಡಲಾರ. ಆದ್ದರಿಂದ ಈ ಎಲ್ಲರನ್ನೂ ಗೌರವಿಸಬೇಕು (ಮಯ–೫.೨೨–೨೪). ಸ್ಥಪತಿಯ ಆದೇಶದಂತೆ ಉಳಿದವರೆಲ್ಲರೂ ಸೇರಿ, ವಾಸ್ತುಶಾಸ್ತ್ರದ ನಿಯಮದಂತೆ ಎಚ್ಚರಿಕೆಯಿಂದ ಕಟ್ಟಡ ನಿರ್ಮಾಣವನ್ನು ಮಾಡಬೇಕು ಎಂದು ಮಾನಸಾರವೂ ಹೇಳಿದೆ (II.14-15). ವಾಸ್ತುಶಾಸ್ತ್ರಜ್ಞರು, ಗುರು ಇಲ್ಲದೆ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಎಲ್ಲಾ ಯಶಸ್ಸು ದೊರೆಯುವುದಿಲ್ಲ. ಈ ಶಾಸ್ತ್ರಜ್ಞರ ಸಹಾಯದಿಂದಲೇ ಕಟ್ಟಡವನ್ನು ನಿರ್ಮಿಸಬೇಕು. ಏಕೆಂದರೆ, ಅವರ ಆದೇಶಗಳನ್ನು ಅನುಸರಿಸದೆ, ಯಾರೂ ಕಟ್ಟಡವನ್ನು ಯಶಸ್ವಿಯಾಗಿ, ಫಲಕಾರಿಯಾಗಿ ಪೂರ್ಣಗೊಳಿಸಲು ಸಾಧ್ಯವಿಲ್ಲ. ಮಯಮತದಲ್ಲಿ ಹೇಳಿರುವಂತೆ, ಇದೊಂದು ಪರಸ್ಪರಾವಲಂಬಿತ

ಬಾಂಧವ್ಯ; ಅಂತೇ, ಪರಸ್ಪರ ಗೌರವವನ್ನು ಚಿಮ್ಮಿಸುತ್ತಾ ಕಾರ್ಯಸಾಧುವಾಗುವ ಸಂಬಂಧ. ಹೀಗೆ ಶಾಸ್ತ್ರಗ್ರಂಥಗಳು ಹೇಳುವ ನಿಯಮಗಳು ಕಾರ್ಯ ಘನತೆಯ ದೃಷ್ಟಿಯಿಂದ ಮಾರ್ಗದರ್ಶೀ ಸೂತ್ರಗಳಾಗಿವೆ ಎನ್ನಬಹುದು.

ಒಂದು ದೇವಾಲಯ/ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಈ ಎಲ್ಲ ಶಿಲ್ಪಿವರ್ಗದವರು ಭಾಗವಹಿಸುತ್ತಾರಾದರೂ, ಸ್ಥಪತಿಯಾದವನು ಇನ್ನೂ ಕೆಲವು ನಿರ್ಮಾಣೇತರ ಕಾರ್ಯಗಳಲ್ಲಿ, ಅಂದರೆ, ನಿರ್ಮಾಣಕ್ಕೆ ಸಂಬಂಧಿಸಿದ ಕೆಲವು ವಿಧಿ-ವಿಧಾನಗಳಲ್ಲಿ ಭಾಗವಹಿಸುತ್ತಾನೆ; ಅವುಗಳನ್ನಿಲ್ಲಿ ಗಮನಿಸಬಹುದು:

ಭೂಪರೀಕ್ಷೆಯ ಸಂದರ್ಭದಲ್ಲಿ ಉತ್ತಮ ಭೂಮಿಯನ್ನು ಆಯ್ಕೆ ಮಾಡಿಕೊಡುವುದೂ ಸ್ಥಪತಿಯ ಕರ್ತವ್ಯವಾಗಿದೆ (ಮಯ-೩.೧೧ ಮತ್ತು ೨೦). ನಂತರ, ನಿಶ್ಚಿತ ಗುಣಗಳೊಂದಿಗೆ ನಿಶ್ಚಿತವೆಂದು ಆರಿಸಿಕೊಂಡ ಭೂಮಿಗೆ ದೇವಬಲಿಯನ್ನು ನೀಡಿ, ಸ್ವಸ್ತಿವಾಚನ ಮಾಡಿ, ದೇವ-ಭೂತ-ರಾಕ್ಷಸರನ್ನು ದೂರಹೋಗುವಂತೆಯೂ, ಆ ಭೂಮಿಯನ್ನು ತನಗೆ ಬಿಟ್ಟುಕೊಡುವಂತೆಯೂ ಕೇಳಿಕೊಳ್ಳುತ್ತಾನೆ (ಮಯ-೪.೧-೩). ಆನಂತರ ಆ ಭೂಮಿಯ ಸಂಪದಭಿವೃದ್ಧಿಯನ್ನು ಪರೀಕ್ಷಿಸುವ ದಿನ ಕೂಡಾ ಅವನು ಶುಚಿರ್ಭೂತನಾಗಿ, ಉಪವಾಸವಿದ್ದು, ದೇವರನ್ನು ಪ್ರಾರ್ಥಿಸಿ ಅಲ್ಲೇ ಮಲಗಿರುತ್ತಾನೆ ಹಾಗೂ ಬೆಳಿಗ್ಗೆ ಎದ್ದು ನೆಲದ ಗುಣ ಪರೀಕ್ಷೆ ಮಾಡುತ್ತಾನೆ (ಮಯ-೪.೧೦-೧೫). ಕಟ್ಟಡದ ಉಪಯೋಗಕ್ಕಾಗಿ ಇಟ್ಟಿಗೆಗಳ ಬಗೆಗಳನ್ನು ಗುರುತಿಸಿ, ಉತ್ತಮವಾದುದನ್ನು ಆಯ್ಕೆ ಮಾಡುವವನೂ ಸ್ಥಪತಿಯೇ (ಮಾನ-೧೨.೧೦೬-೭). ನಿರ್ಮಾಣಕ್ಕೆ ಬೇಕಾದ ಮರ, ಕಲ್ಲುಗಳನ್ನು ಆಯ್ದುಕೊಳ್ಳುವಾಗಲೂ ಅವುಗಳನ್ನು ಪೂಜಿಸಿ, ಪ್ರಾರ್ಥಿಸಿ ತರುತ್ತಾನೆ (ಮಯ-೩೩.೨೪-೩೦).

ದೇವಾಲಯದ ಗರ್ಭನ್ಯಾಸದ ಸಂದರ್ಭದಲ್ಲಿ ಭುವನಾಧಿಪತಿಯನ್ನು ಗಂಧ-ಪುಷ್ಪಗಳಿಂದ ಪೂಜಿಸಿ, ಅವನನ್ನು ಮಂತ್ರಗಳಿಂದ ಜಾಗೃತಗೊಳಿಸುವುದೂ ಸ್ಥಪತಿಯ ಕಾರ್ಯ. ಸ್ಥಪತಿಯು ಆ ದಿನ ರಾತ್ರಿ ಆ ಸ್ಥಳದಲ್ಲೇ ತಂಗಿರುತ್ತಾನೆ (ಮಯ-೧೨.೧೮, ೨೨). ಗರ್ಭನ್ಯಾಸ ಮಾಡುವಾಗ, ಹೋಮವನ್ನು ಮಾಡಿದ ನಂತರ ಸ್ಥಪತಿಯು ಆ ಸ್ಥಳವನ್ನು ಬಿಟ್ಟು, ಭಸ್ಮತಿಲಕವಿಟ್ಟು ಗ್ರಾಮದ ಉತ್ತರದೆಡೆಗೆ ಸಾಗಬೇಕು. ರಾತ್ರಿ ಹಾಲನ್ನು ಮಾತ್ರ ಕುಡಿಯಬೇಕು. ಸೂತ್ರಗ್ರಾಹಿ, ತಕ್ಷಕ, ವರ್ಧಕ-ಇವರು ಮಾತ್ರ ಎಚ್ಚರವಾಗಿದ್ದು, ಅವನ ಸೇವೆಯನ್ನು ಮಾಡಬೇಕು (ಮಾನ-೧೨.೬೫-೭೮). ಬೆಳಿಗ್ಗೆ ಎದ್ದು ಹೋಮ ಮಾಡುವಲ್ಲಿಗೆ ಹೋಗಿ 'ಸಕಲೀಕರಣ' (offering) ನೀಡಬೇಕು.

ಸ್ತಂಭದ ಅಧಿವಾಸ ಮಾಡುವುದೂ ಸ್ಥಪತಿಯೇ. ದೇವಾಲಯದ ಸ್ಥೂಪಿಸ್ಥಾಪನೆಯನ್ನು ಮಾಡುವುದೂ ಸ್ಥಪತಿಯ ಕಾರ್ಯವೇ. ಅದನ್ನು ಮುಗಿಸಿ ಬಂದು, ಆಲಯ ಮತ್ತು ಮಂಟಪವನ್ನು ಸ್ಥಾಪನೆ ಮಾಡುತ್ತಾನೆ. ಕಟ್ಟಡ ನಿರ್ಮಾಣ ಮುಗಿಯುವ ಹಂತದಲ್ಲಿಯೂ ಎಲ್ಲ ದೇವರಿಗೂ ಮಂತ್ರವನ್ನು ಪಠಿಸುತ್ತಾ ದೇವಬಲಿಯನ್ನು ಸ್ಥಪತಿಯು ನೀಡುತ್ತಾನೆ (ಮಯ-೧೮.೧೩೦-೩೧).

ಬಿಂಬ ಸ್ಥಾಪನೆಯ ಸಂದರ್ಭದಲ್ಲೂ ಧೀಮಂತನಾದ ಸ್ಥಪತಿಯು, ಆ ದೇವರ ಪ್ರತಿನಿಧಿಯನ್ನು (ಸಕಲ/ಅಕಲ/ಮಿಶ್ರಕ-ಯಾವುದೇ ರೂಪದಲ್ಲಿ) ಸ್ಥಾಪಿಸುವಲ್ಲಿ ತನ್ನ ಗಮನವನ್ನು ಹರಿಸುತ್ತಾನೆ. ಇದನ್ನು ಮಾಡಲು ಅವನು ಚಿನ್ನದ ಆಭರಣ ಯಜ್ಞೋಪವಿತಗಳನ್ನು ಧರಿಸಿ ಹೊರಡುತ್ತಾನೆ; ಸ್ಥಾಪಕ ಕೂಡಾ ಅವನ ಜೊತೆಗೂಡುತ್ತಾನೆ. ಬಿಂಬದ ನಯನೋನ್ಮೀಲನ ಕಾರ್ಯ ಘನತೆಯೂ ಸ್ಥಪತಿಯದು. ಸ್ಥಪತಿಯು ಸೃಷ್ಟಿಕರ್ತ, ಸ್ಥಾಪಕನು-ಬಿಂಬದ ಜೀವ. ಇಬ್ಬರೂ ಮೊದಲಿಗೆ ಒಟ್ಟಾಗಿ ಕೆಲಸ ಮಾಡಬೇಕು (ಮಾನ-೭೦ನೇ ಅಧ್ಯಾಯ). ಇದೊಂದು ಮುಖ್ಯವಾದ ಕ್ರಿಯೆ. ಬಿಂಬದಲ್ಲಿ ಕಣ್ಣಿನ ಕತ್ತಲೆಯನ್ನು ಕಳೆದು ದೃಷ್ಟಿ ನೀಡುವ ಕ್ರಿಯೆ. ಇದರಲ್ಲಿ ಯಾವುದೇ ತಪ್ಪಾಗಕೂಡದು. ಆದ್ದರಿಂದ ಈ ಕ್ರಿಯೆಯನ್ನು ಸ್ಥಪತಿ ಮತ್ತು ಸ್ಥಾಪಕರೇ ನಿರ್ವಹಿಸಬೇಕು. ಆಗ ಹೋಮ ಮಾಡಿ, ಬಿಂಬಕ್ಕೆ ಮತ್ತೆ ಪೂಜೆ ಮಾಡಬೇಕು. ನಂತರ ಸ್ಥಪತಿಯು ಬಿಂಬದ ಬಲಗಣ್ಣು, ಎಡಗಣ್ಣು (ಹಾಗೂ ಬಲಗಣ್ಣನ್ನು?) ತಿದ್ದಿ ಬರೆಯಬೇಕು. ಹೊಸ ವಸ್ತ್ರಾಭರಣ, ಚಿನ್ನದ ಯಜ್ಞೋಪವೀತ ಧರಿಸಿ ಸ್ಥಪತಿಯು ದೇವಾಲಯದ ಸುತ್ತ ಪ್ರದಕ್ಷಿಣೆ ಬಂದು, ಬಿಂಬವನ್ನು ಗ್ರಾಮ ಪ್ರದಕ್ಷಿಣೆ ಮಾಡಿಸಬೇಕು (-ಗ್ರಾಮಸ್ಥರ ಒಪ್ಪಿಗೆಗಾಗಿ).

ದೇವಾಲಯ/ಕಟ್ಟಡ ನಿರ್ಮಾಣ ಮುಗಿದ ಮೇಲೆ ಯಜಮಾನ, ಗುರು, ಸ್ಥಪತಿ-ಎಲ್ಲರೂ ಸೇರಿ ಪ್ರತಿಷ್ಠಾಪನಾ ಕಾರ್ಯವನ್ನು ಮಾಡಬೇಕು. ಅದನ್ನು ಮಾಡಿದ ನಂತರ ಸ್ಥಪತಿಯು ಆಲಯ ಮತ್ತು ಮಂಟಪವನ್ನು ಸ್ಥಾಪನೆ ಮಾಡುತ್ತಾನೆ. ಆನಂತರ ಅವನು ದೇವರ ಮುಂದೆ ನಿಂತು, ಯಾವುದೇ ಕೆಟ್ಟದ್ದು ಆಗದಂತೆ, ಎಲ್ಲ ಒಳ್ಳೆಯದಾಗುವಂತೆ ಪ್ರಾರ್ಥಿಸುತ್ತಾನೆ. ಇಲ್ಲಿಗೆ ಅವನ ಕಾರ್ಯ ಮುಗಿಯುತ್ತದೆ. ಈ ನಂತರ ಸ್ಥಪತಿಯು ಆ ದೇವಾಲಯವನ್ನು ಯಜಮಾನನಿಗೆ ಒಪ್ಪಿಸುತ್ತಾನೆ. ಈ

ಎಲ್ಲಾ ಕಾರ್ಯಗಳೂ ಮುಗಿದ ಮೇಲೆ ಸ್ಥಪತಿಯು ತನ್ನೆಲ್ಲ ಪರಿಕರ/ಸಾಧನಗಳಿಗೆ ನಮಸ್ಕರಿಸಿ, ಯಾವುದೂ ಬಿಡದಂತೆ ಅವೆಲ್ಲವುಗಳನ್ನು ತೆಗೆದುಕೊಂಡು ತನ್ನ ಮನೆಗೆ ಹಿಂತಿರುಗುತ್ತಾನೆ (ಮಯ. ೧೮.೧೬೫, ೧೯೫-೯೯, ೨೮.೨೪-೨೫). ದೇವಾಲಯ ಮಾತ್ರವಲ್ಲದೆ, ಗೃಹಪ್ರವೇಶ, ಗ್ರಾಮನಿರ್ಮಾಣದ ಸಂದರ್ಭಗಳಲ್ಲಿಯೂ, ಇಂತಹ ಅನೇಕ ವಿಧಿ-ವಿಧಾನಗಳನ್ನು ನೆರವೇರಿಸುವುದು, ಸ್ಥಪತಿಯ ಸ್ಥಾನ-ಗೌರವವನ್ನು ಹೆಚ್ಚಿಸುತ್ತದೆ.

ನಿರ್ಮಾಣ/ನಿರ್ಮಾಣೇತರ ಕಾರ್ಯಸಿದ್ಧಿಯ ನಂತರ ಸ್ಥಾಪಕನು, ಸ್ಥಪತಿಯನ್ನು ತನ್ನ ಕುಟುಂಬದವರೊಂದಿಗೆ ಯಥಾಶಕ್ತಿ ಗೌರವಿಸಬೇಕು. ಅವರಿಗೆ ಧನ ಧಾನ್ಯ, ವಸ್ತ್ರ, ಹಸು ಹಾಗೂ ಭೂಮಿ-ಇವುಗಳನ್ನು ನೀಡಬೇಕು. ಇತರ ಶಿಲ್ಪಿಗಳಿಗೆ ಚಿನ್ನ ವಸ್ತ್ರಗಳನ್ನು ನೀಡಬೇಕು. ಸ್ಥಪತಿಗೆ ದೇವಾಲಯದ ಅಂಗಭಾಗಗಳಾದ ಸ್ತೂಪಿ, ಸ್ತಂಭ ಇವುಗಳ ಅಲಂಕರಣಗಳನ್ನೂ, ವಸ್ತ್ರ, ಧ್ವಜ, ಧೇನು-ಮುಂತಾದವುಗಳನ್ನೂ ಸಂತೋಷದಿಂದ ನೀಡಬಹುದು ಎಂದು ಮಯಮತವು ಹೇಳಿದೆ (೧೮.೨೦೨-೬).

ಸಂಭಾವನೆಯ ಬಗ್ಗೆ ನಿಯಮಗಳಿದ್ದರೂ ಶಾಸ್ತ್ರಗ್ರಂಥಗಳಲ್ಲಿ ಅವರ ವೇತನ ಕ್ರಮದ ಬಗ್ಗೆ ಏನನ್ನೂ ಹೇಳಿಲ್ಲವೆಂದು ಕುಮಾರಸ್ವಾಮಿಯವರು ಹೇಳಿದ್ದಾರೆ. 'ಶಿಲ್ಪರತ್ನ' ಎಂಬ ಶಾಸ್ತ್ರಗ್ರಂಥದಲ್ಲಿ ಮಾತ್ರ, 'ಕರ್ಮಕಾರರ ವೇತನಾಕ್ರಮ' ಎಂಬ ಒಂದು ಅಧ್ಯಾಯವಿರುವುದಾಗಿಯೂ, ಉಳಿದ ಗ್ರಂಥಗಳಲ್ಲಿ ಅಂತಹ ವಿವರವಿಲ್ಲವೆಂದೂ ಕುಮಾರಸ್ವಾಮಿಯವರು ಹೇಳಿದ್ದಾರೆ; ಅದರಂತೆ, ಬೇರೆ ಬೇರೆ ಕೆಲಸಗಳಿಗೆ ಬೇರೆ ಬೇರೆ ಪ್ರಮಾಣದ ವೇತನ ನೀಡುತ್ತಿದ್ದುದನ್ನೂ ವಿವರಿಸಿದ್ದಾರೆ (ಪು. ೯೩-೯೫). ಈ ವೇತನದ ವಿಷಯವನ್ನು ಬಿಟ್ಟರೆ, ಅವರಿಗೆ ಯಜಮಾನನ ಶಕ್ತ್ಯಾನುಸಾರ ಇಚ್ಛಾನುಸಾರ ಸೂಕ್ತ ಸಂಭಾವನೆ ದೊರಕಿರುವಂತೆ ಎನಿಸುತ್ತದೆ. ಅಲ್ಲದೆ ನಿರ್ಮಾಣ/ನಿರ್ಮಾಣೇತರ ಕಾರ್ಯಭಾರದಿಂದ ಒಂದು ಗೌರವದ ಸ್ಥಾನ ದೊರಕಿರುವಂತೆ ತೋರುತ್ತದೆ. ಇದರೊಂದಿಗೆ, ತಮ್ಮ ಜ್ಞಾನನಿಧಿಯಿಂದ ಅವರು ಸಮಾಜದಲ್ಲಿ ಒಂದು ಮನ್ನಣೆಯ ಸ್ಥಾನವನ್ನು ಪಡೆದಿರಲಿಕ್ಕೂ ಸಾಕು.

ಆಕರ ಗ್ರಂಥಗಳು

೧. Acharya, P.K. (Ed and Tr), Manasara series, vol. III (Sans.), IV and VII New Delhi, 1995-1994, 1993-resp.

೨. Bmno Dagens – (Ed. & Tr.), Mayamata, Delhi, 1994.

೩. Ramachandra Rao, S.K., Art and Architecture of Indian Temples, vol. I, Bengaluru.

೪. ಕುಮಾರಸ್ವಾಮಿ ಕೆ.ಎಸ್., ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು ಒಂದು ಅಧ್ಯಯನ, ಬೆಂಗಳೂರು, ೧೯೯೬.

೭೪

ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರ ದೇವಾಲಯ ಕೆಲವು ಸಂಗತಿಗಳು

ಡಾ. ಬಿ. ರಾಜಶೇಖರಪ್ಪ*

ಚಿತ್ರದುರ್ಗದ ಬೆಟ್ಟದ ಮೇಲೆ ಹಲವು ದೇವಾಲಯಗಳಿರುವುದು ಎಲ್ಲರಿಗೂ ತಿಳಿದ ಸಂಗತಿ. ಅವುಗಳಲ್ಲಿ ಕೆಲವು ಮೂಲತಃ ಪ್ರಾಕೃತಿಕ ಗುಹಾಲಯಗಳಾಗಿದ್ದು, ಅನಂತರದ ಕಾಲದಲ್ಲಿ ವಿಸ್ತರಣೆ ಪಡೆದುಕೊಂಡು ಶಿಷ್ಟ ದೇವಾಲಯಗಳ ರೂಪ ಪಡೆದಿವೆ. ಅಂಥ ದೇವಾಲಯಗಳಲ್ಲಿ ಸಂಪಿಗೆ ಸಿದ್ಧೇಶ್ವರ ದೇವಾಲಯವೂ ಒಂದು. ಬೆಟ್ಟದ ಮೇಲೆ 'ಮಧ್ಯರಂಗ' ಎಂದು ಈಚಿನ ಕಾಲದಲ್ಲಿ ಕರೆಯಲಾಗುತ್ತಿರುವ ಜಾಗಕ್ಕೆ ಬಂದರೆ, ಅದರ ದಕ್ಷಿಣ ಭಾಗದಲ್ಲಿ ಈ ದೇವಾಲಯ ನೆಲೆಗೊಂಡಿದೆ. ಮುರುಘರಾಜೇಂದ್ರ ಮಠದ ಮುಂಭಾಗದಿಂದ ಈ ದೇವಾಲಯವನ್ನು ಸಮೀಪಿಸಿ, ಗಾಳಿಮಂಟಪದಂತಿರುವ ಅದರ ಪ್ರವೇಶದ್ವಾರವನ್ನು ದಾಟಿ ಒಳಕ್ಕೆ ಬಂದರೆ, ಎಡಭಾಗದಲ್ಲಿ ವಿಶಾಲವಾದ ಚಾವಡಿ ಅವುಗಳ ಬದಿಯಲ್ಲಿ ಎರಡು ಸಣ್ಣ ಶಿವಲಿಂಗಾಲಯಗಳು, ಬಲಕ್ಕೆ ಒಂದು ನಂದಿ ಆಲಯ, ಬದಿಯಲ್ಲಿ ಒಂದು ಚಿಕ್ಕ ಗುಹೆ, ಒಂದು ಸಣ್ಣ ಕುಂಡ, ದೇವಾಲಯದ ದ್ವಾರದ ಮುಂದೆ ಎಡಬಲಕ್ಕೆ ಎರಡು ಜಗಲಿಗಳು, ಪಶ್ಚಿಮ ಬದಿಯ ಜಗಲಿಯ ಮೇಲೆ ಶಾಸನ ಕೆತ್ತಿರುವ ಬಳಪದ ಎರಡು ಕಲ್ಲುಚಪ್ಪಡಿಗಳು, ದೇವಾಲಯವನ್ನು ಪ್ರವೇಶಿಸುವ ಮುನ್ನ ಹೊಸ್ತಿಲ ಬಳಿ ಮನುಷ್ಯನ ಒಂದು ರೇಖಾಕೆತ್ತನೆ, ಅದರ ಜೊತೆಗೆ ಕನ್ನಡ ಲಿಪಿಯ ಒಂದು ಸಾಲು ಬರಹ– ಇವೆಲ್ಲ ಕಾಣಿಸುತ್ತವೆ.

ಇತ್ತ ದೇವಾಲಯದ ಮುಂದಿನ ಒಳಾವರಣದಲ್ಲಿ ನಡುವೆ ಚೌಕಾಕಾರದ ಒಂದು ದೊಡ್ಡ ಕಟ್ಟೆ. (ನಾನು ನೋಡಿದ್ದಂತೆ) ಹಿಂದೆ ಅದರ ಮೇಲೆ ಹಲಸು, ಬಿಲ್ವ, ಸಂಪಿಗೆ ಮರಗಳಿದ್ದವು. ಇಲ್ಲಿಯ ದೊಡ್ಡ ಸಂಪಿಗೆ ಮರಗಳಿಂದಲೇ ಈ ದೇವರಿಗೆ 'ಸಂಪಿಗೆ ಸಿದ್ಧೇಶ್ವರ' ಎಂಬ ಹೆಸರು ಬಂದಿರಬೇಕು. ಈ ಕಟ್ಟೆಯ ದಕ್ಷಿಣಕ್ಕೆ ಒಂದು ಸಣ್ಣ ಹೋಮಕುಂಡ ಮತ್ತು ಜಲಹರಿ ಕಾಣುತ್ತವೆ. ದೇವಾಲಯದ ಒಳಗೆ ಪ್ರವೇಶಿಸಿದರೆ ನವರಂಗದ ತುಂಬೆಲ್ಲಾ ಬೇರೆ ಬೇರೆ ವಿಗ್ರಹಗಳು, ಉಬ್ಬುಶಿಲ್ಪ, ಶಾಸನ ಮುಂತಾದ ಪ್ರಾಚ್ಯಾವಶೇಷಗಳೇ ತುಂಬಿವೆ. ನೈಋತ್ಯ ಮೂಲೆಯಲ್ಲಿ ವೀರಭದ್ರ, ಅದರ ಎದುರಿಗೆ ಇಬ್ಬರು ಪುರುಷರ ಒಂದು ಶಿಲ್ಪವಿರುವ ಓವರಿ, ಎಡಕ್ಕೆ ನೋಡಿದರೆ ಆ ದೇವಾಲಯದ ಗರ್ಭಗುಡಿ, ನಡುವೆ ಸಂಪಿಗೆ ಸಿದ್ಧೇಶ್ವರ ಲಿಂಗ, ನಂದಿ, ಅವುಗಳ ಎಡಬದಿಯಲ್ಲಿ ಪದ್ಮಾಸನದಲ್ಲಿ ಧ್ಯಾನಮಗ್ನನಾಗಿರುವ ಒಬ್ಬ ಪುರುಷನ ಶಿಲ್ಪ, ಬದಿಯಲ್ಲಿ ಪಾರ್ವತಿಯ ಶಿಲ್ಪ, ಲಿಂಗದ ಹಿಂಭಾಗದ ಗೋಡೆಯಲ್ಲಿ ಪೂರ್ವಕ್ಕೆ ಚೌಕಾಕಾರದ ಕದ ಮುಚ್ಚಿದ ಒಂದು ಚಿಕ್ಕ ದ್ವಾರ– ಇವೆಲ್ಲ ಕಾಣಿಸುತ್ತವೆ. ನವರಂಗದಲ್ಲಿ ಈಶಾನ್ಯದ ಮೂಲೆಯಲ್ಲಿ ಗೋಡೆಗೆ ಹೊಂದಿಸಿರುವ ಒಂದು ಕನ್ನಡ ಶಾಸನವಿರುವ ಕಲ್ಲುಚಪ್ಪಡಿ, ಇತ್ತ ಕಡೆ ವಾಯವ್ಯ ಮೂಲೆಯಲ್ಲಿ ಪದ್ಮಾಸನಸ್ಥನಾಗಿ ನಿವೇದನ ಭಂಗಿಯಲ್ಲಿ ಕುಳಿತಿರುವ ಒಬ್ಬ ಪುರುಷನ ಉಬ್ಬುಶಿಲ್ಪ, ಅವನ ತಲೆಯಿಂದ ಮೇಲೆ ಬಳಪದ ಫಲಕದಲ್ಲಿ ಕನ್ನಡದ ಒಂದು ಚಿಕ್ಕ ಶಾಸನ, ಬಾಗಿಲ ಬಳಿಯಲ್ಲಿ ಚಿಕ್ಕ ಭೈರವ, ಮುಂತಾದುವು ದೃಷ್ಟಿಯನ್ನು ಸೆಳೆಯುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ ಇಲ್ಲಿ ಹೊರಾಂಗಣದಲ್ಲಿ ಮತ್ತು ಸುತ್ತಮುತ್ತ ಇರುವ ಮರಗಳ ನೆರಳಿನ ತಂಪು, ಇಲ್ಲಿ ನೆಲೆಗೊಂಡಿರುವ ದಟ್ಟ ಪ್ರಶಾಂತತೆ ಮನಸ್ಸನ್ನು ಸೆಳೆಯುತ್ತದೆ. ಈ ದೇವಾಲಯದ ಐತಿಹಾಸಿಕತೆ ಏನು? ಎಂದು ಸಹಜವಾಗಿಯೆ ಕುತೂಹಲ ಉಂಟಾಗುತ್ತದೆ.

ಹುಲ್ಲೂರು ಶ್ರೀನಿವಾಸ ಜೋಯಿಸರ ಅಭಿಪ್ರಾಯ

ಚಿತ್ರದುರ್ಗದ ಆದ್ಯ ಸಂಶೋಧಕರಾಗಿದ್ದ ಹುಲ್ಲೂರು ಶ್ರೀನಿವಾಸ ಜೋಯಿಸರು ಈ ದೇವಾಲಯದ ಐತಿಹಾಸಿಕತೆ ಕುರಿತಂತೆ ಹೀಗೆ ಬರೆದಿದ್ದಾರೆ :

"ಚಿತ್ರದುರ್ಗ ಬೆಟ್ಟದ ಮೇಲಿರುವ ಗುಹಾಂತರ್ಗತ ದೇವಾಲಯ. ಈಗ ಇದರಲ್ಲಿ ಚಂಪಕಾ ಸಿದ್ಧೇಶ್ವರ, ವೀರಭದ್ರ, ಪಾರ್ವತಿ, ಶೂಲಬ್ರಹ್ಮ ಮುಂತಾದ ಶೈವ ದೇವತೆಗಳೂ, ಅಲ್ಲಮ ಮತ್ತು ಜಕಣಾಚಾರಿಯ ವಿಗ್ರಹಗಳೂ ಶೋಭಿಸುವುವು.

* ಕನ್ನಡ ಪ್ರಾಧ್ಯಾಪಕರು, ಪ್ರಾಂಶುಪಾಲರು (ನಿ), ೨ನೇ ಕ್ರಾಸ್ (ಪಶ್ಚಿಮ), ಜಯಚಾಮರಾಜೇಂದ್ರ ಬಡಾವಣೆ, ಚಿತ್ರದುರ್ಗ–೫೭೭೫೦೧.

ಇಲ್ಲಿ ಶ್ರೀ ರೇವಣಸಿದ್ಧರೂ, ಶ್ರೀ ಮರುಳಸಿದ್ಧರೂ, ಜಕಣಾಚಾರಿಯೂ, ರಸಸಿದ್ಧರೂ ಗುಹೆಗಳಲ್ಲಿ ವಾಸವಾಗಿದ್ದರಂತೆ. ಹಿಡಿಂಬನ ಹಲ್ಲು ಎಂದು ಆನೆಯ ದವಡೆಯ ಹಲ್ಲನ್ನು ತೋರಿಸುವರು. ಹಲ್ಲು ಬುದ್ಧನ ಮತ್ತು ಬೋಧಿಸತ್ತ್ವನ ದಂತದ ಅವಶೇಷದ ಸಂಕೇತ. ಚಂದ್ರವಳ್ಳಿಯು ಬೌದ್ಧರ ಪ್ರಾಬಲ್ಯದ ಕಾಲದಲ್ಲಿ ರಾಜಧಾನಿಯಾಗಿದ್ದಾಗ ಈ ಬೆಟ್ಟದ ಮೇಲೆ ಬೋಧಿಸತ್ತ್ವನ ಅವಶೇಷಗಳನ್ನು ಭರಣಿಗಳಲ್ಲಿಟ್ಟು ಭೂಗತಮಾಡಿ ಅವುಗಳ ಮೇಲೆ ಚೈತ್ಯ ಮತ್ತು ವಿಹಾರಗಳು ನಿರ್ಮಿತವಾಗಿರಬೇಕು. ಇಲ್ಲಿ ಬೌದ್ಧರ ಧರ್ಮವು ನಶಿಸಿಹೋದ ಮೇಲೆ ಶೈವ ಪ್ರಾಬಲ್ಯವು ಹೆಚ್ಚಾಗಿ, ಅವೆಲ್ಲಾ ಶೈವ ದೇವಾಲಯಗಳಾಗಿ ಮಾರ್ಪಾಡಾದಂತೆ ತೋರುತ್ತದೆ. ಮೂಲದಲ್ಲಿ ಬೌದ್ಧ ಗೃಹಗಳಾಗಿದ್ದುವೆಂಬುದಕ್ಕೆ ಸಿದ್ಧನಾಥ ಎಂಬ ಹೆಸರೂ, ಹಲ್ಲಿನ ಸಂಕೇತವೂ ಮುಖ್ಯವಾದ ಸಾಕ್ಷಿಗಳಾಗಿವೆ." ('ಹುಶ್ರೀಜೋಐಲೇ', ಪುಟ ೨೫. ಇದೇ ಪುಸ್ತಕದ ಪುಟ ೪೦ ರಿಂದ ೪೫ರ ವರೆಗೆ, ಜೋಯಿಸರು ಮೇಲಿನ ಅಭಿಪ್ರಾಯವನ್ನೇ ವಿಸ್ತರಿಸಿ ಕೊಟ್ಟಿರುವ ಇನ್ನೂ ಹೆಚ್ಚಿನ ವಿವರಣೆ ಇದೆ).

ಈ ಹೇಳಿಕೆಯ ಪರಾಮರ್ಶೆ

ಶ್ರೀ ಜೋಯಿಸರು ಈಮೇಲಿನಂತೆ ಸಂಪಿಗೆ ಸಿದ್ಧೇಶ್ವರ ದೇವಾಲಯವು ಹಿಂದೆ ಬೌದ್ಧಾಲಯ ಆಗಿರಬೇಕೆಂದು ಊಹೆ ವ್ಯಕ್ತಪಡಿಸಿದ್ದರು. ಅದು ನಿರ್ದಿಷ್ಟವಾಗಿ ಯಾವ ಕಾಲದಲ್ಲಿ ಎಂದು ಹೇಳಿರಲಿಲ್ಲ. ಆದರೂ "ಚಂದ್ರವಳ್ಳಿಯು ಬೌದ್ಧರ ಪ್ರಾಬಲ್ಯದ ಕಾಲದಲ್ಲಿ ರಾಜಧಾನಿಯಾಗಿದ್ದಾಗ ..." ಎಂದು ಅವರು ಹೇಳಿರುವುದರಿಂದ ಬಹುಶಃ ಅವರ ಮನಸ್ಸಿನಲ್ಲಿದ್ದುದು ಸುಮಾರು ಕ್ರಿ.ಪೂ. ೨ನೇ ಶತಮಾನದಿಂದ ಕ್ರಿ.ಶ. ೨ನೇ ಶತಮಾನದವರೆಗೆ ಆಳಿದ ಶಾತವಾಹನರ ಆಳ್ವಿಕೆಯ ಕಾಲ ಎಂದು ತೋರುತ್ತದೆ.

ಆದರೆ ಈ ದೇವಾಲಯದ ಅಸ್ತಿತ್ವ ಕುರಿತಂತೆ ಪ್ರಮಾಣಗಳು ಉಲ್ಲೇಖಗಳು ಏನು ಹೇಳುತ್ತವೆ? ನಿಜವಾಗಿಯೂ ಈ ದೇವಾಲಯವು ಅಷ್ಟು ಪುರಾತನ ಕಾಲದ್ದು ಎನ್ನಲು ಪ್ರಮಾಣವಿದೆಯೆ?– ಎಂಬುದನ್ನು ಜೋಯಿಸರು ತೀವ್ರವಾಗಿ ಒರೆಗೆ ಹಚ್ಚಿ ನೋಡಲಿಲ್ಲವೆಂಬುದನ್ನು ಹೇಳಲೇಬೇಕು. ಏಕೆಂದರೆ ಈ ದೇವಾಲಯಕ್ಕೆ ಸಂಬಂಧಿಸಿದಂತೆ ಅಥವಾ ಚಿತ್ರದುರ್ಗದ ಯಾವುದೇ ದೇವಾಲಯಕ್ಕೆ ಸಂಬಂಧಿಸಿದಂತೆ ಬೌದ್ಧಸಂಬಂಧಿಯಾದ ಒಂದೇ ಒಂದು ನಿಶ್ಚಿತ ಪ್ರಮಾಣವೂ ದೊರೆತಿಲ್ಲ. ಆದರೂ ಕೇವಲ ಸಿದ್ಧನಾಥ ಎಂಬ ಹೆಸರು ಮತ್ತು ಆನೆಯ ಹಲ್ಲು ಎಂದು ಅವರೇ ಹೇಳುವ ಹಲ್ಲು ಇವುಗಳೇ ಮುಖ್ಯ ಆಧಾರಗಳೆಂದು ಅವರು ಭಾವಿಸಿದ್ದದ್ದು ಸಮರ್ಪಕ ಎನಿಸುವುದಿಲ್ಲ. ನಿರ್ದಿಷ್ಟವಾದ ವಿಷಯದ ಬಗ್ಗೆ ಮುಖ್ಯವಾದ ಒಂದು ತೀರ್ಮಾನಕ್ಕೆ ಬರುವಾಗ ವಿಶ್ವಾಸಾರ್ಹವಾದ ಮತ್ತು ನಿರ್ದಿಷ್ಟವಾದ ಪ್ರಮಾಣಗಳು ಬೇಕಾಗುತ್ತವೆಯಷ್ಟೆ? ಅದಕ್ಕೆ ಪೂರಕವೆನಿಸುವಂತೆ ಸಿದ್ಧೇಶ್ವರ ದೇವಾಲಯದಲ್ಲಿ ಒಂದು ಹಲ್ಲನ್ನು ತೋರಿಸುತ್ತಿದ್ದರು– ಎಂದು ಬರೆದಿದ್ದಾರೆ. ಅದೇ ರೀತಿ ಹಿಡಿಂಬೇಶ್ವರ ದೇವಾಲಯದಲ್ಲಿಯೂ ಒಂದು ಕಾಲಕ್ಕೆ 'ಹಿಡಿಂಬನ ಹಲ್ಲು' ಎಂದು ಒಂದು ಹಲ್ಲನ್ನು ತೋರಿಸುತ್ತಿದ್ದರೆಂಬ ಹೇಳಿಕೆಯೂ ಇದೆ. ಆದರೆ ಈಚೆಗೆ ಆ ಎರಡೂ ದೇವಾಲಯಗಳಲ್ಲೂ ಅಂಥ ಹಲ್ಲು ಇಲ್ಲ; ಅಂಥ ಹಲ್ಲು ಅಲ್ಲಿದ್ದವೆಂದು ಈಗ ಯಾರೂ ಹೇಳುವುದೂ ಇಲ್ಲ. ಏಕೆಂದರೆ ಅದು ಈಗಾಗಲೇ ಜನತೆಗೆ ಮರೆತುಹೋಗಿರುವ ವಿಷಯ. ಆದರೆ, ಅಂತಹ ಒಂದು ಹಲ್ಲು ಈಗ ಏಕನಾಥೇಶ್ವರಿ ದೇವಾಲಯದಲ್ಲಿದೆ. ಅದು ಮೇಲೆ ಹೇಳಿದ ದೇವಾಲಯಗಳಲ್ಲೊಂದರಲ್ಲಿದ್ದ ಹಲ್ಲು ಇದ್ದು, ಕಾಲಾಂತರದಲ್ಲಿ ಈ ದೇವಾಲಯವನ್ನು ಸೇರಿರುವುದೋ ಹೇಗೋ? ಕಾಲಕಾಲಕ್ಕೆ ಹೀಗೆ ಒಂದೊಂದು ಕಡೆ ಇಟ್ಟುಕೊಳ್ಳುತ್ತಾ ತೋರಿಸುತ್ತಾ ಬರಲಾಗುವ ಇಂತಹ ವಸ್ತು ನಿರ್ದಿಷ್ಟವಾಗಿ ಯಾವ ದೇವಾಲಯಕ್ಕೆ ಸೇರಿದ್ದಾಗುತ್ತದೆ? ಮತ್ತು ಮುಖ್ಯ ಸಾಕ್ಷಿ ಹೇಗಾಗುತ್ತದೆ?

'ಹಿಡಿಂಬನ ಹಲ್ಲು' ಎನ್ನುವುದು ಹಿಡಿಂಬೇಶ್ವರ ದೇವರಿಗೆ ಪ್ರಸ್ತುತವೆನಿಸಬಹುದು. ಏಕೆಂದರೆ ಕಡೆಯ ಪಕ್ಷ ಅಲ್ಲಿ ಹೆಸರಿನ ಸಂಬಂಧವಾದರೂ ಇದೆ. ಆದರೆ ಸಿದ್ಧೇಶ್ವರ ದೇವಾಲಯಕ್ಕೂ ಹಿಡಿಂಬನ ಹಲ್ಲಿಗೂ ಹೇಗೆ ಸಂಬಂಧ?– ಇಂತಹ ಪ್ರಶ್ನೆಗಳು ಬರುತ್ತವೆ. ಮೇಲಾಗಿ ಹೀಗೆ ಹಲ್ಲು ತೋರಿಸುವಷ್ಟರಿಂದಲೇ ಬೌದ್ಧಕ್ಕೆ ಸಂಬಂಧ ಕಲ್ಪಿಸಲು ಆಗುವುದಿಲ್ಲ; ಹಾಗೇ ಅದು ಹಿಡಿಂಬನ ಐತಿಹಾಸಿಕತೆಗೂ ಸಾಕ್ಷಿಯಾಗುವುದಿಲ್ಲ. ಜೊತೆಗೆ ಸಿದ್ಧನಾಥ ಎಂಬ ಹೆಸರು ಬೌದ್ಧ ಸಂಬಂಧದಿಂದಲೇ ಇಲ್ಲಿ ಬಂದದ್ದು ಎನ್ನಲು ಸೂಕ್ತವಾದ ಆಧಾರ ಬೇಕು. ಅಂಥ ಯಾವುದೂ ಇಲ್ಲದೆ ಹುಲ್ಲೂರು ಶ್ರೀನಿವಾಸ ಜೋಯಿಸರು, ಸಂಪಿಗೆ ಸಿದ್ಧೇಶ್ವರ ದೇವಾಲಯವು ಒಂದು ಕಾಲಕ್ಕೆ ಬೌದ್ಧಾಲಯ ಎಂಬ ತೀರ್ಮಾನಕ್ಕೆ ಬಂದದ್ದು ಆಶ್ಚರ್ಯವೇ ಸರಿ. ಹೀಗೇ ಶ್ರೀಯುತರು ಹಿಡಿಂಬೇಶ್ವರ, ಏಕನಾಥೇಶ್ವರಿ, ಫಲ್ಗುಣೇಶ್ವರ, ಪಂಚಲಿಂಗೇಶ್ವರ, ಅಂಕಲಿಮಠ ಮೊದಲಾದವುಗಳನ್ನೂ ಸಹ ಬೌದ್ಧ ಸಂಬಂಧಿ ಎಂದೇ ಭಾವಿಸಿದ್ದಾರೆ.

ಇದಲ್ಲದೆ ಈಮೇಲೆ ಉದ್ಧರಿಸಿರುವ ಶ್ರೀಯುತರ ಬರಹದಲ್ಲಿ ಪ್ರಶ್ನೆಯೆತ್ತಬೇಕಾದ ಇನ್ನೂ ಕೆಲವು ಅಂಶಗಳಿವೆ. ಅವುಗಳನ್ನು ಕುರಿತು ಇಲ್ಲಿ ಬರೆಯುವುದು ಪ್ರಸ್ತುತ ಎನಿಸುವುದಿಲ್ಲ. ಸಂಶೋಧಕನಿಗೆ ಇರಬೇಕಾದ ಸತ್ಯಾನ್ವೇಷಕ ದೃಷ್ಟಿ ಊಹಾಪೋಹದ ಪೊರೆಯಿಂದ ಇಲ್ಲಿ ಮಸಕಾಗಿದೆಯೆಂದು ಹೇಳಲೇಬೇಕಾಗಿದೆ. ಅಂತೂ ಇಲ್ಲಿಯವರೆಗೂ ಚಿತ್ರದುರ್ಗದ ಇತಿಹಾಸದ ಬಗ್ಗೆ ಬಂದ ಹಲವಾರು ಲೇಖನಗಳಲ್ಲಿ ಜೋಯಿಸರ ಬೌದ್ಧ ಸಂಬಂಧದ ಊಹೆಯನ್ನು ಒರೆಗೆ ಹಚ್ಚಿ ನೋಡದೆ, ಪುನರುಚ್ಚರಿಸುತ್ತಾ, ಹಾಗೇ 'ಚಿತ್ರದುರ್ಗ ಜಿಲ್ಲೆಯಲ್ಲಿ ಬೌದ್ಧಧರ್ಮದ ಕುರುಹುಗಳು' ಎಂಬ ಅವರ ಲೇಖನದಲ್ಲಿಯ ಕೆಲವು ಹೇಳಿಕೆಗಳನ್ನು ಸ್ವೀಕರಿಸುತ್ತಾ ಬರಲಾಗಿದೆ. ಆದರೆ ಈ ಹೇಳಿಕೆಗಳನ್ನು ಸೂಕ್ತ ಪರಿಶೀಲನೆಯಿಂದ ಒರೆಗೆ ಹಚ್ಚಿ ನಿಜವಾದ ಐತಿಹಾಸಿಕ ಸಂಗತಿ ಏನೆಂಬುದನ್ನು ಜನತೆಯ ಮುಂದಿಡುವ ಪ್ರಯತ್ನ ಆವಶ್ಯಕವಾಗಿದೆ.

ಡಾ. ಎಂ.ಎಚ್. ಕೃಷ್ಣ ಅವರ ಅಭಿಪ್ರಾಯ ಮತ್ತು ಅದರ ಪರಾಮರ್ಶೆ

ಈ ದೇವಾಲಯದ ರಚನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಡಾ. ಎಂ.ಎಚ್. ಕೃಷ್ಣ ಅವರು 'ಇದು ಕಲ್ಯಾಣ ಚಾಳುಕ್ಯರ ಕಾಲದ್ದು' ಎಂದಿರುವರು. ಸಾಮಾನ್ಯವಾಗಿ ಆ ಕಾಲದ ದೇವಾಲಯಗಳ ಮುಂಭಾಗದಲ್ಲಿ ಕಕ್ಷಾಸನ ರಚನೆಗಳು ಇರುತ್ತಿದ್ದ ಹಾಗೆ ಇಲ್ಲೂ ಇರುವುದು ಅವರು ಹಾಗೆ ಹೇಳಲು ಕಾರಣವಾಗಿರಬಹುದು. ಅದು ಕೂಡಾ ಸಮಂಜಸವಲ್ಲ. ಏಕೆಂದರೆ, ಈ ದೇವಾಲಯ ಆದದ್ದು ವಿಜಯನಗರ ಕಾಲದಲ್ಲಿ ಎಂಬುದು ಇಲ್ಲಿಯ ಶಾಸನಗಳಲ್ಲಿ ಸ್ಪಷ್ಟವಾಗಿದೆ. ಈ ಮೇಲಿನ ವಿವರಣೆಗೆ ಪೂರಕವಾಗಿ ಈ ದೇವಾಲಯದ ನವರಂಗದ ಪಶ್ಚಿಮದ ಗೋಡೆಯಲ್ಲಿರುವ ಸೋವಣ್ಣನ ಶಾಸನವನ್ನು ಗಮನಿಸಬೇಕು. ಡಾ. ಎಂ.ಎಚ್. ಕೃಷ್ಣ ಅವರು ಆ ಶಾಸನವನ್ನು ಓದಿ ಪ್ರಕಟಿಸಿದ್ದಾರೆ (ಎಂ.ಎ.ಆರ್. ೧೯೩೯). ಆ ಶಾಸನದ ಕೆಳಗೆ ವಿನಮ್ರನಾಗಿ ಪದ್ಮಾಸನಸ್ಥನಾಗಿ ನಿವೇದನ ಭಂಗಿಯಲ್ಲಿ ಕುಳಿತಿರುವ ಶಿಲ್ಪದ ಪುರುಷ ಸೋವಣ್ಣ ಇರಬೇಕು ಎಂದು ಡಾ. ಎಂ.ಎಚ್. ಕೃಷ್ಣ ಅವರು ಹೇಳಿದ್ದಾರೆ. ಆ ಶಾಸನದ ನನ್ನ ಪುನರ್ಪರಿಶೀಲನೆಯ ಪ್ರಕಾರ, ಈ ಪುರುಷ ಸೋವಣ್ಣ ಅಲ್ಲ. ಅವನ ಅಣ್ಣ ಹರಿಯಣ್ಣ, ಈ ದೇವಾಲಯದ ನಿರ್ಮಾತೃ ಎಂಬುದು ಸ್ಪಷ್ಟವಾಗುತ್ತದೆ. ತನ್ನ ಅಣ್ಣನ ಮೇಲಿನ ಗೌರವದಿಂದ 'ಪರೋಕ್ಷ ವಿನಯ'ವಾಗಿ ತಮ್ಮ ಸೋವಣ್ಣನೆ ಇದನ್ನು ಕೆತ್ತಿಸಿರಬೇಕು. ಆ ಶಾಸನವನ್ನು ಡಾ. ಎಂ.ಎಚ್. ಕೃಷ್ಣ ಅವರು ಪ್ರಕಟಿಸಿದಾಗ, ಅದರ ೩ನೆಯ ಪಂಕ್ತಿಯ ಪ್ರಾರಂಭದಲ್ಲಿ 'ಹರಿಯಂಣ್ನನು ಮಾಡಿಸಿದ ಯಿ ದೇವಲ್ಯಾ' ಎಂದು ಬಂದಿರುವಲ್ಲಿ 'ಹರಿಯಣ್ಣ' ಎಂಬುದರ ಹಿಂದೆ ಇರುವ 'ಇ'(ಈ) ಎಂಬ ಏಕಾಕ್ಷರ ಶಬ್ದ ಗೋಡೆಯ ಸುಣ್ಣದ ಪದರದಲ್ಲಿ ಮುಚ್ಚಿಹೋಗಿಯೋ ಏನೋ ಅವರ ಗಮನಕ್ಕೆ ಬಾರದೆಹೋಯಿತೆಂದು ಕಾಣುತ್ತದೆ. ಆ ಶಾಸನದಲ್ಲಿ ಈ ವ್ಯಕ್ತಿಯನ್ನು 'ಇ'(ಈ) ಹರಿಯಂಣ್ನ' 'ಯಿ ಹರಿಯಂಣ್ನ' ಎಂದು ಎರಡು ಸಾರಿ ನಿರ್ದೇಶಿಸಿರುವುದು ಈ ಕೆಳಗೆ ಶಿಲ್ಪಿತನಾದವನು ಹರಿಯಣ್ಣನೇ ಎಂಬುದನ್ನು ದೃಢಪಡಿಸುತ್ತದೆ. ಅದನ್ನು ಗಮನಿಸಿದ್ದಿದ್ದರೆ ಇಲ್ಲಿಯ ಶಿಲ್ಪದ ವ್ಯಕ್ತಿ ಸೋವಣ್ಣನಲ್ಲ, ಅವನ ಅಣ್ಣ, ಈ ದೇವಾಲಯದ ನಿರ್ಮಾತೃ ಎಂಬ ಸಂಗತಿ ಅಂದೇ ಬೆಳಕಿಗೆ ಬರುತ್ತಿತ್ತು.

ಇದಲ್ಲದೆ ಹುಲ್ಲೂರು ಶ್ರೀನಿವಾಸ ಜೋಯಿಸರು ತಮ್ಮ ಒಂದು ಲೇಖನದಲ್ಲಿ ಮೇಲೆ ಹೇಳಿದ ಶಾಸನ ಪಾಠವನ್ನು ಉಲ್ಲೇಖಿಸುವಾಗ 'ಹರಿಯಣ್ಣ'ನ ಹೆಸರನ್ನು 'ಹಿರಿಯಣ್ಣ' ಎಂದು, 'ಸೋವಣ್ಣ'ನ ಹೆಸರನ್ನು 'ಸೋಮಣ್ಣ' ಎಂದು, 'ದೇವಲ್ಯಾದ ಮುಂದಣ ಆದಿಷ್ಟಣ ಮುಱುನೆಲೆಯ ಉಪ್ಪರಿಗೆ ಕಲ್ಲ ನವಿಲುಯ್ಯಲು ಮೇಲಣ ಸಿಖರವು' ಎಂಬ ಪದಸಮುಚ್ಚಯವನ್ನು ಅವರು 'ದೇವಾಲಯದ ಮುಂದಣ ಗಾರೆ ಸುಣ್ಣದ ಮುಂದಲೆ, ಉಪ್ಪರಿಗೆ ಕಲ್ಲುಯ್ಯಲು, ಮೇಲಣ ಶಿಖರ'- ಎಂದು ಕೊಟ್ಟಿರುವುದು ಆಶ್ಚರ್ಯಕರವಾಗಿದೆ (ಹುಶ್ರೀಜೋಐಲೇ, ಪು. ೪೫). ಆಗಿನ ಕಾಲಕ್ಕೆ ಇದ್ದ ಡಾ. ಎಂ.ಎಚ್. ಕೃಷ್ಣ ಅವರ ಪಾಠ ಜೋಯಿಸರ ಬರಹದಲ್ಲಿ ಹೀಗಾಯಿತೋ?! ('ಹುಶ್ರೀಜೋಐಲೇ' ಸಂಪಾದಕರು ಇದನ್ನು ಗಮನಿಸಿ, ಈ ಬಗೆಗಿನ ವಸ್ತುಸಂಗತಿ ಏನೆಂದು ಅಡಿಟಿಪ್ಪಣಿಯಲ್ಲಿ ಹೇಳಬೇಕಾಗಿತ್ತು).

ಮೇಲೆ ಉಲ್ಲೇಖಿಸಿದ ಶಾಸನದಿಂದ ಈ ದೇವಾಲಯವು ನಿರ್ಮಾಣವಾದದ್ದು ಇದರ ಸ್ಥಾನಿಕನಾಗಿದ್ದ ಹರಿಯಣ್ಣನಿಂದ ಎಂಬುದು ಸ್ಪಷ್ಟವಾಗಿದೆ. ಹರಿಯಣ್ಣನಿಗಿಂತ ಮೊದಲು ಸಿದ್ಧನಾಥ ದೇವರ ಸ್ಥಾನಿಕನಾಗಿದ್ದವನು ಅವನ ತಂದೆ ಹಿರಿಯಸಿದ್ದಣ್ಣ. ಅಂದರೆ ಹಿರಿಯಸಿದ್ದಣ್ಣನ ಕಾಲದಲ್ಲಿ ಬಹುತೇಕ ಗುಹಾಲಯ ಮಾತ್ರವಾಗಿದ್ದ ಈ ದೈವಸ್ಥಾನಕ್ಕೆ ದೇವಾಲಯದ ರೂಪುಕೊಟ್ಟವನು ಹರಿಯಣ್ಣ. ಮುಂದೆ ಹರಿಯಣ್ಣನ ಪ್ರಾಯಶಃ ಅಕಾಲಿಕ ಮರಣದಿಂದ ಈ ದೇವರ ಸ್ಥಾನಿಕ ಸ್ಥಾನದಲ್ಲಿ ಮುಂದುವರಿದವನು ಅವನ ತಮ್ಮ ಸೋವಣ್ಣ. ಸೋವಣ್ಣನು ಸಹ ಈ ದೇವಾಲಯದ ವಿಸ್ತರಣೆಯ ಕಾರ್ಯವನ್ನು ಮಾಡಿದ್ದು ಸ್ಪಷ್ಟವಾಗಿದೆ. ಅಂದರೆ, ಈ ದೇವಾಲಯದ ಅಧಿಷ್ಠಾನದ (=ತಳಪಾಯದ ಅಥವಾ ತಳಪಾಯಕ್ಕೆ ಹೊಂದಿಕೊಂಡಂತಿರುವ) ಮೂರು ನೆಲೆಯ (=ಮೂರು ಅಂತಸ್ತಿನ) ಉಪ್ಪರಿಗೆ (=ಗೋಪುರ), ಕಲ್ಲ ನವಿಲುಯ್ಯಲು (=ನವಿಲಿನ ಚಿತ್ರವಿರುವ ಕಲ್ಲಿನ

ಉಯ್ಯಾಲೆ ಕಂಭ) ಮತ್ತು ದೇವಾಲಯದ ಮೇಲಣ ಶಿಖರ– ಇವನ್ನು ಮಾಡಿಸಿದವನು ಸೋವಣ್ಣ. ಅವನು ಮಾಡಿಸಿದ ಶಿಖರ ಹೇಗಿತ್ತೋ? ನಿರ್ದಿಷ್ಟವಾಗಿ ಎಲ್ಲಿತ್ತೋ? ಈಗ ಹೇಳುವುದು ಕಷ್ಟ. ಏಕೆಂದರೆ, ದೇವಾಲಯ ಇಡಿಯ ಬೆಟ್ಟವೇ ಆದ ಬಂಡೆಯನ್ನೇ ಛಾವಣಿಯಾಗಿ ಹೊಂದಿರುವುದರಿಂದ ಅದರ ಮೇಲೆಯೆ ಊರ್ಧ್ವಕ್ಕೆ ನೇರವಾಗಿ ಯಾವುದೇ ಶಿಖರ ಅಥವಾ ಕಳಸ ಕೂಡಿಸಲು ಸಾಧ್ಯ ಎನಿಸುವುದಿಲ್ಲ. ಆದರೆ ಈ ದೇವಸ್ಥಾನದ ಬದಿಯ ತುಪ್ಪದ ಕೊಣದ ಬೆಟ್ಟವನ್ನು ಏರಿದರೆ ಅದರ ನೆತ್ತಿಯಲ್ಲಿರುವ ಬತೇರಿಯ ಕೆಳಗೆ, ಸುಮಾರು ಆ ಬತೇರಿಯಿಂದ ಈಶಾನ್ಯಕ್ಕೆ, ದೇವಾಲಯಕ್ಕೆ ಛಾವಣಿಯಂತಿರುವ ಬೆಟ್ಟದ ಬಂಡೆಯಲ್ಲಿ ಒಂದೆಡೆ "ಸಿದ್ಧನಾಥ ದೇವಾರ ಸಿಖರ" ಎಂಬ ಶಾಸನ ಇರುವುದನ್ನು ನೋಡಿದರೆ ಸಂಪಿಗೆ ಸಿದ್ಧೇಶ್ವರ ದೇವಸ್ಥಾನದ ಛಾವಣಿ ಎನ್ನುವಂತಿರುವ ಈ ಬಂಡೆಯ ಮೇಲೆ ಇಲ್ಲೇ ಒಂದು ಬಗೆಯ ಶಿಖರ ಅಥವಾ ಕಲ್ಲಿನ (?) ಕಳಸ ಮಾಡಿ(ಸಿ)ದ್ದಿರಬಹುದೆ? ಎಂದು ಸಂದೇಹವಾಗುತ್ತದೆ. (ಈ ಶಿಖರದ ಶಾಸನವನ್ನು ಈಗ್ಗೆ ಕೆಲವು ವರ್ಷಗಳ ಹಿಂದೆ ಗುರುತಿಸಿದವರು ಚಿತ್ರದುರ್ಗದ ಸಂಶೋಧನ ತಂಡದವರು). ಈ ಬೆಟ್ಟದ ಶಿಖರಕ್ಕೆ ಹೋಗಲು ಬೆಟ್ಟದ ಬಂಡೆಯ ಮೇಲೆ ಕಾಲು ಜಾರದಂತೆ ಹತ್ತಿ ಇಳಿಯಲು– ಪಾವಟಿಗೆಗಳ ರೀತಿ ಬಳಸಲು– ೧೮–೧೯ನೆಯ ಶತಮಾನದಲ್ಲಿ ತಳವಾರ ಜನಾಂಗದ ಕೆಲವರು ಭಕ್ತರು ವೆಜ್ಜ ಮಾಡಿಸಿರುವುದು, ಬೆಟ್ಟದ ಬುಡದಲ್ಲಿ ಆ ವೆಜ್ಜಗಳು ಪ್ರಾರಂಭವಾಗುವ ಜಾಗದಲ್ಲಿ, (ದೀರ್ಘ ಗಾತ್ರದ ಒಬ್ಬ ಪುರುಷ ಮತ್ತು ಚಿಕ್ಕ ಗಾತ್ರದ ಒಬ್ಬ ಮಹಿಳೆ ಇವರ ಉಬ್ಬು ಚಿತ್ರಕೆತ್ತನೆ ಸಹಿತ), ಕೊರೆಸಿರುವ (ನಾನು ಓದಿರುವ) ಶಾಸನದಿಂದ ತಿಳಿದುಬರುತ್ತದೆ.

ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಈ ದೇವರನ್ನು 'ಚಂಪಕ ಸಿದ್ಧೇಶ್ವರ', 'ಸಂಪಿಗೆ ಸಿದ್ದಯ್ಯ' ಎಂದು ಮುಂತಾಗಿ ಕರೆಯಲಾಗುತ್ತಿತ್ತು. ಆ ಹೆಸರೇ ಈಗಲೂ ಉಳಿದುಕೊಂಡು ಬಂದಿದೆ. ಚಿತ್ರದುರ್ಗ ಪಾಳೆಯಗಾರರ ಆಳ್ವಿಕೆಯ ಆರಂಭಕಾಲಕ್ಕೆ ಈ ಸಿದ್ಧೇಶ್ವರ ದೇವಾಲಯದಲ್ಲಿ ಮತ್ತು ತಿಮ್ಮಣ್ಣನಾಯಕನ ಕೆರೆಯ ಬಳಿಯ ಬಾಳೆಕಾಯಿ ಸಿದ್ಧೇಶ್ವರನ ಗುಹಾಲಯದಲ್ಲಿ ರಸಸಿದ್ಧರೆಂಬ ಸಿದ್ಧಪುರುಷರು ವಾಸವಾಗಿರುತ್ತಿದ್ದರು ಎಂದು ಈ ಪಾಳೆಯಗಾರರ 'ವಂಶಾವಳಿ'ಯಿಂದ ತಿಳಿಯುತ್ತದೆ. ಅಷ್ಟೇ ಅಲ್ಲ, ತಿಮ್ಮಣ್ಣನಾಯಕನ ಉತ್ತರಾಧಿಕಾರಿ ಓಬಣ್ಣನಾಯಕನನ್ನು ಮೆದಕೇರಿನಾಯಕ ಎಂಬ ಹೆಸರಿಂದ ಕರೆದವರು ಈ ಸಿದ್ಧರೇ. ಅಲ್ಲದೆ, ಅವರು ಅವನಿಗೆ ದರ್ಶನ ಕೊಟ್ಟದ್ದು ಈ ಸಿದ್ಧೇಶ್ವರ ದೇವಾಲಯದಲ್ಲಿ ಎಂದೂ 'ಆ ದೇವರನ್ನು ನಾವು ಎಂದೇ ತಿಳಿದುಕೊಂಡು ಇದರ ಸೇವೆ ಮಾಡು' ಎಂದು ಅವರು ಅವನಿಗೆ ಹೇಳಿದರೆಂದೂ 'ವಂಶಾವಳಿ'ಯಲ್ಲಿದೆ. ಚಿತ್ರದುರ್ಗದ ಪಾಳೆಯಗಾರರಲ್ಲಿ ಕೆಲವರ ಪಟ್ಟಾಭಿಷೇಕ ನಡೆದದ್ದು ಈ ದೇವಸ್ಥಾನದ ಒಳಾವರಣದಲ್ಲಿ. ಈ ದೇವಸ್ಥಾನದ ಒಳಾವರಣ ಮತ್ತು ಹೊರಾವರಣದ ಲೋವೆಯ ಮೇಲಿರುವ ತೆನೆಗೂಡುಗಳು, ಅದರ ಒಳಗಿನ ಗಾರೆಶಿಲ್ಪಗಳು, ಪ್ರವೇಶದ್ವಾರದ ಮೇಲೆ ಒಳಪಾರ್ಶ್ವದಲ್ಲಿ ಈಗಲೂ ಅವಶೇಷ ಮಾತ್ರವಾಗಿ ಉಳಿದಿರುವ ಗಾರೆ ಶಿಲ್ಪಗಳು, ಈ ಎಲ್ಲವೂ ಚಿತ್ರದುರ್ಗ ಪಾಳೆಯಗಾರರ ಕಾಲದ ಕಲಾರಚನೆಗಳು. ಈ ದೇವಸ್ಥಾನದಲ್ಲಿ ಚಿತ್ರದುರ್ಗದ ಪಾಳೆಯಗಾರರ ಆರಂಭಕಾಲದಲ್ಲಿ ರಸಸಿದ್ಧರು ಇರುತ್ತಿದ್ದರೆಂದು, ಅವರ ಮೇಲಿನ ಹಾಡುಗಳನ್ನು ಹಾಡುತ್ತಾ ಕೋಲುಹೊಯ್ಯುತ್ತಾ, ಕುಣಿಯುತ್ತಿದ್ದರೆಂದು ಪಾಳೆಯಗಾರರ ವಂಶಾವಳಿಯಲ್ಲಿ ಹೇಳಿದೆ.

ಗೋಪಾಲಸ್ವಾಮಿ ಹೊಂಡಕ್ಕೆ ಪೂರ್ವದಲ್ಲಿ ಸಿದ್ಧೇಶ್ವರ ದೇವರ ಹೆಸರಿನಿಂದ 'ಸಿದ್ಧಯ್ಯನ ಹೊಂಡ' ಎಂದೂ ಗೋಪಾಲಸ್ವಾಮಿ ದೇವಸ್ಥಾನ ಆದ ಮೇಲೆ ಎರಡೂ ದೇವರ ಹೆಸರಿನಿಂದ 'ಸಿದ್ಧಯ್ಯ ರಂಗಯ್ಯನ ಹೊಂಡ' ಎಂದೂ ಕರೆಯಲಾಗುತ್ತಿತ್ತು. ಮುಂದೆ ಆ ಹೆಸರೂ ಹೋಗಿ 'ಗೋಪಾಲಸ್ವಾಮಿ ಹೊಂಡ' ಎಂಬ ಹೆಸರು ಮಾತ್ರ ನಿಂತಿದೆ.

ಈ ದೇವರನ್ನು ಕುರಿತು ಬಹುಹಿಂದೆ ಪ್ರತಿ ವೃತ್ತ 'ಚಂಪಕ ಸಿದ್ಧೇಶ್ವರ' ಎಂದು ಕೊನೆಗೊಳ್ಳುವ 'ಮೆದಕೇರಿನಾಯಕ ಹೇಳಿದ ದಂಡಕ' ಎಂಬ ಕೃತಿಯೊಂದು– ಬಂದಿದ್ದಂತೆ– ಅಪೂರ್ಣವಾಗಿ ದೊರೆತಿರುವ, ಡಾ. ಬಿ.ಆರ್ ಹಿರೇಮಠ ಅವರು ಸಂಪಾದಿಸಿರುವ, ಅದರ ಹಸ್ತಪ್ರತಿಯೊಂದರಿಂದ ತಿಳಿಯುತ್ತದೆ.

ಚಿತ್ರದುರ್ಗದಲ್ಲಿ ಸಿಗುವ ೧೦೭೩ ರಿಂದ ಹಿಡಿದು ೧೨–೧೩ ಶತಮಾನದ ಶಿಲಾಶಾಸನಗಳಲ್ಲಿ ಆವರೆಗೆ ಚಿತ್ರದುರ್ಗದ ಹಿಡಿಂಬೇಶ್ವರ, ಚೋಳೇಶ್ವರ ಮೊದಲಾದ ದೇವರುಗಳ ಉಲ್ಲೇಖವಿದ್ದಂತೆ, ಈ ದೇವರ ಉಲ್ಲೇಖ ಕಾಣಸಿಗುವುದಿಲ್ಲ. ಕ್ರಿ.ಶ. ೧೩೩೮ರ ಹಿರಿಯ ಬಲ್ಲಪ್ಪ ದಂಣ್ನಾಯಕನ ಶಾಸನದಲ್ಲೇ 'ಸಿದ್ಧೈ ದೇವರು' ಎಂಬ ಉಲ್ಲೇಖ ಕಾಣಸಿಗುತ್ತದೆ. ಇದೇ ಸಿದ್ಧೇಶ್ವರ ದೇವರ ಬಹುಶಃ ಮೊದಲ ಉಲ್ಲೇಖ. ತರುವಾಯ ಕ್ರಿ.ಶ. ೧೩೫೫, ೧೩೫೬ರ ಮಲ್ಲಿನಾಥ ಒಡೆಯನ ಎರಡು ಶಾಸನಗಳಲ್ಲಿ ಈ ದೇವರನ್ನು ಸಿದ್ಧನಾಥ ದೇವರು ಎಂದು ಕರೆಯಲಾಗಿದೆ. ೧೩೩೮ ಮತ್ತು ೧೩೫೫ರ ನಡುವಿನ ಕಾಲದ ಸೋಮಣ್ಣನ ಶಾಸನದಲ್ಲಿ ಕೂಡ ಈ ದೇವರ ಉಲ್ಲೇಖ ಬರುತ್ತದೆ.

ಈ ದೇವಾಲಯದೊಳಗಿರುವ ದೊಡ್ಡ ಶಾಸನದ ನನ್ನ ಪುನರ್ಪರಿಶೀಲನೆಯಿಂದ ಹೊಯ್ಸಳರ ಕಾಲದಲ್ಲಿ, ಕ್ರಿ.ಶ. ೧೩೨೮ರಲ್ಲಿ, ಬೈಚಯ ದಣ್ಣಾಯಕನ ಹೆಸರಲ್ಲಿ ಇಲ್ಲಿ ಪ್ರತಿಷ್ಠಾಪನೆ ಆದ ಬೇಚನಾಥ/ಬೇಚೇಶ್ವರ ಅಥವಾ ಬೈಚನಾಥ/ಬೈಚೇಶ್ವರ ಲಿಂಗವೇ ಮುಂದೆ ಸಿದ್ಧನಾಥ/ಸಿದ್ಧೇಶ್ವರ ಎಂದು ಕರೆಯಲ್ಪಟ್ಟಂತೆ ಕಾಣುತ್ತದೆ. ಹೀಗೆ ಕರೆಯಲು ಅದು ಪ್ರತಿಷ್ಠಾಪನೆಯಾದ ಪ್ರಾರಂಭದ ಕಾಲದಲ್ಲಿ ಈ ದೇವಾಲಯದ ಎದುರಿಗೆ ಇದ್ದ ಮಠಸ್ಥ ಗುರು ಪ್ರಸಿದ್ಧದೇವರು ಮತ್ತು ಈ ದೇವಾಲಯದ ಸ್ಥಾನಿಕನಾಗಿದ್ದ ಹಿರಿಯಸಿದ್ಧಂಣ ಇವರ ಪ್ರಭಾವ ಕಾರಣ ಇದ್ದಿರಬಹುದೆನಿಸುತ್ತದೆ. ಇದೇ ಪರಿಸರದ ಗ್ರಾನೈಟ್ ಗುಂಡೊಂದರಲ್ಲಿ ಈಗ್ಗೆ ಕೆಲವು ವರ್ಷಗಳ ಹಿಂದೆ, ಈ ಪ್ರಸಿದ್ಧದೇವರನ್ನು ಕುರಿತ ಚಿಕ್ಕ ಪಾಠವಿರುವ ಶಾಸನವೊಂದು ಚಿತ್ರದುರ್ಗ ಸಂಶೋಧನ ತಂಡದವರಿಂದ ಪತ್ತೆಯಾಗಿತ್ತು.

ಆಮೇಲೆ ಈ ದೇವಸ್ಥಾನವನ್ನು ಕ್ರಿ.ಶ. ೧೩೨೮ ಮತ್ತು ೧೩೩೮ರ ನಡುವಿನ ಕಾಲದಲ್ಲಿ ನಿರ್ಮಿಸಿದವನು ಈ ದೇವರ ಸ್ಥಾನಿಕನಾಗಿದ್ದ ಹರಿಯಣ್ಣ. ಇವನು ಹಿಂದೆ ಹೇಳಿದ ಹಿರಿಯ ಸಿದ್ಧಂಣಗಳ ಹಿರಿಯ ಮಗ. ಅವನ ಶಿಲ್ಪ ದೇವಸ್ಥಾನದ ನವರಂಗದ ವಾಯವ್ಯ ದಿಕ್ಕಿನ ಮೂಲೆಯ ಗೋಡೆಯಲ್ಲಿದೆ. ಈ ಸಂಗತಿ ಸ್ಪಷ್ಟವಾದದ್ದು ಆ ಶಿಲ್ಪದ ಮೇಲುಭಾಗದಲ್ಲಿರುವ ಶಾಸನದ ನನ್ನ ಪುನರ್ಪರಿಶೀಲನೆಯಿಂದ. ಈ ದೇವಸ್ಥಾನವನ್ನು ಕಟ್ಟಿದ ಕಾಲ ಸುಮಾರು ಕ್ರಿ.ಶ. ೧೩೩೫ ಎಂದು ಇಟ್ಟುಕೊಳ್ಳಬಹುದು.

ಈ ಎಲ್ಲಾ ಉಲ್ಲೇಖಗಳನ್ನು ನೋಡಿದಾಗ ಕ್ರಿ.ಶ. ೧೩೩೮ರಷ್ಟು ಹೊತ್ತಿಗೆ ಈಗಿರುವ ಬೃಹತ್ ಬಂಡೆಯ ಅಡಿಯಲ್ಲಿ ಈ ದೇವರು ಅಸ್ತಿತ್ವಕ್ಕೆ ಬಂದಿತ್ತು ಮತ್ತು ಅದರ ತರುವಾಯ ಕ್ರಿ.ಶ. ೧೩೫೫ರ ಒಳಗೆ ಅದರ ಪ್ರಾಯಶಃ ಚಿಕ್ಕ ಪ್ರಮಾಣದ ಒಂದು ದೇವಾಲಯ ನಿರ್ಮಾಣವಾಗಿತ್ತು ಎಂದು ವ್ಯಕ್ತವಾಗುತ್ತದೆ. ಈ ದೇವರ ಸ್ಥಾನಿಕನಾಗಿದ್ದ ಹಿರಿಯಸಿದ್ಧಣ್ಣನ ಹಿರಿಯ ಮಗ ಹರಿಯಣ್ಣ ಈ ದೇವಾಲಯವನ್ನು ಕಟ್ಟಿಸಿದ ಮೊದಲಿಗ ಎನ್ನುವುದು ಮತ್ತು ಅಣ್ಣ ಕಟ್ಟಿಸಿದ್ದ ದೇವಾಲಯಕ್ಕೆ ವಿಸ್ತರಣೆ ಕೈಗೊಂಡು ಈ ದೇವಾಲಯದ ಮುಂದೆ ಮೂರು ನೆಲೆಯ ಉಪ್ಪರಿಗೆ, ಉಯ್ಯಾಲೆ ಕಂಬ, ಮೇಲಿನ ಶಿಖರ ಇಷ್ಟನ್ನು ಮಾಡಿಸಿದವನು ಅವನ ತಮ್ಮ ಸೋವಣ್ಣನೆಂದು ತಿಳಿದುಬರುತ್ತದೆ. ಮತ್ತು ೧೩೩೮ರ ಶಾಸನವನ್ನು ನೋಡಿದಾಗ ಅದರಲ್ಲಿ 'ಸಿದ್ಧೆ' ದೇವರು ಎಂದು ಈ ದೇವರ ಹೆಸರೂ, ಇದರ ಸ್ಥಾನಿಕನಾಗಿದ್ದವನು ಹರಿಯಣ್ಣ ಎಂದೂ ಮತ್ತು ಹುಲ್ಲೂರಿನ ಗುರು ಮಲ್ಲಜೀಯ ಎಂಬುವನೂ ಸಹ ಇದರ ಸ್ಥಾನಿಕನಾಗಿದ್ದವನೇ ಇರಬೇಕು ಎಂದೂ ಅನ್ನಿಸುತ್ತದೆ.

ಮುಂದೆ ಮಲ್ಲಿನಾಥ ಒಡೆಯನು, ಈ ದೇವರಿಗಾಗಿ ಒಂದು ದೊಡ್ಡ ಉಪ್ಪರಿಗೆ (ಗಾಳಿ ಮಂಟಪ), ಒಂದು ಉಯ್ಯಾಲೆ ಕಂಬ ಮತ್ತು ದೇವರಿಗೆ ಮೇಲಣ ಶಿಖರ ಇಷ್ಟನ್ನು ಮಾಡಿದಿನು. ಮುಂದೆ ಚಿತ್ರದುರ್ಗದ ಪಾಳೆಯಗಾರ ಬರಮಣ್ಣನಾಯಕನು ಈ ದೇವಾಲಯದ ಪಲ್ಲಕ್ಕಿ ಚಾವಡಿಯನ್ನು ಕಟ್ಟಿಸಿದನು. ಅಂದರೆ ಸೋವಣ್ಣ ಕಟ್ಟಿಸಿದ ಮೂರು ನೆಲೆಯ ಉಪ್ಪರಿಗೆ ದೇವಾಲಯಕ್ಕೆ ಪ್ರವೇಶದ್ವಾರವಾಗಿದ್ದುದರಿಂದ, ಅದರ ಎಡ-ಬಲಕ್ಕೆ ಗೋಡೆಗಳು ಬಂದು ಕೂಡಿಕೊಂಡದ್ದರಿಂದ ಅದು ಒಂದು ಗಾಳಿ ಮಂಟಪ ಎಂಬುದು ಕಲ್ಪನೆಗೆ ಬರದಂತಾಯಿತು.

ಹಾಗೇ, ಸ್ಥಾನಿಕನಾದ ಸೋವಣ್ಣ ಕಟ್ಟಿಸಿದನೆಂದು ಹೇಳುವ ಉಪ್ಪರಿಗೆ ಇತ್ಯಾದಿಗಳು ಮಲ್ಲಿನಾಥನಿಂದ ಧನಸಹಾಯ ಒದಗಿ ಕಟ್ಟಲ್ಪಟ್ಟವುಗಳು ಎಂದು ಡಾ. ಎಂ.ಎಚ್. ಕೃಷ್ಣ ಅವರು ಬರೆದಿದ್ದಾರೆ. ಈ ಬಗ್ಗೆ ಒಂದು ವಿಚಾರವನ್ನು ಗಮನಿಸಬೇಕು. ಅದೆಂದರೆ, ಸೋವಣ್ಣನು ಅವನ್ನೆಲ್ಲ ಕಟ್ಟಲು ಮಲ್ಲಿನಾಥ ಒಡೆಯನಂಥ ಪ್ರಾಂತಪಾಲಕನಿಂದ ಧನಸಹಾಯ ಪಡೆದಿದ್ದರೆ, ಅದನ್ನು ತನ್ನ ಶಾಸನದಲ್ಲಿ ಹೇಳದಿರಲು ಕಾರಣವೇನೂ ಇಲ್ಲ. ಏಕೆಂದರೆ ಅಂಥ ಪ್ರಾಂತಪಾಲಕನಿಂದ ಸಹಾಯ ನಿಶ್ಚಯವಾಗಿ ಒದಗಿದ್ದಲ್ಲಿ, ಅವನ ಸಹಾಯವನ್ನು ಗಣನೆಗೆ ತೆಗೆದುಕೊಳ್ಳದೆ, ತಾನೇ ಕಟ್ಟಿಸಿದೆ ಎಂಬಂತೆ ಸ್ಥಾನಿಕನಾದವನು ಹೇಳಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಸೋವಣ್ಣ ಕಟ್ಟಿಸಿದ ರಚನೆಗಳು ಮಲ್ಲಿನಾಥನ ನೆರವಿಲ್ಲದೆ ಅವನೇ ಕಟ್ಟಿಸಿದವುಗಳೆಂದೇ ತೆಗೆದುಕೊಳ್ಳಬೇಕಾಗುತ್ತದೆ.

ಹಿಂದೆ ಹೊಯ್ಸಳರ ಕಾಲದಲ್ಲಿ ಈ ದೇವರಿಗೆ ಚಿಕ್ಕಪುರ ಮತ್ತು ಮುಸುವಡಿಯಪುರ ಎಂಬ ಎರಡು ಗ್ರಾಮಗಳನ್ನು ನೀಡಲಾಗಿದ್ದಂತೆ ಕಾಣುತ್ತದೆ. ಊರು ಕಾಲಕ್ರಮದಲ್ಲಿ, ಆ ಎರಡು ಗ್ರಾಮಗಳ ಉತ್ಪನ್ನ ದೇವರಿಗೆ ಸಲ್ಲದಂತಾಗಿದ್ದಾಗ, ವಿಜಯನಗರದ ದೊರೆ ೧ನೇ ಬುಕ್ಕರಾಯನ ಕಾಲದಲ್ಲಿ ಚಿತ್ರದುರ್ಗದ ಪ್ರಾಂತಪಾಲಕನಾಗಿದ್ದ ಮಲ್ಲಿನಾಥ ಒಡೆಯನು ಆ ಎರಡೂ ಗ್ರಾಮಗಳ ಉತ್ಪನ್ನ ದೇವರಿಗೆ ಮತ್ತೆ ಸಲ್ಲುವಂತೆ ಮಾಡಿ, ಅವುಗಳಿಗೆ ಲಿಂಗಮುದ್ರೆ ಹಾಕಿಸಿ ಪೂರ್ವದ ದಾನವನ್ನು ಸ್ಥಿರೀಕರಿಸಿದನೆಂದು ಈ ದೇವಸ್ಥಾನದ (ನವರಂಗದ) ಪ್ರವೇಶದ್ವಾರದ ಮುಂದೆ ಜಗಲಿಯ ಮೇಲೆ ಇರಿಸಿರುವ ಕ್ರಿ.ಶ. ೧೩೫೫ ಮತ್ತು ೧೩೫೬ರ ಎರಡು ಶಾಸನಗಳು ಹೇಳುತ್ತವೆ. ಚಿಕ್ಕಪುರ ಎಂಬ ಹೆಸರಿನ ಗ್ರಾಮವೇನೋ ಈಗಲೂ

ಇದೆ. ಆದರೆ ಇನ್ನೊಂದು ದಾನಗ್ರಾಮಕ್ಕೆ ಮುಸುವಡಿಯಪುರ ಎಂಬ ಹೆಸರಿಲ್ಲ; ಅದರ ಹೆಸರಿರುವುದು ಮುಸುಂಡಿಹಾಳು ಎಂದು. ಮೇಲೆ ಹೇಳಿದ ಶಾಸನದಲ್ಲಿ ಆ ಹೆಸರನ್ನು ಶಿಷ್ಟೀಕರಿಸಿ ಮುಸುವಡಿಯಪುರ ಎಂದು ಕರೆಯಲಾಗಿದೆ. ಇದು ಸಂಸ್ಕೃತೀಕರಣ ಅಲ್ಲ, ಹಾಗೆ ತೋರುವ ಶಿಷ್ಟೀಕರಣ ಮಾತ್ರ. ನನ್ನ ಕ್ಷೇತ್ರಕಾರ್ಯದಲ್ಲಿ ಮುಸುಂಡಿಹಾಳು ಗ್ರಾಮದಲ್ಲಿ ದೊರೆತ ಅದೇ ಮಲ್ಲಿನಾಥ ಒಡೆಯನ ಚಿಕ್ಕ ಶಾಸನ ಈ ಅಂಶವನ್ನು ದೃಢೀಕರಿಸುತ್ತದೆ. ಅದು ಈ ದೇವಾಲಯದಲ್ಲಿ ಇರುವಷ್ಟು ದೊಡ್ಡ ಪಾಠದ ಶಾಸನವಲ್ಲ. ಹೀಗೆಯೇ ಅವನು ಈ ದೇವಾಲಯದಲ್ಲಿ ಚಿಕ್ಕಪುರದ ಬಗ್ಗೆ ಶಾಸನ ಹಾಕಿಸಿದ್ದಂತೆ ಚಿಕ್ಕಪುರ ಗ್ರಾಮದಲ್ಲಿ ಕೂಡಾ ಒಂದು ಚಿಕ್ಕ ಶಾಸನ ಹಾಕಿಸಿದ್ದಾನೆ. ಆ ಶಾಸನವನ್ನು ಬಹುಹಿಂದೆಯೇ ಬಿ.ಎಲ್. ರೈಸ್ ಪ್ರಕಟಿಸಿದ್ದಾರೆ. ಅಂದರೆ ಈ ಶಾಸನ ಕೂಡಾ ದೇವಾಲಯದಲ್ಲಿರುವಷ್ಟು ದೊಡ್ಡ ಪಾಠದ ಶಾಸನವಲ್ಲ.

ಎಂ.ಎಸ್. ಪುಟ್ಟಣ್ಣನವರು ತಮ್ಮ 'ಚಿತ್ರದುರ್ಗದ ಪಾಳಯಗಾರರು' ಪುಸ್ತಕದಲ್ಲಿ ಈ ದೇವರಿಗೆ ನೀಡಲಾದ ಗ್ರಾಮಗಳ ಹೆಸರುಗಳನ್ನು ಹೇಳುವಾಗ ಒಂದನ್ನು ಮುಸುಂಡಿಹಾಳು ಎಂದು ಹೆಸರಿಸಿದ್ದಾರೆ. ಆದರೆ, ಆಕಾಲಕ್ಕೆ ಆ ಶಾಸನ ಇರುವುದು ಇನ್ನೂ ತಿಳಿದಿರಲಿಲ್ಲ. ಅವರು ಹಾಗೆ ಬರೆದಿರುವುದು ಹೆಸರಿನ ಹೋಲಿಕೆಯ ಊಹೆಯಿಂದ ಎನಿಸುತ್ತದೆ. ಅವರದು ಊಹೆಯೆ ಆದರೂ ಅದು ನಿಜವೇ ಆಗಿರುವುದು ಒಂದು ಕೌತುಕದ ಸಂಗತಿ. ಹುಲ್ಲೂರು ಶ್ರೀನಿವಾಸ ಜೋಯಿಸರು ಸಹ ಮಲ್ಲಿನಾಥ ಒಡೆಯ ಈ ದೇವರಿಗೆ ದತ್ತಿಯಾಗಿ ನೀಡಿದ್ದು ಮುಸುಂಡಿಹಾಳು ಎಂಬ ಗ್ರಾಮ ಎಂದು ಬರೆದಿದ್ದಾರೆ. ಪುಟ್ಟಣ್ಣನವರ ಸೂಚನೆಯನ್ನು ಅನುಸರಿಸಿ ಜೋಯಿಸರು ಹಾಗೆ ಹೇಳಿರಬೇಕು. ಮಲ್ಲಿನಾಥ ಒಡೆಯನು ಈ ದೇವಾಲಯದಲ್ಲಿ ಮುಸುವಡಿಯಪುರದ ಬಗ್ಗೆ ಶಾಸನ ಹಾಕಿಸಿದ್ದಂತೆ ಮುಸುಂಡಿಹಾಳು ಗ್ರಾಮದಲ್ಲೂ ಶಾಸನ ಹಾಕಿಸಿದ್ದನೆಂಬ ಸಂಗತಿ ಆ ಊರಲ್ಲಿ ನನಗೆ ದೊರೆತ ಆ ಶಾಸನದಿಂದ ದೃಢಗೊಂಡಿದೆ.

ಮಲ್ಲಿನಾಥ ಒಡೆಯ ಮಾಡಿದ ವ್ಯವಸ್ಥೆ ಕಾಲಾಂತರದಲ್ಲಿ ಮತ್ತೆ ವ್ಯತ್ಯಯಗೊಂಡಿರಬೇಕು. ಅದಕ್ಕೇ ಬರಮಣ್ಣನಾಯಕನ ಕಾಲದಲ್ಲಿ (೧೬೮೯– ೧೭೨೧) ಒಂದು ಪ್ರಮುಖ ಅಧಿಕಾರದಲ್ಲಿದ್ದ ಮಲ್ಲರಾಯ ಎಂಬುವನು ಈ ದೇವಸ್ಥಾನ, ಇದರ ಉಪ್ಪರಿಗೆ, ಇದರ ಉಯ್ಯಾಲೆಕಂಬ, ದೀಪಮಾಲೆ ಕಂಬ– ಇವನ್ನು ಮಾಡಿಸಿದ ಎಂದು 'ಚಿತ್ರದುರ್ಗ ಪಾಳೆಯಗಾರರ ವಂಶಾವಳಿ' ಹೇಳುತ್ತದೆ. ಅವನು ಮಾಡಿಸಿದ್ದರಲ್ಲಿ ಹೆಚ್ಚಿನ ಪಾಲು ಜೀರ್ಣೋದ್ಧಾರ ಮತ್ತು ನಯಗಾರೆ ಹಾಗೂ ಸುಣ್ಣಬಣ್ಣಗಳ ಕಾರಣೆ ಇರಬೇಕು. ಇಲ್ಲಿ ಹೇಳಿರುವ ಉಪ್ಪರಿಗೆಗಳು ಆ ಕಾಲಕ್ಕೆ ಬಹುಹಿಂದೆಯೇ ಆಗಿದ್ದ ಸೋವಣ್ಣನ ಗಾಳಿಮಂಟಪ ಮತ್ತು ಮಲ್ಲಿನಾಥ ಒಡೆಯನ ಗಾಳಿಮಂಟಪ, ಇವು. ಈ ಮಲ್ಲರಾಯನ ಮಕ್ಕಳು (ಅವರ ಹೆಸರನ್ನು ವಂಶಾವಳಿಯಲ್ಲಿ ಹೇಳಿಲ್ಲ) ಸಹ ಈ ದೇವಾಲಯಕ್ಕೆ ಸೇವೆ ಸಲ್ಲಿಸಿದ್ದಾರೆ. ಅವರು ಈ ದೇವಸ್ಥಾನದೊಳಗೆ ದೊಡ್ಡಮಲ್ಲಿದೇವತೆ ಎನ್ನುವ ದೇವಸ್ಥಾನವೊಂದನ್ನು ಮಾಡಿಸಿದರೆಂದು ಅದೇ 'ವಂಶಾವಳಿ'ಯಲ್ಲಿ ಹೇಳಿದೆ. ಆ ದೇವಸ್ಥಾನ ನಿರ್ದಿಷ್ಟವಾಗಿ ಯಾವುದು ಎಂದು ಸ್ಪಷ್ಟವಾಗುವುದಿಲ್ಲ. ಒಳಾವರಣದಲ್ಲಿರುವ ಎರಡು ಲಿಂಗದ ಗುಡಿಗಳಲ್ಲಿ ಒಂದು ಆ ದೇವಾಲಯ ಇದ್ದಿರಬಹುದು ಮತ್ತು ಅಲ್ಲಿಯ ವಾಸ್ತು ಮತ್ತು ಲಿಂಗಗಳ ಶಿಲ್ಪಶೈಲಿ ಇವನ್ನು ನೋಡಿದರೆ, ಅವು ಪಾಳೆಯಗಾರರ ಕಾಲದಷ್ಟು ನೂತನ ರಚನೆ ಎಂದು ಅನ್ನಿಸುವುದಿಲ್ಲ. ಹೀಗಾಗಿ ಅವರು ಮಾಡಿಸಿದ್ದು ಒಂದು ನೂತನ ನಿರ್ಮಾಣ ಇರದೆ ಜೀರ್ಣೋದ್ಧಾರ ಆಗಿರಲೂ ಬಹುದು. ಇದಲ್ಲದೆ ಆಗ ಈ ದೇವರಿಗೆ ಅಮೃತಪಡಿ, ನಂದಾದೀವಿಗೆ, ಪಾತ್ರ, ವಾಲಗ, ಹುವ್ವಿನತೋಟವನ್ನು ಸಹ ಕೊಡಲಾಯಿತು. ಇದೂ ಅಲ್ಲದೆ, ಮೇಲೆ ಹೇಳಿದ ಎರಡು ಗ್ರಾಮಗಳಿಗೆ ಲಿಂಗಮುದ್ರೆ ಹಾಕಿಸಿ, ಅವನ್ನು ಈ ದೇವರಿಗೆ ಕೊಡಲಾಯಿತೆಂದು ಇಲ್ಲಿ ಎರಡು ಶಾಸನಗಳನ್ನು ಬರೆಸಲಾಗಿದೆ ಎಂದೂ ವಂಶಾವಳಿ ಹೇಳುತ್ತದೆ.

ಅದಾದ ಮೇಲೆ ಸಿದ್ದಾಪುರದ ಗೌಡನು ಇದೇ ದೇವಸ್ಥಾನದಲ್ಲಿ ಬಸವಣ್ಣನ ಗುಡಿಯೊಂದನ್ನು ಮಾಡಿಸಿದಂತೆ ವಂಶಾವಳಿಯಲ್ಲಿದೆ. ಇದು ಈ ದೇವಾಲಯದ ಒಳಾವರಣದಲ್ಲಿ ಪಶ್ಚಿಮ ಭಾಗದಲ್ಲಿರುವ ನಂದಿಯ ಶಿಲ್ಪ ಇರುವ ಪುಟ್ಟಗುಡಿ ಇರಬೇಕು.

ಅದೇ ಬರಮಣ್ಣನಾಯಕ ಸಿದ್ಧೇಶ್ವರನಗುಡಿಯಲ್ಲಿ ಪಲ್ಲಕ್ಕಿ ಚಾವಡಿಯನ್ನು ಮಾಡಿಸಿದಂತೆ ವಂಶಾವಳಿ ಹೇಳುತ್ತದೆ. ಅಂದರೆ ಈ ದೇವರ ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಹೊತ್ತು ಊರಲ್ಲಿ ಸುತ್ತಾಡಿ ಬಂದ ಮೇಲೆ ಆ ಪಲ್ಲಕ್ಕಿಯನ್ನು ಇರಿಸಲಿಕ್ಕೆಂದೇ ಒಂದು ಚಾವಡಿಯನ್ನು ಬರಮಣ್ಣನು ಮಾಡಿಸಿದನೆಂದು ಇದರಿಂದ ತಿಳಿಯಬಹುದು. ದೇವಾಲಯದ ಒಳಾವರಣದ ಪೂರ್ವ ಮತ್ತು ಈಶಾನ್ಯ ಭಾಗದಲ್ಲಿರುವ ಕೆಲವು ಅಂಕಣಗಳ ಚಾವಡಿಯೇ ಅದು ಎನ್ನುವಲ್ಲಿ ಸಂದೇಹವಿಲ್ಲ.

ಸೋವಣ್ಣನ ಶಾಸನದಲ್ಲಿ ಹೇಳಿರುವ ಉಪ್ಪರಿಗೆ, ಕಲ್ಲ ನವಿಲುಯ್ಯಲು, ಮೇಲಣ ಶಿಖರ ಎಂಬವು ಮಲ್ಲಿನಾಥ ಒಡೆಯನ ಶಾಸನದಲ್ಲೂ ಬರುತ್ತದೆ. ಈ ಎರಡೂ ಶಾಸನಗಳಲ್ಲಿ ಹೇಳಿರುವ ವಸ್ತುಗಳು ಅಭಿನ್ನ ಎನಿಸುವುದು ಸಹಜ. ಹಾಗೆನ್ನಿಸಿಯೇ ಡಾ. ಕೃಷ್ಣ ಅವರು, ಈಗಾಗಲೇ ಮೇಲೆ ಪ್ರಸ್ತಾಪಿಸಿದಂತೆ, ಹಾಗೆ ಬರೆಯಲು ಕಾರಣವಾಗಿರಬೇಕು. ಈ ತಪ್ಪು ಅರ್ಥ ಮಾಡಿಕೊಳ್ಳಲು ಈ ಎರಡೂ ಶಾಸನಗಳ ಅಭಿಪ್ರಾಯವನ್ನು ವಿಮರ್ಶಿಸಲು ಹೋಗದೆ ಇದ್ದುದೇ ಕಾರಣ ಎಂದು ಹೇಳಬೇಕಾಗುತ್ತದೆ. ಆದರೆ ಸೋವಣ್ಣ ಕಟ್ಟಿಸಿದ ರಚನೆಗಳೂ ಮಲ್ಲಿನಾಥ ಕಟ್ಟಿಸಿದ ರಚನೆಗಳೂ ಒಂದೇ ಹೆಸರಿನ ರಚನೆಗಳಾದರೂ ಅವು ಪರಸ್ಪರ ಬೇರೆ ಬೇರೆ ಎಂಬುದನ್ನು ಇಲ್ಲಿ ಗಮನಿಸಬೇಕು. ಅಂದರೆ ಸೋವಣ್ಣ ಆ ರಚನೆಗಳನ್ನು ಮುಂಚೆ ಮಾಡಿಸಿದ್ದು, ಅದರಿಂದ ಸ್ಫೂರ್ತಿಗೊಂಡು ಅಥವಾ ಪ್ರೇರಣೆಗೊಂಡು ಮಲ್ಲಿನಾಥ ಒಡೆಯನೂ ಅಂಥವೇ ರಚನೆಗಳನ್ನು ಮಾಡಿಸಿರಬೇಕು. ಈ ಇಬ್ಬರೂ ಕಟ್ಟಿಸಿದ ರಚನೆಗಳಲ್ಲಿ ಕೊನೆಯದಾದ ಮೇಲಣ ಶಿಖರವೊಂದನ್ನು ಬಿಟ್ಟು, ಉಳಿದೆಲ್ಲವೂ ಉಳಿದುಕೊಂಡು ಬಂದಿವೆ. ಸೋವಣ್ಣ ಕಟ್ಟಿಸಿದ್ದ ಮೂರು ನೆಲೆಯ ಉಪ್ಪರಿಗೆ ಸಂಪಿಗೆ ಸಿದ್ಧೇಶ್ವರ ದೇವಸ್ಥಾನದ ಒಳಾವರಣಕ್ಕೆ ಪ್ರವೇಶ ಕೊಡುವ ದ್ವಾರದ ಗೋಪುರ ಎಂಬಲ್ಲಿ ಅನುಮಾನವಿಲ್ಲ. ಹಾಗೇ ಮಲ್ಲಿನಾಥ ಒಡೆಯ ಕಟ್ಟಿಸಿದ್ದು ಅದರ ಎದುರಿಗೆ ಹಿಡಿಂಬೇಶ್ವರದ ಗಾಳಿಮಂಟಪದ ಎದುರಿಗೆ ದಕ್ಷಿಣಕ್ಕಿರುವ ದೊಡ್ಡ ಪ್ರಮಾಣದ ಗೋಪುರವೆಂಬುದರಲ್ಲಿ ಅನುಮಾನವಿಲ್ಲ. ಅದನ್ನು ಗಾಳಿಮಂಟಪ ಎಂದು ಕರೆಯುವುದು ರೂಢಿಯಲ್ಲಿ ಬಂದಿದೆ. ಆದರೆ ಸೋವಣ್ಣನು ನಿರ್ಮಿಸಿದ ಗೋಪುರವನ್ನು ಹಾಗೆ ಕರೆಯುವುದು ರೂಢಿಯಲ್ಲಿ ಬರಲಿಲ್ಲ. ಏಕೆಂದರೆ ಆ ಗೋಪುರ ಒಂದು ಗಾಳಿಮಂಟಪ ಎಂಬುದು ಸುಲಭವಾಗಿ ಗೋಚರಿಸದಿರುವುದರಿಂದ ಅದು ಕಲ್ಪನೆಗೇ ಬರದಂತಾಯಿತು. ಏಕೆಂದರೆ ಆ ಗೋಪುರಕ್ಕೆ ಪೂರ್ವ ಪಶ್ಚಿಮಗಳಿಂದ ಗೋಡೆಗಳು ಬಂದು ಕೂಡಿಕೊಂಡಿರುವುದರಿಂದ ಆ ಪ್ರವೇಶದ್ವಾರಗೋಪುರ ಒಂದು ಗಾಳಿಮಂಟಪ ಎಂಬುದು ತತ್‌ಕ್ಷಣ ಅರಿವಿಗೆ ಬರುವುದಿಲ್ಲ.

ಅಷ್ಟೇ ಅಲ್ಲ, ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶ ಸೋವಣ್ಣ ಮಾಡಿಸಿದ ಕಲ್ಲ ನವಿಲುಯ್ಯಲು ಅಂದರೆ ನವಿಲಿನ ಉಬ್ಬು ಚಿತ್ರಕೆತ್ತನೆ ಇರುವ ಉಯ್ಯಾಲೆ ಕಂಬ, ಅದು ಅವನು ಕಟ್ಟಿಸಿದ ದ್ವಾರಮಂಟಪದ ಎದುರಲ್ಲಿರುವುದೇ ಇರಬೇಕು. ಇನ್ನು ಮಲ್ಲಿನಾಥ ಒಡೆಯ ಕಟ್ಟಿಸಿದ ದ್ವಾರಗೋಪುರ (ಅರ್ಥಾತ್ ಗಾಳಿಮಂಟಪ), ಸೋವಣ್ಣ ಕಟ್ಟಿಸಿದ ದ್ವಾರಮಂಟಪದ ಎದುರಿಗೆ ಉತ್ತರಕ್ಕೆ ಸನಿಹದಲ್ಲೇ ಇರುವ ಸ್ವಲ್ಪ ದೊಡ್ಡ ಗಾತ್ರದ ಗೋಪುರ (ಅರ್ಥಾತ್ ಗಾಳಿಮಂಟಪ) ಎಂಬಲ್ಲಿ ಅನುಮಾನವಿಲ್ಲ. ಇನ್ನು ಸಿದ್ಧೇಶ್ವರ ದೇವರಿಗೆ ಅದರ ಬದಿಯ ಬೆಟ್ಟದ ಮೇಲೆ ಕಲ್ಲಿನ ಒಂದು ಶಿಖರ ಅಥವಾ ಕಳಸವನ್ನು ಸ್ಥಾಪಿಸಿದ್ದಂತೆ ಕಾಣುತ್ತದೆ. ಈ ದೇವಸ್ಥಾನದ ಬದಿಯ ಬೆಟ್ಟದ ಮೇಲೆ ಬಂಡೆಯ ಪಾರ್ಶ್ವದಲ್ಲಿ 'ಸಿದ್ಧನಾಥ ದೇವರ ಶಿಖರ' ಎಂಬ ಶಾಸನ ಸೋವಣ್ಣನದೋ ಮಲ್ಲಿನಾಥ ಒಡೆಯನದೋ ತಿಳಿಯದು. ಹಾಗೆ ಅದು ಸೂಚಿಸುವ ಶಿಖರವೂ ಈಗ ಇಲ್ಲ. ಹೀಗಾಗಿ ಎರಡೂ ಶಾಸನಗಳು ಹೇಳುವ ಶಿಖರ ಇದ್ದದ್ದು ಎಲ್ಲಿ? ಅವು ಏನಾಗಿ ಕಾಣೆಯಾಗಿವೆ? ಅದಾವುದೂ ಸದ್ಯಕ್ಕೆ ತಿಳಿಯುವಂತಿಲ್ಲ.

ಆದರೆ ಎಂ.ಎಸ್. ಪುಟ್ಟಣ್ಣನವರ 'ಚಿತ್ರದುರ್ಗದ ಪಾಳಯಗಾರರು' ಪುಸ್ತಕದಲ್ಲಿ (ಪುಟ ೩) "ವೀರಮಲ್ಲಂಣ ಒಡೆಯರು, ೧. ಸಂಪಿಗೆ ಸಿದ್ಧೇಶ್ವರನ ಗುಡಿ, ೨. ದೊಡ್ಡ ಮಲ್ಲೇಶ್ವರನ ಗುಡಿ, ೩. ಚಿಕ್ಕಮಲ್ಲೇಶ್ವರನ ಗುಡಿ, ಮುಂತಾದ್ದನ್ನು ಕಟ್ಟಿಸಿ, ಇವುಗಳ ಪಡಿತರ ದೀಪಾರಾಧನೆಗೆ ೧ ಮುಸುಂಡಿಹಾಳು, ೨ ಚಿಕ್ಕಪುರ, ಈ ಎರಡು ಗ್ರಾಮಗಳನ್ನು ಕೊಟ್ಟನು. ಇದಕ್ಕೆ ಶಿಲಾಶಾಸನ ಬರೆಯಿಸಿಕೊಟ್ಟಿದ್ದಾರೆ. (ರೈಸ್ ಸಾಹೇಬರ ಚಿತ್ರದುರ್ಗದ ೧೪ನೇ ಸಂಖ್ಯೆ ಶಾಸನವನ್ನು ನೋಡಿ)"- ಎಂದು ಬರೆದಿದ್ದಾರೆ. ಅವರು ನಮೂದಿಸಿರುವ ಶಾಸನದಲ್ಲಿ ಆ ವಿಚಾರ ಬರುವುದಿಲ್ಲ. ಎಂ.ಎಚ್. ಕೃಷ್ಣ ಅವರು ಆ ಶಾಸನವನ್ನು ಏಕೆ ಉಲ್ಲೇಖಿಸಿಲ್ಲ ಎಂದು ಆಶ್ಚರ್ಯವಾಗುತ್ತದೆ. ಆದರೆ ಚಿತ್ರದುರ್ಗ ಪಾಳೆಯಗಾರರ ವಂಶಾವಳಿ'ಯಲ್ಲಿ ಬರಮಣ್ಣನಾಯಕನ ಕಾಲಾವಧಿಯ ವಿವರಣೆ ಕೊಡುವಾಗ 'ಉದ್ಯೋಗಸ್ಥರು ಮಾಡಿಸಿದ್ದು' ಎಂಬ ವಿಭಾಗದಲ್ಲಿ 'ಮಲ್ಲರಾಯರು ಮಾಡಿಸಿದ್ದು' ಎಂಬಲ್ಲಿ 'ಸಿದ್ಧೇಶ್ವರನ ಗುಡಿ ೧, ಈ ಉಪ್ಪರಿಗೆ ೨, ಈ ಉಯ್ಯಾಲೆ ಕಂಭ ೨, ದೀಪಮಾಲೆ ಕಂಭ ೧, ಈತನ ಮಕ್ಕಳು ಮಾಡಿಸಿದ್ದು, ಈ ದೇವಸ್ಥಾನದಲ್ಲು ದೊಡ್ಡ ಮಲ್ಲಿದೇವತೆ ದೇವಸ್ಥಾನ ೧, ಅಂತು ಇಷ್ಟು. ದೇವರಿಗೆ ಅಮೃತಪಡಿ, ನಂದಾದೀವಿಗೆ, ಪಾತ್ರ, ವಾಲಗ, ಹುವ್ವಿನತೋಟ, ಸಹಾ ಕೊಟ್ಟಿತು. ಇದು ಇಷ್ಟು ಅಲ್ಲದೆ ಗ್ರಾಮಗಳು ಮುಸುಂಡಿಹಾಳು ೧ಕ್ಕೆ ಲಿಂಗಮುದ್ರೆ, ಚಿಕ್ಕಪುರ ೧ಕ್ಕೆ ಲಿಂಗಮುದ್ರೆ, ಇವು ಎರಡು ಗ್ರಾಮವನ್ನು ಕೊಟ್ಟು ಇರುತ್ತೆ ಎಂದು ಶಿಲಾಶಾಸನ ಬರೆಸಿ ಇದೆ' ಎಂದಿದೆ. ಈ ಎರಡೂ ವಿವರಗಳಿಂದ ವಾಸ್ತವ ಸಂಗತಿಯನ್ನು ಪರಿಶೀಲಿಸಬೇಕಾಗಿದೆ.

ಸಂಪಿಗೆ ಸಿದ್ಧೇಶ್ವರದ ಹಿಂದೆ, ಮುಚ್ಚಲು ತೆರೆಯಲು ಬರುವಂಥ ಬಾಗಿಲಿರುವ ಸುರಂಗ ಕಾಶಿಯವರೆಗೂ ಇದೆ ಎಂದು ಹೇಳುವುದು ವಾಡಿಕೆ. ಆದರೆ ಅದರೊಳಗೆ ಬಂಡೆಯ ಅಡಿಗೆ ತೆವಳಿಕೊಂಡು ಹೋಗಿ ನೋಡಿದರೆ, ಅದು ಒಂದು

ಹೊರದಾರಿಯಾಗಿದ್ದು, ಮುಂದೆ ಅದು ಈ ದೇವಾಲಯದ ಆಗ್ನೇಯ ಬದಿಯ ಭಾಗದಲ್ಲಿ ದೊಡ್ಡ ಬಂಡೆಗಳ ಅಡಿಯಲ್ಲಿ ಹೊರತೆರೆದುಕೊಳ್ಳುವುದು ಕಾಣಿಸುತ್ತದೆ. ಆದ್ದರಿಂದಲೇ ದೇವಾಲಯದ ಒಳಗಿನ ಈ ಸುರಂಗದ ಬಾಗಿಲು ತೆರೆದಾಗ ಒಳಗಿಂದ ಬೀಸಿಬರುವ ಸುಳಿಗಾಳಿ ಶೀತಲವಾಗಿರುವುದೂ ಅರಿವಿಗೆ ಬರುತ್ತದೆ.

[ಈ ಲೇಖನ ಬರೆಯುವಾಗ್ಗೆ ನಾನು ಕೈಕೊಂಡ ಬೇರೆಬೇರೆ ಶಾಸನಗಳ ಪುನರ್‌ಪರಿಶೀಲನೆಯನ್ನು ಪ್ರತ್ಯೇಕ ಲೇಖನಗಳಲ್ಲಿ ಕೊಡಲಿದ್ದೇನೆ.]

[ಈ ದೇವಾಲಯದೊಳಗಿರುವ ೧೩೨೮ರ ಶಾಸನವನ್ನು ನಾನು ಅಧ್ಯಯನಿಸಲು ವಿವಿಧ ರೀತಿಯಲ್ಲಿ ಸಹಕರಿಸಿದವರು ಭಾ.ಪು.ಸ. ಇಲಾಖೆಯ ಶ್ರೀ ಡಿ. ರಾಜಣ್ಣ, ಶ್ರೀ ಎಚ್.ವಿ. ಇಂದುಶೇಖರ್ ಮತ್ತು ಈ ದೇವಾಲಯದ ಅರ್ಚಕರು. ಇವರೆಲ್ಲರಿಗೂ ನನ್ನ ವಂದನೆಗಳು.]

ಆಧಾರಸೂಚಿ

೧. ಎಕ ೧೧, ೧೯೦೩.

೨. ಎಂಎಆರ್ ೧೯೩೯.

೩. ಚಿತ್ರದುರ್ಗದ ಪಾಳಯಗಾರರು, ಎಂ.ಎಸ್. ಪುಟ್ಟಣ್ಣ, ಬೆಂಗಳೂರು, ೧೯೨೪.

೪. ಹುಲ್ಲೂರು ಶ್ರೀನಿವಾಸ ಜೋಯಿಸರ 'ಐತಿಹಾಸಿಕ ಲೇಖನಗಳು', ಸಂ. ಲಕ್ಷ್ಮಣ್ ತೆಲಗಾವಿ, ಡಾ. ಎಂ.ವಿ. ಶ್ರೀನಿವಾಸ್, ಚಿತ್ರದುರ್ಗ, ೧೯೭೬.

೫. ಪ್ರಾಚೀನ ಚಿತ್ರದುರ್ಗ (ಪಿಎಚ್.ಡಿ. ಮಹಾಪ್ರಬಂಧ), ಡಾ. ಬಿ. ರಾಜಶೇಖರಪ್ಪ, ಚಿತ್ರದುರ್ಗ, ೨೦೧೬.

೬ ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು, ಸಂ: ಡಾ. ಬಿ. ರಾಜಶೇಖರಪ್ಪ, ಬೆಂಗಳೂರು, ೨೦೦೭.

೭೫

ರಾಮನಗರ ಜಿಲ್ಲೆಯಲ್ಲಿ ಬೌದ್ಧ ನೆಲೆಗಳ ಕುರುಹುಗಳು

ಡಾ. ಕನ್ಯಾಕುಮಾರ್ ಪಿ.*

ಬೆಂಗಳೂರು, ಮೈಸೂರು ಹೆದ್ದಾರಿಯಲ್ಲಿ ಬರುವ ರಾಮನಗರ ಜಿಲ್ಲಾ ಪ್ರಾಂತ್ಯ ಇತಿಹಾಸ ಕಾಲದಿಂದ ಮಾತ್ರವಲ್ಲದೆ ಪ್ರಾಗೈತಿಹಾಸಿಕ ನೆಲೆಗಳನ್ನು ಹೊಂದಿರುವ ಪ್ರಾಂತ್ಯ ಮಹತ್ವಪೂರ್ಣ ಇತಿಹಾಸ ಹೊಂದಿದೆ. ಇಲ್ಲಿನ ಸ್ಥಳಪುರಾಣಗಳು, ಜಾನಪದ ಪರಿಕರ ಸಂಪ್ರದಾಯಗಳು ಈ ಪ್ರಾಂತ್ಯದ ಐತಿಹಾಸಿಕ ಚಿತ್ರಣವನ್ನು ತೆರೆದಿಡುವಲ್ಲಿ ಪ್ರಮುಖ ಪಾತ್ರವಹಿಸಿವೆ. ಈ ಪ್ರಾಂತ್ಯ ಇತಿಹಾಸ ಕಾಲದಲ್ಲಿ ಶಾತವಾಹನರಿಂದ – ಪಾಳೆಯಗಾರರು ಹಾಗೂ ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿದ್ದು ಸಾಕಷ್ಟು ಸಾಂಸ್ಕೃತಿಕ ಪರಂಪರೆಯ ಕೊಡುಗೆಗಳನ್ನು ಪಡೆದುಕೊಂಡಿದೆ.

ರಾಮನಗರ ಜಿಲ್ಲಾ ಪ್ರಾಂತ್ಯ ಮೂಲತಃ ಹಳ್ಳಿಗಳಿಂದ, ಬೆಟ್ಟ ಪ್ರದೇಶಗಳಿಂದ ಕೂಡಿದಂತಹ ಪ್ರದೇಶ, ಪುರಾತನ ಕಾಲದಿಂದಲೂ ಮಾನವ ವಸತಿ ಕೇಂದ್ರಗಳಾಗಿವೆ. ಇವು ಸಂಸ್ಕೃತಿ ಉಗಮದ ಸ್ಥಳಗಳು ಆಗಿವೆ. ಆಚರಣೆ, ನಂಬಿಕೆ, ಸಂಪ್ರದಾಯಗಳು ಬೆಳೆದ ಸ್ಥಳಗಳಾಗಿವೆ. ಇಲ್ಲಿನ ಇತಿಹಾಸವನ್ನು ನೋಡುತ್ತಾ ಹೋದರೆ ರಾಜರಾಳ್ವಿಕೆಯ ಕಾಲದಲ್ಲಿ ಅನುಸರಿಸಲಾಗುತ್ತಿದ್ದ ಧರ್ಮಗಳ ಬಗ್ಗೆ ಲಭ್ಯವಿರುವ ಆಧಾರಗಳಿಂದ ಮಾಹಿತಿಯನ್ನು ಶೇಖರಿಸಬಹುದು, ಇದರ ಮುಖೇನ ಇತಿಹಾಸವನ್ನು ಗಟ್ಟಿಯಾಗಿ ಕಟ್ಟಬಹುದು. ಇದರ ಅನ್ವಯ ಸಾಮಾನ್ಯವಾಗಿ ಶೈವ, ವೈಷ್ಣವ, ಮತಗಳು ಸರ್ವೇಸಾಮಾನ್ಯವಾಗಿ ಇದ್ದುದ್ದರ ಬಗ್ಗೆ ತಿಳಿಯಬಹುದು. ಆದರೆ ಬೌದ್ಧಧರ್ಮದ ಅಸ್ತಿತ್ವದ ಬಗ್ಗೆ ಯಾವುದೇ ರೀತಿಯಾದ ಸಂಪೂರ್ಣ ಮಾಹಿತಿ ಲಭ್ಯವಿಲ್ಲ. ಆದರೆ ಈ ಪ್ರಾಂತ್ಯದಲ್ಲಿ ಕಂಡುಬರುವ ಪ್ರಮುಖ ಇತಿಹಾಸ ಮಹತ್ವವೆನಿಸಿದ ಸುಗ್ಗನಹಳ್ಳಿ, ಕಲ್ಯಾ, ಹೂಜಗಲ್ಲು, ಭಾಗಗಳಲ್ಲಿ ಬೌದ್ಧಧರ್ಮದ ಉಪಸ್ಥಿತಿಯ ಆರಂಭಿಕ ಕುರುಹುಗಳು ದೊರೆಯುತ್ತವೆ. ಇಲ್ಲಿ ವಜ್ರಯಾನ ಬೌದ್ಧರ ಪ್ರಭಾವದಿಂದ ಅಲ್ಲಿ ಬೌದ್ಧ ಸಂಕೇತಗಳು ದೊರೆತಿವೆ.

ಬೌದ್ಧರ ಪ್ರಜ್ಞೆಯ ವಿಕಸಿತ ರೂಪ ಎನ್ನಬಹುದಾದ 'ತಾರಾ ಭಗವತಿ ಮತ್ತು ತಾಂತ್ರಿಕ ಶೈವವನ್ನು ತಮ್ಮ ತಾಂತ್ರಿಕ ಚರ್ಯೆಗಳಿಗೆ ಅಡಕವಾದಂತಹ ಬೌದ್ಧಸಿದ್ಧರು ಧರ್ಮವನ್ನು ಪ್ರಸರಿಸಿದ್ದ ಪ್ರಭಾವ ಎದ್ದುಕಾಣುತ್ತದೆ. ಮೂರ್ತಿ ಸಂಕೇತಗಳು ಹಾಗೂ ಸ್ಥಳನಾಮಗಳು ಇದಕ್ಕೆ ಪ್ರೇರಕ ಅಂಶಗಳಾಗಿವೆ.

ಕಲ್ಯಾದ ಕಲ್ಲೇಶ್ವರ, ಕಲಿನಾಥದೇವರು ಎಂದೆಲ್ಲಾ ಶಾಸನೋಕ್ತ ಉಲ್ಲೇಖಗಳು ಬೌದ್ಧ ಸಿದ್ಧರು ನಾಥಪಂಥದ ಮೂಲಕ ಶೈವೀಕರಣಗೊಂಡಂತೆಯೂ, ಕಾಳಮುಖರಾಗಿ ವೀರಶೈವ ಪಂಥಕ್ಕೆ ಜಾರಿಕೊಂಡಂತೆ ತೋರುತ್ತದೆ. ಬೌದ್ಧ ಸಿದ್ಧರು ಬೌದ್ಧ ಸಂಬಂಧ ಆಚಾರಗಳನ್ನು ಅನುಸರಿಸುತ್ತಾ ಬಂದಂತೆ ನಂತರದಲ್ಲಿ ಶೈವ ಅವಧೂತರಾದ ಮೇಲೆ ಸೂರ್ಯೋಪಾಸನೆಗೆ ಜಾರಿದಂತೆ ಕಾಣುತ್ತದೆ. ಇದಕ್ಕೆ ಕಲ್ಯಾದ ಕಲ್ಲೇಶ್ವರ ಗುಡಿಯಲ್ಲಿರುವ 'ಸೂರ್ಯನ ಶಿಲ್ಪ' ಸ್ಫೂರ್ತಿದಾಯಕ ಆಧಾರವಾಗಿದೆ. ಇದರೊಂದಿಗೆ ತಾರಕಚಲ ಶಬ್ಧ ಬೌದ್ಧದ ತಾರಾಭಗವತಿಯನ್ನು ನೆನಪಿಗೆ ತರುವುದು ಗಮನಾರ್ಹ.

ಕ್ರಿ.ಶ. ೧೫೩೩ರ ತುರುವೆಕೆರೆ ಶಾಸನ ರೀತ್ಯಾ "ಬೌದ್ಧವಾಸಾ ಮಹಾಪುರಿ ಕಲವತೀತ ವಿಖ್ಯಾತತೋತ್ತರೇ ಹರಿಣಾಟವೀ ಎಂದಿದೆ" ವಿಜಯನಗರ ಕಾಲದ ಅಚ್ಯುತರಾಯನು 'ನವಳಿನಾತಿ, ನಳಿನಾವತಿ, ಪಟ್ಟಣದ ಶ್ರೀನಿವಾಸಪುರಿ ಗ್ರಾಮದ ಬ್ರಾಹ್ಮಣರಿಗೆ ೧೮ ವೃತ್ತಿಗಳನ್ನು ಬಿಟ್ಟುಕೊಟ್ಟ ಬಗ್ಗೆ ಹೇಳಿದೆ. ಚಿದಾನಂದಮೂರ್ತಿಯವರು ಕಲ್ಯವೇ, ಕಲಾವತಿ ಪಟ್ಟಣ, ಶಿಪ್ಪಸಂದ್ರ ಹೋಬಳಿಯ ತಾವರೆಕೆರೆ ಗ್ರಾಮವೇ ಹಿಂದಿನ ನಳಿನಾವತಿ, ಶಾಸನದಲ್ಲಿ ಬರುವ ಹರಿಣಾಟವಿಯ ಕನ್ನಡ ರೂಪವೇ 'ಶಿಪ್ಪಸಂದ್ರದ ಬಳಿಯ ಹುಳುವೇನಹಳ್ಳಿ' ಎಂದು ತಮ್ಮ ಅಭಿಪ್ರಾಯಯಗಳನ್ನು ತಿಳಿಸಿದ್ದಾರೆ.

ಕಲತಿ, ಕಲ್ಲತ್ತಿ, ಕಲ್ಲೇಹಶಬ್ದಗಳಿಗೆ ಮಣ್ಣಿನ ಪಾತ್ರೆ (ಮಡಿಕೆ, ಘಟ) ಕಲವೆ, ಎಂದರೆ ತಾವರೆ ಎಂಬರ್ಥವಿರುವ ಕಾರಣ ಕಲವತೀತ ಎಂಬ ಶಾಸನೋಕ್ತವಿರುವುದರಿಂದ ತಾಂತ್ರಿಕ ಬೌದ್ಧದ ತಾರಾಭಗವತಿಯ ನೆಲೆಗೆ 'ತಾರಕಾಚಲ' ಪರ್ಯಾಯ ಹೆಸರೂ, ತಾರಾಭಗವತಿಗೂ ಘಟಶಬ್ದದ ಸಂಬಂಧವಿರುವ ಕಾರಣ ಕಲ್ಲೆಹ ಗ್ರಾಮವು ಪ್ರಾಚೀನ ಕಾಲದಲ್ಲಿ ಬೌದ್ಧ

* ಉಪನ್ಯಾಸಕರು, ಪದವಿಪೂರ್ವ ಕಾಲೇಜು, ರಾಮನಗರ.

ಕಲ್ಯಾದ ಕಲ್ಲೇಶ್ವರ ದೇವಾಲಯದಲ್ಲಿರುವ ಶಿಲ್ಪಗಳು ಮತ್ತು ಮಾನಸ್ತಂಭ









ಶಿಲ್ಪಗಳನ್ನು ಹೊಂದಿದ್ದ ಬಗ್ಗೆ ಸಂಕೇತವನ್ನು ತಿಳಿಸುತ್ತದೆ. ಕ್ರಿ.ಶ. ೧೩೬೮ರ ಕಲ್ಯದ ಶಾಸನದ 'ಕಲ್ಲೆಹ' ಕ್ರಿ.ಶ. ೧೫೩೩ರ ಹೊತ್ತಿಗೆ ಸಂಸ್ಕೃತಾನುಕರಣದಲ್ಲಿ 'ಕಲವತತೀತ (ಕಲಾವತಿ) ಎನಿಸಿರುವುದು ಕಾಣಸಿಗುತ್ತದೆ. ಕಲ್ಲೇಶ್ವರ ಗುಡಿಯ ಶಿಲಾಮೂರ್ತಿಯ ರುಂಡದ ಲಲಾಟದಲ್ಲಿ ಧ್ಯಾನಿ ಬುದ್ಧನಂತೆ (ತಾರಾಭಗವತಿಯ ಸಂಕೇತ) ಆಕೃತಿ ಇದೆ. ಬಾಗಿಲುವಾಡದ ತಾಂತ್ರಿಕ ವೃತ್ತ, ಮುಕ್ಕಾಲು ಅಂಡಾಕಾರದ / ಕರಗ ಕುಂಭ ಶೈಲಿಯ ಶೃಂಗಾಕಾರದ ಶಿಲ್ಪದ ಮೊಗದ ಮೇಲಿನ ಮೂರು ಗುಳಿಗಳು ತಾಂತ್ರಿಕ ಬೌದ್ಧದ ಅಂದರೆ ವಜ್ರಯಾನದ ಸೂಚನೆಯಾಗಿದೆ. ಕಲ್ಲೇಶ್ವರ ಗುಡಿಯಲ್ಲಿರುವ ಭೈರವನಶಿಲ್ಪ ನಾಥ ಪಂಥದ ಆರಾಧನೆಯ ಸಂಕೇತವಾಗಿದೆ. ಗರ್ಭಗೃಹದ ಎದುರಿಗೆ ಕಮಲದ ಬಿರಿ ಮೊಗ್ಗುಗಳನ್ನು ಹಿಡಿದ ಸ್ಥಾನಕ ಸೂರ್ಯ ಶಿಲ್ಪವಿದೆ. ಬೌದ್ಧ ಸಿದ್ಧರು ನಾಥಪಂಥದ ಮೂಲಕ ಕಾಳಮುಖ ಶೈವರಾದಂತೆ ವಿವಿಧ ಆಯಾಮಗಳು ಇಲ್ಲಿ ಸೃಷ್ಟಿಯಾಗುತ್ತವೆ. ಇದಕ್ಕೆ ಪೂರಕವೆಂಬಂತೆ, 'ಬೌದ್ಧವಾಸಮಹಾಪುರಿ' ಎಂಬುದು ಪುಷ್ಠಿ ನೀಡುತ್ತದೆ. ಬೌದ್ಧರ ಸುಗತಾರ, ಜೈನರ ಪದ್ಮಾವತಿಯಾಗಿ, ವೈದಿಕ ಗೌರಿಯಾಗಿ, ಆರಾಧನೆಗೊಳ್ಳುವಂತಾಗಿದೆ. ಗರ್ಭಗೃಹದ ಎದುರಿಗೆ ಇರುವಂತಹ ಕಮಲದ ಮೊಗ್ಗುಗಳು ಮತ್ತು ಸೂರ್ಯನ ಶಿಲ್ಪಗಳು ಬೌದ್ಧ ಸಿದ್ಧರ ಸೂರ್ಯಾರಾಧನೆಯ

ಸಂಕೇತವಾಗಿ ಪ್ರಾಚೀನ ಶಿಲ್ಪಿಗಳಾಗಿವೆ. ಸ್ಥಳನಾಮದ ದೃಷ್ಟಿಯಿಂದಲು ಬೌದ್ಧವಜ್ರಯಾನ ಬೌದ್ಧ ಸಿದ್ಧರ ಕ್ಷೇತ್ರವಾಗಿ ಮೊದಲು ಇಲ್ಲಿ ಪರಿವರ್ತನೆಯಾಗತೊಡಗಿರುವ ಸಂಭವ ಹೆಚ್ಚಿದೆ.

ಹಾಗೆಯೇ ಸುಗ್ಗನಹಳ್ಳಿ ಕಲ್ಯಾದಿಂದ ೧೦ ಕಿ.ಮೀ. ದೂರದಲ್ಲಿದೆ. ಶಾಸನ ಮತ್ತು ಜನಪದ ಹಿನ್ನೆಲೆಯಲ್ಲಿ ವಿಶಿಷ್ಠವಾಗಿರುವ ಸುಗ್ಗನಹಳ್ಳಿ ಬೌದ್ಧಮೂಲದಿಂದ ಬಂದಿರುವ ಸಾಧ್ಯತೆ ಇದೆ. ಬೌದ್ಧಪಂಥ ನಾಥಪಂಥವನ್ನು ಅನುಸರಿಸಿದಾಗ ಬೈರವನ ಆರಾಧನೆಗೆ ಬಂದಿತು. ಇದಕ್ಕೆ ಗ್ರಾಮದಲ್ಲಿ ಇಂದಿಗೂ ಲಭ್ಯವಿರುವ ಬೈರವನ ಶಿಲ್ಪಗಳು ಸೂಚನೆ ನೀಡುತ್ತವೆ. ಕೋಲಾರ ಜಿಲ್ಲೆಯ 'ಸುಗತೂರು–ಸುಗಟೂರು' ಹೇಗೆ ಸುಗುತ (ಬೌದ್ಧಮತ) ತಾರಾ ಅಥವಾ ಸುಗುತತಾರ ಶಬ್ದದಿಂದ ಬಂದಿದೆ ಎನ್ನಬಹುದೋ ಹಾಗೆಯೇ 'ಸುಗ್ಗನಹಳ್ಳಿ ಸುಗುತನಹಳ್ಳಿ'ಎಂದು ಪರಿವರ್ತನೆಯಾಗಿರುವುದು ಇಲ್ಲಿ ಕಾಣುತ್ತದೆ. ಈ ಪ್ರದೇಶದಲ್ಲಿ ಬೌದ್ಧ ಪ್ರಭಾವದ ಮುನ್ನ ಕದಂಬರ ಕಾಲದ ಶೈಲಿಯ ಅಂಡಾಕಾರದ ಶಿವಲಿಂಗದ ಇಲ್ಲಿನ ಅಸ್ತಿತ್ವದಿಂದಾಗಿ ಶೈವ ಧರ್ಮದ ಅಸ್ತಿತ್ವವಿದ್ದು ನಂತರದಲ್ಲಿ ಬೌದ್ಧರ ಮೇಲೆ ಗೆಲುವು ಸಾಧಿಸಿದ ಜೈನರು ಮಾನಸ್ತಂಭ ರಚಿಸಿರಬಹುದಾದ ಸಂಭಾವ್ಯವಿದೆ. ಒಟ್ಟಾರೆ ಕಲ್ಯಾದ ಸುಗ್ಗನಹಳ್ಳಿಯ ಹೆಸರುಗಳು ಬೌದ್ಧದೇವತೆಯ ಮೂಲದ 'ದೇವತಾವಾಚಿಯಾಗಿ, ವಸ್ತುವಾಚಿದಿಯಾಗಿ ಹಾಗೂ ಜನಪದವಾಚಿಯಾಗಿ ನಿಷ್ಪತ್ತಿಗೆ ತೆರೆದುಕೊಂಡಿರುವುದು ಖಚಿತ. ಇದಕ್ಕೆ ಸಂಬಂಧಿಸಿದಂತೆ ಅಂದರೆ ಬೌದ್ಧಧರ್ಮದ ಅಸ್ತಿತ್ವ ಇಲ್ಲಿತ್ತೆಂಬುದಕ್ಕೆ ಗಟ್ಟಿಯಾದ ನಿರ್ಧಾರವನ್ನು ತೆಗೆದುಕೊಳ್ಳಲು ಇಲ್ಲಿಯವರೆವಿಗೂ ಯಾವ ಶಾಸನ ಆಧಾರಗಳು ಲಭ್ಯವಾಗಿಲ್ಲ ಆದರೂ ಕ್ರಿ.ಶ. ೧೫೩೩ರ ತುರುವೆಕೆರೆ ಶಾಸನ ಬೌದ್ಧಧರ್ಮದ ಅಸ್ತಿತ್ವದಲ್ಲಿತ್ತೆಂಬುದನ್ನು ಸೂಚಿಸುತ್ತದೆ.

ಒಟ್ಟಾರೆಯಾಗಿ ಅಧ್ಯಯನದಿಂದಾಗಿ ಈ ಅಭಿಪ್ರಾಯಗಳನ್ನು ಮಂಡಿಸಬಹುದು.

೧) ರಾಮನಗರ ಪ್ರಾಂತ್ಯದಲ್ಲಿ ಬೌದ್ಧಮತ ಆರಂಭಿಕವಾಗಿ ನಂತರ ವಿಕಸಿತವಾಗಿದೆ.

೨) ಕಲ್ಯಾ, ಸುಗ್ಗನಹಳ್ಳಿ, ತಾರಕಾಚಲ ಹೆಸರುಗಳು ಬೌದ್ಧ ಪರಂಪರೆಯನ್ನು ಸೂಚಿಸುತ್ತವೆ.

೩) ಕಲ್ಯಾದ ಕಲ್ಲೇಶ್ವರ ದೇವಾಲಯದಲ್ಲಿರುವ ದ್ಯಾನಿಬುದ್ಧನ (ತಾರಾಭಗವತಿ) ಆಕೃತಿ ಮಹತ್ವದ ಕುರುಹಾಗಿದೆ.

೪) ಕ್ರಿ.ಶ. ೧೫೩೩ರ ತುರುವೆಕೆರೆ ಶಾಸನ ಮಹತ್ವದ್ದಾಗಿದೆ.

೫) ಬೌದ್ಧಸಿದ್ಧರು ನಾಥಪಂಥದ ಮೂಲಕ ಕಾಳಮುಖ ಶೈವರಾದಂತೆ, ಈ ಪ್ರಾಂತ್ಯ ಶೈವೀಕರಣಗೊಂಡಂತಿದೆ.

೬) ಈ ಹಿನ್ನೆಲೆಯನ್ನು ಗಮನಿಸಿದ ಮೇಲೆ ಕಲ್ಯಾದ ಹೆಸರು ಬೌದ್ಧದೇವತೆಯ ಮೂಲದ ದೇವತಾವಾದಿಯಾಗಿ, ವಸ್ತುವಾಚಿದಿಯಾಗಿ, ಜನಪದವಾಚಿಯಾಗಿ ಬಂದಿರುವುದು ಗಮನಾರ್ಹ.

[ಸಂಪ್ರಬಂಧವನ್ನು ಸಿದ್ಧಪಡಿಸಲು ನೆರವಾದ ಡಾ. ಎಂ.ಜಿ. ನಾಗರಾಜುರವರಿಗೆ ತುಂಬು ಹೃದಯದ ಧನ್ಯವಾದಗಳು]

ಆಧಾರ ಗ್ರಂಥಗಳು

೧. EC IX (0) Magadi, 151.

೨. ಡಾ. ಎಂ.ಜಿ. ನಾಗರಾಜ್, ಶಿವರಾಮಗಿರಿ, ರಾಮನಗರ ಜಿಲ್ಲೆ, ಸೇವಾಭಿನಂದನಾ ಆಧ್ಯಾತ್ಮ ಸಾಧನೆ, ಪ್ರ.ಸಂ. ಡಾ. ಎಂ.ಜಿ. ನಾಗರಾಜ್, ರಾಮನಗರ, ೧೯೭೬.

೩. ಎಂ. ಭೈರೇಗೌಡ ಮತ್ತು ತಾ.ಸಿ. ತಿಮ್ಮಯ್ಯ, ಅರ್ಕಾವತಿ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೯೯.

೪. ನರಸಿಂಹಮೂರ್ತಿ ಎ.ವಿ (ಸಂ), ಆರ್ಕಿಯಾಲಜಿ ಆಫ್ ಕರ್ನಾಟಕ, ಮೈಸೂರು, ಪ್ರಸಾರಾಂಗ, ಮೈಸೂರು, ೧೯೭೫.

೫. ದಿನಾಂಕ ೦೧–೧೦–೨೦೧೬ ಮತ್ತು ೦೨–೧೦–೨೦೧೬, ೦೩–೧೦–೨೦೧೬ರ ದಿನಗಳಂದು ನಾನು ಮತ್ತು ನನ್ನ ವಿದ್ಯಾರ್ಥಿ ಹರೀಶ್‌ಕುಮಾರ್. ಜೆ.ಎಲ್, ಸುಗ್ಗನಹಳ್ಳಿಯ ಹೊರವಲಯದಲ್ಲಿರುವ ಬಂಡೆಗಳ ಪ್ರದೇಶ, ಕೋತಿಬೆಟ್ಟಗಳಲ್ಲಿ ಬ್ರಾಹ್ಮಿಲಿಪಿಯ ಶಾಸನವಿರಬಹುದು ಎಂಬ ಅಲ್ಲಿನ ಜನಗಳ ಹಾಗೂ ಡಾ. ಎಂ.ಜಿ. ನಾಗರಾಜ್‌ರವರ ಮಾರ್ಗದರ್ಶನದಲ್ಲಿ ಹುಡುಕಾಟ ನಡೆಸಿದರೂ ಲಭ್ಯವಾಗಲಿಲ್ಲ.

೭೬

ಚನ್ನಪಟ್ಟಣ ತಾಲ್ಲೂಕಿನ ಪ್ರಾಚೀನ ಲಕುಲೀಶ ಪಂಥದ ಕೇಂದ್ರಗಳು

ಡಾ. ಎಂ.ಕೆ. ಮಂಜುನಾಥ* ಕೆ.ವಿ. ಮುರುಳಿ**

ಪ್ರಾಚೀನ ಶೈವ ಪರಂಪರೆಯಾದ ಪಾಶುಪತ ಮತವನ್ನು 'ಲಕುಲೀಶ' ಎಂಬ ಯೋಗಿಯು ಪರಿಷ್ಕರಿಸಿ 'ಲಕುಲೀಶ ಮತ'ವನ್ನಾಗಿ ಪ್ರಚುರಪಡಿಸಿದನು. ಲಕುಲೀಶನನ್ನು ಶಿವನ ಇಪ್ಪತ್ತೆಂಟನೇ ಅವತಾರವೆಂದು ಭಾವಿಸಿದ್ದಾರೆ. ಗುಜರಾತ್ ದೇಶದಲ್ಲಿನ ಕಾರ್‍ವಾಣ್ ಎಂಬ ಹಳ್ಳಿಯಲ್ಲಿ ಶಿವನೇ ಲಕುಲೀಶನಾಗಿ (ಸುಮಾರು ಕ್ರಿ.ಶ. ೧-೨ನೇ ಶತಮಾನದಲ್ಲಿ) ಅವತರಿಸಿ ಲಕುಲೀಶ ಶೈವಧರ್ಮವನ್ನು ಪಸರಿಸಿದನೆಂಬ ನಂಬಿಕೆಯಿದೆ.[೧] ಮುಂದೆ ಈ ಪಂಥ ಭಾರತದೆಲ್ಲೆಡೆ ಹರಡಿತು. ಅದಕ್ಕೆ ಸಾಕ್ಷಿಯಾಗಿ ಲಕುಲೀಶನ ಶಿಲ್ಪಗಳು ವಿಫುಲವಾಗಿ ದೊರೆಯುತ್ತವೆ. ಈ ಪಂಥವುತಾತ್ವಿಕವಾಗಿ ಸಾಂಖ್ಯ ಸಿದ್ಧಾಂತದ ತತ್ವಗಳನ್ನು ಅಳವಡಿಸಿಕೊಂಡು ಯೋಗಮಾರ್ಗವನ್ನು ಪ್ರತಿಪಾದಿಸಿದ ಒಂದು 'ಶೈವ ಪಂಥ'ವಾಗಿತ್ತೆಂದು ತಿಳಿದುಬರುತ್ತದೆ. ಈ ಶೈವ ಪಂಥವನ್ನು 'ಲಕುಲೀಶ ಪಾಶುಪತ ಮತ' ಎಂದೂ ಕರೆಯುವರು.

'ಲಾಕುಳ-ಪಾಶುಪತ-ಕಾಳಾಮುಖ ಧರ್ಮವನ್ನು ಶಾಸನಗಳಲ್ಲಿ ಶಿವಸಮಯ, ಶಿವಧರ್ಮ, ಲಗುಡಿಗಳ ಧರ್ಮ, ಕಾಳಾಮುಖ ಸಮಯ ಎಂದು ಮುಂತಾಗಿ ಕರೆದಿದೆ. ಈ ಧರ್ಮದ ಅನುಯಾಯಿಗಳನ್ನು ಮಹೇಶ್ವರರು, ಮಾಹೇಶ್ವರರು ಎಂಬ ವಿಶಿಷ್ಟ ಹೆಸರಿನಿಂದ ಕರೆಯುತ್ತಿದ್ದರು.[೨] ಲಕುಲೀಶನ ಹೆಸರಿನ ಕೆಲವು ಏರುಪೇರುಗಳಾದ ನಕುಲೀಶ, ಲಕುಲೇಶ, ಲಕುಲಿನ್ ಹಾಗೂ ಲಕುಲೀಶ್ವರಗಳೆಲ್ಲ ಲಕುಲ ಎಂಬ ಪದದಿಂದಾಗಿ ಬಂದವುಗಳು. ಲಗುಡ ಅಥವಾ ಲಕುಟ ಎಂದರೆ ದೊಣ್ಣೆ ಎಂಬರ್ಥವಿದೆ. ಹೀಗಾಗಿ ಲಕುಲೀಶನೆಂದರೆ (ಲಕುಲಿನ್) ಕೈಯಲ್ಲಿ ಒಂದು ದೊಣ್ಣೆಯನ್ನು ಹಿಡಿದುಕೊಂಡಿರುವ ಒಬ್ಬ ಈಶ (ಒಡೆಯ)ನಾಗಿದ್ದಾನೆ.[೪]

ಲಕುಲೀಶನ ವಿಗ್ರಹಗಳು ಸಾಮಾನ್ಯವಾಗಿ ಬಲಗೈಯಲ್ಲಿ ಮಾದಲದ ಹಣ್ಣನ್ನೂ, ಎಡಗೈಯಲ್ಲಿ ದಂಡ(ಲಕುಲ)ವನ್ನೂ ಹಿಡಿದಿರುತ್ತವೆ. ಆ ವಿಗ್ರಹಗಳಿಗೆ ಎರಡು ಕೈಗಳಿರುವುದು ಅವನು ಬುದ್ಧ, ಮಹಾವೀರರಂತೆ ಮನುಷ್ಯನಾಗಿ ಅವತರಿಸಿದನೆನ್ನುವುದನ್ನು ಸೂಚಿಸುತ್ತದೆ.[೩] ಕೆಲವೆಡೆಗಳಲ್ಲಿ ಲಕುಲೀಶನ ಶಿಲ್ಪಗಳಲ್ಲಿ ದಂಡವನ್ನು ಬಲಗೈಯಲ್ಲಿ ಹಿಡಿದಿರುವುದನ್ನು ಕಾಣಬಹುದು. ಈ ತರಹದ ಲಕ್ಷಣವುಳ್ಳ 'ಪ್ರಪ್ರಥಮ ಶಾಸನಯುಕ್ತ ಲಕುಲೀಶನ ಶಿಲ್ಪವು ಮಥುರದಲ್ಲಿ ದೊರೆತಿದ್ದು, ಇದು ಲಕುಲೀಶ ಪಂಥವು ಎರಡನೇ ಚಂದ್ರಗುಪ್ತನ ಕಾಲದಲ್ಲೇ ಇತ್ತೆಂದು ಖಚಿತಪಡಿಸುತ್ತದೆ. ಈ ಶಿಲ್ಪದಲ್ಲಿ ಲಕುಲೀಸನು ದ್ವಿಭುಜಧಾರಿಯಾಗಿದ್ದಾನೆ; ಮುಖದಲ್ಲಿ ಮೂರು ಕಣ್ಣುಗಳಿವೆ; ಬಲಗೈಯಲ್ಲಿ ದಂಡವನ್ನು ಹಿಡಿದಿರುವ ಇವನ ಎಡಗೈಯಲ್ಲಿರುವ ವಸ್ತು ಸ್ಪಷ್ಟವಾಗಿಲ್ಲ; ಕಟೀ ವಸ್ತ್ರದಲ್ಲಿ ರೇಖೆಯನ್ನು ಬಿಡಿಸಿರುವ ಈ ಶಿಲ್ಪ ಕ್ರಿ.ಪೂ. ಮೂರನೇ ಶತಮಾನದ್ದಾಗಿದೆ'[೫] ಎಂದು ವಿದ್ವಾಂಸರು ಗುರ್ತಿಸಿದ್ದಾರೆ.

ಮಥುರದಲ್ಲಿ ದೊರೆತ ಲಕುಲೀಶನ ಶಿಲ್ಪದ ಮಾದರಿಯಲ್ಲೇ ಚನ್ನಪಟ್ಟಣ ತಾಲ್ಲೂಕಿನಲ್ಲಿಯೂ ಲಕುಲೀಶನ ಶಿಲ್ಪಗಳು ದೊರೆಯುತ್ತವೆ. ತಾಲ್ಲೂಕಿನ ಲಕುಲೀಶನ ಶಿಲ್ಪಗಳು ದ್ವಿಭುಜಧಾರಿಯಾಗಿದ್ದು, ಬಲಗೈಯಲ್ಲಿ ಲಾಕುಳ ದಂಡವನ್ನು ಹಿಡಿದಿದ್ದು, ಎಡಗೈ ಕಟೀಹಸ್ತವಾಗಿ ಸಮಭಂಗಿಯಲ್ಲಿ ನಿಂತಿರುವ ಅಥವಾ ಪದ್ಮಾಸನದಲ್ಲಿ ಕುಳಿತ ಭಂಗಿಯಲ್ಲಿರುವ ಲಕ್ಷಣವನ್ನು ಹೊಂದಿರುವುದನ್ನು ಕಾಣಬಹುದು.

ಕ್ರಿ.ಶ. ಆರನೇ ಶತಮಾನದಿಂದ ಕ್ರಿ.ಶ. ಹತ್ತನೇ ಶತಮಾನದವರೆಗೆ ಲಕುಲೀಶನ ಮೂರ್ತಿಗಳ ಪರಂಪರೆಯು ಕನ್ನಡ ನಾಡಿನಲ್ಲಿ ಇದ್ದದು ಕಂಡುಬರುತ್ತದೆ. ಕ್ರಿ.ಶ. ಸುಮಾರು ೭-೮ನೇ ಶತಮಾನದಲ್ಲಿಯೇ ಶಿವಗಂಗೆ, ತಲಕಾಡು, ಚಿಕ್ಕನಹಳ್ಳಿ (ಹೊಸಕೋಟೆ), ಗಂಗವಾರ, ಬನವಾಸಿ ಮುಂತಾದ ಶಿವಾಲಯಗಳಲ್ಲಿ ಲಕುಲೀಶ ಶೈವಮುನಿಗಳು ನೆಲೆಸಿದ್ದರೆಂಬುದು

* ಮಾಕಳಿ ಗ್ರಾಮ ಮತ್ತು ಅಂಚೆ, ಚನ್ನಪಟ್ಟಣ ತಾ., ರಾಮನಗರ ಜಿಲ್ಲೆ.

** ಕೂಡ್ಲೂರು ಗ್ರಾಮ ಮತ್ತು ಅಂಚೆ, ಚನ್ನಪಟ್ಟಣ ತಾ., ರಾಮನಗರ ಜಿಲ್ಲೆ.

ಗಮನಾರ್ಹ.[೭] ಲಕುಲೀಶ ಪಂಥ ಕರ್ನಾಟಕದಲ್ಲಿ ತನ್ನ ಪ್ರಭಾವವನ್ನು ಬೀರಿರುವುದನ್ನು ಶಾಸನಗಳಲ್ಲಿ ಗುರುತಿಸಬಹುದು. ಅವುಗಳಲ್ಲಿ ಪ್ರಮುಖವಾದುದ್ದನ್ನು ಇಲ್ಲಿ ಗಮನಿಸಬಹುದು.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆಯ ಶಾಸನವೊಂದು "ವೇದಗಳೆಂಬ ದಂಡವನ್ನು ಹಿಡಿದ ನಟನಾಗಿ ಅಳಿ ಧರ್ಮಗಳೆಂಬ ನಟಿಯನ್ನು ಶಿಕ್ಷಿಸುತ್ತಿರುವ ಮೂರು ಲೋಕಗಳಲ್ಲಿ ಮಂಗಳವನ್ನು ಉಂಟು ಮಾಡುತ್ತ, ತನ್ನ ಭಕ್ತರಿಗೆ ದೃಷ್ಟಾದೃಷ್ಟ ಫಲಗಳನ್ನು ನೀಡಬಲ್ಲ ಲಕುಲಿಸನ ಧರ್ಮವುಜಯಿಸಲಿ" ಎಂದು ಆಶಿಸುತ್ತದೆ.[೮]

ಚನ್ನಪಟ್ಟಣ ತಾಲ್ಲೂಕಿನಲ್ಲಿ ಕ್ರಿ.ಶ. ಏಳನೇ ಶತಮಾನದಿಂದ ಕ್ರಿ.ಶ. ಹತ್ತನೇ ಶತಮಾನದವೆರೆಗಿನ ಲಕುಲೀಶ ಪಂಥದ ಕುರುಹುಗಳು ದೊರೆಯುತ್ತವೆ. ತಾಲ್ಲೂಕಿನ ಸಂತೆಮೊಗೇನಹಳ್ಳಿ, ಬೇವೂರು, ಮಾಕಳಿ, ಕನ್ನಮಂಗಲ, ನೆರಳೂರು, ಇಗ್ಗಲೂರು, ಯಲೆತೋಟದಹಳ್ಳಿ ಗ್ರಾಮಗಳಲ್ಲಿ ಲಕುಲೀಶನ ಬಿಡಿಶಿಲ್ಪಗಳು ದೊರೆಯುತ್ತವೆ. ಬಹುತೇಕ ಶಿವನ ದೇವಾಲಯಗಳ ಆವರಣದಲ್ಲಿದೊರೆಯುವುದರಿಂದ ಈ ಶಿವಾಲಯಗಳು ಲಕುಲೀಶ ಪಂಥದ ಮುನಿಗಳು ಸ್ಥಾಪಿಸಿದರೆನ್ನಬಹುದು.

ಚನ್ನಪಟ್ಟಣ ತಾಲ್ಲೂಕಿನ ಕ್ರಿ.ಶ. ೯೧೦ರ ಸಂತೆಮೊಗೇನಹಳ್ಳಿಯ ಶಾಸನವೊಂದು[೯] ಲಕುಲೀಶ ಪಂಥ ಈ ಪ್ರದೇಶದಲ್ಲಿ ನೆಲೆಸಿತ್ತು ಎಂಬುದಕ್ಕೆ ಪ್ರಮುಖ ಆಧಾರವಾಗಿದೆ. ಈ ಶಿಲಾಶಾಸನದಲ್ಲಿ 'ಚಿಲ್ಲುಕದೇವ' ಎಂಬ ಲಕುಲೀಶ ಪಂಥದ ಮುನಿಯನ್ನು ಉಲ್ಲೇಖಿಸುತ್ತದೆ. ಈ ಶಾಸನೋಕ್ತ ಚಿಲ್ಲುಕದೇವ ಮುನಿಯ ಹೆಸರು ಪ್ರಸ್ತುತ ಆಂಧ್ರ ಪ್ರದೇಶದ ಮಡಕಸಿರಾ ತಾಲ್ಲೂಕಿನ ಹೇಮಾವತೀ ಗ್ರಾಮದ ಕ್ರಿ.ಶ. ೯೪೩ರ ಸ್ತಂಭಶಾಸನದಲ್ಲಿ ಉಲ್ಲೇಖವಾಗಿರುವುದನ್ನು ಬಿ.ಎಲ್. ರೈಸ್‌ರು ಗುರ್ತಿಸುತ್ತಾರೆ.[೧೦] ಹೇಮಾವತೀ (ಅಂದರೆ ಈಗಿನ ಹೆಂಜೇರು) ಗ್ರಾಮದ ಈ ಶಾಸನದಲ್ಲಿ 'ಲಕುಳೀಶೋನಿಜನಾಮ್ನೋವಿಸ್ಮರಣಾಶಂಕಯೇವ ಧರ್ಮ್ಮಾಣಾಂ ಪುನರಪ್ಯವತೀರ್ಣ್ಣಭುವಿ ಮುನಿನಾಥಶ್ಚಿಲ್ಲುಕೋಜಾತಃ' ಎಂದು ಬಣ್ಣಿಸಿದೆ.[೧೧] ಈ ಶಾಸನದಲ್ಲಿಇಲ್ಲಿದ್ದ ಲಕುಲೀಶ ಪಂಥದ ಮುನಿಯ ಬಗ್ಗೆ ತಿಳಿಸುತ್ತ 'ಲಕುಲೀಶನ ಹೆಸರು ಮರೆತುಹೋದೀತೆಂಬ ಶಂಕೆಯಿಂದ, ಧರ್ಮವನ್ನು ಉದ್ಧರಿಸಲು ಚಿಲ್ಲುಕ ಮುನಿಯು ಭೂಮಿಯಲ್ಲಿ ಅವತರಿಸಿದನೆಂದು ತಿಳಿಸಿದೆ. ಈ ಹೇಮಾವತೀ ಶಾಸನಕ್ಕಿಂತ ೩೩ ವರ್ಷಗಳಷ್ಟು ಹಿಂದೆಯೇ ಚನ್ನಪಟ್ಟಣ ತಾಲ್ಲೂಕಿನ ಸಂತೆಮೊಗೇನಹಳ್ಳಿ ಶಾಸನ ರಚನೆಯಾಗಿದೆ.

ಸಂತೆಮೊಗೇನಹಳ್ಳಿಯ ಗಂಗದೊರೆ ಪೆರ್ಮಾಡಿ ನೀತಿಮಾರ್ಗನ ಆಳ್ವಿಕೆಯ ಕಾಲದ ಶಿಲಾಶಾಸನದಲ್ಲಿ 'ಶಿವಮಾರೇಶ್ವರವುಂ ..ಣಘರೇಶ್ವರವುಂವ. ಕೋಟೆಯ ನೀತಿಮಾರ್ಗ್ಗೇಶ್ವರವು ಮನಾಳ್ವ ಶ್ರೀಮನ್ನೂವಡಿ ಚಿಲ್ಲುಕದೇವರ್' ಎಂದಿದೆ.[೧೨] ಈ ಶಾಸನದಲ್ಲಿ ಮೊಗೇನಹಳ್ಳಿಯ ಶಿವಮಾರೇಶ್ವರ, ನಗರೇಶ್ವರ, ಕೋಟೆಯ ನೀತಿಮಾರ್ಗ್ಗೇಶ್ವರ ದೇವಾಲಯಗಳ ಉಸ್ತುವಾರಿಯನ್ನು ನೋಡಿಕೊಳ್ಳುವ ಚಿಲ್ಲುಕದೇವನು ಭೂದಾನ ಪಡೆದ ವಿವರವನ್ನು ಕಾಣಬಹುದು. ಇಲ್ಲಿ ಉಲ್ಲೇಖವಾಗಿರುವ ಮೂರು ದೇವಾಲಯಗಳು ಪ್ರಸ್ತುತದಲ್ಲಿ ಇಲ್ಲ. ಕ್ರಿ.ಶ. ಹತ್ತನೇ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಈ ದೇವಾಲಯಗಳು ಕಾಲಾನಂತರದಲ್ಲಿ ನಾಶಗೊಂಡಿರಬೇಕು. ಬಹುಶಃ ಈ ಗ್ರಾಮ ಹೈದರಾಲಿಯ ಕಾಲದಲ್ಲಿ ಮುಸ್ಲಿಂ ಧರ್ಮದ ನೆಲೆಯಾಗಿ ರೂಪುಗೊಂಡಾಗ ಈ ದೇವಾಲಯಗಳು ನಾಮಾವಶೇಷವಾಗಿರಬಹುದು.

ಚನ್ನಪಟ್ಟಣ ತಾಲ್ಲೂಕಿನಲ್ಲಿ ದೊರೆಯುವ ಲಕುಲೀಶನ ಶಿಲ್ಪಗಳನ್ನು ಹಾಗೂ ಲಕುಲೀಶ ಪಂಥದ ದೇವಾಲಯಗಳನ್ನು ಈ ಕೆಳಗಿನಂತೆ ಗುರ್ತಿಸಬಹುದು.

* ಇಗ್ಗಲೂರು ಗ್ರಾಮದ ಶಿಂಷಾ ನದಿಯ ದಂಡೆಯಲ್ಲಿರುವ ಚೆನ್ನಸೋಮೇಶ್ವರ ದೇವಾಲಯದ ಮುಂಭಾಗ ಭಗ್ನಗೊಂಡಿರುವ ಕ್ರಿ.ಶ. ಸುಮಾರು ಏಳನೇ ಶತಮಾನದ ಲಕುಲೀಶನ ಮೂರ್ತಿಯಿದೆ. ಈ ಮೂರ್ತಿಯ ಆಧಾರದಿಂದ ಗಂಗರ ಕಾಲದಲ್ಲಿ ನಿರ್ಮಾಣಗೊಂಡ ಈ ಚೆನ್ನಸೋಮೇಶ್ವರ ದೇವಾಲಯ ಲಕುಲೀಶ ಪಂಥಕ್ಕೆ ಸೇರಿದ್ದಾಗಿದೆ ಎನ್ನಬಹುದು.

* ಬೇವೂರು ಗ್ರಾಮ ಕ್ರಿ.ಶ. ಒಂಭತ್ತನೇ ಶತಮಾನಕ್ಕಿಂತ ಪೂರ್ವದಲ್ಲಿ ಪ್ರಸಿದ್ಧ ಜೈನಕೇಂದ್ರವಾಗಿದ್ದಲ್ಲದೇ, ಲಕುಲೀಶ ಪಂಥಕ್ಕೆ ನೆಲೆಯಾಗಿತ್ತು ಎಂದು ತಿಳಿಯುತ್ತದೆ. ಈ ಗ್ರಾಮದ ಗಂಗರ ಕಾಲದ ಅರ್ಕೇಶ್ವರ ದೇವಾಲಯದ ಆವರಣದಲ್ಲಿ ಲಕುಲೀಶನ ಮೂರ್ತಿಯಿದೆ. ಕ್ರಿ.ಶ. ಸುಮಾರು ಎಂಟನೇ ಶತಮಾನಕ್ಕೆ ಸೇರಿದ ಈ ಲಕುಲೀಶನ ಮೂರ್ತಿಯನ್ನು ಭಗ್ನಗೊಂಡಿರುವ ಕಾರಣದಿಂದ ಈಗ ದೇವಾಲಯ ಜೀರ್ಣೋದ್ಧಾರದ ಸಂದರ್ಭದಲ್ಲಿ ಕೆರೆಯ ಬಳಿಯಿರುವ ಅರಳಿಮರದ ಕಟ್ಟೆಯಲ್ಲಿ ತಂದಿಡಲಾಗಿದೆ. ಈ ಶಿಲ್ಪದ ಆಧಾರದಿಂದ ಬೇವೂರಿನ ಅರ್ಕೇಶ್ವರ ದೇವಾಲಯ ಲಕುಲೀಶ ಪಂಥದೆಂಬುದು ಸ್ಪಷ್ಟ.



ಬೇವೂರು



ಕನ್ನಮಂಗಲ



ಇಗ್ಗಲೂರು



ನೆರಳೂರು



ಯಿಲೆತೋಟದಹಳ್ಳಿ

* ಕನ್ನಮಂಗಲ ಗ್ರಾಮದ ಕಣ್ವ ಜಲಾಶಯದ ಬಳಿಯಿರುವ ಕೋಡಿಬಸವೇಶ್ವರ ದೇವಾಲಯದ ಗರ್ಭಗುಡಿಯಲ್ಲಿ ಗಣಪತಿ ವಿಗ್ರಹದೊಡನೆ ಲಕುಲೀಶನ ಮೂರ್ತಿಯನ್ನಿಟ್ಟು ಪೂಜಿಸುವುದನ್ನು ಕಾಣಬಹುದು. ಕ್ರಿ.ಶ. ಸುಮಾರು ಎಂಟನೇ ಶತಮಾನದ ಈ ಲಕುಲೀಶ ವಿಗ್ರಹವಿರುವ ಈ ದೇವಾಲಯ ಮೂಲತಃ ಶಿವಾಲಯವಾಗಿದ್ದು, ಕಾಲಾನಂತರದಲ್ಲಿ ಬಸವ ದೇವಾಲಯವಾಗಿ ಮಾರ್ಪಟ್ಟಿದೆ. ಪ್ರಸ್ತುತದಲ್ಲಿ ದೇವಾಲಯದಲ್ಲಿ ಶಿವಲಿಂಗ ಇಲ್ಲವಾದರೂ ಇಲ್ಲಿನ ಗಣಪತಿ, ಬಸವ, ಲಕುಲೀಶನ ಮೂರ್ತಿಗಳ ಆಧಾರದಿಂದ ಇದು ಲಕುಲೀಶ ಪಂಥದ ಶಿವಾಲಯವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

* ನೆರಳೂರು ಗ್ರಾಮದ ಹೊರಪ್ರದೇಶದಲ್ಲಿರುವ ವೈದ್ಯನಾಥೇಶ್ವರ ದೇವಾಲಯ ಲಕುಲೀಶ ಪಂಥದ್ದಾಗಿದೆ. ಗಂಗರ ಕಾಲದ ಈ ದೇವಾಲಯದ ನವರಂಗದಲ್ಲಿ ಕ್ರಿ.ಶ. ಸುಮಾರು ಎಂಟನೇ ಶತಮಾನದ ಲಕುಲೀಶನ ಮೂರ್ತಿಯನ್ನು ಕಾಣಬಹುದು. ಇದರ ಆಧಾರದಿಂದ ಈ ವೈದ್ಯನಾಥೇಶ್ವರ ದೇವಾಲಯನ್ನು ಲಕುಲೀಶ ಮತದ ಮುನಿಗಳು ಸ್ಥಾಪಿಸಿದರೆನ್ನಬಹುದು.

* ಯಲೆತೋಟದಹಳ್ಳಿ ಗ್ರಾಮದ ಭೀಮೇಶ್ವರ ದೇವಾಲಯದ ಮುಂಭಾಗದಲ್ಲಿ ಕ್ರಿ.ಶ. ಸುಮಾರು ಎಂಟನೇ ಶತಮಾನಕ್ಕೆ ಸೇರಿದ ಲಕುಲೀಶನ ಮೂರ್ತಿಯಿದೆ. ಬಲಗೈಯಲ್ಲಿ ದಂಡವನ್ನಿಡಿದು ಸಮಭಂಗಿಯಲ್ಲಿ ನಿಂತಿರುವ ಲಕುಲೀಶನ ಮೂರ್ತಿಯು ಇಲ್ಲಿರುವುದರಿಂದ ಈ ದೇವಾಲಯ ಲಕುಲೀಶನ ಪಂಥಕ್ಕೆ ಸೇರಿದ್ದಾಗಿದೆ ಎಂದು ಗುರ್ತಿಸಬಹುದು.

* ಮಾಕಳಿ ಗ್ರಾಮದ ಹೊರ ಪ್ರದೇಶದಲ್ಲಿರುವ ಬೊಮ್ಮಲಿಂಗೇಶ್ವರ ದೇವಾಲಯದ ಆವರಣದಲ್ಲಿ ಕ್ರಿ.ಶ. ಒಂಭತ್ತನೇ ಶತಮಾನದ ಲಕುಲೀಶನ ಶಿಲ್ಪವಿದೆ. ಇಬ್ಬರು ಚಾಮರಧಾರಿಗಳ ಮಧ್ಯೆದಲ್ಲಿ ಲಾಕುಳ ದಂಡವನ್ನು ಹಿಡಿದು ಕುಳಿತ ಲಕುಲೀಶನ ಶಿಲ್ಪದ ಆಧಾರದಿಂದ ಈ ಬೊಮ್ಮಲಿಂಗೇಶ್ವರ (ಬ್ರಹ್ಮಲಿಂಗೇಶ್ವರ) ದೇವಾಲಯವನ್ನು ಲಕುಲೀಶ ಪಂಥದ ಮುನಿಗಳು ಸ್ಥಾಪಿಸಿದ್ದಾರೆನ್ನಬಹುದು.

ಲಕುಲೀಶನ ಶಿಲ್ಪಗಳು ಸಾಮಾನ್ಯ ಮನುಷ್ಯನಂತಿದ್ದು, ಪೀಠದ ಮೇಲೆ ಸುಖಾಸೀನ ಭಂಗಿಯಲ್ಲಿ ಕುಳಿತಂತೆ ಇದ್ದು, ದ್ವಿಬಾಹುಗಳನ್ನು ಹೊಂದಿವೆ. ಬಲಗೈಯಲ್ಲಿ ಲಾಕುಳ ದಂಡವನ್ನು ಹಿಡಿದಿದ್ದು, ಎಡಗೈಯನ್ನುಎಡಗಾಲಿನ ತೊಡೆಯ ಮೇಲಿಟ್ಟುಕೊಂಡಂತೆ ಕಡೆಯಲಾಗಿರುತ್ತದೆ. ಸಕಲ ಆಭರಣಗಳಿಂದ ಶೃಂಗಾರಗೊಂಡಂತೆ ಚಿತ್ರಿಸಲಾಗಿರುತ್ತದೆ. ಚನ್ನಪಟ್ಟಣ ತಾಲ್ಲೂಕಿನ ಬೇವೂರಿನ ಅರ್ಕೇಶ್ವರ ದೇವಾಲಯ, ಮಾಕಳಿಯ ಬ್ರಹ್ಮಲಿಂಗೇಶ್ವರ, ಕನ್ನಮಂಗಲದ ಬಸವೇಶ್ವರ, ನೇರಳೂರಿನ ವೈದ್ಯನಾಥೇಶ್ವರ, ಇಗ್ಗಲೂರಿನ ಚೆನ್ನಸೋಮೇಶ್ವರ, ಯಲೆತೋಟದಹಳ್ಳಿಯ ಭೀಮೇಶ್ವರ ದೇವಾಲಯಗಳಲ್ಲಿ ಕ್ರಿ.ಶ. ೭–೮ನೇ ಶತಮಾನದ ಲಕುಲೀಶನ ಶಿಲ್ಪಗಳಿವೆ. ಇವು ಸುಮಾರು ಒಂದರಿಂದ ಒಂದುವರೆ ಅಡಿ ಎತ್ತರವಾಗಿವೆ. ಬೇವೂರಿನ ಶಿಲ್ಪದಲ್ಲಿ ಜಟಾಬಂಧವಿದ್ದು, ಕೂದಲು ಹರಡಿದಂತೆ ಕೆತ್ತಲಾಗಿದೆ. ಯಲೆತೋಟದಹಳ್ಳಿ, ಮಾಕಳಿ, ನೇರಳೂರು, ಇಗ್ಗಲೂರುಗಳಲ್ಲಿನ ಲಕುಲೀಶನ ಶಿಲ್ಪಗಳಲ್ಲಿ ಕರಂಡ ಮಕುಟವಿದೆ. ಯಲೆತೋಟದಹಳ್ಳಿಯ ಲಕುಲೀಶನ ಶಿಲ್ಪ ಉಳಿದೆಲ್ಲವುಗಳಿಗಿಂತ ಭಿನ್ನವಾಗಿದ್ದು, ಸಮಭಂಗಿಯಲ್ಲಿ ನಿಂತಿರುವಂತೆ ಕಡೆಯಲಾಗಿದೆ. ಬಲಗೈಯಲ್ಲಿ ಲಾಕುಳ ದಂಡವನ್ನು ಹಿಡಿದಿದ್ದು, ಎಡಗೈಯನ್ನು ಸೊಂಟದ ಮೇಲಿಟ್ಟುಕೊಂಡು ಹಸನ್ಮುಖಿಯಾಗಿ ನಿಂತಿರುವಂತೆ ಚಿತ್ರಿಸಲಾಗಿದೆ.

ಅಡಿಟಿಪ್ಪಣಿ

೧. ಡಾ. ಕೆ. ವಸಂತಲಕ್ಷ್ಮಿ, ಕರ್ನಾಟಕದ ಶೈವ ಶಿಲ್ಪಗಳು, ಪು. ೧೩.
೨. ಪೂರ್ವೋಕ್ತ, ಪು. ೧೫೦.
೩. ವಿರೂಪಾಕ್ಷ ಕುಲಕರ್ಣಿ, ಕಾಪಾಲಿಕರು ಮತ್ತು ಕಾಳಾಮುಖರು, ಕಣ್ಮರೆಯಾದ ಎರಡು ಶೈವ ಸಂಪ್ರದಾಯಗಳು, ಪು. ೨೩೩.
೪. ಡಾ. ಚಿದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೧೪೨.
೫. ಡಾ. ಶ್ರೀಮತಿ ಕೆ.ವಸಂತಲಕ್ಷ್ಮಿ, ಕರ್ನಾಟಕದ ಶೈವಶಿಲ್ಪಗಳು, ಪು. ೧೨.
೬ ಡಾ. ಶ್ರೀಮತಿ ಕೆ. ವಸಂತಲಕ್ಷ್ಮಿ, ಕರ್ನಾಟಕದ ಶೈವಶಿಲ್ಪಗಳು, ಪು. ೧೪.
೭. ಬಿ.ಎಲ್. ರೈಸ್ (ಸಂ) : EC VII, ಶಿಕಾರಿಪುರ–೯, ಪು. ೧೧೪.
೮. ಬಿ.ಎಲ್. ರೈಸ್ (ಸಂ) : EC IX, ಚನ್ನಪಟ್ಟಣ–೪೮, ಸಂತೆಮೊಗೇನಹಳ್ಳಿ, ಪು. ೩೧೪.
೯. ಬಿ.ಎಲ್. ರೈಸ್ (ಸಂ) : EC XII, ಪೀಠಿಕೆ, ಪು. ೬.
೧೦. ಬಿ.ಎಲ್. ರೈಸ್ (ಸಂ) : EC IX, ಶಿರಾ–೨೮, ಹೇಮಾವತೀ, ಪು .೨೬೯.
೧೧. ಬಿ.ಎಲ್. ರೈಸ್ (ಸಂ) : EC IX, ಚನ್ನಪಟ್ಟಣ–೪೮, ಸಂತೆಮೊಗೇನಹಳ್ಳಿ, ಪು. ೩೧೪.

೨೭

ಬಾಸವೂರು ಕಂಪಣದಲ್ಲಿ ಶೈವಧರ್ಮ

ಶಿವಯೋಗಿ ಕೋರಿಶೆಟ್ಟರ*

ಪ್ರಾಚೀನ ಹಾಗೂ ಮಧ್ಯಕಾಲೀನ ಅವಧಿಯಲ್ಲಿ ಕನ್ನಡನಾಡಿನ ಆಡಳಿತ ವಿಭಾಗಗಳಲ್ಲಿ ಒಂದಾಗಿದ್ದ ಬನವಾಸಿ–೧೨೦೦೦ ಅಡಿಯಲ್ಲಿ ಬರುವ ಹಲವಾರು ಆಡಳಿತ ಕಂಪಣಗಳಲ್ಲಿ ಬಾಸವೂರು–೧೪೦ ಕೂಡಾ ಒಂದಾಗಿದೆ. ಪ್ರಸ್ತುತ ಹಾವೇರಿ ಜಿಲ್ಲೆಯ ಹಾವೇರಿ, ಬ್ಯಾಡಗಿ ಹಾಗೂ ಹಾನಗಲ್ ತಾಲೂಕಿನ ಪ್ರದೇಶಗಳನ್ನು ಬಾಸವೂರು ಕಂಪಣ ಒಳಗೊಂಡಿತ್ತು. ೮ನೇ ಶತಮಾನದಿಂದ ೧೩ನೇ ಶತಮಾನದವರೆಗೂ ಅಸ್ತಿತ್ವ ಹೊಂದಿದ್ದ ಈ ಕಂಪಣದ ಮೇಲೆ ಮಾಂಡಳೀಕರಾದ ಸೇನವಾರ ಹಾಗೂ ಖಚರ ಮನೆತನದ ದೊರೆಗಳು ಅಧಿಕಾರ ನಿರ್ವಹಿಸಿದ್ದಾರೆ. ಇಂತಹ ಬಾಸವೂರು ಕಂಪಣದಲ್ಲಿ ಶೈವಧರ್ಮದ ಛಾಯೆ ದಟ್ಟವಾಗಿ ಪಸರಿಸಿರುವುದನ್ನು ಕಾಣಬಹುದು. ಈ ಕಂಪಣದ ನಾಳ್ಗಾವುಂಡ ಹಾಗೂ ಮನ್ನೇಯರಾಗಿದ್ದ ಖಚರರು ಆರಂಭದಲ್ಲಿ ಜೈನರಾಗಿದ್ದರೂ, ನಂತರದಲ್ಲಿ ಶೈವಧರ್ಮವನ್ನು ಅಪ್ಪಿಕೊಂಡಿದ್ದು ಗಮನಿಸಬಹುದಾದ ವಿಚಾರವಾಗಿದೆ. ಈ ಮನೆತನದ ಎರಡನೇ ಕಲಿಯಮ್ಮರಸನು ಚಾಲುಕ್ಯ ಮಾಂಡಳೀಕ ಮನ್ನೆಯದರಸನಾಗಿದ್ದು, ಈತನು ತನ್ನನ್ನು *ಪದ್ಮಾವತಿ ವರಲಬ್ಧ ಪ್ರಸಾದ ಜನಪಾದ ಪಂಕಜ ರಜಃಪುಂಜ ಪಿಂಜರಿತಗಾತ್ರ* ಎಂಬುದಾಗಿ ಶಾಸನಗಳಲ್ಲಿ ಹೇಳಿಕೊಂಡಿದ್ದಾನೆ. ಈತನು ಕೋಳೂರಿನಲ್ಲಿ ತನ್ನ ಹೆಸರಿನ ಕಲಿದೇವೇಶ್ವರ ದೇವಾಲಯವನ್ನು ನಿರ್ಮಿಸಿ, ಆ ದೇವರ ನಂದಾದೀವಿಗೆಗೆ ಮೂವತ್ತು ಮನೆಗಳನ್ನು ದಾನವಾಗಿ ನೀಡಿದ್ದಾನೆ. (*ಎ.ಇಂ. ಸಂ. ೧೯*, ಕೋಳೂರು, ಕ್ರಿ. ಶ. ೧೦೪೫) ಕಲಿಯಮ್ಮರಸನು ರಾಜಗುರು ವರುಣಸಿವಪಂಡಿತರ ಸಮ್ಮುಖದಲ್ಲಿ, ಕೋಳೂರು ಕಲಿದೇವೇಶ್ವರ ದೇಗುಲದ ಆಚಾರ್ಯ ವಾಮರಾಸಿ ದೇವರ ಶಿಷ್ಯ ಮಲ್ಲಿಕಾರ್ಜುನಭಟಾರರ ಪಾದ ತೊಳೆದು ಮೇಲಿನ ದೇವಾಲಯಕ್ಕೆ ದಾನ ನೀಡಿದ್ದಾನೆ.

ಎರಡನೇ ಕಲಿಯಮ್ಮರಸನ ಉತ್ತರಾಧಿಕಾರಿಯಾಗಿ ಹೆರ್ಮಾಡಿಯರಸ ಬಾಸವೂರು–೧೪೦ರ ಮನ್ನೇಯನಾಗಿದ್ದನ್ನು ದೇವಗೆರಿ ಶಾಸನವು ತಿಳಿಸುತ್ತದೆ. (*ಎ.ಇಂ.ಸಂ. ೧೯. ಕ್ರಿ. ಶ. ೧೧೨೧*) ಈತನ ಆಳ್ವಿಕೆಯ ಮಹತ್ವದ ಘಟನೆ ಎಂದರೆ ಮೂಲತಃ ಪದ್ಮಾವತೀ ಲಬ್ದವರ ಪ್ರಸಾದನಾಗಿದ್ದ ಹೆರ್ಮಾಡಿಯರಸ, ಆನಂತರದಲ್ಲಿ ಮಹೇಶ್ವರ ದೀಕ್ಷೆ ಕೈಗೊಂಡು ದೇವಗೆರಿಯ ತ್ರಿಭೂವನೇಶ್ವರ ಮತ್ತು ಭೈರವ ದೇವರಿಗೆ ದಾನ ಬಿಟ್ಟಿದ್ದಾನೆ. ಶೈವಯತಿ ತ್ರಿಭೂವನಸಿಂಘಿ ಪಂಡಿತರ ಪಾದ ತೊಳೆದು ದಾನ ಬಿಟ್ಟಿರುವುದರಿಂದ ಅವರ ಪ್ರಭಾವ ಈತನ ಮೇಲೆ ಆಗಿರುವ ಸಾಧ್ಯತೆ ಇದೆ.

ಹೆರ್ಮಾಡಿಯರಸನ ತರುವಾಯ ಬಾಸವೂರನ್ನಾಳಿದ ಈತನ ಪುತ್ರ ಮೂರನೇ ಕಲಿಯಮ್ಮರಸನೂ ಶೈವನಾಗಿ ಮುಂದುವರಿದಿರುವುದನ್ನು ಕಾಣಬಹುದು. ಕ್ರಿ.ಶ. ೧೧೩೪ರ ಮೂರನೇ ಸೋಮೇಶ್ವರನ ಕಾಲದ ದೇವಗೆರಿ ಶಾಸನವು ಖಚರ ಕುಲದ ರಾಜಕುಮಾರ ಕಲಿಗ (ಕಲಿಯಮ್ಮರಸ) ಮಹೇಶ್ವರ ದೀಕ್ಷೆ ಪಡೆದು ಇಲ್ಲಿನ ಕಂಕಾಳೇಶ್ವರ ದೇವರ ಪೂಜೆ ಹಾಗೂ ನೈವೇಧ್ಯಕ್ಕೆ ಮಲ್ಲಿಕಾರ್ಜುನ ಪಂಡಿತರ ಕಾಲನ್ನು ತೊಳೆದು ದಾನ ನೀಡಿದ್ದನ್ನು ತಿಳಿಸುತ್ತದೆ. (*ಎ. ಇಂ. ಸಂ .೧೯. ದೇವಗೆರಿ, ಪು. ೧೮೩, ಕ್ರಿ.ಶ. ೧೧೩೪,*) ಕಾಚೇಯಸಾಹಣಿಯೊಬ್ಬನನ್ನು ಮಹಾಮಹೇಶ್ವರಂ ಸಮಯ ಧ[ರ್ಮ್ಮ] ಪ್ರತಿಪಾಳರುಮಪ್ಪ ಕಾಚೆಯ ಸಾಹಣಿ ಎಂಬುದಾಗಿ ಕಲಕೇರಿಯ ಶಾಸನವು ಕರೆದಿದೆ. (*ಸೌ.ಇಂ.ಇನ್ಸ. ಸಂ.೨೦, ಶಾ.ಸಂ.೨೨೮,* ಕಲಕೇರಿ)

ರಾಜಕೀಯ ಪಲ್ಲಟನದ ಅಂಗವಾಗಿ ಕಲ್ಯಾಣದ ಚಾಲುಕ್ಯ ದೊರೆ ೨ನೇ ಸೋಮೇಶ್ವರನ ಬೆಂಬಲಿಗರಾಗಿದ್ದ ನೊಳಂಬ ಪಲ್ಲವರು ಈ ಪ್ರದೇಶದ ಮೇಲೆ ತಾತ್ಕಾಲಿಕ ಅಧಿಕಾರ ಹೊಂದಿದ್ದರು. ನೊಳಂಬ ಪಲ್ಲವರು ಮೂಲತಃ ಶೈವರಾಗಿದ್ದರು. ಮಹಾಮಂಡಳೇಶ್ವರ ಶ್ರೀಮದ್ಬುವನೈಕಮಲ್ಲ ವೀರನೊಳಂಬ ಪಲ್ಲವ ಉದಯಾದಿತ್ಯನ ರಾಣಿ ಕಲಕೇರಿಯಲ್ಲಿ ಶಿವಾಲಯವನ್ನು ಮಾಡಿಸಿದುದನ್ನು ಕಾಣಬಹುದು. ನೊಳಂಬ ಪಲ್ಲವರು ಕರ್ನಾಟಕದಲ್ಲಿ ಶೈವಧರ್ಮದ ಬೆಳವಣಗೆಗೆ ಕಾರಣರಾಗಿದ್ದಾರೆ. ಇವರು ಶಿವನನ್ನು ಆರಾಧಿಸುವವರಿಗೆ ಬೆಂಬಲ ನೀಡುತ್ತಿದ್ದುದು ಶಾಸನಗಳಿಂದ ತಿಳಿಯುತ್ತದೆ. ಶಿವನನ್ನು

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕೆ.ಎಲ್.ಇ. ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯ, ಹಾವೇರಿ.

ಪೂಜಿಸುವ ಶಿವಾಲಯಗಳನ್ನು ನಿರ್ಮಿಸುವವರಿಗೆ ನೊಳಂಬವಟ್ಟ ವೆಂಬ ಬಿರುದನ್ನು ಕೊಟ್ಟು ಅವರನ್ನು ಸನ್ಮಾನಿಸುತ್ತಿದ್ದರು. ಈ ಅಂಶವನ್ನು ಕಲಕೇರಿ ಶಾಸನವು *ಒಸೆದು ಶಿವಲಿಂಗಮಂ ಪೂಜಿಸುವ ಶಿವಬ್ರತಿಗೆ ಭಕ್ತಿಯಂ ಮಾಳ್ಪ ಜಗಕ್ಕೆಸೆಯೆ ಶಿವಾಲಯಮಮಂ ಮಾಡಿಸುವಂಗೆ ನೊಳಂಬವಟ್ಟಮೆಂಬುದು ಬರಿದೇ* ಎಂಬುದಾಗಿ ಉಲ್ಲೇಖಿಸುತ್ತದೆ. (*ಸೌ.ಇಂ.ಇನ್ಸ. ಸಂ. ೨೦, ಶಾ.ಸಂ. ೪೯*, ಕಲಕೇರಿ. ಕ್ರಿ.ಶ. ೧೦೭೧)

ಬಾಸವೂರು ಕಂಪಣದ ಪ್ರಮುಖ ಉಪವಿಭಾಗವೆನಿಸಿದ್ದ ಕಲಕೇರಿಯ ನಾಳ್ಪ್ರಭುಗಳು ಕಟ್ಟಾ ಶೈವರಾಗಿದ್ದು, ಶೈವಧರ್ಮವನ್ನು ಪೋಷಿಸಿದರು. ಬೆಂಗೇರಿಯ ಗಾವುಂಡನಾದ ಬರ್ಮಗಾವುಂಡನು ಶ್ರೇಷ್ಠ ಶಿವಭಕ್ತನಾಗಿದ್ದನು. ಈತನನ್ನು ಶಾಸನವು *ಬಿಟ್ಟನಿವಧಿಕ ಪುಣ್ಯ ಸಿಷ್ಟಿಯೊಳಗ್ಗಳಮೆನಿಪ್ಪ ಬರ್ಮನೆ ಗಾವುಣ್ಡಂ ಪುಟ್ಟಿದನೆ ಕುಲಕ್ಕೆ ತಿಲಕಂ ನೆ[ಟ್ಟನೆ] ಸಿವಭಕ್ತನಾತನ ಪೊಗಳದವರಾರು* ಎಂಬುದಾಗಿ ಬಣ್ಣಿಸಿದೆ. (*ಅದೆ, ಶಾ.ಸಂ.೩೫*, ಕಲಕೇರಿ) ಇದೇ ಊರಿನ ಮತ್ತೊಂದು ಶಾಸನವು ದಂಡನಾಯಕ ಗೋವಿಂದರಸನನ್ನು ಶಿವನ ವಿಭಿನ್ನ ಮೂರ್ತಿಗಳಿಗೆ ಹೋಲಿಸಿ ಬಣ್ಣಿಸಿದೆ. *ರಣರಂಗ ಭೈರವಂ ಗೋವಿಂದ ಅವಯುವದಿಂ ಗಜಾಸುರ ನಾಗಾಶೋರವಾಗಿರೆಸಿೞ್ದಿ ಕೊಂದ ಭೈರವಾನದಟಂ ಜಟಾಶೂರನನಾಸುರವಾಗಿರೆ ತಾಗಿಕೊಂದ ಭೈರವನಿವ* ಎಂದಿದೆ. (*ಅದೆ, ಶಾ.ಸಂ. ೧೧೭*, ಕಲಕೇರಿ) ಕಾಗಿನೆಲೆಯ ಶಾಸನವು ಅಲ್ಲಿನ ಗಾವುಂಡು ಆಗಿದ್ದ ಕಾಳಗಾವುಂಡನನ್ನು ಶಿವನದಾಸಿ ಎಂದು ಉಲ್ಲೆಖಿಸಿದೆ. ಹೀಗಾಗಿ ಬಾಸವೂರು ಕಂಪಣದಲ್ಲಿ ಶೈವಧರ್ಮಕ್ಕೆ ರಾಜಾಶ್ರಯ ಮತ್ತು ಪ್ರಜಾಶ್ರಯ ಎರಡೂ ದೊರೆತು ಈ ಧರ್ಮ ಅವ್ಯಾಹಿತವಾಗಿ ನಡೆದುಬಂದಿತು.

ಶೈವಧರ್ಮದಲ್ಲಿ ಲಕುಳೀಶ ಪಾಶುಪತ, ಕಾಳಾಮುಖ, ಕಾಪಾಲಿಕ, ಕೌಳರೆಂಬ ಶಾಖೆಗಳಿವೆ. ಬಾಸವೂರು ಕಂಪಣದಲ್ಲಿ ಶೈವಧರ್ಮದ ಮೇಲಿನ ಎಲ್ಲ ಶಾಖೆಗಳ ಆರಾಧಕರಿದ್ದರೆನ್ನಬಹುದು.

ಕಾಳಾಮುಖರು

ಕಾಳಾಮುಖ ಮತ್ತು ಲಕುಳೀಶ ಪಾಶುಪತ ಒಂದೇ ಆಗಿದ್ದು, ಲಕುಳೇಶ ಪಾಶುಪತದ ಮುನಿಗಳು ಧರಿಸುವ ವ್ರತದ ಹೆಸರು ಕಾಳಾಮುಖವೆಂದು ಕಪಟರಾಳ ಕೃಷ್ಣರಾಯರು ತಮ್ಮ *ಕರ್ನಾಟಕ ಲಾಕುಳ ಶೈವರ ಇತಿಹಾಸ* ದಲ್ಲಿ ಹೇಳಿದ್ದಾರೆ. *ಕರ್ನಾಟಕದಲ್ಲಿ ಲಾಕುಳ ಸಮಯದ ಅನುಯಾಯಿಗಳಾದ ಮಾಹೇಶ್ವರರು ಪ್ರಶಿದ್ಧ ಜನಾಂಗವಾಗಿದ್ದರೆಂಬುದು ಸರ್ವಸಮ್ಮತ ವಿಷಯವಾಗಿದೆ. ಅವರಲ್ಲಿ ವಿಶಿಷ್ಟ ದೀಕ್ಷೆ ಹೊಂದಿದವರಿಗೆ ಮಾತ್ರ ಕಾಳಾಮುಖ ಅಸಿತವಕ್ತ್ರರು ಮುಂತಾದ ಅನೇಕ ಶಬ್ದಗಳಿಂದ ಶಾಸನಗಳಲ್ಲಿ ಸಂಬೋಧಿಸಲಾಗಿದೆ.* (ಕಪಟರಾಳ ಕೃಷ್ಣರಾಯರು., *ಕರ್ನಾಟಕ ಲಾಕುಳ ಶೈವರ ಇತಿಹಾಸ*, ಪು. ೧೦೭) ಕಾಳಾಮುಖರು ಮತ್ತು ಕಾಪಾಲಿಕರು ಒಂದೇ ಎಂದು ಕೆಲವು ವಿದ್ವಾಂಸರು ಹೇಳುತ್ತಾರೆ. (ನೀಲಕಂಠಶಾಸ್ತ್ರಿ ಕೆ.ಎ., *ಎ ಹಿಸ್ಟರಿ ಆಫ್ ಸೌಥ್ ಇಂಡಿಯಾ*, ಪು. ೪೨೨) ಕನ್ನಡ ನಾಡಿನಲ್ಲಿ ಬಳ್ಳಿಗಾವಿ, ಆಂಧ್ರಪ್ರದೇಶದ ಶ್ರೀಶೈಲ ಕಾಳಾಮುಖರ ಪ್ರಮುಖ ಕೇಂದ್ರಗಳಾಗಿದ್ದವು. ತಮಿಳುನಾಡಿನಲ್ಲಿಯೂ ಇವರ ಪ್ರಭಾವಿದ್ದು, ಕಾಳಾಮುಖರು ಹೆಚ್ಚು ಕಡಿಮೆ ದಕ್ಷಿಣ ಭಾರತದಲ್ಲೆಲ್ಲ ಪ್ರಭಾವಶಾಲಿಗಳಾಗಿದ್ದರು. (ಮಹಾಲಿಂಗಮ್ ಟಿ.ವಿ. *ದಿ ಪಾಶುಪಥಾಸ್ ಇನ್ ಸೌಥ ಇಂಡಿಯಾ, ಜರ್ನಲ್ ಆಫ್ ಇಂಡಿಯನ್ ಹಿಸ್ಟರಿ ಸಂ.೨೭*, ಪು. ೫೦) ಕಾಳಾಮುಖ ಶೈವ ಪಂಥದವರ ಬಹುಮುಖ್ಯ ಕೊಡುಗೆಯಂದರೆ ಹಳ್ಳಿಗಳಲ್ಲಿಯೂ ದೇವಾಲಯಗಳ ನಿರ್ಮಾಣ ಮತ್ತು ದೇವಾಲಯಗಳನ್ನೇ ವಿದ್ಯಾಕೇಂದ್ರಗಳನ್ನಾಗಿ ಮಾಡಿಕೊಂಡು ವಿದ್ಯಾದಾನ ಕಾರ್ಯವನ್ನು ಕೈಗೊಂಡಿದ್ದು. (ಡೆವಿಡ್ ಎನ್ ಲೊರೇಂಜನ್ *ದಿ ಕಾಪಾಲಿಕಾಸ್ ಅಂಡ ಕಾಳಾಮುಖಾಸ್*, ಪು. ೧೭೬)

ಕ್ರಿ.ಶ. ೧೦ನೇ ಶತಮಾನದ ತರುವಾಯ ಪ್ರಾಬಲ್ಯಕ್ಕೆ ಬಂದ ಕಾಳಮುಖರು ಕನ್ನಡ ನಾಡಿನ ಬಹುಪಾಲು ಶೈವದೇವಾಲಯಗಳ ಆಡಳಿತ ವ್ಯವಸ್ಥೆಯ ಪ್ರಮುಖರಾಗಿದ್ದರು. ದೇವಾಲಯಗಳಿಗೆ ದಾನ ದತ್ತಿಗಳನ್ನು ನೀಡುವಾಗ ಬಹುತೇಕ ಕಾಳಾಮುಖ ಗುರುಗಳ ಕಾಲಂ ಕರ್ಚಿ ನೀಡಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಕಾಳಾಮುಖ ಗುರುಗಳು ನೈಷ್ಠಿಕ ತಪೋಧನರೂ, ಜಿತೇಂದ್ರಿಯರೂ, ಲಾಕುಳಾಗಮಕೋವಿದರೂ, ಸ್ಥಾನಾಚಾರ್ಯರೂ, ಸಕಲಧರ್ಮಗಳನ್ನು ಪಾಲಿಸುವವರು, ರಾಜಕೀಯದಲ್ಲಿ ಪ್ರಭಾವವುಳ್ಳವರೂ ಆಗಿರುವುದನ್ನು ಆ ಕಾಲದ ಶಾಸನಗಳು ಉಲ್ಲೇಖಿಸಿರುವುದನ್ನು ಕಾಣಬಹುದು.

ಬಾಸವೂರು ಕಂಪಣದ ಕಲಕೇರಿಯು ಕಾಳಾಮುಖರ ಪ್ರಭಾವಕ್ಕೆ ಒಳಪಟ್ಟ ಪ್ರಮುಖ ಕೇಂದ್ರವಾಗಿತ್ತು. ಇಲ್ಲಿನ ಸೋಮೇಶ್ವರ ದೇವಾಲಯಕ್ಕೆ ಹೊಂದಿಕೊಂಡಿರುವ ಮಠವು ನೈಷ್ಠಿಕ ಸ್ಥಾನವಾಗಿದ್ದು, ಈ ಮಠದ ನೈಷ್ಠಿಕರಿಗಾಗಿ ದಾನ ಬಿಟ್ಟಿರುವುದನ್ನು ಶಾಸವೊಂದು ಈ ರೀತಿಯಾಗಿ ತಿಳಿಸುತ್ತದೆ. *ಇಂತೆನಿಸಿದ ಕಾಳಾಮುಖ ನೈಷ್ಠಿಕ ತಪೋಧನರ್ಗ್ರವಲ್ಲಿಯ*

ಚ್ಛಾತ್ರಗ್ರ್ಗವಲ್ಲಿಯ ಪಾವುಳಕಂ ಖಣ್ಡಸ್ಫುಟಿತಕ್ಕಂ ದೇವರ್ಗ್ಗೆ ದಾನ ಮಾಡಲಾಗಿದೆ. ಮುಂದುವರಿದು ಈ ಶಾಸನವು ॥ಈ ಸ್ಥಾನದಲು ನೈಷ್ಠಿಕರಲ್ಲದ ತಪೋಧನರಿರಲಾರದು॥ ಎಂದಿದೆ. *(ಸೌ.ಇಂ.ಇನ್ಸ. ಸಂ.೨೦, ಶಾ.ಸಂ.೪೯, ಕಲಕೇರಿ)*

ಸ್ಥಾನಪತಿಗಳು

ಬಾಸವೂರು ಕಂಪಣದಲ್ಲಿ ಹಲವಾರು ಶೈವ ದೇವಾಲಯಗಳು ನಿರ್ಮಿಸಲ್ಪಟ್ಟಿದ್ದು, ಈ ದೇವಾಲಯಗಳು ಶೈವಧರ್ಮದ ಪ್ರಸಾರ ಕೇಂದ್ರಗಳಾಗಿದ್ದವು. ಇಂತಹ ದೇವಾಲಯಗಳಲ್ಲಿ ಪಾಶುಪತ ಕಾಳಾಮುಖ ಗುರುಗಳು ಅಲ್ಲಿನ ಸ್ಥಾನಪತಿಗಳಾಗಿದ್ದರು. ಕರ್ನಾಟಕದಲ್ಲಿ ಮುದಿನೀರತೀರ್ಥದ ಕಾಶ್ಮೀರದ ಮತ್ತು ಪರ್ವತಾವಳಿಯ ಗುರುಮಠಗಳು ಇದ್ದು, ಇವುಗಳಿಗೆ ಸೇರಿದ ಕಾಳಾಮುಖ ಗುರುಗಳೇ ಸಾಮಾನ್ಯವಾಗಿ ಈ ಕಂಪಣದ ವಿವಿಧ ಮಠಗಳಲ್ಲಿ ಸ್ಥಾನಪತಿಗಳಾಗಿರುವುದನ್ನು ಕಾಣಬಹುದು. ಈ ಸ್ಥಾನಪತಿಗಳು ದೇವಾಲಯದ ಪರವಾಗಿ ಹಲವಾರು ಕಡೆಗಳಲ್ಲಿ ದಾನ ಸ್ವೀಕರಿಸಿದ್ದಾರೆ. ಕಂಪಣದ ಶಿವದೇವಾಲಯಗಳಲ್ಲಿ ಸ್ಥಾನಾಚಾರ್ಯರಾಗಿ ಸೇವೆಗೈದ ಶಾಸನೋಕ್ತ ಶೈವಯತಿಗಳ ಪಟ್ಟಿಯನ್ನು ಕೆಳಗೆ ಕಾಲಾನುಕ್ರಮದಲ್ಲಿ ಕೊಡಲಾಗಿದೆ.

ಬಾಸವೂರು ಕಂಪಣದ ಶೈವದೇವಾಲಯಗಳ ಸ್ಥಾನಪತಿಗಳು

೧. ಚಾಮುಂಡ ಭಟಾರರು (ಕ್ರಿ.ಶ. ೧೦೦೫), ೨. ಶಂಕರರಾಸಿ ಜಿಯಾ (ಕ್ರಿ.ಶ. ೧೦೨೮), ೩. ರಾಜಗುರುದೇವ (ಕ್ರಿ.ಶ. ೧೦೪೫), ೪. ತ್ರಿಭೂವನಸಿಂಗಿ ಜೀಯ (ಕ್ರಿ.ಶ. ೧೦೪೮), ೫. ಪಶುಪತಿದೇವ (ಕ್ರಿ.ಶ. ೧೦೫೫), ೬. ಗಂಗರಾಸಿ ಮುನಿಪ (ಕ್ರಿ.ಶ. ೧೦೬೫), ೭. ಶಿವರಾಜಗುರುದೇವ (ಕ್ರಿ.ಶ. ೧೦೬೮), ೮. ದೇವಸಿಂಗಜೀಯ (ಕ್ರಿ.ಶ. ೧೦೭೧), ೯. ಸದ್ಯೋಜಾತ ಪಂಡಿತ, ೧೦. ಚಂದ್ರಾಭರಣ ಪಂಡಿತ (ಕ್ರಿ.ಶ. ೧೦೭೩), ೧೧. ಗಂಗರಾಸಿ ಪಂಡಿತ (ಕ್ರಿ.ಶ. ೧೦೭೫), ೧೨. ಕನ್ನಡಾಚಾರ್ಯ (ಕ್ರಿ.ಶ. ೧೦೮೦), ೧೩. ಮಲ್ಲಿಕಾರ್ಜುನ ಪಂಡಿತ (ಕ್ರಿ.ಶ. ೧೦೯೨), ೧೪. ತ್ರಿಭುವನಸಿಂಗಿ ಪಂಡಿತ (ಕ್ರಿ.ಶ. ೧೧೦೨), ೧೫. ಲೋಕಾಭರಣ ಪಂಡಿತ (ಕ್ರಿ.ಶ. ೧೧೨೧), ೧೬. ಶಿವಶಕ್ತಿ ಪಂಡಿತ (ಕ್ರಿ.ಶ. ೧೧೨೨), ೧೭. ರಾಮಸಿಂಗಿ ಪಂಡಿತ (ಕ್ರಿ.ಶ. ೧೧೬೦), ೧೮. ಸೋವರಾಸಿ ಪಂಡಿತ (ಕ್ರಿ.ಶ. ೧೧೬೧), ೧೯. ಬ್ರಹ್ಮರಸಿ ಪಂಡಿತ (ಕ್ರಿ.ಶ. ೧೧೬೭), ೨೦. ಮೂರುಜಾವಿದೇವ (ಕ್ರಿ.ಶ. ೧೨೦೬), ೨೧. ಜ್ಞಾನರಾಸಿದೇವ (ಕ್ರಿ.ಶ. ೧೨೨೮), ೨೨. ಅಮರೇಶ್ವರದೇವ, ಮಲ್ಲಿಕಾರ್ಜುನದೇವ (ಕ್ರಿ.ಶ. ೧೨೪೭).

ವೀರಶೈವ ಧರ್ಮ

ಶೈವ ಧರ್ಮದ ವಿಕಸಿತ ರೂಪ ವೀರಶೈವ. (ನಾರಾಯಣ ಪಿ.ವಿ., ವ.ಸಾ.ಒಂದು ಸಾಂಸ್ಕೃತಿಕ ಅಧ್ಯಯನ, ಪು. ೩೬೮) ವೀರಶೈವ ಧರ್ಮ ದೇವರ ದಾಸಿಮಯ್ಯನಿಗೂ ಪೂರ್ವದಿಂದಲೇ ನಡೆದುಬಂದಿದೆ. (*ಅದೆ. ಪು. ೩೮೫*) ಕ್ರಿ.ಶ. ೧೨ನೇ ಶತಮಾನದ ಉತ್ತರಾರ್ಧದಲ್ಲಿ ಬಸವಣ್ಣನವರಿಂದ ಪುನರುತ್ಥಾನಗೊಂಡ ವೀರಶೈವ ಧರ್ಮವು ಅಸ್ತಿತ್ವದಲ್ಲಿದ್ದ ಶೈವ ಧರ್ಮಕ್ಕೆ ಬಲವಾದ ಪೆಟ್ಟು ನೀಡಿತೆನ್ನಬಹುದು. ಕಾಳಾಮುಖರು ಲಿಂಗ ಪ್ರತಿಷ್ಠೆಯನ್ನು ಒಪ್ಪಿ ದೇವಸ್ಥಾನಗಳ ನಿರ್ಮಾಣ ಕಾರ್ಯವನ್ನು ವೀರವ್ರತದಂತೆ ಅಂಗೀಕರಿಸಿದ್ದರೆ, ಇಷ್ಟಲಿಂಗಾರಾಧಕರಾದ ವೀರಶೈವರು ಕಾಳಾಮುಖರ ಆ ಎರಡು ತತ್ವಗಳನ್ನು ಪ್ರತಿಭಟಿಸಬೇಕೆಂಬ ಉದ್ದೇಶದಿಂದಲೋ ಏನೋ ಸ್ಥಾವರಲಿಂಗ ಪ್ರತಿಷ್ಠೆಯನ್ನು ವಿರೋಧಿಸಿ ದೇವಸ್ಥಾನಗಳ ನಿರ್ಮಾಣವನ್ನೂ ಪ್ರತಿಭಟಿಸಿದರು. (ಚಿದಾನಂದಮೂರ್ತಿ. ಎಂ. ಕನ್ನಡ *ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು. ೧೫೮) ಸರಳ ಭಕ್ತಿಯನ್ನು ಪ್ರತಿಪಾದಿಸಿದ ವೀರಶೈವ ಶರಣರಿಗೆ ಕಾಳಾಮುಖರ ಭಸ್ಮಸ್ನಾನ, ಭಸ್ಮಾಶಯನ ಮುಂತಾದ ವಿಚಿತ್ರ ಆಚರಣೆಗಳು ಸರಿ ಎನಿಸಲಿಲ್ಲ. ಅವರ ಆಚರಣೆಗಳನ್ನು ಶಿವಶರಣರು ತಮ್ಮ ವಚನಗಳ ಮೂಲಕ ಕಟುವಾಗಿಯೇ ಟೀಕಿಸಿದರು. ಬಸವ, ಅಲ್ಲಮ, ಚನ್ನಬಸವ, ಅಕ್ಕಮಹಾದೇವಿ ಮುಂತಾದ ಶಿವಶರಣರಿಂದ ಉತ್ಕರ್ಷಗೊಂಡ ವೀರಶೈವ ಧರ್ಮದ ವಿರುದ್ಧ ಕಾಳಾಮುಖ ಶೈವಧರ್ಮವು ಸೆಣಸಲು ಸಾಧ್ಯವಾಗದೇ ವೀರಶೈವಧರ್ಮದಲ್ಲಿ ಲೀನವಾದಂತೆ ಕಾಣುತ್ತದೆ. ಹೀಗಾಗಿ ನಂತರದ ಅವಧಿಯಲ್ಲಿ ಕಾಳಾಮುಖ ಶೈವದೇವಾಲಯಗಳು ವೀರಶೈವ ಜಂಗಮ ಮಠಗಳಾಗಿ ಪರಿವರ್ತನಗೊಂಡಿದ್ದಲ್ಲದೇ, ಕಾಳಾಮುಖ ಶೈವಯತಿಗಳ ಪ್ರಾಬಲ್ಯವೂ ಅಡಗಿ, ಅವರ ಸಂಖ್ಯೆಯೂ ಕ್ರಮೇಣವಾಗಿ ಕ್ಷೀಣಿಸಿತು.

ಬಾಸವೂರು ಕಂಪಣದ ಮೇಲೆಯೂ ವೀರಶೈವ ಧರ್ಮದ ಪ್ರಭಾವವನ್ನು ಕಾಣಬಹುದು. ೧೨ನೇ ಶತಮಾನದ ಶರಣರಲ್ಲಿ ಅಗ್ರಗಣ್ಯರಾದ ಅಲ್ಲಮ ಪ್ರಭುದೇವರ ಜನ್ಮಸ್ಥಳ ಕರವೂರು, ಡಾ. ಎಂ.ಎಂ. ಕಲಬುರ್ಗಿಯವರು ಊಹಿಸಿದಂತೆ ನಾಗರಖಂಡದ ಒಂದು ಗ್ರಾಮ. (ಭೋಜರಾಜ ಪಾಟೀಲ., *ನಾಗರಖಂಡ-೭೦: ಒಂದು ಅಧ್ಯಯನ*, ಪು. ೨೪೦) ಉಡುತಡಿಯ ಅಕ್ಕಮಹಾದೇವಿ, ಅಬ್ಬಲೂರಿನ ಏಕಾಂತದ ರಾಮಯ್ಯ ಮುಂತಾದ ಶಿವಶರಣರು ಬಾಸವೂರು ಕಂಪಣಕ್ಕೆ

ಸಮೀಪದ ಪ್ರದೇಶಗಳಿಗೆ ಸೇರಿದವರಾಗಿದ್ದರು. ಹೀಗಾಗಿ ಅವರ ಪ್ರಭಾವ ಈ ಪ್ರದೇಶದ ಮೇಲಾಗಿದ್ದು ಸಹಜವಾಗಿತ್ತು. ಡಾ. ಎಂ.ಎಂ. ಕಲಬುರ್ಗಿ ಶರಣ ಮಸಣಯ್ಯನು ಹಿರೇಹಳ್ಳಿ (ಗೊಟ್ಟಗಡಿ)ಯವನಾಗಿದ್ದು, ಅಲ್ಲಿನ ಅಂಗಜೇಶ್ವರ ಭಕ್ತನಿರಬೇಕೆಂದು ಅನುಮಾನಿಸುತ್ತಾರೆ. (ಸೂರ್ಯನಾಥ ಕಾಮತ., ಕ.ಗ್ಯಾ.ಧಾ.ಜಿ. ಪು. ೧೦೩೯) ಈ ಪ್ರದೇಶವು ಬಾಸವೂರು ಕಂಪಣಕ್ಕೆ ಒಳಪಟ್ಟಿತ್ತು. ವೀರಶೈವ ಧರ್ಮದ ಪ್ರಭಾವದಿಂದಾಗಿಯೇ ಅನೇಕ ವೀರಶೈವ ಮಠಗಳು (ಗುರುವರ್ಗದ ಮಠಗಳು ಹಾಗೂ ವಿರಕ್ತಮಠಗಳು) ಈ ಭಾಗದ ವಿವಿಧ ಪ್ರದೇಶಗಳಲ್ಲಿ ಏಳಿಗೆಗೆ ಬಂದವು. ಹಾವೇರಿಯೊಂದರಲ್ಲಿಯೆ ಸುಮಾರು ೬೩ ಮಠಗಳು ಅಸ್ತಿತ್ವದಲ್ಲಿದ್ದುದನ್ನು ಕಾಣುತ್ತೇವೆ.

ಉಪಸಂಹಾರ

ಭಾರತದ ಸನಾತನ ಧರ್ಮವಾದ ಶೈವಧರ್ಮವು ಕಾಲಾಂತರದಲ್ಲಿ ಅನೇಕ ಆಚರಣೆ, ನಂಬುಗೆ ಹಾಗೂ ಸಂಪ್ರದಾಯಗಳನ್ನು ಮೈಗೂಡಿಸಿ ಬೆಳೆಯಿತು. ಮುಂದೆ ತನ್ನ ಅಸ್ತಿತ್ವಕ್ಕಾಗಿ ಜೈನ, ಬೌದ್ಧ, ಶ್ರೀವೈಷ್ಣವ ಹಾಗೂ ವೀರಶೈವ ಧರ್ಮಗಳೊಡನೆ ಸ್ಪರ್ಧೆಗಿಳಿಯಬೇಕಾಯಿತು. ಬಾಸವೂರು ಕಂಪಣದಲ್ಲಿಯೂ ಶೈವ ಧರ್ಮವು ಆಳರಸರು, ಮಾಂಡಳೀಕರು ಹಾಗೂ ಸ್ಥಾನಿಕರಿಂದ ಪೋಷಣೆಗೊಂಡು ಬೆಳೆಯಿತು. ಶೈವ ಧರ್ಮದ ಶಾಖೆಗಳಾದ ಲಕುಳೀಶ–ಪಾಶುಪಥ, ಕಾಳಮುಖ, ಶಾಕ್ತ, ಕೌಳ ಪಂಥಗಳು ಇತರೆ ಧರ್ಮಗಳೊಂದಿಗೆ ಸಹಬಾಳ್ವೆ ನಡಿಸಿದರೂ, ಹನ್ನೊಂದನೇ ಶತಮಾನದ ನಂತರದ ಅವಧಿಯಲ್ಲಿ ಶೈವಧರ್ಮ ತನ್ನ ಅಸ್ತಿತ್ವಕ್ಕಾಗಿ ಹೊರಾಟ ನಡೆಸಿರುವುದು ನೆರೆಯ ಆಡಳಿತ ಕಂಪಣದ ಏಕಾಂತದ ರಾಮಯ್ಯ, ಗೊಗ್ಗಿದೇವ ಮುಂತಾದವರ ಪ್ರಸಂಗಗಳು ಅದನ್ನು ಪುಷ್ಟೀಕರಿಸುತ್ತವೆ. ಅವುಗಳ ಪ್ರಭಾವ ಬಾಸವೂರು ಕಂಪಣದ ಮೇಲಾಗಿರುವುದು ಸಹಜವಾಗಿದೆ. ಹನ್ನೆರಡನೇ ಶತಮಾನದ ಸುಮಾರಿಗೆ ಶೈವಧರ್ಮ ಸೊರಗಿದಂತೆ ಕಂಡುಬಂದರೂ, ಪ್ರಸ್ತುತದಲ್ಲಿಯೂ ವೀರಶೈವರೆಂದು ಹೇಳಿಕೊಳ್ಳುವವರು ಜಂಗಮ ಲಿಂಗದ ಜೊತೆಯಲ್ಲಿಯೆ ಸ್ಥಾವರ ಲಿಂಗವನ್ನು ಪೂಜಿಸುತ್ತಿರುವುದು ಹಾಗೂ ಮಠಗಳ ಜೊತೆಯಲ್ಲಿಯೇ ದೇವಾಲಯ ನಿರ್ಮಾಣ ಇಂದಿಗೂ ಮುಂದುವರಿದಿರುವುದು, ಪರಿವರ್ತಿತ ಶೈವ ಧರ್ಮ ಇಂದಿಗೂ ತನ್ನ ಪ್ರಾಬಲ್ಯ ಹೊಂದಿರುವುದರ ಪ್ರತೀಕವೆನ್ನಬಹುದು.

೭೮

ಪುಷ್ಪಗಿರಿ ಮಲ್ಲಿಕಾರ್ಜುನ ದೇವಾಲಯ ಒಂದು ಅವಲೋಕನ

ರೇಣುಕ ಸಿ.ಕೆ.* **ಡಾ. ಲೋಕೇಶ್ ಸಿ.ಈ.****

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ ಕಂಡುಬರುವ ಗಿರಿಧಾಮವಾದ ಪುಷ್ಪಗಿರಿಯು ಕನ್ನಡನಾಡಿನ ಶಿಲ್ಪಕಲೆಗೆ ಪ್ರಸಿದ್ಧವಾದ ಹಳೇಬೀಡಿನಂದ ಕೇವಲ ಎರಡು ಮೈಲಿ ದೂರದಲ್ಲಿ ಕಂಡುಬಂದು ಈ ಗಿರಿಯು ಐತಿಹಾಸಿಕವಾಗಿ ಪ್ರಸಿದ್ಧಿ ಹೊಂದಿರುವ ಸ್ಥಳವಾಗಿದೆ. ಹಳೇಬೀಡಿನಿಂದ ದಕ್ಷಿಣಕ್ಕೆ ಹಗರೆ ಮಾರ್ಗ ಹಾಸನಕ್ಕೆ ಹೋಗುವ ಬದಿಯ ಈ ಸ್ಥಳ ಎಲ್ಲರ ಗಮನ ಸೆಳೆಯುತ್ತದೆ. ಪ್ರವಾಸಿಗರು ಸಾಮಾನ್ಯವಾಗಿ ಈ ಸ್ಥಳವನ್ನು ಕಾಣರು. ಏಕೆಂದರೆ ಈ ಗಿರಿಧಾಮದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದಿರುವುದರಿಂದ ಶ್ರೀಶೈಲದಲ್ಲಿ ನೆಲೆಯಾಗಿರುವ ಶ್ರೀಮಲ್ಲಿಕಾರ್ಜುನ ಪುಷ್ಪಗಿರಿಯಲ್ಲಿ ನೆಲೆಸಿರುವುದನ್ನು ಕಾಣಬಹುದು. ಸುಮಾರು ೧೧ನೇ ಶತಮಾನಕ್ಕಿಂತ ಹಿಂದಿನ ಪುಷ್ಪಗಿರಿ ಮಲ್ಲಿಕಾರ್ಜುನನ ನೆಲೆಯ ಬಗ್ಗೆ ನಿಖರವಾದ ಹಿನ್ನೆಲೆಯಿಲ್ಲ. ಶೈವ, ವೈಷ್ಣವ, ಜೈನಧರ್ಮದ ಆಳ್ವಿಕೆಯ ಏಳುಬೀಳಿಗೆ ಪುಷ್ಪಗಿರಿ ಸಾಕ್ಷಿ ನುಡಿದಂತಿದೆ. ಈ ಪುಷ್ಪಗಿರಿಯು ೩೦೦ ಅಡಿ ಎತ್ತರವಿದ್ದು, ಈ ಗಿರಿಯ ಪಾದದಡಿ ವೃತ್ತಾಕಾರದ ನಾಲ್ಕು ಕಂಬದ ಒಂದು ಮಂಟಪವಿದೆ. ಇದು ಹೊಯ್ಸಳರ ಕಾಲದ್ದಾಗಿದೆ. ಗಿರಿಯ ಮೇಲೆ ಸಾಗಲು ಕಲ್ಲಿನ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಬೆಟ್ಟದ ಮೇಲೆ ಸಾಗಿದರೆ ಪೂರ್ವಾಭಿಮುಖವಾಗಿ ಇರುವ ದೇವಾಲಯವೇ ಶ್ರೀಮಲ್ಲಿಕಾರ್ಜುನ ದೇವಾಲಯ.

ಮಲ್ಲಿಕಾರ್ಜುನ ದೇವಾಲಯ

ಈ ಪುಷ್ಪಗಿರಿಯಲ್ಲಿ ಪ್ರಮುಖವಾದಂತಹ ದೇವಾಲಯಗಳೆಂದರೆ ಈ ಮಲ್ಲಿಕಾರ್ಜುನ ದೇವಾಲಯ. ಈ ದೇವಾಲಯವು ಚೌಕಕಾರವಾಗಿದ್ದು, ಗರ್ಭಗುಡಿ, ಸುಖನಾಸಿ, ನವರಂಗ, ಸಭಾಮಂಟಪ, ಮಹಾದ್ವಾರ ಮಂಟಪಗಳನ್ನು ಒಳಗೊಂಡಿದೆ. ಹೊಯ್ಸಳ ಇಮ್ಮಡಿ ನರಸಿಂಹನ ಕಾಲದಲ್ಲಿ ಕ್ರಿ.ಶ. ೧೨೨೭ರಲ್ಲಿ ನಿರ್ಮಾಣ ಮಾಡಲಾಯಿತೆಂದು ತಿಳಿದುಬರುತ್ತದೆ. ನಂತರದ ಹೊಯ್ಸಳರದ ಅರಸ ಬಲ್ಲಾಳನು ಇದರ ಜೀರ್ಣೋದ್ಧಾರಕ್ಕಾಗಿ ಅನೇಕ ದಾನವನ್ನು (ದೇಣಿಗೆ) ನೀಡಿದರ ಬಗೆಗೆ ಮಾಹಿತಿ ಇದೆ. ಹಾಗೂ ವಿಜಯನಗರದ ಅರಸ ಸದಾಶಿವರಾಯನು ಈ ದೇವಾಲಯದ ಧಾರ್ಮಿಕ ಪೂಜಾ ಕೈಂಕಾರ್ಯಗಳಿಗಾಗಿ ನೆರವೇರಿಸುವುದಕ್ಕಾಗಿ ೧೦೦ ವರಹ ಕೊಟ್ಟ ಮಾಹಿತಿಯನ್ನು ನೀಡಲಾಗಿದೆ.

ಗರ್ಭಗೃಹ

ಗರ್ಭಗೃಹವು ೮x೮ ಅಡಿಗಳ ಉದ್ದ ಅಗಲವಾಗಿದ್ದು, ಚೌಕಕಾರವಾಗಿದೆ. ಸರಳವಾಗಿರುವ ಈ ಗರ್ಭಗೃಹದ ಮಧ್ಯದಲ್ಲಿ ಸುಮಾರು ೨ ಅಡಿಗಳ ಎತ್ತರವಿರುವ ಪಾಣಿಪೀಠದ ಮೇಲೆ ಶಿವನ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಆದರೆ ಇತ್ತೀಚೆಗೆ ಶಿವಲಿಂಗಕ್ಕೆ ಮುಖಪದ್ಮವನ್ನು ಮಾಡಿಸಿ ಕೂಡಿಸಲಾಗಿದೆ. ಹಿಂಭಾಗದಲ್ಲಿ ಬೆಳ್ಳಿಯ ಪ್ರಭಾವಳಿ ಇದೆ. ಈ ಗರ್ಭಗೃಹದ ಬಾಗಿಲ ಪಟ್ಟಿಕೆಗಳು ಅಲಂಕರಣದ ಕೆತ್ತನೆಯಿಂದ ಕೂಡಿದ್ದು, ಪಟ್ಟಿಕೆಗಳಲ್ಲಿ ಬಳ್ಳಿ ಸುರಳಿಗಳ ಸೂಕ್ಷ್ಮ ಕೆತ್ತನೆ ಮಾಡಲಾಗಿದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು, ಬಾಗಿಲ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರು ತ್ರಿಭಂಗಿಯಲ್ಲಿ ನಿಂತಿದ್ದು, ಕೈಗಳಲ್ಲಿ ತ್ರಿಶೂಲ, ಡಮರು, ಗದಾ, ಹಸ್ತವನ್ನು ಹೊಂದಿದ್ದಾರೆ. ದ್ವಾರಪಾಲಕರ ಇಕ್ಕೆಲಗಳಲ್ಲಿ ಫಲ ಮತ್ತು ಪದ್ಮ ಹಿಡಿದು ನಿಂತಿರುವ ಸ್ತ್ರೀಯರಿದ್ದಾರೆ.

ಸುಖನಾಸಿ

ಈ ಸುಖನಾಸಿಯು ಗರ್ಭಗೃಹದಷ್ಟೇ ಉದ್ದ ಮತ್ತು ಅಗಲ ಹೊಂದಿದ್ದು, ಚೌಕಕಾರವಾಗಿದೆ. ಇದರಲ್ಲಿ ಯಾವುದೇ ಮೂರ್ತಿಗಳು ಕಾಣಬರುವುದಿಲ್ಲ. ಆದರೆ ಸುಖನಾಸಿಯ ಎಡ ಮತ್ತು ಬಲವಾಗದಲ್ಲಿರುವ ಕಟ್ಟೆಯ ಮೇಲೆ ಪೂಜೆ ಸಾಮಾಗ್ರಿಗಳನ್ನು ಇಡಲಾಗಿದೆ. ಸುಖನಾಸಿಯ ಮೇಲ್ಚಾವಣಿಯಲ್ಲಿ ನಕ್ಷತ್ರಕಾರದ ಭುವನೇಶ್ವರಿ ಇದ್ದು, ಮಧ್ಯದಲ್ಲಿ ಅರಳಿದ ಪದ್ಮಾಪುಷ್ಪವನ್ನು ಬಿಡಿಸಲಾಗಿದೆ. ನಾಲ್ಕು ಮೂಲೆಗಳಲ್ಲಿ ಕೀರ್ತಿಮುಖಗಳನ್ನು ಬಿಡಿಸಲಾಗಿದೆ.

---

* ಸಂಶೋಧನಾ ವಿದ್ಯಾರ್ಥಿನಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ, ಮೈಸೂರು.
** ಸಹಾಯಕ ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಸುಖನಾಸಿಯ ಎಡ ಮತ್ತು ಬಲಭಾಗದಲ್ಲಿ ಎರಡು ಕೋಷ್ಠಗುಡಿಗಳು ಇದ್ದಂತೆ ಕಂಡುಬರುತ್ತವೆ. ಈ ಕೋಷ್ಠಗುಡಿಗಳು ಎರಡು ಸುಖನಾಸಿಯಷ್ಟೆ ವ್ಯಾಸವನ್ನು ಹೊಂದಿದ್ದು, ಚೌಕಕಾರವಾಗಿ ಆದರೆ ಈ ಕೋಷ್ಠಗುಡಿಗಳ ಒಳಭಾಗದಲ್ಲಿ ಪ್ರತಿಷ್ಠಾಪನ ಮಾಡಲಾಗಿದ್ದ, ಗಣಪತಿ ಮತ್ತು ಸರಸ್ವತಿ ಕಣ್ಮರೆಯಾಗಿದೆ.

ಈ ಎರಡು ಕೋಷ್ಠಗುಡಿಗಳ ಬಾಗಿಲು ಸರಳವಾಗಿದ್ದು, ಯಾವುದೇ ರೀತಿಯ ಅಲಂಕರಣೆಯ ಕೆತ್ತನೆ ಕಾಣಬರುವುದಿಲ್ಲ. ಸುಖನಾಸಿಯ ಬಾಗಿಲ ಅಲಂಕರಣೆ ಕೆತ್ತನೆಯಿಂದ ಕೂಡಿದ್ದು, ಬಾಗಿಲ ಪಟ್ಟಿಕೆಗಳ ಮೇಲೆ ಬಳ್ಳಿ ಸುರಳಿಗಳ ಅಲಂಕರಣೆಯ ಕೆತ್ತನೆ ಮಾಡಲಾಗಿದೆ. ಲಲಾಟ ಬಿಂಬದಲ್ಲಿ ಯಾವುದೇ ಮೂರ್ತಿ ಶಿಲ್ಪ ಕಾಣಬರುವುದಿಲ್ಲ. ಬಾಗಿಲ ತೋರಣದ ಮೇಲ್ಭಾಗದಲ್ಲಿ ಹೊಯ್ಸಳ ಶೈಲಿಯ ಶಿಖರವನ್ನು ಬಿಡಿಸಿ ಅಲಂಕರಿಸಲಾಗಿದೆ.

ನವರಂಗ

ನವರಂಗಲು ೨೦x೨೦ ಅಡಿ ಉದ್ದ ಅಗಲವಾಗಿದ್ದು ಚೌಕಕಾರವಾಗಿದೆ. ಇದರ ಮಧ್ಯದಲ್ಲಿ ಹೊಯ್ಸಳ ಶೈಲಿನ ನಾಲ್ಕು ಕಂಬಗಳು ಮೇಲ್ಛಾವಣಿಗೆ ಆಧಾರವಾಗಿ ನಿಲ್ಲಿಸಲಾಗಿದೆ. ನಾಲ್ಕು ಕಂಬಗಳ ಮಧ್ಯದಲ್ಲಿ ಚೌಕಕಾರವಾಗಿರುವ ಅರ್ಧ ಅಡಿ ಎತ್ತರವಿರುವ ಚಿಕ್ಕ ವೇದಿಕೆಯನ್ನು ಮಾಡಲಾಗಿದೆ.

ನವರಂಗದ ಮೇಲ್ಛಾವಣಿಯು ಅಲಂಕರಣದ ಕೆತ್ತನೆಯಿಂದ ಕೂಡಿದ್ದು, ಮೇಲ್ಛಾವಣಿಯ ಒಂಬತ್ತು ಅಂಕಣದಲ್ಲಿಯೂ ನಕ್ಷತ್ರಾಕಾರವಾಗಿರುವ, ವೃತ್ತಾಕಾರವಾಗಿರುವ, ಚೌಕಕಾರವಾಗಿರುವ, ವಿವಿಧ ಆಕಾರಗಳುಳ್ಳ ಭುವನೇಶ್ವರಿಯನ್ನು ರಚಿಸಿ ಮಧ್ಯದಲ್ಲಿ ಅರಳಿದ ಕಮಲದ ಪುಷ್ಪವನ್ನು ಕಾಣಬಹುದು. ಈ ಭುವನೇಶ್ವರಿಗಳ ಒಳಭಾಗದಲ್ಲಿ ದಿಕ್ಪಾಲಕರ ಮತ್ತು ಅಷ್ಟ ದಿಕ್ಪಾಲಕರ ಮೂರ್ತಿ ಶಿಲ್ಪವನ್ನು ಕೆತ್ತನೆ ಮಾಡಲಾಗಿದೆ. ಮತ್ತೆ ಕೆಲವು ಭುವನೇಶ್ವರಿಗಳಲ್ಲಿ ಕೀರ್ತಿ ಮುಖಗಳನ್ನು ಬಿಡಿಸಲಾಯಿತು. ನವರಂಗದ ಉತ್ತರ ಭಾಗದಲ್ಲಿ ಒಂದು ದ್ವಾರವನ್ನು ಕಲ್ಪಿಸಲಾಗಿದೆ. ನವರಂಗದ ಇಕ್ಕೆಲಗಳಲ್ಲಿ ಕಕ್ಷಾಸನಗಳನ್ನು ನಿರ್ಮಿಸಲಾಗಿ ಆ ಕಕ್ಷಾಸನದಲ್ಲಿ ಶಿಲ್ಪ ಕೆತ್ತನೆ ಕಾರ್ಯಕ್ಕೆ ಬಳಸಿರುವುದು ಕಂಡುಬರುವುದಿಲ್ಲ.

ಮಹಾ ಮಂಟಪ

ಮಹಾ ಮಂಟಪವು ನವರಂಗಕ್ಕೆ ಹೊಂದಿಕೊಂಡಂತೆ ಇದ್ದು, ಇದು ಸಹ ನವರಂಗದ ೨೦ ಅಡಿ ಅಗಲ ೩೦ ಅಡಿ ಉದ್ದವಾಗಿದೆ. ಆಯತಾಕಾರವಾಗಿರುವ ಈ ಮಹಾ ಮಂಟಪದ ಮದ್ಯದಲ್ಲಿ ನಾಲ್ಕು ಹೊಯ್ಸಳ ಶೈಲಿಯ ಸುಂದರ ಕಂಬಗಳಿವೆ. ಈ ನಾಲ್ಕು ಕಂಬಗಳ ಕೆಳಭಾಗದಲ್ಲಿ ಅರ್ಧ ಅಡಿ ಎತ್ತರವಿರುವ ರಂಗ ವೇದಿಕೆಯನ್ನು ಚೌಕಕಾರವಾಗಿ ಮಾಡಲಾಗಿದೆ. ಈ ನಾಲ್ಕು ಕಂಬಗಳ ಮುಂದೆ ಸ್ವಲ್ಪ ಅಂತರವನ್ನು ಬಿಟ್ಟು ಮತ್ತೆ ಎರಡು ಕಂಬಗಳನ್ನು ನಿರ್ಮಿಸಲಾಗಿದೆ. ಈ ಎರಡು ಕಂಬಗಳು ನಕ್ಷತ್ರಾಕಾರವಾಗಿದ್ದು, ೩೨ ಮೂಲೆಗಳನ್ನು ಹೊಂದಿದೆ. ಈ ಸಭಾ ಮಂಟಪದ ಮೇಲ್ಛಾವಣಿಯು ಒಂಬತ್ತು ಅಂಕಣಗಳಿಂದ ಕೂಡಿದ್ದು, ಈ ಒಂಬತ್ತು ಅಂಕಣದಲ್ಲಿ ಭುವನೇಶ್ವರಿಯನ್ನು ರಚಿಸಲಾಗಿದೆ.

ಈ ಭುವನೇಶ್ವರಿಯು ಚೌಕಕಾರವಾಗಿದ್ದು, ಚೌಕಾಕಾರದ ಒಳಗೆ ಒಂದು ವೃತ್ತವನ್ನು ರಚಿಸಿ ಆ ವೃತ್ತದ ಒಳಗೆ ಪದ್ಮಾಸನದಲ್ಲಿ ಕುಳಿತ ಧ್ಯಾನಸಕ್ತವಾಗಿರುವ ಜೈನ ತೀರ್ಥಂಕರ ಮೂರ್ತಿಯನ್ನು ಬಿಡಿಸಲಾಗಿದೆ (ಮಹಾವೀರ) ಇನ್ನುಳಿದ ೮ ಭುವನೇಶ್ವರಿಗಳನ್ನು ರಚಿಸಿ ಭುವನೇಶ್ವರಿಗಳ ಒಳಭಾಗದಲ್ಲಿ ಅಷ್ಟ ದಿಕ್ಪಾಲಕರ ಮೂರ್ತಿಗಳನ್ನು ಬಿಡಿಸಲಾಗಿದೆ.

ಮಹಾ ಮಂಟಪದ ದ್ವಾರ ಬಾಗಿಲು ಅಲಂಕರಣದ ಕೆತ್ತನೆಯಿಂದ ಕೂಡಿದ್ದು, ಬಾಗಿಲ ಪಟ್ಟಿಕೆಗಳಲ್ಲಿ ಬಳ್ಳಿ ಸುರಳಿಗಳ ಕೆತ್ತನೆಗಳನ್ನು ಮಾಡಲಾಗಿದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯನ್ನು ಬಿಡಿಸಲಾಗಿದೆ. ಕೆಳಭಾಗದಲ್ಲಿ ಶೈಲ ದ್ವಾರ ಪಾಲಕರು, ಢಮರು, ತ್ರಿಶೂಲ, ಗದಾ ಹಸ್ತವನ್ನು ಹೊಂದಿದ್ದು ತ್ರಿಭಂಗಿಯಲ್ಲಿದ್ದಾರೆ. ಈ ದಿಕ್ಪಾಲಕರು ಇಕ್ಕೆಲಗಳಲ್ಲಿ ಫಲ ಮತ್ತು ಪುಷ್ಪವನ್ನು ಹಿಡಿದು ನಿಂತಿರುವ ಸ್ತ್ರೀಯರು ಇದ್ದಾರೆ. ಈ ದ್ವಾರದ ಇಕ್ಕೆಲಗಳಲ್ಲಿ ಜಾಲಾಂದ್ರಗಳನ್ನು ಜೋಡಿಸಲಾಗಿದೆ.

ಈ ಮಹಾ ಮಂಟಪದ ಮುಂದಿದ್ದ ಮುಖ ಮಂಟಪವು ಪ್ರಕೃತಿಯ ವಿಕೋಪಕ್ಕೆ ಮತ್ತು ಭಕ್ತಾಧಿಗಳ ನಿರ್ಲಕ್ಷಕ್ಕೆ ಒಳಗಾಗಿ ಈಗ ಮುಖ ಮಂಟಪವು ಸಂಪೂರ್ಣವಾಗಿ ಕಾಣದಂತಾಗಿದೆ. ಇತ್ತೀಚೆಗೆ ಜೀರ್ಣೋದ್ಧಾರ ಸಮಯದಲ್ಲಿ ಕಟ್ಟಿ ನಿಲ್ಲಿಸಲಾಗಿರುವ ಎರಡು ಕಂಬಗಳು ಕಂಡುಬರುತ್ತದೆ.

ಅಧಿಷ್ಠಾನ: ಈ ದೇವಾಲಯದ ತಳನಕ್ಷೆಯ ಮೇಲೆ ನಿರ್ಮಿಸಲಾಗಿರುವ ಅಧಿಷ್ಠಾನದಲ್ಲಿ ಮೂರು ಪಟ್ಟಿಕೆಗಳು ಕಂಡುಬರುತ್ತವೆ. ಉಪಾನ, ತ್ರಿಪಟ, ಕುಮುದ, ಪ್ರತಿ, ಪ್ರತಿಯ ಭಾಗದ ಪಟ್ಟಿಕೆಗಳನ್ನು ದಂತದ ರೀತಿ ಕೆತ್ತನೆ ಮಾಡಲಾಗಿದೆ.

ಭಿತ್ತಿ : ಭಿತ್ತಿಯು ಸರಳವಾಗಿದ್ದು, ಬೃಹದಾಕಾರವಾದ ಕಲ್ಲುಗಳನ್ನು ಭಿತ್ತಿಗೆ ಒಂದರ ಮೇಲೆ ಒಂದರಂತೆ ಇಟ್ಟು ಕಟ್ಟಿಸಲಾಗಿದೆ. ಇದರಲ್ಲಿ ಯಾವುದೇ ಮೂರ್ತಿಶಿಲ್ಪ ಕಂಡುಬರುವುದಿಲ್ಲ.



ದೇವಾಲಯದ ಹಿಂಭಾಗದಲ್ಲಿರುವ ವೀರಗಲ್ಲುಗಳು



ನವರಂಗದ ಕಂಬ



ದ್ವಾರಮಂಟಪ



ನವರಂಗ

ಕಪೋತ: ಕಪೋತವು ಭಿತ್ತಿಯಿಂದ ಸುಮಾರು ಎರಡು ಅಡಿ ಇಳಿಜಾರಾಗಿ ಮುಂದಕ್ಕೆ ಚಾಚಿದೆ. ಈ ಕಪೋತದ ಅಂಚಿನ ಭಾಗದಲ್ಲಿ ದಂತದ ರೀತಿಯ ಕೆತ್ತನೆಯನ್ನು ಮಾಡಲಾಗಿದೆ.

ಶಿಖರ : ಈ ದೇವಾಲಯದ ಗರ್ಭಗೃಹದ ಮೇಲೆ ರಚಿಸಲಾಗಿದ್ದ ಮೂಲ ಶಿಖರವೂ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ಬಿದ್ದುಹೋಗಿ ನಂತರ ಅಂದರೆ ಇತ್ತೀಚೆಗೆ ಇಟ್ಟಿಗೆ ಸಿಮೆಂಟ್‌ನಿಂದ ನಿರ್ಮಿಸಲಾಗಿದೆ.

ದ್ವಾರ ಮಂಟಪ : ಈ ದೇವಾಲಯದ ಸುತ್ತಲೂ ಪ್ರಕಾರವಿದ್ದುದಕ್ಕೆ ಸಾಕ್ಷಿಗಳಿದೆ. ಆದರೆ ಮೂಲ ಪ್ರಾಕಾರದ ಮೇಲೆ ಸಂಪೂರ್ಣವಾಗಿ ನಶಿಸಿ ಹೋಗಿದೆ. ಇತ್ತೀಚೆಗೆ ಕಲ್ಲು, ಇಟ್ಟಿಗೆ ಮತ್ತು ಸಿಮೆಂಟ್‌ನ್ನು ಉಪಯೋಗಿಸಿ ನಿರ್ಮಿಸಲಾಗಿರುವ ಪ್ರಾಕಾರವಿದೆ.

ಈ ದೇವಾಲಯದ ಮಹಾ ದ್ವಾರದಲ್ಲಿ ಒಂದು ವಿಶಾಲವಾಗಿರುವ ದ್ವಾರ ಮಂಟಪವಿದ್ದು ಇದನ್ನು ಸುಮಾರು ೫ ಅಡಿ ಎತ್ತರವಿರುವ ಚೌಕಕಾರವಾಗಿರುವ ಅದಿಷ್ಠಾನ ರಚಿಸಿ ಇಕ್ಕೆಲಗಳಲ್ಲಿ ನಾಲ್ಕು ಕಂಬಗಳುಳ್ಳ ಮಂಟಪವನ್ನು ಹಿಂಭಾಗದಲ್ಲಿ ರಚಿಸಲಾಗಿದೆ. ಇದರಲ್ಲಿರುವ ಕಂಬಗಳುಎರಡು ವೃತ್ತಾಕಾರವಾಗಿದೆ. ಉಳಿದೆರೆದು ನಕ್ಷತ್ರಕಾರವಾಗಿವೆ. ನಕ್ಷತ್ರಕಾರದ ಕಂಬಗಳ ಪಕ್ಕದ ಗೋಡೆಯ ಭಾಗದಲ್ಲಿ ಎರಡು ಕಂಬಗಳ ಮೇಲೆ ಶಿಖರಗಳುಳ್ಳ ಕೋಷ್ಠಗಳಿವೆ. ಮೇಲ್ಛಾವಣಿಯಲ್ಲಿ ಇಳಿಜಾರಾಗಿದ್ದು, ಗೋಡೆಯಿಂದ ಮುಂಚಾಚಿವೆ. ಕಪೋತದ ಅಂಚಿನಲ್ಲಿ ಕಮಲದ ಮೊಗ್ಗುಗಳು ದಂತದ ಅಲಂಕರಣೆಯ ಕೆತ್ತನೆಗಳು. ಈ

ದ್ವಾರ ಮಂಟಪದ ಮುಂದೆ ಉಯ್ಯಾಲೆ ಮಂಟಪವಿದ್ದು, ಇದು ಸರಿ ಸುಮಾರು ೧೫ ಅಡಿ ಎತ್ತರದ ಏಕಶಿಲಾ ಸ್ತಂಭಗಳಿಂದ ನಿರ್ಮಿಸಲಾಗಿದೆ.

ಅದಿಷ್ಠಾನದ ಪಟ್ಟಿಕೆಗಳಲ್ಲಿ ೫ನೇ ಪಟ್ಟಿಕೆಯ ಕೆತ್ತನೆಯ ಮುಂಭಾಗದಲ್ಲಿ ಸಂಗೀತಗಾರನ ನೃತ್ಯದ ಶಿಲ್ಪಗಳನ್ನು ಮತ್ತು ವ್ಯಾಳ ಮುಖ ಬಿಡಿಸಲಾಗಿದೆ. ದ್ವಾರ ಮಂಟಪದ ಮುಂದೆ ಅಂದರೆ ಸೋಪಾನದ ಇಕ್ಕೆಲಗಳಲ್ಲಿ ಎರಡು ಆನೆಗಳನ್ನು ಇರಿಸಲಾಗಿದೆ. ಈ ಮಂಟಪದ ಮೇಲ್ಛಾವಣಿಯಲ್ಲಿ ನಕ್ಷತ್ರಕಾರದ ಭುವನೇಶ್ವರಿಯನ್ನು ರಚಿಸಿ ಮಧ್ಯದಲ್ಲಿ ಅರಳಿದ ಕಮಲದ ಪುಷ್ಪವನ್ನು ಬಿಡಿಸಲಾಗಿದೆ. ಆದರೆ ಕಮಲದ ಒಂದು ಭಾಗ ಮುಕ್ಕಾಗಿದೆ. ಈ ಭುವನೇಶ್ವರಿಯ ನಾಲ್ಕು ಮೂಲೆಗಳಲ್ಲಿ ಕೋನಕಾರವಾಗಿ ರಚಿಸಿ ಅಂಚಿನ ಸುತ್ತಲು ಅರಳಿದ ಪದ್ಮಪುಷ್ಪ ಬಿಡಿಸಲಾಗಿ ಮಧ್ಯದಲ್ಲಿ ಕೀರ್ತಿ ಮುಖವಿದೆ. ಇದೇ ರೀತಿಯಲ್ಲಿ ಒಳಭಾಗದಲ್ಲಿ ಎರಡು ನಕ್ಷತ್ರಾಕಾರದ ಕಂಬ ಎರಡು ವೃತ್ತಾಕಾರದ ಕಂಬಗಳು ಗೋಡೆಗೆ ಸೇರಿದಂತೆ ಸುಮಾರು ೬ ನಕ್ಷತ್ರಾಕಾರವಾಗಿರುವ ಅರೆಗಂಬಗಳನ್ನು ಜೋಡಿಸಲಾಗಿದೆ. ಈ ಮಂಟಪದ ಒಳಗೆ ಭಕ್ತಾಧಿಗಳು ಕುಳಿತುಕೊಳ್ಳಲು ವ್ಯವಸ್ಥೆಮಾಡಲಾಗಿದೆ.

ಕಳೆದ ಮೂರು ಶತಕಗಳಿಂದ ಶ್ರೀ ಶ್ರೀಪುಷ್ಪಗಿರಿ ಮಲ್ಲಿಕಾರ್ಜುನ ಸ್ವಾಮಿಯವರ ಬೆಟ್ಟದಲ್ಲಿ ಪ್ರತಿ ವರ್ಷ ತುಲಾ ಸಂಕ್ರಮಣದಲ್ಲಿ ನಡೆಯುವ ದೊಡ್ಡ ಜಾತ್ರೆಯಲ್ಲಿ, ಕಾರ್ತಿಕ ಮಹೋತ್ಸವ, ಮೊಗ್ಗಿನ ಪೂಜೆ, ಬಿಲ್ವಪತ್ರ ವಾಹನ, ಶೇಷ ವಾಹನ, ಭೃಗಿ ವಾಹನ, ಗಜ ವಾಹನ, ನವಿಲು ವಾಹನ, ಚಿಕ್ಕ ನಂದಿ ವಾಹನ ಹೀಗೆ ಹಲವು ಉತ್ಸವಗಳು ನಡೆಯುತ್ತವೆ. ಈ ಜಾತ್ರೆಯ ೧೫ ದಿನಗಳ ಮುಂಚಿತವಾಗಿಯೇ ಕೆಂಡೋತ್ಸವ, ರಥೋತ್ಸವ, ಮೊದಲಾದ ಕಾರ್ಯಕ್ರಮಗಳು ನೆಡೆಯುತ್ತವೆ.

ಈ ಮೇಲೆ ತಿಳಿದ ಎಲ್ಲಾ ಅಂಶಗಳನ್ನು ಗಮನಸಿದಾಗ ಈ ದೇವಾಲಯ ಶೈವ ಧರ್ಮಕ್ಕೆ ಸೇರಿದ್ದು, ಸಾಮಾಜಿಕ ಪ್ರಕ್ರಿಯೆಯಲ್ಲಿ, ಧಾರ್ಮಿಕ ಪ್ರಜ್ಞೆ ಮೂಢಿಸುವ ಸಲುವಾಗಿ ಈ ದೇವಾಲಯ ಹೊಯ್ಸಳ ಕಾಲದಲ್ಲಿ ನಿರ್ಮಾಣವಾಗಿದ್ದು ಹಾಗೂ ಇದರಲ್ಲಿ ಜೈನ ಧರ್ಮದ ಪ್ರಭಾವವು ಕೂಡ ಬಂದಿದ್ದು, ಈ ಪ್ರಾಂತ್ಯದಲ್ಲಿ ಧಾರ್ಮಿಕ ಸಾಮರಸ್ಯದ ರೂಪುರೇಷೆಗಳು ಕಂಡು ಬರುವುದು ಹಾಗೂ ಈ ದೇವಾಲಯವನ್ನು ವಿಜಯ ನಗರ ಕಾಲದಲ್ಲಿ ಜೀರ್ಣೋದ್ಧಾರ ಹೊಂದಿರುವುದನ್ನು ಪ್ರಸುತ್ತ ದಿನಗಳಲ್ಲಿ ಕಾಣಬಹುದು.

[ಪುಷ್ಪಗಿರಿ ಮಲ್ಲಿಕಾರ್ಜುನ ದೇವಾಲಯವು ಮೂಲತಃ ಜೈನ ಬಸದಿಯಾಗಿತ್ತು. ಬಹುಶಃ ವಿಜಯನಗರದ ಕಾಲದಲ್ಲಿ ಸಂಗಮರ ಅಂತ್ಯಕಾಲಕ್ಕೆ ಶೈವ ಕ್ಷೇತ್ರವಾಗಿ ಪರಿವರ್ತಿತವಾಗಿರಬೇಕು. (ಸಂ)]

ಆಧಾರ ಗ್ರಂಥಗಳು

೧. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೯, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೦.

೨. ಕೂ.ಸ. ಅಪರ್ಣ, ದೇವಾಲಯದ ವಾಸ್ತುಶಿಲ್ಪ ಪರಿಚಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೩. ಸಿಂದಗಿ ರಾಜಶೇಖರ್, ಕರ್ನಾಟಕದ ವಾಸ್ತು ಶಿಲ್ಪ ಮತ್ತು ಚಿತ್ರಕಲೆ, ಧಾರವಾಡ, ೧೯೮೮.

೪. ಶ್ರೀಕಂಠಶಾಸ್ತ್ರಿ ಎಸ್., ಹೊಯ್ಸಳ ವಾಸ್ತುಶಿಲ್ಪ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ೧೯೭೫.

೫. ಹೀ.ಚಿ. ಶಾಂತವೀರಯ್ಯ, ಪುಷ್ಪಗಿರಿ–ಒಂದು ಪರಿಚಯ, ಬೆಂಗಳೂರು, ೧೯೮೭.

೬ ಪೋಟೊದಲ್ಲಿರುವ ಚಿತ್ರಗಳನ್ನು ಗಮನಿಸುವುದು.

೭೯

ಮರ್ಕುಲಿಯ ಪಂಚಕೂಟ ಜಿನಾಲಯ

ಡಾ. ಸನ್ಮತಿಕುಮಾರ್*

ಮರ್ಕುಲಿಯು ಹಾಸನ ಜಿಲ್ಲೆ ಮತ್ತು ತಾಲೂಕಿನ ಶಾಂತಿಗ್ರಾಮ ಎಂಬ ಹೋಬಳಿಗೆ ಸೇರಿರುವ ಅತ್ಯಂತ ಚಿಕ್ಕ ಗ್ರಾಮ. ಹಾಸನ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ, ಶಾಂತಿ ಗ್ರಾಮದಿಂದ ೮ ಕಿ.ಮೀ. ದಕ್ಷಿಣಕ್ಕೆ ಮತ್ತು ಹಾಸನ-ಮೈಸೂರು ರಸ್ತೆಯ ಮೊಸಳೆ ಹೊಸಹಳ್ಳಿಯಿಂದ ೧೩ ಕಿ.ಮೀ. ದೂರದಲ್ಲಿದೆ ಈ ಮರ್ಕುಲಿ ಬಸದಿ. ಮರ್ಕುಲಿಯು ಹಾಸನ ತಾಲ್ಲೂಕಿನ ಸಣ್ಣ ಹಳ್ಳಿಯಾಗಿದ್ದು, ಮೈಸೂರು ಅರಸೀಕೆರೆ ರೈಲು ಮಾರ್ಗದಲ್ಲಿರುವ ಅಂಬುಗ ರೈಲು ನಿಲ್ದಾಣದ ಪೂರ್ವಕ್ಕೆ ಸುಮಾರು ಮೂರು ಮೈಲಿ ದೂರದಲ್ಲಿದೆ.

ಮರ್ಕುಲಿ ಗ್ರಾಮವು ಹಿಂದೆ ಮಣಿಕಲಪುರವೆಂದು ಕರೆಯಿಸಿಕೊಳ್ಳುತ್ತಿದ್ದು, ಸೀಗೆನಾಡಿನ ಮುಖ್ಯ ಗ್ರಾಮವಾಗಿತ್ತು. ಮರ್ಕುಲಿಯ ಸುತ್ತ ಮುತ್ತ ಜೈನಶ್ರೇಷ್ಠಿಗಳು, ಮುತ್ತು ರತ್ನ ಹವಳದ ವ್ಯಾಪಾರಿಗಳು ನೆಲೆಸಿದ್ದ ಪ್ರಮುಖ ವಾಣಿಜ್ಯ ಕೇಂದ್ರವಾಗಿತ್ತು. ಈ ಗ್ರಾಮದಿಂದ ಹೊಯ್ಸಳ ಸಾಮ್ರಾಜ್ಯಕ್ಕೆ ಹೆಚ್ಚಿನ ಕರ, ತೆರಿಗೆ, ಆದಾಯ ಸಲ್ಲಿಕೆಯಾಗುತ್ತಿತ್ತು. ಇಲ್ಲಿನ ಸುತ್ತಮುತ್ತಲಿನ ಪ್ರದೇಶವು, ಹಸಿರು ತೆನೆಗಳಿಂದ ಹಾಗೂ ಕಪ್ಪು ಕಲ್ಲಿನ ಅರೆಯನ್ನೊಂದಿದ್ದು, ಇನ್ನು ಅನೇಕ ಬೆಲೆಬಾಳುವ ರತ್ನ ದೊರೆಯುವ ಪ್ರದೇಶವಾಗಿತ್ತೆಂದು ಶಾಸನ ದಾಖಲೆಗಳು ಹಾಗೂ ಇಂದಿನ ಪ್ರಸ್ತುತ ನಿದರ್ಶನಗಳು ಸಾಕ್ಷಿಗಳಾಗಿವೆ. ಮರ್ಕುಲಿ ಗ್ರಾಮದಲ್ಲಿ ದೊರೆತಿರುವ ಶಾಸನದ ಪ್ರಕಾರ, (ಕೋಟೆಯೊಳಗಣ ಬಸ್ತಿ ಗುಡಿಯಲ್ಲಿ ನೆಟ್ಟಿರುವ ಕಲ್ಲು) ಹೊಯ್ಸಳ ದೊರೆ ವೀರಬಲ್ಲಾಳ (ಎರಡನೇ ಬಲ್ಲಾಳ)ನ ಮಂತ್ರಿ, ವಾಸುಪೂಜ್ಯ ಸಿದ್ಧಾಂತಗಳ ಗುಡ್ಡನೂ, ಸಂಧಿವಿಗ್ರಹಿಯೂ ಆಗಿದ್ದ, ಬೂಚಿಮಯ್ಯನು ಕ್ರಿ.ಶ. ೧೧೭೩ರಲ್ಲಿ ತ್ರಿಕೂಟ ಜಿನಾಲಯವನ್ನು ನಿರ್ಮಿಸಿದನು. ಈ ಜಿನಾಲಯಕ್ಕೆ ಸೀಗೆನಾಡಿನ ಮಣಿಕಲಪುರ ಗ್ರಾಮವನ್ನು ವೀರಬಲ್ಲಾಳನ ಪಟ್ಟಾಭಿಷೇಕ ಮಹೋತ್ಸವದ ಸಂದರ್ಭದಲ್ಲಿ ದತ್ತಿಯಾಗಿ ನೀಡಿದ್ದನು. ಈ ಬಸದಿಯ ಪೂಜೆ, ಆಹಾರ ದಾನ ಮತ್ತು ಜೀರ್ಣೋದ್ಧಾರಕ್ಕಾಗಿ ಮರ್ಕುಲಿ ಗ್ರಾಮವನ್ನು ಸರ್ವನಮಸ್ಯ ದತ್ತಿಯಾಗಿ ಪಡೆದು, ಅವನ ಗುರುಗಳಾದ ಆರ್ಯದ್ರವಿಳ ಸಂಘದ ಅರುಂಗಳಾನ್ವಯದ ಶ್ರೀಪಾಳ ತ್ರೈವಿದ್ಯ ದೇವರ ಶಿಷ್ಯ ಶ್ರೀ ವಾಸುಪೂಜ್ಯ ಸಿದ್ಧಾಂತ ದೇವರಿಗೆ, ಗೌರವಾದರಗಳಿಂದ ಸಮರ್ಪಿಸಿ, ಅದನ್ನು ಗುರುಗಳು ಸ್ವೀಕರಿಸಿದರೆಂದು, ಶಾಸನ ಉಲ್ಲೇಖಗಳು ವಿವರಿಸುತ್ತವೆ. ಸೀಗೆನಾಡಿನ ಮುಖ್ಯ ಗ್ರಾಮವಾಗಿದ್ದ ಈ ಮಣಿಕಲಪುರವು ವಾಣಿಜ್ಯ ವ್ಯಾಪಾರಕ್ಕೆ ಪ್ರಸಿದ್ಧವಾಗಿದ್ದು, ಅಲ್ಲಿನ ತೆರಿಗೆಗಳಿಂದ ಬಂದ ಆದಾಯವನ್ನು ಈ ಬಸದಿಯ ನಿತ್ಯ ಪೂಜಾ ಕಾರ್ಯಕ್ಕೆ ನೀಡಿರುವುದು ತಿಳಿದುಬರುತ್ತದೆ. ಆ ನಂತರದಲ್ಲಿ ಈ ಜಿನಾಲಯದ ನಿತ್ಯ ಪೂಜೆಗೆ ಕಮ್ಮಟದ ಮಾಚಯ್ಯ ಹೆಗ್ಗಡೆ, ಬಾಳಚಂದ್ರದೇವರ ಶಿಷ್ಯ ಚಲ್ಲಯ್ಯದೇವರು ದಾನಕೊಟ್ಟಿರುವ ಬಗ್ಗೆ ಬಸದಿಯ ಮುಂಭಾಗದಲ್ಲಿರುವ ಶಿಲಾಶಾಸನವು ಉಲ್ಲೇಖಿಸುತ್ತದೆ. ಈ ಬಸದಿಗೆ ಮುಂದೆ ನಂತರ ಕಾಲಾಂತರದಲ್ಲಿ ಮತ್ತೆರಡು ಗರ್ಭಗೃಹ, ಅಂತರಾಳಗಳುಳ್ಳ ಭಾಗಗಳನ್ನು ಜೋಡಿಸಿ ಪಂಚಕೂಟ ಜಿನಾಲಯವನ್ನಾಗಿಸಿದ್ದಾರೆ. ಈ ಬಸದಿಯು ಮೊದಲು ಏಕಕೂಟವಾಗಿ ರಚನೆಗೊಂಡು, ನಂತರ ತ್ರಿಕೂಟವಾಗಿ, ಮತ್ತೊಮ್ಮೆ ಜೀರ್ಣೋದ್ಧಾರಗೊಂಡಾಗ ಪಂಚಕೂಟವಾಗಿದೆ. ಶಾಸನಾಧಾರಗಳಿಂದ ಈ ಜಿನಾಲಯದ ವಾಸ್ತುಶಿಲ್ಪದ ವಿನ್ಯಾಸವು ಹೊಯ್ಸಳರ ದೇವಾಲಯದ ಪ್ರತಿಕೃತಿಯಾಗಿದೆ. ಈ ಬಸದಿಯು ಆರಂಭಕಾಲದ ಹೊಯ್ಸಳ ವಾಸ್ತುಶೈಲಿಯ ಪುಟ್ಟ ಕಟ್ಟಡ.

ಬಸದಿಯ ಮತ್ತು ಮೂರ್ತಿಗಳ ವಿವರಣೆ

ಮರ್ಕುಲಿ ಬಸದಿಯ ಒಳಾಂಗಣದಲ್ಲಿ ಮೂರು ಗರ್ಭಗೃಹಗಳಿವೆ. ಬಸದಿಯ ಗರ್ಭಗೃಹವು ಚೌಕಕಾರವನ್ನು ಹೊಂದಿದೆ. ಮೂರು ಸುಖನಾಸಿಗಳನ್ನೂ, ಒಂದು ನವರಂಗವನ್ನೂ ಹಾಗೂ ಒಂದು ಮುಖಮಂಟಪವನ್ನೂ ಹೊಂದಿದೆ. ಚೈತ್ಯಾಲಯವು ಉತ್ತರಾಭಿಮುಖವಾಗಿದ್ದು, ದ್ವಾರವನ್ನೊಳಗೊಂಡಿರುವುದಲ್ಲದೆ ಎತ್ತರವಾದ ಪೌಳಿ ಗೋಡೆಯಿಂದ ಆವೃತವಾಗಿದೆ ಮತ್ತು ಬಸದಿಯು ಮುಚ್ಚಿದ ಅಂತರಾಳವನ್ನು ಹೊಂದಿದೆ. ಮುಂಭಾಗದಲ್ಲಿ ಮೆಟ್ಟಿಲುಗಳಿದ್ದು ಅವುಗಳ ಸಹಾಯದಿಂದ ಒಳಗೆ ಪ್ರವೇಶಿಸಬಹುದು: ಆವರಣದ ಒಳಗೆ ಮುಖ್ಯದ್ವಾರದ ಎರಡೂ ಬದಿಗಳಲ್ಲಿ ಗರ್ಭಗೃಹ ಮತ್ತು

* ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಆಳ್ವಾಸ್ ಕಾಲೇಜು, ವಿದ್ಯಾಗಿರಿ, ಮೂಡುಬಿದಿರೆ-೫೭೪೨೨೭.

ನವರಂಗಗಳನ್ನೊಳಗೊಂಡ ಇನ್ನೂ ಎರಡು ಗುಡಿಗಳನ್ನು ಕಟ್ಟಲಾಗಿದೆ. ಈ ಎರಡೂ ಗುಡಿಗಳು ಸರಳ ಸಾಮಾನ್ಯವಾಗಿದೆ ಮತ್ತು ನಂತರ ಸೇರಿಸಿದವುಗಳಾಗಿವೆ. ಮುಖ್ಯ ಗರ್ಭಗುಡಿಯ ಅಳತೆ ೮X೭ಗಳಾಗಿದ್ದು, ಸುಖನಾಸಿಯ ಅಳತೆ ೭.೫ X ೭.೫ ಆಗಿದೆ. ಪೂರ್ವ ಮತ್ತು ಪಶ್ಚಿಮ ಗರ್ಭಗೃಹಗಳ ಎದುರಿಗಿರುವ ಸುಖನಾಸಿಗಳು ತೆರೆದ ಸುಖನಾಸಿಗಳಾಗಿದ್ದು ದಕ್ಷಿಣ ಗರ್ಭಗೃಹದ ಕಡೆಗಿರುವ ಸುಖನಾಸಿ ಉತ್ತಮವಾದ ಜಾಲಂಧ್ರಗಳಿಂದ ಕೂಡಿದೆ. ನವರಂಗ ಮತ್ತು ಮುಖಮಂಟಪಗಳು ಚೌಕಕಾರವಾಗಿದ್ದು ಕ್ರಮವಾಗಿ ೧೭ ಮತ್ತು ೬ರ ಅಳತೆಯುಳ್ಳವಾಗಿವೆ. ಮುಖ್ಯಗುಡಿಯ ನವರಂಗದ ಮೇಲ್ಛಾವಣಿಗಳೂ ಸಮತಟ್ಟಾಗಿದ್ದು ಒಂಬತ್ತು ಹೂಗಳನ್ನು ಹೊಂದಿದೆ. ಗರ್ಭಗೃಹಗಳ ಮತ್ತು ಸುಖನಾಸಿಗಳ ಮೇಲ್ಛಾವಣಿಗಳೂ ಸಮತಟ್ಟಾಗಿದ್ದು ಕಮಲಗಳಿಂದ ಅಲಂಕೃತವಾಗಿದೆ. ಪ್ರಧಾನ ಗರ್ಭಗುಡಿಯಲ್ಲಿ ೫ ಅಡಿ ಎತ್ತರದ ಭವ್ಯವಾದ ಪದ್ಮಾಸನದಲ್ಲಿನ ಭಗವಾನ್ ಶ್ರೀ ೧೦೦೮ ಆದಿನಾಥ ತೀರ್ಥಂಕರರ ವಿಗ್ರಹವು ಕಲಾಪೂರ್ಣ ಸಿಂಹಾಸನದ ಅಗಲವಾದ ಸಿಂಹ ಪೀಠದ ಮೇಲೆ ವಿರಾಜಮಾನವಾಗಿದೆ. ಈ ಮೂರ್ತಿಯ ಕೈಗಳು ಯೋಗಮುದ್ರೆಯಲ್ಲಿವೆ. ವಿಗ್ರಹದ ಹಿಂದೆ ವಿಗ್ರಹಕ್ಕೆ ತಾಗದಂತೆ ಪ್ರಭಾವಳಿಯಿದೆ. ಆ ಗರ್ಭಗುಡಿಯ ಮುಂಭಾಗದಲ್ಲಿ ಗೋಮೇಧ ಯಕ್ಷ (ಗೋಮುಖ ಯಕ್ಷ)ನ ವಿಗ್ರಹವಿದ್ದು, ಈ ಮೂರ್ತಿಗೆ ಆರು ಕೈಗಳಿವೆ. ಬಲ ಭಾಗದಲ್ಲಿ ಹದಿನಾರು ಹಸ್ತಗಳನ್ನುಳ್ಳ ಮಾತೆ ಶ್ರೀ ಚಕ್ರೇಶ್ವರಿಯ ೩½ ಅಡಿ ಎತ್ತರದ ವಿಗ್ರಹವು ಪಚ್ಚೆಕಲ್ಲಿನಿಂದ ನಿರ್ಮಿತವಾಗಿ, ಪೀಠಾಲಂಕಾರಗೊಂಡು ಕಂಗೊಳಿಸುತ್ತಿದೆ ಮತ್ತು ಸುಂದರ ಪ್ರಭಾವಳಿಯನ್ನು ಹೊಂದಿದೆ. ಶ್ರೀ ಚಕ್ರೇಶ್ವರೀ ಯಕ್ಷಿಯು ಭಕ್ತರ ಅಭೀಷ್ಟಗಳನ್ನು, ಇಷ್ಟಾರ್ಥಗಳನ್ನು ನೆರವೇರಿಸುವ, ಕಾರಣಿಕದ ಭವ್ಯ ದೇವಿಯಾಗಿದ್ದು, ಭಕ್ತರ ಸಂಕಷ್ಟಗಳನ್ನು ನಿವಾರಿಸುವ ಶಕ್ತಿಯ ಅಧಿದೇವತೆಯಾಗಿದ್ದಾಳೆ. ಶ್ರೀ ಚಕ್ರೇಶ್ವರಿ ದೇವಿಗೆ ಹದಿನಾರು ಹಸ್ತಗಳಿದ್ದು, ದೇವಿಯು ಹನ್ನೆರಡು ಹಸ್ತಗಳಲ್ಲಿ ಚಕ್ರವನ್ನು ಹಿಡಿದಿದ್ದು, ಉಳಿದ ನಾಲ್ಕು ಕೈಗಳಲ್ಲಿ ವರದಹಸ್ತ, ವಜ್ರ, ಚಕ್ರ, ಮತ್ತು ಕಮಲವನ್ನು ಧರಿಸಿದ್ದಾಳೆ.

ತ್ರಿಕೂಟ ಮತ್ತು ಪಂಚಕೂಟ

ಜಿನಾಲಯದ ಹೊರಗಿನ ಗರ್ಭಾಂಕಣದಲ್ಲಿಯ ಎಡಭಾಗದಲ್ಲಿ ೬ ಅಡಿ ಎತ್ತರದ ಕಾಯೋತ್ಸರ್ಗ ಭಂಗಿಯಲ್ಲಿ ನಿಂತಿರುವ ಏಳು ಹೆಡೆಗಳಿರುವ ಭಗವಾನ್ ಶ್ರೀ ಪಾರ್ಶ್ವನಾಥ ವಿಗ್ರಹವನ್ನು ಹೊಂದಿದ್ದು, ಬಲ ಮತ್ತು ಎಡಭಾಗದಲ್ಲಿ ಧರಣೇಂದ್ರ ಯಕ್ಷ ಮತ್ತು ಮಹಾಮಾತೆ ಪದ್ಮಾವತಿಯ ವಿಗ್ರಹವಿದೆ. ಧರಣೇಂದ್ರ ಯಕ್ಷನ ವಿಗ್ರಹಕ್ಕೆ ಎರಡು ಕೈಗಳಿವೆ. ಪದ್ಮಾವತಿಯ ವಿಗ್ರಹಕ್ಕೆ ಆರು ಕೈಗಳಿದ್ದು, ಮೂರು ಕೈಗಳಲ್ಲಿ ಅಂಕುಶವೂ, ಉಳಿದ ಮೂರು ಕೈಗಳಲ್ಲಿ ಕಲಶ, ತ್ರಿಶೂಲ ಮತ್ತು ಫಲಗಳಿವೆ. ಇದು ಭ್ರುಗುಟಿಯ ಚಾಮುಂಡಿಯ ಮೂರ್ತಿಯಾಗಿದೆ. ಪಾದತಲದಲ್ಲಿ ಪಾರ್ಶ್ವನಾಥನ ವಾಹನ ಸರ್ಪದ ಒಂದು ಅಡಿಯ ವಿಗ್ರಹವಿದೆ. ಬಲಭಾಗದಲ್ಲಿ ೬ ಅಡಿ ಎತ್ತರದ ಕಾಯೋತ್ಸರ್ಗ ಭಂಗಿಯಲ್ಲಿ ನಿಂತಿರುವ ಭಗವಾನ್ ವರ್ಧಮಾನರ ಮೂರ್ತಿಯಿದೆ. ವಿಗ್ರಹದ ಹಿಂದೆ ವಿಗ್ರಹಕ್ಕೆ ತಾಗದಂತೆ ಸುಂದರವಾದ ಪ್ರಭಾವಳಿಯನ್ನು ಹೊಂದಿದೆ. ಮಕರ ತೋರಣವುಳ್ಳ ಈ ಪ್ರಭಾವಳಿಯಲ್ಲಿ ಇಪ್ಪತ್ತನಾಲ್ಕು ಜಿನಬಿಂಬಗಳನ್ನು ಬಿಡಿಸಲಾಗಿದೆ. ಈ ಪ್ರಭಾವಳಿಯು ಮುಕ್ಕೊಡೆಯ ಕೆಳಗೆ ಕಾಯೋತ್ಸರ್ಗ ಭಂಗಿಯಲ್ಲಿರುವ ಜಿನಬಿಂಬದ ದೇಹವಿನ್ಯಾಸವು ಹೊಯ್ಸಳರ ಅಂತ್ಯ ಕಾಲದ್ದೆಂಬಂತಿದೆ. ಇದರ ಕೆಳಭಾಗದಲ್ಲಿ ಲಾಂಛನವೂ ಸ್ಪಷ್ಟವಾಗಿಲ್ಲವಾದ್ದರಿಂದ ಬೇರೆ ತೀರ್ಥಂಕರರ ಮೂರ್ತಿಯಾಗಿರಬೇಕೆಂದು ಪುರಾತತ್ವ ಇಲಾಖೆಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಬಸದಿಯ ಹೊರಭಾಗವು ನಕ್ಷತ್ರಾಕಾರವುಳ್ಳ ಜಗುಲಿಯನ್ನು ಹೊಂದಿದ್ದು, ಸುಮಾರು ೧೦ ಅಡಿ ದಪ್ಪದ ಪೌಳಿಗೋಡೆಯನ್ನು ನಿರ್ಮಿಸಿ ಬಸದಿಯನ್ನು ರಕ್ಷಿಸಲಾಗಿದೆ. ಬಸದಿಯ ಹೊರಭಾಗದ ಬಲಬದಿಯಲ್ಲಿ ನೇಮಿನಾಥ ಸ್ವಾಮಿ ಮತ್ತು ಎಡಬದಿಯಲ್ಲಿ ಪಾರ್ಶ್ವನಾಥ ಸ್ವಾಮಿಯ ಮೂರ್ತಿಗಳು ಇಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದೆ. ಬಸದಿಯು ಅಧಿಷ್ಠಾನ, ಭಿತ್ತಿಯ ಹೊರಮೈ, ಶಿಖರ, ದ್ವಾರಬಂಧ, ಕಂಬ ಮತ್ತು ಛತ್ತು– ಮೊದಲಾದ ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಕೂಡಿದೆ. ಜಿನಾಲಯವು ಆಯತಾಕಾರದ ತಳವಿನ್ಯಾಸವನ್ನು ಹೊಂದಿದೆ. ಜಿನಾಲಯದ ಆವರಣದಲ್ಲಿ ನಾಲ್ಕು ಕಂಬಗಳನ್ನಾಧರಿಸಿದ ದ್ವಾರಮಂಟಪವನ್ನು ನಿರ್ಮಿಸಲಾಗಿದೆ.

ಮರ್ಕುಲಿಯ ಬಸ್ತಿಗುಡಿ ಶಾಸನ

ಮರ್ಕುಲಿಯ ಕೋಟೆಯೊಳಗಣ ಬಸ್ತಿಗುಡಿಯಲ್ಲಿ ನೆಟ್ಟಿರುವ ತ್ರುಟಿತವಾದ ಈ ಶಾಸನವು ಸಂಧಿವಿಗ್ರಹಿ ಬೂಚಿಮಯ್ಯನು ತಾನೇ ಕಟ್ಟಿಸಿದ ತ್ರಿಕೂಟ ಜಿನಾಲಯಕ್ಕೆ ಸೀಗೆನಾಡಿನಲ್ಲಿದ್ದ ಮರ್ಕುಲಿ ಗ್ರಾಮವನ್ನು ದ್ರಮಿಳಸಂಘದ ಅರುಂಗಳಾನ್ವಯದ ಶ್ರೀಪಾಳತ್ರೈವಿದ್ಯ ದೇವರ ಶಿಷ್ಯರಾದ ವಾಸುಪೂಜ್ಯ ಸಿದ್ಧಾಂತದೇವರ ಪಾದಪ್ರಕ್ಷಾಲನೆ ಮಾಡಿ ದಾನ ಮಾಡಿದನು ಎಂಬ

ವಿಷಯವನ್ನು ದಾಖಲಿಸುತ್ತದೆ. ಈ ದಾನವನ್ನು ದೋರಸಮುದ್ರದಲ್ಲಿ ವೀರಬಲ್ಲಾಳನ ಪಟ್ಟಾಭಿಷೇಕ ಮಹೋತ್ಸವದ ಸಂದರ್ಭದಲ್ಲಿ ಅಂದರೆ ಶಕ ೧೯೫ರ ವಿಜಯ ಸಂವತ್ಸರದ ಶ್ರಾವಣಮಾಸದ ಶುಕ್ಲಪಕ್ಷದ ೧೧ನೆಯ ದಿನ ಭಾನುವಾರದಂದು ಮಾಡಿದನು. ಈ ತೇದಿ ವಿವರಗಳು ಕ್ರಿ.ಶ. ೧೧೭೩ರ ಜು. ೨೨ಕ್ಕೆ ಹೊಂದುತ್ತದೆ.

ಈ ಶಾಸನದ ಅನುಬಂಧವಾಗಿ ಬಂದಿರುವ ಶಿಲಾಲೇಖವು ಕಮ್ಮಟದ (ಟಂಕಶಾಲೆ) ಮಾಚಯ್ಯ, ಹೆಗ್ಗಡೆ ಚಲ್ಲಯ್ಯ, ಬಾಳಚಂದ್ರ ದೇವರ ಶಿಷ್ಯ ಮೊದಲಾದ ಅನೇಕ ಅಧಿಕಾರಿಗಳು ಅದೇ ವರ್ಷದ ಕಾರ್ತಿಕ ಶುಕ್ಲ ಪಕ್ಷದ ೮ನೆಯ ದಿನದಂದು (ಅಕ್ಟೋಬರ್ ೧೬) ಸುಂಕ ಹಾಗೂ ತೆರಿಗೆಗಳಿಂದ ಬರುವ ಆದಾಯ ಎಂದರೆ ಮದುವೆ ಸುಂಕ, ಬಣ್ಣಿಗೆ, ಮಗ್ಗದ ಸುಂಕ, ಗಾಣದ ಸುಂಕ, ಒಳವಾರು, ಹೊರವಾರು (ಒಳಗೆ ಬರುವ ಹಾಗೂ ಹೊರಗೆ ಹೋಗುವ ವಸ್ತುಗಳ ಮೇಲಿನ ಸುಂಕ) ಮೊದಲಾದುವುಗಳನ್ನು ದಾನ ಮಾಡಿದ ವಿಷಯವನ್ನು ದಾಖಲಿಸಿದೆ.

ಪ್ರಸ್ತುತ ಶಾಸನವು ಹೊಯ್ಸಳ ಅರಸರ ವಂಶಾವಳಿಯನ್ನು ನಿರೂಪಿಸಿರುವುದಲ್ಲದೆ ದಾನಿಯ ಮತ್ತು ಆತನ ಪತ್ನಿ ಶಾಂತಲೆಯ ಗುಣಗಳನ್ನೂ ವರ್ಣಿಸಿದೆ. ಆದರೆ ವಿವರಗಳು ನಷ್ಟವಾಗಿದೆ.

ಈ ಮರ್ಕುಲಿ ಪಂಚಕೂಟ ಜಿನಾಲಯದ ಅಧ್ಯಯನದಿಂದ ಹೊಯ್ಸಳರ ಕಾಲದ ಜೈನ ಸಮಾಜದ ಧಾರ್ಮಿಕ ಸ್ಥಿತಿಗತಿಗಳ ಬಗೆಗಿನ ಸ್ಥೂಲವಾದ ಚಿತ್ರಣವು ನಮಗೆ ದೊರೆಯುತ್ತದೆ. ಹೊಯ್ಸಳ ಆಳ್ವಿಕೆಯ ಮಧ್ಯ ಭಾಗದಲ್ಲಿ ಜೈನ ಧರ್ಮವು ಸಕಲ ರೀತಿಯಲ್ಲೂ, ವೈಭವೋಪೇತವಾಗಿ, ಸುವರ್ಣಯುಗವಾಗಿ ಮೆರೆಯಿತು ಎಂಬುದಕ್ಕೆ ಸಾಕ್ಷಿಯಾಗಿ ನಿಂತಿದೆ.

ಗ್ರಂಥಋಣ

೧. Ali, Sheik B., The Hoysala Dynasty, Mysore, 1972.

೨. ಅಪರ್ಣ, ಕೂ.ಸ. ದೇವಾಲಯ ವಾಸ್ತುಶಿಲ್ಪ ಪರಿಚಯ, ಹಂಪೆ, ೨೦೦೦.

೩. ಬಾ.ರಾ. ಗೋಪಾಲ್, ಡಾ. ಎಪಿಗ್ರಾಫಿಯ ಕರ್ನಾಟಿಕ ಸಂಪುಟ ೮, (ಸಂ) ಹಾಸನ ಜಿಲ್ಲೆಯ ಶಾಸನಗಳು–ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೪.

೪. Coelho, William, The Hoysala Vamsa, Bombay, 1950.

೫. Derrett, J.M.D., The Hoysalas A Medieval Indian Royal Family, London, 1957.

೬ Desai, P.B., Jainism in South India and Some Jaina Epigraphs, Solapur, 1957.

೭. ಡಾ. ವಸಂತಲಕ್ಷ್ಮೀ, ಹಾಸನ ಜಿಲೆಯ ಹೊಯ್ಸಳರ ಬಸದಿಗಳು, ಸುಮುಖ ಪ್ರಕಾಶನ, ಬೆಂಗಳೂರು, ೨೦೦೬.

೮. ಮೈಸೂರು ಗೆಜೆಟಿಯರ್ ಸಂಪುಟ ೫ ಪುಟ ಸಂಖ್ಯೆ ೧೦೨೨ ಮತ್ತು ೧೦೨೩. ಹಾಸನ ಜಿಲ್ಲೆ, ೧೯೯೪.

೯. ಡಾ. ನಾಗರಾಜಯ್ಯ, ಹಂಪ. ಶಾಸನಗಳಲ್ಲಿ ಬಸದಿಗಳು, ಮೈಸೂರು, ೧೯೯೮.

೧೦. ಶೆಟ್ಟಿ, ಎಸ್.ಡಿ. ಜೈನ ಬಸದಿಗಳು, ಹಂಪೆ, ೧೯೯೯.

೧೧. Settar, S. Hoysala Temples, Bangalore, 1992.

೧೨. ಬಿಡಿ ಲೇಖನ: ಬೇಗೂರು ವೀರೇಂದ್ರರವರ : ಜಿನಸಾರಥಿ ಪತ್ರಿಕೆಯಲ್ಲಿ ಪ್ರಕಟಗೊಂಡ "ಸಾರಥಿ ಜಿನ ದರ್ಶನ"ದ ಲೇಖನ 'ಮಣಿಕಲಪುರದ ಮಣಿರತ್ನ: ಪಂಚಕೂಟ ಜಿನಾಲಯ, ಏಪ್ರಿಲ್ ೨೦೧೪.

೮೦

ಬೇವೂರಿನ ದೇವಾಲಯದ ವಿವೇಚನೆ

ಡಾ. ದತ್ತಾತ್ರೇಯ.ಜಿ. ಕುಲಕರ್ಣಿ*

ಬಾಗಲಕೋಟೆ ಜಿಲ್ಲೆಯಲ್ಲಿ ಬೇವೂರ ಎಂದೊಡನೆ ಮೊದಲು ನೆನಪಾಗುವುದು ಸೈನ್ಯಾಧಿಕಾರಿ ಕರ್ನಲ್ ಜಿ.ಜಿ. ಬೇವೂರು ಅವರು. ಇವರ ಮೂಲ ಹೆಸರು ಜಿ.ಜಿ. ಕುಲಕರ್ಣಿ ಎಂದಿದ್ದರೂ, ಹುಟ್ಟೂರಿನ ಅಭಿಮಾನದಿಂದ ತಮ್ಮ ಹೆಸರನ್ನು ಜಿ.ಜಿ. ಬೇವೂರು ಎಂದೇ ಇಟ್ಟುಕೊಂಡಿದ್ದರು.

ಗ್ರಾಮದಲ್ಲಿ ಅನೇಕ ಪ್ರಾಚ್ಯಾವಶೇಷಗಳನ್ನು ಕಾಣಬಹುದು. ಮೂರು ವೀರಗಲ್ಲುಗಳು, ಎರಡು ಮಹಿಷಾಸುರ ಮರ್ಧಿನಿ ಶಿಲ್ಪ, ಗಣೇಶ, ಭೈರವ, ನಾಗಶಿಲ್ಪಗಳನ್ನು ಕಾಣಬಹುದು. ಗ್ರಾಮದಲ್ಲಿ ಎರಡು ಶಾಸನಗಳು ಲಭ್ಯವಿದ್ದು, ಒಂದು ಕಲ್ಯಾಣಚಾಲುಕ್ಯ ದೊರೆ ಒಂದನೇ ಸೋಮೇಶ್ವರನ (ತ್ರೈಲೋಕ್ಯಮಲ್ಲ) ಕಾಲದ ಶಾಸನವಾಗಿದ್ದು, ಅವನ ಸಾಮಂತನಾಗಿದ್ದ ನೋಳಂಬಾಧಿ ರಾಜನ ಉಲ್ಲೇಖವಿದ್ದು, ಕಿರಿಯ ಬೇವೂರ ದೇವಾಲಯಕ್ಕೆ ಕೊಟ್ಟ ಭೂದಾನದ ಬಗ್ಗೆ ತಿಳಿಸುತ್ತದೆ. ಇನ್ನೊಂದು ಶಾಸನ ೧೪ನೇ ಶತಮಾನಕ್ಕೆ ಸೇರಿದ ವೀರಗಲ್ಲು ಶಾಸನವಾಗಿದೆ. ನಾಗಂಣ ಎಂಬವನು ಹೋರಾಡಿ ಮಡಿದಂತೆ ಉಲ್ಲೇಖಿಸುತ್ತದೆ.

ಇದಲ್ಲದೆ ಬೇವೂರಿನಲ್ಲಿ ಕಲ್ಯಾಣಿ ಚಾಲ್ಯುಕರ ಆರಂಭ ಕಾಲದ ವಾಸ್ತು ಶೈಲಿಗೆ ಸೇರಿದ ದೇವಾಲಯಗಳಿವೆ. ಮುಖ್ಯ ದೇವಾಲಯವಾದ ಸೋಮೇಶ್ವರ ದೇವಾಲಯವು ತ್ರಿಕೂಟಾಚಲವಾಗಿದ್ದು ದಕ್ಷಿಣಾಭಿಮುಖವಾಗಿದೆ. ಮೂರು ಗರ್ಭಗೃಹಗಳು ತೆರೆದ ಅರ್ಧಮಂಟಪವನ್ನು ಹೊಂದಿವೆ. ೨೦×೨೦ ಅಡಿಯ ಅಳತೆಯ ಚೌಕಾಕಾರದ ನವರಂಗವಿದ್ದು ಅದಕ್ಕೆ ಹೊಂದಿಕೊಂಡಂತೆ ತೆರದ ಮಂಟಪದ ಕಕ್ಷಾಸನವಿದೆ. ಎಡ ಬದಿಯ ಗರ್ಭಗೃಹದಲ್ಲಿ ಲಿಂಗವಿದೆ. ಬಲ ಬದಿಯ ಗರ್ಭಗೃಹದಲ್ಲಿ ಪಾಣಿ ಪೀಠದ ಮೇಲೆ ನಾಲ್ಕು ಅಡಿ ಎತ್ತರದ ಸೂರ್ಯ ಶಿಲ್ಪವಿದೆ. ಮಧ್ಯಗರ್ಭಗೃಹದಲ್ಲಿ ಪೀಠ ಮಾತ್ರವಿದ್ದು ಶಿಲ್ಪವಿಲ್ಲಾ. ಇಲ್ಲಿ ವಿಷ್ಣು ಶಿಲ್ಪ ಇದ್ದಿರಲೂಬಹುದು.

ಸೋಮೇಶ್ವರ ದೇವಾಲಯದ ಎದುರಿಗೆ ಸ್ಥಳೀಯವಾಗಿ ಕರೆಯುವ ಕಾಳಿಕಾದೇವಾಲಯವಿದೆ. ಇದರ ವಾಸ್ತು ರಚನೆಯ ಆರಂಭದ ಕಲ್ಯಾಣದ ಚಾಲುಕ್ಯರ ಶೈಲಿಯನ್ನು ಹೋಲುತ್ತದೆ. ಇಲ್ಲಿ ಗರ್ಭಗೃಹವು ಚೌಕಾಕಾರವಿದ್ದು ಇದರ ಅಕ್ಕಪಕ್ಕದಲ್ಲಿ ಇನ್ನೆರಡು ಕೊಠಡಿಗಳಿವೆ. ಗರ್ಭಗೃಹವು ಅರ್ಧಮಂಟಪವನ್ನು ಹೊಂದಿರದೆ ನೇರವಾಗಿ ನವರಂಗಕ್ಕೆ ಜೋಡಣೆಯಾಗಿದೆ. ೨೭×೨೭ ಅಳತೆಯ ನವರಂಗ ವಿಶಾಲವಾಗಿದೆ. ಮುಂದೆ ತೆರೆದ ಮುಖಮಂಟಪವಿದ್ದು ಸುತ್ತಲು ಕಕ್ಷಾಸನವಿದೆ. ಈ ದೇವಾಲಯದಲ್ಲಿ ಇತ್ತೀಚೆಗೆ ಸ್ಥಾಪಿಸಿದ ಕಾಳಿಕಾ ಶಿಲ್ಪವಿದೆ. ನವರಂಗದಲ್ಲಿ ಭಗ್ನಗೊಂಡ ಸರಸ್ವತಿ ಶಿಲ್ಪವನ್ನು ಕಾಣಬಹುದು.

ಈ ದೇವಾಲಯದ ವಾಸ್ತು ವಿಶೇಷತೆಯನ್ನು ಗಮನಿಸಲಾಗಿ ೧೦-೧೧ನೇ ಶತಮಾನದಲ್ಲಿ ಇದು ಸರಸ್ವತಿ ಮಂಟಪ ಅಥವಾ ಪಾಠಶಾಲೆ ಆಗಿರಬೇಕು ಎಂದು ಊಹಿಸಬಹುದು. ತ್ರೈಪುರುಷರ ದೇವಾಲಯಗಳೊಂದಿಗೆ ಸರಸ್ವತಿ ಪಾಠ ಶಾಲೆ ಇರುವ ವಾಸ್ತು ರಚನೆಗಳನ್ನು ಕರ್ನಾಟಕದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಂಡುಬರುತ್ತವೆ. ತಪೋಧನರನ್ನು ಒಳಗೊಂಡ, ಕಟ್ಟುನಿಟ್ಟಿನ ವಿದ್ಯಾ ಅಭ್ಯಾಸದ ವ್ಯವಸ್ಥೆ ಇಲ್ಲಿ ಇತ್ತು ಎಂದು ಹೇಳಬಹುದು. ನವರಾತ್ರಿಯ ಸಂದರ್ಭದಲ್ಲಿ ವಿಶೇಷ ಪೂಜೆ ಹಾಗೂ ಪ್ರತಿವರ್ಷ ಕಾಳಿಕಾದೇವಿ ಜಾತ್ರೆಯು ನಡೆದುಕೊಂಡು ಬಂದಿದೆ.

ಸೋಮೇಶ್ವರ ಮತ್ತು ಸರಸ್ವತಿ ದೇವಾಲಯಧಿಂದ ಹತ್ತಾರು ಹೆಜ್ಜೆ ದೂರದಲ್ಲಿ ಸ್ಥಳೀಯರು ಕರೆಯುವ ದೇಗುಲ ಎಂಬ ವಾಸ್ತು ರಚನೆ ಇರುವುದು ಬಹು ಅಪರೂಪವಾಗಿದೆ. ಇದು ಸಹ ೧೦-೧೧ನೇ ಶತಮಾನಕ್ಕೆ ಸೇರಿದ್ದಾಗಿದೆ. ಇಲ್ಲಿ ಆಯತಾಕಾರದ ಗರ್ಭಗೃಹದಂತಹ ರಚನೆ ಇದ್ದು ಮಧ್ಯದಲ್ಲಿ ಲಿಂಗವಿದೆ. ಇದರ ಎದುರಿಗೆ ೩೬ ಕಂಬಗಳನ್ನು ಒಳಗೊಂಡಂತೆ ೪೦೪೦ ಅಡಿಯ ವಿಶಾಲ ವಾಸ್ತು ರಚನೆ ಇದೆ. ಇದರ ಮಧ್ಯದಲ್ಲಿ ೬೬ ಅಳತೆಯ ರಚನೆಯು ಹಂತ ಹಂತವಾಗಿ

* ಇತಿಹಾಸ ಪ್ರಾಧ್ಯಾಪಕ, ನರಸಾಪುರ ಕಲಾ ಹಾಗೂ ಶಿರೂರ ವಾಣಿಜ್ಯ ಮಹಾವಿದ್ಯಾಲಯ, ಬಾಗಲಕೋಟೆ.











ಕಿರಿದಾಗುತ್ತಾ ಆಳದಲ್ಲಿ ೩೩ ಅಡಿ ಅಳತೆಯ ಚೌಕಾಕಾರದಲ್ಲಿ ಹೋಮಕುಂಡದಂತೆ ನಿರ್ಮಾಣವಾಗಿದೆ. ಉತ್ತರ ಭಾಗದಲ್ಲಿ ನಾಲ್ಕೂ ದಿಕ್ಕಿನಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಉಬ್ಬು ಶಿಲ್ಪಗಳನ್ನು ಮಕರತೋರಣದಲ್ಲಿ ಕಂಡರಿಸಲಾಗಿದೆ. ಹೋಮಕುಂಡದಿಂದ ಎದ್ದ ಹೊಗೆಯ ಹೋರಹೋಗಲು ತೆರೆದ ಛತ್ತಿನ ಭಾಗ ಹಾಗೂ ಉತ್ತರ ದಕ್ಷಿಣ ದಿಕ್ಕಿಗೆ ಎರಡು ಜಾಲಂದರಗಳನ್ನು ಅಳವಡಿಸಲಾಗಿದೆ. ಇಲ್ಲಿ ವ್ಯವಸ್ಥಿತವಾಗಿ ಯಜ್ಞಯಾಗಗಳನ್ನು ನಡೆಸಲಾಗುತ್ತಿತ್ತು ಎಂದು ಊಹಿಸಬಹುದಾಗಿದೆ. ಈ ಯಜ್ಞ ಮಂಟಪದ ಎಡಬದಿಯಲ್ಲಿ ಆದೇ ಶತಮಾನದ ಬಾವಿಯು ಇದೆ. ಇದು ಸುಮಾರು ೪೦ ಅಡಿ ಆಳವನ್ನು ಹೊಂದಿದ್ದು ಕೆಂಪುಕಲ್ಲಿನ ರಚನೆಯಾಗಿದೆ.

ಪುರಾತತ್ವ ಇಲಾಖೆಯವರು ದೇಗುಲ ಹಾಗೂ ಕಾಳಿಕಾ ದೇವಸ್ಥಾನಗಳನ್ನು ದುರಸ್ತಿಕರಣ ಮಾಡಿದ್ದಾರೆ. ಆದರೆ ಊರಿನ ಪ್ರಮುಖ ದೇವಾಲಯವಾದ ಸೋಮೇಶ್ವರ ದೇವಾಲಯವು ಶಿಥಿಲಾವಸ್ಥೆಯಲ್ಲಿ ಇದ್ದು, ಸರಕಾರ ಹಾಗೂ ಸಾರ್ವಜನಿಕರು ಅದನ್ನು ರಕ್ಷಿಸಬೇಕಾಗಿದೆ.

[ಸೂಕ್ತ ಮಾರ್ಗದರ್ಶನ ಹಾಗೂ ಸಲಹೆಯನ್ನು ನೀಡಿದ ಡಾ॥ ಸಿ.ಎಸ್. ವಾಸುದೇವನ್, ಡಾ॥ ಶಿಲಾಕಾಂತ ಪತ್ತಾರ ಹಾಗೂ ಶ್ರೀಮತಿ ಸುರೇಖಾ ಕುಲಕರ್ಣಿ ಇವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.]

೪೧

ಬಾದಾಮಿ ಪರಿಸರದಲ್ಲಿನ ತಾಂತ್ರಿಕ ಪ್ರಯೋಗದ ಕೊಳ್ಳಗಳು

ಡಾ. ಸಂಧ್ಯಾ.ವಿ.*

ಬಹುಸಂಸ್ಕೃತಿಯ ನಮ್ಮ ನಾಡಿನಲ್ಲಿ ಶಿಷ್ಟ, ಜನಪದ ಆಚರಣೆಗಳೊಂದಿಗೆ ವಾಮಾಚಾರ, ಗುಪ್ತಾಚರಣೆಗಳೂ ವಿಭಿನ್ನ ಪಂಥಗಳಲ್ಲಿ ಬೆಳೆದು ಬಂದಿದೆ. ಈ ಪಂಥಗಳಿಗೆ ಸಾವಿರಾರು ವರ್ಷದ ಇತಿಹಾಸವಿದೆ. ಇವರ ಆಚರಣೆಗಳನ್ನು ತಂತ್ರವಿದ್ಯೆ ಎಂದೂ, ಸಾಧಕರನ್ನು ತಾಂತ್ರಿಕರೆಂದೂ ಒಟ್ಟಾರೆಯಾಗಿ ಗುರುತಿಸಲಾಗುತ್ತದೆ. ಶಾಕ್ತ, ಶೈವ, ವೈಷ್ಣವ, ಬೌದ್ಧ ಎಲ್ಲ ಪಂಥೀಯರಲ್ಲಿಯೂ ತಂತ್ರ ಸಾಧಕರಿದ್ದು, ಇವರ ಆಚರಣೆಗಳು ವಿಭಿನ್ನವಾಗಿರುತ್ತಿತ್ತು. ವೇದವಿರೋಧಿಗಳಾಗಿದ್ದ ಇಂತಹ ತಾಂತ್ರಿಕರನ್ನು ವೈದಿಕರು ಪಾಷಂಡಿಗಳು ಎಂದು ಕರೆದು, ಅವರ ಆಚರಣೆಗಳನ್ನು ಪಾಷಂಡಿ ಮತಗಳೆಂದು ತೀವ್ರವಾಗಿ ಖಂಡಿಸುತ್ತಿದ್ದರು. ಇವರು ವೇದವಿರೋಧಿಗಳಾಗಿದ್ದಷ್ಟೇ ಅಲ್ಲದೆ ಇವರು ನಡೆಸುತ್ತಿದ್ದ ಪ್ರಾಣಿಹತ್ಯಾ, ನರಹತ್ಯಾದಿ ವಿಶಿಷ್ಟ ಕ್ರೂರ ಆಚರಣೆಗಳು ಸಾಮಾನ್ಯರಲ್ಲಿ ಭಯ-ಭೀತಿಗಳನ್ನು ಉಂಟುಮಾಡುತ್ತಿದ್ದವು. ಇವರ ಅಶ್ಲೀಲ ಆಚರಣೆಗಳನ್ನು ಸಮಾಜ ವಿರೋಧಿಕ್ರಿಯೆ, ಹಿಂಸೆ ಮತ್ತು ಕ್ರೌರ್ಯ ಎಂದು ಪ್ರಾಚೀನ ಕಾವ್ಯಗಳು ನಿಂದಿಸಿವೆ. ಈ ಆಚರಣೆಗಳು ಜನರಿಗೆ ಜುಗುಪ್ಸೆ, ಭಯ ಮೂಡುವಂತೆ ಮಾಡುತ್ತಿತ್ತಲ್ಲದೆ ಇವರ ದರ್ಶನವೇ ಮೈಲಿಗೆ ಎನ್ನುವಷ್ಟರ ಮಟ್ಟಿಗೆ ಇವರು ಸಮಾಜದಿಂದ ಪ್ರತ್ಯೇಕರಾಗಿದ್ದರು. ಅಲ್ಲದೆ ತಂತ್ರಸಾಧನೆ ಸ್ಥಳಗಳ ಪ್ರವೇಶವನ್ನು ಗೃಹಸ್ಥರಿಗೆ, ಸಾಮಾನ್ಯರಿಗೆ ನಿಷೇಧಿಸಲಾಗಿತ್ತು.

ಲೋಹವಿದ್ಯೆ, ವಜ್ರಕಾಯ, ಕುಂಡಲಿನಿ ಯೋಗಸಾಧನೆ ಮೊದಲಾದ ಇವರ ಅಲೌಕಿಕ ಮತ್ತು ಆಧ್ಯಾತ್ಮಸಿದ್ಧಿಗೆ ರಹಸ್ಯ ಸಾಧನೆ ಅನಿವಾರ್ಯವೂ, ನಿಗೂಢವೂ ಆಗಿತ್ತು. ವಶೀಕರಣ, ಸಮ್ಮೋಹ, ಆಕರ್ಷಣ, ಉಚ್ಚಾಟನ, ಯೋನ್ಯಾಭಿಷೇಕ, ಪುರಶ್ಚರಣ, ಪ್ರಸ್ತಾವ, ರಜೋಪಾನ ಮೊದಲಾದ ತಂತ್ರ ಪೂಜೆಯ ಆಚರಣೆಗಳು ಗುಪ್ತಾಚರಣೆಗಳಾಗಿದ್ದವು. ಕೆಲವೊಂದು ಬಾಹ್ಯಾಚರಣೆಗಳು ಭೀಕರವಾಗಿ, ಅಶ್ಲೀಲವಾಗಿ ತೋರುತ್ತಿತ್ತು. ಇವರ ತಂತ್ರ ಹಾಗೂ ಸಾಧನೆಗಳು ಶಿಷ್ಟ ಸಮಾಜ ವ್ಯವಸ್ಥೆಯ ವಿರುದ್ಧ ಪ್ರತಿರೋಧವೂ ಆಗಿತ್ತು. "ಬಹಿರಂಗ ಆಚರಣೆಗಳನ್ನು ಗುಪ್ತಸಮಾಜದ ಸಾಧಕರು ಶಿಷ್ಟ ಸಮಾಜವನ್ನು ಹೆದರಿಸಿ ಹದ್ದುಬಸ್ತಿನಲ್ಲಿಡಲು, ಸಾಧನೆಯ ರಕ್ಷಣೆಯಾಗಿ ಬಳಸುತ್ತಿದ್ದರು"[೧]. ಪ್ರಾಚೀನ ಸಾಹಿತ್ಯಗಳು ಇಂತಹ ಕೆಲವು ವಿಚಾರಗಳನ್ನು ತಿಳಿಸುತ್ತವೆ. 'ಕಾದಂಬರಿ'ಯಲ್ಲಿ ಚಂಡಿಕಾ ದೇವಾಲಯದ ವರ್ಣನೆ ಭಯಂಕರವಾಗಿದೆ. ಅಲ್ಲಿ ಸಿದ್ಧರು ಮತ್ತು ಮಾತೃಕೆಯರು ವಾಸಿಸುತ್ತಿದ್ದರು, ಶಬರರು ವಿಂದ್ಯಾವಾಸಿನಿಯಾದ ಚಂಡಿಕೆಗೆ ನರಮಾಂಸ ಅರ್ಪಿಸುತ್ತಿದ್ದರು ಎಂಬ ವಿವರಣೆಗಳು ದೊರಕುತ್ತವೆ. 'ಹಷಚರಿತ್ರೆ'ಯಲ್ಲಿ ನರಬಲಿಕೊಡುವ ಮತ್ತು ನರಮಾಂಸ ಮಾರುವವರ ಚಿತ್ರಣವಿದೆ. 'ಯಶೋಧರ ಚರಿತೆ'ಯಲ್ಲಿಯೂ ಇಂತಹ ನರಬಲಿಯ ಸನ್ನಿವೇಶದ ಭಯಂಕರ ಚಿತ್ರಣವಿದೆ. 'ಮಾಲತಿ-ಮಾದವ'ದಲ್ಲಿ ಕಾಪಾಲಿಕರ ಕುರಿತಂತೆ ಹಾಗೂ 'ಯಶಸ್ತಿಲಕ ಚಂಪು'ಕೃತಿಯಲ್ಲಿ ಮಹಾವ್ರತಿಗಳ ವಿವರಣೆಗಳಿವೆ. ಇಂತಹ ಕೆಲವು ಸಾಹಿತ್ಯಗಳಲ್ಲಿ ತಾಂತ್ರಿಕ ಸಾಧಕರ ಬಹಿರಂಗ ಆಚರಣೆಗಳ ವಿವರಗಳು ದೊರಕುತ್ತವೆ. ಆದರೆ ಬಾಹ್ಯದಲ್ಲಿ ತೋರಿಬರುವ ಈ ಆಚರಣೆಗಳಲ್ಲದೆ ಗೌಪ್ಯವಾದ ಹಲವು ಆಚರಣೆಗಳು ಹೇಗಿತ್ತೆನ್ನುವುದು ರಹಸ್ಯವಾಗಿಯೇ ಉಳಿದಿವೆ.

ಸಮಾಜದ ಕೆಳವರ್ಗದ ಜನಸಾಮಾನ್ಯರು, ವಿವಿಧ ವೃತ್ತಿಯವರು ಈ ಗುಪ್ತ ಸಮಾಜದ ಸಾಧಕವರ್ಗದಲ್ಲಿರುತ್ತಿದ್ದು ಕ್ರಮೇಣ ವೈದಿಕರೂ ಇದರಲ್ಲಿ ತೊಡಗಿರಬೇಕು. ಹಾಗಾದುದರಿಂದಲೇ ಪುರಾಣಗಳಲ್ಲಿ ತಾಂತ್ರಿಕ ವಿಚಾರಗಳು ಎಡೆಪಡೆದವು. ಅಗ್ನಿಪುರಾಣ, ಗರುಡ ಪುರಾಣ ಮುಂತಾದವು ತಂತ್ರದ ವಿಷಯವನ್ನು ಪ್ರಸ್ತಾಪಿಸುತ್ತವೆ. ತಂತ್ರ ವಿರುದ್ಧವಾದ ಕೂರ್ಮ ಮತ್ತು ವರಾಹ ಮೊದಲಾದ ಪುರಾಣಗಳೂ ಉಂಟು. ಒಟ್ಟಾರೆಯಾಗಿ ಇವುಗಳನ್ನು ವೇದವಿರೋಧಿಗಳೆಂದು ಗುರುತಿಸಿದರೂ, ತಂತ್ರಗಳಲ್ಲಿ ವೇದಪರ ಮತ್ತು ವೇದ ವಿರುದ್ಧ ಎರಡು ಸಂಪ್ರದಾಯಗಳೂ ಇದ್ದವೆಂದು ತಿಳಿದು ಬರುತ್ತದೆ. 'ತಂತ್ರಾಲೋಕ', 'ಶಾರದಾ ತಿಲಕ', 'ಮೃಗೇಂದ್ರಾಗಮ', 'ತ್ರಿಪುರ ರಹಸ್ಯ', ಮುಂತಾದ ತಂತ್ರಗಳು ವೇದ ಪರವಾದವುಗಳಾದರೆ, 'ಕಾಳಿಕಾ ಪುರಾಣ' ಮತ್ತು 'ಯೋಗಿನಿ ತಂತ್ರಗಳು' ವೇದ ವಿರುದ್ಧವಾದವು. ಹೀಗೆ ಕಾಲಘಟ್ಟಗಳಲ್ಲಿ ತಂತ್ರಗಳು ವಿಕಾಸ ಹೊಂದುತ್ತಾ ಸ್ಥಿತ್ಯಂತರಗೊಂಡಿರುವುದನ್ನು ಗಮನಿಸಬಹುದು.

*

ಮಧ್ಯಕಾಲೀನ ಕರ್ನಾಟಕದಲ್ಲಿ ಇಂತಹ ಆಚರಣೆಗಳು ಅಧಿಕವಾಗಿತ್ತೆಂದು ತೋರುತ್ತದೆ. ಈ ಕಾಲದಲ್ಲಿ ಜನಸಾಮಾನ್ಯರಿಗೆ ನಿಗೂಢವೆನಿಸಿದ ಈ ಆಚರಣೆಗಳು ರಾಜರ ಹಾಗೂ ಶ್ರೀಮಂತರಿಂದ ಪೋಷಿಸಲ್ಪಟ್ಟಿತು. ಗುಪ್ತವಿಧಿಗಳು, ರಹಸ್ಯ ಆಚರಣೆಗಳು ರಾಜಾಶ್ರಯ ಪಡೆದವು. ಇವು ಯುದ್ಧ ಮತ್ತಿತರ ಸಂದರ್ಭಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದವು. ಅರಸು ಮನೆತನದವರು ಶಕ್ತಿ ಆರಾಧಕರಾಗಿದ್ದರೆನ್ನುವುದಕ್ಕೆ ಹಲವಾರು ಉದಾಹರಣೆಗಳು ದೊರಕುತ್ತವೆ. ಸಪ್ತಮಾತೃಕೆಯರು ಚಾಲುಕ್ಯರ ರಕ್ಷಣಾ ದೇವತೆಗಳಾದರೆ, ಸೇವುಣರು ತಮ್ಮನ್ನು ಪದ್ಮಾವತಿ ಸರೋಜ ಬೃಂಗರೆಂದೂ ಕರೆದುಕೊಂಡಿದ್ದಾರೆ. ಇದೇ ಪ್ರಕಾರ 'ಚಾಮುಂಡೀ ವರಲಬ್ಧಾಕರ', 'ಮಹಾಲಕ್ಷ್ಮೀ ವರಲಬ್ಧಾಕರ', 'ಮಾಳಚಿ ವರಲಬ್ಧಾಕರ'ರೆಂದೂ ಮುಂತಾಗಿ ತಮ್ಮನ್ನು ಕರೆದುಕೊಳ್ಳುತ್ತಿದ್ದ ರಾಜಮನೆತನದವರನ್ನು ಗುರುತಿಸಬಹುದು. ರಾಷ್ಟ್ರಕೂಟ ಅಮೋಘವರ್ಷ ತನ್ನ ಬೆರಳನ್ನು ಕತ್ತರಿಸಿ ದೇವಿಗೆ ಅರ್ಪಿಸಿದ ಕಾರ್ಯವು ತಂತ್ರ ಪಂಥದ ವಿಧಿಯೇ ಆಗಿದೆ. ಆರಂಭದಲ್ಲಿ ಧರ್ಮ ನಿರಪೇಕ್ಷವೆನಿಸಿದ ಈ ತಂತ್ರಾಚರಣೆಗಳು ಕ್ರಮೇಣ ಲೈಂಗಿಕ-ಯೋಗ-ಮನಃಶಾಸ್ತ್ರೀಯ ಸಾಧನೆಯ ಜೊತೆಗೆ ವಶೀಕರಣ, ಶತ್ರುನಾಶ, ವೈದ್ಯ ಮತ್ತು ಜ್ಯೋತಿಷ್ಯಗಳಿಗಾಗಿ ಬಳಸಲ್ಪಡುವಂತಾಯಿತು. ಭೋಗಾಪೇಕ್ಷೆ, ಯುದ್ಧಾಕಾಂಕ್ಷೆ, ಶತ್ರುನಾಶ ಬಯಕೆ ಹೊಂದಿದ್ದ ಪ್ರಭುಶಕ್ತಿಯು ತಾಂತ್ರಿಕ ಸಾಧಕರೊಂದಿಗೆ ಸಂಪರ್ಕ ಬೆಳೆಸಿದ ಸಂದರ್ಭದಲ್ಲಿ ತಾಂತ್ರಿಕರಿಗೆ ಅರಮನೆ, ಅಧಿಕಾರಿ-ಶ್ರೀಮಂತವರ್ಗದ ಮನೆಗಳ ಪ್ರವೇಶಗಳು ಮುಕ್ತವಾಗಿ ತೆರೆದುಕೊಂಡಿತು. ಕೆಲವು ಪ್ರತಿಷ್ಠಿತ ಅರಸುಮನೆತನಗಳು ನಿರ್ಮಿಸಿರುವ ದೇವಾಲಯಗಳ ಹಿಂದೆ ತಾಂತ್ರಿಕ ಸಂಪ್ರದಾಯಗಳ ಕುರುಹನ್ನು ಗಮನಿಸಬಹುದು. ಇದು ಶಾಕ್ತ, ಶೈವ ಮತ್ತು ವೈಷ್ಣವದೇವಾಲಯಗಳಲ್ಲಿ ಅಂತರಂಗ ಮತ್ತು ಬಹಿರಂಗ ಪೂಜೆಗೆ ದಾರಿಯಾಯಿತು. ಬಹಿರಂಗದಲ್ಲಿ ವೈಭವದ ಶ್ರೀಚಕ್ರ ಪೂಜೆ, ಅಂತರಂಗದಲ್ಲಿ ಕನ್ಯಾಪೂಜೆ, ಲತಾಸಾಧನೆ, ಚಕ್ರಮೇಳಗಳು ರಹಸ್ಯವಾಗಿ ಮುಂದುವರೆದವು. ಸಂಸ್ಕೃತೀಕರಣಗೊಂಡ ಶ್ರೀಚಕ್ರಪೂಜೆ ಸಮಯಾಚಾರವಾಗಿ, ವೈಭವದಿಂದ ಬಹಿರಂಗವಾಗಿಯೂ, ಪಂಚಮಕಾರದ ಕುಲಾಚಾರದ ಪೂಜೆ ಮೂಲ ಸ್ವರೂಪದಲ್ಲಿ ರಹಸ್ಯವಾಗಿ ನಡೆಯಲಾರಂಭವಾಯಿತು.

ಬಾದಾಮಿ ಚಳುಕ್ಯರ ರಾಜ್ಯದಲ್ಲಿ ಇಂತಹ ಸಾಧನೆಯ ಭೂಮಿಕೆಯಾಗಿದ್ದ ಕೆಲವು ಕೊಳ್ಳಗಳನ್ನು ಗಮನಿಸಬಹುದು. ಇವು ಬೆಟ್ಟದ ನಡುವಿನ ಪ್ರದೇಶವಾಗಿದ್ದು, ಅಂದಿನ ಕಾಲದ ದುರ್ಗಮವೂ ನಿರ್ಜನವೂ ಆದ ಪ್ರದೇಶವಾಗಿತ್ತು. ಅಲ್ಲಿ ಅಂದಿನ ಆಚರಣೆಗಳ ಕೆಲವು ಕುರುಹುಗಳನ್ನು ಗುರುತಿಸಬಹುದಾಗಿದೆ.

ನಾಗರಹಾಳ್ ಅಥವಾ ನಾಗನಾಥನ ಕೊಳ್ಳ

ಬಾಗಿಲುಕೋಟೆ ಜಿಲ್ಲೆಗೆ ಸೇರಿದ ನಾಗನಾಥ ಕೊಳ್ಳವು ಬಾದಾಮಿಯಿಂದ ಸುಮಾರು ೧೩ ಕಿ.ಮೀ. ಅಂತರದಲ್ಲಿದೆ. ಹಿರೇಗುಡ್ಡದ ಕಣಿವೆಯಲ್ಲಿರುವ ಈ ಕೊಳ್ಳವು ಇಂದಿಗೂ ನಿರ್ಜನ ಪ್ರದೇಶವಾಗಿದೆ. ಇಲ್ಲಿ ಸುಂದರ ಕಲಾಕೃತಿಯಿಂದ ಕೂಡಿದ ನಾಗನಾಥ ಮಂದಿರವಿದೆ. ಈ ದೇವಾಲಯವು ಬಾದಾಮಿ ಚಾಲುಕ್ಯರ ಆಳ್ವಿಕೆಯ ಆರಂಭ ಕಾಲದ ನಿರ್ಮಿತಿಯಾಗಿದೆ. ಈ ದೇವಾಲಯವು, ಪ್ರದಕ್ಷಿಣಾಪಥ ಹೊಂದಿರುವ ಗರ್ಭಗುಡಿ, ಅದಕ್ಕೆ ಹೊಂದಿಕೊಂಡಿರುವ ವಿಶಾಲ ಸಭಾಮಂಟಪ ಹಾಗೂ ಅದರ ಮುಂದೆ ತೆರೆದ ಮುಖಮಂಟಪದಿಂದ ಕೂಡಿದೆ. ಕಂಬಗಳು ಸುಂದರ ಕೆತ್ತನೆಯಿಂದ ಕೂಡಿದೆ. ಸಭಾಮಂಟಪದ ಮೇಲ್ಛಾವಣಿಯಲ್ಲಿ ಶಿವಪಾರ್ವತಿ, ವಿಷ್ಣು, ಬ್ರಹ್ಮ ಅಷ್ಟದಿಕ್ಪಾಲಕರ ಶಿಲ್ಪಗಳಿವೆ. ಗರ್ಭಗುಡಿಯ ಬಾಗಿಲುವಾಡದ ಲಲಾಟದಲ್ಲಿ ಸರ್ಪವನ್ನು ಹಿಡಿದಿರುವ ಗರುಡನ ಶಿಲ್ಪವನ್ನು ಕೆತ್ತಲಾಗಿದೆ.

ಈ ದೇವಾಲಯದ ಹೊರಭಿತ್ತಿಯಲ್ಲಿ ಕೆಂಪು ಬಣ್ಣದಲ್ಲಿ ಮಸಿಯಲ್ಲಿ ಬರೆದಿರುವ ಶಂಖಲಿಪಿಯ ಬರಹಗಳಿವೆ. ಶಿಲ್ಪಿಗಳು ನಾಗರಿ ಲಿಪಿಯಲ್ಲಿ ತಮ್ಮ ಹೆಸರನ್ನು ಕೆತ್ತಿದ್ದಾರೆ. ಲಿಪಿ ಹಾಗೂ ಹೆಸರನ್ನು ಗಮನಿಸಿ ಈ ದೇವಾಲಯವನ್ನು ಉತ್ತರಭಾರತದಿಂದ ಬಂದ ಶಿಲ್ಪಿಗಳು ಕಟ್ಟಿರುವ ಸಾಧ್ಯತೆಗಳಿವೆ ಎಂದು ವಿದ್ವಾಂಸರು ತರ್ಕಿಸುತ್ತಾರೆ.

ಇಲ್ಲಿ ನಾಥಪಂಥೀಯರ ಆಚರಣೆ ಇದ್ದಿರಬಹುದೆಂದು ಕೆಲವು ಆಧಾರಗಳಿಂದ ಗುರುತಿಸಲಾಗುತ್ತದೆ. ನಾಥಪಂಥಕ್ಕೂ ಬೆಟ್ಟ, ಕಣಿವೆ, ಗುಹೆಗಳಿಗೂ ನಂಟು ಇರುವುದನ್ನು ಕಾಣಬಹುದು. ಬಹುತೇಕ ನಾಥರ ನೆಲೆಗಳು ದುರ್ಗಮವೂ, ನಿರ್ಜನವೂ ಆದ ಬೆಟ್ಟಪ್ರದೇಶಗಳಲ್ಲಿಯೇ ಇರುತ್ತಿತ್ತು. ಅವರು ತಮ್ಮ ಸಾಧನೆಗೆ ಅನುಕೂಲಕರವಾದ ಇಂತಹ ಜಾಗಗಳನ್ನು ಉದ್ದೇಶಪೂರ್ವಕವಾಗಿ ಆರಿಸಿಕೊಳ್ಳುತ್ತಿದ್ದರು.

ಹಲವಾರು ಪ್ರಾಚೀನ ಭಾರತೀಯ ದೇವಾಲಯಗಳಲ್ಲಿ ಕಂಡುಬರುವಂತಹ ಮಿಥುನ ಶಿಲ್ಪಗಳು ಇಲ್ಲಿಯೂ ಕಂಡುಬರುತ್ತವೆ. ವೈದಿಕ ಪರಂಪರೆಯ ಕಲ್ಪನೆಯ ಚತುರ್ವಿಧ ಪುರುಷಾರ್ಥಗಳಲ್ಲಿ ಧರ್ಮ, ಅರ್ಥ, ಮೋಕ್ಷಗಳೊಂದಿಗೆ ಕಾಮವೂ ಸೇರಿದೆ. ಸೃಷ್ಟಿಕಾರ್ಯವೂ ಪುರುಷಾರ್ಥಗಳಲ್ಲಿ ಒಂದು ಎಂಬ ಸಾಂಕೇತಿಕ ಅರ್ಥವನ್ನು ಇದು ಬಿಂಬಿಸುತ್ತದೆ ಎಂಬುದು

ಸಾಧಾರಣವಾದ ಅಭಿಪ್ರಾಯವಾದರೆ, ವಾಮಾಚಾರ, ಯೋಗಾಚಾರ, ತಂತ್ರದ ತಾತ್ವಿಕ ಹಿನ್ನೆಲೆಯಲ್ಲಿ ರೂಪುಗೊಂಡ ದೇವಾಲಯಗಳಲ್ಲಿ ಮಿಥುನ ಶಿಲ್ಪಗಳನ್ನು ಯೋಗದ ಅಂಗವಾಗಿ ಪ್ರಾಮುಖ್ಯತೆ ನೀಡಿ ಚಿತ್ರಿಸಿರುತ್ತಾರೆ ಎನ್ನಲಾಗುತ್ತದೆ. ಈ ನಾಗನಾಥ ದೇವಾಲಯದ ಮುಖಮಂಟಪದ ಕಂಬಗಳ ಮೇಲೆ ಇಂತಹ ಕಾಮಾಸಕ್ತ ಜೋಡಿಗಳ ಶಿಲ್ಪಗಳನ್ನು ಕೆತ್ತಲಾಗಿವೆ. ಇವು ಖಜುರಾಹೋ, ಕೋನಾರ್ಕ್ ಶಿಲ್ಪಗಳಲ್ಲಿ ಕಂಡುಬರುವ ಗುಂಪು ಕಾಮಕ್ರೀಡೆಯ ಶಿಲ್ಪಗಳಲ್ಲ. ಇವನ್ನು ದಂಪತಿ ಶಿಲ್ಪಗಳು ಎನ್ನಬಹುದು. ಈ ಶಿಲ್ಪಗಳು ದುಂಡಾದ ಹೊಯ್ಸಳ ಶಿಲ್ಪಗಳ ವಿನ್ಯಾಸವನ್ನು ಹೊಂದಿರದೆ, ನೀಳವಾದ ಕೈ-ಕಾಲುಗಳು ಹಾಗೂ ಸಪೂರ ದೇಹರಚನೆ ಹೊಂದಿರುವ ಶಿಲ್ಪಗಳಾಗಿವೆ. ಇಲ್ಲಿನ ಕೆಲವು ದಂಪತಿ ಶಿಲ್ಪಗಳ ಕೆಳಗೆ ಕುಬ್ಜ ಶಿಲ್ಪವಿದೆ, ಇದು ವ್ಯಕ್ತಿಯೊಬ್ಬರು ಆರಾಧನೆ ಮಾಡುತ್ತಿರುವ ಕಲ್ಪನೆಯಿಂದ ಮೂಡಿರಬಹುದೆ? ಮತ್ತೆ ಕೆಲವು ಶಿಲ್ಪಗಳಲ್ಲಿ ಮರದ ಚಿತ್ರಣವಿದೆ, ಅಲ್ಲದೆ ಕೆಲವು ಶಿಲ್ಪಗಳ ಮೇಲೆ ಬಳ್ಳಿ ಅಥವಾ ಹಾವು ಸುತ್ತಿಕೊಂಡಿರುವಂತಿದೆ ಇವು ಯಾವುದೋ ವಿಶೇಷ ಅರ್ಥವನ್ನು ಸೂಚಿಸುತ್ತಿರಬಹುದು. ನಾಗಪೂಜೆಗೂ ರತಿಕ್ರೀಡೆಗಳಿಗೂ ಸಾಂಕೇತಿಕವಾಗಿ ಸಂಬಂಧ ಸೂಚಿಸಲಾಗುತ್ತದೆ. ಇಂತಹ ಕೆಲವು ಸಾಂಕೇತಿಕ ವಿಚಾರಗಳ ಹಿನ್ನೆಲೆಯಲ್ಲಿಯೇ ನಾಗನಾಥನ ದೇವಾಲಯದ ಶಿಲ್ಪಗಳನ್ನು ಗಮನಿಸುವ ಅಗತ್ಯವಿದೆ. ಕುಂಡಲಿನಿ ಯೋಗವಿದ್ಯೆ, ಶಕ್ತಿ ಪೂಜೆ ಮುಂತಾದ ಆಚರಣೆಗೆ ಕುಂಡಲಿನಿ ಸರ್ಪದ ಶಕ್ತಿಯ ಆವಾಹನೆ ಮತ್ತು ಊರ್ಧ್ವಮುಖ ಚಲನೆಯ ಸಾಧನೆಗಳು ತಂತ್ರ ಸಾಧಕರಿಗೆ ಅವಶ್ಯಕವಾದವು. ಮಿಥುನ ಶಿಲ್ಪಗಳನ್ನು ಪ್ರತಿನಿಧಿಸುವ ಜೋಡಿ ಮೀನುಗಳ ಶಿಲ್ಪವೂ ಇಲ್ಲಿವೆ.

ಈ ಜಾಗದಲ್ಲಿ ತಂತ್ರವಿದ್ಯೆ ಆಚರಣೆಯಲ್ಲಿತ್ತೆನ್ನಲು ಮತ್ತೊಂದು ಆಧಾರ ಇಲ್ಲಿ ದೊರಕಿರುವ ಲಜ್ಜಾಗೌರಿಯ ಶಿಲ್ಪ. ಈ ಶಿಲ್ಪ ಬಾದಾಮಿಯ ಮ್ಯೂಸಿಯಂನಲ್ಲಿದೆ. ಯೋನಿ ಪ್ರಧಾನವಾಗಿ ಕಾಣುವಂತೆ ಕಾಲು ಅಗಲಿಸಿ ಕುಳಿತ ಭಂಗಿಯ ಸ್ತ್ರೀವಿಗ್ರಹವನ್ನು ಲಜ್ಜಾಗೌರಿ ಎಂದು ಕರೆಯಲಾಗುತ್ತದೆ. ಇವು ರುಂಡವಿಲ್ಲದ ವಿಗ್ರಹ. ಈ ವಿಗ್ರಹಗಳಲ್ಲಿ ಮುಖದ ಬದಲು ಕಮಲವಿರುವ ವಿಗ್ರಹಗಳೇ ಹೆಚ್ಚಾಗಿ ಕಂಡುಬರುತ್ತವೆ. ಈ ಶಿಲ್ಪವು ಕುಂಭದ ಆಕಾರದಲ್ಲಿದ್ದು, ಕುಂಭವು ಗರ್ಭಕೋಶದ ಸಂಕೇತವಾಗಿದ್ದು, ಫಲವತ್ತತೆಯ ಸೂಚಕ ವಿರಬಹುದೆಂದು ಹಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಈ ವಿಗ್ರಹಕ್ಕೆ ಪ್ರತ್ಯೇಕ ದೇವಾಲಯ, ಗರ್ಭಗುಡಿಗಳಿರುವುದಿಲ್ಲ. ಇದರ ಪೂಜೆ ಅಥವಾ ಆರಾಧನೆ ಹೇಗೆ ನಡೆಯುತ್ತಿತ್ತೆನ್ನುವುದಕ್ಕೆ ಗ್ರಂಥಾಧಾರಗಳು ದೊರಕುವುದಿಲ್ಲ. ಕೆಲವೊಂದು ಕಾವ್ಯಗಳು ಈ ಕುರಿತು ಉಲ್ಲೇಖ ಮಾಡಿವೆಯಾದರೂ ಸ್ಪಷ್ಟ ವಿಚಾರ ದಾಖಲಾಗಿಲ್ಲ. 'ಶಂಕರದಾಸಿಮಯ್ಯನ ಪುರಾಣ', 'ದೇವಿಕೋಶ'ವೆಂಬ ಕೃತಿಗಳಲ್ಲಿ ಜನಪದರು ಹೇಳುವಂತಹ ಕಥೆಗಳು ದೊರಕುತ್ತವೆ. ಆದರೆ ಇದನ್ನು ಪೂಜೆ ಮಾಡುವ ಅಗತ್ಯವೇನೆಂಬುದಾಗಲಿ, ಆಚರಣೆಯ ವಿಧಾನ ಯಾವರೀತಿಯದಾಗಿತ್ತು ಎನ್ನುವುದಾಗಲಿ ತಿಳಿದುಬರುವುದಿಲ್ಲ. "ಗುದಸ್ಥಾನದ ಮೂಲಾಧಾರ ಚಕ್ರದಿಂದ ಕುಂಡಲಿನಿ ಶಕ್ತಿಯನ್ನು ಜಾಗ್ರತಗೊಳಿಸಿ, ಸುಷುಮ್ನನಾಡಿ ಮಾರ್ಗವಾಗಿ ಅದನ್ನು ಮೇಲ್ಮುಖವಾಗಿ ಹರಿಸಿ, ಮೆದುಳಿನಲ್ಲಿರುವ ಸಹಸ್ರದಳ ಚಕ್ರಕ್ಕೆ (=ಕಮಲ) ಮುಟ್ಟಿಸುವುದು ತಾಂತ್ರಿಕರ ಉದ್ದೇಶವಾಗಿದ್ದು, ಇದನ್ನು ಈ ವಿಗ್ರಹ ಪ್ರತಿನಿಧಿಸುತ್ತದೆ"[೨] ಇದರ ಉದ್ದೇಶವನ್ನು ಇನ್ನೂ ಹಲವು ವಿದ್ವಾಂಸರು ವಿಭಿನ್ನವಾಗಿ ಅರ್ಥೈಸಿದ್ದಾರೆ. ಇದು ಫಲಶಕ್ತಿಯ ಸಂಕೇತ, ಫಸಲು ಸಂವೃದ್ಧಿಗಾಗಿ ಆರಾಧಿಸುತ್ತಿದ್ದಿರಬಹುದೆಂದು ಅರ್ಥೈಸಲು ಪ್ರಯತ್ನಿಸಿದ್ದಾರೆ. ಎಲ್ಲಾ ಸಮಾಜಗಳೂ ಪುರುಷಪ್ರಧಾನವಾಗಿ ಬೆಳೆದರೂ, ಇಲ್ಲಿನ ಪರಮಪುರುಷನ ಹಿಂದೆ ಆದಿಮಾತೆ, ಜಗಜ್ಜನನಿಯ ಪಾತ್ರವನ್ನು ಗಮನಿಸುವಂತೆ, ಎಲ್ಲಾ ಬುಡಕಟ್ಟುಗಳೂ ದೇವಿಯ ಆರಾಧನೆ ಮಾಡುವುದನ್ನು ಕಾಣುತ್ತೇವೆ. ಮೂಲ ಜಗಜ್ಜನನಿಯ ಕಲ್ಪನೆಗೂ ಮೊದಲು ಅಂಧಕಾರ, ಈ ಅಂಧಕಾರದಿಂದ ಅಂಡವೊಡೆದು ಮರಿಯು ಹೊರಬರುವಂತೆ ಬೆಳಕು ಸ್ಫೋಟಗೊಂಡು ಬರುವುದು. ಈ ಬೆಳಕಿನಿಂದಲೇ ವಿಶ್ವಸೃಷ್ಟಿ. ಲಜ್ಜಾಗೌರಿಯ ಆರಾಧನೆಯ ಹಿಂದೆ ಇಂತಹ ಪರಿಕಲ್ಪನೆ ಇದ್ದಿರಬಹುದೆನ್ನುವುದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ[೩].

"ಲಜ್ಜಾಗೌರಿ ವಿಗ್ರಹಗಳು ಉತ್ತರ ಕರ್ನಾಟಕದಲ್ಲಿ ಅದರಲ್ಲಿಯೂ ಬಾದಾಮಿ ಪರಿಸರದಲ್ಲಿ ಹೆಚ್ಚು ಸಿಗುತ್ತವೆ. ಬಾದಾಮಿ ಪ್ರಮುಖವಾಗಿ ಶೈವಪರಿಸರವಾಗಿರುವುದರಿಂದ ಶೈವ ಸಂಪ್ರದಾಯಕ್ಕೂ ಲಜ್ಜಾಗೌರಿಗೂ ತಾತ್ವಿಕ, ಆಚಾರಣಾತ್ಮಕ ಸಂಬಂಧವಿರಲೇಬೇಕು"[೪]. ತಂತ್ರವಿದ್ಯಾ ಆಚರಣೆ ಇದ್ದಿರಬಹುದಾದ ಹಲವಾರು ಕುರುಹುಗಳುಳ್ಳ ಈ ನಾಗನಾಥ ದೇವಾಲಯವು ನಾಥ ಪಂಥೀಯರ ಸಾಧನಾ ಸ್ಥಳವಾಗಿತ್ತೆನ್ನುವುದು ಈ ದೇವಾಲಯಕ್ಕಿರುವ 'ನಾಥ' ಎಂದು ಕೊನೆಗೊಳ್ಳುವ ಹೆಸರೇ ಸೂಚಿಸುತ್ತದೆ.

ಈ ದೇವಸ್ಥಾನದ ದಕ್ಷಿಣಭಾಗದ ಗೋಡೆಯಮೇಲಿರುವ ತೃಟಿತ ಶಾಸನದಲ್ಲಿ "ಸ್ವಸ್ತಿ ಶ್ರೀ ಉಜುಂ, ಅವುಗನುಂ ಚನ್ನನುಂ ವಿಶ್ರಾಮ...."[೫] ಎಂಬ ಅಪೂರ್ಣ ವಾಕ್ಯದ ಬರಹವಿದೆ. ಉರು, ಅವುಗ ಮತ್ತು ಚನ್ನ ಎಂಬುವರು ಸೇರಿ

ವಿಶ್ರಾಮವೊಂದನ್ನು ಸ್ಥಾಪಿಸಿದ್ದಿರಬಹುದಾದ ವಿಚಾರವನ್ನು ಇದು ತಿಳಿಸುತ್ತಿದೆ. ಲಿಪಿಯ ಆಧಾರದ ಮೇಲೆ ಇದು ೯ನೆಯ ಶತಮಾನದ್ದಿರಬಹುದೆಂದು ವಿದ್ವಾಂಸರು ಗುರುತಿಸಿದ್ದಾರೆ. ಆರಾಮ, ವಿಶ್ರಾಮಗಳು ಬೌದ್ಧ ಭಿಕ್ಷುಗಳಿಗಾಗಿ ಸ್ಥಾಪಿಸಲಾಗುತ್ತಿತ್ತು. ವಿಶ್ರಾಮದ ಉಲ್ಲೇಖವಿರುವ ಈ ಶಾಸನ ಸೂಚಿಸುವಂತೆ ಈ ಪ್ರದೇಶದಲ್ಲಿ ಬೌದ್ಧರೂ ಕೂಡ ನೆಲೆಸಿದ್ದರು ಎನ್ನುವುದು ತಿಳಿದು ಬರುತ್ತದೆ. ಅಶೋಕನ ಕಾಲದಲ್ಲಿ ಪ್ರಚಾರಕ್ಕೆ ಬಂದದ್ದು ಬೌದ್ಧಧರ್ಮದ ಹೀನಯಾನ ಪಂಥ. ಕ್ರಿ.ಶ. ಆರು-ಏಳನೆಯ ಶತಮಾನಗಳಲ್ಲಿ ಮಹಾಯಾನ ಪಂಥವು ಕರ್ನಾಟಕದಲ್ಲಿ ಪ್ರಚಾರದಲ್ಲಿತ್ತೆನ್ನುವುದು ತಿಳಿದು ಬರುತ್ತದೆ. ಕ್ರಮೇಣ ಈ ಮಹಾಯಾನ ಪಂಥದ ಸ್ಥಾನವನ್ನು ಬೌದ್ಧಧರ್ಮದ ತಾಂತ್ರಿಕ ಪ್ರಭೇದವಾದ ವಜ್ರಯಾನ ಪಂಥವು ಆಕ್ರಮಿಸಿಕೊಳ್ಳಲಾರಂಭಿಸಿತು. ಕರ್ನಾಟಕದ ವಿಭಿನ್ನ ಪ್ರದೇಶಗಳಲ್ಲಿ ಕಂಡುಬಂದ ಈ ಪಂಥವು ನಾಗನಾಥಕೊಳ್ಳದಲ್ಲಿಯೂ ಇತ್ತೆನ್ನುವ ಸುಳಿವು ಈ ಶಾಸನದಿಂದ ದೊರಕುತ್ತದೆ.

"ಬೌದ್ಧಧರ್ಮದ ವಜ್ರಯಾನವೂ, ಬಲಿದೇವತೆ ಭೈರವನನ್ನು ಆರಾಧಿಸುವ ಕಾಪಾಲಿಕವೂ ಸೇರಿ ನಾಥಪಂಥವನ್ನು ರೂಪಿಸಿದವು. ಇದು ತಂತ್ರಪಂಥಗಳ ಚರಿತ್ರೆಯಲ್ಲಿ ಬಹು ದೊಡ್ಡ ಘಟನೆ"[೬]. ಬೌದ್ಧ ಧರ್ಮೀಯರಿದ್ದ ಸ್ಥಳದಲ್ಲಿ ಕ್ರಮೇಣ ನಾಥಪಂಥೀಯರು ಆಕ್ರಮಿಸಿರುವುದು ಮಂಗಳೂರಿನ ಕದ್ರಿ ಮೊದಲಾದ ಹಲವೆಡೆ ಕಂಡುಬರುತ್ತದೆ. ಆದರೆ ಈ ಪ್ರದೇಶವು ಮೊದಲು ನಾಥರ ಆವಾಸಸ್ಥಾನವಾಗಿದ್ದು, ಆ ನಂತರ ಇಲ್ಲಿ ಬೌದ್ಧರು ಬಂದಿರುವ ಸಾಧ್ಯತೆಗಳಿವೆ. ಈ ದೇವಾಲಯದ ಶಿಲ್ಪಗಳು ಬ್ರಹ್ಮ, ವಿಷ್ಣು, ಮಹೇಶ್ವರ, ಭಾಗವತದ ಕೆಲವು ಕಥನ ಚಿತ್ರಣ ಮೊದಲಾದ ಶಿಲ್ಪಗಳನ್ನು ಒಳಕೊಂಡು ವೈದಿಕ ಪರಂಪರೆಯನ್ನು ತೋರುತ್ತಿದೆ. ಅಲ್ಲದೆ ಯಾವ ಶಿಲ್ಪವೂ ಬೌದ್ಧಮತಕ್ಕೆ ಸಂಬಂಧಿಸಿದ ವಿಚಾರವನ್ನು ತಿಳಿಸುವುದಿಲ್ಲವಾದ್ದರಿಂದ, ಮೂಲತಃ ಇದು ಬೌದ್ಧರಿಗೆ ಸೇರಿದ ದೇವಾಲಯವಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಅಲ್ಲದೆ ಇಲ್ಲಿ ಆರಾಮವನ್ನು ನಿರ್ಮಿಸಿರುವ ವಿಚಾರವನ್ನು ತಿಳಿಸುವ ಶಾಸನವು ಒಂಬತ್ತನೆಯ ಶತಮಾನಕ್ಕೆ ಸೇರಿರುವುದಾಗಿದೆ.

ಸಿದ್ಧರಕೊಳ್ಳ

ಇದು ಬಾದಾಮಿಯ ಪರಿಸರದಲ್ಲಿರುವ ಮತ್ತೊಂದು ಕೊಳ್ಳ. ಸಿದ್ಧಿ ಎಂದರೆ ಸಾಧನೆಯಲ್ಲಿ ಎತ್ತರದ ಹಂತ ಮುಟ್ಟಿದವರು ಎಂದರ್ಥ. ಹಲವು ಪರಂಪರೆಯಲ್ಲಿ ಸಿದ್ಧರ ಪರಿಕಲ್ಪನೆಯಿದೆ. ನಾಥಪಂಥಕ್ಕೆ ಸಿದ್ಧಪಂಥ ಎಂಬ ಹೆಸರೂ ಇದೆ. ನಾಥರ ಅನೇಕ ಮಠಗಳುಸಿದ್ಧಪೀಠ ಎಂಬ ಹೆಸರಲ್ಲಿವೆ. ಚೌರಾಸಿ ಸಿದ್ಧರಪಟ್ಟಿಯಲ್ಲಿ ಅನೇಕ ನಾಥರು ಬರುತ್ತಾರೆ. ಗೋರಖ ಮಚ್ಚೇಂದ್ರರು ಪ್ರಸಿದ್ಧ ಸಿದ್ಧರಾಗಿದ್ದರು. ಕರ್ನಾಟಕದಲ್ಲಿ ನಾಥವಲ್ಲದ ಸಿದ್ಧರ ಸಂಖ್ಯೆಯೂ ದೊಡ್ಡದಾಗಿದೆ. ಸೊನ್ನಲಿಗೆ ಸಿದ್ಧರಾಮ, ಮರುಳಸಿದ್ಧ, ರೇವಣಸಿದ್ಧ, ಕೊಲ್ಹಾಪುರದ ಕಾಡಸಿದ್ಧ ಅಷ್ಟೇ ಅಲ್ಲದೆ ಮಂಟೇಸ್ವಾಮಿ ಅವನ ಶಿಷ್ಯ ಸಿದ್ಧಪ್ಪಾಜಿ, ಕೂಡಲೂರು ಬಸವಲಿಂಗ, ಕೊಡೇಕಲ್ ಬಸವಣ್ಣ, ಹುಬ್ಬಳ್ಳಿಯ ಸಿದ್ಧಾರೂಢ, ತೊಂಟದ ಸಿದ್ಧಲಿಂಗಯತಿ ಮೊದಲಾದ ರಸಸಿದ್ಧರು, ಆರೂಢರನ್ನು ಸಿದ್ಧರೆಂದು ಕರೆಯುವ ವಾಡಿಕೆಯಿದೆ. ಇಲ್ಲಿನ ಸಿದ್ಧರ ಪಟ್ಟಿಯಲ್ಲಿ ಸಾಕಷ್ಟು ಗೋಜಲಿವೆ. ಅಂತೆಯೇ ಕರ್ನಾಟಕದ ಸಿದ್ಧಕ್ಷೇತ್ರಗಳಲ್ಲಿ, ಸಿದ್ಧರಬೆಟ್ಟ, ಸಿದ್ಧರಗುಡಿ, ಸಿದ್ಧರ ಹಲವು ಮಠಗಳು ಸೇರಿವೆ. ಇವು ನಾಥವೂ ಒಳಗೊಂಡಂತೆ ಇತರ ಪಂಥಗಳಿಗೆ ಸೇರಿದವಾಗಿವೆ.

ಬಾದಾಮಿ ಬಳಿಯ ಈ ಸಿದ್ಧರ ಕೊಳ್ಳವೂ ಒಂದು ತಾಂತ್ರಿಕ ಸಾಧನಾ ಕೇಂದ್ರವಾಗಿತ್ತೆನ್ನುವುದಕ್ಕೆ ಕೆಲವು ಕುರುಹುಗಳು ದೊರಕುತ್ತವೆ. ಈ ಪ್ರದೇಶವೂ ಕೂಡ ಬೆಟ್ಟಪ್ರದೇಶದ ನಡುವೆ ಇರುವ ಜೌಗು ಪ್ರದೇಶವಾಗಿದೆ. ಇಲ್ಲಿ ನೀರಿನ ಝುರಿ ಹರಿದು ಬರುತ್ತದೆ. ಇದರ ದಡದ ಮೇಲಿನ ಹುಟ್ಟುಬಂಡೆಯಲ್ಲಿ ಲಜ್ಜಾಗೌರಿಯ ಶಿಲ್ಪವನ್ನು ಕೆತ್ತಲಾಗಿದೆ. ಮಲಗಿದ ಭಂಗಿಯಲ್ಲಿರುವ ಈ ಶಿಲ್ಪದ ತಲೆಯ ಭಾಗದಲ್ಲಿ ಕಮಲದ ಹೂವನ್ನು ಕೆತ್ತಲಾಗಿದೆ.

ಇಲ್ಲಿಂದ ಮೇಲ್ಭಾಗದ ಬಂಡೆಯ ಮೇಲೆ ಪ್ರಾಚೀನ ಗುಡಿಯೊಂದಿದೆ. ಯಾವುದೇ ಅಲಂಕಾರಿಕ ಕಂಬಗಳಾಗಲೀ, ಭಿತ್ತಿಶಿಲ್ಪಗಳಾಗಲಿ ಇಲ್ಲಿಲ್ಲ. ಇದೊಂದು ನೈಸರ್ಗಿಕ ಪ್ರದೇಶವನ್ನು ಗುಡಿಯ ರೂಪದಲ್ಲಿ ಮಾರ್ಪಾಡು ಮಾಡಿಕೊಂಡಿರುವ ಸಣ್ಣ ದೇವಾಲಯ. ಪ್ರಸ್ತುತ ಇಲ್ಲೊಂದು ಶಿವಲಿಂಗವನ್ನಿಟ್ಟು ಪೂಜೆ ಮಾಡಲಾಗುತ್ತಿದೆ. ಈ ಗುಡಿಯ ಮೇಲ್ಭಾಗದಲ್ಲಿ ಕಲ್ಲಿನಿಂದ ಕೊರೆದು ನಿರ್ಮಿಸಿರುವ ಕೋಣೆಯಿದೆ. ಇದಕ್ಕೆ ಮೆಟ್ಟಿಲುಗಳಿಲ್ಲ. ಪಕ್ಕದ ಬಂಡೆಯಮೇಲೆ ಹತ್ತಿ ಹೋಗಬಹುದಾಗಿದೆ. ಇಂತಹ ವಿನ್ಯಾಸಗಳು ಸಾಧಾರಣವಾಗಿ ಬೌದ್ಧರದಾಗಿರುತ್ತಿತ್ತು. ಆದರೆ ಇಲ್ಲಿ ಬೌದ್ಧರ ಕುರುಹುಗಳು ಕಂಡು ಬರುವುದಿಲ್ಲ. ಈ ಗುಡಿಯ ಹೊರಭಾಗದಲ್ಲಿ ಭಿನ್ನವಾದ ಕೆಲವು ವಿಗ್ರಹಗಳೊಂದಿಗೆ ಭೈರವನ ವಿಗ್ರಹವಿದೆ.


ಈ ವಿಶಾಲ ಆವರಣದ, ಪ್ರವೇಶ ದ್ವಾರದ ಎಡಭಾಗದಲ್ಲಿ ಸಪ್ತಮಾತೃಕೆಯರ ಮಂದಿರವಿದೆ. ಸಾಧಾರಣವಾಗಿ ಇತರ ದೇವಾಲಯಗಳಲ್ಲಿ ನವರಂಗದಲ್ಲಿ ಸಪ್ತಮಾತೃಕೆಯರ ಪಟ್ಟಿಕೆಗಳು ಕಂಡು ಬರುತ್ತದೆ. ಆದರೆ ಇಲ್ಲಿ ಹೆಚ್ಚು ಎತ್ತರವಿಲ್ಲದ




ನಾಗನಾಥನ ಕೊಳ್ಳದ ದೇವಾಲಯ



ಸಿದ್ಧರ ಕೊಳ್ಳದಲ್ಲಿ ಹುಟ್ಟು ಬಂಡೆಯ ಮೇಲೆ ಕಡೆದಿರುವ ಲಜ್ಜಾಗೌರಿಯ ಶಿಲ್ಪ



ನಾಗನಾಥನ ಕೊಳ್ಳದ ದೇವಾಲಯದಲ್ಲಿನ ಮಿಥುನ ಶಿಲ್ಪಗಳು ಇಲ್ಲಿ ಶಿಲ್ಪದ ಮೇಲೆ ಹಾವು ಅಥವಾ ಬಳ್ಳಿಯಂತಹದ್ದು ಸುತ್ತಿಕೊಂಡಿರುವುದನ್ನು ಕಾಣಬಹುದು.



ಅದೇ ಸ್ಥಳದ ಭೈರವ ಶಿಲ್ಪ



ಸಪ್ತಮಾತೃಕೆಯರಿಗೆಂದೇ ನಿರ್ಮಿಸಲಾಗಿರುವ ಪ್ರತ್ಯೇಕ ಗುಡಿ




ಹುಲಿಗೆಯಮ್ಮನ ಕೊಳ್ಳದಲ್ಲಿನ ಬಾದಾಮಿ ಚಳುಕ್ಯ ರಾಜ ಮನೆತನದ ಗದ್ದುಗೆಗಳು (ಸಮಾಧಿಗಳು)



ಸಿದ್ಧರ ಕೊಳ್ಳದ ಒಂದು ಪಾರ್ಶ್ವನೋಟ

ಸಣ್ಣಗುಡಿಯೊಂದನ್ನು ಪ್ರತ್ಯೇಕವಾಗಿ ಸಪ್ತಮಾತೃಕಾವಿಗ್ರಹಗಳಿಗೆಂದೇ ನಿರ್ಮಿಸಲಾಗಿದೆ. ಈ ವಿಗ್ರಹಗಳು ಒಂದೇ ಸಾಲಿನಲ್ಲಿ ನಿರ್ಮಿಸಲಾಗಿದೆಯಾದರೂ, ಸಾಧಾರಣವಾಗಿ ಇತರ ದೇವಾಲಯಗಳಲ್ಲಿ ಕಂಡುಬರುವಂತೆ ಒಂದೇ ಪಟ್ಟಿಕೆಯಲ್ಲಿಲ್ಲ. ಗಾತ್ರದಲ್ಲಿ ದೊಡ್ಡದಾಗಿ, ವಿಶಿಷ್ಟ ಶೈಲಿಯ ವಿಗ್ರಹಗಳಾಗಿವೆ. ಬಾದಾಮಿ ಚಾಲುಕ್ಯರ ಕಾಲದ ಈ ವಿಗ್ರಹಗಳಿಗೆ ಇತ್ತೀಚೆಗೆ ಬಣ್ಣ ಹಚ್ಚಲಾಗಿದೆ.

ಇದರ ಮುಂಭಾಗದಲ್ಲಿ ಬಾದಾಮಿ ಚಾಲುಕ್ಯರ ನಂತರ ಕಾಲದಲ್ಲಿ ಕಟ್ಟಿರಬಹುದಾದ ಪ್ರಾಚೀನ ಮಂದಿರವಿದೆ. ಗರ್ಭಗುಡಿ, ಮುಖಮಂಟಪವನ್ನೊಳಗೊಂಡ ಈ ಸಣ್ಣ ಗುಡಿಯಲ್ಲಿ ವೀರಭದ್ರನ ವಿಗ್ರಹ ಪೂಜೆಗೊಳ್ಳುತ್ತಿದೆ.





ಬಂಡೆ ಕೊರೆದು ಮಾಡಿರುವ ಗುಹೆ, ಅಲ್ಲಿನ ಸಪ್ತಮಾತೃಕೆಯರು ಹಾಗು ಬಂಡೆ ಕೊರೆದು ನಿರ್ಮಿಸಿರುವ ಗುಡಿ



ಹುಲಿಗೆಯಮ್ಮನ ಕೊಳ್ಳದಲ್ಲಿನ ಲಜ್ಜಾಗೌರಿಯ ಶಿಲ್ಪ



ಪ್ರೇತಗಳ ಶಿಲ್ಪ

ಹುಲಿಗೆಯಮ್ಮನ ಕೊಳ್ಳ

ಜಾಲಿಹಾಳದ ಬಳಿಯಲ್ಲಿರುವ ಹುಲಿಗೆಯಮ್ಮನ ಕೊಳ್ಳವೂ ಕೂಡ ನಿರ್ಜನ ಪ್ರದೇಶವಾಗಿದ್ದು ಬೆಟ್ಟ ಹಾಗೂ ಕಣಿವೆ ಪ್ರದೇಶದಿಂದ ಕೂಡಿದೆ. ಇಲ್ಲಿ ನೀರಿನ ಸಣ್ಣ ಜಲಪಾತವಿದ್ದು, ಇದು ಮುಂದೆ ಒಂದು ಹಳ್ಳವನ್ನು ನಿರ್ಮಿಸಿ ಹರಿಯುತ್ತದೆ. ನೀರು ಹರಿದು ಬೀಳುವ ಈ ಬೆಟ್ಟದ ಮೇಲೆ ತೆರೆದ ವಿಶಾಲ ಗುಹೆಯನ್ನು ನಿರ್ಮಿಸಿ, ಪೂಜಾಚರಣೆಗೆ ಜಾಗವನ್ನು ಅನುವುಮಾಡಲಾಗಿದೆ. ಇಲ್ಲಿ ಸಪ್ತಮಾತೃಕೆಯರ ಪ್ರಾಚೀನ ಶಿಲ್ಪಗಳು, ಭೈರವನ ಶಿಲ್ಪ ಮೊದಲಾದ ಶಿಲ್ಪಗಳನ್ನು ಕಾಣಬಹುದು. ಇಲ್ಲಿ ಲಜ್ಜಾಗೌರಿಯ ಸಣ್ಣ ವಿಗ್ರಹವಿದೆ.

ಈ ಪ್ರದೇಶದಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಶಿವನ ಗುಡಿಗಳನ್ನು ನಿರ್ಮಿಸಲಾಗಿದೆ. ಈ ಗುಡಿಗಳೆಲ್ಲ ಬಾದಾಮಿ ಚಾಲುಕ್ಯ ಅರಸರ ಸಮಾಧಿಗಳೆಂದು ಗುರುತಿಸಲಾಗಿದೆ. ಇಲ್ಲಿನ ಶಾಸನವೊಂದು "ವಿಕ್ರಮಾದಿತ್ಯ ಸತ್ಯಾಶ್ರಯ ದೇವಾರಿಯ ಮಗ ಬೆನಮ್ಮ ಎಂಬುವವನು ಸ್ವರ್ಗದ ದಾರಿಯ ಗಾಡಿಯನ್ನು ಮಾಡಿದ" ಎಂಬ ವಿಚಾರವನ್ನು ತಿಳಿಸುತ್ತದೆ[೭]. ಈ ವಿವರಣೆಯಲ್ಲಿ ಇಲ್ಲಿನ ಸಮಾಧಿಯನ್ನು ನಿರ್ಮಿಸಿದ ಶಿಲ್ಪಿಯ ಉಲ್ಲೇಖವನ್ನು ಕಾಣಬಹುದು.

ಸಾಧಾರಣವಾಗಿ ಕಾಪಾಲಿಕರ ಸಾಧನೆಗಳು ಸ್ಮಶಾನಗಳಲ್ಲಿ ನಡೆಸಲಾಗುತ್ತಿತ್ತೆನ್ನುವ ವಿವರಗಳು ದೊರಕುತ್ತವೆ. ಇವರು ರುಂಡಮಾಲಿ ಅಥವಾ ಮೂಳೆಗಳ ಹಾರವನ್ನು ಧರಿಸಿದವರಾಗಿ, ಕೈಯಲ್ಲಿ ಕಪಾಲ ಹಿಡಿದು ಭೀಕರ ವೇಷವನ್ನು ಧರಿಸಿದವರಾಗಿರುತ್ತಿದ್ದರು. ಸ್ಮಶಾನವಾಸಿಗಳಾದ ಇವರ ಆಚರಣೆಗಳೆಲ್ಲಾ ಬೀಭತ್ಸ್ಯದಿಂದಿ ಕೂಡಿರುತ್ತಿತ್ತೆನ್ನುವ ವಿವರಣೆಗಳು ಕಾವ್ಯದಲ್ಲಿ ದೊರಕುತ್ತವೆ.

ಇಲ್ಲಿನ ಒಂದು ಕಲ್ಲಿನ ಮೇಲಿರುವ ತೇದಿ ಇಲ್ಲದ ತೃಟಿತ ಶಾಸನವೊಂದರಲ್ಲಿ "ಶ್ರೀ ಕಾದಮಾರಕ್ಕುಟ್ಟರ ಚಟ್ಟ .... ಮಾಬ್ರತಿದಾಸ ಪರಮಮಹೇಶ್ವರ"[೮] ಎಂಬ ಉಲ್ಲೇಖ ದೊರಕುತ್ತದೆ. ಕಾಪಾಲಿಕರು ತಮ್ಮನ್ನು ಮಹಾವ್ರತಿಗಳೆಂದು ಕರೆದುಕೊಳ್ಳುತ್ತಿದ್ದರೆಂದು ತಿಳಿದುಬರುತ್ತದೆಯಾದರೂ ಕರ್ನಾಟಕದಲ್ಲಿ ಕಾಪಾಲಿಕ ಮತ್ತು ಮಹಾವ್ರತಿ ಬೇರೆ ಬೇರೆ ಪಂಥಗಳನ್ನು ಸೂಚಿಸುತ್ತಿದ್ದವೆಂದು ಕಾಣುತ್ತದೆ"[೯] ಏಕೆಂದರೆ ಚನ್ನಬಸವ ತನ್ನ ವಚನವೊಂದರಲ್ಲಿ ಅವೆರಡನ್ನೂ ಬೇರೆ ಬೇರೆಯಾಗಿ ಈ ರೀತಿ ಹೇಳಿದ್ದಾನೆ "...ಮಹಾವ್ರತಿ ಮದವೇರಿದ... ಕಾಪಾಲಿ ಮರುಳಾಗಿ ತಿರುಗಿದ..." ಈ ಎರಡೂ ಪಂಥಗಳು ಬೇರೆಯಾಗಿದ್ದರೂ ಹೆಚ್ಚು ವ್ಯತ್ಯಾಸವಿರಲಿಲ್ಲವೆಂದು ನಿಜಗುಣ ಶಿವಯೋಗಿಯು ವಿವೇಕ ಚಿಂತಾಮಣಿಯಲ್ಲಿ ನೀಡಿರುವ ಉಲ್ಲೇಖದಿಂದ ತಿಳಿದುಬರುತ್ತದೆ. "ಕಾಪಾಲಿಕವು ನರಕಪಾಲದಲ್ಲಿ ಭಿಕ್ಷೆಯನ್ನೆತ್ತಬೇಕೆಂದು ವಿಧಿಸಿದರೆ, ಮಹಾವ್ರತ ಪಂಥವು ಮನುಷ್ಯರ ಎಲುಬುಗಳನ್ನು ಧರಿಸಲು ಪ್ರಾಶಸ್ತ್ಯವನ್ನು ನೀಡುತ್ತದೆ"

ಕಾಪಾಲಿಕರೂ ಬಹಳ ಪ್ರಾಚೀನ ಕಾಲದಿಂದಲೇ ಕರ್ನಾಟಕದಲ್ಲಿದ್ದ ಕುರುಹುಗಳು ದೊರಕುತ್ತವೆ. ಕರ್ನಾಟಕದ ಉತ್ತರ ಭಾಗಗಳನ್ನು ಒಳಗೊಂಡಂತೆ ರಾಜ್ಯವಾಳಿದ ಶಾತವಾಹನ ಹಾಲರಾಜನ 'ಗಾಥಾ ಸಪ್ತಶತಿ'ಕೃತಿಯಲ್ಲಿ ಭಸ್ಮಸ್ನಾನ ಮಾಡುತ್ತಿರುವ ಕಾಪಾಲಿಕೆಯೊಬ್ಬಳ ಚಿತ್ರವಿದೆ[೧೦] ಕ್ರಿ.ಶ. ಐದನೆಯ ಶತಮಾನದ ಶಾಸನವೊಂದು[೧೧] ಕಾಪಾಲಿಕ ಬಟ್ಟಾರಕ

(ಕಾವಾಳಿಕ ಭಟಾರ)ನನ್ನು ಉಲ್ಲೇಖಿಸುತ್ತದೆ. ಕಾಪಾಲಿಕರು ಶಿವನ ಉಗ್ರ ರೂಪವಾದ ಭೈರವನ ಆರಾಧಕರು. ಅವರು ತಲೆಬುರುಡೆ ಎಲಬುಗಳನ್ನು ಧರಿಸಿ, ತಲೆಯೋಡುಗಳಲ್ಲಿ ಊಟ ಮಾಡುತ್ತಾ ಸ್ಮಶಾನವನ್ನು ವಾಸಸ್ಥಾನವನ್ನಾಗಿ ಮಾಡಿಕೊಂಡು ಬೂದಿಯ ಹಾಸಿಗೆಯ ಮೇಲೆ ಮಲಗುತ್ತಿದ್ದರೆನ್ನುವ ವಿವರಗಳು ದೊರಕುತ್ತದೆ. ಚನ್ನಬಸವಣ್ಣ, ಅಲ್ಲಮರು ಇವರ ಆಚರಣೆಯನ್ನು ಖಂಡಿಸುವ ನುಡಿಗಳಲ್ಲಿ ಕೆಲವು ಆಚರಣೆಗಳು ಕಂಡುಬರುತ್ತವೆ. ಕಾಪಾಲಿಕರು ಮತ್ತು ನಾಥರು ಭಿನ್ನ ಪಂಥಗಳಿಗೆ ಸೇರಿದವರೆಂಬ ಅಭಿಪ್ರಾಯವಿದೆಯಾದರೂ, "ಕರ್ನಾಟಕದಲ್ಲಿ ನಾಥಪಂಥ ಮತ್ತು ಕಾಪಾಲಿಕರಿಗೆ ಯಾವ ಭೇದವೂ ಇರಲಿಲ್ಲ. ಕಾಪಾಲಿಕ ಪಂಥವನ್ನು ಆರಂಭಿಸಿದವರು ನಾಥರು – ಎಂಬ ಹೇಳಿಕೆಯೂ ಇದೆ"[೧೨]

ಕಾಳಾಮುಖರು ಕಾಪಾಲಿಕರು ನಾಥಪಂಥೀಯರಿಗಿಂತ ವಿಭಿನ್ನ ಆಚರಣೆ ಹೊಂದಿದ್ದರೆಂದು ತಿಳಿದುಬರುತ್ತದೆ. ಇವರು ಊರು ನಗರ ದೇವಸ್ಥಾನ, ಮಠಗಳಿಗೆ ಸ್ಥಾನಪತಿಯಾಗಿರುತ್ತಿದ್ದರು. ಕೆಲವು ದೊರೆಗಳು – ಅಧಿಕಾರಿ ವರ್ಗದವರು ಇವರಿಗೆ ಶಿಷ್ಯರಾಗಿದ್ದಂತೆ ತಿಳಿದುಬರುತ್ತದೆ. ಕೆಲವು ಶಾಸನಗಳು ಅವರ ತಪಸ್ಸು, ಪಾಂಡಿತ್ಯ, ಔದಾರ್ಯ, ಶೀಲಾದಿಗುಣಗಳನ್ನು ಪ್ರಶಂಸೆ ಮಾಡಿವೆ. ಈ ಎಲ್ಲಾ ಮತಗಳಲ್ಲಿಯೂ ಆಚರಣೆ ಒಂದೇ ರೀತಿಯದ್ದಾಗಿರದಿದ್ದರೂ, ಈ ಎಲ್ಲ ತಾಂತ್ರಿಕ ಮತಗಳೂ ರಹಸ್ಯಸಾಧನೆಗಳನ್ನು ನಡೆಸುತ್ತಿದ್ದವೆನ್ನುವುದು ಸಾಮಾನ್ಯ ಅಂಶವಾಗಿದೆ.

ಹಿಂದೊಮ್ಮೆ ಕಾಪಾಲಿಕರು, ಮಹಾವ್ರತಿಗಳ ತಾಂತ್ರಿಕ ಸಾಧನೆಗೆ ಬಳಸಿಕೊಳ್ಳುತ್ತಿದ್ದ ಹುಲಿಗೆಯಮ್ಮನ ಕೊಳ್ಳದಲ್ಲಿ ಇತ್ತೀಚೆಗೆ ಜಂಗಮ ಮಠವೊಂದು ನಿರ್ಮಾಣಗೊಂಡಿದೆ. ಈ ಬೆಟ್ಟದ ಎಡಭಾಗದಲ್ಲಿ ಇತ್ತೀಚೆಗೆ ಸ್ಥಾಪಿಸಲಾಗಿರುವ ಸ್ವಾಮೀಜಿಯ ಗದ್ದುಗೆ (ಸಮಾಧಿ)ಗೆ ನಿಷ್ಠೆ ತೋರುವ ಅವರ ಅನುಯಾಯಿ ವರ್ಗ ಇಲ್ಲಿ ನೆಲೆಸಿದ್ದಾರೆ.

ಸಾವಿರಾರು ವರ್ಷಗಳ ಹಿಂದೆ ತನ್ನದೇ ಆದ ವಿಶಿಷ್ಟ ಆಚರಣೆಗಳಿಗೆ ನೆಲೆಯಾಗಿದ್ದ ಇಂತಹ ಹಲವು ಕೊಳ್ಳಗಳು ಅಂದಿನ ನಿಗೂಢ ಆಚರಣೆಗಳ ಕುರುಹುಗಳನ್ನೂ ಇಂದಿನ ಹೊಸ ಆಚರಣೆಗಳ ಸಂಪ್ರದಾಯಗಳ ನಡುವೆಯೂ ತೋರುತ್ತಿದೆ.

ಆಧಾರಸೂಚಿ

೧. ಕೆ.ಜಿ. ನಾಗರಾಜಪ್ಪ., ರಹಸ್ಯ ಪಂಥಗಳು, ತಂತ್ರ ದರ್ಶನ, ಅಂಕಿತ ಪುಸ್ತಕ, ಬೆಂ. ೨೦೧೩.

೨. ಅ. ಸುಂದರ., ಅಧ್ಯಯನ, ಶಂ.ಬಾ. ಜೋಶಿ ಅಭಿನಂದನ ಗ್ರಂಥ., ಪು. ೩೩೭.

೩. ಶ್ರೀಪತಿ ತಂತ್ರಿ, ಸನಾತನ ಧರ್ಮದ ಮುಗ್ಗುಲುಗಳು, ೭೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ೨೦೦೭, ಪು. ೨೧–೩೪.

೪. ಎಂ.ಎಂ. ಕಲಬುರ್ಗಿ., ಲಜ್ಜಾಗೌರಿ, ಮಾರ್ಗ ಸಂ. ೨, ಸಪ್ನ ಬುಕ್ ಹೌಸ್, ಬೆಂ.

೫. ಕವಿಶಾಸಂ. ೯, ಬಾದಾಮಿ, ೧೦.

೬ ರಹಮತ್ ತರೀಕೆರೆ, ಕರ್ನಾಟಕದ ನಾಥಪಂಥ, ಕನ್ನಡ ವಿವಿ, ಹಂಪಿ, ೨೦೦೯.

೭. ಕವಿಶಾ ಸಂ. ೯, ಬಾಗಲಕೋಟೆ, ೩೭, ಬಾದಾಮಿ.

೮. ಕವಿಶಾ ಸಂ. ೯, ಬಾಗಲಕೋಟೆ, ೩೬, ಬಾದಾಮಿ.

೯. ಎಂ. ಚಿದಾನಂದ ಮೂರ್ತಿ., ಮಧ್ಯಕಾಲೀನ ಕರ್ನಾಟಕದ ಕೆಲವು ರಹಸ್ಯ ತಾಂತ್ರಿಕ ಪಂಥಗಳು, ಹೊಸತು ಹೊಸತು, ಸಪ್ನ ಬುಕ್ ಹೌಸ್, ಬೆಂ.

೧೦. ರಹಮತ್ ತರೀಕೆರೆ, ಪೂರ್ವೋಕ್ತ, ಪು. ೫೦.

೧೧. ಎ.ಕ. ೧೧, ಚಿತ್ರದುರ್ಗ, ೨೪.

೧೨. ಎಂ. ಚಿದಾನಂದಮೂರ್ತಿ., ಪೂರ್ವೋಕ್ತ.

೮೨

ಮಲಪನಗುಡಿಯ ಮಲ್ಲಿಕಾರ್ಜುನ ದೇವಾಲಯದ ಸ್ವಯಂ ಅಭಿಷೇಕದ ಶಿಲ್ಪ

ಶ್ರೀಶೈಲ ಎಂ. ಮನಗುತ್ತಿ*

ಮಲಪನಗುಡಿಯು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿ ತಾಲೂಕಾ ಕೇಂದ್ರ ಸ್ಥಳದಿಂದ ಈಶಾನ್ಯ ದಿಕ್ಕಿನಲ್ಲಿ ೪ ಕಿ.ಮೀ. ಹಾಗೂ ಹಂಪಿಯಿಂದ ನೈಋತ್ಯಕ್ಕೆ ೮ ಕಿ.ಮೀ. ಅಂತರದಲ್ಲಿದೆ. ಮಲಪನಗುಡಿಯು ಹೊಸಪೇಟೆ ಶಿರಗುಪ್ಪಾ ರಾಜ್ಯ ಹೆದ್ದಾರಿ ೪೯ರ ಪಕ್ಕದಲ್ಲಿದ್ದು, ಇಲ್ಲಿ ೧೫°ಉ.ಅಕ್ಷಾಂಶ ಹಾಗೂ ೭೬°ಪೂರ್ವ ರೇಖಾಂಶಗಳು ಹಾಯ್ದು ಹೋಗಿವೆ. ಮಲ್ಲಿಕಾರ್ಜುನ ಗುಡಿ ಇರುವ ಈ ಊರಿಗೆ ದೇವಾಲಯದ ಹೆಸರಿನಿಂದಲೇ 'ಮಲ್ಲಪ್ಪನ ಗುಡಿ', 'ಮಲಪನಗುಡಿ' ಎಂಬ ಹೆಸರು ಬಂದಿರಬಹುದು. ಆದರೆ "ಕರ್ನಾಟಕದ ಸ್ಥಳನಾಮಗಳು' ಎಂಬ ಗ್ರಂಥದಲ್ಲಿ ಶ್ರೀ ಎಲ್. ಎಸ್. ದೇಶಪಾಂಡೆಯವರು ಮಲಪನ ಗುಡಿಯು ಮಲ್ಲ ಜನಾಂಗ ಸೂಚಕ ಸ್ಥಳನಾಮವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ"[೧] ಸ್ಥಳೀಯ ಹಿರಿಯ ನಾಗರಿಕರ ಅಂಬೋಣದಂತೆ ವಿಜಯನಗರ ಕಾಲದಲ್ಲಿ "ಮಲ್ಲಪ್ಪ" ಎಂಬ ಮಲ್ಲಯುದ್ಧ ಪರಿಣಿತನಿಂದಾಗಿಯೇ ಈ ಊರಿಗೆ ಮಲಪನಗುಡಿ ಎಂಬ ಹೆಸರು ಬಂದಿದೆ.

ಮಲ್ಲಿಕಾರ್ಜುನ ದೇವಾಲಯ

ಮಲ್ಲಿಕಾರ್ಜುನ ದೇವಾಲಯವು ಮಲಪನಗುಡಿಯ ಕೇಂದ್ರ ಭಾಗದಲ್ಲಿದ್ದು, ಉತ್ತರಾಭಿಮುಖವಾಗಿದೆ. ಪ್ರಸ್ತುತವಾಗಿ ಇಲ್ಲಿ ಪ್ರತಿದಿನ ಪೂಜೆ ನಡೆಯುತ್ತಿದೆ. ಈ ದೇವಾಲಯವನ್ನು ಯಾರು ಯಾವಾಗ ಕಟ್ಟಿಸಿದರು ಎಂಬ ಬಗ್ಗೆ ಖಚಿತ ಆಕರಗಳಿಲ್ಲ. ಆದರೆ ವಾಸ್ತು ಶೈಲಿಯನ್ನಾಧರಿಸಿ ವಿಜಯನಗರ ಕಾಲಕ್ಕೆ ಸೇರಿದ್ದೆಂದು ಹೇಳಬಹುದು. ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಸಭಾಮಂಟಪದಲ್ಲಿ ನಂದಿ ವಿಗ್ರಹವಿದ್ದು, ಸಭಾಮಂಟಪದ ಪಾರ್ಶ್ವದಲ್ಲಿ ಮೂರು ಚಿಕ್ಕ ಗರ್ಭಗೃಹಗಳಿವೆ, ಮಧ್ಯದ ಗರ್ಭಗೃಹದಲ್ಲಿ ಪಾರ್ವತಿ ಹಾಗೂ ಇನ್ನೆರಡರಲ್ಲಿ ಗಣೇಶನ ಮೂರ್ತಿಗಳಿವೆ. ಸಭಾ ಮಂಟಪದಲ್ಲಿ ೬ ಹಾಗೂ ಮುಖಮಂಟಪದಲ್ಲಿ ೧೨ ಪೂರ್ಣ ಸ್ತಂಭಗಳಿವೆ.

ದೇವಾಲಯದ ಸುತ್ತಲೂ ಪ್ರಾಕಾರಗೋಡೆ ಇದೆ, ಆದರೆ ದಕ್ಷಿಣ ದಿಕ್ಕಿನ ಪ್ರಾಕಾರ ಗೋಡೆಯ ಬಹುಭಾಗ ಬಿದ್ದುಹೋಗಿದೆ. ದೇವಾಲಯದಿಂದ ಆಗ್ನೇಯ ದಿಕ್ಕಿನಲ್ಲಿ ಸುಮಾರು ೬೦ ಅಡಿ ಆಳವಾದ ಬಾವಿ ಇದೆ. ಪ್ರಾಕಾರ ಗೋಡೆಯ ನಾಲ್ಕೂ ಉಪದಿಕ್ಕಿನ ಮೂಲೆಗಳಲ್ಲಿ ಮಂಟಪಗಳಿದ್ದ ಕುರುಹುಗಳಿವೆ. ಆದರೆ ಸಧ್ಯದ ದಿನಗಳಲ್ಲಿ ನೈಋತ್ಯದಲ್ಲಿರುವ ಕಲ್ಯಾಣಮಂಟಪ ಮಾತ್ರ ಸ್ಪಷ್ಟವಾಗಿ ಗೋಚರಿಸುತ್ತದೆ. ದೇವಾಲಯದ ಮುಖ್ಯ ದ್ವಾರದ ಮೇಲೆ ಮೂರು ಅಂತಸ್ತಿನ ಆಕರ್ಷಕ ಗೋಪುರವಿದೆ. ಇಲ್ಲಿ ಸುಂದರವಾದ ಗಾರೆಶಿಲ್ಪಗಳಿವೆ. ವಾಯುವ್ಯ ದಿಕ್ಕಿನ ಮೂಲೆಯಲ್ಲಿ ಪ್ರಾಕಾರ ಗೋಡೆಗೆ ತಾಗಿಕೊಂಡಿರುವ ಚಿಕ್ಕ ಪರಿವಾರ ಗುಡಿಯಲ್ಲಿ ವೀರಭದ್ರ ವಿಗ್ರಹವಿದೆ.

ದೇವಾಲಯದ ಪಶ್ಚಿಮ ದಿಕ್ಕಿನಲ್ಲಿರುವ ಪ್ರಾಕಾರ ಗೋಡೆಯು ಸುಸ್ಥಿತಿಯಲ್ಲಿದ್ದು, ಅದರ ಕೈಪಿಡಿಗೋಡೆಯಲ್ಲಿ ಒಟ್ಟು ೧೨ ಗೂಡುಗಳಿವೆ ಈ ಗೂಡುಗಳಲ್ಲಿ ಗಾರೆಶಿಲ್ಪಗಳಿದ್ದು, ಬಹುತೇಕ ಶಿಲ್ಪಗಳು ಭಗ್ನಗೊಂಡಿವೆ ಇಲ್ಲಿ ವಿಷ್ಣು, ವೀರಭದ್ರ, ಶಿವಲಿಂಗ, ಕಾರ್ತಿಕೇಯ, ಕಾಲಾರಿಮೂರ್ತಿ, ಸ್ವಯಮಾಭಿಷೇಕ ಶಿವಮೂರ್ತಿ ಇತ್ಯಾದಿ ಶಿಲ್ಪಗಳನ್ನು ಕಾಣಬಹುದು.

ಮಲ್ಲಿಕಾರ್ಜುನ ದೇವಾಲಯದ ಪಶ್ಚಿಮ ದಿಕ್ಕಿನ ಪ್ರಾಕಾರದ ಕೈಪಿಡಿ ಗೋಡೆಯ ೬ನೇ ಗೂಡಿನಲ್ಲಿ ಶಿವನ ಗಾರೆ ಶಿಲ್ಪವಿದೆ. ಶಿವನು ಯೋಗಪೀಠದ ಮೇಲೆ ಪದ್ಮಾಸನ ಭಂಗಿಯಲ್ಲಿ ಪ್ರಶಾಂತವಾಗಿ ಕುಳಿತಿದ್ದಾನೆ. ಶಿಲ್ಪವು ಅಷ್ಟಭುಜಗಳನ್ನು

* ಕ್ಷೇತ್ರ ಸಂಪನ್ಮೂಲ ವ್ಯಕ್ತಿ, ಅಂಕಲಗುಡಿಕೇತ್ರ ಗ್ರಾಮ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ.



ದ್ವಾರಗೋಪುರ



ದೇವಾಲಯದ ಪಾರ್ಶ್ವನೋಟ



ಸ್ವಯಮಾಭಿಷೇಕ ಶಿವನ ಗಾರೆ ಶಿಲ್ಪ

ಹೊಂದಿದ್ದು, ಎರಡೂ ಬದಿಯ ಮೇಲಿನ ಕೈಗಳಲ್ಲಿ ಕುಂಭವಿದ್ದು (ಅಮೃತ ಕಲಶ), ಸ್ವಯಂಅಭಿಷೇಕದಲ್ಲಿ ನಿರತವಾಗಿವೆ. ಶಿಲ್ಪದ ಮೇಲಿನಿಂದ ಕೆಳಕ್ಕೆ ಎರಡೂ ಬದಿಯ ಎರಡನೇ ಹಾಗೂ ಮೂರನೇ ಕೈಗಳು ಬಹುಪಾಲು ಭಗ್ನಗೊಂಡಿವೆ. ಎಡಬದಿಯ ಮೇಲಿನಿಂದ ಕೆಳಕ್ಕೆ ಎರಡನೇ ಮತ್ತು ಮೂರನೇ ಕೈಗಳಲ್ಲಿ ಕೈಗಡಗಳಿರುವುದು ಕಂಡುಬರುತ್ತದೆ. ಮೇಲಿನಿಂದ ಕೆಳಕ್ಕೆ ಬಲಭಾಗದ ಎರಡನೇ ಕೈಯಲ್ಲಿ ಕೈಗಡಗವಿರುವುದು ಅಸ್ಪಷ್ಟವಾಗಿದೆ. ಶಿಲ್ಪದ ಎರಡೂ ಬದಿಯ ಕೆಳಗಿನ ಕೈಗಳು ಪದ್ಮಾಸನ ಮುದ್ರೆಯಲ್ಲಿವೆ. ಶಿವನು ಜಟಾಮಕುಟಧಾರಿಯಾಗಿದ್ದು ಕಿವಿಗಳಲ್ಲಿ ವೃತ್ತ ಕುಂಡಲಗಳನ್ನು ಹೊಂದಿದ್ದಾನೆ. ಕಂಠಹಾರ ಹಾಗೂ ಕೊರಳಹಾರಗಳನ್ನು ಧರಿಸಿದ್ದಾನೆ.

ಮಲಪನ ಗುಡಿಯ ಮಲ್ಲಿಕಾರ್ಜುನ ದೇವಸ್ಥಾನದಲ್ಲಿರುವ ಸ್ವಯಮಭಿಷೇಕಮೂರ್ತಿ ಶಿವನ ಗಾರೆ ಶಿಲ್ಪವು ಅಪರೂಪದ ಶಿಲ್ಪವಾಗಿದೆ ಏಕೆಂದರೆ, ಹಂಪಿ ಪರಿಸರ ಹಾಗೂ ಕರ್ನಾಟಕದಲ್ಲಿಯೇ ಈ ತೆರನಾದ ಶಿಲ್ಪಗಳು ಲಭಿಸಿರುವುದು ಅತಿ ವಿರಳ. ಶೃಂಗೇರಿಯ ವಿದ್ಯಾಶಂಕರ ದೇವಸ್ಥಾನದಲ್ಲಿ ಒಂದು ಸ್ವಯಮಭಿಷೇಕ ಶಿವನ ಶಿಲ್ಪವಿದೆ.

ಆಧಾರಸೂಚಿ

೧. ಎಲ್. ಎಸ್. ದೇಶಪಾಂಡೆ, 'ಕರ್ನಾಟದ ಸ್ಥಳನಾಮಗಳು' ಒಂದು ಅಧ್ಯಯನ, ಪುಟಸಂಖ್ಯೆ ೮೭, ಅನುಬಂಧ ೩.

೮೩

ಚಿತ್ರದುರ್ಗ ಜಿಲ್ಲೆಯ ವಿಜಯನಗರ ನಂತರ ಕಾಲದ ನರಸಿಂಹಸ್ವಾಮಿ ದೇವಾಲಯಗಳು

ಡಾ. ಶಕುಂತಲ ವೀರಭದ್ರಯ್ಯ ಎನ್.*

ಶ್ರೀ ಮನ್ಮಹಾವಿಷ್ಣುವಿನ ಹತ್ತು ಅವತಾರಗಳಲ್ಲಿ ನಾಲ್ಕನೆಯ ಅವತಾರವೇ ನರಸಿಂಹಾವತಾರ. ನರಸಿಂಹನ ಆರಾಧನೆ ಸಾವಿರಾರು ವರ್ಷಗಳಿಗೂ ಪ್ರಾಚೀನವಾದದ್ದು. ಕರ್ನಾಟಕದಾದ್ಯಂತ ಕಂಡುಬಂದಿರುವ ನರಸಿಂಹನ ಶಿಲ್ಪಗಳ ಹಿನ್ನೆಲೆಯಲ್ಲಿ ಹೇಳುವುದಾದರೆ, ಬನವಾಸಿ ಕದಂಬರ ಕಾಲಘಟ್ಟದಲ್ಲಿ ನಿರ್ಮಾಣವಾದ ಶ್ರೀನರಸಿಂಹನ ಶಿಲ್ಪಗಳೇ ರಾಜ್ಯದಲ್ಲಿ ಅತ್ಯಂತ ಪ್ರಾಚೀನ ಶಿಲ್ಪಗಳೆಂದು ಗುರುತಿಸಬಹುದಾಗಿದೆ. ಅದರಲ್ಲೂ ಕದಂಬರ ಕಾಲಾವಧಿಯಲ್ಲಿ ನಿರ್ಮಾಣಗೊಂಡಿರುವ ನರಸಿಂಹನ ಶಿಲ್ಪಗಳು ದ್ವಿಬಾಹು ಶಿಲ್ಪಗಳೆಂಬುದು ಗಮನಾರ್ಹ. ಬನವಾಸಿಯ ಮಧುಕೇಶ್ವರ ದೇವಾಲಯದ ಆವರಣದ ಮಂಟಪದಲ್ಲಿರುವ ನರಸಿಂಹನ ಶಿಲ್ಪ, ಧಾರವಾಡದ ಕನ್ನಡ ಸಂಶೋದನಾ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿರುವ ನರಸಿಂಹನ ಶಿಲ್ಪ, ಬೆಳಗಾಂನ ಹಲಸಿಯ ನರಸಿಂಹ ಶಿಲ್ಪಗಳು ದ್ವಿಬಾಹು ಶಿಲ್ಪಗಳಾಗಿವೆ. ಇವರ ನಂತರದಲ್ಲಿ ಅಧಿಕಾರಕ್ಕೆ ಬಂದ 'ಬಾದಾಮಿ ಚಾಲುಕ್ಯರೂ' ಸಹ ವೈಧಿಕ ಧರ್ಮಾವಲಂಬಿಗಳಾಗಿದ್ದು, ಆ ವಂಶದ ಸ್ಥಾಪಕನಾದ ಜಯಸಿಂಹನ ಹೆಸರಿನಿಂದಲೇ ಅವರು ನರಸಿಂಹನ ಆರಾಧಕರಾಗಿದ್ದರೆಂದು ತಿಳಿಯಬಹುದಾಗಿದೆ. ಮಂಗಳೇಶ ನಿರ್ಮಿಸಿರುವ ಬಾದಾಮಿಯ ಮೂರನೆಯ ಗುಹಾಂತರ ದೇವಾಲಯದಲ್ಲಿ, 'ಬೃಹದಾಕಾರದ ನರಸಿಂಹನ ಶಿಲ್ಪವಿದೆ'. ಹಾಗೆಯೇ ಅಲ್ಲಿನ ಐಹೊಳೆಯ ದುರ್ಗಾ ದೇವಾಲಯ, ಪಟ್ಟದಕಲ್ಲಿನ ಲೋಕೇಶ್ವರ ದೇವಾಲಯಗಳಲ್ಲೂ ಅನೇಕ ನರಸಿಂಹನ ಶಿಲ್ಪಗಳಿರುವುದನ್ನು ಗಮನಿಸಬಹುದಾಗಿದೆ.

ನರಸಿಂಹನಿಗೆ ಎಪ್ಪತ್ತಕ್ಕೂ ಹೆಚ್ಚು ರೂಪಗಳಿವೆ. ಅವುಗಳಲ್ಲಿ ಉಗ್ರ, ಘೋರ, ಅಟ್ಟಹಾಸ, ಆವೇಶ, ಮೊದಲಾದ ರೂಪಗಳಲ್ಲೂ, ಧಾರಣಯೋಗ ಮುದ್ರೆಗಳಲ್ಲಿಯೂ ಹಾಗೂ ಲಕ್ಷ್ಮೀಸಹಿತನಾಗಿಯೂ ಈ ಪ್ರದೇಶದಲ್ಲಿ ಅರ್ಚಿಸಲಾಗುತ್ತದೆ. ವಿವಿಧ ವರ್ಗ ಅಂತಸ್ತು, ಪಂಥ, ಪಂಗಡಗಳ ಜನರು ತಮ್ಮ ಆರಾಧ್ಯದೇವನಾಗಿ ನರಸಿಂಹಸ್ವಾಮಿಯನ್ನು ತಮ್ಮದೇ ಆದ ರೀತಿಯಲ್ಲಿ ಅರ್ಚಿಸಿಕೊಂಡು ಬಂದಿದ್ದಾರೆ. ಕೆಳಜಾತಿಯವರು ಶೂದ್ರರು ಹಣ್ಣು, ಕಾಯಿ ಕೆಲವೊಮ್ಮೆ ಬಲಿಯ ಮೂಲಕ ಸ್ವಾಮಿ ನರಸಿಂಹನಿಗೆ ತಮ್ಮ ಭಕ್ತಿಯನ್ನು ಅರ್ಪಿಸುತ್ತಾ ಬಂದಿದ್ದಾರೆ. ಹೀಗೆ ತಮ್ಮ ಆರಾಧ್ಯ ದೈವನನ್ನು ವಿವಿಧ ರೂಪದಲ್ಲಿಯೂ ಅವನ ಭಕ್ತರು ಕಾಣಲು ಕೈಮುಗಿಯುತ್ತಾ ಕೃತಾರ್ಥರಾಗಲು ಪ್ರಯತ್ನಿಸಿದ್ದಾರೆ. ಪ್ರಮುಖವಾಗಿ ನರಸಿಂಹಸ್ವಾಮಿಯನ್ನು ಕಂಬದಲ್ಲಿ ಹಾಗೂ ಬಂಡೆ ಹೊತ್ತ ಮರಗಳ ರೂಪದಲ್ಲಿಯೂ ಪೂಜಿಸುವುದೂ ರೂಢಿಯಲ್ಲಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಮೌರ್ಯರ ಕಾಲದಿಂದ–ಮೈಸೂರು ಒಡೆಯರ ಕಾಲದವರೆಗೆ ಅನೇಕ ರಾಜಮನೆತನಗಳು ಆಳ್ವಿಕೆ ನಡೆಸಿವೆ. ಅವೆಲ್ಲವೂ ವಿವಿಧ ಧರ್ಮಪಂಥಗಳಿಗೆ ಸಂಬಂಧಿಸಿದ ಅನೇಕ ದೇವಾಗಾರಗಳನ್ನು ನಿರ್ಮಿಸಿ, ಕಲೆ ಮತ್ತು ವಾಸ್ತುಶಿಲ್ಪದ ಕಲಾಭಿಜ್ಞತೆಗಳನ್ನು ಶ್ರೀಮಂತಗೊಳಿಸಿದ್ದಾರೆ. ಅದರಲ್ಲಿ ನರಸಿಂಹಸ್ವಾಮಿಯ ದೇವಾಲಯಗಳು ಅತ್ಯಂತ ಪ್ರಮುಖವಾಗಿವೆ. ಬಹುಶಃ ಚಿತ್ರುದರ್ಗ ಜಿಲ್ಲೆಯಲ್ಲಿ ನಾಯಕ ಜನಾಂಗದವರು ಹೆಚ್ಚು ಇರುವುದರಿಂದ ನರಸಿಂಹಸ್ವಾಮಿಯ ಆರಾಧನೆ ಸಹಜವಾಗಿ ಜನಪ್ರಿಯತೆಯನ್ನು ಕಂಡಿತೆಂದು ಹೇಳಬಹುದಾಗಿದೆ. ಮೂಲತಃ ಆಂಧ್ರಪ್ರದೇಶದ "ಅಹೋಬಲ" ಎಂಬಲ್ಲಿಂದ ಬಂದಂತಹ ಇವರು ಅಹೋಬಲ ನರಸಿಂಹಸ್ವಾಮಿಯನ್ನು ತಮ್ಮ ಮನೆದೇವರಾಗಿ ಸ್ವೀಕರಿಸಿದ್ದರು. ಆದರೆ ಅದ್ವೈತ ಸಿದ್ಧಾಂತಕ್ಕೂ–ಶ್ರೀವೈಷವಪಂಥದ ಆರಾಧಕರಾದ ಇವರು ಆರಾಧಿಸುವ ನರಸಿಂಹಸ್ವಾಮಿ ಆರಾಧನೆಯಲ್ಲಿ ಅಥವಾ ಪೂಜೆಯಲ್ಲಿ ವ್ಯತ್ಯಾಸವಿದೆ. ಅದ್ವೈತದಲ್ಲಿ ಶಿವ–ವಿಷ್ಣು ಒಂದೇ ಎಂದು ಆರಾಧಿಸಿದರೆ, ಶ್ರೀವೈಷ್ಣವದಲ್ಲಿ ವಿಷ್ಣುವೇ ಪ್ರಧಾನವಾಗಿ ಆರಾಧಿಸುತ್ತಿದ್ದಾರೆ. ಹಾಗಾಗಿ ಶ್ರೀವೈಷ್ಣವ ಪಂಥವನ್ನು ಅನುಸರಿಸುತ್ತಿರುವ ನಾಯಕ ಜನಾಂಗದವರು ನರಸಿಂಹನನ್ನು ತಮ್ಮ ತಮ್ಮ ಸಂಪ್ರದಾಯ–ಆಚರಣೆಗಳಿಗೆ ಅನುಗುಣವಾಗಿ ಪೂಜಿಸುತ್ತಿದ್ದಾರೆ.

* ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ.

ಜಿಲ್ಲೆಯಲ್ಲಿ ಪ್ರಮುಖವಾಗಿ ಚಿತ್ರದುರ್ಗ ತಾಲ್ಲೂಕಿನ ಓಬಣ್ಣನ ಹಳ್ಳಿಯ ಓಬಳದೇವರ ಗುಡ್ಡದಲ್ಲಿನ ಓಬಳನರಸಿಂಹಸ್ವಾಮಿ ದೇವಾಲಯ, ತಮ್ಮಟಗಲ್ಲಿನ ನರಸಿಂಹಸ್ವಾಮಿ ದೇವಾಲಯ, ಚಳ್ಳಕೆರೆ ತಾಲ್ಲೂಕಿನ ಚೌಳೂರು ಗ್ರಾಮದ ಅಹೋಬಲ ನರಸಿಂಹಸ್ವಾಮಿ ದೇವಾಲಯ, ದೇವರ ಮರಿಕುಂಟೆಯ ಓಬಳನರಸಿಂಹಸ್ವಾಮಿ ದೇವಾಲಯ, ಹೊಳಲ್ಕೆರೆ ತಾಲ್ಲೂಕಿನ ತೇಕಲವಟ್ಟಿಯ ನರಸಿಂಹಸ್ವಾಮಿ ದೇವಾಲಯ, ಹೊರಕೆರೆ ದೇವರಪುರದ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ, ಗುಂಜಿಗನೂರು ಗೊಲ್ಲರಹಟ್ಟಿಯ ಕದರಿ ನರಸಿಂಹಸ್ವಾಮಿ ದೇವಾಲಯ, ಹೊಸದುರ್ಗ ತಾಲ್ಲೂಕಿನ ಜಾನಕಲ್ಲಿನ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ (ಕ್ರಿ.ಶ. ೧೩೦೧ರಲ್ಲಿ ಹೊಯ್ಸಳರ ಮೂರನೆಯ ಬಲ್ಲಾಳನು ಆಳುತ್ತಿದ್ದಾಗ ನಿರ್ಮಿಸಿದ ದೇವಾಲಯವಿರಬಹುದು), ದೊಡ್ಡ ತೇಕಲವಟ್ಟಿಯ ನರಸಿಂಹಸ್ವಾಮಿ ಗುಡಿ, ದಾವಣಗೆರೆ ತಾಲ್ಲೂಕಿನ ಮಾಯಕೊಂಡದ ಅಹೋಬಲ ನರಸಿಂಹಸ್ವಾಮಿ (ಉದ್ಭವ ನರಸಿಂಹ) ದೇವಾಲಯ, ನೇರ್ಲಗೆಯ ಓಬಳ ನರಸಿಂಹಸ್ವಾಮಿ ದೇವಾಲಯ, ನೀರ್ಥಡಿಯ ಅಹೋಬಲ ನರಸಿಂಹಸ್ವಾಮಿ ದೇವಾಲಯ, ಜಗಲೂರು ತಾಲ್ಲೂಕಿನ ಕೊರಟಗೆರೆಯ ಬೆಟ್ಟದ ಮೇಲಿನ ಓಬಳದೇವರ ಗುಡಿ, ಚೌಳಿಹಳ್ಳಿಯ ಲಕ್ಷ್ಮೀನರಸಿಂಹಸ್ವಾಮಿ, ಹಿರಿಯೂರು ತಾಲ್ಲೂಕಿನ ಹರ್ತಿಕೋಟೆಯ ಪೂರ್ವಾಭಿಮುಖವಾಗಿರುವ ಅಹೋಬಲ ನರಸಿಂಹಸ್ವಾಮಿ ದೇವಾಲಯ ಹಾಗೂ ಹುಲಿತೊಟ್ಟಲಿನ ಕದಿರೆ ನರಸಿಂಹಸ್ವಾಮಿ ದೇವಾಲಯಗಳು ಪ್ರಮುಖವಾಗಿವೆ.

ಹೊರಕೆರೆ ದೇವರಪುರದ "ಶ್ರೀ ಲಕ್ಷ್ಮೀನರಸಿಂಹಸ್ವಾಮಿ" ದೇವಾಲಯ

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಹೊರಕೆರೆದೇವರಪುರ ಒಂದು ಪುಣ್ಯ ಕ್ಷೇತ್ರವೂ ಆಗಿದೆ. ಊರಹೊರಗೆ ಒಂದು ಕೆರೆಯಿದ್ದು, ಕೆರೆಯ ಬಳಿ ದೇವಾಲಯವಿರುವುದರಿಂದ ಗ್ರಾಮಕ್ಕೆ ***"ಹೊರಕೆರೆ ದೇವರಪುರ"*** ಎಂದು ಹೆಸರು ಬಂದಿದೆ ಎಂಬ ಐತಿಹ್ಯವಿದೆ. ವಿಶಾಲವಾದ ತಲವಿನ್ಯಾಸವನ್ನು ಹೊಂದಿರುವ ಈ ದೇವಾಲಯವೂ ಸಹ ವಿಜಯನಗರದ ಬೃಹತ್ ದೇವಾಲಯಗಳನ್ನೇ ಹೋಲುತ್ತದೆ. ಚಿತ್ರದುರ್ಗ ಪಾಳೆಯಗಾರರ ಕಾಲದ ದೇವಾಲಯಗಳೆಲ್ಲಾ ಇದೇ ಅತಿ ದೊಡ್ಡದಾದ ದೇವಾಲಯವಾಗಿದೆ. ಗರ್ಭಗುಡಿ, ಅಂತರಾಳ, ಸಭಾ ಮಂಟಪ, ಮಹಾ ರಂಗಮಂಟಪ, ಮುಖ ಮಂಟಪ, ಪ್ರವೇಶ ಮಂಟಪ, ಗರುಡ ಮಂಟಪ, ಧ್ವಜ ಮಂಟಪ, ಬಲಿಪೀಠ, ಪ್ರಾಕಾರ, ಪ್ರಾಕಾರ ಮಂಟಪಗಳು, ಪರಿವಾರ ದೇವತೆಗಳ ಮಂಟಪಗಳು, ಮಹಾದ್ವಾರ ಮಂಟಪ, ಮಹಾದ್ವಾರ ಮಂಟಪದ ಗೋಪುರ, ಉಯ್ಯಾಲೆ ಕಂಬ, ದೀಪಸ್ತಂಭಗಳ ವಾಸ್ತುಭಾಗಗಳನ್ನು ಹೊಂದಿರುವ ಒಂದು ಸಂಕೀರ್ಣ ದೇವಾಲಯವಾಗಿದೆ.

ಚಿತ್ರದುರ್ಗ-ಹೊಳಲ್ಕೆರೆ ಹೆದ್ದಾರಿಯಲ್ಲಿ, ಚಿತ್ರಹಳ್ಳಿ ಕ್ರಾಸಿನಿಂದ ಚಿತ್ರದುರ್ಗ-ಹೊಸದುರ್ಗ ಮಾರ್ಗದ ಮಧ್ಯೆ ಈ ದೇವಾಲಯವಿದ್ದು, ಚಿತ್ರದುರ್ಗದಿಂದ ೨೮ ಕಿ.ಮೀ. ಹೊಸದುರ್ಗದಿಂದ ೩೨ ಕಿ.ಮೀ. ದೂರದಲ್ಲಿದೆ. ಇದೊಂದು ಉದ್ಭವಮೂರ್ತಿಯಾಗಿದ್ದು, ಮುಖ್ಯ ಅಧಿದೇವತೆಯನ್ನು "ಲಕ್ಷ್ಮೀನರಸಿಂಹಸ್ವಾಮಿ"ಯೆಂದೂ, ಉತ್ಸವಮೂರ್ತಿಯನ್ನು "ಲಕ್ಷ್ಮೀ ರಂಗನಾಥಸ್ವಾಮಿಯೆಂದೂ ಕರೆಯುತ್ತಾರೆ. ಭಕ್ತಿಯ ಆಗರವೂ, ಮುಕ್ತಿಯ ಕ್ಷೇತ್ರವೂ ಆಗಿರುವ ಈ ದೇವಿ ಕ್ಷೇತ್ರದ ಮಹಾತ್ಮೆಯೂ ತುಂಬಾ ವೈಶಿಷ್ಟ್ಯವಾಗಿದೆ. ಹಿಂದೆ ಇಲ್ಲಿ ನಂದರಾಜನೆಂಬ ರಾಜನು ಆಳುತ್ತಿದ್ದು, ದರ್ಪಿಷ್ಟನೂ, ಪ್ರಜಾಪೀಡಕನೂ ಆಗಿದ್ದನಂತೆ. ಇವನ ಹಿಂಸೆಯನ್ನು ತಾಳಲಾರದೆ ಜನ ಬೇಸತುಹೋಗಿದ್ದು, ಇವನ ಸೊಕ್ಕನ್ನು ಅಡಗಿಸಲು ಭಕ್ತಭೂಮಿಕೆಯಲ್ಲಿ ದೇವದೇವನು ಅವತರಿಸಿ ಶ್ರೀ ಸ್ವಾಮಿಯು ನಂದನಗಿರಿಯ ಬಳಿಯ ಕೃಷ್ಣಾಚಲಕ್ಕೆ ಬಂದು ಸ್ವಲ್ಪಹೊತ್ತು ವಿಶ್ರಮಿಸುತ್ತಿದ್ದಾಗ, ಎದುರಿನಲ್ಲಿಯೇ ಕಾಣುವ ನಂದನಗಿರಿಯನ್ನು ತೀಕ್ಷ್ಣದೃಷ್ಟಿಯಿಂದ ನೋಡಿದ ಕಾರಣ ಇಡೀ ನಗರಿಯೇ ಕ್ಷಣ ಮಾತ್ರದಲ್ಲಿ ದಳ್ಳುರಿಯಿಂದ ದಹಿಸತೊಡಗಿತಂತೆ. ಆಗ ನಂದರಾಜನು ತನ್ನ ಅರಮನೆಯೊಂದಿಗೆ ತಾನು ನಿರ್ನಾಮವಾದನು. ಅನಂತರ ಶ್ರೀಸ್ವಾಮಿಯು ಕೃಷ್ಣಾಚಲದಿಂದ ಬಂದು ನಂದನಗಿರಿಯ ಕೆರೆಯ ಹೊರಭಾಗದಲಿದ್ದ ಒಂದು ಹುತ್ತದಲ್ಲಿನ ಅನಂತನೊಡಗೂಡಿ, ಅನಂತಶಯನನಾದನೆಂದು ಐತಿಹ್ಯವಿದೆ. ಈಗಲೂ ಈ ಹುತ್ತದಲ್ಲಿ ಲಕ್ಷ್ಮೀನರಸಿಂಹಸ್ವಾಮಿಯು ಉದ್ಭವ ರೂಪದಲ್ಲಿ ಇರುವನೆಂಬುದು ಎಲ್ಲರ ಬಲವಾದ ನಂಬಿಕೆಯಾಗಿದೆ.

ನೀರ್ಥಡಿಯ "ಅಹೋಬಲ ನರಸಿಂಹಸ್ವಾಮಿ" ದೇವಾಲಯ

ಚಿತ್ರದುರ್ಗದ ಗತಕಾಲದ ಇತಿಹಾಸವನ್ನು ನೆನಪಿಗೆ ತರುವ ಪ್ರಸಿದ್ಧ ದೇವಾಲಯಗಳಲ್ಲಿ, ಅದರಲ್ಲೂ ಕಲೆ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದ, ದಾವಣಗೆರೆ ತಾಲ್ಲೂಕಿನ ನೀರ್ಥಡಿಯ ಅಹೋಬಲ ನರಸಿಂಹಸ್ವಾಮಿ (ಈಗ ಲಕ್ಷ್ಮೀರಂಗನಾಥ) ದೇವಾಲಯವು ಗಮನಾರ್ಹವಾದುದು. ಇದನ್ನು ಚಿತ್ರದುರ್ಗದ ಪಾಳೆಯಪಟ್ಟಿನ ಮೂಲಪುರುಷನಾದ ಚಿತ್ರನಾಯಕರು, ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ಮಂತ್ರಪುಷ್ಪಗಳನ್ನು ಅರ್ಪಿಸುವ ಕೆಲಸದಲ್ಲಿದ್ದ 'ಕರೆಜೋಯಿಸರು' ಮತ್ತು

‘ವಿರೂಪಾಕ್ಷ ಜೋಯಿಸ’ರೊಂದಿಗೆ ಸೇರಿ ಕಟ್ಟಿಸಿದರಂತೆ. ಅನಂತರ ಈ ದೇವಾಲಯದಲ್ಲಿ ಸಾಲಿಗ್ರಾಮ ಪ್ರತಿಷ್ಠಾಪನೆಯ ಸಮಯದಲ್ಲಿ ರಂಗನಾಥಸ್ವಾಮಿ ಉದ್ಭವವಾದಾಗ, ಕ್ರಿ.ಶ. ೧೫೧೯ರಲ್ಲಿ ಮತ್ತಿ ತಿಮ್ಮಣ್ಣನಾಯಕರು ರಂಗನಾಥಸ್ವಾಮಿಯ ದೇವಾಲಯವನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಆದರೆ, ಕ್ರಿ.ಶ. ೧೬೩೪ ರಲ್ಲಿ ಮುಸ್ಲಿಂರ ದಿಲಾವರ್‌ಖಾನನ ದಂಡು ಈ ದೇವಾಲಯವನ್ನೂ ಹಾಗೂ ದೇವರ ವಿಗ್ರಹವನ್ನೂ ಧ್ವಂಸ ಮಾಡಿದಾಗ, ಬಿಚ್ಚುಗತ್ತಿ ಭರಮಣ್ಣನಾಯಕನು ಕ್ರಿ.ಶ. ೧೬೭೮ ರಲ್ಲಿ ಮುಸ್ಲಿಂರೊಂದಿಗೆ ಒಪ್ಪಂದ ಮಾಡಿಕೊಂಡು, ಈ ದೇವಾಲಯವನ್ನು ದುರಸ್ತಿಗೊಳಿಸಿ, ಜೀರ್ಣೋದ್ಧಾರ ಮಾಡಿ, ಪುನ: ದೇವತಾ ಪ್ರತಿಷ್ಠಾಪನೆ ಮಾಡಿ, ಎಮ್ಮೆಹಟ್ಟಿ ಗ್ರಾಮವನ್ನು ಉಂಬಳಿ ನೀಡಿ ಶಾಸನ ಹಾಕಿಸಿದನೆಂದು ತಿಳಿದುಬರುತ್ತದೆ. ಈ ಶಾಸನವನ್ನು ದೇವಾಲಯದ ಉತ್ತರದ ಪ್ರವೇಶಮಂಟಪದ ಹೊರಗೆ ಕಾಣಬಹುದು. ಈ ಶಾಸನದಲ್ಲಿ ದಾವಣಗೆರೆ ತಾಲ್ಲೂಕಿನ ನೀರ್ಥಡಿ ಗ್ರಾಮದಲ್ಲಿರುವ ಅಹೋಬಲ ನರಸಿಂಹಸ್ವಾಮಿ ದೇವಾಲಯವನ್ನು ಬಾದಷಹನ ದಂಡು ಬಂದು ಧ್ವಂಸ ಮಾಡಿ, ದೇವರನ್ನು ಭಿನ್ನ ಮಾಡಿ ಹೋದರೆಂದೂ, ಭರಮಣ್ಣನಾಯಕ ದೇವರನ್ನು ಪುನಃ ಪ್ರತಿಷ್ಠಾಪಿಸಿ ಗುಡಿಯನ್ನು ಜೀರ್ಣೋದ್ಧಾರ ಮಾಡಿಸಿದನೆಂದೂ ಉಕ್ತವಾಗಿದೆ. ಆದರೆ ಅದರ ಬಹುಪಾಲು ವಾಸ್ತುರಚನೆಗಳು ಮೂಲಸ್ವರೂಪದಲ್ಲಿವೆ.

ಕ್ರಿ.ಶ. ಹದಿನಾರನೆಯ ಶತಮಾನದಲ್ಲಿ ಕಟ್ಟಲಾದ ಈ ದೇವಾಲಯ ಇಂದಿಗೂ ಜಿಲ್ಲೆಯ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಹೆಮ್ಮೆಯ ಸಾಕ್ಷಿಯಾಗಿದೆ. ಚೋಳರ ವಾಸ್ತುಶಿಲ್ಪವನ್ನು ಅನುಸರಿಸಿ ಕಟ್ಟಲಾಗಿರುವ ಈ ದೇವಾಲಯ, ಗರ್ಭಗೃಹ, ಅಂತರಾಳ ಅರ್ಧಮಂಟಪ, ನವರಂಗ, ಮುಖಮಂಟಪ, ಪ್ರಾಕಾರ, ಪ್ರವೇಶದ್ವಾರ, ದೀಪಸ್ತಂಭಗಳನ್ನು ಹೊಂದಿದ್ದು ಅನೇಕ ಕಲಾತ್ಮಕ ಶಿಲ್ಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಈಗ ಸುಮಾರು ನಾಲ್ಕು ಅಡಿ ಎತ್ತರದ ರಂಗನಾಥಸ್ವಾಮಿಯ ಮೂರ್ತಿಶಿಲ್ಪವಿದೆ. ಈ ಶಿಲ್ಪವು ವಾಸ್ತವವಾಗಿ **“ವರದರಾಜನ ಶಿಲ್ಪ”** ವಾಗಿದೆ. ಶಿಲ್ಪದ ಮೇಲಿನ ಬಲಗೈಯಲ್ಲಿ ಚಕ್ರ, ಎಡಗೈಯಲ್ಲಿ ಶಂಖಗಳಿದ್ದರೆ, ಕೆಳಗಿನ ಬಲಗೈ ಅಭಯಹಸ್ತ, ಎಡಗೈ ವರದ ಹಸ್ತವಾಗಿದೆ. ಪ್ರತಿಮಾ ಲಕ್ಷಣಗಳ ಪ್ರಕಾರ ಈ ಮೂರ್ತಿಯನ್ನು “ವರದರಾಜನ ಶಿಲ್ಪ”ವೆಂದೇ ಹೇಳಬೇಕಾಗುತ್ತದೆ. ಹಾರಗಳಿಂದ ಅಲಂಕೃತಗೊಂಡಿರುವ ಈ ಮೂರ್ತಿ ಕಾಲಿನಲ್ಲಿ ಕಡಗಗಳನ್ನೂ, ಪೀಠದಲ್ಲಿ ಅರಳಿದ ಕಮಲವನ್ನೂ ಹೊಂದಿದೆ. ನೀಳವಾಗಿರುವ ಈ ಕಪ್ಪುಶಿಲಾ ಮೂರ್ತಿಯ ಮೇಲೆ ಪ್ರಭಾವಳಿಯಲ್ಲಿ, ಕೀರ್ತಿಮುಖದ ಅಲಂಕರಣೆಯನ್ನು ಹೊಂದಿದೆ. ಅರ್ಧಮಂಟಪದ ಉತ್ತರ ದಿಕ್ಕಿನಲ್ಲಿರುವ ಕೊಠಡಿಯಲ್ಲಿ ಹದಿಮೂರು ಆಳ್ವಾರುಗಳ ಶಿಲ್ಪಗಳೂ, ದಕ್ಷಿಣ ದಿಕ್ಕಿನ ಕೊಠಡಿಯಲ್ಲಿ ಕಪ್ಪುಶಿಲೆಯ ಲಕ್ಷ್ಮೀಯ ಸುಂದರ ಮೂರ್ತಿಯೂ ಇವೆ.

ಅಣಜಿಯ “ಉಗ್ರನರಸಿಂಹಸ್ವಾಮಿ” ದೇವಾಲಯ

ದಾವಣಗೆರೆಯಿಂದ ಹನ್ನೆರಡು ಮೈಲಿ ದೂರದಲ್ಲಿ, ದಾವಣಗೆರೆ-ಜಗಳೂರು ಮಾರ್ಗ ಮಧ್ಯೆ ಇರುವ **ಅಣಜಿ** ಒಂದು “ಐತಿಹಾಸಿಕ ಶಾಸನಸ್ಥ ಗ್ರಾಮ”. ಹಳೆ ಊರಿದ್ದ ಸ್ಥಳದಲ್ಲಿ ಉಗ್ರನರಸಿಂಹಸ್ವಾಮಿಯ ದೇವಾಲಯವಿತ್ತೆಂದು ಕೆಲವು ಉಲ್ಲೇಖಗಳಿಂದ ತಿಳಿದುಬಂದಿದೆ. ಆದರೆ ಈಗ ಅಲ್ಲಿ ಊರೂ ಇಲ್ಲ, ದೇವಾಲಯವೂ ಇಲ್ಲ. ಟಿ. ಗಿರಿಜಾರವರು ತಮ್ಮ ಗ್ರಂಥದಲ್ಲಿ ನಮೂದಿಸಿರುವಂತೆ, ಇಪ್ಪತ್ತು ಕಂಬಗಳ ಹಾಳು ಮಂಟಪ ಇತ್ತೆಂದು ತಿಳಿದುಬರುತ್ತದೆ. ಆದರೆ ಈಗ ಸಂಪೂರ್ಣ ಅವೆಲ್ಲ ನಾಶವಾಗಿ, ಅಲ್ಲಿದ್ದ ಮಂಟಪದ ಕಂಬಗಳನ್ನೆಲ್ಲ ಹೊಸ ಊರಿನಲ್ಲಿ ನಿರ್ಮಾಣಗೊಂಡಿರುವ ಮಾರಮ್ಮ ದೇವಿಯ ದೇವಾಲಯದ ಸಭಾ ಮಂಟಪದಲ್ಲಿ ಅಳವಡಿಸಿದ್ದಾರೆ. ಈ ಕಂಬಗಳು ವಾಸ್ತುಲಕ್ಷಣಗಳಿಂದ “ಹೊಯ್ಸಳ ವಾಸ್ತುಶೈಲಿ” ಯನ್ನು ಹೋಲುತ್ತವೆ. ಹಾಗಾಗಿ, ಈ ದೇವಾಲಯವೂ ಅವರ ಕಾಲದಲ್ಲೇ ನಿರ್ಮಾಣವಾಗಿದ್ದಿರಬಹುದೆಂದು ಹೇಳಬಹುದಾಗಿದೆ. ದೇವಾಲಯದ ತಲವಿನ್ಯಾಸವನ್ನು ನೋಡಿದರೆ ಗರ್ಭಗುಡಿ, ಅಂತರಾಳ, ಸಭಾಮಂಟಪಗಳಿದ್ದಂತೆ ಕಂಡುಬರುತ್ತದೆ. ಭಗ್ನಗೊಂಡಿರುವ ನರಸಿಂಹ ಶಿಲ್ಪವಂತೂ ಬಹಳ ಅದ್ಭುತವಾಗಿದ್ದು, ಸುಮಾರು ನಾಲ್ಕರಿಂದ ಐದು ಅಡಿ ಎತ್ತರವಾಗಿದ್ದಿರಬಹುದು.

ಮಾಯಕೊಂಡ “ಅಹೋಬಲ ನರಸಿಂಹಸ್ವಾಮಿ” ದೇವಾಲಯ

ದಾವಣಗೆರೆ-ಅರಸಿಕೆರೆ ಮಾರ್ಗದಲ್ಲಿರುವ ಮಾಯಕೊಂಡ ಚಾಲುಕ್ಯ-ಹೊಯ್ಸಳರ ಆಳ್ವಿಕೆಗೆ ಒಳಪಟ್ಟು, ವಿಜಯನಗರ ಅರಸರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯನ್ನು ತಲುಪಿ, ಒಂದು ಐತಿಹಾಸಿಕ ಶಾಸನಸ್ಥ ಗ್ರಾಮವಾಗಿದೆ. ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಬಳಿ ಹೊಯ್ಸಳ-ಚಾಲುಕ್ಯ ಶೈಲಿಯ ಸುಂದರ ಕೆತ್ತನೆಗಳಿಂದ ಕೂಡಿದ, “ಓಬಳದೇವರು” ಹಾಗೂ “ಅಹೋಬಲ ನರಸಿಂಹಸ್ವಾಮಿ ದೇವರು” ಎಂದೂ ಕರೆಯುತ್ತಾರೆ. ದೇವಾಲಯವು ಗರ್ಭಗುಡಿ, ಅಂತರಾಳ, ಸಭಾ ಮಂಟಪಗಳನ್ನು ಹೊಂದಿದೆ. ಸಭಾಂಗಣಕ್ಕೆ ಎರಡು ಪ್ರವೇಶದ್ವಾರಗಳಿದ್ದು, ಸಭಾಂಗಣವು ಸುಂದರ ಕೆತ್ತನೆಗಳಿಂದ

ಕೂಡಿದ, ಇಪ್ಪತ್ತು ಕಂಬಗಳನ್ನು ಹೊಂದಿದೆ. ಕಂಬಗಳೆಲ್ಲ ಹೊಯ್ಸಳ ಶೈಲಿಯಲ್ಲಿದ್ದು, ಅವುಗಳಲ್ಲಿ ಮೇಲೆ ಮಂಗ, ಗಣಪ, ಶಿವಲಿಂಗಕ್ಕೆ ಹಾಲನ್ನೆರೆಯುತ್ತಿರುವ ಹಸು, ನೃತ್ಯಗಾರ್ತಿಯರು, ನರಸಿಂಹ, ಬಾಲಕೃಷ್ಣನ ಲೀಲೆಗಳು, ಕಮಲದ ಮೊಗ್ಗುಗಳ ರಚನೆ ಮುಂತಾದ ಕೆತ್ತನೆಗಳು ಕಣ್ಮನ ಸೆಳೆಯುತ್ತವೆ. ಭಿತ್ತಿನಲ್ಲಿ ಸಾಧಾರಣ ಭುವನೇಶ್ವರಿ ಇದ್ದು, ಅಂತರಾಳವೂ ಸಾಧಾರಣವಾಗಿದೆ. ಗರ್ಭಗುಡಿಯಲ್ಲಿ ಒರಟು ಕಲ್ಲಿನ ಅಂಕುಡೊಂಕಾದ, ಯಾವುದೇ ನಿರ್ದಿಷ್ಟ ಆಕಾರವಿಲ್ಲದ ಶಿಲ್ಪವಿದೆ. ದ್ವಾರದ ಇಕ್ಕೆಲಗಳಲ್ಲೂ ಶ್ರೀವೈಷ್ಣವ ದ್ವಾರಪಾಲಕರ ವಿಗ್ರಹಗಳಿವೆ. ನವರಂಗದಲ್ಲಿ ದೊಡ್ಡ ನಾಗರಕಲ್ಲಿದೆ. ಪೂರ್ವದ ಪ್ರವೇಶ ದ್ವಾರವು ಸುಂದರ ಕೆತ್ತನೆಗಳಿಂದ ಕೂಡಿದ್ದು, ದ್ವಾರಪಾಲಕರ ಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ಲಿಂಗಾಯತಜನಾಂಗದವರು ಪೂಜೆಯನ್ನು ಮಾಡುತ್ತಿದ್ದಾರೆ. ಆದರೆ ಎಲ್ಲಾ ಜನಾಂಗದವರೂ ಆರಾಧಿಸುತ್ತಿದ್ದಾರೆ.

"ಅಹೋಬಲ" ಎಂದರೆ ಆಂಧ್ರಪ್ರದೇಶದ ನಂದಿಹಾಲ್ ಹತ್ತಿರದ ಗ್ರಾಮದಲ್ಲಿ ಒಂಭತ್ತು ವಿಧದ ರೂಪಗಳ ನರಸಿಂಹನ ಮೂರ್ತಿಗಳಿಂದ ಪ್ರಸಿದ್ಧ ಕ್ಷೇತ್ರವಾಗಿದೆ. ಸುಮಾರು ಐದು ನೂರು ಎಕರೆ ಪ್ರದೇಶದಲ್ಲಿ ಈ ದೇವಸ್ಥಾನ ನಿರ್ಮಾಣವಾಗಿದೆ. ಅದರಲ್ಲಿ ಅಹೋಬಲ ನರಸಿಂಹನದು ಶ್ರೇಷ್ಠವಾಗಿದೆ. ಇದರ ಆರಾಧಕರು ಚಿತ್ರದುರ್ಗ ಜಿಲ್ಲೆಯಲ್ಲೆಲ್ಲ ಇದ್ದಾರೆ. ಬಹುಮುಖ್ಯವಾಗಿ ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಅಹೋಬಲ ಅವರ ಮನೆದೇವರಾಗಿ ಹೆಚ್ಚು ಆರಾಧನೆಗೊಂಡಿದ್ದು, ಇಂದಿಗೂ ಅದರ ಪ್ರಸಿದ್ಧಿ ದಿನೇದಿನೇ ಬೆಳೆಯುತ್ತಿದೆ.

ಚಿತ್ರದುರ್ಗ ನಗರದ "ಯೋಗನರಸಿಂಹಸ್ವಾಮಿ" ದೇವಾಲಯ

ಚಿತ್ರದುರ್ಗ ಪಟ್ಟಣದ ತ್ಯಾಗರಾಜ ಬೀದಿಯಲ್ಲಿ ಹಳೇ ಮಾರುಕಟ್ಟೆ ಹತ್ತಿರದ ಈ ದೇವಾಲಯ ಸುಮಾರು ಇನ್ನೂರು ವರ್ಷಗಳಷ್ಟು ಹಳೆಯದು. ಮೊದಲು ಇದು ಕೋಟೆಯೊಳಗೆ ಗುಹೆಯೊಂದರಲ್ಲಿ ಇತ್ತೆಂದೂ, ಚಿತ್ರದುರ್ಗ ಪಾಳೆಯಗಾರರ ಅರ್ಚಕರಾಗಿದ್ದ ಗೋಪಾಲಾಚಾರ್ ಎಂಬುವವರು ಬೆಟ್ಟದ ಗುಹೆಯಲ್ಲಿದ್ದದ್ದನ್ನು ಕಡೆಯ ಮದಕರಿನಾಯಕನು ಸೆರೆ ಬಂಧಿಯಾದಾಗ ಅಲ್ಲಿದ್ದ ವಿಗ್ರಹವನ್ನು ಊರಿಗೆ ತಂದು ಪ್ರತಿಷ್ಠಾಪಿಸಿದರೆಂದು ಈಗಿನ ಅರ್ಚಕರಾದ ದೇವರಾಜ್ ಭಟ್‌ರವರು ತಿಳಿಸುತ್ತಾರೆ. ದೇವಾಲಯವು ಗರ್ಭಗುಡಿ, ಅಂತರಾಳಗಳನ್ನು ಹೊಂದಿದ್ದು ತುಂಬಾ ಸರಳವಾಗಿದೆ. ಗರ್ಭಗುಡಿಯ ಬಾಗಿಲವಾಡಗಳನ್ನು ಹಿತ್ತಾಳೆಯ ತಗಡಿನಿಂದ ಮುಚ್ಚಲಾಗಿದೆ. ಮುಂದಿನ ಹಜಾರ, ಪಕ್ಕದ ಅಂಕಣಗಳು ಹೊಸದಾಗಿ ನಿರ್ಮಾಣಗೊಂಡಿವೆ. ಇಲ್ಲಿ ಆಂಧ್ರಪ್ರದೇಶದ ನಂದಿಹಾಳ್‌ನಲ್ಲಿರುವಂತೆ ಒಂಭತ್ತು ವಿಧದ ನರಸಿಂಹನ ರೂಪಗಳಾದ ಶ್ರೀಜ್ವಾಲಾ ನರಸಿಂಹ (ಕುಜ), ಪಾವನ ನರಸಿಂಹ (ಬುಧ), ಲಕ್ಷ್ಮೀನರಸಿಂಹ (ಸೂರ್ಯ), ಕಾರಂಜಿ ನರಸಿಂಹ (ಚಂದ್ರ), ಚಿತ್ರವಟಿ ನರಸಿಂಹ (ಕೇತು), ಯೋಗಾ ನರಸಿಂಹ (ಶನಿ), ಕಲ್ಯಾಣ ನರಸಿಂಹಸ್ವಾಮಿ, ವರಾಹ ನರಸಿಂಹಸ್ವಾಮಿ (ರಾಹು), ಅಹೋಬಲ ನರಸಿಂಹಸ್ವಾಮಿ (ಗುರು), ಮಾಲೋಲ ನರಸಿಂಹಸ್ವಾಮಿ (ಶುಕ್ರ) ಶಿಲ್ಪಗಳನ್ನು ಅಳವಡಿಸಲಾಗಿದೆ.

ಈಚಲ ನಾಗೇನಹಳ್ಳಿಯ "ಉದ್ಭವ (ಕದ್ರಿ) ನರಸಿಂಹಸ್ವಾಮಿ" ದೇವಾಲಯ

ಚಿತ್ರದುರ್ಗಕ್ಕೆ ಐದು ಕಿ.ಮೀ. ಅಂತರದಲ್ಲಿರುವ ಈ ಗ್ರಾಮದಲ್ಲಿರುವ ನರಸಿಂಹಸ್ವಾಮಿ ದೇವಾಲಯವು ಸಾಧಾರಣವಾದ ಆಧುನಿಕ ನಿರ್ಮಾಣವಾಗಿದೆ. ಪ್ರಾರಂಭದಲ್ಲಿ ಚಿತ್ರದುರ್ಗದ ಪಾಳೆಯಗಾರ ಕಡೆಯ ಮದಕರಿನಾಯಕನು ಈಚಲ ಗಿಡದ ಸೇಂದಿಯನ್ನು ಇಳಿಸಲು ಈಡಿಗ ಜನಾಂಗದವರನ್ನು **ಆಂಧ್ರದ ಕದ್ರಿಯಿಂದ** ಕರೆತಂದು ನಾಗೇನಹಳ್ಳಿಯಲ್ಲಿ ಬಿಟ್ಟನಂತೆ. ಹಾಗಾಗಿ ಇದಕ್ಕೆ ಈಚಲ ನಾಗೇನಹಳ್ಳಿ ಎಂದು ಕರೆಯಲಾಗಿದೆ ಎಂದು ಗ್ರಾಮಸ್ಥರ ಹೇಳಿಕೆ. ಇವರು ಕದ್ರಿಯಿಂದ ಉಗ್ರನರಸಿಂಹಸ್ವಾಮಿಯನ್ನು ತಂದು ಪ್ರಾರಂಭದಲ್ಲಿ ಒಂದು ಕಲ್ಲುಮಂಟಪದಲ್ಲಿಟ್ಟು ಪೂಜೆ ಮಾಡುತ್ತಿದ್ದರಂತೆ. ಈಗ ಅಂದರೆ ಸುಮಾರು ಐವತ್ತು ವರ್ಷಗಳಿಂದೀಚೆಗೆ ಈಗಿನ ದೇವಾಲಯವನ್ನು ನಿರ್ಮಿಸಿ, ಅದರಲ್ಲಿ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ಪ್ರಸ್ತುತ ಈಡಿಗ ಜನಾಂಗದವರೇ ಪೂಜೆ ಮಾಡುತ್ತಿದ್ದಾರೆ ಆದರೆ ಊರಿನ ಎಲ್ಲಾ ಜನಾಂಗದವರೂ ಈ ದೇವರನ್ನು ಅರಾಧಿಸುತ್ತಾರೆ. ವಾಸ್ತು ದೃಷ್ಟಿಯಿಂದ ಇಲ್ಲಿ ಯಾವುದೇ ಉತ್ತಮ ಕೆತ್ತನೆಗಳಿಲ್ಲ.

ಬಂಜಗೊಂಡನಹಳ್ಳಿಯ "ಕಂಬದ ನರಸಿಂಹಸ್ವಾಮಿ" ದೇವಾಲಯ

ಚಿತ್ರದುರ್ಗದಿಂದ ಹದಿನೈದು ಕಿ.ಮೀ. ದೂರದಲ್ಲಿ ಚಿತ್ರದುರ್ಗ–ಹೊಳಲ್ಕೆರೆ ಮಾರ್ಗದಲ್ಲಿ ಬರುವ ಹೊಳಲ್ಕೆರೆ ತಾಲ್ಲೂಕಿನ ಈ ಗ್ರಾಮದಲ್ಲಿ, ಸುಮಾರು ಏಳೆಂಟು ಅಡಿಯ ಕಂಬದಲ್ಲಿ ಉದ್ಭವಗೊಂಡ **"ಕಂಬದ ನರಸಿಂಹಸ್ವಾಮಿ"ಯ** ದೇವಾಲಯವಿದೆ. ಇದು ಚಿತ್ರದುರ್ಗದ ಪಾಳೆಯಗಾರರಿಂದ ಕಟ್ಟಲ್ಪಟ್ಟ ದೇವಾಲಯವೆಂಬುದು ಅಲ್ಲಿರುವ ಅನೇಕ ವಾಸ್ತು ಲಕ್ಷಣಗಳಿಂದ ಹಾಗೂ ಕುರುಹುಗಳಿಂದ ತಿಳಿದುಬರುತ್ತದೆ. ಗರ್ಭಗುಡಿ, ಅಂತರಾಳ, ಸಭಾಮಂಟಪಗಳನ್ನು ಹೊಂದಿರುವ

ಈ ದೇವಾಲಯ ಸಾಧಾರಣಾ ವಾಸ್ತುಮಟ್ಟದ್ದು. ಸಭಾ ಮಂಟಪವು ಒಂಭತ್ತು ಅಂಕಣಗಳಿಂದ ಕೂಡಿದ್ದು, ಆರು ಪೂರ್ಣಕಂಬಗಳು, ನಾಲ್ಕು ಅರೆಗಂಬಗಳು (ಭಿತ್ತಿಯಲ್ಲಿ) ಇವೆ. ಕಂಬಗಳು ಮೂರು ಕಾಂಡಗಳನ್ನು ಹೊಂದಿದ್ದು, ಮಧ್ಯದ ಕಾಂಡಭಾಗದಲ್ಲಿ ಹದಿನಾರು ನೀಳ ಪಟ್ಟಿಕೆಗಳಿದ್ದು, ಮೇಲಿನ ಮತ್ತು ಕೆಳಗಿನ ಚೌಕಭಾಗಗಳಲ್ಲಿ ಆಂಜನೇಯ, ಕಮಲ, ಬಳ್ಳಿಯಾಕಾರದ ಕೆತ್ತನೆ, ನವಿಲು, ನೃತ್ಯಗಾರ್ತಿಯರು, ಗಣಪ, ಕುಳಿತಿರುವ ಸಿಂಹ, ಶಿವಲಿಂಗಕ್ಕೆ ಹಾಲನ್ನೆರೆಯುತ್ತಿರುವ ನಾಲ್ಕು ಮುಖದ ಹಸು, ಯತಿ, ಪಾಳೆಯಗಾರ ಇತ್ಯಾದಿ ಉಬ್ಬುಶಿಲ್ಪಗಳ ಕೆತ್ತನೆಯನ್ನು ಕಾಣಬಹುದಾಗಿದೆ. ಕಂಬಗಳ ಮೇಲ್ಭಾಗದಲ್ಲಿ ವಿಜಯನಗರ ಶೈಲಿಯ ಪುಷ್ಪ ಬೋದಿಗೆಗಳಿವೆ. ಸಭಾಮಂಟಪದ ದ್ವಾರದ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿದ್ದು, ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ಶ್ರಾವಣ ಮಾಸದಲ್ಲಿ ಪ್ರತಿ ಶನಿವಾರ ವಿಶೇಷ ಪೂಜೆ ನಡೆಯುತ್ತದೆ.. ಈಗ ಗೊಲ್ಲ ಜನಾಂಗದವರು ಪೂಜೆ ಮಾಡುತ್ತಿದ್ದಾರೆ. ಸಭಾ ಮಂಟಪದ ಮೇಲ್ಭಾಗದಲ್ಲಿ ಇತ್ತೀಚಿನ ಸುಮಾರು ಏಳೆಂಟು ಅಡಿಯ ಆಂಜನೇಯನ ನಿಂತ ಶಿಲ್ಪವಿದೆ. ಗರ್ಭಗುಡಿಯ ಮೇಲ್ಭಾಗದಲ್ಲಿ ಇತ್ತೀಚಿನ ಸಾಧಾರಣ ಶಿಖರವಿದೆ. ಅಂತರಾಳದ ಹೊರಭಿತ್ತಿಯಲ್ಲಿ ನಾಗರಹಾವಿನ ಉಬ್ಬುಶಿಲ್ಪವಿದೆ.

ಗೊರವಿನಕಲ್ಲು "ಕಂಬದ ನರಸಿಂಹಸ್ವಾಮಿ" ದೇವಾಲಯ

ಹೊಸದುರ್ಗ ತಾಲ್ಲೂಕಿನ ಗೊರವಿನಕಲ್ಲು ಗ್ರಾಮದಲ್ಲಿರುವ ದೇವಾಲಯವು ಸಾಮಾನ್ಯವಾಗಿದ್ದು, ಹೊಯ್ಸಳರ ಕಾಲದ್ದಾಗಿ ಕಂಡುಬರುತ್ತದೆ. ಕುರುಬ ಜನಾಂಗದವರು ಇಲ್ಲಿ ಪೂಜೆ ಮಾಡುತ್ತಿದ್ದಾರೆ. ಗರ್ಭಗುಡಿಯಲ್ಲಿ "ಕಂಬದಲ್ಲಿ ಒಡಮೂಡಿರುವ ಶ್ರೀನರಸಿಂಹಸ್ವಾಮಿ" ಅತ್ಯಂತ ಪವಾಡ ಪುರುಷ ಎಂಬುದು ಜನರ ನಂಬಿಕೆಯಾಗಿದೆ. ಸಭಾ ಮಂಟಪದಲ್ಲಿ ಚಿತ್ರದುರ್ಗ ಪಾಳೆಯಗಾರರ ಶೈಲಿಯ ಹತ್ತು ಕಂಬಗಳಿವೆ. ಆದರೆ ಇದಕ್ಕೆ ಈಗ ಸಿಮೆಂಟ್ ಮೆತ್ತಿ ಬಣ್ಣ ಲೇಪಿಸಿದ್ದಾರೆ.

ಕಬ್ಬಳದ "ಕಂಬದ ನರಸಿಂಹಸ್ವಾಮಿ" ದೇವಾಲಯ

ಹೊಸದುರ್ಗ ತಾಲ್ಲೂಕಿನ ಕಬ್ಬಳದಲ್ಲಿರುವ ಕಂಬದ ನರಸಿಂಹಸ್ವಾಮಿ ದೇವಾಲಯವು ಅತ್ಯಂತ ಪುರಾತನವಾದದ್ದು. ಗರ್ಭಗೃಹ ಮತ್ತು ಅಂತರಾಳಗಳನ್ನು ಹೊಂದಿರುವ ಈ ದೇವಾಲಯವು ತುಂಬ ಸರಳವಾಗಿದೆ. ಗರ್ಭಗೃಹದಲ್ಲಿ ಕಂಬದಲ್ಲಿ ಶ್ರೀ ನರಸಿಂಹ ಮೂರ್ತಿಯು ಒಡಮೂಡಿದ್ದಾನೆ. ವೀರಶೈವ ಜನಾಂಗದವರು ಪೂಜೆ ಮಾಡುತ್ತಿದ್ದಾರೆ.

ಕುರುಬರಹಳ್ಳಿ "ಕಂಬದ ನರಸಿಂಹಸ್ವಾಮಿ" ದೇವಾಲಯ

ಹೊಸದುರ್ಗ ತಾಲ್ಲೂಕಿನ ಈ ಗ್ರಾಮದಲ್ಲಿ ಪುರಾತನವಾದ "ಕಂಬದ ನರಸಿಂಹಸ್ವಾಮಿ" ದೇವಾಲಯವಿದೆ. ಕುರುಬ ಜನಾಂಗದವರು ಪೂಜೆ ಮಾಡುತ್ತಾರೆ. ಗರ್ಭಗುಡಿಯಲ್ಲಿ ಕಂಬದಲ್ಲಿ ಒಡಮೂಡಿದ ನರಸಿಂಹಸ್ವಾಮಿಯ ಶಿಲ್ಪವಿದೆ. ಕಾರ್ತಿಕಮಾಸದಲ್ಲಿ ವಿಶೇಷ ಪೂಜೆ ಹಾಗೂ ದೊಡ್ಡ ಎಡೆಪೂಜೆಯನ್ನು ಮಾಡುತ್ತಾರೆ.

ಜಾನಕಲ್ಲು "ಓಬಳನರಸಿಂಹಸ್ವಾಮಿ" ದೇವಾಲಯ

ಹೊಸದುರ್ಗ ತಾಲ್ಲೂಕಿನ ಜಾನಕಲ್ಲು ನಾಯಕರಹಟ್ಟಿಯಲ್ಲಿರುವ ಈ ದೇವಾಲಯವು ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ನಿರ್ಮಿಸಲ್ಪಟ್ಟದ್ದಾಗಿದ್ದು, ಇದನ್ನು **"ಕಂಪಳ ನರಸಿಂಹಸ್ವಾಮಿ"** ಎಂತಲೂ ಕರೆಯುತ್ತಾರೆ. ಇದು ಪೆಟ್ಟಿಗೆ ದೇವರಾಗಿದೆ. ನಾಯಕ ಜನಾಂಗದವರು ಪೂಜೆ ಮಾಡುತ್ತಾರೆ. ಪ್ರತಿ ಶನಿವಾರ ವಿಶೇಷ ಪೂಜೆ ನಡೆಯುತ್ತದೆ. ಪ್ರತಿ ತಿಂಗಳೂ ಆಂಧ್ರದಿಂದ ಭಕ್ತರು ಬರುತ್ತಾರೆ.

ಮಾವಿನಕಟ್ಟೆಯ "ಕಂಪಳ ನರಸಿಂಹಸ್ವಾಮಿ" ದೇವಾಲಯ

ಹೊಸದುರ್ಗ ತಾಲ್ಲೂಕಿನ ಈ ದೇವಾಲಯ ತುಂಬಾ ಪುರಾತನವಾದುದಾಗಿದ್ದು, ಇಲ್ಲಿನ ದೇವರು ಪೆಟ್ಟಿಗೆ ದೇವರಾಗಿದ್ದು ನಾಯಕ ಜನಾಂಗದವರು ಪೂಜೆ ಮಾಡುತ್ತಾರೆ. ಆದರೂ ಎಲ್ಲಾ ಜನಾಂಗದವರೂ ನಡೆದುಕೊಳ್ಳುತ್ತಾರೆ. ಪಾಳೆಯಗಾರರು ಆಂಧ್ರದಿಂದ ವಲಸೆ ಬರುವಾಗ ತಮ್ಮ ಮನೆದೇವರನ್ನು ಪೆಟ್ಟಿಗೆಯಲ್ಲಿ ಇಟ್ಟುಕೊಂಡು ಬಂದು ಹಾಗೇ ಪೂಜೆ ಮಾಡಲು ಪ್ರಾರಂಭಿಸಿದ್ದರಿಂದ ಅದನ್ನು ಪೆಟ್ಟಿಗೆ ದೇವರೆಂದು ಕರೆಯಲಾಗಿದೆ.

ದಾಸರಹಳ್ಳಿಯ "ನರಸಿಂಹಸ್ವಾಮಿ" ದೇವಾಲಯ

ಹೊಳಲ್ಕೆರೆ ತಾಲ್ಲೂಕಿನ ಈ ಗ್ರಾಮದಲ್ಲಿದ್ದ ಹಳೆಯ ಗುಡಿಯನ್ನು ದುರಸ್ತಿಗೊಳಿಸಿದ್ದಾರೆ. ಇಲ್ಲಿರುವುದು ಉದ್ಭವ ನರಸಿಂಹಸ್ವಾಮಿ ಮೂರ್ತಿಯಾಗಿದೆ. ನಾಯಕ ಜನಾಂಗದವರು ಪೂಜೆ ಮಾಡುತ್ತಾರೆ. ಪ್ರತಿ ವರ್ಷವೂ ತೇರು–ಉತ್ಸವಗಳು ನಡೆಯುತ್ತದೆ.

ಗಿಲ್ಕೇನಹಳ್ಳಿಯ ಗರಗ ಕಾವಲಿನ "ಉಗ್ರ ನರಸಿಂಹಸ್ವಾಮಿ" ದೇವಾಲಯ

ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ಈ ದೇವಾಲಯವು ಪುರಾತನವಾದುದಾಗಿದ್ದು, ಕಲ್ಲಿನಲ್ಲಿ ಒಡಮೂಡಿರುವ ಉಗ್ರ ನರಸಿಂಹಸ್ವಾಮಿ ಮೂರ್ತಿಯಾಗಿದೆ. ನಾಯಕ ಜನಾಂಗದವರು ಪೂಜೆ ಮಾಡಿದರೂ ಎಲ್ಲಾ ಜನಾಂಗದವರೂ ನಡೆದುಕೊಳ್ಳುತ್ತಾರೆ. ಅಡವಿಯಲ್ಲಿರುವ ಈ ಸ್ವಾಮಿಗೆ ಯುಗಾದಿಯಾದ ನಂತರ ಮೊದಲ ಭಾನುವಾರ ಜಾತ್ರೆ ನಡೆಯುತ್ತದೆ. ಆಂಧ್ರ ಹಾಗೂ ಕರ್ನಾಟಕದ ವಿವಿಧ ಭಾಗಗಳಿಂದ ಸಹಸ್ರಾರು ಇಲ್ಲಿಗೆ ಭಕ್ತರು ಆಗಮಿಸುತ್ತಾರೆ.

ಹುಲ್ಲೂರು "ಜ್ವಾಲಾ ನರಸಿಂಹಸ್ವಾಮಿ" ಶಿಲ್ಪ

ಚಿತ್ರದುರ್ಗ ತಾಲ್ಲೂಕಿನ ಹುಲ್ಲೂರು ಗ್ರಾಮದಲ್ಲಿರುವ ಮಲ್ಲೇಶ್ವರ ದೇವಾಲಯದಲ್ಲಿ ಹೊಯ್ಸಳರ ಕಾಲದ ಜ್ವಾಲಾ ನರಸಿಂಹಸ್ವಾಮಿಯ ಶಿಲ್ಪ ಆಧ್ಭುತವಾಗಿದೆ. ತನ್ನ ತೊಡೆಯ ಮೇಲೆ ರಾಕ್ಷಸನನ್ನು ಮಲಗಿಸಿಕೊಂಡು, ಅವನ ಹೊಟ್ಟೆಯನ್ನು ಬಗೆದು ಕರುಳನ್ನು ಹೊರಗೆ ತೆಗೆಯುತ್ತಿರುವ ದೃಶ್ಯ ಮನಮೋಹಕ ಭಯಂಕರ ಮೂರ್ತಿಯಾಗಿದೆ. ಇದೇ ರೀತಿಯ ಶಿಲ್ಪ ಚಿತ್ರದುರ್ಗ ಪಟ್ಟಣದ ಯೋಗನರಸಿಂಹಸ್ವಾಮಿ ದೇವಾಲಯದಲ್ಲಿ ಕಂಡುಬರುತ್ತದೆ.

ಹರ್ತಿಕೋಟೆಯ "ಅಹೋಬಲ ನರಸಿಂಹಸ್ವಾಮಿ" ದೇವಾಲಯ

ಬಳ್ಳಾರಿ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹಿರಿಯೂರು ಗ್ರಾಮಕ್ಕೆ ಹದಿನೈದು ಕಿ.ಮೀ. ದೂರದಲ್ಲಿರುವ ಹರ್ತಿಕೋಟೆ ಗ್ರಾಮವು ಹಿರಿಯೂರು ತಾಲ್ಲೂಕಿಗೆ ಸೇರಿದೆ. ಹರತಿ ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾದ "ಅಹೋಬಲ ನರಸಿಂಹಸ್ವಾಮಿ" ದೇವಾಲಯ ತನ್ನ ಮೂಲ ವಾಸ್ತು ಲಕ್ಷಣಗಳನ್ನು ಕಳೆದುಕೊಂಡು ಇಂದು ನವೀಕರಣಗೊಂಡಿದೆ. ಮೂಲ ದೇವಾಲಯವು ಸಂಪೂರ್ಣವಾಗಿ ಮರದಿಂದ ನಿರ್ಮಾಣವಾಗಿದ್ದು, ಮರದ ಕಂಬಗಳಲ್ಲಿ ವಿವಿಧ ಕೆತ್ತನೆಗಳನ್ನು ಕಾಣಬಹುದಾಗಿತ್ತೆಂದು ಊರಿನ ಜನ ಹೇಳುತ್ತಾರೆ. ಇದೊಂದು ಪೆಟ್ಟಿಗೆ ದೇವರಾಗಿದ್ದು ಈಗ ಮೂರ್ತಿಯನ್ನು ಹೊಸದಾಗಿ ಪ್ರತಿಷ್ಠಾಪಿಸಿದ್ದಾರೆ. ಈ ಗ್ರಾಮದ ಮತ್ತೊಂದು ವಿಶೇಷವೆಂದರೆ ಇಲ್ಲಿ ಎರಡು ಅಹೋಬಲ ನರಸಿಂಹಸ್ವಾಮಿ ದೇವಾಲಯಗಳಿದ್ದು, ಒಂದನ್ನು ಛಲವಾದಿ ಜನಾಂಗದವರು ಪೂಜೆ ಮಾಡಿದರೆ, ಮತ್ತೊಂದನ್ನು ನಾಯಕ ಜನಾಂಗದವರು ಪೂಜೆ ಮಾಡುತ್ತಾರೆ.

ಆಧಾರ ಗ್ರಂಥಗಳು

೧. ಶಿವತಾರಕ್ ಕೆ.ಬಿ., ೨೦೦೧, 'ಕರ್ನಾಟಕದ ಪುರಾತತ್ವ ನೆಲೆಗಳು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨. ಜಯಣ್ಣ, ೧೯೭೯, "ಚಿತ್ರದುರ್ಗದಲ್ಲಿ ಭೂ ಸಂಶೋಧನೆ', ಐತಿಹಾಸಿಕ ಚಿತ್ರದುರ್ಗ, ಲಕ್ಷ್ಮಣ್ ತೆಲಗಾವಿ, ಕೆ. ವೆಂಕಣ್ಣಾಚಾರ್ (ಸಂ), ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ, ಚಿತ್ರದುರ್ಗ.
೩. ಪುಟ್ಟಣ್ಣ ಎಂ.ಎಸ್., ೧೯೨೪, 'ಚಿತ್ರದುರ್ಗದ ಪಾಳೆಯಗಾರರು'.
೪. ಲಕ್ಷ್ಮಣ್ ತೆಲಗಾವಿ, ೧೯೭೯, 'ಚಿತ್ರದುರ್ಗದ ಸಂಕ್ಷಿಪ್ತ ಇತಿಹಾಸ', ಐತಿಹಾಸಿಕ ಚಿತ್ರದುರ್ಗ.
೫. ಪ್ರಭಾಕರ್ ಎಂ.ಎನ್., ೧೯೮೭, 'ವಾಸ್ತುಶಿಲ್ಪ' ಕೆಲವು ಟಿಪ್ಪಣಿಗಳು, ಹರತಿಸಿರಿ, ಪ್ರೊ. ಲಕ್ಷ್ಮಣ್ ತೆಲಗಾವಿ.
೬ ಸಿಂದಗಿ ರಾಜಶೇಖರ., ೧೯೮೮, 'ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ'.
೭. ಸಾಲತೊರೆ.ಆರ್.ಎಸ್., ೧೯೮೨, 'ವಿಜಯನಗರ ಆರ್ಟ್'.
೮. ಶಂಕರಯ್ಯ ಆ.ರಾ., ೧೯೭೬: 'ನೀರ್ಥಡಿ ರಂಗನಾಥ ದೇವಾಲಯ', ಚಂದ್ರವಳ್ಳಿ, ಭಾಗ–೩.
೯. ಗೌಡೂರ್ ಎಸ್.ವಿ., ೧೯೭೯, 'ಚಿತ್ರದುರ್ಗದ ದೇವಮಂದಿರಗಳು', ಐತಿಹಾಸಿಕ ಚಿತ್ರದುರ್ಗ.
೧೦. ರಂಗಸ್ವಾಮಿ ಡಿ.ಟಿ., ೨೦೦೭, 'ಹೊಳಲ್ಕೆರೆ ತಾಲ್ಲೂಕಿನ ಪ್ರಸಿದ್ಧ ದೇವಾಲಯಗಳ ಒಂದು ಸಾಂಸ್ಕೃತಿಕ ಅಧ್ಯಯನ'.
೧೧. ಗಿರಿಜಾ ಟಿ., ೧೯೯೯, "ಚಿತ್ರದುರ್ಗ ಜಿಲ್ಲಾ ದರ್ಶಿನಿ".
೧೨. ಗಿರಿಜಾ ಟಿ., ೨೦೦೧, "ದಾವಣಗೆರೆ–ಇದು ನಮ್ಮ ಜಿಲ್ಲೆ".

೮೪

ವಿಜಯನಗರ ಕಾಲದ ಇಸ್ಲಾಂ ವಾಸ್ತುಶೈಲಿ: ಮರುನಿರೂಪಣೆ

ಅಕ್ತರ್ ಖಾನಂ ಹೆಚ್.ಎಸ್.* ಮುನಿರಾಜ್ ಎಸ್.**

ಮಧ್ಯಕಾಲೀನ ಭಾರತದಲ್ಲಿ ಆಳ್ವಿಕೆ ನಡೆಸಿದ ಅನೇಕ ರಾಜ ಪ್ರಭುತ್ವಗಳು ತಮ್ಮ ಅಸ್ಮಿತೆಗಾಗಿ ಅನೇಕ ಕಟ್ಟಡಗಳನ್ನು ತಮ್ಮ ಸುಪರ್ದಿಗೆ ಒಳಪಟ್ಟ ಪ್ರದೇಶಗಳಲ್ಲಿ ನಿರ್ಮಿಸಿದರು. ಅವು ಚರಿತ್ರೆಯಲ್ಲಿ ಇಂದಿಗೂ ಅನೇಕ ಸ್ಮಾರಕಗಳಾಗಿ ಗುರುತಿಸಿಕೊಂಡು ಬರುತ್ತಿವೆ. ಅವುಗಳಲ್ಲಿ ಕೆಲವು ಕೋಟೆ-ಕೊತ್ತಳಗಳು, ಅವರ ವಾಸಗೃಹಗಳು, ಅರಮನೆಗಳು, ದೇವಾಲಯಗಳು, ಬಸದಿಗಳು ಜನಸಾಮಾನ್ಯರು ಆರಾಧಿಸುವ ಪ್ರಾರ್ಥನಾ ಮಂದಿರಗಳು ಮುಖ್ಯವಾಗಿವೆ. ಇಲ್ಲಿ ಆಳ್ವಿಕೆ ನಡೆಸಿದ ವಿವಿಧ ಅರಸುಮನೆತನದವರಿಂದ ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಬಗೆಯ ವಾಸ್ತುಶೈಲಿಯ ರೂಪದಲ್ಲಿ ಬೆಳವಣಿಗೆಯಾಗಿರುವುದನ್ನು ನಾವು ಕಾಣಬಹುದು.

ಭಾರತದ ಚರಿತ್ರೆಯಲ್ಲಿ ಪ್ರಾಚೀನ ಕಾಲದಿಂದ ಹಿಡಿದು ಮಧ್ಯಯುಗೀನ ಕಾಲದವರೆಗೆ ಬೆಳೆದ ವಾಸ್ತುಶಿಲ್ಪದ ಶೈಲಿಯಲ್ಲಿ ನಾಗರ, ದ್ರಾವಿಡ, ವೇಸರ ಎಂದು ಕರೆಸಿಕೊಂಡಿರುವ ಹೊಯ್ಸಳ ಶೈಲಿಗಳು ಪ್ರಮುಖವಾದವು. ಇವುಗಳಲ್ಲಿ ಮಧ್ಯಕಾಲೀನ ಸಂದರ್ಭದ ಆರಂಭದಲ್ಲಿ ವಿಜಯನಗರ ಅರಸರು ಹೊಯ್ಸಳರ ಕಾಲದ ವಾಸ್ತುಶೈಲಿಯನ್ನು ಮುಂದುವರೆಸಿ, ನಂತರ ತಮ್ಮದೇ ಆದ ಮಿಶ್ರಿತವಾದ ಹೊಸ ವಿಜಯನಗರ ಶೈಲಿಯನ್ನು ಬೆಳೆಸಲು ಮುಂದಾದರು. ಹಾಗಾಗಿ ಇಲ್ಲಿನ ಸ್ಥಳೀಯ ಸ್ಮಾರಕಗಳಲ್ಲಿ ನಾಗರ, ವೇಸರ ಶೈಲಿಯ ಮಿಶ್ರಣದ ಜೊತೆಗೆ ಉತ್ತರದ ಇಸ್ಲಾಂ ಶೈಲಿಯ ಪ್ರಭಾವವು ಇಲ್ಲಿ ಕಂಡುಬರುತ್ತದೆ. ಈ ಸಮಕಾಲೀನ ಸಂದರ್ಭದಲ್ಲಿ ಉತ್ತರ ಭಾರತದ ರಾಜಪ್ರಭುತ್ವಗಳಲ್ಲಿ ಪ್ರಚಲಿತದಲ್ಲಿದ್ದ ಇಸ್ಲಾಂ ವಾಸ್ತುಶೈಲಿಯ ಪ್ರಭಾವ ದಕ್ಷಿಣ ಭಾರತಕ್ಕೆ ಪ್ರಸರಿಸಿದ್ದನ್ನು ಈ ಹಿನ್ನೆಲೆಯಲ್ಲಿ ನಾವು ಕಾಣಬಹುದು. ಉತ್ತರ ಭಾರತದ ರಾಜ ಪ್ರಭುತ್ವಗಳ ಗಡಿಗಳಿಗೆ ಇಸ್ಲಾಂ ವಾಸ್ತುಶೈಲಿಯ ಪ್ರವೇಶ ಮಲ್ಲಿಕಾಫರ್ ದಾಳಿಯ ನಂತರ ಹೆಚ್ಚು ಪ್ರವರ್ಧಮಾನಕ್ಕೆ ಬಂದಿತು ಎನ್ನಬಹುದು.

ದಕ್ಷಿಣ ಭಾರತದಲ್ಲಿನ ರಾಜ್ಯಗಳ ಪರಧಿಯಲ್ಲಿ ಮುಸ್ಲಿಂ ಪ್ರಭುತ್ವ ಸ್ಥಾಪನೆಯಾದ ನಂತರ ಉತ್ತರದಲ್ಲಿ ಅಸ್ಥಿತ್ವದಲ್ಲಿದ್ದ ಇಸ್ಲಾಂ ಶೈಲಿಯು ಕ್ರಮೇಣವಾಗಿ ಇಲ್ಲಿಗೂ ಪರಿಚಯವಾಯಿತು. ಹೀಗೆ ಭಾರತದಂತಹ ಬಹು ಸಂಸ್ಕೃತಿಯ ಪ್ರದೇಶಕ್ಕೆ ಅನ್ಯ ರಾಷ್ಟ್ರಗಳ ಮೂಲದ ವಿಭಿನ್ನ ಸಂಸ್ಕೃತಿಯ ತಳಹದಿಯನ್ನು ಹೊಂದಿರುವ ರಾಜಪ್ರಭುತ್ವದ ಸ್ಥಾಪನೆಯು ೧೩-೧೪ನೇ ಶತಮಾನದಲ್ಲಿ ಹುಟ್ಟಿಕೊಂಡ ಹೊಸ ವಾಸ್ತುಶೈಲಿಯ ಪರಿಚಯವು ಅದರ ಬೆಳವಣಿಗೆಗೂ ಕಾರಣವಾಯಿತು

ಇಸ್ಲಾಮಿಕ್ ವಾಸ್ತುಶೈಲಿಯ ಪ್ರಭಾವವು ದಕ್ಷಿಣ ಭಾರತದ ಚರಿತ್ರೆಯಲ್ಲಿ ಅತ್ಯಂತ ಪ್ರಭಾವಶಾಲಿಯಾದ ವಿಜಯನಗರ ಸಾಮ್ರಾಜ್ಯದ ಮೇಲೆಯು ಹಂತ ಹಂತವಾಗಿ ಕಂಡುಬಂದಿತು, ಈ ಶೈಲಿಯ ಪ್ರಭಾವಕ್ಕೆ ಒಳಗಾದ ವಿಜಯನಗರದ ಅರಸರು ತಮ್ಮ ರಾಜ್ಯದಲ್ಲಿ ಇಂಡೋ-ಇಸ್ಲಾಮಿಕ್ ಶೈಲಿಯ ಕಟ್ಟಡವನ್ನು ಹಲವು ಕಡೆಗಳಲ್ಲಿ ನಿರ್ಮಿಸಿದರು.

ದಕ್ಷಿಣ ಭಾರತದಲ್ಲಿನ ರಾಜಕೀಯ ಚದುರಂಗದಾಟದಲ್ಲಿ ಮುಸ್ಲಿಂ ಪ್ರಭುತ್ವಗಳು ಬೀದರ್, ಗುಲ್ಬರ್ಗ, ಬಿಜಾಪುರ, ರಾಯಚೂರು ನಗರಗಳಲ್ಲಿ ಸ್ಥಾಪನೆಗೊಂಡು ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯನ್ನು ಬೆಳೆಸಿದರು. ಈ ವಾಸ್ತುಶೈಲಿಗೆ ಸಂವಾದಿ ಕೇಂದ್ರಗಳಾಗಿ ಮುಸ್ಲಿಮ್ ವಾಸ್ತುಶೈಲಿಯಲ್ಲಿ ಒಂದು ಪ್ರಮುಖ ಶೈಲಿಯಾದ ದಖ್ಖನ್ ಶೈಲಿಯನ್ನು ಇಲ್ಲಿಯೇ ಬೆಳೆಸಲು ಮುಂದಾದರು. ಭಾರತ ಮತ್ತು ಪರ್ಶಿಯಾದ ವಾಸ್ತುಶೈಲಿಯ ಸೌಮ್ಯತೆ ಇಂಡೊ-ಇಸ್ಲಾಮಿಕ್ ಶೈಲಿಯಲ್ಲಿ ಹೆಚ್ಚಾಗಿ ಕಂಡುಬುತ್ತದೆ. ಇದು ಭಾರತದಂತಹ ಬಹುಸಂಸ್ಕೃತಿಯ ಸಮುದಾಯಗಳನ್ನು ಒಳಗೊಂಡಿರುವ ರಾಷ್ಟ್ರದಲ್ಲಿ ಹಿಂದೂ-ಮುಸ್ಲಿಂ ವಾಸ್ತುಶೈಲಿಯ ಲಕ್ಷಣಗಳ ಮಿಶ್ರಣದಿಂದ ಇದೊಂದು ಹೊಸ ಶೈಲಿಯಾಗಿ ನಿರ್ಮಾಣವಾಯಿತು. ಹೀಗೆ ಸಂಮಿಶ್ರಣಗೊಳಿಸಿದ ವಾಸ್ತುಶೈಲಿಯೇ ಇಂಡೊ-ಇಸ್ಲಾಮಿಕ್ ಶೈಲಿ ಎಂದೆನಿಸಿಕೊಂಡಿತು. ಈ ರೀತಿಯಾಗಿ ದಕ್ಷಿಣ ಭಾರತದಲ್ಲಿ ಜನಸಾಮಾನ್ಯರ ಬದುಕಿನ ಪ್ರಶ್ನೆಗಳಿಗಾಗಿ ಇಸ್ಲಾಮಿಕ್ ಶೈಲಿಯು ಸ್ಥಳೀಯ ಶೈಲಿಯಾಗಿ ಬೆಳೆಯಿತು. ವಾಸ್ತುಶೈಲಿಯ ವಿಧಾನ ಶಿಲ್ಪಗಳು, ವಾಸ್ತು ತಜ್ಞರು, ಕುಸರಿ ಕೆಲಸಗಾರರು, ಇತರ ಕಟ್ಟಡಗಳ ನಿರ್ಮಾಪಕರಿಂದ ಹೊಸ ಶೈಲಿಗಳು ಚಾಲ್ತಿಗೆ

* ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿಗಳು, ಕನ್ನಡ ವಿಶ್ವಿದ್ಯಾಲಯ, ಹಂಪಿ.

ಬಂದವು. ಅಂಥವುಗಳಲ್ಲಿ ಇಂಡೋ–ಇಸ್ಲಾಮ್ ವಾಸ್ತುಶೈಲಿಯು ಒಂದು. ಇದು ಇಲ್ಲಿನ ಪ್ರದೇಶಗಳಿಗೆ ಅನುಗುಣವಾಗಿ ಬೆಳೆದು ಬಂದಿದ್ದರಿಂದ ಇದು ದಖ್ಖನ್ ಶೈಲಿ ಎಂದಾಯಿತು. ಇಂಡೋ–ಇಸ್ಲಾಮಿಕ್ ಶೈಲಿಯ ಪ್ರಮುಖ ಲಕ್ಷಣಗಳೆಂದರೆ ಹಿಂದೂ–ಮುಸ್ಲಿಮ್ ವಾಸ್ತು ರಚನೆಯಲ್ಲಿ ಸಂಯೋಜನೆ, ಕಟ್ಟಡದ ಆಕಾರ ಗಾತ್ರಗಳಿಗಿಂತ ಅಲಂಕರಣಕ್ಕೆ ಪ್ರಾಧಾನ್ಯತೆ, ಕಮಾನು, ಗುಮ್ಮಟ, ಮೀನಾರ್‌ಗಳ ರಚನೆ, ಗಚ್ಚು–ಗಾರೆಗಳ ಬಳಕೆ, ನಯವಾದ ಗಿಲಾಯಿ ಕೆಲಸ ಕಂಡುಬರುತ್ತದೆ.[೧]

ಇಸ್ಲಾಂ ವಾಸ್ತುಶಿಲ್ಪದಲ್ಲಿ ಧಾರ್ಮಿಕ ಹಿನ್ನೆಲೆಯ ಕಟ್ಟಡಗಳಲ್ಲಿ ಪ್ರಾರ್ಥನಾ ಮಂದಿರಗಳು, ಕಮಾನುಗಳು, ಮಿನಾರುಗಳು, ಲಿಪಿರೇಖಾ ಚಿತ್ರಗಳು ಹೆಚ್ಚಾಗಿ ಕಂಡುಬರುವವು. ಅದಷ್ಟೇ ಅಲ್ಲದೆ ಅಮೃತ ಶಿಲೆಯಲ್ಲಿ ಕೊರೆದ ರೇಖಾಚಿತ್ರಗಳು, ಸಸ್ಯಚಿತ್ರಗಳು, ಬಗೆಬಗೆಯ ಬಣ್ಣಗಳ ಕಲ್ಲುವರಿಸೆಗಳ ಕಟ್ಟಡಗಳು, ನುಣ್ಣನೆಯ ಹೊಳಪು ಬಿಲ್ಲೆಗಳ ಹೊದಿಕೆಯೂ ಮುಸ್ಲಿಂ ಚಿತ್ರ ಪದ್ಧತಿಯಲ್ಲಿ ಮುಖ್ಯವಾಗಿ ಕಂಡುಬರುತ್ತದೆ.[೨] ಇನ್ನು ಅರಮನೆ, ಸಾರ್ವಜನಿಕ ಕಟ್ಟಡಗಳಲ್ಲಿ ಪ್ರಾಣಿಗಳ, ಮನುಷ್ಯ ಚಿತ್ರಗಳನ್ನು ಕೆತ್ತಲಾಗಿದೆ. ಈ ರೀತಿಯಾಗಿ ಇರಾನ್ ಮತ್ತು ಸ್ಪೇನ್‌ನಲ್ಲಿ ಅಧಿಕ ಪ್ರಚಾರದಲ್ಲಿದ್ದ ಈ ವಾಸ್ತುಶಿಲ್ಪದ ಪ್ರಕಾರವು ಭಾರತಕ್ಕೆ ವ್ಯಾಪಾರದ ಮೂಲಕ ಪ್ರವೇಶವನ್ನು ಪಡೆಯಿತು. ಭಾರತದ ಮಟ್ಟಿಗೆ ದೆಹಲಿ ಸುಲ್ತಾನ ಆಳ್ವಿಕೆಯಲ್ಲಿ ಕುತುಬ್‌ಮಿನಾರ್ ಕಟ್ಟಡವು ಮೊದಲ ಮುಸ್ಲಿಂ ಸ್ಮಾರಕವಾಗಿ ನಿರ್ಮಿತವಾಯಿತು. ನಂತರ ಇದರ ಶಾಖೆಗಳು ಉತ್ತರ ಭಾರತಾದ್ಯಂತ ವಿಸ್ತಾರಗೊಂಡವು. ಹೀಗೆ ಭಾರತದಲ್ಲಿ ಮುಸ್ಲಿಂ ಪ್ರಭುತ್ವಗಳು ಸ್ಥಾಪನೆಯಾದ ಪ್ರದೇಶಗಳಲ್ಲಿ ಇಸ್ಲಾಂವಾಸ್ತು ಶೈಲಿಯ ಸ್ಮಾರಕಗಳು ನಿರ್ಮಾಣಗೊಳ್ಳುತ್ತಾ ಹೋದವು. ಅದರೊಂದಿಗೆ ಆಯಾ ಪ್ರಾಂತ್ಯಗಳ ಹಿನ್ನೆಲೆಯಲ್ಲಿ ನಿರ್ಮಾಣವಾದ ಇಸ್ಲಾಂ ಶೈಲಿಯು ಇದರೊಟ್ಟಿಗೆ ಸ್ಥಳೀಯತೆಯನ್ನು ಪಡೆದುಕೊಂಡಿತು. ಉದಾ: ಮುಲ್ತಾನ್ ಶೈಲಿ, ಗುಜರಾತ್‌ನಲ್ಲಿ ಗುಜರಾತ್ ಶೈಲಿ, ದಕ್ಷಿಣ ಭಾರತದಲ್ಲಿ ದಖ್ಖನ್ ಶೈಲಿಯಾಗಿ ರೂಪುಗೊಂಡಿತು. ಈ ರೀತಿಯಾಗಿ ಭಾರತದಾದ್ಯಂತ ಇಸ್ಲಾಂ ವಾಸ್ತುಶೈಲಿಯು ಹಂತ ಹಂತವಾಗಿ ವಿಸ್ತರಿಸುತ್ತಾ ಹೋಯಿತು. ಭಾರತೀಯ ಇಸ್ಲಾಂ ವಾಸ್ತುಶೈಲಿಯಲ್ಲಿ ಅರಮನೆ, ಕೋಟೆ, ಸಾರ್ವಜನಿಕ ಕಟ್ಟಡ, ಮಸೀದಿ ನಿರ್ಮಾಣ, ಈದ್ಗಾ ಮೈದಾನ, ಗೋರಿಕಟ್ಟಡಗಳು ಪ್ರಮುಖವಾಗಿ ಕಂಡುಬರುತ್ತದೆ.

ವಿಜಯನಗರ ಚರಿತ್ರೆ ರಚನೆಯಲ್ಲಿ ಇಂಡೋ–ಇಸ್ಲಾಮಿಕ್ ಕಟ್ಟಡಗಳ ಬಗೆಗೆ ಸಾಕಷ್ಟು ಅಧ್ಯಯನಗಳಾಗಿವೆ. ಹಾಗೆಯೇ ವಿಜಯನಗರದಲ್ಲಿ ನಿರ್ಮಾಣಗೊಂಡಿರುವ ಕಟ್ಟಡಗಳ ಶೈಲಿಯ ರಚನೆ, ವಿನ್ಯಾಸ, ತಾಂತ್ರಿಕತೆ ಹಿನ್ನೆಲೆಯಲ್ಲಿ ನಿರ್ಮಿತವಾದ ಸ್ಮಾರಕಗಳ ಅಧ್ಯಯನಗಳು ನಡೆದಿವೆ. ಆದರೆ ವಿಜಯನಗರದಲ್ಲಿನ ಸ್ಮಾರಕಾವಶೇಷಗಳ ಅಧ್ಯಯನದ ಮೂಲಕ ಅಂದಿನ ಸಂದರ್ಭದ ರಾಜಕೀಯ, ಆರ್ಥಿಕ, ಸಾಮಾಜಿಕ ಜನಜೀವನದ ಮೇಲೆ ಆದ ಪ್ರಭಾವವನ್ನು ಗುರುತಿಸುವ ಪ್ರಯತ್ನವು ಈ ಲೇಖನದ್ದಾಗಿದೆ. ಹಾಗಾಗಿ ಹಂಪಿ ಪ್ರದೇಶದಲ್ಲಿ ಕಂಡುಬರುವ ಇಂಡೋ–ಇಸ್ಲಾಮಿಕ್ ವಾಸ್ತುಶೈಲಿಯ ಸ್ಮಾರಕಗಳನ್ನು ಇಲ್ಲಿ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಆ ಮೂಲಕ ಈ ಸ್ಮಾರಕಗಳು ವಿಜಯನಗರ ಚರಿತ್ರೆ ರಚನೆಯಲ್ಲಿ ಹೊಸ ಬಗೆಯ ಅಧ್ಯಯನಕ್ಕೆ ಯಾವ ಬಗೆಯಲ್ಲಿ ಗುರುತಿಸಬಹುದೆಂಬುದನ್ನು ಕಂಡುಕೊಳ್ಳುವ ಉದ್ದೇಶ ಈ ಲೇಖನದ್ದಾಗಿದೆ.

* ಚರಿತ್ರೆ ರಚನಾಶಾಸ್ತ್ರದಲ್ಲಿ ವಸಾಹತುಶಾಹಿಗಳು ಹಿಂದೂ–ಮುಸ್ಲಿಂ ನಡುವಿನ ಸಂಬಂಧಗಳನ್ನು ನಿರೂಪಿಸುವಾಗ ಅನೇಕ ಬಗೆಯ ಪೂರ್ವಗ್ರಹಗಳಿಂದ ಕೂಡಿದ ವಿರೋಧದ ಧೋರಣೆಗಳನ್ನು ತಳೆದಿದ್ದು, ಇವುಗಳಿಗೆ ವಿಜಯನಗರ ಸಂಧರ್ಭದಲ್ಲಿ ನಿರ್ಮಾಣಗೊಂಡಿರುವ ಇಂಡೊ–ಇಸ್ಲಾಮಿಕ್ ವಾಸ್ತುಶೈಲಿಯು ವಾಸ್ತವಿಕತೆಯನ್ನು ತಿಳಿಸುವ ಪ್ರಯತ್ನವನ್ನು ಮಾಡುತ್ತವೆ. ಹಾಗಾಗಿ ವಾಸ್ತವ ಚರಿತ್ರೆಯನ್ನು ಚರಿತ್ರೆಯಾಗಿ ನೋಡುವ ಪ್ರಯತ್ನದಲ್ಲಿ ವಾಸ್ತುಶೈಲಿಯು ಸಹ ಚರಿತ್ರೆಕಾರರಿಗೆ ಸಹಾಯಕವಾಗಿ ಕಂಡುಬರುತ್ತದೆ. ಪ್ರಭುತ್ವದ ಹಾಗೂ ಜನಸಾಮಾನ್ಯರ ಹಿನ್ನೆಲೆಯಲ್ಲಿ ಹಿಂದೂ–ಮುಸ್ಲಿಂ ನಡುವೆ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಕಂಡುಬರುವ ಸೌಹಾರ್ದಯುತ ಸಂಬಂಧವನ್ನು ಸ್ಮಾರಕಗಳ ಅಧ್ಯಯನಗಳಿಂದ ತಿಳಿದುಕೊಳ್ಳಬಹುದು.

ಹಾಗಾಗಿ ಒಂದೇ ಅವಧಿಯಲ್ಲಿ ಈ ಎರಡು ಪ್ರಭುತ್ವಗಳು ಆರ್ಥಿಕ ಹಿನ್ನೆಲೆಯಲ್ಲಿ ವಿಜಯನಗರ ಮತ್ತು ಬಹುಮನಿ ರಾಜ್ಯದ ಸಂಬಂಧವನ್ನು ಗುರುತಿಸುವಾಗ ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಉತ್ತಮವಾದ ಸಂಬಂಧವನ್ನು ಹೊಂದಿದ್ದರು. ಏಕೆಂದರೆ ಸಾಂಪ್ರದಾಯಿಕ ವಾಸ್ತುಶೈಲಿಯನ್ನು ಹೊಂದಿದಂತಹ ಹಿಂದೂ ಶೈಲಿಯನ್ನು ಮುಂದುವರಿಸುತ್ತಾ ಅದರ ಜೊತೆಗೆ ಇಸ್ಲಾಂ ವಾಸ್ತುಶೈಲಿಯನ್ನು ತಮ್ಮ ರಾಜ್ಯದಲ್ಲಿ ನಿರ್ಮಿಸಲು ಮುಂದಾದರು. ಇಲ್ಲಿ ವಿಜಯನಗರ ಅರಸರಿಗೆ ಒಂದು ಧರ್ಮವು ಮುಖ್ಯವಾಗಿರಲಿಲ್ಲ. ಎಲ್ಲಾ ಧರ್ಮದವರಿಗೂ ಪ್ರೋತ್ಸಾಹ ನೀಡಿದ್ದು, ಎಲ್ಲಾ ಧರ್ಮಗಳ ಸಂಸ್ಕೃತಿಯ ಪೋಷಕರಾಗಿದ್ದರು. ಆ ಕಾರಣಕ್ಕಾಗಿ ಇಲ್ಲಿ ಶೈವ, ವೈಷ್ಣವ, ಜೈನ, ಮುಸ್ಲಿಂ ಧರ್ಮಿಯರ ಸ್ಮಾರಕಗಳು ಕಂಡುಬರುತ್ತವೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಲ್ಲಿ ನಿರ್ಮಿತವಾದ ಕಟ್ಟಡಗಳು ಬಹುಮನಿಯಲ್ಲಿ ಮುಸ್ಲಿಂ ಸುಲ್ತಾನರಿಂದ

ಪ್ರಚಲಿತದಲ್ಲಿದ್ದ ಇಂಡೋ–ಇಸ್ಲಾಮಿಕ್ ವಾಸ್ತುಶೈಲಿಯ ಪ್ರಭಾವಕ್ಕೆ ಒಳಗಾಗಿ ಸಾಂಸ್ಕೃತಿಕವಾಗಿ ಉತ್ತಮ ಸಂಬಂಧವನ್ನು ಹೊಂದಿದ್ದರು ಎನ್ನಬಹುದು. ಏಕೆಂದರೆ ವಿಜಯನಗರದಲ್ಲಿ ಕಂಡುಬರುವ ಇಂಡೊ–ಇಸ್ಲಾಮಿಕ್ ವಾಸ್ತುಶೈಲಿಯ ಕಟ್ಟಡಗಳಲ್ಲಿ ಹಿಂದೂ–ಮುಸ್ಲಿಂ ಶೈಲಿಯ ಮಿಶ್ರಣದ ಸ್ಮಾರಕಗಳು ಇವರ ನಡುವಿನ ಸಾಂಸ್ಕೃತಿಕ, ರಾಜಕೀಯ ಸಂಬಂಧವನ್ನು ಪ್ರತಿಬಿಂಬಿಸುತ್ತವೆ. ಈ ಹಿನ್ನೆಲೆಯಲ್ಲಿ ಈ ಎರಡು ಪ್ರಭುತ್ವದ ರಾಜ್ಯಗಳ ನಡುವೆ ಕೆಲವು ರಾಜಕೀಯವಾದಂತಹ ವೈಷಮ್ಯವಿತ್ತೇ ವಿನಃ ಧಾರ್ಮಿಕ ವೈಷಮ್ಯತೆ ಇರಲಿಲ್ಲ ಎಂದು ಹೇಳಬಹುದಾಗಿದೆ.

* ಇಂಡೋ–ಇಸ್ಲಾಮಿಕ್ ಶೈಲಿಯು ವಿಜಯನಗರದಲ್ಲಿ ವಿಸ್ತರಿಸುತ್ತಾ ಹೋದಂತೆ ಇದು ಸ್ಥಳೀಯ ಶೈಲಿಯಾಗಿ ರೂಪುಗೊಂಡಿತು. ಇಸ್ಲಾಂ ಶೈಲಿಯ ವಿನ್ಯಾಸ, ಆಕಾರ, ತಾಂತ್ರಿಕತೆಯನ್ನು ಕಟ್ಟಡಗಳಲ್ಲಿ ಅಳವಡಿಸಿಕೊಳ್ಳುವ ಸಂದರ್ಭದಲ್ಲಿ ಸ್ಥಳಿಯ ಶೈಲಿಯಲ್ಲಿ ನಿರ್ಮಿಸಲ್ಪಟ್ಟಿತು. ವಿಜಯನಗರದಲ್ಲಿ ನಿರ್ಮಿಸಲ್ಪಟ್ಟ ಶೈಲಿಗಳಲ್ಲಿ ಕೆಲವು ಸಮಾನಾಂತರದ ಕಟ್ಟಡಗಳು ಕಂಡುಬರುತ್ತವೆ. ಉದಾ : ಕಡ್ಡಿರಾಂಪುರದಲ್ಲಿ ಕಂಡುಬರುವ ಸಮಾದಿ ಗೋರಿ ಕಟ್ಟಡ. ಈ ಕಟ್ಟಡ ಕಮಾನಿನ ಆಕಾರದ ವಿನ್ಯಾಸವನ್ನು ಹೊಂದಿದ್ದು, ಗುಮ್ಮಟರಹಿತ ಸ್ಮಾರಕ ಕಂಡುಬರುತ್ತದೆ. ಈ ಕಟ್ಟಡದ ಕೆಲವು ಲಕ್ಷಣಗಳನ್ನು ಹೋಲುವ ಗೋರಿ ಕಟ್ಟಡವು ಬೀದರ್‌ನಲ್ಲಿ ಕಂಡುಬರುತ್ತದೆ. ಕ್ರಿ.ಶ. ೧೪೩೬ರಲ್ಲಿ ಬೀದರ್‌ನಲ್ಲಿ ನಿರ್ಮಿತವಾದ ಸುಲ್ತಾನ ಅಹಮ್ಮದ್ ಷಾ ಬಹಮನಿ ಕಟ್ಟಡ. ಈ ಗೋರಿ ಕಟ್ಟಡದಲ್ಲಿ ಕಂಡುಬರುವ ಕಮಾನಿನ ಆಕಾರ, ವಿನ್ಯಾಸದಲ್ಲಿ ಸಮಾನ ಲಕ್ಷಣಗಳು ಗುರುತಿಸಬಹುದು.

* ಇಂಡೋ–ಇಸ್ಲಾಮಿಕ್ ಕಟ್ಟಡಗಳ ನಿರ್ಮಾಪಕರು ಮೂಲತಃ ಪರ್ಶಿಯಾದ ಶಿಲ್ಪಿಗಳು. ಬಹಮನಿ ಸುಲ್ತಾನರು ತಮ್ಮ ಸ್ಮಾರಕ ನಿರ್ಮಾಣಕ್ಕೆ ಪರ್ಶಿಯಾದ ಕುಶಲಕರ್ಮಿಗಳನ್ನು ರಾಜ್ಯದಲ್ಲಿ ನೇಮಿಸಿಕೊಂಡಿದ್ದರು. ಉದಾ: ೧೪ನೇ ಶತಮಾನದಲ್ಲಿ (೧೩೬೭) ನಿರ್ಮಿತ ಗುಲ್ಬರ್ಗ ಕೋಟೆಯ ಜಾಮಿ ಮಸೀದಿಯನ್ನು ಪರ್ಶಿಯಾದ ಶಿಲ್ಪಿ ರಫಿ ಎಂಬಾತನು ನಿರ್ಮಿಸಿದ್ದನು ಎಂಬ ಉಲ್ಲೇಖ ಕಂಡುಬರುತ್ತದೆ.[೩] ವಿಜಯನಗರ ಸಾಮ್ರಾಜ್ಯದಲ್ಲಿ ಮುಸ್ಲಿಂ ಕುಶಲಕರ್ಮಿಗಳ ಉಲ್ಲೇಖಗಳು ಕಂಡುಬರುವುದಿಲ್ಲ. ಹಾಗಾಗಿ ಈ ಉಲ್ಲೇಖದ ಆಧಾರದ ಮೇಲೆ ವಿಜಯನಗರದಲ್ಲಿ ಪರ್ಶಿಯಾದ ಕುಶಲಕರ್ಮಿ ಸಮುದಾಯ ವಾಸವಾಗಿತ್ತೆಂದು ಊಹಿಸಬಹುದು. ಹಾಗೆಯೇ ವಿಜಯನಗರ ರಾಜ್ಯದಲ್ಲಿ ಸೈನಿಕ ವರ್ಗ, ಅಧಿಕಾರಿವರ್ಗ ಹಾಗೂ ಕುಶಲಕರ್ಮಿಗಳಲ್ಲಿ ಮುಸ್ಲಿಂ ವರ್ಗವಿತ್ತೆಂದು ಹೇಳಬಹುದು. ಇದಕ್ಕೆ ಸಂಬಂಧಿಸಿದಂತೆ ಇಂದು ಆಳವಾದ ಅಧ್ಯಯನಗಳು ನಡೆಯಬೇಕಾಗಿದೆ.

* ಇಂಡೋ–ಇಸ್ಲಾಮಿಕ್ ಸ್ಮಾರಕ ನಿರ್ಮಾಣದಲ್ಲಿ ಪರ್ಶಿಯಾದ ವಾಸ್ತುಶಿಲ್ಪವನ್ನು ಹಿಂದೂ ವಾಸ್ತುಶಿಲ್ಪಿಗಳು ಅಳವಡಿಸಿಕೊಂಡರು. ಹಿಂದೂ ಮತ್ತು ಮುಸ್ಲಿಂ ವಾಸ್ತುಶೈಲಿಯ ಸಂಮಿಶ್ರಣವು ಸ್ಥಳಿಯ ಶೈಲಿಯಾಗಿ ಹೊಂದಿದ ಕೆಲವು ಸ್ಮಾರಕಗಳು ಹಂಪಿಯಲ್ಲಿ ಕಂಡುಬರುತ್ತವೆ. ಉದಾ: ಅಹಮ್ಮದ್ ಖಾನ್ ಕಟ್ಟಿಸಿದ ಮಸೀದಿ ಕಟ್ಟಡ. ಈ ಕಟ್ಟಡ ಕಂಬಗಳು ಹಿಂದೂ ಶೈಲಿಯಲ್ಲಿ ನಿರ್ಮಿತವಾಗಿದೆ. ಮಸೀದಿಯ ಮಧ್ಯದಲ್ಲಿ ಮಿಹಾರ್ ವಾಸ್ತುಶೈಲಿಯು ಇದೆ. ಈ ಸ್ಮಾರಕ ಕಟ್ಟಡದಿಂದ ಎರಡು ಅಂಶಗಳನ್ನು ಗುರುತಿಸಬಹುದು. ಒಂದು ಪರ್ಶಿಯಾದ ವಾಸ್ತುಶಿಲ್ಪಿಗಳು ವಿಜಯನಗರ ಸ್ಮಾರಕ ನಿರ್ಮಾಣದಲ್ಲಿ ತೊಡಗಿದ್ದರು ಹಾಗೂ ಈ ಶಿಲ್ಪಿಗಳು ಸ್ಥಳಿಯ ಕುಶಲಕರ್ಮಿ ಶಿಲ್ಪಿಗಳ ಮೇಲೆ ಪ್ರಭಾವ ಬೀರಿದ್ದರು. ಇದರಿಂದ ವಿಜಯನಗರ ಸ್ಮಾರಕ ನಿರ್ಮಾಣದಲ್ಲಿ ಸ್ಥಳೀಯತೆಯು ಬೆಳೆದುಕೊಂಡಿತು.

ವಿಜಯನಗರ ಸಾಮ್ರಾಜ್ಯ ಆರಂಭದಲ್ಲಿ ಹಿಂದೂಗಳೆಂದು ಕರೆಸಿಕೊಳ್ಳುತ್ತಿರುವ ಸಮುದಾಯದವರಿಂದ ಸ್ಥಾಪಿಸಲ್ಪಟ್ಟಿತು. ಕಾಲಕ್ರಮೇಣ ಅದು ಹಲವು ರಾಜ ಮನೆತನಗಳ ಆಡಳಿತಕ್ಕೆ ಒಳಪಟ್ಟು ಅದರ ಉಳಿವಿಗಾಗಿ ಅನೇಕ ಧರ್ಮಗಳಿಗೆ ಆಶ್ರಯ ತಾಣವೂ ಆಯಿತು. ಅವುಗಳಲ್ಲಿ ಮುಸ್ಲಿಂ ಧರ್ಮವು ಒಂದು, ಇಲ್ಲಿ ಧರ್ಮಗಳು ಪ್ರಭುತ್ವಗಳ ಅಗತ್ಯತೆಗಾಗಿ ಹಲವು ಬಾರಿ ಭಿನ್ನ ರೀತಿಯಾಗಿ ಬಳಕೆಯಾಗಿದ್ದರೂ ಅಂತಿಮವಾಗಿ ಜನಸಾಮಾನ್ಯರನ್ನು ತಲುಪುವ ವೇಳೆಗೆ ಅದು ತನ್ನ ಬಿಗಿ ಹಿಡಿತವನ್ನು ಕಳಚಿಕೊಂಡು ಸಾಂಸ್ಕೃತಿಕವಾಗಿ ಹೊಂದಾಣಿಕೆಯ ಜೀವನವನ್ನು ನಡೆಸುವ ಹಂತವನ್ನು ತಲುಪಿತ್ತು ಎನ್ನಬಹುದು.

ಅಡಿ ಟಿಪ್ಪಣಿಗಳು

೧. ಬಿ.ಷೇಕ್ ಅಲಿ (ಪ್ರ.ಸಂ), ಕೆ.ಎಸ್. ಶಿವಣ್ಣ (ಸಂ. ಸಂಪಾ), **ಕರ್ನಾಟಕ ಚರಿತ್ರೆ ಸಂಪುಟ ೩**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೭, ಪು. ೫೦೪.

೨. ಮಹಮ್ಮದ್ ಅಬ್ಬಾಸ್ ಷೂಸ್ತ್ರಿ, **ಇಸ್ಲಾಂ ಸಂಸ್ಕೃತಿ**, ಮೈಸೂರು ವಿಶ್ವವಿದ್ಯಾಲಯ, ೧೯೭೦, ಪು. ೧೩೭-೧೩೮.

೩. Yazdani G, **Bidar: Its History and Monuments**, M.B.publishers, Delhi, 1995. P.N. 21.

ಆಕರ ಗ್ರಂಥಗಳು

೧. ಕೃಷ್ಣಕೊಲ್ಹಾರ ಕುಲಕರ್ಣಿ, **'ವಿಜಾಪುರ ಆದಿಲಶಾಹಿ ಕಾಲದ (೧೪೮೯-೧೬೮೬) ಹಿಂದೂ-ಮುಸ್ಲಿಮರ ಸಂಬಂಧ ಆಕರಗಳು ಮತ್ತು ಅಧ್ಯಯನ'**, ಇತಿಹಾಸ ದರ್ಶನ ಸಂ. ೯, ೧೯೯೪, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೨. George Michell, M.S Nagaraj Rao, **Vijayanagara, Architectural Inventory of the Urban Core,Volume** 1, 1990, Directorate of Archaeology & Museums.

3. John N Fritz, George Michell, John Golling, **Hampi**, 2003, India Book House.

೪. **Nagaraja Rao M.S. Vijayanagara, Progress of Research**, Directorate of Archaeology & Museums, 1996, Hampi.

೫. Vijayanagara: **Through the Eyes of Alexander J. Greenlaw, 1856, Government of Karnataka, Directorate of Archaeology & Museums, 1988, Hampi.**

೮೫

ಕೊಡಗಿನ ಕೆಲವು ಪ್ರಾಚೀನ, ಅರ್ವಾಚೀನ ಜನಾಂಗಗಳ ಚಾರಿತ್ರಿಕ–ಸಾಂಸ್ಕೃತಿಕ ವೈಶಿಷ್ಟ್ಯಗಳು

ಡಾ. ಎಂ.ಜಿ. ನಾಗರಾಜ್*

ಪೆಗ್ಗೂರು, ಬಿಳಿಯೂರುವಿನ ೯–೧೦ನೆಯ ಶತಮಾನದ ಶಾಸನಗಳಲ್ಲಿ ಬರುವ ಮಲೆಪರು, ಮಲೆಸಾಸಿರ್ವರು, ಮಯ್ಯಾಮರಿಗರು (ಮಾತಂಗರು) (ಛಂದೋಂಬುಧಿ ನಾಗವರ್ಮನ ಕರ್ನಾಟಕ ಕಾದಂಬರಿಯ 'ಮಾತಂಗರ ಪಳ್ಳಿ' ಗಮನಿಸಿ) ಇಲ್ಲಿಯ ಅಟವಿಜನರ ಪರಂಪರೆಯವರಿರಬಹುದು. ಕ್ರಿ.ಶ. ೪೬೬ರ ಮಡಿಕೇರಿ ಒಂದನೇ ಶಾಸನದಲ್ಲಿ ಬರುವ 'ತೇನನ್ದಕರು' (ಜೇನುಕುರುಬರು), 'ಕುಟುಗೋವರು' ಕುಳಪುಟ್ಟಿಗೆ ಆಯದಾಳುಗಳು, ಇದೇ ಅಟವಿಜನವರ್ಗಕ್ಕೆ ಸೇರಿದ ಬುಡಕಟ್ಟಿನವರಿರಬೇಕು. ಈ ಬುಡಕಟ್ಟಿನ ಮೂಲನಿವಾಸಿಗಳಲ್ಲದೆ, ಇನ್ನೊಂದು ಸಮುದಾಯವು ಬುಡಕಟ್ಟಿನಿಂದಲೇ ರೂಪುಗೊಂಡ ವೆಲೀರರು, ಕುರುಬರ ಮೂಲಪುರುಷರೆನ್ನಲಾದ ಅರುವಲರ್‌ಗಳು, ಕೊಡವರು, ಗೌಡರು, ಕೆಂಬಟ್ಟಿಗಳು, ಇಲ್ಲಿ ಬದುಕಿ ಬಾಳಿದ ಬಗ್ಗೆ ಗ್ರಂಥೋಕ್ತಿಗಳಿವೆ. ಕೆಲವೆಡೆ ಇದಕ್ಕೆ ಶಾಸನದಲ್ಲಿ ಪರ್ಯಾಯ ಹೆಸರಿನ ಸೂಚನೆಗಳಿವೆ. ಇವರಲ್ಲದೆ ಯರವ, ಕುಡಿಯ, ಪಣಿಯ, ಕಾಪಳ, ಕಣಿಯ ಕೊಯವ, ಗೊಲ್ಲ, ಐರಿ, ನಾಯಿಂದ, ಮೇದ, ಕೊಡವ ನಾಯರ್, ಮಾರಂಗಿ, ಕುಕ್ಕ, ಹಸಲರು, ದೀವರು, ಜಮ್ಮಮಾಪಿಳ್ಳೆ ಇತ್ಯಾದಿ ಜನಾಂಗಿಯರು ಕೊಡಗಿನಲ್ಲಿ ಬಾಳಿಕೊಂಡು ಬಂದಿದ್ದಾರೆ; ಕಾಡು, ಕೆರೆ, ತೋಡು, ತೊರೆ, ಹೊಳೆ, ಬೆಟ್ಟ, ಪ್ರಾಣಿ, ಪಕ್ಷಿಗಳೊಡನೆ ವನಸಿರಿಯ ನೈಸರ್ಗಿಕ ಚೆಲುವಿನ ಬೀಡೂ ಆಗಿರುವ ಕೊಡಗಿನಲ್ಲಿ ಅವರೆಲ್ಲ ಬಾಳಿ ಬದುಕಿದ್ದಾರೆ.

ಇಲ್ಲಿ ಬುಡಕಟ್ಟು ಮೂಲದವರ ಅಸ್ತಿತ್ವವಿದ್ದಂತೆ, ಕೊಡಗಿನಾಚೆಯಿಂದ ಬಂದು ಕೆಲವಾರು ಜನ ಅಸ್ತಿತ್ವ ಕಂಡುಕೊಂಡಿದ್ದಾರೆ. ಬೃಹತ್ ಶಿಲಾಯುಗದವರಿದ್ದ ಬಗ್ಗೆ, ಉತ್ತರ ಕೊಡಗಿನ ದೊಡ್ಡಮಳತೆ, ಐಮಂಗಲ, ಇತ್ಯಾದಿ ಕಡೆ ಇರುವ ಬೃಹತ್ ಶಿಲಾಯುಗ ಸಮಾಧಿಗಳಿಂದ ಸಾಕ್ಷ್ಯ ದೊರಕುತ್ತದೆ. ಕುಶಾಲನಗರ–ಸೋಮವಾರಪೇಟೆ ಪರಿಸರದ, ಹೆಗ್ಗಡಹಳ್ಳಿಯಲ್ಲಿನ ಉತ್ಖನನದಲ್ಲಿ ಕಂಡುಬಂದ ವೃತ್ತ ಶಿಲಾಗೋರಿಗಳು, ನಿಲುವುಗಲ್ಲುಗಳೂ ಇದಕ್ಕೆ ಕುರುಹುಗಳಾಗಿವೆ. ಹೊಸದಾಗಿ ಕಂಡುಬಂದ ಗೋಣಿಕೊಪ್ಪ–ವೀರರಾಜೇಂದ್ರಪೇಟೆ ಹಾದಿಯ ಕೈಕೇರಿ ಸನಿಹದ ಕೊಳತ್ತೋಡು–ಬೈಗೋಡುವಿನಲ್ಲಿ ('ಕೊಳತ್ತೋಡು'ವಿಗೆ ಕೊಡತ್ತೋಡು–ಕುಡತ್ತೋಡು, ಕುಡಹೊಳೆ ಕಾವೇರಿಯ ಪಶ್ಚಿಮದ ಒಂದು ಕವಲಿನ ಕುರುಹು) ಇದ್ದ ಪಶ್ಚಿಮದ ಒಂದು ಕವಲು; ಪಶ್ಚಿಮಘಟ್ಟಗಳ ಏರು ಹೆಚ್ಚಿದಾಗ ಅದು ತೋಡಿನ ರೂಪಕ್ಕೆ ಇಳಿದಿರಬಹುದು. ಎರಡು ಬೃಹತ್ ನಿಲುವುಗಲ್ಲುಗಳು, ಕಿಂಡಿಕೋಣೆ ಗೋರಿಯ ಅವಶೇಷ, ಹಾಗೂ ಕೈಕೊಡಲಿಯಂಥ ನವಶಿಲಾಯುಗದ ಆಯುಧವೂ ಇದ್ದು, ಜಾನಪದ ಆಚರಣೆಗಳಿಂದ ಸಂರಕ್ಷಣೆಯಲ್ಲಿವೆ. ನವಶಿಲಾಯುಗದ, ಬೃಹತ್ ಶಿಲಾಯುಗದಲ್ಲಿ ಬುಡಕಟ್ಟುಗಳ ವಾಸ್ತವ್ಯವಿದ್ದ ಬಗ್ಗೆ ಇವು ಸ್ಮರಣಸಾಕ್ಷಿಯಾಗಿ ಹೇಳುವಂತಿದೆ. ಈ ಪರಿಸರದಲ್ಲಿ ಹಿಂದೆ ಬೃಹತ್ ಶಿಲಾಯುಗ ಸಮಾಧಿಗಳಿದ್ದು, ಭೂಮಿ ವ್ಯವಸಾಯಕ್ಕೊಳಪಟ್ಟಾಗ, ಅವುಗಳ ಅವಶೇಷಗಳೂ ಕಾಣೆಯಾದವು ಎನ್ನುತ್ತಾರೆ. ಅದೇನೇ ಇರಲಿ, ಕೊಳತ್ತೋಡು (ಕುಡತ್ತೋಡು!) ಬೈಗೋಡು ಎಂಬ ಎರಡು ತೋಡುಗಳಿದ್ದ ಪ್ರದೇಶವಾಗಿ, ಅಲ್ಲಿದ್ದ ಬೃಹತ್ ನಿಲುವುಗಲ್ಲುಗಳನ್ನು ಅಯ್ಯಪ್ಪ, ಸುಬ್ರಹ್ಮಣ್ಯ ಎಂದು ಇಂದಿಗೂ ಜನತೆ ಆರಾಧಿಸುತ್ತಿದ್ದಾರೆ. ಜೊತೆಗೆ 'ಸುಬ್ರಹ್ಮಣ್ಯ' ನಿಲುವುಗಲ್ಲುವಿನ ಬುಡದಲ್ಲಿ ನವಶಿಲಾಯುಗದ 'ಕೈಕೊಡಲಿ'ಯನ್ನು ಪೂಜೆಗಿಟ್ಟಿದ್ದಾರೆ. ಈ ಬೃಹತ್ ನಿಲುವುಗಲ್ಲುಗಳ ಸುತ್ತ ಇರುವ ದೇವರಕಾಡು ಕೊಡಗಿನ ಅತ್ಯಂತ ಪ್ರಾಚೀನ ದೇವರಕಾಡು ಎನ್ನಬೇಕು; ಹಾಗೂ ನಿಲುವುಗಲ್ಲು ದೇವರಕಾಡು ಎಂದೂ ಹೆಸರಿಸಬೇಕು ನವಶಿಲಾಯುಗದಿಂದ ಇಂದಿನವರೆಗೂ ಈ ನಿಲುವುಗಲ್ಲುಗಳಿಗೆ ಪೂಜೆ ಸಲ್ಲುತ್ತಿದೆ.

ಕೇರಳದ ಗ್ರಂಥಗಳು ಕ್ರಿ.ಪೂ. ೧೦೭೫ ಸುಮಾರಿನಲ್ಲಿ, ಅಗಸ್ತ್ಯನು ೧೮ ವೆಲೀರರ ಕುಟುಂಬಗಳನ್ನು, ಕುರುಬರ ಮೂಲಪುರುಷರೆನಿಸಿದ ಅರುವಲರ್ ಬುಡಕಟ್ಟಿನವರನ್ನು ದಕ್ಷಿಣ ಭಾರತದ ಒಳಪಶ್ಚಿಮಕ್ಕೆ, ಪಶ್ಚಿಮಘಟ್ಟಗಳಿಗೆ, ಕರೆತಂದು

* 'ಅನರ್ಘ್ಯ' ಶ್ರೀ ಜಟನಿ ಕೃಪ, # ೨೨೧, ೩೮ನೇ ಅಡ್ಡರಸ್ತೆ, ೫ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–೫೬೦೦೧೦.

ಕಾಡು ಕಡಿಸಿ ರಾಜ್ಯ ಕಟ್ಟಿ ನೆಲೆ ನಿಲ್ಲಿಸಿದ[೨] ಎಂದಿದ್ದು ಬುಡಕಟ್ಟುಗಳ ರಾಜ್ಯ ರೂಪುಗೊಂಡಿತ್ತು ಎನ್ನಬೇಕಾಗುತ್ತದೆ. ಅಗಸ್ತ್ಯ ಇವರನ್ನು ಪಶ್ಚಿಮಘಟ್ಟಗಳ ಕಡೆಗೆ ಕರೆತಂದದ್ದು, ದಕ್ಷಿಣದಿಂದ ವಲಸೆ ಹೋಗಿದ್ದ ಪೂರ್ವಜರ ಕಾರಣವಿರಬಹುದು. ದೇಜಗೌ ಅವರು 'ದಕ್ಷಿಣ ಭಾರತದ ಜನ, ಪ್ರಾಗೈತಿಹಾಸಿಕ ಕಾಲದಲ್ಲಿ ಉತ್ತರ ಭಾರತ ಹಾಗೂ ಅದರಾಚೆ ವಲಸೆ ಹೋಗಿರಬಾರದೇಕೆ?' ಎಂದು ಪ್ರಶ್ನೆ, ಅನುಮಾನವನ್ನು ವ್ಯಕ್ತಪಡಿಸುತ್ತಾರೆ.

ಈಗ ಇದಕ್ಕೆಲ್ಲ ಇರುವ ಹಿನ್ನೆಲೆಯನ್ನು ಪರಿಶೀಲಿಸಬೇಕು. ಶಾಸನೋಕ್ತ 'ಕೊಡಗೂರ್ವಿಷಯ, ಕುಡುಗುನಾಡು'ವಿನಲ್ಲಿ ತೆರಕಣಾಂಬಿ, ಬಯಲ್ನಾಡು (ಕೇರಳದ ವೈನಾಡು) ಪ್ರದೇಶವಿದ್ದ ೭-೮ನೆಯ ಶಾಸನಗಳಲ್ಲಿ ಕಂಡುಬರುತ್ತದೆ. ದಲಿತಕೆಂಬಟ್ಟಿಗಳು ಈ ಪ್ರದೇಶದಲ್ಲಿ ಪ್ರಚಲಿತದಲ್ಲಿದ್ದ ಭಾಷೆಗಳಲ್ಲಿ 'ಕನ್ನಡ'ವನ್ನು ಮೈಗೂಡಿಸಿಕೊಂಡಿದ್ದಾರೆ ಹಾಗೂ ಕೊಡವ ಭಾಷೆಯನ್ನು ಮನೆಭಾಷೆಯನ್ನಾಗಿ ಮಾಡಿಕೊಂಡಿದ್ದಾರೆ. ಆ ಕಾರಣದಿಂದ ಆ ಭಾಷೆಯ ಅಸ್ತಿತ್ವದ ಮೂಲವನ್ನು ತಿಳಿಯಬೇಕು. ಭಾಷೆಗೆ ತಮ್ಮ ಜನಾಂಗೀಯ ಹೆಸರನ್ನು ಕೊಟ್ಟ ಕೊಡವರ ಪ್ರಾಚೀನತೆಯನ್ನೂ ತಿಳಿಯಬೇಕು. ಈ ಉಭಯ ಜನಾಂಗದ ವಾಸ್ತವ್ಯದ ನೆಲೆಗೆ ಹೆಸರು ಕೊಟ್ಟ 'ಕಾವೇರಿ'ಯ ಮೂಲವನ್ನೂ ಪರಿಶೀಲಿಸಬೇಕು. ಕೊಡಗಿನ ಇತರ ಮೂಲನಿವಾಸಿಗಳಾದ ಗಾವುಣ್ಡ-ಕವುಡಿ-ಗೌಡ ಜನಾಂಗದ ಪ್ರಾಚೀನತೆಯನ್ನು, ಕೊಡಗು ಪೋಷಿಸಿರುವ ಬಗೆಯನ್ನೂ ಗಮನಿಸಬೇಕು.

ಕ್ರಿ.ಪೂ. ೩ನೆಯ ಶತಮಾನದಿಂದ ಕ್ರಿ.ಶ. ೩ನೆಯ ಶತಮಾನದ ಅವಧಿಯಲ್ಲಿ ತಮಿಳಿನ **ಸಂಗಂ ಸಾಹಿತ್ಯ,** ಎಂಬ ತುಯ್ದಾಟವಿದ್ದರೂ ಅದರ ಪ್ರಾಚೀನತೆಗೇನೂ ಭಂಗ ಬರುವುದಿಲ್ಲ. ಆ ಸಾಹಿತ್ಯದಂಗಳದಲ್ಲಿ ಮೂಡಿದ ಇಳಂಗೋವಡಿಗಳ್ ಕವಿಯ "ಶಿಲಪ್ಪದಿಕಾರಂ"ನಲ್ಲಿ **'ಕೊಜ್ಗಣರ್ ಕಲಿಜ್ಗರ್ ಕೊಡುಜ್‌ಗರು ನಾಡರ್'** ಎಂದಿರುವಲ್ಲಿ ಕೊಡಗು ಹಾಗೂ ಕರುನಾಡಿನ ಪ್ರಾಚೀನ ಅಸ್ತಿತ್ವವನ್ನು ಸೂಚಿಸಲಾಗಿದೆ. ಸಂಗಂ ಸಾಹಿತ್ಯದ ಕಾವ್ಯಪ್ರಭೇದವಾಗಿ ಪ್ರಣಯಗೀತೆಗಳ ಸಂಕಲನವಾದ ಅಹನಾನೂಱು ಮತ್ತು ವೀರಗೀತೆಗಳ ಸಂಕಲನವಾದ ಪುಱನಾನೂಱುವಿನ ಪದ್ಯಗಳಲ್ಲಿ, **'ಕುಡನಾಡಧಿಪತಿ ಎರುಮೈಊರನ್'** ಎಂದಿದೆ.

೭.೫ ಮಿಲಿಯನ್ ವರ್ಷಗಳ ಹಿಂದೆ, ಪಶ್ಚಿಮಘಟ್ಟಗಳ ಏರುವಿಕೆಗೆ ಮುನ್ನ ಕಾವೇರಿಗೆ ಪಶ್ಚಿಮದಲ್ಲಿಯೂ ಎರಡು ಮುಖ್ಯ ಕವಲುಗಳಿದ್ದವು. ಪಶ್ಚಿಮಘಟ್ಟಗಳ ಏರುವಿಕೆಯ ನಂತರ ಬರಪೊಳೆಗೆ ನದಿಪಥದಾಕ್ರಮಣಕ್ಕೆ (River capture) ಅವಕಾಶವಾಗಿ ಆ ಪಶ್ಚಿಮದ ಕವಲುಗಳು ಅದರಲ್ಲಿ ಲೀನವಾದುವು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ **'ಕುಡ'** ಎಂದರೆ ಪಶ್ಚಿಮದ ಒಳನಾಡು. ಅದುವೆ ಕುಡನಾಡು. ಕೊಡಗಿನಲ್ಲಿ ಕಾವೇರಿಗೆ ಪಶ್ಚಿಮದಲ್ಲಿಯೂ ಎರಡು ಮುಖ್ಯ ಕವಲುಗಳು. **'ಕಾವೇರಿ'**ಗೆ ಮೊದಲಿಗೆ **'ಕುಡಹೊಳೆ'** ಎಂದು ಕರೆಯುತ್ತಿದ್ದಿರಬೇಕು. ಕಾವೇರಿ ಉಗಮದ ನಾಡು, ಒಳಪಶ್ಚಿಮದ ನಾಡು ಎಂದು ಗಮನಿಸುವಲ್ಲಿ ಕಾವೇರಿಯ ಮೊದಲಿನ ಹೆಸರು **'ಕುಡು'** ಶಬ್ದ ಮೂಲವಾಗಿ **'ಕೊಡಗು'** ಎಂಬ ಶಬ್ದಕ್ಕೆ ಆಧಾರವಾಯಿತೆನ್ನಬಹುದು. ಈ ಪ್ರಾಚೀನತೆಯ ಕಾರಣ 'ಕುಡನಾಡಧಿಪತಿ'ಯ ಪ್ರಸ್ತಾಪ ಸಂಗಂಸಾಹಿತ್ಯದಲ್ಲಿ ಬಂದಿರಬೇಕು. ಹೀಗಾಗಿ **'ಕುಡ'** ಶಬ್ದವು ಕಾವೇರಿಗೂ ಸೇರಿದಂತೆ ಕೊಡಗಿಗೆ ಪರಿಸರವಾಚಿಯಾಗಿ ದೇಶವಾಚಿಯಾಗಿ ಅಡಕಗೊಂಡ ವಿಷಯವಾಗಿದೆ.

ಅಗಸ್ತ್ಯ **ವೇಳೀರ**ರನ್ನು **ಅರುವಲರ್** ಬುಡಕಟ್ಟಿನವರನ್ನು ಪಶ್ಚಿಮಘಟ್ಟಗಳ ಕಡೆ ಕರೆದುಕೊಂಡು ಬಂದು ನೆಲೆಸಿದ್ದು ಈ ಹಿಂದೆಯೇ ಹೇಳಿದೆ. ದಕ್ಷಿಣದಿಂದ ವಲಸೆಹೋದ ಪೂರ್ವಜರ ವಂಶದವರು ಇರಬಹುದು. ವೇಲೀರರಲ್ಲಿ 'ಐವರು ಪೆರುವೇಳೀರರು' ರೂಪುಗೊಂಡವರಾಗಿದ್ದರು. ಪೆರುವೇಳೀರರಲ್ಲಿ ಮೈಸೂರು ಪ್ರದೇಶದ ಎರುಮೈ ನಾಯಕರಿದ್ದರು. ಸಂಗಂ ಕಾಲದ ರಾಜಮನೆತನಗಳಲ್ಲಿ **ಎರುಮೈಊರವರ್, ಕುಡುನಾಡವರ್** .... ಕೊಂಕಣರ್ ಮುಂತಾದವರಿದ್ದರು. ಷ.ಶೆಟ್ಟರ್ ಅವರು: ಶಂಗಂ ಕವಿ ಮಾಮೂಲಣಾರ್ 'ಕುಡುನಾಡ ಎರುಮೈ'ಗಳೆಂದು ಹೇಳುವಲ್ಲಿ, ಅವರು ಮಹಿಷಮಂಡಲದ ಹಾಗೂ ಕೊಡಗಿನ ಒಡೆಯರೂ ಆಗಿದ್ದರು ಎಂದಿದ್ದಾರೆ (**ಶಂಗಂ ತಮಿಳಗಂ,** ಪು. ೧೫೨). ಅಂದರೆ ಎರುಮೈ ನಾಯಕರ ಆಡಳಿತ ಕ್ಷೇತ್ರ ಒಂದೆಡೆ ಕೊಡಗಿಗೆ ಇನ್ನೊಂದೆಡೆ ದಿಂಡಿಗಲ್ ವಾಯುವ್ಯ ಭಾಗಕ್ಕೆ ಇದ್ದು ತಮಿಳುನಾಡಿನ ತಂಜಾವೂರಿನವರೆಗೂ ತಲುಪಿದ್ದುದು ಸ್ಪಷ್ಟ. ಇವರನ್ನು ಮೈಸೂರು ಪ್ರದೇಶದ 'ಆದಿಕನ್ನಡಿಗರು' ಎನ್ನುವುದುಂಟು. ಶಂಗಂ ಕಾಲದ ಕೊನೆಘಟ್ಟದಲ್ಲಿ(!) ದಕ್ಷಿಣ ಕರ್ನಾಟಕದ ನಾಯಕನಾಗಿ 'ವೇಳಿರ್ ನಣ್ಣನ್' ಕೊಡಗು-ಕೊಂಕಣದ ಒಡೆತನ ಸಾಧಿಸಿದ; ಚೇರ, ಚೋಳ, ಪಾಂಡ್ಯರ ವಿರುದ್ಧ ಹೋರಾಡಿದ. ಅತೃಪ್ತ ತಮಿಳಗಂ ವೇಳಿರ್‌ಗಳಲ್ಲಿ ಕೆಲವರನ್ನು ತನ್ನೆಡೆಗೆ ಎಳೆದುಕೊಂಡು ಎಲ್ಲರಿಗೂ ಮುಂದಾಳುವಾದ. ಕದಂಬರಿಗೆ ಮುನ್ನವೇ 'ನಣ್ಣನ್' ಕೊಡಗನ್ನು ಆಳಿದ. ಅಗಸ್ತ್ಯ ಹಿಂದೆ ಕರೆತಂದ ೧೮ ವೇಳೀರರ ವಂಶದ ಪೆರುವೇಳೀರರ ಎರುಮೈನಾಯಕರಲ್ಲಿ ಸುಮಾರು ೩೦ನೆ ತಲೆಮಾರಿನವನಾಗಿ ಕೊಡಗನ್ನು **ನಣ್ಣಣ್ ವೇಳೀರ್** ಆಳಿದ ವಿಷಯ ಗಮನಕ್ಕೆ ಬರುತ್ತದೆ. ಈ ನಣ್ಣಣ್, 'ಅಗಪ್ಪ' ಎಂಬ ಅಭೇದ್ಯ ಗಿರಿಕೋಟೆ

ಕಟ್ಟಿ 'ಅಗಸ್ತ್ಯ'ನ ಸ್ಮರಣೆ ಮಾಡಿರುವಂತಿದೆ. 'ಅಗಪ್ಪ' ಎಂಬ ಹೆಸರಿನ ಹಳ್ಳಿ, ಕುರುಂಬರನಾಡು ತಾಲೂಕಿನಲ್ಲಿರುವುದೂ ಗಮನಾರ್ಹ (ಷ. ಶೆಟ್ಟರ್, ಪು. ೧೭೧).[೩] ಈ ಅಂಶಗಳ ಜೊತೆಗೆ ಕರ್ನಾಟಕದಿಂದ ಹರಪ್ಪ, ಮೊಹೆಂಜದಾರೋ ಪ್ರದೇಶಕ್ಕೆ ಚಿನ್ನವೂ ಸರಬರಾಜಾಗುತ್ತಿತ್ತು ಎಂದಿರುವ ವಿಷಯವನ್ನು ತಾರ್ಕಿಕಗೊಳಿಸಿದರೆ, 'ಹರ+ಅಪ್ಪ=ಹರಪ್ಪ' ಶಬ್ದದಲ್ಲಿಯ ಕನ್ನಡತನವನ್ನು ಗುರುತಿಸಬಹುದೆನಿಸುತ್ತದೆ.

ಎರುಮೈನಾಡು (ಎರುಮಿನಾಡು) ಇಂದಿನ ಕೊಡಗು, ದಕ್ಷಿಣ ಕನ್ನಡ (ಕೊಂಕಣ), ಮೈಸೂರು, ಉತ್ತರ ಕೇರಳದ ಕೆಲ ಪ್ರದೇಶವನ್ನು ಹೊಂದಿದ್ದ ನಾಡು ಆಗಿತ್ತು. ಕ್ರಿ.ಶ. ೫ನೇ ಶತಮಾನದ ಕದಂಬರ ಶಾಸನಗಳಲ್ಲಿ 'ಎರುಮೈ' ಪದ ಸಂಸ್ಕೃತೀಕರಣಗೊಂಡು 'ಮಹಿಷವಿಷಯ' ಎನಿಸಿತು. ಇದೇ ಹೆಸರಿನಲ್ಲಿ ಗಂಗರ ೮-೯ನೇ ಶತಮಾನದ ಶಾಸನಗಳಲ್ಲಿ ಈ ರಾಜ್ಯಘಟಕ ಪ್ರಚಲಿತದಲ್ಲಿತ್ತು ಎನ್ನಬಹುದು (ಷ. ಶೆಟ್ಟರ್, ಶಂಗಂ ತಮಿಳಗಂ ಮತ್ತು ಕನ್ನಡನಾಡು-ನುಡಿ, ಪು. ೧೫೩). ಇದರಿಂದ ಗಂಗರಲ್ಲಿ ಬಹುಶಃ ಕೃಷಿಕ ಮೂಲದ ಸಂಕೇತವಾಗಿ ಬರುವ **ಎಱೆಯಪ್ಪ, ಎಱೆಯಮ್ಮ, ಎಱೆಯಂಗ**, (ಕೊಡಗಿನ ಗುಡಗೂರಿನ ಹೊಸ ಶಾಸನದಲ್ಲಿ ಕಂಡುಬರುವ) **ಎರಮ್ಮ** ಇತ್ಯಾದಿ ಶಾಸನೋಕ್ತ ಅರಸರ ಹೆಸರುಗಳಿಗೆ **ಮೂಲವಾಗಿ** ಎರುಮೈ ನಾಯಕ ವಂಶವೇ ಕಾರಣ ಎಂಬ ಸೂಚನೆ ಒದಗುತ್ತದೆ. ಇದು ಕುಡುಗುನಾಡು ಕೊಡಗಿನಲ್ಲಿದ್ದ 'ಗೌಡ' ಜನಾಂಗದ ಪ್ರಾಚೀನತೆಯತ್ತ ಬೆರಳು ತೋರುವಂತಿದೆ. ಕ್ರಿ.ಶ.೮೮೮ರ ಕೋತೂರು ಶಾಸನದಲ್ಲಿ 'ಜಡಲ **ಎಱೆಯಂಗ ಗಾವುಣ್ಡ'** ಎಂಬ ಶಬ್ದಗಳು ಇದಕ್ಕೆಲ್ಲ ಪೋಷಕವೆ[೪].

ಈ ಸಂದರ್ಭದಲ್ಲಿ ಕೊಡಗಿನ ಮಡಿಕೇರಿಯ ತಾಮ್ರಪಟದಲ್ಲಿ ಬರುವ **ತಗಡೂರ ಕುಟುಗೋವರು, ಆಲ್ಗೋಡ ತೇನನ್ದಕರು** (ಎ.ಕ.ಸಂ.೧, ಕೊಡಗು ಜಿಲ್ಲೆ ೧) **ದೇಸಸಾಕ್ಷಿಗಳಾಗಿದ್ದಂತೆ.** ತಗಡೂರ ಕೃಷಿಕರಿಗೆ ಸಂಬಂಧಿಸಿದಂತೆ, 'ಕುಟುಗೋವರು' ಎಂದಿದೆ. ಕ-ಕ ನಿಘಂಟುವಿನಲ್ಲಿ **"ಕುಟು"** ಎಂದರೆ ನೇಗಿಲ ಬಾಯಿಯ ಕಬ್ಬಿಣದ ಪಟ್ಟಿ. ಇದು ಕೃಷಿಕ (ಗವುಡ) ಗವುಡಿ ಸಂಬಂಧಿಯದಾಗಿರಬಹುದು. 'ತೇನು' ಎಂದರೆ ಜೇನು. ನಂದಕರು ಅದರ ಪಾಲಕರು, ಜೇನುಕುರುಬರು ಆಗಿರಬಹುದು. ಇದಲ್ಲದೆ ಎರುಮೈಪ್ರದೇಶ ಕೊಡಗಿನಲ್ಲಿ, 'ಕೊಟ್ಟಗರ' ಬದಣಗುಪ್ಪೆ ಎಂಬ ಪ್ರಯೋಗವಿದೆ. ಇವೆಲ್ಲ ಗೌಡ, ಕೊಡವ ಹಾಗು ಬುಡಕಟ್ಟು ವರ್ಗಗಳ ಅಸ್ತಿತ್ವದ ಸೂಚನೆ ನೀಡುತ್ತಿರಬಹುದೆನಿಸುತ್ತದೆ. ಇದು ದೇಶವಾಚಿ, ಭಾಷಾವಾಚಿ, ಜನಾಂಗವಾಚಿ ಸೂಚನೆಗೆ ಪೂರಕವಾಗಿದೆ ಎಂಬುದನ್ನು ಮುಂದಿನ ಸಾಲುಗಳ ವಿವರಣೆಯಲ್ಲಿ ಗಮನಿಸಬಹುದು. ಮಂಗರಸನ ನಿಘಂಟಿನ ಜಾತಿವರ್ಗದ ೪ನೇ ಪದ್ಯದಲ್ಲಿ **'ಮ್ಲೇಚ್ಛರೆನೆ ಕೊಡವ ಕೊಡಗರು** ಮೃಗಲುಬ್ಧಕಂ ವ್ಯಾಧನಕ್ಕು' ಎಂದಿರುವಲ್ಲಿ [ಅಭಿನವಾಭಿಧಾನಂ ಅಭಿನವ ಮಂಗರಾಜ ವಿರಚಿತಂ, ೧೯೫೨ (ಸಂ.) ಎಂ. ಮರಿಯಪ್ಪಭಟ್ಟ, ಮದರಾಸು, ಪು. IX ಮತ್ತು ಪು. ೧೦೨] ೧) 'ಕೊಡವರ', ೨) 'ಕೊಡಗರ' ಕೊಡಗಿನ ಉಭಯವರ್ಗ ಅಂದರೆ ಒಂದು ಜನಾಂಗ, ಇನ್ನೊಂದು ಸಮಗ್ರ ನಾಡವರ ಅಸ್ತಿತ್ವವನ್ನು ಹೇಳಿದಂತಾಗಿದೆ. ಪ್ರಾಚೀನ ಮೂಲನಿವಾಸಿ ಕೊಡಗಿನವರೆಲ್ಲ 'ಕೊಡಗರು'. ಅವರಲ್ಲಿ ಕೊಡವರೂ ಒಬ್ಬರು.

ಇಲ್ಲಿ ಬರುವ 'ಮ್ಲೇಚ್ಛರೆನೆ' ಶಬ್ದಕ್ಕೆ ಸೂಕ್ತ ಅರ್ಥವನ್ನು ಅಮರಸಿಂಹನ ಅಮರಕೋಶದಿಂದ ಹೆಕ್ಕಿ ತೆಗೆಯಬೇಕು[೪]: ಅಮರಕೋಶದ ದ್ವಿತೀಯಕಾಂಡ(ಜಾತಿವರ್ಗ)ದ (ಶ್ಲೋಕ ೭೫, ಪು.೧೫೦) ಮ್ಲೇಚ್ಛಜಾತಿಭೇದಗಳನ್ನು ಹೇಳುವಲ್ಲಿ;

ನಣ್ಣನ್ ನಂತರ ಕೊಡವರು, ಗಂಗರ ಮೂಲದಿಂದ ಗೌಡರು, ದಲಿತವರ್ಗದಿಂದ ಕೆಂಬಟ್ಟಿಗಳು, ಪ್ರಮುಖ ಮೂಲನಿವಾಸಿಗಳಾಗಿ ಕಾಣಬರುತ್ತಾರೆ. ಕೊಡಗಿನ ದೃಷ್ಟಿಯಿಂದ ಹೇಳಿದರೆ, ಸಂಗಂ ಸಾಹಿತ್ಯ ಹಾಗೂ ಅಮರಸಿಂಹನ ಅಮರಕೋಶವು, ಇವರನ್ನೆಲ್ಲ ಮೂಲನಿವಾಸಿ ಬುಡಕಟ್ಟು ಸಂತತಿಯವರು ಎಂಬ ಸೂಚನೆ ನೀಡುತ್ತವೆ. ಎಡಕಲ್ಲುಗುಡ್ಡದ ಮುನಿಕಲ್ ಗುಹಾಶಾಸನಗಳು (ಕ್ರಿ.ಶ. ೩-೪ನೆಯ ಶತಮಾನ) ಕದಂಬ ದೊರೆ ವಿಷ್ಣುವರ್ಮನೊಡನೆ ಬ್ರಾಹ್ಮಣರ ಅಸ್ತಿತ್ವವನ್ನು ಹೇಳುವಂತಿದೆ. ಆ ನಂತರ ಸೋಮವಾರಪೇಟೆ ತಾಲೂಕಿನ ಕ್ರಿ.ಶ. ೧೯೦೫ರ ಯಡೂರಿನ ದುದ್ದರಸನ ಶಾಸನವು 'ಬ್ರಾಹ್ಮಣಗಳ ಚತ್ರಮಂ ನಿಲಿಸಿ' ಎಂದಿರುವಲ್ಲಿ, ಬ್ರಾಹ್ಮಣರ ಅಸ್ತಿತ್ವವನ್ನು ಹೇಳುತ್ತದೆ. ದುದ್ದರಸನ ಕಾಲದಲ್ಲಿ ಉತ್ತರ ಕೊಡಗಿನ ಪ್ರದೇಶದಲ್ಲಿ ಬ್ರಾಹ್ಮಣರಿಗೆ ಛತ್ರವನ್ನು ಸ್ಥಾಪಿಸಿದುದರ ಸಂಗತಿ ಶಾಸನದಲ್ಲಿದೆ.[೫]

ಕೊಡವರು : ಸಾಹಿತ್ಯ, ಜಾನಪದ, ಪರಂಪರೆಯ ಹಿನ್ನೆಲೆಯಲ್ಲಿ ಕೊಡವರು ಕೊಡಗಿನ ಮೂಲನಿವಾಸಿಗಳ ಪೈಕಿ, ವರ್ಚಸ್ವಿಗಳಾಗಿ ಕಾಣಬರುತ್ತಾರೆ. ಆಂಗ್ಲರ ಬರಹಗಳಲ್ಲಿ ಅವರನ್ನು ಸ್ಕಾಟ್ಲೆಂಡಿನ ಕುಲವೊಂದಕ್ಕೆ ಹೋಲಿಸುವ ಪ್ರಯತ್ನ ಮಾಡಿರುವುದುಂಟು. ಜೊತೆಗೆ ಕೊಡಗು ದೇಶದ ಮೂಲನಿವಾಸಿಗಳಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುವಲ್ಲಿ ರಿಕ್ಟರ್ ಸ್ಕಾಟ್ಲೆಂಡಿನ ಕುಲವೊಂದನ್ನು ಹೋಲುತ್ತಾರೆ ಎಂದಿದ್ದಾನೆ; ಹಿಲ್ಟನ್ ಬ್ರಾನ್ Certainly not the aborigines of the place

(coorg) ಎಂದಿದ್ದಾನೆ[೬]. ಆದರೆ ಸ್ಕಾಂಟ್ಲೆಂಡಿನವರದಾಗಲಿ, ಗ್ರೀಕ್ ಮೂಲದ್ದಾಗಲಿ ಯಾವ ಆಚಾರ ವಿಚಾರ, ಭಾಷಾ ತುಣುಕು, ಶಬ್ದೋಪಚಾರ ಕೊಡವರಲ್ಲಿ ಕಾಣಬರುವುದಿಲ್ಲ. ಹೀಗೆಯೇ ಕೊಡವರು ಮತಾಂತರಗೊಳ್ಳದ ಅರಬ್ ದೇಶದ ಕುರ್ದಿಗಳು ಎಂಬ ಅರಬ್ ಮೂಲದ ವಾದವೂ ಅವರ ಬಗೆಗೆ ಮಾನ್ಯವಾಗಲಿಲ್ಲ[೬].

ಕಾವೇರಿ ಪುರಾಣದ ರೀತ್ಯಾ ಮತ್ಸ್ಯದೇಶದ ಬನವಾಸಿ ಕದಂಬವಂಶದ ಚಂದ್ರವರ್ಮ ಕೊಡಗಿಗೆ ಪ್ರಾಚೀನ ಕಾಲದಲ್ಲಿ ಬಂದು ಆಳತೊಡಗಿದ. ಅವನ ಮಗ ದೇವಕಾಂತ ಕೊಡವರ ಮೂಲಪುರುಷ ಎಂಬ ಮಾತಿದೆ. ಚರಿತ್ರೆಕಾರ ಮಾರ್ಕ್ ವಿಲ್ಕ್ಸ್‌ನ ಪ್ರಕಾರ ಕದಂಬ ದೊರೆಗಳು ಬಂದ ಕಾಲದಲ್ಲಿ ಅವರೊಡನೆ ಕೊಡವರು ಬಂದು ನೆಲೆಸಿದರು[೬].

ಇಡೀ ಕೊಡಗಿನಲ್ಲಿ 'ಕಡಂಗ'ಗಳೂ ಬಹಳ ಪ್ರಚಲಿತ ಗಡಿನೆಲೆಗಳಾಗಿವೆ, ಇದಲ್ಲದೆ ಕೊಡಗಿಗೆ ೩–೪ನೆಯ ಶತಮಾನದಲ್ಲಿಯೇ ಸೇರಿದ್ದ (ಇಂದು ಕೇರಳಕ್ಕೆ ಸೇರಿರುವ) ವೈನಾಡಿನ ಎಡಕಲ್ಲುಗುಡ್ಡದ (ಮುನಿಕಲ್ಲು) ಶಾಸನಗಳು ಕದಂಬ ದೊರೆಗಳ ಆಳ್ವಿಕೆಯನ್ನು ಸೂಚಿಸುತ್ತವೆ. ಈ ಹಿನ್ನೆಲೆಗಳಲ್ಲಿ ಕೊಡವರ ಕೊಡಗಿನ ಅಸ್ತಿತ್ವವು ಗೌರವಯುತವಾಗಿ ಮುಂದುವರೆದದ್ದನ್ನು ಪರೋಕ್ಷವಾಗಿ ಶಾಸನಗಳು ಸೂಚಿಸುತ್ತವೆ. ೯–೧೦ನೆಯ ಶತಮಾನದ ಪೆಗ್ಗೂರು ಮತ್ತು ಬಿಳಿಯೂರು ಶಾಸನಗಳಲ್ಲಿ 'ಮಲೆಪರು, ಮಲೆಸಾಸಿರ್ವರ' ಕೊಡವ ಯೋಧರು ನಾಡರಕ್ಷಣೆಗಾಗಿ ಇದ್ದಿರುವ ಸೂಚನೆ ನೀಡುತ್ತದೆ. ಹಾಲೇರಿ ಅರಸರ ಕಾಲದಲ್ಲಿ ದಿವಾನರಾಗಿ, ಸೇವೆ ಸಲ್ಲಿಸಿದವರೂ ಅವರಲ್ಲಿದ್ದಾರೆ.

ಇನ್ನು ಕೊಡವ ಭಾಷೆಯ ಶೇ. ೪೦ರಷ್ಟು ಕನ್ನಡ, ಶೇ. ೪೦ರಷ್ಟು, ಮಲೆಯಾಳ ದ್ರಾವಿಡಭಾಷಾ ಶಬ್ದಗಳನ್ನು ಹೊಂದಿದೆ; ಪಂಚದ್ರಾವಿಡ ಭಾಷೆಗಳೂ ಸೇರಿ ವ್ಯವಹಾರ ಕೊಡವ ಭಾಷೆ ಬೆಳೆದಿದೆ[೭] ಎಂದಿದ್ದಾರೆ ಐ.ಮಾ. ಮುತ್ತಣ್ಣ. ಸಾಂಸ್ಕೃತಿಕ ಆರಾಧನೆಗಳಲ್ಲಿ ತುಳುನಾಡಿನ ಹಾಗೂ ಕೇರಳದ ದೈವಗಳ ಪ್ರಭಾವ ಕೊಡವರ ಬದುಕಿನಲ್ಲಿದೆ. ಕೇರಳದ ತಾಂತ್ರಿಕ ಪೂಜಾವಿಧಾನ, ತುಳುನಾಡಿನ ನೃತ್ಯಶೈಲಿ, ಕೊಡಗಿನ ದೈವಗಳಿಗೆ ನಡೆಯುವ ಆಚರಣೆಗಳಲ್ಲಿವೆ. ಇದಕ್ಕೆ ಪ್ರಾದೇಶಿಕ ಸೊಗಡೂ ಸೇರಿದೆ. ಅವರಲ್ಲಿ ಸುಮಾರು ೯೦೦ಕ್ಕೂ ಮೀರಿದ ಮನೆಪದಗಳಿದ್ದು ಸಾಂಸ್ಕೃತಿಕ ಅಧ್ಯಯನಕ್ಕೆ ತೆರೆದ ಬಾಗಿಲು ಎನ್ನಿಸಿದೆ.

ಕೊಡವರಿಗೆ ಪ್ರಮುಖವಾಗಿ 'ಕಾವೇರಿ' ಕುಲದೇವತೆ, ಮಾಣಿಕ್ಯ ಮಲೆನಾಡು ಮಲೆಯಾಳದಿಂದ ಬಂದ ಇಗ್ಗುತಪ್ಪ, ತುತ್ತು ಇಡುವ ವ್ಯವಸಾಯದ ಅಧಿದೇವತೆ. 'ಕಾವೇರಿ' ಸಂಬಂಧ, ತುಲಾಸಂಕ್ರಮಣ–ಕಾವೇರಿಬೊತ್ತು ಇಡುವುದು, ಕಾಣಿಪೂಜು ಪೂಜೆ, ತಲಕಾವೇರಿ ಸ್ನಾನ ಅವರಿಗೆ ಪವಿತ್ರ. ಇಗ್ಗುತಪ್ಪ ಸಂಬಂಧ, ಹುತ್ತರಿ–ಕದಿರು ತಂದು ಪೂಜಿಸುವ, ಹೊಸ ಅಕ್ಕಿ ಪಾಯಸ ನಿವೇದಿಸಿ, ಭುಂಜಿಸುವ, ಸಂತೋಷ ಅವರದು. ಜೊತೆಗೆ ಈ ಸಮಯದ ವಿವಿಧ ಭಂಗಿಗಳಲ್ಲಿ ಕೋಲಾಟ ಅವರಿಗೆ ಚೇತೋಹಾರಿ 'ಕೈಲ್‌ಪೊಳ್ದು' ಅವರಲ್ಲಿ ಆಯುಧಪೂಜೆ ಹಬ್ಬ. ಆಗ ತೆಂಗಿಗೆ ಈಡು ಹೊಡೆಯುವ ಗುರಿ ಹಿಡಿಯುವ ರಂಜನಾ ವಿಶೇಷ ಪೂಜೆ.

ಮನೆತನದ ಮೂಲಪುರುಷ, ಕಾರೋಣ ಕಟ್ಟಿದ ಮನೆ 'ಐನ್‌ಮನೆ', ನಂತರ ಅವನಿಗಾಗಿ ಕಟ್ಟಿದ ಸ್ಮಾರಕ 'ಕೈಮಡ'. ಅದು ಮೂಲನಿವಾಸಿ ಪರಂಪರೆಗೆ ಪೂಜಾನೆಲೆಯೂ ಆಗಿದೆ. ಅವರ ಹಬ್ಬಗಳಲ್ಲಿ ಕಾರೋಣಾರಾಧನೆ ಮತ್ತು ದೈವಾರಾಧನೆಯ ಸಂದರ್ಭಗಳಲ್ಲಿ, ಬಿಲ್ಲಾಟ್, ಬೊಳಕಾಟ್, ಕೊಂಬಾಟ್, ಉಮ್ಮತ್ತಾಟ್, ಕೈತಲೆ ಆಟ್, ಪಿಲಿಆಟ್, ಕೊಡಿ ಆಟ್, ಚೌರಿಆಟ್, ಪಡೆಕಳಿ, ಪರೆಯಕಳಿ, ಕುದುರೆಬೋಡುಕಳಿ ಇತ್ಯಾದಿ ಜನಪದ ಕಲೆಗಳ ಮಹಾಪೂರವೇ ಇದೆ. ಕಾವೇರಿಪಾಟ್ ಎವ್ವಮಕ್ಕದೇವಡಪಾಟ್, ಕಾರೋಣಪಾಟ್ ಇತ್ಯಾದಿ ಜನಪದ ಗೀತೆಗಳು ವಿಪುಲವಾಗಿವೆ. ದೇವರಕಾಡುಗಳ ನಿರ್ವಹಣೆಯಲ್ಲಿ ಅವರಿಗಿರುವ ವಿಶೇಷ ಆಸಕ್ತಿ, ಪರಿಸರ ಕಾಳಜಿಯ ಸಂಕೇತವಾಗಿದೆ. ಇಂಥ ಸಾಂಸ್ಕೃತಿಕ ಬದುಕಿನ ಕೊಡವರು, ಸ್ಫುರದ್ರೂಪಿಗಳು; ರಾಷ್ಟ್ರದ ಸೈನ್ಯದ ನೇತಾರರಾಗಿ ಕ್ರೀಡಾಸಾಹಸಿಗಳಾಗಿ, ಅಧಿಕಾರಿಗಳಾಗಿ, ತಮ್ಮ ಅಸ್ತಿತ್ವವನ್ನು ತೋರಿದ್ದಾರೆ. ಅವರಲ್ಲಿ ಶಾಖಾಹಾರಿಗಳಾದ, ಅಮ್ಮಕೊಡವರು, ಸಣ್ಣಕೊಡವ, ಮಲ್ಲಕೊಡವ, ಹಾಗೂ ಕೊಡವ ಪದ್ಧತಿ ಭಾಷೆಗಳನ್ನು ಅನುಸರಿಸಿ ಕೊಡವರಾದ ಜಮ್ಮಕೊಡವ ಎಂಬ ಪಂಗಡಗಳೂ ಇವೆ. ಅವರ ಮನೆಪದ (ಮನೆತನದ ಹೆಸರು)ಗಳೂ ವಿಶಿಷ್ಟವಾಗಿವೆ. ರಾಜರ ಕಾಲದಲ್ಲಿ ದತ್ತವಾದ ಜನ್ಮಸಿದ್ಧಹಕ್ಕಿನ ಜಮ್ಮ ಜಮೀನುಗಳೂ ಅವರಿಗಿವೆ. ಕಲ್ಯಾಟಂಡ ಮನೆತನದ ಕಾರೋಣಪುರುಷ, ಕಲ್ಯಾಟಜ್ಜಪ್ಪ, ಕೊಡಗಿನಲ್ಲಿ ಬಹಳ ಆದರಿಸಲ್ಪಟ್ಟ ಕಾರೋಣ ಪುರುಷನಾಗಿದ್ದಾನೆ.

ಗೌಡರು: ಕೊಡಗಿನ ಗೌಡಜನಾಂಗೀಯರ ಇತಿಹಾಸವೂ ಶಾಸನೋಕ್ತವಾಗಿ ಅಸ್ತಿತ್ವಗೊಂಡಿದೆ. ಗಂಗರು 'ಎರುಮೈವೆಳೀರ'ರ್ ಮೂಲದಿಂದ ಬಂದವರೆನ್ನಬಹುದಾದ ಕಾರಣ ಗೌಡಜನಾಂಗದ ಅಸ್ತಿತ್ವವೂ ಮೂಲ ನೆಲೆಯಲ್ಲಿಯೇ ಗಮನಕ್ಕೆ ಬರುತ್ತದೆ. ಕ್ರಿ.ಶ. ೯ನೆಯ ಶತಮಾನದ ಕೊತೂರು ಶಾಸನದಲ್ಲಿ 'ಜಡಲ ಎಜೆಯಂಗ ಗಾವುಣ್ಡ', 'ಸಿದ್ಧಾಯ

ಬೆಟ್ಟಿಯ ಭತ್ತ', 'ನೂಱು ಭತ್ತಮುಮಂ' (ನೂರು ಭಟ್ಟಿಭೂಮಿ) ಇತ್ಯಾದಿ ಶಬ್ದಗಳು ಕೊಡಗಿನ ಗಾವುಣ್ಡರ (ಗೌಡ) ಕೃಷಿಕಂದಾಯ, ಭತ್ತದ ಬಗೆ (ಬಿಳಿ ಭತ್ತ), ಭತ್ತ ಬೆಳೆದ ವಿಸ್ತಾರ ಹಾಗೂ ಬೆಳೆದ ಪ್ರಮಾಣವನ್ನು ಸೂಚಿಸುವ ಅಂದಿನ ಕೃಷಿವ್ಯವಹಾರದ ಚಿತ್ರಣವನ್ನು ಕೊಡುತ್ತವೆ. ಉತ್ತರ ಕೊಡಗಿನ ಕ್ರಿ.ಶ. ೯೧೧ರ ಅಪ್ರಕಟಿತ ಗುಡಗೂರು ಶಾಸನದಲ್ಲಿ 'ಬೊಪ್ಪಗಾಮುಂಡ'ನ ಹೆಸರಿದೆ (ಹರತಿಸಿರಿ, ಪು. ೭೩೨); ಕ್ರಿ.ಶ.೧೨೯೬ರ ಮುಳ್ಳೂರು ವೀರಗಲ್ಲು ಶಾಸನದಲ್ಲಿ[೭] **ಬೊಪ್ಪಗೌಡಿ**ಯ ಮಲ್ಲೆಯನು ಶತ್ರುಗಳನ್ನು ತವಿದು ವೀರಸ್ವರ್ಗ್ಗವೇರಿದ ವಿಷಯವಿದೆ. ಕ್ರಿ.ಶ. ೧೧೭೯ರ ಮಾದ್ರೆಯ ಅಪ್ರಕಟಿತ ಶಾಸನದಲ್ಲಿ ಮಾದ್ರೆಯ ಬಯ್ಯಣ್ಣ ಮತ್ತು ಚಿನಗಾಮುಂಡರು ವೀರ ಹೋರಾಟ ಮಾಡಿ ವೀರಸ್ವರ್ಗವೇರಿದ ಚಿತ್ರಣವಿದೆ[೮]. ನಿಡುತದ ಕ್ರಿ.ಶ. ೧೨೫೫ರ ವೀರಗಲ್ಲು ಶಾಸನದಲ್ಲಿ ಕಹಿಗೋಡಿನ ಬೀರಗವುಡನ ಮಗ ಸೋಮಯ್ಯ ಕಾಳಗ ಕೊಟ್ಟು ವೀರಸ್ವರ್ಗವೇರಿದ ವಿಷಯ, ಹುಲುಕೋಡಿನ ಕ್ರಿ.ಶ. ೧೩೯೯ರ ವೀರಗಲ್ಲು ಶಾಸನದಲ್ಲಿ, ಹುಲುಕೋಡ ಚಿಕ್ಕಣ್ಣನ **ಬೆಂಮ್ಮಗೌಡ**ನ ಬೀರಗಲ್ಲು 'ಶ್ರೀ ಸ **ಗವುಡಬೊವ** ದೇಮಯ್ಯ ಚಿಕಣ್ಣಯರಿಗೆ ಮಂಗಳವು' ಎನ್ನುವಲ್ಲಿ 'ಗವುಡಬೊವ'ನೆಂಬ ಗೌಡಜನಾಂಗೀಯ ಅಧಿಕಾರಿ ವ್ಯವಸ್ಥೆಯ ಸ್ವರೂಪ ತಿಳಿಯುತ್ತದೆ. ೧೮ನೆಯ ಶತಮಾನದ ಸಿರಂಗಾಲದ ವೀರಗಲ್ಲು ಶಾಸನದಲ್ಲಿ 'ಮಾಚಿಗಾಮಣ್ಡ' ಹಾಗೂ ೧೮ನೆಯ ಶತಮಾನದ ಅಡಿನಾಡೂರಿನ ಶಾಸನದಲ್ಲಿ 'ಗವುಡಿಹಳಿ ನಿಂಗವಡೆಯರ ಸುತಿಕೋಟೆ ಬೈರನಯಕ' ಎಂದಿದೆ. ಇಲ್ಲಿ 'ಗವುಡಿಹಳ್ಳಿ' – ಗೌಡತಿಯ ನಿರ್ವಹಣೆಗಿದ್ದ ಗ್ರಾಮವಾಗಿರುವಂತಿದೆ. ೧೩ನೆಯ ಶತಮಾನದ ಚೌಡ್ಲು ಶಾಸನದಲ್ಲಿ[೯] ಚಂಗಾಳ್ವ ಹರಿಹರದೇವನ ಕಾಲದಲ್ಲಿ, ಹೆಣ್ಣುಮಕ್ಕಳಿಗೆ, ತೊತ್ತಿನ ಮಕ್ಕಳಿಗೆ ಸ್ವಾಸ್ತೆ ಮರ್ಯಾದೆಯನ್ನು ಕೊಟ್ಟ ಬಗ್ಗೆ, ಅವರಲ್ಲಿ ಗೌಡತಿಗಿದ್ದ ಪ್ರಾಮುಖ್ಯತೆ ಅರಿವಿಗೆ ಬರುತ್ತದೆ.

ಗೌಡಜನಾಂಗದಲ್ಲಿಯೂ ಸುಮಾರು ೪೦೭ ಮನೆಪದಗಳಿವೆ. ಈ ಮನೆ ಹೆಸರುಗಳು ವಾಸಸ್ಥಳ, ವ್ಯಕ್ತಿಪುರುಷ, ಹೆಂಗಳೆಯರು, ಕಸಬು, ಪರಿಸರ, ವಂಶೀಕ ತಲೆಮಾರು ವಲಸೆಪೂರ್ವದ ನೆಲೆ, ನಂತನೆಲೆ, ನದಿ, ತೊರೆ ಇತ್ಯಾದಿ ಮೂಲ ಶಬ್ದಗಳಿಂದ ರೂಪಿತವಾಗಿರುವುದು ಕಾಣಬರುತ್ತದೆ. ಇವರ ಐನ್‌ಮನೆಯ ಉಂಬೊಳಗೆ (ಅಡುಗೆಕೋಣೆ)ಯಲ್ಲಿ ಹಬ್ಬ, ಮದುವೆ ಇತ್ಯಾದಿ ಸಂದರ್ಭಗಳಲ್ಲಿ 'ತೊಂಬಾರ' ಅಡಿಗೆ ಮಾಡುತ್ತಾರೆ. ಈ ಉಂಬೊಳಗೆಯಲ್ಲಿ 'ಕಾರಣಿಕ'ರಿಗೆ ಅಂದರೆ ಪೂರ್ವಜರಿಗೆ ಎಡೆ ಇಡುತ್ತಾರೆ. ಪೂರ್ವಾಭಿಮುಖವಾಗಿ ಈ ಅಡುಗೆಮನೆಯಲ್ಲಿಯ ಕೂಟದ ತಳಕ್ಕೆ ಚಿನ್ನದ ಚೂರುಹಾಕಿ ಹುಗಿಯುವ ಮರದ ಚಿಕ್ಕಕಂಬವನ್ನು 'ಕನ್ನಕಂಬ' ಎನ್ನುತ್ತಾರೆ. ಹುಟ್ಟಿನಿಂದ ಸಾವಿನವರೆಗೆ ಎಲ್ಲಾ ಉಭಾಶುಭಾ ಕ್ರಿಯಾಚರಣೆಗಳು ಇದರ ಬಳಿ ನಡೆಯುತ್ತವೆ.

ಗೌಡಜನಾಂಗೀಯರು ಉಗಾದಿ ಆಚರಿಸುವಲ್ಲಿ, ಪೂಜಾನಂತರ, ಚೆಂಡಾಟ, ತೆಂಗಿನಕಾಯಿಗೆ ಈಡು ಹೊಡೆಯುವುದು, ಇರುತ್ತದೆ. ಬಿಸು ಸಂಕ್ರಮಣದಲ್ಲಿ ಉಳುಮೆ ಆರಂಭಿಸುವ ಶುಭದಿನಾಚರಣೆಯಾಗಿ 'ನೆಲ್ಲಕ್ಕಿ ಬಾಡೆ'ಯಲ್ಲಿ ದೀವಿಗೆ, ಪೂಜಾ ಪರಿಕರ, ಫಲ ಹಾಗೂ ಸ್ವರ್ಣವಿಟ್ಟು, 'ಖಣಿಪೂಜು'ವಿಗೆ ಗಣಪತಿ ಪೂಜಾರತಿ ಮಾಡುತ್ತಾರೆ. ಒಟ್ಟಲು ಗದ್ದೆಯಲ್ಲಿ, ಅಗೆ ತೆಗೆಯುವಲ್ಲಿ ದೇವಕಾರ್ಯ ನೆರವೇರಿಸುತ್ತಾರೆ. ತುಲಾ ಸಂಕ್ರಮಣದ ಕಾವೇರಿ ತೀರ್ಥೋದ್ಭವ ಸಮಯದಲ್ಲಿ ತಲಕಾವೇರಿಗೆ ಹೋಗಿ ತೀರ್ಥ ತಂದು ಪೂಜಿಸುತ್ತಾರೆ. ಆಗ ಗದ್ದೆ ತೋಟದಲ್ಲಿ 'ಬೊತ್ತು' ಇಡುತ್ತಾರೆ. ಹುತ್ತರಿ ಹಬ್ಬ–ಹೊಸ ಭತ್ತ ತರುವ ಹಬ್ಬ ಆಚರಿಸುತ್ತಾರೆ. ಭಾಗಮಂಡಲ ಭಗಂಡೇಶ್ವರ ದೇಗುಲದಲ್ಲಿ ಬಳ್ಯಡ್ಕ ಮನೆತನೆದವರು, ಪಾಲೂರು ಮಹಾಲಿಂಗೇಶ್ವರ ದೇಗುಲದಲ್ಲಿ ಎಡಿಕೇರಿ ಮನೆತನದವರು ತಕ್ಕಮುಖಸ್ಥರಾಗಿದ್ದಾರೆ.

ಕೊಡಗಿನ ಗೌಡಪರಂಪರೆಯ ಪ್ರಮುಖ ಪ್ರಾಚೀನ ಹಬ್ಬವಾದ 'ಸುಗ್ಗಿಕಟ್ಟೆ ಹಬ್ಬ'ವು ಕಟ್ಟುಕಟ್ಟಳೆಸಹಿತ ಯಡೂರು, ಚೌಡ್ಲು, ನಗರೂರು, ತಲ್ತರೆ ಶೆಟ್ಟಿಹಳ್ಳಿ ಇತ್ಯಾದಿ ಕಡೆ ನಡೆಯುತ್ತದೆ 'ಹರಿಸೇವೆ'ಯೂ, ಮಣೇವು, ಕತ್ತಿವರಸೆ ಸಹಿತ ನಡೆಯುತ್ತದೆ. ಸುಗ್ಗಿಕಟ್ಟೆ ಹಬ್ಬದಲ್ಲಿ ಪ್ರಾಗೈತಿಹಾಸಿಕ ಪದ್ದತಿಯಂತೆ ಹೆದ್ದೇವರ ಪೂಜೆ, ಅಜ್ಜಿಬನಪೂಜೆ, ವೃತ್ತಾಕಾರದಲ್ಲಿ ಕಲ್ಲುಗಳನ್ನಿಟ್ಟು (ಸಮಾಧಿ ಶಿಲಾವೃತ್ತ), ಪೂಜೆ ನಡೆಸುತ್ತಾರೆ. ತಿರುಪತಿ ವೆಂಕಟರಮಣ ಇವರಿಗೆ ಮುಖ್ಯ ಆರಾಧ್ಯದೈವವಾಗಿದೆ. 'ಐನ್‌ಮನೆ'ಗಳೂ ಇವರಲ್ಲಿವೆ. ಕೆಲವು ಮನೆತನಗಳಲ್ಲಿ ಮಾತ್ರ ಕೈಮಡವಿದೆ. (ಅಯ್ಯಂಗೇರಿ **ಪೆಮ್ಮಡೀರ** ಮನೆತನದ ಗುರುಕಾರೊಣ 'ನಂದಿಚ್ಚ'ಗೆ ಇದೆ.)

ನಾಪೋಕ್ಲು ಮಾರ್ಗದ ಬೆಟ್ಟಗೇರಿಯ ಅನ್ನಚ್ಚಿರ ಮನೆತನಕ್ಕೆ ಕೈಮಡವಿದ್ದು, ಕಟ್ಟೆಮನೆ ಸ್ಥಾನವೂ ಇದೆ. ನಂಜರಾಯ ಪಟ್ಟಣದ ಅಚ್ಚಾಂಡೀರ ಮನೆತನಕ್ಕೆ ಕೈಮಡ ಇಲ್ಲ; ಗುರುಕಾರೊಣರಿಗೆ ಮರದ ಬುಡದಲ್ಲಿ ಸಮಾಧಿ ನೆಲೆ ಇದೆ. ಗುರುಕಾರೊಣನಿಗೆ ತೆರೆಕೋಲ.ಮೊದಲಿಗೆ ಕಟ್ಟಿಸುತ್ತಿದ್ದರು. ಸೋಮವಾರಪೇಟೆ ತಾಲೂಕಿನ ತಲ್ತರೆ ಶೆಟ್ಟಳ್ಳಿಯಲ್ಲಿ ಕುರಾದಗೌಡನ ಮನೆತನದವರು, ತಮ್ಮ ಜಮೀನನ 'ವೀರಗಲ್ಲು'ಗಳಿಗೆ 'ಬಸವೇಗೌಡ'ನ ಸ್ಮಾರಕವೆಂದು ವೀರಶೈವ ಅರ್ಚಕರಿಂದ ಪೂಜೆ ಸಲ್ಲಿಸುತ್ತಾರೆ.

ಹಾಲೇರಿ ಅರಸರ ಕಾಲದಲ್ಲಿ, ನಗರಹಳ್ಳಿ ಪುಟ್ಟಂಗೌಡ, ಮಂಡಪ್ಪನ ಅಪ್ಪಯ್ಯ, ಅಧಿಕಾರಿ ವರ್ಗದಲ್ಲಿದ್ದರು, ಕಾರ್ಯಕಾರಿ ಸುಬೇದಾರರಾಗಿದ್ದರು, ಶಾಂತಳ್ಳಿ ಮಲ್ಲೆಯಂಣ ಗೌಡಪ್ರಮುಖನಾಗಿದ್ದ. ಬಲಮುರಿಯ ಗುಡ್ಡೆಮನೆ (ಗುಡ್ಡೇರ್) ಸುಬೇದಾರ್ **ಅಪ್ಪಯ್ಯಗೌಡ** ರಾಜರ ಕಾಲದಲ್ಲಿ ಗೌಡಿಕೆ ಪಡೆದಿದ್ದ ಪ್ರಸಿದ್ಧ ಗೌಡಜನಾಂಗದ ಮುಖಂಡನಾಗಿದ್ದ. ಅಮರಸೂಳ್ಯದ ಕಾಟಕಾಯಿ ಚಳುವಳಿಯಲ್ಲಿ ಸಕ್ರಿಯನಾಗಿದ್ದ. **ಕೆದಂಬಾಡಿ ರಾಮೇಗೌಡ**ನೂ ಪ್ರಸಿದ್ಧ ಮುಖಂಡನಾಗಿದ್ದ. ಅಮರಸೂಳ್ಯ ಚಳವಳಿಯಲ್ಲಿ ನೇತಾರನಾಗಿದ್ದ. ಚಳವಳಿಯನ್ನು ಆಂಗ್ಲರು ಹತ್ತಿಕ್ಕಿ ಬಂಡಾಯಗಾರರನ್ನು ಶಿಕ್ಷಿಸಿದ ಸಂದರ್ಭದಲ್ಲಿ ಗುಡ್ಡೇರ ಅಪ್ಪಯ್ಯನನ್ನು ೩೧-೧೦-೧೮೩೭ರಲ್ಲಿ ಮಡಿಕೇರಿ ಕೋಟೆ ಮುಂಭಾಗ ಎತ್ತರದ ಮೈದಾನದಲ್ಲಿ ಬೆಳಗ್ಗೆ ೧೦ ಗಂಟೆ ಹೊತ್ತಿಗೆ ಗಲ್ಲಿಗೇರಿಸಲಾಯಿತು[೧೦]. ಆದರೆ ಕೆದಂಬಾಡಿ ರಾಮೇಗೌಡ ಮಂಗಳೂರಿನಿಂದ ಅಮರಸೂಳ್ಯದ ಬಂದು, ಆಂಗ್ಲರ ಪರವಿದ್ದ ಸುಬೇದಾರ-ದಿವಾನ್ ಸೈನ್ಯದೊಡನೆ ಹೋರಾಡುವಲ್ಲಿ ವೀರಮರಣ ಅಪ್ಪಿದಂತೆ ತೋರುತ್ತದೆ. ಇನ್ನೊಂದು ಮೂಲದ ರೀತ್ಯಾ ಆಂಗ್ಲ ಸೈನಕರಿಗೆ ಸೆರೆಸಿಕ್ಕಿ ಸಿಂಗಪುರದಲ್ಲಿ ಬಂಧನದಲ್ಲಿ ಜೀವಾವಧಿ ಕಠಿಣ ಶಿಕ್ಷೆಗೀಡಾದ ಎಂದೂ ಹೇಳಲಾಗಿದೆ. ಆದರೆ ಉಭಯ ಸಂದರ್ಭದಲ್ಲಿಯೂ ಅವನು ಸಮಾಧಿಯ ನೆಲೆ ಕಂಡುಬಂದಿಲ್ಲ. ಬಹುತೇಕ ಸುಳ್ಯಕ್ಕೆ ಮಂಗಳೂರಿನಿಂದ ಬಂದ ಮೇಲೆ ಹೋರಾಡಿ ಮಡಿದ ಎಂದು ನಂಬಲಾಗಿದೆ.

ಹಬ್ಬಗಳ ದೃಷ್ಟಿಯಿಂದ, ಒಕ್ಕಲು ಆದ ನಂತರ ಭತ್ತವನ್ನು ಪೂಜಿಸುವ ಹಬ್ಬವಾದ ಕಿಡ್ಡಾಸ ಹಬ್ಬವೂ ಗೌಡರಲ್ಲಿ ಪ್ರಸಿದ್ಧವಾಗಿದೆ. ಭೂತಾಯಿ ತಂಪಿರಲೆಂದು, ಮನೆ ಅಂಗಳ ಸಾರಿಸಿ ರಂಗೋಲಿ ಇಟ್ಟು ಎಣ್ಣೆ ಹುಯ್ದು, ಮಸಿ ಚೂರು, ಸೀಗೆಚೂರು ಮತ್ತು ಕತ್ತಿ ಇಟ್ಟು ಪೂಜಿಸುವ ರೀತಿಯು ಭೂತಾಯಿಯನ್ನು ಮಡಿ ಮಾಡಿ ಪೂಜಿಸುವೆವು ಎನ್ನುವ ಕಿಡ್ಡಾಸಹಬ್ಬವೆನಿಸಿಕೊಂಡಿದೆ. ಹೀಗೆಯೇ ದೊಡ್ಡಮಳತೆಯ ಹೊನ್ನಮ್ಮನ ಕೆರೆಯ ಸಂದರ್ಭದಲ್ಲಿ 'ಕೆರೆಗೆ ಹಾರ'ದ ಕತೆಯೂ ಇದೆ. ಈ ಸಂದರ್ಭಗಳ ಕುರಿತ ಅರೆಭಾಷೆಯ ಹಾಡುಗಳು ಇವೆ. ಹರಿಸೇವೆ ಹಾಡು, ಹೊನ್ನಾರು ಹಾಡು ಇದ್ದು, ಗಾದೆ, ಒಗಟು, ಜಾನಪದ ಹಾಡು, ಕತೆಗಳು ಅವರಲ್ಲಿಯೂ ಸಾಕಷ್ಟು ಇವೆ.

ವೀರಶೈವರು: ಕೊಡಗಿನ ಚೆಂಗಾಳ್ವರ ಪೈಕಿಯ ರಾಜಮನೆತನವೊಂದು ಇಕ್ಕೇರಿ ಕೆಳದಿಗೆ ಹೋಗಿ ಅಲ್ಲಿ ಸ್ಥಾಪನೆಗೊಂಡ ಇಕ್ಕೇರಿ-ಕೆಳದಿ ಅರಸು ವಂಶದಿಂದ ಬಂದಂಥ (ರೈಸ್ ಮತ್ತು ಕೊಡವ ಭಾಷೆಯ ಕೃತಿ ಪೊಮ್ಮಾಲೆ ಕೊಡಗ್ ಹಾಗೂ ಪಟ್ಟೋಲೆಮಳಮೆ ಕೃತಿಗಳಲ್ಲಿ ಉಲ್ಲೇಖ) ವೀರವಡೆಯರು ಕೊಡಗಿನಲ್ಲಿ ಹಾಲೇರಿ ವಂಶದವರೆನಿಸಿದರು.

ಈ ಅರಸರ ಕಾಲದಲ್ಲಿ ನಂಜರಾಜಪಟ್ಟಣ, ಯಡೂರು, ಪಾಲ್ಪರೆ ಇತ್ಯಾದಿ ನೆಲೆಗಳಲ್ಲಿ ವೀರಶೈವಕ್ಕೆ ರಾಜಾಶ್ರಯ, ಜನಾಶ್ರಯ ದೊರಕಿತ್ತು. ಈ ಹಾಲೇರಿ ವಂಶದ ಅರಸರು ಕೊಡಗನ್ನು ಸಂಸ್ಥಾನವಾಗಿಸಿದರು. ಗುರು-ವಿರಕ್ತ ಮಠಗಳು ಇಡೀ ಕೊಡಗಿನಲ್ಲಿ ದಕ್ಷಿಣ ಕೊಡಗಿನ ನಾಣಚ್ಚಿಮಠದಿಂದ ಉತ್ತರ ಕೊಡಗಿನ ಅಬ್ಬಿಮಠದವರೆಗೆ ಅಸ್ತಿತ್ವದಲ್ಲಿದ್ದವು. ಪ್ರಾದೇಶಿಕ ಸಾಂಸ್ಕೃತಿಕ ಹಬ್ಬಗಳಾದ ಹುತ್ತರಿ, ತುಲಾಸಂಕ್ರಮಣದ ಬೊತ್ತು, ದೀಪಾವಳಿಯ ಮದ್ದಿನತೆಕ್ಕೆ ಇತ್ಯಾದಿಗಳು ಮಠದಲ್ಲಿ ಆಚರಣೆಗೆ ಇದ್ದುವು. ತಾಳೆಗರಿಯ ಹಸ್ತಪ್ರತಿಗಳ ಸಂಗ್ರಹವೂ ಇದ್ದು, ಸಾಹಿತ್ಯಕೃತಿಗಳೂ ಇದ್ದುವು. ಮಠಗಳಲ್ಲಿಯ ಗದ್ದುಗೆಗೆ ಮಕರಸಂಕ್ರಾಂತಿಯಲ್ಲಿ ಎಲ್ಲ ವರ್ಗದ ಜನತೆ ಪೂಜೆ ಸಲ್ಲಿಸುತ್ತಿದ್ದರು. ಮಠದ ಗುರುಗಳು ಹುತ್ತರಿ ಕೋಲಾಟದ ಸಂದರ್ಭದಲ್ಲಿ ಹೋಗಿ ಆಶೀರ್ವಾದದ ಕೋಲು ಹೊಡೆದ ಮೇಲೆ ಕೋಲಾಟ ಆರಂಭವಾಗುತ್ತಿದ್ದುದು ಮೊದಲಿಗಿತ್ತು. ವಿಶೇಷತಃ ಹೆಗ್ಗಡಹಳ್ಳಿಮಠದಲ್ಲಿ ದಲಿತರಿಗೆ ಕೊಟವಳಿ-ಕಣಿಯ ದೀಕ್ಷೆ ನೀಡಿ, ಅವರ ಪಂಗಡದ ಆಚರಣೆಗಳಿಗೆ ತರಬೇತಿ ನೀಡುತ್ತಿದ್ದರು. ಅವರದಾಳು ಜಾತ್ರೆ-ಶನಿವಾರಸಂತೆಯ ಬಳಿ, ವೀರಶೈವ ಹೆಂಗಳೆಯರು ದಲಿತ ಹೆಣ್ಣುಮಗಳ ಕಟ್ಟೆಗೆ ಪೂಜೆ ಸಲ್ಲಿಸಿ, ಅಸ್ಪೃಶ್ಯಭಾವವಿದೂರತೆ ತೋರುತ್ತಿದ್ದರು. ಮಕರಸಂಕ್ರಾಂತಿ ಸಮಯದಲ್ಲಿ ದಲಿತ ಕೊಟವಳಿ ಕಣಿಯರಿಂದ ವೀರಗಾಸೆ ಹಲಗೆ ಕುಣಿತ, ವೀರಶೈವ ಹೆಂಗಳೆಯರಿಂದ ಮೇಲ್ಲೂಚಿತ ಕಟ್ಟೆಗೆ ಇಂದಿಗೂ ಪೂಜೆ ನಡೆದು ಬಂದಿದೆ[೧೦].

ಕೊಡವಭಾಷಿಕ ಕೊಡವೇತರರು: ಕೊಡವ ಭಾಷೆ ಸಂಸ್ಕೃತಿಯನ್ನು ಅನುಸರಿಸಿರುವವರಲ್ಲಿ **ಹೆಗ್ಗಡೆ** ಜನಾಂಗವಿದ್ದು, ಚೆಂಗಾಳ್ವ, ಕೊಂಗಾಳ್ವರ ಕಾಲದಿಂದಲೂ ಇವರ ಅಸ್ತಿತ್ವವನ್ನು ಹೇಳಲಾಗಿದೆ. ಇವರಲ್ಲಿಯೂ ಮನೆಪೆದ, ಐನ್‌ಮನೆ ಕೈಮಡ, ವಕ್ಕ ಸಂಪ್ರದಾಯವಿದ್ದು, ಸೈನ್ಯಕ್ಕೂ ಸೇರಿ ಸೇವೆ ಸಲ್ಲಿಸಿದ್ದಾರೆ. ಕಸುಬಿನ ದೃಷ್ಟಿಯಿಂದ ಕೊಡವ ಭಾಷಿಕ **'ಐರಿ'** ಅವರು ಕೊಡವ ಸಂಸ್ಕೃತಿ ಅನುಸರಿಸಿ ಬಡಗಿ ಮತ್ತು ಕಮ್ಮಾರಿಕೆ ವೃತ್ತಿಯಲ್ಲಿ ತೊಡಗಿದ್ದಾರೆ. ಇವರ ಮೂಲಪುರುಷ[೧೧] ಮಲೆಯಾಳದ **'ತಚ್ಚಾಯಿರಿ'** ಎನ್ನಲಾಗಿದೆ.

ಕೊಡವ ಭಾಷಿಕರ ಪೈಕಿ, **ಕೊಯವ** ಜನಾಂಗದಿಂದ ರಾಜರ ಕಾಲದಲ್ಲಿ ಅಧಿಕಾರಿಗಳಾಗಿದ್ದ ವಿಷಯವೂ ಇದೆ. ಅವರಲ್ಲಿಯ **ಮೇಚಿರ** ಮನೆತನದಲ್ಲಿ 'ಮೆಚ್ಚಿದ ಶೂರ'ನೆಂಬ ಸುಭೇದಾರ ಕೊಡಗು ರಾಜರ ಪರವಾಗಿ ಕಾಳಗದಲ್ಲಿ ಹೋರಾಡಿ ಮಡಿದ ವೀರನಾಗಿದ್ದಾನೆ. ಈತನಿಗೆ ಹಲಸಿನ ಮರದ ಬುಡದಲ್ಲಿ 'ವೀರಗಲ್ಲು' ಪ್ರತೀಕವಾಗಿ ಸ್ಮಾರಕ ಶಿಲೆಯನ್ನು

ಕುಟುಂಬದವರು ನೆಟ್ಟಿದ್ದಾರೆ. ಕಾವೇರಿ ಸಂಕ್ರಮಣದ ೧೦ನೆಯ ದಿನದಂದು (ಪತ್ತ್‌ಲೋಂದಿ) ಈ ಶಿಲೆಯನ್ನು ಪೂಜಿಸಲಾಗುತ್ತಿತ್ತು[೧೨]. ೧೮ನೆಯ ಶತಮಾನದಲ್ಲಿ ಸುಬೇದಾರ್ ಬೆಳ್ಳಪ್ಪ ಎಂಬುವವರು ಅಧಿಕಾರಿಗಳಾಗಿದ್ದರು. ಈ ಜನಾಂಗದವರು, ಕುಂಬಾರಿಕೆಯಲ್ಲಿ ನಿಷ್ಣಾತರು. ಇಂದು ಅವರು ಶೈಕ್ಷಣಿಕವಾಗಿ ಬೆಳೆದು ಒಳ್ಳೆಯ ಹುದ್ದೆಯಲ್ಲಿದ್ದಾರೆ. ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಮುಂದುವರಿದಿದ್ದಾರೆ.

ಹೀಗೆಯೇ ಕೊಡವ ಭಾಷಿಕರಲ್ಲಿ ಮಣ್ಣಿನ ಗೋಂಡೆ ಕಟ್ಟುವವರಾದ ಕೋಲೆಯರು, ಕ್ಷೌರಿಕ ವೃತ್ತಿಯ ಸವಿತರು, ಪಶುಪಾಲಕರಾದ ಗೊಲ್ಲರು, ಕಣಿ ಶಾಸ್ತ್ರ ಹೇಳುವ ಕಣಿಯರು, ನಾಟಿವೈದ್ಯದ ಮಲಿಯರು, ಪಣಿಯರು, ಸೇಂದಿ ಕಟ್ಟುವ ಕುಡಿಯರು, ಬೆತ್ತ ಬಿದಿರು ಹೆಣೆದು ಮರ, ಗೊರಗ ಇತ್ಯಾದಿಗಳನ್ನು ತಯಾರಿಸುವ, ಜಾನಪದ ನೃತ್ಯಗಳಿಗೆ ಪರೆ ಬಾರಿಸುವ ಮೇದರು, ರಾಜರ ಕಾಲದಲ್ಲಿ ಅರಮನೆಗೆ ಕಾವಲಿದ್ದ ಸಿದ್ದಿಮೂಲದ ಕಾಪಳರು (ಇವರಲ್ಲಿ ಕಲ್ಯಾಟಜ್ಜಪ್ಪನ ಸಮಕಾಲೀನ ಕಾಟಾಳುಬೊಳ್ತು ಕಾರಣಪುರುಷ) ಭೂತವೇಷ ಹಾಕುವ ಬಣ್ಣರು ಮುಂತಾದವರಿದ್ದಾರೆ. 'ದೀವರು' ಎಂಬ ಕನ್ನಡ ಭಾಷಿಕ ತಳಸಮುದಾಯವರೂ ಇದ್ದರು. ಬಳೆಗಾರ ವೃತ್ತಿಯ ಕನ್ನಡ ಭಾಷಿಕ ಬಣಜಿಗರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ದಲಿತ ಸಮುದಾಯದಲ್ಲಿ ಪ್ರಮುಖ ಮೂಲನವಾಸಿಗಳಾಗಿ ಕೆಂಬಟ್ಟಿಗಳು ಇದ್ದಾರೆ. ಇವರ ಆರಾಧ್ಯದೇವತೆ ಪನ್ನಂಗಾಲತಮ್ಮೆ. ಇವರಲ್ಲಿ ಮನೆಪೆದಗಳು (ಅಣ್ಣೆಕುಟ್ಟಡ, ಚಂಗಕುಟ್ಟಡ ಇತ್ಯಾದಿ) ಸುಮಾರು ೧೨೦ ಸಂಖ್ಯೆಯಲ್ಲಿದ್ದು ಜನಸಂಖ್ಯೆ ಸುಮಾರು ೫ ಸಾವಿರದಷ್ಟಿದ್ದು ಕೊಡಗಿನ ೫೭ ಗ್ರಾಮಗಳಲ್ಲಿ ಹರಡಿಕೊಂಡಿದ್ದಾರೆ. ಮುಖ್ಯವಾಗಿ ಕೃಷಿ, ಬಿದಿರು ಹೆಣಿಗೆ, ಇಂದಿನ ಅವರ ಕಸುಬಾಗಿದೆ. ಇವರಲ್ಲಿಯೂ ಐನ್‌ಮನೆಗಳಿವೆ. ಕೈಮಡಗಳಲ್ಲಿ ತ್ರಿಶೂಲ ಹಾಗೂ ಸ್ಮಾರಕನೆಲೆಗಳಲ್ಲಿ ಕಾರೋಣಪುರುಷನ ಸ್ಮರಣೆಯನ್ನು ಕಾಣಬಹುದು. ೧೦ನೆಯ ಶತಮಾನದ ಹಾರೋಹಳ್ಳಿ ಶಾಸನವು[೧೩] 'ತೆಯಲಯ್ಯ ಜೂಬು' ಎಂಬ ಕೆಂಬಟ್ಟಿ ಜನಾಂಗದ ನಾಯಕನನ್ನು ಹೆಸರಿಸಿದೆ. ಇವರ ಕುರಿತು ಸಾಂಸ್ಕೃತಿಕ ಅಧ್ಯಯನವೂ ಸಾಹಿತ್ಯ ಅಕಾಡೆಮಿಯಿಂದ ಪ್ರಕಟವಾಗಿದೆ.

ಕೆಂಬಟ್ಟಿಗಳಲ್ಲಿ ಕಾವೇರಮ್ಮೆ ಹಾಡಿನಿಂದ ಹಿಡಿದು ಪನ್ನಂಗಾಲತಮ್ಮೆ, ನೀಲಮ್ಮದೇವಿ, ಭದ್ರಕಾಳಿ, ಬೇಡುಹಬ್ಬ, ಉಮ್ಮತ್ತಾಟ್, ಎತ್ತುಪೊರಟಪಾಟ್ (ಎತ್ತು ಹೇರುವ ಹಾಡು), ಹುತ್ತರಿಹಬ್ಬ, ಒಯ್ಯಪಾಟ್, ಕಂಬಳೆಹಾಡು, ಇತ್ಯಾದಿ ವಿಪುಲ ಜನಪದ ಹಾಡುಗಳ, ಕಿರುಗತೆ, ಒಗಟುಗಳು, ಚಾಲ್ತಿಯಲ್ಲಿವೆ. ವಿಶಿಷ್ಟವಾಗಿ ಧಾರ್ಮಿಕ ಕ್ರೀಡೆಗಳು, ವೀರಕ್ರೀಡೆಗಳು, ಸಾಮಾಜಿಕ ಕ್ರೀಡೆಗಳು ಇವರಲ್ಲಿವೆ. ಸ್ವಾತಂತ್ರ್ಯ ಹೋರಾಟಗಾರರೂ, ಇವರಲ್ಲಿದ್ದಾರೆ. ಇವರಲ್ಲಿಯ ಪನ್ನಂಗಾಲತಮ್ಮೆ ಹಬ್ಬಕ್ಕೆ ಸರ್ವ ಜನಾಂಗೀಯರೂ ಪಾಲ್ಗೊಳ್ಳುತ್ತಾರೆ. ಕೆಂಬಟ್ಟಿಗಳೇ ಪನ್ನಂಗಾಲತಮ್ಮೆಯ ಪೂಜಾರಿಗಳಾಗಿ ಕೊಡೆಹಬ್ಬ ಸಹಿತವಾಗಿ ಎಲ್ಲವನ್ನೂ ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ. ಕೊಡವ ಮನೆತನದವರು ತಕ್ಕರ ನಿರ್ವಹಣಾ ಸಮಿತಿಯಲ್ಲಿದ್ದಾರೆ. ಕೆಂಬಟ್ಟಿಗಳ ಬದುಕಿನ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಪ್ರಗತಿ ಆಗಲು ಅವಕಾಶಗಳು ಒದಗಬೇಕಿದೆ[೧೪].

ಕುಡಿಯರು, ಯೆರವರು ಕೊಡಗಿನ ಪ್ರಮುಖ ಪರಿಶಿಷ್ಟವರ್ಗಕ್ಕೆ ಸೇರಿದವರಾಗಿದ್ದು ಇವರಲ್ಲಿಯೂ ಜನಪದ ಹಾಡು, ಕತೆ, ಗಾದೆ, ಒಗಟುಗಳೂ ಇವೆ. ಅವರನ್ನು ಕುರಿತು ಬರೆದ ಸಾಂಸ್ಕೃತಿಕ ಅಧ್ಯಯನದ ವಿಶೇಷ ಕೃತಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪ್ರಕಟವಾಗಿವೆ. ಇಡೀ ಕೊಡಗಿನ ಬೆಟ್ಟಕುರುಬರು, ಪ್ರಾಚೀನ ಶಾಸನೋಕ್ತ ಜೇನುಕುರುಬರು ಮುಂತಾದವರು ಸೇರಿದಂತೆ ತಿತಿಮತಿ ಬಳಿ ಆಚರಿಸುವ ಕುಂಡೆಹಬ್ಬವು ಬಹು ಪ್ರಸಿದ್ಧ ವಾರ್ಷಿಕ ಹಬ್ಬವಾಗಿದೆ. ಪೌರಾಣಿಕವಾಗಿ ಈಶ್ವರನಿಗೆ ಮೋಸ ಮಾಡಿದ ಭದ್ರಕಾಳಿಯೆಂದು ಆಕೆಗೆ ಅಶ್ಲೀಲವಾಗಿಯೂ ಬೈಯ್ಯುವುದು ಈ ಹಬ್ಬದಲ್ಲಿದೆ. ಜೇನುಕುರುಬರು ನಾಗರಹೊಳೆಯ (ಈಗ ರಾಜೀವಗಾಂಧಿ ಅಭಯಾರಣ್ಯ) ಅಭಯಾರಣ್ಯದಲ್ಲಿಯ ಅಮ್ಮಾಳೆಗುಡಿಯಲ್ಲಿ ಕ್ರಿ.ಶ.೧೪ನೆಯ ಶತಮಾನದ ಚಂಗಾಳ್ವ ದೊರೆ ನಾಗರಾಜನ ಆಸ್ಥಾನ ದೃಶ್ಯವನ್ನು ಅವನ ವಿಗ್ರಹಸಹಿತ ಇಟ್ಟು ಪೂಜೆ ಸಲ್ಲಿಸುತ್ತಾರೆ. ಆ ಗುಡಿ(ಮನೆ)ಯ ಭಿತ್ತಿಯ ಮೇಲೆ ಪ್ರಾಗೈತಿಹಾಸಿಕ ಚಿತ್ರಗಳನ್ನು ಜರಿಗಿಡ, ಮನುಷ್ಯ ರೂಪುಗಳ ಮೂಲಕ ಆ ಪೂಜಾಹಬ್ಬದ ಸಂದರ್ಭದಲ್ಲಿ ಬಿಡಿಸುತ್ತಾರೆ.

ದಕ್ಷಿಣ ಕೊಡಗಿನ ಪಶ್ಚಿಮ ಗಡಿಗ್ರಾಮವಾಗಿ ಹಾಗೂ ಕೇರಳದಗಡಿಗೆ ಹೊಂದಿಕೊಂಡ ಗಿರಿಶ್ರೇಣಿಯ ಬದಿಗಿರುವ 'ಮಂಚಳ್ಳಿ'ಯು ಕೊಡಗು–ಕೇರಳ ಪ್ರದೇಶಕ್ಕೆ ಹೋಗಿಬರಲು ಅನುಕೂಲಿಸುವ ಗ್ರಾಮವಾಗಿದೆ. ಈ ಸ್ಥಳನಾಮದ ವೈಶಿಷ್ಟ್ಯವನ್ನು ಗಮನಿಸಬೇಕು. ಕೇರಳದ ಪದ್ಮನಾಭಪುರದ ಬಳಿಯ ಮನಲಿಕ್ಕರ ಮಠದಲ್ಲಿ ಬೌದ್ಧ ವಜ್ರಯಾನದ ಮೂಲಗ್ರಂಥಗಳಲ್ಲಿ ಒಂದಾದ 'ಮಂಜುಶ್ರೀ' ಮೂಲಕಲ್ಪದ ಹಸ್ತಪ್ರತಿ ದೊರೆಕಿದೆ[೧೫]. ಅಂದರೆ ಅಲ್ಲಿದ್ದ ಬೌದ್ಧರ ಹಾಗೂ ಅವರ ಸಾಹಿತ್ಯದ ಪ್ರಭಾವ ಆ ಕಾಲಕ್ಕೆ ಪಶ್ಚಿಮಘಟ್ಟಗಳ ಪ್ರದೇಶದಲ್ಲಿಯೂ ಆಗಿದ್ದುದರ ಕುರುಹು 'ಮಂಚಳ್ಳಿ' ಸ್ಥಳನಾಮದ ನಿಷ್ಪತ್ತಿಯನ್ನು ಗಮನಿಸಿದರೆ ಒದಗುತ್ತದೆ; ವಜ್ರಯಾನ ಪ್ರಭಾವಿತ ಮಂಜುಗುಳಿ, ಮಂಜಲ್ತೊಣೆ ಇತ್ಯಾದಿ ಸ್ಥಳನಾಮಗಳು ಗಮನಕ್ಕೆ

ಬರುತ್ತದೆ. ಮಂಜುಪಳ್ಳಿ>ಮಂಜುವಳ್ಳಿ>ಮಂಜಳ್ಳಿ>ಮಂಚಳ್ಳಿ ಎನ್ನುವ ಸ್ಥಳನಾಮದ ರೂಪಾಂತರ ಇಲ್ಲಿ ಕಾಣುವಂತಿದೆ. ಇದರ ಜೊತೆಗೆ ಬೌದ್ಧ ಸಂಬಂಧಿಯಾದ 'ಮಂಚಲಿಂದನಾಗ' ಎನ್ನಬಹುದಾದ ಅರಳುಕಮಲಪತ್ತಗಳ ಮೇಲೆ ನಾಗಶರೀರಾವೃತ ಪಾದಯುಗ್ಮ ಶಿಲಾಫಲಕವೂ ಇಲ್ಲಿ ದೊರೆತಿದೆ. ಡೇವಿಡ್ ಅವರು ಬುದ್ಧನ ಪಾದಲಕ್ಷಣಗಳನ್ನು ವರ್ಣಿಸಿರುವುದಕ್ಕೆ ಇದು ಹೋಲುತ್ತದೆ. ಜನಪದರು ಇದನ್ನು 'ಮಕ್ಕಳ ಪಾದ' ಎಂದು ಹೇಳುವುದುಂಟು ಮಂಚಳ್ಳಿ ನೆರೆಗೆ ತಾಗಿಕೊಂಡಂತೆ ಕುರಚಿ(ಕುರ್ಚಿ) ಗ್ರಾಮವಿದೆ. ಅದರ ಮೊದಲ ಹೆಸರು 'ಕುಋುಜಂಗೆ' ಆಗಿದ್ದಿರುವಂತಿದೆ; ಕುರಚಿ<ಕುರುಚಿ<ಕುರುಜಿ<ಕುರುಜಿಗೆ< **ಕುಋುಜಂಗೆ** ಎಂದರೆ 'ಚಿಕ್ಕಪಾದ' ಎಂಬ ಅರ್ಥ ಕ.ಕ. ನಿಘಂಟಿನದಾಗಿದೆ (ಸಂಪುಟ ೨, ಕ.ಸಾ.ಪರಿಷತ್ತು) ಕುರ್ಚಿಗ್ರಾಮದಿಂದ ಮಂಚಳ್ಳಿಗೆ ಸ್ಥಳಾಂತರವಾಗಿ ಈ ಪಾದಯುಗ್ಮ ಶಿಲ್ಪವಿರಬಹುದೇ? ಎಂಬ ಅನುಮಾನ ಇದೆ. ಈ ಪಾದಯುಗ್ಮ ನಾಗಾವೃತ ಶಿಲ್ಪದ ಸನಿಹದಲ್ಲಿ 'ಕೋಟೆ ಚಾವುಂಡಿ' ಎಂದು ಮಂಚಳ್ಳಿ ಪ್ರದೇಶದಲ್ಲಿದ್ದ ಕೋಟೆಯ ಸ್ಮರಣೆ ಮಾಡಿರುವಂತಿದೆ. ಜಮಾಬಂದಿ ಈ ವಿಗ್ರಹದ ಸುತ್ತಲ ಕಾಡನ್ನು 'ಭೈರವದೇವರು ಕಾಡು' ಎಂದೂ ದೇವರ ಹೆಸರಿನಲ್ಲಿ ನಮೂದಾಗಿದೆ. ಈ ಶಿಲ್ಪದ ಚಹರೆಗಳನ್ನು ಗಮನಸಿದರೆ 'ಗಂಧವಭೈರವ' (ಅಶ್ವಾರೋಹಿ) ಲೋಹಮೂರ್ತಿಯು ಬೌದ್ಧಯಕ್ಷರೂಪದ ಶಿಲ್ಪವೆನ್ನುವಂತಿದ್ದು, ಇದರ ವಿಶಿಷ್ಟ ಬೌದ್ಧಚಹರೆಯ ಸ್ಥಾನಕ ಮೂರ್ತಿಯ ಭಗ್ನಶಿಲ್ಪವೂ ಕಾಣಬರುತ್ತದೆ. ಆಗಾಮಿಬುದ್ಧರಾದ ಬೋಧಿಸತ್ವರಲ್ಲಿ ಒಬ್ಬನಾದ ಸೌಮ್ಯರೂಪದ ಅವಲೋಕಿತೇಶ್ವರ, ಇಲ್ಲಿ ಉಗ್ರರೂಪದ 'ಮಾಯಾಜಾಲಕ್ರಮ ಅವಲೋಕಿತೇಶ್ವರ' ಮೂರ್ತಿಯಾಗಿ ಕಾಣಿಸಿಕೊಂಡಿದ್ದಾನೆ. ಕಪಾಲ, ಡಮರು, ಖಟ್ವಾಂಗ, ಅಂಕುಶ, ಪಾಶ, ಇತ್ಯಾದಿ ಆಯುಧಧಾರಣೆ ಹೊಂದಿದ್ದಾನೆ. ದಿಗಂಬರ, ತ್ರಿನಯನ, ಕಪಾಲ ಮಾಲಾಧರನಾಗಿ ಕೋರೆದಾಡೆ ಹೊಂದಿದ್ದಾನೆ. ಇದರಿಂದ ತಾಂತ್ರಿಕ ಶೈವದ ಪ್ರಭಾವಿತ ಬೌದ್ಧವಜ್ರಯಾನ ಸಂಪ್ರದಾಯದ ಮೂರ್ತಿ ಎನ್ನಲು ಅವಕಾಶವಾಗುತ್ತದೆ. ಪ್ರಸ್ತುತ ಶಿಲ್ಪದ ಲಕ್ಷಣಗಳಿಂದ ಮೊದಲಿಗೆ, 'ಮಾಯಾಜಾಲಕ್ರಮ ಅವಲೋಕಿತೇಶ್ವರ'ನೆನಿಸಿದ್ದು ಕಾಲಾನಂತರ ಭೈರವ, ಚಾವುಂಡಿ ಎಂದೆಲ್ಲ ರೂಢಿನಾಮಗಳು ಈ ಮೂರ್ತಿಗೆ ಆರೋಪಗೊಂಡಿವೆ ಎನ್ನಬೇಕು. ಈ ಅಂಶಗಳಿಂದ, ಈ ಗಡಿಗ್ರಾಮಗಳಲ್ಲಿ ಪ್ರಾಚೀನ ಕಾಲಕ್ಕೆ ಬೌದ್ಧರೂ ವಾಸವಾಗಿದ್ದಿರುವ ಸೂಚನೆಗಳು ದೊರಕುತ್ತವೆ.

ಇದಕ್ಕೆ ಪೂರಕವಾಗಿ, ಈ ಪರಿಸರದಲ್ಲಿ **ತೆರಾಲು** ಗ್ರಾಮ ಐಯ್ಯತ್‌ನಾಡು (೧೬,೨೬೩ ಎಕರೆ ೩೬ ಸೆಂಟು) ಎಂಬ ಹೆಸರಿನ ಗ್ರಾಮವೂ ಅಸ್ತಿತ್ವದಲ್ಲಿದೆ[೧೬]. ಬಹುಶಃ ಬೆಟ್ಟಿಯತ್‌ನಾಡ್ ಬೇರ್ಳನಾಡು ಎಂದು ದಕ್ಷಿಣ ಕೊಡಗಿನ ಕಿಗ್ಗಟ್ಟುನಾಡಿನ ಉಪನಾಡುಗಳಾಗಿದ್ದಂತೆ. ಈ ತೆರಾಲು ಐಯ್ಯತ್ತ್‌ನಾಡೂ ಕೂಡ ಉಪನಾಡಾಗಿತ್ತೆನಿಸುತ್ತದೆ. 'ತೆರಾಲು', ಥೇರಹಾಳು ಎಂಬುದರ ಅಪಭ್ರಂಶ ಉಚ್ಚಾರವೆನಿಸುತ್ತದೆ. ಥೇರಹಾಳು>ಥೇರಾಳು>ಥೇರಾಲು>ತೇರಾಲು>ತೆರಾಲು ಎಂಬ ನಿಷ್ಪತ್ತಿಯಲ್ಲಿ ಬೌದ್ಧರ 'ಥೇರ' ಅಂದರೆ ಬೌದ್ಧ ಸಾಧು (ಭಿಕ್ಷು!); ಥೇರ ಎಂಬುದನ್ನು ಜೈನಮುನಗೂ ಅನ್ವಯಿಸಿ ಕ.ಕ. ನಿಘಂಟು ಹೇಳುವುದರ ಜೊತೆಗೆ ಬೌದ್ಧ ಸಾಧುವಿಗೂ ಅನ್ವಯಿಸಿ ಅರ್ಥ ನೀಡಿದೆ. ಬೌದ್ಧಪರ ಶಿಲ್ಪ, ಅವಶೇಷಗಳು, ಹಾಗೂ ಪ್ರಭಾವಿತ ನಾಮಗಳೂ ಈ ಪರಿಸರದಲ್ಲಿ ಇರುವ ಕಾರಣ 'ತೆರಾಲು ಐಯ್ಯತ್ತ್‌ನಾಡು' ಬೌದ್ಧರ ಪ್ರಾಚೀನ ಹಿರಿಯ ವಿಶಾಲವಾದ ಕ್ಷೇತ್ರೀಯ ನೆಲೆಯಾಗಿತ್ತು ಎಂಬುದಕ್ಕೆ ಪುರಾವೆ ಒದಗುತ್ತದೆ. ಜೊತೆಗೆ ಇಲ್ಲಿ 'ಬುದ್ಧನ ಕಲ್ಲು' ಎಂಬ ನೆಲೆಯೂ ಇರುವುದು ತೀರಾ ಗಮನಾರ್ಹ.

ಪ್ರಾಚೀನ ಕೇರಳದಲ್ಲಿ ಚೇರಮಾನ್ ಪೆರುಮಾಳ್, ಬೌದ್ಧಧರ್ಮವನ್ನನುಸರಿಸಿದ. ಕೇರಳದಲ್ಲಿ ಜೈನ ಮತ್ತು ಬೌದ್ಧರ ಅರಾಧನಾ ಕೇಂದ್ರಗಳಿಗೆ 'ಪಳ್ಳಿ' ಎನ್ನುತ್ತಾರೆ. ಬೌದ್ಧಪಂಥದಲ್ಲಿ ಬುದ್ಧನನ್ನು 'ಶಾಸ್ತ' ಎಂದು ಕರೆಯುತ್ತಾರೆ. ಅಮರಕೋಶವು, ಬುದ್ಧನ ಹೆಸರುಗಳನ್ನು 'ಮುನೀಂದ್ರಃ ಶ್ರೀಘನಃ **ಶಾಸ್ತಾಮುನಿಃ** ಶಾಕ್ಯಮುನಿಸ್ತುಯಃ' ಎಂದಿದೆ. ತಮಿಳು ಅಕಾರಾದಿ ನಿಘಂಟಿನಲ್ಲಿ, 'ಅಯ್ಯನ್' ಎನ್ಬುದು ಮತ್ತೋನ್ **ಚಾತ್ತನ್** ಅಪ್ಪನ್ ಚುವಾಮಿ ಎನುಂಪೆಯರ್' ಎಂದಿದೆ. ದಕ್ಷಿಣ ದೇಶದಲ್ಲಿ 'ಚಾತ್ತನ್' ಗ್ರಾಮದೇವತೆ ಈ ಚಾತ್ತನನ್ನು ಹರಿಹರಪುತ್ರ, ೧೨ ವರ್ಷದ ಬಾಲಕನೆಂದು ಪರಿಗಣಿಸಿ 'ಕುಟ್ಟಿಚಾತ್ತ' ಅಂದರೆ ಹುಡುಗ ಶಾಸ್ತ, ಬಾಲಕ ಶಾಸ್ತ. ಕೊಡಗು ಸೀಮೆಯಲ್ಲಿ ಶಾಸ್ತನನ್ನು ಅಯ್ಯಪ್ಪನೆಂದೇ ಕರೆದು ಕೇರಿ ಕೇರಿಗಳಲ್ಲಿ ಆರಾಧಿಸುತ್ತಾರೆ. ಇದು ಬೌದ್ಧಪ್ರಭಾವದ ಪಾರಂಪರಿಕ ಮುಂದುವರಿಕೆಯೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೇವಸ್ಥಾನಗಳಲ್ಲಿ ಕುಕ್ಷಿಶಾಸ್ತ (ಕುಟ್ಟಿಚಾತ್ತ)ನನ್ನು 'ಶಾಸ್ತಾವು' ಕಲ್ಲುಗಳಲ್ಲಿ ಕಾಣುತ್ತಾರೆ. ಬೇತುಗ್ರಾಮದಲ್ಲಿ ಹುತ್ತರಿ ಕಳೆದ ಮೇಲೆ ನಡೆವ ಮಕ್ಕಿಶಾಸ್ತಾವಿನ ಹಬ್ಬದಲ್ಲಿ ಕುಟ್ಟಿಜಾತ ತೆರೆ–ಕೋಲಗಳು; ಕರವಲೆ ಬಾಡಗದ ಭದ್ರಕಾಳಿ/ಭಗವತಿ ಹಬ್ಬದಲ್ಲಿ ದೇಹಾಂಗಗಳಿಗೆ ಪಾಂಬಾಳೆಗರಿ ಅಲಂಕಾರವಿರುವಂಥದು ಕುಟ್ಟಿಚಾತ ತೆರೆ; ಹೆಗ್ಗಳದ ಪಂಚಲಿಂಗೇಶ್ವರ ಪೆರುಮಲೆ 'ಅಯ್ಯಪ್ಪ ಶಾಸ್ತಾವು'ವಿಗೆ, **ಮುಪ್ಪಟ್ಟು ಚನಿಯಾಚೆ**ಯಂದು (ವೃಶ್ಚಿಕ ಮಾಸದ ಮೊದಲನೆಯ ಶನಿವಾರದಂದು) ಅಚ್ಚಪ್ಪಂಡ ಮನೆತನದವರು ಕುಟ್ಟಿಚಾತ್ತ ತೆರೆ (ಬಾಲಶಾಸ್ತಾವು ತೆರೆ)ಯನ್ನು ಕಟ್ಟಿಸುವಲ್ಲಿ, ಬೌದ್ಧಪರಂಪರೆಯ ಪ್ರಭಾವದ ಸೂಚನೆ ಕಾಣುತ್ತದೆ.

'ಭಗವತಿಯ ಹಬ್ಬ ಕೊಡಗಿನಲ್ಲಿ ಬಹಳ ಪ್ರಸಿದ್ಧ (ರಾಟೆ ಭಗವತಿ ವಿಶೇಷತಃ ವೃತ್ತಾಧಿಷ್ಠಾನದ ವಿನ್ಯಾಸದ ದೇಗುಲ ಹೊಂದಿರುವ ಕರವಲೆ ಬಾಡಗದ ಭಗವತಿ, ಇತ್ಯಾದಿ). ಕುಟ್ಟಿಚಾತ ತೆರೆ ನಡೆಯವಲ್ಲಿ, ಬೌದ್ಧಮೂಲದ ದೇವತೆ ತಾರಾ ಭಗವತಿ ಶೈವ ಪ್ರಭಾವಕ್ಕೆ ಸಿಲುಕಿ 'ಸರ್ವಜನಪೂಜಿತೆ ಭಗವತಿ', ಆದಂತೆ ಕಾಣುತ್ತದೆ. ಅಂತೇ ಪದ್ಮಾವತೀ ಸ್ತೋತ್ರದಲ್ಲಿ[೧೮], '**ತಾರಾತ್ವಂ ಸುಗತಾಮೇ ಭಗವತೀ** ಗೌರೀತಿ ಶೈವಾಗಮೇ ವಜ್ರಕಾಲಿಕ ಶಾಸನೇ ಜಿನಮತೇ ಪದ್ಮಾವತಿ ವಿಶ್ರುತಾ' ಎನ್ನುವಲ್ಲಿ ಬೌದ್ಧಮೂಲದ ಪ್ರಭಾವ ಕೊಡಗಿನ ಭಗವತೀ ಆರಾಧನೆ ಹಾಗೂ ಕುಟ್ಟಿಜಾತ ತೆರೆ-ಕೋಲಗಳಲ್ಲಿ ಕಾಣಬರುತ್ತದೆ. ಕೇರಳದಲ್ಲಿ ಜೈನ, ಬೌದ್ಧ, ಆರಾಧನಾ ಕೇಂದ್ರಗಳಿಗೆ 'ಪಳ್ಳಿ' ಎಂದಿದ್ದು, ಬೇತುಗ್ರಾಮದಲ್ಲಿ ಮಕ್ಕಿ ಶಾಸ್ತಾವಿನ ಪರಿಸರದಲ್ಲಿ ದಲಿತ ಕೆಂಬಟ್ಟಿಗಳು 'ಪಳ್ಳಿ ಅಯಪ್ಪ'ನ ಗುಡಿ ಬಾಗಿಲೆಂದು ಸಾಂಕೇತಿಕವಾಗಿ ಬಿದಿರುಕಡ್ಡಿಗಳ ದೇಗುಲ ಬಾಗಿಲುವಾಡವನ್ನು ದಲಿತ ಕೆಂಬಟ್ಟಿಗಳು ರೂಪಿರುವುದು ಗಮನಾರ್ಹ. ಈ ಎಲ್ಲ ಹಿನ್ನೆಲೆಗಳಲ್ಲಿ ಕೊಡಗಿನಲ್ಲಿ ಬೌದ್ಧರ ವಾಸ್ತವ್ಯದ ಪಳಿಯುಳಿಕೆಗಳನ್ನು ನೋಡಬಹುದು.

ಕೊಡಗಿನಲ್ಲಿ ಜೈನರು : ಮಹಾವೀರನ ಕಾಲಾನಂತರ ಕ್ರಿ.ಪೂ. ೩೦೮ರ ವೇಳೆಗೆ ಕರ್ನಾಟಕಕ್ಕೆ ಭದ್ರಬಾಹುಮುನಿ ಚಂದ್ರಗುಪ್ತನೊಡನೆ ಶ್ರವಣಬೆಳಗೊಳಕ್ಕೆ ಬಂದ ಬಗ್ಗೆ ತಿಳಿದಿದೆ. ಕ್ರಿ.ಪೂ. ೨೫೭ರ ಸುಮಾರಿಗೆ ಮೌರ್ಯ ಅಶೋಕನ ಶಾಸನೋಕ್ತ ಕೇರಳಪುತ್ರ, ಸತಿಯಪುತ್ರಗಳ ಪ್ರಸ್ತಾಪವಿರುವಲ್ಲಿ, ಜೈನಧರ್ಮ ಕರ್ನಾಟಕಕ್ಕೆ ಬೌದ್ಧಕ್ಕಿಂತಲೂ ಮೊದಲೇ ಪ್ರವೇಶಿಸಿತ್ತು ಎನ್ನಬೇಕಾಗುತ್ತದೆ. ಶ್ರವಣಬೆಳಗೊಳದ ೧೨ನೆಯ ಶತಮಾನದ ಶಾಸನದಲ್ಲಿ[೧೯], ಮುಳ್ಳೂರು ಬಸದಿಯ ಗುಣಸೇನಪಣ್ಡಿತನ ವಿದ್ವತ್ತಿನ ಪರಿಚಯವಿದ್ದ ಬಗ್ಗೆ ಹೇಳಿದೆ (**ಶ್ರೀ ಮುಳ್ಳೂರ ವಿಡೂರ ಸಾರವಸುಧಾರತ್ನಂ**). ಆ ಹೊತ್ತಿಗೆ ಉತ್ತರ ಕೊಡಗಿನಲ್ಲಿ ಜೈನಧರ್ಮೀಯರು ಬೇರುಗೊಂಡಿದ್ದುದು ಕಾಣಬರುತ್ತದೆ. ಈ ಮುನ್ನ ಕ್ರಿ.ಶ. ೪೬೬ರ ಮಡಿಕೇರಿ ಶಾಸನವು (ಕೊಡಗೂರ್ವಿಷಯದ ಕೊಡಗು), ಕೂಟಶಾಸನವೆನ್ನಲಾಗಿದ್ದರೂ ಬೇರೆ ಅಂಶಗಳಿಂದ ಕೊಡಗಿನಲ್ಲಿ ೧೦ನೆಯ ಶತಮಾನದ ಮುಂಚೆಯೇ ಜೈನಧರ್ಮದ ಅಸ್ತಿತ್ವವನ್ನು ಹೇಳಿದಂತಿದೆ. ಅದರಲ್ಲಿ ಗಂಗರ ಅವಿನೀತ ತಲವನನಗರದ ಜಿನಾಲಯಕ್ಕೆ ನೀಡಿದ ದತ್ತಿ ಕುರಿತು ಹೇಳಿದೆ.

ಕ್ರಿ.ಶ. ೯೭೮ನೆಯ ಗಂಗರ ಶಾಸನದಲ್ಲಿ (ಕೊಡಗು ೯೮, ಪೆಗ್ಗೂರು) ದಕ್ಷಿಣ ಕೊಡಗಿನ ಪೆಗ್ಗದೂರು ಬಸದಿಗೆ ಬೆಳಗೊಳದ ನಿವಾಸಿ ಅನಂತವೀರ್ಯನು ಪೆಗ್ಗರೂರು, ಹಾಗೂ ಪೊಸಬಾಡಗ ಗ್ರಾಮವನ್ನು ದಾನ ನೀಡಿದ್ದಾನೆ. ಇದು ದಕ್ಷಿಣ ಕೊಡಗಿನಲ್ಲಿ ಆ ಕಾಲಕ್ಕೆ ಇದ್ದ ಜಿನಧರ್ಮಿಗಳ ಅಸ್ತಿತ್ವವನ್ನು ತೋರುತ್ತದೆ. ಉತ್ತರ ಕೊಡಗಿನ ಸೋಮವಾರಪೇಟೆ ತಾಲೂಕಿನ ಮುಳ್ಳೂರು, ಜಿಲ್ಲೆಯ ಪ್ರಮುಖ ಜೈನಕೇಂದ್ರವಾಗಿದ್ದು, ಕ್ರಿ.ಶ. ೧೦೫೯ರ ಶಾಸನದಲ್ಲಿ ಕೊಂಗಾಳ್ವರ ರಾಜಾಧಿರಾಜ ಕೊಂಗಾಳ್ವನು, ಮುಳ್ಳೂರು ಬಸದಿಯ ಗುಣಸೇನಪಣ್ಡಿತನಗೆ ಗ್ರಾಮಗಳನ್ನು ದಾನವಾಗಿ ಕೊಟ್ಟ ವಿಷಯವನ್ನು ಹೇಳಿದೆ. (ಕೊಡಗು ೭೨, ಮುಳ್ಳೂರು, ಪಾರ್ಶ್ವನಾಥ ಬಸದಿ) ಪಾರ್ಶ್ವನಾಥ ಬಸದಿಯ ಜೊತೆಗೆ ಚಂದ್ರನಾಥ ಬಸದಿ, ಶಾಂತೀಶ್ವರ ಬಸದಿಗಳು ಸಾಲಾಗಿ ನಿರ್ಮಾಣಗೊಂಡಿವೆ (ಕೊಡಗು ೭೩, ಮುಳ್ಳೂರು) ಈ ಮುಳ್ಳೂರು ಬಸದಿಗಳಲ್ಲಿ ಚತುರ್ವಿಂಶತಿ ತೀರ್ಥಂಕರರ ವಿಶಿಷ್ಟ ಸ್ಥಾನಕ ನಾಲ್ಮೊಗದ ಘನಾಕಾರದ ಶಿಲ್ಪಗಳಿವೆ. ಇಲ್ಲಿಯ ೧೧ನೆಯ ಶತಮಾನದ ಬಸದಿ ಶಾಸನಗಳು (ಕೊಡಗು ೬೮-೭೦, ಮುಳ್ಳೂರು), ಗುಣಸೇನಪಣ್ಡಿತನಿಗೆ ದಾನ ಕೊಟ್ಟ ಸಂದರ್ಭವಾಗಿಯೇ ಬಂದಿವೆ. ಬೇಳೂರು ಬಳಿಯ ಗುಡಗೂರು ಬಸವೇಶ್ವರ ಗುಡಿ ಪರಿಸರದಲ್ಲಿ ಅಪ್ರಕಟಿತ ಜೈನಶಾಸನವಿದೆ. ಈ ಶಾಸನಗಳಿಂದ ಕೊಡಗಿನ ದಕ್ಷಿಣ ಹಾಗೂ ಉತ್ತರ ಭಾಗದಲ್ಲಿ ಜೈನರು ವಾಸ್ತವ್ಯವಿದ್ದು, ಬಸದಿಗಳಿಗೆ ದಾನ ನೀಡಿರುವ ಸಂಗತಿ ಕಾಣಬರುತ್ತದೆ. ರಾಜಾಧಿರಾಜ ಕೊಂಗಾಳ್ವನ ತಾಯಿ ಪೊಚಬ್ಬರಸಿ, ಮುಳ್ಳೂರಿನಲ್ಲಿ ಬಸದಿ ಕಟ್ಟಿಸಿಕೊಟ್ಟ ವಿಷಯವಿದೆ. ಕೊಡಗಿನಲ್ಲಿ ಜೈನಧರ್ಮಕ್ಕೆ ಜನಾಶ್ರಯ ಹಾಗೂ ರಾಜಾಶ್ರಯ ಎರಡೂ ದೊರಕಿತ್ತು. ಬೌದ್ಧರ ಹಾಗೂ ಅವರ ಆರಾಧನಾ ಕೇಂದ್ರಗಳಿಗಿಂತ, ಜೈನರು ಮತ್ತು ಅವರ ಆರಾಧನಾ ಕೇಂದ್ರಗಳ ಸಂಖ್ಯೆ ಹೆಚ್ಚಾಗಿತ್ತು. ಜೈನ ಆಚರಣೆಗಳ ಪ್ರಭಾವದ ಸಂಕೇತವೆಂಬಂತೆ ಸೋಮವಾರಪೇಟೆ ತಾಲೂಕು ಯಡೂರಿನ ಸುಗ್ಗಿಕಟ್ಟೆ ಹಬ್ಬದಲ್ಲಿ, ಅಲ್ಲಿಯ ಗೌಡಜನಾಂಗದಲ್ಲಿ ಸುಗ್ಗಿಕಟ್ಟೆಯ ಸಬತಾಯಿಗೆ (ಸಪ್ತಮಾತೃಕಾ ಪ್ರತೀಕ) ನೈವೇದ್ಯವಿಡುವಲ್ಲಿನ ಬಾಯಿಗೆ ಬಟ್ಟೆ ಕಟ್ಟಿಕೊಂಡು ಇಡುವ ಪದ್ಧತಿ ಇದೆ. ಯಡೂರಿನ ಸಮೀಪದ ಕಲಕಂದೂರು ಜೈನಕೇಂದ್ರವಾಗಿ ಬಸದಿಯನ್ನು ಹೊಂದಿದೆ. 'ಪಳ್ಳಿ ಅಯ್ಯಪ್ಪ' ಎಂದು ಕೆಂಬಟ್ಟಿಗಳು ಬೇತುಗ್ರಾಮ(ಮಕ್ಕಿ ಶಾಸ್ತಾವಿನ ಬಳಿ) ಬಿದಿರುಕಡ್ಡಿಗಳಿಂದ ಮಂಟಪದಂತಹ ರಚನೆ ಮಾಡಿ, ಆರಾಧಿಸುವಲ್ಲಿ ಬೌದ್ಧ-ಜೈನಪ್ರಭಾವ ಎರಡೂ ಸೇರಿದೆ. ಬಸದಿಗಳಿಗೆ 'ಜಿನದೇವರಕಾಡು'ಗಳೂ ಇವೆ. 'ಮಕ್ಕಿ ಶಾಸ್ತಾವು'ಅನ್ನು ಕೇರಳದಿಂದ 'ಕರೆದು ತಂದವರು' ಮೊದಲಿಗೆ ಜೈನರು ಬೇತು-ಮಕ್ಕಿಶಾಸ್ತಾವು ನೆಲೆ ಸನಿಹಕ್ಕೆ ಹೊಂದಿರುವ ಮನೆ 'ಕೊಂಡಿರ' ಮನೆತನದವರಂತೆ. ಹೀಗೆ ವಿವಿಧ ಜಾತಿಗಳ ಮೇಲೂ

ಜೈನಧರ್ಮದ ಪ್ರಭಾವ ಬೆಳೆದುಬಂದಿದೆ. ಬಹುಪ್ರಾಚೀನ ಕಾಲದಿಂದ ಕೊಡಗಿನ ನಿವಾಸಿಗಳಾಗಿ ಅವರೂ ಬಾಳಿ ಬದುಕಿ ಬಂದವರಾಗಿದ್ದಾರೆ. ಇಂದು ಅವರ ಸಂಖ್ಯೆ ಹೆಚ್ಚಾಗಿಲ್ಲ.

ಅಡಿಟಿಪ್ಪಣಿ ಮತ್ತು ಆಧಾರ ಗ್ರಂಥಗಳು

೧. ಎಂ.ಜಿ. ನಾಗರಾಜ್, **ಶಾಸನಶಿಲ್ಪಗಳು**, ೧೯೯೦, ಶ್ರೀ ಗೌರೀ-ಗಂಗಾ ಪ್ರಕಾಶನ, ಪು, ೩೧-೩೨.

೨. ಎ.ಕ. ಸಂ. ೧ (ಹೊಸತು), ೧೯೭೨, ಕೊಡಗು ಜಿಲ್ಲೆ ೯೬.

೩. K. Mammen, *Kerala Culture*, 1942, pp.80-81.

೪. **ಶಾಸನ ಸಂಗ್ರಹ** (ಸಂ.) ಎ.ಎಂ. ಅಣ್ಣಿಗೇರಿ, ಆರ್. ಶೇಷಶಾಸ್ತ್ರಿ, ೧೯೭೫, ಕನ್ನಡ ಸಾಹಿತ್ಯ ಪರಿಷತ್ತು, ಶಾಸನ ಸಂಖ್ಯೆ ೧೬.

೫. **ಕರ್ನಾಟಕ ಸಂಪದ,** ೨೦೦೪, ಪ್ರ.ಸಂ. ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, ಕ.ಸಾ.ಪ., ಪು.೨

೬ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, **ನಮ್ಮ ಕರ್ನಾಟಕ,** ೧೯೯೭, ಕ.ಸಾ.ಪ., ಪು.೫೨.

೭. **ಅಮರಸಿಂಹನ ಅಮರಕೋಶ ಎಂಬ ನಾಮಲಿಂಗಾನುಶಾಸನ** (ಸಂ.) ಲೂಯಿರೈಸ್, (ಪರಿಷ್ಕೃತ ಸಂಸ್ಕರಣ) ಎನ್. ಬಾಲಸುಬ್ರಮಣ್ಯ, ೨ನೇ ಮುದ್ರಣ, ೧೯೮೯, ಮೈಸೂರು ವಿಶ್ವವಿದ್ಯಾಲಯ, ಪು.೧೫೦.

೮. ಎಂ.ಜಿ. ನಾಗರಾಜ್, ೧೯೮೯, **ಕೊಡಗು ಜಿಲ್ಲೆಯ ಸುಗ್ಗಿಕಟ್ಟೆಗಳು,** ಶ್ರೀ ಗೌರಿ-ಗಂಗಾ ಪ್ರಕಾಶನ, ಬೆಂಗಳೂರು.

೯. (೧) Rev. G. Richter, 1887, *Caste and Tribes found in the province of Coorg*, Bangalore.
(೨) Hilten Brown, 1922, *The Astronishing Land of Coorg*, London.

೧೦. ಡಾ. ಪಿ.ಎಸ್. ರಾಮಾನುಜಂ, ೧೯೭೫, **ಕೊಡವರು,** ಮೈಸೂರು.

೧೧. ರಾಹುಲ ಸಾಂಕೃತ್ಯಾಯನ, **ವೋಲ್ಗಾ-ಗಂಗಾ** (ಕನ್ನಡ ಅನು: ಬಿ.ಎಂ.ಶರ್ಮ), ಬೆಂಗಳೂರು.

೧೨. ಎಂ.ಜಿ. ನಾಗರಾಜ್ **'ಕೊಡಗಿನ ಕೊಲೆಕಲ್ಲುಗಳು' ಹರತಿಸಿರಿ,** ೧೯೮೭, (ಸಂ.) ಲಕ್ಷ್ಮಣ್ ತೆಲಗಾವಿ, ಹರ್ತಿಕೋಟೆ.

೧೩. ಡಿ.ಎನ್. ಕೃಷ್ಣಯ್ಯ, ೧೯೭೪, **ಕೊಡಗಿನ ಇತಿಹಾಸ,** ಮೈಸೂರು ವಿಶ್ವವಿದ್ಯಾಲಯ.

೧೪. ಎಂ.ಜಿ. ನಾಗರಾಜ್, ೨೦೧೦, **ಕೊಡಗಿನ ಸಾಂಸ್ಕೃತಿಕ ಜಾನಪದ ನೆಲೆಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೫. ಐ.ಮಾ. ಮುತ್ತಣ್ಣ, ೧೯೮೩, **ಕೊಡವ ಕನ್ನಡ ನಿಘಂಟು,** ಬೆಂಗಳೂರು.

೧೬. ಎ.ಕ.ಸಂ. ೪ (ಹೊಸತು).

೧೭. ಎಂ.ಜಿ. ನಾಗರಾಜ್, ೨೦೧೦, **ಕೊಡಗಿನ ಸಾಂಸ್ಕೃತಿಕ ಜಾನಪದ ನೆಲೆಗಳು.**

೧೮. ಅಡ್ಡಂಡ ಕಾರ್ಯಪ್ಪ, 'ಕೊಡವ ಸಂಸ್ಕೃತಿಯೊಂದಿಗೆ ಕೊಡವ ಭಾಷಿಕರು' **ಕೊಡವ ಜನಪದ ಸಂಸ್ಕೃತಿ,** ಕನ್ನಡ ಸಾಹಿತ್ಯ ಪರಿಷತ್ತು, ಕೊಡಗು ಜಿಲ್ಲೆ (ಸಂ.) ಟಿ.ಪಿ. ರಮೇಶ, ಬಿ.ವಿ.ಷಂಶುದ್ದೀನ್, ಮಡಿಕೇರಿ, ೨೦೧೧.

೧೯. ಎಂ.ಜಿ. ನಾಗರಾಜ್, ೧೯೯೩, **ಕೆಂಬಟ್ಟಿ ಹೊಲೆಯರ ಸಂಸ್ಕೃತಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೦. ಎಂ.ಜಿ. ನಾಗರಾಜ್, ೨೦೦೪, **ಕೊಡಗಿನ ಹಾಲೇರಿ ರಾಜವಂಶವು, ಭಾಗ ೨,** ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.

೨೧. Kavalam Narayana Pannikar, 1991, *Floklore of Kerala*, National Book Trust, India, New Delhi.

೨೨. ಹಂಪನಾ., ೧೯೭೬, **ಯಕ್ಷಯಕ್ಷಿಯರು,** ಬೆಂಗಳೂರು.

೨೩. ಎ.ಕ. ಸಂ. ೨ (ಹೊ) ಶ್ರವಣಬೆಳಗೊಳ, ಮೈ.ವಿ.ವಿ., ೧೯೭೩.

೮೩

ರಾಮನಗರ ಜಿಲ್ಲೆಯಲ್ಲಿ ರಾಜಕೀಯ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತ್ಯಂತರಗಳು

ವಿ.ಪಿ. ಗುರುಶಾಂತ್*

ರಾಮನಗರ ಊರು ನಿರ್ಮಾಣಗೊಂಡಿದ್ದು, ಕೇವಲ ಇನ್ನೂರ ಹತ್ತು ವರ್ಷಗಳ ಹಿಂದೆ. ಈಗ ಇದು ಜಿಲ್ಲಾ ಕೇಂದ್ರವೂ ಹೌದು. ಆದರೆ ನಾವು ಚರಿತ್ರೆಯ ಪುಟಗಳನ್ನು ಅವಲೋಕಿಸಿದಾಗ ಕ್ರಿಶ. ೧೮೦೦ಕ್ಕೆ ಮುಂಚೆ ರಾಮನಗರ ಎಂಬ ಈ ಊರೇ ಅಸ್ತಿತ್ವದಲ್ಲಿ ಇರಲಿಲ್ಲ. ಬ್ರಿಟೀಷರು ಕ್ರಿ.ಶ. ೧೭೯೯ರಲ್ಲಿ ಅಂದಿನ ಮೈಸೂರು ಸೈನ್ಯವನ್ನು ಸೋಲಿಸಿ ಇಡೀ ಮೈಸೂರು ರಾಜ್ಯವನ್ನು ತನ್ನ ನೇರ ಆಡಳಿತಕ್ಕೆ ಸೇರಿಸಿಕೊಂಡಿತು. ಆಗ ಮೈಸೂರು ಅರಸು ಮನೆತನ ಅಸ್ತಿತ್ವದಲ್ಲಿತ್ತು. ಆದರೆ ಟೀಪೂ ಸುಲ್ತಾನ ಮೈಸೂರು ರಾಜ್ಯದ ರಾಜ್ಯಭಾರವನ್ನು ಶ್ರೀರಂಗಪಟ್ಟಣದಿಂದ ನಡೆಸುತ್ತಿದ್ದನು.

ಬ್ರಿಟೀಷರು ಟೀಪುಸುಲ್ತಾನನ ನೇತೃತ್ವದ ಸೈನ್ಯದ ಮೇಲೆ ಹಾಗೂ ಆಗ ಮೈಸೂರು ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದ ಮೇಲೆ ೧೭೯೯ ರಲ್ಲಿ ದಾಳಿ ಮಾಡಿ ಯುದ್ದದಲ್ಲಿ ಟೀಪು ಸುಲ್ತಾನನ್ನು ಹತ್ಯೆಗೈದು ಮೈಸೂರು ರಾಜ್ಯದ ಮೇಲೆ ಆಂಗ್ಲರ ಅಂದರೆ ಬ್ರಿಟೀಷರ ಆಡಳಿತ ಸ್ಥಾಪಿಸಿದರು.

ಬ್ರಿಟೀಷರು ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡುವುದಕ್ಕೆ ಬೆಂಗಳೂರಿನಿಂದ ಹೊರಟು ತಮ್ಮ ಜೊತೆಯಲ್ಲಿ ಮರಾಠರನ್ನು ಮತ್ತು ನೈಜಾಮನ ಸೈನ್ಯಗಳನ್ನು ಜೊತೆಗೂಡಿಸಿಕೊಂಡು ಬೃಹತ್ ಸೈನ್ಯದೊಡನೆ ರಾತ್ರಿಯಲ್ಲಿ ದಾಳಿ ಮಾಡಿ ಮೈಸೂರು ಸೈನ್ಯವನ್ನು ಸೋಲಿಸಿ ಟೀಪು ಸುಲ್ತಾನನ ಪತನಕ್ಕೆ ಕಾರಣರಾದರು ಎಂಬ ವಿಷಯಗಳು ಚರಿತ್ರೆಯಲ್ಲಿ ದಾಖಲಾಗಿವೆ.

ರಾಮನಗರ ಊರಿನ ಸ್ಥಾಪನೆಯ ವಿಷಯಕ್ಕೆ ಟೀಪುಸುಲ್ತಾನನ ನೇತೃತ್ವದ ಮೈಸೂರು ಸೈನ್ಯ ಸೋತು ಶ್ರೀರಂಗಪಟ್ಟಣ ಅಂದರೆ ಮೈಸೂರು ರಾಜ್ಯ ಬ್ರಿಟೀಷರ ವಶವಾದದ್ದಕ್ಕೂ ನೇರ ಸಂಬಂಧವಿದೆ. ಆಗ ಮೈಸೂರು ರಾಜ್ಯದ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣಕ್ಕೆ ಮುಖ್ಯ ಮಾರ್ಗವು ಇಂದಿನ ರಾಮಗಿರಿ ಬೆಟ್ಟದ ಮಾರ್ಗದಿಂದ ಚನ್ನಪಟ್ಟಣ, ಮದ್ದೂರು ಮತ್ತು ಮಂಡ್ಯ ಮೂಲಕವಾಗಿತ್ತು. ಬ್ರಿಟೀಷರ ಸೈನಿಕರ ದಾಳಿಯನ್ನು ಈ ಮಾರ್ಗದಲ್ಲಿ ನಿರೀಕ್ಷಿಸಿದ್ದ ಟೀಪುಸುಲ್ತಾನ್ ಈ ಮಾರ್ಗದಲ್ಲಿ ತನ್ನ ಹೆಚ್ಚಿನ ಸೈನ್ಯವನ್ನು ನಿಯೋಜಿಸಿದ್ದನು. ಇದನ್ನು ಮುಂಚಿತವಾಗಿ ಅರಿತ ಬ್ರಿಟೀಷರು ತಮ್ಮ ಸೈನ್ಯದ ಮಾರ್ಗವನ್ನು ಬದಲಿಸಿ ಇಂದಿನ ಕನಕಪುರ, ಮಳವಳ್ಳಿ, ಅರೆಕೆರೆ ಮಾರ್ಗವಾಗಿ ಹೋಗಿ ಶ್ರೀರಂಗಪಟ್ಟಣದ ಮೇಲೆ ಯಶಸ್ವಿ ರಾತ್ರಿ ದಾಳಿ ನಡೆಸಿ ಯುದ್ಧವನ್ನು ಗೆದ್ದದ್ದೂ ಸಹ ಇತಿಹಾಸದಲ್ಲಿ ದಾಖಲಾಗಿದೆ.

ಈ ರೀತಿ ಕನಕಪುರ ಮಾರ್ಗವಾಗಿ ಬ್ರಿಟೀಷರ ಸೈನ್ಯ ಸಾಗುವುದಕ್ಕೆ ಆಗ ದೊಡ್ಡ ಅಡ್ಡಿಯಾಗಿದ್ದದ್ದು, ಈಗ ಕಾಲುವೆಯಂತಿರುವ ಅರ್ಕಾವತಿ ನದಿ. ಆಗ ನದಿಯ ಪಾತ್ರ ಹೆಚ್ಚು ಅಗಲವಾಗಿದ್ದು, ಅಪಾರ ಜಲರಾಶಿ ರಭಸದಿಂದ ಹರಿಯುತ್ತಿತ್ತು. ಅದನ್ನು ಬೃಹತ್ ಸೈನ್ಯ ಮತ್ತು ಸೈನಿಕರ ಸರಂಜಾಮುಗಳ ಜೊತೆ ದಾಟುವುದು ಅಸಾಧ್ಯವಾದ ಕಾರ್ಯವಾಗಿತ್ತು. ಆಗ ಇಂದಿನ ರಾಮನಗರ ಪ್ರದೇಶದಲ್ಲಿ ಬೆರಳೆಣಿಕೆಯಷ್ಟು ಕೆಲವೇ ಹಳ್ಳಿಗಳಿದ್ದು, ಜನಸಂಖ್ಯೆಯೂ ಕಡಿಮೆಯಿತ್ತು. ಆದರೂ ಅರ್ಕಾವತಿ ನದಿಯ ಅಕ್ಕ-ಪಕ್ಕದಲ್ಲಿದ್ದ ಹಳ್ಳಿಯ ಜನರು ನೀಡಿದ ಸಹಾಯದಿಂದಲೇ ಬ್ರಿಟೀಷರು ಅರ್ಕಾವತಿ ನದಿಯನ್ನು ಯಶಸ್ವಿಯಾಗಿ ದಾಟಲು ಸಾಧ್ಯವಾದದ್ದು. ಈ ರೀತಿ ಬ್ರಿಟೀಷರು ತಮ್ಮ ಬೃಹತ್ ಸೈನ್ಯ ಮತ್ತು ಸರಂಜಾಮುಗಳ ಜೊತೆ ನದಿ ದಾಟಲು ಕಾರಣವಾದ ಸ್ಥಳೀಯ ಜನರ ಸಹಕಾರ ಟೀಪುಸುಲ್ತಾನನ ರಕ್ಷಣಾವ್ಯೂಹ ತಲೆಕೆಳಗಾಗಿ ಅವನು ಸೋಲುವುದಕ್ಕೂ ಪ್ರಮುಖ ಕಾರಣವಾಯಿತು.

೧೭೯೯ರ ಯುದ್ಧದಲ್ಲಿ ಗೆಲುವು ಸಾದಿಸಿದ ಬ್ರಿಟೀಷ್ ಸೈನ್ಯದ ಕರ್ನಲ್‌ನಾಗಿದ್ದ ಬ್ಯಾರಿಕ್ಲೋಸ್ ಅರ್ಕಾವತಿ ನದಿ ದಾಟಲು ಆಗ ಸಹಾಯ ಮಾಡಿದ ಅರ್ಕಾವತಿ ನದಿಯ ಬಳಿಯ ಹಳ್ಳಿಯ ಜನರ ಉಪಕಾರಕ್ಕಾಗಿ ಪ್ರತಿಯಾಗಿ

* # ೩೦೭, ಜಿ೨ ಗೆಲಾಕ್ಸಿ ಅಪಾರ್ಟ್‌ಮೆಂಟ್, ಶ್ರೀನಿವಾಸಪುರ ಮುಖ್ಯರಸ್ತೆ, ರಾಜರಾಜೇಶ್ವರಿನಗರ, ಬೆಂಗಳೂರು-೫೬೦೦೯೮.

ಕೊಡುಗೆಯನ್ನು ನೀಡಬೇಕೆಂದು ಯುದ್ಧ ಮುಗಿದ ಸ್ವಲ್ಪ ಕಾಲದ ಮೇಲೆ, ಇಂದಿನ ರಾಮನಗರದಲ್ಲಿ ಮನೆಮಾಡಿಕೊಂಡು ಕೆಲವು ಕಾಲ ವಾಸವಾಗಿದ್ದ. ಆಗ ಯಾವ ಹೆಸರೂ ಇರದಿದ್ದ ಆ ಪ್ರದೇಶದಲ್ಲಿ ನೂತನವಾಗಿ ಊರನ್ನು ನಿರ್ಮಾಣ ಮಾಡಿದನು. ಇಂದಿನ ರಾಮನಗರದ ಈಗ ಜಿಲ್ಲಾ ಆಸ್ಪತ್ರೆ ಇದ್ದ ಜಾಗವೇ ಕರ್ನಲ್ ಬ್ಯಾರಿಕ್ಲೋಸ್ ವಾಸವಾಗಿದ್ದ ಸ್ಥಳ. ಆಗ ಸ್ಥಾಪಿತವಾದ ನೂತನ ಊರು 'ಕ್ಲೋಸ್‌ಪೇಟೆ' ಎಂದು ನಾಮಕಾರಣಗೊಂಡು, ಅಸ್ಥಿತ್ವಕ್ಕೆ ಬಂತು. ಅದರ ಸ್ಥಾಪನೆಯ ಶಾಸನದ ಕಲ್ಲನ್ನು ರಾಮನಗರ ಪಟ್ಟಣದ ಮಧ್ಯಭಾಗದಲ್ಲಿ ಇಂದಿಗೂ ಕಾಣಬಹುದು. ಆ ಶಾಸನದ ಪಾಠ ಈ ರೀತಿ ಇದೆ:

"ಕುಲೂಸು ಪೆಟೆಯೂ ರಾಜೆ ಮಹ
ರಾಜೇಸಾಹೇಬರವರ್ರು ತಮ್ಮ ದೋಸ್ತರಾ
ದ ಕರ್ನಲ್ ಕುಲೂಸ ಸಾಹೇಬರವರ ಹೆಸ
ರ್ರಿನಲ್ಲಿ ಶಾಲಿವಾಹನ ಶಕ ಸಿದ್ಧಾರ್ಥಿ ಸಂವತ್ಸರದಲ್ಲಿ ಕಟ್ಟಿಸಿದ್ರು"

ಶಾಸನದ ಈ ವಿಷಯವನ್ನು ಉರ್ದು ಭಾಷೆಯಲ್ಲಿಯೂ ಬರೆಯಲಾಗಿದೆ. ಈ ಶಾಸನ ಸ್ಥಾಪಿಸಿದ ದಿನಾಂಕವಿಲ್ಲ ಆದ್ದರಿಂದ ಜನಪದ ಐತಿಹ್ಯದಲ್ಲಿ ೨೨-೭-೧೭೯೮ರಲ್ಲಿ ಕರ್ನಲ್ ಬ್ಯಾರಿಕ್ಲೋಸ್ ಮತ್ತು ದಿವಾನ್ ಪೂರ್ಣಯ್ಯರವರಿಗೆ ನದಿ ದಾಟಲು ಸಹಾಯ ಮಾಡಿದರು ಎಂಬ ವಿಚಾರ ತಿಳಿದುಬರುವುದಾದರೂ, ಯುದ್ಧ ಕಾಲದಲ್ಲಿ ನದಿಯ ಅಕ್ಕ-ಪಕ್ಕ ಇದ್ದ ಹಳ್ಳಿಯ ಜನರು ಸಹಾಯವೂ ಮಾಡಿದ ಕಾರಣಕ್ಕೆ ಅವನು ಇಲ್ಲಿ ನಿಂತು ಊರು ಕಟ್ಟಿಸಿದನು ಎಂಬುದು ಸೂಕ್ತ. ಇಂದಿನ ರಾಮನಗರದ ಸ್ಥಾಪನೆಯ ಕಾಲಕ್ಕೆ ಕೆಲವೇ ಹಳ್ಳಿಗಳಿದ್ದು, ಜನಸಂಖ್ಯೆಯೂ ಕಡಿಮೆ ಇದ್ದ ಕಾರಣ ಮತ್ತು ಬ್ರಿಟೀಷ್ ಸೈನಕ ವಸಹಾತು ನೆಲೆಸುವುದಕ್ಕಾಗಿ ಆಗ ಇದ್ದ ಸುತ್ತಲ ಹಳ್ಳಿಯ ಜನರನ್ನು ಇಲ್ಲಿ ನೆಲೆಗೊಳಿಸಲಾಯಿತು. ರಾಮಗಿರಿ ಬೆಟ್ಟದ ಬಳಿಯಿದ್ದ ಕೆಲವು ಹಳ್ಳಿಗಳು ಜನರನ್ನು ಇಲ್ಲಿ ಸ್ಥಳಾಂತರಿಸಲಾಯಿತು. ಬ್ರಿಟೀಷ್ ಸೈನ್ಯದ ತುಕಡಿಯ ವಸತಿಗಳೂ ಸಹ ಇಲ್ಲಿ ಸ್ಥಾಪಿತವಾಗಿ ಊರು ಅಸ್ತಿತ್ವಕ್ಕೆ ಬಂದಿತು. ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಹಲವು ವರ್ಷಗಳ ನಂತರ 'ಕ್ಲೋಸ್‌ಪೇಟ್' ಆಗಿದ್ದ ಊರು ರಾಮನಗರವಾಯಿತು. ಇದು ರಾಮನಗರ ಪಟ್ಟಣದ ಸಂಕ್ಷಿಪ್ತ ಹಿನ್ನಲೆ.

ಪ್ರಸಕ್ತ ಸಂದರ್ಭದಲ್ಲಿ ರಾಮನಗರ ಜಿಲ್ಲೆಯಲ್ಲಿ ಮುಖ್ಯವಾಗಿ ಒಕ್ಕಲಿಗ ಜನಾಂಗ ಹೆಚ್ಚಾಗಿ ಕಂಡುಬರುತ್ತಾರೆ. ಆದರೆ ನಾವು ಪ್ರಾಚೀನ ಚರಿತ್ರೆಯನ್ನು ನೋಡಿದರೆ ಇಂದಿನ ರಾಮನಗರ ಜಿಲ್ಲೆಯಲ್ಲಿ ವಿವಿಧ ವರ್ಗಕ್ಕೆ ಸೇರಿದ ೧೮ಕ್ಕೂ ಹೆಚ್ಚು ಜಾತಿಯ ಜನಗಳಿದ್ದದ್ದು, ಕಂಡುಬರುತ್ತದೆ.

ಕ್ರಿ.ಶ. ೧೪ನೇ ಶತಮಾನದವರೆಗೂ ಜೈನರ ಪ್ರಾಬಲ್ಯ ಇಲ್ಲಿ ಹೆಚ್ಚಾಗಿತ್ತು. ಗಂಗರ ಅವನತಿಯೊಂದಿಗೆ ಇವರ ಪ್ರಾಬಲ್ಯ ಇಳಿಮುಖ ಹೊಂದಲಾರಂಭಿಸಿ, ಈಗ ಇಡೀ ಜಿಲ್ಲೆಯಲ್ಲಿ ಜೈನ ಸಮುದಾಯದವರು ಅಲ್ಪಸಂಖ್ಯಾತರಾಗಿದ್ದಾರೆ. ಪ್ರಾಚೀನ ಚರಿತ್ರೆಯನ್ನು ನೋಡಿದರೆ, ಈ ಜಿಲ್ಲೆಯಲ್ಲಿ ಬೌದ್ದರೂ ಇದ್ದಂತೆ ಕಂಡುಬಂದು, ಅದರ ಕುರುಹು ಇಂದಿನ ಮಾಗಡಿ ತಾಲ್ಲೂಕಿನ ಕಲ್ಯಾ ಗ್ರಾಮದಲ್ಲಿ ಗುರುತಿಸಲಾಗುತ್ತದೆ.

ರಾಮನಗರ ಜಿಲ್ಲೆಯಲ್ಲಿ ವಿಭಿನ್ನ ಕಾಲಘಟ್ಟದಲ್ಲಿ ವಿವಿಧ ರೀತಿಯ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತ್ಯಂತರಗಳನ್ನು ಗುರುತಿಸಬಹುದು. ಈ ವಿಷಯಕ್ಕೆ ಉತ್ತಮ ಉದಾಹರಣೆಯೆಂದರೆ ಮಾಗಡಿ ತಾಲ್ಲೂಕಿನ ಇಂದಿನ ಕಲ್ಯಾ ಗ್ರಾಮ. ಇದೊಂದು ಐದು ಸಾವಿರ ವರ್ಷಗಳ ಚರಿತ್ರೆಯನ್ನು ಗುರುತಿಸಬಹುದಾದ ಸ್ಥಳ. ಕಲ್ಯ ಮತ್ತು ಸಾವನದುರ್ಗಗಳಲ್ಲಿ ನವ ಶಿಲಾಯುಗದ ಕಲ್ಲಿನ ಗೋರಿಗಳು ಅಂದರೆ ಸ್ಥಳೀಯರ ಬಾಯಲ್ಲಿ ಪಾಂಡವರ ಗುಡಿಗಳು, ಅದಕ್ಕೆ ಪೂರಕವಾದ ಸಾಕ್ಷ್ಯಾಧಾರಗಳಾದ ಪುರಾತನ ಮಾನವನು ಉಪಯೋಗಿಸುತ್ತಿದ್ದ, ಕೆಂಪುಬಣ್ಣದ ಮಡಿಕೆ ಚೂರುಗಳು, ಕಲ್ಲಿನ ಕೊಡಲಿ ಮುಂತಾದವುಗಳು ಪತ್ತೆಯಾಗಿವೆ. ಜಿಲ್ಲೆಯಲ್ಲಿ ಅನೇಕ ಭಾಗಗಳಲ್ಲಿ ಕಲ್ಗೋರಿಗಳು ಕಂಡುಬರುತ್ತವೆ. ಬೌದ್ಧರು, ಸಿದ್ದರು ಮತ್ತು ಜೈನಯತಿಗಳು ಸಹ ಈ ಜಿಲ್ಲೆಯ ಪ್ರದೇಶಗಳಲ್ಲಿ ಇದ್ದದ್ದು ಕಂಡುಬರುತ್ತದೆ. ರಾಮನಗರ ತಾಲ್ಲೂಕಿನ ಹರಿಸಂದ್ರ, ಸುಗ್ಗನಹಳ್ಳಿ, ಮಾಗಡಿ ತಾಲ್ಲೂಕಿನ ಕಲ್ಯ, ಸಾವನದುರ್ಗ, ತಿಪ್ಪಸಂದ್ರ, ಹೂಜಿಗಲ್ಲು ಮುಂತಾದ ಊರುಗಳ ಗುಹೆಗಳಲ್ಲಿ ಹಾಗೂ ಈ ಜಿಲ್ಲೆಯ ಇತರ ತಾಲ್ಲೂಕುಗಳಲ್ಲಿ ಈ ರೀತಿ ಕುರುಹುಗಳು ಕಂಡುಬರುತ್ತವೆ.

ಅದರೆ ಕಾಲದ ಮಹಿಮೆಯ ಪ್ರಭಾವದಿಂದ ಮತ್ತು ಜನಸಂಖ್ಯೆಯ ಏರಿಕೆ ಹಾಗೂ ರಾಜಕೀಯ ಸ್ಥಿತ್ಯಂತರಗಳು ಸಾಮಾಜಿಕ ಹಾಗೂ ಧಾರ್ಮಿಕ ವಿಚಾರಗಳಲ್ಲಿ ಪ್ರಭಾವ ಬೀರಿದ್ದು, ಕ್ರಿ.ಶ. ೯ನೇ ಶತಮಾನದ ನಂತರ ಚೋಳರಿಂದ ಜೈನರ ಗಂಗ ರಾಜ್ಯದ ಅವನತಿಯು ಪ್ರಾರಂಭವಾಯಿತು. ಗಂಗರ ರಾಜ್ಯ ಅಂತ್ಯಗೊಂಡರೂ, ಜೈನರು ರಾಜ್ಯಾಶ್ರಯ ಕಳೆದುಕೊಂಡರೂ, ಅವರು ವ್ಯಾಪಾರದಲ್ಲಿ ತೊಗಡಿಸಿಕೊಂಡಿದ್ದರಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಧಾರ್ಮಿಕವಾಗಿಯೂ

ಪ್ರಬಲರಾಗಿದ್ದರು. ಈ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತ್ಯಂತರಕ್ಕೆ ಸೂಕ್ತ ಉದಾಹರಣೆ ರಾಮನಗರ ತಾಲ್ಲೂಕಿನ ಸುಗ್ಗನಹಳ್ಳಿ. ಈ ಬಗ್ಗೆ ವಿವರಗಳು ಅರ್ಕಾವತಿ ಸ್ಮರಣ ಸಂಚಿಕೆಯಲ್ಲಿ ದಾಖಲಾಗಿವೆ.

ಕ್ರಿ.ಶ. ೧೧ ಮತ್ತು ೧೨ನೇ ಶತಮಾನದಲ್ಲಿ ತಮಿಳುನಾಡಿನಿಂದ ಅಧಿಕ ಸಂಖ್ಯೆಯಲ್ಲಿ ಬಂದ ಶ್ರೀವೈಷ್ಣವ ಧರ್ಮಾನುಯಾಯಿಗಳು ಮತ್ತು ಅಚಾರ್ಯರು ಕ್ರಿ.ಶ. ೧೪ನೇ ಶತಮಾನದ ಕಾಲಕ್ಕೆ ಬಹಳ ಪ್ರಭಾವಶಾಲಿಗಳಾಗಿದ್ದರು. ಅವರು ಜೈನರೊಡನೆ ಹಿಂಸಾತ್ಮಕ ರಕ್ತಸಿಕ್ತ ಸಂಘರ್ಷ ನಡೆಸಿ ಅನ್ಯಾಯವಾಗಿ ಜೈನರ ಹತ್ಯೆಯೂ ಆಯಿತು. ಮಾಗಡಿ ಸೀಮೆಯ ಪ್ರದೇಶಗಳಲ್ಲಿ ಪ್ರಭಾವ ಶಾಲಿಗಳಾಗಿದ್ದ ಜೈನರು ಶ್ರೀವೈಷ್ಣವರಿಂದ ತೀವ್ರ ತೊಂದರೆಗೆ ಒಳಗಾಗಿ ಬಹಳ ಕಷ್ಟ-ನಷ್ಟ ಅನುಭವಿಸಿದ್ದಲ್ಲದೆ ಅವರ ಬಸದಿಗಳ ನಾಶವಾಗಿ ಅವರ ಧಾರ್ಮಿಕ ಆಚರಣೆಗಳಿಗೂ ಶ್ರೀವೈಷ್ಣವರು ಅಡ್ಡಿಯುಂಟು ಮಾಡಿದರು. ಕ್ರಿ.ಶ. ೧೪ನೇ ಶತಮಾನದಲ್ಲಿ ರಾಮನಗರ ಜಿಲ್ಲೆಯು ವಿಜಯನಗರ ಸಾಮ್ರಾಜ್ಯದ ಸಂಗಮ ವಂಶದ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಉಲ್ಲೇಖಿತ ಜೈನರ ಮತ್ತು ಶ್ರೀವೈಷ್ಣವರ ಕಲಹ ತೀವ್ರಗೊಂಡು, ಶ್ರೀ ವೈಷ್ಣವರಿಂದ ಜೈನರ ಪ್ರಾಣಹಾನಿಯಂತಹ ಅಹಿತಕರ ಘಟನೆಗಳು ನಡೆದಂತಹ ಸಂದರ್ಭದಲ್ಲಿ ಈ ಪ್ರದೇಶವನ್ನಾಳುತ್ತಿದ್ದ ಒಂದನೇ ಬುಕ್ಕ ರಾಜನ ಬಳಿಗೆ ದೂರು ನೀಡಿದಾಗ ಅವನು ಶ್ರೀವೈಷ್ಣವ ಮುಖಂಡರು, ಮತ್ತು ಜೈನ ಮುಖಂಡರನ್ನು ಕರೆಸಿ ಸಮಾಜದ ೧೮ ಜಾತಿಗಳ ಮುಖಂಡರ ಹಾಗೂ ಇತರ ಮುಖಂಡರುಗಳ ಮುಂದೆ ಮತ್ತು ತಮಿಳು ನಾಡಿನಲ್ಲಿರುವ ಶ್ರೀ ವೈಷ್ಣವ ಕ್ಷೇತ್ರಗಳಾದ ಶ್ರೀರಂಗಂ, ಕಂಚಿ, ತಿರುಪತಿ (ಆಗ ಇದು ತಮಿಳು ಪ್ರದೇಶಕ್ಕೆ ಸೇರಿತ್ತು) ಮತ್ತು ಕರ್ನಾಟಕದ ಮೇಲುಕೋಟೆಯ ಶ್ರೀವೈಷ್ಣವ ಮಠದ ಗುರುಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಬುಕ್ಕನು ಶ್ರೀ ವೈಷ್ಣವರ ಅನ್ಯಾಯದ ನಡೆಗಳ ಬಗ್ಗೆ ತನ್ನ ಅಸಮಾದಾನ ತಿಳಿಸಿ ವಿಚಾರಣೆ ನಡೆಸಿ, ರಾಜನಿರ್ಣಯ ಕೈಗೊಂಡು ಶ್ರೀವೈಷ್ಣವರ ಮತ್ತು ಜೈನರ ಧಾರ್ಮಿಕ ವಿಚಾರಗಳಲ್ಲಿ ವ್ಯತ್ಯಾಸಗಳಿಲ್ಲ ಎಲ್ಲರೂ ಒಂದೇ ಎಂದು ಆ ಧಾರ್ಮಿಕ ವ್ಯಾಜ್ಯಗಳನ್ನು ತೀರ್ಮಾನ ಮಾಡಿದನು. ಅದನ್ನು ಶಾಸನದಲ್ಲಿ ದಾಖಲಿಸಿ, ಆ ಶಾಸನವನ್ನು ಆಗಿನ ಜೈನರ ಪ್ರಮುಖ ಧಾರ್ಮಿಕ ಕೇಂದ್ರವಾಗಿದ್ದ ಮಾಗಡಿ ತಾಲ್ಲೂಕಿನ 'ಕಲ್ಯಾ'ಗ್ರಾಮದಲ್ಲಿ ಸ್ಥಾಪಿಸಿದ್ದಾನೆ. ಅ ಶಾಸನ ಪ್ರಕಟಿತ ಶಾಸನವಾಗಿದ್ದು, ಅದು ಎಪಿಗ್ರಾಫಿಯಾ ಕರ್ನಾಟಿಕ, ೯ ಮಾಗಡಿ ಶಾಸನ ಸಂಖ್ಯೆ ೧೮ ರಲ್ಲಿ ದಾಖಲಾಗಿದೆ. ಈ ರೀತಿಯ ಧಾರ್ಮಿಕ ಮತ್ತು ಸಾಮಾಜಿಕ ವ್ಯಾಜ್ಯದ ತೀರ್ಮಾನ ಇಡೀ ದಕ್ಷಿಣ ಭಾರತದಲ್ಲಿ ಪ್ರಸಿದ್ಧಿ ಹೊಂದಿತ್ತೆಂದು ಡಾ॥ಮನರಾಜಪ್ಪನವರ ತಮ್ಮ ಪಿಹೆಚ್‌ಡಿ ಮಹಾ ಪ್ರಬಂಧ 'ಮಾಗಡಿ ಸೀಮೆ ಇತಿಹಾಸ ಮತ್ತು ಸಂಸ್ಕೃತಿ' ಎಂಬ ಕೃತಿಯಲ್ಲಿ ತಿಳಿಸಿದ್ದಾರೆ. ಈ ವಿಷಯವನ್ನು ಆರ್. ನರಸಿಂಹಚಾರ್‌ರ ೧೯೦೬ ಎಂ.ಎ.ಆರ್. ವರದಿಯಲ್ಲಿಯೂ, ಮಿಥಿಕ್ ಸೊಸೈಟಿ ಬೆಂಗಳೂರು (೧೯೭೩) ಪ್ರಕಟಿಸಿರುವ ಆರ್ಕಿಯಾಲಜಿಕಲ್ ಇನ್ ಮೈಸೂರ್ ಎಂಬ ಆಂಗ್ಲ ಕೃತಿಯ ಸಂಪುಟ ೩-೪ ರಲ್ಲಿಯೂ ಕಾಣಬಹುದು.

ಕಾಲದ ಪ್ರಭಾವದಿಂದ ಹಾಗೂ ಧಾರ್ಮಿಕ ಒತ್ತಡಕ್ಕೆ ಆಗ ಒಳಗಾದ ಜೈನರು ವೈಷ್ಣವ ಧರ್ಮಕ್ಕೂ ಹಾಗೂ ಪ್ರವರ್ಧಮಾನಕ್ಕೆ ಬರುತ್ತಿದ್ದ ವೀರಶೈವ (ಲಿಂಗಾಯತ) ಧರ್ಮಕ್ಕೂ ಮತಾಂತರಗೊಂಡರೆಂದು ಹೇಳಲಾಗಿದೆ. ಡಾ॥ ಎಂ. ಚಿದಾನಂದಮೂರ್ತಿರವರ ಸಂಶೋಧನೆಯ ಪ್ರಕಾರ ಶ್ರವಣಬೆಳಗೊಳದಲ್ಲಿನ ಇಂತಹದ್ದೇ ಶಾಸನವು ಕಲ್ಯಾದಲ್ಲಿ ಸ್ಥಾಪಿಸಿದ ನಂತರದ ಶಾಸನವೆಂದು ತಿಳಿದು ಬಂದಿದೆ.

ಮೇಲೆ ಉಲ್ಲೇಖಿಸಿದ ಡಾ॥ ಮುನಿರಾಜಪ್ಪನವರ 'ಮಾಗಡಿ ಸೀಮೆ ಇತಿಹಾಸ ಮತ್ತು ಸಂಸ್ಕೃತಿ' ಕೃತಿಯಲ್ಲಿ ಈ ಪ್ರದೇಶದ ಒಕ್ಕಲಿಗ ಜನಾಂಗದವರೂ ಸಹ ಸಾಕಷ್ಟು ಸಂಖ್ಯೆಯಲ್ಲಿ ವೀರಶೈವ (ಲಿಂಗಾಯುತ) ಧರ್ಮ ಸ್ವೀಕರಿಸಿದ್ದು, ಕೆಲವು ಕಾಲನಂತರ ಕೆಲವು ಕುಟುಂಬಗಳು ಮತ್ತೆ ಒಕ್ಕಲಿಗ ಧರ್ಮಕ್ಕೆ ಹಿಂತಿರುಗಿದರು. ಆದರೆ ಅನೇಕರು ಲಿಂಗಾಯಿತ/ ವೀರಶೈವ ಧಾರ್ಮಿಕ ಆಚರಣೆಗಳನ್ನು ನಂತರವೂ ಮುಂದುವರಿಸಿಕೊಂಡು ಹೋಗುತ್ತಿದ್ದಾರೆಂದು ತಿಳಿಸಲಾಗಿದೆ. ಇದು, ಈ ಜಿಲ್ಲೆಯಲ್ಲಿ ನಡೆದಿರುವ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತ್ಯಂತರಗಳಿಗೆ ಸಾಕ್ಷಿಯಾಗಿವೆ. ಮಾಗಡಿ ತಾಲ್ಲೂಕಿನ ಸುಗ್ಗನಹಳ್ಳಿ ಪ್ರದೇಶದ ಒಕ್ಕಲಿಗರು ವೀರಶೈವ ಧರ್ಮ ಸ್ವೀಕಾರ ಮಾಡಿದ್ದ ನಂತರ ಒಕ್ಕಲಿಗರಾದ ಬಗ್ಗೆ ಜನಪದರಲ್ಲಿರುವ ವಿಷಯವನ್ನು ಡಾ॥ ಎಂ.ಜಿ. ನಾಗರಾಜ 'ಅರ್ಕಾವತಿ' ಸ್ಮರಣ ಸಂಚಿಕೆಯ ಪುಟ ೨೪ರಲ್ಲಿ ತಿಳಿಸಿದ್ದಾರೆ. ('ಅರ್ಕಾವತಿ' ೬೭ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಪರಿಷತ್, ೧೯೯೯ ಪು. ೨೧೦-೨೫೭)

ಈ ವಿಷಯದಲ್ಲಿ ಇನ್ನೊಂದು ಪ್ರಮುಖ ಉದಾಹರಣೆ ಕಾಣಬಹುದು. ಚನ್ನಪಟ್ಟಣದಿಂದ ೫ ಕಿ.ಮೀ.ಗಳ ದೂರದಲ್ಲಿರುವ ಇಂದಿನ ಕೂಡ್ಲೂರು ಚಾರಿತ್ರಿಕವಾಗಿ ಬಹಳ ಪ್ರಮುಖ ಸ್ಥಾನ ಪಡೆದಿದೆ. ಇದು ಜೈನ ಪ್ರಮುಖ ಕೇಂದ್ರವಾಗಿದ್ದು ನಂತರದ ಕಾಲದಲ್ಲಿ ಶೈವ ಕ್ಷೇತ್ರವಾಗಿದೆ. ಹಿಂದೆ ಈ ಊರಿನಲ್ಲಿ ಅನೇಕ ಜೈನ ಬಸದಿಗಳು ಶಿವನ ದೇವಾಲಯಗಳೂ ಇದ್ದವು. ಇಂದಿಗೆ ಜೈನ ಬಸದಿಗಳೆಲ್ಲವೂ ನಾಶವಾಗಿವೆ. ('ಅರ್ಕಾವತಿ ಸಂಚಿಕೆಯ ಪುಟ ೩೦೨).

ಹಿಂದೆ ಬಹಳ ಪ್ರಮುಖ ಸ್ಥಾನ ಪಡೆದಿದ್ದ ಈ ಊರಿನ ಪಂಚಲಿಂಗೇಶ್ವರ ದೇವಸ್ಥಾನ ನಾಶಗೊಂಡಿದೆ. ಆ ಊರಿನಲ್ಲಿ ಕೊಳದ ನಿರ್ಮಾಣದಲ್ಲಿ ಪಂಚಲಿಂಗೇಶ್ವರ ದೇವಸ್ಥಾನದ ಕಂಬಗಳು ಮತ್ತು ಇತರ ತೊಲೆ ಕಲ್ಲುಗಳು ಬಳಕೆಗೊಂಡಿರುವುದು ಕಂಡುಬರುತ್ತದೆ. ದೇವಾಲಯದ ಹಲವು ಕಲ್ಲು, ಕಂಬಗಳ ಅವಶೇಷ ಕೊಳದಲ್ಲಿ ದೊರಕುತ್ತದೆ. ದೇವಸ್ಥಾನದಲ್ಲಿದ್ದ ಶಿವ, ಪಾರ್ವತಿ ಮತ್ತು ನಟರಾಜನ ಪಂಚಲೋಹದ ಮೂರ್ತಿಗಳು ಸಮೀಪದಲ್ಲಿದ್ದ ಪಾಳುಭಾವಿಯಲ್ಲಿ ದೊರೆತಿವೆ. ಪ್ರಾಚ್ಯ ಇಲಾಖೆಯ ನಿರ್ದೇಶಕರಾಗಿದ್ದ ಡಾ॥ ಎಸ್.ಆರ್. ರಾವ್ ಆ ಪಂಚಲೋಹದ ವಿಗ್ರಹಗಳನ್ನು ಬಾವಿಯಿಂದ ತೆಗೆಸಿ, ಅವುಗಳನ್ನು ಕಸ್ತೂರಿ ಬಾ ರಸ್ತೆಯಲ್ಲಿರುವ ಸರಕಾರಿ ಮ್ಯೂಸಿಯಂನಲ್ಲಿ ಇರಿಸಿದ್ದಾರೆ. ಈ ವಿಚಾರವು ಎಂ.ಎ.ಆರ್. (೧೯೪೬-೧೯೪೭) ನಲ್ಲಿ ದಾಖಲಾಗಿದೆ.

ಈ ಪಂಚಲಿಂಗೇಶ್ವರ ದೇವಾಲಯಗಳಲ್ಲಿದ್ದ ಶಿಲಾಶಾಸನಗಳನ್ನು ಮತ್ತು ಶಾಸನ ಕಲ್ಲುಗಳನ್ನು ಕೂಡ್ಲೂರಿನ ಚೆಲ್ಲಮ್ಮನ ದೇವಸ್ಥಾನದ ಹಾಗೂ ಚನ್ನಪಟ್ಟಣದ ಸಮೀಪದ ಶ್ರೀ ವೈಷ್ಣವ ದೇವಸ್ಥಾನಗಳಲ್ಲಿ ಕಂಡುಬಂದಿವೆ. ಇಲ್ಲಿ ಕಂಡುಬರುವ ಆಶ್ಚರ್ಯಕರ ವಿಚಾರವೆಂದರೆ, ಶೈವ ದೇವಾಲಯವೊಂದು ನಾಶವಾಗಿರುವ ಈ ಊರಿನಲ್ಲಿನ ವೈಷ್ಣವ ದೇವಸ್ಥಾನಗಳಿಗೆ ಯಾವುದೇ ದಕ್ಕೆಯಾಗದೆ, ಈ ದೇವಾಲಯಗಳು ಈಗ ಮುಜುರಾಯಿ ಇಲಾಖೆಗೆ ಒಳಪಟ್ಟು ಸುಸ್ಥಿತಿಯಲ್ಲಿವೆ. ಶಾಸನಗಳ ನಾಶ ಮತ್ತು ಸ್ಥಾನಪಲ್ಲಟ ಗೊಂಡಿರುವ ಈ ವಿಷಯಗಳ ಬಗ್ಗೆ ಪ್ರಾಚ್ಯ ಇಲಾಖೆಯ ನಿರ್ದೇಶಕರಾಗಿದ್ದ ಆರ್. ನರಸಿಂಹಚಾರ್ ರವರ ಎಂ.ಎ.ಆರ್ (೧೯೦೬-೧೯೧೧) ರಲ್ಲಿ ದಾಖಲಾಗಿದೆ.

ರಾಮನಗರದ ಮಾಗಡಿ ರಸ್ತೆಯಲ್ಲಿರುವ ಯತಿರಾಜ ಸ್ವಾಮಿ ಬೆಟ್ಟಕ್ಕೆ ಹಿಂದೆ ಸಿದ್ದರ ಬೆಟ್ಟವೆಂಬ ಹೆಸರಿತ್ತು. ಅಲ್ಲಿ ಸಿದ್ದರು ವಾಸವಾಗಿದ್ದರು. ಆ ಸಿದ್ದರಿಗೆ ರಾಮನುಜಾರ್ಯರು ತಮ್ಮ 'ವಿಶ್ವರೂಪ' ತೋರಿಸಿದಾಗ ಅವರು ಹೆದರಿ ಆ ಜಾಗ ಬಿಟ್ಟುಹೋದರೆಂದು ಹೇಳಲಾಗುತ್ತದೆ. ಆದರೆ ಆ ಬೆಟ್ಟದಲ್ಲಿ ಹಲವಾಗು ಗುಹೆಗಳಿದ್ದು, ಇಂದಿಗೂ ಸಹ ಅವುಗಳನ್ನು ಸಿದ್ದರ ಗುಹೆಗಳು ಎಂದೇ ಸ್ಥಳೀಯರು ಕರೆಯುತ್ತಾರೆ. ಸೂಕ್ಷ್ಮವಾಗಿ ಗಮನಿಸಿದರೆ ಆ ಬೆಟ್ಟದ ಗುಹೆಗಳಲ್ಲಿದ್ದ ಸಿದ್ದರನ್ನು ಭಯ ಹುಟ್ಟಿಸಿ ಅಲ್ಲಿಂದ ಓಡಿಸಿರಬಹುದೆಂಬ ಸಂಶಯ ಬರದಿರಲಾರದು.

ಧಾರ್ಮಿಕ ಅಸಹಿಷ್ಣತೆಯ ಕುರಿತಾಗಿ ಕೇಳಿಬರುವ ಹಲವಾರು ಐತಿಹ್ಯಗಳಲ್ಲಿ ಮತ್ತೊಂದು ಉದಾಹರಣೆಯೆಂದರೆ ಕನಕಪುರ ತಾಲ್ಲೂಕಿನ ಹಾರೋಹಳ್ಳಿಯ ಅರುಣಾಚಲ ದೇವಸ್ಥಾನದ ನಿರ್ಮಾಣದ ಹಿಂದಿನ ಒಂದು ವಿಚಾರ. ಹೈದರಾಲಿ ಅದೀನದಲ್ಲಿ, ಮೈಸೂರು ಸರ್ಕಾರದ ಸ್ಥಳೀಯ ಅಧಿಕಾರಿಯಾಗಿದ್ದ ಸುಬೇದಾರ್ ವೆಂಕಟಯ್ಯ ಸರ್ಕಾರದ ಹಣವನ್ನು ಬಳಸಿ ಅರುಣಾಚಲ ದೇವಸ್ಥಾನ ನಿರ್ಮಿಸಿದನೆಂದು ಆಪಾದಿಸಿ ಅವನನ್ನು ಮರಣ ದಂಡನೆಗೆ ಒಳಪಡಿಸಲಾಯಿತೆಂದು ಹೇಳಲಾಗುತ್ತದೆ.

ಡಾ॥ ಎಂ.ಜಿ.ನಾಗರಾಜ್ ಹಾಗೂ ಡಾ॥ಮುನಿರಾಜಪ್ಪ ತಮ್ಮ ಪಿಹೆಚ್.ಡಿ ಪ್ರಬಂಧ 'ಮಾಗಡಿ ಸೀಮೆ ಇತಿಹಾಸ ಮತ್ತು ಸಂಸ್ಕೃತಿ'ದಲ್ಲಿ ತಿಳಿಸಿದ್ದು, ಆಗ್ಗೆ ಶ್ರೀವೈಷ್ಣವ ಸಂಪ್ರದಾಯ ಪಾಲಿಸುತ್ತಿದ್ದ ಮೈಸೂರು ಅರಸರು ಕಾರಣಾಂತರಗಳಿಂದ ಕೆಂಪೇಗೌಡನ ಆಳ್ವಿಕೆಗೆ ಒಳಪಟ್ಟಿದ್ದ ಮಾಗಡಿ ಸಾವನದುರ್ಗಗಳನ್ನು ವಶಪಡಿಸಿಕೊಂಡು ಮಾಗಡಿ ಅರಸ ಕೆಂಪವೀರಪ್ಪಗೌಡನನ್ನು ನೆಲಪಟ್ಟಣದಲ್ಲಿ ಬಂದಿಸಿ 'ಕಬ್ಬಿಣ ಪಂಜರದ' ವಾಹನದಲ್ಲಿ ಶ್ರೀರಂಗಪಟ್ಟಣಕ್ಕೆ ದಾರಿಯ ಊರುಗಳಲ್ಲಿ ಮೆರವಣಿಗೆ ರೀತಿ ಕರೆದುಕೊಂಡು ಹೋಗಿ ಶ್ರೀರಂಗಪಟ್ಟಣ ಸೆರೆಯಲ್ಲಿಡುತ್ತಾರೆ. ಕಡೆಯವರೆಗೂ ಅಲ್ಲಿಯೇ ಇದ್ದ ಅವನು ಸೆರೆಯಲ್ಲಿಯೇ ಮರಣ ಹೊಂದುತ್ತಾನೆ. ಅವನ ಮರಣಾನಂತರ ಅವನ ದಾಯಾದಿಯಾದ ಹುಲಿಕಲ್ಲು ಸಂಸ್ಥಾನದ ಬಂಧುವೊಬ್ಬನನ್ನು ಮೈಸೂರ್ ಅರಸರು ಆಯ್ಕೆಮಾಡಿ ಅವನನ್ನು ಮಾಗಡಿ ಸಂಸ್ಥಾನದ ಅರಸನೆಂದು ನೇಮಿಸುತ್ತಾರೆ. ಅರಸನಿಗೆ ನಿಷ್ಠನಾಗಿದ್ದರೆ ತನಗೆ ಉಳಿಗಾಲವೆಂದು ಬಗೆದ ಆತ ತನ್ನ ರಾಜಧಾನಿಗೆ ಕೃಷ್ಣಾನಗರವೆಂಬ ಹೊಸ ಹೆಸರಿಟ್ಟು, ತಾನು ವೈಷ್ಣವ ದೀಕ್ಷೆ ಪಡೆದು ಕೃಷ್ಣರಾಜಗೌಡನೆಂದು ಹೆಸರು ಬದಲಿಸಿಕೊಂಡನೆಂದು ತಿಳಿದು ಬರುತ್ತದೆ. ಮಾಗಡಿ ಕೆಂಪೇಗೌಡ ಅರಸರು ವೀರಶೈವ ಧರ್ಮ ಸ್ವೀಕಾರ ಮಾಡಿದ್ದು, ಶ್ರೀವೈಷ್ಣವ ಪರವಾಗಿದ್ದ ಮೈಸೂರು ಒಡೆಯರ ನಡುವಿದ್ದ ಭಿನ್ನಾಭಿಪ್ರಾಯಕ್ಕೆ ಧರ್ಮವೂ ಕಾರಣವಾಗಿರಬಹುದೆ? ಎಂಬುದು ಚರ್ಚಾರ್ಹ ವಿಚಾರವಾಗಿದೆ. ಅಲ್ಲದೆ, ಮುಂದಿನ ಅರಸು ತನ್ನ ನಿಷ್ಠೆಯನ್ನು ತೋರಲು ಧಾರ್ಮಿಕವಾದ ಬದಲಾವಣೆಗೆ ಮುಂದಾದದ್ದು ಕೂಡ ಅಂದಿನ ಪರಿಸ್ಥಿತಿಯನ್ನು ತಿಳಿಸುತ್ತದೆ.

ಪ್ರಸುತ ಲೇಖನದ ಸೀಮಿತಕ್ಕೆ ಒಳಪಟ್ಟಿರುವ ಕಾರಣ ವಿಷಯ ಮತ್ತು ವಿವರಣೆಗಳನ್ನು ಸಂಕ್ಷಿಪ್ತಗೊಳಿಸಲಾಗಿದೆ. ಮೇಲೆ ತಿಳಿಸಿರುವ ರಾಮನಗರ ಜಿಲ್ಲೆಯ ಪ್ರದೇಶ ಪುರಾತನ ನೂತನ ಶಿಲಾಯುಗದಿಂದ ಆಧುನಿಕ ಕಾಲದವರೆಗಿನ ಚರಿತ್ರೆಯನ್ನು ಹೊಂದಿದ್ದು, ಅದು ವಿವಿಧ ಕಾಲಘಟ್ಟಗಳಲ್ಲಿ ರಾಜಕೀಯ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತ್ಯಂತರದ

ಪರಿವರ್ತನೆಗೆ ಸಾಕ್ಷಿಯಾಗಿರುವುದು ಕಂಡುಬಂದು ಈ ನಿಟ್ಟಿನಲ್ಲಿ ಸಂಬಂಧಪಟ್ಟ ವಿಷಯಗಳ ಸಂಶೋಧನೆಗೆ ವಿಪುಲ ಅವಕಾಶ ಕಂಡುಬರುತ್ತದೆ.

ರಾಮನಗರ ಪ್ರಸಿದ್ದ ಜಾನಪದ ಲೋಕವನ್ನು ನಿರ್ಮಿಸಲು ಬಹಳ ಶ್ರಮವಹಿಸಿ, ತಮ್ಮನ್ನು ಸಂಪೂರ್ಣವಾಗಿ ಅದರಲ್ಲಿ ತೊಡಗಿಸಿಕೊಂಡ ಡಾ॥ ಹೆಚ್.ಎಲ್. ನಾಗೇಗೌಡರು ಈ ಜಿಲ್ಲೆಯ ಜನತೆಗಷ್ಟೇ ಅಲ್ಲದೆ, ನಾಡಿಗೇ ಉತ್ತಮ ಕೊಡುಗೆಯನ್ನು ನೀಡಿದ್ದಾರೆ. ಸಮರ್ಪಿಸಿದರು. ಇದರ ಧ್ಯೇಯೋದ್ದೇಶಗಳನ್ನು ಉತ್ತಮ ರೀತಿಯಿಂದ ನಡೆಸಿಕೊಂಡು ಹೋಗುವತ್ತ ಹೆಚ್ಚಿನ ಗಮನ ಹರಿಸುವ ಅಗತ್ಯವಿದೆ. ಜಿಲ್ಲೆಯಲ್ಲಿ ಕ್ರೀಡಾ ಚಟುವಟಿಕೆಯೂ ಕಡಿಮೆಯಿದ್ದು, ಈ ಕುರಿತಾಗಿಯೂ ಸಂಬಂಧ ಪಟ್ಟವರು ಆಸಕ್ತಿ ವಹಿಸುವ ಅಗತ್ಯವಿದೆ.

ಚನ್ನಪಟ್ಟಣದ ಸಮೀಪದ ಕೂಡಲೂರು, ಮಳೂರು, ಬೇವೂರು ಮುಂತಾದ ಊರುಗಳಲ್ಲಿನ ಶಾಸನಗಳ ವಿವರಣೆಯ ಪ್ರಕಾರ ಹಿಂದೆ ಇವುಗಳು ಜೈನ ಪ್ರಾಬಲ್ಯವಿದ್ದ ಊರಾಗಿತ್ತು ಎಂಬುದು ತಿಳಿದು ಬರುತ್ತದೆ. ಕಾಲಾನಂತರದಲ್ಲಿ ಇದು ಶೈವ ಕ್ಷೇತ್ರವಾಗಿಯೂ ಪರಿವರ್ತಿತವಾಗಿದೆ. ವಿವಿಧ ಕಾಲಘಟ್ಟಗಳಲ್ಲಿ ರಾಜಕೀಯ ಸ್ಥಿತ್ಯಂತರಗಳಿಂದ ಧಾರ್ಮಿಕ ಸ್ಥಿತ್ಯಂತರಗಳಾಗಿರುವುದೂ ಈ ಶಾಸನಗಳಿಂದ ತಿಳಿದುಬರುತ್ತದೆ. ಇಂತಹ ಒಂದು ತೀವ್ರ ರೀತಿಯ ಬದಲಾವಣೆಗೆ ಕೂಡ್ಲೂರು ಒಂದು ಉತ್ತಮ ಉದಾಹರಣೆ. ಪ್ರಸ್ತುತ ಈ ಊರಿನ ಜೈನ ಬಸದಿಗಳು ಸಂಪೂರ್ಣ ನಾಶವಾಗಿರುವುದು ಅಲ್ಲದೆ ಹಲವಾರು ಶೈವ ದೇವಸ್ಥಾನಗಳೂ ಕೂಡ ನಾಶವಾಗಿರುವುದು ಕಂಡುಬರುತ್ತದೆ. ಹಲವಾರು ಘಟನೆಗಳ ಹಿನ್ನೆಲೆಯಲ್ಲಿನ ಚರಿತ್ರೆಯಾಗಲೀ, ಸ್ಥಳೀಯ ಐತಿಹ್ಯಗಳೂ ದಾಖಲಾಗಿಲ್ಲವಾದ್ದರಿಂದ ಸಮರ್ಪಕ ವಿಚಾರ ತಿಳಿದುಬರುವುದಿಲ್ಲ. ಇಲ್ಲಿ ದೊರಕುವ ಮೌಖಿಕ ಹಾಗೂ ಶಾಸನಾಧಾರಗಳನ್ನು ಬಳಸಿಕೊಂಡು ಸೂಕ್ತ ಅಧ್ಯಯನ ನಡೆಯುವ ಅವಶ್ಯಕತೆ ಇದೆ.

ಆಧಾರ ಗ್ರಂಥಗಳು

೧. ‘ಅರ್ಕಾವತಿ’ ಸ್ಮರಣ ಸಂಚಿಕೆ ೬೭ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ೧೯೯೯ ಕನ್ನಡ ಸಾಹಿತ್ಯ ಪರಿಷತ್ ಪ್ರಕಟಣೆ ಪುಟ ೨೨೦–೨೨೪

೨. ಡಾ. ಎಂ.ಜಿ. ನಾಗರಾಜ್ ಪುಟ ೨೧೦ರಿಂದ ೨೫೭ ಮತ್ತು ಅದರಲ್ಲಿನ ಉಲ್ಲೇಖಗಳು.

೩. ಜಗದೀಶ್ ಮತ್ತು ಕೂಡ್ಲೂರು ಪಂಪಾಪತಿ–‘ಅರ್ಕಾವತಿ’ ಪುಟ ೨೮೭–೨೯೩ ಮತ್ತು ಎಕ ೧೩೩೦ ಸಂಖ್ಯೆ ೧೧೩.

೪. ಎಕ IX ಚನ್ನಪಟ್ಟಣ ೧೧೫, ೧೧೬, ೧೧೭, ೧೧೮ ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್ (ಎಂಎಆರ್) ೧೯೩೫ ಪುಟ ೧೫, ಎಂ.ಎ.ಆರ್. ೧೯೦೬–೧೯೧೧, ಎಂ.ಎ.ಆರ್. ೧೯೪೭–೧೯೫೬.

೫. ಎಕ IX ಸಪ್ಲಿಮೆಂಟರಿ, ಚನ್ನಪಟ್ಟಣ, ೧೯೭, ಎಂ.ಎ.ಆರ್., ೧೯೦೯, ಪುಟ ೧೨೩.

೬ ಡಾ. ಬಿ.ಸಿ. ವೀರಪ್ಪ ೧೭೯–೧೮೧ ದೇಗುಲ ಮಠದ ಕೊಡುಗೆ ಎಕ ೯ ಬೆಂಗಳೂರು ೯೪ ೧೬೬೩.

೭. ಹಾರೋಹಳ್ಳಿ ಪುರಾತನ ದೇಗುಲಗಳು ಡಾ. ಹೆಚ್.ಎಸ್. ವೆಂಕಟೇಶ್ ‘ಅರ್ಕಾವತಿ’ ಪುಟ ೧೯೨ರಿಂದ ೧೯೭.

೮. ‘ಮಾಗಡಿ ತಾಲ್ಲೂಕಿನ ಇತಿಹಾಸ’ ಮತ್ತು ಸಂಸ್ಕೃತಿ’ ಡಾ. ಮುನಿರಾಜಪ್ಪ ಅರ್ಕಾವತಿ ಪುಟ ೩೦೨ ಲೇಖಕರ ಮೂಲ ಕೃತಿ ಮತ್ತು ಅದರ ಸಂಬಂಧಪಟ್ಟ ಉಲ್ಲೇಖಗಳು ಹಾಗೂ ಶಾಸನಗಳು.

೯. ಡಾ. ಆರ್. ನರಸಿಂಹಚಾರ್ ಆರ್ಕಿಯಾಲಜಿ ಇನ್ ಮೈಸೂರ್ ಆಂಗ್ಲ ಕೃತಿ ಎಂ.ಎ.ಆರ್. ೧೯೦೬–೧೯೧೧ ಪ್ರತ್ಯೇಕ ಎಂ.ಎ.ಆರ್. ೧೯೦೬ ರಿಂದ ೧೯೧೧.

೮೭

ಗೋವೆ ಕದಂಬರ ಆಡಳಿತ ವಿಭಾಗಗಳು

ಸದಾಶಿವ ಎಸ್.ಮುಗಳಿ*

ಕರ್ನಾಟಕದ ರಾಜಕೀಯ ಇತಿಹಾಸ ಪ್ರಾರಂಭವಾಗುವುದು ಬನವಾಸಿಯಿಂದ ಆಳಿದ ಕದಂಬ ಅರಸು ಮನೆತನದಿಂದ. ಕದಂಬರು ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ಕ್ರಿ.ಶ. ಸು. ೩೫೦ರಿಂದ ಕ್ರಿ.ಶ. ಸು. ೫೪೦ರವರೆಗೆ ಎರಡು ಶತಮಾನಗಳಿಗೂ ಹೆಚ್ಚು ಕಾಲ ರಾಜ್ಯವಾಳಿದರು. ಪುನಃ ಹತ್ತನೆಯ ಶತಮಾನದ ಆರಂಭದ ಹೊತ್ತಿಗೆ ಕರ್ನಾಟಕದಲ್ಲಿ ಹಲವು ಕದಂಬ ಶಾಖೆಗಳು ಹುಟ್ಟಿಕೊಂಡು ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಲುಕ್ಯರ ಅಧೀನದಲ್ಲಿ ಮಾಂಡಲೀಕರಾಗಿ, ಸಾಮಂತರಾಗಿ ಮತ್ತು ಮಹಾಸಾಮಂತರಾಗಿ ರಾಜ್ಯವಾಳಿದವು. ಹೀಗೆ ರಾಜ್ಯವಾಳಿದ ಕದಂಬ ಶಾಖೆಗಳಲ್ಲಿ ಗೋವೆ ಕದಂಬರು ಒಬ್ಬರು.

ಗೋವೆ ಕದಂಬರು ಕರ್ನಾಟಕ ಮತ್ತು ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ವದ ಸ್ಥಾನವನ್ನು ಅಲಂಕರಿಸಿದ್ದಾರೆ.

ಕದಂಬ ಶಾಖೆಗಳು : ಕ್ರಿ. ಶ. ಹತ್ತನೆಯ ಶತಮಾನದ ಮಧ್ಯಭಾಗದಲ್ಲಿ ಕರ್ನಾಟಕ ಮತ್ತು ಕೊಂಕಣ ಪ್ರದೇಶದಲ್ಲಿ ಹಲವು ಕದಂಬ ಹೆಸರಿನ ಶಾಖೆಗಳು ಹುಟ್ಟಿಕೊಂಡವು. ಬಿ. ಆರ್. ಗೋಪಾಲ್ ಮತ್ತು ಮೊರೇಸ್‌ರವರು ತಮ್ಮ ಅಧ್ಯಯನಗಳಿಂದ ಈ ಶಾಖೆಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಗೋವೆ ಕದಂಬರು, ಹಾನಗಲ್ಲು ಕದಂಬರು, ಚಂದಾವರದ ಕದಂಬರು, ಬೇಲೂರು ಕದಂಬರು, ಬಂಕಾಪುರ ಕದಂಬರು, ಉಚ್ಚಂಗಿ ಕದಂಬರು, ಬಯಲುನಾಡು ಕದಂಬರು, ನಾಗರಖಂಡದ ಕದಂಬರು, ರಟ್ಟಿಹಳ್ಳಿ ಕದಂಬರು, ಕಳಿಂಗ ಕದಂಬರು, ಮಂಜರಾಬಾದ್ ಕದಂಬರು, ಲುಂಕ ಕದಂಬರು, ಮೊಳಕಾಲ್ಮುರು ಕದಂಬರು, ಕೋಗುಳಿ ಕದಂಬರು, ಕರಡಿಕಲ್ಲು ಕದಂಬರು ಮತ್ತು ಕೊಟ್ಟೂರಿನ ಕದಂಬರು ಮುಂತಾದ ಕದಂಬ ಶಾಖೆಗಳು ಮಳಖೇಡದ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಲುಕ್ಯರ ಸಮಕಾಲೀನರಾಗಿ ಸಾಮಂತ ಮತ್ತು ಮಹಾಸಾಮಂತರಾಗಿ ರಾಜ್ಯವಾಳುತ್ತಿದ್ದರು. ಈ ಶಾಖೆಗಳಲ್ಲಿ ಗೋವೆಯ ಕದಂಬರು ಪ್ರಸಿದ್ಧರಾಗಿದ್ದರು.

ಗೋವೆ ಕದಂಬರ ಮೂಲ : 'ಬನವಾಸೀ ಪುರವರಾಧೀಶ್ವರ', 'ಹರಧರಣೀ ಪ್ರಸೂತ' ರೆಂದು ತಮ್ಮನ್ನು ಶಾಸನಗಳಲ್ಲಿ ಕರೆದುಕೊಂಡಿರುವ ಗೋವೆ ಕದಂಬರ ಮೂಲ ಪುರುಷನು ಶಿವನಿಂದಲೇ ಹುಟ್ಟಿದನೆನ್ನಲಾಗಿದೆ. ಜಯಂತ ಅಥವಾ ತ್ರಿಲೋಚನ ಕದಂಬ ಇವರ ವಂಶದ ಮೂಲ ಪುರುಷನೆಂದು ನಂಬಲಾಗಿದೆ. ಆದರೆ ಕಂಟಕಾಚಾರ್ಯನೆಂದು ಹೆಸರು ಪಡೆದಿರುವ ಒಂದನೇಯ ಶಾಸ್ಥ, ಚಟ್ಟ, ಚಟ್ಟಯ್ಯ ಅಥವಾ ಷಷ್ಠದೇವ ಈ ವಂಶದ ಮೂಲ ಪುರುಷನೆಂದು ಮಾರ್ಸೆಲಾ ತಾಮ್ರಫಲಕ ಮತ್ತು ಗಾಣದೇವಿ ಶಾಸನದಿಂದ ತಿಳಿಯಬಹುದಾಗಿದೆ. ಸಿಂಹ ಇವರ ರಾಜ ಲಾಂಛನವಾಗಿತ್ತು. ಮಹಾಧ್ವಜದಲ್ಲಿ ವಾನರ ಚಿತ್ರವಿತ್ತು. ಪೆರ್ಮಟ್ಟಿ ರಾಜ್ಯವಾದ್ಯವಾಗಿತ್ತು. ಕೊಲ್ಹಾಪೂರದ ಮಹಾಲಕ್ಷ್ಮೀ, ಸೌರಾಷ್ಟ್ರದ ಸೋಮನಾಥ ಮತ್ತು ಗೋಕರ್ಣೇಶ್ವರ ಈ ಮನೆತನದ ಪ್ರಮುಖ ಆರಾಧನಾ ಕೇಂದ್ರಗಳಾಗಿದ್ದವು.

ಗೋವೆ ಕದಂಬರ ಉಗಮ : ಗೋವೆಯಲ್ಲಿ ಮೌರ್ಯ, ಶಾತವಾಹನ, ಶಿಲಾಹಾರರು, ರಾಷ್ಟ್ರಕೂಟರು, ಅಭೀರರು ಮತ್ತು ಕಲ್ಯಾಣ ಚಾಲುಕ್ಯರು ರಾಜ್ಯವಾಳಿದರು. ಗೋವೆ ಕದಂಬರು ಪ್ರಾರಂಭದಲ್ಲಿ ರಾಷ್ಟ್ರಕೂಟರ ಸಾಮಂತರಾಗಿ ಆನಂತರ ಕಲ್ಯಾಣದ ಚಾಲುಕ್ಯರ ಮಾಂಡಲೀಕರಾಗಿ ಅಧಿಕಾರಕ್ಕೆ ಬಂದರು. ಗೋವೆಯನ್ನು ಕೇಂದ್ರಸ್ಥಾನವನ್ನಾಗಿ ಹೊಂದಿದ್ದರಿಂದ ಈ ಶಾಖೆಗೆ ಗೋವೆ ಕದಂಬರು ಎಂಬ ಹೆಸರು ರೂಢಿಗೆ ಬಂದಿತು. ಗೋವೆಯ ಕದಂಬರ ಕುಲ ಚಂದ್ರಪುರ (ಇಂದಿನ ಚಂದೋರ್)ದಲ್ಲಿ ರಾಷ್ಟ್ರಕೂಟರ ಅಧೀನದಲ್ಲಿ ಪುಟ್ಟ ರಾಜ್ಯ ಸ್ಥಾಪಿಸಿಕೊಂಡಿತ್ತು. ಚಾಲುಕ್ಯ ಅರಸ ತೈಲಪನು ರಾಷ್ಟ್ರಕೂಟರ ಮೇಲೆ ದಾಳಿ ಮಾಡಿ ಪರಾಭವಗೊಳಿಸಿದನು. ರಾಷ್ಟ್ರಕೂಟರ ಸಾಮಂತರಾದ ರಟ್ಟರನ್ನು ಶಿಲಾಹಾರರಿಂದ ಸೋಲಿಸಿ ದಕ್ಷಿಣ ಕೊಂಕಣದ ಮೇಲೆ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದರು. ಉತ್ತರದ ಶಿಲಾಹಾರರು ಮತ್ತು ದಕ್ಷಿಣದ ಶಿಲಾಹಾರರು ಕಲ್ಯಾಣ ಚಾಲುಕ್ಯರ ಮಾಂಡಳೀಕರಾಗಿದ್ದರು. ಇವರ ಒಳಜಗಳಗಳಲ್ಲಿ ಚಾಲುಕ್ಯರು ತಲೆ ಹಾಕಲಿಲ್ಲ. ಈ ಸುಸಮಯವನ್ನು

* ಉಪನ್ಯಾಸಕರು, ಇತಿಹಾಸ ವಿಭಾಗ, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ.

ಬಳಸಿಕೊಂಡ ಒಂದನೆಯ ಷಷ್ಠದೇವನು ಶಿಲಾಹಾರರ ಮೇಲೆ ದಾಳಿ ಮಾಡಿ ಕೊಂಕಣ ಸೀಮೆಯನ್ನು ಸ್ವಾಧೀನ ಪಡಿಸಿಕೊಂಡನು. ಈತ ಈ ಮನೆತನದ ಪ್ರಥಮ ದೊರೆ. ಚಂದ್ರಾಪುರ ಈತನ ಮೊದಲ ರಾಜಧಾನಿಯಾಗಿತ್ತು. ನಂತರ ಒಂದನೆಯ ಜಯಕೇಶಿಯ ಕಾಲಕ್ಕೆ ರಾಜಧಾನಿಯನ್ನು ಗೋಪಕಪಟ್ಟಣ (ಇಂದಿನ ಹಳೇಯ ಗೋವಾ)ಕ್ಕೆ ಸ್ಥಳಾಂತರಿಸಿದರು. ಅಂದಿನಿಂದ ಇವರನ್ನು ಗೋವೆ ಕದಂಬರೆಂದು ಗುರುತಿಸಲಾಗಿದೆ. ಗೋವೆ ಕದಂಬರು ಕ್ರಿ.ಶ. ಸು. ೯೨೫ರಿಂದ ಕ್ರಿ.ಶ. ಸುಮಾರು ೧೨೭೦ ರವರೆಗೆ ರಾಜ್ಯವಾಳಿದರು. ಮಹಾರಾಷ್ಟ್ರದ ದಕ್ಷಿಣ ಭಾಗದ ಸಾವಂತವಾಡಿ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತ್ತು ಖಾನಾಪುರ ತಾಲೂಕಿನ ಭಾಗಗಳು, ಧಾರವಾಡ ಜಿಲ್ಲೆಯ ಧಾರವಾಡ, ಕಲಘಟಗಿ, ಹುಬ್ಬಳ್ಳಿ, ಕಾರವಾರ ಜಿಲ್ಲೆಯ ಹಳಿಯಾಳ ಮತ್ತು ಸಂಪೂರ್ಣ ಗೋವಾ ಕೊಂಕಣ ಸೀಮೆ ಇವರ ಅಧೀನಕ್ಕೊಳಪಟ್ಟಿತ್ತು. ಗೋವೆ ಕದಂಬರಿಗೆ ಕೊಂಕಣ-೯೦೦, ಪಲಸಿಗೆ-೧೨೦೦೦, ಕುಂದೂರು-೫೦೦, ಕಾದರವಳ್ಳಿ-೩೦, ಕವಡಿದ್ವೀಪ-೧೨೦೦೦೦, ಮುಗದ-೩೦, ಹುಲ್ಲುಂಬೆ-೭೦, ಮಾರಜವಾಡಿ ಕಂಪಣ, ಕಿತ್ತೂರು-೩೦, ಬನವಾಸಿ-೧೨೦೦೦, ಹೈವೆ-೫೦೦, ವೇಣುಗಾಮೆ-೭೦ ಮುಂತಾದ ವಿಭಾಗಗಳು ಸೇರಿದ್ದವು.

ಗೋವೆ ಕದಂಬರ ಆಡಳಿತ ವಿಭಾಗಗಳು

ಗೋವೆ ಕದಂಬರು ಕಲ್ಯಾಣದ ಚಾಲುಕ್ಯರ ಮಹಾಸಾಮಂತರಾಗಿ ವಿಶಾಲ ಪ್ರದೇಶಕ್ಕೆ ಅಧಿಪತಿಗಳಾಗಿದ್ದರು. ಆಡಳಿತದ ಅನುಕೂಲದ ದೃಷ್ಟಿಯಿಂದ ರಾಜ್ಯವನ್ನು ವಿಭಾಗ ಮತ್ತು ಉಪ ವಿಭಾಗಗಳನ್ನಾಗಿ ವಿಂಗಡಿಸಿ ಅವುಗಳಿಗೆ ತಮಗೆ ನಿಷ್ಠರಿರುವ ಅಧಿಕಾರಿಗಳನ್ನು ನೇಮಿಸುತಿದ್ದರು. ಈ ವಿಭಾಗಗಳನ್ನು ರಾಷ್ಟ್ರ, ಮಂಡಲ, ನಾಡು, ಕಂಪಣ ಮತ್ತು ವಿಷಯ, ದೇಶ ಮತ್ತು ರಾಜಧಾನಿ ಮುಂತಾಗಿ ಕರೆಯುತ್ತಿದ್ದರು.

ಕುಂದೂರು-೫೦೦ : ಇಂದಿನ ಧಾರವಾಡದಿಂದ ಐದು ಮೈಲಿ ದೂರದಲ್ಲಿರುವ ನರೇಂದ್ರ ಗ್ರಾಮವೇ ಹಿಂದಿನ ಕುಂದೂರು ಆಗಿತ್ತು. ಇದು ಐದನೂರು ಗ್ರಾಮಗಳನ್ನು ಒಳಗೊಂಡ ಒಂದು ಪ್ರದೇಶವಾಗಿತ್ತು. ಇದೇ ತಾಲೂಕಿನ ಕನಕೂರ ಶಾಸನದಲ್ಲಿ[೧] **"ಕೋಂಕಣಾಧಿಪತಿ ಶ್ರೀಮನ್ಮಹಾಮಂಡಳೇಶ್ವರಂ ಜಯಕೇಶಿದೇವರ ವಿವಾಹಮಹೋತ್ಸವ ಕಾಲದಲ್ಲಿ ಶ್ರೀ ಮತ್ತ್ರಿಭುವನಮಲ್ಲ ದೇವರು ಕುಂದೂರೈನೂರರ ಬಳಿಯ ಬಾಡಂ ಕನಕಾಪುರವಂ ಶ್ರೀ ಸೌರಾಷ್ಟ್ರದ ಶ್ರೀ ಸೋಮನಾಥ ದೇವರ ಧೂಪಕ್ಕೆ ಕೊಟ್ಟವದು ನಿನ್ನ ಧರ್ಮವಾಗಿ ನೀ ಕುಡೆಂದು ಬೇಡಲು.."** ಎಂದು ವಿಷಯ ಪ್ರಸ್ತಾಪವಿದೆ. ಇಂದಿನ ಧಾರವಾಡ ತಾಲೂಕಿನ ಕನಕೂರು ಹಿಂದೆ ಕನಕಾಪುರವೆಂದು ಕರೆಯಲಾಗುತಿತ್ತು. ಕುಂದೂರು ವಿಭಾಗವನ್ನು ಮನಗುಂಡಿ[೨], ಧಾರವಾಡ[೩], ನರೇಂದ್ರ[೪], ಕುರಡಿಕೇರಿ[೫] ಮತ್ತು ಮಿಶ್ರಿಕೋಟಿ ಶಾಸನಗಳು ಉಲ್ಲೇಖಿಸುತ್ತವೆ. ಕುಂದೂರು-೫೦೦ ರಲ್ಲಿ ಅಮ್ಮಿನಭಾವಿ, ಕೊಟಬಾಗಿ, ಧಾರವಾಡ, ನರೇಂದ್ರ, ತಡಕೊಡ, ಕೌಲಗೇರಿ ಮತ್ತು ಹಲ್ಲುಂಡಿ ಗ್ರಾಮಗಳಿದ್ದವೆನ್ನಲಾಗಿದೆ.[೬] ಇದೇ ತಾಲ್ಲೂಕಿನ ಕುಂಬಾಪುರ ಶಾಸನ[೭]ವು **"ಹಲಸಿಗೆಪನ್ನಿಚ್ಛಾಸಿರ ದೋಳಗ(ಣ)ಯ್ನೂರರ ಮೊದಲ ಬಾಡ ರಾಜಧಾನಿ ಕುಂದೂರಲು... ಮತ್ತವಯ್ನೂರರ ಬಳಿಯ ಬಾಡಂ ಧಾರವಾಡ....ಕುಂದೂರಯ್ನೂರರ ಬಳಿಯ ಬಾಡ ಕೌಲಗೇರಿಯ ಸ್ಥಾನಮಾನ್ಯರ"** ಎಂಬುದಾಗಿ ಉಲ್ಲೇಖಿಸಿದೆ. ಕೊಟಬಾಗಿ ಶಾಸನ[೮]ದಲ್ಲಿ **'ಹಲಸಿಗೆದೇಶ ಸಂಮಂಧ ಕುಂದೂರು ವಿಷಯ ಕೊಟ್ಟಬಾಗೇನಾ(ಮ)ಗ್ರಾಮ'** ಎಂಬುದಾಗಿ ಉಲ್ಲೇಖಿತವಾಗಿದೆ. ಇದರಿಂದ ಹಲಸಿಗೆ ನಾಡಿನ ಕುಂದೂರು ವಿಷಯದಲ್ಲಿರುವ ಕೊಟಬಾಗಿ ಗ್ರಾಮವಾಗಿತ್ತೆಂದು ತಿಳಿದುಬರುತ್ತದೆ. ದೇವರಹುಬ್ಬಳ್ಳಿ ಶಾಸನ[೯] ಧಾರವಾಡವನ್ನು ಹಲಸಿಗೆ ನಾಡಿನ ಗ್ರಾಮವೆಂದು ಹೇಳಿದೆ.

ಮಾರಜವಾಡಿ ನಾಡು : ಇದು ಪಲಸಿಗೆ ಪನ್ನಿರ್ಚ್ಛಾಸಿರದ ಆಡಳಿತ ಕೇಂದ್ರದ ಉಪವಿಭಾಗವಾಗಿದೆ. ಮುಗದ ಶಾಸನ[೧೦] **'ಹಲಸಿಗೆ ಪನ್ನಿರ್ಚ್ಛಾಸಿರದೊಳಗೆ ಮಾಹಾರಾಜವಾಡಿನಾಡೆಂಬುದು ಭೂಲಲನಾಲಪನಮದಕ್ಕೆ ತಿಲಕವೆನಿಪ್ಪುದು ಮುಗುದ ಮೂವತ್ತು'** ಎಂದಿದೆ. ಮತ್ತು ತೇಗೂರ[೧೧] ಶಾಸನಗಳಲ್ಲಿ **'ಮಾರಜವಾಡಿ ಕಂಪಣ'** ಎಂಬ ಉಲ್ಲೇಖವಿದೆ. ಧಾರವಾಡ ತಾಲೂಕಿನ ಮುಗದ ಗ್ರಾಮ (ಮುಗುಂದ-೩೦) ಮಾರಜವಾಡಿ ನಾಡಿನಲ್ಲಿ ಸೇರಿದ್ದನ್ನು ಗುರುತಿಸಬಹುದು. ಈ ಉಪವಿಭಾಗವನ್ನು ಮುತ್ತಗಿಯು ಶಾಸನಗಳು[೧೨] ಉಲ್ಲೇಖಿಸಿವೆ. **'ಮಾರಜವಾಡಿ ಯೊಳನ್ತದೆಸಾರಂ ಪುಲ್ಲುಂಬಿಯೆಳ್ಪಿತಾನಾಡೊಳ್ ನೆಗರ್ದುದು ಪೆಂಪನಾರಿಸಿ ಮುರ್ತ್ತಗೆ'** ಎಂಬುದಾಗಿ ಮುತ್ತಗಿಯ ಮತ್ತೊಂದು ಶಾಸನ[೧೩] ಉಲ್ಲೇಖಿಸಿದೆ. ಈ ವಿಭಾಗವು ಇಂದಿನ ಕಲಘಟಗಿ ತಾಲೂಕಿನ ಉತ್ತರ ಭಾಗ ಮತ್ತು ಹುಬ್ಬಳ್ಳಿ ತಾಲೂಕಿನ ಪಶ್ಚಿಮ ಭಾಗದ ವ್ಯಾಪ್ತಿಯನ್ನು ಹೊಂದಿರಬಹುದಾಗಿದೆ. ಪುಲ್ಲುಂಬಿ-೭೦ ಮತ್ತು ಮುಗುಂದ-೩೦ ಇವು ಮಾರಜವಾಡಿ ಕಂಪಣದ ಉಪವಿಭಾಗಗಳಾಗಿದ್ದವು.

ಮುಗುಂದ – ೩೦ : ಇಂದಿನ ಧಾರವಾಡ ತಾಲೂಕಿನ ಮುಗದ ಗ್ರಾಮವೇ ಹಿಂದೆ **ಮುಗುಂದ**ವೆಂದು ಕರೆಯಲ್ಪಡುತಿತ್ತು. ಇದು ಮಾರಜವಾಡಿನಾಡಿನ ಕಂಪಣದ ಭಾಗವಾಗಿದ್ದು, ಇದು ಮೂವತ್ತು ಗ್ರಾಮಗಳ ಸಣ್ಣ ವಿಭಾಗದ ಒಂದು ಮುಖ್ಯ ಗ್ರಾಮವಾಗಿತ್ತು. ಅಲ್ಲದೇ ಕುಂದೂರ–೫೦೦ರಲ್ಲಿಯ ಪ್ರಮುಖ ಭಾಗವಾಗಿತ್ತು. ನಿಗದಿ[೧೪] ಶಾಸನದಲ್ಲಿ **'ಮಾರಜವಾಡಿನಾಡಿನ ಕಂಪಣ ಮುಗುಂದ ಮೂವತ್ತರ ಬಳಿಯ ಬಾಡ ನಿಗುಂದೆಯ'** ಎಂದಿದೆ. ನಿಗುಂದ ಎಂದರೆ ಇಂದಿನ ಧಾರವಾಡ ತಾಲೂಕಿನ ನಿಗದಿ. ಮುಗದ[೧೫]ದಲ್ಲಿರುವ ಶಾಸನದಲ್ಲಿ **'ಪಲಸಿಗೆ ಪನ್ನಿಚ್ಛಾಸಿರದೊಳಗೆ ಮಹಾರಾಜವಾಡಿನಾಡೆಂಬುದು ಭೂಲಲನಾಪಮದಕ್ಕೆ ತಿಲಕವೆನಿಪ್ಪದು ಮುಗುಂದ ಮತ್ತೆಂದು'** ಎಂಬುದಾಗಿ ಉಲ್ಲೇಖಿಸಲಾಗಿದೆ.

ಮಾವಳೆ–೫೦೦ : ಇದು ಪಲಸಿಗೆ–೧೨೦೦೦ಕ್ಕೆ ಸೇರಿದ ಉಪವಿಭಾಗವಾಗಿದೆ. ಇದು ಇಂದಿನ ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಮಾವಳ್ಳಿ ಗ್ರಾಮವಾಗಿದೆ. ಇದನ್ನು **ಮಾವೆಳೆನಾಡು** ಎಂಬುದಾಗಿಯೂ ಕರೆಯಲಾಗುತಿತ್ತು. ಕಲಘಟಗಿ ತಾಲ್ಲೂಕಿನ ಸಂಗಮೇಶ್ವರ[೧೬], ತಂಬೂರು[೧೭] ಮತ್ತು ಕಲಕುಂಡಿ[೧೮] ಶಾಸನಗಳಲ್ಲಿ ಇದರ ಉಲ್ಲೇಖಗಳಿವೆ. ಕಲಘಟಗಿ ತಾಲ್ಲೂಕಿನ ಕಲಘಟಗಿ, ತಡಸ, ಯಲ್ಲಾಪುರ ತಾಲೂಕಿನ ಕೆಲವು ಗ್ರಾಮಗಳು, ಮುಂಡಗೋಡ ತಾಲೂಕಿನ ವಾಯುವ್ಯ ಭಾಗದ ಗ್ರಾಮಗಳು ಮತ್ತು ಹಳಿಯಾಳ ತಾಲ್ಲೂಕಿನ ಗ್ರಾಮಗಳು ಈ ಆಡಳಿತ ವಿಭಾಗದಲ್ಲಿ ಸೇರಿದ್ದವು. ಇದರ ಸೀಮೆಗಳು ಉತ್ತರಕ್ಕೆ ಹಾಗೂ ಪೂರ್ವಕ್ಕೆ ಹಲಸಿಗೆ ನಾಡಿನ ಉಪವಿಭಾಗವಾದ ಕುಂದೂರು ಐನೂರು, ದಕ್ಷಿಣಕ್ಕೆ ಹಾಗೂ ಆಗ್ನೇಯಕ್ಕೆ ಪಾನುಂಗಲ್ಲ ಐನೂರರ ಉಪವಿಭಾಗವಾದ ಕೊಂಕ ಮೂವತ್ತು, ಪಶ್ಚಿಮಕ್ಕೆ ಪಲಸಿಗೆ ನಾಡಿನ ಒಂದು ಭಾಗ ಈ ರೀತಿಯಾಗಿ ಈ ಆಡಳಿತ ವಿಭಾಗ ವ್ಯಾಪ್ತಿಯನ್ನು ಹೊಂದಿತ್ತು. ತಂಬೂರ ಶಾಸನ[೧೯] **'ಪಲಸಿಗೆ ಪನ್ನಿರ್ಚ್ಛಾಸಿರದೊಳಗಣ ಕಂಪಣಂ ವಸೂವಳೆಯಯ್ನೂರಕ್ಕಂ ವಿಶಿಷ್ಟಮೆನಿಪ ತಮ್ಮಿಯೂರೊಳ್'** ಎಂಬುದಾಗಿ ಉಲ್ಲೇಖಿಸಿದೆ.

ಉಣಕಲ್ಲು–೩೦ : ಇಂದಿನ ಹುಬ್ಬಳ್ಳಿ ತಾಲ್ಲೂಕಿನ ಊಣಕಲ್ಲು ಗ್ರಾಮವೇ ಪ್ರಾಚೀನ ಉಣಕಲ್ಲ ಆಗಿತ್ತು. ಇದು ಮುವತ್ತು ಗ್ರಾಮಗಳ ಆಡಳಿತ ವಿಭಾಗದ ಮುಖ್ಯ ಕೇಂದ್ರವಾಗಿತ್ತು. ಹುಬ್ಬಳ್ಳಿ ತಾಲ್ಲೂಕಿನ ಅಮರಗೋಳ ಶಾಸನ[೨೦]ದಲ್ಲಿ **'ಪಲಸಿಗೆ ನಾಡೊಳ್ಮಿಕ್ಕೆ ಕಂಪಣ ಉಣಕಲ್ಲ ಬಳಿಯ ಬಾಡವೆಂಬಮರಗೋಳದೊಳು'** ವೆಂದು ಉಲ್ಲೇಖಿತವಾಗಿದೆ. ಇವು ಕ್ರಮವಾಗಿ ಹುಬ್ಬಳ್ಳಿಗೆ ಸಮೀಪವಿರುವ ಉಣಕಲ್ಲು ಮತ್ತು ಅಮರಗೋಳ ಗ್ರಾಮಗಳಾಗಿವೆ. ತೆರಸಿಕೊಪ್ಪ[೨೧] ಶಾಸನದಲ್ಲಿ **'ಕಲ್ಮುವತ್ತು'** ಪದದ ಉಲ್ಲೇಖವಿದ್ದು, ಇದು ಉಣಕಲ್ಲು ಮುವತ್ತು ಎಂದು ಸ್ಪಷ್ಟವಾಗುತ್ತದೆ. ನರೇಂದ್ರ[೨೨] ಶಾಸನದಲ್ಲಿ **'ಉಣಕಲ್ಸಬ್ಬಿಯೆರಡು ಮೂವತ್ತು'** ಎಂಬುದಾಗಿ ಉಲ್ಲೇಖಿತವಾಗಿದೆ. ಇದನ್ನು ಉಣಕಲ್ಲ–೩೦ ಮತ್ತು ಸಬ್ಬಿ–೩೦ ಎಂದು ಗುರುತಿಸಲಾಗಿದೆ. ಕಲಘಟಗಿ[೨೩] ಶಾಸನದಲ್ಲಿ ಇದರ ಉಲ್ಲೇಖವಿದೆ. ಇದು ಹಲಸಿಗೆ–೧೨೦೦೦ದಲ್ಲಿಯ ಕಂಪಣವಾಗಿತ್ತೆಂದು ತಿಳಿದುಬರುತ್ತದೆ.

ಪುಲ್ಲುಂಬಿ – ೭೦ : ಕಲಘಟಗಿ ತಾಲೂಕಿನ ಮುತ್ತಗಿ ಶಾಸನ[೨೪] **'ಮಾರಜವಾಡಿ ಯೊಳನ್ತದೆಸಾರಂ ಪುಲ್ಲುಂಬಿ ಯೆರ್ಪಿತಾನಾಡೊಳ್ ನೆಗರ್ಪುದು ಪೆಂಪನಾರಿಸಿ ಮುರ್ತ್ತಗೆ'** ಈ ರೀತಿಯಾಗಿ ಉಲ್ಲೇಖಿಸಿದೆ. ಕ್ರಿ.ಶ. ೧೨೦೩ರ ಮನಗುಂಡಿ ಶಾಸನ[೨೫] ಹುಲ್ಲುಂಬೆಯು ಹಲಸಿಗೆ–೧೨೦೦೦ ನಾಡಿನ ಉಪವಿಭಾಗವೆಂದು ತಿಳಿಸಿದೆ. ಇದರಲ್ಲಿ ಸುಮಾರು ಎಪ್ಪತ್ತು ಹಳ್ಳಿಗಳು ಸಮಾವೇಶಗೊಂಡಿದ್ದವು.

ತಮ್ಮಿಯೂರು–೧೨ : ತಮ್ಮಿಯೂರು ಮಾವಳೆ ಐನೂರರ ಉಪವಿಭಾಗದಲ್ಲಿ ಬರುವ ಪ್ರಮುಖ ಹನ್ನೆರಡು ಹಳ್ಳಿಗಳ ಚಿಕ್ಕ ಆಡಳಿತದ ವಿಭಾಗವಾಗಿತ್ತು. ತಮ್ಮಿಯೂರು ಇಂದಿನ ಕಲಘಟಗಿ ತಾಲೂಕಿನ ತಂಬೂರ ಗ್ರಾಮವಾಗಿದೆ. ತಂಬೂರ[೨೬] ಶಾಸನಗಳಲ್ಲಿ ಇದರ ಉಲ್ಲೇಖವಿದೆ.

ಸಬ್ಬಿ–೩೦ : ಪಲಸಿಗೆ–೧೨೦೦೦ದ ಉಪವಿಭಾಗವಾಗಿದ್ದ ಇದು ಇಂದಿನ ಹುಬ್ಬಳ್ಳಿ ತಾಲೂಕಿನ ಛಬ್ಬಿ ಗ್ರಾಮವಾಗಿದ್ದು, ಹಿಂದೆ ಸಬ್ಬಿ ಎಂದು ಕರೆಯಲಾಗುತಿತ್ತು. ಇದು ಮೂವತ್ತು ಗ್ರಾಮಗಳ ಆಡಳಿತ ವಿಭಾಗದ ಮುಖ್ಯ ಕೇಂದ್ರವಾಗಿತ್ತು. ಹುಬ್ಬಳ್ಳಿ ತಾಲೂಕಿನ ಆಗ್ನೇಯ ಭಾಗದ ಗ್ರಾಮಗಳು ಮತ್ತು ಕುಂದಗೋಳ ತಾಲೂಕಿನ ಪಶ್ಚಿಮ ಭಾಗದ ಗಡಿ ಪ್ರದೇಶದ ಗ್ರಾಮಗಳನ್ನು ಈ ವಿಭಾಗವು ಒಳಗೊಂಡಿತ್ತು.[೨೭] ಮನಗುಂಡಿ, ಕಲಘಟಗಿ, ನೂಲ್ವಿ ಮತ್ತು ನರೇಂದ್ರ ಶಾಸನಗಳಲ್ಲಿ ಇದರ ಉಲ್ಲೇಖಗಳಿವೆ.

ಕೊಂಕಣ–೯೦೦ : ಈ ಆಡಳಿತ ವಿಭಾಗದಲ್ಲಿ ಒಂಬತ್ತುನೂರು ಹಳ್ಳಿಗಳು ಸಮಾವೇಶಗೊಂಡಿದ್ದವು. ಧಾರವಾಡ ತಾಲ್ಲೂಕಿನ ಮುಗದ ಶಾಸನ 'ಕೊಂಕಣ ಒಂಭಯ್ನೂರು' ಎಂದೂ ಕರೆದಿದೆ. ಇಂದಿನ ಸಂಪೂರ್ಣ ಗೋವೆ ರಾಜ್ಯ, ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ದಕ್ಷಿಣದ ಕೆಲವು ಭಾಗಗಳು, ಸಾವಂತವಾಡಿ ಸಂಸ್ಥಾನಕ್ಕೆ ಸೇರಿದ ಪ್ರದೇಶಗಳು,

ಸಿಂಧದುರ್ಗ ಮತ್ತು ರತ್ನಾಗಿರಿ ಜಿಲ್ಲೆಯ ಭಾಗಗಳು ಕೊಂಕಣದ ಉತ್ತರದ ಸೀಮೆಗಳಾಗಿದ್ದವು. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಭಟ್ಕಳವರೆಗಿನ ಪ್ರದೇಶಗಳು ಇದರಲ್ಲಿ ಸೇರಿದ್ದವು. ಈ ಪ್ರದೇಶದ ಸೀಮೆಗಳು ಉತ್ತರಕ್ಕೆ ಕವಡೀದ್ವೀಪ, ಪೂರ್ವಕ್ಕೆ ಕೊಲ್ಲಾಪೂರ ಮತ್ತು ಪಲಸಿಗೆ ನಾಡು, ದಕ್ಷಿಣಕ್ಕೆ ಹೈವೆ ನಾಡು ಮತ್ತು ಪಶ್ಚಿಮಕ್ಕೆ ಅರಬ್ಬಿಸಮುದ್ರ ಹೀಗೆ ಹಬ್ಬಿಕೊಂಡಿವೆ.

ಪಲಸಿಗೆ-೧೨೦೦೦ : ಪಲಸಿಗೆ ಪನ್ನಿರ್ಚ್ಛಾಸಿರ ಎಂದೇ ಕರೆಯಲ್ಪಡುವ ಹಲಸಿ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಐತಿಹಾಸಿಕ ಗ್ರಾಮವಾಗಿದೆ. ಬನವಾಸಿ ಕದಂಬರ ಮತ್ತು ಗೋವೆ ಕದಂಬರ ರಾಜಧಾನಿಯಾಗಿದ್ದ ಹಲಸಿಯು ಗೋವೆ ಕದಂಬರ ಆಳ್ವಿಕೆಯ ಕಾಲಕ್ಕೆ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಪಶ್ಚಿಮ ದಕ್ಷಿಣ ಭಾಗ, ಬೈಲಹೊಂಗಲ ತಾಲ್ಲೂಕಿನ ಪಶ್ಚಿಮ ಭಾಗದ ಗ್ರಾಮಗಳು, ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕು, ಹುಬ್ಬಳ್ಳಿ ತಾಲ್ಲೂಕಿನ ಕೆಲವು ಗ್ರಾಮಗಳು, ಕಲಘಟಗಿ ತಾಲ್ಲೂಕು ಮತ್ತು ಉತ್ತರ ಕನ್ನಡ ಜಿಲ್ಲೆಯ ಪೂರ್ವ ಭಾಗವನ್ನು ಒಳಗೊಂಡಿತ್ತು.[೨೮] ಖಾನಾಪುರ ತಾಲ್ಲೂಕಿನ ಶೀಗಿಹಳ್ಳಿ[೨೯] ಶಾಸನವು **ಪಲಸಿಗೆ ಪನ್ನಿರ್ಚ್ಛಾಸಿರದೊಳೆಸೆವೀ ಕಾಳಗಿರಿಗೆ ಕನ್ನಡಿಯುನ್ತುಜ್ಜಳಿಸಿ ಬೆಳೆದಗ್ರಹಾರಂವಿಳಾಸನ್ಮಾಗೋಡ** ಎಂಬುದಾಗಿ ಉಲ್ಲೇಖಿಸಿದೆ. ಕಾದರವಳ್ಳಿ ಶಾಸನ ಗೂವಲದೇವನು ಆರನೆಯ ವಿಕ್ರಮಾದಿತ್ಯನ ಸಾಮಂತನಾಗಿ 'ಪಲಸಿಕೆ ಪನ್ನಿರ್ಛಾಸಿರಮಂ ನಿಜ ರಾಜಧಾನಿಯ ನೆಲೆವೀಡಿ'ನಿಂದ ಆಳುತಿದ್ದನೆಂದು ಉಲ್ಲೇಖಿಸಿದೆ.

ವೇಣುಗ್ರಾಮ-೭೦ : ಗೋವೆ ಕದಂಬರ ಕಾಲಕ್ಕೆ ಬೆಳಗಾವಿಯನ್ನು ವೇಲುಗಾಮ ಅಥವಾ ವೇಣುಗ್ರಾಮವೆಂದು ಕರೆಯಲಾಗುತಿತ್ತು. ಬೆಳಗಾವಿ ವೇಣುಗ್ರಾಮ-೭೦ರ ಆಡಳಿತ ಘಟಕದ ಕೇಂದ್ರವಾಗಿತ್ತು. ಇಂದಿನ ಬೆಳಗಾವಿಯ ದಕ್ಷಿಣ ಭಾಗದ ಅನೇಕ ಹಳ್ಳಿಗಳು ಗೋವೆ ಕದಂಬರಿಗೆ ಸೇರಿದ್ದವು. ಕ್ರಿ.ಶ. ೧೧೨೩ರಲ್ಲಿ ಅಧಿಕಾರದಲ್ಲಿದ್ದ ಇಮ್ಮಡಿ ಜಯಕೇಶಿಯ ಧಾರವಾಡ ತಾಲ್ಲೂಕಿನ ನರೇಂದ್ರ[೩೦] ಶಾಸನ ವೇಲುಗ್ರಾಮ (ವೇಣುಗ್ರಾಮ)-೭೦ನ್ನು ಉಲ್ಲೇಖಿಸುವ ಅತೀ ಪ್ರಾಚೀನ ಶಾಸನಗಳಲ್ಲಿ ಒಂದಾಗಿದೆ. ಖಾನಾಪುರ ತಾಲ್ಲೂಕಿನ ಗೋಲಿಹಳ್ಳಿ, ಹಲಸಿ ಮತ್ತು ಧಾರವಾಡ ಜಿಲ್ಲೆಯ ಅಳ್ಣಾವರ (ಅಣಿಲಾಪುರ) ಶಾಸನಗಳು ವೇಣುಗ್ರಾಮ-೭೦ ವನ್ನು ಉಲ್ಲೇಖಿಸುತ್ತವೆ. ಗೋವೆ ಕದಂಬರ ಸಮಕಾಲೀನ ಕ್ರಿ. ಶ. ೧೧೭೦ರಿಂದ ೧೧೯೦ರವರೆಗೆ ಆಳಿದ ರಟ್ಟ ದೊರೆ ಒಂದನೆಯ ಲಕ್ಷ್ಮೀದೇವ ಗೋವೆ ಕದಂಬರಿಂದ ವೇಣುಗ್ರಾಮವನ್ನು ಗೆದ್ದುಕೊಂಡು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನೆಂದು ತಿಳಿದುಬರುತ್ತದೆ.[೩೧]

ಕಾದರವಳ್ಳಿ-೩೦ : ಈ ವಿಭಾಗದ ಆಡಳಿತ ಕೇಂದ್ರ ಇಂದಿನ ಬೈಲಹೊಂಗಲ ತಾಲ್ಲೂಕಿನ ಕಾದ್ರೊಳ್ಳಿ ಗ್ರಾಮವಾಗಿದೆ. ಈ ವಿಭಾಗದಲ್ಲಿ ಮೂವತ್ತು ಹಳ್ಳಿಗಳು ಸೇರಿದ್ದವು. ಕುಂಭಾಪುರ ಶಾಸನ[೩೨] 'ಉತ್ಸುಗ್ರಾಮೆ ಕಾದರವಳ್ಳಿಯೆರಡು ಮೂವತ್ತು' ಎಂಬುದಾಗಿ ಉಲ್ಲೇಖಿಸಿದೆ.

ಕವಡಿದ್ವೀಪ-೧,೨೫,೦೦೦ : ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಕವಡಿದ್ವೀಪ ೧೨೫೦೦೦ ಆಡಳಿತ ವಿಭಾಗವು ಇಂದಿನ ಮಹಾರಾಷ್ಟ್ರದ ಠಾಣೆ ಜಿಲ್ಲೆಯ ದಕ್ಷಿಣ ಭಾಗಗಳನ್ನು ಒಳಗೊಂಡಿತು. ಈ ಭಾಗದಲ್ಲಿ ಉತ್ತರ ಶಿಲಾಹಾರರು ಪ್ರಬಲರಾಗಿದ್ದರು. ರಾಯಗಡ, ಸಿಂಧುದುರ್ಗ, ರತ್ನಾಗಿರಿ ಮತ್ತು ಗೋವೆ ರಾಜ್ಯದ ಭಾಗಗಳನ್ನು ಒಳಗೊಂಡಿತ್ತು. ಒಂದನೆಯ ಜಯಕೇಶಿಯ ಕಾಲಕ್ಕೆ ಈ ವಿಭಾಗವು ಗೋವೆ ಕದಂಬರಿಗೆ ಸೇರಿತ್ತೆಂದು ಶೇಡಂಬಿ, ಸಂಗಮೇಶ್ವರ ಮತ್ತು ಕಲಘಟಗಿ ತಾಲ್ಲೂಕಿನ ಮುತ್ತಗಿ ಶಾಸನ[೩೩] ಈ ಪ್ರದೇಶವು ಗೋವೆ ಕದಂಬರಿಗೆ ಸೇರಿತ್ತೆಂದು ತಿಳಿಸುತ್ತದೆ. ಕ್ರಿ.ಶ. ೧೧೪೭-೪೮ರಲ್ಲಿ ಅಧಿಕಾರಕ್ಕೆ ಬಂದ ಪೆರ್ಮಾಡಿದೇವನ ಆಳ್ವಿಕೆಯ ಕೊನೆಯಕಾಲ ಕ್ರಿ.ಶ. ೧೧೭೪ರ ಸುಮಾರಿಗೆ ಈ ಆಡಳಿತ ವಿಭಾಗವು ಗೋವೆ ಕದಂಬರಿಂದ ಕೈಬಿಟ್ಟು ಹೋಗಿರುವ ಸಾಧ್ಯತೆಗಳಿವೆ.

ಕಿತ್ತೂರು ನಾಡು : ಕಿತ್ತೂರು ನಾಡು ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿದೆ. ಇದು ಮೂವತ್ತು ಹಳ್ಳಿಗಳ ಆಡಳಿತ ಕೇಂದ್ರವಾಗಿರಬಹುದು. ಗೋವೆ ಕದಂಬರ ಕಾಲಕ್ಕೆ ಕಿತ್ತೂರು ಹಲಸಿಗೆ-೧೨೦೦೦ದ ಅಧೀನವಾಗಿ ಕಾರ್ಯನಿರ್ವಹಿಸುತಿತ್ತು. ಕಿತ್ತೂರು ನಾಡು ಹತ್ತರಿಂದ ಹದಿಮೂರನೆಯ ಶತಮಾನದವರೆಗೆ ಗೋವೆ ಕದಂಬರ ಆಡಳಿತಕ್ಕೆ ಒಳಪಟ್ಟಿತ್ತು ಎನ್ನಲಾಗಿದೆ.

ಈ ಮೇಲಿನ ಎಲ್ಲ ಆಡಳಿತ ವಿಭಾಗಗಳ ಜೊತೆಗೆ ಗೋವೆ ಕದಂಬರು ಅನೇಕ ಸಣ್ಣ ಸಣ್ಣ ಆಡಳಿತ ಘಟಕಗಳನ್ನು ಹೊಂದಿರುತಿದ್ದರು. ಈ ಮನೆತನಕ್ಕೆ ಸಂಬಂಧಿಸಿದಂತೆ ಕೊಂಡರಟ್ಟೆ-೭೦, ತೆಂಗರೆ-೩೦, ಕಂಪಣ ರಜೀ, ಮರೆಯವಾಡ ಮುಂತಾದವುಗಳ ಕುರಿತು ಹೆಚ್ಚಿನ ಅಧ್ಯಯನವಾದಲ್ಲಿ ಹೊಸ ವಿಷಯಗಳು ಬೆಳಕು ಕಾಣುವ ಸಾಧ್ಯತೆಗಳಿವೆ.

ಸುಮಾರು ೩೫೦ ವರ್ಷಗಳಿಗೂ ಹೆಚ್ಚು ಕಾಲ ರಾಜ್ಯವಾಳಿದ ಗೋವೆ ಕದಂಬ ಅರಸರು ಸೇವುಣ ಯಾದವರಿಂದ ಸೋಲಿಸಲ್ಪಟ್ಟರು. ಇದೇ ಕಾಲಕ್ಕೆ ಉತ್ತರ ಭಾರತದ ದೆಹಲಿ ಸುಲ್ತಾನರ ದಾಳಿಗಳು ದಕ್ಷಿಣದತ್ತ ವಿಸ್ತರಿಸಲ್ಪಟ್ಟವು. ಅಲ್ಲಾವುದ್ದಿನ್ ಖಿಲ್ಜಿಯ ದಂಡನಾಯಕ ಮಲ್ಲಿಕಾಫರ್ ಮತ್ತು ಆನಂತರ ಮಹಮ್ಮದ್ ಬಿನ್ ತುಘಲಕ್ ಈ ನಾಡಿನಲ್ಲಿ ದಾಳಿಮಾಡಿ ರಾಜಧಾನಿಯಾದ ಗೋಪಕಪಟ್ಟಣವನ್ನು ಧ್ವಂಸಗೊಳಿಸಿದರು. ಗೋವೆ ಕದಂಬರು ಗೋವೆಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರಾದರೂ ಅವರ ಹೆಚ್ಚಿನ ಕಾರ್ಯಕ್ಷೇತ್ರ ಕರ್ನಾಟಕವೇ ಆಗಿತ್ತು. ಆಡಳಿತ ವಿಭಾಗಗಳನ್ನು ವಿಸ್ತರಿಸಿ ಪ್ರಜೆಗಳ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಆಡಳಿತ ನಡೆಸಿದರು. ಸಾಮಂತ ಮನೆತನವಾಗಿದ್ದರೂ ಸಹ ಸ್ವತಂತ್ರ್ಯ ಮನೆತನಗಳಿಗೆ ಸರಿಸಾಟಿಯಾಗಿ ರಾಜ್ಯವಾಳಿದ ಗೋವೆ ಕದಂಬ ಮನೆತನ ಕರ್ನಾಟಕ ಸಂಸ್ಕೃತಿಗೆ ತನ್ನದೇ ಆದ ಮಹತ್ವದ ಕೊಡುಗೆಯನ್ನು ನೀಡಿದೆ.

ಅಡಿಟಿಪ್ಪಣಿ

೧. ಎಸ್.ಆಯ್.ಆಯ್, ಸಂ. ೧೧, ಭಾಗ ೨, ಕ್ರಿ.ಶ. ೧೧೦೪, ಪುಟ ೧೫೪.
೨. ಸಂಯುಕ್ತ ಕರ್ನಾಟಕ, ದಿನಾಂಕ ೧೦.೦೩.೨೦೦೫.
೩. ಕೆ.ಆಯ್. ಸಂ. ೧೬, ಕ್ರಿ.ಶ. ೧೧೧೭, ಧಾರವಾಡ.
೪. ಈ.ಆಯ್. ಸಂ. ೧೩, ೨೮ ಎ, ನರೇಂದ್ರ, ಕ್ರಿ.ಶ. ೧೧೨೫.
೫. ಆರ್.ಎನ್. ಗುರವ್, ಕದಂಬಾಸ್ ಆಫ್ ಗೋವಾ ಆ್ಯಂಡ್ ದೇರ್ ಇನ್ಸ್ಕ್ರಿಪಶನ್ಸ್, ಶಾಸನ ಸಂಖ್ಯೆ ೨೧, ಕುರಡಿಕೇರಿ, ಕ್ರಿ.ಶ. ೧೨೨೬.
೬ ಕ.ಇ. ಸಂ. ೧, ೨೮ ಎ, ಕ್ರಿ.ಶ. ೧೧೨೫, ಆಗಸ್ಟ್ ೨೮, ಕುಂಬಾಪುರ, ಧಾರವಾಡ. ತಾ.
೭. ಕ.ಇ, ಸಂ. ೫, ೧೬, ಕ್ರಿ.ಶ. ೧೧೧೭, ಡಿಸೆಂಬರ್ ೨೪, ಧಾರವಾಡ. ತಾ.
೮. ಧಾ. ತಾ. ಶಾ, ನಂ. ೧೭, ಕ್ರಿ.ಶ. ೧೨೬೪, ಕೊಟಬಾಗಿ.
೯. ಅದೇ, ನಂ. ೨೭, ಕ್ರಿ.ಶ. ೧೨೦೬, ದೇವರಹುಬ್ಬಳ್ಳಿ.
೧೦. ಎಎಸ್.ಆಯ್.ಆಯ್, ಸಂ. ೧೧, (೧), ಡಿಸೆಂಬರ್ ೨೫, ಕ್ರಿ.ಶ. ೧೧೨೫, ಪುಟ ೧೭೭.
೧೧. ಅದೇ, ಶಾಸನ ಸಂಖ್ಯೆ ೧೧, (೨), ೧೨೮, ತೇಗೂರು, ಕ್ರಿ.ಶ. ೧೦೮೨.
೧೨. ಆರ್.ಎನ್. ಗುರವ್, ಶಾಸನ ಸಂಖ್ಯೆ ೫೩, ೫೮, ಮುತ್ತಗೆ, ಕ್ರಿ.ಶ. ೧೧೯೧, ಕ್ರಿ.ಶ. ೧೨೦೨.
೧೩. ಹಿರೇಮಠ. ಬಿ.ಆರ್., ಶಾಸನ ಅಧ್ಯಯನ, ಮುತ್ತಗಿ, ೧೦೭೭, ಕ.ವಿ.ವಿ. ಹಂಪಿ, ಪುಟ ೬೫.
೧೪. ಧಾ. ತಾ. ಶಾ., ಕ್ರಿ.ಶ. ೧೧೧೧, ಮೇ ೮ ಮತ್ತು ೧೧೧೨ ಎಪ್ರಿಲ್ ೨೬, ನಿಗದಿ, ಪುಟ ೧೬೦.
೧೫. ಎಸ್.ಆಯ್.ಆಯ್., ಸಂ. ೧೧, (೨), ಕ್ರಿ.ಶ. ೧೨ ಶ. ಮುಗದ, ಪುಟ. ೨೧೧.
೧೬. ಆರ್.ಎನ್. ಗುರವ್, ಶಾಸನ ಸಂಖ್ಯೆ. ೩, ಸಂಗಮೇಶ್ವರ, ಕ್ರಿ.ಶ. ೧೦೬೮.
೧೭. ಆರ್.ಎನ್. ಗುರವ್, ಸಾಧನೆ, ಸಂ. ೪, ಸಂ. ೧, ತಂಬೂರ, ಕ್ರಿ.ಶ. ೧೧೪೪.
೧೮. ಆರ್.ಎನ್. ಗುರವ್, ಶಾಸನ ಸಂಖ್ಯೆ. ೪೦, ಕಲಕುಂಡಿ, ಕ್ರಿ.ಶ. ೧೧೪೯.
೧೯. ಅದೇ, ಶಾಸನ ಸಂಖ್ಯೆ ೨೦, ತಂಬೂರ, ಕ್ರಿ.ಶ. ೧೧೨೫.
೨೦. ಅದೇ, ಶಾಸನ ಸಂಖ್ಯೆ, ೧೭, ಅಮರಗೋಳ, ಕ್ರಿ.ಶ. ೧೧೧೯.
೨೧. ಅದೇ, ಶಾಸನ ಸಂಖ್ಯೆ, ೯, ತೆರಸಿಕೊಪ್ಪ, ಕ್ರಿ.ಶ. ೧೦೮೦.
೨೨. ಈ.ಆಯ್, ಸಂ. ೧೩, ೨೮ ಬಿ, ಕ್ರಿ.ಶ. ೧೧೨೩, ನರೇಂದ್ರ ಶಾಸನ.
೨೩. ಆರ್.ಎನ್. ಗುರವ್, ಶಾಸನ ಸಂಖ್ಯೆ. ೧೦, ಕಲಘಟಗಿ, ಕ್ರಿ.ಶ. ೧೦೮೦.
೨೪. ಹಿರೇಮಠ. ಬಿ.ಆರ್., ಶಾಸನ ಅಧ್ಯಯನ, ಮುತ್ತಗಿ, ೧೦೭೭, ಕ.ವಿ.ವಿ ಹಂಪಿ, ಪುಟ ೬೫.
೨೫. ಧಾ. ತಾ. ಶಾ. ಕ್ರಿ.ಶ. ೧೨೦೩, ಮನಗುಂಡಿ.
೨೬. ಆರ್.ಎನ್. ಗುರವ್, ಸಾಧನೆ, ಸಂ. ೪, ಸಂ. ೧, ತಂಬೂರ, ಕ್ರಿ.ಶ. ೧೧೪೪.
೨೭. ಆರ್.ಎನ್. ಗುರವ್, ಶಾಸನ ಸಂಖ್ಯೆ ೧೩, ಸಬ್ಬಿ.
೨೮. ಅದೇ, ಪುಟ ೧೧.
೨೯. ಅನುಶಾಸನ, ಹನುಮಾಕ್ಷಿ ಗೋಗಿ, ಶೀಗಿಹಳ್ಳಿ, ಕ್ರಿ.ಶ. ೧೦೯೪, ಪುಟ ೩೩೩.
೩೦. ಈ.ಆಯ್, ಸಂ. ೧೩, ಪುಟ ೩೧೬.
೩೧. ಪಾಟೀಲ. ಶಿ.ಬಾ., ಬೆಳಗಾವಿಯ ರಟ್ಟರು, ಬೆಳಗಾವಿ ಸಂಸ್ಕೃತಿ, ಪುಟ ೪೬.
೩೨. ಈ.ಆಯ್, ಸಂ. ೧೩, ನಂ. ೨೮, ಕ್ರಿ.ಶ. ೧೧೨೬.
೩೩. ಹಿರೇಮಠ. ಬಿ.ಆರ್., ಶಾಸನ ಅಧ್ಯಯನ, ಮುತ್ತಗಿ, ೧೦೭೭, ಕ.ವಿ.ವಿ ಹಂಪಿ, ಪುಟ ೬೫.

೮೮

ದಾವಣಗೆರೆಯ ಜಿಲ್ಲೆಯಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಕೈಗಾರಿಕೋದ್ಯಮಗಳು

ಡಾ. ಎನ್.ಜಿ. ಸಂತೋಷ್*

ವಿಜಯನಗರ ಮತ್ತು ನಾಯಕರ ಕಾಲಾವಧಿಯಲ್ಲಿ ಹಲವಾರು ಕೈಗಾರಿಕೆಗಳು ಅಸ್ತಿತ್ವದಲ್ಲಿದ್ದವು. ಕೈಗಾರಿಕೆಗಳಲ್ಲಿ ಜೀವನಾವಶ್ಯಕ ಮತ್ತು ವಿಲಾಸಿ ವಸ್ತುಗಳನ್ನು ಉತ್ಪಾದಿಸಲಾಗುತ್ತಿದ್ದು ಮಾನವ ಸಂಸ್ಕೃತಿ ಹಾಗೂ ವ್ಯಾಪಾರ ವಾಣಿಜ್ಯಗಳ ಅನೇಕ ಬದಲಾವಣೆಗಳಿಗೆ ಎಡೆಮಾಡಿಕೊಟ್ಟಿತು. ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಜನರು ಕೃಷಿಯ ಜೊತೆಗೆ ಕೈಗಾರಿಕೆಗಳನ್ನು ಎಷ್ಟರಮಟ್ಟಿಗೆ ಅವಲಂಬಿತರಾಗಿದ್ದರೆಂದು ಶಾಸನಗಳು ಮತ್ತು ಸಾಹಿತ್ಯ ಗ್ರಂಥಗಳಿಂದ ತಿಳಿಯುತ್ತದೆ.

ಪ್ರಾಚೀನ ಕರ್ನಾಟಕದಲ್ಲಿ ಅನೇಕ ಕೈಗಾರಿಕೆಗಳಿಗೆ ಅವಕಾಶ ಮತ್ತು ಪ್ರಾಧಾನ್ಯತೆ ಕೊಟ್ಟಿದ್ದರು ಎಂದು ಕುಪ್ಪುಸ್ವಾಮಿಯವರು ಅಭಿಪ್ರಾಯಿಸಿದ್ದಾರೆ. ಕೈಗಾರಿಕೆಗಳು ಬೆಳವಣಿಗೆಯಾಗಬೇಕಾದರೆ ಪ್ರಮುಖವಾಗಿ ಕಚ್ಚಾವಸ್ತುಗಳು ಅತ್ಯಗತ್ಯ. ಅವುಗಳಲ್ಲಿ ಕೃಷಿ ಮೂಲಕ ಸಾಕಷ್ಟು ಕಚ್ಚಾವಸ್ತುಗಳು ಉತ್ಪನ್ನವಾಗುತ್ತಿದ್ದವು. ಇವುಗಳಲ್ಲಿ ಮುಖ್ಯವಾದವುಗಳೆಂದರೆ ಹತ್ತಿ, ಕಬ್ಬು, ಎಣ್ಣೆಬೀಜಗಳು, ರೇಷ್ಮೆಗಳಾಗಿದ್ದವೆಂದು ಕಂಡುಬರುತ್ತದೆ. ಇಲ್ಲವೆ ಪ್ರಕೃತಿದತ್ತವಾದ ಕಚ್ಚಾವಸ್ತುಗಳನ್ನು ಬಳಸಿಕೊಂಡು ಕೈಗಾರಿಕೆಗಳನ್ನು ನಡೆಸುತ್ತಿದ್ದರು. ಅವುಗಳಲ್ಲಿ ಮರಗಳು, ಖನಿಜ, ಅರಣ್ಯವಸ್ತುಗಳು ಸಹ ದೊರೆಯುತ್ತಿದ್ದವು.

ವಿಜಯನಗರ ಮತ್ತು ವಿಜಯನಗರೋತ್ತರ ನಾಯಕರ ಕಾಲದ ಹೆಚ್ಚಿನ ಉದ್ದಿಮೆಗಳು ಕೃಷಿ ಆಧಾರಿತವಾಗಿದ್ದವೆಂದು ತಿಳಿಸುತ್ತಾರೆ. ಎಣ್ಣೆ ತಯಾರಿಕೆ, ಬೆಲ್ಲ, ಸಕ್ಕರೆ, ಬಟ್ಟೆ ನೇಯುವುದು ಮುಂತಾದವು ಕೃಷಿ ಆಧಾರಿತ ಉದ್ದಿಮೆಗಳಾಗಿದ್ದವು. ಇವುಗಳಲ್ಲದೆ ಮರದ ಕೆಲಸ, ಮಡಕೆ ತಯಾರಿಕೆ, ಆಭರಣಗಳ ತಯಾರಿಕೆ, ಯುದ್ಧೋಪಕರಣಗಳು ಮತ್ತು ಕೃಷಿ ಸಾಮಗ್ರಿಗಳ ತಯಾರಿಕೆ ಮುಂತಾದ ಕೈಗಾರಿಕೆಗಳು ಉತ್ಪಾದನೆಯಲ್ಲಿ ತೊಡಗಿದ್ದವು.

ಕೃಷಿಯನ್ನು ಬಿಟ್ಟರೆ ಕೈಮಗ್ಗದಿಂದ ಬಟ್ಟೆಯನ್ನು ತಯಾರಿಸುವುದು ಪ್ರಮುಖ ಕೈಗಾರಿಕೆಯಾಗಿತ್ತು. ಸಾಮ್ರಾಜ್ಯದ ಎಲ್ಲಾ ಕೇಂದ್ರಗಳಲ್ಲಿಯೂ ಈ ಉದ್ದಿಮೆಗಳಿದ್ದವೆಂದು[೧], ಕೈಮಗ್ಗಗಳಿಂದ ದಾರ, ಹತ್ತಿಬಟ್ಟೆ ಹಾಗೂ ರೇಷ್ಮೆ ಬಟ್ಟೆಗಳನ್ನು ತಯಾರಿಸುತ್ತಿದ್ದರು[೨]. ಪ್ರವಾಸಿಗ ಬುಕಾನನ್ ದಾವಣಗೆರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಹತ್ತಿಬಟ್ಟೆ ಮತ್ತು ಕಂಬಳಿಯನ್ನು ತಯಾರಿಸಲಾಗುತ್ತಿತ್ತು ಎಂದು ಮಾಹಿತಿ ನೀಡುತ್ತಾನೆ[೩]. ಹರಪನಹಳ್ಳಿಯಲ್ಲಿ ಕುರುಬರು ಉತ್ತಮವಾದ ನಯವಾದ ಕಂಬಳಿ[೪], ಕರಿಯ ಕಂಬಳಿ[೫] ಮತ್ತು ನಾಡಕಂಬಳಿ[೬]ಯನ್ನು ತಯಾರಿಸುತ್ತಿದ್ದರು. ಇವರು ೪೦–೫೦ ರೂಪಾಯಿಗೊಂದರಂತೆ ಮಾರಾಟ ಮಾಡುತ್ತಿದ್ದರೆಂದು ವರದಿ ತಿಳಿಸುತ್ತದೆ. ಈ ಕಂಬಳಿಗಳಿಗೆ ದೇಶದ ಎಲ್ಲಾ ಭಾಗಗಳಲ್ಲಿ ಬೇಡಿಕೆ ಇತ್ತು[೭]. ಚಿನ್ನಸ್ವಾಮಿ ಸೋಸಲೆಯವರು ವಿಜಯನಗರ ಕಾಲದ ಉಣ್ಣೆ ಉತ್ಪಾದನೆಯ ಕೇಂದ್ರಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಚಿತ್ರದುರ್ಗವು ಒಂದು ಕೇಂದ್ರವಾಗಿದ್ದಿತು[೮]. ನೇಕಾರರ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು ಮಗ್ಗದೆರ[೯] ಎಂದು ಕರೆಯಲಾಗಿದೆ.

ಎಣ್ಣೆ ಉತ್ಪಾದನೆ ಅಂದಿನ ಮತ್ತೊಂದು ಪ್ರಮುಖ ಉದ್ದಿಮೆಯಾಗಿತ್ತು. ಎಣ್ಣೆ ಉತ್ಪಾದಿಸುವವರನ್ನು ಗಾಣಿಗ, ತೈಲಿಕ, ತೆಲ್ಲಿಗಾರ ಎಂಬ ಹೆಸರುಗಳಿಂದ ಕರೆಯಲಾಗುತ್ತಿತು[೧೦]. ದಾವಣಗೆರೆ ಪ್ರದೇಶದಲ್ಲಿ ವಿಜಯನಗರ ಪೂರ್ವದಲ್ಲಿಯೇ ಎಣ್ಣೆ ಬೀಜಗಳಿಂದ ಎಣ್ಣೆ ತೆಗೆಯುತ್ತಿದ್ದ ಕೈಗಾರಿಕೆಯು ಕಂಡು ಬರುತ್ತದೆ[೧೧]. ಗಾಣ[೧೨], ಕೈಗಾಣ[೧೩], ಎತ್ತುಗಾಣ[೧೪], ಮರದ ಹೇರುಗಾಣ[೧೫], ಕಲ್ಲುಗಾಣ[೧೬]ಗಳಲ್ಲಿ ಹರಳು[೧೭] (ಔಡಲ) ಹೊಂಗೆ[೧೮], ಕೊಬ್ಬರಿ[೧೯], ಎಳ್ಳು[೨೦], ಕುಸುಬೆ, ಕವುಂಗು, ಬೇವು, ಹೊಂಗೆ, ತೆಂಗು, ಸಾಸವೆ, ಯಿಪ್ಪೆ, ಗೇರು, ವಿಳಂಗ, ವಂಕಲೆ[೨೧] ಬೀಜಗಳಿಂದ ಎಣ್ಣೆ ಪಡೆಯುತ್ತಿದ್ದರೆಂದು **ಸಿವೆಲ್** ತಿಳಿಸುತ್ತಾನೆ[೨೨]. ಗಾಣಗಳ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು ಗಾಣದ ತೆರಿಗೆ[೨೩] ಎಂದು ಕರೆಯುತ್ತಿದ್ದರು.

---

* ಉಪನ್ಯಾಸಕರು, ಶಾಂತಲಾ ಮಹಿಳಾ ಪ್ರಥಮ ದರ್ಜೆ ಕಾಲೇಜು, ಬೇಲೂರು, ಹಾಸನ ಜಿಲ್ಲೆ.

ಶಾಸನಗಳಲ್ಲಿ ಕಬ್ಬನ್ನು[೨೪], ಗಾಣವನ್ನು[೨೫] ಉಲ್ಲೇಖಿಸಿರುವುದರಿಂದ ಅಲ್ಲಿ ಹೇರಳವಾಗಿ ಬೆಳೆಯುತ್ತಿದ್ದರೆಂದು ತಿಳಿಯಬಹುದು. ಸಾಮಾನ್ಯವಾಗಿ ನೀರಾವರಿ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಗಾಣಗಳಿಂದ ಕಬ್ಬನ್ನು ಹಿಂಡಿ ರಸವನ್ನು ಕುದಿಸಿ ಬೆಲ್ಲ[೨೬], ಸಕ್ಕರೆ[೨೭] ಉತ್ಪಾದಿಸುತ್ತಿದ್ದರು[೨೮]. ಕ್ರಿ.ಶ. ೧೪೫೦ರಲ್ಲಿ ಮಲೆಬೆನ್ನೂರ ಸೀಮೆಯ ಕಬ್ಬಿನ ಸುಂಕವನ್ನು ತೆಗೆದುಹಾಕಿದರು[೨೯]. ಇದು ಅತ್ಯಂತ ಕಡಿಮೆ ವೆಚ್ಚದ ಕಡಿಮೆ ಶ್ರಮದಿಂದ ಕೂಡಿದ ಜನಪ್ರಿಯ ಕೈಗಾರಿಕೆಯಾಗಿತ್ತೆಂದು ಹೇಳಬಹುದು.

ಪಂಡಿತ ಎಸ್. ಬಸಪ್ಪ ಸಂಗ್ರಹಿಸಿದ ದೇವಕವಿ ಕೃತ ಮರುಳಸಿದ್ಧನ ಕಾವ್ಯದಲ್ಲಿ, "ಹಂಚ ಮಾಡುವ ಚಕ್ರಕುಲ ಹೀನ ಚನ್ನರಿವರುಂ ಚಹಡಿಯ ಮಾಡುತಿರಲು" ಎಂಬ ಉಲ್ಲೇಖವಿದೆ[೩೦]. ಇದರಿಂದ ಕುಂಬಾರರಿದ್ದರೆಂದು ತಿಳಿಯುತ್ತದೆ. ಇವರು ದಿನನಿತ್ಯ ಬಳಕೆಗೆ ಬೇಕಾದ ಮಣ್ಣಿನ ಮಡಕೆ, ಮಣ್ಣಿನ ತಟ್ಟೆ, ಹೂವಿನ ಕುಂಡ, ಬಾನ, ದೇವರ ಪ್ರತಿಮೆ, ಧಾನ್ಯಗಳನ್ನು ಸಂಗ್ರಹಿಸುವ ಗುಡಾಣಗಳನ್ನು ತಯಾರಿಸುತ್ತಿದ್ದರು. ಇವರು ಪ್ರತಿಯೊಂದು ಗ್ರಾಮದಲ್ಲಿ ನೆಲೆಸಿದ್ದರು[೩೧]. ಕಮ್ಮಾರರು[೩೨] ಲೋಹದ ಉಪಕರಣಗಳನ್ನು ತಯಾರಿಸುವವರಾಗಿದ್ದರು. ಹಾರೆ, ಗುದ್ದಲಿ, ಕುಡಗೋಲು ಮೊದಲಾದ ಕೃಷಿಗೆ ಬಳಸುವ ಉಪಕರಣಗಳನ್ನು ತಯಾರಿಸಿಕೊಡುತ್ತಿದ್ದರು. ಅಲ್ಲದೆ ಯುದ್ಧಗಳಿಗೆ ಬೇಕಾಗುವ ಖಡ್ಗ, ಈಟಿ, ಕವಚ, ಶೂಲ, ಬಾಣ, ಶಿರಸ್ತ್ರಾಣ[೩೩] ಗಂಡುಕೊಡಲಿ, ಸುತ್ತಿಗೆ[೩೪] ಆಯುಧಗಳನ್ನು ತಯಾರಿಸುತ್ತಿದ್ದರು. ಇವೆಲ್ಲವನ್ನು ಕುಲುಮೆಗಳಲ್ಲಿ ತಯಾರಿಸುತ್ತಿದ್ದರು[೩೫]. ಪ್ರತ್ಯೇಕ ಕಮ್ಮಾರ ಬೀದಿ ಇತ್ತೆಂದು ಹೊನ್ನಾಳಿ ತಾಲ್ಲೂಕು ನ್ಯಾಮತಿ ಶಾಸನ ತಿಳಿಸುತ್ತದೆ[೩೬]. ಇವರೂ ರಾಜಪ್ರಭುತ್ವಕ್ಕೆ ಕುಲುಮೆದೆರೆ[೩೭] ಎಂಬ ತೆರಿಗೆಯನ್ನು ನೀಡಬೇಕಾಗಿತ್ತು. ಶಾಸನಗಳಲ್ಲಿ ಕಮ್ಮಾರ ಉಜ್ಜಪ್ಪ[೩೮], ಕಮ್ಮಾರ ಮದೋಜ[೩೯] ಎಂಬ ಹೆಸರುಗಳು ಕಂಡುಬರುತ್ತದೆ.

ಕಂಚುಗಾರರು, ಅಕ್ಕಸಾಲಿಗರು, ಬಡಗಿ ಇವರುಗಳು ಕುಶಲಕರ್ಮಿಗಳಾಗಿದ್ದರು. ಕಂಚುಗಾರರು[೪೦] ದಿನನಿತ್ಯ ಬಳಕೆಯ ಪಾತ್ರೆಗಳನ್ನು, ಲೋಹದ ಮೂರ್ತಿಗಳನ್ನು, ಸಣ್ಣ ಯಂತ್ರಗಳನ್ನು ತಯಾರಿಸುತ್ತಿದ್ದರು[೪೧]. ಮುಮ್ಮಡಿ ಬಸಪ್ಪನಾಯಕನು ಉಚ್ಚಂಗಿದುರ್ಗದ ದೇವಾಲಯಕ್ಕೆ ಗಂಟೆ ಮಾಡಿಸಿದನು. ಇದನ್ನು ಮಾಡಿದವನು ಕಂಚುಗಾರ ದುಂಡಪ್ಪನ ಮಗ ನಾಗಪ್ಪ[೪೨]. ಆಭರಣ ತಯಾರಿಕೆಯು ಅತ್ಯಂತ ಸೂಕ್ಷ್ಮ ಕೆಲಸವಾಗಿದ್ದು, ಇವರು ತಾಂತ್ರಿಕ ಜ್ಞಾನವನ್ನು ಪಡೆದುಕೊಂಡವರಾಗಿದ್ದರು. ಬ್ರೂಸ್‌ಫೂಟ್‌ರು ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕಿನ ಚಲುವನ ಹಳ್ಳಿಯಲ್ಲಿ ಚಿನ್ನದ ನಿಕ್ಷೇಪವಿತ್ತೆಂದು ತಿಳಿಸುತ್ತಾರೆ[೪೩]. ಅಕ್ಕಸಾಲಿಗ[೪೪]ರನ್ನು ಪಾಂಚಾಲರು ಎಂದು ಕರೆಯುತ್ತಿದ್ದರು. ದೊಡ್ಡ ರತ್ನಾಭರಣ ಮಾಡುವ ಅಕ್ಕಸಾಲಿಗರು ಪಟ್ಟಣ ಮತ್ತು ಮಾರುಕಟ್ಟೆಯ ಪ್ರದೇಶದಲ್ಲಿ ಇದ್ದರೆ, ಸಣ್ಣ ಅಕ್ಕಸಾಲಿಗರು ಗ್ರಾಮಾಂತರ ಪ್ರದೇಶದಲ್ಲಿದ್ದರು[೪೫]. ಇವರು ಆಭರಣಗಳನ್ನು ತಯಾರಿಸುವ ಕುಶಲಕರ್ಮಿಗಳಾಗಿದ್ದರು. ಶಾಸನಗಳಲ್ಲಿ ಇವರ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಅವರುಗಳಲ್ಲಿ ಶ್ರೀ ಹರಿಹರ ದೇವರ ಮನೆಯ ಅಕ್ಕಸಾಲೆ ನೀರ ವಿರೋಜನ ಮಗ ಕರಿಯ ತಿಪ್ಪೋಜ[೪೬], ಅಕ್ಕಸಾಲಿ ಕರಿಯಪ್ಪ[೪೭] ಎಂಬ ಹೆಸರುಗಳು ಶಾಸನಗಳಲ್ಲಿ ಉಲ್ಲೇಖವಾಗಿವೆ. ಬೇಗಾರ ಅಥವಾ ಮಾದಿಗರು[೪೮] ಚರ್ಮದಿಂದ ಹಗ್ಗ, ಮಿಣಿ[೪೯], ಕಪಿಲೆ, ಚಪ್ಪಲಿ ಮುಂತಾದ ವಸ್ತುಗಳನ್ನು ತಯಾರಿಸಿಕೊಡುತ್ತಿದ್ದರು[೫೦].

ಬಡಗಿ[೫೧] ಮರದಿಂದ ವಿವಿಧ ರೀತಿಯ ವಸ್ತುಗಳನ್ನು ತಯಾರಿಸುವವರಾಗಿದ್ದರು. ಇವರು ಕೃಷಿಗೆ ಅವಶ್ಯಕವಾದ ರೈತರ ಜೀವನಕ್ಕೆ ಆಧಾರವಾದ ವಸ್ತುಗಳನ್ನೇ ತಯಾರಿಸುತ್ತಿದ್ದರು. ಇವರು ಮನೆಯ ಪೀಠೋಪಕರಣ, ರಥ[೫೨], ಕೃಷಿ ಬೇಸಾಯ ಉಪಕರಣಗಳಾದ ನೇಗಿಲು, ನೊಗ[೫೩], ಕುಂಟೆ, ಕೂರಿಗೆ[೫೪], ಎತ್ತಿನ ಬಂಡಿ[೫೫]ಗಳನ್ನು ತಯಾರಿಸಿಕೊಡುತ್ತಿದ್ದರು. ಬೆಲೆ ಬಾಳುವ ಶ್ರೀಗಂಧ[೫೬], ತೇಗ, ಹೊನ್ನೆ, ಬೀಟೆ[೫೭] ಮರಗಳಿಂದ ದೇವಾನುದೇವತೆಯರ ಕೆತ್ತನೆಗಳು, ಗೊಂಬೆಗಳು, ಪ್ರಾಣಿ ಪಕ್ಷಿಗಳ ಚಿತ್ರವನ್ನು ಕೆತ್ತುತ್ತಿದ್ದರು[೫೮]. ಶಾಸನಗಳಲ್ಲಿ ಬಡಗಿ ಲಿಂಗಣ್ಣ[೫೯], ಕುರಡಿಯ ಬಡಗಿ ಮಲ್ಲೋಜ[೬೦], ಮುತ್ತಿಗೆಯ ಬಡಗಿ ದೇಮೋಜ[೬೧] ಎಂಬ ಹೆಸರುಗಳ ಶಾಸನೋಕ್ತ ಉಲ್ಲೇಖಗಳು ಕಂಡು ಬರುತ್ತವೆ.

ಚಿತ್ರದುರ್ಗ ಸಂಸ್ಥಾನದಲ್ಲಿ ತಾಳೆ ಮರಗಳ ಸಂಖ್ಯೆ ಕಡಿಮೆ ಇದ್ದುದರಿಂದ ಈಚಲು ಹೆಂಡವನ್ನು ತಯಾರಿಸುತ್ತಿದ್ದರು. ಪಲ್ಲಕ್ಕಿ ಹೊರುವವರು ಹಾಗೂ ಬೇಡ ಜನಾಂಗದವರು ಸಕ್ಕರೆ, ಹಿಪ್ಪು ಹೂವು ಹಾಗೂ ಮರದ ಚಕ್ಕೆಗಳಿಂದ ಸರಾಯಿ ತಯಾರಿಸುತ್ತಿದ್ದರು. ಇಂತಹ ಮದ್ಯವನ್ನು ಮಾರಲು ಪರವಾನಗಿ ಪಡೆಯಲು ತೆರಿಗೆಯನ್ನು ನೀಡಬೇಕಾಗಿತು[೬೨].

ಈ ರೀತಿಯಾಗಿ ಉತ್ಪಾದನೆ ಮಾತ್ರವಲ್ಲದೆ ಅವುಗಳ ವ್ಯಾಪಾರವನ್ನು ನಡೆಸುತ್ತಿದ್ದರು. ತಾವು ವಾಸಿಸುತ್ತಿರುವ ಪ್ರದೇಶದ ಸುತ್ತಮುತ್ತಲಿನಲ್ಲಿ ಸಿಗುವ ಪ್ರಕೃತಿದತ್ತವಾದ ಕಚ್ಚಾವಸ್ತುಗಳನ್ನೇ ಹೆಚ್ಚಾಗಿ ಬಳಸಿಕೊಂಡು ಕೈಗಾರಿಕೆಗಳನ್ನು ನಡೆಸುತ್ತಿದ್ದರು. ತಾವೇ ಸ್ವತಃ ಮಾರುಕಟ್ಟೆಗಳನ್ನು ಏರ್ಪಡಿಸಿಕೊಂಡಿದ್ದು, ಸಮಾಜದಲ್ಲಿ ಇವರು ಉತ್ತಮ ಸ್ಥಾನಮಾನ ಮತ್ತು ಉತ್ತಮ ಜೀವನವನ್ನು ನಿರ್ವಹಿಸುತ್ತಿದ್ದರು.

ಅಡಿಟಿಪ್ಪಣಿ

೧. ಲಕ್ಷ್ಮಣ್ ತೆಲಗಾವಿ, (ಸಂ) ಹರತಿಸಿರಿ, ಪುಟ ೪೩೮.

೨. ಚಿನ್ನಸ್ವಾಮಿ ಸೋಸಲೆ, ಸಾಮ್ರಾಜ್ಯ ಮತ್ತು ಸಂಸ್ಥಾನ, ಪೂರ್ವೋಕ್ತ, ಪುಟ ೧೨೪.

೩. ಬುಕಾನನ್, ಪೂರ್ವೋಕ್ತ, ೧೯೮೮, ಪುಟ ೩೩೦.

೪. ಅದೇ.

೫. ಪಂಡಿತ್ ಎಸ್. ಬಸಪ್ಪ, (ಸಂ) ಪೂರ್ವೋಕ್ತ, ೩ನೇ ಸಂಧಿ, ಪದ್ಯ ೧೭, ಪುಟ ೩೪.

೬ ಇಂದುಬಾಯಿ ಟಿ.ಕೆ., (ಸಂ) ಶಂಕರನ ಗಂಡನ ಹಾಡು, ಪದ್ಯ ೨೭, ಪುಟ. ೭೬.

೭. ಬುಕಾನನ್, ಪೂರ್ವೋಕ್ತ, ಪುಟ ೩೩೦.

೮. ಚಿನ್ನಸ್ವಾಮಿ ಸೋಸಲೆ, ಪೂರ್ವೋಕ್ತ, ಪುಟ ೧೨೪.

೯. ಎ.ಕ. VII, ಹೊನ್ನಾಳಿ ೭೧, ಕ್ರಿ.ಶ. ೧೪೯೬.

೧೦. ಹಿರೇಮಠ ಬಿ.ಆರ್., ಶಾಸನಗಳಲ್ಲಿ ಕರ್ನಾಟಕ ವರ್ತಕರು, ಪೂರ್ವೋಕ್ತ, ಪುಟ ೧೦೩.

೧೧. ಎ.ಕ. XI, ದಾವಣಗೆರೆ ೨೦, ಕ್ರಿ.ಶ. ೧೦೪೫.

೧೨. ಕ.ವಿ.ವಿ.ಶಾ.ಸಂ. ೧, ಹರಪನಹಳ್ಳಿ ೩, ಕ್ರಿ.ಶ. ೧೫೨೪.

೧೩. ಅದೇ, ದಾವಣಗೆರೆ ೨೦, ಕ್ರಿ.ಶ. ೧೦೪೫.

೧೪. ಎ.ಕ. VII, ಹೊನ್ನಾಳಿ ೧, ಕ್ರಿ.ಶ. ೧೦೫೫.

೧೫. ಕ.ವಿ.ವಿ.ಶಾ.ಸಂ. ೧, ಹರಪನಹಳ್ಳಿ ೩, ಕ್ರಿ.ಶ. ೧೫೩೪.

೧೬. ಪಂಡಿತ ಎಸ್. ಬಸಪ್ಪ, (ಸಂ) ಪೂರ್ವೋಕ್ತ, ೩ನೇ ಸಂಧಿ, ಪದ್ಯ ೩೪, ಪುಟ ೪೦.

೧೭. ಬುಕಾನನ್, ಪೂರ್ವೋಕ್ತ, ಪುಟ ೩೩೦.

೧೮. ಎ.ಕ. XI, ದಾವಣಗೆರೆ ೨೯, ಕ್ರಿ.ಶ. ೧೪೨೪.

೧೯. ಇಂದೂಬಾಯಿ ಟಿ.ಕೆ., (ಸಂ) ಪೂರ್ವೋಕ್ತ, ಪುಟ ೧೪೪.

೨೦. ಪಂಡಿತ್ ಎಸ್. ಬಸಪ್ಪ, (ಸಂ) ಪೂರ್ವೋಕ್ತ, ೩ನೇ ಸಂಧಿ, ಪದ್ಯ ೪೩, ಪುಟ ೪೨.

೨೧. ಶ್ರೀಕಂಠಯ್ಯ ಕೆ., ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪೂರ್ವೋಕ್ತ, ಪುಟ. ೧೩೮.

೨೨. ರಾಬರ್ಟ್ ಸಿವೆಲ್, (ಮೂಲ) ಸದಾನಂದ ಕನವಳ್ಳಿ, (ಕನ್ನಡ ಅನುವಾದ) ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪ್ರಸಾರಾಂಗ, ಕ.ವಿ.ವಿ. ಹಂಪಿ, ೨೦೦೬, ಪುಟ ೨೪೭.

೨೩. ಎ.ಕ. VII, ಹೊನ್ನಾಳಿ ೭೧, ಕ್ರಿ.ಶ. ೧೪೯೬; ಕ.ವಿ.ವಿ. ಶಾ.ಸಂ. ೧, ಹರಪನಹಳ್ಳಿ ೩, ಕ್ರಿ.ಶ. ೧೫೨೪.

೨೪. ಎ.ಕ. XI, ದಾವಣಗೆರೆ ೧೦೬, ಕ್ರಿ.ಶ. ೧೫೨೮.

೨೫. ಕ.ವಿ.ವಿ.ಶಾ.ಸಂ. ೧, ಹರಪನಹಳ್ಳಿ ೩, ಕ್ರಿ.ಶ. ೧೫೨೪; ಪಂಡಿತ್.ಎಸ್.ಬಸಪ್ಪ, (ಸಂ) ಪೂರ್ವೋಕ್ತ, ೩ನೇ ಸಂಧಿ, ಪದ್ಯ ೩೪, ಪುಟ ೪೦.

೨೬ ಇಂದೂಬಾಯಿ ಟಿ.ಕೆ., (ಸಂ) ಪೂರ್ವೋಕ್ತ, ಉದ್ದಾಳಕನ ಕಥೆ, ಪದ್ಯ ೪೦೨, ಪುಟ ೬೯.

೨೭. ಅದೇ, ಚಂದ್ರಹಾಸನ ಕಥೆ, ಪದ್ಯ ೧೧೨, ಪುಟ ೪೪.

೨೮. ಎಂ.ಎ.ಆರ್. ೧೯೨೭; ಚಿನ್ನಸ್ವಾಮಿ ಸೋಸಲೆ, ಪೂರ್ವೋಕ್ತ, ಪುಟ ೧೧೩.

೨೯. ಎ.ಕ. XI, ದಾವಣಗೆರೆ ೧೦೬, ಕ್ರಿ.ಶ. ೧೫೨೮.

೩೦. ಪಂಡಿತ ಎಸ್. ಬಸಪ್ಪ, (ಸಂ) ಪೂರ್ವೋಕ್ತ, ೩ನೇ ಸಂಧಿ, ಪದ್ಯ ೩೨, ಪುಟ ೩೯.

೩೧. ಚಿನ್ನಸ್ವಾಮಿ ಸೋಸಲೆ, ಪೂರ್ವೋಕ್ತ, ಪುಟ ೧೨೯.

೩೨. ಭಟ್ ಸೂರಿ ಕೆ.ಜಿ., (ಸಂ) ಪೂರ್ವೋಕ್ತ, ಪುಟ ೩೬.

೩೩. ಚಿದಾನಂದ ಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೩೭೪; ಮೋಹನ ಕೃಷ್ಣ ರೈ, ಪೂರ್ವೋಕ್ತ, ಪುಟ. ೯೫–೯೬.

೩೪. ಲಕ್ಷ್ಮಣ್ ತೆಲಗಾವಿ, ಡಾ. ಶ್ರೀನಿವಾಸ.ಎಂ.ವಿ., (ಸಂ) ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಪುಟ ೫೦–೫೧.

೩೫) ಮೋಹನ ಕೃಷ್ಣ ರೈ, ಪೂರ್ವೋಕ್ತ, ಪುಟ ೯೫.

೩೬) ಎ.ಕ. VII, ಹೊನ್ನಾಳಿ ೬೪.

೩೭. ಅದೇ, ಹೊನ್ನಾಳಿ ೭೧, ಕ್ರಿ.ಶ. ೧೩೯೬.
೩೮. ಸಾಮಕ್ ಎಸ್.ಜಿ., ಪೂರ್ವೋಕ್ತ, ಪುಟ ೧೦.
೩೯. ಎ.ಕ. XI, ಜಗಳೂರು ೭, ಕ್ರಿ.ಶ. ೧೫೧೧.
೪೦. ಪಂಡಿತ್ ಎಸ್. ಬಸಪ್ಪ, (ಸಂ) ಪೂರ್ವೋಕ್ತ, ೩ನೇ ಸಂಧಿ, ಪದ್ಯ ೩೨, ಪುಟ ೩೯.
೪೧. ಗುರುರಾಜಚಾರ್ ಎಸ್., ಪೂರ್ವೋಕ್ತ, ಪುಟ ೬೮.
೪೨. ಕ.ವಿ.ವಿ.ಶಾ.ಸಂ. ೧, ಹರಪನಹಳ್ಳಿ ೧೯, ಕ್ರಿ.ಶ. ೧೭೦೦.
೪೩. ಎಂ.ಎ.ಆರ್. ೧೯೪೦, ಸಂ. ೧೯, ೧೯೫೨, ಸಂ. ೩೦.
೪೪. ಭಟ್‌ಸೂರಿ ಕೆ.ಜಿ., ಪೂರ್ವೋಕ್ತ, ಪುಟ ೩೬.
೪೫. ಎಂ.ಎ.ಆರ್. ೧೯೪೦, ಸಂ. ೧೯, ೧೯೫೨, ಸಂ. ೩೦.
೪೬. ಎ.ಕ. XI, ದಾವಣಗೆರೆ ೩೧, ಕ್ರಿ.ಶ. ೧೫೩೧.
೪೭. ಕ.ವಿ.ವಿ.ಶಾ.ಸಂ. ೧, ಹರಪನಹಳ್ಳಿ, ೧೯, ಕ್ರಿ.ಶ. ೧೭೦೦.
೪೮. ಎ.ಕ. XI, ದಾವಣಗೆರೆ ೧೭೪, ಕ್ರಿ.ಶ. ೧೪೧೭; ಭಟ್ ಸೂರಿ ಕೆ.ಜಿ., (ಸಂ) ಪೂರ್ವೋಕ್ತ, ಪುಟ ೩೬; ಪಂಡಿತ ಎಸ್. ಬಸಪ್ಪ, ಪೂರ್ವೋಕ್ತ, ಪದ್ಯ ೫೧, ಪುಟ ೨೬.
೪೯. ಅದೇ, ಪದ್ಯ ೫೭, ಪುಟ ೨೬.
೫೦. ಶಿವಣ್ಣ ಕೆ.ಎಸ್., (ಸಂ) ಕರ್ನಾಟಕ ಚರಿತ್ರೆ, ಸಂಪುಟ ೩, ಪುಟ ೨೪೮.
೫೧. ಕುಂ.ಬಾ. ಸದಾಶಿವಪ್ಪ, ಹರಪನಹಳ್ಳಿ ಪಾಳೆಗಾರರು, ಪುಟ ೬೯.
೫೨. ಗುರುರಾಜಚಾರ್ ಎಸ್., ಪೂರ್ವೋಕ್ತ, ಪುಟ ೭೭.
೫೩. ಬುಕಾನನ್, ಪೂರ್ವೋಕ್ತ, ಪುಟ ೩೪೩.
೫೪. ವಿರುಪಾಕ್ಷಿ ಪೂಜಾರಳ್ಳಿ, ತರೀಕೆರೆ ಪಾಳೆಗಾರ ಸರ್ಜಪ್ಪನಾಯಕನ ಕಥಾಸಾರ, ಪುಟ ೫೩.
೫೫. ಇಂದೂಬಾಯಿ ಟಿ.ಕೆ., (ಸಂ) ಉದ್ಧಾಳಿಕನ ಕಥೆ, ಪದ್ಯ ೪೪೨, ಪುಟ ೭೩.
೫೬. SII IX Pt (ii) No.344; MAR No.72 of 1904; ಇಂದೂಬಾಯಿ.ಟಿ.ಕೆ., ಚಂದ್ರಹಾಸನ ಕಥೆ, ಪದ್ಯ ೪೨೧, ಪುಟ. ೭೧.
೫೭. ಚಿನ್ನಸ್ವಾಮಿ ಸೋಸಲೆ, ಪೂರ್ವೋಕ್ತ, ಪುಟ ೧೨೩.
೫೮. ಅದೇ, ಪುಟ ೧೨೭.
೫೯. ಸಾಮಕ್ ಎಸ್.ಜಿ., ಪೂರ್ವೋಕ್ತ, ಪುಟ.
೬೦. ಎ.ಕ. XI, ದಾವಣಗೆರೆ ೧೭೪, ಕ್ರಿ.ಶ. ೧೪೧೭.
೬೧. ಕ.ವಿ.ವಿ.ಶಾ.ಸಂ. ೧, ಹರಪನಹಳ್ಳಿ ೧೮೬, ಕ್ರಿ.ಶ. ೧೫೫೭.
೬೨. ಬೆಂಜಮಿನ್ ಹೇನೆ, ಸ್ಟ್ಯಾಟಿಕಲ್ ಫ್ರಾಗ್‌ಮೆಂಟ್ಸ್ ಆಫ್ ಮೈಸೂರು, ಪುಟ ೫–೬.

೮೯

ಚಿತ್ರದುರ್ಗ ಕೋಟೆಯೊಳಗೆ ೧೮ನೇ ಶತಮಾನದಲ್ಲಿ ಸಂಭವಿಸಿದ ಭೂನಡುಕ–ಒಂದು ಟಿಪ್ಪಣಿ

ಡಾ. ಹೆಚ್. ಚಂದ್ರಶೇಖರ*

ಪೀಠಿಕೆ

"ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು" ಎಂಬ ಪುಸ್ತಕದಲ್ಲಿ ಚಿತ್ರದುರ್ಗ ಪಾಳೆಯಗಾರರ ವಂಶಾವಳಿ ಎಂಬ ಭಾಗದಲ್ಲಿ ಒಂದು ಕುತೂಹಲಕಾರಿ ಘಟನೆಯನ್ನು ದಾಖಲಿಸಲಾಗಿದೆ.[೧] ಶಾಲಿವಾಹನ ಶಕೆ ೧೬೭೦ ಪುಷ್ಯ ೧ ಶು॥ ೧೦ (ಗುರುವಾರ) ರಂದು ಭೂಮಿ ಗರ್ಜನೆಯಾಯ್ತು. (ಕ್ರಿ.ಶ. ೨೩-೦೨-೧೭೪೯) "ಈ ಬ ೨ಲ್ಲು ಹಿಂಡಂಬೇಶ್ವರರ ಉಪ್ಪರಿಗೆಯ ಮೇಲಣ ಕಲ್ಲು ಕಳಸ ಪಡುವಗಡ ದಿಕ್ಕಿಗೆ ತೊಲಗಿತು." ತೀರ ಸಣ್ಣ ಪರಿಮಾಣಂಕದ (Very small Magnitude) ಭೂಕಂಪವಾದಾಗ ಭೂಮಿ ಗರ್ಜಿಸಿದಂತೆ ಅಥವಾ ಕಟ್ಟಡಗಳು ಕಂಪಿಸಿದಂತೆ ಭಾಸವಾಗುತ್ತದೆ. ಇದು ಭೂಕಂಪ ಶಾಸ್ತ್ರದ (Socilogy) ಪ್ರಕಾರ ಸರಿಯಾದ ಘಟನೆ. ಹೀಗೆ ಭೂನಡುಕದ (Earth Trend) ನಿಖರವಾದ ದಿನಾಂಕ ಮತ್ತು ನಿವೇಶನವನ್ನು (Focus) ದಾಖಲಿಸುವ ಇಷ್ಟು ಪುರಾತನ ದಾಖಲೆ ಇನ್ನೊಂದು ನನ್ನ ಗಮನಕ್ಕೆ ಬಂದಿಲ್ಲ. ಇಪ್ಪತ್ತನೆಯ ಶತಮಾನದಲ್ಲಿ ಭೂಕಂಪ ಶಾಸ್ತ್ರ (Seisnology) ಬೆಳೆದು ಬಂದಿದೆ. ಎಲ್ಲಾ ಪ್ರಮುಖ ಭೂಕಂಪಗಳ ಅಧ್ಯಯನ ಹಿಂದೆ ಹೇಳಿದ ನಡೆದಿದೆ. ಹಿಂದೆ ಹೇಳಿದ ಪುರಾತನವಾದ ಭೂನಡುಕದ ದಾಖಲೆಯನ್ನು ನನ್ನ ಗಮನಕ್ಕೆ ಡಾ. ಬಿ. ರಾಜಶೇಖರಪ್ಪನವರು ಕೆಲವು ವರ್ಷಗಳ ಹಿಂದೆ ತಂದಿದ್ದರು. ಈ ದಾಖಲೆ ನಿಜವೇ ಆಗಿದ್ದರೆ ಈಗಲೂ ಅದನ್ನು ಕ್ಷೇತ್ರ ಕಾರ್ಯದ ಮೂಲಕ ಖಚಿತಪಡಿಸಿಕೊಳ್ಳಬಹುದೆಂದು ನಾನು ಹೇಳಿದ್ದೆ. ಅಂಥ ಕ್ಷೇತ್ರ ಕಾರ್ಯವನ್ನು ನಾನು ಮತ್ತು ರಾಜಶೇಖರಪ್ಪ ಸೇರಿ ದಿನಾಂಕ: ೦೩.೦೩.೨೦೧೬ರಂದು ಕೈಗೊಂಡೆವು.

ಪರಿಕಲ್ಪನೆಗಳು

ಈ ಅಧ್ಯಯನದ ವಿವರಗಳನ್ನು ವಿವರಿಸುವುದಕ್ಕೆ ಮುಂಚೆ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ಕೆಲವು ಪರಿಕಲ್ಪನೆಗಳನ್ನು (Definitions) ವಿವರಿಸುವುದು ಅವಶ್ಯಕ. ಭೂಕಂಪ ಕೇಂದ್ರವೆಂದು (Foces) ಕರೆಯಲಾಗುತ್ತದೆ. ಈ ಕೇಂದ್ರದ ಮೇಲೆ (ಅಂದರೆ ಭೂಮಿಯ ಮೇಲೆ) ಇರುವ ಸ್ಥಳವನ್ನು ಉಪರಿ ಕೇಂದ್ರವೆಂದು (Epicentra) ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಉಪರಿ ಕೇಂದ್ರದ ಸಮೀಪದ ಪ್ರದೇಶದಲ್ಲಿ ಭೂಕಂಪದ ಪರಿಣಾಮಗಳು (Effects of Earthquake) ಹೆಚ್ಚಾಗಿರುತ್ತವೆ. ಇದು ಸಹಜ ಪ್ರಕ್ರಿಯೆ ಆದರೆ ಕೆಲವೊಂದು ಸಲ ಇದಕ್ಕೆ ಅಪವಾದಗಳಿರುತ್ತವೆ. ಇದಕ್ಕೆ ಕಾರಣವೆಂದರೆ ಭೂಕಂಪದ ಅಲೆಗಳು (Seismic Waves) ಚಲಿಸುವ ದಿಕ್ಕುಗಳು ಕಾರಣವಾಗಿರುತ್ತವೆ. ಭೂಕಂಪಗಳು, ಸ್ತರ ಭಂಗಗಳಿಂದುಂಟಾಗುತ್ತವೆ (Faulting of Blocks) ಈ ಸ್ತರ ಭಂಗಗಳಿಂದಾಗಿ ಶಿಲೆಗಳ ಮೇಲೆ ಉಬ್ಬು (Strialions) ಮತ್ತು ತಗ್ಗುಗಳುಂಟಾಗುತ್ತವೆ (Grooves) ಇಂಥ ಉಬ್ಬು ಮತ್ತು ತಗ್ಗುಗಳ ಮೇಲೆ ಬೆರಳುಗಳನ್ನು ಅಥವಾ ಅಂಗೈಯನ್ನು ಚಲಿಸಿದಾಗ ಒಂದು ದಿಕ್ಕಿನಲ್ಲಿ ಒರಟಾಗಿಯೂ (Rough) ವಿರುದ್ಧ ದಿಕ್ಕಿನಲ್ಲಿ ನವಿರಾಗಿಯೂ (Smooth) ಇರುವುದು ಸ್ಪರ್ಶಕ್ಕೆ ಗೊತ್ತಾಗುತ್ತದೆ. ಇದೇ ಸ್ತರ ಭಂಗದ ಲಕ್ಷಣ.

ಗಾಳಿ ಮಂಟಪಗಳು

ರಾಜಶೇಖರಪ್ಪನವರು "ಅನ್ವೇಷಣೆ" ಎಂಬ ಕೃತಿಯಲ್ಲಿ ಗಾಳಿಮಂಟಪಗಳ ವಿವರಣೆ ನೀಡಿದ್ದಾರೆ. ಚಿತ್ರದುರ್ಗದ ಕೋಟೆಯೊಳಗೆ ಒಟ್ಟು ೫ ಗಾಳಿ ಮಂಟಪಗಳನ್ನು ಗುರ್ತಿಸಿದ್ದಾರೆ. ನಮ್ಮ ಈ ಅಧ್ಯಯನಕ್ಕೆ ಎರಡು ಗಾಳಿ ಮಂಟಪಗಳು ಸಾಕು. ಈ ಗಾಳಿ ಮಂಟಪಗಳು ಹಿಡಿಂಬೇಶ್ವರ ದೇವಾಲಯದ ಮುಂಭಾಗದಲ್ಲಿವೆ. ಈ ಮೂರು ರಚನೆಗಳ (Structures)

* 'ಸಂಗಮ', ಎಮ್‌ಐಜಿ-೭೭, ೬ನೇ ಕ್ರಾಸ್, ೬ನೇ ಮೇನ್, ಕೆ.ಹೆಚ್.ಬಿ. ಕಾಲೋನಿ, ೨ನೇ ಹಂತ, ಬಸವೇಶ್ವರನಗರ, ಬೆಂಗಳೂರು-೭೯.

ತಳ ವಿನ್ಯಾಸವನ್ನು (Gruond Plan) ಚಿತ್ರ ೧ರಲ್ಲಿ ತೋರಿಸಿದ್ದೇನೆ. ಉಯ್ಯಾಲೆಯ ಪ್ರದೇಶವನ್ನು ದಾಟಿ ಸಂಪಿಗೆ ಸಿದ್ದೇಶ್ವರ ಗುಡಿಗೆ ಹೋಗುವಾಗ ಎಡಗಡೆ ಈ ಮೂರು ರಚನೆಗಳಿವೆ. ಹಿಡಂಬೇಶ್ವರ ದೇವಾಲಯವಿರುವ ಬೃಹತ್ ಬಂಡೆಯ ಮೆಟ್ಟಿಲುಗಳನ್ನು ಹತ್ತಿ ಏರುವಾಗ ಸಿಗುವ ಮೊದಲ ಗಾಳಿಮಂಟಪದ ಹೆಸರು "ತಿಪ್ಪಯ್ಯನ ಗಾಳಿಮಂಟಪ". ಈ ಮಂಟಪವು ಮೂರು ಅಂತಸ್ತುಗಳನ್ನು ಹೊಂದಿದ್ದು ಮೇಲೆ ಕಳಶವಿದೆ. (ಚಿ. ೨) ಕಳಶದ ಒಂದು ಚಪ್ಪಡಿಯು ತುಂಡಾಗಿದೆ (ಚಿ. ೩). ಈ ಚಪ್ಪಡಿಕಲ್ಲು ತುಂಡಾಗುವದಕ್ಕೆ ಕಾರಣವನ್ನು ಮುಂದೆ ಚರ್ಚಿಸುತ್ತೇನೆ. ನಂತರ ಮೇಲೇರಿದಾಗ ಹಿಡಿಂಬೇಶ್ವರನ ಗುಡಿಯ ಎದುರಿಗೆ ಬರುವುದೇ "ವೀರಮಲ್ಲಣ್ಣ ಒಡೆಯನ ಗಾಳಿ ಮಂಟಪ". ಈ ಮಂಟಪವು ಸಧ್ಯ ಒಂದೇ ಅಂತಸ್ತನ್ನು ಹೊಂದಿದೆ (ಚಿ. ೪). ವೀರಮಲ್ಲಯ್ಯ ಒಡೆಯನ ಗಾಳಿಮಂಟಪದ ಎರಡನೆಯ ಅಂತಸ್ತು ಮತ್ತು ಕಳಶಗಳನ್ನು ಸಧ್ಯಕ್ಕೆ ನೋಡಲಾಗುವುದಿಲ್ಲ.

ಭೂನಡುಕ

"ಚಿತ್ರದುರ್ಗ ಪಾಳೆಯಗಾರರ ವಂಶಾವಳಿ"ಯಲ್ಲಿ ದಿನಾಂಕ ೨೩.೦೨.೧೭೪೯ರಂದು ಭೂಮಿ ಗರ್ಜಿಸಿತು. ಅಲ್ಲದೆ, ಒಂದು ವಾರದ ನಂತರ (ಏಳು ದಿನಗಳ ನಂತರ) ಆ ಗಾಳಿಮಂಟಪದ ಕಳಶವು ಪಶ್ಚಿಮಕ್ಕೆ (ಪಡುವಗಡೆ) ಬಿತ್ತು (ತೊಲಗಿತು). ಸುಮಾರು ೩೦–೩೫ ಮೀಟರ್ ಎತ್ತರದಿಂದ ಈ ಕಳಶವು ಬಿದ್ದದ್ದರಿಂದ ಚೂರು ಚೂರಾಗಿಬೇಕು. ಸಧ್ಯ, ಈ ಶಿಲೆಯ ಚೂರುಗಳನ್ನೂ ನೋಡಲಾಗದು.

ಸ್ತರಭಂಗದ ಸ್ಪರ್ಶ

ಮೇಲೆ ಸ್ತರಭಂಗದಿಂದುಂಟಾಗುವ ಉಬ್ಬುಗಳನ್ನು ಮತ್ತು ತಗ್ಗುಗಳನ್ನು ಸ್ಪರ್ಶದಿಂದ ಗುರ್ತಿಸಬಹುದೆಂದು ಹೇಳಿದ್ದೇನೆ. ಈಗ "ತಿಪ್ಪಯ್ಯನ ಗಾಳಿಮಂಟಪ"ದ ಗೋಡೆಗಳ ಕಂಬಗಳು ಮತ್ತು ಅಡಿಯ ಚಪ್ಪಡಿಗಳು ಜರುಗಿರುವುದನ್ನು ಚಿತ್ರ ೪ ಚಿತ್ರ ೫ರಲ್ಲಿ ಬಿ. ರಾಜಶೇಖರಪ್ಪನವರು ಪರೀಕ್ಷಿಸುತ್ತಿದ್ದಾರೆ. ಬಲ ಅಂಗೈಯನ್ನು ಮೇಲಕ್ಕೆ ಸರಿಸಿದರೆ ಒರಟು ಒರಟಾಗಿ ಸ್ಪರ್ಶವಾಗುತ್ತದೆ (ಚಿತ್ರ ೫). ಆದರೆ, ಅಂಗೈಯನ್ನು ಕೆಳಕ್ಕೆ ಜರುಗಿಸಿದರೆ ತುಲನಾತ್ಮಕವಾಗಿ ನವಿರಾಗಿ ಸ್ಪರ್ಶಕ್ಕೆ ಸಿಗುತ್ತದೆ (ಚಿತ್ರ ೬). ಇದರ ಅರ್ಥವೆಂದರೆ ೨೩.೦೨.೧೭೪೯ರಂದು ಸಂಭವಿಸಿದ ಭೂನಡುಕದಿಂದಾಗಿ "ತಿಪ್ಪಯ್ಯನ ಗಾಳಿಮಂಟಪ"ದ ಕಲ್ಲುಗಳು ಸರಿದಾಡಿವೆ ಮತ್ತು "ವೀರಮಲ್ಲಯ್ಯ ಒಡೆಯನ ಗಾಳಿಮಂಟಪದ ಮೇಲಿನ ಅಂತಸ್ತು ಮತ್ತು ಕಳಶ ಅಭದ್ರಗೊಂಡ ನಂತರ, ಏಳು ದಿನಗಳ ಬಳಿಕ ಪಶ್ಚಿಮಕ್ಕೆ ತೊಲಗಿ ಕೆಳಕ್ಕೆ ಉರುಳಿವೆ. ಈಗ ಮೇಲಿನ ಅಂತಸ್ತಿನ ಸೈಜು ಕಲ್ಲುಗಳು ಮತ್ತು ಕಳಶದ ಅವಶೇಷಗಳಿಲ್ಲ. "ತಿಪ್ಪಯ್ಯನ ಗಾಳಿ ಮಂಟಪ"ದ ಕಳಶದ ಒಂದು ಚಪ್ಪಡಿಯು ತುಂಡಾಗಿರುವುದಕ್ಕೆ ಈ ಭೂನಡುಕವೇ ಕಾರಣ (ಚಿತ್ರ ೩).

ಭೂನಡುಕ ಸಂಭವಿಸುವುದಕ್ಕಿಂತ ಮುಂಚಿನ ನೋಟ


ದಿನಾಂಕ ೨೩.೦೨.೧೭೪೯ರ ಭೂನಡುಕ ಸಂಭವಿಸುವುದಕ್ಕಿಂಥ ಮುಂಚೆ ಇರುವ ದೃಶ್ಯವನ್ನು ರಾಜಶೇಖರಪ್ಪನವರು ಚಿತ್ರಕಲಾವಿದರಂತೆ ಪೆನ್ನಿನಲ್ಲಿ ಬರೆದು ತೋರಿಸಿದ್ದಾರೆ (ಚಿತ್ರ ೭). ವೀರಮಲ್ಲಣ್ಣನ ಒಡೆಯನ ಗಾಳಿಮಂಟಪವು ಪೂರ್ಣವಾಗಿದ್ದಾಗ ಇರಬಹುದಾದ ನೋಟವನ್ನು, ಕಲಾವಿದರು ಸಮರ್ಪಕವಾಗಿ ತಿಪ್ಪಯ್ಯನ ಗಾಳಿಮಂಟಪವನ್ನು ಆಧರಿಸಿ ರಚಿಸಿದ್ದಾರೆ. ಈ ಚಿತ್ರದಲ್ಲಿ "ತಿಪ್ಪಯ್ಯನ ಗಾಳಿಮಂಟಪ" ಪೂರ್ಣರೂಪದಲ್ಲಿದ್ದ "ವೀರಮಲ್ಲಯ್ಯ ಒಡೆಯನ ಮಂಟಪ" ಮತ್ತು ಹಿಡಂಬೇಶ್ವರ ಗುಡಿಗಳ ರೇಖಾ ಚಿತ್ರಗಳನ್ನು ಬಿಡಿಸಲಾಗಿದೆ. ಈ ರೇಖಾಚಿತ್ರಗಳು ಚಿತ್ರಕಾರರಲ್ಲಿ ನಾನು ತೋರಿಸಿದ ತಳವಿನ್ಯಾಸದೊಂದಿಗೆ ಹೋಲಿಸಿ ನೋಡಬಹುದು.

ಇತ್ತೀಚಿನ ನಿದರ್ಶನ

ವಿಜಯ ಕರ್ನಾಟಕ ಪತ್ರಿಕೆಯ (೧೦.೪.೨೦೦೬) ಪ್ರಕಟವಾದ ವರದಿಯು ನನ್ನ ವಿವರಣೆಗೆ ಪುಷ್ಠಿ ಕೊಡುತ್ತದೆ. ಸಂಡೂರು ಪ್ರದೇಶದಲ್ಲಿ ನಿರಂತರವಾಗಿ ನಡೆಯುತ್ತಿರುವ ಸಿಡಿಮದ್ದಿನ ಸ್ಫೋಟ (Dynamite) ಪರಿಣಾಮವಾಗಿ ಈ ಪ್ರದೇಶದ ನವಿಲೆಸ್ವಾಮಿ ಗುಡಿಯ ಗೋಡೆಗಳು ಬಿರುಕುಬಿಟ್ಟಿರುವುದನ್ನು ಚಿತ್ರ ಸಮೇತ ವರದಿ ಮಾಡಲಾಗಿದೆ. ಅಂದರೆ, ತೀರ ಸಣ್ಣ ಪರಿಣಾಮಂಶದ ಭೂನಡುಕದಿಂದ ಕಟ್ಟಡಗಳು ಜಖಂ ಆಗುತ್ತವೆ ಎಂಬುದಕ್ಕೆ ಇತ್ತೀಚಿನ ನಿದರ್ಶನ (ಚಿತ್ರ ೮).



ಭೂನಡುಕ ಸಂಭವಿಸುವುದಕ್ಕಿಂತ ಪೂರ್ವದಲ್ಲಿ ವೀರಮಲ್ಲಣ್ಣನ ಒಡೆಯನ ಗಾಳಿಮಂಟಪವು ಸುಸ್ಥಿತಿಯಲ್ಲಿದ್ದ ನೋಟ.



ಮೂರು ರಚನೆಗಳನ್ನು ತೋರಿಸುವ ತಳ ನಕಾಶೆ

೧. ತಿಪ್ಪಯ್ಯನ ಗಾಳಿ ಮಂಟಪ, ೨. ವೀರಮಲ್ಲಣ್ಣ ಒಡೆಯನ ಗಾಳಿ ಮಂಟಪ, ೩. ಹಿಡಿಂಬೇಶ್ವರ ಗುಡಿ.

ಸಾರಾಂಶ ಮತ್ತು ನಿರ್ಣಯಗಳು

ಮೇಲೆ ವಿವರಿಸಲಾದ ಅಂಶಗಳನ್ನು ಆಧರಿಸಿ ಈ ಕೆಳಗೆ ಕಾಣಿಸಲಾಗಿರುವ ನಿರ್ಣಯಗಳನ್ನು ನಾವು ಒಪ್ಪಬಹುದು:

i) ಚಿತ್ರದುರ್ಗದ ಪಾಳೆಯಗಾರರು ವಂಶಾವಳಿಯಲ್ಲಿ ಉಲ್ಲೇಖಿಸಲಾದ ಕ್ರಿ.ಶ. ೨೩.೦೨.೧೭೪೯ರಂದು ಸಂಭವಿಸಿದ "ಭೂಗರ್ಜನೆ" (ಭೂನಡುಕ) ಭೂವೈಜ್ಞಾನಿಕ ಸತ್ಯ.

ii) ಈ ಭೂನಡುಕದ ಪರಿಣಾಮವಾಗಿ ವೀರಮಲ್ಲಣ್ಣ ಒಡೆಯನ ಗಾಳಿಮಂಟಪದ ಮೇಲಿದ್ದ ಅಂತಸ್ತು ಮತ್ತು ಕಳಶಗಳೆರಡೂ ಪಶ್ಚಿಮಕ್ಕೆ ಉರುಳಿದವು. ಈಗ ಅವುಗಳ ಅವಶೇಷಗಳೂ ಸಿಗುವುದಿಲ್ಲ.



ಗಣಿಗಾರಿಕೆಯ ಸಿಡಿಮದ್ದಿನಿಂದಾಗಿ ಸಂಡೂರಿನ ನವಿಲೆಸ್ವಾಮಿಯ ಗುಡಿಯ ಗೋಡೆಗಳು ಬಿರುಕು ಬಿಟ್ಟಿರುವುದು.



ತಿಪ್ಪಯ್ಯನ ಗಾಳಿಮಂಟಪದ ಶಿಖರದ ಚಪ್ಪಡಿ ತುಂಡಾಗಿರುವುದು.



ವೀರಮಲ್ಲಯ್ಯನ ಗಾಳಿಮಂಟಪ: ಒಂದನೆಯ ಅಂತಸ್ತು ಮತ್ತು ಕಳಶ ಇಲ್ಲ.



ತಿಪ್ಪಯ್ಯನ ಗಾಳಿಮಂಟಪದ ಕಂಬದ ಬಳಿಯ ಸೈಜುಗಲ್ಲು ಒರಟುಒರಟಾಗಿ ಸ್ಪರ್ಶಕ್ಕೆ ಅನುಭವ ನೀಡುತ್ತದೆ.

iii) ಈ ಭೂನಡುಕದಿಂದಾಗಿ "ತಿಪ್ಪಯ್ಯ ಗಾಳಿಮಂಟಪ"ದ ಗೋಡೆಗಳು ಜಖಂಗೊಂಡಿವೆ. ಅದರ ಕಳಶದ ಒಂದು ಚಪ್ಪಡಿ ತುಂಡಾಗಿದೆ.

iv) ಇಷ್ಟೇ ಅಲ್ಲದೆ ತಿಪ್ಪಯ್ಯನ ಗಾಳಿಮಂಟಪದ ತಳದ ಭಾಗ (Basement) ಕುಸಿದಿದೆ.

v) ಈ ಕೋಟೆಯ ಉಸ್ತುವಾರಿಯನ್ನು ವಹಿಸಿಕೊಂಡಿರುವ ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯು (Archaeological Survey of India) "ತಿಪ್ಪಯ್ಯ ಗಾಳಿಮಂಟಪ"ದ ದುರಸ್ತಿ ಕಾರ್ಯವನ್ನು ಕೈಗೊಳ್ಳಬೇಕು. ಇಲ್ಲವಾದರೆ, ಈ ಮಂಟಪವು ನೈಸರ್ಗಿಕ ಕ್ರಿಯೆಗಳಾದ ಮಳೆ ಗಾಳಿಯ ಹೊಡೆತದಿಂದ ಕೆಲವು ವರ್ಷಗಳಲ್ಲಿ ಉರುಳಿ ಹೋಗಬಹುದು.

[ಈ ಭೂನಡುಕದ ಐತಿಹಾಸಿಕ ದಾಖಲೆಗಳನ್ನು ನೀಡಿದ್ದಲ್ಲದೆ ಕ್ಷೇತ್ರ ಕಾರ್ಯದಲ್ಲಿ ನನ್ನೊಡನೆ ಇದ್ದ ಪ್ರೊ. ಬಿ. ರಾಜಶೇಖರಪ್ಪ ಅವರಿಗೆ ನಾನು ಕೃತಜ್ಞ. ೨.೩.೧೬ರಂದು ನಮ್ಮೊಡನಿದ್ದು ಸಹಕರಿಸಿದ ಶ್ರೀ ಇಂದುಶೇಖರ ಅವರಿಗೆ ನಾನು ವಂದಿಸುತ್ತೇನೆ.]

೬೦

ಎಂ.ಎಂ. ಕಲಬುರ್ಗಿ ಮತ್ತು ಚಾರಿತ್ರಿಕ ಕಾವ್ಯ ಸಂಪಾದನೆ

ಶ್ವೇತಾ.ಎಚ್.ಬಿ.*

ಎಂ.ಎಂ. ಕಲಬುರ್ಗಿ ಅವರು ರೂಪಿಸಿಕೊಂಡ ಸಂಶೋಧನ ವೈಧಾನಿಕತೆ ಒಂದಾದರೆ ಅವರ ಗ್ರಂಥ ಸಂಪಾದನ ವೈಧಾನಿಕತೆ ಮತ್ತೊಂದು ರೀತಿಯದು. ಸಾಮಾನ್ಯವಾಗಿ ಗ್ರಂಥ ಸಂಪಾದನೆ ಎಂದರೆ ಕಾವ್ಯ ಸಂಪಾದನೆ ಎಂದು ಬಹುತೇಕ ವಿದ್ವಾಂಸರು ಭಾವಿಸಿದ್ದರು. ಭಾವಿಸಿರುವ ಸಂದರ್ಭದಲ್ಲಿ ಕಲಬುರ್ಗಿ ಅವರು ಶಾಸನ ಸಂಪಾದನೆಯು ಗ್ರಂಥ ಸಂಪಾದನೆಯ ವ್ಯಾಪ್ತಿಗೆ ಬರುತ್ತದೆಂಬುದನ್ನು ಅನೇಕ ಶಾಸನಗಳ ಪಠ್ಯಗಳನ್ನು ಕನ್ನಡ ಗ್ರಂಥ ಸಂಪಾದನ ಶಾಸ್ತ್ರ ಕೃತಿಯಲ್ಲಿ ನಿದರ್ಶನಾತ್ಮಕವಾಗಿ ನೀಡುವುದರ ಮೂಲಕ ಗ್ರಂಥ ಎಂಬ ಪರಿಭಾಷೆಗೆ ವ್ಯಾಪಕ ಅರ್ಥ ಬರುವಂತೆ ಮಾಡಿದ್ದಾರೆ. ಹೀಗಾಗಿ ಗ್ರಂಥ ಸಂಪಾದನೆ ಒಂದು ಕಾವ್ಯ ಸಂಪಾದನೆ ಎನಿಸಿದರೂ ಆ ಕಾವ್ಯದಲ್ಲಿ ಬದುಕಿದ್ದ ಕನ್ನಡಿಗರ ಸಾಂಸ್ಕೃತಿಕ ಚರಿತ್ರೆಯೇ ಆಗಿರುತ್ತದೆ. ಅದೇನೆ ಇದ್ದರೂ ಏಕೈಕ ಪ್ರತಿ, ಉಪೇಕ್ಷಿತ ಪ್ರತಿ ಅಗತ್ಯ ಪ್ರತಿಗಳನ್ನು ಸಂಪಾದಿಸಿಕೊಡುವುದರ ಮೂಲಕ ಗ್ರಂಥಸಂಪಾದನೆಯ ವಸ್ತುವೈವಿಧ್ಯತೆಯನ್ನು ವಿಸ್ತರಿಸಿದವರಲ್ಲಿ ಕಲಬುರ್ಗಿ ಅವರು ಅತಿ ಮುಖ್ಯರೆನಿಸುತ್ತಾರೆ. ಚಾರಿತ್ರಿಕ ಕಾವ್ಯಗಳು ಕನ್ನಡ ಕಾವ್ಯಗಳ ಭಾಗವಾಗಿ ಬಂದಿರುವುದನ್ನು ಅತ್ಯಂತ ಸಹನಶೀಲತೆಯಿಂದ ಹಾಗೂ ಅಧ್ಯಯನ ಪೂರ್ಣವಾಗಿ ಚರ್ಚಿಸಿದ ವಿದ್ವಾಂಸರಲ್ಲಿ ಕಲಬುರ್ಗಿ ಅವರು ಗಣ್ಯರೆನಿಸುತ್ತಾರೆ. ಈ ಕಾರಣದಿಂದ ದೇಶಿ ಧಾರ್ಮಿಕ ಪುರುಷರಾದ ಕೊಡೆಕಲ್ಲು ಬಸವಣ್ಣ, ತಿಂತಿಣಿ ಮೋನಪ್ಪಯ್ಯ, ಗುಂಡಬಸವೇಶ ಮುಂತಾದ ಉಪೇಕ್ಷಿತ ಸಾಂಸ್ಕೃತಿಕ ನಾಯಕರ ಚರಿತ್ರೆಯನ್ನು ಅಧ್ಯಯನ ಮಾಡಿಸಿದರೆ ಇನ್ನೊಂದೆಡೆ ಇಮ್ಮಡಿ ಚಿಕ್ಕಭೂಪಾಲ, ನಿಂಬಸಾಮಂತ, ಸಿರುಮಣನಾಯಕ, ಕುಮಾರರಾಮರಂತವರ ಇತಿಹಾಸಕ್ಕೆ ಅಗತ್ಯವಾಗಿ ಬೇಕಾದ ಕಾವ್ಯಗಳನ್ನು ಸಂಪಾದಿಸಿಕೊಟ್ಟಿದ್ದು ಇವರ ಹೆಗ್ಗಳಿಕೆಯಾಗಿದೆ. ಇದರಿಂದ ಚಾರಿತ್ರಿಕ ಕಾವ್ಯ ಸಂಪಾದನೆಯ ಮಹತ್ವ ಕನ್ನಡಿಗರಿಗೆ ಮನವರಿಕೆಯಾಗುವಂತೆ ಮಾಡಿದ್ದಾರೆ.

ಶಾಸನಗಳಂತಹ ಪ್ರಮುಖ ಆಕರಗಳು ನಮ್ಮ ನಾಡಿನ ಚರಿತ್ರೆಯನ್ನು ನಿರೂಪಿಸುವ ಪ್ರಮುಖ ದಾಖಲೆಗಳು. ಅವುಗಳ ಅಸ್ತಿತ್ವ ವಿಜಯನಗರದ ಕಾಲದವರೆಗೆ ಅಂದರೆ ವಿಜಯನಗರದ ನಂತರ ಮರಾಠಿ ಆಳ್ವಿಕೆಯ ಆರಂಭದಲ್ಲಿ ಸಂಪೂರ್ಣವಾಗಿ ಶಾಸನಗಳ ರಚನೆ ನಿಂತುಹೋಯಿತು. ಇದರ ಅರ್ಥ ಕರ್ನಾಟಕ ಚರಿತ್ರೆಯ ನಿರ್ಮಾಣಕ್ಕೆ ವಿಜಯನಗರದ ನಂತರ ಅಗತ್ಯವಾಗಿ ಬೇಕಾಗಿದ್ದ ದಾಖಲೆಗಳ ಕೊರತೆಯಿಂದಾಗಿ ೪೫೦ ವರ್ಷಗಳ ಇತಿಹಾಸದ ರಚನೆಗೆ ಇಂತಹ ದೇಶಿ ಚಾರಿತ್ರಿಕ ಕಾವ್ಯಗಳು ಅತ್ಯಂತ ಪ್ರಮುಖ ಎಂಬುದನ್ನು ತಮ್ಮ ಸಂಪಾದನೆಯ ಮೂಲಕ ಮನವರಿಕೆ ಮಾಡಿಕೊಟ್ಟರು. ಈ ಮೇಲೆ ತಿಳಿಸಿದ ಇಮ್ಮಡಿ ಚಿಕ್ಕಭೂಪಾಲ, ನಿಂಬಸಾಮಂತ, ಸಿರುಮಣ್ಣನಾಯಕ, ಕುಮಾರರಾಮರಂಥ ಚಾರಿತ್ರಿಕ ವ್ಯಕ್ತಿಗಳು ಜನಮಾನಸದಲ್ಲಿ ಉಳಿದು ಅವರ ಬದುಕನ್ನು ಸಾಂಗತ್ಯದಂತಹ ದೇಶಿಪ್ರಕಾರದಲ್ಲಿ ಕಥೆಕಟ್ಟಿ ಹಾಡಿದ ರೀತಿಯನ್ನು ಈ ಎಲ್ಲಾ ಕಾವ್ಯಗಳ ಸಂಪಾದನೆಯ ಪ್ರಸ್ತಾವನೆಯಲ್ಲಿ ಕಲಬುರ್ಗಿ ಅವರು ವಿವರಿಸಿದ್ದಾರೆ. ಈ ಕಾವ್ಯ ಸಂಪಾದನೆಗೆ ತಾವು ಬಳಸಿಕೊಂಡ ಹಸ್ತಪ್ರತಿ ಈ ಕಾವ್ಯಗಳಲ್ಲಿ ನಿರೂಪಿತವಾದ ಕರ್ನಾಟಕ ಅರಸಮನೆತನಗಳ ಚರಿತ್ರೆ ಕುರಿತಂತೆ ಪ್ರಸ್ತಾವನೆಯಲ್ಲಿ ಚರ್ಚಿಸಿದ್ದಾರೆ. ಒಂದು ದೇಶಿಕೃತಿ ಕನ್ನಡ ನಾಡಿನ ಚಾರಿತ್ರಿಕ ಆಕೃತಿಯಾಗಿ ಮುಂದೆ ಕರ್ನಾಟಕ ಸಂಸ್ಕೃತಿಯ ಭಾಗವಾಗಿ ರೂಪಗೊಂಡ ರೀತಿಯನ್ನು ಅವರ ಮೌಖಿಕವಾದ ಪ್ರಸ್ತಾವನೆಯಲ್ಲಿ ನಿರೂಪಿಸಲಾಗಿದೆ.

ಎಂ.ಎಂ. ಕಲಬುರ್ಗಿ ಅವರು ಸಂಪಾದನೆ ಮಾಡಿದ ಚಾರಿತ್ರಿಕ ಕಾವ್ಯಗಳ ಪಟ್ಟಿ:

೧. ಇಮ್ಮಡಿ ಚಿಕ್ಕ ಭೂಪಾಲನ ಸಾಂಗತ್ಯ– ೧೯೭೭

೨. ನಿಂಬಸಾಮಂತ ಚರಿತೆ– ೧೯೮೧

೩. ಸಿರುಮಣನಾಯಕನ ಸಾಂಗತ್ಯ– ೧೯೮೩

೪. ಸಿರುಮನ ಚರಿತೆ– ೧೯೯೧

* ಸಂಶೋಧನಾ ವಿದ್ಯಾರ್ಥಿನಿ, ಹಸ್ತಪ್ರತಿ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬.

೫. ಗೊಲ್ಲ ಸಿರುಮನ ಚರಿತೆ- ೧೯೯೪

೬. ಹೊಸ ಕುಮಾರರಾಮನ ಸಾಂಗತ್ಯ- ೨೦೦೦

೭. ಕೊಮಾರರಾಮಯ್ಯನ ಚರಿತ್ರೆ- ೨೦೦೧

೮. ಸಿದ್ಧಮಂಕ ಚರಿತೆ- ೨೦೦೪

೯. ತಗರ ಪವಾಡ- ೨೦೦೪

೧೦ ಬಾಲರಾಮನ ಸಾಂಗತ್ಯ- ೨೦೦೭

೧೧. ಗುಂಡಬಸವೇಶ್ವರ ಚರಿತೆ- ೨೦೦೮

೧೨. ಹಳೆಯ ಕುಮಾರರಾಮನ ಸಾಂಗತ್ಯ- ೨೦೦೮

* **ಇಮ್ಮಡಿ ಚಿಕ್ಕ ಭೂಪಾಲನ ಸಾಂಗತ್ಯ:** ಮಲ್ಲಿಕಾರ್ಜುನ ಕವಿಯ 'ಕವಿಕರ್ಣ ರಸಾಯನ' ಎಂಬ ಕೃತಿಯನ್ನು ಎಂ.ಎಂ. ಕಲಬುರ್ಗಿ ಅವರು ಡಾ. ಬಿ.ಆರ್. ಹಿರೇಮಠರೊಡನೆ ಸೇರಿ ೧೯೭೭ರಲ್ಲಿ ಸಂಪಾದನೆ ಮಾಡಿದ್ದಾರೆ. ಕಂಚಿ ಪಲ್ಲವರು ಮತ್ತು ನೊಳಂಬ ಪಲ್ಲವರ ಪರಂಪರೆ ಮುಂದುವರಿಕೆಯಾಗಿ ಬಂದವರು ಮಹಾನಾಡ ಪ್ರಭುಗಳು ಇವರು ೧೬ನೇ ಶತಮಾನದಲ್ಲಿ ಮಧುಗಿರಿ ಬಿಜ್ಜಾವರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ನೆರೆಹೊರೆಯ ಪ್ರದೇಶಗಳನ್ನಾಳಿದ ಒಂದು ವೀರಶೈವ ಪಾಳೆಗಾರ ಪರಿವಾರದವರು. ಈ ಕೃತಿಯು ಮುಖ್ಯವಾಗಿ ಮಹಾನಾಡಪ್ರಭುಗಳ ಮನೆತನ ಹಾಗೂ ಚಿಕ್ಕಭೂಪಾಲನನ್ನು ಕುರಿತಂತೆ ಇದೆ. ಪೆನುಗೊಂಡೆಯನ್ನು ಆಳುತ್ತಿದ್ದ ವಿಜಯನಗರದ ಅರಸು ವೆಂಕಟಪತಿ ರಾಯನ ೭೭ ಜನ ಪಾಳೆಗಾರರಲ್ಲಿ ಇಮ್ಮಡಿ ಚಿಕ್ಕಭೂಪಾಲನು ಒಬ್ಬ. ಈ 'ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ' ಕೃತಿಯ ಕಥಾವಸ್ತು ಹರವೆಯ ಕಾಳಗ. ಇದರ ಜೊತೆಗೆ ಮಿಡಿಗೇಸಿಯ ನಾಗಿರೆಡ್ಡಿ, ವಿಜಯನಗರದ ವೆಂಕಟಪತಿರಾಯ, ಅಳಿಯ ಎಲ್ಲೇಂದ್ರ ಮತ್ತು ಹಾವಳಿಯ ಭೈರೇಗೌಡನೊಡನೆ ಜರುಗಿದ ಯುದ್ಧಗಳನ್ನು ಕುರಿತಂತೆ ಇವೆ. ಇಮ್ಮಡಿ ಚಿಕ್ಕಭೂಪಾಲನ ಮಕ್ಕಳಾದ ಇಮ್ಮಡಿ ಚಿಕ್ಕಭೂಪಾಲ, ತೋಂಟದ ರಾಯರ ವೀರಸ್ವರ್ಗಾರೋಹಣ, ಚಿಕ್ಕಭೂಪಾಲ ಪೂರೈಸಿದ ಬ್ರಹ್ಮರಥ ವಿರಚನೆ, ಸರ್ಪೇಂದ್ರ ಪೂರೈಸಿದ ಮದ್ದಗಿರಿ ಮಲ್ಲೇಶ ದೇವಾಲಯ ನಿರ್ಮಾಯಕಗಳನ್ನು ಕುರಿತಂತೆ ಚರ್ಚಿಸಲಾಗಿದೆ. ಜೊತೆಗೆ ಕೃತಿಯ ಕರ್ತೃ, ಕೃತಿ, ಕೃತಿಯ ಮಹತ್ವ, ಛಂದಸ್ಸು ಹಾಗೂ ಕಥಾಸಾರ ಕುರಿತಂತೆ ಚರ್ಚಿಸಿದ್ದಾರೆ.

* **ನಿಂಬಸಾಮಂತ ಚರಿತೆ:** ಎಂ.ಎಂ. ಕಲಬುರ್ಗಿ ಅವರು ೧೯೮೧ರಲ್ಲಿ ಸಂಪಾದಿಸಿದ ಚಾರಿತ್ರಿಕ ಕಾವ್ಯಗಳಲ್ಲಿ ನಿಂಬಸಾಮಂತ ಚರಿತೆಯು ಒಂದಾಗಿದೆ. ಈ ಕೃತಿಯು ೫೦೬ ಭಾಮಿನಿ ಷಟ್ಪದಿಗಳನ್ನು ಒಳಗೊಂಡಿದೆ. ಶಿಲಾಹಾರದೊರೆ ಗಂಡರಾದಿತ್ಯನ ಸಾಮಂತನಾಗಿದ್ದ ನಿಂಬನ ಸಾಹಸ, ಧಾರ್ಮಿಕ ಸೇವೆಯನ್ನು ಕುರಿತಂತೆ ವಿವರಿಸಲಾಗಿದೆ. ಚಾಲುಕ್ಯ ಚಕ್ರವರ್ತಿ ಬಿಜ್ಜಳನೊಂದಿಗೆ ಕೊಲ್ಲಾಪುರದ ನೆರೆಯ ಪಂಚ ಗಂಗಾನದಿ ತೀರದಲ್ಲಿ ಹೋರಾಡಿ ಸಲ್ಲೇಖನ ವ್ರತದಿಂದ ವೀರಸ್ವರ್ಗವನ್ನು ಏರಿದ್ದನ್ನು ಕೃತಿ ತಿಳಿಸುತ್ತದೆ.

* **ಸಿರುಮನ ಸಾಂಗತ್ಯಗಳು:** ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ಶೌರ್ಯವನ್ನು ಮೆರೆದ ಸೂಜಿಗಲ್ಲು ದುರ್ಗದ ಅಧಿಪತ್ಯ ಪಡೆದ ಸಿರುಮನನ್ನು ಕುರಿತಂತೆ ಎಂ.ಎಂ. ಕಲಬುರ್ಗಿ ಅವರು ೩ ಕಾವ್ಯಗಳನ್ನು ಸಂಪಾದನೆ ಮಾಡಿದ್ದಾರೆ.

೧. ಸಿದ್ಧಕವಿಯ 'ಸಿರುಮಣನಾಯಕನ ಸಾಂಗತ್ಯ'

೨. ಕೆಂಚಶೆಟ್ಟಿಯ 'ಸಿರುಮಣ ಚರಿತೆ'

೩. ಮಲ್ಲಕವಿಯ 'ಗೊಲ್ಲ ಸಿರುಮನ ಚರಿತೆ'

ಸಿರುಮಣನಾಯಕನನ್ನೆ ಕೇಂದ್ರವಾಗಿಟ್ಟುಕೊಂಡು ಬಂದ ಈ ಮೂರು ಕೃತಿಗಳನ್ನು ಗಮನಿಸಿದಾಗ ಸಿರುಮಣನಾಯಕನ ಸಾಂಗತ್ಯ ಹಾಗೂ ಸಿರುಮನ ಚರಿತೆ ಇವೆರಡರಲ್ಲೂ ನರಸಿಂಹನೊಡನೆ ನಡೆದ ಯುದ್ಧವನ್ನೇ ಕೇಂದ್ರವಾಗಿಟ್ಟುಕೊಂಡು ಕೃತಿ ಆರಂಭವಾಗುತ್ತದೆ. ವಿಜಯನಗರದ ಆಳ್ವಿಕೆಯ ಸಂದರ್ಭದಲ್ಲಿ ತಲೆ ಎತ್ತಿದ ವೀರಶೈವ ಪಾಳೆಗಾರರಲ್ಲಿ ಬೂದಿಹಾಳ ಸಿರುಮನ ಮನೆತನವೂ ಒಂದಾಗಿದೆ. ಈ ಮನೆತನದ ಹೋರಾಟಕ್ಕೆ ಸಂಬಂಧಪಟ್ಟ ಒಂದು ಘಟನೆ ಸಿರುಮನ ಚರಿತೆಯ ವಸ್ತುವಾಗಿದೆ. ಆದರೆ ಗೊಲ್ಲಸಿರುಮನ ಚರಿತೆಯಲ್ಲಿ ಸ್ವಲ್ಪ ಭಿನ್ನತೆ ಕಂಡುಬರುತ್ತದೆ. ಇದರಲ್ಲಿ ಸಿರುಮನ ತಂದೆ ಕಾಚನ ವಿವರವಿದೆ. ಕಾಚ ಪ್ರೌಢದೇವಾರಾಯನ ದ್ವಾರಪಾಲಕನಾಗಿದ್ದುದು ಸೇನಾಪತಿ ಗುಂಡನನ್ನು ಮಲ್ಲಯುದ್ಧದಲ್ಲಿ ಸೋಲಿಸಿದ

ಅಂಶ, ಸೂಜಿಗಲ್ಲು ದುರ್ಗವನ್ನು ಪಡೆದುದು, ಸೇನಾಪತಿ ಗುಂಡನ ಮಗ ನರಸಿಂಹನನ್ನು ಅರಸು ಪ್ರೌಢರಾಯ ಮಗನಂತೆ ಸಲಹಿ ರಾಜ್ಯಭಾರ ವಹಿಸಿಕೊಟ್ಟಿದ್ದು, ಪೆನುಗೊಂಡವನ್ನು ಆಳುತ್ತಿದ್ದ ನರಸಿಂಗನ ಕೈಕೆಳಗೆ ಕಾಚನ ಮಗ ಸಿರುಮ ಆಳುವುದು ಮುಂತಾದ ಅಂಶಗಳನ್ನು ಒಳಗೊಂಡಿದೆ.

* **ಕುಮಾರರಾಮನ ಸಾಂಗತ್ಯ:** ಎಂ.ಎಂ. ಕಲಬುರ್ಗಿ ಅವರು 'ಕುಮಾರರಾಮನ ಸಮಗ್ರ ಸಾಹಿತ್ಯ ಪ್ರಕಟಣಾ' ಯೋಜನೆಯನ್ನು ರೂಪಿಸಿಕೊಂಡು ಕುಮಾರರಾಮನನ್ನು ಕುರಿತಂತೆ ಬೇರೆ ಬೇರೆ ಕವಿಗಳು ರಚಿಸಿದ ೪ ಸಾಂಗತ್ಯ ಕಾವ್ಯಗಳನ್ನು ಸಂಪಾದಿಸಿದ್ದಾರೆ.

೧. ಅನಾಮಧೇಯ ಕವಿಯ 'ಹೊಸಕುಮಾರರಾಮನ ಸಾಂಗತ್ಯ'– ೨೦೦೦

೨. ಅನಾಮಧೇಯ ಕವಿಯ 'ಕೊಮಾರರಾಮಯ್ಯನ ಚರಿತ್ರೆ'–೨೦೦೧

೩. ಹಂಪಿಯ ಮಹಾಲಿಂಗಸ್ವಾಮಿಯ 'ಬಾಲರಾಮನ ಸಾಂಗತ್ಯ'– ೨೦೦೭

೪. ಪಾಂಚಾಳ ಗಂಗನ 'ಹಳೆಯ ಕುಮಾರರಾಮನ ಸಾಂಗತ್ಯ– ೨೦೦೮

ಈ ಕೃತಿ ಸಂಪಾದನೆಗಾಗಿ ಹುಲ್ಲೂರು ಶ್ರೀನಿವಾಸ ಜೋಯಿಸ, ಡಾ. ವರದರಾಜರಾವ್, ಪ್ರೊ. ಬಿ. ರಾಜಶೇಖರಪ್ಪ ಅವರ ಪ್ರತಿಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಪ್ರಕಟಿಸುವ ಪ್ರಯತ್ನವನ್ನು ಎಂ.ಎಂ. ಕಲಬುರ್ಗಿ ಅವರು ಮಾಡಿದ್ದಾರೆ.

೧೩–೧೪ನೇ ಶತಮಾನದಲ್ಲಿ ಮುಸಲ್ಮಾನರು ದಕ್ಷಿಣ ಭಾರತವನ್ನು ಆಕ್ರಮಣ ಮಾಡಿದ್ದ ಕಾಲ. ಇದು ಕನಾಟಕದಲ್ಲಿ ಅನೇಕ ಪಲ್ಲಟಗಳಿಗೆ ಕಾರಣವಾಯಿತು. ಸ್ಥಳೀಯ ರಾಜಮನೆತನಗಳ ಯುದ್ಧವನ್ನು ನೋಡಿದ್ದ ಜನತೆಗೆ ಇದೊಂದು ಆಘಾತಕಾರಿಯಾಗಿ ಪರಿಣಮಿಸಿತು. ಅಂತಹ ಸಂದರ್ಭದಲ್ಲಿ ಹುಟ್ಟಿದ ವ್ಯಕ್ತಿ ಕುಮಾರರಾಮ. ಎಲ್ಲಾ ಅರಸುಮನೆತನಗಳು ಅಳಿವಿನ ಅಂಚಿನಲ್ಲಿದ್ದಾಗ ಉಳಿದಂತಹ ಏಕೈಕ ಮನೆತನ ಕಮ್ಮಟದುರ್ಗದ ಕಂಪಿಲರಾಯನದು. ಈತ ಅಪ್ರತಿಮವೀರನಾಗಿ ಪರನಾರಿ ಸಹೋದರನಾಗಿ, ಏಕಾಂಗಿಯಾಗಿ ಮುಸ್ಲಿಂರ ವಿರುದ್ಧ ಹೋರಾಡಿ ವೀರನಾಗಿ ಕಂಡುಬರುತ್ತಾನೆ.

ಎಂ.ಎಂ. ಕಲಬುರ್ಗಿ ಅವರು 'ಕೃತಿ–ಆಕೃತಿ–ಸಂಸ್ಕೃತಿ' ಎಂಬ ಭಾಗದಲ್ಲಿ ಕೃತಿಯು ಒಳಗೊಂಡಿರುವ ವಿಶೇಷತೆಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. 'ಕೃತಿ' ಕುಮಾರರಾಮ ಸಾಂಗತ್ಯ ಒಳಗೊಂಡಿರುವ ಕಥೆಯ ವಿವರಣಾತ್ಮಕ ಭಾಗವಾಗಿದೆ. 'ಆಕೃತಿ'ಯಲ್ಲಿ ಕುಮಾರ ರಾಮನನ್ನು ರಾಜಕೀಯ ವ್ಯಕ್ತಿಯಾಗಿ ನಿರೂಪಿಸಲಾಗಿದೆ. ಕುಮಾರರಾಮನ ಕಥೆಯು ಪುರಾಣ, ಚರಿತ್ರೆ, ಪುರಾಣದ ಚರಿತ್ರೀಕರಣ, ಚರಿತ್ರೆಯ ಪುರಾಣೀಕರಣ ಹೀಗೆ ಅನೇಕ ಮುಖಗಳಲ್ಲಿ ನಿರೂಪಿಸಲಾಗಿದೆ. ಈ ಕೃತಿಯು ಸಾಂಗತ್ಯದಂತಹ ಛಂಧೋ ರೂಪದಲ್ಲಿ ರಚನೆಗೊಂಡಿರುವ ವಿಚಾರವನ್ನು ಚರ್ಚಿಸಿದ್ದಾರೆ. 'ಸಂಸ್ಕೃತಿ' ಭಾಗದಲ್ಲಿ ಕುಮಾರ ರಾಮನ ಜೀವನದ ಸುತ್ತ ರೂಪಗೊಂಡ ಧಾರ್ಮಿಕ ಆಚರಣೆಗಳು, ಕೃತಿಯಲ್ಲಿ ಪ್ರಭುತ್ವಕ್ಕಾಗಿ ನಡೆಯುವ ಹೋರಾಟಗಳು, ಸತಿಪದ್ಧತಿಯ ಆಚರಣೆಗಳು ಹಾಗೂ ವೇಳವಾಳಿಯನ್ನು ಕುರಿತಂತೆ ಚಿತ್ರಿಸಿದ್ದಾರೆ. ಕುಮಾರ ರಾಮನ ಸಾಂಗತ್ಯ ಮಧ್ಯಕಾಲೀನ ಕರ್ನಾಟಕದ ವೀರಜೀವನವನ್ನು ಅದಕ್ಕೆ ಪೂರಕವಾದ ಎಲ್ಲಾ ಮುಖಗಳನ್ನು ಚಿತ್ರಿಸುವ ಮಹತ್ವದ ಕೃತಿಯಾಗಿದೆ.

* **ಸಿದ್ಧಮಂಕ ಚರಿತೆ:** ಪ್ರಸ್ತುತ ಈ ಕೃತಿಯನ್ನು ಎಂ.ಎಂ. ಕಲಬುರ್ಗಿ ಅವರು ವೈ.ಸಿ. ಭಾನುಮತಿ ಅವರೊಂದಿಗೆ ಸಂಪಾದಿಸಿದ್ದು, ಲಿಂಗಾಯತ ಅಧ್ಯಾಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಗದಗದಿಂದ ೨೦೦೪ರಲ್ಲಿ ಪ್ರಕಟಿಸಲಾಗಿದೆ. ಏಕೈಕ ಹಸ್ತಪ್ರತಿಯಿಂದ ಈ ಕೃತಿಯನ್ನು ಪರಿಷ್ಕರಿಸಲಾಗಿದೆ. ಮೂಲತಃ ಈ ಪ್ರತಿ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಸರಗೂರು ಹೋಬಳಿ ಎತ್ತಿಗದ ಮಠಕ್ಕೆ ಸಂಬಂಧಿಸಿದ ಓಲೆಪ್ರತಿ. ಇದು ನಾಲ್ಕು ಸಂಧಿಗಳಿಂದ ರೂಪಗೊಂಡಿದೆ. ಲಿಂಗಾಯತ ಸಮಾಜ ಮತ್ತು ಕುರುಬ ಸಮಾಜಗಳ ಏಕೀಕರಣವನ್ನು ಧ್ವನಿಸುವಂತಹ ಕೃತಿಯಾಗಿದೆ. ೧೨ನೇ ಶತಮಾನದಲ್ಲಿ ಮತಾಂತರ ಸಂದರ್ಭದಲ್ಲಿ ಕುರುಬರು ಲಿಂಗಾಯತಕ್ಕೆ ಹೊರಳಿದ ವಿಷಯವನ್ನು ಕಥಾ ರೂಪದಲ್ಲಿ ಚಿತ್ರಿಸುವಂತಹ ಕೃತಿಯಾಗಿದೆ. ಸಿದ್ಧರಾಮನ ಸೊನ್ನಲಿಗೆ, ಬಸವಣ್ಣನ ಕಲ್ಯಾಣ, ಮರುಳಮಂಕನ ಸರೂರ, ಕುರಿಬೆಟ್ಟದೂರ ಆತಕೂರು, ಈ ಸ್ಥಳಗಳು ಕೃತಿಯಲ್ಲಿ ಕಂಡುಬಂದರೂ ಕೂಡ ನಮ್ಮ ಗಮನ ಸೆಳೆಯುವಂತಹ ಗ್ರಾಮ ಸರೂರ. ಕಾರಣ ಸರೂರಿನಲ್ಲಿ ಹೆಚ್ಚಾಗಿ ಕುರುಬರೆ ಕಂಡುಬರುತ್ತಾರೆ. ಒಟ್ಟಾರೆಯಾಗಿ ಈ ಸಿದ್ಧಮಂಕ ಚರಿತೆ ಕುರುಬ ಸಮಾಜವನ್ನು ಕುರಿತಂತೆ ರಚಿಸಲಾದ ಕೃತಿ,

* **ತಗರ ಪವಾಡ:** ಸಿದ್ಧಮಂಕ ಚರಿತೆಯಂತೆ ಕುರುಬ ಸಮಾಜವನ್ನು ಕುರಿತು ರಚಿತವಾದ ಇನ್ನೊಂದು ಮುಖ್ಯವಾದ ಕಾವ್ಯ ತಗರ ಪವಾಡ. ಎಂ.ಎಂ. ಕಲಬುರ್ಗಿ ಅವರು ಗದುಗಿನ ಶ್ರೀ ತೋಂಟದಾರ್ಯ ಮಠದ ಮೂಲಕ ೨೦೦೪ರಲ್ಲಿ ಪ್ರಕಟಿಸಿದ್ದಾರೆ. ಕೃತಿಯ ರಚನೆಕಾರ ಸಿದ್ಧೇಶನಿರಬೇಕೆಂದು ಎಂ.ಎಂ. ಕಲಬುರ್ಗಿ ಅವರು ಅಭಿಪ್ರಾಯಪಟ್ಟಿದ್ದಾರೆ. ಈ ಕೃತಿಯ ಪರಿಷ್ಕರಣೆಗಾಗಿ ೩ ಕಾಗದ ಪ್ರತಿಗಳನ್ನು ಬಳಸಿಕೊಂಡಿದ್ದಾರೆ. ಈ ಕೃತಿಯ ಮುಖ್ಯ ಪಾತ್ರದಾರಿ ಶಾಂತಮುತ್ತಯ್ಯ. ಈತ ಕುರುಬ ಸಮುದಾಯದವನು. ಕುರುಬ ಸಮಾಜದ ಶಾಂತಮುತ್ತಯ್ಯ ಸಂಪ್ರದಾಯದ ಸುತ್ತಲೂ ಬೆಳೆದುಬಂದ ಕೃತಿಯಾಗಿದೆ. ಕಲ್ಯಾಣದಲ್ಲಿ ಜರುಗಿದ ಸತ್ತಕುರಿಯ ಮೈಲಿಗೆಯೇ ಸಿರುಮನ ಚರಿತೆ ಮತ್ತು ತಗರಪವಾಡ ಎರಡರ ಕೇಂದ್ರ ಆಶಯವಾಗಿದೆ. ತಗರಪವಾಡದಲ್ಲಿ ಸತ್ತಕುರಿ ಬದುಕಿಸಿದ ಮತ್ತು ಕಲ್ಯಾಣದಿಂದ ೧೨ ವರ್ಷ ಹೊರಗುಳಿದಿದ್ದ ಕುರುಬರನ್ನು ಒಳಗೆ ಕರೆದುಕೊಂಡ ವಿಷಯ ಕುರಿತಂತೆ ಇದೆ.

* **ಗುಂಡ ಬಸವೇಶ್ವರ ಚರಿತೆ:** ಎಂ.ಎಂ. ಕಲಬುರ್ಗಿ ಅವರು ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಿ ೨೦೦೭ರಲ್ಲಿ ಪ್ರಕಟಿಸಿದ ಕಾವ್ಯವಾಗಿದೆ. ೭ ಸಂಧಿಗಳಿಂದ ಕೂಡಿದ ಈ ಕಾವ್ಯದ ಕರ್ತೃ ಕಾಲದ ವಿಚಾರವಾಗಿ ಎಲ್ಲಿಯೂ ಸುಳುವಿಲ್ಲ ಎಂಬ ವಿಚಾರವನ್ನು ಕುರಿತಂತೆ ಎಂ.ಎಂ. ಕಲಬುರ್ಗಿ ಅವರು ತಿಳಿಸಿದ್ದಾರೆ. ಈ ಕೃತಿ ಮುಖ್ಯವಾಗಿ ಕಲ್ಯಾಣ ಪರಂಪರೆಯ 'ಧರ್ಮಕಲ್ಯಾಣ'ದ ಸ್ಥಾಪಕ ಗುಂಡಬಸವಣ್ಣನನ್ನು ಕುರಿತದ್ದಾಗಿದೆ. ಕಲ್ಯಾಣದ ಬಸವಣ್ಣನವರ ಪ್ರಭಾವದಿಂದ ಕಲಬುರ್ಗಿಯ ಸಗರನಾಡಿನಲ್ಲಿ ಹುಟ್ಟಿ ಬೆಳೆದ 'ಆರೂಢ ಸಂಪ್ರದಾಯ'ದ ಕಥೆಯನ್ನು ಈ ಕೃತಿ ತಿಳಿಸುತ್ತದೆ.

ನಾಡಿನ ಸಾಂಸ್ಕೃತಿಕ ಚರಿತ್ರೆ ಕಟ್ಟಲು ಹಲವಾರು ಬಗೆಗಳಿವೆ. ಕವಿಗಳು ಕಾವ್ಯಗಳಲ್ಲಿ ಒಂದು ರೀತಿಯ ಸಾಂಸ್ಕೃತಿಕ ಚರಿತ್ರೆ ಕಟ್ಟಿದರೆ ಸಂಶೋಧನ ವಲಯದಲ್ಲಿ ಎಂ.ಎಂ. ಕಲಬುರ್ಗಿ ಅವರು ಅಳಿವಿನ ಹಂಚಿನಲ್ಲಿದ್ದ ಎಷ್ಟೋ ಭಾಗಗಳನ್ನು ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯ ಭಾಗವಾಗಿ ಸಂಪಾದನೆ ಮಾಡಿದ್ದಾರೆ. ಎಂ.ಎಂ. ಕಲಬುರ್ಗಿ ಅವರು ಏಳುಜನ ಚಾರಿತ್ರಿಕ ವ್ಯಕ್ತಿಗಳಿಗೆ ಸಂಬಂಧಿಸಿದಂತಹ ೧೨ ಕಾವ್ಯಗಳನ್ನು ಸಂಪಾದನೆ ಮಾಡಿದ್ದಾರೆ. ನಮ್ಮ ನಾಡಿನ ಅರಸುಗಳ ಚರಿತ್ರೆಯನ್ನು ಹಾಗೂ ನಾಡಿನ ಸ್ಥಳೀಯ ಚರಿತ್ರೆಯನ್ನು ಪ್ರಸ್ತುತ ಸಂದರ್ಭದಲ್ಲಿ ತಿಳಿಯುವುದು ತುಂಬಾ ಕಷ್ಟಕರವಾದ ಕೆಲಸವಾಗಿದೆ. ಅಂಥ ಸಂದರ್ಭದಲ್ಲಿ ಎಂ.ಎಂ. ಕಲಬುರ್ಗಿ ಅವರು ತಮ್ಮ ಸಂಪಾದನೆಯ ಕಾರ್ಯದ ಮೂಲಕ ಈ ಕೊರತೆಯನ್ನು ತುಂಬುವ ಪ್ರಯತ್ನ ಮಾಡಿದ್ದಾರೆ. ಯಾವುದಾದರೂ ಒಂದು ಕೃತಿಯನ್ನು ಕುರಿತಂತೆ ಬಂದಿರುವ ಹಲವು ಹಸ್ತಪ್ರತಿಗಳನ್ನು ಸಂಗ್ರಹಿಸಿ ಅವುಗಳನ್ನು ಪರಿಷ್ಕರಿಸುವಾಗ ಹಲವಾರು ದೋಷಗಳು ಕಂಡು ಬರುವುದು ಸಹಜ. ಅಂಥಹ ಹೊತ್ತಿನಲ್ಲಿ ಅವುಗಳನ್ನು ತಿದ್ದಿ ಪೂರಕವಾದ ಮಾಹಿತಿಯನ್ನು ಕಲೆಹಾಕಿ ಪ್ರಕಟಿಸುವುದು ಒಂದು ಸಾಹಸಕಾರ್ಯವೇ ಆಗಿದೆ. ಒಬ್ಬ ವ್ಯಕ್ತಿಯನ್ನು ಕುರಿತಂತೆ ಬಂದಿರುವ ಹಲವಾರು ಕೃತಿಗಳನ್ನು ಹಾಗೂ ಆ ಕೃತಿಗಳ ಪ್ರತಿಗಳನ್ನು ಒಂದೆಡೆ ಕಲೆಹಾಕಿ ಪರಿಷ್ಕರಣೆ ಮಾಡಿ ಆ ಮೂಲಕ ಆ ಚಾರಿತ್ರಿಕ ವ್ಯಕ್ತಿಗಳ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ.

ರಾಣಿ ಚೆನ್ನಭೈರಾದೇವಿ ಮತ್ತು ಇಮ್ಮಡಿ ಅಂಕುಶ ರಾಯನ ನಾಣ್ಯಗಳು

ಮಂದರ್ಕೆ ನಿತ್ಯಾನಂದ ಪೈ*

ಹೊಯ್ಸಳರ ಕೆಳಗೆ ಸಾಮಂತರಾಗಿದ್ದ ಹಲವಾರು ಸಣ್ಣ ರಾಜಮನೆತನಗಳು ಹೊಯ್ಸಳರ ಇಳಿಗಾಲದಲ್ಲಿ ತಾವೇ ಸ್ವತಂತ್ರರಾಗಿ ಆಳಲು ಪ್ರಾರಂಭಿಸಿದರು. ಇಂತಹ ಪರಿವರ್ತನೆಯಲ್ಲಿ ಉದಯಿಸಿದ ರಾಜ್ಯಗಳಲ್ಲಿ 'ನಗಿರೆ' ರಾಜ್ಯವು ಒಂದು. ನಗಿರೆಗೆ ಗೇರುಸೊಪ್ಪೆ, ಭಲ್ಲಾತಕೀಪುರ, ಕ್ಷೇಮಪುರ ಮುಂತಾದ ಹೆಸರುಗಳು ಇವೆ. ಇದರ ಪಕ್ಕದ ರಾಜ್ಯ 'ಹಾಡುವಳ್ಳಿ' ಇದಕ್ಕೆ ಸಂಗೀತಪುರ ಎಂದೂ ಕರೆಯುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಿಂದ ೨೬ ಕಿ.ಮೀ. ದೂರದಲ್ಲಿರುವ ಗೇರುಸೊಪ್ಪೆ ಮತ್ತು ಭಟ್ಕಳದಿಂದ ೧೯ ಕಿ.ಕೀ. ದೂರದಲ್ಲಿರುವ ಹಾಡುವಳ್ಳಿಯು ಒಂದು ಕಾಲದಲ್ಲಿ ಸಾಳುವರ ರಾಜಧಾನಿಯಾಗಿ ಮೆರೆದಿತ್ತು. ಈ ಎರಡೂ ಮನೆತನಗಳು ಸಾಳುವ ಅಥವಾ ಸಾಳ್ವ ವಂಶಸ್ಥರು, ಜೈನ ಮತಾವಲಂಬಿಗಳು ಇವರು ತಮ್ಮನ್ನು ಸೋಮ ವಂಶದ ಕಾಶ್ಯಪ ಗೋತ್ರದವರೆಂದು ಕರೆದುಕೊಂಡಿದ್ದಾರೆ.

ಈ ಎರಡೂ ಮನೆತನಗಳ ಮಧ್ಯೆ ವೈವಾಹಿಕ ಸಂಬಂಧ, ಹಗೆತನ, ಕಾಳಗ ಆಗಾಗ್ಯೆ ನಡೆಯುತ್ತಿದ್ದರೂ, ಅಂತಿಮವಾಗಿ ಈ ಒಳಜಗಳಕ್ಕೆ ಪೂರ್ಣವಿರಾಮ ಹಾಕಿದ ಶ್ರೇಯಸ್ಸು ಮಹಾಮಂಡಲೇಶ್ವರೀ ಚೆನ್ನಭೈರಾದೇವಿ (ಕ್ರಿ.ಶ. ೧೫೫೪–೧೬೦೩)ಗೆ ಸೇರುತ್ತದೆ. ಸಣ್ಣ ವಯಸ್ಸಿನಲ್ಲೇ ಪಟ್ಟಕ್ಕೇರಿದ ಈ ರಾಣಿ ಸುಮಾರು ಅರ್ಧ ಶತಮಾನಗಳ ಕಾಲ ಆಳಿದ್ದು ಚರಿತ್ರಾರ್ಹ ದಾಖಲೆ. ಇವಳ ಗಂಡ ಸಾಳುವ ಕೃಷ್ಣದೇವರಸ. ಪ್ರಸ್ತುತ ಈ ಹೊಸ ಮಾದರಿಯ ನಾಣ್ಯದ ವಿವರಗಳು ಹೀಗಿವೆ.

ಲೋಹ : ತಾಮ್ರ ತೂಕ : ೯ ಗ್ರಾಂ. ವ್ಯಾಸ : ೧೮ ಮಿ.ಮೀ.



ಮುಂಬದಿ : ಎಡಬದಿಗೆ ಚಲಿಸುತ್ತಿರುವ ಗಂಡಭೇರುಂಡದ ಚಿತ್ರವಿದೆ.

ಹಿಂಬದಿ : ಆಯತಾಕಾರದ ವಿನ್ಯಾಸವನ್ನು ಒಂದು ರೇಖೆಯು ೨ ವಿಭಾಗವನ್ನಾಗಿ ಮಾಡಿದ್ದು ಇದರ ಮೇಲೆ ಮತ್ತು ಕೆಳಗೆ ಚಂನ ಬ / ಯಿರಾ ದೇವಿ ಎಂಬ ಕನ್ನಡ ಲಿಪಿ ಇದೆ. ಆಯತಾಕಾರದ ಮೇಲೆ ಚಂದ್ರ ಮತ್ತು ಸೂರ್ಯರಿದ್ದು ನಡುವೆ ಸಾಳುವರ ತಾಮ್ರದ ನಾಣ್ಯಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ೩ ದಳಗಳ ವಿನ್ಯಾಸವಿದೆ.

ಶಾಸನಗಳು ಚೆನ್ನಭೈರಾದೇವಿಯನ್ನು ಚಂನ ಭಯಿರಾದೇವಿ, ಚಂನ ಭೈರಾದೇವಿ, ಚೆನ್ನ ಭೈರಾದೇವಿಯಮ್ಮ, ಇಮ್ಮಡಿ ಚೆನ್ನ ಭೈರಾದೇವಿ ಎಂದು ಉಲ್ಲೇಖಿಸುತ್ತವೆ.

ಸಂಪತ್ ಭರಿತವಾದ ತನ್ನ ರಾಜ್ಯವನ್ನು ಕಬಳಿಸಲು ಸನ್ನದ್ದರಾಗಿದ್ದ ಪೋರ್ಚುಗೀಸರನ್ನು ಸ್ವತಃ ಯುದ್ಧದಲ್ಲಿ ಮಣಿಸಿದ ಈ ರಾಣಿಯು ವಿಜಯನಗರದ ದೊರೆಗಳೊಂದಿಗೆ ಉತ್ತಮ ಸಂಬಂಧವನ್ನು ಇಟ್ಟುಕೊಂಡಿದ್ದಳು. 'ಕರಿಮೆಣಸಿನ ರಾಣಿ' (Pepper Queen) ಯೆಂದೇ ಪ್ರಸಿದ್ಧಳಾದ ಮಹಾಮಂಡಲೇಶ್ವರಿ ಚೆನ್ನಭೈರಾದೇವಿಯ ಅಂತ್ಯ ಕೆಳದಿ ನಾಯಕರ ಕೈಯಲ್ಲಾಯಿತು.

ವಿಜಯನಗರದ ದೊರೆ ಅಚ್ಯುತರಾಯ (ಕ್ರಿ.ಶ. ೧೫೩೦–೧೫೪೨) ಗತಿಸಿದ ಕೆಲ ವರ್ಷಗಳ ನಂತರ ಚೆನ್ನ ಭೈರಾದೇವಿಯು ಪಟ್ಟಕ್ಕೆ ಬಂದಳು. ಸ್ವಾಭಾವಿಕವಾಗಿ ಆ ಕಾಲದಲ್ಲಿ ಚಲಾವಣೆಯಲ್ಲಿದ್ದ ಅಚ್ಯುತರಾಯನ ಗಂಡಭೇರುಂಡದ ವಿನ್ಯಾಸವನ್ನು ತನ್ನ ನಾಣ್ಯಗಳಲ್ಲಿ ಅಳವಡಿಸಿಕೊಂಡು, ನಂತರದ ದಿನಗಳಲ್ಲಿ ಆಳ್ವಿಕೆಯಲ್ಲಿದ್ದ ವಿಜಯನಗರದ ದೊರೆ ಸದಾಶಿವರಾಯನ ತಾಮ್ರದ ನಾಣ್ಯಗಳಲ್ಲಿರುವ ಗರುಡನ ಚಿತ್ರವನ್ನು ತನ್ನ ನಾಣ್ಯಗಳಲ್ಲಿ ಚಂನ ಭೈರಾದೇವಿಯು ಟಂಕಿಸಿದಳು.

* ಗಣೇಶ ಎಂಟರ್‌ಪ್ರೈಸಸ್, ಮೂಡಬಿದಿರೆ.

ಪ್ರಸ್ತುತ ಈ ನಾಣ್ಯವು ಭಟ್ಕಳದಲ್ಲಿ ದೊರಕಿದ್ದು ಸಾಳುವರ ನಾಣ್ಯ ಶೃಂಖಲೆಗೆ (Chain) ಹೊಸದೊಂದು ನಾಣ್ಯವು ಸೇರಿಕೊಂಡಂತಾಯಿತು.


ಚನ್ನಪಟ್ಟಣ ಪಾಳೇಗಾರರು ರಾಣಾ ವಂಶದವರು. ತೆಲುಗು, ಬಣಜಿಗರು, ಇವರು ೧೪ನೇ ಶತಮಾನದಲ್ಲಿ ಅಧಿಕಾರಕ್ಕೆ ಬಂದರೆಂದು ಬುಖನನ್ ತಿಳಿಸುತ್ತಾನೆ. ಈ ವಂಶದ ಮೂಲ ಪುರುಷ ರಾಣೋಜಿರಾವ್. ಚನ್ನಪಟ್ಟಣದ ಶಾಸನವು ಈ ವಂಶದ ತಿಮ್ಮ ನಾಯಕನು ಖಜಾನೆಯ ಮುಖ್ಯಸ್ಥನಾಗಿರುವ ವಿಷಯ ಉಲ್ಲೇಖಿಸುತ್ತದೆ. ಇವನ ಮಗ ಜಗದೇವರಾಯ. ಇವನ ನಂತರ ಆಳ್ವಿಕೆಗೆ ಬಂದ ಇಮ್ಮಡಿ ಜಗದೇವರಾಯನು ಈ ವಂಶದ ಅತ್ಯಂತ ಪ್ರಸಿದ್ಧ ದೊರೆ. ಬಿಜಾಪುರ ಅಹಮದ್ ನಗರ ಸುಲ್ತಾನರು ಪೆನುಗೊಂಡೆಯನ್ನು ಆಕ್ರಮಿಸಲು ಇವನು ವಿಜಯನಗರದ ಪರವಾಗಿ ಅಪ್ರತಿಮ ಸಾಹಸದಿಂದ ಕಾದಾಡಿ ಗೆಲುವನ್ನು ತಂದುಕೊಟ್ಟ. ಇದರಿಂದ ವಿಜಯನಗರದ ದೊರೆಗಳು ಇವನಿಗೆ 'ಘನಪೂರಿ ರಕ್ಷಕ' ಎಂಬ ಬಿರುದನ್ನು ನೀಡಿ, ಕೆಲವು ಜಿಲ್ಲೆಗಳನ್ನು ಪ್ರತಿಫಲವಾಗಿ ಕೊಟ್ಟರು. ಆಡಳಿತದ ದೃಷ್ಟಿಯಿಂದ ಚನ್ನಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿ ಅಲ್ಲಿ ಕೋಟೆಯನ್ನು ಇಮ್ಮಡಿ ಜಗದೇವರಾಯನು ನಿರ್ಮಿಸಿದನು. ಅಂದಿನಿಂದ ಈ ಸ್ಥಾನಿಕ ಪ್ರಭುಗಳಿಗೆ ಚನ್ನಪಟ್ಟಣ ಪಾಳೇಗಾರರೆಂದು ಹೆಸರು ಬಂತು.

ಇಮ್ಮಡಿ ಜಗದೇವರಾಯನ ನಂತರ ಅಂಕುಶರಾಯನು ಕ್ರಿ.ಶ. ೧೬೦೦ರಲ್ಲಿ ಪಟ್ಟಕ್ಕೆ ಬಂದನು. ಈ ವೇಳೆಗೆ ಚನ್ನಪಟ್ಟಣ ಪಾಳೇಗಾರರು ಸಾಕಷ್ಟು ಪ್ರಬಲರಾಗಿ ವಿಜಯನಗರದ ದೌರ್ಬಲ್ಯದ ಪ್ರಯೋಜನವನ್ನು ಪಡೆದುಕೊಂಡು ಸ್ವಾತಂತ್ರ್ಯವನ್ನು ಘೋಷಿಸಿಕೊಂಡರು. ಇವನ ನಂತರ ಕುಮಾರ ಜಗದೇವರಾಯನು ಪಟ್ಟಕ್ಕೆ ಬಂದನು.

ಈ ಸಂತತಿಯ ಕೊನೆಯ ದೊರೆ ಅಂಕುಶ ಜಗದೇವರಾಯ ಅಥವಾ ಅಂಕುಶ ವೆಂಕಟಪತಿ. ಇವನು ಕ್ರಿ.ಶ. ೧೬೨೫ರಲ್ಲಿ ಆಳ್ವಿಕೆಗೆ ಬಂದನು. ಇವನ ಬಗ್ಗೆ ಸಮಕಾಲೀನ ಸಾಹಿತ್ಯದಲ್ಲಿ ಮಾತ್ರ ಉಲ್ಲೇಖ ಬರುತ್ತದೆ. ಸಾಹಿತ್ಯ ಪ್ರೇಮಿಯಾದ ಇವನ ಆಸ್ಥಾನದಲ್ಲಿ ರೇವೂರಿ ಏಕಾಂಬರನಾಥ ಎಂಬ ಪ್ರಸಿದ್ಧ ಕವಿ ಸಂಸ್ಕೃತದಲ್ಲಿ ಜಾಂಬವತೀ ಕಲ್ಯಾಣಂ ಮತ್ತು ಸತ್ಯವತೀ ಪರಿಣಯಂ ಎಂಬ ಕೃತಿಗಳನ್ನು ರಚಿಸಿ ಇಮ್ಮಡಿ ಅಂಕುಶನಿಗೆ ಸಮರ್ಪಿಸಿದ್ದಾನೆ. ಆದ್ದರಿಂದ ಈ "ಇಮ್ಮಡಿ ಅಂಕುಶರಾಯನು" ಅಂಕುಶ ಜಗದೇವರಾಯ ಅಥವಾ ಅಂಕುಶ ವೆಂಕಟಪತಿಯೇ ಇರಬೇಕೆಂದು ಇತಿಹಾಸ ತಜ್ಞರ ಅಭಿಪ್ರಾಯ.

ಇದುವರೆಗೆ ಜಗದೇವರಾಯ, ಇಮ್ಮಡಿ ಜಗದೇವರಾಯ, ಅಂಕುಶರಾಯನ ನಾಣ್ಯಗಳು ಪ್ರಕಟಿಸಲ್ಪಟ್ಟಿವೆ. ಪ್ರಸ್ತುತ ಇಮ್ಮಡಿ ಅಂಕುಶರಾಯನ ನಾಣ್ಯದ ವಿವರಗಳು ಹೀಗಿವೆ.

ಲೋಹ : ತಾಮ್ರ   ತೂಕ : ೩.೨ ಗ್ರಾಂ. ವ್ಯಾಸ : ೧೫ ಮಿ.ಮೀ.



ಮುಂಭಾಗ : ಎರಡು ಅಂಕುಶಗಳ ವಿನ್ಯಾಸವಿದೆ.

ಹಿಂಭಾಗ : ಗೆರೆಗಳ ನಡುವೆ ಮೂರು ಸಾಲಿನ ಯಿಮಡಿ/ಅಂಕುಶ/ರಾಯ ಎಂಬ ಕನ್ನಡ ಲಿಪಿ ಇದೆ.

ಇಮ್ಮಡಿ ಅಂಕುಶ ರಾಯನ ಬಗ್ಗೆ ಇತಿಹಾಸ ಹೆಚ್ಚಾಗಿ ಏನನ್ನೂ ದಾಖಲಿಸಲಿಲ್ಲವಾದರೂ ಈ ನಾಣ್ಯವೂ ಅವನ ಅಸ್ತಿತ್ವವನ್ನು ಸಾರುತ್ತದೆ.

ಚನ್ನಪಟ್ಟಣದ ಪಾಳೇಗಾರರ ರಾಜ್ಯವು ಎಷ್ಟು ವೇಗವಾಗಿ ಅಸ್ತಿತ್ವಕ್ಕೆ ಬಂದಿತೋ ಅಷ್ಟೇ ಕ್ಷಿಪ್ರಗತಿಯಿಂದ ಇತಿಹಾಸದ ಪುಟಗಳಿಂದ ಕಣ್ಮರೆಯಾಗಿತ್ತು. ಕ್ರಿ.ಶ. ೧೬೩೦ರಲ್ಲಿ ಮೈಸೂರಿನ ಚಾಮರಾಜ ಒಡೆಯರ ದಳಪತಿ ವಿಕ್ರಮ ರಾಯನು ಚನ್ನಪಟ್ಟಣವನ್ನು ಆಕ್ರಮಿಸಿಕೊಂಡು ಈ ಪಾಳೆಯ ಪಟ್ಟವನ್ನು ಮೈಸೂರಿಗೆ ಸೇರಿಸಿಕೊಂಡನು.

ಆಕರ ಗ್ರಂಥಗಳು

೧. ನಾಡೋಜ ಪ್ರೊ. ಕಮಲಾ ಹಂಪನಾ, ಮಹಾಮಂಡಲೇಶ್ವರೀ ರಾಣಿ ಚೆನ್ನ ಭೈರಾದೇವಿ.

೨. Dr. Gururaj Bhat, Studies in Tuluvas History and Culture.

೩. ಡಾ. ರಮೇಶ್ ಕೆ.ವಿ., ತುಳುನಾಡಿನ ಇತಿಹಾಸ.

೪. Epigraphica Carnatica Vol IV

೫. Venkat Rao N. Southern School of Telugu Literature.

೬ ಡಾ. ವಸು ಎಂ.ವಿ., ಸಂಪಾದಿತ ದಕ್ಷಿಣ ಕರ್ನಾಟಕದ ಅರಸ ಮನೆತನಗಳು.

೬೨

ಅಂಕನಾಥಪುರ ಗ್ರಾಮದಲ್ಲಿ ದೊರೆತ ಈಸ್ಟ್ ಇಂಡಿಯ ಕಂಪೆನಿ ಮತ್ತು ಬ್ರಿಟೀಷ್ ನಾಣ್ಯಗಳು

ಕೆಂಡಮ್ಮ ಕೆ.*

ಹೆಚ್.ಡಿ. ಕೋಟೆಯಿಂದ ೧೩ ಕಿ.ಮೀ. ದೂರದಲ್ಲಿರುವ ಅಂಕನಾಥಪುರ ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಈ ನಾಣ್ಯಗಳು ನನಗೆ ದೊರೆತಿದೆ. ನಾಣ್ಯಗಳು ಭಾರತೀಯ ಇತಿಹಾಸದ ಅಧ್ಯಯನದ ದೃಷ್ಟಿಯಿಂದ ಅಭ್ಯಾಸಿಸುವುದಾದರೆ ಒಂದು ಸಾಮ್ರಾಜ್ಯದ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಬಹುಮುಖ್ಯವಾದವುಗಳಾಗಿದ್ದು ಆರ್ಥಿಕ, ಧರ್ಮ, ಕಲೆ ಮತ್ತು ಸಾಂಸ್ಕೃತಿಕ ಅಂಶಗಳನ್ನೊಳಗೊಂಡಂತೆ ಅಮೂಲಾಗ್ರ ಮಾಹಿತಿಯನ್ನು ನೀಡಬಲ್ಲ ಮಹತ್ವದ ಸ್ಥಾನವನ್ನು ಪಡೆದಿದೆ ಎಂದು ಹೇಳಬಹುದು.

ನಾಣ್ಯ–೧

ಲೋಹ – ತಾಮ್ರ

ಮೌಲ್ಯ – ಅರ್ಧ ಆಣೆ

ಆಕಾರ – ವೃತ್ತಾಕಾರ

ತೂಕ – ೧೧.೫೮ ಗ್ರಾಂ

ವ್ಯಾಸ – ೩.೦೦ ಸೆಂಮೀ

ಗ್ರೇನ್ – ೧೭೮



ಮುಮ್ಮುಖ: ಈ ಭಾಗದಲ್ಲಿ ಎರಡು ಸಿಂಹಗಳು ನಾಣ್ಯದಲ್ಲಿ ಕಿರೀಟವನ್ನು ಎತ್ತಿ ಹಿಡಿದಿರುವ ವಿನ್ಯಾಸ ಹೊಂದಿದ್ದು.

ಹಿಮ್ಮುಖ: ಗೆರೆಯ ವರ್ತುಲದಲ್ಲಿ ಸುತ್ತಲೂ ಇಂಗ್ಲೀಷ್ "EAST INDIA COMPANY" ಎಂಬ ಬರಹವಿದೆ. ಕೆಳಗೆ ಅಚ್ಚಾದ ಇಸವಿ **೧೮೩೫** ಎಂದು ನಮೂದಿಸಿದೆ. ಇದರ ಎಡಭಾಗದಲ್ಲಿ 'U' ಮತ್ತು ಬಲಭಾಗದಲ್ಲಿ 'K' ಎಂದು ಸಣ್ಣ ಅಕ್ಷರದಲ್ಲಿ ಅಚ್ಚಾಗಿದೆ. ನಾಣ್ಯದ ಮಧ್ಯದಲ್ಲಿ "HALF ANNA" ಎಂದು ಎರಡು ಗಿಡದ ಗೊಂಚಲಿನ ಮಧ್ಯದಲ್ಲಿ ಎರಡು ಸಾಲಿನಲ್ಲಿ ಅಚ್ಚಾಗಿದೆ. ಪ್ರಾಚೀನ ಕಾಲದಿಂದಲೂ ಭಾರತೀಯ ಪರಂಪರೆಯಲ್ಲಿ ಸಿಂಹಕ್ಕೆ ವಿಶೇಷ ಸ್ಥಾನವಿದೆ. ಸಿಂಹವನ್ನು ರಾಜ ಲಾಂಛನವಾಗಿ ಬಳಸಿದ ಇಂತಹ ಪ್ರಾಣಿಯು ನಾಣ್ಯಗಳ ಮೇಲೆ ವಿಜೃಂಭಿಸಿದುದು ಆಶ್ಚರ್ಯವೇನಲ್ಲ, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು, ಗೋವೆಯ ಕದಂಬರು, ಮುಮ್ಮಡಿ ಕೃಷ್ಣರಾಜ ಒಡೆಯರು ಇವರೆಲ್ಲರೂ ಕಲಾತ್ಮಕವಾದ ಸಿಂಹದ ಚಿತ್ರವಿರುವ ನಾಣ್ಯಗಳನ್ನು ಟಂಕಿಸಿದರು.

ನಾಣ್ಯ ೨

ಲೋಹ – ಬೆಳ್ಳಿ / ನಿಕ್ಕಲ್

ಆಕಾರ – ವೃತ್ತಾಕಾರ

ತೂಕ – ೧೨.೩೩ ಗ್ರಾಂ

ವ್ಯಾಸ – ೩.೦೦ ಸೆಂಮೀ

ಗ್ರೇನ್ – ೧೯೦



* ಸಂಶೋಧನಾ ವಿದ್ಯಾರ್ಥಿನಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

ಮುಮ್ಮುಖ: ಗೆರೆಯ ವರ್ತುಲದ ಸುತ್ತಲೂ "GEORGE VI KING EMPEROR" ಎಂಬ ಬರಹವಿದ್ದು ಮಧ್ಯದಲ್ಲಿ ೬ನೇ ಜಾರ್ಜ್ ಕಿರೀಟ ಮುಖಚರ್ಯೆವುಳ್ಳ ಚಿತ್ರ ಕಂಡು ಬಂದಿದೆ.

ಹಿಮ್ಮುಖ: ಈ ನಾಣ್ಯವು ವೃತ್ತಾಕಾರವಾಗಿದ್ದು ಸುತ್ತಲೂ ಅಡ್ಡಗೆರೆಗಳನ್ನು ಕೆತ್ತಲಾಗಿದ್ದು ಮಧ್ಯದಲ್ಲಿ "ONE RUPEE INDIA" ಎಂಬ ಬರಹವಿದೆ. ಕೆಳಗೆ ಅಚ್ಚಾದ ಇಸವಿ ೧೯೪೫ ಎಂದು ನಮೂದಿಸಲಾಗಿದೆ ಹಾಗೂ ಇದನ್ನು ಸುತ್ತುವರಿದು ಬಳ್ಳಿ ಸುರಳಿಯ ಒಳಗೆ ಅರಳಿದ ಪುಷ್ಪಗಳನ್ನು ಬಿಡಿಸಲಾಗಿದೆ.

ಈಸ್ಟ್ ಇಂಡಿಯ ಕಂಪೆನಿ ಮತ್ತು ಬ್ರಿಟೀಷ್ ನಾಣ್ಯಗಳ ಪ್ರಾಮುಖ್ಯತೆ

ಭಾರತಕ್ಕೆ ಬಂದು, ಸಾಮ್ರಾಜ್ಯವನ್ನೇ ಕಟ್ಟಿ ಭಾರತವನ್ನು ಆಳಿದವರು ಬ್ರಿಟಿಷರು. ಲಂಡನ್ನಿನ ವ್ಯಾಪಾರಿ ಸಂಸ್ಥೆಯೊಂದು ಕ್ರಿ.ಶ. ೧೬೧೫ರಲ್ಲಿ ಮೊಗಲ್ ಚಕ್ರವರ್ತಿ ಜಹಾಂಗೀರ್‌ನಿಂದ ಅನುಮತಿ ಪಡೆದು ಸೂರತ್‌ನಲ್ಲಿ ಕೋಠಿಯನ್ನು ಕಟ್ಟಿಕೊಂಡು, ಕಾಲಕ್ರಮೇಣ ಇಡೀ ಭಾರತದಲ್ಲೇ ಪ್ರಮುಖವಾಯಿತು. ಚಂದ್ರಗಿರಿ ರಾಜನ ಅಪ್ಪಣೆ ಪಡೆದು ಮದರಾಸಿನಲ್ಲಿ ಒಂದು ಕೋಠಿಯನ್ನು ಕಟ್ಟಿ ಅದನ್ನು ಫೋರ್ಟ್ ಸೇಂಟ್ ಜಾರ್ಜ್ ಎಂದು ಕರೆಯಲಾಯಿತು. ಈ ಸಂಸ್ಥೆಯೇ ಈಸ್ಟ್ ಇಂಡಿಯ ಕಂಪೆನಿ. ಸುಮಾರು ೧೮೩೪ ರ ಸಮಯದಲ್ಲಿ ಈ ಸಂಸ್ಥೆಯನ್ನು ಎದುರಿಸುವ ಯಾವ ರಾಜಮಹಾರಾಜರೂ ಇರಲಿಲ್ಲ. ಆದುದರಿಂದ ಇಡೀ ಭಾರತಕ್ಕೆ ಅವರು ಪ್ರಭುಗಳೆನಿಸಿದರು. ೧೮೫೭ರಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದ ಮೊದಲ ಹೆಜ್ಜೆಯನ್ನು ಇವರು ದಮನ ಮಾಡಿದರು. ಅನಂತರ ಸಂಸ್ಥೆಯು ಬ್ರಿಟಿಷ್ ಸರ್ಕಾರದ ಆಡಳಿತಕ್ಕೆ ನಾಂದಿಯಾಯಿತು.

ಈಸ್ಟ್ ಇಂಡಿಯ ಕಂಪೆನಿ ನಾಣ್ಯಗಳನ್ನು ಟಂಕಿಸುವ ವಿಷಯದಲ್ಲಿ ಸರಿಯಾದ ಮಾರ್ಗವನ್ನು ಅನುಸರಿಸಲಿಲ್ಲ. ದೇಶದ ಅನೇಕ ಸ್ಥಳಗಳಲ್ಲಿ ಟಂಕಶಾಲೆಗಳನ್ನು ಸ್ಥಾಪಿಸಿ, ಸ್ಥಳೀಯರ ನಾಣ್ಯಗಳನ್ನೇ ಮೋಸದಿಂದ ಅಚ್ಚು ಹಾಕಿಸಲು ಮೊದಲು ಮಾಡಿತು. ನಂತರ ಮದರಾಸಿನಲ್ಲಿ ನಾಣ್ಯಗಳನ್ನು ಟಂಕಿಸುವ ಅಧಿಕಾರವನ್ನು ಪಡೆದುಕೊಂಡು ನಾಣ್ಯಗಳನ್ನು ಟಂಕಿಸಲು ಆರಂಭಿಸಿದರು. ಸ್ಥಳೀಯರು ಇದನ್ನು ಖಂಡಿಸಿದರು. ಕೊನೆಗೆ ಮೊಘಲರ ಅಪ್ಪಣೆ ಪಡೆದು ನಾಣ್ಯಗಳನ್ನು ಅಚ್ಚು ಮಾಡಲು ಆರಂಭಿಸಿದರು. ಇವು ಒಳ್ಳೆಯ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳಾದುದರಿಂದ ಜನಗಳು ಮತ್ತು ವ್ಯಾಪಾರಿಗಳು ಇದನ್ನು ಒಪ್ಪಿಕೊಂಡರು.

ಕರ್ನಾಟಕವೂ ಸೇರಿದಂತೆ ದಕ್ಷಿಣ ಭಾರತದಲ್ಲಿ ಚಲಾವಣೆಗೋಸ್ಕರ ವಿಜಯನಗರ ಸಾಮ್ರಾಜ್ಯದ ನಮೂನೆಯ ನಾಣ್ಯಗಳನ್ನೇ ಕಂಪೆನಿಯು ಅಚ್ಚು ಮಾಡಿಸಲು ಆರಂಭಿಸಿತು. ಪಗೋಡ ಎಂದು ಕರೆಯಲಾದ ವರಹ ನಾಣ್ಯಗಳ ಮೇಲೆ ವೆಂಕಟೇಶ್ವರ ಮತ್ತು ಶ್ರೀದೇವಿ–ಭೂದೇವಿಯರನ್ನು ಅಳವಡಿಸಲಾಯಿತು. 'ತ್ರೀ ಸ್ವಾಮಿ ಪಗೋಡ' ಎಂಬ ಹೆಸರಿನ ನಮೂನೆಯ ನಾಣ್ಯ ತುಂಬಾ ಜನಾನುರಾಗಿಯಾಯಿತು. ಇದೇ ರೀತಿಯಲ್ಲಿ ನಿಂತಿರುವ ವಿಷ್ಣುವಿನ ಪಗೋಡ ನಾಣ್ಯಗಳು ಅಚ್ಚಾದವು. ಇದು ಮದರಾಸಿನಲ್ಲಿ ಅಚ್ಚಾದದ್ದು ಎಂದು ತೋರಿಸುವ ಸಲುವಾಗಿ ವಿಷ್ಣುವಿನ ಪಕ್ಕದಲ್ಲಿ M ಎಂಬ ಇಂಗ್ಲಿಷ್ ಅಕ್ಷರವನ್ನು ತೆಗೆದುಹಾಕಿ ನಕ್ಷತ್ರವಿರುವ ನಾಣ್ಯವನ್ನು ಟಂಕಿಸಲಾಯಿತು. ಇದು ಜನಾನುರಾಗಿಯಾಗಿ ಬಹಳ ಕಾಲ ಚಲಾವಣೆಯಲ್ಲಿತ್ತು. ಇನ್ನೊಂದು ನಮೂನೆಯ ಬೆಳ್ಳಿ ನಾಣ್ಯದಲ್ಲಿ ನಿಂತಿರುವ ವಿಷ್ಣು, ತೆಲುಗು–ತಮಿಳು ಬರಹ, ಹಿಮ್ಮುಖದಲ್ಲಿ ಎತ್ತರವಾದ ಗೋಪುರ, ಸುತ್ತಲೂ ನಕ್ಷತ್ರಗಳಿರುವ ನಾಣ್ಯಗಳು ವಿಷ್ಣು–ಗೋಪುರ ನಾಣ್ಯಗಳೆಂದು ಪ್ರಸಿದ್ಧವಾದವು. ದೇವಾಲಯ ಹಾಗೂ ವಿಷ್ಣುವಿನ ಬಗೆಗೆ ವಿಶೇಷ ಗೌರವ ಹೊಂದಿದ್ದ ಇಲ್ಲಿಯ ಜನಗಳಿಗೆ ಈ ರೀತಿಯ ನಾಣ್ಯ ತುಂಬ ಪ್ರಿಯವಾಯಿತು. ಇದು ಕಂಪೆನಿಗೆ ಗೌರವವನ್ನು ತಂದುಕೊಟ್ಟಿತು.

ಕಂಪೆನಿಯು ರಾಜಕೀಯವಾಗಿ ಬಲವಾದ ನಂತರ ಈ ಮೇಲಿನ ನಮೂನೆಯ ನಾಣ್ಯವನ್ನು ನಿಲ್ಲಿಸಿ, ಮೊಗಲ್ ರೀತಿಯ ಮೊಹರ್ ನಾಣ್ಯಗಳನ್ನು ಟಂಕಿಸಲು ಆರಂಭಿಸಲಾಯಿತು. ಇದರಲ್ಲಿ ಈಸ್ಟ್ ಇಂಡಿಯ ಕಂಪೆನಿ ಎಂಬ ಬರಹ ಮತ್ತು ಚಿಹ್ನೆಗಳು ಮಾತ್ರ ಕಂಡುಬಂದವು. ಮತ್ತೊಂದು ನಾಣ್ಯದಲ್ಲಿ ಕಿರೀಟವನ್ನು ಎರಡು ಸಿಂಹಗಳು ಎತ್ತಿ ಹಿಡಿದಿರುವ ವಿನ್ಯಾಸ ಮತ್ತು ಈಸ್ಟ್ ಇಂಡಿಯ ಕಂಪೆನಿ ಎಂಬ ಬರಹವನ್ನುಳ್ಳ ನಾಣ್ಯಗಳು ಚಲಾವಣೆಗೆ ಬಂದವು. ಇದೇ ನಮೂನೆಯ ತಾಮ್ರದ ಕ್ಯಾಶ್ ನಾಣ್ಯಗಳು ಅಚ್ಚಾಗಲು ಆರಂಭಗೊಂಡವು.

ವಿಕ್ಟೋರಿಯ ರಾಣಿಯು ೧೮೫೮ರಲ್ಲಿ ಅಧಿಕಾರವನ್ನು ನಂತರ ಬ್ರಟಿಷ್ ಸರ್ಕಾರದ ನಾಣ್ಯ ಪರಂಪರೆ ಆರಂಭವಾಯಿತು. ಕಿರೀಟಧಾರಿಣಿಯಾದ ವಿಕ್ಟೋರಿಯ ರಾಣಿಯ ಚಿತ್ರ ಮತ್ತು ಕ್ವೀನ್ ಎಂಬ ಬರಹದ ನಾಣ್ಯಗಳು ಅಸ್ತಿತ್ವಕ್ಕೆ ಬಂದವು. ೧೮೭೭ರಲ್ಲಿ ಆಕೆಯು ಚಕ್ರವರ್ತಿನಿಯಾದುದರಿಂದ, ಕ್ವೀನ್ ಎನ್ನುವ ಪದವನ್ನು ಕಿತ್ತುಹಾಕಿ, 'ಎಂಪ್ರೆಸ್' ಎಂಬ ಪದವನ್ನು ಸೇರಿಸಲಾಯಿತು. ಆಕೆಯ ಮರಣಾ ನಂತರ ಕಿರೀಟವಿಲ್ಲದ ಏಳನೆಯ ಎಡ್ವರ್ಡ್ ಚಕ್ರವರ್ತಿಯ ಚಿತ್ರಗಳನ್ನುಳ್ಳ ನಾಣ್ಯಗಳು

ಬಳಕೆಗೆ ಬಂದವು. ಈ ರೀತಿಯ ಬೋಳುತಲೆಯ ಚಿತ್ರವಿರುವ ನಾಣ್ಯಗಳು ಭಾರತೀಯರನ್ನು ಅವಮಾನ ಮಾಡುವುದಕ್ಕೋಸ್ಕರ ಟಂಕಿಸಲಾಯಿತು ಎಂದು ಭಾವಿಸಿ, ಜನಗಳು ತಮ್ಮ ಕೋಪವನ್ನು ತೋರಿಸಿದರು. ಅನಂತರ ಕಿರೀಟವಿರುವ ಚಕ್ರವರ್ತಿಯ ಚಿತ್ರವಿರುವ ನಾಣ್ಯಗಳನ್ನೇ ಅಚ್ಚು ಹಾಕುವ ಪರಂಪರೆ ಮುಂದುವರೆಯಿತು. ಐದನೆಯ ಜಾರ್ಜ್ ದೊರೆಯ ರೂಪಾಯಿ ನಾಣ್ಯಗಳ ಮೇಲಿದ್ದ ಆನೆಯ ಚಿತ್ರ ಹಂದಿಯಂತೆ ಕಾಣುತ್ತಿತ್ತು. ಇದರಿಂದ ಮುಸ್ಲಿಮರು ರೊಚ್ಚಿಗೆದ್ದು, ಇದು ತಮ್ಮ ಮತಕ್ಕೆ ಅವಮಾನವೆಂದು ಭಾವಿಸಿದರು. ಕೂಡಲೇ ಈ ನಾಣ್ಯಗಳನ್ನು ಹಿಂತೆಗೆದುಕೊಂಡು, ಸರಿಯಾದ ಆನೆ ಚಿತ್ರವಿರುವ ರೂಪಾಯಿಗಳನ್ನು ಟಂಕಿಸಲು ಆರಂಭಿಸಿದರು. ಒಂದು ರೂಪಾಯಿ, ಅರ್ಧ ರೂಪಾಯಿ, ಕಾಲು ರೂಪಾಯಿ ಮತ್ತು ಎರಡು ಆಣೆ ಮೌಲ್ಯದ ನಾಣ್ಯಗಳು ಅಚ್ಚಾದವು. ತಾಮ್ರದಲ್ಲಿ ಕಾಲು ಆಣೆ, ಅರ್ಧ ಪೈ ಮತ್ತು ಪೈ ನಾಣ್ಯಗಳು ಬಳಕೆಗೆ ಬಂದವು. ಆರನೆಯ ಜಾರ್ಜ್ ಚಕ್ರವರ್ತಿಯ ಕಾಲದಲ್ಲಿ ಇದೇ ವಿನ್ಯಾಸದ ನಾಣ್ಯಗಳು ಬಳಕೆಯಲ್ಲಿದ್ದವು. ಆದರೆ ಈ ಸಮಯಕ್ಕಾಗಲೇ ವಿವಿಧ ಲೋಹಗಳ ಬೆಲೆಯು ಹೆಚ್ಚಾದುದರಿಂದ, ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಕೈಬಿಟ್ಟು, ತಾಮ್ರ ಮತ್ತು ನಿಕ್ಕಲ್ ಮಿಶ್ರಲೋಹದ ರೂಪಾಯಿಗಳನ್ನು ಅಚ್ಚು ಮಾಡುವ ಪದ್ಧತಿ ಆರಂಭವಾಯಿತು. ಇವುಗಳ ಮುಮ್ಮುಖದಲ್ಲಿ ತಾಮ್ರವನ್ನು ಉಳಿಸುವ ಸಲುವಾಗಿ ರಂಧ್ರವಿರುವ ನಾಣ್ಯಗಳನ್ನು ಟಂಕಿಸಲಾಯಿತು. ಈ ಕಾಲದಲ್ಲಿ ಒಂದು ರೂಪಾಯಿಗೆ ಹದಿನಾರು ಆಣೆ, ಒಂದು ಆಣೆಗೆ ಹನ್ನೆರಡು ಕಾಸು ಎಂದು ನಿರ್ಧಾರವಾಗಿತ್ತು. ಭಾರತವು ೧೯೪೭ರಲ್ಲಿ ಸ್ವತಂತ್ರವಾದ ನಂತರ ಹೊಸ ನಮೂನೆಯ ನಾಣ್ಯಗಳ ಪರಂಪರೆ ಬೆಳೆದು ಬಂದಿತು.

[ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಸಹಕರಿಸಿದ ನನ್ನ ಸಂಶೋಧನಾ ಮಾರ್ಗದರ್ಶಕರಾದ ಡಾ. ಜಿ. ಕರಿಯಪ್ಪ ಸಹ ಪ್ರಾಧ್ಯಾಪಕರು ಹಾಗೂ ಡಾ. ಹೆಚ್.ಎನ್. ಕಾಳಸ್ವಾಮಿ ಸರ್‌ರವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.]

ಆಕರ ಗ್ರಂಥಗಳು

೧. ಕನ್ನಡ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೦.

೨. ನರಸಿಂಹಮೂರ್ತಿ ಎ.ವಿ., ಕರ್ನಾಟಕ ನಾಣ್ಯ ಪರಂಪರೆ, ಪ್ರಸಾರಾಂಗ, ಬೆಂಗಳೂರು, ೨೦೦೩

೩. ಖಂಡೋಬರಾವ್.ಹೆಚ್., ನಾಣ್ಯ ಕರ್ನಾಟಕ, ಶಿವಮೊಗ್ಗ, ೨೦೦೨.

೬೩

ಸಾಕ್ಷರ ಲೋಕದ ದಾರಿದೀಪ "ಬೆಳಕು" ಪತ್ರಿಕೆ

ಮಂಜುಳ.ಎ.ಸಿ.*

ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನದಲ್ಲಿ ಮೈಸೂರು ಸಂಸ್ಥಾನದಲ್ಲಿ ಅನೇಕ ಚಳುವಳಿಗಳು ನಡೆದವು ಅದರಲ್ಲಿ ಶೈಕ್ಷಣಿಕ ಚಳುವಳಿಯೂ ಒಂದು ಶಾಲಾ ಶಿಕ್ಷಣದಿಂದ ವಂಚಿತರಾಗಿರುವ ಅವಿದ್ಯಾವಂತ ಜನರ ಹಾಗೂ ನಿರ್ದಿಷ್ಟವಾದ ಗುರಿಯಿಲ್ಲದ ಶಿಕ್ಷಣವನ್ನು ಪಡೆದಿರುವ ಅರೆ ಅಕ್ಷರಸ್ಥರ ಸಮಾಜದಲ್ಲಿರುವ ಅವಿದ್ಯಾವಂತರಿಗೆ ಪ್ರಾರಂಭವಾದುದೇ **'ವಯಸ್ಕರ ಶಿಕ್ಷಣ'** ಮೈಸೂರು ಸಂಸ್ಥಾನದಲ್ಲಿ ೧೮೬೮ರಲ್ಲಿ **'ಹೋಬಳಿ ಶಾಲೆ ಯೋಜನೆ'** ಯಲ್ಲಿ ವಯಸ್ಕರ ಶಿಕ್ಷಣದ ಪ್ರಸ್ತಾಪವಿದೆ. ಹಗಲಿನ ಅವಧಿಯಲ್ಲಿ ಶಾಲೆಗೆ ಬಂದು ಶಿಕ್ಷಣ ಪಡೆಯಲಾಗದವರಿಗೆ ರಾತ್ರಿ ಶಾಲೆಗಳನ್ನು ಪ್ರಾರಂಭಿಸಲಾಗಿತ್ತು. ಈ ಹೋಬಳಿ ಶಾಲೆಯಲ್ಲಿ ಅನೇಕರು ಓದು ಬರಹ ಕಲಿಯತೊಡಗಿದರು. ಅದರಲ್ಲೂ ಅನಕ್ಷರಸ್ಥ ಪೊಲೀಸ್ ಪೇದೆಗಳು ಬಿಡುವು ಮಾಡಿಕೊಂಡು ಸಾಕ್ಷರತಾ ಕೌಶಲ್ಯ ಪಡೆಯುತ್ತಿದ್ದರು[೧]. ಮೈಸೂರು ಸಂಸ್ಥಾನದಲ್ಲಿ ೧೮೮೭ ಜನವರಿ ತಿಂಗಳಲ್ಲಿ ರಾತ್ರಿ ಶಾಲೆ ಆರಂಭವಾಗುವುದರೊಂದಿಗೆ ಅಧಿಕೃತವಾಗಿ ವಯಸ್ಕರ ಶಿಕ್ಷಣ ಪ್ರಾರಂಭವಾಯಿತು.[೨] ಇಬ್ಬರು ಮುಸ್ಲಿಂ ವಿದ್ಯಾರ್ಥಿಗಳಿಂದ ಪ್ರಾರಂಭವಾದ ರಾತ್ರಿ ಶಾಲೆಯ ನೇತೃತ್ವವನ್ನು ವಹಿಸಿದ ಎಂ. ಶಾಮರಾವ್ ಮಹಾರಾಜ ಕಾಲೇಜಿನ ಸಹಾಯಕ ಶಿಕ್ಷಕರಾಗಿದ್ದರು. ೧೮೯೦ರ ಮಾರ್ಚ್ ವೇಳೆಗೆ ೧೯ ವಿದ್ಯಾರ್ಥಿಗಳಿಂದ ಕೂಡಿದ್ದ ರಾತ್ರಿ ಶಾಲೆಯು ೪ ತರಗತಿಗಳಲ್ಲಿ ನಡೆಯುತ್ತಿತ್ತು ೪೬ ಹಿಂದೂ ವಿದ್ಯಾರ್ಥಿಗಳಿದ್ದರೆ ೬೩ ಮುಸ್ಲಿಂ ವಿದ್ಯಾರ್ಥಿಗಳಿದ್ದು ಹನ್ನೆರಡರಿಂದ ಮೂವತ್ತೊಂದು ವರ್ಷ ವಯಸ್ಸಿನ ವಿದ್ಯಾರ್ಥಿಗಳಿದ್ದು ಇವರೆಲ್ಲರನ್ನು ಅವರವರ ಉದ್ಯೋಗಕ್ಕೆ ತಕ್ಕಂತೆ ವರ್ಗೀಕರಿಸಿದ್ದು ಅಕ್ಷರ ಜ್ಞಾನದ ಜೊತೆಗೆ ಕರಕುಶಲ ಚಟುವಟಿಕೆಗಳನ್ನು ಹೇಳಿ ಕೊಡಲಾಗುತ್ತಿತ್ತು. ೧೮೮೯ ಜುಲೈ ತಿಂಗಳಲ್ಲಿ ಮೈಸೂರು ಸರ್ಕಾರವು ತಿಂಗಳಿಗೆ ಇಪ್ಪತ್ತು ರೂಪಾಯಿಗಳ ಸಹಾಯಧನವನ್ನು ಮಂಜೂರು ಮಾಡಿತು. ೧೮೯೧ರ ಜನಗಣತಿ ಪ್ರಕಾರ ಮೈಸೂರು ರಾಜ್ಯದಲ್ಲಿ ಅನಕ್ಷರಸ್ಥರ ಪ್ರಮಾಣ ಶೇಕಡಾ ೮೭.೮% ರಷ್ಟಿತ್ತು.[೩] ೧೮೯೩ರಲ್ಲಿ ವೆಸ್ಲಿಯನ್ ಮಿಷನ್ನಿನ ವತಿಯಿಂದ ತ್ಯಾಮಗೊಂಡ್ಲುವಿನಲ್ಲಿ ರಾತ್ರಿ ಶಾಲೆ ಆರಂಭವಾಗಿ ಪಂಚಮರಿಗೆಂದೆ ಮೀಸಲಾಗಿತ್ತು. ಸರ್ಕಾರದ ವತಿಯಿಂದ ಕೂಡ ಹರಿಜನರಿಗೆ ಶಾಲೆ ಪ್ರಾರಂಭಿಸಲಾಯಿತು. ಮೈಸೂರಿನಲ್ಲಿದ್ದ ರಾತ್ರಿ ಶಾಲೆಗೆ ಮೈಸೂರಿನ ಪುರಸಭೆಯಿಂದ ೪೦ ರೂಪಾಯಿಯ ಸಹಾಯಧನ ದೊರಕುತ್ತಿತ್ತು. ೧೯೦೨ ರಲ್ಲಿ ಮೈಸೂರು ಸಂಸ್ಥಾನದಲ್ಲಿ ಒಟ್ಟು ೬೬ ರಾತ್ರಿ ಶಾಲೆಗಳಿದ್ದು, ೭ ಶಾಲೆಗಳು ಪಂಚಮರಿಗಾಗಿ ಇತ್ತು. ಅದರಲ್ಲಿ ೧೨ ಹಿಂದೂಸ್ತಾನ್ ಶಾಲೆಗಳು, ಒಂದು ಉರ್ದು ಭಾಷೆಯ ಶಾಲೆಯಾಗಿದ್ದರೆ, ೫೩ ಶಾಲೆಗಳಲ್ಲಿ ಕನ್ನಡ ಭಾಷೆಯಲ್ಲಿ ಭೋದಿಸಲಾಗುತಿತ್ತು.[೪] ೧೯೦೫ರಲ್ಲಿ ವಯಸ್ಕರ ಶಿಕ್ಷಣ ವ್ಯವಸ್ಥಿತವಾಗಿ ಪ್ರಾರಂಭವಾಯಿತು. ಸರ್ಕಾರ ೧೯೧೦ರಲ್ಲಿ ವಯಸ್ಕರ ಶಿಕ್ಷಣ ಶಾಲೆಗಳನ್ನು ಅಂಗೀಕರಿಸಿತು.[೫] ೧೯೧೨ ನಂತರ ಮೈಸೂರು ಸಂಸ್ಥಾನದಲ್ಲಿ ಶಿಕ್ಷಣದ ಕ್ರಾಂತಿ ಉಂಟಾಯಿತು ಕಡ್ಡಾಯ ಮತ್ತು ಉಚಿತ ಶಿಕ್ಷಣದ ಜೊತೆಗೆ ವಯಸ್ಕರ ಶಿಕ್ಷಣಕ್ಕೂ ಪ್ರೋತ್ಸಾಹ ಕೊಟ್ಟವರು ನಾಲ್ವಡಿ ಕೃಷ್ಣರಾಜ ಒಡೆಯರು, ಅದನ್ನು ಸಾಕಾರಗೊಳಿಸಿದವರು ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರು. ರಾತ್ರಿ ಶಾಲೆಗಳೆಂದು ಕರೆಯಲ್ಪಡುತ್ತಿದ್ದ ಶಿಕ್ಷಣ ವ್ಯವಸ್ಥೆಗೆ ವಯಸ್ಕರ ಶಿಕ್ಷಣವೆಂದು ನಾಮಕರಣ ಮಾಡಲಾಯಿತು. ವಯಸ್ಕರ ಶಿಕ್ಷಣಕ್ಕೆ ನೀಡಿದ ಪ್ರೋತ್ಸಾಹ ಹಾಗೂ ಸರ್ಕಾರದ ಅನುದಾನದಿಂದ ವಯಸ್ಕರ ಶಿಕ್ಷಣ ಶಾಲೆಗಳ ಸಂಖ್ಯೆ ೫೬೨ ರಿಂದ ೧೦೨೦ಕ್ಕೆ ಏರಿತು. ಅವುಗಳಲ್ಲಿ ೯೩೬ ಶಾಲೆಗಳು ಅನುದಾನ ಪಡೆದ ಶಾಲೆಗಳಾಗಿದ್ದರೆ, ೫೪ ಶಾಲೆಗಳು ಅನುದಾನ ರಹಿತವಾಗಿದ್ದವು. ಸರ್ಕಾರದ ಜೊತೆಗೆ ಖಾಸಗಿ ಸಂಸ್ಥೆಗಳು ಕೂಡ ವಯಸ್ಕರ ಶಿಕ್ಷಣ ನೀಡುವಲ್ಲಿ ಆಸಕ್ತಿಯನ್ನು ಹೊಂದಿದ್ದವು. ಸುಮಾರು ೨೩.೦೦೦ ವಿದ್ಯಾರ್ಥಿಗಳು ವಯಸ್ಕರ ಶಿಕ್ಷಣದ ಶಾಲೆಗಳಲ್ಲಿ ದಾಖಲಾಗಿದ್ದರು. ಪಂಚಮರಿಗಾಗಿ ೪೫ ಶಾಲೆಗಳಿದ್ದು ಸಮಾಜದ ಕಟ್ಟಕಡೆಯ ವರ್ಗಕ್ಕೆ ಕೂಡ ಶಿಕ್ಷಣ ತಲುಪಿಸುವ ಜವಾಬ್ದಾರಿಯನ್ನು ಸರ್ಕಾರ ನಿಭಾಯಿಸುತಿತ್ತು.[೬] ೧೯೧೯ರಲ್ಲಿ ವಯಸ್ಕರ ಶಿಕ್ಷಣ ಸಮಿತಿ ಸಭೆ ಸೇರಿ ವಯಸ್ಕರ ಶಿಕ್ಷಣ ಪಡೆಯುವವರಿಗಾಗಿ ಸೂಕ್ತವಾದ ಪಠ್ಯಪುಸ್ತಕಗಳನ್ನು ರಚಿಸುವುದರ ಬಗ್ಗೆ ಚರ್ಚಿಸಿ, ೬ ಅಂಶಗಳನ್ನು ಸಮಿತಿ ಶಿಫಾರಸ್ಸು ಮಾಡಿ [ಆದೇಶ ಸಂಖ್ಯೆ **3447-9-END-150-19-4**


---

* ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ.

ದಿನಾಂಕ ೦೨-೧೦-೧೯೨೦ ರಲ್ಲಿ] ಸರ್ಕಾರ ಆದೇಶ ಹೊರಡಿಸಲಾಯಿತು.[2] ವಾರಕ್ಕೆ ೬ ದಿನಗಳಂತೆ ಪ್ರತಿದಿನ ಎರಡು ಗಂಟೆಗಳಲ್ಲಿ ತರಗತಿಗಳನ್ನು ನಡೆಸಿ, ಸರಳವಾಗಿ ಸೂಕ್ತ ಉದಾಹರಣೆಗಳೊಂದಿಗೆ ಬೋದಿಸಲು ಆದೇಶವನ್ನು ಹೊರಡಿಸಲಾಯಿತು. ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರು ಬದಲಾದ ಅನಂತರದ ದಶಕದಲ್ಲಿ ವಯಸ್ಕರ ಶಿಕ್ಷಣ ಶಾಲೆಗಳು ಕ್ಷೀಣಿಸತೊಡಗಿದವು. ಸರ್ಕಾರವು ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಹಾಗೂ ಬೆಂಗಳೂರಿನ ಸಿದ್ದಾಪುರದಲ್ಲಿ ಅನಕ್ಷರಸ್ಥ ಜೈಲುವಾಸಿಗಳಿಗೆ ಅಕ್ಷರ ಕಲಿಸಲು ಯೋಜನೆಯನ್ನು ಹಾಕಿ, ರಾಜ್ಯ ಇತರ ಜೈಲುಗಳಲ್ಲಿ ಈ ಯೋಜನೆಯನ್ನು ವಿಸ್ತರಿಸಲಾಯಿತು. ವಯಸ್ಕರ ಶಿಕ್ಷಣದ ಶಾಲೆಗಳ ಕಾರ್ಯವೈಖರಿ ಅತೃಪ್ತಕರವಾಗಿದ್ದು ಅನೇಕ ಶಾಲೆಗಳನ್ನು ಮುಚ್ಚಲಾಯಿತು. ಸರ್ಕಾರ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದ್ದರು ವಯಸ್ಕರ ಶಿಕ್ಷಣದ ಇಳಿಕೆ ಉಂಟಾದಾಗ ಮೈಸೂರು ಸರ್ಕಾರದಲ್ಲಿದ್ದ ಕೆಲವು ಉನ್ನತ ಅಧಿಕಾರಿಗಳು, ಖಾಸಗಿ ವ್ಯಕ್ತಿಗಳು ಅಕ್ಷರ ಪ್ರಚಾರ ಕಾರ್ಯಕ್ಕೆ ಬೆಂಬಲ ನೀಡಿದ್ದರು.

೧೯೪೦ರ ನಂತರದ ವಯಸ್ಕರ ಶಿಕ್ಷಣ ಮೈಸೂರು ಸಂಸ್ಥಾನದಲ್ಲಿ ನಿರ್ಮಿಸಿದ ಇತಿಹಾಸ ದೊಡ್ಡದು. ೧೯೪೦ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಘದವರು ಮೈಸೂರು ನಗರದ ವಿವಿಧ ಭಾಗಗಳಲ್ಲಿ ಸಾಕ್ಷರತಾ ತರಗತಿಗಳನ್ನು ತೆರೆಯಲು ನಿರ್ಧರಿಸಿದರು. ಅಕ್ಷರ ಪ್ರಚಾರಕ್ಕಾಗಿ ಸ್ವಯಂ ಸೇವಕರು ಮುಂದೆ ಬಂದು ಮೈಸೂರು ನಗರದ ಅನೇಕ ಬಡಾವಣೆಗಳಲ್ಲಿ ತರಗತಿಗಳು ಆರಂಭವಾದವು. ಈ ಮಹತ್ಕಾರ್ಯಕ್ಕೆ ಮೈಸೂರಿನ ಪುರಸಭೆಯು ತನ್ನ ಸಹಾಯ ಹಸ್ತ ನೀಡಿದುದಲ್ಲದೆ ವಿದ್ಯಾರ್ಥಿ ಸಂಘದವರಿಗೆ ಮೈಸೂರು ವಿಶ್ವವಿದ್ಯಾನಿಲಯದಿಂದ ೩೦೦ (ಮುನ್ನೂರು ರೂಪಾಯಿ) ರೂ. ಅನುದಾನ ನೀಡಿ ಪ್ರೋತ್ಸಾಹಿಸಿತು. ಹೀಗೆ ವಿಶ್ವವಿದ್ಯಾನಿಲಯದ ಮೇಲ್ವಿಚಾರಣೆಯಲ್ಲಿ ಸಾಕ್ಷರತಾ ಕೆಲಸವನ್ನು ನೆರವೇರಿಸಲು **"ಮೈಸೂರು ನಗರ ಅಕ್ಷರ ಪ್ರಚಾರ"** ಸಮಿತಿಯನ್ನು ಸ್ಥಾಪಿಸಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳೇ ಅಧ್ಯಕ್ಷರಾದರು. ಇಡೀ ಮೈಸೂರು ಸಂಸ್ಥಾನಕ್ಕೆ ಅನ್ವಯಿಸುವ ಒಂದು ಯೋಜನೆಯನ್ನು ಸಿದ್ದಪಡಿಸಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿತ್ತು. ಸರ್ಕಾರವು ಮೈಸೂರು ವಿಶ್ವವಿದ್ಯಾನಿಲಯದ ಪ್ರಸ್ತಾವನೆಯನ್ನು ಅಂಗೀಕರಿಸಿತು. ೧೯೪೧ರಲ್ಲಿ ಕೆಲವು ಕಾರ್ಯಕರ್ತರು ಹಾಗೂ ಉತ್ಸಾಹಿ ಶಾಸಕರನ್ನು ಒಳಗೊಂಡ ಒಂದು ಖಾಸಗಿ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಆ ಖಾಸಗಿ ಸಮಿತಿಯೆ **"ಮೈಸೂರು ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿ"** ಈ ಸಮಿತಿಯ ಮೊದಲ ಅಧ್ಯಕ್ಷರು ಮೈಸೂರು ವಿಶ್ವ ವಿದ್ಯಾನಿಲಯದ ಆಂಗ್ಲ ಭಾಷಾ ಪ್ರಾಧ್ಯಾಪಕರು ಕನ್ನಡದ ಪ್ರಸಿದ್ದ ಸಾಹಿತಿಗಳಾದ ಬಿ.ಎಂ. ಶ್ರೀಕಂಠಯ್ಯನವರು ಉಪಾಧ್ಯಕ್ಷರಾಗಿ ಆಂಗ್ಲ ಭಾಷೆಯ ಪ್ರಾಧ್ಯಾಪಕರಾಗಿದ್ದ ಡಬ್ಲ್ಯೂ.ಜಿ. ಈಗಲ್‌ಡನ್ ರವರು ಕಾರ್ಯನಿರ್ವಹಿಸಿದರೆ, ನ.ಭದ್ರಯ್ಯ, ಸಾಹುಕಾರ್ ಚನ್ನಯ್ಯ, ಟಿ. ಮರಿಯಪ್ಪ ಮುಂತಾದವರನ್ನು ಸರ್ಕಾರದ ಪ್ರತಿನಿಧಿಗಳನ್ನಾಗಿ ಸರ್ಕಾರ ನೇಮಿಸಿ ೫,೦೦೦/- ರೂಗಳ ಸಹಾಯಧನವನ್ನು ನೀಡಿತು. ಶಿಕ್ಷಕರ ಅನುಭವದ ಆಧಾರದ ಮೇಲೆ ಸಮಿತಿ ವಯಸ್ಕರಿಗಾಗಿ ಒಂದು ಪಠ್ಯ ಪುಸ್ತಕವನ್ನು ಸಿದ್ದಪಡಿಸಿ ಒಬ್ಬ ವಯಸ್ಕನನ್ನು ಅಕ್ಷರಸ್ಥನನ್ನಾಗಿ ಮಾಡಲು ೧೦೮ ಗಂಟೆಗಳ ಅವಧಿ ಬೇಕಾಗಿದ್ದು, ಪತ್ರ ವ್ಯವಹಾರ ನಡೆಸುವುದು ಮತ್ತು ಪತ್ರಿಕೆಗಳನ್ನು ಓದಿ ಅರ್ಥ ಮಾಡಿಕೊಳ್ಳುವುದು. ಕನಿಷ್ಠ ಜ್ಞಾನವೆಂದು ನಿರ್ಣಯಿಸಿ ಒಬ್ಬ ವಯಸ್ಕನಿಗೆ ಅಕ್ಷರಸ್ಥನಾಗಲು ಐದು ರೂ.ಗಳು ವೆಚ್ಚವಾಗುತ್ತಿದ್ದು, ಮೈಸೂರು ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿ ಮುಂದಿನ ಹದಿನೈದು ವರ್ಷಗಳ ಯೋಜನೆಯನ್ನು ಸಿದ್ದಪಡಿಸಿ ಅದನ್ನು ಮುಂದಿನ ಮೂರು ಹಂತಗಳಲ್ಲಿ ಜಾರಿಗೆ ತರಲು ತೀರ್ಮಾನಿಸಿ **"ಮೈಸೂರು ಫುಲ್ ಬಿ ಲಿಟರೇಟ್"** ಎಂಬ ಕಿರುಹೊತ್ತಿಗೆಯಲ್ಲಿ ಪ್ರಕಟಿಸಿತು.

ಮೈಸೂರು ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿಯು ಹೊಸದಾಗಿ ಅಕ್ಷರ ಕಲಿತವರಿಗಾಗಿ ೦೭-೧೧-೧೯೪೨ರ ಶನಿವಾರ **"ಬೆಳಕು"** ಎಂಬ ಪತ್ರಿಕೆಯನ್ನು ಪ್ರಕಟಿಸಿತು. ಅಂದು ದೀಪಾವಳಿಯಾಗಿದ್ದು **"ಅಜ್ಞಾನವೇ ಕತ್ತಲು ಜ್ಞಾನವೇ ಬೆಳಕು"** ಎಂಬ ಧ್ಯೇಯ ವಾಕ್ಯವನ್ನು ಹೊಂದಿದ್ದ ಪತ್ರಿಕೆ ವಾರಪತ್ರಿಕೆಯಾಗಿದ್ದು "ಬೆಳಕು" ವಿನ ಮೊದಲ ಸಂಪಾದಕರು ಎಸ್.ವಿ. ಶ್ರೀನಿವಾಸರಾಯರಾಗಿದ್ದರು. ಎರಡು ಪುಟದ ಕ್ರೌನ್ ಆಕಾರದಲ್ಲಿದ್ದ **"ಬೆಳಕು"** ಪತ್ರಿಕೆ ಪಂಚಾಚಾರ್ಯ ಪ್ರೆಸ್ಸಿನಲ್ಲಿ ಮುದ್ರಣಗೊಳ್ಳುತ್ತಿತ್ತು. **"ಇಂದಿನಿಂದ ಕ್ರಮವಾಗಿ ವಾರವಾರವೂ "ಬೆಳಕು" ಎಂಬ ಪತ್ರಿಕೆಯನ್ನು ಅಚ್ಚು ಹಾಕಿಸಲು ಏರ್ಪಾಟಾಗಿದೆ. ಇದರಿಂದ ಹೊಸದಾಗಿ ಅಕ್ಷರ ಕಲಿತವರಿಗೆ ಪತ್ರಿಕೆಯನ್ನು ಓದುವ ಅಭ್ಯಾಸವಾಗಬೇಕು ಪ್ರಪಂಚದ ಸುದ್ದಿಗಳು ಅವರಿಗೆ ತಿಳಿಯಬೇಕು. ಮುಂದಕ್ಕೆ ಅವರು ತಾವೇ ಇತರ ಪತ್ರಿಕೆಗಳನ್ನು ಓದಬೇಕು ತಾವು ಕಲಿತ ವಿದ್ಯೆಯನ್ನು ಬೆಳಕಿನ ಮೂಲಕ ಹೆಚ್ಚಿಸಿಕೊಳ್ಳಬೇಕು. ಈ ಉದ್ದೇಶಗಳಿಂದ ಈ ವಾರ ಪತ್ರಿಕೆಯನ್ನು ಹೊರಡಿಸುತ್ತೇವೆ. ಇದು ಎಲ್ಲಾ ಊರುಗಳಲ್ಲಿಯೂ ಬೆಳಗಲಿ"** ಎಂಬುದಾಗಿ ಸಂಪಾದಕರು ನಿವೇದಿಸಿಕೊಂಡಿದ್ದ ಮೊದಲ ಸಂಚಿಕೆಯ ಮುಖಪುಟದ ಮೇಲ್ಭಾಗದಲ್ಲಿ ದಪ್ಪ ಅಕ್ಷರಗಳಲ್ಲಿ ಮೈಸೂರು ಮಹಾರಾಜರು ಶುಭಾಶಯ ಕೋರಿದ್ದರು. ಹೊಸದಾಗಿ ಓದು ಬರಹಗಳನ್ನು ಕಲಿತವರ ಉಪಯೋಗಕ್ಕಾಗಿ ಪತ್ರಿಕೆಯು ಮೀಸಲಾಗಿದ್ದು, ಅವರು ಸುಲಭವಾಗಿ ಓದಬಹುದಾದ ಸರಳವಾದ ಲೇಖನಗಳನ್ನು


Reg. No. M-4670

ಬೆಳಕು

ಪ್ರತಿನಿಧಿಸಭೆಯ ಅಧಿವೇಶನ

ನವರಾತ್ರೆಯ ಸಮಾರಂಭ

ಪೀಟರ್ ದೊರೆ

ಹಬ್ಬದಲ್ಲಿ ಆಡಂಬರ ಏಕೆ?

ವಯಸ್ಕರ ಶಿಕ್ಷಣದ ಸುದ್ದಿಗಳು

ಮೈಸೂರು ಯೋಜನೆಗಳು

ಸರಾಗವಾಗಿ ಓದಿಕೊಂಡು ಹೋಗುವಂತಹ ಲೇಖನಗಳನ್ನು ಬೆಳಕು ಒಳಗೊಂಡಿತ್ತು. ನವಸಾಕ್ಷರರು ಈ ಪತ್ರಿಕೆಯ ಓದುಗರಾದ್ದರಿಂದ ಬೇರೆ ಪತ್ರಿಕೆಗಳಿಗಿಂತ ಇಲ್ಲಿ ಅಕ್ಷರಗಳು ದೊಡ್ಡದಾಗಿವೆ. ದೇಶ-ವಿದೇಶದ ಸುದ್ದಿಗಳು ಆರೋಗ್ಯ, ವ್ಯವಸಾಯದ ಬಗೆಗಿನ ಖಾಯಂ ಅಂಕಣಗಳ ಜೊತೆಗೆ ಸಣ್ಣ ಸಣ್ಣ ಕತೆಗಳು, ಪ್ರಬಂಧಗಳು, ಸರಳ ಪದ್ಯಗಳು ರೇಖಾ ಚಿತ್ರಗಳು ವ್ಯಂಗ್ಯ ಚಿತ್ರಗಳನ್ನು ಒಳಗೊಂಡ ಪತ್ರಿಕೆ ಚಿತ್ರಗಳನ್ನು ನೀಡಿ ಓದುಗರೇ ಅದಕ್ಕೆ ಸೂಕ್ತವಾದ ಕತೆ ಬರೆಯುವಂತೆ ಪ್ರೇರಪಣೆಯನ್ನು ಕೂಡ ನೀಡುತ್ತಿತ್ತು. ೧೯೫೦ನೇ ಇಸವಿಯ ದೀಪಾವಳಿ ಸಂಚಿಕೆಯಲ್ಲಿ

"ಎಲ್ಲ ಬಲ್ಲವ ಚಂದ
ಬೆಲ್ಲ ತಿನ್ನಲು ಚಂದ
ಎಲ್ಲ ಅಕ್ಷರ ಕಲಿಯೆ ಬಲು ಚಂದ
ಕೋಲು ಕೋಲೆನ್ನ ಕೋಲೆ
ಮುತ್ತಿನ ರತ್ನದ ಕೋಲು ಕೋಲೆನ್ನ ಕೋಲೆ"

ಎಂಬ ಕೋಲಾಟದ ಪದ ಪ್ರಕಟಗೊಂಡಿದ್ದು, ೧೯೫೧ ನೇ ಇಸವಿಯ ದೀಪಾವಳಿಗೆ "ಬೆಳಕು" ಪತ್ರಿಕೆ ಕೋರಿದ ಶುಭಾಶಯ ಹೀಗಿದ್ದು ಇಂದಿಗೂ ಪ್ರಸ್ತುತವಾಗಿದೆ. **"ಎಲ್ಲರಿಗೂ ಹೊಟ್ಟೆತುಂಬ ಅನ್ನ ಮೈ ತುಂಬ ಬಟ್ಟೆ ಸಿಕ್ಕಲಿ ಎಲ್ಲ ದೇಶಗಳಲ್ಲಿಯೂ ಸದಾ ಶಾಂತಿ ನೆಲೆಸಿರಲಿ ನಮ್ಮ ಗ್ರಾಮದಲ್ಲಿ ಅನಕ್ಷರಸ್ಥರೇ ಇಲ್ಲದಂತಾಗಲಿ ." "ಬೆಳಕು"** ವಾರಪತ್ರಿಕೆಯಿಂದ ಕನ್ನಡ ಪತ್ರಿಕೋದ್ಯಮ ಬೆಳೆದು ಬಂದ ಹಂತವನ್ನು ಗುರುತಿಸಲು ಸಹಕಾರಿಯಾಗಿದ್ದು, ಅಂದಿನ ಕಾಲಕ್ಕೆ ಚಿಕ್ಕ ಚೊಕ್ಕ ಆಕರ್ಷಕ ಶೀರ್ಷಿಕೆಗಳನ್ನು ತನ್ನ ಲೇಖನಕ್ಕೆ ನೀಡುತ್ತಿದ್ದು, ಎಲ್ಲರನ್ನು ಸೆಳೆಯುವಂತಿತ್ತು. **"ಬೆಳಕು"** ಪತ್ರಿಕೆ ವಯಸ್ಕರ ಶಿಕ್ಷಣಕ್ಕೆ ಮಾತ್ರ ಮೀಸಲಾಗದೆ, ಗಾಂಧಿಯುಗದಲ್ಲಿ ಸ್ವದೇಶಿ ಚಳುವಳಿಯನ್ನು ಪ್ರೇರೇಪಿಸುವ ಕೆಲಸವನ್ನು ಮಾಡುತ್ತಿದ್ದು **"ಬಿಡುವಾದಾಗ ನೂಲಿರಿ"** ಎಂಬ ಘೋಷವಾಕ್ಯವನ್ನು ಒಳಗೊಂಡಿತ್ತು. ಎಸ್.ಎಸ್.ಎಲ್.ಸಿ. ಫೇಲಾದ ವಿದ್ಯಾರ್ಥಿಗಳಿಗೆಂದೇ ವಿಶೇಷ ಪುರವಣಿಗಳನ್ನು ಪ್ರಕಟಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಕೆಲಸವನ್ನು ಬೆಳಕು ಮಾಡುತ್ತಿತ್ತು. **"ಬೆಳಕು"** ಪತ್ರಿಕೆ ವಾರವಾರವೂ ತಪ್ಪದೇ ಪ್ರಕಟಗೊಂಡಿದ್ದು, ಒಂದು ವೇಳೆ ತಾಂತ್ರಿಕ ಕಾರಣದಿಂದ ಕೆಲವು ವಾರ ಪ್ರಕಟಗೊಳ್ಳಲು ಅಸಾಧ್ಯವಾದಾಗ ಮುಂದಿನ ಸಂಚಿಕೆಗಳಲ್ಲಿ ಪುಟಗಳನ್ನು ಹೆಚ್ಚಿಸಿ ಓದುಗರಿಗೆ ನೀಡುವ ಕಾರ್ಯವನ್ನು ಮಾಡಿದೆ. ಯಾವುದೇ ಲಾಭದ ಆಸೆ ಇಲ್ಲದೆ ಜಾಹಿರಾತುಗಳನ್ನು ನಂಬಿ ಮಾರುಕಟ್ಟೆಯನ್ನು ಹೆಚ್ಚಿಸಿಕೊಳ್ಳದೆ ವಯಸ್ಕರ ಶಿಕ್ಷಣ ಸಂಸ್ಥೆಯಿಂದ ನವಸಾಕ್ಷರಿಗಾಗಿಯೇ ಪ್ರಕಟಗೊಳ್ಳುತ್ತಿದ್ದ ಪತ್ರಿಕೆ. ಅಂದಿನ ಕಾಲದಲ್ಲಿ ಅದರ ಪ್ರಸಾರ ಸುಮಾರು ೧೦.೦೦೦ದವರೆ ಇದ್ದು ತನ್ನದೆ ಆದ ಅಭಿಮಾನಿಗಳನ್ನು ಹೊಂದಿತ್ತು. ೧೯೭೫ರಲ್ಲಿ ಇಡೀ ಭಾರತದಲ್ಲಿ ಪ್ರಕಟವಾಗುತ್ತಿದ್ದ ನವಸಾಕ್ಷರರ ಸಾಪ್ತಾಹಿಕಗಳ ಕೇವಲ ಎರಡಾಗಿದ್ದು ಒಂದು ಕನ್ನಡದಲ್ಲಿ ಮತ್ತೊಂದು ಮಲೆಯಾಳದಲ್ಲಿ ಇತ್ತು. **"ಬೆಳಕು"** ಉತ್ತಮ ಭಾಷೆ ಮತ್ತು ನಿರೂಪಣೆಗೆ ಹೆಸರಾಗಿದ್ದು, ಅದನ್ನು ಯುನೆಸ್ಕೋ ಮೆಚ್ಚಿಕೊಂಡಿತ್ತು.

"ಬೆಳಕು" ಪತ್ರಿಕೆಗೆ ಸ್ಥಾಪಕ ಸಂಪಾದಕರು ಎಸ್.ವಿ. ಶ್ರೀನಿವಾಸರಾಯರಾಗಿದ್ದು, ಆರ್.ವಿ. ಶ್ರೀನಿವಾಸಮೂರ್ತಿ, ಕೂಡಲಿ ಚಿದಂಬರಂ, ಎಂ.ಆರ್. ಲಕ್ಷಮ್ಮ, ಎಸ್.ವಿ. ಕುಮಾರ್, ರಜತಾದ್ರಿ, ಚಂದ್ರಶೇಖರ ಆರಾಧ್ಯ, ಆರ್ ಬೋರಯ್ಯ ಮುಂತಾದವರು **"ಬೆಳಕು"** ವಿನ ಸಾರಥ್ಯ ವಹಿಸಿದ್ದರು.

ಆರು ದಶಕಗಳ ಕಾಲ **"ಬೆಳಕು"** ಬೆಳಗಿ ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಹೆಸರಿಗೆ ಪರ್ಯಾಯವಾಗಿ ಬೆಳೆಯಿತು. ವಯಸ್ಕರ ಶಿಕ್ಷಣದ ಬಗ್ಗೆ ಸರ್ಕಾರದ ನೀತಿಗಳು ಬದಲಾದಂತೆ ಅವುಗಳ ಕಾರ್ಯಚಟುವಟಿಕೆಗಳು ಕಡಿಮೆಯಾದಂತೆ

೨೦೦೧ರಲ್ಲಿ ಬೆಳಕುವಿನ ಪ್ರಸಾರ ನಿಂತು ಹೋಯಿತು. **"ಬೆಳಕು"** ಪುಟ್ಟ ಹಣತೆಯಾಗಿ ಅನೇಕ ಹಣತೆಗಳನ್ನು ತನ್ನಿಂದ ಬೆಳಗಿಸಿ ಅನಕ್ಷರತೆಯ ಕತ್ತಲನ್ನು ಹೋಗಲಾಡಿಸುವಲ್ಲಿ ಅವಿತರವಾಗಿ ಶ್ರಮಿಸಿ ಇತಿಹಾಸದ ಪುಟ ಸೇರಿತು. ಬೆಳಕು ಮತ್ತೆ ಬೆಳಗಲಿ ನಾಡಿಗೆ ತನ್ನ ಬೆಳಕು ನೀಡಲಿ.

ಆಧಾರ ಗ್ರಂಥಗಳು

೧. ಡಾ. ಟಿ. ವೆಂಕಟೇಶ "ಕನ್ನಡದಲ್ಲಿ ನವಸಾಕ್ಷರ ಸಾಹಿತ್ಯ" ಒಂದು ಅಧ್ಯಯನ ವಿಹಂಗಮ ಪ್ರಕಾಶನ, ಮೈಸೂರು ೨೦೦೯.

೨. Administration Report Public instruction, 1889-90, Para No. 57.

೩. ಪೂರ್ವೋಕ್ತ ಪುಟ ಸಂಖ್ಯೆ ೧೨.

೪. Mysore Administration Report, 1902-03, Page No. 43.

೫. ಡಾ. ಸೂರ್ಯನಾಥ ಕಾಮತ್, "ಕರ್ನಾಟಕ ರೆಜೆಟಿಯರ್" ಪುಟ ಸಂಖ್ಯೆ ೬೬೪.

೬ Mysore Administration Report, 1916-17, Page No. 76.

೭. Proceedings of the Government of his highness the Maharaja of Mysore, 1920.

೮. ಬೆಳಕು ಪತ್ರಿಕೆ ಸಂಚಿಕೆಗಳು.

೯. ಪುಸ್ತಕ ಪ್ರಪಂಚ ಮಾಸಪತ್ರಿಕೆಗಳು.

ಉತ್ತರಾದಿ ಸಂಗೀತಕ್ಕೆ ಧಾರವಾಡ ಪ್ರದೇಶದ ಕೊಡುಗೆ

ಡಾ. ಸುಷಮಾ ಆರೂರ್*

ಧಾರವಾಡವು ಬ್ರಿಟಿಷರ ಕಾಲದಲ್ಲಿ ಬಾಂಬೆ ಪ್ರೆಸಿಡೆನ್ಸಿ ಪ್ರಾಂತದ ಒಂದು ಭಾಗವಾಗಿದ್ದು, ೧೯ನೇ ಶತಮಾನದ ಮಧ್ಯಕಾಲದಿಂದ ಶಿಕ್ಷಣ ಕೇಂದ್ರವಷ್ಟೇ ಅಲ್ಲ ಸಂಗೀತದ ಕೇಂದ್ರ ಬಿಂದು ಕೂಡ ಆಗಿತ್ತು. 'ಸದರನ್ ಮರಾಠಾ ಕಂಟ್ರಿ' ಎನಿಸಿಕೊಂಡ ಈ ಪ್ರದೇಶವು ಈಗಿನ ಸಾತಾರಾ, ಮಿರಜ್, ಸಾಂಗ್ಲಿ, ಬೆಳಗಾವಿ, ಬಿಜಾಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡಿದ್ದು, ಉತ್ತರದಲ್ಲಿ ಕೃಷ್ಣಾ ನದಿಯಿಂದ ತುಂಗಭದ್ರಾ ನದಿಯವರೆಗೆ ಪಸರಿಸಿತ್ತು. ಶಿಕ್ಷಣ ಮತ್ತು ಸಂಗೀತವನ್ನು ಅರಸಿ ಈ ಪ್ರದೇಶದ ಅನೇಕರು ಧಾರವಾಡಕ್ಕೆ ಬರುವುದು ಸಾಮಾನ್ಯವಾಗಿತ್ತು. ಮುಂಚಿನಿಂದ ಕರ್ನಾಟಕ ಸಂಗೀತ ಪದ್ಧತಿಯು ಇಲ್ಲಿ ಪ್ರಚಲಿತವಿದ್ದು, ಅನಂತರ ಉತ್ತರಾದಿ ಸಂಗೀತ (ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತ) ದ ಪ್ರಭಾವ ಮತ್ತು ಪ್ರಾಬಲ್ಯ ಇಲ್ಲಿ ಜೋರಾಯಿತು. ಅದಕ್ಕೆ ಕಾರಣವು ಇಲ್ಲಿಯವರ ಸಂಗೀತ ಪ್ರೇಮ ಮತ್ತು ಹೊಸತನ್ನು ಅಪ್ಪಿಕೊಳ್ಳುವ ಸಹಜ ಗುಣ. ಧಾರವಾಡ ಪ್ರದೇಶದಿಂದಲೇ ಬಂದಿರುವ ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ಥರದಲ್ಲಿ ಮೆರೆದ ಗಾಯಕರು (ರಾಮಭಾವು ಕುಂದಗೋಳಕರ ಉರ್ಫ್ ಸವಾಯ ಗಂಧರ್ವ, ಶಿವಪುತ್ರ ಕೊಂಕಳಿಮಠ ಉರ್ಫ್ ಕುಮಾರ ಗಂಧರ್ವ, ಮಲ್ಲಿಕಾರ್ಜುನ ಮನ್ಸೂರ, ಗಂಗೂಬಾಯಿ ಹಾನಗಲ್, ಭೀಮಸೇನ್ ಜೋಶಿ, ಸಂಗಮೇಶ್ವರ ಗುರವ, ಬಸವರಾಜ ರಾಜಗುರು...) ಎಲ್ಲರಿಗೂ ಪರಿಚಿತರೇ. ಈ ಪ್ರಸ್ತುತ ಲೇಖನ ಅವರ ಬಗ್ಗೆ ಇರದೇ, ಅದಕ್ಕೂ ಮೊದಲಿನ ಚಾರಿತ್ರಿಕ ಹಿನ್ನೆಲೆಯನ್ನು ಕೊಡುವದಾಗಿದೆ. ಇಲ್ಲಿ ಉತ್ತರಾದಿ ಸಂಗೀತ ಪ್ರಸಾರಕ್ಕೆ ಕಾರಣವಾದ ನಾಟಕ ಕಂಪನಿಗಳ, ಸಂಗೀತ ಶಿಕ್ಷಕ-ಗಾಯಕ-ವಾದಕರ, ವೀರಾಶ್ರಮ ಪುಣ್ಯಾಶ್ರಮದಂತಹ ವಿದ್ಯಾ ಸಂಸ್ಥೆಗಳ ಪಾತ್ರವನ್ನು ಎತ್ತಿ ತೋರಿಸುವ ಪ್ರಯತ್ನ ಮಾಡಲಾಗಿದೆ. ಇವುಗಳ ಕೊಡುಗೆ ಮಹತ್ವದ್ದು. ಇಂತಹ ಅಡಿಪಾಯ ಇದ್ದುದರಿಂದ ಪ್ರತಿಭಾನ್ವಿತ ಕಲಾವಿದರು ಮುಂದೆ ತಮ್ಮ ಸ್ವಂತ ಸಾಧನೆಯಿಂದ ಧಾರವಾಡದಿಂದ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ಬೆಳಗಲು ಸಾಧ್ಯವಾಯಿತು ಎಂಬುದು ಸತ್ಯ.

ರಂಗಭೂಮಿ ಮತ್ತು ರಂಗ ಗೀತೆಗಳು

೧೯ ಮತ್ತು ೨೦ನೇ ಶತಮಾನಗಳ ಮಧ್ಯಕಾಲದಲ್ಲಿ ಜನರನ್ನು ರಂಜಿಸುವ ಒಂದು ಮಹತ್ವದ ಸಾಧನವೆಂದರೆ ನಾಟಕ ಮತ್ತು ಅದರಲ್ಲಿಯ ರಂಗ ಸಂಗೀತವಾಗಿತ್ತು. ಈ ಧಾರವಾಡ ಪ್ರದೇಶದಲ್ಲಿ ಭಾಷೆಗಳ ಬಗ್ಗೆ ಸಹಿಷ್ಣುತೆ ಇದ್ದ ಆ ಕಾಲದಲ್ಲಿ ಕನ್ನಡ ಮತ್ತು ಮರಾಠಿ ರಂಗಭೂಮಿ ಮತ್ತು ರಂಗಗೀತೆಗಳು ಜೊತೆ ಜೊತೆಗೆ ಉಛ್ರಾಯ ಸ್ಥಿತಿಯಲ್ಲಿದ್ದು ಉತ್ತರಾದಿ ಸಂಗೀತದ ಹರಡುವಿಕೆಗೆ ಹಾದಿ ಮಾಡಿಕೊಟ್ಟಿತು ಎಂದು ಹೇಳಬಹುದು.

ಕನ್ನಡ-ಮರಾಠಿ ಭಾಷೆಗಳಲ್ಲಿಯ ಅನೇಕ ದೊಡ್ಡ-ಸಣ್ಣ ನಾಟಕ ಕಂಪನಿಗಳ ಮಧ್ಯೆ ಕೊಡು-ಕೊಡಳುವಿಕೆ ನಿರಂತರವಿದ್ದು, ಅವು ಲೋಕರಂಜನೆಯ ಮಾಧ್ಯಮವಾಗಿದ್ದವು. ಈ ನಾಟಕಗಳಲ್ಲಿ ಸಂಗೀತಕ್ಕೆ ಪ್ರಾಧಾನ್ಯವಿದ್ದುದರಿಂದ ಅದೆಷ್ಟೋ ಹಳ್ಳಿ-ಹಳ್ಳಿಗಳಿಂದ ಸಂಗೀತದ ಅದಮ್ಯ ಹುಚ್ಚಿನಿಂದ ಬಾಲ್ಯದಲ್ಲಿಯೇ ಈ ಕ್ಷೇತ್ರದಲ್ಲಿಳಿದ ಕಲಾವಿದರೆಷ್ಟೋ ! ಇಂಥವರಿಗೆ ಅನುವು ಮಾಡಿಕೊಟ್ಟವರು ಉತ್ತರ ಕನ್ನಡ ಜಿಲ್ಲೆಯ ಕರ್ಕಿ ಗ್ರಾಮದ ಹಾಸ್ಯಗಾರ ಯಕ್ಷಗಾನ ಮಂಡಳಿ, ಗುರ್ಲಹೋಸುರಿನ (ಬೆಳಗಾವಿ) ಅಣ್ಣಾಸಾಹೇಬ ಬಳವಂತ ಪಾಂಡುರಂಗ ಕಿರ್ಲೋಸ್ಕರ ನಾಟಕ ಮಂಡಳಿ, "ವಿಶ್ವಗುಣಾದರ್ಶ ನಾಟಕ ಮಂಡಳಿ"ಯ ಸವಣೂರಿನ ವಾಮನರಾವ್ ಮಾಸ್ತರರು, ಗದಗದ ಗರುಡ ಸದಾಶಿವರಾಯರ ಕಂಪನಿ, ಗುಳೇದಗುಡ್ಡದ (ಬಾಗಲಕೋಟೆ) ಕಂಪನಿ ಇವೆಲ್ಲ ಪ್ರಮುಖ. ಈಗ ಜಗದ್ವಿಖ್ಯಾತರಾದ ಅನೇಕರು ಈ ಮಂಡಳಿಗಳ ಗರಡಿಯಲ್ಲಿಯೇ ಬೆಳೆದು, ಅಭಿನಯ ಮತ್ತು ಸಂಗೀತ ಕಲೆಯಲ್ಲಿ ತರಬೇತಿ ಪಡೆದು ಮುಂದೆ ವಿಶ್ವಪ್ರಸಿದ್ಧಿ ಪಡೆದ ಕಲಾವಿದರು ಈ ಪ್ರದೇಶದವರೇ.

* # ೩೦೩, ಹೆರಿಟೇಜ್ ರಾಯಲ್, ಲಾ-ಓಶಿಯಾನಾ, ಫೇಸ್ ೨, ಡೊನಾಪಾವ್ಲಾ, ಗೋವಾ-೪೦೩೦೦೪.

ಯಕ್ಷಗಾನವು ಜಾನಪದದಿಂದ ಬಂದಿದ್ದು, ಸಾಹಿತ್ಯ, ಸಂಗೀತ, ನೃತ್ಯ ಮತ್ತು ನಾಟಕಗಳಿಂದ ಪರಿಪೂರ್ಣವಾಗಿರುವಂತಹ ಮನರಂಜನೆಯ ಮಾಧ್ಯಮವಾಗಿದೆ. ೧೮೫೦ರ ಸುಮಾರಿಗೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಕರ್ಕಿಗ್ರಾಮದ ಹಾಸ್ಯಗಾರ ಯಕ್ಷಗಾನ ಮಂಡಳಿಯವರು ಬಯಲಾಟ, ದಶಾವತಾರ ಇತ್ಯಾದಿ ನಾಟಕ ಮತ್ತು ಹಾಡುಗಳ ಪ್ರದರ್ಶನಗಳಿಂದ ಪ್ರಸಿದ್ಧರಾಗಿದ್ದರು. ಕನ್ನಡ ಜಿಲ್ಲೆಗಳಿಂದ ಈ ಯಕ್ಷಗಾನ ಮೇಳಗಳು ಉತ್ತರಕ್ಕೆ ಸಂಚರಿಸುತ್ತಿದ್ದವು. ಆ ಕಾಲದ ಸಾಂಗಲಿಯ ಮಹಾರಾಜರಾದ ರಾಜಾಸಾಹೇಬ ಚಿಂತಾಮಣಿ ಅಪ್ಪಾಸಾಹೇಬ ಪಟವರ್ಧನರು (೧೮೦೧–೧೮೫೧) ಈ ಕರ್ಕಿ ಯಕ್ಷಗಾನ ಮಂಡಳಿಯವರನ್ನು ಸಾಂಗಲಿಗೆ ಕರೆಸಿ (೧೮೪೦) ಅವರ 'ಸೀತಾ ಸ್ವಯಂವರ'ವನ್ನು ನೋಡಿ ಎಷ್ಟು ಪ್ರಭಾವಿತರಾದರೆಂದರೆ, ತಮ್ಮದೇ ಸಾಂಗಲಿಕರ್ ನಾಟಕ ಮಂಡಳಿಯ ವಿಷ್ಣುದಾನ ಭಾವೆಯವರನ್ನು ಕರೆಸಿ ಈ ನಾಟಕವನ್ನು ಮರಾಠಿಯಲ್ಲಿ ಅನುವಾದಿಸಿ, ಹಾಸ್ಯಗಾರ ಯಕ್ಷಗಾನದವರ ಪೋಷಾಕುಗಳೊಂದಿಗೆ ಅದೇ ತರಹ ಆಡಿಸಬೇಕೆಂದು ಅಪ್ಪಣೆ ಕೊಟ್ಟರು. ಈ ಮರಾಠಿ ನಾಟಕವು ಇಡೀ ಮಹಾರಾಷ್ಟ್ರದಲ್ಲಿ ಮಿತಿಮೀರಿ ಜನಪ್ರಿಯತೆ ಮತ್ತು ಖ್ಯಾತಿ ಪಡೆದು, ವಿಷ್ಣುದಾಸ ಭಾವೆಯವರು ಮರಾಠಿ ನಾಟಕಗಳ ಜನಕರೆಂದು ಪರಿಗಣಿಸಲ್ಪಟ್ಟರು! ಹೀಗೆ ಉತ್ತರ ಕರ್ನಾಟಕದ ಈ "ನಾಟಕ"ವು ಮರಾಠಿ ನಾಟಕಕ್ಕೆ ಪ್ರೇರಣೆಯಾದದ್ದು ಕನ್ನಡಿಗರಿಗೆ ಹೆಮ್ಮೆಯ ವಿಷಯ. ಈ ಕನ್ನಡ ನಾಟಕದ ಮುಖ್ಯ ಆಕರ್ಷಣೆಯಾದ ಕರ್ನಾಟಕ ಸಂಗೀತ ಪದ್ಧತಿಯಲ್ಲಿದ್ದ ಹಾಡುಗಳನ್ನು ಮರಾಠಿಯ ಭಾಷಾಂತರ ನಾಟಕದಲ್ಲಿ ಇದ್ದಕ್ಕಿದ್ದಂತೆ ಇಟ್ಟಿರುವುದು ಈ ಮಾತಿಗೆ ಸಾಕ್ಷಿ. ಯಕ್ಷಗಾನದ ಮಾಧ್ಯಮದಿಂದ ಕರ್ನಾಟಕ ಪದ್ಧತಿಯ ಹಾಡುಗಳು ಧಾರವಾಡ ಪ್ರದೇಶದ ಉತ್ತರದಲ್ಲಿ ಜನಪ್ರಿಯವಾದರೆ, ಹಿಂದುಸ್ಥಾನಿ ಶಾಸ್ತ್ರೀಯ ಪದ್ಧತಿ ಉತ್ತರದಿಂದ ಇಳಿದು ದಕ್ಷಿಣದಲ್ಲಿ ಪಸರಿಸಿ, ಖ್ಯಾತಿ ಪಡೆಯಿತು.

ವಿಶ್ವಗುಣಾದರ್ಶ ಕಂಪನಿಯ ವಾಮನರಾವ್ ಮಾಸ್ತರರಂತೂ ಕನ್ನಡ ಮರಾಠಿ ಎರಡೂ ಭಾಷೆಗಳಲ್ಲಿ ನಾಟಕವಾಡಿಸುತ್ತಿದ್ದರು. ಬಸವರಾಜ ರಾಜಗುರು ಮತ್ತು ಮಲ್ಲಿಕಾರ್ಜುನ ಮನ್ಸೂರ ಈ ಬಂಧುದ್ವಯರಂತೂ ಚಿಕ್ಕಂದಿನಿಂದ ಈ ನಾಟಕ ಕಂಪನಿಗಳಲ್ಲಿಯೇ ತಮ್ಮ ಸಂಗೀತದ ಆರಾಧನೆ ಮಾಡಿದ್ದರು. ವಾಮನ ಮಾಸ್ತರರೇ ಮುಂದೆ ಮಲ್ಲಿಕಾರ್ಜುನರನ್ನು ಗ್ವಾಲಿಯರ ಘರಾಣೆಯ ನೀಲಕಂಠ ಬುವಾ ಆಲೂರಮಠ ಇವರಲ್ಲಿ ಕಲಿಯಲು ಬಿಟ್ಟರು. ಅವರ ಶಿಷ್ಯರಲ್ಲಿ ಮನ್ಸೂರರ ಹೊರತು ಬಾಲಕೃಷ್ಣ ಬುವಾ ಈಚಲಕರಂಜೀಕರ, ಪಂಚಾಕ್ಷರಿ ಬುವಾ ಮತ್ತು ಬಸವರಾಜ ರಾಜಗುರು ಇವರೆಲ್ಲ ಪ್ರಮುಖರು.

ಮುಂಬಯಿ ಕರ್ನಾಟಕದ ಚುರಮುರಿ ಶೇಷಗಿರಿರಾಯರು (೧೮೨೭–೧೮೮೪) ಜೈಮಿನಿ ಭಾರತದ ಮೊದಲ ಸಂಧಿಯನ್ನು ಮರಾಠಿಗೆ ಭಾಷಾಂತರಿಸಿದವರು, ಶಾಕುಂತಲವನ್ನು ಕನ್ನಡಿಸಿದರು (೧೮೬೯). ೮೦ ಹಾಡುಗಳ ಹೊಸಗನ್ನಡದ ಪ್ರಥಮ ನಾಟಕವಿದು. ಇದರಲ್ಲಿ ಅವರು ಉತ್ತರ ಕನ್ನಡದ ದೇಶಿ ಹಾಡಿನ ಪರಂಪರೆಗೆ ಗ್ರಂಥಸ್ಥ ರೂಪ ಕೊಟ್ಟರು. ಕಾಳಿದಾಸನ ಗದ್ಯಕ್ಕೆ ಹಾಡುಗಳನ್ನು ಸೇರಿಸಿ ಹಿಂದೂಸ್ಥಾನಿ ಸಂಗೀತಕ್ಕೆ ಪ್ರಾಧಾನ್ಯ ಕೊಟ್ಟ ನಾಟಕವಿದು. ಹಾಡುಗಳು ಭಾವಪೂರ್ಣ ಹಾಗೂ ಸರಳವಾಗಿರುವುದರಿಂದ ಬಹಳ ಜನಪ್ರಿಯವಾದವು.

ಅದೇ ತರಹ ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ ಗುರ್ಲಹೋಸುರಿನಲ್ಲಿ ಹುಟ್ಟಿದ (೧೮೪೩–೧೯೪೨) ಅಣ್ಣಾಸಾಹೇಬ ಕಿರ್ಲೋಸ್ಕರರು ಕನ್ನಡ ಶಾಕುಂತಲವನ್ನು 'ಅಭಿಜ್ಞಾನ ಶಾಕುಂತಲ'ವೆಂದು ಹೆಸರಿಸಿ ಮರಾಠಿ ರಂಗಭೂಮಿಗೆ ತಂದರು. ತಮ್ಮ ಮರಾಠಿ ಶಾಕುಂತಲ ಮತ್ತು "ಸೌಭದ್ರ" ನಾಟಕಗಳಲ್ಲಿ ವೀರೋಚಿತ ಮತ್ತು ಸಮರಗೀತೆಗಳಿಗೆ ಕರ್ನಾಟಕಿ ರಾಗಗಳನ್ನು ಉಪಯೋಗಿಸಿ, ಪ್ರಣಯ, ವಿರಹ, ಮಧುರ ಭಾವನೆಯುಳ್ಳ ಗೀತೆಗಳಿಗೆ ಹೊಸತಾಗಿ ಬಂದಿಳಿದ ಉತ್ತರಾದಿ ಸಂಗೀತ ಪ್ರಕಾರವನ್ನು ಬಳಸಿದವರಲ್ಲಿ ಇವರು ಮೊದಲಿಗರು ಎಂದು ಹೇಳಬಹುದು.

ವಾದಕರು : ಇದೇ ತರಹ ಇನ್ನೊಬ್ಬ ಉತ್ತರ ಹಿಂದುಸ್ಥಾನದ ಕಿರಾನಾ ಘರಾಣೆಯ ಶ್ರೇಷ್ಠ ವಾದಕರಾದ 'ಸಿತಾರ ರತ್ನ' ರಹಮತ್ ಖಾನರು (೧೮೬೩–೧೯೫೪) ಧಾರವಾಡದಲ್ಲಿ ನೆಲೆಸಿ ತಮ್ಮ ಸಿತಾರ ವಾದನದ ಮುಖಾಂತರ ಈ ಪ್ರದೇಶದಲ್ಲಿ ಉತ್ತರಾದಿ ಸಂಗೀತದ ಮೊಟ್ಟಮೊದಲ ಪ್ರಚಾರಕ ಮತ್ತು ಪ್ರಸಾರಕರಾಗಿದ್ದರೆಂಬ ಶ್ರೇಯ ಅವರಿಗೆ ಹೋಗುತ್ತದೆ. ಧಾರವಾಡದ ಮಾಳಮಡ್ಡಿಯಲ್ಲಿ ಮನೆ ಮಾಡಿ ಸಂಗೀತ ಶಾಲೆಯನ್ನು ತೆರೆದು ಸಂಗೀತ ಜ್ಞಾನವನ್ನು ಹರಡಿದರು. ಅಪ್ರತಿಮ ಸಿತಾರ್ ವಾದಕರಾದ ರಹಮತ್ ಖಾನ್ ಧಾರವಾಡಕರ್ ಇವರು ಸಿತಾರದ ಗಾತ್ರದಲ್ಲಿ ಬದಲಾವಣೆ ಮಾಡಿ, ತಂತಿಗಳ ಸಂಖ್ಯೆ ಹೆಚ್ಚಿಸಿ, ಆಧುನಿಕ ರೂಪ ಕೊಟ್ಟವರು. ಇವರ ಸಿತಾರವಾದನವನ್ನು ಅತಿಯಾಗಿ ಮೆಚ್ಚಿದ ಮೈಸೂರು ಮಹಾರಾಜರು (ಜಯಚಾಮರಾಜೇಂದ್ರ ಒಡೆಯರ್ ೧೯೪೦–೧೯೫೦) ಅವರನ್ನು ತಮ್ಮ ಆಸ್ಥಾನದ ವಾದಕರನ್ನಾಗಿ ಅಲ್ಲಿಯೇ ಇರಿಸಲು ಪ್ರಯತ್ನಪಟ್ಟರು. ಆದರೆ ರಹಮತಖಾನರು ಮೊದಲು ಪುಣೆ ಆಮೇಲೆ ಧಾರವಾಡದಲ್ಲಿ ವಾಸಿಸಿದರು.

ಮತ್ತು ತಮ್ಮ ಹೆಸರನ್ನು 'ಧಾರವಾಡಕರ್' ಎಂದು ಅಭಿಮಾನದಿಂದ ಇಟ್ಟುಕೊಂಡರು. ಮೈಸೂರಿನಲ್ಲಿ ಖಾಯಮ್ ವಾಸಿಸದಿದ್ದರೂ ಮಹಾರಾಜರಿಗೆ ತಮ್ಮ ವಾದನದಿಂದ ಸಂತೋಷಪಡಿಸಿ ಬಂದು-ಹೋಗಿ ಇರುತ್ತಿದ್ದರು.

ಅವರ ಇಡೀ ಕುಟುಂಬ ಧಾರವಾಡದಲ್ಲಿ ಉತ್ತರಾದಿ ಸಂಗೀತದ ಪ್ರಸಾರ ಮತ್ತು ಪ್ರಚಾರಕ್ಕೆ ಕಾರಣವಾಯಿತು. ಹೀಗೆ ಉತ್ತರದಿಂದ ಬಂದ ಇವರ ಕುಟುಂಬಕ್ಕೆ ಸಿತಾರದ ಝೇಂಕಾರವನ್ನು ಕರ್ನಾಟಕಕ್ಕೆ ತಂದ ಶ್ರೇಯ ಸಲ್ಲುತ್ತದೆ.

ಸಂಗೀತ ಶಿಕ್ಷಕರು

೧) ಜಯಪುರ ಘರಾಣೆಯ ಹೆಸರಾಂತ ಹಿಂದುಸ್ಥಾನಿ ಸಂಗೀತಜ್ಞರೂ, ಶಿಕ್ಷಕರೂ ಮತ್ತು ಹಾಡುಗಾರರಾದ (೧೮೬೯-೧೯೨೦) ಭಾಸ್ಕರಬುವಾ ಬಖಲೆಯವರ ನಂಟು ಕರ್ನಾಟಕದ ಜೊತೆ ಅಂಟಿದ್ದು ಚಿಕ್ಕಂದಿನಿಂದ. ಅಣ್ಣಾಸಾಹೇಬ ಕಿರ್ಲೋಸ್ಕರ ಅವರ ನಾಟಕ ಮಂಡಳಿಯಲ್ಲಿ ಬಾಲ ಕಲಾವಿದನೆಂದು ತಮ್ಮ ಪ್ರತಿಭೆಯನ್ನು ಮೆರೆದಿದ್ದರು. ಮರಾಠಿಮಯವಾಗಿದ್ದ ಮುಂಬಯಿ ಕರ್ನಾಟಕ ಪ್ರಾಂತದಲ್ಲಿ ಬ್ರಿಟಿಷ್ ಸರಕಾರವು ಕನ್ನಡ ಶಾಲೆಗಳನ್ನು ಪ್ರಾರಂಭಿಸುವ ಉಪಕ್ರಮ ಕೈಕೊಂಡಾಗ ಶಿಕ್ಷಕರ ಕೊರತೆಯನ್ನು ಕಂಡು ಟ್ರೈನಿಂಗ್ ಕಾಲೇಜುಗಳನ್ನು ಸ್ಥಾಪಿಸಿತು. ಇಂತಹ ಧಾರವಾಡದ ಗಂಡು-ಮತ್ತು ಹೆಣ್ಣುಮಕ್ಕಳ ಟ್ರೈನಿಂಗ್ ಕಾಲೇಜಿನಲ್ಲಿ ಅಧ್ಯಾಪಕರು, ಶಿಕ್ಷಕರಾಗಿ ನೇಮಿಸಲ್ಪಟ್ಟರು. ಸಂಗೀತ ಶಿಕ್ಷಕರೆಂದು ರಾಮಕೃಷ್ಣ ಬುವಾ ಬಖಲೆಯವರು (೧೮೬೯-೧೯೨೨) ನಿಯುಕ್ತರಾದರು. ಇವರು ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಹೆಸರಾಂತ ಗಾಯಕರಾಗಿದ್ದು, ಕಿರಾನಾ, ಅಗ್ರಾ, ಜಯಪುರ್ ಮತ್ತು ಗ್ವಾಲಿಯರ್ ಘರಾನಾಗಳ ವಿದ್ವಾಂಸರಿಂದ ಸಂಗೀತ ಕಲಿತು ತಮ್ಮ ಹಾಡುಗಾರಿಕೆಯಲ್ಲಿ ಈ ವಿವಿಧ ಪ್ರಕಾರಗಳನ್ನು ಚಾಕಚಕ್ಯತೆಯಿಂದ ಬಳಕೆ ಮಾಡಿದ ಪ್ರಬುದ್ಧರಿವರು. ಇಡೀ ಮುಂಬಯಿ ಕರ್ನಾಟಕ ಪ್ರದೇಶಕ್ಕೆ ಇದೊಂದೇ ಟ್ರೈನಿಂಗ್ ಕಾಲೇಜು ಇದ್ದದ್ದರಿಂದ ಇದು ಧಾರವಾಡ, ಬೆಳಗಾವಿ, ವಿಜಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಅನೇಕ ವಿದ್ಯಾರ್ಥಿಗಳನ್ನು ಆಕರ್ಷಿಸಿತ್ತು. ಭಾಸ್ಕರ ಬುವಾದ ಮಾರ್ಗದರ್ಶನದಲ್ಲಿ ಪಳಗಿದ ಅನೇಕ ಸಂಗೀತ ಕಲಾವಿದರು ಮುಂದೆ ತಮ್ಮ ತಮ್ಮ ಜಿಲ್ಲೆಗಳಲ್ಲಿ ಸಂಗೀತದ ಹರಡುವಿಕೆಗೆ ಕಾರಣರಾದರು. ಈ ಪ್ರದೇಶದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಪ್ರಕಾರದಲ್ಲಿ ಕಲಿಸಲ್ಪಟ್ಟ ಪ್ರಾರ್ಥನಾಗೀತೆಗಳು, ಸಮೂಹ ಗೀತೆಗಳು, ದೈಹಿಕ ತರಬೇತಿ ಶಿಬಿರಗಳಲ್ಲಿ ಹಾಡಲ್ಪಟ್ಟ ಹಾಡುಗಳು ಕೂಡ ಒಬ್ಬರಿಂದೊಬ್ಬರಿಗೆ ನಿರಂತರವಾಗಿ ಮನೆ ಮನೆ ತಲುಪಿ ಜನಪ್ರಿಯವಾದವು. ಹೀಗೆ ಉತ್ತರಾದಿ ಸಂಗೀತ ಕರ್ನಾಕಟದಲ್ಲಿ ಪ್ರಸಿದ್ಧಿ ಪಡೆಯಲು ಕರಣವಾಯಿತು.

೨) ದಕ್ಷಿಣದಲ್ಲಿ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದ ಅದರಲ್ಲೂ ಕಿರಾನಾ ಘರಾನಾದ ಪ್ರಚಾರ ಮತ್ತು ಬೆಳವಣಿಗೆಗೆ ಉಸ್ತಾದ ಅಬ್ದುಲ್ ಕರಿಂ ಖಾನ (೧೮೭೨-೧೯೩೭) ಮತ್ತು ಅವರ ಕುಟುಂಬದವರ (ತಾರಾಬಾಯಿ ಮಾನೆ, ಹೀರಾಬಾಯಿ ಬಡೋದೆಕರ್, ಸುರೇಶಬಾಬು ಮಾನೆ, ಸರಸ್ವತಿ ರಾಣೆ ಮುಂ) ಕೊಡುಗೆಯಿಂದ ಉತ್ತರಾಧಿ ಇನ್ನೂ ಗಟ್ಟಿಯಾಗಿ ಕರ್ನಾಟಕದಲ್ಲಿ ತಳ ಊರಿತು ಅನ್ನಬಹುದು. ಉತ್ತರದ ಪಾನಿಪತ್ ಮೂಲದವರಾದ ಇವರು ಬರೋಡಾ ಸಂಸ್ಥಾನದಲ್ಲಿದ್ದವರು, ಕೊನೆಗೆ ಮುಂಬಯಿ ಕರ್ನಾಟಕದಲ್ಲಿಯ ಸಾಂಗ್ಲಿ, ಸಾತಾರಾ, ಮಿರಜ್, ಸಂಸ್ಥಾನದಿಂದ ಬೆಳಗಾವಿ, ಹುಬ್ಬಳ್ಳಿ, ಧಾರವಾಡ ಮುಂತಾದ ಊರುಗಳಲ್ಲಿ ತಮ್ಮ "ಆರ್ಯ ಸಂಗೀತ ಪ್ರಸಾರಕ ಮಂಡಳಿಗಳನ್ನು ಸ್ಥಾಪಿಸುತ್ತಾ ಮದ್ರಾಸದವರೆಗೆ ಪ್ರಯಾಣ ಬೆಳೆಸಿದ್ದು ಒಂದು ಇತಿಹಾಸ. ರಾಜಾಶ್ರಯವಿಲ್ಲದ ಪ್ರದೇಶಗಳಲ್ಲಿ ಲೋಕಾಶ್ರಯ ಪಡೆದು, ಟಿಕೆಟು ಹಚ್ಚಿ ಸಂಗೀತ, ನೃತ್ಯಗಳಂತಹ ಕಲೆಗಳನ್ನು ಬೆಳೆಸಿದರು. ಅವರ ಶಿಷ್ಯರಾದ ಸವಾಯಿ ಗಂಧರ್ವರು (೧೮೮೬-೧೯೫೨) ಕಿರಾನಾ ಘರಾನೆಯನ್ನು ಮುಂದೆ ಬೆಳೆಸಿ ಯಶಸ್ವಿಯಾದರು. ಇವರ ಶಿಷ್ಯಸಂಪತ್ತು ಅಪಾರ. ಶ್ರೇಷ್ಠ ಕಲಾವಿದರಾದ ಗಂಗೂಬಾಯಿ ಹಾನಗಲ್, ಭೀಮಸೇನ್ ಜೋಶಿ, ಸಂಗಮೇಶ್ವರ್ ಗುರವ್, ಬಸವರಾಜ್ ರಾಜಗುರು ಮತ್ತು ಅನೇಕರು ಜಯಪುರ್-ಅತ್ರೋಲಿ ಘರಾಣೆಯ ಮನ್ಸೂರ ಬಂಧುಗಳು, ಅಗ್ರಾ ಘರಾಣೆಯ ರಾಮರಾವ ನಾಯಕರು ಇವರೆಲ್ಲ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತವನ್ನು ಬೆಳೆಸಿ ಉತ್ತುಂಗಕ್ಕೆ ತಂದು ತಮ್ಮ ಕರ್ಮಭೂಮಿಯಾದ ಧಾರವಾಡಕ್ಕೆ ಹೆಮ್ಮೆ ತಂದರು. ಹೀಗೆ ಕಿರಾನಾ, ಜಯಪುರ, ಅಗ್ರಾ ಘರಾಣೆಗಳು ಧಾರವಾಡ ಪ್ರದೇಶದಲ್ಲಿ ಮರವಾಗಿ ಬೆಳೆಯಲು ಧಾರವಾಡದ ಮಣ್ಣು, ನೀರು ಹಾಗೂ ಸಂಗೀತ ಪ್ರೇಮಿ ಜನಸಮುದಾಯ ಕಾರಣ. ಅದಕ್ಕೆನೇ "ಪೈದಾಯಿಶಿ ಯುಪಿಮೆ, ಪಾಲಾ ಕರ್ನಾಟಕನೆ, ಔರ್ ಪೋಸಾ ಮಹಾರಾಷ್ಟ್ರನೆ" ಎಂದು ಆಗ್ರಾ ಘರಾಣೆಯ ಉಸ್ತಾದ್ ಖಾದೀಮ್ ಹುಸೈನ್ ಖಾನ್ ಅಂದದ್ದು ಎಷ್ಟು ನಿಜವೆಂದು ಸಂಗೀತ ಸಂಶೋಧಕರು ಒಪ್ಪಬೇಕಾದ ವಿಷಯ.

೩) ಗದುಗಿನ ಪಂಚಾಕ್ಷರಿ ಗವಾಯಿಗಳು (೧೮೯೨-೧೯೪೪) ನೀಲಕಂಠ ಬುವಾ ಆಲೂರಮಠ ಅವರ ಶಿಷ್ಯೋತ್ತಮರು. ಕರ್ನಾಟಕ ಮತ್ತು ಹಿಂದುಸ್ಥಾನಿ ಎರಡೂ ಸಂಗೀತ ಪ್ರಕಾರಗಳಲ್ಲಿ ಪ್ರತಿಭೆ ಇದ್ದ ಅಪ್ರತಿಮ ಹಾಡುಗಾರರು. ತಾವು

ಪ್ರಾರಂಭಿಸಿದ ವೀರಾಶ್ರಮ ಪುಣ್ಯಾಶ್ರಮದ ಮೂಲಕ ಸಾವಿರಾರು ವಿದ್ಯಾರ್ಥಿಗಳಿಗೆ ಸಂಗೀತ ಮತ್ತು ವಿವಿಧ ಕಲೆಗಳನ್ನು ಕಲಿಸಿ ಸಂಗೀತ ಪ್ರಚಾರ ಮಾಡಿದರಷ್ಟೇ ಅಲ್ಲ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಿದ ಅವಧೂತರು. ಅವರ ಸಂಗೀತ ಪ್ರತಿಭೆಯನ್ನು ಅರಿತ ಎಚ್.ಎಮ್.ವಿ.ಯವರು ಮುಂಬಯಿಗೆ ಅವರ ಹಾಡುಗಾರಿಕೆಯನ್ನು ರೆಕಾರ್ಡು ಮಾಡಲು ಕರೆಸಿದಾಗ ತಾವು ಕನ್ನಡ ಹಾಡುಗಳನ್ನು ಮಾತ್ರ ಹಾಡುವುದಾಗಿ ಅವುಗಳನ್ನೇ ರೆಕಾರ್ಡು ಮಾಡಬೇಕೆಂದು ಶರತ್ ಹಾಕಿದ್ದರಂತೆ. ಇದು ಅವರ ಕನ್ನಡದ ಬಗ್ಗೆ ಇರುವ ಪ್ರೀತಿ ಮತ್ತು ಗೌರವದ ದ್ಯೋತಕ ಎಂದೆನ್ನಬಹುದು. ಅವರ ಶಿಷ್ಯರಾದ ಪಂ. ಬಸವರಾಜ ರಾಜಗುರು, ಸಿದ್ದರಾಮ ಜಂಬಲದಿನ್ನಿ, ಪಂಚಾಕ್ಷರಿ ಮತ್ತಿಗಟ್ಟಿ, ಅರ್ಜುನ ಸಾ ನಾಕೋಡ ಮುಂತಾದವರು ಅವರ ಸಂಗೀತ ಸಂಪ್ರದಾಯವನ್ನು ಕರ್ನಾಟಕದಾದ್ಯಂತ ಮುಂದುವರೆಸಿದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಉತ್ತರಾಧಿ ಸಂಗೀತದ ಕೊಡುಗೆ

ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಜನಸಾಮಾನ್ಯರನ್ನು ಹುರಿದುಂಬಿಸಲು ಪ್ರತಿಯೊಂದು ಪ್ರದೇಶದ ಜನರು ಪ್ರಭಾತಫೇರಿ, ಸಾಮೂಹಿಕ ಪ್ರಾರ್ಥನೆ ಮತ್ತು ಗೀತೆಗಳನ್ನು ಹಾಡುತ್ತಾ ಬೆಳಗು ಮುಂಜಾನೆ ಹೊರಡುತ್ತಿದ್ದ ಆ ದೃಶ್ಯಗಳು ಎಷ್ಟು ರೋಮಾಂಚನ ಮತ್ತು ಅಭೂತಪೂರ್ಣವಿರಲು ಸಾಕು ಎಂದೆನಿಸುತ್ತದೆ. ಗಂಗೂಬಾಯಿ ಹಾನಗಲ್ ಅವರು ತಮ್ಮ ಎಳೆ ವಯಸ್ಸಿನಲ್ಲಿ ೧೯೨೪ರ ಬೆಳಗಾವಿ ಅಧಿವೇಶನದಲ್ಲಿ ಹಾಡಿದ್ದು, ಅದೇ ಅಧಿವೇಶನದಲ್ಲಿ ನಾರಾಯಣ ಹೂಯಿಲಗೋಳ ಅವರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಈ ಗೀತೆಯನ್ನು ಹಾಡಿದ್ದು ಇವೆಲ್ಲ ಹಿಂದೂಸ್ಥಾನಿ ಸಂಗೀತದ ಜನಪ್ರಿಯತೆಯ ಕೆಲ ಉದಾಹರಣೆಗಳು ಎಂದು ಹೇಳಬಹುದು.

ಲೋಕಮಾನ್ಯ ತಿಳಕರು ಉಸ್ತಾದ್ ಕರೀಂಖಾನರ ಸಂಗೀತ ಕೇಳಿ, ರಾಷ್ಟ್ರದ ಪುನರ್ ನಿರ್ಮಾಣದಲ್ಲಿ ಸಂಗೀತವು ಅತಿ ಮುಖ್ಯ ಮತ್ತು ಇದಕ್ಕೆ ಪ್ರಾಧಾನ್ಯ ಕೊಡಬೇಕೆಂದು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು. ಅದೇ ತರಹ ಗಾಂಧೀಜಿಯವರಿಗೆ ಕೂಡ ಸಂಗೀತ ತುಂಬ ಸೇರುತ್ತಿತ್ತು. ಅವರು ತಮ್ಮ ಯಾವುದೇ ಕಾರ್ಯಕ್ರಮವನ್ನು ಭಜನೆಯಿಂದಲೇ ಪ್ರಾರಂಭಿಸುತ್ತಿದ್ದರು. ವಿಷ್ಣು ದಿಗಂಬರ ಪಲುಸ್ಕರ (೧೮೭೨-೧೯೩೧) ಇವರು ಕುರುಂದವಾಡಿಯಲ್ಲಿ ಜನಿಸಿದವರು. ಆ ಕಾಲದ ಪ್ರಸಿದ್ಧ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತಕಾರರು. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಪ್ರತಿಯೊಂದು ರಾಷ್ಟ್ರೀಯ ಸಮ್ಮೇಳನದಲ್ಲಿ "ವಂದೆ ಮಾತರಂ" ಮತ್ತು "ರಘುಪತಿ ರಾಘವ ರಾಜಾರಾಂ" ಗೀತೆಗಳ ರಾಗ ಸಂಯೋಜನೆ ಮಾಡಿ ಹಾಡಿದವರು. ಮುಂದೆ ಗಾಂಧೀಜಿಯವರು ಈ ಹಾಡುಗಳನ್ನು ಪ್ರಸಿದ್ಧಿಗೊಳಿಸಿದರು ಪಂ. ಪಲುಸ್ಕರರು ತಮ್ಮ ಗಾಂಧರ್ವ ಮಹಾವಿದ್ಯಾಲಯವನ್ನು ಸ್ಥಾಪಿಸಿ ಸಂಗೀತದ ಪುನರುಜ್ಜೀವನ ಮಾಡಿದರು. ಪಲುಷ್ಕರರ ಶಿಷ್ಯರಾದ ಬಿ.ಆರ್. ದೇವಧರರು ಮುಂಬಯಿಯಲ್ಲಿ ತಮ್ಮ ಸಂಗೀತ ಶಾಲೆಯನ್ನು ಪ್ರಾರಂಭಿಸಿ ಅನೇಕ ಶಿಷ್ಯೋತ್ತಮರನ್ನು ಪಳಗಿಸಿದ್ದರು ಅವರಲ್ಲಿ ಪಂ. ಕುಮಾರ ಗಂಧರ್ವರೊಬ್ಬರು. ಈ ಸಂಗೀತ ಶಾಲೆಯಲ್ಲಿ ಕಲಿತವರು ಅದೆಷ್ಟೋ ಗಾಯಕ-ವಾದಕರು ಉತ್ತರಾದಿ ಸಂಗೀತವನ್ನು ಮುಂದಿನ ಪೀಳಿಗೆಯವರಿಗೆ ಕಲಿಸಿ ಅದರ ನಿರಂತರತೆ ಮತ್ತು ಪ್ರಸಾರಕ್ಕೆ ಕಾರಣರಾದರು. ಪಂ ವಿಷ್ಣು ನಾರಾಯಣ ಭಾತಖಂಡೆಯವರು ಸಂಗೀತವನ್ನು ಪಾಶ್ಚಾತ್ಯ ರೀತಿಯಲ್ಲಿ ಒಂದು ವ್ಯವಸ್ಥೆಗೆ ಅಳವಡಿಸಿ ಅನೇಕ ಸಂಗೀತ ಸಮ್ಮೇಳನಗಳನ್ನು ಸಂಯೋಜಿಸಿದರು ಇವರೆಲ್ಲ ಕರ್ನಾಟಕದ ಹೊರಗಡೆಯವರಾದರೂ ಅವರ ಪ್ರಭಾವ ಧಾರವಾಡದಲ್ಲಿ ಅಷ್ಟೇ ಅಲ್ಲ ಇಡೀ ಕರ್ನಾಟಕದಲ್ಲಿ ಆಗದೆ ಇರಲಿಲ್ಲ, ಮೈಸೂರು ಮಹಾರಾಜರು ಕೂಡ ಹಿಂದುಸ್ಥಾನಿ ಸಂಗೀತ ಪರಂಪರೆಗೆ ರಾಜಾಶ್ರಯ ಕೊಟ್ಟವರೇ.

ಉಸ್ತಾದ ಕರೀಂ ಖಾನರೇ (೧೮೭೨-೧೯೩೭) ಮೊಟ್ಟಮೊದಲ ದೊಡ್ಡ ದೊಡ್ಡ ಸಂಗೀತ ಸಮಾರಾಧನೆಗಳಿಗೆ ಟಿಕೆಟು ಇಟ್ಟು ಶ್ರೀಮಂತರ ಸೊತ್ತಾದ ಸಂಗೀತವನ್ನು ಜನಸಾಮಾನ್ಯರ ತನಕ ಮುಟ್ಟಲು ಮಾಡಿದ್ದು ಒಂದು ಸಾಮಾಜಿಕ ಚಳುವಳಿ ಅಥವಾ ಪರಿವರ್ತನೆ ಎನ್ನಬಹುದು. ಸಂಗೀತ ಕಚೇರಿಗಳು ನಿಯಮಿತವಾಗಿ ನಡೆಯುತ್ತಿದ್ದವು. ಇದರ ಜೊತೆಗೆ ಗ್ರಾಮೊಫೋನ ಕಂಪನಿಗಳ, ಆಕಾಶವಾಣಿಯ ಮತ್ತು ಸಿನೆಮಾಗಳ ಪಾತ್ರ ಸಂಗೀತದ ಪ್ರಸಾರ ಮತ್ತು ಪ್ರಚಾರಕ್ಕೆ ಬಹುಮುಖ್ಯವಾಗಿದೆ. ಹಳ್ಳಿಹಳ್ಳಿಗಳ ಜನರು ಕೂಡ ಇವುಗಳ ಸೌಲಭ್ಯ ಪಡೆದು ರಸಿಕರಾಗಿದ್ದನ್ನು ಸಂಗೀತ ಕಲಾವಿದರ ಚರಿತ್ರೆಗಳನ್ನು ಓದಿದಾಗ ಗೊತ್ತಾಗುತ್ತದೆ. (ಸೂಳೆಬಾವಿಯಂತಹ ಹಳ್ಳಿಯಲ್ಲಿ ಕುಮಾರ ಗಂಧರ್ವರ ತಂದೆ ಅತಿ ಬಡತನದಲ್ಲಿ ಕೂಡ ಗ್ರಾಮೊಫೋನ್ ಹಚ್ಚಿ ಹಾರಮೋನಿಯಮ್ ಬಾರಿಸುತ್ತಾ ಕರೀಂಖಾನರ ಹಾಡುಗಳನ್ನು ಕೇಳುತ್ತಾ ಹಾಡುತ್ತಿರುವ ಪ್ರಸಂಗ).

ಸಂಗೀತಕ್ಕೆ ರಾಜಾಶ್ರಯ ಮತ್ತು ಲೋಕಾಶ್ರಯದ ಪ್ರೋತ್ಸಾಹ ಇದ್ದರೂ ರಾಷ್ಟ್ರೀಯ ಜಾಗೃತಿಯಿಂದ ಶಾಲೆಗಳಲ್ಲಿ ಸಂಗೀತ ಕಲಿಸಬೇಕೆಂಬ ಆಂದೋಲನ ಹಮ್ಮಿಕೊಂಡದ್ದು ವಿಶೇಷ. ಬಖಲೆಯವರು ಧಾರವಾಡದ ಗಂಡು ಮತ್ತ ಹೆಣ್ಣು ಮಕ್ಕಳ ಟ್ರೈನಿಂಗ್ ಕಾಲೇಜಿನಲ್ಲಿ ಸಂಗೀತ ಶಿಕ್ಷಕರೆಂದು ೧೮೯೭–೧೯೦೧ರ ತನಕ ಸೇವೆ ಸಲ್ಲಿಸಿದ್ದನ್ನು ಈ ಹಿಂದೆ ಹೇಳಿದೆ. ಮುಂಬಯಿ ಮುನಿಸಿಪಲ್ ಕಮಿಶನರ ಹುದ್ದೆಗೆ ಬಂದ ಅನೇಕರು ಸಂಗೀತ ಪ್ರಿಯರೇ ಆಗಿದ್ದರು. ಅವರಲ್ಲಿ ಮುಖ್ಯರು ಮಧುಕರ್ ವಾಮನ್ ದೇಸಾಯಿ ಸಾಹೇಬರು. ಅವರ ಕಾಲದಲ್ಲಿ ಅನೇಕ ಸಂಗೀತ ಕಾರ್ಯಕ್ರಮಗಳು ಆದವು ಅಷ್ಟೇ ಅಲ್ಲ ಮುನಿಸಿಪಲ್ ಶಾಲೆಗಳಲ್ಲಿ ಸಂಗೀತ ಕಲಿಸುವ ವ್ಯವಸ್ಥೆ ಮಾಡಿ ಒಳ್ಳೆಯ ಸಂಗೀತಗಾರರನ್ನೇ ನೇಮಿಸಿದ್ದರು. ಧಾರವಾಡ ಬಾಂಬೆ ಪ್ರೆಸಿಡೆನ್ಸಿಯಲ್ಲಿ ಇದ್ದುದರಿಂದ ಅದೇ ಕಾಯದೆ ಲಾಗು ಆಗುತ್ತಿತ್ತು.

ಧಾರವಾಡ ಪ್ರದೇಶವು ಹೀಗೆ, ಉತ್ತರದಿಂದ ಬಂದ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತದ ಕೇಂದ್ರವಷ್ಟೇ ಆಗದೆ, ಕರ್ನಾಟಕದ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಕೂಡ ಮುನ್ನಡೆ ಮಾಡಿ, ಒಂದು ಮಾದರಿ ಪ್ರದೇಶವಾಗಿದೆ ಎಂದೆನ್ನಬಹುದು.

ಆಕರ ಗ್ರಂಥಗಳು

೧. ಡಾ. ಶ್ರೀನಿವಾಸ ಹಾವನೂರ್, (ಕನ್ನಡ) 'ಹೊಸಗನ್ನಡದ ಅರುಣೋದಯ', (ಕನ್ನಡ ಅಧ್ಯಯನ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ), ೧೯೭೪.

೨. ಮಾಯಕೆಲ್ ಕಿನ್ನರ್, (ಇಂಗ್ಲಿಷ್), ದ ಜ್ಯೂವೆಲ್ ಆಫ್ ಮ್ಯೂಸಿಕ್ ಖಾನ್ ಅಬ್ದುಲ್ ಕರೀಂಖಾನ್–ಎ ಬಾಯೊ–ಡಿಸ್ಕೊಗ್ರಫಿ, ಆಸ್ಟ್ರೇಲಿಯಾ, ೨೦೦೩.

೩. ಡಾ. ಲೀಲಾ ಬಿ., (ಕನ್ನಡ) ಮೈಸೂರ ಸಾಂಸ್ಕೃತಿಕ ಸಂಕಥನ–ಕನ್ನಡ ಅಧ್ಯಯನ ವಿಭಾಗ, ಮುಂಬಯಿ ವಿ.ವಿ. ಮುಂಬಯಿ, ೨೦೧೦.

೪. ಪಂಡರಿನಾಥ ಕೊಲ್ಹಾಪುರೆ, (ಮರಾಠಿ), "ಗಾನ ಶಿವಯೋಗಿ ಶಿವಪುತ್ರ'.

೫. ಡಾ. ಉಪಾಧ್ಯೆ ಜಿ.ಎನ್., (ಕನ್ನಡ) ಮಹಾರಾಷ್ಟ್ರ ಕರ್ನಾಟಕ ಆದಾನ, ಪ್ರದಾನ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ, ೨೦೦೯.

೬೫

ಪೇಠಶಿರೂರ ಲಾಳಿಯವರ ಮನೆಯಲ್ಲಿನ ಭಿತ್ತಿ ಚಿತ್ರಗಳು

ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ*

ಚಿತ್ತಾಪುರ ತಾಲೂಕಿನ ಗಡಿಯಂಚಿಗೆ ಹೊಂದಿಕೊಂಡಿದೆ ಪೇಠಶಿರೂರ ಗ್ರಾಮ. ಶ್ರೀ ಮಲ್ಲಿಕಾರ್ಜುನ ದೇವಾಲಯ, ಶ್ರೀ ಹೊನ್ನಲಿಂಗೇಶ್ವರ ದೇವಾಲಯ, ಊರ ಹೊರಗಿನ ಒಂದೆರಡು ದೇಗುಲಗಳನ್ನು ಒಳಗೊಂಡಂತೆ ಪ್ರಾಚೀನ ಕಾಲದ ಕೆಲ ದೇವಾಲಯಗಳು ಇಲ್ಲಿದ್ದು, ಚಾರಿತ್ರಿಕ ಮಹತ್ವ ಪಡೆದುಕೊಂಡಿವೆ. ಅದರಲ್ಲೂ ವಿಶೇಷವಾಗಿ ಶ್ರೀ ಮಲ್ಲಿಕಾರ್ಜುನ ದೇವಾಲಯ ಮತ್ತು ಎದುರಿಗಿರುವ ಬಾವಿಯಂತೂ ಅದ್ಭುತ ವಾಸ್ತುಶೈಲಿ ಮತ್ತು ವಿಶಿಷ್ಟ ಕೆತ್ತನೆಯಿಂದ ಕೂಡಿವೆ. ಶ್ರೀ ಹೊನ್ನಲಿಂಗೇಶ್ವರ ದೇವಾಲಯದಿಂದಾಗಿ ಈ ಗ್ರಾಮಕ್ಕೆ ಹೊನ್ನ ಶಿರೂರ ಎಂತಲೂ ಕರೆಯಲಾಗುತ್ತಿದ್ದ ಉದಾಹರಣೆಗಳಿವೆ.

ಕೃಷಿ ಇಲ್ಲಿನ ಜನರ ಮುಖ್ಯ ಕಸುಬು. ಅಪಾರ ಪ್ರಮಾಣದ ಭೂಮಿಯನ್ನು ಹೊಂದಿರುವ ನಾಲ್ಕಾರು ಹಿರಿ ತಲೆಮಾರಿನ ಮನೆಗಳು ಇಲ್ಲಿದ್ದು, ಅವುಗಳಲ್ಲಿ ಲಾಳಿಯವರ ಮನೆಯೂ ಒಂದು. ಈ ಮನೆತನದ ಹಿರೀಕರ ಹೆಸರು ಅಮರಪ್ಪ ಎಂತಿದೆಯಾದರೂ, ತೋಟಪ್ಪ ಎನ್ನುವ ಹೆಸರು ಈ ಮನೆತನದೊಂದಿಗೆ ವಿಶೇಷವಾಗಿ ತಳುಕು ಹಾಕಿಕೊಂಡಿದೆ. ಸದ್ಯ ಈ ಮನೆಯಲ್ಲಿ ವಾಸವಾಗಿರುವ ಕುಟುಂಬದ ಹಿರೀಕರೂ ಅದೇ ಹೆಸರುಳ್ಳವರು. ಕೃಷಿಯೇ ಈ ಕುಟುಂಬಕ್ಕೆ ಮೂಲ ಆಧಾರ. ನಾಲ್ಕಾರು ತಲೆಮಾರುಗಳಿಂದ ಈ ಮನೆತನದವರು ಕೃಷಿ ಕಾಯಕವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಲಾಳಿಯವರದು ಕೂಡು ಕುಟುಂಬ. ನಾಲ್ಕೈದು ತಲೆಮಾರುಗಳಿಂದ ಎಲ್ಲರೂ ಒಂದೇ ಮನೆಯಲ್ಲಿ ವಾಸವಾಗಿದ್ದರಿಂದ ಅವರು ಕಟ್ಟಿಸಿರುವ ಮನೆ ಅತ್ಯಂತ ವಿಶಾಲವಾಗಿದೆ.

ಪೂರ್ವಾಭಿಮುಖವಾಗಿ ಕಟ್ಟಲ್ಪಟ್ಟ ಲಾಳಿಯವರ ಮನೆ ಎರಡು ಎಕರೆ ಭೂಪ್ರದೇಶದಲ್ಲಿ ಹರಡಿಕೊಂಡಿದೆ. ವಾಸ್ತುಶೈಲಿಯ ದೃಷ್ಟಿಯಿಂದ ಹೊರನೋಟಕ್ಕೆ ಅಷ್ಟೇನೂ ಮಹತ್ವದ್ದಾಗಿ ಕಾಣಿಸುವುದಿಲ್ಲ. ಆದರೆ, ಮನೆಯೊಳಗೆ ಒಂದು ಸುತ್ತು ಹಾಕಿದಾಗ ಅಲ್ಲಿನ ಕಲಾನೈಪುಣ್ಯತೆಗೆ ಬೆರಗಾಗದಿರಲು ಸಾಧ್ಯವೆ? ಅದನ್ನು ನೋಡಿಯೇ ಅನುಭವಿಸಬೇಕು.

ಭವ್ಯವಾದ ಈ ಮನೆ ಎರಡು ಆವರಣಗಳಿಂದ ಕೂಡಿದೆ. ಎತ್ತರವಾದ ಸೋಪಾನಗಳನ್ನು ಹತ್ತುತ್ತ ಮೊದಲ ಹಂತದ ತಲಬಾಗಿಲನ್ನು ಪ್ರವೇಶಿಸುತ್ತಿದ್ದಂತೆಯೇ ಇಕ್ಕೇಲಗಳಲ್ಲಿನ ಜಾಲಾಂದ್ರಗಳು ನಮ್ಮನ್ನು ಸ್ವಾಗತಿಸುತ್ತದೆ. ಮೂರ್‍ನಾಲ್ಕು ಹೆಜ್ಜೆ ಮುಂದೆ ಹೋದರೆ ನಮಗೆ ಕಾಣಿಸುವುದು ವಿಶಾಲವಾದ ಅಂಕಣ. ಕೃಷಿ ಚಟುವಟಿಕೆ ಹೆಚ್ಚುತ್ತಿದ್ದಂತೆಯೇ ಈ ಮೊದಲ ಆವರಣವನ್ನು ದನ–ಕರುಗಳಿಗೆ ಮೀಸಲಿರಿಸಿದ್ದಾರೆ. ಆವರಣದ ಸುತ್ತಲೂ ಇರುವ ಎತ್ತರವಾದ ಕಟ್ಟೆಯ (ಹಜಾರ ಇಲ್ಲವೆ ಪಡಸಾಲೆ ಎಂತಲೂ ಕರೆಯಲಾಗುತ್ತದೆ) ಮೇಲೆ ವಿಶಿಷ್ಟ ಕೆತ್ತನೆಯ ಕಂಬ–ಬೋದಿಗೆಗಳುಳ್ಳ (ಸಾಗುವಾನಿ ಮರದ ಕಟ್ಟಿಗೆಯಲ್ಲಿನ) ಕಮಾನು ರಚನೆಗಳಿವೆ. ಈ ಆವರಣದ ಎದುರಿಗೆ ಮನೆಯ ಒಳಾವರಣವನ್ನು ಪ್ರವೇಶಿಸುವ ಮತ್ತೊಂದು ತಲಬಾಗಿಲಿದ್ದು, ಎಡಭಾಗದಲ್ಲಿ ಕುದುರೆ ಪಾಗಾ, ಬಲಭಾಗದಲ್ಲಿ ಐದು ಅಂಕಣದ ಕಮಾನುರಚನೆಯ ತೆರೆದ ಪಡಸಾಲೆಯಿದೆ. ಈ ಸಿರಿಮನೆಯ ಒಟ್ಟು ರಚನೆಗಳಲ್ಲಿ ಈ ತೆರೆದ ಪಡಸಾಲೆ ಹೆಚ್ಚಿನ ಮಹತ್ವ ಪಡೆದುಕೊಳ್ಳುತ್ತದೆ. ಕಾರಣ, ಈ ಪಡಸಾಲೆಯ ಮೂರೂ ಬದಿಯ ಗೋಡೆಗಳ ತುಂಬೆಲ್ಲ ವರ್ಣಚಿತ್ರಗಳನ್ನು ಬರೆಯಲಾಗಿರುವುದು.

ಚಿತ್ರಗಳ ಶೋಧದ ಹಿನ್ನೆಲೆ : ೨೦೧೩ ನವಂಬರ್ ೯ರಂದು ಈ ಮನೆಗೆ ಕ್ಷೇತ್ರಕಾರ್ಯ ಕೈಗೊಂಡಿದೆ. ತೆರೆದ ಪಡಸಾಲೆಯೊಳಗಿನ ಕಪಾಟು ಮಾದರಿಯ ಕುಸುರಿ ಕಲೆಯೆಡೆಗೆ ಆಕರ್ಷಿಸಿತು. ಅದಾಗಲೇ ಇಲ್ಲಿ ಹೊಟ್ಟು–ಮೇವು ತುಂಬಲಾಗಿತ್ತಾದರೂ ಪೊರಕೆಯಿಂದ ಶುಚಿಗೊಳಿಸಿದೆ. ಆದರೆ, ನನಗೆ ಇಲ್ಲಿ ಕಂಡ ಮತ್ತೊಂದು ಆಶ್ಚರ್ಯ ಎಂದರೆ, ಈ ಕಪಾಟು ಮಾದರಿಯ ಸುತ್ತಲೂ ವಿವಿಧ ವರ್ಣಗಳಿಂದ ವಿನ್ಯಾಸಗೊಳಿಸಲಾಗಿದ್ದು. ಇದು ನನಗೆ ಮತ್ತಷ್ಟು ಕುತೂಹಲಕ್ಕೆ ಎಡೆಮಾಡಿತು. ಒಂದಿಬ್ಬರನ್ನು ಜೊತೆಮಾಡಿಕೊಂಡು ಪಡಸಾಲೆಯಲ್ಲಿನ ಹೊಟ್ಟನ್ನೆಲ್ಲ ಖಾಲಿ ಮಾಡಲು ಮುಂದಾದೆ, ಕನಿಷ್ಠ ಎರಡು ಗಂಟೆಗಳ ಕಾಲ ಬಸವಳಿದ ನನಗೆ ಕಂಡದ್ದು ಮತ್ತದೇ ಆಶ್ಚರ್ಯ. ಪಡಸಾಲೆಯ ಗೋಡೆಗಳ ತುಂಬೆಲ್ಲ

* ದೃಶ್ಯಕಲಾ ಅಧ್ಯಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.






ಚಿತ್ತಾರಗಳಿರುವುದು. ಪ್ರಾಚೀನ ಭಿತ್ತಿಚಿತ್ರಗಳ ಕುರಿತಂತೆ ನಿರಂತರ ಸಂಶೋಧನೆ ನಡೆಸುತ್ತ ಬಂದಿರುವ ನನಗೆ ಲಾಳಿಯವರ ಮನೆಯಲ್ಲಿನ ಚಿತ್ರಗಳನ್ನು ಈ ಪರಂಪರೆಗೆ ಹೊಸ ಸೇರ್ಪಡೆಯಾಗಿಸಲು ಅತೀವ ಸಂತಸವೆನಿಸಿತು.

ಹಿಂದಿನಿಂದಲೂ ಕೃಷಿಗೇ ಹೆಚ್ಚು ಒತ್ತುನೀಡುತ್ತ ಬಂದಿರುವ ಲಾಳಿಯವರ ಮನೆತನ ಪ್ರಸ್ತುತ ದಿನಮಾನಗಳಲ್ಲಿ ಅಕ್ಷರ ಲೋಕದ ಸಾಮಾನ್ಯ ತಿಳುವಳಿಕೆ ಪಡೆದುಕೊಂಡಿದೆ ಹೊರತು ಸಾಕ್ಷರ ಸಂಸ್ಕೃತಿಯ ಮತ್ತಾವ ಕ್ಷೇತ್ರದಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿಲ್ಲ. ಆದರೆ, ಈ ಮನೆಯ ಪಡಸಾಲೆಯೊಂದರ ಗೋಡೆಗಳ ಮೇಲೆ ಬಹಳ ಹಿಂದೆಯೇ ಬರೆದಿರಬಹುದಾದ ಚಿತ್ರಗಳನ್ನು ಗಮನಿಸಿದರೆ, ಲಾಳಿ ಮನೆತನದ ಪೂರ್ವಿಕರು ದೃಶ್ಯ ಸಂಸ್ಕೃತಿಯ ಮಹತ್ವವನ್ನು ಅರಿತುಕೊಂಡಿದ್ದರೆ? ಎಂಬ ಆಲೋಚನೆಗೆ ಮನ ಕೆದಕುತ್ತದೆ.

ಇತಿಹಾಸವನ್ನೇ ನಾವು ಅವಲೋಕಿಸುವುದಾದರೆ, ರಾಜಮನೆತನಗಳನ್ನು ಹೊರತುಪಡಿಸಿ ಅಧಿಕಾರಿ ವರ್ಗದವರು, ಮಠಾಧೀಶರು ಇಲ್ಲವೆ ಕೆಲ ಶ್ರೀಮಂತ ಕಲಾ ಪೋಷಕರು ಮಾತ್ರ ತಮ್ಮ ಮನೆ–ಮಠಗಳಲ್ಲಿ ಭಿತ್ತಿಚಿತ್ರಗಳನ್ನು ಬರೆಯಿಸಿಕೊಂಡಿದ್ದಾರೆ (ಪ್ರಾದೇಶಿಕ ಮಹತ್ವವವನ್ನೂ ಇಲ್ಲಿ ಅಲ್ಲಗಳೆಯುವಂತಿಲ್ಲ). ಹಾಗಾದರೆ, ಲಾಳಿ ಮನೆತನದ ಪೂರ್ವಿಕರು (ಚಿತ್ರರಚನೆ ಸಂದರ್ಭವನ್ನು ಅನುಲಕ್ಷಿಸಿ) ದೃಶ್ಯ ಸಂಸ್ಕೃತಿಯಲ್ಲಿನ ಭಿತ್ತಿಚಿತ್ರ ರಚನೆಯ ಮಹತ್ವ–ಪಾತ್ರ ಕುರಿತಂತೆ ತಿಳಿದುಕೊಂಡಿದ್ದರೆ? ಎಂಬ ಅನುಮಾನ ಮೂಡುವುದು ಸಹಜ. ಇದನ್ನರಿಯಲು ದಾಖಲಾತ್ಮಕ ಕೊರತೆಯಿದೆ. ಈಗಿರುವ ಮನೆಯ ವಾರಸುದಾರನ್ನು ಕೇಳಿದರೆ, ಅವರಿಗೆ ಚಿತ್ರರಚನೆ ಬಗ್ಗೆ ಏನೂ ತಿಳಿಯದು. ಆದರೆ, ಅವರು ಹೇಳುವುದಿಷ್ಟು "ನಮ್ಮ ಮನೆಯ ಹಿರೀಕರೊಬ್ಬರು ಈ ಪಡಸಾಲೆಯಲ್ಲಿ ಕುಳಿತುಕೊಳ್ಳುತ್ತಿದ್ದು, ತಮ್ಮ ಕಷ್ಟ–ಸುಖಗಳನ್ನು ಹೇಳಿಕೊಳ್ಳಲು ಬಂದವರಿಗೆ ಆರ್ಥಿಕವಾಗಿ ಮತ್ತು ಮಾನಸಿಕವಾಗಿ ಸಹಾಯ ಮಾಡುತ್ತಿದ್ದರು. ತೆರೆದ ಪಡಸಾಲೆಯಲ್ಲಿ ಕುಳಿತುಕೊಳ್ಳಲೆಂದು ಅವರು ಸಾಗುವಾನಿ ಮರದ ಕಟ್ಟಿಗೆಯಲ್ಲಿ ಆಸನವೊಂದನ್ನು ಮಾಡಿಸಿದ್ದು, ಈಗಲೂ ನಮ್ಮ ಮನೆಯಲ್ಲಿದೆ" ಎಂದು ತೋರಿಸುತ್ತಾರೆ.





ಒಟ್ಟಿನಲ್ಲಿ ಲಾಳಿ ಮನೆತನದ ಹಿರೀಕರು ತಮ್ಮ ಮನೆಯ ಗೋಡೆಗಳ ಮೇಲೆ ಚಿತ್ರಗಳನ್ನು ಬರೆಯಿಸುವ ಮೂಲಕ ಅಂದು ಕಲಾವಿದ ಕುಟುಂಬಗಳಿಗೆ ನೆರವಾಗಿದ್ದುದನ್ನು ಈಗಿನ ಕಲಾ ಸಮುದಾಯ ಹೆಮ್ಮೆ ಪಟ್ಟುಕೊಳ್ಳುವಂಥದ್ದು.

ಚಿತ್ರಿತ ಪಡಸಾಲೆ : ದಕ್ಷಿಣಾಭಿಮುಖವಾಗಿರುವ ತೆರೆದ ಪಡಸಾಲೆಯು ೧೦ ಅಡಿ ಉದ್ದ ಮತ್ತು ೪೦ ಅಡಿ ಅಗಲ ವಿಸ್ತೀರ್ಣದಲ್ಲಿದೆ. ಪ್ರತಿ ೮ ಅಡಿಗೆ ಒಂದರಂತೆ ಕಂಬ-ಬೋದಿಗೆವುಳ್ಳ ಕಮಾನು ರಚನೆಗಳನ್ನು ಮಾಡಲಾಗಿರುವ್ಯದರಿಂದ ಈ ಪಡಸಾಲೆ ಒಟ್ಟು ಐದು ಅಂಕಣಗಳಾಗಿ ವಿಂಗಡಣೆಗೊಳ್ಳುತ್ತದೆ. ಅಂಕಣಗಳನ್ನು ಪ್ರತ್ಯೇಕಿಸಲು ಉಬ್ಬು ಮಾದರಿಯ ಗಾರೆನಿರ್ಮಿತಿ ಕಂಬವಿನ್ಯಾಸಗಳನ್ನು ಮಾಡಲಾಗಿದೆ. ಪ್ರತಿಯೊಂದು ಕಂಬ-ಬೋದಿಗೆಗಳಲ್ಲಿನ ಕೆತ್ತನೆ ವಿಭಿನ್ನವಾಗಿದ್ದು, ಪಡಸಾಲೆಗೆ ಇದು ಮತ್ತಷ್ಟು ಮೆರಗು ನೀಡಿದೆ.

ತೆರೆದ ಪಡಸಾಲೆಯೊಳಗಿನ ಚಿತ್ರಿತ ಗೋಡೆಗಳನ್ನು ಪೂರ್ವಾಭಿಮುಖ, ದಕ್ಷಿಣಾಭಿಮುಖ ಮತ್ತು ಪಶ್ಚಿಮಾಭಿಮುಖ ಗೋಡೆಗಳೆಂದು ವರ್ಗೀಕರಿಸಬಹುದಾಗಿದೆ. ದಕ್ಷಿಣಾಭಿಮುಖವಾಗಿರುವ ಗೋಡೆಯು ೪೦ ಅಡಿ ಅಗಲ ಅಳತೆಯಲ್ಲಿದ್ದು, ಕಂಬ-ಬೋದಿಗೆ ರಚನೆಗಳಿಂದಾಗಿ ಒಟ್ಟು ಐದು ಅಂಕಣಗಳಾಗಿ ವಿಂಗಡಣೆಗೊಳ್ಳುತ್ತದೆ. ಪೂರ್ವ ಮತ್ತು ಪಶ್ಚಿಮಾಭಿಮುಖವಾಗಿರುವ ಗೋಡೆಗಳು ೧೦ ಅಡಿ ಉದ್ದ ಅಳತೆಯಲ್ಲಿದ್ದು, ಇಲ್ಲಿ ಯಾವುದೇ ಅಂಕಣಗಳನ್ನು ಮಾಡಲಾಗಿಲ್ಲ.

ಭಿತ್ತಿ ಸಿದ್ಧತೆ : ಚಿತ್ರರಚನೆಗೂ ಮುನ್ನ ಗೋಡೆಯ ಮೇಲ್ಮೈಯನ್ನು ಸಂಸ್ಕರಿಸಿದ ಭಿತ್ತಿಯಿಂದ ನುಣುಪಾಗಿಸಿಕೊಳ್ಳಲಾಗಿದೆ. ಪ್ರಸ್ತುತ ಪಡಸಾಲೆಯಲ್ಲಿನ ಭಿತ್ತಿರಚನೆಯು ಮಣ್ಣಿನ ಭಿತ್ತಿಯದ್ದಾಗಿದ್ದು, ಭಿತ್ತಿ ಸಿದ್ಧತೆಗೆಂದು ಮಾಡಿಕೊಳ್ಳಲಾದ ಪರಿಕರಗಳಲ್ಲಿ ಮಣ್ಣನ್ನು ಪ್ರಧಾನವಾಗಿರಿಸಿಕೊಂಡಿದೆಯಾದರೂ ಪೂರಕವಾಗಿ ಕವಳಿ ಹುಲ್ಲು, ಬೆಲ್ಲ, ಅಂಟು ಮತ್ತಿತರ ಸಾಮಗ್ರಿಗಳನ್ನು ಬಳಸಲಾಗಿದೆ. ಕೀಟಗಳ ಬಾಧೆ ತಡೆಯುವ ಉದ್ದೇಶದಿಂದ ಭಿತ್ತಿ ಸಂಸ್ಕರಣೆಯಲ್ಲಿ ಸಗಣಿಯನ್ನು ಬಳಸಲಾಗಿದೆ. ಒಟ್ಟಾರೆ, ಚಿತ್ರರಚನೆಗೆಂದು ಸಿದ್ಧಪಡಿಸಿದ ಭಿತ್ತಿ ಸಂಸ್ಕರಣೆಯು ಪ್ರಾಚೀನ ಪದ್ಧತಿಯಲ್ಲೇ ಮಾಡಲಾಗಿರುವುದು ವಿಶೇಷ.

ಪೂರ್ವ ಮತ್ತು ದಕ್ಷಿಣಾಭಿಮುಖವಾಗಿರುವ ಗೋಡೆಗಳ ಮೇಲಿನ ಬಹುಪಾಲು ಚಿತ್ರಗಳು ನಶಿಸಿಹೋಗಿವೆ. ದಕ್ಷಿಣಾಭಿಮುಖವಾಗಿರುವ ಗೋಡೆಯ ಮಧ್ಯದ ಅಂಕಣದಲ್ಲಿ ಸುಂದರ ಕುಸುರಿ ಕೆತ್ತನೆಯ ಕಪಾಟು ಮಾದರಿಯಿದ್ದು, ಇದರ ಸುತ್ತಲೂ ಹಳದಿ, ನೀಲಿ ಮತ್ತು ಕೆಂಪು ವರ್ಣಗಳಿಂದ ವಿನ್ಯಾಸಗೊಳಿಸಿದೆ. ಈ ಗೋಡೆಯ ಮೂರು ಮತ್ತು ನಾಲ್ಕನೇ ಅಂಕಣಗಳಲ್ಲಿ ಮನುಷ್ಯಾಕೃತಿ ರಚನೆಗಳಿದ್ದು, ಸುಣ್ಣದ ಪದರಿನಲ್ಲಿ ಮುಚ್ಚಿಹೋಗಿವೆ. ಕೆಲವೆಡೆ ಮೂಗಲ್ಲಿ ನತ್ತು ಮತ್ತು ಪ್ರಾದೇಶಿಕ ಉಡುಗೆಯಲ್ಲಿರುವ ಸ್ತ್ರೀರಚನೆ ಗಮನ ಸೆಳೆಯುತ್ತವೆ. ಈ ಆಕೃತಿಗಳಲ್ಲಿನ ಭಾವಪರ ನಿಲುವು ಶಾಸ್ತ್ರೀಯ ನೆಲೆಯಲ್ಲಿ ರೂಪುಗೊಂಡಿದ್ದು, ಪ್ರಾದೇಶಿಕ ಶೈಲಿಯನ್ನು ನಿರೂಪಿಸುತ್ತದೆ. ಉಳಿದಂತೆ ಚಿತ್ರಗಳಲ್ಲಿನ ಪ್ರಧಾನ ಆಕೃತಿ ಮತ್ತು ಚಿತ್ರಿತ ವಿಷಯಕ್ಕೆ ಅನುಗುಣವಾಗಿ ಎಲೆ, ಹೂಬಳ್ಳಿ ಸೇರಿದಂತೆ ಅಲಂಕಾರಿಕ ಚಿತ್ರನಮೂನೆಗಳಿವೆ. ಪ್ರತಿಯೊಂದು ಅಂಕಣವನ್ನು ಪ್ರತ್ಯೇಕಿಸಲು ಮಾಡಿಕೊಂಡಿರುವ ಉಬ್ಬುಮಾದರಿಯ ಕಂಬರಚನೆಯಲ್ಲೂ ಹಳದಿ, ಕೆಂಪು ಮತ್ತು ನೀಲಿ ವರ್ಣಗಳ ಅಲಂಕಾರವಿದೆ. ಈ ಗೋಡೆಯ ತೀರಕೆಳಭಾಗದಲ್ಲಿ ಹಳದಿ ವರ್ಣದ ಅಡ್ಡದಾದ ಪಟ್ಟಿಕೆಯನ್ನು ಮಾಡಿಕೊಂಡು ಅದರಲ್ಲಿ ಕೆಂಪು ಮತ್ತು ನೀಲಿ ವರ್ಣಗಳಿಂದ ವಿನ್ಯಾಸಗೊಳಿಸಿದೆ. ಬಹುಶಃ ಈ ರೀತಿಯ ವರ್ಣಿತ ಅಡ್ಡಪಟ್ಟಿಕೆಯನ್ನು ಮೂರು ಬದಿಯ ಗೋಡೆಗಳಿಗೆ ಹೊಂದಿಕೆಯಾಗುವಂತೆ ಮಾಡಿರಬಹುದು. ಆದರೆ, ಹೆಚ್ಚಿನ ರಚನೆ ಉಳಿದಿಲ್ಲ.

ಪೂರ್ವಾಭಿಮುಖವಾಗಿರುವ ಗೋಡೆಯ ಅಳತೆಯನ್ನೇ ಹೊಂದಿರುವ ಪಶ್ಚಿಮಾಭಿಮುಖ ಗೋಡೆಯ ಮೇಲೆ ಒಂದೆರಡು ಚಿತ್ರನಮೂನೆಗಳು ಉಳಿದಿವೆಯಾದರೂ, ಅವೂ ಸಹ ಅಸ್ಪಷ್ಟವಾಗಿವೆ. ಆದರೆ, ಈ ಗೋಡೆಯ ಮೇಲೆ ಮನುಷ್ಯಾಕೃತಿಗಳ ಬದಲಿಗೆ ಎಲೆ, ಹೂಬಳ್ಳಿ ಸೇರಿದಂತೆ ಅಲಂಕಾರಿಕ ನಮೂನೆಗಳನ್ನು ಚಿತ್ರಿಸಿದೆ. ಈ ಗೋಡೆಯಲ್ಲಿ ಮೇಲ್ಭಾಗ, ಮಧ್ಯಭಾಗ ಮತ್ತು ಕೆಳಭಾಗ ಎಂಬಂತೆ ಪ್ರತ್ಯೇಕಿಸಲು ಉಬ್ಬುಮಾದರಿ ಗಾರೆನಿರ್ಮಿತಿಯಿದ್ದು, ಇದು ಅಡ್ಡವಾಗಿರುವ ಮೂರು ಅಂಕಣಗಳನ್ನಾಗಿ ಪರಿವರ್ತಿಸಿದೆ. ಈ ಮೂರೂ ಅಂಕಣಗಳ ಮಧ್ಯೆ ಉಬ್ಬುಮಾದರಿ ಗಾರೆನಿರ್ಮಿತಿ ಕಂಬಗಳನ್ನು

ಮಾಡಿಕೊಂಡು ಅದರ ಮೇಲೆ ಹಳದಿ, ಕೆಂಪು ಮತ್ತು ನೀಲಿ ವರ್ಣಗಳ ಲೇಪನ ಮಾಡಲಾಗಿದೆ. ಉಳಿದಂತೆ ಮತ್ತಾವ ವಿಶೇಷ ರಚನೆಗಳು ಈ ಗೋಡೆಯ ಮೇಲೆ ಕಂಡುಬರುವುದಿಲ್ಲ.

ಚಿತ್ರಗಳಲ್ಲಿನ ಮನುಷ್ಯಾಕೃತಿಗಳನ್ನು ಹಳದಿ ವರ್ಣದ ಹಿನ್ನೆಲೆಯಲ್ಲಿ ತೋರಿಸಿದ್ದು, ಆಕೃತಿಗಳಿಗೆ ದಟ್ಟವರ್ಣದ ಹೊರರೇಖೆಯನ್ನು ಎಳೆಯಲಾಗಿದೆ. ಆಭರಣ ಮತ್ತು ವಸ್ತ್ರವಿನ್ಯಾಸಗಳಲ್ಲಿ ಸರಿಹೊಂದುವಂತೆ ಅನ್ಯ ವರ್ಣಗಳನ್ನು ಬಳಸಿದೆ. ಸಾಂದರ್ಭಿಕವಾಗಿ ಬಳಸಲ್ಪಟ್ಟ ಮಿಶ್ರವರ್ಣಗಳನ್ನು ಹೊರತುಪಡಿಸಿ ಮೂಲವರ್ಣಗಳನ್ನು ಚಿತ್ರರಚನೆಗೆ ಪ್ರಧಾನವಾಗಿ ಬಳಸಿದೆ.

ಈ ಮನೆಯ ಒಳಾಂಗಣದೊಳಗೆ ಎತ್ತರವಾದ ಸೋಪಾನಗಳುಳ್ಳ ಮತ್ತೊಂದು ಪ್ರವೇಶದ್ವಾರವಿದೆ. ಒಳಗೆ ಪ್ರವೇಶಿಸುತ್ತಲೇ ಎತ್ತರವಾದ ಕಟ್ಟೆ ಮಾದರಿಯ ತೆರೆದ ಪಡಸಾಲೆಯಿದೆ. ಸಾಗುವಾನ ಮರದ ಕಟ್ಟಿಗೆಯಲ್ಲಿ ಕೆತ್ತನೆ ಮಾಡಿದ ಒಟ್ಟು ೧೬ ಕಂಬ–ಬೋದಿಗೆಗಳುಳ್ಳ ಕಮಾನು ಮಾದರಿಯ ರಚನೆಗಳಿವೆ. ಪ್ರತಿಯೊಂದು ಕಂಬ–ಬೋದಿಗೆಯಲ್ಲಿನ ಕೆತ್ತನೆ ವಿಭಿನ್ನವಾಗಿದ್ದು, ಸ್ಥಳೀಯ ಕುಶಲಕರ್ಮಿಗಳೇ ಇದನ್ನು ನಿರ್ಮಿಸಿದ್ದಾರೆ. ಇದೇ ವಿನ್ಯಾಸದ ಮೇಲಂತಸ್ತಿನ ಕಂಬ–ಬೋದಿಗೆಗಳ ಜೋಡಣೆಗೆ ಸಾಗುವಾನಿ ಮರದ ಕಟ್ಟಿಗೆಯನ್ನು ಬಳಸಲಾಗಿಲ್ಲದ ಕಾರಣ ಇಲ್ಲಿ ಕುಸುರಿ ಕೆತ್ತನೆ ಕಂಡುಬರುವುದಿಲ್ಲ. ಕೆಳ ಅಂತಸ್ತಿನ ಪಡಸಾಲೆಯ ನಾಲ್ಕೂ ಬದಿಯ ಗೋಡೆಗಳಲ್ಲಿ, ಬಾಗಿಲು ಮತ್ತು ಕಿಟಕಿಗಳ ಸುತ್ತಲೂ ಕಂಬ ಮಾದರಿಯ ಉಬ್ಬು ರಚನೆಗಳಿದ್ದು, ಈ ಉಬ್ಬುರಚನೆಗಳ ಮೇಲೆ ಚಿತ್ರರಚನೆ ಮಾಡಲಾಗಿದೆಯಾದರೂ, ಪ್ರತಿವರ್ಷ ಸುಣ್ಣ–ಬಣ್ಣ ಬಳಿಯುತ್ತಿರುವ ಕಾರಣಕ್ಕೆ ಚಿತ್ರಗಳು ಮುಚ್ಚಿಹೋಗಿವೆ. ಪಡಸಾಲೆಗೆ ಹೊಂದಿಕೊಂಡಂತೆ ಅಡುಗೆ ಕೋಣೆ, ದೇವರ ಕೋಣೆ, ಧಾನ್ಯಸಂಗ್ರಹ ಕೋಣೆ, ಮಲಗುವ ಕೋಣೆ ಸೇರಿದಂತೆ ಒಟ್ಟು ೧೨ ಕೋಣೆಗಳಿವೆ. ಅಡುಗೆ ಕೋಣೆಯಗುಂಟ ಪಡಸಾಲೆಯೊಂದರ ಒಳಹೋದರೆ ಹಿತ್ತಲವಿದ್ದು, ಇಲ್ಲಿ ಬಾವಿಯಿದೆ. ಈ ಮನೆಯಲ್ಲಿ ಒಟ್ಟು ಮೂರು ಬಾವಿಗಳಿವೆ. ಎರಡು ಆವರಣಗಳುಳ್ಳ, ಎರಡು ಎಕರೆ ಭೂಪ್ರದೇಶದಲ್ಲಿ ಕಟ್ಟಲ್ಪಟ್ಟ ಈ ಮನೆಯನ್ನು ಅರ್ಧದಷ್ಟು ದನದ ಕೊಟ್ಟಿಗೆಗಳಿಗೇ ಮೀಸಲ್ಪಟ್ಟಿರುವುದು ವಿಶೇಷ.

ಚಿತ್ರಗಳ ಈಗಿನ ಸ್ಥಿತಿ : ಲಾಳಿಯವರ ಮನೆಯಲ್ಲಿನ ಭಿತ್ತಿಚಿತ್ರಗಳು ಕಾಲಮಾನ ದೃಷ್ಟಿಗಿಂತಲೂ ಮನೆಯವರಿಗೆ ಚಿತ್ರಸಂಸ್ಕೃತಿಯ ಅರಿವು ಇಲ್ಲದೇ ಇರುವುದರಿಂದ ನಶಿಸಿರಲು ಸಾಧ್ಯ ಎನ್ನಬಹುದು. ೧೯೧೦–೨೦ರ ಅವಧಿಯಲ್ಲಿ ಇಲ್ಲಿನ ಚಿತ್ರಗಳು ರಚನೆಗೊಂಡಿರಬೇಕು. ಕಳೆದ ಎರಡು–ಮೂರು ದಶಕಗಳೀಚೆಗೆ ಮೊದಲ ಆವರಣದಲ್ಲಿನ ತೆರೆದ ಪಡಸಾಲೆಯನ್ನು ಮೇವು–ಹೊಟ್ಟು ತುಂಬಲು ಬಳಸಲಾಗುತ್ತಿದೆ. ಇದರಿಂದಾಗಿ ಸಹಜವಾಗಿಯೇ ಗೋಡೆಗಳ ಮೇಲಿನ ಚಿತ್ರಗಳು ಹಾಳಾಗಿವೆ. ಆಗಾಗ ಸುಣ್ಣ–ಬಣ್ಣ ಬಳಿಯಲಾಗುತ್ತಿರುವ ಕಾರಣಕ್ಕೂ ಗೋಡೆಗಳ ಮೇಲಿನ ಚಿತ್ರಗಳು ಸುಣ್ಣದ ಪದರಿಯಲ್ಲಿ ಮುಚ್ಚಿಹೋಗಿವೆ.

೬೩

ಹೈದರಾಲಿ ಪೂರ್ವಿಕರ ಸಮಾಧಿ ಭವನ-ಕೋಲಾರ

ಆದಪ್ಪ ಪಾಸೋಡಿ*

ಜಿಲ್ಲಾ ಕೇಂದ್ರವಾದ ಕೋಲಾರ ಪಟ್ಟಣವು ಬೆಂಗಳೂರಿನಿಂದ ಈಶಾನ್ಯಕ್ಕೆ ೬೦ ಕಿ.ಮೀ. ದೂರದಲ್ಲಿದ್ದು, ೧೩°೬' ಉತ್ತರ ಅಕ್ಷಾಂಶ ಹಾಗೂ ೭೮°೭' ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ. ಐದನೆಯ ಶತಮಾನದ ಪೂರ್ವಾರ್ಧದಲ್ಲೇ ಕುವಲಾಲವನ್ನು ಕೇಂದ್ರಸ್ಥಾನವನ್ನಾಗಿಸಿಕೊಂಡ ಕುವಲಾಲ ವಿಷಯವು ಕಾಲಕ್ರಮೇಣ ಕುವಲಾಲ ರಾಷ್ಟ್ರ, ಕುವಳಾಲ ನಾಡು, ಕುವಳಾಲ ಮುನ್ನೂರು, ಕೋಳಾಲನಾಡು, ಕುವಳಾಲ ನಾಟ್ಟು, ಕೋಳಾಲ ಸೀಮೆ, ಕೋಳಾಲದೇಶ, ಕೋಳಾಲ ಚಾವಡಿ, ಕೋಳಾಲ ರಾಜಧಾನಿಯಾಗಿ ಉಲ್ಲೇಖಗೊಂಡಿದೆ. ಕ್ರಿ.ಶ. ೧೮೧೧ ರಿಂದ ೧೮೩೧ ರವರೆಗಿನ ಮೈಸೂರು ದೊರೆಗಳ ಖುದ್ದು ದೌಲತ್ತು ಸಂದರ್ಭದಲ್ಲಿ ಬೆಂಗಳೂರು ತುಕಡಿಗೊಳಪಟ್ಟ ೨೮ ತಾಲ್ಲೂಕುಗಳಲ್ಲಿ ಕೋಲಾರವೂ ಒಂದಾಗಿತ್ತು. ಇಂದು ಕೋಲಾರ ಜಿಲ್ಲೆಯಾಗಿ ಉಳಿದಿದೆ.

ಹೈದರಾಲಿ ಪೂರ್ವಿಕರ ಸಮಾಧಿ ಭವನ : ಕೋಲಾರ ನಗರದಲ್ಲಿ ಮುಸಲ್ಮಾನರ ಪ್ರಾರ್ಥನಾ (ನಮಾಜು) ಮಂದಿರಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ-ಸೈದಾನಬಿ ದರ್ಗಾ ಷಾಹಿ ಮಸೀದಿ, ಲಿತೀಫಾ ಬಾನು ಮಸೀದಿ, ನಮತ್ ಜಿ ಮಸೀದಿ, ಮೊಹಮ್ಮದ್ ನೂರಿ ಮಸೀದಿ, ಶಾಬಾ ಷಾ ಕಲಂದರ್ ಮಸೀದಿ, ಶರಿಯಮ್ ಮಸೀದಿ, ಕೋಟೆ ಮಸೀದಿ, ಬಿಲಾಲ್ ಮಸೀದಿ ಹಾಗೂ ಬಾರ್‌ಲೈನ್ ಮಸೀದಿಗಳು, ಬೆಂಗಳೂರು-ಕೋಲಾರ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-೪ ಎಂಬುದೀಗ ರಾಷ್ಟ್ರೀಯ ಹೆದ್ದಾರಿ-೭೫ ಎಂದಾಗಿದೆ. ಈ ಹೆದ್ದಾರಿಯು ಕೋಲಾರ ನಗರ ಪ್ರವೇಶಿಸುತ್ತಿದ್ದಂತೆ ಬಲಭಾಗದಲ್ಲಿ ಹಾಜಿ ಮೊಹಮ್ಮದ್ ಮುಸ್ತಫಾ ಸಾಹೇಬರ ಗಡಿಯಾರ ಗೋಪುರ ಸಿಗುತ್ತದೆ. ಇದರ ವಾಯುವ್ಯದಲ್ಲಿ ದಕ್ಷಿಣಕ್ಕೆ ಮುಖ ಮಾಡಿರುವ ಸೈದಾನಬಿ ದರ್ಗಾ ಷಾಹಿ ಮಸೀದಿಯ ಪ್ರವೇಶದ್ವಾರಕ್ಕೆ 'ಹಜರತ್ ನವಾಬ್ ಫತೇ ಅಲಿಖಾನ್ ಬಹಾದ್ದೂರ್ ಹಜರತ್ ಸಯೀದಾದ ಸೈದಾನಬೀ ದರ್ಗಾ, ಷಾಹೀ ಮೊಹಲ್ಲಾ ಕೋಲಾರ' ಎಂಬ ಸಂಯುಕ್ತ ನಾಮಫಲಕವಿರುತ್ತದೆ. ಎಡಪಕ್ಕದಲ್ಲಿ ಎರಡು ಕಲ್ಲುಕಂಬಗಳಿಗೆ ಸ್ಥಿರಪಡಿಸಿದ ಶಿಲಾಫಲಕದ ಮೇಲೆ 'ಹೈದರಾಲಿ ತಂದೆಯ ಸಮಾಧಿ' ಎಂಬುದನ್ನು ಹಿಂದಿ ಮತ್ತು ಆಂಗ್ಲಭಾಷೆಯಲ್ಲಿ ಬರೆಯಲಾಗಿದೆ. ಈ ಆವರಣದಲ್ಲಿ ಹೈದರಾಲಿ ತಂದೆಯ ಸಮಾಧಿಯನ್ನೊಳಗೊಂಡು, ಅವನ ಒಟ್ಟು ೧೨ ಜನ ಪೂರ್ವಿಕರ ಸಮಾಧಿಗಳು ಒಂದು ಆಯತಾಕಾರದ ಕಟ್ಟಡದೊಳಗೆ ಮಾಡಲ್ಪಟ್ಟಿರುವುದರಿಂದ ಹೈದರಾಲಿ ಪೂರ್ವಿಕರ ಸಮಾಧಿಭವನ ಅಥವಾ ಸಮಾಧಿ ಸಂಕೀರ್ಣ ಎಂದು ಹೇಳುವುದು ಸೂಕ್ತವೆನಿಸುತ್ತದೆ. ಸ್ಥಳೀಯರು 'ಮಕಬರಾ' ಎಂದೂ ಸಂಬೋಧಿಸುತ್ತಾರೆ.

ಪ್ರತಿಷ್ಠಿತ ಹಾಗೂ ಆಧ್ಯಾತ್ಮಿಕ ಸಾಧನೆಗೈದವರ ಶವವನ್ನು ಹೂಳಿರುವ ಜಾಗವನ್ನು ಸಮಾಧಿಯೆಂದು ಹೇಳಿದರೆ, ಜನಸಾಮಾನ್ಯರ ಸಂದರ್ಭಕ್ಕೆ ಗೋರಿ ಎನ್ನುತ್ತೇವೆ. ಶವವನ್ನು ಹೂಳಿದ ಸ್ಥಳದಲ್ಲಿ ನಿರ್ಮಿಸಲಾದ ಗುಂಬಜ್ ಅಥವಾ ನಿರ್ಮಿತಿಯನ್ನು ಹಿಂದಿ ಭಾಷೆಯಲ್ಲಿ 'ಮಕಬರಾ', ಇಂಗ್ಲೀಷಿನಲ್ಲಿ 'ಮೌಸೋಲಿಯಂ' ಎಂದೂ ಕರೆಯುವುದು ರೂಢಿಯಲ್ಲಿದೆ. ಈ 'ಹೈದರಾಲಿ ಪೂರ್ವಿಕರ ಸಮಾಧಿ ಭವನ'ವನ್ನು ರಾಷ್ಟ್ರೀಯ ಮಹತ್ವದ ಸ್ಮಾರಕವೆಂದು ಘೋಷಿಸಲಾಗಿದೆ.

ಸಮಾಧಿಭವನದ ಪೂರ್ವೋಕ್ತ : ಶೀಬಿಯ ಕರಣೀಕ ನಲ್ಲಪ್ಪನವರು (ತಂದೆ ಕಚೇರಿ ಕೃಷ್ಣಪ್ಪನು?) ಬರೆದ 'ಹೈದರ್‌ನಾಮಾ' ಕೃತಿಯಲ್ಲಿ – 'ಯೀ ಹೈದರಲ್ಲಿ ಖಾನರ ಹೀರೇರು ಪೂರ್ವದಲ್ಲಿ ಅರಬ್ಬ ದೇಶದಿಂದ ಅಷರಾಷ ಸಾಹೇಬ, ಸುಂನತ ಜಮಾತಮ ಷಾಹೇಬ ಜಾದೇರು ಬಿಜಾಪುರದ ಸಂಸ್ಥಾನಕ್ಕೆ ಬಂದು, ಅಲ್ಲಿನ ಬಹರಲ್ಲಿ ನೌಕರೀ ನಿಂತು, ದಿನೇ ದಿನೇ ಭಾರೀ ಖಿಜಮತ್ತು ಸರದಾರಿ ಮಾಡುತ್ತಾಯಿದ್ದು ಕೆಲವು ದಿವಸದ ಮ್ಯಾಲೆ ಯೀ ವಂಶದ ಜನರ ಪೈಕಿ ತುಟಾಯಿಸಿ ಅಲ್ಲಿಂದ ಹೊರಟು ಮಹಂಮದ ಮಹಂಮದ ಪತ್ತಾಹುಲ್ಲಾ ಸಾಬರ ಜನ ೧, ಯಿವರ ತಂಮ ಗುಲಾಮ ಹೈದರ ಸಾಬರ ಜನ ೧, ಗುಲಾಂ ಅಲ್ಲಿಸಾಬರ ಜನ ೧ ಸಹಾ, ವಂದು ತಾಯಿ ಮಕ್ಕಳು ಮೂರು ಜನ ಅಂಣ ತಮ್ಮಂದಿರು, ಯಿವರ

* ೨ನೆಯ ರಸ್ತೆ, ಸರ್ಕಾರಿ ಕಾಲೇಜಿನ ಹಿಂಭಾಗ, ವರ್ತೂರು, ಬೆಂಗಳೂರು-೫೬೦೦೮೭

ತಂದೆ ತಾಯಿ ಸಹಾ ಕೋಲಾರಕ್ಕೆ ಬಂದು ಕೆಲವು ದಿನ ಅಲ್ಲಿಯಿದ್ದು ಆ ಬಳಿಕ ತಂದೆ ತಾಯಿ ಅಲ್ಲಿಯೇ ಸಂದು ಹೋದ್ದರಿಂದ ಅವರಿಗೆ ಗುಂಮಗೆ ಕೋಲಾರದ ಬಳಿಯಲ್ಲೇ ಮಾಡಿದರು' ಎಂಬ ವಿವರಣೆಯಿದೆ.

ಏಳನೆಯ ಜುಲೈ ೧೮೦೦ರಂದು ವಕ್ಕಲೇರಿಯಿಂದ ಕೋಲಾರಕ್ಕೆ ಬಂದಿದ್ದ ಫ್ರಾನ್ಸಿಸ್ ಬುಕಾನನ್ ಅವರು – '೭೦೦ ಮನೆಗಳಿಂದ ಕೋಲಾರ ಪಟ್ಟಣದಲ್ಲಿ ಮಣ್ಣಿನ ದೊಡ್ಡ ಕೋಟೆಯಿದ್ದು, ದುರಸ್ತಿಗೊಳ್ಳುತ್ತಿದೆ. ಹೈದರಾಲಿಯ ತಂದೆ ಇಲ್ಲಿ ಜೀವಿಸಿ ಕಾಲವಾಗಿದ್ದಾನೆ. ಹೈದರಾಲಿಯು ತನ್ನ ತಂದೆಯ ಶೋಭಾಯಮಾನವಾದ ಸಮಾಧಿಭವನವನ್ನು ಕಟ್ಟಿಸಿದ್ದಾನೆ. ಈಸ್ಟ್ ಇಂಡಿಯಾ ಕಂಪನಿಯಿಂದ ನೇಮಕಗೊಂಡ ಸಂಗೀತಗಾರರು ಹೈದರಾಲಿ ತಂದೆಯ ಆತ್ಮಶಾಂತಿಗಾಗಿ ಸಂಗೀತ ನುಡಿಸುತ್ತಾರೆ. ಸಮಾಧಿಭವನದ ಹತ್ತಿರದಲ್ಲೇ ಮಸೀದಿ ಹಾಗೂ ಮುಸಲ್ಮಾನ ಮೌಲ್ಲಾರ ವಿದ್ಯಾಕೇಂದ್ರವಿದೆ' ಎಂಬ ಮಾಹಿತಿಯನ್ನು ದಾಖಲಿಸಿರುತ್ತಾರೆ.

ಕ್ರಿ.ಶ. ೧೮೧೨ರಲ್ಲಿ ಭಾರತ ಪ್ರವಾಸಕ್ಕೆ ಬಂದಿದ್ದ ಕ್ಯಾಪ್ಟನ್ ಬಸಿಲ್‌ವಾಲ ಕೂಡ ತನ್ನ ಪ್ರವಾಸ ಕಥನದಲ್ಲಿ – ಶ್ರೀರಂಗಪಟ್ಟಣದಲ್ಲಿರುವ ಹೈದರಾಲಿ (ಫತ್ತೆಮಹಮ್ಮದನ ಮಗ)ಯ ಸಮಾಧಿಯ ಮುಂದೆ ಕುರಾನವಾಚನ ನಡೆಯುತ್ತಿದ್ದ ಬಗ್ಗೆ ಹೀಗೆ ಬರೆದಿದ್ದಾನೆ–'ವೆಲ್ಲಿಂಗ್ಟನ್ನರು ಹೈದರಾಲಿ ಗೋರಿಯ ಬಳಿ ದಿನಾ ಹಲವಾರು ಸಲ ಕೊರಾನು ಓದುತ್ತಿದ್ದುದನ್ನು ಮುಂದುವರೆಸಿಕೊಂಡು ಹೋಗುವಂತೆ ತಿಳಿಸಿದ್ದರು. ಅರಮನೆಯಲ್ಲಿದ್ದ ಕೆಲವು ದಿವಸಗಳ ಕಾಲ ನಾನು ಮುಲ್ಲಾಗಳು ಸಲ್ಲಿಸುತ್ತಿದ್ದ ಪ್ರಾರ್ಥನೆಯನ್ನು ಕೇಳಲು ಆಗಾಗ್ಗೆ ಹೋಗುತ್ತಿದ್ದೆ. ಬ್ರಿಟಿಷ್ ಸರ್ಕಾರ ಇನ್ನೊಂದು ಕೆಲಸ ಮಾಡಿತು. ಅದೇನೆಂದರೆ ಸೋತು ಹೋದ ಟಿಪ್ಪು ಕಡೆಯ ಮುಖ್ಯ ಅಧಿಕಾರಿಗಳಿಗೂ, ಸೇನಾಪತಿಗಳಿಗೂ ಪಿಂಚಣಿ ಮಂಜೂರು ಮಾಡಿದ್ದು, ಮುಲ್ಲಾಗಳಿಗೂ ಈ ಸೌಲಭ್ಯ ದೊರೆಯಿತು'.

ಹೈದರಾಲಿ ಸಮಾಧಿ ಬಳಿ ಪ್ರಾರ್ಥನೆ ಸಲ್ಲಿಸುತ್ತಿದ್ದ ಮುಲ್ಲಾಗಳಿಗೆ ಪಿಂಚಣಿ ಲಭಿಸಿದಂತೆ, ಫತೇ ಮಹಮ್ಮದನ ಸಮಾಧಿ ಭವನದಲ್ಲಿರುವ ಸಂಗೀತಗಾರರಿಗೂ ತಿಂಗಳಿಗೆ ರೂ. ೨೦ ಗೌರವಧನ ಪಾವತಿಸಲ್ಪಡುತ್ತಿತ್ತು ಎಂಬುದನ್ನು ನೌಬತ್‌ಖಾನಾದ ಸಂಗೀತಸೇವೆಯಲ್ಲಿದ್ದ ತಮ್ಮ ತಂದೆ ನಾಗಪ್ಪನವರು ಮುಖವೀಣೆ ನುಡಿಸುತ್ತಿದ್ದರೆಂದು ಕಠಾರಿಪಾಳ್ಯದ ಎನ್. ವೆಂಕಟರಮಣಪ್ಪನವರು ನೆನಪಿಸಿಕೊಳ್ಳುತ್ತಾರೆ.

ಕ್ರಿ.ಶ. ೧೮೧೭ರಲ್ಲಿ ಕರ್ನಲ್ ಮಾರ್ಕ್ ವಿಲ್ಕ್ಸನು ತನ್ನ 'ಹಿಸ್ಟರಿ ಆಫ್ ಮೈಸೂರು' ಎಂಬ ಕೃತಿಯಲ್ಲಿ ಹೈದರನ ಮನೆತನದ ಇತಿಹಾಸವನ್ನು ಬರೆಯುವಾಗ – 'ಕೋಲಾರದಲ್ಲಿರುವ ಹೈದರಾಲಿ ತಂದೆ ಫತೇ ಮಹಮ್ಮದನ ಸಮಾಧಿ ಮತ್ತು ಮಸೀದಿಯಲ್ಲಿರುವ ಧರ್ಮಾಧಿಕಾರಿಗಳು ಬರೆದಿರುವ ಪುಸ್ತಕದಿಂದ ಮಾಹಿತಿ ಪಡೆಯಲಾಯಿತು' ಎಂದಿದ್ದಾನೆ. ಅಂದರೆ ಸಮಾಧಿಭವನ ಮತ್ತು ಮಸೀದಿಗಳಲ್ಲಿರುವ ಧಾರ್ಮಿಕ ವರ್ಗದವರು ಹೈದರಾಲಿ ಪೂರ್ವಿಕರ ಶೌರ್ಯ–ಸಾಹಸಗಾಥೆಯನ್ನು ಸಾರ್ವಜನಿಕರಿಗೆ ತಲುಪಿಸುವಲ್ಲಿ ಪ್ರಯತ್ನಿಸಿದ್ದರೆಂಬ ಅಂಶ ಸ್ಪಷ್ಟವಾಗುತ್ತದೆ.

ಶಾಸನತಜ್ಞ ಬಿ.ಎಲ್. ರೈಸ್ ಅವರು ಕ್ರಿ.ಶ. ೧೯೦೫ರಲ್ಲಿ ಪ್ರಕಟಿಸಿದ ತಮ್ಮ ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ–೧೦ರ ಪೀಠಿಕೆ ಪುಟ ೪೦ರಲ್ಲಿ ಮಹಮ್ಮದೀಯ ಸ್ಮಾರಕಗಳ ಬಗ್ಗೆ ಹೇಳುವಾಗ There is also Imamabara, the Mausoleum of Haider Ali's father, at Kolar' ಎಂದಿದ್ದಾರೆ. Imambara ಅಂದರೆ ನಮಾಜಿನ ಕಟ್ಟೆ, Mausoleum ಪದಕ್ಕೆ ರೌಜಾ, ದೊಡ್ಡಗೋರಿ, ಸಮಾಧಿಭವನ, ವೃಂದಾವನ ಎಂಬರ್ಥಗಳಿವೆ.

ಕ್ರಿ.ಶ. ೧೯೬೮ರಲ್ಲಿ ಪ್ರಕಟವಾದ ಕೋಲಾರ ಜಿಲ್ಲೆ ಗ್ಯಾಸೆಟಿಯರ್‌ನಲ್ಲಿ 'The Makbara or tomb of Haider Ali's fateher is one of the principal old buildings and is maintained with an endowment' ಎಂಬ ಉಲ್ಲೇಖವಿದೆ.

ಗ್ಯಾಸೆಟಿಯರ್‌ನ ಪರಿಷ್ಕೃತ ಆವೃತ್ತಿಯಲ್ಲಿ 'ಸುಮಾರು ೧೭೨೯ರಲ್ಲಿ ಫತೇ ಮಹಮ್ಮದ್ ಮತ್ತವನ ಮೊದಲ ಹೆಂಡತಿಯ ಹಿರಿಯ ಮಗ ಇಬ್ಬರೂ ಚಿತ್ತೂರಿನ ವಿರುದ್ಧದ ಕದನದಲ್ಲಿ ಸಾವನ್ನಪ್ಪಿದರು. ಅವರಿಬ್ಬರ ದೇಹವನ್ನು ತಂದು ಕೋಲಾರದಲ್ಲಿ ಸಂಸ್ಕಾರ ಮಾಡಿ ಸಮಾಧಿಯನ್ನು ನಿರ್ಮಿಸಲಾಯಿತು' ಎಂಬ ಮಾಹಿತಿಯಿದೆ.

ಸಮಾಧಿಭವನದ ಕಲೆ ಮತ್ತು ವಾಸ್ತುಶಿಲ್ಪ : ಹೈದರಾಲಿ ಪೂರ್ವಿಕರ ಸಮಾಧಿಭವನದ ಅಳತೆ, ತಲವಿನ್ಯಾಸ, ಪ್ರವೇಶದ್ವಾರ, ಜಾಲಂಧ್ರ, ಕಂಬ–ಬೋದಿಗೆ–ತೊಲೆಗಳು, ಗೋಡೆ ಮತ್ತು ದೀಪದ ಗೂಡುಗಳು, ಮೇಲ್ಛಾವಣಿ, ಕಲಾತ್ಮಕ ಗಾರೆ ಕೆಲಸ, ಮಿನಾರ–ಕಳಶವನ್ನೊಳಗೊಂಡಂತೆ ಸ್ಮಾರಕದ ಕಲೆ ಮತ್ತು ವಾಸ್ತುಶಿಲ್ಪದ ವಿವರಗಳನ್ನು ಇಲ್ಲಿ ಸಂಕ್ಷೇಪಿಸಲಾಗಿದೆ. ಸಮಾಧಿಭವನವು ಆಯತಾಕಾರವಾಗಿದ್ದು, ಪೂರ್ವ–ಪಶ್ಚಿಮದ ಹೊರಗೋಡೆಯು ೧೦.೮೦ ಮೀ, ದಕ್ಷಿಣೋತ್ತರ ಹೊರಗೋಡೆ ೯.೦೦ ಮೀ ಹಾಗೂ ದಕ್ಷಿಣೋತ್ತರದಲ್ಲಿ ಇದು ೭.೩೦ ಮೀ ಉದ್ದವನ್ನು ಹೊಂದಿದೆ. ಈ ಎಲ್ಲ ನಾಲ್ಕೂ ಗೋಡೆಗಳು ೯೦ ಸೆಂ.ಮೀ. ದಪ್ಪವಾಗಿರುತ್ತವೆ. ಭವನದ ಪೂರ್ವ ದಿಕ್ಕಿನ ಗೋಡೆಯಲ್ಲಿ ಆಗ್ನೇಯ ಮೂಲೆಯಿಂದ ಪ್ರವೇಶ ದ್ವಾರವಿದ್ದು,

೧.೩೮ ಮೀ ಎತ್ತರ, ೬೬ ಸೆಂ.ಮೀ. ಅಗಲವನ್ನು ಹೊಂದಿರುತ್ತದೆ. ಇದುವೇ ಮುಖ್ಯ ಪ್ರವೇಶದ್ವಾರವಾಗಿದ್ದು, ಬಲಕ್ಕೆ 'ಹೈದರಾಲಿ ತಂದೆಯ ಸಮಾಧಿ' ಎಂಬ ಮಾಹಿತಿ ಫಲಕ ಹಾಕಲಾಗಿದೆ. ಅಲಂಕಾರರಹಿತ ದ್ವಾರಬಂಧವಿದ್ದು, ಹೊರಗೋಡೆಯಲ್ಲಿ ಗಾರೆಯಿಂದ ಕಮಾನಿನಾಕಾರದ ವಿನ್ಯಾಸ ಮಾಡಿ, ಹಸಿರು ಬಣ್ಣದ ಪಟ್ಟಿ ಎಳೆಯಲಾಗಿದೆ. ಕಟ್ಟಿಗೆಯ ಬಾಗಿಲುಗಳು ಇದ್ದು, ಮೇಲ್ಭಾಗದ ಸುಳಿಕೆಗಳನ್ನು ಕಲ್ಲು ಚಪ್ಪಡಿಯ ರಂಧ್ರಗಳಲ್ಲಿ ಸೇರಿಸಿ ಸ್ಥಿರಪಡಿಸಲಾಗಿದೆ. ಉತ್ತರ ದಿಕ್ಕಿನ ಗೋಡೆಯಲ್ಲೂ ಎರಡನೆಯ ಪ್ರವೇಶದ್ವಾರವಿದ್ದು, ಇದರ ಅಳತೆ-ವಿನ್ಯಾಸಗಳು ಆಗ್ನೇಯ ದಿಕ್ಕಿನ ಬಾಗಿಲಿನಂತೆಯೇ ಇರುತ್ತವೆ. ವಾತಾಯನಕ್ಕಾಗಿ ಪೂರ್ವ ಗೋಡೆಯಲ್ಲಿ ಜಾಲಂದ್ರವಿರುವುದಿಲ್ಲ. ಪಶ್ಚಿಮ ಗೋಡೆಯಲ್ಲಿ ಮೂರು, ದಕ್ಷಿಣದ ಗೋಡೆಯಲ್ಲಿ ಐದು, ಉತ್ತರದ ಗೋಡೆಯಲ್ಲಿ (ಪ್ರವೇಶದ್ವಾರದ ಎಡಕ್ಕೆ ಎರಡು, ಬಲಕ್ಕೆ ಎರಡು) ನಾಲ್ಕು ಜಾಲಂದ್ರಗಳಿರುತ್ತವೆ. ಜಾಲಂದ್ರಗಳು ಚಚ್ಚೌಕಾಗಿದ್ದು, ಪ್ರತಿಯೊಂದು ಜಾಲಂದ್ರದಲ್ಲಿ ೩೬ ರಂಧ್ರಗಳಿವೆ. ಮಧ್ಯದ ನಾಲ್ಕು ರಂಧ್ರಗಳು ಲಂಬ-ವರ್ತುಲಾಕಾರದಲ್ಲಿಯೂ, ಉಳಿದ ೩೨ ರಂಧ್ರಗಳು ಸರಳ ವರ್ತುಲಾಕಾರವನ್ನು ಹೊಂದಿವೆ.

ಚತುಷ್ಕಾಕಾರವಾಗಿರುವ ಮೂರು ಪೂರ್ಣ ಕಲ್ಲುಕಂಬಗಳು ಮೊದಲ ಸಾಲಿನಲ್ಲಿಯೂ, ಮತ್ತೆ ಮೂರು ಪೂರ್ಣಕಂಬಗಳನ್ನು ಎರಡನೆಯ ಸಾಲಿನಲ್ಲಿಯೂ ನಿಲ್ಲಿಸಲಾಗಿದೆ. ಇಡೀ ಸಮಾಧಿ ಭವನಕ್ಕೆ ನಾಲ್ಕು ಮೂಲೆಗಂಬಗಳು, ಪೂರ್ವದ ಗೋಡೆಯಲ್ಲಿ ಎರಡು ಅರ್ಧಗಂಬ, ಪಶ್ಚಿಮದಲ್ಲಿ ಎರಡು, ದಕ್ಷಿಣದಲ್ಲಿ ಮೂರು, ಉತ್ತರದ ಗೋಡೆಯಲ್ಲಿ ಮೂರು ಅರ್ಧಗಂಬಗಳು ಇರುತ್ತವೆ. ಎಲ್ಲ ಹತ್ತೂ ಅರ್ಧಗಂಬಗಳು ಗೋಡೆಯಲ್ಲಿ ಮುಚ್ಚಿವೆ. ಅಂದರೆ ಗೋಡೆಗೆ ಹಾಕಿರುವ ಗಾರೆ (ಗಿಲಾವು) ಯಿಂದಾಗಿ ಅವು ಕಾಣುವುದಿಲ್ಲ. ಅರ್ಧಗಂಬ, ಮೂಲೆಗಂಬ ಹಾಗೂ ಪೂರ್ಣಕಂಬಗಳು ೨.೦೦ ಮೀಟರ್ ಎತ್ತರವಿದ್ದು, ಅವುಗಳ ಮೇಲೆ ೧೮ ಸೆಂ.ಮೀ. ಎತ್ತರದ ಸಾದಾ ಬೋದಿಗೆಗಳನ್ನು ಸ್ಥಿರಪಡಿಸಲಾಗಿದೆ. ಪೂರ್ಣಕಂಬಗಳ ಮೇಲಿರುವ ಬೋದಿಗೆಗಳು ೨೮ ಸೆಂ.ಮೀ. ಎತ್ತರದ ನಾಲ್ಕು ಶಿಲಾತೊಲೆಗಳನ್ನು ಹೊತ್ತು ನಿಂತಿರುತ್ತದೆ. ಅಷ್ಟೇ ಎತ್ತರದ ಎರಡೆರಡು ಶಿಲಾತೊಲೆಗಳು ಪ್ರತಿಯೊಂದು ಮೂಲೆಗಂಬ ಹಾಗೂ ಅರ್ಧಕಂಬಗಳ ಆಶ್ರಯ ಪಡೆದಿರುತ್ತವೆ. ಭಿತ್ತಿಯಲ್ಲಿ ಪ್ರವೇಶದ್ವಾರ, ಜಾಲಂದ್ರಗಳನ್ನು ಬಿಟ್ಟರೆ ನಿರಲಂಕೃತ ಬಿಳಿಗೋಡೆ ಮಾತ್ರ ಇದೆ. ನೆಲಮಟ್ಟದಿಂದ ೪೦ ಸೆಂ.ಮೀ. ಎತ್ತರದಲ್ಲಿ ನಾಲ್ಕೂ ದಿಕ್ಕುಗಳಲ್ಲಿ ಗಾರೆ ಬಳಸಿ ಹೊರಗೋಡೆಯಲ್ಲಿ ಮುಂಬಣಿ ಮಾಡಿ ಅದಕ್ಕೆ ಹಸಿರು ಬಣ್ಣ ಬಳಿಯಲಾಗಿದೆ. ಮೇಲ್ಛಾವಣಿಯ ಮೇಲೆ ಬಿದ್ದ ಮಳೆನೀರು ಹರಿದು ಹೋಗಲು ಸಮಾನಾಂತರವಾಗಿ ಪೂರ್ವದ ಗೋಡೆಯಲ್ಲಿ ಒಂದು, ಪಶ್ಚಿಮದ ಗೋಡೆಯಲ್ಲಿ ಎರಡು, ದಕ್ಷಿಣದ ಗೋಡೆಯಲ್ಲಿ ಎರಡು, ಉತ್ತರದ ಗೋಡೆಯಲ್ಲಿ ಎರಡು ಹರನಾಳಿಗೆಗಳಿರುತ್ತವೆ. ಗಾರೆಯಲ್ಲಿ ಮಾಡಲಾದ ಮುಂಬಣಿ ಹಾಗೂ ಅದಕ್ಕೆ ಹಸಿರು ಬಣ್ಣದ ಲೇಪನ ಹರನಾಳಿಗೆಗಳ ಮೇಲ್ಸ್ತರದಲ್ಲಿಯೂ ಪುನರಾವರ್ತನೆಯಾಗಿದೆ. ಹಸಿರು ಪಟ್ಟಿಕೆ ನಂತರ ಗಾರೆಯ ಚೌಕುಗಳಲ್ಲಿ ಕಮಾನು, ಬಟ್ಟಲಾಕಾರದ ಗಾರೆವಿನ್ಯಾಸಗಳು ಮುಂದುವರೆದಿವೆ. ಮುಂದಿನ ಪಟ್ಟಿಕೆಯಲ್ಲಿ ಗಾರೆಯಲ್ಲಿ ಮಾಡಲಾದ ನಕ್ಷತ್ರಾಲಂಕಾರವಿದೆ. ಮೇಲ್ಛಾವಣಿಯ ನಂತರವೂ ನಾಲ್ಕೂ ಗೋಡೆಗಳು ಎತ್ತರಿಸಲ್ಪಟ್ಟಿದ್ದು, ಚಿಕ್ಕ ಕಮಾನುಗಳ ಸ್ತರವಿದೆ. ಗಾರೆಯಲ್ಲಿ ನಕ್ಷತ್ರಾಲಂಕಾರ, ಗಾರೆಯ ಸರಳುಗಳು ಒಂದಕ್ಕೊಂದು ಛೇದಿಸಿದಂತೆ ನಿಲ್ಲಿಸಿ, ಮುಂದಿನ ಸ್ತರದಲ್ಲಿ ರಂಧ್ರಗಳ ಟೊಳ್ಳು, ಅವುಗಳ ಮೇಲೆ ಇಂಗ್ಲೀಷಿನ 'ವಿ' ಅಕ್ಷರವನ್ನು ಕಂಡರಿಸುತ್ತ ಹೋದಂತೆ ಭಾಸವಾಗುತ್ತದೆ. ನಾಲ್ಕೂ ಮೂಲೆಗಳಲ್ಲಿ ನಾಲ್ಕು ದೊಡ್ಡ ಮಿನಾರುಗಳಿವೆ. ಮಿನಾರುಗಳ ಮಧ್ಯಭಾಗವನ್ನು ವಿಸ್ತರಿಸಿಕೊಂಡು ಸುತ್ತಲೂ ಚಿಕಣಿ ಕಮಾನುಗಳ ರಚನೆಗಳನ್ನು ಮಾಡಲಾಗಿದೆ. ಎರಡು ದೊಡ್ಡ ಮಿನಾರುಗಳ ನಡುವೆ ಗೋಡೆಯ ಮೇಲೆ ಎರಡೆರಡು ಚಿಕ್ಕ ಮಿನಾರುಗಳಿದ್ದು, ಅವುಗಳ ಮೇಲೆ ಗಾರೆಯ ಕಲಶಗಳನ್ನು ತೋರಿಸಲಾಗಿದೆ. ಭವನದ ಮೇಲೆ ಒಟ್ಟು ನಾಲ್ಕು ದೊಡ್ಡ ಮಿನಾರು, ಎಂಟು ಚಿಕ್ಕ ಮಿನಾರುಗಳನ್ನು ಕಾಣುತ್ತೇವೆ. ಭವನದ ಮೇಲ್ಛಾವಣಿಯ ಮಧ್ಯದಲ್ಲಿ ಗಾರೆಯಿಂದ ಮಾಡಲಾದ ಗುಮ್ಮಟವಿದ್ದು, ಅದು ನವಾಬ ಫತೇ ಅಲಿಖಾನ್ ಹಾಗೂ ಸೈದಾನಿಬೀಬಿ ಸಾಹೀಬಾರ ಸಮಾಧಿಗಳ ಮೇಲಿನ ಅಂಕಣದಲ್ಲಿ ಬರುತ್ತದೆ. ಗುಮ್ಮಟದ ಒಳಗಿನ ಟೊಳ್ಳುಭಾಗದಲ್ಲಿ ಅಡ್ಡಲಾಗಿ ಕಬ್ಬಿಣದ ತೊಲೆಯ ಆಧಾರ ಕೊಡಲಾಗಿದೆ. ಭವನದ ದಕ್ಷಿಣ ಅಂದರೆ ಫತೇ ಮಹಮ್ಮದ-ಶಾಬಾಜ್ ಅಲಿಖಾನರ ಸಮಾಧಿಗಳ ಮೇಲಿನ ಅಂಕಣದಲ್ಲಿ ಬರುವ ಒಂದು ಶಿಲಾ ತೊಲೆಯು ಮಧ್ಯದಲ್ಲಿ ಸೀಳಿ ಹೋಗಿದ್ದು, ಕುಸಿಯುವ ಹಂತದಲ್ಲಿದೆ ಮತ್ತು ಅಪಾಯಕಾರಿಯಾಗಿದೆ. ಗುಮ್ಮಟದ ಹೊರಭಾಗದಲ್ಲಿ ಮಾಳಿಗೆ ಮೇಲೆ ಹಿತ್ತಾಳೆಯ ಹೊಳೆಯುವ ಕಳಶವಿರುತ್ತದೆ.

ಹೊರಗಿನ ನೆಲಮಟ್ಟಕ್ಕಿಂತ ಭವನದ ನೆಲಮಟ್ಟವು ಕೆಳಗಿದೆ. ಭವನದೊಳಗಿನ ಪೂರ್ವದ ಗೋಡೆಯಲ್ಲಿ ೦೯, ಪಶ್ಚಿಮದಲ್ಲಿ ೧೩, ದಕ್ಷಿಣದಲ್ಲಿ ೧೬ ಹಾಗೂ ಉತ್ತರದ ಗೋಡೆಯಲ್ಲಿ ೦೫ ತ್ರಿಕೋನಾಕಾರದ ಗೂಡು (ಮಾಡು) ಗಳಿರುವುದು ವಿಶೇಷ. ದೀಪದ ಹಣತೆಗಳನ್ನು ಈ ಗೂಡುಗಳಲ್ಲಿಟ್ಟು ಬೆಳಗಿಸುವ ಪರಿಪಾಠವಿದೆ. ಈ ಬಗೆಯ ಗೂಡುಗಳು

ಸಮಾಧಿ ಭವನ ಹಾಗೂ ಮಸೀದಿಯ ಸುತ್ತಲೂ ನಿರ್ಮಿಸಲಾದ ಕೋಟೆಗೋಡೆಯ ಒಳಭಾಗದಲ್ಲಿಯೂ ಕಂಡುಬರುತ್ತದೆ.

ಸಮಾಧಿಭವನದ ಕೋಟೆ (ಪ್ರಾಕಾರ) ಗೋಡೆ : ಸಮಾಧಿ ಭವನದ ಸುತ್ತಲೂ ೧.೮೦ ಮೀ ಎತ್ತರದ ಕೋಟೆ ಗೋಡೆಯ ಮೇಲ ೫೦ ಸೆಂ.ಮೀ. ಎತ್ತರದ ಅರಳಿ ಎಲೆಯಾಕಾರದ ಕಿಲಾ ನಿರ್ಮಿತಿಯಿದ್ದು, ಒಟ್ಟು ೨.೩೦ ಮೀ. ಎತ್ತರದ ಕೋಟೆ ಗೋಡೆಯಿದಾಗಿರುತ್ತದೆ. ಸುಟ್ಟ ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ಇದನ್ನು ಕಟ್ಟಲಾಗಿದೆ. ಪೂರ್ವ–ಪಶ್ಚಿಮದಲ್ಲಿ ಸುಮಾರು ೬೦ ಮೀ. ದಕ್ಷಿಣೋತ್ತರವಾಗಿ ಸುಮಾರು ೭೫ ಮೀ. ಉದ್ದವಿರುವ ಈ ಕೋಟೆಯ ಗೋಡೆಯು ೬೫ ಸೆಂ.ಮೀ. ಅಗಲ (ದಪ್ಪ) ವಿರುತ್ತದೆ. ಪ್ರಸ್ತುತ ಪೂರ್ವ, ಪಶ್ಚಿಮ, ಉತ್ತರ ದಿಕ್ಕಿನ ಕೋಟೆ ಗೋಡೆಗಳು ಹಾಗೂ ಪೂರ್ವದ ಪ್ರವೇಶದ್ವಾರವು ಮಾತ್ರ ಮೂಲಸ್ಥಿತಿಯಲ್ಲಿ ಉಳಿದುಕೊಂಡಿದೆ. ಪೂರ್ವ ಪ್ರವೇಶದ್ವಾರದ ಒಳಭಾಗಕ್ಕೆ ಮುಂಚಾಚು ಇದ್ದು, ಅದು ಎರಡು ಕಲ್ಲುಕಂಬಗಳ ಮೇಲೆ ನಿಂತಿದೆ. ಬೆಂಗಳೂರು–ಕೋಲಾರ ರಾಷ್ಟ್ರೀಯ ಹೆದ್ದಾರಿಯ ಅಗಲೀಕರಣದಿಂದಾಗಿ ದಕ್ಷಿಣದ ಕೋಟೆಗೋಡೆ ಹಾಳಾಗಿದ್ದು, ಪಶ್ಚಿಮ ದಿಕ್ಕಿನ ಗೋಡೆ ಭಾಗಶಃ ಉಳಿದುಕೊಂಡಿರುತ್ತದೆ. ಸಮಾಧಿ ಭವನದಲ್ಲಿರುವಂತೆ ಕೋಟೆ (ಪ್ರಾಕಾರ) ಗೋಡೆಯ ಒಳಭಾಗದಲ್ಲಿಯೂ ಎರಡು ಸಾಲುಗಳಲ್ಲಿ ತ್ರಿಕೋನಾಕಾರದ ದೀಪದ ಗೂಡುಗಳಿರುತ್ತವೆ. ಕೆಳಗಿನ ಸಾಲಿನಲ್ಲಿರುವ ಎರಡು ಗೂಡುಗಳ ಮಧ್ಯದಲ್ಲಿ ಬರುವಂತೆ ಮೇಲಿನ ಸಾಲಿನ ಗೂಡುಗಳು ರಚಿಸಲ್ಪಟ್ಟಿವೆ. ಪೂರ್ವ ದಿಕ್ಕಿನ ಕೋಟೆ (ಪ್ರಕಾರ) ಗೋಡೆಯ ಒಳಭಾಗದ ಮೇಲಿನ ಸಾಲಿನಲ್ಲಿ ೧೯, ಕೆಳಗಿನ ಸಾಲಿನಲ್ಲಿ ೨೦ ದೀಪದ ಗೂಡುಗಳಿವೆ. ಪಶ್ಚಿಮದಲ್ಲಿ ಮೇಲಿನ ಸಾಲು ೧೩, ಕೆಳಗಿನ ಸಾಲು ೧೦ ಹಾಗೂ ಉತ್ತರದ ಕೋಟೆಗೋಡೆಯ ಮೇಲಿನ ಸಾಲಿನಲ್ಲಿ ೧೨, ಕೆಳಗಿನ ಸಾಲಿನಲ್ಲಿ ೧೧ ಗೂಡುಗಳು ಮಾತ್ರ ಉಳಿದಿವೆ, ಶಿಥಿಲವಾದ ಗೋಡೆ ದುರಸ್ತಿ ಮಾಡುವಾಗ ದೀಪದ ಗೂಡುಗಳನ್ನು ಮುಚ್ಚಿ ಹಾಕಲಾಗಿದೆ. ದಕ್ಷಿಣದ ಪ್ರಾಕಾರಗೋಡೆಯು ಬೆಂಗಳೂರು–ಕೋಲಾರ ಹೆದ್ದಾರಿ ಅಗಲೀಕರಣದಿಂದಾಗಿ ಸಂಪೂರ್ಣ ಹಾಳಾಗಿದೆ. ಪೂರ್ವ, ಪಶ್ಚಿಮ ಹಾಗೂ ಉತ್ತರ ದಿಕ್ಕಿನ ಕೋಟೆ (ಪ್ರಾಕಾರ) ಗೋಡೆಗಳೆಲ್ಲವೂ ಸೇರಿ ಒಟ್ಟು ೮೫ ದೀಪದ ಗೂಡುಗಳನ್ನು ಈಗ ನೋಡಬಹುದಾಗಿದೆ. ವಿಶೇಷ ಸಂದರ್ಭಗಳಲ್ಲಿ ಸಮಾಧಿಭವನ ಹಾಗೂ ಕೋಟೆ (ಪ್ರಾಕಾರ) ಗೋಡೆಯ ಗೂಡುಗಳಲ್ಲಿ ದೀಪ ಬೆಳಗಿಸಿದ ಹಣತೆಗಳನ್ನು ಇಟ್ಟು ದೀಪೋತ್ಸವದಂತಹ ವಾತಾವರಣ ನಿರ್ಮಾಣ ಮಾಡುತ್ತಿದ್ದಿರಬಹುದೆಂದು ತಿಳಿದುಬರುತ್ತದೆ. ಕೋಟೆ ಆವರಣದೊಳಗೆ ಸಮಾಧಿ ಭವನದ ಪೂರ್ವಕ್ಕೆ ೨೧, ಪಶ್ಚಿಮಕ್ಕೆ ೧೫ ಹಾಗೂ ದಕ್ಷಿಣದಲ್ಲಿ ೦೩ ಸಮಾಧಿಗಳಿದ್ದು, ಒಟ್ಟು ೩೯ ಸಮಾಧಿಗಳು ಫತೇ ಮಹಮ್ಮದನ ಹತ್ತಿರದ ಸಂಬಂಧಿಗಳಿಗೆ ಸಂಬಂಧಿಸಿದ್ದಾಗಿರುತ್ತವೆ.

ಭವನದ ಪುಷ್ಕರಿಣಿ ಬಾವಿ : ಸಮಾಧಿಭವನ ಹಾಗೂ ಪ್ರಾರ್ಥನಾ ಮಂದಿರ (ಮಸೀದಿ) ದ ಉತ್ತರ ದಿಕ್ಕಿಗೆ ಈಗಿನ ಬಯಲು ಸ್ಥಳದಲ್ಲಿ ಸುಮಾರು ೧೫ ಮೀ. X೧೫ ಮೀ ಗಾತ್ರದ ಬಾವಡಿ (ಬಾವಿ) ಇತ್ತೆಂದೂ, ನೀರಿನ ಮೂಲ ಬತ್ತಿ ಹೋಗಿದ್ದರಿಂದಾಗಿ ಅದನ್ನು ೨೫ ವರ್ಷಗಳ ಹಿಂದೆ ಮಣ್ಣು ತುಂಬಿ ಮುಚ್ಚಲಾಗಿದೆ ಎಂಬ ಅಂಶವನ್ನು ಹಿರಿಯರು ತಿಳಿಸಿದರು. ಸಮಾಧಿ ಭವನದ ವಸ್ತು ಸಂಗ್ರಹಾಲಯದಲ್ಲಿರುವ 'Pond in Darga, Kolar' ಎಂದು ಬರೆದು ಹಾಕಿರುವ ಭಾವಚಿತ್ರವು ಪುಷ್ಕರಿಣಿ ಬಾವಿಯ ಚಿತ್ರಣವನ್ನು ಕಟ್ಟಿಕೊಡುತ್ತದೆ. ನಾಲ್ಕೂ ನಿಟ್ಟಿನಲ್ಲಿ ಒಟ್ಟು ಏಳು ಸ್ತರಗಳಲ್ಲಿ ನಿರ್ಮಿತವಾದ ಪುಷ್ಕರಿಣಿ ಬಾವಿಯ ಮೇಲ್ಭಾಗವು ಅಗಲವಾಗಿದ್ದು, ಕೆಳಕ್ಕೆ ಹೋದಂತೆ ಉದ್ದಗಲಗಳು ಕಡಿಮೆಯಾಗುತ್ತವೆ. ಮೊದಲನೆಯ ಸ್ತರದಲ್ಲಿ ಏಳು ಮೆಟ್ಟಿಲುಗಳು, ಎರಡನೆಯ ಸ್ತರದಲ್ಲಿ ಎಂಟು, ಮೂರನೆಯ ಸ್ತರದಲ್ಲಿ ಏಳು, ನಾಲ್ಕನೆಯ ಸ್ತರದಲ್ಲಿ ಏಳು, ಐದನೆಯ ಸ್ತರದಲ್ಲಿ ಎಂಟು, ಆರನೆಯ ಸ್ತರದಲ್ಲಿ ಏಳು ಹಾಗೂ ಏಳನೆಯ ಸ್ತರದಲ್ಲಿ ಏಳು ಮೆಟ್ಟಿಲುಗಳಿರುತ್ತವೆ. ಹೀಗೆ ಒಟ್ಟು ೫೧ ಮೆಟ್ಟಿಲುಗಳನ್ನು ಇಳಿದ ಮೇಲೆ ಅಂದರೆ ಸುಮಾರು ೧೧ ಮೀಟರ್ ಆಳದಲ್ಲಿ ಬಾವಿಯ ಕಟ್ಟೆಯಿದೆ. ಕಟ್ಟೆಯ ಮೇಲೆ ಖಾಲಿ ಕೊಡಗಳನ್ನು ಇಟ್ಟು ನೀರು ತುಂಬಿಕೊಂಡು ಹೋಗುವುದಕ್ಕಾಗಿ ಸುಮಾರು ೨೦ ಜನರು ಕಾಯುತ್ತಿದ್ದಾರೆ. ಬಹುಶಃ ಬಾವಿಯಲ್ಲಿ ಒಬ್ಬರು ಮಾತ್ರ ಇಳಿದು ನೀರು ತುಂಬಿಕೊಂಡು ಬರುವಷ್ಟು ಸ್ಥಳಾವಕಾಶವಿದ್ದಿರಬೇಕು. ಪಂಚೆ, ಅಂಗಿ, ಕೋಟು ಮತ್ತು ತಲೆಯ ಮೇಲೆ ರುಮಾಲು (ಪೇಟ) ಧರಿಸಿದ ಹಿರಿಯ ವ್ಯಕ್ತಿಯೊಬ್ಬ ನೀರಿಗಾಗಿ ಕಾಯುತ್ತಿರುವ ಜನರನ್ನು ವೀಕ್ಷಿಸುತ್ತ ನಾಲ್ಕನೆಯ ಸ್ತರದ ಮೆಟ್ಟಿಲುಗಳ ಮೇಲೆ ನಿಂತಿದ್ದಾನೆ. ಪ್ರತಿಯೊಂದು ಸ್ತರದ ಮೇಲ್ಭಾಗದಲ್ಲಿ ಸುಮಾರು ಒಂದು ಅಥವಾ ಒಂದೂವರೆ ಮೀಟರ್‌ನಷ್ಟು ಅಗಲವಾದ ಸ್ಥಳಾವಕಾಶವನ್ನು ಬಿಡಲಾಗಿದೆ. ಮಹಮ್ಮದನು ಕೋಟ ರಾಮಗುಳ್ಳದಲ್ಲಿ ನಿರ್ಮಿಸಿದ್ದ ಕೆರೆಯನ್ನು ಜನರು ಈಲಗೂ 'ಫತೇ ನಾಯಕನ ಕೆರೆ' ಎಂದು ಕರೆಯುತ್ತಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕಾಗುತ್ತದೆ.

ಭವನದ ಪಾತ್ರೆಗಳು, ಫಾರ್ಸಿ ಭಾಷೆಯ ಅಪ್ರಕಟಿತ ಬರೆಹಗಳು : ಸಮಾಧಿಭವನದ ದಕ್ಷಿಣಕ್ಕೆ ಪೂರ್ವಾಭಿಮುಖವಾಗಿರುವ ಒಂದು ಕೊಠಡಿಯಲ್ಲಿ ಅನ್ನದಾಸೋಹಕ್ಕಾಗಿ ಬಳಸಲಾಗುತ್ತಿದ್ದ ಪಾತ್ರೆ–ಪಗಡ, ಜಾಗಟೆ, ಲೋಹದ ಹಣತೆ ಹಾಗೂ ತಾಳಗಳನ್ನು ಜೋಡಿಸಿ ಇಡಲಾಗಿದೆ.

i) ಅಗಲಬಾಯಿಯ ಎರಡು ಚೆಂಬು (ಭರಿಗೆ) ಗಳ ಮೇಲೆ ಫಾರ್ಸಿ ಭಾಷೆಯ ಒಂದು ಸಾಲಿನ ಬರೆಹ–'ಪ್ರೊಕ್ರ ಜುಮ ರಾಜಾಸಾಹೇಬ ಬಹಾದ್ದೂರ

ಹಾಸಿಲ್‌ಕರೋ ಮೀರ್ ಮಹಮ್ಮೂದ ಆಲಿಜಾನ್ ಬಹಾದ್ದೂರ

ಸಲಾತೀನ್ ಮಕ್ಬರಾ ಫತೇ ಬಹದ್ದೂರ ಶಹೀದ್ ತಯಾರ್ ಕನಂದ ಸಾಲ್ ಬಹಾ ೧೨೪೬

ಗೌರವಾನ್ವಿತ ರಾಜಾಸಾಹೇಬ ಬಹದ್ದೂರ ಅವರು, ಹುತಾತ್ಮರಾದ ಫತೇ ಬಹದ್ದೂರ ಅವರ ಸಮಾಧಿಭವನದ ಉಪಯೋಗಕ್ಕಾಗಿ ಮೀರ್ ಮಹಮ್ಮೂದ ಆಲಿಜಾನ್ ಬಹದ್ದೂರ್ ಅವರು ಸ್ವೀಕರಿಸಲೆಂದು–ಕ್ರಿ.ಶ. ೧೮೩೬.

ii) ೬೪ ಸೆಂ.ಮೀ. ಎತ್ತರ, ೨.೮೨ ಮೀಟರ್ ಸುತ್ತಳತೆಯುಳ್ಳ ಹಂಡೆಯು ೪೭ ಸೆಂ.ಮೀ. ವ್ಯಾಸದ ಕಂಠವನ್ನು ಹೊಂದಿದೆ. ಈ ಕಂಠದ ಮೇಲೆ ಇರುವ ಫಾರ್ಸಿ ಭಾಷೆಯ ಬರೆಹ–

'ಪ್ರೊಕ್ರ ಹುಜುರ್ ರಾಜಾಸಾಹೇಬ ಬಹಾದ್ದೂರ

ಹಾಸಿಲ್‌ಕರೋ ಮೀರ್ ಮಹಮ್ಮೂದ ಓ ಅಲಿಜಾನ್ ಬಹಾದ್ದೂರ

ಏಕ ತತಿಸ್ ಪಂಜಿಂ ಮಕ್ಬರಾ ಫತೇ ಬಹದ್ದೂರ ಶಹೀದ್

ತಯಾರ್ ಕುನಂದ ದರಸಾಲ್ ಕರಾ ೧೨೪೬'

ಗೌರವಾನ್ವಿತ ಹುಜುರ್ ರಾಜಾಸಾಹೇಬ ಬಹಾದ್ದೂರರು, ಹುತಾತ್ಮರಾದ ಫತೇ ಬಹದ್ದೂರ ಅವರ ಸಮಾಧಿಸ್ಥಳದಲ್ಲಿ ಮುಕ್ಕಾಲು ಮಣ ಆಹಾರ ಬೇಯಿಸುವುದಕ್ಕೋಸ್ಕರ ಹಂಡೆಯನ್ನು ಮೀರ್ ಮಹಮ್ಮೂದ ಓ ಅಲಿಜಾನ್ ಬಹಾದ್ದೂರ ಅವರಿಗೆ ಕೊಟ್ಟದ್ದು–ಕ್ರಿ.ಶ. ೧೮೩೬.

iii) ೫೬ ಸೆಂ.ಮೀ. ಎತ್ತರ, ೩.೩೪ ಮೀ. ಸುತ್ತಳತೆ ಹಾಗೂ ೭೮ ಸೆಂ.ಮೀ. ವ್ಯಾಸವುಳ್ಳ ದೊಡ್ಡ ಹಂಡೆಯ ಕಂಠದ ಮೇಲೆ ಎರಡು ಸಾಲುಗಳಲ್ಲಿರುವ ಫಾರ್ಸಿ ಭಾಷೆಯ ಬರೆಹ–

೧. 'ಪ್ರೊಕ್ರ ಹುಜುರ್ ರಾಜಾಸಾಹೇಬ ಬಹಾದ್ದೂರ ಹಾಸಿಲ್‌ಕರೋ ಮೀರ್ ಮಹಮ್ಮೂದ ಓ ಅಲಿಜಾನ್ ಬಹಾದ್ದೂರ

೨. ಏಕ್ನ ಮನ್ ಓ ಸೈರಾನಾ ನಾಕೊಜ ಮಕ್ಬರಾ ಫತೇ ಬಹದ್ದೂರ ಶಹೀದ್ ತಯಾಋ ಕುನಂದ ದರಸಾಲ್ ಕರಾ ೧೨೪೬'

ಹುತಾತ್ಮರಾದ ಫತೇ ಬಹದ್ದೂರ ಅವರ ಸಮಾಧಿ ಸ್ಥಳದಲ್ಲಿ ಅನ್ನದಾಸೋಹಕ್ಕಾಗಿ ಒಂದು ಮಣ (೪೦ ಸೇರು) ಆಹಾರ ಕುದಿಯುವ ಈ ಹಂಡೆಯನ್ನು ಗೌರವಾನ್ವಿತ ಹುಜುರ್ ರಾಜಾಸಾಹೇಬ ಬಹಾದ್ದೂರರು ಮೀರ್ ಮಹಮ್ಮೂದ್ ಓ ಅಲಿಜಾನ್ ಬಹಾದ್ದೂರ ಅವರಿಗೆ ಕ್ರಿ.ಶ. ೧೮೩೬ರಲ್ಲಿ ಕೊಟ್ಟದ್ದು.

iv) ಹಂಡೆಯಿಂದ ಬೇರ್ಪಟ್ಟ ೬೦ ಸೆಂ.ಮೀ. ವ್ಯಾಸವುಳ್ಳ ಕಂಠದ ಮೇಲೆ ಉರ್ದು ಮತ್ತು ಫಾರ್ಸಿ ಭಾಷೆಯ ಬರೆಹ.

'ಪರ್ ರವಾನಿಗಿ ಹುಜುರ್ ರಾಜಾಸಾಹೇಬ ಬಹಾದ್ದೂರ

ಹಾಸಿಲ್‌ಕರೋ ಮೀರ್ ಮಹಮ್ಮೂದ ಅಲಿಖಾನ್ ಬಹಾದ್ದೂರ

ಚಾರಹ ಮನ್ ಓ ಮಕ್ಬರಾ ಫತೇ ಬಹಾದ್ದೂರ ಶಹೀದ್

ತಯಾರ್ ಕುನಿಂದ ಸಾಲ್ ಕರಾ ೧೨೪೧'

ಗೌರವಾನ್ವಿತ ಹುಜುರ್ ರಾಜಾಸಾಹೇಬ ಬಹದ್ದೂರ ಅವರು, ಹುತಾತ್ಮರಾದ ಫತೇ ಬಹದ್ದೂರ ಅವರ ಸಮಾಧಿ ಭವನದಲ್ಲಿ ನಾಲ್ಕು ಮಣ ಆಹಾರ ಬೇಯಿಸುವುದಕ್ಕಾಗಿ ಹಂಡೆಯನ್ನು ಮೀರ್ ಮಹಮ್ಮೂದ ಅಲಿಖಾನ್ ಬಹದ್ದೂರ ಅವರಿಗೆ ಕೊಟ್ಟದ್ದು–ಕ್ರಿ.ಶ. ೧೮೩೧.

v) ಹಂಡೆಯಿಂದ ಬೇರ್ಪಟ್ಟ ೪೯ ಸೆಂ.ಮೀ. ವ್ಯಾಸವುಳ್ಳ ಕಂಠದ ಮೇಲೆ ಉರ್ದು ಮತ್ತು ಫಾರ್ಸಿ ಭಾಷೆಯ ಬರೆಹ.

'ಪರ್ ರವಾನಿಗಿ, ರಾಜಾಸಾಹೇಬ ಬಹಾದ್ದೂರ

ಹಾಸಿಲ್‌ಕರೋ ಮೀರ್ ಮಹಮ್ಮೂದ ಅಲಿಖಾನ್ ಬಹದ್ದೂರ್...

...ಮಕ್ಬರಾ ಫತೇ ಬಹದ್ದೂರ ಶಹೀದ್ ತಯಾರ ಕುನಿಂದ'

ಅರ್ಥ: ಇದರ ಸಾರಾಂಶವೂ ಈ ಮೇಲಿನಂತೆಯೇ ಇದ್ದು 'ತಯಾರ ಕುನಿಂದ' ಎಂಬ ಶಬ್ದಗಳು ಮಾತ್ರ ಫಾರ್ಸಿಯಲ್ಲಿದ್ದು, ಉಳಿದ ಬರೆಹ ಉರ್ದುವಿನಲ್ಲಿದೆ.

vi) ಹಂಡೆಯಿಂದ ಬೇರ್ಪಟ್ಟ ೫೫ ಸೆಂ.ಮೀ. ವ್ಯಾಸವುಳ್ಳ ಕಂಠದ ಮೇಲೆ ಉದು ಬರೆಹ–'ಇನ್ ದೇಖ್ ಇಲಾಖಾ ಮಕ್ಬರಾ ಕೋಲಾರ ೧೮೯೦'

ಈ ಹಂಡೆಯನ್ನು ಕೋಲಾರ ಭಾಗದ ಮಕ್ಬರಾಗೆ ಕ್ರಿ.ಶ. ೧೮೯೦ರಲ್ಲಿ ಕೊಟ್ಟದ್ದು.

ಸಾಮಾನ್ಯವಾಗಿ ಹಿಜ್ರಿಶಕೆಗೆ ೫೯೦ನ್ನು ಕೂಡುವುದರಿಂದ ಕ್ರಿಸ್ತಶಕ ವರ್ಷವನ್ನು ಪಡೆಯುತ್ತೇವೆ. ಹಿಜ್ರಿಶಕೆ ೧೨೪೧ (ಕ್ರಿ.ಶ. ೧೮೩೧) ರಲ್ಲಿ ನಾಲ್ಕು ಮಣ ಆಹಾರ ಬೇಯಿಸುವ ಹಂಡೆ ಒಂದು, ಹಿಜ್ರಿಶಕೆ ೧೨೪೬ (ಕ್ರಿ.ಶ. ೧೮೩೬) ರಲ್ಲಿ ಮುಕ್ಕಾಲು ಮಣದ ಒಂದು ಒಂದು ಮಣ ಆಹಾರ ಬೇಯುವ ಒಂದು ಹಾಗೂ ತೇದಿರಹಿತ ಪರಿಮಾಣ ಉಲ್ಲೇಖಿಸುವ ಹಂಡೆ ಒಂದು–ಹೀಗೆ ಒಟ್ಟು ನಾಲ್ಕು ಹಂಡೆಗಳನ್ನು ಹಾಗೂ ಎರಡು ಚೆಂಬುಗಳನ್ನು ರಾಜಾಸಾಹೇಬ ಬಹದ್ದೂರ ಅವರು ಸಮಾಧಿ ಭವನದ ಉಪಯೋಗಕ್ಕಾಗಿ ಮೀರ ಮಹಮ್ಮೂದ ಅಲಿಖಾನ್ ಬಹದ್ದೂರ ಅವರಿಗೆ ಕೊಟ್ಟಿರುತ್ತಾರೆ.

ಬಿ.ಎಲ್. ರೈಸ್ ಅವರ 'ಎಪಿಗ್ರಾಫಿಯಾ ಕರ್ನಾಟಿಕಾ ಸಂ. ೧೦', ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮೈಸೂರು ಅವರಿಂದ ಪ್ರಕಟವಾದ 'ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಅಲ್ಲದೆ ಹಂಪಿ ಕನ್ನಡ ವಿ.ವಿ.ಯು ಹೊರತಂದ 'ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು' ಎಂಬ ಸಂಪುಟಗಳಲ್ಲಿ ಸಮಾಧಿಭವನದ ಪಾತ್ರೆಗಳ ಮೇಲಿರುವ ಫಾರ್ಸಿ ಭಾಷೆಯ ಈ ಬರೆಹಗಳು ಪ್ರಕಟವಾಗಿರುವುದಿಲ್ಲ.

ನವಿಲಿನ ರೇಖಾಚಿತ್ರವುಳ್ಳ ಹಿತ್ತಾಳೆಯ ಚೆಂಬು, ಬರೆಹರಹಿತ ಮಧ್ಯಮ ಗಾತ್ರದ ಎರಡು ಅಡುಗೆ ಪಾತ್ರೆಗಳು, ಬರೆಹರಹಿತ ಚಿಕ್ಕ ಪಾತ್ರೆ ಹಾಗೂ ಅಗಲ ಬಾಯಿಯ ವೃತ್ತಾಕಾರದ ಎರಡು ಹಿಡಿಕೆಗಳಿರುವ ಹಿತ್ತಾಳೆಯ ಪಾತ್ರೆ ಸಮಾಧಿ ಭವನದಲ್ಲಿ ಭಜನೆ/ಸಂಗೀತ ಸೇವೆಗೆ ಬಳಸುತ್ತಿದ್ದ ಅಂಚಿನಲ್ಲಿ ಎರಡು ರಂಧ್ರಗಳಿರುವ ವೃತ್ತಾಕಾರದ ಜಾಗಟೆ, ಒಂದು ಜೊತೆ ತಾಳ ಹಾಗೂ ಚತುರ್ದೀಪಗಳ ಲೋಹದ ಹಣತೆಗಳಿವೆ. ಹಣತೆಗೆ ೧೫ ಸೆಂ.ಮೀ. ಎತ್ತರದ ಕಟ್ಟಿಗೆಯ ನಿಲುಗಡೆ, ಅದರ ಮೇಲೆ ೧೩ ಸೆಂ.ಮೀ. ಎತ್ತರದ ಲೋಹದಿಂದಲೇ ಮಾಡಲಾದ ಕಾಂಡಭಾಗ ಇರುತ್ತದೆ.

ನಗಾರಾಮನೆ/ನೌಬತ್‌ಖಾನಾ: ಮಕ್ಬರಾದಿಂದ ದಕ್ಷಿಣ ದಿಕ್ಕಿನಲ್ಲಿ ನಗಾರಾಮನೆ ಇತ್ತು. ಈ ಮನೆಯಲ್ಲಿ ನಗಾರಿ, ಶಹನಾಯಿ, ಜಾಗಟೆ, ತಾಳ–ಮುಂತಾದ ಮಂಗಳವಾದ್ಯಗಳನ್ನು ಪ್ರತಿನಿತ್ಯ ಬೆಳಿಗ್ಗೆ ೫.೩೦ ರಿಂದ ಅರ್ಧ ಗಂಟೆ ಹಾಗೂ ಸಾಯಂಕಾಲ ೫.೩೦ರಿಂದ ಅರ್ಧ ಗಂಟೆ ಕಾಲ ನುಡಿಸಲಾಗುತ್ತಿತ್ತು. ನೌಬತ್‌ಖಾನಾ ವಾದ್ಯವೃಂದದಲ್ಲಿ ಐದು ಜನ ಮುಸ್ಲಿಂ ಹಾಗೂ ನಾಲ್ಕು ಜನ ಹಿಂದೂಗಳು ಭಾಗವಹಿಸಿದ್ದರು. ಮುಖವೀಣೆ ನುಡಿಸುತ್ತಿದ್ದ ಕಠಾರಿಪಾಳ್ಯ ನಾಗಪ್ಪನವರಿಗೆ ಪ್ರತಿ ವರ್ಷ ಟಿಪ್ಪುಸುಲ್ತಾನರ ದರ್ಬಾರಿನಿಂದ ಎರಡು ಜೊತೆ ಬಿಳಿಸಮವಸ್ತ್ರ ವಿತರಿಸಲ್ಪಡುತ್ತಿತ್ತು. ಮಹಮ್ಮದೀಯ ಭಕ್ತರು ಒಂದು ಜೊತೆ ಚಿನ್ನದ ಮುರುವು (ಕಿವಿಯೋಲೆ) ಮಾಡಿಸಿಕೊಟ್ಟಿದ್ದರು. ಉರುಸು ಸಂದರ್ಭದಲ್ಲಿ ಅಕ್ಕಿ, ಬೇಳೆ, ಸಕ್ಕರೆ, ಮೆಣಸಿನ ಕಾಳನ್ನು ಮಕ್ಬರಾದ ಭಕ್ತರು ನಾಗಪ್ಪನವರ ಮನೆಗೆ ಕಳುಹಿಸುತ್ತಿದ್ದರೆಂದು ತಿಳಿದುಬರುತ್ತದೆ. ದಿನಾಂಕ ೧೦.೦೭.೧೯೬೫ ರಂದು ನಾಗಪ್ಪನವರು ದಿವಂಗತರಾದಾಗ ಸೈದಾನಿಬೀಬಿ ದರ್ಗಾದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದ ಮಹಮ್ಮದೀಯ ಭಕ್ತರ ಸಾಮರಸ್ಯ ಭಾವವನ್ನು ನಿವೃತ್ತ ಸರ್ವೆ ಸೂಪರ್‌ವೈಸರ್ ಎನ್. ವೆಂಕಟರಮಣಪ್ಪನವರು ಸ್ಮರಿಸಿಕೊಳ್ಳುತ್ತಾರೆ.

ದಿನಸಿ ವಹಿ: ಇಂದಿಗೆ ೯೨ ವರ್ಷಗಳ ಹಿಂದೆ ದಾಸೋಹಕ್ಕಾಗಿ ಬಳಸಲಾದ ಆಹಾರಧಾನ್ಯಗಳ ಲೆಕ್ಕದ ವಹಿಯನ್ನು ಭವನದ ಕಚೇರಿಯಲ್ಲಿ ಕಾರ್ಯದರ್ಶಿಯವರು ಸುರಕ್ಷಿತವಾಗಿ ಇಟ್ಟುಕೊಂಡಿದ್ದಾರೆ.

ಪುರಾತತ್ವ ಇಲಾಖೆಯಿಂದ ಹಾಕಿರುವ ಮಾಹಿತಿ ಫಲಕಗಳಲ್ಲಿ ದಾಖಲಿಸಿದಂತೆ, ಭವನವು ಬರೀ 'ಹೈದರಾಲಿ ತಂದೆಯ ಸಮಾಧಿ'ಯಷ್ಟೇ ಅಲ್ಲ. ಹೈದರಾಲಿಯ ಮಲತಾಯಿ ಸೈದಾನಿಬೀಬಿ, ಸೈದಾನಿಬೀಬಿಯ ಮಗ ಮಹಮ್ಮದ ಅಲಿಖಾನ್ ಸಾಹೇಬ, ಸೈದಾನಿಬೀಬಿಯ ಎರಡನೆಯ ಮಗ ಮಹಮ್ಮದ ವಲಿಖಾನ್ ಸಾಹೇಬ್, ಹೈದರಾಲಿಯ ಅಜ್ಜಿ ಶಕೀನಾಬಿ, ಅಜ್ಜ ಮಹಮ್ಮದ್ ಅಲಿಖಾನ್ ಸಾಹೇಬ್, ಹೈದರಾಲಿಯ ಎರಡನೆಯ ಮಲತಾಯಿ ಚಾಂದ್‌ಬೀಬಿ ಸಾಹೀಬಾ, ಮಲಸಹೋದರ, ಚಾಂದ್‌ಬೀಬಿಯ ಮಗ ಮಹಮ್ಮದ್ ಅಲಿಖಾನ್, ಹೈದರಾಲಿಯ ಸಹೋದರ ಶಾಬಾಜ್ ಅಲಿಖಾನ್, ಹೈದರಾಲಿಯ ತಾಯಿ ರಜಿಯಾಬೇಗಂ ಸಾಹೀಬಾ ; ಚಾಂದ್‌ಬೀಬಿಯ ಎರಡನೆಯ ಮಗ ಮಹಮ್ಮದ್ ಬೆಹಲೂಲ್ ಖಾನ್ ಹಾಗೂ ಹೈದರಾಲಿಯ ಮೂರನೆಯ ಮಲತಾಯಿ ಖುಲ್ಸುಮ್‌ಬೀಬಿ ಸಾಹೀಬಾ–ಇವರೆಲ್ಲರೂ ಭವನದ ಸಮಾಧಿಸ್ಥರಾಗಿದ್ದಾರೆ. ಉತ್ತರದ ಪ್ರವೇಶದ್ವಾರದಿಂದ ಭವನದೊಳಗೆ ಹೋದರೆ ಮೊದಲನೆಯ ಸಾಲಿನಲ್ಲಿ ಏಳು, ಎರಡನೆಯ ಸಾಲಿನಲ್ಲಿ ನಾಲ್ಕು ಹಾಗೂ ವಾಯವ್ಯ ಮೂಲೆಯಲ್ಲಿ ಒಂದು; ಹೀಗೆ ಒಟ್ಟು ೧೨ ಸಮಾಧಿಗಳು ದಕ್ಷಿಣೋತ್ತರವಾಗಿ ಚಾಚಿರುತ್ತವೆ. ಸಮಾಧಿಗಳ ಮೇಲೆ ಹಸಿರು, ಕೇಶರಿ, ಹಳದಿ ಮತ್ತು ಕಪ್ಪು ಬಣ್ಣಗಳ ನುಣುಪಾದ ಹೊಳಪುಳ್ಳ ಮಕಮಲ್ ಬಟ್ಟೆಗಳನ್ನು ಹೊದಿಸಲಾಗಿದೆ. ಪ್ರತಿ ಸಮಾಧಿ ಕಟ್ಟೆಯ ಮುಂದೆ ಕಬ್ಬಿಣದ ನಿಲುಗಡೆಯುಳ್ಳ ನಾಮಫಲಕವನ್ನು ಪ್ರದರ್ಶಿಸಲಾಗಿದೆ.

ನವಾಬ ಫತೇಅಲಿಖಾನ್: ಸಮಾಧಿ ಭವನದ ನಿರ್ಮಾತೃ, ಮಹಮ್ಮದ ಅಲಿಖಾನ್ ಸಾಹೇಬರ ನಾಲ್ಕನೆಯ ಮತ್ತು ಕಿರಿಯ ಮಗನೇ ಫತೇ ಅಲಿಖಾನ್ ಆಗಿರುತ್ತಾರೆ. ಹೈದರಾಲಿಯ ತಂದೆಯಾದ ಇವರನ್ನು ಫತೇಮಹಮ್ಮದ್, ಫತೇ

ಮಹಮ್ಮದ್ ಖಾನ್, ಫತ್ತೆ ನಾಯಕ, ಫತೆಅಲಿ, ಫತ್ತೇಸಾಬ, ಫತ್ತಾಹುಲ್ಲಾಸಾಬ, ನವಾಬು ಪತ್ತಾಲಿಖಾನ್ ಸಾಹೇಬು ಬಹದರ, ನಾದಿಮ್‌ಸಾಹೇಬ್, ಸೈಯದ್ ವಾಲ್‌ಷರೀಫ್ ಫತೇಮಹಮ್ಮದ್ ಅಲಿಖಾನ್ ಕೋಲಾರಿ–ಎಂಬೆಲ್ಲ ಅಂಕಿತನಾಮಗಳಿರುವುದು ತಿಳಿದುಬರುತ್ತದೆ. ಶಿರಾ ಇವನ ಜನ್ಮಸ್ಥಳ. 'ಫತಹ' ಅಂದರೆ ಜಯ ಅಥವಾ ಗೆಲುವು ಎಂಬರ್ಥವಿದೆ. ಕಾಸಿಮ್‌ಖಾನನ ಸೇನಾಪತಿಯಾಗಿದ್ದವನು ಅಲಿಖುಲಿಖಾನ್, ಇವನ ಮಗನಾಗಿದ್ದ ದರ್ಗಾಖುಲಿಖನ್ (೧೭೧೫) ಶಿರಾದ ಸುಬೇದಾರನಾಗಿದ್ದನು. ಫತೇಮಹಮ್ಮದನು ದರ್ಗಾಖುಲಿಖಾನನ ಗಮನ ಸೆಳೆಯುವಲ್ಲಿ ಯಶಸ್ವಿಯಾದನು. ಅಂದರೆ ಇವನು ಶಿರಾ ಸುಬೇದಾರನ ಸೇವೆಯಲ್ಲಿದ್ದಾಗ, ಗಂಜೀಕೋಟೆಗೆ ಮುತ್ತಿಗೆ ಹಾಕಿದ್ದ ಸಂದರ್ಭದಲ್ಲಿ, ಶಿರಾದವನು ಸೋತು ಹೋಗುವ ಹಂತ ತಲುಪಿದ್ದರೆಂದೂ, ಆಗ ಧೈರ್ಯದಿಂದ ಕೋಟೆಯ ಬುರುಜಿನ ಮೇಲೇರಿ, ಶಿರಾದ ಧ್ವಜ ಹಾರಿಸಿ, ಸೋಲನ್ನು ಗೆಲುವಾಗಿ ಮಾರ್ಪಡಿಸಿದ್ದರಿಂದ 'ಫತೇ ಮಹಮ್ಮದ್' ಎಂಬ ನಾಮಾಂಕಿತ ಬಂದಿತೆಂದು ಹೇಳಲಾಗುತ್ತದೆ. ಈ ಪರಾಕ್ರಮಕ್ಕೆ ಉಡುಗೊರೆಯಾಗಿ 'ಬೂದಿಕೋಟೆ'ಯು ಫತೇ ಮಹಮ್ಮದನಿಗೆ ಜಹಗೀರಾಗಿ ಬಂತು. ಫತೇಮಹಮ್ಮದನು ತನ್ನ ಪರಾಕ್ರಮವನ್ನು ಮೆರೆದ ಸ್ಥಳವಾದ ಗಂಜಿಕೋಟೆಯು ದೊಡ್ಡಬಳ್ಳಾಪುರದ ಹತ್ತಿರವಿದೆಯೆಂದು ಮಾರ್ಕ್ ವಿಲ್ಕ್ಸ್‌ರು ದಾಖಲಿಸಿದ್ದಾರೆ.

ಮಾರ್ಕ್ ವಿಲ್ಕ್ಸ್‌ರು ಸೂಚಿಸಿದ ದೊಡ್ಡಬಳ್ಳಾಪುರದ ಹತ್ತಿರವಿರುವ ಗಂಜೀಕೋಟೆಯು ಈಗ ಬೇಚರಾಕ್ ಆಗಿರಬಹುದೇ? ಪ್ರಶ್ನೆಯಾಗಿ ಉಳಿದುಬಿಡುತ್ತದೆ. ಇನ್ನು ಪ್ರಸ್ತುತ ಆಂಧ್ರ ಪ್ರದೇಶದ ಕಡಪ ಜಿಲ್ಲೆಯಲ್ಲಿ ಬೆಂಗಳೂರಿನಿಂದ ಈಶಾನ್ಯ ದಿಕ್ಕಿಗೆ 'ಗಂಡೀಕೋಟೆ' ಇದೆ. ಹೈದರಾಲಿಯ ಗೆದ್ದ ಪ್ರದೇಶಗಳಲ್ಲಿ (ಗಂಜೀಕೋಟ, ಶಿಂತಕುಂಟ, ದುವೂರು, ಜಮಲಮಡು) ಇದೂ ಒಂದಾಗಿತ್ತು. ಗಂಡೀಕೋಟೆಯನ್ನು ಮಾರ್ಕ್ ವಿಲ್ಕ್ಸ್‌ರು 'ಗಂಜೀಕೋಟೆ' ಎಂಬುದಾಗಿ ಬರೆದಿರಬೇಕು. 'ಗಂಡೀ' 'ಗಂಜೀ' ಆಗುವ ಸಾಧ್ಯತೆಗಳು ಹೆಚ್ಚು. ಆದ್ದರಿಂದ ಕಡಪ ಜಿಲ್ಲೆಯ ಪೆನ್ನೇರು ನದಿ ಬಲದಂಡೆಯ ಮೇಲಿರುವ ಇಂದಿನ ಗಂಡೀಕೋಟವೇ ಗಂಜೀಕೋಟೆ ಎನ್ನಬೇಕಾಗುತ್ತದೆ.

ಕ್ರಿ.ಶ. ೧೩೦೧ರ ಬೆಂಗಳೂರು ೯೬ನೆಯ ತಾಮ್ರಶಾಸನದಲ್ಲಿ ಉಕ್ತವಾದ 'ಬೂದಿಕಟ್ಟೆ'ಯೇ ಬೂದಿಕೋಟೆಯಾಗಿರಬಹುದು. ಕ್ರಿ.ಶ. ೧೮೧೧ ರಿಂದ ೧೮೩೧ ರವರೆಗೆ ಮೈಸೂರು ದೊರೆಗಳವರ ಖುದ್ದು ದೌಲತ್ತು ಸಂದರ್ಭದಲ್ಲಿ ಬೆಂಗಳೂರು ತುಕಡಿಗೊಳಪಟ್ಟ ೨೮ ತಾಲ್ಲೂಕುಗಳಲ್ಲಿ ಬೂದಿಕೋಟೆಯೂ ಒಂದಾಗಿತ್ತು. ಪ್ರಸ್ತುತ ಬಂಗಾರಪೇಟೆ ತಾಲ್ಲೂಕಿನ ಬೂದಿಕೋಟೆಯನ್ನು ಹೊರತುಪಡಿಸಿ, ನಮ್ಮ ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಬೂದಿಕೋಟೆ ಎಂಬ ಸ್ಥಳನಾಮಗಳು ಕಂಡುಬರುವುದಿಲ್ಲವಾದರೂ, 'ಬೂದಿ' ಪೂರ್ವಪದದೊಂದಿಗೆ ಹಾಳು, ಹಳ್ಳಿ, ಕೊಪ್ಪ, ಊರು, ಗಾವಿ, ಗುಡ್ಡ, ಬೆಟ್ಟ, ಕೆರೆ, ತಿಟ್ಟು, ಕುಪ್ಪೆ, ಬಳ್ಳಿ ಎಂಬ ಉತ್ತರಪದಗಳು ಸೇರಿ ಸುಮಾರು ೬೦ ಸ್ಥಳನಾಮಗಳಿರುವುದನ್ನು ಕಾಣುತ್ತೇವೆ. ಬೂದಿಕೋಟೆ ಗ್ರಾಮದ ಕೋಟೆಯೊಳಗೆ ಒಂದು ನಿಗದಿತ ಸ್ಥಳದಲ್ಲಿ ಫತೇಮಹಮ್ಮದನ ಮಗ ಹೈದರಾಲಿ ಜನಿಸಿದನೆಂದು ಹೇಳಲಾಗುತ್ತದೆ. ರಾಜ್ಯ ಪುರಾತತ್ವ ಇಲಾಖೆಯಿಂದ ನೆಡಲಾದ ಶಿಲಾಫಲಕದಲ್ಲಿ 'NEAR THIS SPOT, WAS BORN NAWAB HAIDER ALI KHAN-1720-1782' ಎಂಬ ಮಾಹಿತಿಯನ್ನು ಬರೆದು ಇಲ್ಲಿ ಹಾಕಲಾಗಿದೆ. ಆದರೆ ಬರಹಗಾರ ಕಿರ್ಮಾನಿಯವರು– ಹೈದರಾಲಿ ಕ್ರಿ.ಶ. ೧೭೨೧ ರಲ್ಲಿ ದೊಡ್ಡಬಳ್ಳಾಪುರದಲ್ಲಿ ಜನಿಸಿದನು ಎಂದಿರುವುದು ಗಮನಾರ್ಹವೆನಿಸುತ್ತದೆ.

ಹೈದರಾಲಿ ಜನ್ಮಸ್ಥಳವೆಂದು ಗುರುತಿಸಲಾದ ಆಯತಾಕಾರದ ನಿವೇಶನದಲ್ಲಿ ಪೂರ್ವ–ಪಶ್ಚಿಮ ೨೪ ಮೀ. ದಕ್ಷಿಣೋತ್ತರ ೧೩.೫ ಮೀ ಉದ್ದದ ಅಡಿಪಾಯಗ ಗೋಡೆಗಳು ಇರುತ್ತವೆ. ಈ ನಾಲ್ಕೂ ಗೋಡೆಗಳು ೮೫ ಸೆಂ.ಮೀ. ದಪ್ಪವನ್ನು ಹೊಂದಿವೆ. ೬೦ ಸೆಂ.ಮೀ. ದಪ್ಪನೆಯ ಎರಡು ಅಡ್ಡಗೋಡೆ ಗಳಿಂದ ಇಡೀ ನಿವೇಶನವನ್ನು ಎರಡು ಭಾಗಗಳನ್ನಾಗಿ ಪ್ರತ್ಯೇಕಿಸಲಾಗಿದೆ. ನಿವೇಶನದ ವಾಯವ್ಯ ಮೂಲೆಯಲ್ಲಿ ನೆಲದಲ್ಲಿ ಹೂತು ಹೋಗಿರುವ ಇಟ್ಟಿಗೆಗಳು ೧೩ ಸೆಂ.ಮೀ. ಅಗಲ, ೦೪ ಸೆಂ.ಮೀ. ದಪ್ಪವಾಗಿರುತ್ತವೆ. ನೆಲವನ್ನು ಗಾರಗಂಟಿ ಕಲ್ಲು ಮತ್ತು ಗಾರೆಯಿಂದ ಸಮತಟ್ಟು ಮಾಡಲಾಗಿದೆ. ಫತೇ ಮಹಮ್ಮದನ ವಾಸದ ನೆಲೆಯಾಗಿದ್ದರಿಂದ ಈ ಜಾಗದಲ್ಲಿ ಕೆಂಪು ಮತ್ತು ಕಪ್ಪು ಬಣ್ಣದ ಸುಟ್ಟ ಮಡಕೆ ಚೂರುಗಳು ಕಾಣಸಿಗುತ್ತವೆ.

ಶಿ.ತಾ. ಶರ್ಮರ ಚಾರಿತ್ರಿಕ ದಾಖಲೆಗಳಲ್ಲೊಂದಾದ 'ಹೈದರ್‌ನಾಮಾ' ಕೃತಿಯಲ್ಲಿ 'ದೇವನ ಶೀರ್ಯದ (ಈಗಿನ ಶಿರಾ ತಾಲ್ಲೂಕು ಕೇಂದ್ರ) ನವಾಬ ದಿಲ್‌ದಿಲೇರುಖಾನರು ಕರಶಿದ್ದರಿಂದ ಫತ್ತಾಹುಲ್ಲಾಸಾಬರು ಶೀರ್ಯಕ್ಕೆ ಬಂದು ನೌಕರೀ ನಿಂತು ಕುದುರೆ ೫೦೦, ಪ್ಯಾದೆ ೬೫೦ ಸಹಾ ಭರ್ತಿ.

ಇದೇ 'ಹೈದರನಾಮಾ'.ದಲ್ಲಿ 'ಚಿತ್ರಗಲ್ಲ ಪಾಳೇಗಾರರು ಶೀರ್ಯದವರ ಮೇಲೆ ಲಡಾಯಿಗೆ ಬಂದಲ್ಲಿ ಗುಮ್ಮನಹಳ್ಳಿ ಬಳಿಯ ಫತ್ತೇಸಾಬರು ಆನೆ–ಅಂಬಾರಿ ಮ್ಯಾಲೆ ಕುಳಿತು ಆನೆ ಕಾಲಿಗೆ ಅಂದೂ ಜಡಾಯಿಸಿ ನಿಂತು ಬಹಳ ಲಡಾಯಿ

ಮಾಡಿ ಯುದ್ಧದಲ್ಲಿ ಮೃತವಾದರು. ಫತ್ತೇಸಾಬರ ಮೇಲೆ ಶೀರ್ಯದ ಸರಕಾರದ ಕಡಾ ೩೦೦೦ ವರಹ, ವರ್ತಕರ ಕಡಾ ೬೦೦೦ ವರಹ ಸಹಾ ಯಿದ್ದದ್ದಕ್ಕೆ, ಶೀರ್ಯದ ನವಾಬರು ವರಾತಾ ಮಾಡಿದ ಕಾರಣ, ಹೆಂಗಸರು ಮಕ್ಕಳು ವೋಲುಯಿಟ್ಟು ಫತ್ತೇಸಾಬರ ಹಿರೇಮಗ ಮಹಮ್ಮದ ಶಾಬಾಸಾಹೇಬರು, ಕಿರೀಮಗ ಹೈದರಾಲಿಖಾನರು ದೊಡ್ಡಬಳ್ಳಾಪುರಕ್ಕೆ ತಮ್ಮ ಚಿಕ್ಕಪ್ಪ ಅಲ್ಲೀಸಾಬರ ಬಳಿಗೆ ಬಂದು ಈ ವರ್ತಮಾನವೆಲ್ಲ ಹೇಳಿದರು' ಎಂದು ದಾಖಲಾಗಿದೆ. ಅಂದರೆ ಫತ್ತೇಸಾಬರ ಸಮಕಾಲೀನನಾಗಿದ್ದ ಹಾಗೂ ಬರಮಣ್ಣನಾಯಕನ ಮಗನಾದ ಚಿತ್ರಗಲ್ಲ (ಈಗಿನ ಚಿತ್ರದುರ್ಗ ಜಿಲ್ಲಾ ಕೇಂದ್ರ) ಪಾಳೇಗಾರ ಹಿರೇ ಮದಕೇರಿನಾಯಕ (ಕ್ರಿ.ಶ. ೧೭೨೧–೧೭೪೮)ನೇ ಗುಮ್ಮನಹಳ್ಳಿಗೆ ಬಂದು ಲಡಾಯಿ ಮಾಡಿರಬೇಕು. ಈ ಯುದ್ಧದಲ್ಲೇ ಫತ್ತೇಸಾಬ ಮೃತನಾಗುತ್ತಾನೆ. ಆದರೆ ಕೋಲಾರ ಜಿಲ್ಲಾ ಗ್ಯಾಸೆಟಿಯರ್‌ನ ಪರಿಷ್ಕೃತ ಆವೃತ್ತಿ (೨೦೦೫) ಯಲ್ಲಿ 'ಕ್ರಿ.ಶ.ಸು. ೧೭೨೯ರಲ್ಲಿ ಫತೇಮಹಮ್ಮದ್ ಮತ್ತವನ ಮೊದಲ ಹೆಂಡತಿಯ ಹಿರಿಯ ಮಗ ಇಬ್ಬರೂ ಚಿತ್ತೂರಿನ ವಿರುದ್ಧದ ಕದನದಲ್ಲಿ ಸಾವನ್ನಪ್ಪಿದರು. ಅವರಿಬ್ಬರ ದೇಹವನ್ನು ತಂದು ಕೋಲಾರದಲ್ಲಿ ಸಂಸ್ಕಾರ ಮಾಡಿ ಸಮಾಧಿಯನ್ನು ನಿರ್ಮಿಸಲಾಯಿತು'–ಎಂಬ ಮಾಹಿತಿಯಿದೆ. ಫತೇಮಹಮ್ಮದನು ಗುಮ್ಮನಹಳ್ಳಿ ಅಥವಾ ಚಿತ್ತೂರಿ(ಆಂಧ್ರ ಪ್ರದೇಶ)ನಲ್ಲಿ ಮೃತನಾಗಿರುವ ಬಗ್ಗೆ ಭಿನ್ನಾಭಿಪ್ರಾಯಗಳಿವೆಯಾದರೂ, ಸಮಾಧಿ ಮಾಡಿದ್ದು ಮಾತ್ರ ಕೋಲಾರದ ಸಮಾಧಿ ಭವನದಲ್ಲಿ ಎಂಬುದು ಸ್ಪಷ್ಟ. ಹೀಗೆ ಫತೇ ಮಹ್ಮದನು ಸೇನಾಪತಿಯಾಗಿ ಶಿರಾ, ಬೂದಿಕೋಟೆ, ಕೋಟರಾಮಗುಳ್ಳ, ಗುಮ್ಮನಹಳ್ಳಿ, ಮಲಯಾಳ, ಶಿರ್ಶಿ, ಮೈಸೂರು ಹಾಗೂ ಕೋಲಾರದಲ್ಲಿದ್ದನೆಂಬುದಕ್ಕೆ ಅಸಂಖ್ಯಾತ ಸಾಕ್ಷ್ಯಾಧಾರಗಳು ಲಭ್ಯವಿರುತ್ತವೆ.

ಭವನದ ಗೋಡೆಯಲ್ಲಿ ದೀಪದ ಗೂಡುಗಳು: ದೀಪದ ಗೂಡು (ಮಾಡ) ಎಂಬುದು ಎಣ್ಣೆ–ಬತ್ತಿಗಳಿಂದ ಅಥವಾ ಇತರ ವಿಧಾನಗಳಿಂದ ಬೆಳಕನ್ನುಂಟು ಮಾಡುವ ಹಣತೆಯನ್ನಿಡಲು ಗೋಡೆಯಲ್ಲಿ ಕೊರೆದು ಮಾಡಿದ ಜಾಗವಾಗಿದೆ. ಈ ಬಗೆಯ ಒಂಭತ್ತು ಗೂಡುಗಳು ಭವನದ ಪೂರ್ವದ ಗೋಡೆಯಲ್ಲಿ, ೧೩ ಗೂಡುಗಳು ಪಶ್ಚಿಮದ ಗೋಡೆಯಲ್ಲಿಯೂ; ಅದರಂತೆ ದಕ್ಷಿಣದ ಗೋಡೆಯಲ್ಲಿ ೧೬ ಹಾಗೂ ಉತ್ತರದ ಗೋಡೆಯಲ್ಲಿ ಐದು ಗೂಡುಗಳಿರುತ್ತವೆ. ಹೀಗೆ ಒಟ್ಟು ೪೩ ಗೂಡುಗಳು ಕೋಲಾರದ ಹೈದರಾಲಿ ಪೂರ್ವಿಕರ ಸಮಾಧಿಭವನದ ನಾಲ್ಕೂ ನಿಟ್ಟಿನ ಒಳಗೋಡೆಗಳಲ್ಲಿವೆ.

ಹೈದರಾಲಿಯ ತಾತ ಮಹಮ್ಮದ ಅಲಿ, ಅಜ್ಜಿ ಶಕೀನಾಬಿಯವರು ಕಲಬುರ್ಗಿಯಿಂದ ಕೋಲಾರಕ್ಕೆ ಬಂದವರು; ಅವರು ಸೂಫಿ ಸಂತರ ಪ್ರಭಾವಕ್ಕೊಳಗಾಗಿರುವಂತೆ ಕಾಣುತ್ತದೆ. ಫತೇ ಮಹಮ್ಮದ–ಸೈದಾನಿಬೀಬಿಯವರೂ ತಮ್ಮ ಮನೆತನದ ಮೇಲಾದ ಸೂಫಿ ಸಂತ ಸಂಪ್ರದಾಯವನ್ನು ಮುಂದುವರೆಸಿದರೆಂಬುದಕ್ಕೆ ಕೋಲಾರದ ಸಮಾಧಿ ಭವನದಲ್ಲಿ ಸಂರಕ್ಷಿಸಿಟ್ಟಿರುವ ಅನ್ನ ದಾಸೋಹಕ್ಕಾಗಿ ಬಳಸಿದ್ದ ಅಪ್ರಕಟಿತ ಬರೆಹಗಳನ್ನು ಹೊಂದಿದ ಬೃಹತ್ ಗಾತ್ರದ ಅಡುಗೆ ಪಾತ್ರೆಗಳು, ಜಾಗಟೆ, ತಾಳ ಮತ್ತು ದೀಪದ ಕಂಬಗಳು ಆಧಾರ ಒದಗಿಸುತ್ತವೆ.

[ಸಮಾಧಿ ಭವನದ ವಿಷಯ ಸೂಚಿಸಿ, ಸಂಬಂಧಿಸಿದ ಬೇರೆ ಬೇರೆ ಸ್ಥಳಗಳ ಕ್ಷೇತ್ರ ಕಾರ್ಯದಲ್ಲಿ ನೆರವಾದ ಹಲಸೂರು ಜೌಗುಪಾಳ್ಯದ ಬಿ. ತಾಯಪ್ಪನವರು, ಪಾರ್ಸಿ ಭಾಷೆಯ ಬರೆಹಗಳನ್ನು ಓದಿ ಸಹಕರಿಸಿದ ಶಿಕ್ಷಕ ಸೈಯದ್ ಶಹಾಬುದ್ದೀನ್, ಮಹಮ್ಮದ ಹನೀಫ್; ದರ್ಗಾದ ಕಾರ್ಯದರ್ಶಿ ತಾಸಿರ್ ಪಾಷ, ನಗರಸಭಾ ಸದಸ್ಯರಾದ ಸಾದಿಕ್ ಪಾಷ ಹಾಗೂ ದರ್ಗಾದ ಎಲ್ಲ ಭಕ್ತವೃಂದದವರಿಗೆ ಅಭಿನಂದನೆಗಳು]

ಆಧಾರ ಗ್ರಂಥಗಳು

೧. ಕೋಲಾರ ಜಿಲ್ಲೆ ಗ್ಯಾಸೆಟಿಯರ್, (ಪರಿಷ್ಕೃತ ಆವೃತ್ತಿ) (ಸಂ) ಹೆಚ್. ಚಿತ್ತರಂಜನ್, ಕರ್ನಾಟಕ ರಾಜ್ಯ ಸರ್ಕಾರದ ಪ್ರಕಟಣೆ–೨೦೦೫, ಪುಟ ೮೬೧.

೨. ಕರ್ನಾಟಕ ಚರಿತ್ರೆ (ಕ್ರಿ.ಶ. ೧೭೬೦–೧೮೦೦) ಸಂ. ೫, (ಸಂ) ಪ್ರೊ. ಬಿ. ಷೇಕ್‌ಅಲಿ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೧೯೯೭, ಪುಟ ೨೪.

೩. ಕೆ.ಆರ್. ನರಸಿಂಹನ್, 'ಕುವಳಾಲ–ಕೋಲಾರ ಜಿಲ್ಲೆಯ ಚಾರಿತ್ರಿಕ ಚಿತ್ರಗಳು', ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೋಲಾರ, ೨೦೧೦, ಪುಟ ೧೦೦.

೪. ಕರ್ನಾಟಕದ ಕೈಫಿಯತ್ತುಗಳು (ಹೈದರನ ಕೈಫಿಯತ್ತು–೨) (ಸಂ) ಡಾ. ಎಂ. ಕಲಬುರ್ಗಿ, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ, ೧೯೯೪, ಪುಟ ೨೦೭.

೫. Mackenzie Manuscripts, Summaries of the Historical Manuscripts in the Mackenzie collection, Vol-II, Edited by: T.V. Mahalingam, University of Madras, 1976, Page-427.

೬. Mark Wilks, History of Mysore-Vol-1, Asian Educational Services, New Delhi, 1989, Page 263.

೭. ಡಾ. ಎಸ್. ವೆಂಕಟೇಶ್., ದೊಡ್ಡಬಳ್ಳಾಪುರ–ಚಾರಿತ್ರಿಕ ಅಧ್ಯಯನ, ದೃಶ್ಯ ಪ್ರಕಾಶನ, ದೊಡ್ಡಬಳ್ಳಾಪುರ ೨೦೧೬, ಪುಟ ೨೪೭.

೮. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿವಿ, ೧೯೭೯, ಪುಟ ೪೧೭.

೯. ಡಾ.ಎನ್. ನಂದೀಶ್ವರ, ಸಿರಾ ತಾಲ್ಲುಕು ದರ್ಶನ, ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ಸಿರಾ, ೨೦೦೮, ಪುಟ ೨೪೧.

೬೭

ಪಾರಂಪರಿಕ ನಗರಗಳು ಮತ್ತು ಪರಂಪರಾವಲಯ: ಅವಶ್ಯಕತೆ ಮತ್ತು ಸಾಧ್ಯತೆ (ಬೆಳಗಾವಿ ನಗರವನ್ನು ಅನುಲಕ್ಷಿಸಿ)

ಡಾ. ಸ್ಮಿತಾ ಸುರೇಬಾನಕರ*

ಪಾರಂಪರಿಕ ಜೀವಂತಿಕೆಯನ್ನು ಪ್ರತಿಬಿಂಬಿಸುವ ಅನೇಕ ನಗರ/ಪಟ್ಟಣ/ಪ್ರದೇಶಗಳು ನಮಗೆ ಸಹಸ್ರಾರು ವರ್ಷಗಳ ಐತಿಹಾಸಿಕ ಸಂಸ್ಕೃತಿಯನ್ನು ಹೊಂದಿದ ಕರ್ನಾಟಕದಲ್ಲಿ ಕಾಣಸಿಗುತ್ತವೆ. ಕರ್ನಾಟಕದ ಮೈಸೂರು, ಬೆಂಗಳೂರು, ಬೀದರ್, ಗುಲಬರ್ಗ, ವಿಜಯಪುರ, ಶ್ರವಣಬೆಳಗೊಳ, ಶ್ರೀರಂಗಪಟ್ಟಣ, ಬನವಾಸಿ, ಹಲಸಿ ಇವೇ ಮುಂತಾದವುಗಳು ನೂರಾರು ವರ್ಷಗಳ ಇತಿಹಾಸವನ್ನು ತನ್ನ ಉದರದಲ್ಲಿ ಹುದುಗಿಸಿಕೊಂಡು ಐತಿಹಾಸಿಕ ಪರಂಪರೆಯನ್ನು ಕಂಡುಂಡ ಪ್ರದೇಶಗಳು, ಇದರ ಪ್ರತೀಕವಾಗಿ ಇವತ್ತಿಗೂ ಈ ನಗರಗಳ ಬೀದಿಗಳು, ಓಣಿಗಳು, ಗುಡಿ–ಗೋಪುರಗಳು, ಕೋಟೆ–ಕೊತ್ತಲಗಳು, ಪಾರಂಪರಿಕ ಮನೆಗಳು, ಕಮಾನುಗಳು, ಪ್ರವೇಶದ್ವಾರಗಳು, ಪ್ರಾಚೀನ ಬಾವಿಗಳು, ಭವ್ಯ ಸೌಧಗಳು ಮತ್ತು ಇಮಾರತುಗಳು; ಈ ನಗರಗಳ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿ ಪ್ರಾಚೀನ ಇತಿಹಾಸವನ್ನು ಸಾರಿ ಹೇಳುತ್ತವೆ. ಈ ಪಾರಂಪರಿಕ ನಗರಗಳು ಅನೇಕ ಐತಿಹಾಸಿಕ ಆಗು–ಹೋಗುಗಳಿಗೆ ಮೂಕ ಸಾಕ್ಷಿಯಾಗಿ, ಲಿಖಿತ ಐತಿಹಾಸಿಕ ದಾಖಲೆಗಳಾಗಿ ಈ ಕಾಲದ ಇತಿಹಾಸ, ಸಂಸ್ಕೃತಿ, ಸಮಾಜ ಮತ್ತು ಧರ್ಮಗಳ ಕುರಿತಾದ ಮಾಹಿತಿಗಳನ್ನು ಸಾರಿ ಹೇಳುವ ಆಕರಗಳಾಗಿವೆ. ಆದರೆ ನಗರೀಕರಣ, ವಾಣಿಜ್ಯೀಕರಣ, ಜೀವನ ಶೈಲಿಯ ಬದಲಾವಣೆ ಮತ್ತು ಪಾರಂಪರಿಕ ನಗರಗಳ ಸಂರಕ್ಷಣಾ ಕಾರ್ಯ್ಯಗಳ ಕೊರತೆಯಿಂದಾಗಿ ಪಾರಂಪರಿಕ ನಗರಗಳು ತೀವ್ರಗತಿಯಲ್ಲಿ ನಾಶವಾಗುತ್ತಿರುವುದು ಶೋಚನೀಯ.

ಪಾರಂಪರಿಕ ಬೆಳಗಾವಿ ನಗರವನ್ನು ಅಧ್ಯಯನದ ಕೇಂದ್ರ ಬಿಂದುವಾಗಿಟ್ಟುಕೊಂಡು, ಈ ತರಹದ ನಗರಗಳ ಪಾರಂಪರಿಕತೆಯನ್ನು ಉಳಿಸಿ ಬೆಳೆಸುವ ಸಾಧ್ಯಾಸಾಧ್ಯತೆಯನ್ನು ಚರ್ಚಿಸುವುದು ಪ್ರಸ್ತುತ ಪ್ರಬಂಧದ ಉದ್ದೇಶ. ಪಾರಂಪರಿಕ ನಗರಗಳಲ್ಲಿರುವ ಸ್ಮಾರಕಗಳನ್ನಷ್ಟೇ ಅಲ್ಲದೆ ಇಡೀ ನಗರವನ್ನು ಪಾರಂಪರಿಕ ನೆಲೆಯಾಗಿ ಸಂರಕ್ಷಿಸುವ ಅವಶ್ಯಕತೆಯನ್ನು ಅರಿಯಬೇಕಾಗಿದೆ. ಪ್ರತಿ ಐತಿಹಾಸಿಕ ನಗರಗಳಲ್ಲಿಯ ಐತಿಹಾಸಿಕ ಮಹತ್ವತೆಯನ್ನು ಅರಿತು, ಪರಂಪರಾ ವಲಯಗಳನ್ನು ಗುರುತಿಸಿ, ಸೃಷ್ಟಿಸುವುದು ಮತ್ತು ಅವುಗಳನ್ನು ಪ್ರವಾಸಿ ಆಕರ್ಷಣೀಯ ಕೇಂದ್ರಗಳನ್ನಾಗಿ ಬಿಂಬಿಸುವ ನಿಟ್ಟಿನಲ್ಲಿ ಬರಬಹುದಾದ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಯೋಚಿಸಬೇಕಾದ ಅವಶ್ಯಕತೆಯಿದೆ.

ಉದ್ದಿಶ್ಯ

* ಪಾರಂಪರಿಕ ನಗರಗಳಾಗಿ ಪರಂಪರೆಯನ್ನು ಜೀವಂತವಾಗಿ ಬಿಂಬಿಸುವ ಪ್ರತ್ಯೇಕ ಪರಂಪರಾ ವಲಯಗಳನ್ನು (Heritage Zone) ಸೃಷ್ಟಿಸಿ, ಅವುಗಳನ್ನು ಪ್ರವಾಸಿ ಆಕರ್ಷಣೀಯ ತಾಣಗಳಾಗಿ ಉಳಿಸಿ ಬೆಳೆಸುವುದು.

* ಈ ನಿಟ್ಟಿನಲ್ಲಿ ಪಾರಂಪರಿಕ ನಗರಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿಯುವುದು.

* ಭಾರತೀಯ ಪರಂಪರೆಯ ಮಿಶ್ರಿತ (hybrid) ಮತ್ತು 'ಬಹುಮುಖೀಯ' (multidimensional) ಪರಂಪರೆಯನ್ನು ಪ್ರದರ್ಶಿಸುವ ನಿಟ್ಟಿನಲ್ಲಿ ಅನುಸರಿಸಬಹುದಾದ ಕ್ರಮ (methodology).

ಪ್ರಾಚೀನ ನಗರಗಳು ಎದುರಿಸುವ ಸಮಸ್ಯೆಗಳು

ಆಧುನಿಕ ಯುಗದಲ್ಲಿ ಪಾರಂಪರಿಕ ನಗರಗಳು ಅನೇಕ ಸಮಸ್ಯೆಗಳ ಸರಮಾಲೆಯನ್ನು ಎದುರಿಸುತ್ತಿವೆ. ಈ ಕಾರಣದಿಂದಾಗಿ ಅವುಗಳು ಪತನ ಹೊಂದುತ್ತಿದ್ದು ತಮ್ಮ ಮೂಲ ಸ್ವರೂಪವನ್ನು ಕಾಪಾಡಿಕೊಂಡು ತಮ್ಮ ಇರುವಿಕೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಹೆಣಗಾಡುತ್ತಿವೆ. ಈ ದಿಕ್ಕಿನಲ್ಲಿ ಕೆಳಕಂಡ ಕೆಲ ಸಮಸ್ಯೆಗಳನ್ನು ಗುರುತಿಸಬಹುದು.

* ಪ್ರಾಂಶುಪಾಲರು, ರಾಣಿ ಪಾರ್ವತಿದೇವಿ ಮಹಾವಿದ್ಯಾಲಯ, ಬೆಳಗಾವಿ.

೧. ತೀವ್ರಗತಿಯಲ್ಲಿ ಆಗುತ್ತಿರುವ ಬದಲಾವಣೆ, ಬೆಳವಣಿಗೆ ಮತ್ತು ವಾಣೀಜ್ಯೀಕರಣ, ಇದರಿಂದ ಪ್ರಾಚೀನ ಮನೆಗಳು, ವಾಡೆಗಳು, ಹವೇಲಿಗಳನ್ನು ನೆಲಸಮಗೊಳಿಸಿ ಅಲ್ಲಿ ವಾಣಿಜ್ಯ ಮಳಿಗೆಗಳು, ಬಹುಅಂತಸ್ತಿನ ಕಟ್ಟಡಗಳು, ತಲೆ ಎತ್ತಿ ನಿಂತಿವೆ. ಇದರಿಂದಾಗಿ ಪಾರಂಪರಿಕ ಓಣಿಗಳು, ಕಿರುರಸ್ತೆಗಳು ಕಣ್ಮರೆಯಾಗುತ್ತಿವೆ.

೨. ಪ್ರಾಚೀನ ನಗರಗಳು ಜನದಟ್ಟಣೆ ಮತ್ತು ನಾಲ್ಕು ಚಕ್ರೀಯ ವಾಹನಗಳ ಓಡಾಟಕ್ಕೆ ಪ್ರತಿಕೂಲವಿದ್ದು, ಅವು ಪಾದಚಾರಿಗಳಿಗಾಗಿ ವಿನ್ಯಾಸಗೊಂಡಿವೆ. ಈ ನಗರಗಳ ಕಿರಿದಾದ ಓಣಿಗಳು ಮತ್ತು ಕಿರುರಸ್ತೆಗಳು ಪಾದಚಾರಿಗಳಿಗೆ ಸಾಕಷ್ಟು ನೆರಳು ಕೊಡುವುದರ ಮೂಲಕ ಅನುಕೂಲಕರವಾಗಿವೆ. (ರಸ್ತೆಯ ಇಕ್ಕೆಲಗಳಲ್ಲಿ ಮರಗಳಿರುವುದರಿಂದ) ಆದರೆ ದೊಡ್ಡ ವಾಹನಗಳ ತಿರುಗಾಟದಿಂದಾಗಿ ವಾಹನಸಾಂದ್ರತೆಗೆ ಕಾರಣೀಭೂತವಾಗಿ ಅರಾಜಕತೆಗೆ ಕಾರಣವಾಗುತ್ತವೆ. ಇದು ಅಲ್ಲಿಯ ನಿವಾಸಿಗಳಿಗೂ ಸಮಸ್ಯೆಯನ್ನು ಸೃಷ್ಟಿಸುತ್ತದೆ.

೩. ಕಾಲಗತಿಗೆ ಸಿಲುಕಿ ಅನೇಕ ಪಾರಂಪರಿಕ ಕಟ್ಟಡಗಳು ಭಗ್ನಾವಸ್ಥೆಯಲ್ಲಿವೆ. ಸ್ಥಳೀಯ/ಪ್ರಾದೇಶಿಕ ವಾಸ್ತುಶಿಲ್ಪ ವೈವಿಧ್ಯದ ಸೊಗಡನ್ನು ಹೊಂದಿದ ಅನೇಕ ಭವ್ಯ ಸೌಧಗಳು, ಹವೇಲಿಗಳು, ಪಾರಂಪಾರಿಕ ಉದಾಸೀನತೆ ಮತ್ತು ನಿರ್ವಹಣಾ ಸಮಸ್ಯೆಗಳಿಂದಾಗಿ ಭಗ್ನಾವಸ್ಥೆಯನ್ನು ಹೊಂದಿ ಪತನದ ಹಂತದಲ್ಲಿವೆ.

೪. ವಾಹನಗಳ ದಟ್ಟಣೆ ಮತ್ತು ಜನಸಾಂದ್ರತೆಯನ್ನು ಸಮಸ್ಯೆಯ ಪರಿಹಾರಾರ್ಥವಾಗಿ ರಸ್ತೆ ಅಗಲೀಕರಣದ ಕೆಲಸ ನಗರಗಳಲ್ಲಿ ಇಂದು ಭರದಿಂದ ಸಾಗುತ್ತಿದೆ. ಇವು ಪ್ರಾಚೀನ ಓಣಿಗಳು ಮತ್ತು ಕಟ್ಟಡಗಳ ಮುಂಚಾಚಿನ ಮೂಲ ಸ್ವರೂಪ ಮತ್ತು ಅಸ್ತಿತ್ವಕ್ಕೆ ಧಕ್ಕೆ ತಂದಿವೆ ಮತ್ತು ಅವುಗಳನ್ನು ನೆಲಸಮಗೊಳಿಸಲಾಗುತ್ತಿದೆ.

ಭಾರತದಲ್ಲಿ ಸಂರಕ್ಷಣೆ ಎನ್ನುವುದು ಬರೀ ಸ್ಮಾರಕಗಳಿಗೆ ಮಾತ್ರ ಸೀಮಿತವಾಗಿದೆ. ಈ ದೃಷ್ಟಿಕೋನದಲ್ಲಿ ಬದಲಾವಣೆಯ ಅವಶ್ಯಕತೆ ಇದ್ದು, ಅದು ಪರಂಪರಾ ಪ್ರದೇಶ/ಪರಿಸರವನ್ನು ಒಳಗೊಳ್ಳಬೇಕಾಗಿದೆ. ಅದು ಆಯಾ ಪರಿಸರದ ನಿವಾಸಿಗಳ ಸಾಮೂಹಿಕ ಸಂಪತ್ತಾಗಿದೆ.

ಬೆಳಗಾವಿಯ ಹಿನ್ನೆಲೆ

ಕರ್ನಾಟಕದ ಎರಡನೆಯ ರಾಜಧಾನಿ ಎನಿಸಿದ ಬೆಳಗಾವಿ, ರಾಜ್ಯದ ವಾಯುವ್ಯ ದಿಕ್ಕಿನಲ್ಲಿದ್ದು, ಗೋವಾ ಮತ್ತು ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿದೆ. ವೇಣುಗ್ರಾಮ, ಇಕ್ಷುಗ್ರಾಮ, ಬೆಳಗುಗ್ರಾಮ, ಮುಝುಫರ ನಗರ, ಅಝುಂ ನಗರ ಮುಂತಾದ ವಿವಿಧ ಹೆಸರಿನಿಂದ ಶಾಸನೋಲ್ಲೇಖಿತವಾದ ಬೆಳಗಾವಿ, ಕರ್ನಾಟಕದ ಸಾಂಸ್ಕೃತಿಕ ನಕ್ಷೆಯಲ್ಲಿ ಹೆಸರು ನೋಂದಾಯಿಸಿದೆ. ಎರಡು ಸಹಸ್ರಮಾನಗಳ ಆಗುಹೋಗುಗಳನ್ನು ಮೈಗೂಡಿಸಿಕೊಂಡ ನಿರಂತರವಾದ ಉಜ್ವಲ ಭವ್ಯ ಐತಿಹಾಸಿಕ ಸಾಂಸ್ಕೃತಿಕ ಪರಂಪರೆಯ ಬೀಡು, ಬೆಳಗಾವಿ.

ಪಾರಂಪರಿಕ ಬೆಳಗಾವಿ

೧. ಬೆಳಗಾವಿ ನಗರದಲ್ಲಿ ನೈಸರ್ಗಿಕ ಮತ್ತು ನಿರ್ಮಿತ ಪರಂಪರೆ ಹಾಸುಹೊಕ್ಕಾಗಿದೆ. ಧೀರತೆ, ಶೌರ್ಯ, ಸಾಹಸಗಳ ಪ್ರತೀಕ ಮತ್ತು ಸರ್ವಧರ್ಮ ಸಮನ್ವಯತೆಯ ಸಂಕೇತವೆನಿಸಿದ ಬೆಳಗಾವಿ ಕೋಟೆ ಪರಿಸರ ಬೆಳಗಾವಿಯ ಹೆಮ್ಮೆಯ ಪಾರಂಪರಿಕ ನೆಲೆ. ವಿವಿಧ ರಾಜಮನೆತನಗಳ ಆಳ್ವಿಕೆಯಲ್ಲಿ ಏರಿಳಿತವನ್ನು ಕಂಡುಂಡು ಆದಿಲಶಾಹಿಗಳ ಆಳ್ವಿಕೆಯಲ್ಲಿ ಸಾಕಾರತೆಯನ್ನು ಹೊಂದಿದ ಕೋಟೆ ರಕ್ಷಣಾ ವಾಸ್ತುಶಿಲ್ಪದ ಉತ್ತಮ ಉದಾಹರಣೆ ಎನಿಸಿದ ನಗರವನ್ನು ಆವರಿಸಿದ ಕೋಟೆ (citadel). ಕದಂಬ ನಾಗರ ಶಿಖರ ಮತ್ತು ಕಲ್ಯಾಣ ಚಾಲುಕ್ಯ ಶೈಲಿಯ ಕಮಲ ಬಸದಿ, ಈಶ್ವರ ದೇವಾಲಯ, ಭಗ್ನಾವಸ್ಥೆಯಲ್ಲಿರುವ ಬಸದಿ, ಸಾಫಾ ಮಸೀದಿ, ಅನೇಕ ದರ್ಗಾಗಳು, ಗುಮ್ಮಟಗಳು, ಬುರುಜುಗಳು, ಬ್ರಿಟೀಷ ಕಾಲದ ಮೂವತ್ತಕ್ಕೂ ಹೆಚ್ಚು ವಾಸದ ಮನೆಗಳು, ಭವ್ಯ ಸೌಧಗಳು, ವಿವೇಕಾನಂದರು ತಂಗಿದ್ದ ಮನೆ, ರಾಮಕೃಷ್ಣ ಆಶ್ರಮ, ಪೇಶ್ವೆ ಕಾಲದ ಮೂರ್ತಿ ಶಿಲ್ಪಗಳು–ಇವೆ ಮುಂತಾದವುಗಳು ಕೋಟೆಯ ಪರಿಸರವನ್ನು ಬೆಳಗಾವಿಯ ಪಾರಂಪರಿಕ ಸಾಂದ್ರತೆಯ ಪರಿಸರವನ್ನಾಗಿದೆ.

೨. ಬ್ರಿಟೀಷ ವಸಾಹತುಶಾಹಿ ಆಳ್ವಿಕೆಯ ದ್ಯೋತಕವಾದ ಬೆಳಗಾವಿಯ ದಂಡುಮಂಡಲ ಪರಿಸರ, (Cantonment/ Camp) ದಟ್ಟವೃಕ್ಷಗಳ ಮೇಲ್ಛಾವಣಿಯನ್ನು ಹೊಂದಿದ ಪಾರಪಂರಿಕ ರಸ್ತೆಗಳು, ಮರಾಠಾ ಲೈಟ್ ಇನ್‌ಫಂಟ್ರಿ ರೆಝಿಮೆಂಟ್ ಸೆಂಟರ್, ಶೌರ್ಯ ಸೌಧ ವಸ್ತು ಸಂಗ್ರಹಾಲಯ, ಮಿಲಿಟರಿ ಅಧಿಕಾರಿಗಳ ಭವ್ಯ ಸೌಧಗಳು, ಮರಾಠಾ ಕೋಟೆ ಮಾದರಿಯ ಮುಂಭಾಗವನ್ನು ಹೊಂದಿದ ಅನೇಕ ಇಮಾರತುಗಳು, ಸಿಪಾಯಿ ದಂಗೆಯ

ಸ್ಮಾರಕಗಳು ಮತ್ತು ಎಲ್ಲಕ್ಕೂ ಕಳಶಪ್ರಾಯವಾದ ೧೯ನೆಯ ಶತಮಾನದ ದ್ವಿತೀಯಾರ್ಧದಲ್ಲಿ ನಿರ್ಮಾಣಗೊಂಡ ಸೆಂಟ್ ಮೇರಿಸ್ ಚರ್ಚ್, ಬ್ರಿಟಿಷ್ ಕಾಲದ ಶೈಕ್ಷಣಿಕ ಸಂಸ್ಥೆಗಳನ್ನು ಹೊಂದಿದ ಭವ್ಯ ಸೌಧಗಳನ್ನು ಒಳಗೊಂಡ ಪರಂಪರಾ ಪರಿಸರ.

೩. ಸಾಂಗ್ಲಿ ಪಟವರ್ಧನರ ಆಳ್ವಿಕೆಗೆ ಒಳಪಟ್ಟಿದ್ದ ಮಾರುಕಟ್ಟೆ ಪ್ರದೇಶವಾದ ಶಹಾಪುರ, ಸಾಲು ಮನೆಗಳನ್ನು ಹೊಂದಿದ್ದು, ಯತೇಚ್ಛವಾಗಿ ಬಳಸಿದ ಸಾಗವಾನಿ ಕಟ್ಟಿಗೆಯ ಮುಂಭಾಗವನ್ನು ಹೊಂದಿದೆ. ಈ ಪ್ರದೇಶದಲ್ಲಿರುವ ಕಾಷ್ಠಶಿಲ್ಪದ ವೈವಿಧ್ಯತೆಯ ನಯ-ನಾಜೂಕಿನ ಕೆತ್ತನೆಯನ್ನು ಹೊಂದಿದ ೧೯ನೆಯ ಶತಮಾನದ ವೆಂಕಟರಮಣ ದೇವಾಲಯ, ರಾಧಾಕೃಷ್ಣ ಮತ್ತು ವಿಠ್ಠಲ ದೇವಾಲಗಳು ಮತ್ತು ಸರಸ್ವತಿ ವಾಹನಾಲಯ, ಪಟವರ್ಧನರ ದಿವಾನರ ಭವ್ಯ ಸೌಧಗಳು ಬೆಳಗಾವಿಯ ಭವ್ಯ ಪರಂಪರೆಯ ಬೀಡಾಗಿವೆ.

೪. ಇದಲ್ಲದೇ ಟಿಳಕವಾಡಿ ಪ್ರದೇಶದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ೩೯ನೆಯ ಅಧಿವೇಶನ ನಡೆದ ಸಂಪೂರ್ಣ ಪರಿಸರ ಗತವೈಭವವನ್ನು ನೆನಪಿಸುತ್ತದೆ. ಕಾಂಗ್ರೆಸ್ ರೋಡ್, ಕಾಂಗ್ರೆಸ್ ಬಾವಿ, ರೈಲ್ವೆ ಗೇಟ್‌ಗಳು ಮತ್ತು ಕಾಂಗ್ರೆಸ್ ಅಧಿವೇಶನ ನಡೆದ ಸ್ಥಳದ ಸ್ಮಾರಕ-ಇವೆಲ್ಲವುಗಳನ್ನೊಳಗೊಂಡ ಪರಂಪರಾ ಪರಿಸರದ ಸಂರಕ್ಷಣೆಯ ಅವಶ್ಯಕತೆಯಿದೆ.

೫. ೧೦೦ ಎಕರೆ ವಿಶಾಲ ಮತ್ತು ಹಚ್ಚಹಸುರಿನ ಗಿಡ-ಮರಗಳಿಂದ ಆವೃತವಾದ ವ್ಯಾಕ್ಸಿನ ಡಿಪೊ ನೈಸರ್ಗಿಕ ಮತ್ತು ನಿರ್ಮಿತ ಪರಂಪರೆಯ ಮಹತ್ವದ ಪ್ರದೇಶ. ಇಲ್ಲಿ ಜಿಲ್ಲಾಡಳಿತ ಪರಂಪರಾ ವಲಯ ಸಂಭಾವ್ಯದ ಕುರಿತು ಚಿಂತಿಸುತ್ತಿದೆ. ಇದು ಕಿರು ಕಾಡಿನಂತಿದ್ದು, ಸುಮಾರು ೩೭೦೦ ವಿವಿಧ ಆಯುರ್ವೇದ ಮಹತ್ವದ ಗಿಡಮೂಲಿಕೆಗಳನ್ನೊಳಗೊಂಡಿದೆ.

ಬೆಳಗಾವಿ ನಗರದ ಪಾರಂಪರಿಕ ಪರಿಸರ

	ಪ್ರಕಾರಗಳು	ಪರಂಪರಾ ಪರಿಸರ
೧	ಕೋಟೆ ಆವರಣ	* ಕೋಟೆ ಮತ್ತು ಅದರ ಎರಡು ಪ್ರವೇಶ ದ್ವಾರಗಳು
		* ಕೋಟೆ ಕೆರೆಯ ಪರಿಸರ
		* ಕಮಲ ಬಸದಿ, ಭಗ್ನ ಬಸದಿ, ಈಶ್ವರ ದೇವಾಲಯ
		* ರಾಮಕೃಷ್ಣ ಆಶ್ರಮ, ವಿವೇಕಾನಂದರು ತಂಗಿದ್ದ ಮನೆ
		* ಫೈರ್ ಗ್ರೌಂಡ್, ಸಾಫಾ ಮಸೀದಿ, ಗುಮ್ಮಟಗಳು
೨	ದಂಡು ಮಂಡಲ ಪ್ರದೇಶ	* ಸೆಂಟ್ ಮೇರಿ ಚರ್ಚ್, MLIRC, ಕ್ಯಾಂಪ ಪ್ರದೇಶದ ಪಾರಂಪರಿಕ ರಸ್ತೆಗಳು, ಗಿಡ ಮರಗಳು, ಸೌಧಗಳು
೩	ಶಹಾಪುರ ಪ್ರದೇಶ	* ಕಚೇರಿಗಲ್ಲಿ, ಸರಾಫಗಲ್ಲಿ, ವೆಂಕಟರಮಣ ದೇವಸ್ಥಾನ ಪರಿಸರ, ಆಚಾರಗಲ್ಲಿ
೪	ವ್ಯಾಕ್ಸಿನ ಡಿಪೊದ ನೈಸರ್ಗಿಕ ಪರಿಸರ	* ಆಲದ ಮರದ ನೈಸರ್ಗಿಕ ಪ್ರದೇಶ, ಕಿರುಕಾಡು

ನಗರದ ಪಾರಂಪರಿಕ ಪ್ರದೇಶ ಐತಿಹಾಸಿಕ, ವಾಸ್ತುಶಿಲ್ಪ ಮತ್ತು ಪರಿಸರ ದೃಷ್ಟಿಕೋನದಿಂದ ಮಹತ್ವವನ್ನು ಹೊಂದಿದೆ. ಬೆಳಗಾವಿ ಕೋಟೆ ಪರಿಸರದಲ್ಲಿ ಸುಮಾರು ೬೦% ಪಾರಂಪರಿಕ ಕಟ್ಟಡಗಳನ್ನು ಒಳಗೊಂಡಿದೆ. ಇದು ಅಗೋಚರ ಪರಂಪರೆಯಾದ ಮಂಗಾಯಿ ಜಾತ್ರಾ ಉತ್ಸವಕ್ಕೆ ಪ್ರಸಿದ್ಧಿ ಪಡೆದಿದೆ.

ಸವಾಲುಗಳು

ಕೋಟೆ ಪರಿಸರದ ಸಂರಕ್ಷಣೆ ಅಲ್ಲಿರುವ ಮರಾಠಾ ರೆಜಿಮೆಂಟ ಮತ್ತು ಸೈನ್ಯದ ಹಿಡಿತದಿಂದಾಗಿ ಸವಾಲೆನಿಸಿದೆ. ಅಲ್ಲದೆ ಕೋಟೆ ಕೆರೆಯಲ್ಲಿ ಘನತ್ಯಾಜ್ಯಗಳ ಎಸೆತದಿಂದಾಗಿ ನೈಸರ್ಗಿಕ ಪರಿಸರ ಕುರೂಪಗೊಂಡಿದೆ. ಕೋಟೆ ಮತ್ತು ಶಹಾಪುರ ಪ್ರದೇಶದಲ್ಲಿ ವಾಹನ ಮತ್ತು ಜನದಟ್ಟಣೆ ಪ್ರದೂಷಣ ಮತ್ತು ಪರಿಸರ ಮಾಲಿನ್ಯಕ್ಕೆ ಕಾರಣವಾಗಿದೆ. ಕೋಟೆ ಆವರಣವನ್ನು ಅದರಲ್ಲೂ ನೂರಾರು ವರ್ಷಗಳ ಸ್ಮಾರಕಗಳ ಸಂರಕ್ಷಿಸುವ ನಿಟ್ಟಿನಲ್ಲಿ ವಿದ್ಯುತ್‌ಚಾಲಿತ ಮೋಟಾರಗಳ ಬಳಕೆಯ ಅಗತ್ಯವಿದೆ.

ಪಾರಂಪರಿಕ ನಗರಗಳಲ್ಲಿರುವ ಪರಂಪರಾ ಆವರಣಗಳನ್ನು ಒಳಗೊಂಡ ವಲಯಗಳನ್ನು ಗುರುತಿಸಿ ಅಲ್ಲಿ ಸಂರಕ್ಷಣಾ ಕಾರ್ಯಗಳನ್ನು ಕೈಗೊಳ್ಳುವ ಅವಶ್ಯಕತೆಯಿದೆ. ಉದಾಹರಣೆಗೆ ಕಿತ್ತೂರಿನಲ್ಲಿ ಕೋಟೆ ಮತ್ತು ಸಮಾಧಿಗಳನ್ನು ಮಾತ್ರ ಸಂರಕ್ಷಿತ ಸ್ಮಾರಕಗಳೆಂದು ಘೋಷಿಸಲಾಗಿದೆ. ಆದರೆ ಮಾರುಕಟ್ಟೆ ಪ್ರದೇಶ, ಗುರುವಾರಪೇಟೆ, ಬಳೆಗಾರ ಓಣಿ ಇವೇ ಮುಂತಾದವುಗಳನ್ನೊಳಗೊಂಡ ವಲಯವನ್ನು ಗುರುತಿಸಿ ಸಂರಕ್ಷಿಸಬೇಕಾಗಿದೆ. ಭೂತಕಾಲವನ್ನು ವರ್ತಮಾನಕ್ಕೆ ಜೋಡಿಸುವ ಕಳಚದ ಕೊಂಡಿಯಾದ ಪಾರಂಪರಿಕ ನಗರಗಳು ಸಾಂಸ್ಕೃತಿಕ ಮೌಲ್ಯವನ್ನು ಹೊಂದಿವೆ. ಆಧುನಿಕತೆಯ ಪ್ರಗತಿ ದಾಪುಗಲಿನಿಂದ ಮುನ್ನಡೆಯುತ್ತಿರುವ ಈ ಯುಗದಲ್ಲಿ ಪ್ರವೇಶ ದ್ವಾರಗಳು, ಕಾರಂಜಿಗಳು, ಉದ್ಯಾನಗಳು, ಕೆರೆ-ಬಾವಿಗಳು, ಸರೋವರಗಳು, ಪಾರಂಪರಿಕ ಸೌಧಗಳು, ಐತಿಹಾಸಿಕ ಮನೆಗಳು, ಬೀದಿಗಳು, ಓಣಿಗಳು, ಹಳೆಯ ಮರಗಳು ಆಯಾ ನಗರಗಳ ಸಂರಕ್ಷಣೆಯ ಭಾಗವಾಗಿರದೇ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಈ ಸಾಂಸ್ಕೃತಿಕ ಸಂಪತ್ತನ್ನು ಗುರುತಿಸಿ ಸಂರಕ್ಷಿಸುವುದು ನಾಗರಿಕ ಸಮಾಜದ ಮತ್ತು ಆಯಾ ನಗರಗಳ/ಜಿಲ್ಲಾಡಳಿತದ ಆದ್ಯ ಕರ್ತವ್ಯವಾಗಿದೆ. ಅದರಲ್ಲೂ ಸ್ಮಾರ್ಟ್ ಸಿಟಿ ಪರಿಕಲ್ಪನೆಯ ಸಂದರ್ಭದಲ್ಲಿ ಐತಿಹಾಸಿಕ ಸಾಂದ್ರತೆಯ ಪರಿಸರದಲ್ಲಿ ಪರಂಪರಾ ವಲಯಗಳನ್ನು ನಿರ್ಮಿಸಿ ಅವುಗಳನ್ನು ಸಂರಕ್ಷಿಸಿ, ಪಾರಂಪರಿಕ ಮಹತ್ವವನ್ನು ಅರಿತು ಆಧುನಿಕ ಪ್ರಗತಿಯನ್ನು ಸಾಧಿಸಬಹುದು. ಪ್ರಾಚೀನತೆ ಮತ್ತು ಆಧುನಿಕತೆಯ ನಡುವೆ ಸಾಮರಸ್ಯ ಸಾಧಿಸಿದಾಗ ಮಾತ್ರ ನಿಜವಾದ ಅರ್ಥದಲ್ಲಿ ಉನ್ನತಿ ಸಾಧ್ಯ. ಆದ್ಯತೆಯ ಮೇರೆಗೆ ಸ್ಮಾರಕಗಳ ಮತ್ತು ಅವುಗಳನ್ನೊಳಗೊಂಡ ಪರಿಸರದ ಸಂರಕ್ಷಣೆ ಕೈಗೊಳ್ಳುವ ಅವಶ್ಯಕತೆಯಿದೆ.

* ಬೀದಿ ದೀಪ, ಸೌಂದರ್ಯೀಕರಣ, ಗಿಡ-ಮರಗಳ ರಕ್ಷಣೆ, ಪಾದಚಾರಿಗಳಿಗಾಗಿ ಕಾಲು-ಹಾದಿ, ರಸ್ತೆ ಬದಿಗೆ ಆಸನಗಳು.
* ಆಯಾ ಪರಿಸರದ ವಾಸ್ತುಶಿಲ್ಪ ಸಾಮರಸ್ಯದ ಸೂಕ್ಷ್ಮ ಯೋಜನೆಗಳು (ವಾಸ್ತುಶಿಲ್ಪದ ಮತ್ತು ಬಣ್ಣಗಳ ಸಂಯೋಜನೆ).
* ಪಾರಂಪರಿಕ ಪ್ರವಾಸೋದ್ಯಮ ತಾಣಗಳನ್ನಾಗಿ ಈ ಪರಿಸರಗಳನ್ನು ಅಭಿವೃದ್ಧಿಗೊಳಿಸುವುದು. ಕುಡಿಯುವ ನೀರು, ಘನ ತ್ಯಾಜ್ಯಗಳ ವಿಲೇವಾರಿ ಸ್ಥಳ, ಪ್ರಾಸಾಧನಗೃಹಗಳು. ಇವೇ ಮುಂತಾದ ಸೌಕರ್ಯಗಳನ್ನು ಒದಗಿಸಬೇಕಾದೆ.
* ಪಾರಂಪರಿಕ ನಗರಗಳ ಅಂತರಜಾಲದ ಮೂಲದ ಪರಸ್ಪರರ ಸಮಸ್ಯೆ, ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಉದ್ಯಮಿಗಳ (Corporate Social Responsibility) ಸಹಭಾಗಿತ್ವ ಮತ್ತು ಸಹಕಾರ ಕೋರುವುದು.
* ಸಾರ್ವಜನಿಕ ಮತ್ತು ಸಂಘ-ಸಂಸ್ಥೆಗಳ ಹಣಕಾಸು ಬಂಡವಾಳ ಹೂಡುವಿಕೆಯ ಮೂಲಕ ಪಾರಂಪರಿಕ ನಗರಗಳ ಸಂರಕ್ಷಣೆ.
* ಸಾಂಸ್ಕೃತಿಕ/ಪಾರಂಪರಿಕ ಸಂರಕ್ಷಣೆಯಲ್ಲಿ ನಾಗರಿಕರು ಅಡಿಟಿಪ್ಪಣಿಯಾಗದೇ ತಲೆಬರಹವಾಗಬೇಕಾದ ಅವಶ್ಯಕತೆಯನ್ನು ಮನಗಾಣಿಸುವುದು.
* ಯಾಂತ್ರಿಕ ಮನೋಭಾವನೆಯ ಬದಲಾಗಿ ಸ್ಥಳೀಯರ ಭಾವನೆಗಳನ್ನು ಮತ್ತು ಅವಶ್ಯಕತೆಯನ್ನು ಪರಿಗಣಿಸಬೇಕಾಗಿದೆ. ಸ್ಥಳೀಯ ಪರಂಪರೆಯನ್ನು ಸ್ಥಳೀಯರ ಸಮಾಜೋ-ಆರ್ಥಿಕ ಅಭಿವೃದ್ಧಿಗೆ ಬಳಸುವುದು.

ಜಿಲ್ಲಾಡಳಿತ, ನಗರಾಭಿವೃದ್ಧಿ ಮಂಡಳಿ, ಪುರಾತತ್ವಜ್ಞರು, ನಗರೀಕರಣ ವಿಜ್ಞಾನಿಗಳು, ಸ್ಮಾರಕ ಸಂರಕ್ಷಣಾ ತಜ್ಞರು, ಸಾಮಾಜಿಕ ಜವಾಬ್ದಾರಿ, ಕಳಕಳಿ ಹೊಂದಿದ ನಾಗರೀಕರು, ಸ್ವಯಂ ಸೇವಾ ಸಂಸ್ಥೆಗಳು ಇವರೆಲ್ಲ ಸೇರಿ, ಈ ನಿಟ್ಟಿನಲ್ಲಿ ಸಂವಾದ, ಸಂವಹನ ಕೈಗೊಂಡ ಪಾರಂಪರಿಕ ನಗರಗಳಲ್ಲಿ ಪರಂಪರಾ ವಲಯಗಳನ್ನು ಗುರುತಿಸುವ ಮೂಲಕ ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸಬೇಕಾಗಿದೆ.

ಆಧಾರ ಗ್ರಂಥಗಳು

೧. ಸುರೇಬಾನಕರ ಸ್ಮಿತಾ, 'ಬೆಳಗಾವಿ ವಾಸ್ತುಶಿಲ್ಪನಿಧಿ', ಬೆಳಗಾವಿ, ೨೦೧೩.

೨. Chidambara Swamy and B. Shankar, 'Heritage Resources and Architectural style: Mysore city "International Journal of Modern Architectural Research, vol. 2, 2012 pp 139-143.

೩. Kamath S.V., (Ed.), Belgaum District Gazetter, Bangalore, 1983.

೪. ಬೆಳಗಾವಿ ನಗರದಲ್ಲಿ ಕೈಗೊಂಡ ಕ್ಷೇತ್ರಕಾರ್ಯ.

೬೮

ಬಿಜಾಪುರ ಆದಿಲ್‌ಶಾಹಿಗಳಿಗೆ ಸಂಬಂಧಿಸಿದ ಜನಪದ ಹಾಗೂ ಇತಿಹಾಸ

ಡಾ. ಅಮರೇಶ ಯತಗಲ್*

ಬಿಜಾಪುರದ ಆದಿಲ್‌ಶಾಹಿಗಳು ಕ್ರಿ.ಶ. ೧೪೮೯ರಿಂದ ಕ್ರಿ.ಶ. ೧೬೮೬ರವರೆಗೆ ಸುಮಾರು ಎರಡು ಶತಮಾನಗಳವರೆಗೆ ಆಳ್ವಿಕೆ ಮಾಡಿದ್ದಾರೆ. ಇವರ ಕುರಿತಾಗಿ ಈಗಾಗಲೇ ತಕ್ಕಮಟ್ಟಿಗೆ ರಾಜಕೀಯ ಚರಿತ್ರೆ ರಚನೆಗೊಂಡಿದೆ. ಇದಕ್ಕೆ ಸಂಬಂಧಿಸಿದ ಅರೇಬಿಕ್, ಪರ್ಷಿಯನ್, ಉರ್ದು, ಮರಾಠಿ, ಇಂಗ್ಲೀಷ್, ಹಿಂದಿ, ಮೋಡಿ ಹಾಗೂ ಕನ್ನಡದ ದಾಖಲೆಗಳು ಈ ಮನೆತನದ ಮಾಹಿತಿಯನ್ನು ನೀಡುತ್ತವೆ. ಅಲ್ಲದೇ ಈ ಮನೆತನದ ಕುರಿತಾದ ಅನೇಕ ಮೌಖಿಕವಾದ ಮಾಹಿತಿಗಳಿವೆ. ಆದರೆ ಇಲ್ಲಿಯವರೆಗೂ ಅವುಗಳನ್ನು ಸಂಗ್ರಹಿಸಲಾಗಿಲ್ಲ. ಇವರ ಕುರಿತಾಗಿ ಹಳ್ಳಿಗಳಲ್ಲಿ ಇಂದಿಗೂ ಜನಜನಿತವಾದ ಅನೇಕ ಜನಪದ ಗಾದೆಗಳು, ನುಡಿಗಟ್ಟುಗಳು, ಹಾಡುಗಳು ಹಾಗೂ ಐತಿಹ್ಯಗಳಿವೆ. ಕ್ಷೇತ್ರಕಾರ್ಯದ ಮೂಲಕ ಅವುಗಳನ್ನು ಸಂಗ್ರಹಿಸಿ, ಇಲ್ಲಿ ವಸ್ತುನಿಷ್ಠವಾಗಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಆದಿಲ್‌ಶಾಹಿಗಳ ಕಾಲದ ಆಡಳಿತದ ಕೇಂದ್ರಗಳು, ಬಾವಿಗಳು ಹಾಗೂ ಉರಿಯುವ ದೀಪಗಳನ್ನು ತಿಳಿಸುವ ಗಾದೆಮಾತೊಂದು ಇಂತಿದೆ:

"ಛತ್ತಿಸ್ ಸೌ ಚಾವಡಿ, ಬತ್ತಿಸ್ ಸೌ ಬಾವಡಿ, ಚಾರ್‌ಲಾಕ್ ಚಿರಾಗ್" ಎಂದು **'ಛತ್ತಿಸೌ ಚಾವಡಿ'** ಎಂದರೆ, ಆದಿಲ್‌ಶಾಹಿ ಆಡಳಿತಾವಧಿಗೆ ಸಂಬಂಧಿಸಿದಂತೆ ಇವರ ರಾಜ್ಯದಲ್ಲಿ ಮೂರುಸಾವಿರದ ಆರನೂರು ಚಾವಡಿಗಳಿದ್ದವು ಎಂಬ ಮಾಹಿತಿಯನ್ನು ನೀಡುತ್ತದೆ. ಬಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿ ೩೬ ಪರಗಣೆಗಳಿದ್ದವು, ಈ ಪರಗಣೆಗಳು ಆಡಳಿತದ ಒಂದು ಭಾಗವಾಗಿದ್ದವು. ಪರಗಣೆಯ ಅಧೀನದಲ್ಲಿ ಚಾವಡಿಗಳಿದ್ದವು. 'ಚಾವಡಿ' ಎಂದರೆ ಅಂದಿನ ಕಾಲದ ಗ್ರಾಮ ಕಾರ್ಯಾಲಯಗಳು. ಕೆಲವು ಕಡೆ ಇವುಗಳು ನ್ಯಾಯ ಪಂಚಾಯಿತಿಗಳಾಗಿ ಕಾರ್ಯಮಾಡಿದ್ದುಂಟು. ಇವುಗಳನ್ನು ನ್ಯಾಯದಾನದ ಕೇಂದ್ರಗಳೆಂದೂ ಕರೆಯುತ್ತಾರೆ.

ಆದಿಲ್‌ಶಾಹಿಗಳು ಬಿಜಾಪುರದ ಜನತೆಗೆ ಸಾಕಷ್ಟು ಪ್ರಮಾಣದಲ್ಲಿ ನೀರಿನ ಸೌಲಭ್ಯವನ್ನು ಒದಗಿಸಿದ್ದರು. ಅದಕ್ಕಾಗಿ ತಮ್ಮ ರಾಜ್ಯದ ತುಂಬೆಲ್ಲಾ ಕೆರೆ, ಬಾವಿ ಹಾಗೂ ಸರೋವರಗಳನ್ನು ನಿರ್ಮಿಸಿದ್ದುಂಟು. ಬಿಜಾಪುರ ನಗರದ ಜನತೆಗೆ ಕುಡಿಯಲು ಹಾಗೂ ಬೇರೆ ಬೇರೆ ಕಾರ್ಯಗಳಿಗಾಗಿ ವಿಫುಲವಾಗಿ ಬಳಸಲು ನಿರಂತರವಾಗಿ ನೀರು ದೊರೆಯುವಂತೆ ಕ್ರಮವನ್ನು ಕೈಗೊಂಡಿದ್ದರು. ನೀರನ್ನು ಹರಿಸುವಲ್ಲಿ ಅನೇಕ ತಾಂತ್ರಿಕ ಚಮತ್ಕಾರಗಳನ್ನು ಬಳಸಿರುವುದನ್ನು ಇಂದಿಗೂ ನೋಡಬಹುದಾಗಿದೆ. ಇಲ್ಲಿಯ "ಜಲಸಂಗ್ರಹಗಳು ಆದಿಲ್‌ಶಾಹಿಗಳ ಬೌದ್ಧಿಕ, ಅಭಿಯಾಂತ್ರಿಕ ಮತ್ತು ಕೌಶಲ್ಯತೆಗೆ ಸಾಕ್ಷಿಯಾಗಿವೆ."

ಇದೇ ಗಾದೆಮಾತಿನಲ್ಲಿ **'ಬತ್ತೀಸ್ ಸೌ ಬಾವಡಿ'** ಎಂಬುದು, ಇವರು ಮೂರು ಸಾವಿರದ ಎರಡನೂರು ಬಾವಿಗಳನ್ನು ತೋಡಿಸಿದ ಕುರಿತು ಮಾಹಿತಿ ನೀಡುತ್ತದೆ. ಇವರ ರಾಜ್ಯವು ಪೂರ್ವದಲ್ಲಿ ಬಂಗಾಳಕೊಲ್ಲಿ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ, ಉತ್ತರದಲ್ಲಿ ನರ್ಮದ (ಗುಜರಾತಿನ ಗಡಿರೇಖೆ), ದಕ್ಷಿಣದಲ್ಲಿ ಜಿಂಜಿ ಮದ್ರಾಸ್‌ನವರೆಗೆ ವಿಸ್ತರಿಸಿತ್ತು. ಇವರು ತಮ್ಮ ರಾಜ್ಯದ ತುಂಬೆಲ್ಲಾ ನೀರಿನ ವ್ಯವಸ್ಥೆಯನ್ನು ಮಾಡಿದ್ದರು. ಹೀಗಾಗಿ ಅಂದಿನ ಸಂದರ್ಭದಲ್ಲಿ ಬಿಜಾಪುರ ನಗರದಲ್ಲಿಯೇ ಸುಮಾರು ೧೦ ಲಕ್ಷ ಜನರಿಗೆ ನೀರು ಪೂರೈಕೆಯ ವ್ಯವಸ್ಥೆಯನ್ನು ಮಾಡಿದ್ದರು. ಇವತ್ತಿಗೂ ಬಿಜಾಪುರದಲ್ಲಿ 'ಗುಂಡಬಾವಡಿ', 'ತಾಜ್ ಬಾವಡಿ', 'ಸೋನಾರ ಬಾವಡಿ', 'ಚಾಂದ್ ಬಾವಡಿ', 'ಇಬ್ರಾಹಿಂಪುರ ಬಾವಡಿ', 'ಬರಿ ಮತ್ತು ಮುಬಾರಕ ಖಾನ್ ಬಾವಡಿ', 'ಸಂದಲ್ ಬಾವಡಿ', 'ಮಾಸಾ ಮತ್ತು ನಿಮ್ ಬಾವಡಿ', 'ಹಿಲಾಲ್ ಮತ್ತು ನಗರ ಬಾವಡಿ', 'ಜಾಮಿಯಾ ಮಸೀದಿ ಬಾವಡಿ' ಇನ್ನೂ ಮುಂತಾದ ಅನೇಕ ಐತಿಹಾಸಿಕ ಬಾವಿಗಳನ್ನು ನೋಡಬಹುದು.

* ಸಹಾಯಕ ಪ್ರಾಧ್ಯಾಪಕ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ತೊರವಿ, ವಿಜಯಪುರ.

೧೮೧೫ರಲ್ಲಿ ಕ್ಯಾಪ್ಟನ್ ಸೈಕ್‌ನು ಬಿಜಾಪುರದಲ್ಲಿ ಬಿಡಾರ ಹೂಡಿದ್ದಾಗ, ಕೋಟೆ ಒಳಗಡೆಯಲ್ಲಿ ೭೦೦ ಮೆಟ್ಟಿಲುಗಳಿದ್ದ ಬಾವಿಗಳಲ್ಲಿ, ೩೦೦ ಸೇದುವ ಬಾವಿಗಳನ್ನು ಗುರುತಿಸಿ ದಾಖಲಿಸಿದ್ದಾನೆ. ಆಗಲೇ ಒಂದು ಶತಮಾನ ಮಿಕ್ಕಿ ಹೋಗಿತ್ತು. ಬ್ರಿಟಿಷ್ ಆಡಳಿತಾವಧಿಯ ಬ್ರಿಟಿಷ ಅಧಿಕಾರಿಯಾದ ಜೇಮ್ಸ್ ಬರ್ಡನ್‌ನ ಸರ್ವೇ ಪ್ರಕಾರ "ಬಿಜಾಪುರದಲ್ಲಿ ಒಟ್ಟು ೪೩೦ ಬಾವಿಗಳು ಚಾಲ್ತಿಯಲ್ಲಿದ್ದವು" ಎಂದು ಹೇಳುತ್ತಾನೆ. ಆದರೆ ಇಂದು ಇವುಗಳಲ್ಲಿ ಅನೇಕ ಬಾವಿಗಳು ಹೂಳು ತುಂಬಿವೆ. ನೀರಿಲ್ಲದೆ ಬತ್ತಿ ಹೋಗಿವೆ. ಬೆರಳೆಣಿಕೆಯಷ್ಟು ಬಾವಿಗಳಲ್ಲಿ ನೀರಿದೆ. ಈ ನೀರನ್ನು ಜನೋಪಯೋಗಿ ಕಾರ್ಯಕ್ಕೆ ಬಳಸುವ ಯೋಜನೆಯನ್ನು ರೂಪಿಸುವ ಮೂಲಕ ಅದರ ಐತಿಹಾಸಿಕ ಮಹತ್ವವನ್ನು ತಿಳಿಸಬೇಕಾಗಿದೆ.

'ಚಾರ್‌ಲಾಕ್ ಚಿರಾಗ್' ಎಂದರೆ, ಅಂದು ರಾಜ್ಯದಲ್ಲಿ ನಾಲ್ಕು ಲಕ್ಷ ಬೀದಿ ದೀಪಗಳು ಉರಿಯುತ್ತಿದ್ದವು. ಅಂದು ದೀಪಗಳೇ ನಾಲ್ಕು ಲಕ್ಷ ಇರುವಾಗ, ರಾಜ್ಯದಲ್ಲಿ ಅಂದಿನ ಜನಸಂಖ್ಯೆ ಅಧಿಕ ಪ್ರಮಾಣದಲ್ಲಿತ್ತು ಎಂಬುದನ್ನು ಅರಿಯಬಹುದು. ಹೀಗೆ ಈ ಮೇಲಿನ ಗಾದೆಮಾತು ಆದಿಲ್‌ಶಾಹಿಗಳ ಆಡಳಿತ, ನೀರಿನ ಯೋಜನೆ ಹಾಗೂ ಜನರಿಗೆ ನೀಡಿದ ಸೌಕರ್ಯಗಳ ಕುರಿತು ಮಾಹಿತಿ ನೀಡುತ್ತದೆ.

"ಇವನ ಬಾಯಿ, ಮಮದಾಪುರ ಕೆರೆ ಐಗೈತಿ" ಎಂಬ ಗಾದೆಮಾತಿದೆ. ಮಮದಾಪುರ (ಮಹಮ್ಮದಾಪುರ) ಎಂಬ ಗ್ರಾಮದಲ್ಲಿ ಕೆರೆ ಇದೆ. ಅದನ್ನು 'ಮಮದಾಪುರ ಕೆರೆ' ಎಂದು ಕರೆಯುತ್ತಾರೆ. ಇದು ಬಿಜಾಪುರದ ಪಶ್ಚಿಮ ದಿಕ್ಕಿಗಿದೆ. ಮಹ್ಮದ್ ಆದಿಲ್‌ಶಾಹನು ತನ್ನ ಆಡಳಿತಾವಧಿಯಲ್ಲಿ ಸುಂದರವಾದ ಕೆರೆಗಳನ್ನು ನಿರ್ಮಾಣಮಾಡಬೇಕೆಂದು ಆಲೋಚಿಸುತ್ತಾನೆ. ಹೀಗಾಗಿ ಅಂದು ರಾಜ್ಯಾದಂತ ಅನೇಕ ಕೆರೆಗಳು ನಿರ್ಮಾಣವಾಗುತ್ತವೆ. ಹೀಗಾಗಿ ಅರಸನ ಅಪ್ಪಣೆಯಂತೆ ಖವಾಸಖಾನ–ಹೌಜ–ಇ–ಸುಲ್ತಾನನು ಕ್ರಿ.ಶ. ೧೬೩೦ರ ಹೊತ್ತಿಗೆ ಮಮದಾಪುರ ಕೆರೆಯನ್ನು ಕಟ್ಟಿಸಿದನು. ಇದು ಅಂದು ಮಹ್ಮದ್ ಆದಿಲ್‌ಶಾಹನ ಮಗಳಾದ 'ಖುರ್ಷಿದಾ ಬೇಗಂ'ಳ ಹೆಸರಿನಲ್ಲಿ ನಿರ್ಮಿಸಿರುವಂತಹದ್ದು. ಬಿಜಾಪುರದ ಈ ಭಾಗದಲ್ಲಿ 'ಸಣ್ಣ ಕೊಂಕಣ' ಪರಿಸರವನ್ನು ನಿರ್ಮಿಸಬೇಕು, ಸದಾ ಮಲೆನಾಡಿನಂತೆ ಕಂಗೊಳಿಸಬೇಕೆಂಬ ಉದ್ದೇಶವಿತ್ತು. ಹೀಗಾಗಿ ಸುತ್ತಲೂ ಅರಣ್ಯವನ್ನು ಬೆಳೆಸಿ, ನಡುವೆ ಈ ಕೆರೆಯನ್ನು ನಿರ್ಮಿಸಲಾಯಿತು. ಅಂದಿನ ಮುಂಬೈ ಪ್ರಾಂತ್ಯದಲ್ಲಿ ಕೆರೆಗಳನ್ನು ಸಮೀಕ್ಷೆ ಮಾಡಿದಾಗ ಅತೀ ದೊಡ್ಡ ಕೆರೆಯೇ ಇದಾಗಿದ್ದುದು ತಿಳಿದುಬರುತ್ತದೆ. ಇದು ಅಂದು ೮೬೪ ಎಕರೆಗಳ ಅಗಲ, ೩೮ ಅಡಿ ಎತ್ತರವಾಗಿತ್ತು. ಇದರಲ್ಲಿ ಸುಮಾರು ೭೭೪ ಎಕರೆ ಭೂಮಿಯು ನೀರಾವರಿಗೆ ಒಳಪಟ್ಟಿತ್ತು.[೧]

ಹೀಗೆ ವಿಶಾಲವಾದ ಈ ಕೆರೆಯ ದ್ಯೋತಕವಾಗಿ ಜನಸಾಮಾನ್ಯರು ಹೆಚ್ಚು ಮಾತನಾಡುವ (ವಾಚಾಳಿ)ವನಿಗೆ **'ಇವನ ಬಾಯಿ ಮಮದಾಪುರ ಕೆರೆ ಆಗೈತಿ'** ಎಂಬ ಗಾದೆಮಾತನ್ನು ಬಳಸುತ್ತಿದ್ದರು; ಇಂದಿಗೂ ಬಳಸುತ್ತಾರೆ.

'ಇವನ ಬಾಯಿ ಬೇಗಂ(ಪಿ)ಕೆರೆ ಐಗೈತಿ' ಎಂಬುದು ಇನ್ನೊಂದು ಗಾದೆ ಮಾತು. ಇದು 'ಬೇಗಂ' ಕೆರೆ (ಬೇಗಂ ತಾಲಾಬ) ಕುರಿತು ಹೇಳಿದುದು. ಇದೊಂದು ಬೃಹತ್ ಕೆರೆಯಾಗಿದೆ. "ಆದಿಲ್‌ಶಾಹಿಗಳು ಬಿಜಾಪುರ ನಗರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೀರು ಬೇಕಾದಾಗ ನಗರ ಪ್ರದೇಶಕ್ಕಿಂತಲೂ ಎತ್ತರದ ಪ್ರದೇಶಗಳಲ್ಲಿ ಕೆರೆ ಮತ್ತು ಸರೋವರಗಳನ್ನು ನಿರ್ಮಿಸುತ್ತಿದ್ದರು. ನಂತರ ಅಲ್ಲಿಯ ನೀರನ್ನು ಕಾಲುವೆಗಳ ಮುಖಾಂತರ ಹರಿಸುತ್ತಿದ್ದರು. ಇಂಥಹ ಕೆರೆಗಳಲ್ಲಿ ಅಂದು ಬಿಜಾಪುರ ನಗರಕ್ಕೆ ನೀರು ಸರಬರಾಜು ಮಾಡಿದ ಕೆರೆಗಳಲ್ಲಿ 'ಬೇಗಂ ತಾಲಾಬ'ವೂ ಒಂದಾಗಿದೆ."[೨] ಇದು ಸಹ ಜೋರಾಗಿ ಮಾತನಾಡುವ, ವಾಚಾಳಿಯಾದವನ ಕುರಿತಾಗಿ ಹೇಳುವ ಗಾದೆಮಾತು. ಬೇಗಂ ಕೆರೆಯು ಬಿಜಾಪುರದಿಂದ ಬಾಗಲಕೋಟೆಗೆ ಹೋಗುವ ರಸ್ತೆಯ ಎತ್ತರದ ಪ್ರದೇಶದ ಮೇಲೆ ನಿರ್ಮಾಣವಾಗಿದೆ. ಇದು ಮಹಮ್ಮದ್ ಆದಿಲ್‌ಶಾಹ (ಕ್ರಿ.ಶ. ೧೬೪೬)ನ ನೀರಿನ ಪ್ರಮುಖವಾದ ಯೋಜನೆಯಾಗಿದೆ. ಇದಕ್ಕೆ ತನ್ನ ರಾಣಿ 'ಜಾಹಾನ್ ಬೇಗಂ'ಳ ಹೆಸರಿಟ್ಟಿದ್ದಾನೆ. ಈತನ ಕಾಲದಲ್ಲಿ ಅಫಜಲ್ ಖಾನ್‌ನ ಮೇಲ್ವಿಚಾರಣೆಯಲ್ಲಿ ಈ ಕೆರೆಯನ್ನು ಕ್ರಿ.ಶ. ೧೬೫೧–೫೩ರಲ್ಲಿ ನಿರ್ಮಿಸಲಾಗಿದೆ.

ಇಂದು ಶ್ರೀ ಎಂ.ಬಿ. ಪಾಟೀಲ, ನೀರಾವರಿ ಸಚಿವರು, ಬೇಗಂ ತಾಲಾಬ ಉಪಯೋಜನೆ(ಪ್ಯಾಕೇಜ)ಯನ್ನು ಜಾರಿಗೊಳಿಸಿದ್ದಾರೆ. "ಈ ಉಪ ಯೋಜನೆಯಿಂದ ರೋಣಿಹಾಳ, ಕುಬಕಡ್ಡಿ, ಮಲಘಾಣ, ತಳೆವಾಡ, ಕೂಡಗಿ, ಮುತ್ತಗಿ, ನಾಗವಾಡ, ಮಣೂರ, ಯರನಾಳ, ಮಸೂತಿ, ಕಿರಶ್ಯಾಳ, ಮುಕಾರ್ತಿಹಾಳ, ಭೂತನಾಳ, ನಾಗಠಾಣ, ಅಥರ್ಗಾ, ಅರಕೇರಿ, ಮಖಣಾಪೂರ, ತಿಡಗುಂದಿ, ಡೊಮನಾಳ, ಬರಟಗಿ, ಗೂಗದಡ್ಡಿ, ಮಿಂಚನಾಳ, ಬೊಮ್ಮನಳ್ಳಿ ಗುಣಕಿ, ದ್ಯಾಬೇರಿ, ಅಲಿಯಾಬಾದ, ಹುಣಶ್ಯಾಳ, ಹೊನ್ನುಟಗಿ, ಕವಲಗಿ, ಆಹೇರಿ, ಕುಮಟಗಿ ಕಗ್ಗೋಡ, ಅಂಕಲಗಿ ಮತ್ತು ಜಂಬಗಿ ಗ್ರಾಮಗಳ ರೈತರಿಗೆ ನೀರಾವರಿ ಪ್ರಯೋಜನವಾಗುತ್ತಿದ್ದು, ೨೧,೭೦೦ ಎಕರೆ ಪ್ರದೇಶವು ನೇರವಾಗಿ ನೀರಾವರಿ ಸೌಲಭ್ಯಕ್ಕೆ ಒಳಪಡುತ್ತದೆ. ಮತ್ತು ವಿಜಯಪುರ ನಗರದ ಕುಡಿಯುವ ನೀರಿನ ಪೂರೈಕೆಯ ಮೂಲವಾದ ಭೂತನಾಳ ಕೆರೆ ಹಾಗೂ

ಆದಿಲ್‌ಶಾಹಿ ಕಾಲದಿಂದಲೂ ವಿಜಯಪುರ ನಗರದ ಕುಡಿಯುವ ನೀರು ಸರಬರಾಜು ಮಾಡುತ್ತಿದ್ದ 'ಬೇಗಂ ತಲಾಬ್ ಕೆರೆ' ಈ ಉಪ ಯೋಜನೆಯಿಂದ ತುಂಬುತ್ತದೆ.[೩] ಇದರಿಂದ ಈ ಭಾಗದ ರೈತರಿಗೆ ಅನುಕೂಲವಾಗಲಿದೆ. ಇದು ಮತ್ತೊಮ್ಮೆ ಆದಿಲ್‌ಶಾಹಿಗಳ ಅವಧಿಯನ್ನು ನೆನಪಿಗೆ ತರುತ್ತದೆ.

"ಹತ್ತಿದರ ಕುದುರೆ ಹತ್ತಬೇಕು, ಚಾಬೂಕ್ ಸವಾರನ್ಹಂಗ". ಇಲ್ಲಿ 'ಚಾಬೂಕ್' ಅಂದರೆ ಯಾರು? ಎಂಬ ಪ್ರಶ್ನೆ ಉದ್ಭವಿಸುತ್ತದೆ. 'ಚಾಬೂಕ್' ಎನ್ನುವುದು ಪರ್ಷಿಯನ್ ಹಾಗೂ ಹಿಂದೂಸ್ಥಾನಿ ಶಬ್ದ. ಹಿಂದೂಸ್ಥಾನಿಯಲ್ಲಿ "ಚಾಚೂತಪ್ಪದೇ ಆಜ್ಞೆಯನ್ನು ಪಾಲಿಸುವವನು" ಎಂದಾದರೆ, ಪರ್ಷಿಯನ್‌ದಲ್ಲಿ 'ಕುದುರೆ ಸವಾರ' ಎಂದಾಗುತ್ತದೆ.

ಬಿಜಾಪುರದ ಸುಲ್ತಾನ ಮಹ್ಮದ್ ಅಲಿಆದಿಲ್‌ಷಾನ ಕಾಲ (ಕ್ರಿ.ಶ. ೧೬೨೭–೧೬೫೬)ದಲ್ಲಿ 'ಚಾಬೂಕ್ ಸವಾರ್' ನೆಂಬ ಸೂಫೀ ಸಂತನೊಬ್ಬ ಆಗಿ ಹೋಗಿದ್ದಾನೆ. ಈತನ ಮೂಲ ಹೆಸರು 'ಸಯ್ಯದ್–ರಾಜು–ಅಲ್–ಹುಸೇನಿ' ಎಂದು. ಈತನ ಸಮಾಧಿಯು ಸೊಲ್ಲಾಪುರ ರಸ್ತೆಯ ಬಿ.ಎಲ್.ಡಿ.ಇ. ಸಂಸ್ಥೆಯ ಹತ್ತಿರ ಇದೆ. ಇಂದಿಗೂ, ಚಾಬೂಕ್ ಸವಾರರ ಕುಟುಂಬಗಳು ಬಿಜಾಪುರ ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿವೆ. ಮಹಾರಾಷ್ಟ್ರದಲ್ಲಿಯೂ ಇವೆ. ಇವರುಗಳ ವಂಶಸ್ಥರಲ್ಲಿ ಕೆಲವರು ಬಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿ ಕುದುರೆ ಸವಾರರಾಗಿದ್ದರು, ಇನ್ನೂ ಕೆಲವರು 'ಚಾವಟಿ'ಗೆ ತಯಾರಿಸುವವರಾಗಿದ್ದರು.

ಹೀಗೆ ಇಂಥ ಅನೇಕ ಜನಪದ ಗಾದೆಗಳು, ಆಟಗಳು, ಐತಿಹ್ಯಗಳು, ಜಾನಪದ ಹಾಡುಗಳು ಬಿಜಾಪುರ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿದ್ದು, ಕೆಲವು ಐತಿಹಾಸಿಕ ಘಟನೆಗಳನ್ನು ಅರುಹುತ್ತವೆ. ಅಲ್ಲದೆ ಇವು ಇತಿಹಾಸದ ಅನೇಕ ಸಂಗತಿಗಳೊಂದಿಗೆ ತಳುಕುಹಾಕಿಕೊಂಡಿವೆ. ಇಂಥವುಗಳ ಹುಟ್ಟಿಗೆ ಇತಿಹಾಸದ ಯಾವುದೋ ಘಟನೆಯು ಕಾರಣವಾಗಿರುತ್ತದೆ. ಇವುಗಳ ಮೂಲಕ ಜನ ಇತಿಹಾಸ(People History)ವನ್ನು ರಚಿಸುವ ಅಗತ್ಯತೆ ಇದೆ. ಅಂಥವುಗಳನ್ನು ಸಂಗ್ರಹಿಸುವ, ವಸ್ತುನಿಷ್ಠವಾಗಿ ವಿಶ್ಲೇಷಿಸುವ ಕಾರ್ಯವಾಗಬೇಕಿದೆ.

[ಈ ಪ್ರಬಂಧವನ್ನು ರಚಿಸುವಲ್ಲಿ ಮಾರ್ಗದರ್ಶನ ನೀಡಿ ಸಹಕರಿಸಿದ ಖ್ಯಾತ ಸಂಶೋಧಕರಾದ ಪ್ರೊ. ಲಕ್ಷ್ಮಣ್ ತೆಲಗಾವಿ, ಪ್ರೊ. ಹೆಚ್. ಎಂ. ಕಡಕೋಳ, ವಿಶ್ರಾಂತ ನಿರ್ದೇಶಕರು, ಕ.ವಿ.ವಿ.ಸ್ನಾ.ಕೇಂ. ವಿಜಯಪುರ, ಡಾ. ಬಸವಲಿಂಗ ಸೊಪ್ಪಿಮಠ, ಸಂಶೋಧಕರು, ರಾಯಚೂರು. ಡಾ. ಸೋಮಶೇಖರ ವಾಲಿ, ಸ.ನಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯಪುರ ಇವರುಗಳಿಗೆ ಅನಂತ ಕೃತಜ್ಞತೆಗಳು.]

ಆಧಾರಸೂಚಿ

೧. James m. Campbell (edit.), **Bijapur,** Gazetteer of India, Govt of Karnataka, 2001, P-662.

೨. ಹೆನ್ರಿ ಕಜನ್ಸ : ಮೂಲ ಲೇಖಕರು, ಡಾ. ವಿಷ್ಣು ಶಿಂಧೆ(ಪ್ರ.ಸಂ), ಡಾ. ರಮೇಶ ರಾಠೋಡ (ಅನು.), **ಬಿಜಾಪುರದ ಆದಿಲ್‌ಶಾಹಿಗಳ ವಾಸ್ತು ಶಿಲ್ಪದ ರೂಪರೇಷೆಗಳು**, ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ, ೨೦೧೩, ಪುಟ–೧೦೬.

೩. ಡಾ. ಮಹಾಂತೇಶ ಬಿರಾದಾರ, ಬರದ ನಾಡಿನ ಭರವಸೆಯ ಕಿರಣ: ಕೆರೆ ನೀರು ತುಂಬುವ ಯೋಜನೆ, **ನುಡಿ ಗುಮ್ಮಟ**, ನೆನಪಿನ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೩, ಪುಟ–೪೨೪.

ದಾವಣಗೆರೆ ನಗರಕ್ಕೆ ರೈಲು ಸಂಪರ್ಕ–ಬ್ರಿಟಿಷರು ಮತ್ತು ಮೈಸೂರು ಒಡೆಯರ ಪ್ರಯತ್ನಗಳು

ಡಾ. ಬಿ.ಪಿ. ಕುಮಾರ್*

ಬ್ರಿಟಿಷ್ ವಸಾಹತುಶಾಹಿ ಆಡಳಿತಾವಧಿಯಲ್ಲಿ ಹಲವು ರಂಗಗಳು ಅಭಿವೃದ್ಧಿ ಕಂಡವು. ಅವುಗಳಲ್ಲಿ ಬಹಳಷ್ಟು ರಂಗಗಳು ವಸಾಹತು ಹಿತಾಸಕ್ತಿ ಪೂರೈಕೆಗೆ ಪೂರಕವಾಗಿದ್ದರೂ, ಪರೋಕ್ಷವಾಗಿ ಸ್ಥಳೀಯರಿಗೆ ಹಲವು ಪ್ರಯೋಜನಗಳೂ ಆದವು. ಅಂತಹ ರಂಗಗಳಲ್ಲಿ ರೈಲ್ವೆಯೂ ಒಂದು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ರೈಲು ಸಾರಿಗೆ ೧೯ನೇ ಶತಮಾನದ ಪೂರ್ವಾರ್ಧದಲ್ಲಿ ಪ್ರಗತಿ ಕಾಣಲಾರಂಭಿಸಿತು. ೧೮೩೦ರಲ್ಲಿ ಸ್ಟೀಮ್–ಎಂಜಿನ್ ಮೂಲಕ ಇಂಗ್ಲೆಂಡಿನಲ್ಲಿ ರೈಲು ಸಂಚಾರ ಆರಂಭವಾಯಿತು. ವಿಶಾಲ ಭಾರತದ ಅಧಿಪತ್ಯ ಹೊಂದಿದ್ದ ಬ್ರಿಟಿಷರು ಭಾರತದಲ್ಲಿ ೧೮೫೩ರಲ್ಲಿ ರೈಲು ಸಂಚಾರ ಪರಿಚಯಿಸಿದರು.

ಮೈಸೂರು ರಾಜ್ಯವು ಬ್ರಿಟಿಷ್ ಕಮೀಷನರ್ ಆಳ್ವಿಕೆಗೆ ಒಳಪಟ್ಟಿತ್ತು. ಮೈಸೂರು ಪ್ರಾಂತ್ಯದಲ್ಲಿ ೧೮೬೪ರಲ್ಲಿ ರೈಲು ಶಕೆ ಆರಂಭವಾಯಿತು. ಬೌರಿಂಗ್‌ನ ಆದೇಶದಂತೆ ಕ್ಯಾಪ್ಟನ್ ಲಿಂಡ್ಸೆ ಹಾಗೂ ಮುಖ್ಯ ಇಂಜಿನಿಯರ್ ಮೇಸ್ತಾನ್ಲೇ ಅವರು ವರದಿ ನೀಡಿದಂತೆ ರೈಲ್ವೆ ಸಾರಿಗೆ ಕಾರ್ಯ ಆರಂಭವಾಯಿತು. ಮುಂಬೈ, ಮದ್ರಾಸ್, ಮೈಸೂರು ಪ್ರಾಂತ್ಯಗಳು ಬ್ರಿಟಿಷರ ಹಿಡಿತದಲ್ಲಿದ್ದವು. ಆ ಭಾಗದಲ್ಲಿ ರೈಲು ಸೇವೆ ಆರಂಭ ಮಾಡಿದ್ದು ಒಂದು ಗಮನಾರ್ಹ ವಿಷಯ. ೫೬ ಕಿ.ಮೀ. ದೂರದ ಬೆಂಗಳೂರು, ಚನ್ನಪಟ್ಟಣ ನಡುವೆ (೧೮೭೭–೭೮) ಮೊದಲ ಕಂತಿನ ಮಾರ್ಗ ಸಿದ್ಧವಾಯಿತು.

ಈ ಚಾರಿತ್ರಿಕ ಹಿನ್ನೆಲೆಯಲ್ಲಿ ರೈಲ್ವೆ ಸಾರಿಗೆ ಸಂಪರ್ಕ ಕ್ರಾಂತಿಕಾರಕ ಹೆಜ್ಜೆ ಎಂದರೆ ಉತ್ಪ್ರೇಕ್ಷೆಯಾಗಲಾರದು. ಭಾರತದ ಬಾಂಬೆ–ಥಾಣಾದಿಂದ ಮೊದಲುಗೊಂಡ ರೈಲ್ವೆ ಸಾರಿಗೆ ಮೈಸೂರು ಸಂಸ್ಥಾನದಲ್ಲೂ ಬೆಳೆಯಲಾರಂಭಿಸಿತು. ಉತ್ತರ ಮತ್ತು ದಕ್ಷಿಣ ಕರ್ನಾಟಕದ ಸಂಪರ್ಕನಗರ, ವಾಣಿಜ್ಯ ನಗರವಾಗಿದ್ದ ದಾವಣಗೆರೆಯೂ ರೈಲ್ವೆ ಸಂಪರ್ಕ ಪಡೆದು ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಬದಲಾವಣೆ ಕಾಣಲು ಸಾಧ್ಯವಾಯಿತು. ಬೆಂಗಳೂರು–ಮೈಸೂರು ನಡುವಣ ಆರಂಭವಾದ ರೈಲು ಸಂಪರ್ಕ ವಿವಿಧ ಕಾಲಘಟ್ಟದಲ್ಲಿ ದಾವಣಗೆರೆ ಆ ಮೂಲಕ ಹರಿಹರ–ಹುಬ್ಬಳ್ಳಿ ನಡುವೆ ಸಂಪರ್ಕ ಪಡೆಯಿತು. ಹೀಗೆ ಬೆಳವಣಿಗೆ ಹೊಂದಿದ ರೈಲು ಸಂಪರ್ಕವು ಒಮ್ಮಿಂದೊಮ್ಮಲೇ ನಿರ್ಮಾಣವಾದದ್ದಲ್ಲ. ಈ ಹಿನ್ನೆಲೆಯಲ್ಲಿ ದಾವಣಗೆರೆ ನಗರ ಮತ್ತು ಪರಿಸರದ ರೈಲು ಸಂಪರ್ಕ ಪ್ರಗತಿಯ ಅಧ್ಯಯನ ಅರ್ಥಪೂರ್ಣವೆನಿಸುತ್ತದೆ. ೧೯೭೭ರವರೆಗೂ ದಾವಣಗೆರೆ ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುಗಳಲ್ಲೊಂದಾಗಿತ್ತು. ಆದ್ದರಿಂದ ದಾವಣಗೆರೆಯ ರೈಲು ಸಂಪರ್ಕದ ಬೆಳವಣಿಗೆ/ಪ್ರಗತಿ ಚಿತ್ರದುರ್ಗದೊಂದಿಗೂ ಸಂಬಂಧ ಪಡೆದುಕೊಂಡಿರುತ್ತದೆ.

ದಾವಣಗೆರೆಯನ್ನು ಬೆಂಗಳೂರು–ಮೈಸೂರು ನಗರಗಳ ರೈಲು ಸಂಪರ್ಕದೊಂದಿಗೆ ಬೆಸೆಸಲು ಮೂಲಭೂತವಾಗಿ ಹಲವು ಹಿನ್ನೆಲೆಗಳಿದ್ದವು. ಅವುಗಳಲ್ಲಿ ಪ್ರಮುಖವಾದದ್ದೆಂದರೆ ವಾಣಿಜ್ಯನಗರಿ ಮುಂಬೈಗೆ ಸಮೀಪದ ಪೂನಾ–ಬೆಂಗಳೂರು ನಡುವೆ ಸಂಪರ್ಕ ಕಲ್ಪಿಸುವುದು ಹಾಗೂ ಹುಬ್ಬಳ್ಳಿಯ ಮೇಲ್‌ರೈಲುಗಳಿಗೆ ಸಂಪರ್ಕ ಕಲ್ಪಿಸುವುದಾಗಿತ್ತು. ಆದರೆ ಇದರ ಪರೋಕ್ಷ ಪರಿಣಾಮಗಳು ಹಲವು ರಂಗಗಳ ಮೇಲಾದವು. ಕಮೀಷನರ ಕಾಲದಲ್ಲಾದ ಪ್ರಯತ್ನಗಳು ಫಲ ನೀಡಿದ್ದು ೧೮೮೧ರ ನಂತರ.

ಈ ಎಲ್ಲಾ ಹಿನ್ನೆಲೆ ಹೊಂದಿರುವ ದಾವಣಗೆರೆ ಮುಂದೆ ಅನೇಕ ಹತ್ತಿ ಗಿರಣಿಗಳ ನೆಲೆವೀಡಾಯಿತು. ಈ ಕೈಗಾರಿಕಾ ಬೆಳವಣಿಗೆಗೆ ರೈಲ್ವೆ ಸಂಪರ್ಕವೂ ಒಂದು ಪೂರಕ ವಿಷಯವಾಗಿತ್ತು. ೧೯೩೬–೩೭ನೇ ಸಾಲಿನಲ್ಲಿ ಮೈಸೂರು ಸಂಸ್ಥಾನದ ರೈಲ್ವೆ ಆದಾಯವು ೩೩.೨೬ ಲಕ್ಷಗಳಾಗಿದ್ದು, ಉಳಿತಾಯವು ೪.೪೫ ಲಕ್ಷಗಳಾಗಿತ್ತು. ಆಗಿನ ಇಡೀ ರಾಜ್ಯದ ಆದಾಯದ

* ಮುಖ್ಯಸ್ಥರು, ಇತಿಹಾಸ ವಿಭಾಗ, ಎ.ವಿ.ಕೆ. ಮಹಿಳಾ ಕಾಲೇಜು, ದಾವಣಗೆರೆ

ಮೊತ್ತಕ್ಕೂ ಮೀರಿದ ಆದಾಯ ದಾವಣಗೆರೆ ರೈಲ್ವೆ ನಿಲ್ದಾಣದಲ್ಲಿ ಕೇವಲ ಒಂದೇ ತಿಂಗಳಿನಲ್ಲಿ ಲಭ್ಯವಾಗುತ್ತಿದೆ. ಈ ರೀತಿ ಆದಾಯ ನೀಡುತ್ತಿರುವ ದಾವಣಗೆರೆ ರೈಲ್ವೆ ಸಂಪರ್ಕ ಬೇರೆ ಬೇರೆ ಕಾಲಘಟ್ಟದಲ್ಲಿ ನಡೆಯಿತು.

ದಾವಣಗೆರೆ ನಗರವನ್ನು ಬೆಂಗಳೂರಿನಿಂದ ಸಂಪರ್ಕಿಸುವ ಮೂಲ ಮಾರ್ಗವಾಗಿ ಬೆಂಗಳೂರು-ತುಮಕೂರು ನಡುವೆ ೧೮೮೪ರಲ್ಲಿ ರೈಲು ಸಂಪರ್ಕ ಆರಂಭವಾಯಿತು. ಈ ಸಂಪರ್ಕವನ್ನು ದಾವಣಗೆರೆಯವರೆಗೂ ವಿಸ್ತರಿಸುವ ಯೋಜನೆಯಿತ್ತು. ಆದರೆ ಈ ಕಾಲಘಟ್ಟದಲ್ಲಿದ್ದ ಬರಗಾಲ, ಹಣಕಾಸಿನ ಕೊರತೆ ಅಡ್ಡಿಯಾಗಿತ್ತು. ಆದರೂ ಕ್ರಮೇಣ ರೈಲು ಮಾರ್ಗ ನಿರ್ಮಾಣ ನಡೆದಿತ್ತು. ಈ ರೈಲು ಸಂಪರ್ಕ ನಿರ್ಮಾಣಕ್ಕೆ ಮೈಸೂರು ಸಂಸ್ಥಾನ ಮತ್ತು ಬ್ರಿಟಿಷ್ ಸರ್ಕಾರದ ನಡುವೆ ಮಾತುಕತೆಗಳು ನಡೆದವು. ಹರಿಹರ ವಿಭಾಗದ ರೈಲ್ವೆ ರಚನೆಯ ಕೆಲಸವನ್ನು 'ಸದರನ್ ಮರಾಠ ಕಂಪನಿಗೆ' ವಹಿಸುವುದೇ ಸೂಕ್ತವೆಂದು ಬ್ರಿಟಿಷ್ ಸರ್ಕಾರ ಸಲಹೆ ನೀಡಿತು. ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದ ಈ ಕಂಪನಿಗೆ ೧೪೦ ಮೈಲು ಉದ್ದದ ಹಳಿ ನಿರ್ಮಾಣ ಕಾರ್ಯವನ್ನು ವಹಿಸಲಾಯಿತು. ಬೆಂಗಳೂರಿನಿಂದ-ದಾವಣಗೆರೆ ಮಾರ್ಗವಾಗಿ ಹರಿಹರಕ್ಕೆ ರೈಲ್ವೆ ಸಂಪರ್ಕವನ್ನು ೨೧.೦೨.೧೮೮೯ರ ಕಾಲಘಟ್ಟದಲ್ಲಿ ಆರಂಭಿಸಲಾಯಿತು.

ಹೀಗೆ ಬೆಂಗಳೂರಿನಿಂದ ದಾವಣಗೆರೆ ನಗರಕ್ಕೆ ಹಾಗೂ ಹರಿಹರಕ್ಕೆ ರೈಲು ಸಂಪರ್ಕ ದೊರೆಯಿತು. ದಾವಣಗೆರೆ ತಾಲ್ಲೂಕಿನಲ್ಲಿ ಒಟ್ಟು ೫ ರೈಲು ನಿಲ್ದಾಣಗಳಿವೆ. ಅವುಗಳೆಂದರೆ, ಮಾಯಕೊಂಡ, ಕೊಡಗನೂರು, ತೋಳಹುಣಸೆ, ದಾವಣಗೆರೆ, ಅಮರಾವತಿ ಕಾಲೋನಿಗಳಾಗಿವೆ. ಈ ದಾವಣಗೆರೆ ತಾಲ್ಲೂಕಿನಲ್ಲಿ ಒಟ್ಟು ೪೦ ಕಿ.ಮೀ. ರೈಲು ಹಳಿ ಇದೆ. ದಾವಣಗೆರೆ ರೈಲುನಲ್ದಾಣ ಆರಂಭದಲ್ಲೇ ಗೂಡ್ಸ್‌ಷಡ್ಡನ್ನು ಹೊಂದಿತ್ತು. ಇತ್ತೀಚೆಗೆ ಈ ಷೆಡ್ಡನ್ನು ಅಮರಾವತಿ ಕಾಲೋನಿ ಜಂಕ್ಷನ್‌ಗೆ ವರ್ಗಾಯಿಸಲಾಗಿದೆ.

ದ್ವಿತೀಯ ಮಹಾಯುದ್ಧ ಪೂರ್ವ, ಯುದ್ಧಾವಧಿ ಮತ್ತು ಯುದ್ಧಾ ನಂತರದ ರೈಲು ಚಟುವಟಿಕೆಗಳು

ಮೈಸೂರು ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್‌ಗಳ ಪ್ರಕಾರ ೦೧-೧೦-೧೯೩೮ರಿಂದ ಅರಸೀಕೆರೆ-ಹರಿಹರ (ದಾವಣಗೆರೆ ಮೂಲಕ) ಒಂದು ಜೊತೆ ಷಟಲ್‌ಟ್ರೈನ್ ಆರಂಭಿಸಲಾಯಿತು. ಈ ಅವಧಿಯಲ್ಲಿ ರಾಜ್ಯದ ಒಟ್ಟು ರೈಲ್ವೆ ಗಳಿಕೆ (ಲಾಭ) ೦.೬೮ ಲಕ್ಷವಾಗಿತ್ತು. ದಾವಣಗೆರೆ ರೈಲೆ ನಿಲ್ದಾಣದಲ್ಲಿ ಕೇವಲ ಟಿಕೆಟ್ ಕಾಯ್ದಿರಿಸುವ ವಿಭಾಗದಿಂದ ೨೦೧೨ರ ಅಂಕಿ-ಅಂಶಗಳ ಪ್ರಕಾರ ತಿಂಗಳಿಗೆ ಸರಾಸರಿ ೫೦ ಲಕ್ಷ ಆದಾಯ ಬರುತ್ತಿರುವುದು ಇಂದು ಗಮನಿಸಬಹುದಾದ ವಿಷಯವಾಗಿದೆ.

೧೯೩೯-೪೦ರ ಸಾಲಿನಲ್ಲಿ ಟ್ರೈನ್ ಸಂಖ್ಯೆ ೫೫ ಮತ್ತು ೫೬ನ್ನು (ಅರಸೀಕೆರೆ-ಹರಿಹರ ಮಾರ್ಗದ್ದು) ಹುಬ್ಬಳ್ಳಿಯವರೆಗೆ ವಿಸ್ತರಿಸಲಾಯಿತು. ಈ ವಿಸ್ತರಣೆಯ ಅಂದಿನ ಪ್ರಮುಖ ಉದ್ದೇಶ ಹುಬ್ಬಳ್ಳಿಯ ಮೈಲ್‌ಟ್ರೇನುಗಳೊಂದಿಗೆ ಸಂಪರ್ಕ ಕಲ್ಪಿಸುವುದಾಗಿತ್ತು.

೧೯೪೧-೪೨ರ ಅವಧಿಯಲ್ಲಿ ಕಲ್ಲಿದ್ದಲು ಮುಂತಾದ ಬಳಕೆಯಾಗುವ ವಸ್ತುಗಳ ಖರ್ಚನ್ನು ಕಡಿಮೆಗೊಳಿಸುವ ಕ್ರಮವಾಗಿ ಕೆಲ ಟ್ರೈನುಗಳನ್ನು ನಿಲ್ಲಿಸಲಾಯಿತು. ಉದಾ: ಮೈಸೂರು-ಅರಸೀಕೆರೆ, ಮೈಸೂರು-ಚಾಮರಾಜನಗರ, ಅರಸೀಕೆರೆ-ಹರಿಹರ ಮುಂತಾದವು. ಯುದ್ಧಾವಧಿಯ ರೈಲ್ವೆ ಪರಿಣಾಮಗಳು ದಾವಣಗೆರೆ ನಗರದ ಮೇಲೂ ಬೀರದೇ ಉಳಿಯಲಿಲ್ಲ.

೧೯೪೩-೪೪ರ ಅವಧಿಯಲ್ಲಿ ರೈಲ್ವೆ ಸೆಸ್ ಫಂಡ್‌ನಿಂದ ಚಿತ್ರದುರ್ಗ ಜಿಲ್ಲೆಯ ೧೮ ರೈಲ್ವೆ ಹಳಿ ಕಾರ್ಯವನ್ನು ಅಭಿವೃದ್ಧಿಪಡಿಸಲಾಯಿತು. ೧೯೪೬-೪೭ರ ಅವಧಿಯಲ್ಲಿ ಚಿತ್ರದುರ್ಗ-ಚಿಕ್ಕಜಾಜೂರು ಟ್ರೈನ್‌ನ್ನು ರದ್ದು ಮಾಡಲಾಯಿತು.

ಯುದ್ಧಾನಂತರ ಪ್ರಗತಿ ಯೋಜನೆಯಲ್ಲಿ ೪೫೩ ಲಕ್ಷ ಹಣವನ್ನು ರೈಲ್ವೆ ಪ್ರಗತಿಗೆ ಒಡೆಯರು ಬಿಡುಗಡೆ ಮಾಡಿದರು. ಈ ಹಣದ ವ್ಯಾಪ್ತಿಯಲ್ಲಿ ಅರಸೀಕೆರೆ, ಚಿಕ್ಕಜಾಜೂರು ಹಾಗೂ ದಾವಣಗೆರೆ ರೈಲು ನಿಲ್ದಾಣಗಳು ನವೀಕರಣಗೊಂಡವು.

ರಾಜ್ಯದ ಇತರೆ ರೈಲು ಸೌಕರ್ಯ ಪ್ರಗತಿಯಂತೆಯೇ ದಾವಣಗೆರೆ ಮೇಲಿನ ಬದಲಾವಣೆಗಳೊಂದಿಗೆ ಬೆಳೆದು ಇಂದು ಒಂದು ಪ್ರಮುಖ ಆದಾಯ ನೀಡುವ ರೈಲು ನಿಲ್ದಾಣವಾಗಿದೆ. ಈ ನಿಲ್ದಾಣ ಆಧುನೀಕರಣಗೊಳ್ಳುವ ಮೊದಲು ಮುಂಭಾಗದಲ್ಲಿ ಪಾರ್ಕೊಂದನ್ನು ಹೊಂದಿತ್ತು. ಇಲ್ಲಿ ದಾವಣಗೆರೆ ನಗರಕ್ಕೆ ಸಂಬಂಧಿಸಿದ ಮಾಹಿತಿ ನೀಡುವ ಶಾಸನವೊಂದಿತ್ತು. ಉತ್ತಮ ರೈಲ್ವೆ ಆದಾಯ ನೀಡುವ ಈ ನಗರದೆಹಲಿ-ಬೆಂಗಳೂರು ರಾಜಸ್ಥಾನ-ಆಗ್ರಾ ಮುಂತಾದ ಪ್ರಮುಖ ನಗರಗಳನ್ನು ಸಂಪರ್ಕಿಸುವ, ೫೮ ರೈಲುಗಳು (ಅಂದರೆ ೨೪ ಗಂಟೆ ಅವಧಿಯಲ್ಲಿ) ಇಲ್ಲಿ ಪ್ರತಿನಿತ್ಯ ಓಡಾಡುತ್ತಿವೆ.

ಉತ್ತಮ ಆದಾಯ ತರುತ್ತಿರುವ ಕರ್ನಾಟಕದ ರೈಲ್ವೆ ನಿಲ್ದಾಣಗಳಲ್ಲಿ ಒಂದಾದ ದಾವಣಗೆರೆ ರೈಲ್ವೆ ನಿಲ್ದಾಣವು ಹಲವು ದೃಷ್ಟಿಗಳಲ್ಲಿ, ಸಂದರ್ಭಗಳಲ್ಲಿ ಆಕರ್ಷಣೆಯ ಕೇಂದ್ರವಾಗಿದೆ. ದಾವಣಗೆರೆ ೧೯೬೦ರಿಂದ ೧೯೮೦ರವರೆಗೆ ಹತ್ತಿ ಗಿರಣಿಗಳ

ನಗರವಾಗಿ, ಮ್ಯಾಂಚೆಸ್ಟ್ ಎಂಬ ಖ್ಯಾತಿಗೆ ಒಳಗಾಗಿತ್ತು. ಈ ಖ್ಯಾತಿಗೆ ರೈಲ್ವೆಯು ಅಪಾರ ನೆರವು ನೀಡಿದೆ. ಈ ಭಾಗದಿಂದ ಹೆಚ್ಚಿನ ಪ್ರಮಾಣದ ಹತ್ತಿ ಬಟ್ಟೆಗಳ ರಫ್ತಾಗುತ್ತಿತ್ತು. ಈ ವ್ಯಾಪಾರ ವಹಿವಾಟಿಗೆ ಮೈಸೂರು ಸಂಸ್ಥಾನ ನೀಡಿದ ರೈಲು ಸೇವೆ ಪರಿಣಾಮಕಾರಿಯಾಗಿತ್ತು. ಆದರೆ ಈ ಗಿರಣಿಗಳು ೧೯೯೦ರ ಅವಧಿಗೆ ಅವನತಿಯಾದವು. ಆದರೂ ರೈಲ್ವೆ ವಿಭಾಗವು ಹಿನ್ನಡೆ ಕಾಣಲಿಲ್ಲ. ಈ ನಗರಕ್ಕೆ ತುಂಗಭದ್ರಾ ನೀರು ಕಾಲುವೆಗಳ ಮೂಲಕ ಹರಿಯಲಾಗಿ ರೈತರ ಕೃಷಿ ಚಟುವಟಿಕೆಯಲ್ಲಿ ಬದಲಾವಣೆಯಾಯಿತು.

ರೈತರ ಉತ್ಪನ್ನಗಳಾದ ಮೆಕ್ಕೆಜೋಳ, ಹತ್ತಿ, ಭತ್ತ ಮುಂತಾದವುಗಳ ರಫ್ತಿಗೆ ರೈಲ್ವೆ ನೆರವಾಯಿತು. ಇವುಗಳ ಜೊತೆಜೊತೆಯಲ್ಲಿ ದಾವಣಗೆರೆ ನಗರ ಶೈಕ್ಷಣಿಕವಾಗಿ ಬೆಳೆದಂತೆ ಈ ನಗರಕ್ಕೆ ಬರುವ ವಿದ್ಯಾರ್ಥಿಗಳು, ಪೋಷಕರ ಸಂಖ್ಯೆ ತೀವ್ರವಾಗಿ ಏರತೊಡಗಿ ರೈಲ್ವೆ ದೇಶದ ವಿವಿಧ ಭಾಗಗಳನ್ನು ಸಂಪರ್ಕಿಸಿತು. ಏರ್‌ಪೋರ್ಟ್ ಇಲ್ಲದ ದಾವಣಗೆರೆಗೆ ಪ್ರಥಮ ಆಯ್ಕೆ ರೈಲ್ವೆಯಾಗಿದೆ.

ಆಕರ ಗ್ರಂಥಗಳು

೧. ಬಿ.ಎನ್. ಸತ್ಯನ್ (ಸಂ.), ಗೆಜೆಟಿಯರ್ ಆಫ್ ಇಂಡಿಯಾ, ಮೈಸೂರು ಸ್ಟೇಟ್, ಚಿತ್ರದುರ್ಗ ಡಿಸ್ಟ್ರಿಕ್ಟ್.

೨. ಎಸ್. ಅನೀಸ್ ಸಿರಾಜ್ (ಮು.ಸಂ.), ಮೈಸೂರು ತಾಲ್ಲೂಕು ಗ್ಯಾಸೆಟಿಯರ್, ೨೦೧೦.

೩. ಎಸ್. ಅನೀಸ್ ಸಿರಾಜ್ (ಮು.ಸಂ.), ನಂಜನಗೂಡು ತಾಲ್ಲೂಕು ಗ್ಯಾಸೆಟಿಯರ್, ೨೦೧೧.

೪) ಮೈಸೂರು ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ಸ್, ೧) ೧೯೩೬–೩೭ ರಿಂದ ೧೯೪೬–೪೭ವರೆಗೆ.

೫) ಡಾ. ಬಿ.ಪಿ. ಕುಮಾರ್, ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಚಳವಳಿಗಳು.

೬) ಡಾ. ಎಂ.ಜಿ. ಈಶ್ವರಪ್ಪ (ಸಂ.), ಶತಮಾನದ ದಾವಣಗೆರೆ.

೭) ಜಿಲ್ಲಾ ಸಾಂಕಿಕ ಅಧಿಕಾರಿಗಳ ಕಛೇರಿ, ದಾವಣಗೆರೆ–ಜಿಲ್ಲಾ ಅಂಕಿ ಅಂಶಗಳ ನೋಟ.

೮) ದಾವಣಗೆರೆ ರೈಲ್ವೆ ಇಲಾಖೆಯ ಅಧಿಕಾರಿಗಳಿಂದ ಪಡೆದ ಅಂಕಿ–ಅಂಶಗಳು.

೧೦೦

ಕರ್ನಾಟಕ ಏಕೀಕರಣ ಚಳುವಳಿ ಮತ್ತು ಚಿತ್ರದುರ್ಗ ಜಿಲ್ಲೆ

ಡಾ. ಎಚ್.ಈ. ಬಸವರಾಜಪ್ಪ*

ಪ್ರಾದೇಶಿಕವಾಗಿ ಒಂದು ಭಾಷೆಯ ಆಧಾರದ ಮೇಲೆ ಏಕೀಕರಣಗೊಳಿಸುವ ಪ್ರಕ್ರಿಯೆಯು, ಭಾರತದಲ್ಲಿ ರಾಷ್ಟ್ರೀಯ ಭಾವನೆ ವ್ಯಾಪಕವಾಗಿ ಹರಡಿದ ನಂತರವೇ ಆರಂಭವಾಯಿತು. ಭಾರತದ ಇತರ ಭಾಷೆಗಳನ್ನಾಡುವ ಜನರು ಸಹ ಭಾಷಾವಾರು ಪ್ರಾಂತ್ಯ ರಚನೆಗೆ ಚಳವಳಿ ನಡೆಸಿದರು. ಈ ಸಂದರ್ಭದಲ್ಲಿ ಜನರನ್ನು ಒಗ್ಗೂಡಿಸುವ ಸಾಧನವಾಗಿ ಭಾಷೆಯೂ ಪ್ರಮುಖ ಪಾತ್ರವಹಿಸಿತು. ಅಂದಿನ ಕನ್ನಡ ನಾಡು ವಿವಿಧ ಆಡಳಿತ ಭಾಗದಲ್ಲಿ ಹಂಚಿತ್ತು ಅವುಗಳು ಒಂದೇ ಆಡಳಿತದಲ್ಲಿ ಬರಲು ಕನ್ನಡ ನಾಡಿನ ಎಲ್ಲಾ ಭಾಗದಿಂದಲೂ ಒತ್ತಾಯ ಬಂದಿತು. ಇಂತಹ ಏಕೀಕರಣ ಚಳವಳಿಯಲ್ಲಿ ಚಿತ್ರದುರ್ಗ ಜಿಲ್ಲೆಯೂ ಮುಂಚೂಣಿಯಲ್ಲಿತ್ತು.

ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದ ಏಕೀಕರಣಪೂರ್ವ ಚಟುವಟಿಕೆಗಳು ಕರ್ನಾಟಕದ ಏಕೀಕರಣಕ್ಕೆ ಪೂರಕವಾಗಿದ್ದವು. ೧೮೦೦ ನಂತರ ಚಿತ್ರದುರ್ಗ ಜಿಲ್ಲೆಯಲ್ಲಿ ನಿರ್ಮಾಣವಾದ ರಸ್ತೆ ಮಾರ್ಗಗಳು ಹೊರ ಜಗತ್ತಿನೊಂದಿಗೆ ಸುಲಭ ಸಂಪರ್ಕ ಕಲ್ಪಿಸಿದವು. ಅವುಗಳಲ್ಲಿ ೧೮೩೦ರಲ್ಲಿ ನಿರ್ಮಾಣವಾದ ಬೆಂಗಳೂರು- ಚಿತ್ರದುರ್ಗ ರಸ್ತೆ ಹರಿಹರ ಮಾರ್ಗವಾಗಿ ಬೆಂಗಳೂರು ಮತ್ತು ಧಾರವಾಡ ರಸ್ತೆ ಅತ್ಯಂತ ಪ್ರಮುಖ ಪಾತ್ರವಹಿಸಿದವು. ನಂತರದಲ್ಲಿ ನಿರ್ಮಾಣವಾದ ಹರಿಹರದ ಹತ್ತಿರದ ತುಂಗಭದ್ರ ನದಿಗೆ ೧೮೬೮ರಲ್ಲಿ ತುಂಗಭದ್ರಾ ಮೇಲುಸೇತುವೆಯನ್ನು ಕಮೀಷನರ್ ಕಾಲಾವಧಿಯಲ್ಲಿ ನಿರ್ಮಿಸಲಾಯಿತು. ಬೆಂಗಳೂರು ಮತ್ತು ಚಿತ್ರದುರ್ಗ ನಡುವೆ ರೈಲ್ವೆ ಸಂಪರ್ಕದಿಂದಾಗಿ ಆಧುನಿಕ ಜಗತ್ತಿನ ಸಂಪರ್ಕವೇ ಕನ್ನಡಿಗರಿಗೆ ದೊರೆತಂತಾಯಿತು. ಸದರನ್ ಮರಾಠ ರೈಲ್ವೆ ಕಂಪನಿಯು ಪುಣೆ- ಹರಿಹರದೊಂದಿಗೆ ರೈಲ್ವೆ ಸಂಪರ್ಕ ಕಲ್ಪಸುವ ಮೂಲಕ ಚಿತ್ರದುರ್ಗ ಪ್ರದೇಶವು ೧೯ನೇ ಶತಮಾನದ ಪ್ರಾರಂಭದಲ್ಲಿಯೇ ಕರ್ನಾಟಕದ ಎಲ್ಲಾ ಭಾಗಗಳೊಂದಿಗೆ ನೇರವಾದ ಸಂಪರ್ಕ ಹೊಂದಿತ್ತು. ಹಾಗೂ ಕರ್ನಾಟಕದ ಏಕೀಕರಣ ಚಳವಳಿಯಲ್ಲಿ ಚಿತ್ರದುರ್ಗ ಜಿಲ್ಲೆ ಬಹು ಮುಖ್ಯವಾದ ಪಾತ್ರವಹಿಸಿತ್ತು. ಈ ವೇಳೆಯಲ್ಲಿ ಚಿತ್ರದುರ್ಗ ಜಿಲ್ಲೆಯು ಉತ್ತರ ಕರ್ನಾಟಕ ಮತ್ತು ದಕ್ಷಿಣ ಭಾಗಕ್ಕೆ ಗಡಿ ಪ್ರದೇಶವಾಗಿತ್ತು. ಈ ರೀತಿಯಾದ ಆಡಳಿತಾತ್ಮಕ ಎಲ್ಲೆಯನ್ನು ದಾಟಿದ ಕನ್ನಡಿಗರು ಬಾಂಬೆ ಕರ್ನಾಟಕ, ಹೈದ್ರಾಬಾದ್ ಕರ್ನಾಟಕದ ಭಾಗಗಳ ವಾಣಿಜ್ಯೋದ್ಯಮಿಗಳು ಚಿತ್ರದುರ್ಗ ಮತ್ತು ದಾವಣಗೆರೆಯಲ್ಲಿ ಬಂದು ನೆಲೆಸಿದರು.

೧೯೨೪ರಲ್ಲಿ ಬೆನಗಲ್ ರಾಮರಾಯರು ಅಧ್ಯಕ್ಷರಾಗಿ, ಬಿ. ಶಿವಮೂರ್ತಿಶಾಸ್ತ್ರೀಗಳು ಕಾರ್ಯದರ್ಶಿಯಾಗಿ ಬೆಂಗಳೂರಿನಲ್ಲಿ ಸ್ಥಾಪನೆಯಾದ ಕರ್ನಾಟಕ ಏಕೀಕರಣ ಸಂಘವು ಮೈಸೂರು ಪ್ರದೇಶದಲ್ಲಿ ಏಕೀಕರಣ ಚಳವಳಿಯನ್ನು ತೀವ್ರಗೊಳಿಸಿತು. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ೧೯೩೬ರಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ತನ್ನ ಸಮ್ಮತಿಯನ್ನು ಸೂಚಿಸಿ ನಿರ್ಣಯವನ್ನು ಮಂಡಿಸಿತು[೧]. ಇದನ್ನು ಅನುಮೋದಿಸಿದ ಮಹಾತ್ಮಗಾಂಧೀಜಿ ಅವರು ಪ್ರತ್ಯೇಕ ಕರ್ನಾಟಕ ಪ್ರಾಂತ್ಯದ ಅಸ್ತಿತ್ವವನ್ನು ಆಶಿಸಿ ಕರ್ನಾಟಕ ಚಿರಾಯುವಾಗಲಿ ಎಂದು ಘೋಷಿಸಿದರು. ೧೯೩೭ರ ಅಕ್ಟೋಬರ್ ೧೦ರಂದು ಕರ್ನಾಟಕದಾದ್ಯಂತ ಕರ್ನಾಟಕ ಏಕೀಕರಣ ದಿನವನ್ನಾಗಿ ಆಚರಿಸಲಾಯಿತ್ತು. ಇದೇ ವೇಳೆಯಲ್ಲಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಚಳ್ಳಕೆರೆ ಇನ್ನಿತರ ಸ್ಥಳಗಳಲ್ಲಿಯೂ ಏಕೀಕರಣ ದಿನವನ್ನಾಚರಿಸಿದ ಬಗ್ಗೆ ವರದಿಗಳಿವೆ.

ಅಂದಿನ ಕರ್ನಾಟಕದ ಏಕೀಕರಣ ಚಳವಳಿಯ ನಾಯಕರಾಗಿದ್ದ ಎಸ್. ನಿಜಲಿಂಗಪ್ಪ, ಜಿ.ವಿ. ಹಳ್ಳಿಕೆರೆ, ಜಿನರಾಜ ಹೆಗ್ಗಡೆ ಮತ್ತು ಕೆ.ಆರ್. ಕಾರಂತ ಅವರು ಆ ಕಾಲದಲ್ಲಿ ಚಿತ್ರದುರ್ಗದೊಂದಿಗೆ ನಿಕಟಸಂಬಂಧ ಹೊಂದಿದ್ದರು. ಕೆ.ಫ್. ಪಾಟೀಲರು ಹೇಳುವಂತೆ "ಎಲ್ಲ ನಾಯಕರಲ್ಲಿ ಬೇಗ ಕರ್ನಾಟಕ ಏಕೀಕರಣ ಆಗಲೇಬೇಕು ಎನ್ನುವ ಕಾತರವಿತ್ತು. ಅದಕ್ಕೆ ಮೊದಲು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಯಾರಾಗಬೇಕು ಎನ್ನುವ ಪ್ರಶ್ನೆಯು ಇತ್ತು. ಮೈಸೂರು ಸಂಸ್ಥಾನ ಮತ್ತು ಬ್ರಿಟಿಷ ಕರ್ನಾಟಕ ಹಾಗೂ ಇತರ ಭಾಗಗಳ ಪ್ರದೇಶಗಳಿಗೂ ಸರಿಹೊಂದುವ ಸಮಾನ ಮನಸ್ಕ ವ್ಯಕ್ತಿಯೊಬ್ಬರು ಆಯ್ಕೆಯಾಗುವುದು ಸೂಕ್ತ ಎನ್ನವುದು ಎಲ್ಲರ ಅಭಿಪ್ರಾಯವಾಗಿತ್ತು ಚಿತ್ರದುರ್ಗ ಅಥವಾ ಶಿವಮೊಗ್ಗ

* ಇತಿಹಾಸ ವಿಭಾಗ, ಕೆ.ಎಲ್.ಇ. ಸಂಸ್ಥೆ, ಬಿ.ಕೆ. ಕಾಲೇಜು, ಚಿಕ್ಕೋಡಿ.

ಜಿಲ್ಲೆಯ ಯಾರಾದರೊಬ್ಬರು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರೆ ಎಲ್ಲ ಕಡೆಯವರನ್ನು ಸರಿದೂಗಿಸಿಕೊಂಡು ಹೋಗುತ್ತಾರೆ. ಎನ್ನುವುದು ಎಲ್ಲ ಕಾರ್ಯಕರ್ತರ ಅಭಿಪ್ರಾಯವಾಗಿತ್ತು. ಏಕೆಂದರೆ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳು ಉತ್ತರ ಕರ್ನಾಟಕದ ಗಡಿ ಪ್ರದೇಶವಾಗಿದ್ದು, ಈ ಭಾಗದ ನಾಯಕರೊಂದಿಗೆ ಉತ್ತರ ಕರ್ನಾಟಕದ ಕಾಂಗ್ರೆಸ್ ನಾಯಕರು ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ನಿಕಟ ಸಂಬಂಧವನ್ನು ಇಟ್ಟುಕೊಂಡಿದ್ದರು. ಹೀಗಾಗಿ ಈ ಪ್ರದೇಶದ ವ್ಯಕ್ತಿಗಳು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರಾದರೆ ಸಮಗ್ರ ಕರ್ನಾಟಕದ ದೃಷ್ಟಿಯಿಂದ ಸರಿ ಎಂಬ ಅಭಿಪ್ರಾಯ ಕಾಂಗ್ರೆಸ್ ನಾಯಕರದಾಗಿತ್ತು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಎರಡೂ ಕಡೆ ಸದಸ್ಯರಾಗಿದ್ದವರು ಮಾತ್ರ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಬಹುದಾಗಿತ್ತು.

ಆದರೂ ಕಾರ್ಯಕರ್ತರ ಮೊದಲ ಆಯ್ಕೆ ಶಿವಮೊಗ್ಗದ ಹೆಚ್. ಸಿದ್ದಯ್ಯನವರಾಗಿದ್ದರು. ಅವರು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸದಸ್ಯರಾಗಿರಲಿಲ್ಲ. ಕರ್ನಾಟಕ ಏಕೀಕರಣದ ದೃಷ್ಟಿಯಿಂದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಯಾರಾಗಬೇಕು ಎಂಬ ಪ್ರಶ್ನೆ ಕಗ್ಗಂಟಾಗಿತ್ತು. ಉತ್ತರ ಕರ್ನಾಟಕ ಕಾಂಗ್ರೆಸ್ ಪಕ್ಷದಲ್ಲಿ ಪ್ರಭಾವಿ ನಾಯಕರಾಗಿದ್ದ ಕೆ.ಎಫ್. ಪಾಟೀಲರು ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಎಸ್. ನಿಜಲಿಂಗಪ್ಪ ಅವರನ್ನೇ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಸೂಕ್ತ ವ್ಯಕ್ತಿ ಎಂದು ಭಾವಿಸಿದರು. ಒಮ್ಮತದಿಂದ ೧೯೪೪ರಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರನ್ನಾಗಿ ಅವರನ್ನು ಆಯ್ಕೆ ಮಾಡಲಾಗಿತ್ತು. ಎಸ್. ನಿಜಲಿಂಗಪ್ಪನವರು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸದಸ್ಯರಾಗಿಯೂ ಹಾಗೂ ಸಂವಿಧಾನ ರಚನಾ ಸಮಿತಿಯ ಸದಸ್ಯರಾಗಿದ್ದರು. ನಂತರ ಉತ್ತರ ಕರ್ನಾಟಕದ ಕಾಂಗ್ರೆಸ್ ಧುರೀಣರ ವಿಶ್ವಾಸ ಗಳಿಸಲು ಸಮಿತಿಯ ಕಾರ್ಯದರ್ಶಿಯನ್ನಾಗಿ ಪ್ರಭಾವಿ ಉತ್ತರ ಕರ್ನಾಟಕದ ಕಾಂಗ್ರೆಸ್ ನಾಯಕರಾದ ಹಳ್ಳಿಕೇರಿ ಗುದ್ಲಪ್ಪ ಅವರನ್ನು ನೇಮಿಸಿ ಪಕ್ಷದೊಳಗಿನ ಟೀಕಾಕಾರರ ಬಾಯಿ ಮುಚ್ಚಿದ್ದರು. ಈ ನೇಮಕ ಅವರ ದೂರದರ್ಶಿ ಹಾಗೂ ಮುತ್ಸದ್ದಿತನದ ಪ್ರತೀಕವಾಗಿತ್ತು. ಎಸ್. ನಿಜಲಿಂಗಪ್ಪ ಚಿತ್ರದುರ್ಗವನ್ನು ಕೇಂದ್ರನ್ನಾಗಿ ಮಾಡಿಕೊಂಡು ಕನ್ನಡ ಪ್ರದೇಶದಲ್ಲಿ ವ್ಯಾಪಕವಾದ ಸಂಚಾರ ಕೈಗೊಂಡು ಜನರ ಸಂಪರ್ಕ ಸಾಧಿಸಿದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಕರ್ನಾಟಕ ಏಕೀಕರಣ ಚಳವಳಿಯ ಮುಂಚೂಣಿಯಲ್ಲಿತ್ತು. ಎಸ್. ನಿಜಲಿಂಗಪ್ಪ ಅದರ ನಾಯಕರಾಗಿದ್ದರು.

ಕರ್ನಾಟಕ ಏಕೀಕರಣಕ್ಕೆ ಕೆಲವರಿಂದ ಉಂಟಾಗಬಹುದಾದ ತೊಂದರೆಯನ್ನು ಗಮನಿಸಿ, ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರು ಚಿತ್ರದುರ್ಗದಲ್ಲಿ ಒಂದು ಹೇಳಿಕೆ ನೀಡಿದರು. 'ಆ ಹೇಳಿಕೆಯಲ್ಲಿ ದ್ವಿಕರ್ನಾಟಕವನ್ನು ಸಕಾರಣವಾಗಿ ಖಂಡಿಸಿದ್ದರು. ಎರಡು ಕರ್ನಾಟಕಗಳಿರಬೇಕೆಂಬುದು ತರ್ಕಬದ್ಧವೂ ಅಲ್ಲ, ಜಾಣತನದ್ದೂ ಅಲ್ಲ, ವ್ಯವಹಾರಿಕವೂ ಅಲ್ಲ" ಎಂದು ಸಾರಿ ಹೇಳಿದರು. ಮೈಸೂರು ಸಂಸ್ಥಾನದಲ್ಲಿ ಕರ್ನಾಟಕ ಏಕೀಕರಣಕ್ಕೆ ಇದ್ದ ವಿರೋಧವನ್ನು ಕಡೆಗಣಿಸಿ, ಏಕೀಕರಣ ಪರವಾದ ಜನಜಾಗೃತಿಯನ್ನು ಮಾಡುವುದು ಅನಿವಾರ್ಯವಾಯಿತು. ಏಕೀಕರಣ ಪರವಾಗಿದ್ದ ಮುಖಂಡರೆಲ್ಲ ಚಿತ್ರದುರ್ಗದಲ್ಲಿ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಇದನ್ನು ಸಾಧಿಸಬೇಕಾದರೆ ಯುವಕರ ಬೆಂಬಲ ಅಗತ್ಯವೆಂದು ಮನಗಂಡರು. ಕರ್ನಾಟಕ ಯುವಕ ಪರಿಷತ್ತಿನ ಆಶ್ರಯದಲ್ಲಿ ಚಿತ್ರದುರ್ಗದಲ್ಲಿ ಕರ್ನಾಟಕ ಏಕೀಕರಣ ಸಮಾವೇಶವನ್ನು ನಡೆಸಲಾಯಿತು. ೧೯೪೬ ಸೆಪ್ಟಂಬರ್ ೩ರಂದು ಚಿತ್ರದುರ್ಗದಲ್ಲಿ ಆರ್.ಆರ್. ದಿವಾಕರ ಅವರು ಪತ್ರಿಕಾವರದಿಯಲ್ಲಿ ಕೆಲವು ಮಹತ್ವದ ಪ್ರಕಟಣೆ ನೀಡಿದರು. ಅದೇನೆಂದರೆ "ಒಂದೇ ಭಾಷೆಯ ಬ್ರಿಟಿಷ ಪ್ರಾಂತ್ಯದ ಮತ್ತು ಸಂಸ್ಥಾನದ ಪ್ರಜೆಗಳು ಒತ್ತಟ್ಟಿಗೆ ಸೇರಿ ತಮ್ಮ ಪ್ರಾಂತ್ಯಕ್ಕೆ ಒಂದೇ ಆಡಳಿತದ ಬೇಡಿಕೆಯನ್ನು ಮಂಡಿಸಿದ ಈ ಮಹಾಸಭೆಯು ಇಡೀ ಭಾರತದಲ್ಲಿಯೇ ಮಹತ್ವದ್ದಾಗಿದೆ." ಬ್ರಿಟಿಷ–ಕರ್ನಾಟಕದಿಂದ ಮುಂಬೈ– ಮದ್ರಾಸ್, ಕೊಡಗುಗಳ ಶಾಸನ ಸಭೆಗಳಿಗೆ ಪ್ರತಿನಿಧಿಗಳಾಗಿದ್ದವರೇ ಈ ಮಹಾಸಭೆಗೂ ಪ್ರತಿನಿಧಿಗಳಾಗಿದ್ದಾರೆ. ಕರ್ನಾಟಕದ ಸಂಸ್ಥಾನಗಳ ಶಾಸನ ಸಭೆಗಳ ಸದಸ್ಯರಾಗಿದ್ದವರು ಈ ಮಹಾಸಭೆಗೆ ಪ್ರತಿನಿಧಿಗಳಾಗಿ ಬಂದಿದ್ದರು. ಈಗಾಗಿ "ಅಖಂಡ ಕರ್ನಾಟಕದ ಪ್ರಾತಿನಿಧಿಕ ವಿಧಿವಿಧಾನಗಳಿಂದಲೇ ದಾವಣಗೆರೆ ಪರಿಷತ್ತು ಪ್ರಾರಂಭವಾಯಿತು. ದಾವಣಗೆರೆಯ ಮಹಾಅಧಿವೇಶನದಲ್ಲಿ ದೇಶಿಯ ಸಂಸ್ಥಾನ ಪ್ರದೇಶಗಳಿಗೆ ಸಂಬಂಧಪಟ್ಟ ನಿರ್ಣಯವೊಂದು ಅಂಗೀಕೃತವಾಯಿತು[೫]. ಇದು'ಅಖಂಡ ಕರ್ನಾಟಕ' ಸ್ಥಾಪನೆಯ ಹಿತದೃಷ್ಟಿಯಿಂದ ಹಾಗೂ ಬ್ರಿಟಿಷ್ ಕರ್ನಾಟಕ ಎಂಬಭಿನ್ನತೆಗಳನ್ನು ಅಳಿಸಿ ಹಾಕುವುದರ ಹಿನ್ನೆಲೆಯಲ್ಲಿ ತೆಗೆದುಕೊಳ್ಳಲಾದ ನಿರ್ಣಯವಾಗಿತ್ತು.

ಚಿತ್ರದುರ್ಗದಲ್ಲಿ ೧೯೪೬ ಜೂನ್‌ನಲ್ಲಿ ಸಭೆ ಸೇರಿದ ಅಖಿಲ ಕರ್ನಾಟಕ ಏಕೀಕರಣ ಪರಿಷತ್ ಸದಸ್ಯರು ಕೆಲವು ನಿರ್ಣಯಗಳನ್ನು ತಗೆದುಕೊಂಡರು. ಮೊದಲು ಒಂದಡೆ ಸೇರಿಸಿ ಕರ್ನಾಟಕ ಪ್ರಾಂತ್ಯವನ್ನು ನಿರ್ಮಿಸುವುದಕ್ಕೆ ಆಂತಕವುಂಟಾಗದಂತೆ ಬ್ರಿಟಿಷ ಕರ್ನಾಟಕ, ಸಂಸ್ಥಾನದ ಕರ್ನಾಟಕದ ಭಿನ್ನತೆಯನ್ನು ಎನಿಸದೆ ಎಲ್ಲರೂ ಕರ್ನಾಟಕದಲ್ಲಿ ಒಂದೇ ಆಡಳಿತವುಳ್ಳ ಸರಕಾರ ರಚಿಸುವುದು ಅಖಂಡ ಕರ್ನಾಟಕದ ಹಿತದೃಷ್ಟಿಯಿಂದ ಒಳ್ಳೆಯದೆಂದು, ಈ ಅಖಿಲ ಕರ್ನಾಟಕದ ಪ್ರತಿನಿಧಿಗಳ ಪರಿಷತ್ತು ವಿವೇಚಿಸಿತ್ತು. ಭಾಷಾವಾರು ಪ್ರಾಂತ್ಯ ರಚನೆಯ ವಿಷಯವನ್ನು ಮಹತ್ವದ ವಿಷಯವೆಂದು ಕರ್ನಾಟಕ ಏಕೀಕರಣ ಸಮಿತಿಯವರು ತಿಳಿದು ಕರ್ನಾಟಕ ಏಕೀಕರಣ ಕಾರ್ಯವು ಬೇಗನೆ ಮುಗಿಯಬೇಕೆಂದು ಈ ಮೂಲಕ ಪರಿಷತ್ ಸೂಚಿಸಿತು[೬]. ಈ ಏಕೀಕರಣ ಸಮಿತಿಗೆ ಬ್ರಿಟಿಷ್ ಭಾರತದಿಂದ ಆಯ್ಕೆಯಾದ ಪ್ರತಿನಿಧಿಗಳೇ ಇರುವುದರಿಂದ ಸಂಸ್ಥಾನಗಳಿಂದಲೂ ಚುನಾಯಿಸಲ್ಪಟ್ಟ ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ತಿಳಿಸಲಾಯಿತು.

೧೯೪೮ರ ಡಿಸೆಂಬರ್‌ನಲ್ಲಿ ಜೈಪುರದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನಕ್ಕೆ ಭಾಷಾವಾರು ಪ್ರಾಂತ್ಯಗಳನ್ನು ಪ್ರತಿನಿಧಿಸುತ್ತಿದ್ದ ಡಾ. ಪಟ್ಟಾಬಿಸೀತಾರಾಮಯ್ಯನವರು ಅಧ್ಯಕ್ಷರಾದರು. ಅವರು ರಚಿಸಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮತ್ತು ಪಾರ್ಲಿಮೆಂಟರಿ ಬೋರ್ಡ್‌ನಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರು ಸದಸ್ಯರನ್ನಾಗಿ ಸೇರಿಸಿಕೊಂಡಿದ್ದರು. ಭಾಷಾವಾರು ಪ್ರಾಂತ್ಯದ ಬಗ್ಗೆ ನೆಹರೂ, ಪಟೇಲ್ ಮತ್ತು ಪಟ್ಟಾಭಿ ಸೀತಾರಾಮಯ್ಯನವರು ಒಂದು ವರದಿಯನ್ನು ನೀಡುತ್ತಾ, ಅದರಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾಗಬೇಕಾದರೆ ದೇಶೀಯ ಸಂಸ್ಥಾನಗಳು ಯುನಿಯನ್ ಪ್ರದೇಶಗಳಲ್ಲಿ ವಿಲೀನವಾಗತಕ್ಕದ್ದು. ದೇಶೀಯ ಸಂಸ್ಥಾನಗಳು ವಿಲೀನವಾಗದೆ ಭಾಷಾವಾರು ಪ್ರಾಂತ್ಯ ರಚನೆ ಸಾಧ್ಯವಿಲ್ಲ ಎಂಬ ವಿಚಾರವನ್ನು ಪ್ರತಿಪಾದಿಸಿದರು. ಮೈಸೂರು ಸಂಸ್ಥಾನವು ದೇಶೀಯ ಸಂಸ್ಥಾನವಾಗಿ ಪ್ರತ್ಯೇಕ ಆಡಳಿತ ಹೊಂದಿ ಒಡೆಯರ ಅಧೀನದಲ್ಲಿರುವುದರಿಂದ, ಅದು ವಿಲೀನವಾಗದ ಹೊರತು ಕರ್ನಾಟಕ ಏಕೀಕರಣ ಸಾಧ್ಯವಿಲ್ಲ ಎಂಬುದನ್ನು ಎಸ್. ನಿಜಲಿಂಗಪ್ಪನವರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು.

ಮೈಸೂರು ಸಂಸ್ಥಾನದಲ್ಲಿ ಕರ್ನಾಟಕ ಏಕೀಕರಣಕ್ಕೆ ಇದ್ದ ವಿರೋಧವನ್ನು ಕಡೆಗಣಿಸಿ, ಏಕೀಕರಣ ಪರವಾಗಿದ್ದ ಮುಖಂಡರೆಲ್ಲ ಚಿತ್ರದುರ್ಗದಲ್ಲಿ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಇದನ್ನು ಸಾಧಿಸಬೇಕಾದರೆ ಯುವಕರ ಬೆಂಬಲ ಅಗತ್ಯವೆಂದು ಮನಗಂಡರು. ಚಿತ್ರದುರ್ಗದಲ್ಲಿ " ಅಖಿಲ ಕರ್ನಾಟಕ ಯುವಕ ಅಧಿವೇಶನ" ವನ್ನು ೧೯೪೮ರಲ್ಲಿ ಕೆ. ವೀರಭದ್ರಪ್ಪನವರು ಸಂಘಟಿಸಿದರು[೭]. ಈ ಅಧಿವೇಶನದಲ್ಲಿ ಸಂಸ್ಥಾನಗಳ ಮತ್ತು ಬ್ರಿಟಿಷ ಕರ್ನಾಟಕದ ಯುವಕರು ಅಧಿಕ ಸಂಖ್ಯೆಯಲ್ಲಿ ಸೇರಿದ್ದರು. ಈ ಅಧಿವೇಶನವು ಪಕ್ಷಾತೀತವಾಗಿತ್ತು. ಕೇವಲ ಕಾಂಗ್ರೆಸ್ ಪಕ್ಷವಲ್ಲದೆ ವಿರೋಧ ಪಕ್ಷದ ಮುಖಂಡರಾದ ಜೆ. ಮಹಮ್ಮದ್ ಇಮಾಂ (ಜಗಳೂರು) ಸಹ ಬಂದಿದ್ದರು. ಈ ಅಧಿವೇಶದಲ್ಲಿ ತೆಗೆದುಕೊಂಡ ಮುಖ್ಯ ನಿರ್ಧಾರಗಳಿಗೆ ಕರ್ನಾಟಕ ಏಕೀಕರಣ ಸಂಘ ಬೆಂಬಲ ವ್ಯಕ್ತಪಡಿಸಿತ್ತು. ಈ ಅಧಿವೇಶನದ ಮುಖ್ಯ ಉದ್ದೇಶವೇ ಏಕೀಕೃತ ಕರ್ನಾಟಕದ ಸ್ಥಾಪನೆಯಾಗಿತ್ತು.

ಎಸ್. ನಿಜಲಿಂಗಪ್ಪ, ಎ. ಭೀಮಪ್ಪನಾಯಕ, ಟಿ. ಸಿದ್ದಲಿಂಗಯ್ಯ ಮುಂತಾದವರು ಸೇರಿ ದೆಹಲಿಗೆ ಹೋಗಿ ಕೇಂದ್ರನಾಯಕರನ್ನು ನೋಡಿ ಕರ್ನಾಟಕ ಏಕೀಕರಣ ಸಮಸ್ಯೆಯನ್ನು ಪರಿಶೀಲಿಸಲು ತೀರ್ಮಾನಿಸಿದರು. ನಂತರ ೧೯೪೮ರ ಜನವರಿಯಲ್ಲಿ ಎಸ್. ನಿಜಲಿಂಗಪ್ಪನವರ ನೇತೃತ್ವದಲ್ಲಿ ದೆಹಲಿಗೆ ತೆರಳಿದರು[೮]. ಅಲ್ಲಿ ಡಾ. ರಾಜೇಂದ್ರಪ್ರಸಾದ್, ಪಂಡಿತ್ ನೆಹರು, ಸರ್ದಾರ್ ವಲ್ಲಭಾಯಿ ಪಟೇಲ್ ಮುಂತಾದವರನ್ನು ಭೇಟಿ ಮಾಡಿದರು. ಆಂಧ್ರ ಪ್ರಾಂತ್ಯದ ಜೊತೆಗೆ ಕರ್ನಾಟಕ ಪ್ರಾಂತ್ಯ ನಿರ್ಮಾಣವಾಗಬೇಕೆಂದು ಅವರನ್ನು ಎಸ್. ನಿಜಲಿಂಗಪ್ಪನವರ ನಿಯೋಗ ಒತ್ತಾಯಿಸಿತ್ತು. ಚಿತ್ರದುರ್ಗ ಜಿಲ್ಲೆಯಲ್ಲಿ ಎಸ್. ನಿಜಲಿಂಗಪ್ಪನವರ ಜೊತೆಯಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ ಪ್ರಮುಖರಲ್ಲಿ ಕೆ.ಎಂ. ರುದ್ರಪ್ಪ, ಹೆಚ್.ಕೆ. ಸಿದ್ದವೀರಪ್ಪ, ಗಂಜಿ ವೀರಪ್ಪ, ಕೆ. ವೀರಭದ್ರಪ್ಪ, ಎಚ್. ಸಿದ್ದಯ್ಯ, ಎಣ್ಣೆಕೊಪ್ಪದ ಮಲ್ಲಿಕಾರ್ಜುಪ್ಪಗೌಡ್ರು ಮುಂತಾದವರು ಕರ್ನಾಟಕ ಏಕೀಕರಣಕೋಸ್ಕರ ಅವಿರತವಾಗಿ ದುಡಿದ ವ್ಯಕ್ತಿಯಾಗಿದ್ದಾರೆ[೯]. ಕರ್ನಾಟಕ ಪ್ರಾಂತ್ಯ ನಿರ್ಮಾಣದ ಬೇಡಿಕೆಯನ್ನು ಕೇಂದ್ರದ ವರಿಷ್ಠರ ಮುಂದಿಟ್ಟು ಚರ್ಚಿಸಲು ೧೯೪೯ ಅಕ್ಟೋಬರ್‌ನಲ್ಲಿ ಒಂದು ನಿಯೋಗವು ಕೆ. ಎಂ. ರುದ್ರಪ್ಪನವರ ನೇತೃತ್ವದಲ್ಲಿ ದೆಹಲಿಗೆ ಹೋದರು. ದೆಹಲಿಯಲ್ಲಿ ವರಿಷ್ಠರನ್ನು ಕಂಡು ಮಾತುಕತೆ ನಡೆಸಿದರು. ಆದರೆ ಯಾರಿಂದಲೂ ಸ್ಪಷ್ಟ ಉತ್ತರ ದೊರೆಯಲಿಲ್ಲ. ಸರ್ದಾರ್ ಪಟೇಲರು ಮಾತ್ರ ಕರ್ನಾಟಕ ಪ್ರಾಂತ್ಯ ನಿರ್ಮಾಣವಾಗಬೇಕಾದರೆ ಮೈಸೂರು ಸಂಸ್ಥಾನ ವಿಲೀನವಾಗಬೇಕು ಎಂದರು ಹೀಗೆ ಎಸ್. ನಿಜಲಿಂಗಪ್ಪನವರು ಚಿತ್ರದುರ್ಗ ಅನೇಕ ಸ್ಥಳೀಯ ನಾಯಕರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳಲು ಅವರಿಗೂ ಜವಾಬ್ದಾರಿ ನೀಡುವ ಮೂಲಕ ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಎಸ್. ನಿಜಲಿಂಗಪ್ಪನವರು ಹೈದರಾಬಾದ್ ಕರ್ನಾಟಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರ ನೇತೃತ್ವದಲ್ಲಿ ಭಾಷೆ, ಭೌಗೋಳಿಕ ಹಾಗೂ ಆರ್ಥಿಕತೆ ಆಧಾರದ ಮೇಲೆ ಬಳ್ಳಾರಿಯನ್ನು ಕರ್ನಾಟಕದಲ್ಲಿ ವಿಲೀನಗೊಳಿಸಬೇಕೆಂದು ಪ್ರಬಲವಾಗಿ ವಾದಿಸಿದರು[೧೦]. ಚಿತ್ರದುರ್ಗದಲ್ಲಿ ಹಲವು ನಾಯಕರೊಂದಿಗೆ ಸೇರಿ ಜನಜಾಗ್ರತಿ ಮೂಡಿಸಿದ್ದರು. ಸ್ವಾಮಿ ರಮಾನಂದರೊಂದಿಗೆ ಎಸ್. ನಿಜಲಿಂಗಪ್ಪನವರು ಬಹಳ ವರ್ಷಗಳ ಕಾಲ ಸ್ನೇಹ ಬೆಳೆಸಿಕೊಂಡವರು. ಚಿತ್ರದುರ್ಗದಲ್ಲಿ ಎಲ್ಲ ಪ್ರದೇಶದ ನಾಯಕರುಗಳು ಇವರ ಮುಂದಾಳತ್ವದಲ್ಲಿ ನಂಬಿಕೆ ಇಟ್ಟಿದ್ದು, ಏಕೀಕರಣಕ್ಕಾಗಿ ಪ್ರಯತ್ನಿಸಿದರು.

ಸುಮಾರು ಅರ್ಧಶತಮಾನ ಕಾಲಕ್ಕೂ ಹೆಚ್ಚು ಈ ದೇಶದ ಆಗುಹೋಗುಗಳಿಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದ ಎಸ್. ನಿಜಲಿಂಗಪ್ಪನವರ ಬದುಕಿನ ಬಹುದೊಡ್ಡ ಸಾಧನೆ ಎಂದರೆ ಕರ್ನಾಟಕದ ಏಕೀಕರಣಕ್ಕಾಗಿ ನಿರಂತರವಾಗಿ ಧ್ವನಿ ಎತ್ತಿದ್ದು. ೧೯೫೨ರಿಂದ ೧೯೫೬ರವರೆಗೆ ಚಿತ್ರದುರ್ಗ ಲೋಕಸಭಾ ಸದಸ್ಯರಾಗಿದ್ದ ಅವರು ತಮ್ಮ ಏಕೀಕೃತ ಕರ್ನಾಟಕದ ಕನಸಿಗೆ ಅನೇಕ ಅಡ್ಡಿ ಅಡಚಣೆಗಳು ಬಂದರೂ ಎದೆಗುಂದಲಿಲ್ಲ. ಸಂಸತ್ತಿನಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯ ಅಗತ್ಯವನ್ನು ಅವರು ಸತತವಾಗಿ ಪ್ರಸ್ತಾಪಿಸಿದರು. ಕರ್ನಾಟಕ ಏಕೀಕರಣಕ್ಕೆ ಸ್ಥಳೀಯ ಮತ್ತು ರಾಷ್ಟ್ರೀಯ ಪತ್ರಿಕೆಗಳು ಮಹತ್ವ ನೀಡಿದವು. ಎಸ್. ನಿಜಲಿಂಗಪ್ಪನವರ ದೃಢ ನಿಶ್ಚಯ, ತಾಳ್ಮೆ, ಚಾಣಾಕ್ಷತನ ಮತ್ತು ಕನ್ನಡ ಮಾತನಾಡುವ ಪ್ರದೇಶಗಳ ಏಕೀಕರಣ ಚಳವಳಿಯ ನೇತೃತ್ವಗಳ ಪರಿಣಾಮವಾಗಿ ಅನೇಕ ವರ್ಷಗಳ ಹೋರಾಟದ ನಂತರ ಐದು ತುಂಡುಗಳಲ್ಲಿ ಹಂಚಿಹೋಗಿದ್ದ ಕನ್ನಡನಾಡು ೧೯೫೬ರ ನವೆಂಬರ್ ೧ರಂದೇ ಅಸ್ತಿತ್ವಕ್ಕೆ ಬಂದಿತು. ಅನಂತರ ಏಕೀಕೃತ ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ನಾಡಿನ ಬಹುತೇಕ ಪತ್ರಿಕೆಗಳು ಏಕೀಕರಣ ಶಿಲ್ಪಿ ಎಂದು ಅವರನ್ನು ಬಣ್ಣಿಸಿದ್ದವು.

ಅಡಿಟಿಪ್ಪಣಿ

೧. ಜಿ.ಎಸ್. ಹಾಲಪ್ಪ, ಹಿಸ್ಟರಿ ಆಫ್ ಫ್ರೀಡಂ ಮೂಮೆಂಟ್ ಇನ್ ಕರ್ನಾಟಕ, ಸಂಪುಟ ೨, ಪು. ೪೨೩.

೨. ಅದೇ. ಪು. ೪೪೯–೪೫೦.

೩. ಎಸ್. ನಿಜಲಿಂಗಪ್ಪ, ಕರ್ನಾಟಕ ಏಕೀಕರಣ, ದಿವಾಕರ ಆರ್.ಆರ್. (ಸಂ) ಕರ್ನಾಟಕ ಥ್ರೂ ದ ಏಜಸ್, ಪು. ೫೬೦.

೪. ಕೆ. ರಾಘವೇಂದ್ರರಾವ್, ರಾಷ್ಟ್ರಬಂಧು ಎಸ್. ನಿಜಲಿಂಗಪ್ಪ, ಮ್ಯಾನ್ ಅಂಡ್ ಸ್ಟೇಟ್ ಮ್ಯಾನ್, ಪು. ೮೧.

೫. ಅದೇ. ಪುಟ ೮೨.

೬ ಎಂ. ಜಮುನ ಕರ್ನಾಟಕ ಏಕೀಕರಣ ಚಳವಳಿ: ಎಸ್. ಚಂದ್ರಶೇಖರ್ ಸಂಪುಟ ಸಂಪಾದಕರು, ಕರ್ನಾಟಕ ಚರಿತ್ರೆ ಸಂಪುಟ ೭ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು. ೨೨೮.

೭. ಎನ್.ಎ. ಪಾಟೀಲ. ಮುಂಬಯಿ ಕರ್ನಾಟಕ ಏಕೀಕರಣದ ಸ್ಫೂರ್ತಿಯ ಸೆಲೆ, ಕಲಬುರ್ಗಿ ಎಂ.ಎಂ. (ಸಂ) ಭಾರತದ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣದಲ್ಲಿ ಲಿಂಗಾಯತರ ಪಾತ್ರ, ಪು. ೫೨.

೮. ಕೆ.ಎಂ. ರುದ್ರಪ್ಪ, ಕರ್ನಾಟಕ ಏಕೀಕರಣ: ಕಾಳೇಗೌಡ ನಾಗವಾರ (ಸಂ), ಜಿ.ವಿ. ಆನಂದಮೂರ್ತಿ, ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು. ೯೪–೯೫.

೯. ಬಿ.ಸಿ. ಮಹಾಬಲೇಶ್ವರಪ್ಪ, ಹೈದ್ರಾಬಾದ್–ಕರ್ನಾಟಕದಲ್ಲಿ ರಾಜಕೀಯ ಚಳವಳಿಗಳು, ಗುಲ್ಬರ್ಗಾ ವಿಶ್ವವಿದ್ಯಾಲಯ, ೧೯೯೭, ಪು. ೨೨೮.

೧೦. ಪಾಟೀಲ್ ಕಲ್ಲನಗೌಡ, ಕರ್ನಾಟಕ ಏಕೀಕರಣದ ಹಾದಿಯಲ್ಲಿ ವಿವೇಕ ಪ್ರಕಾಶನ, ಹುಬ್ಬಳ್ಳಿ, ೧೯೮೬, ಪು. ೧೧೦.

೧೧೧

ರಾಜ್ಯ ಪತ್ರಾಗಾರದ ಪರಿಚಯ ಮತ್ತು ಕಾರ್ಯಚಟುವಟಿಕೆಗಳು

ಮಂಜುಳಾ ಯಲಿಗಾರ*

ದಾಖಲೆಗಳು ದೇಶದ ಸಾಂಸ್ಕೃತಿಕ ಸಂಪತ್ತು. ಸಾರ್ವಜನಿಕ ಜೀವನದಲ್ಲಿ ಸರ್ಕಾರದ ದೈನಂದಿನ ಕಾರ್ಯಗಳಲ್ಲಿ ಹಾಗೂ ಸಂಶೋಧನೆಯಲ್ಲಿ ಇವುಗಳ ಉಪಯೋಗ ಬಹುಮುಖವಾಗಿದೆ. ಈ ಅಭಿಲೇಖ/ದಾಖಲೆಗಳ ಅಂತರ್ಗತ ಮೌಲ್ಯಗಳಿಂದಾಗಿ ಅವುಗಳ ಸಂಗ್ರಹಣೆ ಸಂರಕ್ಷಣೆ ಇಂದು ಅತ್ಯಗತ್ಯವಾಗಿದೆ. ದಾಖಲೆಗಳ ಸಂಗ್ರಹಣೆ, ಸುವ್ಯವಸ್ಥಿ ಜೋಡಣೆ, ಪರಾಮರ್ಶನ ಮಾಧ್ಯಮಗಳ ತಯಾರಿಕೆ, ಅಮೂಲ್ಯ ದಾಖಲೆಗಳ ಪ್ರಕಟಣೆ, ಅವುಗಳ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಹಾಗೂ ಯುವ ಸಂಶೋಧಕರಲ್ಲಿ ಜಾಗೃತಿಯನ್ನುಂಟು ಮಾಡುವ ಕಾರ್ಯಗಳು ಪತ್ರಾಗಾರ ಇಲಾಖೆಯ ಕ್ರಿಯೆಗಳಾಗಿವೆ.

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯು ೧೯೭೪ರಲ್ಲಿ ಸ್ಥಾಪಿತವಾಗಿದ್ದು ವಿಧಾನಸೌಧದ ಕೊಠಡಿ ಸಂಖ್ಯೆ : ೧೧ರಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮೈಸೂರು ವಿಭಾಗೀಯ ಪತ್ರಾಗಾರ ಕಛೇರಿ ಮೈಸೂರಲ್ಲಿ, ಹಾಗೂ ಬೆಳಗಾವಿ ವಿಭಾಗೀಯ ಪತ್ರಾಗಾರ ಕಛೇರಿಯು ಧಾರವಾಡದಲ್ಲಿ ತೆರೆದಿದೆ. ಪ್ರಸ್ತುತ ಧಾರವಾಡದ ಪ್ರಾದೇಶಿಕ ಪತ್ರಾಗಾರ ಕಛೇರಿಯು ೧೯೮೦ರಿಂದ ಕರ್ನಾಟಕ ವಿಶ್ವಿದ್ಯಾಲಯದ, ಕನ್ನಡ ಅಧ್ಯಯನ ಪೀಠದ ೨ನೇ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಸರ್ಕಾರಿ ಮತ್ತು ಖಾಸಗಿ ದಾಖಲೆಗಳ ಸಂಗ್ರಹ

ನಿರ್ದಿಷ್ಟವಾದ ಮತ್ತು ಅಧಿಕೃತವಾದ ದಾಖಲೆಗಳ ಸಂಗ್ರಹಾಗಾರವಾಗಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯು ಪೂರ್ಣಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಐತಿಹಾಸಿಕ ಮಹತ್ವದ ಸರ್ಕಾರಿ ದಾಖಲೆಗಳನ್ನು ರಕ್ಷಿಸುವುದರ ಜೊತೆಗೆ ಖಾಸಗಿ ವ್ಯಕ್ತಿ, ಸ್ವಾತಂತ್ರ್ಯ ಹೋರಾಟಗಾರರು, ಧಾರ್ಮಿಕ ಮತ್ತು ಶೈಕ್ಷಣಿಕ ಸಂಘ ಸಂಸ್ಥೆಗಳ ವಶದಲ್ಲಿರುವ ಕಾಗದ ಪತ್ರಗಳನ್ನು ಸಂರಕ್ಷಿಸಿ ಭವಿಷ್ಯದ ಪೀಳಿಗೆಗೆ ಸಂಶೋಧನೆಗೆ ನೆರವಾಗುವಂತೆ ಅವುಗಳನ್ನು ರಕ್ಷಿಸಿಕೊಂಡು ಬರುವ ಉದ್ದೇಶವನ್ನು ಹೊಂದಿದೆ.

ನಿವೃತ್ತ ಆಡಳಿತಗಾರರು, ಸಮಾಜಸೇವಕರು ಹಾಗೂ ಗಣ್ಯ ವ್ಯಕ್ತಿಗಳು ತಮ್ಮಲ್ಲಿರುವ ಪತ್ರ ವ್ಯವಹಾರ, ದಿನಚರಿ ಹಾಗೂ ಇತರ ಐತಿಹಾಸಿಕ ಮಹತ್ವದ ಕಾಗದ ಪತ್ರಗಳನ್ನು ಹೊಂದಿರಬಹುದು. ಹಿಂದಿನ ರಾಜವಂಶಗಳ ಹಾಗೂ ಪಟೇಲ, ಶಾನುಭೋಗ, ದೇಶಪಾಂಡೆ, ದೇಸಾಯಿ, ದೇಶಮುಖ ಅಥವಾ ಪಾಳೆಯಗಾರರ ವಂಶಸ್ಥರು ತಮ್ಮ ಮನೆತನದ ಸನ್ನದುಗಳು, ಪತ್ರ ವ್ಯವಹಾರ, ರಾಜಾಜ್ಞೆ, ಕಂದಾಯದ ಕಾಗದ ಪತ್ರಗಳು, ಮುಂತಾದವುಗಳನ್ನು ಹೊಂದಿರಬಹುದು. ದೇವಾಲಯ, ಮಠ, ಮಸೀದಿ, ಇಗರ್ಜಿ, ಶೈಕ್ಷಣಿಕ ಇಲ್ಲವೇ ಧರ್ಮ ಸಂಸ್ಥೆಗಳೂ ತಮ್ಮಲ್ಲಿ ಐತಿಹಾಸಿಕ ಮಹತ್ವದ ಕಾಗದ ಪತ್ರಗಳನ್ನು ಹೊಂದಿರಬಹುದು. ಅಂತಹ ಕಾಗದ ಪತ್ರಗಳನ್ನು ಸ್ವೀಕರಿಸಿ ರಕ್ಷಿಸಲು ರಾಜ್ಯ ಪತ್ರಾಗಾರವು ಸಂತೋಷದಿಂದ ಮುಂದಾಗುವುದು. ಇಂಥ ದಾಖಲೆಗಳನ್ನು ದಾನ ನೀಡಲು ಸಾಧ್ಯವಿಲ್ಲವಾದಲ್ಲಿ ಅವುಗಳನ್ನು ಪರಿಶೀಲಿಸಿ ಅವುಗಳ ಛಾಯಾಚಿತ್ರ ಪಡೆಯಲು ಕೂಡಾ ರಾಜ್ಯ ಪತ್ರಾಗಾರ ಸಿದ್ಧವಿದೆ. ಕಾಗದ ಪತ್ರಗಳು ಮುಕ್ಕಾಗುವುದು ಇಲ್ಲವೇ ಅವುಗಳ ಅಕ್ಷರಗಳು ಮಬ್ಬಾಗುವ ಸಾಧ್ಯತೆಗಳಿವೆ. ಸಂಶೋಧನೆಗೆ ಪ್ರೋತ್ಸಾಹ ನೀಡಲು ತುರ್ತಾಗಿ ಅವುಗಳ ರಕ್ಷಣೆಗೆ ಕ್ರಮ ಕೈಗೊಳ್ಳುವುದರ ಅವಶ್ಯಕತೆ ತೀವ್ರವಾಗಿದೆ. ಕೇವಲ ಕಾಗದದ ದಾಖಲೆಗಳು ಹಾಗೂ ಕಡತಗಳು ಇಲಾಖೆಯು ಗಮನಿಸುವ ವಸ್ತುಗಳು.

ಹಳೆಯ ವರ್ತಮಾನಪತ್ರ, ಸ್ಮರಣ ಸಂಚಿಕೆಗಳು, ಸುದ್ದಿ ಪತ್ರಿಕೆಯ ತುಣುಕುಗಳು, ಕರಪತ್ರಗಳು, ಛಾಯಾಚಿತ್ರಗಳು ಮತ್ತು ಮಾರಾಟಕ್ಕೆ ಸಿಗಲಾರದಂತಹ ಇತರ ಪ್ರಕಟಣೆಗಳನ್ನೂ ಹೊಂದಿರುವ ವ್ಯಕ್ತಿ ಮತ್ತು ಸಂಸ್ಥೆಗಳು ಅಂತಹ ಪ್ರಕಟಣೆಗಳ ಒಂದು ಪ್ರತಿಯನ್ನು ಪತ್ರಾಗಾರಕ್ಕೆ ದಾನ ನೀಡಬಹುದು. ಅವುಗಳು ಒಂದು ಹಳ್ಳಿ, ಪಟ್ಟಣ, ತಾಲ್ಲೂಕು, ಜಿಲ್ಲೆ, ಇಲ್ಲವೆ

* ಸಹಾಯಕ ಪತ್ರಪಾಲಕರು, ಪ್ರಾದೇಶಿಕ ಪತ್ರಾಗಾರ ಕಛೇರಿ, ಧಾರವಾಡ-೦೩.

ಒಂದು ಸಮುದಾಯ ಅಥವಾ ಜಾತಿಗೆ ಸಂಬಂಧಿಸಿದ ಐತಿಹಾಸಿಕ ಮಹತ್ವದ ಪ್ರಕಟಣೆಗಳಾಗಿದ್ದರೂ ಸರಿ. ಮೂಲ ದಾಖಲೆಗಳನ್ನು ನೀಡಲು ಇಚ್ಛಿಸದಿದ್ದಲ್ಲಿ ಅವುಗಳನ್ನು ಸ್ಥಳದಲ್ಲಿಯೇ ಸ್ಕ್ಯಾನ್/ಸೂಕ್ಷ್ಮ ಚಿತ್ರೀಕರಣ (ಮೈಕ್ರೋಫಿಲ್ಮ್) ಮಾಡಿ ಮೂಲ ದಾಖಲೆ ಹಿಂತಿರುಗಿಸಲಾಗುವುದು.

ಪುಸ್ತಕಗಳ ಸಮೃದ್ಧ ಸಂಗ್ರಹ ಗ್ರಂಥಾಲಯ ಸೌಲಭ್ಯ

ಇಲಾಖೆಯು ಪುಸ್ತಕಗಳ ಸಮೃದ್ಧ ಸಂಗ್ರಹವನ್ನು ಹೊಂದಿದೆ. ಸರ್ಕಾರದ ವರದಿಗಳು, ಚರ್ಚೆಗಳು, ಅಲ್ಲದೇ ಐತಿಹಾಸಿಕ, ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಹಿತ್ಯಿಕ ಮೌಲ್ಯಗಳಿರುವ ಪುಸ್ತಕಗಳ ಉಪಯೋಗವನ್ನು ಸಂಶೋಧಕರು/ ಸಾರ್ವಜನಿಕರು ಗ್ರಂಥಾಲಯದಿಂದ ಸಹ ಪಡೆಯಬಹುದು. ರಾಜ್ಯ ಪತ್ರಾಗಾರವು ಐತಿಹಾಸಿಕ ಮಹತ್ವವುಳ್ಳ ದಾಖಲೆಗಳಿಂದ ಮೈಸೂರು ರಾಜ್ಯ ಬ್ರಿಟಿಷ್ ಆಡಳಿತ, ಹೈದರಾಲಿ, ಟಿಪ್ಪುಸುಲ್ತಾನ ಮತ್ತು ಫ್ರೆಂಚರ್ ನಡುವೆ ನಡೆದ ಪತ್ರ ವ್ಯವಹಾರಗಳು, ಫ್ರೆಂಚ್ ದಾಖಲೆಗಳು, ಭಾರತ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಏಕೀಕರಣ ಚಳುವಳಿ ಮುಂತಾದ ದಾಖಲೆಗಳನ್ನು ಪರಮಾರ್ಶನೆಗೆ ಒದಗಿಸಲಾಗುತ್ತಿದೆ.

ಸಂಶೋಧಕರ ಅಧ್ಯಯನದ ಅನುಕೂಲಕ್ಕಾಗಿ ಇಲಾಖೆಯು ಪ್ರಮುಖವಾಗಿ ವಿಷಯವಾರು ದಾಖಲೆ ಪಟ್ಟಿ, ಸೂಚಿಗಳು, ಗೈಡ್ಸ್, ಇತ್ಯಾದಿ ವಿವಿಧ ಸಾಧನ ಸಹಾಯಕಗಳನ್ನು ತಯಾರಿಸಿದೆ. ಹಲವು ಪ್ರಮುಖ ಆಯ್ದ ಐತಿಹಾಸಿಕ ಮೌಲ್ಯವುಳ್ಳ ದಾಖಲೆಗಳ ಪ್ರಕಟಣಾ ಕಾರ್ಯವನ್ನು ಕೂಡಾ ಹಮ್ಮಿಕೊಂಡಿದೆ. ಈ ದಿಸೆಯಲ್ಲಿ ಈಗಾಗಲೇ ಅನೇಕ ಪುಸ್ತಕಗಳನ್ನು ಪ್ರಕಟಣಾ ರೂಪದಲ್ಲಿ ಹೊರತಂದು ಮಾರಾಟವನ್ನು ಕೂಡ ಮಾಡಲಾಗುತ್ತಿದೆ.

ಧ್ವನಿ/ಮೌಖಿಕ ಇತಿಹಾಸ ಸಂಗ್ರಹ

ಇಲಾಖೆಯು ತನ್ನ ದೈನಂದಿನ ಕಾರ್ಯದ ಜೊತೆಗೆ ನಾಡಿನ ಹೆಸರಾಂತ ಸ್ವಾತಂತ್ರ್ಯ ಹೋರಾಟಗಾರರು, ಕವಿಗಳು, ಸಾಹಿತ್ಯ ದಿಗ್ಗಜರುಗಳು, ಕಲಾವಿದರು, ಯೋಧರು, ಧೀಮಂತ ಆಡಳಿತಗಾರರು, ವಿಜ್ಞಾನಿಗಳು, ರಾಜಕೀಯ ನಾಯಕರು ಹಾಗೂ ನಾಡು ನುಡಿಗೆ ಸೇವೆ ಸಲ್ಲಿಸಿದ ಮಹನೀಯರುಗಳ ನೆನಪುಗಳನ್ನು ಧ್ವನಿ ಸುರುಳಿಯಲ್ಲಿ ಸಂಗ್ರಹಿಸಿ ಮೌಖಿಕ ಐತಿಹಾಸದ ರೂಪದಲ್ಲಿ ಮುಂದಿನ ಪೀಳಿಗೆಗೆ ತಲುಪಿಸುವ ಆಸಕ್ತಿದಾಯಕ ಕಾರ್ಯವನ್ನು ಹಮ್ಮಿಕೊಂಡಿದೆ. ಈ ಸಂಗ್ರಹದಲ್ಲಿ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ನಿಜಲಿಲಂಗಪ್ಪ, ಶ್ರೀ ನಿಟ್ಟೂರು ಶ್ರೀನಿವಾಸ ರಾಯರು, ಶ್ರೀ ಶಿವರಾಮ ಕಾರಂತರು, ಶ್ರೀ ಬಿ.ಡಿ. ಜತ್ತಿ ಹಾಗೂ ಪಾಟೀಲ್ ಪುಟ್ಟಪ್ಪ (ಸಾಹಿತಿಗಳು), ಚನ್ನವೀರ ಕಣವಿ ಮತ್ತು ಎಂ.ಎಂ. ಕಲಬುರ್ಗಿ, ಎಂ.ಸಿ. ಮೋದಿ (ನೇತ್ರ ತಜ್ಞರು), ಶ್ರೀ ಶಿವಕುಮಾರ ಸ್ವಾಮೀಜಿ (ಸಿದ್ಧಗಂಗಾ ಮಠ) ಡಾ. ಎಂ. ಚಿದಾನಂದ ಮೂರ್ತಿ (ಲೇಖಕರು), ಶ್ರೀ ನರಸಿಂಹ ದಾಬಡೆ (ಸ್ವಾತಂತ್ರ್ಯ ಹೋರಾಟಗಾರರು), ಶ್ರೀ ಎಂ.ಎಸ್. ಜೋಯಿಸ್ (ಸ್ವಾತಂತ್ರ್ಯ ಹೋರಾಟಗಾರರು) ಅವರಂತಹ ಮುಂತಾದ ೧೨೦ಕ್ಕೂ ಹೆಚ್ಚು ನಾಡಿನ ಗಣ್ಯ ವ್ಯಕ್ತಿಗಳ ಧ್ವನಿ ಸುರಳಿಗಳ/ಸಿಡಿ ರೂಪದಲ್ಲಿ ಈ ಇಲಾಖೆಯ ಸಂಗ್ರಹದಲ್ಲಿದೆ.

ದಾಖಲೆಗಳ ಜಾಗೃತಿ ಕಾರ್ಯಕ್ರಮ

ಜಿಲ್ಲಾಧಿಕಾರಿಗಳು ಮತ್ತು ಇತರೆ ಕಛೇರಿಗಳಲ್ಲಿನ ದಾಖಲೆಗಳ ಸಂರಕ್ಷಣೆ, ನಿರ್ವಹಣೆ ಕುರಿತು ವಿದ್ಯಾರ್ಥಿಗಳು, ಸಂಶೋಧಕರು ಹಾಗೂ ಸಾರ್ವಜನಿಕರಲ್ಲಿ ಐತಿಹಾಸಿಕ ದಾಖಲೆಗಳ ಬಗ್ಗೆ ಅರಿವು ಮೂಡಿಸಲು ವಿಶ್ವವಿದ್ಯಾಲಯ ಸರ್ಕಾರಿ/ಖಾಸಗಿ ಪದವಿ ಮಹಾವಿದ್ಯಾಲಯ ಹಾಗೂ ಸಂಘ-ಸಂಸ್ಥೆಗಳಿಗೆ, ಧನಸಹಾಯ ನೀಡುವುದರೊಂದಿಗೆ ರಾಷ್ಟ್ರ, ರಾಜ್ಯ, ಮಟ್ಟದ ವಿಚಾರಸಂಕಿರಣ, ಕಾರ್ಯಾಗಾರ, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ.

ಪತ್ರಾಗಾರ ಕೂಟ

ವಿದ್ಯಾರ್ಥಿಗಳಲ್ಲಿ ದಾಖಲೆಗಳ ಜಾಗೃತಿ ಮೂಡಿಸಲೂ ಕರ್ನಾಟಕದಲ್ಲಿರುವ ಸರ್ಕಾರಿ ಮತ್ತು ಅನುದಾನಿತ ಪ್ರಥಮ ದರ್ಜೆ ಕಾಲೇಜು ಮಟ್ಟದಲ್ಲಿ ಪತ್ರಾಗಾರ ಕೂಟ ಎಂಬ ಕಾರ್ಯಕ್ರಮವನ್ನು ಕೂಡಾ ಆಯೋಜಿಸಿ ವಿದ್ಯಾರ್ಥಿಗಳಿಗೆ ದಾಖಲೆಗಳ ಪರಿಚಯವನ್ನುಂಟು ಮಾಡುತ್ತಿದೆ.

ಪ್ರದರ್ಶನ ಕಾರ್ಯಕ್ರಮ

ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲು ಸಾರ್ವಜನಿಕರಿಗೆ, ಸಂಶೋಧಕರಿಗೆ, ಆಡಳಿತಗಾರರಿಗೆ, ವಿದ್ವಾಂಸರಿಗೆ, ಪತ್ರಾಗಾರ ಇಲಾಖೆಯು ತಮ್ಮ ಅಧೀನದಲ್ಲಿ ಸಂಗ್ರಹಿಸಿರುವ ಐತಿಹಾಸಿಕ ಮಹತ್ವವುಳ್ಳ ದಾಖಲೆಗಳು, ಅಪರೂಪದ ಛಾಯಾಚಿತ್ರಗಳು, ಸರ್ಕಾರದ ರೀತಿ ನೀತಿಗಳು, ಇತಿಹಾಸದ ಪ್ರಮುಖ ಘಟನಾವಳಿಗಳು, ನಕಾಶೆಗಳು, ವರದಿಗಳು, ಪತ್ರ ವ್ಯವಹಾರಗಳು ಹೀಗೆ ಹತ್ತು–ಹಲವಾರು ನಿಯತಕಾಲಿಕೆಗಳು, ಆಸಕ್ತಿ ಮೂಡಿಸುವ ಸಂಗತಿಗಳನ್ನು ಒಳಗೊಂಡ ದಾಖಲೆಗಳನ್ನು, ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ, ಜಿಲ್ಲೆ ಮತ್ತು ತಾಲೂಕುಗಳಲ್ಲಿ ಪ್ರಥಮ ದರ್ಜೆ ಕಾಲೇಜು, ಐತಿಹಾಸಿಕ ಉತ್ಸವಗಳು, ಐತಿಹಾಸಿಕ ಸಮ್ಮೇಳನಗಳು, ವಿಚಾರ ಸಂಕಿರಣಗಳು ಮುಂತಾದ ಸಂದರ್ಭಗಳ ಕಾರ್ಯಕ್ರಮಗಳಲ್ಲಿ ಪ್ರದರ್ಶಿಸುತ್ತಾ ಬಂದಿದೆ.

ರಾಷ್ಟ್ರೀಯ ಪತ್ರಾಗಾರ ಕಾರ್ಯನಿರ್ವಹಣೆ

ಸಾರ್ವಜನಿಕರಲ್ಲಿ ಖಾಸಗಿ ಸಂಘ ಸಂಸ್ಥೆಗಳಲ್ಲಿ, ಮಠ ಮಾನ್ಯಗಳಲ್ಲಿ, ರಾಜ್ಯದ ವಿಶ್ವವಿದ್ಯಾಲಯಗಳ ಅಮೂಲ್ಯ ದಾಖಲೆಗಳು, ಐತಿಹಾಸಿಕ ಛಾಯಾಚಿತ್ರಗಳು, ಮುದ್ರಣಗಳು ಮುಂತಾದವುಗಳ ಸಂರಕ್ಷಣೆ, ದುರಸ್ತಿ, ಪ್ರಕಟಣೆ, ಮಾರ್ಗದರ್ಶಕಗಳನ್ನು, ಸಂಗ್ರಹಿಸಿ ಲ್ಯಾಮಿನೇಶನ್, ಮೈಕ್ರೋಫಿಲ್ಮಿಂಗ್ ಹಾಗು ಡಿಜಿಟಲೈಸ್‌ಗೊಳಿಸುವುದಲ್ಲದೆ ಇವುಗಳ ದುರಸ್ತಿ ಮತ್ತು ನವೀಕರಣಗೊಳಿಸುವುದಕ್ಕಾಗಿ ಗಣಕಯಂತ್ರ, ವ್ಯಾಕ್ಯೂಂಕ್ಲೀನರ್, ಸ್ಕ್ಯಾನರ್, ರೆಪ್ರೋಗ್ರಾಫಿ, ಸಂರಕ್ಷಣೆಗೊಳಿಸುವುದಕ್ಕಾಗಿ ಆರ್ಥಿಕ ಧನಸಹಾಯಕ್ಕಾಗಿ ಸಲ್ಲಿಸಿದಂತಹ ಅರ್ಜಿಗಳನ್ನು ರಾಜ್ಯಮಟ್ಟದಲ್ಲಿ ಪರಿಶೀಲಿಸುವುದರೊಂದಿಗೆ ಗೌರವ ಧನ ಮತ್ತು ಆರ್ಥಿಕ ನೆರವು ನೀಡುವಲ್ಲಿ ಸಹಾಯ–ಸಹಕಾರ, ಮಾರ್ಗದರ್ಶನ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಸಂಶೋಧನಾ ವಿದ್ಯಾರ್ಥಿಗಳಿಗೆ ಗೌರವ ಧನಸಹಾಯ

ರಾಜ್ಯದ ವಿಶ್ವವಿದ್ಯಾಲಯಗಳ ಸಮಾಜ ನಿಕಾಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪಿಎಚ್‌ಡಿ ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಗೌರವ ಧನವನ್ನು ನೀಡುತ್ತದೆ. ಇದಕ್ಕೆ ಸಂಧಿಸಿದಂತೆ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ವಿಚಾರ ಸಂಕಿರಣ/ಕಾರ್ಯಾಗಾರವನ್ನು ಹಮ್ಮಿಕೊಳ್ಳುವ ಉದ್ದೇಶ ಹೊಂದಿದೆ.

ದಾಖಲೆಗಳ ಸಂರಕ್ಷಣೆ

ನಾಡಿನ ಭವಿಷ್ಯದ ಪೀಳಿಗೆಗೆ ದಾಖಲೆಗಳನ್ನು ಕಾಲಾನುಕ್ರಮವಾಗಿ ನೈಸರ್ಗಿಕ ಕಾರಣಗಳಿಂದ ಕಾಗದಗಳ ಆಯಸ್ಸು ಕ್ಷೀಣಿಸಿ, ಹರಿದು ಹಾಳಾಗುತ್ತದೆ. ಆದ್ದರಿಂದ ಹಳೆಯ ಚಿಂದಿಯಾದ ದಾಖಲೆಗಳ ಆರೈಕೆ, ದುರಸ್ತಿ ಮತ್ತು ಪುನರಾವಸ್ಥೆಯು ಅತ್ಯವಶ್ಯಕವಾಗುತ್ತದೆ. ಈ ನಿಟ್ಟಿನಲ್ಲಿ ಇವುಗಳ ಪ್ರಧೂಮೀಕರಣ, ಆಮ್ಲೀಕರಣ, ಲ್ಯಾಮಿನೇಷನ್, ಟಿಷ್ಯೂರಿಪೇರಿ, ದಾಖಲೆಗಳ ಮರುಜೋಡಣೆ ಮುಂತಾದ ಕಾರ್ಯವನ್ನು ನಿರ್ವಹಿಸುತ್ತದೆ.

ಐತಿಹಾಸಿಕ ಮಹತ್ವದ ಸರ್ಕಾರಿ ದಾಖಲೆಗಳನ್ನು ಸಂರಕ್ಷಿಸುವುದರ ಜೊತೆಗೆ ಖಾಸಗಿ ವ್ಯಕ್ತಿಗಳ ಸಂಗ್ರಹದಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರು, ಧಾರ್ಮಿಕ/ಶೈಕ್ಷಣಿಕ ಸಂಘ ಸಂಸ್ಥೆಗಳ, ವಶದಲ್ಲಿರುವ ಕಾಗದ ಪತ್ರಗಳನ್ನು ಸಂರಕ್ಷಿಸಿ ಭವಿಷ್ಯದ ಪೀಳಿಗೆಗೆ, ಸಂಶೋಧನೆಗೆ ನೆರವಾಗುವಂತೆ ಅವುಗಳನ್ನು ವೈಜ್ಞಾನಿಕವಾಗಿ ಸಂರಕ್ಷಿಸಿಕೊಂಡು ಬರಲು ಮಾರ್ಗದರ್ಶನ ಮಾಡುತ್ತಾ ಬಂದಿದೆ.

ಪ್ರಕಟಣೆ

ಇಲಾಖೆಯು ತನ್ನ ಸಂಗ್ರಹದಲ್ಲಿರುವ ಮಹತ್ವವುಳ್ಳ ದಾಖಲೆಗಳನ್ನು ಪರಾಮರ್ಶಿಸಿ, ಈಗಾಗಲೇ ಹಲವಾರು ಪುಸ್ತಕಗಳನ್ನು ಹೊರತಂದಿದೆ. ಹಾಗೂ ಪ್ರಕಟಣೆಗೆ ಧನಸಹಾಯ ಕೂಡಾ ನೀಡುತ್ತಾ ಬಂದಿದೆ.

ಗಣಕೀಕರಣ

ಸಾರ್ವಜನಿಕರಿಗೆ, ಸಂಶೋಧಕರಿಗೆ, ಕ್ಷಣಮಾತ್ರದಲ್ಲಿ ದಾಖಲೆಗಳು ಕೈಗೆ ಎಟುಕುವುದಕ್ಕಾಗಿ ಇಲಾಖೆಯಲ್ಲಿ ಸಂಗ್ರಹವಿರುವ ಸಾವಿರಾರು ಐತಿಹಾಸಿಕ ಮಹತ್ವವುಳ್ಳ ದಾಖಲೆಗಳನ್ನು ಸ್ಕ್ಯಾನ್ ಮತ್ತು ಡಿಜಿಟಲೈಸ್ ಮಾಡಿ ಇವುಗಳಿಗೆ ಸರ್ಚ್ ಇಂಜಿನ್

ಎಂಬ ಹುಡುಕುವ ವಿಧಾನವನ್ನು ಅಳವಡಿಸಿಕೊಂಡಿದೆ. ಮಾಹಿತಿ, ತಂತ್ರಜ್ಞಾನ ಕ್ಷೇತ್ರದಲ್ಲಿಯೂ ಹೊಸ ಅಲೆಯನ್ನು ಕಂಡುಕೊಂಡ ಪತ್ರಾಗಾರ ನಿರ್ದೇಶನಾಲಯವು ಇಲಾಖೆಯ ದಾಖಲೆಗಳ ಗಣೀಕೃತಗೊಂಡ ಹಾಗೂ ಸ್ಕ್ಯಾನ್ ಮಾಡಿದ ಮಾಹಿತಿಯು ಡಿಜಿಟಲ್ ಮಾಧ್ಯಮದಲ್ಲಿ ಸಾರ್ವಜನಿಕರ/ಸಂಶೋಧಕರ ಉಪಯೋಗಕ್ಕೆ ತೆರವು ಮಾಡಿಕೊಟ್ಟಿದೆ.

ಸೂಕ್ಷ್ಮ ಚಿತ್ರೀಕರಣ/ಮೈಕ್ರೋಫಿಲಂ

ಪತ್ರಾಗಾರವು ಇಲಾಖೆಯಲ್ಲಿನ ೨೫ ಲಕ್ಷಕ್ಕೂ ಹೆಚ್ಚಿನ ದಾಖಲೆಗಳನ್ನು ಸೂಕ್ಷ್ಮ ಚಿತ್ರೀಕರಣ (ಮೈಕ್ರೋಫಿಲಂ) ಹಿಂದಿನ ದಾಖಲೆಗಳು ಹಳೆಯ ಸುದ್ದಿ ಪತ್ರಿಕೆಗಳು, ಮತ್ತು ಐತಿಹಾಸಿಕ ಪ್ರಾಮುಖ್ಯತೆವುಳ್ಳ ಖಾಸಗಿ ಪತ್ರಗಳು ಮುಂತಾದವುಗಳನ್ನು ಮೈಕ್ರೋಫಿಲಂಗೊಳಿಸಿ ಸಂಶೋಧಕರ ಅಧ್ಯಯನಕ್ಕೆ ಮಾಹಿತಿ ಒದಗಿಸುತ್ತದೆ.

ಕರ್ನಾಟಕ ರಾಜ್ಯಪತ್ರಗಳ ಒದಗಿಸುವಿಕೆ

ಸುಮಾರು ೧೮೬೬ ರಿಂದ ಇಂದಿನವರೆಗೂ ರಾಜ್ಯ ಪತ್ರಗಳು (ಗೆಜೆಟ್ ಕಾಪಿ) ಸಹ ಇಲಾಖೆಯಲ್ಲಿ ಲಭ್ಯವಿದೆ. ಸಾರ್ವಜನಿಕರು ತಮಗೆ ಬೇಕಾದ ಗೆಜೆಟ್ ಕಾಪಿಯ ದೃಢೀಕೃತ ಜೆರಾಕ್ಸ್ ಪ್ರತಿಗಳನ್ನು ಅರ್ಜಿ ಸಲ್ಲಿಸಿ ಪಡೆಯಬಹುದು. ಅಲ್ಲದೆ R.T.I. ಮುಖಾಂತರ ಕೂಡಾ ಪಡೆಯಬಹುದಾಗಿದೆ.

ಸಾರ್ವತ್ರಿಕ ದಾಖಲೆಗಳು ಮತ್ತು ಬಿಡಿ ಪ್ರತಿ ವಿಭಾಗ

ರಾಜ್ಯ ಸರ್ಕಾರದ ಸಚಿವಾಲಯದ ಇಲಾಖೆಗಳ ದಾಖಲೆಗಳ/ಕಡತಗಳ ಸಂರಕ್ಷಣೆ ಮಾಡುವುದರೊಂದಿಗೆ, ಸಚಿವಾಲಯದ ಇಲಾಖೆಗಳಿಗೆ ಬೇಡಿಕೆ ಪತ್ರದ ಆಧಾರದ ಮೇಲೆ ದಾಖಲೆಗಳನ್ನು ಒದಗಿಸುವ ಕಾರ್ಯ ಮಾಡುತ್ತಿದೆ.

ಇಲಾಖೆಯು ಸರ್ಕಾರದ ಸಚಿವಾಲಯದ ಸರ್ಕಾರಿ ಆದೇಶಗಳು, ವರದಿಗಳು, ಇತ್ಯಾದಿಗಳನ್ನು ಬಿಡಿ ಪ್ರತಿಗಳನ್ನು ಶೇಖರಿಸಿ ಇಡಲಾಗಿದ್ದು ಇದರ ಪ್ರತಿಗಳನ್ನು ಸಾರ್ವಜನಿಕರಿಗೂ ಸರ್ಕಾರಕ್ಕೂ ವಿವಿಧ ಇಲಾಖೆಗಳಿಗೂ ಒದಗಿಸಲಾಗುತ್ತದೆ.

ಒಟ್ಟಾರೆ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯು ಸರ್ಕಾರದ ಪರವಾಗಿ ಸಾರ್ವಜನಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಳ ಆರ್ಥಿಕ, ಸಾಮಾಜಿಕ, ರಾಜಕೀಯ, ಐತಿಹಾಸಿಕ ಸಂಶೋಧನೆಗಳಿಗೆ ಹಲವಾರು ಯೋಜನೆಗಳನ್ನು ಹಮ್ಮಿಕೊಂಡು ರಾಷ್ಟ್ರದ ಇತಿಹಾಸ ಪುನಾರಚನೆಗೆ ತನ್ನ ತೆಕ್ಕೆಯಲ್ಲಿರುವ ದಾಖಲೆಗಳನ್ನು ಸಂಶೋಧಕರಿಗೆ ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ.

ಕರ್ನಾಟಕದಲ್ಲಿ ಇನ್ನಷ್ಟು ಪತ್ರಾಗಾರದ ಚಟುವಟಿಕೆಗಳ ಕಾರ್ಯ ಭರದಿಂದ ಸಾಗಬೇಕಾಗಿದೆ. ಈ ನಿಟ್ಟಿನಲ್ಲಿ ಇಲಾಖೆಯ ಹಲವಾರು ಯೋಜನೆಗಳ ಸದೋಪಯೋಗವನ್ನು ಪಡೆದುಕೊಳ್ಳುವುದರೊಂದಿಗೆ, ಸಂಶೋಧಕರು, ಸಂಘ ಸಂಸ್ಥೆಗಳು, ವಿದ್ವಾಂಸರು, ಗಣ್ಯವ್ಯಕ್ತಿಗಳು, ಸರ್ಕಾರಿ ಇಲಾಖೆಗಳು ತಮ್ಮ ಅಧೀನದಲ್ಲಿರುವ ಐತಿಹಾಸಿಕ ಮಹತ್ವವುಳ್ಳ ದಾಖಲೆ ಪತ್ರಗಳನ್ನು, ಕಡತಗಳನ್ನು, ಪತ್ರಾಗಾರಕ್ಕೆ ನೀಡುವುದರೊಂದಿಗೆ ಸಹಾಯ ಸಹಕಾರ ನೀಡಬೇಕಾಗಿ ಕೋರಲಾಗಿದೆ.

ದಾಖಲೆಗಳ ಆಯುಷ್ಯ ಕ್ಷೀಣಿಸಿದಂತೆ, ದಾಖಲೆಗಳ ವಿಷಯವು ನಶಿಸಿಹೋಗುವುದರಿಂದ ಯುವ ಸಂಶೋಧಕರು ಇಲಾಖೆಯ ಸಂಗ್ರಹಾಗಾರದಲ್ಲಿರುವ ದಾಖಲೆಗಳನ್ನು ಪರಾಮರ್ಶಿಸಿ ಹಲವಾರು ಐತಿಹಾಸಿಕ ಮಹತ್ವದ ಸಂಗತಿಗಳನ್ನು ಹೊರತಂದು ನಾಡಿನ ಇತಿಹಾಸದ ಪುನಃರಚನೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕು.

೧೦೨

ಸದಾಶಿವಮಠ, ಕಮಲಾಪುರ

ಡಾ. ಸಿ.ಎಸ್. ವಾಸುದೇವನ್*

ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನಲ್ಲಿರುವ ಕಮಲಾಪುರದ ಕೆರೆಯ ಅಂಚಿನಲ್ಲಿರುವ ಗಣಪತಿ ದೇವಸ್ಥಾನದ ಹಿಂಬದಿಯಲ್ಲಿ ಸದಾಶಿವ ಮಠವಿದೆ. ಕಮಲಾಪುರದಿಂದ ಹೊಸಪೇಟೆಗೆ ತೆರಳುವ ಮಾರ್ಗದಲ್ಲಿರುವ ಕಮಲಾಪುರ ಕೆರೆಯ ಏರಿಯ ಪ್ರಾರಂಭದಲ್ಲಿ ಬಲಭಾಗಕ್ಕೆ ಸರ್ವೆ ನಂ. ೪೭೮ರಲ್ಲಿ ಗಣಪತಿ ದೇವಾಲಯವಿದೆ (ಅಕ್ಷಾಂಶ ೧೬° ೯೪' ೦೩", ರೇಖಾಂಶ ೬೫° ೯೨' ೫೧"). ಇದು ಶಾದಿಮಹಲಿನಿಂದ ಪಶ್ಚಿಮಕ್ಕೆ ಸುಮಾರು ೨೦೦ ಮೀಟರ್ ಅಂತರದಲ್ಲಿದೆ. ನೈಸರ್ಗಿಕ ಕಣಶಿಲೆ ಬಂಡೆಯಲ್ಲಿ ನಿಂತ ಭಂಗಿಯಲ್ಲಿರುವ ಎಂಟು ಬಾಹುಗಳಿರುವ ಗಣಪತಿಯ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಇದರ ಶೈಲಿಯ ಆಧಾರದಿಂದ ಈ ಶಿಲ್ಪವನ್ನು ಕ್ರಿ.ಶ. ಸುಮಾರು ೧೫–೧೬ನೇ ಶತಮಾನ ಎಂದು ನಿರ್ಧರಿಸಬಹುದು. ಗಣಪತಿ ಶಿಲ್ಪದ ಮುಂಭಾಗದಲ್ಲಿ ಗೂಡನ್ನು ರಚಿಸಿ ದೇವಾಲಯವನ್ನು ೧೯೮೧ರಲ್ಲಿ ನಿರ್ಮಿಸಲಾಗಿದೆ. ಇದರಿಂದಾಗಿ ಗಣಪತಿಯ ಶಿಲ್ಪವು ಗೂಡಿನಲ್ಲಿರುವಂತೆ ಕಾಣುತ್ತದೆ. ಈ ಬಂಡೆಯ ಮುಂಭಾಗದಲ್ಲಿ ಕೋಣೆಯನ್ನು ಗರ್ಭಗೃಹದಂತೆ ರಚಿಸಲಾಗಿದೆ. ಈ ಭಾಗವನ್ನೇ ಗರ್ಭಗೃಹ ಮತ್ತು ಸಭಾಮಂಟಪದಂತೆ ಬಳಸಲಾಗುತ್ತಿದೆ. ಇದರಲ್ಲಿ ಗೋಡೆ ಮತ್ತು ನೆಲದ ಹಾಸುಭಾಗಗಳಿಗೆ ಟೈಲ್ಸ್‌ಗಳನ್ನು ಬಳಸಲಾಗಿದೆ. ಉಬ್ಬುಶಿಲ್ಪವಿರುವ ಬಂಡೆಯ ಮೇಲೆ ದ್ರಾವಿಡ ಮಾದರಿಯ ಏಕತಳ ವಿಮಾನವನ್ನು ರಚಿಸಲಾಗಿದೆ. ತಳಗಳಲ್ಲಿ ಶಾಲ, ಕೂಟ ಮತ್ತು ಪಂಜರ ಭಾಗಗಳಿರುವ ಹಾರ ಭಾಗವಿದೆ. ಪಕ್ಕದಲ್ಲಿ ಒಂದು ಆಯತಾಕಾರದ ಸಮುದಾಯಭವನವಿದೆ. ಸ್ಥಳೀಯರು ಅದನ್ನು ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಬಳಸುತ್ತಾರೆ. ಗಣೇಶ ದೇವಾಲಯದ ಹಿಂಭಾಗದಲ್ಲಿ ಆಯತಾಕಾರದ ಕಲ್ಲಿನ ಕಟ್ಟಡವಿದ್ದು ಅದಕ್ಕೆ ಕಿರಿದಾದ ಪ್ರಾಕಾರ ಗೋಡೆಯಿದೆ. ಈ ಕಟ್ಟಡದಲ್ಲಿ ಎರಡು ಕೋಣೆಗಳಿದ್ದು ಅವುಗಳನ್ನು ಮಧ್ಯಮ ಗಾತ್ರದ ಕಣಶಿಲೆಯ ಸೈಜುಗಲ್ಲುಗಳಿಂದ ಕಟ್ಟಲಾಗಿದೆ. ಪ್ರಸ್ತುತ ಕಟ್ಟಡವನ್ನು ಸ್ಥಳೀಯರು ಸದಾಶಿವಮಠ ಎಂದು ಕರೆಯುತ್ತಾರೆ. ಕಮಲಾಪುರದಲ್ಲಿ ವಾಸಿಸುವ ಕೆಲ ಹಿರಿಯರು ಈ ಕಟ್ಟಡವನ್ನು ಸದಾಶಿವಮಠವೆಂದು ತಿಳಿಸಿರುವರು.

ಸದಾಶಿವಮಠವು ಪೂರ್ವಾಭಿಮುಖವಾಗಿದೆ. ಮಠದ ಮುಂಭಾಗವನ್ನು ಆವರಿಸಿದಂತೆ ಸುಮಾರು ೫ ಅಡಿ ಎತ್ತರದ ಆವರಣ ಗೋಡೆಯನ್ನು ನಿರ್ಮಿಸಲಾಗಿದೆ. ಆವರಣ ಗೋಡೆಯಲ್ಲಿ ಒಂದು ಪ್ರವೇಶದ್ವಾರವನ್ನು ಒದಗಿಸಲಾಗಿದೆ. ಅದಕ್ಕೆ ಗೋಡೆಗಿಂತ ಎತ್ತರವಾದ ಪ್ರವೇಶದ್ವಾರವಿದ್ದು ಅದಕ್ಕೆ ಯಾವುದೇ ಬಾಗಿಲನ್ನು ಅಳವಡಿಸಿಲ್ಲ. ಪ್ರವೇಶದ್ವಾರದಿಂದ ಮಠದ ಕಟ್ಟಡವಿರುವ ಸ್ಥಳಕ್ಕೆ ಕಣಶಿಲೆಯ ಹಾಸುಗಲ್ಲುಗಳ ಕಿರುಪಥವಿದೆ. ಆವರಣದ ಗೋಡೆಯನ್ನು ಸಹ ಸೈಜುಗಲ್ಲುಗಳ ಸಹಾಯದಿಂದ ಗೋಡೆಯನ್ನು ನಿರ್ಮಿಸಲಾಗಿದೆ. ಪೂರ್ವಾಭಿಮುಖ ಗೋಡೆಯಿಂದ ಮಠದ ಕಟ್ಟಡದ ಭಾಗದವರೆಗೆ ಸುಮಾರು ೧೦ ಅಡಿಗಳಷ್ಟು ವಿಶಾಲವಾಗಿದೆ. ದಕ್ಷಿಣ ಭಾಗದಲ್ಲಿ ಕಟ್ಟಡಕ್ಕೆ ಹೊಂದಿಕೊಂಡಂತೆ ನಿರ್ಮಿಸಲಾಗಿದೆ. ಆವರಣ ಗೋಡೆಯ ಮೇಲಿನ ಭಾಗವನ್ನು ಗಾರೆಯ ಲೇಪನದಿಂದ ಕೋನಾಕಾರವಾಗಿ ರಚಿಸಲಾಗಿದೆ.

ಪೂರ್ವ ಭಾಗದ ಹೊರಗೋಡೆಗೆ ಹೊಂದಿಕೊಂಡಂತೆ ಕಣಶಿಲೆಯಲ್ಲಿ ಒರಟಾಗಿ ಕಟ್ಟೆಯನ್ನು ನಿರ್ಮಿಸಲಾಗಿದೆ. ಮಠದ ಭಾಗಕ್ಕೆ ಅಧಿಷ್ಠಾನವಿದ್ದು, ಅದನ್ನು ಗೋಡೆಯ ಭಾಗದಿಂದ ಬೇರ್ಪಡಿಸಿರುವಂತೆ ತೋರಲು ಒಂದು ಸಾಲಿನ ಕಲ್ಲಿನ ಸಾಲನ್ನು ಹೊರಚಾಚಿರುವಂತೆ ನಿರ್ಮಿಸಲಾಗಿದೆ. ಸದಾಶಿವಮಠದ ಪೂರ್ವ ಭಾಗದಲ್ಲಿರುವ ಪ್ರವೇಶದ್ವಾರವು ನೆಲಮಟ್ಟದಿಂದ ಸುಮಾರು ೪ ಅಡಿ ಎತ್ತರದಲ್ಲಿದ್ದು ಅದನ್ನು ನಾಲ್ಕು ಮೆಟ್ಟಿಲುಗಳ ಮೂಲಕ ಬಾಗಿಲನ್ನು ತಲುಪಬಹುದು. ಮಠದ ಬಾಗಿಲ ಇಕ್ಕೆಲಗಳಲ್ಲಿ ದೀಪದ ಗೂಡುಗಳಿವೆ. ಮುಖ್ಯ ಕಟ್ಟಡವು ಆವರಣ ಗೋಡೆಯ ಪ್ರವೇಶದ್ವಾರಕ್ಕೆ ಅಭಿಮುಖವಾಗಿ ಕಟ್ಟಲಾಗಿದೆ. ಮಠವು ಸುಮಾರು ೨೦ ಅಡಿಗಳಷ್ಟು ಎತ್ತರದ ಗೋಡೆಗಳನ್ನು ಹೊಂದಿದೆ. ಇದಕ್ಕೆ ಹೊಂದಿಕೊಂಡಂತೆ ಬಲಭಾಗದಲ್ಲಿ ಅಂದರೆ ಉತ್ತರ ಭಾಗಕ್ಕೆ ಇನ್ನೊಂದು ಕೋಣೆಯಿರುವ ರಚನೆಯಿದೆ. ಈ ರಚನೆಯು ಪ್ರಧಾನ ಕಟ್ಟಡಕ್ಕಿಂತ ಸುಮಾರು ೩ ಅಡಿಗಳಷ್ಟು ಕಿರಿದಾಗಿದೆ. ಪೂರ್ವ ಗೋಡೆಯ ಕಟ್ಟೆಯ ಭಾಗವು ಕಿರಿದಾದ

* ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿವಿ, ಹಂಪಿ, ವಿದ್ಯಾರಣ್ಯ.

ಕೋಣೆಯ ಪ್ರವೇಶ ಬಾಗಿಲವರೆಗೆ ಇರುವುದನ್ನು ಕಾಣಬಹುದು. ಪ್ರಧಾನ ಕಟ್ಟಡದ ಬಾಗಿಲಿನಿಂದ ಎಡಭಾಗದ ಕೋಣೆಯ ಬಾಗಿಲು ಸ್ವಲ್ಪ ಕೆಳಮಟ್ಟದಲ್ಲಿದೆ.


ಮುಖ್ಯ ಕೋಣೆಯನ್ನು ಮೆಟ್ಟಲುಗಳು ಮೂಲಕ ತಲುಪಿ ಅಲ್ಲಿರುವ ಬಾಗಿಲಿನಿಂದ ಪ್ರವೇಶಿಸಬಹುದು. ಬಾಗಿಲನ್ನು ಕಣಶಿಲೆಯಿಂದ ನಿರ್ಮಿಸಿದ್ದು ಬಾಗಿಲವಾಡವು ಸರಳವಾಗಿದೆ. ಬಾಗಿಲ ಲಲಾಟಬಿಂಬದಲ್ಲಿ ಹೂವಿನ ಅಲಂಕರಣವಿದೆ. ಲಲಾಟಬಿಂಬದ ಬಲಭಾಗದಲ್ಲಿ ಕನ್ನಡ ಅಥವಾ ತೆಲುಗು ಲಿಪಿಯ ಶಾಸನವಿದೆ. ಬಾಗಿಲಿನ ತೊಲೆ ಮತ್ತು ಲಲಾಟಬಿಂಬ ಭಾಗಗಳಿಗೆ ಸುಣ್ಣ ಮತ್ತು ಕೆಂಪು ವರ್ಣಗಳನ್ನು ಬಳಿದಿರುವುದರಿಂದ ತೊಲೆಯ ಭಾಗದಲ್ಲಿರುವ ಶಾಸನವು ಅಸ್ಪಷ್ಟವಾಗಿದೆ. ಪ್ರಸ್ತುತ 'ಶಿವಾ ನಮಃ' ಎಂಬ ಅಕ್ಷರಗಳು ಕಾಣಸಿಗುತ್ತವೆ. 'ಶಿವಾಯ ನಮಃ' ಎಂಬ ಸಾಲು ಇರುವ ಸಾಧ್ಯತೆಗಳಿವೆ. ಈ ಬಾಗಿಲಿಗೆ ಮರದ ಬಾಗಿಲು ಅಳವಡಿಸಲಾಗಿತ್ತು. ಅದಕ್ಕೆ ಕುರುಹಾಗಿ ಬಾಗಿಲ ಹೊಸ್ತಿಲಿನ ಭಾಗದಲ್ಲಿ ಕಬ್ಬಿಣದ ಎರಡು ಕೀಲು ಇರುವುದನ್ನು ಕಾಣಬಹುದು.

ಮಠದ ಒಳಭಾಗವು ಆಯತಾಕಾರವಾಗಿದ್ದು ಉತ್ತರ-ದಕ್ಷಿಣವು ಸುಮಾರು ೧೫ ಅಡಿಗಳಷ್ಟು ಇದ್ದರೆ ಪೂರ್ವ-ಪಶ್ಚಿಮವಾಗಿ ೧೦ ಅಡಿಗಳಿವೆ. ಬಾಗಿಲಿನ ಎದುರಿಗೆ ಒಂದು ಗದ್ದುಗೆ ಇದ್ದಿರಬೇಕು. ಅದನ್ನು ಪ್ರಸ್ತುತ ನಿಧಿಗಳ್ಳರು ಅಗೆದು ನೆಲಹಾಸಿನ ಕಲ್ಲುಗಳನ್ನು ಆವರಣದಲ್ಲಿ ಅನಿಯಮಿತವಾಗಿ ಹರಡಿದ್ದಾರೆ. ಮಠದ ಒಳ ಮತ್ತು ಹೊರ ಗೋಡೆಗಳಲ್ಲಿ ಮೂರು ಗೂಡುಗಳನ್ನು, ಪೂರ್ವದ ಗೋಡೆಯಲ್ಲಿ ಎರಡು, ಉತ್ತರ ಮತ್ತು ದಕ್ಷಿಣ ಗೋಡೆಗಳಲ್ಲಿ ತಲಾ ಎರಡು ಗೂಡುಗಳನ್ನು ನಿರ್ಮಿಸಲಾಗಿದೆ. ಗಾಳಿ ಮತ್ತು ಬೆಳಕು ಕೋಣೆಯ ಒಳಗೆ ಬರಲು ಅನುಕೂಲವಾಗುವಂತೆ ಉತ್ತರ ಮತ್ತು ದಕ್ಷಿಣ ಭಾಗದ ಗೋಡೆಗಳಲ್ಲಿ ತಲಾ ಎರಡು ಕಿಂಡಿಗಳನ್ನು ರಚಿಸಲಾಗಿದೆ. ಮಠದ ಛತ್ತಿನ ಭಾಗದಲ್ಲಿ ಎರಡು ಕಲ್ಲಿನ ತೊಲೆಗಳು ಪೂರ್ವ-ಪಶ್ಚಿಮವಾಗಿ ಇರಿಸಿದ್ದು, ಅದರ ಮೇಲೆ ಕಣಶಿಲೆಯ ಹಾಸುಗಲ್ಲುಗಳನ್ನು ಬಳಸಿ ಛತ್ತನ್ನು ನಿರ್ಮಿಸಲಾಗಿದೆ. ಇದರ ಮೇಲ್ಭಾಗದಲ್ಲಿ ಪ್ರಾಯಶಃ ಗಾರೆಯ ಲೇಪನ ಮಾಡಲಾಗಿದೆ. ಮಠದ ಪ್ರಸ್ತರ ಭಾಗವನ್ನು ಒಂದು ಸಾಲಿನ ಕಲ್ಲುಗಳ ಮುಂಚಾಚುಗಳ ಮೂಲಕ ಗೋಡೆಯಿಂದ ಬೇರ್ಪಡಿಸಲಾಗಿದೆ. ಅದರ ಮೇಲಿನ ಭಾಗದಲ್ಲಿ ಮೂರು ಸಾಲುಗಳ ಕೈಪಿಡಿ ಗೋಡೆಯನ್ನು ನಿರ್ಮಿಸಲಾಗಿದೆ.

ಗದ್ದುಗೆಯಿರುವ ಸ್ಥಳದಲ್ಲಿ ಕಣಶಿಲೆಯ ೪ ಅಡಿಯ ನಾಲ್ಕು ಕಲ್ಲುಗಳನ್ನು ಒಂದಕ್ಕೆ ಇನ್ನೊಂದನ್ನು ಆನಿಸಿದಂತೆ ನಿಲ್ಲಿಸಿ ಒಂದು ಕಿರು ಕೋಣೆಯಂತೆ ನಿರ್ಮಿಸಿ ಅದರಲ್ಲಿ ಪ್ರಾಯಶಃ ವ್ಯಕ್ತಿಯ ಶವವನ್ನು ಕುಳಿತ ಭಂಗಿಯಲ್ಲಿರಿಸಿ ಸಮಾಧಿ ಮಾಡಲಾಗಿದೆ. ಕೋಣೆಯ ರಚನೆಯ ಮೇಲಿನ ಭಾಗವನ್ನು ೪ ಅಡಿ ಉದ್ದದ ಕಣಶಿಲೆಯ ಕಲ್ಲಿನಿಂದ (cap stone) ಮುಚ್ಚಲಾಗಿದೆ. ಶವದೊಂದಿಗೆ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿದ ಕೆಲವು ಮೃತ್ಪಾತ್ರೆಗಳು ಮತ್ತು ಲೋಹದ (ತಾಮ್ರದ) ಪಾತ್ರೆಗಳು ಇವೆ. ಗದ್ದುಗೆಯ ಒಳಭಾಗದಲ್ಲಿ ಮರಳಿನಲ್ಲಿ ಈ ಸಂಸ್ಕಾರ ಪಾತ್ರೆಗಳು ಮತ್ತು ಇತರೆ ವಸ್ತುಗಳೊಂದಿಗೆ ಮಾನವನ ಮೂಳೆಗಳು ಕಂಡುಬಂದಿದೆ. ಅವುಗಳಲ್ಲಿ ಮುಖ್ಯವಾಗಿ Humerus, Radius, Ulna, Femur, Tibia, Fibula, clavicle, rib bones, ಮುಂತಾದವುಗಳು ಇವೆ. ತಲೆ ಬುರುಡೆಯು ಕಂಡುಬಂದಿಲ್ಲ. ಮೂಳೆಗಳು ಸಮಾಧಿಯಲ್ಲಿ ಹರಡಿರುವ ವಿಧಾನದಿಂದ ಮತ್ತು ಸಮಾಧಿ ಕೋಣೆಯಲ್ಲಿರುವ ಕಿರು ಪ್ರದೇಶದಿಂದ ಶವವನ್ನು ಕುಳಿತ ಭಂಗಿಯಲ್ಲಿ ಸಮಾಧಿಯನ್ನು ಮಾಡಲಾಗಿದೆ ಎಂದು ತೀರ್ಮಾನಿಸಲಾಗಿದೆ. ಸಮಾಧಿಯ ಮುಚ್ಚಳ ಕಲ್ಲನ್ನು (cap stone) ಪಶ್ಚಿಮದ ಗೋಡೆಗೆ ಆನಿಸಿದಂತೆ ಓರೆಯಾಗಿ ನಿಲ್ಲಸಲಾಗಿದೆ. ಮುಚ್ಚಳ ಕಲ್ಲಿನ ಒಳಭಾಗದಲ್ಲಿ 'ಓಂ ರಾಜರಾಜೀಯೆಶ್ವರಿ ನಃ' ಎಂಬ ತೆಲುಗು ಲಿಪಿಯ ಶಾಸನವಿದೆ. ಪ್ರಸ್ತುತ ಈ ಕಲ್ಲು ತಲೆ ಕೆಳಗೆ ಇದೆ. ಅಂದರೆ ಕಲ್ಲನ್ನು ಮುಚ್ಚಿದಾಗ ಅಕ್ಷರವು ಶವದ ತಲೆಯ ಮೇಲಿನ ಭಾಗಕ್ಕೆ ಬರುತ್ತದೆ. ಅದರ ಕೆಳಭಾಗದ ಸಮಾಧಿಯ ಪಶ್ಚಿಮ ಭಾಗದ ಕಲ್ಲಿನಲ್ಲಿ, ಮೂರು ಸಾಲುಗಳಲ್ಲಿ ಸುಮಾರು ೨೦ನೇ ಶತಮಾನದ ತೆಲುಗು ಲಿಪಿಯಲ್ಲಿ ನಾಲ್ಕು ಸಾಲುಗಳಲ್ಲಿ ಕೆಲವು ಬೀಜಾಕ್ಷರಗಳಿವೆ. ಇದು ಭಾಗಶಃ ಮಣ್ಣಿನಲ್ಲಿ ಹೂತಿದೆ. ಸಮಾಧಿಯ ದಕ್ಷಿಣ ಭಾಗದ ಕಲ್ಲಿನಲ್ಲಿ 'ಓಂ ನಮ ಶಿವಾಯಃ' ಎಂಬ ತೆಲುಗು ಲಿಪಿಯ ಶಾಸನವಿದೆ. ಈ ಶಾಸನವು ಭಾಗಶಃ ಕಾಣಸಿಗುತ್ತದೆ. ಉಳಿದ ಭಾಗವು ಮರಳಿನಲ್ಲಿ ಹೂತಿದೆ. ಸಮಾಧಿಯನ್ನು ನೆರವೇರಿಸಿದ ನಂತರ ಉದ್ದನೆಯ ಹಾಸುಗಲ್ಲುಗಳನ್ನು ನೆಲಕ್ಕೆ ಅಳವಡಿಸಲಾಗಿತ್ತೆಂಬುದು ಕಂಡುಬರುತ್ತದೆ. ಮೇಲ್ಭಾಗದಲ್ಲಿ ಕಿರಿದಾದ ಗದ್ದುಗೆಯನ್ನು ನಿರ್ಮಿಸಿ ಬಹುಶಃ ಲಿಂಗವನ್ನು ಪ್ರತಿಷ್ಠಾಪಿಸಿರಬಹುದು. ಆದರೆ ಇಂದು ಅಲ್ಲಿ ಯಾವ ಅವಶೇಷಗಳೂ ಇಲ್ಲ. ಒಳ ಆವರಣದ ಆಗ್ನೇಯ ಮತ್ತು ನೈಋತ್ಯ ಮೂಲೆಯಲ್ಲಿ ನಾಲ್ಕು ಕಾಲುಗಳಿರುವ ಕಲ್ಲಿನ ಪೀಠವಿದೆ. ಪೂಜಾ ವಸ್ತುಗಳನ್ನು ಮತ್ತು ದೀಪಗಳನ್ನು ಇರಿಸಲು ಗೋಡೆಗಳಲ್ಲಿ ಗೂಡುಗಳನ್ನು ರಚಿಸಲಾಗಿದೆ. ಒಳ ಆವರಣದ ಪ್ರತಿ ಮೂಲೆಯಲ್ಲಿ ಮತ್ತು ತೊಲೆಗಳ ಎರಡೂ ಭಾಗಗಳಲ್ಲಿರುವಂತೆ ಒಟ್ಟು ಎಂಟು ಕಬ್ಬಿಣದ ಕೊಂಡಿಗಳನ್ನು ಅಳವಡಿಸಲಾಗಿದೆ. ವಸ್ತ್ರಗಳನ್ನು



ಸದಾಶಿವಮಠ



ಸದಾಶಿವಮಠದ ಪ್ರವೇಶದ್ವಾರ





ಗಣೇಶ ದೇವಾಲಯದ ಹಿಂಬದಿ ಮತ್ತು ಸದಾಶಿವಮಠದ ಪ್ರವೇಶದ್ವಾರ



ಸದಾಶಿವಮಠದ ಪ್ರವೇಶದ್ವಾರದಲ್ಲಿನ ಶಾಸನ



ನಿಧಿಗಳ್ಳರಿಂದ ತೆರೆದ ಗದ್ದುಗೆ



ಗದ್ದುಗೆಯಲ್ಲಿರುವ ಮಾನವ ಮೂಳೆಗಳು



ಕಾಲುಗಳಿರುವ ಕಲ್ಲಿನ ಪೀಠ



ಮುಚ್ಚಳ ಕಲ್ಲಿನ ಒಳ ಭಾಗದಲ್ಲಿರುವ ಶಾಸನ



ಗದ್ದುಗೆಯ ಕಲ್ಲಿನಲ್ಲಿರುವ ಶಾಸನ



ಗದ್ದುಗೆಯ ಕಲ್ಲಿನಲ್ಲಿರುವ ಶಾಸನ




ದಕ್ಷಿಣ ಗೋಡೆಯಲ್ಲಿರುವ ಶಾಸನಕಲ್ಲು



ಸದಾಶಿವಮಠದ ಇನ್ನೊಂದು ಕೋಣೆಯ ಪ್ರವೇಶದ್ವಾರ ಮತ್ತು ಒಳನೋಟ



ದಕ್ಷಿಣ ಗೋಡೆಯಲ್ಲಿರುವ ಶಾಸನಕಲ್ಲು



ಹಾಕಲು ಇವುಗಳನ್ನು ಬಳಸಿರಬಹುದು. ಈ ಗದ್ದುಗೆಯು ನಿರ್ಮಾಣವಾದ ನಂತರ ಕೆಲ ಕಾಲದವರೆಗೆ ಅಲ್ಲಿ ಪೂಜಾ ವಿಧಿಗಳು ನಿರಂತರವಾಗಿ ಜರುಗಿತ್ತೆಂಬುದರ ಕುರುಹಾಗಿ ಇಲ್ಲಿನ ಗೋಡೆಗಳಲ್ಲಿರುವ ಮಸಿಯಿಂದ ತಿಳಿಯಬಹುದು. ಈ ಗದ್ದುಗೆಯು ಬಹುಶಃ ಯಾವುದೇ ಸಂತ ಅಥವಾ ಸ್ವಾಮಿಯದ್ದಾಗಿರಬಹುದು.

ಈ ಗದ್ದುಗೆ ಕೋಣೆಗೆ ಅಂಟಿಕೊಂಡಂತೆ ಉತ್ತರ ಭಾಗದಲ್ಲಿರುವ ಕೋಣೆಯು ಚೌಕಾಕಾರವಾಗಿದ್ದು ಆ ಕೋಣೆಯಲ್ಲಿ ಯಾವುದೇ ವಸ್ತುಗಳು ಇರದೇ ಖಾಲಿಯಾಗಿದೆ. ಸದರಿ ಕೋಣೆಗೆ ಅಲಂಕಾರರಹಿತ ಸಾಧಾರಣ ಪ್ರವೇಶದ್ವಾರವಿದೆ. ಪಶ್ಚಿಮದ ಗೋಡೆಯಲ್ಲಿ ಎರಡು ಕಿಂಡಿಗಳಿವೆ. ಅದರ ಮೂಲಕ ಗಾಳಿ ಮತ್ತು ಬೆಳಕು ಒಳ ಬರುತ್ತದೆ. ವಾಯವ್ಯ ಮತ್ತು ಈಶಾನ್ಯ ಮೂಲೆಗಳಲ್ಲಿ, ಗೋಡೆಯಲ್ಲಿ ತಲಾ ಒಂದು ಕಲ್ಲಿನ ಮುಂಚಾಚು ಇದೆ. ಅವುಗಳ ಮೇಲೆ ಕೆಲವು ವಸ್ತುಗಳುನ್ನು ಇಡಲು ಬಳಸಲಾಗುತ್ತಿತೆಂದು ಗಣಿಸಬಹುದು. ಈ ಕೋಣೆಯ ನೆಲದಲ್ಲಿ ಅಧಿಕವಾಗಿ ಬೂದಿಯು ಹರಡಿರುವುದನ್ನು ಕಾಣಬಹುದು. ಕೋಣೆಯ ನಾಲ್ಕು ಗೋಡೆಗಳು ಮತ್ತು ಛತ್ತಿನ ಭಾಗವು ಮಸಿಯಿಂದ ಕಪ್ಪಾಗಿದೆ. ಗದ್ದುಗೆಯ ಪೂಜೆಯನ್ನು ನೆರವೇರಿಸುತ್ತಿದ್ದವರು ಈ ಕೋಣೆಯನ್ನು ತಮ್ಮ ವಾಸ್ತವ್ಯಕ್ಕೆ ಬಳಸುತ್ತಿದ್ದರು ಎಂದು ಗಣಿಸಬಹುದು.

ಸದಾಶಿವಮಠದ ಗದ್ದುಗೆಯಿರುವ ಕೋಣೆಯ ದಕ್ಷಿಣ ಭಾಗದ ಹೊರ ಗೋಡೆಯ ಮೂಲೆಯಲ್ಲಿ ನಯಗೊಳಿಸದ ಆಯತಾಕಾರದ ಕಲ್ಲಿನಲ್ಲಿ ನಾಲ್ಕು ಸಾಲುಗಳಿರುವ ೨೦ನೇ ಶತಮಾನದ ತೆಲುಗು ಲಿಪಿಯ ಶಾಸನಕಲ್ಲು ಇದೆ. ದಕ್ಷಿಣ ಗೋಡೆಯ ಮೂಲೆಯಲ್ಲಿ ಪೂರ್ವದ ಗೋಡೆ ಮೂಲೆಗೆ ಇರುವಂತೆ ಶಾಸನವನ್ನು ಎತ್ತರದಲ್ಲಿ ಅಳವಡಿಸಲಾಗಿದೆ. ಇದು

ಸಾಮಾನ್ಯವಾಗಿ ಕೈಗೆ ಎಟುಕದಷ್ಟು ಎತ್ತರದಲ್ಲಿದೆ. ಇದು ಅಪ್ರಕಟಿತ ಶಾಸನ. ಈ ಶಾಸನವನ್ನು ಓರ್ವ ಭಕ್ತನು ಹಾಕಿಸಿದಂತೆ ಅದು ತಿಳಿಸುತ್ತದೆ. ಶಾಸನದಲ್ಲಿ ತೇದಿಯಿದೆ. ಶಾಸನದ ಪಾಠವು ಇಂತಿದೆ.

ಶಾಸನ ಪಾಠ

೧. ಶಾಲಿವಾಹನ ಶಕ ೧೮೫೬

೨. ಸ್ವಸ್ತಿ ಶ್ರೀ ರುಧಿರೋದ್ಗಾರಿ ಸಂ

೩. ವತ್ಸರ ನಿಜ ಜೇ// ೧೨ ಸಮಾಧಿ

೪. ಕಿ ಬಳ್ಳಾರಿ ವೆಂಲು ಸಾಯಿ

೫. ವಿಟುಕು ಚೆಂದಿಚಿನ ಭಕ್ತಿ

ತೆಲುಗು ಭಾಷೆ ಮತ್ತು ಲಿಪಿಯಲ್ಲಿರುವ ೫ ಸಾಲುಗಳ ಶಾಸನದ ತೇದಿಯು ಶಾಲಿವಾಹನ ಶಕ ೧೮೫೬ ಎಂದಿದ್ದು, ಇದು ಕ್ರಿ.ಶ. ೧೯೩೪ಕ್ಕೆ ಸರಿ ಹೊಂದುತ್ತದೆ. ರುಧಿರೋದ್ಗಾರಿ ಸಂವತ್ಸರ ನಿಜ ಜೇಷ್ಠ ೧೨ ಎಂಬ ಉಲ್ಲೇಖವಿದೆ. ಈ ತೇದಿಯ ನಿಖರತೆಯನ್ನು ತಾಳೆ ನೋಡಿಲ್ಲ. ಈ ಶಾಸನದ ಲಿಪಿ ಮತ್ತು ತೇದಿಯ ಆಧಾರಗಳಿಂದ ಇದು ಕ್ರಿ.ಶ. ೧೯೩೪ಕ್ಕೆ ಸರಿಹೊಂದುತ್ತದೆ. ಶಾಸನದ ಪಾಠದಲ್ಲಿರುವಂತೆ ಅದರ ಅರ್ಥವು ಇಂತಿದೆ. ರುಧಿರೋದ್ಗಾರಿ ಸಂವತ್ಸರದ ನಿಜ ಜೇಷ್ಠ ಮಾಸದ ೧೨ನೇ ದಿನದಂದು ಸಮಾಧಿಗೆ ಬಳ್ಳಾರಿ ವೆಂಲು ಸಾಯಿ ಎಂಬ ವ್ಯಕ್ತಿಯು ಸಲ್ಲಿಸಿದ ಭಕ್ತಿ ಎಂದು ಶಾಸನ ದಾಖಲಿಸಿದೆ. ಪ್ರಾಯಶಃ ಇಲ್ಲಿ ಸಮಾಧಿಯಾದ ವ್ಯಕ್ತಿಗೆ ಬಳ್ಳಾರಿ ಮೂಲದ ಭಕ್ತನು ಕಟ್ಟಡವನ್ನು ನಿರ್ಮಿಸಿ ತನ್ನ ಭಕ್ತಿ ಮತ್ತು ಗೌರವವನ್ನು ಸಲ್ಲಿಸಿರುವನು. ಸಮಾಧಿಯಾದ ವ್ಯಕ್ತಿ ಯಾರೆಂಬುದು ಸ್ಪಷ್ಟವಿಲ್ಲ.

ಈ ಸಮಾಧಿಯು ವೈಶ್ಯ ಜನಾಂಗಕ್ಕೆ ಸೇರಿದ್ದಾಗಿರಬೇಕು. ಪ್ರಸ್ತುತ ಮಠವಿರುವ ಸ್ಥಳ ಮತ್ತು ಅದರ ಸುತ್ತಲಿನ ಪ್ರದೇಶವು ವೈಶ್ಯ (ಕೋಮಟಿ) ಜನಾಂಗದವರಿಗೆ ಸೇರಿದ್ದಾಗಿದೆ. ಮಠದ ಅಕ್ಕಪಕ್ಕದಲ್ಲಿ ಕೆಲವು ಸಮಾಧಿಗಳಿವೆ. ಕಮಾಲಾಪುರದ ಜನರು, ಅದರಲ್ಲಿಯೂ ವೈಶ್ಯ ಜನಾಂಗದವರು ನೀಡಿರುವ ಮಾಹಿತಿಯಂತೆ ಸುಮಾರು ೪೦ ವರ್ಷಗಳ ಕೆಳಗೆ ಇಲ್ಲಿ ಸಂಸ್ಕಾರ ವಿಧಿಗಳು ಜರಗುತಿತ್ತು ಹಾಗೂ ಇಲ್ಲಿನ ಮಠವನ್ನು ಸದಾಶಿವ ಮಠವೆಂದು ಕರೆಯುತಿದ್ದರೆಂದು ತಿಳಿಸಿರುತ್ತಾರೆ (ವಕ್ತೃ ನಾರಣಪ್ಪ, ದೇಸಾಯಿ ಓಣಿ, ಕಮಲಾಪುರ). ಕಮಲಾಪುರ ಭಾಗದಲ್ಲಿ ತೀರಿಕೊಂಡ ವೈಶ್ಯ ಜನಾಂಗಕ್ಕೆ ಸೇರಿದ ಸಾಧು ಅಥವಾ ಸಂತನ ಸಮಾಧಿ ಇದಾಗಿದ್ದು, ಆತನನ್ನು ಕುಳಿತ ಭಂಗಿಯಲ್ಲಿ ಸಮಾಧಿ ಮಾಡಿ ನಂತರ ಗದ್ದುಗೆಗೆ ಕಟ್ಟಡ ನಿರ್ಮಾಣ ಮಾಡಲಾಗಿದೆ. ಕಟ್ಟಡವು ೮೦ ವರ್ಷಗಳಷ್ಟು ಪ್ರಾಚೀನವಾಗಿದ್ದು, ಸತ್ತ ವ್ಯಕ್ತಿಯ ಸಮಾಧಿಯು ಅದರ ಪೂರ್ವ ಕಾಲಕ್ಕೆ ಸೇರುತ್ತದೆ, ಅಂದರೆ ೯೦ ಅಥವಾ ಅದಕ್ಕೂ ಮೊದಲಿನ ಕಾಲಕ್ಕೆ ಸೇರುತ್ತದೆ.

೧೦೩

ಪ್ರೊ. ಎಸ್.ಎಸ್. ಬಸವನಾಳ ಗ್ರಂಥಾಲಯ ಕನ್ನಡ ಸಂಶೋಧನ ಸಂಸ್ಥೆ

ಡಾ. ಸದಾನಂದ ಆರ್. ಶೆಟ್ಟಿ* ರಮೇಶ ಮಾ. ಮೊರಬ**

ಕನ್ನಡ ಸಂಶೋಧನ ಸಂಸ್ಥೆ ಮುಖ್ಯವಾಗಿ ಕರ್ನಾಟಕ ಇತಿಹಾಸ ಸಂಸ್ಕೃತಿ ಸಾಹಿತ್ಯದ ಬಗ್ಗೆ ಮೀಸಲಾಗಿಟ್ಟು ಅದು ತನ್ನದೇ ಆದ ೭೫ ವರುಷಗಳ ಉಜ್ವಲ ಇತಿಹಾಸವನ್ನು ಹೊಂದಿದೆ. ಈ ಎಪ್ಪತ್ತೈದು ವರುಷಗಳ ಕಾಲ ಈ ಸಂಸ್ಥೆಯು ಕನ್ನಡ ಭಾಷೆ, ಸಾಹಿತ್ಯ, ಇತಿಹಾಸ, ಪುರಾತತ್ವ, ಶಾಸನ, ನಾಣ್ಯಶಾಸ್ತ್ರ ಇವುಗಳ ಮೇಲೆ ಸಂಶೋಧನೆಯನ್ನು ಕೇಂದ್ರಿಕೃತವಾಗಿರಿಸಿ, ತನ್ನ ಕಾರ್ಯವನ್ನು ನಿರ್ವಹಿಸುತ್ತಿದೆ. ಕನ್ನಡ ಸಂಶೋಧನ ಸಂಸ್ಥೆಯು ಸಂಶೋಧನೆಯನ್ನು ಈ ಎಲ್ಲ ಕ್ಷೇತ್ರಗಳಲ್ಲಿ ಕೇಂದ್ರಿಕರಿಸಿ ಯಶಸ್ವಿಯಾಗಿ ಹೆಚ್ಚು ಹೆಚ್ಚು ಕೃತಿಗಳನ್ನು ಪ್ರಕಟಿಸಿದೆ. ಇದು ಅತಿ ವಿರಳವಾದ ಅತ್ಯುತ್ತಮ ವಸ್ತು ಸಂಗ್ರಹಾಲಯವನ್ನೂ, ಅತ್ಯುತ್ತಮ ಹಸ್ತಪ್ರತಿ ಕೃತಿಗಳನ್ನು ಸಂಗಹಿಸುತ್ತಾ ಇದೊಂದು ಅತಿ ಪ್ರಯೋಜನಕಾರಿಯಾದ ಉಪಯುಕ್ತ ಗ್ರಂಥಾಲಯವನ್ನು ಹೊಂದಿ ಇತಿಹಾಸ, ಹಾಗೂ ಕರ್ನಾಟಕದ ಸಂಸ್ಕೃತಿ ಬಗ್ಗೆ ಹೊಸ ಹೊಸ ವಿಚಾರಗಳ ಬೆಳಕು ಚೆಲ್ಲುತ್ತ, ಮೂಲ ವಸ್ತು, ಸಂಶೋಧನಾತ್ಮಕ ವ್ಯಾಖ್ಯಾನಗಳು ಹಾಗೂ ವಸ್ತು ಸಂಗ್ರಹಾಲಯವನ್ನು ಹೊಂದಿದ್ದು ಅತಿ ಹೆಮ್ಮೆಯ ವಿಷಯ.

ಕನ್ನಡ ಸಂಶೋಧನ ಸಂಸ್ಥೆ ೧೯೩೯ರಲ್ಲಿ ಅಸ್ತಿತ್ವಕ್ಕೆ ಬಂದಿತು ಆಗಿನ ಮುಂಬಯಿ ಸರಕಾರವು ಈ ಭಾಗದಲ್ಲಿ ಕರ್ನಾಟಕ ಇತಿಹಾಸ ಹಾಗೂ ಸಂಸ್ಕೃತಿ ಬಗ್ಗೆ ಹೊಸ ಹೊಸ ಸಂಶೋಧನಾತ್ಮಕ ವಿಚಾರಗಳ ಆಯಾಮಗಳನ್ನು ತಿಳಿಸುವ ಬಗ್ಗೆ ಈ ಸಂಸ್ಥೆಯನ್ನು ನಿರ್ಮಿಸಲಾಯಿತು. ಸ್ವಲ್ಪ ಸಮಯದಲ್ಲೇ ಕಲೆ ಹಾಗೂ ಪುರಾತತ್ತ್ವ ಸಂಬಂಧಿಸಿದ್ದನ್ನು ಕೂಡಿ ಹಾಕಿ ಸಂಶೋಧಕರಿಗೆ ಪ್ರಾಚೀನ ಇತಿಹಾಸ ಪುರಾತತ್ತ್ವದಲ್ಲಿ ಆಸಕ್ತಿ ಹುಟ್ಟಿಸಲು, ಹಾಗೂ ಹೆಚ್ಚೆಚ್ಚು ಸಂಶೋಧನೆ ಕೈಗೊಳ್ಳಲು ಪ್ರೋತ್ಸಾಹ ನೀಡುತ್ತಿದೆ. ಪ್ರಾಚೀನ ಶಿಲಾಶಾಸನ ಶಿಲ್ಪ, ಪ್ರತಿಮೆ, ವಿಗ್ರಹ, ಕಲ್ಲು, ಜೇಡಿ ಮಣ್ಣು ಲೋಹ ಮುಂತಾದವುಗಳಿಂದ ಮಾಡಿದ ಆಕೃತಿ, ತಾಮ್ರ ಪಟ ಶಾಸನ, ಕಲಾತ್ಮಕ ವಸ್ತುಗಳ, ಮಹೆಂಜೋದಾರೊ, ಹರಪ್ಪಾ ಸಂಸ್ಕೃತಿ ಅವಶೇಷಗಳು, ತಾಡೋಲೆ ಸಂಗ್ರಹ ಇವು ಸಂಶೋಧಕರಿಗೆ, ಇತಿಹಾಸ ತಜ್ಞರಿಗೆ, ಸ್ಫೂರ್ತಿಯ ನೆಲೆಯಾಗಿ ನಿಂತಿದೆ.

ಶ್ರೀ ಆರ್.ಎಸ್. ಪಂಚಮುಖಿಯವರು ಪ್ರಪ್ರಥಮ ನಿರ್ದೇಶಕರಾಗಿ ೦೧-೧೦-೧೯೩೯ ನೇಮಿಸಲ್ಪಟ್ಟಿದ್ದರು, ಒಬ್ಬ ಗ್ರಂಥಪಾಲ, ಒಬ್ಬ ಕಾರಕೂನ ಹಾಗೂ ಇಬ್ಬರೂ ಸಂಶೋಧಕರಿಗೆ ನೇಮಿಸಲ್ಪಟ್ಟಿದ್ದು ಅವರ ಪುಸ್ತಕ ಪ್ರಕಟಣೆ, ಸಾಹಿತ್ಯ ಕ್ಷೇತ್ರದಲ್ಲಿ ಸಮೀಕ್ಷೆ ನಡೆಸುವದು ಹಾಗೂ ನಿರ್ದೇಶಕರಿಗೆ ಸಹಾಯ ಮಾಡುವದು ಕೆಲವು ಆರಿಸಲ್ಪಟ್ಟ ದೇವಾಲಯಗಳ ಶಿಲ್ಪಕಲೆ, ಶಿಲ್ಪ, ಪ್ರತಿಮೆ, ವಿಗ್ರಹ, ಶಾಸನ ಇವುಗಳ ಅಭ್ಯಾಸ ಹಾಗೂ ಸಂಶೋಧನೆ ಬಗ್ಗೆ ಮಹತ್ತ್ವ ಕೊಡಲಾಗಿದೆ ವಸ್ತು ಸಂಗ್ರಹಾಲಯವನ್ನು, ಪುರಾತತ್ತ್ವ, ಶಾಸನ, ಶಿಲ್ಪ ಪ್ರತಿಮೆಗಳು ನಾಣ್ಯ ಇವುಗಳನ್ನು ಸಂಗ್ರಹಿಸಿ, ಪ್ರದರ್ಶಿಸಿ ಎಲ್ಲರನ್ನು ಆಕರ್ಷಿಸುತ್ತಿದೆ.

ಭಾರತ ಇತಿಹಾಸ, ಪುರಾತತ್ತ್ವ, ಸಾಹಿತ್ಯ, ಸಂಸ್ಕೃತಿ ಹಳೆಯ ವಿದ್ವಾಂಸರು ಬರೆದ ಗ್ರಂಥಗಳು ಪುನರ್ ಮುದ್ರಣವಾಗದೆ ಪೇಟೆಯಲ್ಲಿ ಲಭ್ಯವಿರಲಿಲ್ಲ. ಹಾಗೂ ಸಂಶೋಧಕರಿಗೆ ಓದಲು ಪುಸ್ತಕಗಳು ಲಭ್ಯವಿರಲಿಲ್ಲ. ಹೀಗಾಗಿ ನಿರ್ದೇಶಕರು ಡೈರೆಕ್ಟರ ಜನರಲ್ ಆಫ್ ಇಂಡಿಯಾ ಇವರ ಮುಖಾಂತರ ದೇಶದಾದ್ಯಂತ ಲಭ್ಯವಿದ್ದ ಪುರಾತತ್ವ ಪ್ರಕಟಣೆಗಳನ್ನು ಪುಕ್ಕಟೆಯಾಗಿ ಕಳುಹಿಸಲು ಕೇಳಿಕೊಂಡರು ಅದಕ್ಕೆ ಒಪ್ಪಿ ಕಳುಹಿಸಿ ಉಪಕಾರ ಮಾಡಿದರು. ಮುಂದೆ ಮೈಸೂರ ಮಹಾರಾಜರು ೧೯೪೯-೫೦ರಲ್ಲಿ ಪುರಾಣದ ಹೊಸ ಮುದ್ರಣದ ಗ್ರಂಥಗಳನ್ನು ದೇಣಿಗೆಯಾಗಿ ಕೊಟ್ಟರು. ಉಳಿದ ಸಂಸ್ಥೆಗಳಿಂದಲೂ ಬೇಡಿಕೆ ಮುಂದಿಟ್ಟು, ಇತಿಹಾಸ, ಕಲೆ, ಸಂಸ್ಕೃತಿ, ಪುರಾತತ್ತ್ವ, ಶಾಸನ, ಧರ್ಮ ತತ್ತ್ವಶಾಸ್ತ್ರ, ಸಮಾಜಶಾಸ್ತ್ರದ

* ನಾಯಕ ವಕೀಲ ಕಾಂಪೌಂಡ್, ಬೆಳಗಾವಿ ರೋಡ್, ಧಾರವಾಡ-೮.

** ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿವಿ, ಧಾರವಾಡ-೩.

ಅತಿ ವಿರಳ ಗ್ರಂಥ ಸುಮಾರು ೧೮,೦೦೦ ಗ್ರಂಥಗಳನ್ನು ಹೊಂದಿದೆ. ಅಲ್ಲದೆ ಕರ್ನಾಟಕದ ಇತಿಹಾಸದ ಮೇಲೆ ನಡೆಸಿದ ಸಂಶೋಧನಾತ್ಮಕ ಗ್ರಂಥಗಳನ್ನೂ ಹೊಂದಿದೆ. ಹೀಗಾಗಿ ಇದೊಂದು ಅತ್ಯುತ್ತಮ ಸಂಶೋಧನಾತ್ಮಕ ಗ್ರಂಥಾಲಯವಾಗಿ ಹೆಸರು ಗಳಿಸಿದೆ. ಸಂಶೋಧನೆಗೆ ಅನುಕೂಲವಾಗುವಂತಹ ಮಾಹಿತಿಯುಳ್ಳ ಗ್ರಂಥಗಳು, ನಿಯತ ಕಾಲಿಕೆಗಳು Technical Trade Literature, ಸರಕಾರಿ ಕಾಗದ ಪತ್ರಗಳು, Photo Copies, Microfilms, Paper Clippings, ವಿಶ್ವಕೋಶ, ಗೆಝುಟಿಯರ, Year Books ನಿರ್ದಿಷ್ಟ ವಿಷಯದ ಮೇಲೆ ಪ್ರಕಟಿತ ಗ್ರಂಥಸೂಚಿಗಳು ಲಭ್ಯವಿವೆ.

ಎಲ್ಲ ಗ್ರಂಥಗಳಿಗೂ, ಗ್ರಂಥ ಸೂಚಿಕರಣ, ಗ್ರಂಥ ವರ್ಗೀಕರಣ ಮಾಡಲಾಗಿದೆ. ಹೀಗಾಗಿ ಇದೆಲ್ಲದರ ಆಧಾರದ ಮೇಲೆ Indexing ಹಾಗೂ Abstracting ಸೇವೆ ಲಭ್ಯವಿದೆ.

ಈ ಗ್ರಂಥಾಲಯದಲ್ಲಿ ಗ್ರಂಥಗಳ ಸಂಗ್ರಹದಲ್ಲಿ, ಭಾರತೀಯಶಾಸ್ತ್ರ ಕರ್ನಾಟಕದ ಇತಿಹಾಸ, ಪ್ರಾಚೀನ ಭಾರತೀಯ ಇತಿಹಾಸ, ಸಂಸ್ಕೃತ ಭಾಷೆ ಗ್ರಂಥಗಳು, ಕಲೆ, ಪುರಾತತ್ತ್ವ, ಶಾಸನ, ಧರ್ಮ, ತತ್ತ್ವಶಾಸ್ತ್ರ, ಸಮಾಜಶಾಸ್ತ್ರದ ಮೇಲೆ ೧೮,೦೦೦ ಗಿಂತ ಹೆಚ್ಚು ಗ್ರಂಥಗಳಿವೆ.

ಜ್ಞಾನದ ಪರಿಸರ ಹೆಚ್ಚಿಸಿಕೊಳ್ಳಲು ಗ್ರಂಥಾಲಯಗಳ ಭೇಟಿ ಅನಿವಾರ್ಯವಾಗಿದೆ. ಹೀಗಾಗಿ ಸಂಶೋಧನಾ ಸಂಸ್ಥೆಗಳು ಸಮೃದ್ಧ ಗ್ರಂಥಾಲಯವನ್ನು ಹೊಂದಿದಲ್ಲಿ ಅವು ಉತ್ಕರ್ಷೆಯ ಪಥದಲ್ಲಿ ಮುಂದುವರಿಯಲು ಸಾಧ್ಯವಾಗುತ್ತದೆ. ನಮ್ಮ ಬುದ್ಧಿಯನ್ನು, ಚಿತ್ತವನ್ನು ಸದಾ ಚೈತನ್ಯಮಯವಾಗಿ, ಪ್ರತಿಭಾನ್ವಿತವಾಗಿ ಇಟ್ಟುಕೊಳ್ಳಲು ನಾವೆಲ್ಲರೂ ಪುಸ್ತಕ ಪ್ರಪಂಚದ ನಿಕಟ ಸಂಬಂಧ ಹೊಂದಬೇಕಾಗುತ್ತದೆ. ಅಂತೆಯೇ ಕನ್ನಡ ಸಂಶೋಧನ ಸಂಸ್ಥೆ ಗ್ರಂಥಾಲಯ ಅಮೃತ ಮಹೋತ್ಸವ Platinum Jubilee Celebration ಅತಿ ವಿಜೃಂಭಣೆಯಿಂದ ಆಚರಿಸುತ್ತಿರುವದು ನಮಗೆಲ್ಲರಿಗೂ ಹೆಮ್ಮೆಯ ವಿಷಯ.

ಕರ್ನಾಟಕ ಸಂಶೋಧನೆ ಸಂಸ್ಥೆಯ ವಸ್ತು ಸಂಗ್ರಹಾಲಯ

ಇದಕ್ಕೆ ಪೂರಕವಾಗಿ ಕನ್ನಡ ಸಂಶೋಧನಾ ಸಂಸ್ಥೆಯ ವಸ್ತುಸಂಗ್ರಹಾಲಯವು ಪುರಾತತ್ತ್ವ, ಕಲೆ, ಶಿಲ್ಪಕಲೆ ಹಾಗೂ ಸಂಸ್ಕೃತಿ ಬಗ್ಗೆ ವಿಶೇಷ ಸಂಗ್ರಹವಿದೆ ವಿಶೇಷವಾಗಿ

1. Prehistoric and Historic antiquities
2. Stone and metal image
3. Paleographic gallery, memorial stones and Epigraphs.
4. Hero stone
5. Numismatic cabinet
6. Arts, (Paintings, sketches, and photographs)
7. Historical documents
8. Manuscript library, few maps and charts of historical and literary interest are prepared and exhibited for the information of visitors.
೯. ಗ್ರಂಥ ಪ್ರದರ್ಶನಗಳು

ಈ ಗ್ರಂಥಾಲಯವು ದಿನನಿತ್ಯ ೧೦-೩೦ ರಿಂದ ೬-೦೦ ರ ವರೆಗೆ ತೆರೆದಿದ್ದು, ಶನಿವಾರ ೧೦-೩೦ ರಿಂದ ೨.೩೦ ರವಿವಾರ ಸೂಟಿಯ ದಿನ ಬಂದು ಇರುತ್ತದೆ. ಓದುಗರಿಗೆ ಸಹಾಯ ಮಾಡಲು ಓದುವ ಕೋಣೆ (Reading Room) ತೆರೆದಿದ್ದು ಸುಮಾರು ೫೦ ಓದುಗರಿಗೆ ಕುಳಿತು ಓದುವ ಅವಕಾಶವಿದೆ. ದಿನನಿತ್ಯ ಸುಮಾರು ೭೫ ಓದುಗರು ಸಂದರ್ಶನವಿತ್ತು ಸುಮಾರು ೨೦೦ ಗ್ರಂಥಗಳನ್ನು ಪರಾಮರ್ಶಿಸುತ್ತಾರೆ ಈ ಗ್ರಂಥಾಲಯದಲ್ಲಿ ಮುಖ್ಯವಾಗಿ ಇತಿಹಾಸ, ಸಂಸ್ಕೃತ, ಕನ್ನಡ ವಿಭಾಗದಲ್ಲಿ ಓದುವ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಸಂಶೋಧನ ಮಾಡುವ ವಿದ್ಯಾರ್ಥಿಗಳಿಗೆ ಓದಲು ಸಹಾಯ ಮಾಡಲಾಗುತ್ತಿದೆ.

ಪ್ರಕಟಣೆಗಳು

1. Annual report as Kannada Research in Bombay Province (1939-40)
2. Digest of Annual Report on Kannada Research in Bombay Province 1940-41
3. Progress of Kannada Research in Bombay Province (1941-1957)

4. 20 years of Kannada Research in Bombay State (1939-51)

೫. ಮುಂಬಯಿ ರಾಜ್ಯದಲ್ಲಿ ಕನ್ನಡ ಸಂಶೋಧನೆ

೬. ಮುಂಬಯಿ ರಾಜ್ಯದಲ್ಲಿ ಕನ್ನಡ ಸಂಶೋಧನೆಯ ಮುನ್ನಡೆ (೧೯೫೧-೫೨)

ಸಂಶೋಧನಾ ಗ್ರಂಥಗಳು

1. Basaveshwar and his times by Dr. P.B.Desai
2. History of Karnataka by Dr. P.B.Desai

Volumes of Inscriptions

1. Karnataka Inscriptions ಸಂ R.S.Panchamukhi Vols. 1-3
2. Karnataka Inscription ಸಂ A.M. Annigeri Vol. 4
3. Karnataka Inscription ಸಂ B.R. Gopal Vols V and VI

Monographs

1. Gandharvas and Kinnaras by R.S.Panchamukhi
2. Archaeology of Karnataka by R.S.Panchamukhi
3. Navayats of Kanara by Dr. V.S. Desouza
4. Pattadakallu Gudigalu by A.M.Annigeri

Summaries of Inscriptions

1. List of Inscriptions copied by KRI (1940-1943) and (1944 – 1950)
   Catalogue of manuscripts in KRI Vols. 1-10

Research Lectures

೧. ಮೂರು ಉಪನ್ಯಾಸಗಳು by ಗೋವಿಂದ ಪೈ

೨. ಕರ್ನಾಟಕದ ಸಂಗೀತವು by ಹುಲಗೂರು ಕೃಷ್ಣಾಚಾರ್ಯ

೩. ಶಬ್ದಮಣಿ ದರ್ಪಣ by D.K.Bhimsen Rao

೪. ಕರ್ನಾಟಕದ ಪೂರ್ವ ಚರಿತ್ರೆ by M.H.Krishna

೫. ಕೆಲವು ಕನ್ನಡ ವ್ಯಾಕರಣ ವಿಚಾರಗಳು by M.P.Pujar

೬. ಕನ್ನಡ ನಾಡು, ದೇಶಿಸಾಹಿತ್ಯವು – by Pandit ಮುಳಿಯ ತಿಮ್ಮಪ್ಪಯ್ಯ

೭. ಕರ್ನಾಟಕ ಲಕುಳ ಶೈವರ ಇತಿಹಾಸ by Kapatral ಕೃಷ್ಣರಾವ್

೮. ಕನ್ನಡ ವ್ಯಾಕರಣಗಳು ಕೆಲವು ಸಮಸ್ಯೆಗಳ by Sediyapu ಕೃಷ್ಣಭಟ್ಟ

English

1. Three Lectures – K.V.Subramanya Iyar
2. Same Problems in Kannada Linguistics – C.R.Saukara
3. Ancient Indian History and Culture by Dr. B.A.Salefore
4. Early Temple Architecture in Karnataka – K V Sundar Raju
5. South Indian Temple Complex by T V Mahalingam
6. The Kushanas by D.C.Sirca

Classical Works

೧. ಕವಿಜಹ್ವ ಬಂಧನು by R.S.Panchamukhi

೨. ಮದನ ತಿಲಕ by R.S.Panchamukhi

೩. ಐರಾವತ by R.S.Panchamukhi

೪. ವಿರೂಪಾಕ್ಷ ವಸಂತೋತ್ಸವ – in Sanskrit

೫. ಸಮಯ ಪರೀಕ್ಷೆ – Dr.B.S.Kulkarni

ಇತರ ಪ್ರಕಟಣೆಗಳು

೧. ಕರ್ನಾಟಕದ ಜಾನಪದ ಗೀತೆಗಳು ಸಂ R.S.Panchamukhi

೨. ಶಾಸನ ಸಾಹಿತ್ಯ ಸಂಚಯ ಸಂ A.M.Annigeri ಹಾಗೂ ಮೇವುಂಡಿ ಮಲ್ಲಾರಿ

3. Indian Chronological Table by R.S.Panchamukhi Ed.

4. Historical Document by R.S.Panchamukhi

5. ಕರ್ನಾಟಕ Epigraphy by R.S. Panchamukhi

6. Guide to Kannada Research Institute Museum by A.M.Annigeri

7. Guide to Pattadakal Temples – A.M.Annigeri

8. Museum of Art and Archaeology: Brochure on KRI Museum

9. Set of Printed Cards

10. Problem of South India Megaliths by S.B.Desai

11. Expressive Quality of Literary Flavour in Art by C ಶಿವರಾಮಮೂರ್ತಿ

12. Karnatak Andhrap relations – by M. Ramarao

13. Karnatak Inscriptions Vol. VI ed by B.R. Gopal

14. Descriptive catalogue of Manuscript Vol. IX by Dr. B.S.Kulkarni.

ಈ ರೀತಿ ಕನ್ನಡ ಸಂಶೋಧನಾ ಸಂಸ್ಥೆ ಗ್ರಂಥಾಲಯವು ಒಂದು ಸಂಶೋಧನಾತ್ಮಕ ವಿಶಿಷ್ಟ ಗ್ರಂಥಾಲಯವಾಗಿ ಓದುಗರಿಗೆ, ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ, ಶಿಕ್ಷಕ ಸಿಬ್ಬಂದಿಗಳಿಗೆ ಕಳಕಳಿಯಿಂದ ಅವಿರತವಾಗಿ ಸೇವೆಸಲ್ಲಿಸುತ್ತಾ ಖ್ಯಾತಿಯನ್ನು ಪಡೆದಿದೆ – ಇಂದು ಕನ್ನಡ ಸಂಶೋಧನಾ ಗ್ರಂಥಾಲಯವು ತನ್ನ ಮಾತೃ ಸಂಸ್ಥೆಯಾದ ಕನ್ನಡ ಸಂಶೋಧನಾ ಸಂಸ್ಥೆಯ ಅಮೃತ ಮಹೋತ್ಸವ ವರ್ಷದಲ್ಲಿ ಪಾಲ್ಗೊಳ್ಳುತ್ತಾ ತನ್ನ ಸಂತಸವನ್ನು ಹಂಚಿಕೊಳ್ಳುತ್ತಿರುವದು ನಮಗೆಲ್ಲ ಅಭಿಮಾನದ ಸಂಗತಿ. ಸಂಸ್ಥೆಯು ಇನ್ನೂ ಹೆಚ್ಚೆಚ್ಚು ಸೇವೆ ನೀಡುತ್ತಾ ನೂರಾರುವರ್ಷ ಬಾಳಲಿ ಎಂಬುದು ನಮ್ಮೆಲ್ಲರ ಹೆಬ್ಬಯಕೆ.

೧೦೪

ಸಾಹಿತ್ಯಕ್ಕೆ ಕನ್ನಡ ಸಂಶೋಧನ ಸಂಸ್ಥೆಯ ಕೊಡುಗೆ

ಡಾ. ಶಿವರಾಜ ಯತಗಲ್*

೧೯೩೯ಕ್ಕಿಂತ ಮುಂಚೆ ಮುಂಬೈ ಕರ್ನಾಟಕದಲ್ಲಿ ಶಾಸ್ತ್ರೀಯವಾಗಿ ಕನ್ನಡ ಸಂಸ್ಕೃತಿ, ಇತಿಹಾಸವನ್ನು ಅಧ್ಯಯನ ಹಾಗೂ ಸಂಶೋಧನೆ ಮಾಡುವ ಪ್ರತ್ಯೇಕವಾದಂತಹ ಸಂಸ್ಥೆಗಳು ಕರ್ನಾಟಕ ರಾಜ್ಯದಲ್ಲಿ ಇರಲಿಲ್ಲ. ೧೮೯೦ ಜುಲೈ ೨೦ರಂದು ಧಾರವಾಡದಲ್ಲಿ ಸ್ಥಾಪಿಸಲ್ಪಟ್ಟ ಕರ್ನಾಟಕ ವಿದ್ಯಾವರ್ಧಕ ಸಂಘ(ರಿ.) ಹಾಗೂ ಕರ್ನಾಟಕ ಇತಿಹಾಸ ಸಂಶೋಧನ ಮಂಡಳಗಳು ಸ್ಥಾಪಿಸಲ್ಪಟ್ಟರೂ ಅವುಗಳ ಕಾರ್ಯ ಭಿನ್ನವಾಗಿದ್ದು, ಅಷ್ಟು ವಿಸ್ತಾರವಾಗಿರಲಿಲ್ಲ ಎಂದೇ ಹೇಳಬೇಕು. ಕರ್ನಾಟಕದಲ್ಲಿ ೧೯೩೮ರಲ್ಲಿ ಬಾಂಬೆ ಸರ್ಕಾರ ನೇಮಕ ಮಾಡಿದ್ದ ಸಮಿತಿಯ ಶಿಫಾರಸ್ಸಿನ ಮೇರೆಗೆ ಅದೇ ವರ್ಷ ಸ್ಥಾಪಿತವಾದದ್ದೇ 'ಕನ್ನಡ ರೀಸರ್ಚ್ ಆಫೀಸ್'. ಇದು ಈ ಸಂಸ್ಥೆಯ ಮೊದಲ ಹೆಸರು. ಮೊದಲು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ರೀಸರ್ಚ್‌ನ ಕಛೇರಿಯನ್ನು ಪ್ರಾರಂಭಿಸಲಾಯಿತು. ನಂತರ ೧೯೩೯ನೇ ಅಕ್ಟೋಬರ್‌ನಲ್ಲಿ ಎಸ್.ಆರ್. ಪಂಚಮುಖಿಯವರು ಈ ಸಂಸ್ಥೆಯ ನಿರ್ದೇಶಕರಾಗಿ ಅಧಿಕಾರವನ್ನು ಸ್ವೀಕರಿಸಿದರು. ಇವರ ಅಧಿಕಾರಾವಧಿಯಲ್ಲಿ ಈ ಸಂಸ್ಥೆಯು ಸಾರಸ್ವತಪುರದ ಉಭಯಕರ ಅವರ ಬಂಗಲೆಗೆ ಕರ್ನಾಟಕ ಕಾಲೇಜಿನಿಂದ ಸ್ಥಳಾಂತರವಾಯಿತು. ಸಾರಸ್ವತಪುರದ ಸುತ್ತಲಿನ ವಾತಾವರಣ ಈ ಸಂಸ್ಥೆಯ ವಸ್ತುಸಂಗ್ರಹಾಲಯದ ಕಾರ್ಯಚಟುವಟಿಕೆಗಳಿಗೆ ಹೊಂದಿಕೆಯಾಗಲಿಲ್ಲ ಆ ಕಾರಣಕ್ಕಾಗಿ ೧೯೪೦ರಲ್ಲಿ ಉಳವಿ ಬಸಪ್ಪ ಗುಡ್ಡದ ದಾರ್‌ಮಹಲ್‌ಗೆ ವರ್ಗಾವಣೆ ಮಾಡಲಾಯಿತು. ಅಲ್ಲಿಯೂ ಹೆಚ್ಚು ಕಾಲ ನೆಲೆನಿಲ್ಲದ ಈ ಸಂಸ್ಥೆಯನ್ನು ೧೯೫೬ ನವ್ಹಂಬರ್ ೧ ಕನ್ನಡ ರಾಜ್ಯೋತ್ಸವದ ದಿನದಂದು 'ಕನ್ನಡ ಅಧ್ಯಯನ ಸಂಸ್ಥೆ' ಎಂದು ಪುನರ್ ನಾಮಕರಣ ಮಾಡಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಹಸ್ತಾಂತರಿಸಲಾಯಿತು.

ಕನ್ನಡ ಸಂಶೋಧನ ಸಂಸ್ಥೆಯು ಪ್ರಾಚ್ಯವಸ್ತು ಮತ್ತು ನಿವೇಶನಗಳ ಶೋಧ, ಶಿಲೆ ಹಾಗೂ ತಾಮ್ರ ಶಾಸನ, ನಾಣ್ಯ ಸಂಪತ್ತಿನ ಶೋಧ, ವಿಗ್ರಹಗಳ ಹಸ್ತಪ್ರತಿ ಗ್ರಂಥಗಳ ಸಂಗ್ರಹ ಹಾಗೂ ಪ್ರಕಟಣೆ ಮಾಡುವಲ್ಲಿ ನಿರತವಾಗಿದ್ದು, ತಲೆಮಾರುಗಳಿಂದ ನಡೆದು ಬಂದ ಜನಪದ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಯ ಕಾರ್ಯವನ್ನು ಮಾಡುತ್ತ ಬಂದಿತು. ಕೇವಲ ವಸ್ತುಸಂಗ್ರಹಾಲಯಕ್ಕೆ ಮಾತ್ರ ಸೀಮಿತವಾಗದೇ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಲವು ಮೌಲೀಕವಾದ ಕೃತಿಗಳನ್ನು ಹೊರತಂದಿದೆ. ಇನ್ನೂ ತರಬೇಕಾದದ್ದು ಬಹಳಷ್ಟಿದೆ. ಈಗಾಗಲೇ ಹೊರತಂದ ಕೃತಿಗಳ ಮರುಮುದ್ರಣವೂ ಜರೂರಾಗಿ ನಡೆಯಬೇಕಾಗಿದೆ. ಅಧಿಕೃತವಾಗಿ ೭೫ ವಸಂತಗಳ ಅಮೃತ ಮಹೋತ್ಸವದ ಅಂಗಳಕ್ಕೆ ಕಾಲಿಟ್ಟ ಈ ಸಂಸ್ಥೆಯ ನಡೆ ಮಾದರಿಯಾದದ್ದು.

ಈ ಸಂಸ್ಥೆಯು ಕನ್ನಡ ಸಾಹಿತ್ಯದ ಹಲವಾರು ಕೃತಿಗಳನ್ನು, ಶಾಸನ ಸಂಪುಟಗಳನ್ನು, ವಾರ್ಷಿಕ ವರದಿಗಳನ್ನು, ಸಂಶೋಧನ ಭಾಷಣ ಮುಂತಾದವುಗಳನ್ನು ಕುರಿತು ಹಲವು ಕೃತಿಗಳನ್ನು ಪ್ರಕಟಿಸಿದೆ. ಹಲವಾರು ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಿ, ಅಲ್ಲಿ ನೀಡಿದ ಉಪನ್ಯಾಸಗಳನ್ನು ಸಂಗ್ರಹಿಸಿ ಪ್ರಕಟಣಾ ಕಾರ್ಯವನ್ನು ಮಾಡಿದೆ.

ಸಾಹಿತ್ಯಿಕ ಕೃತಿಗಳು

ಈಶ್ವರ ಕವಿ ವಿರಚಿತ ಕವಿಜಿಹ್ವಾಬಂಧನಂ, ಚಂದ್ರರಾಜನ ಮದನ ತಿಲಕಂ, ಕುಮಾರವ್ಯಾಸ ವಿರಚಿತ ಐರಾವತ, ವಿರೂಪಾಕ್ಷ ವಸಂತೋತ್ಸವ, ಸಮಯ ಪರೀಕ್ಷೆ, ತ್ರಿಷಷ್ಟಿ ಲಕ್ಷಣ ಮಹಾಪುರಾಣಂ, ಶಂಬಾ ವಾಙ್ಮಯ ವಿಚಾರ ಸೂಚಿ ಎಂಬ ಕನ್ನಡದ ಕೃತಿಗಳು ಪ್ರಕಟಿತವಾಗಿವೆ. ಈಶ್ವರ ಕವಿ ವಿರಚಿತ ಕವಿಜಿಹ್ವಾಬಂಧನಂ ಕನ್ನಡದ ಕೃತಿಯನ್ನು ಆರ್.ಎಸ್. ಪಂಚಮುಖಿಯವರು ೧೯೫೦ರಲ್ಲಿ ಹೊರತಂದಿದ್ದಾರೆ. ಶಿ.ಶಿ. ಬಸವನಾಳ ಅವರು ಈ ಕೃತಿಯನ್ನು ಕುರಿತಾಗಿ "ಇದು ಛಂದಸ್ಸನ್ನು ಕುರಿತ ಗ್ರಂಥ. ಕನ್ನಡದಲ್ಲಿ ಉಪಲಬ್ಧವಿರುವ ಮೂರು ನಾಲ್ಕು ಛಂದೋ ವಿಷಯಕ ಗ್ರಂಥಗಳಲ್ಲಿ ಇದೂ ಒಂದು. ಈ ಕವಿ ಸುಮಾರು ೧೫ನೇ ಶತಮಾನದವನೆಂದು ಊಹಿಸಲಾಗಿದೆ. ಈ ಗ್ರಂಥದ ವೈಶಿಷ್ಟ್ಯವೆಂದರೆ 'ಯತಿ' ಮತ್ತು

* ಕನ್ನಡ ಅತಿಥಿ ಉಪನ್ಯಾಸಕರು, ಗುಲಬರ್ಗಾ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ರಾಯಚೂರು.

'ವಡಿ' ಇವುಗಳ ವಿವೇಚನೆ" ಎಂದಿದ್ದಾರೆ. ಮದನ ತಿಲಕಂ ಎಂಬ ಚಂದ್ರರಾಜನ ವಿರಚಿತ ಕಾಮಶಾಸ್ತ್ರದ ೧೧ನೇ ಶತಮಾನದ ಕಾವ್ಯವನ್ನು ಪಂಚಮುಖಿಯವರು ಪರಿಷ್ಕರಿಸಿದ್ದಾರೆ. ಮಾಧವಾಲಂಕಾರ ಎಂಬ ಕೃತಿಯನ್ನು ೧೫ನೇ ಶತಮಾನದಲ್ಲಿದ್ದ ಮಾಧವ ಕವಿ ಕೃತವಾದ ಅಲಂಕಾರ ಗ್ರಂಥವನ್ನು ಹಲವು ಟಿಪ್ಪಣಿಗಳೊಂದಿಗೆ ಪರಿಷ್ಕೃತವಾಗಿದೆ. ಐರಾವತ ಎಂಬ ಕಾವ್ಯವನ್ನು ಪ್ರಕಟಿಸಿದ್ದಾರೆ. ಈ ಕಾವ್ಯವು ಕುಮಾರವ್ಯಾಸನಂದ ರಚಿತವಾದದ್ದು ಎಂದು ಹೇಳುತ್ತಾ ಐರಾವತದ ಭಾಷೆ, ಭಿನ್ನ ಭಿನ್ನವಾದ ಲಿಖಿತ ಪಾಠಾಂತರಗಳನ್ನು ಒಗ್ಗೂಡಿಸಿಕೊಂಡು ಈ ಕಾವ್ಯವನ್ನು ಸಂಪಾದಿಸಿದ್ದಾರೆ. ಇದು ೧೯೪೯ರಲ್ಲಿ ಪ್ರಕಟಿತವಾಗಿದೆ. ಈ ಕೃತಿಯ ಕುರಿತಾಗಿ ಮ.ಪ್ರ.ಪೂಜಾರ, ಪ್ರೊ. ಡಿ.ಕೆ. ಭೀಮಸೇನರಾವ್, ಎನ್. ಲಕ್ಷ್ಮಿನಾರಾಯಣರಾವ್, ಡಿ.ಎಲ್. ನರಸಿಂಹಾಚಾರ್ ಅವರಂಥ ವಿದ್ವಜರು ಈ ಸಂಪಾದನಾ ಕಾರ್ಯಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ವಿರೂಪಾಕ್ಷ ವಸಂತೋತ್ಸವ, ಸಮಯ ಪರೀಕ್ಷೆ, ತ್ರಿಷಷ್ಟಿಲಕ್ಷಣ ಮಹಾಪುರಾಣ, ಶಂಬಾ ವಾಙ್ಮಯ ವಿಚಾರ ಸೂಚಿ ಎಂಬ ಡಾ.ಎಚ್.ಆರ್.ರಘುನಾಥ್ ಭಟ್ ಅವರ ಕೃತಿಯು ಕನ್ನಡ ಸಂಶೋಧನ ಸಂಸ್ಥೆಯ ವತಿಯಿಂದ ೨೦೦೦ರಲ್ಲಿ ಹೊರಬಂದಿದೆ. ಈ ಕೃತಿಯಲ್ಲಿ ಶಂಭಾ ಜೋಶಿ ಅವರ ಜೀವನ, ಪ್ರಮುಖ ಘಟನಾವಳಿಗಳು, ಅವರು ರಚಿಸಿದ ಪುಸ್ತಕಗಳು, ಲೆಖನಗಳು ಮತ್ತು ಮುಖ್ಯವಾಗಿ ಇಲ್ಲಿಯವರೆಗೆ ಶಂಬಾ ಅವರಕುರಿತಾಗಿ ಪ್ರಕಟಿತವಾದ ಪುಸ್ತಕಗಳ ಮಾಹಿತಿಯನ್ನು ಒಳಗೊಂಡ ಕೃತಿ ಇದಾಗಿದೆ. ಇಲ್ಲಿನ ಪ್ರತಿಯೊಂದು ವಿಷಯಗಳು ಬಿಡಿಬಿಡಿ ಲೇಖನಗಳೊಂದಿಗೆ ಮಾಹಿತಿಯನ್ನು ಕಟ್ಟಿಕೊಟ್ಟಿವೆ.

ಹಸ್ತಪ್ರತಿ ಸಂಪುಟಗಳು : ಈ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಸುಮಾರು ೧೩ ಹಸ್ತಪ್ರತಿ ಸಂಪುಟಗಳು ಪ್ರಕಟಿತಗೊಂಡಿವೆ. ಆರು ಶಾಸನಗಳ ಸಂಪುಟಗಳು ಹೊರಬಂದಿವೆ. ಅವುಗಳಲ್ಲಿ ಕರ್ನಾಟಕ ಶಾಸನ ಸಂಪುಟ ೧, ೨ ಮತ್ತು ೩ ಈ ಮೂರನ್ನು ಆರ್.ಎಸ್.ಪಂಚಮುಖಿ ಅವರು ಸಂಪಾದಿಸಿದ್ದಾರೆ. ೪ನೇ ಸಂಪುಟವನ್ನು, ಎ.ಎಂ. ಅಣ್ಣಿಗೇರಿಯವರು ಸಂಪಾದಿಸಿದ್ದು, ಇನ್ನುಳಿದ ೫ ಮತ್ತು ೬ನೇ ಕರ್ನಾಟಕ ಶಾಸನ ಸಂಪುಟಗಳನ್ನು ಬಿ.ಆರ್.ಗೋಪಾಲ್ ಅವರ ಸಂಪಾದಕತ್ವದಲ್ಲಿ ಕನ್ನಡ ಸಂಶೋಧನ ಸಂಸ್ಥೆಯ ವತಿಯಿಂದ ಪ್ರಕಟಿತಗೊಂಡಿವೆ.

ಸಂಶೋಧನ ಕೃತಿಗಳು : Basaveshwara and His Times ಎಂಬ ಆಂಗ್ಲ ಭಾಷೆಯ ಸಂಶೋಧನಾತ್ಮಕ ಗ್ರಂಥವು ಪ್ರಕಾಶನಗೊಂಡಿದೆ. ಕರ್ನಾಟಕದ ಇತಿಹಾಸ ಎಂಬ ಮತ್ತೊಂದು ಕೃತಿಯನ್ನು ಈ ಸಂಸ್ಥೆಯು ಹೊರತಂದಿದೆ. ಈ ಎರಡೂ ಕೃತಿಗಳಿಗೆ ಡಾ. ಪಿ.ಬಿ. ದೇಸಾಯಿ ಅವರೇ ಲೇಖಕರಾಗಿದ್ದಾರೆ. ಇವೆರಡು ಅತ್ಯಂತ ಮಹತ್ವದ ಸಂಶೋಧನಾ ಕೃತಿಗಳಾಗಿ ಈ ಸಂಸ್ಥೆಯಿಂದ ಪ್ರಕಟಿತಗೊಂಡಿವೆ.

ವಾರ್ಷಿಕ ವರದಿಗಳು : ಬಾಂಬೆ ಪ್ರಾವೀನ್ಸ್‌ದಲ್ಲಿ ಕನ್ನಡ ಸಂಶೋಧನೆಯ ವಾರ್ಷಿಕ ವರದಿಗಳು, ಬಾಂಬೆ ಪ್ರವೀನ್ಸ್‌ದಲ್ಲಿ ಕನ್ನಡ ಸಂಶೋಧನೆಯ ವಾರ್ಷಿಕ ವರದಿಯ ವಿವರಣೆ-೧೯೪೦-೪೧, ಬಾಂಬೆ ಪ್ರವೀನ್ಸ್‌ದಲ್ಲಿ ಕನ್ನಡ ಸಂಶೋಧನೆಯ ವಾರ್ಷಿಕ ವರದಿಯ ಬೆಳವಣಿಗೆ-೧೯೪೧-೫೨, ಬಾಂಬೆ ಪ್ರವೀನ್ಸ್‌ದಲ್ಲಿ ಕನ್ನಡ ಸಂಶೋಧನೆಯ ೧೨ ವರ್ಷಗಳು-೧೯೩೯-೧೯೫೧, ಕನ್ನಡ ಸಂಶೋಧನ ಸಂಸ್ಥೆಯ ಪ್ರಗತಿಯ ವರದಿ ಕುರಿತು-೧೯೫೩-೫೭, ಮುಂಬೈ ರಾಜ್ಯದಲ್ಲಿ ಕನ್ನಡ ಸಂಶೋಧನೆಯ ಮುನ್ನೆಡೆ (ಕನ್ನಡ), ೧೯೫೧-೫೨ ಎಂಬ ವರದಿಗಳನ್ನು ಈ ಸಂಸ್ಥೆಯು ಪ್ರಕಟಿಸಿದೆ. ಇಲ್ಲಿ ನಡೆದ ಉಪನ್ಯಾಸಗಳನ್ನು ಕೂಡ ಪ್ರಕಟಿತ ರೂಪದಲ್ಲಿ ಹೊರತಂದಿದ್ದಾರೆ.

ಸಂಶೋಧನ ಉಪನ್ಯಾಸ ಮಾಲಿಕೆಗಳು

ಕನ್ನಡ ಸಂಶೋಧನ ಸಂಸ್ಥೆಯ ವತಿಯಿಂದ ಪ್ರತಿವರ್ಷ ವಿದ್ವಾಂಸರಿಂದ ಹಲವು ವಿದ್ವಾಂಸರಿಂದ ಸಂಶೋಧನೆಯ ಉಪನ್ಯಾಸಗಳನ್ನು ಏರ್ಪಡಿಸಿ ಅವರಿಂದ ಮಂಡಿತವಾದ ಪ್ರಬಂಧಗಳನ್ನು ಪ್ರಕಟಿಸುವ ಕಾರ್ಯವನ್ನು ಕೈಗೊಂಡಿದೆ. ಆ ಪ್ರಕಟಣೆಗಳೆಂದರೆ, ಎಂ. ಗೋವಿಂದ ಪೈ ಅವರ ಮೂರು ಉಪನ್ಯಾಸಗಳು ಕೃತಿಯು ೧೯೬೦ರಲ್ಲಿ ಪ್ರಕಟವಾಗಿದೆ. ಎರಡನೇ ಉಪನ್ಯಾಸ ಬಸವೇಶ್ವರನ ಕಾಲನಿರ್ಣಯದ ಕುರಿತದ್ದಾಗಿದೆ. ಮೂರನೆಯ ಲೇಖನ ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ಶೋಧಿಸುವ ಲೇಖನವಾಗಿದೆ. ರನ್ನನ ಪರಶುರಾಮ ಚರಿತೆಯನ್ನು, ಗದಾಯುದ್ಧದ ಕಾಲವನ್ನೂ ಕುರಿತಾಗಿ ಲೇಖನ ಪ್ರಕಟಿಸಲ್ಪಟ್ಟಿದೆ. ಹಾಗೆಯೇ ಕಿನ್ನರಿ ವಿದ್ವಾನ್ ಹುಲಗೂರು ಕೃಷ್ಣಾಚಾರ್ಯ ಅವರಿಂದ ಕರ್ನಾಟಕ ಸಂಗೀತವೂ ದಾಸಕೂಟವೂ ಅರ್ಥಾತ್ ಭಾರತೀಯ ಸಂಗೀತದ ಇತಿಹಾಸವು ನಡೆದಿವೆ. ಇವುಗಳು ಕೂಡ ಕನ್ನಡ ಸಂಸ್ಥೆಯ ವತಿಯಿಂದ ಪ್ರಕಟಿತಗೊಂಡಿವೆ. ಶಬ್ದಮಣಿ ದರ್ಪಣದ ಪಾಠಾಂತರಗಳು, ಅನುಭವಾಮೃತವೂ, ಹರಿಕಥಾಮೃತವೂ ಎಂಬ ಮೂರು ಉಪನ್ಯಾಸಗಳು ಡಿ.ಕೆ. ಭೀಮಸೇನ್ ರಾವ್ ಅವರಿಂದ ನಡೆದಿವೆ. ಕರ್ನಾಟಕ ಸಂಗೀತವೂ ದಾಸಕೂಟವೂ

ಅರ್ಥಾತ್ ಭಾರತೀಯ ಆರ್ಯ ಸಂಗೀತದ ಇತಿಹಾಸವು ವೈ. ಕಿನ್ನರಿ ವಿದ್ವಾನ್ ಹುಲಗೂರು ಕೃಷ್ಣಾಚಾರ್ಯ ಅವರ ಉಪನ್ಯಾಸಗಳ ಮಾಲೆಯಾಗಿದೆ. ಕರ್ನಾಟಕದ ಪೂರ್ವಚರಿತೆ ಎಂಬ ಮಾಲಿಕೆ ಎಂ.ಎಚ್. ಕೃಷ್ಣ ಅವರಿಂದ ಪ್ರಕಟಿತವಾಗಿದೆ. ಕೆಲವು ಕನ್ನಡ ವ್ಯಾಕರಣ ವಿಚಾರಗಳು ಕುರಿತಾದ ಮಾಲಿಕೆಯು ಪಂಡಿತ ಮ.ಪ್ರ. ಪೂಜಾರ ಅವರಿಂದ ಪ್ರಕಟಿತವಾಗಿದೆ. ಕನ್ನಡ ನಾಡು ದೇಸಿ ಸಾಹಿತ್ಯ ಮಾಲಿಕೆಯು ಪಂಡಿತ ಎಂ. ತಿಮ್ಮಪ್ಪಯ್ಯ ಅವರಿಂದ, ಕರ್ನಾಟಕದ ಲಾಕುಳ ಶೈವರ ಇತಿಹಾಸವು ಕಪಟರಾಳ ಕೃಷ್ಣರಾವ್ ಅವರುಗಳು ನೀಡಿದ ಉಪನ್ಯಾಸಗಳು ಕೃತಿರೂಪದಲ್ಲಿ ಹೊರಬಂದಿವೆ.

೧೯೪೦ರಲ್ಲಿ ಮುಂಬೈ ಕರ್ನಾಟಕದ ಕನ್ನಡ ಸಂಶೋಧನೆಯ ಪರಿವಿಡಿಯನ್ನು ಆರ್.ಎಸ್. ಪಂಚಮುಖಿ ಅವರು ಹೊರತಂತಿದ್ದಾರೆ. ಇಲ್ಲಿ ಕನ್ನಡ ಸಂಶೋಧನ ಸಂಸ್ಥೆಯು ಹುಟ್ಟಿಬಂದ ಬಗೆಯನ್ನು ಕಟ್ಟಿಕೊಟ್ಟಿದ್ದಾರೆ. ಇಲ್ಲಿ ೧೯೩೯ ರಿಂದ ಆರಂಭವಾದ ಕನ್ನಡ ಅಧ್ಯಯಯನ ಸಂಸ್ಥೆಯು ನಡೆದು ಬಂದಿರುವ ಹಾದಿಯನ್ನು ಚಿತ್ರಿಸಿದ್ದಾರೆ. ಕನ್ನಡ ಶಾಸನಶಾಸ್ತ್ರ, ಕರ್ನಾಟಕದ ಜಾನಪದ ಗೀತೆಗಳು, ಶಾಸನಸಾಹಿತ್ಯ ಸಮಯ, ಭಾರತೀಯ ಕಾಲಗಣನಶಾಸ್ತ್ರ, ಐತಿಹಾಸಿಕ ಅವಶೇಷಗಳು, ಕುಶಾನರು, ಕನ್ನಡ ಜಾನಪದದಲ್ಲಿಯ ಕೆಲವು ಸಮಸ್ಯೆಗಳು, ಪ್ರಾಚೀನ ಭಾರತದ ಇತಿಹಾಸ ಮತ್ತು ಸಂಸ್ಕೃತಿ, Museum of Art and Archaeology, Jaina Bronzes in the Kannada Research Institute Museum ಮುಂತಾದವುಗಳು ಮುಖ್ಯವಾಗಿವೆ.

ಕರ್ನಾಟಕದ ಇತಿಹಾಸ, ಕರ್ನಾಟಕದ ಶಾಸನದ ೬ ಸಂಪುಟಗಳನ್ನು ಮತ್ತು ಹಸ್ತಪ್ರತಿಗಳ ೧೩ ಸಂಪುಟಗಳನ್ನು ಹೊರತರಲಾಗಿದೆ. ವಾರ್ಷಿಕ ವರದಿಗಳನ್ನು ಪ್ರಕಟಣೆ ಮಾಡಿದೆ. ಹತ್ತಕ್ಕಿಂತಲೂ ಹೆಚ್ಚು ಉಪನ್ಯಾಸ ಮಾಲಿಕೆಗಳನ್ನು ಪ್ರಕಟಿಸಿದೆ. ಈ ಮಾಲಿಕೆಗಳಲ್ಲಿ ಕರ್ನಾಟಕದ ಚರಿತ್ರೆ, ಉಪನಯನಗಳು, ಸಂಗೀತ, ಶಿಲೆ, ಸಂಸ್ಕೃತಿ, ಕನ್ನಡ ವ್ಯಾಕರಣದ ಹರವು ಇಲ್ಲಿದೆ. ಹೀಗೆ ೭೫ ವಸಂತಗಳನ್ನು ಪೂರೈಸಿರುವ 'ಕನ್ನಡ ಸಂಶೋಧನ ಸಂಸ್ಥೆ'ಯು ಕನ್ನಡ ನಾಡಿನ ಸಾಹಿತ್ಯಕ್ಕೆ ಕೊಡಮಾಡಿದ ಕೊಡುಗೆಯನ್ನು ಇತಿಹಾಸದ ಪುಟಗಳಲ್ಲಿ ದಾಖಲಿಸಬೇಕಾಗಿದೆ.

ಆಧಾರ ಗ್ರಂಥಗಳು

೧. Vidyaratna R.S.Panchamukhi, Twelve Years of Kannada Research, Kannada Research Institute, Dharwad, 1951.

೨. ಡಾ. ಎಚ್.ಆರ್. ರಘುನಾಥ ಭಟ್, ಶಂಭಾ ವಾಙ್ಮಯ ವಿಚಾರ ಸೂಚಿ, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, ೧೯೯೯.

೩. ಆರ್.ಎಸ್. ಪಂಚಮುಖಿ, ಮುಂಬಯಿ ರಾಜ್ಯದಲ್ಲಿ ಕನ್ನಡ ಸಂಶೋಧನೆಯ ಮುನ್ನುಡಿ, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, ೧೯೫೩.

೪. ಎಂ. ಗೋವಿಂದ ಪೈ, ಮೂರು ಉಪನ್ಯಾಸಗಳು, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, ೧೯೬೦.

೫. ಆರ್.ಎಸ್. ಪಂಚಮುಖಿ, ರಾಜ್ಯದಲ್ಲಿ ಕನ್ನಡ ಸಂಶೋಧನೆಯ ಪರಿವಿಡಿ, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, ೧೯೪೦.

೬ Dr. B.S. Kulkarni, Jaina Bronzes in the Kannada Research Institute Museum, Kannada Research Institute, Dharwad, 1985.

೭. D.C.Pavate and others, Museum of Art and Archeology, Kannada Research Institute, Dharwad.

೮. ಆರ್.ಎಸ್. ಪಂಚಮುಖಿ, (ಸಂ.), ಕುಮಾರವ್ಯಾಸ ವಿರಚಿತ ಐರಾವತ ಕಾಳಗ, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, ೧೯೪೯.

೧೦೫

ಸ್ವದೇಶಿ ಚಳವಳಿಯಲ್ಲಿ ಪೈಸಾ ಫಂಡ್ ಪಾತ್ರ

ಡಾ. ಎ.ಬಿ. ವಗ್ಗರ*

ಸ್ವದೇಶಿ ಇದೊಂದು ಸ್ವಸಹಾಯ ಮತ್ತು ಪರಸ್ಪರ ಸಹಾಯಕ್ಕಾಗಿನ ಪಂಥ. ಝಕೋಸ್ಲೋವಾಕಿ ದೇಶ ಇದನ್ನು ತೀವ್ರವಾಗಿ ಪ್ರಾರಂಭಿಸಿತ್ತು. ಮುಂಬೈ ಪ್ರಾಂತದಲ್ಲಿಯು ಕೂಡ ಆರ್ಥಿಕ ಸ್ವಾವಲಂಬನೆಗಾಗಿನ ಹೋರಾಟಕ್ಕೆ ಇದೇ ಅಸ್ತ್ರ ಒಳಿತೆಂದು ಸಂಘನಾತ್ಮಕ ಪ್ರಯತ್ನ ಪ್ರಾರಂಭಿಸಿದರು. ಸ್ವದೇಶಿ ತತ್ವದ ಮೇಲೆ ನಡೆಸಿದ ಮೊದಲ ಪ್ರಯತ್ನವೆ 'ಪೈಸಾ ಫಂಡ್',

ಮುಂಬೈ ಪ್ರಾಂತ ಕೃಷಿಗೆ ಪೂರಕವಾದ ಫಲವತ್ತಾದ ಭೂಪ್ರದೇಶವನ್ನು ಹೊಂದಿರಲಿಲ್ಲ. ಕೈಗಾರಿಕೆಗಳು ಇರಲಿಲ್ಲಾ. ಮೊದಲು ರಕ್ಷಣೆ ಮತ್ತು ತಮ್ಮ ಅಸ್ತಿತ್ವಕ್ಕಾಗಿ ಖಡ್ಗವನ್ನೆ ಅವಲಂಬಿಸಿದರು (ಉತ್ತಮ ಯೋಧ ಪಡೆ) ಮತ್ತು ಆಡಳಿತ ಸೇವೆಗೆ ದಕ್ಕನ್ ಸುಲ್ತಾನರ ಸೇವೆಗೆ ಸೇರಿದ್ದು ಇತಿಹಾಸ. ನಂತರದಲ್ಲಿ ಲೇಖನಿ ಹಿಡಿದರು. ವ್ಯಾಪಾರ ಮತ್ತು ವಾಣಿಜ್ಯಕ್ಕಾಗಿ ಬಂಡವಾಳದ ಕೊರತೆಯಿತ್ತು. ಆದರೆ, ಕೆಲವು ಅರ್ಥಶಾಸ್ತ್ರಜ್ಞರು ಉಲ್ಲೇಖಿಸುವಂತೆ 'ಬುದ್ಧಿಶಕ್ತಿಯೆ ಇವರ ಬಂಡವಾಳ' ಇದನ್ನೆ ಬಳಸಿಕೊಂಡು ವಾಣಿಜ್ಯ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಮುಂದಾದರು. ಈ ವಿಚಾರಧಾರೆ ಮತ್ತು ಸ್ವದೇಶಿ ಚಳವಳಿಯ ಭಾಗವಾಗಿ ಹುಟ್ಟಿಕೊಂಡಿದ್ದು 'ಪೈಸಾ ಫಂಡ ಗಾಜಿನ ಕಾರ್ಖಾನೆ'. ಇದರಿಂದ ಜಪಾನ ದೇಶ ಕೂಡ ಪ್ರಭಾವಿತಗೊಂಡು ಪೈಸಾ ಫಂಡ್ ಮಾದರಿಯಲ್ಲಿಯೇ ಪ್ರತಿಯೊಬ್ಬ ಪ್ರಜೆಯಿಂದ ಅರ್ಧ ಯೆನ್ ಹಣವನ್ನು 'ನೇವಲ್ ಫಂಡ್' ಎಂದು ಸಂಗ್ರಹಿಸ ತೊಡಗಿದರು.

ನಿಧಿ ಸಂಗ್ರಹಣೆ ವಿಚಾರ ಇದೇ ಮೊದಲಲ್ಲ. 'ರಾಷ್ಟ್ರೀಯ ನಿಧಿ' ಸಂಗ್ರಹಣೆ ವಿಚಾರ ಕುರಿತು ಮೊದಲು ೧೮೬೫ರಲ್ಲಿ ಬೆಂಗಾಳದ ರಾಣಿಗಂಜ್‌ನ ತಾರಾಪದ ಬ್ಯಾನರ್ಜಿಯವರು 'ಇಂಡಿಯನ್ ಮಿರರ್' ಪತ್ರಿಕೆಯಲ್ಲಿ ಹಲವಾರು ಲೇಖನಗಳನ್ನು ಪ್ರಕಟಿಸಿದ್ದರು. ೧೮೭೩ರಲ್ಲಿ ಮುಂಬೈ ಪ್ರಾಂತದಲ್ಲಿ ಈ ವಿಚಾರ ಪರಿಚಿತಗೊಂಡು, ಕೆಲವರಲ್ಲಿ ಆಸಕ್ತಿ ಮೂಢಿಸುವ ಪ್ರಯತ್ನಗಳು ನಡೆದವು. ಬೆಸ್ಸಿನ್‌ನಲ್ಲಿ ಜಿ.ಬಿ. ಜೋಶಿ–'ಸಾರ್ವಜನಿಕ ಪೈಸೆ ಫಂಡ್ ಬಾಕ್ಸ್', ಮಹಾಡದ ಸಬ್ ಜಡ್ಜ್ ಜಿ.ಎ. ಭಟ್–'ಬಡ್ಡಿ ರಹಿತ ಬಂಡವಾಳ', ಕುರಿತು ಲೇಖನಗಳನ್ನು ಪ್ರಕಟಿಸಿ ಅಲ್ಪ ಬಂಡವಾಳ ಸಂಗ್ರಹಿಸಿ ಮುಂದುವರೆಸುವಲ್ಲಿ ವಿಫಲರಾದರು. ಇದೇ ವಿಚಾರವಾಗಿ ಗುರ್ಜರ ಮತ್ತು ಠಾಕೂರರು ಬಾಂಬೆಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ (೧೮೯೯) ಕರಪತ್ರಗಳನ್ನು ಹಂಚಿದರು. ಆದರೆ, ಇವು ಅಷ್ಟಾಗಿ ಯಶಸ್ವಿಯಾಗಲಿಲ್ಲ.

ಎಲ್ಲಾ ಕಾಲಘಟ್ಟಗಳಲ್ಲಿ ಯಾವುದೇ ಹೊಸ ವಿಚಾರಗಳು ಸಾಮಾನ್ಯ ಹಳ್ಳಿಯ ವ್ಯಕ್ತಿಯಲ್ಲಿಯೆ ಹುಟ್ಟುತ್ತವೆ, ಪೈಸಾ ಫಂಡ್ ವಿಚಾರ ಕೂಡಾ ಹುಟ್ಟಿದ್ದು ಅಂತಾಜೀ ದಾಮೋದರ ಕಾಲೆ ಠಾಣಾ ಜಿಲ್ಲೆಯ ಸಣ್ಣ ಹಳ್ಳಿಯ ಓರ್ವ ಶಾಲಾ ಶಿಕ್ಷಕನಿಂದ. ಇವರೊಬ್ಬ ಶಿಕ್ಷಕರಾಗಿದ್ದರಿಂದ ಕಾಲೆಯವರ ಚಟುವಟಿಕೆಗಳನ್ನು ಇಲಾಖೆಯ ಮೇಲಾಧಿಕಾರಿಗಳು ಪ್ರಶ್ನಿಸತೊಡಗಿದರು. ಕೊನೆಗೆ ೧೬ ಅಕ್ಟೋಬರ್ ೧೮೯೯ರಲ್ಲಿ ಕಾಳೆ ತಮ್ಮ ಶಿಕ್ಷಕ ವೃತ್ತಿಗೆ ರಾಜೀನಾಮೆ ನೀಡಿದರು. ಸಂಪೂರ್ಣವಾಗಿ ಈ ಕಾರ್ಯದಲ್ಲಿಯೇ ತೊಡಗಿಕೊಂಡರು.

ಕಾಳೆಯವರು ಅಂದಿನ ಆರ್ಥಿಕ ಸ್ಥಿತಿ ಮತ್ತು ಭಾರತದಲ್ಲಿ ಕೈಗಾರಿಕರಣದ ಪುನರುಜ್ಜೀವನಗೊಳಿಸಲು ಹಣದ ಅವಶ್ಯಕತೆ ಬಗ್ಗೆ ಮರಾಠಿಯಲ್ಲಿ ಪುಸ್ತಕ ಬರೆದರು. ತಿಲಕ ಮುಂತಾದ ರಾಷ್ಟ್ರೀಯ ನಾಯಕರುಗಳ ಪ್ರೋತ್ಸಾಹದಿಂದ ಮೊದಲು 'ಪೈಸಾ ಫಂಡ್ ಮ್ಯಾಗಝಿನ್' ಮತ್ತು 'ಎನ್‌ಕರೇಜಿಂಗ್ ಅಸೋಸಿಯನ್' ಸ್ಥಾಪಿಸಿದರು. ನಂತರ ೨೭ ಡಿಸೆಂಬರ್ ೧೯೦೪ರಂದು ಮುಂಬೈ ಆರ್ಯ ಸಮಾಜ ಮಂದಿರದಲ್ಲಿ ಸಾರ್ವಜನಕ ಸಭೆ ಸೇರಿ, ಎಂ.ಜಿ. ದೇಶಮುಖರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ, ೧೬ ಅಕ್ಟೋಬರ್ ೧೯೦೫ರಲ್ಲಿ 'ದಿ ಇಂಡಸ್ಟ್ರೀಯಲ್ ಫಂಡ' ಅಥವಾ 'ಪೈಸಾ ಫಂಡ್' ಸಂಸ್ಥೆಯನ್ನು ನೋಂದಣಿ ಮಾಡಿಸಲಾಯಿತು.

* ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿ.ಸ.ಪ್ರ.ದ. ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ನರಗುಂದ, ಗದಗ ಜಿಲ್ಲೆ.

ನಿಧಿ ಸಂಗ್ರಹಣೆಯನ್ನು ಸಮಾಜದ ಎಲ್ಲಾ ವರ್ಗಗಳಿಂದ ಒಂದು ಪೈಸೆ ಅಥವಾ ಹೆಚ್ಚಿನ ಹಣ ಪಡೆಯಲು ನಿರ್ಧರಿಸಲಾಯಿತು. ಈ ಹಣ ಸಂಗ್ರಹಣೆಯ ಉದ್ದೇಶ ಕೃಷಿ ಮತ್ತು ವ್ಯಾಪಾರಕ್ಕೆ ಸಂಬಂಧಿಸಿದ ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದಾಗಿತ್ತು.

ನಂತರ ತಳೆಗಾಂವದಲ್ಲಿ 'ಗ್ಲಾಸ್ ಇಂಡಸ್ಟ್ರೀ' ಸ್ಥಾಪಿಸುವ ನಿರ್ಧಾರ ಕೈಗೊಂಡರು. ಇಂಡಸ್ಟ್ರೀ ಸ್ಥಾಪಿಸಲು ತಳೆಗಾಂವನ ಸಮರ್ಥ ವಿದ್ಯಾಲಯ ಪೈಸಾ ಫಂಡ್ ಕಮಿಟಿಗೆ ತಮ್ಮ ಆವರಣದಲ್ಲಿನ ಭೂಮಿ ದಾನ ನೀಡಿತು. ಯಾಕೆಂದರೆ ತಮ್ಮ ಶಿಕ್ಷಣ ಸಂಸ್ಥೆಯು ಕೈಗಾರಿಕಾ ತರಬೇತಿ ನೀಡುವ ಶಾಲೆಯಾಗಬೇಕೆಂದು ಬಯಸಿದ್ದರು, ಪ್ರತಿಯಾಗಿ ಗ್ಲಾಸ್ ಇಂಡಸ್ಟ್ರಿಯಿಂದ ತಮ್ಮ ಕೆಲವು ವಿದ್ಯಾರ್ಥಿಗಳನ್ನು ತರಬೇತಿಗೊಳಿಸುವ ಕರಾರಿನ ಮೇಲೆ ಭೂಮಿ ನೀಡಿದರು. ಸ್ವಾತಂತ್ರ್ಯ ಚಳವಳಿ ತೀವ್ರಗೊಂಡ ಸಂದರ್ಭದಲ್ಲಿ ಸಮರ್ಥ ವಿದ್ಯಾಲಯ ಕ್ರಾಂತಿಕಾರಿಗಳನ್ನು ಸೃಷ್ಟಿಸುತ್ತಿದೆ ಎಂದು ಸರ್ಕಾರ ಇದನ್ನು ಮುಚ್ಚಿಸಿತು.

ಜಪಾನ ಮತ್ತು ಅಮೇರಿಕಯಲ್ಲಿ ಗ್ಲಾಸ್ ತಯಾರಿಕೆ ಕೌಶಲ್ಯ ಕಲಿತ ಈಶ್ವರದಾಸ ವಾರ್ಷ್ಣೇ ಸಹಾಯದಿಂದ ೦೫ ಆಗಸ್ಟ್ ೧೯೦೮ರಲ್ಲಿ ಗ್ಲಾಸ್ ಇಂಡಸ್ಟ್ರಿಯನ್ನು ಪ್ರಾರಂಭಿಸಲಾಯಿತು. ಆದರೆ, ಈ ಕೈಗಾರಿಕೆಗೆ ಅಂದಿನ ಸ್ವದೇಶಿ ಮತು ವಿದೇಶಿ ವಸ್ತುಗಳ ಬಹಿಷ್ಕಾರ ಚಳವಳಿಯಿಂದ ಒಳ್ಳೇಯ ಪ್ರತಿಕ್ರಿಯೆ ಬರಲಿಲ್ಲ.

ತಿಲಕರ ಅಭಯ ಇಂಡಸ್ಟ್ರಿಗೆ ದೊರೆತು ಅವರು ತಮ್ಮ ಕೇಸರಿ ಪತ್ರಿಕೆಯಲ್ಲಿ ಪೈಸಾ ಫಂಡದ ಮಹತ್ವವನ್ನು ಪ್ರಚಾರ ಮಾಡಿದರು. ಈ ಪೈಸಾ ಫಂಡ ಕಮೀಟಿಯಲ್ಲಿ ಇದರಲ್ಲಿ ಧಾರವಾಡದ ವಿ.ಎನ್.ಜೋಗ್(ಎಂಎಲ್‌ಸಿ), ಜಿ.ಡಿ. ದೇಶಪಾಂಡೆ, ವಿ.ಜಿ. ಪಂಡಿತ(ಬೆಳಗಾವಿ), ಪಿ.ಎ. ಪೈ (ಹುಬ್ಬಳ್ಳಿ), ವಿ.ಜಿ. ಕೊಲ್ಹಾಟ್ಕರ್ (ಕುಂದಗೋಳ) ಮತ್ತು ಎಸ್.ಜಿ. ಹಾಳಪನವರ(ಸದಲಗಾ) ಇವರು ಸದಸ್ಯರಾಗಿದ್ದರು. ಹಲವಾರು ಜನರನ್ನು ಸ್ವಾವಲಂಭಿಗಳನ್ನಾಗಿಸಿದ ಗ್ಲಾಸ್ ಇಂಡಸ್ಟ್ರೀ ಹಲವಾರು ರೀತಿಯಲ್ಲಿ ತಮ್ಮ ಕೊಡುಗೆ ನೀಡಿದೆ.

* ಹಲವಾರು ಜನರಿಗೆ ಗಾಜು ತಯಾರಿಕೆ ಕಲೆಯನ್ನು ಕಲಿಸಿದರು.
* ಸಾವಿರಾರು ಕಾರ್ಮಿಕರ ಕುಟುಂಬಗಳಿಗೆ ಅನ್ನ ನೀಡಿತು.
* ಸಿರಾಮಿಕ್ ಸೈನ್ಸ್ ಮತ್ತು ಆರ್ಟ್ಸ್‌ನಲ್ಲಿ ವಿಶ್ವವಿದ್ಯಾಲಯ ಪದವಿದರರನ್ನು ತರಬೇತಿ ನೀಡಿದೆ.
* ಸ್ವಲ್ಪ ಮಟ್ಟಿಗೆ ವಿದೇಶಕ್ಕೆ ಹರಿದು ಹೋಗುತ್ತಿದ್ದ ಹಣವನ್ನು ತಡೆದಿದೆ.

ಹಲವಾರು ಬ್ರಿಟಿಷ ಅಧಿಕಾರಿ ಮತ್ತು ರಾಷ್ಟ್ರೀಯ ನಾಯಕರುಗಳು ಇಲ್ಲಿಗೆ ಭೇಟಿ ನೀಡಿದ್ದರು. ಮಹಾತ್ಮಾ ಗಾಂಧಿ, ಸುಭಾಸಚಂದ್ರ ಭೋಸ್, ಪಂಡಿತ ಮಾಳವಿಯಾ, ಜವಾಹರಲಾಲ ನೆಹರು, ವೆಲ್ಲಿಂಗಡನ್ (ಬಾಂಬೆ ಗವರ್ನರ್ ಆಗಿದ್ದಾಗ), ಹೆಚ್.ಇ.ಜಿ.ಎಸ್. ಕ್ಲಾರ್ಕ (ಬಾಂಬೆ ಗವರ್ನರ್), ಆರ್.ಪಿ. ಪರಾಂಜಪೆ (ಶಿಕ್ಷಣ ಮಂತ್ರಿ), ಎಂ. ವಿಶ್ವೇಶ್ವರಯ್ಯ ಮೊದಲಾದವರು ಭೇಟಿ ನೀಡಿ ಪೈಸಾ ಫಂಡ್ ಗಾಜಿನ ಕಾರ್ಖಾನೆಯ ಕಾರ್ಯವನ್ನು ಶ್ಲಾಘಿಸಿದ್ದಾರೆ.

೧೯೧೦ ಜುಲೈನಲ್ಲಿ ಭೇಟಿ ನೀಡಿದ ಬಾಂಬೆ ಎಕ್ಸಿಕ್ಯೂಟಿವ್ ಕೌನ್ಸಿಲರುಗಳಾದ ಶ್ರೀಮತಿ. ಚೌಬಾಲ, ಲಾಂಬ್ ಮತ್ತು ಮೊರಿಸನ್‌ರು–ಸಾಧ್ಯವಾದಷ್ಟು ತಳೆಗಾಂವ ಗ್ಲಾಸ್ ಇಂಡಸ್ಟ್ರಿಗೆ ಸರ್ಕಾರ ಸಹಾಯ ಮಾಡುವಂತೆ ಶಿಫಾರಸ್ಸು ಮಾಡಿದರು. ಇಲಾಖೆಗಳಿಗೆ ಬೇಕಾದ ಖರೀದಿಯನ್ನು ಇಲ್ಲಿಂದ ಮಾಡುವಂತೆ ತಿಳಿಸಿದರು. ಬಾಂಬೆ ಸರ್ಕಾರ, ಹೈದರಾಬಾದ ಮತ್ತು ಬರೋಡಾ ಸಂಸ್ಥಾನಗಳು ಇಲ್ಲಿನ ಉತ್ಪನ್ನಗಳನ್ನೆ ಖರೀದಿಸತೊಡಗಿದರು.

ಕೇವಲ ಒಂದೇ ಪೈಸೆ ಸಂಗ್ರಹಣೆಯೊಂದಿಗೆ ಪ್ರಾರಂಭಗೊಂಡ ಈ ಸ್ವದೇಶಿ ಗ್ಲಾಸ್ ಇಂಡಸ್ಟ್ರಿ ಕಾರ್ಯ ಶ್ಲಾಘನೀಯ. ಆದರೆ, ರಾಷ್ಟ್ರೀಯತ್ವ, ದೇಶಪ್ರೇಮ ವಿಚಾರ ಬಂದಾಗ ಕೆಲವು ಪ್ರಶ್ನೆಗಳು ನಮ್ಮ ಮುಂದೆ ಬರುತ್ತವೆ. ಸಮಾಜದ ಎಲ್ಲ ವರ್ಗಗಳಿಂದ ನಿಧಿ ಸಂಗ್ರಹಿಸಲಾಯಿತು. ಆದರೆ, ಎಲ್ಲ ವರ್ಗದವರು ಇದರ ಆಡಳಿತ ಮಂಡಳಿ ಅಥವಾ ಸದಸ್ಯ ವರ್ಗದಲ್ಲಿ ಇದ್ದಿರಲಿಲ್ಲ ಯಾಕೆ. ಸರ್ಕಾರದ ಸಹಾಯ ಸಿಗುವಂತೆ ಮಾಡಿದ ಶಿಫಾರಸ್ಸುಗಳನ್ನು ತಿರಸ್ಕರಿಸಲಿಲ್ಲ, ಬ್ರಿಟಿಷರಿಗೆ ತಮ್ಮ ಉತ್ಪಾದಿತ ವಸ್ತುಗಳನ್ನು ಮಾರಬಾರದಿತ್ತು. ಬಹುಶಃ ಇಲ್ಲಿ ವ್ಯಾಪಾರದ ಲಕ್ಷಣಗಳು ಪ್ರಬಲಗೊಂಡಂತೆ ಕಾಣುತ್ತದೆ. ಇನ್ನೊಂದು ಅಂಶವೆಂದರೆ, ಪ್ರಜಾಪೀಡಕ ಸಂಸ್ಥಾನಿಕರು ಇದರಲ್ಲಿರುವುದನ್ನು ಕಾಣುತ್ತೇವೆ. ಪೈಸಾ ಫಂಡ್ ಗ್ಲಾಸ್ ಇಂಡಸ್ಟ್ರಿಯು ಕೇಸರಿ, ನವಕಾಲ, ಜ್ಞಾನ ಪ್ರಕಾಶ ಮುಂತಾದ ಪತ್ರಿಕೆಗಳಿಗೆ ಹಣಕಾಸಿನ ನೆರವು ನೀಡುತ್ತಿತ್ತು. ಒಟ್ಟಿನಲ್ಲಿ ಮಹಾರಾಷ್ಟ್ರದಲ್ಲಿ ಸ್ವದೇಶಿ ಚಳವಳಿಯ ಭಾಗವಾಗಿ ಸ್ಥಾಪಿತಗೊಂಡ ಪೈಸಾ ಫಂಡ ಪರ್ಯಾಯ ಅರ್ಥವ್ಯವಸ್ಥೆಯನ್ನು ಕಲ್ಪಿಸುವಲ್ಲಿ ಮಹತ್ವದ ಪಾತ್ರವಹಿಸಿತು.

೧೦೩

ಕನ್ನಡ ಸಂಶೋಧನ ಸಂಸ್ಥೆಯ ಪ್ರಾಚ್ಯವಸ್ತು ಸಂಗ್ರಹಾಲಯದ ಮೂಲಾಕಾರಗಳು

ಡಾ. ಎಸ್.ಕೆ. ಮೇಲಕಾರ*

ಕನ್ನಡ ನಾಡಿನ ಸಾಹಿತ್ಯ, ಇತಿಹಾಸ ಕಲೆ ಹಾಗೂ ಸಂಸ್ಕೃತಿಗಳ ಬಗೆಗೆ ಸಾಕಷ್ಟು ಅನ್ವೇಷಣೆ, ಸಂಶೋಧನೆ ಮತ್ತು ಅಧ್ಯಯನಗಳು ನಡೆಯುವುದರ ಅವಶ್ಯಕತೆಯನ್ನು ಅಂದಿನ ಮುಂಬಯಿ ಸರಕಾರಕ್ಕೆ ಮನಗಾಣಿಸುವ ಪ್ರಯತ್ನಗಳು ೧೯೨೭ರ ಸುಮಾರಿಗೆ ನಡೆದಿದ್ದವು ಎಂದು ಕಾಣಿಸುತ್ತದೆ. ಅದರ ಫಲವಾಗಿಯೇ ಮುಂಬಯಿ ಸರಕಾರ ಅದನ್ನು ಕಾರ್ಯಗತಗೊಳಿಸಲು ನಿರ್ಧರಿಸಿತು. ಪರಿಣಾಮವಾಗಿ ೧೯೨೮ ಅಕ್ಟೋಬರಲ್ಲಿ ಕರ್ನಾಟಕ ಸಂಸ್ಕೃತಿಯ ಸಂಶೋಧನೆಯ ಬಗೆಗೆ ನಡೆಯಬೇಕಾದ ಕಾರ್ಯ ಯೋಜನೆಯನ್ನು ಸಿದ್ಧಗೊಳಿಸಲು ಒಂದು ಸಮಿತಿಯನ್ನು ನೇಮಕ ಮಾಡಿತು. ಆ ಸಮಿತಿಗೆ ಕರ್ನಾಟಕ ಕಾಲೇಜಿನ ಅಂದಿನ ಪ್ರಾಚಾರ್ಯರಾದ ಶ್ರೀ ಎಸ್.ಸಿ. ಫ್ಯಾರಿನ್ ಸಭಾಪತಿಗಳಾಗಿ ನೇಮಕಗೊಂಡರು. ಅದರ ಸದಸ್ಯರುಗಳಾಗಿ ಕರ್ನಾಟಕ ವಿದ್ಯಾಪೀಠದ ಉಪನ್ಯಾಸಕರಾದ ಶ್ರೀ ಡಿ.ಸಿ. ಪಾವಟೆಯವರು, ಅಂದಿನ ಭಾರತ ಸರಕಾರದ ಮಾನ್ಯ ಮಂತ್ರಿಗಳಾದ ಶ್ರೀ ಡಿ.ಪಿ. ಕರಮರಕರ, ಡಾ. ನಂದಿಮಠ, ಮತ್ತು ಶ್ರೀ ವಿ.ಕೃ. ಗೋಕಾಕ ಇವರು ಸದಸ್ಯರಾಗಿ ನೇಮಕಗೊಂಡಿದ್ದರು. ಕನ್ನಡ ಪ್ರಾಧ್ಯಾಪಕರಾದ ಪ್ರೊ. ಮಾಳವಾಡ ಇವರು ಆ ಸಮಿತಿಯ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿರುತ್ತಾರೆ. ಪರಿಣಾಮವಾಗಿ ಅನ್ವೇಷಣೆ ಸಂಶೋಧನೆ ಅಧ್ಯಾಪನ, ಪ್ರಕಟಣೆ ಇತ್ಯಾದಿ ಕಾರ್ಯಗಳು ಕನ್ನಡ ಸಂಶೋಧನ ಸಂಸ್ಥೆಯಿಂದ ಪ್ರಾರಂಭಗೊಂಡವು. ಸಮಿತಿಯು ನಿರ್ಣಯಿಸಿದಂತೆ ೧೯೨೯ ಮೇ ತಿಂಗಳಲ್ಲಿ ಮುಂಬಯಿ ಸರಕಾರ ಅಧಿಕೃತವಾಗಿ ಕನ್ನಡ ಸಂಶೋಧನ ಸಂಸ್ಥೆಯನ್ನು ಸ್ಥಾಪನೆ ಮಾಡಿತು. ಅದಕ್ಕೆ ಕರ್ನಾಟಕ ಕಾಲೇಜಿನ ಕನ್ನಡ ಪ್ರಾಧ್ಯಾಪಕರೇ ಮೊದಲ ಸಮಿತಿಯ ಸದಸ್ಯರಾಗಿ ಡೈರೆಕ್ಟರಾಗಿ ೧೯೩೯ ಸಪ್ಟಂಬರ್ ತಿಂಗಳವರೆಗೆ ಕಾರ್ಯನಿರ್ವಹಿಸಿದರು. ಬಳಿಕ ಡಾ. ನಂದಿಮಠರವರು ಅಧ್ಯಕ್ಷರಾದರು. ಅದೇ ವರ್ಷವೇ ಅಕ್ಟೋಬರ ತಿಂಗಳಲ್ಲಿ ಡಾ. R.S. ಪಂಚಮುಖಿಯವರು ಕಾಯಂ ನಿರ್ದೇಶಕರಾಗಿ ನೇಮಕಗೊಂಡರು. ಆನಂತರ ಬಿ.ಎಸ್. ಕುಲಕರ್ಣಿಯವರು ೧೯೩೭ ಸಂಸ್ಥೆಯ ನಿರ್ದೇಶಕರಾದರು. ಅಲ್ಲಿಂದ ಸಂಸ್ಥೆಯ ಮೂಲಾಕರ ಸಾಮಗ್ರಿಗಳನ್ನು ಹುಡುಕುವ, ಸಂಗ್ರಹಿಸುವ ಮತ್ತು ಸಂಶೋಧನೆಯ ಮೂಲಕ ಪ್ರಕಟಿಸುವು ಕಾರ್ಯ ಚುರುಕುಗೊಂಡವು. ನಾಡಿನಾದ್ಯಂತ ಕೈಕೊಂಡ ಅನ್ವೇಷಣೆಯ ಸಂದರ್ಭದಲ್ಲಿ ಲಭ್ಯವಾದ ಆಕರಗಳನ್ನು ವಿಂಗಡಿಸಿ ಶಾಸ್ತ್ರೀಯವಾಗಿ ಅಧ್ಯಯನಿಸುವ ಕಾರ್ಯದ ವ್ಯಾಪ್ತಿ ವಿಸ್ತಾರವಾಗಿ ಬೆಳೆಯಿತು. ಇದರಿಂದಾಗಿ ಕರ್ನಾಟಕದ ಇತಿಹಾಸ, ಸಾಹಿತ್ಯ ವಿವಿಧ ಕಲೆಗಳ ಸಾಮಾಜಿಕ ಧಾರ್ಮಿಕ ಜೀವನ, ಮತ್ತು ಸಂಸ್ಕೃತಿಗಳ ವ್ಯಾಸಂಗಕ್ಕೆ ಅನುಕೂಲವಾದ ಹಾಗೂ ಬೆಲೆಯುಳ್ಳ ಮೂಲ ಆಕರ ಸಾಮಗ್ರಿಗಳ ಅಪಾರ ಸಂಗ್ರಹವಾಗಿದೆ. ಹೀಗೆ ಕಲೆಹಾಕಲ್ಪಟ್ಟ ಹಳೆಯ ಕೈಬರಹದ ಅನೇಕ ಗ್ರಂಥಗಳು, ಹಸ್ತಪ್ರತಿಗಳು, ಕಡತಗಳು, ಕಾಗದ ಪತ್ರಗಳ ಸಂಗ್ರಹ, ಶಿಲಾಶಾಸನ, ತಾಮ್ರಪಟ ಶಾಸನ, ಮೂರ್ತಿ ಶಿಲ್ಪಗಳು, ನಾಣ್ಯಗಳು, ವರ್ಣ ಚಿತ್ರಗಳು, ಇತ್ಯಾದಿ ಆಕರಗಳನ್ನು ದಾಖಲಿಸುವ ಬಗ್ಗೆ ಛಾಯಾಚಿತ್ರಗಳನ್ನು, ನಕ್ಷೆಗಳನ್ನು ಸಿದ್ಧಪಡಿಸಿಕೊಂಡು, ಟಿಪ್ಪಣೆ ಮಾಡಿಕೊಳ್ಳುವ ಮೂಲಕ ಅವುಗಳನ್ನು ಅಭ್ಯಾಸಮಾಡಿ ಗ್ರಂಥಗಳ ಮೂಲಕ ಪ್ರಕಟಿಸುವ ಮತ್ತು ಪ್ರದರ್ಶಿಸುವ ಕಾರ್ಯಗಳನ್ನು ಸಿದ್ಧಗೊಳಿಸಲಾಯಿತು.

೧೯೩೨ ಮೇ ತಿಂಗಳಲ್ಲಿಯೇ ಶ್ರೀ ಪಂಚಮುಖಿಯವರು ಡೈರೆಕ್ಟರ ಹುದ್ದೆಯಿಂದ ನಿವೃತ್ತಗೊಂಡರು. ನಂತರ ಕನ್ನಡ ಸಂಶೋಧನ ಸಂಸ್ಥೆಯನ್ನು ಪುನಃ ಕರ್ನಾಟಕ ಕಾಲೇಜಿನ ಆಡಳಿತಕ್ಕೆ ಒಳಪಡಿಸಲಾಯಿತು. ಈ ಅವಧಿಯಲ್ಲಿ ಸಹಿತ ಮೂಲ ಸಾಮಗ್ರಿಗಳ ಹುಡುಕಾಟ, ಸಂಗ್ರಹಣೆ, ಪ್ರಕಟಣೆಯ ಕಾರ್ಯ ಮುಂದವರೆಸಲಾಯಿತು ಆಗ ಬಾದಾಮಿ, ಐಹೊಳೆ, ಪಟ್ಟದಕಲ್ಲಿನಲ್ಲಿಯ ವರ್ಣಚಿತ್ರದ ಛಾಯಾಚಿತ್ರಗಳನ್ನು ಸಂಗ್ರಹಿಸಲಾಗಿರುತ್ತದೆ. ಹಾಗೂ ಬಾದಾಮಿಯಿಂದ ಬನವಾಸಿವರೆಗಿನ ವಿವಿಧ ಪ್ರಾಗೈತಿಹಾಸಿಕ ನೆಲೆಗಳಿಂದ ಗಡಿಗೆ ಮಡಿಕೆ, ಶಿಲಾ ಉಪಕರಣಗಳನ್ನು ಸಹಿತ ಕಲೆಹಾಕಲಾಯಿತು. ಅವುಗಳ

* ಕನ್ನಡ ಸಂಶೋಧನ ಸಂಸ್ಥೆ, ಕ.ವಿ.ವಿ. ಧಾರವಾಡ-೩.

ಪ್ರಯೋಜನ ಸಾರ್ವಜನಿಕರಿಗೆ ತಲುಪಿಸುವ ನಿಟ್ಟಿನಲ್ಲಿ ಪ್ರದರ್ಶನಕ್ಕಾಗಿ ೧೯೫೩ರಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯವನ್ನು ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಸ್ಥಾಪಿಸುವ ಯೋಜನೆ ಸಿದ್ಧಗೊಂಡು ಅದು ಕಾರ್ಯಗತಗೊಂಡಿತು. ಪರಿಣಾಮವನ್ನು ಕರ್ನಾಟಕದಲ್ಲಿಯೇ ಉತ್ತಮ ಪ್ರಾಚ್ಯವಸ್ತು ಸಂಗ್ರಹಾಲಯವಾಗಿ ಹೊರಮ್ಮಿದೆ. ಅಲ್ಲದೆ ನಾಡಿನ ಬೇರೆ ಬೇರೆ ಕಡೆಯಿಂದ ಸಂಗ್ರಹಿತ ಹಾಗೂ ದೇಣಿಗೆ ರೂಪದಲ್ಲಿ ಹರಿದುಬಂದ ಗ್ರಂಥಗಳ ಭಂಡಾರದ ಗ್ರಂಥಾಲಯದ ಅವಶ್ಯಕತೆ ಉಂಟಾಯಿತು. ಹೀಗಾಗಿ ಪ್ರಕಟಿತ ಮತ್ತು ಸಂಗ್ರಹಿತವಾದ ಮೂಲಾಕಾರಗಳ ರಕ್ಷಣೆ, ಪ್ರದರ್ಶನಕ್ಕಾಗಿ ಗ್ರಂಥಾಲಯ ಮತ್ತು ಪ್ರಾಚ್ಯವಸ್ತು ಸಂಗ್ರಹಾಲಯದ ಕಾರ್ಯ ವ್ಯಾಪ್ತಿಯು ಬೆಳೆಯಿತು. ಅದನ್ನು ನಿರ್ವಹಿಸಲು ಪ್ರತ್ಯೇಕವಾಗಿ ಒಬ್ಬ ಕ್ಯೂರೇಟರವರನ್ನು ನೇಮಿಸುವ ಅವಶ್ಯಕತೆ ಉಂಟಾಯಿತು, ಅದಕ್ಕಾಗಿ ೧೯೫೨ ರಲ್ಲಿ ಕ್ಯೂರೇಟರವರನ್ನು ನೇಮಿಸಿ ಆ ಸ್ಥಾನವನ್ನು ತುಂಬಲಾಯಿತು.

ಅಂದಿನಿಂದ ಡಾ. ಅಣ್ಣಿಗೇರಿ ಡಾ. B.S. ಕುಲಕರ್ಣಿಯವರು ಡಾ. ಎಂ.ಎಸ್. ನಾಗರಾಜ ಡಾ. M.T. ಕಾಂಬಳೆ ಡಾ. I.K. ಪತ್ತಾರ ಅನಂತರ ೧೯೯೭ರಲ್ಲಿ ಡಾ. S.K. ಮೇಲಕಾರವರು ಪೂರ್ಣಕಾಲಿಕ ಕ್ಯೂರೇಟರಾಗಿ ಸೇವೆ ಸಲ್ಲಿಸುತ್ತಾ ಬಂದಿರುತ್ತಾರೆ. ಮತ್ತು ೧೯೪೯ರಿಂದ ೧೯೫೨ರವರೆಗೆ ಡಾ. R.S. ಪಂಚಮುಖಿಯವರೇ ನಿರ್ದೇಶಕರಾಗಿ ಸೇವೆ ಗೈದಿರುತ್ತಾರೆ.

ಅದೇ ಸಂದರ್ಭದಲ್ಲಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಭಾಷಾವಾರು ಪ್ರಾಂತದ ಏಕೀಕರಣದ ಆಧಾರದ ಮೇಲೆ ಈ ನಾಡಿಗೆ ಕನ್ನಡ ನಾಡಿನ ಹೆಸರಿಡುವ ಕಾರ್ಯ ಆರಂಭಗೊಂಡಿತ್ತು. ಪರಿಣಾಮವಾಗಿ ೧೯೫೭ರಲ್ಲಿ ಕನ್ನಡ ನಾಡು ಏಕೀಕರಣಗೊಂಡು ಪ್ರತ್ಯೇಕ ಮೈಸೂರು ರಾಜ್ಯವಾಯಿತು. ಮುಂದೆ ಆರು ವರ್ಷ ಗತಿಸುವಷ್ಟರಲ್ಲಿಯೇ ಅಂದರೆ ೧೯೭೩ ನವೆಂಬರ ೧ರಂದು ಕರ್ನಾಟಕ ರಾಜ್ಯವೆಂದು ನಾಮಕರಣವಾಯಿತು.

ಆಗ ಕನ್ನಡ ಸಂಶೋಧನ ಸಂಸ್ಥೆಯೂ ಸಹ ೧೯೫೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಹಸ್ತಾಂತರವಾಯಿತು. ಡಾ. ಬಿ.ಎ. ಸಾಲೊತ್ತೂರೆ ಡಾ. P.B. ದೇಸಾಯಿ, ಡಾ. ಶ್ರೀನಿವಾಸ ರಿತ್ತಿ ಡಾ. T.K. ಮೇಟಿ, ಡಾ. ರಾಘನಾಥ ಭಟ್ಟ, ಡಾ. R.M. ಷಡಕ್ಷರಯ್ಯನವರು ಪ್ರಭಾರ ನಿರ್ದೇಶಕರಾಗಿ ಸೇವೆ ಸಲ್ಲಿಸಿರುತ್ತಾರೆ. ಈ ಸಂಸ್ಥೆಯ ಮತ್ತೊಂದು ಕೊಡುಗೆ ಏನೆಂದರೆ ಕ.ವಿ.ವಿ. ದ ಪ್ರಾಚೀನ ಭಾರತೀಯ ಇತಿಹಾಸ ವಿಭಾಗ ಹಾಗೂ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗಗಳು ಇದೇ ಸಂಸ್ಥೆಯಲ್ಲಿ ಜನ್ಮತಾಳಿದ್ದು, ಪಿ.ಜಿ. ಶಾಸನ ಶಾಸ್ತ್ರ ಕೋರ್ಸ್ ೧೯೬೭ರಲ್ಲಿ ಆರಂಭಿಸಿ ಶಾಸನ ಕ್ಷೇತ್ರದಲ್ಲಿ ಈ ನಾಡಿಗೆ ನೀಡಿದ ಕೊಡುಗೆ ಸ್ಮರಣಾರ್ಹವಾಗಿದೆ. ಅದೇ ರೀತಿ ಕನ್ನಡ ನಾಡಿನ ಸಾಹಿತ್ಯ ಮತ್ತು ಪುರಾತತ್ವ ಇತಿಹಾಸದ ಸಂಸ್ಕೃತಿ ವಿಷಯಗಳಿಗೆ ಸಂಬಂಧಿಸಿದಂತೆ ಅಧ್ಯಯನಕ್ಕೆ ಮನ್ನಣೆ ನೀಡಲಾಗಿದೆ. ಈ ರೀತಿಯಾಗಿ ಬೆಳೆದು ಬಂದ ಕನ್ನಡ ಸಂಶೋಧನ ಸಂಸ್ಥೆ ೭೫ ವರ್ಷದಲ್ಲಿ ಕಾಲಿರಿಸಿದ್ದು ತನ್ನ ಅಮೃತ ಮಹೋತ್ಸವ ಸಮಾರಂಭ ಮತ್ತು ಶಾಸನ ಶಾಸ್ತ್ರದ ಸುವರ್ಣ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಆಕರ ಸಾಮಗ್ರಿಗಳ ಸಂಗ್ರಹ ನಾಡಿನ ಇತಿಹಾಸ ಪುನ ರಚನೆಯಲ್ಲಿ ಎಷ್ಟು ಮಹತ್ವದ ಪಾತ್ರ ವಹಿಸಿವೆ ಎಂದು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಅದರಲ್ಲಿ ಶಿಲಾಸಂಸ್ಕೃತಿಯಿಂದ ೧೯ನೇ ಶತಮಾನ ಕಾಲಘಟ್ಟವರೆಗಿನ ಕಾಲ ಮಿತಿಯಲ್ಲಿ ಆಕರ ಸಾಮಗ್ರಿಗಳನ್ನು ಅರಿಯಲಾಗಿದೆ.

ಆ ಹಿನ್ನೆಲೆಯಲ್ಲಿ ನಮ್ಮ ನಾಡಿನ ಇತಿಹಾಸ ಶಿಲಾಸಂಸ್ಕೃತಿಯಿಂದ ಆರಂಭಗೊಳ್ಳುತ್ತಿದ್ದು, ಅದು ಎಷ್ಟು ಪ್ರಾಚೀನವೆಂದು ಹೇಳಿಕೊಂಡಷ್ಟು ಅದರ ಮೌಲ್ಯ ಹೆಚ್ಚುತ್ತದೆ. ಈ ನಿಜಾಂಶವನ್ನು ಪ್ರತಿನಿಧಿಸುವ ಪ್ರಾಚ್ಯವಸ್ತುಗಳೇ ಮೂಲಾಕಾರಗಳೆಂದು ಪರಿಗಣಿಸಲಾಗುತ್ತದೆ. ಅವುಗಳನ್ನು ಪ್ರಧಾನವಾಗಿ ಪುರಾತತ್ವ ಮೂಲಾಧಾರಗಳು ಮತ್ತು ಸಾಹಿತ್ಯ ಆಕರಗಳೆಂದು ವಿಂಗಡಿಸಿ ಅಧ್ಯಯನಿಸುತ್ತಾ ಬರಲಾಗಿರುತ್ತದೆ. ಶಿಲಾ ಶಾಸನಗಳು, ನಾಣ್ಯಗಳು, ಸ್ಮಾರಕಶಿಲ್ಪಗಳು, ಧಾರ್ಮಿಕ ಶಿಲ್ಪಗಳು, ನಿಶಿಧಿಗಳು, ಸತಿಗಲ್ಲುಗಳು, ಶಿಲಾ ಉಪಕರಣಗಳು, ಗಡಿಗೆ ಮಡಿಕೆಗಳು, ಭೂ ಉತ್ಖನನದಲ್ಲಿ ಮತ್ತು ಅನ್ವೇಷಣೆಯಲ್ಲಿ ದೊರೆತ ಇಟ್ಟಂಗಿಗಳು, ಮಣಿಗಳು, ಇತ್ಯಾದಿ ಆಕರ ಸಾಮಗ್ರಿಗಳು ಕನ್ನಡ ಸಂಶೋಧನೆ ಸಂಸ್ಥೆಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿವೆ. ಅವುಗಳನ್ನು ಪುನರ ಪರಿಶೀಲನೆಗೊಳ್ಳಪಡಿಸಿ ವರ್ತಮಾನದ ಜಗತ್ತಿಗೆ ಸಂವಹನ ರೂಪದಲ್ಲಿ ಪರಿಚಯಿಸಿದರೆ ಅದರ ಜೀವಂತಿಕೆ ಇತಿಹಾಸ ಸತ್ವಾಧಾರಿತವಾಗಿ ಇಂದಿನ ಮತ್ತು ಮುಂದಿನ ಪೀಳಿಗೆಗೆ ಅರ್ಪಿಸಿದಂತಾಗುತ್ತದೆ. ಆ ನಿಟ್ಟಿನಲ್ಲಿ ವಿವಿಧ ಮೂಲಗಳಿಂದ ಸಂಗ್ರಹವಾದಂತ ಕನ್ನಡ ಸಂಶೋಧನ ಸಂಸ್ಥೆಯ ವಸ್ತು ಸಂಗ್ರಹಾಲಯದ ಪ್ರಾಚ್ಯವಸ್ತು ಆಕರಗಳನ್ನು ಪರಿವೀಕ್ಷಿಸಲಾಗಿದ್ದು, ಸಂಶೋಧಕರು ಅವುಗಳನ್ನು ಬಳಸಿಕೊಂಡು ನಮ್ಮ ನಾಡಿನ ಇತಿಹಾಸ ಮತ್ತು ಪುರಾತತ್ವ ಚರಿತ್ರೆಯನ್ನು ಪುನರಚಿಸುವ ವ್ಯಾಖ್ಯಾನಿಸುವ ಹಾಗೂ ಅರ್ಥೈಸುವ ಕಾರ್ಯಗಳು ಮುಂದುವರೆಸಿದರೆ. ನಮ್ಮ ಮುಂದಿನ ಪೀಳಿಗೆ ಹೆಮ್ಮೆ ಪಡುವಂತಾಗುತ್ತದೆ.

ಆ ನಿಟ್ಟಿನಲ್ಲಿ ಇಲ್ಲಿಯ ಶಿಲಾಸಂಸ್ಕೃತಿಗೆ ಸಂಬಂಧಿಸಿದಂತೆ ನಾವು ಇಲ್ಲಿ ಗಮನಿಸುವುದಾದರೆ ಗುಲಬರ್ಗಾ ಜಿಲ್ಲೆಯ ಸುರಪುರ ಸಮೀಪದ ಹುಣಸಗಿ ಅವಿಭಜಿತ ವಿಜಯಪುರ ಜಿಲ್ಲೆಯ ಖ್ಯಾಡ್, ಡಾಣಕ ಶಿರೂರ, ಹಳ್ಳೂರ ಹನುಮಸಾಗರದಲ್ಲಿ ಪತ್ತೆಯಾದ ಹಳೆಯ ಶಿಲಾಯುಗಧ ಆಯುಧಗಳ ಸಂಗ್ರಹ ಸಂಸ್ಥೆಯ ಪ್ರಾಚ್ಯವಸ್ತು ಸಂಗ್ರಹದಲ್ಲಿರುತ್ತದೆ, ಅಂತಹ ನೆಲೆಗಳನ್ನು ಮೊದಲ ಬಾರಿಗೆ ಗುರ್ತಿಸಿ ಈ ನಾಡಿಗೆ ಪರಿಚಯಿಸಿದವರೆಂದರೆ ಡಾ. ರಾಬರ್ಟ್ ಭ್ರೂಸ್ ಪೂಟರು ಮಾರ್ಟಿಮರ್ ವ್ಹೀಲರ್, ಮೊದಲಿಗರು ಆನಂತರ ಕರ್ನಲ್ ಮೇಡೋಸ್ ಟೇಲರ ಡಾ. ಪದ್ಧಯ್ಯ, ಡಾ. ರವಿ ಕೊರೀಶೆಟ್ಟರ, ಡಾ. ಸುಬ್ಬರಾವ್, ಡಾ. M.H. ಕೃಷ್ಣಾ ಡಾ. ಸಂಕಾಲಿಯಂತಹ ಹತ್ತಾರು ಜನ ಪುರಾತತ್ವಜ್ಞರು ಈ ಕಾಲದ ನೆಲೆಗಳನ್ನು ಶೋಧಿಸಿ ೫೦ ಲಕ್ಷ ವರ್ಷಗಳ ಹಿಂದೆ ಮಾನವ ಈ ಶಿಲಾ ಉಪಕರಣಗಳನ್ನು ಬಳಸುತ್ತಿದ್ದನೆಂದು ಗುರ್ತಿಸಿರುತ್ತಾರೆ.

ನಂತರ ಕಾಲಘಟ್ಟದ ಮಧ್ಯಶಿಲಾಯುಗ, ಸೂಕ್ಷ್ಮ ಶಿಲಾಯುಗ ನೂತನಶಿಲಾಯುಗ, ಬೃಹತ್ ಶಿಲಾಯುಗ ತಾಮ್ರ ಶಿಲಾಯುಗ ಹಾಗೂ ಇತಿಹಾಸ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ನಾಡಿನ ಪ್ರಸಿದ್ಧ ಐತಿಹಾಸಿಕ ನೆಲೆಗಳಾದ ಸನ್ನತಿ, (ಗುಲಬರ್ಗಾ ಜಿಲ್ಲೆ), ಸಂಗನಕಲ್ಲು, (ಬಳ್ಳಾರಿ ಜಿಲ್ಲೆ), ಪಿಕ್ಲಿಹಾಳ, ಮಸ್ಕಿ ಹನುಮಸಾಗರ (ರಾಯಚೂರ ಕೊಪ್ಪಳ ಜಿಲ್ಲೆ), ಖ್ಯಾಡ, ಡಾಣಕಶಿರೂರ ಹಳ್ಳುರ(ವಿಜಯಪುರ ಜಿಲ್ಲೆ), ನಿಟ್ಟೂರು, ಕುಡತನಿ, ಬ್ರಹ್ಮಗಿರಿ, ತಕ್ಕಲಕೋಟೆ, (ಬಳ್ಳಾರಿ ಜಿಲ್ಲೆ), ಕೊಪ್ಪಳ, ಹಿರೇಬೆನಕಲ್ ಚಂದ್ರವಳ್ಳಿ, ಹಳ್ಳೂರ (ಹೀರೆಕೇರೂರ), ವಡಗಾಂವ ಮಾದವಪೂರ, (ಬೆಳಗಾವಿ ಜಿಲ್ಲೆ), ಕಪಗಲ್ಲು, ಬೆನಕಲ್ ಮುಂತಾದ ನೆಲೆಗಳಿಗೆ ಬೆಟ್ಟಿಕೊಟ್ಟು ಅಲ್ಲಿ ಲಭ್ಯವಾದ ಶಿಲಾ ಉಪಕರಣಗಳು ಗಡಿಗೆ ಮಡಿಕೆಗಳನ್ನು ಸಂಗ್ರಹಿಸಿ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿರುವುದು. ಈ ನೆಲೆಗಳನ್ನು ಡಾ. M.H. ಕೃಷ್ಣಾ, ಡಾ ಶೆಷಾದ್ರಿ, ಬಿ. ಸುಬ್ಬರಾವ್, ಡಾ. ಅ. ಸುಂದರ ಡಾ. M.S. ನಾಗರಾಜರಾವ್, ಡಾ. B.K. ಗುರುರಾಜ, ಡಾ. ಸುಬ್ಬಯ್ಯ, ಡಾ. ಪದ್ದಯ್ಯ, ಡಾ. ರವಿ ಕೋರಿಶೆಟ್ಟರ, ಡಾ. S.M. ಷಡಕ್ಷರಯ್ಯ, ಇನ್ನೂ ಅನೇಕ ಪುರಾತತ್ವಜ್ಞರು ಅನ್ವೇಷಣೆ ಮಾಡಿ ಪ್ರಾಗೈತಿಹಾಸಿಕ ಚರಿತ್ರೆಯನ್ನು ಗುರುತಿಸಿ ವಿಮರ್ಶಿಸುವ ಕಾರ್ಯ ಮಾಡಿರುತ್ತಾರೆ. ಆ ಹಿನ್ನಲೆಯಲ್ಲಿ ಶಿಲಾಸಂಸ್ಕೃತಿ ಅಧ್ಯಯನಕ್ಕೆ ಕನ್ನಡ ಸಂಶೋಧನ ಸಂಸ್ಥೆಯ ಕೊಡುಗೆ ಸ್ಮರಣೀಯವಾಗಿದೆ.

ಹಾಗೆಯೇ ಕಳೆದ ೩೦ ವರ್ಷಗಳ ಹಿಂದೇ ಡಾ. ಎಂ.ಎಸ್. ನಾಗರಾಜರಾವರವರು ಸಂಸ್ಥೆಯಲ್ಲಿ ಮ್ಯೂಜಿಯಂ ಕೃರೇಟರಾಗಿದ್ದಾಗ ಭಾರತೀಯ ಪುರಾತತ್ವ ಇಲಾಖೆಯ ನಿರ್ದೇಶಕರಾಗಿ ನೇಮಕವಾದ ಸಂದರ್ಭದಲ್ಲಿ ಸುಮಾರು ೨೫೦೦ ಸಾವಿರ ವರ್ಷಗಳ ಹಿಂದಿನ ಸಿಂಧು ಸಂಸ್ಕೃತಿಗೆ ಸಂಬಂಧಿಸಿದಂತೆ ಗಡಿಗೆ ಮಡಿಕೆ, ಗೊಂಬೆಗಳು, ಮುದ್ರೆಗಳು, ಇಟ್ಟಂಗಿಗಳು, ಪಿಂಗಾಣಿ ತುಣಕುಗಳು, ಬೀಡ್ಸಗಳು ಮತ್ತು ಆಟಿಕೆಯ ವಸ್ತುಗಳು ಇತ್ಯಾದಿ ಮೂಲ ಆಕರಗಳನ್ನು ಸಂಸ್ಥೆಯ ವಸ್ತು ಸಂಗ್ರಹಾಲಯಕ್ಕೆ ಸಂಗ್ರಹಿಸಿದ್ದರಿಂದ ಈ ಸಂಸ್ಥೆಗೆ ಭಾರತ ಮಟ್ಟದಲ್ಲಿ ಶಾಸ್ತ್ರೀಯ ಸ್ಥಾನಮಾನದಲ್ಲಿ ಪರಿಗಣಿಸಲು ಸಾಧ್ಯವಾಗಿದೆ. ಆದಿಸೆಯಲ್ಲಿ ಜೋರ್ವೆ ಸಂಸ್ಕೃತಿಗೆ ಸಂಬಂಧಿಸಿದಂತೆ ಮಣ್ಣಿನ ಪಾತ್ರೆಯ ಮೇಲ್ಲಿರುವ ಪೇಂಟಿಂಗ್ಸ್‌ಗಳನ್ನು ಡಾ. ರಘುನಾಥಭಟ್ಟರು ಸಂಗ್ರಹಿಸಿದ್ದಾರೆ. ಲೋತಾಲ್ಥ್ ನೆಲೆಯಿಂದ ಇಟ್ಟಂಗಿ ಹಾಗೂ ಮಡಕೆಯ ಪಿಸುಗಳನ್ನು ಸಂಸ್ಥೆಯ ಕ್ಯೂರೇಟರಾದ ಡಾ. S.K. ಮೇಲಕಾರವರು ಡಾ. V.S. ಬಡಿಗೇರ ಇವರ ನೆರವಿನೊಂದಿಗೆ ೨೦೦೯ರಲ್ಲಿ ಸಂಗ್ರಹಿಸಿರುತ್ತಾರೆ.

ಡಾ. ಅ. ಸುಂದರವರು ಬೆಳಗಾವಿ ನಗರದ ವಡಗಾಂವ ಮಾದವಪೂರದಲ್ಲಿ ಹಾಗೂ ೧೯೭೪ ರಲ್ಲಿ ಹಿರೇಕೇರೂರ ತಾಲೂಕಿನ (ಹಾವೇರಿ ಜಿಲ್ಲೆ), ಹಳ್ಳೂರ (ತುಂಗಾಬದ್ರನದಿ ತೀರ)ದಲ್ಲಿ ಉತ್ಸನನ ಮಾಡಿದ್ದರ ಫಲವಾಗಿ ಆ ಕಾಲದ ಶಿಲಾಯುಗ ಉಪಕರಣಗಳು, ಕಬ್ಬಿಣದ ಆಯುಧಗಳು ಕ್ರಿ.ಪೂ. ೧-೨ನೇ ಶತಮಾನದಿಂದ ಕ್ರಿ.ಶ. ೧-೨ನೇ ಶ. ದವರೆಗಿನ ಗಡಿಗೆ ಮಡಿಕೆಗಳು, ಬೀಡ್ಸ್‌ಗಳು, ಇಟ್ಟಂಗಿಗಳ ನಾಣ್ಯಗಳು, ಮತ್ತು ಯೂಪಸಂಭ (ಬೆಳಗಾವಿ ವಡಗಾಂವ ಮಾದವಪೂರ) ಶಾಸನ ಮುಂತಾದವುಗಳು ಲಭ್ಯವಾಗಿದ್ದು ಅವುಗಳನ್ನು ಸಹ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಲಾಗಿರುತ್ತದೆ. ಆ ನೆಲೆಗಳ ಉತ್ಖನ್ನದ ಕೀರ್ತಿ ಈ ಸಂಸ್ಥೆಗೆ ಸಲ್ಲುತ್ತದೆ. ಇವು ಇತಿಹಾಸ ಆರಂಭ ಕಾಲದ ಸಂಸ್ಕೃತಿಗೆ ಉತ್ತಮ ಉದಾಹರಣೆಯಾಗಿವೆ.

ಹೀಗೆ ನಮ್ಮ ದೇಶಧ ಇತಿಹಾಸ ಶಿಲಾಸಂಸ್ಕೃತಿಯಿಂದ ಆರಂಭಗೊಂಡು ಸಿಂಧುನಾಗರಿಕತೆಗೆ ಕಾಲಿರಿಸಿದ ಬಗ್ಗ ತಿಳಿದುಕೊಳ್ಳಲು ಅವಕಾಶವಿರುವ ಎಲ್ಲಾ ಮೂಲಾಕರಗಳು ಇಲ್ಲಿವೆ. ಅನಂತರ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಮೌರ್ಯ-ಶತವಾಹನರ ಕಾಲದಿಂದ ೧೯ನೇ ಶತಮಾನದವರೆಗೆ ದಕ್ಷಿಣ ಭಾರತದಲ್ಲಿ ಆಳ್ವಿಕೆ ಮಾಡಿದ ವಿವಿಧ ಅರಸು ಮನೆತನಗಳ ಚರಿತ್ರೆಯ ಮೇಲೆ ಬೆಳಕು ಚಲ್ಲುವ ಮತ್ತು ತುಂಬಾ ಅಪರೂಪವುಳ್ಳ ವಿವಿಧ ಧರ್ಮಗಳು ಅಂದರೆ ಶೈವ, ವೈಷ್ಣವ, ಜೈನ, ಬೌದ್ಧ ವೀರಶೈವ ಇಸ್ಲಾಮಿಕ ಧರ್ಮಗಳ ಮೂರ್ತಿಶಿಲ್ಪಗಳು, ಸಾವಿರಾರು ನಾಣ್ಯಗಳು, ನೂರಾರು

ಶಾಸನಗಳು, ತಾಮ್ರಪಟ ಶಾಸನಗಳು ವಿವಿಧ ಲೋಹಗಳಿಂದ ಮಾಡಲ್ಪಟ್ಟ ವಿಗ್ರಹಗಳು ವೀರಗಲ್ಲು, ಸತಿಗಲ್ಲು, ನಿಶಿದಿಗಲ್ಲು ಪೇಂಟಿಂಗ್ಸ್‌ಗಳು, ಮತ್ತು ಹಸ್ತ ಪ್ರತಿಗಳ ಬಂಡಾರವೇ ಇಲ್ಲಿದೆ. ಇವುಗಳ ಸಹಾಯದಿಂದ ಹತ್ತಾರು ಸಂಶೋಧನ ಗ್ರಂಥಗಳು ಪ್ರಕಟಣೆಗೊಂಡಿದ್ದು ಇನ್ನೂ ನೂರಾರು ಗ್ರಂಥಗಳನ್ನು ಪ್ರಕಟಣೆಗೆ ಅವಕಾಶವಿದೆ. ಅದನ್ನು ಈ ಲೇಖನದ ಮೂಲಕ ನಾಡಿಗೆ ಪರಿಚಯಿಸಲಾಗಿದೆ.

ನಮ್ಮ ದೇಶದ ಚರಿತ್ರೆಯ ಪುನರ್ ರಚನೆಗೆ ಶಾಸನಗಳು ಕೂಡಾ ಬಹುಮುಖ್ಯವಾದ ಆಕರಗಳಲ್ಲಿ ಒಂದಾಗಿವೆ. ಮೌರ್ಯ ಚಕ್ರವರ್ತಿ ಅಶೋಕನ ಕಾಲದಿಂದ (ಕ್ರಿ.ಪೂ. ಸುಮಾರು ೨೭೩–೨೩೪) ವಿಜಯನಗರೋತ್ತರ್ ನಾಯಕರ ಕಾಲದವರೆಗಿನ ೪೬ ಶಾಸನಗಳು, ೨೫ ಕ್ಕಿಂತ ಹೆಚ್ಚು ವೀರಗಲ್ಲು, ಸತಿಗಲ್ಲು ಶಾಸನಗಳು ಇಲ್ಲಿವೆ. ಇವುಗಳ ಅಧ್ಯಯನದಿಂದ ವಿವಿಧ ರಾಜರುಗಳ ಆಡಳಿತ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಗಳ ಸಂಗತಿಗಳು, ಲಿಪಿ, ಭಾಷೆಗಳ ಬೆಳವಣಿಗೆಯನ್ನು ತಿಳಿಯಲು ಸಾಧ್ಯವಾಗಿದೆ.

ಹಾಗೇಯೇ ಶಾಸನಗಳಂತೆ ಆಯಾ ಪ್ರದೇಶದ ಆಯಾ ಕಾಲದ ಜನಸಮುದಾಯಗಳ ದೈನಂದಿನ ಜೀವನಕ್ಕೆ ಸಂಬಂಧಿಸಿದ ವಿವಿಧ ಪ್ರಕಾರಗಳ ವಾಸ್ತು ನಿರ್ಮಿತಿಗಳು, ಶಿಲ್ಪಗಳು ಮೊದಲಾದ ಪುರಾತತ್ವ ಅವಶೇಷಗಳು ಸಹ ಮುಖ್ಯ ಆಕರಗಳಲ್ಲಿ ಒಂದಾಗಿವೆ. ಶಾಸನಗಳು ಬರವಣಿಗೆಯ ತಂತ್ರ ಬಳಕೆಗೆ ಬಂದಾಗಿನಿಂದ ಜನಸಮುದಾಯಗಳ ಇತಿಹಾಸ ಮತ್ತು ಸಂಸ್ಕೃತಿಯನ್ನು ತಿಳಿಸಿದರೆ ಇತರ ಪುರಾತತ್ವ ಆಕರಗಳು ಯಥಾ ಸ್ಥಿತಿಯ ನಗರ, ಗ್ರಾಮ ವಿನ್ಯಾಸದ ನಾನಾ ರೀತಿಯ ಪ್ರಕಾರದ ನಿರ್ಮಿತಿಗಳ ನಿರ್ಮಾಣ ತಂತ್ರ, ಕೈಗಾರಿಕಾ ತಂತ್ರಗಳು ಮುಂತಾದ ಸಿದ್ಧವಸ್ತುಗಳ ಬಗ್ಗೆ ತಿಳಿಯಲು ಸಾಧ್ಯವಾಗುವುದಲ್ಲದೆ ಮಾನವರು ಈ ಭೂಮಿಯ ಮೇಲೆ ಕಾಣಿಸಿದಂದಿನ ಬರವಣಿಗೆಯ ತಂತ್ರವನ್ನು ಕಲ್ಪಿಸಿಕೊಳ್ಳುವ ದೀರ್ಘಕಾಲದ ಅವರ ದೈಹಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಯನ್ನು ತಿಳಿಸುತ್ತವೆ. ಈ ಶಾಸನ ಮತ್ತು ಶಿಲ್ಪಗಳ ಆಧಾರದಿಂದ ನಾಡಿನ ಪುರಾತತ್ವ ನೆಲೆಗಳ ಶೋಧನೆ ಮತ್ತು ಅಧ್ಯಯನಗಳಿಗೆ ಸಹಾಯವಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಈ ನಾಡಿನ ಚರಿತ್ರೆಯ ಅಭ್ಯಾಸವು ಪೂರ್ಣಗೊಳ್ಳಬೇಕಾದರೆ ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಇದ್ದ ಪ್ರಾದೇಶಿಕ ಪ್ರಾಚ್ಯವಸ್ತು ಸಂಗ್ರಹವುಳ್ಳ ಸಂಸ್ಥೆಗಳಲ್ಲಿನ ಇತಿಹಾಸ ಮತ್ತು ಪುರಾತತ್ವಕ್ಕೆ ಸಂಬಂಧಿಸಿದ ಸಾಹಿತ್ಯ ಮತ್ತು ಪುರಾತತ್ವ ಆಕರಗಳನ್ನು ಪರಿಕ್ಷಿಸುವುದು ತುಂಬಾ ಅವಶ್ಯಕವಾಗಿದೆ. ಸಂಶೋಧನಾ ಅಧ್ಯಯನದ ವ್ಯಾಪ್ತಿ ವಿಶಲಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಇವು ಮಹತ್ವ ಪಡೆದುಕೊಳ್ಳುತ್ತಿವೆ. ಇಲ್ಲವಾದಲ್ಲಿ ನಮ್ಮ ಪ್ರಾಚೀನ ಕರ್ನಾಟಕದಲ್ಲಿ ಆಗಿಹೋದ ಇತಿಹಾಸದ ಆಂದೋಲನಗಳ ವಿವಿಧ ಕಾಲಘಟ್ಟಗಳ ಸ್ಪಷ್ಟ ಚಿತ್ರಣ ತಿಳಿಯಲು ಸಾಧ್ಯವಾಗುವುದಿಲ್ಲ. ಆ ನಿಟ್ಟಿನಲ್ಲಿ ಕನ್ನಡ ಸಂಶೋಧನ ಸಂಸ್ಥೆ ವಿವಿಧ ಕ್ಷೇತ್ರದಲ್ಲಿ ಬೆಳೆದು ಸರ್ವಾಂಗೀಣವಾದ ಸಂಶೋಧನ ಕಾರ್ಯಕ್ಕೆ ಮತ್ತು ಸಂಸ್ಕೃತಿಯ ಅಧ್ಯಯನ ಕಾರ್ಯಕ್ಕೆ ಸಾಕಷ್ಟು ಆಕರಗಳನ್ನು ಪೂರೈಸುತ್ತದೆ ಎಂದು ಹೇಳಬಹುದಾಗಿದೆ.

ಆಕರ ಗ್ರಂಥಗಳು

೧. ಡಾ. ಬಿ.ಎಸ್. ಕುಲಕರ್ಣಿ, ೧೯೫೭, ಕನ್ನಡ ಸಂಶೋಧನ ಸಂಸ್ಥೆ ಒಂದು ನೋಟ, ಜಯ ಕರ್ನಾಟಕ ಸಂಪುಟ ೩೫, ಸಂಚಿಕೆ ೧ ಪು ೮.
೨. ಬಿ. ಶೇಖ ಅಲಿ ಮತ್ತು ಸಂಗಡಿಗರು, ೧೯೯೭, ಕರ್ನಾಟಕ ಚರಿತ್ರೆ, ಸಂಪುಟ ೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೦, ೨೮೪.
೩. ಡಾ. ಆರ್. ಗೋಪಾಲ (ಸಂ) ೨೦೦೮, ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪುಟ ೪೭.
೪. ಡಾ. ಕೆ.ಜಿ. ಬಟ್‌ಸೂರಿ (ಸಂ) ೨೦೦೯, ಕರ್ನಾಟಕ ಶಾಸನ ಸಂಶೋಧನೆ, ಕ.ವಿ.ವಿ. ಹಂಪಿ, ಪುಟ ೧೩೮ ಮತ್ತು ೨೦೦.
೫. ಇತಿಹಾಸ ದರ್ಶನ, ಸಂಪುಟಗಳು ೧ರಿಂದ ೩೦, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.
೬ ಕರ್ನಾಟಕದ ಶಾಸನ ಸಂಪುಟುಗಳು, ಕೆ.ಆರ್.ಆಯ್. ಕ.ವಿ.ವಿ. ಧಾರವಾಡ.
೭. ಎಗ್ಯೆಡ್‌ಟು ಕೆ.ಆರ್.ಆಯ್. (ಕನ್ನಡ ರಿಸರ್ಚ್ ಇನ್ಸ್‌ಟ್ಯೂಟ್) ಮ್ಯೂಸಿಯಂ.
೮. ಕನ್ನಡ ಸಂಶೋಧನ ಸಂಸ್ಥೆಯ ಪ್ರೊಗ್ರೇಸ್ಸ್ ರಿಪೋರ್ಟ್ಸ್‌ಗಳು, ಕ.ವಿ.ವಿ. ಧಾರವಾಡ.
೯. ಡಾ. ಸೂರ್ಯನಾಥ ಕಾಮತ್, ೧೯೯೫, ಧಾರವಾಡ ಜಿಲ್ಲೆಯ ಗ್ಯಾಸೆಟಿಯರ್, ಕರ್ನಾಟಕ ಸರಕಾರ.
೧೦. ಡಾ. ಬಾ. ರಾ. ಗೋಪಾಲ ಕನ್ನಡ ಶಾಸನಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೧೧. ಡಾ. ರಮೇಶ ನಾಯಕ, ೨೦೦೭, ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಕ.ವಿ.ವಿ., ಹಂಪಿ.
೧೨. ಡಾ. ಶ್ರೀನಿವಾಸ ಪಾಡಿಗಾರ, ೧೯೯೭, ಪುರಾತತ್ವ ಶಾಸ್ತ್ರ ಪರಿಚಯ, ರಾಮಾಶ್ರೀ ಪಬ್ಲಿಕೇಷನ್ಸ್, ಧಾರವಾಡ.
೧೩. ಡಾ. ಎಚ್.ಎಸ್. ಗೋಪಾಲರಾವ್, ೧೯೮೪, ನಾಗಾಭಿನಂದನ ಅಭಿನಂದ ಗ್ರಂಥ, ಬೆಂಗಳೂರು.

೧೦೭

ಗ್ರಾಮೀಣ ಪರಿಸರದ ವಿದ್ಯಾರ್ಥಿ ನಿಲಯ : ವಿ.ಎಫ್. ಹಾಸ್ಟೆಲ್

ಡಾ. ಕೆ. ರವೀಂದ್ರನಾಥ*


ಕರ್ನಾಟಕದಲ್ಲಿ ಪ್ರಸಾದ ನಿಲಯಗಳಿಗೆ ವಿಶಿಷ್ಟ ಮತ್ತು ವ್ಯಾಪಕವಾದ ಚರಿತ್ರೆಯಿದೆ. ಅನ್ನ, ಅಕ್ಷರ, ಆಶ್ರಯ, ಅಗ್ನಿಷ್ಟಿಕೆ, ಅರವಟ್ಟಿಗೆ ಔಷಧಿಗಳಂಥ ನಿತ್ಯೋಪಯೋಗಿ ಯೋಜನೆಗಳನ್ನು ಚಾಚುತಪ್ಪದೆ ಅನುಷ್ಠಾನಗೊಳಿಸಿದ ನೂರಾರು ಉದಾಹರಣೆಗಳು ಉಲ್ಲೇಖಗಳು ದೊರೆಯುತ್ತವೆ.

ಸಾಮಾನ್ಯವಾಗಿ ಪ್ರಸಾದ ನಿಲಯಗಳೆಂದರೆ ವಿದ್ಯಾರ್ಥಿಗಳ ಪ್ರಸಾದ ನಿಲಯಗಳೆಂದೇ ಅರ್ಥೈಯಿಸುತ್ತೇವೆ. ಇದೇ ಸರಿಯಾದ ಗ್ರಹಿಕೆ. ಪರಸ್ಥಳದಿಂದ ಬಂದಂಥ ಸಾರ್ವಜನಿಕರು ಉಳಿದುಕೊಳ್ಳುವುದಕ್ಕೆ ಮಾಡಿಕೊಂಡಂಥ ವ್ಯವಸ್ಥೆಗೆ 'ಛತ್ರ' ಅನ್ನಸತ್ರ ಎಂದು ಕರೆಯುತ್ತಿದ್ದಂತೆ ತೋರುತ್ತದೆ. ಇದಕ್ಕೆ ಉದಾಹರಣೆಯಾಗಿ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಕುಣೇಕುಮಟಗಿಯ ಚಂಡೇಶ್ವರ ಮಠಕ್ಕೆ ೧೦೭೭ರ ಕೇತಲದೇವಿ ಬಿಟ್ಟ ದಾನಶಾಸನದಲ್ಲಿ 'ಸತ್ರಕ್ಕೆ ಬಿಟ್ಟ ಮತ್ತರು ೨' ಎಂಬ ಉಲ್ಲೇಖವಿದೆ. ಇಂಥ ನೂರಾರು ಶಾಸನೋಕ್ತ ಉಲ್ಲೇಖಗಳು ಕರ್ನಾಟಕದಲ್ಲಿ ದೊರೆಯುತ್ತವೆ.

ಬ್ರಿಟೀಶರ ಆಗಮನದಿಂದ ಆಧುನಿಕ ಶಿಕ್ಷಣದ ಜಾರಿಯಾದ ಮೇಲೆ ಅಂದರೆ ೧೨ನೇ ಶತಮಾನದ ಆರಂಭ ಕಾಲಘಟ್ಟದಲ್ಲಿ ಪ್ರಸಾದ ನಿಲಯಗಳಿಗೂ ಧರ್ಮಶಾಲೆಗಳಿಗೂ, ವಿದ್ಯಾರ್ಥಿ ನಿಲಯಗಳಿಗೂ ಹಣದರೂಪದ ದವಸಧಾನ್ಯ ರೂಪದ ಕಟ್ಟಡ ರೂಪದ ಸಹಾಯಾರ್ಥವನ್ನು ನೀಡಿದ ಬಗ್ಗೆ ಕುತೂಹಲಕಾರಿಯಾದ ಸಂಗತಿಗಳು ಬೆಳಕಿಗೆ ಬಂದಿವೆ. ಕ್ರಿ.ಶ. ೧೮೨೩ರಲ್ಲಿ ಅರಳೇಪೇಟೆಯ ತೋಟದ ದೇವರ ಮಠದ ಧರ್ಮದಾಸೋಹಕ್ಕೆ ಯಲಹಂಕದ ಮುಮ್ಮಡಿ ಪರ್ವತ ಸ್ವಾಮಿಗಳು ೨ ಕೊಳಗ ಭೂಮಿಯನ್ನು ದಾಸೋಹಕ್ಕೆ ಬರೆದುಕೊಡುತ್ತಾರೆ. ಅದೇ ರೀತಿ ೧೮೪೯ರಿಂದ ೭೭ರವರೆಗೆ ಜೀವಿಸಿದ್ದ ಸರ್ಪಭೂಷಣ ಮಠದ ಪೀಠಾಧಿಪತಿಗಳಾದ ಪಾಲಲೋಚನ ಶ್ರೀಗಳಿಗೆ ರಾಮನಗರ ಶೆಟ್ರು, ಹಿರಿಯರು ೪೦ ಖಂಡುಗ ದವಸಧಾನ್ಯ ಸಂಗ್ರಹಿಸಿಕೊಂಡು ಶಾಸನ ಬರೆದುಕೊಟ್ಟಿರುವುದರ ಉಲ್ಲೇಖವಿದೆ. ವ್ಯಾಪಾರಕ್ಕಾಗಿ ಬಂಡಿ ಕಟ್ಟಿಕೊಂಡು ಬರುತ್ತಿದ್ದ ರೈತಾಪಿ ಜನರೆಲ್ಲ ಅಲ್ಲಿ ತಂಗುತ್ತಿದ್ದರೆಂಬ ಮಾಹಿತಿಯೂ ಇದೆ. ಬೆಂಗಳೂರಿನ ಕೆಂಪೇಗೌಡರ ಕಾಲದ ಧರ್ಮಶಾಲಾ ಮಠದಲ್ಲಿ 'ಧರ್ಮಶಾಲೆ ಮತ್ತು ಅನ್ನಛತ್ರ' ಹೊಂದಿದ್ದನ್ನು ಕ್ರಿ.ಶ. ೧೬೩೩ರ ಚಿಕ್ಕಪೇಟೆ ತೂಗದ ಅಚ್ಚಪ್ಪನವರ ಮನೆಯ ಹತ್ತಿರದ ಶಾಸನ ತಿಳಿಸುತ್ತದೆ. ಮೈಸೂರು ಅರಸ ಕೃಷ್ಣರಾಜ ಒಡೆಯರ ೧೨.೧೦.೧೮೨೫ರ ನಿರೂಪದಲ್ಲಿ ಬೇಲಿಮಠದ ಇಮ್ಮಡಿಸಿದ್ಧಲಿಂಗ ಸ್ವಾಮಿಗಳ ಅವಧಿಯಲ್ಲಿ 'ವೇದಪಾಠಶಾಲಾ ಮತ್ತು ಫ್ರೀಬೋರ್ಡಿಂಗ್' ಸ್ಥಾಪನೆಯಾಯಿತು. ಈ ಬೋರ್ಡಿಂಗ್‌ಗಾಗಿ ಬಿನ್ನಿ ಕಂಪನಿಯಲ್ಲಿ ೪೦೧೨೫/-ರೂಪಾಯಿಗಳನ್ನು ಇಡುಗಂಟಾಗಿ ಇಟ್ಟು ಬರುವ ತಿಂಗಳ ೨೫೦/-ಗಳ ಬಡ್ಡಿಯಲ್ಲಿ ಉಚಿತ ಪ್ರಸಾದ ನಿಲಯ ನಡೆಸಿರುವುದು ತಿಳಿದುಬರುತ್ತದೆ.

೧೮೬೮ರಲ್ಲಿ ಡಬ್ಲ್ಯೂ. ರಸಲ್ (ದಕ್ಷಿಣಭಾಗದ ಶಿಕ್ಷಣಾಧಿಕಾರಿಗಳು) ಸುತ್ತೋಲೆಯನ್ನು ಹೊರಡಿಸಿ 'ನಾವು ಬಹು ಸಂತೋಷದಿಂದ ಸಮಸ್ತಜನರಿಗೆ ವಿಶೇಷವಾಗಿ ಲಿಂಗಾಯತರಿಗೆ ತಿಳಿಸುವುದೇನೆಂದರೆ ಬೆಳಗಾವಿ ಜಿಲ್ಲೆಯ ಡೆಪ್ಯೂಟಿ ಇನ್ಸ್‌ಪೆಕ್ಟರಾದ ಚೆನ್ನಬಸಪ್ಪನವರು ಕೇಳಿಕೊಂಡಿದ್ದರಿಂದ ಚಿತ್ರದುರ್ಗ ಮುರಿಗಿ ಜಗದ್ಗುರು ಸ್ವಾಮಿಗಳು ಬಹುದಯಾಳುಗಳಾಗಿ ಅನಾಥರಾದ ವಿದ್ಯಾರ್ಥಿಗಳಿಗೆ ಬೆಳಗಾವಿಯಲ್ಲಿ ಅನ್ನ ಕೊಡುವುದಕ್ಕೋಸ್ಕರ ಪ್ರತಿತಿಂಗಳಿಗೆ ೩೦೦/-ರೂ.ಗಳನ್ನು ಕೊಡಲು ಒಪ್ಪಿಕೊಂಡಿದ್ದಾರೆ. ಈ ಹಣದಿಂದ ಒಂದು ಮನೆ ಬಾಡಿಗೆ ಹಿಡಿದು ಅಡಿಗೆಯವರು ಮೊದಲಾದ ಚಾಕರರನ್ನು ಇಟ್ಟು ಸುಮಾರು ೫೦ ನಿರಾಶ್ರಿತ ವಿದ್ಯಾರ್ಥಿಗಳಿಗೆ ಎರಡುಹೊತ್ತು ಊಟ, ಇರುವುದಕ್ಕೆ ಸ್ಥಳ ಕೊಡತಕ್ಕ ಬಗ್ಗೆ ಈಗ ತಜವೀಜ ನಡೆದಿದೆ. ಈ ಕಾರ್ಖಾನೆಯು ಎಂದು ಆರಂಭವಾಗುವುದು ಎಷ್ಟು ಜನ ಯಾವ ಜಾತಿಯ ವಿದ್ಯಾರ್ಥಿಗಳು ತೆಗೆದುಕೊಳ್ಳಲ್ಪಡುವುದು ಏನೇನು ಕಲಿಸಬೇಕು ಎಂಬುದನ್ನು ಜಾಹೀರಾತಿನ ಮೂಲಕ ತಿಳಿಸಲ್ಪಡುವುದೆಂದು ರೆಸೆಲ್ ಸಾಹೇಬರ ಪತ್ರ ತಿಳಿಸುತ್ತದೆ. ಇವರು ಸ್ಥಾಪಿಸಿದ ಪ್ರಸಾದ ನಿಲಯ ಕೇಳಕರ ಭಾಗದಲ್ಲಿದ್ದ 'ಬೆಳಗಾವಿ ಲಿಂಗಾಯತ ಬೋರ್ಡಿಂಗ್' ಎಂಬುದಾಗಿ

* ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.



ಕೆ.ಎಸ್. ಈಶ್ವರಗೌಡ ಇವರ ೩ ಎಕರೆ ಜಮೀನಿನಲ್ಲಿ ಶಂಕುಸ್ಥಾಪನೆಗೊಂಡ ಹಾಸ್ಟೆಲ್ ಕಟ್ಟಡ



ಹಾಸ್ಟಲಿನ ಕಟ್ಟಡದ ಮುಂಭಾಗ

ಅರಟಾಳ ರುದ್ರಗೌಡರು ತಮ್ಮ ದಿನಚರಿಯಲ್ಲಿ ತಿಳಿಸುತ್ತಾರೆ. ಬೆಂಗಳೂರಿನಲ್ಲಿ ಸ್ಥಾಪನೆಯಾಗಿರುವ ಮೈಸೂರು ಲಿಂಗಾಯತ ವಿದ್ಯಾಭ್ಯುವೃದ್ಧಿ ಸಂಘದ ಪ್ರಸಾದ ನಿಲಯದ ಸ್ಥಾಪನೆಗೆ ಸುತ್ತೂರು ಶ್ರೀಗಳೂ, ರಂಭಾಪುರಿ ಶ್ರೀಗಳೂ, ಉಜ್ಜಿನಿಶ್ರೀಗಳೂ ತಮ್ಮ ಭಾಗದ ಭಕ್ತರಿಗೆ ಮಾಡಿಕೊಂಡ ಮನವಿ ಹೀಗಿದೆ.

"ಮೈಸೂರು ಲಿಂಗಾಯತ ವಿದ್ಯಾಭ್ಯಿವೃದ್ಧಿ ಸಂಘಕ್ಕೆ ಉದಾರವಾಗಿ ದಾನ ಮಾಡಬೇಕು. ಪ್ರತಿಯೊಬ್ಬ ಲಿಂಗಾಯತರು ನಿಮ್ಮ ಮನೆಯಲ್ಲಾಗುವ ಶುಭಶೋಭಾನಾದಿ ಕಾರ್ಯಗಳಲ್ಲಿ ನಡೆಯುವ ಖರ್ಚಿನ ಜೊತೆಗೆ ್ವಲ್ಪ ಹಣವನ್ನು ವಿದ್ಯಾಭಿವೃದ್ಧಿ ನಿಧಿಗೆ ಮನೆಯಾರ್ಡರ್ ಮಾಡಿರಿ."

ಹೀಗೆ ೧೯ನೇ ಶತಮಾನದ ಕೊನೆಯ ಭಾಗ ಮತ್ತು ೨೦ನೇ ಶತಮಾನದ ಆದಿಭಾಗದಲ್ಲಿ ಆಧುನಿಕ ಶಿಕ್ಷಣವನ್ನು ಅನುಷ್ಠಾನಗೊಳಿಸುವ ಪ್ರಯತ್ನವಾಗಿ ವಿದ್ಯಾಭಿವೃದ್ಧಿ ನಿಧಿಯ 'ಬೋರ್ಡಿಂಗ್‌ಗಳ ಸ್ಥಾಪನೆಗೆ ಮುಂದಾಗಿರುವುದು ಕಂಡುಬರುತ್ತದೆ. ಹೀಗೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ನಡೆದ ಪ್ರಯತ್ನಗಳ ಪ್ರೇರಣೆಯಿಂದ ೧೯೨೭ರಲ್ಲಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೊಟ್ಟೂರಿನಲ್ಲಿ 'ವಿದ್ಯಾಭಿವೃದ್ಧಿ ಪಂಢ್ ಸಂಸ್ಥೆ' ಸ್ಥಾಪನೆಯಾಯಿತು. ಈ ಸಂಸ್ಥೆಯೇ ಮುಂದೆ ಕೊಟ್ಟೂರಿನ ಪ್ರಮುಖರು ಹಾಗೂ ವರ್ತಕರ ಸಹಾಯದಿಂದ 'ದಿ ವಿದ್ಯಾಭಿವೃದ್ಧಿ ಫಂಡ್ ಹಾಸ್ಟೆಲ್' ಸ್ಥಾಪಿಸಿತು. ಎಲ್ಲ ಮತಧರ್ಮದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ ಗ್ರಾಮೀಣ ಪರಿಸರದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲಮಾಡಿಕೊಟ್ಟಿತು.

ಆರಂಭದಲ್ಲಿ ವಿ.ಎಫ್. ಹಾಸ್ಟೆಲ್ ಸ್ವಂತ ಕಟ್ಟಡವಿಲ್ಲದೆ ಶ್ರೀ ಉಜ್ಜನೀ ಸಂಸ್ಥಾನಮಠದ ಜಾಗದಲ್ಲಿ ಹಂಗಾಮಿಯಾಗಿ ಸುಮಾರು ೨೪ ವರ್ಷಗಳ ಕಾಲ ನೆಡೆಸಿಕೊಂಡು ಬರಲಾಯಿತು. ಕೊಟ್ಟೂರಿನ ಯೋಗಿಗಳೂ, ದಾರ್ಶನಿಕರೂ ಆಗಿದ್ದ ಶ್ರೀ ಕೆ.ಎಸ್. ಈಶ್ವರಗೌಡರು ಸ್ವಂತ ಮೂರು ಎಕೆರೆ ಜಮೀನನ್ನು ಹಾಸ್ಟೆಲ್‌ಗಾಗಿ ನೀಡುತ್ತಾರೆ. ೧೯೫೦ರಲ್ಲಿ ಬಾಡದ ವೀರಪ್ಪಜ್ಜ ಅಂಬೂರು ಬೀಡಿಯವರ ಕಡೆಯಿಂದ ಡೇಣಿಗೆ ಪಡೆದು ೫ ಕೋಣೆಗಳನ್ನು ಕಟ್ಟಿಸಿದರು. ೧೪.೨.೧೯೫೧ರಲ್ಲಿ ಶ್ರೀ ಈಶ್ವರಗೌಡ ಅವರಿಂದ 'ಕೊಟ್ಟೂರು ವಿದ್ಯಾಭಿವೃದ್ಧಿ ಫಂಡ್ ಹಾಸ್ಟೆಲ್‌ಗೆ ಶಂಕುಸ್ಥಾಪನೆಯಾಯಿತು. ೧೯೫೪ರಲ್ಲಿ ಮೈಸೂರು ಸರಕಾರದ ಶಾಲಾ ಮುಖ್ಯಾಧಿಕಾರಿಯಾಗಿದ್ದ ಶ್ರೀ ಜೆ.ಬಿ. ಮಲ್ಲಾರಾಧ್ಯರು ದಿನಾಂಕ: ೨೬.೬.೧೯೫೪ರಲ್ಲಿ ಹಾಸ್ಟೆಲ್‌ನ್ನು ಉದ್ಘಾಟನೆ ಮಾಡಿದರು. ಮಹಾದಾನಿಗಳಾದ ಶ್ರೀ ಕೆ.ಎಸ್. ಈಶ್ವರಗೌಡರ ಅಭಿಪ್ರಾಯದಂತೆ ಆ ದಿನಗಳಲ್ಲಿ ದಕ್ಷ ಶಿಕ್ಷಕರಾಗಿದ್ದ ಶ್ರೀ ಭದ್ರಶೆಟ್ಟಿ ವೀರಪ್ಪ ಮಾಸ್ತರರು ವಾರ್ಡ್‌ನನ್ನಾಗಿ ನೇಮಕಗೊಂಡು ೨೫ ವರ್ಷಗಳ ಸೇವೆಯನ್ನು ಸಲ್ಲಿಸಿದರು. ಇದೇ ಸಮಯದಲ್ಲಿ ವಿನೋಬಾಜಿವರು ಹಾಸ್ಟೆಲ್‌ಗೆ ಭೇಟಿ ನೀಡಿದ್ದರು. ಮುಂದೆ ಮುರುಘಾ ಮಠದ ಮೃತ್ಯುಂಜಯ ಅಪ್ಪಗಳು ವಿದ್ಯಾಭಿವೃದ್ಧಿ ಫಂಡ್ ಹಾಸ್ಟೆಲ್‌ನ ಕೆಲಸ ಕಾರ್ಯಗಳಿಗೆ ೧೦೦೦/–ರೂ. ಗಳ ದೇಣಿಗೆ ನೀಡಿ ಆಶೀರ್ವದಿಸುತ್ತಾರೆ. ಕೊಟ್ಟೂರಿನ ಪ್ರಮುಖ ವರ್ತಕರಾದ ಶ್ರೀ ಮಂಡ್ಲಿ ಪಂಪಣ್ಣ ಶೆಟ್ಟರು ಹಾಸ್ಟೆಲ್ ಆವರಣದಲ್ಲಿ ಸೇದುವ ಬಾವಿಯನ್ನು ತೋಡಿಸಿಕೊಡುತ್ತಾರೆ.

ಮುಂದೆ ಈ ಹಾಸ್ಟೆಲ್‌ನ ಪಕ್ಕದಲ್ಲಿ ಅಂದರೆ ದಕ್ಷಿಣ ಭಾಗಕ್ಕೆ ೩ ಎಕರೆ ಜಮೀನನ್ನು ಖರೀದಿಸಿ ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘಕ್ಕೆ 'ಶ್ರೀ ಕೊಟ್ಟೂರೇಶ್ವರ ಕಾಲೇಜು ಕಟ್ಟಲು' ದೇಣಿಯಾಗಿ ನೀಡುತ್ತಾರೆ. ಇದರಿಂದಾಗಿ ಕೇವಲ ಪ್ರಾಥಮಿಕ ಮಾಧ್ಯಮಿಕ ಮಟ್ಟದ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಊಟೋಪಚಾರದ ವ್ಯವಸ್ಥೆ ಮಾಡಿದ್ದ ಫಂಡ್ ಹಾಸ್ಟೆಲ್ ಉನ್ನತ ಶಿಕ್ಷಣಕ್ಕಾಗಿ ಮಹಾವಿದ್ಯಾಲಯದ ಸ್ಥಾಪನೆಗೆ ಕಾರಣವಾದದ್ದನ್ನು ಚಾರಿತ್ರಿಕವಾಗಿ ಇಲ್ಲಿ ದಾಖಲಿಸಬೇಕಾದ ಅಂಶಗಳಾಗಿದೆ. ವಿದ್ಯಾಭಿವೃದ್ಧಿ ಫಂಡ್ ಹಾಸ್ಟೆಲ್‌ನ ಬೆಳವಣಿಗೆಗೆ ಕಾರಣರಾದ ಅಂದಿನ ಜಿಲ್ಲಾಧಿಕಾರಿಯಾಗಿದ್ದ ಶ್ರೀರಾಮನಾಥನ್, ಶ್ರೀ ವೆಂಕಟಶಿವರೆಡ್ಡಿ, ವಿದ್ಯಾರ್ಥಿಗಳಾಗಿದ್ದ ಶ್ರೀ ಜಿ.ಆರ್. ರಾಮಸ್ವಾಮಿ, ಶ್ರೀ ಎಲ್.ಆರ್. ಶೇಷ, ಶ್ರೀ. ಎಚ್.ಎಸ್. ಸುಬ್ಬಾರಾವ್ ಅವರನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಅಂದಿನ ಬಹುಶಃ ಮದ್ರಾಸ್ ಸರಕಾರದ ಮಂತ್ರಿಗಳಾಗಿದ್ದ ಶ್ರೀ ವೆಂಕಟಪ್ಪ, ಶಾಸಕರಾದ ಕೆ. ಕೊಟ್ರಬಸವನಗೌಡ ಅವರುಗಳಿಂದ ಕೆಲವು ಕಟ್ಟಡಗಳು ಉದ್ಘಾಟನೆಗೊಳ್ಳುತ್ತವೆ. ಅನಂತರದಲ್ಲಿ ವಾರ್ಡ್‌ನ್ನಾಗಿ ಬಿ.ಸಿ. ಬಸಪ್ಪ ಮಾಸ್ತರ ಸೇವೆ ಅನುಪಮವಾದ್ದದ್ದು. ಮಿತವಾಗಿ ಕರೆಂಟ್ ನೀರಿನ ಬಳಕೆಯ ಕಾಳಜಿ, ಹಿತವಾಗಿ ನಿಂತು ಊಟ ಮಾಡಿಸುವ ಅವರ ವ್ಯಕ್ತಿತ್ವಕ್ಕೆ ಅವರೇ ಸಾಟಿ. ವಿದ್ಯಾರ್ಥಿಗಳಿಗೆ ಹುಷಾರಿಲ್ಲದಾಗ ಉಚಿತವಾಗಿ ತಪಾಸಣೆ ಮಾಡುತ್ತಿದ್ದ ಡಾ. ಅಲಬೂರು ನಂಜಪ್ಪ ವೈದ್ಯರ ಸೇವೆ ಇಲ್ಲಿ ಸ್ಮರಣೀಯ. ಕೋಟಿಗಟ್ಟಲೆ ಬೆಲೆಬಾಳುವ ಅವರ ಸ್ವಂತ ಮನೆಯನ್ನು ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘಕ್ಕೆ ದಾನರೂಪದಲ್ಲಿ ನೀಡಿದ್ದು ದಾನಕ್ಕೆ ಪರಮಾವಧಿ ನಿದರ್ಶನವೆನಿಸಿದೆ. ಎಂ.ಎಂ.ಜೆ. ಸದ್ಯೋಜಾತಪ್ಪ, ಬಿ.ಎಸ್. ವೀರಭದ್ರಪ್ಪ, ನೆಲ್ಲುದ್ರಿ ಬಸವರಾಜಪ್ಪ, ಚಟ್ರಿಕಿ ಕೊಟ್ರಪ್ಪ, ಜೆ.ಎಂ. ಸಿದ್ಧರಾಮಯ್ಯ, ಗೊರ್ಲಿಶರಣಪ್ಪ, ಯು.ಜಿ. ವೀರಣ್ಣ, ಹೆಗ್ಡಾಳ ಗುರುಬಸಪ್ಪ, ವೆಂಕದಾರಿ ಹನುಮಂತಶೆಟ್ರು ಇನ್ನೂ ನೂರಾರು ಸಾಂಸ್ಕೃತಿಕ ನಾಯಕರು 'ವಿದ್ಯಾಭಿವೃದ್ಧಿ ಫಂಡ್ ಹಾಸ್ಟೆಲ್' ಅಭಿವೃದ್ಧಿಗಾಗಿ ದುಡಿದು ಈ ಭಾಗದ ವಿದ್ಯಾರ್ಥಿಗಳು ಮದ್ರಾಸ್‌ಗೆ ಹೋಗಿ ಉನ್ನತ ಶಿಕ್ಷಣ ಕಲಿಯುವ ತೊಂದರೆಯನ್ನು ತಪ್ಪಿಸಲು ರಾವ್‌ಬಹುದ್ದೂರ್ ವೈ. ಮಹಾಬಲೇಶ್ವರಪ್ಪ ಅವರ ಸಾಧನೆಯನ್ನು ಸಾಧ್ಯವಾಗಿಸಿದ ಪ್ರಯತ್ನವೆಂಬಂತೆ ಗ್ರಾಮಾಂತರ ವಿದ್ಯಾರ್ಥಿಗಳ ವಿದ್ಯಾರ್ಜನೆಗಾಗಿ 'ವಿದ್ಯಾರ್ಥಿ ಫಂಡ್ ಹಾಸ್ಟೆಲ್' ಸ್ಥಾಪಿಸಿ ಅದು ತನ್ನ ಅಮೃತ ಮಹೋತ್ಸವ ಆಚರಿಸಿಕೊಳ್ಳುವಷ್ಟು ಸುಧೀರ್ಘ ಇತಿಹಾಸ ಹೊಂದಿದೆ.

[ಈ ಲೇಖನ ಸಿದ್ಧಪಡಿಸಲು ಮಾಹಿತಿ ನೀಡಿದ ಹಾಸ್ಟೆಲ್‌ನ ಮೇಲ್ವಿಚಾರಕರಾದ ಶ್ರೀ. ಬಸವರಾಜ ಹಾಗೂ ಛಾಯಾಚಿತ್ರ ಒದಗಿಸಿದ ಡಾ. ಕುಸುಮಾದೇವಿ ಸಜ್ಜನ ದಂಪತಿಗಳಿಗೆ ಕೃತಜ್ಞತೆಗಳು].

೧೦೮

ಕರ್ನಾಟಕದಲ್ಲಿ ಬಾಸೆಲ್ ಮಿಶನ್

ಡಾ. ಅಶೋಕ್ ರಾಕೇಶ್ ಡಿ'ಸೋಜ*

ಕ್ರಿಸ್ತನ ಸುವಾರ್ತೆಯ ಪ್ರಸರಣೆ ಮತ್ತು ಕ್ರೈಸ್ತ ಸಭೆಗಳ ಸ್ಥಾಪನೆಯ ಉದ್ದೇಶದಿಂದ ೧೮೧೫ರಲ್ಲಿ ಸ್ವಿಜರ್‌ಲ್ಯಾಂಡಿನ ಬಾಸೆಲ್‌ನಲ್ಲಿ ಬಾಸೆಲ್ ಮಿಶನ್ ಸ್ಥಾಪನೆಯಾಗುತ್ತದೆ. ಇದು ಸ್ವಿಜರ್‌ಲ್ಯಾಂಡಿನ ಬಾಸೆಲ್ ನಗರದ ಒಂದು ಸಭೆಯಾಗಿರಲಿಲ್ಲ. ಅದೆ ರೀತಿ ಇದು ಯಾವುದೇ ಒಂದು ಸಭಾ ಸಂಪ್ರದಾಯಕ್ಕೆ ಸಂಬಂಧ ಪಟ್ಟದ್ದಾಗಿರಲಿಲ್ಲ. ಬದಲು ಬಾಸೆಲ್ ಮಿಶನ್ ಪಶ್ಚಿಮ ಜರ್ಮನಿ ಮತ್ತು ಸ್ವಿಜರ್‌ಲ್ಯಾಂಡಿನ ಬೇರೆ ಬೇರೆ ಕ್ರೈಸ್ತ ಪಂಗಡಗಳ ಹಾಗೂ ಸಭಾ ಸಂಪ್ರದಾಯಗಳಿಗೆ ಸೇರಿದ (ಲೂಥರನ್ ಸಂಪ್ರದಾಯ, ಪುನಃ ಸ್ಥಾಪನಾ ಸಂಪ್ರದಾಯ, ಸ್ವಿಂಗ್ಲಿಯನನ್ ಸಂಪ್ರದಾಯ) ಕೆಲವು ಕ್ರೈಸ್ತರು ಸಂಘಟಿಸಿದ ಒಂದು ಮಿಶನರಿ ಸಂಸ್ಥೆಯಾಗಿತ್ತು. ಇದು ಸ್ವತಂತ್ರವಾದ ಹಾಗೂ ಸ್ವಯಂ ಸೇವಾ ಮನೋಭಾವದ ಮಿಶನರಿ ಸಂಘವಾಗಿದ್ದು, ಇದು ಯಾವುದೇ ಸರಕಾರದ ಅಥವಾ ರಾಜ್ಯದ ಚರ್ಚಿನ ಭಾಗವಾಗಿರಲಿಲ್ಲ. ಬಾಸೆಲ್ ಮಿಶನ್‌ಗೆ ಆರಂಭದಲ್ಲಿ ನೇರವಾಗಿ ಮಿಶನರಿ ಚಟುವಟಿಕೆಗಳನ್ನು ಆರಂಭಿಸುವ ಉದ್ದೇಶವಿರಲಿಲ್ಲ. ಅದರ ಬದಲು ಮಿಶನರಿಗಳನ್ನು ತರಬೇತುಗೊಳಿಸಿ ಅವರನ್ನು ಇತರ ಯುರೋಪಿನ ಮಿಶನ್ ಸಂಘಗಳಿಗೆ ಒದಗಿಸುವ ಉದ್ದೇಶವನ್ನು ಹೊಂದಿತ್ತು.

ರಷ್ಯಾ ಮತ್ತು ಆಫ್ರಿಕಾದಲ್ಲಿನ ಮಿಶನರಿ ಕಾರ್ಯಚರಣೆಯು ಬಾಸೆಲ್ ಮಿಶನ್‌ಗೆ ಬಹಳಷ್ಟು ಕಷ್ಟ ನಷ್ಟಗಳನ್ನು ತಂದೊಡ್ಡಿದ್ದರಿಂದ ಮಿಶನ್ ಹೊಸ ಪ್ರದೇಶಗಳತ್ತ ಗಮನಹರಿಸುತ್ತದೆ. ೧೮೩೩ರಲ್ಲಿ ಬ್ರಿಟಿಷ್ ಪಾರ್ಲಿಮೆಂಟ್ ಭಾರತವನ್ನು ಎಲ್ಲಾ ದೇಶಗಳ ಮಿಶನರಿಗಳಿಗೂ ಮುಕ್ತವಾಗಿರಿಸಿದ ಸಂದರ್ಭದಲ್ಲಿ ಬಾಸೆಲ್ ಮಿಶನ್ ಭಾರತದಲ್ಲಿ ತನ್ನ ಕಾರ್ಯವನ್ನು ಆರಂಭಿಸಲು ನಿರ್ಧರಿಸುತ್ತದೆ. ಹೀಗೆ ೧೮೩೪ರಲ್ಲಿ ಆರಂಭವಾದ ಬಾಸೆಲ್ ಮಿಶನಿನ ಮಿಶನರಿ ಕಾರ್ಯ ೧೯೧೪ರವರೆಗೆ ಯಾವುದೇ ಅಡೆತಡೆಗಳಿಲ್ಲದೆ ನಿರಂತರವಾಗಿ ಬೆಳೆದು, ವಿಸ್ತರಿಸುತ್ತ ಹೋಗುತ್ತದೆ. ಬಾಸೆಲ್ ಮಿಶನ್ ಈ ಕಾಲಾವಧಿಯಲ್ಲಿ ದಕ್ಷಿಣ ಕೆನರಾ, ಉತ್ತರ ಕೆನರಾ (ಹೊನ್ನವರ), ದಕ್ಷಿಣ ಮರಾಠ, ಕೊಡಗು, ಮಲಬಾರ್ ಮತ್ತು ನೀಲಗಿರಿ ಪ್ರದೇಶಗಳಲ್ಲಿ ತನ್ನ ಹಲವು ಮಿಶನ್ ಠಾಣ್ಯಗಳನ್ನು ಹಾಗೂ ಉಪಠಾಣ್ಯಗಳನ್ನು ಸ್ಥಾಪಿಸುತ್ತದೆ. ಬಾಸೆಲ್ ಮಿಶನ್ ಕರ್ನಾಟಕದಲ್ಲಿನ ಇತರ ಮಿಶನ್ ಸಂಘಗಳಿಗಿಂತ ಭಿನ್ನವಾಗಿದ್ದು, ಅದು ಕೇವಲ ಸುವಾರ್ತೆ ಸಾರಿ ಕ್ರೈಸ್ತೇತರರನ್ನು ಕ್ರೈಸ್ತ ಮತಕ್ಕೆ ಮತಾಂತರಿಸುವ ಕಾರ್ಯದಲ್ಲಿ ಮಾತ್ರ ತೊಡಗಿಕೊಳ್ಳದೆ ಜಗತ್ತು ಇಂದೂ ಅದನ್ನು ನೆನಪಿಸುವಂತಹ ಕೈಗಾರಿಕೆಗಳ ಸ್ಥಾಪನೆ, ಶಿಕ್ಷಣ, ಮುದ್ರಣ, ನೇಯುವ ಕಾರ್ಖಾನೆ, ತಾಂತ್ರಿಕ ಕಾರ್ಯಗಾರ, ಕೃಷಿ, ಭಾಷೆ, ಪತ್ರಿಕೋದ್ಯಮ ಇತ್ಯಾದಿ ಕ್ಷೇತ್ರಗಳಲ್ಲಿ ಶ್ಲಾಘನೀಯ ಕಾರ್ಯಗಳನ್ನು ನಿರ್ವಹಿಸಿತ್ತು.

ಜಾಗತಿಕ ಸಮರದಿಂದಾಗಿ ಮಿಶನ್ ಎದುರಿಸಿದ ಬಿಕ್ಕಟ್ಟುಗಳನ್ನು ಹಾಗು ಮಿಶನಿನ ವಿಭಿನ್ನ ಸ್ಥಿತಿ ಗತಿಗಳನ್ನು ವಿವರಿಸುವುದು ಪ್ರಬಂಧದ ಉದ್ದೇಶವಾಗಿದೆ. ಪ್ರಬಂಧ ರಚನೆಗೆ ಮಿಶನರಿ ದಾಖಲೆಗಳು, ಬ್ರಿಟಿಷ್ ಸರಕಾರದ ದಾಖಲೆಗಳು ಹಾಗು ಇತರ ದಾಖಲೆಗಳನ್ನು ಬಳಸಲಾಗಿದೆ.

ಮೊದಲ ಮಹಾಯುದ್ಧ ಆರಂಭವಾಗುತ್ತಿದ್ದಂತೆ ಬ್ರಿಟಿಷ್ ಭಾರತ ಸರ್ಕಾರ 'ದಿ ಡಿಫೇನ್ಸ್ ಆಫ್ ಇಂಡಿಯಾ ಆಕ್ಟ್ ೧೯೧೪' (The Defence of India Act 1914) ನ್ನು ಜಾರಿಗೊಳಿಸುತ್ತದೆ. ಇದರ ಪ್ರಕಾರ ಸರ್ಕಾರದ ಆಜ್ಞೆಯಂತೆ ವೈರಿ ದೇಶದ ಜನರು ಒಂದು ನಿರ್ದೇಶಿತ ಪ್ರದೇಶದಲ್ಲಿ ನೆಲೆಗೊಳ್ಳಬೇಕಿತ್ತು. ಸರ್ಕಾರದ ಮುಂದಿನ ಆಜ್ಞೆ ಬರುವ ತನಕ ಅವರು ಅದೇ ಪ್ರದೇಶದಲ್ಲಿರಬೇಕಿತ್ತು ಹಾಗೂ ಸಮಯಕ್ಕೆ ಸರಿಯಾಗಿ ಪೋಲಿಸ್ ಅಧಿಕಾರಿಗಳಿಗೆ ವರದಿ ಮಾಡಬೇಕಿತ್ತು. ಈ ಕಾಲಾವಧಿಯಲ್ಲಿ ಅವರಿಗೆ ಮುಕ್ತವಾಗಿ ಮಾತನಾಡುವ ಅಧಿಕಾರವಿರಲಿಲ್ಲ ಹಾಗೂ ಪತ್ರಿಕೆಗಳಲ್ಲಿ ಬರೆಯುವ ಅವಕಾಶವು ಇರಲಿಲ್ಲ. ತದನಂತರ ಸರಕಾರವು 'ದಿ ಪೋರಿನರ್ಸ್ ಆಕ್ಟ್ ಆಫ್ ೧೯೧೪' ನ್ನು (Foreigners Act of 1914) ಜಾರಿಗೆ ತರುತ್ತದೆ. ಇದರಂತೆ ಮದ್ರಾಸ್ ನಗರ ವ್ಯಾಪ್ತಿಯ ಹಾಗೂ ನೀಲಗಿರಿ ಜಿಲ್ಲೆಯ ಎಲ್ಲಾ ವಿದೇಶಿಯರು ಪೋಲಿಸ್

* ವಿಭಾಗ ಮುಖ್ಯಸ್ಥರು ಹಾಗೂ ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಆಳ್ವಾಸ್ ಕಾಲೇಜು, ಮೂಡಬಿದಿರೆ.

ಕಮಿಷನರ್‌ಗೆ ಅಥವಾ ಜಿಲ್ಲಾ ನ್ಯಾಯಾಧೀಶರಿಗೆ ವರದಿ ಮಾಡುವಂತೆ ಆಜ್ಞಾಪಿಸುತ್ತದೆ. ಅಷ್ಟೇ ಅಲ್ಲದೇ 'ಹೊಸ್ಟೈಲ್ ಪೋರಿನರ್ಸ್ (ಟ್ರೇಡಿಂಗ್) ಆಕ್ಟ್ ಆಫ್ ೧೯೧೪' (Hostile Foreigners (Trading) Act of 1914) ಜಾರಿಗೊಳಿಸಿ ವೈರಿ ದೇಶಗಳ ವಾಣಿಜ್ಯ ವ್ಯವಹಾರಗಳ ಮೇಲೆ ನಿಯಂತ್ರಣವನ್ನು ಸಾಧಿಸುತ್ತದೆ. ಈ ಮೇಲಿನ ಕಾಯ್ದೆಗಳಂತೆ ಬ್ರಿಟಿಷ್ ಸರಕಾರ ಬಾಸೆಲ್ ಮಿಶನನ್ನು ವೈರಿ ದೇಶದ ಮಿಶನ್ ಎಂದು ಸಾರಿ, ಅದರ ವಿರುದ್ಧ ಕ್ರಮ ಕೈಗೊಳ್ಳಲು ಮುಂದಾಗುತ್ತದೆ ಹಾಗೂ ಬಾಸೆಲ್ ಮಿಶನಿನ ಎಲ್ಲಾ ಮಿಶನರಿಗಳನ್ನು ೧೯೧೪ರ ಸೆಪ್ಟಂಬರ್‌ನಂದ ನವೆಂಬರ್‌ನ ಕಾಲಾವಧಿಯ ಒಳಗೆ, ಬಳ್ಳಾರಿ (Bellary), ಮಧುರೈ (Madurai), ಯೇರ್‌ಕಾಡ್ (Yerkad) ಮತ್ತು ಸೇಲಂ (Salem) ನ ಕ್ಯಾಂಪ್‌ಗಳಲ್ಲಿ ಸರಹದ್ದಿನ ಬಂಧನಕ್ಕೆ [Interned] ಗುರಿಪಡಿಸುತ್ತದೆ. ೧೯೧೪ ಡಿಸೆಂಬರ್ ಹಾಗೂ ೧೯೧೫ ಜನವರಿಯ ಕಾಲಾವಧಿಯಲ್ಲಿ ಹೆಚ್ಚಿನ ಮಿಶನರಿಗಳನ್ನು ಅಹಮದ್‌ನಗರದ ನಾಗರೀಕ ಕ್ಯಾಂಪ್‌ಗೆ ವರ್ಗಾಯಿಸಲಾಗುತ್ತದೆ. ಮುಂದೆ ಅಲ್ಲಿಂದ ಅವರನ್ನು ಎರಡು ಹಂತಗಳಲ್ಲಿ 'ಗೋಲ್ಕೊಂಡ' ಹಡಗಿನಲ್ಲಿ ಸ್ವದೇಶಕ್ಕೆ ಕಳುಹಿಸಲಾಗುತ್ತದೆ.

ಜರ್ಮನ್ ಮಿಶನರಿಗಳನ್ನು ಬಂಧಿಸಿದ ಬಳಿಕ ಬಾಸೆಲ್ ಮಿಶನಿನಲ್ಲಿದ್ದ ಸ್ವಿಸ್ ಮಿಶನರಿಗಳು ತಮ್ಮ ಕಾರ್ಯದಲ್ಲಿ ಮುಂದುವರಿದರೂ, ಇಲ್ಲಿ ಅವರು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಬಾಸೆಲ್ ಮಿಶನಿನ ಕೈಗಾರಿಕೆಗಳನ್ನು ಹಾಗೂ ಆಸ್ತಿಯನ್ನು ವೈರಿಗಳ ಸಂಪತ್ತೆಂದು ತನ್ನ ವಶಕ್ಕೆ ತೆಗೆದುಕೊಂಡ ಸರಕಾರ, ಅದನ್ನು ವೈರಿ ಆಸ್ತಿಯ ಮೇಲ್ವಿಚಾರಕರ (Custodian of enemy property) ನಿಯಂತ್ರಣಕ್ಕೆ ಒಪ್ಪಿಸುತ್ತದೆ. ಕೈಗಾರಿಕೆಗಳನ್ನು ಮೊದಲು ಮಿಶನ್ ಟ್ರಸ್ಟ್ ಆಫ್ ಸಧರನ್ ಇಂಡಿಯ ನಿಯಂತ್ರಣದಲ್ಲೂ ನಂತರ ಅವುಗಳನ್ನು ಕೋಮನ್‌ವೆಲ್ತ್ ಟ್ರಸ್ಟ್‌ಗೂ ವಹಿಸಿಕೊಡಲಾಗುತ್ತದೆ. ೧೯೧೪ರ ವರೆಗೆ ಈ ಕೈಗಾರಿಕೆಗಳು ಮಿಶನ್ ಕಂಪನಿಗೆ ಹಾಗೂ ಮಿಶನಿಗೆ ಅಪಾರವಾದ ಲಾಭವನ್ನು ತಂದು ಕೊಡುತಿತ್ತು. ಆದರೆ ಯುದ್ಧ ಆರಂಭವಾದ ನಂತರ ಕೈಗಾರಿಕೆಗಳು ಸ್ವಿಸರ ಮೇಲ್ವಿಚಾರಣೆಯಲ್ಲಿ, ಬ್ರಿಟಿಷ್ ಸರಕಾರದ ನಿಯಂತ್ರಣದಲ್ಲಿ ಪತನದಂಚಿಗೆ ಮುಂದುವರಿದವು. ಇದರೊಂದಿಗೆ ಮಿಶನಿಗೆ ಕೈಗಾರಿಕೆಗಳಿಂದ ಮಿಶನ್ ಕೆಲಸಕ್ಕೆ ಬರುತ್ತಿದ್ದ ಆದಾಯವು ಕಡಿಮೆಯಾಯಿತು. ತನ್ನ ಆರಂಭದಿಂದಲೇ ಭಾರತದಲ್ಲಿನ ಬ್ರಿಟಿಷ್ ವಸಾಹತು ಸರಕಾರಕ್ಕೆ ಹಾಗೂ ಬ್ರಿಟಿಷ್ ಸರಕಾರಕ್ಕೆ ತನ್ನ ವಿಧೇಯತೆಯನ್ನು ತೋರಿದ್ದ ಬಾಸೆಲ್ ಮಿಶನರಿಗಳು[೧] ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ನಿರೀಕ್ಷೆಯೂ ಮಾಡಿರಲಿಲ್ಲ. ಜೊತೆಗೆ ಇಂತಹ ಪರಿಸ್ಥಿತಿಯನ್ನು ಎದುರಿಸಲು ಯಾವುದೇ ಸಿದ್ಧತೆಯನ್ನು ಮಾಡದೇ ಇದ್ದುದು ಕೈಗಾರಿಕೆಗಳ ಪತನಕ್ಕೆ ಕಾರಣವಾಗುತ್ತದೆ. ಮತ್ತೊಂದೆಡೆ ತನ್ನ ಉತ್ತುಂಗ ಶಿಖರಕ್ಕೆ ಮುಟ್ಟಿದ್ದ ಮಿಶನರಿ ಕಾರ್ಯದ ಮೇಲೂ ಯುದ್ಧದ ಕರಿಛಾಯೆ ಆವರಿಸುತ್ತದೆ. ಬಾಸೆಲ್ ಮಿಶನಿನ ಮಿಶನ್ ಠಾಣ್ಯಗಳು ಬೇರೆ ಬೇರೆ ಮಿಶನ್‌ಗಳ ಮೇಲ್ವಿಚಾರಣೆಗೆ ಹರಿದು ಹಂಚಿ ಹೋಗುತ್ತವೆ. ಇದರೊಂದಿಗೆ ಬಾಸೆಲ್ ಮಿಶನ್ ಮತ್ತೆಂದಿಗೂ ತನ್ನ ಮೊದಲಿನ ವೇಗವನ್ನು, ಛಾಪನ್ನು ಪಡೆಯದಾಗುತ್ತದೆ.

ಯುದ್ಧ ಕಾಲದಲ್ಲಿ ಬಾಸೆಲ್ ಮಿಶನ್ ಎದುರಿಸಿದ ಈ ರೀತಿಯ ಅಪಾರವಾದ ಹಿನ್ನಡೆಗೆ ಒಂದು ರೀತಿಯಲ್ಲಿ ಅದರ ಮಿಶನ್ ಹಾಗೂ ಮಿಶನರಿ ನೀತಿಗಳೇ ಕಾರಣವಾದವು ಎಂದು ಹೇಳಬಹುದು. ಏಕೆಂದರೆ ಮಿಶನ್ ಭಾರತೀಯ ಕ್ರೈಸ್ತರಿಗೆ ನಾಯಕತ್ವದ ಬಗ್ಗೆ ತಿಳುವಳಿಕೆ ನೀಡಿ, ಜವಾಬ್ದಾರಿಯನ್ನು ವಹಿಸಿಕೊಟ್ಟಿರಲಿಲ್ಲ. ಮಿಶನರಿಗಳು ಸ್ಥಳೀಯ ಪಾಸ್ಟರ್‌ಗಳಿಗೆ ಸ್ವತಂತ್ರ ಜವಾಬ್ದಾರಿಯನ್ನು ನೀಡಿರಲಿಲ್ಲ. ಬಾಸೆಲ್ ಮಿಶನ್ ತನ್ನ ಕ್ರೈಸ್ತರಿಗೆ, ತನ್ನ ಶಾಲೆಗಳಲ್ಲಿ ಶಿಕ್ಷಕರಾಗುವ, ಕ್ಲರ್ಕ್‌ಗಳಾಗುವ ತರಬೇತಿಯನ್ನು ಹಾಗೂ ಕೈಗಾರಿಕಾ ಕಾರ್ಯಗಳಿಗೆ ಬೇಕಾಗುವ ವಿಭಿನ್ನ ಕೌಶಲ್ಯಗಳಲ್ಲಿ ತರಬೇತಿಯನ್ನು ಒದಗಿಸಿತು.[೨] ಈ ರೀತಿ ಬಾಸೆಲ್ ಮಿಶನ್ ತನ್ನ ಕ್ರೈಸ್ತರನ್ನು ಹಾಗೂ ತರಬೇತಿ ಪಡೆದ ಇತರರನ್ನು ತನ್ನ ಪ್ರಬಲ ನಿಯಂತ್ರಣದಲ್ಲಿರಿಸಿಕೊಂಡಿತ್ತು. ಮಿಶನಿನ ಹಾಗೂ ಚರ್ಚಿನ ಸಂಪೂರ್ಣ ಆಡಳಿತ ನಿರ್ವಹಣೆ ಮಿಶನರಿಗಳ ಕೈಯಲ್ಲೇ ಕೇಂದ್ರೀಕೃತವಾಗಿತ್ತು. ಮಿಶನ್‌ನ ಕಾರ್ಯ ಚಟುವಟಿಕೆಗಳ ಮೇಲೆ ಬಾಸೆಲ್ ಹೋಮ್ ಕಮಿಟಿಯು ತನ್ನ ನೇರ ನಿಯಂತ್ರಣವನ್ನು ಹೊಂದಿತ್ತು.

ಯುದ್ಧದ ಕಾಲದಲ್ಲಿ ಬಾಸೆಲ್ ಮಿಶನಿನ ಬಗ್ಗೆ ಸಾರ್ವಜನಿಕ ಪತ್ರಿಕೆಗಳು ವಿಭಿನ್ನವಾದ ಹೇಳಿಕೆಗಳನ್ನು ನೀಡುತ್ತವೆ. ಮಾತ್ರವಲ್ಲದೇ ಮಿಶನ್ ಬಗ್ಗೆ ಬೇರೆ ಬೇರೆ ರೀತಿಯ ಊಹಾಪೋಹಗಳು ಸೃಷ್ಟಿಯಾಗಿರುತ್ತವೆ. ಯುದ್ಧ ಆರಂಭವಾಗುತ್ತಿದ್ದಂತೆ ಮೆಡ್ರಾಸ್ ಪ್ರೆಸಿಡೆನ್ಸಿಯಲ್ಲಿನ ಬ್ರಿಟಿಷ್ ಪರವಾಗಿದ್ದ ಕೆಲವು ಪತ್ರಿಕೆಗಳು ಜರ್ಮನ್ ಮಿಶನ್‌ಗಳನ್ನು ಅನುಮಾನದ ದೃಷ್ಟಿಯಿಂದ ಗಮನಿಸಿ ಅವುಗಳ ವಿರುದ್ಧ ಬ್ರಿಟಿಷ್ ಸರಕಾರ ಕಠಿಣ ಕ್ರಮ ಕೈಗೊಳ್ಳುವಂತೆ ಬೇಡಿಕೆ ಮಂಡಿಸುತ್ತದೆ. ಕೆಲವು ಪತ್ರಿಕೆಗಳು ಬಾಸೆಲ್ ಮಿಶನಿನ ಚಟುವಟಿಕೆಗಳ ಮೇಲೆ ನಿರ್ಬಂಧ ಹೇರುವಂತೆ ಒತ್ತಾಯಿಸುತ್ತವೆ. ಆದರೆ ಈ ಹೇಳಿಕೆಗಳಲ್ಲಿ ತಳಮಟ್ಟದ ಸತ್ಯ ಹಾಗೂ ಬಹಳಷ್ಟು ತಪ್ಪು ಅಭಿಪ್ರಾಯಗಳು ಮಿಶ್ರವಾಗಿವೆ. ನಿಜವಾದ ವಿಚಾರಗಳ ಬಗ್ಗೆ ಹೇಳಿಕೆಯನ್ನು ಕೊಡಬೇಕಾಗುತ್ತದೆ ಎಂದು 'ದಿ ಹರ್ವೆಸ್ಟ್ ಫಿಲ್ಡ್' ವರದಿ ಮಾಡುತ್ತದೆ.[೩] ಈ ರೀತಿಯ ಹೇಳಿಕೆಗಳು ಬ್ರಿಟಿಷರು ಬಾಸೆಲ್ ಮಿಶನಿನ ಬಗ್ಗೆ ಕಠಿಣ ನಿಲುವುಗಳನ್ನು ತೆಗೆದುಕೊಳ್ಳಲು ಕಾರಣವೆನ್ನಬಹುದು. ಬಾಸೆಲ್ ಮಿಶನ್‌ನಲ್ಲಿ ಜರ್ಮನ್ ಅಸ್ತಿತ್ವಗಳು ಹಾಗೂ ಜರ್ಮನ್

ನಿಯಂತ್ರಣವಿರುವುದರಿಂದ ಅದನ್ನು ವೈರಿ ಮಿಶನ್ ಎಂಬುದಾಗಿ ಸಾರಲಾಗುತ್ತದೆ. ಈ ಮಿಶನ್ ನಾಮಾಂಕಿತವಾಗಿ ಮಾತ್ರ ಸ್ವಿಸ್ ನಿಯಂತ್ರಣದಲ್ಲಿದೆ ಎಂದು ಪರಿಗಣಿಸಿದ್ದ ಬ್ರಿಟಿಷ್ ಸರಕಾರ, ಬಾಸೆಲ್ ಮಿಶನ್ ಮುಖ್ಯವಾಗಿ ಅದರ ಕೈಗಾರಿಕಾ ವಿಭಾಗದ ಮೇಲೆ ಅವಲಂಬಿತವಾಗಿರುವುದರಿಂದ, ಅದನ್ನು ಮಾರಾಟ ಮಾಡುವುದರ ಮೂಲಕ, ಮಿಶನ್‌ನ ಶಕ್ತಿಗುಂದಿಸಿ, ಅದು ತಾನಾಗಿಯೇ ಅಥವಾ ಸ್ವತಿಂಕೆಯೊಂದಿಗೆ ಮಿಶನ್ ಕಾರ್ಯದಿಂದ ಹಿಂತೆಗೆದು ಕೊಳ್ಳುವಂತೆ ಮಾಡುವುದು ಉಚಿತವೆಂಬುದು ಬ್ರಿಟಿಷ್ ಸರಕಾರದ ಚಿಂತನೆಯಾಗಿತ್ತು.[೪]

ಯುದ್ಧ ಆರಂಭವಾದ ನಂತರ 'ದಿ ಮೆಡ್ರಾಸ್ ರೆಪ್ರಸೆನ್‌ಟೇಟಿವ್ ಕೌನ್ಸಲ್ ಆಫ್ ಮಿಶನ್ಸ್' (The Madras Representative council of Missions) ದಕ್ಷಿಣ ಭಾರತದಲ್ಲಿ ಜರ್ಮನ್ ಮಿಶನರಿಗಳ ಮೇಲೆ ಯುದ್ಧದಿಂದಾಗುವ ಪರಿಣಾಮ ಹಾಗೂ ಅವುಗಳ ಸಹಾಯಕ್ಕೆಂದು ಒಂದು ಕಮಿಟಿಯನ್ನು ರಚಿಸುತ್ತದೆ. ಈ ಕಮಿಟಿಯು ಬಾಸೆಲ್ ಮಿಶನನೊಂದಿಗೆ ಬಹಳಷ್ಟು ನಿಕಟ ಸಂಪರ್ಕದಲ್ಲಿದ್ದು, ನೈಜ ವಿಚಾರಗಳ ಬಗ್ಗೆ ಬೆಳಕು ಚೆಲ್ಲುವಷ್ಟು ಶಕ್ತವಾಗಿತ್ತು. ಅದರ ಪ್ರಕಾರ ಬಾಸೆಲ್ ಮಿಶನಿನ ಬಗ್ಗೆ ಅದು ವೈರಿಗಳಿಗೆ ಸಹಾಯ ಮಾಡುತ್ತಿದೆ ಹಾಗೂ ಬ್ರಿಟಿಷರಿಗೆ ಅವಿಧೇಯವಾಗಿದೆ ಎಂಬ ಊಹಾಪೋಹಗಳು ಹರಡಲಾರಂಭಿಸಿದವು. ಆದರೆ ಈ ಮೇಲಿನ ಯಾವುದೇ ಉಹಾಪೋಹಗಳೂ ಸತ್ಯವೆಂದು ಸಾಬೀತಾಗಲಿಲ್ಲ. ಕೆಲವೊಂದು ಮಿಶನರಿಗಳು ವಿವೇಚನೆಯಿಲ್ಲದೆ ತಮ್ಮ ಮೂಲ ರಾಷ್ಟ್ರದ ಬಗ್ಗೆ ಕಾಳಜಿಯ ಮಾತುಗಳಾನ್ನಾಡಿದ್ದಾರೆ. ಆದರೆ ಬಾಸೆಲ್ ಮಿಶನ್‌ನ ಯಾವುದೇ ಮಿಶನರಿಗಳ ವಿರುದ್ಧ ಅವಿಧೇಯತೆಯ ಅಥವಾ ಬ್ರಿಟಿಷರ ವಿರುದ್ಧ ವೈರತ್ವದ ವಿಚಾರಗಳು ಸಾಬೀತಾಗಿಲ್ಲ.[೫]

ಬಾಸೆಲ್ ಮಿಶನಿನ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ, ಅದು ಬಹುಪಾಲು ಸ್ವಿಸ್ ಮೂಲದ್ದಾಗಿದ್ದರೂ, ಅದರಲ್ಲಿಯೂ ಸರಕಾರ ಜರ್ಮನರ ಬಹುಪಾಲು ಅಸ್ತಿತ್ವ ಹಾಗೂ ನಿಯಂತ್ರಣವನ್ನು ಗಮನಿಸುತ್ತದೆ. ಯುದ್ಧದ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ಕೈಗಾರಿಕೆಗಳಲ್ಲಿನ ಎಲ್ಲಾ ಜರ್ಮನರನ್ನು ತೆಗೆದು ಹಾಕಿ, ಕೈಗಾರಿಕೆಗಳು ಕೇವಲ ಸ್ವಿಸರ ಮೇಲ್ವಿಚಾರಣೆಯಲ್ಲಿ ಮುಂದುವರಿಯುವಂತಾಗಲು "ದಿ ಹೊಸ್ಟೈಲ್ ಫಾರಿನರ್ಸ್ (ಟ್ರೇಡಿಂಗ್) ಆಕ್ಟ್ ಆಫ್ ೧೯೧೪" [The Hostile foreigners (trading) Act of 1914] ನ ನಿಬಂಧನೆಗಳ ಅನ್ವಯ ಕೈಗಾರಿಕೆಗಳಿಗೆ ಅನುಮತಿಯನ್ನು ನೀಡುತ್ತದೆ. ಕೈಗಾರಿಕೆಗಳ ಲೆಕ್ಕ ಪತ್ರಗಳ ಪರಿಶೀಲನೆಗೆ ಬ್ರಿಟಿಷ್ ಸರಕಾರ ತನ್ನ ಒಬ್ಬ ಅಧಿಕಾರಿಯನ್ನೂ ನೇಮಿಸುತ್ತದೆ. ಬ್ರಿಟಿಷ್ ಹಡಗಾದ 'ಎಸ್.ಎಸ್.ಅಪಾಪ'ವನ್ನು [Apapa] ಜರ್ಮನ್ ಜಲಾಂತರ್ಗಾಮಿ ಮುಳುಗಿಸಿದ ಸಂದರ್ಭದಲ್ಲಿ, ಈ ಘಟನೆಯನ್ನು 'ಬಾಸೆಲ್ ಮಿಶನ್ ಟ್ರೇಡಿಂಗ್ ಸೊಸೈಟಿ' ಯ ನಾಲ್ಕು ಮಂದಿ ಸ್ವಿಸ್ ಸಹಾಯಕರು ಗೋಲ್ಡ್ ಕೋಸ್ಟ್‌ನಲ್ಲಿ (ಆಫ್ರಿಕಾ) ಸಂಭ್ರಮಿಸಿದ ಘಟನೆ ಬ್ರಿಟಿಷ್ ಸರಕಾರಕ್ಕೆ ಬಾಸೆಲ್ ಮಿಶನನ ಬಗ್ಗೆಗಿರುವ ಅನುಕಂಪವನ್ನು ನಾಶ ಮಾಡುತ್ತದೆ. ಈ ಕಾರಣದಿಂದ ಬಾಸೆಲ್ ಮಿಶನಿನೊಂದಿಗಿನ ಎಲ್ಲಾ ರೀತಿಯ ವ್ಯವಹಾರವನ್ನು ಕೊನೆಗಾಣಿಸಿ, ಬ್ರಿಟಿಷ್ ವಸಾಹತುಗಳಲ್ಲಿನ ಬಾಸೆಲ್ ಮಿಶನನ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ರದ್ದುಗೊಳಿಸುತ್ತದೆ. ಮಾತ್ರವಲ್ಲದೇ ಬಾಸೆಲ್ ಟ್ರೇಡಿಂಗ್ ಸೊಸೈಟಿಯ ವ್ಯವಹಾರವನ್ನು ಮುಚ್ಚಿ ಬಿಡಲು ನಿರ್ಧರಿಸುತ್ತದೆ.

ಯುದ್ಧ ಆರಂಭವಾದ ಕಾಲದಲ್ಲಿ ಸರಕಾರ ಹಾಗೂ ಮಡ್ರಾಸ್ ಎಜುಕೇಶನಲ್ ಕೌನ್ಸಿಲ್ (Madras Educational council) ಬಾಸೆಲ್ ಮಿಶನನ ಶೈಕ್ಷಣಿಕ ಸಂಸ್ಥೆಗಳಿಗೆ ನೀಡಿದ್ದ ಮನ್ನಣೆ ಹಾಗೂ ಅನುದಾನವನ್ನು ಹಿಂಪಡಿಯುತ್ತದೆ. ಆದರೆ ಮಿಶನರಿ ಎಜುಕೇಶನಲ್ ಕೌನ್ಸಿಲ್ ಆಫ್ ಸೌತ್ ಇಂಡಿಯಾ (Missionary educational council of south India) ವು ಮಧ್ಯ ಪ್ರವೇಶ ಮಾಡಿ, ಮಿಶನ್ ಶಾಲೆಗಳ ಸಂಪೂರ್ಣ ಜವಾಬ್ದಾರಿಯನ್ನು ತಾತ್ಕಾಲಿಕವಾಗಿ ವಹಿಸಿಕೊಳ್ಳುವ ಭರವಸೆ ನೀಡಿದ ಮೇಲೆ ಮದ್ರಾಸ್ ಸರಕಾರ ಮಿಶನ್ ಶಾಲೆಗಳಿಗೆ ನೀಡಿದ್ದ ಮನ್ನಣೆ ಹಾಗೂ ಅನುದಾನವನ್ನು ಮುಂದುವರಿಸುತ್ತದೆ. ಬಾಸೆಲ್ ಮಿಶನನ್ನು ಸಂಪೂರ್ಣವಾಗಿ ನಿರ್ಬಂಧಿಸಿದ ಕಾರಣದಿಂದ ನ್ಯಾಶನಲ್ ಮಿಶನರಿ ಕೌನ್ಸಿಲ್ ಬದಲಿ ವ್ಯವಸ್ಥೆಯನ್ನು ರೂಪುಗೊಳಿಸುವವರೆಗೆ ಅದರ ಎಲ್ಲಾ ಶೈಕ್ಷಣಿಕ ಜವಾಬ್ದಾರಿಗಳು 'ಮಿಶನರಿ ಎಜುಕೇಶನಲ್ ಕೌನ್ಸಲ್ ಆಪ್ ಸೌತ್ ಇಂಡಿಯಾ' ದ ನಿಯಂತ್ರಣದಲ್ಲಿರುತ್ತವೆ.

೧೯೧೪ರ ಏಕಾಏಕಿಯಾದ ಹೊಡೆತವು ಬಾಸೆಲ್ ಮಿಶನ್ ಕೆನರಾ, ಮಲಬಾರ್, ದಕ್ಷಿಣ ಮರಾಠ, ಕೊಡಗು ಮತ್ತು ನೀಲಗಿರಿ ಪ್ರದೇಶಗಳಲ್ಲಿ ಹುಟ್ಟು ಹಾಕಿದ್ದ ವಿಸ್ತಾರವಾದ ಹಾಗೂ ವೈವಿಧ್ಯಮಯವಾದ ಕಾರ್ಯಗಳನ್ನು ಬಾಸೆಲ್ ಮಿಶನಿನ ಸ್ವಿಸ್ ಮಿಶನರಿಗಳು ನಿರ್ವಹಿಸಬೇಕಾಗಿ ಬರುತ್ತದೆ. ಈ ಸ್ವಿಜ್ ಮಿಶನರಿಗಳು ದೈಹಿಕವಾಗಿ, ಭೌತಿಕವಾಗಿ, ಅಧ್ಯಾತ್ಮಿಕವಾಗಿ ಹಾಗೂ ಎಲ್ಲಾ ವಿಚಾರದಲ್ಲೂ ಈ ರೀತಿಯ ಜವಾಬ್ದಾರಿಗಳನ್ನು ನಿರ್ವಹಿಸಲು ಯೋಗ್ಯರಾಗಿರಲಿಲ್ಲ ಎಂಬುದು ದೇಶಿಯ ಕ್ರೈಸ್ತರ ವಾದವಾಗಿತ್ತು. ಬಾಸೆಲ್ ಮಿಶನಿನ ಜರ್ಮನ್ ಮಿಶನರಿಗಳನ್ನು ಮಿಶನ್ ಕ್ಷಾಣ್ಯದಿಂದ ತೆಗೆದ ಸಂದರ್ಭದಲ್ಲಿ ಸ್ವಿಸ್

ಮಿಶನರಿಗಳು ಬಹಳಷ್ಟು ಸಂಕಷ್ಟಕ್ಕೆ ಗುರಿಯಾಗುತ್ತಾರೆ. ಈ ಸಂದರ್ಭದಲ್ಲಿ ಅವರು ಈವರೆಗೂ ನಿರ್ವಹಿಸದಂತಹ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿ ಬರುತ್ತದೆ ಎಂದು 'ಹರ್ವೆಸ್ಟ್ ಫಿಲ್ಡ್' ವರದಿ ಮಾಡುತ್ತದೆ.[೬] ಈ ಸಂದರ್ಭದಲ್ಲಿ ಹಣಕಾಸಿನ ಕೊರತೆಯು ಇದ್ದು, ಮಿಶನನ್ನು ಮಿಶನರಿಗಳ ಕೊರತೆಯಿಂದಾಗಿ ಒಂದು ಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿ ಮುಂದುವರಿಸುವುದು ಸಾಧ್ಯವಾಗುವುದಿಲ್ಲ. ಜೊತೆಗೆ ಇಲ್ಲಿ ಉಳಿದಿದ್ದ ಮಿಶನರಿಗಳು ಅವರ ಹೋಮ್ ಬೋರ್ಡಿನೊಂದಿಗಿದ್ದ ಎಲ್ಲಾ ಸಂಬಂಧವನ್ನು ಕಳೆದುಕೊಳ್ಳುತ್ತಾರೆ.

ಜಾಗತಿಕ ಯುದ್ಧವು ಭಾರತದಲ್ಲಿ ಬಾಸೆಲ್ ಮಿಶನಿನ ಮಿಶನ್ ಠಾಣ್ಯಗಳ ಹಾಗೂ ಇತರ ಸಂಸ್ಥೆಗಳ ಮೇಲೆ ಗಣನೀಯ ಪರಿಣಾಮ ಬೀರಿದರೆ ಮತ್ತೊಂದೆಡೆ ಸ್ವಿಜರ್‌ಲ್ಯಾಂಡಿನಲ್ಲಿ ಮಿಶನ್ ಬೆಂಬಲಿಗರಾದ ಸ್ವಿಸ್ ಜರ್ಮನ್ ಹಾಗೂ ಸ್ವಿಸ್ ಫ್ರೆಂಚರ ಮಧ್ಯ ಬಿರುಕು ಮೂಡುತ್ತದೆ. ನಂತರದಲ್ಲಿ ಬಹು ದೀರ್ಘಕಾಲ ಸ್ವಿಸ್ ಜರ್ಮನರು ಮಿಶನನ ಸಕ್ರಿಯ ಕಾರ್ಯದಿಂದ ದೂರ ಉಳಿಯುವಂತಾಗುತ್ತದೆ. ಭಾರತದಲ್ಲಿನ ಬಾಸೆಲ್ ಮಿಶನನ ಸಂದಿಗ್ಧ ಪರಿಸ್ಥಿತಿಯನ್ನು ಗಮನಸಿದ ಮಿಶನಿನ ಸ್ವಿಸ್ ಸ್ನೇಹಿತರು ಮಿಶನರಿಗಳಿಗೆ ಸಹಾಯ ಮಾಡಲು ಮುಂದಾಗುತ್ತಾರೆ. ಯುದ್ಧದ ಕಾಲಾವಧಿಯಲ್ಲಿ ಬಾಸೆಲ್ ಮಿಶನಿನ ಎಲ್ಲಾ ಜರ್ಮನ್ ಮಿಶನರಿಗಳನ್ನು ತೆಗೆದು ಹಾಕಿದ ಮೇಲೆ ಮಿಶನನ್ನು ಮೂರು ಮಿಶನರಿಗಳುಳ್ಳ 'ಜನರಲ್ ಲೋಕಲ್ ಕಮಿಟಿಗೆ' (General local committee) ವಹಿಸಲಾಗುತ್ತದೆ. ಇದರಲ್ಲಿ ಸ್ವಿಸ್ ಮಿಶನರಿಗಳು ಮಾತ್ರವಿದ್ದು, ಇತರ ಮಿಶನರಿಗಳ ಸಹಾಯದಿಂದ ತಮ್ಮ ಕಾರ್ಯವನ್ನು ಮುಂದಿನ ಮೂರು ವರ್ಷಗಳವರೆಗೆ ಮುಂದುವರಿಸುತ್ತಾರೆ. ಈ ಸ್ವಿಸ್‌ರು ಬಹಳ ಕಷ್ಟದಿಂದ, ಹಣಕಾಸಿನ ಸಂಕಷ್ಟದಿಂದ ಮಿಶನನ್ನು ಮುಂದುವರಿಸುತ್ತಾರೆ.

೧೯೧೮ರಲ್ಲಿ ಬ್ರಿಟಿಷ್ ಸರಕಾರವು ಭಾರತದಲ್ಲಿ ಬಾಸೆಲ್ ಮಿಶನನ್ನು ನಿರ್ಬಂಧಿಸಿ ಅದರ ಕಾರ್ಯವನ್ನು ನ್ಯಾಶನಲ್ ಮಿಶನರಿ ಕೌನ್ಸಿಲ್‌ಗೆ (National Missionary council) ವರ್ಗಾಯಿಸುತ್ತದೆ. ಬಾಸೆಲ್ ಮಿಶನಿನ ಶೈಕ್ಷಣಿಕ ಹಾಗೂ ಧಾರ್ಮಿಕ ಮಿಶನ್ ಕಾರ್ಯವನ್ನು ಸಂಪೂರ್ಣವಾಗಿ ನ್ಯಾಶನಲ್ ಮಿಶನರಿ ಕೌನ್ಸಿಲ್‌ನ ನಿರ್ವಹಣೆಗೆ ವಹಿಸಲಾಗುತ್ತದೆ. ಅದೇ ರೀತಿ ಬಾಸೆಲ್ ಮಿಶನಿನ ಜನರಲ್ ಲೋಕಲ್ ಕಮಿಟಿಯು (General local committee of the Basel Mission) ಇದಕ್ಕೆ ಸಮ್ಮತಿಯನ್ನು ಸೂಚಿಸಿ ಅದರ ಕೆಲಸವನ್ನು ಮುಂದುವರಿಸಲು ವ್ಯವಸ್ಥೆ ಮಾಡುವಂತೆ ಕೇಳಿಕೊಳ್ಳುತ್ತದೆ. ಬಾಸೆಲ್ ಮಿಶನ್ ಬಹಳಷ್ಟು ವಿಸ್ತೃತವಾದ ಪ್ರದೇಶದಲ್ಲಿ ತನ್ನ ಕಾರ್ಯವನ್ನು ನಿರ್ವಹಿಸಿತ್ತು. ಅವುಗಳೆಂದರೆ ನೀಲಗಿರಿ, ಕೊಡಗು, ಮಲಬಾರ್, ಉತ್ತರ ಕೆನರಾ (ಹೊನ್ನಾವರ), ದಕ್ಷಿಣ ಕೆನರಾ, ದಕ್ಷಿಣ ಮರಾಠ (ಹುಬ್ಬಳ್ಳಿ ಮತ್ತು ಧಾರವಾಡ, ಅದರ ಸುತ್ತಮುತ್ತಲಿನ ಪ್ರದೇಶ) ಗಳಲ್ಲಿ ಕಾರ್ಯನಿರ್ವಹಿಸಿತ್ತು. ನ್ಯಾಶನಲ್ ಮಿಶನರಿ ಕೌನ್ಸಿಲ್ ಭಾರತ ಸರಕಾರದ ಅನುಮತಿಯೊಂದಿಗೆ ಬಾಸೆಲ್ ಮಿಶನಿನ ಮಿಶನನ್ನು ಮುಂದುವರಿಸಲು ಈ ಕೆಳಗಿನ ಯೋಜನೆಯನ್ನು ಸಿದ್ಧಪಡಿಸುತ್ತದೆ ಹಾಗೂ ಈ ಯೋಜನೆಯನ್ನು ಯಥಾ ಪ್ರಕಾರ ಅಸ್ಥಿತ್ವಕ್ಕೆ ತರಲಾಗುತ್ತದೆ. ಅದರಂತೆ

೧. ನೀಲಗಿರಿ ಹಾಗೂ ಕೊಡಗಿನ ಪ್ರದೇಶಗಳ ಮಿಶನ್ ಜವಾಬ್ದಾರಿಯನ್ನು ವೆಸ್ಲಿಯನ್ ಮಿಶನರಿ ಸೊಸೈಟಿಗೆ ವಹಿಸಲಾಗುತ್ತದೆ.

೨. ಕ್ಯಾಲಿಕಟ್‌ನ, ಬಾಸೆಲ್ ಮಿಶನ್ ಕಾಲೇಜಿನ (Basel Mission College, Calicut) ಜವಾಬ್ದಾರಿಯನ್ನು ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿಗೆ ವಹಿಸಲಾಗುತ್ತದೆ.

೩. ನ್ಯಾಶನಲ್ ಮಿಶನರಿ ಸೊಸೈಟಿಗೆ ಉತ್ತರ ಕೆನರಾ (ಹೊನ್ನಾವರ)ದ ಜವಾಬ್ದಾರಿಯನ್ನು ವಹಿಸಿಕೊಡಲಾಗುತ್ತದೆ.

೪. ಮಲಬಾರ್‌ಗೆ ಸಂಬಂಧಿಸಿದಂತೆ ಅದರ ಜವಾಬ್ದಾರಿಯನ್ನು ಯಾವುದೇ ಒಂದು ಮಿಶನ್ ವಹಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ಜರ್ಮನ್ ಮಿಶನ್ಸ್ ಕಮಿಟಿಯು ಅಭಿಪ್ರಾಯ ಪಡುತ್ತದೆ. ಬಾಸೆಲ್ ಮಿಶನಿನ ಮಲಬಾರ್ ಚರ್ಚ್ ಇದೇ ಸಂದರ್ಭದಲ್ಲಿ 'ಸೌತ್ ಇಂಡಿಯಾ ಯುನೈಟೆಡ್ ಚರ್ಚ್'ನ್ನು (South India united church) ಸೇರಲು ನಿರ್ಧರಿಸುತ್ತದೆ. ಆದುದರಿಂದ ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ಗೆ, ಬಾಸೆಲ್ ಮಿಶನಿನ ಮಲಬಾರ್ ಚರ್ಚ್‌ನ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಕೇಳಲಾಗುತ್ತದೆ.

೫. ಬಾಸೆಲ್ ಮಿಶನಿನ ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠಗಳ ಮಿಶನ್ ಜವಾಬ್ದಾರಿಯನ್ನು ಸ್ವಿಸ್‌ರಿಗೆ ವಹಿಸಲಾಗುತ್ತದೆ. ಇಲ್ಲಿನ ಮಿಶನ್‌ಗೆ ಹಣಕಾಸು ಹಾಗೂ ಮಿಶನರಿಗಳನ್ನು ಒದಗಿಸಿ ಮಿಶನ್ ಮುಂದುವರಿಸುವುದು ಸ್ವಿಸ್‌ರ ಜವಾಬ್ದಾರಿಯಾಗುತ್ತದೆ. ಈ ಉದ್ದೇಶಕ್ಕಾಗಿ ಲೌಸಾನ್ನೆಯಲ್ಲಿ (Lausanne) ಒಂದು ಕಮಿಟಿಯು ರಚಿತವಾಗಿ ಅದು ಮಿಶನರಿಗಳನ್ನು ಹಾಗೂ ಹಣಕಾಸನ್ನು ಒದಗಿಸುವ ಉದ್ದೇಶವನ್ನು ಹೊಂದಿರುತ್ತದೆ. ಅದೇ ರೀತಿ ಮೇಲಿನ ಜರ್ಮನ್ ಮಿಶನ್ಸ್ ಕಮಿಟಿಯು ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠದ ಮಿಶನ್ ಕೆಲಸವನ್ನು ನಿರ್ವಹಿಸುವ

ಸ್ವಿಸ್ ಮಿಶನರಿಗಳೊಂದಿಗೆ ಕಾರ್ಯ ನಿರ್ವಹಿಸಲು ಒಬ್ಬ ಬ್ರಿಟಿಷ್ ಮಿಶನರಿಯನ್ನು ನೇಮಿಸಬೇಕೆಂದೂ, ಆ ಮಿಶನರಿಯು ಇಲ್ಲಿ ರಚನೆಯಾಗುವ ಯಾವುದೇ ಸಂಘಟನೆಯ ಸೆಕ್ರೆಟರಿಯಾಗಬೇಕೆಂದು ಸಲಹೆ ಮಾಡುತ್ತದೆ. ಇಲ್ಲಿನ ಸಂಪೂರ್ಣ ಕೆಲಸವು ನ್ಯಾಶನಲ್ ಮಿಶನರಿ ಕೌನ್ಸಿಲ್‌ನ ನಿಯಂತ್ರಣದಲ್ಲಿರಬೇಕೆಂದೂ ಸಲಹೆ ಮಾಡುತ್ತದೆ. ನ್ಯಾಶನಲ್ ಮಿಶನರಿ ಕೌನ್ಸಿಲ್ ಮದ್ರಾಸನ್ನು ಕೇಂದ್ರವಾಗಿರಿಸಿ ಒಂದು ಕಮಿಟಿಯನ್ನು ರಚಿಸಲಿದ್ದು, ಅದು ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠ ಮಿಶನಿನ ಕೆಲಸದ ನಿಯಂತ್ರಣ ಮತ್ತು ಮಿಶನರಿಗಳ ನಿಯಂತ್ರಣದ ಕೆಲಸವನ್ನು ಮಾಡಲಿದೆ ಎಂಬುದಾಗಿ ಯೋಜನೆಯಲ್ಲಿ ಬ್ರಿಟಿಷ್ ಸರಕಾರಕ್ಕೆ ಭರವಸೆ ನೀಡಲಾಗುತ್ತದೆ.

೧೯೧೯ರಲ್ಲಿ ನ್ಯಾಶನಲ್ ಮಿಶನರಿ ಕೌನ್ಸಿಲ್ ಔಪಚಾರಿಕವಾಗಿ ಬಾಸೆಲ್ ಮಿಶನಿನ ಜವಾಬ್ದಾರಿಗಳನ್ನು ವಹಿಸಿಕೊಳ್ಳುತ್ತದೆ. ಅದೇ ರೀತಿ ಆಗಾಗಲೇ ಬಾಸೆಲ್ ಮಿಶನ್ ಠಾಣ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸ್ವಿಸ್ ಮಿಶನರಿಗಳು ಮುಂದುವರಿಯುತ್ತಾರೆ. ಆದರೆ ವ್ಯವಸ್ಥೆ ಹಾಗೂ ಸಂಘಟನೆಗಳಲ್ಲಿ ಅಗತ್ಯ ಮಾರ್ಪಾಡುಗಳಾಗುತ್ತವೆ. ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠ ಮಿಶನರಿಗಳು, ಸರಕಾರದ ಒಪ್ಪಿಗೆ ಪಡೆದು ಹೊಸ ಅಂಗವೊಂದನ್ನು ರಚಿಸಿ ಮಿಶನ್ ಕಾರ್ಯ ಮುಂದುವರಿಸಲು ನಿರ್ಧರಿಸುತ್ತಾರೆ. ಈ ಹೊಸ ಅಂಗವನ್ನು 'ಕೆನರೀಸ್ ಇವ್ಯಾಂಜಲಿಕಲ್ ಮಿಶನ್' ಎಂದು ಕರೆಯಲಾಯಿತು. ಇದಕ್ಕೆ ಸಹಾಯಕ ಕಮಿಟಿಯಾಗಿ ಲೌಸನ್ನೆ (Laussanne) ಕಮಿಟಿಯು ಇದ್ದು, ಅಗತ್ಯವಿರುವ ಹಣಕಾಸು ಹಾಗೂ ಮಿಶನರಿಗಳನ್ನು ಒದಗಿಸುತ್ತಿತ್ತು. ೧೯೧೮ ಡಿಸೆಂಬರ್‌ನಲ್ಲಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಭಾರತದಲ್ಲಿ ಸ್ಥಾಪನೆಯಾಗುತ್ತದೆ. ಇದು ನ್ಯಾಶನಲ್ ಮಿಶನರಿ ಕೌನ್ಸಿಲ್‌ನ ಮಾರ್ಗದರ್ಶನದಲ್ಲಿ ಹಾಗೂ ಮದ್ರಾಸಿನ ಅಂಗ್ಲೀಕನ್ ಬಿಷಪ್‌ರಾಗಿದ್ದ ಹೆನ್ರಿ ವೈಟ್‌ಹೆಡ್ಡ್ (Henry Whitehead) ಅಧ್ಯಕ್ಷರಾಗಿರುವ (Chairman) ಮತ್ತು ವೆಸ್ಲಿಯನ್ ಮೆಥೊಡಿಸ್ಟ್ ಮಿಶನರಿಯಾದ ಲೈಥ್‌ರವರು ಕಾರ್ಯದರ್ಶಿಯಾದ ಒಂದು ಕಮಿಟಿಯ ಮಾರ್ಗದರ್ಶನ ಮತ್ತು ನಿಯಂತ್ರಣದಲ್ಲಿ ತನ್ನ ಕಾರ್ಯವನ್ನು ಮುಂದುವರಿಸುತ್ತದೆ.[೭]

ಯುದ್ಧದ ನಿರ್ಬಂಧದಿಂದಾಗಿ ಉಂಟಾಗಿದ್ದ ಹಲವು ಸಮಸ್ಯೆಗಳು, ಅವ್ಯವಸ್ಥೆಗಳು ಅಂತ್ಯವಾಗಿ ಈ ಹೊಸ ಯೋಜನೆಯ ಪ್ರಕಾರ ಹೊಸ ವ್ಯವಸ್ಥೆಯನ್ನು ಮಿಶನ್‌ನ ಮುಂದುವರಿಕೆಗೆ ಹುಟ್ಟು ಹಾಕಲಾಗುತ್ತದೆ. ಆದರೆ ಈ ಯೋಜನೆಯು ಮಿಶನ್‌ನಲ್ಲಿ ಅಶಾಂತಿ, ಅವ್ಯವಸ್ಥೆ ಬುಗಿಲೇಳುವುದಕ್ಕೆ ಕಾರಣವಾಗುತ್ತದೆ. ಈ ಅಶಾಂತಿ ಸ್ಥಳೀಯವಾಗಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಹಾಗೂ ಸ್ಥಳೀಯ ಕ್ರೈಸ್ತರ ಮಧ್ಯೆ ಹುಟ್ಟಿಕೊಂಡರೆ ಸ್ವಿಸ್‌ನಲ್ಲಿ ಲೌಸನ್ನೆಯವರ ಹಾಗೂ ಮೂಲ ಬಾಸೆಲ್ ಮಿಶನಿನ ಬೆಂಬಲಿಗರ ಮಧ್ಯೆ ಆರಂಭವಾಗುತ್ತದೆ. ಈ ಹೊಸ ವ್ಯವಸ್ಥೆಯು ಈವರೆಗೂ ಬಾಸೆಲ್ ಮಿಶನ್ ಕಂಡು ಕೇಳರಿಯದ ಬಿಕ್ಕಟ್ಟನ್ನು ಉಂಟುಮಾಡುತ್ತದೆ. ಈ ಹೊಸ ಯೋಜನೆಗಳು ಶಾಂತಿಯನ್ನು ಅಶಾಂತಿಯಾಗಿ ಹಾಗೂ ವ್ಯವಸ್ಥೆಯನ್ನು ಅವ್ಯವಸ್ಥೆಯಾಗಿ ಮಾರ್ಪಡಿಸುತ್ತವೆ. ಮತ್ತೊಂದೆಡೆ ಈ ಎರಡೂ ಪಕ್ಷಗಳ ನಡುವೆ ಶೀತಲ ಸಮರ ಆರಂಭವಾಗುತ್ತದೆ. ಹೀಗೆ ಹೊಸ ಶಿಶುವಾದ ಕೆನರೀಸ್ ಇವ್ಯಾಂಜಲಿಕಲ್ ಮಿಶನ್, ಭಾರತ ಹಾಗೂ ಸ್ವಿಸ್‌ನಲ್ಲಿ ಭಾರೀ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸ್ವಿಸ್‌ನಲ್ಲಿ ಕೆಲವು ಜರ್ಮನ್ ಭಾಷಾ ಸ್ವಿಸ್‌ರು ಭಾರತದಲ್ಲಿ ಹುಟ್ಟು ಹಾಕಿದ ಹೊಸದಾದ ಹಾಗೂ ಸ್ವತಂತ್ರವಾದ ಸ್ವಿಸ್ ಮಿಶನ್‌ಗೆ ಭಾರೀ ವಿರೋಧವನ್ನು ವ್ಯಕ್ತಪಡಿಸುತ್ತಾರೆ.

ಸ್ವಿಜರ್‌ಲ್ಯಾಂಡಿನಲ್ಲಿಯೂ ಮಿಶನಿನ ಪರಿಸ್ಥಿತಿ ಮೊದಲಿಗಿಂತ ಭಿನ್ನವಾಗಿರುತ್ತದೆ. ಸ್ವಿಸ್‌ನ ಪ್ರೆಂಚ್ ಭಾಷಾ ಸದಸ್ಯರು ಕೆನರೀಸ್ ಇವ್ಯಾಂಜಲಿಕಲ್ ಮಿಶನನ್ನು ಬೆಂಬಲಿಸಿದರೆ, ಸ್ವಿಸ್‌ನ ಜರ್ಮನ್ ಭಾಷಾ ಕೆಲವು ಸದಸ್ಯರು ಕೆನರೀಸ್ ಇವ್ಯಾಂಜಲಿಕಲ್ ಮಿಶನನ್ನು ಬೆಂಬಲಿಸಿದ್ದರು. ಮತ್ತೊಂದೆಡೆ ಬಾಸೆಲ್ ಮಿಶನ್ ಜರ್ಮನಿಯಲ್ಲಿನ ತನ್ನ ಬೆಂಬಲಿಗರೊಂದಿಗೆ ಪ್ರಬಲ ಸಂಪರ್ಕದಲ್ಲಿರುತ್ತದೆ. ಬಾಸೆಲ್ ಮಿಶನಿನ ಹಳೆ ಮಿಶನರಿಗಳು, ಬಾಸೆಲ್ ಮಿಶನಿನ ಜರ್ಮನ್ ಬೆಂಬಲಿಗರು ಹಾಗೂ ಕೆಲವು ಜರ್ಮನ್ ಭಾಷಾ ಸ್ವಿಸರು ಬಾಸೆಲ್ ಮಿಶನಿನ ಬೆಂಬಲಿಗರಾಗಿದ್ದು, ಕೆನರೀಸ್ ಇವ್ಯಾಂಜಲಿಕಲ್ ಮಿಶನನ್ನು ಪ್ರಬಲವಾಗಿ ವಿರೋಧಿಸಿದ್ದರು. ಈ ರೀತಿ ಯೂರೋಪಿನಲ್ಲೂ ಬಾಸೆಲ್ ಮಿಶನ್ ಹಾಗೂ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಸಂಬಂಧ ಅನ್ಯೋನ್ಯವಾಗಿರಲಿಲ್ಲ. ಈ ಭಿನ್ನಾಭಿಪ್ರಾಯಗಳ ಹೊರತು ಈ ಎರಡೂ ಮಿಶನುಗಳು ಸಹಕಾರವನ್ನು ಇಟ್ಟುಕೊಳ್ಳಲು ಪ್ರಯತ್ನಪಡುತ್ತವೆ.

೧೯೨೫ರ ಕಾಲಾವಧಿಯಲ್ಲಿ ಕಾಮನ್‌ವೆಲ್ತ್ ಟ್ರಸ್ಟ್‌ನಿಂದ ಬರುತ್ತಿದ್ದ ಹಣಕಾಸಿನ ನೆರವು ನಿಂತುಹೋಗುತ್ತದೆ. ಇದರಿಂದ ಕೆಲವು ಶಾಲೆಗಳು ಮುಚ್ಚಲ್ಪಡುತ್ತವೆ. ಮಿಶನರಿಗಳ, ಉಪಾಧ್ಯಾಯರ ಹಾಗೂ ಇತರ ನೌಕರರ ಸಂಬಳ ಕಡಿಮೆಯಾಗುತ್ತದೆ. ಹೀಗೆ .ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಆರಂಭದಿಂದ ಅಂತ್ಯದವರೆಗೂ ಅದು ಹಲವು ಸಮಸ್ಯೆಗಳಿಂದ ಬಳಲುತ್ತ, ರೋಗಗ್ರಸ್ಥವಾಗಿರುತ್ತದೆ. ಹೊಸ ಸಂವಿಧಾನ ಹಾಗೂ ಸಭಾ ನಿಯಮಗಳು ಮಿಶನನ್ನು ಛಿದ್ರಗೊಳಿಸುತ್ತವೆ. ಹೀಗೆ ಆರಂಭದ ಕಾಲದಲ್ಲಿ ಒಳಗೊಳಗೆ ನಡೆಯುತ್ತಿದ್ದ ಶೀತಲ ಸಮರವು ತದನಂತರದಲ್ಲಿ ಬೀದಿಗೆ

ಬಂದು ಕೋರ್ಟ್ ಮೆಟ್ಟಿಲೇರುತ್ತದೆ. ಕೊನೆಗೆ ಈ ಪರಿಸ್ಥಿತಿಯು ಸ್ಥಳೀಯ ಕ್ರೈಸ್ತರು ಪುನಃ ಬಾಸೆಲ್ ಮಿಶನರಿಗಳಿಗಾಗಿ ಎದುರು ನೋಡುವಂತೆ ಮಾಡುತ್ತದೆ.

ಉಪಸಂಹಾರ

ಭಾರತವು ಬ್ರಿಟಿಷ್ ವಸಾಹತುವಾಗಿದ್ದು, ಬಾಸೆಲ್ ಮಿಶನ್‌ನಲ್ಲಿ ಕಾರ್ಯಾಚರಿಸುತ್ತಿದ್ದ ಬಹುಪಾಲು ಮಿಶನರಿಗಳು ಜರ್ಮನರಾಗಿದ್ದರು. ಆದುದರಿಂದ ಮಿಶನಿನ ಎಲ್ಲಾ ರೀತಿಯ ಕಾರ್ಯಾಚರಣೆಯ ಹಾಗೂ ಮಿಶನರಿಗಳ ಮೇಲೆ ನಿರ್ಬಂಧವನ್ನು ವಿಧಿಸಿದ ಬ್ರಿಟಿಷ್ ವಸಾಹತು ಸರಕಾರ, ಅದರ ಸಂಪೂರ್ಣ ಕಾರ್ಯಾಚರಣೆಯ ಮೇಲೆ ತನ್ನ ನಿಯಂತ್ರಣವನ್ನು ಸಾಧಿಸಿಕೊಳ್ಳುತ್ತದೆ. ಇದು ಬಾಸೆಲ್ ಮಿಶನ್ ಹುಟ್ಟುಹಾಕಿದ್ದ ವಿಸ್ತ್ರತವಾದ ಹಲವು ವ್ಯವಸ್ಥೆಗಳ ಪತನಕ್ಕೆ ಕಾರಣವಾಗುತ್ತದೆ. ೧೯೨೭ರ ಜುಲೈ ೧ರಂದು ಕೆನರೀಸ್ ಇವ್ಯಾಂಜಲಿಕಲ್ ಮಿಶನ್, ದಕ್ಷಿಣ ಕೆನರಾ ಮತ್ತು ದಕ್ಷಿಣ ಮರಾಠಗಳ ಜವಾಬ್ದಾರಿಯನ್ನು ಬಾಸೆಲ್ ಮಿಶನಿಗೆ ವಹಿಸಿ ಕೊಡುತ್ತದೆ. ೧೯೨೭ರಲ್ಲಿ ತನ್ನ ಹಳೆ ಮಿಶನ್ ಠಾಣ್ಯಗಳಲ್ಲಿ ಕಾರ್ಯವನ್ನು ಮರು ಆರಂಭಿಸಿದ ಬಾಸೆಲ್ ಮಿಶನರಿಗಳು ಅದು ಇಲ್ಲಿ ಹುಟ್ಟು ಹಾಕಿದ ಚರ್ಚ್, ಇತರ ಸಂಘಟನೆಗಳು ಹಾಗೂ ಮಿಶನನ್ನು ಉತ್ತಮವಾಗಿ ನಿರ್ವಹಿಸುತ್ತಾರೆ. ಆದರೆ ೧೯೨೭ರ ನಂತರ ಬಾಸೆಲ್ ಮಿಶನ್ ಕಾರ್ಯವಾಗಲೀ, ಠಾಣ್ಯಗಳಾಲೀ ವಿಸ್ತರಣೆಯಾಗುವುದಿಲ್ಲ. ಮತ್ತೊಂದೆಡೆ ಬ್ರಿಟಿಷ್ ಸರಕಾರ ಪ್ರಥಮ ಜಾಗತಿಕ ಯುದ್ಧದ ಸಂದರ್ಭದಲ್ಲಿ ಅದು ಬಾಸೆಲ್ ಮಿಶನ್ ಮೇಲೆ ಹಾಕಿದ್ದ ನಿರ್ಬಂಧಗಳನ್ನು ಹಿಂತೆಗೆದುಕೊಂಡಿರುತ್ತದೆ. ಆದರೆ ಈ ರೀತಿಯ ಬಾಸೆಲ್ ಮಿಶನನ ಮುಂದುವರಿಕೆಯು ದೀರ್ಘಕಾಲಿಕವಾಗದೇ, ೧೯೩೯ರಲ್ಲಿ ಎರಡನೇ ಜಾಗತಿಕ ಯುದ್ಧ ಆರಂಭಗೊಳ್ಳುವುದರೊಂದಿಗೆ ಅದು ಅಂತ್ಯಗೊಳ್ಳುತ್ತದೆ. ಈ ೧೨ ವರುಷಗಳ ಕಾಲಾವಧಿಯಲ್ಲಿ ಬಾಸೆಲ್ ಮಿಶನರಿಗಳು ಮಿಶನ್ ಮೇಲೆ ತಮ್ಮ ನಿಯಂತ್ರಣವನ್ನು ಮುಂದುವರಿಸಿದರೂ, ಸ್ಥಳೀಯ ಬಾಸೆಲ್ ಮಿಶನ್ ಕ್ರೈಸ್ತರಿಗೆ ಕೆಲವು ಜವಾಬ್ದಾರಿಗಳನ್ನು ವಹಿಸುತ್ತಾರೆ. ಚರ್ಚ್ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವನ್ನು ಬಾಸೆಲ್ ಮಿಶನ್ ಕ್ರೈಸ್ತರು ನಿರ್ವಹಿಸಲು ಆರಂಭಿಸುತ್ತಾರೆ. ಆದರೆ ಮಿಶನರಿಗಳ ಮಾರ್ಗದರ್ಶನ ಹಾಗೂ ಅಸ್ತಿತ್ವ ಮುಂದುವರಿಯುತ್ತದೆ. ಬಾಸೆಲ್ ಮಿಶನರಿಗಳು ಮಲಬಾರ್, ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠ ಮಿಶನ್ ಪ್ರದೇಶಗಳನ್ನು ಸೇರಿಸಿ ಪ್ರಬಲವಾಗಿ ಬಾಸೆಲ್ ಮಿಶನ್ ಪ್ರದೇಶಗಳನ್ನು ಸಂಘಟಿಸುವ ಪ್ರಯತ್ನಗಳು ಈ ಕಾಲಾವಧಿಯಲ್ಲಿ ನಡೆಯುತ್ತವೆ. ೧೯೩೪ರಲ್ಲಿ 'ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ'ವನ್ನು ಸ್ಥಾಪಿಸಿ ಎಲ್ಲಾ ಬಾಸೆಲ್ ಮಿಶನ್ ಚರ್ಚ್‌ಗಳನ್ನು ಒಂದಾಗಿ ಮುಂದುವರಿಸುವ ಯೋಜನೆಯು ಜಾರಿಯಾಗುತ್ತದೆ. ಹೀಗೆ ಈ ಕಾಲಾವಧಿಯಲ್ಲಿ ಬಾಸೆಲ್ ಮಿಶನರಿಗಳು ನಿಧಾನವಾಗಿ ಸ್ಥಳೀಯ ಕ್ರೈಸ್ತರಿಗೆ ಅಧಿಕಾರವನ್ನು ನೀಡುವ ಪ್ರಯತ್ನಗಳನ್ನು ಮುಂದುವರಿಸುತ್ತಾರೆ ಹಾಗೂ ಇದು ಮುಂದೆ ಬಾಸೆಲ್ ಮಿಶನ್ ಚರ್ಚುಗಳು ಸ್ವತಂತ್ರವಾಗಿ ಮುಂದುವರಿಯಲು ಸಾಧ್ಯವಾಗಬಹುದು ಎಂಬುದು ಮಿಶನಿನ ಅಭಿಪ್ರಾಯವಾಗಿತ್ತು.

ಸಂದರ್ಭ ಸೂಚಿ

೧. ದಿ 48th ರಿಪೋರ್ಟ್ ಆಫ್ ದಿ ಬಾಸೆಲ್ ಜರ್ಮನ್ ಇವಾಂಜಲಿಕಲ್ ಮಿಶನ್ ಇನ್ ಸೌತ್ – ವೆಸ್ಟರ್ನ್ ಇಂಡಿಯಾ ಫಾರ್ ದಿ ಇಯರ್ ೧೮೮೭, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು, ೧೮೮೮, ಪುಟ ೭.

"Deserves to be made of the jubilee of the ascension to the throne of the Unithed Kingdom of our most Gracious Sovereign Lady Queen Victoria, Empress of this land, under whose gentle and firm sway we, who are of the some precious faith, although of a different nationality, have been permitted to enjoy preaching the Gospel without let or hindrance, as also protection and encouragement in our arduous duties, for which we thank our Heavenly Father. The congregations whom we were permitted to collect, conscious of the deep dept of gratitude they owe to God for such a just rule and govt., as truly loyal subjects gave vent to their feelings by celebrating with us special services of thanks giving on either the 16th or 17th of February as the occasion was and by contributing without stint or grudge heartily, according to their limited abilities towards the different Jubilee funds that were collected."

೨. ಕ್ರಿಸ್ಟೋಫರ್ ಎಲ್. ಪುರ್ಟಾಡೊ, ಚರ್ಚ್ ಯೂನಿಯನ್ ಮೂವ್‌ಮೆಂಟ್ ಇನ್ ದಿ ಪೋರ್‌ಮರ್ ಬಾಸೆಲ್ ಮಿಶನ್ ಏರಿಯಾಸ್, ಎ ಹಿಸ್ಟೋರಿಕಲ್ ಕ್ರಿಟಿಕಲ್ ರಿವ್ಯೂವ್, ಫೆಬ್ರವರಿ, ೨೦೦೯, ಬಲ್ಮಠ, ಮಂಗಳೂರು. ಪುಟ ೩.

೩. ದಿ ಬಾಸೆಲ್ ಮಿಶನ್, ದಿ ಹರ್ವೆಸ್ಟ್ ಫಿಲ್ಡ್, ಸಂಪುಟ XXXVIII, ನವೆಂಬರ್, ೧೯೧೮, ನಂ. ೧೧, ಪುಟ ೪೧೦.

೪. ಜಿ. ಓ. ನಂ. ೭೩೬, (ಮಿಸಲೇನಿಯಸ್), (ಕಾನ್ಫಿಡೆನ್ಶ್ಯಲ್), ಪಬ್ಲಿಕ್ ಡಿಪಾರ್ಟ್‌ಮೆಂಟ್, ಗವರ್ನ್‌ಮೆಂಟ್ ಆಫ್ ಮೆಡ್ರಾಸ್, ಮೆಡ್ರಾಸ್, ೧೨ನೇ ಸೆಪ್ಟೆಂಬರ್, ೧೯೨೨, ಪುಟ ೧೪.

೫. ದಿ ಬಾಸೆಲ್ ಮಿಶನ್, ದಿ ಹರ್ವೆಸ್ಟ್ ಫಿಲ್ಡ್, ಪೂರ್ವೋಕ್ತ, ಪುಟ ೪೧೦–೪೧೧.

೬. ದಿ ಬಾಸೆಲ್ ಮಿಶನ್, ದಿ ಹರ್ವೆಸ್ಟ್ ಫಿಲ್ಡ್, ಸಂಪುಟ XXXVIII, ನಂ.೧೧, ನವೆಂಬರ್, ೧೯೧೮, ಪುಟ ೪೧೧.

೭. ನೊರ್ಮನ್ ಸಿ. ಸಾರ್ಜಂಟ್, ಫ್ರಂಮ್ ಮಿಶನ್ಸ್ ಟು ಚರ್ಚ್ ಇನ್ ಕರ್ನಾಟಕ, ದಿ ಕ್ರಿಶ್ಚಿಯನ್ ಲಿಟರೇಚರ್ ಸೊಸೈಟಿ, ಮೆಡ್ರಾಸ್, ೧೯೮೭, ಪುಟ ೧೧೬.-೧೧೪.

೮. My Sincere thanks to Dr. Denis Fernandes, Associate Professor of History, St. Aloysius College, Mangalore and my Ph.D guide for his valuable support and guidance.

ಪರಾಮರ್ಶನ ಗ್ರಂಥಗಳು

೧. ಅನ್ಯುವಲ್ ರಿಪೋರ್ಟ್ಸ್ ಆಫ್ ದಿ ಬಾಸೆಲ್ ಜರ್ಮನ್ ಇವಾಂಜಲಿಕಲ್ ಮಿಶನ್ ಇನ್ ಸೌತ್ – ವೆಸ್ಟರ್ನ್ ಇಂಡಿಯಾ ಫಾರ್ ದ ಇಯರ್ಸ್ ಫ್ರಮ್ ೧೮೪೦ – ೧೯೧೩, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು.

೨. ನ್ಯೂಸ್ ಪೇಪರ್ ರಿಪೋರ್ಟ್ ಫಾರ್ ದಿ ಇಯರ್ಸ್ ೧೯೦೧ ಟು ೧೯೪೫, ತಮಿಳುನಾಡು ಸ್ಟೇಟ್ ಪತ್ರಾಗಾರ, ಮದ್ರಾಸ್.

೩. ಪ್ರೊಸೀಡಿಂಗ್ಸ್ ಆಫ್ ದಿ ಗವರ್ನಮೆಂಟ್ ಆಫ್ ಪೋರ್ಟ್ ಸೈಂಟ್ ಜೋರ್ಜ್ ಇನ್ ದಿ ಎಕ್ಲೇಜ್ವಿಯಾಸ್ಟಿಕಲ್ ಡಿಪಾರ್ಟ್‌ಮೆಂಟ್ ಫಾರ್ ದಿ ಇಯರ್ಸ್ ೧೯೦೧–೧೯೪೦, ತಮಿಳುನಾಡು ಸ್ಟೇಟ್ ಪತ್ರಾಗಾರ, ಮದ್ರಾಸ್.

೪. ಜಿ. ಓ. ನಂ. (ಗವರ್ನಮೆಂಟ್ ಓರ್ಡರ್) ೧೦೮೬, ಮಿಸಲೇನಿಯಸ್, ಪಬ್ಲಿಕ್ ಡಿಪಾರ್ಟ್‌ಮೆಂಟ್, ಗವರ್ನಮೆಂಟ್ ಆಫ್ ಮೆಡ್ರಾಸ್, ಮೆಡ್ರಾಸ್, ೧೯೧೪.

೫. ಜಿ. ಓ. ನಂ. ೧೮೩೪, ಮಿಸಲೇನಿಯಸ್, ಪಬ್ಲಿಕ್ ಡಿಪಾರ್ಟ್‌ಮೆಂಟ್, ಗವರ್ನಮೆಂಟ್ ಆಫ್ ಮೆಡ್ರಾಸ್, ಮೆಡ್ರಾಸ್, ೧೯೧೬.

೬. ಜಿ. ಓ. ನಂ. ೧೮೪, ಪ್ರೆಸ್, ಎನ್.ಪಿ., ಪಬ್ಲಿಕ್ ಡಿಪಾರ್ಟ್‌ಮೆಂಟ್, ಗವರ್ನಮೆಂಟ್ ಆಫ್ ಮೆಡ್ರಾಸ್, ಮೆಡ್ರಾಸ್, ೧೯೧೭.

೭. ಜಿ. ಓ. ನಂ. ೧೦೬೭ – ೬೮, ಪ್ರೆಸ್, ಎನ್.ಪಿ., ಪಬ್ಲಿಕ್ ಡಿಪಾರ್ಟ್‌ಮೆಂಟ್, ಗವರ್ನಮೆಂಟ್ ಆಫ್ ಮೆಡ್ರಾಸ್, ಮೆಡ್ರಾಸ್, ೧೯೧೮.

೮. ಬಾಸೆಲ್ ಇವ್ಯಾಂಜಲಿಕಲ್ ಮಿಶನ್ ಇನ್ ಇಂಡಿಯಾ: ಕಾನ್ಸ್ಟಿಟ್ಯೂಶನ್ ಆ್ಯಂಡ್ ರೂಲ್ಸ್ ಆಫ್ ದಿ ಮಿಶನ್ ಆ್ಯಂಡ್ ದಿ ಚರ್ಚ್ ಇನ್ ದಿ ಡಿಸ್ಟ್ರಿಕ್ಟ್ ಆಫ್ ಸೌತ್ ಕೆನರಾ, ಸೌತ್ ಮರಾಠ ಆ್ಯಂಡ್ ಮಲಬಾರ್, ಮಂಗಳೂರು, ೧೯೩೧.

೯. ಬಾಸೆಲ್ ಮಿಶನ್ ಸಭಾ ಕ್ರಮ, ಮಂಗಳೂರು, ೧೯೦೩.

೧೦. ರೂಲ್ಸ್ ಫಾರ್ ದಿ ಜರ್ಮನ್ ಇವ್ಯಾಂಜಲಿಕಲ್ ಮಿಶನ್ ಚರ್ಚ್ ಇನ್ ಸೌತ್ ವೆಸ್ಟರ್ನ್ ಇಂಡಿಯಾ, ಮಂಗಳೂರು, ೧೯೦೩.

೧೧. ಜಯಕುಮಾರ್, ಡಿ. ಅರ್ಥೂರ್, 'ಮೆಮೊರ್ಯಾಂಡಮ್ ಆಫ್ ೧೯೧೯ ಆ್ಯಂಡ್ ದಿ ನ್ಯಾಶನಲ್ ಮೂವ್‌ಮೆಂಟ್, ವಿಥ್ ಸ್ಪೆಶಲ್ ರೆಫರೆನ್ಸ್ ಟು ಪ್ರೊಟೆಸ್ಟೆಂಟ್ ಕ್ರಿಶ್ಚಿಯನ್ಸ್ ಇನ್ ತಮಿಳುನಾಡು ೧೯೧೯ – ೩೯', ಪ್ರಕಟಿತ ಸಂಪ್ರಬಂಧ, ಸೆರಾಂಪುರ ಕಾಲೇಜು, ಕಲ್ಕತ್ತ, ೧೯೮೮.

೧೨. ಪುರ್ತಾಡೋ, ಸಿ.ಎಲ್., 'ಎ ಬ್ರೀಫ್ ಹಿಸ್ಟರಿ ಆಫ್ ದಿ ವರ್ಕ್ ಆಫ್ ದಿ ಬಾಸೆಲ್ ಮಿಶನ್ ಇನ್ ಕೂರ್ಗ್ ಫ್ರಮ್ ೧೮೫೩ ಟು ೧೯೧೪ ವಿಥ್ ಸ್ಪೆಶಲ್ ರೆಫರೆನ್ಸ್ ಟು ದಿ ಮೆಥಡ್ಸ್ ಆಫ್ ಇವ್ಯಾಂಜಲಿಸಮ್', ಅಪ್ರಕಟಿತ ಸಂಪ್ರಬಂಧ, ಯುನೈಟೆಡ್ ತಿಯೋಲಾಜಿಕಲ್ ಕಾಲೇಜು, ಬೆಂಗಳೂರು, ೧೯೬೪.

೧೩. ಪುರ್ತಾಡೋ, ಎಸ್. ಆರ್., 'ಚರ್ಚ್ ರಿವೈವಲ್ – ಎ ಸ್ಟಡಿ ಬೇಸ್‌ಡ್ ಆನ್ ದಿ ಹಿಸ್ಟರಿ ಆ್ಯಂಡ್ ಎಕ್ಸ್‌ಪೀರಿಯನ್ಸ್ ಆಫ್ ದಿ ಬಾಸೆಲ್ ಮಿಶನ್ ಚರ್ಚ್ ಇನ್ ಸೌತ್ ಕೆನರಾ', ಅಪ್ರಕಟಿತ ಸಂಪ್ರಬಂಧ, ಯುನೈಟೆಡ್ ತಿಯೋಲಾಜಿಕಲ್ ಕಾಲೇಜು, ಬೆಂಗಳೂರು, ೧೯೮೮.

೧೪. ಫೆರ್ನಾಂಡಿಸ್, ಡೆನಿಸ್. ಡಾ., 'ದಿ ತುಳು ವರ್ಲ್ಡ್ ಇನ್ ಯುರೋಪಿಯನ್ ರೈಟಿಂಗ್ಸ್', ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ, ಮಂಗಳೂರು ವಿಶ್ವವಿದ್ಯಾನಲಯ, ಮಂಗಳೂರು, ೨೦೦೬.

೧೫. ಸ್ಪೇನ್‌ಜ್ಞಿಲ್, ಕ್ಯಾಥರಿನ್, 'ದಿ ಬಾಸೆಲ್ ಮಿಶನ್ ಇಂಡಸ್ಟ್ರೀಸ್ ಇನ್ ಇಂಡಿಯಾ ೧೮೩೪ – ೧೮೮೪ ಇಮ್‌ಪ್ರುವೈಸೇಶನ್ ಓರ್ ಪೋಲಿಸಿ?', ಅಪ್ರಕಟಿತ ಸಂಪ್ರಬಂಧ, ಲಂಡನ್ ವಿಶ್ವವಿದ್ಯಾನಿಲಯ, ೨೦೧೦.

೧೬. ಡಿ'ಸೋಜ, ಅಶೋಕ್ ರಾಕೇಶ್, 'ಇಪ್ಪತ್ತನೇ ಶತಮಾನದ ಕರ್ನಾಟಕದಲ್ಲಿ ಬಾಸೆಲ್ ಮಿಶನ್' ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೧೪.

೧೭. ಇಂಡಿಯನ್ ಚರ್ಚ್ ಹಿಸ್ಟರಿ ರಿವ್ಯೂ, ೧೯೬೮–೧೯೯೪, ೨೦೦೩, ೨೦೧೨, ದಿ ಚರ್ಚ್ ಹಿಸ್ಟರಿ ಎಸೋಸಿಯೇಶನ್ ಆಫ್ ಇಂಡಿಯಾ, ಬೆಂಗಳೂರು.

೧೮. ಕ್ರೈಸ್ತ ಹಿತವಾದಿ, (ಮಾಸ ಪತ್ರಿಕೆ), ಫೆಡ್ರಿಕ್ ಜತ್ತನ್ನ (ಸಂಪಾದಕ), ೧೯೨೪–೧೯೩೧, ಮಂಗಳೂರು.

೧೯. ದಿ ಹರ್ವೆಸ್ಟ್ ಫಿಲ್ಡ್, ಎ ಮ್ಯಾಗಜೀನ್ ಡಿವೋಟೆಡ್ ಟು ದಿ ಇಂಟ್ರೆಸ್ಟ್ ಆಫ್ ಮಿಶನರಿ ವರ್ಕ್ ಇನ್ ದಿ ಇಂಡಿಯನ್ ಎಂಫಾಯರ್, ೧೮೬೩ –೧೮೬೫, ೧೮೮೦– ೧೮೯೩, ೧೯೦೯–೧೯೨೪, ವೆಸ್ಲಿಯನ್ ಮಿಶನ್ ಪ್ರೆಸ್, ಮೈಸೂರು.

೨೦. ಸತ್ಯವ್ರತ, (ಮಾಸ ಪತ್ರಿಕೆ), ಎಸ್.ಇ.ಐಮನ್/ಜೋರ್ಜ್ ಹರ್ಬರ್ಟ್ (ಸಂಪಾದಕ) ೧೯೨೫–೧೯೨೮, ಮಂಗಳೂರು.

೨೧. ಕವಶೀಮ, ಕೋಜಿ, ಮಿಶನರೀಸ್ ಆ್ಯಂಡ್ ಎ ಹಿಂದೂ ಸ್ಟೇಟ್ ಟ್ರಾವಂಕೂರ್ ೧೮೫೮–೧೯೩೬, ಓಕ್ಸ್‌ಫೋರ್ಡ್ ಯುನಿವರ್ಸಿಟಿ ಪ್ರೆಸ್, ದೆಹಲಿ, ೧೯೯೮.

೨೨. ಕೊಯಿಮನ್, ಥಿಕ್, ಕನ್‌ವರ್‌ಶನ್ ಆ್ಯಂಡ್ ಸೋಶಿಯಲ್ ಇಕ್ವಾಲಿಟಿ ಇನ್ ಇಂಡಿಯ: ಲಂಡನ್ ಮಿಶನರಿ ಸೊಸೈಟಿ ಇನ್ ಸೌತ್ ಟ್ರಾವಂಕೂರ್ ಇನ್ ದಿ 19th ಸೆಂಚುರಿ, ಹೊಸ ದೆಹಲಿ, ೧೯೮೯.

೨೩. ಡಂಕರ್, ವಿಲಿಯಂ ಜೆ., ಪ್ರಾಫಿಟ್ ಫಾರ್ ದಿ ಲಾರ್ಡ್, ವಿಲಿಯಂ ಬಿ. ಇರ್‌ಡಮನ್ಸ್ ಪಬ್ಲಿಶಿಂಗ್ ಕಂಪೆನಿ, ಮಿಚ್ಚಿಗನ್, ೧೯೭೧.

೨೪. ರೋಸೆಲ್, ಜ್ಯಾಕ್ಸ್, ಟ್ರ್ಯಾಕಿಂಗ್ ಕ್ರಿಶ್ಚಿಯಾನಿಟಿ ವರ್ಲ್ಡ್‌ವೈಡ್, (ಜೀವನ ಚರಿತೆ–ಫ್ರೆಂಚ್‌ನಿಂದ ಇಂಗ್ಲೀಷಿಗೆ ಭಾಷಾಂತರ–ಜೋನ್ ಎಮ್.ಲೈಲ್), ಏಷ್ಯಾನ್ ಟ್ರೇಡಿಂಗ್ ಕಾರ್ಪೊರೇಶನ್, ಬೆಂಗಳೂರು, ೨೦೧೦.

೨೫. ಶಿರಿ, ಗೋಡ್ವಿನ್, (ಸಂಪಾಧಿತ), ಹೋಲಿನೆಸ್ ಇನ್ ಕ್ರೈಸ್ಟ್, ದಿ ಕರ್ನಾಟಕ ತಿಯೋಲಾಜಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಮಂಗಳೂರು, ೧೯೮೫.

೨೬. ಸಾರ್ಜೆಂಟ್, ಎನ್. ಸಿ., ಫ್ರಮ್ ಮಿಶನ್ಸ್ ಟು ಚರ್ಚ್ ಇನ್ ಕರ್ನಾಟಕ, ದಿ ಕ್ರಿಶ್ಚಿಯನ್ ಲಿಟರೇಚರ್ ಸೊಸೈಟಿ, ಮದ್ರಾಸ್, ೧೯೮೭.

೧೦೬

ಕುಕನೂರಿನ ವಿದ್ಯಾನಂದ ಗುರುಕುಲ

ಡಾ. ಫಕೀರಪ್ಪ ವಜ್ರಬಂಡಿ*

ಹೈದ್ರಾಬಾದ್ ಕರ್ನಾಟಕದ ರಾಷ್ಟ್ರೀಯ ಇತಿಹಾಸವುಳ್ಳ ಕೆಲವೇ ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಕುಕನೂರು ಗ್ರಾಮದ ವಿದ್ಯಾನಂದ ಗುರುಕುಲ ಶಿಕ್ಷಣ ಸಂಸ್ಥೆಯೂ ಒಂದು. ಇದು ಹೈದ್ರಾಬಾದ್ ನಿಜಾಮನಿಂದ ಸಾಲರಜಂಗ್‌ರಿಗೆ ಉಂಬಳಿಯಾಗಿ ಕೊಡಮಾಡಿದ ಆಡಳಿತದ ಜಿಲ್ಲೆಯಲ್ಲೊಂದು.

ರಾಘವೇಂದ್ರರಾವ್ ಭೀಮಸೇನ್‌ರಾವ್ ದೇಸಾಯಿಯವರು ಮೂಲತಃ ಕುಕನೂರು ಸಮೀಪದ ಬೆಣಕಲ್ ಗ್ರಾಮದವರು. ಇವರ ತಂದೆಗೆ ಐವರು ಪುತ್ರರು. ಅವರಲ್ಲೊಬ್ಬರಾದ ಸಂಜೀವರಾಯ ಕಲಬುರಗಿಯಲ್ಲಿ ವಕಾಲತ್ತು ಉದ್ಯೋಗದಲ್ಲಿದ್ದರು. ರಾಘವೇಂದ್ರರಾವ್ ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿಯೇ ಪೂರೈಸಿದರು. ಪ್ರಾಚೀನಕಾಲದ ಬೆಣ್ಣೆಕಲ್ಲು ಈಗಿನ ಬೆಣಕಲ್ಲು. ಇದು ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಒಂದು ಸಣ್ಣ ಹಳ್ಳಿ. ಇಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಸಾಧ್ಯವಿಲ್ಲವೆಂದು ತಿಳಿದ ಕುಟುಂಬದ ಹಿರಿಯರು ಅಣ್ಣ ಸಂಜೀವರಾಯನೊಂದಿಗೆ ಕಳುಹಿಸಿಕೊಟ್ಟರು. ಕಲಬುರ್ಗಿಯ ನೂತನ ವಿದ್ಯಾಲಯದಲ್ಲಿ ರಾಘವೇಂದ್ರರಾವ್ ಅವರು ಮಾಧ್ಯಮಿಕ ಶಿಕ್ಷಣ ಪೂರೈಸಿ ಅಲ್ಲಿಯ ಸಹಕಾರಿ ಹೈಸ್ಕೂಲಿನಲ್ಲಿ ಪ್ರೌಢಶಿಕ್ಷಣ ಪೂರೈಸಿದರು. ಮುಂದಿನ ಉನ್ನತ ಶಿಕ್ಷಣಕ್ಕಾಗಿ ೧೯೧೬ ರಲ್ಲಿ ಹೈದ್ರಾಬಾದ್‌ನ ನಿಜಾಮ ಕಾಲೇಜ್ ಸೇರಿದರು. ಪ್ರೌಢಶಾಲೆಯಲ್ಲಿ ಓದುತ್ತಿದ್ದ ಸಂದರ್ಭದಲ್ಲಿ ಪರಿಚಯವಾಗಿದ್ದ ರಾಮಸ್ವಾಮಿ ಪುಣೆಯ ಫರ್ಗ್ಯೂಸನ್ ಕಾಲೇಜನಲ್ಲಿ ಬಿಎ ತರಗತಿಯಲ್ಲಿ ಓದುತ್ತಿದ್ದರು. ಈ ಸಂದರ್ಭದಲ್ಲಿ ದೇಶದಾದ್ಯಂತ ಗಾಂಧೀಜಿಯವರ ಅಸಹಕಾರ ಚಳವಳಿ ತೀವ್ರಗತಿಯಲ್ಲಿ ಹರಡಿತ್ತು. ಆಗ ರಾಘವೇಂದ್ರರಾವ್ ಮತ್ತು ರಾಮಸ್ವಾಮಿ ತಮ್ಮ ಕಾಲೇಜ್ ಶಿಕ್ಷಣ ತೊರೆದು ಕಲಬುರಗಿಗೆ ಬಂದರು. ಅಲ್ಲಿ ತಮ್ಮಂತೆ ದೇಶಕ್ಕಾಗಿ ತ್ಯಾಗ, ಸೇವೆಗಳಿಗೆ ಹಾಗೂ ಬಲಿದಾನಕ್ಕೆ ಸನ್ನದ್ಧರಾದ ಅನೇಕರು ಸೇರಿ ಈ ಹಿಂದೆ ತಾವು ಕಲಿತ ಶಾಲೆ ನೂತನ ವಿದ್ಯಾಲಯದಲ್ಲಿದ್ದ ಉರ್ದು ಮಾಧ್ಯಮದೊಂದಿಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡಬೇಕು ಎಂದು ಮನವಿ ಮಾಡಿಕೊಂಡರು. ಆದರೆ, ಅದರಿಂದ ಯಾವ ಪ್ರತಿಫಲ ದೊರೆಯದಿದ್ದಾಗ ತುಂಬಾ ನಿರಾಶರಾದರೂ ಧೃತಿಗೆಡಲಿಲ್ಲ.

ಮಾತೃ ಭಾಷಾ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವುದರಿಂದ ಜ್ಞಾನ ವಿಸ್ತಾರವಾಗುತ್ತದೆ. ತಿಳುವಳಿಕೆಯಿಂದ ರಾಷ್ಟ್ರಾಭಿಮಾನ ಸ್ವಾಭಾವಿಕವಾಗಿ ಹೆಚ್ಚುತ್ತದೆ ಎಂಬ ಗಾಂಧೀಜಿಯವರ ಅಭಿಪ್ರಾಯದಲ್ಲಿ ಸಂಪೂರ್ಣ ನಂಬುಗೆಯುಳ್ಳವರಾಗಿದ್ದರು. ತಮ್ಮ ಈ ಕನಸನ್ನು ನನಸಾಗಿಸಲು ರಾಘವೇಂದ್ರರಾವ್ ತಮ್ಮ ಗೆಳೆಯ ರಾಮಸ್ವಾಮಿಯವರನ್ನು ಕರೆದುಕೊಂಡು ತಮ್ಮ ಜಿಲ್ಲೆ ಕೊಪ್ಪಳಕ್ಕೆ ಬಂದರು. ಕೊಪ್ಪಳ ಈಗಾಗಲೇ ಐತಿಹಾಸಿಕ ಪರಂಪರೆಯುಳ್ಳ ಸ್ಥಳವಾಗಿತ್ತು. ಸ್ವಾತಂತ್ರ್ಯ ಚಳವಳಿಗಳು ಅಲ್ಲಿ ಆರಂಭಗೊಂಡಿದ್ದವು. ಈ ನೆಲದಲ್ಲಿ ಒಂದು ರಾಷ್ಟ್ರೀಯ ಶಾಲೆಯನ್ನು ಆರಂಭಿಸುವ ಇಚ್ಛೆ ಇವರದಾಗಿತ್ತು. ಕೊಪ್ಪಳ ಮತ್ತು ಸುತ್ತಮುತ್ತಲಿನ ಊರುಗಳಲ್ಲಿನ ಗಣ್ಯಮಾನ್ಯರನ್ನು ಕಂಡು ತಮ್ಮ ಮನದೊಳಗಿನ ಬಯಕೆಯನ್ನು ವ್ಯಕ್ತಪಡಿಸಿದರು. ಇವರು ಭೇಟಿಯಾದ ಪ್ರತಿಯೊಬ್ಬರೂ ಮುಕ್ತಕಂಠದಿಂದ ಈ ಎಳೆಯರ ಧ್ಯೇಯೋದ್ದೇಶಗಳನ್ನು ಕೇಳಿ ಮೆಚ್ಚಿಕೊಂಡರು. ಅಲ್ಲದೆ, ತಮ್ಮ ಕೈಲಾಗುವ ಸಹಾಯ ಸಹಕಾರ ನೀಡುವುದಾಗಿ ಭರವಸೆ ಕೊಡುತ್ತಾ ಧನಸಹಾಯ ಆಗಲೇ ನೀಡಿದರು. ತಮಗೆ ಪರಿಚಿತರಿರುವ ಗಣ್ಯರ ವಿಳಾಸ ತಿಳಿಸಿ ಅವರಿಗೆ ಪತ್ರಕೊಟ್ಟು ಕಳುಹಿಸಿದವರು ಕೆಲವರಿದ್ದರು. ಕೊಪ್ಪಳದ ಸುತ್ತಮುತ್ತಲಿನ ಊರುಗಳಿಗಲ್ಲದೆ ಕುಕನೂರಿನವರೆಗೂ ಈ ಸುದ್ದಿ ಹರಡಿತು ಹಾಗೂ ಅವರಿಂದಲೂ ಧನಸಹಾಯ ದೊರಕಿತು.

ಒಳ್ಳೆಯ ಕೆಲಸಕ್ಕೆ ನೂರು ವಿಘ್ನಗಳು ಎನ್ನುವಂತೆ ಆಗ ಕೊಪ್ಪಳ ಪ್ರದೇಶದಲ್ಲಿ ಕಾಲರಾ ರೋಗ ವಿಪರೀತವಾಗಿತ್ತು. ಇದನ್ನು ಲೆಕ್ಕಿಸದೆ ರಾಘವೇಂದ್ರರಾವ್ ಮತ್ತು ರಾಮಸ್ವಾಮಿ ತಮ್ಮ ಉದ್ದೇಶಿತ ಕಾರ್ಯಸಾಧನೆಗಾಗಿ ಊರೂರು ಅಲೆದಾಡಿದ್ದರು. ಇದರ ಪರಿಣಾಮವಾಗಿ ರಾಮಸ್ವಾಮಿ ಕಾಲರಾಪೀಡಿತರಾದರು. ಅವರು ಚೇತರಿಸಿಕೊಳ್ಳಲಾಗದೆ ಸಾವನ್ನಪ್ಪಿದರು. ಇದ್ದೊಬ್ಬ ಗೆಳೆಯನ ಅಗಲಿಕೆಯಿಂದ ರಾಘವೇಂದ್ರರಾವ್‌ಗೆ ದಿಕ್ಕೆ ತೋಚದಂತಾಯಿತು. ಹೇಗೋ ಸುಧಾರಿಸಿಕೊಂಡ ಅವರು

* ಉಪನ್ಯಾಸಕರು, ಸರಕಾರಿ ಪದವಿಪೂರ್ವ ಕಾಲೇಜು, ಯಲಬುರ್ಗ ಜಿಲ್ಲೆ, ಕೊಪ್ಪಳ ತಾಲ್ಲೂಕು, ತಳಕಲ್ಲ-೫೮೩೨೩೮.

ಒಂದು ದೃಢನಿರ್ಧಾರಕ್ಕೆ ಬಂದರು. ಈಗ ಶಾಲೆ ಆರಂಭವಾಗುವ ಹಂತದಲ್ಲಿಲ್ಲ. ಇನ್ನೂ ಸಾಕಷ್ಟು ಕೆಲಸವಿದೆ. ನನ್ನೊಂದಿಗೆ ಸಹಕರಿಸಿ ಸಲಹೆ ಸೂಚನೆಗಳನ್ನು ನೀಡುತ್ತಾ ಊರೂರು ಅಲೆಯಲು ಯಾರನ್ನು ಹುಡುಕಲಿ? ಎಂದುಕೊಂಡ ಅವರು ತಾವು ಈ ಮೊದಲು ಯಾರ್ಯಾರಿಂದ ಧನಸಹಾಯ ಪಡೆದಿದ್ದರೂ ಅದನ್ನು ಅವರವರಿಗೆ ವಾಪಾಸ್ ನೀಡಿ ಋಣಮುಕ್ತರಾಗುವುದೊಂದೆ ದಾರಿ ಎಂಬ ತೀರ್ಮಾನಕ್ಕೆ ಬಂದರು. ಆ ಪ್ರಕಾರವಾಗಿ ಕೊಪ್ಪಳ ಭಾಗದವರಿಗೆಲ್ಲ ತಲುಪಿಸಿ ನಂತರ ಕುಕನೂರಿನ ಭಾಗದವರಿಗೂ ಅವರವರ ದೇಣಿಗೆಯನ್ನು ಹಿಂದಿರುಗಿಸುತ್ತಾ ನಡೆದ ಸಂಗತಿಯನ್ನು ವಿವರಿಸಿ ಕೈಮುಗಿದು ಕೃತಜ್ಞತೆ ಸಲ್ಲಿಸಿದರು.

ಈ ಘಟನೆಯ ನಂತರ ತಮ್ಮ ಊರಾದ ಬೆಣಕಲ್‌ಗೆ ರಾಘವೇಂದ್ರರಾವ ಅವರು ಬಂದರು. ಅವರು ತಮ್ಮ ಚಿಕ್ಕಪ್ಪನವರಾದ ಸಣ್ಣಹನುಮಂತರಾಯರಲ್ಲಿ ನಡೆದ ಸಂಗತಿ ಕುರಿತಂತೆ ಮೆಲಕು ಹಾಕಿ ನಿಟ್ಟುಸಿರು ಬಿಟ್ಟರು. ಯುವಕರು ನಾಡಿಗಾಗಿ ಟೊಂಕಕಟ್ಟಿ ಎದೆಗುಂದದೆ ನಿಲ್ಲಬೇಕು. ನಿಮ್ಮ ಇಚ್ಛೆ ಪ್ರಮಾಣಿಕವಾಗಿದ್ದರೆ ಅದು ಎಂತೋ ರೂಪಗೊಳ್ಳುತ್ತದೆ ಧೈರ್ಯಗೆಡಬೇಡ ಎಂದು ಆತ್ಮವಿಶ್ವಾಸ ತುಂಬಿದರು. ಅವರು ಪಕ್ಕದ ನಿಟ್ಟಾಲಿ ಗ್ರಾಮದ ದೇಸಾಯಿ ಶ್ರೀನಿವಾಸ ಅವರು ಕುಕನೂರಿನಲ್ಲಿದ್ದಾರೆ. ಅವರನ್ನು ಕಂಡರೆ ಇದಕ್ಕೊಂದು ಸೂಕ್ತ ಪರಿಹಾರ ಒದಗಿಸುತ್ತಾರೆಂದು ಮಾರ್ಗ ಸೂಚಿಸಿದರು. ಅದರಂತೆ ರಾಘವೇಂದ್ರರಾವ್ ದೇಸಾಯಿ ಅವರು ಈ ಮೊದಲು ಅವರಿಂದ ಸಂಗ್ರಹಿಸಿದ ಕಾಣಿಕೆಯನ್ನು ಹಿಂದಿರುಗಿಸುವುದರ ಜೊತೆಗೆ ಪರಿಹಾರವನ್ನೂ ಕೇಳೋಣವೆಂದು ಅವರ ಬಳಿಗೆ ಹೋದರು. ಆದರೆ, ಕುಕನೂರಿನಲ್ಲಿನ ನಿಟ್ಟಾಲಿ ಶ್ರೀನಿವಾಸ ದೇಸಾಯಿ ಅವರು ಈ ನಿರ್ಮಲ ಸಹಜ ಮನಸಿನ ಯುವಕನನ್ನು ಒಂದು ಕ್ಷಣ ದಿಟ್ಟಿಸಿ ನೋಡಿದರು. ಕೈಗೆ ದಕ್ಕಿದ ಸಂಪತ್ತನ್ನು ಸ್ವಂತಕ್ಕಾಗಲಿ, ದುರುದ್ದೇಶಕ್ಕಾಗಲಿ ಬಳಸದ ಇವರಲ್ಲಿನ ಪ್ರಾಂಜಲ ಪ್ರಾಮಾಣಿಕತೆಯನ್ನು ಗುರುತಿಸಿದರು. ಆಗಲೇ ತಮಗೆ ಬೇಕಾದ ನಾಲ್ಕೆಂಟು ಮಂದಿಯನ್ನು ತಮ್ಮ ಮನೆಯಲ್ಲಿ ಕಲೆಹಾಕಿದರು. ಕೊಪ್ಪಳದಲ್ಲಿ ಸ್ಥಾಪಿಸಬೇಕೆಂದಿದ್ದ ಶಾಲೆಯನ್ನು ನಮ್ಮೂರಿನಲ್ಲಿಯೇ ಸ್ಥಾಪಿಸಬೇಕೆಂದು ಸೂಚಿಸಿದರು. ರಾಮಸ್ವಾಮಿಯ ಹಾಗೆ ಜೊತೆಗೆ ನಾವೆಲ್ಲಾ ಇದ್ದೇವೆ. ನಿನ್ನ ಯೋಚನೆ ಯೋಜನೆಯಂತೆ ಶಾಲೆ ಇರಲಿ. ಅದಕ್ಕೆ ಬೇಕಾಗುವ ಎಲ್ಲ ವಿವಿಧ ಸಹಾಯ ಸಹಕಾರ ನಾವೆಲ್ಲ ಒದಗಿಸುತ್ತೇವೆ ಎಂದು ಶ್ರೀನಿವಾಸ ದೇಸಾಯಿ ಅವರು ಗಟ್ಟಿಯಾಗಿ ಹೇಳಿದರು. ಆಗ ನಿರಾಸೆಯಿಂದ ಬಂದಿದ್ದ ರಾಘವೇಂದ್ರರಾವ್‌ರಲ್ಲಿ ಮತ್ತೆ ಆಶಾಕಿರಣ ಮೂಡಿತು. ಕುಕನೂರಿನ ಜನರ ಒತ್ತಾಯಕ್ಕೆ ಮಣಿದ ರಾಘವೇಂದ್ರರಾವ್ ದೇಸಾಯಿ ಅವರು ತಮ್ಮ ಕನಸಿಕ ಶಾಲೆಯ ರೂಪರೇಷೆಗಳನ್ನೆಲ್ಲಾ ವಿವರಿಸಿದರು. ಶಾಲೆಗೆ ಒಂದು ನಿರ್ದಿಷ್ಟ ಜಾಗ ಕಲ್ಪಿಸುವವರೆಗೂ ಗ್ರಾಮದೇವತೆ ಮಹಾಮಾಯಿ ದೇವಸ್ಥಾನದ ಪ್ರಾಂಗಣದಲ್ಲಿಯೇ ನಡೆಸಬೇಕೆಂಬುದು ಎಲ್ಲ ಸದಭಿಪ್ರಾಯವಾಗಿತ್ತು. ಅದರಂತೆ ದಿನಾಂಕ ೨೭.೦೭.೧೯೨೨ ಶ್ರಾವಣ ಶುದ್ಧ ತೃತೀಯದಂದು ಶ್ರೀ ಮಹಾಮಾಯಿ ಚರಣ ಸನ್ನಿಧಾನದಲ್ಲಿ ಅನೇಕ ದೇಶಭಕ್ತರು ಈ ರಾಷ್ಟ್ರೀಯ ಶಾಲೆ ಆರಂಭಿಸುವಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಮುಂದೊಂದು ಪ್ರಸಂಗದಲ್ಲಿ ಸಂಸ್ಥೆಗೆ ಸ್ಥಳೀಯ ಪೂಜ್ಯರಿಂದ ವಿದ್ಯಾನಂದ ಗುರುಕುಲ ಎಂದು ಮರುನಾಮಕರಣ ಮಾಡಲಾಯಿತು. ಸಿದ್ನೇಕೊಪ್ಪದ ದೇಸಾಯಿ ಮನೆತನದಿಂದ ಸುಮಾರು ೧೬ ಎಕರೆಯಷ್ಟು ಭೂಮಿ ದಾನವಾಗಿ ಕೊಡಲಾಯಿತು. ಕುಕನೂರಿನ ಮುಂದಿರುವ ಈ ಸ್ಥಳವನ್ನು ಸ್ಥಾನಿಕವಾಗಿ ಕೆಮ್ಮಣ್ಣಗುಂಡಿ ಎಂದು ಕರೆಯುವ ವಾಡಿಕೆ ಇತ್ತು. ಈ ಸ್ಥಳಕ್ಕೆ ವಿದ್ಯಾನಂದ ಗುರುಕುಲ ರಾಷ್ಟ್ರೀಯ ಶಾಲೆ ಸ್ಥಳಾಂತರಗೊಂಡು ಸ್ಥಿರನೆಲೆ ಕಂಡುಕೊಂಡಿತು. ವಿಶಾಲವಾದ ಬಯಲಿನಲ್ಲಿ ಸ್ಥಾಪಿಸಲ್ಪಟ್ಟ ವಿದ್ಯಾನಂದ ಗುರುಕುಲವು ಪ್ರಾಚೀನಕಾಲದ ನಿಜವಾದ ಗುರುಕುಲವಾಗಿ ರೂಪಾಂತರಗೊಂಡಿತು. ಬ್ರಹ್ಮಚಾರಿ ಯುವಕ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ತರಗತಿ ಕೋಣೆಗಳನ್ನು ಕುಟೀರದ ಆಕಾರಗಳಲ್ಲಿ ನಿರ್ಮಿಸಿದರು. ಇವರೆಲ್ಲರ ಶ್ರಮದ ಮೂಲಕ ಬಾವಿತೋಡಿ ಕುಡಿಯಲು, ಸ್ನಾನಕ್ಕೆ ಮತ್ತು ಹೂಹಣ್ಣಿನ ಗಿಡಮರಗಳನ್ನು ಬೆಳೆದು ಸ್ವಾವಲಂಬಿಯಾಗುವ ಜೀವನ ಪಾಠ ನಡೆಯಲು ಕಾರಣವಾಯ್ತು. ಪ್ರತಿದಿನ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ನಿತ್ಯ ಕರ್ಮಗಳ ನಂತರ ದೇವತಾ ಪ್ರಾರ್ಥನೆ, ಅಷ್ಟಾಂಗ ನಮಸ್ಕಾರ, ವ್ಯಾಯಾಮ, ಯೋಗಾಸನ, ಧ್ಯಾನ, ಓಟ, ನಿಧಾನ ನಡಿಗೆ ಹೀಗೆ ಹಲವಾರು ದೈಹಿಕ ಕಸರತ್ತಿನ ಕವಾಯತುಗಳನ್ನು ಶಿಕ್ಷಕರು ಕಲಿಸುತ್ತಿದ್ದರು. ಬಾವಿ ನೀರು ಸೇದಿ ಸ್ನಾನ ಮಾಡಿ ಉಪಹಾರ ಸೇವಿಸಿದ ನಂತರ ಪಾಠ ಪ್ರವಚನಗಳು ನಡೆಯುತ್ತಿದ್ದವು. ಅಂದಿನ ಸರ್ಕಾರ ಗೊತ್ತುಪಡಿಸಿದ ಪಠ್ಯಕ್ರಮಗಳ ಜೊತೆಯಲ್ಲಿ ಬದುಕನ್ನು ರೂಪಿಸುವ ವಿದ್ಯೆಗಳನ್ನೂ ಇಲ್ಲಿ ಹೇಳಿಕೊಡಲಾಗುತ್ತಿತ್ತು. ಮರಗೆಲಸ, ಚಿತ್ರಕಲೆ, ತೋಟಗಾರಿಕೆ, ಹತ್ತಿಯಿಂದ ನೂಲು ತೆಗೆಯುವುದು, ಲಾಠಿ ಬೀಸುವುದು, ಕವಣೆ ಹೊಡೆಯುವುದು, ಸಂಕೇತ ಭಾಷೆಯ ಕೂಗು, ಶಿಳ್ಳೆ ಹಾಕುವುದು, ಭಾರ ಎತ್ತುವುದು, ಮಣ್ಣಿನಿಂದ ವಸ್ತುಗಳ ತಯಾರಿಕೆ, ಬಟ್ಟೆ ಹೊಲಿಯುವುದು, ಕಸೂತಿ, ಆಹಾರ ತಯಾರಿಕೆ ಹೀಗೆ ಅವರವರ ಆಸಕ್ತಿಗನುಗುಣವಾಗಿ ಹಲವಾರು ಉದ್ಯೋಗಗಳಿಗೆ ಕೌಶಲ್ಯಯುಕ್ತ ಮಾರ್ಗದರ್ಶನ ನೀಡಲಾಗುತ್ತಿತ್ತು. ಇಲ್ಲಿ ಕೇವಲ

ಸಾಕ್ಷರರನ್ನಾಗಿ ಮಾಡುವುದು ಒಂದೇ ಈ ಶಾಲೆಯ ಕೆಲಸವಾಗಿರಲಿಲ್ಲ. ವ್ಯಕ್ತಿ ಸರ್ವತೋಮುಖ ಬೆಳವಣಿಗೆ ಹೊಂದಿ ಶಾಲೆಯಿಂದ ಹೊರಹೋದ ವ್ಯಕ್ತಿ ಸಮಾಜಕ್ಕೆ ಭಾರವಾಗುವ ಬದಲು ಸ್ವತಂತ್ರವಾಗಿ ತನ್ನ ಬದುಕನ್ನು ಕಟ್ಟಿಕೊಳ್ಳುವಂತೆ ಮಾಡುವುದಕ್ಕಾಗಿತ್ತು. ಈ ಸಂಸ್ಥೆ ಶಿಸ್ತಿನ ಸಿಪಾಯಿಯಾಗಿ ನಿರಂತ ಕ್ರಿಯಾಶೀಲತೆಯಿಂದ ಕೂಡಿತ್ತು. ಹೀಗಾಗಿ, ಈ ಸಂಸ್ಥೆಯ ಪ್ರಭಾವ ಮತ್ತು ಪ್ರಚಾರ ನಾಡಿನಾದ್ಯಂತ ಬಹುಬೇಗನೆ ಹರಡಿತು. ಆದ್ದರಿಂದ ಈ ಸಂಸ್ಥೆಗೆ ಸಮೀಪದ ಹಾಗೂ ದೂರದ ಬಾಲಕರನ್ನು ಪಾಲಕರು ಸೇರಿಸಲು ಹೆಚ್ಚು ಮುತುವರ್ಜಿ ವಹಿಸಹತ್ತಿದರು.

ನಿಜಾಮ ಸರ್ಕಾರ ವಿದ್ಯಾ ಇಲಾಖೆ ಈ ಸಂಸ್ಥೆಯ ಕಾರ್ಯಚಟುವಟಿಕೆಯನ್ನು ಪರಿಶೀಲಿಸಿ ೧೯೨೫ರಲ್ಲಿ ಅಧಿಕೃತ ಮಾನ್ಯತೆ ನೀಡಿತು. ಈ ಭಾಗದಲ್ಲಿ ಅಧಿಕೃತ ಮಾನ್ಯತೆ ಪಡೆದ ಪ್ರಾಥಮಿಕ ಶಾಲೆಗಳಲ್ಲಿ ಇದು ಪ್ರಥಮ ಖಾಸಗಿ ಶಾಲೆ ಎಂಬುದು ಗಮನಾರ್ಹ ಸಂಗತಿ. ಇದೇ ಸಂದರ್ಭದಲ್ಲಿ ಕೊಪ್ಪಳದ ನವಾಬ ಸಾಲರಜಂಗ್ ಬಹದ್ದೂರು ಅವರು ಈ ಸಂಸ್ಥೆಗೆ ಮಾಸಿಕ ೨೫ ರೂಪಾಯಿಯನ್ನು ಪ್ರೋತ್ಸಾಹಧನ ನೀಡಲು ಆರಂಭಿಸಿದನು. ಅಂದಿನ ದಿನಮಾನಗಳಲ್ಲಿ ಸಾಂಕ್ರಾಮಿಕ ಸರ್ವೆಸಾಮಾನ್ಯ ಎನ್ನುವಂತೆ ಪ್ರತಿವರ್ಷ ಅದರ ಪ್ರಭಾವವಿರುತ್ತಿತ್ತು. ಕಾಲರಾ ಮತ್ತು ಪ್ಲೇಗ್‌ಗಳು ಬಂದ ಊರು, ಊರಾಗಿ ಉಳಿಯುತ್ತಿರಲಿಲ್ಲ. ಅದು ಮಸಣವಾಗುತ್ತಿತ್ತಂತೆ. ಸತ್ತವರನ್ನು ಹೂಳುವುದಕ್ಕೂ ಜನ ಸಿಗುತ್ತಿರಲಿಲ್ಲವಂತೆ. ಇವು ಕಾಣಿಸಿಕೊಂಡವೆಂದರೆ ಜನ ಊರು ತೊರೆದು ತಾತ್ಕಾಲಿಕವಾಗಿ ಊರಿಂದಾಚೆಗಿನ ಕಾಡಿನಲ್ಲಿ ವಾಸಿಸುತ್ತಿದ್ದರು. ೧೯೨೯–೩೦ನೇ ಸಾಲಿನಲ್ಲಿ ಕುಕನೂರಿಗೆ ಪ್ಲೇಗ್ ತೀವ್ರವಾಗಿದ್ದರಿಂದ ಸುಮಾರು ೪ ತಿಂಗಳುಗಳ ಕಾಲ ನಿಟ್ಟಾಲಿ ಮತ್ತು ಬೆಣಕಲ್ ಗ್ರಾಮಗಳ ನಡುವಿನ ನಿಡುಮಾವಿನ ತೋಪಿಗೆ ಸ್ಥಳಾಂತರಿಸಿದರು. ಆಗ ಈ ಸಂಸ್ಥೆಯನ್ನು ಬೆಣಕಲ್ ಸಣ್ಣ ಹನುಮಂತರಾವ್ ಮತ್ತು ನಿಟ್ಟಾಲಿಯ ಶ್ರೀನಿವಾಸ ದೇಸಾಯಿಯವರು ಎಚ್ಚರಿಕೆಯಿಂದ ಪೋಷಣೆ ಮಾಡಿರುವುದಾಗಿ ತಿಳಿದುಬರುತ್ತದೆ. ಪ್ಲೇಗ್‌ನ ಪ್ರಭಾವ ಕಡಿಮೆಯಾದ ನಂತರ ಸಂಸ್ಥೆ ಎಂದಿನಂತೆ ತನ್ನ ಮೂಲದಲ್ಲಿಯೇ ಮುಂದುವರೆಯಿತು. ವಿದ್ಯಾನಂದ ಗುರುಕುಲವು ನಿಜಾಮ ಸರ್ಕಾರದಿಂದ ಅನುಮತಿ ಪಡೆದಾಗ ಉರ್ದು ಮಾಧ್ಯಮದಲ್ಲಿ ಶಿಕ್ಷಣ ನೀಡುವುದಾಗಿ, ದೇಶ ವಿರೋಧಿ ಚಟುವಟಿಕೆಗಳನ್ನು ನಡೆಸದಿರುವ ಬಗ್ಗೆ ನೀಡಿದ ಮನವಿಯಂತೆ ಮೇಲ್ನೋಟಕ್ಕೆ ವ್ಯವಸ್ಥೆ ಮಾಡಿಕೊಂಡಿತ್ತು. ಅಂತರಂಗದಲ್ಲಿ ಬಾಂಬೆ ಕರ್ನಾಟಕ ಭಾಗದಲ್ಲಿದ್ದ ಕನ್ನಡ ಮಾಧ್ಯಮದ ಪಠ್ಯ ಪುಸ್ತಕಗಳನ್ನು ತರಿಸಿಕೊಂಡು ಬೋಧಿಸುತ್ತಿತ್ತು. ಬ್ರಿಟೀಷರ ವಿರುದ್ಧ ಅಸಹಕಾರಕ್ಕೆ ಕರೆಕೊಟ್ಟ ಗಾಂಧೀಜಿಯವರ ವಿಚಾರಕ್ಕೂ ಪ್ರಭಾವಿತವಾಗಿತ್ತು. ಅಲ್ಲದೆ, ಯುವಕರನ್ನು ರಾಷ್ಟ್ರರಕ್ಷಣೆಗಾಗಿ ಹೋರಾಡುವಂತೆ ಮಾಡಲು ಒಳಗೊಳಗೆ ಯುದ್ಧದ ತರಬೇತಿಗಳನ್ನು ನೀಡಲಾಗುತ್ತಿತ್ತು. ವಿವಿಧ ಕವಾಯತ್ತು, ಕಸರತ್ತುಗಳ ಹೆಸರಿನಲ್ಲಿ ಇದು ನಡೆಯುತ್ತಿತ್ತು. ಈ ಸುದ್ದಿ ಹೇಗೋ ನವಾಬನ ಶಿಕ್ಷಣ ಇಲಾಖೆಗೆ ತಲುಪಿತು. ಕೊಪ್ಪಳದ ಶಿಕ್ಷಣ ಇಲಾಖೆಯ ಅಧಿಕಾರಿಗಳು ಪರೀಕ್ಷಿಸಲು ಸಂಸ್ಥೆಗೆ ಭೇಟಿ ನೀಡಿದ್ದರು. ಬೇರೆ ಬೇರೆ ತರಗತಿಗಳಲ್ಲಿ ಉರ್ದು ಮಾಧ್ಯಮದ ಪಠ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳು ಬಂದಿದ್ದರಿಂದ ಸಮಾಧಿನಿಗಳಾದರು. ಅಧಿಕಾರಿಗಳು ಕಚೇರಿಯತ್ತ ನಡೆದದ್ದನ್ನು ಶಿಕ್ಷಕರು ಗಮನಿಸಿ ಕನ್ನಡದ ಪಠ್ಯಗಳನ್ನು ಬೋಧಿಸಲು ಆರಂಭ ಮಾಡಿದ್ದರು. ಅಧಿಕಾರಿಗಳಲ್ಲೊಬ್ಬ ತರಗತಿಯತ್ತ ಪುನಃ ಹೋಗಿ ದೂರದಿಂದ ಸೂಕ್ಷ್ಮವಾಗಿ ಗಮನಿಸಿ ದಡದಡನೆ ಕಚೇರಿಗೆ ಬಂದವನೆ ಠೀವಿ ಮತ್ತು ಅಧಿಕಾರದ ದರ್ಪದಿಂದ ಸಿಗರೇಟ್ ಸೇದಲು ಆರಂಭಿಸಿದ್ದಾನೆ. ಸಿಗರೇಟ್ ಸೇವನೆ ನಮ್ಮ ವಿದ್ಯಾಸಂಸ್ಥೆಯಲ್ಲಿ ನಿಷಿದ್ಧವೆಂದು ಸಂಸ್ಥಾಪಕರಾದ ರಾಘವೇಂದ್ರರಾವ್ ದೇಸಾಯಿಯವರು ನಿಷ್ಠುರವಾಗಿ ಹೇಳಿದ್ದರು. ವಿದ್ಯಾ ಸಂಸ್ಥೆಯಲ್ಲಿ ಶಿಸ್ತು ಪಾಲಿಸುವುದು ಪ್ರತಿಯೊಬ್ಬರ ಕರ್ತವ್ಯ. ಅವರು ಚಿಕ್ಕವರು ದೊಡ್ಡವರು, ಅಧಿಕಾರಿಗಳು– ಸಾಮಾನ್ಯರು ಹೀಗೆ ಯಾವುದೇ ಬೇಧಭಾವ ಮಾಡುವವರಲ್ಲ ಸಂಸ್ಥಾಪಕರು. ಅಲ್ಲಿದ್ದ ಅಧಿಕಾರಿ ತಾನು ಕಂಡ ಹಾಗೂ ಕಾಣದೆ ಕೇಳಿದ ಸಂಗತಿಗಳನ್ನೆಲ್ಲಾ ಒಟ್ಟುಗೂಡಿಸಿ ಇಲ್ಲ ಸಲ್ಲದ ದೋಷಾರೋಪಗಳ ಪಟ್ಟಿಯನ್ನು ಇಲಾಖೆಗೆ ನೀಡಿದ್ದಾನೆ. ಇದರ ಪರಿಣಾಮವಾಗಿ ಹಿಂದೆ ನವಾಬ ಸಾಲರಜಂಗ್ ನೀಡುತ್ತಿದ್ದ ೨೫ ರುಪಾಯಿ ಪ್ರೋತ್ಸಾಹಧನವನ್ನು ನಂತರ ನೂರಕ್ಕೆ ಹೆಚ್ಚಿಸಿದ್ದು ಆ ಆದೇಶವನ್ನು ರದ್ದುಪಡಿಸಿದ್ದರಿಂದ ಆ ಸಂಸ್ಥೆಯಲ್ಲಿ ದುಡಿಯುವ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗಾಗಿ ಮಾಡುತ್ತಿದ್ದ ವೆಚ್ಚಗಳನ್ನು ನಿಭಾಯಿಸಲು ತೊಂದರೆಯಾಯಿತು. ರದ್ದುಪಡಿಸಿದ ಆದೇಶದ ದಿನಾಂಕ ೦೪.೦೬.೧೯೩೦. ಇದರಿಂದ ಸಂಸ್ಥೆಗೆ ಆರ್ಥಿಕ ಸಂಕಷ್ಟವಾದರೂ ಶಿಕ್ಷಕರು ಒಗ್ಗಟ್ಟಿನಿಂದ ತಮ್ಮ ಗುಟ್ಟನ್ನು ಬಿಟ್ಟುಕೊಡದೆ ಸರ್ಕಾರದ ರಾಜಿಯಾಗದೆ ತ್ಯಾಗಿಗಳಾಗಿ ಸಂಸ್ಥೆಯನ್ನು ಎತ್ತಿಹಿಡಿಯುವ ಶ್ಲಾಘನೀಯ ಸೇವೆ ಸಲ್ಲಿಸಿದ್ದಾರೆ.

ಶಾಲಾ ತನಿಖಾಧಿಕಾರಿಯ ವರದಿಯು ಸುಳ್ಳಿನಿಂದ ಕೂಡಿದ್ದಾಗಿದೆಂಬುದನ್ನು ಕೊಪ್ಪಳದ ಅಧೀನ ಸರ್ಕಾರಿ ವಕೀಲರಾಗಿದ್ದ ಹಿರೇಗುರುರಾಯರು ನವಾಬ ಸಾಲರಜಂಗ ಅವರಿಗೆ ಮನವರಿಕೆ ಮಾಡಿಕೊಟ್ಟರು. ಇದನ್ನು ದೃಢೀಕರಿಸುವ ಸಲುವಾಗಿ ಒಮ್ಮೆ ಕಾರ್ಯನಿಮಿತ್ಯ ನವಾಬರು ಕುಕನೂರಿಗೆ ಬಂದಾಗ ವಕೀಲರು ವಿದ್ಯಾನಂದ ಗುರುಕುಲ ಶಾಲೆಗೆ ಭೇಟಿ ಕೊಡಿಸಿದರು.

ಅಲ್ಲಿ ವಿವಿಧ ಧರ್ಮ ಮತ್ತು ವರ್ಗದ ಮಕ್ಕಳಿಗೆ ಉರ್ದು ಮಾಧ್ಯಮದಲ್ಲಿ ಪಾಠ ಪ್ರವಚನ ನಡೆದಿರುವುದನ್ನು ಮನವರಿಕೆ ಮಾಡಿಸಿದರು. ಇದನ್ನರಿತ ನವಾಬರು ಹರ್ಷಚಿತ್ತರಾದರು. ಅಲ್ಲದೆ, ಪುನಃ ಪ್ರೋತ್ಸಾಹಧನ ನೀಡುವ ಆದೇಶವನ್ನು ಹೊರಡಿಸಿದರು.

* **ಪೈಸಾ ಫಂಡು ಮತ್ತು ಮುಷ್ಠಿ ಫಂಡು:** ಅಂದಿನ ಕಾಲಕ್ಕನುಗುಣವಾಗಿ ಬಾಲಕೀಯರು ಮನೆಯಿಂದ ಹೊರಬರುವುದೇ ದುಸ್ತರವಾಗಿತ್ತು. ಹೀಗಾಗಿ, ಈ ಶಾಲೆಯಲ್ಲಿ ಕಲಿಯಲು ಬರುತ್ತಿದ್ದವರು ಕೇವಲ ಬಾಲಕರಾಗಿದ್ದರು. ಅವರು ಸಹ ಯಾವುದೇ ರೀತಿಯ ಶುಲ್ಕವನ್ನು ಭರಿಸುತ್ತಿರಲಿಲ್ಲ. ದಾನಿಗಳಿಂದ ಸಂಗ್ರಹವಾದ ಹಣವನ್ನೇ ಪಠ್ಯಪುಸ್ತಕ ಖರೀದಿಗೆ, ಉಪಹಾರಕ್ಕೆ, ಸಂಸ್ಥೆಯ ಕಟ್ಟಡ ನಿರ್ಮಾಣಕ್ಕೆ, ಅಲ್ಪ ಪ್ರಮಾಣದ ಗೌರವಧನವನ್ನು ಶಿಕ್ಷಕರಿಗೆ ನೀಡುವುದಕ್ಕೆ ಬಳಸಿಕೊಳ್ಳಲಾಗುತ್ತಿತ್ತು. ದಾನಿಗಳಿಂದ ಸಂಗ್ರಹವಾಗುತ್ತಿದ್ದ ಪ್ರಮಾಣ ಇಂತಿಷ್ಟೆ ಆಗಬೇಕೆಂಬ ಒತ್ತಾಯವಿರಲಿಲ್ಲ. ಆಗ ಒಂದೊಂದು ಪೈಸೆಗೂ ದೊಡ್ಡ ಮೌಲ್ಯವಿತ್ತು. ಆದ್ದರಿಂದ ಹನಿಹನಿ ಕೂಡಿದರೆ ಹಳ್ಳವೆಂಬಂತೆ ಅತ್ಯಂತ ಸಣ್ಣ ಪ್ರಮಾಣವೆನಿಸಿದರು ಒಂದು ನಯಾಪೈಸೆ ಮಹತ್ವದ್ದೆಂದು ಸಂಸ್ಥಾಪಕರು ಇದನ್ನು ಪೈಸಾ ಫಂಡು ಎಂಬ ಹೆಸರಿನಿಂದಲೇ ಮಾರ್ಮಿಕವಾಗಿ ಕರೆದಿದ್ದಾರೆ. ರೈತರು ತಾವು ಬೆಳೆದ ಬೆಳೆಗಳಲ್ಲಿ ಒಂದು ಮುಷ್ಠಿಯನ್ನಾದರೂ ಈ ಸಂಸ್ಥೆಗೆ ನೀಡಿ ತಮ್ಮ ಸೇವಾ ಕೈಂಕರ್ಯವನ್ನು ವ್ಯಕ್ತಪಡಿಸಿದ್ದರಿಂದ ರಾಘವೇಂದ್ರರಾವ್ ಅವರು ಇದನ್ನು ಮುಷ್ಠಿ ಫಂಡು ಎಂದು ಸಹ ಅರ್ಥಪೂರ್ಣವಾಗಿ ಕರೆದಿದ್ದಾರೆ. ಉಳ್ಳವರು ಕ್ವಿಂಟಾಲ್‌ಗಟ್ಟಲೆ ನೀಡಿದರೆ ಬಡವರು ತಮ್ಮ ಕೈಲಾದ ಅಲ್ಪಪ್ರಮಾಣದ ಸಹಾಯವನ್ನು ಈ ರಾಷ್ಟ್ರೀಯ ಶಾಲೆಗೆ ನೀಡಿದ್ದನ್ನು ಸಂಸ್ಥಾಪಕರು ಕೃತಜ್ಞತೆಯಿಂದ ಸ್ಮರಿಸಿಕೊಂಡಿದ್ದಾರೆ.

* **ಯೋಧರ ನಿರ್ಮಾಣ:** ರಾಷ್ಟ್ರೀಯ ಶಾಲೆಯಾಗಿ ರೂಪಗೊಂಡ ವಿದ್ಯಾನಂದ ಗುರುಕುಲವು ಶಿಸ್ತು ಸದಾಚಾರಗಳಿಗೆ ಹೆಸರುವಾಸಿಯಾಗಿತ್ತು. ಇಲ್ಲಿ ಬೆಳೆದ ನಂದನರು ನಾಡಿನ ದುರಂಧರರಾಗಿ ಸಿದ್ದಗೊಂಡರು. ಸೈನ್ಯದ ಒಂದು ತುಕಡಿಯನ್ನೇ ನಿರ್ಮಾಣ ಮಾಡಿದಂತಿತ್ತು. ರಾಘವೇಂದ್ರರಾವ್ ದೇಸಾಯಿ ಅವರು ಇಲ್ಲಿ ಎಲ್ಲರನ್ನು ಹೆಸರಿಸಲಾಗದಿದ್ದರೂ ಕೆಲಸವರನ್ನಾದರೂ ಸ್ಮರಣೆಗಾಗಿ ದಾಖಲಿಸಬೇಕಾಗಿದೆ. ತ್ರಿಲೋಚನ ದೀಕ್ಷಿತ್, ತಿರುಮಲರಾವ್ ದೇಸಾಯಿ, ವಿ.ವಿ. ವಾಯಿ, ವಾಮದೇವ ದೀಕ್ಷಿತ್, ದತ್ತುರಾವ್ ರಂಗರಾವ್ ದೇಸಾಯಿ, ಎಂ.ಜಿ. ಶಾಸ್ತ್ರಿ, ವೀರಭದ್ರಪ್ಪ ಶಿರೂರು, ಮುರುಡಿ ಭೀಮಜ್ಜ, ಅನಿರುದ್ಧ ದೇಸಾಯಿ ಇನ್ನೂ ಹಲವಾರು ಸ್ವತಂತ್ರ ಯೋಧರನ್ನು ಈ ಸಂಸ್ಥೆ ಕೊಡುಗೆಯಾಗಿ ನೀಡಿದೆ. ಈ ಸಂಸ್ಥೆಯ ಹಲವಾರು ಪ್ರೌಢ ನಂದನರು ನಾಡಿನ ಶ್ರೇಷ್ಠ ಸಾಹಿತಿಗಳಾಗಿ, ಸಂಶೋಧಕರಾಗಿದ್ದಾರೆ. ದ್ಯಾಂಪುರದ ಸಿದ್ದಯ್ಯ ಪುರಾಣಿಕ, ಅನ್ನದಾನಯ್ಯ ಪುರಾಣಿಕ, ಹೊಸಂಗಡಿ ಶಾಂತಪ್ಪ, ಪಾಂಡುರಂಗ ಭೀಮಸೇನ್ ದೇಸಾಯಿ, ಅಯ್ಯನಗೌಡ ಪೋಲೀಸ್ ಪಾಟೀಲ್, ಬಿ.ವಿ. ಶಿರೂರು, ರಾಮರಾವ್ ಚನಪನಹಳ್ಳಿ ಈ ಮೊದಲಾದವರು. ನೀಲಕಂಠಪ್ಪ ಬಣ್ಣದಬಾವಿ, ಅನ್ನದಾನಯ್ಯ ಪುರಾಣಿಕ, ಕೆ.ಎ. ಸ್ವಾಮಿ ಅವರು ನ್ಯಾಯಾಂಗ ಕ್ಷೇತ್ರದಲ್ಲಿ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದಾರೆ.

* **ಆಲದ ಮರವಾದ ಸಂಸ್ಥೆ:** ಕೇವಲ ಪ್ರಾಥಮಿಕ ಶಾಲೆಯಾಗಿದ್ದ ವಿದ್ಯಾನಂದ ಗುರುಕುಲವು ಪ್ರೌಢಶಾಲೆಯಾಗಲು ಹಂಬಲಿಸಿತು. ೧೯೫೦-೫೩ರಲ್ಲಿ ಪ್ರೌಢಶಾಲೆಯಾಗಿ ಪರಿವರ್ತನೆಯಾಯ್ತು. ೧೯೮೧-೮೨ರಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಅನುಮತಿಯಿಂದಾಗಿ ಕಲಾ ಹಾಗೂ ವೃತ್ತಿಶಿಕ್ಷಣ ವಿಭಾಗವನ್ನು ಆರಂಭಿಸಿತು. ನಂತರ ವಿಜ್ಞಾನ ವಿಭಾಗವು ಆರಂಭವಾಗಿ ೧೯೮೯ ರಿಂದ ಅನುದಾನಕ್ಕೆ ಒಳಪಟ್ಟಿತು. ಈ ಸಂಸ್ಥೆಯಲ್ಲಿ ತಂದೆ ತಾಯಿ ಇಲ್ಲದ ಅನಾಥ ಮತ್ತು ನಿರ್ಗತಿಕ ಮಕ್ಕಳ ಸಲುವಾಗಿ ನಿರ್ಗತಿಕ ಮಕ್ಕಳ ಕುಟೀರ ಎಂಬ ಊಟ ಮತ್ತು ವಸತಿಯೊಂದಿಗೆ ಆ ಮಕ್ಕಳಿಗೆ ಬೇಕಾಗುವ ಸರ್ವ ವಿಧದ ಸೌಲಭ್ಯ ಈ ಸಂಸ್ಥೆ ಪೂರೈಸುತ್ತಿದೆ. ೧೯೯೦ರಲ್ಲಿ ಪಾಲಿಟೆಕ್ನಿಕ್ ಕಾಲೇಜ್‌ನ್ನು ಆರಂಭಿಸಲಾಯಿತು. ೧೯೯೬ರಲ್ಲಿ ಪ್ರಥಮ ದರ್ಜೆ ಕಾಲೇಜನ್ನು ತೆರೆದು ಉನ್ನತ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಯಿತು. ೧೯೯೮ ರಿಂದ ಶಿಶುವಿಹಾರ ವಿಭಾಗವನ್ನು ಅಲ್ಲದೆ ಪ್ರಾಥಮಿಕ ಮತ್ತು ಪ್ರೌಢಶಾಲೆ ವಿಭಾಗದಲ್ಲಿ ಆಂಗ್ಲಮಾಧ್ಯಮ ವಿಭಾಗವನ್ನು ತೆರೆಯಲಾಯಿತು. ಹೀಗೆ ಸಂಸ್ಥೆಯು ವಿಸ್ತಾರಗೊಂಡಿದೆ.

* **ಪ್ರಶಸ್ತಿ ಪುರಸ್ಕಾರ:** ವಿದ್ಯಾನಂದ ಗುರುಕುಲ ಸಂಸ್ಥೆಯು ತನ್ನ ವಿದ್ಯಾರ್ಥಿ ಬಳಗದ ಶ್ರೇಯಸ್ಸು ತನಗೆ ಸಿಕ್ಕ ಪ್ರಶಸ್ತಿ ಪುರಸ್ಕಾರಗಳೆಂದು ಭಾವಿಸಿದೆ. ಈ ಸಂಸ್ಥೆಯ ಸಮಾಜಮುಖಿ ಕಾರ್ಯಚಟುವಟಿಕೆಗಳನ್ನು ಗಮನಿಸಿ ಅನೇಕ ಸಂಘ ಸಂಸ್ಥೆಗಳು ಪುರಸ್ಕರಿಸಿ ಗೌರವಿಸುತ್ತಲೇ ಬಂದಿವೆ. ೧೯೯೩ರಲ್ಲಿ ಈ ಸಂಸ್ಥೆಗೆ ರಾಜ್ಯ ಪ್ರಶಸ್ತಿ ದೊರಕಿದೆ. ನಂತರ ೧೯೯೯ರಲ್ಲಿ ರಾಷ್ಟ್ರಪ್ರಶಸ್ತಿ ದೊರಕಿದೆ. ರಾಘವೇಂದ್ರರಾವ್ ದೇಸಾಯಿವರು ೧೭-೧೧-೧೯೯೬ರಂದು ಹುತಾತ್ಮರಾಗಿದ್ದಾರೆ. ಇವರ ಸ್ಮರಣೆಗಾಗಿ ಇವರ ಕಂಚಿನ ಪುತ್ಥಳಿಯನ್ನು ೨೦೦೦ದಲ್ಲಿ ಸಂಸ್ಥೆಯ ಕೇಂದ್ರ ಭಾಗದಲ್ಲಿ ಸ್ಥಾಪಿಸಲಾಗಿದೆ. ಗುರುಕುಲ ಸ್ವಾತಂತ್ರದೇವಿಯ ನಂದಾದೀಪವಾಗಿ ಬೆಳಗುತ್ತಿದೆ.

೧೧೦

ಸ್ವಾತಂತ್ರ್ಯ ಚಳುವಳಿಗೆ ಹಗರಿಬೊಮ್ಮನಹಳ್ಳಿ ತಾಲೂಕಿನ ಹೋರಾಟಗಾರರ ಪಾತ್ರ

ಭೋಜ್ಯನಾಯ್ಕ ಎಲ್.ಎಚ್.*

ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರತಿಯೊಂದು ಜಿಲ್ಲೆ, ನಗರ ಪ್ರದೇಶ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಅದರಂತೆ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಚಳವಳಿಯಲ್ಲಿ ಪಾಲ್ಗೊಳ್ಳುವ ಮೂಲಕ ರಾಷ್ಟ್ರೀಯ ಆಂದೋಲನದಲ್ಲಿ ಕೊಡುಗೆಯನ್ನು ಸಲ್ಲಿಸಿರುವುದು ಕಂಡುಬರುತ್ತದೆ. ಇಲ್ಲಿನ ಜನರು ಲಿಂಗಭೇದವಿಲ್ಲದೆ ಜಾತಿ ಅಂತಸ್ತು ಮುಂತಾದವುಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಈ ದೇಶದ ಬೃಹತ್ ಚಳವಳಿಯಲ್ಲಿ ಭಾಗವಹಿಸಿ ಶೌರ್ಯ ಸಾಹಸ, ತ್ಯಾಗ, ರಾಷ್ಟ್ರಪ್ರೇಮವನ್ನು ಮೆರೆದಿದ್ದಾರೆ. ಆದ್ದರಿಂದ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಹಗರಿಬೊಮ್ಮನಹಳ್ಳಿ ತಾಲೂಕಿಗೆ ತನ್ನದೇ ಆದ ಸ್ಥಾನ ಸಲ್ಲಬೇಕಾಗಿದೆ.

ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳು ಬಳ್ಳಾರಿ ನಗರಕ್ಕೆ ಮಾತ್ರ ಸೀಮಿತವಾಗಿತ್ತು. ಕಾಲಾಂತರದಲ್ಲಿ ವಿದ್ಯಾರ್ಥಿಗಳು, ವಕೀಲರು, ಸರ್ಕಾರಿ ನೌಕರರು, ಶಾಲಾ ಉಪಾಧ್ಯಾಯರು ಈ ಸ್ವಾತಂತ್ರ್ಯ ಚಳವಳಿಗೆ ಆಸಕ್ತಿ ನೀಡಿದ್ದರಿಂದ ಇತರೆ ಭಾಗಗಳಾದ ಹರಪನಹಳ್ಳಿ, ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಸಂಡೂರುಗಳಲ್ಲಿ ಈ ಹೋರಾಟ ವಿಕಾಸ ಹೊಂದಿತು. ಗಾಂಧೀಜಿಯವರ ಭೇಟಿ, ನೆಹರೂರವರ ಭಾಷಣಗಳು, ವಿ.ಡಿ. ಸಾರ್ವಕರ್ ಅವರ ಹೋರಾಟಗಳು, ಚಟುವಟಿಕೆಗಳು ಪ್ರಮುಖ ಕಾರಣಗಳಾಗಿವೆ. ಈ ಮೇಲಿನ ಅಂಶಗಳಿಂದ ಪ್ರೇರಣೆಗೊಂಡು ಶಾಲಾ ಕಾಲೇಜುಗಳನ್ನು ತೊರೆದು ಚಳವಳಿಗೆ ಭಾಗವಹಿಸಿದರು. ಈ ಸ್ವಾತಂತ್ರ್ಯ ಚಳವಳಿಗೆ ಭಾಗವಹಿಸಿದ ಪ್ರಮುಖ ಹೋರಾಟಗಾರರೆಂದರೆ ಹಾಲ್ದಾಳ್ ಕೊಟ್ರಪ್ಪ, ಬಾರಿಕರ ಯಲ್ಲಪ್ಪ, ನಾರಾಯಣರಾವ್ ಹಲಾಲೆ, ಚನ್ನಬಸವನಗೌಡ, ಬನ್ನಿಕಲ್ಲು ವೀರಪ್ಪ, ಈಶ್ವರಪ್ಪ, ಹಂಪಸಾಗರದ ಕೆ. ಅನ್ನದಾನಪ್ಪ, ಬನ್ನಿಗೋಳದ ಅಪ್ಪಣ್ಣ, ಹೆಚ್.ಎಂ. ಬಸಪ್ಪ, ಅಪ್ಪಣ್ಣ, ವೆಂಕೋಬಣ್ಣ, ಎಂ.ಎಂ. ಪಾಟೀಲ್ ಮುಂತಾದ ನಾಯಕರು ಸ್ವಾತಂತ್ರ್ಯ ಚಳವಳಿಯಲ್ಲಿ ಕ್ರಿಯಾಶೀಲರಾಗಿ ಭಾಗವಹಿಸಿ ಹೋರಾಟ ನಡೆಸಿದ್ದಾರೆ.

೧೯೪೨ರಲ್ಲಿ ಭಾರತ ಬಿಟ್ಟು ತೊಲಗಿ ಚಳವಳಿ ಇಲ್ಲಿ ಬಹಳ ಮಹತ್ವ ಪಡೆದಿತ್ತು. ಆ ಸಮಯದಲ್ಲಿ ಹೊಸಪೇಟೆಯ ಕೋರಿಶೆಟ್ಟಿ ಜಂಬಣ್ಣನವರ ತಂಡವು ವಲ್ಲಭಾಪುರ, ನಾರಾಯಣದೇವರಕೆರೆ, ತಂಬ್ರಹಳ್ಳಿ ಮುಂತಾದ ಊರುಗಳಲ್ಲಿ ಯಶಸ್ವಿಯಾಗಿ ಜನಜಾಗೃತಿ ಉಂಟು ಮಾಡಿದರು. ಈ ನಾಯಕರು ಬ್ರಿಟಿಷರ ವಿರುದ್ಧ ಬಂಡಾಯ ಹೂಡಿ ಹೋರಾಟ ನಡೆಸಿದ್ದಾರೆ. ಇವರು ರೈಲು ಕಂಬಿಗಳನ್ನು ಕಡಿಯುವುದು, ಅಂಚೆ ಪೆಟ್ಟಿಗೆಗಳನ್ನು ಲಪಟಾಯಿಸುವುದು, ಸರಕಾರಿ ಕಛೇರಿಗಳಿಗೆ ಬೆಂಕಿ ಇಡುವುದು, ಸರಕಾರದ ಆಸ್ತಿಪಾಸ್ತಿಗಳನ್ನು ಸುಡುವುದು ಮುಂತಾದ ಚಟುವಟಿಕೆಗಳನ್ನು ಮಾಡಿ ಅನೇಕ ಬಾರಿ ಹೊಸಪೇಟೆ ಬಳ್ಳಾರಿಯ ಜೈಲುಗಳಲ್ಲಿ ಶಿಕ್ಷೆ ಅನುಭವಿಸಿದ್ದಾರೆ.

ಹಾಲ್ದಾಳ್ ಕೊಟ್ರಪ್ಪ

ಸೂಗೂರಪ್ಪ ಹಾಗೂ ಗೌರಮ್ಮ ದಂಪತಿಗಳ ಮಗನಾದ ಇವರು ೧೯೨೧ರ ಆಗಸ್ಟ್‌ನಲ್ಲಿ ಜನಿಸಿದರು. ೧೯೩೭ರಲ್ಲಿ ಗದಗಿನಲ್ಲಿ ನೆಹರುರವರ ಭಾಷಣದಿಂದ ಹಾಗೂ ಹೊಸಪೇಟೆಗೆ ಆಗಮಿಸಿದ ಗಾಂಧೀಜಿಯವರ ಭಾಷಣಗಳಿಂದ ಸ್ಫೂರ್ತಿ ಪಡೆದು ಸ್ನೇಹಿತರ ಜೊತೆ ಸೇರಿಕೊಂಡು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ೧೯೪೨ ಆಗಸ್ಟ್ ೯ರಂದು ಪ್ರಾರಂಭಗೊಂಡ ಚಲೇಜಾವ್ ಚಳವಳಿ ಪ್ರಾರಂಭದ ದಿನ. ಇದಕ್ಕೂ ಮುಂಚಿನ ದಿನಗಳಿಂದಲೂ ತಮ್ಮನ್ನು ಸ್ವಾತಂತ್ರ್ಯ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದರು. ಸಜ್ಜದ್ ವೀರಣ್ಣ, ನಾರಾಯಣಸ್ವಾಮಿ ಈಡಿಗರ, ವರ್ಧಮಾನ, ಬಡಿಗೇರ ವೆಂಕೋಬಣ್ಣ, ಕೃಷ್ಣರಾವ್ ಇವರೊಂದಿಗೆ ಸೇರಿಕೊಂಡು ತಮ್ಮ ಭೂಗತ ಚಟುವಟಿಕೆಗಳಲ್ಲಿ ರೈಲ್ವೆಹಳಿಗಳನ್ನು ಕೀಳುವುದು, ದೂರವಾಣಿ ಸಂಪರ್ಕವನ್ನು ಕೀಳುವುದು, ಸರ್ಕಾರದ ಆಸ್ತಿಪಾಸ್ತಿಗಳಿಗೆ ನಷ್ಟ ಮಾಡುವುದು ಮುಂತಾದ ಚಟುವಟಿಕೆಗಳನ್ನು ನಡೆಸುತ್ತಿದ್ದರು.

* ಪಿಎಚ್.ಡಿ. ಸಂಶೋಧನಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಈ ಗುಂಪಿನೊಂದಿಗೆ ಸೇತುವೆಯನ್ನು ಕೆಡುವಿ ಹಾಕಿದ ಆರೋಪದ ಮೇಲೆ ೧೯೪೨ರ ಸೆಪ್ಟೆಂಬರ್ ೧೦ರಂದು ಬ್ರಿಟಿಷರು ಇವರನ್ನು ಬಂಧಿಸಿದರು. ನಂತರ ಇವರ ವಿರುದ್ಧ ಬಲವಾದ ಸಾಕ್ಷ್ಯಾಧಾರಗಳು ದೊರೆಯದ ಕಾರಣ ಅದೇ ಡಿಸೆಂಬರ್ ೧೬ರಂದು ಜಾಮೀನಿನ ಮೇಲೆ ಬಿಡುಗಡೆ ಮಾಡಿದರು. ನಂತರ ತಮ್ಮ ಹೋರಾಟವನ್ನು ಮುಂದುವರೆಸಿದ ಇವರು ಗುಂಪು ಹೋರಾಟಕ್ಕೆ ಹೊಸಪೇಟೆಯ ಮುನ್ಸಿಪಲ್ ಹೈಸ್ಕೂಲ್‌ನ ವಿದ್ಯಾರ್ಥಿಗಳು ಸಹಕರಿಸಲಿಲ್ಲವೆಂದು ಶಾಲೆಗೆ ಬೆಂಕಿ ಹಚ್ಚಿದರು. ಈ ಆರೋಪದ ಮೇಲೆ ೨೧-೯-೧೯೪೨ರಂದು ಬ್ರಿಟಿಷರು ಇವರನ್ನು ಸೆರೆಹಿಡಿದು ೬ ತಿಂಗಳು ಕಾಲ ಹೊಸಪೇಟೆ ಹಾಗೂ ಬಳ್ಳಾರಿ ಜೈಲಿನಲ್ಲಿ ಬಂಧನದಲ್ಲಿಟ್ಟರು. ಜೈಲಿನಿಂದ ಬಿಡುಗಡೆಯಾದ ನಂತರ ಇವರು ಹಲವಾರು ಚಳವಳಿಗಳಲ್ಲಿ ಭಾಗವಹಿಸಿದರು.

ಬಾರಿಕರ ಯಲ್ಲಪ್ಪ

೧೯೧೭ರಲ್ಲಿ ನಾರಾಯಣ ದೇವರಕೆರೆ ಗ್ರಾಮದಲ್ಲಿ ಜನಿಸಿದ ಇವರು ಸ್ವಾತಂತ್ರ್ಯ ಹೋರಾಟಗಾರರ ಭಾಷಣಗಳಿಂದ, ಚಟುವಟಿಕೆಗಳಿಂದ ಸ್ಫೂರ್ತಿ ಪಡೆದು ೧೯೪೨ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಭಾಗವಹಿಸಿದರು. ಹೊಸಪೇಟೆ, ವಲ್ಲಭಾಪುರ, ತಂಬ್ರಹಳ್ಳಿ, ನಾರಾಯಣ ದೇವರಕೆರೆ ಮುಂತಾದ ಗ್ರಾಮಗಳಿಗೆ ಸ್ನೇಹಿತರೊಂದಿಗೆ ತೆರಳಿ ಜನಜಾಗೃತಿ ಉಂಟು ಮಾಡುತ್ತಿದ್ದರು. ಅಂಚೆ ಪೆಟ್ಟಿಗೆಗಳನ್ನು ಕಳವು ಮಾಡುವುದು, ಸರಕಾರಿ ಕಛೇರಿಗಳಿಗೆ ಬೆಂಕಿ ಇಡುವುದು, ರೈಲು ಕಂಬಿಗಳನ್ನು ಕಡಿಯುವುದು ಮುಂತಾದ ಚಟುವಟಿಕೆಗಳನ್ನು ಮಾಡಿ ಹೊಸಪೇಟೆ ಹಾಗೂ ಬಳ್ಳಾರಿ ಜೈಲಿನಲ್ಲಿ ೨ ಬಾರಿ ಶಿಕ್ಷೆಯನ್ನು ಅನುಭವಿಸಿದ್ದಾರೆ.

ಭಾರತಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಈ ಭಾಗದಲ್ಲಿ ರಜಾಕಾರರ ಹಾವಳಿ ಹೆಚ್ಚಾಗಿತ್ತು. ರಜಾಕಾರರು ಕೊಪ್ಪಳ ಪ್ರದೇಶದಿಂದ ಬಂದು ಈ ಭಾಗದಲ್ಲಿ ಜನರಿಗೆ ಸಾಕಷ್ಟು ತೊಂದರೆ ಕೊಡುತ್ತಿದ್ದರು. ಹಾಗೂ ಲೂಟಿ ಮಾಡುತ್ತಿದ್ದರು. ಬಾರಿಕರ ಯಲ್ಲಪ್ಪ ಹಾಗೂ ಸ್ನೇಹಿತರು ಸೇರಿಕೊಂಡು ರಜಾಕಾರರ ವಿರುದ್ಧ ಹೋರಾಟ ಮಾಡಿದರು ಹಾಗೂ ಅವರ ಬಳಿ ಇರುವ ವಸ್ತುಗಳನ್ನು ಲೂಟಿ ಮಾಡಿಕೊಂಡು ಜನರಿಗೆ ಹಂಚುತ್ತಿದ್ದರು.

ಬನ್ನಿಕಲ್ಲು ಈಶ್ವರಪ್ಪ

ಪರಮೇಶ್ವರಪ್ಪ ಮತ್ತು ಶಾಂತಮ್ಮ ಅವರ ಮಗನಾದ ಇವರು ೧೯೦೫ರಲ್ಲಿ ಬನ್ನಕಲ್ಲು ಗ್ರಾಮದಲ್ಲಿ ಜನಿಸಿದರು. ಇವರು ಸ್ವಾತಂತ್ರ್ಯ ಹೋರಾಟಕ್ಕೆ ಪರೋಕ್ಷವಾಗಿ ಸಹಕಾರ ನೀಡಿದ್ದಾರೆ. ಹಗಲು ಹೊತ್ತಿನಲ್ಲಿ ಮಲಗಿ ರಾತ್ರಿ ಪೂರ್ತಿ ಸ್ವಾತಂತ್ರ್ಯ ಹೋರಾಟಗಾರರಿಗೆ ಪೂರಕ ಸೇವೆಯನ್ನು ಸಲ್ಲಿಸುತ್ತಿದ್ದರು. ಬ್ರಿಟಿಷರ ಕಣ್ತಪ್ಪಿಸಿ ಅತ್ಯಂತ ಕಠಿಣ ಹಾದಿಯ ಮೂಲಕ ಕಾರು ಚಾಲನೆ ಮಾಡಿ ಸಂಗ್ರಾಮದ ಸಂದೇಶ ಸಾರಲು ನೆರವಾಗಿದ್ದರು. ದಾವಣಗೆರೆ ಅಧಿವೇಶನದ ನಂತರ ಬಳ್ಳಾರಿ ಜಿಲ್ಲೆಗೆ ಗಾಂಧೀಜಿಯವರನ್ನು ಸುರಕ್ಷಿತವಾಗಿ ಕರೆತಂದಿದ್ದರು. ಇವರ ಸೇವೆಗೆ ಮೆಚ್ಚಿದ ಗಾಂಧೀಜಿ ೩-೩-೧೯೩೪ರಲ್ಲಿ ಸ್ವ ಹಸ್ತಾಕ್ಷರದಿಂದ ಪತ್ರ ಬರೆದು ಮೆಚ್ಚುಗೆ ಮತ್ತು ಕೃತಜ್ಞತೆಯನ್ನು ಸಲ್ಲಿಸಿದ್ದಾರೆ. ಜತೆಗೆ ನೆನಪಿಗಾಗಿ ತಾವು ಬಳಸುತ್ತಿದ್ದ ಗಡಿಯಾರ ಮತ್ತು ವಾಕಿಂಗ್ ಸ್ಟಿಕ್‌ನ್ನು ನೀಡಿದ್ದಾರೆ. ಒಂದೆಡೆ ಸರಕಾರದ ಜೊತೆ ಬಲವಾಗಿ ಗುರುತಿಸಿಕೊಂಡಿದ್ದರೂ ಗಾಂಧೀಜಿ ಕೈಗೊಳ್ಳುವ ಎಲ್ಲಾ ನಿರ್ಧಾರಗಳಿಗೆ ಈಶ್ವರಪ್ಪನವರು ಬದ್ಧರಾಗಿದ್ದರು. ವರ್ಷಕ್ಕೆ ೨೦೦ ರೂ.ಗಳಿಗೂ ಹೆಚ್ಚು ತೆರಿಗೆ ನೀಡುತ್ತಿದ್ದ ಬೆರಳೆಣಿಕೆಯ ಜನರಲ್ಲಿ ಇವರಿದ್ದರು. ಸಾವಿರಾರು ರೂ.ವರೆಗೂ ತೆರಿಗೆ ಸಲ್ಲಿಸಿದ ಹಿನ್ನೆಲೆಯಲ್ಲಿ ಈ ಮನೆತನಕ್ಕೆ ರಾವ್ ಬಹದ್ದೂರ್ ಎಂದು ಬ್ರಿಟಿಷರು ನೀಡಿದ ಬಿರುದನ್ನು ಮನೆತನದವರು ಸ್ವೀಕರಿಸಲಿಲ್ಲ. ಹೀಗೆ ಸ್ವಾತಂತ್ರ್ಯ ಹೋರಾಟದಲ್ಲಿ ತನ್ನದೇ ಆದ ಕಾಣಿಕೆ ನೀಡಿದ ಇವರು ವೀರೇಂದ್ರ ಪಾಟೀಲ್, ಎಸ್. ನಿಜಲಿಂಗಪ್ಪ ಅವರೊಂದಿಗೆ ಸಂಪರ್ಕ ಹೊಂದಿದ್ದರು. ಗಾಂಧೀಜಿಯವರ ಜೊತೆಗಿನ ಒಡನಾಟ ಮತ್ತು ಸಹಕಾರ ಪಡೆದಿದ್ದ ಈಶ್ವರಪ್ಪ ಪರೋಕ್ಷ ಸೇವೆಯ ಮಹನೀಯರಾಗಿದ್ದಾರೆ.

ನಾರಾಯಣರಾವ್ ಹಲಾಲೆ

ಎಚ್. ಸುಬ್ರಮಣಿರಾವ್ ಹಾಗೂ ರಾಣುಬಾಯಿ ಅವರ ಮಗನಾದ ನಾರಾಯಣರಾವ್ ಹಲಾಲೆ ೧೯೧೯ರಲ್ಲಿ ನಾರಾಯಣದೇವರಕೆರೆಯಲ್ಲಿ ಜನಿಸಿದರು. ಇವರು ಕೂಡ ಮಹನೀಯರ ಭಾಷಣ ಹಾಗೂ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳ ಮೂಲಕ ಸ್ಫೂರ್ತಿ ಪಡೆದುಕೊಂಡು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದರು.

ವಿ.ಡಿ. ಸಾವರ್ಕರ್ ಅವರ ಬ್ರಿಟಿಷರ ವಿರುದ್ಧ ಹೋರಾಟದ ಚಳವಳಿಯ ಮೂಲಕ ಸ್ಫೂರ್ತಿ ಪಡೆದು ವಿ.ಡಿ. ಸಾವರ್ಕರ್ ಗುಂಪಿನಲ್ಲಿ ಸೇರಿಕೊಂಡರು. ಸ್ನೇಹಿತರ ಜೊತೆ ಸೇರಿಕೊಂಡು ಶಿಶುವಿನಹಾಳ್ ರೈಲ್ವೆ ಹಳಿಗಳನ್ನು ಕಿತ್ತಿದರು.

ನಂತರ ಚಟುವಟಿಕೆಗಳನ್ನು ಮುಂದುವರೆಸುತ್ತಾ ಪೋಸ್ಟ್ ಆಫೀಸ್‌ಗೆ ಬೆಂಕಿ ಹಚ್ಚಿದರು, ಸರ್ಕಾರದ ಆಸ್ತಿಪಾಸ್ತಿಗೆ ಹಾನಿ ಮಾಡಿದರು. ಇವರು ಚಟುವಟಿಕೆಗಳನ್ನು ಗಮನಿಸಿದ ಬ್ರಿಟಿಷ್ ಸರಕಾರ ಬಂಧಿಸಿ ಹಿಂಡಲಗಾ ಜೈಲಿನಲ್ಲಿ ಆರು ತಿಂಗಳ ಕಾಲ ಜೈಲು ಶಿಕ್ಷೆ ಅನುಭವಿಸುವಂತೆ ಮಾಡಿದರು. ಹೀಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ನಾರಾಯಣರಾವ್ ಹಲಾಲೆ ಜನವರಿ ೧೩ ೨೦೦೦ರಲ್ಲಿ ತನ್ನ ೮೧ನೇ ವಯಸ್ಸಿನಲ್ಲಿ ಮರಣ ಹೊಂದಿದರು.

ಚೆನ್ನಬಸವನಗೌಡರು

ಸಿದ್ಧನಗೌಡರು ಮತ್ತು ಗೌರಮ್ಮ ಅವರ ಮಗನಾದ ಚೆನ್ನಬಸವನಗೌಡರು ೧೩-೫-೧೯೧೨ರಲ್ಲಿ ಬಾಚಿಗೊಂಡನಹಳ್ಳಿಯಲ್ಲಿ ಜನಿಸಿದರು. ಇವರು ವಿದ್ಯಾರ್ಥಿಯಿರುವಾಗಲೇ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದರು. ಹಲವು ಬಾರಿ ಜೈಲಿಗೆ ಹೋಗಿ ಶಿಕ್ಷೆಯನ್ನು ಅನುಭವಿಸಿದ್ದಾರೆ. ಸ್ನೇಹಿತರ ಜೊತೆ ಸೇರಿಕೊಂಡು ಬ್ರಿಟಿಷರ ವಿರುದ್ಧ ಬಂಡಾಯ ಹೂಡಿ ಹೋರಾಟ ಮಾಡಿದ್ದಾರೆ. ಇವರು ರೈಲು ಕಂಬಿಗಳನ್ನು ಕೀಳುವುದು, ಅಂಚೆ ಪೆಟ್ಟಿಗೆಗಳನ್ನು ಕಳುವು ಮಾಡುವುದು, ಸರ್ಕಾರಿ ಕಚೇರಿಗಳಿಗೆ ಬೆಂಕಿ ಹಚ್ಚುವುದು, ಸರಕಾರದ ಆಸ್ತಿ ಪಾಸ್ತಿಗಳನ್ನು ಸುಡುವುದು, ಮುಂತಾದ ಚಟುವಟಿಕೆಗಳನ್ನು ಮಾಡಿ ಅನೇಕ ಬಾರಿ ಹೊಸಪೇಟೆ ಮತ್ತು ಬಳ್ಳಾರಿ ಜೈಲುಗಳಲ್ಲಿ ಶಿಕ್ಷೆ ಅನುಭವಿಸಿದ್ದಾರೆ.

ಉಪ್ಪಿನ ಸತ್ಯಾಗ್ರಹದಲ್ಲಿ ಮೈಲಾರ್ ಮಹಾದೇವ ಅವರನ್ನು ಬಂಧಿಸಿದಾಗ ಕಾಲೇಜು ವಿದ್ಯಾರ್ಥಿಗಳನ್ನು ಗುಂಪುಕಟ್ಟಿಕೊಂಡು ಸತ್ಯಾಗ್ರಹ ಮಾಡಿದರು. ೧೯೪೨ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಧುಮುಕಿ ಬ್ರಿಟಿಷರ ವಿರುದ್ಧ ಹೋರಾಡಿದ್ದರು.

ಹೈದ್ರಾಬಾದಿನ ರಜಾಕಾರರು ಕೊಪ್ಪಳ ತಾಲೂಕಿನಲ್ಲಿ ಹಿಂದೂಗಳ ಮೇಲೆ ಕೌರ್ಯ ಮೆರೆದರು. ಈ ಹಾವಳಿಯನ್ನು ತಪ್ಪಿಸಲು ರಜಾಕಾರರ ವಿರುದ್ಧ ಹೋರಾಟ ಮಾಡಿದರು. ರಜಾಕಾರರ ಹಾವಳಿಯಿಂದ ಹಿಂದೂಗಳು ವಲಸೆ ಬಂದರು. ಅವರಿಗೆ ೩ ದಿನಗಳ ಕಾಲ ತಮ್ಮ ಮನೆಯಲ್ಲಿ ಊಟ, ವಸತಿ ಕಲ್ಪಿಸಿಕೊಡಲಾಯಿತು. ಸ್ವಾತಂತ್ರ್ಯ ಪಡೆದ ನಂತರ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ೧೮ ವರ್ಷಗಳ ಕಾಲ ಎಂ.ಎಲ್.ಸಿ. ಆಗಿ ೩ ವರ್ಷಗಳ ಕಾಲ ಎಂ.ಎಲ್.ಎ. ಆಗಿ ಶಾಸನಸಭಾ ಸದಸ್ಯರಾಗಿದ್ದರು. ಈ ೨೧ ವರ್ಷಗಳ ರಾಜಕೀಯ ಜೀವನದಲ್ಲಿ ಅನೇಕ ಜನಪರ ಕಾರ್ಯಗಳನ್ನು ಮಾಡಿದ್ದಾರೆ.

ಹೀಗೆ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಸ್ವಾತಂತ್ರ್ಯ ಚಳವಳಿಗೆ ತಮ್ಮದೆ ಆದ ಕೊಡುಗೆ ನೀಡಿರುವುದು ಕಂಡುಬರುತ್ತದೆ. ಸ್ವಾತಂತ್ರ್ಯದ ನಂತರವೂ ಹೋರಾಟವನ್ನು ಮುಂದುವರಿಸುತ್ತಾ ಬಂದಿದ್ದಾರೆ. ಈ ಸಂದರ್ಭದಲ್ಲಿ ಅನೇಕ ಬಗೆಯ ಸಮಾಜ ಸುಧಾರಣಾ ಕಾರ್ಯಗಳು ನಡೆದವು. ವಿಧವಾ ವಿವಾಹ, ಹರಿಜನ ಸುಧಾರಣೆ, ಅಸ್ಪೃಶ್ಯತಾ ನಿವಾರಣೆ, ಪಾನ ನಿಷೇಧ ಮುಂತಾದ ಕಾರ್ಯಗಳು ಸ್ವಾತಂತ್ರ್ಯ ಹೋರಾಟಗಾರರು ಕೈಗೊಂಡರು.

ಆಧಾರ ಗ್ರಂಥಗಳು

೧. ಪರಮೇಶ್ವರ ಸೊಪ್ಪಿನಮಠ, ಹಗರಿಬೊಮ್ಮನಹಳ್ಳಿ ತಾಲೂಕು ದರ್ಶನ.

೨. ಶಂಕರ್ ನಾರಾಯಣರಾವ್, ೨೦೧೪, ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು.

೩. ಶೇಷಾದ್ರಿ ಬಿ., ಚಂದ್ರಶೇಖರ್ ಟಿ.ಆರ್. (ಸಂ), ೧೯೯೮, ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಸೂರ್ಯನಾಥ ಕಾಮತ್ (ಸಂ), ೧೯೪೭, ಸ್ವಾತಂತ್ರ್ಯ ಹೋರಾಟದ ಸ್ಮೃತಿಗಳು, ಸಂಪುಟ ೧ ಮತ್ತು ೩, ಗೀತಾಬುಕ್ ಹೌಸ್, ಮೈಸೂರು.

೫. ಸೂರ್ಯನಾಥ ಕಾಮತ್, ೨೦೧೨, ಕರ್ನಾಟಕ ಸಂಕ್ಷಿಪ್ತ ಇತಿಹಾಸ, ಎಂ.ಸಿ.ಸಿ. ಪಬ್ಲಿಕೇಷನ್ಸ್, ಬೆಂಗಳೂರು.

೬ ಸೂರ್ಯನಾಥ ಕಾಮತ್ (ಮು.ಸಂ), ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಕರ್ನಾಟಕ ಸರಕಾರ, ಬೆಂಗಳೂರು.

೭. Mysore State Gazetteer, Bellary District (1972). Government of Mysore, Bangalore.

೮. Francis W (Ed), 1904, Madras District Gazetteer, Bellary District Madras.

೯. ಸಂದರ್ಶನ, ಬನ್ನಿಕಲ್ಲು ಶಿವಣ್ಣ, ದಿನಾಂಕ ೩೦.೦೯.೨೦೧೬

೧೦. ಸಂದರ್ಶನ, ಹಾಲ್ದಾಳ್ ವೀರಣ್ಣ, ದಿನಾಂಕ ೦೨.೧೦.೨೦೧೬

೧೧. ಸಂದರ್ಶನ, ಬಾಪೂಜಿ, ದಿನಾಂಕ ೦೩.೧೦.೨೦೧೬

೧೨. ಸಂದರ್ಶನ, ರುಕ್ಮಾಜಿರಾವ್ ಹಲಾಲೆ, ದಿನಾಂಕ ೦೪.೧೦.೨೦೧೬

ದಲಿತ ಸ್ವಾತಂತ್ರ್ಯ ಹೋರಾಟಗಾರ ದಾವಣಗೆರೆಯ ಬಿ. ಶಾಮಪ್ಪ

ಡಾ. ಎಚ್.ಎಸ್. ತಿಪ್ಪೇಸ್ವಾಮಿ*

ತಮ್ಮ ಪ್ರಾಣದ ಹಂಗು ತೊರೆದು ದೇಶಕ್ಕಾಗಿ ದುಡಿದ ಹಲವು ಸ್ವಾತಂತ್ರ್ಯ ಹೋರಾಟಗಾರರು ನಮಗೆ ಇಂದು ವೀರ ಯೋಧರಂತೆ ಕಂಡುಬರುತ್ತಾರೆ. ಇತರೆ ಸಮುದಾಯಗಳಂತೆ ದೇಶದ ದಲಿತ ಸಮುದಾಯವು ಸಹಾ ದೇಶದ ಸ್ವಾತಂತ್ರ್ಯಕ್ಕಾಗಿ ಅವಿರತವಾಗಿ ಶ್ರಮಿಸಿದೆ. ಸಮಾಜದಂಚಿನಲ್ಲಿದ್ದುಕೊಂಡು ಪರಂಗಿಯರ ಆಡಳಿತವನ್ನು ಕೊನೆಗಾಣಿಸಬೇಕೆಂಬ ಹಂಬಲದಿಂದ ಹೋರಾಡಿದ ಅನೇಕ ದಲಿತ ಸ್ವಾತಂತ್ರ್ಯ ಹೋರಾಟಗಾರರಲ್ಲಿ ದಾವಣಗೆರೆಯ ಬಿ. ಶಾಮಪ್ಪ ಸಹಾ ಒಬ್ಬರಾಗಿದ್ದಾರೆ.

ದಲಿತ ವರ್ಗದ (ಮಾದಿಗ ಸಮುದಾಯಕ್ಕೆ ಸೇರಿದ) ಭೈರಜ್ಜನವರ ಭೈರಪ್ಪ ಮತ್ತು ಕೊಂಡಜ್ಜಿ ದುರುಗಮ್ಮ ಇವರ ಆರನೆಯ ಮಗನಾಗಿ ಇವರು ೦೧-೦೬-೧೯೨೦ರಲ್ಲಿ ದಾವಣಗೆರೆಯಲ್ಲಿ ಜನಸಿದರು.[೧] ದಾವಣಗೆರೆಯ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣ ಪೂರೈಸಿದರು. ಇವರಿಗೆ ಆಗ ಕ್ರೀಡೆಯಲ್ಲಿ ತುಂಬಾ ಆಸಕ್ತಿ ಇದ್ದ ಪರಿಣಾಮವಾಗಿ ಕ್ರಿಕೆಟ್, ಪುಟ್‌ಬಾಲ್ ಆಟಗಳಿಂದ ಪ್ರಭಾವಿತರಾಗಿ ಆ ಕುರಿತ ಹೆಚ್ಚಿನ ತರಬೇತಿ ಪಡೆದು, ಆ ಕ್ರೀಡೆಗಳಲ್ಲಿ ಹೆಚ್ಚಿನ ಪ್ರಾವಿಣ್ಯತೆ ಗಳಿಸಿಕೊಂಡರು. ೧೯೩೬ರಲ್ಲಿ ಇ.ಎಲ್.ಎಸ್.ನಲ್ಲಿ ತಮ್ಮ ಪ್ರೌಢ ಕ್ಷಣ ಪಡೆಯುತ್ತಿರುವಾಗಲೇ ಇವರು ಪುಟ್‌ಬಾಲ್ ತಂಡವೊಂದರ ನಾಯಕತ್ವ ವಹಿಸಿಕೊಂಡು ಮೈಸೂರಿಗೆ ಹೋಗಿ ಅಲ್ಲಿ ವಿಜೇತರಾಗಿ ತಮ್ಮ ಶಾಲೆಗೆ ಕೀರ್ತಿ ತಂದರು.

ಹಲವು ದೇಶಪ್ರೇಮಿಗಳಿಂದ ಪ್ರಭಾವಿತರಾದ ಇವರು ತಾವು ಕಲಿಯುತ್ತಿದ್ದ ಹೈಸ್ಕೂಲಿನಲ್ಲಿಯೇ 'ನೇತಾಜಿ ಸಂಘ'ವನ್ನು ಸ್ಥಾಪಿಸಿ ಆ ಮೂಲಕ ಹಲವು ಹೋರಾಟಗಳನ್ನು ಸಂಘಟಿಸಿದರು. ಅಲ್ಲದೇ ದೇಶಕ್ಕೆ ಒದಗಿದ ಅನ್ಯಾಯದ ವಿರುದ್ಧ ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪರವಾಗಿಯೂ ಪ್ರಚಾರವನ್ನು ತಮ್ಮ ವಿದ್ಯಾರ್ಥಿ ದೆಸೆಯಿಂದಲೇ ಮಾಡುತ್ತಾ ಬಂದಿದ್ದರು. ಸ್ವಾತಂತ್ರ್ಯ ಹೋರಾಟಕ್ಕೆ ನಾನೇನಾದರೂ ಅಲ್ಪಕಾಣಿಕೆಯನ್ನು ನೀಡಲೇಬೇಕೆಂಬ ಹಂಬಲದಿಂದ ಗಾಂಧೀಜಿಯವರ ಅನುಯಾಯಿಗಳು ಮತ್ತು ಅವರ ಆದರ್ಶಗಳ ಪ್ರತಿಪಾದಕರಾದ ಶ್ರೀ ಅನಂತಶರ್ಮರು ೧೯೩೨ರಲ್ಲಿ ದಾವಣಗೆರೆಯ ಹರಿಜನ ಕೇರಿಗೆ ಭೇಟಿಯಿತ್ತಾಗ ಸ್ವಯಂಸೇವಕರಾಗಿ ಅಂದಿನ ಸಬ್ ಡಿವಿಜನ್ ಆಫೀಸರ್ ಸುಬ್ಬರಾವ್ ಇವರ ಅಪಾರ ನೆರವಿನೊಂದಿಗೆ ತಮ್ಮ ಹರಿಜನ ಕೇರಿಯನ್ನು ಸ್ವಚ್ಛ ಮಾಡಿಸಿದರು. ಹಾಗೆಯೇ ೧೯೩೪ರಲ್ಲಿ ಗಾಂಧೀಜಿಯವರು ಇದೇ ಕಾಲೋನಿಗೆ ಭೇಟಿ ಇತ್ತಾಗ ಅವರ ಭಾಷಣದಿಂದ ಪ್ರಭಾವಿತರಾಗಿ ಭಾರತೀಯ ಕಾಂಗ್ರೆಸ್ಸಿನ ಸ್ವಯಂಸೇವಕರಾಗಿ ಹೋರಾಟದಲ್ಲಿ ಧುಮುಕಿದರು. ೧೯೩೬ರಲ್ಲಿ ಮಹಾದೇವ ದೇಸಾಯಿಯವರು ದಾವಣಗೆರೆಗೆ ಬಂದಾಗ ದೊಗ್ಗನಾಳು ನಂಜಪ್ಪನವರ ಮಾರ್ಗದರ್ಶನದಲ್ಲಿ ಅಖಿಲ ಭಾರತ ಕಾಂಗ್ರೆಸ್ ಪರವಾಗಿ ಪ್ರಚಾರ ಮಾಡಿ ಕಾಂಗ್ರೆಸ್ ಮುಖಂಡರಾದ ಕಾಸಲು ಶ್ರೀನವಾಸ ಶೆಟ್ಟರು ಮತ್ತು ಪ್ರಾಣಿ ದಯಾಳು ಸಂಘದ ಶೇಷಪ್ಪನವರಿಂದ ಶಹಬಾಸ್‌ಗಿರಿಯನ್ನು ಪಡೆದುಕೊಂಡು ಕಾಂಗ್ರೆಸ್‌ನ ಪ್ರಖ್ಯಾತ ಪ್ರಚಾರಕರ್ತರೆನಸಿಕೊಂಡರು. ಅಲ್ಲದೇ ಅವರ ಜೊತೆ ಸೇರಿ ಇತರೆ ಹಲವು ಹೋರಾಟಗಳಲ್ಲಿ ಭಾಗಿಯಾಗಿದ್ದು, ಅಲ್ಲದೆ ಸ್ವಯಂಸೇವಕರಾಗಿ ಹಲವೆಡೆ ತಮ್ಮ ಪ್ರಚಾರಗಳನ್ನು ಮುಂದುವರೆಸಿದರು.

ಮೈಸೂರು ಮತ್ತು ತುರವನೂರು ಅರಣ್ಯ ಸತ್ಯಾಗ್ರಹಗಳಲ್ಲಿ ಭಾಗಿ

೧೯೩೯ರಲ್ಲಿ ಮೈಸೂರಿನಲ್ಲಿ ನಡೆದ ಅರಣ್ಯ ಸತ್ಯಾಗ್ರಹದಲ್ಲಿ ಭಾಗಿಯಾಗಿ ಈಚಲು ಮರಗಳನ್ನು ಕಡಿದು ಹಾಕಿದರು. ಬ್ರಿಟಿಷ್ ಸರ್ಕಾರದ ವಿರುದ್ಧ ಮಾಡಿದ ಈ ವ್ಯಾಪಕ ಪ್ರತಿಭಟನೆಯಿಂದಾಗಿ ಅಪ್ರಾಪ್ತ ವಯಸ್ಕರೆಂಬ ಕಾರಣಕ್ಕಾಗಿ ಇವರನ್ನು ಬಂಧಿಸದೇ ಉಳಿದ ಸ್ವಯಂ ಸೇವಕರನ್ನು ಪೋಲೀಸರು ಬಂಧಿಸಿದರು. ಮೈಸೂರು ಅರಣ್ಯ ಸತ್ಯಾಗ್ರಹದ ಪ್ರಭಾವದಿಂದ ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ೧೯೩೯ರ ನವೆಂಬರ್ ತಿಂಗಳಲ್ಲಿ ನಡೆದ ಅರಣ್ಯ ಸತ್ಯಾಗ್ರಹದಲ್ಲಿ ಇವರು ಸಕ್ರಿಯವಾಗಿ ಭಾಗಿಯಾದರು: ಈ ಹೋರಾಟದ ಭಾಗವಾಗಿ ತುರವನೂರಿನಲ್ಲಿಯೇ ಹಲವಾರು ಈಚಲು ಮರಗಳನ್ನು

* ಅತಿಥಿ ಸಹಾಯಕ ಪ್ರಾಧ್ಯಾಪಕ, ಇತಿಹಾಸ ಮತ್ತು ಪುರಾತತ್ವ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ-೦೧.

ಕಡಿದು ಹಾಕಿ, ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿ ಬ್ರಿಟಿಷ್ ಸರ್ಕಾರದ ವಿರುದ್ಧ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು.

ಹರಿಹರದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗಿ

೧೯೪೦ರ ಏಪ್ರಿಲ್‌ನಲ್ಲಿ ಹರಿಹರದಲ್ಲಿ ನಡೆದ ಮೈಸೂರು ಕಾಂಗ್ರೆಸ್ ಅಧಿವೇಶನ ನಡೆಯಿತು. ಈ ಕಾರ್ಯಕ್ರಮದ ಕರಪತ್ರಗಳನ್ನು ತಮ್ಮ ಸುತ್ತಲಿನ ಅನೇಕ ನಗರ ಮತ್ತು ಹಳ್ಳಿಗಳಿಗೆ ತಮ್ಮ ತಮ್ಮ ಕಾಲ್ನಡಿಗೆಯಲ್ಲಿ ಹೋಗಿ ಗುಪ್ತವಾಗಿ ಹಂಚಿ ದೇಶ ಸೇವೆಗಾಗಿ ಜನರನ್ನು ಹುರಿದುಂಬಿಸಿದರು. ಸ್ವಯಂಸೇವಕರಾಗಿ ಈ ಅಧಿವೇಶನದಲ್ಲಿ ಸಕ್ರಿಯವಾಗಿ ಭಾಗಿಯಾದ ಶಾಮಪ್ಪನವರ ಕಾರ್ಯವೈಖರಿಯನ್ನು ಕಂಡ ಆಚಾರ್ಯ ವಿನೋಬಭಾವೆಯವರು ಇವರನ್ನು ಸ್ವತಃ ಕರೆದು ಬೆನ್ನುತಟ್ಟಿ ಅಪಾರ ಪ್ರಶಂಸೆ ವ್ಯಕ್ತಪಡಿಸಿದರು.[೨]

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗಿ

೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯ ಛಾಯೆಗಳು ಕಾಂಗ್ರೆಸ್ ಮುಖಂಡರಾದ ದೋತ್ರಿಗಾಲಿ ಶ್ರೀನಿವಾಸ ಮತ್ತು ಶ್ರೀ ಇಟಗಿ ವೇದಮೂರ್ತಿ ಇವರ ನಾಯಕತ್ವದಲ್ಲಿ ದಾವಣಗೆರೆಯಲ್ಲಿ ಸಹಾ ಮೊಳಗಿದವು. ಶಾಮಪ್ಪನವರ ಹೋರಾಟ ಘಟ್ಟದಲ್ಲೆ ಈ ಚಳುವಳಿ ಅತಿ ಪ್ರಾಮುಖ್ಯತೆ ಪಡೆದುಕೊಂಡಿದೆ. ಏಕೆಂದರೆ "ಶಾಮಪ್ಪನವರ ನೇತೃತ್ವದ ವಿದ್ಯಾರ್ಥಿ ಗುಂಪೊಂದು ಆಕ್ಟೋಬರ್ ೨೪ರಂದು ದಾವಣಗೆರೆ ರೈಲು ನಿಲ್ದಾಣದಲ್ಲಿ ನಿಂತಿದ್ದ ರೈಲೊಂದನ್ನು ನಿರ್ಭಯವಾಗಿ ಸುಟ್ಟು ಹಾಕಿದರು. ಹಾಗೆಯೇ ಅಲ್ಲಿನ ರೈಲ್ವೆ ಕಚೇರಿಯಲ್ಲಿದ್ದ ಎಲ್ಲಾ ಮಹಿಳೆಯರನ್ನು ಸ್ಥಳೀಯ ನ್ಯಾಯಾಧೀಶರಿಗೆ ಒಪ್ಪಿಸಿ, ವಿದೇಶಿ ಬಟ್ಟೆಗಳನ್ನು ಆ ರೈಲ್ವೆ ಕಚೇರಿ ಎದುರಿನಲ್ಲೇ ಸುಟ್ಟು ಹಾಕಿದರು. ಹಾಗೆಯೇ ಡಿಸೆಂಬರ್ ೨೫ರಂದು ದಾವಣಗೆರೆಯ ರೈಲ್ವೆ ನಿಲ್ದಾಣಕ್ಕೆ ಬಂದ ಸೈನಿಕ ರೈಲಿನಲ್ಲಿದ್ದ ಸೈನಿಕರ ವಿದೇಶಿ ಟೋಪಿಗಳನ್ನು, ಕಿತ್ತು ಹಾಕಿ ಅವುಗಳನ್ನು ಅಲ್ಲೇ ಧೈರ್ಯವಾಗಿ ಸುಟ್ಟು ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದರು". ಈ ಗುಂಪಿನ ಮೇಲೆ ಪೋಲೀಸರು ತಾಳ್ಮೆಗೆಟ್ಟು ಗುಂಡು ಹಾರಿಸಿದ ಪರಿಣಾಮವಾಗಿ ಸ್ಥಳದಲ್ಲೇ ಒಬ್ಬ ಸ್ವಾತಂತ್ರ್ಯ ಹೋರಾಟಗಾರ ಮೃತನಾದ. ನಂತರ ಪೋಲೀಸರು ಸೆರೆ ಹಿಡಿದ ನೂರಾರು ಹೋರಾಟಗಾರರಲ್ಲಿ ಶಾಮಪ್ಪನವರು ಸಹಾ ಒಬ್ಬರು. ಇವರನ್ನು ಚಿತ್ರದುರ್ಗ ಜೈಲಿನಲ್ಲಿ ಐದುವರೆ ತಿಂಗಳವರೆಗೆ ಸೆರೆಯಲ್ಲಿಟ್ಟು, ನಂತರ ವಿದ್ಯಾರ್ಥಿಗಳೆಂಬ ಕಾರಣಕ್ಕಾಗಿ ಇವರ ಜೊತೆಗೆ ಇನ್ನು ಕೆಲವರನ್ನು ಬಿಡುಗಡೆ ಮಾಡಲಾಯಿತು.

ಇವರು ೧೯೩೪ರಲ್ಲಿ ವಿವಾಹವಾಗಿ ಅದೇ ವರ್ಷ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾದರು. ನಂತರ ಹೊಟ್ಟೆಪಾಡಿಗಾಗಿ ಮಿಲಿಟರಿಯಲ್ಲಿ ಸಿವಿಲಿಯನ ಕ್ಲರ್ಕ್ (ಗುಮಾಸ್ತ) ಆಗಿ ೧೯೩೮ರವರೆಗೆ ಕೆಲಸ ನಿರ್ವಹಿಸಿದರು. ಆನಂತರ ೧೯೩೮-೧೯೪೭ರವರೆಗೆ 'ಕಿರ್ಲೋಸ್ಕರ್'ನಲ್ಲಿ ಗುಮಾಸ್ತರಾಗಿ ದುಡಿದರು. ಆ ಕಂಪನಿಯಲ್ಲಿದ್ದ ಮರಾಠಿಗರು ಮತ್ತು ಕನ್ನಡಿಗರು ಎಂಬಾ ಭೇದಭಾವದ ವಿರುದ್ಧ ಶಾಮಪ್ಪನವರು ಸಿಡಿದೆದ್ದು, ನನ್ನ ವಿದ್ಯಾರ್ಹತೆಗೆ ತಕ್ಕಂತೆ ವೇತನ ಜಾಸ್ತಿ ಮಾಡಿ ಎಂದು ಕಂಪನಯವರನ್ನು ಕೇಳಿ ಬೇಸತ್ತು ಕೊನೆಗೆ ನೊಂದು ಗುಮಾಸ್ತ ಹುದ್ದೆಯನ್ನು ೧೯೪೭ರಲ್ಲಿ ತ್ಯಜಿಸಿದರು. ನಂತರ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ಶಿಕ್ಷಕರಾಗಿ ನಂತರ ಅದೇ ತಾಲೂಕಿನ ನಗರಂಗೇರಿಯಲ್ಲಿ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿ ೧೯೭೫ರಲ್ಲಿ ನಿವೃತ್ತಿ ಹೊಂದಿದರು.

ಜನರಲ್ಲಿ ಬೇರು ಬಿಟ್ಟಿದ್ದ ಮೂಢನಂಬಿಕೆ, ಅಜ್ಞಾನ, ಹಿಂಸೆ, ಮದ್ಯಪಾನ ಇವುಗಳ ವಿರುದ್ಧ ಹಳ್ಳಿ ಹಳ್ಳಿಗೂ ಹೋಗಿ ಪ್ರಚಾರ ಮಾಡಿ ಅವರನ್ನು ಬೆಳಕಿನೆಡೆಗೆ ಸೆಳೆಯಲು ಹೋರಾಟದ ಸಂದರ್ಭದಲ್ಲಿ ಇವರು ಪ್ರಯತ್ನಿಸಿದರು. ಪ್ರಾಣಿ ದಯಾಳು ಸಂಘದ ಸದಸ್ಯರೊಡಗೂಡಿ 'ಹಿಂಸೆ' ಅಜ್ಞಾನದ ಪ್ರತೀಕ ಎಂದು ಜನತೆಗೆ ಸಾರಿ ಹೇಳಿ ಗಾಂಧೀಜಿಯವರ ಅಹಿಂಸಾ ತತ್ವವನ್ನು ಜನಪ್ರಿಯಗೊಳಿಸಿದರು. ಅಲ್ಲದೆ "ನೂರಾರು ವರ್ಷಗಳಿಂದ ಚಾಚು ತಪ್ಪದೆ ಕುರಿ ಕಡಿದು ಆಚರಿಸಲ್ಪಡುತ್ತಿದ್ದ ಹಿರೇರ ಹಬ್ಬವನ್ನು ೧೯೩೫ರಲ್ಲಿ ಕುರಿ ಕಡಿಯುವ ನೀತಿಗೆ ಮಂಗಳ ಹಾಡಿ ಕೇವಲ ಸಸ್ಯಾಹಾರದಿಂದ ಹಿರೇರ ಹಬ್ಬ ಪೂರೈಸಿದ್ದು" ಇವರ ಅಹಿಂಸಾ ನೀತಿಗೆ ಹಿಡಿದ ಕೈಗನ್ನಡಿಯಾಗಿದೆ.

ಅಪ್ಪಟ ಗಾಂಧೀವಾದಿಗಳಾಗಿದ್ದ ಶಾಮಪ್ಪನವರು ಬಳ್ಳಾರಿಯ ಶ್ರೀ ಮುರೆಗೆಪ್ಪ, ಕೊಟ್ಟಿಗೆ ಸಿದ್ಧಲಿಂಗಪ್ಪ ಇವರ ಮಾರ್ಗದರ್ಶನದಲ್ಲಿ ದಾವಣಗೆರೆ, ಜಗಲೂರು, ಹೊಳಲ್ಕೆರೆ ಇನ್ನೂ ಮೊದಲಾದಡೆಯ ಹರಿಜನ ಕೇರಿಗಳನ್ನು ಸ್ವಚ್ಛ ಮಾಡಿಸಿದರು. ಅಂದು ಸಾರ್ವಜನಿಕ ದೇವಾಲಯ, ಹೋಟಲುಗಳಿಗೆ ಸಾವಿರಾರು ವರ್ಷಗಳಿಂದ ಹರಿಜನರ ಪ್ರವೇಶ ನಿರಾಕರಿಸಲ್ಪಟ್ಟಿತ್ತು. ಈ ಅವ್ಯವಸ್ಥೆಯ ವಿರುದ್ಧ ಸಿಡಿದೆದ್ದ ಕೆರೆಯಾಗಳಹಳ್ಳಿ ಸಿಡ್ಲಪ್ಪ, ಹಿರಿಯೂರು ಕೆಂಚಪ್ಪ ಇವರ ಜೊತೆ

ಸೇರಿ ಇಂತಹ ಹಲವು ಕಟ್ಟುಪಾಡುಗಳನ್ನು ಮುರಿದು ಹಾಕಿದರು. 'ಅಸ್ಪೃಶ್ಯತೆ' ಈ ದೇಶಕ್ಕೆ ಅಂಟಿದ ಶಾಪ ಎಂದು ಹೇಳಿದ ಗಾಂಧೀಜಿ ಮತ್ತು ಅವರ ವಿರುದ್ಧ ಸಮರವನ್ನೇ ಸಾರಿದ ಡಾ. ಬಿ.ಆರ್. ಅಂಬೇಡ್ಕರ್‌ರಂತೆ, ದಾವಣಗೆರೆಯಂತಹ ಪ್ರದೇಶದಲ್ಲಿ ಭಾಗಶಃ ಅದರ ಆಚರಣೆಯ ವಿರುದ್ಧ ಸಿಡಿದೆದ್ದು, ಅಸ್ಪೃಶ್ಯರಿಗೆ ಆಗುವ ಅನ್ಯಾಯಗಳ ಬಗ್ಗೆ ಪ್ರತಿಭಟನೆ ಮಾಡಿದವರಲ್ಲಿ ಶಾಮಪ್ಪ ಪ್ರಮುಖರಾಗಿದ್ದಾರೆ.[೩] ಇವರು ಚಳ್ಳಕೆರೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವಾಗ ಪ್ರವಾಸಿ ಮಂದಿರದ ಪಕ್ಕದ ೨ ಎಕರೆ ಜಮೀನನ್ನು ಸರ್ಕಾರದಿಂದ ಪಡೆದು ಸ್ವ-ಜಾತಿಯ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿ ನಿಲಯ ಕಟ್ಟಿಸಲು ಶ್ರಮಿಸಿದರು. ಆ ವಿದ್ಯಾರ್ಥಿ ನಿಲಯದ ಕಟ್ಟಡವನ್ನು ಅಂದಿನ ಮಂತ್ರಿಗಳಾಗಿದ್ದ ಬಿ. ರಾಚಯ್ಯ ಇವರಿಂದ ಶಂಕುಸ್ಥಾಪನೆ ಮಾಡಿಸಿದ್ದು ಇವರ ಬಹು ಮುಖ್ಯ ಸಾಧನೆ ಎನ್ನಬಹುದು.

ಸನ್ಮಾನ

ಶಾಮಪ್ಪನವರ ಈ ಸುದೀರ್ಘವಾದ ಹೋರಾಟವನ್ನು ಗುರುತಿಸಿದ ಭಾರತ ಸರ್ಕಾರವು ಇವರನ್ನು ಗೌರವಿಸಿದೆ. ಅಂದಿನ ಪ್ರಧಾನಿಗಳಾದ ಶ್ರೀ ರಾಜೀವಗಾಂಧಿಯವರು ಇವರಿಗೆ ತಾಮ್ರಪತ್ರ ನೀಡಿ ಮತ್ತು ಸ್ವಾತಂತ್ರ್ಯ ಹೋರಾಟಗಾರರ ಗೌರವಧನವನ್ನು ನೀಡಿ ಗೌರವಿಸಿದ್ದು ಶ್ಲಾಘನೀಯ. ೧೫-೦೮-೯೧ರಲ್ಲಿ ಇವರ ಅವಿಸ್ಮರಣನೀಯ ಹೋರಾಟವನ್ನು ಮೆಚ್ಚಿದ ಚಳ್ಳಕೆರೆಯ ೪೫ನೇ ಸ್ವಾತಂತ್ರ್ಯೋತ್ಸವ ಸಮಿತಿಯವರು ನಾಗರಿಕರ ಸಮ್ಮುಖದಲ್ಲಿ ಇವರಿಗೆ ಸನ್ಮಾನ ಪತ್ರವನ್ನು ನೀಡಿ ಗೌರವಿಸಿರುವುದು ನಿಜಕ್ಕೂ ಪ್ರತಿಭೆಗೆ ಸಂದ ಗೌರವವಾಗಿದೆ.

ಬಹುಮುಖ ಪ್ರತಿಭೆಯ ಶಾಮಪ್ಪನವರು ಸ್ವತಃ ನಾಯಕತ್ವ ವಹಿಸಿಕೊಂಡು ಮುಖ್ಯ ಹೋರಾಟಗಳನ್ನು ನಡೆಸದೆ ಇದ್ದರೂ ಸಹಾ ಇತರೆ ನಾಯಕರ ಮಾರ್ಗದರ್ಶನದಲ್ಲಿ ಹಗಲಿರಳೆನ್ನದೆ ಸ್ವಾತಂತ್ರ್ಯ ಹೋರಾಟಗಾರರ ಜೊತೆ ಸೇರಿ ಹೋರಾಡಿ ದಲಿತೇತರರಿಗೆ ಸೀಮಿತವಾದ ಸ್ವಾತಂತ್ರ್ಯ ಹೋರಾಟದಲ್ಲಿ ದಲಿತರ ಪಾಲು ಇದೆ ಎಂಬುದನ್ನು ಸ್ವತಂತ್ರ್ಯ ಹೋರಾಟಗಾರರಾಗಿ ಸ್ವತಃ ತೋರಿಸಿಕೊಟ್ಟದ್ದು ಅತ್ಯಂತ ಮಹತ್ವದಾಯಕ ಎನಿಸಿದೆ. ಸದಾ ಖಾದಿಧಾರಿಗಳು ಹಾಗೂ ಅಪ್ಪಟ ಕನ್ನಡಾಭಿಮಾನಿಗಳಾಗಿದ್ದ ಶಾಮಪ್ಪನವರು ಸುಂದರ ಸಮಾಜ ನಿರ್ಮಾಣವಾಗಬೇಕೆಂದು ಬಯಸಿದ್ದರು. ಗಾಂಧೀಜಿಯವರ ಕನಸು ಇನ್ನೂ ನನಸಾಗುತ್ತಿಲ್ಲ, ಭ್ರಷ್ಟಾಚಾರ, ನಿರುದ್ಯೋಗ, ಬಡತನ ಇತ್ಯಾದಿಗಳು ನಮ್ಮ ಜನರನ್ನು ಕಾಡುತ್ತಿರುವುದು ವಿಷಾದನೀಯ. ಇವುಗಳನ್ನು ತೊಡದು ಹಾಕಲು ಸರ್ಕಾರ ಮತ್ತು ಅಧಿಕಾರಿಗಳು ಹಾಗೆಯೇ ಜನರು ಪಣತೊಡಬೇಕು. ಆಗ ಮಾತ್ರ ಈ ಸಮಸ್ಯೆಗಳಿಗೊಂದು ಪರಿಹಾರ ಸಿಕ್ಕು ರಾಷ್ಟ್ರ ಇನ್ನು ಪ್ರಗತಿಯತ್ತ ದಾಪುಗಾಲು ಹಾಕುತ್ತದೆ ಎಂಬುದು ಅವರ ಬಲವಾದ ನಂಬಿಕೆಯಾಗಿತ್ತು. ಪ್ರಸ್ತುತ ಚಿತ್ರದುರ್ಗದ ಚಳ್ಳಕೇರಿಯಲ್ಲಿ ವಾಸವಾಗಿರುವ ಶ್ರೀ ಶಾಮಪ್ಪನವರ ಹೋರಾಟದ ಬದುಕು ನಮ್ಮೆಲ್ಲರಿಗೂ ಮಾದರಿ ಮತ್ತು ಉತ್ತೇಜನಕಾರಿಯಾಗಿದೆ.

ಆಧಾರಸೂಚಿ

೧. ಇದು ಅವರು ಕಲಿತ ದಾವಣಗೆರೆಯ ಸರ್ಕಾರಿ ಶಾಲೆಯಲ್ಲಿರುವ ದಾಖಲೆ ಪುಸ್ತಕದಲ್ಲಿ ನಮೂದಿತವಾಗಿದೆ.

೨. ಶಾಮಪ್ಪನವರು ನೀಡಿದ ಮಾಹಿತಿ.

೩. ದಾವಣಗೆರೆಯ ಭೀಮಪ್ಪ ಮತ್ತು ಸಿದ್ದಪ್ಪನವರು ನೀಡಿದ ಮಾಹಿತಿ.

೪. ಶಾಮಪ್ಪನವರು ನೀಡಿದ ಮಾಹಿತಿ.

೧೧೨

ದಾಸ ಸಾಹಿತ್ಯಕ್ಕೆ ಹರಪನಹಳ್ಳಿ ಭೀಮವ್ವನವರ ಕೊಡುಗೆ ಹೊಸ ಶೋಧ

ಟಿ.ಹೆಚ್.ಎಂ. ಬಸವರಾಜ*

ದಾಸ ಸಾಹಿತ್ಯಕ್ಕೆ ಹರಪನಹಳ್ಳಿ ಭೀಮವ್ವ ತಮ್ಮ ಅಮೂಲ್ಯವಾದ ಕೊಡುಗೆಯನ್ನು ನೀಡಿ ಪ್ರಖ್ಯಾತವಾದರು. ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಭೀಮವ್ವ ೧೮೨೩ನೇ ಇಸ್ವಿ ಜುಲೈ ೬ನೇ ತಾರೀಖು, ಭಾನುವಾರ ಹೊಸಪೇಟೆ ತಾಲ್ಲೂಕಿನ ನಾರಾಯಣ ದೇವರಕೆರೆ ಎಂಬ ಹಳ್ಳಿಯಲ್ಲಿ ಸ್ವಭಾನುನಾಮ ಸಂವತ್ಸರ ಜೇಷ್ಠ ಬಹುಳ ಕೌಂಡಿನ್ಯ ಗೋತ್ರದಲ್ಲಿ ತ್ರಯೋದಶಿ ನರೇಭಟ್ಟರ ವಂಶದ ರಘುನಾಥಾಚಾರ್ಯ ಮತ್ತು ರಾಘಮ್ಮ ದಂಪತಿಗಳ ಚೊಚ್ಚಲ ಪುತ್ರಿಯಾಗಿ ಜನಿಸಿದರು. ಹುಟ್ಟು ಹೆಸರು ಕಮಲಾಕ್ಷಿ ಹುಟ್ಟಿದ ಮಗುವಿಗೆ ಕೆಲವು ದಿನಗಳವರೆಗೂ ಮೈತುಂಬಾ ಚಕ್ರಗಳು, ಕಾಲುಗಳೆರೆಡರಲ್ಲಿ ಪದ್ಮಗಳು ಕಾಣುತ್ತಿದ್ದವು. ಮೂರು-ನಾಲ್ಕು ತಿಂಗಳು ಮಗುವಿದ್ದಾಗಲೇ ತೊಟ್ಟಿಲು ತೂಗುವಾಗ ಹರಿನಾಮಗಳನ್ನು ಹಾಡಬೇಕಿತ್ತು. ಇತರೆ ಪದಗಳನ್ನು ಹಾಡಿದರೆ ಮಗು ಅಳಲಾರಂಭಿಸುತ್ತಿತ್ತು. ಚುರುಕಾಗಿದ್ದ ಈ ಮಗು ಮುಂದೆ ಭೀಮಾಬಾಯಿ ಎಂದು ಕರೆಸಿಕೊಂಡು ಭೀಮವ್ವ ಎಂದು ಖ್ಯಾತಿಯಾಯಿತು. ಭೀಮವ್ವನ ತಂದೆ-ತಾಯಿಗಳು ವೈಷ್ಣವ ಸಂಪ್ರದಾಯಸ್ತರು. ಹಬ್ಬ-ಹರಿದಿನಗಳನ್ನು ನಿಷ್ಠೆಯಿಂದ ಆಚರಿಸುತ್ತಿದ್ದರು. ಈಕೆಗೆ ೧೧ ವರ್ಷಗಳಾದಾಗ ರಾಯದುರ್ಗ ತಾಲ್ಲೂಕು, ಹರೇಸಮುದ್ರ ಗ್ರಾಮದ ಗೋಪಾಲಪ್ಪ ಎಂಬ ಕುಲಕರ್ಣಿ ವಂಶದ ಸಂಬಂಧಗಳಾಗಿತ್ತು. ಕ್ಷಾಮ ಕಾಲದಲ್ಲಿ ಆ ಸ್ಥಳವನ್ನು ಬಿಟ್ಟು ಹರಪನಹಳ್ಳಿಯಲ್ಲಿ ಬಂದು ನೆಲೆಸಿದರು. ಅವರ ಮರಿಮಗ ಮುನಿಯಪ್ಪನವರು ೬ ವರ್ಷ ಇರುವಾಗಲೇ ತಂದೆ-ತಾಯಿಗಳನ್ನು ಕಳೆದುಕೊಂಡರು. ಇವರ ನಾಲ್ಕನೇ ಹೆಂಡತಿಯಾಗಿ ಭೀಮವ್ವನವರು ಮನೆ ತುಂಬಿದರು. ಅತ್ತೆ ಮನೆಯಲ್ಲಿ ಕೃಷ್ಣಬಾಯಿಯೆಂದು ಹೆಸರಿಟ್ಟರು. ಅವರ ಪತಿ ಮುನಿಯಪ್ಪನವರಿಗೆ ೪೫ ವರ್ಷಗಳು ಇವರಿಗೆ ೧೧ ವರ್ಷಗಳು, ಇವರಿಗೆ ೧೪ ವರ್ಷ ಇರುವಾಗ ತಾಯಿ ತೀರಿಕೊಂಡರು. ಭೀಮವ್ವ ೩೫ ವರ್ಷವಿದ್ದಾಗ ಗಂಡ ಮುನಿಯಪ್ಪನವರು ಸ್ವರ್ಗಸ್ಥರಾದರು. ಆ ಬಳಿಕ ಇವರ ಜೀವನ ಮಾರ್ಗವೇ ಬದಲಾಯಿತು. ಒಂದು ದಿನ ಮಧ್ಯಾಹ್ನ ಮಲಗಿದ್ದಾಗ ಒಂದು ಸ್ವಪ್ನವನ್ನು ಕಂಡರು. ತಂಬೂರಿ ಧರಿಸಿದ ಬ್ರಾಹ್ಮಣ, ಕೃಷ್ಣ ಸರ್ಪದೊಂದಿಗೆ ಬಂದು ನಾಲಿಗೆಯ ಮೇಲೆ ಮೂರು ಅಕ್ಷರಗಳನ್ನು ಬರೆ ಎಂದು ಆ ಸರ್ಪಕ್ಕೆ ಹೇಳಿದ ಆ ಸರ್ಪವು ಈಕೆ ನಾಲಿಗೆಯ ಮೇಲೆ ಬರೆಯಿತು.

ಅಂದಿನಿಂದ ಆಕೆಗೆ ಹಾಡು ಬರಲು ಪ್ರಾರಂಭವಾಯಿತು. ಹಾಗೆಯೇ ಮೊದಲು ಬಂದಿದ್ದು "ರಕ್ಷಿಸಬೇಕೆನ್ನ ಲಕ್ಷ್ಮೀನರಸಿಂಹ ಭಕ್ತಾನೆ" ಎಂಬ ಹಾಡು.

ಭೀಮವ್ವನ ತವರು ಮನೆ ಹೆಸರು ಭೀಮಾಬಾಯಿ ಅತ್ತೆ ಮನೆ ಹೆಸರು ಕೃಷ್ಣಾಬಾಯಿ ಎಂದಿದ್ದರಿಂದ ಮುಂದೆ ಇವರು ಭೀಮೇಶಕೃಷ್ಣ ಎಂಬ ಅಂಕಿತದಿಂದಲೇ ಹಾಡುಗಳನ್ನು ರಚಿಸಿರುತ್ತಾರೆ. ಅಕ್ಷರ ಜ್ಞಾನ ರಹಿತವಾಗಿದ್ದರು ಕೇವಲ ಭಗವಂತನ ಅನುಗ್ರಹದಿಂದ ಮಾತ್ರ ನೂರಾರು ಸರಸ ಸುಂದರ ಹಾಡುಗಳನ್ನು ರಚಿಸಿ ಓದುಗರ ಮತ್ತು ಕೇಳುಗರ ಹೃದಯದಲ್ಲಿ ಭಕ್ತಿಯ ಬೀಜವನ್ನು ಬಿತ್ತುವುದರ ಜೊತೆಗೆ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಆದರಣೀಯ ನಾರಿಮಣಿ ಎನಿಸಿದ್ದಾರೆ ಭೀಮವ್ವನವರು. ಭೀಮವ್ವನವರು ಮಾಧ್ವ ಸಂಪ್ರದಾಯ ಕುಟುಂಬದಿಂದ ಬಂದವರು ಮಾತ್ರವಲ್ಲ ಆಚಾರ್ಯ ಮಧ್ವರ ಮತವೇ ಶುದ್ಧ ಶಾಸ್ತ್ರಗಳೆಂದು ಸಕಲ ಸ್ಮೃತಿ ಸಮ್ಮತವೆಂದು ಮತ್ತು ಮುಚುಕುಂದ ವರದಾ ಮುಕುಂದವನ್ನು ಮೂಡಲಗಿರಿ ಗೋವಿಂದನನ್ನು ಕಾಣಲು ಸೂಕ್ತವಾದ ಪಥವೆಂದು ಬಲವಾಗಿ ನಂಬಿದವರು. ಇಂತೆಯೇ ಆಚಾರ್ಯ ಮಧ್ವರನ್ನು ಕೊಂಡಾಡುವಾಗ

"ಮಧ್ಯಗೇಹರಲ್ಲಿ ಜನಿಸಿ ಸುಜನರಿಗೆ
ಶುದ್ಧ ಶಾಸ್ತ್ರವ ಬೋಧಿಸಿ

* ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರು, ಕರ್ನಾಟಕ ಇತಿಹಾಸ ಅಕಾಡೆಮಿ, ೩೬/೨೫, ವಿದ್ಯಾಗಿರಿ ಬಡಾವಣೆ, ಬಳ್ಳಾರಿ.

ಗೆದ್ದು ಮಾಯವಾದಿಗಳ ಪ್ರ
ಸಿದ್ದನೆನಿಸಿದ ಮಧ್ವಮುನಿವರ
ಮುದ್ದು ಭೀಮೇಶಕೃಷ್ಣನ ಪ್ರಸಿದ್ಧಿ ಮಾಡಿದ
ಪರಮ ಗುರುವೆ"

ಎಂಬುದಾಗಿ ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ.

ಅಲ್ಲದೇ ಅವರ ಅನೇಕ ಹಾಡುಗಳಲ್ಲಿ ಮಧ್ವ ಮತದ ತತ್ವದ ನಿರೂಪಣೆಯನ್ನು ನೋಡಬಹುದು. ಅವರು ರಚಿಸಿರುವ ಸ್ತುತಿಮಣಿ ಮಾಲಿಕೆ ಎಂಬ ತತ್ವ ಸುವಾಲಿ ಧಾಟಿಯಲ್ಲಿ ಇರುವ ಕೃತಿಯೆಂದು ಶ್ರೀಮಧ್ವಚಾರ್ಯರ ತತ್ವವಾದ ಪ್ರಮೇಯಗಳನ್ನು ಭಟ್ಟಿ ಇಳಿಸಿದಂತಿದೆ. ಹರಿಸರ್ವೋತ್ತಮ, ಸರ್ವ ವ್ಯಾಪ್ತಿತ್ವ, ಪಂಚಬೇದ, ತಾರತಮ್ಯಗಳನ್ನು ಕೊಂಡಾಡುತ್ತಾ ಮಧ್ವಮತದ ತತ್ವಗಳನ್ನು ಸಜ್ಜನರ ಮುಂದರಿಸಿದ್ದಾರೆ. ಭೀಮವ್ವನವರ ಹಾಡುಗಳಲ್ಲಿ ಭಕ್ತಿ ನಿರೂಪಣೆ, ಹಾಸ್ಯರಸ, ಒಗಟು ಮುಂತಾದವು ಎಲ್ಲರ ಮನಸ್ಸಿಗೆ ಸಂತೋಷವನ್ನು ಉಂಟು ಮಾಡುತ್ತವೆ. ಮುತ್ತೈದೆ ಹಾಡು, ಸುಭದ್ರ ಕಲ್ಯಾಣ, ರತಿಕಲ್ಯಾಣ, ನಳಚರಿತ್ರೆ, ಪತಿದಾನ ಕೊಟ್ಟ ಹಾಡು ಮೊದಲಾದ ದೊಡ್ಡ ಚಿಂತನೆಗಳಿಗೆ ಅನೇಕ ಸಣ್ಣಪುಟ್ಟ ಕೀರ್ತನೆಗಳನ್ನು ರಚಿಸಿದ್ದಾರೆ.

ಚಿನ್ನದ ಚಾವಡಿ ಮೇಲೆ ಪನ್ನಂಗ ಶಯನರು, ಮಾನ್ಯಮಾನ್ಯರು ಮುಕ್ತರು । ಮುಕ್ತರ ನೋಡುತಲಿ ಮಾತ್ಯಾರ ಭಯವೂ ನಮಗಿಲ್ಲ । ಐದು ನುಡಿಗಳ ಹಾಡನ್ನು ಮೂರು ದಿನಗಳ ಮೊದಲು ಮಾಡೋಣೆ ಮುತೈದೆಯರು ಜೋಡು ಜ್ಯೋತಿ ಆರುತಿ ಎಂಬ ಆರುತಿ ಹಾಡನ್ನು ಶ್ರೀಹರಿಗೆ ಅರ್ಪಿಸಿದ್ದಾರೆ. ಹರಿದಾಸರ ಸಂಪ್ರದಾಯದಂತೆ ಭೀಮವ್ವ ಕೀರ್ತನೆ, ಸುಳಾದಿ, ಉಗಾಭೋಗ ಎಂಬ ಮೂರು ಪ್ರಕಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇದಲ್ಲದೇ ೧೪೩ ಸಣ್ಣ ಕೀರ್ತನೆಗಳು, ಮೂರು ನುಡಿಗಳಿರುವ ಚಿಕ್ಕ ಕೀರ್ತನೆಯಿಂದ ಹಿಡಿದು ೧೯೩ ದೊಡ್ಡ ಕೀರ್ತನೆಗಳನ್ನು ರಚಿಸಿ ಲಕ್ಷ್ಮಿದೇವಿ ಹಾಡು, ಜಲಕ್ರೀಡೆ ಹಾಡು, ಶನಿವಾರದ ಹಾಡು ಮುಂತಾದವು ದೀರ್ಘ ಕೀರ್ತನೆಗಳು ಕಥನ ಕಾವ್ಯಗಳೆನ್ನಬಹುದು. ರಾಮಾಯಣ, ಮಹಾಭಾರತ ಭಾಗವತದ ಘಟನೆಗಳನ್ನು ಇವರುಗಳ ವಸ್ತುವಾಗಿರುತ್ತವೆ. ಭೀಮವ್ವ ವರ್ಣಿಸಿರುವ ಭಕ್ಷಭೋಜಗಳಂತು ಎಂತವರ ಬಾಯಿಯಲ್ಲಿ ನೀರು ತರಿಸುವಂತಿದೆ. ಮುತ್ತಿನ ಹರಿವಾಣದಲ್ಲಿ ಮಾಲತಿ ಭಟ್ಟವಿ, ಗೌಲಿ, ಅಪ್ಪವುಳ್ಳ, ಶಾವಿಗೆ, ಪರಡಿ ಪಾಯಸ, ಹೆಣ್ಣೋರಿಗೆ, ಬೀಸೋರಿಗೆ, ಡುಳ್ಳೋರಿಗೆ, ಮಂಡಿಗೆ, ಚೂರ್ಮಲಾಡು, ಚಕ್ಕುಲಿ, ಕರ್ಜಿಕಾಯಿ, ದಧನ್ಯ, ಅಂಬೋಡೆ, ಸೀಕರಣೆ, ಸಾರು, ಸಾಂಬಾರು ಎಲ್ಲವನ್ನು ಅಂದವಾಗಿ ಬಡಿಸಿ, ಘಮಘಮಿಸುತ್ತಿರುವ ತಿನಿಸುಗಳನ್ನು ದೇವಿ ಮಂಗಳಗೌರಿಗೆ ನೈವೇದ್ಯಕ್ಕೆ ಇರಿಸಿರುವರು. ಮಂಗಳಗೌರಿ ಹಾಡು, ಲಕ್ಷ್ಮಿದೇವಿ ಹಾಡು, ಮುತ್ತೈದೆತನದ ಹಾಡು, ಪುತ್ರಿ-ಪುತ್ರ ಸಂತಾನ ಪ್ರಾಪ್ತಿ ಹಾಡಿಗೆ ಜೀವ ತುಂಬಿದ್ದಾರೆ. ಆರತಿ ಎತ್ತುವುದು, ಉರಟಣೆ ಮಾಡುವುದು, ಆಶೀರ್ವಾದ ಮಾಡುವುದು, ಬಾಗಿಲು ತಟ್ಟುವುದು ರೂಢಿಗತ ಸಾಮೂಹಿಕ, ಸಾಂಪ್ರದಾಯಗಳು ಭೀಮವ್ವನವರ ಕೀರ್ತನೆಗಳಲ್ಲಿ ಹೆತೋಚ್ಚಿತ ಸ್ಥಾನ ಪಡೆದಿವೆ. ಅದರಲ್ಲೂ ಕೇವಲ ಹೆಂಗಳೆಯರ ಸಮಕ್ಷಮದಲ್ಲಿ ಹೆಂಗಳೆಯರೇ ಹೆಂಗಳೆಯರಿಗೆ ಮಾಡುವ ಬಸುರಿ ಹೆಂಗಸಿಗೆ ಹೂ ಮುಡಿಸಿ, ಬಯಕೆ ತೀರಿಸುವ, ಮಗುವಿಗೆ ತೊಟ್ಟಿಲು ಇಡುವ ವಿಶೇಷ ಸಾಂಪ್ರದಾಯಗಳಂತೂ ತಮ್ಮ ಹಾಡುಗಳಲ್ಲಿ ಎಳೆಎಳೆಯಾಗಿ ಬಣ್ಣಿಸಿದ್ದಾರೆ. ಭೀಮವ್ವನವರು ಶಾಲಿವಾಹನ ಶಕೆ ೧೯೦೩ ಜನವರಿ ೧೧ ಭಾನುವಾರ ಹೊಸಪೇಟೆ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಶುಭಕೃತನಾಮ ಸಂವತ್ಸರ ಪುಷ್ಯ ಶುದ್ಧ ದ್ವಾದಶಿ ಎರಡೂವರೆ ಗಂಟೆ ಸಮಯದಲ್ಲಿ ದೇವರಯಾತ್ರೆ ಮಾಡಿದ್ದಾರೆ. ಅಂದರೆ ನಿಧನ ಹೊಂದಿದವರು. ಹೊಸಪೇಟೆ ವಕೀಲ, ಸಂಡೂರು ಕೃಷ್ಣಾಚಾರರ ಮನೆಯಲ್ಲಿ ಭೀಮವ್ವರವರ ಉತ್ತರ ಕಾರ್ಯಗಳು ಜಮದಗ್ನಿ ಕ್ಷೇತ್ರ ಹೊಸೂರು ಗ್ರಾಮದಲ್ಲಿ ತುಂಗಭದ್ರ ತೀರದಲ್ಲಿ ಜರುಗಿರುತ್ತವೆ. ಇವರ ೧೧ನೇ ದಿವಸ ರಾತ್ರಿ ಸುಮಾರು ೧ ಗಂಟೆ ವೇಳೆ ಪವಾಡದಯ್ಯನ ಗುಡಿಯಲ್ಲಿ ಎಲ್ಲರು ಮಲಗಿರುವಾಗ ಒಂದು ಸಪ್ಪೆ ತೆಂಗಿನಕಾಯಿ ಗಿಡತ್ತರವಾದ ಕೆಂಪು ವರ್ಣದ ನಕ್ಷತ್ರವು ನದಿ ಕಡೆಯಿಂದ ಪೂರ್ವಕ್ಕೆ ಎತ್ತರದ ಮೇಲೆ ಬಂದು ಆ ಗುಡಿಯ ಮುಂಭಾಗದಲ್ಲಿರುವ ಶಿವಾಲಯದ ಗೋಪುರದ ಮೇಲೆ ಬಂದು ೫-೬ ನಿಮಿಷ ಅಲ್ಲಿ ನಿಂತು ಮೇಲಕ್ಕೆ ಅಂತರಿಕ್ಷಕ್ಕೆ ಹಾರಿಹೋಯಿತು. ಸ್ವಲ್ಪ ದೂರ ಕಂಡು ಮಾಯಾವಾಯಿತು. ಆ ಗುಡಿಯಲ್ಲಿ ಮಲಗಿದವರು ಕಂಡು ನಾರಾಯಣ, ನಾರಾಯಣ ಎಂದಿದ್ದಾರೆ. ಶ್ರೀ ಕೃಷ್ಣಾರ್ಪಣಮಸ್ತು, ಶ್ರೀ ಭೀಮೇಶಕೃಷ್ಣಾಯ ನಮಃ, ಶ್ರೀ ಗುರುಭ್ಯೋನಮಃ. ಹರಪನಹಳ್ಳಿ ಭೀಮವ್ವನವರ ಆರಾಧ್ಯ ದೈವ ಹರಪನಹಳ್ಳಿ ತಾಲ್ಲೂಕು ದೇವರ ತಿಮ್ಮಲಾಪುರದ ಶ್ರೀ ವೆಂಕಟೇಶ ಇವರು ಪ್ರತಿನಿತ್ಯ ಬೆಳಿಗ್ಗೆ ಈ ದೇವಸ್ಥಾನಕ್ಕೆ ಹೋಗಿ ದೇವರ ಮುಂದೆ ಕೀರ್ತನೆಗಳನ್ನು ಹಾಡಿ ಆಶೀರ್ವಾದ ಪಡೆದುಕೊಂಡು ಬರುತ್ತಿದ್ದರು.

ಈಗ ದೊರೆತಿರುವ ಕೀರ್ತನೆ, ಸ್ತೋತ್ರಗಳು ಹಾಡುಗಳು ಪ್ರಕಟಗೊಳ್ಳಬೇಕಾಗಿದೆ.

[ಈ ಲೇಖನ ಬರೆಯಲು ಸಹಕರಿಸಿದ ನನ್ನ ಆಪ್ತ ಸ್ನೇಹಿತನಾದ ಶ್ರೀ ಎನ್. ಸುಬ್ರಮಣ್ಯಂ, ಬಳ್ಳಾರಿ ಶ್ರೀ ಡಾ॥ ಹೆಚ್.ಎಸ್. ಗೋಪಾಲ್‌ರಾವ್, ಶ್ರೀಮತಿ ನಿರ್ಮಲ, ಇತಿಹಾಸ ಅಕಾಡೆಮಿ, ಹರಪನಹಳ್ಳಿಯ ಸುಧಾಮೃತ ಭಜನಾ ಮಂಡಳಿ ಹಾಗೂ ಪರಿಮಳಾ ಭಜನಾ ಮಂಡಳಿಯವರಿಗೆ ನನ್ನ ಕೃತಜ್ಞತೆಗಳು.]

ಆಧಾರ ಗ್ರಂಥಗಳು

೧. ಸಮಗ್ರ ದಾಸ ಸಾಹಿತ್ಯ, ಸಂ. ೧೯, ಹರಪನಹಳ್ಳಿ ಭೀಮವ್ವನ ಕೀರ್ತನೆಗಳು, ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು-೨೦೦೩.

೨. ಹರಪನಹಳ್ಳಿ ಭೀಮವ್ವ ಬರೆದವರು ಜಯಸಿಂಹ, ಪರಿಮಳ ಪ್ರಕಾಶನ, ಬೆಂಗಳೂರು.

೩. ಶ್ರೀ ಭೀಮೇಶಕೃಷ್ಣ ಭಜನಾಮೃತ, ಪ್ರಕಾಶಕರು ಶ್ರೀ ಭೀಮೇಶಕೃಷ್ಣ ಭಜನಾ ಮಂಡಳಿ, ಹರಪನಹಳ್ಳಿ.

೪. ಶ್ರೀ ಹರಪನಹಳ್ಳಿ ಭೀಮವ್ವನವರ ಸಣ್ಣ ಕೃತಿಗಳು, ಪರಿಮಳ ಸೌರಭ, ಪರಿಮಳಾ ಭಜನಾ ಮಂಡಳಿ, ಮಠದ ಬೀದಿ, ಹರಪನಹಳ್ಳಿ.

೫. ನನ್ನ ವಿದ್ಯಾಗುರುಗಳಾದ ಶ್ರೀಮತಿ ವಾಸುಕಿಬಾಯಿ, ಬಿದರಹಳ್ಳಿ, ಮುಕ್ಕಾಂ, ಬಳ್ಳಾರಿ ಇವರಿಂದ ತಿಳಿದ ವಿಷಯಗಳು.

ಸ್ವಾತಂತ್ರ್ಯ ಹೋರಾಟದಲ್ಲಿ ಶಿವಪ್ಪ ಬಸಪ್ಪ ನೆಲ್ಲೂರರ ಪಾತ್ರ

ಶ್ರೀಮತಿ ಸರೋಜಿನಿ.ನೀ.ಹೊಸಕೇರಿ*

೧೯೪೩ರಲ್ಲಿ ಸೇನಾಭಿಯಾನ ನಡೆಸಿ ಅಂತಿಮ ಪರ್ವದಲ್ಲಿ ಭಾರತದ ಸ್ವಾತಂತ್ರ್ಯವನ್ನು ಸಮೀಪಗೊಳಿಸಿದ ನೇತಾಜಿ ಸುಭಾಸಚಂದ್ರ ಬೋಸ್ ತಮ್ಮ ಅಭಿಯಾನವನ್ನು ೧೮೫೭ರ ಮುಂದುವರಿಕೆ ಎಂದೇ ಪರಿಗಣಿಸಿದರು. ಬ್ರಿಟಿಷರ ವಿರುದ್ಧ ಸಮರವನ್ನು ಉಪಕ್ರಮಿಸುವುದಕ್ಕೆ ಮೊದಲು ಸುಭಾಸಚಂದ್ರರು ಬಹದೂರ ಶಾಹ ಅಫರನ ಸಮಾದಿಯ ದರ್ಶನ ಮಾಡಿ ಗೌರವವನ್ನರ್ಪಿಸಿದರು. ಸ್ವಾತಂತ್ರ್ಯಾನಂತರ ಜಾಫರನ ಅವಶೇಷಗಳನ್ನು ದೆಹಲಿಗೆ ಗೌರವಪೂರ್ವಕವಾಗಿ ತರಿಸಿಕೊಂಡು ಸ್ಮಾರಕ ಸ್ಥಾಪಿಸುವುದಾಗಿ ಘೋಷಿಸಿದರು.

೧೯೪೨ರ ಹೋರಾಟಗಾರರ ಹೆಸರು

೧. ಶಿವಪ್ಪ. ಬಸಪ್ಪ ನೆಲ್ಲೂರ, ೨. ಮುದಕಪ್ಪ. ಅಡಿವೆಪ್ಪ ಕಂಠಿ, ೩. ಗುರುಪಾದಪ್ಪ. ಸಂತೋಜಿ, ೪. ಶರಣಪ್ಪ. ರುದ್ರಪ್ಪ ಹಕಾರಿ, ೫.ಗಿರುಶಿದ್ದಪ್ಪ. ಈಶ್ವರಪ್ಪ ನವಲಗುಂದ, ೬. ನಾಗಪ್ಪ. ಗಿರಿಯಪ್ಪ ಕಮ್ಮಾರ, ೭. ರುದ್ರಪ್ಪ. ಉಳ್ಳಾಗಡ್ಡಿ, ೮. ರಾಚಪ್ಪ. ರುದ್ರಪ್ಪ ಹೊವಿನಹಳ್ಳಿ, ೯. ಪರಪ್ಪಾ. ರಾಚಪ್ಪ ಗಡಾದ, ೧೦. ರಾಚಪ್ಪ. ಚನ್ನಪ್ಪ ಐವಳ್ಳಿ, ೧೧. ಮಹಾದೇವಪ್ಪ. ಕಂಬಳಿ, ೧೨. ರಂಗರಾವ್. ಮದ್ವರಾವ್ ಕುಲಕರ್ಣಿ. ವಕೀಲ, ೧೩. ಸಂಗನಗೌಡ. ಪಾಟೀಲ್ ಅಬ್ಬಿಗೇರಿ, ೧೪. ಮರಿತಮ್ಮಪ್ಪ. ಗಡಗಿ, ೧೫. ನಾಗಪ್ಪ. ಡಂಬಳ.

ಆರಂಭಿಕ ಜೀವನ: ಶಿವಪ್ಪ ನೆಲೂರ ಇವರು ದಿನಾಂಕ ೦೬-೧೦-೧೯೧೯ರಲ್ಲಿ ಕೊತಬಾಳ ಗ್ರಾಮದ ಬಸಪ್ಪ ನೆಲ್ಲೂರ ಹಾಗೂ ಹನುಮವ್ವ ಇವರ ಉದರದಲ್ಲಿ ಜನಿಸಿದರು. ಮುಲ್ಕಿ ಶಿಕ್ಷಣವನ್ನು ರೋಣದಲ್ಲಿ ಮುಗಿಸಿದರು. ಇವರು ಬಸವಣ್ಣೆವ್ವ ಎಂಬ ಮಹಿಳೆಯನ್ನು ಮದುವೆಯಾದರು. ಇವರಿಗೆ ೫ ಜನ ಗಂಡುಮಕ್ಕಳು ಹಾಗೂ ಒಬ್ಬಳು ಹೆಣ್ಣುಮಗಳು ಇದ್ದಾರೆ. ೧೯೩೦ರಲ್ಲಿ ಬ್ರಿಟೀಷ್ ಸರಕಾರದಿಂದ ಶಿಕ್ಷಣ ಹೊಂದಿದ ರಂಗೂ ನರಸಿಂಹ ಕುಲಕರ್ಣಿ ಇವರು ಸ್ಥಾಪಿಸಿದ ಖಾಸಗಿ ಮಾಧ್ಯಮಿಕ ಶಾಲೆಯಲ್ಲಿ ಅಂಗ್ರೇಜಿ ಅಭ್ಯಾಸ ಮಾಡಿದರು. ರಂಗೂ ನರಸಿಂಹ ಕುಲಕರ್ಣಿಯವರು ಪಕ್ಕಾ ಗಾಂಧೀ ವಿಚಾರಗಳು ಮತ್ತು ಸ್ವಾತಂತ್ರ್ಯದ ಬಗ್ಗೆ ಸತ್ಯಾಗ್ರಹತತ್ವ ಖಾದಿ ಪ್ರಸಾರಗಳ ಬಗ್ಗೆ ತಿಳಿದಿರುವುದರಿಂದ ಅವರಲ್ಲಿಯ ಈ ಸ್ವಾತಂತ್ರ್ಯದ ಧೀರತನ ಶಿವಪ್ಪನವರಲ್ಲಿ ಮೂಡಿತು.

೧೯೩೨-೩೪ರಲ್ಲಿ ರೋಣ ತಾಲೂಕಿನ ಕರ್ನಾಟಕದ ಹಿರಿಯ ನಾಯಕರಲ್ಲೊಬ್ಬರಾದ ದೊಡ್ಡಮೇಟಿ ಅಂದಾನಪ್ಪನವರು ಜವಹರಲಾಲ ನೆಹರೂ ಹಾಗೂ ರಾಜೇದ್ರ ಪ್ರಸಾದರನ್ನು ರೊಣಕ್ಕೆ ಹಾಗೂ ಒಕ್ಕಲಿಗೆ ಕರೆಯಿಸಿ ರೋಣ ತಾಲುಕನ್ನು ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ಅಣಿಗೊಳಿಸಿದರು. ಇಂತಹ ಸಭೆ-ಮೆರವಣಿಗೆಗಳನ್ನು ಮಾಡುವಾಗ ಸೇವಾದಳದ ಸ್ವಯಂ ಸೇವಕರಾದ ಶಿವಪ್ಪ ನೆಲ್ಲೂರ ಇವರು ಮುಂಚೂಣಿಯಲ್ಲಿ ನಂತು ಕೆಲಸಗಳನ್ನು ಮಾಡಿ ಸಭೆ ಮೆರವಣಿಗೆಗಳನ್ನು ಯಶಸ್ವಿಗೊಳಿಸುತ್ತಿದ್ದರು.

೧೯೩೦ರಲ್ಲಿ ಶಿಕ್ಷೆಹೊಂದಿ ರಂಗೂ ನರಸಿಂಹ ಕುಲಕರ್ಣಿಯವರು ಬಾಸ್ಲಾಪುರ ಗ್ರಾಮದಿಂದ ರೋಣಕ್ಕೆ ಬರುವಾಗ ತಿರುಗಿ ಝುಂಡಾವನ್ನು ಹೆಗಲ ಮೇಲೆ ಹೊತ್ತುಕೊಂಡು **"ಝೀಂಡಾ ಊಂಚಾ ರಹೆ ಹಮಾರಾ"** ಅಂತಾರಾಷ್ಟ್ರಿಯ ಪದಗಳು ಹೇಳುತ್ತಾ ಬರುತ್ತಿದ್ದರು. ಶಿವಪ್ಪ ನೆಲ್ಲೂರ ಇವರು ಅವರನ್ನು ಹಿಂಬಾಲಿಸಿ ಜೈ ಜೈಕಾರ ಹಾಕುತ್ತಾ ರಾಷ್ಟ್ರೀಯ ಹಾಡುಗಳನ್ನು ಹೇಳುತ್ತಾ ಹೊಗುತ್ತಿದ್ದರು.

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸ.ಪ್ರ.ದ. ಕಾಲೇಜು, ನವನಗರ, ಬಾಗಲಕೋಟೆ-೫೮೭೧೦೩.

ರಾಷ್ಟ್ರೀಯ ಕಾರ್ಯಾಚರಣೆಗಳು

೧) ರಾಷ್ಟ್ರೀಯ ಬುಲೆಟ್ಟನ್ನು ಹಂಚುವುದು.

೨) ಹಳ್ಳಿ-ಹಳ್ಳಿಗಳಲ್ಲಿ ಸರಕಾರದ ವಿರುದ್ಧ ಪ್ರಚಾರ ಕಾರ್ಯವನ್ನು ಕೈಗೊಳ್ಳುವುದು.

೩) ೧೨-೦೯-೧೯೪೨ರಲ್ಲಿ ಮುಖ್ಯಸ್ಥಳವಾದ ರೋಣದಲ್ಲಿ ಒಂದು ದೊಡ್ಡ ಮೆರವಣಿಗೆಯನ್ನು ಹೊರಡಿಸಿ ತಾಲೂಕ ಕಛೇರಿಗೆ ಹೋಗಿ ಅಲ್ಲಿ ಸಭೆ ಮಾಡಿ ಆಗಿನ ಮಾಮಲೇದಾರ ಮತ್ತು ಫೌಜದಾರರಿಗೆ ನೀವು ರಾಜೀನಾಮೆಯನ್ನು ಕೊಡಿ ಗಾಂಧಿ ಟೊಪ್ಪಿಗೆ ಹಾಕಿಕೊಳ್ಳಿರೆಂದು ಶಿವಪ್ಪ ನೆಲ್ಲೂರ ಇವರು ಆಗ್ರಹಿಸುತ್ತಿದ್ದರು.

೪) ೦೯-೦೮-೧೯೪೩ರಂದು ಕ್ರಾಂತಿಯ ದಿನವೆಂದು ಆಚರಿಸಿ ಮುದಕಪ್ಪ ಅಡಿವೆಪ್ಪ ಕಂಠಿ ಹಾಗೂ ಇನ್ನೂ ಅನೇಕ ಜನರನ್ನು ಕೂಡಿಸಿಕೊಂಡು ರೋಣದ ಸರಕಾರಿ ಕನ್ನಡ ಶಾಲೆಗೆ ಬೆಂಕಿ ಹಚ್ಚಿದರು.

೫) ರೋಣ ತಾಲೂಕಿನ ಎಲ್ಲಾ ಶಾಲೆಗಳಿಂದ ಬಂದಿದ್ದ ಎಲ್ಲಾ ದಫ್ತರುಗಳು ಸರಕಾರಿ ಕನ್ನಡ ಶಾಲೆಯಲ್ಲಿ ಜಮಾ ಆಗಿರುವುದರಿಂದ ಎಲ್ಲವನ್ನು ಒಂದು ಕಡೆಗೆ ಕಪಾಟುಗಳಿಂದ ತಗೆದುಹಾಕಿ ಬಣವಿ ಒಟ್ಟಿ ಒಂದು ಡಬ್ಬಿ ಚಿಮಣಿ ಎಣ್ಣೆಯಿಂದ ಸುಟ್ಟುಹಾಕಿದರು.

೬) ಅಗಸ್ಟ ೧೫ರಂದು ಧುರೀಣರ ಬಂಧನದ ನಿಷೇಧ ಮತ್ತು ಬಿಡುಗಡೆಯ ಬಗ್ಗೆ ಸತ್ಯಾಗ್ರಹ ನಡೆಸಿದರು.

೭) ಇದೇ ಸಂದರ್ಭದಲ್ಲಿ ಅನೇಕ ವಿದ್ಯಾರ್ಥಿಗಳು ಹಾಗೂ ಸ್ನೇಹಿತರು ಜೊತೆಗೆ ಸೇರಿ ವೀರಭದ್ರ ದೇವರ ಗುಡಿಯ ಮುಂದೆ ಝುಂಡಾ ಧ್ವಜಾರೋಹಣವನ್ನು ಮಾಡಿ ಧ್ವಜದಡಿ ನಿಂತು ಸ್ವಾತಂತ್ರ್ಯ ಸಿಗುವವರೆಗೂ ವಿಶ್ರಾಂತಿ ಪಡೆಯಬಾರದೆಂದು ವೀರ ಪ್ರತಿಜ್ಞೆಯನ್ನು ಮಾಡಿ ಹಸ್ತಾಕ್ಷರಗಳಿಂದ ಸಹಿ ಹಾಕಿ ತಮ್ಮ ಧುರೀಣರಿಗೆ ಕಳುಹಿಸಿಕೊಟ್ಟರು.

೮) ಮಲ್ಲಾಪೂರ ಸ್ಟೇಶನ್ ರಸ್ತೆಯಲ್ಲಿದ್ದ ರೋಣದಿಂದ ೨೦ ಮೈಲಿಯಿರುವ ಚಿಕ್ಕಮಣ್ಣೂರವರೆಗೆ ೩ ಮೈಲುದ್ದ ತಂತಿಯನ್ನು ಕತ್ತರಿಸಿದ್ದಲ್ಲದೇ ಅಲ್ಲಿ ಇರತಕ್ಕ ಯಾವತ್ತೂ ತಾರಿನ ಕಂಬಗಳನ್ನು ಕಡಿದುಹಾಕಿದರು.

೯) ೨೬-೦೧-೧೯೪೪ರಂದು ಬೆಳಿಗ್ಗೆ ೮ ಘಂಟೆಗೆ ರೋಣದ ವೀರಭದ್ರ ದೇವರ ಗುಡಿಯ ಬೈಲಿನಲ್ಲಿ ಝೇಂಡಾ ವಂದನೆ ಕಾರ್ಯಕ್ರಮಕ್ಕೆ ಕಂಠಿ ಮುದಕಪ್ಪಾ, ಶರಣಪ್ಪ ಹಕಾರಿ, ನಾಗಪ್ಪ ಕಮ್ಮಾರ, ಗುರುಶಿದ್ದಪ್ಪ ಸಂತೋಜಿ, ಪರಪ್ಪ ಗಡಾದ, ಮೊದಲಾದವರೊಂದಿಗೆ ಸೇರಿ ಪ್ರಭಾತಬೇರಿ ಕೈಗೊಂಡು ಊರಲ್ಲೆಲ್ಲಾ ಸಂಚರಿಸಿ ಬಂದು ಧ್ವಜ ವಂದನೆ ಮಾಡಿದರು.

೧೦) ಜೈಲಿನಲ್ಲಿದ್ದಾಗ ರಾಜಕೀಯ ಅಧ್ಯಯನಮಾಡಿ ಸಭೆ, ಸಮ್ಮೇಳನಗಳಲ್ಲಿ ಭಾಷಣ, ಸಂಘಟನೆಯ ಬಗ್ಗೆ ತಿಳಿದುಕೊಂಡರು.

೧೧) ಕಾಂಗ್ರೆಸ್ ಸೇವಾದಳದ ಸಂಘಟನೆಯ ಬಗ್ಗೆ ವಿಶೇಷವಾಗಿ ಟ್ರೈನಿಂಗ್ ಪಡೆದರು.

೧೨) ಸೇವಾದಳದ ದೀಕ್ಷೆಯನ್ನು ಬಿಂದುಮಾಧವ ಬುರ್ಲಿ ಇವರಿಂದ ಪಡೆದಿದ್ದರು.

೧೩) ರೋಣ ತಾಲೂಕಿನ ಹಳ್ಳಿಗಳಾದ ಗಜೇಂದ್ರಗಡ, ಹೊಳೆ ಆಲೂರ, ನರೇಂದ್ರ, ಸೂಡಿ, ಬೆಳವಣಿಕಿ, ಹಿರೇಹಾಳ, ಅಬ್ಬಿಗೇರಿ, ಕೊತಬಾಳ ಮೊದಲಾದ ಕಡೆಗಳಲ್ಲಿ ಸೇವಾದಳದ ಶಾಖೆಗಳನ್ನು ತೆರೆದು ನಿತ್ಯವೂ ರಾಷ್ಟ್ರೀಯ ಶಿಕ್ಷಣವನ್ನು ಕೊಡುತ್ತಿದ್ದರು.

೧೪) ಶಿವಪ್ಪ ಬಸಪ್ಪ ನೆಲ್ಲೂರ್ ಇವರು ಸೇವಾದಳದ ಶಾಖೆಯನ್ನು ಮೊಟ್ಟಮೊದಲಿಗೆ ಗದಗದಲ್ಲಿ ಪ್ರಾರಂಭಿಸಿದರು.

೧೫) ಎರಡನೆಯದಾಗಿ ಲಕ್ಷ್ಮೇಶ್ವರದಲ್ಲಿ ೬ ತಿಂಗಳು ಇದ್ದು ಅಲ್ಲಿ ೨-೩ ಶಾಖೆಗಳನ್ನು ಸ್ಥಾಪಿಸಿ ಇಡೀ ಊರೇ ಈ ಕಾರ್ಯದಲ್ಲಿ ಭಾಗವಹಿಸುವಂತೆ ಜಾಗೃತಗೊಳಿಸಿದರು.

೧೬) ಆನಂತರ ಹೊಳೆಆಲೂರಿನಲ್ಲಿ ೬ ತಿಂಗಳು ಇದ್ದು ಇಲ್ಲಿ ೨ ಶಾಖೆಗಳನ್ನು ತೆರೆದು ಬಹಳ ಪ್ರಸಿದ್ದಿಯನ್ನು ಪಡೆಯಲಾಯಿತು.

೧೭) ೧೯೪೪ನೇ ಅಕ್ಟೋಬರ್ ೨ನೇ ತಾರೀಖಿಗೆ ಗಾಧೀಜಿಯವರ ಹುಟ್ಟುಹಬ್ಬದ ಪ್ರಯುಕ್ತವಾಗಿ ಬುಲೆಟ್ಟಗಳೂ ಬಂದಿದ್ದವು ಅವುಗಳನ್ನು ರೋಣದಲ್ಲಿ ಹಂಚಿ ಆ ದಿನ ವೀರಭದ್ರ ದೇವರ ಗುಡಿಯ ಬೈಲಿನಲ್ಲಿ ಧ್ವಜ ವಂದನೆಯನ್ನು ಏರ್ಪಡಿಸಿ ಭಾಷಣವನ್ನು ಮಾಡಿದರು.

೧೮) ೧೯೪೭ ನೇ ಅಗಸ್ಟ್ ೧೪ನೇ ತಾರೀಖಿನ ಮಧ್ಯರಾತ್ರಿ ೧೨-೦೦ ಗಂಟೆ ೧ ನಿಮಿಷಕ್ಕೆ ರೋಣ ತಾಲೂಕಾ ಕಛೇರಿ ಮೇಲೆ ಪ್ರಥಮವಾಗಿ ರಾಷ್ಟ್ರ ದ್ವಜಾರೋಹಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.

ಶಿವಪ್ಪ ನೆಲ್ಲೂರರು ಮಾಡಿದ ಸಂಕಲ್ಪ : ೧೯೪೨ ಸಪ್ಟಂಬರ್ ೧೬ನೇ ತಾರೀಖಿನಂದು ದೇಶಕ್ಕೆ ಸ್ವಾತಂತ್ರ್ಯ ದೊರೆತು ನಮ್ಮ ದ್ವಜವನ್ನು ನಾವು ಹಾರಿಸುವವರೆಗೂ ತಲೆಯ ಹಾಗೂ ಗಡ್ಡದ ಕೂದಲನ್ನು ತಗೆಯುವುದಿಲ್ಲಾ ಎಂದು ಸಂಕಲ್ಪ ಮಾಡಿ ೧೯೪೭ ಅಗಷ್ಟ ೧೪ ರಂದು ಮಧ್ಯರಾತ್ರಿ ೧೨-೦೦ ಗಂಟೆ ೧ ನಿಮಿಷಕ್ಕೆ ದ್ವಜಾರೋಹಣ ಮಾಡಿದ ನಂತರ ಕೂದಲನ್ನು ತೆಗೆಯಿಸಿಕೊಂಡರು.

ಭಾರತ ಮಾತೆಯ ಆರಾಧಕರೂ ಕರ್ನಾಟಕ ಮಾತೆಯ ಆರಾಧಕರೂ ಆದ ಶಿವಪ್ಪ ನೆಲ್ಲೂರ ರವರು ಪುನಃ ಕರ್ನಾಟಕ ಏಕೀಕರಣಕ್ಕಾಗಿ ಪ್ರತಿಜ್ಞೆಗೈದು ಹೋರಾಡಿ ೧೯೫೬ ನವ್ಹಂಬರ್ ೧ಕ್ಕೆ ಪುನಃ ಕೇಶರಾಶಿಯನ್ನು ತೆಗೆಯಿಸಿಕೊಂಡರು.

ದಿ॥ ಎಂ. ಹರಿದಾಸರ ಬಗ್ಗೆ ಶಿವಪ್ಪ. ಬಸಪ್ಪ ನೆಲ್ಲೂರರ ಅಭಿಪ್ರಾಯಗಳು : ದಿ॥ ಎಂ. ಹರಿದಾಸರು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಸಬ್ ಎಡಿಟರ್ ರಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಭಾಗದವರು. ಇವರು ಚಿಕ್ಕಂದಿನಲ್ಲಿಯೇ ಸುಪ್ರಸಿದ್ಧ ಬರಹಗಾರರಾಗಿದ್ದು, 'ಸಂಯುಕ್ತ ಕರ್ನಾಟಕದಲ್ಲಿ' ಸೇವೆ ಸಲ್ಲಿಸುತ್ತಿರುವಾಗ ೧೯೪೨ರ ಚಲೆಜಾವ್ ಚಳುವಳಿಯಲ್ಲಿ ಸೇರಿದರು. ಈ ಮಹನೀಯರು ಹಿಂಡಲಗಾ ಜೇಲಿನಲ್ಲಿ ಬೆಳಗಾಂವ ಕ್ಯಾಂಪ ಜೇಲಿನಲ್ಲಿ ಮತ್ತು ಧಾರವಾಡ ಜುವೆನಯಲ್ ಜೇಲಿನಲ್ಲಿ ಶ್ರೀಯುತರ ಜೋತೆಯಲ್ಲಿ ಇದ್ದರು ಅವರು ಒಳ್ಳೆಯ ವಾಗ್ಮಿಗಳು, ತತ್ವನಿಷ್ಟರು, ಅಪ್ಪಟ ಗಾಂಧೀವಾದಿಗಳು ಆಗಿದ್ದರು. ಇಷ್ಟೆಲ್ಲಾ ವೈಶಿಷ್ಟತೆ ಇದ್ದ ಇವರು "ಎಚ್ಚೆತ್ತ ಆಗ್ನೇಯ ಏಶಿಯಾ" "ಮುಂದುವರೆದ ಜಪಾನ" ಹೀಗೆ ಮುಂತಾದ ಗ್ರಂಥಗಳನ್ನು ಹಾಗೂ "ಬಾಳಿನ ಗಿಡ" ಎಂಬ ಕಾದಂಬರಿಯನ್ನು ಬರೆದಿದ್ದಾರೆ. ಇವರು ಲೇಖನಿಗಿಂತ ನಾಲಿಗೆಯಲ್ಲಿ ಬಲು ಚುರುಕು. ಜೈಲಿನ ಸಭೆಗಳಲ್ಲಿ ಭಾಷಣ ಮಾಡುವಾಗ ಇವರ ಧೀರತನ, ಜಿಗುಟುತನ ಮತ್ತು ಪಾಂಡಿತ್ಯ ವೇದ್ಯವಾಗುತ್ತಿದ್ದವು ಇವರು ಹುಬ್ಬಳ್ಳಿ ನಗರ ರಸ್ತೆಯಲ್ಲಿ ಮನೆಯಿಂದ ಸೈಕಲ್ ಮೇಲಿಂದ ಬರುವಾಗ ಮೋಟಾರು ಅಪಘಾತದಲ್ಲಿ ಸಿಕ್ಕು ಇಹಲೋಕ ಯಾತ್ರೆಯನ್ನು ಮುಗಿಸಿದರು. ಇವರನ್ನು ಕರ್ನಾಟಕ ಮಾತೆ ಬಹುಬೇಗ ಕಳೆದುಕೊಂಡಳು.

ಶಿವಪ್ಪ ಬಸಪ್ಪ ನೆಲ್ಲೂರ ಸಲ್ಲಿಸಿದ ಸೇವೆ

ಇವರು ಮೂಲತಃ ಕೃಷಿಕರಾಗಿದ್ದರೂ ಸಹ ಇಂಗ್ಲೀಷ ಭಾಷೆಯನ್ನು ಕಲಿತು ಸೇವೆ ಸಲ್ಲಿಸಿದ್ದಾರೆ.

೧) ಭಾರತ ಸ್ವಾತಂತ್ರ್ಯ ನಂತರ ವಿಧಾಯಕ ಕಾರ್ಯದಲ್ಲಿ ತೊಡಗಿ ೧೦ ವರ್ಷಗಳ ಕಾಲ ಕಾಂಗ್ರೇಸ್ಸಿನ ರೋಣ ತಾಲೂಕಿನ ಪ್ರಧಾನ ಕಾರ್ಯದರ್ಶಿಯಾಗಿದ್ದರು.

೨) ೧೯೫೮ರಲ್ಲಿ ೩ ವರ್ಷ ಕಾಲ ತಾಲೂಕಾ ಕಾಂಗ್ರೇಸ್ ಅಧ್ಯಕ್ಷರಾಗಿದ್ದರು.

೩) ೧೯೫೨-೬೦ರ ವರೆಗೂ ೮ ವರ್ಷ ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ಸದಸ್ಯರಾಗಿದ್ದರು.

೪) ೮ ವರ್ಷ ಲೋಕಲ್ ಬೋರ್ಡಿನ ಸ್ಟ್ಯಾಂಡಿಗ್ ಕಮೀಟಿಯ ಸದಸ್ಯರಾಗಿ ಇಡೀ ಜಿಲ್ಲೆಯಲ್ಲಿ ಒಳ್ಳೆಯ ಸೇವೆ ಗೈದಿದ್ದಾರೆ.

೫) ೧೯೬೦ ರಲ್ಲಿ ಟಿ,ಡಿ ಬೋರ್ಡಗಳು ಅಸ್ತಿತ್ವಕ್ಕೆ ಬಂದು ರೋಣ ತಾಲೂಕ ಬೋರ್ಡಿಗೆ ಪ್ರಚಂಡ ಬಹುಮತಗಳಿಂದ ಚುನಾಯಿತರಾಗಿ ಪ್ರಥಮ ವರ್ಷ ಇದರ ಉಪಾಧ್ಯಕ್ಷರಾಗಿದ್ದರು. ಮುಂದೆ ಸದಸ್ಯರಾಗಿಯು ಸೇವೆ ಸಲ್ಲಿಸಿದರು.

೬) ೧೯೬೭ರಲ್ಲಿ ರೋಣದ ಟಿ,ಡಿ ಬೋರ್ಡಿನ ಪ್ರಸಿಡೆಂಟರಾಗಿದ್ದರು.

೭) ಆ ನಂತರ ರೋಣ ತಾಲೂಕ ಭಾರತ ಸ್ವಾತಂತ್ರ್ಯ ಯೋಧರ ಸಮೀತಿಯ ಅಧ್ಯಕ್ಷರಾಗಿದ್ದರು.

೮) ಸಂಸ್ಥಾ ಕಾಂಗ್ರೇಸ್ಸಿನ ತಾಲೂಕ ಸಮೀತಿಯ ಅಧ್ಯಕ್ಷರಾಗಿಯೂ ಕೂಡಾ ಸೇವೆ ಸಲ್ಲಿಸಿದ್ದಾರೆ.

೯) ೧೯೭೭ರಲ್ಲಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರಿಗೆ ಮಧ್ಯಪಾನ ವಿರೋಧಕ್ಕಾಗಿ ಸಲ್ಲಿಸಿದ ಮನವಿ.

ಶಿವಪ್ಪ ಬಸಪ್ಪ ನೆಲ್ಲೂರವರು ರಾಷ್ಟ್ರ ನಿರ್ಮಾಪಕರು, ಧುರೀಣರು, ಧೀರತನದ ವ್ಯಕ್ತಿಗಳು, ಹಠವಾದಿಗಳು ಆಗಿದ್ದು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಈ ಕೆಳಗಿನಂತೆ ಜೈಲು ಸೇರಿ ಶಿಕ್ಷೆ ಅನುಭವಿಸಿದ್ದಾರೆ.

೧) ೧೯೪೨ ಸಪ್ಟಂಬರ್ ೧೨ರಂದು ಸ್ನೇಹಿತರ ಜೊತೆ ಸೇರಿ ಮಾಮ್ಲೇದಾರ ಮತ್ತು ಪೌಜದಾರರಿಗೆ ನೀವು ರಾಜಿನಾಮೆ ಕೊಟ್ಟು ಗಾಂಧೀ ಟೊಪ್ಪಿಗೆ ಹಾಕಿಕೊಳ್ಳಿರೆಂದು ಒತ್ತಾಯಪಡಿಸುತ್ತಿರುವಾಗ ಬಂಧಿಸಿ India Defense Act ೫೬ ಕಲಂ ೪ರ ಪ್ರಕಾರ ಕಟ್ಲೆಹಾಕಿ ೬ ತಿಂಗಳ ಶಿಕ್ಷೆ ೧೦೦ ರೂ. ದಂಡ ವಿಧಿಸಿದರು. ಈ ಶಿಕ್ಷೆಯನ್ನು ಹಿಂಡಲಗಾ ಸೆಂಟ್ರಲ್ ಜೈಲ್, ಬೆಳಗಾವ್ ಜೈಲ್ ಮತ್ತು ಧಾರವಾಡ ಬೋರ್ಷ್ಟಲ್ ಸ್ಕೂಲ್ ಜೈಲುಗಳಲ್ಲಿ ಅನುಭವಿಸಿ ೧೯೪೩ ಎಪ್ರೀಲ್ ತಿಂಗಳ ಮೊದಲ ವಾರದಲ್ಲಿ ಬಿಡುಗಡೆಯಾಗಿ ಹೊರ ಬಂದರು.

೨) ೨೬-೦೧-೧೯೪೪ ರಂದು ಬೆಳಿಗ್ಗೆ ೮ ಗಂಟೆಗೆ ರೋಣದ ವೀರಭದ್ರ ದೇವರ ಬಯಲಿನಲ್ಲಿ ಧ್ವಜವಂದನೆ ಮಾಡಿ ಭಾಷಣ ಮಾಡುವಾಗ ಎಲ್ಲರನ್ನು ಬಂಧಿಸಿ ಪೋಲೀಸ ಸ್ಟೇಶನ್ನಿಗೆ ಕರೆದೊಯ್ದು ಎಲ್ಲರ ಮೇಲೆ India Defense Act ೫೬ರ ಪ್ರಕಾರ ಕಟ್ಲೆಯನ್ನ ಹಾಕಿ ೨೮-೦೧-೧೯೪೪ ಕ್ಕೆ ೬ ತಿಂಗಳ ಶಿಕ್ಷೆ ೨೦೦ ದಂಡ ಹಾಕಿ ಹಿಂಡಲಗಾ ಸೆಂಟ್ರಲ್ ಜೈಲಿಗೆ ಕಳುಹಿಸಿದರು ೧೯೪೪ನೇ ಜುಲೈ ತಿಂಗಳಿನಲ್ಲಿ ಬಿಡುಗಡೆ ಹೊಂದಿದರು.

೩) ೦೨-೧೦-೧೯೪೪ರ ಗಾಂಧೀ ಜಯಂತಿಯ ಪ್ರಯುಕ್ತವಾಗಿ ವೀರಭದ್ರ ದೇವರ ಗುಡಿಯ ಬಯಲಿನಲ್ಲಿ ಧ್ವಜವಂದನೆ ಏರ್ಪಡಿಸಿ ಭಾಷಣ ಮಾಡುವ ಸಂದರ್ಭದಲ್ಲಿ ಹತ್ತೆಂಟು ಜನ ಪೋಲೀಸರು ಈ ಸ್ಥಳಕ್ಕೆ ಧಾವಿಸಿ ಎಲ್ಲರನ್ನು ಬಂಧಿಸಿದರು. ಈ ಸಮಯದಲ್ಲಿ ಶಿವಪ್ಪ ನೆಲ್ಲೂರ ಅವರಿಗೆ ೬ ತಿಂಗಳ ಶಿಕ್ಷೆಯಾಯಿತು. ಮುಂದೆ ೧೯೪೫ರಲ್ಲಿ ಬಿಡುಗಡೆಯಾಗಿ ಊರಿಗೆ ಬಂದರು ಈ ರೀತಿ ೩ ಭಾರಿ ರಾಷ್ಟ್ರದ ಸ್ವಾತಂತ್ರ್ಯ ಪಡೆಯಲು ಜೈಲು ಶಿಕ್ಷೆ ಅನುಭವಿಸಿರುತ್ತಾರೆ.

ಉತ್ತಮ ಸ್ವಾತಂತ್ರ್ಯ ಹೋರಾಟಗಾರರು, ಧೀರೋದಾತ್ತ ವಿಚಾರವಂತರು ಆಗಿರುವ ಶಿವಪ್ಪ ನೆಲ್ಲೂರ ಅವರು ದಿನಾಂಕ ೧೮-೧೦-೧೯೯೬ ರಂದು ಹೆಂಡತಿ ಮಕ್ಕಳನ್ನು ಅಗಲಿ ಇಹಲೋಕ ತೆಜಿಸಿದರು.

ಒಟ್ಟಾರೆಯಲ್ಲಿ ರೋಣದ ಶಿವಪ್ಪ ಬಸಪ್ಪ. ನೆಲ್ಲೂರ. ಅವರು ದೃಡ ಮನಸ್ಕರು ಬಹುಮುಖ ಪ್ರತಿಭಾ ವ್ಯಕ್ತಿತ್ವವನ್ನು ಹೊಂದಿದವರು, ಹಠವಾದಿಗಳು, ಧೀರೋದಾತ್ತ ವ್ಯಕ್ತಿಗಳು ಉತ್ತಮ ಸಂಘಟಕರು ಆಗಿದ್ದು ಬ್ರಟೀಷರ ವಿರುದ್ಧ ಒಂದು ಟೋಳಿಯನ್ನ ನಿರ್ಮಾಣ ಮಾಡಿಕೊಂಡು ರಾಷ್ಟ್ರೀಯ ಮನೋಭಾವನೆಯನ್ನು ಬೆಳೆಸುವಲ್ಲಿ ಮುಂದಾದಾಗ ಜೈಲು ಸೇರಿ ಶಿಕ್ಷೆ ಅನುಭವಿಸಿದರೂ ಸಹ ರೋಣದ ಸುತ್ತ ಮುತ್ತಲ ಗ್ರಾಮಗಳಲ್ಲೂ ಸಹ ರಾಷ್ಟ್ರೀಯ ಕಾಂಗ್ರೆಸ್ ಸೇವಾದಳದ ಮಹತ್ವವನ್ನ ಭಾರತೀಯರಿಗೆ ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇಂತವರ ಬಗ್ಗೆ ಓದಿ ತಿಳಿಯುವದು ಸಹ ನಮಗೆ ಹೆಮ್ಮೆಯ ವಿಷಯ.

[ಮಾಹಿತಿ ನೀಡಿದವರು ಶಿವಪ್ಪ ನೆಲ್ಲೂರರ ಪುತ್ರರಾದ ರಾಜೇಂದ್ರ ಪ್ರಸಾದ. ಶಿವಪ್ಪ ನಲ್ಲೂರ, ಲೋಕನಾಥ ಶಿವಪ್ಪ ನೆಲ್ಲೂರ.]

ಆಧಾರ ಗ್ರಂಥಗಳು

೧. ಡಾ. ಸೂರ್ಯನಾಥ ಕಾಮತ್, ಸಂಪಾದಕರು, ೧೯೮೮, **"ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು"**, (ಕರ್ನಾಟಕ ಸಂಗ್ರಾಮವನ್ನು ಕುರಿತು) ಪ್ರಥಮ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು.

೨. ಚಕ್ರವರ್ತಿ ಸೂಳಿಭಾವಿ, ೨೦೦೦, **"೧೮೫೭ರ ಸ್ವಾತಂತ್ರ್ಯ ಸಮರ"**.

೩. ಡಾ. ಸೂರ್ಯನಾಥ ಕಾಮತ್, ೧೯೯೫, **"ಧಾರವಾಡ ಜಿಲ್ಲಾ ಗ್ಯಾಜೆಟಿಯರ್"**, ಪ್ರಧಾನ ಸಂಪಾದಕರು, ಕಾವೇರಿ ಭವನ, ಬೆಂಗಳೂರು.

೪. ಡಾ. ಸೂರ್ಯನಾಥ ಕಾಮತ್, ೧೯೮೫, **"ಕರ್ನಾಟಕ ರಾಜ್ಯ ಗ್ಯಾಜೆಟಿಯರ್"**, ಪರಿಶ್ರೀ ಪ್ರಿಂಟರ್ಸ್, ನಾಗಪ್ಪ ರಸ್ತೆ, ಗುಟ್ಟಹಳ್ಳಿ, ಬೆಂಗಳೂರು.

೫. ಡಾ. ಹಾ.ಮಾ. ನಾಯಕ, ೧೯೭೬, **"ಕರ್ನಾಟಕ ಕನ್ನಡ ವಿಶ್ವಕೋಶ"**, ಕನ್ನಡ ಅಧ್ಯಯನ ಸಂಸ್ಥೆ, ಸಂಪುಟ ೪, ಮೈಸೂರು.

೧೧೪

ಸ್ವಾತಂತ್ರ್ಯ ಹೋರಾಟಗಾರ ಅಥರಗಾ ಗ್ರಾಮದ ಶಿವಲಿಂಗಪ್ಪಾ ಗುಣಕಿ

ಎಂ.ಎಚ್. ಮೊಕಾಶಿ*



ಕರ್ನಾಟಕದ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಒಂದು ಚಿಕ್ಕ ಗ್ರಾಮವೇ ಅಥರಗಾ.

ಅಥರಗಾ ಗ್ರಾಮವು ವಿಜಯಪುರದಿಂದ ೨೫ ಕಿ.ಮೀ. ದೂರದಲ್ಲಿದೆ ಈ ಗ್ರಾಮಕ್ಕೆ ಅಥರಗಾ ಎಂದು ಹೆಸರು ಬರಲು ಪ್ರಮುಖ ಕಾರಣವೆಂದರೆ, ಆದಿಲ್‌ಶಾಹಿಗಳ ಕಾಲದಲ್ಲಿ ಈ ಗ್ರಾಮದಲ್ಲಿ ಅತ್ತರ ಎಂದರೆ ಸುಗಂಧ ದ್ರವ್ಯವನ್ನು ತಯಾರಿಸುತ್ತಿದ್ದರು. ಆದುದರಿಂದ ಇದಕ್ಕೆ ಅತ್ತರಕಾ ಅಥವಾ ಅಥರಗಾ, ಅಥರ್ಗಾ. ಎಂದು ಹೆಸರು ಬಂದಿತೆಂದು ಹೇಳಲಾಗುತ್ತಿದೆ. ಈ ಗ್ರಾಮವು ದೇಶ ಸೇವೆಗಾಗಿ ಹಲವಾರು ನಾಗರಿಕರನ್ನು ನೀಡಿದೆ ಹಾಗೆಯೇ ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ಗ್ರಾಮದ ಹಲವಾರು ಹೋರಾಟಗಾರರು ತಮ್ಮ ಅಳಿಲು ಸೇವೆ ಸಲ್ಲಿಸಿದ್ದಾರೆ. ಅವರಲ್ಲಿ ಪ್ರಮುಖರಾದವರೆಂದರೆ ಶಿವಲಿಂಗಪ್ಪಾ ಶಿದಗೊಂಡಪ್ಪಾ ಗುಣಕಿಯವರು.

ಶಿವಲಿಂಗಪ್ಪನವರು ೧೮೯೯ರಲ್ಲಿ ಜನಿಸಿದರು. ತಂದೆ ಶಿದಗೊಂಡಪ್ಪಾ ತಾಯಿ ಅವ್ವಮ್ಮ ಪತ್ನಿ ನೀಲಮ್ಮ. ಇವರು ಮೆಟ್ರಿಕ್‌ವರೆಗೆ ಶಿಕ್ಷಣ ಮುಗಿಸಿದರು. ದಿ॥ ಔರಸಂಗ ರೇವಣಸಿದ್ದಪ್ಪ ಮಾಸ್ತರರ ಆಪ್ತ ವಿದ್ಯಾರ್ಥಿಯಾಗಿದ್ದು, ಗಾಂಧೀಜಿಯ ಅಚ್ಚ ಭಕ್ತರಾಗಿದ್ದರು. (ಈ ವಿಷಯ ಸಿಂಪಿ ಲಿಂಗಣ್ಣನವರ ಬರಹಗಳಿಂದ ತಿಳಿದು ಬರುವುದು.) ಮೆಟ್ರಿಕ್ ನಂತರ ಧಾರವಾಡಕ್ಕೆ ಹೋಗಿ ಹರ್ಡೇಕರ ಮಂಜಪ್ಪನವರ ಮಾರ್ಗದರ್ಶನದಂತೆ ಮಂಜಪ್ಪನವರು ಹರಿಹರದಲ್ಲಿ ಸ್ಥಾಪಿಸಿದ ಆಶ್ರಮಕ್ಕೆ ಹೋಗಿ ೩ ತಿಂಗಳುಗಳವರೆಗೆ ವಾಸವಾಗಿದ್ದರು. ನಂತರ ೧೯೨೭ರಲ್ಲಿ ಗುದ್ಲೆಪ್ಪ ಹಳ್ಳಿಕೇರಿಯವರಿಂದ ಸ್ಥಾಪಿತವಾದ 'ಭಾರತೀಯ ತರುಣ ಸಂಘ'ವನ್ನು ಸೇರಿ ಅದರಲ್ಲಿ ಕೆಲಸ ಮಾಡಲಾರಂಭಿಸಿದರು. ನಂತರ ಮಂಜಪ್ಪನವರು ಆಲಮಟ್ಟಿಯಲ್ಲಿ "ವೀರಶೈವ ವಿದ್ಯಾಲಯವನ್ನು" ಸ್ಥಾಪಿಸಿದರು. ಅದರಲ್ಲಿ ಲೆಕ್ಕಿಗನಾಗಿ ಕೆಲಸ ಮಾಡಿದರು. ನಂತರ ಅಲ್ಲಿಯೇ ಕೆಲಕಾಲ ಶಿಕ್ಷಕ ವೃತ್ತಿ ನಿರ್ವಹಿಸಿದರು.

ಸ್ವಾತಂತ್ರ್ಯ ಸಂಗ್ರಾಮದೆಡೆಗೆ ಪ್ರಥಮ ಹೆಜ್ಜೆ: ಭಾರತದ ಸ್ವಾತಂತ್ರ್ಯ ಚಳುವಳಿಯು ಸುದೀರ್ಘವಾಗಿದ್ದು, ಭಾರತೀಯ ಇತಿಹಾಸದಲ್ಲಿ ಮಾತ್ರವಲ್ಲದೇ ಜಾಗತಿಕ ಇತಿಹಾಸದಲ್ಲಿ ಪ್ರಮುಖವಾಗಿದೆ. ಭಾರತೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಾತ್ಮಾ ಗಾಂಧೀಜಿಯವರ ಪ್ರವೇಶವಾದ ನಂತರ ದೇಶದೆಲ್ಲೆಡೆ ಹೋರಾಟ ತೀವ್ರ ಸ್ವರೂಪ ಪಡೆಯಿತು. ಮಹಾತ್ಮಾ ಗಾಂಧೀಜಿಯವರ ಕರೆಯ ಮೇರೆಗೆ ದೇಶದೆಲ್ಲೆಡೆ ಚಳುವಳಿಗಳು ಪ್ರಾರಂಭವಾದವು. ಕರ್ನಾಟಕದಲ್ಲಿ ಮಹಾತ್ಮಾ ಗಾಂಧೀಜಿಯವರು ೧೯೨೪ರಲ್ಲಿ ಬೆಳಗಾವಿ ಅಧಿವೇಶನದ ಅಧ್ಯಕ್ಷತೆ ವಹಿಸಿದ ನಂತರ ಸ್ವಾತಂತ್ರ್ಯದ ಅಲೆ ಹೆಚ್ಚಾಗಿ ಬೀಸತೊಡಗಿತು. ೧೯೩೨ರಲ್ಲಿ ಸ್ವಾತಂತ್ರ್ಯ ಹೋರಾಟಗಾರ ಶಂಕರಗೌಡ ಪಾಟೀಲ ಪಡಗಾನೂರ ಇವರು ಅಥರಗಾ ಗ್ರಾಮಕ್ಕೆ ಬಂದು ಬಾಗಲಕೋಟೆಯಲ್ಲಿ ನಡೆಯಲಿದ್ದ ಕರ್ನಾಟಕ ರಾಜಕೀಯ ಸಮ್ಮೇಳನದಲ್ಲಿ ಭಾಗವಹಿಸಲು ಕರೆ ನೀಡಿದರು. ಆಗ ಊರ ಹಿರಿಯರಾದ ಗುರಪ್ಪ ಗೋಡೆಕಾರರೊಂದಿಗೆ ಬಾಗಲಕೋಟೆಯಲ್ಲಿ ಜರುಗಲಿರುವ ಕರ್ನಾಟಕ ರಾಜಕೀಯ ಸಮ್ಮೇಳನದಲ್ಲಿ ಭಾಗವಹಿಸಲು ಮಾರುವೇಷದಲ್ಲಿ ಹೋದಾಗ ಅಲ್ಲಿ ಶಿವಲಿಂಗಪ್ಪನವರು ಇತರ ಪ್ರತಿನಿಧಿಗಳೊಂದಿಗೆ ಬಂಧಿತರಾದರು. ಆಗ ೧೯೩೩ರಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್‌ರು ೩ ತಿಂಗಳು ಜೈಲು ಶಿಕ್ಷೆ ಹಾಗೂ ೫೦ ರೂಪಾಯಿ ದಂಡವನ್ನು ವಿಧಿಸಿದರು. ಈ ಸಂದರ್ಭದಲ್ಲಿ

* ಅತಿಥಿ ಉಪನ್ಯಾಸಕರು, ಸರಕಾರಿ ಪದವಿ ಪೂರ್ವ ಕಾಲೇಜು, ಕಗ್ಗೋಡ ತಾಲ್ಲೂಕು, ವಿಜಯಪುರ ಜಿಲ್ಲೆ.

ಶಿವಲಿಂಗಪ್ಪನವರ ಮನೆಯ ಆರ್ಥಿಕಸ್ಥಿತಿ ಉತ್ತಮವಾಗಿಲ್ಲದ್ದರಿಂದ ೫೦ ರೂಪಾಯಿ ದಂಡವನ್ನು ಭರಿಸಲಾಗಲಿಲ್ಲ. ಆದುದರಿಂದ ಒಂದು ತಿಂಗಳು ಅಧಿಕ ಜೈಲು ಶಿಕ್ಷೆ ಅಂದರೆ ೪ ತಿಂಗಳುಗಳ ಕಾಲ ಜೈಲುಶಿಕ್ಷೆಯನ್ನು ಅನುಭವಿಸಬೇಕಾಯಿತು.

ಜೈಲಿನಿಂದ ಬಿಡುಗಡೆಯಾದ ನಂತರ ಕಾಂಗ್ರೆಸಿನ ಪ್ರಮುಖ ಕೆಲಸಗಳಲ್ಲಿ ಭಾಗವಹಿಸಲಾರಂಭಿಸಿದರು. ಆಗ ಪಂಡಿತ ಮರುಳಾರಾಧ್ಯ ಶಾಸ್ತ್ರಿಗಳು ಡಿ.ಸಿ.ಸಿ.ಯ ಅಧ್ಯಕ್ಷರಾಗಿದ್ದರು. ಆಗ ಇವರು ಡಿ.ಸಿ.ಸಿ.ಯ ಕಾರ್ಯ ಸಮಿತಿಯ ಸದಸ್ಯನಾಗಿ ನೇಮಕ ಹೊಂದಿದರು. ೧೯೩೫ರ ಗವರ್ನ್‌ಮೆಂಟ್ ಆಫ್ ಇಂಡಿಯಾ ಕಾಯ್ದೆಯಂತೆ ಭಾರತದಲ್ಲಿ ಚುನಾವಣೆ ನಡೆಸುವ ಅಧಿಕಾರ ಒದಗಿಸಲಾಯಿತು. ೧೯೩೭ರಲ್ಲಿ ಜರುಗಿದ ಚುನಾವಣೆಯಲ್ಲಿ ಹಲವರ ಆಶೀರ್ವಾದದಿಂದ ಪಾರ್ಲಿಮೆಂಟ್ ಬೋರ್ಡ್‌ನ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು. ನಂತರ ಹಲವು ವರ್ಷಗಳವರೆಗೆ ಸಕ್ರಿಯವಾಗಿ ಸ್ವಾತಂತ್ರ್ಯ ಚಟುವಟಿಕೆಯಲ್ಲಿ ತೊಡಗಿದರು.

ವೈಯಕ್ತಿಕ ಕಾನೂನು ಭಂಗ ಚಳುವಳಿ: ಗಾಂಧೀಜಿಯವರು ಎರಡನೇ ಜಾಗತಿಕ ಯುದ್ಧದಲ್ಲಿ ಬ್ರಿಟಿಷರು ಜರ್ಮನಿಯ ವಿರುದ್ಧ ಯುದ್ಧದಲ್ಲಿ ತೊಡಗಿರುವಾಗ ಸಾಮೂಹಿಕ ಅಸಹಕಾರ ಚಳುವಳಿ ಹೂಡುವುದು ಮಾನವೀಯತೆಯಲ್ಲ ಎಂದು ತಿಳಿದು ೧೯೪೦ ಅಕ್ಟೋಬರ್ ತಿಂಗಳಿನಲ್ಲಿ 'ವೈಯಕ್ತಿಕ ಕಾನೂನುಭಂಗ' ಚಳುವಳಿಗೆ ಮುಂದಾದರು.

ಗಾಂಧೀಜಿಯವರ ಕರೆಯಂತೆ ಶಿವಲಿಂಗಪ್ಪ ಗುಣಕಿಯವರು, ವೈಯಕ್ತಿಕ ಸತ್ಯಾಗ್ರಹವನ್ನು ಗ್ರಾಮದಲ್ಲಿ ಪ್ರಾರಂಭಿಸಿದರು. ನಂತರ ಹಿಟ್ಟಿನಹಳ್ಳಿಯಲ್ಲಿ (ಸಿಂದಗಿ ತಾಲೂಕು) ಅಗಾಧ ಪ್ರಮಾಣದಲ್ಲಿ ಈ ಸತ್ಯಾಗ್ರಹವನ್ನು ೨೧-೦೩-೧೯೪೧ ರಲ್ಲಿ ಆಚರಿಸಲು ಮುಂದಾದರು. ಇದಕ್ಕೆ ಚನ್ನಬಸಪ್ಪ ಅಂಬಲಿ, ಶರಣಯ್ಯ ವಸ್ತ್ರದ, ಮೊದಲಾದವರು ಪ್ರೇರೇಪಣೆ ನೀಡಿದರು. ಹಿಟ್ಟಿನಹಳ್ಳಿ ಗ್ರಾಮದ ಭಗವಾನ್‌ಸಿಂಗ್ ಅಂಗಡಿ ಮತ್ತು ಶಿವಲಿಂಗಪ್ಪನವರು ಪ್ರಮುಖ ಪಾತ್ರ ವಹಿಸಿದ್ದರು. ಇದರಲ್ಲಿ ಭಾಗವಹಿಸಿದ ಪ್ರಮುಖರೆಂದರೆ. ಚಿಕ್ಕರೂಗಿಯಿಂದ ಯಶವಂತರಾಯ ಪಾಟೀಲ, ದುಂಡಪ್ಪ ಗರಡೆ, ಭೀಮರಾಯ ಜಮಾದಾರ, ಗುರುಬಸಪ್ಪ ಹಡಪದ, ಮಲ್ಲಪ್ಪಾ ಬಾಗಲಕೋಟೆ, ದುಂಡಪ್ಪ ಹೂಗಾರ, ಗುರಪ್ಪ ಬಿರಾದಾರ, ಹೀಗೆ ಈ ಊರಿನಿಂದ ೨೦ಕ್ಕೂ ಅಧಿಕ ಜನ ಭಾಗಿಯಾಗಿದ್ದರು. ನಾಗಠಾಣದಿಂದ ಗುರುಬಸಪ್ಪ ಅರಕೇರಿ, ಹಣಮಂತಪ್ಪ ವಾಡೆ, ದುಂಡಪ್ಪ ಹುನಸಿಹಾಳ, ಆಲಮೇಲದಿಂದ ನಾರಾಯಣ ದೇಶಪಾಂಡೆ, ಕೊಂಡಗೂಳಿಯಿಂದ ಬಲವಂತಪ್ಪ ಹಾಲಭಾವಿ, ಹೋರ್ತಿಯಿಂದ ದಾನಪ್ಪ ಮೋದಿ, ಇಂಚಗೇರಿಯಿಂದ ಬಸವನಗೌಡ ಪಾಟೀಲ, ಅಥರಗಾದಿಂದ ಗದಿಗೆಪ್ಪ ಲೋಣಿ, ಸಿದ್ದರಾಮಪ್ಪಾ ವಾಲಿ, ರಾಚಪ್ಪಾ ನಿವರಗಿ, ಹಾಗೂ ಹಲವಾರು ಗಣ್ಯರು ಭಾಗವಹಿಸಿದ್ದರು. ಆಗ ದೇವರಹಿಪ್ಪರಗಿಯ ಪೊಲೀಸರಿಂದ ಹಲವಾರು ಹೋರಾಟಗಾರರು 'ಬೋಲೊ ಭಾರತ ಮಾತಾ ಕೀ ಜೈ' ಮೊದಲಾದ ಘೋಷಣೆಯೊಂದಿಗೆ ಬಂಧಿತರಾದರು. ಅವರಲ್ಲಿ ಶಿವಲಿಂಗಪ್ಪ ಗುಣಕಿಯವರು ಪ್ರಮುಖರಾಗಿದ್ದರು. ಇವರಿಗೆ ೬ ತಿಂಗಳು ಜೈಲು ಶಿಕ್ಷೆಯಾಯಿತು. ಇವರನ್ನು ಬಿಜಾಪುರ ಜೈಲಿಗೆ ತರಲಾಯಿತು ನಂತರ ಹಿಂಡಲಗಾ ಜೈಲಿಗೆ ಕಳಿಸಲಾಯಿತು. ಭಗವಾನ್‌ಸಿಂಗ್ ಅಂಗಡಿಯವರಿಗೂ ೪ ತಿಂಗಳು ಶಿಕ್ಷೆಯಾಯಿತು. ಅಲ್ಲದೇ ಕೆಲವು ಗಣ್ಯರನ್ನು ಹಿಂಡಲಗಾ ಜೈಲಿಗೆ ಕಳಿಸಲಾಯಿತು.

೧೯೪೨ರಲ್ಲಿ ಜರುಗಿದ ಕ್ವಿಟ್ ಇಂಡಿಯಾ ಚಳುವಳಿ ಸಂದರ್ಭದಲ್ಲಿ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಮಿಂಚನಾಳ ರೇಲ್ವೆ ಸ್ಟೇಷನ್‌ವನ್ನು ಸುಡಲು ನಿರ್ಧರಿಸಲಾಯಿತು. ಇದಕ್ಕೆ ಅಡಿವೆಪ್ಪ ಅಂಬಲಿಯವರು ಬೆಂಬಲಿಸಿದರು. ಅದರಂತೆಯೇ ೦೨-೧೦-೧೯೪೨ರಲ್ಲಿ ಮಾರುವೇಷದ ಕಾರ್ಯಾಚರಣೆಗೆ ಮುಂದಾಗಿ, ಮಿಂಚನಾಳ ರೈಲು ಸ್ಟೇಷನವನ್ನು ಸುಟ್ಟರು. ರಾತ್ರಿ ರೈಲು ಹಳಿಗಳನ್ನು ಕಿತ್ತು ಹಾಕಲಾಯಿತು. ಇದರಲ್ಲಿ ದುಂಡಪ್ಪ ಅಂಕಲಗಿ, ಗದಿಗೆಪ್ಪ ಲೋಣಿ, ಸಾಯಬಣ್ಣ ಅಥಣಿ, ಗುರುಬಸಪ್ಪ ಅರಕೇರಿ, ನಾರಾಯಣ ದೇಶಪಾಂಡೆ, ಭಗವಾನಸಿಂಗ್ ಅಂಗಡಿ, ಕಲ್ಲಯ್ಯ ಡೋಣೂರ, ಚನ್ನಯ್ಯಾ ಮಠಪತಿ, ಯಲ್ಲಪ್ಪ ವಡ್ಡರ, ಚನ್ನಬಸಪ್ಪ ಮೊದಲಾದವರು ಭಾಗವಹಿಸಿದ್ದರು. ಇದರಲ್ಲಿ ಶಿವಲಿಂಗಪ್ಪಾ ಗುಣಕಿ ಹಾಗೂ ಸಾಯಬಣ್ಣ ಅಥಣಿ ಪ್ರಮುಖ ಪಾತ್ರ ವಹಿಸಿದ್ದರು. ನಂತರ ಪೊಲೀಸರಿಗೆ ಅಡಿವೆಪ್ಪ, ಚೆನ್ನಬಸಪ್ಪ, ಮೊದಲಾದವರು ರಾತ್ರಿ ಸೆರೆಸಿಕ್ಕರು. ನಂತರ ಹಲವರೊಂದಿಗೆ ಕೂಡಿ ಶಿವಲಿಂಗಪ್ಪಾ ಗುಣಕಿಯವರು ತಂತಿ ಕಡಿದರು. ಸಾಯಬಣ್ಣನು ಕಲ್ಲಯ್ಯ ಡೋಣುರ, ಚನ್ನಯ್ಯಾ ಮಠಪತಿಯೊಂದಿಗೆ ಸೇರಿ, ಊರಿನ ಪೋಸ್ಟ್ ಆಫೀಸಿಗೆ ಬೆಂಕಿ ಹಚ್ಚಿದರು. ಅಲ್ಲದೇ ಗುರುಬಸಪ್ಪ ಅರಕೇರಿ, ಭಗವಾನ್‌ಸಿಂಗ್ ಅಂಗಡಿ ಮೊದಲಾದವರು ನಿಂಬಾಳ ರೇಲ್ವೆ ಸ್ಟೇಷನ್ನಗೆ ಬೆಂಕಿ ಹಚ್ಚಿದರು. ಆಗ ಪೊಲೀಸರು ಇವರೊಂದಿಗೆ ಚಿಕ್ಕರೂಗಿಯ ಕೆಲವು ಹೋರಾಟಗಾರರನ್ನು ಕೂಡ ಬಂಧಿಸಿದರು. ಸಾಯಬಣ್ಣ ಅಥಣಿಗೆ ೭-೧೦-೧೯೪೨ರಲ್ಲಿ ೩ ತಿಂಗಳು ಜೈಲು ಶಿಕ್ಷೆಯಾಯಿತು ಯಲ್ಲಪ್ಪ ವಡ್ಡರಗೆ ೬ ವರ್ಷ ಜೈಲು ಶಿಕ್ಷೆ ನೀಡಲಾಯಿತು. ಶಿವಲಿಂಗಪ್ಪನವರಿಗೂ ಹಲವು ತಿಂಗಳುಗಳ ಶಿಕ್ಷೆಯ ನಂತರ ೯ ತಿಂಗಳುಗಳವರೆಗೆ ಸ್ಥಾನಬದ್ದತೆಯಲ್ಲಿಡಲಾಯಿತು.



ಶಿವಲಿಂಗಪ್ಪ ಶಿ. ಗುಣಕಿ



ಪ್ರಸ್ತುತ ಮಿಂಚನಾಳ ರೈಲ್ವೆ ನಿಲ್ದಾಣ

ಜೈಲಿನಿಂದ ಬಿಡುಗಡೆಯಾಗಿ ಬಂದನಂತರ ಕಾಂಗ್ರೆಸಿನೊಂದಿಗೆ ಸಂಪರ್ಕ ಹೊಂದಿದ್ದರು. ಆಗ ಅಂಬಲಿಯವರ ಸಲಹೆಯ ಮೇರೆಗೆ ಕೆಲಸಮಯದ ವರೆಗೆ ಭೂಗತರಾಗಿದ್ದರು. ನಂತರ ಇವರು ಆದ್ಯಾತ್ಮದ ಕಡೆಗೆ ಒಲವು ತೋರಲಾರಂಭಿಸಿ. ಅರವಿಂದರ ಅನುಯಾಯಿಯಾಗಿ ಪಾಂಡಿಚೇರಿ ಆಶ್ರಮಕ್ಕೆ ತೆರಳಿದರು ಅಲ್ಲಿ ೨ ವರ್ಷ ಕಳೆದರು. ಗ್ರಾಮಕ್ಕೆ ಬಂದ ನಂತರ ತಮ್ಮಿಷ್ಟವಾದ ಶಿಕ್ಷಕ ವೃತ್ತಿ ಆಯ್ಕೆ ಮಾಡಿಕೊಂಡರು. ಶಿವಲಿಂಗಪ್ಪಾ ಗುಣಕಿಯವರ ಕುರಿತು ಚಡಚಣದ ಸ್ವಾತಂತ್ರ್ಯ ಹೋರಾಟಗಾರರಾದ ಹಾಗೂ ಸಾಹಿತಿಯಾದ ಸಿಂಪಿ ಲಿಂಗಪ್ಪನವರು ಮುಕ್ತ ಕಂಠದಿಂದ ಹೊಗಳಿ ಇವರ ಬಗ್ಗೆ ತಮ್ಮ ಸಾಹಿತ್ಯದಲ್ಲಿ ಉಲ್ಲೇಖಿಸಿದ್ದಾರೆ.

ಸಾಮಾಜಿಕ ಸುಧಾರಣೆಗಳು: ಕಾರಖಾನೀಸ್ ಹಾಗೂ ದಿವಾಕರರು ಗ್ರಾಮ ಸೇವಾಕಾರ್ಯದಲ್ಲಿ ಪ್ರಮುಖವಾಗಿ ತೊಡಗಿಸಿಕೊಂಡಿದ್ದರು. ಇವರ ಒಪ್ಪಿಗೆಯ ಮೇರೆಗೆ ಕಲ್ಲಯ್ಯ ಡೋಣೂರರವರು ಅಥರಗಾ ಗ್ರಾಮಕ್ಕೆ ಬಂದರು. ಅಲ್ಲಿ ಪಂ.ಮರುಳಾರಾಧ್ಯ ಶಾಸ್ತ್ರಿಗಳ ಶಾಖಾ ಆಸ್ಪತ್ರೆಯಲ್ಲಿ ತಂಗಿದರು. ಮರುದಿನ ಶಾಸ್ತ್ರಿಗಳು ಶಿವಲಿಂಗಪ್ಪಾ ಗುಣಕಿಯವರನ್ನು ಭೇಟಿ ಮಾಡಿಸಿದರು. ಇವರೊಂದಿಗೆ ಸೇರಿ ಗ್ರಾಮದ ಜನರಿಗೆ ಬಚ್ಚಲು ನೀರನ್ನು ಇಂಗಿಸಿ ಗ್ರಾಮವನ್ನು ಸ್ವಚ್ಛವಾಗಿಡುವ ಬಗ್ಗೆ ಸ್ವತಃ ಕೆಲಸಮಾಡಿ ಜನರಿಗೆ ತರಬೇತಿ ನೀಡಿದರು. ಇದರಿಂದಾಗಿ ರಸ್ತೆಯ ಮೇಲೆ ಕೊಳಚೆನೀರು ಹರಿಯುವದನ್ನು ತಡೆಯುವಂತಾಯಿತು. ಕಸವನ್ನು ಬೇರೆ ಬೇರೆಯಾಗಿ ರಾಶಿ ಹಾಕುವ ಹಾಗೂ ಅದನ್ನು ಗೊಬ್ಬರವನ್ನಾಗಿ ಮಾಡುವ ಬಗೆಯನ್ನು ಹೇಳಲಾಯಿತು. ಇದರಿಂದ ಗ್ರಾಮದಲ್ಲಿ ಮನೆಗಳ ಪಕ್ಕದಲ್ಲಿ ಹಾಕಿದ ಕಸದ ಗುಂಡಿಗಳಿಂದ ಅನೈರ್ಮಲ್ಯವಾಗುದನ್ನು ತಡೆಯಲು ಸಹಾಯವಾಯಿತು.

ಮುಲ್ಕಿ ಪರೀಕ್ಷೆಯಲ್ಲಿ ಪಾಸಾದವರನ್ನು ಪ್ರೋತ್ಸಾಹಿಸಿ ಅವರನ್ನು ಲಂಬಾಣಿ ತಾಂಡಾಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆಸಿದರು. ಪ್ರತಿಯೊಬ್ಬ ವಿದ್ಯಾರ್ಥಿಯು ಒಂದು ಸೂಲಿಗೆ ಜೋಳ ಕೊಡಬೇಕೆಂದು ನಿರ್ಧರಿಸಲಾಯಿತು. ಗ್ರಾಮೋದ್ಯೋಗಕ್ಕೆ ಪ್ರೋತ್ಸಾಹಿಸಿದರಲ್ಲದೇ 'ನೇಕಾರರ ಸೊಸಾಯಿಟಿ'ಯನ್ನು ಸ್ಥಾಪಿಸಿ ನೂಲು ಎಲ್ಲರಿಗೂ ಪೂರೈಸುವಂತೆ ಮಾಡಿದರು.

ವಿಜಯಪುರ ಜಿಲ್ಲೆಯಲ್ಲಿ ಕಾಲರಾ ರೋಗದ ಭೀತಿ ಶುರುವಾಯಿತು. ಅಥರಗಾ ಗ್ರಾಮದಲ್ಲಿಯೂ ಇದು ಪ್ರಭಾವ ಬೀರಿತ್ತು. ಈ ಸಂದರ್ಭದಲ್ಲಿ ಪಂ॥ ಮರುಳಾರಾಧ್ಯ ಶಾಸ್ತ್ರಿಗಳು ನೀಡಿದ ಔಷಧಿಯನ್ನು ಜನರಿಗೆ ಹಂಚಲು ಗ್ರಾಮದ ಪ್ರತಿಯೊಂದು ಓಣಿಗಳಲ್ಲದೇ ವಿಶೇಷವಾಗಿ ಹರಿಜನರ ಓಣಿಯಲ್ಲಿ ಮನೆ, ಮನೆಗೆ ತಿರುಗಿ ಔಷಧ ಹಂಚಿ, ಬಹುಪಾಲು ಜನರು ಗುಣಮುಖವಾಗುವಂತೆ ಮಾಡುವಲ್ಲಿ ಶಿವಲಿಂಗಪ್ಪಾ ಗುಣಕಿಯವರು ಪ್ರಮುಖ ಪಾತ್ರವಹಿಸಿದರು. ಕಾಲರಾ ರೋಗಕ್ಕೆ ಸಂಬಂಧಿಸಿದಂತೆ ದೇವಿಗೆ ಶಾಂತಿ ಮಾಡಲು ಜನರು ಕೋಣವನ್ನು ಬಲಿಕೊಡಲು ಮುಂದಾದಾಗ ಅದನ್ನು ಬಲಿ ಕೊಡದಂತೆ ಜನರ ಮನವೊಲಿಸಿದರು. ಅಲ್ಲದೇ ಶಿವಲಿಂಗಪ್ಪಾ ಗುಣಕಿಯವರೊಂದಿಗೆ ಸಮಾಜ ಸೇವೆಯಲ್ಲಿ ಸಹಾಯ ಮಾಡಿದ ಕಲ್ಲಯ್ಯ ಸುಬ್ಬಯ್ಯ ಡೋಣೂರರವರಿಗೆ ಆರ್ಥಿಕ ತೊಂದರೆಯುಂಟಾಗಿ ಕುಟುಂಬ ನಿರ್ವಹಣೆ ಕಷ್ಟವಾಯಿತು. ಆಗ ಗುಣಕಿಯವರು ಆರ್ಥಿಕ ಸಹಾಯ ಮಾಡಿ ಕಲ್ಲಯ್ಯ ಡೋಣೂರ ಅವರಿಗೆ ಜವಳಿ ಅಂಗಡಿ ಪ್ರಾರಂಭಿಸಲು ನೆರವಾದರು.

ಸ್ವಾತಂತ್ರ್ಯ ಚಳುವಳಿಯು ಯಶಸ್ವಿಯಾಗಲು ಹಳ್ಳಿಯಲ್ಲಿರುವ ಅಸಮಾನತೆ, ಬೇಧ-ಭಾವಗಳನ್ನು ನಿವಾರಿಸಲು ಮುಂದಾದರು. ಭಾರತೀಯರು ಬ್ರಿಟಿಷರ ಅಧೀನವಾಗಲು ಭಾರತೀಯರಲ್ಲಿದ್ದಂತ ಧರ್ಮ, ಜಾತಿ, ಜನಾಂಗ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ ಎಂದು ತಿಳಿದಿದ್ದರು. ಆದುದರಿಂದ ಶಿವಲಿಂಗಪ್ಪಾ ಗುಣಕಿಯವರು ಗ್ರಾಮದ ಪ್ರಮುಖ

ದೇವರಾದ ಶ್ರೀ ಕುಲಂಕಾರೇಶ್ವರ ದೇವಾಲಯ ಹಾಗೂ ಮೊದಲಾದ ದೇವಾಲಯಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶ ಒದಗಿಸಿದರು. ಅಲ್ಲದೇ ಜನರಲ್ಲಿರುವ ಬೇಧ-ಭಾವವನ್ನು ತೊರೆಯಲು ಸಾಕಷ್ಟು ಶ್ರಮ ವಹಿಸಿದರು.

ಸಮಾರೋಪ : ಶಿವಲಿಂಗಪ್ಪನವರು ಸ್ವಾತಂತ್ರ್ಯ ನಂತರವೂ ಸಾಮಾಜಿಕ ಸುಧಾರಣೆಗಳಲ್ಲಿ ತೊಡಗಿದರು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ದೇಶದ ಪ್ರತಿಯೊಂದು ಪ್ರದೇಶವು ತಮ್ಮದೇ ಆದ ಕೊಡುಗೆಗಳನ್ನು ನೀಡಿದೆ. ಇದರಲ್ಲಿ ಗ್ರಾಮೀಣ ಪ್ರದೇಶಗಳ ಪಾತ್ರವು ಪ್ರಮುಖವಾಗಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಎಲ್ಲ ಹೋರಾಟಗಾರರ ಬಹುಮುಖ ಸೇವೆಯು ಸ್ಮರಣಾರ್ಹವಾಗಿದ್ದು ಮುಂದಿನ ಪೀಳಿಗೆಗೆ ಸ್ಫೂರ್ತಿದಾಯಕವಾಗಿದೆ.

[ಈ ಲೇಖನವನ್ನು ಸಿದ್ಧಪಡಿಸುವಾಗ ಹಲವು ಮಾಹಿತಿಗಳನ್ನು ಒದಗಿಸಿದ ಆಕಾಶವಾಣಿ ವಿಜಯಪುರದ ಉದ್ಘೋಷಕರಾದ ಕಿರಣಕುಮಾರ ಶೇಖದಾರ ಹಾಗೂ ಅಥರಗಾ ಗ್ರಾಮದ ಸಮಾಜಸೇವಕರಾದ ರಾಘುನಾಥ ಬಾಣಿಕೋಲರವರಿಗೆ ಕೃತಜ್ಞತೆಗಳು.]

ಆಧಾರಸೂಚಿ

೧. ಎಮ್.ವಾಯ್. ಸಾವಂತ, 'ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಸ್ವಾತಂತ್ರ್ಯ ಹೋರಾಟ', ಪ್ರಸಾರಾಂಗ ಕ.ವಿ.ವಿ. ಧಾರವಾಡ.

೨. ಡಾ. ಸೂರ್ಯನಾಥ ಕಾಮತ್, 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು', ತೃತೀಯ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೩. ಬಿ.ಷೇಕ್ ಅಲಿ.(ಸಂ.) 'ಕರ್ನಾಟಕ ಚರಿತ್ರೆ', ಪ್ರಸಾರಾಂಗ ಕ.ವಿ.ವಿ. ಹಂಪಿ.

೪. ಡಾ. ಡಿ.ಟಿ. ಜೋಶಿ, 'ಆಧುನಿಕ ಭಾರತದ ಇತಿಹಾಸ' ವಿದ್ಯಾನಿಧಿ ಪ್ರಕಾಶನ, ಗದಗ.

೧೧೫

ಸಂಶೋಧನಾ ಕ್ಷೇತ್ರಕ್ಕೆ ಶ್ರೀ ಚನ್ನಮಲ್ಲಿಕಾರ್ಜುನರ ಕೊಡುಗೆ

ಜಯದೇವಪ್ಪ ಜೈನಕೇರಿ*

ಸಾಮಾನ್ಯ ವ್ಯಾಪಾರಸ್ತರ ಕುಟುಂಬದಲ್ಲಿ ಹುಟ್ಟಿ, ಪ್ರಾಥಮಿಕ ಶಾಲೆ ಅಧ್ಯಾಪಕರಾಗಿ ಸೇವೆ ಸಲ್ಲಿಸಿ, ಸಂಶೋಧನೆಯ ಯಾವುದೇ ಶಿಸ್ತುಬದ್ಧ ಅಧ್ಯಯನ ಮಾಡದೆ, ಸ್ವಂತ ಆಸಕ್ತಿ ಮತ್ತು ಪ್ರತಿಭೆಯಿಂದ ಸಂಶೋಧನಾ ಕ್ಷೇತ್ರದಲ್ಲಿ ಅಪೂರ್ವ ಸಾಧನೆ ಮಾಡಿದವರು. ಶಿವಮೊಗ್ಗ ಜಿಲ್ಲೆ ಶಿರಾಳಕೊಪ್ಪದ ಶ್ರೀ ಚನ್ನಮಲ್ಲಪ್ಪ ನೂರೊಂದಪ್ಪ ಕೊರಿಶೆಟ್ಟಿ. ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಪ್ರಭುತ್ವ ಪಡೆದಿದ್ದ ಅವರಿಗೆ ಇಂಗ್ಲಿಷ್ ಭಾಷೆ ಜ್ಞಾನವೂ ಇತ್ತು. ಉಪಾಧ್ಯಾಯರಾಗಿ ೩೫ ವರ್ಷ ಸೇವೆ ಸಲ್ಲಿಸಿದರು. ಅವರು ಇತಿಹಾಸ ಸಾಹಿತ್ಯ ಸಂಸ್ಕೃತಿ, ತತ್ವಶಾಸ್ತ್ರ, ನೀತಿಶಾಸ್ತ್ರ, ವಚನ ಸಾಹಿತ್ಯ ಕ್ಷೇತ್ರಗಳಲ್ಲಿ ಅಪಾರವಾದ ಆಸಕ್ತಿ ಹೊಂದಿದ್ದರು. ಗ್ರಾಮಾಂತರ ಪ್ರದೇಶಗಳಲ್ಲಿ ದೊಡ್ಡ ಮನೆತನಗಳ ಪೂಜಾಕೋಣೆಯಲ್ಲಿ, ಅಟ್ಟಗಳಲ್ಲಿ ಕತ್ತಲು ಕೋಣೆಗಳಲ್ಲಿ ಬಂಧಿತವಾಗಿದ್ದ. ಆಸ್ತಿಕರ ಮನೆಗಳಲ್ಲಿ ಪ್ರವಚನಗಳಿಗೆ ಬಳಕೆಯಾಗುತ್ತಿದ್ದ ತಾಡವೊಲೆ ಗ್ರಂಥಗಳನ್ನು ತಾವು ಶಾಸನಗಳನ್ನು, ಶಿಲಾಶಾಸನಗಳನ್ನು ಬೆಳಕಿಗೆ ತರುವ ಪ್ರಯತ್ನ ನಡೆಸಿದರು. ಅವುಗಳನ್ನು ಓದಿ, ಅಧ್ಯಯನ ಮಾಡಿ, ಸಂಶೋಧನೆಯ ನಿಕಷಕ್ಕೆ ಒಡ್ಡಿ ದಾಖಲಿಸಿದರು. ತಮ್ಮ ಸಂಶೋಧನೆಗಳನ್ನು ಮುದ್ರಣಾಲಯ ಸ್ಥಾಪಿಸಿ, ಸದ್ಧರ್ಮದೀಪಿಕೆ ಎಂಬ ಮಾಸಪತ್ರಿಕೆಯ ಮೂಲಕ ಬೆಳಕಿಗೆ ತಂದರು. ಸಮಕಾಲೀನ ವಿದ್ವಾಂಸರ ಗಮನ ಸೆಳೆದು ಸಂಶೋಧನಾ ಕ್ಷೇತ್ರಕ್ಕೆ ಅಪೂರ್ವ ಕಾಣಿಕೆ ನೀಡಿದ್ದಾರೆ. ಅಂದಿನ ಕೆಲವು ಪ್ರಗತಿಪರ ಮಠಗಳಲ್ಲಿ ಗೋಷ್ಠಿಗಳಲ್ಲಿ ಪಾಲ್ಗೊಂಡು ತಮ್ಮ ಸಂಶೋಧನೆಗಳನ್ನು ಕುರಿತು ಚರ್ಚಿಸಿದರು. ಸಮಕಾಲೀನ ಸಾಹಿತ್ಯ, ಸಂಶೋಧಕರ ಕೃತಿಗಳನ್ನು ಅಧ್ಯಯನ ಮಾಡಿ ವಿದ್ವತ್‌ಪೂರ್ಣವಾದ ವಿಮರ್ಶಾ ಲೇಖನಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

ಶ್ರೀ ಚನ್ನಮಲ್ಲಪ್ಪನವರು ಮಾಧ್ಯಮಿಕ ಶಾಲೆ ಮುಖ್ಯೋಪಾಧ್ಯಾಯ ಸ್ಥಾನದಿಂದ ನಿವೃತ್ತರಾದ ನಂತರ ತಮ್ಮ ಜೀವಿತದ ಪೂರ್ಣ ಸಮಯವನ್ನು ಸಂಶೋಧನೆ, ತತ್ವಪ್ರಸಾರ, ವಚನಸಾಹಿತ್ಯ ಪರಿಷ್ಕರಣೆ ಮತ್ತು ಲಿಂಗಾಯತ ಧರ್ಮ, ಶರಣರ ಬದುಕನ್ನು ನಿರ್ಧರಿಸುವ, ಶಾಸನಗಳನ್ನು ಓದಿ ದಾಖಲಿಸುವುದರಲ್ಲಿಯೇ ಕಳೆದರು. ಪೂರ್ವಸೂರಿಗಳು ಮಾಡಿದ ಸಂಶೋಧನೆಗಳನ್ನು ನಿಕಷಕ್ಕೆ ಒಡ್ಡಿ ಹೊಸ ಆಕರಗಳು ದೊರಕಿದಂತೆ ಪರಿಷ್ಕರಿಸಿ ಪ್ರಕಟಿಸಿದರು. ಸದ್ಧರ್ಮ ದೀಪಿಕೆ ಮಾಸ ಪತ್ರಿಕೆಯನ್ನು ಅವರ ಅಂತಿಮ ಕಾಲದವರೆಗೆ ಪ್ರಕಟಿಸಿದರು. ಸದ್ಧರ್ಮ ಗ್ರಂಥಮಾಲೆಯ ಮೂಲಕ ಅನೇಕ ಮೌಲಿಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಮೈಲಾರ ಬಸವಲಿಂಗ ಶರಣರ ಕೃತಿಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಸಂಶೋಧನ ದೃಷ್ಟಿಯಿಂದ ಪರಿಷ್ಕರಿಸಿ ಪ್ರಕಟಿಸಿ ಆಸಕ್ತ ಓದುಗರಿಗೆ ತಲುಪಿಸುವ ಕಾರ್ಯ ಮಾಡಿದರು. ಶತಕತ್ರಯ ಮುಂತಾದ ಲಿಂಗಾಯತ ತತ್ವಗ್ರಂಥಗಳನ್ನು ಪ್ರಕಟಿಸಿದರು. ಇವುಗಳಲ್ಲಿ ಬಸವೇಶ್ವರ ಮತ್ತು ರೇವಣಸಿದ್ದರ ಕಾಲ ನಿರ್ಣಯ ಬಹಳ ಮಹತ್ವದ ಕೃತಿಗಳು. ಪ್ರಭುಲಿಂಗ ಲೀಲೆ, ಮೊಗ್ಗೆಯ ಮಾಯಿದೇವರ ಶತಕಗಳು, ವಚನ ಶಾಸ್ತ್ರಗಳನ್ನು ಪ್ರವಚನ ಮಾಡುವ ಮೂಲಕ ಜನಪ್ರಿಯಗೊಳಿಸಿದರು. ಒಮ್ಮೆ ಅವರು ತಮ್ಮ ಸಂಶೋಧಿತ ದಾಖಲೆಗಳೊಂದಿಗೆ ಅಂದಿನ ಎತ್ತಿನ ಗಾಡಿಯಲ್ಲಿ ಪ್ರಯಾಣಿಸುವಾಗ ಟಿಪ್ಪಣಿಗಳ ಪೆಟ್ಟಿಗೆ ಕಳುವಾಗುತ್ತದೆ. ಆಗ ಅವರು ಸ್ವಲ್ಪವೂ ಚಿಂತಿಸದೆ ತಮ್ಮ ಜ್ಞಾಪಕ ಶಕ್ತಿಯಿಂದ ಮತ್ತು ಪುನಃ ಸ್ಥಳ ಪರಿಶೀಲನೆ ಮೂಲಕ ಲೇಖನಗಳನ್ನು ಸಿದ್ಧಪಡಿಸಿ ಪ್ರಕಟಿಸಿದರೆಂದು ತಿಳಿದು ಬರುತ್ತದೆ. ಈ ಎಲ್ಲ ಚಟುವಟಿಕೆಗಳಿಗೆ ಅವರ ಅಂಗವೈಕಲ್ಯ ಅಡ್ಡಿಯಾಗದಂತೆ ಕಾರ್ಯಶೀಲರಾಗಿದ್ದರು. ಮೈಲಿ ಬೇನೆಯಿಂದಾಗಿ ಅವರ ಬಲಗೈ ತುಂಡಾಗಿತ್ತು. ಹಸ್ತಭಾಗ ಸೊಟ್ಟಗಾಗಿ ಮಣಿಕಟ್ಟಿಗೆ ಅಂಡಿಕೊಂಡಿತ್ತು ಬಲಗಣ್ಣು ಕುರುಡಾಗಿತ್ತು. ಬಲಗಾಲು ಡೊಂಕಾಗಿತ್ತು ಎಂಬುದಾಗಿ ಶ್ರೀ ಮರಿಗಪ್ಪ ಈರಪ್ಪ ಎಲಿಮಾಸ್ತರ ದಾಖಲಿಸಿದ್ದಾರೆ.

* ನಂ. ೮೭, 'ಶಾಂತಲಾ' ಜಿಲ್ಲಾ ಪಂಚಾಯತಿ ಎದಿರು, ಶಿವಮೊಗ್ಗ-೫೭೭೨೦೧.

ಶ್ರೀ ಚನ್ನಮಲ್ಲಪ್ಪ ಮಾಸ್ತರು ತಮ್ಮ ವೃತ್ತಿಯ ಜೊತೆಗೆ ಪ್ರವೃತ್ತಿಯಾಗಿ ಸಾಮಾಜಿಕ ಕಾರ್ಯಗಳ ಜೊತೆಗೆ ಬಿಡುವಾದಾಗಲೆಲ್ಲಾ ಸಮೀಪದ ಬಳ್ಳಿಗಾವಿ, ತಾಳಗುಂದ, ಬನವಾಸಿ, ಬಂದಳಿಕೆ, ಏಕಾಂತರಾಮಯ್ಯನ ಗುಡ್ಡ ಮುತ್ತಿಗೆ, ತೊಗರಸಿ, ಮುಂತಾದ ಇತಿಹಾಸ ಪ್ರಸಿದ್ಧ ಸ್ಥಳಗಳಿಗೆ ಹೋಗಿ ಅಲ್ಲಿರುವ ಪ್ರಾಚೀನ ತಾಳೆಗರಿಗಳನ್ನು ಸಂಗ್ರಹಿಸುವುದು, ಅಲ್ಲಿನ ಸ್ಥಳ ಐತಿಹ್ಯಗಳನ್ನು ದಾಖಲಿಸಿದರು. ಶಾಸನಗಳ ಪ್ರತಿ ತೆಗೆದು ಓದುವುದು ಕೋರಿ ಕಾಗದ ಕೃತಿಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗುತ್ತಿದ್ದರು. ಸಂಗ್ರಹಿಸಿದ ಕಡತಗಳ ಅವಲೋಕನ, ಟಿಪ್ಪಣಿ ಮಾಡುವುದು, ಪಾಠಾಂತರಗಳನ್ನು ಆಧರಿಸಿ ಶುದ್ಧಪ್ರತಿ ತಯಾರಿಸುವುದು, ಅವುಗಳನ್ನು ಪ್ರಕಟಿಸಿ ವಿದ್ವಾಂಸರ ಗಮನ ಸೆಳೆಯುವ ಕಾರ್ಯದಲ್ಲಿ ಸದಾಕಾಲ ತೊಡಗಿದ್ದರು.

ವಿಜಯಪುರ ಭಾಗದಲ್ಲಿ ಸಂಶೋಧನಾಕಾರ್ಯ, ವಚನಸಾಹಿತ್ಯವನ್ನು ಬೆಳಕಿಗೆ ತಂದ ಶಿ.ಘ.ಗು. ಹಳಕಟ್ಟಿ ಅವರಿಗೆ ಸರಿದೊರೆಯಾಗಿ ಶಿರಾಳಕೊಪ್ಪ ಭಾಗದ ಸಂಶೋಧನೆ, ಶರಣರ ಸ್ಥಳಗಳ ದಾಖಲೆ, ಲಿಂಗಾಯತ ತತ್ವ ಗ್ರಂಥಗಳ ಪ್ರಕಟನೆ, ಸದ್ಧರ್ಮ ದೀಪಿಕೆ ಮಾಸಿಕ ಪ್ರಕಟನೆ ಕಾರ್ಯಗಳಲ್ಲಿ ತೊಡಗಿದ್ದ ಶ್ರೀ ಚನ್ನಮಲ್ಲಪ್ಪ ಮಾಸ್ತರರ ಜೀವನ ಸಾಧನೆಗಳು ಬೆಳಕಿಗೆ ಬರಬೇಕಾಗಿದೆ. ನಮ್ಮ ಯಾವ ಸಂಶೋಧಕರಿಗೆ ಮಾದರಿಯಾಗಬೇಕಾಗಿದೆ. ಶಿರಾಳಕೊಪ್ಪದಲ್ಲಿನ ಅವರ ಮನೆಯನ್ನು ಶ್ರೀ ಸಿದ್ಧೇಶ್ವರ ನಿಲಯ ಎಂಬ ಹೆಸರಿನಲ್ಲಿ ಸುತ್ತಲ ಗ್ರಾಮಾಂತರ ಪ್ರದೇಶಗಳಿಂದ ಬಂದ ವಿದ್ಯಾರ್ಥಿಗಳಿಗಾಗಿ ಉಚಿತ ವಸತಿ, ಪ್ರಸಾದ ನಿಲಯವನ್ನಾಗಿಸಿದರು. ತಮ್ಮ ಸಮಸ್ತ ಆಸ್ತಿಯನ್ನು ಒಂದು ಟ್ರಸ್ಟನ್ನಾಗಿ ರೂಪಿಸಿ, ಅದರ ಉಸ್ತುವಾರಿಗೆ ಗಣ್ಯರಿಂದ ಕೂಡಿದ ವಿಶ್ವಸ್ಥ ಸಮಿತಿಯನ್ನು ರಚಿಸಿದರು. ಅವರ ಜೀವಿತ ಕಾಲದ ಕೊನೆಯವರೆಗೆ ಪೂರ್ಣ ಸಂಶೋಧನೆ ಪ್ರಕಟಣೆಯಲ್ಲಿ ಕಳೆದರು ಎಂದಿದ್ದಾರೆ ಪ್ರೊ. ಸ.ಸ. ಮಾಳವಾಡ ಅವರು. ಸಂಶೋಧನೆ: ಸದ್ಧರ್ಮದೀಪಿಕೆ ಸಂಪಾದಕರಾಗಿದ್ದ ಶ್ರೀ ಚನ್ನಮಲ್ಲಪ್ಪನವರು ತಮ್ಮ ಗ್ರಂಥದಲ್ಲಿ ರೇವಣಸಿದ್ಧರ ಚರಿತ್ರೆಯನ್ನು ಬೆಳಕಿಗೆ ತಂದು, ಎಲ್ಲರಿಗೂ ತಿಳಿಯುವಂತೆ ಸರಳ ಸುಲಭ ಶೈಲಿಯಲ್ಲಿ ನಿರೂಪಿಸಿದ್ದಾರೆ. ರೇವಣಸಿದ್ಧರ ಜನಪದ ಕುರಿತು ಇರುವ ಮಿಥ್ಯೆಗಳನ್ನು ಸಾಧಾರ ಪೂರ್ವಕವಾಗಿ ನಿರೂಪಿಸಿ ಅಲ್ಲಗಳೆದಿದ್ದಾರೆ. ಪ್ರಾಚೀನ ಗ್ರಂಥಗಳನ್ನು ಆಧರಿಸಿ ಕೂಲಂಕಷವಾಗಿ ಅಧ್ಯಯನ ಮಾಡಿದರು. ಶ್ರೀ ರೇವಣಸಿದ್ಧರ ಚರಿತ್ರೆಯನ್ನು ಉಪಯುಕ್ತ ಮಾಹಿತಿಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.

೧೯೪೧-೪೨ರಲ್ಲಿ ರಚಿತವಾದ ಅವರ ಸಂಶೋಧನಾ ಕೃತಿ ಬಸವೇಶ್ವರ ಕಾಲ. ಚನ್ನಮಲ್ಲಿಕಾರ್ಜುನರು ಈ ಕೃತಿ ಪ್ರಕಟನೆಗಾಗಿ ಅನೇಕ ಪ್ರಾಚೀನ ಗ್ರಂಥಗಳು, ಶಾಸನಗಳು, ತಾಳೆಕಟ್ಟುಗಳ ಅಧ್ಯಯನ ಮಾಡಿದ್ದಾರೆ. ಸಂಶೋಧಕ ಶ್ರೀ ಚನ್ನಮಲ್ಲಪ್ಪನವರ ಸಂಶೋಧನಾಸಕ್ತಿ, ಚಿಕಿತ್ಸಕ ದೃಷ್ಟಿ, ಅಧ್ಯಯನಶೀಲತೆ ವಿಮರ್ಶನ ಶಕ್ತಿಗೆ ನಿದರ್ಶವಾಗಿದೆ. ಬಸವೇಶ್ವರರ ಅಂತಿಮ ಕಾಲದಿಂದ ಆರಂಭವಾಗಿ, ಪ್ರಾಬಲ್ಯ, ವಿದ್ಯಾಭ್ಯಾಸ, ಜನನ ಹೀಗೆ ಅವರೋಹಣ ಕ್ರಮದಲ್ಲಿ ಶೋಧಿಸಿ ಪ್ರಕಟಿಸಿದ್ದಾರೆ.

ಶಿವಮೊಗ್ಗ ಜಿಲ್ಲೆ ಆನಂದಪುರ ಶಾಸನ ಮತ್ತು ಮಠಸ್ಥಳ ಹಸ್ತಪ್ರತಿಯ ಸಹಾಯದಿಂದ ಚರಿಪಾರಣ್ಯ ಮಠಗಳು ಲೇಖನ ಪ್ರಕಟಿಸಿದ್ದಾರೆ. ಕೆಳದಿ ಕಾಲದಲ್ಲಿ (೧೫೦೦-೧೭೬೩) ನಿರ್ಮಾಣವಾದ ಚಂಪಕ ಸರಸ್ಸು ದಂಡೆಯಲ್ಲಿರುವ ಮಹಂತಿನ ಮಠದ ಕುರುಹುಗಳನ್ನು ಅಧ್ಯಯನ ಮಾಡಿ ಚಂಪಾರಣ್ಯ ಮಠದ ಶೂನ್ಯ ಸಿಂಹಾಸನವೇ ಕಲ್ಯಾಣದ ಶೂನ್ಯ ಸಿಂಹಾಸನದ ಪ್ರಾಬಲ್ಯ ಕುಂದಿದ ನಂತರದ, ಶೂನ್ಯಸಿಂಹಾಸನ ಪೀಠದ ಮುಂದುವರಿಕೆಯಾಗಿದೆ ಎಂದಿರುವುದು ಗಮನಾರ್ಹ ಸಂಗತಿಯಾಗಿದೆ.

ಪರಶಿವನ ವಾಹನ ನಂದಿಯ ಅವತಾರವೆಂದು ಶೂನ್ಯ ಸಂಪಾದನೆಕಾರರು, ಪುರಾಣಕಾರರು ನಿರೂಪಿಸಿದ್ದ ಬಸವಣ್ಣನವರ ಹುಟ್ಟು ಸಾಧನೆಗಳ ಪುರಾಣಗಳ ಮಿಥ್ಯೆಯನ್ನು ಅಲ್ಲಗಳೆದು, ವಾಸ್ತವ ಸಂಗತಿಗಳಿಂದ ಕೂಡಿದ ಬಸವಣ್ಣನವರ ಚರಿತ್ರೆಯನ್ನು ಆಧಾರ ಪೂರ್ವಕವಾಗಿ ಅನೇಕ ಪ್ರಾಚೀನ ಗ್ರಂಥಗಳನ್ನು ನಿಕಷಕ್ಕೆ ಒಡ್ಡಿ, ಸಮಕಾಲೀನ ವಿದ್ವಾಂಸರೊಂದಿಗೆ ಚರ್ಚಿಸಿ ಶ್ರೀ ಬಸವೇಶ್ವರ ಕಾಲ ಎಂಬ ಕೃತಿಯನ್ನು ಪ್ರಕಟಿಸಿದ್ದಾಎರ. ತಮ್ಮ ಸಂಶೋಧನೆಗೆ ಬೇಕಾದ ಸಾವಿರಾರು ಪ್ರಾಚೀನ ಗ್ರಂಥಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಬಳಸಿದ್ದಾರೆ.

ಶ್ರೀ ಚನ್ನಮಲ್ಲಪ್ಪನವರು ೧೯೩೩ರಲ್ಲಿ ಪ್ರಕಟಿಸಿರುವ ಪುರಾತನ ದೇವಿಯವರ ತ್ರಿವಿಧಿ ಒಂದು ಅಮೂಲ್ಯವಾದ ಚಿಕ್ಕ ಕೃತಿ. ಈ ಕೃತಿ ರಚನೆಗಾಗಿ ಅವರು ಅನೇಕ ಪುರಾಣ ಗ್ರಂಥಗಳು, ತಾಳೆಗರಿ ಕಟ್ಟುಗಳನ್ನು ಪರಿಶೀಲಿಸಿ, ಅಪಾರ ಪರಿಶ್ರಮದಿಂದ ೬೩ ಪುರಾತನ ದೇವಿಯರನ್ನು ಕುರಿತ ಪದ್ಯಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ತ್ರಿವಿಧಿಗಳ ಶಬ್ದಾರ್ಥ, ಭಾವಾರ್ಥ, ವಿವರಣೆಗಳನ್ನು ನೀಡಿದ್ದಾರೆ ಎನ್ನುತ್ತಾರೆ ಪ್ರೊ. ಸ.ಸ. ಮಾಳವಾಡ ಅವರು. ಶ್ರೀ ಚನ್ನಮಲ್ಲಪ್ಪನವರು ತಮ್ಮ ೫೦ಕ್ಕೂ ಹೆಚ್ಚು ಅಮೂಲ್ಯ ಸಂಶೋಧನಾ ಕೃತಿಗಳನ್ನು ಶ್ರೀ ಸದ್ಧರ್ಮ ದೀಪಿಕೆ ಮೂಲಕ ಪ್ರಕಟಿಸಿ ಕರ್ನಾಟಕದ ಸಂಶೋಧನಾ ಕ್ಷೇತ್ರಕ್ಕೆ ಅಪೂರ್ವವಾದ ಕೊಡುಗೆ ನೀಡಿದ್ದಾರೆ.

ಪಂಚಾಚಾರ್ಯರು, ಪುರಾಣಪುರುಷರು. ಐತಿಹಾಸಿಕ ವ್ಯಕ್ತಿಗಳಲ್ಲ. ಅವರು ವೀರಶೈವ ಮತ ಸ್ಥಾಪಕರೆಂದು ನಂಬಲು ಶಾಸನಗಳ ಆಧಾರವಿಲ್ಲ. ಪ್ರಾಚೀನ ಸಾಹಿತ್ಯದಲ್ಲಿ ಉಲ್ಲೇಖವೂ ಇಲ್ಲ. ಶಿವಾಗಮಗಳ ಕಾಲವೂ ನಿರ್ಧಾರವಾಗಿಲ್ಲ. ೧೨ನೇ ಶತಮಾನದ ಬಸವಣ್ಣನವರು, ರೇವಣಸಿದ್ದರು ಕುರಿತು ಸಂಶೋಧನೆ ಮಾಡಿ ಬಿರುದು ಗ್ರಂಥ ಪ್ರಕಟಿಸಿದ್ದೇನೆ. ಹರಿಹರ ಮೊದಲಾದ ಕವಿಗಳು ರೇವಣಸಿದ್ಧರ ವಿಚಾರವಾಗಿ ಬರೆದಿರುವ ಕಾವ್ಯಗಳಾಗಲಿ, ಸಿದ್ದಾಂತ ಶಿಖಾಮಣಿ ಕೃತಿಯಾಗಲಿ, ಬಸವಣ್ಣನವರಿಗಿಂತ ಈಚಿನ ಕಾಲದವು. ಇವುಗಳಲ್ಲಿ ಉತ್ಪ್ರೇಕ್ಷೆ ತುಂಬಿದೆ. ಬಸವಣ್ಣನವರು ಶೂನ್ಯಸಿಂಹಾಸನ ರಚಿಸಿದರು ಎಂಬುದು ಐತಿಹಾಸಿಕ ಸತ್ಯ. ವಚನ ಸಾಹಿತ್ಯವನ್ನು ಕೂಲಂಕಷವಾಗಿ ಅಧ್ಯಯನ ಮಾಡಿ, ವೈಚಾರಿಕ ದೃಷ್ಟಿಯಿಂದ ಎಲ್ಲ ವಿಚಾರಗಳನ್ನು ಪರಿಶೀಲಿಸಬೇಕು. ವೈಜ್ಞಾನಿಕ ದೃಷ್ಟಿಯಿಂದ ಎಲ್ಲ ವಿಚಾರಗಳನ್ನು ಅಧ್ಯಯನ ಮಾಡಿ ನಿರ್ಣಯಿಸಬೇಕು. ಇದೇ ಸಂಶೋಧನೆಯ ಜೀವಾಳ ಎಂದಿದ್ದಾರೆ ಚನ್ನಮಲ್ಲಪ್ಪನವರು.

ನೆಲದ ಮರೆಯ ನಿಧಾನದಂತೆ, ತಿಲದ ಮರೆಯ ತೈಲದಂತೆ, ಎಲೆಯ ಮರೆಯ ಹೂವಿನಂತೆ, ತೆರೆಮರೆಯಲ್ಲಿ ಸದ್ದುಗದ್ದಲವಿಲ್ಲದೆ ಸಂಶೋಧನಾ ಕ್ಷೇತ್ರಕ್ಕೆ ಅಪೂರ್ವ ಕೊಡುಗೆ ನೀಡಿದ ಚನ್ನಮಲ್ಲಪ್ಪನವರು ದಿ: ೨.೧೧.೧೯೬೨ರಂದು ಶಿರಾಳಕೊಪ್ಪದಲ್ಲಿಯೇ ನಿಧನರಾದರು.

ಆಕರಗ್ರಂಥಗಳು

೧. ದೇವಿರಪ್ಪ ಎಚ್., ಚನ್ನಪ್ಪ ಎರಸೀಮೆ, ಸಂ. ಮಹಾನುಭಾವಿ ಶ್ರೀ ಚನ್ನಮಲ್ಲಿಕಾರ್ಜುನರು ಪ್ರ.ಜ.ಗಂ. ಧರ್ಮ ಪ್ರಸಾರ ಮಂಡಳಿ, ಮೂರು ಸಾವಿರ ಮಠ, ಹುಬ್ಬಳ್ಳಿ, ೧೯೮೩.

೨. ಡಾ. ರವೀಂದ್ರನಾಥ ಕೆ., ಹಸ್ತಪ್ರತಿ ವ್ಯಾಸಂಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

೧೧೩

ಕುಣಿಗಲ್ ತಾಲ್ಲೂಕು ಹ(ಅ)ಂದಲಗೆರೆ ಗ್ರಾಮದ ನಾಮವಿವೇಚನೆ ಮತ್ತು ಪ್ರಾಚ್ಯಾವಶೇಷಗಳು

ಹಂ.ಗು. ರಾಜೇಶ್*

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನಲ್ಲಿ ಎರಡು ಹಂದಲಗೆರೆಗಳಿವೆ. ಒಂದು ಹುಲಿಯೂರುದುರ್ಗ ಹೋಬಳಿಗೆ ಸೇರಿದ್ದರೆ, ಮತ್ತೊಂದು ಅಮೃತೂರು ಹೋಬಳಿಗೆ ಸೇರಿದೆ. ಈ ಲೇಖನವು ಹುಲಿಯೂರು ದುರ್ಗ ಹೋಬಳಿ, ತಾವರೇಕೆರೆ ಗ್ರಾಮಪಂಚಾಯ್ತಿಗೆ ಸೇರಿರುವ ಹಂದಲಗೆರೆಯಲ್ಲಿ (ಈ ಗ್ರಾಮದ ಮೂಲಕ ರಾಜ್ಯ ಹೆದ್ದಾರಿ ೧೧೧ ಹಾದು ಹೋಗುತ್ತದೆ) ನಡೆಸಿದ ಕ್ಷೇತ್ರಕಾರ್ಯವನ್ನು ಆಧರಿಸಿದೆ. ಈ ಊರಿನ ಪರಿಸರದಲ್ಲಿ ನಡೆಸಿದ ಕ್ಷೇತ್ರಕಾರ್ಯದಲ್ಲಿ ಒಂದು ಅಪ್ರಕಟಿತ ಶಾಸನ ದೊರಕಿದೆ. ಅಲ್ಲದೆ, ದೊಡ್ಡ ಮನೆಯೊಂದರ ಬುನಾದಿ, ಮಡಕೆ ಚೂರುಗಳು, ಕೆಲವು ಒಡೆದ ವೀರಗಲ್ಲುಗಳು, ಕುಲುಮೆ ಕಿಟ್ಟ, ಯೂಪಸ್ತಂಬ(?) ಮೊದಲಾದ ಅವಶೇಷಗಳು ದೊರೆತಿವೆ.

ಭೌಗೋಳಿಕ ಪರಿಸರ : ಭೌಗೋಳಿಕವಾಗಿ ಈ ಗ್ರಾಮವು ಉಪ ಜಲವಿಭಜಕ ರೇಖೆಯ ಮೇಲಿದೆ. ಈ ಗ್ರಾಮದಲ್ಲಿ ಬಿದ್ದ ಮಳೆಯ ನೀರು ಪೂರ್ವ ಮತ್ತು ಪಶ್ಚಿಮಾಭಿಮುಖವಾಗಿ ಹರಿಯುವ ಮೂಲಕ ಕಣ್ವ ಮತ್ತು ಶಿಂಷಾ ಎಂಬ ಕಾವೇರಿಯ ಎರಡು ಉಪನದಿಗಳನ್ನು ಸೇರುತ್ತವೆ. ಹೀಗೆ ಈ ಗ್ರಾಮವು ಉಪ ಜಲವಿಭಜಕ ರೇಖೆಯೊಂದರ ಮೇಲಿರುವುದರಿಂದ ಭೌಗೋಳಿಕ ಮಹತ್ವವನ್ನು ಪಡೆದುಕೊಂಡಿದೆ.

ಊರಿನ ನೈರುತ್ಯಕ್ಕೆ ಮಾರಮ್ಮನ (ರೇಣುಕಾಂಬ) ದೇವಸ್ಥಾನದ ಸಮೀಪ ರಸ್ತೆ ಬದಿಯಲ್ಲಿ ಮಣ್ಣಿನ ಗುಪ್ಪೆಯ ಮೇಲೆ ನಿಲ್ಲಿಸಿರುವ ಶಿಲಾಶಾಸನವು ಓದಲಾಗದಷ್ಟು ತ್ರುಟಿತವಾಗಿದೆ. ಇದರಲ್ಲಿ ಶಾಸನದ ಕಾಲ ಮತ್ತು ಕೆಲವು ಶಬ್ದಗಳನ್ನು ಮಾತ್ರ ಗುರುತಿಸಬಹುದಾಗಿದೆ. ಈ ಶಾಸನದಲ್ಲಿ ಶಾಲಿವಾಹನ ಶಕ ೧೫೮೫ ಎಂದು ತಿಳಿಸಿರುವುದರಿಂದ ಶಾಸನದ ಕಾಲ ಕ್ರಿ.ಶ. ೧೬೬೩ ಎಂದು ಅಂದಾಜಿಸಬಹುದು. ಇದರಲ್ಲಿನ ಅಸ್ಪಷ್ಟ ಅಕ್ಷರಗಳು ಮುಮ್ಮಡಿ ಕೆಂಪೇಗೌಡನ ಹೆಸರನ್ನು ಸೂಚಿಸುವಂತಿವೆ. ಈ ಗ್ರಾಮದ ಈಶಾನ್ಯಕ್ಕೆ ೫ ಕಿ.ಮೀ. ದೂರದಲ್ಲಿರುವ ಅಳಲಕುಪ್ಪೆ ಗ್ರಾಮದಲ್ಲಿ ಮುಮ್ಮಡಿ ಕೆಂಪೇಗೌಡನ ಶಾಸನವೊಂದನ್ನು ರೈಸ್ ಅವರು ಈ ಮೊದಲು ಪ್ರಕಟಿಸಿರುತ್ತಾರೆ.[೧] ಅಳಲಕುಪ್ಪೆ ಶಾಸನದಲ್ಲಿ ಸಂವತ್ಸರವಿದೆಯೇ ವಿನಃ ವರ್ಷದ ಉಲ್ಲೇಖವಿಲ್ಲ. ಸಂವತ್ಸರದ ಹಿನ್ನೆಲೆಯಲ್ಲಿ ನೋಡಿದಾಗ ಅದರ ಕಾಲ ಕ್ರಿ.ಶ. ೧೬೬೭ಕ್ಕೆ ಸರಿ ಹೊಂದುತ್ತದೆ. ಇತ್ತೀಚಿನ ಅಧ್ಯಯನಗಳ ಪ್ರಕಾರ ಮುಮ್ಮಡಿ ಕೆಂಪೇಗೌಡನ ಕಾಲವನ್ನು ಕ್ರಿ.ಶ. ೧೬೪೧–೧೬೭೪ ಎಂದು ಅಂದಾಜಿಸಲಾಗಿದೆ.[೨]

ಸ್ಥಳನಾಮ ವಿವೇಚನೆ : ಆರಂಭದಲ್ಲಿಯೇ ಹಂದಲಗೆರೆ ಗ್ರಾಮದ ನಾಮ ನಿಷ್ಪತ್ತಿಯನ್ನು ಶೋಧಿಸುವುದು ಅವಶ್ಯ. ಮೊದಲಿಗೆ ನಾಮ ನಿಷ್ಪತ್ತಿಯನ್ನು ಹುಡುಕಲು ಹೊರಟಾಗ 'ಹಂದಲ' ಎಂಬುದರ ನಾಮ ನಿಷ್ಪತ್ತಿಯನ್ನು ಗುರುತಿಸಲು ನಡೆಸಿದ ಪ್ರಯತ್ನಗಳು ವಿಫಲವಾಗಿದ್ದವು. ಆ ಸಂದರ್ಭದಲ್ಲಿ ಗಮನ ಸೆಳೆದ ಅಪ್ರಕಟಿತ ಶಾಸನದಲ್ಲಿ ಗ್ರಾಮದ ಹೆಸರನ್ನು 'ಅಂದಳಗೆರೆ' ಎಂದು ಉಲ್ಲೇಖಿಸಿರುವುದು ಕಂಡುಬಂತು. ಶಾಸನದಲ್ಲಿ ದೊರೆತ 'ಅಂದಳ' ಎಂಬುದಕ್ಕೆ ನಿಘಂಟಿನಲ್ಲಿ 'ಮೇನೆ', 'ಪಲ್ಲಕ್ಕಿ' ಎಂಬ ಅರ್ಥವಿದೆ.[೩] ಪಲ್ಲಕ್ಕಿ ಹೊರುವವರನ್ನು ಬೋವಿಗಳೆಂದು ಮತ್ತು ಸಾಮಾನ್ಯವಾಗಿ ಬೋಯಿಗಳು ಹೊರುತ್ತಿದ್ದ, ಬಾಗಿಲುಗಳುಳ್ಳ ಪಲ್ಲಕ್ಕಿಯಂತಹ ಒಂದು ವಾಹನವೇ ಮೇನೆ ಎಂದೂ ನಿಘಂಟಿನಲ್ಲಿ ಅರ್ಥಗಳಿವೆ.[೪] ನಮ್ಮ ಗ್ರಾಮೀಣ ಪರಿಸರದಲ್ಲಿ ಕಲ್ಲು, ಮಣ್ಣಿನ ಕೆಲಸ ಮಾಡುವ ಸಮುದಾಯವಾದ ಒಡ್ಡರನ್ನು ಬೋವಿಗಳೆಂದೂ ಕರೆಯುತ್ತಾರೆ. ಕೃತಿಯೊಂದರಲ್ಲಿ "ವಡ್ಡರು ಅಥವಾ ಭೋವಿಗಳು ಕಲ್ಲು ಕುಟ್ಟುವುದು, ಬಾವಿ ತೋಡುವುದು ಕೆರೆ – ಕಟ್ಟಡಗಳ ಅಣೆಕಟ್ಟುಗಳನ್ನು ಕಟ್ಟುವುದು ಬಹುಮುಖ್ಯವಾಗಿ ಮಣ್ಣು ಕೆಲಸ ಕಲ್ಲುಗಳಲ್ಲಿ ಕೆತ್ತನೆ ಕೆಲಸಗಳನ್ನು ಮಾಡುತ್ತಾರೆ" ಎಂದು ಉಲ್ಲೇಖಿಸಿದೆ.[೫] ಈ ಊರಿನ ಆಗ್ನೇಯಕ್ಕೆ 'ಒಡ್ಡನ ಕಟ್ಟೆ' ಎಂಬ ಕೆರೆ ಇದೆ. ಮೊದಲು ಈ ಊರಿನಲ್ಲಿ ಒಡ್ಡರು ನೆಲೆನಿಂತು ಕೆರೆಯನ್ನು ಕಟ್ಟಿದ್ದರಿಂದ ಈ ಹೆಸರು ಬಂತೆಂದು ಗ್ರಾಮಸ್ಥರು ಹೇಳುತ್ತಾರೆ. ಆದ್ದರಿಂದ ಒಡ್ಡರೆ ಗ್ರಾಮದ ಮೂಲ ಸ್ಥಾಪಕರು ಎಂದು

* # ೩೩/ಎ, ಐ.ಟಿ.ಐ. ಕಾಲೇಜು ಹತ್ತಿರ, ಕೆಂಪೇಗೌಡ ನಗರ, ವಿಶ್ವನೀಡಂ ಅಂಚೆ, ಬೆಂಗಳೂರು–೫೬೦೦೯೧.

ಹೇಳಬಹುದು. ಆದರೆ ಇಂದು ಈ ಗ್ರಾಮದಲ್ಲಿ ಒಡ್ಡರು ವಾಸವಿಲ್ಲ. ಇವರೇ ಗ್ರಾಮದೇವತೆ ಮಾರಮ್ಮನನ್ನು ಕೂಡ ಪ್ರತಿಷ್ಠಾಪನೆ ಮಾಡಿದರೆಂದು ಹೇಳುತ್ತಾರೆ.[೬] ಆದ್ದರಿಂದ 'ಒಡ್ಡನಕಟ್ಟೆ' ಎಂಬ ಅಚ್ಚಕನ್ನಡದ ಸಂಸ್ಕೃತ ರೂಪವೇ 'ಅಂದಳಗೆರೆ' ಆಗಿದೆ.

ಈ ರೀತಿಯ ಸಂಸ್ಕೃತ ರೂಪಾಂತರವನ್ನು ಕುರಿತು ವಿದ್ವಾಂಸರು ಏನು ಹೇಳುತ್ತಾರೆ ನೋಡೋಣ. ೧೯೪೭ರಲ್ಲಿ ಪ್ರಕಟವಾದ ಶಂ.ಬಾ. ಜೋಶಿ ಅವರ 'ಎಡೆಗಳು ಹೇಳುವ ಕಂನಾಡ ಕತೆ' ಕೃತಿಯು ಕನ್ನಡ ನಾಡಿನ ಸ್ಥಳನಾಮ ಅಧ್ಯಯನ ಕೈಗೊಳ್ಳುವವರಿಗೆ ಒಂದು ಆಕರ ಗ್ರಂಥವಾಗಿದೆ. ಶಂ.ಬಾ. ಜೋಶಿ ಅವರ ಪ್ರಕಾರ ಸ್ಥಳನಾಮಕ್ಕೆ ಸಂಬಂಧಿಸಿದಂತೆ ಯಾವುದೇ ಹೆಸರಿರಲಿ, ಅದು ಸಾಧಾರಣವಾಗಿ ಎರಡು ಶಬ್ದಗಳಿಂದಾದ ಒಂದು ಕೂಡು ನುಡಿಯಾಗಿದೆ. ಅದರಲ್ಲಿ ಮೊದಲನೆಯ ಶಬ್ದ ವಿಶಿಷ್ಟಾರ್ಥವನ್ನೂ, ಎರಡನೆಯ ಶಬ್ದ ಆ ವರ್ಗದ ಸಾಮಾನ್ಯಾರ್ಥವನ್ನೂ ಸೂಚಿಸುತ್ತದೆ.[೭] ಸ್ಥಳನಾಮ ಅಧ್ಯಯನ ನಡೆಸುವಾಗ ಎಷ್ಟೋ ಊರುಗಳ ಹೆಸರುಗಳು ಕಾಲಘಟ್ಟದಲ್ಲಿ ಜನರ ಬಾಯಲ್ಲಿ ಮಾರ್ಪಾಡುಗೊಂಡು ಅರ್ಥಹೀನವಾಗಿರುತ್ತವೆ. ಮತ್ತೆ ಕೆಲವು ದೇಶಿಯ ಹೆಸರುಗಳು ಕಾಲಾಂತರದಲ್ಲಿ ಸಂಸ್ಕೃತಕ್ಕೆ ರೂಪಾಂತರಗೊಂಡಿರುತ್ತವೆ. ಅಂತಹ ಸಂದರ್ಭದಲ್ಲಿ ಸ್ಥಳನಾಮ ಅಭ್ಯಾಸಿಗಳು ಪ್ರಾಚೀನ ಸಾಹಿತ್ಯ, ಶಾಸನಗಳ ನೆರವನ್ನು ಪಡೆಯಬೇಕಾಗುತ್ತದೆ. ಸ್ಥಳೀಯ ಹೆಸರುಗಳು ಸಂಸ್ಕೃತರೂಪ ಪಡೆದುಕೊಂಡ ಬಗ್ಗೆ ಶಂ.ಬಾ. ಜೋಶಿ ಅವರು 'ಎಡೆಗಳು ಹೇಳುವ ಕಂನಾಡ ಕತೆ' ಕೃತಿಯ ಮುನ್ನುಡಿಯಲ್ಲಿ "...ದೇಶಿಯ ಹೆಸರುಗಳನ್ನು ಸಂಸ್ಕೃತಕ್ಕೆ ತಿರುಗಿಸಿಕೊಳ್ಳುವ ರೂಢಿಯು ಒಂದು ಕಾಲಕ್ಕೆ ವಿಶೇಷವಾಗಿದ್ದಿತು" ಎನ್ನುತಾರೆ.[೮] ಶಂ.ಬಾ. ಜೋಶಿ ಅವರು ಹೇಳುವ ಹಾಗೆ ಈ ಗ್ರಾಮದ ಮೂಲ ಹೆಸರು 'ಒಡ್ಡನ ಕಟ್ಟೆ'ಯಾಗಿದ್ದು, ಈ ದೇಶಿಯ ಹೆಸರು ನಂತರ ಸಂಸ್ಕೃತಕ್ಕೆ 'ಅಂದಳಗೆರೆ' ಎಂದು ರೂಪಾಂತರಗೊಂಡಿರುವುದನ್ನು ಕಾಣಬಹುದು. ಆನಂತರ 'ಅಂದಳಗೆರೆ'ಯು 'ಹಂದಲಗೆರೆ' ಎಂದು ಅರ್ಥಹೀನವಾಗಿದೆ ಎಂದು ತೀರ್ಮಾನಿಸಬಹುದು.

ಹಂದಲಗೆರೆ ಪರಿಸರದ ಪ್ರಾಚ್ಯಾವಶೇಷಗಳು: ಮಾರಮ್ಮನ ಗುಡಿಗೆ ಹೊಂದಿಕೊಂಡಂತೆ ನೈರುತ್ಯ ಮೂಲೆಯಲ್ಲಿ ಬೃಹತ್ ತಳಹದಿಯೊಂದರ ಅವಶೇಷವಿದೆ. ಬಹುಶಃ ಇದೇ ಒಡ್ಡರ ಮೂಲ ನೆಲೆಯಾಗಿರಬಹುದು. ಶಕ್ತಿ ದೇವತೆಯಾದ ಮಾರಮ್ಮ ಒಡ್ಡರ ಆರಾಧ್ಯದೇವತೆ[೯] ಆಗಿರುವುದರಿಂದ ಒಡ್ಡರಿಂದಲೇ ಊರಿನ ಮಾರಮ್ಮ ದೇವಿಯ ಪ್ರತಿಷ್ಠಾಪನೆ ಮತ್ತು ಆರಾಧನೆ ಪ್ರಾರಂಭವಾಗಿರಬೇಕು. ಇದೇ ಅಭಿಪ್ರಾಯ ಗ್ರಾಮಸ್ಥರದೂ ಆಗಿದೆ. ನಂತರ ಕುಂಬಾರರು ಈ ಊರಿಗೆ ಬಂದು ನೆಲೆಸಿದರೆಂದು ಪ್ರತೀತಿ ಇದೆ. ಊರಿನ ಪೂರ್ವಕ್ಕಿರುವ ಅಜ್ಜಿಕಟ್ಟೆಯ ಮಣ್ಣಿನಲ್ಲಿ ಇವರು ಮಡಕೆ ಮಾಡುತ್ತಿದ್ದರೆಂದು ಆ ಮಡಕೆಗಳು ಹೆಚ್ಚು ತಾಳಿಕೆ ಬರುತ್ತಿದ್ದವೆಂದು ಸ್ಥಳಿಯರು ಹೇಳುತ್ತಾರೆ. ಒಮ್ಮೆ ಮನೆಯ ಮೇಲಿನಿಂದ ಎಸೆದ ಮಡಕೆಯು ಒಡೆಯದಿದ್ದಾಗ ಕುಂಬಾರರು ಈ ಊರಿನಲ್ಲಿ ನಮಗೆ ಏಳಿಗೆ ಇಲ್ಲವೆಂದು ಗ್ರಾಮವನ್ನು ತೊರೆದು ಬೇರೆ ಕಡೆಗೆ ವಲಸೆ ಹೋದರೆಂದು ಹೇಳುತ್ತಾರೆ.[೧೦] ಅದಕ್ಕೆ ಪೂರಕವಾಗಿ ದೇವಸ್ಥಾನದ ಪಶ್ಚಿಮದಲ್ಲಿರುವ ಬಜ್ಜಪ್ಪನವರ ದೊಡ್ಡಯ್ಯ ಎಂಬುವವರ ಹೊಲದಲ್ಲಿ ಮಡಕೆ ಚೂರುಗಳು ಇಂದಿಗೂ ಉಳುಮೆಯ ಸಂದರ್ಭದಲ್ಲಿ ದೊರೆಯುತ್ತವೆ.

ಸುಮಾರು ೧೨೦ ವರ್ಷಗಳ ಹಿಂದೆ ಪೊದೆಯೊಳಗಿದ್ದ ಮಾರಮ್ಮನನ್ನು ಗ್ರಾಮಸ್ಥರು ಹೊರತೆಗೆದು ದೇವಾಲಯವನ್ನು ನಿರ್ಮಿಸಿದ್ದರು. ಶಿಥಿಲವಾಗಿದ್ದ ದೇವಾಲಯವನ್ನು ಇಪ್ಪತ್ತು ವರ್ಷಗಳ ಕೆಳಗೆ ಕೆಡವಿ ಹಾಕಿ ಈಗಿನ ದೇವಾಲಯವನ್ನು ೨೦೦೬ರ ಸುಮಾರಿನಲ್ಲಿ ಪೂರ್ಣಗೊಳಿಸಿದರು.

ಊರಿನ ಈಶಾನ್ಯಕ್ಕಿರುವ ತಿಪ್ಪಾಳ(ಒಂದು ಕುಂಟೆ)ಕ್ಕೆ ಹೋಗುವ ದಾರಿಯ ಎಡಬದಿಯ ಹೊಲಗಳಲ್ಲಿ ಕೆಲವು ವರ್ಷಗಳ (೨೦೦೪) ಹಿಂದೆ ಕ್ಷೇತ್ರಕಾರ್ಯ ನಡೆಸಿದಾಗ ಒಡೆದ ವೀರಗಲ್ಲುಗಳು ದೊರೆತಿದ್ದವು. ಇವು ವಿಜಯನಗರ ಕಾಲಘಟ್ಟದ ವೀರಗಲ್ಲಿನಂತೆ ತೋರುತ್ತಿದ್ದವು. ಅಲ್ಲಿಯೇ ಕುಸಿದ ಚಪ್ಪಡಿಯ ಮಂಟಪವೊಂದರ ಅವಶೇಷವಿದೆ. ಬಹುಶಃ ಇದು ವೀರಗಾರರ ಗುಡಿ ಇರಬಹುದು. ಇದರ ಎದುರಿಗೆ ಅಂದರೆ ಪೂರ್ವಕ್ಕೆ ೫೦ ಮೀ. ದೂರದಲ್ಲಿ ೫ ಅಡಿ ಎತ್ತರದ ಯೂಪಸ್ತಂಬವೊಂದನ್ನು ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿದ ಕಿರು ವೇದಿಕೆಯ ಮೇಲೆ ನಿಲ್ಲಿಸಲಾಗಿದೆ. ತಿಪ್ಪಾಳದ ಮೇಲ್ಭಾಗದಲ್ಲಿ ಇತ್ತೀಚೆಗೆ ನಡೆಸಿದ ಕ್ಷೇತ್ರಕಾರ್ಯದ ವೇಳೆ ಕುಲುಮೆಕಿಟ್ಟ ದೊರೆಯಿತು. ಇಲ್ಲಿ ಕಮ್ಮಾರರು ಕುಲುಮೆ ಹಾಕಿಕೊಂಡಿದ್ದರೆಂದು ಹೇಳುತ್ತಾರೆ. ಆದರೆ ಕಾಲದ ಬಗ್ಗೆ ಸ್ಪಷ್ಟತೆ ಸಿಗುವುದಿಲ್ಲ.

ಹಂದಲಗೆರೆ ಗ್ರಾಮದ ದಕ್ಷಿಣಕ್ಕೆ ಅಂದರೆ ಒಡ್ಡನಕಟ್ಟೆಯ ನೈರುತ್ಯಕ್ಕೆ ಕೆಲವು ನಿಲುವುಗಲ್ಲುಗಳಿವೆ. ಬಹುಶಃ ಇದು ಮನೆ ಅಥವಾ ಮಂಟಪದ ಅವಶೇಷವಾಗಿರಬಹುದು. ಈ ಭಾಗದ ಹೊಲಗಳನ್ನು 'ಗೊಲ್ಲನ ಹೊಲ' ಎಂದು ಕರೆಯುತ್ತಾರೆ. ಈ ಹೊಲಗಳ ಆಚೆಗೆ ಅರಣ್ಯದ ಅಂಚು ಇರುವುದರಿಂದ ಹಾಗೂ ಪಕ್ಕದಲ್ಲಿಯೇ ಕೆರೆ ಇರುವುದರಿಂದ ಗೊಲ್ಲರು ಇಲ್ಲಿ



ಮಾರಮ್ಮ (ರೇಣುಕಾಂಬ) ದೇವಾಲಯ
(ಪ್ರಾಚೀನ ಬುನಾದಿಯ ಅವಶೇಷಗಳ ಭಾಗದಿಂದ ಕಾಣುವ ದೃಶ್ಯ)



ಪ್ರಾಚೀನ ಬುನಾದಿ ಅವಶೇಷ



ಯೂಪಸ್ತಂಬ(?)

ನೆಲೆಸಿದ್ದಿರಬಹುದು. ಇಲ್ಲಿನ ಸಮೀಪದ ಹೊಲಗಳಲ್ಲಿ ಹಗೇವುಗಳು (ನೆಲಕಣಜ) ಸಿಕ್ಕಿವೆ. ಊರಿನ ವಾಯವ್ಯಕ್ಕೆ ಅರ್ಧ ಕಿ.ಮೀ. ದೂರದಲ್ಲಿ ಲಕ್ಕ(ಮ್ಮ)ನದೊಡ್ಡಿ ತಿಟ್ಟು ಎಂಬ ಊರು ಇತ್ತೆಂದು ಹೇಳುತ್ತಾರೆ.[೧೧] ಆದರೆ ಆ ಪ್ರದೇಶದಲ್ಲಿ ಯಾವುದೇ ಪ್ರಾಚ್ಯಾವಶೇಷಗಳು ಕಂಡು ಬರುವುದಿಲ್ಲ. ಆದರೆ ಸಮೀಪದಲ್ಲಿ ಬೃಹತ್ ಆಲದಮರವೊಂದು ಅಮಾಸಯ್ಯ ಅವರ ಹೊಲದಲ್ಲಿತ್ತು. ಅದನ್ನು ೨೦ ವರ್ಷಗಳ ಹಿಂದೆ ಕಡಿದು ಹಾಕಿದ್ದಾರೆ.

ಹಂದಲಗೆರೆ ಗ್ರಾಮ ಪರಿಸರದ ಪ್ರಾಚ್ಯಾವಶೇಷಗಳು, ಶಾಸನ ಮತ್ತು ಮೌಖಿಕ ಕಥನಗಳನ್ನು ಆಧರಿಸಿ ಒಟ್ಟಾರೆಯಾಗಿ ನೋಡುವುದಾದರೆ, ಈ ಗ್ರಾಮವು ವಿಜಯನಗರೋತ್ತರ ಕಾಲದಲ್ಲಿ ಏಳಿಗೆಗೆ ಬಂದ ಗ್ರಾಮವಾಗಿದೆ. ಒಡ್ಡ ಸಮುದಾಯವೇ ಈ ಊರಿನ ಮೂಲ ನಿವಾಸಿಗಳು. ಒಡ್ಡರೇ ಈ ಪರಿಸರದಲ್ಲಿ ಕೆರೆಯನ್ನು ಕಟ್ಟಿ ಕೃಷಿಗೆ ಅನುವು ಮಾಡಿಕೊಟ್ಟರು. ಅಲ್ಲದೆ, ಮಾರಮ್ಮ ದೇವಿಯನ್ನು ಪ್ರತಿಷ್ಠಾಸಿದ್ದರು (ಮೂಲದಲ್ಲಿ ಪುಟ್ಟದಾದ ಮರದ ಪ್ರತಿಮೆ ಇತ್ತು. ೭–೮ ವರ್ಷಗಳ ಹಿಂದೆ ಅದನ್ನು ಬದಲಿಸಿ ಕಲ್ಲಿನ ವಿಗ್ರಹವನ್ನು ಮಾಡಿಸಿ ಗ್ರಾಮಸ್ಥರು ಮರುಪ್ರತಿಷ್ಠಾಪನೆ ಮಾಡಿದ್ದಾರೆ). ಒಡ್ಡರು ದೇವಸ್ಥಾನದ ಪಕ್ಕದಲ್ಲಿಯೇ ದೊಡ್ಡ ಮನೆಯೊಂದನ್ನು ನಿರ್ಮಿಸಿ ಕೆಲಕಾಲ ವಾಸವಿದ್ದಿರುವಂತೆ ತೋರುತ್ತದೆ. ಇಂದಿಗೂ ಮನೆಯ ಬುನಾದಿಯ ಅವಶೇಷಗಳು ಗೋಚರಿಸುತ್ತವೆ. ದೇವಸ್ಥಾನದ ಸಮೀಪವೇ ಇರುವ ಶಿಲಾಶಾಸನವು ಮುಮ್ಮಡಿ ಕೆಂಪೇಗೌಡನ ಕಾಲಕ್ಕೆ ಸೇರಿದ ಶಾಸನವಿದೆ. ಆದರೆ ಶಿಲಾಶಾಸನದ ಕೆಳಹಂತದ ಪಟ್ಟಿಕೆಯೊಳಗೆ ಕುಂಭದ ಎಡ ಮತ್ತು ಬಲಗಳಲ್ಲಿ ಕತ್ತೆ

ಹಾಗೂ ನಾಯಿಯನ್ನೂ, ಎರಡನೇ ಹಂತದಲ್ಲಿ ಎತ್ತುಗಳನ್ನು ಹೂಡಿದ ಬಂಡಿಯ ಕೆತ್ತನೆಯನ್ನು ಕಾಣಬಹುದು. ಎತ್ತಿನ ಬಂಡಿ, ಕುಂಭ ಮತ್ತು ನಾಯಿ ಹಾಗೂ ಕತ್ತೆಯ ಶಿಲ್ಪಗಳು ಗಮನ ಸೆಳೆಯುತ್ತವೆ.

ಒಟ್ಟಾರೆ, ಇದೊಂದು ದಾನಶಾಸನದಂತೆ ತೋರುತ್ತಿದ್ದು, ಸ್ಥಳೀಯ ಅರಸನಾದ ಮುಮ್ಮಡಿ ಕೆಂಪೇಗೌಡನು ಬಂಡಿ ಮತ್ತು ಎತ್ತುಗಳನ್ನು ಕೆರೆಯ ದುರಸ್ಥಿಗಾಗಿ ನೀಡಿರಬಹುದು. ಕಳಶ / ಕುಂಭವನ್ನು ಸಮೃದ್ಧಿಯ ಸಂಕೇತವಾಗಿಯೂ, ಕತ್ತೆಯನ್ನು ಶುಭ ಸೂಚಕವಾಗಿಯೂ ಭಾವಿಸಬಹುದು. ಈ ಹಿನ್ನೆಲೆಯಲ್ಲಿ ಚರಿತ್ರೆಯನ್ನು ವಿಶ್ಲೇಷಿಸುವುದಾದರೆ, ಸ್ಥಳೀಯ ಅರಸರು ಊರು ಕಟ್ಟಲು ಮತ್ತು ಕೃಷಿಯನ್ನು ಅಭಿವೃದ್ಧಿಪಡಿಸಲು ಒಡ್ಡರನ್ನು ಪ್ರಧಾನವಾಗಿ ಬಳಸಿಕೊಳ್ಳುತ್ತಿದ್ದರೆಂಬ ಅಂಶ ಸ್ಪಷ್ಟವಾಗುತ್ತದೆ.

ಇದೇ ರೀತಿ ಹಂದಲಗೆರೆಯ ಅಕ್ಕಪಕ್ಕದಲ್ಲಿರುವ ಕೆಂಚನಹಳ್ಳಿ, ತಾವರೆಕೆರೆ ಮೊದಲಾದ ಗ್ರಾಮಗಳ ಪರಿಸರಗಳಲ್ಲಿಯೂ ಸಾಕಷ್ಟು ಪ್ರಾಚ್ಯಾವಶೇಷಗಳು ಲಭ್ಯವಿದ್ದು, ಅವುಗಳನ್ನು ಕೂಡ ಅಧ್ಯಯನಕ್ಕೆ ಒಳಪಡಿಸಬೇಕಾದ ಅಗತ್ಯವಿದೆ.

ಆಧಾರಸೂಚಿ

೧. *ಎಪಿಗ್ರಾಫಿಯ ಕರ್ನಾಟಿಕ ಸಂಪುಟ ೯*, (ರೈಸ್ ಆವೃತ್ತಿ), ಮಾಗಡಿ–೩೫.

೨. ಹಂ.ಗು. ರಾಜೇಶ್, ೨೦೧೬, 'ಕೆಂಪಾಪುರ ಸಮಾಧಿಯ ಕೆಂಪೇಗೌಡ ಯಾರು?', *ಇತಿಹಾಸ ದರ್ಪಣ*, ಪುಸ್ತಕ–೨೮ ನೋಡಿ.

೩. *ಸಂಕ್ಷಿಪ್ತ ಕನ್ನಡ ನಿಘಂಟು (ಪರಿಷ್ಕೃತ)*, ೨೦೦೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪು. ೭.

೪. ಅದೇ, ಪು. ೯೨೭ ಮತ್ತು ೧೦೫೩.

೫. ಗಂಗಾಧರಯ್ಯ, ೨೦೦೭, *ಭೋವಿ ಸಮಾಜದ ಸಂಸ್ಕೃತಿ* ಮತ್ತು ಕೊಡುಗೆಗಳು, ಬೆಂಗಳೂರು, ಪು. ೧೬.

೬. ವಕ್ತೃ: ಟೈಲರ್ ಕೆಂಪಣ್ಣ (೬೫), ಒಕ್ಕಲಿಗ, ಹಂದಲಗೆರೆ ಗ್ರಾಮ.

೭. ಮಲ್ಲೇಪುರಂ ಜಿ. ವೆಂಕಟೇಶ (ಸಂ.), ೧೯೯೯, ಶಂಬಾ ಕೃತಿ ಸಂಪುಟ ೩, ಕಂನಡ–ಕಂನುಡಿ, ಕನ್ನಡ ಪುಸ್ತಕ ಪ್ರಾಧಿಕಾರ: ಬೆಂಗಳೂರು. ಪು. ೧೨೩.

೮. ಅದೇ. ಪು. ೧೨೦.

೯. ಪ್ರಶಾಂತ್ ಹೆಚ್.ಡಿ., (ಸಂ.) ೨೦೦೦, ಕರ್ನಾಟಕ ರಾಜ್ಯಕೋಶ ೪, ಜನಸಮುದಾಯ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ: ಹಂಪಿ, ಪು. ೮೭.

೧೦. ವಕ್ತೃ: ಗ್ರಾಮಸ್ಥರಾದ ಮೋಟಯ್ಯನವರ ಮಗ ಕೆಂಪಯ್ಯ (೭೫) ಒಕ್ಕಲಿಗ ಮತ್ತು ಮಳ್ಳಪ್ಪನವರ ಮಗ ಶಿವಣ್ಣ (೫೦) ಒಕ್ಕಲಿಗ ಇವರ ಸಂದರ್ಶನದಿಂದ ವ್ಯಕ್ತವಾದ ಸಾಮಾನ್ಯ ಅಭಿಪ್ರಾಯ.

೧೧. ವಕ್ತೃ: ಗ್ರಾಮಸ್ಥರಾದ ದಾದಯ್ಯ ಉರುಫ್ ರಂಗಯ್ಯ (೭೦), ಒಕ್ಕಲಿಗ.

೧೧೭

ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಪತ್ತಿನ ಕರ್ನಾಟಕವನ್ನು ಸುತ್ತೋಣ

ಡಾ. ಎಸ್.ಕೆ. ಜೋಶಿ*

'ಇತಿಹಾಸ' ಹಾಗೂ 'ಸಂಸ್ಕೃತಿ' ವಿಷಯಗಳು ಮಾನವನ ಬದುಕಿನ ಸುತ್ತ ಹೆಣೆದುಕೊಂಡಿವೆ. ಮೊದಲು ಇತಿಹಾಸದ ಉಮಗ, ತದನಂತರ ಆತನ ಪ್ರೌಢ ಮನಸ್ಸಿನಿಂದ ಹೊರಬಂದ ಗುಣಮೌಲ್ಯಗಳು ಸಂತತಿಯಾಗಿ ರೂಪುಗೊಂಡಿವೆ.

ಇತಿ+ಹಾ+ಅಸಂ ಇತಿಹಾಸ ಶಬ್ದದ ಪರಿಚ್ಛೇದ 'ಮಾನವನು ಹೀಗೆ ಇದ್ದನು' ಎಂದರ್ಥ. ಅವನು ಹೇಗೆ ಇದ್ದನು ಎಂಬ ಮಾನವನ ಕಥೆ ಹೇಳುವುದೇ, ಸಂಕ್ಷಿಪ್ತದಲ್ಲಿ, ಇತಿಹಾಸವೆಂದು ಅರ್ಥೈಸಬಹುದು.

ಮಾನವನು ತನ್ನ ಸಂಸ್ಕೃತಿಯ ಕೊಡುಗೆಗಳಾಗಿ, ನೃತ್ಯ, ಸಂಗೀತ, ಶಿಲ್ಪಕಲೆ, ಉಡುಗೆ ತೊಡುಗೆ, ಸಾಹಿತ್ಯ ಇತ್ಯಾದಿಗಳನ್ನು ನೀಡಿದ, ಇತಿಹಾಸ ನಿರ್ಮಿಸಿದ, ಅವುಗಳಲ್ಲಿ ಚಿತ್ತಾಕರ್ಷವಾಗಿರುವುದು ರಾಜಕೀಯ ಇತಿಹಾಸ ಮಾತ್ರವಲ್ಲ ಮಾನವ ಸಮಾಜದ ಮಾನಸ ಸಾಮ್ರಾಜ್ಯದಲ್ಲಿ ಸತ್ಯವನ್ನೂ, ನ್ಯಾಯವನ್ನೂ, ಸಮತೆಯನ್ನೂ, ಬಂಧುತ್ವವನ್ನೂ, ಆಧ್ಯಾತ್ಮವನ್ನೂ ಬಿತ್ತರಿಸಿದ್ದಾರೆ. ಆ ಹೋರಾಟದಲ್ಲಿ ಭಾರತದ ಇನ್ನುಳಿದ ಪ್ರಾಂತ್ಯಗಳು ಭಾಗಿಯಾದಂತೆ, ಕರ್ನಾಟಕವೂ ಮುಂಚೂಣಿಯಲ್ಲಿದೆ.

ಈ ಮುಂಚೂಣಿಯ ಕ್ಷೇತ್ರಗಳಾದ ತತ್ವ, ಸಾಹಸ ಧರ್ಮ, ಸಹನೆ, ಸಹಬಾಳ್ವೆ, ಜೀವನ ಹಾಗೂ ಸಂಸ್ಕೃತಿ, ಜೀವನ ವಿಧಾನ ಮತ್ತು ಮೌನ ಇವೆಲ್ಲ ಮಾನವನ ಸಮಾಜದ ಅಭಿವೃದ್ಧಿಯ ಅಡಿಗಲ್ಲುಗಳಾದವು. ಇತಿಹಾಸವು 'what we havel' ಎಂಬುದನ್ನೂ ಸಂಸ್ಕೃತಿಯು 'what we are' ಎಂಬುದನ್ನು ತೋರಿಸುತ್ತವೆ.

ಅನೇಕ ರಾಜವಂಶಗಳ ಉದಯಾಸ್ತ ಮಾನಗಳನ್ನು ಕರ್ನಾಟಕದಲ್ಲಿ ಇಲ್ಲಿಯ ಕೋಟೆಗಳು, ಕೊತ್ತಲಗಳು, ವಾಡೆಗಳು, ಅರಮನೆಗಳು ಕಂಡಿವೆ. ಭವ್ಯ ಭಾರತದಲ್ಲಿ ಬದಲಾವಣೆಗಳಾದರೂ ಇವೆಲ್ಲ ನಿಶ್ಚಯವಾಗಿವೆ, ನಿಚ್ಚಳವಾಗಿವೆ. ಕಾಲಗರ್ಭದಲ್ಲಿ ವಿವಿಧ ಶಕ್ತಿಗಳ ಒಂದರ ಮೇಲೊಂದು ವರ್ತಿಸುತ್ತ, ಪ್ರವರ್ತಿಸುತ್ತ, ಹೆಚ್ಚು ದಿಗ್‌ಭ್ರಮೆಗೊಳಿಸುವ ಐತಿಹಾಸಿಕ ನಾಟಕಗಳು (Dramas) ನಡೆದಿವೆ. ಈ ನೆಲದ ಸಂಸ್ಕೃತಿ ನಿರ್ಮಿಸಲು ಅನೇಕ ನಟರು ಪಾತ್ರವಹಿಸಿದ್ದಾರೆ. ಏಳು-ಬೀಳುಗಳಿದ್ದರೂ, ಈ ದೇಶದ ಅಂತಃಸತ್ವವು ಆಘಾತಗಳನ್ನು ತಡೆದುಕೊಂಡಿದ್ದು, ಕಾಲಕ್ರಮೇಣ ವೈವಿಧ್ಯಪೂರ್ಣ ವಿನ್ಯಾಸವಿರುವ ಸುಂದರ ಸಾಂಸ್ಕೃತಿಕ ಉಪವರಣವನ್ನು ನೇಯ್ದಿದೆ (ಡಾ. ಬಿ. ಶೇಖ್‌ಅಲಿ, ಪ್ರಸಿದ್ಧ ಇತಿಹಾಸಕಾರ).

ಇನ್ನು ಕರ್ನಾಟಕದ ವಾಸ್ತುಶಿಲ್ಪ ಸಾಮ್ರಾಜ್ಯದಲ್ಲಿ ವಿಹರಿಸಿದಂತೆ, ನಮಗೆ ಗೋಚರಿಸುವವು ನಾಲ್ಕು ವಾಸ್ತುಶಿಲ್ಪ ಪ್ರಕಾರಗಳು.

ಡೊಮೆಸ್ಟಿಕ್ ಆರ್ಕಿಟೆಕ್ಚರ್ (ಗೃಹ್ಯ) ವಾಸ್ತು.

ರಿಲಜಿಯಸ್ ಆರ್ಕಿಟೆಕ್ಚರ್ (ಧಾರ್ಮಿಕ) ವಾಸ್ತು.

ಡಿಫೆನ್ಸ್ ಆರ್ಕಿಟೆಕ್ಚರ್ (ರಕ್ಷಣಾ) ವಾಸ್ತು.

ಸೆಕ್ಯೂಲರ್ ಆರ್ಕಿಟೆಕ್ಚರ್ (ಸಾರ್ವಜನಿಕ) ವಾಸ್ತು.

ಈ ಚತುರಸ್ರ ವಾಸ್ತುಗಳ (ಪ್ರಯೋಗ ಈ ನಾಡಿನಲ್ಲಾಗಿದೆ. ಗ್ರಹ್ಯವಾಸ್ತುಗಳ ಸುಂದರ ಅರಮನೆಗಳು, ಧಾರ್ಮಿಕ ವಾಸ್ತುವಿನ ಗುಡಿಗೋಪುರಗಳು, ರಕ್ಷಣಾ ವಸ್ತುವಿನ ಕೋಟೆ ಕೊತ್ತಲಗಳು ಸೆಕ್ಯುಲರ್ ಅಂದರೆ ಸಾರ್ವಜನೀಯ ಕಟ್ಟಡಗಳು- ಸಭಾಮಂಟಪ, ನ್ಯಾಯಾಲಯ, ಸಭಾಂಗಣ, ಕೆರೆ, ಬಾವಿ, ಪುಷ್ಕರಣ ನೀರಿನ ಸಂಗಾರಗಳು ಇದರಲ್ಲಿ ಬರುತ್ತವೆ.

* # ೬೦, ಸಿಲ್ವರ್ ಆರ್ಚರ್ಡ್, ಧಾರವಾಡ-೧.

ಇತಿಹಾಸ ಹಾಗೂ ಸಂಸ್ಕೃತಿಗಳ ಸುತ್ತಮುತ್ತ

ಕರ್ನಾಟಕವು ಉಜ್ವಲ ಇತಿಹಾಸ, ಭವ್ಯ ಕಲೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. 'ಸಾವಿರಾರು ವರುಷಗಳ ಇತಿಹಾಸ, ಕಲೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಖ್ಯಾತಿವೆತ್ತ ರಾಜಮನೆತನಗಳಾದ ಶಾಲಿವಾಹನ, ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ಯಾದವ, ವಿಜಯನಗರ, ಬಹಮನಿ, ಆದಿಲ್‌ಶಾಹಿ, ಬರೀದಶಾಹಿ, ಕೆಳದಿ, ಮೈಸೂರು ಒಡೆಯರು, ಮರಾಠಾ ಹೈದರಅಲಿ, ಟಿಪ್ಪುಸುಲ್ತಾನ ಮತ್ತು ಬ್ರಿಟಿಷ್ ಆಡಳಿತಾಧಿಕಾರಿಗಳು, ಅನೇಕ ಸುಂದರ ಕಲಾತ್ಮಕ ಸ್ಮಾರಕಗಳನ್ನು, ದೇವಾಲಯಗಳನ್ನು, ಮಸೀದಿಗಳನ್ನು ನಮಗಾಗಿ ಬಿಟ್ಟು ಹೋಗಿದ್ದಾರೆ. ಅವು ನಮ್ಮ ಭವ್ಯ ನಿಮಿತ ಪರಂಪರೆಯ ಭಾಗಗಳಾಗಿವೆ.

ಇದೇ ರೀತಿ ಶಿಲ್ಪ ಸೌಂದರ್ಯದೊಂದಿಗೆ ಸಾಂಪ್ರದಾಯಕ ಕರಕುಶಲ ಕಲೆ, ಪಾರಂಪರಿಕ ಆಟಗಳು, ಜಾನಪದ ಜಾತ್ರೆಗಳು, ಗ್ರಾಮ್ಯದೇವತೆಗಳು, ಮತಮಾನ್ಯಗಳು ಮುಂತಾದವು ನಮ್ಮ ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗಗಳಾಗಿವೆ. ನಮ್ಮ ಸುತ್ತಲಿನ ಹಸಿರು, ಪರಿಸರ, ಜಲಪಾತ, ನದಿ, ಹಳ್ಳ ಕೊಳ್ಳಗಳು, ಸರೋವರ, ಪುಷ್ಕರಣಿಗಳು, ಗುಡ್ಡ, ಬೈಗಳು ನಮ್ಮ ನೈಸರ್ಗಿಕ ಪರಂಪರೆಯ ಬಳುವಳಿಗಳಾಗಿವೆ.

'ದೇವನ ಗೀತ ಹಾಡುವ ಈ ನಾಡಿನ
ಗುಡಿ ಗುಂಡಾರಗಳು, ಕಲ್ಲಿನಲ್ಲಿಯ ಭಗವದ್ ಗೀತೆಗಳಾಗಿವೆ
ಅಲ್ಲಲ್ಲಿ ದೈವ ನೆನಹಿನಲ್ಲಿ ಎಚ್ಚರಿಸುವ ಈ
ಪ್ರಾಚೀನ ದೇಗುಲಗಳು ಎತ್ತರದ ಶಿಖರಗಳನ್ನು ಹೊತ್ತು
ಆ ಭಗವಂತನ ನೆನಹನ್ನು ತಂದು ನಮ್ಮನ್ನು ಸಜ್ಜನ
ಪಥಕ್ಕೆ ಕರೆದೊಯ್ಯುತ್ತವೆ (ಮಹಾತ್ಮ ಗಾಂಧಿ)'

ಡೋಮೆಸ್ಟಿಕ್ ಆರ್ಕಿಟೆಕ್ಚರ್ (ಗೃಹ್ಯ)


ಗೃಹ್ಯ ವಾಸ್ತುಗಳಲ್ಲಿ : ಅತ್ಯಂತ ವಿಸ್ತಾರ ಹಾಗೂ ಉನ್ನತ ಕಟ್ಟಡಗಳು ಕರ್ನಾಕಟದ ಹಂಪಿಯಲ್ಲಿ ಉತ್ಖನನಗಳಲ್ಲಿ ಹೊರತರಲಾಗಿದೆ, ಆದರೆ ಹಂಪಿಯು ಆಕ್ರಮಣಕ್ಕೆ (ಕ್ರಿ.ಶ. ೧೫೬೫) ತುತ್ತಾದುದರಿಂದ ಅವೆಲ್ಲ ಧ್ವಂಸವಾಗಿ ಕೇವಲ ಅಧಿಷ್ಠಾನಗಳನ್ನು ಮಾತ್ರ ನೋಡಲು ತೆರೆದುಕೊಂಡಿವೆ. ಮಹಾನವಮಿ ದಿಬ್ಬ, ದರಬಾರ್ ಹಾಲ್, ರಂಗಮಹಲ್, ಲೋಟಸ್ ಮಹಲ್, ರಾಣಿಯರ ಸ್ನಾನ ಗೃಹ, ನೋಬಲ್ ಮೆನ್ಸ್ ಕ್ವಾಟ್ರಸ್, ದಂಡನಾಯಕರ ಆವರಣ, ಕೊಳ, ನೀರಿನ ಕಾಲುವೆಗಳು, ಕಾರಂಜಿಗಳು, ನೀರಿನ ಹೋದುಗಳು ಇತ್ಯಾದಿಗಳನ್ನು ಹೆಸರಿಬಹುದು. ಗೃಹ್ಯ ವಾಸ್ತುಗಳ ಕೊಡುಗೆಯ, ವಿಷಯ ಮುಂದುವರಿಸಿ, ಚಿತ್ರದುರ್ಗದ ಅರಮನೆಯ ಅವಶೇಷಗಳು, ಕೆಳದಿ ನಾಯಕರ ಶಿವಮೊಗ್ಗೆ, ಕೆಳದಿಗಳು ದೇವನಹಳ್ಳಿ, ಬೆಂಗಳೂರು, ಶ್ರೀರಂಗಪಟ್ಟಣಗಳ ಅರಮನೆಗಳು, ಕಿತ್ತೂರಿನ ಅರಮನೆ ಇತ್ಯಾದಿಗಳನ್ನು ಹೆಸರಿಸಬಹುದು.

ಡಿಫೆನ್ಸ್ ಆರ್ಕಿಟೆಕ್ಚರ್ (ರಕ್ಷಣಾ)


ರಕ್ಷಣಾ ವಾಸ್ತುವಿನಲ್ಲಿ : ಕೋಟೆಯ ಗೋಡೆಗಳು ಬರೀ ಕಲ್ಲು ಮಣ್ಣುಗಳನ್ನು ಗಾರೆಗಳಿಂದ ನಿರ್ಮಿತವಾದ ಸುತ್ತುವರಿದ ಗೋಡೆಗಳಲ್ಲ, ಅವು ಮಾನವನ ಭಾವಗಳಿಗೆ ಎತ್ತೆ ಮಾಡುವ, ಶೌರ್ಯ, ಕ್ರೌರ್ಯ, ಪ್ರೀತಿ–ವೈರ, ಸಾಹಸ–ಸಹನೆ, ಕಲೆ–ಸಾಹಿತ್ಯ, ನೃತ್ಯ–ನಾಟಕ, ನ್ಯಾಯ–ಸತ್ಯ, ನಗು–ಆಳು, ಆಧ್ಯಾತ್ಮ ರಾಜಸ್ವ ಇತ್ಯಾದಿ ಭಾವ ಸಂಪದಗಳನ್ನು, ನೀರುಣಿಸಿ ಬೆಳೆಸಿದ ಆವರಣ ತೋಗಳಾಗಿವೆ.

ಅವುಗಳ ಆವರಣದಲ್ಲಿ ಚಿತ್ತಾಕರ್ಷಕವಾದ ರಾಜಕೀಯ ಇತಿಹಾಸ ಮಾತ್ರವಲ್ಲ, ಜನಜೀವನದ ಸಾಮಾನ್ಯ ಬದುಕನ್ನೂ ಅಲ್ಲಿ ಕಾಣಬಹುದು. ಈ ಗೋಡೆಗಳ ಆವರಣದಲ್ಲಿ ನಾಗರಿಕತೆ ಬೆಳೆದು ಬಂದಿದೆ. ಮೆಹೆಂಜೊದಾರೋ ರಕ್ಷಣಾ ನಗರ ಗೋಡೆಗಳನ್ನು ಹಿಡಿದು ಹತ್ತೊಂಬತ್ತನೆ ಶತಮಾನದ ನಾಯಕರ, ದೇಸಾಯರ, ಬ್ರಿಟೀಷರ ಕಾಲದವರೆಗೂ ಕಟ್ಟಿದ ವಾಡೆ ವಸತಿಗಳವರೆಗೆ ಕಾಣಬಹುದು.

ಭಾರತದ ಐದು ಸಾವಿರ ಕೋಟೆ ಕೊತ್ತಲಗಳ ಬೃಹತ್ ಸಂಖ್ಯೆಯು ನಮ್ಮ ವೀರರ ಕಥೆಗಳಾಗಿವೆ. ತೃಣಗಳಾಗಿವೆ. ಅವುಗಳನ್ನು ಸಂರಕ್ಷಿಸುವದು ನಮ್ಮ ಸಮಕಾಲೀನ ಸಮಾಜ ಹಾಗೂ ಸರಕಾರಗಳ ಕರ್ತವ್ಯವಾಗಿದೆ. ಕರ್ನಾಟಕದ ನೆಲದಲ್ಲಿ ಸುಮಾರು ೭೦೦ ಕೋಟೆಗಳಿವೆ. ಮೃದ್‌ದುರ್ಗ, ಪಾಷಾಣ ದುರ್ಗ, ವನದುರ್ಗ, ಗಿರಿದುರ್ಗ, ಸ್ಥಳದುರ್ಗಗಳು ಆಯಾ ಪರಿಸರಗಳಲ್ಲಿ ರಚಿತವಾಗಿದೆ.



INDIA IN A.D. 640



ರಿಲಿಜಿಯಸ್ ಆರ್ಕಿಟೆಕ್ಚರ್ (ಧಾರ್ಮಿಕ)

ಧಾರ್ಮಿಕ ವಾಸ್ತುವಿನಲ್ಲಿ : ಕರ್ನಾಟಕ ಕೊಡುಗೆ ಎರಡು ಸಾವಿರ ವರುಷಗಳ ಇತಿಹಾಸ ಹೊತ್ತಿದೆ. ಕ್ರಿಸ್ತಶಕದ ಆಸುಪಾಸಿನ ಸನ್ನತಿ (ಜಿ. ಗುಲಬರ್ಗಾ) ಶಾತವಾಹನ ಕಾಲದ ಸ್ತೂಪಗಳು, ಇತ್ತಿತ್ತಲಾಗಿ ಭಾ.ಪು.ಸ. (D.S.I.) ಉತ್ಖನನ ಮಾಡಿದೆ. ಇಲ್ಲಿಯ ಪ್ರಾಚೀನ (ಭೀಮಾ ನದಿಯ ದಡದಲ್ಲಿ ಕಟ್ಟಿದ) ಕೋಟೆ ಕರ್ನಾಟಕ ಅತ್ಯಂತ ಪ್ರಾಚೀನ ಕಾಲಪಟ್ಟಿಯಲ್ಲಿ ಬರುತ್ತದೆ. ಕ್ರಿ.ಪೂ. ೩ನೇ ಶತಮಾನದ ಅಶೋಕನ ಶಾಸನವು ಈ ನೆಲದ ಪ್ರಾಚೀನ ಸಂಸ್ಕೃತಿಯ ಹಿನ್ನೆಲೆಯನ್ನು ತೋರಿಸುತ್ತದೆ.

ಐಹೊಳೆಯ ಚಾಲುಕ್ಯ ದೇವಾಲಯಗಳು ಭಾರತದ ಹಿಂದು ವಾಸ್ತುಶಿಲ್ಪದ ತೂಗು ತೊಟ್ಟಿಲುಗಳಾಗಿವೆ. ಪಟ್ಟದಕಲ್ಲಿನ ಮಲಪ್ರಭೆ ದಡದ ದೇವಾಲಯಗಳು ನಾಗರ ದ್ರಾವಿಡ ಶೈಲಿಗಳ ಪರಿಪೂರ್ಣತೆಯ, ನಿದರ್ಶನಗಳಾಗಿವೆ. ರಾಷ್ಟ್ರಕೂಟರ ಜೈನ ಬಸದಿ ಅನನ್ಯ ಕಾಲಘಟ್ಟದ ಅಳತೆಯಾಗಿದೆ. ಬಾದಾಮಿಯ ಗುಹಾಂತರ ದೇವಾಲಯಗಳು 'ಪರಮ ಭಾಗವತ'ರು ಚಾಲುಕ್ಯರು ಎಂದು ಸಾರುತ್ತವೆ' ಇಲ್ಲಿಯ ಕೋಟೆಯು ಶಾಸನೋಕ್ತವಾಗಿದ್ದು ಕ್ರಿ.ಶ. ೫೪೩ ಎಂದು ಸಾರುತ್ತಿದೆ. 'ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ...' ಕಪ್ಪೆ ಅರಭಟ್ಟನ ವೀರವಾಣಿ ಶಿಲಾಲೇಖದಿಂದ ಪ್ರತಿಧ್ವನಿಗೊಳ್ಳುತ್ತಿದೆ.

ಕಲ್ಯಾಣ ಚಾಲುಕ್ಯರ ಮಂದಿರಗಳು, ಲಕ್ಕುಂಡಿ, ಡಂಬಳ, ಗದಗ, ಬೇಡದಾನಪುರ, ಹರಲಹಳ್ಳಿ, ಹಾವೇರಿಗಳಲ್ಲಿ 'ಕಲ್ಲಿನ' ಕುಶಲತೆಯಲ್ಲಿ 'ಕುಸುರಾಣಿ ತದನಂತರ ಬಂದಂಥ ವಾಸ್ತುಶಿಲ್ಪದ ಸೌಂದ್ಯವನ್ನು ಈ ನಾಡಿಗೆ ನೀಡಿದ ಹೊಯ್ಸಳರ ಹಳೆಬೀಡು, ಬೇಲೂರು, ಸೋಮನಾಥಪುರಗಳು ದರ್ಪಣ ಸುಂದರಿಯ ಮೂಲಕ ತೋರಿಸುತ್ತವೆ.

ಇಸ್ಲಾಂ ವಾಸ್ತುಶಿಲ್ಪ ಗುಲಬರ್ಗಾ, ಬೀದರ, ಬಿಜಾಪುರಗಳಲ್ಲಿ ಗುಣಗುಟ್ಟುತ್ತಿದೆ. ದೇಸಾಯಿ ದೇಸಮುಖ, ನಾಯಕರ ವಾಡೆಗಳು, ಪುಟ್ಟ ಪುಟ್ಟ ಕೋಟೆ ಕೊತ್ತಲಗಳು ನೂರಾರು ತಾಲ್ಲೂಕುಗಳಲ್ಲಿ ಹರಡಿವೆ. ಕಿತ್ತೂರು, ಸಿರಸಂಗಿ, ನಿಪ್ಪಾಣಿ, ತಲ್ಲೂರುಗಳಂತ ವಾಡೆಗಳು ಮರಾಠಾ ವಾಸ್ತುಶಿಲ್ಪದ ಪ್ರಭೆ ಹೊಂದಿವೆ.

ಹೀಗೆ ಈ ಮೇಲಣ ಎಲ್ಲ ತಾಣಗಳು ಧಾರ್ಮಿಕ, ವಾಸ್ತವ್ಯದ, ಹಾಗೂ ದರ್ಪಣಾ ವಾಸ್ತುಶಿಲ್ಪದ ದರ್ಶನಗಳಾಗಿ, ಕರ್ನಾಟಕದ ಇಡಿಯಾದ ಇತಿಹಾಸ ಹಾಗೂ ಸಂಸ್ಕೃತಿಗಳ ಪರಿಚ್ಛೇದವನ್ನು ತೋರಿಸುತ್ತವೆ.

೧೧೮

ಹಾವೇರಿ ಜಿಲ್ಲೆಯಲ್ಲಿ ಆದಿಲ್‌ಶಾಹಿಗಳ ಕಾಲದ ಬಾವಿಗಳು

ಡಾ. ರಮಾ ಜಿ. ಗುಂಡುರಾವ್* ಡಾ. ಎಸ್.ಕೆ. ಮೇಲಕಾರ**

ಇತ್ತೀಚೆಗೆ ಧಾರವಾಡ ಜಿಲ್ಲೆಯಿಂದ ವಿಭಜಿತಗೊಂಡು ಜಿಲ್ಲೆಯಾಗಿ ರೂಪ ತಾಳಿದ ಹಾವೇರಿ ಜಿಲ್ಲೆಯಲ್ಲಿ ಬಂಕಾಪುರ, ಸವಣೂರ, ತಿಳವಳ್ಳಿ, ನೀಲಗಿ, ಲಕ್ಷ್ಮೇಶ್ವರ, ಶಿರಹಟ್ಟಿ, ಮಿಶ್ರಿಕೋಟಿ, ರಾಣೆಬೆನ್ನೂರ, ಐರಣಿ, ಹಾನಗಲ್, ಹಿರೇಕೆರೂರ ತಾಲೂಕಿನ ಮುಗದ ಮಾಸೂರ, ರಟ್ಟಿಹಳ್ಳಿ ಮುಂತಾದ ಕಡೆ ಆದಿಲ್‌ಶಾಹಿಗಳ ಕಾಲದಲ್ಲಿ ಕಟ್ಟಿಸಿದ ಕೋಟೆ, ಕೊತ್ತಳ, ಮಸೀದಿ, ದರ್ಗಾ, ಗೋರಿ, ಅರಮನೆ, ಮಹಲು, ಬಾವಿ, ಕೆರೆಗಳನ್ನು ನಮ್ಮ ಕ್ಷೇತ್ರ ಕಾರ್ಯದಲ್ಲಿ ಗುರ್ತಿಸಲಾಗಿರುತ್ತದೆ. ಮತ್ತು ಇಲ್ಲಿ ದೊರೆತ ಶಾಸನಗಳನ್ನಾಧರಿಸಿ ತಿಳಿಯಲಾಗಿದೆ.[೧]

ಬಂಕಾಪುರದ ಬಾವಿಗಳು : ಶಿಗ್ಗಾಂವಿ ತಾಲೂಕಿನ ಬಂಕಾಪುರವು ಹುಬ್ಬಳ್ಳಿಯಿಂದ ೩೨ ಕಿ.ಮೀ. ದೂರವಿದೆ. ಕ್ರಿ.ಶ. ೧೫೬೭ರಲ್ಲಿ ಅಲಿ ಆದಿಲ್‌ಶಾಹನು ಸ್ವತಃ ಇದನ್ನು ಗೆದ್ದುಕೊಂಡು ಇಲ್ಲಿ ಜುಮ್ಮಾ ಮಸೀದಿ, ಸರ್ಜಾ ಮಸೀದಿ, ಕಾಲಿ ಮಸೀದಿ ಕಟ್ಟಿಸಿದನೆಂದು ಜುಬೇರಿ ಹೇಳಿದ್ದಾನೆ. ಮುಂದೆ ಬಿಜಾಪುರದ ದಳಪತಿ ಮುಸ್ತಫಖಾನ್ ಇಲ್ಲಿ ನೆಲೆಸಿದನು. ಕ್ರಿ.ಶ. ೧೬೩೭ರಲ್ಲಿ ಪಠಾಣ ರಾವುಫಖಾನನ್ನು ಪ್ರಾಂತಾಧಿಕಾರಿಯನ್ನು ನೇಮಿಸಲಾಯಿತು. ಈತ ಮುಂದೆ ಮೊಘಲರಿಗೆ ಶರಣಾಗಿ ತನ್ನ ಕೇಂದ್ರವನ್ನು ಸವಣೂರಿಗೆ ಬದಲಾಯಿಸಿದನು. ಬಂಕಾಪುರದಲ್ಲಿ ೧೦ ಹಿರಿ ಕಿರಿಯ ಮಸೀದಿಗಳಿವೆ ೨೦ಕ್ಕೂ ಹೆಚ್ಚು ದರ್ಗಾಗಳಿವೆ. ಮೂರು ಕೆರೆಗಳು, ಪಂಚ ಮಲಕಪ್ಪನ ಬಾವಿ, ಕಳ್ಳರ ಬಾವಿ, ನಾಗರಬಾವಿ, ಗುನ್ನಪ್ಪನಬಾವಿ, ವಿಟ್ಟಪ್ಪನ ಬಾವಿ ಇತ್ಯಾದಿ ಬಾವಿಗಳು ಇಲ್ಲಿವೆ.

ಕಳ್ಳರ ಬಾವಿ : ಈ ಬಾವಿ ಬಂಕಾಪುರದ ಪಂಚಮಲಕಪ್ಪನ ಬಾವಿಯ ಆಗ್ನೇಯ ದಿಕ್ಕಿನಲ್ಲಿ[೨]. ಇದು ಚೌಕಾಕಾರದಲ್ಲಿರುವ ದೊಡ್ಡ ಬಾವಿಯಾಗಿದೆ. ಬಾವಿಯ ಕೆಳಗಿನ ಭಾಗವನ್ನು ನೈಸರ್ಗಿಕ ಕಲ್ಲಿನಲ್ಲಿಯೇ ಕಟ್ಟಿಸಲಾಗಿದೆ. ಬಾವಿಯ ಕೆಳಗಿನ ಹಂತದಲ್ಲಿ ಉತ್ತರ ದಿಕ್ಕಿನಲ್ಲಿ ಕಮಾನಿನ ಪ್ರವೇಶವಿದೆ. ಈ ಕಮಾನು ಇಸ್ಲಾಮಿಕ ಶೈಲಿಯಲ್ಲಿದೆ. ಮೇಲಿನ ಮಟ್ಟದ (ಹಂತದ) ತಳದಲ್ಲ ಮುಂದೆ ಬಾಚಿಕೊಂಡಿರುವ ಮೊಗಸಾಲೆ ಬಾವಿಯ ಎಲ್ಲಾ ಬದಿಗಳಲ್ಲಿದೆ. ಆದರೆ ಇದು ಉತ್ತರ ದಿಕ್ಕಿನಲ್ಲಿ ಸೇತುವೆಯ ಮೇಲಿದೆ. ಈ ಸೇತುವೆಗೆ ಪ್ರವೇಶ ದಾರಿಯ ಪಕ್ಕದಲ್ಲಿರುವ ಮೊಗಸಾಲೆಗಳಿಂದ ಹೋಗಬಹುದು. ಉತ್ತರದ ಗೋಡೆಯ ಮಧ್ಯಭಾಗದಲ್ಲಿ ಮೂರು ಕಮಾನುಗಳಿವೆ. ಇವು ಸೇತುವೆಯಿಂದ ಬಾವಿಯಲ್ಲಿ ತೆರೆದುಕೊಂಡಿವೆ. ಈ ಮೂರು ಕಮಾನುಗಳಲ್ಲಿ ಮಧ್ಯದ ಕಮಾನು ದೊಡ್ಡದಾಗಿದ್ದು ಪಕ್ಕದ ಕಮಾನುಗಳು ಚಿಕ್ಕವಾಗಿವೆ. ಪೂರ್ವ ಮತ್ತು ಪಶ್ಚಿಮ ಗೋಡೆಗಳಲ್ಲಿ ಎರಡು ದೊಡ್ಡ ಮತ್ತು ಎರಡು ಚಿಕ್ಕ ಕಮಾನುಗಳ ಕಿಂಡಿಗಳಿವೆ. ದಕ್ಷಿಣದ ಗೋಡೆಗಳಲ್ಲಿ ಕಮಾನಿನ ಒಂದೇ ಕಿಂಡಿಯಿದೆ. ಈ ಎಲ್ಲಾ ಕಿಂಡಿಗಳು ಮಾಳಿಗೆಯುಳ್ಳ ಮೊಗಸಾಲೆಗಳಿಂದ ಬಾವಿಯಲ್ಲಿ ತೆರೆದುಕೊಂಡಿವೆ. ಮಾಳಿಗೆಯಲ್ಲಿ ಈ ಮೊಗಸಾಲೆಗಳು ಮುಂದೆ ಚಾಚಿಕೊಂಡಿರುವ ಚಿಕ್ಕ ಮೊಗಸಾಲೆಗಳಿಂದ ಜೋಡಿಸಲ್ಪಟ್ಟಿವೆ. ದಕ್ಷಿಣದ ಗೋಡೆಗಳಲ್ಲಿ ಒಂದು ಗೂಡಿನ ಮೇಲೆ ನೀರೆತ್ತುವ ಜಗಲಿಯಿದೆ. ಬಾವಿಯ ಪ್ರವೇಶ ದಾರಿಯು 'ಎಲ್' ಆಕಾರದಲ್ಲಿದೆ. ಬಾವಿಯ ತುದಿಯಲ್ಲಿ ಮೊದಲು ನಡುನಿಲ್ಲೆಡೆಯಿದೆ. ನಂತರ ಆರು ಮೆಟ್ಟಲುಗಳು ೨ನೆಯ ನಡುನಿಲ್ಲೆಡೆ, ಒಂಬತ್ತು ಮೆಟ್ಟಲುಗಳಿವೆ. ಇಲ್ಲಿ ಮೊಗಸಾಲೆಯು ಮುಂದುವರೆದಿದೆ. ನಂತರ ೩ನೆಯ ನಡುನಿಲ್ಲೆಡೆ ಮೂರು ಮೆಟ್ಟಿಲು ನಾಲ್ಕನೆಯ ನಡುನಿಲ್ಲೆಡೆ, ಒಂಬತ್ತು ಮೆಟ್ಟಲು, ಐದನೆಯ ನಡುನಿಲ್ಲೆಡೆ ಒಂಬತ್ತು ಮೆಟ್ಟಿಲು, ಆರನೆಯ ನಡುನಿಲ್ಲೆಡೆ, ನಂತರದ ಮೆಟ್ಟಿಲುಗಳು ನೀರಿನಲ್ಲಿ ಮುಳಗಿವೆ. ಬಾವಿಯ ತುದಿಯಲ್ಲಿ ಸುಣ್ಣದ ಕಾಂಕ್ರೆಟ್ ಮತ್ತು ಇಟ್ಟಿಗೆ ಕಲ್ಲುಗಳ ತುಂಡುಗಳಿಂದ ಕಟ್ಟಿದ ಎತ್ತರ ಗೊಡೆಯಿದೆ. ಈ ಬಾವಿ ಕಟ್ಟಿಸಿದ ಬಗ್ಗೆ ನಮಗೆ ಶಾಸನಗಳು ಸಿಗುವುದಿಲ್ಲ. ಇದರ ವಾಸ್ತು ಕಲೆಯಿಂದ ಆದಿಲ್‌ಶಾಹಿಗಳ ಕಾಲದಲ್ಲಿ ಜೀರ್ಣೋದ್ಧಾರಗೊಂಡು ಮರುನಿರ್ಮಾಣವಾಗಿದೆ. ಇದರಲ್ಲಿ ಈಗ ಗಿಡಗಳು ಬೆಳೆದಿದ್ದು ಕಳ್ಳತನ ಮಾಡಿದ ಜನರು ಇಲ್ಲಿ ಅಡಗಿ ಕುಳಿತಿರುವುದರಿಂದ ಇದನ್ನು ಕಳ್ಳರ ಬಾವಿ ಎಂದು ಕರೆಯುತ್ತಾರೆ.

---

* ಮ್ಯೂಜಿಯಂ ಕ್ಯೂರೇಟರ್, ಕನ್ನಡ ಸಂಶೋಧನಾ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪಂಚ ಮಲಕಪ್ಪನ ಬಾವಿ : ಈ ಬಾವಿಯು ಬಂಕಾಪುರ ಗ್ರಾಮದ ಹೊರಗೆ ಈಶಾನ್ಯ ದಿಕ್ಕಿನಲ್ಲಿರುವ ಒಂದು ಹೊಲದಲ್ಲಿ ಇದೆ. ಚೌಕಾಕಾರದಲ್ಲಿರುವ ಈ ಬಾವಿಗೆ ಪಶ್ಚಿಮಕ್ಕೆ ಪ್ರವೇಶದ್ವಾರವಿದೆ. ಬಾವಿಯ ಪೂರ್ವಕ್ಕೆ ಇಸ್ಲಾಮಿಕ್ ಕಮಾನಿನ ಮೇಲಿರುವ ಗೋಡೆಯ ಅಲಂಕಾರವಿದೆ.

ಇದರ ಮೊಗಸಾಲೆಗೆ ಹೋಗಲು ವಾಯುವ್ಯ ಮತ್ತು ನೈಋತ್ಯ ದಿಕ್ಕುಗಳಲ್ಲಿ ಮೇಲಿನಿಂದ ಕೆಳಗೆ ಐ ಆಕಾರದ ಮೆಟ್ಟಿಲುಗಳಿವೆ. ಬಾವಿಯ ಉತ್ತರ ಬದಿಯಲ್ಲಿ ಒಂದು ಸಣ್ಣ ಕೋಣೆಯಿದ್ದು ಇದಕ್ಕೆ ಚಿಕ್ಕದಾದ ಪ್ರವೇಶ ಮತ್ತು ಗುಮ್ಮಟಾಕಾರದ ಒಳ ಮಾಳಿಗೆಯಿದೆ. ಬಾವಿಯ ಪ್ರವೇಶ ಭಾಗದಲ್ಲಿ ಕಲ್ಲು ಹಾಸಿನ ದೊಡ್ಡ ನಡುನಿಲ್ಲೆಡೆ ಅಥವಾ ನೆಲ ಇದೆ. ನಂತರ ಎರಡು ಮೆಟ್ಟಿಲು, ಕಿರಿದಾದ ನಡುನಿಲ್ಲೆಡೆ, ೧೬ ಮೆಟ್ಟಿಲುಗಳು, ಎರಡನೆಯ ನಡುನಿಲ್ಲೆಡೆ ೯ ಮೆಟ್ಟಿಲು, ೩ನೇ ನಡುನಿಲ್ಲೆಡೆ, ೯ ಮೆಟ್ಟಿಲು, ೫ನೇ ನಡುನಿಲ್ಲೆಡೆ ಕೊನೆಯಲ್ಲಿ ಎರಡು ಮೆಟ್ಟಿಲು ನೀರಿನ ಮೇಲೆ ಮತ್ತೆ ಉಳಿದವುಗಳು ನೀರಿನಲ್ಲಿವೆ. ೫ನೇ ನಡುನಿಲ್ಲೆಡೆಯು ಸೇತುವೆಯ ಹೊರಗಿನ ಭಾಗಕ್ಕೆ ಆಧಾರವಾಗಿದೆ.

೪ನೇ ನಡುನಿಲ್ಲೆಡೆಯ ಮೇಲೆ ೪ನೇ ಮೆಟ್ಟಿಲಿನ ಮಟ್ಟದಲ್ಲಿ ಉತ್ತರ ಮತ್ತು ದಕ್ಷಿಣ ಬದಿಗಳಲ್ಲಿ ಕೆಳಗಡೆಯಿಂದ ಒಂದು ಮುಂದೆ ಚಾಚಿಕೊಂಡಿರುವ ಮೊಗಸಾಲೆಯಿದೆ. ಈ ಮೊಗಸಾಲೆಯ ಮೂಲಕ ಸೇತುವೆ ಹೋಗಲು ದಾರಿಯಿದೆ. ದಕ್ಷಿಣದ ಮೊಗಸಾಲೆಯ ದಕ್ಷಿಣ ಬದಿಯಲ್ಲಿ ಆಳವಲ್ಲದ ಒಂದು ಗೂಡಿದೆ. ಇದರಲ್ಲಿ ಒಂದಕ್ಕೊಂದು ಹಣೆದುಕೊಂಡಿದೆ. ಇಲ್ಲಿ ಸರ್ಪ, ಗಣೇಶ ಹನುಮಾನ ವಿಗ್ರಹದ ಗೂಡುಗಳಿವೆ. ಈ ಗೂಡಿಗೆ ಕಮಾನುಗಳಿವೆ. ಇವು ಹಿಂದು ದೇವರುಗಳಾಗಿವೆ. ಬಾವಿಯ ಅರ್ಧ ಭಾಗದಲ್ಲಿ ಶೈವ ಧರ್ಮಕ್ಕೆ ಸಂಬಂಧಿಸಿದಂತೆ ಮೂರ್ತಿ ಶಿಲ್ಪಗಳಿವೆ ಕಂಬಗಳು, ಗೋಡೆಗಳಿವೆ. ಹೀಗಾಗಿ ಆನಂತರ ಆದಿಲ್ ಶಾಹಿಗಳ ಕಾಲದಲ್ಲಿ ಬಾವಿಯ ಮೇಲಿನ ಭಾಗ ಮಾತ್ರ ಇಂಡೊ-ಇಸ್ಲಾಮಿಕ ಸಾರ್ಸನಿಕ ಶೈಲಿಯಲ್ಲಿ ನಿರ್ಮಾಣವಾಗಿದೆ ಎಂಬುದನ್ನು ಕ್ಷೇತ್ರ ಕಾರ್ಯದಲ್ಲಿ ಗುರ್ತಿಸಲಾಗಿದೆ. ಹಾಗೆಯೇ ಇನ್ನೆರಡು ಬಾವಿಗಳಲ್ಲಿ ಒಂದು ಊರಲ್ಲಿ ಮಸೀದಿ ಪಕ್ಕದಲ್ಲಿದೆ. ಮತ್ತೊಂದು ಊರ ಹೊರಗೆ ವಾಯವ್ಯ ದಿಲ್ಲಿನಲ್ಲಿ ದರ್ಗಾ ಹತ್ತಿರ ಇದೆ. ಇವು ಕೂಡಾ ಆದಿಲ್ ಶಾಹಿಗಳ ಕಾಲದಲ್ಲಿ ಪುನರನಿರ್ಮಾಣವಾಗಿವೆ. ಉಳಿದ ನಾಲ್ಕು ಬಾವಿಗಳ ಕುರಿತು ಸ್ಪಷ್ಟ ಮಾಹಿತಿಗಳು ಸಿಗುವುದಿಲ್ಲ.

ನೀಲಗಿ ಬಾವಿ : ಕ್ರಿ.ಶ. ೧೫೯೯ರಲ್ಲಿ ೨ನೇ ಇಬ್ರಾಹಿಂ ಆದಿಲ್‌ಶಾಹನ ಕಾಲದಲ್ಲಿ ಬಂಕಾಪುರ ಕೋಟೆಯನ್ನು ಆಳುತ್ತಿದ್ದ ಅಧಿಕಾರಿ ಖಾನ್-ಎ-ಅಜಂ ಸವಣೂರು ತಾಲೂಕು ನೀಲಗಿ ಗ್ರಾಮದಲ್ಲಿ ಬಾವಿಯನ್ನು ಕಟ್ಟಿಸಿದ ಬಗ್ಗೆ ಉಲ್ಲೇಖಿಸುವ ಶಾಸನ ಈಗ ಸವಣೂರಿನಲ್ಲಿದೆ ಎಂಬುದು ಧಾರವಾಡ ಜಿಲ್ಲೆ ಗ್ಯಾಸೇಟಿಯರದಲ್ಲಿ ದಾಖಲಾಗಿದೆ. ಎಲೆ, ಬಾಳೆ, ಹತ್ತಿ ಬೆಳೆಗಳ ಬೇಸಾಯಕ್ಕೆ ಈ ಪ್ರದೇಶ ಪ್ರಸಿದ್ಧಿಯಾಗಿದೆ.

ಲಕ್ಷ್ಮೇಶ್ವರದ ಬಾವಿ : ಆದಿಲ್‌ಶಾಹಿಗಳು ಲಕ್ಷ್ಮೇಶ್ವರದಲ್ಲಿ ಅನೇಕ ಮಸೀದಿ, ದರ್ಗಾಗಳು, ಗೋರಿಗಳನ್ನು ಕಟ್ಟಿಸಿದ್ದಾರೆ. ಕ್ರಿ.ಶ. ೧೫೯೯ರಲ್ಲಿ ಬಂಕಾಪುರ ಕೋಟೆಯನ್ನು ಆಳುತ್ತಿದ್ದ ಅಧಿಕಾರಿ ಖಾನ್-ಎ-ಅಜಂನು ಧರ್ಮ ಶಾಲೆ ಹಾಗೂ ಬಾವಿಯನ್ನು ಕಟ್ಟಿಸಿದ ಬಗ್ಗೆ ಶಾಸನ ತಿಳಿಸುತ್ತದೆ.

ಸಯ್ಯದ ಮಲ್ಲಿಕ್ ಸಾದಾತ್ ದರ್ಗಾದ ಬಾವಿ

ಇದು ಲಕ್ಷ್ಮೇಶ್ವರ ಗ್ರಾಮದ ಸವಣೂರ ದಾರಿಯ ಎಡಬದಿಯಲ್ಲಿದೆ. ಬಾವಿಯು ಚೌಕಾಕಾರದಲ್ಲಿದ್ದು ಮೆಟ್ಟಿಲಿರುವ ಪ್ರವೇಶ ಭಾಗ ಮಾತ್ರ ಎಲ್ ಆಕಾರದಲ್ಲಿದೆ. ಉತ್ತರ ದಿಕ್ಕಿನಿಂದ ಪ್ರವೇಶ ಮಾಡಿ ಪುನಃ ಪೂರ್ವಕ್ಕೆ ತಿರುಗಿ ಮತ್ತೆ ದಕ್ಷಿಣಕ್ಕೆ ತಿರುಗಿದರೆ ಅಲ್ಲಿ ಕಮಾನವಿರುವ ಗೋಡೆ ದಾಟಿ ಮುಂದೆ ಹೋದರೆ ಅಲ್ಲೊಂದು ಗೋಡೆ ಮಧ್ಯದಲ್ಲಿರುವ ಕಮಾನು ಮೂಲಕ ಬಾವಿಯನ್ನು ಪ್ರವೇಶ ಮಾಡಬಹುದಾಗಿದೆ. ಬಾವಿಯ ದಕ್ಷಿಣದಲ್ಲಿ ಮಟ್ಟಿಬಾರಿ ಇದೆ. ಇದರ ಉತ್ತರ ದಿಕ್ಕಿನಲ್ಲಿ ದರ್ಗಾ ಇದೆ. ಇದು ದರ್ಗಾಕ್ಕೆ ಬಂದ ಯಾತ್ರಾರ್ಥಿಗಳಿಗೆ ಮತ್ತೆ ತೋಟಕ್ಕೆ ನೀರಾವರಿಗಾಗಿ ಜೀರ್ಣೋದ್ಧಾರಗೊಳಿಸಿ ಕಟ್ಟಿಸಿದ ಬಾವಿಯಾಗಿದೆ ಎಂಬುದನ್ನು ತಿಳಿಯಲಾಗಿದೆ.

ಜುಮ್ಮಾ ಮಸೀದಿ ಬಾವಿ : ಲಕ್ಷ್ಮೇಶ್ವರದಲ್ಲಿ ಜುಮ್ಮಾ ಮಸೀದಿಯಲ್ಲಿರುವ ಬಾವಿಯನ್ನು ಪ್ರಾರ್ಥನೆ ಮಾಡಲು ಬರುವ ಯಾತ್ರಿಕರಿಗೆ ಕಟ್ಟಿಸಿದ ಬಾವಿಯಾಗಿದೆ ಎನ್ನುತ್ತಾರೆ. ಇಲ್ಲಿ ಕಂಬದ ಮೇಲೆ ಪರ್ಶಿಯನ್ ಭಾಷೆಯ ಶಾಸನವಿದ್ದು ಅಂಕುಸಖಾನ್, ಖಾನ, ಅಲೀಖಾನ, ರಪೂಲ್ ಅಲ್ಲಾ ಖದ್ರಮಖಾನ್, ಮಕುಬುಲ್ ದರ್ಗಾ, ಸುಬಾನಖಾನ್, ಅದಮಖಾನ ಅಂಜನ ಖಾನರ ಉಲ್ಲೇಖಗಳಿವೆ ಎಂದು ಸ್ಥಳಿಯ ವಿದ್ವಾಂಸ ಮಹಮ್ಮದ ಶಾಹಿತ ಖಲೀಬರು ಹೇಳುತ್ತಾರೆ. ಈಗ ಆ ಬಾವಿಯ ಮೇಲ್ಭಾಗ ಮುಚ್ಚಿರುತ್ತಾತೆ.

ಹಜರತ್ ಸಯ್ಯದ ಸುಲೇಮಾನ ಬಾದಶಾಹ ಖಾದ್ರಿ ದರ್ಗಾ ಬಾವಿ

ಇದು ವೃತ್ತಾಕಾರದ ಬಾವಿಯಾಗಿದ್ದು ಬಂದ ಯಾತ್ರಿಕರಿಗೆ ಕುಡಿಯಲು ಬಳಸಲು ಕಟ್ಟಿಸಿದ ಬಾವಿಯಾಗಿದೆ.

ಶಿರಹಟ್ಟಿ ಬಾವಿ : ಶಿರಹಟ್ಟಿಯ ಫಕೀರಸ್ವಾಮಿ ಮಠದ ದ್ವಾರದ ಮೇಲೆ ಕ್ರಿ.ಶ. ೧೭೩೫–೩೬ರ ಶಾಸನ, ಇನ್ನೊಂದು ಮೆಹಬೂಬ್ ಸುಬಾನಿಯವರ ದರ್ಗಾದಲ್ಲಿದೆ. ಮತ್ತೊಂದು ಇದೆ ದರ್ಗಾದಲ್ಲಿದ್ದು ೧೮ನೇ ಶತಮಾನದಲ್ಲಿ ಮಹಮ್ಮದ್ ರಿಜಾ ಎಂಬುವವನು ಮಸೀದಿಯನ್ನು ದುರಸ್ಥಿ ಪಡಿಸಿ ನಂತರ ಬಾವಿಯನ್ನು ನಿರ್ಮಾಣ ಮಾಡಿದನೆಂದು ಉಲ್ಲೇಖಿಸುತ್ತದೆ.[3]

ಸವಣೂರ ಬಾವಿಗಳು : ಸವಣೂರಿನಲ್ಲಿ ಗೋರಿ, ಮಸೀದಿ, ದರ್ಗಾ, ಕೋಟೆ, ಗೋಪುರ, ಕೊತ್ತಳ, ಬಾವಿ–ಕೆರೆ, ಮಹಲು, ಕಾರಂಜಿ, ಉದ್ಯಾನ, ತೋಟ ಇತ್ಯಾದಿ ಸ್ಮಾರಕಗಳು ಇಲ್ಲಿದ್ದು ಆದಿಲ್‌ಶಾಹಿ ಆಸ್ಥಾನದಿಂದಲೇ ಅಧಿಕೃತ ಒಪ್ಪಿಗೆ ಪಡೆದು. ಆಳುತ್ತಿದ್ದ ಸವಣೂರಿನ ನವಾಬರು ನಂತರ ಸ್ವತಂತ್ರರಾಗಿ ಆಳುತ್ತಿದ್ದಾಗ ತೀರ್ಥ ಬಾವಿ, ಕೋಟೆಬಾವಿ, ಕಟ್ಟಿಸಿರುವ ಮಾಹಿತಿಗಳು ಲಭ್ಯವಾಗಿದೆ.

ರಾಮತೀರ್ಥ ಬಾವಿ : ಇದು ಮೋತಿ ತಲಾಬ್ ಕೆರೆಯ ಕೆಳಭಾಗದಲ್ಲಿ ಇದೆ. ಇದರ ಪಕ್ಕದಲ್ಲಿ ಶೈವ ದೇವಾಲಯವಿದ್ದು ಆ ನಂತರ ಶಾಹಿಸುಲ್ತಾನರ ಸಾಮಂತ ಅಧಿಕಾರಿಗಳಾಗಿದ್ದ ನವಾಬರು ಅದನ್ನು ಇಂಡೋ ಇಸ್ಲಾಮಿಕ ಮಾದರಿಯಲ್ಲಿ ಜೀರ್ಣೋದ್ಧಾರಗೊಳಿಸಿದ್ದಾರೆ. ಅದು ಕೆರೆ ಕೆಳಗಿನ ತೋಟದ ನೀರಾವರಿಗೆ ಬಳಸಲಾಗಿದೆ. ಈಗಲೂ ಅಲ್ಲಿ ತೆಂಗು, ಬಾಳೆ, ಅಡಿಕೆ ಇತ್ಯಾದಿ ಬೆಳೆಯುತ್ತಾರೆ.

ಲಕ್ಷ್ಮೇಶ್ವರ ರೋಡಿನಲ್ಲಿ ಗೋಪುರ ಪಕ್ಕದ ಬಾವಿ : ಇದು ನವಾಬರ ಕಾಲದಲ್ಲಿ ಕಟ್ಟಿಸಲ್ಪಟ್ಟಿದೆ. ಇದು ಚೌಕಾಕಾರವಾಗಿದೆ. ಒಂದು ಕಡೆ ೧೦೦ ಪೂಟ ಎತ್ತರದ ನೀರಿನ ಗೋಪುರವಿದ್ದು ಅಲ್ಲಿಂದ ಅರಮನೆಗೆ ನೀರು ಒಯ್ಯಲಾಗಿದೆ. ಇನ್ನೊಂದು ಕಡೆ ವ್ಯವಸಾಯಕ್ಕೂ ಸಹ ಇದನ್ನು ಬಳಸಲಾಗಿದೆ.

ಕೋಟೆ ಪಶ್ಚಿಮದ ನೈಋತ್ಯ ದಿಕ್ಕಿನಲ್ಲಿರುವ ಬಾವಿ : ಈ ಬಾವಿ ಬಂಕಾಪುರದ ಕಡೆ ಹೋಗುವ ದಾರಿಯಲ್ಲಿ ಬಲಬದಿಯಲ್ಲಿದೆ. ಒಳಗಡೆ ಇಂಡೋ–ಇಸ್ಲಾಮಿಕ್ ಶೈಲಿಯಲ್ಲಿ ಕಟ್ಟಿದ ದೊಡ್ಡ ಬಾವಿಯಾಗಿಗೆ. ಪೂರ್ವ ದಿಕ್ಕಿನಿಂದ ಒಳಗೆ ಪ್ರವೇಶಿಸಲು ಮೆಟ್ಟಲುಗಳಿವೆ. ಇನ್ನೊಂದು ಕಡೆ ಬಾವಿಗೆ ಮಟ್ಟಿ ಬಾರಿ ಇದ್ದುದರಿಂದ ವ್ಯವಸಾಯಿಕ್ಕೂ ಇದನ್ನು ಬಳಸಲಾಗಿದೆ ಎಂದು ತಿಳಿದು ಬರುತ್ತದೆ. ಸವಣೂರನಲ್ಲಿ ಅರಸ ಮಸೀದಿ, ಲಾಲಾಷಾ ಮಸೀದಿ, ಮಲಂಜಿ ಮಸೀದಿ, ಮಯ್ಯಣ ಮಸೀದಿ, ಅಲ್ಲಿಖಾನ್ ಮಸೀದಿ, ಸೂರ ಮಸೀದಿ, ಇತ್ಯಾದಿ ೧೮ ಮಸೀದಿಗಳು ಹಾಗೂ ೯೦ ದರ್ಗಾಗಳಿವೆ. ಆರು ಪರ್ಶಿಯನ್ ಶಾಸನಗಳು ಇಲ್ಲಿದ್ದು ಅವುಗಳೆಲ್ಲ ಮಸೀದಿ ದರ್ಗಾ, ಅರಮನೆ (ಬಂಗಲೆ) ಮಹಲುಗಳು ಕಟ್ಟಿಸಿದ ಬಗ್ಗೆ ಹೇಳುತ್ತವೆ.

ಈ ಊರಿನಲ್ಲಿ ಸಿಕ್ಕಿದ ಶಾಸನವೊಂದು ಸುಲ್ತಾನ ಎರಡನೇ ಇಬ್ರಾಹಿಂನ ಕಾಲದ್ದಾಗಿದ್ದು ಕ್ರಿ.ಶ. ೧೫೯೯ರಲ್ಲಿ ಬಂಕಾಪುರ ಕೋಟೆ ಅಧಿಕಾರಿ ಖಾನ್–ಎ–ಅಜಂ ಖುಸ್ತುರ ಖಾನ್‌ನಿಂದ ನೀರಲಿಗೆ ಗ್ರಾಮದಲ್ಲಿ ಬಾವಿಯನ್ನು ನಿರ್ಮಾಣ ಮಾಡಿಸಿದನೆಂದು ತಿಳಿಸುತ್ತದೆ. ಅದೇ ರೀತಿ ಐರಣಿ, ಮುಗದ, ಮಾಸೂರು. ಕಂಡೆಬಾಗೂರು, ಹಿರೇಕೆರೂರು, ರಾಣೆಬೆನ್ನೂರು, ರಟ್ಟಿಹಳ್ಳಿ, ತಿಳಿವಳ್ಳಿ, ಹಾನಗಲ್ಲ, ಹಾವೇರಿ ಮುಂತಾದೆಡೆ ಕಟ್ಟಿಸಿದ ಬಾವಿಗಳು ಈಗ ಹಾಳುಬಿದ್ದು ಹೋಗಿವೆ.

ಆಕರ ಗ್ರಂಥಗಳು

೧. ಯಾಸಿನ್ ಖಿದ್ದೇಶಿ (ಸಂ), ೨೦೦೧, ಪರ್ಶಿಯನ್ ಉರ್ದು ಶಾಸನಗಳು, ಕ.ವಿ.ವಿ. ಹಂಪಿ.

೨. ವೆಂಕಟರಂಗೋಕಟ್ಟಿ, ಕರ್ನಾಟಕ ಗ್ಯಾಸೆಟಿಯರ್ ಮುಂಬೈ ಮತ್ತು ಧಾರವಾಡ ಜಿಲ್ಲೆಯ ಗ್ಯಾಸೆಟಿಯರ್.

೩. ಪಾಟೀಲ ವಿನೋದ, ೨೦೦೬, ಕರ್ನಾಟಕದ ಬಾವಿಗಳು, ಪ್ರಾಚ್ಯ ವಸ್ತುಗಳ ಸಂಗ್ರಹಾಲಯ, ಕ.ಸ. ಮೈಸೂರು.

೪. ಡಾ. ಶ್ರೀಮತಿ ರಮಾ ಜಿ. ಗುಂಡುರಾವ್, ೨೦೧೭, ಬಿಜಾಪುರದ ಆದಿಲ್‌ಶಾಹಿಗಳ ಕಾಲದ ನೀರಾವರಿ ವ್ಯವಸ್ಥೆ, ಭಾರತ ಸಿಂಧುರಶ್ಮಿ ಪ್ರಕಾಶನ, ಅರಳಗುಂಡಗಿ (ಗುಲಬರ್ಗಾ).

೫. ಮಹಮ್ಮದ ಇಬ್ರಾಹಿಂ ಜುಬೇರಿ ಮೂಲಕೃತಿ, ಅನು. ಕೃಷ್ಣ ಕೊಲಾರ ಕುಲಕರ್ಣಿ, ೧೯೯೯, ಬಸಾತಿನೆ ಸಲಾತಿನೆ, ಕ.ವಿ.ವಿ., ಹಂಪಿ.

೬ ಡಾ. ಹರಿಲಾಲ ಪವಾರ (ಸಂ), ೨೦೦೯, ಬಿಜಾಪುರ ಆದಿಲ್ ಶಾಹಿಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಕ.ವಿ.ವಿ., ಧಾರವಾಡ.

೧೧೯

ಕೊಪ್ಪಳ ಜಿಲ್ಲೆಯ ಐತಿಹಾಸಿಕ ಬಾವಿಗಳು

ಶಿವಪ್ಪ*

ಅಳಿದುಹೋದ ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಯನ್ನು ಮೇರೆಯಾಗಿಸಿಕೊಂಡ ಕೊಪ್ಪಳ ಜಿಲ್ಲೆಯಲ್ಲಿ ಕಂಡುಬರುವ ಐತಿಹಾಸಿಕ ಬಾವಿಗಳ ಬಗೆಗಿನ ಪರಿಚಯಾತ್ಮಕ ಪ್ರಬಂಧ ಇದಾಗಿದೆ. ಆನೆಗೊಂದಿ ಪ್ರದೇಶ ಸಾಮ್ರಾಜ್ಯದ ಭಾಗವಾಗಿದೆ.

ಕೆರೆಗಳನ್ನು ಕಟ್ಟಿ ನೀರನ್ನು ಸಂಗ್ರಹಿಸುತ್ತಿದ್ದಂತೆ ಬಾವಿಯ ನಿರ್ಮಾಣಕ್ಕೂ ಅದರ ಸಂರಕ್ಷಣೆಗೂ ಪ್ರಾಮುಖ್ಯತೆಯನ್ನು ನೀಡಲಾಗಿತ್ತು. ಬಾವಿಗಳಲ್ಲಿ ಸದಾ ನೀರು ತುಂಬಿರುತ್ತಿದ್ದು ಸಾರ್ವಜನಿಕರು ಅವುಗಳನ್ನು ಕುಡಿಯಲು ಬಳಸುವುದರೊಂದಿಗೆ ಇತರೆ ದೈನಂದಿನ ಕೆಲಸ ಕಾರ್ಯಗಳಿಗೂ ಉಪಯೋಗಿಸುತ್ತಿದ್ದರು. ಅಳವಂಡಿಯಲ್ಲಿ ದೊರೆತ ಶಾಸನವು ತ್ರೈಲೋಕ್ಯಮಲ್ಲನ ಆಡಳಿತದ ಅವಧಿಯಲ್ಲಿ ಅಳವಂಡಿಯ ನಾನೂರು ಮಹಾರಾಜರ ಸನ್ನಿಧಿಯಲ್ಲಿ ಕರುವ ಗುಲ್ಲಿಮಯ್ಯನು ಬಾವಿಯನ್ನು ಮಾಡಿಸಿದ್ದಂತೆ ಮಾಹಿತಿ ನೀಡುತ್ತದೆ.

ಕೊಪ್ಪಳದ ಬಸವನಗೌಡರ ಬಾವಿಯ ದಡದಲ್ಲಿ ದೊರೆತ ಕ್ರಿ.ಶ.೧೬ನೇ ಶತಮಾನ ಶಾಸನದಲ್ಲಿ ಮಲಿಸೆಟ್ಟಿ ಎಂಬ ವ್ಯಕ್ತಿಯು ಬಾವಿಯನ್ನು ಕಟ್ಟಿಸಿದ್ದು ಕಂಡುಬಂದಿದೆ. ಕ್ರಿ.ಶ. ೧೭೪೬ರಲ್ಲಿ ದೊರೆತ ಶಾಸನ ಮಹಮ್ಮದಖಾನ್ ಎಂಬುವವನು, ನೀರು ಜನಗಳಿಗೆ ಹಾಗೂ ಪಶುಪಕ್ಷಿಗಳಿಗೆ ಅವಶ್ಯವೆಂದು ತಿಳಿದು ಬಾವಿಯನ್ನು ನಿರ್ಮಿಸಿದ್ದಂತೆ ತಿಳಿಸುತ್ತದೆ. ಕೊಪ್ಪಳದ ಕೆರೆಯಿಂದ ಬಾವಿಯೊಂದಕ್ಕೆ ನೀರನ್ನು ಹರಿಸಲು ನಾಲೆಯೊಂದನ್ನು ಕಟ್ಟಿಸಿದ್ದು ಕಂಡುಬಂದಿದೆ.

ಇಟಗಿಯ ಕೀಲಗೊಂಡ ಬಾವಿ

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಇಟಗಿ ಗ್ರಾಮದಲ್ಲಿರುವ "ದೇವಾಲಯಗಳ ಚಕ್ರವರ್ತಿ" ಎಂಬ ಖ್ಯಾತಿಗೆ ಪಾತ್ರವಾಗಿರುವ ಮಹಾದೇವ ದೇವಾಲಯದ ಪಕ್ಕದಲ್ಲಿಯೇ ಈ ಬಾವಿಯಿದೆ. ಆ ದೇವಾಲಯದಷ್ಟೇ ಸರ್ವ ವಿಧದಲ್ಲೂ ಹೆಸರು ಮಾಡಿರುವ ಬಾವಿಯೇ ಇಟಗಿಯ ಮಹಾದೇವ ದೇವಾಲಯದ ಕೀಲುಗೊಂಡ ಬಾವಿ. ಪ್ರಸ್ತುತ ಇದಕ್ಕೆ ಕೀಲಬಾವಿಯೆಂದು ಕರೆಯುತ್ತಿದ್ದಾರೆ. ೧೦೭೬ರಿಂದ ೧೧೨೩ರ ಅವಧಿಯಲ್ಲಿದ್ದು, ಪ್ರಖ್ಯಾತಿಯೆನಿಸಿದ್ದ ಕಲ್ಯಾಣ ಚಾಲುಕ್ಯರ ದೊರೆ ೬ನೇ ವಿಕ್ರಮಾದಿತ್ಯನ ಆಡಳಿತ ದಂಡನಾಯಕನಾದ ಮಹಾದೇವನು ಇದನ್ನು ನಿರ್ಮಿಸಿರುವನು. ಪೂರ್ವ ಪಶ್ಚಿಮಾಭಿಮುಖವಾಗಿ ೫೦ ಅಡಿ ಉತ್ತರ ದಕ್ಷಿಣಾಧಿಯಾಗಿ ೧೨೦ ಅಡಿ ವಿಸ್ತಾರ ಹೊಂದಿದ್ದು, ಉತ್ತರ ಭಾಗದಲ್ಲಿ ನೀರಿನ ಸಂಗ್ರಹವಿದ್ದು ವಿನ್ಯಾಸ ಆಯತಾಕಾರದಲ್ಲಿದೆ. ಬಾವಿಗೆ ಇಳಿಯಲು ದಾರಿಯ ಮುಖ್ಯ ಮೆಟ್ಟಿಲು ದಕ್ಷಿಣೋತ್ತರಾಭಿಮುಖವಾಗಿದ್ದು, ಪೂರ್ವ ಮತ್ತು ಪಶ್ಚಿಮಕ್ಕೊಂದರಂತೆಯೂ ಚಿಕ್ಕ ಮೆಟ್ಟಿಲುಗಳ ದಾರಿಗಳಿದ್ದು ಆಕರ್ಷಕವಾಗಿದೆ.

ಆನೆಗೊಂದಿಯ ದುರ್ಗಾ ಬೆಟ್ಟ ಮತ್ತು ಗಟ್ಟಿ ಕೋಟೆಯ ಬಾವಿ

ಆನೆಗೊಂದಿಯ ದುರ್ಗಾಬೆಟ್ಟದಲ್ಲಿ ಶಿವನ ಉಗ್ರಕೋಪವನ್ನು ಶಮನಗೊಳಿಸಲು ಪಾರ್ವತಿಯೇ ಆದಿಶಕ್ತಿಯಾಗಿ ದುರ್ಗಾವತಾರವಾಗಿ ರೂಪ ತಾಳಿ ಬಂದು ಇಲ್ಲಿ ನೆಲೆಸಿರುವಳೆಂಬ ಪ್ರತೀತಿ ಇದೆ. ದುರ್ಗಾದೇವಿಯು ಆನೆಗೊಂದಿ ರಾಜರ ಮನೆದೇವರಾಗಿದ್ದು, ಈ ಬೆಟ್ಟ ಸುಭದ್ರವಾದ ಸ್ಥಳವಾಗಿದ್ದರಿಂದ ಸಂಪತ್ತನ್ನು ಗೌಪ್ಯವಾಗಿ ಇಡಲಾಗಿತ್ತಂತೆ. ಆದ್ದರಿಂದ ಕೋಟೆಯನ್ನು ಗಟ್ಟಿಕೋಟೆ ಎಂದು ಕರೆಯಲಾಗಿದೆ.

ಕೋಟೆಯ ದುರ್ಗಾ ದೇವಸ್ಥಾನದ ಹಿಂಭಾಗದಲ್ಲಿ ಕೋಟೆಯ ದ್ವಾರ ಬಾಗಿಲಿನಿಂದ ಹುತ್ತಕ್ಕೆ ಹೋಗುವ ದಾರಿಯಲ್ಲಿ ಐತಿಹಾಸಿಕ ಬಾವಿ ಇದ್ದು, ಈ ಬಾವಿಯ ನೀರನ್ನು ದುರ್ಗಾಮಾತೆಯ ನಿತ್ಯ ಮಜ್ಜನಕ್ಕೆ ಬಳಸಲಾಗುತ್ತದೆ. ಆ ಬಾವಿಯ ನೀರು ಸಿಹಿಯಾಗಿದ್ದು, ಬೆಟ್ಟದ ಮೇಲೆ ಇದ್ದರೂ ಬಾವಿಯಲ್ಲಿ ಸದಾ ನೀರಿದ್ದು ಸಿಹಿಯಾಗಿದೆ.

ಗವಿರಂಗನಾಥಸ್ವಾಮಿ ಬಾವಿ

ಆನೆಗೊಂದಿ ಗ್ರಾಮಕ್ಕೆ ಹತ್ತಿರ ಇರುವ ಮ್ಯಾಗೋಟಿ ಬೆಟ್ಟದ ಮಧ್ಯದಲ್ಲಿ ಗವಿರಂಗನಾಥ ದೇವಾಲಯವಿತ್ತೆಂದು ಹೇಳಲಾಗಿದೆ. ದೇವಾಲಯದ ಗರ್ಭಗುಡಿಯ ಮುಂಭಾಗದಲ್ಲಿ ಬಾವಿ ಇದ್ದು, ಈ ಬಾವಿ ನೀರನ್ನು ದೇವರ ಅಭೀಷೇಕಕ್ಕೆ

* ಸಂಶೋಧನಾ ವಿದ್ಯಾರ್ಥಿ, ಹಸ್ತಪ್ರತಿ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಬಳಸುತ್ತಾರೆ. ಇದರ ನೀರನ್ನು ಸೇವಿಸಿದರೆ ಅನೇಕ ರೋಗರುಜಿನಗಳು ವಾಸಿಯಾಗುತ್ತವೆ ಎಂಬ ನಂಬಿಕೆಯಿದೆ. ಬೆಟ್ಟದಲ್ಲಿರುವ ಅನೇಕ ಗಿಡಮೂಲಿಕೆಗಳ ಬೇರುಗಳನ್ನು ವಿವಿಧ ಔಷಧಿಗಳಿಗೆ ಬಳಸಲಾಗುತ್ತದೆ ಎಂದು ತಿಳಿದು ಬಂದಿದೆ.

ಗಂಗಾವತಿಯ ಸಿಹಿ ನೀರು ಬಾವಿ

ಗಂಗಾವತಿಯ ಮಧ್ಯಭಾಗದ ಬೆಂಡರವಾಡಿಯಲ್ಲಿ ಕಾಳಿದೇವಿ ಕಮ್ಮಟೇಶ್ವರ ದೇವಸ್ಥಾನದ ಹಿಂಭಾಗದಲ್ಲಿ ಐತಿಹಾಸಿಕ ಸಿಹಿ ನೀರಿನ ಬಾವಿ ಇದೆ. ಕ್ರಿ.ಶ. ೧೮೦೦ರಲ್ಲಿ ಈ ಬಾವಿ ನಿರ್ಮಿಸಲಾಗಿದೆ ಎಂದು ಇತಿಹಾಸ ತಿಳಿಸುತ್ತದೆ. ಹಿಂದೆ ಗಂಗಾವತಿ ನಗರದಲ್ಲಿ ಒಂದೇ ಬಾವಿ ಇದ್ದು, ಸಾರ್ವಜನಿಕರು ಈ ಬಾವಿಯ ನೀರನ್ನೇ ಕುಡಿಯಲು ಉಪಯೋಗಿಸುತ್ತಿದ್ದರು ಎಂಬುದು ಜನರ ಅಭಿಪ್ರಾಯ. ಇಂದಿಗೂ ಈ ಬಾವಿಯ ನೀರನ್ನು ಉಪಯೋಗಿಸುತ್ತಾರೆ.

ಪುರದ ಏಳು ಬಾವಿಗಳು

ಕುಷ್ಟಗಿ ತಾಲೂಕು: ಪುರ ಗ್ರಾಮವು ತಾವರೆಗೆರೆಯಿಂದ ಸಿಂಧನೂರಿಗೆ ಹೋಗುವ ರಸ್ತೆಯಲ್ಲಿ ಬಲಬದಿಗೆ ೩ ಕಿ.ಮೀ. ದೂರದಲ್ಲಿದೆ. ಇದನ್ನು ಕೋಟಿ ಲಿಂಗಗಳ ದೇವಸ್ಥಾನವೆಂದು ಕರೆಯುತ್ತಾರೆ. ದೇವಸ್ಥಾನದೊಳಗೆ ಒಟ್ಟಾರೆ ೭ ಬಾವಿಗಳು, ೭ ಹನುಮಂತನ ಮೂರ್ತಿಗಳಿವೆ.

ಗರ್ಭ ಗುಡಿಯಲ್ಲಿರುವ ಶಿವಲಿಂಗವನ್ನು ಸೋಮನಾಥವೆಂದು ಕರೆಯಲಾಗಿದೆ. ಇದರ ಪ್ರವೇಶ ದ್ವಾರ ಚಿಕ್ಕದಾಗಿದ್ದು ೪ ಕಂಬಗಳಿದ್ದು ನಡುವೆ ಒಂದು ಚೌಕಾಕಾರದ ಬಾವಿ ಇದೆ. ಈ ಬಾವಿಯ ನೀರನ್ನು ಸೋಮನಾಥ ದೇವರ ನಿತ್ಯ ಅಭಿಷೇಕಕ್ಕೆ, ಪೂಜೆಗೆ ಬಳಸಲಾಗುತ್ತದೆ. ಈ ಬಾವಿಯಲ್ಲಿ ಸದಾ ನೀರಿರುತ್ತದೆ. ಬಾವಿಯ ಹಿಂದೆ ಕಂಬಗಳ ನಡುವೆ ದೇವರಿಗೆ ಮುಖ ಮಾಡಿ ನಂದಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯದ ಮೊದಲನೇ ಪ್ರಕಾರದಲ್ಲಿ ಆಗ್ನೇಯ ದಿಕ್ಕಿನಲ್ಲಿ ಒಂದು ಬಾವಿಯ ಪ್ರದಕ್ಷಿಣಾ ಪಥ ಇದೆ. ದೇವಾಲಯದಲ್ಲಿ ೭ ಬಾವಿಗಳು, ೭ ಹನುಮಂತನ ಮೂರ್ತಿಗಳಿವೆ. ಅವುಗಳನ್ನೆಲ್ಲ ನೋಡಿದರೆ ಮುಕ್ತಿ ಸಿಗುವುದೆಂದು ಸ್ಥಳೀಯರ ನಂಬಿಕೆಯಾಗಿದೆ. ನೈರುತ್ಯ ದಿಕ್ಕಿಗೊಂದು (ದಕ್ಷಿಣ ಪಶ್ಚಿಮ), ಆಗ್ನೇಯ ದಿಕ್ಕಿಗೊಂದು, ಗೋಪುರದ ಕೆಳಗೆ (ಪೂರ್ವ ಉತ್ತರ) ಈಶಾನ್ಯ ದಿಕ್ಕಿಗೆ (ಪೂರ್ವ ದಿಕ್ಕಿಗೆ ಮಧ್ಯ) ಹೀಗೆ ೪ ಬಾವಿಗಳು ಗೋಚರಿಸುತ್ತವೆ. ದೇವಾಲಯದ ಹೊರ ಮಗ್ಗುಲ ೧ ಬಾವಿ ಇದ್ದು ಲಿಂಗದ ಗುಡಿ ಪಾಳು ಬಿದ್ದಂತೆ ಇದೆ. (ಹಳ್ಳದ ಕಡೆಗೆ ಮತ್ತೊಂದು ಬಾಗಿಲಿನ ಬಲಬದಿ ಒಂದು ಹಾಳು ಬಿದ್ದ ಕೋಣೆಯಂತಿದ್ದು, ಇಲ್ಲಿ ಸಾಧುಸಂತರು ಧ್ಯಾನ ಮಾಡುತ್ತಿದ್ದರೆಂದು ನಂಬಿಕೆ ಇದೆ) ಸೋಮನಾಥ ದೇವಾಲಯದ ಆಗ್ನೇಯ ದಿಕ್ಕಿನಲ್ಲಿ ೨ ಪ್ರಾಕಾರಗಳ ನಡುವೆ ಪ್ರದಕ್ಷಿಣಾ ಪಥದಲ್ಲಿ ಒಂದು ಭವ್ಯವಾದ ಮಜ್ಜನ ಮಂಟಪ ಇದೆ. ಬುಡದಲ್ಲಿ ಚೌಕಾಕಾರದ ಬಾವಿ ಇದೆ. ಇದರ ನಾಲ್ಕು ಮೂಲೆಗಳಲ್ಲಿ ಚೌಕಾಕಾರದ ನಾಲ್ಕು ಕಂಬಗಳು, ಅದರ ಮೇಲೆ ಕಟ್ಟಿದ ಎತ್ತರವಾದ ದ್ರಾವಿಡ ಮಾದರಿಯ ಶಿಖರವನ್ನು ಹೊತ್ತಿವೆ. ಈ ಮಜ್ಜನ ಬಾವಿಯಿಂದ ನೀರನ್ನು ತೆಗೆದುಕೊಂಡು ಶಿವಲಿಂಗಗಳಿಗೆ ಅಭಿಷೇಕ ಮಾಡುತ್ತಿರಬಹುದೆಂದು ತಿಳಿಯುತ್ತದೆ. ಇದರ ಕಾಲಮಾನ ಕ್ರಿ.ಶ. ೧೭ನೇ ಶತಮಾನ. ಒಟ್ಟಾರೆ ಈ ಶಿಲ್ಪಗಳಲ್ಲಿ ವೀರಶೈವ ಪರಂಪರೆಯ ಲಕ್ಷಣಗಳು ಎದ್ದು ಕಾಣುತ್ತವೆ. ಒಂದು ಸ್ಥಳೀಯ ನಾಣ್ಣುಡಿಯಂತೆ ಕಣ್ಣಿದ್ದರೆ ಕನಕಗಿರಿ ನೋಡು, ಕಾಲು ಇದ್ದರೆ ಹಂಪಿ, ಪುಣ್ಯ ಇದ್ದರೆ ಪುರ ನೋಡು ಎಂಬ ಪ್ರತೀತಿ ಇದೆ.

ಚಂದ್ರಗಿರಿಯ ಬಿಸಿಲನ್ನೇ ಕಾಣದ ಬಾವಿ (ಹಾಲುಬಾವಿ)

ಹನುಮಸಾಗರದಿಂದ ೫ ಕಿ.ಮೀ. ದೂರದಲ್ಲಿ ಭವ್ಯವಾದ ಬೆಟ್ಟದ ಮೇಲೆ ಚಂದ್ರಗಿರಿಯ ಚಂದಾಲಿಂಗೇಶ್ವರ ದೇವಸ್ಥಾನವಿದೆ. ಚಂದಾಲಿಂಗೇಶ್ವರನ ಬಲಭಾಗದಲ್ಲಿ ಮಾದಮ್ಮ ತಾಯಿಯ ಗುಡಿಯ ಕೆಳಗೆ ಬಿಸಿಲು ಬೀಳದ ಬಾವಿಯಿದೆ. ಇದರ ನೀರು ಕುಡಿದರೆ ಹಾಲು ಕುಡಿದಷ್ಟೆ ಸಿಹಿ. ಅದಕ್ಕಾಗಿ ಇದಕ್ಕೆ ಹಾಲು ಬಾವಿಯೆಂತಲೂ ಕರೆಯುತ್ತಾರೆ. ಈ ಬಾವಿಯ ಆಳ ಎಷ್ಟಿದೆ? ಎಲ್ಲಿಂದ ನೀರು ಬರುತ್ತದೆ? ಎಲ್ಲಿಗೆ ಹೋಗುತ್ತದೆ? ಎಂಬುದು ಎಲ್ಲವೂ ನಿಗೂಢ. ಈ ಕೋಟೆಯ ಆವರಣದಲ್ಲಿ ವೀರಗಲ್ಲುಗಳು ಇವೆ. ಇತಿಹಾಸದ ಪ್ರಕಾರ ಕ್ರಿ.ಶ. ೧೦೭೭ರಿಂದ ೧೧೨೬ರ ೬ನೇ ವಿಕ್ರಮಾದಿತ್ಯನ ಕಾಲದಲ್ಲಿ ಬಾವಿಗಳು ನಿರ್ಮಾಣಗೊಂಡಿವೆ ಎಂದು ಹೇಳಲಾಗಿದೆ. ಚಂದಾಲಿಂಗೇಶ್ವರನೊಬ್ಬ ಸಾಂಸ್ಕೃತಿಕ ವೀರನಾಗಿದ್ದಾನೆ.

ಕುಷ್ಟಗಿಯ ಕಲ್ಲುಬಾವಿ

೧೫೨೦ರಲ್ಲಿ ಬಿಜಾಪುರದ ಆದಿಲ್‌ಷಾಹಿ ರಾಜ್ಯ ವಿಸ್ತರಣೆಗಾಗಿ ಸೈನ್ಯದೊಂದಿಗೆ ರಾಜಧಾನಿಗೆ ಮರಳುವಾಗ ಈ ಸ್ಥಳದಲ್ಲಿ ವಾಸ್ತವ್ಯ ಹೂಡಿದ್ದನು. ಇದೊಂದು ನೆನಪಿನ ತಾಣವಾಗಲೆಂದು ಬೃಹತ್ ತಗ್ಗಿಗೆ ಒಂದು ರೂಪ ಕೊಟ್ಟು ಕಲ್ಲುಬಾವಿ ಕಟ್ಟಿಸಿದ್ದಾರೆ. ಇದು ಕುಷ್ಟಗಿ ನಗರದ ಮಧ್ಯದಲ್ಲಿದೆ.

ಕುಷ್ಟಗಿಯ ಮಧ್ಯ ಭಾಗದಲ್ಲಿ ಕಾಲೇಜಿನ ರಸ್ತೆಯ ಪಕ್ಕದಲ್ಲಿ ಸುಮಾರು ೪೮೦ ವರ್ಷಗಳಷ್ಟು ಹಳೆಯದಾದ ಕಲ್ಲುಬಾವಿ ಇದೆ. ಇದು ಸುಮಾರು ೧೦೦ x ೮೦ ಅಡಿ ಉದ್ದಗಲ, ೫೦ ಅಡಿ ಆಳವಾಗಿದೆ. ಈ ಬಾವಿಯು ಕೆಂಪು ಹಾಗೂ ಕಪ್ಪು ಮಿಶ್ರಿತ ಕಲ್ಲುಗಳಿಂದ ಕೂಡಿದೆ. ಒಳಗೋಡೆ ಹಾಗೂ ೩ ದಿಕ್ಕಿಗೆ ಹಿಂದೂ, ಇಸ್ಲಾಂ ಶೈಲಿಯ ಕಮಾನುಗಳಿಂದ ಕಟ್ಟಲ್ಪಟ್ಟಿದೆ. ಬಾವಿಯಲ್ಲಿ ಇಳಿಯಲು ದಕ್ಷಿಣದ ಗೋಡೆಯ ಕಮಾನಿನಲ್ಲಿ ದೊಡ್ಡದಾದ ಮೆಟ್ಟಿಲುಗಳಿದ್ದು ಇಲ್ಲಿಂದಲೇ ನೀರನ್ನು ಸೇದುತ್ತಿದ್ದರೆಂದು ತಿಳಿದು ಬರುತ್ತದೆ. ಇನ್ನುಳಿದ ಗೋಡೆಗಳಲ್ಲಿ ಕಲ್ಲುಗಳಿಂದ ಹೊರ ಚಾಚಿದ ಕ್ಲಿಷ್ಟಕರ ಮೆಟ್ಟಿಲುಗಳಿವೆ. ದಕ್ಷಿಣಾಭಿಮುಖವಾದ ಕಮಾನುಗಳು ಈ ಬಾವಿಯ ಜೀವನಾಡಿ, ಕುಷ್ಟಗಿಯ ಕೆರೆ ತುಂಬಿದರೆ ಕಲ್ಲು ಬಾವಿ ತುಂಬುತ್ತದೆ ಎಂಬುದು ನಾಗರಿಕರ ಮಾತು.

ಬಾವಿಯ ಉತ್ತರಕ್ಕೆ ಕೆಲವು ಅಡಿಗಳ ದೂರದಲ್ಲಿ ಕುಷ್ಟಗಿಯ ಕೆರೆ ಇತ್ತು. ಈ ಬೃಹತ್ ಬಾವಿಯ ಕೆರೆಯಿಂದ ಸುರಂಗ ಮಾರ್ಗದ ಮೂಲಕ ನೀರು ಬರುತ್ತಿತ್ತು ಎಂದು ಹೇಳಲಾಗುತ್ತದೆ.

ಡಣಕನ ಬಾವಿ (ದಂಡ ನಾಯಕನ ಬಾವಿ)

ಕೊಪ್ಪಳದ ಕೋಟೆಯೊಳಗೆ ಡಣಕನ ಬಾವಿ ಇದ್ದು, ಟಿಪ್ಪುಸುಲ್ತಾನನ ಸುಬೇದಾರ ಮಹಮ್ಮದ್‌ಖಾನ್ ಬಹಲಮಿ ಬಾವಿ ಕಟ್ಟಿಸಿದ್ದಾಗಿ ತಿಳಿದು ಬರುತ್ತದೆ. ಜೈನ ಬಸದಿಗಳ ಕಲ್ಲು ಹಾಗೂ ಧರ್ಮ ಶಾಸನಗಳನ್ನು ಈ ಬಾವಿ ಕಟ್ಟಡಕ್ಕೆ ಬಳಸಲಾಗಿದೆ. ಬುರುಜು ಬತೇರಿ, (ಹುಡೇವು)ಗಳನ್ನು ಕಟ್ಟಿಸಲು ಕೂಡ ಈ ಸಲಕರಣೆಗಳನ್ನು ಉಪಯೋಗಿಸಿರುವುದು ಕಂಡು ಬರುತ್ತದೆ. ಮಹಮ್ಮದ್‌ಖಾನ್ ಬಹಲಮಿ ಬಹದ್ದೂರ ಬಂಡೆ ಹಾಗೂ ಕೊಪ್ಪಳದ ಕೆರೆ ಹಾಗೂ ಬಾವಿಗಳನ್ನು, ಸಿಹಿ ನೀರು ಬಾವಿಗಳನ್ನು ಕಟ್ಟಿಸಿದ್ದಾಗಿ ತಿಳಿದು ಬರುತ್ತದೆ. ಹುಲಿಕೆರೆಗೆ ಹೋಗುವ ದಾರಿಯಲ್ಲಿ ಸಿಹಿ ನೀರು ಕೆರೆಗಳಲ್ಲಿ ಕುಡಿಯುವ ನೀರಿನ ಬಾವಿಗಳಿವೆ. ಗಂಗಾಪತ್ರಿ ಬಾವಿ, ಶೇಖ ಬಾವಿ, ಕರೋಡಗಿರಿ ಬಾವಿ ಸ್ಮರಣೀಯವಾಗಿವೆ.

ಒಟ್ಟಾರೆಯಾಗಿ ಕೊಪ್ಪಳ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಕನಕಗಿರಿಯಲ್ಲಿ ೭೦೧ ಐತಿಹಾಸಿಕ ಬಾವಿಗಳಿದ್ದು, ಕೇವಲ ೩೦ ಬಾವಿಗಳು ಚಾಲ್ತಿಯಲ್ಲಿರುತ್ತವೆ. ಅದೇ ರೀತಿಯಾಗಿ ಗಿಣಿಗೇರಾದಿಂದ ಕೊಪ್ಪಳಕ್ಕೆ ಹಾದು ಹೋಗುವ ರಸ್ತೆಯಲ್ಲಿ ಬಸಾಪುರ ಗ್ರಾಮದ ಹೊಲದಲ್ಲಿ ಐತಿಹಾಸಿಕ ಬಾವಿ ಇದೆ. ಆನೆಗುಂದಿ ರಾಜರ ವಂಶಸ್ಥರಾದ ಲಲಿತಾರಾಣಿ ಶ್ರೀರಂಗದೇವರಾಯಲು ಜಮೀನಿನಲ್ಲಿ ಒಂದು ಬಾವಿ ಇದೆ. ಅದೇ ರೀತಿಯಾಗಿ ಗಂಗಾವತಿ ಸಮೀಪ ಇರುವ ಬೆಣಕಲ್ ಗ್ರಾಮದಲ್ಲಿ ಬೆಟ್ಟದ ಲಿಂಗೇಶ್ವರ ದೇವಸ್ಥಾನದ ಮುಂದೆ ಬಾವಿ ಇದ್ದು, ಅದನ್ನು ಮುಚ್ಚಲಾಗಿದೆ. ಅದೇ ರೀತಿ ಆಗೋಲಿ ಗ್ರಾಮದಲ್ಲಿ ಬೆಟ್ಟದ ಮೇಲೆ ಅಮರೇಶ್ವರ ದೇವಸ್ಥಾನವಿದ್ದು, ಪಕ್ಕದಲ್ಲಿ ಬಾವಿ ಇದೆ. ಯಲಬುರ್ಗಾ ತಾಲೂಕಿನ ಮಾಸಕಟ್ಟೆ ಗ್ರಾಮದಲ್ಲಿ ಗ್ರಾಮ ದೇವತೆ ದೇವಸ್ಥಾನದ ಪಕ್ಕದಲ್ಲಿ ಬಾವಿ ಇದೆ. ತಳಕಲ್ ಗ್ರಾಮದ ಪುರಾಣ ಬಾವಿಯೂ ಪ್ರಸಿದ್ಧಿ ಪಡೆದಿದೆ. ಕುಷ್ಟಗಿ ತಾಲೂಕಿನ ಗುಮಗೇರಾ ಗ್ರಾಮದಲ್ಲಿ ಊರಿನ ಒಳಗಡೆ ಊರಿನಬಾವಿ ಎನ್ನುವ ಬಾವಿ ಇದೆ. ಕೊಪ್ಪಳ ಜಿಲ್ಲೆಯಲ್ಲಿ ನೂರಾರು ಸಂಖ್ಯೆಯಲ್ಲಿ ಬಾವಿಗಳಿದ್ದು, ಅವುಗಳಲ್ಲಿ ಅನೇಕ ಬಾವಿಗಳು ಪಾಳು ಬಿದ್ದಿವೆ. ಅವುಗಳನ್ನು ಜೀರ್ಣೋದ್ಧಾರ ಮಾಡಿ ಸಾರ್ವಜನಿಕರ ಉಪಯೋಗಕ್ಕೆ ಹಾಗೂ ವೀಕ್ಷಣೆಗೆ ಅನುಕೂಲ ಮಾಡಿಕೊಟ್ಟರೆ ಮುಂದಿನ ಪೀಳಿಗೆ ಯುವಕರಿಗೆ ಬಾವಿಯ ಮಹತ್ವ ತಿಳಿಸಬಹುದಾಗಿದೆ.

ಆಕರ ಗ್ರಂಥಗಳು

೧. ಶರಣಬಸಪ್ಪ ಕೋಲ್ಕಾರ್., ೧೯೯೪, ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು, ಅಪ್ರಕಟಿತ ಎಂ.ಫಿಲ್ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨. ವಿನೋದಾ ಪಾಟೀಲ – ಕನಕಗಿರಿ ವೆಂಕಟಪತಿ ಬಾವಿ – ವಿಜಯನಗರ ಅಧ್ಯಯನ.

೩. ಎಚ್.ಎಸ್. ಪಾಟೀಲ, ಕೊಪ್ಪಳ ಜಿಲ್ಲೆಯ ಸಾಹಿತ್ಯ ಸಂಸ್ಕೃತಿ ಪರಂಪರೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೊಪ್ಪಳ, ೨೦೧೦.

೪. ಅಲ್ಲಮಪ್ರಭು ಬೆಟ್ಟದೂರು, ಎಚ್.ಎಸ್. ಪಾಟೀಲ (ಸಂ) ಕೊಪ್ಪಳ ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫.

೫. ಎಚ್.ಎಸ್. ಪಾಟೀಲ (ಸಂ), ಕೊಪಣಸಿರಿ, ಅಖಿಲ ಭಾರತ ೭೮ನೇ ಕನ್ನಡ ಸಾಹಿತ್ಯ ಸಮ್ಮೇಳನ, ಗಂಗಾವತಿ. ೯.೧೦.೧೧ ಡಿಸೆಂಬರ್, ೨೦೧೧, ಪ್ರಕಾಶಕರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬. ಪಾರ್ವತಿ ಪೂಜಾರ್, ಗವಿಸಿರಿ, ಶ್ರೀ. ಗ.ವಿ.ವ. ಟ್ರಸ್ಟ್, ಕೊಪ್ಪಳ, ೨೦೧೩.

೭. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ ೨, ಕೊಪ್ಪಳ ಜಿಲ್ಲೆ.

೧೨೦

ಯಾದಗಿರಿ ಜಿಲ್ಲೆಯ ಪುರಾತನ ಬಾವಿಗಳು

ರೇವ್ಯಾಗೋವಿಂದ ನಾಯಕ್*

ಭೂಮಿಯ ಮೇಲೆ ಮಾನವನು ಉದಯಿಸಿದಾಗ ತನ್ನ ವಸತಿಗಳನ್ನು ಸರೋವರ ನದಿ ಬಯಲು ಪ್ರದೇಶ ಮತ್ತು ಹಳ್ಳಕೊಳ್ಳಗಳ ಸಮೀಪ ನೆಲಸಿ[೧] ಇದರ ಮೂಲಕ ನೀರನ್ನು ಉಪಯೋಗಿಸುತ್ತಿದ್ದನು. ಕಾಲಾಂತರದಲ್ಲಿ ಮಳೆಯ ವಿಫಲತೆಯಿಂದ ಭೂಮಿಯ ಮೇಲಿನ ಜನರಿಂದ ದೂರು ಸರಿದು ಭೂಮಿಯನ್ನು ತೋಡಿ ಅಂತರ್ಜಲದ ಮೂಲಕ ನೀರನ್ನು ಪಡೆದು ಸಂಗ್ರಹಣ ಮಾಡಿ ಕುಡಿಯಲು ಮತ್ತು ಕೃಷಿ ಚಟುವಟಿಕೆಗೆ ಬಳಸಿಕೊಂಡನು.

ಭಾರತದಲ್ಲಿ ಬಾವಿಯ ಪ್ರಾಚೀನತೆ ಮತ್ತು ರಚನೆಯನ್ನು ಕುರಿತು ಪುರಾತನ ಗ್ರಂಥಗಳಾದ ವೇದಗಳು, ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆಗಳಲ್ಲಿ ಉಲ್ಲೇಖವಿದೆ.[೨] ಕ್ರಿ.ಶ. ೧೯೦೭ ಸರ್ವೇಕ್ಷಣೆಯ ಪ್ರಕಾರ ಭಾರತದ ಶೇಕಡ ೩೦ರಷ್ಟು ನೀರಾವರಿ ಕಾರ್ಯಗಳು ಬಾವಿಗಳಿಂದಲೇ ಜರುಗುತ್ತಿತ್ತು.[೩] ಈ ಜಿಲ್ಲೆಯಲ್ಲಿಯ ಕೃಷಿ ವ್ಯವಸ್ಥೆ ಬಾವಿಗಳಿಂದಲೇ ಇಂದಿಗೂ ಜರುಗುತ್ತಲಿದೆ.

ಕರ್ನಾಟಕವನ್ನು ಆಳ್ವಿಕೆ ಮಾಡಿದ ಅರಸ ಮನೆತನಗಳಾದ ಮೌರ್ಯರು, ಶಾತವಾಹನರು, ಬಾದಾಮಿ ಚಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲ್ಯಾಣದ ಕಳಚೂರಿ, ದೇವಗಿರಿಯ ಯಾದವರು, ಬಹುಮನಿ ಸುಲ್ತಾನರು, ಹೈದ್ರಾಬಾದಿನ ನಿಜಾಮರು, ಕಾಕಲುವಾರು ಮತ್ತು ಸುರಪುರದ ಸಂಸ್ಥಾನಿಕರ ಆಳ್ವಿಕೆಗೆ ಯಾದಗಿರಿ ಜಿಲ್ಲೆಯು ಒಳಪಟ್ಟಿದ್ದರಿಂದ ಸುಮಾರು ೬೦ಕ್ಕಿಂತಲೂ ಅಧಿಕ ಬಾವಿಗಳು ನಿರ್ಮಾಣಗೊಂಡಿವೆ. ಅವುಗಳನ್ನು ಮೂರು ಪ್ರಕಾರಗಳನ್ನಾಗಿ ವಿಂಗಡಿಸಲಾಗಿದೆ.

* ಭೂಮಿಯನ್ನು ತೋಡಿ ಅಂತರ್ಜಲದ ಮೂಲಕ ನೀರನ್ನು ಸಂಗ್ರಹಿಸುವುದು.
* ನದಿ ಮತ್ತು ಹಳ್ಳದ ಪಕ್ಕದಲ್ಲಿ ಭೂಮಿ ತೋಡಿ ನಿರ್ಮಾಣ ಮಾಡಿದ ಬಾವಿಗಳು
* ಬೆಟ್ಟದಿಂದ ಜರಿ ಮೂಲಕ ಕೆಳಗೆ ಬಿದ್ದು ಸಂಗ್ರಹವಾಗಿರುವ ಹೊಂಡದ ಬಾವಿಗಳು

ಯಾದಗಿರಿ ಜಿಲ್ಲೆಯ ಬಾವಿಗಳಿಗೆ ಮುಖ್ಯವಾಗಿ ಬೆಟ್ಟದಿಂದ ಹರಿದು ಬಂದ ನೀರು ಹೊಂಡದಲ್ಲಿ ಸಂಗ್ರಹವಾಗುವ ಜಲಾಶಯವೇ ಜಲಧಾರ.

ಕಶ್ಯಪನ ಕೃಷಿ ಸೂಕ್ತಿ ವಿಶ್ವವಲ್ಲಭ ಮಿಶ್ರಚಕ್ರಪಾಣಿ ಕೃತಿಗಳಲ್ಲಿ[೪] ಬಾವಿಗಳ ನಿರ್ಮಾಣದ ಮಾದರಿಗಳನ್ನು ನೀಡಲಾಗಿದ್ದು ಸಾಮಾನ್ಯವಾಗಿ ಸ್ಥಳದ ಭೌಗೋಳಿಕ ಪರಿಸ್ಥಿತಿಯನ್ನು ಆಧರಿಸಿಯೇ ಈ ರಚನೆಯನ್ನು ಕೈಗೊಳ್ಳಲಾಗುತ್ತಿತ್ತು. ಬಾವಿ ತೋಡಲು ಪ್ರಮುಖವಾದ ಅಂಶಗಳನ್ನು ಚಾವುಂಡರಾಯನ ಐದನೆಯ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ. ಪುರಾಣ ಹೆಸರಿಸಿ ಅದು ಹುಟ್ಟುವ ಸ್ಥಳಗಳ ಪ್ರಾಕೃತಿಕ ಲಕ್ಷಣಗಳನ್ನು, ಭೂರಚನೆ, ಮಣ್ಣಿನ ಗುಣ ಜಲ ಹುಟ್ಟಲು, ಅಗೆಯಬೇಕಾದ ಆಳ, ಇತ್ಯಾದಿಗಳ ವಿವರಣೆ ನೀಡಿದ್ದಾರೆ. ಗ್ರಾಮಗಳ ಆಗ್ನೇಯ ಮತ್ತು ವಾಯವ್ಯ ದಿಕ್ಕುಗಳಲ್ಲಿ ಬಿಟ್ಟು ಉಳಿದ ದಿಕ್ಕುಗಳಾದ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಮತ್ತು ಈಶಾನ್ಯ ದಿಕ್ಕುಗಳಲ್ಲಿ ಬಾವಿಗಳನ್ನು ನಿರ್ಮಿಸುತ್ತಿದ್ದರು ಎಂದು ವಿವರಗಳಿವೆ. ಈ ಉಲ್ಲೇಖದಂತೆ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಬಾವಿ ಬಸವಣ್ಣನ ಪುಷ್ಕರಣಿ ಮುದನೂರಿನ ತೀರ್ಥಗಳು ಯಾಳಗಿಯ ಬಾವಿ ಹಮ್ಮಡಗಿಯ ಬಾವಿ, ಹಗರಟ್ಟಗಿಯ ಬಾವಿಗಳು, ಕೆಂಬಾವಿ ಹಾಗೂ ಶಹಪೂರ ತಾಲೂಕಿನ ರಾಮಣ್ಣನ ಬಾವಿ ಮದ್ರಕಿ ಬಾವಿ, ಸಗರ ಬಾವಿ, ಹಾರಣಗೇರಾ ಬಾವಿ, ಮತ್ತು ಯಾದಗಿರಿ ತಾಲೂಕಿನ ಅಕ್ಕತಂಗಿಯರ ಬಾವಿ ಕಾಕಲುವಾರು ಮಲ್ಲಿಕಾರ್ಜುನ ಪುಷ್ಕರಣಿ, ಗಂಗಾ ಪುಷ್ಕರಣಿ ಮುಂತಾದವು ನಿರ್ಮಾಣವಾಗಿರುತ್ತವೆ.

ಐವೂರ ಬಸವಣ್ಣನ ಪುಷ್ಕರಣಿ

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಐವೂರ ಗ್ರಾಮದ ಸಿದ್ಧರಾಮಯ್ಯ ಮಠಪತಿ ಅವರ ಮನೆಯ ಪಕ್ಕದಲ್ಲಿರುವ ಪುಷ್ಕರಣಿಯು ಕ್ರಿ.ಶ. ೧೦೪೦ರ ಐವೂರಿನ ಶಾಸನ ಪ್ರಕಾರ[೫] ಕಲ್ಯಾಣ ಚಾಲುಕ್ಯರ ಚಕ್ರವರ್ತಿ ಜಗದೇಕಮಲ್ಲ

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮತ್ತು ಎರಡನೇ ಜಯಸಿಂಹನ ಆಳ್ವಿಕೆಯಲ್ಲಿ ಸ್ವಯಂಭೂದೇವರ ದೇವಾಲಯವನ್ನು ನಿರ್ಮಾಣಕ್ಕಾಗಿ ಹೈಹಯ ವಂಶದ ಚಂದಭೂಪನ ಮಗ ಮಹಾಮಂಡಳೇಶ್ವರನಾದ ರೇವರಸನು ಬಾವಿಯ ನಿರ್ಮಾಣಕ್ಕಾಗಿ ಭೂದಾನ ಮಾಡಿ ದೇವಾಲಯವನ್ನು ನಿರ್ಮಿಸಿದ ಎಂದು ಉಲ್ಲೇಖವಾಗಿರುತ್ತದೆ. ಈ ಚೌಕಾಕಾರದ ಪುಷ್ಕರಣಿಯು ಎರಡು ದೇವಾಲಯಗಳ ಮಧ್ಯೆ ನಿರ್ಮಾಣವಾಗಿದೆ. ಬಾವಿಯ ಗೋಡೆಯ ಮೇಲೆ ರಾಮಾಯಣ ಮತ್ತು ಮಹಾಭಾರತಕ್ಕೆ ಸಂಬಂಧಿಸಿದ ಅನೇಕ ಶಿಲ್ಪಗಳನ್ನು ಕೆತ್ತನೆ ಮಾಡಲಾಗಿದೆ. ಅಂದು ದೇವಾಲಯಗಳು ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಿಗೆ ಪ್ರೇರಣೆಯಾಗಿದ್ದು ಇಂದಿಗೂ ಇಂತಹ ಕಾರ್ಯಕ್ರಮಗಳಿಗೆ ಸಾಕ್ಷಿಯಾಗಿದೆ.

ಮುದನೂರಿನ ತೀರ್ಥಗಳು

ಸುರಪುರದಿಂದ ವಾಯವ್ಯಕ್ಕೆ ೩೦ ಕಿ.ಮೀ. ಅಂತರದಲ್ಲಿರುವ ಈ ಗ್ರಾಮವು ಕ್ರಿ.ಶ. ೧೧-೧೨ನೆಯ ಶತಮಾನದಲ್ಲಿ ಪ್ರಸಿದ್ಧ ಅಗ್ರಹಾರವಾಗಿತ್ತು. ಕ್ರಿ.ಶ. ೧೦೯ ಶಾಸನ ಪ್ರಕಾರ[೬] ಕಲ್ಯಾಣ ಚಾಲುಕ್ಯರ ಚಕ್ರವರ್ತಿ ೬ನೆಯ ವಿಕ್ರಮಾದಿತ್ಯನ ಕಾಲದ ಈ ಶಾಸನದಂತೆ ಐದು ಮಹಾಜನರು ರಾಮೇಶ್ವರ ತೀರ್ಥ (ರಾಮನಾಥ) ಮತ್ತು ಲಕ್ಷ್ಮಣೇಶ್ವರ ದೇವಾಲಯಗಳಿಗೆ ದಾನ ದತ್ತಿಗಳನ್ನು ನೀಡಿ ಈ ಎರಡು ತೀರ್ಥಗಳನ್ನು ನಿರ್ಮಿಸಿರುವ ಸಂಗತಿಯನ್ನು ಉಲ್ಲೇಖವಾಗಿದೆ. ಕ್ರಿ.ಶ. ೧೦೯ ಶಾಸನ ಪ್ರಕಾರ[೭] ಜನ್ನನ ಬಾವಿಯಿಂದ ತೆಂಗಿನ ತೋಟಕ್ಕೆ ನೀರು ಒದಗಿಸಲಾಗುತ್ತಿತ್ತು.

ಆದರೆ ಜನ್ನನ ಬಾವಿ ಎಂಬ ಹೆಸರಿನ ಬಾವಿ ಸದ್ಯಕ್ಕೆ ಕಂಡುಬರುವುದಿಲ್ಲ. ಇಲ್ಲಿನ ಕೆಲವು ಬಾವಿಗಳನ್ನು ಜನರು ಹಿಂದೆ ಸಪ್ತತೀರ್ಥಗಳಾಗಿದ್ದವು ಎಂದು ವಿವರಿಸುತ್ತಾರೆ. ಈ ಬಾವಿಗಳು ಮುದನೂರಿನಲ್ಲಿ ಸಿಗುವ ಭೀಮಾ ಶ್ರೇಣಿಗೆ ಸೇರಿದ ಸುಣ್ಣದ ಕಲ್ಲಿನಲ್ಲಿ ನಿರ್ಮಿಸಲಾಗಿದ್ದು ಕಲ್ಲಿನ ಸ್ತರಗಳು ಇಳುಕ ಮತ್ತು ಸುಂದರವಾಗಿ ನಿರ್ಮಿಸಿದರಿಂದ ಉತ್ತಮ ಜಲಧಾರೆಗಳಾಗಿವೆ. ರಾಮೇಶ್ವರ ತೀರ್ಥ ಮತ್ತು ಲಕ್ಷ್ಮಣೇಶ್ವರ ತೀರ್ಥ ಸದಾ ನೀರನ್ನು ನೀಡುತ್ತಿದ್ದು ನೀರು ತನ್ನಷ್ಟಕ್ಕೆ ತಾನೇ ಹೊರಕ್ಕೆ ಹರಿದು ಬರುವಂತೆ ಬಾವಿಯ ಕಟ್ಟೆಗಳನ್ನು ಕಟ್ಟಲಾಗಿದ್ದು ಹೊರಹೋದ ನೀರನ್ನು ಇಂದಿಗೂ ಕೃಷಿ ಚಟುವಟಿಕೆಗೆ ಉಪಯೋಗಿಸಿಕೊಳ್ಳುತ್ತಾರೆ.

ಈ ಬಾವಿಗಳು ಅಂದಿನ ಕಲ್ಯಾಣ ಚಾಲುಕ್ಯರ ಆಳ್ವಿಕೆಯಲ್ಲಿ ಪ್ರಮುಖವಾಗಿ ದೇವಾಲಯದ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಿಗೆ ಪ್ರೇರಣೆಯಾಗಿತ್ತು. ೧೨ನೆಯ ಶತಮಾನದ ವಚನಕಾರ ಜೇಡರ ದಾಸಿಮಯ್ಯನ ವಾಸಿಸಿದ ಸ್ಥಳವಾಗಿತ್ತು ಎಂದು ಹನುಮಾಕ್ಷಿ ಗೊಗಿಯವರು ಉಲ್ಲೇಖ ಮಾಡಿರುತ್ತಾರೆ. ಇವು ಕರ್ನಾಟಕ ಭೂವೈಜ್ಞಾನಿಕ ಇಲಾಖೆಯ ಪಟ್ಟಿಯಲ್ಲಿ ಸೇರ್ಪಡೆಯಾಗಿರುತ್ತವೆ.

ಕೆಂಭಾವಿಯ ಬಾವಿಗಳು

ಸುರಪುರ ತಾಲೂಕಿನ ವಾಯವ್ಯಕ್ಕೆ ೪೦ ಕಿ.ಮೀ. ದೂರದಲ್ಲಿರುವ ಕೆಂಭಾವಿಯು ಭೋಗಣ್ಣನಿಂದಾಗಿ ಇತಿಹಾಸದ ಪ್ರಸಿದ್ಧ ಸ್ಥಳವಾಗಿದೆ. ರೇವಣ್ಣಸಿದ್ಧೇಶ್ವರ ದೇವಾಲಯದ ಆವರಣದಲ್ಲಿರುವ ಕ್ರಿ.ಶ. ೧೦೫೪ರ ಶಾಸನ ಪ್ರಕಾರ[೮] ಕಲ್ಯಾಣ ಚಾಲುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲ ಮೊದಲನೆಯ ಸೋಮೇಶ್ವರನ ಕಾಲದ ಶಾಸನವು ಹೈಹಯ ಮಹಾಮಂಡಲೇಶ್ವರರ ವಂಶಾವಳಿಯನ್ನು ಚಂದನಿಂದ ರೇವಸರವರೆಗೆ ವಿವರಿಸುತ್ತದೆ. ರೇವಸರ ಹೆಂಡತಿ ಮಾಳೆಯಬ್ಬರಸಿ ಕೆಂಬಾವಿಯಲ್ಲಿ ಮಾಳಿಬೇಶ್ವರ ದೇವಾಲಯ ಕಟ್ಟಿಸಿ ಭೂದಾನ ಮಾಡಿ ಬಾವಿಯನ್ನು ನಿರ್ಮಿಸಿದಳೆಂದು ತಿಳಿದುಬರುತ್ತದೆ.

ಕೆಂಭಾವಿಯಲ್ಲಿ ಪ್ರಮುಖವಾಗಿ ಎರಡು ಬಾವಿಗಳನ್ನು ನಿರ್ಮಿಸಲಾಗಿದ್ದು ಮೊದಲನೆಯದಾಗಿ ಭೋಗೇಶ್ವರ ದೇವಾಲಯದ ಬಾವಿ. ಇದು ಪೂರ್ವ ಪಶ್ಚಿಮಾಭಿಮುಖವಾಗಿದ್ದು, ಗರ್ಭಗೃಹ ತೆರೆದ ಅಂತರಾಳಗಳನ್ನು ಹೊಂದಿದೆ. ದ್ವಿಕೂಟ ದೇವಾಲಯವಾಗಿದ್ದು, ಎರಡು ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ದೇವಾಲಯ ಬಾವಿಯ ಪಶ್ಚಿಮ ಮತ್ತು ಉತ್ತರದ ಬದಿಗಳು ಹಾಳಾಗಿದ್ದು ಪೂರ್ವ ಮತ್ತು ಪಶ್ಚಿಮದ ಬದಿಗಳಲ್ಲಿ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ದೇವಾಲಯ ಪ್ರವೇಶ ಮಾಡಲು ಸೇತುವೆಯನ್ನು ನಿರ್ಮಿಸಲಾಗಿದೆ. ಕ್ರಿ.ಶ. ೧೧-೧೨ನೆಯ ಧಾರ್ಮಿಕ ಕ್ಷೇತ್ರವಾಗಿತ್ತು. ಎರಡನೆಯದಾಗಿ ಧಮಂತರ ಬಾವಿಗೆ ಪೂರ್ವ ದಿಕ್ಕಿನಿಂದ ಮೆಟ್ಟಿಲುಗಳನ್ನು ಪಶ್ಚಿಮ ಗೋಡೆಯ ಮೇಲೆ ಮೂರು ನೀರೆತ್ತುವ ಜಗಲಿಗಳಿವೆ ಬಾವಿಯ ಎತ್ತರಕ್ಕೆ ಕಲ್ಲು ಮತ್ತು ಸುಣ್ಣದ ಗಾರೆಯಿಂದ ಕಟ್ಟಿದ ಸಣ್ಣ ತೊಟ್ಟಿ ಇದ್ದು ಬಾವಿಯ ಗೋಡೆಯ ಮೇಲೆ ಅರೇಬಿಕ್, ಪರ್ಶಿಯನ್ ನಾಗರಿ ಲಿಪಿಯ ಮೂರು ಶಾಸನಗಳು ಕೆತ್ತಲಾಗಿದ್ದು ಧಾರ್ಮಿಕ ಕಾರ್ಯದ ಕೇಂದ್ರ ಬಿಂದುವಾಗಿತ್ತು.

ಹಗರಟ್ಟಗಿಯ ಸಿಡಿಲುಬಾವಿ

ಸುರಪುರ ತಾಲೂಕಿನ ಪ್ರಮುಖ ಗ್ರಾಮವಾಗಿರುವ ಹಗರಟಗಿಯು ಕಲ್ಯಾಣ ಚಾಲುಕ್ಯರ ಆಳ್ವಿಕೆಯಲ್ಲಿ ಅಗ್ರಹಾರವಾಗಿತ್ತು ಎಂದು ಉಲ್ಲೇಖವಾಗಿದೆ. ಕ್ರಿ.ಶ. ೧೧೨೯–ಶಾಸನಗಳ ಪ್ರಕಾರ್ ಯಾದವ ಚಕ್ರವರ್ತಿ ಇಮ್ಮಡಿ ಸಿಂಗಣದೇವನು ರಾಮನಾಥ ದೇವರು ಆಯರೇವೇಶ್ವರ ದೇವರು ಚಾಚಲೇಶ್ವರ ದೇವರು, ಕಲ್ಲೇಶ್ವರ ದೇವರು ಹಾಗೂ ಚೌಡೇಶ್ವರಿ ದೇವಿಗೆ ಈ ಐದೂ ದೇವರಿಗೆ ಭೂದಾನ ಮಾಡಿ ಸಿಡಿಲು ಬಾವಿಯನ್ನು ನಿರ್ಮಿಸಿದನು ಎಂದು ಉಲ್ಲೇಖವಾಗಿದೆ. ಹಾಗೂ ಕ್ರಿ.ಶ. ೧೦೨೮ ಶಾಸನದಂತೆ ೬ನೆಯ ವಿಕ್ರಮಾದಿತ್ಯನು ಬಾವಿಯನ್ನು ನಿರ್ಮಿಸಿರುವ ಕುರಿತಂತೆ ಮತ್ತು ಕ್ರಿ.ಶ. ೧೧೬೬ ಶಾಸನದಂತೆ, ಕಳಚೂರಿ ಸಂಕಮದೇವನು ಅಗ್ರಹಾರ ನಿರ್ಮಿಸಿ ಬಾವಿಗೆ ಭೂದಾನ ಮಾಡಿದನು ಎಂದು ಉಲ್ಲೇಖವಾಗಿದೆ. ಈ ಹಿನ್ನೆಲೆಯಲ್ಲಿ ಹಗರಟ್ಟಗಿಯು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಪ್ರಮುಖವಾಗಿ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರವಾಗಿತ್ತು ಎಂದೂ ಹೇಳಬಹುದಾಗಿದೆ.

ಯಾಳಗಿಯ ಬಾವಿ

ಸುರಪುರದಿಂದ ೫ ಕಿ.ಮೀ. ಅಂತರದಲ್ಲಿರುವ ಈ ಗ್ರಾಮದ ಸಿದ್ದರಾಯನಗುಡಿಯ ನವರಂಗದ ಕಂಬದ ಮೇಲೆ ಇರುವ ಕ್ರಿ.ಶ. ೧೨೬೫ರ ಶಾಸನ ಪ್ರಕಾರ[೧೦] ಯಾದವ ಚಕ್ರವರ್ತಿ ಮಹಾದೇವರಾಯನ ಕಾಲದಲ್ಲಿ ಚನ್ನಕೇಶವ ದೇವರಿಗೆ ಮತ್ತು ಗೋಪಾಲ ದೇವರಿಗೆ ಭೂದಾನ ಮಾಡಿ ಸಂಜೆಯ ವೇಳೆಗೆ ಬಾವಿಯನ್ನು ನಿರ್ಮಿಸಿದರು ಎಂಬುದರ ಬಗೆಗೆ ಉಲ್ಲೇಖವಿದೆ. ಸಂಸ್ಥಾನದ ಬಾವಿ ಇಂದಿಗೂ ಧಾರ್ಮಿಕ ಕಾರ್ಯಕ್ರಮಗಳಿಗೆ ಸಹಾಯಕವಾಗಿವೆ.

ಶಿರವಾಳ ಗ್ರಾಮದ ಬಾವಿಗಳು

ಶಹಪೂರ ತಾಲೂಕಿನ ಈಶಾನ್ಯಕ್ಕೆ ೧೦ ಕಿ.ಮೀ. ದೂರದಲ್ಲಿರುವ ಭೀಮಾ ನದಿಯ ಹತ್ತಿರವಿರುವ ಈ ಗ್ರಾಮವು ರಾಷ್ಟ್ರಕೂಟರ ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಪ್ರಮುಖ ಕೇಂದ್ರವಾಗಿದ್ದು, ಇಲ್ಲಿ ಸುಮಾರು ೨೪ ದೇವಾಲಯಗಳನ್ನು ಮತ್ತು ಐದು ಬಾವಿಗಳಿವೆ. ಕ್ರಿ.ಶ. ೧೧೩೭ರ ಶಾಸನ ಪ್ರಕಾರ[೧೧] ಅಗ್ರಹಾರವಾಗಿತ್ತು ಹಾಗೂ ಬಾವಿಯ ನಿರ್ಮಾಣದ ಕುರಿತು ಉಲ್ಲೇಖವಿದೆ. ಒಂದನೆಯ ಬಾವಿಯು ಸುಣ್ಣದ ಕಲ್ಲಿನಲ್ಲಿ ಚೌಕಾಕಾರವಾಗಿ ನಿರ್ಮಾಣ ಮಾಡಲಾಗಿದ್ದು ಬಾವಿಯ ದಕ್ಷಿಣ ದಿಕ್ಕಿನಲ್ಲಿ ಎಲ್ ಅಕ್ಷರಾಕಾರದಲ್ಲಿನ ಮೆಟ್ಟಿಲುಗಳಿಗೆ ಕೆಳಗಿನ ಭಾಗ ದಕ್ಷಿಣ–ಉತ್ತರಾಭಿಮುಖವಾಗಿದ್ದು ಮೇಲಿನ ಭಾಗದಲ್ಲಿ ರಾಮಾಯಣ ಹಾಗೂ ಮಹಾಭಾರತದ ಶಿಲ್ಪಗಳನ್ನು ಕೆತ್ತಲಾಗಿದೆ. ೨ನೆಯ ಬಾವಿ ಗ್ರಾಮದ ಪೂರ್ವ ದಿಕ್ಕಿನಲ್ಲಿದ್ದು ಪೂರ್ವಕ್ಕೆ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಎಡದಿಂದ ಪ್ರವೇಶ ದಾರಿಯನ್ನು ಹೊಂದಿದ್ದು ಮುಂಭಾಗದಲ್ಲಿ ಗೋಡೆಯ ಮೇಲೆ ಕುಳಿತಿರುವ ಭಂಗಿಯಲ್ಲಿ ಶಂಖನಿಧಿಯ ಶಿಲ್ಪವಿದ್ದು ಇನ್ನೊಂದು ಭಾಗದಲ್ಲಿ ಮಲಗಿರುವ ಎರಡು ಆನೆಗಳನ್ನು ಕೆತ್ತಲಾಗಿದೆ. ಬಾವಿಯ ಪ್ರವೇಶ ದಾರಿಯ ಮೇಲೆ ಒಂದು ಚಿಕ್ಕ ದೇವಾಲಯವಿದ್ದು ಪೂರ್ವದ ದ್ವಾರಕ್ಕೆ ಚೌಕಟ್ಟಿನಲ್ಲಿ ದೇವಾಲಯದ ತೊಲೆ ಕಂಬ ಮತ್ತು ಬಿಳಿ ಮಾಳಿಗೆಗಳನ್ನು ಕಣಶಿಲೆಯಿಂದ ನಿರ್ಮಿಸಲಾಗಿದೆ. ಭಾಗಗಳು ಸುಣ್ಣದ ಕಲ್ಲುಗಳಿಂದ ನಿರ್ಮಿಸಲಾಗಿದ್ದು ದ್ವಾರದ ಕೆಳಭಾಗದಲ್ಲಿ ಶಂಖನಿಧಿ ಅಲಂಕರಿತವಾಗಿದೆ. ಹಣೆಪಟ್ಟಿಯ ಮೇಲೆ ಗಜಲಕ್ಷ್ಮಿ ಹಾಗೂ ಅನೇಕ ಸಾಲುಗಳು ಮೆಟ್ಟಿಲ ಮೇಲೆ ಚಿಕ್ಕ ಚಿಕ್ಕ ಶಿಲ್ಪಗಳನ್ನು ಕೆತ್ತಲಾಗಿದೆ. ಹೀಗೆ ಮೂರನೆಯ, ನಾಲ್ಕನೆಯ, ಐದನೆಯದಾಗಿ ಬಾವಿಗಳನ್ನು ಈ ಗ್ರಾಮದಲ್ಲಿ ನಿರ್ಮಿಸಲಾಗಿದೆ.

ಶಹಪುರ ತಾಲೂಕಿನಲ್ಲಿ ಕ್ರಿ.ಶ. ೧೦೨೮ ಮದ್ರಕಿ ಶಾಸನವು ಕಲ್ಯಾಣ ಚಾಲುಕ್ಯರ ದೊರೆ ೨ನೆಯ ಜಯಸಿಂಹನು ಏತಗಿಯಲ್ಲಿ ಆಳ್ವಿಕೆ ಮಾಡುತ್ತಿರುವಾಗ ಜಗದೇವಮಲ್ಲ ದೇವರು ಮದ್ರಕಿಯಲ್ಲಿ ಗಾಮುಣ್ಣನ ಬಾವಿಯನ್ನು ನಿರ್ಮಿಸಿರುವ ಕುರಿತು ಉಲ್ಲೇಖಿಸುತ್ತದೆ. ಕ್ರಿ.ಶ. ೧೨೮೯ರ ಸುರಪುರದ ಶಾಸನ ಪ್ರಕಾರ[೧೨] ಸುರಪೂರಿನ ಅರಸರು ಸುರಪೂರದ ವೇಣುಗೋಪಾಲ ಸ್ವಾಮಿಗೆ ಪುಷ್ಕರಣಿ ಮತ್ತು ಶಹಪೂರಿನ ಸಾಗರ ಗ್ರಾಮದಲ್ಲಿ ಬಾವಿಯ ನಿರ್ಮಾಣಕ್ಕೆ ಭೂದಾನ ಮಾಡಿದರು ಎಂದು ತಿಳಿದುಬರುತ್ತದೆ.

ಅಕ್ಕತಂಗಿಯರ ಬಾವಿ, ಗಿರಿದುರ್ಗ

ಯಾದಗಿರಿ ಪರಿಸರವು ಕಲ್ಯಾಣ ಚಾಲುಕ್ಯರ ಚಕ್ರವರ್ತಿ ೨ನೆಯ ಜಯಸಿಂಹನ ರಾಜಧಾನಿಯಾಗಿತ್ತು ಎಂದು ಕ್ರಿ.ಶ. ೧೦೧೪ ಏತಗಿರಿ ಶಾಸನ[೧೩] ಉಲ್ಲೇಖಿಸಿದೆ. ಈ ಶಾಸನದ ಪ್ರಕಾರ ಯಾದಗಿರಿ ಗಿರಿದುರ್ಗದ ಮೇಲಿರುವ ಚಾಲುಕ್ಯರ ತ್ರಿಕೂಟ ದೇವಾಲಯ ಉತ್ತರಕ್ಕೆ ಬಾವಿಯನ್ನು ನಿರ್ಮಿಸಲಾಗಿದ್ದು (೪೦x೩೦) ಅಡಿ ವಿಸ್ತೀರ್ಣವುಳ್ಳ ಈ ಬಾವಿಯ ಆಳದ

ಬಗ್ಗೆ ಮಾಹಿತಿ ಇರುವುದಿಲ್ಲ. ಆದರೆ ಪಶ್ಚಿಮ ದಿಕ್ಕಿನಿಂದ ಮೆಟ್ಟಿಲುಗಳನ್ನು ಇಳಿಯಲು ನಿರ್ಮಿಸಲಾಗಿದೆ. ದಕ್ಷಿಣ ದಿಕ್ಕಿಗೆ ಕಲ್ಯಾಣ ಚಾಲುಕ್ಯರ ತ್ರಿಕೂಟ ದೇವಾಲಯಗಳಲ್ಲಿ ಶಿವಲಿಂಗಗಳು ಮತ್ತು ನಂದಿಯನ್ನು ಪ್ರತಿಷ್ಠಿಸಲಾಗಿದೆ. ಗಿರಿದುರ್ಗದ ಮೇಲಿರುವ ಅಂಭಾಭವಾನಿ ದೇವಾಲಯದ ದಸರಾ ಹಬ್ಬದ ಆಯುಧ ಪೂಜೆಯ ಸಂದರ್ಭದಲ್ಲಿ ಪ್ರಮುಖ ಕೇಂದ್ರ ಬಾವಿಯಾಗಿರುತ್ತದೆ. ಇಂದಿಗೂ ಧಾರ್ಮಿಕ ಕಾರ್ಯಕ್ರಮಗಳಿಗೆ ಸಾಕ್ಷಿಯಾಗಿದೆ.

ಚಂಡ್ರಕಿ ಬಸವೇಶ್ವರ ಪುಷ್ಕರಣಿ

ಯಾದಗಿರಿ ತಾಲೂಕಿನಿಂದ ೫೦ ಕಿ.ಮೀ. ಪೂರ್ವಕ್ಕೆ ಇರುವ ಕ್ರಿ.ಶ. ೧೨–೧೩ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಉಲ್ಲೇಖಿತವಾಗಿದೆ. ಚಾಲುಕ್ಯರ ಅವನತಿಯ ನಂತರ ಕಾಕಲುವಾರು ಸಂಸ್ಥಾನಕ್ಕೆ[೧೪] ಒಳಪಟ್ಟಿರುವ ಈ ಗ್ರಾಮದ ಪೂರ್ವ ದಿಕ್ಕಿಗೆ ೧೪ ಎಕರರೆ ವಿಸ್ತೀರ್ಣವುಳ್ಳ ಮಣ್ಣಿನ ಕೋಟೆಯ ಒಳಗಡೆ ಬಸವೇಶ್ವರ ದೇವಾಲಯದ ಉತ್ತರಕ್ಕೆ ಪುಷ್ಕರಣಿಯನ್ನು ನಿರ್ಮಿಸಲಾಗಿದ್ದು ಚೌಕಾಕಾರವಾಗಿ ಕಪ್ಪುಕಲ್ಲಿನಿಂದ ಪುಷ್ಕರಣಿಯನ್ನು ನಿರ್ಮಿಸಲಾಗಿದೆ. ೧೧ ಹಂತದಲ್ಲಿ ನಾಲ್ಕು ಕಡೆಯಿಂದ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. (೪೦x೪೦ ಅಡಿ) ಪುಷ್ಕರಣಿಯ ಪಕ್ಕದಲ್ಲಿ ೧೨ನೆಯ ಶತಮಾನದ ಶಿವಶರಣ್ಣರ ಮೂರ್ತಿಶಿಲ್ಪಗಳನ್ನು ಕೆತ್ತಲಾಗಿದೆ. ಕ್ರಿ.ಶ. ೧೪೮೯ರ ಕಾಕಲುವಾರು ಶಾಸನ ಪ್ರಕಾರ[೧೫] ಕಲಿನಾಥ ಎಂಬ ಪಂಡಿತನೂ ಈ ಬಾವಿಯನ್ನು ನಿರ್ಮಿಸಿದನು ಎಂದೂ ಉಲ್ಲೇಖವಾಗಿದೆ. ಅಂದು ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಿಗೆ ಪ್ರೇರಣೆ ಈ ಬಾವಿಯಾಗಿದ್ದು ಶಿವಶರಣರಿಗೆ ಆಶ್ರಯ ತಾಣವಾಗಿತ್ತು. ಹೀಗೆ ಯಾದಗಿರಿ ತಾಲೂಕಿನ ರಾಜರಕೋಟೆಯ ಮಲ್ಲಿಕಾರ್ಜುನ ಪುಷ್ಕರಣಿ ಮೈಲಾಪುರದ ಹೊನ್ನ ಕೆರೆ ಪುಷ್ಕರಣಿ ಯಾದಗಿರಿಯ ಚಾಂದಚಾವಡಿ, ಕಾಳಬೇಳಗುಂದಿಯ ಬನದೇಶ್ವರ ಪುಷ್ಕರಣಿ, ಮುಂತಾದ ಬಾವಿ ಪುಷ್ಕರಣಿಗಳು ಯಾದಗಿರಿ ಜಿಲ್ಲೆಯಲ್ಲಿ ನಿರ್ಮಾಣವಾಗಿರುತ್ತವೆ.

ಸುಮಾರು ೬೦ ಅಧಿಕ ನಿರ್ಮಾಣ ಮಾಡಲಾಗಿದ್ದು ಅವು ಇಂದಿಗೂ ಪ್ರೇರಣೆಯಾಗಿದ್ದು ಗಮನಿಸಬೇಕಾಗುತ್ತದೆ.

ಅಡಿಟಿಪ್ಪಣಿಗಳು

೧. ವಾಸುದೇವನ್ ಸಿ.ಎಸ್., 'ವಿಜಯನಗರ ಕಾಲದ ಕೃಷಿ ನೀರಾವರಿ ವ್ಯವಸ್ಥೆ', ರಮೇಶ ನಾಯಕ (ಸಂ), ೨೦೦೭, ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಪು. ೧೨೪–೧೩೦.

೨. ಕೌಟಿಲ್ಯನ ಅರ್ಥಶಾಸ್ತ್ರ (ಕ.ಅನು) ಶೃಂಗೇರಿ ಜಗದ್ಗುರು ಶ್ರೀ ಸಚ್ಚಿದಾನಂದ ಶಂಕರ ಭಾರತಿ ಸ್ವಾಮಿಗಳು ೨೦೧೦ ಪು. ೮೮.

೩. ಧೃವನಾರಾಯಣ ಎಂ. (ಕ.ಅ) ಸಿ.ಟಿ.ಎಂ. ಕೊಟ್ರಯ್ಯ, ೨೦೦೧ ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ ಪು. ೧೦೨.

೪. ಅದೇ ಪು. ೬೫.

೫. ಹನುಮಾಕ್ಷಿ ಗೋಗಿ, ೧೯೯೫, ಸುರಪುರ ತಾಲೂಕಿನ ಶಾಸನಗಳು; ಪು. ೦೮.

೬. ವಿನೋದ ಪಾಟೀಲ್, ೨೦೦೫, ಕರ್ನಾಟಕದ ಪ್ರಾಚೀನ ಬಾವಿಗಳು, ಪು. ೫೬.

೭. ಹನುಮಾಕ್ಷಿ ಗೋಗಿ, ೧೯೯೫, ಸುರಪುರ ತಾಲೂಕಿನ ಶಾಸನಗಳು, ಪು. ೧೧೧.

೮. ಅದೇ ಪು. ೬೮–೭೧.

೯. ಅದೇ ಪು. ೧೮೯–೧೯೦.

೧೦. ಅದೇ ಪು. ೧೫೪–೧೫೫.

೧೧. ಹನುಮಾಕ್ಷಿ ಗೋಗಿ, ೧೯೯೬, ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು. ೪೩೯–೪೪೦.

೧೨. ಅದೇ ಪು. ೪೩೬.

೧೩. ರೇವ್ಯಾ ಗೋವಿಂದ ನಾಯಕ್, ೨೦೦೯, ಯಾದಗಿರಿ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನ, (ಎಂ.ಫಿಲ್. ಸಂಪ್ರಬಂಧ ಅಪ್ರಕಟಿತ) ಪು. ೬೭.

೧೪. ವಿಶ್ವನಾಥ ರೆಡ್ಡಿ ಎಂ., ೨೦೧೧ ಕಾಕಲುವಾರು ಸಂಸ್ಥಾನದ ಸಂಕ್ಷಿಪ್ತ ಇತಿಹಾಸ, ಪು. ೨೪.

೧೫. ಹನುಮಾಕ್ಷಿ ಗೋಗಿ, ೨೦೦೨, (ಅನು.) ಶಾಸನ, ಸಂ. ೧, ಪು. ೨೨೪.

೧೨೧

ಗಜೇಂದ್ರಗಡದ ಸ್ಮಾರಕಗಳು

ಪ್ರೊ. ಶಕುಂತಲಾ ಸಿಂಧೂರ*

ಗಜೇಂದ್ರಗಡ ಗದಗ ಜಿಲ್ಲೆಯ ರೋಣ ತಾಲೂಕಿನಲ್ಲಿಯೇ ದೊಡ್ಡ ನಗರವೆಂದು ಪುರಾಣ ಇತಿಹಾಸ ಕಾಲದಿಂದಲೂ ಪ್ರಸಿದ್ಧಿ ಪಡೆದಿದೆ. ಬೆಳಕಿಗೆ ಬಾರದ ಪುರಾತನ ಗುಹೆ, ಶ್ರೀ ಗವಿಸಂಗಪ್ಪನ ದೇವಾಲಯ, ಮರಿಯಮ್ಮನ ಗುಡಿ, ಮಲ್ಲೋಜ ಬಾವಿ, ಕಾಲಕಾಲೇಶ್ವರ (ಕಳಕಪ್ಪನ) ಗುಡಿ ಹಾಗೂ ಕಾಲಕಾಲೇಶ್ವರ ಗುಡ್ಡದ ಕೋಟೆ ಇತ್ಯಾದಿಗಳು ಐತಿಹಾಸಿಕ ನಗರ ಗಜೇಂದ್ರಗಡದ ಪ್ರಾಚೀನ ಸ್ಮಾರಕಗಳಾಗಿರುತ್ತವೆ. 'ದಕ್ಷಿಣ ಕಾಶಿ' ಎಂದೇ ಖ್ಯಾತಿ ಗಳಿಸಿದ ಪುಣ್ಯಧಾಮ ಶ್ರೀ ಕಾಲಕಾಲೇಶ್ವರ. ಪೌರಾಣಿಕವಾಗಿ ಐತಿಹಾಸಿಕವಾಗಿ ಸಹಸ್ರಾರು ವರ್ಷಗಳ ಹಿಂದಿನ ಪುರಾತನ ದೇಗುಲವಿದು.

ಕರ್ನಾಟಕದಲ್ಲಿಯೇ ಅತ್ಯಂತ ಮಹತ್ವದ ಹಾಗೂ ನಿಸರ್ಗ ಸೌಂದರ್ಯದಿಂದೊಡಗೂಡಿದ ಪವಿತ್ರಕ್ಷೇತ್ರ ಶ್ರೀ ಕಾಲಕಾಲೇಶ್ವರ ಲಿಂಗವು ಉದ್ಭವ ಲಿಂಗವಾಗಿದೆ. ಈ ದೇವಸ್ಥಾನವು ಮಾನವ ನಿರ್ಮಿತವಾಗಿರದೆ ನಿಸರ್ಗ ನಿರ್ಮಿತವಾಗಿದ್ದು ಈ ಕ್ಷೇತ್ರ ಆಧುನಿಕತೆಯ ಸೋಗಿಗೆ ಬಿದ್ದಿರುವುದಿಲ್ಲ. ಶ್ರೀ ಕಾಲಕಾಲೇಶ್ವರ ಪರ್ವತದ ಮಧ್ಯಭಗದಲ್ಲಿರುವ ಗುಹೆಯಲ್ಲಿರುವ ಶ್ರೀ ಕಾಲಕಾಲೇಶ್ವರ ದೇಗುಲವಿದೆ. ಎಂಹ ನಾಸ್ತಿಕರಲ್ಲಿಯೂ ಭಕ್ತಿಭಾವ ತುಂಬುವಂತಹದ್ದಾಗಿದೆ. ಪೌರಾಣಿಕ ಹೆಸರಾದ 'ಜಾಲಿಂದ್ರಗಿರಿ' ಎಂಬ ಹೆಸರಿನ ಗಜೇಂದ್ರಗಡದ ಗುಡ್ಡಕ್ಕೆ ಹೊಂದಿಕೊಂಡ ಜಾಲಿಂದ್ರಗಿರಿಯಲ್ಲಿರುವ ಈ ಕ್ಷೇತ್ರ ನಾಡಿನ ಇತರ ಪುಣ್ಯಕ್ಷೇತ್ರಕ್ಕಿಂತ ವಿಭಿನ್ನವಾಗಿದೆ.[೧] ಕಾಲೇಶ್ವರ ಉದ್ಭವಲಿಂಗದಲ್ಲಡಗಿದ್ದಾನೆಂಬುದನ್ನು ಶಿವಪುರಾಣ ಮತ್ತು ಸ್ಕಂದ ಪುರಾಣಗಳಲ್ಲಿ ದಾಖಲಿಸಲಾಗಿದೆ.

ಶ್ರೀ ಕಾಲಕಾಲೇಶ್ವರ ದೇವಸ್ಥಾನದ ಗರ್ಭಗುಡಿಯ ಬಲಭಾಗದಲ್ಲೊಂದು ಶಿಲಾಲೇಖವಿದೆ. ಚಾಲುಕ್ಯ ಸಾಮ್ರಾಟನಾದ ಇಮ್ಮಡಿ ಪುಲಕೇಶಿಯ ಚಿಕ್ಕಪ್ಪನಾದ ಮಂಗಳೇಶನು ಶ್ರೀ ಕಾಲಕಾಲೇಶ್ವರ ಲಿಂಗಕ್ಕೆ ಅಭಿಷೇಕ ಮಾಡಿ ಪೂಜೆ ಸಲ್ಲಿಸಿ ನಂತರ ಶ್ರೀ ಕಾಲಕಾಲೇಶ್ವರ ದೇವಸ್ಥಾನದಲ್ಲಿ ನಿತ್ಯ ಪೂಜಾಕೈಂಕರ್ಯ ಏರ್ಪಡಿಸಲು ಎರಡು ಹಳ್ಳಿಗಳನ್ನೊಳಗೊಂಡು ಬಹಳಷ್ಟು ಜಮೀನುಗಳನ್ನು ದಾನವಾಗಿತ್ತಿರುವ ಉಲ್ಲೇಖ ಈ ಶಿಲಾಲೇಖನದಲ್ಲಿರುವುದನ್ನು ಗಮನಿಸಿದರೆ ಸು. ೧೨೦೦ ವರ್ಷಕ್ಕಿಂತ ಪೂರ್ವದಲ್ಲಿಯೇ ಈ ದೇವಾಲಯವು ಸಾಕಷ್ಟು ಪ್ರಖ್ಯಾತಿ ಪಡೆದಿತ್ತೆಂಬುದು ಸ್ಪಷ್ಟವಾಗುತ್ತದೆ.[೨]

ಸು. ೨೦೦ ಅಡಿ ಎತ್ತರದ ಗುಡ್ಡದ ಮೇಲೆ ಕಾಲಕಾಲೇಶ್ವರ ದೇವಾಲಯ ಸ್ಥಾಪಿಸಲ್ಪಟ್ಟಿದೆ. ನೂರಾರು ಮೆಟ್ಟಿಲುಗಳನ್ನೇರಿ ದೇವಾಲಯ ಪ್ರವೇಶಿಸುವುದು ಅನಿವಾರ್ಯ. ನಿಸರ್ಗ ರಮಣೀಯತೆಯಿಂದೊಡಗೂಡಿದ ಈ ಪವಿತ್ರ ಸ್ಥಳವು ಪ್ರಕೃತಿದತ್ತವಾದ ಗುಹೆ (ಗವಿ) ಗಳಿಂದ ಅತ್ಯಾಕರ್ಷಕವಾಗಿದೆ. ಸಹಜವಾಗಿ ನಿರ್ಮಾಣಗೊಂಡಿರುವ ಗುಹೆಗಳನ್ನೇ ದೇವಾಲಯವನ್ನಾಗಿ ಪರಿವರ್ತಿಸಲಾಗಿದೆ. ಕಲ್ಯಾಣ ಚಾಲುಕ್ಯ ಶೈಲಿಯಲ್ಲಿರುವ ಕಾಲಕಾಲೇಶ್ವರ ಸ್ಮಾರಕವು ದಕ್ಷಿಣಾಭಿಮುಖವಾಗಿದ್ದು ಸಾಧಾರಣ ಸ್ಥಿತಿಗತಿಯಲ್ಲಿ ಉಳಿದಿದೆ.

ಕಾಲಕಾಲೇಶ್ವರನೆಂಬ ಹೆಸರಿನಿಂದ ಪೂಜಿಸಲ್ಪಡುತ್ತಿರುವ ವೀರಭದ್ರನ ಶಿಲ್ಪವು ದೇಗುಲದ ಪ್ರಮುಖ ಕೇಂದ್ರವಾಗಿದೆ. ನೈಸರ್ಗಿಕವಾಗಿ ನಿರ್ಮಾಣವಾಗಿರುವ ಇತರ ಗೂಡುಗಳಲ್ಲಿ ವಿವಿಧ ಶಿಲ್ಪಗಳನ್ನಿಡಲಾಗಿದೆ. ವಿಶಾಲವಾದ ತೆರೆದ, ಮೇಲ್ಛಾವಣಿ ಇಲ್ಲದ ನವರಂಗ ಮುಖಮಂಟಪ ಮತ್ತು ಗರ್ಭಗೃಹಗಳು ಇವೆ. ಗರ್ಭಗೃಹದಲ್ಲಿ ವೀರಭದ್ರ ದೇವರು ನಿಂತಿರುವ ಶಿಲ್ಪವಿದೆ. ಇದೇ ದೇಗುಲದ ಮುಖೇನ ಇನ್ನೊಂದು ಗುಡಿಯನ್ನು ಪ್ರವೇಶಿಸುತ್ತೇವೆ. ಇದೂ ಕೂಡಾ ಗರ್ಭಗೃಹ ಮತ್ತು ನವರಂಗವನ್ನೊಳಗೊಂಡಿದೆ. ಈ ಗುಡಿಯ ಗರ್ಭಗೃಹದಲ್ಲಿ ಲೋಹದಿಂದ ನಿರ್ಮಿಸಿರುವ ವೀರಭದ್ರದೇವರ ಶಿಲ್ಪವಿದ್ದು ಇದನ್ನು ಈಚೆಗೆ ನಿರ್ಮಿಸಲಾಗಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಿಸಲಾಯಿತೆನ್ನುವ ಈ ಪ್ರಾಚೀನ ದೇವಾಲಯವನ್ನು ಭಾಗಶಃ ನವೀಕರಿಸಿ ಕಟ್ಟಿರುವುದರಿಂದ ಅಲ್ಲಿರುವ ಪ್ರಾಚೀನ ಶಿಲ್ಪಗಳನ್ನು ಗೋಡೆ ಹಾಗೂ ಗೂಡುಗಳಲ್ಲಿಡಲಾಗಿದೆ. ಇವು ಶಿವ ವಿಷ್ಣು ಬ್ರಹ್ಮನ ಮೂರ್ತಿ ಶಿಲ್ಪಗಳಾಗಿವೆ. ಮಹಿಷಾಸುರ ಮರ್ದಿನಿಯ ಶಿಲ್ಪ ಹಾಗೂ ಕೈ ಮುಗಿದು ಕುಳಿತಿರುವ

* ಕನ್ನಡ ಸಹ ಪ್ರಾಧ್ಯಾಪಕರು, ಕೆಎಲ್‌ಇ ಸಂಸ್ಥೆಯ ಜೆ.ಟಿ. ಕಾಲೇಜು, ಗದಗ-೫೮೨೧೦೧.

ದ್ವಾರಪಾಲಕ ಶಿಲ್ಪಗಳನ್ನು ಈ ಗುಡಿಯಲ್ಲಿಟ್ಟಿದ್ದಾರೆ. ಪ್ರಾಚೀನ ಸಪ್ತಮಾತೃಕತೆಯ ಶಿಲ್ಪ, ನಾಗಶಿಲ್ಪ ಮತ್ತು ಮಹಾಸತಿ ಶಿಲ್ಪಗಳು ಇಲ್ಲಿವೆ. ಮಹಾಸತಿ ಶಿಲ್ಪವನ್ನು ನೆಲಹಾಸಕ್ಕೆ ಬಳಸಲಾಗಿದೆ. ಭಕ್ತ ದಂಪತಿಗಳ ಶಿಲ್ಪವೊಂದು ಗಮನಾರ್ಹವಾಗಿದೆ. ಇದರಲ್ಲಿ ಭಕ್ತನು ತಲೆಗೆ ಪೇಟಾ (ಮುಂಡಾಸ) ಸುತ್ತಿದ್ದು ಗಡ್ಡ ಬಿಟ್ಟಿದ್ದಾನೆ. ಗಂಭೀರ ಮುಖಭಾವವನ್ನು ಹೊಂದಿರುವ ಈ ಶಿಲ್ಪದಲ್ಲಿರುವ ದಂಪತಿಗಳು ಬಹುಶಃ ದೇವರ ಸ್ಮರಣೆಗೆ ಕುಳಿತಿರಬಹುದಾಗಿದೆ. ಕುದುರೆಯ ಮೇಲೆ ಕುಳಿತು ಸವಾರಿ ಮಾಡುತ್ತಿರುವ ಇನ್ನೊಂದು ಶಿಲ್ಪ ಹೆಚ್ಚಿನ ಆಕರ್ಷಣೆವುಳ್ಳದ್ದಾಗಿದೆ. ಭಗ್ನಗೊಂಡಿರುವ ಗಣಪತಿ ಹಾಗೂ ನಂದಿ ಶಿಲ್ಪಗಳು ಕೂಡ ಗುಡಿಯ ಆವರಣದಲ್ಲಿವೆ.

ದೇವಸ್ಥಾನಕ್ಕೆ ಪ್ರವೇಶ ದ್ವಾರವನ್ನು ನಿರ್ಮಿಸಿದ್ದು ಅದರ ಅಧಿಷ್ಠಾನದಲ್ಲಿ ಚಿಕ್ಕ ಚಿಕ್ಕ ಕಂಬಗಳನ್ನು ಕೆತ್ತಿದ್ದಾರೆ. ದ್ವಾರಬಾಗಿಲದ ಅಕ್ಕಪಕ್ಕದಲ್ಲಿ ದ್ವಾರಶಿಲ್ಪಗಳನ್ನಿಡಲಾಗಿದೆ. ಇಲ್ಲಿರುವ ನಂದಿ ಶಿಲ್ಪ ದೊಡ್ಡದಾಗಿದೆ. ಸುಮಾರು ಅಡಿ ಎತ್ತರವಾಗಿದೆ. ಈ ಶಿಲ್ಪದ ಬಗ್ಗೆ ಕೆಲವು ಐತಿಹ್ಯಗಳಿವೆ. ನಂದಿ ಶಿಲ್ಪವು ಪ್ರತಿ ವರ್ಷ ಬೆಳೆಯುತ್ತಲಿದೆ ಎಂಬ ಪ್ರತೀತಿ ಇದೆ. ಈ ನಂದಿಯನ್ನು ವಿಧವೆಯರು ಮಾತ್ರ ಪೂಜಿಸುವುದು ವಿಶೇಷವಾಗಿದೆ. ಇಂಥ ಆಚರಣೆ ಯಾವ ಕಾಲದಲ್ಲಿ ಯಾವ ಕಾರಣಕ್ಕಾಗಿ ಮಾತ್ರ ರೂಢಿಯಲ್ಲಿ ಬಂದಿತೆಂಬುದರ ಬಗ್ಗೆ ವಿಶೇಷ ಅಧ್ಯಯನ ಕೈಗೊಳ್ಳಬೇಕಿದೆ.

ಕಳಕಪ್ಪನ ಗುಡ್ಡವೆಂದು ಕರೆಯಲ್ಪಡುವ ಈ ಕಾಲಕಾಲೇಶ್ವರ ಸ್ಥಳದಲ್ಲಿ ಒಟ್ಟು ೫ ಶಾಸನಗಳು ಲಭಿಸಿದ್ದು ಅವು ಪ್ರಕಟವಾಗಿವೆ. (ಧಾ.ಜಿ.ಶಾ.ಸೂ.ಸಂ.ರೋ ೨೬, ೨೭, ೨೮, ೨೯ ಮತ್ತು ೩೦ ಪು. ೧೭ SII, XV. No. 74, SII XV No. 165 and SII XV No. 245) ಕಲ್ಯಾಣ ಚಾಲುಕ್ಯ ನಾಲ್ಕನೇ ಸೋಮೇಶ್ವರನ ಕಾಲಕ್ಕೆ ಸಂಬಂಧಿಸಿದ ಶಾಸನ ಕ್ರಿ.ಶ. ೧೧೯೪ರ ತೇದಿಯದ್ದು. ಸಿಂದ ವಂಶದ (ಬಹುಶಃ ಯಲಬುರ್ಗಿಯ ಸಿಂದವಂಶದವನಿರಬಹುದು) ಆಜಿದೇವರಸನಿಂದ ಕಾಲಕಾಲೇಶ್ವರ ದೇವರಿಗೆ ಭೂಮಿಯನ್ನು ದಾನವಿತ್ತಿರುವ ಉಲ್ಲೇಖವಿದೆ. ಅದೇ ಶಾಸನದಲ್ಲಿ ರಾಜೂರ ಗ್ರಾಮದ ಸಾಯಿಮ ಗಾವುಂಡ ಮತ್ತು ಉಗುರ ಮುನ್ನೂರ್ವರಿಂದ ಕಾಳಕಾಳೇಶ್ವರ ದೇವರಿಗೆ ಭೂಮಿಯನ್ನು ದಾನ ಕೊಟ್ಟಿರುವ ಮಾಹಿತಿ ಇದೆ. ಅದು ಕ್ರಿ.ಶ. ೧೨೨೦ರ ಕಾಲವನ್ನು ಸೂಚಿಸುವ ಹಾಗೂ ಯಾದವ ಸಿಂಘಣನ ಕಾಲದ್ದಾಗಿದೆ. ಇದೇ ದೇವಸ್ಥಾನದ ಇನ್ನೊಂದು ಶಾಶನ ವಿಜಯನಗರದ ಅರಸ ೨ನೆಯ ಹರಿಹರನಿಗೆ ಸಂಬಂಧಿಸಿದ್ದಾಗಿದೆ. ಅದು ತೃಟಿತವಾಗಿದ್ದು ಬೊಮ್ಮಗೌಡನ ಉಲ್ಲೇಖವನ್ನೊಳಗೊಂಡಿದೆ. ಕಾಳಕಾಳೇಶ್ವರ ಲಿಂಗದ ಪ್ರಭಾವಳಿಯಲ್ಲಿರುವ ಇನ್ನೊಂದು ಶಾಸನವು ಮಹಾದೇವನ ಮಗ ನಾರಾಯಣ ದಾತೆಯನಿಂದ ಕಾಳಕಾಳೇಶ್ವರನಿಗೆ ಪ್ರಭಾವಳಿಯನ್ನು ಕಾಣಿಕೆಯಾಗಿತ್ತಿರುವ ಮಾಹಿತಿಯನ್ನೊಳಗೊಂಡಿದೆ. ಈ ಶಾಸನದ ಕಾಲ ಮತ್ತು ಸಂಬಂಧಿಸಿದ ಕರ್ತೃವಿನ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿ ಲಭ್ಯವಿಲ್ಲ. ಶಾಸನದಲ್ಲಿ ಉಲ್ಲೇಖಿಸಲ್ಪಟ್ಟ ಮಹಾದೇವ ಹಾಗೂ ಅವನ ಮಗ ನಾರಾಯಣದಾತೆಯು ಗಜೇಂದ್ರಗಡದ ಅರಸರಿಗೆ ಸಂಬಂಧಿಸಿದ ಹೆಸರುಗಳೆಂಬುದನ್ನು ಗಮನಿಸುವದತ್ಯವಶ್ಯವಾಗಿದೆ.[೩]

ನಿಸರ್ಗ ನಿರ್ಮಿತ ಕಾಲಕಾಲೇಶ್ವರ ಗುಡ್ಡದ ಪ್ರದೇಶದಲ್ಲಿ ಪ್ರಾಚೀನ ಮಾನವರ ವಸತಿಗೆ ಸಂಬಂಧಿಸಿದ ಚಟುವಟಿಕೆಗಳು ಹೆಚ್ಚಿನ ಪ್ರಮಾಣದಲ್ಲಿ ಆಗಿರುವ ಸಾಧ್ಯತೆಗಳಿವೆ. ಬೃಹತ್ ಶಿಲಾಯುಗ ಸಂಸ್ಕೃತಿಯ ಕುರುಹುಗಳು ಹಾಗೂ ಇತಿಹಾಸ ಆರಂಭ ಯುಗದ ಮಾನವನ ಚಟುವಟಿಕೆಯಲ್ಲಿ ಬಳಕೆಗಿರುವ ಸಲಕರಣೆಗಳು ಈ ಭಾಗದಲ್ಲಿ ಲಭಿಸಿವೆ.

ಮಹಾದ್ವಾರದ ದಾರಿಯೇ ತತ್‌ಕ್ಷಣ ಕಾಣದಂತೆ ರಚಿತವಾದ ಗಜೇಂದ್ರಗಡದ ಕೋಟೆ ಬೆಟ್ಟದ ತುದಿಯ ಒಂದೆಡೆ ಬಾಗಿಲು ಹೊಂದಿದ್ದರಿಂದ ಇದಕ್ಕೆ 'ಗುಹ್ಯ ಗಿರಿದುರ್ಗ' ಎನ್ನಲಾಗಿದೆ. ಗಿರಿಗಳ ಮೇಲಿರುವ ಗಿರಿದುರ್ಗವಿದು. ಗಜಾಸುರನೆಂಬ ರಾಕ್ಷಸನ ಸಂಹಾರದ ಪೌರಾಣಿಕ ಹಿನ್ನೆಲೆಯನ್ನೊಳಗೊಂಡಿರುವ ಈ ಕೋಟೆಯನ್ನು ದೂರದಿಂದ ನೋಡಿದಾಗ ಆನೆ (ಗಜ)ಯಂತೆ ಮಲಗಿದ ಕಾರಣದಿಂದ ಮರಾಠಿಯಲ್ಲಿ ಕೋಟೆಯನ್ನು 'ಘಡ' ಎಂದು ಕರೆಯುವದರಿಂದ ಈ ಊರಿಗೆ 'ಗಜೇಂದ್ರಗಡ' ಹೆಸರು ಬಂದಿದ್ದು ಈ ಹೆಸರಿಗೆ ಕೋಟೆಯು ತಳಕು ಹಾಕಿಕೊಂಡಿದೆ.

ಗಜೇಂದ್ರಗಡ ಗುಡ್ಡವು ನಗರದ ಉತ್ತರ ದಿಕ್ಕಿಗೆ ಇರುವುದರಿಂದ ಹಾಗೂ ಅಭೇದ್ಯ ಮತ್ತು ಎತ್ತರವಾಗಿರುವುದರಿಂದಲೂ ಡಾ. ಡಿ.ಎಸ್. ಕರ್ಕಿಯವರು ಗಜೇಂದ್ರಗಡ ನಗರವನ್ನು ಸಮಸ್ತ ಭಾರತದೇಶಕ್ಕೂ ಹಾಗೂ ಗಜೇಂದ್ರಗಡದ ಉತ್ತರಕ್ಕಿರುವ ಈ ಗುಡ್ಡವನ್ನು ಹಿಮಾಲಯ ಪರ್ವತಕ್ಕೂ ಹೋಲಿಸಿ ಈ ನಗರವನ್ನು ನೋಡಿದ ನಮಗೆ ಸಮಗ್ರ ಭರತಖಂಡವನ್ನೇ ನೋಡಿದಂತಾಗಿದೆ.[೪] ಎಂದಿರುವುದು ಉತ್ಪ್ರೇಕ್ಷೆಯೆನಿಸದಿರಲಾರದು. ಗುಡ್ಡದ ಮೇಲೆ ಕೋಟೆ ರಚನೆ, ಗುಡ್ಡ ಹತ್ತಿ ಹೋಗಲು ಪಾವಟಿಗೆ ನಡುವೆ ವೀರಹನುಮಂತನ ದೇವಾಲಯ ಸುಂದರ ಮನೋಹರವಾಗಿದೆ. ಗಜೇಂದ್ರಗಡ ಗುಡ್ಡ ಹಾಗೂ ಕೋಟೆ ಕರ್ನಾಟಕದ ಯಾವುದೇ ಪ್ರೇಕ್ಷಣೀಯ ಸ್ಥಳಕ್ಕೂ ಕಡಿಮೆ ಇಲ್ಲದಂತೆ ತನ್ನ ಸೌಂದರ್ಯವನ್ನು ಬೆಳಗುತ್ತದೆ. ಪ್ರಸಿದ್ಧ

ಸಾಹಿತಿ ಅನಕೃ ಅವರಿಗೆ ಗುಡ್ಡವು ಮಲಗಿದ ಆನೆಯಂತೆ ಕಂಡಿದೆ. ಕನ್ನಡದ ವರಕವಿ ಬೇಂದ್ರೆಯವರಿಗೆ ಗಜೇಂದ್ರಗಡ ಗುಡ್ಡವು "ಇದು ಗೋಡೆಯೋ ಗುಡ್ಡವೋ ಅಥವಾ ಶತ್ರುಗಳಿಗೆ ಜಯಿಸಲು ಅಸಾಧ್ಯವಾದ ಕೋಟೆಯೋ" ಎನ್ನುವಂತಾಗಿದೆ. ಬೃಹದಾಕಾರದ ಕಲ್ಲುಗಳಿಂದ ನಿರ್ಮಿಸಿದ ಕೋಟೆ ನೋಡಿದಾಗ ಹಿಂದಿನ ಶಿಲ್ಪಿಗಳ ಸಾಹಸಕ್ಕೆ ಬೆಕ್ಕಸ ಬೆರಗಾಗುವದು ಖಚಿತ. ವೈರಿಗಳಿಗೆ ಕಾಣದಂತೆ ಬಂದೂಕದಿಂದ ಹೊಡೆಯಲು ರಚಿಸಿದ ರಂಧ್ರಗಳು ಬಾಗಿಲಿನ ಪಕ್ಕದಲ್ಲಿವೆ. ಇಡೀ ಗುಡ್ಡದ ಸುತ್ತಲೂ ಈ ಕೋಟೆ ಕಟ್ಟಿ ವೈರಿಗಳನ್ನೆದುರಿಸಲು ನೆರವಾಗುವಂತೆ ವೈರಿಗಳ ವೀಕ್ಷಣಾ ತೊಟ್ಟಿಲು, ಮಹಾದ್ವಾರವೇ ಕೆಳಗಿನಿಂದ ವೀಕ್ಷಿಸಿದರೆ ಕಾಣುವುದೇ ಇಲ್ಲ. ಈ ಒಂದು ತಾಂತ್ರಿಕತೆಯಿಂದ ಈ ಕೋಟೆ ಕಟ್ಟಲಾಗಿದೆ. ಅಂದಿನ ಮರಾಠರ ಹಿರಿಯ ಅರಸ ಶಿವಾಜಿಯು ತನ್ನ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಹಾಗೂ ಧಾರವಾಡ ಬಿಜಾಪುರ ಪ್ರಾಂತಗಳನ್ನು ಹಿಡಿತದಲ್ಲಿಟ್ಟುಕೊಂಡು ೧೬೭೪ರಲ್ಲಿ ನರಗುಂದ ಮತ್ತು ಸವದತ್ತಿ ಹತ್ತಿರವಿರುವ ಪರಸಗಡದೊಂದಿಗೆ ಈ ಗಜೇಂದ್ರಗಡ ಕೋಟೆಯನ್ನು ಕಟ್ಟಿಸಿದನೆಂಬುದು ವಿದಿತವಾಗುತ್ತದೆ. ಇದಕ್ಕೆ ಸಾಕ್ಷಿಯಾಗಿ ಕೋಟೆ ಬಾಗಿಲಿನ ಪಕ್ಕದಲ್ಲಿ ಕುದುರೆ ಏರಿದ ಪೇಶ್ವೆ ಅರಸನೊಬ್ಬನ ಚಿತ್ರವನ್ನು ಕಾಣಬಹುದು. ಆದರೆ ಕೋಟೆಯ ಬಾಗಿಲಿನ ತ್ರುಟಿತ ಶಾಸನದಿಂದ ೧೬೮೮ರಲ್ಲಿ ದಕ್ಷಿಣದಿಂದ ಗಜೇದ್ರಗಡಕ್ಕೆ ಮೊದಲು ಬಂದ ಮೇವಾಡ ದೇಶದ ರಾಣಿ 'ಪದ್ಮಿನಿ' ವಂಶಸ್ಥರಾದ ಘೋರ್ಪಡೆ ಮನೆತನದ ಬಹಿರಜಿ ಇಲ್ಲವೇ ಅವರ ಮಗನಾದ ಮಾಲೋಜಿರಾಯರು ಶಿವಾಜಿಯು ಕಟ್ಟಿದ ಕೋಟೆಯನ್ನು ಪೂರ್ಣಗೊಳಿಸಲು ಯತ್ನಿಸಿದರು. ಅದನ್ನು ಪೂರ್ತಿ ಕಟ್ಟಿಸಿದವ ದೌಲತ್ತರಾಯ ಆಗಿರಬಹುದೆಂದು ತಿಳಿದುಬರುತ್ತದೆ.

ಸು. ೧೭೭೬ರಲ್ಲಿ ಹೈದರಾಲಿಯು ಈ ಪ್ರದೇಶದ ಮೇಲೆ ದಾಳಿ ಮಾಡಿ ಈ ಕೋಟೆಯೊಂದಿಗೆ ಕೆಲವು ಪ್ರದೇಶಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ಹೈದರಾಲಿಯ 'ತರುವಾಯ ಆತನ ಮಗ ಟಿಪ್ಪುಸುಲ್ತಾನರ ವಶದಲ್ಲಿ ಸು. ೧೪-೧೫ ವರ್ಷಗಳವರೆಗೆ ಇತ್ತು. ಈ ಸಮಯದಲ್ಲಿ ಕೋಟೆಯ ಪಾರುಪತ್ಯೆಗಾಗಿ ಟೀಪು 'ರಜಬಲಿಖಾನ' ಎಂಬುವವನನ್ನು ನೇಮಿಸಿದ್ದನು. ಮುಂದೆ ಘೋರ್ಪಡೆ ಮನೆತನದೊಂದಿಗೆ ಸೆಣಸಿದಾಗ ಅನೇಕ ಪ್ರಮುಖ ದಾಖಲು ಪತ್ರಗಳೊಂದಿಗೆ ಈ ರಜಬಲಿಖಾನನು ಮರಣವನ್ನಪ್ಪಿದನು. ಆತನ ಸಮಾಧಿಯು ಹಿರೇವಾಡಿಯ ಹಿಂದೆ ಈಗಲೂ (ಗೋರಿ) ಇದೆ. ಇದನ್ನೇ ಸ್ಥಳೀಕರು ಗೋರಿ ಸಾಹೇಬನ ಗೋರಿ ಎನ್ನುತ್ತಾರೆ. ಬ್ರಿಟೀಷರು ಪೇಶ್ವೆಗಳೊಂದಿಗೆ ಟೀಪು ಸುಲ್ತಾನನ ರಾಜಧಾನಿ ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಿದಾಗ ಟೀಪು ಒಪ್ಪಂದ ಮಾಡಿಕೊಂಡ ಪ್ರಕಾರ ತನ್ನ ಆಡಳಿತದ ಅರ್ಧ ಪ್ರದೇಶದಲ್ಲಿ ಗಜೇಂದ್ರಗಡವೂ ಸೇರಿತ್ತು.

ಈ ಭಾಗವನ್ನು ಪೇಶ್ವೆಯವರಿಗೆ ನೀಡಿ ನಂತರ ಘೋರ್ಪಡೆ ಮನೆತನಕ್ಕೆ ಸೇರಿತು. ಕ್ರಿ.ಶ. ೧೭ನೇ ಶತಮಾನದಿಂದ ೧೯೪೭ನೇ ಸ್ವಾತಂತ್ರ್ಯ ಸಿಗುವವರೆಗೆ ಇದು ಘೋರ್ಪಡೆ ಮನೆತನಕ್ಕೆ ಇನಾಂ ಇತ್ತು. ನಿಜಾಮನು ಇದನ್ನು ಗೆದ್ದು ೧೭೭೫ರ ಗಜೇಂದ್ರಗಡ ಒಪ್ಪಂದದಂತೆ ಅದು ಪೇಶ್ವೆಗೆ ಸಂದು ಪುನಃ ಘೋರ್ಪಡೆಯವರಿಗೆ ೧೯೪೭ರಿಂದ ೧೯೫೨ರ ತನಕ ಸರ್ಕಾರ ಜಹಗೀರಿ ರದ್ದುಪಡಿಸುವವರೆಗೆ ಅವರ ವಶದಲ್ಲಿಯೇ ಇತ್ತು. ಇಂದು ಅಕ್ಕತಂಗಿಯರು ಎತ್ತಿ ಇಟ್ಟರೆಂದು ಹೇಳುವ ಕೋಟೆ ಒಳದ್ವಾರದ ಪಕ್ಕದ ಬೃಹದಾಕಾರವಾದ ಎರಡು ಕಲ್ಲಿನ ಮೇಲೆ ನಿಂತ ಹರವಾದ ಬಂಡೆ ಅಂದು ರಾಜರು ಕುಳಿತುಕೊಳ್ಳಲು ಪ್ರಸಂಗ ಬಂದರೆ ಮನೋರಂಜನೆಗಾಗಿ ನಿರ್ಮಿಸಿದ ಈ ಸಣ್ಣ ಸಭಾಂಗಣ ನೋಡಿದರೆ ಬೆಕ್ಕಸ ಬೆರಗಾಗುವಂತಿದೆ. ವೈರಿಗಳ ವೀಕ್ಷಣೆಗಿರುವ ತೊಟ್ಟಿಲಿನಂತೆ ವೀಕ್ಷಣಾ ಗೃಹ ಅಪರೂಪದ ಶೈಲಿಯಿಂದ ಕೂಡಿದೆ. ಮದ್ದುಗುಂಡುಗಳನ್ನಿಡುವ ಮದ್ದಿನ ಕೋಣೆ ಕುಸಿದಿದೆ. ಕಲ್ಲಿನಲ್ಲಿಯೇ ನಿರ್ಮಿಸಿದ ಬೃಹದಾಕಾರದ ಈಜುಕೊಳದ ಒಂದೆಡೆ ಮಲಗಿದ ನಂದಿ ಇನ್ನೊಂದೆಡೆ ಸಿಂಹಗಳಿದ್ದವು. ಆದರೆ ದರೋಡೆಕೋರರ ಹಾವಳಿಗೆ ಸಿಲುಕಿದ ಸಿಂಹ ಪುಡಿಯಾಗಿ ನೆಲಸಮವಾಗಿದೆ. ಕೋಟೆಯ ಒಳಭಗದ ಗುಡ್ಡದ ಮೇಲಿರುವ ನಾಲ್ಕು ಕಡೆ (ಹುಡೇವು) ಗಳನ್ನು ಹೊಂದಿ ಮಧ್ಯದಲ್ಲಿ ಬೃಹದಾಕಾರದ ಹರಾಜು ಇದೆ. ಇದು ರಾಜರ ರಕ್ಷಣಾ ಸ್ಥಳವಾಗಿರಬಹುದಾಗಿದೆ. ವೈರಿಗಳಿಂದ ರಕ್ಷಣೆ ಪಡೆಯಲು, ಪಾರಾಗಲು ಕೋಟೆಯಲ್ಲಿ ಅಲ್ಲಲ್ಲಿ ಗುಪ್ತ ಮಾರ್ಗಗಳಿವೆ. ಈ ಮಂಗ್ಯಾನ ಹೊಂಡ ಎಂಬ ಅಡಗುದಾಣ ನೆಲದಲ್ಲಿದ್ದು ಅಲ್ಲಿ ನೀರಿಗಾಗಿ ಸಣ್ಣ ಕೊಳವೂ ಇದೆ. ಮಹಾದ್ವಾರದ ಸ್ವಲ್ಪ ದೂರದಲ್ಲಿ ಸೈನಿಕರ ಬಟ್ಟೆ ಒಗೆಯಲು ನಿರ್ಮಿಸಿರುವ ಅಗಸರ ಹೊಂಡ, ಸ್ನಾನಗೈಯಲು, ದನ-ಕರುಗಳಿಗೆ ನೀರು ಕುಡಿಯಲು ಕಲ್ಲಿನಲ್ಲಿ ನಿರ್ಮಿಸಿದ ವಿಸ್ತಾರವಾದ ಆಕಳ ಹೊಂಡ ತುಂಬಾ ಮನಮೋಹಕವಾಗಿದೆ. ಕೋಟೆಯ ಪಶ್ಚಿಮ ದಿಕ್ಕಿನಲ್ಲಿ ಬೃಹದಾಕಾರದ ನಯನ ಮನೋಹರವಾದ ಈ ಕೋಟೆಯ ಒಳಾಂಗಣದ ಕಲ್ಲುಗಳನ್ನೆಬ್ಬಿಸಿ ಕಳ್ಳಸಾಗಾಣಿಕೆ ಮಾಡಲಾಗಿದೆ. ಗಜೇಂದ್ರಗಡದ ಇತಿಹಾಸದ ಮೇಲೆ ಘನವಾದ ಬೆಳಕು ಚೆಲ್ಲುವ ಈ ಕೋಟೆ ಇನ್ನು ಕೆಲವು ಕಾಲ ಗತಿಸಿದಂತೆ ಮೆಟ್ಟಿಲುಗಳೆಲ್ಲವೂ ಕುಸಿದು ಏರಲಾಗದಂತೆ ಸ್ಥಿತಿಗತಿ ಒದಗುವುದರಲ್ಲಿ

ಎಳ್ಳಷ್ಟೂ ಸಂದೇಹವೇ ಇಲ್ಲ, ಇಂಥ ಅಪರೂಪದ ಅಪೂರ್ವ ನಿಸರ್ಗ ರಮಣೀಯ ಕೋಟೆಯನ್ನು ಸಂರಕ್ಷಿಸಲು ಆಸಕ್ತರು ಗಮನಹರಿಸಬೇಕಾಗಿದೆ.

ಗಜೇಂದ್ರಗಡದಲ್ಲಿರುವ ವಿಜಯನಗರೋತ್ತರ ಶೈಲಿಯ ಇನ್ನೊಂದು ಸ್ಮಾರಕ ಮಲ್ಲೋಜಬಾವಿಯು ಪೂರ್ವಾಭಿಮುಖವಾಗಿದೆ. ಕ್ರಿ.ಶ. ಸು. ೧೮-೧೯ನೇ ಶತಮಾನದ್ದಾಗಿದೆಯೆನ್ನಲಾದ ಈ ಬಾವಿಯು ಕುಷ್ಟಗಿ ಗಜೇಂದ್ರಗಡದ ರಸ್ತೆಯಲ್ಲಿದ್ದು ಇದರ ಸ್ಥಿತಿಯು ಕನಿಷ್ಠ ಮಟ್ಟದ್ದಾಗಿದೆ. ಗಜೇಂದ್ರಗಡದ ಪ್ರದೇಶವನ್ನು ಆಳ್ವಿಕೆ ಮಾಡಿದ ಸ್ಥಳೀಯ ಘೋರ್ಪಡೆ ಮನೆತನವು ಕೃಷಿ ಉಪಯೋಗಕ್ಕಾಗಿ ಈ ಬಾವಿ ನಿರ್ಮಿಸಿದ್ದಾರೆ. ಬೃಹದಾಕಾರದ ಬಾವಿಯನ್ನು ಸು. ೪೦ ಅಡಿಗಳವರೆಗೆ ಆಳವಾಗಿ ತೋಡಲಾಗಿದೆ. ಗಟ್ಟಿಯಾದ ಕಟ್ಟಡವನ್ನು ಶಿಲ್ಪಗಳಿಂದ ಸುಂದರಗೊಳಿಸಲಾಗಿದೆ. ಪವಿತ್ರವಾದ ತೀರ್ಥದ ಕಲ್ಪನೆಯ ದೃಷ್ಟಿಯಿಂದ ಬಾವಿಯಲ್ಲಿ ಕೆಲವು ಚಿಕ್ಕಪುಟ್ಟ ಗರ್ಭಗೃಹಗಳನ್ನು ನಿರ್ಮಿಸಿದ್ದಾರೆ. ಅದರಲ್ಲಿ ಲಿಂಗಗಳನ್ನಿಡಲಾಗಿದೆ. ಬಾವಿಯಿಂದ ನೀರನ್ನು ಮೇಲಕ್ಕೆತ್ತಲು ಸು. ೩೦ ಅಡಿ ಏತವನ್ನು ನಿರ್ಮಿಸಲಾಗಿದೆ. ಗರುಡ, ವಾನರ, ಮಿಥುನ, ದ್ವಾರಪಾಲಕ ಹಾಗೂ ಮಾಳಿಗಳ ಉಬ್ಬುಶಿಲ್ಪಗಳನ್ನು ಬಾವಿಯ ಒಳಗೋಡೆಯಲ್ಲಿ ಸುತ್ತಲೂ ನಿರ್ಮಿಸಲಾಗಿದೆ. ಅಲ್ಲದೆ ಮೀನು ಹಾವು (ನಾಗ) ಹಾಗೂ ಆಮೆಯ ಉಬ್ಬು ಶಿಲ್ಪಗಳನ್ನು ಅಲ್ಲಲ್ಲಿ ಕೆತ್ತಿದ್ದಾರೆ. ಪ್ರಾಚೀನ ಪ್ರಮುಖ ಸ್ಮಾರಕವೆನಿಸಿದ ಈ ಬಾವಿಯು ನೂರಾರು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಜೀವ ಮೂಲವಾಗಿತ್ತು.[೫] ಸ್ಥಳೀಯ ನಾಗರೀಕರ ಅಲಕ್ಷ್ಯ ಹಾಗೂ ಅಂತರ್‌ಜಲ ಕುಸಿತದಿಂದ ಇಂಥ ಪ್ರಮುಖ ನೀರಿನ ಮೂಲ ಬತ್ತಿಹೋಗಿ ನಾಶದ ಸ್ಥಿತಿಗೆ ಬಂದು ತಲುಪಿದ್ದು ಸಾರ್ವಜನಿಕರು ಒಗ್ಗಟ್ಟಿನಿಂದ ಈ ಬಾವಿಗೆ ಮರುಜನ್ಮ ಕೊಡಲು ಮುನ್ನುಗ್ಗಬೇಕಾಗಿದೆ.

ಗಜೇಂದ್ರಗಡದ ಮರಿಯಮ್ಮನ ಗುಡಿ ವಿಜಯನಗರೋತ್ತರ ಶೈಲಿಯನ್ನೊಳಗೊಂಡ ಸ್ಮಾರಕವಾಗಿದೆ. ೧೮-೧೯ನೇ ಶತಮಾನದಲ್ಲಿ ನಿರ್ಮಿಸಲಾಯಿತೆನ್ನಲಾದ ಈ ಗುಡಿಯು ದಕ್ಷಿಣಾಭಿಮುಖವಾಗಿದ್ದು ಗರ್ಭಗೃಹ ಅಂತರಾಳ ಹಾಗೂ ಮಂಟಪಗಳನ್ನು ಹೊಂದಿ ಎತ್ತರದ ಕಟ್ಟೆಯ ಮೇಲಿದೆ. ಗರ್ಭಗೃಹದಲ್ಲಿ ಉದ್ಭವಮೂರ್ತಿ ಶಿಲ್ಪವಿದ್ದು ಅವನ್ನೇ ಮರಿಯಮ್ಮಳೆಂದು ಪೂಜಿಸುತ್ತಾರೆ. ಅಂತರಾಳಕ್ಕೆ ಎರಡು ಪ್ರವೇಶಗಳನ್ನು ನಿರ್ಮಿಸಲಾಗಿದೆ. ಮಂಟಪಕ್ಕೆ ಸ್ಥಳೀಯವಾದ ಶಿಲೆಗಳನ್ನು ಬಳಸಿ ಗಟ್ಟಿಗೊಳಿಸಲಾಗಿದೆ. ದೇವಾಲಯಕ್ಕೆ ಶಿಖರವಿದ್ದು ಅದು ದ್ರಾವಿಡ ಮಾದರಿಯದ್ದಾಗಿದೆ. ಶಿಖರದಲ್ಲಿ ಉಬ್ಬುಶಿಲ್ಪಗಳನ್ನು ಅಳವಡಿಸಲಾಗಿದೆ.[೬]

ಗಜೇಂದ್ರಗಡದ ಬೆಟ್ಟದಲ್ಲಿ ಅನೇಕ ಗುಹೆಗಳಿದ್ದು ಸಂಗಪ್ಪನ ಗುಹೆಯು ಪ್ರಾಚೀನ ಸ್ಮಾರಕವಾಗಿದೆ. ಈ ಸಂಗಮೇಶ್ವರ ಗವಿಯನ್ನು ನೋಡಲು ಪೂರ್ವಕ್ಕೆ ಸು. ೧ ಕಿ.ಮೀ. ದೂರ ಹೋದರೆ ಬೃಹದಾಕಾರದ ನಂದಿಯೊಂದು ಕಣ್ಣಿಗೆ ಬೀಳುತ್ತದೆ. ಇದಕ್ಕೆ ಆನೆಗುಂದಿ ಬಸವಣ್ಣ ಎಂದು ಕರೆಯಲಾಗಿದೆ. ಆನೆಗುಂದಿ ಶ್ರೀ ಕಾಲಕಾಲೇಶ್ವರ ಕ್ಷೇತ್ರ ಕಟ್ಟಿಸಿದ್ದರ ಸವಿನೆನಪಿಗಾಗಿ ಈ ನಂದಿಯನ್ನು ಕೆತ್ತಿಸಿದನೆನ್ನಲಾಗಿದೆ.

ಕಣವಿಯಲ್ಲಿ ಶ್ರೀ ವೀರಭದ್ರೇಶ್ವರ ಬಸವೇಶ್ವರ ದೇವರ ದರ್ಶನ ಪಡೆಯಬಹುದಾಗಿದೆ. ಇಲ್ಲಿ ದೊಡ್ಡದೊಂದು ನೀರಿನ ಹೊಂಡವಿದೆ. ಈ ಕಣವಿಯಿಂದ ಸು. ೩ ಕಿ.ಮೀ. ಬೆಟ್ಟದಲ್ಲಿ ನಡೆಯುತ್ತ ಹೋದರೆ 'ಶ್ರೀ ಗವಿ ಸಂಗಮೇಶ್ವರ' ಕ್ಷೇತ್ರ ಕಾಣುತ್ತದೆ. ಬೆಟ್ಟದ ಗುಹೆಯಲ್ಲಿ ಸಂಗಮೇಶ್ವರ ಲಿಂಗವಾಗಿ ನೆಲಸಿದ್ದಾನೆ. ಸುತ್ತಮುತ್ತ ಹಚ್ಚ ಹಸಿರಾದ ಪರ್ವತವಿದ್ದು ಕೆಳಗಿನ ತಗ್ಗು ಪ್ರದೇಶವನ್ನು ಮಲಯವ್ವನ ಕೊಳ್ಳವೆಂದು ಕರೆಯುತ್ತಾರೆ. ಸಂಗಮೇಶ ಎಂಬ ಋಷಿ ಆರಾಧಕನು ವಾಸಿಸಿದ ಗುಹೆಯೇ ಗವಿಸಂಗಪ್ಪನ ಕೊಳ್ಳವೆಂದು ಗ್ರಾಮ್ಯಭಾಷೆಯಲ್ಲಿ ಹೇಳಲಾಗಿದೆ.

ಆಕರಸೂಚಿ

೧. ಮಾತೃಶ್ರೀ ಅಭಿನಂದನ ಗ್ರಂಥ, ದಕ್ಷಿಣ ಕಾಶಿ, ಕಾಲಕಾಲೇಶ್ವರ, ಡಾ. ಮಲ್ಲಿಕಾರ್ಜುನ ಕುಂಬಾರ, ಪುಟ ೫೯.

೨. ಗಜೇಂದ್ರಗಡ ನಡೆದು ಬಂದ ದಾರಿ, ಶಂಕರಪ್ಪ ಮುದೇನೂರ, ಪುಟ ೬.

೩. ಕರ್ನಾಟಕ ದೇವಾಲಯ ಕೋಶ, ಗದಗ ಜಿಲ್ಲೆ, ಕವಿವಿ ಹಂಪಿ, ಪುಟ ೧೯೩.

೪. ಗಜೇಂದ್ರಗಡ ನಡೆದು ಬಂದ ದಾರಿ.

೫. ಕರ್ನಾಟಕ ದೇವಾಲಯ ಕೋಶ, ಗದಗ ಜಿಲ್ಲೆ, ಕವಿವಿ ಹಂಪಿ, ಪುಟ ೨೦೪.

೬ ಅದೇ ಪುಟ ೨೦೨.

೧೨೨

"ಗಂಗಾವತಿ ಪರಿಸರದ ಸ್ಮಾರಕ ಮತ್ತು ಶಿಲ್ಪಗಳು"

ಗೀತಾ ಪೋಲೀಸ ಪಾಟೀಲ್*

ಗಂಗಾವತಿಯು ಕೊಪ್ಪಳ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದೆ. ಈ ಪರಿಸರದಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ದೊರೆತ ಹಲವು ದೇವಾಲಯ, ಶಿಲ್ಪ, ವೀರಗಲ್ಲು, ಕೆರೆಗಳ ಮೇಲೆ ಬೆಳಕು ಬೀರುವುದು ಅಷ್ಟೇ ಅಲ್ಲ ಅವುಗಳ ವಿಶಿಷ್ಟತೆಯನ್ನು ಗುರುತಿಸಿ, ಅವುಗಳ ಮಹತ್ವವನ್ನು ಪ್ರಸ್ತುತ ಪ್ರಬಂಧದಲ್ಲಿ ವಿವೇಚಿಸಲಾಗಿದೆ.

ಶಿವಲಿಂಗನ ಗುಡಿ

ತಾವರಗೇರೆಯ ರಾಯರ ಕೆರೆಯ ಪಶ್ಚಿಮಕ್ಕೆ ಅರ್ಧ ಕಿ. ಮೀ. ದೂರದಲ್ಲಿ ಡಾ. ಶ್ರೀನಿವಾಸಗೌಡ ಮೆದಿಕೇರಿ ಯವರ ಹೊಲದಲ್ಲಿ ಪೂರ್ವಭಿಮುಖವಾಗಿರುವ ಈ ಗುಡಿಯು ವಿಜಯನಗರ ಕಾಲದ ಶೈಲಿಯನ್ನು ಹೊಂದಿದೆ. ಸದ್ಯದ ಸ್ಥಿತಿಯಲ್ಲಿ ಪಾಳುಬಿದ್ದಿದ್ದು, ಅಲ್ಲಲ್ಲಿ ಶಿಥಿಲವಾಗಿದೆ. ಬಿಳಿ ಕಣಶಿಲೆ ಮತ್ತು ಗಾರೆಗಳಿಂದ ದೇವಾಲಯವನ್ನು ನಿರ್ಮಿಸಲಾಗಿದೆ. ದೇವಾಲಯವು ತಲವಿನ್ಯಾಸದಲ್ಲಿ ಗರ್ಭಗೃಹ ಮತ್ತು ಮುಖಮಂಟಪಗಳನ್ನು ಹೊಂದಿದೆ. ಊರ್ಧ್ವ ವಿನ್ಯಾಸದಲ್ಲಿ ಅಧಿಷ್ಠಾನ, ಭಿತ್ತಿ, ಪ್ರಸ್ತರ ಭಾಗಗಳಿವೆ.

ಮುಖಮಂಟಪವು ಮೂರು ಅಂಕಣಗಳ ಆಯತಾಕಾರ ತಲವಿನ್ಯಾಸದಲ್ಲಿದ್ದು, ಮುಂಬದಿಯಲ್ಲಿ ತೆರೆದಿದೆ. ಮುಖಭಾಗದ ನಾಲ್ಕು ಕಂಬಗಳಲ್ಲಿ ಮಧ್ಯದ ಎರಡು ಸ್ವತಂತ್ರ (ಬಿಡಿ) ಕಂಬಗಳು. ಉಳಿದೆರಡು ಬದಿಯ ಗೋಡೆಗಳಿಗೆ ಹೊಂದಿಕೊಂಡಂತೆ ಇವೆ. ಬಿಡಿ ಕಂಬಗಳು ದ್ವಿಕಾಂಡ ಶೈಲಿಯ ವಿಜಯನಗರ ವಿಶಿಷ್ಟ ಪ್ರಕಾರದವಾಗಿವೆ. ಪ್ರಧಾನ ಕಾಂಡದಲ್ಲಿ ಕೆಳಗೆ, ಮಧ್ಯ ಮತ್ತು ಮೇಲೆ ಅಸಮ ಮೂರು ಚೌಕ ಭಾಗಗಳಿವೆ. ಇದಕ್ಕೆ ಹೊಂದಿಕೊಂಡಿರುವ ಉಪಕಾಂಡದಲ್ಲಿ ಉಪಕಂಬಗಳಿವೆ. ಈ ರೀತಿಯ ಕಂಬಗಳು ವಿಜಯನಗರ ವಾಸ್ತು ಕಲೆಯ ವಿಶಿಷ್ಟ ಕೊಡುಗೆಗಳಾಗಿವೆ. ಕೊಪ್ಪಳ ಜಿಲ್ಲೆಯ ಹಿರೇಜಂತಕಲ್, ಪಂಪಾವಿರೂಪಾಕ್ಷೇಶ್ವರ, ಕನಕಗಿರಿಯ ಕನಕಗಿರಿನಾಥ ಮತ್ತು ಕಲ್ಲೂರಿನ ಕಲ್ಲಿನಾಥೇಶ್ವರ ದೇವಾಲಯಗಳನ್ನು ಹೊರತುಪಡಿಸಿದರೆ, ಪ್ರಸ್ತುತ ತಾವರಗೇರಾದ ಈ ದೇವಾಲಯದಲ್ಲಿ ಮಾತ್ರ ಕಂಡುಬರುತ್ತವೆ. ಉಳಿದ ದೇವಾಲಯಗಳಿಗಿಂತ ಇದು ತೀರಾ ಚಿಕ್ಕದೇವಾಲಯವಾಗಿದ್ದರೂ ಇಲ್ಲಿ ಆ ರೀತಿ ಕಂಬಗಳ ರಚನೆ ದೇವಾಲಯದ ಸ್ಥಾನಿಕ ಮಹತ್ವವನ್ನು ಬಿಂಬಿಸುವಂತಹದು. ಈ ಕಂಬಗಳ ಮೇಲೆ ಪುಷ್ಪಬೋಧಿಗೆಗಳಿವೆ.

ಸಭಾಮಂಟಪದ ಮಧ್ಯದ ಛತ್ತು ಕಮಲಾಕೃತಿಯ ಭುವನೇಶ್ವರಿಯಾಗಿದ್ದು, ಅದರಲ್ಲಿ ಕೋಲಾಟವಾಡುವವರ ಶಿಲ್ಪಗಳಿರುವುದು ಗಮನಾರ್ಹ ಸಂಗತಿ. ಉಳಿದಂತೆ ಎರಡು ಅಂಕಣಗಳಲ್ಲಿ ಮಟ್ಟಸಗೊಳಿಸಿದ ಚಪ್ಪಡಿಗಳ ಛತ್ತು ಇದೆ. ಸಭಾಮಂಟಪದಲ್ಲಿ ಗರ್ಭಗೃಹದ ದ್ವಾರಬಂಧದ ಇಕ್ಕೆಲ ಭಿತ್ತಿಗಳಲ್ಲಿ ದೇವಕೋಷ್ಠಗಳಿವೆ. ಇವುಗಳಲ್ಲಿ ಸದ್ಯ ಯಾವುದೇ ದೇವತಾ ಶಿಲ್ಪಗಳಿರುವುದಿಲ್ಲ.

ಗರ್ಭಗೃಹದ ಬಾಗಿಲು ಲತಾಶಾಖ, ರತ್ನಶಾಖಗಳನ್ನು ಹೊಂದಿದೆ. ಲಲಾಟದಲ್ಲಿ ಗಣೇಶನ ಬಿಂಬವಿದೆ. ಬಾಗಿಲ ಮೇಲೆ ಎರಡೂ ಮೂಲೆಗಳಲ್ಲಿ ಚಾಮರಧಾರಿಯರ ಶಿಲ್ಪಗಳಿರುವುದು ವಿಶೇಷವೆನಿಸುತ್ತದೆ. ಸಾಮಾನ್ಯವಾಗಿ ದ್ವಾರಬಂಧದ ಮೇಲ್ಭಾಗದಲ್ಲಿ ಇಂಥ ಶಿಲ್ಪಗಳು ಹೆಚ್ಚಾಗಿ ಇರಲಾರವು. ಒಂದು ಅಂಕಣದ ಗರ್ಭಗೃಹದಲ್ಲಿ ಸದ್ಯ ಶಿವಲಿಂಗ ಇಲ್ಲ. ಹಿಂದಿನ ಭಿತ್ತಿಯಲ್ಲಿ ಮುಂಚಾಚಿದ ಮಾಡು (ಕೈಪಿಡಿ) ಮತ್ತು ಬಲಬದಿಯ ಭಿತ್ತಿಯಲ್ಲಿ ಉಬ್ಬುಶಿಲ್ಪಗಳಿದ್ದು ಸ್ಪಷ್ಟವಾಗಿಲ್ಲ.

ದೇವಾಲಯದ ಅಧಿಷ್ಠಾನವು ಉಪಾನ, ಗಳ ಮತ್ತು ಕಪೋತಗಳನ್ನು ಹೊಂದಿದ್ದು, ಸರಳ ವಿನ್ಯಾಸದ ಮಂಚಬಂಧ ಶೈಲಿಯಲ್ಲಿದೆ. ಭಿತ್ತಿಯನ್ನು ಮಟ್ಟಸಗೊಳಿಸಿದ ಮಧ್ಯಮ ಗಾತ್ರದ ಅಳತೆಕಲ್ಲುಗಳಿಂದ ನಿರ್ಮಿಸಲಾಗಿದೆ. ಭಿತ್ತಿಯ ಮೇಲೆ ಅಲ್ಲಲ್ಲಿ ಸಾಮಾನ್ಯವಾಗಿ ವಿಜಯನಗರ ವಾಸ್ತುಶೈಲಿಯ ದೇವಾಲಯಗಳಲ್ಲಿ ಕಂಡುಬರುವ ಶಿವಲಿಂಗಕ್ಕೆ ಹಾಲು ಕರೆಯುತ್ತಿರುವ

* ಸಂಶೋಧನಾ ವಿದ್ಯಾರ್ಥಿನಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿವಿ, ಹಂಪಿ, ವಿದ್ಯಾರಣ್ಯ.

ಹಸು, ಶಿವಲಿಂಗ, ಮಂಗ, ನವಿಲು, ಆನೆ ಮತ್ತು ಮಿಥುನ ಶಿಲ್ಪಗಳು ಇವೆ. ಉಳಿದಂತೆ ಭಿತ್ತಿಯು ಹೆಚ್ಚಿನ ಅಲಂಕರಣೆಯಿಲ್ಲದೆ ಸರಳವಾಗಿದೆ.

ಪ್ರಸ್ತರವನ್ನು ಚಿಕ್ಕ ಚಿಕ್ಕ ಕಲ್ಲು ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಮುಖಮಂಟಪದ ಮುಂಬದಿಯಲ್ಲಿ ಇಳಿಜಾರಾದ ಮುಂಜೂರು (ಮಾಡಿನಲ್ಲಿ ಮುಂದಕ್ಕೆ ಇಳಿಜಾರಾಗಿ ಕೂಡಿಸಿದ ಶಿಲಾ ಹಲಗೆ) ಇದೆ. ಇದರ ಮೇಲ್ಬದಿಯಲ್ಲಿ (ಪ್ರಸ್ತರದಲ್ಲಿ) ಶಾಲ, ಕೂಟಗಳ ಮಾದರಿಯಂತೆ ಮಧ್ಯದಲ್ಲಿ ಚಿಕ್ಕಗೂಡು ಅದರ ಎರಡೂ ಬದಿಯಲ್ಲಿ ಕೊನೆಗೆ ಕಟ್ಟೆಗಳನ್ನು ನಿರ್ಮಿಸಲಾಗಿದ್ದು ಅವುಗಳ ಮೇಲೆ ಭಗ್ನವಾಗಿರುವ ನಂದಿಯು ಗಾರೆ ಶಿಲ್ಪಗಳಿವೆ. ಈ ಶಾಲಕೂಟ ಮಾದರಿಗಳ ಮಧ್ಯದಲ್ಲಿ ಸಾಲಾಗಿ ಕಂಗೂರಾಕೃತಿಗಳಿವೆ. ಈ ರೀತಿಯ ಪ್ರಸ್ತರದ ವಿನ್ಯಾಸವು ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಬಿಂಬಿಸುತ್ತದೆನ್ನಬಹುದು. ಪ್ರಸ್ತರವು ಬಲಬದಿ ಹಾಗೂ ಹಿಂಭಾಗದಲ್ಲಿ ಶಿಥಿಲಗೊಂಡಿದೆ. ದೇವಾಲಯಕ್ಕೆ ಶಿಖರವಿಲ್ಲ.

ಶಿವ ದೇವಾಲಯ

ಹಳೇಶಿವಪುರದ ಶಿವ ದೇವಾಲಯವು ಸೋಮೇಶ್ವರ ಬೆಟ್ಟದ ಕೆಳಭಾಗದ ಗದ್ದೆಯಲ್ಲಿದ್ದು, ಪೂರ್ವಾಭಿಮುಖವಾಗಿದೆ. ವಿಜಯನಗರ ಶೈಲಿಯನ್ನು ಹೊಂದಿರುವ ದೇವಾಲಯವು ಸದ್ಯದ ಸ್ಥಿತಿಯಲ್ಲಿ ಶಿಥಿಲಗೊಂಡಿದೆ.

ಈ ದೇವಾಲಯವು ಶಿವಪುರದ ಮುಖ್ಯ ರಸ್ತೆಯ ಬಲಬದಿಗೆ ಸೋಮೇಶ್ವರ ಬೆಟ್ಟದ ಕೆಳಭಾಗದಲ್ಲಿ ಪೂರ್ವಾಭಿಮುಖವಾಗಿರುವ ಈ ದೇವಾಲಯವು ಮುಖಮಂಟಪ ಮತ್ತು ಗರ್ಭಗೃಹ ಹೊಂದಿದ್ದು, ಆದರೆ ಪ್ರಸ್ತುತ ಮುಖಮಂಟಪ ನಾಶ ಹೊಂದಿದ್ದು, ಗರ್ಭಗೃಹ ಮಾತ್ರ ಉಳಿದಿದೆ. ಗರ್ಭಗೃಹ ಗೋಡೆಗಳು ಶಿಥಿಲಗೊಂಡಿದ್ದು, ಛತ್ತು ಬಿದ್ದು ಹೋಗಿದೆ. ಗರ್ಭಗೃಹದ ಅಧಿಷ್ಠಾನವು ಸುಂದರವಾಗಿದ್ದು, ಉಪಾನ, ತ್ರಿಪಟ ಕುಮುದಾ ಮತ್ತು ಕಪೋತಭಾಗಗಳಿವೆ. ಭಿತ್ತಿ ಸರಳವಾಗಿದ್ದು, ಅದರಲ್ಲಿ ಉಬ್ಬು ಸ್ತಂಭಗಳ ಅಲಂಕರಣೆ ಇವೆ. ಪ್ರವೇಶ ದ್ವಾರವು ಸರಳವಾಗಿದೆ. ಇದಕ್ಕೆ ಲಲಾಟ ಬಿಂಬ ಇರುವುದಿಲ್ಲ. ಗರ್ಭಗೃಹದ ಒಳ ಭಾಗದಲ್ಲಿ ಶಿಲ್ಪ ಇರುವಿದಿಲ್ಲ. ದೇವಾಲಯದ ಮುಂಬದಿಯಲ್ಲಿ ಭಗ್ನಗೊಂಡ ದೊಡ್ಡ ನಂದಿಯ ಶಿಲ್ಪವಿದೆ.

ಬಸವಣ್ಣ ದೇವಾಲಯ

ಹಳೇ ಶಿವಪುರದ ರಸ್ತೆಯಿಂದ ೧ ಕಿ.ಮೀ. ದೂರದಲ್ಲಿದ್ದು, ಗಂಗರಾಜ ಅವರ ಗದ್ದೆಯಲ್ಲಿದೆ. ಇದು ದಕ್ಷಿಣಾಭಿಮುಖವಾಗಿದ್ದು, ಬಹುಮಟ್ಟಿಗೆ ಶಿಥಿಲವಾಗಿದೆ. ಕೇವಲ ನವರಂಗ ಮಾತ್ರ ಉಳಿದಿದೆ. ಈ ದೇವಾಲಯಕ್ಕೆ ದಕ್ಷಿಣ ದಿಕ್ಕಿಗೆ ಪ್ರವೇಶದ್ವಾರ ಇದೆ. ಈ ನವರಂಗದಲ್ಲಿ ನಾಲ್ಕು ಮೂಲೆಕಂಬಗಳು, ಎಂಟು ಅರ್ಧಕಂಬಗಳು, ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಮಧ್ಯದ ಒಂದು ಕಂಬದಲ್ಲಿ ಅಂಜಲಿ ಮುದ್ರೆಯಲ್ಲಿರುವ ಅಲಂಕಾರ ಭೂಷಿತ ಸ್ತ್ರೀ ಶಿಲ್ಪವಿದೆ. ನವರಂಗದ ದ್ವಾರಬಂಧವು ಸರಳವಾಗಿದ್ದು, ಲಲಾಟ ಬಿಂಬದಲ್ಲಿ ಪುಷ್ಪಾಕೃತಿ ಇದೆ. ಸ್ತಂಭಗಳ ಕೆಳಗೆ, ಮಧ್ಯ, ಮೇಲೆ ಅಸಮವಾದ ಚೌಕಭಾಗಗಳನ್ನು ಹೊಂದಿದೆ. ಅವುಗಳ ಮಧ್ಯದಲ್ಲಿ ಅಷ್ಟಮುಖಗಳ ಪಟ್ಟಿಕೆಗಳಿವೆ.

ನವರಂಗದ ಹಿಂಬದಿಯ ಮೂಲೆಯ ಒಂದು ಭಿತ್ತಿಯು ನಾಶವಾಗಿದೆ. ಉಳಿದ ಭಿತ್ತಿಯನ್ನು ಚಿಕ್ಕ ಚಿಕ್ಕ ಕಲ್ಲುಗಳಿಂದ ನಂತರ ಕಾಲದಲ್ಲಿ ಕಟ್ಟಲಾಗಿದೆ. ನವರಂಗದ ಮಧ್ಯದಲ್ಲಿ ತಕ್ಕಮಟ್ಟಿಗೆ ದೊಡ್ಡ ಕಪ್ಪು ಶಿಲೆಯ ನಂದಿಯ ಶಿಲ್ಪವಿದೆ. ಈ ನಂದಿ ಶಿಲ್ಪ ಕುಳಿತ ಭಂಗಿಯಲ್ಲಿದೆ. ಕೊರಳಲ್ಲಿ ಅಗಲವಾದ ಕಂಠಹಾರ, ಘಂಟೆಯ ಗೆಜ್ಜೆ ಸರ, ಬೆನ್ನ ಮೇಲೆ ಅಲಂಕರಣವನ್ನು ಮಾಡಲಾಗಿದೆ. ಅದರ ಮುಖ ಮತ್ತು ಕೊಡುಗಳು ಭಗ್ನಗೊಂಡಿವೆ. ಈ ದೇವಾಲಯದ ಹತ್ತಿರವೇ ಚಿಕ್ಕ ನಂದಿಯ ಶಿಲ್ಪವಿದೆ.

ಚಂದ್ರಮೌಳೇಶ್ವರ ದೇವಾಲಯ

ಹನುಮನಹಳ್ಳಿದಿಂದ ೧ ಕಿ.ಮೀ. ದೂರದಲ್ಲಿರುವ ಋಷ್ಯಮೂಕ ಪರ್ವತದಲ್ಲಿ ಈ ದೇವಾಲಯವಿದೆ. ಗರ್ಭಗೃಹ, ಅಂತರಾಳ ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಚಂದ್ರಮೌಳೇಶ್ವರ ಲಿಂಗವಿದೆ. ಸಭಾಮಂಟಪದ ಮುಂಭಾಗದಲ್ಲಿ ಪ್ರವೇಶವಿರದೆ ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಇರುವುದು ಇಲ್ಲಿಯ ವೈಶಿಷ್ಟ್ಯ. ಸಭಾಮಂಟಪದ ಕಂಬಗಳು ಬೃಹತ್ ಗಾತ್ರದಿಂದ ಕೂಡಿದ್ದು. ಈ ಕಂಬಗಳಲ್ಲಿ ಹೂ, ಬಳ್ಳಿ, ನಂದಿ ಶಿಲ್ಪಗಳಿವೆ. ಇವು ಪೀಠ, ೪-೮-೪ ಪಟ್ಟಿಕೆಗಳ ಕಾಂಡ, ಕಳಶ, ಫಲಕ ಹಾಗೂ ಪುಷ್ಪ ಬೋಧಿಗೆಗಳನ್ನು ಹೊಂದಿದೆ. ದಕ್ಷಿಣ ಬಾಗಿಲ ಮುಂದೆ ಪ್ರಾಯಶಃ ಮುಖ ಮಂಟಪವಿದ್ದಂತೆ ತೋರುತ್ತದೆ. ಆದರೆ ಈ ಭಾಗ ಸಂಪೂರ್ಣ ನೆಲಕಚ್ಚಿದೆ. ಮುಖಮಂಟಪದ ಕಂಭಗಳಲ್ಲಿ ಗಣೇಶ, ಶಿವಲಿಂಗಕ್ಕೆ ಹಾಲು

ಕರೆಯುತ್ತಿರುವ ಹಸು, ಋಷಿ, ನೃತ್ಯ ಮಾಡುತ್ತಿರುವ ಸ್ತ್ರೀ, ಹುಲಿಯ ಜೊತೆ ಬೇಟೆ ಮಾಡುತ್ತಿರುವ ಮನುಷ್ಯ, ವಾದ್ಯಗಳನ್ನು ನುಡಿಸುತ್ತಿರುವ ವಾದ್ಯಕಾರರು, ನಿಂತಿರುವ ಆನೆ, ಚಲಿಸುತ್ತಿರುವ ಆನೆ, ಮನುಷ್ಯನನ್ನು ತುಳಿಯುತ್ತಿರುವ ಆನೆ, ಕಬ್ಬನ್ನು ತಿನ್ನುತಿರುವ ಆನೆ, ಮುಂತಾದ ಉಬ್ಬು ಶಿಲ್ಪಗಳಿವೆ.

ಈ ದೇವಾಲಯದ ಉತ್ತರದ ಪ್ರವೇಶದ್ವಾರಕ್ಕೆ ಶೈವ ದ್ವಾರಪಾಲಕರು ಇದ್ದು, ಈ ದ್ವಾರಬಾಗಿಲು ದ್ವಾರಶಾಖೆಗಳನ್ನು ಹೊಂದಿದೆ. ದೇವಾಲಯದ ಅಧಿಷ್ಠಾನದಲ್ಲಿ ಉಪಾನ, ಕುಮುದ, ಕಪೋತಗಳ ಸ್ಪಷ್ಟವಾಗಿ ಗೋಚರಿಸುತ್ತದೆ. ಭಿತ್ತಿಯು ವಿಜಯನಗರದ ಆರಂಭಿಕ ದೇವಾಲಯಗಳಂತೆ ಇದೆ. ಭಿತ್ತಿಯಲ್ಲಿ ಎರಡು ಕಂಭಗಳ ಮಧ್ಯೆ ದೇವಕೋಷ್ಠಕಗಳು, ಕುಂಭ ಪಂಜರಗಳನ್ನು ಕೆತ್ತಲಾಗಿದೆ. ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಕುಂಭ ಪಂಜರಗಳು ಕಪೋತದವರೆಗೂ ಮುಂಚಾಚಿವೆ. ಕಪೋತದಲ್ಲಿ ಗೂಡು ಮತ್ತು ಕೀರ್ತಿಮುಖಗಳ ಅಲಂಕರಣೆಗಳಿವೆ. ದೇವಾಲಯದ ಪೂರ್ವಕ್ಕೆ ಜಾಲಂಧ್ರವಿದೆ. ಗರ್ಭಗೃಹದ ಮೇಲೆ ಶಿಥಿಲವಾಗಿರುವ ದ್ರಾವಿಡ ಮಾದರಿಯ ಶಿಖರವಿದೆ. ಅದನ್ನು ಇಟ್ಟಿಗೆ, ಗಾರೆಯಿಂದ ನಿರ್ಮಿಸಲಾಗಿದೆ. ವಾಸ್ತುಶಿಲ್ಪದ ಆಧಾರದ ಮೇಲೆ ಈ ದೇವಾಲಯ ೧೫ನೇ ಶತಮಾನದ ಆರಂಭಿಕ ದಶಕದೆಂದು ಗುರುತಿಸಲಾಗಿದೆ.

ಆಂಜನೇಯ ದೇವಾಲಯ

ಹುಲಿಹೈದರ ಗ್ರಾಮವು ಕನಕಗಿರಿಯಿಂದ ೧೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಆಂಜನೇಯ ದೇವಾಲಯವು ಗ್ರಾಮದ ಮಧ್ಯದಲ್ಲಿ ಪೂರ್ವಾಭಿಮುಖವಾಗಿದ್ದು, ವಿಜಯನಗರ ಶೈಲಿಯನ್ನು ಹೊಂದಿದೆ. ಈ ದೇವಾಲಯವು ಗರ್ಭಗೃಹ ಮತ್ತು ಮುಖಮಂಟಪವನ್ನು ಹೊಂದಿದೆ. ಊರ್ಧ್ವ ವಿನ್ಯಾಸದಲ್ಲಿ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಸ್ಥೂಪಿ, ಶಿಖರವನ್ನು ಹೊಂದಿದೆ. ಭಿತ್ತಿಯನ್ನು ಶಿಲೆಗಳಿಂದ ಕಟ್ಟಲಾಗಿದೆ. ಪ್ರಸ್ತರದ ಮುಂಭಾಗವನ್ನು ಇಳಿಜಾರಾದ ಮುಂಜೂರು, ಇಟ್ಟಿಗೆ ಗಾರೆಯಿಂದ ನಿರ್ಮಿತವಾಗಿ ಕಂಗುರಾಕೃತಿಗಳ ಅಲಂಕರಣೆ ಇದೆ. ಶಿಖರವು ಇಟ್ಟಿಗೆ, ಗಾರೆಯ ನಿರ್ಮಾಣದ, ಏಕಸ್ಥಲ ದ್ರಾವಿಡ ಮಾದರಿ ಶಿಖರವು ಗರ್ಭಗೃಹದ ಉದ್ದಗಲಕ್ಕೂ ವ್ಯಾಪಿಸಿದೆ. ಸ್ಥೂಪಿಯು ವೃತ್ತಾಕಾರದಲ್ಲಿದೆ. ಈ ದೇವಾಲಯದ ಮುಂದಿನ ಜಗತಿಯ ಮೇಲೆ ಗರುಡ ಸ್ತಂಭವಿದೆ. ಈ ದೇವಾಲಯದ ಬಲಭಾಗದಲ್ಲಿ ಬಾವಿ ಇದೆ. ಈ ದೇವಾಲಯದ ಪಕ್ಕದಲ್ಲಿ ಶಿವಲಿಂಗ, ನಂದಿ, ನಾಗರ ಕಲ್ಲು, ಇವೆ.

ಆಂಜನೇಯ ದೇವಾಲಯ

ಮುಷ್ಟೂರು ಗಂಗಾವತಿಯಿಂದ ೨೦ ಕಿ.ಮೀ. ದೂರದಲ್ಲಿರುವ ಈ ಗ್ರಾಮದಲ್ಲಿ ಆಂಜನೇಯ ದೇವಾಲಯ ಮತ್ತು ಬಂದೂಕು ವೀರಗಲ್ಲುಗಳು ಕಂಡುಬಂದಿವೆ. ಹಳೇ ಮುಷ್ಟೂರಿನಲ್ಲಿರುವ ಈ ದೇವಾಲಯವು ಗರ್ಭಗೃಹ, ತೆರೆದ ಸಭಾಮಂಟಪವನ್ನು ಹೊಂದಿದೆ. ತೆರೆದ ಸಭಾಮಂಟಪದಲ್ಲಿ ಎರಡು ಮೂಲೆ ಕಂಭಗಳು, ಆರು ಅರ್ಧಕಂಭಗಳಿವೆ. ಗರ್ಭಗೃಹದ ಪ್ರವೇಶದ್ವಾರವು ಸಾದಾ ಕೆತ್ತನೆಯನ್ನು ಹೊಂದಿದೆ. ಗರ್ಭಗೃಹದಲ್ಲಿ ಆಂಜನೇಯನ ಉಬ್ಬುಶಿಲ್ಪವಿದೆ. ಗರ್ಭಗೃಹ, ಸಭಾಮಂಟಪದ ಛತ್ತುಗಳು ಸಾದಾ ಕೆತ್ತನೆಯಿಂದ ಕೂಡಿವೆ. ದೇವಾಲಯವನ್ನು ಕಣಶಿಲೆಯಿಂದ ನಿರ್ಮಿಸಲಾಗಿದೆ. ಇದರ ಮುಂಭಾಗದ ಕಟ್ಟೆಯ ಮೇಲೆ ಗರುಡಗಂಬವಿದೆ. ಈ ದೇವಾಲಯದ ಹತ್ತಿರ ದೊಡ್ಡ ಬಂಡೆಯ ಮೇಲೆ ಗಜಲಕ್ಷ್ಮೀಯ ಉಬ್ಬು ಶಿಲ್ಪವಿದೆ.

ಬಂದೂಕು ವೀರಗಲ್ಲು

ಮುಷ್ಟೂರಿನ ಆಂಜನೇಯ ದೇವಾಲಯದ ಹತ್ತಿರದಲ್ಲೇ ಬಂದೂಕು ವೀರಗಲ್ಲು ಇದೆ. ಈ ಶಿಲ್ಪವು ಕಪ್ಪು ಕಣಶಿಲೆಯಲ್ಲಿದೆ. ವೀರನು ಚಲಿಸುತ್ತಿರುವ ಭಂಗಿಯಲ್ಲಿದ್ದು, ತನ್ನ ಬಲಗೈಯಲ್ಲಿ ಕತ್ತಿ ಮತ್ತು ಎಡಗೈಯಲ್ಲಿ ಬಂದೂಕನ್ನು ಹಿಡಿದುಕೊಂಡಿದ್ದಾನೆ. ವೀರನ ಕೊರಳಲ್ಲಿ ಸರಗಳಿವೆ. ಸೊಂಟಕ್ಕೆ ಸೊಂಟದ ಪಟ್ಟಿ ಕಟ್ಟಿಕೊಂಡಿದ್ದಾನೆ. ವೀರನ ಮೇಲ್ಭಾಗದಲ್ಲಿ ಸೂರ್ಯಚಂದ್ರರನ್ನು ಖಂಡರಿಸಲಾಗಿದೆ.

ಸೂರ್ಯ ಶಿಲ್ಪ

ಗಂಗಾವತಿ ತಾಲೂಕಿನ ಮುಕ್ಕುಂಪಿಯ ಹಳೇ ಗ್ರಾಮದಲ್ಲಿ ದೊರೆತಿರುವ ಸೂರ್ಯನ ಶಿಲ್ಪವು ತುಂಬಾ ವಿಶಿಷ್ಟವಾಗಿದ್ದು. ಸೂರ್ಯನು ಸಮಭಂಗಿಯಲ್ಲಿ ನಿಂತಿದ್ದು, ಎರಡು ಕೈಗಳಲ್ಲಿ ಪದ್ಮಗಳನ್ನು ಹಿಡಿದಿದ್ದು ಎರಡು ಕೈಗಳು ಮುರಿದಿವೆ. ಸೂರ್ಯನ ತಲೆಯ ಮೇಲೆ ಕೀರಿಟ ಮುಕುಟ, ಭುಜಕೀರ್ತಿ, ಭುಜಹಾರ, ಮಣಿಸರ, ಉದರಬಂಧ, ಯಜ್ಞೋಪವೀತ,

ತೋಳ್ಬಂದಿ, ಸೊಂಟಪಟ್ಟಿ, ಕಾಲ್ಕಡಗ, ಕಚ್ಚೆ ರೀತಿಯಲ್ಲಿ ಧೋತಿಯನ್ನು ಸಹ ಧರಿಸಿದ್ದಾನೆ. ತಲೆಯ ಹಿಂದೆ ಪ್ರಭಾವಳಿ ಇದೆ. ಪ್ರಭಾವಳಿಯ ಕೆಳಭಾಗ ಅಥವಾ ಸೂರ್ಯನ ಎರಡು ಕಾಲುಗಳ ಬದಿಯಲ್ಲಿ ಚಾಮರಾಧಾರಿಗಳಾದ ಉಷಾ, ಪ್ರತ್ಯುಷಾ ಶಿಲ್ಪಗಳಿವೆ. ಎರಡು ಸ್ತಂಭಗಳಿದ್ದು, ಅದರ ಮೇಲೆ ಅರ್ಧ ವೃತ್ತಾಕಾರದಲ್ಲಿರುವ ಕಮಾನಿನಲ್ಲಿ ಚಿಕ್ಕ ಚಿಕ್ಕ ಪ್ರತಿಮೆಗಳಿದ್ದು ಮೂಲತಃ ಅವು ಹನ್ನೊಂದು ಆದಿತ್ಯರ ಚಿಕಣಿ ಚಿತ್ರಗಳನ್ನು ತೋರಿಸಿದ್ದಾರೆ. ಧಾತ್ರಿ, ಮಿತ್ರ, ಅರ್ಯಮನ್, ರುದ್ರ, ವರುಣ, ಸೂರ್ಯ, ಭಗ, ವಿವಸ್ವಾನ್, ಪೂಷನ್, ಸವಿತೃ. ತ್ವಷ್ಟ್ರ, ವಿಷ್ಣು ಇವರು ದ್ವಾದಶಾದಿತ್ಯರು. ಹೀಗೆ ದ್ವಾದಶಾದಿತ್ಯರ ಶಿಲ್ಪಗಳನ್ನು ಹೊಂದಿರುವುದರಿಂದ ಇದೊಂದು ಇಲ್ಲಿಯ ವಿಶಿಷ್ಠ ಸೂರ್ಯ ಶಿಲ್ಪವೆಂದು ಹೇಳಬಹುದು.

ಭೈರವನ ಶಿಲ್ಪ

ಆನೆಗುಂದಿಯಿಂದ ಹನುಮನಹಳ್ಳಿ ರಸ್ತೆಯ ಬಲ ಭಾಗದ ಬೆಟ್ಟದ ಬಂಡೆಯಲ್ಲಿ ಭೈರವನ ಶಿಲ್ಪ ಇದೆ. ಈ ಭೈರವನು ಚತುರ್ಭುಜಗಳನ್ನು ಹೊಂದಿದ್ದು, ಹಿಂದಿನ ಕೈಗಳಲ್ಲಿ ಡಮರು, ತ್ರಿಶೂಲ ಮುಂದಿನ ಕೈಗಳಲ್ಲಿ ಕತ್ತಿ ಹಾಗೂ ಕಪಾಲ ಮತ್ತು ರುಂಡವನ್ನು ಹಿಡಿದಿರುತ್ತವೆ. ಹಾಗೂ ರುಂಡಕ್ಕೆ ನಾಯಿಯು ಬಾಯಿ ಹಾಕಿರುವಂತೆ ಕೆತ್ತಲಾಗಿದೆ. ಭೈರವನ ಕೊರಳಲ್ಲಿ ಹಾರ, ರುಂಡಮಾಲೆಗಳಿವೆ. ಭೈರವನ ಮುಖದಲ್ಲಿ ಭೀಬತ್ಸ ಭಾವವನ್ನು ತೋರಲು ಬಾಯಲ್ಲಿ ಕೋರೆ ಹಲ್ಲುಗಳನ್ನು ತೋರಿಸಲಾಗಿದೆ. ವಿಶೇಷವಾಗಿ ಭೈರವನ ಪಾದಗಳಲ್ಲಿ ಅಂದುಗೆ, ಗೆಜ್ಜೆಗಳಲ್ಲದೇ ಎತ್ತರದ ಪಾದುಕೆಗಳನ್ನು ತೋರಿಸಿದ್ದಾರೆ. ಬಲಗಾಲ ಬದಿಯಲ್ಲಿ ಭಕ್ತ(ದಕ್ಷ)ನ ಶಿಲ್ಪವಿದೆ. ಇದರ ಕೆಳಗೆ ಚೇಳು ಇದೆ.

ವಿಷ್ಣು ಶಿಲ್ಪ

ವೆಂಕಟಗಿರಿಯ ಬೆಟ್ಟದಲ್ಲಿರುವ ಸಮಭಂಗಿಯಲ್ಲಿರುವ ವಿಷ್ಣುಶಿಲ್ಪ ಇದೆ. ಈ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದ್ದು, ಬಲಭಾಗದ ಕೆಳ ಕೈಯು ಅಭಯ ಹಸ್ತದಲ್ಲಿದ್ದು, ಮೇಲ್ಭಾಗದ ಕೈಯಲ್ಲಿ ಚಕ್ರ ಇದೆ. ಎಡಭಾಗದ ಕೆಳಕೈಯು ಸೊಂಟದ ಮೇಲೆ ಇರಿಸಿದ್ದು, ಎಡ ಮೇಲಗೈ ಶಂಕವನ್ನು ಹಿಡಿದ್ದಾನೆ. ಈ ಶಿಲ್ಪದಲ್ಲಿ ಕೊರಳಲ್ಲಿ ಕಂಠಹಾರ, ತೋಳ್ಬಂದಿ, ಕಂಕಣಗಳನ್ನು ಹೊಂದಿದೆ. ಇಲ್ಲಿನ ಶಿಲ್ಪದಲ್ಲಿರುವವ ವಸ್ತ್ರವು ಶಿಲ್ಪದ ಎರಡು ಭಾಗದಲ್ಲಿ ಸುಂದರವಾಗಿ ಹರಡಿದಂತೆ ಗೋಚರಿಸುತ್ತದೆ. ಈ ಶಿಲ್ಪವು ಕಪ್ಪು ಗ್ರಾನೈಟ್ ಶಿಲೆಯಿಂದ ಕಂಡರಿಸಲಾಗಿದೆ.

ಪಶುಪಾಲನ ಶಿಲ್ಪ

ಭಿಳೆಬಾವಿಯು ಕೊಪ್ಪಳ-ಗಂಗಾವತಿ ರಸ್ತೆಯಲ್ಲಿ ಬೂದಗುಂಪದಿಂದ ಈಶಾನ್ಯಕ್ಕೆ ಸುಮಾರು ೨ ಕಿ.ಮೀ. ದೂರದಲ್ಲಿ ಈ ಗ್ರಾಮವಿದೆ. ಗ್ರಾಮದ ಆಂಜನೇಯ ದೇವಾಲಯದ ಹತ್ತಿರ ಈ ಶಿಲ್ಪಗಳಿವೆ.

ಪಶುಪಾಲನ ಶಿಲ್ಪವು ೩.೧೦ ಅಡಿ ಎತ್ತರ, ೨.೮ ಅಡಿ ಅಗಲ ಇದೆ. ವೀರ, ಮಾಸ್ತಿ ಮತ್ತು ತುರುಗಳ ಶಿಲ್ಪಗಳಿವೆ. ಈ ವೀರನು ತನ್ನ ಎರಡು ಕೈಗಳನ್ನು ಮೇಲೆ ಎತ್ತಿಕೊಂಡು ಭುಜದ ಮೇಲೆ ಅಡ್ಡವಾಗಿ ಕೊಲವನ್ನು ಹಿಡಿದುಕೊಂಡಿದ್ದಾನೆ. ಈ ಕೋಲಿನ ಎರಡು ತುದಿಯಲ್ಲಿ ಬಿಂದಿಗೆಗಳನ್ನು ಹೋಲುವ ವಸ್ತುಗಳಿವೆ (ದಂಡೆ). ತಲೆಗೂದಲುಗಳನ್ನು ತಿರುವಿ ಬಲಕ್ಕೆ ತುರುಬು ಕಟ್ಟಿದ್ದಾನೆ. ವೀರನ ಕೊರಳಲ್ಲಿ ವೈವಿಧ್ಯಮಯ ಆಭರಣಗಳಿವೆ. ಕಿವಿಯಲ್ಲಿ ಕಿವಿಯೋಲೆಗಳು, ಕೈ ಮತ್ತು ಕಾಲುಗಳಲ್ಲಿ ಕಡಗಗಳಿವೆ. ವಿಶಿಷ್ಟವಾದ ಉಡುಪುಗಳಿವೆ. ವೀರನ ಬಲಭಾಗದಲ್ಲಿ ವೀರನ ಪತ್ನಿಯ ಶಿಲ್ಪವಿದೆ. ಇಲ್ಲಿ ಮಹಾಸತಿಯು ಕೈಮುಗಿದು ನಿಂತಿದ್ದಾಳೆ. ಮಾಸ್ತಿಯ ಕಿವಿಯಲ್ಲಿ ದೊಡ್ಡದಾದ ಕಿವಿಯೊಲೆ ಮತ್ತು ಕೈ, ಕಾಲುಗಳಲ್ಲಿ ಕಡಗಗಳಿವೆ. ಈ ಶಿಲ್ಪದ ಮೇಲ್ಭಾಗದಲ್ಲಿ ಎರಡು ತುರುಗಳು ಮತ್ತು ಸೂರ್ಯ ಚಂದ್ರರನ್ನು ಚಿತ್ರಿಸಲಾಗಿದೆ.

ವೀರಗಲ್ಲುಗಳು

ಭಿಳೆಬಾವಿಯ ಮೊದಲನೇಯ ವೀರಗಲ್ಲು ಕಪ್ಪು ಕಣಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ಈ ಶಿಲ್ಪವು ೨.೮ ಅಡಿ ಉದ್ದ, ೨.೬ ಅಡಿ ಅಗಲ ಇದೆ. ಈ ವೀರನು ಬಲಗೈಯಲ್ಲಿ ಚಾಕು ಮತ್ತು ಎಡಗೈಯಲ್ಲಿ ಬಿಲ್ಲುವನ್ನು ಹಿಡಿದ್ದಾನೆ. ತಲೆಗೂದಲುಗಳನ್ನು ತಿರುವಿ ಬಲಕ್ಕೆ ತುರುಬು ಕಟ್ಟಿದ್ದಾನೆ. ವೀರರ ಕಾಲು ಮತ್ತು ಕೈಗಳಲ್ಲಿ ಕಡಗಗಳಿವೆ. ಮೈಮೇಲೆ ಬಟ್ಟೆಯನ್ನು ಚಿತ್ರಿಸಿ ಸೊಂಟವನ್ನು ವಸ್ತ್ರದಿಂದ ಬಿಗಿಯಲಾಗಿದೆ. ಈ ಶಿಲ್ಪದಲ್ಲಿ ಸೂರ್ಯ ಚಂದ್ರರನ್ನು ಚಿತ್ರಿಸಲಾಗಿದೆ.

ಭಿಳೆಬಾವಿಯ ಎರಡನೆಯ ವೀರಗಲ್ಲು ಶಿಲ್ಪವು ೪.೪ ಅಡಿ ಉದ್ದ, ಅಗಲ ೨.೨ ಅಡಿ ಇದೆ. ವೀರನು ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಅಲಂಕೃತ ಗುರಾಣಿಯನ್ನು ಹಿಡಿದಿದ್ದಾನೆ. ಎರಡನ್ನು ಎಡಭಾಗದಲ್ಲಿ ಮೇಲೆ ಖಡ್ಗ ಮತ್ತು ಕೆಳಭಾಗದಲ್ಲಿ


ತಾವರಗೆರೆಯ ಶಿವಲಿಂಗ ಗುಡಿ


ಹಳೇ ಶಿವಪುರದ ಶಿವ ದೇವಾಲಯ


ಹಳೇ ಮುಕ್ಕುಂಪಿಯ ಸೂರ್ಯ ಶಿಲ್ಪ

ಗುರಾಣಿಯನ್ನು ಚಿತ್ರಿಸಲಾಗಿದೆ. ಕಾಲು ಮತ್ತು ಕೈಗಳಲ್ಲಿ ಕಡಗಗಳಿವೆ. ತಲೆಗೆ ರುಂಬಾಲು ಸುತ್ತಿದ್ದಾನೆ. ಕಿವಿಯೊಲೆ ಇವೆ. ವೀರನು ಚಲಿಸುವ ಭಂಗಿಯಲ್ಲಿ ಇದ್ದಾನೆ.

ವೀರಗಲ್ಲುಗಳು

ಚಿಲವಾಡ್ಗಿ ಗ್ರಾಮವು ಕೊಪ್ಪಳ ತಾಲೂಕಿನಲ್ಲಿದ್ದು. ಕೊಪ್ಪಳದಿಂದ ೭ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಪೋಲಿಸ್ ಪಾಟೀಲ ಅವರ ಗದ್ದೆಯಲ್ಲಿ ಪೂರ್ವಾಭಿಮುಖವಾಗಿ ಎರಡು ವೀರಗಲ್ಲು ಇವೆ.

ಮೊದಲನೆಯ ವೀರಗಲ್ಲು ಮೂರು ಹಂತಗಳನ್ನು ಹೊಂದಿದ್ದು, ೪.೭ ಅಡಿ ಉದ್ದ, ೨.೧೦ ಅಡಿ ಅಗಲವಿದೆ. ಮೂರು ಹಂತಗಳಲ್ಲಿ ಶಿಲ್ಪಗಳನ್ನು ಬಿಡಿಸಲಾಗಿದೆ. ಮೊದಲನೆ ಹಂತದಲ್ಲಿ ವೀರನು ಗುರಾಣಿಯನ್ನು ಹಿಡಿದು ಶತ್ರುವಿನ ಜೊತೆ ಹೋರಾಡುತ್ತಿದ್ದು, ಅವನ ಪಕ್ಕದಲ್ಲಿ ಕುದುರೆ ಮೇಲೆ ವೀರನು ಕುಳಿತಿದ್ದು ಕುದುರೆಯು ಚಲಿಸುವ ಭಂಗಿಯಲ್ಲಿದೆ. ಎರಡನೆ ಹಂತದಲ್ಲಿ ವೀರಮರಣವನ್ನು ಹೊಂದಿದ ವೀರನನ್ನು ಅಪ್ಸರೆಯರು ಬುಜಗಳನ್ನು ಹಿಡಿದುಕೊಂಡು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವುದರ ಚಿತ್ರಣವಿದೆ. ಮೂರನೆಯ ಹಂತದಲ್ಲಿ ವೀರ ಮತ್ತು ಅಪ್ಸರೆಯರ ಚಿತ್ರಣವಿದೆ. ವೀರನು ಸ್ವರ್ಗದಲ್ಲಿ ಸ್ಥಾನವನ್ನು ಪಡೆದ ಸನ್ನಿವೇಶವನ್ನು ತಿಳಿಸಿಕೊಡುವ ಚಿತ್ರಣವಿದೆ. ಇಲ್ಲಿ ಆಸನದ ಮೇಲೆ ವೀರನು ಕುಳಿತಿದ್ದು ಅವನ ಬದಿಯಲ್ಲಿ ಅಪ್ಸರೆಯರು ನಂತಿದ್ದಾರೆ. ಶಿಲ್ಪದ ಮೇಲೆ ಸೂರ್ಯ, ಚಂದ್ರರನ್ನು ಕಂಡರಿಸಲಾಗಿದೆ.

ಎರಡನೇಯ ವೀರಗಲ್ಲು ಸುಮಾರು ೩ ಅಡಿ ಉದ್ದ, ೨ ಅಡಿ ಅಗಲವಿದೆ. ಮೂರು ಹಂತಗಳಲ್ಲಿ ಶಿಲ್ಪಗಳನ್ನು ಬಿಡಿಸಲಾಗಿದೆ. ಮೊದಲಹಂತದಲ್ಲಿ ವೀರನೊಬ್ಬ ಭರ್ಚಿಯಲ್ಲಿ ಶತ್ರುವನ್ನು ಚುಚ್ಚಿ ಮೇಲಕ್ಕೆ ಹಿಡಿದ ದೃಶ್ಯವಿದೆ. ಬರ್ಚಿಗೆ ಸಿಲುಕಿರುವ ವ್ಯಕ್ತಿ ತಲೆ ಕೆಳಗಾಗಿ ಜೊತುಬಿದ್ದಿದ್ದಾನೆ. ಎರಡನೆ ಹಂತದಲ್ಲಿ ವೀರಮರಣವನ್ನು ಹೊಂದಿದ ವೀರನನ್ನು ಅಪ್ಸರೆಯರು ಬುಜಗಳನ್ನು ಹಿಡಿದುಕೊಂಡು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವುದರ ಚಿತ್ರಣವಿದೆ. ಮೂರನೆಯ ಹಂತದಲ್ಲಿ ವೀರ ಮತ್ತು ಅಪ್ಸರೆಯರ ಚಿತ್ರಣವಿದೆ. ಇಲ್ಲಿ ಆಸನದ ಮೇಲೆ ವೀರನು ಕುಳಿತಿದ್ದು ಅವನ ಬದಿಯಲ್ಲಿ ಅಪ್ಸರೆಯರು ನಿಂತಿದ್ದಾರೆ. ಶಿಲ್ಪದ ಮೇಲೆ ಸೂರ್ಯ, ಚಂದ್ರರನ್ನು ಚಿತ್ರಿಸಲಾಗಿದೆ.

ಈ ಶಿಲ್ಪದ ಲಕ್ಷಣಗಳು ಮತ್ತು ಕಲ್ಲಿನ ವಿಧವನಾಧರಿಸಿ ಈ ವೀರಗಲ್ಲಿನ ರಚನೆ ಹೊಯ್ಸಳ ಕಾಲದಲ್ಲಿ ರಚನೆಯಾಗಿವೆ.

ಅಗಳಕೆರೆ

ಅಗಳಕೆರೆ ಗ್ರಾಮದಲ್ಲಿ ಒಂದು ಕೆರೆಯಿದ್ದು. ಇದನ್ನು ಆ ಗ್ರಾಮದ ಹೆಸರಿನಿಂದ ಕರೆಯಲಾಗುತ್ತಿದೆ. ಈ ಕೆರೆಯನ್ನು ಯಾರು ನಿರ್ಮಿಸಿದರು ಎಂಬುದರ ಬಗ್ಗೆ ಮಾಹಿತಿಯು ದೊರೆಯುವುದಿಲ್ಲ. ಈ ಕೆರೆ ಸುಮಾರು ೩೦೦ ಎಕರೆಯಷ್ಟು ವಿಸ್ತೀರ್ಣ ಹೊಂದಿದೆ. ಪ್ರಸ್ತುತ ಈ ಕೆರೆಯಲ್ಲಿ ಜಲಸಂಗ್ರಹವಿಲ್ಲದೆ ಅದನ್ನು ಕೃಷಿ ಭೂಮಿಯಾಗಿ ಪರಿವರ್ತಿಸಿ ತುಂಗಭದ್ರ ನೀರನ್ನು ಬಳಸಿ ಭತ್ತವನ್ನು ಬೆಳೆಯುತ್ತಾರೆ. ಕೆರೆಯ ಏರಿ ಪಶ್ಚಿಮ ದಿಕ್ಕಿದೆ. ಕೆರೆಗೆ ತುಂಬಾ ಎತ್ತರವಾದ ಏರಿ ಸುಮಾರು ೭

ಅಡಿ ಎತ್ತರ , ೪ ಅಡಿ ಅಗಲ ಇದೆ. ಈ ಏರಿಯ ಕೆಳಭಾಗದಲ್ಲಿ ದೊಡ್ಡ ಗುಂಡು ಕಲ್ಲುಗಳು ಮತ್ತು ಅದರ ಮೇಲ್ಭಾಗದಲ್ಲಿ ಮಣ್ಣಿನಿಂದ ನಿರ್ಮಿಸಿದ್ದಾರೆ.

ತೂಬುಗಳನ್ನು ಸಾಮಾನ್ಯವಾಗಿ ಕಲ್ಲಿನಿಂದ ರಚಿಸಿದ್ದು, ಇದು ಕೆರೆಯ ಏರಿಯ ಮಧ್ಯಭಾಗದಲ್ಲಿ ತೂಬು ಇದೆ. ತೂಬು ನಾಲ್ಕು ಕಂಬಗಳಿಂದ ಕೂಡಿದೆ. ಎರಡು ಕಂಬಗಳ ನಡುವಿನಲ್ಲಿ ಒಂದು ಅಡ್ಡ ಕಲ್ಲನ್ನು ಇರಿಸಲಾಗುತ್ತದೆ. ಈ ಎರಡು ಅಡ್ಡಗಲ್ಲುಗಳ ನಡುವೆ ಎರಡು ರಂಧ್ರಗಳಿವೆ. ಈ ನಾಲ್ಕು ಕಂಬಗಳನ್ನು ಆವರಿಸಿದಂತೆ ಛತ್ತು ಇದೆ. ಹೀಗೆ ನಾಲ್ಕು ಕಂಬಗಳನ್ನು ಹೊಂದಿದ್ದರಿಂದ ಈ ತೂಬು ಮಂಟಪದ ತರ ಗೋಚರಿಸುತ್ತದೆ. ಈ ದೃಷ್ಟಿಯಿಂದ ಇದನ್ನು ವಿಶೇಷ ರಚನೆ ಎಂದು ಗುರುತಿಸಬಹುದು. ತೂಬಿನ ಮೇಲ್ಭಾಗದಲ್ಲಿರುವ ಕಲ್ಲಿನ ಮೇಲೆ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ. ಇದರಿಂದ ಆ ಕೆರೆಯನ್ನು ವಿಜಯನಗರ ಕಾಲದ ಕೆರೆಯೆಂದು ಗುರುತಿಸಬಹುದಾಗಿದೆ.

ತಿಪ್ಪನಾಳ ಕೆರೆ

ತಿಪ್ಪನಾಳ ದುರ್ಗಮ್ಮ ದೇವಾಲಯ ಪಕ್ಕದಲ್ಲಿ ಕೆರೆಯಿದ್ದು, ಇದನ್ನು ಆ ಗ್ರಾಮದ ಹೆಸರಿನಿಂದ ಕರೆಯಲಾಗಿದೆ. ಈ ಕೆರೆ ಸುಮಾರು ೧೦೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಪ್ರಸ್ತುತ ಈ ಕೆರೆಯಲ್ಲಿ ಜಲಸಂಗ್ರಹವಿಲ್ಲದೆ ಅದನ್ನು ಕೃಷಿಭೂಮಿಯಾಗಿ ಪರಿವರ್ತಿಸಿದ್ದಾರೆ. ಕೆರೆಯ ಏರಿಯು ಸುಮಾರು ೬ ಅಡಿ ಎತ್ತರ, ೪ ಅಡಿ ಅಗಲ ಇದೆ. ಏರಿಯನ್ನು ಕಲ್ಲುಗಳು ಮತ್ತು ಮಣ್ಣಿನಿಂದ ನಿರ್ಮಿಸಿದ್ದಾರೆ. ಕೆರೆಯ ಏರಿಯ ಮಧ್ಯಭಾಗದಲ್ಲಿ ತೂಬು ಇದೆ. ತೂಬು ಎರಡು ಕಂಬಗಳಿಂದ ಕೂಡಿದೆ. ಎರಡು ಕಂಬಗಳ ನಡುವೆ ಒಂದು ಅಡ್ಡ ಕಲ್ಲನ್ನು ಇರಿಸಲಾಗಿದೆ. ಈ ಅಡ್ಡಗಲ್ಲುಗಳ ನಡುವೆ ಎರಡು ರಂಧ್ರಗಳಿವೆ. ತೂಬಿನ ಮೇಲ್ಭಾಗದಲ್ಲಿರುವ ಕಲ್ಲಿನ ಮೇಲೆ ಗಜಲಕ್ಷ್ಮಿ ಶಿಲ್ಪವಿದೆ. ಇದರಿಂದ ಈ ಕೆರೆಯನ್ನು ವಿಜಯನಗರ ಕಾಲದ ಕೆರೆಯೆಂದು ಗುರುತಿಸಬಹುದಾಗಿದೆ.

ಕುಟುಗನಹಳ್ಳಿಕೆರೆ

ಕೊಪ್ಪಳ-ಗಂಗಾವತಿ ರಸ್ತೆ ಯಿಂದ ೨ ಕಿ.ಮೀ. ದೂರದಲ್ಲಿದೆ. ಹಂಪಿಯ ಹಜಾರರಾಮ ಸ್ವಾಮಿ ದೇವಾಲಯದ ಉತ್ಸವ ಮಂಟಪದ ದಕ್ಷಿಣ ಗೋಡೆಯಲ್ಲಿರುವ ಶಾಸನದಲ್ಲಿ ಕೊಪ್ಪಳ ಸೀಮೆಯ ಪ್ರಸ್ತಾಪವಿದೆ. ಕೊಪ್ಪಣ ಸೀಮೆಯ ಕುಟುಕನಹಳ್ಳಿಯನ್ನು ಆ ಗ್ರಾಮದ ಸುವರ್ಣಾದಾಯ, ಭತ್ತದಾಯ, ಸುಂಕ, ಸಾಮ್ಯ, ತಳವಾರಿಕೆಯ ರೊಕ್ಕ, ಜೋಡಿ ಬಿರಾಡ, ನೀರ ಬಿರಾಡ, ಅನುಪು ಹಾರಿಕಾ ಮೊದಲಾದ ಉತ್ಪತ್ತಿಗಳನ್ನು ಸೂರ್ಯಗ್ರಹಣ ಪುಣ್ಯಕಾಲದಲ್ಲಿ ದಾನವಾಗಿ ಬಿಡಲಾಗಿದೆ. (ಕ.ವಿ.ಶಾ.ಸಂ-೩ ಪು. ೨೬೫)

ಕುಟುಗನಹಳ್ಳಿಯಿಂದ ಭೀಮನೂರಗೆ ಹೋಗುವ ಮಾರ್ಗದಲ್ಲಿ ಈ ಕೆರೆಯಿದ್ದು. ಇದನ್ನು ಆ ಗ್ರಾಮದ ಹೆಸರಿನಿಂದ ಕರೆಯಲಾಗುತ್ತಿದೆ. ಈ ಕೆರೆಯನ್ನು ಯಾರು ನಿರ್ಮಿಸಿದರು ಎಂಬುದರ ಬಗ್ಗೆ ಮಾಹಿತಿಯು ದೊರೆಯುವುದಿಲ್ಲ. ಈ ಕೆರೆ ಸುಮಾರು ೧೨೦ ಎಕರೆಯಷ್ಟು ವಿಸ್ತೀರ್ಣ ಹೊಂದಿದೆ. ಕೆರೆಯ ಏರಿ ಪಶ್ಚಿಮ ದಿಕ್ಕಿದೆ. ಏರಿಯು ಗುಂಡುಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಲಾಗಿದೆ. ಕೆರೆಯ ತೂಬುಗಳನ್ನು ಎರಡು ಕಲ್ಲಿನ ಕಂಬಗಳಿಂದ ರಚನೆ ಇದೆ. ಎರಡು ಕಂಬಗಳ ನಡುವೆ ಒಂದು ಅಡ್ಡಕಲ್ಲನ್ನು ಇರಿಸಲಾಗಿದೆ. ಈ ಅಡ್ಡಗಲ್ಲುಗಳ ನಡುವೆ ಒಂದು ರಂಧ್ರ ಇದೆ. ತೂಬಿನ ಮೇಲ್ಭಾಗದಲ್ಲಿರುವ ಕಲ್ಲಿನ ಮೇಲೆ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ. ಇದರಿಂದ ಕೆರೆಯನ್ನು ವಿಜಯನಗರ ಕಾಲದ ಕೆರೆಯೆಂದು ಗುರುತಿಸಬಹುದಾಗಿದೆ.

ಆಧಾರ ಗ್ರಂಥಗಳು

೧. ಕನ್ನಡ ವಿಶ್ವವಿದ್ಯಾಲಯ ಶಾಸನ, ಸಂಪುಟ ೨, **ಕೊಪ್ಪಳ ಶಾಸನಗಳು**, ೧೯೯೯, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ದೇವರಕೊಂಡಾರೆಡ್ಡಿ, ೧೯೯೪, **ತಲಕಾಡಿನ ಗಂಗರ ದೇವಾಲಯಗಳು: ಒಂದು ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩. ವಾಸುದೇವನ್.ಸಿ.ಎಸ್, ೨೦೦೧, **ಹಂಪಿ ಪರಿಸರದ ಕೆರೆಗಳು**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಶೇಷಶಾಸ್ತ್ರಿ ಆರ್., ೧೯೮೨, **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೨೩

ಕಳಸ ಪಟ್ಟಣದ ಪ್ರಾಚ್ಯಾವಶೇಷಗಳು

ಸುಪ್ರೀತ ಕೆ.ಎನ್.*

ಕಳಸ ಪಟ್ಟಣವು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಐದು ಹೋಬಳಿಗಳಲ್ಲಿ ಒಂದಾಗಿದೆ. ಇದು ಮಲೆನಾಡಿನ ಮಧ್ಯಭಾಗದಲ್ಲಿದ್ದು, ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಸಹ್ಯಾದ್ರಿಯ ಉತ್ತುಂಗ ಪರ್ವತ ಶ್ರೇಣಿಯಿಂದ ಸುತ್ತುವರೆದ ಕಣಿವೆಯಲ್ಲಿದೆ. ೧೩'೧೮ ಅಕ್ಷಾಂಶ ಮತ್ತು ೭೫'೨೬ ರೇಖಾಂಶವನ್ನು ಹೊಂದಿದೆ. ಈ ಪರಿಸರದಲ್ಲಿ ಮಾನವನು ಪ್ರಾಗೈತಿಹಾಸ ಕಾಲದಿಂದ ಚಾರಿತ್ರಿಕ ಕಾಲದವರೆಗೂ ನೆಲೆಸಿದ್ದ ಎಂಬುದನ್ನು ತಿಳಿಯಲು ಇಲ್ಲಿನ ಪುರಾತತ್ವದ ಕುರುಹುಗಳು ದೃಢಪಡಿಸುತ್ತವೆ. ಹಾಗೆಯೇ ಈ ಪಟ್ಟಣವು ಹುಂಬುಚದ ಸಾಂತರಸರು, ಕಳಸ–ಕಾರ್ಕಳ ಭೈರರಸರು, ವಿಜಯನಗರ ಅರಸರು, ಕೆಳದಿ ಅರಸರು ಹಾಗೂ ಮೈಸೂರು ಒಡೆಯರ ಆಳ್ವಿಕೆಗೆ ಒಳಪಟ್ಟಿತ್ತು. ಈ ರಾಜಮನೆತನಗಳ ಕಾಲಾವಧಿಯಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳು, ಮೂರ್ತಿಶಿಲ್ಪಗಳು, ವೀರಗಲ್ಲುಗಳು ಹಾಗೂ ಮಾಸ್ತಿಗಲ್ಲುಗಳು ಪ್ರಮುಖ ಸ್ಮಾರಕಗಳಾಗಿವೆ.

ಕಲಸೇಶ್ವರ ದೇವಾಲಯ: ಕಳಸದಲ್ಲಿರುವ ಪ್ರಮುಖ ದೇವಾಲಯಗಳಲ್ಲಿ ಕಲಸೇಶ್ವರ ದೇವಾಲಯವು ಒಂದಾಗಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿನ ಶಿವಲಿಂಗವು ಸುಮಾರು ೯ ಅಂಗುಲ ಎತ್ತರವಿದ್ದು ಉತ್ತರಕ್ಕೆ ಬಾಗಿದೆ. ಲಿಂಗವು ಪಾಣಿ ಪೀಠವನ್ನು ಹೊಂದಿದೆ. ನವರಂಗದ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು ವಾಹನ ಸಮೇತರಾಗಿರುವುದನ್ನು ಕಾಣಬಹುದು. ಪೂರ್ವಕ್ಕೆ ಇಂದ್ರ ಆನೆಯೊಂದಿಗೆ, ಆಗ್ನೇಯದಲ್ಲಿ ಅಗ್ನಿ, ದಕ್ಷಿಣಕ್ಕೆ ಯಮ, ನೈರುತ್ಯಕ್ಕೆ ನಿರುತಿ/ನೈರುತ್ಯ, ಪಶ್ಚಿಮಕ್ಕೆ ವರುಣ, ವಾಯುವ್ಯಕ್ಕೆ ವಾಯು, ಉತ್ತರಕ್ಕೆ ಕುಬೇರ ಹಾಗೂ ಈಶಾನ್ಯಕ್ಕೆ ಈಶಾನರನ್ನು ಕಾಣಬಹುದು. ನವರಂಗದ ಎಡಭಾಗದ ದೇವಕೋಷ್ಟಕದಲ್ಲಿ ಮಹಿಷಾಸುರಮರ್ಧಿನಿ ಮತ್ತು ಬಲಬದಿಯ ದೇವಕೋಷ್ಟಕದಲ್ಲಿ ಗಣಪತಿ ಶಿಲ್ಪಗಳಿವೆ. ನವರಂಗಕ್ಕೆ ಮೂರುದ್ವಾರ ಬಾಗಿಲುಗಳಿವೆ.

ಮುಖಮಂಟಪದಲ್ಲಿ ಆರು ಕಂಬಗಳಿದ್ದು, ಅವುಗಳಲ್ಲಿ ಎರಡು ಕಂಬಗಳಲ್ಲಿ ಮಾತ್ರ ಭಿತ್ತಿಶಿಲ್ಪಗಳಿವೆ. ಹಾಗೂ ಮಧ್ಯಭಾಗದಲ್ಲಿ ನಂದಿಶಿಲ್ಪವಿದೆ. ವಿಶೇಷವಾಗಿ ಪ್ರವೇಶದ್ವಾರದಲ್ಲಿ ಶೈವದ್ವಾರಪಾಲಕರ ಕೆತ್ತನೆಯಿದ್ದು, ಎಡಬದಿಯ ದ್ವಾರಪಾಲಕನ ಎಡಹಸ್ತದ ತೋರು ಬೆರಳು ಮತ್ತು ಹೆಬ್ಬೆರಳಿನ ನಡುವೆ ಗುಲಗಂಜಿಕಾಳನ್ನು ಹಿಡಿದುಕೊಂಡಿದ್ದಾನೆ. ಇದು ಕಾಶಿವಿಶ್ವನಾಥನ ದರ್ಶನಕ್ಕಿಂತ ಕಳಸದ ಕಲಸೇಶ್ವರಸ್ವಾಮಿಯ ದರ್ಶನವು ಒಂದು ಗುಲಗಂಜಿಕಾಳಿನ ತೂಕಗಿಂತ ಹೆಚ್ಚಿನ ಪುಣ್ಯಲಭಿಸುತ್ತದೆ ಎಂಬ ಸಂಕೇತವನ್ನು ಸೂಚಿಸಲು ಶಿಲ್ಪಿಯು ಈ ರೀತಿ ಚಿತ್ರಿಸಿದ್ದಾನೆ ಎಂಬ ವಾಡಿಕೆ ಇದೆ.

ಈ ದೇವಾಲಯದ ಪಾರ್ಶ್ವನೋಟದಲ್ಲಿ 'ಅದಿಷ್ಟಾನಂ ಸ್ತೂಪಿ ಪರ್ಯಂತಮ್ ವಿಮಾನಮ್' ಎಂಬಂತೆ ಕಲಶೇಶ್ವರ ದೇವಾಲಯವು ಅಧಿಷ್ಟಾನದಿಂದ ವಿಮಾನದವರೆಗೂ ಕಾಣಬಹುದು. ಅಧಿಷ್ಟಾನದಲ್ಲಿ ಉಪಾನ, ಕುಮುದ, ಕಂಠವನ್ನು ಹೊಂದಿದೆ. ಭಿತ್ತಿಯಲ್ಲಿ ಕುಡ್ಯಸ್ತಂಬಗಳಿದ್ದು ನಾಗರಶೈಲಿಯ ಶಿಖರವನ್ನು ಹೊಂದಿದೆ. ಪ್ರಾಕಾರಗೋಡೆ ಮತ್ತು ದೇವಾಲಯದ ನಡುವಲ್ಲಿ ಶಿವಲಿಂಗ ಮತ್ತು ಕಾರ್ತೀಕೇಯನ ಶಿಲ್ಪಗಳಿವೆ. ಈ ದೇವಾಲಯದ ವಾಸ್ತುಶೈಲಿಯನ್ನು ಗಮನಿಸಿದಾಗ ವಿಜಯನಗರ ಕಾಲಕ್ಕೆ ಸೇರಿದೆ ಎಂದು ಹೇಳಬಹುದು.

ಸರ್ವಾಂಗ ಸುಂದರಿ ಅಮ್ಮನವರ ದೇವಾಲಯ: ಕಲಸೇಶ್ವರನ ಪರಿವಾರ ದೇವತೆಯಾಗಿರುವ ಸರ್ವಾಂಗ ಸುಂದರಿ ಅಮ್ಮನವರ ದೇವಾಲಯವು ಕಲಶೇಶ್ವರಸ್ವಾಮಿ ದೇವಾಲಯದ ಎಡಬದಿಯಲ್ಲಿದೆ. ಸ್ಕಂದ ಪುರಾಣದ ತುಂಗಾಭದ್ರಾಖಂಡದಲ್ಲಿ ಕಲಶಕ್ಷೇತ್ರದ ಶ್ರೀಕಲಶೇಶ್ವರಸ್ವಾಮಿ ಮಾಹಾತ್ಮೆಯಲ್ಲಿ ಹೇಳಿರುವ ಪ್ರಕಾರ ಕಲಶೇಶ್ವರ ಮತ್ತು ಗಿರಿಜಾದೇವಿಗೆ ವಿವಾಹ ನಿಶ್ಚಯವಾಗಿದ್ದು, ಕಲಶೇಶ್ವರನು ಪರ್ವತರಾಜನ ಮನೆಗೆ ಬರುತ್ತಾನೆ. ಶ್ರೀ ಗಿರಿಜಾದೇವಿಯು ಸಿಂಹಾಸನದಿಂದ ಎದ್ದು ತನ್ನ

* ಪಿಹೆಚ್.ಡಿ. ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿವಿ, ಹಂಪಿ, ವಿದ್ಯಾರಣ್ಯ–೭೩.

ಕಲಸೇಶ್ವರನಿಗೆ ನಮಸ್ಕರಿಸಿ ಕೈಯಲ್ಲಿದ್ದ ಹಾರದಿಂದ ಪತಿಯನ್ನು ಅಲಂಕರಿಸಿದಳು. ಆಗ ಕಲಶೇಶ್ವರನು ಪ್ರೀತಿಯಿಂದ ಗಿರಿಜಾದೇವಿಯನ್ನು ಸಂಪೂರ್ಣದೃಷ್ಟಿಯಿಂದ ನೋಡಿದನು. ಆ ಕ್ಷಣದಲ್ಲಿಯೇ ಗಿರಿಜಾದೇವಿಯ ಶರೀರದ ದೆಸೆಯಿಂದ ಸರ್ವಸುಂದರಿಯಾದ ಸರ್ವಾಂಗ ಸುಂದರಿದೇವಿಯು ಹುಟ್ಟಿದಳೆಂಬ ಕಥೆ ಇದೆ.

ಅಮ್ಮನವರ ದೇವಾಲಯವು ವಿಜಯನಗರ ಶೈಲಿಯಲ್ಲಿದ್ದು, ಮುಖಮಂಟಪದಲ್ಲಿ ಲತಾಬಳ್ಳಿ, ದ್ವಾರಪಾಲಕರು ಹಾಗೂ ಎರಡು ಕಂಬಗಳನ್ನು ಒಳಗೊಂಡಿದೆ. ಕಂಬಗಳು ವ್ಯಾಳ, ಕುದುರೆ, ಸಿಂಹವನ್ನು ಹೊಂದಿವೆ. ಮುಖಮಂಟಪದ ಒಳಗೆ ಯಾವುದೇ ಕಂಬಗಳು ಕಂಡುಬರುವುದಿಲ್ಲ. ಎಡಬದಿಯಲ್ಲಿ ಭೈರವ, ಬಲಬದಿಯಲ್ಲಿ ವೀರಭದ್ರನ ದ್ವಾರಪಾಲಕರನ್ನು ಕಾಣಬಹುದು. ದ್ವಾರದ ಮೇಲೆ ಪುರುಷಮೃಗ, ಲಿಂಗ, ಭೀಮನ ಉಬ್ಬುಶಿಲ್ಪವಿದೆ. ಸಭಾಮಂಟಪ ಭಾಗದಲ್ಲಿ ಎರಡು ಬದಿಯಲ್ಲು ಗಾಳಿ-ಬೆಳಕಿಗಾಗಿ ಜಾಲಾಂಧರಗಳ ವಿನ್ಯಾಸವನ್ನು ಮಾಡಿದ್ದಾರೆ. ಅಂತರಾಳದಲ್ಲಿಯೂ ಸಹ ದ್ವಾರಪಾಲಕರ ರಚನೆ ಇರುವುದನ್ನು ಕಾಣಬಹುದು. ಗರ್ಭಗೃಹದಪೀಠದ ಮೇಲೆ ಸುಮಾರು ೪ ಅಡಿ ಎತ್ತರದ ಸರ್ವಾಂಗಸುಂದರಿ ಅಮ್ಮನವರ ಮೂರ್ತಿ ಶಿಲ್ಪವಿದೆ. ಕ್ರಮವಾಗಿ ತನ್ನ ಒಂದು ಕೈಯಲ್ಲಿ ಪದ್ಮ ಮತ್ತು ಇನ್ನೊಂದು ಕೈಯನ್ನು ಇಳಿಬಿಟ್ಟಿದ್ದಾಳೆ ಹಿಂಭಾಗ ಪ್ರಭಾವಳಿಯಿದ್ದು, ಕೊರಳಲ್ಲಿ ಕಂಠಹಾರ, ತಾಳಿ, ಸೊಂಟಕ್ಕೆ ಢಾಬು, ಕೈಗೆ ವಂಕಿ ಹೀಗೆ ಅನೇಕ ಆಭರಣಗಳಿಂದ ಅಲಂಕೃತವಾಗಿ ಚಿತ್ರಿಸಲಾಗಿದೆ.

ದೇವಾಲಯದ ಪಾರ್ಶ್ವಭಾಗದಲ್ಲಿ ಸರಳವಾದ ಅಧಿಷ್ಠಾನ, ಭಿತ್ತಿಯಲ್ಲಿ ದೇವಕೋಷ್ಟಕ, ಬಲಬದಿಯಲ್ಲಿರುವ ರಥದಲ್ಲಿ ಆಂಜನೇಯನ ಶಿಲ್ಪ, ಹಿಂಬದಿಯ ರಥದಲ್ಲಿ ಗರುಡ, ಹಾಗೂ ಎಡಬದಿಯ ಭಿತ್ತಿಯದೇವ ಕೋಷ್ಠಕದಲ್ಲಿ ಗಣೇಶನ ಶಿಲ್ಪವಿದೆ.

ಸೂರ್ಯ ದೇವಾಲಯ/ಕ್ಷೇತ್ರಪಾಲ ದೇವಾಲಯ: ಸರ್ವಾಂಗ ಸುಂದರಿ ಅಮ್ಮನವರ ದೇವಾಲಯಕ್ಕೆ ಅಭಿಮುಖವಾಗಿ ಸೂರ್ಯದೇವಾಲಯವನ್ನು ನಿರ್ಮಿಸಲಾಗಿದೆ. ದೇವಾಲಯದ ಮುಂದೆ ಬಲಿಪೀಠವಿದ್ದು ದೇವಾಲಯದಲ್ಲಿ ಗರ್ಭಗೃಹ ಮಾತ್ರ ಕಂಡುಬರುತ್ತದೆ. ಗರ್ಭಗೃಹದಲ್ಲಿ ಸೂರ್ಯನ ಮೂರ್ತಿಶಿಲ್ಪವಿದೆ. ಅದೇ ರೀತಿ ದ್ವಾದಶ ರಾಶಿಗಳ ಚಿಹ್ನೆಗಳಾದ ಟಗರು, ಮೀನು, ಕಳಸ, ಮೊಸಳೆ, ಚೇಳು, ತಕ್ಕಡಿ, ಏಡಿ, ಮುಂತಾದವುಗಳ ಉಬ್ಬು ಶಿಲ್ಪಗಳಿವೆ. ದೇವಾಲಯದ ಮೂರು ಭಾಗದಲ್ಲೂ ಜಾಲಾಂಧರಗಳ ವಿನ್ಯಾಸವನ್ನು ಕಾಣಬಹುದು.

ವೇಣುಗೋಪಾಲ ದೇವಾಲಯ: ಕಳಸದ ಭದ್ರಾನದಿಯ ಬಲದಂಡೆಯ ಮೇಲೆ ದಕ್ಷಿಣಾಭಿಮುಖವಾಗಿ ವೇಣುಗೋಪಾಲ ದೇವಾಲಯವು ನಿರ್ಮಾಣಗೊಂಡಿದೆ. ತಲವಿನ್ಯಾಸದಲ್ಲಿ ಗರ್ಭಗೃಹ ಮತ್ತು ಅರ್ಧಮಂಟಪವನ್ನು ಕಾಣಬಹುದು. ತುಂಬಾ ಸರಳಶೈಲಿಯನ್ನು ಹೊಂದಿರುವ ಈ ದೇವಾಲಯವು ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಂತಿದೆ. ಸ್ಥಳೀಯರ ಪ್ರಕಾರ ಮೊದಲು ಇದು ವಿಷ್ಣು ದೇವಾಲಯವಾಗಿದ್ದು ನಂತರ ಕೆಲವು ದಾಳಿಗಳಿಂದಾಗಿ ಮೂರ್ತಿಶಿಲ್ಪವು ಹಾಳಾಗಿದೆ. ಇದಕ್ಕೆ ಆಧಾರವಾಗುವಂತೆ ದೇವಾಲಯದ ಮುಂಭಾಗದಲ್ಲಿ ೧೯೦೦ರಲ್ಲಿ ಜೀರ್ಣೋದ್ಧಾರ ಮಾಡಿದ್ದನ್ನು ಕುರಿತು ಶಾಸನವನ್ನು ಹಾಕಿಸಲಾಗಿದೆ, ಶಾಸನದ ಮೇಲ್ಭಾಗದಲ್ಲಿ ವಿಷ್ಣುವಿನ ಪಾದಶಿಲ್ಪವನ್ನು ಇಡಲಾಗಿದೆ. ಇದರ ಕೆಳಭಾಗದಲ್ಲಿ ವಿಷ್ಣುವಿನ ವಾಹನವಾದ ಗರುಡನನ್ನು ಚಿತ್ರಿಸಲಾಗಿದ್ದು ಇದೊಂದು ಮೂರ್ತಿಯ ಪೀಠದಂತಿದೆ. ಸಾಮಾನ್ಯವಾಗಿ ವಿಷ್ಣು ಪೀಠಕ್ಕೆ ಇಂತಹ ಮೂರ್ತಿ ಇರುತ್ತದೆ. ಆದರೆ ಇದರಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಪೀಠದ ಮಧ್ಯದಲ್ಲಿ ಮೂರ್ತಿಯನ್ನು ಇಡುವಂತಹ ಕುರುಹುಗಳು ಕಂಡುಬರುವುದಿಲ್ಲ, ಬದಲಾಗಿ ಜೋಡಿಪಾದದ ಉಬ್ಬುಶಿಲ್ಪವಿದೆ. ಪಾದದ ಮೇಲೆ ಹಿಂಭಾಗದ ಮಧ್ಯದಲ್ಲಿ ಒಂದೊಂದು ಗುಮ್ಮಟಗಳಿವೆ. ಈ ಶೈಲಿಯಿಂದ ಇದನ್ನು ೧೫ ಅಥವಾ ೧೬ನೇ ಶತಮಾನದಲ್ಲಿ ನಿರ್ಮಾಣಗೊಂಡಿದೆ ಎಂದು ಹೇಳಬಹುದು. ಪ್ರಸ್ತುತ ಈ ದೇವಾಲಯದಲ್ಲಿ ವೇಣುಗೋಪಾಲನ ಕಂಚಿನ ಮೂರ್ತಿಯನ್ನಿಟ್ಟು ಪೂಜಿಸಲಾಗುತ್ತಿದೆ.

ಈ ವಿಷ್ಣುಪಾದವನ್ನು ಗಮನಿಸಿದಾಗ ತಿಳಿದುಬರುವ ಅಂಶವೆಂದರೆ ಈ ಪಾದವು ವಿಷ್ಣುವಿನ ಮೂರ್ತಿಯ ಅವಶೇಷವಾಗಿರಬಹುದು. ಪಾದದ ಮೇಲಿನ ಭಾಗ ಮುರಿದುಹೋಗಿದ್ದು ನಂತರ ಅದನ್ನು ಸೇರಿಸಿ ದೇವಾಲಯದ ಮುಂದೆ ಇಟ್ಟಿದ್ದಾರೆ. ವಿಶೇಷವೆಂದರೆ ವಿಷ್ಣುವಿನ ಪಾದ ಮತ್ತು ಗರುಡನ ಮೂರ್ತಿಯನ್ನು ಒಂದೇ ಕಲ್ಲಿನಿಂದ ಮಾಡಿದ್ದಾರೆಂದು ಅ. ಸುಂದರ ಅವರು ಅಭಿಪ್ರಾಯಪಟ್ಟಿದ್ದಾರೆ.

ಚಂದ್ರನಾಥ ಬಸದಿ : ಕಳಸದಲ್ಲಿ ಕೆಳಂಗಡಿ ಎಂಬ ಸ್ಥಳದಲ್ಲಿ ದಕ್ಷಿಣಾಭಿಮುಖವಾಗಿ ಈ ಬಸದಿ ಇದೆ. ಬಸದಿಯಲ್ಲಿ ಚಂದ್ರನಾಥನ ಪ್ರತಿಮೆಯನ್ನು ಲಲಿತಕೀರ್ತಿದೇವನ ಶಿಷ್ಯನಾದ ದೇವಚಂದ್ರನು ಸ್ಥಾಪಿಸಿದನೆಂದು ಪ್ರತಿಮೆಯ ಇಕ್ಕೆಲಗಳಲ್ಲಿ


ಕಲಸೇಶ್ವರ ದೇವಾಲಯದ ಪಾಶ್ವನೋಟ


ಕಲಸೇಶ್ವರ ಗರ್ಭಗೃಹದಲ್ಲಿನ ಲಿಂಗ ಕಲಶೇಶ್ವರ


ದೇವಾಲಯದಲ್ಲಿನ ನಂದಿ ವಿಗ್ರಹ


ಸರ್ವಾಂಗ ಸುಂದರಿ ಅಮ್ಮನವರ ಶಿಲ್ಪ


ಗುಲಗಂಜಿ ಹಿಡಿದಿರುವ ದ್ವಾರಪಾಲಕ


ವೇಣುಗೋಪಾಲ ದೇವಾಲಯ






ವೇಣುಗೋಪಾಲ ದೇವಾಲಯದ ಮುಂದಿರುವ ವಿಷ್ಣುಪಾದ



ಗಣಪತಿಕಟ್ಟೆಯಲ್ಲಿನ ವೀರಮಾಸ್ತಿಗಲ್ಲು





ಹೊಸ್ತಾರ್ ಚೌಡಿಯಲ್ಲಿನ ವೀರಮಾಸ್ತಿಗಲ್ಲು





ಯಗ್ನೇಶ್ ಮೂರ್ತಿ ಇವರ ತೋಟದಲ್ಲಿನ ವೀರ ಮಾಸ್ತಿಗಲ್ಲು ಮತ್ತು ಭೈರವಶಿಲ್ಪ

ಕೊರೆದ ೧೨ನೇ ಶತಮಾನಕ್ಕೆ ಸೇರಿದ ಸಂಸ್ಕೃತ ಭಾಷೆಯ ಶಾಸದಿಂದ ತಿಳಿದು ಬರುತ್ತದೆ[೧]. ಇದೇ ಬಸದಿಯಲ್ಲಿನ ಚತುರ್ವಿಂಶತಿ ತೀರ್ಥಂಕರ ಪ್ರತಿಮೆಯ ಪೀಠದಮೇಲೆ ಕೊರೆದ ೧೪ನೇ ಶತಮಾನದ ಶಾಸನದಿಂದ ಅಂಕಿಶೆಟ್ಟಿ ಎಂಬುವವನ ಮಗನಾದ ಆದಿಶೆಟ್ಟಿ ಎಂಬುವವನು ಇದನ್ನು ಪ್ರತಿಷ್ಠಾಪಿಸಿದ ಎಂದು ತಿಳಿಸುತ್ತದೆ[೨]. ಬಸದಿಯಲ್ಲಿ ಮೂಲವಿಗ್ರಹ, ಕೈಪಿಡಿ, ಬಲಿಪೀಠವನ್ನು ಹೊರತು ಪಡಿಸಿದರೆ ಉಳಿದೆಲ್ಲಾ ಬಸದಿಯ ಭಾಗಗಳನ್ನು ನೂತನವಾಗಿ ನಿರ್ಮಿಸಿದ್ದಾರೆ. ಈ ಬಸದಿಯ ಇಕ್ಕೆಲಗಳಲ್ಲಿ ಚಂದ್ರನಾಥನ ಯಕ್ಷಿಣಿಯಾಗಿರುವ ಪದ್ಮಾವತಿ ಅಮ್ಮನವರ ಗುಡಿಯಿದೆ.

ಹೊಸ್ತಾರ್ ಚೌಡಿಯಲ್ಲಿನ ವೀರಮಾಸ್ತಿಗಲ್ಲು: ಕಳಸದಿಂದ ಸುಮಾರು ೪ ಕಿ.ಮೀ. ದೂರದಲ್ಲಿ ಹೊಸ್ತಾರ್‌ಚೌಡಿ ಗುಡಿಯಿದೆ. ಈ ಗುಡಿಯ ಮುಂದೆ ಒಂದು ವೀರಮಾಸ್ತಿಗಲ್ಲು ಕಂಡುಬರುತ್ತದೆ. ಈ ವೀರಮಾಸ್ತಿಗಲ್ಲು ೫ ಅಡಿ ಎತ್ತರ ಮತ್ತು ೪ ಅಡಿ ಅಗಲವಾಗಿದೆ. ಇದು ವಿಜಯನಗರ ಕಾಲದ ವೀರಗಲ್ಲು. ಈ ವೀರಗಲ್ಲು ಮೂರು ಹಂತಗಳನ್ನು ಹೊಂದಿದೆ. ಮೊದಲ ಹಂತದಲ್ಲಿ ತನ್ನ ಬಲಗೈಯಲ್ಲಿ ನಿಂಬೆಹಣ್ಣು ಹಿಡಿದ ಒಕ್ಕೈ ಮೇಲೆ ಸತಿ ಮತ್ತು ಪತಿ ಅಕ್ಕ–ಪಕ್ಕದಲ್ಲಿ ಕೈಮುಗಿದು ಕುಳಿತಿದ್ದಾರೆ. ನಂತರದ ಹಂತದಲ್ಲಿ ಲಿಂಗದ ಮುಂದೆ ನಂದಿಯು ಕುಳಿತಿದೆ. ಕೊನೆಯ ಹಂತದಲ್ಲಿ ಸೂರ್ಯ ಮತ್ತು ಚಂದ್ರನ ಉಬ್ಬುಚಿತ್ರಣವನ್ನು ಕಾಣಬಹುದು.

ಹೊಸ್ತಾರ್ ಚೌಡಿದೇವಾಲಯದ ಮುಂದೆ ನೆಟ್ಟಿರುವ ಇನ್ನೊಂದು ವೀರಮಹಾಸತಿಗಲ್ಲು : ಈ ವೀರಮಹಾಸತಿಗಲ್ಲು ೫ ಅಡಿ ಎತ್ತರ ೩ ಅಡಿ ಅಗಲವಾಗಿದ್ದು ಎರಡು ಹಂತಗಳನ್ನು ಹೊಂದಿದೆ. ಮೊದಲನೆ ಹಂತದಲ್ಲಿ ನಿಂಬೆಹಣ್ಣು ಹಿಡಿದ ಒಕ್ಕೈ ಮೇಲೆ ಪತಿ ಮತ್ತು ಪತ್ನಿಯರು ಕುಳಿತಿದ್ದಾರೆ. ಪತ್ನಿಯ ಎಡಬದಿಯಲ್ಲಿ ಬಂದೂಕು ಹಾಗೂ ಪತಿಯ ಎಡಬದಿಯಲ್ಲಿ

ಖಡ್ಗವಿದೆ. ಎರಡನೆಯ ಹಂತದಲ್ಲಿ ಶಿವಲಿಂಗಕ್ಕೆ ಎರಡೂಕಡೆಯಿಂದ ಆನೆಯು ಚಾಮರ ಬೀಸುವಂತಿದ್ದು, ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರರನ್ನು ಚಿತ್ರಿಸಲಾಗಿದೆ. ಇದರ ಶೈಲಿ ಮತ್ತು ಬಳಸಿರುವ ಶಿಲೆಯಿಂದ ಇದು ವಿಜನಗರ ಕಾಲದಲ್ಲಿ ನಿರ್ಮಿಸಿದ ಸ್ಮಾರಕ ಶಿಲ್ಪ ಇದಾಗಿದೆ. ಹಾಗೂ ಇದೇರೀತಿಯ ಎರಡು ಒಕ್ಕೈ ಮಾಸ್ತಿಗಲ್ಲು ಗಣತಿಕಟ್ಟೆಯಲ್ಲಿದ್ದು ಬಲಗೈ ಮೇಲಕ್ಕೆತ್ತಿದೆ. ಅದರ ಮೇಲೆ ಸತಿ–ಪತಿಗಳಿಬ್ಬರೂ ಕುಳಿತಿದ್ದಾರೆ.

ಯಗ್ನೇಶ್‌ಮೂರ್ತಿ ಇವರ ಕಾಫಿತೋಟದಲ್ಲಿ ಇರುವಂತಹ ವೀರಮಾಸ್ತಿಗಲ್ಲು : ಕಳಸದಲ್ಲಿನ ಅಗ್ರಹಾರ ರುದ್ರಪಾದಕ್ಕೆ ಹೋಗುವ ದಾರಿಯಲ್ಲಿ ಯಗ್ನೇಶ್‌ಮೂರ್ತಿ ಇವರ ತೋಟದಲ್ಲಿ ವೀರಮಾಸ್ತಿಗಲ್ಲು ಇದೆ. ೩ ಅಡಿ ಎತ್ತರ ಮತ್ತು ೨ ಅಡಿ ಎತ್ತರ ಅಗಲವಾದ ವಿಸ್ತೀರ್ಣವನ್ನು ಹೊಂದಿದ್ದು ಸತಿಗಲ್ಲಿನಲ್ಲಿ ಪತಿಯು ಕುಳಿತಂತಿದ್ದು ಪತ್ನಿಯು ಪಕ್ಕದಲ್ಲಿ ನಿಂತಿದ್ದಾಳೆ. ಪತಿ ಪತ್ನಿಯರ ಉಡುಗೆ–ತೊಡುಗೆಗಳನ್ನು ಗಮನಿಸಿದಾಗ ರಾಜ ಮನೆತನಕ್ಕೆ ಸೇರಿದ ಸತಿಪತಿಗಳೆಂದು ತಿಳಿದುಬರುತ್ತದೆ. ಪತಿಯ ಕೈಯಲ್ಲಿ ಖಡ್ಗವಿದೆ ಮತ್ತು ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಉಬ್ಬುಚಿತ್ರವನ್ನು ಕೆತ್ತಲಾಗಿದೆ. ಈ ವೀರಮಾಸ್ತಿಗಲ್ಲಿನ ಮುಂದೆ ಭೈರವಿ ಶಿಲ್ಪವಿದೆ ಕುತ್ತಿಗೆಗೆ ರುಂಡಮಾಲೆಯನ್ನು ಧರಿಸಿರುವುದನ್ನು ಬಿಟ್ಟು ಬೇರೆ ಯಾವುದೇ ರೀತಿಯ ಗುರುತು ಸಿಗುವುದಿಲ್ಲ. ಅತಿಯಾದ ಮಳೆಗೆ ಈ ಶಿಲ್ಪವು ತುಂಬಾ ತ್ರುಟಿತಗೊಂಡಿದೆ.

ಈ ಹೀಗೆ ಕಳಸ ಪರಿಸರದಲ್ಲಿ ಹಲವು ಸ್ಮಾರಕಗಳು ಕಂಡುಬಂದಿದ್ದು ಇವುಗಳಿಂದ ಈ ಪರಿಸರದಲ್ಲಿ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ತಿಳಿಯಲು ಸಹಾಯಕವಾಗಿದೆ. ಹಾಗೂ ಈ ಭಾಗದಲ್ಲಿ ಅನೇಕ ಪ್ರಾಚ್ಯಾವಶೇಷಗಳು ಕಾಫಿ ತೋಟ, ಕಾಡು, ಗದ್ದೆಗಳಲ್ಲಿ ಅಲ್ಲದೆ ಮಣ್ಣಿನಲ್ಲಿ ಹೂತುಹೋಗಿವೆ. ಕಳಸ ಪರಿಸರವು ಅತೀ ಹೆಚ್ಚು ಮಳೆಬೀಳುವ ಪ್ರದೇಶವಾಗಿರುವುದರಿಂದ ಪ್ರಾಚ್ಯಾವಶೇಷಗಳು ನೈಸರ್ಗಿಕ ಕ್ರಿಯೆಗಳಿಗೆ ಒಳಪಟ್ಟು ಮೂಲ ದಾಖಲೆಗಳು ನಶಿಸುಹೋಗುತ್ತಿವೆ. ಇದರಿಂದಾಗಿ ಇವುಗಳನ್ನು ದಾಖಲು ಮಾಡಿ ಸಂರಕ್ಷಣೆ ಮಾಡುವುದು ತುಂಬಾ ಅವಶ್ಯಕವಾಗಿದೆ.

ಆಧಾರಸೂಚಿ

೧. ಎಪಿಗ್ರಾಫಿಯ ಕರ್ನಾಟಿಕ, ಚಿಕ್ಕಮಗಳೂರು–೧೧, ಪು. ೨೧೯.

೨. ಎಪಿಗ್ರಾಫಿಯ ಕರ್ನಾಟಿಕ, ಚಿಕ್ಕಮಗಳೂರು–೧೧, ಪು. ೨೧೯–೨೨೦.

೧೨೪

ಕುಣಿಗಲ್ ಪಟ್ಟಣದ ಪ್ರಾಚೀನ ದೇವಾಲಯಗಳು

ರೇವಣಸಿದ್ದಯ್ಯ.ಕೆ.*

ತುಮಕೂರು ಜಿಲ್ಲೆಯ ಕುಣಿಗಲ್ ಪಟ್ಟಣವು ಸಾಂಸ್ಕೃತಿಕವಾಗಿ ಮತ್ತು ಚಾರಿತ್ರಿಕವಾಗಿ ಮಹತ್ವ ಹೊಂದಿದೆ. ಕುಣಿಗಲ್ ಎಂದಾಕ್ಷಣ ನೆನಪಾಗುವುದು ಮೂಡಲ್ ಕುಣಿಗಲ್ ಕೆರೆ ಹಾಗೂ ಕುದುರೆ ಫಾರಂನಿಂದಾಗಿ ನಾಡಿನಾದ್ಯಂತ ಪ್ರಸಿದ್ದಿಯಾಗಿದೆ. ಕುಣಿಗಲ್ ಪಟ್ಟಣವನ್ನು ಸ್ಥಳೀಯ ಜನಪದರು ನರ್ತನಪುರಿ ಎಂಬುದಾಗಿ ಕರೆಯುವುದ ವಾಡಿಕೆಯಲ್ಲಿದೆ. ಶಾಸನಗಳಲ್ಲಿ ಕುಣಿಗಲ್‌ನಾಡು, ಕುಣಿಗಲ್‌ದೇಶ, ರಾಜೇಂದ್ರ ಚೋಳಪುರಂ, ಕುಣುಂಗಿಲ್‌ನಾಟ್ಟು, ಕುಣಿಗಲ್‌ಸೀಮೆ ಎಂದು ಉಲ್ಲೇಖಗೊಂಡಿದೆ.[೧]

ಬೆಟ್ಟ-ಗುಡ್ಡಗಳಿಂದ ಕೂಡಿದ ತಗ್ಗು ಪ್ರದೇಶವಾದ್ದರಿಂದ, ಕುಣಿಗಲ್ ಎಂಬ ನಾಮ ನಿಷ್ಪತಿ ಪ್ರಾಕೃತಿಕ ವಾಚಿಯಿಂದ ಬಂದಿರಬಹುದು. ಅಥವಾ ಕುಣಿಗಲ್ ಪ್ರದೇಶವು ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ನೆಲೆಯಾಗಿರುವುದರಿಂದ ಕುಣಿ+ಕಲ್ಲು=ಕುಣಿಕಲ್ಲು>ಕುಣಿಗಲ್ಲು ಲೋಕರೂಢಿಯಾಗಿ ಕುಣಿಗಲ್ ಎಂಬುದಾಗಿ ನಾಮ ನಿಷ್ಪತಿ ಶಿಲಾವಾಚಿಯಿಂದ ಬಂದಿರಬಹುದು.

ಕ್ರಿ.ಶ. ೭೨೬ರಲ್ಲಿ ಗಂಗವಾಡಿ-೯೬೦೦೦ಕ್ಕೆ ಗಂಗ ಅರಸ ಶ್ರೀಪುರುಷನು ಪಟ್ಟಾಭಿಶಕ್ತನಾದ, ಈ ಅವಧಿಯಲ್ಲಿ ನಾಗಿನ ನದಿಗೆ ಅಡ್ಡಲಾಗಿ ಬೃಹತ್ ಕೆರೆಯೊಂದನ್ನು ಕಟ್ಟಿಸಿ ಜನರ ವಸತಿಗಾಗಿ ಕುಣಿಗಲ್ ಪಟ್ಟಣದ ಸಮೀಪ ಗಂಗ್ಗಾನಹಳ್ಳಿ (ಗಂಗರಹಳ್ಳಿ)ಎಂಬ ಗ್ರಾಮವನ್ನು ನೆಲೆಗೊಳಿಸಿ ಶಿವಾಲಯವನ್ನು ಕಟ್ಟಿಸಿದರ ಬಗ್ಗೆ ಉಲ್ಲೇಖವಿದೆ.[೨] ಪ್ರಸ್ತುತ ಈ ಗ್ರಾಮವು ನಾಶವಾಗಿ ಮಡಿಕೆಚೂರುಗಳು, ಬೂದಿದಿಬ್ಬ ಹಾಗೂ ಪಾಳುಬಿದ್ದ ಶಿವಲಿಂಗ ಮಾತ್ರ ಉಳಿದುಕೊಂಡಿದೆ. ಬಹುಶಃ ಈ ಗ್ರಾಮವು ನಾಶವಾದ ನಂತರ ಎತ್ತರ ಪ್ರದೇಶವಾದ ಕುಣಿಗಲ್ ಪಟ್ಟಣದಲ್ಲಿ ಶಾಶ್ವತವಾಗಿ ಜನವಸತಿ ನೆಲೆಯೂರಿ ಬೆಳೆದು ದೊಡ್ಡಪಟ್ಟಣವಾಗಿದೆ.

ಈ ರೀತಿಯಾಗಿ ಅಭಿವೃದ್ದಿಗೊಂಡ ಕುಣಿಗಲ್ ಪಟ್ಟಣವು ಶ್ರೀಪುರುಷನ ಕಾಲಾವಧಿಯಲ್ಲಿ ಕುಣಿಗಲ್‌ನಾಡು-೫೦೦ ಎಂಬ ಸಣ್ಣ ಆಡಳಿತ ಘಟಕವಾಗಿ, ಗಂಗವಾಡಿ-೯೬೦೦೦ದ ಆಡಳಿತ ವ್ಯಾಪ್ತಿಗೆ ಒಳಪಟ್ಟಿತ್ತು. ಈ ಪ್ರದೇಶದ ಆಡಳಿತ ನೋಡಿಕೊಳ್ಳಲು ಯುವರಾಜನಾದ ಸೈಗೊಟ್ಟ ಶಿವಮಾರನನ್ನು ನೇಮಿಸಲಾಯಿತು, ಕಾಲಾನಂತರದಲ್ಲಿ ಈತ ಕುಣಿಗಲ್ ಪಟ್ಟಣದ ರಕ್ಷಣೆಗೆ ಕೋಟೆಯನ್ನು ಕಟ್ಟಿಸಿ ಅನೇಕ ದೇವಾಲಯಗಳನ್ನು ನಿರ್ಮಿಸಿ ಅಭಿವೃದ್ದಿಪಡಿಸಿದ.

ಗಂಗರ ನಂತರ ಈ ಪ್ರದೇಶವನ್ನು ರಾಷ್ಟ್ರಕೂಟರೂ, ಚೋಳರು, ಹೊಯ್ಸಳರು, ವಿಜಯನಗರ ಅರಸರು, ಯಲಹಂಕ ನಾಡಪ್ರಭುಗಳು ಹಾಗೂ ಮೈಸೂರಿನ ಒಡೆಯರು ಆಳ್ವಿಕೆ ನಡೆಸಿದ್ದು, ಇವರ ಆಡಳಿತದ ಅವಧಿಯ ಅನೇಕ ದೇವಾಲಯಗಳು, ಶಾಸನಗಳು, ಕೆರೆ-ಕಟ್ಟೆಗಳು, ಮೂರ್ತಿಶಿಲ್ಪಗಳು ಮತ್ತು ಕೋಟೆಯ ಅವಶೇಷಗಳನ್ನು ಒಳಗೊಂಡಂತೆ ಸಂಸ್ಕೃತಿಯ ಪ್ರತೀಕವಾಗಿವೆ.

ಸೋಮೇಶ್ವರ ದೇವಾಲಯ: ಕುಣಿಗಲ್ ದೊಡ್ಡ ಕೆರೆ ಏರಿಯ ಮೇಲಿರುವ ಈ ದೇವಾಲಯವು ಗಂಗರ ಆಡಳಿತ ಅವಧಿಗೆ ಸೇರಿದ್ದು, ಕಾಲಾನಂತರದಲ್ಲಿ ವಿವಿಧ ರಾಜ ಮನೆತನಗಳ ಆಡಳಿತದ ಅವಧಿಯಲ್ಲಿ ಜೀರ್ಣೋದ್ದಾರಗೊಂಡಿದೆ. ನಿರ್ಮಾಣದ ಬಗ್ಗೆ ಯಾವುದೇ ಶಾಸನ ಉಲ್ಲೇಖವಿಲ್ಲ ಆದರೆ ಶ್ರೀಪುರುಷನು ಕುಣಿಗಲ್ ಕೆರೆಯನ್ನು ಕಟ್ಟಿಸಿರುವ ಬಗ್ಗೆ ಶಾಸನ ಉಲ್ಲೇಖವಿದೆ.[೩] ಅದೇ ಅವಧಿಯಲ್ಲಿ ಈ ದೇವಾಲಯವು ನಿರ್ಮಾಣಗೊಂಡಿರಬಹುದು. ದ್ರಾವಿಡ ಶೈಲಿಯಲ್ಲಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಉದ್ಭವ ಮೂರ್ತಿಯ ಶಿವಲಿಂಗವಿದೆ. ನವರಂಗದ ಬಲಭಾಗದ ದೇವಕೋಷ್ಠಕದಲ್ಲಿ ಗಣಪತಿಯನ್ನು ಹಾಗೂ ಶಿವಲಿಂಗಕ್ಕೆ ಎದುರಾಗಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ.

* ಸಂಶೋಧನಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬.

ನವರಂಗದ ಈಶಾನ್ಯ ದಿಕ್ಕಿನಲ್ಲಿರುವ ಸೂರ್ಯನ ವಿಗ್ರಹವು ತುಂಬಾ ಆಕರ್ಷಕವಾಗಿದ್ದು, ಗಂಗರ ಕಾಲದ ಅಪರೂಪದ ಶಿಲ್ಪವಾಗಿದೆ. ಈ ಮೂರ್ತಿಶಿಲ್ಪವು ಸುಮಾರು ೪ ಅಡಿ ಎತ್ತರವಿದ್ದು ಸ್ಥಾನಿಕ ಬಂಗಿಯಲ್ಲಿದೆ. ಪ್ರಭಾವಳಿಯು ನವಗ್ರಹಗಳ ಕೆತ್ತನೆಯಿಂದ ಕೂಡಿದ್ದು, ಪಾದಪೀಠದ ಅಕ್ಕಪಕ್ಕದಲ್ಲಿ ಸಮಜ್ಞ ಮತ್ತು ಛಾಯಾದೇವಿಯನ್ನು ಕಂಡರಿಸಲಾಗಿದೆ. ಸೂರ್ಯದೇವನು ತನ್ನ ಬಲಗೈಯಲ್ಲಿ ಬಾಣವನ್ನು ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದು, ಪೀಠದಲ್ಲಿ ಏಳು ಅಶ್ವಗಳನ್ನು ಕೆತ್ತಲಾಗಿದೆ. ಮುಖಮಂಟಪದಲ್ಲಿ ವಿಜಯನಗರ ಶೈಲಿಯ ೮ ಕಂಬಗಳಿದ್ದು ವಿಶೇಷ ಕೆತ್ತನೆಯಿಂದ ಕೂಡಿವೆ. ಶಿವಲಿಂಗ, ಕುಸ್ತಿಪಟು, ಮತ್ಸ್ಯನಾಥ, ಕುದುರೆಸವಾರ, ಬೇಡರಕಣ್ಣಪ್ಪ ಹಾಗೂ ನಂದಿಶಿಲ್ಪಗಳನ್ನು ಕಾಣಬಹುದು.

ಸೋಮೇಶ್ವರ ದೇವಾಲಯಕ್ಕೆ ಹೊಂದಿಕೊಂಡಂತೆ ಎಡಭಾಗದಲ್ಲಿ ಎರಡು ಸಣ್ಣ ಗುಡಿಗಳಿದ್ದು ಸರಸ್ವತಿ ಮತ್ತು ಪಾರ್ವತಿಯ ಮೂರ್ತಿಶಿಲ್ಪವನ್ನು ಪೂರ್ವಾಭಿಮುಖವಾಗಿ ಪ್ರತಿಷ್ಠಾಪಿಸಲಾಗಿದೆ. ಹೊಯ್ಸಳ ವಾಸ್ತುಶೈಲಿಯಲ್ಲಿರುವ ಸರಸ್ವತಿ ವಿಗ್ರಹವು ಸುಮಾರು ೪ ಅಡಿ ಎತ್ತರವಿದ್ದು ದ್ಯಾನ ಬಂಗಿಯಲ್ಲಿದೆ. ಬಲಗೈಯಲ್ಲಿ ದಂಡವನ್ನು ಕೆಳಗಿನ ಕೈಯಲ್ಲಿ ಅಭಯಹಸ್ತವನ್ನು ಎಡಭಾಗದ ಕೆಳಗಿನ ಕೈ ವರದ ಮುದ್ರೆಯಲ್ಲೂ ಮತ್ತು ಗ್ರಂಥವನ್ನು ಹಿಡಿದಿದ್ದು ಪ್ರಭಾವಳಿಯಿಂದ ಅಲಂಕೃತಗೊಂಡಿದೆ. ಅದೇರೀತಿ ಮತ್ತೊಂದು ಗುಡಿಯಲ್ಲಿ ಸುಮಾರು ೪ ಅಡಿ ಎತ್ತರದ ಪಾರ್ವತಿಯ ಮೂರ್ತಿಶಿಲ್ಪವಿದೆ. ಈ ಶಿಲ್ಪವು ಸ್ಥಾನಿಕ ಬಂಗಿಯಲ್ಲಿದ್ದು ಹೋಯ್ಸಳ ಶೈಲಿಯಲ್ಲಿ ರಚನೆಗೊಂಡಿದೆ. ಪ್ರಸ್ತುತ ಸೋಮೇಶ್ವರ ದೇವಾಲಯದ ಅಧಿಷ್ಠಾನದ ಕೆಲವು ಹಂತಗಳು ಮಣ್ಣಿನಿಂದ ಮುಚ್ಚಿಹೋಗಿದ್ದು ಅವಸಾನದ ಅಂಚಿಗೆ ತಲುಪಿದ್ದು ಸಂರಕ್ಷಿಸಬೇಕಾಗಿದೆ.

ಪದ್ಮೇಶ್ವರ: ಸಂತೇಬೀದಿಯಿಂದ ದೊಡ್ಡಕೆರೆ ಕಡೆಗೆ ಹೋಗುವ ದಾರಿಯ ಎಡಭಾಗದಲ್ಲಿ ಪದ್ಮೇಶ್ವರ ದೇವಾಲಯವಿದೆ. ಈ ದೇವಾಲಯವು ಹೊಯ್ಸಳ ವಾಸ್ತುಶೈಲಿಯಿಂದ ಕೂಡಿದ್ದು ನಿರ್ಮಾಣದ ಬಗ್ಗೆ ಯಾವುದೆ ಶಾಸನ ಉಲ್ಲೇಖವಿಲ್ಲ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗದಿಂದ ಕೂಡಿದೆ. ಮೂಲ ಗರ್ಭಗೃಹದಲ್ಲಿ ಶಿವಲಿಂಗವನ್ನು, ಅಂತರಾಳದ ಬಲಭಾಗದಲ್ಲಿ ಗಣಪತಿ ಹಾಗೂ ಎಡಭಾಗದಲ್ಲಿ ಪಾರ್ವತಿಯ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗವು ೯ ಅಂಕಣಗಳಿಂದ ಕೂಡಿದ್ದು ಮೇಲ್ಛಾವಣಿಯಲ್ಲಿ ಪದ್ಮದ ಕೆತ್ತನೆಯ ಭುವನೇಶ್ವರಿಗಳನ್ನು ಕಾಣಬಹುದು. ನವರಂಗದಲ್ಲಿ ೧೬ ಕಂಬಗಳಿದ್ದು ಸಾದಾರಣವಾಗಿವೆ. ದೇವಾಲಯವು ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದ್ದು ಅಧಿಷ್ಠಾನ, ಭಿತ್ತಿ, ಗ್ರೀವ, ಶಿಖರ ಮತ್ತು ಸ್ತೂಪಿಯನ್ನು ಹೊಂದಿದೆ. ಭಿತ್ತಿಯಲ್ಲಿ ಅರ್ಧಗಂಭಗಳು ಮತ್ತು ದೇವಕೋಷ್ಠಕಗಳನ್ನು ಕಾಣಬಹುದು. ಶಿಖರವು ದ್ರಾವಿಡ ಶೈಲಿಯಲ್ಲಿದ್ದು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಾಣಗೊಂಡಿದೆ. ರಾಜ್ಯ ಪುರಾತತ್ವ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದೆ.

ಶಿವಮಾರೇಶ್ವರ: ಈ ದೇವಾಲಯವು ಉತ್ತರಾಭಿಮುಖವಾಗಿದ್ದು ಕೆರೆ ಏರಿಯ ಮೇಲಿದೆ. ಗಂಗರ ವಾಸ್ತುಶೈಲಿಯಲ್ಲಿ ನಿರ್ಮಾಣಗೊಂಡಿದ್ದು ಗಂಗರ ಕಾಲಕ್ಕೆ ಸೇರಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಸುಮಾರು ಒಂದೂವರೆ ಅಡಿ ಎತ್ತರದ ಶಿವಲಿಂಗವಿದೆ. ಅಂತರಾಳದ ಎಡಭಾಗದಲ್ಲಿ ಅಂಬಾಭವಾನಿ, ಬಲಭಾಗಕ್ಕೆ ಗಣಪತಿಯನ್ನು ಹಾಗೂ ಶಿವಲಿಂಗಕ್ಕೆ ಎದುರಾಗಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಮುಖಮಂಟಪದ ದ್ವಾರಬಾಗಿನ ಎಡ ಮತ್ತು ಬಲಭಾಗಕ್ಕೆ ಶೈವ ದ್ವಾರಪಾಲಕರನ್ನು ಕೆತ್ತಲಾಗಿದೆ. ಲಲಾಟಬಿಂಬದಲ್ಲಿ ಶಿವಲಿಂಗವಿದೆ. ದೇವಾಲಯದ ಮುಖಮಂಟಪವು ನಾಲ್ಕು ಕಂಬಗಳಿಂದ ಕೂಡಿದ್ದು ಯಾಳಿ, ಪದ್ಮ, ಚಕ್ರದ ಕೆತ್ತನೆಗಳಿವೆ. ದ್ರಾವಿಡ ಶೈಲಿಯ ಶಿಖರವಿದ್ದು ಇಟ್ಟಿಗೆ ಮತ್ತು ಗಾರೆಯನ್ನು ಬಳಸಿಕೊಂಡು ಕಟ್ಟಲಾಗಿದೆ. ಶಿವಮಾರೇಶ್ವರ ಅನ್ನುವುದನ್ನು ಗಮನಿಸಿದರೆ ಈ ಪ್ರದೇಶ ಆಳುತ್ತಿದ್ದ ಸೈಗೊಟ್ಟ ಶಿವಮಾರ ಕಟ್ಟಿಸಿದ ದೇವಾಲಯವಾಗಿರಬಹುದು.

ಪಂಚಲಿಂಗೇಶ್ವರ: ಸೋಮೇಶ್ವರ ದೇವಾಲಯದ ಹಿಂಭಾಗದಲ್ಲಿರುವ ಪಂಚಲಿಂಗೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಂತೆ ಕಾಣುತ್ತದೆ. ತಲವಿನ್ಯಾಸದಲ್ಲಿ ಗರ್ಭಗೃಹ ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ೫ ಶಿವ ಲಿಂಗಗಳನ್ನು ಸಾಲಾಗಿ ಪ್ರತಿಷ್ಠಾಪಿಸಲಾಗಿದೆ. ಈ ಐದು ಲಿಂಗಗಳು ವಿಭಿನ್ನ ಆಕಾರದಿಂದ ಕೂಡಿದ್ದು ಮಧ್ಯದ ಶಿವಲಿಂಗದ ಎದುರಿಗೆ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಮುಖಮಂಟಪದ ಬಾಗಿಲುವಾಡದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳನ್ನು ಕೆತ್ತಲಾಗಿದೆ. ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ಕಟ್ಟಲಾಗಿದ್ದು ಇತ್ತೀಚೆಗೆ ನವೀಕರಿಸಿ ಸುಣ್ಣ- ಬಣ್ಣ ಬಳಿಯಲಾಗಿದೆ.

ಈಶ್ವರ ದೇವಾಲಯ: ಪದ್ಮೇಶ್ವರ ದೇವಾಲಯದ ಹಿಂಭಾಗದಲ್ಲಿರುವ ಈಶ್ವರ ದೇವಾಲಯವು ಪೂರ್ವಭಿಮುಖವಾಗಿದ್ದು, ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಒಂದೂವರೆ ಅಡಿ ಎತ್ತರದ

ಶಿವಲಿಂಗವನ್ನು ಪಾಣಿ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಅಂತರಾಳದಲ್ಲಿ ಶಿವಲಿಂಗಕ್ಕೆ ಎದುರಾಗಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಬಲಭಾಗದಲ್ಲಿ ಗಣಪತಿಯನ್ನು ಮತ್ತು ಎಡಭಾಗದಲ್ಲಿ ಮಹಿಷಾಸುರಮರ್ದಿನಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಈ ಶಿಲ್ಪವು ನೋಡಲು ಆಕರ್ಷಕವಾಗಿದ್ದು ಚೋಳರ ವಾಸ್ತುಶೈಲಿಯನ್ನು ಹೋಲುತ್ತದೆ. ನಾಲ್ಕು ಕೈಗಳನ್ನು ಹೊಂದಿದ್ದು ತ್ರಿಶೂಲದಿಂದ ಕೋಣವನ್ನು ಕೊಲ್ಲುತ್ತಿರುವಂತೆ ಬಿಂಬಿಸಲಾಗಿದೆ. ನವರಂಗದಲ್ಲಿ ಎರಡು ಕಂಬಗಳು ಮಾತ್ರವಿದ್ದು ಯಾವುದೇ ಕೆತ್ತನೆಗಳಿಲ್ಲ. ಪ್ರವೇಶದ್ವಾರದ ಬಾಗಿಲವಾಡವು ಸಾಧಾರಣವಾಗಿದ್ದು ಮುಂಭಾಗದಲ್ಲಿ ಬಲಿಪೀಠ ಹಾಗೂ ಸುಮಾರು ೨೫ ಅಡಿ ಎತ್ತರದ ದೀಪಸ್ಥಂಭವಿದೆ.

ಉರಿತಿರುಮಲ: ಈ ದೇವಾಲಯವು ದಕ್ಷಿಣಾಭಿಮುಖವಾಗಿದ್ದು ಪಟ್ಟಣದ ಕೋಟೆಬೀದಿಯಲ್ಲಿ ನಿರ್ಮಾಣಗೊಂಡಿದೆ. ಈ ದೇವಾಲಯವು ಚೋಳರ ಅವಧಿಯಲ್ಲಿ ನಿರ್ಮಾಣಗೊಂಡಿದ್ದು ಸಾಧಾರಣ ಶೈಲಿಯಲ್ಲಿದೆ. ರಾಜರಾಜ ಚೋಳನು ಕ್ರಿ.ಶ. ೧೦೪೪ರಲ್ಲಿ ಕೊತ್ತಗೆರೆ ಗ್ರಾಮದಲ್ಲಿ ಶಾಸನವನ್ನು ಹಾಕಿಸಿ ತಿರುನಾಳ ದೇವಾಲಯಕ್ಕೆ ದಾನ ನೀಡಿರುವ ಬಗ್ಗೆ ಉಲ್ಲೇಖಿಸಿದೆ.[೪] ತಲವಿನ್ಯಾಸದಲ್ಲಿ ಗರ್ಭಗೃಹ, ನವರಂಗ ಮುಖಮಂಟಪವನ್ನು ಹೊಂದಿದೆ. ಗರ್ಭಗುಡಿಯಲ್ಲಿ ತಿರುಮಲ ದೇವರ ವಿಗ್ರಹವಿದೆ. ನವರಂಗವು ನಾಲ್ಕುಕಂಬಗಳಿಂದ ಕೂಡಿದೆ. ಬಾಗಿಲುವಾಡದ ಎಡ ಮತ್ತು ಬಲಭಾಗದಲ್ಲಿ ದ್ವಾರಪಾಲಕರ ಮೂರ್ತಿಶಿಲ್ಪಗಳಿವೆ. ಮುಖಮಂಟಪವು ಸಾಧಾರಣವಾಗಿದ್ದು ಎದುರಿಗೆ ಸುಮಾರು ೧೫ ಅಡಿ ಎತ್ತರದ ಗರುಡ ಕಂಬವಿದೆ. ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದ್ದು ಪ್ರಸ್ತುತ ಶಿಥಿಲಾವಸ್ಥೆಯಲ್ಲಿದೆ.

ಕೋಟೆ ನರಸಿಂಹಸ್ವಾಮಿ: ಕುಣಿಗಲ್ ಪಟ್ಟಣದ ಮಧ್ಯಭಾಗದಲ್ಲಿರುವ ಕೋಟೆನರಸಿಂಹ ದೇವಾಲಯವು ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ನಿರ್ಮಾಣಕ್ಕೆ ಸಂಬಂಧಿಸಿದಂತೆ ದೇವಾಲಯದ ಉತ್ತರ ದಿಕ್ಕಿನ ಪಂಚಾಂಗ ಜಗತಿಕಲ್ಲಿನ ಮೇಲೆ ಶಾಲಿವಾಹನ ಶಕವರುಷ ೧೪೧೫ ಎಂದು ಉಲ್ಲೇಖಿಸಿರುವುದರಿಂದ ವಿಜಯನಗರ ಕಾಲದಲ್ಲಿ ಈ ದೇವಾಲಯವು ಜೀರ್ಣೋದ್ಧಾರವಾಗಿ ವಿಸ್ತಾರಗೊಂಡಿರಬಹುದು. ವಾಸ್ತುಶೈಲಿಯನ್ನು ಗಮನಿಸಿದರೆ ಹೊಯ್ಸಳ ಕಾಲಾವಧಿಯಲ್ಲಿ ಗರ್ಭಗೃಹ ಮತ್ತು ಅಂತರಾಳ ನಿರ್ಮಾಣವಾಗಿ ವಿಜಯನಗರ ಕಾಲಾವಧಿಯಲ್ಲಿ ನವರಂಗ ಮತ್ತು ಮುಖಮಂಟಪ ನಿರ್ಮಾಣಗೊಂಡಂತಿದೆ. ಮೂಲ ಗರ್ಭಗೃಹದಲ್ಲಿ ನರಸಿಂಹನ ಬದಲಾಗಿ ಸುಮಾರು ೫ ಅಡಿ ಎತ್ತರದ ಸೌಮ್ಯಕೇಶವನ ಶಿಲ್ಪವಿದೆ. ಈ ಶಿಲ್ಪವನ್ನು ಹುಲಿಯೂರುದುರ್ಗದಿಂದ ತಂದು ಪ್ರತಿಷ್ಠಾಪಿಸಲಾಗಿದೆ ಎಂಬುದು ಸ್ಥಳೀಯರ ಹೇಳಿಕೆಯಾಗಿದೆ. ಅಂತರಾಳದಲ್ಲಿ ಒಂದುವರೆ ಅಡಿ ಎತ್ತರದ ನರಸಿಂಹನ ವಿಗ್ರಹ ಹಾಗೂ ಆಳ್ವಾರರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗವು ೧೬ ಕಂಬಗಳಿಂದ ಕೂಡಿದ್ದು ಮೇಲ್ಛಾವಣಿಯಲ್ಲಿ ಭುವನೇಶ್ವರಿಯ ಕೆತ್ತನೆ ಇದೆ. ಮುಖ್ಯ ಪ್ರವೇಶ ದ್ವಾರದಲ್ಲಿ ಜಯ ವಿಜಯರೆಂಬ ದ್ವಾರಪಾಲಕರ ಶಿಲ್ಪಗಳು ಆಕರ್ಷಕವಾಗಿವೆ. ಲಲಾಟಬಿಂಬದಲ್ಲಿ ಬಾಲಕೃಷ್ಣನ ಉಬ್ಬು ಶಿಲ್ಪವಿದೆ. ತೆರೆದ ಮುಖಮಂಟಪವು ೪ ಕಂಬಗಳಿಂದ ಕೂಡಿದ್ದು ವಿಶೇಷ ಕೆತ್ತನೆಗಳಿಂದ ಅಲಂಕೃತಗೊಂಡಿದೆ. ಯಾಳಿ, ಪದ್ಮ, ವಿಜಯನಗರ ಲಾಂಛನ, ವಿಠ್ಠಲ, ಗಣಪತಿ, ಯತಿ, ನವಿಲು, ಶ್ರೀಲಕ್ಷ್ಮಿ, ಶಂಕ, ಚಕ್ರ, ಗರುಡ, ಹನುಮ, ಕಾರ್ತಿಕೇಯ, ನರ್ತನ ಸ್ತ್ರೀ ಶಿಲ್ಪಗಳಿವೆ. ಮುಖಮಂಟಪದ ಮುಂಭಾಗದಲ್ಲಿನ ಹಜಾರದ ಎಡ ಮತ್ತು ಬಲಭಾಗದಲ್ಲಿ ಸಾಲು ಮಂಟಪಗಳನ್ನು ನಿರ್ಮಿಸಲಾಗಿದೆ. ಎಡಗಡೆಯ ಮಂಟಪದಲ್ಲಿ ರಾಮ, ಲಕ್ಷ್ಮಣ, ಸೀತಾ, ಆಂಜನೇಯ ಹಾಗೂ ಆಳ್ವಾರರ ಮೂರ್ತಿಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಬಲಭಾಗದ ಮಂಟಪದಲ್ಲಿ ವೆಂಕಟರಮಣ ಮತ್ತು ಪದ್ಮಾವತಿಯನ್ನು ಪ್ರತಿಷ್ಠಾಪಿಸಿದ್ದಾರೆ.

ನರಸಿಂಹ ದೇವಾಲಯದ ಆವರಣದಲ್ಲಿಯೇ ಕೋಟೆಆಂಜನೇಯ ದೇವಾಲಯವಿದೆ. ದಕ್ಷಿಣಕ್ಕೆ ಮುಖಮಾಡಿರುವ ಆಂಜನೇಯನ ಮೂರ್ತಿಶಿಲ್ಪವು ಕೋಟೆಯ ರಕ್ಷಕನಂತಿದ್ದು ಯಲಹಂಕ ನಾಡಪ್ರಭು ಕೆಂಪೇಗೌಡರ ಕಾಲದ್ದಾಗಿದೆ. ನರಸಿಂಹ ದೇವಾಲಯದ ಹಜಾರದ ಎಡ ಮತ್ತು ಬಲಭಾಗದಲ್ಲಿನ ಸಾಲು ಮಂಟಪಗಳು ಸಹ ಈತನ ಕಾಲದಲ್ಲೇ ನಿರ್ಮಾಣವಾಗಿವೆ. ಆಂಜನೇಯ ಗುಡಿ ಮುಂಭಾಗ ಕ್ರಿ.ಶ. ೧೫೬೬ರ ಶಾಸನವಿದ್ದು ಕೆಂಪೇಗೌಡರಿಗೆ ಧರ್ಮವಾಗಲಿ ಎಂದು ಬರೆಸಿ, ಕಂಚಿ ಮತ್ತು ತಿರುಪತಿಯ ದೇವಾಲಯಗಳಿಗೆ ದಾನ-ದತ್ತಿ ನೀಡಿರುವುದನ್ನು ತಿಳಿಯಪಡಿಸುತ್ತದೆ.[೫] ನರಸಿಂಹ ದೇವಾಲಯದ ಎಡ ಭಾಗಕ್ಕೆ ಅಮ್ಮನವರ ಗುಡಿ ಮತ್ತು ಬೃಂದಾವನ ಇದೆ. ಪ್ರಾಕಾರ ಗೋಡೆಯ ಮೇಲೆ ರಾಯಗೋಪುರ ಇತ್ತು, ಆದರೆ ಇತ್ತೀಚೆಗೆ ಜೀರ್ಣೋದ್ಧಾರದ ಸಂದರ್ಭದಲ್ಲಿ ಕೆಡವಲಾಗಿದ್ದು, ರಾಜ್ಯ ಪುರಾತತ್ವ ಇಲಾಖೆ ಮೈಸೂರು ಇವರ ವತಿಯಿಂದ ಜೀರ್ಣೋದ್ಧಾರಗೊಳ್ಳುತ್ತಿದೆ.

ಕೃಷ್ಣಸ್ವಾಮಿ ದೇವಾಲಯ: ಕುಣಿಗಲ್ ಪಟ್ಟಣದ ಪಶ್ಚಿಮಕ್ಕೆ ಕೃಷ್ಣಸ್ವಾಮಿ ದೇವಾಲಯವಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗುಡಿಯಲ್ಲಿ ಶ್ರೀಕೃಷ್ಣನ ಸುಂದರ ವಿಗ್ರಹವಿದೆ. ಪ್ರಾಚೀನ ದೇವಾಲಯವನ್ನು ಕೆಡವಿ



ಕುಣಿಗಲ್ ಕೆರೆ ಹಾಗೂ ಏರಿಯ ಮೇಲಿರುವ ದೇವಾಲಯಗಳು



ಕೋಟೆನರಸಿಂಹಸ್ವಾಮಿ ದೇವಾಲಯ



ಪದ್ಮೇಶ್ವರ ದೇವಾಲಯದಲ್ಲಿನ ಶಿವಲಿಂಗ



ಸೋಮೇಶ್ವರ ದೇವಾಲಯದ ಮುಖಮಂಟಪ



ಪದ್ಮೇಶ್ವರ ದೇವಾಲಯ



ಕೋಟೆನರಸಿಂಹ ದೇವಾಲಯದಲ್ಲಿನ ಸೌಮ್ಯಕೇಶವ ಶಿಲ್ಪ



ಮಹಿಷಾಸುರಮರ್ದಿನಿ ಶಿಲ್ಪ

ಜೀರ್ಣೋದ್ಧಾರ ಮಾಡಿರುವುದರಿಂದ ಪ್ರಾಚೀನ ದೇವಾಲಯದಂತೆ ಕಂಡುಬರುವುದಿಲ್ಲ. ದೇವಾಲಯದ ಎದುರಿಗೆ ಶಿಲಾಶಾಸನವಿದ್ದು ಕ್ರಿ.ಶ. ೧೫೯೯ರಲ್ಲಿ ಇಮ್ಮಡಿ ಕೆಂಪೇಗೌಡರು ಅನಾರೋಗದಿಂದ ನರಳುತ್ತಿದ್ದ ಸಂದರ್ಭದಲ್ಲಿ ಅವರ ಸೊಸೆ ಇಮ್ಮಡಿ ಹಿರಿಯ ಕೆಂಪೇಗೌಡರ ಧರ್ಮಪತ್ನಿ ವೆಂಕಟಕೃಷ್ಣಾಜಮ್ಮನವರು ವೆಂಕಟಕೃಷ್ಣಸಾಗರ ಅಗ್ರಹಾರ ಹಾಗೂ ಕೃಷ್ಣಸ್ವಾಮಿ ದೇವಾಲಯವನ್ನು ಕಟ್ಟಿಸಿ ಅಲ್ಲಿನ ಬ್ರಾಹ್ಮಣರಿಗೆ ವೃತ್ತಿ ಆದಾರಿತವಾಗಿ ಕುಣಿಗಲ್ ಕೆರೆ ಹಿಂಭಾಗದ ಗದ್ದೆ ಭೂಮಿಯನ್ನು ನೀಡಿ ಮಾನ್ಯ ಮಾಡಿರುವ ಬಗ್ಗೆ ಉಲ್ಲೇಖಿಸಿದೆ.[೬]

ಕಂಬದರಾಯ ಸ್ವಾಮಿ: ಈ ದೇವಾಲಯವು ಕುಣಿಗಲ್ ಪಟ್ಟಣದ ಕುದುರೆ ಫಾರಂ ಒಳಗಡೆ ಇದೆ. ಇದನ್ನು ಕಂಬದನರಸಿಂಹಸ್ವಾಮಿ ಎಂತಲೂ ಕರೆಯುತ್ತಾರೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ರಾಷ್ಟ್ರಕೂಟರ ಕಾಲಾವಧಿಯಲ್ಲಿ ವೀರಕಂಬಳರಾಯ ಎಂಬ ಅಧಿಕಾರಿಯು ಕುಣಿಗಲ್ ಪಟ್ಟಣಕ್ಕೆ ಕೋಟೆಯನ್ನು ಮತ್ತು ದೇವಾಲಯವನ್ನು ಕಟ್ಟಿಸಿದನೆಂಬ ವಾಡಿಕೆ ಇದೆ. ಈ ದೇವಾಲಯವು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದ್ದು ಪ್ರತಿದಿನ ಪೂಜೆ–ಪುನಸ್ಕಾರ ನಡೆಯುತ್ತಿದೆ. ಗರ್ಭಗೃಹದಲ್ಲಿ ಕಂಬದ ನರಸಿಂಹಸ್ವಾಮಿಯ ವಿಗ್ರಹ ತುಂಬಾ ಆಕರ್ಷಕವಾಗಿದೆ.

ತುಡಿಕೆ ವೆಂಕಟರಮಣ: ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಕುಣಿಗಲ್ ಪಟ್ಟಣದ ಸಂತೇ ಮೈದಾನದ ರಸ್ತೆಯಲ್ಲಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ವೆಂಕಟರಮಣನನ್ನು ಪಾಣಿಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಅಂತರಾಳದ ಬಲಭಾಗದಲ್ಲಿನ ಜಗತಿಯ ಮೇಲೆ ಆಳ್ವಾರರ ಪ್ರತಿಮೆಗಳನ್ನು ಸಾಲಾಗಿ ಪ್ರತಿಷ್ಠಾಪಿಸಿದ್ದಾರೆ. ಅಂತರಾಳದ ಮುಂಭಾಗದ ಎಡ ಮತ್ತು ಬಲಭಾಗದ ಸಣ್ಣ ಕೋಣೆಗಳಲ್ಲಿ ಲಕ್ಷ್ಮೀಯನ್ನು ಮತ್ತು ಗಣಪತಿಯನ್ನು ಪ್ರತಿಷ್ಠಾಪಿಸಿದ್ದಾರೆ. ನವರಂಗದಲ್ಲಿ ಚಚ್ಚೌಕವಾದ ನಾಲ್ಕು ಕಂಬಗಳಿದ್ದು ಹೂಬಳ್ಳಿ, ಶಂಖ, ಚಕ್ರ, ತಿರುನಾಳ, ಪದ್ಮ ಹಾಗೂ ಹನುಮಂತನ ಶಿಲ್ಪಗಳನ್ನು ಕೆತ್ತಲಾಗಿದೆ. ದೇವಾಲಯದ ಎದುರಿಗೆ ಗರುಡ ಮಂಟಪವಿದ್ದು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ.

ದುರ್ಗಾಭವಾನಿ: ದಕ್ಷಿಣಾಭಿಮುಖವಾಗಿರುವ ಈ ದೇವಾಲಯವು ಕುಣಿಗಲ್ ದೊಡ್ಡ ಕೆರೆ ಏರಿಯ ಮೇಲಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ನವರಂಗ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ದುರ್ಗಾಭವಾನಿ ದೇವಾಲಯವು ಗಂಗರ ಕಾಲಾವಧಿಯಲ್ಲಿ ನಿರ್ಮಾಣಗೊಂಡಿದೆ. ಮೂಲಗರ್ಭಗೃಹದಲ್ಲಿನ ಚಾಮುಂಡಿಯ (ದುರ್ಗಿ) ಮೂಲವಿಗ್ರಹವು ಪೂರ್ವಾಭಿಮುಖವಾಗಿದ್ದು ಗಂಗರ ಕಾಲದ ಅಪರೂಪದ ಮೂರ್ತಿಶಿಲ್ಪವಾಗಿದೆ. ಕಗ್ಗಲ್ಲಿನಿಂದ ಕಂಡರಿಸಿರುವ ಚಾಮುಂಡಿಯ (ದುರ್ಗಿ) ಶಿಲ್ಪವು ಸುಮಾರು ಮೂರುವರೆ ಅಡಿ ಎತ್ತರವಾಗಿದೆ. ದ್ವಿಭುಜದಾರಿಯಾಗಿರುವ ದೇವಿಗೆ ನಾಲ್ಕು ಕೈಗಳಿದ್ದು ಶಂಖ, ಚಕ್ರ, ಬಿಲ್ಲು ಹಾಗೂ ಕತ್ತಿಯನ್ನು ಹಿಡಿದಿದ್ದು ಮಹಿಷನ ತಲೆಯ ಮೇಲೆ ಆಸೀನಳಾಗಿದ್ದು ಪಕ್ಕದಲ್ಲಿ ಸಿಂಹವು ನಿಂತಿದೆ. ಎಡ ಮತ್ತು ಭಾಗದಲ್ಲಿ ದ್ವಾರಪಾಲಕರಂತೆ ಕಾಣುವ ಶಿಲ್ಪಗಳಿವೆ. ನವರಂಗದಲ್ಲಿ ಚಚ್ಚೌಕವಾದ ನಾಲ್ಕು ಕಂಬಗಳಿದ್ದು ವಿಶೇಷ ಕೆತ್ತನೆಗಳಿಂದ ಕೂಡಿವೆ, ಭೈರವ, ವೀರಭದ್ರ, ಶಿವಲಿಂಗ, ನಾಗಬಂದ, ಯಾಳಿ, ಆಂಜನೇಯ, ಗಜ, ನಂದಿ, ಪದ್ಮ, ಕಾಳಿಂಗ ಮರ್ಧನ, ಬಾಲಕೃಷ್ಣ, ಕಾರ್ತಿಕೇಯ, ಗೋಪಾಲಕೃಷ್ಣ, ಗಣಪತಿ, ಮತ್ಸ್ಯನಾಥ, ಹಂಸವನ್ನು ಕೆತ್ತಲಾಗಿದೆ. ನವರಂಗದ ಮೇಲ್ಛಾವಣಿಯಲ್ಲಿ ಭುವನೇಶ್ವರಿಯನ್ನು ಕೆತ್ತಲಾಗಿದೆ. ದೇವಾಲಯದ ಮುಖ್ಯದ್ವಾರವು ಸಾಧಾರಣವಾಗಿದೆ. ತೆರೆದ ಮುಖಮಂಟಪವಿದ್ದು ನಾಲ್ಕು ಕಂಬಗಳನ್ನು ಕಾಣಬಹುದಾಗಿದೆ.

ನೀರು ಬಾಗಿಲು ಆಂಜನೇಯ: ಕುಣಿಗಲ್ ದೊಡ್ಡ ಕೆರೆ ಏರಿಯ ಮೇಲಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ವಿಜಯನಗರ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ವೀರಭದ್ರನು ಗ್ರಾಮದ ರಕ್ಷಕನಾದರೆ ಆಂಜನೇಯನು ಕೆರೆಯನ್ನು ರಕ್ಷಿಸುವ ರಕ್ಷಕನಾಗಿದ್ದು ಮುಖ್ಯ ಪ್ರಾಣದೇವರು ಎಂದು ಕರೆಯುವುದು ವಾಡಿಕೆಯಲ್ಲಿದೆ. ತಲವಿನ್ಯಾಸದಲ್ಲಿ ಗರ್ಭಗೃಹ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಸುಮಾರು ೪ ಅಡಿ ಎತ್ತರದ ಆಂಜನೇಯನ ಮೂರ್ತಿಶಿಲ್ಪವಿದೆ. ಮುಖಮಂಟಪದಲ್ಲಿ ಆರು ಕಂಬಗಳಿದ್ದು ಅರ್ಧಗಂಭಗಳಾಗಿದ್ದು ಸುಂದರ ಕೆತ್ತನೆಯಿಂದ ಅಲಂಕೃತಗೊಂಡಿವೆ. ಗಂಡುಭೇರುಂಡ, ಪೂರ್ಣಕುಂಭ, ಹಂಸಪಕ್ಷಿ, ಯಾಳಿ, ಯೋಧನ ಶಿಲ್ಪ, ಆನೆ, ಗೋಪಾಲಕೃಷ್ಣ, ವಾದ್ಯಗಾರ ಹಾಗೂ ಓಂಟೆ ಸವಾರನ ಶಿಲ್ಪವನ್ನು ಕಾಣಬಹುದು.

ಒಟ್ಟಾರೆ ಹೇಳುವುದಾದರೆ ಕುಣಿಗಲ್ ಪಟ್ಟಣದ ದೇವಾಲಯಗಳು ಕಲೆ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದ ಮಹತ್ವಪಡೆದುಕೊಂಡಿದ್ದು ಗಂಗರ ಕಾಲದ ದೇವಾಲಯಗಳೇ ಪ್ರಾಚೀನವಾದವುಗಳಾಗಿವೆ. ಅದೇ ರೀತಿ ಕೆಲವು ದೇವಾಲಯಗಳು ವಿವಿಧ ಕಾಲಾವಧಿಯಲ್ಲಿ ಜಿರ್ಣೋದ್ಧಾರಗೊಂಡು ವಿಸ್ತಾರಗೊಂಡಿವೆ. ದೇವಾಲಯಗಳಲ್ಲಿನ ಸರಸ್ವತಿ ಶಿಲ್ಪ, ಪಾರ್ವತಿ ಶಿಲ್ಪ, ಮಹಿಷಾಸುರಮರ್ದಿನಿ ಶಿಲ್ಪ, ಸೂರ್ಯನ ಶಿಲ್ಪ ನಂದಿಶಿಲ್ಪ, ಗಣಪತಿ ಶಿಲ್ಪ ಹಾಗೂ ಶಿವಲಿಂಗಗಳು ತುಂಬಾ ವಿಶೇಷತೆಯಿಂದ ಕೂಡಿದ್ದು ಕಲಾ ಶ್ರೀಮಂತಿಕೆಯನ್ನು ಹೆಚ್ಚಿಸಿವೆ.

ಅಡಿಟಿಪ್ಪಣಿಗಳು

೧. ರೇವಣಸಿದ್ದಯ್ಯ ಕೆ., ಕುಣಿಗಲ್ ಪಟ್ಟಣದ ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩, ಪು. ೧೩.

೨. ಬೋರಯ್ಯ ಎಚ್.ಎಂ., ಕುಣಿಗಲ್ ಕೆರೆ ಪಟ್ಟಣ, ಗೋಧೂಳಿ ಪ್ರಕಾಶನ, ಬೆಂಗಳೂರು, ೨೦೧೫, ಪು. ೩.

೩. ಡಾ. ಪಿ.ವಿ. ಕೃಷ್ಣಮೂರ್ತಿ, ರಾಷ್ಟ್ರಕೂಟ ಅಕಾಲ ವರ್ಷದೇವ ಮುಮ್ಮಡಿ ಕೃಷ್ಣನ ಕುಣಿಗಲ್ ಕೆರೆ ಶಾಸನ (ಲೇ), ಇತಿಹಾಸ ದರ್ಶನ, ಸಂ. ೧೯.

೪. ರೇವಣಸಿದ್ದಯ್ಯ ಕೆ., ಕುಣಿಗಲ್ ಪಟ್ಟಣದ ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩, ಪು. ೨೫.

೫. ಎಪಿಗ್ರಾಫಿಕಾ ಕರ್ನಾಟಿಕ, ಸಂ. ೧೨, ತುಮಕೂರು ಜಿಲ್ಲೆ, ಕುಣಿಗಲ್ ಶಾಸನ ಸಂಖ್ಯೆ-೧೬.

೬ ಎಪಿಗ್ರಾಫಿಕಾ ಕರ್ನಾಟಿಕ, ಸಂ. ೧೨, ತುಮಕೂರು ಜಿಲ್ಲೆ, ಕುಣಿಗಲ್ ಶಾಸನ ಸಂಖ್ಯೆ-೨೫.

೧೨೫

ರಾವುಗೋಡ್ಲು ಪರಿಸರದ ಕೆಲವು ಪ್ರಾಚ್ಯಾವಶೇಷಗಳು

ಡಾ. ಮುತ್ತುರಾಜು*

ರಾವುಗೋಡ್ಲು ಗ್ರಾಮವು ಬೆಂಗಳೂರು ದಕ್ಷಿಣ ಭಾಗದಲ್ಲಿ ಬರುವ ಪ್ರಾಗೈತಿಹಾಸಿಕ ಸ್ಥಳವಾಗಿದ್ದು, ಇಂದಿನವರೆಗೂ ಈ ಪರಿಸರದಲ್ಲಿ ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಪ್ರಾಚ್ಯಾವಶೇಷಗಳು ಉಳಿದು ಬಂದಿವೆ. ಇಲ್ಲಿನ ಪ್ರಾಗೈತಿಹಾಸಿಕತೆ ಕುರಿತು ಇತಿಹಾಸ ದರ್ಶನದಲ್ಲಿ (ಸಂ. ೨೩) ಈ ಹಿಂದೆ ಪ್ರಸ್ತಾಪಿಸಿದ್ದೇನೆ. ಈ ಪರಿಸರದಲ್ಲಿ ಮತ್ತಷ್ಟು ಕ್ಷೇತ್ರಕಾರ್ಯವನ್ನು ಕೈಗೊಂಡಾಗ ಕೆಲವು ವಿಭಿನ್ನ ಪ್ರಾಚ್ಯಾವಶೇಷಗಳು ಮತ್ತಷ್ಟು ಲಭ್ಯವಾಗಿವೆ.

ಇಲ್ಲಿನ ಸರ್ಕಾರಿ ಶಾಲೆಯ ಹಿಂಭಾಗದ ಹೊಲ ಒಂದರಲ್ಲಿ ನಾಲ್ಕು ಪ್ರಾಚೀನ ವೀರಗಲ್ಲುಗಳು ಕಂಡುಬಂದಿದ್ದು, ಇವು ತೀರಾ ಶೋಚನೀಯ ಸ್ಥಿತಿಯಲ್ಲಿ ಉಳಿದುಬಂದಿವೆ. ನಾಲ್ಕು ಅಡಿ ಎತ್ತರ ಮತ್ತು ಅಷ್ಟೇ ಅಗಲದ ಬೃಹತ್ ವೀರಗಲ್ಲು ಒಂದು ಮುಮ್ಮುಖವಾಗಿ ಬಿದ್ದು ಹೋಗಿದ್ದು ಸಂಶೋಧನಾಧ್ಯಯನಕ್ಕೆ ಅಡಚಣೆಯಾಗಿದೆ.

ಮತ್ತೊಂದು ವೀರಗಲ್ಲು ಶೇಕಡ ೭೦ರಷ್ಟು ಭೂಮಿಯಲ್ಲಿ ಹುದುಗಿಹೋಗಿದ್ದು ನಾಲ್ಕು ಅಡಿ ಅಗಲವನ್ನು ಹೊಂದಿರುವ ಸ್ಥಳೀಯ ಕಣಶಿಲೆಯ ಸ್ಮಾರಕವಾಗಿದೆ. ಈ ವೀರಗಲ್ಲು ಸ್ಮಾರಕದ ಚಿತ್ರಣದಲ್ಲಿ ಪ್ರಧಾನವಾಗಿರುವ ವೀರನು ತನ್ನ ಕೈಗಳಲ್ಲಿ ಬಿಲ್ಲು ಮತ್ತು ಬಾಣಗಳನ್ನು ಹಿಡಿದಿದ್ದಾನೆ. ಬೆನ್ನಿನಲ್ಲಿರುವ ಭತ್ತಳಿಕೆಯಲ್ಲಿ ಬಾಣಗಳಿವೆ. ವೀರನ ಮುಂದೆ ಪುಟ್ಟ ಪ್ರಮಾಣದಲ್ಲಿರುವ ಶತೃವಿನ ಚಿತ್ರಣವಿದೆ. ಈ ವೀರನು ಯಾವುದೋ ಕಾರಣಕ್ಕಾಗಿ ಶತೃಗಳೊಡನೆ ಹೋರಾಡಿ ಮಡಿದಿದ್ದಾನೆ. ಬಹುತೇಕ ಭೂಮಿಯ ಒಳಗಡೆ ಈ ಸ್ಮಾರಕವು ಅಡಗಿರುವುದರಿಂದ ಇನ್ನಿತರ ವಿವರಗಳು ಅಲಭ್ಯವಾಗಿವೆ. ವೀರನ ಚಿತ್ರಣಗಳ ರೂಪಾಲಂಕಾರಗಳಿಂದಾಗಿ ಈ ವೀರಗಲ್ಲು ಕ್ರಿ.ಶ. ಸುಮಾರು ೧೦ನೇ ಶತಮಾನಕ್ಕೆ ಸೇರಿದುದಾಗಿದೆ ಎಂದು ನಿರ್ಧರಿಸಬಹುದಾಗಿವೆ.

ಬಳಿಯಲ್ಲಿಯೇ ನಾಲ್ಕು ಅಡಿ ಅಗಲ ಮತ್ತು ಅಷ್ಟೇ ಎತ್ತರದ ವೀರಗಲ್ಲು ಇದ್ದು ಉತ್ತಮ ಕಣಶಿಲೆಯ ಪ್ರಾಚೀನ ಸ್ಮಾರಕವಾಗಿದೆ. ಇಲ್ಲಿಯೂ ಸಹ ವೀರನದೇ ಪ್ರಧಾನ ಚಿತ್ರಣವಾಗಿದೆ. ಇವನು ತನ್ನ ಎಡದ ಕೈನಲ್ಲಿ ಬಿಲ್ಲನ್ನು ಹಿಡಿದಿದ್ದು ಬಲದ ಕೈನಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ನಡುವಿನಲ್ಲಿ ಚಿಚ್ಚುಗತ್ತಿಯಿದೆ. ಶಿರದಲ್ಲಿ ತುರುಬು ಕಿವಿಗಳಲ್ಲಿ ಕುಂಡಲಗಳು, ಕೊರಳಿನಲ್ಲಿ ಸರ, ಕಾಲುಗಳಲ್ಲಿ ಬಂದಿಗಳಿದ್ದು, ಅಲಂಕೃತವಾದ ಕಚ್ಚೆ ಪಂಚೆಯ ಉಡುಗೆ ಇವನಿಗೆ ಇದೆ. ಈ ವೀರನಿಗೆ ಎದುರಾಗಿ ಮುಂದುಗಡೆ ಶತೃಗಳು ಬಿಲ್ಲುಗಳಿಂದ ಬಾಣಗಳನ್ನು ಹೂಡುತ್ತಾ ಬಾಣಗಳ ಪ್ರಖರಗಳನ್ನು ಹರಿಸುತ್ತಿರುವ ಪುಟ್ಟ ಪ್ರಮಾಣದ ಚಿತ್ರಣಗಳಿವೆ. ಈ ಬಾಣ ವೀರನ ಶರೀರವನ್ನು ಭೇದಿಸಿಕೊಂಡು ಹೊರಬಂದಿದೆ. ಅಂದರೆ ಶತೃಗಳು ಬಿಟ್ಟ ಬಾಣಗಳು ವೀರನನ್ನು ಹತ್ಯೆಗೈದಿವೆ. ಈ ವೀರಗಲ್ಲಿನ ಎಡ ಮೇಲ್ಭಾಗದಲ್ಲಿ ಅಪ್ಸರೆಯರಿಬ್ಬರು ಮಡಿದ ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುವ ಚಿತ್ರಣವಿದೆ. ಲಭ್ಯವಿರುವ ಚಿತ್ರಣಗಳ ಶೈಲಿ ಮತ್ತು ರೂಪಗಳ ಆಧಾರಗಳನ್ನು ಲಕ್ಷಿಸಿ ಈ ವೀರಗಲ್ಲು ಸಹ ಕ್ರಿ.ಶ. ಸುಮಾರು ೧೦ನೇ ಶತಮಾನಕ್ಕೆ ಸೇರಿದುದಾಗಿದೆ.

ನಾಲ್ಕು ಅಡಿ ಅಗಲ ಮತ್ತು ಐದು ಅಡಿ ಎತ್ತರದ ವೀರಮಾಸ್ತಿಕಲ್ಲು ಸ್ಮಾರಕವು ಸಹ ಇಲ್ಲಿ ಬಹುತೇಕ ಭೂಮಿಯಲ್ಲಿ ಹುದುಗಿ ಹೋಗಿದೆ. ಉತ್ತಮ ಸ್ಥಳೀಯ ಕಣಶಿಲೆಯ ಸ್ಮಾರಕ ಇದಾಗಿದ್ದು, ವೀರ ಮತ್ತು ಸತಿ ಇರುವ ಚಿತ್ರಣಗಳ ಒಂದೇ ಹಂತದ ಸ್ಮಾರಕವಾಗಿದೆ. ಇಲ್ಲಿನ ವೀರನು ತನ್ನ ಎಡಗೈನಲ್ಲಿ ಬಿಲ್ಲು ಹಿಡಿದಿದ್ದು ಬಲಗೈನಿಂದ ಬಾಣ ಹೂಡುತ್ತಿದ್ದಾನೆ. ಹಿರಿದಾದ ಶಿರೋಮುಡಿ ಕರ್ಣಗಳ ಆಭರಣಗಳು ಇದ್ದು, ಉತ್ತಮ ಅಲಂಕೃತ ಪೋಷಾಕು ಇವನಿಗಿದೆ. ವೀರನನ್ನು ಸತಿಯು ಸಹಗಮನ ಪದ್ಧತಿ ಅನುಸರಿಸಿ ಸಾವಿನಲ್ಲೂ ಹಿಂಬಾಲಿಸಿದ್ದಾಳೆ. ಕಲ್ಲಿನ ಎಡಭಾಗದ ಮೇಲೆ ಮಡಿದ ವೀರನನ್ನು ಅಪ್ಸರೆಯರು ಚಾಮರ ಬೀಸುತ್ತಾ ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ. ಈ ವೀರಗಲ್ಲೂ ಸಹ ಕ್ರಿ.ಶ. ಸುಮಾರು ೧೦ನೇ

---

* # ೩೩೩೩, ೬೦ ಅಡಿ ಮುಖ್ಯರಸ್ತೆ, ಕುಮಾರಸ್ವಾಮಿ ಬಡಾವಣೆ, ೨ನೇ ಹಂತ, ಬೆಂಗಳೂರು-೫೬೦೦೭೮.

ಶತಮಾನಕ್ಕೆ ಸೇರಿದುದಾಗಿದ್ದು ಈ ನಾಲ್ಕೂ ವೀರಗಲ್ಲುಗಳು ಬೆಂಗಳೂರು ದಕ್ಷಿಣ ತಾಲೂಕಿನ ಅಗರ ಮತ್ತು ಬೇಗೂರಿನ ಪ್ರಾಚೀನ ವೀರಗಲ್ಲುಗಳನ್ನು ಹೋಲುತ್ತವೆ.

ಇದೇ ಪರಿಸರದಲ್ಲಿ ಬರುವ ರಾಚೇನಮಡುವು ಎಂಬ ಗ್ರಾಮದ ದೊಡ್ಡ ಆಂಜನೇಯ ಗುಡಿ ಹಿಂಭಾಗದಲ್ಲಿ ಒಂದು ಹುಲಿ ಬೇಟೆಯ ವೀರಗಲ್ಲು ಕಂಡುಬಂದಿದ್ದು ಇದು ೩ ಅಡಿ ಎತ್ತರ ಮತ್ತು ೩ ಅಡಿ ಅಗಲವಾಗಿದೆ. ಅಲ್ಲದೇ ½ ಅಡಿ ದಪ್ಪವನ್ನು ಹೊಂದಿದೆ. ಕಣಶಿಲೆಯಲ್ಲಿ ನಿರ್ಮಿಸಿರುವ ಒಂದೇ ಹಂತದ ಚಿತ್ರಣವು ಇದ್ದು ಕೆತ್ತನೆಯು ರೇಖಾಚಿತ್ರದಂತೆ ಗೋಚರವಾಗುತ್ತದೆ. ಹುಲಿ ಮತ್ತು ವೀರರ ಚಿತ್ರಣಗಳು ಪ್ರಧಾನವಾಗಿ ಶಿಲಾಸ್ಮಾರಕವನ್ನು ಆವರಿಸಿಕೊಂಡಿದ್ದು ಪಾರ್ಶ್ವಮುಖವಾಗಿ ವೀರ ಮತ್ತು ಹುಲಿಯ ಹೋರಾಟದ ದೃಶ್ಯವನ್ನು ಬಿಂಬಿಸಲಾಗಿದೆ. ತನ್ನ ಮೇಲೆ ಎರಗಿ ಬಂದು ಆಕ್ರಮಣ ಮಾಡುತ್ತಿರುವ ಹುಲಿಯ ಬಾಯಿಯನ್ನು ವೀರನು ತನ್ನ ಬಲದ ಕೈನಿಂದ ಹಿಡಿದಿರುವ ಖಡ್ಗಾಯುಧದಿಂದ ಇರಿಯುತ್ತಿದ್ದರೆ ಎಡದ ಕೈನಲ್ಲಿ ಇರುವ ಗುರಾಣಿಯಿಂದ ಹುಲಿಯ ಶರೀರವನ್ನು ಒತ್ತಿ ಹಿಡಿದಿದ್ದಾನೆ. ತನ್ನ ಬಾಯಿಯನ್ನು ತೆರೆದಿರುವ ಹುಲಿಯು ಹಿಂಗಾಲಿನಿಂದ ವೀರನ ಕಾಲ ಮೇಲೆ ನಿಂತಿದ್ದು, ಮುಂಗಾಲುಗಳಿಂದ ವೀರನ ಮುಖದ ಮೇಲೆ ಆಕ್ರಮಣ ಮಾಡುತ್ತಿದೆ. ಇಲ್ಲಿನ ವೀರನಿಗೆ ಶಿರೋಮುಡಿ ಇದ್ದು, ಕರ್ಣಗಳ ಆಭರಣಗಳು ಕೊರಳಿನಲ್ಲಿ ಕಂಠಾಭರಣ ತೋಳು ಮತ್ತು ಕಾಲುಗಳಲ್ಲಿಯೂ ಸಹ ಆಭರಣಗಳು ಇವೆ. ವೀರನ ಪೋಷಾಕು ಹೆಚ್ಚಿನ ಅಲಂಕಾರಗಳಿಂದ ಕೂಡಿದೆ. ಈ ಹುಲಿಮೇಲಿನ ಹೋರಾಟದ ವೀರಗಲ್ಲಿನ ಮೇಲೆ ಬಲಮುಖಿಯಾದ ಎರಡು ಗೋವುಗಳ ಪುಟ್ಟ ಪ್ರಮಾಣದ ಚಿತ್ರಣಗಳಿರುವುದರಿಂದ ಈ ತುರುಗಳನ್ನು ರಕ್ಷಿಸುವ ಸಲುವಾಗಿ ವೀರನು ಹುಲಿಯೊಡನೆ ಹೋರಾಟ ಮಾಡಿ ತಾನು ಸಹ ಹುಲಿಯ ಆಕ್ರಮಣಕ್ಕೆ ತುತ್ತಾಗಿ ಸಾವನ್ನಪ್ಪಿದ್ದಾನೆ. ಕ್ರಿ.ಶ. ಸುಮಾರು ೧೫ನೇ ಶತಮಾನಕ್ಕೆ ಈ ವೀರಗಲ್ಲು ಸೇರುತ್ತದೆ.

ಬಸಪ್ಪನಪಾಳ್ಯದ ಬಳಿಯ ಕಲಾಕುಟೀರ ಎಂಬ ಆಧುನಿಕ ಬಯಲು ಕಲಾ ಸಂಗ್ರಹಾಲಯದಲ್ಲಿ ೫ ವೀರಗಲ್ಲುಗಳು ಕಂಡುಬಂದಿವೆ. ಇವುಗಳ ಶಿಲಾ ಮಾಧ್ಯಮ ರೂಪಗಳನ್ನು ಗಮನಿಸಿದರೆ ಇವುಗಳನ್ನು ಬೇರೇ ಸ್ಥಳಗಳಿಂದ ಇಲ್ಲಿಗೆ ಸ್ಥಳಾಂತರಿಸಿರಬಹುದು ಎಂಬುದು ವ್ಯಕ್ತವಾಗುತ್ತದೆ.

ಈ ಕಲಾ ಕುಟೀರದ ಮುಖ್ಯದ್ವಾರದ ಎರಡೂ ಕಡೆಗಳಲ್ಲೂ ಈ ಪ್ರಾಚೀನ ವೀರಗಲ್ಲು ಸ್ಮಾರಕಗಳನ್ನು ನಿಲ್ಲಿಸಲಾಗಿದೆ.

ಇವುಗಳಲ್ಲಿ ೪ ಅಡಿ ಎತ್ತರ ಮತ್ತು ೩ ರಿಂದ ೪ ಅಡಿವರೆಗೂ ಮುಂದುವರಿದಿರುವ ಅಗಲದ ಮತ್ತು ½ ಅಡಿ ದಪ್ಪದ ಕಣಶಿಲೆಯ ಹುಲಿಬೇಟೆಯ ಪ್ರಾಚೀನ ವೀರಗಲ್ಲು ಒಂದು ಗಮನಾರ್ಹವಾಗಿದ್ದು, ಇಲ್ಲಿ ಹುಲಿ ಮತ್ತು ವೀರರು ಹೋರಾಡುತ್ತಿರುವ ಪ್ರಧಾನ ಚಿತ್ರಣವಿದೆ. ತನ್ನ ಮೇಲೆ ಎರಗಿ ಬಂದ ಹುಲಿಯನ್ನು ವೀರನು ತನ್ನ ಎಡಗೈನಿಂದ ಮುಖವನ್ನು ಒತ್ತುತ್ತಾ ಬಲಗೈನಲ್ಲಿ ಹಿಡಿದಿರುವ ಖಡ್ಗದಿಂದ ಇರಿಯಲು ಯತ್ನಿಸುತ್ತಿದ್ದಾನೆ. ಬಾಯಿ ತೆರೆದ ಹುಲಿಯು ತನ್ನ ಮುಂಗಾಲುಗಳನ್ನು ವೀರನ ಎಡತೊಡೆಯ ಮೇಲೆ ಇರಿಸಿ ಹಿಂಗಾಲುವಿನಿಂದ ವೀರನ ಎಡ ಪಾದವನ್ನು ಒತ್ತಲು ಯತ್ನಿಸುತ್ತಿದೆ. ವೀರನ ಚಿತ್ರಣದಲ್ಲಿ ಸಮ ಪ್ರಮಾಣತೆ ಇದ್ದು ಕಟ್ಟಿದ ಶಿರೋಮುಡಿಯಿಂದ ಇಳಿಬಿಟ್ಟ ಉದ್ದನೆಯ ಜಡೆ ಇದೆ. ನಡುವಿನಲ್ಲಿ ಬಿಚ್ಚುಗತ್ತಿ ಇದ್ದು ಕರ್ಣ, ಕಂಠ ಮತ್ತು ಕಾಲುಗಳಲ್ಲಿ ಆಭರಣಗಳಿವೆ. ಕಚ್ಚೆ ಪಂಚೆಯ ಉಡುಗೆ ಇವನಿಗಿದೆ. ಬಲಿಷ್ಠ ಶರೀರ ಉದ್ದನೆಯ ಬಾಲ ಆಕ್ರಮಣಕಾರಿ ಮುಖಚರ್ಯೆಯಿಂದ ಹುಲಿಯ ಚಿತ್ರಣ ಗಮನ ಸೆಳೆಯುತ್ತದೆ. ಈ ವೀರಗಲ್ಲಿನ ಮೇಲ್ಭಾಗದಲ್ಲಿ ಶಿವಲಿಂಗ ಮತ್ತು ನಂದಿ ಚಿತ್ರಗಳ ಕೈಲಾಸದ ವರ್ಣನೆ ಇರುವುದರಿಂದ ಇಲ್ಲಿನ ವೀರನು ಹುಲಿಯನ್ನು ಕೊಲ್ಲುವಲ್ಲಿ ವಿಫಲನಾಗಿ ಸಾವನ್ನಪ್ಪಿದ್ದಾನೆ. ಇದು ಕ್ರಿ.ಶ. ಸುಮಾರು ೧೩ನೇ ಶತಮಾನಕ್ಕೆ ಈ ಪ್ರಾಚೀನ ಹುಲಿಬೇಟೆ ವೀರಗಲ್ಲು ಸೇರುತ್ತದೆ.

ಇಲ್ಲಿನ ಎರಡನೆಯ ವೀರಗಲ್ಲು ವೀರಮಾಸ್ತಿ ಸ್ಮಾರಕವಾಗಿದ್ದು ಇದು ೩ ಅಡಿ ಎತ್ತರ ೧೧/೨ ಅಡಿ ಅಗಲವನ್ನು ಹೊಂದಿದೆ. ಗ್ರಾನೈಟ್ ಶಿಲೆಯಲ್ಲಿ ಮೂಡಿಸಿದ ಎರಡು ಹಂತಗಳ ಚಿತ್ರಣಗಳು ಇಲ್ಲಿದ್ದು, ಕೆಳಗಿನ ಹಂತದಲ್ಲಿ ಖಡ್ಗ ಗುರಾಣಿ ಹಿಡಿದು ಕಾಲುಗಳನ್ನು ಅಗಲಿಸಿ ಹೋರಾಡಲು ನಿಂತಿರುವ ವೀರನ ಚಿತ್ರಣ ಮಾತ್ರವಿದೆ. ಗುರಾಣಿಯ ಮುಂದೆ ಅಸ್ಪಷ್ಟ ಚಿತ್ರಣವಿದೆ. ಈ ಚಿತ್ರಣದಲ್ಲಿ ವೀರನ ಶಿರೋಮುಡಿ ಬಲಿಷ್ಠ ಶರೀರ ಮತ್ತು ಆಯುಧಗಳು ಗಮನಾರ್ಹವಾಗಿವೆ. ಮೇಲಿನ ಎರಡನೆಯ ಹಂತದಲ್ಲಿ ನಿಂತ ಇಬ್ಬರು ಸತಿಯರ ಮುಂದೆ ಮೇಲೆತ್ತಿ ಹಿಡಿದ ಖಡ್ಗವನ್ನಿಡಿದಿರುವ ವೀರನ ನಿಂತ ಚಿತ್ರಣವಿದೆ. ಅಂದರೆ ಹೋರಾಟವೊಂದರಲ್ಲಿ ವೀರನು ಎದುರಾಳಿಗಳೊಡನೆ ಹೋರಾಡಿ ಮಡಿದಿರುವ ಈತನ ಸತಿಯರಿಬ್ಬರು ಚಿತೆ ಏರಿ ಸಹಗಮನ ಪದ್ಧತಿ ಅನುಸರಿಸಿದ್ದಾರೆ. ಈ ಸ್ಮಾರಕದ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಚಿತ್ರಣಗಳಿವೆ. ಕ್ರಿ.ಶ. ಸುಮಾರು ೧೫ನೇ ಶತಮಾನಕ್ಕೆ ಈ ಪ್ರಾಚೀನ ವೀರ ಮಾಸ್ತಿ ಸ್ಮಾರಕವು ಸೇರುತ್ತದೆ.



ಬೃಹತ್ ಶಿಲಾಯುಗದ ಶಿಲಾಸಮಾಧಿ



ಪ್ರಾಚೀನ ಹುಲಿ ಬೇಟೆ ವೀರಗಲ್ಲು ಕಲಾಕುಟೀರ ಬಸಪ್ಪನಪಾಳ್ಯ



ಪ್ರಾಚೀನ ವೀರಮಾಸ್ತಿಗಲ್ಲು ಕಲಾಕುಟೀರ, ಬಸಪ್ಪನಪಾಳ್ಯ



ಪ್ರಾಚೀನ ವೀರಮಾಸ್ತಿಗಲ್ಲು, ರಾವುಗೋಡ್ಲು



ಪ್ರಾಚೀನ ವೀರಮಾಸ್ತಿಗಲ್ಲು, ರಾವುಗೋಡ್ಲು ಗ್ರಾಮ



ಪ್ರಾಚೀನ ವೀರಮಾಸ್ತಿಗಲ್ಲು, ರಾವುಗೋಡ್ಲು



ಬೃಹತ್ ಶಿಲಾಯುಗದ ಶಿಲಾಸಮಾಧಿ, ಗುಂಡಾಜನೇಯ ಪರಿಸರ

ಇಲ್ಲಿನ ಮೂರನೆಯ ಪ್ರಾಚೀನ ವೀರಗಲ್ಲು ೨ ೧/೨ ಅಡಿ ಎತ್ತರ ೧ ೧/೨ ಅಡಿ ಅಗಲದ ವೀರಗಲ್ಲು ಸ್ಮಾರಕವಾಗಿದೆ. ಒರಟು ಕಣಶಿಲೆಯ ಸ್ಮಾರಕ ಇದಾಗಿದೆ. ಇಲ್ಲಿಯೂ ಎರಡು ಹಂತಗಳ ಚಿತ್ರಣಗಳಿದ್ದು, ಕೆಳಗಿನ ಹಂತದಲ್ಲಿ ಇಬ್ಬರು ವ್ಯಕ್ತಿಗಳು ತಮ್ಮ ಕೈಗಳಲ್ಲಿ ಖಡ್ಗಗಳನ್ನು ಹಿಡಿದು ಪರಸ್ಪರ ಎದಿರು ಬದಿರಾಗಿ ಹೋರಾಡುತ್ತಿದ್ದಾರೆ.

ಎರಡನೇ ಹಂತದ ಹೋರಾಟದಲ್ಲಿ ಮಡಿದು ಸಾವನ್ನಪ್ಪಿರುವ ವೀರನನ್ನು ಅಪ್ಸರೆಯರು ಕೈ ಹಿಡಿದು ನಿಂತ ಭಂಗಿಯಲ್ಲಿ ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ. ಸ್ಮಾರಕದ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಚಿತ್ರಣಗಳಿವೆ. ಈ ಸ್ಮಾರಕದಲ್ಲಿನ ವೀರನು ಯಾವುದೋ ಕಾರಣದಿಂದ ಶತೃವಿನೊಡನೆ ಕಾದಾಡಿ ಮಡಿದಿದ್ದಾನೆ. ಕ್ರಿ.ಶ. ಸುಮಾರು ೧೬ನೇ ಶತಮಾನಕ್ಕೆ ಈ ವೀರಗಲ್ಲು ಸೇರುತ್ತದೆ.

ಈ ಕಲಾ ಕುಟೀರದ ಎಡಭಾಗದಲ್ಲಿ ಇರುವ ನಾಲ್ಕನೆಯ ಪ್ರಾಚೀನ ವೀರ–ಮಾಸ್ತಿ ಸ್ಮಾರಕವು ೩ ಅಡಿ ಎತ್ತರ ಮತ್ತು ೩ ಅಡಿ ಅಗಲ ಮತ್ತು ಅರ್ಧ ಅಡಿ ದಪ್ಪವನ್ನು ಹೊಂದಿದೆ. ಇದು ಕಪ್ಪು ವರ್ಣದ ಶಿಲೆಯಾಗಿದ್ದು ಒಂದೇ ಹಂತದ ಚಿತ್ರಣ ಇಲ್ಲಿದೆ. ಇಲ್ಲಿನ ವೀರನು ತನ್ನ ಎಡದ ಕೈನಿಂದ ಖಡ್ಗವನ್ನು ಹಿಡಿದಿದ್ದು ಬಲದ ಕೈಯನ್ನು ಮುಂದೆ ಚಾಚಿ ಮತ್ತೊಂದು ಆಯುಧವನ್ನು ಹಿಡಿದಿದ್ದಾನೆ. ಆದರೆ ಇದು ಯಾವ ಆಯುಧವೆಂಬುದು ಸ್ಪಷ್ಟವಿಲ್ಲ. ಈ ವೀರನ ಉಡುಗೆ ತೊಡುಗೆ ಅಲಂಕಾರಗಳನ್ನು ಗಮನಿಸಿದರೆ ಪ್ರಾಚೀನ ವೀರಗಲ್ಲು ಇದು ಎಂಬುದು ಸ್ಪಷ್ಟವಾಗುತ್ತದೆ. ಈ ವೀರನ ಚಿತ್ರಣದಲ್ಲಿ ಶಿರೋಮುಡಿ, ಕರ್ಣ ಮತ್ತು ಕಾಲುಗಳ ಆಭರಣಗಳಿವೆ. ಉತ್ತಮ ಕಚ್ಚೆ ಪಂಚೆಯ ಪೋಷಾಕು ಇವನಿಗೆ ಇದೆ. ಶಿರೋಮುಡಿಯಿಂದ ಇಳಿಬಿದ್ದ ಜಡೆ ಇಲ್ಲಿ ಗಮನಾರ್ಹ, ನಡುವಿನಲ್ಲಿ ಬಿಚ್ಚುಗತ್ತಿ ಇದೆ.

ವೀರನ ಹಿಂದೆ ಸತಿಯ ನಿಂತ ಚಿತ್ರಣವಿದ್ದು ಅಲಂಕೃತ ಚಿತ್ರಣ ಇವಳದ್ದಾಗಿದೆ. ಹಿರಿದಾದ ಶಿರೋಮುಡಿ ಕರ್ಣ ಕಾಲು ಮತ್ತು ಮುಂಗೈಗಳ ಆಭರಣಗಳು ಇವಳಿಗಿದ್ದು ಅಲಂಕೃತವಾದ ಉಡುಗೆ ಇದೆ. ಅಲ್ಲದೇ ಬಲಗೈನಲ್ಲಿ ಬಾಚಿ ಹಿಡಿದಿರುವ ತಾವರೆ ಮೊಗ್ಗಿನ ದಂಟಿದೆ. ಎಡಗೈಯನ್ನು ಇಳಿಬಿಟ್ಟಿರುವ ಚಿತ್ರಣವಿದೆ. ಇಲ್ಲಿಯೂ ಸಹ ವೀರನು ಯಾವುದೋ ಕಾರಣಕ್ಕಾಗಿ ಶತೃವಿನೊಡನೆ ಹೋರಾಡಿ ಮಡಿದಿದ್ದಾನೆ. ಈತನ ಸತಿಯು ಚಿತೆ ಏರಿ ಅಗ್ನಿ ಪ್ರವೇಶ ಮಾಡಿದ್ದಾಳೆ. ಈ ಪ್ರಾಚೀನ ಸ್ಮಾರಕದ ಕಾಲಮಾನವನ್ನು ಕ್ರಿ.ಶ. ಸುಮಾರು ೧೬ನೆಯ ಶತಮಾನವೆಂದು ನಿರ್ಧರಿಸಬಹುದಾಗಿದೆ.

ಇಲ್ಲಿರುವ ಐದನೆಯ ವೀರಗಲ್ಲು ಸಹ ಪ್ರಾಚೀನ ವೀರ–ಮಾಸ್ತಿ ಸ್ಮಾರಕವಾಗಿದ್ದು ೩ ೧/೨ ಅಡಿ ಎತ್ತರ ಮತ್ತು ೩ ಅಡಿ ಅಗಲವನ್ನು ಹೊಂದಿದ್ದು ೧ ಅಡಿ ದಪ್ಪನೆಯ ಕರಿಯ ಬಣ್ಣದ ಶಿಲೆಯಾಗಿದೆ. ಒಂದೇ ಹಂತದ ಚಿತ್ರಣವು ಇಲ್ಲಿದ್ದು ವೀರ ಮತ್ತು ಸತಿಯ ಚಿತ್ರಣವಿದೆ. ಹಿರಿದಾದ ದುಂಡನೆಯ ಗುರಾಣಿಯನ್ನು ತನ್ನ ಎಡದ ಕೈನಲ್ಲಿ ಹಿಡಿದಿರುವ ವೀರನು ತನ್ನ ಬಲದ ಕೈನಲ್ಲಿ ಹಿಡಿದ ಖಡ್ಗದಿಂದ ಹೋರಾಡುತ್ತಿದ್ದಾನೆ. ಬಲದ ತೋಳಿನ ಭಾಗವು ಒಡೆದು ಹೋಗಿದೆ. ಶಿರದಲ್ಲಿ ಎತ್ತಿ ಕಟ್ಟಿದ ಶಿರೋಮುಡಿ ಇದ್ದು ಶಿರದಿಂದ ಉದ್ದನೆಯ ಜಡೆ ಇಳಿಬಿಟ್ಟಿದೆ. ಉತ್ತಮ ಉಡುಗೆಗಳು ಇವನಿಗಿವೆ. ಈತನ ಹಿಂಬದಿಯಲ್ಲಿ ನಿಂತ ಸತಿಯ ಚಿತ್ರಣವಿದ್ದು ಇವಳಿಗೂ ಸಹ ಉತ್ತಮ ಉಡುಗೆ ತೊಡುಗೆಗಳ ಅಲಂಕಾರಗಳಿವೆ. ಇಲ್ಲಿನ ವೀರನು ಯಾವುದೋ ಕಾರಣದಿಂದಾಗಿ ಶತೃವಿನೊಡನೆ ಹೋರಾಡಿ ಮಡಿದಿದ್ದಾನೆ. ಈತನ ಸತಿಯು ಚಿತೆ ಏರಿ ಸಹಗಮನ ಪದ್ಧತಿ ಅನುಸರಿಸಿದ್ದಾಳೆ. ಕಾಲ ಕ್ರಿ.ಶ. ಸುಮಾರು ೧೪ನೇ ಶತಮಾನಕ್ಕೆ ಈ ವೀರ ಮಾಸ್ತಿ ಸ್ಮಾರಕವು ಸೇರುತ್ತದೆ.

ಬೆಂಗಳೂರು ದಕ್ಷಿಣ ಮತ್ತು ರಾಮನಗರ ಜಿಲ್ಲೆಗಳನ್ನು ಬೆಸೆಯುವ ಈ ರಾವುಗೊಡ್ಲು ಪರಿಸರವು ಪ್ರಾಚ್ಯಾವಶೇಷಗಳ ವಿಪುಲತೆಗಳಿಂದ ತುಂಬಿದೆ. ಪ್ರಾಗೈತಿಹಾಸಿಕ ಕಾಲವಾದ ಬೃಹತ್ ಶಿಲಾಯುಗ (ಕಾಲ ಕ್ರಿ.ಪೂ. ೮೦೦) ದಿಂದ ಇಂದಿನವರೆಗೂ ಅವಿರತವಾಗಿ ರಾಜಕೀಯ ಸಾಮಾಜಿಕ ಮತ್ತು ಧಾರ್ಮಿಕ ದೃಷ್ಟಿಯಿಂದ ನಡೆದು ಬಂದಿದ್ದು ಇಲ್ಲಿನ ಗುಂಡಾಂಜನೇಯ ದೇವಾಲಯದ ಸಾಂಸ್ಕೃತಿಕ ಚಟುವಟಿಕೆ ಜೀವಂತವಾಗಿದೆ. ವಿಸ್ತಾರವಾದ ಬೃಹತ್ತಾದ ದೇವಾಲಯದ ಮುಂದೆ ೩೦ ಅಡಿ ಎತ್ತರದ ಗರುಡಗಂಬವಿದೆ. ದೊಡ್ಡದಾದ ಕಲ್ಯಾಣಿ ಇಲ್ಲಿದೆ. ಯಂತ್ರಗಳ ರೇಖಾಚಿತ್ರಗಳು, ನಮಸ್ಕಾರದ ರೇಖಾ ಮತ್ತು ಉಬ್ಬುಶಿಲ್ಪಗಳು ವಿಫುಲವಾಗಿವೆ. ಅಲ್ಲದೆ ಸುಮಾರು ನಾಲ್ಕು ಅಡಿ ಎತ್ತರದ ೪ ಶಿವಲಿಂಗಗಳು ಇಲ್ಲಿದ್ದು, ವೈಷ್ಣವ ಮತ್ತು ಶೈವ ಆರಾಧನೆಗಳ ಜೊತೆಗೆ ಜಾನಪದ ವೈವಿಧ್ಯಮಯತೆ ಇಲ್ಲಿ ಅಡಗಿದೆ.

೧೨೬

ಹಿರಿಯೂರು ತಾಲ್ಲೂಕು ಬಿದರಕೆರೆಯ ಪ್ರಾಚ್ಯಾವಶೇಷಗಳು

ಕಾಂತರಾಜ್.ಎಚ್.ದೊಡ್ಮನೆ*

ಬಿದರಕೆರೆ; ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು, ಧರ್ಮಪುರ ಹೋಬಳಿಯಲ್ಲಿರುವ ಪುಟ್ಟ ಗ್ರಾಮ. ವಾಸ್ತವದಲ್ಲಿ ಇದು ವೇದಾವತಿ ನದಿದಂಡೆ ಮೇಲಿರುವ ಎಡೆ. ವೇದಾವತಿ ಜಲಾನಯನ ಪ್ರದೇಶವೆಂದು ಕರೆಯಲಾಗಿರುವ ಚಿತ್ರದುರ್ಗ ಜಿಲ್ಲೆಯಲ್ಲಿ ಈ ನದಿ ಹರಿವಿನ ವ್ಯಾಪ್ತಿಯಲ್ಲಿರುವ ತಾಲ್ಲೂಕುಗಳೆಂದರೆ ಹೊಸದುರ್ಗ, ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು, ಕೆಳಕಣಿವೆಯಲ್ಲಿ ಈ ನದಿಗೆ ಇರುವ ಹೆಸರು ಚಿನ್ನಹಗರಿ ಅಥವಾ ಸಣ್ಣಹಗರಿ. ಚರಿತ್ರೆಪೂರ್ವ ಕಾಲದಿಂದಲೂ ಈ ನದಿಕಣಿವೆ ಜನವಸತಿಯ ತಾಣವಾಗಿದ್ದಿತೆನ್ನಲು ಈ ನದಿಯ ಎರಡೂ ದಂಡೆಗಳಲ್ಲಿ ಕಂಡು ಬರುವ ಪ್ರಾಚೀನ ಜನಜೀವನದ ಕುರುಹುಗಳೇ ಸಾಕ್ಷಿ. ಈ ತನಕ ಈ ದಂಡೆಗಳಲ್ಲಿ ಕೈಗೊಳ್ಳಲಾದ ಪರಿವೀಕ್ಷಣ ಕಾರ್ಯದಲ್ಲಿ ಚಳ್ಳಕೆರೆ ತಾಲ್ಲೂಕಿನಲ್ಲಿ ಬೃಹತ್‌ಶಿಲಾಸಂಸ್ಕೃತಿ ಕುರುಹುಗಳನ್ನು ಈಗಾಗಲೇ ಚಿತ್ರದುರ್ಗ ಸಂಶೋಧನ ತಂಡವು ಬೆಳಕಿಗೆ ತಂದಿದೆ. (ಪತ್ರಿಕಾ ವರದಿ : ೭ ಆಗಸ್ಟ್ ೧೯೯೮) ಈಗ ಈವರೆಗೂ ಬಿದರಕೆರೆಯಲ್ಲಿ ವರದಿಯಾಗದ ಶಿಲಾಯುಗ ಕಾಲದ ಪ್ರಾಚೀನ ಕುರುಹುಗಳಿಂದಾಗಿ ಈ ನದಿ ಕಣಿವೆ ಮತ್ತೊಮ್ಮೆ ಸಂಶೋಧಕರ ಗಮನ ಸೆಳೆದಿದೆ.

ಗ್ರಾಮವು ಉತ್ತರಕ್ಕೆ ಚಳ್ಳಕೆರೆ, ಪಾವಗಡ, ದಕ್ಷಿಣಕ್ಕೆ ಹಿರಿಯೂರು, ಶಿರಾ, ಪೂರ್ವಕ್ಕೆ ಆಂಧ್ರ ಕಲ್ಯಾಣದುರ್ಗ, ಪಶ್ಚಿಮಕ್ಕೆ ಹೊಸದುರ್ಗ, ಚಿತ್ರದುರ್ಗ ತಾಲ್ಲೂಕುಗಳಿಂದ ಸುತ್ತುವರಿದಿದೆ. ಭೌಗೋಳಿಕವಾಗಿ ಸುತ್ತಮುತ್ತ ಯಾವುದೆ ಬೆಟ್ಟಗುಡ್ಡಗಳಿಲ್ಲದೇ ಅಲ್ಲಲ್ಲಿ ಚಿಕ್ಕ ಚಿಕ್ಕ ಕಣ ಶಿಲೆಯ ಗುಂಪುಗಳು ಕಂಡುಬರುತ್ತವೆ. ಇದು ಐತಿಹಾಸಿಕವಾಗಿ ಶಿಲಾಯುಗದಿಂದ ಪಾಳೆಯಗಾರರವರೆಗೆ ಆಳ್ವಿಕೆ ನಡೆಸಿದ ಬಗ್ಗೆ ಲಿಖಿತ ದಾಖಲೆಗಳು ಮಾಹಿತಿ ನೀಡುತ್ತವೆ. ಗ್ರಾಮಕ್ಕೆ ಬಿದಿರುಕೆರೇ, ಬಿದಿರಕೆರೆ ಎಂಬ ಪ್ರಾಚೀನ ಹೆಸರುಗಳಿದ್ದು; ಇಂದು ಬಿದರಕೆರೆ ಎಂದು ನಾಮಕರಣಗೊಂಡಿದೆ.

ಈಗಿನ ಬಿದರಕೆರೆ ಗ್ರಾಮ ಹೊಸದು; ಹಳೆಯ ಗ್ರಾಮ ನಿವೇಶನ ನದಿಯ ಎಡದಂಡೆ ಸನಿಹದಲ್ಲಿದೆ. ಗ್ರಾಮದ ಹಳೆಯ ನಿವೇಶನದಲ್ಲಿ ಕಂಡು ಬರುವ ಪ್ರಾಕ್ಚಾರಿತ್ರಿಕ ಅವಶೇಷಗಳು ಕ್ಷೇತ್ರಕಾರ್ಯದಲ್ಲಿ ದೊರೆತಿದ್ದು ಅವುಗಳ ವಿಶ್ಲೇಷಣೆಯನ್ನು ಈ ಕೆಳಗಿನಂತೆ ವಿವೇಚಿಸಲಾಗಿದೆ. ಬೂದು ಬಣ್ಣದ, ಬೂದು ಮಿಶ್ರಿತ ಕಪ್ಪುಬಣ್ಣದ, ಕೆಂಪುಬಣ್ಣದ, ಕಪ್ಪುಬಣ್ಣದ ಮಡಿಕೆಯ ಭಾಗಗಳು, ಹಲವು ರೀತಿಯ ಕಂಠದ ಭಾಗಗಳು, ಸಮತಟ್ಟಾದ, ತಟ್ಟೆಯಾಕಾರದ ಮಡಿಕೆ ತುಣುಕುಗಳು, ಚಿಕ್ಕ ಮಡಿಕೆ ತುಮಡುಗಳು, ನಯವಾದ ಮಡಿಕೆ ತುಣುಕುಗಳು, ಕಪ್ಪುಬಣ್ಣದ ಮಡಿಕೆಯ ಮೇಲೆ ಕೆಂಪು ಬಣ್ಣ ಲೇಪನ ಮಾಡಿರುವ ತುಣುಕುಗಳು ದುಂಡಾದ ಬೂದು ಮಿಶ್ರಿತ ಕಪ್ಪು ಮೇಲ್ಮೈ ಒಳಗಡೆ ಬೂದುಬಣ್ಣದ ಮಡಿಕೆ ತುಂಡುಗಳು, ಏಣು ಏಣುಗಳಾಗಿರುವ ದೊಡ್ಡ ಗೆರೆಗಳು, ಮಡಿಕೆಯ ಕಂಠಭಾಗ, ಓರೆಯಾಗಿ ಹೆಬ್ಬೆರುಳಿನಿಂದ ಒತ್ತಿದ ಕಂಠದ ಪಕ್ಕದಲ್ಲೇ ಉಗುರಿನಿಂದ ಕೊರೆದಿರುವ ಗೆರೆಗಳು, ಕೈಯಿಂದ ಮಾಡಿದ ಸಾಕಷ್ಟು ದೀಪಗಳು, ಕಬ್ಬಿಣ ಕರಗಿಸಿದ ನಂತರ ಉಳಿಯುವ ಕಿಟ್ಟ ಈ ನೆಲೆಯಲ್ಲಿ ತುಂಬಾ ಹರಡಿಕೊಂಡಿವೆ ಹಾಗೂ ಕೆಲಸು ಮಣ್ಣಿನಿಂದ ಕಟ್ಟಿದ ಕಟ್ಟಡಗಳ ತಳಪಾಯಗಳು ವಾಸ್ತು ನಿರ್ಮಾಣದ ತಂತ್ರ ಮತ್ತು ಪರಂಪರೆ ಕುರಿತು ಆಗಿನ ಜನಜೀವನ ಕುರಿತು ಸ್ಥೂಲಪರಿಚಯ ನೀಡುತ್ತವೆ.

ನೆಲೆಯಲ್ಲಿ ತ್ರಿಭುಜಕಾರದ ವಿವಿಧ ಆಯುಧಗಳು ದೊರೆತಿದ್ದು ಅವು ೫ ಸೆಂ.ಮೀ. ಉದ್ದ ೩ ಸೆಂ.ಮೀ ತಳದ ಸುತ್ತಳತೆ ತುದಿಯ ಸುತ್ತಳತೆ ೩ ೧/೨ ಸೆಂ.ಮೀ. ಇದ್ದು ತಳಭಾಗ ಸಮತಟ್ಟಾಗಿ ಮೊನೆ ಸವೆದಿದೆ. ಈ ಆಯುಧದ ಮೇಲೆ ಅಲ್ಲಲ್ಲಿ ಚಕ್ಕೆ ತಗೆದಿದೆ. ಆಯುಧ ತ್ರಿಭುಜಾಕಾರವಾಗಿ ಕಾಣುತ್ತದೆ. ಈ ಆಯುಧವನ್ನು ಇತರೆ ಆಯುಧಗಳನ್ನು ತಯಾರಿಸುವಾಗ ಚಕ್ಕೆ ತೆಗೆಯಲು ಒಳಸಿರಬಹುದು. ಜೊತೆಗೆ ದೊಡ್ಡ ಚಕ್ಕೆಗಳನ್ನು ತೆಗೆದ ಮೇಲೆ ಚಿಕ್ಕ ಚಿಕ್ಕ ಚಕ್ಕೆ ತೆಗೆದು ಸಮತಟ್ಟು ಮಾಡಲು ಬಳಸಿರಬಹುದು. ಮತ್ತೊಂದು ಆಯುಧ ೩ ಇಂಚು ಉದ್ದ, ೪ ಇಂಚು ಅಗಲವಿರುವ ಕಲ್ಲಿನಾಯುಧದ ಕೆಳಗೆ ಮತ್ತು ಮೇಲ್ಭಾಗ ಚಕ್ಕೆ ತೆಗೆದು ಸಮನಾಗಿ, ನಯವಾಗಿ ಮಾಡಿಕೊಂಡಿದ್ದಾರೆ. ಕೆಳಭಾಗದಲ್ಲಿ ೧ ಇಂಚು ಉದ್ದದ ಮೊನೆಯಿದ್ದು, ಹಿಂಭಾಗ ಬುಗುಟಾಗಿ ಕಾಣುತ್ತದೆ.

* ಪಿಹೆಚ್.ಡಿ ಸಂಶೋಧಕ ಹಾಗೂ ಉಪನ್ಯಾಸಕರು, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ.











ಇಂದು ಈ ನೆಲೆಯನ್ನು ಕೃಷಿಗೆ ಅಳವಡಿಸಿದ್ದು ಭೂಮಿಯ ಮೇಲ್ಪದರದಲ್ಲಿ ಸ್ವಲ್ಪ ಬೂದಿ ಕಂಡು ಬರುತ್ತದೆ. ೧ ರಿಂದ ೨ ಅಡಿ ಆಳದಲ್ಲಿ ಬೂದಿ ಹೇರಳವಾಗಿ ಕಂಡು ಬರುತ್ತಿದೆ. ಬೂದಿಯ ಜೊತೆಗೆ ಬೂದು, ಬೂದು ಮಿಶ್ರಿತ ಕಪ್ಪು ಬಣ್ಣದ ಮಂದ ಬಣ್ಣದ ಕೆಂಪು ಮಡಿಕೆಯ ತುಣುಕುಗಳು ಸಿಕ್ಕುತ್ತಿವೆ. ಈ ಜಮೀನಿನ ಒಡೆಯ ಭೀಮಣ್ಣನವರನ್ನು ವಿಚಾರಿಸಿದಾಗ ನಮ್ಮ ತಂದೆ ಕಾಲದಲ್ಲಿ ಹೊಗೆ ಸೊಪ್ಪು (ತಂಬಾಕು) ಬೆಳೆಯುತ್ತಿರುವಾಗ ನೀರು ಸಂಗ್ರಹಣೆಗೆಂದು ೬ ರಿಂದ ೭ ಅಡಿ ಗುಂಡಿ ತೆಗೆಯುವಾಗ ದುಂಡಾದ ದೊಡ್ಡ ಮಡಿಕೆಗಳು ಅದರ ಒಳಗೆ ಭತ್ತದ ಒಟ್ಟು ಹವಳದ ಮಣಿಗಳು, ಮೂಳೆಗಳು, ಆಯುಧಗಳು ಮಣ್ಣಿನ ದೀಪಗಳು, ಕಬ್ಬಿಣ ಕಿಟ್ಟಗಳು ಹಾಗೂ ಮಣ್ಣಿನ ಇಟ್ಟಿಗೆ ಗೋಡೆ ತಳಪಾಯಗಳು ಸಿಕ್ಕುತ್ತಿದ್ದವು ಎಂದು ಅಭಿಪ್ರಾಯಪಟ್ಟರು. ಈ ನೆಲೆಯನ್ನು ಭೂ ಸಂಶೋಧನೆಗೆ ಒಳಪಡಿಸಿದರೆ ಸ್ಪಷ್ಟ ಮಾಹಿತಿ ಅರಿತುಕೊಳ್ಳಬಹುದು.

ವೀರಗಲ್ಲು

ಇದು ಬಿದರಕೆರೆಯ ಉತ್ತರಕ್ಕೆ ಹಾಳು ನಿವೇಶನದಲ್ಲಿ ಕಂಡು ಬಂದಿದ್ದು, ಇದನ್ನು ಬಿಳಿ ಶಿಲೆಯಲ್ಲಿ ಪೂರ್ವಾಭಿಮುಖವಾಗಿ ಖಂಡರಿಸಲಾಗಿದೆ. ಸುಮಾರು ೪ ಅಡಿ ಎತ್ತರ ೨ ಅಡಿ ಅಗಲ ಮತ್ತು ೪ ಇಂಚು ದಪ್ಪವಾಗಿದೆ. ಇದರಲ್ಲಿ ವೀರಯೋಧನು ಬಲಗೈನಲ್ಲಿ ಖಡ್ಗ ಹಿಡಿದು, ಎಡಗೈನಲ್ಲಿ ಗುರಾಣಿ ಹಿಡಿದಿದ್ದಾನೆ. ಕೊರಳಿಗೆ ಕಂಠಾಭರಣ, ತೋಳ್ಬಂದಿ, ಕೈಕಡೆಗ, ಕಾಲ್ಕಡಗ, ಕಿವಿಯಲ್ಲಿ ರುದ್ರಾಕ್ಷಿ ಓಲೆ ಧರಿಸಿದ್ದಾನೆ. ತಲೆಯ ಮೇಲ್ಭಾಗದಲ್ಲಿ ಕೂದಲಿನ ತುರುಬು ನೆತ್ತಿಯ ಮೇಲಿದೆ. ಸೊಂಟದ ಮೇಲೆ ವೀರಗಚ್ಚೆಯನ್ನು ಕಟ್ಟಿಕೊಂಡು ಸಮಭಂಗಿಯಲ್ಲಿ ನಿಂತಿದ್ದಾನೆ. ತಲೆಯ ಮೇಲ್ಭಾಗದಲ್ಲಿ ಸೂರ್ಯ–ಚಂದ್ರ ಉಬ್ಬು ಶಿಲ್ಪಗಳಿವೆ. ಈ ಶಿಲ್ಪವನ್ನು ಗಮನಿಸಿದಾಗ (ಕ್ರಿ.ಶ. ೧೫–೧೬ನೇ ಶತಮಾನ) ಕಾಲದ ವೀರಗಲ್ಲು ಶಿಲ್ಪವನ್ನು ಹೋಲುತ್ತದೆ.

ಮಂತ್ರಗಲ್ಲು ಶಾಸನ

ನವ ಗ್ರಾಮದ ಊರ ಬಾಗಿಲ ಬಳಿ ಅಪ್ರಕಟಿತ ಮಂತ್ರಗಲ್ಲುಶಾಸನ ದೊರೆತಿದ್ದು, ಈ ಶಾಸನವು ೧೬ ಚೌಕಗಳಲ್ಲಿ ಕನ್ನಡ ಅಕ್ಷರಗಳು ಮತ್ತು ಕನ್ನಡ ಅಂಕಿಗಳಲ್ಲಿ ಬರೆಯಲಾಗಿದೆ. ಶಾಸನದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರ ಹಾಗೂ ಮೂರು ತ್ರಿಶೂಲಗಳನ್ನು ಕೆತ್ತಲಾಗಿದೆ. ಶಾಸನವು ಓಂ ಯಿಂದ ಶುರುವಾಗಿ ಅ ಯಿಂದ ಅಃ ವರೆಗೂ ಅಕ್ಷರಗಳನ್ನು ಬರೆದು ಪ್ರತಿಯೊಂದು ಅಕ್ಷರದ ಕೆಳಗೆ ಅಂಕಿಗಳನ್ನು ಬರೆಯಲಾಗಿದೆ. ಈ ಶಾಸನದ ಭಾಷೆ ಸುಮಾರು ೧೭–೧೮ನೇ ಶತಮಾನದ ಕಾಲದ್ದೆಂದು ಊಹಿಸಬಹುದು. ಇದೊಂದು ಮಂತ್ರಗಲ್ಲು ಆಗಿದ್ದು ಯಾವುದೋ ಒಂದು ಸಂದರ್ಭದಲ್ಲಿ ಊರಿನ ಧನ–ಕರುಗಳು ವಿಪರೀತ ಕಾಯಿಲೆಗೆ ತುತ್ತಾಗಿ ಸಾವನ್ನಪ್ಪುತ್ತಿರುವಾಗ ಅದರ ನಿವಾರಣೆಗಾಗಿ ಶಾಸ್ತ್ರೋಕ್ತವಾಗಿ ಮುನಿಗಳಿಂದ ಮಂತ್ರವನ್ನು ಪಠಿಸಿ ಶಾಶ್ವತವಾಗಿ ಇರುವಂತೆ ಕಲ್ಲಿನ ಮೇಲೆ ಬರೆಸಿದಾಗ ಧನ–ಕರುಗಳು ಬದುಕುಳಿದಿರಬಹುದು. ಗ್ರಾಮದ ಹಿರಿಯರನ್ನು ವಿಚಾರಿಸಿದಾಗ ಅವರು ಇದನ್ನೇ ಅಭಿಪ್ರಾಯಪಟ್ಟರು. ಗ್ರಾಮದ ಜನ ಈ ಶಾಸನಕ್ಕೆ ಯುಗಾದಿ ಮತ್ತು ಇತರೆ ವಿಶೇಷ ದಿನಗಳಲ್ಲಿ ಪೂಜೆ ಸಲ್ಲಿಸುತ್ತಾ ಬಂದಿದ್ದಾರೆ.

ಒಟ್ಟಾರೆಯಾಗಿ ಹಳೆಯ ಗ್ರಾಮ ನಿವೇಶನವು ವೇದಾವತಿ ನದಿಯ ಎಡದಂಡೆಯ ಪ್ರಮುಖ ನೆಲೆಯಾಗಿದ್ದು, ಮಡಿಕೆ ಭಾಗಗಳನ್ನು ಕಲ್ಲಿನ ಆಯುಧಗಳು ಕಬ್ಬಿಣದ ಕಿಟ್ಟಗಳು ಹಾಗೂ ೧೭ನೇ ಶತಮಾನದ ವೀರಗಲ್ಲು ಇತರೆ ಪ್ರಮುಖ ಅಂಶಗಳು ವಿಶೇಷವಾಗಿ ಭೂ ಅನ್ವೇಷಣೆಯಲ್ಲಿ ದೊರಕಿರುವುದರಿಂದ ಈ ನೆಲೆಯನ್ನು ಭೂ ಸಂಶೋಧನೆಗೆ ಒಳಪಡಿಸಿದರೆ ಕರ್ನಾಟಕದ ಇತಿಹಾಸ ಮೇಲೆ ಹೊಸ ಮಾಹಿತಿ ನೀಡಿ ಹೊಸ ಬೆಳಕು ಚೆಲ್ಲಬಹುದು.

[ನನ್ನ ಕ್ಷೇತ್ರಾಧ್ಯಯನಕ್ಕೆ ಸಲಹೆ ಸೂಚನೆಗಳನ್ನು ನೀಡಿದ ಖ್ಯಾತ ವಿದ್ವಾಂಸರಾದ ಡಾ. ಎಸ್. ತಿಪ್ಪೇಸ್ವಾಮಿ ಹಾಗೂ ಸ್ನೇಹಿತ ಶಿವರಾಜ್.ವಿ. ಇವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ]

ಆಧಾರ ಗ್ರಂಥಗಳು

೧. ಅ. ಸುಂದರ (ಸಂ) ಇಂಡಿಯನ್ ಪ್ರೀ ಹಿಸ್ಟರಿ ಅಂಡ್ ಪ್ರೊಟೋ ಹಿಸ್ಟರಿ, ಬೆಂಗಳೂರು, ೨೦೦೪.

೨. ಅ. ಸುಂದರ (ಸಂ) ಕರ್ನಾಟಕ ಪ್ರಾಗೈತಿಹಾಸಿಕ ಕಾಲ, ಬೆಂಗಳೂರು, ೧೯೭೧.

೩. ಎಪಿಗ್ರಾಫಿಯಾ ಕರ್ನಾಟಿಕಾ ಶಾಸನ ಸಂಪುಟ ೧೧, ಚಿತ್ರದುರ್ಗ ಜಿಲ್ಲೆ.

೪. ಕೆ.ಬಿ. ಶಿವತಾರಕ್ (ಸಂ) ಕರ್ನಾಟಕ ಪುರಾತತ್ವ ನೆಲೆಗಳು, ಕನ್ನಡ ವಿ.ವಿ. ಪ್ರಸಾರಂಗ, ಹಂಪಿ, ೨೦೦೧.

೫. ಕ್ಷೇತ್ರಕಾರ್ಯ ವರದಿ, ನವೆಂಬರ್ ೨೦೧೬.

೬ ಗೋಪಾಲ್.ಆರ್. (ಸಂ) ಚಿತ್ರದುರ್ಗ ಜಿಲ್ಲೆಯ ಇತಿಹಾಸ & ಪುರಾತತ್ವ, ಹೊಸಪೇಟೆ, ೨೦೦೫.

೭. ಟಿ. ಗಿರಿಜಾ, ಚಿತ್ರದುರ್ಗ ಜಿಲ್ಲಾ ದರ್ಶಿನಿ.

೮. ರಾಮದಾಸರೆಡ್ಡಿ.ಎಸ್.ಜಿ., ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ, ಬೆಂಗಳೂರು, ೨೦೦೯.

೧೨೭

ಕ್ಯಾಸನೂರು ಮನೆತನ ಮತ್ತು ಪ್ರಾಚ್ಯಾವಶೇಷಗಳು

ಮಲ್ಲೇಶಪ್ಪ ಒ. ಗೊಲ್ಲರ್* ಪ್ರೊ. ಎಸ್.ಬಿ. ಹಿರೇಮಠ**

ಕ್ಯಾಸನೂರು ಗ್ರಾಮವು ಹಾನಗಲ್ ತಾಲೂಕಿನಿಂದ ನೈರುತ್ಯಕ್ಕೆ **೨೪ ಕಿ.ಮೀ.** ಅಂತರದಲ್ಲಿದೆ. ಈ ಗ್ರಾಮವು **೭೪೧ ಹೆಕ್ಟರ್** ಪ್ರದೇಶದಲ್ಲಿ ವಿಸ್ತರಿಸಿಕೊಂಡಿದೆ. ಇದು ಅರೆಮಲೆನಾಡು ಪ್ರದೇಶವಾಗಿದೆ. ಪೂರ್ವ ದಿಕ್ಕಿನಲ್ಲಿ **ಬಯಲು ಪ್ರದೇಶವಿದ್ದು**, ಪಶ್ಚಿಮ, ದಕ್ಷಿಣ ಮತ್ತು ಉತ್ತರ ದಿಕ್ಕಿನಿಂದ **ಕಾಡು** ಆವರಿಸಿಕೊಂಡಿದೆ. ಈ ಗ್ರಾಮದ ಸ್ಥಳನಾಮವು ಶಾಸನೋಕ್ತವಾಗಿ **"ಕೇಸಳೂರು"** ಮತ್ತು **"ಕೇಸನೂರು"** ಎಂದಿದೆ.

ಕ್ರಿ.ಶ. ೧೦ನೆಯ ಶತಮಾನಕ್ಕಿಂತಲೂ ಪೂರ್ವದಲ್ಲಿ ಕ್ಯಾಸನೂರಿನ ಅಸ್ಥಿತ್ವ ಕಂಡುಬರುತ್ತದೆ. **ಕ್ರಿ.ಶ.೯೪೬** ರ ರಾಷ್ಟ್ರಕೂಟರ ದೊರೆ ೩ನೇ ಕೃಷ್ಣನ ಶಾಸನವೊಂದು ದೊರೆತಿದ್ದು, ಈ ಶಾಸನದಲ್ಲಿ ಈ ಗ್ರಾಮದ ಉಲ್ಲೇಖವಿದೆ. **(AEI Vol. 16 P.284)** ಈ ಗ್ರಾಮವು **ಚಿಕೌಂಶಿ ಹೊಸುರು** ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತದೆ. ಮತ್ತು ತಿಳುವಳ್ಳಿ ಮತ್ತು ಶಿರಸಿಯ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ.

ಬಸನಗೌಡ ರುದ್ರಗೌಡ ಪಾಟೀಲ್

ಹಿನ್ನೆಲೆ

ಬಸನಗೌಡ ಪಾಟೀಲರ ಮನೆತನವು ಕ್ಯಾಸನೂರು (ಕೇಸಳೂರು) ಗ್ರಾಮದಲ್ಲಿ ದೊಡ್ಡ ಮನೆತನವಾಗಿದೆ. ಇವರು ಮೂಲತಃ ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಬೀದರಕೋಟೆಯವರು. ಈ ಮನೆತನದ ಮೂಲ ಪುರುಷರೆಂದರೆ ದೊಡ್ಡಬಸನಗೌಡ ಸಣ್ಣಬಸನಗೌಡ ಮತ್ತು ತಂಗಿಯಾದ "ನೀಲಗಂಗಮ್ಮ".

ಇವರು ಮೂಲತಃ ಕ್ಷತ್ರಿಯರಾಗಿದ್ದರು. ನಂತರ ಲಿಂಗದೀಕ್ಷೆ ಪಡೆದುಕೊಂಡರು. ಇವರಿಗೆ ೧೦೦ ಕೂರಿಗೆ (೪೦೦ ಎಕರೆ) ಜಮೀನನ್ನು ಹೊಂದಿದ್ದರು. ಒಂದು ದಿನ ನೀಲಗಂಗಮ್ಮ ಗದ್ದೆಗೆ ಹೋಗುವಾಗ ಬಿಜಾಪುರದ ಆದಿಲ್‌ಷಾಹಿ ಸೈನಿಕರು ಅವಳನ್ನು ನೋಡಿ ಆದಿಲ್‌ಷಾಹಿ ದೊರೆಗೆ ತಿಳಿಸುತ್ತಾರೆ. ಆ ದೊರೆ ನೀಲಗಂಗಮ್ಮಾಳನ್ನು ಮದುವೆ ಮಾಡಿಕೊಡಲು ಬಲಾತ್ಕರಿಸುತ್ತಾನೆ. ಆದ್ದರಿಂದ ಈ ಗೌಡ್ರ ಮನೆಗೆ ಕಾವಲುಗಾರರಾಗಿ ಆರು ಜನ ಸೈನಿಕರನ್ನು ನೇಮಿಸುತ್ತಾನೆ. ದೊಡ್ಡಬಸನಗೌಡ್ರ ಮತ್ತು ಸಣ್ಣಬಸನಗೌಡ್ರ ಲಿಂಗಾಯತರಾಗಿದ್ದರು. ಆದರೆ ಆದಿಲ್‌ಶಾಹಿ ದೊರೆ ಮುಸ್ಲಿಂ ಆಗಿರುವುದರಿಂದ ತಮ್ಮ ಮನೆಯ ಹೆಣ್ಣು ಮಗಳನ್ನು ಕೊಡಲು ಒಪ್ಪಿಗೆ ಇರುವುದಿಲ್ಲಾ. ಆದ್ದರಿಂದ ಈ ಒಂದು ಸಂಕಷ್ಟ ಪರಿಸ್ಥಿತಿಯಿಂದ ಪಾರಾಗಲು ಗೌಡ್ರ ಸಹೋದರರು (ದೊಡ್ಡ ಬಸನಗೌಡ ಮತ್ತು ಸಣ್ಣಬಸನಗೌಡ) ಒಂದು ಉಪಾಯವನ್ನು ಕಂಡುಕೊಂಡರು. ಷಾಹಿ ದೊರೆಗೆ ಬರುವ ಅಮವಾಸ್ಯೆಯ ದಿನ ನಮ್ಮ ಮನೆಯಲ್ಲಿ ಹಬ್ಬವಿದೆ. ಆ ಹಬ್ಬ ಮುಗಿದ ನಂತರ ನಮ್ಮ ತಂಗಿಯಾದ ನೀಲಗಂಗಮ್ಮಳನ್ನು ನಿಮಗೆ ಮದುವೆ ಮಾಡಿಕೊಡುತ್ತೇವೆ ಎಂದು ಹೇಳಿದರು.

ಅಮವಾಸ್ಯೆಯ ಹಬ್ಬದ ದಿನದಲ್ಲಿ ಸಿಹಿ ತಿಂಡಿಯಾದ ಹುಗ್ಗಿಯನ್ನು ಮಾಡಿ ಅದರಲ್ಲಿ ಮತ್ತೇರುವ (ಮಂಪರು) ವಿಷ ಹಾಕಿ ತಮ್ಮ ಮನೆಗೆ ಕಾವಲುಗಾರರಾದ ಆರು ಜನ ಸೈನಿಕರಿಗೆ ತಿನಿಸಿದರು. ಅವರು ಮೂರ್ಛೆ ಬಂದು ಮಲಗಿದಾಗ ಈ ದೊಡ್ಡ ಬಸನಗೌಡ ಮತ್ತು ಸಣ್ಣ ಬಸನಗೌಡರು ಎರಡು ಕುದುರೆಗಳನ್ನು ತೆಗೆದುಕೊಂಡು ತಮ್ಮ ತಂಗಿಯಾದ ನೀಲಗಂಗಾಮ್ಮಳನ್ನು ಕರೆದುಕೊಂಡು **ಕ್ರಿ.ಶ. ೧೩೮೫**ರಲ್ಲಿ **ಬಾಗಲಕೋಟೆಗೆ** ಬಂದು ನೆಲೆಸುತ್ತಾರೆ. ಅಲ್ಲಿಯೇ ಒಂದು ವರ್ಷ ನೆಲೆಸಿ **ಕ್ರಿ.ಶ. ೧೩೮೬**ರಲ್ಲಿ **ಕ್ಯಾಸನೂರುಗೆ** ಬಂದು ನೆಲೆಸುತ್ತಾರೆ.

ನಂತರ ಆಂಧ್ರಪ್ರದೇಶದ ಪುಂಗನೂರು ಅರಸರು ಲಿಂಗದೀಕ್ಷೆ ಸ್ವೀಕರಿಸಿದ್ದರಿಂದ ಈ ಗೌಡರ ಮನೆಯ ಮಗಳಾದ ನೀಲಗಂಗಾಮ್ಮಳನ್ನು ಪುಂಗನೂರು ಅರಸನಿಗೆ ವಿವಾಹ ಮಾಡಿಕೊಡುತ್ತಾರೆ. ಈ ಪುಂಗನೂರು ಅರಸರು ತಮ್ಮ

*

ಸಂಬಂಧದ ಗುರುತಿಗಾಗಿ ಒಂದು ವಜ್ರದ ಉಂಗುರವನ್ನು ಗೌಡ ಮನೆಯವರಿಗೆ ಕೊಟ್ಟಿರುತ್ತಾರೆ. ಆದರೆ ಉಂಗುರವನ್ನು ಬೇರೆ ವ್ಯಕ್ತಿ ಮೋಸದಿಂದ ಪಡೆದು ಗದ್ದೆ ಕೆಲಸ ಮಾಡುವಾಗ ಕಳೆದು ಹೋಯಿತು ಎಂದು ಹೇಳಿ ಆತನು ಪುಂಗನೂರು ಅರಸರ ಹತ್ತಿರ ಹೋಗಿ ರಾಜಗೌರವಕ್ಕೆ ಪಾತ್ರನಾಗಿರುತ್ತಾನೆ.

ಮುಂದೆ ಈ ಗೌಡ ವಂಶದಲ್ಲಿ ಜನಿಸಿದ **"ಇರಾಜಮ್ಮ"** ಎಂಬ ಕನ್ಯೆಯನ್ನು ಪುಂಗನೂರು ಅರಸನಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ. ಈ ವೈವಾಹಿಕ ಸಂಬಂಧಗಳ ಪ್ರತೀಕವಾಗಿ ಪುಂಗನೂರು ಅರಸರು ಒಂದು ಮಾವಿನಗಿಡವನ್ನು ಗೌಡರಿಗೆ ನೀಡಿರುತ್ತಾರೆ. ಆ ಮರವು ಇತ್ತೀಚೆಗೆ ಅವಸಾನ ಹೊಂದಿದೆ. ಇದನ್ನು ಪುಂಗನೂರು ಗಿಡ ಎಂದೇ ಕರೆಯಲ್ಪಡುತ್ತಿತ್ತು. ಈ ಮರದ ಹಣ್ಣನ್ನು ತಿಂದಿರುವದಾಗಿ ೬೫ ವರ್ಷ ವಯಸ್ಸಿನ ಹಿರಿಯರಾದ ಬಸನಗೌಡ ರುದ್ರಗೌಡ ಪಾಟೀಲರು ಹೇಳಿದ್ದಾರೆ.

ಆಯುಧಗಳು

ಪ್ರಸ್ತುತವಾಗಿ ಗೌಡರ ಮನೆಯಲ್ಲಿ ಎಂಟು ಖಡ್ಗಗಳಿವೆ. ಒಂದು ಪರಶು, ಒಂದು ಕೈಕತ್ತಿ ಇದೆ. ಮೊದಲು ಸುಮಾರು ನಲವತ್ತು (೪೦) ಕತ್ತಿಗಳಿದ್ದವು ಎಂದು ಬಸನಗೌಡ್ರ ಪಾಟೀಲರು ಹೇಳಿದ್ದಾರೆ. ಇವರ ಸಂಪ್ರದಾಯದಂತೆ ಪ್ರತಿ ದಸರಾ ಹಬ್ಬಕ್ಕೆ ಆಯುಧಗಳನ್ನು ತೊಳೆದು ಪೂಜೆ ಮಾಡುವ ಸಂಪ್ರದಾಯವಿತ್ತು. ಈ ಖಡ್ಗಗಳನ್ನು ತೊಳೆಯಲು ಕಷ್ಟವಾಗುತ್ತದೆ ಎಂದು ಕೇವಲ ೮ ಖಡ್ಗಗಳನ್ನು ಸಾಂಕೇತಿಕವಾಗಿ ಇಟ್ಟುಕೊಂಡು ಉಳಿದ ಖಡ್ಗಗಳನ್ನು ಭತ್ತ ಕೊಯ್ಯಲು ಕುಡಗೋಲನ್ನು (ಬೆಳೆ ಕಟಾವು ಮಾಡುವ ಆಯುಧ) ಮಾಡಿಸಿದರು. ಪ್ರಮುಖ ಹಬ್ಬಗಳು, ಮತ್ತು ಮದುವೆಯಂತಹ ಕಾರ್ಯಕ್ರಮಗಳಲ್ಲಿ ಮನೆಯಲ್ಲಿದ್ದ ಖಡ್ಗ, ಕತ್ತಿಗಳನ್ನು, ಆಂಗ್ಲಭಾಷೆಯ 'X' ಆಕಾರವಾಗಿ ಜೋಡಿಸಿ ಅದಕ್ಕೆ ಮಾವಿನ ತೋರಣ ಕಟ್ಟಿ ಪೂಜೆ ಮಾಡುವ ಸಂಪ್ರದಾಯ ಇಂದಿಗೂ ಜೀವಂತವಾಗಿದೆ.

ಈ ಮನೆಯ ಹಿರಿಯರಾದ ಅನ್ನಾಜಿಗೌಡ ಮತ್ತು ಬಸನಗೌಡ ರುದ್ರಗೌಡ ಪಾಟೀಲರ ಹೇಳಿಕೆ ಪ್ರಕಾರ ತಮ್ಮ ಮನೆಯಲ್ಲಿ ಬಂಗಾರದ ದಡಿ (ಬಂಗಾರದ ಪಟ್ಟಿಕೆ) ಇರುವ ಒಂದು ಶಾಲು, ಮತ್ತು ರೇಷ್ಮೆಯಿಂದ ತಯಾರಿಸಿದ ಸೈನಿಕರ ಉಡುಪುಗಳು ಇದ್ದವು. ಈ ಹೇಳಿಕೆಯನ್ನು ಪುಷ್ಟಿಕರಿಸಲು ಯಾವುದೇ ಸಾಕ್ಷಾಧಾರಗಳು ದೊರೆತಿಲ್ಲ.

ಇವರ ಮನೆಯನ್ನು ಗಮನಿಸಿದಾಗ ಸುಮಾರು ೩೫೦ ವರ್ಷಗಳಿಗೂ ಅಧಿಕ ಹಳೆಯದಾಗಿದ್ದು, ಸಂಪೂರ್ಣವಾಗಿ ಮರದ ತೊಲೆಗಳಿಂದ ನಿರ್ಮಿತವಾಗಿದೆ. ಮನೆಯ ಮುಂದಿನ ಭಾಗದಲ್ಲಿ ಧನದ (ಹಸು)ಕೊಟ್ಟಿಗೆ ಇದೆ. ಮನೆಗೆ ಹೋಗಬೇಕಾದರೆ ದನದ ಕೊಟ್ಟಿಗೆಯಲ್ಲಿ ಹಾದು ಹೋಗಬೇಕು. ಈ ಊರಲ್ಲಿ ಒಂದು ಉತ್ತಮ ಸುಸಂಸ್ಕೃತ ಮತ್ತು ಸಿರಿವಂತಿಕೆ ಮನೆತನವಾಗಿದೆ.

ಈ ಕುಟುಂಬದಲ್ಲಿ ಅನೇಕರು ಸರಕಾರಿ ನೌಕರಿಯಲ್ಲಿ ಇದ್ದಾರೆ. ಇನ್ನೂ ಕೆಲವರು ಉನ್ನತ ಪದವಿಗಳನ್ನು ಪಡೆದಿರುವರು.

ಇವರು ಕೃಷಿಯನ್ನೇ ಅವಲಂಬಿಸಿರುವರು. ಉತ್ತಮ ನೀರಾವರಿ ಬೇಸಾಯ ಹೊಂದಿರುವರು. ಅಡಿಕೆ ತೋಟ, ಬಾಳೆ ತೋಟ, ಸೊಂಟಿ, ಭತ್ತ, ಗೋವಿನ ಜೋಳ, ಮಾವು, ಪಶುಸಂಗೋಪನೆ ಮುಂತಾದ ಬೆಳೆಗಳನ್ನು ಮತ್ತು ವೃತ್ತಿಗಳನ್ನು ಕೈಗೊಳ್ಳುವುದರ ಜೊತೆಗೆ ಅಂಗಡಿ ವ್ಯಾಪಾರ ಭತ್ತದ ಮಿಲ್‌ಗಳನ್ನು ಹೊಂದಿದ್ದಾರೆ.

ಧಾರ್ಮಿಕ ಆಚರಣೆಗಳು : ಈ ಕುಟುಂಬದವರು ಮೂಲತಃ ಕ್ಷತ್ರಿಯರಾಗಿದ್ದು, ನಂತರದ ಕಾಲದಲ್ಲಿ ಲಿಂಗದೀಕ್ಷೆ ಪಡೆದು ವೀರಶೈವ ಧರ್ಮವನ್ನು ಸ್ವೀಕರಿಸಿದರು. ಕ್ಷತ್ರಿಯಧರ್ಮದ ಪ್ರಭಾವ ಇಂದಿಗೂ ಇವರ ಆಚರಣೆಯಲ್ಲಿ ಅಡಗಿಕೊಂಡಿದೆ. ಪ್ರಮುಖ ಹಬ್ಬಗಳು, ಮತ್ತು ಮದುವೆಯಂತಹ ಕಾರ್ಯಕ್ರಮಗಳಲ್ಲಿ ಮನೆಯಲ್ಲಿದ್ದ ಖಡ್ಗ, ಕತ್ತಿಗಳನ್ನು, ಆಂಗ್ಲಭಾಷೆಯ 'X' ಆಕಾರವಾಗಿ ಜೋಡಿಸಿ ಅದಕ್ಕೆ ಮಾವಿನ ತೋರಣ ಕಟ್ಟಿ ಪೂಜೆ ಮಾಡುವ ಸಂಪ್ರದಾಯ ಇಂದಿಗೂ ಜೀವಂತವಾಗಿದೆ.

ಇವರು ಹಿಂದೂ ಸಂಪ್ರದಾಯದಂತೆ ಕಾರಹುಣ್ಣಿಮೆ, ದೀಪಾವಳಿ, ಆಯುಧಪೂಜೆ, ಗಣಪತಿ ಹಬ್ಬ, ನಾಗರಪೂಜೆ, ಬಸವ ಜಯಂತಿ, ಕಾರ್ತಿಕ ಹಬ್ಬ, ಲಕ್ಷ್ಮೀಪೂಜೆ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ.

ವಂಶಾವಳಿ : ಈ ಗೌಡ ವಂಶದ ಪೂರ್ವಜರಾದ ದೊಡ್ಡ ಬಸನಗೌಡ ಮತ್ತು ಸಣ್ಣಬಸನಗೌಡರು ಕ್ರಿ.ಶ. ೧೩೮೬ರಲ್ಲಿ ಬಿಜಾಪುರದಿಂದ ಕ್ಯಾಸನೂರಿಗೆ ಬಂದು ನೆಲೆಸಿದ್ದರು ಎಂಬ ಪ್ರತೀತಿ ಇದೆ. ಈ ಇರ್ವರ ಮೂಲ ಪುರುಷರಿಂದ ಹಿಡಿದು ಇಲ್ಲಿಯವರೆಗೆ ೧೭ ತಲೆಮಾರುಗಳು ಕಂಡುಬರುತ್ತವೆ.

ಈ ಒಂದು ಮಾಹಿತಿಯನ್ನು ಗೌಡ್ರ ವಂಶದ ಕುರಿತು ದಾಖಲು ಮಾಡಿಕೊಳ್ಳುವ **"ಹೆಳುವರಿಂದ"** (ಒಂದು ರೀತಿಯ ಅಲೆಮಾರಿ ಜನಾಂಗ) ಪಡೆದುಕೊಳ್ಳಲಾಗಿದೆ. ಅವರು ನೀಡಿದ ವಂಶಾವಳಿಯ ಮಾಹಿತಿಯ ಪ್ರಕಾರ ಈ ಕೆಳಗಿನಂತೆ ವಿವರಿಸಲಾಗಿದೆ.

ವಂಶವೃಕ್ಷ

। ೧) ದೊಡ್ಡ ಬಸನಗೌಡ (ಪೋತಿ)   ೨) ಸಣ್ಣಬಸನಗೌಡ (ಪೋತಿ)   ೩) ನೀಲಗಂಗಮ್ಮ (ಪೋತಿ)

೧) ವೀರಭದ್ರಗೌಡ (ಪೋತಿ)

೨) ಸಣ್ಣ ಶಿದ್ಧನಗೌಡ (ಪೋತಿ)   ೩) ದೊಡ್ಡ ಶಿದ್ಧನಗೌಡ (ಪೋತಿ)

೧) ವೀರನಗೌಡ (ಪೋತಿ)

೧) ದೊಡ್ಡ ಅಣ್ಣಯ್ಯಗೌಡ (ಪೋತಿ)   ೨) ಶಿದ್ದನಗೌಡ (ಪೋತಿ)   ೩) ಸಣ್ಣ ಅಯ್ಯನಗೌಡ (ಪೋತಿ)   ೪) ಬಸನಗೌಡ (ಪೋತಿ)   ೪) ಮಹಾಂತಗೌಡ (ಪೋತಿ)

೧) ಈರನಗೌಡ (ಪೋತಿ)   ೨) ಈಶ್ವರಗೌಡ (ಪೋತಿ)   ೩) ವೀರಭದ್ರಗೌಡ (ಪೋತಿ)   ೪) ದೊಡ್ಡ ಶಿದ್ದನಗೌಡ (ಪೋತಿ)   ೫) ಸಣ್ಣ ಸಿದ್ದನಗೌಡ (ಪೋತಿ)

೧) ಮುದ್ದನಗೌಡ   ೨) ಮಲ್ಲನಗೌಡ

೧) ರುದ್ರಗೌಡ   ೨) ಬಸನಗೌಡ   ೩) ಸಣ್ಣವೀರನಗೌಡ (ಪೋತಿ)

೧) ಪುಟ್ಟನಗೌಡ   ೨) ಮಲ್ಲನಗೌಡ   ೩) ಶಿವನಗೌಡ

೧) ದೊಡ್ಡ ವೀರನಗೌಡ   ೨) ದೊಡ್ಡ ಗವಿಯಪ್ಪಗೌಡ   ೩) ಸಣ್ಣ ಗವಿಯಪ್ಪಗೌಡ   ೪) ಚೆನ್ನಬಸನಗೌಡ

೧) ವೀರಭದ್ರಗೌಡ   ೨) ಶಿವನಗೌಡ (ಪೋತಿ)   ೩) ಕರಿಯಪ್ಪಗೌಡ   ೪) ಭದ್ರಗೌಡ

೧) ಸಣ್ಣವೀರನಗೌಡ   ೨) ಪಕ್ಕೀರಗೌಡ   ೩) ದೊಡ್ಡವೀರನ ಗೌಡ   ೧) ಶಿವನಗೌಡ

೧) ದತ್ತ ಟೋಪನಗೌಡ   ೧) ಟೋಪಗೌಡ   ೨) ವೀರನಗೌಡ   ೧) ದತ್ತ ಚನ್ನಬಸನಗೌಡ (ಪೋತಿ)

೧) ಕಲ್ಲನಗೌಡ (ಪೋತಿ)   ೨) ರುದ್ರಗೌಡ

೧) ನಾಗನಗೌಡ   ೨) ಲಿಂಗನಗೌಡ   ೩) ವಾದಪಾಳಗೌಡ   ೪) ಅನ್ನಾಜಿಗೌಡ   ೫) ಬಸನಗೌಡ

ಸಾಮಾಜಿಕ ವ್ಯವಸ್ಥೆ : ಮೇಲುವರ್ಗ, ಮಧ್ಯಮವರ್ಗ, ಕೆಳವರ್ಗದವರು ಐಕ್ಯತೆಯಿಂದ ಜೀವಿಸುವರು. ಸಮಾಜದಲ್ಲಿ ಸಂಘ-ಸಭೆಗಳನ್ನು ಮಾಡಿಕೊಂಡು ಊರಿನ ಎಲ್ಲಾ ಸಮಸ್ಯೆಗಳನ್ನು ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಸಮನ್ವಯದಿಂದ ನಿರ್ವಹಿಸುತ್ತಾರೆ. ಸಾಮಾನ್ಯವಾಗಿ ಎಲ್ಲಾ ಹಬ್ಬಹರಿದಿನಗಳಲ್ಲಿ ಸ್ತ್ರೀ-ಪುರುಷರು ಪಾಲ್ಗೊಳ್ಳುವರು. ಸುಮಾರು **೨೦೦೦**ಕ್ಕೂ ಅಧಿಕ ಜನಸಂಖ್ಯೆಯನ್ನು ಹೊಂದಿದ ಈ ಗ್ರಾಮದಲ್ಲಿ ಲಿಂಗಾಯತರು, ವಡ್ಡರ ಜನಾಂಗ, ಜಾಡರು, ಹರಿಜನರು, ಆಯ್ಯರು ಸೇರಿದಂತೆ ವಿವಿಧ ಜನಾಂಗದವರು ನೆಲೆಸಿದ್ದಾರೆ. ಸಾಮಾನ್ಯವಾಗಿ ಎಲ್ಲರು ಹಂಚಿನಮನೆಗಳನ್ನು ಕಟ್ಟಿಕೊಂಡಿದ್ದಾರೆ. ಒಂದೆರೆಡು ಮಾತ್ರ ಕಬ್ಬಿಣ ಮತ್ತು ಸಿಮೆಂಟಿನಿಂದ ನಿರ್ಮಿಸಿದ ಮನೆಗಳಿವೆ.

ಆರೋಗ್ಯ : ಇಲ್ಲಿಯ ಜನರು ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡುವರು. ಇವರಿಗೆ ಅತ್ಯಂತ ಹತ್ತಿರವಾದ ಸರಕಾರಿ ಆರೋಗ್ಯ ಕೇಂದ್ರಗಳೆಂದರೆ



೧) ಪ್ರಾಥಮಿಕ ಆರೋಗ್ಯ ಕೇಂದ್ರ-ಚಿಕೌಂಶಿ ಹೂಸುರು ೨) ಪ್ರಾಥಮಿಕ ಆರೋಗ್ಯ ಕೇಂದ್ರ- ಶಿರಗೋಡ

೩) ಪ್ರಾಥಮಿಕ ಆರೋಗ್ಯ ಕೇಂದ್ರ- ಶೇಷಗಿರಿ ೪) ಮಕ್ಕಳ ಆರೋಗ್ಯ ಕೇಂದ್ರ – ಹಾನಗಲ್

ಆರ್ಥಿಕ ವ್ಯವಸ್ಥೆ : ಸಾಮಾನ್ಯವಾಗಿ ಕೂಲಿ ಮತ್ತು ಕೃಷಿಯನ್ನೇ ಅವಲಂಭಿಸಿರುವರು. ಇಲ್ಲಿ ೨೫೮ ಹೆಕ್ಟೆರ್ ಭೂ ಪ್ರದೇಶವನ್ನು ವ್ಯವಸಾಯಕ್ಕೆ ಬಳಸುತ್ತಾರೆ. ಪ್ರಮುಖವಾದ ಬೆಳೆಗಳೆಂದರೆ ಭತ್ತ, ಬಾಳೆ, ಅಡಿಕೆ, ಸೊಂಟಿ, ಗೋವಿನಜೋಳ ಮುಂತಾದವು. ಕೆಲವರು ಸರ್ಕಾರಿ ನೌಕರಸ್ಥರು ಇದ್ದಾರೆ. ಕೂಲಿ ಕಾರ್ಮಿಕರು ಪ್ರತಿವರ್ಷ **ಡಿಸೆಂಬರ್** ತಿಂಗಳಿನಿಂದ **ಏಪ್ರೀಲ್** ತಿಂಗಳವರೆಗೆ ಕೇರಳ, ಕಾಪಿಸೀಮೆ ಹಾಗೂ ಮಲೆನಾಡು ಪ್ರದೇಶಗಳಿಗೆ ದುಡಿಯಲು ಹೋಗುತ್ತಾರೆ. ಕೆಲವರು ಗೃಹ ಉಪಕರಣಗಳಿಗೆ ಕಾಡಿನ ಮರದ ತುಂಡುಗಳನ್ನು ಕಡಿದು ಮಾರುವರು. ಇನ್ನೂ ಕೆಲವರು ಕೆರೆ ಕಟ್ಟೆಗಳಲ್ಲಿ ಮೀನುಗಳನ್ನು ಹಿಡಿದು ಮಾರುವುದು ಮತ್ತು **ಹಂದಿ, ಜಿಂಕೆ, ಮೊಲ** ಮುಂತಾದ ಪ್ರಾಣಿಗಳನ್ನು ಬೇಟೆಯಾಡುವ ಉಪವೃತ್ತಿಗಳನ್ನು ಮಾಡುತ್ತಾರೆ.

ಈ ಬೇಟೆಯಾಡುವ ಪದ್ಧತಿಯಲ್ಲಿ ಮೂರು ಪ್ರಕಾರದ ಬೇಟೆಗಳನ್ನಾಡುತ್ತಾರೆ.

೧. ನಾಯಿ ಬೇಟೆ ೨. ಬಲಿ ಹಾಕುವ ಬೇಟೆ ೩. ಬಂದೂಕು ಬೇಟೆ

ಆದರೆ ಈ ಬೇಟೆಯಾಡುವ ಪ್ರವೃತ್ತಿ ಗುಪ್ತವಾಗಿ ನಡೆಯುತ್ತಿದೆ.

ಶೈಕ್ಷಣಿಕ ವ್ಯವಸ್ಥೆ : ಶೈಕ್ಷಣಿಕವಾಗಿ ತುಂಬಾ ಹಿಂದುಳಿದ ಗ್ರಾಮವಾಗಿದೆ. ಆದರೂ ಇತ್ತೀಚೆಗೆ ಶಿಕ್ಷಣಕ್ಕೆ ಒಲವು ಹೊಂದುತ್ತಿದ್ದಾರೆ. ಕೆಲವರು ಸರ್ಕಾರಿ ನೌಕರಿಯಲ್ಲಿ ಸೇರಿದ್ದಾರೆ. ಇನ್ನು ಕೆಲವರು ಬಡತನದಿಂದ ಶಿಕ್ಷಣವನ್ನು ಮೊಟಕುಗೊಳಿಸಿದ್ದಾರೆ. **ತಿಳುವಳ್ಳಿ** ಮತ್ತು **ಶಿರಸಿಯ** ರಸ್ತೆಯ ಬಲಭಾಗದಲ್ಲಿ ಒಂದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಇದೆ. ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಿಗೆ ಚಿಕೌಂಶಿ ಹೊಸೂರಿಗೆ ಮಕ್ಕಳು ಹೋಗುತ್ತಾರೆ. ಪದವಿ ಮಟ್ಟದ ಉನ್ನತ ವಿದ್ಯಾಭ್ಯಾಸಗಳಿಗೆ ಹಾನಗಲ್ ಶಿರಸಿ, ಶಿವಮೊಗ್ಗ, ಧಾರವಾಡಕ್ಕೆ ಮುಂತಾದ ನಗರಗಳಿಗೆ ಹೋಗುತ್ತಾರೆ.

ಮನರಂಜನೆ : ಮಕ್ಕಳಿಂದ ಹಿಡಿದು ವಯೋವೃದ್ಧರವರೆಗೂ ಪ್ರಿಯವಾದ ಆಟಗಳೆಂದರೆ ಕಬಡ್ಡಿ, ಕೋ ಕೋ, ವಾಲಿಬಾಲ್, ರಿಲೇ, ಮರಮಂಗ ಆಟ, ಹುಲಿಮನಿ ಆಟ, ಹುಣಸೆ ಬೀಜದ ಆಟ, ಇಸ್ಪಿಟು, ಆಣಿಆಟ, ನಿಂಬೆ ಆಟಗಳ ಜೊತೆಗೆ ಹೋರಿ ಬೆದರಿಸುವುದು ಇನ್ನೂ ಮುಂತಾದವು ಪ್ರಮುಖ ಮನರಂಜನೆ ಕ್ರೀಡೆಗಳಾಗಿವೆ.

ದೇವಾಲಯಗಳು

ದೇವಾಲಯ	:	**ವೀರಭದ್ರೇಶ್ವರ**
ಸ್ಥಳ	:	ಕ್ಯಾಸನೂರು
ಕಾಲ	:	ಕ್ರಿ.ಶ. ೧೩ನೇ ಶತಮಾನ (ಮರುನಿರ್ಮಾಣ)
ಶೈಲಿ	:	ಆಧುನಿಕ
ಸ್ಥಿತಿ	:	ಉತ್ತಮ
ದಿಕ್ಕು	:	ಉತ್ತರಾಭಿಮುಖ
ಸಂರಕ್ಷಣೆ	:	ಗ್ರಾಮಸ್ಥರಿಂದ

ಈ ದೇವಾಲಯವು ಮೂಲತ: ಕಲ್ಯಾಣಿ ಚಾಲುಕ್ಯರ ಶೈಲಿಯನ್ನು ಹೊಂದಿದ್ದು, ಇಂದು ಆಧುನಿಕ ಶೈಲಿಯಲ್ಲಿ ಮರುನಿರ್ಮಾಣ ಮಾಡಲಾಗಿದೆ. ಗರ್ಭಗೃಹದ ಶಿಲ್ಪ ಪ್ರಾಚೀನವಾಗಿದೆ. ದೇವಾಲಯದ ಎದುರಿಗೆ ಒಂದು ಕಂಬನ್ನು ನಿಲ್ಲಿಸಲಾಗಿದೆ. ಇದು ಮೂಲ ದೇವಾಲಯದ ಒಂದು ಕಂಭವನ್ನು ೨೧-೧೧-೨೦೧೪ರಂದು ದೀಪ ಸ್ತಂಭವನ್ನಾಗಿ

ನಿಲ್ಲಿಸಿದ್ದಾರೆ. ದೇವಾಲಯದ ಎದುರಿಗೆ ಬಲಭಾಗದಲ್ಲಿ ೨.೧೦ ಅಡಿ ಎತ್ತರ, ೯ ಇಂಚು ಅಗಲವಾದ ಒಂದು ಮಹಾಸತಿಗಲ್ಲು ಇದೆ. ಇದರ ಪಕ್ಕದಲ್ಲಿ ಶಕ್ತಿಪ್ರದರ್ಶನದ ಎರಡು ದುಂಡುಗಲ್ಲುಗಳಿವೆ.

ಇಲ್ಲಿ ಪ್ರತಿ ಅಮವಾಸ್ಯೆಗೆ ಅಭಿಷೇಕವಾಗುತ್ತದೆ. ಯುಗಾದಿ ಹಬ್ಬ ಆದ ನಂತರ ಒಂದು ವಾರದಲ್ಲಿ ಜಾತ್ರೆ, ಗುಗ್ಗುಳ ನಡೆಸುತ್ತಾರೆ. ಪ್ರತಿವರ್ಷ ಕಾಡಶೆಟ್ಟಳ್ಳಿ, ಅರಳೇಶ್ವರ ಹಾಗೂ ಶಿವಮೊಗ್ಗದಿಂದ ಗುಗ್ಗುಳ ಆಡುವವರನ್ನು ಕರೆಸುತ್ತಾರೆ. ಈ ಜಾತ್ರೆಯಲ್ಲಿ ಎಲ್ಲಾ ವರ್ಗದವರು ಒಟ್ಟಾಗಿ ಸೇರಿ ಭಕ್ತಿಯಿಂದ ಸಂಭ್ರಮದಿಂದ ಅದ್ದೂರಿಯಾಗಿ ಆಚರಿಸುವರು.

ನಂ. ೨

ದೇವಾಲಯ	:	**ರಾಮಲಿಂಗೇಶ್ವರ**
ಸ್ಥಳ	:	ಕ್ಯಾಸನೂರು
ಕಾಲ	:	ಕ್ರಿ.ಶ. ೧೩–೧೪ನೇ ಶತಮಾನ
ಶೈಲಿ	:	ಕಲ್ಯಾಣಿ ಚಾಲುಕ್ಯ
ಸ್ಥಿತಿ	:	ಶಿಥಿಲ
ದಿಕ್ಕು	:	ಪೂರ್ವಾಭಿಮುಖ
ಸಂರಕ್ಷಣೆ	:	ರಕ್ಷಣೆ ಹೊಂದಿಲ್ಲಾ

ಈ ದೇವಾಲಯವು ಕ್ಯಾಸನೂರು ಊರಿನ ಕೆರೆಯ ದಂಡೆಯ ಮೇಲಿದೆ. ಇದು ಅತ್ಯಂತ ಚಿಕ್ಕ ದೇವಸ್ಥಾನವಾಗಿದೆ. ಸ್ಥಳೀಯರ ನಿರ್ಲಕ್ಷಕ್ಕೆ ಒಳಗಾಗಿ ಅವಸಾನದ ಅಂಚಿನಲ್ಲಿದೆ. ದೇವಾಲಯದ ಎಲ್ಲಾ ಅವಶೇಷಗಳು ನಾಶಹೊಂದಿ ಕೇವಲ ಗರ್ಭಗೃಹ ಮಾತ್ರ ಉಳಿದುಕೊಂಡಿದೆ. ಗರ್ಭಗೃಹದಲ್ಲಿ ಒರಟಾದ ಶಿವಲಿಂಗವಿದೆ. ಎದುರಿಗೆ ಮಹಿಷಾಸುರ ಮರ್ದಿನಿ ಶಿಲ್ಪ, ಎರಡು ವಿಷ್ಣುವಿನ ಶಿಲ್ಪಗಳಿಗೆ. ಈ ಬಿಡಿಶಿಲ್ಪಗಳು ಕೂಡಾ ಭಗ್ನಗೊಂಡಿವೆ. ಮುಂದೆ ತೆಂಗಿನ ಗರಿಗಳಿಂದ ಚಿಕ್ಕ ಹಂದರವನ್ನು ಹಾಕಿದ್ದಾರೆ. ಈ ದೇವಾಲಯದ ಎದುರಿಗೆ ನಾಲ್ಕು ದಾನಶಾಸನಗಳಿವೆ. ಯುಗಾದಿ ಮತ್ತು ವೀರಭದ್ರೇಶ್ವರ ದೇವಾಲಯದ ಜಾತ್ರೆಯಲ್ಲಿ ಈ ದೇವಾಲಯಕ್ಕೆ ಪೂಜೆ ಮಾಡಲಾಗುತ್ತದೆ.

ನಂ. ೩

ದೇವಾಲಯ	:	**ಈಶ್ವರ**
ಸ್ಥಳ	:	ಕ್ಯಾಸನೂರು
ಕಾಲ	:	ಕ್ರಿ.ಶ. ೧೩–೧೪ ನೇ ಶತಮಾನ (ಮರುನಿರ್ಮಾಣ)
ಶೈಲಿ	:	ಆಧುನಿಕ
ಸ್ಥಿತಿ	:	ಕನಿಷ್ಠ
ದಿಕ್ಕು	:	ಪೂರ್ವಾಭಿಮುಖ
ಸಂರಕ್ಷಣೆ	:	ಗ್ರಾಮಸ್ಥರಿಂದ

ಈ ದೇವಾಲಯವು ಊರಿನ ಕೆರೆಯ ದಂಡೆಯ ಮೇಲೆ ರಾಮಲಿಂಗೇಶ್ವರ ದೇವಸ್ಥಾನದ ಬಲಭಾಗದಲ್ಲಿದೆ. ಈ ದೇವಾಲಯವು ಮೂಲತಃ ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ್ದು, ಇಂದು ಮರು ನಿರ್ಮಾಣವಾಗಿದ್ದರಿಂದ ಆಧುನಿಕ ಶೈಲಿಯನ್ನು ಹೊಂದಿದೆ. ಸಿಮೆಂಟು ಮತ್ತು ಇಟ್ಟಿಗೆಗಳಿಂದ ನಿರ್ಮಿಸಿದ್ದು, ಒಂದೇ ಕೋಣೆಯಲ್ಲಿ **ಶಿವಲಿಂಗ** ಮತ್ತು **ನಂದಿ** ವಿಗ್ರಹಗಳಿವೆ. ದೇವಾಲಯದ ಎದುರಿಗೆ ೨ ದಾನ ಶಾಸನಗಳಿವೆ. ದೇವಾಲಯದ ಆವರಣದಲ್ಲಿ ಶಾಸನಗಳು ಸೇರಿದಂತೆ ೨೯ ಇತರೆ ದೇವಾಲಯದ ಅವಶೇಷಗಳು ಶಿಲಾ ಫಲಕಗಳು ಬಿದ್ದಿವೆ. ಈ ದೇವರಿಗೆ ಪ್ರತಿದಿನ ಪೂಜೆ ನಡೆಯುತ್ತದೆ.

ಇತರೆ ದೇವಾಲಯಗಳು

* ಗುಡದಯ್ಯನ ಶಿಬಾರ **ತಿಳವಳ್ಳಿ** ಮತ್ತು **ದಾಸನಕೊಪ್ಪದ** ಮುಖ್ಯ ರಸ್ತೆಯ ಪಕ್ಕದಲ್ಲಿದೆ. ಇಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಇದೆ. ಈ ಶಿಬಾರವು ೨–೧೧–೨೦೦೩ರಂದು ನಿರ್ಮಾಣವಾಗಿದೆ. ಆಯತಾಕಾರದ ಎರಡು ಶಿಲಾ ಸ್ಥಂಭಗಳನ್ನು ಲಂಭವಾಗಿ ನಿಲ್ಲಿಸಿ, ಅವುಗಳ ಮೇಲೆ ಒಂದು ಶಿಲಾ ಫಲಕವನ್ನು ಅಡ್ಡವಾಗಿ ಇರಿಸಲಾಗಿದೆ. ಈ ಶಿಲಾಫಲಕದ

ಕೊನೆಯ ಅಂಚಿನಲ್ಲಿ ಎರಡು ಸಣ್ಣ ಶಿವಲಿಂಗಗಳಿದ್ದು, ಮಧ್ಯದಲ್ಲಿ ತ್ರಿಶೂಲವಿದೆ. ಇದರಲ್ಲಿ ವೀರಭದ್ರನ ಶಿಲ್ಪವಿದ್ದು ತಲೆಯ ಮೇಲೆ ನಾಗಶಿಲ್ಪವನ್ನು ಕೆತ್ತಲಾಗಿದೆ. ಇದಕ್ಕೆ ಪ್ರತಿವರ್ಷ ಉತ್ಸವವನ್ನು ಆಚರಿಸುತ್ತಾರೆ.

* ಗಣಪತಿ ದೇವಾಲಯವು ಬತ್ತದ ಮಿಲ್ ಹತ್ತಿರವಿದೆ. ಇದು ಚಿಕ್ಕ ಗುಡಿಯಾಗಿದ್ದರು ಅಲಂಕಾರಿಕವಾಗಿದೆ. ಸುಮಾರು ೧೦ ವರ್ಷಗಳ ಹಿಂದೆ **ಸಿದ್ದನಗೌಡ ಪಾಟೀಲರು** ನಿರ್ಮಿಸಿದರು. ಪ್ರತಿ ಸಂಕಷ್ಟಿಗೆ **ಗುರುಶಾಸ್ತ್ರಿ** ಎಂಬುವರ ನೇತೃತ್ವದಲ್ಲಿ ಪೂಜೆ ನಡೆಸುತ್ತಾರೆ. ಈ ಪೂಜೆಗೆ ಹೊಸೂರು, ಕ್ಯಾಸನೂರುದಿಂದ ಜನರು ಸೇರಿಬರುತ್ತಾರೆ. ಪೂಜೆಯ ದಿನ ದಾಸೋಹ ನಡೆಯುತ್ತದೆ. ಈ ಗುಡಿಯ ಪಕ್ಕದಲ್ಲಿ ನಾಗಲಿಂಗೇಶ್ವರ ಶಿಲ್ಪಗಳಿವೆ.

* ಹನುಮಂತ ದೇವರ ಗುಡಿ ಮೀಲ್ ಹತ್ತಿರವಿದೆ. ಈ ಗುಡಿಯನ್ನು ದಿವಂಗತ **ಮಲ್ಲಯ್ಯ** ಎಂಬ ಸ್ವಾಮಿಗಳು ಸುಮಾರು ೩೦ ವರ್ಷಗಳ ಹಿಂದೆ ನಿರ್ಮಿಸಿದ್ದಾರೆ. ಪ್ರತಿ ಶನಿವಾರ ಪೂಜೆ ನಡೆಯುತ್ತಿದೆ.

* ಕುಮಾರಪ್ಪ ಗುಡಿಯ ಕಟ್ಟಡ ನಿರ್ಮಾಣದ ಕಾರ್ಯ ನಡೆಯುತ್ತದೆ. ಇದಕ್ಕೆ ಊರಿನ ಜನರೆ ಪಟ್ಟಿ (ದೇಣಿಗೆ) ಹಾಕಿ ನಿರ್ಮಿಸುತ್ತಿದ್ದಾರೆ.

* ಕಾಳಮ್ಮನ ಗುಡಿ ಅಣ್ಣಾಗೌಡ್ರ ಮನೆಯ ಎದುರಿಗಿದೆ. ಗುಗ್ಗಳದಲ್ಲಿ (ಜಾತ್ರೆ) ಉಡಿತುಂಬುವ ಕಾರ್ಯ ನಡೆಸುತ್ತಾರೆ. ಇದು ಸುಮಾರು ೩೫ ವರ್ಷಗಳ ಹಿಂದೆ ನಿರ್ಮಿಸಲಾಗಿದೆ. ಈ ಗುಡಿಯ ಚಾವಣಿಯು ಇಸ್ಲಾಮಿಕ್ ಮಾದರಿ (ಗುಮ್ಮಟ) ಯಲ್ಲಿ ನಿರ್ಮಿಸಿದ್ದಾರೆ.

ಬಿಡಿ ಶಿಲ್ಪಗಳು

ನಂ. ೧

ವಿಗ್ರಹ	:	ಗಜಲಕ್ಷ್ಮೀ
ಊರು	:	ಕ್ಯಾಸನೂರು
ದೊರೆತ ಸ್ಥಳ	:	ಅಣ್ಣಾಗೌಡ್ರ ರುದ್ರಗೌಡ್ರ ಜಮೀನಿನಲ್ಲಿ
ಕಾಲಮಾನ	:	ಸುಮಾರು ೪೦ ದಶಕಗಳ ಹಿಂದೆ
ಸ್ಥಾನ	:	ಜಮೀನಿನಲ್ಲಿ
ಭಂಗಿ	:	ಪದ್ಮಾಸನ
ಕೈಗಳ ಸಂಖ್ಯೆ	:	೨
ಲಕ್ಷಣಗಳು	:	ಕಮಲ, ಜಯಮಾಲ, ಕಂಠಹಾರ, ಕೀರಿಟ, ಕೈಬಳೆ

ಸಂಬಂಧಿತ ಮೂರ್ತಿ: ಬೃಹತ್ ಎರಡು ಗಜಗಳು ಮತ್ತು ಎರಡು ಸಣ್ಣ ಗಜಗಳು

ಇತರೆ ವಿವರಣೆಗಳು: ಈ ಶಿಲ್ಪವು ಅಣ್ಣಾಗೌಡ್ರ ರುದ್ರಗೌಡ್ರ ಮನೆಯ ಹತ್ತಿರವಿರುವ ಸಾಗುವಾನಿ ಮರಗಳ ತೋಪಿನ ಜಮೀನಿನಲ್ಲಿದೆ. ಹಳೆಯ ಶಿಲ್ಪ ನಾಶವಾಗಿದ್ದರಿಂದ ಗುಡಿಗಾರ ಮಂಜಪ್ಪ ಎನ್ನುವರು (ಬನವಾಸಿ) ಈ ಶಿಲ್ಪವನ್ನು ೪೦ ವರ್ಷದ ಹಿಂದೆ ನಿರ್ಮಿಸಿ ಕೊಟ್ಟಿದ್ದಾರೆ. ಇದು ೪.೭ ಅಡಿ ಅಗಲ, ೨ ಅಡಿ ಎತ್ತರವಾಗಿದೆ. ಲಕ್ಷ್ಮಿಯು ಕಮಲದ ಮೇಲೆ ಆಸೀನನಾಗಿದ್ದಾಳೆ. ಎಡ–ಬಲದಲ್ಲಿ ಬೃಹತ್ ಗಜಗಳು ಸೊಂಡಿಲನ್ನು ಎತ್ತಿ ಲಕ್ಷ್ಮಿಗೆ ಕ್ಷೀರಾಭಿಷೇಕ ಮಾಡುತ್ತಿವೆ. ಈ ಬೃಹತ್ ಗಜಗಳ ಕೆಳಗೆ ಸಣ್ಣ ಪ್ರಮಾಣದ ಗಜಗಳಿವೆ. ಇವುಗಳ ಮೇಲೆ ಬೃಹತ್ ಗಜಗಳು ಕುಳಿತಂತಿವೆ. ಲಕ್ಷ್ಮೀಯ ಸುತ್ತಲು ಕಮಾನಿನ ಆಕಾರದಲ್ಲಿ ಲತೆಬಳ್ಳಿಗಳ ಅಲಂಕಾರವಿದೆ. ಎಡ–ಬಲಭಾಗದಲ್ಲಿ ಕುಬ್ಜ ಗಣಗಳಿದ್ದಾರೆ. ಇವರು ಒಂದು ಕೈಯಲ್ಲಿ ಮೂಲಂಗಿಯನ್ನು ಮತ್ತೊಂದು ಕೈಯಲ್ಲಿ ಗೆಣಸನ್ನು ಹಿಡಿದಿದ್ದಾರೆ. ಶಿಲ್ಪದ ಅಂಚಿನಲ್ಲಿ ಪುಷ್ಪದಳದ ವಿನ್ಯಾಸವಿದೆ.

ನಂ. ೨.

ವಿಗ್ರಹ	:	**ಕೋಣನ ಬಲಿಪೀಠ (ಕ್ವಾಣಕಲ್ ಬೂತಪ್ಪ)**
ಊರು	:	ಕ್ಯಾಸನೂರು
ದೊರೆತ ಸ್ಥಳ	:	ಅಣ್ಣಾಗೌಡ್ರ ರುದ್ರಗೌಡ್ರ ಜಮೀನಿನಲ್ಲಿ
ಕಾಲಮಾನ	:	ಕ್ರಿ.ಶ. ೧೩–೧೪ನೇ ಶತಮಾನ
ಸ್ಥಾನ	:	ಸಾಗುವಾನಿ ತೋಪಿನ ಜಮೀನಿನಲ್ಲಿ
ಭಂಗಿ	:	ಲಿಂಗಾತಶಯನ
ಕೈಗಳ ಸಂಖ್ಯೆ	:	ಕಾಣುವುದಿಲ್ಲ
ಲಕ್ಷಣಗಳು	:	ಕೋಣದ ತಲೆಯ ಭಾಗವಾಗಿದ್ದು ನಾಲಿಗೆಯನ್ನು ಹೊರಚಾಚಿದೆ

ಈ ಶಿಲ್ಪವು ಅಣ್ಣಾಗೌಡ್ರ ಸಾಗುವಾನಿ ತೋಪಿನ ಜಮೀನಿನಲ್ಲಿದೆ. ಇದು ೫.೭ ಅಡಿ ಉದ್ದ ೨.೮ ಅಡಿ ಅಗಲವಾಗಿದೆ. ಇದರ ಸುತ್ತಲು ನಾಲ್ಕು ಅಡಿ ಗೋಡೆಯನ್ನು ಕಟ್ಟಿಸಿದ್ದಾರೆ. ಇದನ್ನು **ಕೋಣಕಲ್ಲು ಭೂತಪ್ಪ** ಎಂದು ಕರೆಯುತ್ತಾರೆ. ೧೩–೧೪ನೇ ಶತಮಾನದ ಕಾಲದಲ್ಲಿ ಪ್ರಾಣಿಬಲಿಪೀಠವಾಗಿದ್ದ ಇಂತಹ ಶಿಲ್ಪಗಳು ಕರ್ನಾಟಕದಲ್ಲಿ ಹಾವೇರಿ, ಶಿವಮೊಗ್ಗ ಜಿಲ್ಲೆಗಳಲ್ಲಿ ಅಧಿಕವಾಗಿ ಕಂಡುಬರುತ್ತವೆ. ಈ ಬಲಿಪೀಠವು ತುಂಬಾ ಚೆನ್ನಾಗಿ ಕೆತ್ತಲಾಗಿದೆ.

ಶಾಸನಗಳು

* ಕ್ಯಾಸನೂರ ಊರಿನಲ್ಲಿ ದೊರೆತ ಶಾಸನದಲ್ಲಿ ರಾಷ್ಟ್ರಕೂಟ ದೊರೆ **೩ನೇ ಕೃಷ್ಣನ** ಆಳ್ವಿಕೆಯಲ್ಲಿ **ಚಲ್ಲಕೇತವಂಶದ** ಮಾಂಡಲಿಕನೊಬ್ಬನು ಬನವಾಸಿಯನ್ನಾಳುವಾಗ ತಟ್ಟಯ್ಯನು ಗೋವುಗಳ ರಕ್ಷಣೆಯಲ್ಲಿ (ಗೋಸಾಸ) ವೀರ ಮರಣ ಹೊಂದಿದ್ದನ್ನು ವಿವರಿಸಿದೆ.

* ಈ ಗ್ರಾಮದ ವೀರಭದ್ರ ದೇವಾಲಯದ ಹತ್ತಿರ ರಾಷ್ಟ್ರಕೂಟರ ದೊರೆ ೩ನೇ ಕೃಷ್ಣನ ಆಳ್ವಿಕೆ ಕಾಲಕ್ಕೆ ಸೇರಿದ ಒಂದು ವೀರಗಲ್ಲು ದೊರೆತಿದೆ. **ಮಲ್ಲಗೌಡನ** ಮಗನ ಮರಣದ ಕುರಿತು ವಿವರಿಸಿದೆ ಆದರೆ ಈ ವೀರಗಲ್ಲು ಇಂದು ಅಲ್ಲಿಲ್ಲಾ.

* ರಾಷ್ಟ್ರಕೂಟರ ಅರಸ **ಖೊಟ್ಟಿಗನ** ಆಳ್ವಿಕೆಯ ಕಾಲದ ಸುಮಾರು ೫ ದಾನಶಾಸನಗಳಿವೆ. ಅವುಗಳಲ್ಲಿ ಒಂದು **ಕವಿಲಿಟ್ಟನು**. ಬನವಾಸಿ ನಾಡನ್ನಾಳುವಾಗ **ಪೊರವಯ್ಯ** ಮಾಡಿದ ಧರ್ಮದ ಕುರಿತು ತಿಳಿಸುತ್ತದೆ. ಇನ್ನೊಂದು ಶಾಸನದಲ್ಲಿ **ಶಂಕರಗೌಡ** ಬನವಾಸಿ ನಾಡನ್ನಾಳುವಾಗ ನೈವೇದ್ಯಕ್ಕಾಗಿ ನೀಡಿದ ಭೂದಾನದ ಕುರಿತು ವಿವರಿಸುತ್ತದೆ. ಇದು ಅಪೂರ್ಣಗೊಂಡಿದೆ. ಹಾಗೂ ಮತ್ತೊಂದು ಶಾಸನದಲ್ಲಿ ಬನವಾಸಿನಾಡನ್ನಾಳುವ **ಕಣ್ಣಯ್ಯ ಎಡೆವೊಳಲ–೭೦** ಆಳುವ **ಪೊತಿಗ** ಮತ್ತು **ಸಿಂಗರನ್ನು** ಉಲ್ಲೇಖಿಸಿದೆ.

೧೨೮

ಕಬ್ಬಳ್ಳಿ ಗ್ರಾಮದ ಪ್ರಾಚ್ಯಾವಶೇಷಗಳು

ಸಮೀವುಲ್ಲಾ*

ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಅರಸೀಕೆರೆ ಹೋಬಳಿಯ ಕಬ್ಬಳ್ಳಿ ಗ್ರಾಮ ಐತಿಹಾಸಿಕ ಮಹತ್ವ ಹೊಂದಿದಂತಹ ಗ್ರಾಮ.

ಸುತ್ತಮುತ್ತಲಿನ ಪರಿಸರದ ಚಾರಿತ್ರಿಕ ಅಂಶಗಳನ್ನ ಗಮನಿಸಿದರೆ ಚಿತ್ರದುರ್ಗ ಹಾಗೂ ಹರಪನಹಳ್ಳಿ ಪಾಳೆಗಾರರಿಗೆ ಗಡಿ ಪ್ರದೇಶಗಳಾಗಿದ್ದ ಗ್ರಾಮಗಳಲ್ಲಿ ಈ ಗ್ರಾಮವು ಒಂದಾಗಿತ್ತು. ಮುಖ್ಯವಾಗಿ ಈ ಪರಿಸರದಲ್ಲಿ ಕಲ್ಯಾಣ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಪಾಳೆಗಾರರು ಆಳ್ವಿಕೆ ಮಾಡಿದಂತಹ ಅನೇಕ ಕುರುಹುಗಳು ದೊರೆಯುತ್ತವೆ. ಪ್ರಸಕ್ತ ವಿಷಯದಲ್ಲಿ ಕಬ್ಬಳ್ಳಿ ಗ್ರಾಮದ ಪ್ರಾಚ್ಯಾವಶೇಷಗಳು ಮಾತ್ರ ವಿವರಿಸಲ್ಪಟ್ಟಿವೆ. ಅವುಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಈಶ್ವರ ದೇವಾಲಯ ಗ್ರಾಮದ ಹೊರವಲಯದ ಏರಿಯೊಂದರ ಮೇಲೆ ಕಂಡುಬರುತ್ತದೆ. ಪೂರ್ವಾಭಿಮುಖವಾಗಿರುವ ದೇವಾಲಯವು ಅಧಿಷ್ಠಾನ, ಭಿತ್ತಿ, ಗರ್ಭಗೃಹ, ಅಂತರಾಳಗಳನ್ನು ಮಾತ್ರ ಹೊಂದಿದ್ದು ದೇವಾಲಯದ ಶಿಖರ ಭಾಗ ಬಿದ್ದು ಶಿಥಿಲವಾಗಿದೆ. ಸಾಧಾರಣವಾದ ಅಧಿಷ್ಠಾನವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗ ಎದುರಿಗೆ ನಂದಿ ಶಿಲ್ಪವಿದ್ದು ಗರ್ಭಗೃಹದ ದ್ವಾರದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಖಾಲಿಯಿರುವ ಅಂತರಾಳದ ವಿತಾನದಲ್ಲಿ ಅಲಂಕಾರಿಕ ಬೋಧಿಗೆಯಿಂದ ಕೂಡಿದೆ ಇದೊಂದು ವಿಜಯನಗರ ಕಾಲದ ದೇವಾಲಯವಾಗಿದೆ. ದೇವಾಲಯದ ಗರ್ಭಗೃಹದಲ್ಲಿರುವ ಶಿವಲಿಂಗವು ಪಾಣಿವಟ್ಟಲು ಜಲಾಹರಿಯ ಪೀಠ ಮಾತ್ರವಿದೆ. ಮುಂಭಾಗದಲ್ಲಿ ನಂದಿ ಶಿಲ್ಪವಿದೆ. ಇದು ಗರ್ಭಗೃಹದಲ್ಲಿರುವ ಶಿವಲಿಂಗಕ್ಕೆ ಅಭಿಮುಖವಾಗಿ ಗರ್ಭಗೃಹದಲ್ಲೇ ಪ್ರತಿಷ್ಠಾಪಿಸಲ್ಪಟ್ಟಿದೆ. ಕೆಲವೊಂದು ಬಾರಿ ಅಂತರಾಳ ಇಲ್ಲವೆ ಪ್ರತ್ಯೇಕವಾಗಿ ದೇವಾಲಯಗಳ ಹೊರಗೆ ನಂದಿಮಂಟಪದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುತ್ತವೆ. ಪಕ್ಕದಲ್ಲಿ ಅರಸೀಕೆರೆಯ ನೊಳಂಬೇಶ್ವರ ದೇವಾಲಯವನ್ನು ಗಮನಿಸಬಹುದು. ಆದರೆ ಇಲ್ಲಿ ಗರ್ಭಗೃಹದಲ್ಲೇ ಪ್ರತಿಷ್ಠಾಪಿಸಿದ್ದಾರೆ ನಂದಿ ಶಿಲ್ಪವು ಪೀಠದ ಮೇಲೆ ಕುಳ್ಳಿರಿಸಿದ್ದಾರೆ ಶಿಲ್ಪದಲ್ಲಿ ತನ್ನ ಮುಂದಿನ ಬಲಗಾಲನ್ನು ಹಿಂದಕ್ಕೆ ಮಡಚಿ ಎಡಗಾಲನ್ನು ಸ್ವಲ್ಪ ಮುಂದಕ್ಕೆ ಚಾಚಿರುವಂತೆ, ಹಿಂದಿನ ಬಲಗಾಲನ್ನು ಮುಂದಕ್ಕೆ ಚಾಚಿ ಎಡಗಾಲನ್ನು ಹೊಟ್ಟೆಯ ಕೆಳಗೆ ಎಳೆದುಕೊಂಡು ಮಡಚಿ ಮಲಗಿರುವಂತೆ ಕೆತ್ತಿದ್ದಾರೆ. ತನ್ನ ತಲೆಯನ್ನು ಮುಂದಕ್ಕೆ ನೇರವಾಗಿ ಚಾಚಿಕೊಂಡಿದೆ. ಗಂಟಾಸರ, ಗಗ್ಗರ, ಕೊರಳಸರ, ಹಣೆಪಟ್ಟಿ, ಕಾಲ್ಗಡಗಗಳು ಮುಂತಾದ ಆಭರಣಗಳಿಂದ ನಂದಿಶಿಲ್ಪಕ್ಕೆ ಅಲಂಕರಿಸಲಾಗಿದೆ.

ದೇವಾಲಯದ ಮುಂಭಾಗದಲ್ಲಿ ಮುಳ್ಳುಕಂಟೆಗಳ ನಡುವೆ ಇದ್ದ ವೀರಗಲ್ಲು ಇಲ್ಲಿ ದೊರೆತ ಇನ್ನೊಂದು ಸ್ಮಾರಕವಾಗಿದೆ. ಇದು ಸುಮಾರು ೩ ೧/೨ ಅಡಿ ಎತ್ತರ, ೨ ೧/೨ ಅಡಿ ಅಗಲ ೬ ಇಂಚು ದಪ್ಪವಾಗಿದೆ. ಇದು ಮೂರು ಪಟ್ಟಿಕೆಗಳಿಂದ ಕೂಡಿದ್ದು ಮೊದಲನೆ ಪಟ್ಟಿಕೆಯಲ್ಲಿ ಇಬ್ಬರು ವೀರರು ವೀರಾವೇಶದಿಂದ ಹೋರಾಡುತ್ತಿರುವ ದೃಶ್ಯ ಕಂಡುಬಂದಿದ್ದು ಕೆಳಭಾಗದಲ್ಲಿ ಒಬ್ಬ ಸತ್ತು ಬಿದ್ದಿರುವ ದೃಶ್ಯವಿದೆ. ನಂತರ ಇನ್ನೊಬ್ಬ ವ್ಯಕ್ತಿಯು ವೀರರ ಜೊತೆ ಹೋರಾಡುತ್ತಿದ್ದಾನೆ. ಎರಡನೆ ಪಟ್ಟಿಕೆಯಲ್ಲಿ ಇಬ್ಬರು ದೇವಲೋಕದ ಕನ್ಯೆಯರು ಯುದ್ಧದಲ್ಲಿ ಮಡಿದ ವೀರನನ್ನು ವಿಮಾನದಲ್ಲಿ ಕೂರಿಸಿಕೊಂಡು ಚಾಮರಧಾರಿಣಿಯರಾಗಿ ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ದೃಶ್ಯವಿದೆ. ಮೂರನೆ ಪಟ್ಟಿಕೆಯಲ್ಲಿ ಶಿವಲಿಂಗಕ್ಕೆ ಯತಿಯು ಪೂಜೆ ಸಲ್ಲಿಸುತ್ತಿದ್ದು ಬಲಭಾಗದಲ್ಲಿ ವೀರನು ಕೈಮುಗಿದು ಕುಳಿತಿರುವ ದೃಶ್ಯ ಹಾಗೂ ನಂದಿ ಶಿಲ್ಪವಿರುವುದು ಜೊತೆಗೆ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಕೆತ್ತನೆಯನ್ನು ಕಾಣಬಹುದು.

ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಅಳೂರು ಅಂಜನೇಯನ ದೇವಾಲಯವಿದೆ. ಗರ್ಭಗೃಹದಲ್ಲಿನ ಅಂಜನೇಯ ಮೂರ್ತಿಶಿಲ್ಪವು ಎಡಗಡೆ ಮುಖಮಾಡಿದ್ದಾನೆ. ಬಾಲವು ತನ್ನ ತಲೆಯ ಮೇಲಿಂದ ಮುಖದ ಮುಂದಕ್ಕೆ ಇಳಿದಿದೆ ವೀರಗಾಸೆಯನ್ನು

*

ತೊಟ್ಟಿರುವ ಅಂಜನೇಯ ಕಾಲುಗಳಿಗೆ ವಿಶಿಷ್ಠ ಬಗೆಯ ಕಡಗಗಳನ್ನು ಧರಿಸಿದ್ದಾನೆ ಅಭಯ ಮುದ್ರೆಯ ಅಂಜನೇಯ ತನ್ನ ಎಡಗೈಯನ್ನು ಸೋಂಟದ ಮೇಲೆ ಇಟ್ಟುಕೊಂಡಿದ್ದಾನೆ. ಕಿವಿಗಳಲ್ಲಿ ಪತ್ರಕುಂಡಲ, ಸೋಂಟದಲ್ಲಿ ಕಟಿವಸ್ತ್ರ, ಕೈಗಳಲ್ಲಿ ಕಂಕಣ ಧರಿಸಿದ್ದಾನೆ. ಮೂರ್ತಿಯ ಎರಡು ಕಾಲುಗಳ ಮಧ್ಯದಲ್ಲಿ ಒಂದು ಶಿಲ್ಪವಿದೆ.

ಈಗಿನ ಅಂಜನೇಯ ದೇವಾಲಯವು ಇದ್ದ ಸ್ಥಳದಲ್ಲಿ ಹಿರೇ ಕಬ್ಬಳ್ಳಿ ಇತ್ತು ಎಂಬುದಾಗಿ ಪ್ರಸಕ್ತ ಇರುವ ಕಬ್ಬಳ್ಳಿ ಚಿಕ್ಕ ಕಬ್ಬಳ್ಳಿಯಾಗಿತ್ತು ಒಂದು ಕಾಲದಲ್ಲಿ ಹಿರೇ ಕಬ್ಬಳ್ಳಿ ಚಿಕ್ಕ ಕಬ್ಬಳ್ಳಿಯೊಳಗೆ ಬಂದು ನೆಲೆಸಿತು ಎಂಬುದಾಗಿ ಸ್ಥಳೀಯ ಐತಿಹ್ಯದಿಂದ ತಿಳಿಯುತ್ತದೆ. ಈ ಹಿನ್ನಲೆಯಲ್ಲಿ ಅಲ್ಲಿ ಕ್ಷೇತ್ರಕಾರ್ಯ ನಡೆಸಿದಾಗ ಅಂಜನೇಯ ದೇವಾಲಯದ ಸುತ್ತಲೂ ಮಡಿಕೆ ಚೂರುಗಳು, ಒರಳುಕಲ್ಲು, ದುಂಡಿ ಮುಂತಾದ ಕುರುಹುಗಳು ದೊರೆತಿದ್ದು, ಚಾರಿತ್ರಿಕವಾಗಿ ಮತ್ತು ಐತಿಹಾಸಿಕವಾಗಿ ಹೆಚ್ಚಿನ ಮಹತ್ವವನ್ನು ಹೊಂದಿದೆ ಎಂದು ಹೇಳಬಹುದು.

ಆಧಾರ ಗ್ರಂಥಗಳು

೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ೧೯೯೯, ಬಳ್ಳಾರಿ ಜಿಲ್ಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಗಿರಿಜ. ಟಿ, ೨೦೦೧, ಇದು ನಮ್ಮ ಜಿಲ್ಲೆ ದಾವಣಗೆರೆ, ನಿಹಾರಿಕ ಪ್ರಕಾಶನ, ದಾವಣಗೆರೆ.

೩. ಪರಮಶಿವಮೂರ್ತಿ ಡಿ. ವಿ, ೨೦೦೬, ಕನ್ನಡ ಶಾಸನಶಿಲ್ಪ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨೬

ರಾಯಚೂರು ದೇವಾಲಯಗಳ ಪ್ರಾಚ್ಯಾವಶೇಷಗಳು

ರಡ್ಡೆಪ್ಪಹಳ್ಳಿ*

ಕೃಷ್ಣಾ ಮತ್ತು ತುಂಗಭದ್ರ ನದಿಗಳಿಂದ ಆವೃತವಾದ ರಾಯಚೂರು ಪ್ರದೇಶವು ಕರ್ನಾಟಕದ ಚರಿತ್ರೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾ ಬಂದಿದೆ. ಪ್ರಾಗೈತಿಹಾಸಿಕ ಕಾಲದಿಂದ ಆರಂಭವಾಗುವ ಇದರ ಚರಿತ್ರೆ ಮುಂದೆ ವ್ಯಾಪಕಗೊಳ್ಳುತ್ತಾ ಹೋಯಿತು.

ರಾಯಚೂರಿನಲ್ಲಿ ಕಂಡುಬಂದಿರುವ ಪ್ರಮುಖ ಶಾಸನವೆಂದರೆ ಕ್ರಿ.ಶ. ೧೨೯೪ರ ಕಾಕತೀಯ ಶಾಸನ[೧]. ಇದು ರಾಯಚೂರಿನಲ್ಲಿ ಕಲ್ಲಿನ ಕೋಟೆಯನ್ನು ಕಟ್ಟಿದ ವಿಷಯವನ್ನು ದಾಖಲಿಸುತ್ತದೆ. ಇದಕ್ಕೂ ಪೂರ್ವದ ಅಥವಾ ನಂತರದ ದೇಶಿಭಾಷೆಯ ಶಾಸನಗಳಾವು ಉಳಿದುಕೊಂಡು ಬಂದಿಲ್ಲ.

ಡಾ॥ ಪಿ.ಬಿ. ದೇಸಾಯಿಯವರು ಹೇಳುವಂತೆ[೨] ರಾಯಚೂರನ್ನು ಉಲ್ಲೇಖಿಸುವ ಮೊದಲ ದಾಖಲೆಗಳೆಂದರೆ ವಿಷ್ಣುವರ್ಧನನ ಉತ್ತರದ ದಿಗ್ವಿಜಯವನ್ನು ವರ್ಣಿಸುವ ಶಾಸನಗಳೇ ಆಗಿವೆ. ವಿಷ್ಣುವರ್ಧನನ ಉತ್ತರಾಧಿಕಾರಿಗಳು ಹೊರಡಿಸಿದ ಹುಲಿಕೇರಿ[೩], ಹಟ್ಟಣ[೪], ಹೀರೆಹಳ್ಳಿ[೫] ಶಾಸನಗಳು ಮುಖ್ಯವಾಗಿವೆ. ಇವುಗಳಿಂದ ರಾಚವೂರ್, ಪೆರ್ಮನ ರಾಚವೂರ್ ವಿಷ್ಣುವರ್ಧನನ ಕೈವಶವಾಯಿತೆಂದು ತಿಳಿದು ಬರುತ್ತದೆ.

ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ದೊಡ್ಡಪ್ರಮಾಣದಲ್ಲಿ ದೇವಾಲಯಗಳ ನಿರ್ಮಾಣವಾಯಿತು. ಈ ಭಾಗದ ಅನೇಕ ಹಳ್ಳಿ ಪಟ್ಟಣಗಳಲ್ಲಿ ಅವು ಕಂಡುಬಂದಿವೆ. ಆದರೆ ರಾಯಚೂರು ನಗರದಲ್ಲಿರುವ ದೇವಾಲಯಗಳನ್ನು ಕುರಿತಂತೆ ಆಗಿರುವ ಕೆಲಸವು ಕಡಿಮೆ. ಇದಕ್ಕೆ ಕಾರಣ ಅವುಗಳು ಮೂಲಸ್ವರೂಪದಲ್ಲಿ ಉಳಿದುಕೊಂಡು ಬಂದಿಲ್ಲದಿರುವುದೇ ಆಗಿದೆ. ಸುಲ್ತಾನರ ಕಾಲದಲ್ಲಿ ಅನೇಕ ಪೂಜಾಮಂದಿರಗಳು ಪ್ರಾರ್ಥನಾ ಮಂದಿರಗಳಾಗಿ ಮಾರ್ಪಟ್ಟಿವೆ. ಜಿ. ಯಾಜ್‌ಧಾನಿ[೬] ಮೊದಲಾದ ವಿದ್ವಾಂಸರು ಇದನ್ನು ಗಮನಿಸಿದ್ದಾರೆ.

ತಟಿತರಾಯ (ಆಂಜನೇಯ) ದೇವಸ್ಥಾನ

ಗುಬ್ಬೇರು ಬೆಟ್ಟದ ಪೂರ್ವಕ್ಕಿರುವ ಚಿಕ್ಕಬೆಟ್ಟದ ಮೇಲೆ ತಟಿತರಾಯ (ಆಂಜನೇಯ) ದೇವಸ್ಥಾನವಿದೆ. ತಟಿತರಾಯ ಪರ್‌ಕೋಟ ದ್ವಾರದ ಈಶಾನ್ಯಕ್ಕಿರುವ ಈ ದೇವಾಲಯವು ಉತ್ತರಕ್ಕೆ ಮುಖ ಮಾಡಿದೆ. ಈ ದೇವಾಲಯವು ವಿಶಾಲವಾದ ಆವರಣದಲ್ಲಿ ಗರ್ಭಗೃಹ, ನವರಂಗ ಅಥವ ಮೊಗಶಾಲೆ ಮುಂದೆ ಆವರಣದಲ್ಲಿ ಇದಿರು ಬದಿರಾಗಿರುವ ಎರಡು ಮಂಟಪಗಳು ಗರುಡಗಂಬವನ್ನು ಹೊಂದಿದೆ.

ಮಾರುತಿಯ ವಿಗ್ರಹವು ಗರ್ಭಗೃಹದ ಹಿಂಭಾಗದ ಗೋಡೆಯ ಮೇಲಿದೆ. ಮೂಲತಃ ಬಂಡೆಗಲ್ಲಿನಲ್ಲಿ ಕೊರೆದಿರುವ ಆಂಜನೇಯನಿಗೆ ನಂತರದಲ್ಲಿ ದೇವಾಲಯವನ್ನು ನಿರ್ಮಿಸಿರಬಹುದಾಗಿದೆ. ಆಂಜನೇಯನ ಮುಖವು ಬಲಕ್ಕೆ ತಿರುಗಿದೆ. ಆಂಜನೇಯ ಮೂರ್ತಿಗೆ ಕೈ ಮತ್ತು ಕಾಲುಗಳನ್ನು ಅರ್ಧವಾಗಿ ಕೊರೆಯಲಾಗಿದೆ. ಬಲಭುಜದ ಮೇಲ್ಗಡೆ ಕೊರೆದಿರುವ ವಸ್ತು ಈಟಿಯಂತೆ ಕಾಣುತ್ತಿದ್ದು ಬಹುಶಃ ಅದು ಗದೆಯನ್ನು ಸಂಕೇತಿಸುತ್ತಿರಬಹುದು. ಆಂಜನೇಯನ ತಲೆಯ ಮೇಲೆ ಜುಟ್ಟುವು ಇದೆ, ಅವನು ಕಂಠಹಾರ ನಡುಬಂಧಗಳಿಂದ ಅಲಂಕೃತನಾಗಿದ್ದಾನೆ.

ಈ ಮೂರ್ತಿಯ ಎಡಭಾಗದಲ್ಲಿ ಕೆಳಗೆ ಚಿಕ್ಕದಾದ ರಾಮಮೂರ್ತಿ ಇದ್ದು ಶಂಖ-ಚಕ್ರಗಳನ್ನು ತೋರಿಸಲಾಗಿದೆ. ಇಲ್ಲಿ ಆಂಜನೇಯನು ಬಹುಶಃ ನಮಿಸುವ ಭಂಗಿಯಲ್ಲಿದ್ದಾನೆ.

ಈ ದೇವಾಲಯದಲ್ಲಿ ಗರ್ಭಗೃಹದ ಗೋಡೆಯ ಮೇಲೆ ಎರಡು ಶಿಲ್ಪಗಳನ್ನು ಬಿಡಿಸಲಾಗಿದೆ. ಬಲಭಾಗದ ಗೋಡೆಯ ಮೇಲೆ ನಾಗಬಂಧ ಶಿಲ್ಪವಿದೆ. ದೊಡ್ಡದಾದ ಒಂದೇ ಹಾವು ವಿಭಿನ್ನ ರೀತಿಯಲ್ಲಿ ತಿರುಗಿ ಬಂಧಗಳನ್ನು ಸೃಷ್ಟಿಸಿದೆ.

---

* ಉಪನ್ಯಾಸಕರು, ಬಳಗಾನೂರು, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ.

ಮಧ್ಯದಲ್ಲಿ ಅದು ಹೆಡೆ ಎತ್ತಿ ನಿಂತಿದ್ದು ಹೆಡೆ ಮತ್ತು ಬಾಲದ ಮಧ್ಯೆ ಬಹುಶಃ ರತ್ನ ಅಥವ ಪುಷ್ಪವನ್ನು ತೋರಿಸಲಾಗಿದೆ. ಹೆಡೆಯ ಆಚೀಚೆ ನಿಂತಿರುವ ನಾಗಿಣಿಯರಲ್ಲೊಬ್ಬರು ಕೈಯಲ್ಲಿ ಶಂಖವನ್ನು ಹಿಡಿದಿದ್ದರೆ ಮತ್ತೊಬ್ಬರು ಚಕ್ರವನ್ನು ಹಿಡಿದಿದ್ದಾರೆ. ಎಡಭಾಗದ ಗೋಡೆಯ ಮೇಲ್ತುದಿಯಲ್ಲಿ ನಿಂತಿರುವ ಏಳು ಆನೆಗಳನ್ನು ಕೆತ್ತಲಾಗಿದೆ. ಈ ಆನೆಗಳು ಅಲಂಕೃತಗೊಂಡಿದ್ದು ತಲೆಕಟ್ಟು ಹಾಗೂ ಕೊರಳಲ್ಲಿ ಸರಪಳಿಯನ್ನು ಹೊಂದಿವೆ.

ಇಲ್ಲಿಯ ನವರಂಗ ಮತ್ತು ಮಂಟಪಗಳಲ್ಲಿ ಒಟ್ಟು ಎಂಟು ಕಂಬಗಳಿದ್ದು ಪ್ರತಿಯೊಂದು ಕಂಬವು ಸುಮಾರು ಒಂದು ಅಡಿ ಎತ್ತರದ ಚೌಕಾಕಾರದ ಪೀಠದ ಮೇಲಿವೆ. ಈ ಕಂಬಗಳು ಮೂರು ವಿಧದಲ್ಲಿವೆ. ಒಂದು ವಿಧದ ಕಂಬ ಕೆಳಭಾಗದಲ್ಲಿ ಚೌಕಾಗಿದ್ದು ಮೇಲ್ಭಾಗ ವೃತ್ತಾಕಾರದಲ್ಲಿದೆ. ಮೇಲ್ಭಾಗದಲ್ಲಿ ಅಷ್ಟಕೋನದ ಚಿಕ್ಕಪಟ್ಟಿ, ವೃತ್ತ, ದೀರ್ಘವಾದ ಅಷ್ಟಕೋನ ಪಟ್ಟಿ ಇದೆ. ಮುಂದೆ ಕಂಬವು ಕಿರಿದಾಗುತ್ತಾ ಮೇಲೆ ವೃತ್ತಾಕಾರದ ಮುಚ್ಚುಳವನ್ನು ಹೊಂದಿದೆ. ಇಂಥ ಐದು ಕಂಬಗಳಿವೆ.

ಎರಡನೆಯ ವಿಧದ ಕಂಬವು ಕೆಳಭಾಗದಲ್ಲಿ ದೀರ್ಘ ಚೌಕಾಕಾರದಲ್ಲಿದ್ದು ಮೇಲ್ಭಾಗವು ವೃತ್ತ ಮತ್ತು ಅಷ್ಟ ಪಟ್ಟಿಕೆಯನ್ನೊಳಗೊಂಡ ವೃತ್ತಾಕಾರದಲ್ಲಿದೆ. ಅದರ ಮೇಲ್ಗಡೆ ತಿರುಗಿದ ಘಂಟೆಯಾಕಾರವನ್ನು ಹೊಂದಿ ಕಂಬವು ಕಿರಿದಾಗುತ್ತ ಮೇಲೆ ವೃತಾಕಾರದ ಮುಚ್ಚಳವನ್ನು ಹೊಂದಿದೆ. ಇಂಥ ಎರಡು ಕಂಬಗಳಿವೆ.

ಮೂರನೆ ವಿಧದ ಒಂದು ಕಂಬವು ಕೆಳಭಾಗ ಚೌಕಾಗಿದ್ದು ಅದರ ಮೇಲೆ ಎಲೆ ಆಕಾರದ ಚಿಕ್ಕ ಅಷ್ಟಪಟ್ಟಿಯಿದೆ. ಮುಂದೆ ಹದಿನಾರು ಮುಖದ ಧೀರ್ಘ ಪಟ್ಟಿ ರೂಪಗೊಂಡು ಮತ್ತೆ ಅಷ್ಟಕೋನ ರೂಪ ತಾಳಿ ಕಂಬವು ಕಿರಿದಾಗುತ್ತ ಮೇಲೆ ವೃತ್ತಾಕಾರದ ಮುಚ್ಚುಳವನ್ನು ಹೊಂದಿದೆ.

ರಾಮಲಿಂಗೇಶ್ವರ ದೇವಾಲಯ

ರಾಯಚೂರು ಬಸ್ ನಿಲ್ದಾಣದ ಆವರಣದಲ್ಲಿ ಈಶ್ವರ ಗುಡಿಯೊಂದಿದೆ. ಇದನ್ನು ರಾಮಲಿಂಗೇಶ್ವರ ದೇವಾಲಯ ಎಂದು ಕರೆಯುತ್ತಾರೆ. ಇದರ ಗರ್ಭಗೃಹವು ಚೌಕಾಕಾರದಲ್ಲಿದ್ದು ಪೂರ್ವಕ್ಕೆ ಮುಖಮಾಡಿದೆ. ಇದರ ಅಧಿಷ್ಠಾನದಲ್ಲಿ ವಜ್ರಾಲಂಕಾರದ ಕೆತ್ತನೆಯಿದೆ. ಗರ್ಭಗೃಹದಲ್ಲಿ ದೊಡ್ಡದಾದ ಶಿವಲಿಂಗ (ಬಾಣ ಭಾಗ ಮಾತ್ರ)ವಿದೆ. ಗರ್ಭಗೃಹದ ನಾಲ್ಕು ಮೂಲೆಗಳಲ್ಲೂ ಅರ್ಧಗಂಬಗಳಿವೆ. ಗೋಡೆಯ ಮಧ್ಯದಲ್ಲಿ ಕಿರಿದಾದ ಭಾಗವಿದ್ದು ಪೂಜಾಸಾಮಗ್ರಿಗಳನ್ನಿಡುವುದಕ್ಕೆ ಅನುಕೂಲವಾಗಿದೆ. ಇದರ ಒಳ ಛಾವಣಿಯಲ್ಲಿ ಪುಷ್ಪಾಲಂಕಾರವಿದೆ. ಗರ್ಭಗೃಹದ ದ್ವಾರವು ಸಾದಾರೀತಿಯಲ್ಲಿದೆ. ಇದರ ಮೇಲ್ಗಡೆ ಐದು ಶಿಖರಗಳ ಕೆತ್ತನೆಯಿದೆ. ಗರ್ಭಗೃಹದ ಮೇಲೆ ಆಧುನಿಕ ಶಿಖರವಿದೆ. ಗರ್ಭಗೃಹದ ಮುಂದುಗಡೆ ಎರಡು ಕಂಬಗಳಿವೆ. ಇವುಗಳು ಪೀಠದ ಮೇಲೆ ನಿಂತಿವೆ. ಮೂಲತಃ ಚೌಕಾಕಾರದಲ್ಲಿರುವ ಈ ಕಂಬಗಳು ಕೆಲಮಟ್ಟಿಗೆ ಕಚ್ಚುಕಚ್ಚಾಗಿವೆ. ಎರಡು ಚೌಕಾಕಾರದ ಭಾಗಗಳ ಮಧ್ಯದ ಕಿರಿದಾದ ಭಾಗದಲ್ಲಿ ಧನ (ಸಂಕಲನ) ಚಿಹ್ನೆಯನ್ನು ಪ್ರದರ್ಶಿಸುತ್ತವೆ. ಮೇಲ್ಗಡೆ ವೃತ್ತಾಕಾರದ ಹಲಗೆ ಮತ್ತು ಚೌಕಾಕಾರದ ಬೋದುಗೆಯಿದೆ.

ರಾಮಲಿಂಗೇಶ್ವರ ದೇವಾಲಯ

ರಾಮಲಿಂಗೇಶ್ವರ ದೇವಾಲಯವು ರಾಯಚೂರಿನಲ್ಲಿ ರೈಲ್ವೆ ನಿಲ್ದಾಣದ ಹತ್ತಿರ ಮಂತ್ರಾಲಯದ ರಸ್ತೆಯಲ್ಲಿದೆ. ಇದು ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳನ್ನು ಹೊಂದಿದೆ. ಇದರ ಪಕ್ಕದಲ್ಲಿ ಇವುಗಳಷ್ಟೇ ಉದ್ದವಾದ ಹಜಾರವು ಉತ್ತರ ದಿಕ್ಕಿಗೆ ತೆರೆದುಕೊಂಡಿದೆ.

ಗರ್ಭಗೃಹವು ಪಶ್ಚಿಮಕ್ಕೆ ಮುಖಮಾಡಿದ್ದು ಸುಕನಾಸಿಗಿಂತ ಕೆಳಹಂತದಲ್ಲಿದೆ. ಹೀಗಾಗಿ ಇದರೊಳಗೆ ಇಳಿಯಲು ಮೆಟ್ಟಿಲುಗಳನ್ನು ರಚಿಸಲಾಗಿದೆ. ಗರ್ಭಗೃಹವು ಸಾಕಷ್ಟು ದೊಡ್ಡದಾಗಿದ್ದು ಇಲ್ಲಿ ಈಶ್ವರನಿದ್ದಾನೆ. ಪಾಣಿಪೀಠದ ಜಲಹರಿವು ಉತ್ತರ ದಿಕ್ಕಿಗಿದೆ. ಇದನ್ನು ಉದ್ಭವಲಿಂಗ ಎಂದು ಅರ್ಚಕರು ಹೇಳುತ್ತಾರೆ. ಪೂಜಾ ಪರಿಕರಗಳನ್ನಿಡುವುದಕ್ಕೆ ಗರ್ಭಗೃಹದ ಮೂರು ಗೋಡೆಗಳಲ್ಲಿ ಕಪೋತಗಳನ್ನು ನಿರ್ಮಿಸಲಾಗಿದೆ. ಗರ್ಭಗೃಹದ ನಾಲ್ಕು ಮೂಲೆಗಳಲ್ಲೂ ಮೂಲೆಗಂಬಗಳಿದ್ದು ಅವು ಮೂಲತಃ ಚೌಕಾಗಿದ್ದು ಅಲ್ಲಲ್ಲಿ ವಜ್ರಾಲಂಕಾರ, ಪುಷ್ಪಾಲಂಕಾರವಿದೆ.

ಗರ್ಭಗೃಹದ ದ್ವಾರವು ಆಕರ್ಷಕವಾಗಿದೆ. ದ್ವಾರದ ಕೆಳಬದಿಯಲ್ಲಿ ಎರಡು ಅರ್ಧಗಂಬಗಳ ಮೇಲೆ ಮಕರವನ್ನು ಕೆತ್ತಲಾಗಿದ್ದು ಅಲ್ಲಿಂದ ಹೊರಟ ಮಕರ ತೋರಣವು ತೊಟ್ಟುಗಳನ್ನು ಸೃಷ್ಟಿಸುತ್ತ ಕೀರ್ತಿಮುಖದಲ್ಲಿ ಅಡಕವಾಗಿದೆ. ಇದರ ಮಧ್ಯೆ ದ್ವಾರಪಾಲಕರನ್ನು ತೋರಿಸಲಾಗಿದೆ. ದ್ವಾರಪಾಲಕರು ತ್ರಿಭಂಗಿಯಲ್ಲಿ ನಿಂತಿದ್ದು ಸೌಮ್ಯ ಮುಖಮುದ್ರೆ ಹೊಂದಿದ್ದಾರೆ. ನಾಲ್ಕು ಕೈಗಳನ್ನು ಹೊಂದಿರುವ ಇವರು ಮೇಲಿನ ಕೈಯಲ್ಲಿ ಡಮರುಗ ತ್ರಿಶೂಲವನ್ನು ಹಿಡಿದಿದ್ದಾರೆ. ಕೆಳಗಿನ ಒಂದು ಕೈ

ಕೆಳಮುಖವಾಗಿರುವ ಗದೆಯ ಮೇಲಿದ್ದರೆ ಮತ್ತೊಂದು ಅಭಯ ನೀಡುತ್ತಿದೆ. ಇವರು ಎತ್ತರವಾದ ಕಿರೀಟವನ್ನು ಧರಿಸಿದ್ದು ಪ್ರಭಾವಳಿಯಂತೆ ಕಾಣಿಸುತ್ತದೆ. ಇವರು ಕರ್ಣಕುಂಡಲ, ಕೊರಳಹಾರ, ಯಜ್ಞೋಪವಿತ, ತೋಳ್ಬಂದಿ, ಕೈಗಡಗ, ನಡುಬಂಧ, ಕಾಲ್ಗಡಗಗಳನ್ನು ಧರಿಸಿದ್ದಾರೆ. ಇವರಿಗೆ ಅಕ್ಕ-ಪಕ್ಕದಲ್ಲಿ ಇಬ್ಬರು ಸಹಾಯಕಿಯರಿದ್ದು ಅವರು ಚೌರಿ ಬೀಸುತ್ತಿದ್ದಾರೆ. ಅವರು ಕೊರಳಹಾರ, ತೋಳ್ಬಂದಿ, ಕಾಲ್ಗಡಗ, ಪ್ರಭಾವಳಿಯಂತಿರುವ ಕಿರೀಟವನ್ನು ಧರಿಸಿದ್ದಾರೆ.

ಈ ದ್ವಾರವು ಐದು ಶಾಖೆಗಳಿಂದ ಕೂಡಿದ್ದು ಅವುಗಳೆಂದರೆ ವಜ್ರಾಲಂಕಾರ, ಹೂಬಳ್ಳಿ, ಅರ್ಧಗಂಬ, ಕೆಳಗಿನ ಆನೆಯ ಮೇಲೆ ನಿಂತ ಸಿಂಹ ಪಟ್ಟಿಕೆ ಮತ್ತು ರೇಖಾಸುಳಿವು. ಅರ್ಧಗಂಬವು ಕೆಳಗೆ ಚೌಕಾಕಾರದಲ್ಲಿದ್ದು ಮೇಲಕ್ಕೆ ಹೋದಂತೆಲ್ಲ ಅನೇಕ ವೃತ್ತ ಮತ್ತು ಅಷ್ಟಪಟ್ಟಿಕೆ, ತಿರುಗಿದ ಗಂಟೆ, ಅಷ್ಟಪಟ್ಟಿಕೆಯನ್ನು ಪ್ರದರ್ಶಿಸುತ್ತ ಕಿರಿದಾಗುತ್ತ ಮೇಲೆ ವೃತ್ತ ಮತ್ತು ಚೌಕಾಕಾರದ ಹಲಗೆ, ಬೋದುಗೆಯನ್ನು ಹೊಂದಿದ್ದು ಹಣೆ ಪಟ್ಟಿಗೆ ಆಸರೆಯಾಗಿದೆ.

ಹಣೆಪಟ್ಟಿಯು ಹಿಂಬಣಿ ಮುಂಬಣಿಗಳಿಂದ ಕೂಡಿದ್ದು ತೊಟ್ಟುಗಳನ್ನು ಪ್ರದರ್ಶಿಸುತ್ತ ಸುಂದರವಾಗಿದೆ. ದ್ವಾರಶಾಖೆಗಳ ಅಲಂಕಾರಗಳಾದ ವಜ್ರಾಲಂಕಾರ ಮತ್ತು ಹೂಬಳ್ಳಿ ಹಣೆಪಟ್ಟಿಯಲ್ಲಿ ಮುಂದುವರೆದಿದೆ. ಹಣೆಪಟ್ಟಿಯ ಮಧ್ಯದಲ್ಲಿ ಅರ್ಧಗಂಬದ ಮಧ್ಯೆ ಗಜಲಕ್ಷ್ಮಿ ಶಿಲ್ಪವಿದ್ದು ಇದು ಒಡೆದು ಹೋಗಿದೆ.

ಸುಕನಾಸಿಯಲ್ಲಿ ಈಶ್ವರನಿಗೆ ಎದುರಾಗಿ ಕುಳಿತ ನಂದಿಯಿದೆ. ಇದರ ಕೊರಳಲ್ಲಿ ಗೆಜ್ಜೆಯಿದೆ. ಇಲ್ಲಿ ಗೋಡೆಗೆ ಆಸರೆಯಾಗಿ ನಿಂತ ಭಗ್ನವಿಘ್ನೇಶ್ವರ ಮೂರ್ತಿಯಿದೆ. ಇದು ಸುಮಾರು ೩ ಅಡಿ ಎತ್ತರ ೨ ಅಡಿ ಅಗಲವಿದೆ. ಕುಳಿತ ಭಂಗಿಯಲ್ಲಿರುವ ಗಣಪನು ದೊಡ್ಡ ಕಿವಿ ಕಣ್ಣುಗಳಿಂದ ಕೂಡಿದ್ದು ಸೊಂಡಿಲು ಒಡೆದು ಹೋಗಿದೆ. ಹೊಟ್ಟೆಗೆ ಹಾವನ್ನು ಬಿಗಿಯಲಾಗಿದೆ. ಇವನ ಒಂದು ಕೈಯಲ್ಲಿ ಅಂಕುಶ ಮತ್ತೊಂದು ಕೈಯಲ್ಲಿ ಮೋದಕವಿದ್ದು ಉಳಿದವುಗಳು ಅಸ್ಪಷ್ಟವಾಗಿವೆ. ಕಿರೀಟ ಕೊರಳಹಾರದಿಂದ ಗಣಪನು ಅಲಂಕೃತನಾಗಿದ್ದಾನೆ. ಇದಲ್ಲದೆ ಕಟ್ಟೆಯ ಮೇಲೆ ಮತ್ತೊಂದು ವಿಘ್ನೇಶ್ವರ ಮತ್ತು ಆಂಜನೇಯ ಮೂರ್ತಿಗಳಿದ್ದು ಅವು ಇತ್ತೀಚಿನವು ಆಗಿರಬೇಕು.

ಸುಕನಾಸಿ ದ್ವಾರವು ಕೆಳಗಡೆ ದ್ವಾರಪಾಲಕರನ್ನು ಹೊಂದಿದ್ದು ಅವರು ದ್ವಿಭಂಗಿಯಲ್ಲಿದ್ದಾರೆ. ದ್ವಾರವು ನಾಲ್ಕು ಶಾಖೆಗಳಿಂದ ಕೂಡಿದ್ದು ಅವು ವಜ್ರಾಲಂಕಾರ, ಹೂಬಳ್ಳಿ, ಅರ್ಧಗಂಬ, ಸಿಂಹ ಪಟ್ಟಿಕೆ ಸಾಲಿನಿಂದ ಕೂಡಿವೆ. ಆ ಅರ್ಧಗಂಬದ ಮಾದರಿಯು ಕೆಳಗೆ ಚೌಕಾಕಾರದಲ್ಲಿದ್ದು ಮೇಲ್ಗಡೆ ಅನೇಕ ವೃತ್ತ ಮತ್ತು ಅಷ್ಟಕೋನಾಕಾರದ ಪಟ್ಟಿಯಿಂದ ಕೂಡಿರುವದಲ್ಲದೆ ಮುತ್ತಿನ ತೋರಣ (ಇಳಿಬಿಟ್ಟ ಮುತ್ತಿನ ತೋರಣದ) ಅಲಂಕಾರದಿಂದ ಕೂಡಿದೆ. ಮುಂದೆ ಕಂಬವು ಕಿರಿದಾಗುತ್ತ ವೃತ್ತ ಚೌಕಾಕಾರದ ಹಲಗೆ ಬೋದುಗೆಯನ್ನು ಹೊಂದಿ ಹಣೆಪಟ್ಟಿಗೆ ಆಸರೆಯಾಗಿದೆ. ಹಣೆಪಟ್ಟಿಯು ಹಿಂಬಣಿ ಮುಂಬಣಿಗಳಿಂದ ಸುಂದರವಾಗಿದ್ದು ಎರಡು ತೊಟ್ಟುಗಳನ್ನು ಹೊಂದಿದೆ. ಮೇಲ್ಗಡೆ ಐದು ದ್ರಾವಿಡ ಶಿಖರಗಳನ್ನು ಕೆತ್ತಲಾಗಿದೆ. ದ್ವಾರಶಾಖೆಯ ವಜ್ರಾಲಂಕಾರ ಹೂಬಳ್ಳಿ ಪಟ್ಟಿಕೆಗಳು ಇಲ್ಲಿಯೂ ಮುಂದುವರೆದಿದೆ. ಹಣೆಪಟ್ಟಿಯ ಮಧ್ಯದಲ್ಲಿ ಅರ್ಧಗಂಬಗಳ ಮಧ್ಯ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ.

ನವರಂಗವು ಚೌಕಾಕಾರದಲ್ಲಿ ಸುಮಾರು ಅರ್ಧ ಅಡಿಯಷ್ಟು ಎತ್ತರವಿದೆ. ಇದರ ನಾಲ್ಕು ಮೂಲೆಯಲ್ಲೂ ಸುಮಾರು ಒಂದೂವರೆ ಅಡಿ ಎತ್ತರದ ಚೌಕಾಕಾರದ ಪೀಠದ ಮೇಲೆ ಕಂಬಗಳು ನಿಂತುಕೊಂಡಿವೆ. ಈ ಕಂಬಗಳು ಕೆಳಭಾಗದಲ್ಲಿ ಚೌಕಾಗಿದ್ದು ಮಧ್ಯದಲ್ಲಿ ವೃತ್ತ ಮೇಲ್ಗಡೆ ಪುನಃ ಚೌಕಾಕಾರದಲ್ಲಿದ್ದು ಕಿರಿದಾಗುತ್ತ ವೃತ್ತಾಕಾರದ ಮುಚ್ಚುಳ ಬೋದುಗೆಯನ್ನು ಹೊಂದಿದ್ದು ತೊಲೆಗೆ ಆಧಾರವಾಗಿವೆ. ಇವುಗಳ ಮಧ್ಯಭಾಗವು ಸಾಮಾನ್ಯವಾಗಿ ೮–೧೬–೮ ಮುಖದ ಪಟ್ಟಿಕೆಗಳಿಂದ ಕೋಡಿರುವುದಾದರೂ ವಿಭಿನ್ನ ರೀತಿಯಲ್ಲಿರುವುದನ್ನು ಗಮನಿಸಬಹುದು. ಒಂದು ಕಂಬವು ಎರಡು ವೃತ್ತಾಕಾರದ ಪಟ್ಟಿಗಳ ಮಧ್ಯ ಅಷ್ಟಕೋನಾಕಾರದ ಪಟ್ಟಿಯನ್ನು ಹೊಂದಿದ್ದು ಅಲ್ಲಿ ವಜ್ರಾಲಂಕಾರವನ್ನು ಕೆತ್ತಲಾಗಿದೆ. ಇನ್ನೊಂದು ಕಂಬವು ಆಳವಾದ ಎರಡು ಕಚ್ಚುಕಚ್ಚಾದ ಅಷ್ಟಪಟ್ಟಿಗಳ ಮಧ್ಯೆ ವಜ್ರಾಲಂಕಾರವುಳ್ಳ ಹದಿನಾರು ಮುಖದ ಪಟ್ಟಿಯನ್ನು ಹೊಂದಿದೆ. ಇನ್ನೆರಡು ಕಂಬಗಳು ಸರಪಳಿ ಕೆತ್ತನೆಯನ್ನು ಹೊಂದಿದ ಅಷ್ಟಮುಖದ ಪಟ್ಟಿಯ ಮಧ್ಯೆ ಪುಷ್ಪಾಲಂಕಾರದಿಂದ ಕೂಡಿದ ಹದಿನಾರು ಮುಖದ ಪಟ್ಟಿಯನ್ನು ಹೊಂದಿದೆ.

ನವರಂಗದಿಂದ ಹಜಾರಕ್ಕೆ ಪ್ರವೇಶವನ್ನು ಒದಗಿಸುವ ಈ ದ್ವಾರವು ಉತ್ತರಾಭಿಮುಖವಾಗಿದೆ. ದ್ವಾರದ ಕೆಳಭಾಗದಲ್ಲಿ ದ್ವಾರಪಾಲಕರನ್ನು ಕೆತ್ತಲಾಗಿದೆ ಇವರು ವೈಷ್ಣವ ದ್ವಾರಪಾಲಕರಾಗಿದ್ದು ಕಾಲ್ತೊಡರಿಕೊಂಡು ನಿಂತಿದ್ದು ತ್ರಿಭಂಗಿಯಲ್ಲಿದ್ದಾರೆ. ಇವರು ಮೇಲಿನ ಕೈಗಳಲ್ಲಿ ಶಂಖ-ಚಕ್ರವನ್ನು ಹಿಡಿದಿದ್ದರೆ ಕೆಳಗೈಯೊಂದು ಕೆಳಮುಖವಾಗಿರುವ ಗದೆಯ ಮೇಲಿದೆ. ಮತ್ತೊಂದು ಕೈ ಅಭಯದೊಂದಿಗೆ ಬಹುಶಃ ಕಮಲ ಅಥವಾ ಯಾವುದೊ ಆಯಧ (ಬಹುಶಃ ಅಂಕುಶ) ಹಿಡಿದಿರುವಂತಿದೆ.

ಈ ದ್ವಾರಪಾಲಕರು ಕಿರೀಟ, ಕರ್ಣಕುಂಡಲ, ಕಂಠಾಭರಣ, ಕೊರಳಹಾರ, ಯಜ್ಞೋಪವಿತ ನಡುಬಂಧಗಳಿಂದ ಅಲಂಕೃತವಾಗಿದ್ದು ಪಂಚೆಯನ್ನು ಧರಿಸಿದ್ದಾರೆ. ಇವರಿಗೆ ಮಹಿಳಾ ಸಹಾಯಕಿಯರಿದ್ದು ಚೌರಿ ಬೀಸುತ್ತಿದ್ದಾರೆ. ಈ ಸಹಾಯಕಿಯರಾದರೂ ಕೈಗಡಗ, ಕಾಲ್ಗಡಗ, ವಸ್ತ್ರಾಭರಣಗಳಿಂದ ಅಲಂಕೃತರಾಗಿದ್ದಾರೆ. ಇದರ ಮೇಲ್ಗಡೆ ಬಾಗಿಲ ಚೌಕಟ್ಟು ೩ ದ್ವಾರ ಶಾಖೆಗಳಿಂದ ಕೂಡಿದ್ದು ಅವು ವಜ್ರಾಲಂಕಾರ ಅರ್ಧಸುರಳಿ ಪೂರ್ಣಸುರಳಿ ಅರ್ಧಗಂಬವನ್ನು ಪ್ರತಿನಿಧಿಸುತ್ತವೆ. ಅರ್ಧಗಂಬವು ಕ್ರಮವಾಗಿ ಚೌಕ, ಅಷ್ಟಕೋನ ಸರಪಳಿಯಿಂದ ಬಿಗಿದ ವೃತ್ತ, ಕಿರಿದಾದ ಅಷ್ಟಪಟ್ಟಿ, ಧೀರ್ಘಚೌಕ ಅಥವಾ ಆಯತ, ಕಿರಿದಾದ ಭಾಗ, ಎರಡು ವೃತ್ತ (ಮುಚ್ಚುಳ), ಚೌಕ (ಬೋದುಗೆ abacus) ಯನ್ನು ಪ್ರದರ್ಶಿಸುತ್ತದೆ. ಈ ಹಣೆಪಟ್ಟಿಯು ಹಿಂಬಣಿ ಮುಂಬಣಿಗಳಿಂದ ಸುಂದರವಾಗಿದ್ದು ಎರಡು ಬದಿಯಲ್ಲಿ ತೊಟ್ಟುಗಳನ್ನು ಹೊಂದಿದೆ. ಮಧ್ಯದಲ್ಲಿ ಗಜಲಕ್ಷ್ಮಿಯನ್ನು ಕೆತ್ತಲಾಗಿದ್ದು ಈ ಶಿಲ್ಪದ ಮೂಲೆ ಬದಿಯಲ್ಲಿ ಯಾಳಿ ಅಥವಾ ಸಿಂಹವನ್ನು ಕೆತ್ತಲಾಗಿದೆ.

ರಾಮಲಿಂಗೇಶ್ವರ ದೇವಾಲಯವು ಹೊರಭಾಗದಲ್ಲಿ ಉತ್ತರ ದಿಕ್ಕಿಗೆ ತೆರೆದಿದ್ದು ೨೦ ಕಂಬಗಳ ಸುಂದರವಾದ ಮೊಗಶಾಲೆಯಿದೆ. ಇದನ್ನು ಶಾ॥ ಶ॥ ೧೮೫೨ನೇ ಪ್ರಮೋದೂತ ಸಂ ॥ ಶ್ರಾ ॥ ಶು ೧ ॥ ೧೩೩೬ನೆ ಫಸ್ಲಿಯಂದು ಕುರ್ದಿ ಅಮರಪ್ಪ ರಾ॥ ಈತನು ನಿರ್ಮಿಸಿದನೆಂದು ಅಲ್ಲಿನ ಕಲ್ಬರಹದ ಮೂಲಕ ತಿಳಿದು ಬರುತ್ತದೆ. ಅಂದರೆ ಈ ಮೊಗಶಾಲೆಯು ೧೯೩೦ರಲ್ಲಿ ನಿರ್ಮಾಣವಾದ ಕಟ್ಟಡ.

ಈ ದೇವಾಲಯವನ್ನು ಕುರಿತಂತೆ ದೇವಾಲಯ ಕೋಶಕಾರರು[2] ದೇವಾಲಯದ ಭಾಗಗಳನ್ನು ಹಲವಾರು ಬಾರಿ ನವೀಕರಿಸಿ ಕಾಲದಿಂದ ಕಾಲಕ್ಕೆ ಹೊಸ ಸೇರ್ಪಡೆಗಳನ್ನು ಮಾಡಿರುವುದರಿಂದ ಮೂಲ ಲಕ್ಷಣಗಳು ಮರೆಯಾಗಿವೆ ಎಂಬುದಾಗಿ ಅಭಿಪ್ರಾಯಪಡುತ್ತಾರೆ.

ವಿಷ್ಣು ದೇವಾಲಯ

ರಾಯಚೂರಿನಲ್ಲಿ ಖಾಸಬಾವಿಯ ಹತ್ತಿರ ಒಂದು ಕಟ್ಟಡವಿದೆ. ಇದು ಹೊರಗಡೆಯಿಂದ ನೋಡುವುದಕ್ಕೆ ಮುಸ್ಲಿಂ ವಾಸ್ತುಶಿಲ್ಪದ ಗುಮ್ಮಟದಂತೆ ಕಂಡುಬರುತ್ತದೆ. ಇದಕ್ಕೆ ಪೂರ್ವ ಮತ್ತು ಪಶ್ಚಿಮದಲ್ಲಿ ಅಗಲವಾದ ಕಮಾನುಗಳಿವೆ. ಇವುಗಳನ್ನು ಸೇರಿ ಸುತ್ತಲಿನ ಗೋಡೆಯನ್ನು ಅರೆಬರೆಯಾದ ಕಲ್ಲುಗಳಿಂದ ಮುಚ್ಚಲಾಗಿದೆ. ಇದನ್ನು ಸ್ಥಳೀಯರು ತಾಲಿಮ್‌ಖಾನ ಎಂದು ಹೇಳುತ್ತಾರೆ.

ಆದರೆ ಒಳಗಡೆ ಅದಕ್ಕೆ ಆಸರೆಯಾಗಿರುವ ಕಂಬಗಳನ್ನು ನೋಡಿದರೆ ಅಲ್ಲಿ ಮೊದಲು ಹಿಂದು ದೇವಾಲಯವಿತ್ತೆ? ಎಂಬ ಅನುಮಾನ ಬಾರದೆ ಇರದು. ಇದರ ಮಧ್ಯದಲ್ಲಿ ಸ್ವತಂತ್ರವಾಗಿ ನಿಂತ ಕಲ್ಯಾಣಿ ಚಾಳುಕ್ಯರ ಕಾಲದ ಎರಡು ಕಂಬಗಳಿವೆ. ಇವುಗಳ ಕೆಳಭಾಗವು ಚೌಕಾಕಾರದಲ್ಲಿದ್ದು ಮಧ್ಯದ ಕಾಂಡ ಭಾಗವು ದುಂಡಾಗಿದ್ದು ಎಂಟು–ಹದಿನಾರು–ಎಂಟು ಮುಖದ ಆಳವಾದ ಕೆತ್ತನೆಯಿಂದ ಕೂಡಿದೆ. ಮಧ್ಯದ ಪಟ್ಟಿಯಲ್ಲಿ ಪುಷ್ಪಾಲಂಕಾರದ ಕೆತ್ತನೆಯಿದೆ. ಮೇಲ್ಭಾಗದಲ್ಲಿ ಕಂಬವು ಪುನಃ ಚೌಕಾಗಿದ್ದು ತದನಂತರದಲ್ಲಿ ಕಾಂಡವು ಕಿರಿದಾಗುತ್ತದೆ. ಈ ಸಂದರ್ಭದ ನಾಲ್ಕು ಮುಖಗಳಲ್ಲಿ ಸಿಂಹಮುಖ ಕೆತ್ತನೆ, ಸಂಪತ್ತನ್ನು ಹೊರಚೆಲ್ಲುತ್ತಿರುವ ಕುಂಭವನ್ನು ತೋರಿಸಲಾಗಿದೆ. ಕಂಬದ ಮೇಲ್ಗಡೆ ವೃತ್ತಾಕಾರದ, ಚೌಕಾಕಾರದ ಹಲಗೆ ಬೋದುಗೆಗಳಿದ್ದು ತೊಲೆಗೆ ಆಸರೆಯಾಗಿದೆ. ಇವೆರಡನ್ನು ಹೊರತು ಪಡಿಸಿದರೆ ಉಳಿದೆಲ್ಲವುಗಳು ಗೋಡೆಗಂಬಗಳಾಗಿವೆ.

ಇನ್ನೊಂದು ವಿಧದ ಕಂಬವು ಮೂಲತಃ ಚೌಕಾಕಾರದಲ್ಲಿದ್ದು ಎರಡು ಕಡೆಗಳಲ್ಲಿ ನಾಲ್ಕು ಮೂಲೆಗಳನ್ನು ಕತ್ತರಿಸುವ ಮೂಲಕ ಮೂರು ಚೌಕಗಳನ್ನಾಗಿ ಸೃಷ್ಟಿಸಲಾಗಿದೆ. ಇನ್ನೊಂದು ವಿಧದ ಕಂಬಗಳು ಮೂಲತಃ ಚೌಕಾಕಾರದಲ್ಲಿದ್ದು ಅದರ ಮೇಲ್ಮೈಯ ಕೆಲಭಾಗವನ್ನು ತೆಳುವಾಗಿ ತೆಗೆದು ಬಾಣಾಕಾರದ ವಿನ್ಯಾಸವನ್ನು ಮಾಡಲಾಗಿದೆ. ಬಾಣಾಕಾರವು ಸ್ಪಷ್ಟವಾಗಿ ಕಾಣುವಂತೆ ಮಾಡಲು ಅದರ ಮೇಲೆ ಸುರಮವನ್ನು (ಕೆಂಪು ಬಣ್ಣ) ಬಳಿಯಲಾಗಿದೆ. ಮಧ್ಯದ ಕಂಬಗಳು ಸೇರಿ ಆರು ಕಂಬಗಳ ಆಧಾರದ ಮೇಲೆ ಗುಮ್ಮಟವನ್ನು ರಚಿಸಲಾಗಿದೆ. ಇದಕ್ಕೆ ಇಟ್ಟಿಗೆ ಮತ್ತು ಗಚ್ಚನ್ನು ಬಳಸಲಾಗಿದೆ. ನೈರುತ್ಯ ಮತ್ತು ವಾಯುವ್ಯದ ಒಳಭಾವಣಿಗಳಲ್ಲಿ ಎಂಟು ದಳದ ಕಮಲವನ್ನು ಬಿಡಿಸಲಾಗಿದೆ.

ಇದರ ಒಳಗೆ ಯಾವುದೇ ವಿಗ್ರಹವಿಲ್ಲ. ಇಲ್ಲಿಯ ಕಂಬಗಳ ನಾಲ್ಕೈದು ಕಡೆಗಳಲ್ಲಿ ಶ್ರೀನಾರಾಯಣ ಎಂಬ ಲಿಪಿಯಿದೆ. ಇದರ ಹೊರಗೆ ಪೂರ್ವದಿಕ್ಕಿನಲ್ಲಿ ಗಿಡವೊಂದರ ಕೆಳಗೆ ವಿಷ್ಣುವಿನ ಭಗ್ನಮೂರ್ತಿ ಇದೆ.

ಬೃಹನ್ಮಠದ ವೀರಭದ್ರೇಶ್ವರ ದೇವಾಲಯ

ರಾಯಚೂರಿನ ಕಿಲ್ಲೆ ಬೃಹನ್ಮಠದ ಆವರಣದಲ್ಲಿರುವ ವೀರಭದ್ರೇಶ್ವರ ಮೂರ್ತಿಯು ಮೂಲತಃ ಸಮೀಪದಲ್ಲೇ ಇದ್ದ ದೇವಾಲಯಕ್ಕೆ ಸೇರಿದ್ದೆಂದು ದೇವಾಲಯ ಆಕ್ರಮಣಕ್ಕೊಳಗಾದಾಗ ಅಲ್ಲಿಯ ಮೂರ್ತಿ ಇಲ್ಲಿ ತಂದು ರಕ್ಷಿಸಿಡಲಾಗಿದೆಯೆಂಬ ನಂಬಿಕೆ ಸ್ಥಳೀಯರಲ್ಲಿ ಗಾಢವಾಗಿದೆ. ಪ್ರಸ್ತುತ ಈ ದೇವಾಲಯವು ಗರ್ಭಗೃಹ, ಸುಕನಾಸಿ ಮತ್ತು ಮೊಗಶಾಲೆಯನ್ನು ಹೊಂದಿದೆ. ಇವುಗಳಲ್ಲಿ ಬಾಗಿಲವಾಡ ಮತ್ತು ಮೂರ್ತಿ ಮಾತ್ರ ಹಳೆಯವು.

ಸುಕನಾಸಿ ದ್ವಾರವು ಕಪ್ಪು ಕಲ್ಲಿನ ರಚನೆಯಾಗಿದ್ದು ಸುಂದರವಾಗಿ ಕಾಣಿಸುತ್ತದೆ. ದ್ವಾರದ ಕೆಳಭಾಗದಲ್ಲಿ ಪೂರ್ಣಕುಂಭವನ್ನು ಕೆತ್ತಲಾಗಿದ್ದು ಸಂಪತ್ತು ಹೊರ ಚೆಲ್ಲುವಂತೆ ತೋರಿಸಲಾಗಿದೆ. ಮೇಲ್ಭಾಗದಲ್ಲಿ ದ್ವಾರವು ಮೂರು ಶಾಖೆಗಳಾಗಿ ವಿಂಗಡಿಸಿದ್ದು ಅವುಗಳೆಂದರೆ : ವಜ್ರಾಲಂಕಾರ, ಅರ್ಧಗಂಬ ಮತ್ತು ಪುಷ್ಪಾಲಂಕಾರ ಪಟ್ಟಿ, ಅರ್ಧಗಂಬ ಪಟ್ಟಿಕೆಯ ಕೆಳಭಾಗದಲ್ಲಿ ಚೌಕಾಗಿದ್ದು ಮೇಲ್ಭಾಗದಲ್ಲಿ ಅನೇಕ ಪಟ್ಟಿಗಳನ್ನೊಳಗೊಂಡ ವೃತ್ತ, ಅಷ್ಟಕೋನ, ತಿರುಗಿದ ಗಂಟೆಯಾಕಾರದಲ್ಲಿದ್ದು ವೃತ್ತ ಮತ್ತು ಚೌಕಾಕಾರದ ಹಲಗೆಯನ್ನೊಳಗೊಂಡು ಮೇಲಿನ ಹಣೆಪಟ್ಟಿಗೆ ಆಧಾರವಾಗಿದೆ ಹಣೆಪಟ್ಟಿಯ ಮಧ್ಯದಲ್ಲಿ ಸುಂದರವಾದ ಗಜಲಕ್ಷ್ಮಿಯ ಶಿಲ್ಪವಿದೆ. ಸುಕನಾಸಿಯಲ್ಲಿ ಪೂರ್ವಕ್ಕೆ ಮುಖಃಮಾಡಿರುವಂತೆ ದೊಡ್ಡದಾದ ಶಿವಲಿಂಗವಿದೆ. ಇದಕ್ಕೆ ಪಾಣಿಪೀಠ ಇಲ್ಲ. ಕೇವಲ ಬಾಣ ಭಾಗ ಮಾತ್ರ ಇದೆ.

ಗರ್ಭಗೃಹದ ದ್ವಾರವು ಸಾದಾ ಇದೆ. ಇಲ್ಲಿ ಚೌಕಾಕಾರದ ಅರ್ಧಗಂಬವು ಪ್ರಧಾನವಾಗಿದ್ದು ಇದರ ಮಧ್ಯೆ ಲಂಬಪಟ್ಟಿಯು ಎದ್ದು ಕಾನುತ್ತದೆ. ಇದರ ಮೇಲೆ ಚೌಕಾಕಾರದ ಹಲಗೆ, ಬೋದುಗೆಗಳಿದ್ದು ಹಣೆಪಟ್ಟಿಗೆ ಆಧಾರವಾಗಿದೆ. ಹಣೆಪಟ್ಟಿಯ ಕಪೋತವು ಗಿಳಿ ಹಂಸಗಳಿಂದ ಅಲಂಕೃತಗೊಂಡಿದೆ.

ವೀರಭದ್ರೇಶ್ವರ ಮೂರ್ತಿಯು ಪಾಣಿಪೀಠದ ಮೇಲೆ ಸ್ಥಾಪಿತವಾಗಿದೆ. ಇದು ಸುಮಾರು ಎರಡೂವರೆ ಅಡಿ ಅಗಲ ಐದು ಅಡಿ ಎತ್ತರದ ಫಲಕದ ಮೇಲೆ ರಚಿತವಾಗಿದೆ. ಮೂರ್ತಿಯು ನಾಲ್ಕು ಕೈಗಳನ್ನು ಹೊಂದಿದ್ದು ಮೇಲಿನ ಬಲಗೈಯಲ್ಲಿ ದಂಡ (ಅಂಕುಶ?) ಎಡಗೈಯಲ್ಲಿ ಬಾಣ ಕೆಳಗಿನ ಬಲಗೈಯಲ್ಲಿ ಮೇಲ್ಮುಖವಾಗಿರುವ ಖಡ್ಗ ಎಡಗೈಯು ಕೆಳಮುಖವಾಗಿ ಇಳಿಬಿಟ್ಟಂತಿದೆ. ವೀರಭದ್ರನ ಕಣ್ಣು, ಕಿವಿ, ಮೀಸೆ ಢಾಳವಾಗಿ ಮೂಡಿಬಂದಿದೆ. ತಲೆಯ ಮೇಲೆ ಅಲಂಕಾರಯುತವಾದ ಕಿರೀಟವಿದೆ. ಫಲಕದ ಮೇಲ್ತುದಿಯಲ್ಲಿ ಕೀರ್ತಿ ಮುಖದ ಕೆತ್ತನೆಯಿದೆ. ನಿಂತ ವೀರಭದ್ರನ ಪಾದದ ಬಳಿ ಒಂದು ಬದಿ ಕೈ ಮುಗಿದು ನಿಂತ ದಕ್ಷನನ್ನು ತೋರಿಸಲಾಗಿದೆ. ಅವನ ಮುಖವು ಕುರಿಯ ಮುಖದಂತಿದೆ. ಇನ್ನೊಂದು ಬದಿಗೆ ಬಹುಶಃ ದಕ್ಷನ ಸತಿಯ ಚಿತ್ರಣವಿದೆ.

ರಾಯಚೂರಿನಲ್ಲಿರುವ ದೇವಾಲಯಗಳು ಮೂಲಸ್ವರೂಪದಲ್ಲಿ ಉಳಿದುಕೊಂಡು ಬಂದಿಲ್ಲ. ರಾಜಕೀಯ ಸ್ಥಿತ್ಯಂತರಗಳೆ ಇದಕ್ಕೆ ಕಾರಣ. ಈ ದೇವಾಲಯಗಳು ಕಲ್ಯಾಣಿ ಚಾಳುಕ್ಯ ವಾಸ್ತುಶೈಲಿಯನ್ನು ಪ್ರತಿಬಿಂಬಿಸುತ್ತಿದ್ದು ಆ ಕಾಲದಲ್ಲಿಯೇ ರಚನೆಗೊಂಡಿವೆ. ರಾಯಚೂರು ಆ ಹೊತ್ತಿಗಾಗಲೇ ಮಹತ್ವವನ್ನು ಪಡೆಯ ತೊಡಗಿತ್ತು. ಅಂತೆಯೇ ಹೊಯ್ಸಳರ ಶಾಸನಗಳಲ್ಲಿ ಇದನ್ನು ರಾಚವೂರು, ಪೆರ್ಮನ ರಾಚವೂರು ಎಂದು ಹೆಸರಿಸಲಾಗಿದೆ. ಪೆರ್ಮ ಎಂಬುದು ಕಲ್ಯಾಣಿ ಚಾಳುಕ್ಯರ ಸುಪ್ರಸಿದ್ಧ ಅರಸು ಆರನೆ ವಿಕ್ರಮಾದಿತ್ಯನ ಬಿರುದುಗಳಲ್ಲೊಂದಾದ ಪೆರ್ಮಾಡಿಯ ಅರೆರೂಪ. ವಿಕ್ರಮಾದಿತ್ಯನ ಅಧೀನದಲ್ಲಿದ್ದ ಇದು ಅವನ ಸೇನಾಠಾಣ್ಯವಾಗಿ ರೂಪಗೊಳ್ಳುತ್ತಿದ್ದ ಬಗ್ಗೆ ಹೊಯ್ಸಳರ ಶಾಸನಗಳಲ್ಲಿ ಸೂಚನೆಗಳಿವೆ.

ಆಧಾರಸೂಚಿ

೧. ಕನ್ನಡ ವಿಶ್ವವಿದ್ಯಾಲಯ ಶಾಸನ, ಸಂಪುಟ ೭, ರಾಯಚೂರು ೪೫, ಕಾಕತೀಯ ಶಾಸನ, ಕ್ರಿ.ಶ. ೧೨೯೪.

೨. ಕನ್ನಡ ನುಡಿ, ೧೯೬೯, ಪುಟ ೧೫.

೩. E.C.IX ಬೇಲೂರು, ೪೧೦, ಹುಲಿಕೇರಿ ಶಾಸನ, ಕ್ರಿ.ಶ. ೧೧೬೦, ಒಂದನೇ ನರಸಿಂಹ.

೪. ಇ.ಅ. VII, ನಾಗಮಂಗಲ, ೧೧೮, ಹಟ್ಟಣ ಶಾಸನ, ಕ್ರಿ.ಶ. ೧೧೭೮, ಎರಡನೇ ಬಲ್ಲಾಳ.

೫. ಇ.ಅ. IX, ಬೇಲೂರು, ೨೪೦, ಹಿರೇಹಳ್ಳಿ ಶಾಸನ, ಕ್ರಿ.ಶ. ೧೧೮೨, ಎರಡನೇ ಬಲ್ಲಾಳ.

೬. Annual Report of The Archaeological of His Exalted Highness of Nizam's Dominions Hyderabad 1929-1930 Page 6-19.

೭. ಕರ್ನಾಟಕ ದೇವಾಲಯಗಳ ಕೋಶ : ರಾಯಚೂರು ಜಿಲ್ಲೆ, ಡಾ. ಸಿ.ಎಸ್. ವಾಸುದೇವನ್, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪುಟ ೮೭.

೧೩೦

ಹಗರಿಬೊಮ್ಮನಹಳ್ಳಿ ತಾಲೂಕು ಅಲಬೂರು ಗ್ರಾಮದಲ್ಲಿರುವ ಪ್ರಾಚ್ಯಾವಶೇಷಗಳು

ಮಂಜನಾಯ್ಕ ಆರ್.*

ಹಗರಿಬೊಮ್ಮನಹಳ್ಳಿಯು ಬಳ್ಳಾರಿ ಜಿಲ್ಲೆಯ ಒಂದು ತಾಲೂಕು ಕೇಂದ್ರ. ಇದು ಬಳ್ಳಾರಿಯಿಂದ ಸುಮಾರು ೧೦೨ ಕಿ.ಮೀ. ದೂರದಲ್ಲಿದೆ. ಈ ತಾಲೂಕಿನಲ್ಲಿ ಕೋಗಳಿ, ತಂಬ್ರಹಳ್ಳಿ, ಹಂಪಾಪಟ್ಟಣ, ಮತ್ತು ಹಗರಿಬೊಮ್ಮನಹಳ್ಳಿ ಎಂಬ ನಾಲ್ಕು ಪ್ರಮುಖ ಹೋಬಳಿ ಕೇಂದ್ರಗಳಿವೆ. ತಾಲೂಕಿನ ಉತ್ತರದಲ್ಲಿ ತುಂಗಭದ್ರಾ ಜಲಾಶಯದ ಹಿನ್ನೀರು ಹರಡಿದ್ದು, ತಾಲೂಕು ಗಡಿಯಾಗಿ ಕೊಪ್ಪಳ ಜಿಲ್ಲೆಯನ್ನು ಇಲ್ಲಿಂದ ಬೇರ್ಪಡಿಸಿದೆ. ಚಿಕ್ಕಹಗರಿ ಈ ತಾಲೂಕಿನ ಮುಖ್ಯ ನದಿ. ಇದು ದಕ್ಷಿಣದಿಂದ ಉತ್ತರಾಭಿಮುಖವಾಗಿ ಹರಿದು ತುಂಗಭದ್ರಾನದಿಯನ್ನು ಸೇರಿಕೊಳ್ಳುತ್ತದೆ.

ಶಾಸನದಲ್ಲಿ ಅಲಂಬೂರು ಎಂದು ದಾಖಲಾಗಿರುವ ಈ ಗ್ರಾಮವು ಪ್ರಸ್ತುತದಲ್ಲಿ ಅಲಬೂರು ಎಂದು ಕರೆಯಲ್ಪಡುತ್ತಿದೆ. ಈ ಗ್ರಾಮವು ಕೋಗಳಿ ಹೋಬಳಿಯ ಒಂದು ಪ್ರಾಚೀನ ಗ್ರಾಮ ಇದು ತಾಲೂಕು ಕೇಂದ್ರದಿಂದ ದಕ್ಷಿಣ ಭಾಗಕ್ಕೆ ೨೭ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಪೂರ್ವದಲ್ಲಿ ಅಂಬಳಿ, ಪಶ್ಚಿಮದಲ್ಲಿ ಇಟ್ಟಿಗೆ-ಕಲ್ಲಹಳ್ಳಿ, ಉತ್ತರದಲ್ಲಿ ಕೋಗಳಿ-ದಿಬ್ಬದಹಳ್ಳಿ ಮತ್ತು ದಕ್ಷಿಣದಲ್ಲಿ ಹೊನ್ನಹಳ್ಳಿ-ಬಳಿಗನೂರು ಗ್ರಾಮಗಳಿವೆ.

ಶಾಸನಗಳು

ಈ ಗ್ರಾಮದ ರಾಮಲಿಂಗೇಶ್ವರ ದೇವಾಲಯದ ಹತ್ತಿರ ನಿಲ್ಲಿಸಿರುವ ಶಾಸನವು ಐದು ಅಡಿ ಏಳು ಇಂಚು ಉದ್ದ, ಎರಡು ಅಡಿ ನಾಲ್ಕು ಇಂಚು ಅಗಲವನ್ನು ಮತ್ತು ೩೪ ಸಾಲುಗಳನ್ನು ಹೊಂದಿದೆ.[೧] ಶಾಸನದಲ್ಲಿ ಎಡಬದಿ ಸೂರ್ಯ ಚಂದ್ರ ಮತ್ತು ಮಧ್ಯದಲ್ಲಿ ಶಿವಲಿಂಗ, ಆಕಳು, ಕರು ಇದೆ. ಬಲಬದಿಯ ತುದಿಯಲ್ಲಿ ಶಿವಭಕ್ತ ಶಿಲ್ಪವಿದೆ. ಶಾಸನವು ಕ್ರಿ.ಶ. ೧೧೪೭ರ ಕಲ್ಯಾಣ ಚಾಲುಕ್ಯ, ಎರಡನೇ ಜಗದೇಕಮಲ್ಲದೇವನ ಕಾಲದ ಶಾಸನವಾಗಿದ್ದು, ಶಾಸನದ ಪಾಠವನ್ನು ಕನ್ನಡ ಭಾಷೆಯಲ್ಲಿ ಬರೆಯಲಾಗಿದ್ದು, ಕನ್ನಡ ಲಿಪಿಯಲ್ಲಿ ಕೆತ್ತಲಾಗಿದೆ. ಶಾಸನದಲ್ಲಿ ಜಗದೇಕಮಲ್ಲ-ಪಾಂಡ್ಯದೇವನು ನೊಳಂಬವಾಡಿ-೩೨೦೦೦ ಮತ್ತು ನಾಚಿದೇವರಸನು ಕೋಗಳಿ-೫೦೦ನ್ನು ಆಳುತ್ತಿದ್ದರೆಂದು ತಿಳಿಸುತ್ತದೆ. ಅಲಂಬೂರಿನ ಎಂಬತ್ತನಾಲ್ಕು ಮಹಾಜನರು ಸೋಗೆಯ (ಈಗಿನ ಹೂವಿನ ಹಡಗಲಿ ತಾಲೂಕು ಸೋಗಿ ಗ್ರಾಮ) ಕಳೇಶ್ವರ ಪಂಡಿತರ ಶಿಷ್ಯ ವಾಮಶಕ್ತಿ ಪಂಡಿತರ ಕಾಲನ್ನು ತೊಳೆದು ಸ್ವಯಂಭೂ ಮೂಲಸ್ಥಾನ ದೇವರ ಪೂಜಾರ್ಥ ಹಾಗೂ ಗುರುಗಳ ಆಹಾರ ಇತ್ಯಾದಿಗಳಿಗಾಗಿ ಭೂದಾನ ನೀಡುತ್ತಾರೆ. ಮಹಾಜನರ ಕೆಲವು ವಿಶಿಷ್ಟ ಗುಣಗಳನ್ನು ಈ ಶಾಸನದಲ್ಲಿ ವರ್ಣಿಸಿದೆ.[೨]

ಗ್ರಾಮದ ಹೊನ್ನತ್ತಿಯಮ್ಮನ ದೇವಾಲಯದ ಹತ್ತಿರ ನಿಲ್ಲಿಸಿರುವ ಶಾಸನವು ಒಂದು ಅಡಿ ಆರು ಇಂಚು ಉದ್ದ, ಎರಡು ಅಡಿ ಅಗಲ ಮತ್ತು ೯ ಸಾಲುಗಳನ್ನು ಹೊಂದಿದೆ.[೩] ಶಾಸನವು ಕ್ರಿ.ಶ. ೧೫೧೮ರ ವಿಜಯನಗರದ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಸೋಲೂರ ಬಸವಪನಾಯಕನ ಮಗ ಕೃಷ್ಣಪನಾಯಕನು ಅಲಬೂರಿನ ಹೊಂನತಿದೇವಿಯ ದೇವಾಲಯಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.[೪]

ವೀರಗಲ್ಲುಗಳು

ಹೊನ್ನತ್ತಿಯಮ್ಮನ ದೇವಾಲಯದ ಹತ್ತಿರ ನಿಲ್ಲಿಸಿರುವ ಶಾಸನದ ಪಕ್ಕದಲ್ಲಿರುವ ಶಾಸನೋಕ್ತ ವೀರಗಲ್ಲುಇದ್ದು ಇದು ನಾಲ್ಕು ಅಡಿ ಉದ್ದ ಹಾಗೂ ಎರಡು ಅಡಿ ಅಗಲವನ್ನು ಹೊಂದಿದೆ. ವೀರಗಲ್ಲನ್ನು ಹಸಿರು ಮಿಶ್ರಿತ ನೀಲಿ ಛಾಯೆಯ ಬಳಪದ ಶಿಲೆಯಲ್ಲಿ ಕೆತ್ತಿರುವುದನ್ನು ಕಾಣಬಹುದು.

* ಪುರಾತತ್ವ ಸಹಾಯಕರು, ಉಪ ನಿರ್ದೇಶಕರ ಕಚೇರಿ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕಮಲಾಪುರ, ಹಂಪಿ.

ವೀರಗಲ್ಲಿನ ಕೆಳಗಿನಿಂದ ಮೊದಲನೆ ಪಟ್ಟಿಕೆಯಲ್ಲಿ ಹೋರಾಟದ ಭಂಗಿಯಲ್ಲಿ ಆಯುಧ ಮತ್ತು ಕುದುರೆಗಳ ಸಹಿತ ವೀರರು ಪರಸ್ಪರ ವೈರಿಗಳ ವಿರುದ್ಧ ಹೋರಾಡುತ್ತಿರುವುದನ್ನು ಕಾಣಬಹುದು. ಇದರ ಮಧ್ಯದಲ್ಲಿ ಒಬ್ಬ ಪ್ರಮುಖ ವೀರನು ಅಥವಾ ನಾಯಕನು ವೀರವೇಶದಿಂದ ಹೋರಾಡುತ್ತಿರುವ ಶಿಲ್ಪವು ಈ ವೀರಗಲ್ಲಿನ ಕೆಳಗಿನ ಪಟ್ಟಿಕೆಯನ್ನು ಎರಡು ಭಾಗಗಳಾಗಿ ವಿಂಗಡಿಸುವಂತೆ ಮಾಡಿದೆ. ಅದರ ಮುಂಭಾಗದಲ್ಲಿ ಒಂದರ ಮೇಲೆ ಒಂದರಂತೆ ಮೂರು ಕುದುರೆಗಳಲ್ಲೂ ವೀರರು ಕುಳಿತು ತಮ್ಮ ಬಲಗೈಯಿಂದ ಕತ್ತಿಯನ್ನು ಬೀಸುತ್ತಿರುವಂತೆ ಕೆತ್ತಲಾಗಿದೆ. ಹಾಗೂ ಮಧ್ಯದ ವೀರನ ಹಿಂಭಾಗದಲ್ಲಿರುವ ವೀರನು ಅವನಿಗೆ ಸಹಕರಿಸುವಂತೆ ಕಾಣುತ್ತದೆ. ಕೆಳಭಾಗದಲ್ಲಿ ಕುದುರೆಯ ಮೇಲೆಯೇ ಮುಗುಚಿಬಿದ್ದ ಹಾಗೆ ಮತ್ತು ಅವನನ್ನು ಮೇಲಿನ ವೀರನು ತುಳಿದಿರುವಂತೆ ಕೆತ್ತಲ್ಪಟಿದೆ.

ವೀರಮರಣ ಅಪ್ಪಿದ ವ್ಯಕ್ತಿಯು ಅಂಜಲಿಮುದ್ರೆಯಲ್ಲಿ ಪೀಠದ ಮೇಲೆ ಕುಳಿತಿರುವುದನ್ನು ಎರಡನೆಯ ಹಂತದಲ್ಲಿ ಕಂಡರಿಸಲಾಗಿದೆ. ಇವನು ಮಂಟಪದಲ್ಲಿ ಕುಳಿತಿರುವಂತೆ ತೋರಲಾಗಿದೆ. ಅತ್ಯಂತ ಆಕರ್ಷಕವಾಗಿರುವ ಮಂಟಪದ ಮೇಲೆ ಕಳಶವನ್ನು ಕಾಣಬಹುದು. ಮಂಟಪದ ಎರಡು ಬದಿಯಲ್ಲಿ ಅಪ್ಸರೆಯರಿದ್ದು ಒಬ್ಬಳು ಚಾಮರವನ್ನು ಬಿಸುವಂತೆಯು ಮತ್ತೊಬ್ಬಳು ಮಂಟಪವನ್ನು ಹಿಡಿದಿರುವಂತೆ ಕಾಣುತ್ತದೆ. ಈ ಅಪ್ಸರೆಯರು ವಿವಿಧ ಆಭರಣಗಳನ್ನು ಧರಿಸಿದ್ದಾರೆ. ಇವರ ಉಡುಗೆಗಳು ಅತ್ಯಂತ ಸುಂದರವಾಗಿರುವಂತೆ ಚಿತ್ರಿಸಿರುವುದನ್ನು ಶಿಲ್ಪದಲ್ಲಿ ಕಾಣಬಹುದು.

ಮೂರನೇ ಪಟ್ಟಿಕೆಯಲ್ಲಿ ಸ್ವರ್ಗಕ್ಕೆ ಹೋಗಬೇಕಾದರೆ ಧಾರ್ಮಿಕ ವಿಧಿ–ವಿಧಾನದನ್ವಯ ಭಕ್ತಿಪೂರ್ವಕವಾಗಿ ಪ್ರಜೆ ಮಾಡುತ್ತಿರುವುದು ಅಲ್ಲದೇ ಯತಿಯು ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವಂತೆಯೂ ಹಾಗೂ ಶಿವಲಿಂಗದ ಮೇಲೆ ಅಲಂಕಾರಿಕವಾಗಿ ಛತ್ರವಳಿಯಂತೆ ಕೆತ್ತಲ್ಪಟಿದೆ. ಮಂಟಪಕ್ಕೆ ದೇವಾಲಯದ ಮೇಲ್ಭಾಗದಲ್ಲಿರುವ ಶಿಖರದಂತೆ ಇದೆ. ನಂದಿಯ ಮೇಲ್ಭಾಗದಲ್ಲಿ ಚಂದ್ರನ ಶಿಲ್ಪವು ಸಹ ಕೆತ್ತಲ್ಪಟಿದೆ.

ಗ್ರಾಮದ ಬಸವೇಶ್ವರ ದೇವಾಲಯದ ಮುಂದೆ ಇನ್ನೊಂದು ವೀರಗಲ್ಲು ಇದ್ದು ಇದು ನಾಲ್ಕು ಅಡಿ ಆರು ಇಂಚು ಉದ್ದ ಹಾಗೂ ಎರಡು ಅಡಿ ಅಗಲವನ್ನು ಹೊಂದಿದೆ. ವೀರಗಲ್ಲನ್ನು ಗ್ರಾನೈಟ್ ಶಿಲೆಯಲ್ಲಿ ಕೆತ್ತಿರುವುದನ್ನು ಕಾಣಬಹುದು. ಕುದುರೆಯು ತನ್ನೆರಡು ಮುಂಗಾಲುಗಳನೆತ್ತಿ ಓಡುತ್ತಿರುವುದು ಆ ಕುದುರೆ ಮೇಲೆ ಕುಳಿತ ವೀರ ತನ್ನ ಎಡಗೈಯಲ್ಲಿ ಕುದುರೆ ಲಗಾಮು ಹಿಡಿದುಕೊಂಡು ಬಲಗೈಯಲ್ಲಿ ಖಡ್ಗವನ್ನು ಎತ್ತಿ ಹಿಡಿದಿದ್ದಾನೆ. ಕುದುರೆಯ ವೇಗದ ರಭಸವನ್ನು ನೋಡಿದರೆ ವೀರನ ಹೋರಾಟದ ವೀರಾವೇಶದ ಗತಿಶೀಲತೆಯನ್ನು ತೋರಿಸುತ್ತದೆ. ಕುದುರೆ ಹಾಗೂ ವೀರ ಇಬ್ಬರು ಅಜಾನುಭಾವರಾಗಿದ್ದಾರೆ. ಇದು ವೀರಗಲ್ಲಿನ ಮೊದಲನೇ ಹಂತವಾದರೆ ಎರಡನೇ ಹಂತದಲ್ಲಿ ಶಿವಲಿಂಗವಿದ್ದು ಅದರ ಬಲಭಾಗದಲ್ಲಿ ಯತಿಯು ಶಿವಲಿಂಗಕ್ಕೆ ಪೂಜೆಯನ್ನು ಸಲ್ಲಿಸುತ್ತಿರುವುದು ಮತ್ತು ಯತಿಯ ಹಿಂಭಾಗದಲ್ಲಿ ಹಸು ಮತ್ತು ಕರುವಿನ ಶಿಲ್ಪವಿದ್ದು ಆ ಭಾಗ ಸ್ವಲ್ಪ ತೃಟಿತವಾಗಿದೆ. ಎಡಭಾಗದಲ್ಲಿ ನಂದಿ ಮತ್ತು ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಶಿಲ್ಪಗಳಿವೆ.

ದೇವಾಲಯಗಳು

ರಾಮಲಿಂಗೇಶ್ವರ ದೇವಾಲಯ

ಕಲ್ಯಾಣ ಚಾಲುಕ್ಯರ ಕಾಲದ ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು ಪೂರ್ವಾಭಿಮುಖವನ್ನು ಹೊಂದಿದೆ. ಹಾಳಾದ ಅವಸ್ಥೆಯಲ್ಲಿರುವ ಇದು ಗರ್ಭಗೃಹ ಮಾತ್ರ ಉಳಿದಿದೆ. ಗರ್ಭಗೃಹದ ಪ್ರವೇಶದ್ವಾರವು ಸಾದಾ ಕೆತ್ತನೆಯಿಂದ ಕೂಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ ಹಾಗೂ ಬಾಗಿಲುವಾಡದ ಮೇಲ್ಭಾಗದಲ್ಲಿ ಸಪ್ತಮಾತೃಕೆಯ ಶಿಲ್ಪವುಳ್ಳ ಪಟ್ಟಿಕೆಯನ್ನು ಇಟ್ಟು ಗೋಡೆಯನ್ನು ಇತ್ತೀಚೆಗೆ ಕಟ್ಟಲಾಗಿದೆ.[೫] ಗರ್ಭಗೃಹದಲ್ಲಿ ಶಿವಲಿಂಗವಿದೆ ಅದರ ಮುಂಭಾಗದಲ್ಲಿ ನಂದಿ ವಿಗ್ರಹವಿದ್ದು ಇದು ತಲೆಯನ್ನು ನೇರವಾಗಿಸಿಕೊಂಡು ಲಿಂಗಕ್ಕೆ ಎದುರಾಗಿದ್ದು ಮುಂದಿನ ಬಲಗಾಲನ್ನು ಮಡಚಿ ಎಡಗಾಲನ್ನು ಮುಂದೆ ಚಾಚಿ ಕುಳಿತ ಭಂಗಿಯಲ್ಲಿದೆ. ಕೊರಳಿಗೆ ಅಲಂಕಾರಿಕವಾದ ಸಾದಾಪಟ್ಟಿಕೆಗಳಿವೆ. ಮೈಮೇಲೆ ಸಾಧಾರಣ ಗಂಟೆಸರಮಾತ್ರಯಿದೆ ಹಾಗೂ ಮೂಗಿಗೆ ಮೂಗುದಾರವನ್ನು ಮತ್ತು ಹಣೆಗೆ ಹಣೆಪಟ್ಟಿಯನ್ನು ಕೆತ್ತಲಾಗಿದೆ. ಬಾಲವು ಬಾಗಿದ ರೀತಿಯಲ್ಲಿದೆ. ಈ ದೇವಾಲಯದ ಬಳಿ ಶಾಸನ, ಎರಡು ಶಿವಲಿಂಗಗಳು ಮತ್ತು ಸಣ್ಣದೊಂದು ಜೈನಶಿಲ್ಪವಿದೆ.

ಈಶ್ವರ ದೇವಾಲಯ

ಕಲ್ಯಾಣ ಚಾಲುಕ್ಯರ ಕಾಲದ ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು ಪೂರ್ವಾಭಿಮುಖವನ್ನು ಹೊಂದಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪ ಹಾಗೂ ಮುಖಮಂಟಪಗಳಿಂದ ಕೂಡಿದೆ. ಈಗ ಗರ್ಭಗೃಹ ಮಾತ್ರ ಇದೆ. ಇದರ ಒಳಗೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದ್ದು, ಇದರ ಪಕ್ಕದಲ್ಲಿ ಗಣೇಶನ ಶಿಲ್ಪವಿದೆ. ಗರ್ಭಗೃಹದ ಪ್ರವೇಶದ್ವಾರವು ಪಂಚಶಾಖೆಯಿಂದ ಕೂಡಿದ ಅಲಂಕಾರಿಕ ಪಟ್ಟಿಕೆಯಿಂದ ಕೆತ್ತಲ್ಪಟಿದೆ. ಮೊದಲಪಟ್ಟಿಕೆಯಲ್ಲಿ ಲತಾಶಾಖೆ, ಎರಡನೆಯ ಪಟ್ಟಿಕೆಯಲ್ಲಿ ಅಲಂಕಾರಿಕವಾದ ಹೂಬಳ್ಳಿ, ಮೂರನೇ ಪಟ್ಟಕೆಯಲ್ಲಿ ಅರ್ಧಗಂಬ (ಸದಾಪಟ್ಟಿಕೆ), ನಾಲ್ಕನೆಯ ಪಟ್ಟಿಕೆಯಲ್ಲಿ ಲತಸುರಳಿ ಹಾಗೂ ಐದನೆಯ ಪಟ್ಟಿಕೆಯಲ್ಲಿ ಮತ್ತೆ ಅರ್ಧಗಂಬದ ರೀತಿಯಲ್ಲಿದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ ಹಾಗೂ ವಿಶಿಷ್ಟವಾದ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಈ ದೇವಾಲಯದ ಉಳಿದ ಭಾಗಗಳ ಅವಶೇಷಗಳು ಸುತ್ತಲೂ ಹರಡಿವೆ.[೬]

ಗೋಪಾಲಕೃಷ್ಣ ದೇವಾಲಯ

ವಿಜಯನಗರ ಕಾಲದ ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು ಪೂರ್ವಾಭಿಮುಖವನ್ನು ಹೊಂದಿದೆ. ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳನ್ನೊಳಗೊಂಡಿದ್ದು, ಇತ್ತೀಚೆಗೆ ಮುಖ ಮಂಟಪವನ್ನು ಜೋಡಿಸಲಾಗಿದೆ. ಗರ್ಭಗೃಹದಲ್ಲಿ ಗೋಪಾಲಕೃಷ್ಣ ಮತ್ತು ಗಣಪತಿ ವಿಗ್ರಹಗಳಿವೆ.[೭] ಗರ್ಭಗೃಹದ ಮುಚ್ಚಿಗೆಯು ಅಷ್ಟಕೋನಾಕಾರದಲ್ಲಿದ್ದು ಅದರ ಮಧ್ಯದಲ್ಲಿ ಅರಳಿದ ಪದ್ಮವಿದೆ. ಗರ್ಭಗೃಹದ ಬಾಗಿಲುವಾಡವು ಸಾದಾ ಕೆತ್ತನೆಯಿಂದ ಕೂಡಿದ್ದು, ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರು, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬು ಕೆತ್ತನೆಯಿದೆ. ಸಭಾಮಂಟಪದಲ್ಲಿ ಸಾದಾ ಕೆತ್ತನೆಯ ನಾಲ್ಕು ಕಂಬಗಳಿವೆ. ಅವು ಕೆಳಗೆ ಅಸಮಚೌಕಾಕಾರ, ಮೇಲ್ಭಾಗ ವೃತ್ತಾಕಾರದ ಫಲಕ ಹಾಗೂ ಬೋದಿಗೆಗಳನ್ನು ಒಳಗೊಂಡಿವೆ. ಸಭಾಮಂಟಪದ ಪ್ರವೇಶದ್ವಾರವು ಸಾದಾ ಕೆತ್ತನೆಯಿಂದ ಕೂಡಿದೆ ಇದರ ಲಲಾಟದ ಭಾಗವು ಇತ್ತೀಚೆಗೆ ಕೆಳಗೆ ಬಿದ್ದಿದ್ದು ಅದನ್ನು ಸ್ಥಳೀಯ ಗ್ರಾಮಸ್ಥರು ಜೀರ್ಣೋದ್ಧಾರ ಮಾಡಿರುತ್ತಾರೆ. ಈ ದೇವಾಲಯದ ಗರ್ಭಗುಡಿಯ ಭಿತ್ತಿಯು ಅರ್ಧಗಂಬಗಳ ಮಾದರಿಯಲ್ಲಿದ್ದು ವೃತ್ತಾಕಾರದ ತಲವಿನ್ಯಾಸವನ್ನು ಹೊರಮುಖದಿಂದ ಕಾಣುತ್ತದೆ. ಗರ್ಭಗೃಹದ ಮೇಲೆ ದ್ವಿತಲವುಳ್ಳ ಶಿಖರವನ್ನು ಗಾರೆ ಮತ್ತು ಇಟ್ಟಿಗೆಗಳನ್ನು ಬಳಸಿ ಕಟ್ಟಲಾಗಿದೆ. ಇದರಲ್ಲಿ ವಾಸ್ತು ಅಲಂಕರಣೆಗಳಾದ ಕಂಬ, ಗೂಡು ಮತ್ತು ಕಪೋತಗಳಿವೆ.

ಮೂರ್ತಿಶಿಲ್ಪಗಳು

ಗೋಪಾಲಕೃಷ್ಣ


ಈ ಮೂರ್ತಿಯು ಗ್ರಾಮದ ಗೋಪಾಲಕೃಷ್ಣ ದೇವಾಲಯದ ಗರ್ಭಗುಡಿಯಲ್ಲಿದೆ. ಶಿಲ್ಪವು ಕಪ್ಪು ಬಣ್ಣದ ಬಳಪ ಶಿಲೆಯಲ್ಲಿದ್ದು ಸ್ಥಾನಕಭಂಗಿಯಲ್ಲಿದೆ. ಮೂರುವರೆ ಅಡಿ ಉದ್ದ, ಒಂದು ಅಡಿ ಹತ್ತು ಇಂಚು ಅಗಲವನ್ನು ಹೊಂದಿರುವ ಶಿಲ್ಪವು ಚತುರ್ಭುಜದಾರಿಯಾಗಿದ್ದು ಮೇಲಿನ ಎಡಗೈಯಲ್ಲಿ ಶಂಖ, ಮೇಲಿನ ಬಲಗೈಯಲ್ಲಿ ಚಕ್ರ ಮತ್ತು ಕೆಳಗಿನ ಎಡ ಮತ್ತು ಬಲಗೈಯಿಂದ ಕೊಳಲನ್ನು ಹಿಡಿದಿದ್ದಾನೆ. ಐದು ಎಡೆಯಿರುವ ನಾಗರಾಜನು ಕೃಷ್ಣನ ಕಿರೀಟ ಮುಕುಟದ ಮೇಲೆ ಎಡೆಬಿಚ್ಚಿಕೊಂಡಿದ್ದಾನೆ. ಪತ್ರಕುಂಡಲ, ಕಂಠಹಾರ, ಮಣಿಸರ, ಮೋಣಕಾಲಿನವರೆಗೆ ಇಳಿಬಿದ್ದ ಅಲಂಕಾರಯುತ ವೈಜಯಂತಿ ಮಾಲೆ, ಯಜ್ಞೋಪವೀತ, ಕೇಯೂರ, ಕಟಿವಸ್ತ್ರ ಧಾರಿಯಾಗಿದ್ದು, ಕಾಲಿಗೆ ಕಾಲುಕಡಗಗಳನ್ನು ಧರಿಸಿದ್ದಾನೆ. ಶಿಲ್ಪದ ಎಡಬಲದಲ್ಲಿ ಗೋವುಗಳಿವೆ. ಪೀಠದಲ್ಲಿ ಗರುಡನಿದ್ದಾನೆ. ಶಿಲ್ಪದ ಕೊರಳಿನ ಭಾಗದಲ್ಲಿ ಬಿರಕು ಬಿಟ್ಟಿದೆ. ಈ ಮೂರ್ತಿಲಕ್ಷಣದ ಆಧಾರದ ಮೇಲೆ ಇದನ್ನು ವಿಜಯನಗರ ಕಾಲದ್ದೆಂದು ಹೇಳಬಹುದು.

ಗಣಪತಿ

ಈ ಮೂರ್ತಿಯು ಗ್ರಾಮದ ಗೋಪಾಲಕೃಷ್ಣ ದೇವಾಲಯದ ಗರ್ಭಗುಡಿಯಲ್ಲಿರುವ ಗೋಪಾಲಕೃಷ್ಣ ಮೂರ್ತಿಯ ಪಕ್ಕದಲ್ಲಿದೆ. ಶಿಲ್ಪವು ಪೀಠದ ಮೇಲೆ ಕುಳಿತಭಂಗಿಯಲ್ಲಿದೆ. ಒಂದು ಅಡಿ ಏಳು ಇಂಚು ಉದ್ದ, ಒಂದು ಅಡಿ ಐದು ಇಂಚು ಅಗಲವನ್ನು ಹೊಂದಿರುವ ಶಿಲ್ಪವು ಚತುರ್ಭುಜದಾರಿಯಾಗಿದ್ದು ಕರಂಡಮುಕುಟಧಾರಿಯಾಗಿದೆ. ಅಗಲವಾದ ಕಿವಿ, ಹಾವಿನ ಉದರಬಂಧ ಮತ್ತು ಹಾವಿನ ನಡುಬಂಧ ಹಾಗೂ ಯಜ್ಞೋಪವೀತಗಳಿವೆ. ಮೇಲಿನ ಕೈಗಳಲ್ಲಿ ಅಂಕುಶ, ಪಾಶ, ಕೆಳಬಲಗೈಯನ್ನು ಕೆಳಗೆ ಬಾಗಿಸಿ ಮಡಚಿದ ರೀತಿಯಲ್ಲಿದ್ದು, ಎಡಗೈಯಲ್ಲಿ ಮೋದಕ ಪಾತ್ರೆ, ಆ ಪಾತ್ರೆಯಲ್ಲಿರುವ



ರಾಮಲಿಂಗೇಶ್ವರ ದೇವಾಲಯ ಮತ್ತು ಶಾಸನ



ಶಾಸನೋಕ್ತ ವೀರಗಲ್ಲು



ವೀರಗಲ್ಲು



ರಾಮಾಯಣದ ನಿರೂಪಣಾತ್ಮಕ ಉಬ್ಬು ಶಿಲ್ಪಗಳಿರುವ ಕಂಬ



ಈಶ್ವರ ದೇವಾಲಯ



ಭೈರವಮೂರ್ತಿ



ಚತುರ್ಮುಖಬ್ರಹ್ಮನ ಶಿಲ್ಪದ ಮುಂಭಾಗ

ಸಿಹಿಯನ್ನು ಸೊಂಡಿಲಿನಿಂದ ತಿನ್ನುವಂತೆ ತೋರಿಸಲಾಗಿದೆ. ಈ ಮೂರ್ತಿಲಕ್ಷಣದ ಆಧಾರದ ಮೇಲೆ ಇದನ್ನು ವಿಜಯನಗರ ಕಾಲದ್ದೆಂದು ಹೇಳಬಹುದು.

ಭೈರವಮೂರ್ತಿ

ಈ ಮೂರ್ತಿಯು ಗ್ರಾಮದ ಹೊನ್ನತ್ತಿಯಮ್ಮನ ದೇವಾಲಯದ ಹತ್ತಿರ ಇರುವ ಕಟ್ಟೆಯ ಮೇಲಿದೆ. ಶಿಲ್ಪವು ಕಪ್ಪು ಬಣ್ಣದ ಗ್ರಾನೈಟ್ ಶಿಲೆಯಲ್ಲಿದ್ದು ಸ್ಥಾನಿಕ ಭಂಗಿಯಲ್ಲಿದೆ. ಈ ಮೂರ್ತಿಯ ಮೋಣಕಾಲಿನವರೆಗೆ ಸಿಮೆಂಟಿನ ಕಟ್ಟೆಯೊಳಗೆ ಹೂತಿದೆ. ಮೂರ್ತಿಯು ಚತುರ್ಭುಜಧಾರಿಯಾಗಿದೆ. ಎಡಭಾಗದ ಹಿಂದಿನ ಕೈಯಲ್ಲಿ ಡಮರುಗವನ್ನು ಮುಂದಿನ ಕೈಯಲ್ಲಿ

ರುಂಡವನ್ನು ಹಿಡಿದುಕೊಂಡಿದೆ. ಬಲಗೈಗಳಲ್ಲಿ ಹಿಂದಿನ ಕೈಯಲ್ಲಿ ಶೂಲವನ್ನು ಮುಂದಿನ ಕೈಯಲ್ಲಿ ಕತ್ತಿಯನ್ನು ಹಿಡಿದಿದೆ. ಕೆದರಿದ ಜಡೆ, ಸರ್ಪಕುಂಡಲ, ಭುಜಕೀರ್ತಿ ಕೇಯೂರ, ಕೊರಳಲ್ಲಿ ಮತ್ತು ಎದೆಯ ಭಾಗದಲ್ಲಿ ಸರ್ಪವನ್ನು ಸುತ್ತಿಕೊಂಡಿರುವುದು. ಎದೆಪಟ್ಟಿ, ಯಜ್ಞೋಪವೀತ, ರುಂಡಮಾಲೆ, ಕೈಗಡಗಗಳಿಂದ ಅಲಂಕೃತವಾದ ಈ ಮೂರ್ತಿಯು ನಗ್ನವಾಗಿದೆ. ಈ ಮೂರ್ತಿಲಕ್ಷಣದ ಆಧಾರದ ಮೇಲೆ ಇದನ್ನು ವಿಜಯನಗರ ಕಾಲದ್ದೆಂದು ಹೇಳಬಹುದು.

ಚರ್ತುಮುಖಬ್ರಹ್ಮ

ಈ ಶಿಲ್ಪವು ಒಂದೂವರೆ ಅಡಿ ಉದ್ದ, ಒಂದು ಅಡಿ ಅಗಲವನ್ನು ಹೊಂದಿರುವ ಸ್ತಂಭದ ಸುತ್ತಲೂ ನಾಲ್ಕು ಮುಖಗಳನ್ನು ಕಂಡರಿಸಲಾಗಿದೆ. ಇದು ಗ್ರಾಮದ ಕುರುಬರ ಓಣಿಯಲ್ಲಿರುವ ಉಡುಸಲಮ್ಮ ಗುಡಿಯಲ್ಲಿದೆ. ಈ ಗುಡಿಯು ಅವಸನಾದ ಸ್ಥಿತಿಯಲ್ಲಿದೆ.

ಸ್ಥಳೀಯರಿಂದ ಚರ್ತುಮುಖ ಬ್ರಹ್ಮನೆಂದು ಕರೆಯಲ್ಪಡುತ್ತಿರುವ ಈ ಶಿಲ್ಪವು ಒಂದು ಅಡಿ ಹತ್ತು ಇಂಚು ಉದ್ದ, ಒಂದು ಅಡಿ ಹತ್ತು ಇಂಚು ಅಗಲವನ್ನು (ಸೊಂಟದಿಂದ ಮೇಲ್ಭಾಗ ಮಾತ್ರ ಸೊಂಟದಿಂದ ಕೆಳಭಾಗವು ಸಿಮೆಂಟಿನ ಕಟ್ಟೆಯಲ್ಲಿ ಹೂತಿದೆ) ಹೊಂದಿದೆ. ಸಮಭಂಗದಲ್ಲಿ ನಿಂತಿದ್ದು ಕರಂಡ ಮುಕುಟದಾರಿಯಾಗಿದೆ. ಶಿಲ್ಪದ ಮುಂಭಾಗದಲ್ಲಿ ಮೂರು ತಲೆಯನ್ನು ಮತ್ತು ಹಿಂಭಾಗದಲ್ಲಿ ಒಂದು ತಲೆಯನ್ನು ಕೆತ್ತಲ್ಪಟ್ಟಿದ್ದು ದ್ವಿಭುಜದಾರಿಯಾಗಿದೆ. ಬಲಗೈಯಲ್ಲಿ ಸ್ಕಂದ, ಎಡಗೈಯಲ್ಲಿ ಶಂಕುವಿರಬಹುದು. ಶಿಲ್ಪಕ್ಕೆ ಎಣ್ಣೆ, ಬೆಣ್ಣೆ ಮತ್ತು ತುಪ್ಪವನ್ನು ಸುರಿದು ಹಾಳಾಗಿರುವುದರಿಂದ ಸ್ಪಷ್ಟವಾಗಿ ಗೋಚರಿಸುತ್ತಿಲ್ಲ. ಕೊರಳಲ್ಲಿ ಸಾಧಾರಣವಾದ ಪಟ್ಟಿಕೆಯ ಹಾರದಂತಿದ್ದು, ಯಜ್ಞೋಪವೀತವನ್ನು ಧರಿಸಿದ್ದಾನೆ. ಶಿಲ್ಪದ ಸೊಂಟದ ಭಾಗದವರೆಗೂ ಸಿಮೆಂಟಿನ ಕಟ್ಟೆಯಲ್ಲಿ ಹೂತಿರುವುದರಿಂದ ಶಿಲ್ಪದ ಕೆಳಗಿನ ಭಾಗವನ್ನು ನೋಡಲು ಸಾಧ್ಯವಿಲ್ಲ. ಸ್ಥಳೀಯರು ಈ ಶಿಲ್ಪದ ಕುರಿತು ಈ ರೀತಿ ಹೇಳುತ್ತಾರೆ. ಇದು ಚರ್ತುಮುಖ ಬ್ರಹ್ಮನ ಶಿಲ್ಪ. ಇದಕ್ಕೆ ನಮ್ಮ ಊರಿನಲ್ಲಿ ಮತ್ತು ಸುತ್ತಮುತ್ತಲಿನ ಊರಿನಲ್ಲಿ ಹೊಸದಾಗಿ ಮದುವೆಯಾದ ದಂಪತಿಗಳು ಬಂದು ಪೂಜೆ ಮಾಡಿಕೊಂಡು ಹೋಗುತ್ತಾರೆ. ನಂತರವೇ ಅವರನ್ನು ಪ್ರಸ್ಥಕ್ಕೆ ಬಿಡುವುದು. ಮಗು ಹುಟ್ಟಿದ ಮೇಲೆ ಮೊದಲು ಇಲ್ಲಿ ಮಗುವಿನ ತೊಟ್ಟಿಲು ಪೂಜೆಯನ್ನು ಮಾಡಿ ನಂತರವೇ ಮಗುವನ್ನು ತೊಟ್ಟಿಲಿನಲ್ಲಿ ಹಾಕುತ್ತಾರೆ ಎಂದು ಸ್ಥಳೀಯರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿರುತ್ತಾರೆ.

ರಾಮಾಯಣದ ಉಬ್ಬುಶಿಲ್ಪಗಳು

ಗ್ರಾಮದ ಆಂಜನೇಯ ದೇವಾಲಯದ ಮುಂಭಾಗದಲ್ಲಿರುವ ಸುಮಾರು ಮೂರು ಅಡಿ ನಾಲ್ಕು ಇಂಚು ಉದ್ದ ಹಾಗೂ ಒಂದು ಅಡಿ ಅಗಲ ಹೊಂದಿರುವ ಕಂಬವಿದ್ದು ಈ ಕಂಬದಲ್ಲಿರುವ ನಾಲ್ಕು ಪಟ್ಟಿಕೆಯಲ್ಲಿ ರಾಮಾಯಣದ ನಿರೂಪಣಾತ್ಮಕ ಉಬ್ಬು ಶಿಲ್ಪಗಳಿವೆ. ಕಂಬದ ಪೂರ್ವ ಪಟ್ಟಿಕೆಯಲ್ಲಿ ಅಶೋಕ ವನದಲ್ಲಿ ಆಂಜನೇಯನು ಸೀತಾದೇವಿಗೆ ರಾಮನ ಉಂಗುರವನ್ನು ಕೊಡುತ್ತಿರುವ ದೃಶ್ಯ, ಪಶ್ಚಿಮದ ಪಟ್ಟಿಕೆಯಲ್ಲಿ ಯದ್ಧದ ದೃಶ್ಯ, ಉತ್ತರದ ಪಟ್ಟಿಕೆಯಲ್ಲಿ ಲಂಕಾದಹನ ಮತ್ತು ದಕ್ಷಿಣದ ಪಟ್ಟಿಕೆಯಲ್ಲಿ ರಾಮ, ಲಕ್ಷ್ಮಣ, ಸೀತಾದೇವಿ ಹಾಗೂ ಆಂಜನೇಯನ ಉಬ್ಬು ಶಿಲ್ಪಗಳನ್ನು ಕಂಡರಿಸಲಾಗಿದೆ. ಇಲ್ಲಿ ಮುಖ್ಯವಾಗಿ ಪಶ್ಚಿಮ ಮತ್ತು ಉತ್ತರದ ಪಟ್ಟಿಕೆಗಳಲ್ಲಿ ಸ್ಥಳೀಯರು ಅವುಗಳಿಗೆ ಎಣ್ಣೆ ಸುರಿದಿರುವುದರಿಂದ ಶಿಲ್ಪಗಳು ಅಸ್ಪಷ್ಟವಾಗಿ ಗೋಚರಿಸುತ್ತವೆ. ಬಹುಶಃ ಈ ಕಂಬ ಯಾವುದೋ ದೇವಾಲಯದಲ್ಲಿರುವ ಕಂಬವಾಗಿರಬೇಕು. ಕಂಬದ ಅರ್ಧಭಾಗವನ್ನು ಸ್ಥಳೀಯರು ತಂದು ನಿಲ್ಲಿಸಿರುತ್ತಾರೆ. ಈ ಕಂಬಕ್ಕೂ ದೇವಾಲಯಕ್ಕು ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು.

[ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ನಮ್ಮ ಕಛೇರಿಯ ನೌಕರನಾದ ಶ್ರೀ ಹನುಮಂತಪ್ಪ ದುರ್ಗಪ್ಪ ಅವರಿಗೂ ಹಾಗೂ ಈ ಲೇಖನವನ್ನು ತಯಾರಿಸುವಲ್ಲಿ ಸಲಹೆ–ಸೂಚನೆಗಳನ್ನಿತ್ತ ಮಾರ್ಗದರ್ಶಕರಾದ ಡಾ. ಸರ್ವಮಂಗಳ ಜಿ. ಇವರಿಗೂ ಕೃತಜ್ಞತೆಗಳು]

ಅಡಿಟಿಪ್ಪಣಿಗಳು

೧. ದೇವರಕೊಂಡಾರೆಡ್ಡಿ, ಕಲವೀರ ಮನ್ವಾಚಾರ್, ಭಟ್‌ಸೂರಿ ಕೆ.ಜಿ, ಮತ್ತು ಪರಮಶಿವಮೂರ್ತಿ ಡಿ.ವಿ, ೧೯೯೮, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧, ಬಳ್ಳಾರಿ ಜಿಲ್ಲೆ,** ಪು. ೨೬೧–೨೬೨.

೨. ಚನ್ನಬಸಪ್ಪ ಎಸ್. ಪಾಟೀಲ, ವಿನೋದಾ ಪಾಟೀಲ, ೧೯೯೭, **ಕರ್ನಾಟಕ ಶಾಸನಗಳು ಸಂಪುಟ ೨ ಬಳ್ಳಾರಿ ಜಿಲ್ಲೆಯ ಶಾಸನಗಳು,** ಪು. ೬೯.

೩. ದೇವರಕೊಂಡಾರೆಡ್ಡಿ, ಕಲವೀರ ಮನ್ವಾಚಾರ್, ಭಟ್‌ಸೂರಿ ಕೆ.ಜಿ, ಮತ್ತು ಪರಮಶಿವಮೂರ್ತಿ ಡಿ.ವಿ, **ಪೂರ್ವೋಕ್ತ,** ಪು. ೨೬೨–೨೬೩.

೪. ಚನ್ನಬಸಪ್ಪ ಎಸ್. ಪಾಟೀಲ, ವಿನೋದಾ ಪಾಟೀಲ, **ಪೂರ್ವೋಕ್ತ,** ಪು. ೬೯.

೫. ಸುರೇಶ್. ಕೆ.ಎಂ., ವಾಸುದೇವ ಬಡಿಗೇರ, ಮಾಡಲಗೇರಿ ಕೊಟ್ರೇಶ್, ಸೋಮಶೇಖರ್.ಎಸ್.ವೈ., ೧೯೯೮, **ಕರ್ನಾಟಕ ದೇವಾಲಯ ಕೋಶ ಬಳ್ಳಾರಿ ಜಿಲ್ಲೆ,** ಪು. ೨೬೭.

೬ ಅದೇ ಪು. ೨೬೮. ೭. ಅದೇ ಪು. ೨೬೭–೨೬೮.

ಮಾಳಹಳ್ಳಿಯ ವೀರಗಲ್ಲು ಹಾಗೂ ಪರಿಸರ

ಬಿ.ಕೆ. ದೇವರಾಜ ಜೆ. ಬಾಗೇವಾಡಿ*

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಕೆಂಭಾವಿಯಿಂದ ಆಗ್ನೇಯ ದಿಕ್ಕಿಗೆ ೩ ಕಿ.ಮೀ. ದೂರದಲ್ಲಿ ಸಿಗುವುದೇ ಮಾಳಹಳ್ಳಿ ಗ್ರಾಮ. ಇದಕ್ಕೆ ಮಾಲಹಳ್ಳಿಯಂತಲೂ ಕರೆಯುವರು. ಈ ಊರಿನ ಪ್ರಸಿದ್ದ ಅಧಿ ದೈವವೆಂದರೆ ಮಹಾಲಿಂಗೇಶ್ವರ. ಗುಡಿಯ ಪ್ರಾಂಗಣ ಮಾಲಿಂಗೇಶ್ವರ ದೇವಸ್ಥಾನ ವಿಸ್ತಾರವಾಗಿದ್ದು ನಡುವೆ ಗರ್ಭಗುಡಿ, ಪಡಶಾಲೆ ಇದೆ. ಇದನ್ನು ಹಾಲಮತಸ್ಥರು ಪೂಜಿಸುತ್ತಾರೆ. ಗರ್ಭಗುಡಿಯ ಒಳಗಡೆ ಗದ್ದುಗೆ ಇದೆ. ಗರ್ಭಗುಡಿಯ ದ್ವಾರದ ಮೇಲೆ ಗಣೇಶನ ಶಿಲ್ಪವಿದೆ. ಪಡಸಾಲೆಯು ೪ ಕಂಬಗಳ ಮೇಲ್ಚಾವಣೆಯಿಂದ ನಿಂತಿದೆ. ದೇವಸ್ಥಾನದ ಪ್ರಾಂಗಣಕ್ಕೆ ಎರಡು ಮಹಾದ್ವಾರಗಳಿವೆ.

ಮಹಾಲಿಂಗೇಶ್ವರ ದೇವಾಲಯ



ಮಾಳಿಂಗೇಶ್ವರ ದೇವಾಲಯದ ಉತ್ತರ ಈಶಾನ್ಯ ಮುಖ್ಯದ್ವಾರ



ಮಾಳಿಂಗೇಶ್ವರ ದೇವಾಲಯ

ಮಾಳಹಳ್ಳಿಯ ಊರಿನ ಅಧಿದೈವ ಮಹಾಲಿಂಗೇಶ್ವರ ದೇವರು. ಈ ದೇವಾಲಯ ಕ್ರಿ.ಶ. ೧೦೫೪ರಲ್ಲಿ ಪಶ್ಚಿಮ ಚಾಲುಕ್ಯ ಚಕ್ರವರ್ತಿ ತ್ರೈಲೋಕ್ಯ ಮಲ್ಲದೇವ ಮೊದಲನೆಯ ಸೋಮೇಶ್ವರನ ಕಾಲದಲ್ಲಿ ಕಟ್ಟಿಸಿದ ದೇವಾಲಯದಾಗಿದೆ. ಹೈಹಯ ಮಹಾಮಂಡಲೇಶ್ವರರ ವಂಶಾವಳಿಯು ಚಂದಿಮರಸನಿಂದ ರೇವರಸನ ಪತ್ನಿ ಮಾಲಿಯಬ್ಬಿರಸಿ ಯುವರೆಗೆ ವಿವರಗಳು ಸಿಗುತ್ತವೆ. ಮುಂಭಾಗದ ೨ ಕಂಬಗಳಲ್ಲಿ ಅಪ್ರಕಟವಾದ ಶಾಸನಗಳು ಇವೆ. ಕಂಬಗಳು ಕರಿಯ ಕಲ್ಲಿನಿಂದ ಗಿರಕಿ ಹಿಡಿದಿದ್ದು ಸುಂದರವಾಗಿವೆ. ಶಾಸನವು ಕಂಬದ ಮೇಲಭಾಗದಲ್ಲಿ ಇದ್ದು ಸುಮಾರು ೧೪ ಸಾಲುಗಳನ್ನು ಹೊಂದಿದೆ. ಈಶ್ಯಾನ್ಯದ ಮಹಾದ್ವಾರದ ಮೇಲ್ಭಾಗದಲ್ಲಿ ಇತ್ತೀಚೆಗೆ ಮಾಳಿಂಗೇಶ್ವರ ಮೂರ್ತಿಯನ್ನು ಅಮೃತಶಿಲೆಯಲ್ಲಿ ಸ್ಥಾಪಿಸಲಾಗಿದೆ. ಇದನ್ನು ಮುದ್ದೇಬಿಹಾಳ ತಾಲೂಕಿನ ಬೋಳವಾಡ ಗ್ರಾಮದ ನಿವಾಸಿಗಳಾದ ಮಾಳಿಂಗೇಶ್ವರರ ಮಹಾಭಕ್ತರಾದ ಮುಕುಂದಪ್ಪಾ ಅಮಲ್ಯಾಳ ಮನೆತನದವರು ಪ್ರತಿಷ್ಠಾಪಿಸಿದ್ದಾರೆ.

ಮಾಳಯಬ್ಬರಸಿಯ ವಿಗ್ರಹ – ಮಂಗಮ್ಮ

ಮಾಲಿಂಗೇಶ್ವರ ದೇವಾಲಯದ ಹಿಂದುಗಡೆ ಮಾಳಬ್ಬಿರಸಿಯ ಚಿಕ್ಕಮಂದಿರವಿದೆ. ಮಾಳಯಬ್ಬರಸಿಯು ಕೆಂಬಾವಿಯಲ್ಲಿ ಕ್ರಿ.ಶ. ೧೦೫೪ರಲ್ಲಿ ರೇವಣಸಿದ್ದೇಶ್ವರ ದೇವಾಲಯ ಕಟ್ಟಿಸಿದಳೆಂದು ಹೇಳುತ್ತದೆ. ಇದೇ ಸಮಕಾಲಿನ ದೇವಾಲಯ

* ಶಿಕ್ಷಕರು, 'ದಿವ್ಯಸಂಗಮ ಭವನ', ಕೆಇಬಿ ಹಿಂದೆ, ಗಣೇಶ್ ನಗರ, ತಾಳಿಕೋಟೆ, ಮುದ್ದೇಬಿಹಾಳ, ವಿಜಯಪುರ ತಾಲ್ಲೂಕು–೫೮೬೨೧೪.



ಮಾಳಿಂಗೇಶ್ವರ ಕರ್ತೃರು ಗದ್ದಿಗೆ



ಗರ್ಭಗುಡಿಯ ದ್ವಾರಬಾಗಿಲು



ಮಹಾಲಿಂಗೇಶ್ವರ ದೇವಾಲಯ. ಮಾಲಿಂಗೇಶ್ವರ ದೇವಾಲಯದಲ್ಲಿ ಎದರು ಬದುರಾಗಿರುವ ಕಂಬದಲ್ಲಿ ಶಾಸನವು ಇದೆ ಎಂದು ಖ್ಯಾತ ಇತಿಹಾಸ ಸಂಶೋಧಕಿಯರಾದ ಶ್ರೀಮತಿ ಹನುಮಾಕ್ಷಿ ಗೋಗಿ ಅವರು "ಸುರುಪುರ ತಾಲೂಕಿನ ಶಾಸನಗಳೂ" ಎಂಬ ಗ್ರಂಥದಲ್ಲಿ ಮಾಲಹಳ್ಳಿಯ ಶಾಸನವನ್ನ ಉಲ್ಲೇಖಮಾಡಿದ್ದಾರೆ. ಆದರೆ ಒಂದು ಕಂಬದಲ್ಲಿ ಶಾಸನ ಇರುವದು ಕಂಡು ಬರುತ್ತದೆ. ಶಾಸನವಿದ್ದ ಕಂಬಕ್ಕೆ ಪೇಂಟ್ ಬಳಿಯಲಾಗಿದೆ. ಆ ಶಾಸನವನ್ನು ಓದಲು ಅಸಮರ್ಥವಾಗಿದೆ ಎಂದಿದ್ದಾರೆ. ಆದರೆ ನಾವು ಶಾಸನಗಳ ಅಧಯನ ಕೈಗೊಂಡಾಗ ೨ ಕಂಬಗಳಲ್ಲಿ ಶಾಸನಗಳು ಕಂಡು ಬಂದಿದೆ. ಈ ಕಂಬ ಶಾಸನವು ಕ್ರಿ.ಶ. ೧೦೫೪ರಲ್ಲಿ ಪಶ್ಚಿಮ ಚಾಲುಕ್ಯ ಚಕ್ರವರ್ತಿ ತ್ರೈಲೋಕ್ಯ ಮಲ್ಲನ ಮೊದಲನೆಯ ಸೋಮೇಶ್ವರನ ಕಾಲದಲ್ಲಿ ಶಾಸನವನ್ನು ಬರೆದಿರುವುದು ತಿಳಿದುಬರುವುದು. ಹೈಹಯ ಮಹಾಮಂಡಲೇಶ್ವರರ ವಂಶಾವಳಿಯನ್ನು ಚಂದನಂದ ರೇವರಸರವರೆಗೆ ವಿವರಿಸುತ್ತದೆ. ರೇವರಸನ ಹೆಂಡತಿ "ಮಾಳಬ್ಬಿರಸಿ" ಈ ಶಾಸನವನ್ನು ಹಾಕಿಸಿರುವದು ಕಂಡು ಬರುತ್ತದೆ. ದೇವಾಲಯಕ್ಕೆ ಅಂಗಭೋಗ, ರಂಗಭೋಗ, ತಪೋದನರ ಆಹಾರ, ದೇವಾಲಯ ನಿರ್ವಹಣೆಗೆ ದಾನ ನೀಡಿದ ಸಂಗತಿ ತಿಳಿಸುತ್ತದೆ.



ಮಾಳಹಳ್ಳಿಯ ವೀರಗಲ್ಲು

ಮಹಾಲಿಂಗೇಶ್ವರ ದೇವಾಲಯದ ಪಕ್ಕದಲ್ಲಿಯ ಕರಿಯ ಕಲ್ಲಿನಲ್ಲಿ ವೀರಗಲ್ಲಿದೆ. ಮೂರ್ತಿಯ ಬಲಗೈಯಲ್ಲಿ ಬರ್ಚಿ, ಎಡಗೈಯಲ್ಲಿ ಗೂರಾಣಿ ಹಿಡಿದಿದೆ. ಕೆಳಗಡೆ ಮನುಷ್ಯನ ಹೆಣವಿದೆ. ಮೂರ್ತಿಯ ಸುಂದರವಾದ ಅಲಂಕಾರ ಟೊಂಕದಲ್ಲಿ ನಡಪಟ್ಟಿ ಇದ್ದು, ಸೊಂಟದಲ್ಲಿ ಕಿರುಗತ್ತಿ ಇದ್ದು, ತೆಲೆಯಲ್ಲಿ ಮುಡಿ ಕಟ್ಟಿದೆ.

ಆಧಾರಸೂಚಿ

೧. ಸುರಪುರ ತಾಲೂಕಿನ ಶಾಸನಗ,ಳು, ಡಾ॥ ಹನುಮಾಕ್ಷಿ ಗೋಗಿ.

೨. ಮಧ್ಯಕಾಲಿನ ಕರ್ನಾಟಕ ಇತಿಹಾಸ, ಪಾಲಾಕ್ಷಿ.

೧೩೨

ನಲ್ಕುದುರೆಯ ಪ್ರಾಚ್ಯಾವಶೇಷಗಳು

ಸಂತೆಬೆನ್ನೂರು ಸುಮತೀಂದ್ರ ನಾಡಿಗ್*

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕಿನ ಒಂದು ಪ್ರಾಚೀನ ಗ್ರಾಮ ನಲ್ಕುದುರೆ. ಇದು ತಾಲೂಕು ಕೇಂದ್ರ ಚನ್ನಗಿರಿಯಿಂದ ಉತ್ತರಕ್ಕೆ ೩೨ ಕಿ.ಮೀ. ದೂರದಲ್ಲಿದೆ ಹಿಂದೆ ಈ ಗ್ರಾಮದಲ್ಲಿ ಅನೇಕ ಯೋಧರು ವಾಸವಾಗಿದ್ದು ಕುದುರೆಗಳನ್ನು ಸಾಕುತ್ತಿದ್ದಿರಬೇಕು ಮತ್ತು ಈ ಗ್ರಾಮದಲ್ಲಿ ಕುದುರೆಗಳು ನವಿಲಿನಂತೆ ಕುಣಿಯುತ್ತಿದ್ದವಂತೆ, ಹಾಗಾಗಿ ಈ ಗ್ರಾಮಕ್ಕೆ ನವಿಲು ಕುದುರೆ ಎಂದು ಹೆಸರು ಬಂದು ಕ್ರಮೇಣ ಈಗ ಅದು ನಲ್ಕುದುರೆ ಎಂದಾಯಿತೆಂದು ಇಲ್ಲಿನ ಹಿರಿಯರು ಹೇಳುತ್ತಾರೆ. ಶಾಸನದಲ್ಲಿ ನಲ್ಕುದುರೆ ಎಂದು ಪ್ರಸ್ತಾಪಿಸಲಾಗಿದೆ. ಇಲ್ಲಿರುವ ಶಾಸನಗಳಿಂದ ಇದೊಂದು ಪ್ರಾಚೀನ ಅಗ್ರಹಾರವಾಗಿತ್ತೆಂದು ತಿಳಿದುಬರುತ್ತದೆ. ಇಲ್ಲಿ ಜೈನಮುನಿಗಳು ವಾಸಿಸುತ್ತಿದ್ದರೆಂದು ಹಳೇಬೀಡಿನ ಒಂದು ಶಾಸನ ಉಲ್ಲೇಖಿಸುತ್ತದೆ. ಈ ಗ್ರಾಮದಲ್ಲಿ ಚಾಲುಕ್ಯ, ಹೊಯ್ಸಳ, ವಿಜಯನಗರ ಮತ್ತು ವಿಜಯನಗರೋತ್ತರ ಅರಸರ ನಾಯಕರ ಕಾಲದ ಅನೇಕ ಪ್ರಾಚೀನ ದೇವಾಲಯಗಳು, ಶಿಲ್ಪಗಳು, ಮಾಸ್ತಿಕಲ್ಲುಗಳು, ವೀರಕಲ್ಲುಗಳು ಇದ್ದು ಇದೊಂದು ಬಯಲ ಪ್ರಾಚ್ಯ ವಸ್ತು ಸಂಗ್ರಹಾಲಯದಂತಿದೆ. ಅವುಗಳ ಪರಿಚಯ ಮಾಡಿಕೊಡುವುದು ಈ ಸಂಪ್ರಬಂಧದ ಉದ್ದೇಶವಾಗಿದೆ.

ಈಗಿರುವ ಗ್ರಾಮ ಹೊಯ್ಸಳರ ಕಾಲಕ್ಕೆ ಹೊಸದಾಗಿ ನಿರ್ಮಾಣವಾದ ಹಾಗೆ ಕಾಣುತ್ತದೆ ಕಾರಣ ಈ ಗ್ರಾಮದ ಪಶ್ಚಿಮಕ್ಕೆ ೧ ಕಿ.ಮೀ. ದೂರದಲ್ಲಿ ಮಣ್ಣಿನಿಂದ, ಗಿಡ-ಗಂಟೆಗಳಿಂದ ಮುಚ್ಚಿರುವ ಚಾಲುಕ್ಯರ ಕಾಲದ ಅತಿ ಪುರಾತನವಾದ ತ್ರೈಪುರುಷ ದೇವಾಲಯವಿದೆ. ಇದೇ ಈ ತಾಲೂಕಿನ ಅತಿ ಪುರಾತನ ದೇವಾಲಯವೂ ಆಗಿದೆ. ಈಗ ಈ ದೇವಾಲಯದ ಸುತ್ತ ಗದ್ದೆಗಳನ್ನು ಮಾಡಿದ್ದು, ದೇವಸ್ಥಾನಕ್ಕೆ ಹೋಗುವುದೇ ದುಸ್ತರವಾಗಿದೆ. ಇದನ್ನು ಸ್ಥಳೀಯರು ಕಲ್ಲಪ್ಪನ ಗುಡಿ ಎಂದು ಕರೆಯುತ್ತಾರೆ. ಇದೊಂದು ತ್ರೈಪುರುಷ ದೇವಾಲಯವಾಗಿದ್ದು ದಕ್ಷಿಣಾಭಿಮುಖವಾಗಿದೆ. ಈ ದೇವಾಲಯ ತೆರೆದ ನವರಂಗ, ಸುಖನಾಸಿ, ಗರ್ಭಗುಡಿಯನ್ನು ಹೊಂದಿದ್ದು ನಾಲ್ಕು ಸುಂದರವಾದ ನಯಗೊಳಿಸಿದ ಕಂಬಗಳ ಮೇಲೆ ದೇವಾಲಯ ನಿರ್ಮಿಸಲಾಗಿದೆ. ಈ ನವರಂಗದ ಬಾಗಿಲ ಎದುರಿಗೆ ದಕ್ಷಿಣಾಭಿಮುಖವಾಗಿ ಜನಾರ್ಧನ ವಿಗ್ರಹವಿದ್ದು ಪಶ್ಚಿಮಾಭಿಮುಖವಾಗಿ ಸೂರ್ಯನಾರಾಯಣನ ಭಿನ್ನ ವಿಗ್ರಹವಿದೆ. ಸರ್ವಾಲಂಕೃತವಾದ ಈ ವಿಗ್ರಹಗಳು ಈಗ ಭಿನ್ನವಾಗಿವೆ. ಪೂರ್ವಾಭಿಮುಖದ ಗರ್ಭಗುಡಿಯಲ್ಲಿ ಶಿವಲಿಂಗವಿದ್ದು, ಅದರ ಎದುರುಗಡೆ ಸುಂದರ ಪಾಣಿಪೀಠದಲ್ಲಿ ಅಲಂಕೃತ ನಂದಿ ವಿಗ್ರಹವಿದೆ. ಈ ಪಾಣಿಪೀಠವೇ ವಿಶೇಷವಾಗಿದ್ದು ತುಂಬಾ ಅಲಂಕರಣಗಳಿಂದ ಕೂಡಿದೆ. ನಂದಿಗೆ ಮಾಡಿದ ಅಭಿಷೇಕದ ನೀರು ಜಲಹರಿ ಮೂಲಕ ಹಿಂಭಾಗಕ್ಕೆ ಬರುವ ಹಾಗೆ ಕೆತ್ತಲಾಗಿದೆ. ಪಾಣಿಪೀಠದ ಎಡ ಬಲದಲ್ಲೂ ಉಬ್ಬು ಶಿಲ್ಪದಲ್ಲಿ ನಂದಿ ವಿಗ್ರಹಗಳಿದ್ದು ಪಶ್ಚಿಮಾಭಿಮುಖವಾಗಿ ಇದೇ ಪಾಣಿಪೀಠದಲ್ಲಿ ಕೈಮುಗಿದು ಕುಳಿತ ಒರ್ವ ಯತಿಯ ವಿಗ್ರಹವಿದೆ. ಈ ವಿಗ್ರಹದ ಲಕ್ಷಣ ನೋಡಿದರೆ ಕಾಳಾಮುಖ ಯತಿಯಂತಿದೆ. ಮುಂದಿರುವ ಬಾಗಿಲು ಮತ್ತು ಗರ್ಭಗುಡಿಯ ಬಾಗಿಲ ಮೇಲೆ ಎರಡು ಆನೆಗಳೊಂದಿಗೆ ಗಜ ಲಕ್ಷ್ಮಿಯ ಉಬ್ಬುಶಿಲ್ಪವಿದ್ದು, ಮೂಲ ಗರ್ಭಗುಡಿಯ ಎಡಗಡೆ ಗಣಪತಿ, ಬಲಗಡೆ ಮಹಿಷಮರ್ದಿನಿ, ನವರಂಗದ ವಾಯುವ್ಯ ಮೂಲೆಯಲ್ಲಿ ಷಣ್ಮುಖನ ವಿಗ್ರಹಗಳಿವೆ. ಎಲ್ಲಾ ವಿಗ್ರಹಗಳು ಸುಂದರವಾಗಿ ಅಲಂಕರಣಗಳೊಂದಿಗೆ ನಿರ್ಮಿಸಲಾಗಿದೆ. ಈಗ ಅಲ್ಲಿರುವ ಬಹಳಷ್ಟು ವಿಗ್ರಹಗಳು ಭಿನ್ನವಾಗಿವೆ. ಅನ್ಯ ಮತಿಯರ ಧಾಳಿಯಿಂದ ರಕ್ಷಿಸಲು ಈ ದೇವಾಲಯವನ್ನು ಮಣ್ಣಿನಿಂದ ಮುಚ್ಚಿದ್ದು ಅಲ್ಲಿ ಇನ್ನು ಅನೇಕ ಖಾಲಿ ಪಾಣಿಪೀಠಗಳು ಇದ್ದು ಅವುಗಳು ವಿಗ್ರಹ ಚೋರರ ಪಾಲಾದಂತೆ ಕಂಡುಬರುತ್ತದೆ.

ಈಗಿರುವ ಊರೊಳಗೆ ಒಂದು ಈಶ್ವರ ದೇವಾಲಯವಿದ್ದು, ಆ ದೇವಾಲಯದ ಆಗ್ನೇಯ ಮೂಲೆಯಲ್ಲಿರುವ ಶಾಸನದಲ್ಲಿ ಇದನ್ನು ಬ್ರಹ್ಮೇಶ್ವರ ದೇವಾಲಯವೆಂದು ಕರೆಯಲಾಗಿದೆ. ರೈಸರು ಈ ಶಾಸನವನ್ನು ಪ್ರಕಟಿಸಿದ್ದು ಅದರಂತೆ ಹೊಯ್ಸಳ ವೀರ ನರಸಿಂಹನ ಕಾಲದಲ್ಲಿ ಅವನ ಊರೊಡೆಯರು ಶಕ ೧೧೫೬ನೇ ವಿಜಯ ಸಂವತ್ಸರದ ಮಾರ್ಗಶಿರ ಶುದ್ಧ ೧೦ ಬುಧವಾರ (ಎಪಿಮರೀಸ್‌ನಂತೆ ದಿನಾಂಕ:೦೪-೦೫-೧೨೩೩) ಬ್ರಹ್ಮೇಶ್ವರ ದೇವರ ಅಂಗಭೋಗ,

* ಪತ್ರಕರ್ತ (ನಿ), ಸಂಶೋಧಕ, ಸಂತೇಬೆನ್ನೂರು-೫೭೭೫೫೨.

ರಂಗಭೋಗ, ಖಂಡಸ್ಪುಟಿತ ಜೀರ್ಣೋದ್ಧಾರಕ್ಕೆ ಬೊಂತೆಯ ವಾಮರಾಶಿ ಗುರುಗಳ ಕಾಲಂ ಕರ್ಚಿ ಭೂದಾನ ಕೊಟ್ಟಿದ್ದಾಗಿ ತಿಳಿಸುತ್ತದೆ. ೬೪ ಸಾಲುಗಳು ಕನ್ನಡ ಲಿಪಿ, ಭಾಷೆಯಲ್ಲಿ ಈ ಶಾಸನವನ್ನು ಊರೊಡೆಯ ಚಂದ್ರದೇವ ಬರೆಸಿ ಶ್ರೀ ಮದ್ವಿಜಯ ಕೀರ್ತಿದೇವ ಈ ಶಾಸನ ರಚಿಸಿದನೆಂದು, ಸಂಕೋಜ ಈ ಶಾಸನ ಹೊಯಿಸದನೆಂದು ಶಾಸನ ತಿಳಿಸುತ್ತದೆ. ಶ್ರೀ ಮದ್ವಿಜಯ ಕೀರ್ತಿ ದ್ವಜ ದೇವ ಈ ತಾಲೂಕಿನ ಪ್ರಾಚೀನ ಓರ್ವ ಕವಿ ಎಂಬ ಹೊಸ ವಿಷಯ ಈ ಶಾಸನದಿಂದ ತಿಳಿದುಬರುತ್ತದೆ. ಈ ಬ್ರಹ್ಮೇಶ್ವರ ದೇವಾಲಯವೂ ಚಾಲಯಕ್ಯರ ಕಾಲದಲ್ಲಿ ನಿರ್ಮಿತವಾಗಿದ್ದು, ಚಾಲುಕ್ಯ ಶೈಲಿಯಲ್ಲಿದೆ. ನವರಂಗ ಅಂತರಾಳ, ಗರ್ಭಗುಡಿಯನ್ನು ಹೊಂದಿದ್ದು, ಈ ದೇವಾಲಯ ಪೂರ್ವಾಭಿಮುಖವಾಗಿದೆ. ಈ ದೇವಾಲಯದಲ್ಲಿ ಒಂದು ವಿಷ್ಣುಶಿಲ್ಪ, ಭೈರವ, ಗಣಪತಿ, ನಾಗರಕಲ್ಲು ಮುಂತಾದ ವಿಗ್ರಹಗಳಿವೆ. ಈ ದೇವಾಲಯದ ಸುಖನಾಸಿಯ ಚೌಕಟ್ಟಿನ ಮೇಲೆ ೧. ಲೋಕಿಕೆರೆಯ ದಾರಿಯಿಂದ. ಹಾಗೂ ೨. ಮೂಡಲಕಂಬ ಎಂಬ ಎರಡು ಸಾಲಿನ ಕಿರು ಶಾಸನ ಕೆತ್ತಲಾಗಿದೆ. ಇದು ಎಂ.ಎ.ಅರ್.೪೪/೧೯೩೫ ರಲ್ಲಿ ಪ್ರಕಟವಾಗಿದೆ. ಈ ದೇವಾಲಯದ ನವರಂಗದಲ್ಲಿರುವ ೪ ಅಡಿ ಎತ್ತರದ ನಂದಿ ವಿಗ್ರಹವನ್ನು ಬಹಳ ಸುಂದರವಾಗಿ ಕೆತ್ತಲಾಗಿದ್ದು, ಹೊಯ್ಸಳ ಶೈಲಿಯಲ್ಲಿದೆ. ಬಹುಶಃ ಇದನ್ನು ಹೊಯ್ಸಳರ ಕಾಲದಲ್ಲಿ ಪುನರ್ ಪ್ರತಿಷ್ಠಾಪಿಸಿರಬಹುದು.

ದೇವಾಲಯದ ಹೊರಭಾಗದಲ್ಲಿ ೨ ಮಾಸ್ತಿಕಲ್ಲುಗಳು, ೩ ವೀರಗಲ್ಲುಗಳು, ೧ ಭೈರವ ಶಿಲ್ಪವೂ ಇದೆ. ಇಲ್ಲಿರುವ ೩ ವೀರಗಲ್ಲು ಶಾಸನಗಳು ತುರುಗೋಳ್ ಶಾಸನಗಳಾಗಿದ್ದು, ಗೋವುಗಳ್ಳರಿಂದ ಗೋವುಗಳನ್ನು ರಕ್ಷಿಸಿ ಹುತಾತ್ಮರಾದ ಬಗ್ಗೆ ತಿಳಿಸುತ್ತವೆ. ಒಂದು ಶಾಸನ ಶಕ ೧೧೬೪ನೇ ಶುಭಕೃತು ಸಂವತ್ಸರದ ವೈಶಾಖ ಶುದ್ಧ ೩ ಶುಕ್ರವಾರ ಸೋಮಯ್ಯನ ಮಗ ಬೊಮ್ಮಯ್ಯನಾಯಕ ಸುರಲೋಕ ಪ್ರಾಪ್ತನಾದುದನ್ನು ತಿಳಿಸಿದರೆ, ಇನ್ನೊಂದು ಶಾಸನ ಶಕ ೧೧೯ನೇ ಈಶ್ವರ ಸಂವತ್ಸರದ ವೈಶಾಖ ಶುದ್ಧ ೧೫ ಹಿರಿಯ ಬೊಮ್ಮನ ಮಗ ನಾಗಯ್ಯ ನಾಯಕ ತುರು ಹರಿಯಲು ಕಾದು ಸುರಲೋಕ ಪ್ರಾಪ್ತನಾದುದನ್ನು ತಿಳಿಸುತ್ತದೆ. ಮತ್ತೊಂದು ಶಾಸನ ೧೨೦೧ನೇ ಪ್ರಮಾಥಿ ಸಂವತ್ಸರದ ಆಶ್ವೀಜ ಶುದ್ಧ ೧೫ ಮಾರೆಯ ನಾಯಕ ತುರು ಹರಿಯಲು ಕಾದು ಸುರಲೋಕ ಪ್ರಾಪ್ತವಾದುದನ್ನು ಹೇಳುತ್ತದೆ.

ಈ ಗ್ರಾಮದ ಮುಖ್ಯ ದೇವತೆ ವೀರಭದ್ರಸ್ವಾಮಿ ಈ ದೇವಾಲಯ ಈಚೆಗೆ ನವೀಕರಣಗೊಂಡಿದ್ದರೂ. ಇದು ಸಹ ಒಂದು ಪ್ರಾಚೀನ ದೇವಾಲಯವಾಗಿದೆ. ಈ ದೇವಾಲಯದ ಮುಂದೆ ಪ್ರಾಚೀನ ಶಿವಲಿಂಗ, ನಂದಿ, ವೀರಭದ್ರ, ನಾಗಶಿಲ್ಪ ಮುಂತಾದ ಶಿಲ್ಪಗಳಿವೆ. ಊರ ಹೊರಗಡೆ ಉತ್ತರದಿಕ್ಕಿನ ಡಾ. ಪರಮೇಶ್ವರಪ್ಪ ನವರ ತೋಟದಲ್ಲಿ ೫ ಅಡಿ ಎತ್ತರದ ಭೈರವ ವಿಗ್ರಹವಿದೆ.

ಇದಲ್ಲದೆ ಈ ಗ್ರಾಮದಲ್ಲಿ ವಿಜಯನಗರ ಕಾಲದ ಆಂಜನೇಯ ದೇವಾಲಯ, ಬಸವಣ್ಣ ದೇವಾಲಯ, ಮುಂತಾದ ದೇವಾಲಯಗಳಿದ್ದು. ಆನೇಕ ದೇವಾಲಯದ ಅವಶೇಷಗಳು ಗ್ರಾಮದ ಅಲ್ಲಲ್ಲಿ ಬಿದ್ದಿರುವುದು ಕಂಡು ಬರುತ್ತದೆ. ಇಲ್ಲಿ ವಿಜಯನಗರ ಸ್ಥಾಪಕರ ಗುರುಗಳಾದ ವಿದ್ಯಾರಣ್ಯರ ವಿದ್ಯಾಪೀಠ ಇತ್ತೆಂದು ಹೇಳಲಾಗುತ್ತದೆ. ಹೀಗೆ ಆನೇಕ ಪ್ರಾಚ್ಯಾವಶೇಷಗಳನ್ನು ಒಳಗೊಂಡ ಈ ಗ್ರಾಮ ಐತಿಹಾಸಿಕವಾಗಿ ಮಹತ್ವದ ಸ್ಥಳವಾಗಿದೆ.

ಆಧಾರಸೂಚಿ

೧. ಶಿವಮೊಗ್ಗ ಜಿಲ್ಲೆಯಲ್ಲಿರುವ ಶಾಸನಗಳು, ೧೯೦೨ (೧ನೇ ಸಂಚಿಕೆ. ಸಂಪುಟ-೭) ಬಿ.ಎಲ್. ರೈಸ್.

೨. ಎಂ.ಎ.ಆರ್. ೧೯೩೫ (೪೪).

೩. ದಾವಣಗೆರೆ ಜಿಲ್ಲೆ ಇತಿಹಾಸದ ಕೆಲವು ಹೆಜ್ಜೆಗಳು, (೨೦೧೦), ಸುಮತೀಂದ್ರ ನಾಡಿಗ್.

೧೩೩

ದೊಡ್ಡೇರಿ ಗ್ರಾಮದ ವೀರಗಲ್ಲುಗಳು

ರವೀಂದ್ರ ಜೆ.ಸಿ.*

ತುರುವೇಕೆರೆ ತಾಲೂಕಿಗೆ ಸೇರಿದಂತೆ ಸುಮಾರು ೨೫ ಕಿ.ಮೀ. ದೂರದಲ್ಲಿರುವ ಗ್ರಾಮವೇ ದೊಡ್ಡೇರಿ. ಇದು ಐತಿಹಾಸಿಕವಾಗಿ ಹೆಚ್ಚಿನ ಮಹತ್ವ ಪಡೆದಿದ್ದು ಈ ಗ್ರಾಮದ ಊರಿನ ಮಧ್ಯ ಭಾಗದಲ್ಲಿ ಒಂದು ಆಂಜನೇಯ ದೇವಾಲಯವಿದ್ದು ಇದರ ಬಲಭಾಗಕ್ಕೆ ಇರುವ ಅಶ್ವತ್ಥ ವೃಕ್ಷದ ಕೆಳಗೆ ಪೂರ್ವಾಭಿಮುಖವಾಗಿ ಎಂಟು ವೀರಗಲ್ಲುಗಳನ್ನು ಒಂದರ ಪಕ್ಕದಲ್ಲೊಂದರಂತೆ ಸಾಲಾಗಿ ಜೋಡಿಸಿ ನಿಲ್ಲಿಸಲಾಗಿದೆ.

ವೀರಗಲ್ಲು : ಇದು ಸುಮಾರು ೪ ಅಡಿ ಎತ್ತರವಾಗಿದ್ದು ೧.೫ ಅಡಿ ಅಗಲ ೬ ಇಂಚು ದಪ್ಪನಾದ ಬಳಪದ ಕಲ್ಲಿನದ್ದಾಗಿದ್ದು ದುರಾದೃಷ್ಟವಶಾತ್ ಪ್ರಸ್ತುತ ಇದರ ಮುಕ್ಕಾಲು ಭಾಗ ಭೂಮಿಯೊಳಗೆ ಹೂತು ಹೋಗಿದ್ದು ಇದರ ಸ್ಪಷ್ಟ ಚಿತ್ರಣ ಅಗೋಚರವಾಗಿದೆ.



ದೊಡ್ಡೇರಿ ಗ್ರಾಮದ ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು

ಇನ್ನೊಂದು ೨.೬ ಅಡಿ ಎತ್ತರವಾಗಿದ್ದು ೧.೫ ಅಡಿ ಅಗಲ ೬ ಇಂಚು ದಪ್ಪನಾದ ಬಳಪದ ಕಲ್ಲಿನದ್ದಾಗಿದ್ದು, ಒಂದು ಪಟ್ಟಿಕೆಯಿಂದ ಮಾತ್ರ ಕೂಡಿದೆ. ಚಿತ್ರದಲ್ಲಿ ಕಂಡುಬಂದಂತೆ ವೀರನು ಕೈಗಳಲ್ಲಿ ಯುದ್ಧೋಪಕರಣಗಳಾದ ಗುರಾಣಿ ಮತ್ತು ಕತ್ತಿಯನ್ನು ಹಿಡಿದು ಯುದ್ಧಗಳ ಸನ್ನದ್ಧನಾಗಿ ನಿಂತಿರುವ ದೃಶ್ಯ ಬಹಳ ಮನೋಹರವಾಗಿದೆ ಮತ್ತು ಈತನ ಹಿಂಬದಿಯಲ್ಲಿ ಒಬ್ಬ ಸ್ತ್ರೀಯು ಕೈಮುಗಿದು ನಿಂತಿರುವುದು ಕಂಡುಬಂದಿದೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಉಬ್ಬು ಶಿಲ್ಪದ ಕೆತ್ತನೆಯಿರುವುದನ್ನು ಕಾಣಬಹುದು. ಜೊತೆಗೆ ವೀರನು ದಷ್ಟಪುಷ್ಟನಾಗಿದ್ದು, ಕೈಗಳಲ್ಲಿ ಕೈಕಡಗ, ಕಾಲುಗಳಲ್ಲಿ ಕಾಲ್ಗಡಗ ಕಿವಿಯಲ್ಲಿ ಕರ್ಣಕುಂಡಲ ಮತ್ತು ಕೇಶವನ್ನು ಮುಡಿಯಂತೆ ಕಟ್ಟಿರುವುದು. ಮತ್ತು ಸುಂದರವಾದ ವಸ್ತ್ರವನ್ನು ಧರಿಸಿರುವುದನ್ನು ಗಮನಿಸಬಹುದಾಗಿದೆ.

ವೀರಮಾಸ್ತಿಗಲ್ಲು : ಇದು ೩ ಅಡಿ ಉದ್ದ ೧.೫ ಅಡಿ ಅಗಲವನ್ನು ೬ ಇಂಚು ದಪ್ಪನಾಗಿದ್ದು, ಕಪ್ಪು ಗ್ರಾನೈಟ್ ಶಿಲೆಯದ್ದಾಗಿದ್ದು ಒಂದು ಪಟ್ಟಿಕೆಯಿಂದ ಕೂಡಿದೆ. ಚಿತ್ರದಲ್ಲಿ ಕಂಡು ಬಂದಂತೆ ಒಬ್ಬ ಪುರುಷ ಮತ್ತು ಸ್ತ್ರೀ ದಂಪತಿಗಳ ಚಿತ್ರವಿದ್ದು, ಈ ವೀರಪುರುಷನು ಬಲಗೈಯಲ್ಲಿ ಕತ್ತಿಯನ್ನು ಮೇಲಕ್ಕೆ ಎತ್ತಿ ಹಿಡಿಯುವುದು ಎಡಗೈಲಿ ಗುರಾಣಿಯನ್ನು ಹಿಡಿದಿರುವುದು ಕಂಡು ಬಂದಿದ್ದು ಈತನ ಹಿಂಬದಿಯಲ್ಲಿ ತನ್ನ ಮಡದಿ ಬಲಗೈಯನ್ನು ಮೇಲಕ್ಕೆ ಎತ್ತಿರುವ ಶಿಲ್ಪವಿದೆ.

* ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಾನಸ ಗಂಗೋತ್ರಿ, ಮೈಸೂರು.





ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು

ವೀರಗಲ್ಲು : ಇದು ೩ ಅಡಿ ಎತ್ತರ ೧.೫ ಅಡಿ ಅಗಲ ಮತ್ತು ೬ ಇಂಚು ದಪ್ಪಾಗಿದ್ದು ಎರಡು ಪಟ್ಟಿಕೆಯಿಂದ ಕೂಡಿದೆ ವೀರಬೊಬ್ಬನು ಕೈಗಳಲ್ಲಿ ಆಯೋಧೋಪಕರಣಗಳನ್ನು ಹಿಡಿದು ಯುದ್ಧಕ್ಕೆ ಸನ್ನದ್ದಾಗಿ ನಿಂತಿದ್ದು ಹಾಗೇ ಹಾರವಾಗಿರುವ ದೃಶ್ಯ ಕಂಡು ಬಂದಿದ್ದು ೨ನೇ ಪಟ್ಟಿಕೆಯಲ್ಲಿ ೧ ಅಡಿ ಎತ್ತರದ ಪಾಣಿ ಪೀಠದ ಮೇಲೆ ೧.೫ ಅಡಿ ಎತ್ತರದ ಶಿವ ಲಿಂಗವನ್ನು ಇದರ ಹಿಂಭಾಗದಲ್ಲಿ ನಂದಿಯ ಉಬ್ಬು ಶಿಲ್ಪವನ್ನು ಕಾಣಬಹುದು. ಬಲಭಾಗದಲ್ಲಿ ಯುದ್ಧದಲ್ಲಿ ಮರಣ ಹೊಂದಿದ ವೀರಪುರುಷರ ಕುಳಿತಿರುವ ದೃಶ್ಯ ಕಂಡು ಬಂದಿದ್ದು, ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಉಬ್ಬುಶಿಲ್ಪ ಕೆತ್ತನೆ ಮಾಡಿರುವುದನ್ನು ಕಾಣಬಹುದು.

ಹೀಗೆಯೇ ಇನ್ನೂ ನಾಲ್ಕು ವೀರಗಲ್ಲುಗಳನ್ನು ಕಾಣಬಹುದು.

ಒಟ್ಟಾರೆಯಾಗಿ ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ ಈ ಪ್ರದೇಶದಲ್ಲಿ ದೊರೆತಿರುವ ವೀರಗಲ್ಲು ಹಾಗೂ ಮಹಾಸತಿಕಲ್ಲುಗಳು ಅಂದಿನ ಕಾಲದ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತವೆ. ಯುದ್ಧೋಪಕರಣಗಳು ಅವುಗಳ ಲಕ್ಷಣ, ಯುದ್ಧ, ತ್ಯಾಗ ಮತ್ತು ಬಲಿದಾನಗಳನ್ನು ಈ ವೀರಗಲ್ಲುಗಳು ಪ್ರತಿನಿಧಿಸುತ್ತವೆ.

ಆಧಾರ ಗ್ರಂಥಗಳು

೧. ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೨೦೧೦.

೨. ಪರಶಿವಮೂರ್ತಿ.ಡಿ.ವಿ., ಕನ್ನಡ ಶಾಸನ ಶಿಲ್ಪ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ-೧೯೯೯.

೩. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು-೨೦೦೨.

೧೩೪

ಹರ್ತಿ ಕೋಟೆಯ ಪ್ರಾಚ್ಯಾವಶೇಷಗಳು

ಹೊನ್ನಮ್ಮ ಎಸ್. ಗುಡಿಯಾಳ್*

ಹರ್ತಿಕೋಟೆ ಗ್ರಾಮ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿದ್ದು, ಹಿರಿಯೂರು ಚಳ್ಳಕೆರೆಗಳ ಮಧ್ಯ ಸಿಕ್ಕುವ ಊರು. ಹಿರಿಯೂರಿನಿಂದ ಹರ್ತಿಕೋಟೆಗೆ ಇರುವ ಅಂತರ ಸು. ೧೪ ಕಿ.ಮೀ. ನಾಯಕರ ಆಳ್ವಿಕೆಯ ಅವಧಿಯಲ್ಲಿ ಊರಿನ ಹೆಬ್ಬಾಗಿಲು ಇದ್ದುದು. ಪೂರ್ವ ದಿಕ್ಕಿನಲ್ಲಿದ್ದರೂ ಈಗ ಊರನ್ನು ಪ್ರವೇಶಿಸಬೇಕಾಗಿರುವುದು ಪಶ್ಚಿಮ ದಿಕ್ಕಿನ ಮುಖ್ಯ ರಸ್ತೆಯ ಮೂಲಕ ಈ ಹರತಿಯನ್ನಾಳಿದ ಪಾಳೆಗಾರರೂ ಕೂಡಾ ಪ್ರಾಚೀನ ನಾಯಕ ಮನೆತನಗಳಲ್ಲಿ ಒಂದಾಗಿದೆ. ಇವರ ಮೂಲದೇವರು 'ಹರತಿ' ಆ ಕಾರಣದಿಂದಾಗಿ 'ಹರತಿ ನಾಯಕ'ರೆಂತಲೂ ಹಾರತೇಯರು ಎಂತಲೂ ಹೇಳಿಕೊಂಡಿರುವರು. ಸ್ಥಳೀಯ ದಾಖಲೆಗಳು ಇದನ್ನು ಸಮರ್ಥಿಸುತ್ತವೆ ಇವರು ನಿಡುಗಲ್ಲು, ದೊಡ್ಡೇರಿ, ರತ್ನಗಿರಿ, ಐಮಂಗಳಗಳನ್ನು ತಮ್ಮ ಕೇಂದ್ರಗಳನ್ನಾಗಿಸಿಕೊಂಡು ಆಳ್ವಿಕೆ ನಡೆಸಿದರು.

ಕೋಟೆ : ಈ ನೆಲೆಯಲ್ಲಿದ್ದ ಕೋಟೆಯು ದುಂಡಾಕಾರದಲ್ಲಿದ್ದು ಈಗಿನ ಹರ್ತಿಕೋಟೆ ಗ್ರಾಮದ ಅರ್ಧದಷ್ಟು ಆವರಿಸಿದ್ದಿತೆಂದು ತಿಳಿದು ಬರುವುದರಿಂದ ಹಿಂದೆ ನಿರ್ಮಿಸಲಾಗಿದ್ದ ಕೋಟೆ ಈಗ ನಾಶಗೊಂಡಿದೆ. ಕಂದಕ ಹಾಗೂ ಕೋಟೆಯ ತರದ ಕುರುಹುಗಳನ್ನು ಅಲ್ಲಲ್ಲಿ ಸೂಕ್ಷ್ಮವಾಗಿ ಗುರುತಿಸಬಹುದಷ್ಟೇ. ಇಲ್ಲಿದ್ದ ಕೋಟೆ ಒಂದು ವಿಧದಲ್ಲಿ ರಕ್ಷಣಾ ಪ್ರಾಕಾರದ ಸ್ವರೂಪದ್ದಾಗಿದ್ದು ಸಣ್ಣ ಅಥವಾ ಪುಡಿಗಲ್ಲುಗಳಿಂದ ನಿರ್ಮಾಣಗೊಂಡಿದೆ.

ಅಹೋಬಲ ನರಸಿಂಹಸ್ವಾಮಿ ದೇವಾಲಯ: ಈ ದೇವಾಲಯ ಪೂರ್ವಾಭಿಮುಖವಾಗಿದೆ. ಮುಖಮಂಪಟವು ಈಚೆಗೆ ನಿರ್ಮಾಣಗೊಂಡಿರುವಂತಹದು. ನಾಯಕರಲ್ಲಿರುವ ಎನುಮಲರು ಮತ್ತು ಮಂದಲವರು ಎಂಬ ಪಂಗಡದವರು ಇಂದಿಗೂ ಈ ಆಹೋಬಲ ನರಸಿಂಹದೇವರಿಗೆ ಅಣ್ಣತಮ್ಮಂದಿರಾಗಿ ನಡೆದುಕೊಳ್ಳುವುದುಂಟು. ಈ ದೇವಾಲಯದ ಎದುರುಗಡೆ ದೀಪಸ್ತಂಭವಿದ್ದು, ಇದರ ಆವರಣದಲ್ಲಿ 'ಬಿರೇದ'ನೆಂಬವನ ಹೆಸರಿನ ಶಾಸನೋಕ್ತ ವೀರಮಾಸ್ತಿಗಲ್ಲಿದೆ.

ಕೆಂಚಲಿಂಗೇಶ್ವರ ದೇವಾಲಯ : ಈ ದೇವಾಲಯವು ಉತ್ತರಾಭಿಮುಖವಾಗಿದೆ. ಇದು ಇಲ್ಲಿಯ ಪ್ರಾಚೀನ ದೇವಾಲಯಗಳಲ್ಲಿ ಒಂದು. ಈ ದೇವತೆಯನ್ನು ಪೆನುಗೊಂಡೆಯಿಂದ ತಂದು ಇಲ್ಲಿ ಪ್ರತಿಷ್ಠಾಪಿಸಲಾಯಿತೆಂಬ ಹೇಳಿಕೆ ಇದೆ. ಇತ್ತೀಚಿಗೆ ಈ ದೇವಾಲಯವನ್ನು ದುರಸ್ತಿ ಮಾಡಲಾಗಿದೆ.

ವೀರಮಾಳೇಶ್ವರ ದೇವಾಲಯ : ಈ ದೇವಾಲಯ ಪಶ್ಚಿಮಾಭಿಮುಖವಾಗಿದೆ. ಈ ದೇವರು ಮೈಲಾರ ಲಿಂಗಕ್ಕೆ ಸಂಬಂಧಿಸಿದ ದೇವರು, ಇದನ್ನು ಕುರುಬರಲ್ಲಿ ಬರುವ ಬೆಡಗುಗಳಲ್ಲಿ ಒಂದಾದ 'ಹೊನ್ನುಂಗುರದವರು' ಪೂಜಿಸುತ್ತಾರೆ. ಕಡ್ಡಾಯದ ಮರಡಿವೀರಪ್ಪ ಎಂಬಾತನು ಈ ದೇವರ ಸ್ಥಾಪನೆಗೆ ಕಾರಣನಾದನಂತೆ. ಮರದ ಕಂಬ ಹಾಗೂ ತೊಲೆ, ತೀರು, ಜಂತಿಗಳಿಂದ ನಿರ್ಮಿಸಿರುವ ಚಾವಣಿ ಈ ದೇವಾಲಯದ ವೈಶಿಷ್ಟವಾಗಿದೆ.

ರೇವಣಸಿದ್ದೇಶ್ವರ ದೇವಾಲಯ : ಈ ದೇವಾಲಯ ದಕ್ಷಿಣದಿಕ್ಕಿಗೆ ಅಭಿಮುಖವಾಗಿದೆ ಗರ್ಭಗುಡಿಯಲ್ಲಿ ಗದ್ದಿಗೆಯ ಮೇಲೆ ಇಟ್ಟಿರುವ ಲಿಂಗವನ್ನು ರೇವಣಸಿದ್ದೇಶ್ವರ ಎನ್ನುವರು. ಈ ದೇವಲಯದ ನಿರ್ಮಾಣಕ್ಕೆ ಒಂದೆ ಜಾತಿಯ ಕಲ್ಲು ಹಾಗೂ ಮರವನ್ನು ಬಳಸಿರುವರು. ದೇವಾಲಯದ ಮುಖಮಂಟಪವನ್ನು 'ಕಮರದ' ಮರದ ದಿಮ್ಮುಗಳಲ್ಲಿ ನಿರ್ಮಿಸಿದ್ದಾರೆ. ನವರಂಗವನ್ನು ಪ್ರವೇಶಸುವ ಮುನ್ನ ದ್ವಾರದ ಮೇಲಿನ ಗೋಡೆಯ ಮೇಲೆ ಆನೆಗಳು ಮತ್ತು ಗಂಡಬೇರುಂಡ ಚಿತ್ರಗಳನ್ನು ಗಾರೆಯಲ್ಲಿ ಬಿಡಿಸಿಲಾಗಿದೆ. ಈ ದೇವಾಲಯದ ನವರಂಗವು ವಿಶಾಲವಾಗಿದೆ, ಮರದ ನಾಲ್ಕು ತೊಲೆಗಳ ಆಧಾರವಿಂದಲೂ ಭುವನೇಶ್ವರಿಯನ್ನು ಅಟ್ಟಣೆಯನ್ನು ನಿರ್ಮಿಸಲಾಗಿದೆ. ಇವುಗಳಿಗೆ ಆಧಾರವಾಗಿರುವ ನಾಲ್ಕು ಸ್ತಂಭಗಳು ದುಂಡಾಕಾರದಲ್ಲಿ ಕೆತ್ತಿದ್ದು ಅವು ಗಟ್ಟಿಮರದ ಕೊರಡುಗಳಿಂದ ನಿರ್ಮಿಸಿದ್ದಾರೆ. ಗುಡಿಯ ಮುಖಮಂಟಪದ ಎರಡು ಮಗ್ಗುಲಿಗೂ ಎಡಕ್ಕೆ ಆಂಜನೆಯ ಬಲಕ್ಕೆ ಗರುಡಮೂರ್ತಿಗಳನ್ನು ಗಾರೆಯಲ್ಲಿ ನಿರ್ಮಿಸಿದ್ದಾರೆ.

* ಉಪನ್ಯಾಸಕರು, ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ-೫೭೭೫೦೧.



ಹರ್ತಿಕೋಟೆಯ ವೀರ ಮಾಸ್ತಿಗಲ್ಲು



ಹರ್ತಿಕೋಟೆಯ ವೀರಗಲ್ಲು



ಹರ್ತಿಕೋಟೆಯ ಪದ್ಮಣ್ಣ ನಾಯಕನ ಸಮಾಧಿ



ಹರ್ತಿಕೋಟೆಯ ಆಂಜನೇಯ ದೇವಸ್ಥಾನ



ಹರ್ತಿಕೋಟೆಯ ಕಲ್ಲುಬಾವಿ



ಹರ್ತಿಕೋಟೆಯ ರಥ

ಓರುಗಲ್ಲಮ್ಮನ ದೇವಾಲಯ: ಓರುಗಲ್ಲಮ್ಮನ ದೇವಲಯ ಹರತಿಯಲ್ಲದೆ ಹೊಸದುರ್ಗ ತಾಲ್ಲೂಕಿನ ಬಾಗೂರುನಲ್ಲಿಯೂ ಇದೆ. ಆಂದ್ರಪ್ರದೇಶದ ಓರುಗಲ್ಲಿನಿಂದ ಕರ್ನಾಟಕಕ್ಕೆ ವಲಸೆ ಬಂದ ಈ ದೇವತೆಯ ಸಂಪ್ರದಾಯದವರು (ಹಾರೆ ಕುರುಬರು) ಆಕೆಯನ್ನು ತಮ್ಮ ಜತೆಯಲ್ಲಿ ಕರೆತಂದರಂತೆ, ವಾರಂಗಲ್ಲಿನ ಮೇಲೆ ನಡೆದ ಮುಸ್ಲಿಮರ ದಾಳಿಯಂದಾಗಿ ಈ ಜನಾಂಗದವರು ಕರ್ನಾಟಕಕ್ಕೆ ಬಂದರೆಂದು ಹೇಳುವರು. ಈ ದೇವಾಲಯವು ಪ್ರಾರಂಭದಲ್ಲಿ ಮಣ್ಣಿನ ಗೋಡೆಗಳಿಂದ ನಿರ್ಮಿಸಲಾಗಿದ್ದಿತು. ೧೯೩೨ರಲ್ಲಿ ಅದನ್ನು ಕಲ್ಲ ಕಂಬಗಳನ್ನು ಬಳಸಿ ಪುನರ್‌ನಿರ್ಮಾಣ ಮಾಡಲಾಯಿತು. ೧೯೭೬ರಲ್ಲಿ ಓರುಗಲಮ್ಮನ ಮೂರ್ತಿಯನ್ನು ಹಿತ್ತಾಳೆ ಲೋಹದಲ್ಲಿ ಹೊಸದಾಗಿ ಮಾಡಿಸಿದ್ದಾರೆ. ಈ ದೇವತೆಯ ಎಡಪಕ್ಕದಲ್ಲಿ ಪಂಚಲೋಹದ ಬಿರೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಲಾಗಿದೆ.

ವೀರಭದ್ರಸ್ವಾಮಿದೇವಾಲಯ : ಈ ದೇವಾಲಯ ಪ್ರಧಾನ ಹಾಗೂ ವಿಶಾಲವಾದ ದೇವಾಲಯ ಇದು ಉತ್ತರಾಭಿಮುಖವಾಗಿದೆ ಗರ್ಭಗುಡಿಯಲ್ಲಿ ವೀರಭದ್ರ ದೇವರನ್ನು ಪ್ರತಿಷ್ಠಾಪಿಸಲಾಗಿದೆ. ದೇವಸ್ಥಾನದ ಮುಂದೆ ಚಾವಡಿಯಂತಿರುವ ದ್ವಾರಮಂಟಪ ಮಂಟಪವನ್ನು ದಾಟಿ ಒಳನಡೆದರೆ ವಿಶಾಲವಾದ ನವರಂಗವಿದೆ. ನವರಂದರಲ್ಲಿ ಬೃಹತ್ತಾದ ಕಂಬಗಳು ಇವೆ. ಈ ದೇವಾಲಯದಲ್ಲಿರುವ ಗಂಟೆಗಳಲ್ಲಿ ಬಹುಪಾಲು ಶಾಸನೋಕ್ತವಾಗಿವೆ.

ವೀರಗಲ್ಲು : ಇದು ಅಹೋಬಲನರಸಿಂಹ ದೇವಾಲಯದ ಮುಂದೆ ಇದೆ. ಇದು ೨.೬ ಅಡಿ ಉದ್ದವಾಗಿದೆ. ಇದನ್ನು ಬಿಳಿಯ ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿದೆ. ಶಿಲ್ಪಕಲಾ ದೃಷ್ಟಿಯಿಂದ ಮತ್ತು ಐತಿಹಾಸಿಕ ದೃಷ್ಟಿಯಿಂದ ಇದು ವೈಶಿಷ್ಟ ಪೂರ್ಣವಾದುದು. ಅಲಂಕೃತವಾದ ಕುದುರೆಯನ್ನೇರಿರುವ ವೀರನೊಬ್ಬನು ತನ್ನ ಎಡಗೈಯಲ್ಲಿ ಕುದುರೆಯ ಕಡಿವಾಣವನ್ನಿಡಿದು ಮೇಲೆತ್ತಿದ ಬಲಗೈಯಲ್ಲಿ ಉದ್ದನೆಯ ಈಟಿಯನ್ನು ಹಿಡಿದಿದ್ದಾನೆ. ಅವನ ಬೆನ್ನಿಗೆ ಅಂಟಿಕೊಂಡಂತೆ ಈರ್ವರು ಪತ್ನಿಯರು

ಕುದುರೆಯನ್ನೇರಿ ಕುಳಿತಿದ್ದಾರೆ. ಅವರಿರ್ವರು ತಮ್ಮ ತಮ್ಮ ಬಲ ಹಸ್ತಗಳಲ್ಲಿ ಕನ್ನಡಿಯನ್ನು ಹಿಡಿದಿರುವರು. ಶಿಲ್ಪಿಯೂ ಕುದುರೆಯ ಹಿಂಭಾಗದಲ್ಲಿ ಧ್ವಜವನ್ನು ಹಿಡಿದಿರುವ ವ್ಯಕ್ತಿಯನ್ನು, ಮುಂಭಾಗದಲ್ಲಿ ಚಾಮರಧಾರಿ ವ್ಯಕ್ತಿಯನ್ನು ಚಿತ್ರಿಸಿದ್ದಾನೆ. ಈ ವೀರನು ವೈಷ್ಣವ ಧರ್ಮದವನೆಂಬುದನ್ನು ಸೂಚಿಸುವ ಸಲುವಾಗಿ ತ್ರಿಪುಂಡ್ರವನ್ನು ಬಿಡಿಸಿದ್ದಾನೆ. ಇದು ಕ್ರಿ.ಶ. ೧೫–೧೬ನೇ ಶತಮಾನಗಳಿಗೆ ಸೇರಿದ ವೀರಗಲ್ಲೆನ್ನಬಹುದು. ಇದರ ಮೇಲ್ಭಾಗದಲ್ಲಿ ಕೆತ್ತಲಾಗಿರುವ ಬರಹವು ಕನ್ನಡ ಲಿಪಿ, ತೆಲಗುಬಾಷೆಯಲ್ಲಿದೆ. ಈ ವೀರ ಮಾಸ್ತಿಗಲ್ಲಿನಲ್ಲಿರುವ ಬರಹ ಪೂ.(ಚಿ) ಜಾರಿ ಬಿಕಯ ಕೊಮರುಡು ಬೀರೇದ, ಪೂಜಾರಿ ಬಿ(ಚಿ)ಕ್ಕಯ್ಯನ ಮಗ ಬೀರೇದ ನೆಂಬವನ ನೆನಪನ್ನುಈ ಶಾಸನ ಇಂದಿಗೂ ಇಲ್ಲಿ ಸಾರುತ್ತದೆ.

ರಾಜದಂಪತಿಗಳು: ಈ ಊರಿನ ಉರುಸಲಮ್ಮನ ಗುಡಿಯ ಸನಹದಲ್ಲಿ ಈ ವೀರಮಾಸ್ತಿಗಲ್ಲು ಇದೆ. ಇದು ಬಹುಶಃ ವಿಜಯನಗರದ ಅವಧಿಯದ್ದು ಇದು ೧.೮ ಅಡಿ ೧೧ ಅಂಗುಲ ಅಗಲದ ಕಪ್ಪು ಶಿಲೆಯಲ್ಲಿ ನಿರ್ಮಾಣವಾಗಿದೆ. ಈ ಕಲ್ಲಿನಲ್ಲಿ ಕೈಮುಗಿದು ನಿಂತಿರುವ ದಂಪತಿಗಳ ಚಿತ್ರವನ್ನು ಕೆತ್ತಲ್ಲಾಗದೆ. ಅವರು ರಾಜಪೋಷಾಕಿನಲ್ಲಿದ್ದಾರೆ. ಅವರಿರ್ವರ ತಲೆಗಳ ಬಳಿಯಲ್ಲಿ ಸೂರ್ಯಚಂದ್ರರ ನಡುವೆ ಲಿಂಗವನ್ನು ಕೆತ್ತಲಾಗಿದೆ. ಮೇಲ್ಭಾಗದಲ್ಲಿ ೭ ಅಂಗುಲ ಎತ್ತರದ ನಂದಿಯಿದೆ.

ವೀರಗಲ್ಲು: ಇದು ಉರುಸಲಮ್ಮನ ದೇವಾಲಯದ ವೀರಗಲ್ಲಿನ ವೀರರು ಯಾವುದೋ ಯುದ್ಧ ಸಂದರ್ಭದಲ್ಲಿ ಮಡಿದಿರಬೇಕು. ಈ ವೀರಗಲ್ಲು ವಿಜಯನಗರ ಕಾಲದ ವೀರಗಲ್ಲು ಶಿಲ್ಪವನ್ನು ಹೋಲುತ್ತದೆ. ಶಿಲ್ಪಿಯು ಈ ಈರ್ವರು ವ್ಯಕ್ತಿಗಳಲ್ಲಿ ವ್ಯತ್ಯಾಸ ತೋರಿಸಲು ಅವರ ಉಡುಪು ಕೇಶಾಲಂಕಾರಗಳಲ್ಲಿ ಬದಲಾವಣೆ ಮಾಡಿದ್ದಾನೆ. ವೀರಗಲ್ಲಿನ ಬಲಭಾಗದಲ್ಲಿರುವ ವ್ಯಕ್ತಿಯು ತನ್ನ ಕೈಯಲ್ಲಿ ಬುತ್ತಿಯ ಗಂಟನ್ನು ಹಿಡಿದಿರುವುದನ್ನು ಗಮನಿಸಿದರೆ ಈತನು ಸೇವಕನಿರಬಹುದು. ಎಡಭಾಗದಲ್ಲಿರುವ ವ್ಯಕ್ತಿಯು ದಪ್ಪನಾದ ಮುಡಿಯನ್ನು ನೀಳವಾದ ಪಂಚೆಯನ್ನು ಉಟ್ಟಿದ್ದಾನೆ ಈ ವ್ಯಕ್ತಿಯ ಎರಡು ಕೈಗಳಲ್ಲಿಯೂ ಆಯುಧಗಳಿವೆ. ಈ ವೀರಗಲ್ಲಿನ ಎತ್ತರ ೩.೬ ಅಡಿಗಳು ಅಗಲ ೨.೩ ಅಡಿಗಳು

ವೀರಗಲ್ಲು : ಈ ವೀರಗಲ್ಲು ಸಹ ವಿಜಯನಗರ ಕಾಲಕ್ಕೆ ಸೇರಿದ್ದಿರಬಹುದು ಎತ್ತರ ೩ ಅಡಿ ಅಗಲ ೨.೫ ಅಡಿಗಳು. ಇದರಲ್ಲಿ ವೀರನು ನಿಂತು ಬಾಣಪ್ರಯೋಗ ಮಾಡುತ್ತಿದ್ದಾನೆ. ಬಿಲ್ಲಿನ ಹೆದೆಯನ್ನು ತನ್ನ ಕಿವಿಯವರೆಗೂ ಎಳೆದಿದ್ದಾನೆ. ಇದರಿಂದ ಬಿಲ್ಲು ತುಂಬ ಬಾಗಿದೆ ವೀರನ ಹಿಂಭಾಗದಲ್ಲಿ ಅತನ ಹೆಂಡತಿಯೂ ತನ್ನ ಎಡಗೈಯಲ್ಲಿ ಕಳಸ–ಕನ್ನಡಿಗಳನ್ನಿಡಿದಿದ್ದು ತನ್ನ ಬಲಗೈಯನ್ನು ಮೇಲೆತ್ತಿದ್ದಾಳೆ. ಶಿಲ್ಪಿಯೂ ವೀರಗಲ್ಲಿನಲ್ಲಿ ಬಳ್ಳಿಯೊಂದನ್ನು ಚಿತ್ರಿಸಿದ್ದಾನೆ. ಇದು ವೀರಗಲ್ಲಿನ ಸೌಂದರ್ಯವನ್ನು ಹೆಚ್ಚಿಸಿದೆ.

ಧರ್ಮಪ್ರಭು ವೀರಪದ್ಮಣನಾಯಕನ ಸಮಾಧಿ: ಇದು ವೀರಭದ್ರಸ್ವಾಮಿ ದೇವಾಲಯದ ದ್ವಾರಮಂಟಪದ ಮುಂಭಾಗದಲ್ಲಿಯ ಆವರಣದಲ್ಲಿದೆ. ಇದು ಮಹತ್ವದ ಸ್ಮಾರಕ ಈ ಸಮಾದಿಯ ಕಟ್ಟೆಗೆ ಬಳಸಲಾಗಿರುವ ಕಲ್ಲುಗಳ ಮೇಲೆ ಓರ್ವ ವ್ಯಕ್ತಿ ಹುಲಿಯೊಡನೆ ಹೋರಾಡುತ್ತಿರುವ ಚಿತ್ರವಿದೆ. ಈ ಸಮಾದಿಯ ಮೇಲೆ ನಿಲ್ಲಿಸಿರುವ ೫ ಅಡಿ ಎತ್ತರದ ಕಪ್ಪುಶಿಲೆಯಲ್ಲಿ ಪಶ್ಚಿಮಾಭಿಮುಖವಾಗಿ ಕೈಮುಗಿದು ನಿಂತಿರುವ ವೀರಯೋಧನೊಬ್ಬ ಶಿಲ್ಪವನ್ನು ಕೆತ್ತಲಾಗಿದೆ. ಬಹುಶಃ ಈತನೇ ಪದ್ಮಣ್ಣ ನಾಯಕನಿರಬಹುದು. ಹುಲಿಗಳು ಮತ್ತು ಆನೆಗಳು ತಮ್ಮ ತಮ್ಮಲ್ಲಿ ಪರಸ್ಪರ ಕಾಳಗ ಮಾಡುತ್ತಿರುವ ಹಾಗೂ ಸಿಂಹಾಸನದ ಮೇಲೆ ಕುಳಿತ ವ್ಯಕ್ತಿಯನ್ನು ಇತತರು ಓಲೈಸುತ್ತಿರುವ ಶಿಲಾ ಕೆತ್ತನೆಗಳು ಇಲ್ಲಿದೆ.

ದೀಪಸ್ತಂಭ: ಅಂಜನೇಯ ಗುಡಿಯ ಎದುರುಗಿರುವ ಸು: ೨೫ ಅಡಿ ಎತ್ತರದ ಚೌಕಕಾರದ ಕಲಾತ್ಮಕ ದೀಪಸ್ತಂಭವಿದೆ. ಇದನ್ನು ಏಕಶಿಲೆಯಲ್ಲಿ ನಿರ್ಮಿಸಲಾಗಿದೆ. ಈ ದೀಪಸ್ತಂಬದಲ್ಲಿ ಆಂಜನೇಯನಿಗೆ ಎದುರಾಗಿ ಕೈಮುಗಿದು ನಿಂತಿರುವ ರಾಜಪುರುಷ ಉಬ್ಬು ಚಿತ್ರವಿದೆ. ವಿಜಯನಗರದ ನಂತರದ ಕಾಲದ್ದಾಗಿದೆ.

ಕಲ್ಲುಬಾವಿ: ಹರ್ತಿಕೋಟೆಯ ಮಧ್ಯಬಾಗದಲ್ಲಿರುವ ಈ ಬಾವಿಯನ್ನು ಗ್ರಾನೈಟ್ ಕಲ್ಲಿನಿಂದ ನಿರ್ಮಿಸಲಾಗಿದೆ. ತಳಭಾಗದಿಂದ ಭೂಮಟ್ಟದವರೆಗಿನ ಇದರ ಎತ್ತರ ೩೩ ಅಡಿಗಳು ಇದರಲ್ಲಿ ಒಳಬಾವಿಯೊಂದಿದ್ದು ಇದರ ಆಳ ೧೩ ಅಡಿ ಬಾವಿಯ ಸುತ್ತಲೂ ರಕ್ಷಣೆಗಾಗಿ ಕಲ್ಲು ಗೋಡೆಯ ಆವರಣ ನಿರ್ಮಿಸಿದ್ದಾರೆ. ಬಾವಿಯಲ್ಲಿ ಇಳಿಯುವ ಮೆಟ್ಟಿಲುಗಳ ಎರಡು ಬದಿಯ ಗೋಡೆಗಳಲ್ಲೂ ಅಳವಡಿಸಿರುವ ಕಲ್ಲು ತುಂಡುಗಳ ಮೇಲೆ ಚಿಕ್ಕದ್ದಾಗಿ ಕೇತ್ತಿರುವ ಸ್ತ್ರೀ ಮತ್ತು ಪುರುಷ ಶಿಲ್ಪ, ವಿನಾಯಕ, ಆನೆ ಚಿತ್ರಗಳು ಕೆತ್ತಲ್ಪಟಿವೆ. ಬಾವಿಯೊಳಕ್ಕೆ ಇಳಿಯುವವರಿಗೆ ಎದುರುಗಡೆ ಕಾಣುವಂತೆ ಬಾವಿ ಪೂರ್ವದಿಕ್ಕಿನ ಒಳಮೈಯಲ್ಲಿ ಪಶ್ಚಿಮಾಭಿಮುಖವಾಗಿ ಭೂಮಟ್ಟದಿಂದ ಸು. ೫ ಅಡಿ ಕೆಳಕ್ಕೆ ನಿರ್ಮಿಸಿರುವ ಚಿಕ್ಕಗೂಡಿನಲ್ಲಿ ಬಸವಣ್ಣನ ವಿಗ್ರಹವಿದೆ. ಈ ಬಾವಿಯನ್ನು ಸು. ೨೦೦ ವರ್ಷಗಳ ಹಿಂದೆ ರತ್ನಗಿರಿ ಪಾಳೆಗಾರರು ನಿರ್ಮಿಸಿದ್ದರೆನ್ನಲಾಗುತ್ತದೆ.

ಹರ್ತಿ ಮನೆತನದ ಪಾಳೆಗಾರರು ನಾನಾ ಶಾಖೆಗಳಲ್ಲಿ ಬೇರೆ ಬೇರೆಯಾಗಿ ಇದ್ದರೂ ಒಂದೇ ಕುಟುಂಬದ ಅಣ್ಣತಮ್ಮಂದಿರಂತೆ ಕ್ರಿ.ಶ. ೧೩೪೦ರಿಂದ ೧೮೦೦ ರವರೆಗೆ ಸು. ೪೬೦ ವರ್ಷಗಳ ಕಾಲ ಮುಖ್ಯವಾಗಿ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಬಹುಪಾಲು ಪ್ರದೇಶದ ಮೇಲೆ ತಮ್ಮ ಅಧಿಪತ್ಯ ಸ್ಥಾಪಿಸಿದ್ದರು. ವಿಜಯನಗರದ ಅರಸರು ಮತ್ತು ಅವರ ಸಾಮಂತರ ಬಳಿ ಸೇನಾಧಿಕಾರಿಗಳಾಗಿ, ಜಹಗೀರುದಾರರಾಗಿ ಆನಂತರ ದೊರೆಗಳಾಗಿ ಉನ್ನತ ಸ್ಥಾನಮಾನಗಳಿಗೆ ಏರಿದುದು ಇವರ ವಿಶೇಷ.

ಮುಖ್ಯವಾಗಿ ಹರ್ತಿಕೋಟೆ, ಐಮಂಗಳ, ನಿಡುಗಲ್ಲು ಶಾಖೆಗಳಲ್ಲಿ ಈ ಹರತಿ ಮನೆತನದವರು ತಮ್ಮ ರಾಜಕೀಯ ಸಾಧನೆ ಮಾಡಿ ಕರ್ನಾಟಕದ ಇತಿಹಾಸದಲ್ಲಿ ಸ್ಥಾನ ಪಡೆದುಕೊಂಡುದೊಂದು ಪರಿಗಣನಾರ್ಹ ಅಂಶ.

ಆಕರ ಗ್ರಂಥಗಳು

೧. ಹರತಿ ಸಿರಿ, ಪ್ರೊ. ಲಕ್ಷ್ಮಣ್ ತೆಲಗಾವಿ.

೨. ಕರ್ನಾಟಕದ ಪಾಳೆಗಾರರ ಕಾಲದ ನ್ಯಾಯಾಡಳಿತ : ಪ್ರೊ. ಲಕ್ಷ್ಮಣ್ ತೆಲಗಾವಿ.

೩. ಹರ್ತಿ ಪಾಳೆಗಾರರ ಮೂಲವಂಶಾವಳಿ ಒಂದು ವ್ಯಾಸಂಗ : ಎಂ.ವಿ. ಚಿತ್ರಲಿಂಗಯ್ಯ.

೪. ಹಾರತೇಯರು : ದಿ. ಹೆಚ್.ವಿ. ವೀರನಾಯಕ.

೫. ಚಿತ್ರದುರ್ಗ ಪರಿಸರದ ಪ್ರಾಗೈತಿಹಾಸಿಕ ಚಿತ್ರಗಳು : ಹೆಚ್.ಎಲ್. ಶ್ರೀಶೈಲಾರಾಧ್ಯ.

೬ ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನ, ವ್ಯಾಪಕತೆ ಮತ್ತು ಸಾಧ್ಯತೆ ಒಂದು ಶತಮಾನ : ಪ್ರೊ. ಲಕ್ಷ್ಮಣ್ ತೆಲಗಾವಿ.

೭. ಚಿತ್ರದುರ್ಗ ಜಿಲ್ಲಾ ದರ್ಶನ : ಟಿ. ಗಿರಿಜ.

೮. EC, Vol. NO. XI.

೧೩೫

ಕೃಷ್ಣರಾಜನಗರ ತಾಲ್ಲೂಕು ಪರಿಸರದ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳ ಪರಿಚಯ

ಡಾ. ಹೆಚ್.ಎನ್. ಕಾಳಸ್ವಾಮಿ*

'ಸಾಂಸ್ಕೃತಿಕ ನಗರಿ' ಎಂಬ ಹೆಗ್ಗಳಿಕೆಗೆ ಹೆಸರುವಾಸಿಯಾದ ಮೈಸೂರು ಜಿಲ್ಲೆಯು ಐತಿಹಾಸಿಕವಾಗಿ ಮತ್ತು ಚಾರಿತ್ರಿಕವಾಗಿ ಹೆಚ್ಚಿನ ಮಹತ್ವ ಪಡೆದುಕೊಂಡಿದೆ. ಇದರ ತಾಲೂಕು ಕೇಂದ್ರವಾದ ಎಡತೊರೆ ಎಂಬ ಹೆಸರಿಗೆ ಪಾತ್ರವಾದ ಕೃಷ್ಣರಾಜನಗರ ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನಲೆಯಿಂದ ಪ್ರಸಿದ್ಧಿ ಪಡೆದಿದ್ದು ಹಾಗೂ ಈ ತಾಲೂಕು ಪರಿಸರದಲ್ಲಿ ಕಂಡು ಬರುವ ಕೆಸ್ತೂರು, ಮಾವತ್ತೂರು, ಮಾರಗೌಡನಹಳ್ಳಿ, ಮಿರ್ಲೆ, ಮೇಲೂರು, ನಾಟನಹಳ್ಳಿ ಮತ್ತು ಶ್ಯಾಬಾಳುವಿನಲ್ಲಿ ಕೆಲವು ವೀರಗಲ್ಲು, ಮಾಸ್ತಿಕಲ್ಲು ಮತ್ತು ಒಕ್ಕೈ ಮಾಸ್ತಿಕಲ್ಲುಗಳು ಗೋಚರಿಸಿದವು ಅವುಗಳ ಮಾಹಿತಿಯನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

೧. ಕೆಸ್ತೂರು ; ಒಕ್ಕೈಮಾಸ್ತಿಕಲ್ಲು

ಈ ಒಕ್ಕೈಮಾಸ್ತಿಕಲ್ಲು ಕೆಸ್ತೂರು ಗ್ರಾಮದ ಬಸವೇಶ್ವರ ದೇವಾಲಯದ ಮುಂಭಾಗ ಕಂಡುಬರುತ್ತದೆ. ಇದು ಸುಮಾರು ೩.೫ ಅಡಿ ಎತ್ತರ ೧.೫ ಅಡಿ ಅಗಲ, ೬ ಇಂಚು ದಪ್ಪನಾಗಿದ್ದು ಇದೊಂದು ಒಕ್ಕೈಮಾಸ್ತಿಕಲ್ಲಾಗಿದೆ. ಇದರ ಕೆಳಭಾಗದಲ್ಲಿ ಹಾರವಾಗಿರುವ ದೃಶ್ಯಾವಳಿ ಕಂಡುಬಂದಿದ್ದು ಒಕ್ಕೈನ ಎಡಭಾಗದಲ್ಲಿ ಶಿವಲಿಂಗ, ಸೂರ್ಯಚಂದ್ರ ಉಬ್ಬುಶಿಲ್ಪಗಳ ಕೆತ್ತನೆ ಇರುವುದನ್ನು ಚಿತ್ರದಲ್ಲಿ ಕಾಣಬಹುದು.

೨. ಕೆಸ್ತೂರು ; ವೀರಗಲ್ಲು

ಈ ವೀರಗಲ್ಲು ಚುಂಚನಕಟ್ಟೆಗೆ ಹೋಗುವ ಮಾರ್ಗದಲ್ಲಿ ಪೂರ್ವಭಾಗದಲ್ಲಿ ೨೦ ಮೀಟರ್ ದೂರದಲ್ಲಿರುವ ಹೊಲದಲ್ಲಿ ಪೂರ್ವಾಭಿಮುಖವಾಗಿ ಕಂಡುಬರುತ್ತದೆ. ಇದೊಂದು ವೀರಗಲ್ಲಾಗಿದ್ದು ೪ ಅಡಿ ಎತ್ತರ ೪.೫ ಅಡಿ ಅಗಲ, ೬ ಇಂಚು ದಪ್ಪನಾಗಿದ್ದು ಎರಡು ಪಟ್ಟಿಕೆಯಿಂದ ಕೂಡಿದ್ದು, ೨ ವ್ಯಕ್ತಿಗಳು ಈಟಿ ಬಿಲ್ಲು ಬಾಣಗಳನ್ನು ಹಿಡಿದು ಹೋರಾಡುತ್ತಿರುವ ದೃಶ್ಯ. ಎರಡನೆ ಪಟ್ಟಿಕೆಯಲ್ಲಿ ಇಬ್ಬರು ವ್ಯಕ್ತಿಗಳು ಮರಣವನ್ನಪ್ಪಿದ್ದು ಇಬ್ಬರನ್ನು ಸುರಾಂಗನೆಯರು ದೇವಲೋಕಕ್ಕೆ ಕೊಂಡೊಯ್ಯುತ್ತಿರುವ ದೃಶ್ಯವನ್ನು ಕಾಣಬಹುದು.

೩. ಮಾವತ್ತೂರು ; ವೀರಗಲ್ಲು

ಈ ವೀರಗಲ್ಲು ಚುಂಚನಕಟ್ಟೆಗೆ ಹೋಗುವ ಮಾರ್ಗದಲ್ಲಿ ರಸ್ತೆಯ ಪಶ್ಚಿಮದಿಕ್ಕಿಗೆ ಕಂಡುಬರುತ್ತದೆ. ಈ ವೀರಗಲ್ಲು ಸುಮಾರು ಎರಡುವರೆ ಅಡಿ ಎತ್ತರ ೧.೫ ಅಡಿ ಉದ್ದ, ೫ ಇಂಚು ದಪ್ಪನಾಗಿದ್ದು ಗ್ರಾನೈಟ್ ಕಲ್ಲಿನದಾಗಿದ್ದು ಇದು ೩ ಪಟ್ಟಿಕೆಗಳಿಂದ ಕೂಡಿದೆ. ಮೊದಲನೆ ಪಟ್ಟಿಕೆ ನೆಲದಲ್ಲಿ ಹೂತು ಹೋಗಿದ್ದು ೨ನೇ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವ್ಯಕ್ತಿಯನ್ನು ಇಬ್ಬರು ದೇವಕನ್ಯೆಯರು ದೇವಲೋಕಕ್ಕೆ ಛಾಮರಧಾರಣಿಯರಾಗಿ ಕರೆದೊಯ್ಯುತ್ತಿರುವ ದೃಶ್ಯ. ಮೂರನೆ ಪಟ್ಟಿಕೆಯಲ್ಲಿ ಶಿವಲಿಂಗಕ್ಕೆ ಯತಿಯು ಪೂಜಾ ಕೈಂಕರ್ಯ ನೆರವೇರಿಸುತ್ತಿದ್ದು ಬಲಭಾಗದಲ್ಲಿ ನಂದಿ ಉಬ್ಬು ಶಿಲ್ಪದ ಕೆತ್ತನೆಯಿದ್ದು ಇದರ ಹಿಂಭಾಗದಲ್ಲಿ ಭಕ್ತನು ನಂತಿರುವ ದೃಶ್ಯವನ್ನು ಕಾಣಬಹುದು.

೪. ಮಾವತ್ತೂರು ; ವೀರಗಲ್ಲು

ಈ ವೀರಗಲ್ಲು ಚುಂಚನಕಟ್ಟೆಗೆ ಹೋಗುವ ಮಾರ್ಗದಲ್ಲಿ ಪಶ್ಚಿಮ ಭಾಗದಲ್ಲಿರುವ ಬಸವೇಶ್ವರ ದೇವಾಲಯದ ಎಡಭಾಗದಲ್ಲಿ ಕಂಡು ಬರುತ್ತದೆ. ಈ ವೀರಗಲ್ಲು ಒಂದು ಪಟ್ಟಿಕೆಯಿಂದ ಕೂಡಿದ್ದು ಬಹುಶಃ ಮಿಕ್ಕ ಪಟ್ಟಿಕೆಗಳು ಹೂತು

* ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು–೫೭೦೦೦೬.

ಹೋಗಿರಬಹುದು. ಕಡೆಯ ಪಟ್ಟಿಕೆಯಲ್ಲಿ ಪತಿ ಪತ್ನಿಯರಿಬ್ಬರು ಶಿವಲಿಂಗಕ್ಕೆ ಪೂಜಾ ಕೈಂಕರ್ಯವನ್ನು ಮಾಡುತ್ತಿರುವಂತೆ ಕಂಡುಬಂದಿದ್ದು ಸೂರ್ಯ ಚಂದ್ರ ಉಬ್ಬು ಕೆತ್ತನೆಗಳು ಕಂಡುಬರುತ್ತದೆ.

೫. ಮಾವತ್ತೂರು ; ವೀರಗಲ್ಲು

ಈ ವೀರಗಲ್ಲು ಚುಂಚನಕಟ್ಟೆಗೆ ಹೋಗುವ ಮಾರ್ಗದಲ್ಲಿ ರಸ್ತೆಯ ಪಶ್ಚಿಮ ದಿಕ್ಕಿಗೆ ಬಸ್ ನಲ್ದಾಣದ ಎದುರು ಕಂಡುಬರುತ್ತದೆ. ಇದೊಂದು ವೀರಗಲ್ಲಾಗಿದ್ದು ೧ ಪಟ್ಟಿಕೆಯಿಂದ ಕೂಡಿದ್ದು ವೀರನು ಬಿಲ್ಲು ಬಾಣವನ್ನು ಹಿಡಿದಿರುವಂತೆಯೂ ಮರಣಕ್ಕೆ ತುತ್ತಾಗಿದ್ದನ್ನು ಸೂಚಿಸುವಂತೆ ಈತನನ್ನು ಇಬ್ಬರು ಅಪ್ಸರೆಯರು ಸ್ವರ್ಗಲೋಕಕ್ಕೆ ಕೊಂಡೊಯ್ಯುತ್ತಿರುವ ದೃಶ್ಯಾವಳಿ ಚಿತ್ರದಲ್ಲಿ ಮೂಡಿಬಂದಿದೆ.

೬. ಮಾರನಗೌಡನಹಳ್ಳಿ ; ಒಕ್ಕೈಮಾಸ್ತಿಕಲ್ಲು

ಈ ಒಕ್ಕೈಮಾಸ್ತಿಕಲ್ಲು ಮಾರಗೌಡನಹಳ್ಳಿಯಲ್ಲಿರುವ ಬಸವೇಶ್ವರ ದೇವಾಲಯದ ಮುಂದಿರುವ ನಂದಿಕಂಬದ ಮುಂಭಾಗದಲ್ಲಿದ್ದು ಕಂಡುಬಂದು ಪೂರ್ವಾಭಿಮುಖವಾಗಿದೆ. ಇದೊಂದು ಒಕ್ಕೈಮಾಸ್ತಿಕಲ್ಲಾಗಿದ್ದು ೧.೫ ಅಡಿ ಎತ್ತರ ೨.೫ ಅಡಿ ಅಗಲ ೪ ಇಂಚು ದಪ್ಪನಾಗಿದೆ.

೭. ಮಾರಗೌಡನಹಳ್ಳಿ ; ವೀರಗಲ್ಲು

ಈ ವೀರಗಲ್ಲು ಮಾರಗೌಡನಹಳ್ಳಿಯ ರಸ್ತೆಯಲ್ಲಿ ಕಂಡುಬರುವ ಬಸವೇಶ್ವರ ದೇವಾಲಯದ ಪಶ್ಚಿಮದಿಕ್ಕಿಗೆ ಕಂಡುಬರುತ್ತದೆ. ಇದು ಸುಮಾರು ೧.೫ ಅಡಿ ಎತ್ತರ ೨ ಅಡಿ ಅಗಲ ೪ ಇಂಚು ದಪ್ಪನಾಗಿದ್ದು ಈ ಕಲ್ಲಿನಲ್ಲಿ ಒಬ್ಬ ವ್ಯಕ್ತಿಯ ಶಿಲ್ಪವಿದ್ದು ಈತನು ಕೈಗಳಲ್ಲಿ ಕತ್ತಿ, ಭರ್ಜಿ, ಈಟಿಯನ್ನು ಹಿಡಿದು ಯುದ್ಧಕ್ಕೆ ಸನ್ನಧನಾಗಿ ಹೊರಟಿರುವ ದೃಶ್ಯ ಜೊತೆಗೆ ಮೇಲ್ಭಾಗದಲ್ಲಿ ಛಾಮರಧಾರಣಿಯರು ಇರುವುದು ಹಾಗೂ ವಿವಿಧ ಭಂಗಿಯಲ್ಲಿ ಎಡ ಮತ್ತು ಬಲ ಬದಿಯಲ್ಲಿ ಆಯೋಧಪಕರಣ ಹಿಡಿದು ನಿಂತಿರುವಂತೆ ಬಿಡಿಸಿದೆ.

೮. ಮಿರ್ಲೆ ; ಒಕ್ಕೈಮಾಸ್ತಿಕಲ್ಲು

ಈ ಮಿರ್ಲೆ ಗ್ರಾಮದಲ್ಲಿರುವ ಚನ್ನಕೇಶವ ದೇವಾಲಯದ ಎದುರಾಗಿ ರಸ್ತೆಯ ಬದಿಯಲ್ಲಿ ಕಂಡುಬರುತ್ತದೆ. ಇದು ೨ ಅಡಿ ಎತ್ತರ ೨ ಅಡಿ ಅಗಲ, ೩ ಇಂಚು ದಪ್ಪನಾಗಿದ್ದು ಒಕ್ಕೈಮಾಸ್ತಿಕಲ್ಲಾಗಿದೆ. ಇದು ೧ ಪಟ್ಟಿಕೆಯಿಂದ ಕೂಡಿದ್ದು ಕೆಳಹಂತದಲ್ಲಿ ಪತಿ ಪತ್ನಿಯರಿಬ್ಬರನ್ನು ಹಾರೈಸುತ್ತಿರುವಂತೆ ಕೆತ್ತಲಾಗಿದೆ.


೯. ಮಿರ್ಲೆ ; ವೀರಗಲ್ಲು

ಈ ವೀರಗಲ್ಲು ಸಾಲಿಗ್ರಾಮಕ್ಕೆ ಹೋಗುವ ರಸ್ತೆಯ ಮುಂಭಾಗ ಹಾಗೂ ಯೋಗನರಸಿಂಹಸ್ವಾಮಿ ದೇವಾಲಯದ ಎದುರು ಉತ್ತರ ದಿಕ್ಕಿಗೆ ಕಂಡುಬರುತ್ತದೆ. ಈ ವೀರಗಲ್ಲು ಸುಮಾರು ೧.೫ ಅಡಿ ಎತ್ತರ ೧ ಅಡಿ ಅಗಲ ೫ ಇಂಚು ದಪ್ಪನಾಗಿದ್ದು ೧ ಪಟ್ಟಿಕೆಯಿಂದ ಕೂಡಿದೆ, ಯುದ್ಧದಲ್ಲಿ ಆಯುಧಗಳನ್ನು ಹಿಡಿದು ಹೋರಾಡಿ ಮಡಿದ ವ್ಯಕ್ತಿಯನ್ನು ಸುರಾಂಗನೆಯರು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯವು ಚಿತ್ರದಲ್ಲಿ ಮೂಡಿಬಂದಿದೆ.

೧೦. ಮೇಲೂರು ; ವೀರಗಲ್ಲು

ಈ ವೀರಗಲ್ಲು ಮೇಲೂರು ಗ್ರಾಮದಲ್ಲಿರುವ ಶಂಭುಲಿಂಗೇಶ್ವರ ದೇವಾಲಯದ ಪ್ರಾಕಾರದ ಒಳಗೆ ಪೂರ್ವಾಭಿಮುಖವಾಗಿ ಕಂಡುಬರುತ್ತದೆ. ಈ ವೀರಗಲ್ಲು ಸುಮಾರು ೫ ಅಡಿ ಎತ್ತರ ೩ ಅಡಿ ಅಗಲ ೬ ಇಂಚು ದಪ್ಪನಾಗಿದ್ದು ಕಪ್ಪು ಗ್ರಾನೈಟ್ ಶಿಲೆಯದಾಗಿದ್ದು ೩ ಪಟ್ಟಕೆಗಳಿಂದ ಕೂಡಿದೆ. ಮೊದಲನೆ ಪಟ್ಟಿಕೆಯಲ್ಲಿ ಕುದುರೆ ಮೇಲೆ ಕುಳಿತು ಸವಾರಿಯನ್ನು ಮಾಡುತ್ತಿರುವ ವೀರಯೋಧರು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಹೋರಾಡುತ್ತಿರುವ ಸೈನಿಕರು ಮೇಲ್ಭಾಗದಲ್ಲಿ ಕತ್ತಿ, ಗುರಾಣಿಯನ್ನು ಹಿಡಿದು ಹೋರಾಡುತ್ತಿರುವ ಸೈನಿಕರು ಹಾಗೂ ಎಡಭಾಗದಲ್ಲಿ ಇಬ್ಬರು ವ್ಯಕ್ತಿಗಳು ಈಟಿಯನ್ನು ಹಿಡಿದು ಚುಚ್ಚುತ್ತಿರುವ ಶಿಲ್ಪಗಳಿವೆ.

ಎಡರನೇ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವ್ಯಕ್ತಿಯನ್ನು ಪಲ್ಲಕ್ಕಿ ಮೇಲೆ ಇಬ್ಬರು ದೇವಕನ್ಯೆಯರು ಚಾಮರಧಾರಣಿಯರಾಗಿ ಸ್ವರ್ಗ ಲೋಕಕ್ಕೆ ಕೊಂಡೊಯ್ಯುತ್ತಿರುವ ದೃಶ್ಯ ಇದರ ಎಡ ಮತ್ತು ಬಲ ಭಾಗದಲ್ಲಿ ಇಬ್ಬರು ಸ್ತ್ರೀಯರು ನೃತ್ಯಗಾರ್ತಿಯರಂತೆ ನಗಾರಿಯನ್ನು ಬಾರಿಸುತ್ತಾ ಮೆರವಣಿಗೆಯಲ್ಲಿ ಹೊರಟಿರುವ ದೃಶ್ಯವಿದೆ.



ಕೆಸ್ತೂರು : ಒಕ್ಕೈಮಾಸ್ತಿಕಲ್ಲು



ಕೆಸ್ತೂರು : ವೀರಗಲ್ಲು





ಮಾವತ್ತೂರು : ವೀರಗಲ್ಲುಗಳು

ಮೂರನೇ ಪಟ್ಟಿಕೆಯಲ್ಲಿ ನಕ್ಷತ್ರಾಕಾರದ ಪಾಣಿಪೀಠದ ಮೇಲೆ ೧.೨ ಅಡಿ ಎತ್ತರದ ಶಿವಲಿಂಗವನ್ನು ಪ್ರತಿಷ್ಠಾಪಿಸಿದ್ದು ಬಲಭಾಗದಲ್ಲಿ ಯತಿಯು ಶಿವಲಿಂಗಕ್ಕೆ ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿದ್ದು ಹಿಂಭಾಗದಲ್ಲಿ ಭಕ್ತನು ನಿಂತಿದ್ದು ಕೆಳಭಾಗದಲ್ಲಿ ಇಬ್ಬರು ವ್ಯಕ್ತಿಗಳು ಕೈಮುಗಿದು ಕುಳಿತಿರುವ ದೃಶ್ಯವಿದೆ. ಕೆಳಭಾಗದಲ್ಲಿ ನಂದಿಯ ಉಬ್ಬುಶಿಲ್ಪದ ಕೆತ್ತನೆಯನ್ನು ಕೆತ್ತಲಾಗಿದ್ದು ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಉಬ್ಬುಕೆತ್ತನೆ ಮಾಡಲಾಗಿದೆ. ಈ ವೀರಗಲ್ಲನ್ನು ಸೂಕ್ಷ್ಮವಾಗಿ ಗಮನಿಸಿದಾಗ ಹೊಯ್ಸಳರ ಕಾಲದ ವೀರಗಲ್ಲಿನಂತಿದೆ.

೧೧. ನಾಟನಹಳ್ಳಿ ; ವೀರಮಾಸ್ತಿಕಲ್ಲು

ಈ ವೀರಮಾಸ್ತಿಕಲ್ಲು ನಾಟನಹಳ್ಳಿ ಗ್ರಾಮದ ಒಳಗೆ ಕಂಡುಬಂದು ಪೂರ್ವಾಭಿಮುಖವಾಗಿ ಕಂಡುಬರುತ್ತದೆ. ಈ ವೀರಮಾಸ್ತಿಕಲ್ಲು ಸುಮಾರು ೩.೫ ಅಡಿ ಎತ್ತರ ೧.೫ ಅಡಿ ಅಗಲ, ೫ ಇಂಚು ದಪ್ಪನಾಗಿದ್ದು ಕಪ್ಪುಗ್ರಾನೈಟ್ ಶಿಲೆಯದಾಗಿದ್ದು ಎರಡು ಪಟ್ಟಿಕೆಯಿಂದ ಕೂಡಿದೆ. ಇದೊಂದು ವೀರಮಾಸ್ತಿಕಲ್ಲಾಗಿದ್ದು ಮೊದಲನೆ ಪಟ್ಟಿಕೆಯಲ್ಲಿ ಇಬ್ಬರು ದಂಪತಿಗಳು ಜೊತೆಗೆ ಮಗುವಿದ್ದು ಆಯುಧೋಪಕರಣಗಳನ್ನು ಹಿಡಿದು ಯುದ್ಧಕ್ಕೆ ಹೊರಟು ಮರಣಹೊಂದಿದ ಸನ್ನಿವೇಶ ಚಿತ್ರದಲ್ಲಿ ಮೂಡಿಬಂದಿದ್ದು ರಾಜನು ಬಲಗೈಯಲ್ಲಿ ಈಟಿ, ಎಡಗೈಯನ್ನು ಸೊಂಟದಲ್ಲಿ ಇಟ್ಟುಕೊಂಡು ಸೊಂಟದ ಕೆಳಭಾಗದಲ್ಲಿ ಪಂಚೆಯನ್ನು ಕಚ್ಚೆಯಂತೆ ಧರಿಸಿದ್ದು ಕೊರಳಲ್ಲಿ ಕಂಠಿಹಾರ, ಯಜ್ಞೋಪವೀತವನ್ನು ಧರಿಸಿದ್ದು ತಲೆಯಲ್ಲಿ ಕಿರೀಟವನ್ನು ತೊಟ್ಟಿದ್ದಾನೆ. ಎಡಭಾಗದಲ್ಲಿ ತನ್ನ ಪತ್ನಿಯಿದ್ದು ಸುಂದರವಾದ ವಸ್ತ್ರವನ್ನು ಧರಿಸಿದ್ದು ಕೈಕಡಗ, ಕಾಲುಗಳಲ್ಲಿ ಕಾಲು ಬಂಧಿ, ಕಂಠಿಹಾರ, ಕಿವಿಯಲ್ಲಿ ಕರ್ಣಕುಂಡಲ ಮೇಲ್ಭಾಗದಲ್ಲಿ ಕಿರೀಟ ಧರಿಸಿದ್ದು ಇವರಿಬ್ಬರು ಯುದ್ಧದಲ್ಲಿ ತಮ್ಮ ಮಗುವನ್ನು ಇರಿಸಿಕೊಂಡಿದ್ದು ಯುದ್ಧದಲ್ಲಿ ಕುಟುಂಬ ಸದಸ್ಯರು ಯುದ್ಧದಲ್ಲಿ ಹೋರಾಡಿ ಸತ್ತಿರುವಂತಿದೆ. ಇವರ ಹಿಂಬಂಧಿಯಲ್ಲಿ ಛಾಮರಧಾರಣಿಯರು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯವಿದೆ.

ಎರಡನೆ ಪಟ್ಟಿಕೆಯಲ್ಲಿ ನಕ್ಷತ್ರಾಕಾರದ ಪಾಣಿಪೀಠದ ಮೇಲೆ ಸುಮಾರು ೧.೫ ಅಡಿ ಎತ್ತರದ ಶಿವಲಿಂಗವಿದ್ದು ಶಿವಲಿಂಗಕ್ಕೆ ಎಡಭಾಗದಲ್ಲಿ ಯತಿಯು ಪೂಜಾಕೈಂಕರ್ಯಗಳನ್ನು ನೆರವೇರಿಸುತ್ತಿದ್ದು ಹಿಂಭಾಗದಲ್ಲಿ ಭಕ್ತನು ನಂದಿಯ ಉಬ್ಬು ಶಿಲ್ಪದ ಕೆತ್ತನೆಸಹಿತ ಕುಳಿತಿರುವುದು ಬಲಭಾಗದಲ್ಲಿ ಇಬ್ಬರು ಭಕ್ತರು ಶಿವಲಿಂಗಕ್ಕೆ ಕೈಮುಗಿದು ಕುಳಿತಿರುವ ದೃಶ್ಯ. ಇದರ ಮೇಲ್ಭಾಗದಲ್ಲಿ ಸೂರ್ಯಚಂದ್ರ ಉಬ್ಬು ಶಿಲ್ಪಕೆತ್ತನೆ ಇದ್ದು ಪ್ರಭಾವಳಿಯ ಕೆತ್ತನೆ ಮಾಡಲಾಗಿದೆ.

೧೨. ನಾಟನಹಳ್ಳಿ ; ವೀರಮಾಸ್ತಿಕಲ್ಲು

ಈ ವೀರಮಾಸ್ತಿಕಲ್ಲು ನಾಟನಹಳ್ಳಿ ಗ್ರಾಮದ ಒಳಗೆ ಕಂಡುಬಂದು ಪೂರ್ವಾಭಮುಖವಾಗಿ ಕಂಡುಬರುತ್ತದೆ. ಇದೊಂದು ಒಕ್ಕೈಮಾಸ್ತಿಕಲ್ಲಾಗಿದ್ದು ಒಂದು ಪಟ್ಟಿಕೆಯಿಂದ ಕೂಡಿದ್ದು ಸುಮಾರು ೨ ಅಡಿ ಎತ್ತರ ಒಂದೂವರೆ ಅಡಿ ಅಗಲ ಹಾಗೂ ೫ ಇಂಚು ದಪ್ಪನಾಗಿದ್ದು ಕಪ್ಪುಗ್ರಾನೈಟ್ ಕಲ್ಲಿನಂದ ಕೂಡಿದೆ. ಪತಿ ಪತ್ನಿಯರಿಬ್ಬರಿಗೂ ಶುಭ ಹಾರೈಸುವಂತೆ ಕೈ ಎತ್ತಿ ಆಶೀರ್ವದಿಸುವಂತೆ ಕಾಣಬರುವುದರ ಜೊತೆಗೆ ಸೂರ್ಯ ಚಂದ್ರರ ಉಬ್ಬು ಕೆತ್ತನೆ ಮಾಡಲಾಗಿದೆ.

೧೩. ಶ್ಯಾಬಾಳು ; ವೀರಗಲ್ಲು

ಈ ವೀರಗಲ್ಲು ಶ್ಯಾಬಾಳು ಗ್ರಾಮದಲ್ಲಿರುವ ಚಾಮುಂಡೇಶ್ವರಿ ದೇವಾಲಯದ ಒಳಭಾಗದಲ್ಲಿ ಪೂರ್ವಾಭಿಮುಖವಾಗಿ ಕಂಡುಬರುತ್ತದೆ. ಈ ವೀರಗಲ್ಲು ಮೂರು ಪಟ್ಟಿಕೆಯಿಂದ ಕೂಡಿದ್ದು ಮೊದಲನೇ ಪಟ್ಟಿಕೆಯಲ್ಲಿ ಕುದುರೆ ಮೇಲೆ ಕುಳಿತಿರುವ

ವೀರಯೋಧ ಎಡಭಾಗದಲ್ಲಿ ಬಿಲ್ಲುಬಾಣವನ್ನು ಹಿಡಿದು ಹೋರಾಡುತ್ತಿರುವ ವೀರ, ಇವರ ಮಧ್ಯದಲ್ಲಿ ಇಬ್ಬರು ಯೋಧರು ಕತ್ತಿ ಗುರಾಣಿ ಹಿಡಿದು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಹೋರಾಡುತ್ತಿರುವ ದೃಶ್ಯ ಕಂಡುಬಂದಿದ್ದು ಎರಡನೆಯ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವ್ಯಕ್ತಿಯನ್ನು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ ಕಂಡುಬಂದಿದೆ. ಮೂರನೆ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ಇದರ ಎಡ ಮತ್ತು ಬಲಭಾಗದಲ್ಲಿ ಯತಿಯು ಪೂಜಾ ಕೈಂಕರ್ಯಗಳನ್ನು ಸಲ್ಲಿಸುತ್ತಿದ್ದು ಬಲಭಾಗದಲ್ಲಿ ಒಬ್ಬ ಭಕ್ತನು ಕುಳಿತಿದ್ದು ಮೇಲ್ಭಾಗದಲ್ಲಿ ಸೂರ್ಯ ಚಂದ್ರ ಉಬ್ಬುಶಿಲ್ಪ ಕೆತ್ತನೆ ಜೊತೆಗೆ ಪ್ರಭಾವಳಿಯಲ್ಲಿ ಚಿತ್ರವನ್ನು ಕೆತ್ತನೆ ಮಾಡಲಾಗಿದೆ.

೧೪. ಶ್ಯಾಬಾಳು ; ವೀರಗಲ್ಲು

ಈ ವೀರಗಲ್ಲು ಪಶುಪತಿ, ಮಾವನೂರು ಗ್ರಾಮದ ಮುಖ್ಯರಸ್ತೆಯಲ್ಲಿರುವ ಬಸವೇಶ್ವರ ದೇವಾಲಯದ ಮುಂಭಾಗ ಕಂಡುಬರುತ್ತದೆ. ಈ ವೀರಗಲ್ಲು ೬ ಅಡಿ ಎತ್ತರ ೨.೫ ಅಡಿ ಅಗಲ ೪ ಇಂಚು ದಪ್ಪನಾಗಿದ್ದು ೪ ಪಟ್ಟಿಕೆಗಳಿಂದ ಕೂಡಿದ್ದು ಮೊದಲನೇ ಪಟ್ಟಿಕೆಯಲ್ಲಿ ನಾಲ್ಕು ವ್ಯಕ್ತಿಗಳು ವೀರವೇಶದಿಂದ ಆಯೋಧಪಕರಣಗಳನ್ನು ಹಿಡಿದು ಪರಸ್ಪರ ವಿರುಧ್ಧ ದಿಕ್ಕಿನಲ್ಲಿ ಹೋರಾಡುತ್ತಿರುವ ದೃಶ್ಯ. ಎರಡನೇ ಪಟ್ಟಿಕೆಯಲ್ಲಿ ಇಬ್ಬರು ಯೋಧರು ಕತ್ತಿ, ಗುರಾಣಿ ಹಿಡಿದು ಹೋರಾಡುತ್ತಿದ್ದು ಮೂರನೇ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವ್ಯಕ್ತಿಯನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದು ನಾಲ್ಕನೇ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವ ಯತಿಯ ಚಿತ್ರ. ಎಡಭಾಗದಲ್ಲಿ ಭಕ್ತನ ಚಿತ್ರ. ಬಲಭಾಗದಲ್ಲಿ ನಂದಿ ಶಿಲ್ಪದ ಕೆತ್ತನೆ ಇದೆ. ಹಿಂಭಾಗದಲ್ಲಿ ಒಬ್ಬ ಭಕ್ತನು ಕುಳಿತಿರುವುದು ಇದರ ಮೇಲ್ಭಾಗದಲ್ಲಿ ಎರಡು ಆನೆಗಳು ಸೊಂಡಿಲನ್ನು ಎತ್ತಿ ಶಿವಲಿಂಗಕ್ಕೆ ಸೇವೆ ಸಲ್ಲಿಸುತ್ತಿರುವುದು ಒಂದು ವಿಶೇಷ ಎನ್ನಬಹುದು.

೧೫. ಶ್ಯಾಬಾಳು ; ಒಕ್ಕೈಮಾಸ್ತಿಕಲ್ಲು

ಈ ವೀರಗಲ್ಲು ಮಾವನೂರು ರಸ್ತೆ ಮಾರ್ಗದಲ್ಲಿ ರಸ್ತೆಯ ಬದಿಯಲ್ಲಿದ್ದು ಪಶ್ಚಿಮಾಭಿಮುಖವಾಗಿ ಕಂಡುಬರುತ್ತದೆ. ಈ ವೀರಗಲ್ಲು ಸುಮಾರು ನಾಲ್ಕುವರೆ ಅಡಿ ಎತ್ತರ ಒಂದೂವರೆ ಅಡಿ ಅಗಲ, ೫ ಇಂಚು ದಪ್ಪನಾಗಿದ್ದು ಒಂದು ಪಟ್ಟಿಕೆಯಿಂದ ಕೂಡಿದ್ದು ಇದು ಪತಿ ಪತ್ನಿಯರನ್ನು ಹಾರೈಸುತ್ತಿರುವಂತೆ ಕಾಣಬರುತ್ತದೆ.

ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕೃಷ್ಣರಾಜ ನಗರ ತಾಲೂಕಿನಲ್ಲಿ ಕಂಡು ಬರುವ ವೀರಗಲ್ಲುಗಳ ಅಧ್ಯಯನ ಪರಿಪೂರ್ಣವಾಗಿ ಧಾರ್ಮಿಕ ಹಾಗೂ ಸಾಮಾಜಿಕ ಪ್ರಕ್ರಿಯೆಯಲ್ಲಿ ಸಾಂಸ್ಕೃತಿಕ ಅಂಶಗಳನ್ನು ತಿಳಿಸುವ ವಿಭಿನ್ನ ಶೈಲಿಯ, ವಿಭಿನ್ನ ಆಕೃತಿಯ, ವಿಭಿನ್ನ ಪೂಜಾ ಕೈಂಕರ್ಯಗಳನ್ನು ಸಮಾರೋಪಾದಿಯಲ್ಲಿ ಪ್ರಾಚೀನ ಕಾಲದಲ್ಲಿ ಪೂರ್ವಜರು ಧಾರ್ಮಿಕ ನಂಬಿಕೆಯ ಪ್ರತೀಕವಾಗಿ ವೀರಗಲ್ಲುಗಳನ್ನು ಪೂಜಿಸುವ ಪದ್ಧತಿ ಇಂದಿಗೂ ಇದೆ. ಹೀಗಾಗಿ ಒಂದು ಪಟ್ಟಿಕೆ, ಎರಡು ಪಟ್ಟಿಕೆ, ಮೂರು ಮತ್ತು ನಾಲ್ಕು ಪಟ್ಟಿಕೆಗಳಿಂದ ನಿರ್ಮಿತವಾದ ವೀರಗಲ್ಲುಗಳು ಕಂಡು ಬರುವುದು ಸಹಜ. ಆದರೆ ಆ ವೀರಗಲ್ಲುಗಳಲ್ಲಿ ವೀರಯೋಧ, ದೇವಕನ್ಯೆ, ಭಕ್ತ, ಯತಿ, ಶಿವಲಿಂಗ, ನಂದಿಯ ಶಿಲ್ಪ, ಛಾಮರಧಾರಿಣಿ ಪ್ರಭಾವಳಿ ಕೀರ್ತಿಮುಖ ಗಜಗಳ ಉಬ್ಬು ಶಿಲ್ಪ ಕೆತ್ತನೆ, ಸೂರ್ಯ ಚಂದ್ರ ಇವೆಲ್ಲದರ ಸಮಗ್ರ ವರದಿಯೇ ಶೈವ ಸಂಸ್ಕಾರ ಪ್ರತೀಕವಾಗಿದೆ ಎಂಬ ಅಂಶವನ್ನು ಮೇಲೆ ತಿಳಿಸಿದ ಎಲ್ಲಾ ವೀರಗಲ್ಲು ಮತ್ತು ಮಾಸ್ತಿಗಲ್ಲು ಹಾಗೂ ಒಕ್ಕೈ ಮಾಸ್ತಿಗಳು ಪ್ರತಿಬಿಂಬಿಸುವಲ್ಲಿ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ ಎಂದು ಹೇಳಬಹುದು.

ಆಕರ ಗ್ರಂಥಗಳು

೧. ಸೂರ್ಯನಾಥ ಕಾಮತ್ ಯು. (ಸಂ) ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ ೧, ಕರ್ನಾಟಕ ಸರ್ಕಾರ, ಬೆಂಗಳೂರು-೧೯೮೪.

೨. ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೨೦೧೦.

೩. ತಿಪ್ಪೆರುದ್ರಸ್ವಾಮಿ ಹೆಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು-೨೦೧೦.

೪. ಪರಶಿವಮೂರ್ತಿ.ಡಿ.ವಿ., ಕನ್ನಡ ಶಾಸನ ಶಿಲ್ಪ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ-೧೯೯೯.

೫. ಚಿದಾನಂದಮೂರ್ತಿ.ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು-೨೦೦೨.

೬. ಕನ್ನಡ ವಿಷಯ ವಿಶ್ವಕೋಶ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೨೦೦೫.

೧೩೬

ಇಟಕದಿಬ್ಬನ ಹಳ್ಳಿಯ ಸುತ್ತಮುತ್ತ ಸಿಕ್ಕಿರುವ ಪ್ರಾಚೀನ ಅವಶೇಷಗಳು (ಬಸ್ತಿಪಟ್ಟಣ)

ಕೆ. ಪುಟ್ಟಕಾಮಯ್ಯ*

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಇಟಕದಿಬ್ಬನ ಹಳ್ಳಿ ಮಧುಗಿರಿಗೆ ಸುಮಾರು ೩೦ ಕಿ.ಮೀ. ದೂರವಿದ್ದು, ಹೋಬಳಿಯ ಕೇಂದ್ರ ಸ್ಥಳವಾಗಿದೆ. ಇದು ಈಗ ಐಡಿ ಹಳ್ಳಿ ಎಂತಲೇ ಪ್ರಸಿದ್ಧಿ ಪಡೆದಿದೆ. ಈ ಗ್ರಾಮದ ಸುತ್ತಮುತ್ತಲೂ, ಅನೇಕ ಪ್ರಾಚೀನ ಅವಶೇಷಗಳಿರುವುದು ಕಂಡು ಬರುತ್ತದೆ. ಈ ಗ್ರಾಮದ ಪೂರ್ವಕ್ಕೆ ಒಂದು ಪ್ರಾಚೀನ ಏಳು ಸುತ್ತಿನ ಕೋಟೆ ಇತ್ತೆಂದು ಹೇಳುತ್ತಾರೆ.

ಈ ಗ್ರಾಮದ ಪಶ್ಚಿಮಕ್ಕೆ ೧.೫ ಕಿ.ಮೀ. ದೂರ ಕ್ರಮಿಸಿ ಹೋದರೆ ಅಲ್ಲಿ ಭವ್ಯವಾದ ಎರಡು ಜೋಡಿ ದೇವಸ್ಥಾನಗಳು ಮತ್ತು ಆವರಣದಲ್ಲಿ ಸುಂದರವಾದ ಒಂದು ವೀರಮಾಸ್ತಿ ಕಲ್ಲು ಇರುವುದನ್ನು ನೋಡಬಹುದು. ಈ ಎರಡು ದೇವಸ್ಥಾನದಲ್ಲಿರುವ ಮೂರ್ತಿಗಳು ಒಂದು ಅಡಿ ಪೀಠದ ಮೇಲೆ ಎರಡು ಅಡಿ ಎತ್ತರದ ಕಪ್ಪು ಗ್ರಾನೈಟ್ ಕಲ್ಲಿನಲ್ಲಿ ಸುಂದರವಾಗಿ ಕೆತ್ತಲ್ಪಟ್ಟಿರುವ ಶ್ರೀದೇವಿ ಮತ್ತು ಭೂದೇವಿ ವಿಗ್ರಹಗಳಿವೆ. ಈ ಮೂರ್ತಿಗಳು ಚಿಕ್ಕ ಚಿಕ್ಕ ಗುಡಿಗಳಲ್ಲಿ ಇದ್ದವೆಂದು ಪಕ್ಕದಲ್ಲಿ ಒಂದು ವೀರ ಮಾಸ್ತಿಕಲ್ಲು ಇತ್ತೆಂದೂ, ಇದಲ್ಲದೆ ಶ್ರೀದೇವಿ–ಭೂದೇವಿ ವಿಗ್ರಹಗಳಿದ್ದು ಅವುಗಳಿಗೆ ಇತ್ತೀಚೆಗೆ ದೇವಾಲಯ ನಿರ್ಮಿಸಿ ಜೀರ್ಣೋದ್ಧಾರ ಮಾಡಲಾಗಿದೆ. ಅಲ್ಲದೆ ಪ್ರಾಚೀನ ವಿಗ್ರಹಗಳ ಜೊತೆಗೆ ತದ್ರೂಪವಾದ ೫ ಅಡಿ ಎತ್ತರದ ಹೊಸ ವಿಗ್ರಹಗಳನ್ನು ಮಾಡಿಸಿ ಪ್ರತಿಷ್ಠಾಪಿಸಿದ್ದಾರೆ. ಇಲ್ಲಿ ಪ್ರತಿ ವರ್ಷ ರಥೋತ್ಸವ ಹಾಗೂ ವಿಶೇಷ ಪೂಜೆಗಳು ಅನ್ನದಾನ ನಡೆಯುತ್ತವೆ.

ಈ ದೇವಾಲಯಕ್ಕೆ ಸುಮಾರು ೨೦೦ ಮೀ ದೂರದ ಶ್ರೀ ಶಂಕರಯ್ಯ ಎಂಬುವವರ ಹೊಲದಲ್ಲಿ ಸುಮಾರು ೧೪ನೇ ಶತಮಾನದ್ದು ಎಂದು ಹೇಳಲಾದ ಪಾಳು ಬಿದ್ದಿರುವ ಸೋಮೇಶ್ವರ ದೇವಾಲಯವಿದೆ. ಈ ದೇವಾಲಯವು ಇಟ್ಟಿಗೆ, ಗಾರೆ, ಕಲ್ಲಿನಕಂಭ ಮತ್ತು ಚಪ್ಪಡಿಗಳಿಂದ ನಿರ್ಮಿತವಾಗಿರುತ್ತದೆ. ಇಲ್ಲಿ ಉದ್ಭವಲಿಂಗ ಎಂದು ಹೇಳುವ ಲಿಂಗಾಕಾರದ ಗುಂಡು, ಪಕ್ಕದಲ್ಲಿ ಪಾಣಿಪೀಠವಿದ್ದು, ಇದು ಶಿವಲಿಂಗದಿಂದ ಕಿತ್ತಿರುವುದು ಗೋಚರವಾಗುತ್ತದೆ, ಈ ದೇವಾಲಯವು ಪೂರ್ವಾಭಿಮುಖಕ್ಕೆ ಹೊಂದಿದ್ದು ದ್ವಾರದ ಎಡ ಪಕ್ಕದಲ್ಲಿ ಒಂದು ಆನೆಯ ಶಿಲ್ಪ ಅದರ ಮುಂದೆ ಶಿವಗಣದ ಶಿಲ್ಪವಿರುವ ಶಿಲೆ ಇದ್ದು ಭೂಮಿಯಲ್ಲಿ ಅರ್ಧ ಹೂತುಹೋಗಿದೆ. ಈ ದೇವಾಲಯಕ್ಕೆ ೨೦೦ ಮೀ. ಪಶ್ಚಿಮಕ್ಕೆ ಹೋದರೆ ಅಲ್ಲೊಂದು ಆಂಜನೇಯಸ್ವಾಮಿ ದೇವಾಲಯವಿದ್ದು ಪ್ರಸ್ತುತ ಬಸ್ತಿ ಆಂಜನೇಯ ಸ್ವಾಮಿ ದೇವಾಲಯವೆಂದು ಪ್ರಸಿದ್ಧವಾಗಿದೆ. ಈಗಲೂ ಶ್ರಾವಣ ಮಾಸದಲ್ಲಿ ಜಾತ್ರೆ, ವಿಶೇಷ ಪೂಜೆಗಳು ಅನ್ನದಾನ ನಡೆಯುತ್ತಿರುತ್ತವೆ. ಈ ದೇವಾಲಯದ ಮುಂದೆ ಒಂದು ಚಿಕ್ಕ ಗುಡಿಯಿದ್ದು ಅದು ಗಾರೆ ಇಟ್ಟಿಗೆಯಿಂದ ಚಪ್ಪಡಿಕಲ್ಲುಗಳಿಂದ ನಿರ್ಮಿಸಿದ್ದು ಗುಡಿಯ ಮೇಲೆ ಗಾರೆ ಇಟ್ಟಿಗೆಯಿಂದ ಕಟ್ಟಿದ ಒಂದು ಗೋಪುರವಿದ್ದು ಈಗ ಶಿಥಿಲವಾಗಿದೆ. ಇದನ್ನು ಕಮ್ಮಾರರ ಗುಡಿ ಎಂದು ಕರೆಯುತ್ತಾರೆ ಇದರ ಮುಂದೆ ನೆಲದ ಮೇಲೆ ಬಿದ್ದಿರುವ ಒಂದು ಕಂಭದ ಮೇಲೆ ಸುಂದರವಾಗಿ ಆಂಜನೇಯಸ್ವಾಮಿ ಶಿಲ್ಪವನ್ನು ಕೆತ್ತಿದ್ದಾರೆ ಅದರ ಪಕ್ಕದಲ್ಲಿ ನಾಗರಕಲ್ಲುಗಳಿವೆ ಪಕ್ಕದಲ್ಲಿಯೇ ೨೦ ಅಡಿ ಉದ್ದದ ಗರುಡಗಂಭ ಅದರ ಮೇಲು ಸಹ ಆಂಜನೇಯರ ಶಿಲ್ಪವಿದೆ, ಈ ಅವಶೇಷಗಳ ಪಕ್ಕದಲ್ಲಿ ಒಂದು ಕಡೆ ಮೆಟ್ಟಿಲಿರುವ ಕಲ್ಲುಕಟ್ಟಡದಿಂದ ಕೂಡಿದ ಒಂದು ಆಯತಾಕಾರದ ಬಾವಿ ಇದೆ. (ಚಿಕ್ಕ ಕಲ್ಯಾಣಿ) ಇದರಲ್ಲಿನ ನೀರನ್ನು ದೇವರ ಕಾರ್ಯಗಳಿಗೆ ಉಪಯೋಗಿಸುತ್ತಿದ್ದರೆಂದು ಅರ್ಚಕರು ಹೇಳುತ್ತಾರೆ.

ಈ ದೇವಾಲಯದ ಪಕ್ಕದಲ್ಲಿ ೧೫೦ ಮೀ. ದೂರದಲ್ಲಿರುವುದೇ ಪ್ರಾಚೀನ ಜೈನಬಸದಿ ಈ ಬಸದಿಯು ಮೂರು ಭಾಗದಿಂದ ಕೂಡಿದ್ದು, ಕಲ್ಲಿನ ಚಪ್ಪಡಿ, ಗಾರೆ ಮತ್ತು ಕಲ್ಲಿನ ಕಂಭಗಳಿಂದ ನಿರ್ಮಿತವಾಗಿದೆ. ಮೇಲ್ಛಾವಣಿ ಇಟ್ಟಿಗೆ, ಗಾರೆಯಿಂದ ನಿರ್ಮಿಸಿದ್ದಾರೆ. ಇದು ಪೂರ್ವಭಿಮುಖವಾಗಿದ್ದು ಸುಂದರವಾದ ಶಿಲ್ಪಗಳಿಂದ ಕೂಡಿದೆ ಕಂಭಗಳ ಮೇಲೆ

* ನಿವೃತ್ತ ಅಧ್ಯಾಪಕರು, ಚಿಕ್ಕ ಯಲ್ಲೂರು, ಮಧುಗಿರಿ ತಾಲ್ಲೂಕು.



ಬ್ರಹ್ಮ ಮಂಟಪ



ಬಸ್ತಿ ಆಂಜನೇಯಸ್ವಾಮಿ ಎದುರುಗಡೆ ನಿಲ್ಲಿಸಿರುವ ಶಿಲ್ಪವಿರುವ ಕಲ್ಲು



ಶ್ರೀದೇವಿ, ಭೂದೇವಿ ದೇವಸ್ಥಾನದಲ್ಲಿ ಆವರಣದಲ್ಲಿ ನಿಲ್ಲಿಸಿರುವ ವೀರ ಮಾಸ್ತಿ ಕಲ್ಲು



ಪಾಳು ಬಿದ್ದಿರುವ ಸೋಮೇಶ್ವರ ದೇವಸ್ಥಾನದ ಮುಂಭಾಗ.



ಸೋಮೇಶ್ವರ ದೇವಸ್ಥಾನ ಒಳಗಡೆ ಇರುವ ಪಾಣಿಪೀಠ ಮತ್ತು ಉದ್ಭವಲಿಂಗ



ಸೋಮೇಶ್ವರ ದೇವಸ್ಥಾನ ಪಕ್ಕದಲ್ಲಿ ಒಂದು ಆನೆ ಮತ್ತು ಶಿವಗಣ ಶಿಲ್ಪ ಇದ್ದು ಅರ್ಧ ಭೂಮಿ ಒಳಗಿದೆ



ಸೋಮೇಶ್ವರ ದೇವಸ್ಥಾನದ ಮುಂದೆ ಇರುವ ಒಂದು ನಾಗರಕಲ್ಲು



ಕಮ್ಮಾರರ ಗುಡಿ


ಕಂಬದ ಮೇಲೆ ಆಂಜನೇಯಸ್ವಾಮಿಯನ್ನು ಸುಂದರವಾಗಿ ಕೆತ್ತಿರುವುದು


ಜೈನ ಬಸದಿಯ ಮುಂಭಾಗ


ಪ್ರವೇಶ ಮಂಟಪದ ಕಂಬದಲ್ಲಿನ ಒಂದು ಸುಂದರವಾದ ಜಿನಬಿಂಬ


ಬಸದಿ ಮುಂದೆ ನಿರ್ಮಿಸಿರುವ ಬ್ರಹ್ಮಮಂಟಪ

ಧ್ಯಾನ ಮಾಡುತ್ತಿರುವ ಜೈನ ಶ್ರಾವಕರ ಶಿಲ್ಪಗಳು ಕೆಲವು ಕಂಭಗಳ ಮೇಲೆ ಸುಂದರವಾದ ಪಕ್ಷಿಗಳ ಶಿಲ್ಪಗಳು ಕೆಲವು ಕಂಭಗಳ ಮೇಲೆ ಪುಷ್ಪಗಳನ್ನು, ಬಾಗಿಲ ಹೊಸಲುಗಳ ಮೇಲೆ ಜೈನ ಶ್ರಾವಕರ ಶಿಲ್ಪಗಳನ್ನು ಬಿಡಿಸಿದ್ದಾರೆ. ಈ ಬಸದಿ ಶಿಥಿಲವಾಗಿದ್ದು ಯಾವುದೇ ತೀರ್ಥಂಕರರ ಪ್ರತಿಮೆಯು ಇಲ್ಲಿ ಕಂಡುಬರುವುದಿಲ್ಲ. ನಿಧಿ ಕಳ್ಳರು ನಿಧಿಶೋಧನೆಗಾಗಿ ಒಳಗಡೆ ಅಗೆದು ಹಾಳು ಮಾಡಿದ್ದಾರೆ.

ಈ ಬಸದಿಯ ಮುಂದೆ ಸುಂದರವಾದ ನಾಲ್ಕು ಕಂಭಗಳಿಂದ ನಿರ್ಮಿತವಾದ ಎರಡು ಅಂತಸ್ತಿನ ಕಟ್ಟಡವಿದ್ದು ಅದರ ಮಧ್ಯದಲ್ಲಿ ಎರಡು ಅಡಿ ವ್ಯಾಸದ ಕಂಬವಿದೆ ಮೇಲಿನ ಅಂತಸ್ತಿನಲ್ಲಿ ಕಂಬದ ಮೇಲೆ ದೊಡ್ಡ ದೀಪವನ್ನು ಬೆಳಗಿಸುತ್ತಿದ್ದರೆಂದು ಹೇಳುತ್ತಾರೆ. ಪ್ರವೇಶ ದ್ವಾರದ ಮೇಲ್ಭಾವಣಿಯಲ್ಲಿ ಒಂದು ಶಾಸನವಿದೆ ಅದರಲ್ಲಿ "ಅಂತಿಮ ಶೆಟ್ಟಿ ಬ್ರಹ್ಮ ಮಂಟಪಂ ಮಾಡಿಸಿದನ್" ಎಂಬ ಬರಹವಿದೆ. ಬಸದಿಯ ಮುಂದೆ ಬ್ರಹ್ಮ ಮಂಟಪವಿದ್ದು ಒಂದು ಅಪರೂಪದ ಕಲಾತ್ಮಕ ರಚನೆಯಾಗಿದೆ.

ಅಂದರೆ ಈ ಪ್ರದೇಶ ೧೩–೧೪ನೇ ಶತಮಾನದಲ್ಲಿ ಬಸದಿ ಪಟ್ಟಣ ಎಂಬ ಊರಾಗಿತ್ತೆಂದು ಇಲ್ಲಿ ಜೈನರು ಹೆಚ್ಚಿನ ಸಂಖ್ಯೆಯಲ್ಲಿದ್ದು ಜೈನ ಬಸದಿ, ಬಸ್ತಿ ಆಂಜನೇಯಸ್ವಾಮಿ ದೇವಾಲಯ ಶೈವರಿಗೆ ಸೋಮೇಶ್ವರ ದೇವಾಲಯ ಕಟ್ಟಿಸಿದ್ದರೆಂದು ಶ್ರೀದೇವಿ ಮತ್ತು ಭೂದೇವಿ ಎಂದು ಪೂಜಿಸಲ್ಪಡುವ ಪ್ರತಿಮೆಗಳು ಜೈನ ಯಕ್ಷಿಯರಿರಬಹುದೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಈ ಬಸದಿ ಪಟ್ಟಣವು ೪೨ ಎಕರೆ ಪ್ರದೇಶದಲ್ಲಿ ಇತ್ತು. ನೂರಾರು ವರ್ಷಗಳು ಹಿಂದೆ (೧೪–೧೫ನೇ ಶತಮಾನ) ಮಾರಕ ರೋಗಗಳಾದ ಪ್ಲೇಗ್ ಮತ್ತು ಕಾಲರ ಖಾಯಿಲೆಗಳು ಬಂದು ಅನೇಕ ಜನ ಸಾಮೂಹಿಕವಾಗಿ ಈ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗಿ ಬಸ್ತಿ ಪಟ್ಟಣವು ಅವನತಿ ಹೊಂದುತ್ತದೆ. ಇದಕ್ಕೆ ಇಲ್ಲಿ ಸಿಗುವ ಬೂದಿ ಅಸ್ಥಿಪಂಜರಗಳು ಮಡಿಕೆ ಚೂರುಗಳು ಅಲ್ಲಲ್ಲಿ ಸಿಕ್ಕಿರುವ ಮಂಟಪಗಳು ವೀರ ಮಾಸ್ತಿಕಲ್ಲುಗಳು ಸಾಕ್ಷಿಯಾಗಿವೆ ಉಳಿದ ಜನ ಊರು ಬಿಟ್ಟು ಗುಳೆ ಹೊರಟಾಗ ಕೆಲವರು ಬಸ್ತಿಪಟ್ಟಣದ ಪಶ್ಚಿಮಕ್ಕೆ ೧ ಕಿ.ಮೀ. ದೂರದಲ್ಲಿ ಎತ್ತರವಾದ ಸ್ಥಳದಲ್ಲಿ ಹಸಿ ಇಟ್ಟಿಗೆಯಿಂದ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡಲು ಪ್ರಾರಂಭಿಸುತ್ತಾರೆ. ಆದ್ದರಿಂದ ಈ ಹಳ್ಳಿಗೆ ಇಟಕ ದಿಬ್ಬನಹಳ್ಳಿ ಎಂದು ಹೆಸರಾಯಿತೆಂದು ಹೇಳುತ್ತಾರೆ.

೧. ಶ್ರೀದೇವಿ ಮತ್ತು ಭೂದೇವಿ ದೇವಾಲಯದ ಆವರಣದಲ್ಲಿ ಒಂದು ವೀರ ಮಾಸ್ತಿಕಲ್ಲನ್ನು ನಿಲ್ಲಿಸಲಾಗಿದ್ದು, ಮೂರು ಅಡಿ ಎತ್ತರದ ಹಾಗೂ ಎರಡೂವರೆ ಅಡಿ ಅಗಲದ ಕಪ್ಪು ಗ್ರಾನೈಟ್ ಕಲ್ಲಾಗಿದ್ದು ವೀರ ಮತ್ತು ಮಹಾಸತಿಯ ಶಿಲ್ಪವನ್ನು ಹೊಂದಿದೆ.

ಶಿಲ್ಪದ ಬಲಭಾಗದಲ್ಲಿ ವೀರನು ನಿಂತಿದ್ದು ಅವನಿಗೆ ಶಿರದ ಮೇಲೆ ಎತ್ತಿಕಟ್ಟಿದ ತುರುಬು ಇದ್ದು ತೋಳು, ಮುಂಗೈ ಮತ್ತು ಕಾಲುಗಳಲ್ಲಿ ಕಡಗಗಳಿದ್ದು ಕೊರಳಿನಲ್ಲಿ ಮೂರು ಎಳೆಯ ಸರವಿದೆ. ಆಕರ್ಷಕವಾಗಿ ಕಚ್ಚೆಪಂಚೆ, ಎಡಗೈನಲ್ಲಿ ಧನಸ್ಸು ಬಲಗೈನಲ್ಲಿ ಎತ್ತಿಹಿಡಿದ ಆಯುಧ, ಬೆನ್ನಹಿಂದೆ ಬಾಣಗಳಿರುವ ಬತ್ತಳಿಕೆಯಿದೆ ಕರ್ಣ ಕುಂಡಲಗಳಿಂದ ಕೂಡಿದ ಮುಖವು ತುಂಬ ಸುಂಧರವಾಗಿದೆ.

ಈ ವೀರನ ಎಡಬದಿಯಲ್ಲಿ ಸಾವಿನಲ್ಲೂ ಗಂಡನನ್ನು ಹಿಂಬಾಲಿಸುವ ಸಲುವಾಗಿ ಅಗ್ನಿ ಪ್ರವೇಶ ಮಾಡಿ ಸತಿ ಸಹಗಮನ ಪದ್ಧತಿ ಅನುಸರಿಸಿದ ಸತಿಯ ಚಿತ್ರಣವಿದೆ.

ಈ ಶಿಲ್ಪವು ಸಹ ಆಕರ್ಷಕವಾಗಿದ್ದು ಅಲಂಕಾರ ಯುಕ್ತ ಕೇಶಸೌಂದರ್ಯವಿದೆ. ಕರ್ಣಕುಂಡಲಗಳು ಕೊರಳಲ್ಲಿ ಪದಕ ನಡುವಿನಲ್ಲಿ ಡಾಬು ಮುಂಗೈನಲ್ಲಿ ಖಡಗಗಳು ಇವೆ ಅತ್ಯಂತ ಆಕರ್ಷಕವಾದ ಉಡುಪುಗಳಿವೆ ಈ ಶಿಲ್ಪವು ನಾಟ್ಯದ ಭಂಗಿಯಲ್ಲಿದ್ದು ಒಂದು ಕೈನಲ್ಲಿ ನಿಂಬೆ ಹಣ್ಣು ಮತ್ತೊಂದು ಕೈನಲ್ಲಿ ಕನ್ನಡಿಯನ್ನು ಹಿಡಿದಿದ್ದಾಳೆ.

ಮೇಲ್ಭಾಗದಲ್ಲಿ ಸೂರ್ಯ ಚಂದ್ರ ಶಿವಲಿಂಗ ನಂದಿ ಚಿತ್ರಣಗಳಿವೆ ಯಾವುದೋ ಕಾರಣದಿಂದ ವೀರನು ಶತ್ರುಗಳೊಡನೆ ಹೋರಾಡಿ ಮರಣ ಹೊಂದಿದ್ದಾನೆ ಇವನ ಸತಿಯು ಅಗ್ನಿ ಪ್ರವೇಶ ಮಾಡಿ ಮಹಾಸತಿಯಾಗಿದ್ದ ಈ ವೀರಗಲ್ಲನ್ನು ಸುಮಾರು ೧೫ನೇ ಶತಮಾನದೆಂದು ನಿರ್ಧರಿಸಬಹುದಾಗಿದೆ.

೨. ಬಸ್ತಿ ಆಂಜನೇಯ ಸ್ವಾಮಿ ದೇವಾಲಯದ ಎದುರುಗಡೆ ಒಂದು ವೀರಗಲ್ಲು ಇದ್ದು ಎರಡು ಹಂತಗಳಿಂದ ಕೂಡಿದೆ.

ಕೆಳಹಂತದಲ್ಲಿ ವೀರನು ತನ್ನ ಎಡಗೈನಲ್ಲಿ ದಂಡವೊಂದನ್ನು ಹಿಡಿದು ನಿಂತಿದ್ದು ಬಲಗೈನಲ್ಲಿಯೂ ಕೂಡ ಆಯುಧವೊಂದನ್ನು ಹಿಡಿದಿದ್ದಾನೆ ಶಿರದಿಂದ ಹಿಂದಕ್ಕೆ ಜಡೆ ಇಳಿಬಿದ್ದಿದೆ ಕಚ್ಚೆ ಪಂಚೆ ವಸ್ತ್ರದ ಅಲಂಕಾರವಿದೆ ಈ ವೀರಗಲ್ಲಿನ ಮೇಲಿನ ಹಂತದಲ್ಲಿ ಸೂರ್ಯಚಂದ್ರರ ಚಿತ್ರಣಗಳಿವೆ.

ಯಾವುದೋ ಕಾರಣಕ್ಕೆ ಶತ್ರುಗಳ ವಿರುದ್ಧ ತನ್ನ ಬಳಿ ಇದ್ದು ದಂಡ ಮತ್ತು ಆಯುಧಗಳಿಂದ ಹೋರಾಟವಾಗಿ ಮಡಿದಿದ್ದಾನೆ. ಆತನ ಸ್ಮಾರಕವಾಗಿ ಈ ಕಲ್ಲನ್ನು ನೆಡಲಾಗಿದೆ. ಕಾಲಮಾನ ದೃಷ್ಟಿಯಿಂದ ಈ ವೀರಗಲ್ಲನ್ನು ಕ್ರಿ.ಶ. ೧೫ನೇ ಶತಮಾನಕ್ಕೆ ಸೇರಿಸಬಹುದು.

[ಈ ಲೇಖನ ಬರೆಯುವಾಗ ಸಹಕರಿಸಿದ ರಾಮಕೃಷ್ಣಾರೆಡ್ಡಿ, ನಿವೃತ್ತ ಶಿಕ್ಷಕರು, ಇಟಕದಿಬ್ಬನ ಹಳ್ಳಿ ಇವರಿಗೆ ಕೃತಜ್ಞತೆಗಳು].

ಕೂಡ್ಲಿಗಿ ಪಟ್ಟಣದಲ್ಲಿರುವ ಬ್ರಿಟಿಷರ ಸ್ಮಾರಕಗಳು

ಸಣ್ಣಪಾಲಯ್ಯ ಬಿ.ಪಿ.*

ಇದು ಬಳ್ಳಾರಿ ಜಿಲ್ಲಾಡಳಿತ ಕೇಂದ್ರ ಭಾಗದಿಂದ ೮೦ ಕಿ.ಮೀ. ದೂರದಲ್ಲಿ ಚಿತ್ರದುರ್ಗ–ಹೊಸಪೇಟೆ ಹೆದ್ದಾರಿಯಲ್ಲಿದೆ. ಕ್ರಿ.ಶ. ೧೭೯೯ರಲ್ಲಿ ಟಿಪ್ಪುಸುಲ್ತಾನ್ ಮಡಿದ ತರುವಾಯ ಬಳ್ಳಾರಿ ಪ್ರದೇಶ ನಿಜಾಮನ ವಶದಲ್ಲಿತ್ತು. ಹೈದರಾಬಾದ್ ನಿಜಾಮ ಬ್ರಿಟಿಷರ ಸಹಾಯಕ ಸೈನ್ಯಪದ್ಧತಿಗೆ ಸಹಿ ಹಾಕಿ ಬಳ್ಳಾರಿ, ಅನಂತಪುರ, ಕಡಪಾ ಮತ್ತು ಕರ್ನೂಲು ಜಿಲ್ಲೆಗಳನ್ನು ದತ್ತ ಮಂಡಲವಾಗಿ ಬ್ರಿಟಿಷರಿಗೆ ಬಿಟ್ಟುಕೊಟ್ಟನು. ಕ್ರಿ.ಶ. ೧೮೦೦ರಲ್ಲಿ ಬ್ರಿಟಿಷರು ಬಳ್ಳಾರಿಯಲ್ಲಿ ಆಡಳಿತ ನಡೆಸಲು ಸರ್. ಥಾಮಸ್ ಮನ್ರೋ ಮೊದಲ ಕಲೆಕ್ಟರ್‌ನಾಗಿ ನೇಮಕಗೊಂಡು ಬಳ್ಳಾರಿಗೆ ಬಂದಾಗ, ಈತ ಮಾಡಿದ ಮೊದಲು ಕೆಲಸವೆಂದರೆ ಸ್ಥಳೀಯ ಪಾಳೆಯಗಾರರ ಆಡಳಿತದಲ್ಲಿ ಮಧ್ಯಸ್ಥಿಕೆ ವಹಿಸಿ, ಕುಟಿಲೋಪಾಯದಿಂದ ಅವರನ್ನು ಹತ್ತಿಕ್ಕಿ, ಅವರಿಗೆ ಮಾಶಾಸನ ಕೊಟ್ಟ. ಇದರಿಂದ ರೊಚ್ಚಿಗೆದ್ದ ಗುಡೆಕೋಟೆ, ಜರಿಮಲೆ, ಬಳ್ಳಾರಿ, ಹರಪನಹಳ್ಳಿ, ಇತರ ಬೇಡ ಪಾಳೆಯಗಾರರು ಬ್ರಿಟಿಷರ ವಿರುದ್ಧ ದಂಗೆ ನಡೆಸಿದರು. ಕ್ರಿ.ಶ. ೧೮೦೩ರಲ್ಲಿ ಮನ್ರೋ ಗುಡೇಕೋಟೆಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಶಾಂತಗೊಳಿಸಿ,[1] ತಮ್ಮ ಆಡಳಿತದ ಕಾಯ್ದೆಗಳಿಗೆ ಬದ್ಧರಾಗಿರುವಂತೆ ಮಾಡಿಕೊಂಡನು.

ವಸಾಹತುಶಾಹಿ ಆಳ್ವಿಕೆಗೆ ಒಳಗಾಗಿದ್ದ ಬಳ್ಳಾರಿ ಜಿಲ್ಲೆಯ ಪ್ರಮುಖ ನಗರ ಮತ್ತು ಪಟ್ಟಣಗಳ ಆಯಾಕಟ್ಟಿನ ಪ್ರದೇಶಗಳಲ್ಲಿ ತಮ್ಮ ವ್ಯಾಪಾರ ಮತ್ತು ಆಡಳಿತದ ಅನುಕೂಲಕ್ಕಾಗಿ ಹಲವಾರು ಮಾದರಿಯ ಕಟ್ಟಡಗಳನ್ನು ನಿರ್ಮಿಸಿಕೊಂಡರು. 'ಬ್ರಿಟಿಷ್ ಪರಂಪರೆಯಲ್ಲಿ ನಿರ್ಮಿತವಾದ ಕಟ್ಟಡಗಳ ವಿನ್ಯಾಸಗಳು ನಿರ್ಮಾಪಕನ 'ಹುಚ್ಚು ಮನಸ್ಸಿನ ಹತ್ತು ಮುಖಗಳೇ ಹೊರತು, ಯಾವ ನಿರ್ದಿಷ್ಟ ಶಾಸ್ತ್ರ ನಿಯಮಕ್ಕೂ ಅವು ಹೊಂದಿಕೆಯಾಗುವುದಿಲ್ಲ.[2] ರಂಗಾಚಾರ್ಯರು ಹೇಳುವಂತೆ, ಅವು ಕೇವಲ ವಿದೇಶೀಯ ಸಂಸ್ಕೃತಿಯ, ವಿದೇಶೀಯ ಸಂಪ್ರದಾಯದ, ವಿದೇಶೀಯ ವ್ಯಂಜನಾ ರೀತಿಯ ಅಂಧಾನುಕರಣವಲ್ಲದೆ ಬೇರೇನೂ ಅಲ್ಲ ಬ್ರಿಟಿಷರಿಗೆ ಕೂಡ್ಲಿಗಿ ಪಟ್ಟಣವು ಆಯಾಕಟ್ಟಿನ ಪ್ರದೇಶವಾಗಿದ್ದರಿಂದ ಕ್ರಿ.ಶ. ೧೮೦೩ರಲ್ಲಿ ತಾಲೂಕನ್ನು ರಚಿಸಿ ಅಲ್ಲಿ ಪ್ರಮುಖವಾಗಿ ಆಡಳಿತ ಕಛೇರಿಗಳು, ವಾಸದ ಬಂಗಲೆಗಳು, ತಂಗುದಾಣಗಳು, ಸೈನಿಕ ಬಂಗಲೆಗಳು, ಪ್ರವಾಸಿ ಮಂದಿರ, ನ್ಯಾಯಾಲಯ, ಕಾರಗೃಹ ಇತ್ಯಾದಿ ಕಟ್ಟಡಗಳನ್ನು ಗೋತಿಕ್, ಡೋರಿಕ್, ಆಯೋನಿಕ್ ಕಾರಿಂತಿಯನ್ ಶೈಲಿಯಲ್ಲಿ ನಿರ್ಮಿಸಿಕೊಂಡರು.

ತಾಲೂಕು ಕಛೇರಿ (ಸಬ್ ರಿಜಿಸ್ಟರ್ ಆಫೀಸ್)

ಕೂಡ್ಲಿಗಿ ಪಟ್ಟಣದ ಹೃದಯ ಭಾಗದಲ್ಲಿ ಹಾಗೂ ಕೂಡ್ಲಿಗಿಯಿಂದ ಗುಡೇಕೋಟೆಗೆ ಹೋಗುವ ಮಾರ್ಗದ ಎಡಭಾಗದಲ್ಲಿ ದಕ್ಷಿಣಾಭಿಮುಖವಾಗಿರುವುದೇ ತಾಲೂಕು ಕಛೇರಿ. ಇದು ಕ್ರಿ.ಶ. ೧೯೧೬ರಲ್ಲಿ ನಿರ್ಮಾಣಗೊಂಡಿದೆ ಎಂದು ಕೃಷ್ಣಮೂರ್ತಿ ತಹಶೀಲ್ದಾರ್ ಅವರ ಅಭಿಪ್ರಾಯವಾಗಿದೆ. ಕ್ರಿ.ಶ. ೧೯೧೦ರಲ್ಲಿ ತಾಲೂಕು ಕಛೇರಿ ನಿರ್ಮಾಣಗೊಂಡಿದೆ ಎಂದು ಕಾರ್ಯನಿರ್ವಾಹಕ ಅಭಿಯಂತರ ಕಛೇರಿಯ ಕಡತದಲ್ಲಿ ಇದೆ. ನಾನು ತಮಿಳುನಾಡಿನ ಚೆನ್ನೈನಲ್ಲಿರುವ ರಾಜ್ಯ ಪತ್ರಗಾರ ಇಲಾಖೆಗೆ ಭೇಟಿ ನೀಡಿ ಬಳ್ಳಾರಿ ಜಿಲ್ಲೆಗೆ ಸಂಬಂಧಪಟ್ಟ ಪತ್ರಗಳನ್ನು ಪರಿಶೀಲಿಸಿದಾಗ ಕೂಡ್ಲಿಗಿ ತಾಲೂಕು ಕಛೇರಿಯ ಬಗ್ಗೆ ಈ ರೀತಿ ಮಾಹಿತಿ ಇದೆ. ಗೆಜೆಟ್ ಆದೇಶ ಸಂಖ್ಯೆ ೧೫೪೯, ನ್ಯಾಯಿಕ, ದಿನಾಂಕ ೧೨ ಅಕ್ಟೋಬರ್ ೧೯೦೩ರಲ್ಲಿ ನಮೂದಿಸಿರುವಂತೆ ವಿಶೇಷ ಉಪನೋಂದಣಾಧಿಕಾರಿಯ ಅಧೀನದಲ್ಲಿ ಖಾಸಗಿ ಕಟ್ಟಡವನ್ನು ೧೮೯೨ರಲ್ಲಿ ಖರೀದಿಸಿ, ಅದರಲ್ಲಿ ಕಾರ್ಯನಿರ್ವಹಿಸಲಾಗುತ್ತಿತ್ತು. ಇದಕ್ಕೆ ಪ್ರತಿ ತಿಂಗಳು ೧೪೫ ರೂಪಾಯಿಗಳನ್ನು ಬಾಡಿಗೆ ನೀಡಲಾಗುತ್ತಿತ್ತು.[3] ಈ ಕಟ್ಟಡವು ಮಳೆ ಬಂದರೆ ಸೋರುತ್ತಿತ್ತು. ಇದರ ಜೊತೆಗೆ ಇಲಿಗಳ ಹಾವಳಿಯಿಂದ ಸರಕಾರದ ಕಡತಗಳು ಹಾಳಾಗುತ್ತಿದ್ದವು. ಇದಕ್ಕಾಗಿ ಹೊಸ ಸರಕಾರಿ ಕಟ್ಟಡ ಒದಗಿಸುವುದು ಅವಶ್ಯಕವಾಗಿತ್ತು. ಬಳ್ಳಾರಿ ಕಲೆಕ್ಟರ್ ಜೆ.ಎಂ. ಕಮಿಂಗ್ ಅವರು ಕಮಿಷನರ್ ಭೂ ಕಂದಾಯ ಕಾರ್ಯದರ್ಶಿ ಮದರಾಸ್ ಅವರಿಗೆ ಪತ್ರ ಬರೆದರು. ಈ ಪತ್ರದಲ್ಲಿ ಕೂಡ್ಲಿಗಿ ಪಟ್ಟಣದಲ್ಲಿರುವ

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿವಿ, ವಿದ್ಯಾರಣ್ಯ–೫೮೩೨೭೬.

ತಾಲೂಕು ಕಛೇರಿ ಕಟ್ಟಡವು ಹಳೆಯ ವಿನ್ಯಾಸಾಧರಿತವಾಗಿದ್ದು, ಅಲ್ಲಿನ ಅಧಿಕಾರಿಗಳಿಗೆ ಅತ್ಯಂತ ಚಿಕ್ಕದಾಗಿದೆ ಎಂದು ಗೌರವಪೂರ್ವಕವಾಗಿ ತಿಳಿಸಲಿಚ್ಛಿಸುತ್ತೇನೆ. ತಹಶೀಲ್ದಾರ ಹಾಗೂ ಉಪನ್ಯಾಯಾಧೀಶರಿಗೆ ಒದಗಿಸಿರುವ ವಸತಿ ಸೌಕರ್ಯವು ಸಮರ್ಪಕವಾಗಿಲ್ಲ ಹಾಗೂ ಕಡತಗಳಿಗೆ ವ್ಯವಸ್ಥಿತವಾದ ಕೊಠಡಿ ಇಲ್ಲದೆ ಪರದಾಡುವಂತಾಗಿದೆ. ಆದುದರಿಂದ ಮಂಡಳಿಯು ಸರಕಾರದಿಂದ ತಹಶೀಲ್ದಾರರಿಗೆ ಮತ್ತು ಉಪನ್ಯಾಯಾಧೀಶರು ಹಾಗೂ ಅವರ ಸಿಬ್ಬಂದಿಗೆ ಸಂಖ್ಯೆ: ೭೫, ಡಬ್ಲ್ಯೂ ೨ ಮಾರ್ಚ್ ೧೯೦೪, ಬಿ.ಪಿ. ಸಂಖ್ಯೆ: ೧೧೮ ಎಲ್.ಆರ್. ದಿನಾಂಕ ೧೫.೦೬.೧೯೦೪ರಲ್ಲಿ ಉಲ್ಲೇಖಿಸಿರುವ ನೂತನ ವಿನ್ಯಾಸದ ಕಟ್ಟಡ ನಿರ್ಮಾಣಕ್ಕೆ ಅನುಮೋದನೆಯನ್ನು ನೀಡಬೇಕೆಂದು ಗೌರವಪೂರ್ವಕವಾಗಿ ವಿನಂತಿಸುತ್ತೇನೆ.[೪]

ಈ ಪತ್ರವನ್ನು ಸ್ವೀಕರಿಸಿದ ಸಿ.ಜಿ. ವೈರ್, ಕಮಿಷನರ್ ಭೂಕಂದಾಯ ಇಲಾಖೆ ಮದರಾಸ್ ಅವರು ಪತ್ರದಲ್ಲಿರುವ ಮಾಹಿತಿಯನ್ನು ಪರಿಶೀಲಿಸಿ ಗೆಜೆಟ್ ಆದೇಶ ಸಂಖ್ಯೆ: ೧೧೩೬ ಡಬ್ಲ್ಯೂ ದಿನಾಂಕ ೧೫.೧೦.೧೯೦೯ರಲ್ಲಿ ೧೧,೬೦೦ ರೂಪಾಯಿ ಅಂದಾಜು ವೆಚ್ಚದಲ್ಲಿ ನೂತನ ಸಬ್ ರಿಜಿಸ್ಟ್ರಿ ಕಟ್ಟಡ ನಿರ್ಮಾಣಕ್ಕೆ ಅನುಮೋದನೆಯನ್ನು ನೀಡಲಾಗಿದೆ[೫] ಎಂದು ಆದೇಶಿಸುತ್ತಾನೆ. ಈ ಮೇಲಿನ ಮಾಹಿತಿ ಪ್ರಕಾರ ಕೂಡ್ಲಿಗಿ ತಾಲೂಕು ಕಛೇರಿಯು ೧೮೯೨ರಲ್ಲಿ ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸಿ, ೧೯೦೯ರಲ್ಲಿ ಹೊಸ ಕಟ್ಟಡ ಆರಂಭಗೊಂಡಿದೆ. ಈ ಕಟ್ಟಡವು ಇಂದು ಶತಮಾನ ಕಂಡ ಕಟ್ಟಡವಾಗಿದ್ದು, ಪ್ರಸ್ತುತವು ಇದೇ ಕಟ್ಟಡದಲ್ಲಿ ತಾಲೂಕು ಕಛೇರಿಯು ಕಾರ್ಯನಿರ್ವಹಿಸುತ್ತಿದೆ.

ಪೊಲೀಸ್ ಠಾಣೆ ಕೂಡ್ಲಿಗಿ

ಬ್ರಿಟಿಷರು ಒಂದು ವ್ಯವಸ್ಥಿತವಾದ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು ೧೮೮೬ರಲ್ಲಿ ಅದು ಬಂಗಾಳದಲ್ಲಿದ್ದ ಪೊಲೀಸ್ ವ್ಯವಸ್ಥೆಯನ್ನು ಅನುಸರಿಸಿಕೊಂಡು ಮದ್ರಾಸ್ ಪ್ರಿಸಿಡೆನ್ಸಿಯಲ್ಲಿ ಪೊಲೀಸ್ ವ್ಯವಸ್ಥೆಯನ್ನು ಸ್ಥಾಪಿಸಲು ೧೮೮೬ರ ಮದ್ರಾಸ್ ರೆಗ್ಯುಲೇಷನ್ ಹನ್ನೊಂದನ್ನು ಅಂಗೀಕರಿಸಲಾಯಿತು.[೬] ಈ ಕಾಯ್ದೆಯನ್ವಯ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಪ್ರತಿ ಜಿಲ್ಲೆಯನ್ನು ಸುಮಾರು ೨೦ ಚದರ ಮೈಲು ಭೂ ಪ್ರದೇಶ ಹೊಂದಿರುವಂತೆ ಸಣ್ಣ ಸಣ್ಣ ಪೊಲೀಸ್ ವಿಭಾಗಗಳನ್ನು ಸ್ಥಾಪಿಸಲಾಯಿತು.

ಕೂಡ್ಲಿಗಿ ಪೊಲೀಸ್ ಠಾಣೆಯು ಹಳೆಯ ಬಸ್‌ಸ್ಟ್ಯಾಂಡ್‌ಗೆ ಹೋಗುವ ಮಾರ್ಗದ ಬಲಭಾಗದಲ್ಲಿ ಅಥವಾ ತಾಲೂಕು ಕಛೇರಿಯ ಪಕ್ಕದಲ್ಲಿದೆ. ಇದು ಕ್ರಿ.ಶ. ೧೮೯೧ರಲ್ಲಿ ಸ್ಥಾಪನೆಯಾಗಿದ್ದು, ಸರ್ವೇ ನಂಬರ್ ೫೬೩ ಎ೨ರಲ್ಲಿ ೨.೧೧ ಚದರ ಅಡಿಗಳ ಭೂಮಿಯನ್ನು ಹೊಂದಿದೆ. ಠಾಣೆಯ ಕಟ್ಟಡವನ್ನು ಪಶ್ಚಿಮಾಭಿಮುಖವಾಗಿ ಒಂದು ಅಡಿ ಎತ್ತರದ ಬೆಸೆಮೆಂಟ್ ಮೇಲೆ ಚತುಷ್ಕಾಕಾರದಲ್ಲಿ ನಿರ್ಮಾಣಗೊಂಡಿದೆ. ಕಟ್ಟಡವು ಆರು ಕೊಠಡಿಗಳನ್ನು ಒಳಗೊಂಡಿದ್ದು, ಒಂದು ಪಿ.ಎಸ್.ಐ. ಕೊಠಡಿ, ಎರಡು ವಿಚಾರಣಾ ಕೊಠಡಿ, ಮೂರು ಠಾಣಾ ಬರಹಗಾರರ ಕೊಠಡಿ, ನಾಲ್ಕು ಪುರುಷರ ಬಂಧಿಖಾನೆ, ಐದು ಮಹಿಳೆಯರ ಬಂಧಿಖಾನೆ, ಆರು ಮುದ್ದೆ ಮಾಲು ಕೊಠಡಿಗಳನ್ನು ಒಳಗೊಂಡಿದೆ. ಕಟ್ಟಡಕ್ಕೆ ಸ್ಥಳೀಯವಾಗಿ ದೊರೆಯುವ ಗಾರೆಗಚ್ಚು, ಕಲ್ಲು, ಇಟ್ಟಿಗೆ, ಕಬ್ಬಿಣ, ಮರದ ತೀರು, ಮಂಗಳೂರು ಹೆಂಚು ಹಾಗೂ ಸಿಮೆಂಟನ್ನು ಬಳಸಿಕೊಂಡು ಬಹಳ ಸರಳವಾಗಿ ಕಟ್ಟಡವನ್ನು ನಿರ್ಮಿಸಿಕೊಂಡಿದ್ದಾರೆ.

ಸಬ್ – ಜೈಲು

ಪೊಲೀಸ್ ಠಾಣೆಯ ದಕ್ಷಿಣ ದಿಕ್ಕಿನಲ್ಲಿ ಅಥವಾ ತಾಲೂಕು ಕಛೇರಿಯ ಪಶ್ಚಿಮದಲ್ಲಿ ಕಂಡುಬರುವ ಕಟ್ಟಡವೇ ಸಬ್ ಜೈಲು. ಇದು ಕ್ರಿ.ಶ. ೧೯೧೧ರಲ್ಲಿ ನಿರ್ಮಾಣಗೊಂಡಿರುವುದೆಂದು ಅಲ್ಲಿರುವ ಕೆಲವು ದಾಖಲೆಗಳಿಂದ ದೃಢಪಟ್ಟಿದೆ. ಇದು ಎರಡು ಅಡಿ ಎತ್ತರದ ಬೆಸ್‌ಮೆಂಟ್ ಮೇಲೆ ಚತುಷ್ಕಾಕಾರದಲ್ಲಿ ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿದೆ. ಇದು ಕೇವಲ ನಾಲ್ಕು ಕೊಠಡಿಗಳನ್ನು ಒಳಗೊಂಡಿದೆ. ಈ ಕೊಠಡಿಗಳಿಗೆ ಬಾಗಿಲುಗಳು ಮಾತ್ರ ಇವೆ. ಆದರೆ, ಯಾವುದೇ ಕಿಟಕಿಗಳನ್ನು ಅಳವಡಿಸದೆ ಇರುವುದನ್ನು ನಾನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ. ಕಟ್ಟಡಕ್ಕೆ ಗಾರೆ, ಸಿಮೆಂಟ್, ಕಲ್ಲು, ಇಟ್ಟಿಗೆ, ಕಬ್ಬಿಣ, ಮರದ ತೀರುಗಳ ಬಳಸಿ ನಿರ್ಮಿಸಲಾಗಿದೆ. ಪ್ರಸ್ತುತ ತಾಲೂಕು ಕಛೇರಿಯ ಸಿಬ್ಬಂದಿಯು ಜೈಲು ಕಟ್ಟಡದ ಆವರಣದಲ್ಲಿ ಕುಳಿತು ಕಾರ್ಯನಿರ್ವಹಿಸುತ್ತಿದ್ದಾರೆ.

ಪೊಲೀಸ್ ವಸತಿ ಗೃಹಗಳು

ಬಳ್ಳಾರಿ ಜಿಲ್ಲೆಯಲ್ಲಿ ಯಾವುದೇ ಗ್ರಾಮ, ಹೋಬಳಿ, ಪಟ್ಟಣ, ನಗರ ಪ್ರದೇಶಗಳಲ್ಲಿರುವ ಪೊಲೀಸ್ ಠಾಣೆಗಳ ಸಮೀಪದಲ್ಲೇ ಸಿಬ್ಬಂದಿಯವರಿಗೆ ಬ್ರಿಟಿಷರು ಯಾಕೆ? ವಸತಿ ವ್ಯವಸ್ಥೆಯನ್ನು ಒದಗಿಸುತ್ತಿದ್ದರು ಎನ್ನುವಂತಹ ಪ್ರಶ್ನೆ







ಉದ್ಭವಿಸುತ್ತದೆ. ಪ್ರಾಯಶಃ ಬ್ರಿಟಿಷ್ ಅಧಿಕಾರಿಗಳ ಮೇಲೆ ಸ್ಥಳೀಯ ಹೋರಾಟಗಾರರು ಯಾವ ಸಮಯದಲ್ಲಾದರೂ ದಂಗೆ ಮಾಡುವರು ಎಂಬ ಭಯದ ಕಲ್ಪನೆ ಅವರಲ್ಲಿತ್ತು. ಹಾಗಾಗಿ ತಮ್ಮ ರಕ್ಷಣೆಗಾಗಿ, ದೈನಂದಿನ ಶಿಸ್ತುಪಾಲನೆಗಾಗಿ, ಸಿಬ್ಬಂದಿಯವರ ಮೇಲ್ವಿಚಾರಣೆಯ ದೃಷ್ಟಿಯಿಂದ ಹಾಗೂ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ಬರುವ ಸಂದರ್ಭದಲ್ಲಿ ತಕ್ಷಣ ಪೊಲೀಸ್ ಸಿಬ್ಬಂದಿಗಳು ಕೆಲಸಕ್ಕೆ ಲಭ್ಯವಾಗಬೇಕೆಂಬ ಉದ್ದೇಶದಿಂದ ಪೊಲೀಸ್ ಠಾಣೆಗಳ ಸಮೀಪದಲ್ಲೇ ಪೊಲೀಸ್ ಲೇನ್ ಅಥವಾ ಗುಡಿಸಲು(Huts)ಗಳಲ್ಲಿ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಇದೇ ವ್ಯವಸ್ಥೆಯು ಕೂಡ್ಲಿಗಿ ಪಟ್ಟಣದಲ್ಲಿರುವುದನ್ನು ಗಮನಿಸಬಹುದಾಗಿದೆ. ಪೊಲೀಸ್ ಠಾಣೆಯ ನೈರುತ್ಯ ದಿಕ್ಕಿನಲ್ಲಿ ಪೊಲೀಸ್ ಸಿಬ್ಬಂದಿಯವರಿಗೆ ವಸಾಹತುಶಾಹಿ ಆಳ್ವಿಕೆಯು ೨೦ ವಸತಿ ಮನೆಗಳನ್ನು ನಿರ್ಮಿಸಿಕೊಟ್ಟಿತ್ತು. ಆದರೆ, ಅವುಗಳಲ್ಲಿ ನಾಲ್ಕು ಕಟ್ಟಡಗಳು ಮಾತ್ರ ಪಾಳು ಬಿದ್ದಿವೆ. ಉಳಿದ ಕಟ್ಟಡಗಳನ್ನು ಸರ್ಕಾರವು ೨೦೧೪ರಲ್ಲಿ ತೆರವುಗೊಳಿಸಿ ಅದೇ ಸ್ಥಳದಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸಿಕೊಟ್ಟಿದೆ.

ಹಳೆ ಸರ್ಕಾರಿ ಆಸ್ಪತ್ರೆ

ಪಟ್ಟಣದ ಹೃದಯ ಭಾಗದಲ್ಲಿರುವ ಸಂತೆ ಮೈದಾನದ ಬಳಿ ಹಳೆಯ ಸರ್ಕಾರಿ ಆಸ್ಪತ್ರೆಯ ಕಟ್ಟಡವಿದೆ. ಇದು ಶತಮಾನ ಕಂಡ ಕಟ್ಟಡವಾಗಿದೆ. ಹಳೆಯ ಕಟ್ಟಡವಾಗಿದ್ದರೂ, ಆಸ್ಪತ್ರೆಯು ಆರಂಭದಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿತ್ತು. ಆದರೆ, ೧೯೯೪ರಲ್ಲಿ ಗುಡೇಕೋಟೆ ರಸ್ತೆಯಲ್ಲಿ ಹೊಸ ಸರ್ಕಾರಿ ಆಸ್ಪತ್ರೆ ನಿರ್ಮಾಣಗೊಂಡಾಗ ಆಸ್ಪತ್ರೆಯನ್ನು ಹಳೆಯ ಕಟ್ಟಡಿಂದ ಹೊಸ ಕಟ್ಟಡಕ್ಕೆ ವರ್ಗಾಯಿಸಲಾಯಿತು.[೬] ಹಳೆಯ ಕಟ್ಟಡ ಖಾಲಿಯಾಗಿಯೇ ಉಳಿಯಿತು. ಕಟ್ಟಡವನ್ನು ಖಾಲಿ ಬಿಡಬಾರದೆಂದೇ ಕೆಲಕಾಲ ಅದನ್ನು ಮಕ್ಕಳ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಯಿತು. ವೈದ್ಯರು ವರ್ಗಾವಣೆಗೊಂಡ ನಂತರ ಆಸ್ಪತ್ರೆ ಮತ್ತೆ ಖಾಲಿ ಉಳಿಯಿತು. ಆರೋಗ್ಯ ಉಪಕೇಂದ್ರವನ್ನು ನಿರ್ಮಾಣ ಮಾಡಲಾಯಿತಾದರೂ, ಅದು ಖಾಲಿ ಉಳಿದಿದೆ.

ಮುನ್ಸಿಪ್ ನ್ಯಾಯಾಲಯ

ಕೂಡ್ಲಿಗಿಯಿಂದ ಗುಡೇಕೋಟೆಗೆ ಹೋಗುವ ಮಾರ್ಗದ ಬಲಭಾಗದಲ್ಲಿ ಕ್ರಿ.ಶ. ೧೯೧೩ರಲ್ಲಿ ಮುನ್ಸಿಫ್ ನ್ಯಾಯಾಲಯವನ್ನು ಸ್ಥಾಪಿಸಿದ್ದರು. ಇದರ ಖರ್ಚು ೧೨,೮೧೦ ರೂ. ಆಗಿದ್ದು, ೨೭೦.೭೩ ಸೆಂ.ಮೀ ವಿಸ್ತೀರ್ಣವಿದ್ದ ಸ್ಥಳದಲ್ಲಿ ಕಟ್ಟಡವನ್ನು

ನಿರ್ಮಿಸಿದ್ದರು. ಆದರೆ, ಹಳೆಯ ಕಟ್ಟಡವನ್ನು ತೆರೆವುಗೊಳಿಸಿ, ಅದೇ ಸ್ಥಳದಲ್ಲಿ ಹೊಸ ಕಟ್ಟಡವನ್ನು ಡೋರಿಕ್ ಶೈಲಿಯ ಕಂಬಗಳನ್ನು ಒಳಗೊಂಡ ಕಟ್ಟಡವನ್ನು ನಿರ್ಮಿಸಿದ್ದಾರೆ.

ಪ್ರವಾಸಿ ಮಂದಿರ

ಪ್ರವಾಸಿ ಮಂದಿರವು ಗುಡೇಕೋಟೆ ರಸ್ತೆಯ ಮಾರ್ಗದಲ್ಲಿ ಬಲಭಾಗದಲ್ಲಿದೆ. ಇದರ ಖರ್ಚು ೩,೭೪೭ರೂ. ಆಗಿದ್ದು, ೧೧.೫೬ ಸೆಂ.ಮೀ. ವಿಸ್ತೀರ್ಣದಲ್ಲಿ ಕ್ರಿ.ಶ. ೧೯೧೧ರಲ್ಲಿ ನಿರ್ಮಿಸಲಾಗಿದೆ. ಪ್ರಸ್ತುತ ಇದೇ ಕಟ್ಟಡವು ಸೇವೆಯಲ್ಲಿದ್ದು, ಇಲ್ಲಿ ವಿ.ಐ.ಪಿ. ಅಧಿಕಾರಿಗಳಿಗೆ ಮಾತ್ರ ತಂಗುವುದಕ್ಕೆ ಅವಕಾಶ ಕಲ್ಪಿಸಲಾಗಿದೆ.

ಸರ್ಕಾರಿ ಪ್ರೌಢಶಾಲೆ

ಸರ್ಕಾರಿ ಪ್ರೌಢಶಾಲೆಯು ಕ್ರಿ.ಶ. ೧೯೪೫ರಲ್ಲಿ ಸ್ಥಾಪನೆಯಾಗಿದೆ. ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಅಲ್ಲಿನ ಪ್ರಾಂಶುಪಾಲರನ್ನು ಕೇಳಿದಾಗ ಅವರು ಈ ಹಿಂದೆ ಕಟ್ಟಡಕ್ಕೆ ಬೆಂಕಿ ಬಿದ್ದು ಕಡತಗಳು ಸುಟ್ಟು ಹೋಗಿವೆ ಎಂಬ ಅಭಿಪ್ರಾಯವನ್ನು ನೀಡಿದರು. ಪ್ರಸ್ತುತ ಇದೇ ಶಾಲೆಯಲ್ಲಿ ಸರಕಾರಿ ಪದವಿಪೂರ್ವ ಕಾಲೇಜು ಸಂಯೋಜನೆಗೊಂಡಿರುವುದರಿಂದ ಇಲ್ಲಿ ಪಿ.ಯು.ಸಿ. ತರಗತಿಗಳು ನಡೆಯುತ್ತಿವೆ. ಪಟ್ಟಣದಲ್ಲಿಯೇ ವಿಶಾಲವಾದ ಶಾಲಾ ಮೈದಾನವನ್ನು ಹೊಂದಿರುವ ಶಾಲೆಯಾಗಿದೆ.

ರಾಣಿ ಛತ್ರ

ರಾಣಿ ಛತ್ರವು ಕೂಡ್ಲಿಗಿಯಿಂದ ಹೊಸಪೇಟೆ ಕಡೆಗೆ ಬರುವ ಮಾರ್ಗದ ಎಡಭಾಗದಲ್ಲಿದೆ. ಎರಡು ಅಡಿ ಎತ್ತರದ ತಳಪಾಯದ ಮೇಲೆ ಉತ್ತರ – ದಕ್ಷಿಣಾಭಿಮುಖವಾಗಿ ನಿರ್ಮಿಸಿರುವ ಕಟ್ಟಡವನ್ನು ಕ್ರಿ.ಶ. ೧೯೧೪ರಲ್ಲಿ ಬಳ್ಳಾರಿ ಜಿಲ್ಲಾ ಕಲೆಕ್ಟರ್ ಆಗಿದ್ದ ಎಂ.ಎಫ್.ಸಿ. ಮೆಕಾರ್ಡಿ ಅವರು ಉದ್ಘಾಟಿಸಿದ್ದಾರೆ. ಇದು ಹದಿನೈದು ಕೊಠಡಿಗಳನ್ನೊಳಗೊಂಡ ಬೃಹದಾಕಾರದ ನೆಲಮಾಳಿಗೆಯ ಕಟ್ಟಡವಾಗಿದ್ದು, ಕಟ್ಟಡದ ಒಳಭಾಗದಲ್ಲಿ ಸಾಕಷ್ಟು ಗಾಳಿ, ಬೆಳಕು, ಬರುವ ಹಾಗೆ ಆಯೋಜಿಸಲಾಗಿದೆ. ಕಟ್ಟಡವನ್ನು ಕಲ್ಲು, ಸಿಮೆಂಟ್, ಗಾರೆ, ಕಬ್ಬಿಣ, ಮರದ ತೀರು, ಮಂಗಳೂರು ಹೆಂಚು ಇತ್ಯಾದಿ ಸಲಕರಣೆಗಳನ್ನು ಬಳಸಿ ಕಟ್ಟಲಾಗಿದೆ

ಛತ್ರ ಎಂಬ ಪದದ ಅರ್ಥ ನಿಘಂಟುವಿನಲ್ಲಿ ಊಟ, ವಸತಿಗಳನ್ನು ಒದಗಿಸುವ ಸ್ಥಳ ಎಂದರ್ಥ. ರಾಣಿಯ ಛತ್ರ ಎಂಬುದರ ಬಗ್ಗೆ ಯಾವುದೇ ದಾಖಲೆಯಿಲ್ಲ. ಆದರೆ, ಸ್ಥಳೀಯರಲ್ಲಿ ಇದರ ಬಗ್ಗೆ ಒಮ್ಮತವಿಲ್ಲ. ಬಳ್ಳಾರಿ ಜಿಲ್ಲಾ ಕಲೆಕ್ಟರ್ ಆಗಿದ್ದ ಮೆಕಾರ್ಡಿಯವರು ವಿದೇಶಗಳಿಂದ ಬಂದ ಮಹಿಳೆಯರಿಗೆ ಅಥವಾ ರಾಣಿಯರಿಗೆ ವಿಶ್ರಾಂತಿಗಾಗಿ ಅಥವಾ ತಂಗುವುದಕ್ಕಾಗಿ ಈ ಕಟ್ಟಡವನ್ನು ಕಟ್ಟಿಸಿದ್ದನು ಎಂಬ ಅಭಿಪ್ರಾಯವಿದೆ. ಪ್ರಾಯಶಃ ಕ್ರಿ.ಶ. ೧೮೫೮ರಲ್ಲಿ ಕಂಪನಿಯ ಆಡಳಿತವು ಕೊನೆಗೊಂಡು, ಭಾರತದ ಆಡಳಿತವು ನೇರವಾಗಿ ಬ್ರಿಟೀಷ್ ಆಡಳಿತಕ್ಕೊಳಪಡುತ್ತದೆ. ಕ್ರಿ.ಶ. ೧೮೬೭ರಲ್ಲಿ ರಾಣಿ ವಿಕ್ಟೋರಿಯಾ ಭಾರತದ ಸಾಮ್ರಾಜ್ಞೆಯಾಗಿ ಪಟ್ಟಕ್ಕೇರುತ್ತಾಳೆ. ಇದರ ನೆನಪಿಗಾಗಿ ಭಾರತದಲ್ಲಿ ಛತ್ರಗಳು, ಆಸ್ಪತ್ರೆಗಳು, ಬಂಗಲೆಗಳನ್ನು ನಿರ್ಮಿಸಲಾಯಿತು. ಈ ಹಿನ್ನೆಲೆಯಲ್ಲಿ ಕೂಡ್ಲಿಗಿ ಪಟ್ಟಣದಲ್ಲಿರುವ ರಾಣಿ ಛತ್ರವು ಕೂಡ ಇಂಗ್ಲೆಂಡಿನ ರಾಣಿ ವಿಕ್ಟೋರಿಯಾ ಅಧಿಕಾರ ವಹಿಸಿಕೊಂಡ ನೆನಪಿಗಾಗಿ ನಿರ್ಮಿಸಿರಬಹುದು.

ಬ್ರಿಟಿಷರು ಕೇವಲ ಕಲೆ ಮತ್ತು ವಾಸ್ತುಶಿಲ್ಪಕ್ಕಲ್ಲದೆ, ಧರ್ಮ, ಸಾಹಿತ್ಯ, ಶಿಕ್ಷಣ, ಅಂಚೆ, ಟೆಲಿಗ್ರಾಫ್, ಕೆರೆ–ನೀರಾವರಿ, ಸಾರಿಗೆ ವ್ಯವಸ್ಥೆಗೆ ಹೆಚ್ಚು ಪ್ರೋತ್ಸಾಹ ನೀಡಿ ತಮ್ಮದೇ ಆದ ಸಂಸ್ಕೃತಿಯನ್ನು ಬಿಟ್ಟು ಹೋಗಿದ್ದಾರೆ. ಹಾಗಾಗಿ ಈ ಪ್ರಬಂಧದ ಆಶಯ ಬ್ರಿಟಿಷರ ಸ್ಮಾರಕಗಳ ರಚನಾವಿನ್ಯಾಸ ಹೇಗೆ ಪ್ರಭಾವ ಬೀರಿದೆ ಹಾಗೂ ಅವುಗಳ ಸ್ಥಿತಿಗತಿಯ ಬಗ್ಗೆ ತಿಳಿಯಪಡಿಸುವುದಾಗಿದೆ.

ಅಡಿಟಿಪ್ಪಣಿಗಳು

೧. ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೯, **ಬ್ರಿಟಿಷರ ವಿರುದ್ಧ ಬೇಡನಾಯಕರ ಹೋರಾಟಗಳು,** ಪುಟ ೧೩.

೨. ಡಾ. ಎಂ.ವಿ. ಕೃಷ್ಣರಾವ್ ಮತ್ತು ಕೇಶವಭಟ್ಟ, ೧೯೬೦, **ಕರ್ನಾಟಕದ ಇತಿಹಾಸ ದರ್ಶನ,** ಪುಟ ೧೦೫೪.

೩. G.O.NO.: 1272, **Judicial Dated 16th July 1907,** PWD, TNA, ಪುಟ ೧.

೪. G.O.NO.: 1136 W, **Dated 15-10-1909,** PWD, TNA, ಪುಟ ೨.

೫. ಆರ್.ಸಿ. ಮಜುಂದಾರ್ (ಮೂಲ), ಎ.ವಿ. ನರಸಿಂಹಮೂರ್ತಿ (ಅನು) (ಸಂ.), ೨೦೦೪, **ಬ್ರಿಟಿಷ್ ಪಾರಮ್ಯ ಮತ್ತು ಭಾರತೀಯ ಪುನರುಜ್ಜೀವನ (೧) (ಭಾಗ ಒಂದು),** ಪುಟ ೫೫೯.

೬. **ಸಿದ್ಧರಾಮ ಹಿರೇಮಠ,** ೩೦ನೇ ಮೇ ೨೦೧೩, ಪ್ರಜಾವಾಣಿ ದಿನಪತ್ರಿಕೆಯಲ್ಲಿ, ಪುಟ ೩.

೧೩೮

ಕಲಾದಗಿ ಪರಿಸರದಲ್ಲಿ ವಸಾಹತು ಕಾಲದ ಸ್ಮಾರಕಗಳು

ಲೋಕಣ್ಣ ಭಜಂತ್ರಿ*

ಕಲಾದಗಿಯು ಬಾಗಲಕೋಟೆ ಜಿಲ್ಲೆಯ ಒಂದು ಗ್ರಾಮ. ಹಳೆಯ ಶಿಲಾಯುಗದ ಕಾಲದಿಂದ ಹಿಡಿದು ಆಧುನಿಕ ಯುಗದವರೆಗೆ ಚರಿತ್ರೆಯಲ್ಲಿ ಕಲಾದಗಿ ಹೆಸರನ್ನು ಪಡೆದುಕೊಂಡಿದೆ. ಬಾಗಲಕೋಟೆ ಜಿಲ್ಲೆ ಮೊದಲು ವಿಜಾಪುರ ಜಿಲ್ಲೆಯಲ್ಲಿ ವಿಲೀನಗೊಂಡಿತ್ತು. ಕೇಂದ್ರ ಬಾಗಲಕೋಟೆಯಿಂದ ೨೫ ಕಿ.ಮೀ. ದೂರದಲ್ಲಿರುವ ಕಲಾದಗಿಯು ಬ್ರಿಟಿಷರ ಆಡಳಿತದ ಅವಧಿಯಲ್ಲಿ ವಿಜಾಪುರ ಜಿಲ್ಲೆಗಿಂತ ಮೊದಲೇ 'ಕಲಾದಗಿ ಕಲೆಕ್ಟರೇಟ್' ಕಛೇರಿಯಾಗಿತ್ತು. ಅಷ್ಟೇ ಅಲ್ಲದೇ ಬ್ರಿಟಿಷರು ಸೈನಿಕ ನೆಲೆಯ(ಕಂಟೋನ್ಮೆಂಟ್)ನ್ನು ನಿರ್ಮಿಸಿಕೊಂಡು ಕಲಾದಗಿಯಿಂದ ಆಡಳಿತ ನಡೆಸಿದ್ದಾರೆ.

ಭಾರತದಲ್ಲಿ ಕ್ರಿ.ಶ. ೧೮೦೦ರ ವೇಳೆಗೆ ಬ್ರಿಟಿಷರು ಪ್ರಬಲ ರಾಜಕೀಯ ಶಕ್ತಿಗಳಾಗಿ ರೂಪಿತಗೊಂಡಿದ್ದರು. ಇದರ ತತ್ಪರಿಣಾಮವಾಗಿ ಕ್ರಿ.ಶ. ೧೮೧೭ರ ವೇಳೆಗೆ ಪೇಶ್ವೆಗಳು ಮತ್ತು ಬ್ರಿಟಿಷರ ಸಂಬಂಧ ಹದಗೆಟ್ಟು ಯುದ್ಧ ಅನಿವಾರ್ಯವಾಯಿತು. ಕ್ರಿ.ಶ. ೧೮೧೮ರಲ್ಲಿ ಸರ್ ಥಾಮಸ್ ಮನ್ರೋ ಬೃಹತ್ತಾದ ಬ್ರಿಟಿಷ ಸೈನ್ಯದೊಂದಿಗೆ ಬಾದಾಮಿಗೆ ಮುತ್ತಿಗೆ ಹಾಕಿ, ಬಾದಾಮಿ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ವಶಪಡಿಸಿಕೊಂಡನು. ನಂತರ ಬಾಗಲಕೋಟೆ ಪ್ರದೇಶ, ಹವೇಲಿ, ಕಲಾದಗಿ ಹಾಗೂ ಇತರ ಪ್ರದೇಶಗಳು ಸಂಪೂರ್ಣವಾಗಿ ಕ್ರಿ.ಶ. ೧೮೧೮ ಮೇ ೧೭ರಂದು ಬ್ರಿಟಿಷರ ಕೈವಶವಾದವು. ಕ್ರಿ.ಶ. ೧೮೧೮ರಿಂದ ೧೮೩೬ರವರೆಗೆ ಬಾಗಲಕೋಟೆ, ಬಾದಾಮಿ, ಹುನಗುಂದ ತಾಲೂಕುಗಳು ಧಾರವಾಡ ಕಲೆಕ್ಟರೇಟ್ ಅಧಿಕಾರಿಗಳ ಅಧೀನದಲ್ಲಿದ್ದವು. ಮುಧೋಳ ಘೋರ್ಪಡೆ ಸಂಸ್ಥಾನ, ಜಮಖಂಡಿ ಪಟವರ್ಧನ ಸಂಸ್ಥಾನಗಳು ತಮ್ಮ ರಾಜತ್ವವನ್ನು ಮುಂದುವರಿಸಿದವು.

ದಕ್ಷಿಣ ಭಾಗದ ಬ್ರಿಟಿಷ ಸಾಮ್ರಾಜ್ಯದ ಕಂದಾಯ ಆಯುಕ್ತನಾದ ಡಬ್ಲ್ಯು. ಹಾರ್ಟಿನ್ ಸಲಹೆಯಂತೆ ಆಡಳಿತದ ಅನೂಕೂಲಕ್ಕಾಗಿ ಇಂಡಿ, ಹಿಪ್ಪರಗಿ, ವಿಜಯಪುರ, ಮನಗೂಳಿ, ಮುದ್ದೇಬಿಹಾಳ, ಬಾಗಲಕೋಟೆ, ಬಾದಾಮಿ ಹಾಗೂ ಹುನಗುಂದಗಳನ್ನೊಳಗೊಂಡ 'ಕಲಾದಗಿ ಕಲೆಕ್ಟರೇಟ್' ಕ್ರಿ.ಶ. ೧೮೬೪ ಡಿಸೆಂಬರ್ ೧ರಂದು ರಚನೆ ಮಾಡಲಾಯಿತು. ಬೀಳಗಿ ಉಪ ತಾಲೂಕಾಗಿ ಮುಂದುವರೆದು, ಮುಧೋಳ ಮತ್ತು ಜಮಖಂಡಿ ಪ್ರದೇಶಗಳು ಸಂಸ್ಥಾನಗಳಾಗಿ ಆಡಳಿತ ನಡೆಸಿದವು. ಕಲಾದಗಿಯಲ್ಲಿ ವ್ಯವಸ್ಥಿತವಾಗಿ ಜಿಲ್ಲಾ ಕಛೇರಿ, ಅವಶ್ಯವಿರುವ ಕಟ್ಟಡಗಳನ್ನು ನಿರ್ಮಿಸಲು ನೀಲನಕ್ಷೆ ತಯಾರಿಸಲು ಮುಂಬೈನಿಂದ ವಾಸ್ತುತಜ್ಞನನ್ನು ಕಲಾದಗಿಗೆ ಕರೆಸಲಾಯಿತು. ಕಟ್ಟಡಗಳ ನಿರ್ಮಾಣದ ಬಗ್ಗೆ ವಾಸ್ತುತಜ್ಞನು ವರದಿ ನೀಡಿದ ಬಳಿಕ ಮರಳಿ ಮುಂಬೈಗೆ ಹೋಗುವ ಮುನ್ನ ವಿಜಾಪುರದಲ್ಲಿ, ವಿಶ್ವವಿಖ್ಯಾತ ಗೋಳಗುಮ್ಮಟ, ಆದಿಲ್‌ಶಾಹಿಗಳು ನಿರ್ಮಿಸಿದ ಕಟ್ಟಡಗಳನ್ನು ನೋಡಿ ಆಶ್ಚರ್ಯಚಕಿತನಾಗಿ ಕಲಾದಗಿಗಿಂತ ವಿಜಾಪುರವನ್ನು ಜಿಲ್ಲಾ ಕೇಂದ್ರವನ್ನಾಗಿಸುವ ಅಭಿಪ್ರಾಯವನ್ನು ವ್ಯಕ್ತಪಡಿಸಿದನು. ವಿಜಾಪುರದಲ್ಲಿ ಆದಿಲ್‌ಶಾಹಿ ಆಡಳಿತದಲ್ಲಿ ನಿರ್ಮಾಣಗೊಂಡ ಅನೇಕ ಕಟ್ಟಡಗಳು ಅನಾಥವಾಗಿ ಹಾಳು ಬಿದ್ದಿದ್ದವು. ವಿಜಾಪುರದ ಕಟ್ಟಡಗಳನ್ನು ದುರಸ್ತಿ ಮಾಡಿ ಇಲ್ಲಿ ಜಿಲ್ಲಾ ಕೇಂದ್ರಕ್ಕೆ ಬೇಕಾದಂತಹ ಎಲ್ಲ ಮೂಲ ಸೌಕರ್ಯಗಳು ಇಲ್ಲಿವೆ ಎಂದು ಕ್ರಿ.ಶ. ೧೮೭೬ರಲ್ಲಿ ಕರ್ನಲ್ ಸೆಂಟ್ ಕ್ಲಾರ್ ವಿಲ್ಕಿನ್ಸನು ಆಡಳಿತದ ದೃಷ್ಟಿಯಿಂದ ಕಲಾದಗಿಗಿಂತ ವಿಜಾಪುರವೇ ಜಿಲ್ಲಾ ಕೇಂದ್ರವಾಗಲು ಯೋಗ್ಯವೆಂದು ಸಲಹೆಯನ್ನು ನೀಡಿದನು.

ಕ್ರಿ.ಶ. ೧೮೭೭ರ ಭೀಕರ ಬರಗಾಲದಿಂದ ಕ್ರಿ.ಶ. ೧೮೭೯ರವರೆಗೆ ಬರಪರಿಹಾರ ಕಾರ್ಯ ಮುಂದುವರೆಯಿತು. ತದನಂತರ ಕ್ರಿ.ಶ. ೧೯೭೯ರಿಂದ ೧೮೮೫ರವರೆಗೆ ವಿಜಾಪುರದಲ್ಲಿ ಹಾಳು ಬಿದ್ದ ಕಟ್ಟಡಗಳ ದುರಸ್ತಿ ಕಾರ್ಯ ತ್ವರಿತಗತಿಯಲ್ಲಿ ನಡೆದು ಅಂತಿಮವಾಗಿ ಕಲಾದಗಿ ಜಿಲ್ಲೆಯನ್ನು ವಿಜಾಪುರಕ್ಕೆ ಕ್ರಿ.ಶ. ೧೮೮೫ರಲ್ಲಿ ವರ್ಗಾಯಿಸಲಾಯಿತು. ಕಲಾದಗಿಯು ಸುಮಾರು ೬೭ ವರ್ಷಗಳ ಬ್ರಿಟಿಷರ ಆಡಳಿತ ಅವಧಿಯಲ್ಲಿ ಸುಮಾರು ೨೧ ವರ್ಷಗಳ ಕಾಲ ಬ್ರಿಟಿಷರ ಸೈನಿಕ ನೆಲೆಯಾ(ಕಂಟೋನ್ಮೆಂಟಾ)ಗಿ ಜಿಲ್ಲಾ ಕೇಂದ್ರವಾಗಿ ಅಸ್ತಿತ್ವದಲ್ಲಿ ಇದ್ದಿತ್ತು. ಅಷ್ಟೇ ಅಲ್ಲದೆ ಕ್ರಿ.ಶ. ೧೮೧೮ರ ನಂತರ

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೭೬.

ಬಾಗಲಕೋಟೆಯನ್ನು ಬ್ರಿಟಿಷರು ವಶಪಡಿಸಿಕೊಂಡ ನಂತರ ಕಲಾದಗಿಯತ್ತ ಪಯಣವನ್ನು ಆರಂಭಿಸಿದ್ದರು. ಕಲಾದಗಿಯಲ್ಲಿ ಯೋಗ್ಯವಾದ ವಾಯುಗುಣ, ಜಲಸಂಪತ್ತು, ಸಾರಿಗೆ ಸಂಪರ್ಕ, ಮೂಲ ಸೌಕರ್ಯಗಳು ಬ್ರಿಟಿಷರಿಗೆ ಅನುಕೂಲಕರವಾದ ರಿತಿಯಲ್ಲಿದ್ದಿತು. ಅಷ್ಟೇ ಅಲ್ಲದೇ ಬ್ರಿಟಿಷರು ಹಣ್ಣುಗಳ ಪ್ರಿಯರಾಗಿದ್ದರು. ಕಲಾದಗಿಯ ಸುತ್ತಮುತ್ತಲಿನ ಪರಿಸರದಲ್ಲಿ ಹೇರಳವಾಗಿ ಬಾಳೆಹಣ್ಣು, ಮಾವಿನಹಣ್ಣು, ಪೇರಲ, ಚಿಕ್ಕು, ದಾಳಿಂಬೆ, ಲಿಂಬೆ, ದ್ರಾಕ್ಷಿ, ಸೀತಾಫಲ, ಬಾರಿಹಣ್ಣು, ನೇರಳೆಹಣ್ಣು ಇತ್ಯಾದಿ ಎಲ್ಲ ತರಹದ ಹಣ್ಣುಗಳು ತರಕಾರಿಗಳನ್ನು ಬೆಳೆಯುತ್ತಿದ್ದರು. ಅಷ್ಟೇ ಅಲ್ಲದೆ ಕಲಾದಗಿಯ ಪಕ್ಕದಲ್ಲಿ ಘಟಪ್ರಭಾ ನದಿ ಇದೆ. ಜಲಚರಗಳಾದ ಆಮೆ, ಮೀನು, ಏಡಿಯನ್ನು ಬ್ರಿಟಿಷರು ತಮ್ಮ ಆಹಾರದಲ್ಲಿ ಹೇರಳವಾಗಿ ಉಪಯೋಗಿಸುತ್ತಿದ್ದರು. ಇಂತಹ ಸಮಯದಲ್ಲಿ ಅಂದರೆ ಬ್ರಿಟಿಷರ ಆಡಳಿತದ ಅವಧಿಯಲ್ಲಿ ಹಲವಾರು ರೀತಿಯ ಸಮಾಜಮುಖಿ ಹಾಗೂ ತಮ್ಮ ಸ್ವಾರ್ಥಕ್ಕಾಗಿ ಅನೇಕ ಕಟ್ಟಡಗಳನ್ನು ಇಲ್ಲಿ ನಿರ್ಮಿಸಿದ್ದಾರೆ. ಅವು ಇಂದಿಗೂ ಕಲಾದಗಿಯ ಗ್ರಾಮದಲ್ಲಿವೆ. ಅವುಗಳಲ್ಲಿ ಪ್ರಮುಖವೆಂದರೆ ನಿರೀಕ್ಷಣಾ ಮಂದಿರ (ಬಂಗಲೆ), ಅಂಚೆಕಛೇರಿ, ಧರ್ಮಶಾಲೆ, ಆಸ್ಪತ್ರೆ, ಪೊಲೀಸ್ ವಸತಿಗೃಹಗಳು, ಶಾಲೆ ಕಟ್ಟಡ, ಬ್ರಿಟಿಷ ಸಮಾಧಿ ಸ್ಮಾರಕಗಳು, ಬ್ರಿಟಿಷ್ ಅಧಿಕಾರಿಗಳ ವಸತಿಗಳು, ಸಾರಿಗೆ ಸಂಪರ್ಕದ ಸೇತುವೆ ಇತ್ಯಾದಿ ಬ್ರಿಟಿಷರು ನಿರ್ಮಿಸಿದ ಸ್ಮಾರಕಗಳು ಕಲಾದಗಿ ಪರಿಸರದಲ್ಲಿರುವುದನ್ನು ಗುರುತಿಸಿ ಕ್ಷೇತ್ರಕಾರ್ಯಾಧಾರಿತವಾಗಿ ಮಾಹಿತಿ ಸಂಗ್ರಹಿಸಿ ಇಲ್ಲಿ ವಿಶ್ಲೇಷಿಸಲಾಗಿದೆ.

೧. ಬ್ರಿಟಿಷರ ಸಮಾಧಿ (ಗೋರಿ) ಸ್ಮಾರಕಗಳು

ಬ್ರಿಟಿಷರ ಸಮಾಧಿಗಳು ಕಲಾದಗಿಯ ಗ್ರಾಮದ ಊರ ಹೊರಗೆ ದಕ್ಷಿಣಕ್ಕೆ ಖಾಸಗಿ ಜಮೀನಿನಲ್ಲಿ ನಿರ್ಮಿಸಲಾಗಿದೆ. ಈ ಸಮಾಧಿಗಳ ಸುತ್ತಲೂ ಕಂಪೌಂಡ ಕಟ್ಟಡ ನಿರ್ಮಿಸಿದ್ದರೂ ಸಹ ಮುಳ್ಳು, ಕಂಟಿ, ಪೊದೆಗಳು ಬೆಳೆದುಕೊಂಡು ಬ್ರಿಟಿಷ್ ಸ್ಮಾರಕಗಳು ಅವಸಾನದ ಅಂಚಿನಲ್ಲಿವೆ. ಸುಮಾರು ೬೪ ಬ್ರಿಟಿಷ್ ಸಮಾಧಿ ಸ್ಮಾರಕಗಳು ಇದ್ದು, ಇದರಲ್ಲಿ ಈಗ ಕೆಲವನ್ನು ಮಾತ್ರ ವಿಶ್ಲೇಷಿಸಲಾಗಿದೆ.

ಒಂದು ಬ್ರಿಟಿಷರ ಸಮಾಧಿ ಶಾಸನದ ಪ್ರಕಾರ ಕ್ರಿ.ಶ. ೧೮೨೪ ಸೆಪ್ಟೆಂಬರ್ ೬ರಲ್ಲಿ ಕ್ಯಾಪ್ಟನ್ ಮೆರಡಿತನ ಮಗಳಾದ ಹ್ಯಾರಿಡ್ ಐ. ಜೆನ್ನೆಟ್ ತನ್ನ ೨೧ನೇ ವಯಸ್ಸಿನಲ್ಲಿ ಮರಣ ಹೊಂದಿದ ದಾಖಲೆ ಇದೆ. ಆದರೆ ಇಲ್ಲಿ ಜೇನ್ನೆಟ್ ಸಾವಿಗೆ ಕಾರಣ ಏನು? ಹೇಗೆ? ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಹ್ಯಾರಿಡ್ ಐ ಜೆನ್ನೆಟ್ ಸಮಾಧಿ ಸ್ಮಾರಕವು ತಳವಿನ್ಯಾಸದಲ್ಲಿ ೨.೧೦ ಮೀ. ಅಗಲ, ೧.೬ ಮೀ. ಉದ್ದವಿದೆ. ಈ ತಳಪಾಯದ ಮೇಲೆ ಚೌಕಾಕಾರದ ೧.೪೭ ಮೀ. ಅಗಲ, ೧.೧೭ ಮೀ. ಉದ್ದವಿರುವ ಹಾಗೂ ೧ ಮೀ. ಎತ್ತರದಲ್ಲಿ ಸಮಾಧಿ ನಿರ್ಮಿಸಲಾಗಿದೆ. ಸುಣ್ಣ ಮಿಶ್ರಿತ ಗಚ್ಚು ಇಟ್ಟಿಗೆ ಕಲ್ಲು ಬಳಸಿ ಸಮಾಧಿ ಕಟ್ಟಲಾಗಿದೆ. ಆದರೆ ಸಮಾಧಿಗೆ ಮುಳ್ಳು ಕಂಟಿಗಳು ಆಶ್ರಯ ನೀಡಿರುವುದು ವಿಪರ್ಯಾಸದ ಸಂಗತಿಯಾಗಿದೆ. ಜೆನ್ನೆಟ್‌ಳ ಸಮಾಧಿಯ ಮುಂದೆ ಸಂಖ್ಯೆ ೧೮ ಎಂದು ಬರೆದು ಒಂದು ಗುರುತಿನ ಕಲ್ಲು ನೆಡಲಾಗಿದೆ. ಕಲಾದಗಿ ಸೈನಿಕ ನೆಲೆ ಆಗಿರುವುದರಿಂದ ಇಲ್ಲಿ ಸೈನ್ಯದ ಮುಖ್ಯಸ್ಥ ಕ್ಯಾಪ್ಟನ್ ಇರುತ್ತಿದ್ದ.

ಕ್ರಿ.ಶ. ೧೮೨೧ರ ಬ್ರಿಟಿಷ್ ಸಮಾಧಿ ಶಾಸನದ ಪ್ರಕಾರ ಆನ್ನೆ ಮತ್ತು ಹೆನ್ರಿ ರೈಸ್ ಕಿಂಗ್‌ರ ದಂಪತಿಗಳ ಪೌಲೈನ್ ಎಂಬ ೧೩ ತಿಂಗಳ ಕೂಸು ಮರಣ ಹೊಂದಿದ ಸಂಗತಿ ತಿಳಿಸುತ್ತದೆ. ದಂಪತಿಗಳು ಅದೇಷ್ಟು ನರಕಯಾತನೆ ಅನುಭವಿಸಿದರೋ? ಏನೋ? ತಮ್ಮ ಮಗುವಿನ ನೆನಪಿಗಾಗಿ ಸಮಾಧಿ ಸ್ಮಾರಕವನ್ನು ನಿರ್ಮಿಸಿ ಮಗುವಿನ ಗೋರಿಯ ಮೇಲಿನ ಶಾಸನದಲ್ಲಿ "ಹೋಗು ಎಲ್ಲವನ್ನು ಬಿಟ್ಟು ಹೋಗು ನಮ್ಮನ್ನು ಮರೆಯಬೇಡ. ಬಹುಶಃ ನಾಳೆ ನಾವೆಲ್ಲರೂ ನಿನ್ನವರಾಗಬಹುದು" ಎಂಬ ಚರಮಗೀತೆಯನ್ನು ಹೆನ್ರಿ ರೈಸ್ ಕಿಂಗ್ ಬರೆಸಿದ್ದಾನೆ. ಪೌಲೈನ್ ಸಮಾಧಿಯ ಮುಂದೆ ಸಂಖ್ಯೆ ೨೧ ಬರೆದು ಗುರುತಿನ ಕಲ್ಲು ನೆಡಲಾಗಿದೆ. ಸಮಾಧಿ ೨.೩೦ ಮೀ. ಉದ್ದ ೧.೯ ಮೀ. ಅಗಲದಲ್ಲಿ ೨೫ ಸೆ.ಮೀ. ಎತ್ತರದ ತಳಪಾಯ ಹೊಂದಿದೆ. ತಳಪಾಯದ ಮೇಲೆ ೧ ಮೀ. ಅಗಲ ೧.೪.ಮೀ. ಉದ್ದ ೧ ಮೀ. ಎತ್ತರದಲ್ಲಿ ಸಮಾಧಿ ನಿರ್ಮಿಸಲಾಗಿದೆ. ಮೇಲ್ಭಾಗ ೫ ಇಂಚು ಎತ್ತರ ೩.೧೦ ಅಡಿ ಮತ್ತು ೪.೧೧ ಅಡಿ ಸುತ್ತಳತೆ ಚೌಕಾಕಾರದಲ್ಲಿದೆ. ಇದು ಸಹ ಸೀಮೆಸುಣ್ಣಮರಳು ಮಿಶ್ರಿತ ಗಚ್ಚು ಇಟ್ಟಿಗೆ, ಕಲ್ಲಿನಿಂದ ಕಟ್ಟಲಾಗಿದೆ. ಪೌಲೈನ್ ಸಮಾಧಿ ಬಲಭಾಗದಲ್ಲಿ ತಾಯಿ ಮೆರಿ ಆನ್ನೆ ಸಮಾಧಿ ಸಹ ಇದೆ. ಕ್ರಿ.ಶ. ೧೮೨೨ ಜುಲೈ ೧೧ರ ಸ್ಮಾರಕ ಶಾಸನದಲ್ಲಿ ಲೆಫ್ಟಿನೆಂಟ ಹೆನ್ರಿ ರೈಸ ಕಿಂಗ್‌ನ ಪತ್ನಿ ೨೨ ವರ್ಷದ ಮೇರಿ ಆನ್ನೆ ಕಿಂಗ್ ಸ್ಮರಣಾರ್ಥ ಈ ಶಾಸನ ನಿಲ್ಲಿಸಲಾಗಿದೆ. ಮೇರಿ ತನ್ನ ೧೩ ತಿಂಗಳ ಕೂಸು ಪೌಲೈನ ಸಾವಿನ ದುಃಖ ಮರೆಯದೇ ಅವಳೂ ಕೂಡಾ ಸಾವನ್ನಪ್ಪಿದ್ದ ವಿಷಯವನ್ನು ಈ ಸಮಾಧಿ ಸ್ಮಾರಕ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಮೆರಿ ಆನ್ನೆ ಸಮಾಧಿ ಮುಂದೆ ಸಂಖ್ಯೆ ೨೨ ಬರೆದು ಗುರುತಿನ ಕಲ್ಲು ನೆಡಲಾಗಿದೆ. ಆನ್ನೆ ಸಮಾಧಿ ತಳಪಾಯದ

ಮೊದಲನೆ ಮೆಟ್ಟಿಲು ಎತ್ತರ ೧೬ ಸೆಂ.ಮೀ. ೨.೭೫ ಮೀ ಉದ್ದ ೨.೭೫ ಅಗಲವಿದೆ. ಎರಡನೇ ಮೆಟ್ಟಿಲು ಎತ್ತರ ೨೪ ಸೆಂ.ಮೀ. ೨.೨೦ ಮೀ ಉದ್ದ ೨.೨೦ ಮೀ ಅಗಲವಿದೆ. ಮೂರನೇ ಮೆಟ್ಟಿಲು ಎತ್ತರ ೨೨ ಸೆಂ.ಮೀ. ೧.೭೦ ಮೀ. ಉದ್ದ ೧.೭೦ ಮೀ. ಅಗಲವಿದೆ. ಈ ತಳಪಾಯದ ಮೇಲೆ ೧.೨೦ ಮೀ. ಅಗಲ ೧.೨೦ ಮೀ ಉದ್ದ, ೨.೩೦ ಎತ್ತರದಲ್ಲಿ ಸಮಾಧಿಯನ್ನು ನಿರ್ಮಿಸಲಾಗಿದೆ. ಮೇಲ್ಭಾಗದಲ್ಲಿ ೫ ಹಂತದ ಮೆಟ್ಟಿಲು ಏರಿಕೆ ಕ್ರಮದಲ್ಲಿ ಅಳತೆಯನ್ನು ಕಡಿಮೆಗೊಳಿಸುತ್ತಾ ಹೋಗಿ ಕಟ್ಟಿಸಲಾಗಿದೆ. ಈ ಸಮಾಧಿಯ ಮೇಲ್ಭಾಗ ದೇವಸ್ಥಾನದ ಗೋಪುರದ ರೀತಿಯಲ್ಲಿ ಮೇಲ್ಭಾಗದಿಂದ ಹಿಡಿದು ಕಳಸದವರೆಗಿನ ಹಂತದ ರೀತಿಯಲ್ಲಿ ಕಟ್ಟಲಾಗಿದೆ. ಈ ಎರಡು ಸಮಾಧಿ ಸುತ್ತಲೂ ಕಂಪೌಂಡ್ ಇದ್ದು, ಈ ಕಾಂಪೌಂಡ್ ೬.೯೦ ಮೀ. ಅಗಲ ೪.೩೦ ಮೀ.ಉದ್ದ ೭೦ ಸೆಂ.ಮೀ. ಎತ್ತರದಲ್ಲಿ ನಿರ್ಮಿಸಿದ್ದಾರೆ. ತಾಯಿ ಮತ್ತು ಮಗಳ ಸಮಾಧಿಗಳ ರಕ್ಷಣೆಗೆ ಈ ಕಂಪೌಂಡ್ ಕಟ್ಟಿದ್ದಾರೆ.

ಇಬ್ಬರು ತರುಣ ಸೈನಿಕರು ಈಜಲು ಹೋಗಿ ಘಟಪ್ರಭಾ ನದಿಗೆ ಬಲಿಯಾದ ಸಂಗತಿ ಮತ್ತೊಂದು ಸಮಾಧಿ ಸ್ಮಾರಕದ ಶಾಸನದಲ್ಲಿ ಮಾಹಿತಿ ಲಭ್ಯವಿದೆ. ಇವರ ನೆನಪಿಗಾಗಿ ಕ್ಯಾಪ್ಟನನು ಸಮಾಧಿ ನಿರ್ಮಿಸಿ ಅವರಿಗೆ ಗೌರವ ಸಲ್ಲಿಸುವುದು ಬ್ರಿಟಿಷರ ಒಂದು ಪದ್ಧತಿಯಾಗಿದೆ.

ಆಂಗ್ಲರ ಮುದ್ದು ನಾಯಿಯ ಸಮಾಧಿ ಸ್ಮಾರಕ ಸಹ ಇಲ್ಲಿದ್ದಿತ್ತು ಎಂಬುದು ಸ್ಥಳೀಯರ ಅಭಿಪ್ರಾಯ. ಇಲ್ಲಿ ಬ್ರಿಟಿಷರು ಪ್ರಾಣಿ ಪ್ರೇಮಿಗಳಾಗಿದ್ದರು ಎಂಬ ಅಂಶ ಎದ್ದು ಕಾಣುತ್ತದೆ. ನಾಯಿ ನಿಯತ್ತಿನ ಪ್ರಾಣಿ, ಸ್ವಾಮಿ ನಿಷ್ಠೆಗೆ ಹೆಸರಾದಂತಹ ಪ್ರಾಣಿ ಇದರ ಅಪಾರವಾದ ಪ್ರಾಮಾಣಿಕ ಸೇವೆ ಬ್ರಿಟಿಷರಿಗೆ ಎಷ್ಟರ ಮಟ್ಟಿಗೆ ಸಲ್ಲಿರುತ್ತದೆ ಎಂಬ ಅಂಶ ತಿಳಿಯುತ್ತದೆ. ಒಂದು ನಾಯಿ ಕೂಡಾ ಬ್ರಿಟಿಷರಿಗೆ ಹುತಾತ್ಮ ಯೋಧನಂತೆ ಕಂಡಿರಬೇಕು ಎಂಬ ಸತ್ಯ ಈ ನಾಯಿಯ ಸ್ಮಾರಕದಿಂದ ಅರ್ಥವಾಗುತ್ತದೆ. ಅವಸಾನದಂಚಿನಲ್ಲಿರುವ ಫಿರಂಗಿಯರ ಗೋರಿಗಳ ಸಮೂಹದಲ್ಲಿ ನಾಯಿಯ ಗೋರಿಯನ್ನು ಗುರುತಿಸಿ ಪತ್ತೆ ಹಚ್ಚುವುದು ತುಂಬಾ ಕಷ್ಟಕರ ಸಂಗತಿಯಾಗಿದೆ. ಗೋರಿಯೊಳಗೆ 'ನಿಧಿ' ಇದೆ ಎಂಬ ಮೂಢನಂಬಿಕೆಯಿಂದ ಬಹುತೇಕ ಗೋರಿಗಳ ಮೇಲಿರುವ ಶಾಸನ (ಮಾಹಿತಿ ಫಲಕ)ವನ್ನು ಕೆತ್ತೆಸೆದು ಹಾಳುಮಾಡಿದ್ದರಿಂದ ಗೋರಿಗಳಿಗೆ ಧಕ್ಕೆಯಾಗಿದೆ. ಕ್ರಿ.ಶ. ೧೮೫೧ ಆಗಸ್ಟ ೧೮ರ ಸ್ಮಾರಕದಲ್ಲಿ ಅಲೆಮಾಮ್ ಲೆಫ್ಟಿನೆಂಟ್ ಚ ಕೆನಸಿಂಗಟನ್ ೩೧ ವರ್ಷ ಮತ್ತು ಲೆಫ್ಟಿನೆಂಟ ತಿ ಆಲೇಕ್ಸ್ ಸ್ಟೆನುಸ್ ೩೦ ವರ್ಷದ, ಸೈನಿಕರು ಮರಣ ಹೊಂದಿರುವಂತಹ ವಿವರಣೆ ಲಭ್ಯವಿದೆ.

ಕಲಾದಗಿಯ ಬ್ರಿಟಿಷ ಸಮಾಜ ಸ್ಮಾರಕಗಳನ್ನು ಗಮನಿಸಿದಾಗ, ಹಲವಾರು ಕುತೂಹಲಕಾರಿ ವಿಷಯಗಳು ದೊರೆಯುತ್ತವೆ. ಭಾರತೀಯರನ್ನು ಬಲುದರ್ಪದಿಂದ ಆಳಿದ ಆಂಗ್ಲರು ಕೂಡಾ ಸಾವು ಬಂದಾಗ ಕೇವಲ ಮನುಷ್ಯರೇ ಎಂಬುದನ್ನು ಸೂಚಿಸುತ್ತದೆ. ಸಾವಿನ ಸಮಾಜವಾದಕ್ಕೆ ಮಗು, ತರುಣ, ಯುವತಿ, ಸೈನಿಕ, ವೃದ್ಧ, ಚಕ್ರವರ್ತಿ, ನಾಯಿ ಮರಿ ಎಂಬ ವ್ಯತ್ಯಾಸವಿಲ್ಲ. ಬ್ರಿಟಿಷರು ಯುದ್ಧ ಸಂಸ್ಕೃತಿಯಲ್ಲಿ, ರಣರಂಗದಲ್ಲಿ ಸತ್ತವರಿಗೆ ಅಪೂರ್ವ ಗೌರವ ಸಲ್ಲಿಸುವ ಪದ್ಧತಿಯಿದೆ. ಮುಖ್ಯವಾಗಿ ಸೈನಿಕರ ಶೌರ್ಯದ ಗುಣಗಾನ ಮಾಡುವ ಸ್ಮಾರಕಗಳನ್ನು ನಿಲ್ಲಿಸುವರು. ಕಲಾದಗಿ ಸ್ಮಾರಕಗಳು ಅನಾಥವಾಗಿ ಬೀಳಲು ಕಾರಣಗಳು ಹಲವು. ನಮ್ಮ ದೇಶ ಆಳಿದ ಕೆಂಪು ಮುಖದವರ ಸ್ಮಾರಕ ನಾವೇಕೆ ರಕ್ಷಿಸಬೇಕು? ಬ್ರಿಟಿಷರೇನು ನಮ್ಮ ಹಿರಿಯರೇ? ಎಂಬ ದ್ವೇಷದಿಂದ ಕೆಲವು ಕಿಡಿಗೇಡಿಗಳು ಕೆಲವೊಂದು ಸ್ಮಾರಕಗಳನ್ನು ಭಗ್ನಗೊಳಿಸಿ ಶಾಸನಗಳನ್ನು ತ್ರುಟಿತಗೊಳಿಸಿದ್ದಾರೆ.

೨. ನ್ಯಾಯಾಲಯ

ಬ್ರಿಟಿಷರ ವಿರುದ್ಧ ಸ್ಥಳೀಯರು ದಂಗೆಗಳನ್ನು ಆರಂಭಿಸಿದಾಗ ದಂಗೆಕೋರರನ್ನು ಬಂಧಿಸಿ ವಿಚಾರಣೆಗೊಳಪಡಿಸಲು ಕ್ರಿ.ಶ. ೧೮೬೦ರಲ್ಲಿ ಕಲಾದಗಿಯಲ್ಲಿ ಬ್ರಿಟಿಷರು ನ್ಯಾಯಾಲಯವನ್ನು ಸ್ಥಾಪಿಸಿದರು. ನ್ಯಾಯಾಲಯದಲ್ಲಿ ಆರೋಪಿಗಳನ್ನು ವಿಚಾರಣೆಗೊಳಪಡಿಸಿ ಅಪರಾಧಿಗಳನ್ನು ಬಾಗಲಕೋಟೆಯ ಸೆರೆಮನೆ(ಜೈಲಿ)ಗೆ ಕಳುಹಿಸಲಾಗುತ್ತಿತ್ತು. ಕ್ರಿ.ಶ. ೧೮೫೭ರ ಹಲಗಲಿ ಬಂಡಾಯವನ್ನು ಬ್ರಿಟಿಷರು ಹತ್ತಿಕ್ಕಿದ ನಂತರ ಸ್ಥಳೀಯರಲ್ಲಿ ಭಯ ಹುಟ್ಟಿಸುವ ಸಲುವಾಗಿ ಕಲಾದಗಿಯಲ್ಲಿ ನ್ಯಾಯಾಲಯವನ್ನು ಆರಂಭಿಸಿದರು. ಬ್ರಿಟಿಷರ ಕಾಲದ ನ್ಯಾಯಾಲಯದ ಕಟ್ಟಡ ಇಂದು ಸರಕಾರಿ ಕನ್ನಡ ಗಂಡು ಮಕ್ಕಳ ಮಾದರಿ ಪ್ರಾಥಮಿಕ ಶಾಲೆಯಾಗಿ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ಅಕ್ಷರಜ್ಞಾನ ಬಿತ್ತರಿಸುವ ಆಶ್ರಯ ತಾಣವಾಗಿ ಈ ಸ್ಮಾರಕ ಕಾರ್ಯನಿರ್ವಹಿಸುತ್ತಿದೆ. ಇಡಿಯಾದ ಕಟ್ಟಡ ಜೀರ್ಣೋದ್ಧಾರಗೊಂಡು ಮೂಲ ಕಟ್ಟಡದ ಸ್ವರೂಪದಲ್ಲಿ ಬದಲಾವಣೆಯಾಗಿದೆ. ಬೆಳಗಾವಿಯಿಂದ ನ್ಯಾಯಾಧೀಶರು ಕಲಾದಗಿಗೆ ಬಂದು ನ್ಯಾಯಾಲಯದಲ್ಲಿ ತೀರ್ಪು ಕೊಡುತ್ತಿದ್ದರು.



ಅಂಚೆ ಕಛೇರಿ



ಸರಕಾರಿ ಕನ್ನಡ ಗಂಡು ಮಕ್ಕಳ ಮಾದರಿ ಪ್ರಾಥಮಿಕ ಶಾಲೆ



ಬ್ರಿಟಿಷ ಸಮಾಧಿ (ಗೋರಿ) ಸ್ಮಾರಕ ಶಾಸನ



ಬ್ರಿಟಿಷರ ಸಮಾಧಿ (ಗೋರಿ) ಸ್ಮಾರಕಗಳು

೩. ಬಂಗಲೆ (ನಿರೀಕ್ಷಣಾ ಮಂದಿರ)

ಕಲಾದಗಿಯಲ್ಲಿ ಬ್ರಿಟಿಷರು ನಿರ್ಮಿಸಿದ ಬಂಗಲೆ ಬಾಗಲಕೋಟೆ–ಬೆಳಗಾವಿ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿದ್ದು, ಇಂದಿಗೂ ಸಹ ಸುವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿದೆ. ಸೀಮೆಸುಣ್ಣ, ಕಲ್ಲು, ಗಾರೆಗಚ್ಚು, ಸ್ಥಳೀಯವಾಗಿ ದೊರೆಯುವ ಇಟ್ಟಿಗೆ, ಸಾಗವಾಣಿ ಮತ್ತು ಕರಿಮತ್ತಿ ಕಟ್ಟಿಗೆ ಉಪಯೋಗಿಸಿ ಈ ಬಂಗಲೆಯನ್ನು ನಿರ್ಮಿಸಲಾಗಿದೆ. ಬಂಗಲೆ ಮೇಲ್ಛಾವಣಿಗೆ ಮಂಗಳೂರು ಹೆಂಚು ಹಾಕಲಾಗಿದ್ದು, ವ್ಯವಸ್ಥಿತ ಕಾಂಪೌಂಡ್ ಹೊಂದಿ ಸುತ್ತಲೂ ಗಿಡಮರಗಳಿಂದ ಬಂಗಲೆ ಆವೃತವಾಗಿದೆ. ಬೇಸಿಗೆಯ ಸಮಯದಲ್ಲಿ ತಂಪಾಗಿದ್ದು, ಮಳೆಗಾಲದಲ್ಲಿ ನೀರು ಸರಾಗವಾಗಿ ಹರಿದು ಹೋಗುವ ವ್ಯವಸ್ಥಿತ ರೀತಿಯಲ್ಲಿ ತಾಂತ್ರಿಕತೆಯಿಂದ ಬಂಗಲೆ ನಿರ್ಮಾಣಗೊಂಡಿದೆ. ಕಲಾದಗಿ ಬ್ರಿಟಿಷರ ಆಡಳಿತದ ಅವಧಿಯಲ್ಲಿ ಜಿಲ್ಲಾ ಕೇಂದ್ರವಾಗಿದ್ದುದರಿಂದ ಬ್ರಿಟಿಷ ಅಧಿಕಾರಿಗಳ ವಸತಿಗಾಗಿ ಈ ಬಂಗಲೆ ಕಟ್ಟಲು ಮೂಲ ಉದ್ದೇಶವಾಗಿದೆ. ಬಂಗಲೆ ಒಳಗಡೆ, ವಿಶ್ರಾಂತಿ ಕೊಠಡಿ, ಊಟದ ಕೋಣೆ, ಸಭಾಂಗಣ, ಶೌಚಾಲಯ ಸ್ನಾನಗೃಹ ಮತ್ತು ಅಡುಗೆ ಕೋಣೆ ಎಲ್ಲವೂ ಜೀರ್ಣೋದ್ಧಾರಗೊಂಡು ಇಂದು ಆಧುನಿಕ ಸ್ಪರ್ಶದಿಂದ ಕಂಗೊಳಿಸುತ್ತಿವೆ.

೪. ಅಂಚೆ ಕಛೇರಿ

ಬ್ರಿಟಿಷ್ ಕಂಪನಿ ಸರಕಾರದ ಆಡಳಿತದ ಅವಧಿಯಲ್ಲಿ ಜಿಲ್ಲಾ ಕೇಂದ್ರವಾಗಿರುವ ಕಲಾದಗಿಯಲ್ಲಿ ಅಂಚೆ ಕಛೇರಿ ಅತ್ಯಂತ ಅವಶ್ಯಕವಾಗಿ ಬೇಕಾಗಿದ್ದಿತು. ಇದನ್ನು ಗಮನಿಸಿದ ಸರ್ ಥಾಮಸ್ ಮನ್ರೋ ಕಲಾದಗಿಯಲ್ಲಿ ಅಂಚೆ ಕಛೇರಿಯನ್ನು ಆರಂಭಿಸಿದನು. ಅಂಚೆ ಕಛೇರಿಯು ನ್ಯಾಯಾಲಯದ ಕಟ್ಟಡ, ಸರಕಾರಿ ಆಸ್ಪತ್ರೆ ಕಂಪೌಂಡ್‌ಗೆ ಹೊಂದಿಕೊಂಡಿದ್ದು, ನಾಡ

ಕಛೇರಿ ಎದುರಿಗೆ ಅಂಚೆ ಕಛೇರಿ ಸುಂದರವಾಗಿ ಕಂಗೊಳಿಸುತ್ತಿದೆ. ಮಳೆಯಿಂದ ಹಾನಿಗೊಳಗಾದ ಅಂಚೆ ಕಛೇರಿ ಕಟ್ಟಡವನ್ನು ದುರಸ್ತಿ ಮಾಡಲಾಗಿದೆ.

ಬ್ರಿಟಿಷ ಸಮಾಧಿಗಳು ಕಲಾದಗಿಯಲ್ಲಿ ಕ್ರಿ.ಶ. ೧೮೨೧ ರಿಂದ ಕ್ರಿ.ಶ. ೧೮೭೪ರ ವರೆಗೆ ನಿರ್ಮಾಣವಾಗಿದ್ದರ ಬಗ್ಗೆ ಸಮಾಧಿಗಳ ಮೇಲೆ ಬರೆಯಲ್ಪಟ್ಟ ಬರಹಗಳಿಂದ ತಿಳಿದುಬರುತ್ತದೆ. ಇಲ್ಲಿ ಸತ್ತು ಸಮಾಧಿಯಾಗಿರುವರು ಯಾರು ಯುದ್ಧದಲ್ಲಿ ಭಾಗವಹಿಸಿ ಹೋರಾಡಿ ಸತ್ತಂತೆ ತೋರುವುದಿಲ್ಲ. ರೋಗರುಜಿನಗಳಾದ ಕಾಲರಾ, ಮಲೇರಿಯಾ ಭೀಕರ ಕ್ಷಾಮ ಮತ್ತು ನೀರಿನಲ್ಲಿ ಮುಳುಗಿ ಮರಣ ಹೊಂದಿದ್ದು ಸಮಾಧಿ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಕಲಾದಗಿಯು ಬ್ರಿಟಿಷರ ಒಂದು ಸೈನಿಕ ನೆಲೆಯಾ(ಕಂಟೋನ್ಮೆಂಟಾ)ಗಲು ಹಲವು ಕಾರಣಗಳಿವೆ. ಬ್ರಿಟಿಷರಿಗೆ ಕಲಾದಗಿಯು ಎಲ್ಲಾ ವಿಧದಲ್ಲೂ ಯೋಗ್ಯವಾದ ವಾತಾವರಣವಿದ್ದುದರಿಂದಲೇ ಇಲ್ಲಿ ನೆಲೆ ನಿಲ್ಲಲು ಕಾರಣವಾಗಿದೆ. ಕಲಾದಗಿ ಪರಿಸರದಲ್ಲಿ ಬ್ರಿಟಿಷರು ನಿರ್ಮಿಸಿದ ಸ್ಮಾರಕಗಳಾದ ಆಸ್ಪತ್ರೆ, ಧರ್ಮಶಾಲೆ, ವಸತಿಗೃಹಗಳು, ಶಾಲೆ ಕಟ್ಟಡ, ಸಾರಿಗೆ ಸಂಪರ್ಕ, ಸೇತುವೆಗಳು, ನಾಡ ಕಾರ್ಯಾಲಯ ಎಲ್ಲವೂ ಚರಿತ್ರೆಯ ಪುಟದಲ್ಲಿ ದಾಖಲಾಗಿವೆ.

[ಈ ಲೇಖನ ಸಿದ್ಧಪಡಿಸಲು ಸಹಾಯ, ಸಹಕಾರ ನೀಡಿ ಮಾರ್ಗದರ್ಶನ ಮಾಡಿದ ಡಾ. ವಾಸುದೇವ ಬಡಿಗೇರ ಪ್ರಾಧ್ಯಾಪಕರು, ಕ.ವಿ.ವಿ. ಹಂಪಿ, ಡಾ. ರಮೇಶ ನಾಯಕ, ಸಹ ಪ್ರಾಧ್ಯಾಪಕರು, ಕ.ವಿ.ವಿ. ಹಂಪಿ, ಸ್ಥಳೀಯರಾದ ಶ್ರೀ ದ.ರಾ. ಪುರೋಹಿತ, ಶ್ರೀ ಸುಭಾಸ ಭಜಂತ್ರಿ, ಶ್ರೀ ರಮೇಶ ಭಜಂತ್ರಿ, ಸಹೋದರರಾದ ವಿಠ್ಠಲ, ಕೃಷ್ಣ, ದುರಗಣ್ಣ ಇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.]

ಗ್ರಂಥಋಣ

೧. ಮಹಾದೇವ ಬಣಕಾರ, ೧೯೮೬, **ಆಂಗ್ಲರ ಆಡಳಿತದಲ್ಲಿ ಕನ್ನಡ,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ೧೯೯೯, **ಬಿಜಾಪುರ ಜಿಲ್ಲೆ (ಬಾಗಲಕೋಟೆ ಜಿಲ್ಲೆಯೂ ಸೇರಿದಂತೆ),** ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೩. ವೆಂಕಟರಂಗೋ ಕಟ್ಟಿ (ಸಂ), ೧೮೯೩, **ಬಾಂಬೆ ಕರ್ನಾಟಕ ಗ್ಯಾಸೆಟಿಯರ್,** ಮುಂಬೈ.

೪. ದೇವರಕೊಂಡಾ ರೆಡ್ಡಿ (ಸಂ.), ೨೦೦೯, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೯, ಬಾಗಲಕೋಟೆ ಜಿಲ್ಲೆ,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೫. ವಿಜಯಕುಮಾರ ಕಟಗಿಹಳ್ಳಿಮಠ (ಸಂ), ೨೦೧೪, **ಬಾಗಲಕೋಟೆ ಜಿಲ್ಲಾ ಸಂಸ್ಕೃತಿ** ಬಾಗಲಕೋಟ ಜಿಲ್ಲಾ ೪ನೇ ಕನ್ನಡ ಸಾಹಿತ್ಯ ಸಮ್ಮೇಳನ, ಸ್ವಾಗತ ಸಮಿತಿ, ಮುಧೋಳ.

೬ ಗೋಪಾಲ್ ಆರ್. (ಸಂ)., ೨೦೧೧, **ಬಾಗಲಕೋಟೆ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೭. ರಹಮತ್ ತರೀಕೆರೆ, ೨೦೧೫, **ನಡೆದಷ್ಟೂ ನಾಡು,** ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೩೬

ಹಾಲಸಾಗರ ಗ್ರಾಮದ ಪ್ರಾಚ್ಯಾವಶೇಷಗಳು

ತಿಪ್ಪೇಶ ಹಚ್.ಎಂ.*

ಹಾಲಸಾಗರ ಗ್ರಾಮವು ಕೂಡ್ಲಿಗಿ ತಾಲೂಕು ಕೇಂದ್ರದಿಂದ ಪೂರ್ವದಿಕ್ಕಿಗೆ ೩೫ ಕೀ.ಮೀ ದೂರದಲ್ಲಿದೆ. ಜಿಲ್ಲಾ ಕೇಂದ್ರದಿಂದ ದಕ್ಷಿಣಕ್ಕೆ ೪೫ ಕೀ. ಮೀ ದೂರದಲ್ಲಿರುವ ಇದು ಪ್ರಾಗಿತಿಹಾಸ ಕಾಲದಿಂದಲೂ ಜನವಸತಿಯ ಸ್ಥಳವಾಗಿದೆ. ಅಪ್ಪೇನಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿರುವ ಈ ಗ್ರಾಮ ಪರಿಸರವೂ ಭೌಗೋಳಿಕವಾಗಿ ಸಮೃದ್ಧವಾದುದು. ಈ ಪ್ರದೇಶದಲ್ಲಿ ದೊಡ್ಡ ದೊಡ್ಡ ಬಂಡೆಗಳನ್ನು ಹೊತ್ತ ನಿಸರ್ಗ ನಿರ್ಮಿತ ಬೆಟ್ಟಗಳು, ಗುಹೆಗಳು ಮಳೆಗಾಲದಲ್ಲಿ ತುಂಬಿ ಹರಿಯುವ ಹಳ್ಳ, ಕೆರೆ, ತೊರೆಗಳು, ಫಲವತ್ತಾದ ಭೂಭಾಗವು ಇಲ್ಲಿನ ಪರಿಸರವನ್ನು ಸಮೃದ್ಧಗೊಳಿಸಿವೆ. ನಾನು ಕ್ಷೇತ್ರ ಕಾರ್ಯ ಕೈಗೊಂಡಾಗ ಪ್ರಾಚೀನ ಕೆರೆಯ ಹಿಂಬದಿಯಲ್ಲಿ ಸ್ಥಳೀಯವಾಗಿ 'ಬಸವಣ್ಣನ ಕಟ್ಟೆ' ಎಂದು ಕರೆಯುವ ಸಣ್ಣಕಟ್ಟೆಯ ಮೇಲೆ ಶಿವಲಿಂಗ, ಮೂರು ನಂದಿಶಿಲ್ಪಗಳ ಜೊತೆಗೆ ನವಶಿಲಾಯುಗಕ್ಕೆ ಸೇರಿದ ಮೂರು ಶಿಲಾಯುಧಗಳನ್ನಿಟ್ಟು ಪೂಜಿಸಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಈ ಹಿಂದಿನ ಅಧ್ಯಯನಗಳಲ್ಲಿ ಹಾಲಸಾಗರವನ್ನು 'ಬೃಹತ್ ಶಿಲಾಯುಗದ ನೆಲೆ'[೧] ಎಂದು ಗುರುತಿಸಲಾಗಿತ್ತು. ಪ್ರಸ್ತುತ ಪ್ರಬಂಧದಲ್ಲಿ ಬೃಹತ್ ಶಿಲಾಯುಗಕ್ಕೂ ಪೂರ್ವದಲ್ಲಿ ನವಶಿಲಾಯುಗದ ಮಾನವ ಬಳಸಿ ಬಿಟ್ಟಿರುವ ಅವಶೇಷಗಳು ದೊರಕಿರುವುದರಿಂದ ಈ ಪ್ರದೇಶದಲ್ಲಿ ನವಶಿಲಾಯುಗ ಕಾಲದಿಂದಲೂ ಜನ ವಸತಿ ಇತ್ತೆಂಬುವುದನ್ನು ವಿವರಿಸುವ ಉದ್ದೇಶವನ್ನು ಒಳಗೊಂಡಿದೆ.

ಪ್ರಾಗೈತಿಹಾಸಿಕ ಅವಶೇಷಗಳು: ಶಿಲಾಯುಗದಿಂದಲೂ ಈ ಭಾಗದಲ್ಲಿ ಜನವಸತಿ ಇದ್ದ ಬಗ್ಗೆ ನಮಗೆ ಹಲವು ಉಲ್ಲೇಖಗಳು ದೊರೆತಿವೆ. ಅವುಗಳಲ್ಲಿ ಗುಡೇಕೋಟೆ, ಅಪ್ಪಯ್ಯನ ಹಳ್ಳಿ, ಸಿಡೇಗಲ್ಲು, ಜುಮ್ಮೋಬನಹಳ್ಳಿ, ರಾಮದುರ್ಗ, ಜರಿಮಲೆ, ನರಸಿಂಹನಗಿರಿ, ಹುಲಿಕುಂಟೆ, ಕುಮತಿ ಮೊದಲಾದ ಪ್ರದೇಶಗಳಲ್ಲಿ ದೊರೆತಿರುವುದನ್ನು ನಾವು ಸ್ಮರಿಸಬಹುದು. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ದೊರೆತಿರುವ ಅವಶೇಷಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ನವಶಿಲಾಯುಗದ ಅವಶೇಷಗಳು

ಹಾಲಸಾಗರ ಗ್ರಾಮದ ಪೂರ್ವದಿಕ್ಕಿನಲ್ಲಿರುವ ಪ್ರಾಚೀನ ಕೆರೆಯ ಹಿಂಬದಿಯಲ್ಲಿ ಸ್ಥಳೀಯವಾಗಿ 'ಬಸವಣ್ಣನ ಕಟ್ಟೆ' ಎಂದು ಕರೆಯುವ ಸಣ್ಣಕಟ್ಟೆಯ ಮೇಲೆ ಬಲಭಾಗದಲ್ಲಿರಿಸಿ ಪೂಜಿಸಲಾಗಿದ್ದ, ಮೂರು ಕೈಗೊಡಲಿಗಳು ಕಂಡು ಬಂದಿದ್ದು ಅವುಗಳು ಅಧ್ಯಯನ ದೃಷ್ಟಿಯಿಂದ ಪ್ರಮುಖವಾಗಿವೆ. ಮೊದಲನೆಯ ಕೈಗೊಡಲಿಯ(ಶಿಲಾಯುಧ) ಅಳತೆಯು ಈ ರೀತಿ ಇದೆ. ಉದ್ದ ೧೮ ಸೆಂ.ಮೀ., ಅಗಲ ೯ ಸೆಂ.ಮೀ. ಇದೆ. ಹಾಗೂ ಬಾಯಿಯ(ಅಂಚಿನ) ಭಾಗವು ೮ ಸೆಂ.ಮೀ. ಇದೆ. ಹಿಡಿಕೆಯ ಭಾಗವು ತ್ರುಟಿತಗೊಂಡಿದೆ. ಸುತ್ತಲೂ ಚಕ್ಕೆಗಳನ್ನು ಎಬ್ಬಿಸಲಾಗಿದ್ದು, ಹೆಚ್ಚಿನ ಮಟ್ಟದಲ್ಲಿ ಉಜ್ಜಿ ನುಣುಪುಗೊಳಿಸಿರುವುದಿಲ್ಲ ಆದರೆ ಅಂಚಿನ ಭಾಗವನ್ನು ಮಾತ್ರ ಉಜ್ಜಿರುವುದು ಕಂಡುಬರುತ್ತದೆ. ಇದನ್ನು ನವಶಿಲಾಯುಗ ಕಾಲದ ಮಾನವ ಆಯುಧವನ್ನು ತಯಾರಿಸಿಕೊಳ್ಳುವಾಗ ಒರಟಾದ ಶಿಲೆಯನ್ನು ನಿರ್ದಿಷ್ಟ ಆಕಾರಕ್ಕೆ ತಂದು ಅದನ್ನು ಉಜ್ಜಿ ನಯಗೊಳಿಸುವ ಪ್ರಯತ್ನ ಮಾಡಿದ್ದಾನೆ. ಮತ್ತೊಂದು ಕೈಗೊಡಲಿಯನ್ನು ಸಹ ಡೈಕ್ ಶಿಲೆಯನ್ನು ಬಳಸಿ ತಯಾರಿಸಲಾಗಿದೆ. ಇದರ ಉದ್ದ ೧೯ ಸೆಂ.ಮೀ. ಇದ್ದು, ೬ ಸೆಂ.ಮೀ. ಅಗಲವಿದೆ. ಬಾಯಿ ಅಂಚಿನ ಭಾಗವು ೯ ಸೆಂ.ಮೀ. ಇದ್ದು, ಮೊದಲನೆಯದಕ್ಕಿಂತ ಉತ್ತಮವಾಗಿದೆ. ಇದರ ಸುತ್ತಲೂ ಚಕ್ಕೆಗಳನ್ನು ಎಬ್ಬಿಸಿ, ಉಜ್ಜಿ ನಯಗೊಳಿಸಿರುವುದು ಕಂಡುಬರುತ್ತದೆ. ಇದನ್ನು ಆ ಕಾಲದ ಮನುಷ್ಯ ತನ್ನ ದಿನನಿತ್ಯದ ಕೆಲಸಗಳಿಗೆ ಬಳಸಿಕೊಂಡಿರುವ ಸಾಧ್ಯತೆ ಇದೆ. ಹಾಗೂ ಇದರ ಪಕ್ಕದಲ್ಲಿರುವ ಮತ್ತೊಂದು ಕೈಗೊಡಲಿಯನ್ನು ಸಹ ಡೈಕ್ ಶಿಲೆಯಿಂದ ತಯಾರಿಸಲಾಗಿದ್ದು, ಸಂಪೂರ್ಣವಾಗಿ ಉಜ್ಜಿ ನಯಗೊಳಿಸಲಾಗಿರುವ ಇದು ೧೭ ಸೆಂ.ಮೀ. ಉದ್ದ, ೯ ಸೆಂ.ಮೀ. ಅಗಲವಿದೆ. ಬಾಯಿ ಅಂಚಿನ ಭಾಗವು ತ್ರುಟಿತಗೊಂಡಿದೆ. ಈ ಶಿಲಾಯುಧಗಳು ಅಂದಿನ ಕಾಲದ ಶಿಲಾಯುಗದ ಮಾನವನ ಜೀವನದಲ್ಲಿ ಬಹುಮುಖ್ಯ ಪಾತ್ರವಹಿಸಿವೆ. ಇವುಗಳಿಂದ ಈ ಪ್ರದೇಶದಲ್ಲಿ

* ಹುಲಿಕೆರೆ ಅಂಚೆ, ಕೂಡ್ಲಿಗಿ ತಾ।। ಬಳ್ಳಾರಿ ಜಿಲ್ಲೆ – ೫೮೩೧೨೦

ನವಶಿಲಾಯುಗ ಕಾಲ (ಸು. ಕ್ರಿ.ಪೂ. ೧೬೦೦ ರಿಂದ ೮೦೦) ದಿಂದಲೂ ಮಾನವನ ಚಟುವಟಿಕೆಗಳು ನಡೆದಿತ್ತು ಎಂದು ತಿಳಿಯುತ್ತದೆ.

ಬೃಹತ್ ಶಿಲಾಯುಗದ ಅವಶೇಷಗಳು: ಈ ಗ್ರಾಮದ ಲಕ್ಷ್ಮಯ್ಯನವರ ಜಮೀನಿನಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳಾದ ಹಾದಿಕೋಣೆ ಸಮಾಧಿಗಳು, ಸಿಸ್ಟ್ ಸಮಾಧಿಗಳು ಕಂಡುಬಂದಿವೆ. ಇವುಗಳನ್ನು ಸ್ಥಳೀಯವಾಗಿ ಮೋರೆಯರ ಮನೆಗಳೆಂದು ಕರೆಯಲಾಗುತ್ತದೆ. ಕಪ್ಪು, ಕೆಂಪು ವರ್ಣದ ಮಡಕೆ ಭಾಗಗಳು, ಕಬ್ಬಿಣದ ಕಿಟ್ಟ, ಹಾಗೂ ಕುಲುಮೆಯ ಮೂಸೆಯ ಭಾಗಗಳು ದೊರೆತಿವೆ. ಇಲ್ಲಿ ದೊರೆತಿರುವ ಕುರುಹುಗಳಿಂದ ಈ ಭಾಗದಲ್ಲಿ ಕಬ್ಬಿಣದ ಬಳಕೆಯು ಆವೇಳೆಗೆ ಬಳಕೆಯಲ್ಲಿತ್ತು ಎಂದು ತಿಳಿಯುತ್ತದೆ. ಇದರಿಂದ ಈ ಪ್ರದೇಶವು ಬೃಹತ್ ಶಿಲಾಯುಗದ ಕೈಗಾರಿಕೆಯ ನೆಲೆಯಾಗಿತ್ತೆಂದು ಹೇಳಬಹುದು. ಈ ಸಂಸ್ಕೃತಿಯ ಕಾಲಮಾನ ಸು. ಕ್ರಿ.ಪೂ. ೮೦೦ ರಿಂದ ೨೦೦ರ ವರೆಗೆ ಎಂದು ಪರಿಗಣಿಸಬಹುದಾಗಿದೆ.

ದೇವಾಲಯಗಳು: ಹಾಲಸಾಗರ ಗ್ರಾಮದ ಉಪ ಗ್ರಾಮವಾದ ಬೋರಯ್ಯನಹಟ್ಟಿಯ ಬಳಿಯಲ್ಲಿ ಎತ್ತರದ ವಿಶಾಲವಾದ ಬಂಡೆಯ ಮೇಲೆ ಮೂರು ದೇವಾಲಯಗಳಿದ್ದು, ಅವುಗಳಲ್ಲಿ ಎರಡು ದೇವಾಲಯಗಳು ಮಾತ್ರ ಉಳಿದು ಕೊಂಡಿವೆ. ಈ ಎರಡು ದೇವಾಲಯಗಳನ್ನು ಸ್ಥಳೀಯವಾಗಿ ದೊರಕುವ ಗ್ರಾನೈಟ್ ಶಿಲೆಯನ್ನು ಬಳಸಿ ನಿರ್ಮಿಸಲಾಗಿದೆ. ಏಕಕೂಟ ದೇವಾಲಯವಾಗಿರುವ ಇದು ಚಚ್ಚೌಕಾರವಾದ ತಳವಿನ್ಯಾಸ ಹೊಂದಿದೆ. ಗರ್ಭಗೃಹದಲ್ಲಿ ಭೈರವನಶಿಲ್ಪ ಮತ್ತು ನಾಗಶಿಲ್ಪಗಳಿವೆ. ಭೈರವ ಶಿಲ್ಪವನ್ನು ಬಳಪದಕಲ್ಲನ್ನು ಬಳಸಿ ನಿರ್ಮಿಸಲಾಗಿದ್ದು, ಇದರ ಎತ್ತರ ೨.೧೧ ಅಡಿ, ಅಗಲ ೨.ಅಡಿ ಇದೆ. ಭೈರವನು ಶ್ವೇತ ವರ್ಣದವನಾಗಿದ್ದು, ಕೊರಳಲ್ಲಿ ಕಂಟಹಾರ ಮತ್ತು ಸೊಂಟಪಟ್ಟಿ ಇದೆ. ಎಡ ಮತ್ತು ಬಲ ಕಿವಿಗಳಲ್ಲಿ ನಕ್ರ, ಪತ್ರ ಕುಂಡಲ ಉಳ್ಳವನಾಗಿದ್ದಾನೆ. ಚತುರ್ಭುಜಧಾರಿಯಾದ ಭೈರವನ ಮೇಲಿನ ಎಡ ಮತ್ತು ಬಲ ಕೈಗಳಲ್ಲಿ ತ್ರಿಶೂಲ, ಡಮರುಗಳನ್ನು ಹೊಂದಿದ್ದು, ಕೆಳಗಿನ ಕೈಗಳು ತ್ರುಟಿತಗೊಂಡಿವೆ. ಬಲಭಾಗದಲ್ಲಿ ದಕ್ಷನ ಶಿಲ್ಪ, ಎಡ ಭಾಗದಲ್ಲಿ ನಾಯಿ ಮತ್ತು ಸರ್ಪವನ್ನು ಕಂಡರಿಸಲಾಗಿದೆ. ಶಿಲ್ಪವು ತ್ರುಟಿತಗೊಂಡಿವುದರಿಂದ ಎಡ ಕೈಯಲ್ಲಿರಬಹುದಾದ ಬ್ರಹ್ಮ ಕಪಾಲವು ಹಾಳಾಗಿದ್ದು, ಅದರಿಂದ ಹೊರಸೂಸುವ ರಕ್ತವನ್ನು ನಾಯಿಯು ಹೀರುವಂತಿದೆ. ಒಟ್ಟಿನಲ್ಲಿ ದೇವಾಲಯದ ಸ್ವರೂಪ ಮತ್ತು ಮೂರ್ತಿ ಶಿಲ್ಪದ ಲಕ್ಷಣಗಳಿಂದ ಕ್ರಿ.ಶ. ಸು. ೧೬-೧೭ನೇ ಶತಮಾನದಲ್ಲಿ ಈ ದೇವಾಲಯವನ್ನು ನಿರ್ಮಿಸಲಾಗಿದೆ ಎಂದು ಹೇಳಬಹುದು. ಇದೇ ದೇವಾಲಯದ ಪಕ್ಕದಲ್ಲಿ ಮತ್ತೊಂದು ದೇವಾಲಯವಿದ್ದು, ಅದು ಗರ್ಭಗೃಹ, ತೆರದ ಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಯಾವುದೇ ಶಿಲ್ಪವಿಲ್ಲ. ಒಟ್ಟಿನಲ್ಲಿ ಅಪ್ರಕಟಿತಗೊಂಡಿರುವ ಈ ದೇವಾಲಯಗಳು ಹಿಂದೆ ಧಾರ್ಮಿಕ, ಸಾಂಸ್ಕೃತಿಕ ಮಹತ್ವವನ್ನು ಹೊಂದಿದ್ದು, ಇಂದು ನಿರಂತರವಾಗಿ ನಡೆಯುತ್ತಿರುವ ಕಲ್ಲುಗಣಿಗಾರಿಕೆಯಿಂದ ಅವನತಿಗೀಡಾಗಿವೆ. ಹಾಗೂ ಇದೇ ಸ್ಥಳದಲ್ಲಿ ವಿಜಯ ನಗರೋತ್ತರ ಕಾಲದ ಆಂಜನೇಯ ದೇವಾಲಯವಿದೆ. ದಕ್ಷಿಣಾಭಿಮುಖವಾಗಿ ನಿರ್ಮಿಸಿರುವ ಈ ದೇವಾಲಯವು ಗರ್ಭಗೃಹ, ತೆರದ ಮಂಟಪವನ್ನು ಹೊಂದಿದ್ದು, ಇದರಲ್ಲಿ ಆಂಜನೇಯ ಶಿಲ್ಪವಿದ್ದು, ಅದು ಸಾಮಾನ್ಯ ಲಕ್ಷಣವನ್ನು ಹೊಂದಿದೆ. ಕನಿಷ್ಠ ಸ್ಥಿತಿಯಲ್ಲಿರುವ ಈ ದೇವಾಲಯವನ್ನು ಸ್ಥಳೀಯವಾಗಿ ದೊರಕುವ ಕಲ್ಲು ಚಪ್ಪಡಿಗಳನ್ನು ಬಳಸಿ ನಿರ್ಮಿಸಲಾಗಿದೆ.

ತುರುಗೋಳ್ ವೀರಮಾಸ್ತಿಕಲ್ಲು ಶಿಲ್ಪ: ಆಂಜನೇಯ ದೇವಾಲಯದ ವಾಯುವ್ಯ ದಿಕ್ಕಿನಲ್ಲಿ ನೂರು ಮೀಟರ್ ಅಂತರದಲ್ಲಿ ವೀರಮಾಸ್ತಿಕಲ್ಲು ಶಿಲ್ಪವಿದೆ. ಇದರ ಲಕ್ಷಣವು ಈ ರೀತಿ ಇದೆ. ಪೂರ್ವಭಿಮುಖವಾಗಿ ನಿಲ್ಲಿಸಿರುವ ಈ ಸ್ಮಾರಕ ಶಿಲ್ಪವನ್ನು ಗ್ರಾನೈಟ್ ಶಿಲೆಯಲ್ಲಿ ಕಂಡರಿಸಲಾಗಿದೆ. ಇದರ ಎತ್ತರ ೫.೧೦ ಅಡಿ ಮತ್ತು ಅಗಲ ೨.೧೧ ಅಡಿ ಇದೆ. ಮೂರು ಹಂತದಲ್ಲಿರುವ ಸ್ಮಾರಕ ಶಿಲ್ಪದ ಮೊದಲ ಹಂತದಲ್ಲಿ ಶಿಲ್ಪದ ಬಲ ಭಾಗದಲ್ಲಿ ವೀರನು ತನ್ನ ಕೈಗಳಲ್ಲಿ ಬಿಲ್ಲು ಬಾಣವನ್ನು ಹಿಡಿದು, ಎಡ ಬಾಗದಲ್ಲಿರುವ ಶತ್ರುವಿನ ವಿರುದ್ದ ಹೋರಾಟ ಸಂದರ್ಭದ ಚಿತ್ರಣವನ್ನು ಕಂಡರಿಸಲಾಗಿದೆ.[೨] ಹಾಗೂ ಶಿಲ್ಪದ ಬಲ ಬದಿಯಲ್ಲಿ ತುರುಗಳನ್ನು ಚಿತ್ರಿಸಿರುವುದರಿಂದ ಅವುಗಳನ್ನು ಅಪಹರಿಸಲು ಬಂದ ಶತ್ರುವಿನ ವಿರುದ್ದ ವೀರನು ಹೋರಾಡಿ ತುರುಗಳನ್ನು ರಕ್ಷಿಸಿದ ಸಂದರ್ಭವನ್ನು ಚಿತ್ರಿಸಲಾಗಿದೆ. ವೀರನು ಮತ್ತು ಶತ್ರು ಇಬ್ಬರ ನಡುವೆ ಪರಸ್ಪರ ಹೋರಾಟದಲ್ಲಿ ಇಬ್ಬರು ಮಡಿದಿರುವುದು ತಿಳಿಯುತ್ತದೆ. ಆತನ ಪತ್ನಿಯನ್ನು ಚಿತ್ರಿಸಲಾಗಿದೆ. ಆಕೆಯು ಬಲಕೈಯನ್ನು ಮೇಲಕ್ಕೆ ಎತ್ತಿ ಹರಸುತ್ತಿರುವಳು. ಸತಿಯ ಎರಡು ಕೈಗಳನ್ನು ಹಿಡಿದು ಇಬ್ಬರು ಅಪ್ಸರೆಯರು ಸ್ವರ್ಗಕ್ಕೆ ಕರೆದುಕೊಂಡು ಹೋಗುವ ಸನ್ನಿವೇಶವಿದೆ. ಮೂರನೆಯ ಹಂತದಲ್ಲಿ ಸ್ವರ್ಗರೋಹಣ ಪ್ರಾಪ್ತಿಯನ್ನು ಚಿತ್ರಿಸಿದ್ದು, ಈ ಹಂತದ ಮಧ್ಯದಲ್ಲಿ ಶಿವಲಿಂಗ, ಲಿಂಗವನ್ನು ಪೂಜಿಸುತ್ತಿರುವ ಯತಿ, ಕೈಮುಗಿದುಕೊಂಡು ಪದ್ಮಾಸನದಲ್ಲಿ ಕುಳಿತಿರುವ ವೀರ ಹಾಗೂ ಶಿಲ್ಪದ ಎಡ ಮತ್ತು ಬಲ ಭಾಗದಲ್ಲಿ ಸೂರ್ಯ, ಚಂದ್ರರನ್ನು ಕಂಡರಿಸಲಾಗಿದೆ. ಸ್ಮಾರಕ ಶಿಲ್ಪ ರಚನೆಗೆ ಬಳಸಿರುವ ಶಿಲೆ ಹಾಗೂ



ನವಶಿಲಾಯುಗದ ಕೈಗೊಡಲಿಗಳು



ಬೃಹತ್ ಶಿಲಾಯುಗದ ಸಿಸ್ಟ್ ಸಮಾಧಿಗಳು



ಕಪ್ಪು–ಕೆಂಪು ವರ್ಣದ ಮಡಕೆ ಭಾಗಗಳು




ಮೂಸೆ ಅವಶೇಷಗಳು



ಬೋರೆದೇವರಗುಡಿ



ಭೈರವ ಮತ್ತು ನಾಗಶಿಲ್ಪ



ಆಂಜನೇಯ ಶಿಲ್ಪ



ತುರ್‌ಗೋಳ್ ವೀರಮಾಸ್ತಿಕಲ್ಲು ಶಿಲ್ಪ



ಗಣೇಶ ಶಿಲ್ಪ

ಶಿಲ್ಪದ ಕೆತ್ತನೆಯಿಂದ ಇದನ್ನು ವಿಜಯನಗರ ಪೂರ್ವದಲ್ಲಿ (ಕ್ರಿ.ಶ. ೧೫-೧೬ನೇ ಶತಮಾನದಲ್ಲಿ) ನಿರ್ಮಾಣ ಮಾಡಲಾಗಿದೆ ಎಂದು ಹೇಳಬಹುದು.

ಗಣೇಶ ಶಿಲ್ಪ: ಹಾಲಸಾಗರ ಗ್ರಾಮದ ಪ್ರಾಚೀನ ಕೆರೆಯ ಹಿಂಬದಿಯಲ್ಲಿ ಗಣೇಶ ಶಿಲ್ಪವಿದೆ. ಈ ಶಿಲ್ಪವನ್ನು ಗ್ರಾನೈಟ್ ಶಿಲೆಯನ್ನು ಬಳಸಿ ನಿರ್ಮಿಸಲಾಗಿದೆ. ಇದರ ಎತ್ತರ ೫.೧೧ ಅಡಿ, ಅಗಲ ೪. ೧೧ ಅಡಿ ಇದೆ. ಪಾಣಿ ಪೀಠದ ಮೇಲೆ ಆಸೀನವಾಗಿರುವ ಗಣೇಶಶಿಲ್ಪವು ಸುಂದರ ಕೆತ್ತನೆಯಿಂದ ಕೂಡಿದೆ. ಪೂರ್ವಾಭಿಮುಖವಾಗಿರುವ ಶಿಲ್ಪವು ಕಿರೀಟ ಮುಕುಟ ಹೊಂದಿದ್ದು, ಚತುರ್ಭುಜಧಾರಿಯಾಗಿದೆ.[೩] ಹಾಗೂ ನಾಲ್ಕು ಕೈಗಳಿಂದ ಕೂಡಿದ್ದು ಮೇಲಿನ ಎಡ ಕೈಯಲ್ಲಿ ಪರಶು, ಕೆಳ ಕೈಯಲ್ಲಿ ಫಲವನ್ನು ಹಿಡಿದಿದೆ. ಸೊಂಡಲಿನ ವಿನ್ಯಾಸವು ಎಡಕ್ಕೆ ಬಾಗಿ ಕೆಳಗಿನ ಕೈಯಲ್ಲಿರುವ ಫಲವನ್ನು ಆನಿಸಿಕೊಂಡಿದೆ. ಬಲ ಭಾಗದ ಮೇಲಿನ ಕೈಯಲ್ಲಿ ಶಂಕು, ಕೆಳಗಿನ ಕೈಯು ಧ್ಯಾನ ಮುದ್ರೆಯಲ್ಲಿ ಬಲ ತೊಡೆಯ ಮೇಲಿದೆ. ಉದರದ ಮೇಲೆ ಸರ್ಪವು ಬಂಧಿಸಿರುವುದನ್ನು ಚಿತ್ರಿಸಲಾಗಿದೆ. ಆಸೀನ ಭಂಗಿಯಲ್ಲಿರುವ ಶಿಲ್ಪದ ಪೀಠದಲ್ಲಿ ಮೂಷಿಕನನ್ನು ಕಂಡರಿಸಲಾಗಿದೆ. ಗಣೇಶನನ್ನು ಕ್ಷೇತ್ರಪಾಲಕನಾಗಿ ಆರಾಧಿಸುವ ಪರಿಪಾಠ ಹಿಂದಿನಿಂದಲೂ ಇರುವುದರಿಂದ ಈ ಗ್ರಾಮದ ರಕ್ಷಣೆಯ ಸಂಕೇತವಾಗಿ ಈ ಸ್ಮಾರಕ ಶಿಲ್ಪವನ್ನು ರಚಿಸಲಾಗಿದೆ. ಶಿಲ್ಪದ ರಚನಾ ಶೈಲಿ ಮತ್ತು ಬಳಸಿರುವ ಶಿಲೆಯಿಂದ ಇದನ್ನು ಸು. ೧೬ನೇ ಶತಮಾನದಲ್ಲಿ ನಿರ್ಮಿಸಲಾಗಿದೆ ಎಂದು ಹೇಳಬಹುದು.

ಒಟ್ಟಿನಲ್ಲಿ ಹಾಲಸಾಗರ ಗ್ರಾಮದಲ್ಲಿ ಕಂಡುಬರುವ ಅಪ್ರಕಟಿತ ಪ್ರಾಚ್ಯಾವಶೇಷಗಳಿಂದ ನವಶಿಲಾಯುಗ ಕಾಲದಿಂದ ಹಿಡಿದು ಇಂದಿನವರೆಗೂ ಜನವಸತಿ ಇರುವುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಇದರಿಂದ ಈ ಪ್ರದೇಶವು ಸಾಂಸ್ಕೃತಿಕ ಕೇಂದ್ರವಾಗಿತ್ತು ಎಂದು ತಿಳಿಯುತ್ತದೆ.

[ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಸ್ಥಳೀಯರಾದ ಸಂಜೀವಪ್ಪ, ಸಹೋದರ ಹೆಚ್. ಚನ್ನಬಸಪ್ಪ ಇವರಿಗೆ ಮತ್ತು ಪಿಎಚ್.ಡಿ ಮಾರ್ಗದರ್ಶಕರಾಗಿ ಪ್ರತಿಹಂತದಲ್ಲೂ ಸಲಹೆಗಳನ್ನು ಸೂಚಿಸುತ್ತಾ ನನಗೆ ಸ್ಫೂರ್ತಿ ತುಂಬುತ್ತಿರುವ ಗುರುಗಳಾದ ಡಾ. ರಮೇಶ ನಾಯಕ ಅವರಿಗೂ ಕೃತಜ್ಞತೆಗಳು]

ಅಡಿಟಿಪ್ಪಣಿಗಳು

೧. ಮೆಡೋಸ್ ಟೇಲರ್, ೨೦೧೫, 'ಮೆಗಲೆಥಿಕ್ ಟೂಂಬ್ಸ್ ಏನ್ಸಂಟ್ ರಿಮೈನ್ಸ್ ಇನ್ ದ ಡೆಕ್ಕನ್', ಪ್ರಕಾಶನ ದಿ ಆರ್ಕಿಯಾಲಾಜಿಕಲ್ ಡಿಪಾರ್ಟಮೆಂಟ್ ಆಫ್ ಹೈದರಾಬಾದ್, ಪು. ೮೬-೮೭.

೨. ಶೇಷಶಾಸ್ತ್ರಿ ಆರ್., ೨೦೦೪, 'ಕರ್ನಾಟಕದ ವೀರಗಲ್ಲುಗಳು', ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪು. ೨೦.

೩. ರಾಮಚಂದ್ರರಾವ್ ಎಸ್. ಕೆ., ೨೦೧೨, 'ಮೂರ್ತಿಶಿಲ್ಪ ನೆಲೆ-ಹಿನ್ನೆಲೆ', ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪು. ೯೦-೯೨.

ಆಕರ ಗ್ರಂಥಗಳು

೧. ತಿಪ್ಪೇಸ್ವಾಮಿ ಹೆಚ್., ೨೦೧೪, 'ಏಳೂರು ಗುಡ್ಡದ ಪ್ರಾಚ್ಯಾವಶೇಷಗಳು', ಇತಿಹಾಸ ದರ್ಶನ ಸಂಪುಟ ೩೦, ಕರ್ನಾಟಕ ಇತಿಹಾಸ ಅಕಾಡೆಮಿ (ರಿ) ಬೆಂಗಳೂರು.

೨. ವಾಸುದೇವ ಬಡಿಗೇರ, ೨೦೧೨, 'ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ'. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಶಿವತಾರಕ್ ಕೆ.ಬಿ., ೨೦೧೧, 'ಕರ್ನಾಟಕ ಪುರಾತತ್ವ ನೆಲೆಗಳು', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಸುಂದರ ಅ., ೧೯೯೪, 'ಕರ್ನಾಟಕದ ಪ್ರಾಗಿತಿಹಾಸ ಕಲೆ', ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೫. ಸುರೇಶ ಕೆ.ಎಂ ಮತ್ತು ಇತರರು., ೧೯೯೯, ಕರ್ನಾಟಕ ದೇವಾಲಯ ಕೋಶ ಬಳ್ಳಾರಿ ಜಿಲ್ಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಷೇಕ್ ಅಲಿ ಬಿ., ಮತ್ತು ಸುಂದರ ಅ., ೧೯೯೭, 'ಕರ್ನಾಟಕ ಚರಿತ್ರೆ ಸಂಪುಟ ೧', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪೦

ಲಿಂಗಣ್ಣ ಕವಿಯ ಕೆಳದಿ ನೃಪವಿಜಯದಲ್ಲಿ ಅಕ್ಕಣ್ಣ–ಮಾದಣ್ಣ

ಡಾ. ಕೆಳದಿ ಗುಂಡಾಜೋಯಿಸ್*

ಭಾರತಾದ್ಯಂತ ಚರಿತ್ರೆಗೆ 'ಕೆಳದಿ ನೃಪವಿಜಯ' ಆಕರ ಗ್ರಂಥಗಳಲ್ಲಿ ಪ್ರಮುಖವಾದುದು. ಈ ಕೃತಿ ಚಂಪೂ ಕಾವ್ಯವಾಗಿದ್ದರೂ ಸಂಶೋಧನಾ ರಂಗದಲ್ಲಿ ಆದ್ಯತೆ ಹೊಂದಿದೆ. ಭಾರತದ ಅದರಲ್ಲೂ ದಕ್ಷಿಣ ಭಾರತದ ಚಾರಿತ್ರಿಕ ಅಧ್ಯಯನಕ್ಕೆ ಈ ಕೃತಿಯನ್ನು ಕೈಬಿಟ್ಟಲ್ಲಿ ಇತಿಹಾಸಕ್ಕೆ ಅಪಚರವೆಸಗಿದಂತಾಗುತ್ತದೆ. ಪೂರ್ವಾಗ್ರಹ ಪೀಡಿತರು ಇತಿಹಾಸವನ್ನು ತಿರುಚಿ ಇದನ್ನು ಕೈಬಿಟ್ಟಿರುವುದು ಅನೇಕ ಗ್ರಂಥಗಳಲ್ಲಿ ಕಾಣಬಹುದು. ಕ್ರಿ.ಶ. ೧೭–೧೮ನೇ ಶತಕದಲ್ಲಿದ್ದ ಕವಿ ಲಿಂಗಣ್ಣನು ಸಮಕಾಲೀನ ಇತಿಹಾಸದಲ್ಲಿ ಪ್ರಾಮಾಣಿಕ ಸಂಶೋಧಕನೆಂಬುದಾಗಿ ವಿದ್ವಾಂಸರು ಅಭಿಪ್ರಾಯಿಸಿದ್ದಾರೆ. ಕೆಳದಿ ನೃಪವಿಜಯದಲ್ಲಿ ಉಲ್ಲೇಖನಗೊಂಡಿರುವ ಕ್ಷೇತ್ರಕಾರ್ಯಗಳು ವಿಷಯ ಸಂಗ್ರಹಣೆಗಳು ಗಮನಾರ್ಹವಾದುದು. ಅವುಗಳಲ್ಲಿ ಒಂದಾದ ಅಕ್ಕಣ್ಣ ಮಾದಣ್ಣ ಕುರಿತು–

ಅಕ್ಕಣ ಮಾಂದಣರುಗಳಿಂ
ಚಕ್ಕನೆ ತತ್ಪಾತುರಹಗರುಹಿಸಿ ಬರವಂ ।
ಮಿಕ್ಕಾ ರಜಾಲಯಮಂ
ಪೊಕ್ಕಾಯವನಪನ ಬೇಟಿಯಂ ನೆರೆಕೊಂಡಂ ॥
ವ ॥ ಇಂತು ಭಾಗಾನಗರದೊಳ್ ತನಾಶಾಹನ ಬೇಟಿಯಂ ಕೊಂಡನೇಕ ಬಹುಮಾನಮಂ ಪಡೆದು ತೆರಳ್ದನಂತರಂ ಪನ್ನಾಳಿಯಂ
ಸಾರ್ದುಮುನ್ನಿಗಿಂ ದತ್ಯಧಿಕ ಪ್ರಬಲನಾಗಿ ವರ್ತಿಸುತ್ತುಮಿರಲ್ ಡಿಳ್ಳಿಯೊಳಿತ್ತಂ
ಮ॥ ಮಿಗೆ ನೇತೋಜಿಯ ಪೌತ್ರನಂ ಬಿಡದೆ ಕಾಯ್ವಚೌಕಿಯೊಳ್ ಕಾಣದು
ಬೈಗದಿಂದಂದವರಂಗಜೇಬಗರುಪಲ್ ಕೇಳ್ದೆಮ್ಮೊಳಿಂತಾರೆಯಂ ।
ಡಗೆಗೆಯ್ದಾವೆಡೆಗೆಯ್ದಿದಂ ಬೆದಕಿ ಶೀಘ್ರ ತಪ್ಪುದೆಂದಾರ್ದುಕೆ
ಮ್ಮೊಗರಾಣ್ಮಂ ಬಿಡದಟ್ಟಿದಂ ಪ್ರಬಲಸೇನಾಭಾರರಂ ಚಾರರಂ ॥
ಕಂ ॥ ತೆರಳ್ದವರ್ಗಳ್ನಾಲ್ಲಡೆಗಳೂ
ಳರಸುತ್ತಿರೆ ತಚ್ಚಿವಾಜಿ ಗಯೆಯಿಂ ಪೊರಮ ।
ಟ್ಟುರೆ ಪನ್ನಾಳಿಯನೈದಿದ
ಪರಿಯಂ ಕೇಳ್ದಾ ತುರುಷ್ಕಪತಿಯತಿಖತಿಯಂ ॥
..... ಭಾಗಾನಗರದ ಸಂಸ್ಥಾನದ ಖಂಡಾಧಿಕಾರಮಂ ವಹಿಸಿ ನಡೆಸುತ್ತಿರ್ದ
ಕ್ಕಣ್ಣ ಮಾಂದಣ್ಣರೆಂಬ ಪ್ರಸಿದ್ಧ ನಿಯೋಗಿಗಳ್ ನಡೆಸುತಿರ್ದ ಸಹಾಯ
ಮೂಲ ದಿಂದೇನದೊಡಮಾ ಪರಿಸ್ತರಣಂ ಕ್ಷಿಪ್ರ ಸಾಧ್ಯಮಾಗದಿರ್ಪುದಂ
ಕಂಡು ಚಲದಿಂ ಕಸ್ತುಗೆಯ್ದುನಿಂದೀರಯ್ದುವರ್ಷಂಬರಂ ನೆಲದಂಡಿಳಿರು
ಜೇರುಮುತ್ತಿಗೆಯನಿಕ್ಕಿ ಬಹುವಿಧ ಪ್ರಯತ್ನಂಬಡುತ್ತಿರ ಲಿತ್ತಂ ಭಾಗಾ
ನಗರದೊಳ್ ಸರ್ವಾದಿಕಾರಮಂ ನಡೆಸುತಿರ್ದಕ್ಕಣ್ಣ ಮಾದಣ್ಣ ರೆಂಬ
ನಿಯೋಗಿಗಳ್ ಕುಹಕಿಗಳ್ ಭಿನ್ನ ತಂತ್ರಮಂ ರಚಿಸಿ ನಡೆಸಿದ
ಲೇಖನ ಮೂಲದಿಂ.......

ಕೆಳದಿ ನೃಪವಿಜಯದ ನವಮಾಶ್ವಾಸದಲ್ಲಿ ಕಂಡುಬರುವ ಅಕ್ಕಣ್ಣ–ಮಾದಣ್ಣ ಕುರಿತಂತೆ ಸಮಗ್ರ ಮಾಹಿತಿಯು ಗೋಲ್ಕೊಂಡದ ಕುತುಬಶಾಹಿ ಚರಿತ್ರೆಯಲ್ಲಿ ಕಂಡುಬಂದಿದೆ. 'ಗೋವಲಗೊಂಡ್ಯಾ–ಚೀ ಕುತ್ಬಶಾಹೀ' ಕೃತಿಯು ವಾಸುದೇವ ಸೀ ಬೇಂದ್ರೇ ಪ್ರೊ. ಭಗವತ ದಯಾಳ ಶರ್ಮ ಸಂಪಾದಕತ್ವದಲ್ಲಿ ಪೂನಾದ ಭಾರತ ಇತಿಹಾಸ ಸಂಶೋಧಕ ಮಂಡಳವು ೧೯೩೪ರಲ್ಲಿ ಪ್ರಕಟಿಸಿದೆ. ಮುಖಪುಟದಲ್ಲಿಯೇ –

---

* ಕೆಳದಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

The history of a late revolution in the Kingdom of Golcondah chapters 6th and 7th from "Hadiquat - ul - Alam" by Mir Alam, and some Account of **Akana** and **madana** Chief Ministers of Golcondah, with an historical sketch of the Qutubshahi of Golcondah by the Editor.

ಎಂಬುದಾಗಿ ಉಲ್ಲೇಖನಗೊಂಡಿದೆ. ಮರಾಠಿ ಮತ್ತು ಇಂಗ್ಲೀಷಿನಲ್ಲಿ ಪ್ರಕಟವಾಗಿದೆ. ಇಂಗ್ಲೀಷ್ ಭಾಗದಲ್ಲಿರುವ Some Account of Akana and Madna, Chief Minister of Tanashah Badshah of Golconda, ವಿವರಗಳನ್ನು ವಿದ್ವಾಂಸರ ಅವಗಾಹನೆಗಾಗಿ ನೀಡಲಾಗಿದೆ.

ಗೋಲ್ಕಂಡ ಬಾದಶಹರ ಮುಖ್ಯಮಂತ್ರಿಗಳಾದ ಅಕ್ಕಣ್ಣ ಮಾದಣ್ಣರ ಕೆಲ ವಿವರಗಳು*

ಪ್ರತಾಪರೂಡೂಡೂ ಅವರ ವಾಸಸ್ಥಾನದಲ್ಲಿ ವೊರೋಂಗೊಲ್ಲೂ ಎನ್ನುವ ಪ್ರಾಂತ್ಯವಿತ್ತು. ಆ ಅಧಿಪತ್ಯದಲ್ಲಿ ಅನ್ನೂಮೂಸೊಂದೊ ಎನ್ನುವ ದೊಡ್ಡ ಹಳ್ಳಿ. ಅಲ್ಲಿ ಒಬ್ಬ ಬನೂಜುಪಂತೂಲು ಎನ್ನುವ ಬ್ರಾಹ್ಮಣ ವಾಸಿಸುತ್ತಿದ್ದು, ಅವರು ಒಂದು ಒಳ್ಳೆಯ ಗೌರವಾನ್ವಿತ ಕುಟುಂಬದಿಂದ ಬಂದ ಬಾಗುಮ್ಮ ಎನ್ನುವವರನ್ನು ಮದುವೆಯಾಗುತ್ತಾರೆ. ಅವರಿಗೆ ನಾಲ್ಕು ಸದ್ಗುಣರಾದ ಪುತ್ರರು ಜನಿಸುವರು. ಅವರ ಹೆಸರು ಅಕ್ಕಣ್ಣ ಮತ್ತಣ, ವಿಸ್ಸಣ, ಹಾಗೂ ಮೂರ್ತುಂಜಯೂದು (ಮೂರ್ಚಿಕೊವೊತೊಡಾ) ಈ ನಾಲ್ವರೂ ತಮ್ಮ ಬೆಳವಣಿಗೆಯ ಯೌವನದ ಶುರುವಿನಲ್ಲಿಯೇ ಸುಸಂಸ್ಕೃತ ನಡವಳಿಕೆಯನ್ನು ಹೊಂದಿ, ಡಕ್ಕನ್ ಪ್ರದೇಶದ ಜನರಿಂದ ಸಂಸ್ಕರಿಸಿಗೊಂಡ ಎಲ್ಲಾ ರೀತಿಯ ವಿದ್ಯಾಭ್ಯಾಸ ಕ್ರಮದಲ್ಲಿ ಪರಿಣಿತಿ ಪಡಕೊಂಡು, ತಂದೆ ತಾಯಂದಿರನ್ನು ವಿಧೇಯತೆ, ಗೌರವಾದರದಿಂದ ನಡೆಸಿಕೊಂಡು ಅವರ ತಂದೆಯ ಅಪ್ಪಣೆಯಿಲ್ಲದೆ ಯಾವುದೇ ಕಾರ್ಯವನ್ನು ಮಾಡದೆ, ಜೀವನದಲ್ಲಿ ಮುಂದುವರೆಯುತ್ತಿದ್ದರು. ಬನೂಜುಪಂತಲುರವರನ್ನು ಪ್ರಧಾನ ಅಬಕಾರಿ ವ್ಯವಸ್ಥಾಪಕರಾಗಿ ನೇಮಿಸಲಾಯಿತು.

ಆ ಪರ್ಗಣದ ಅಬಕಾರಿ ವ್ಯಾಪಾರ ತಮ್ಮ ಸುಪರ್ದಿಗೆ ಬಂದಾಗ, ಅವರು ಮೊದಲಿಗೆ ಆ ನಾಲ್ಕು ಮಕ್ಕಳಿಗೆ ಉಪನಯನದ ಶಾಸ್ತ್ರವನ್ನು ಮಾಡಿ, ಅವರು ಜನಿವಾರವನ್ನು ಧರಿಸುವಂತಾದ ನಂತರ ಅವರಿಗೆ ವೇದ ಶಾಸ್ತ್ರಗಳ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟರು.

ವಿವಾಹ ಹಾಗೂ ವಿದ್ಯಾಭ್ಯಾಸ

ಆ ನಾಲ್ವರನ್ನು ಆಮೇಲೆ ಸದ್ಗುಣ ಬ್ರಾಹ್ಮಣ ಕುಟುಂಬದಿಂದ ಬಂದ ಸುಶೀಲೆಯರೊಂದಿಗೆ ವಿವಾಹ ನೆರವೇರಿಸಿ, ಪಂತಲು ಅವರ ನಿರ್ದೇಶನದಲ್ಲೇ ಎಲ್ಲಾ ಲೆಕ್ಕ ವಿಚಾರದಲ್ಲಿ, ಹಿಂದು ಹಾಗೂ ಪರ್ಷಿಯಾದಲ್ಲಿ ಬಲು ಬೇಗನೆ ವ್ಯಾಪಾರ ವಹಿವಾಟುಗಳ ಜ್ಞಾನ ಕೌಶಲ್ಯವನ್ನು ಒಗ್ಗೂಡಿಸಿಕೊಳ್ಳುವ ಕಲೆಯನ್ನು ಮೈಗೂಡಿಸಿಕೊಳ್ಳುವಲ್ಲಿ ನೆರವಾದರು. ಅಕ್ಕಣ ಹಾಗೂ ಮತ್ತಣ್ಣನವರು ಹಿರಿಯ ಪುತ್ರರು. ಇವರು ವಿದ್ಯಾಭ್ಯಾಸದಲ್ಲಿ ಬಹಳ ಪಾಂಡಿತ್ಯ ಹಾಗೂ ಭಾಷೆಯ ಪ್ರಾಜ್ಞತೆ ಪಡೆದಿರುವ ಕಾರಣದಿಂದ ಅಲ್ಲೇ ಉಳಿದುಕೊಂಡು ಪರ್ಜುಡಾಸ್‌ರ ಸೇವೆಯಲ್ಲಿ ಸಮಯವನ್ನು ಕಳೆದುಕೊಳ್ಳಲು ಬಯಸದೇ ತಂದೆ ತಾಯಂದಿರ ಜೀವನ ಕೌಶಲ್ಯವನ್ನು ಗಮನಿಸುತ್ತಾ, ಅವರ ಜೀವನಾಂಶಕ್ಕೆ ಯಾವುದೇ ಸೇವಾ ಸೌಲಭ್ಯ ಕೊಡುವ ಪ್ರಯತ್ನವನ್ನು ಮಾಡದೆ ಹಾಗೂ ತಮ್ಮಲ್ಲಿರುವ ನಿರ್ವಹಣಾ ಕೌಶಲ್ಯವನ್ನು ಹೊರತರಲು ಮನೆಯಲ್ಲಿರುವ ಹೆಂಗಳೆಯರಂತೆ ಅಲ್ಲೇ ಉಳಿದುಕೊಂಡರೆ ಅವರಲ್ಲಿರುವ ಪ್ರತಿಭೆ ಅರಳಲು ಅವಕಾಶವಾಗದೆಂದು ಅವರ ವಾಸಸ್ಥಾನದಿಂದ ಹೈದರಾಬಾದಿಗೆ ಆಗಮಿಸಿ ತನುಶಾ ಸರಕಾರದ ಸೇವೆಗೆಂದು ಬಂದು, ಈ ಸಮಯದಲ್ಲಿ ಬಹಳ ಉದ್ಯೋಗಿಗಳನ್ನು ಹಾಗೂ ಉದ್ಯೋಗದಾತರನ್ನು ಭೇಟಿಯಾಗುತ್ತಿದ್ದರು. ಒಂದು ಒಳ್ಳೆಯ ಸೇವಾನುಕೂಲತೆಯ ಅವಕಾಶವನ್ನು ಇಬ್ಬರು ಅಣ್ಣತಮ್ಮಂದಿರು ಪಡೆಯುವ ನಿಟ್ಟಿನಲ್ಲಿ ಹಲವು ಕಛೇರಿಗಳಿಗೆ ಭೇಟಿ ನೀಡುತ್ತಿದ್ದರು. ಈ ಪ್ರದೇಶಕ್ಕೆ ಅಪರಿಚಿತರಾದ್ದರಿಂದ ಅವರಿಗೆ ಕೆಲವು ಸಮಯ ಯಾರ ಪರಿಚಯವೂ ಸಾಧ್ಯವಾಗುವುದಿಲ್ಲ. ಅನಂತರ ಅಲ್ಲಿ ಪರ್ಜುಡಾಸ್‌ನ ರಕ್ಷಣೆ ಲಭ್ಯವಾಗುತ್ತದೆ. ತನುಷಾದ ಮಂತ್ರಿಯವರ ಶಿಫಾರಸಿನ ನಿರೀಕ್ಷೆಯಿಂದಾಗಿ ಅಣ್ಣತಮ್ಮಂದಿರು ಅವರನ್ನು ಸತತವಾಗಿ ಭೇಟಿಯಾಗುತ್ತಿದ್ದರು.

ಔರಂಗಜೇಬನಿಂದ ಕುತೂಹಲಕಾರಿಯಾದ ಇನಾಯತ್‌ನಾಮ

ಒಂದು ಸೂಕ್ತವಾದ ಉಮ್ರಾವೊಜಾನ್‌ಗೆ ಶಿಫಾರಸ್ಸು. ಹಾಗೆಯೇ ಸಮಯ ಕಳೆದಂತೆ ದೆಹಲಿಯ ಮತ್ಸೂದನ ಅಧ್ಯಕ್ಷತೆಯ ಬಾದಾಶಾಹರವರ ಅಪ್ಪಣೆಯ ಮೇರೆಗೆ ತನುಷಾ ರಾಜ್ಯಕ್ಕೆ ವ್ಯಾಪಾರಕೋಸ್ಕರ ಎಲ್ಲಾ ವಿಷಯವನ್ನು ಬಿಳಿ

* ಮೂಲ ಇಂಗ್ಲೀಷ್ ಲೇಖನದ ಕನ್ನಡಾನುವಾದ.

ಶಾಯಿಯಲ್ಲಿ ಬರೆದು ತನುಷಾದ ಮತ್ಸೂದರ ಕೌಶಲ್ಯವನ್ನು ಪರೀಕ್ಷಿಸಲು ಹೈದ್ರಾಬಾದಿಗೆ ರವಾನಿಸಿದರು. ತನುಷಾದಲ್ಲಿ ಆ ಕಾಗದದ ಮುದ್ರೆ ಹೊಡೆದು ನೋಡಿದಾಗ ಏನೂ ಅರ್ಥವಾಗದೆ ಆಶ್ಚರ್ಯಪಟ್ಟು ಎಲ್ಲಾ ಮತ್ಸೂದರಿಗೂ ಅಲ್ಲಿನ ಮುಖ್ಯ ನಾಗರಿಕ ಅಧಿಕಾರಿಗಳಿಗೂ ಕಳುಹಿಸಿ ಅದರಲ್ಲಿಯ ಕುತೂಹಲಕಾರಿಯಾದ ವಿಷಯಗಳನ್ನು ಓದಿ ತಿಳಿಸಿಲು ಅಪ್ಪಣೆ ನೀಡಿದರು. ಎಲ್ಲಾ ಮತ್ಸೂದರು ಹಾಗೂ ಇತರ ಎಲ್ಲಾ ವ್ಯಕ್ತಿಗಳೆಲ್ಲಾ ಸೇರಿ ಇದನ್ನು ಓದಲು ಬಹಳಷ್ಟು ಪ್ರಯತ್ನ ಮಾಡಿದರು.

ಎರಡು ಮೂರು ದಿನಗಳ ಕಾಲ ತಮ್ಮನ್ನು ಆಳುವ ಅರಸನನ್ನು ತೃಪ್ತಿಪಡಿಸಲು ಅದೆಷ್ಟು ಪ್ರಯತ್ನಪಟ್ಟರೂ ಸಾದ್ಯವಾಗದೇ, ಈ ಪತ್ರ ಬರೀ ಅಪ್ರಾಯೋಗಿಕ, ಬರೀ ಬಿಳಿಯ ಹಾಳೆ, ಅಷ್ಟೇ ಎನ್ನುವ ಉತ್ತರವನ್ನಿತ್ತರು. ತನುಷಾಗೆ ಅವರೆಲ್ಲರ ಬಗ್ಗೆ ಅಸಮಾಧಾನವಲ್ಲದೆ, ಅವನ ಪರಿಚಯಸ್ಥರ ಎದುರು ದೆಹಲಿಯ ಬಾದಷಾಹರ ಕಾಗದವನ್ನು ಓದಲು ಅಶಕ್ತರಾದ ಮತ್ಸೂದರನ್ನು ಹೊಂದಿದ್ದಾರೆನ್ನುವ ಅವಮಾನವನ್ನು ತಡೆಯಲು ಹಾಗೂ ಬಾದಶಾಹರ ಪತ್ರಕ್ಕೆ ಸೂಕ್ತ ಉತ್ತರ ನೀಡುವುದಲ್ಲದೇ, ತನ್ನ ಸಾಮರ್ಥ್ಯವನ್ನು ಪರೀಕ್ಷಿಸಲು ನನ್ನಲ್ಲಿ ಅಷ್ಟು ಕಠಿಣವಾದ ಪತ್ರವನ್ನು ಓದುವಂತಹ ವ್ಯಕ್ತಿಗಳು ಇರುವರೋ ಎನ್ನುವ ಯೋಚನೆಯಲ್ಲಿದ್ದು, ತಕ್ಷಣ ಆ ಕಾಗದವನ್ನು ಹೈದ್ರಾಬಾದಿನ ೧೨ ಬೀದಿಗಳಲ್ಲಿ ಕಳುಹಿಸಿ ಆ ಪತ್ರವನ್ನು ಓದಿ ಅರ್ಥೈಸಿಕೊಳ್ಳುವವರು ಯಾರಾದರೂ ಇದ್ದರೆ ಹುಡಕಲು ಚೌಬ್‌ದಾರರನ್ನು ಕಳುಹಿಸಿದರು. ಹಾಗೆಯೇ ಕೋತ್ವಾಲರಿಗೆ ಈ ವಿಷಯವನ್ನು ಹೈದರಾಬಾದಿನ ೧೨ ಬೀದಿಗಳಲ್ಲಿ ಡಂಗುರ ಬಾರಿಸಿ ಯಾರು ದೆಹಲಿಯ ಬಾದಶಾಹರ ಪತ್ರದ ತಾತ್ಪರ್ಯವನ್ನು ಹೇಳುವರೋ, ಅವರಿಗೆ ಸರಕಾರದ ವಸಾರತ್‌ನಲ್ಲಿ ಉದ್ಯೋಗ ನೀಡುವ ಭರವಸೆಯನ್ನು ನೀಡಿದರು. ತನುಷಾರ ಅಪ್ಪಣೆ ಮೇರೆಗೆ ಚೌಬದಾರ್ ಆ ಪತ್ರವನ್ನು ಎಲ್ಲಾ ದಿಕ್ಕಿಗೂ ತೆಗೆದುಕೊಂಡು ಈ ಪತ್ರದ ಒಕ್ಕಣೆಯನ್ನು ಹೇಳುವ ಎಲ್ಲರಿಗೂ ತನುಷಾರ ಸರಕಾರದಲ್ಲಿ ಉದ್ಯೋಗದ ಭರವಸೆಯನ್ನು ಅರುಹಿದರು. ಆದರೆ ಚೌಬದಾರರ ಬಳಿಯಿದ್ದ ಪತ್ರವನ್ನು ನೋಡಿದ ಜನರು, "ಏನು ಮೂರ್ಖತನವಿದು? ತಮಾಷೆಗೂ ಮಿತಿಯಿಲ್ಲವೆ? ಖಾಲಿ ಹಾಳೆಯನ್ನು ತೋರಿಸಿ ಇದರಲ್ಲಿರುವ ವಿಷಯವನ್ನೋದಿ ಎನ್ನುವುದು ನಾವು ಎಂದಿಗೂ ಕೇಳರಿಯದ ವಿಷಯ," ಎಂದು ಹೇಳಿದರು. ನಾಲ್ಕು ದಿನಗಳ ಸತತ ಪ್ರಯತ್ನವೆಲ್ಲವೂ ವ್ಯರ್ಥವಾದಾಗ ಚೌಬದಾರರು ತನುಷಾರಿಗೆ ನಡೆದದ್ದೆಲ್ಲವನ್ನೂ ವಿವರಿಸಿ ಜನರ ವ್ಯರ್ಥ ಮಾತುಗಳನ್ನು ಅರುಹಿದರು.

ಅಕ್ಕಣ ಹಾಗೂ ಮಾದಣ್ಣನವರು ಅದರ ಅರ್ಥವನ್ನು ಓದಿ ಹೇಳಿದರು

ಪರೂಜಡಾಸ್‌ರ ಬಳಿ ನಾಲ್ಕೈದು ತಿಂಗಳಿಂದ ಸತತವಾಗಿ ಭೇಟಿ ನೀಡುತ್ತಲಿದ್ದ ಅಕ್ಕಣ್ಣ ಮಾದಣ್ಣನವರಿಗೆ ದೆಹಲಿಯ ಬಾದಶಾಹರ ಪತ್ರದ ವಿಷಯವನ್ನು ಪರೂಜ್‌ಡಾಸ್ ಸುಮ್ಮನೆ ತಮಾಷೆಗೆ ಕೇಳಿದಾಗ, ಅವರಿಗೆ ಆಶ್ಚರ್ಯವಾಗುವಂತೆ ಅವರು ಆ ಕಾಗದವನ್ನೊಮ್ಮೆ ನೋಡಿದರೆ ಹೇಳಬಹುದೆಂದು ಒಪ್ಪಿದರು ಚೌಬದಾರರ ಮೂಲಕ ತನುಷಾರ ಆ ಪತ್ರವನ್ನು ಪರೂಜಡಾಸ್‌ರು ತರಿಸಿಕೊಂಡರು. ಅಕ್ಕಣ ಮಾದಣ್ಣರು ದೆಹಲಿಯ ರಾಜನ ಮತ್ಸೂದರ ಗೆರೆಗಳ ಕೌಶಲ್ಯವನ್ನು ಗಮನಿಸಿ ಚೌಬದಾರರ ಬಳಿ ಈ ಕಾಗಗದ ಒಕ್ಕಣೆಯನ್ನು ತಿಳಿಸಬಹುದೆಂದು ಹೇಳಿ ಕಳುಹಿಸಿದರು. ಆದರೆ ಇದು ಬಹಳ ಗೌಪ್ಯದ ಸಂಗತಿಯಾಗಿರುವುದರಿಂದ ತನುಷಾರನ್ನು ಬಿಟ್ಟು ಬೇರಾರ ಬಳಿಯು ಹೇಳಲಾಗುವುದಿಲ್ಲವೆಂದರು.

ಹಾಗಾಗಿ ಈ ಕಾಗದದ ಒಕ್ಕಣೆಯನ್ನು ಅವರ ಸಮ್ಮುಖದಲ್ಲಿ ಗೌಪ್ಯವಾಗಿ ವಿವರಿಸಲಾಗುವುದೆಂದು ತಿಳಿಸಿದರು ಚೌಬದಾರರು ಸಂತೋಷದಿಂದ ಪರೂಜಡಾಸ್ ಮನೆಯಿಂದ ತನುಷಾರ ಅರಮನೆ ಇನಾಯತ್ ನಾಮಾದ ಅರ್ಥವನ್ನು ಓದಲು ಇಬ್ಬರು ಸೂಕ್ತ ವ್ಯಕ್ತಿಗಳು ದೊರಕಿರುವರೆಂದು ತಿಳಿಸಲು ಓಡಿದರು. ಅಲ್ಲಿ ತಲುಪಿದ ಮೇಲೆ, ತನುಷಾರ ಬಳಿ ಈ ಕಾಗದದ ವಿಷಯವನ್ನು ಸಾರ್ವಜನಿಕವಾಗಿ ಹೇಳಲಾಗದು. ಯಾಕೆಂದರೆ ಈ ಗೌಪ್ಯ ವ್ಯಾಪಾರದ ವಿಷಯ ಪ್ರಧಾನವಾಗಿ ಅವರನ್ನೇ ಉದ್ದೇಶಿಸಿರುವುದರಿಂದ ತನೂಷಾರು ಅನುಮತಿ ನೀಡಿದರೆ ಅವರಿಬ್ಬರು ತನುಷಾರನ್ನು ಭೇಟಿಯಾಗಿ ಎಲ್ಲವನ್ನು ವಿವರಿಸುವರೆಂದು ತಿಳಿಸಿದರು. ತನುಷಾರಿಗೆ ಈ ವಿಷಯವನ್ನು ಕೇಳಿ ಸಂತೋಷವಾಯಿತು. ತಮ್ಮ ಪಟ್ಟಣದಲ್ಲೇ ಇಷ್ಟೊಂದು ಭಾಷಾಕೌಶಲ್ಯದ ಯುವಕರೀರ್ವರಿರುವರೆಂದು ತಿಳಿದು ಅವರನ್ನು ಕರೆತರಲು ಸರಿಯಾದ ವ್ಯಕ್ತಿಗಳನ್ನು ಪರೂಜುಡಾಸ್‌ರ ಕಡೆಗೆ ಕೃತಜ್ಞತಾ ಪೂರ್ವಕವಾಗಿ ಕಳುಹಿಸಿದರು.

ಅಕ್ಕಣ್ಣ ಹಾಗೂ ಮಾದಣ್ಣರು ತನೂಷಾರನ್ನು ಭೇಟಿಯಾಗಲು ತಯಾರಾದರು

ಪರ್ಜುಡಾಸ್‌ರ ಮನೆಗೆ ತನುಷಾರು ಕಳುಹಿಸಿದ ವ್ಯಕ್ತಿಗಳು ಬಂದು ತನುಷಾರ ಉದ್ದೇಶವನ್ನು ಅರುಹಿದರು. ಪರ್ಜುಡಾಸರು ತುಂಬಾ ಸಂತೋಷವಾಗಿ ನಾಲ್ಕೈದು ತಿಂಗಳಿಂದ ತಮ್ಮಲ್ಲಿ ಬರುತ್ತಿದ್ದ ಆ ಬ್ರಾಹ್ಮಣ ಯುವಕರ ಪ್ರಾಮಾಣಿಕ ಸ್ವಭಾವ ಹಾಗೂ ಬುದ್ಧಿಮಟ್ಟವನ್ನು ಗಮನದಲ್ಲಿರಿಸಿಕೊಂಡು ಅತ್ಯುತ್ತಮ ಮಟ್ಟದ ಶಿಫಾರಸ್ಸು ಪತ್ರವನ್ನು ಕಳುಹಿಸಿದರು. ಈ ಈರ್ವರು ಬ್ರಾಹ್ಮಣ ಯುವಕರು ಎಲ್ಲಾ ವ್ಯವಹಾರಗಳನ್ನು ನಿರ್ವಹಿಸಲು ಯೋಗ್ಯರಿರುವರೆಂಬುದನ್ನು ತಿಳಿಸಿದರು. ಅನಂತರ ಪಲ್ಲಕ್ಕಿಯನ್ನು, ಸೇವಕರನ್ನು ಹಾಗೂ ಇತರ ಉಮ್ರಾವುಗಳನ್ನು ಅವರ ಜೊತೆ ಕಳುಹಿಸಿ, ತನುಷಾರನ್ನು ಮೊದಲ ಬಾರಿಗೆ ಭೇಟಿಯಾಗುವ ನಿಮಿತ್ತ ಅವರಿಗೆ ನೀಡಲು ಉಡುಗೊರೆಯನ್ನೂ ಕೊಟ್ಟು ಕಳುಹಿಸಿದರು. ಇದರ ಜೊತೆಗೆ ಈ ಯುವಕರ ಸಂಪತ್ತು ದಿನದಿಂದ ದಿನಕ್ಕೆ ಹೆಚ್ಚಾಗಲೆಂದು ಆಶೀರ್ವದಿಸಿ ಕಳುಹಿಸಿಕೊಟ್ಟರು.

ಯುನಾಯತ್‌ನಾಮದ ಕಗ್ಗಂಟನ್ನು ಮಾದಣ್ಣ ಸ್ಪಷ್ಟಪಡಿಸುತ್ತಾರೆ

ಅಕ್ಕಣ ಮತ್ತು ಮಾದಣ್ಣ ತನುಷಾರ ದರ್ಬಾರಿಗೆ ಬಂದು ತಲುಪಿದಾಗ ಅವರ ವಿನಮ್ರತೆ, ಅಹ್ಲಾದಕರ ನಡತೆ, ಸಭ್ಯತೆ ಇದನ್ನು ಕಂಡು ಸಂತೋಷಗೊಂಡ ತನುಷಾರು ಅವರನ್ನು ಆತ್ಮೀಯತೆಯಿಂದ ಬರಮಾಡಿಕೊಂಡು ಅವರ ಹೆಸರನ್ನು ಕೇಳಿದರು. ಅಕ್ಕಣ ಮಾದಣ್ಣರು ತಮ್ಮ ಜೀವನದ ಈ ಒಳ್ಳೆಯ ತಿರುವಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ, ವಿನಯಪೂರ್ವಕವಾಗಿ ತಾವು ತಂದಿದ್ದ ಉಡುಗೊರೆಗಳನ್ನು ಅವರಿಗೆ ಸಲ್ಲಿಸಿ, ತಲೆಬಾಗಿ ತನುಷಾರಿಗೆ ತಮ್ಮ ಹೆಸರನ್ನು ಹೇಳಿದರು. ತನುಷಾರು ದೆಹಲಿಯ ಬಾದಷಾಹರಿಂದ ಬಂದ ಯುನಾಯತ್‌ನಾಮದ ಬಗ್ಗೆ ವಿಚಾರಿಸಿದಾಗ ಅವರು ಅದು ನಿರ್ದಿಷ್ಟವಾಗಿ ಖಾಸಗಿ ವ್ಯವಹಾರವಾಗಿರುವುದರಿಂದ ತಮ್ಮನ್ನು ತನುಷಾರ ಖಾಸಗಿ ಕೋಣೆಗೆ ಕರೆದೊಯ್ದರೆ ಯುನಾಯತ್ ನಾಮದ ಬಗ್ಗೆ ಹೇಳಲು ಅನುಕೂಲವಾಗುವುದೆಂದು ಕೋರಿಕೊಂಡರು. ತನುಷಾರು ಸಂತೋಷಪಟ್ಟು ಅವರನ್ನು ತಮ್ಮ "ಕುಲಾಯತ್ ಕಾನಾ"ಗೆ ಬರಮಾಡಿಕೊಂಡರು. ಅಕ್ಕಣ ಮಾದಣ್ಣರು ಅಲ್ಲಿ ಒಂದು ಬೋಗುಣಿಯಲ್ಲಿ ನೀರನ್ನು ತರಿಸಿಕೊಂಡು ದೆಹಲಿಯ ಬಾದಷಾಹರಿಂದ ಬಂದ ಪತ್ರವನ್ನು ನೀರಿನ ಮೇಲೆ ಹರಡಿದಾಗ ಕುತುಹಲಕಾರಿಯಾಗಿ ಆ ಬರಹವು ಸ್ಪಷ್ಟವಾಗತೊಡಗಿತ್ತು.

ಅಕ್ಕಣ ಮಾದಣ್ಣರು ಪ್ರಧಾನಮಂತ್ರಿಯರಾಗಿ ನೇಮಕಗೊಂಡರು

ತನುಷಾರು ಆ ಪತ್ರದ ಒಕ್ಕಣೆಯನ್ನು ತಿಳಿದುಕೊಂಡು ಹರ್ಷದಿಂದ ಈ ಯೋಗ್ಯ ಬ್ರಾಹ್ಮಣ ಯುವಕರನ್ನು ಪ್ರಧಾನಮಂತ್ರಿಯರನ್ನಾಗಿ ನೇಮಿಸಿಕೊಂಡರೆ ತಮ್ಮ ಸರಕಾರದ ಎಲ್ಲಾ ಕಾರ್ಯಕ್ಷೇತ್ರಗಳಿಗೆ ಒಳಿತೆಂದು ತಿಳಿದು ಸರಕಾರದ ಮುದ್ರೆಯನ್ನು ಕೂಡಲೇ ಅವರ ಕೈಗೆ ನೀಡಿ ಅವರಿಂದ ಬಾದಷಾಹರ ಪತ್ರಕ್ಕೆ ಸೂಕ್ತ ಉತ್ತರ ನೀಡಿ ತಕ್ಷಣ ಆ ಪತ್ರವನ್ನು ದೆಹಲಿಯ ಬಾದಷಾಹರಿಗೆ ರವಾನಿಸುವ ವ್ಯವಸ್ಥೆಯನ್ನು ಮಾಡಿದರು. ಅವರೀರ್ವರ ಜೊತೆ ಆನೆ, ಕುಲಾಯತ್, ಹಾಗೂ ನಂಖತ್ ಎಲ್ಲಾ ನೀಡಿ ಎಲ್ಲಾ ಉಮ್ರಾವೋಗಳನ್ನು, ಸರದಾರರನ್ನು, ನಾಗರಿಕ ಹಾಗೂ ಸೈನ್ಯಾಧಿಕಾರಿಗಳನ್ನು ಬರಲು ಆದೇಶಿಸಿ ಅವರ ಉಪಸ್ಥಿತಿಯಲ್ಲಿ ಅಕ್ಕಣ ಮಾದಣ್ಣರನ್ನು ಪ್ರಧಾನಮಂತ್ರಿಗಳಾಗಿ ನೇಮಿಸಿಕೊಂಡ ವಿಷಯವನ್ನು ಘೋಷಿಸಿದರು. ಅವರೆಲ್ಲರನ್ನು ಅಕ್ಕಣ ಮಾದಣ್ಣರ ನಿವಾಸಕ್ಕೆ ನಝುರ್ ಹಾಗೂ ಉಡುಗೊರೆಗಳ ಸಮೇತ ತಲುಪಿಸಲು ಆದೇಶಿಸಿ ಇನ್ನು ಮುಂದಿನ ಎಲ್ಲಾ ಸಾರ್ವಜನಿಕ ವ್ಯವಹಾರಗಳಿಗೆ ಅವರೀರ್ವವರ ಆಜ್ಞೆಯನ್ನು ಪಾಲಿಸಬೇಕೆಂದು ಆದೇಶಿಸಿದರು.

ರಾಜ್ಯದ ಪ್ರಮುಖರು ನಝುರ್ ಹಾಗೂ ಗೌರವಾದರಗಳನ್ನು ಸಲ್ಲಿಸಿದರು

ತನುಷಾರ ಆದೇಶವನ್ನು ಪಾಲಿಸಿ ಎಲ್ಲಾ ಉಮ್ರಾವೋಗಳು ಹಾಗೂ ಸರದಾರರು ಅವರೀರ್ವರನ್ನು ಗಜಪಡೆಗಳ ಜೊತೆ ಅವರ ನಿವಾಸಕ್ಕೆ ತಲುಪಿಸಿ ನಝುರ್‌ಗಳನ್ನು ನೀಡಿ ಪ್ರಧಾನ ಮಂತ್ರಿಗಳ ಮುಂದಿನ ಎಲ್ಲಾ ಕಾರ್ಯ ಕ್ಷೇತ್ರಗಳ ವ್ಯವಹಾರಗಳ ಆದೇಶವನ್ನು ಪಾಲಿಸುವ ಭರವಸೆಯನ್ನು ನೀಡಿದರು.

ಮಾದಣ್ಣ ಆ ರಾಜ್ಯದಲ್ಲಿ ನೆಲೆಸಿದರು

ತನುಷಾರು ಅವರನ್ನು ಪ್ರಧಾನಮಂತ್ರಿಗಳಾಗಿ ನೇಮಿಸಿದ ಕ್ಷಣದಿಂದ ಅಕ್ಕಣ ಮಾದಣ್ಣರು ಅವರ ಸಂಸ್ಥಾನದ ಎಲ್ಲ ವ್ಯವಹಾರಗಳನ್ನು ಸರಕಾರದ ಮೇಲಿನ ಗೌರವದಿಂದ ದಕ್ಷತೆಯಿಂದ ವ್ಯವಹರಿಸಿ, ಅವರಿಗೆ ನಿಯೋಜಿಸಿದ ನಿವಾಸದಲ್ಲಿ ಹೆಂಗಳೆಯರೊಡನೆ ಸಭ್ಯ ನಡತೆಯಿಂದ ನೆಲೆಸಿದರು. ಹಾಗೂ ಇಡೀ ಸಂಸ್ಥಾನವನ್ನು ಚತುರತೆಯಿಂದ ಆಡಳಿತಕ್ಕೆ ಒಳಪಡಿಸಿದರು. ದುರ್ನಡತೆಯಿಂದ ಕೂಡಿದ ಜಮೀನ್ದಾರರ ಮೇಲೆ ಹತೋಟಿಯನ್ನು ಜಾರಿಗೆ ತಂದರು. ರಾಜ್ಯದ ಎಲ್ಲಾ ವರ್ಗದವರ ಮೇಲೆ ಸುಸೂತ್ರವಾಗಿ ಆಡಳಿತದ ಕ್ರಮ ಕೈಗೊಂಡರು.

ಮಾದಣ್ಣನವರ ಆಡಳಿತದಲ್ಲಿ ದೇವಸ್ಥಾನಗಳ ನಿರ್ಮಾಣ ಹಾಗೂ ಅನ್ನ ಛತ್ರಗಳ ಸ್ಥಾಪನೆ

ಅವರ ಹೆಸರನ್ನು ಪ್ರಪಂಚದಲ್ಲಿ ಶಾಶ್ವತವಾಗಿರಿಸಲು ಪಗೋಡಗಳನ್ನು ನಿರ್ಮಿಸಿ ದೇವರ ಮೂರ್ತಿಯ ಸಮೀಪ ತಮ್ಮ ಮೂರ್ತಿಯನ್ನು ನಿರ್ಮಿಸಿ ಅಲ್ಲಿ ನಿರಂತರವಾಗಿ ಅನ್ನ ಸಂತರ್ಪಣೆ, ಬ್ರಾಹ್ಮಣರಿಗೆ ಆಹಾರ ಧಾನ್ಯಗಳನ್ನು ದಾನವಾಗಿ ನೀಡುವ ವ್ಯವಸ್ಥೆ ಮಾಡಿದರು. ರಾಮೇಶ್ವರದಿಂದ ಕಾಶಿಯವರಿಗಿನ ಎಲ್ಲಾ ತೀರ್ಥಯಾತ್ರಾ ಸ್ಥಳಗಳಲ್ಲಿ ಈ ಅನ್ನ ಸಂತರ್ಪಣೆ ಹಾಗೂ ಬ್ರಾಹ್ಮಣರಿಗೆ ದಾನವನ್ನು ನೀಡುವ ವ್ಯವಸ್ಥೆ ಜಾರಿಗೆ ತಂದರು.

ಮಾದಣ್ಣನವರ ದತ್ತಿ ಆಡಳಿತದ ವಿವರಣೆ

ಸರಕಾರದ ಎಲ್ಲಾ ವ್ಯವಹಾರಗಳನ್ನು ತನುಷಾರ ಆದೇಶದ ಪ್ರಕಾರ ಪಾಲಿಸಿ ಪ್ರತಿದಿನ ಬೆಳಗ್ಗೆ ತನುಷಾರಿಗೆ ವರದಿ ಒಪ್ಪಿಸುತ್ತಿದ್ದರು. ಎಲ್ಲಾ ಹಳ್ಳಿಗಳ ವಿವಿಧ ಸೂಬಗಳನ್ನು ಅವರ ಅಧಿಪತ್ಯಕ್ಕೆ ಒಳಪಡಿಸಿ ಎಲ್ಲ ವ್ಯಾಪಾರ ವ್ಯವಹಾರಗಳನ್ನು ದಕ್ಷತೆಯಿಂದ ನಿರ್ವಹಿಸಿದರು. ಎಲ್ಲಾ ವಸಾಹತುಗಳನ್ನು ನವೀಕರಿಸಿ ವರ್ಷದಿಂದ ವರ್ಷಕ್ಕೆ ಅವುಗಳ ಸಂಖ್ಯೆಯನ್ನು ವಿಸ್ತರಿಸಿದರು. ಇಷ್ಟೆಲ್ಲವನ್ನು ಅಲ್ಲಿನ ಜಮೀನ್ದಾರರ ಹಾಗೂ ಅಲ್ಲಿನ ನಿವಾಸಿಗಳ ಒಪ್ಪಿಗೆಯನ್ನು ಪಡೆದು ಅವರೆಲ್ಲರ ಒಳಿತನ್ನು ಗಮನದಲ್ಲಿರಿಸಿಕೊಂಡು ಯಾವುದೇ ಹಿಂಸೆಯ ಮಾರ್ಗವನ್ನು ಅನುಸರಿಸದೆ ಬಂದ ಆದಾಯವನ್ನು ಎಲ್ಲರಿಂದ ಅನುಮೋದಿಸಿ ಅವರ ರೀತಿ ರಿವಾಜುಗಳನ್ನು, ಜಮೀನ್ದಾರರ ಹಾಗೂ ಮೀರಾಸಿದಾರರ ಅಂತಸ್ಥಿಗೆ ಧಕ್ಕೆ ಬಾರದಂತೆ ಅವರಿಗೆ ಸೂಕ್ತ ಇನಾಮುಗಳನ್ನು, ಬ್ರಾಹ್ಮಣರಿಗೆ ಹಾಗೂ ಪಗೋಡಕ್ಕೆ ಭೂಮಿಗಳನ್ನು ನೀಡಿದರು.

ಪುರಾತನ ಕಾಲದಿಂದ ಅವರಲ್ಲಿದ್ದ ಆಸ್ತಿಯನ್ನು ಸಂರಕ್ಷಿಸಿ, ಪೋಷಿಸಿ ಸೇವಾಮನೋಭಾವದಿಂದ ಸರಕಾರದ ಎಲ್ಲಾ ವ್ಯವಹಾರಗಳನ್ನು ನಿರ್ವಹಿಸಿದರು. ಸಂಸ್ಥಾನದ ಎಲ್ಲಾ ಅಖಬಾರದ ಹಾಗೂ ಪ್ರಾಂತ್ಯಗಳ ಕಾರ್ಯವೈಖರಿಯ ವರದಿಯನ್ನು ಪ್ರತಿ ದಿನವೂ ತನುಷಾರಿಗೆ ಒಪ್ಪಿಸುತ್ತಿದರು.

ಮಾದಣ್ಣನ ತಮ್ಮಂದಿರನ್ನು ಸೇವೆಗೆ ತೆಗೆದುಕೊಳ್ಳಲಾಯಿತು

ಹನುಮುಕೊಂಡದಿಂದ ಮಾದಣ್ಣನವರು ಅವರ ತಂದೆ ತಾಯಿಯವರನ್ನು ಹಾಗೂ ಉಳಿದ ತಮ್ಮಂದಿರಾದ ವಿಶ್ವನಾಥ ಹಾಗೂ ಮೂರ್ತುಂಜಯುಡು ಇವರೀರ್ವರನ್ನು ಕರೆತಂದರು. ವಿಶ್ವನಾಥರನ್ನು ತನೂಷಾದ ಸೇನಾ ನಾಯಕನಾಗಿ ಹಾಗೂ ಮೂರ್ತುಂಜಯುಡು ಅವರನ್ನು ಕಾರ್ಯದರ್ಶಿಯಾಗಿ ನೇಮಿಸಿದರು.

ಎಲ್ಲಾ ಅಣ್ಣ ತಮ್ಮಂದಿರು ಒಗ್ಗಟ್ಟಾಗಿ ತನುಷಾರ ಸರಕಾರಿ ಆಡಳಿತದಲ್ಲಿ ಕಾರ್ಯವಹಿಸಿದರು.

ಮಾದಣ್ಣ ಅವರ ನಿವಾಸವನ್ನು ನಿರ್ಮಿಸುವರು

ಸರ್ಕಾರಿ ವ್ಯವಹಾರವನ್ನು ನಿರ್ವಹಿಸುತ್ತಾ ನಾಲ್ಕು ಜನ ಅಣ್ಣ ತಮ್ಮಂದಿರು ತಮ್ಮ ಸ್ನೇಹಿತ ಹಾಗೂ ವಿದ್ವಾನ್ ಮದ್ವಪಂತ್ ಕೌಹರ್ ಭಟ್ಟರ ಸಲಹೆ ಮೇರೆಗೆ ಪೂರ್ವ ದಿಕ್ಕಿನ ನಾಗೂಲ್‌ಸ್ಥಿಂತ್ ಅನ್ನುವ ಪ್ರದೇಶದಲ್ಲಿ (ಸಾಹಬಂದಾ) ವಸತಿ ಸಮುಚ್ಚಯ ನಿರ್ಮಿಸುವ ನಿರ್ಧಾರ ಕೈಗೊಳ್ಳುತ್ತಾರೆ. (ಪು. ೪೧ಎ)

ಬ್ರಾಹ್ಮಣರೆಲ್ಲರೂ ಸೇರಿ ಶಾಸ್ತ್ರವನ್ನೆಲ್ಲಾ ಓದಿ ಒಂದು ಪ್ರಶಸ್ತವಾದ ಸಮಯದಲ್ಲಿ ಮಾಘಶುದ್ಧ ಪಂಚಮಿಯಂದು ೨೪ನೇ ತಾರೀಕು ಜನವರಿ ಕ್ರಿ.ಶ. ೧೬೭೪ರಂದು ನಿವಾಸದ ಭದ್ರಬುನಾದಿಯನ್ನು ಹಾಕಿದರು. ಮೂರು ತಿಂಗಳಲ್ಲೇ ಮನೆಯ ನಿರ್ಮಾಣ ಕಾರ್ಯ ಮುಗಿಯಿತು. ಅವರೆಲ್ಲರೂ ೨೨ನೇ ಏಪ್ರಿಲ್ ಕ್ರಿ.ಶ. ೧೬೭೪ರಂದು ಆ ನಿವಾಸಕ್ಕೆ ಆಗಮಿಸಿ ೧೧ ವರ್ಷಗಳ ಕಾಲ ಅಲ್ಲಿ ವಾಸಿಸಿದರು. ಆರೋಗ್ಯಕರವಾಗಿ ಉತ್ತಮ ರೀತಿಯಲ್ಲಿ ಸರಕಾರದ ಎಲ್ಲಾ ವ್ಯಾಪಾರ ವ್ಯವಹಾರಗಳನ್ನು ಚೆನ್ನಾಗಿ ನಿರ್ವಹಿಸಿ, ತಮ್ಮ ಹಾಗೂ ತನುಷಾರ ಭೂಮಿಯನ್ನು ಬ್ರಾಹ್ಮಣರ ಮೂಲಕ ಹಂಚಿದರು.

ಗೋಲ್ಕಂಡವನ್ನು ಆಕ್ರಮಿಸುವ ಔರಂಗಜೇಬನ ಪ್ರಯತ್ನ ಸೋತಿತು

ದೆಹಲಿಯ ಬಾದಷಾಹರವರಿಗೆ ಅಕ್ಕಣ ಮಾದಣ್ಣರೆನ್ನುವ ಬ್ರಾಹ್ಮಣ ಯುವಕರ ದಕ್ಷ ನಿರ್ವಹಣೆಯಿಂದ ತನುಷಾ ರಾಜ್ಯದವರು ಬಾದಷಾಹರವರ ಆದೇಶವನ್ನು ಉಲ್ಲಂಘಿಸುತ್ತಿದ್ದಾರೆ ಎನ್ನುವುದು ಗಮನಕ್ಕೆ ಬಂದಿತು.

ಕೂಡಲೇ ದೆಹಲಿಯ ಬಾದಷಾಹರು ಔರಂಗಜೇಬನ ನೇತೃತ್ವದಲ್ಲಿ ೧೦,೦೦೦ ಅಶ್ವಗಳ ಹಾಗೂ ಅಷ್ಟೇ ಸಂಖ್ಯೆಯ ಕಾಲಾಳು ಪಡೆಯನ್ನು ಜೊತೆಯಾಗಿಸಿ ತನುಷಾರ ರಾಜ್ಯವನ್ನು ಬಗ್ಗು ಬಡಿಯಲು ಹಾಗೂ ಸರಕಾರದ ನಿರ್ವಹಣೆಯನ್ನು ತಮ್ಮ ಆಳ್ವಿಕೆಗೆ ಪಡೆಯಲು ಕಳುಹಿಸಿದರು. ಔರಂಗಜೇಬನ್ನು ದೆಹಲಿಯಿಂದ ಹೊರಟು ಹೈದರಾಬಾದಿನವರೆಗಿನ ಎಲ್ಲಾ

ಪ್ರದೇಶವನ್ನು ಆಕ್ರಮಿಸಿ, ಹೈದ್ರಾಬಾದ್‌ಗೆ ತಲುಪುವರು. (ಮೊದಲ ಮೊಘಲ್ ಆಕ್ರಮಣ ಜುಲೈ ೧೬೮೫ನೇ ಇಸವಿ) ಹೈದರಾಬಾದಿಗೆ ಅವರ ಸೈನ್ಯದೊಂದಿಗೆ ಆಗಮಿಸಿ ಕೋಟೆಯ ಪಶ್ಚಿಮ ದಿಕ್ಕಿನಲ್ಲಿ ತನುಷಾರೊಂದಿಗೆ ನಾಲ್ಕು ತಿಂಗಳು ಹಾಗೂ ೮ ದಿನಗಳ ಕಾಲ ಯುದ್ಧ ಮಾಡಿದರು. ಯಾವಾಗ ಆ ಕೋಟೆಯನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲವೋ ಆಗ ಕೋಟೆಯ ಸುತ್ತ ಆಳವಾದ ಕಂದಕವನ್ನು ನಿರ್ಮಿಸಿ ಅದರಲ್ಲಿ ಬಂದೂಕಿನ ಮದ್ದಿನ ಪುಡಿಯನ್ನು ತುಂಬಿ ಅದಕ್ಕೆ ಬೆಂಕಿ ಇಟ್ಟು ಇಡೀ ಕೋಟೆಯನ್ನೇ ನಾಶ ಮಾಡುವ ಹುನ್ನಾರದಲ್ಲಿದ್ದರು. ಆದರೆ ಅಷ್ಟರಲ್ಲಿ ಅಕ್ಕಣ್ಣ ಹಾಗೂ ಮಾದಣ್ಣರು ತಮ್ಮ ಸೈನ್ಯಕ್ಕೆ ಈ ವಿಚಾರವನ್ನು ತಿಳಿಸಿ ರಾತ್ರಿ ಬೆಳಗಾಗುವುದರೊಳಗೆ ಆ ಕಂದಕವನ್ನು ಸಂಪೂರ್ಣವಾಗಿ ಮುಚ್ಚಿಬಿಟ್ಟರು. ಹಾಗಾಗಿ ಔರಂಗಜೇಬನ ಕುತುಂತ್ರ ಫಲ ಕೊಡಲಿಲ್ಲ. ಅಕ್ಕಣ್ಣ ಮತ್ತು ಮಾದಣ್ಣರು ತನುಷಾರಿಗೆ ಪ್ರಧಾನಮಂತ್ರಿಯಾಗಿರುವವರೆಗೆ ತನುಷಾರನ್ನು ಆಕ್ರಮಿಸುವುದು ಹಾಗೂ ಡಕ್ಕನ್ ಅಧಿಪತ್ಯವನ್ನು ಸಾಧಿಸುವುದು ಅಸಾಧ್ಯವೆಂದು ಅವರಿಗೆ ತಿಳಿಯಿತು. ಈ ವಿಷಯವನ್ನು ದೆಹಲಿಯ ಬಾದಷಾಹರಿಗೆ ತಿಳಿಸಿದರು.

ರಾಯ ಯಲ್ಲಮ್ಮರ ಜೊತೆ ಅಕ್ಕಣ್ಣರವರ ಜಗಳ

ಒಮ್ಮೆ ಅಕ್ಕಣ್ಣನು ಆಸ್ಥಾನದಿಂದ ಬರುತ್ತಿರುವಾಗ ಬೀದಿಯ ಕೊನೆಯಲ್ಲಿ ರಾಯ ಅತ್ತಮತ್ತರೊಡೂರವರ ಪಲ್ಲಕ್ಕಿ ಬರುವುದು ಕಾಣಿಸಿತು. ಅಕ್ಕಣ್ಣನವರ ಹಿಂಬಾಲಕರು ರಾಯರ ಪಲ್ಲಕ್ಕಿಯನ್ನು ಮುಂದೆ ಹೋಗಲು ಅವಕಾಶ ಮಾಡಿಕೊಡದೇ ಜಗಳವಾಡಲು ಶುರು ಮಾಡಿದರು ಈ ಜಗಳ ರಾಯರ ಪಲ್ಲಕ್ಕಿಯನ್ನು ಮುರಿಯುವವರೆಗೆ ಮುಂದುವರೆಯಿತು. ಆಮೇಲೆ ಈ ವಿಷಯ ಮಾದಣ್ಣಪಂತೂರವರಿಗೆ ತಿಳಿದಾಗ ತಮ್ಮನ ಮೇಲೆ ಸಿಟ್ಟಾದರು. ರಾಯಯಲ್ಲಮ್ಮತ್ತರು ತಮಗಿಂತ ಹೆಚ್ಚಿನ ಪದವಿಯಲ್ಲಿದ್ದರಲ್ಲದೆ ದೆಹಲಿಯ ಬಾದಷಾಹರಿಗೆ ಡಕ್ಕನ್ ಪ್ರಾಂತ್ಯದ ಅಕಬಾರವನ್ನು ಬರೆಯುವ ಕೆಲಸ ಅವರದಾಗಿತ್ತು. ಅವರೊಡನೆ ವೈರತ್ವದಿಂದ ಒಳಿತಾಗದೆಂದು ತುಂಬಾ ಬೇಸರಿಸಿದರು. ಹಾಗೆಯೇ ಸರ್ಕಾರದ ವ್ಯವಹಾರವನ್ನು ೧೨ ವರ್ಷಗಳ ಕಾಲ ಸುಸೂತ್ರವಾಗಿ ನಡೆಸಿಕೊಂಡು ಹೋದರು.

ಮಾದಣ್ಣನವರು ತಮ್ಮ ಸೋಲಿನ ಕನಸನ್ನು ಕಂಡರು

ಒಂದು ರಾತ್ರಿ ಲಕ್ಷ್ಮೀದೇವಿ ಅಕ್ಕಣ್ಣ ಮಾದಣ್ಣನವರ ಕನಸಲ್ಲಿ ಬಂದು ೧೨ ವರ್ಷ ಮುಗಿದಕೂಡಲೇ ತಾನು ಆ ಜಾಗದಿಂದ ಹೊರಡುವ ಸೂಚನೆಯನ್ನು ನೀಡಿ ಆಮೇಲೆ ಯಾವುದೇ ಶ್ರೀಮಂತಿಕೆಗೆ ಅವಕಾಶವಿಲ್ಲವೆಂದಳು. ಮರುದಿನ ಮಾದಣ್ಣನವರು ಅವರೆಲ್ಲಾ ಸಂಬಂಧಿಕರಿಗೆ ಬರ ಹೇಳಿ ಅವರ ಬಳಿ ಕನಸಿನ ವಿಚಾರ ತಿಳಿಸಿ ಅವರಿಗೂ ಹಾಗೂ ಅಕ್ಕಣ್ಣ ಮಾದಣ್ಣರ ಸ್ನೇಹಿತರಿಗೂ ಸಾಕಷ್ಟು ಹಣವನ್ನು ನೀಡಿದರು.

ಮಾದಣ್ಣರು ತಮ್ಮ ತಮ್ಮಂದಿರಿಗೆ ಪರಗಣದ ಜವಾಬ್ದಾರಿಯನ್ನು ವಹಿಸಿದರು

ಮಾದಣ್ಣನು ಗೋಲ್ಕೊಂಡ, ಹಸನಾಬಾದ್ ಹಾಗೂ ರಾಜಗೋಪಾಲಪೇಟ, ಈ ಮೂರು ಪರಗಣದ ಜಮಿನ್ದಾರಿಯನ್ನು ತನ್ನ ತಮ್ಮಂದಿರಾದ ವಿಶ್ವನಾಥ ಹಾಗೂ ಮೃತ್ಯುಂಜುಯುಡು ಅವರಿಗೆ ವಹಿಸಿ ತನ್ನ ತಂದೆ ತಾಯಿಯವರನ್ನು ಅವರ ಸುಪರ್ದಿಯಲ್ಲಿರಿಸಿದರು.

ಮಾದಣ್ಣನವರ ರಾಯಯಲ್ಲಮ್ಮರ ಜೊತೆ ಸ್ನೇಹ ಪಡೆಯುವ ಪ್ರಯತ್ನ

ರಾಯ ಯಲ್ಲಮ್ಮತ್ತರು ಇವರನ್ನು ನಾಶಪಡಿಸುವ ಯೋಜನೆಯಲ್ಲಿದ್ದಾಗ ಮಾದಣ್ಣರು ಸ್ವತಃ ಅವರ ನಿವಾಸಕ್ಕೆ ತೆರಳಿ ಅಕ್ಕಣ್ಣನವರ ತಪ್ಪನ್ನು ಕ್ಷಮಿಸಬೇಕೆಂದು ಬಹಳಷ್ಟು ಕೇಳಿಕೊಂಡರು ಆದರೆ ರಾಯ ಯಲ್ಲಮ್ಮತ್ತರು ಈ ಕೋರಿಕೆಯನ್ನು ಮನ್ನಿಸದೇ ನಯವಂಚಕರಾಗಿ ತಾನೇನು ಅಕ್ಕಣ್ಣನವರಿಗೆ ಯಾವುದೇ ಕೆಟ್ಟದ್ದನ್ನು ಭಾವಿಸದೆ ಬೀದಿಯಲ್ಲಿ ಅವರ ಚಾರಿತ್ರ್ಯವಧೆ ಮಾಡಲ್ಲವೆಂದರು. ಅವರ ಮಾತಿನ ವ್ಯಂಗ್ಯವರಿತು ತಮ್ಮ ಕೋರಿಕೆಯನ್ನು ಅವರು ಮನ್ನಿಸುವುದಿಲ್ಲವೆಂದು ಅರಿತು ತಮ್ಮ ನಿವಾಸಕ್ಕೆ ಹಿಂತಿರುಗಿದರು.

ಮಾದಣ್ಣ ಅಕ್ಕಣ್ಣರನ್ನು ರಾಯ ಯಲ್ಲಮ್ಮತ್ತರು ಕೊಲ್ಲುವ ಪಿತೂರಿ

ರಾಯ ಯಲ್ಲಮ್ಮತ್ತರು ತಮ್ಮ ಸಹಚರರೊಡನೆ ಸಮಾಲೋಚನೆ ನಡೆಸಿ ಆ ಸಮಯದಿಂದ ಅಕ್ಕಣ್ಣ ಮಾದಣ್ಣರನ್ನು ಬಗ್ಗು ಬಡಿಯಬೇಕಾದರೆ ಮೊದಲು ತನುಷಾರು ಅವರ ಬಗ್ಗೆ ಅಸಮಾಧಾನ ಹೊಂದುವ ಹಾಗೆ ಮಾಡಬೇಕೆಂದು ತಿಳಿದುಕೊಂಡರು. ಆಮೇಲೆ ಯಲ್ಲಮ್ಮತ್ತರು ಸುಳ್ಳು ಪತ್ರಗಳನ್ನು ಮಾದಣ್ಣ ಅಕ್ಕಣ್ಣರವರ ಕೈ ಬರಹದಲ್ಲಿ "ಔರಂಗಜೇಬನಿಗೆ ತನುಷಾರ ಕೋಟೆಯನ್ನು ತಮ್ಮಿಂದ ಅವರಿಗೆ ಕೊಡಲು ಸಾಧ್ಯವೆಂದು" ಬರೆದು ಸೇವಕರ ಮೂಲಕ ಕಳುಹಿಸುತ್ತಾರೆ.

ಆಮೇಲೆ ಗೌಪ್ಯವಾಗಿ ಈ ವಿಷಯವನ್ನು ತನುಷಾರಿಗೆ ತಿಳಿಸಿ ಆ ದೂತರನ್ನೂ, ಪತ್ರವನ್ನೂ ವಶಪಡಿಸಿಕೊಳ್ಳುವಂತೆ ಮಾಡುತ್ತಾರೆ. ಹಾಗೂ ಈ ರೀತಿಯ ರಹಸ್ಯ ಪತ್ರಗಳು ತನುಷಾರ ನಾಶಕ್ಕಾಗಿ ಔರಂಗಜೇಬನಿಗೆ ಆಗಾಗ ರವಾನೆಯಾಗುತ್ತಿತ್ತೆಂದೂ ತೋರಿಸಿಕೊಟ್ಟರು.

ತನುಷಾರು ಈ ಕಾಗದವನ್ನು ಓದಿ ಕೈಬರಹವನ್ನು ಪರಿಶೀಲಿಸಿ ಖಂಡಿತವಾಗಿ ಇದು ಅಕ್ಕಣ್ಣ, ಮಾದಣ್ಣರ ಕೈಬರಹವೇ ಸರಿಯೆಂದು ತೀರ್ಮಾನಿಸಿ ತಾನು ಇಷ್ಟೊಂದು ನಂಬಿಕೆ ಇಟ್ಟವರು ಈ ಮಟ್ಟಕ್ಕೆ ದ್ರೋಹ ಮಾಡಲು ಮುಂದುವರೆದ ವಿಷಯವನ್ನು ವಿಚಾರಿಸಲು ಅಕ್ಕಣ್ಣ ಮಾದಣ್ಣರನ್ನು ಆಸ್ಥಾನಕ್ಕೆ ಬರಲು ಆದೇಶಿಸಿದರು.

ಅವರು ಬಂದ ಕೂಡಲೇ ಆ ಪತ್ರವನ್ನು ಅವರ ಕೈಗೆ ನೀಡಿ ರಾಜ್ಯವನ್ನು ಆಳುವ ಪ್ರಭುವನ್ನೇ ನಾಶಗೊಳಿಸುವ ಕುತಂತ್ರಿಗಳಿಗೆ ಯಾವ ಶಿಕ್ಷೆ ನೀಡಬೇಕೆಂದು ಅವರನ್ನೇ ಕೇಳಿದರು. ಅದಕ್ಕೆ ಅಕ್ಕಣ್ಣ ಮಾದಣ್ಣರು ಅಂತಹ ಕ್ರೂರಿಗಳಿಗೆ ಯಾವುದೇ ಅವಕಾಶ ನೀಡದೆ ಕೂಡಲೇ ಕ್ರೂರವಾಗಿ ಶಿಕ್ಷಿಸಬೇಕೆಂದು ತಿಳಿಸಿದರು. ನಂತರ ತನುಷಾರು ನೀಡಿದ ಪತ್ರವನ್ನು ಕೂಲಂಕುಷವಾಗಿ ಓದಿ ನಿಜಾಂಶವನ್ನು ತಿಳಿದು ತನುಷಾರಿಗೆ ಈ ಪತ್ರದ ಬರಹ ತಮ್ಮ ಕೈ ಬರಹದಂತಿದ್ದರೂ ಇದು ರಾಯಯಲ್ಲಮ್ಮತ್ತರ ಕುತಂತ್ರದ ಪರಿಣಾಮವೆಂದು ಅವರಿಗೆ ಯಾರ ಕೈಬರಹವನ್ನಾದರೂ ಯಥಾವತ್ತಾಗಿ ಬರೆಯುವ ಕಲೆ ಇರುವುದರಿಂದ ಇದು ಅವರ ಕೈವಾಡವೇ ಇರಬೇಕೆಂದು ತಿಳಿಹೇಳಿದರು. ಕೊನೆಗೆ ತನುಷಾರು ದೀರ್ಘವಾಗಿ ಯೋಚಿಸಿ ಅವರಿಬ್ಬರನ್ನು ಕ್ಷಮಿಸಿ ಹಿಂತಿರುಗಲು ಅನುಮತಿ ನೀಡಿದರು. ಹಾಗಾಗಿ ಯಲ್ಲಮ್ಮತ್ತರ ಕುತಂತ್ರ ಇಲ್ಲಿ ಫಲಿಸದೆ ನಿರಾಸೆಯಾಯಿತು.

ಆಮೇಲೆ ಅವರು ಜನ್ನಾನಮಹಲ್‌ನಿಂದ ಗುಲಾಮ ಹುಡುಗಿಯರನ್ನು ಕರೆಯಿಸಿ ಅವರಿಗೆ ಸಾಕಷ್ಟು ಹಣವನ್ನು ನೀಡಿ ಅಕ್ಕಣ್ಣ ಮಾದಣ್ಣರನ್ನು ಕೊಲ್ಲುವ ಯೋಜನೆಯನ್ನು ಮುಂದಿಟ್ಟರು.

ಮಾದಣ್ಣರವರು ಒಂದು ದೇವಸ್ಥಾನ ಹಾಗೂ ಸರೋವರವನ್ನು ನಿರ್ಮಿಸಿದರು

ಸಾವಿನ ಸಮಯ ಸಮೀಪಿಸಿತೆಂದು ತಿಳಿದು ಭವಿಷ್ಯದಲ್ಲಿ ತಮ್ಮೆಲ್ಲಾ ಸಂಪತ್ತನ್ನು ದೇವರಿಗೆ ಸಮರ್ಪಿಸುವ ನಿಟ್ಟಿನಲ್ಲಿ (ಪು. ೪೩೬) ಒಂದು ಕುತೂಹಲಕಾರಿಯಾದ ಪಗೋಡವನ್ನು ನಿರ್ಮಿಸಿದರು. ಹಾಗೆಯೇ ಸುವೋಜೋಂಡಾ ಎನ್ನುವ ಸರೋವರವನ್ನು ಅಗೆದು ಆ ಪಗೋಡದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಧಾರ್ಮಿಕ ಆಚರಣೆಯನ್ನು ಸಂಭ್ರಮದಲ್ಲಿ ಆಚರಿಸಿ, ಫಸೂರಿ ವಿಮತ್ರಮ್ ಎನ್ನುವ ಬ್ರಾಹ್ಮಣನೊಬ್ಬನನ್ನು ಅಲ್ಲಿಯ ಧಾರ್ಮಿಕ ಆಚರಣೆಗೆ ನೇಮಿಸಿ ಅಲ್ಲಿ ೨೦೦೦ ಬ್ರಾಹ್ಮಣರಿಗೆ ಪ್ರತಿ ದಿನ ಆಹಾರ ಧಾನ್ಯವನ್ನು ದಾನ ಮಾಡುವ ಆದೇಶವನ್ನು ನೀಡಿದರು. ಹಾಗೆಯೇ ಪ್ರತಿ ದಿನ ಬೆಳಗ್ಗೆ ೧೦ ಘಂಟೆಯಿಂದ ರಾತ್ರಿ ೧೨ ಘಂಟೆಯವರೆಗೆ ಅಲ್ಲಿದ್ದು ಪಲ್ಲಕ್ಕಿಯಲ್ಲಿ ಊರಿಗೆ ಹಿಂತಿರುಗುತ್ತಿದ್ದರು.

ರಾಯಯಲ್ಲಮ್ಮತ್ತರು ಮಾದಣ್ಣನವರ ಶತ್ರುಗಳನ್ನು ಗೆಲ್ಲುವ ಯೋಜನೆ

ಯಲ್ಲಮ್ಮತ್ತರು ಅಕ್ಕಣ್ಣ ಮಾದಣ್ಣನವರಿಂದ ನಿರಾಶೆಹೊಂದಿದ ಸರದಾರರಿಗೆಲ್ಲಾ ಸಾಕಷ್ಟು ಲಂಚವನ್ನು ನೀಡಿ ಅವರ ಪ್ರಾಂತ್ಯದಲ್ಲಿ ತಮ್ಮ ಸಹಚರರಿಂದ ನಿರ್ಮಿಸಲ್ಪಟ್ಟ ದೊಡ್ಡ ಸೇನಾಪಡೆಯನ್ನು ಹುಟ್ಟುಹಾಕಿದರು. ಆಸ್ಥಾನದಿಂದ ಮನೆಗೆ ಹಿಂತಿರುಗುವಾಗ ಆ ಸೈನಿಕರಿಂದ ಅಕ್ಕಣ್ಣ ಮಾದಣ್ಣರ ತಲೆಯನ್ನು ಕತ್ತರಿಸುವಂತೆ ಮಾತನ್ನು ಪಡೆದರು.

ಮಾದಣ್ಣ ತಮ್ಮ ಒಡೆತನದ ಆಸ್ತಿಯನ್ನೆಲ್ಲಾ ದಾನ ಮಾಡಿದರು

ಅಕ್ಕಣ್ಣ ಮಾದಣ್ಣರು ಎಲ್ಲಾ ವಿದ್ವಾಂಸರನ್ನು ಕರೆಸಿ ಸಮಸ್ತ ಲೆಕ್ಕ ವ್ಯವಹಾರಗಳಿಂದ ಪರಮಾತ್ಮನ ಹೆಸರಿನಲ್ಲಿ ಒಂದು ದಿನಕ್ಕೆ ಎಲ್ಲಾ ಕಡೆಯಿಂದ ಅಂದರೆ ಕಾಶಿಯಿಂದ ಹಿಡಿದು ರಾಮೇಶ್ವರದವರೆಗೆ ಎಷ್ಟು ಬ್ರಾಹ್ಮಣರು ಊಟ ಮಾಡುತ್ತಾರೆಂದು ಲೆಕ್ಕ ಹಾಕಿ ಸಾಧಾರಣ ೧ ಲಕ್ಷ ಬ್ರಾಹ್ಮಣರು ೧೦೮ ತಾರಪುತ್ತುಂನಲ್ಲಿ ಊಟ ಮಾಡುವರೆಂದು ವಿಷಯ ಪಡೆದುಕೊಂಡರು. ಯಾವ ದಿನ ೧ ಲಕ್ಷ ಬ್ರಾಹ್ಮಣರು ಊಟ ಮಾಡುತ್ತಾರೋ ಅದೇ ಅವರ ಕೊನೆಯ ದಿನವಾಗಬಹುದೆಂದು ನಿರ್ಧರಿಸಿ ತಮ್ಮೆಲ್ಲಾ ಆಸ್ತಿ, ಸಂಪತ್ತನ್ನು ಬ್ರಾಹ್ಮಣರಿಗೆ ಮತ್ತು ನಾಣ್ಯವನ್ನೆಲ್ಲಾ ಭಿಕ್ಷುಕರಿಗೆ ದಾನ ಮಾಡಿದರು.

ಅಕ್ಕಣ್ಣ ಮಾದಣ್ಣರ ಕೊಲೆ

ಇದು ಏನು..........ಅಕ್ಕಣ್ಣ ಮಾದಣ್ಣರ ಸಾವು........

ಆಸ್ಥಾನಕ್ಕೆ ಮುಂಜಾನೆಯೇ ತೆರಳಿ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸಿ ೧೧ ಘಂಟೆಯ ವೇಳೆಗೆ ಎಲ್ಲವನ್ನು ಒಂದು ಹಂತಕ್ಕೆ ತಂದಿರಿಸಿ ತನುಷಾರಿಗೆ ವಿಷಯ ತಿಳಿಸಿ ಮನೆಯ ಕಡೆ ಹೊರಟರು. ತನುಷಾರನ್ನು ಆ ಗುಲಾಮ

ಹೆಂಗಸರು ಹೊರಗೆ ಬರಲು ಬಿಡದೇ ಈ ಯಾವ ವಿಷಯವನ್ನೂ ಅವರಿಗೆ ತಿಳಿಸದೇ ಹೋದರು. ತನುಷಾರು ಹೊರಗೆ ಬಾರದೆ ಇದ್ದುದರಿಂದ ತಾವು ಇನ್ನೂ ಮಹಾಸ್ವಸ್ವರಂಗೆ ಹೋಗಬಹುದೆಂದು ತಿಳಿದು ಒಂದು ದ್ವಾರದಿಂದ ದಾಟಿ ೨ನೇ ದ್ವಾರವನ್ನು ದಾಟಲು ಬಂದಾಗ ಯಲ್ಲಮ್ಮತ್ತರಾಯರ ಪಡೆ ಎದುರಾಯಿತು. ಎಲ್ಲಾ ಸರದಾರರ ಸಮ್ಮುಖದಲ್ಲಿ ಅಕ್ಕಣ ಮಾದಣ್ಣರ ತಲೆ ಕಡಿಯಲಾಯಿತು. ಇಷ್ಟಲ್ಲದೇ ಅವರ ನಿವಾಸಕ್ಕೂ ಲಗ್ಗೆ ಹಾಕಿ ಅಲ್ಲಿನ ಸಂಪತ್ತನ್ನು ಕೊಳ್ಳೆ ಹೊಡೆದು ಅಕ್ಕಣ್ಣ ಮಾದಣ್ಣರ ರಕ್ಷಣೆಯಲ್ಲಿದ್ದ ೧೦೦೦೦ ಬ್ರಾಹ್ಮಣರನ್ನೂ ಕೊಂದರು.

ಅಕ್ಕಣ್ಣ ಮಾದಣ್ಣರ ಹೆಂಡಂದಿರು ನೀರಿನಲ್ಲಿ ಬಿದ್ದು ಸತ್ತರು. ಅಕ್ಕಣ್ಣ ಪಂತಲೂ ಅವರಿಗೆ ೨ ವರ್ಷದ ಮಲ್ಲೂ ಎನ್ನುವ ಮಗನಿದ್ದ ಅಲ್ಲಿಯ ಸೇವಕಿ ಆ ಹುಡುಗನನ್ನು ಬಟ್ಟೆಯಲ್ಲಿ ಸುತ್ತಿ ಗೌಪ್ಯವಾಗಿ ಅವನನ್ನು ಹಸನ್ ಎನ್ನುವ ಅಕ್ಕಣ್ಣನ ಸ್ನೇಹಿತನ ಮನೆಗೆ ತಲುಪಿಸಿ ತಾನು ತನ್ನ ಯಜಮಾನ ಯಜಮಾನಿಯರಂತೆ ಸಾವನ್ನಪ್ಪಿದಳು..

ತನುಷಾರು ಮಾದಣ್ಣನ ಸಾವಿಗೆ ದುಃಖಿಸಿದರು

ಅಕ್ಕಣ್ಣ ಮಾದಣ್ಣರ ಸಾವಿನಸುದ್ದಿ ಕೇಳಿ ತನುಷಾರಿಗೆ ಆಘಾತವಾಗಿ, ಆ ದುಃಖದಿಂದ ಹೊರ ಬರಲಾರದೇ ಬುದ್ಧಿಭ್ರಮಣೆಯಾಗಿ ಅಂದಿನಿಂದ ಅರಮನೆಯಿಂದ ಸರ್ಕಾರದ ವ್ಯವಹಾರವನ್ನು ತಿಳಿಯಲು ಹೊರ ಬರಲೇ ಇಲ್ಲ.

ತನುಷಾ ಹಾಗೂ ಗೋಲ್ಕಂಡವನ್ನು ಔರಂಗಜೇಬರು ವಶಪಡಿಸಿಕೊಂಡರು

ಅಕ್ಕಣ್ಣ ಮಾದಣ್ಣರ ಸಾವಿನ ವಿಷಯ ಔರಂಗಜೇಬನಿಗೆ ತಿಳಿದು ದೆಹಲಿಯಿಂದ ಸೇನಾಪಡೆಯನ್ನು ತೆಗೆದುಕೊಂಡು ತನುಷಾರ ವಿರುದ್ಧ ಯುದ್ಧ ಮಾಡಿ ಹೈದರಾಬಾದ್‌ನ್ನು ವಶಪಡಿಸಿಕೊಂಡರು. ಆಮೇಲೆ ತನುಷಾರನ್ನು ವಶಪಡಿಸಿಕೊಂಡು ಡೆಕ್ಕನ್ ಸರ್ಕಾರದ ವ್ಯವಹಾರವನ್ನು ತಮ್ಮ ವಶಕ್ಕೆ ಪಡೆದುಕೊಂಡರು.

ಉಪಸಂಹಾರ

ಕವಿ ಲಿಂಗಣ್ಣನ ಕೆಳದಿ ನೃಪವಿಜಯದಲ್ಲಿ ಉಲ್ಲೇಖನಗೊಂಡ ಗೋಲ್ಕೊಂಡರ ಕುತುಬಶಾಹಿಯಲ್ಲಿರುವ ಅಕ್ಕಣ್ಣ–ಮಾದಣ್ಣ ಕುರಿತ ಐತಿಹಾಸಿಕ ಸಂಗತಿಯು ಗಮನಾರ್ಹವಾದುದು. ಲಿಂಗಣ್ಣ ಕವಿಯು ನಡೆಸಿದ ಈ ಸಂಶೋಧನ ವಿವರಗಳು ಅವನನ್ನು ಸಮಕಾಲೀನ ಐತಿಹಾಸದಲ್ಲಿ ಉನ್ನತ ಸಂಶೋಧಕನ ಸ್ಥಾನಕ್ಕೆ ಏರಿಸುತ್ತವೆ. ಕೆಳದಿ ನೃಪವಿಜಯ ಚಂಪೂ ಕಾವ್ಯವಾಗಿದ್ದರೂ ಚಾರಿತ್ರಿಕ ವೈಫಲ್ಯದಿಂದ ಸಮಕಾಲೀನ ಸಂಶೋಧನೆಯಲ್ಲಿ ಅಗ್ರ ಗಣ್ಯವದುದು. ಈ ಕಾರಣದಿಂದಲೇ ಲ್ಯೂಯಿ ರೈಸ್ ಆದಿಯಾಗಿ ಪ್ರತಿಷ್ಠಿತ ವಿದ್ವಾಂಸರು ಕೆಳದಿ ನೃಪ ವಿಜಯವನ್ನು ಅಕರ ಗ್ರಂಥಗಳ ಸಾಲಿಗೆ ಸೇರಿಸಿದ್ದು ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂನಲ್ಲಿಯೂ ಇದರ ಹಸ್ತಪ್ರತಿಯಿದೆ. ಕರ್ನಲ್ ಮೆಕಂಜಿ ಇದನ್ನು ಇಂಗ್ಲೀಷಿನಲ್ಲಿ ಭಾಷಾಂತರಿಸಿರುವುದೂ ಗಮನಾರ್ಹವಾದುದು. ಅಕ್ಕಣ್ಣ–ಮಾದಣ್ಣ ಕುರಿತ ಮೂಲ ಸಾಮಗ್ರಿಗಳು ಈ ಕೆಳಕಂಡಂತೆ ಲಂಡನ್ ಇಂಡಿಯ ಆಫೀಸ್ ಗ್ರಂಥ ಭಂಡಾರದಲ್ಲಿದೆ.

1.The History of a late Revolution in the Kingdom of Golkonda (mackenzyie Collection).

2.Chapters 5th and 7th from "Hadiquat - ul - Alaṃ" Mackenzyie collection.

3.Some Account of Akana and Madana chief ministers of Tanashah Badshah of Golconda (Mackenzyie collection).

ಪೂನಾದ ಭಾರತೀಯ ಇತಿಹಾಸ ಸಂಶೋಧನಾ ಮಂಡಳದಿಂದ ಪ್ರಕಟವಾದ ಈ ಗ್ರಂಥವು ಕರ್ನಾಟಕ ಇತಿಹಾಸದ ಆಕರಗಳಿಗೆ ಹಾಗೂ ಮುಂದಿನ ಸಂಶೋಧನೆಗಳಿಗೆ ಅಲಭ್ಯವಾಗಿದೆ. ಕಾರಣ ಈ ಕೃತಿಯು ಪ್ರಾಚೀನ ಆಂಗ್ಲೇಯ (old English) ಭಾಷೆಯಲ್ಲಿರುವುದರಿಂದ ಭಾಷಾಂತರ ತಜ್ಞತೆ ಅಗತ್ಯವೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಸ್ಥಳನಾಮ ಆದಿಯಾಗಿ ವ್ಯಕ್ತಿನಾಮಗಳವರೆಗೆ ಇರುವ ಉಲ್ಲೇಖಗಳನ್ನು ಗುರುತಿಸುವುದು ಅಗತ್ಯ. ಮಾದರಿಗಾಗಿ ಕ್ಲಿಷ್ಟ ಪದಗಳನ್ನೂ ನೀಡಲಾಗಿದೆ. ಒಟ್ಟಿನಲ್ಲಿ ಕೆಳದಿ ನೃಪವಿಜಯದಲ್ಲಿರುವ ಇಂತಹ ಮಾಹಿತಿಗಳು ವಿಪುಲವಾಗಿದ್ದು ಕರ್ನಾಟಕ ಹಾಗೂ ಭಾರತದ ಇತಿಹಾಸಕ್ಕೆ ಕವಿ ಲಿಂಗಣ್ಣನು ನೀಡಿದ ಆಕರಗಳಿಂದ ಆತನ ಸಂಶೋಧನಾ ಸಾಮರ್ಥ್ಯವು ಆದರ್ಶ ಪ್ರಾಯವಾದುದು.

ಮರೆಯುವ ಮುನ್ನ, ಕೆಳದಿ ನೃಪವಿಜಯದಲ್ಲಿರುವ ಅಕ್ಕಣ್ಣ–ಮಾದಣ್ಣ ಹಾಗೂ ಗೋಲ್ಕೊಂಡ ನವಾಬರ ಇತಿಹಾಸದಲ್ಲಿ ಅಧ್ಯಯನ ಕೈಗೊಳ್ಳುವ ಅವಶ್ಯಕತೆಯಿದೆ.

ಕ್ಲಿಷ್ಟ ಪದಗಳು (ಮಾದರಿ)

imploy > Employ; Duley > Delhi; writ > write; Ducken > Daccan; Letchmma > Lakchmma Devi > Lakshmi devi > The Goddess of Wealth; Ajallamattarow > ajamatara; Collaconda > koilkonda; Katch > Catch; maddanna puntooloo > Madana pandita; Madda > Madanna; Pagoida > Pagoda > Ancent Temple; Victnals > vichuals; Akkana and mattana > Akkanna and Madanna.

ಆಧಾರ ಗ್ರಂಥಗಳು

೧. History of Vijayanagar Empire; Rama Sharma; Vol 2 (Appendix e 586)

೨. ಗೋವಲಕೊಂಡ್ಯಾಚೀ ಕುತ್ಬಶಾಹೀ; ವಸುದೇವ ಸಿ. ಬೇಂದ್ರೆ, ಭಗವತ ದಯಾಳ ವರ್ಮಾ M.A., ಭಾರತೀಯ ಇತಿಹಾಸ ಸಂಶೋಧಕ ಮಂಡಳ ಸ್ವೀಯಗ್ರಂಥಮಾಲಾ ಪೂನಾ, (೧೯೩೪)

೩. (a) Abul Hassan Kutub Shah and His Ministers Madanna and Akkanna JIH | X | 1931 (ಅಲಭ್ಯ).

(b) Durate, Adrian; An Estimate of Madanna from French Sources, JIH ii (31) 1932 (ಅಲಭ್ಯ).

ಕರ್ನಾಟಕ ಇತಿಹಾಸ ಅಕಾದೆಮಿ (ರಿ).

ನಂ. ೪೩/೧೩, ಮಾತೃಕೃಪಾ, ೨ನೇ ಮುಖ್ಯರಸ್ತೆ, ೫ನೇ ಅಡ್ಡರಸ್ತೆ
ಮೌಂಟ್‌ಜಾಯ್ ಬಡಾವಣೆ, ಹನುಮಂತನಗರ, ಬೆಂಗಳೂರು – ೫೬೦ ೦೧೯

೨೦೧೬–೧೭ನೆಯ ಸಾಲಿನ ವಾರ್ಷಿಕ ವರದಿ

ಸದಸ್ಯ ಬಂಧುಗಳೇ,

ಕರ್ನಾಟಕ ಇತಿಹಾಸ ಅಕಾದೆಮಿಯ ೩೧ನೆಯ ವಾರ್ಷಿಕ ಸಮ್ಮೇಳನಕ್ಕಾಗಿ ನಾವೆಲ್ಲಾ ಕೊಪ್ಪಳ ಜಿಲ್ಲೆಯ ಎಸ್.ಜಿ.ವ್ಹಿ.ವ್ಹಿ. ಟ್ರಸ್ಟ್‌ನ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ಸಮಾವೇಶಗೊಂಡಿದ್ದೇವೆ. ಕಳೆದ ಮೂವತ್ತೊಂದು ವರ್ಷಗಳಲ್ಲಿ ಅಕಾದೆಮಿಯ ಅಭ್ಯುದಯದಲ್ಲಿ ನಿರಂತರವಾಗಿ ಸಹಕರಿಸುತ್ತಾ ಬಂದಿರುವ ಎಲ್ಲರಿಗೂ ಅನಂತ ಧನ್ಯವಾದಗಳು. ಕಳೆದ ೩೦ ಸಮ್ಮೇಳನಗಳಿಗೆ ಆಶ್ರಯ ನೀಡಿ ಅಕಾದೆಮಿಯನ್ನು ಪೋಷಿಸಿರುವ ಎಲ್ಲಾ ಸಂಘ ಸಂಸ್ಥೆ ಹಾಗೂ ಧರ್ಮಪೀಠಗಳಿಗೆ ಅಕಾದೆಮಿಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಐತಿಹಾಸಿಕ ಪರಂಪರೆ ಉಳಿಸಿ–೨೦೧೬

೨೦೧೬ನೇ ಸಾಲಿನ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮ ಉದ್ಘಾಟನಾ ಸಮಾರಂಭವನ್ನು ದಿನಾಂಕ ೨೦–೦೮–೨೦೧೬ರ ಶನಿವಾರ ಬೆಳಗ್ಗೆ ಹೊಯ್ಸಳ ವೇದಿಕೆ, ಹಾರನಹಳ್ಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆಯಲ್ಲಿ ಮೊದಲ ಬಾರಿಗೆ ಬೆಂಗಳೂರಿನಿಂದ ಹೊರಭಾಗದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ವರ್ಷವೂ ಎಂದಿನಂತೆ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆರ್ಥಿಕ ಸಹಯೋಗವು ದೊರೆತಿತ್ತು.

ಹಾರನಹಳ್ಳಿಯ ಹೊಯ್ಸಳ ವೇದಿಕೆಯ ಸಂಚಾಲಕರೂ, ಪತ್ರಕರ್ತರೂ ಆದ ಶ್ರೀ ನಾಗೇಂದ್ರ ಅವರು, ಸ್ಥಳೀಯ ಶಾಲಾ ಕಾಲೇಜಿನ ಪ್ರಾಂಶುಪಾಲರು ಹಾಗೂ ಅಧ್ಯಾಪಕರಿಗೂ ಮತ್ತು ಅಪಾರ ಸಂಖ್ಯೆಯಲ್ಲಿ ಸೇರಿದ ವಿದ್ಯಾರ್ಥಿ ವೃಂದಕ್ಕೂ ವಿಶೇಷವಾಗಿ ಸ್ವಾಗತ ಕೋರಿದರು.

ಅಕಾದೆಮಿಯ ಪದಾಧಿಕಾರಿಗಳಿಗೂ ಮತ್ತು ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳು, ಸುಕ್ಷೇತ್ರ ಕೋಡಿಮಠ ಇವರಿಗೂ ಸ್ವಾಗತ ಕೋರಿದರು. ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆಯನ್ನು ಪ್ರತಿನಿಧಿಸಿದ ಶ್ರೀ ಗವಿಸಿದ್ಧಯ್ಯ ನಿರ್ದೇಶಕರು ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆ ಇವರಿಗೂ ಮತ್ತು ನೆರೆದ ಅಧಿಕಾರಿಗಳಿಗೆ, ಗಣ್ಯರಿಗೆ ಸ್ವಾಗತವನ್ನು ಕೋರಿದರು.

ಅಕಾದೆಮಿಯ ಪ್ರಧಾನ ಕಾರ್ಯದರ್ಶಿಗಳಾದ ಪ್ರೊ. ಜಿ.ಕೆ. ದೇವರಾಜಸ್ವಾಮಿ ಅವರು, ಅಕಾದೆಮಿಯು ಈವರೆಗೆ ನಡೆದು ಬಂದ ಹಾದಿ, ಕಾರ್ಯಚಟುವಟಿಕೆಗಳನ್ನು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಸಭೆಗೆ ಮಾಹಿತಿ ನೀಡಿದರು.

ಶ್ರೀ ಗವಿಸಿದ್ದಯ್ಯ ನಿರ್ದೇಶಕರು ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆ, ಮೈಸೂರು, ಅವರು. "ಐತಿಹಾಸಿಕ ಪರಂಪರೆ ಉಳಿಸಿ" ಕಾರ್ಯಕ್ರಮವನ್ನು ಜ್ಯೋತಿ ಬೆಳಗುವುದರ ಮೂಲಕ ವಿಧಿವತ್ತಾಗಿ ಉದ್ಘಾಟಿಸಿದರು.

ಪರಂಪರೆ ಸಂಸ್ಕೃತಿ ಬಗ್ಗೆ, ಐತಿಹಾಸಿಕ ಸ್ಮಾರಕಗಳು, ವೀರಗಲ್ಲುಗಳು, ಮಾಸ್ತಿಕಲ್ಲು, ಶಿಲಾಶಾಸನಗಳೆಲ್ಲವೂ ನಮ್ಮ ಪೂರ್ವಿಕರ ಸಾಧನೆಗಳು ಮತ್ತು ರಾಜಮಹಾರಾಜರ ಕೊಡುಗೆಗಳು ಇವುಗಳು ನಮ್ಮ ರಾಷ್ಟ್ರೀಯ ಸ್ವತ್ತುಗಳು. ಅವುಗಳ ರಕ್ಷಣೆಯು ಕೇವಲ ಸರ್ಕಾರದ್ದು ಮಾತ್ರವಲ್ಲ ಅದು ನಮ್ಮೆಲ್ಲರ ಜವಾಬ್ದಾರಿ ಹಾಗೂ ಕರ್ತವ್ಯವೂ ಹೌದು ಎಂಬುದನ್ನು ವಿದ್ಯಾರ್ಥಿ ಸಮೂಹ ಹಾಗೂ ಜನರನ್ನು ಉದ್ದೇಶಿಸಿ ಶ್ರೀ ಗವಿಸಿದ್ಧಯ್ಯ ತಿಳಿಸಿದರು. ಇಲಾಖೆಯೊಂದಿಗೆ ಈ ಕಾರ್ಯದಲ್ಲಿ ಸಾರ್ವಜನಿಕರೂ ಕೈ ಜೋಡಿಸಬೇಕೆಂದರು. ಹಾರನಹಳ್ಳಿ ಗ್ರಾಮಪಂಚಾಯತಿಯ ಅಧ್ಯಕ್ಷರಾದ ಶ್ರೀ ಎಸ್.ಎಸ್. ನಂದೀಶ್ ಅವರು, ಈ ಸಂದರ್ಭಕ್ಕೆಂದೇ ಕಲಾವಿದರಾದ ಟಿ. ಶ್ರೀನಿವಾಸ್ ಅವರು ಅಕಾದೆಮಿಗಾಗಿ ಸಿದ್ದಪಡಿಸಿದ್ದ ವಿಶೇಷ ಭಿತ್ತಿಚಿತ್ರವನ್ನು ಅನಾವರಣಗೊಳಿಸಿದರು.

ಪ್ರಸ್ತುತ ವರ್ಷದಿಂದ, ಐತಿಹಾಸಿಕ ಪರಂಪರೆ ಉಳಿಸುವಲ್ಲಿ ವಿಶೇಷವಾಗಿ ತಮ್ಮನ್ನು ತೊಡಗಿಸಿಕೊಂಡು ಸೇವೆ ಸಲ್ಲಿಸಿರುವವರನ್ನು ಗೌರವಿಸುವ ಒಂದು ಯೋಜನೆಯನ್ನು ಅಕಾದೆಮಿಯು ಯೋಜಿಸಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಲ್ಲಿ ಗಮನಾರ್ಹವಾದ ಸೇವೆ ಸಲ್ಲಿಸಿ ನಿವೃತ್ತರಾದ ಶ್ರೀ ಕೆ.ಎಸ್. ಸುಬ್ರಮಣ್ಯ ಅವರನ್ನು ಸನ್ಮಾನಿಸಲಾಯಿತು. ಅವರ ಸೇವೆ ಹಾಗೂ ಪರಿಚಯವನ್ನು ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ಸಭೆಗೆ ಓದಿ ತಿಳಿಸಿದರು. ಶ್ರೀ ಕೆ.ಎಸ್. ಸುಬ್ರಮಣ್ಯ ಅವರನ್ನು ವೇದಿಕೆಯಲ್ಲಿದ್ದ ಗಣ್ಯರು ಅಕಾದೆಮಿಯ ಅಧ್ಯಕ್ಷರಾದ ದೇವರಕೊಂಡಾರೆಡ್ಡಿ ಅವರೊಂದಿಗೆ ಸೇರಿ ಸನ್ಮಾನಿಸಿದರು. 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ದೇವರಕೊಂಡಾರೆಡ್ಡಿ, ಅಧ್ಯಕ್ಷರು ಕರ್ನಾಟಕ ಇತಿಹಾಸ ಅಕಾದೆಮಿ. ಅವರು ಕಾರ್ಯಕ್ರಮಗಳ ಬಗ್ಗೆ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸಿದರು. ಅಕಾದೆಮಿಯೊಂದಿಗೆ

ಸಹಕಾರ ನೀಡುತ್ತಿರುವ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಸಂಘ ಸಂಸ್ಥೆಗಳನ್ನು ನೆನೆಯುತ್ತಾ ಅವುಗಳ ಸಹಕಾರದಿಂದ ನಿರಂತರ ಕಾರ್ಯ ನಿರ್ವಹಿಸಲು ಸಾಧ್ಯವಾಗಿದೆ ಎಂದರು.

ಅಕಾದೆಮಿಯ ೨೦೧೬ನೇ ಸಾಲಿನ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಉದ್ಘಾಟನೆಗೆ ಸ್ಥಳಾವಕಾಶ ಮಾಡಿಕೊಟ್ಟ ಹೊಯ್ಸಳ ವೇದಿಕೆ ಹಾರನಹಳ್ಳಿ ಅರಸೀಕೆರೆ ತಾಲ್ಲೂಕು ಇವರಿಗೆ, ಹಾಗೂ ಉದ್ಘಾಟನೆಗೆ ಆಗಮಿಸಿದ್ದ ಮತ್ತು ಭಿತ್ತಿಪತ್ರ ಬಿಡುಗಡೆ ಹಾಗೂ ಸನ್ಮಾನ ಸ್ವೀಕರಿಸಿದ ಗಣ್ಯರನ್ನು ಹಾಗೂ ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳು, ಸುಕ್ಷೇತ್ರ ಕೋಡಿಮಠ ಅವರ ಅನುಪಸ್ಥಿತಿಯಲ್ಲಿ ಅಕಾದೆಮಿಯ ಪ್ರಧಾನ ಕಾರ್ಯದರ್ಶಿಗಳಾದ ಪ್ರೊ. ಜಿ.ಕೆ. ದೇವರಾಜಸ್ವಾಮಿ ಅವರು ವಂದನೆ ಸಲ್ಲಿಸಿದರು.

ಹಾರನಹಳ್ಳಿಯಲ್ಲಿ ಕನಾಟಕ ಇತಿಹಾಸ ಅಕಾದೆಮಿಯ ವತಿಯಿಂದ ಐತಿಹಾಸಿಕ ಕಾರ್ಯಕ್ರಮವು ಉದ್ಘಾಟನೆಗೊಂಡು, ಸದರಿ ವರ್ಷದಲ್ಲಿ ವಿಶೇಷ ಭಿತ್ತಿಪತ್ರಗಳ ಅನಾವರಣದ ನಂತರ ರಾಜ್ಯಾದಾದ್ಯಂತ ವಿವಿಧ ಸ್ಥಳಗಳಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳು ನಡೆದಿವೆ. ಆ ಕಾರ್ಯಕ್ರಮಗಳ ವಿವರವನ್ನಿಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ.

ದಿನಾಂಕ ೦೬-೦೯-೨೦೧೬, ಕಲಘಟಗಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ಹಸ್ತಪ್ರತಿ ವಿಭಾಗವು, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಆಯ್ದ ಪದವಿ ಕಾಲೇಜುಗಳ ಕನ್ನಡ ಮತ್ತು ಇತಿಹಾಸ ವಿಭಾಗಗಳ ಸಹಯೋಗದೊಂದಿಗೆ "ಐತಿಹಾಸಿಕ ಪರಂಪರೆ ಉಳಿಸಿ" ಕಾರ್ಯಕ್ರಮಗಳನ್ನು ದಿನಾಂಕ : ೬-೯-೨೦೧೬ರಿಂದ ದಿನಾಂಕ : ೧೪-೯-೨೦೧೬ರವರೆಗೆ ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮಗಳ ರೂಪುರೇಷೆಗಳನ್ನು ಡಾ. ಎಫ್.ಟಿ. ಹಳ್ಳಿಕೇರಿ, ಮುಖ್ಯಸ್ಥರು ಹಸ್ತಪ್ರತಿ ವಿಭಾಗ, ಕ.ವಿ.ವಿ. ಹಂಪಿ ಹಾಗೂ ಡಾ. ಕೆ. ರವೀಂದ್ರನಾಥ್, ಪ್ರಾಧ್ಯಾಪಕರು ಹಸ್ತಪ್ರತಿ ವಿಭಾಗ, ಕ.ವಿ.ವಿ. ಹಂಪಿ ಇವರುಗಳು ಯೋಜಿಸಿದ್ದರು. ಕಲಘಟಗಿಯ ಗುಡ್‌ನ್ಯೂಸ್ ಪದವಿ ಮಹಾವಿದ್ಯಾಲಯದಲ್ಲಿ ೬-೯-೨೦೧೬ರಂದು ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಪ್ರೊ. ಲಕ್ಷ್ಮಣ ತೆಲಗಾವಿ, ವಿಶ್ರಾಂತ ಪ್ರಾಧ್ಯಾಪಕರು, ಧಾರವಾಡ ಇವರು ಉದ್ಘಾಟಿಸಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಮಲ್ಲಿಕಾಘಂಟಿ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ, ಇವರು ವಹಿಸಿದ್ದರು. ಡಾ. ಎಸ್.ಎಸ್. ಅಂಗಡಿ, ಸಂಚಾಲಕರು ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಇವರು ಪರಂಪರೆ ಉಳಿಸಿ ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರೆ.ಬ್ರ. ನಿಜ್ಯೂ ವಿಥುಥಾಮಸ್, ಉಪಾಧ್ಯಕ್ಷರು, ಗುಡ್ ನ್ಯೂಸ್ ವೆಲ್‌ಫೇರ್ ಸಂಸ್ಥೆ, ಕಲಘಟಗಿ ಹಾಗೂ ರೆ.ಬ್ರ. ಪೀಟರ್ ರಾಜನ್, ಖಜಾಂಚಿ, ಗುಡ್‌ನ್ಯೂಸ್ ವೆಲ್‌ಫೇರ್ ಸಂಸ್ಥೆ ಇವರುಗಳು ಭಾಗವಹಿಸಿದ್ದರು.

ಡಾ. ಬಿ.ಜಿ. ಬಿರಾದಾರ, ಪ್ರಾಚಾರ್ಯರು, ಗುಡ್ ನ್ಯೂಸ್ ಪದವಿ ಕಾಲೇಜು ಹಾಗೂ ಪ್ರೊ. ಜಿ.ಆರ್. ಸೂಳಿಭಾವಿ, ಅಧ್ಯಕ್ಷರು ಕಾಲೇಜು ಒಕ್ಕೂಟ, ಗು.ಪ. ಕಾಲೇಜು ಇವರುಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದರು.

ದಿನಾಂಕ ೭-೯-೨೦೧೬, ಯಲ್ಲಾಪುರ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಯಲ್ಲಾಪುರದಲ್ಲಿ ದಿನಾಂಕ : ೭-೯-೨೦೧೬ರಂದು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಡಾ. ಜಯರಾಮರೆಡ್ಡಿ ಪ್ರಾಚಾರ್ಯರು ಇವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡಿತ್ತು.

ಉಪನ್ಯಾಸಕರಾಗಿ ಡಾ. ಕೆ. ರವೀಂದ್ರನಾಥ್, ಪ್ರಾಧ್ಯಾಪಕರು, ಹಸ್ತಪ್ರತಿ ವಿಭಾಗ ಕ.ವಿ.ವಿ. ಹಂಪಿ ಇವರು ಭಾಗವಹಿಸಿದ್ದು ಐತಿಹಾಸಿಕ ಸ್ಮಾರಕಗಳ ಮಹತ್ವ ಅವುಗಳ ಪರಂಪರೆ ಅವುಗಳ ರಕ್ಷಣೆಗಳನ್ನು ನಾವು ಮಾಡಬೇಕಾದ ಜವಾಬ್ದಾರಿ ಕುರಿತು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಡಾ. ದಾಕ್ಷಾಯಿಣಿ ಹೆಗಡೆ, ಪ್ಯಾಧ್ಯಾಪಕರು, ಯಲ್ಲಾಪುರ ಇವರು ಭಾಗವಹಿಸಿದ್ದರು.

ದಿನಾಂಕ ೮-೯-೨೦೧೬, ಆಳ್ನಾವರ

ಆಳ್ನಾವರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ : ೮-೯-೨೦೧೬ರಂದು ಡಾ. ಕೆ.ಆರ್. ಕೇಶವಮೂರ್ತಿ, ಪಿ.ಡಿ.ಎಫ್. ಫೆಲೋ ಹಸ್ತಪ್ರತಿ ವಿಭಾಗ ಕ.ವಿ.ವಿ. ಹಂಪಿ ಇವರು ಭಾಗವಹಿಸಿ ಉಪನ್ಯಾಸ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಎಂ.ಡಿ. ಒಕ್ಕುಂದ, ಪ್ರಾಚಾರ್ಯರು ಇವರು ವಹಿಸಿದ್ದರು.

ದಿನಾಂಕ ೯-೯-೨೦೧೬, ಜೊಯಿಡಾ

ದಿನಾಂಕ : ೯-೯-೨೦೧೬ರಂದು ಸಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಜೊಯಿಡಾದಲ್ಲಿ ಡಾ. ಎಸ್.ಎಸ್. ಅಂಗಡಿ, ಪ್ರಾಚಾರ್ಯರು ಇವರ ಅಧ್ಯಕ್ಷತೆಯಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಉಪನ್ಯಾಸಕರಾಗಿ ಪ್ರೊ. ಬಿ.ಎಸ್. ಸಿರಿಯಪ್ಪಗೌಡರ, ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ, ಕಲಘಟಗಿ ಇವರು ಭಾಗವಹಿಸಿದ್ದರು.

ದಿನಾಂಕ ೧೦-೯-೨೦೧೬, ಹುಬ್ಬಳ್ಳಿ

ಹುಬ್ಬಳ್ಳಿಯ ಕೆ.ಎಲ್.ಇ. ಸಂಸ್ಥೆಯ ಕಾಡಸಿದ್ಧೇಶ್ವರ ಕಲಾ ಕಾಲೇಜು ಹಾಗೂ ಎಚ್.ಎಸ್. ಕೋತಂಬ್ರಿ ವಿಜ್ಞಾನ ಸಂಸ್ಥೆಯ ಆಶ್ರಯದಲ್ಲಿ ದಿನಾಂಕ ೧೦-೯-೨೦೧೬ರಿಂದ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಡಾ. ಅಪ್ಪಣ್ಣ ಹಂಜೆ, ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗದಗ ಇವರು ಉಪನ್ಯಾಸಕರಾಗಿ ಆಗಮಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಬಿ.ಆರ್. ಪಾಟೀಲ, ಪ್ರಾಚಾರ್ಯರು ಇವರು ವಹಿಸಿದ್ದು ಐತಿಹಾಸಿಕ ಪರಂಪರೆ ಕಟ್ಟುವ ಬಗ್ಗೆ ಮಾತನಾಡಿದರು.

ದಿನಾಂಕ ೧೩-೯-೨೦೧೬, ಕಲಘಟಗಿ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಲಘಟಗಿಯಲ್ಲಿ ದಿನಾಂಕ : ೧೩-೯-೨೦೧೬ರಂದು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಪ್ರೊ. ಜೆ.ಸಿ. ಗುಮ್ಮಗೊಳ ಮಠ, ಪ್ರಾಚಾರ್ಯರು. ಇವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಉಪನ್ಯಾಸಕರಾಗಿ ಡಾ. ಬಿ.ಜಿ. ಬಿರಾದಾರ, ಪ್ರಾಚಾರ್ಯರು ಗುಡ್ ನ್ಯೂಸ್ ಕಾಲೇಜು ಕಲಘಟಗಿ ಇವರು ಆಗಮಿಸಿದ್ದರು.

ದಿನಾಂಕ ೧೪-೯-೨೦೧೬, ಹುಬ್ಬಳ್ಳಿ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಬ್ಬಳ್ಳಿಯಲ್ಲಿ ದಿನಾಂಕ : ೧೪-೯-೨೦೧೬ರ ಬೆಳಗ್ಗೆ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ಕನ್ನಡ ವಿ.ವಿ. ಹಂಪಿಯ ಹಸ್ತಪ್ರತಿ ವಿಭಾಗವು ಹಮ್ಮಿಕೊಂಡಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಡಿ. ಪಾಂಡುರಂಗಬಾಬು, ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರು ವಹಿಸಿದ್ದರು.

ಡಾ. ಎಫ್.ಟಿ. ಹಳ್ಳಿಕೇರಿ, ಮುಖ್ಯಸ್ಥರು, ಹಸ್ತಪ್ರತಿ ವಿಭಾಗ, ಕ.ವಿ.ವಿ. ಹಂಪಿ, ಅವರು ಉಪನ್ಯಾಸ ನೀಡಿದರು. ಶಾಸನ, ಹಸ್ತಪ್ರತಿ, ದೇವಾಲಯ, ಕೋಟೆ ಮುಂತಾದವು ನಮ್ಮ ಸಂಸ್ಕೃತಿಯನ್ನು ಹಾಗೂ ಪರಂಪರೆಯನ್ನು ಕಟ್ಟಿದವುಗಳು. ಪ್ರಾಚಾರ್ಯರಾದ ಡಾ. ಎಚ್.ಸಿ. ಗೀತಾ ಅವರು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಉಪಸ್ಥಿತರಿದ್ದು, ಪರಂಪರೆ ಉಳಿಸಿ ಕಾರ್ಯಕ್ರಮದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ದಿನಾಂಕ ೧೬-೩-೨೦೧೭, ಮೈಸೂರು

ಮೈಸೂರಿನ ಸಿದ್ಧಾರ್ಥ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ : ೧೬-೩-೨೦೧೭ರಂದು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ಆಯೋಜಿಸಿದ್ದಲ್ಲದೆ, 'ಪರಂಪರೆ ಕೂಟ'ದ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವು ಜಿ. ರೂಪ ಅವರ ನಿರೂಪಣೆ ಮಾಡಿದರು. ಶ್ರೀಯುತ ಹೆಚ್.ಇ. ದಿವಾಕರ್, ವಿಭಾಗದ ಮುಖ್ಯಸ್ಥರು ಹಾಗೂ ಪರಂಪರೆ ಕೂಟದ ಸಂಚಾಲಕರು ಇವರು ಮಾತನಾಡಿ, ಇತಿಹಾಸ ಪರಂಪರೆಯ ಮಹತ್ವದ ಬಗ್ಗೆ ಮಾತನಾಡಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಾ. ಎಚ್.ಎಸ್. ಉಷಾರಾಣಿ ನಿವೃತ್ತ ಪ್ರಾಂಶುಪಾಲರು ಇವರು ಮೂರ್ತ, ಅಮೂರ್ತ ಮತ್ತು ನೈಸರ್ಗಿಕ ಪರಂಪರೆ ಬಗ್ಗೆ ಅರಿವು ಮೂಡಿಸಿದರು. ಕಾಲೇಜಿನ ಪ್ರಾಚಾರ್ಯರಾದ ಡಾ. ಚನ್ನಬಸವೇಗೌಡ ಅವರು ಅಧ್ಯಕ್ಷತೆ ವಹಿಸಿದ್ದರು.

ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ: ಸುರಪುರ

ಶ್ರೀ ನಿಂಗನಗೌಡ ಹ. ದೇಸಾಯಿ (ಹನಿ) ಪರಸನಹಳ್ಳಿ ಸಂಶೋಧಕರು, ಶಿಕ್ಷಕರು ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಕೆಂಭಾವಿ ಇವರ ನೇತೃತ್ವದಲ್ಲಿ ಸುರಪುರ ತಾಲ್ಲೂಕಿನಲ್ಲಿ ನಡೆದ "ಐತಿಹಾಸಿಕ ಪರಂಪರೆ ಉಳಿಸಿ" ಕಾರ್ಯಕ್ರಮದ ವಿವರ ಈ ಕೆಳಕಂಡಂತಿದೆ.

ದಿನಾಂಕ	ಸ್ಥಳ	ಅಧ್ಯಕ್ಷತೆ	ಉಪನ್ಯಾಸಕರು	ಅತಿಥಿಗಳು
೧೫-೦೯-೨೦೧೭	ಸ.ಪ.ಪೂ. ಕಾಲೇಜು ಹುಣಸಗಿ	ವಿ.ಎಸ್. ಬಿರಾದಾರ ಪ್ರಾಂಶುಪಾಲರು	ನಿಂಗನಗೌಡ ದೇಸಾಯಿ (ಹನಿ) ಸಂಶೋಧಕರು	ಆರ್.ಎಲ್. ಸುಣಗಾರ ಆರ್.ಐ. ಬಿರಾದಾರ ಚಂದ್ರಶೇಖರ ಬೆಳ್ಳಿ ಶ್ರೀ ರಾಘವೇಂದ್ರ ಎನ್.ಕೆ.

೧೫-೦೯-೨೦೧೭	ಸ.ಪ್ರೌ.ಶಾಲೆ ಕಕ್ಕೆರಾ	ನೀಲಮ್ಮ ನಾಗರಬೆಟ್ಟ. ಪ್ರ ಗು	ನಿಂಗನಗೌಡ ದೇಸಾಯಿ (ಹನಿ)	ಬಿ.ಎಸ್. ಕೋಳಕೂರ ನಾನಾಗೌಡ ಎಸ್.ಬಿ. ವಿರೇಶ ಅಂಗಡಿ
೧೫-೯-೨೦೧೭	ಸ.ಪ್ರೌ.ಶಾಲೆ ರಾಜನಕೋಳೂರ	ಶ್ರೀ ವಿರುಪಾಕ್ಷಪ್ಪ ಹಂಡಗಿ.ಪ್ರ ಗು	ನಿಂಗನಗೌಡ ದೇಸಾಯಿ (ಹನಿ)	ಭೀಮರಾಯ ಕುಲ್ಕರ್ಣಿ ಪ್ರಭುಸ್ವಾಮಿ ಕಂಠಿಮಠ ನಿಂಗಪ್ಪ ಕುಳಿಗೇರಿ ಶ್ರೀಕಾಂತಗೌಡ
೨೫-೦೯-೨೦೧೭	ಸ.ಬಾ.ಪ್ರೌ.ಶಾಲೆ ಕೆಂಭಾವಿ	ಶ್ರೀ ಅನೀಲ್ ಕುಮಾರ.ಪ್ರ ಗು	ನಿಂಗನಗೌಡ ದೇಸಾಯಿ (ಹನಿ)	ಸ್ಮಿತಾ. ಬಿರಾದಾರ ಎನ್.ಡಿ. ಅವರಾಧಿ ನಾಗಲಕ್ಷ್ಮೀ ಸಜ್ಜನ
೭-೧೦-೨೦೧೭	ವಿದ್ಯಾವಾಹಿನಿ ಪ.ಪೂ. ಕಾಲೇಜು ಕೆಂಭಾವಿ	ಶ್ರೀಮತಿ ಪಾರ್ವತಿ. ಬಾಪೂಗೌಡ ಪ್ರಾಂಶುಪಾಲರು	ನಿಂಗನಗೌಡ ದೇಸಾಯಿ (ಹನಿ)	ವಿಶ್ವನಾಥರೆಡ್ಡಿ. ಅಬ್ಬೆ ತುಮಕೂರ ಮೋಹನರೆಡ್ಡಿ ದೇಸಾಯಿ ಮಲ್ಲಣ್ಣ. ಬಿಳೇಭಾವಿ ರಮೇಶ ಟಣಕೆದಾರ

ದಿನಾಂಕ : ೨೦-೮-೨೦೧೭ ಉದ್ಯಾವರ

ತುಳುನಾಡಿನ ಪ್ರಾಚೀನ ರಾಜಧಾನಿ, ಉದ್ಯಾವರದಲ್ಲಿ ಶಿರ್ವದ ಮುಲ್ಕಿ ಸುಂದರ ರಾಮ್ ಶೆಟ್ಟಿ ಕಾಲೇಜಿನ ವಿದ್ಯಾರ್ಥಿಗಳು "ಐತಿಹಾಸಿಕ ಪರಂಪರೆ ಉಳಿಸಿ" ಸಪ್ತಾಹದ ಅಂಗವಾಗಿ, ಚೊಂಬುಕಲ್ಲು ವೀರಭದ್ರ ದೇವಾಲಯದ ಆವರಣದಲ್ಲಿರುವ ೧೦ ಶಾಸನಗಳನ್ನು ಶುಚಿಗೊಳಿಸಿ, ಅವುಗಳ ಪ್ರತಿ ಮಾಡಿ, ಶಾಸನಗಳ ಸಂರಕ್ಷಣೆಯ ಮೂಲಕ ಚರಿತ್ರೆಯ ಸಂರಕ್ಷಣೆ, ಚರಿತ್ರೆಯ ಸಂರಕ್ಷಣೆಯ ಮೂಲಕ ಚರಿತ್ರೆಯ ಅನ್ವೇಷಣೆ ಎಂಬುದನ್ನು ಪ್ರೊ. ಟಿ. ಮುರುಗೇಶಿಯವರ ಮಾರ್ಗದರ್ಶನದಲ್ಲಿ ನಡೆಸಿದರು. ಇದೇ ಸಂದರ್ಭದಲ್ಲಿ, ಅಲ್ಲಿನ ಸಾರ್ವಜನಿಕರಿಗೆ, ಶಾಸನ ಅಧ್ಯಯನ ಮತ್ತು ಸಂರಕ್ಷಣೆಯ ಮಹತ್ವವನ್ನು ಮನವರಿಕೆ ಮಾಡಿಕೊಡಲಾಯಿತು.

ಮೂವತ್ತನೆಯ ವಾರ್ಷಿಕ ಸಮ್ಮೇಳನ

ಕರ್ನಾಟಕ ಇತಿಹಾಸ ಅಕಾದೆಮಿಯು ಕನ್ನಡ ಸಂಶೋಧನಾ ಸಂಸ್ಥೆಯ ಅಮೃತ ಮಹೋತ್ಸವ ಸಮಿತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಹಾಗೂ ಪ್ರಾಚ್ಯ ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇವರ ಸಹಯೋಗದೊಂದಿಗೆ ೨೦೧೬ ಅಕ್ಟೋಬರ್ ೨೨ರಿಂದ ೨೪ರವರೆಗೆ ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದ ೩೦ನೇ ವಾರ್ಷಿಕ ಸಮ್ಮೇಳನಕ್ಕೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವು ಆಶ್ರಯ ನೀಡಿತ್ತು.

ಉದ್ಘಾಟನಾ ಸಮಾರಂಭ ದಿನಾಂಕ ೨೨-೧೦-೨೦೧೬ನೇ ಶನಿವಾರ ಬೆಳಿಗ್ಗೆ ೧೦.೩೦ಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಮಾನಸೋಲ್ಲಾಸ ಸಭಾಂಗಣದಲ್ಲಿ ಉದ್ಘಾಟನಾ ಸಮಾರಂಭ ಏರ್ಪಟ್ಟಿತ್ತು. ಕುಮಾರಿ ಶ್ರುತಿನಾಯಕ್ ಅವರ ಪ್ರಾರ್ಥನೆ ಮತ್ತು ನಾದ ಝೇಂಕಾರ ಸಾಂಸ್ಕೃತಿಕ ಸಂಘ ಸದಸ್ಯರ ನಾಡಗೀತೆಯೊಂದಿಗೆ ಚಾಲನೆ ದೊರಕಿತು. ಕನ್ನಡ ಸಂಶೋಧನಾ ಸಂಸ್ಥೆಯ ಪ್ರಾಧ್ಯಾಪಕರೂ, ಕಾರ್ಯಕ್ರಮ ಸಂಯೋಜಕರು ಆದ ಡಾ. ಎಸ್.ಕೆ. ಮೇಲಕಾರ ಅವರು ಅತಿಥಿಗಳಿಗೆ ಹಾಗೂ ಎಲ್ಲರಿಗೂ

ಸ್ವಾಗತ ಕೋರಿದರು. ಕರ್ನಾಟಕ ಇತಿಹಾಸ ಅಕಾದೆಮಿಯ ಪ್ರಧಾನ ಕಾರ್ಯದರ್ಶಿ ಪ್ರೊ. ಜಿ.ಕೆ. ದೇವರಾಜಸ್ವಾಮಿ ಅವರು ಅಕಾದೆಮಿಯ ಚಟುವಟಿಕೆಗಳ ಬಗ್ಗೆ ಪ್ರಾಸ್ತಾವಿಕ ವಿಷಯಗಳನ್ನು ತಿಳಿಸಿದರು.

ಪ್ರೊ. ಪ್ರಮೋದ್ ಭೀ. ಗಾಯ್, ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರು ಜ್ಯೋತಿ ಬೆಳಗಿಸುವ ಮೂಲಕ ೩೦ನೇ ವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸಿದರು. ಇತಿಹಾಸದ ಸತ್ಯಶೋಧ ಸಂಶೋಧನೆಗಳನ್ನು ಹಿಂದಿನ ವಿದ್ವಾಂಸರಂತೆ ಈಗಿನ ಯುವ ಸಂಶೋಧಕರು ಕೈಗೊಳ್ಳಬೇಕೆಂದು ತಮ್ಮ ಉದ್ಘಾಟನಾ ಭಾಷಣದಲ್ಲಿ ತಿಳಿಸಿದರು.

ಡಾ. ದೇವರಕೊಂಡಾರೆಡ್ಡಿ ಹಾಗೂ ಪ್ರೊ. ಜಿ.ಕೆ. ದೇವರಾಜಸ್ವಾಮಿ ಅವರು ಸಂಪಾದಿಸಿದ "ಇತಿಹಾಸ ದರ್ಶನ" ೩೧ನೇ ವಾರ್ಷಿಕ ಸಂಪುಟವನ್ನು ಡಾ. ಆರ್. ಗೋಪಾಲ್ ನಿರ್ದೇಶಕರು, ವಸ್ತು ಸಂಗ್ರಹಾಲಯಗಳು, ರಾಜ್ಯ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮೈಸೂರು ಅವರು ಬಿಡುಗಡೆ ಮಾಡಿದರು. ಇತಿಹಾಸ ದರ್ಶನ ಸಂಪುಟವು ನಿರಂತರವಾಗಿ ೩೧ ಸಂಪುಟ ಬಂದಿರುವುದು ಶ್ಲಾಘನೀಯವಾಗಿದೆ. ಆದರೂ ಸಂಶೋಧನಾ ಲೇಖನಗಳು ಇನ್ನೂ ಉತ್ತಮ ಮಟ್ಟವನ್ನು ಹೊಂದಬೇಕಾಗಿದೆ. ಎಂಬುದನ್ನು ತಿಳಿಸಿದ್ದಲ್ಲದೆ, ಅಕಾದೆಮಿಯನ್ನು ಮೊದಲಿನಿಂದಲೂ ಗಮನಿಸಿದ್ದಲ್ಲದೆ ಅಕಾದೆಮಿಯ ಕಾರ್ಯಗಳನ್ನು ಶ್ಲಾಘಿಸಿದರು.

ನಿಕಟಪೂರ್ವ ೨೯ನೇ ವಾರ್ಷಿಕ ಸಮ್ಮೇಳನಾಧ್ಯಕ್ಷರಾಗಿದ್ದ ಡಾ. ಹಂ.ಪ. ನಾಗರಾಜಯ್ಯ, ಇವರು, ಪಾಟೀಲ ಬಸನಗೌಡ ಎಸ್.ಹುಣಸಗಿ ಬರೆದಿರುವ 'ಗಿರಿನಾಡು' ಪುಸ್ತಕ ಹಾಗೂ ಪ್ರೊ. ಎಸ್.ಸಿ. ಪಾಟೀಲ್ ಅವರ ದೃಶ್ಯಕಲಾ ಸಂವೇದನೆ, ಚಿತ್ರಕಲಾ ಪಥ, 'ಕರ್ನಾಟಕ ಭಿತ್ತಿಚಿತ್ರಕಲೆ ಹಲವು ಹೊಸ ಶೋಧ' ಎಂಬ ಪುಸ್ತಕಗಳನ್ನು ಬಿಡುಗಡೆ ಮಾಡಿದರು.

ಸಮ್ಮೇಳನದ ಮುಖ್ಯ ಅತಿಥಿಗಳಾಗಿ ಪ್ರೊ. ಶ್ರೀನಿವಾಸ ಎಚ್. ರಿತ್ತಿ, ಹಿರಿಯ ಇತಿಹಾಸ ಸಂಶೋಧಕರು, ಧಾರವಾಡ ಇವರು ಉಪಸ್ಥಿತರಿದ್ದರು. ಇತಿಹಾಸ ಸಂಶೋಧನಾ ಮಹತ್ವ ಹಾಗೂ ಸಂಶೋಧನಾ ಪ್ರಮಾಣಿಕತೆಯ ಬಗ್ಗೆ ಅವರು ಬರೆದಿದ್ದ ಭಾಷಣದ ಲೇಖನವನ್ನು ಪ್ರೊ. ದೀಪಕ್ ಆಲೂರು ಅವರು ವಾಚಿಸಿದರು.

ಡಾ. ಬಾ.ರಾ. ಗೋಪಾಲ್ ಅವರ ನೆನಪಿನಲ್ಲಿ ನೀಡುವ ಶಾಸನ ತಜ್ಞರ ಪ್ರಶಸ್ತಿಯು ರೂ ೧೦,೦೦೦/- ನಗದನ್ನು ಶಾಸನ ಮತ್ತು ಇತಿಹಾಸ ತಜ್ಞರಾದ ಡಾ. ಎಸ್.ವಿ. ಪಾಡಿಗಾರ್, ನಿವೃತ್ತ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಅವರಿಗೆ ಅತಿಥಿ ಗಣ್ಯರೆಲ್ಲರೂ ಸೇರಿ ಪ್ರಶಸ್ತಿ ನೀಡಿ ಗೌರವಿಸಿದರು.

ಬೈಸಾನಿ ರುಕ್ಮಣಮ್ಮ ರತ್ನಂ ಶೆಟ್ಟಿ ಅವರ ನೆನಪಿನಲ್ಲಿ ನೀಡುವ "ಇತಿಹಾಸ ಸಂಸ್ಕೃತಿ ಶ್ರೀ" ಐದನೇ ಬಾರಿಯ ಪ್ರಶಸ್ತಿಯ ಹಾಗೂ ರೂ. ೧,೦೦,೦೦೦ ನಗದನ್ನು ಖ್ಯಾತ ಸಂಶೋಧಕ ಮತ್ತು ಪುರಾತತ್ವವಿದರಾದ ಡಾ. ಎಸ್. ರಾಜಶೇಖರ್ ಅವರಿಗೆ, ಬಿ.ಆರ್.ಆರ್. ಚಾರಿಟಬಲ್ ಟ್ರಸ್ಟ್‌ನ ಕಾರ್ಯದರ್ಶಿಗಳಾದ, ಲಕ್ಷ್ಮೀ ಮುದ್ರಣಾಲಯದ ಶ್ರೀಯುತ ಅಶೋಕ್‌ಕುಮಾರ್ ದಂಪತಿಗಳು ಇತರ ಗಣ್ಯರೊಂದಿಗೆ ಒಡಗೂಡಿ ಪ್ರಶಸ್ತಿ ಪ್ರಧಾನ ಮಾಡಿದರು.

ಶ್ರೀಮತಿ ವಿ. ಗೌರಮ್ಮ, ಶ್ರೀ ಗಂಗಾಧರಯ್ಯ ಇವರ ಹೆಸರಿನಲ್ಲಿ ಅವರ ಮಕ್ಕಳಾದ ಡಾ. ಎಂ.ಜಿ. ನಾಗರಾಜ್, ಶ್ರೀಮತಿ ಪದ್ಮ ವಿರೂಪಾಕ್ಷಯ್ಯ ಮತ್ತು ಡಾ. ಎಂ.ಜಿ. ಚಂದ್ರಕಾಂತ್ ಇವರುಗಳು ಸ್ಥಾಪಿಸಿರುವ ದತ್ತಿಯಿಂದ "ಸಂಶೋಧನ ಶ್ರೀ" ಪ್ರಶಸ್ತಿಯನ್ನು ಈ ಸಾಲಿನಿಂದ ನೀಡಲಾಗುತ್ತಿದೆ. ಪ್ರಸ್ತುತ ಸಾಲಿನ 'ಸಂಶೋಧನ ಶ್ರೀ' ಪ್ರಶಸ್ತಿಯ ಹಾಗೂ ರೂ ೧೫,೦೦೦ ನಗದನ್ನು ಡಾ. ಬಿ. ರಾಜಶೇಖರಪ್ಪ, ಇತಿಹಾಸ ಮತ್ತು ಸಾಹಿತ್ಯ ಸಂಶೋಧಕರು ಚಿತ್ರದುರ್ಗ ಇವರಿಗೆ ಸಮ್ಮೇಳನಾಧ್ಯಕ್ಷರು ಇತರ ಗಣ್ಯರೊಡಗೂಡಿ ಪ್ರಶಸ್ತಿ ಪ್ರಧಾನ ಮಾಡಿದರು.

ಅರಸೀಕೆರೆ ಮೇಲಣ ಮಠದ ಶ್ರೀ ಎಸ್. ಸಿದ್ದಣ್ಣಯ್ಯ ಮತ್ತು ಶ್ರೀಮತಿ ಗಂಗಮ್ಮ ಸ್ಮಾರಕ ಟ್ರಸ್ಟ್ ನೀಡುವ "ನೊಳಂಬ ಶ್ರೀ" ಪ್ರಶಸ್ತಿಯ ಹಾಗೂ ರೂ ೧೦,೦೦೦/-ಗಳನ್ನು ಡಾ. ಎಚ್. ಜಯಮ್ಮ ಕರಿಯಣ್ಣ ಅವರಿಗೆ ನೀಡಲಾಯಿತು. ಡಾ. ಜಯಮ್ಮ ಕರಿಯಣ್ಣ ಅವರ ಅನಾರೋಗ್ಯದಿಂದ ಬರಲಾಗದ ಕಾರಣ, ಪ್ರಶಸ್ತಿಯ ವಿವರವನ್ನು ಸಭೆಗೆ ನೀಡಲಾಯಿತು. ಆ ನಂತರದಲ್ಲಿ ಡಾ. ದೇವರಕೊಂಡಾರೆಡ್ಡಿ ಅವರೊಂದಿಗೆ ಎಲ್ಲಾ ಪದಾಧಿಕಾರಿಗಳು ಹಾಗೂ ಶ್ರೀ ಪರಶಿವಮೂರ್ತಿ ಅರಸೀಕೆರೆ ಅವರು ಎಲ್ಲರೂ ಸೇರಿ ಡಾ. ಜಯಮ್ಮ ಅವರ ಸ್ವಗೃಹದಲ್ಲಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಇತಿಹಾಸ ಅಕಾದೆಮಿಯ ೩೦ನೇ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷ ಪದವಿಯ ಗೌರವಕ್ಕೆ ಪಾತ್ರರಾದ ಪ್ರೊ. ಕೆ. ಪದ್ದಯ್ಯ, ಖ್ಯಾತ ಪುರಾತತ್ವವಿದರು, ಡೆಕ್ಕನ್ ಕಾಲೇಜು, ಪುಣೆ, ಅವರ ಕಿರು ಪರಿಚಯವನ್ನು ಸಭೆಗೆ ಮಾಡಿಕೊಡಲಾಯಿತು. ೩೦ನೇ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷ ಪದವಿ ಗೌರವಕ್ಕೆ ಪಾತ್ರರಾಗಿದ್ದ ಪುರಾತತ್ವವಿದರೂ, ಖ್ಯಾತ ಸಂಶೋಧಕರೂ ಆದ ಪ್ರೊ. ಕೆ. ಪದ್ದಯ್ಯ ಅವರು ಗೌರವ ಹಾಗೂ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದರು. ಸಮಕಾಲೀನ ಸಮಯದಲ್ಲಿ ಪ್ರಾಗೈತಿಹಾಸಿಕ ಅಥವಾ ಬರವಣಿಗೆ ಪೂರ್ವಕಾಲದ ಅಧ್ಯಯನದ ಪ್ರಾಮುಖ್ಯತೆ ಪ್ರಸ್ತುತತೆ ಬಗ್ಗೆ ತಿಳಿಸಿದರು. ವಿದ್ವಾಂಸರಲ್ಲಿನ ಚರಿತ್ರೆ ಹಾಗೂ ಪುರಾತತ್ವಗಳ ನಡುವಿನ ಅನ್ಯೋನ್ಯತೆ ಮತ್ತು ವೈಮನಸ್ಯಗಳ ಬಗ್ಗೆ ತಿಳಿಸಿ ಹೊಂದಾಣಿಕೆಯ ಮಹತ್ವ ವಿವರಿಸಿದರು.

ಶೋರಾಪುರ (ಸುರಪುರ) ದೋಆಬ್‌ನಲ್ಲಿಯ ಪುರಾತತ್ವ ಅಧ್ಯಯನ ಹಾಗೂ ಕರ್ನಾಟಕದಲ್ಲಿ ಸುದೀರ್ಘ ೩೫ ವರ್ಷಗಳ ಪುರಾತತ್ವ ಅಧ್ಯಯನ ವಿಷಯವನ್ನು ದೀರ್ಘವಾಗಿ ಪ್ರಸ್ತಾಪಸಿದರು. ತಮ್ಮ ದೀರ್ಘಾವಧಿಯ ಸಂಶೋಧನೆಯಲ್ಲಿ ಸಹಾಯ ಮಾಡಿದ ಸ್ಥಳೀಯ ಜನರು, ಉಪಾಧ್ಯಾಯರು, ಅಧಿಕಾರಿಗಳಿಗೆ ಕೃತಜ್ಞತೆಯನ್ನು ತಿಳಿಸಿದ್ದಲ್ಲದೆ, ಮುಂದಿನ ಜನ್ಮವಿದ್ದಲ್ಲಿ ದೋ ಅಬ್ ಸುರಪುರ ಪ್ರದೇಶದಲ್ಲಿ ಹುಟ್ಟಲು ಬಯಸುತ್ತೇನೆ ಎಂದು ಗದ್ಗದಿತರಾಗಿ ನುಡಿದರು. ೩೦ನೇ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಮಾಡಿದ ಇತಿಹಾಸ ಅಕಾದೆಮಿಗೆ ಕೃತಜ್ಞತೆಯನ್ನು ಸಲ್ಲಿಸಿದರು.

ಖ್ಯಾತ ಪುರಾತತ್ವವಿದರಾದ ಡಾ. ಅ. ಸುಂದರ ಅವರು ಸನ್ಮಾನಿತ ಗಣ್ಯರನ್ನು ವೈಯಕ್ತಿಕವಾಗಿ ಗೌರವಿಸಿ ಸನ್ಮಾನಿಸಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಇತಿಹಾಸ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ವಹಿಸಿದ್ದರು. ಕಾರ್ಯಕ್ರಮದ ನಿರ್ವಹಣೆಯನ್ನು ಪ್ರೊ. ಜಿ.ಕೆ. ದೇವರಾಜಸ್ವಾಮಿ ಅವರು ನಿರ್ವಹಿಸಿದರು.

ಅಕಾದೆಮಿಯ ಹಿಂದಿನ ಸಮ್ಮೇಳನ ೨೦೧೫-೧೬ನೇ ಶೈಕ್ಷಣಿಕ ಸಾಲಿನ ನಂತರ ಸದಸ್ಯರು ಪಿಎಚ್.ಡಿ/ಡಿ.ಲಿಟ್ ಪದವಿ ಪಡೆದು ಗೌರವ, ಸನ್ಮಾನಕ್ಕೆ ಪಾತ್ರರಾದ ಸದಸ್ಯರಿಗೆ ಗಣ್ಯ ಅತಿಥಿಗಳು ಸನ್ಮಾನಿಸಿದರು. ಸನ್ಮಾನಕ್ಕೆ ಪಾತ್ರರಾದ ಪ್ರತಿ ಅಭ್ಯರ್ಥಿಗೂ ತಲಾ ೫೦೦/-ನ್ನು ತುಮಕೂರಿನ ಶ್ರೀರಾಜನ್ ಅವರು ನೀಡಿದರು.

ಕನ್ನಡ ಸಂಶೋಧನಾ ಸಂಸ್ಥೆಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಏರ್ಪಡಿಸಿದ 'ನಾಣ್ಯಗಳ ಪ್ರದರ್ಶನ'ವನ್ನು ಮಾನ್ಯ ಕುಲಪತಿಗಳಾದ ಪ್ರೊ. ಪ್ರಮೋದ್ ಬಿ. ಗಾಯ್ ಇವರು ಉದ್ಘಾಟಿಸಿದರು.

ಉದ್ಘಾಟನಾ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಅತಿಥಿಗಳಿಗೆ ಹಾಗೂ ಎಲ್ಲರಿಗೂ ಪ್ರೊ. ಜಿ.ಕೆ. ದೇವರಾಜಸ್ವಾಮಿ ಅವರು ವಂದನಾರ್ಪಣೆ ಅರ್ಪಿಸಿದರು.

ಪಿ.ಎಚ್‌ಡಿ ಮತ್ತು ಡಿ.ಲಿಟ್ ಪದವಿ ಪಡೆದ ಸನ್ಮಾನಿತರು

ಕ್ರ. ಸಂ.	ಪಿಎಚ್.ಡಿ./ಡಿ.ಲಿಟ್ ಪದವಿ ಪಡೆದವರ ಹೆಸರು	ಮಾರ್ಗದರ್ಶಕರ ಹೆಸರು	ವಿಷಯ	ವಿಶ್ವವಿದ್ಯಾಲಯವರ್ಷ
೧	ಡಾ. ನಾಗರಾಜಪ್ಪ ಎಸ್.	ಡಾ. ಸಿ.ಎಸ್. ವಾಸುದೇವನ್	ಹಂಪಿ ಪರಿಸರದ ಲೌಕಿಕ ಶಿಲ್ಪಗಳು	ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೬
೨	ಡಾ. ಎಸ್.ಕೆ. ವಾಸುದೇವ	ಡಾ. ಎ. ಸೋಮಶೇಖರ	ಕರ್ನಾಟಕದಲ್ಲಿ ಊಳಿಗಮಾನ್ಯ ವ್ಯವಸ್ಥೆ ಉಗಮ, ಬೆಳವಣಿಗೆ ಮತ್ತು ಅವನತಿ (ಕ್ರಿ.ಶ. ೧೫೦೦ರಿಂದ ೧೮೦೦ರವರೆಗೆ)	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ೨೦೧೬
೩	ಡಾ. ಫಕೀರಪ್ಪ ವಜ್ರಬಂಡಿ	ಡಾ.ವಿಠ್ಠಲರಾವ್ ಟಿ.ಗಾಯಕ್ವಡ್	ಕನ್ನಡದಲ್ಲಿ ಅರ್ಥಶಾಸ್ತ್ರ ಅಧ್ಯಯನದ ಪಠ್ಯ ಸಾಮಗ್ರಿಗಳು	ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೬
೪	ಡಾ. ಪದ್ಮಜಾ ಎಂ. ದೇಸಾಯಿ	ಡಾ. ಸಿ.ಎಸ್. ವಾಸುದೇವನ್	ಹಂಪಿ ಪರಿಸರದ ವೈಷ್ಣವ ಶಿಲ್ಪಗಳು	ಕನ್ನಡ ವಿವಿ, ಹಂಪಿ ೨೦೧೬
೫	ಡಾ. ಲಕ್ಷ್ಮೀ ಜಿ. ಪ್ರಸಾದ್	ಡಾ. ವಿ. ನಾರಾಯಣ ಭಟ್	i)ಪಾಡ್ದನಗಳು ಮತ್ತು ತುಳು ಸಂಸ್ಕೃತಿ ii)ತುಳುನಾಡಿನ ನಾಗಬ್ರಹ್ಮ ಮತ್ತು ಕಂಬಳ	ದ್ರಾವಿಡಂ ವಿ.ವಿ., ೨೦೧೫ ಹಂಪಿ ವಿವಿ, ೨೦೧೦
೬	ಡಾ. ಪ್ರವೀಣ್ ಬಿ.	ಡಾ. ಹನುಮನಾಯಕ	ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಇತಿಹಾಸ-ಒಂದು ಅಧ್ಯಯನ (೧೦ನೇ ಶತಮಾನದಿಂದ ೧೮ನೇ ಶತಮಾನದವರೆಗೆ)	ಮಂಗಳೂರು ವಿ.ವಿ., ೨೦೧೬, ಮಂಗಳೂರು
೭	ಡಾ. ಹೇಮಾವತಿ ಎಸ್. ಮೆಣಸಿಗಿ	ಡಾ. ಸಿ.ಎಸ್. ವಾಸುದೇವನ್	ಹಂಪಿ ಪರಿಸರದ ಶೈವಶಿಲ್ಪಗಳು	ಕನ್ನಡ ವಿ.ವಿ., ಹಂಪಿ ೨೦೧೬
೮	ಡಾ. ಬಿ.ಟಿ. ಚಾರುಲತಾ	ಡಾ. ಎಸ್.ವೈ. ಸೋಮಶೇಖರ್	ಬ್ರಹ್ಮಗಿರಿ ಪರಿಸರ: ಸಾಂಸ್ಕೃತಿಕ ಅಧ್ಯಯನ	ಕನ್ನಡ ವಿ.ವಿ., ಹಂಪಿ ೨೦೧೬
೯	ಡಾ. ಸುರೇಶ್ ಕೆ. ಹಾನಗಲ್ಲ	ಡಾ. ಕೆ.ಜಿ. ಭಟ್‌ಸೂರಿ	ಧಾರವಾಡ ಜಿಲ್ಲೆಯ ಶಾಸನಗಳು ಮತ್ತು ದೇವಾಲಯಗಳು	ಕನ್ನಡ ವಿ.ವಿ. ಹಂಪಿ ಹಂಪಿ, ೨೦೧೬
೧೦	ಡಾ. ಬಸವರಾಜ ಬಿ.	ಡಾ. ಎಂ.ಜಿ. ಮಂಜುನಾಥ್	ಚಾರಿತ್ರಿಕ ಹಿನ್ನೆಲೆಯಲ್ಲಿ ಪ್ರವಾಸ ಕೇಂದ್ರವಾಗಿ ಮೈಸೂರು ಜಿಲ್ಲೆ	ಮೈಸೂರು ವಿ.ವಿ. ೨೦೧೬, ಮೈಸೂರು

೧೧	ಡಾ. ಅರ್ಚನಾ ಸಿದ್ಧರಾಮಪ್ಪ	ಡಾ. ಕೆ.ಜಿ. ಭಟ್‌ಸೂರಿ	ಗುಲಬರ್ಗಾ ಜಿಲ್ಲೆಯ ಕಲ್ಯಾಣ ಚಾಲುಕ್ಯರ ಶಾಸನಗಳು ಮತ್ತು ದೇವಾಲಯಗಳು	ಕನ್ನಡ ವಿ.ವಿ. ಹಂಪಿ ೨೦೧೬
೧೨	ಡಾ.ಗುರುಮೂರ್ತಿಪೆಂಡಕೂರು	ಡಾ. ಎಸ್.ಎನ್. ತಾರಾನಾಥ್	ಕೃಷ್ಣದೇವರಾಯನ ಕಾಲದ ಕನ್ನಡ ಶಾಸನಗಳು	ಮೈಸೂರು ವಿ.ವಿ. ೨೦೧೬
೧೩	ಡಾ. ಉಮೇಶ್ ಸಿ.ಜಿ.	ಡಾ. ಎನ್.ಎಸ್. ರಂಗರಾಜು	ಚಾಮರಾಜನಗರ ಜಿಲ್ಲೆಯ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ–ಒಂದು ವಿವರಣಾತ್ಮಕ ಅಧ್ಯಯನ (ಗಂಗರ ಕಾಲದಿಂದ ವಿಜಯನಗರ ಕಾಲದವರೆಗೆ)	ಮೈಸೂರು ವಿ.ವಿ. ಮೈಸೂರು, ೨೦೧೬
೧೪	ಡಾ. ಎಂ.ಎ. ಪ್ರಭಾಕರ	ಡಾ. ಕಲವೀರ ಮನ್ವಾಚಾರ್	ಮಧ್ಯಮಲೆನಾಡಿನ ಶಾಸನಗಳ ಸಾಮಾಜಿಕ ಅಧ್ಯಯನ (ತೀರ್ಥಹಳ್ಳಿ, ಕೊಪ್ಪ,ಶೃಂಗೇರಿ)	ಕನ್ನಡ ವಿ.ವಿ., ಹಂಪಿ ೨೦೧೬
೧೫	ಡಾ. ಟಿ. ರಾಜು	ಡಾ. ಬಿ. ಪುಟ್ಟಯ್ಯ	ಚಾಮರಾಜನಗರದಲ್ಲಿ ಶೈವಪರಂಪರೆ–ಒಂದು ಸಾಂಸ್ಕೃತಿಕ ಅಧ್ಯಯನ	ಮೈಸೂರು ವಿವಿ, ಮೈಸೂರು ೨೦೧೬
೧೬	ಡಾ. ನಾಗವೇಣಿ ಎ.	ಡಾ. ಎಂ. ಕೊಟ್ರೇಶ್	ಹಡಗಲಿ ತಾಲೂಕಿನ ದೇವಾಲಯಗಳು ಮತ್ತು ಶಾಸನಗಳ ಅಧ್ಯಯನ	ಕನ್ನಡ ವಿವಿ, ಹಂಪಿ ೨೦೧೬
೧೭	ಶಂಕರಪ್ಪ ಎಂ. ಬಡಿಗೇರ	ಡಾ.ಎಸ್.ವೈ.ಸೋಮಶೇಖರ್	ಗದಗ ಜಿಲ್ಲೆಯ ಕೆರೆ ಮತ್ತು ಬಾವಿಗಳು–ಚರಿತ್ರಾತ್ಮಕ ಅಧ್ಯಯನ	ಕನ್ನಡ ವಿವಿ, ಹಂಪಿ ೨೦೧೫
೧೮	ಡಾ. ವಿಜಯಲಕ್ಷ್ಮಮ್ಮ	ಡಾ. ಚಿನ್ನಸ್ವಾಮಿ ಸೋಸಲೆ	ಮೈಸೂರು ಒಡೆಯರು ಚರಿತ್ರೆ–ಚರಿತ್ರೆ ಲೇಖನದ ಹಿನ್ನೆಲೆಯಲ್ಲಿ	ಕನ್ನಡ ವಿವಿ ಹಂಪಿ ಹಂಪಿ, ೨೦೧೬
೧೯	ಡಾ. ತಾರಾ	ಡಾ. ಸುನಂದಮ್ಮ	ಕರ್ನಾಟಕದ ಚರಿತ್ರೆಯಲ್ಲಿ ಮಹಿಳಾ ಆಡಳಿತಗಾರರು, ಸ್ತ್ರೀವಾದಿ ಅಧ್ಯಯನ	ಅಕ್ಕಮಹಾದೇವಿ ಮಹಿಳಾ ವಿವಿ, ೨೦೧೬
೨೦	ಡಾ. ಮಂಜುಶ್ರೀ ಎಸ್.ಪಿ.	ಡಾ. ಎಂ.ಜಿ. ಮಂಜುನಾಥ್	ಮೈಸೂರು ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ	ಮೈಸೂರು ವಿವಿ ಮೈಸೂರು, ೨೦೧೬

೩೦ನೇ ವಾರ್ಷಿಕ ಸಮ್ಮೇಳನದಲ್ಲಿ ನಡೆದ ಗೋಷ್ಠಿಗಳು : ದಿನಾಂಕ : ೨೨ ಅಕ್ಟೋಬರ್ ೨೦೧೬ ಶನಿವಾರ ಮಧ್ಯಾಹ್ನ ೨ ಗಂಟೆಯಿಂದ ದಿನಾಂಕ : ೨೪ ಅಕ್ಟೋಬರ್ ೨೦೧೬ ಸೋಮವಾರ ೪ ಗಂಟೆವರೆಗೆ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಆಶ್ರಯದಲ್ಲಿ 'ಮಾನಸೋಲ್ಲಾಸ ಸಭಾಂಗಣ'ದಲ್ಲಿ ಹಾಗೂ ಸಮಾನಾಂತರ ೨೧ ಗೋಷ್ಠಿಗಳಲ್ಲಿ ಒಟ್ಟು ೨೧೦ ಪ್ರಬಂಧಗಳು ಮಂಡನೆಯಾದವು.

ಗೋಷ್ಠಿಗಳ ಅಧ್ಯಕ್ಷತೆ: ಕ್ರಮವಾಗಿ ಡಾ. ಅ. ಸುಂದರ, ಡಾ. ಎ.ಕೆ. ಶಾಸ್ತ್ರಿ, ಡಾ. ವೆಂಕಟೇಶ್ ಜೋಯ್ಸ್, ಪ್ರೊ. ಲಕ್ಷ್ಮಣ್ ತೆಲಗಾವಿ, ಡಾ. ಪಾಟೀಲ್.ಎಸ್.ಸಿ., ಪ್ರೊ. ಧನವಂತ ಹಾಜವಗೋಳ, ಡಾ. ಎಫ್.ಟಿ. ಹಳ್ಳಿಕೇರಿ, ಡಾ. ರಾಜಶೇಖರಪ್ಪ, ಡಾ. ಗಣಪತಿಗೌಡ, ಡಾ. ಜಿ. ಕರಿಯಪ್ಪ, ಡಾ. ಎಂ.ಜಿ. ನಾಗರಾಜ್, ಎಂ.ಬಿ. ಪಾಟೀಲ್. ಡಾ. ಕೆ. ರವೀಂದ್ರನಾಥ್, ಡಾ. ಸಿ.ಎಸ್. ವಾಸುದೇವನ್, ಪ್ರೊ. ಮುರುಗೇಶಿ, ಡಾ. ಎಸ್.ಕೆ. ಮೇಲಕಾರ, ಎಸ್.ಕೆ. ಕೊಪ್ಪ, ಪ್ರೊ. ಪಿ.ಎಫ್. ಹಳೇಮನಿ ಪ್ರೊ. ಎಂ.ಎನ್. ಬೆನ್ನೂರ, ಪ್ರೊ. ಎಸ್.ಜಿ. ಚಲವಾದಿ ಅವರುಗಳು ಗೋಷ್ಠಿ ಅಧ್ಯಕ್ಷತೆ ವಹಿಸಿದ್ದರು.

ಗೋಷ್ಠಿಗಳ ನಿರ್ವಹಣೆ: ಡಾ. ಬಾಲಕೃಷ್ಣಹೆಗಡೆ, ಡಾ. ಮಂಜುಳಾಚಾರಿ, ಪ್ರೊ. ದತ್ತ ಪ್ರಸನ್ನ ಪಾಟೀಲ, ಪ್ರೊ. ಸಣ್ಣಪಾಲಯ್ಯ. ಬಿ.ಪಿ. ಶ್ರೀಮತಿ ಪದ್ಮಜಾ ದೇಸಾಯಿ, ಶ್ರೀ ವಿಜಯಶಂಕರ್, ಡಾ. ಮಹೇಶ್ ಕುಮಾರ್, ಹ. ಪಾಟೀಲ ಶ್ರೀ ಲೋಕಣ್ಣಭಜಂತ್ರಿ, ಶ್ರೀ ಸತೀಶ್ ಕುಮಾರ್ ಬಿ.ವಿ. ಶ್ರೀ ಟಿ.ಎಲ್. ಜಗದೀಶ್, ಶ್ರೀ ಶೈಲ ಮನಗುತ್ತಿ, ಶ್ರೀ ಆದಪ್ಪ ಪಾಸೋಡಿ, ಶ್ರೀಸನ್ಮತಿ ಕುಮಾರ್, ಶ್ರೀ ಹೆಚ್. ರಮೇಶ್, ಶ್ರೀ ಶೈಲ ಮನಗುತ್ತಿ, ಶ್ರೀ ಸುರೇಶ್ ವೈ. ಮಾದಾರ, ಶ್ರೀ ಮಂಜುನಾಥ್ ಬೆನ್ನೂರ, ಶ್ರೀ ಪ್ರಮೋಧ್, ಹ. ಹಳೇಮನಿ, ಡಾ. ಎಂ.ಎಂ. ಅಕ್ಕಿ, ಪ್ರೊ. ಎಸ್.ಆರ್. ಕೋರಿ ಶೆಟ್ಟರ್ ಅವರುಗಳು ಗೋಷ್ಠಿ ನಿರ್ವಹಣೆ ಮಾಡಿದರು.

ಸಮಾರೋಪ ಸಮಾರಂಭ

ದಿನಾಂಕ : ೨೪–೧೦–೨೦೧೬ ಸೋಮವಾರ ಸಂಜೆ ೪.೩೦ಕ್ಕೆ ಸಮಾರೋಪ ಸಮಾರಂಭವು ಕರ್ನಾಟಕ ವಿಶ್ವವಿದ್ಯಾಲಯದ ಮಾನಸೋಲ್ಲಾಸ ಸಭಾಂಗಣದಲ್ಲಿ ಏರ್ಪಟ್ಟಿತ್ತು. ಕುಮಾರಿ ಶ್ರುತಿನಾಯಕ್ ಹಾಗೂ ಯಮುನಪ್ಪ ಜಲಗಾರ್ ಸಂಗಡಿಗರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಡಾ. ಎಸ್.ಕೆ. ಮೇಲಕಾರ ಕಾರ್ಯಕ್ರಮ ಸಂಯೋಜಕರು, ಅಮೃತ ಮಹೋತ್ಸವ ಸಮಿತಿ, ಕನ್ನಡ ಸಂಶೋಧನಾ ಸಂಸ್ಥೆ ಕ.ವಿ.ವಿ. ಧಾರವಾಡ, ಇವರು ಪ್ರಾಸ್ತಾವಿಕ ನುಡಿಗಳೊಂದಿಗೆ ಅತಿಥಿಗಳಿಗೆ ಸ್ವಾಗತ ಕೋರಿದರು. ಮುಖ್ಯ ಅತಿಥಿಗಳಾಗಿ ಪ್ರೊ. ಎಂ.ಎನ್. ಜೋಶಿ, ಕುಲಸಚಿವರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಇವರು ಆಗಮಿಸಿದ್ದರು. ಸಮಾರಂಭದ ಅತಿಥಿಗಳಾಗಿ ಡಾ. ವೀರಾಪುರ್, ಸಹಾಯಕ ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರು ಆಗಮಿಸಿದ್ದರು.

ಸಮ್ಮೇಳನದ ಸರ್ವಾಧ್ಯಕ್ಷರಾದ ಪ್ರೊ. ಕೆ. ಪದ್ದಯ್ಯ ಅವರು ಸಮ್ಮೇಳನದ ವ್ಯವಸ್ಥೆ ಅಕಾದೆಮಿಯ ಚಟುವಟಿಕೆ ಹಾಗೂ ಪ್ರಬಂಧಗಳ ಮಂಡನೆ ಇವುಗಳು ಅಂತರಾಷ್ಟ್ರೀಯ ಸಮ್ಮೇಳನಕ್ಕಿಂತಲೂ ಸಂತೋಷವನ್ನುಂಟು ಮಾಡಿತು. ಅದಲ್ಲದೆ ಹೊಸ ತಂತ್ರಜ್ಞಾನದ ಬಳಕೆಯೊಂದಿಗೆ ಹೆಚ್ಚಿನ ಸಂಶೋಧನೆಗಳ ಬಗ್ಗೆ ಗಮನ ಸೆಳೆದರು. ಅದಲ್ಲದೆ ಅಕಾದೆಮಿಯ ಮೇಲಿನ ಪ್ರೀತಿಗಾಗಿ ಡಾ. ಎಂ.ಎಚ್. ಕೃಷ್ಣ ಅವರ ಹೆಸರಿನಲ್ಲಿ, ಆ ವರ್ಷದ ಅತ್ಯತ್ತಮ ಪ್ರಾಗೈತಿಹಾಸಿಕ ಲೇಖನದ ಬಗ್ಗೆ ಒಂದು ಪುದುವಟ್ಟು ಇಡುವ ಬಗ್ಗೆ ತಿಳಿಸಿ, ಮೂವತ್ತು ಸಾವಿರ ರೂಪಾಯಿಗಳ ಹಣದ ಸಹಾಯವನ್ನೂ ನೀಡಿದರು.

ರಾಜ್ಯ ಪತ್ರಾಗಾರ ಇಲಾಖೆಯ ಧಾರವಾಡದ ಶಾಖೆಯು ಸಮ್ಮೇಳನದಲ್ಲಿ ವಸ್ತುಪ್ರದರ್ಶನವೇರ್ಪಡಿಸಿತ್ತು. ಇದನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಪತ್ರಾಗಾರ ಇಲಾಖೆಯ ಸಹಾಯ ಅಧಿಕಾರಿಗಳಾದ ಶ್ರೀಮತಿ ಮಂಜುಳ ಎಲಿಗಾರ ಅವರನ್ನು ಸನ್ಮಾನಿಸಲಾಯಿತು.

ಸಮ್ಮೇಳನ ಸಂದರ್ಭದಲ್ಲಿ ನಾಣ್ಯಗಳ ಪ್ರದರ್ಶನವೇರ್ಪಡಿಸಿ ಐತಿಹಾಸಿಕ ಮಹತ್ವವನ್ನು ತಿಳಿಯುವಲ್ಲಿ ಸಹಕರಿಸಿದ ಶ್ರೀ ಭರತ್‌ಕುಮಾರ್ ಸೊನಗಾರ ಅವರನ್ನೂ ಅಕಾದೆಮಿಯ ಅಧ್ಯಕ್ಷರೂ, ಸಮ್ಮೇಳನಾಧ್ಯಕ್ಷರೂ ಕೂಡಿ ಸನ್ಮಾನಿಸಿದರು.

ವಾರ್ಷಿಕ ಸಮ್ಮೇಳನದ ಮೂರೂ ದಿನಗಳ ಕಾಲ ಭೋಜನ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ. ಫಕೀರಪ್ಪ ವಜ್ರಬಂಡಿ, ಗಜಾನನ ವೀರಪ್ಪ ಚಿನಗುಡಿ ಅವರನ್ನು ಸನ್ಮಾನಿಸಿದ್ದಲ್ಲದೆ ಸಹಾಯಕರಾದ ಮಲ್ಲಿಕಾರ್ಜುನ ಉಪ್ಪಿನ್ ಶ್ರೀಪತ್ರಪ್ಪ ಹರಡಿ ಇವರನ್ನೂ ಗೌರವಿಸಲಾಯಿತು. ಕಾರ್ಯಕ್ರಮ ಯಶಸ್ಸಿಗೆ ಸಹಕರಿಸಿದ ಕನ್ನಡ ಸಂಶೋಧನ ಸಂಸ್ಥೆಯ ಪಿಎಚ್.ಡಿ. ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ದೇವರಕೊಂಡಾರೆಡ್ಡಿ ಅವರು ಸಮ್ಮೇಳನದ ಯಶಸ್ಸಿಗೆ ಕಾರಣರಾದವರಿಗೆ ಕೃತಜ್ಞತೆ ಸಲ್ಲಿಸಿದರು. ಅದಲ್ಲದೆ ಡಾ. ಎಸ್.ಕೆ. ಮೇಲಕಾರ ಅವರ ಶ್ರಮ ಹಾಗೂ ಆಯೋಜಿಸಿದ ಕ್ರಮಗಳಿಂದ ಸಮ್ಮೇಳನವು ಯಶಸ್ಸಿಗೆ ಕಾರಣವಾಯಿತೆಂದರು. ಡಾ. ಎಸ್.ಕೆ. ಮೇಲಕಾರ ಅವರನ್ನು ಸನ್ಮಾನಿಸಲಾಯಿತು. ಅಕಾದೆಮಿಯ ಪರವಾಗಿ ಪ್ರೊ. ದೇವರಾಜಸ್ವಾಮಿ ಪ್ರಧಾನ ಕಾರ್ಯದರ್ಶಿ ಅವರು ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದವರೆಲ್ಲರಿಗೂ ಅತಿಥಿಗಳಿಗೂ ವಂದನೆಗಳನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಅತಿಥಿಗಳನ್ನು ಸನ್ಮಾನಿಸಲಾಯಿತು. ಇಲ್ಲಿಗೆ ೩೦ನೇ ವಾರ್ಷಿಕ ಸಮ್ಮೇಳನವು ಮುಕ್ತಾಯವಾಯಿತು.

೨೦೧೬–೧೭ನೇ ಸಾಲಿನ ೩೦ನೇ ಸರ್ವಸದಸ್ಯರ ಸಭೆಯ ವರದಿ

ದಿನಾಂಕ : ೨೩–೧೦–೨೦೧೬ರ ಭಾನುವಾರದಂದು ಸಂಜೆ ೬.೦೦ ಗಂಟೆಗೆ ಅಕಾದೆಮಿಯ ೩೦ನೇ ವಾರ್ಷಿಕ ಸರ್ವಸದಸ್ಯರ ಸಭೆಯು, "ಮಾನಸೋಲ್ಲಾಸ ಸಭಾಂಗಣ", ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಕಾದೆಮಿಯ ಎಲ್ಲಾ ಸದಸ್ಯರಿಗೂ, ದಿನಾಂಕ: ೨೫–೯–೨೦೧೬ರ ಸುತ್ತೋಲೆಯಲ್ಲಿ ಸರ್ವಸದಸ್ಯರ ಸಭೆಯ ತಿಳುವಳಿಕೆ ಪತ್ರವನ್ನು ಮತ್ತು ಕಾರ್ಯಸೂಚಿಯನ್ನು (agenda) ಅಂಚೆ ಮೂಲಕ ತಿಳಿಸಲಾಗಿತ್ತು. ಕಾರ್ಯಸೂಚಿಯಂತೆ ಜರುಗಿದ ಸಭೆಯ ನಡಾವಳಿಗಳನ್ನು ಮತ್ತು ವರದಿಯನ್ನು ಇಲ್ಲಿ ದಾಖಲಿಸಿದೆ.

ಸಭೆಯು ಶ್ರೀಯುತ ಟಿ.ಎಚ್.ಎಂ. ಬಸವರಾಜ್ ಅವರ ದೇವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಅಕಾದೆಮಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ಕೆ. ದೇವರಾಜಸ್ವಾಮಿಯವರು, ನೆರೆದಿದ್ದ ಎಲ್ಲಾ ಸದಸ್ಯರನ್ನು ಸಭೆಗೆ ಆಹ್ವಾನಿಸಿ, ಎಲ್ಲರೂ ಸಕ್ರಿಯವಾಗಿ ಭಾಗವಹಿಸಿ ಮತ್ತು ಸಭೆಯನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸಿದರು. ನಂತರ ಅವರು ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿಯವರನ್ನು ವೇದಿಕೆಗೆ ಆಹ್ವಾನಿಸಿ, ಸರ್ವಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿಕೊಂಡು, ಸಭೆಯ ಕಲಾಪಗಳನ್ನು ನಡೆಸಿಕೊಡಬೇಕೆಂದು ವಿನಂತಿಸಿದರು. ಹಾಗೆಯೇ ಅಕಾದೆಮಿಯ ಎಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ವೇದಿಕೆಗೆ ಆಹ್ವಾನಿಸಿದರು.

ಎಲ್ಲಾ ಸದಸ್ಯರಿಗೂ ೨೦೧೫–೧೬ನೇ ಸಾಲಿನ ವಾರ್ಷಿಕ ವರದಿ, ಪರಿಶೋಧಿತ ಲೆಕ್ಕಪತ್ರಗಳ ವರದಿ, ಅಂದಾಜು ಆಯ–ವ್ಯಯ ಪತ್ರಗಳನ್ನು ನೀಡಲಾಗಿತ್ತು. ಸಭೆಯಲ್ಲಿ ಹಾಜರಿದ್ದ ೧೧೮ ಸದಸ್ಯರ ಸಹಿ ಹಾಜರಾತಿ ಪುಸ್ತಕದಲ್ಲಿ ದಾಖಲಾಗಿದೆ.

ಸಭೆಯ ನಡಾವಳಿಗಳು

೧. ಸಂತಾಪ ಸೂಚಕ ಸಭೆ ಮತ್ತು ಶ್ರದ್ಧಾಂಜಲಿ

ಕಳೆದ ಸರ್ವಸದಸ್ಯರ ಸಭೆಯ ನಂತರ ಈವರೆಗೆ ನಮ್ಮನ್ನು ಅಗಲಿರುವ ಅಕಾದೆಮಿಯ ಸದಸ್ಯರು ಹಾಗೂ ರಾಷ್ಟ್ರದ/ ನಾಡಿನ ಗಣ್ಯವ್ಯಕ್ತಿಗಳ ನಿಧನಕ್ಕಾಗಿ ಸಭೆಯು ಒಂದು ನಿಮಿಷ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಿ ಮೃತರ ಆತ್ಮಕ್ಕೆ ಸದ್ಗತಿ ಕೋರಲಾಯಿತು. ನಮ್ಮನ್ನಗಲಿದ ಸದಸ್ಯರ ಮತ್ತು ಗಣ್ಯವ್ಯಕ್ತಿಗಳ ಹೆಸರುಗಳನ್ನು ಶ್ರೀ ದೇವರಾಜಸ್ವಾಮಿಯವರು ಸಭೆಗೆ ಪ್ರಾರಂಭದಲ್ಲಿ ತಿಳಿಸಿದ್ದರು.

ಅಕಾದೆಮಿಯ ಸದಸ್ಯರುಗಳು

೧. ಶ್ರೀ ಸೀತಾರಾಮ ಭಟ್ ಎಂ. ಮಂಡ್ಯ, ೨. ಶ್ರೀ ಚನ್ನಪ್ಪ ಗುರುಸಂಗಪ್ಪ ಹುಡೇದಗಡ್ಡಿ, ೩. ಶ್ರೀ ಲಕ್ಷ್ಮೀಕಾಂತ್ ಎನ್., ೪. ಶ್ರೀ ಎಂ.ಎಸ್. ಪುಟ್ಟಣ್ಣ, ಬೆಂಗಳೂರು, ೫. ಶ್ರೀ ಎಚ್.ಎಸ್. ರೇಣುಕಾಪ್ರಸಾದ್, ಬೆಂಗಳೂರು.

ರಾಷ್ಟ್ರದ/ನಾಡಿನ ಗಣ್ಯ ವ್ಯಕ್ತಿಗಳು

೧. ಶ್ರೀ ರೇವಣಸಿದ್ದಪ್ಪ, ತುಮಕೂರು, ೨. ಶ್ರೀ ಚೌಶೆಟ್ಟಿ, ೩. ಡಾ. ವಾಮನ ಬೇಂದ್ರೆ, ಧಾರವಾಡ, ೪. ದೇ. ಜವರೇಗೌಡ, ಮೈಸೂರು, ೫. ಪುಂಡಲೀಕ ಹಾಲಂಬಿ, ಬೆಂಗಳೂರು.

೨. ೨೦೧೫-೧೬ನೇ ಸಾಲಿನ ವಾರ್ಷಿಕ ವರದಿ ವಾಚನ ಮತ್ತು ಅಂಗೀಕಾರ

ಶ್ರೀ ದೇವರಾಜಸ್ವಾಮಿಯವರು ಸಭೆಗೆ, ಸರ್ವಸದಸ್ಯರ ಸಭೆಯ ದಿನಾಂಕ ೨೫-೯-೨೦೧೬ರ ತಿಳುವಳಿಕೆ ಪತ್ರವನ್ನು ಮತ್ತು ಕಾರ್ಯಸೂಚಿಯನ್ನು ವಾಚನ ಮಾಡಿದರು. ನಂತರ ವಾರ್ಷಿಕ ವರದಿಯಲ್ಲಿ ದಾಖಲಿಸಿದ ಕಾರ್ಯ ಚಟುವಟಿಕೆಗಳನ್ನು ಸಭೆಗೆ ತಿಳಿಸಿ, ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಸಮಜಾಯಿಷಿಯನ್ನು ನೀಡಿದರು. ಎಲ್ಲಾ ಸದಸ್ಯರು ಅಕಾದೆಮಿಯ ಕಾರ್ಯಚಟುವಟಿಕೆಗಳನ್ನು ಸಮರ್ಪಕವಾಗಿದೆ ಎಂದು ಸಂತೋಷ ವ್ಯಕ್ತಪಡಿಸಿದರು. ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಆಯೋಜಿಸುವ ರೀತಿಯಲ್ಲಿ ಮಾಡಿದ ಕೆಲವು ಬದಲಾವಣೆ, ಗ್ರಾಮಾಂತರ ಪರಿಸರದಲ್ಲಿ ಸ್ಮಾರಕಗಳ, ದೇವಾಲಯಗಳ ಬಳಿ ಮಾಡಿದ ಕಾರ್ಯಕ್ರಮ, ಅಭಿಯಾನಗಳನ್ನು ಮುಂದೆಯೂ ಸಹ ನಡೆಸಿಕೊಂಡು ಹೋಗಬಹುದು ಎಂಬ ಅಭಿಪ್ರಾಯವನ್ನು ಸಭೆ ವ್ಯಕ್ತಪಡಿಸಿತು. ವಿವಿಧ ಜಿಲ್ಲೆಗಳಲ್ಲಿ ಸದಸ್ಯರು ಕೈಗೊಂಡ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ವರದಿಗಳನ್ನು ತಪ್ಪದೇ ಕಳಿಸಿಕೊಡಲು ಮನವಿ ಮಾಡಿದರು.

೩. ೨೦೧೫-೧೬ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಮಂಡನೆ ಅಂದಾಜು ಆಯವ್ಯಯ ಪಟ್ಟಿ ಮತ್ತು ಸ್ವೀಕಾರ

ಶ್ರೀ ಎಂ.ಬಿ. ಪಾಟೀಲ್, ಕೋಶಾಧಿಕಾರಿಗಳು, ಅಕಾದೆಮಿಯ ಆರ್ಥಿಕ ಪರಿಸ್ಥಿತಿಯ ಬಗ್ಗೆ ನೀಡಿರುವ ಆದಾಯಗಳ ವಿವರ, ಖರ್ಚುಗಳ ವಿವರದ ಬಗ್ಗೆ ಸಭೆಗೆ ಮನವರಿಕೆ ಮಾಡಿಕೊಟ್ಟರು. ಸದಸ್ಯರು ಕೇಳಿದ ವಿವರಗಳಿಗೆ ಸಮಜಾಯಿಷಿ ನೀಡಿದರು. ಸರ್ವಸದಸ್ಯರೂ ಒಪ್ಪಿಗೆ ನೀಡಿದರು.

ಅಕಾದೆಮಿಯು ಈವರೆಗೆ ತನ್ನ ಮೂರು (ಬೃಹತ್) ಆಯೋಜಿತ ಕಾರ್ಯಕ್ರಮಗಳಿಗೆ, ಅಂದರೆ (೧) ವಾರ್ಷಿಕ ಸಮ್ಮೇಳನಕ್ಕೆ (೨) ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ನಡೆಸುವುದಕ್ಕೆ ಮತ್ತು (೩) ಇತಿಹಾಸ ದರ್ಶನ ಸಂಪುಟಗಳನ್ನು ಹೊರತರಲು ಸರ್ಕಾರದ ಅನುದಾನವೇ ಒಂದು ಆಧಾರಸ್ತಂಭವಾಗಿರುವ ಬಗ್ಗೆ ಗಮನ ಸೆಳೆದರು. ಮುಂದೆಯೂ ಸಹ ಹೀಗೆ ಈ ಅನುದಾನದ ಭರವಸೆ ಮೇಲೆಯೇ ಕಾರ್ಯಕ್ರಮವನ್ನು ರೂಪಿಸುವ ಬೇಕಾದ ಪರಿಸ್ಥಿತಿ ಅಥವಾ ಅನುದಾನಕ್ಕೆ ಕಾಯುವಂತಹ ಪರಿಸ್ಥಿತಿ ಅಥವಾ ಬದಲಾದ ಸರ್ಕಾರದ ಧೋರಣೆಯಿಂದ ಅನುದಾನ ಬಿಡುಗಡೆಯಾಗದ ಪರಿಸ್ಥಿತಿಯ ಬಗ್ಗೆ ಅಕಾದೆಮಿಯು ತನ್ನ ಕಾಲಮೇಲೆ ತಾನು ನಿಂತು, ಕನಿಷ್ಠ ವಾರ್ಷಿಕ ಸಮ್ಮೇಳನ ನಡೆಸುವ ಸ್ಥಿತಿ ತಲುಪಬೇಕೆಂದು ಸಭೆಗೆ ತಿಳಿಸಿದರು. ಈ ಸಾಲಿನಲ್ಲಿ ಸರ್ಕಾರದಿಂದ ಇನ್ನೂ ಅನುದಾನ ಬಿಡುಗಡೆಯಾಗದ ಬಗ್ಗೆ ಸಭೆಯ ಗಮನ ಸೆಳೆದರು. ಹಾಗೇ ಅಕಾದೆಮಿಯ ಆರ್ಥಿಕ ಪರಿಸ್ಥಿತಿಯು ಇನ್ನಷ್ಟು ಸುಧಾರಿಸಲು ಸಲಹೆ/ಸೂಚನೆಗಳನ್ನು ಆಹ್ವಾನಿಸಿದರು. ಅದರಂತೆ ದೀರ್ಘವಾದ ಚರ್ಚೆಗಳಾಗಿ, ಕೆಲವು ಕಾರ್ಯರೂಪಕ್ಕೆ ತರಬಹುದಾದ ಸೂಚನೆಗಳನ್ನು ಇಲ್ಲಿ ದಾಖಲಿಸಿದೆ.

(ಅ) ಅಕಾದೆಮಿಯ ೩೦ ವರ್ಷಗಳ ದೀರ್ಘಕಾಲದ ನೆನಪಿನಲ್ಲಿ ಒಂದು ಸ್ಮರಣ ಸಂಚಿಕೆ ಹೊರತರುವ ಸಲಹೆಯನ್ನು ಡಾ. ಕೋ.ವೆಂ. ರಾಮಕೃಷ್ಣೇಗೌಡರು ನೀಡಿದರು.

(ಆ) ಸಾಧ್ಯವಾದಷ್ಟು ಸದಸ್ಯರು, ದೇಣಿಗೆ ಸಂಗ್ರಹಿಸುವುದರಿಂದ ಆರ್ಥಿಕ ಪರಿಸ್ಥಿತಿಯ ಸುಧಾರಣೆಯಾಗುವುದೆಂಬ ಸಲಹೆ ಡಾ. ಎಫ್.ಟಿ. ಹಳ್ಳಿಕೇರಿಯವರಿಂದ ಸ್ವೀಕೃತವಾಯಿತು.

(ಇ) ಅಕಾದೆಮಿಯ ವತಿಯಿಂದ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ ಸರ್ಕಾರದಿಂದ ಅನುದಾನ ಪಡೆಯಬಹುದೆಂಬ ಡಾ. ಎಚ್. ಚಂದ್ರಶೇಖರ ಅವರು ಸೂಚಿಸಿದರು.

(ಈ) ಸದಸ್ಯರು ಕೆಲವು ವಿಶೇಷ ಸಂದರ್ಭಗಳಲ್ಲಿ, ಅಕಾದೆಮಿಗಾಗಿ ದೇಣಿಗೆ ನೀಡುವ ಮೂಲಕ ಪರಿಸ್ಥಿತಿಯನ್ನು ಉತ್ತಮಗೊಳಿಸಬಹುದೆಂದು ಶ್ರೀ ಟಿ.ಎಚ್.ಎಂ. ಬಸವರಾಜ್ ತಿಳಿಸಿದರು.

ಈ ವಿಷಯಗಳನ್ನು ಸಮಯ ಸಂದರ್ಭಕ್ಕೆ ಅನುಸಾರವಾಗಿ ಕಾರ್ಯಕ್ರಮ ರೂಪಿಸಲು ಸಭೆಯು ಡಾ. ದೇವರಕೊಂಡಾರೆಡ್ಡಿ ಅವರಿಗೆ ಅನುಮೋದನೆ ನೀಡಿತು.

೪. ಲೆಕ್ಕ ಪರಿಶೋಧಕರ ಬದಲಾವಣೆ-ಅನುಮೋದನೆ

೪.೧ ಅಕಾದೆಮಿಯ ಆರಂಭದಿಂದ ೨೦೧೪-೧೫ರವರೆಗೂ ಲೆಕ್ಕಪರಿಶೋಧನೆ ಮಾಡಿದ ಮೆ. ಆಚಾರ್ಯ ಅಂಡ್ ಕಂಪನಿಯವರು, ಕಾರಣಾಂತರಗಳಿಂದ ಅಂದರೆ ತಮ್ಮ ವಯಸ್ಸು, ಸಿಬ್ಬಂದಿ ಕೊರತೆ ಮತ್ತು ಅಕಾದೆಮಿಯ Manual book

keeping ಮುಂತಾದ ಕಾರಣಗಳಿಂದ ಅಕಾದೆಮಿಯ ಲೆಕ್ಕಪರಿಶೋಧಕ ಸ್ಥಾನದಿಂದ ರಾಜೀನಾಮೆ ನೀಡಿದರು. ಅವರ ಸುದೀರ್ಘ ಸೇವೆಯನ್ನು ಮೆಚ್ಚಿ ಅವರಿಗೆ 'ಅಭಿನಂದನಾ ಪತ್ರ'ವನ್ನು ಬರೆದಿದೆಯೆಂದು ತಿಳಿಸಿದರು. ಇದಕ್ಕೆ ಸಭೆಯು ಮೆಚ್ಚುಗೆ ಸೂಚಿಸಿತು.

೪.೨ ೨೦೧೫-೧೬ರ ಲೆಕ್ಕಪರಿಶೋಧನಾ ಕಾರ್ಯ ಮತ್ತು ಲೆಕ್ಕಪರಿಶೋಧಕರ ನೇಮಕ

ಜುಲೈ ೨೦೧೬ರಲ್ಲಿ ಅಕಾದೆಮಿಯು, ಮೆ. ಗಣೇಶ್ ಶೆಟ್ಟಿ, ಚಾರ್ಟರ್ಡ್ ಅಕೌಂಟೆಂಟ್ಸ್ ಅವರನ್ನು ಸಂಪರ್ಕಿಸಿ, ಮನವಿ ಸಲ್ಲಿಸಿದ ನಂತರ, ೨೦೧೫-೧೬ನೆಯ ಸಾಲಿನ ಲೆಕ್ಕಗಳನ್ನು ಶೀಘ್ರವಾಗಿ ಪರಿಶೋಧಿಸಿ ವರದಿ ನೀಡಿದ ಬಗ್ಗೆ ಸಭೆಗೆ ತಿಳಿಸಲಾಯಿತು. ಶ್ರೀ ಗಣೇಶ್ ಶೆಟ್ಟಿ ಅವರನ್ನೇ ಮುಂದೆ ಇನ್ನೂ ಮೂರು ವರ್ಷಗಳ ಕಾಲ ಲೆಕ್ಕಪರಿಶೋಕರಾಗಿ, ವಾರ್ಷಿಕ ಸಂಭಾವನೆ ರೂ. ೧೦,೦೦೦/- ಮತ್ತು ತೆರಿಗೆ + ಸೇವಶುಲ್ಕಗಳನ್ನು ನೀಡಿ ನೇಮಿಸಿಕೊಳ್ಳಬಹುದೆಂದು ಡಾ. ಸುಮತೀಂದ್ರ ನಾಡಿಗ್ ಅವರು ಸೂಚಿಸಿದರು. ಶ್ರೀ ಗುರುಶಾಂತಪ್ಪ ಮತ್ತು ಶ್ರೀ ಲಕ್ಷ್ಮಣಗೌಡ ಅವರು ಅನುಮೋದಿಸಿದರು. ಇದಕ್ಕೆ ಸರ್ವಸದಸ್ಯರೂ ಒಪ್ಪಿಗೆ ನೀಡಿದರು.

೪.೩ ಕೋಶಾಧಿಕಾರಿ ಶ್ರೀ ಎಂ.ಬಿ. ಪಾಟೀಲರು, ತಮ್ಮ ಅನುಪಸ್ಥಿತಿಯಲ್ಲಿ ಶ್ರೀ ಬಿ.ಎಸ್. ಗುರುಪ್ರಸಾದ್ ಅವರೇ ಅಕಾದೆಮಿಯ ಹಣಕಾಸಿನ ವ್ಯವಹಾರ ಮತ್ತು ಬ್ಯಾಂಕಿನ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ ಎಂದು ಸಭೆಗೆ ತಿಳಿಸಿ, ಅವರಿಗೆ ಅಭಿನಂದನೆಗಳನ್ನು ತಿಳಿಸಲಾಯಿತು.

೪.೪ ಅಕಾದೆಮಿಯಲ್ಲಿ ಸ್ಥಾಪಿತವಾಗಿರುವ ಕೆಲವು ದತ್ತಿನಿಧಿಗಳ ವಿವರ, ಮೊಬಲಗು, ಸಂದರ್ಭ ನೀಡಿದವರ ಬಗ್ಗೆ ಮಾಹಿತಿಯನ್ನು ಈ ವರ್ಷದಿಂದ ವಾರ್ಷಿಕ ವರದಿಯಲ್ಲಿ ನೀಡಿರುವುದಾಗಿ ಸದಸ್ಯರ ಗಮನ ಸೆಳೆದರು (ಪುಟ ೫೦೪).

೫. ಬೈಲಾ ತಿದ್ದುಪಡಿ ಪ್ರಸ್ತಾವನೆ

ಅಕಾದೆಮಿಯ ನಿಯಮಗಳಲ್ಲಿ ಮತ್ತು ನಿಬಂಧನೆಗಳಲ್ಲಿ ತಿದ್ದುಪಡಿ ಪ್ರಸ್ತಾವನೆಯ ಪ್ರತಿಯನ್ನು ಸದಸ್ಯರಿಗೆ ಸಭೆಯ ಆರಂಭದಲ್ಲೇ ನೀಡಲಾಗಿತ್ತು.

ವಿಷಯ : (೧) ಕಾರ್ಯಕಾರಿ ಸಮಿತಿಯ ಸದಸ್ಯರ ಬಲ ಹಾಲಿ ೨೦ರಿಂದ ೨೫ಕ್ಕೆ ಹೆಚ್ಚಿಸುವುದು.

(೨) ಕಾರ್ಯಕಾರಿ ಸಮಿತಿಯ ಆಡಳಿತಾವಧಿಯನ್ನು ಹಾಲಿಯಿರುವ ಎರಡು ವರ್ಷದಿಂದ ಮೂರು ವರ್ಷಕ್ಕೆ ಹೆಚ್ಚಿಸುವುದು.

ತಿದ್ದುಪಡಿ ಮಾಡಬೇಕಾಗಿರುವುದಕ್ಕೆ ಕಾರಣ, ಸಾಧಕ ಮತ್ತು ಬಾಧಕಗಳ ಚರ್ಚೆ ನಡೆಯಿತು. ನಂತರ ಸಭೆಯು ಸರ್ವಾನುಮತದಿಂದ ಪ್ರಸ್ತಾಪಿಸಿದ ತಿದ್ದುಪಡಿಯನ್ನು ಒಪ್ಪಿತು. ಈ ತಿದ್ದುಪಡಿಯು ೨೦೧೭-೨೦೨೦ರ ಸಾಲಿನಿಂದ ಜಾರಿಗೆ ಬರುವುದೆಂದು ತೀರ್ಮಾನಿಲಸಾಯಿತು. ಸರ್ವಸದಸ್ಯರೂ ಇದನ್ನು ಸ್ವಾಗತಿಸಿ ಒಪ್ಪಿಗೆ ನೀಡಿದರು. ತಿದ್ದುಪಡಿಯು ಈ ಕೆಳಗಿನಂತಿದೆ.

೩೦ನೆಯ ವಾಷಿಕ ಸರ್ವಸದಸ್ಯರ ಸಭೆ – ದಿನಾಂಕ : ೨೩-೧೦-೨೦೧೬

ಅಕಾದೆಮಿಯ ನಿಯಮಗಳು ಮತ್ತು ನಿಬಂಧನೆಗಳು-ತಿದ್ದುಪಡಿ ಪ್ರಸ್ತಾವನೆ

ಪುಟ ಪ್ಯಾರ ಸಂಖ್ಯೆ	ಈಗ ಇರುವ ನಿಯಮ	ಮಾಡಬೇಕಾದ ತಿದ್ದುಪಡಿ ಮತ್ತು ಕಾರಣ
೨ ೪ ಅ	ಅಕಾದೆಮಿಯ ಕಾರ್ಯನಿರ್ವಹಣೆಯನ್ನು ಕಾರ್ಯಕಾರಿ ಸಮಿತಿಯು ನಿರ್ವಹಿಸುತ್ತದೆ.' ಕಾರ್ಯಕಾರಿ ಸಮಿತಿಯಲ್ಲಿ ಅಕಾದೆಮಿಯ ಸರ್ವಸದಸ್ಯರ ಮಹಾಸಭೆಯಲ್ಲಿ ಚುನಾಯಿತರಾದ ಇಪ್ಪತ್ತು ಮಂದಿ ಸದಸ್ಯರಿರುತ್ತಾರೆ. ಕರ್ನಾಟಕದ ರಾಜ್ಯದ ಪ್ರತಿ ಕಂದಾಯ (ರೆವಿನ್ಯೂ) ವಿಭಾಗದಿಂದ ಕನಿಷ್ಠ ಇಬ್ಬರು ಸದಸ್ಯರು ಇರಬೇಕು. ಕಾರ್ಯಕಾರಿ ಸಮಿತಿಯ ಆಡಳಿತಾವಧಿಯು ಎರಡು ವರ್ಷಗಳಿದ್ದು, ಒಮ್ಮೆ ಇದ್ದ ಸದಸ್ಯರ ಮರುಚುನಾವಣೆಗೆ ಅವಕಾಶವಿರುತ್ತದೆ.	೧. ಕಾರ್ಯಕಾರಿ ಸಮಿತಿಯಲ್ಲಿ ಅಕಾದೆಮಿಯ ಸರ್ವಸದಸ್ಯರ ಮಹಾಸಭೆಯಲ್ಲಿ ಚುನಾಯಿತರಾದ ಇಪ್ಪತ್ತೈದು ಮಂದಿ ಸದಸ್ಯರಿರುತ್ತಾರೆ. ಕಾರಣ: ಜಿಲ್ಲೆಗಳ ಸಂಖ್ಯೆ ಜಾಸ್ತಿಯಾದ ಕಾರಣ ೨. ಕಾರ್ಯಕಾರಿ ಸಮಿತಿಯ ಆಡಳಿತಾವಧಿಯು ಮೂರು ವರ್ಷಗಳಿದ್ದು, ಒಮ್ಮೆ ಇದ್ದ ಸದಸ್ಯರ ಮರುಚುನಾವಣೆಗೆ ಅವಕಾಶವಿರುತ್ತದೆ. ಕಾರಣ: ಆಡಳಿತಾತ್ಮಕ ದೃಷ್ಟಿಯಿಂದ ಈ ತಿದ್ದುಪಡಿ ಅಗತ್ಯವೆನಿಸುತ್ತದೆ.

೬. ಕಾರ್ಯಕಾರಿ ಸಮಿತಿಗೆ ಚುನಾವಣೆ

ಡಾ. ದೇವರಕೊಂಡಾರೆಡ್ಡಿಯವರು ಮತ್ತು ಶ್ರೀ ಎಂ.ಬಿ. ಪಾಟೀಲ್ ಅವರು ಚುನಾವಣೆ ಮೊದಲಲ್ಲಿಯೇ, ಕೆಲಸ ಮಾಡಲು ಉತ್ಸುಕರಾಗಿರುವ ಯುವ ಸದಸ್ಯರುಗಳ ಅವಶ್ಯಕತೆಯನ್ನು ಸದಸ್ಯರಿಗೆ ತಿಳಿಸಿದರು. ಚುನಾವಣೆ ಪ್ರಕ್ರಿಯೆಯನ್ನು ಸುಲಭಗೊಳಿಸುವ ಸಲುವಾಗಿ, ಡಾ. ಪದ್ಮಜಾ ದೇಸಾಯಿ ಅವರು ಇತರ ಹಾಜರಿದ್ದ ಸದಸ್ಯರೊಡಗೂಡಿ ಚರ್ಚಿಸಿ, ನಂತರ

ಸಿದ್ಧಗೊಳಿಸಿದ ಪಟ್ಟಿಯನ್ನು ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಓದಿ, ಈ ಸದಸ್ಯರುಗಳು ಕಾರ್ಯಕಾರಿ ಸಮಿತಿ ಸಭೆಗೆ ಆಯ್ಕೆ ಮಾಡಬಹುದೆಂದು ಸೂಚಿಸಿದರು.

(೧) ಡಾ. ದೇವರಕೊಂಡಾರೆಡ್ಡಿ
(೨) ಡಾ. ಎಂ.ಜಿ. ನಾಗರಾಜ್
(೩) ಡಾ. ಎಚ್.ಎಸ್. ಗೋಪಾಲರಾವ್
(೪) ಪ್ರೊ. ಜಿ.ಕೆ. ದೇವರಾಜಸ್ವಾಮಿ
(೫) ಶ್ರೀ ಎಂ.ಬಿ. ಪಾಟೀಲ್
(೬) ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ
(೭) ಡಾ. ಎ.ಕೆ. ಶಾಸ್ತ್ರಿ
(೮) ಶ್ರೀ ಎಂ.ಎನ್. ಪ್ರಭಾಕರ
(೯) ಡಾ. ಅಮರೇಶ್ ಯತಗಲ್
(೧೦)ಪ್ರೊ. ಟಿ. ಮುರುಗೇಶಿ
(೧೧)ಡಾ. ಹನುಮಾಕ್ಷಿ ಗೋಗಿ
(೧೨) ಶ್ರೀ ಟಿ.ಎಚ್.ಎಂ. ಬಸವರಾಜ್
(೧೩) ಶ್ರೀ ಬಿ.ಎಸ್. ಗುರುಪ್ರಸಾದ್
(೧೪) ಪ್ರೊ. ಕೆ.ಎಂ. ಗರಗ
(೧೫) ಶ್ರೀ ಸಿ.ಬಿ. ಪಾಟೀಲ
(೧೬) ಶ್ರೀ ಸಿದ್ಧರಗಿರಿ ಒ.ಎಲ್. ಚಂದ್ರೇಗೌಡ
(೧೭) ಡಾ. ಎಫ್.ಟಿ. ಹಳ್ಳಿಕೇರಿ
(೧೮) ಡಾ. ಲಿಂಗರಾಜು ಮಂಡ್ಯ
(೧೯) ಶ್ರೀ ಇಷ್ಟಲಿಂಗ ಶಿರಸಿ
(೨೦) ಶ್ರೀ ಕೆ.ಎಲ್. ರಾಜಶೇಖರ್
(೨೧) ಶ್ರೀಮತಿ ವಿ. ಸಂಧ್ಯಾ

ಈ ಪಟ್ಟಿಯನ್ನು ಓದಲಾಗಿ ಸರ್ವಸದಸ್ಯರೂ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು. ಹಾಗೂ ಉಳಿದ ಸದಸ್ಯರ ಆಯ್ಕೆ ಪ್ರಕ್ರಿಯೆ ನಡೆಸಲಾಯಿತು.

(೨೨) ಡಾ. ಎಚ್. ಚಂದ್ರಶೇಖರ್–ಸೂಚನೆ: ಶ್ರೀ ಎಂ.ಬಿ. ಪಾಟೀಲ್, ಅನುಮೋದನೆ: ಡಾ. ಎಂ.ಜಿ. ನಾಗರಾಜ್.
(೨೩) ಶ್ರೀ ಸುಮತೀಂದ್ರ ನಾಡಿಗ್–ಸೂಚನೆ: ಡಾ. ಬಾಲಕೃಷ್ಣ ಹೆಗಡೆ, ಅನುಮೋದನೆ: ಡಾ. ಎ.ಕೆ. ಶಾಸ್ತ್ರಿ.
(೨೪) ಡಾ. ಲಕ್ಷ್ಮಣ ತೆಲಗಾವಿ–ಸೂಚನೆ: ಡಾ. ಎಫ್.ಟಿ. ಹಳ್ಳಿಕೇರಿ, ಅನುಮೋದನೆ: ಡಾ. ಅಮರೇಶ್ ಯತಗಲ್.
(೨೫) ಶ್ರೀ ಗುರುಶಾಂತಪ್ಪ–ಸೂಚನೆ: ಶ್ರೀ ಬಿ.ಎಸ್. ಗುರುಪ್ರಸಾದ್, ಅನುಮೋದನೆ: ಪ್ರೊ. ಜಿ.ಕೆ. ದೇವರಾಜಸ್ವಾಮಿ.
(೨೬) ಡಾ. ಎಸ್.ಕೆ. ಮೇಲಕಾರ–ಸೂಚನೆ: ಡಾ. ದೇವರಕೊಂಡಾರೆಡ್ಡಿ, ಅನುಮೋದನೆ: ಡಾ. ಚಲವಾದಿ.

ಈ ಎಲ್ಲಾ ಸದಸ್ಯರ ಹೆಸರನ್ನು ಪ್ರೊ. ಜಿ.ಕೆ. ದೇವರಾಜಸ್ವಾಮಿ ಅವರು ಸಭೆಗೆ ಓದಿದರು. ಸರ್ವಸದಸ್ಯರೂ ಸರ್ವಾನುಮತದ ಒಪ್ಪಿಗೆ ಸೂಚಿಸಿದರು.

೭. ಠರಾವುಗಳು

೧. ರಾಜ್ಯ ಸರ್ಕಾರವು 'ಸಿ' ಕ್ಯಾಟಗರಿ ಗಣಿಗಾರಿಕೆ ಪ್ರಾರಂಭ ಮಾಡುವ ಉದ್ದೇಶವನ್ನು ಇತ್ತೀಚೆಗೆ ಪ್ರಕಟಿಸಿದೆ. ಈ ಗಣಿಕಾರಿಕೆಯಿಂದ ಹತ್ತಿರದಲ್ಲಿರುವ ಐತಿಹಾಸಿಕ ನೆಲೆಗಳ ಮೇಲೆ, ಸ್ಮಾರಕಗಳ ಮೇಲೆ, ಪ್ರಸಿದ್ಧ ಪ್ರಾಚೀನ ದೇವಾಲಯಗಳ ಮೇಲೆ, ಕೋಟೆ, ಕೊತ್ತಲಗಳ ಮೇಲೆ, ಬೆಟ್ಟಗುಡ್ಡಗಳ ಮೇಲೆ ತೀವ್ರ ಪರಿಣಾಮ ಉಂಟು ಮಾಡುತ್ತದೆ. ಇದರ ವಿರುದ್ಧ ಅಕಾದೆಮಿಯು ಪ್ರತಿಭಟಿಸಬೇಕಾಗುವುದು. ಅಕಾದೆಮಿಯ ದೃಷ್ಟಿಗೆ ಬೀಳುವ ಸಂದರ್ಭಗಳಲ್ಲಿ ಅಕಾದೆಮಿಯು ಪ್ರತಿಭಟನೆಯನ್ನು ಸಲ್ಲಿಸಬೇಕೆಂದು ಉಡುಪಿಯ ಪ್ರೊ. ಎಸ್.ವಿ. ಕೃಷ್ಣಯ್ಯನವರ ಸೂಚಿಸಿದ್ದನ್ನು ಶ್ರೀ ಸುಮತೀಂದ್ರ ನಾಡಿಗ್ ಅವರು ಅನುಮೋದಿಸಿದರು.

೨. ಪರಂಪರೆ ಉಳಿಸಿ, ಬೆಳೆಸಿ – ಈ ಹಿನ್ನೆಲೆಯಲ್ಲಿ ಅಲ್ಪಾವಧಿ ಕೋರ್ಸ್ ನಡೆಸುವುದು (ವಸ್ತುಸಂಗ್ರಹಾಲಯ: ಅಧ್ಯಯನ) ಈ ಸಂಬಂಧವಾಗಿ ಕೇಂದ್ರ ವಿಶ್ವವಿದ್ಯಾಲಯಗಳು ನೋಂದಾವಣೆ ಮಾಡಿಕೊಳ್ಳುವಂತೆ ಹಾಗೂ "ಪುರಾತತ್ವ ಇತಿಹಾಸ ವಿಶ್ವವಿದ್ಯಾಲಯ" ಸ್ಥಾಪಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಅಕಾದೆಮಿಯು ಪತ್ರ ಬರೆಯಬೇಕೆಂದು ಪ್ರೊ. ಎಸ್.ವಿ. ಕೃಷ್ಣಯ್ಯ ಅವರು ಸೂಚಿಸಿದರು. ಇದನ್ನು ಡಾ. ಎಸ್.ಕೆ. ಜೋಷಿ ಅವರು ಅನುಮೋದಿಸಿದರು.

ಈ ಠರಾವುಗಳ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಬಹುದೆಂದು ಸರ್ವಾನುಮತದಿಂದ ಸಭೆಯು ಸೂಚಿಸಿತು.

೮. ೩೧ನೇ ವಾರ್ಷಿಕ ಸಮ್ಮೇಳನ

೧. ಅಕಾದೆಮಿಯ ೩೧ನೆಯ ವಾರ್ಷಿಕ ಸಮ್ಮೇಳನಕ್ಕೆ ಶ್ರೀಮದ್ವೀರಶೈವ ಶಿವಯೋಗ ಮಂದಿರ ಸಂಸ್ಥೆ, ಬಾಗಲಕೋಟೆ ಜಿಲ್ಲೆಯಿಂದ ಸದಸ್ಯರು ೨೧–೧೦–೨೦೧೬ರ ಪತ್ರದ ಮೂಲಕ ೩೧ನೆಯ ವಾರ್ಷಿಕ ಸಮ್ಮೇಳನವನ್ನು ತಾವೇ ನಡೆಸುವುದಾಗಿ ಕೋರಿದ್ದರು.

ಕೊಪ್ಪಳ ಜಿಲ್ಲೆಯ ಶ್ರೀ ಬಿ.ಸಿ. ಪಾಟೀಲ್ ಫೌಂಡೇಷನ್ ಮತ್ತು ಎಸ್.ಜಿ.ಸೈನ್ಸ್ ಆರ್ಟ್ಸ್, ಕಾಮರ್ಸ್ ಕಾಲೇಜು ಹಾಗೂ ಗವಿಮಠದ ಸಹಯೋಗದೊಂದಿಗೆ ಇತಿಹಾಸ ಅಕಾದೆಮಿಯ ೩೧ನೆಯ ವಾರ್ಷಿಕ ಸಮ್ಮೇಳನ ನಡೆಸುವುದಾಗಿ ದಿನಾಂಕ : ೨೧–೧೦–೨೦೧೬ರ ಪತ್ರದಲ್ಲಿ ಕೋರಿದ್ದಾರೆ. ಈ ವಿಷಯವನ್ನು ಸರ್ವಸದಸ್ಯರ ಗಮನಕ್ಕೆ ಡಾ. ದೇವರಕೊಂಡಾರೆಡ್ಡಿ ಅವರು ತಂದರು. ಇದನ್ನು ಗಮನಿಸಿದ ಸರ್ವಸದಸ್ಯರೂ ಕೊಪ್ಪಳದಲ್ಲಿ ೩೧ನೆಯ ವಾರ್ಷಿಕ ಸಮ್ಮೇಳನ ನಡೆಸಬಹುದೆಂದು ಸರ್ವಾನುಮತದಿಂದ ಒಪ್ಪಿಗೆ ನೀಡಿದರು. ಮುಂದಿನ ಯೋಜನೆ ರೂಪಿಸುವ ಬಗ್ಗೆ ಕಾರ್ಯಕಾರಿ ಸಮಿತಿಗೆ ಸಭೆಯು ಅನುಮತಿ ನೀಡಿತು.

ಅಧ್ಯಕ್ಷರ ಭಾಷಣ

ಸರ್ವಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ. ದೇವರಕೊಂಡಾರೆಡ್ಡಿ ಅವರು ಅಕಾದೆಮಿಯ ೩೦ನೆಯ ವಾರ್ಷಿಕ ಸಮ್ಮೇಳನವನ್ನು ನಡೆಸಲು ಅವಕಾಶ ಕಲ್ಪಿಸಿ, ಆಶ್ರಯ ನೀಡಿದ ಧಾರವಾಡ ವಿಶ್ವವಿದ್ಯಾನಿಲಯ ಕನ್ನಡ ಸಂಶೋಧನಾ ಸಂಸ್ಥೆಯ ಅಧಿಕಾರಿಗಳಿಗೆ ಹಾಗೂ ಧಾರವಾಡ ವಿಶ್ವವಿದ್ಯಾಲಯದ ಕುಲಪತಿಗಳಿಗೆ, ವಿದ್ಯಾರ್ಥಿಗಳಿಗೆ ಹಾಗೂ ಗಣ್ಯರಿಗೆ ಸದಸ್ಯರಿಗೆ ಧನ್ಯವಾದ ತಿಳಿಸಿದ್ದಲ್ಲದೆ, ಅಕಾದೆಮಿಯು ಇನ್ನು ಹೆಚ್ಚಿನ ರೀತಿಯಲ್ಲಿ ಬೆಳೆಯಲು ಎಲ್ಲಾ ಸದಸ್ಯರೂ ಹೀಗೆಯೇ ಹೆಚ್ಚಿನ ರೀತಿಯಲ್ಲಿ ಸಹಕರಿಸಬೇಕೆಂದು ತಿಳಿಸಿ, ಧನ್ಯವಾದಗಳನ್ನು ತಿಳಿಸಿದರು.

ಕೃತಜ್ಞತೆಗಳು

ಕರ್ನಾಟಕ ಇತಿಹಾಸ ಅಕಾದೆಮಿಯ ೩೦ನೆಯ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ ಎಲ್ಲಾ ಸದಸ್ಯರಿಗೂ ಸಂತೋಷವಾಗುವಂತೆ ಸಮರ್ಥವಾಗಿ ಸಮ್ಮೇಳನವನ್ನು ನಡೆಸಿಕೊಟ್ಟ, ಧಾರವಾಡ ವಿಶ್ವವಿದ್ಯಾಲಯದ ಕುಲಪತಿಗಳು, ಅಧಿಕಾರಿಗಳು ಹಾಗೂ ಕನ್ನಡ ಸಂಶೋಧನಾ ಸಂಸ್ಥೆಯ ಅಧಿಕಾರಿಗಳಿಗೆ ಸಂಯೋಜನಾಧಿಕಾರಿ ಡಾ. ಎಸ್.ಕೆ. ಮೇಲಕಾರ ಅವರಿಗೆ, ಸಹಕರಿಸಿದ ವಿದ್ಯಾರ್ಥಿಗಳು, ಸದಸ್ಯರು ಹಾಗೂ ಎಲ್ಲರಿಗೂ ಪ್ರಧಾನ ಕಾರ್ಯದರ್ಶಿಗಳಾದ ಪ್ರೊ. ಜಿ.ಕೆ. ದೇವರಾಜಸ್ವಾಮಿ ಅವರು ಧನ್ಯವಾದಗಳನ್ನು ಸಲ್ಲಿಸುವುದರೊಂದಿಗೆ ಸರ್ವಸದಸ್ಯರ ಸಭೆಯು ಮುಕ್ತಾಯವಾಯಿತು.

ಕಾರ್ಯಕಾರಿ ಸಮಿತಿ ಸಭೆಗಳು

೨೦೧೬– ೧೭ನೇ ಸಾಲಿನಲ್ಲಿ ಅಕಾದೆಮಿಯ ಕಾರ್ಯಕಾರಿ ಸಮಿತಿಯ ಸಭೆಗಳು ಒಟ್ಟು ೩ ಬಾರಿ ನಡೆದಿದೆ. ಸದಸ್ಯರು ಕಾರ್ಯಕಾರಿ ಸಮಿತಿಯ ಸಭೆಗಳಲ್ಲಿ ಖುದ್ದು ಹಾಜರಿದ್ದು ಅಥವಾ ಪತ್ರದ ಮೂಲಕ ಇಲ್ಲವೆ ದೂರವಾಣಿ ಎಸ್.ಎಂ.ಎಸ್. ವಿದ್ಯುನ್ಮಾನ ಟಪಾಲುಗಳ ಮೂಲಕ ಸೂಚನೆ ಒಪ್ಪಿಗೆಗಳನ್ನು ನೀಡಿ ಅಕಾದೆಮಿಯ ಯಶಸ್ಸಿಗೆ ಸಹಕರಿಸುತ್ತಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು.

ಅಕಾದೆಮಿಯ ಸದಸ್ಯ ಬಲ : ಸಮ್ಮೇಳನದ ಆರಂಭದ ವೇಳೆಗೆ ಕರ್ನಾಟಕ ಇತಿಹಾಸ ಅಕಾದೆಮಿಯ ಆಜೀವ ಸದಸ್ಯತ್ವ ಹೊಂದಿರುವವರು ಒಟ್ಟು ೧೯೧೦

ಕ್ಷೇತ್ರಕಾರ್ಯ ಪ್ರವಾಸ : ಕರ್ನಾಟಕ ಇತಿಹಾಸ ಅಕಾದೆಮಿಯ ಬೆಂಗಳೂರಿನ ಸದಸ್ಯರು ಹಾಗೂ ಸದಸ್ಯೇತರರು ದಿನಾಂಕ : ೨೨ ರಿಂದ ೨೬ ಜೂನ್ ೨೦೧೭ರಲ್ಲಿ ಒಟ್ಟು ನಾಲ್ಕು ದಿನಗಳ ಪ್ರವಾಸ ಹಮ್ಮಿಕೊಂಡಿದ್ದರು. ೨೬ ಜನರು ಪ್ರವಾಸದಲ್ಲಿ ಪಾಲ್ಗೊಂಡಿದ್ದರು. ಶ್ರೀಮತಿ ಸಂಧ್ಯಾ ವಿ. ಅವರ ನೇತೃತ್ವದಲ್ಲಿ ಪ್ರವಾಸವನ್ನು ಬಾದಾಮಿ, ಐಹೊಳೆ, ಪಟ್ಟದಕಲ್ಲು, ಸಿದ್ಧರಕೊಳ್ಳ ಬನಶಂಕರಿ ಮುಂತಾದ ಸ್ಥಳಗಳಿಗೆ ಹಮ್ಮಿಕೊಳ್ಳಲಾಗಿತ್ತು. ಪ್ರವಾಸದಲ್ಲಿ ಡಾ. ದೇವರಕೊಂಡಾರೆಡ್ಡಿ, ಡಾ. ಕೆ.ಆರ್. ಗಣೇಶ್ ಹಾಗೂ ಶ್ರೀ ಎಂ.ಎಸ್. ಪ್ರಭಾಕರ್ ಅವರುಗಳು, ದೇವಾಲಯಗಳ ಬಗೆಗಿನ ಇತಿಹಾಸ, ವಾಸ್ತುಶಿಲ್ಪ, ಮೂರ್ತಿಶಿಲ್ಪ ಮುಂತಾದವುಗಳ ಬಗ್ಗೆ ವಿವರಣೆಯನ್ನು ಆಯಾ ಸ್ಥಳಗಳಲ್ಲಿ ನೀಡಿದರು. ಇದರಿಂದ ದೇವಾಲಯ ವಾಸ್ತು ವಿಷಯಗಳೂ ಹಾಗೂ ಇತಿಹಾಸವು ಪ್ರವಾಸಿಗರಿಗೆ ದೊರಕುವಂತಾಯಿತು. ಪ್ರವಾಸವು ಜ್ಞಾನಪ್ರದವೂ ಯಶಸ್ವಿಯೂ ಆಗಿತ್ತು.

ಮೋಡಿ ಲಿಪಿ ಕಾರ್ಯಾಗಾರ

ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ ಮತ್ತು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸಹಯೋಗದೊಂದಿಗೆ ಕರ್ನಾಟಕ ಇತಿಹಾಸ ಅಕಾದೆಮಿಯು ಮೂರು ದಿನಗಳ ಮೋಡಿಲಿಪಿ ಕಾರ್ಯಾಗಾರವನ್ನು ಹಮ್ಮಿಕೊಂಡಿತ್ತು. ಕಾರ್ಯಕ್ರಮವು ದಿನಾಂಕ ೨೭, ೨೮ ಹಾಗೂ ೨೯ನೆಯ ಜನವರಿ ೨೦೧೭ರಂದು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ನ.ರಾ. ಕಾಲೋನಿ, ಬೆಂಗಳೂರು ಇಲ್ಲಿ ನೆರವೇರಿತು.

ದಿನಾಂಕ ೨೭ರಂದು ಬೆಳಗ್ಗೆ, ಪತ್ರಾಗಾರ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ಸದಾನಂದ್, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಪಿ.ವಿ. ನಾರಾಯಣ್ ಹಾಗೂ ಕರ್ನಾಟಕ ಇತಿಹಾಸ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ಉದ್ಘಾಟನಾ ಕಾರ್ಯಕ್ರಮವನ್ನು ನೆರವೇರಿಸಿ, ಮೂರು ದಿನಗಳ ಕಾರ್ಯಾಗಾರಕ್ಕೆ ಚಾಲನೆ ನೀಡಿದರು. ಡಾ. ನಳಿನಿ ವೆಂಕಟೇಶ್ ಅವರ ಪ್ರಾರ್ಥನೆಯೊಂದಿಗೆ ಆರಂಭವಾದ ಈ ಕಾರ್ಯಕ್ರಮದಲ್ಲಿ ಅಕಾದೆಮಿಯ ಕಾರ್ಯದರ್ಶಿಗಳಾದ ಪ್ರೊ. ದೇವರಾಜಸ್ವಾಮಿಯವರು ಗಣ್ಯರಿಗೆ ಸ್ವಾಗತ ಕೋರಿ, ಕಾರ್ಯಕ್ರಮದ ಉದ್ದೇಶ ತಿಳಿಸಿದರು. ದೀಪ ಬೆಳಗುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದ ಶ್ರೀ ಸದಾನಂದ್ ಅವರು ಉದ್ಘಾಟನಾ ಭಾಷಣ ಮಾಡಿದರು. ಡಾ. ದೇವರಕೊಂಡಾರೆಡ್ಡಿಯವರು ಮೋಡಿಲಿಪಿಯ ಹುಟ್ಟು, ಬೆಳವಣಿಗೆಗಳನ್ನು ಕುರಿತು ತಿಳಿಸಿ, ಪ್ರಸ್ತುತ ಸಂದರ್ಭದಲ್ಲಿ ಮೋಡಿಲಿಪಿ ಕಲಿಕೆಯ ಅಗತ್ಯವನ್ನು ಮನವರಿಕೆ ಮಾಡಿಕೊಟ್ಟರು. ಡಾ. ಪಿ.ವಿ. ನಾರಾಯಣ್ ಅವರು ಅಧ್ಯಕ್ಷೀಯ ನುಡಿಗಳನ್ನಾಡಿದರು. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಕಾರ್ಯದರ್ಶಿಗಳಾದ ಶ್ರೀ ಅಬ್ದುಲ್ ಬಷೀರ್ ಅವರು ಉದ್ಘಾಟನೆ ನೆರವೇರಿಸಿದ ಗಣ್ಯರಿಗೆ ವಂದನಾರ್ಪಣೆ ಸಲ್ಲಿಸಿದರು. ಶ್ರೀ ಕೆ.ಎಲ್. ರಾಜಶೇಖರ್ ಅವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

ಕಾರ್ಯಾಗಾರದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ, ಸಂಸ್ಕೃತ ವಿಶ್ವವಿದ್ಯಾನಿಲಯ, ಹಂಪಿ ಕನ್ನಡ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳಲ್ಲದೆ, ಕೋಲಾರ, ಮಾಲೂರು, ಚಿತ್ರದುರ್ಗ ಮೊದಲಾದೆಡೆಗಳಿಂದ ಬಂದ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಇವರೊಂದಿಗೆ ಸಂಸ್ಕೃತ ವಿಶ್ವವಿದ್ಯಾನಿಲಯದ ಕೆಲವು ಉಪನ್ಯಾಸಕರು, ಕೆಲವು ನಿವೃತ್ತ ಸರ್ಕಾರಿ, ಬ್ಯಾಂಕ್ ನೌಕರರು ಸೇರಿದಂತೆ ೪೫ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಮೋಡಿಲಿಪಿ ಕುರಿತಾದ ವಿವರಣೆ ನೀಡುವುದರೊಂದಿಗೆ ಮೋಡಿಲಿಪಿಯ ಅಕ್ಷರಗಳನ್ನು ಕಲಿಸುವ ಹಾಗೂ ವಿದ್ಯಾರ್ಥಿಗಳಿಂದ ಓದಿಸುವ, ಮೋಡಿಲಿಪಿಯ ಪತ್ರಗಳನ್ನು ಆಧುನಿಕ ಕನ್ನಡ ಬರಹಗಳಿಗೆ ಲಿಪ್ಯಂತರ ಮಾಡುವ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಡಾ. ಕೆಳದಿ ವೆಂಕಟೇಶ ಜೋಯಿಸ್ ಅವರು ಮೋಡಿಲಿಪಿಯ ಬಳಕೆ, ವಿಭಿನ್ನ ಮಾದರಿಗಳ ಕುರಿತಾದ ವಿಚಾರಗಳನ್ನು ಪ್ರಾತ್ಯಕ್ಷಿಕೆಯೊಂದಿಗೆ (ಪಿ.ಪಿ.ಟಿ) ವಿವರವಾಗಿ ತಿಳಿಸಿಕೊಟ್ಟರು. ಎರಡನೆಯ ದಿನದಂದು ಡಾ. ಪಿ.ವಿ. ಕೃಷ್ಣಮೂರ್ತಿಯವರು ಕೆಲವು ವಿಭಿನ್ನ ಸಂದರ್ಭಗಳಲ್ಲಿ, ವಿಭಿನ್ನ ಹಿನ್ನೆಲೆಯಲ್ಲಿ ಬರೆಯಲಾಗಿದ್ದ ಮೋಡಿಲಿಪಿಯ ಪತ್ರಗಳನ್ನು ವಿದ್ಯಾರ್ಥಿಗಳಿಂದ ಲಿಪ್ಯಂತರ ಮಾಡಿಸಿ, ಓದಿಸಿದರು. ಡಾ. ಕೆ.ಆರ್. ಗಣೇಶ್ ಅವರು ಕೆಲವು ಪತ್ರಗಳನ್ನು ಓದಿ, ಅದರ ಅಪೂರ್ವ ವಿಚಾರಗಳು, ಐತಿಹಾಸಿಕ ಸನ್ನಿವೇಶಗಳು, ಸಂಕೇತಾರ್ಥಗಳು ಮೊದಲಾದವುಗಳನ್ನು ಕುರಿತು ತಿಳಿಸಿ, ವಿದ್ಯಾರ್ಥಿಗಳ ಹಲವು ರೀತಿಯ ಅನುಮಾನಗಳನ್ನು ಪರಿಹರಿಸಿದರು. ಆಲಿಗೆ ಮೇಲಣ ಮನೆಯ ಹಸ್ತಪ್ರತಿಗಳು ಹಾಗೂ ಆಲಿಗೆ ಕೆಳಗಣ ಮನೆಯ ಹಸ್ತಪ್ರತಿಗಳ ಸೂಚಿಯನ್ನು ತಯಾರಿಸಿರುವ ಹಾಗೂ ಇದೀಗ ಹಸ್ತುಪ್ರತಿಗಳ ಬೃಹತ್ ಹೊತ್ತಿಗೆಯನ್ನು ಹೊರತರುತ್ತಿರುವ ಶ್ರೀ ಗುರು ಅವರು ತಮ್ಮ ಅನುಭವದ ಹಲವಾರು ವಿಶೇಷ ವಿಚಾರಗಳನ್ನು ಹಂಚಿಕೊಂಡರು. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸಂಗ್ರಹದಲ್ಲಿರುವ ಸಾವಿರಾರು ಹಸ್ತಪ್ರತಿಗಳ ಸೂಚಿ ಹಾಗೂ ಲಿಪ್ಯಂತರದ ಕಾರ್ಯಗಳಲ್ಲಿ ತೊಡಗಿರುವ ಶ್ರೀ ಗುರುಪ್ರಸಾದ್ ಅವರು ಹಸ್ತಪ್ರತಿಗಳಲ್ಲಿ ಬಳಸಲಾಗಿರುವ ಸಂಕೇತಾಕ್ಷರಗಳ ಪಟ್ಟಿಕೆಯನ್ನು ನೀಡಿ ಅವುಗಳ ಅರ್ಥವನ್ನು ವಿವರಿಸಿದರು.

ಸಮಾರೋಪ ಸಮಾರಂಭ

ಸಮಾರೋಪ ಸಮಾರಂಭದಲ್ಲಿ ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಡಾ. ಕೆ.ಆರ್. ಗಣೇಶ್ ಅವರನ್ನು ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ಸನ್ಮಾನಿಸಿದರು. ಶಿಕ್ಷಕರ ದೃಷ್ಟಿಯಿಂದ ಮೋಡಿಲಿಪಿಯ ಕಲಿಕೆಯ ಅವಶ್ಯಕತೆಯನ್ನು ಕುರಿತು ಡಾ. ಪಿ.ವಿ. ಕೃಷ್ಣಮೂರ್ತಿಯವರು ಮಾತನಾಡಿದರು. ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಡಾ. ಪಿ.ವಿ. ನಾರಾಯಣ್ ಅವರು 'ಇಂತಹ ಅತ್ಯುತ್ತಮವಾದ ಕಾರ್ಯಗಳನ್ನು ಹಮ್ಮಿಕೊಳ್ಳುವುದಾದರೆ ಮುಂದೆಯೂ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸಭಾಂಗಣವನ್ನು ಅನುವು ಮಾಡಿಕೊಡುವುದಾಗಿ' ತಿಳಿಸಿ, ಕಾರ್ಯಕ್ರಮ ಯಶಸ್ವಿಯಾಗಿ ನಡೆದುದಕ್ಕೆ ಹರ್ಷ ವ್ಯಕ್ತಪಡಿಸಿದರು. ಪ್ರೊ. ದೇವರಾಜಸ್ವಾಮಿಯವರು ವಂದನಾರ್ಪಣೆ ನೆರವೇರಿಸಿದರು.

ಜಿಲ್ಲಾ ಘಟಕಗಳು : ಪ್ರಸ್ತುತ ಎಲ್ಲಾ ಜಿಲ್ಲಾ ಘಟಕಗಳು ಹೊಸ ಕಾರ್ಯಕಾರಿ ಸಮಿತಿಯೊಂದಿಗೆ ಕಾರ್ಯಕ್ರಮಗಳನ್ನು ರಚಿಸಿಕೊಳ್ಳಬೇಕಾಗಿದೆ.

WEBSITE : ಕರ್ನಾಟಕ ಇತಿಹಾಸ ಅಕಾದೆಮಿಯ ವೆಬ್‌ಸೈಟ್‌ನ್ನು ತಯಾರಿಸಿ ಅದನ್ನು ನಿರ್ವಹಿಸುತ್ತಿರುವ ಶ್ರೀಮತಿ ಸೀತಾಲಕ್ಷ್ಮೀ ಅವರು ಈ ವರೆಗೆ ಮೂವತ್ತೆರಡು ಇತಿಹಾಸ ದರ್ಶನಗಳ ಲೇಖನಗಳನ್ನು ವೆಬ್‌ಗೆ ಹಾಕಿ ಯಾವುದೇ ರೀತಿಯಲ್ಲೂ ವಿಷಯ ಹುಡುಕಲು ಶ್ರಮವಹಿಸಿ ತಯಾರಿಸಿದ್ದಾರೆ. ಅವರಿಗೆ ಅಕಾದೆಮಿಯು ಅಭಾರಿಯಾಗಿದೆ. ಇನ್ನೂ ಹಲವಾರು ವಿಷಯಗಳು, ಛಾಯಾಚಿತ್ರಗಳೂ ಒಳಗೊಂಡಿರುವ Website ಅಂತರಾಷ್ಟ್ರೀಯ ಮಟ್ಟದಲ್ಲೂ ಗುರುತಿಸಿಕೊಂಡಿದೆ. ಇದನ್ನೂ ಅಕಾದೆಮಿಯ ಸದಸ್ಯರ ಸಹಕಾರವೂ ಅಗತ್ಯವಾಗಿದೆ.

ಕರ್ನಾಟಕ ಇತಿಹಾಸ ಅಕಾಡೆಮಿಯ Websiteನ್ನು ಬದಲಾವಣೆಯೊಂದಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ತಲುಪಿಸುವ ಹೆಚ್ಚಿನ ಯೋಜನೆಯ ಕೆಲಸಗಳು ನಡೆಯುತ್ತಿದೆ. ಈ Websiteಗಾಗಿ ಡಾ. ದೇವರಕೊಂಡಾರೆಡ್ಡಿ ಅಭಿನಂದನಾ ಸಮಿತಿಯು ಅಕಾದೆಮಿಯಲ್ಲಿ ರೂ.೧,೧೦,೦೦೦/–ಗಳನ್ನು ದತ್ತಿಯನ್ನು ಇಟ್ಟಿದೆ. ಇದರಿಂದ ಬರುವ ಬಡ್ಡಿಯಿಂದ Website ನಿವರ್ಹಣೆ ಮಾಡಲಾಗುತ್ತದೆ.

ಕೃತಜ್ಞತೆಗಳು: ಕರ್ನಾಟಕ ಇತಿಹಾಸ ಅಕಾದೆಮಿಯನ್ನು ಸೋದರ ಸಂಸ್ಥೆ ಎಂಬಂತೆ ಪರಿಗಣಿಸಿ ಸಹಕರಿಸುತ್ತಾ ಬಂದಿರುವ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯ ನಿರ್ದೇಶನಾಲಯದ ನಿರ್ದೇಶಕರು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ಅಕಾದೆಮಿಯ ವಾರ್ಷಿಕ ಸಮ್ಮೇಳನ ಸಂದರ್ಭದಲ್ಲಿ ವಸ್ತುಪ್ರದರ್ಶನ ಏರ್ಪಡಿಸಿ, ಸಹಕರಿಸುತ್ತಿರುವ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ, ೨೦೧೬ರ "ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹ ಕಾರ್ಯಕ್ರಮದ ಉದ್ಘಾಟನಾ ಸಮಾರಂಭಕ್ಕೆ ಆಶ್ರಯನೀಡಿ ಸಹಕರಿಸಿರುವ ಹಾರನಹಳ್ಳಿ ಹೊಯ್ಸಳವೇದಿಕೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ, ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ಶ್ರೀ ಬೈಸಾನಿ ರುಕ್ಮಣಮ್ಮ ರತ್ನಂಶೆಟ್ಟಿ ಕುಟುಂಬದ ಸೇವಾ ಟ್ರಸ್ಟ್‌ನ ಶ್ರೀ ಅಶೋಕ ಕುಮಾರ್, ವಾಗ್ದೇವಿ ಮುದ್ರಣಾಲಯದ ಶ್ರೀ ಪ್ರಭು ಮತ್ತು ಸಿಬ್ಬಂದಿ ವರ್ಗ, ಡಾ. ಬಾ.ರಾ.ಗೋಪಾಲ ಪ್ರಶಸ್ತಿಗೆ ದತ್ತಿ ನೀಡಿರುವ ಡಾ. ಬಾ.ರಾ.ಗೋಪಾಲ್ ಕುಟುಂಬ ವರ್ಗ, ಸಮ್ಮೇಳನಾಧ್ಯಕ್ಷರ ಗೌರವಸ್ಮರಣ ಫಲಕವನ್ನು ಪ್ರಾಯೋಜಿಸಿರುವ ಶ್ರೀ ಕೆ. ಅಭಿಶಂಕರ ಕುಟುಂಬ ವರ್ಗ, "ಇತಿಹಾಸ ಸಂಸ್ಕೃತಿ ಶ್ರೀ" ಪ್ರಶಸ್ತಿಯನ್ನು ಪ್ರಾಯೋಜಿಸುತ್ತಿರುವ ಬೈಸಾನಿ ಶ್ರೀಮತಿ ರುಕ್ಮಣಮ್ಮ ಶ್ರೀ ರತ್ನಂಶೆಟ್ಟಿ ಟ್ರಸ್ಟಿನವರಿಗೆ, ಡಾ. ಬಾ.ರಾ. ಗೋಪಾಲ್ ಪ್ರಶಸ್ತಿಯ ಸ್ಮರಣಫಲಕವನ್ನು ಪ್ರಾಯೋಜಿಸುತ್ತಾ ಬಂದಿರುವ ಶ್ರೀ ವೇಮಗಲ್ ಸೋಮಶೇಖರ್, ಪಿಎಚ್.ಡಿ ಪದವಿದರರಿಗೆ ಉತ್ತೇಜನ ನೀಡುವ ಸಲುವಾಗಿ ದತ್ತಿ ಸ್ಥಾಪಿಸಿರುವ ಶ್ರೀ ರಾಜನ್ ತುಮಕೂರು, ವೆಬ್‌ಸೈಟ್‌ನ ನಿರ್ವಹಣೆ

ಮಾಡಲು ದತ್ತಿ ಸ್ಥಾಪಿಸಿರುವ ಡಾ॥ ದೇವರಕೊಂಡಾರೆಡ್ಡಿ ಅಭಿನಂದನಾಸಮಿತಿಗೆ, ಸೂರ್ಯನಾಥ ಕಾಮತ್ ನೆನಪಿನ ದತ್ತಿ ಸ್ಥಾಪಿಸಿರುವ ಶ್ರೀಮತಿ ಅರ್ಚನ ಎಸ್.ರಾವ್, ಅವರಿಗೆ ಶ್ರೀಮತಿ ವಿ.ಗೌರಮ್ಮ ಗಂಗಾಧರಯ್ಯ ಅವರ ಮಕ್ಕಳಾದ ಡಾ. ಎಂ.ಜಿನಾಗರಾಜ್, ಶ್ರೀಮತಿ ಎಂ.ಜಿ. ಪದ್ಮವಿರೂಪಾಕ್ಷಯ್ಯ, ಡಾ. ಎಂ.ಜಿ. ಚಂದ್ರಕಾಂತ್ ಅವರುಗಳು 'ಸಂಶೋಧನ ಶ್ರೀ' ಪ್ರಶಸ್ತಿಗಾಗಿ ದತ್ತಿ ನಿಡಿದ್ದಾರೆ. ಪ್ರಸ್ತುತ ಸಾಲಿನಿಂದ ಡಾ. ಎಂ.ಎಚ್. ಕೃಷ್ಣ ಮೆರಿಟ್ ಅವಾರ್ಡ್ ಗಾಗಿ ದತ್ತಿ ನೀಡಿರುವ ಪ್ರೊ.ಕೆ.ಪದ್ದಯ್ಯ ಪುಣೆ. ಅವರಿಗೆ ಹಾಗೂ 'ನಾಯಕ ಶ್ರೀ' ಪ್ರಶಸ್ತಿ ದತ್ತಿ ನೀಡಿರುವ ಪ್ರೊ. ಲಕ್ಷ್ಮಣ್‌ತೆಲಗಾವಿ ಧಾರವಾಡ ಅವರಿಗೆ ಈ ಮೇಲಿನ ಎಲ್ಲರಿಗೂ ಅಕಾದೆಮಿಯು ಆಭಾರಿಯಾಗಿದೆ. ಇತಿಹಾಸ ದರ್ಶನ ವಾರ್ಷಿಕ ಸಂಚಿಕೆಯ ಮುದ್ರಣಕ್ಕೆ ಆಶೀರ್ವಾದಪೂರ್ವಕವಾಗಿ ಪ್ರತಿ ವರ್ಷದಂತೆ ಈ ವರ್ಷವೂ ರೂ.೨೫,೦೦೦/- (ಇಪ್ಪತ್ತೈದು ಸಾವಿರ ರೂ.) ನೆರವು ನೀಡಿರುವ ಬಾಳೆಹೊನ್ನೂರಿನ ಶ್ರೀಮದ್ರಂಭಾಪುರಿ ಮಹಾಸಂಸ್ಥಾನದ ಜ.ಶ್ರೀ.ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ ಅವರಿಗೆ ಅಕಾದೆಮಿಯ ೩೦ನೆಯ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ ಸಮ್ಮೇಳನದ ಯಶಸ್ವಿಗೆ ಕಾರಣರಾದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾಸಂಸ್ಥೆ ಅಮೃತಮಹೋತ್ಸವ ಸಮಿತಿ, ಕರ್ನಾಟಕ ವಿ.ವಿ.ಯ ಧಾರವಾಡ ಇಲ್ಲಿಯ ಆಡಳಿತಾಧಿಕಾರಿಗಳು ಹಾಗೂ ಇತರ ಕಾರ್ಯಕರ್ತರಿಗೂ ಅಕಾದೆಮಿಯು ಆಭಾರಿಯಾಗಿದೆ. ಇತಿಹಾಸ ದರ್ಶನ ಸಂಚಿಕೆಯ ೩೨ನೆಯ ಸಂಪುಟವನ್ನು ಸಂಪಾದಿಸಿಕೊಟ್ಟಿರುವ ಸಂಪಾದಕರಾದ ಡಾ. ದೇವರಕೊಂಡಾರೆಡ್ಡಿ, ಪ್ರೊ. ಜಿ.ಕೆ. ದೇವರಾಜಸ್ವಾಮಿ ಅವರಿಗೆ, ಸಂಪುಟವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಲಕ್ಷ್ಮೀ ಮುದ್ರಣಾಲಯದ ಮಾಲೀಕರಾದ ಶ್ರೀ ಕೆ.ಎಸ್. ಮಂಜು ಹಾಗೂ ಸಿಬ್ಬಂದಿ ವರ್ಗದವರಿಗೆ ಅಂದವಾಗಿ ಇತಿಹಾಸದರ್ಶನ ಪ್ರಾರಂಭದಿಂದಲೂ ಡಿ.ಟಿ.ಪಿ. ಮಾಡುತ್ತಿರುವ ಶ್ರೀ ಸುಬ್ರಮಣ್ಯ ಅವರಿಗೆ ಹಾಗೂ ಶ್ರೀಮತಿ ಮಾಲಾ ಲಕ್ಷ್ಮೀಮುದ್ರಣಾಲಯ ಅವರಿಗೆ ಅಕಾದೆಮಿಯು ಆಭಾರಿಯಾಗಿದೆ.

ಕಾರ್ಯಕಾರಿ ಸಮಿತಿಯ ಅನುಮತಿ ಮೇರೆಗೆ

ಡಾ. ದೇವರಕೊಂಡಾರೆಡ್ಡಿ
ಅಧ್ಯಕ್ಷರು

ಡಾ. ಎಂ.ಜಿ. ನಾಗರಾಜ್
ಡಾ. ಎಚ್.ಎಸ್. ಗೋಪಾಲರಾವ್
ಉಪಾಧ್ಯಕ್ಷರುಗಳು

ಪ್ರೊ. ಜಿ.ಕೆ. ದೇವರಾಜಸ್ವಾಮಿ
ಪ್ರಧಾನ ಕಾರ್ಯದರ್ಶಿ

ಶ್ರೀ ಎಂ.ಬಿ. ಪಾಟೀಲ
ಕೋಶಾಧಿಕಾರಿ

ಶ್ರೀ ರಾಜಶೇಖರ್
ಶ್ರೀಮತಿ ಸಂಧ್ಯಾ
ಕಾರ್ಯದರ್ಶಿಗಳು



ಶ್ರೀ ನಿಂಗನಗೌಡ ಹ. ದೇಸಾಯಿ (ಹನಿ) ಇವರ ನೇತೃತ್ವದಲ್ಲಿ ಸುರಪುರ ತಾಲ್ಲೂಕಿನಲ್ಲಿ ನಡೆದ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ.



ಪ್ರೊ. ಟಿ. ಮುರುಗೇಶಿ ಅವರ ನೇತೃತ್ವದಲ್ಲಿ ಮೂಲ್ಕಿ ಸುಂದರರಾಮ ಶೆಟ್ಟಿ ಕಾಲೇಜಿನ ವಿದ್ಯಾರ್ಥಿಗಳು ಪಡಿಯಚ್ಚು ತೆಗೆಯುತ್ತಿರುವುದು.



ಪ್ರೊ. ಟಿ. ಮುರುಗೇಶಿ ಅವರ ನೇತೃತ್ವದಲ್ಲಿ, ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ ಮೂಲ್ಕಿ ಸುಂದರರಾಮ ಶೆಟ್ಟಿ ಕಾಲೇಜಿನ ವಿದ್ಯಾರ್ಥಿಗಳು.



ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ ಹಾರನಹಳ್ಳಿಯ ಶಾಲಾ ಮಕ್ಕಳಿಂದ ಪ್ರಾರ್ಥನೆ



ಮೈಸೂರು ಸಿದ್ದಾರ್ಥ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಾದ ಕುಮಾರನಾಯಕ್ ಮತ್ತು ಪ್ರಕಾಶ್ ಅವರಿಂದ ಪರಂಪರೆ ಕೂಟ ಉದ್ಘಾಟನೆ ಸಮಾರಂಭದ ಕಾರ್ಯಕ್ರಮದಲ್ಲಿ ಪ್ರಾರ್ಥನೆ.



ಮೈಸೂರು ಸಿದ್ದಾರ್ಥ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಂದ ಕೂ.ಸ. ಅಪರ್ಣ ವಿರಚಿತ ಲಾವಣಿಯನ್ನು ಹಾಡುತ್ತಿರುವುದು.



ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ ಶ್ರೀ ಗವಿಸಿದ್ಧಯ್ಯ ಅವರಿಂದ ಭಾಷಣ



ಪರಂಪರೆ ಉಳಿಸಿ ಕಾರ್ಯಕ್ರಮ, ಹಾರನಹಳ್ಳಿ

ಅಕಾದೆಮಿಯಲ್ಲಿ ಈವರೆಗೂ ಸ್ಥಾಪಿಸಿರುವ ದತ್ತಿಗಳ ವಿವರ

ಕ್ರಸಂ.	ದತ್ತಿನಿಧಿಯನ್ನು ನೀಡಿರುವವರ ವಿವರ/ದತ್ತಿಯ ವಿವರ	ದತ್ತಿ ನಿಧಿ ಮೊತ್ತ	ಪ್ರಾರಂಭದ ವರ್ಷ
1.	ಡಾ॥ ಬಾ.ರಾ.ಗೋಪಾಲ್ ನೆನಪಿನ ದತ್ತಿ ನಿಧಿ–ಶಾಸನ ತಜ್ಞರಿಗೆ	1,10,000	2001
2.	ಡಾ॥ ಅಭಿಶಂಕರ್ ಅವರ ನೆನಪಿನಲ್ಲಿ ನೀಡುತ್ತಿರುವ ಸಮ್ಮೇಳನಾಧ್ಯಕ್ಷರ ಸ್ಮರಣಿಕೆ ಮತ್ತು ಸನ್ಮಾನ	20,000	1998
3.	ಶ್ರೀ ಕೆ. ರಾಜನ್, ತುಮಕೂರು– ಪಿಎಚ್.ಡಿ ಪಡೆದ ವಿದ್ಯಾರ್ಥಿಗಳಿಗೆ ಉತ್ತೇಜನವಾಗಿ ನೀಡುವ ನಗದು ಬಹುಮಾನ	50,000	2014
4.	ಡಾ॥ ದೇವರಕೊಂಡಾರೆಡ್ಡಿ ಅಭಿನಂದನಾ ಸಮಿತಿಯವರು ನೀಡಿರುವ ದತ್ತಿ (ವೆಬ್‌ಸೈಟ್‌ನ ವಾರ್ಷಿಕ ನಿರ್ವಹಣಾ ವೆಚ್ಚ ಬರಿಸಲು)	1,10,000	2016
5.	ಶ್ರೀಮತಿ ಅರ್ಚನ. ಎಸ್. ರಾವ್ ಅವರು ನೀಡಿರುವ ದಿ॥ ಡಾ॥ ಸೂರ್ಯನಾಥ್ ಕಾಮತ್ ಅವರ ನೆನಪಿನ ದತ್ತಿ ನಿದಿ (ವಿವರಗಳು ಬರಬೇಕಿದೆ)	50,000	2016
6.	ಶ್ರೀಮತಿ ವಿ. ಗೌರಮ್ಮ ಗಂಗಾಧರಯ್ಯ ಅವರ ಮಕ್ಕಳಾದ ಡಾ॥ ಎಂ.ಜಿ. ನಾಗರಾಜ್, ಶ್ರೀಮತಿ ಎಂ.ಜಿ. ಪದ್ಮ ವಿರೂಪಾಕ್ಷಯ್ಯ ಮತ್ತು ಡಾ॥ ಎಂ.ಜಿ. ಚಂದ್ರಕಾಂತ್ ಅವರುಗಳು ಸ್ಥಾಪಿಸಿರುವ "ಸಂಶೋಧನ ಶ್ರೀ" ಪ್ರಶಸ್ತಿ (ಶ್ರೇಷ್ಠ ಸಂಶೋಧಕರಿಗೆ ನೀಡುವ ಪ್ರಶಸ್ತಿ)	2,75,000	2016
6.	ಡಾ. ಕೆ. ಪದ್ದಯ್ಯ, ಪುಣೆ, 30ನೇ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷರು ಇವರು ಸ್ಥಾಪಿಸಿರುವ ಡಾ॥ ಎಂ.ಎಚ್. ಕೃಷ್ಣ ಮೆರಿಟ್ ನಗದು ಪ್ರಶಸ್ತಿ (ಅತ್ಯುತ್ತಮ ಪ್ರಾಗೈತಿಹಾಸಿಕ ಲೇಖನಕ್ಕೆ)	30,000	2016
	ಒಟ್ಟು	6,45,000	

ದಿನಾಂಕ 22.10.2016ರಿಂದ 10.10.2017ವರೆಗೆ ದಾನಿಗಳು


ಕ್ರ.ಸಂ.	ದಾನಿಗಳು	ಮೊತ್ತ ರೂ.
1.	ಶ್ರೀಮದ್ರಂಭಾಪುರಿ ಮಠ, ಬಾಳೆಹೊನ್ನೂರು	25,000
2.	ಶ್ರೀ ಜಿ.ಕೆ ಮಲ್ಲಿಕಾರ್ಜುನಪ್ಪ ದಾವಣಗೆರೆ	1,000
3.	ಶ್ರೀ ಟಿ.ಎಂ.ಎಚ್. ಬಸವರಾಜ್, ಬಳ್ಳಾರಿ	2,000
4.	ಶ್ರೀ ಶಿವಾನಂದಯ್ಯ, ಚಿಕ್ಕಮಗಳೂರು	1,000
5.	ಶ್ರೀ ಕೆ. ಪುಟ್ಟಕಾಮಯ್ಯ, ಬೆಂಗಳೂರು	1,000
6.	ಶ್ರೀ ಎಂ.ಎನ್. ಪ್ರಭಾಕರ್, ಮೈಸೂರು	5,000
7.	ಶ್ರೀ ಶ್ಯಾಮಸುಂದರ್, ಬೆಂಗಳೂರು	20,000
8.	ಶ್ರೀಮತಿ ಸೀತಾಲಕ್ಷ್ಮಿ, ಬೆಂಗಳೂರು	10,000
9.	ಡಾ. ಎಸ್.ವಿ. ಪಾಡಿಗಾರ್, ಧಾರವಾಡ	1,000
10.	ಡಾ. ಎಚ್. ಚಂದ್ರಶೇಖರ್, ಬೆಂಗಳೂರು	5,000
11.	ಶ್ರೀಮತಿ ಭಾರತಿ, ಬೆಂಗಳೂರು	20,000
12.	ಶ್ರೀ ಶ್ರೀನಿವಾಸಮೂರ್ತಿ, ಬೆಂಗಳೂರು	5,000
13.	ಶ್ರೀ ಶ್ರೀನಿವಾಸ.ಟಿ., ಬೆಂಗಳೂರು	3,000
14.	ಕುವೆಂಪು ಮಹಾವಿದ್ಯಾಲಯದ ವಿದ್ಯಾರ್ಥಿಗಳ ಸಮೂಹ	5,000
15.	ಶ್ರೀ ಸುಂಕಂ. ಗೋವರ್ಧನ್, ಬೆಂಗಳೂರು	2,000
16.	ಶ್ರೀಮತಿ ಸಂಧ್ಯಾ, ಬೆಂಗಳೂರು	1,000
17.	ಶ್ರೀ ಎಂ.ಬಿ. ಪಾಟೀಲ್, ಬೆಂಗಳೂರು	2,000
18.	ಶಾಸನ ಶಾಸ್ತ್ರ ತರಗತಿ ವಿದ್ಯಾರ್ಥಿಗಳು, ಕಸಾಪ, ಬೆಂಗಳೂರು	4,500
19.	ಕ್ಷೇತ್ರಕಾರ್ಯ ಪ್ರವಾಸ ಮಾಡಿದ ಸದಸ್ಯರಿಂದ ದೇಣಿಗೆ	24,380
20.	ಶ್ರೀಮತಿ ಎಸ್. ಸುಮಾ, ಬೆಂಗಳೂರು	5,000
21.	ಶ್ರೀಮತಿ ಎಸ್. ಸುಧಾ, ಬೆಂಗಳೂರು	5,000
22.	ಡಾ. ಎಫ್.ಟಿ. ಹಳ್ಳಿಕೇರಿ, ಕನ್ನಡ ವಿವಿ, ಹಂಪಿ	5,000
23.	ಶ್ರೀ ಸಿದ್ದರಗಿರಿ ಓ.ಎಲ್. ಚಂದ್ರೇಗೌಡ, ಚಿಕ್ಕಮಗಳೂರು	5,000
	ಒಟ್ಟು	**1,57,880**

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು


ಆಡಳಿತ ಮಂಡಲಿಯ ಸದಸ್ಯರು ೨೦೧೬–೨೦೧೯



ಡಾ॥ ಜಿ.ಎಸ್. ಧೀಕ್ಷಿತ್
ಗೌರವ ಅಧ್ಯಕ್ಷರು (೨೦೦೪ರ ವರೆಗೆ)



ಡಾ॥ ಸೂರ್ಯನಾಥ ಕಾಮತ್
ಗೌರವ ಅಧ್ಯಕ್ಷರು



ಡಾ॥ ದೇವರಕೊಂಡಾರೆಡ್ಡಿ
ಕಾರ್ಯಾಧ್ಯಕ್ಷರು



ಡಾ॥ ಎಂ.ಜಿ. ನಾಗರಾಜ್
ಉಪಾಧ್ಯಕ್ಷರು



ಡಾ॥ ಎಚ್.ಎಸ್. ಗೋಪಾಲರಾವ್
ಉಪಾಧ್ಯಕ್ಷರು



ಶ್ರೀ ಎಂ.ಬಿ. ಪಾಟೀಲ್
ಕೋಶಾಧ್ಯಕ್ಷರು



ಶ್ರೀ ಜಿ.ಕೆ. ದೇವರಾಜಸ್ವಾಮಿ
ಪ್ರಧಾನ ಕಾರ್ಯದರ್ಶಿ



ಕೆ.ಎಲ್. ರಾಜಶೇಖರ್
ಕಾರ್ಯದರ್ಶಿ



ಶ್ರೀಮತಿ ಸಂಧ್ಯಾ. ವಿ
ಕಾರ್ಯದರ್ಶಿ

ಕಾರ್ಯಕಾರಿ ಸಮಿತಿ ಸದಸ್ಯರು



ಡಾ॥ ಎ.ಕೆ. ಶಾಸ್ತ್ರಿ
ಸಿರಸಿ



ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ
ರಾಯಚೂರು



ಶ್ರೀ ಪ್ರಭಾಕರ್ ಎಂ.ಎನ್.
ಮೈಸೂರು



ಡಾ॥ ಅಮರೇಶ್ ಯತಗಲ್
ಬಿಜಾಪುರ



ಪ್ರೊ. ಮುರುಗೇಶಿ ಓ.
ಉಡುಪಿ



ಡಾ॥ ಹನುಮಾಕ್ಷಿ ಗೋಗಿ
ಧಾರವಾಡ




ಟಿ.ಎಚ್.ಎಂ. ಬಸವರಾಜ
ಬಳ್ಳಾರಿ




ಶ್ರೀ ಕಲ್ಲಪ್ಪ ಮಹದೇವಪ್ಪ ಗರಗ
ಗದಗ



ಶ್ರೀ ಸಿ.ಬಿ. ಪಾಟೀಲ,
ಕೊಪ್ಪಳ



ಶ್ರೀ ಸಿದ್ದಗಿರಿ ಓ.ಎಲ್. ಚಂದ್ರೇಗೌಡ
ಚಿಕ್ಕಮಗಳೂರು



ಪ್ರೊ. ಲಕ್ಷ್ಮಣ್ ತೆಲಗಾವಿ
ಧಾರವಾಡ



ಡಾ॥ ಎಫ್.ಟಿ. ಹಳ್ಳಿಕೇರಿ,
ಹಂಪಿ



ಡಾ. ಲಿಂಗರಾಜು
ಮಂಡ್ಯ



ಡಾ. ಚಂದ್ರಶೇಖರ್ ಎಚ್.
ಬೆಂಗಳೂರು



ಶ್ರೀ ಸುಮತೀಂದ್ರ ನಾಡಿಗ್
ದಾವಣಗೆರೆ



ಶ್ರೀ ಗುರುಪ್ರಸಾದ್ ಬಿ.ಎಸ್.
ಬೆಂಗಳೂರು



ಶ್ರೀ ಗುರುಶಾಂತಪ್ಪ ವಿ.ಪಿ.
ಬೆಂಗಳೂರು



ಡಾ. ಎಸ್.ಕೆ. ಮೇಲಾಕಾರ
ಧಾರವಾಡ



ಶ್ರೀ ಇಷ್ಟಲಿಂಗ ಶಿರಸಿ
ಬಾದಾಮಿ

ಕರ್ನಾಟಕ ಇತಿಹಾಸ ಅಕಾದೆಮಿ(ರಿ.)

ಬೆಂಗಳೂರು

ಸಹಯೋಗ

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು







ಪ್ರಾಚೀನ ನಾಣ್ಯಗಳ ನಾಶ
ಇತಿಹಾಸ ಪರಂಪರೆಯ ನಾಶ

ಕೋಟೆ ಕೊತ್ತಲದ ಕಲ್ಲು ಕಿತ್ತರೆ
ಪ್ರಾಚೀನ ಪರಂಪರೆಯ ಪಂಚಾಂಗ ಕಿತ್ತಂತೆ


ಪ್ರಾಚೀನ ಚರ್ಚ್, ಮಸೀದಿ, ಗುಡಿ
ನಮ್ಮ ಪರಂಪರೆಯ ಭವ್ಯ ಮುಡಿ



ಐತಿಹಾಸಿಕ
ಪರಂಪರೆ ಉಳಿಸಿ



ತಾಳೆ ಹೊತ್ತಗೆಯ ರಕ್ಷಣೆ, ಹಳೆಯ
ಪರಂಪರೆ ಪೋಷಣೆ





ಐತಿಹಾಸಿಕ ಪರಂಪರೆ ಉಳಿಸಿ ಭಿತ್ತಿ ಪತ್ರ - 2017

ISBN : 978-81-921255-7-2

E-mail : karnatakaitihasaacademy25@gmail.com
web : www.karnatakaitihasaacademy.org